KSA LIBRARY, B'lore
B004889
328.32402 548 LAD,1972
JJ37

MYSORE LEGISLATIVE ASSEMBLY DEBATES

OFFICIAL REPORT

FIRST SESSION

VOLUME V—(Nos. 1 to 10)

[illegible] July, 1972 to [illegible] 1972

V-31 N72
N72-51-1C
(B)4889

BANGALORE:
PRINTED BY THE DIRECTOR OF PRINTING, STATIONERY AND
PUBLICATIONS AT THE GOVERNMENT PRESS
[illegible]

GOVERNMENT OF KARNATAKA

KARNATAKA STATE ARCHIVES
LIBRARY
BANGALORE

For Reference only

Not to be issued out of the Library

4889

V-31'N 72
N 73-5-1-10
(B) 4889

TABLE OF CONTENTS

TO THE

MYSORE LEGISLATIVE ASSEMBLY DEBATE

Volume V—(1 to 10)

(From 10th July 1972 to 20th July 1972)

Monday, the 10th July 1972

PAGES

1 Revised Budget Estimates for 1972-73—(Demands for Grants):

Demand No.	Major Head	PAGES
2—(9)	Land Revenue—(Debate continued)	1—14 30—78
7—(14)	Stamps—(Debate continued)	
8—(15)	Registration Fees—(Debate continued)	
33—(64)	Famine Relief—(Debate continued)	
42—(92)	Payment of Compensation to Land-holders on the Abolition of the Zamindari System—(Debate continued)	
3—(10)	State Excise Duties—(Debate continued)	
4—(11)	Taxes on Vehicles—(Debate continued)	
26—(38)	Labour and Employment—(Debate continued)	
50A—(114)	Capital Outlay on Roads and Water Transport Schemes—(Debate continued)	
15—(26)	Miscellaneous Departments—(Debate continued)	
53—(124)	Capital Outlay on Schemes of Government Trading—(Debate continued)	

PAGES

2 (i) Adimission in the Maharani's College ... 1

(ii) Question of Privilege against the Mayor, Bangalore City Corporation—(Postponed) ... 15

(iii) Question of Privilege motion against the Engineer in-Chief and Additional Secretary to Government, P.W.D.—(Consent withheld) ... 15—30

3 Calling Attention to matters of Urgent Public Importance : ...

(i) *re* : Situation created due to floods in Malaprabha River ... 79—80

(ii) *re* : Situation created in South Kanara and Malnad Districts due to heavy rains ... 81—85

(iii) *re* : Admission of Students in the Maharani's College, Bangalore ... 83—85

Tuesday, the 11th July 1972

PAGE

1 (i) Starred Questions and Answers ... 87—99

(ii) Short Notice Question and Answer ... 100—101

(iii) Questions for Answers on the day—(but not taken up) ... 101 104

2 Calling Attention to matters of urgent Public Importance :

re : (i) Failure of Students in 8th and 9th Standards at Government High School, Holenarsipur 104—105

re : (ii) Capitation Fee Collection by the Medical College at Gulbarga run by the Hyderabad Karnatak Education Society ... 105—110

3 Statement by the Minister of State for Animal Husbandry *re* : Worms in the Bangalore Dairy Milk ... 110—114

4 Revised Budget Estimates for 1972-73—(Demands for Grants) :

Demand No. Major Head

18 { 29 Medical—(Debate continued)
30 Public Health—(Debate continued)
30A Family Planning—(Debate continued) } 114—165

Wednesday, the 12th July 1972

PAGES

1 Revised Budget Estimates for 1972-73—(Demands for Grants):

Demand No.	Major Head		Pages
18—	29	Medical—(Voted)	161—180
	30	Public Health—(Voted)	
	30A	Family Planning—(Voted)	
20—(31)		Agriculture—(Debate not concluded).	180—237
38—(70)		Forest—(Debate not concluded)	
51—(119)		Capital Outlay on Forest—(Debate not concluded).	
22—(33)		Animal Husbandry (Debate not concluded).	

2 Calling Attention to Matters of Urgent Public Importance:

(i) *re*: Fall in Prices of Arecanut in the State ... 237—241

(ii) *re*: Damage caused to hybrid Jawar Crop in Dharwar District ... 241—242

Thursday, the 13th July 1972

PAGES

1 Revised Budget Estimates for 1972-73—(Demands for Grants):

Demand No.	Major Head	Pages
20—(31)	Agriculture—(Voted)	243—281
38—(70)	Forests—(Voted)	
51—(119)	Capital Outlay on Forests—(Voted)	
22—(33)	Animal Husbandry—(Voted)	

2 (i) Starred Questions and Answers ... 281—298

(ii) Questions for Answers on the day—(but not taken up) ... 298—301

PAGES

3 Calling Attention to matters of urgent Public Importance :
re : Scarcity Conditions in Gulbarga District ... 301—304

4 (i) Change in the Sitting Hours of the House ... 304
(ii) Taking up a certain Call Attention Notice ... 304

5 Papers laid on the Table of the House :
Notifications issued under the Mysore Land Revenue Act, 1964 ... 305

6 Revised Budget Estimates for 1972-73—(Demands for Grants) : 305—333

Demand No.	Major Head
1—(4)	Taxation Income other than Corporation Tax—(Voted).
5—(12)	Sales Tax—(Administration)—(Voted).
34—(65)	Pensions and Other Retirement Benefits—(Voted).
35—(66)	Territorial and Political Pensions—(Voted).
36—(67)	Privy Purses and Allowances of Indian Rulers—(Voted).
40—(72)	Commutation of Pensions—(Voted)
41—(76)	Other Miscellaneous Compensations and Assignments—(Voted).
52—(120)	Payments of Commuted Value of Pensions—(Voted).
52—Q	Loans and Advances by State Government—(Voted).

7 Calling Attention to a matter of urgent Public Importance :
re : Non-Revision of Electoral Rolls for T. D. B. Elections ... 333—335

8 Programme of Business of the House—(Announced) ... 335—336

Friday, the 14th July 1972

PAGES

1 (i) Starred Questions and Answers ... 337—354
(ii) Questions for Answers on the day—(but not taken up) ... 354—355

PAGES

2 Calling Attention to a matter of urgent Public Importance *re*: Remission of Local Fund Cess on Land Revenue in Ramdurg Taluk ... 355—358

3 Papers laid on the Table :—

(*a*) Notification No. GSR 237, dated 23rd June 1972, issued under the Mysore Excise Act, 1965.
(*b*) Notification No. S.O. 1246, dated 26th June 1972, issued under the Mysore Official Language Act, 1963.
(*c*) Notification No. S.O. 1224, dated 23rd June 1972 and No. GSR 205, dated 8th May 1972, issued under the Mysore Municipalities Act, 1969.
(*d*) Notification No. AF 36 AMS 68, dated 20th May 1972, issued under the Cotton Transport Act, 1923 (Central).
} 358—359

4 Revised Budget Estimates for 1972-73—(Demands for Grants):

Demand No.	Major Head	Pages
2—(35)	industries Including Sericulture—(Debate not concluded).	359—422
16—(27)	Scientific Departments—(Debate not concluded).	
43—(94)	Capital Outlay on Improvements of Public Health—(Debate not concluded).	
44—(96)	Capital Outlay on Industrial and Economic Development—(Debate not concluded).	
9—(18)	State Legislature and Elections—(Debate not concluded).	
11—(21)	Administration of Justice—(Debate not concluded).	
14—(25)	Supplies and Disposals—(Debate not concluded).	

Saturday, the 15th July 1972

PAGES

1 Revised Budget Estimates for 1972-73—(Demands for Grants):

Demand No.	Major Head	PAGES
24—(35)	Industries—(Voted)	423—486
16—(27)	Scientific Departments—(Voted)	
43—(94)	Capital Outlay on Improvement of Public Health—(Voted)	
44—(96)	Capital Outlay on Industrial and Economic Development—(Voted)	
9—(18)	State Legislature and Elections—(Voted)	
11—(21)	Administration of Justice—(Voted)	
14—(25)	Supplies and Disposals—(Voted)	
39—(71)	Miscellaneous—(Voted)	

2 Calling Attention to Matters of Urgent Public Importance:

(i) *re*: Private Operators to be permitted to run bus service in Bangalore, Gulbarga and Belgaum ... 487

(ii) *re*: Nationalisation of short distance bus routes 488

Monday, the 17th July 1972

1 (i) Starred Questions and Answers ... 489—501

(ii) Questions for Answers on the day—(but not taken up) ... 501—502

2 Calling Attention to a matter of urgent Public Importance *re*: Suspension of buses running between Gulbarga and Aurad ... 503

3 (i) Raising the number of seats in the Agricultural Colleges .... 503—504

(ii) Leakage of Water at the Bhadra Reservoir ... 504—505

4 (i) Message from the Governor—(Announced) ... 505

(ii) Mysore Appropriation (No. 2) Bill, 1972—(Introduced) 505—527

(iii) Mysore Appropriation (No. 2) Bill, 1972 ... 527

PAGES

5 Mysore Appropriation (No. 2) Bill, 1972—(Passed) ... 527

6 Notice of an adjournment Motion *re*: Palace Affairs—(Postponed) ... 528

7 Discussion on Matters of urgent Public Importance for short Duration :

(i) *re*: Working of the Bangalore Transport Service ... 528—540

(ii) *re*: Drought Conditions in several areas of the State ... 540—548

8 Annexure :

Mysore Appropriation (No. 2) Bill, 1972 ... 549—555

Tuesday, the 18th July 1972

1 (i) Starred Questions and Answers ... 557—576

(ii) Questions for Answers on the day—(but not taken up) ... 577

2 Calling Attention to a matter of urgent Public Importance :

(i) *re*: Mechanisation of Kemmangundi Mines ... 577 579

(ii) *re*: Murder at Attalatti near Bijapur ... 58 —581

(iii) *re*: Lands allotted in Amrit Mahal Kaval of Halkudike ... 581—583

3 Statement of the Minister for Education *re*: admission of Students in Government College, Kolar ... 583

4 Notice of Adjournment Motion *re*: purchasing the three palaces belonging to the former Maharaja of Mysore... 583—601

5 First Report of the Committee on Private Members' Bills and Resolutions ... 601

Papers laid on the Table—

6 (i) Annual Financial Statement—revised Budget for 1971-72 and Budget Estimates for 1972-73 of the Mysore State Electricity Board ... 602

(ii) Second List of Unstarred Questions and Answers ... 602—671

		Pages
7	Discussion on a Matter of Urgent Public Importance *re*: Drought Conditions in several areas of the State—(Debate Concluded) ...	671—677
8	Statement of the Chief Minister *re*: Constitution of the Mysore Backward Classes Commission ...	678—690

Wednesday, the 19th July 1972

1	(i) Starred Questions and Answers ...	691—713
	(ii) Questions for Answers on the day—(but not taken up)	713—715
2	Calling Attention to matters of urgent Public Importance:	
	(i) *re*: Termination of Services of the candidates selected by the Public Service Commission in Gulbarga ...	715—717
	(ii) *re*: Grave situation in Hosanagar Town due to Sharavathi back waters ...	717—719
	(iii) *re*: Termination of Services of 350 Teachers in Gulbarga ...	719—721
3	(i) Supply of English Question Papers to Kannada Medium Students in Mysore and Bangalore Universities ...	721
	(ii) Scarcity of Kerosene in Bangalore City ...	721—723
4	Statement by the Minister of State for Food and Civil Supplies *re*: Shortage of Kerosene ...	723—724
5	Mysore (Bombay and Hyderabad Areas) Religious and Charitable Inams Abolition Bill, 1972—(Motion to refer to a Joint Select Committee)—(Adopted) ...	724—746
6	Indian Penal Code (Mysore Amendment) Bill, 1972—(Passed) ...	747—757
7	Press and Registration of Books (Mysore Amendment) Bill, 1972—(Passed) ...	757—758

PAGES

Thursday, the 20th July 1972

1	(i) Starred Questions and Answers ...	759—780
	(ii) Questions for Answers on the day—(but not taken up) ...	781—782
2	Calling Attention to matters of urgent Public Importance : ...	
	(i) *re* : Malpractices in the admission of Children in Little Flower Convent School, Hospet...	783—785
	(ii) *re* : Non-allocation of pay in the Revised Pay Scale of Teachers of Junior Colleges ...	785
	(iii) *re* : Recovery of Local Fund Arrears in Dharwar District ...	786—787
3	(i) Students' Strike at Belgaum ...	788
	(ii) Police excesses over a woman under trial in Bidar District ...	789
	(iii) Procedure for Supplementaries during Question Hour	789
	(iv) Admission at the B.V.Sc. Colleges ...	791
	(v) Drought Conditions etc., at Indi Taluka ...	792
4	Notice of Adjournment motion *re* : blackmarketing the Kerosene Oil ...	792—794
5	(i) Affairs at the Bangalore Fair Price Depots ...	795
	(ii) Students agitation at Belgaum ...	795
6	Official Resolution *re* : ratifying the Constitution of (28th Amendment) Bill, 1972 as passed by the two Houses of Parliament ...	795—814
7	Non-Official Resolution :	
	(i) *re* : Steps to remove or improve the existing Slums in Bangalore City—(Withdrawn) ...	815—824
	(ii) *re* : Appointment of a Committee to review the working of the Co-operatives—(Debate not concluded) ...	825—828

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Monday, the 10th July 1972/Ashadha 18, 1894 (Saka)

The House met in the Assembly Chamber, Vidhana Soudha, at Twelve of the Clock.

MADAM SPEAKER (SMT. K. S. NAGARATHNAMMA) in the Chair.

REVISED BUDGET ESTIMATES FOR 1972-73

Demands for Grants—Demand Nos : 2, 7, 8, 33 and 42

(Debate Continued)

†ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷರೇ ಈ ಸಭೆಯ ಮುಂದೆ ನಾನು ಇಟ್ಟಿರತಕ್ಕ ಕೆಲವು ಬೇಡಿಕೆಗಳ ವಿಷಯದಲ್ಲಿ ಮಾನ್ಯ ಸದಸ್ಯರು ಬಹಳ ವ್ಯಾಪಕವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಆ ಸಲಹೆಗಳಿಗಾಗಿ ನಾನು ಮೊಟ್ಟಮೊದಲು ಮಾನ್ಯ ಸದಸ್ಯರನ್ನು ವಂದಿಸುತ್ತೇನೆ. ಆ ಸಲಹೆಗಳಲ್ಲಿ ಮುಖ್ಯವಾದಂಥ ಕೆಲವು ವಿಷಯಗಳನು ನಾನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಪ್ರಾರಂಭದಲ್ಲಿ ಬಹಳವಾಗಿ ಈ ರೆವಿನ್ಯೂ ಖಾತೆಯಲ್ಲಿ ಈಗ ಇರತಕ್ಕ ಸಿಬ್ಬಂದಿ ಮೊಟ್ಟಮೊದಲು ಹೇಗೆ ಇತ್ತೊ, ಅದೇ ರೀತಿಯಲ್ಲಿ ಇವರಿಗೆ ಕೆಲವು ಅನು ಕೂಲಗಳನ್ನು ಕಲ್ಪಿಸಬೇಕು ಎಂಬ ವಗೈರೆ ಸಲಹೆಗಳನ್ನು ಸಹ ಹೇಳಿದರು. ಅದಕ್ಕೆ ಮುಂಚೆ ನಾನು ಒಂದೆರಡು ಮಾತುಗಳನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ರೆವಿನ್ಯೂ ಇಲಾಖೆ ಪ್ರಾರಂಭದ ದೆಸೆಯಿಂದ ಬಂದಂಥ ಇಲಾಖೆ, ಮಾತೃ ಸ್ಥಾನವನ್ನು ಪಡೆದದ್ದು ಹಾಗೆ ಎಂದು ಕೆಲವರು ಹೇಳಿದರು; ಅದು ನಿಜ. ಆದರೆ ಇತ್ತೀಚೆಗೆ ದೇಶಕ್ಕೆ ಸ್ವಾತಂತ್ರ್ಯ ಬಂದು ಅಭಿವೃದ್ಧಿ ಕಾರ್ಯಗಳ ಕಡೆಗೆ, ಇತರೆ ಕಾರ್ಯಕ್ರಮಗಳ ಕಡೆಗೆ ಹೆಚ್ಚು ಗಮನವನ್ನು ಸರ್ಕಾರದವರು ಕೊಡುವುದಕ್ಕೆ ಪ್ರಾರಂಭವಾದ ಮೇಲೆ ರೆವಿನ್ಯೂ ಖಾತೆ ಏನು ಇದ್ದರೂ ಕೂಡ ಕಂದಾಯ ವಸೂಲು ಮಾಡತಕ್ಕ ಖಾತೆ ಎಂದು, ಅದರ ಹಿನ್ನೆಲೆಯಲ್ಲಿ, ತಿಳಿದಂಥ ಪ್ರಸಂಗಗಳು ಇದ್ದರೂ ಕೂಡ ಇತ್ತೀ ಚೆಗೆ ರೆವಿನ್ಯೂ ಖಾತೆಯಲ್ಲಿ ಆಗಬೇಕಾದಂಥ ಕೆಲಸಗಳು ಸಮರ್ಪಕವಾಗಿ ನಡೆದರೆ ಮಾತ್ರ ಉಳಿದ ಇಲಾಖೆಯ ಕಾರ್ಯಕ್ರಮಗಳಿಗೆ ಸಹಾಯವಾಗುತ್ತದೆ ಎಂದು ಹೇಳಿ ಸರ್ಕಾರದವರು ಅರಿವು ಮಾಡಿಕೊಳ್ಳಬೇಕಾದಂಥ ಪರಿಸ್ಥಿತಿಗೆ ಬಂತು. ಉದಾಹರಣೆಗೆ, ರೆಕಾರ್ಡ್ ಆಫ್ ರೈಟ್ಸ್ ವಗೈರೆ ಕೆಲವು ಕೆಲಸಗಳು ಕ್ರಮವಾಗಿ ನಡೆಯದೆ ಇದ್ದರೆ, ಅದರಿಂದ ಇತರೆ ಕೆಲಸಗಳಿಗೆ ಬಹಳ ತೊಂದರೆ ಉಂಟಾಗುತ್ತದೆ. ಹಕ್ಕುದಾರಿ ಗೊತ್ತುಮಾಡತಕ್ಕ ಕೆಲಸಗಳು ಸಮರ್ಪಕವಾಗಿ ನಡೆಯದೆ ಇದ್ದರೆ, ಸೊಸೈಟಿಗಳಾಗಲೀ, ಬ್ಯಾಂಕುಗಳಾಗಲೀ ಇವುಗಳಿಂದ ಸಾಲ ಪಡೆಯುವುದಕ್ಕೆ ಅಗಲೀ ಅಥವಾ ಇತರೆ ಹಣ ಪಡೆಯುವುದಕ್ಕಾಗಲೀ ತೊಂದರೆಯಾಗುತ್ತದೆ. ಈ ದೃಷ್ಟಿಯಿಂದ ರೆವಿನ್ಯೂ ಇಲಾಖೆಯ ಕೆಲಸಕಾರ್ಯಗಳು ಸಮರ್ಪಕವಾಗಿ ನಡೆಯಬೇಕು ಎನ್ನುವುದನ್ನು ಸರ್ಕಾರ ಮನ ಗಂಡಿದೆ. ಅದಕ್ಕಾಗಿ ಈ ಕೆಲಸಕಾರ್ಯಗಳನ್ನು ಸಮರ್ಪಕವಾಗಿ ನಡೆಯುವಂತೆ ಮಾಡುವುದಕ್ಕೆ ಹೊಸ ಏರ್ಪಾಡು ಮಾಡಬೇಕಾದಂಥ ಪರಿಸ್ಥಿತಿ ಇತ್ತೀಚೆಗೆ ಉಂಟಾಗಿದೆ. ಈ ಕೆಲಸ ಕಾರ್ಯ ಗಳನ್ನು ನಡೆಸುವುದಕ್ಕೋಸ್ಕರ 9 ಜಿಲ್ಲೆಗಳಲ್ಲಿ ಈಗ ಡಿವಿಷನಲ್ ಡೆಪ್ಯೂಟಿ ಕಮೀಷನರುಗಳನ್ನು

† Indicates that the remarks or speeches have not been revised by the member concerned.

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಹಾಕಿದ್ದೇವೆ. ಈ ಕೆಲಸಕಾರ್ಯಗಳು ಅಂದರೆ, ಮುಖ್ಯವಾಗಿ ಇರತಕ್ಕ ಭೂಮಿಯನ್ನು ಹಂಚುವುದು. ಈ ಭೂಮಿ ಈಗಾಗಲೇ ನಾನು ಅನೇಕ ವೇಳೆ ತಿಳಿಸಿರುವ ಹಾಗೆ, ಸುಮಾರು 12 ಲ ಎಕರೆ ಭೂಮಿ ಇವತ್ತು ಜನಕ್ಕೆ ಕೊಡಬೇಕಾದಂಥಾದ್ದು ಸರ್ಕಾರದ ಸ್ವಾಧೀನದಲ್ಲಿದೆ. ಹನ್ನೆರಡು ಲಕ್ಷ ಎಕರೆಗಳಲ್ಲಿ ಸಾಗುವಳಿಗೆ ಅನರ್ಹವಾದುದು ಮತ್ತು ಇತರೇ ಕೆರೆ ಅಂಗಳದಲ್ಲಿರುವ ಕೆಲವು ಜಮೀನನ್ನು ಬಿಟ್ಟು, ಸುಮಾರು ಐದು ಲಕ್ಷ ಎಕರೆ ಭೂಮಿಯನ್ನು ಇವತ್ತು ವ್ಯವಸಾಯಕ್ಕೆ ಕೊಡುವುದಕ್ಕೆ ಸರ್ಕಾರದ ಹತ್ತಿರ ಸಿದ್ಧವಾಗಿದೆ. ಈ ಭೂಮಿಯನ್ನು ಹಂಚಿಕೆ ಮಾಡುವುದು ಅಗತ್ಯ. ವ್ಯವಸಾಯ ಅಭಿವೃದ್ಧಿ ಆಗಬೇಕಾದರೆ ಭೂಮಿ ಹಂಚಿಕೆ ಸಮರ್ಪಕವಾಗಿ ಆದಷ್ಟು ಜಾಗ್ರತೆ ನಡೆಯಬೇಕು. ಈ ಭೂಮಿ ಹಂಚಿಕೆ ಮಾಡತಕ್ಕ ಕಾರ್ಯಕ್ರಮವನ್ನು ಈಗಾಗಲೇ ಸರ್ಕಾರ ತೀವ್ರವಾಗಿ ಕೈಗೊಂಡಿದೆ. 1967 ರಿಂದ 1970 ನೆಯ ಇಸವಿಯವರೆಗೆ ಸುಮಾರು ಐವತ್ತನಾಲ್ಕುವರೆ ಸಾವಿರ ಎಕರೆ ಭೂಮಿ ಮಾತ್ರ ಹಂಚಿಕೆಯಾಗಿದೆ. ಈ ವರ್ಷದಲ್ಲಿ, ಒಂದೇ ವರ್ಷದಲ್ಲಿ ಸುಮಾರು 85 ಸಾವಿರ ಎಕರೆ ಭೂಮಿ ಹಂಚಿಕೆಯಾಗಿದೆ. ಉಳಿದಿರತಕ್ಕ ಭೂಮಿಯನ್ನು ಕೂಡ 73ನೇ ಇಸವಿಯ ಮಾರ್ಚಿ ಆಖೈರೊಳಗೆ ಹಂಚಿಕೆ ಮಾಡುವುದಕ್ಕೆ ಎಲ್ಲಾ ಕಾರ್ಯಕ್ರಮವನ್ನು ಕೈಗೊಳ್ಳಬೇಕು ಎಂದು ಜಿಲ್ಲಾ ಅಧಿಕಾರಿಗಳಿಗೆ ತಿಳಿಸಲಾಗಿದೆ. ಅಷ್ಟೇ ಅಲ್ಲದೆ ಎಲ್ಲೆಲ್ಲಿ ಹೆಚ್ಚು ಭೂಮಿ ಇದೆ, ಅಂಥ ಕಡೆಗಳಲ್ಲಿ ಭೂಮಿಯ ಹಂಚಿಕೆಯನ್ನು 73ನೇ ಇಸವಿ ಮಾರ್ಚಿ ಆಖೈರೊಳಗೆ ಆಗಬೇಕು ಎಂದು ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ. ಇದರಲ್ಲಿ ಎಷ್ಟೆಷ್ಟು ಭೂಮಿ ಹಂಚಿಕೆಯಾಗಿದೆ, ಏನು ತೊಂದರೆಗಳು ಇವೆ, ಎನ್ನುವುದನ್ನು ತಿಳಿದುಕೊಂಡು ವಿಧೇಯಕವಾಗಿರತಕ್ಕ ಅವಧಿಯೊಳಗೆ ಹಂಚುವುದಕ್ಕೆ ಸರ್ವ ಪ್ರಯತ್ನವನ್ನು ಸರ್ಕಾರ ಮಾಡುತ್ತದೆ ಎನ್ನುವ ಭರವಸೆಯನ್ನು ಈ ಸಭೆಯ ಮುಂದೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಪಟ್ಟಗಳ ಹಂಚಿಕೆಯ ವಿಷಯದ ವಿವರಕ್ಕೆ ನಾನು ಹೋಗುತ್ತೇನೆ. ಭೂಮಿ ಹಂಚಿಕೆ ಆಗಬೇಕಾದುದು ಬಹಳ ಅಗತ್ಯ. ಇನ್ನೂ ಕೆಲವಾರು ತೊಂದರೆಗಳು ತಾಲ್ಲೂಕು ಕಚೇರಿಯ ಮಟ್ಟದಲ್ಲಿ ಇವೆ. ಇವುಗಳನ್ನು ನಿವಾರಣೆ ಮಾಡಬೇಕಾದುದು ಅಗತ್ಯ. ಈ ಇಲಾಖೆ ಸಮರ್ಪಕವಾಗಿ ನಡೆಯುವುದಕ್ಕೆ ಎಲ್ಲೆಲ್ಲಿ ಸಿಬ್ಬಂದಿಯ ಅಗತ್ಯವಿದೆಯೋ ಅಲ್ಲಿಗೆ ಸಿಬ್ಬಂದಿಯನ್ನು ಕೂಡ ಒದಗಿಸುವುದಕ್ಕೆ ಸರ್ಕಾರ ಸಿದ್ಧವಾಗಿದೆ. ಮತ್ತೆ ನಮ್ಮ ಇಲಾಖೆಯ ಅಧಿಕಾರಿಗಳಿಗೆ ಕೆಲವು ಸೌಲಭ್ಯಗಳನ್ನು ಒದಗಿಸಿ ಕೊಡಬೇಕು ಎಂದು ಕೂಡ ಸರ್ಕಾರದ ಏರ್ಪಾಡು ಇದೆ. ಆದ್ದರಿಂದ 47 ರೆವಿನ್ಯೂ ಸಬ್ ಡಿವಿಷನ್‌ಗಳಲ್ಲಿ ಈಗಾಗಲೇ ಸುಮಾರು 19 ಸಬ್ ಡಿವಿಷನಗಳಿಗೆ ಮಾತ್ರ ಒಂದೊಂದು ವಾಹನ ಸೌಕರ್ಯ ಇದೆ. ಉಳಿದ 28 ಸಬ್ ಡಿವಿಜನ್‌ಗಳಿಗೆ ಒಂದೊಂದು ಜೀಪು ಕೊಡತಕ್ಕ ವ್ಯವಸ್ಥೆ ಆಗಿದೆ, ಸರ್ಕಾರ ಅದಕ್ಕೆ ಮಂಜೂರಾತಿ ಕೊಟ್ಟಿದ್ದಾರೆ. ಈ 28 ರೆವಿನ್ಯೂ ಸಬ್ ಡಿವಿಷನ್‌ಗಳಿಗೂ ಜೀಪುಗಳನ್ನು ಒದಗಿಸಿ ಕೊಡುತ್ತೇವೆ. ಹೀಗೆ ಕೆಲವು ಸೌಕರ್ಯಗಳನ್ನು ಒದಗಿಸಿಕೊಟ್ಟು, ರೆವಿನ್ಯೂ ಇಲಾಖೆ ಸಮರ್ಪಕವಾಗಿ ಕೆಲಸ ಮಾಡುವ ಹಾಗೆ ಮಾಡಿ, ಈ ಮೂಲಕ ಉಳಿದ ಇಲಾಖೆಯ ಕಾರ್ಯಕ್ರಮಗಳು ಆಗಲೀ, ಅಭಿವೃದ್ಧಿ ಕಾರ್ಯಕ್ರಮಗಳಾಗಲಿ ನಡೆಯುವುದಕ್ಕೆ ಸಹಾಯ ಆಗಬೇಕಾಗಿದೆ. ಆದ್ದರಿಂದ ಇತ್ತೀಚೆಗೆ ಈ ಇಲಾಖೆ ಹೆಚ್ಚು ಆಸಕ್ತಿಯಿಂದ ಕಾರ್ಯಕ್ರಮಗಳನ್ನು ಹಾಕಿಕೊಂಡು ಎಷ್ಟು ಮಟ್ಟಿಗೆ ಮನಸ್ಸು ಇದೆಯೋ ಅಷ್ಟುಮಟ್ಟಿಗೆ ಉಳಿದ ಕಾರ್ಯಕ್ರಮಗಳನ್ನು ಜಾರಿಗೆ ತರುವುದಕ್ಕೆ ಸಮರ್ಪಕವಾದ ರೀತಿಯಲ್ಲಿ ಕೆಲಸ ಮಾಡಿ ಮುಂದಿನ ಕಾರ್ಯಕ್ರಮಗಳು ಜಯಪ್ರದವಾಗುವ ಹಾಗೆ ಮಾಡುವುದಕ್ಕೆ ಸಹಾಯಕವಾಗಬೇಕು ಎಂದು ಸರ್ಕಾರ ದೃಷ್ಟಿ ಇಟ್ಟುಕೊಂಡು ಈ ಕೆಲಸಗಳನ್ನು ಮಾಡುವುದಕ್ಕೆ ಗೊತ್ತುಮಾಡಿದೆ. ಇನ್ನು ಮಾನ್ಯ ಸದಸ್ಯರು ಬಹಳ ಉತ್ತಮವಾದಂಥ ಕೆಲವೊಂದು ಸಲಹೆಗಳನ್ನು ಕೊಟ್ಟಿದ್ದಾರೆ. ಕಂದಾಯವನ್ನು, ಕಡಮೆ ಹಿಡುವಳಿದಾರರಿಗೆ ಏಕೆ ವಜಾಮಾಡಬಾರದು, ಹಿಂದಿನ ಸರ್ಕಾರ ಇದರ ಬಗ್ಗೆ ಒಂದು ಆರ್ಡರ್ ಮಾಡಿತ್ತು, ಹತ್ತು ಎಕರೆಗಿಂತ ಕಡಮೆ ಖುಷ್ಕಿ ಜಮೀನು ಇರತಕ್ಕವರಿಗೆ ಅಥವಾ ಸಮನಾದಂಥ ತರೀ ಮತ್ತು ಬಾಗಾಯಿತು ಇರತಕ್ಕ ಭೂಮಿ ಇರುವವರಿಗೆ ಕಂದಾಯ ವಜಾ ಮಾಡಬೇಕು ಎಂದು ಅವರು ತೀರ್ಮಾನ ಮಾಡಿದರು ಅದನ್ನು ಏತಕ್ಕೆ ಜಾರಿಗೆ ತರಬಾರದು ಎಂದು ಕೆಲವರು ಸಲಹೆ ಮಾಡಿದ್ದಾರೆ. ಅದೂ ಅಲ್ಲದೆ ಮುಖ್ಯಮಂತ್ರಿಗಳು 1970ನೇ ಇಸವಿಯಲ್ಲಿ ಭಾಷಣ ಮಾಡಿ ಹೇಳಿದಾಗ ಕಂದಾಯ ವಜಾ ಮಾಡತಕ್ಕ ವಿಷಯವಲ್ಲಿ ಅವರು ಬಹಳ ಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾರೆ. ಕಡಮೆ ಹಿಡುವಳಿದಾರರಿಗೆ ಕಂದಾಯ ವಜಾ ಮಾಡಬೇಕಾದದ್ದು ಅಗತ್ಯ ಎಂದು ತಿಳಿಸಿದ್ದಾರೆ, ಅದನ್ನು ಏತಕ್ಕೆ ಮಾಡಿಲ್ಲ ಎಂದು ಕೆಲವರು ಕೇಳಿದರು. ಅಧ್ಯಕ್ಷರೇ, ಈ ಕಂದಾಯ ವಜಾ ಮಾಡತಕ್ಕ ವಿಷಯವಾಗಿ ತೀವ್ರ ಆಲೋಚನೆ ಮಾಡಬೇಕಾದ್ದು ಇದೆ. ಮೊನ್ನೆತಾನೇ ರಾಜ್ ಕಮಿಟಿ ಎಂದು ಒಂದು ಕಮಿಟಿಯನ್ನು ಕೇಂದ್ರ ಸರ್ಕಾರದವರು ನೇಮಕ ಮಾಡಿದ್ದಾರೆ. ಮುಖ್ಯಮಂತ್ರಿಗಳು ಭೂಮಿಯ ಆದಾಯದಮೇಲೆ

ಆದಾಯ ತೆರಿಗೆ ಹಾಕಿ ಕಂದಾಯ ವಜಾಮಾಡಬೇಕು, ಕಂದಾಯ ಪದ್ಧತಿ ಶಾಸ್ತ್ರೀಯವಾಗಿ ಇಲ್ಲ, ಈ ಜಮೀನು ಉತ್ಪತ್ತಿ ಪ್ರಮಾಣದ ಮೇಲೆ ಕಂದಾಯ ಹಾಕುವುದೇ ಶಾಸ್ತ್ರೀಯವಾದ ತೆರಿಗೆಯೆಂದು ಸ್ಪಷ್ಟಪಡಿಸಿದ್ದಾರೆ. ಅದು ಶಾಸ್ತ್ರೀಯವಾಗಿದ್ದರೂ ಕೂಡ ಕೆಲವು ತೊಂದರೆಗಳು ಇವೆ. ಲೆಕ್ಕ ಇಡತಕ್ಕದ್ದು ಸಾಮಾನ್ಯ ರೈತರಿಗೆ ಗೊತ್ತಿಲ್ಲದೆ ಇರುವುದರಿಂದ, ಅವರಿಗೆ ಅಧಿಕಾರಿಗಳಿಂದ ಕಿರುಕುಳ ಉಂಟಾಗುತ್ತದೆ. ಈ ಕಿರುಕುಳ ತಪ್ಪಿಸಬೇಕು ಎನ್ನುವುದು ಕೂಡ ದೃಷ್ಟಿಯಲ್ಲಿ ಇದೆ. ಆ ದೃಷ್ಟಿಯಿಂದ ಯಾವರೀತಿ ಕಿರುಕುಳಗಳನ್ನು ತಪ್ಪಿಸಿ, ಆದಾಯ ತೆರಿಗೆ ಹೇಗೆ ಹಾಕಬೇಕು, ಯಾವ ಯಾವ ಮಟ್ಟದಲ್ಲಿ ಎಷ್ಟೆಷ್ಟು ಇರಬೇಕು ಎಂದು ಈ ರಾಜ್ ಸಮಿತಿಯವರು ಕೊಟ್ಟ ವರದಿಯನ್ನು ನೋಡಿ, ಕಂದಾಯವನ್ನು ರದ್ದುಮಾಡತಕ್ಕದ್ದಾಗಲೀ, ಆದಾಯ ತೆರಿಗೆ ಹಾಕತಕ್ಕದ್ದಾಗಲಿ ಪರಿಶೀಲನೆ ಮಾಡಿ ಕೆಲವಾರು ದಿವಸಗಳ ಮೇಲೆ ಸರ್ಕಾರ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಇಷ್ಟುಮಾತ್ರ ಹೇಳುತ್ತೇನೆ.

ಇನ್ನು ಕಂದಾಯದ ವಸೂಲ ವಿಷಯ ಕೆಲವು ಸ್ನೇಹಿತರು ಹೇಳಿದರು. ಕಂದಾಯ ಬಾಕಿ ಬಹಳವಾಗಿ ನಿಂತಿದೆ ಎನ್ನುವುದು ನಿಜ. ಆದರೆ ಏಕ ಕಾಲದಲ್ಲಿ ಬಾಕಿ ವಸೂಲು ಮಾಡುವುದು ಕಷ್ಟ ಎನ್ನುವ ಅರಿವು ಸರ್ಕಾರಕ್ಕೆ ಇದೆ. ಆದುದರಿಂದಲೇ ಜಿಲ್ಲಾಧಿಕಾರಿಗಳ ಸಮ್ಮೇಳನ ನಡೆಸಿ ಈಗ ಈ ವರ್ಷದ ಕಂದಾಯ ಮತ್ತು ಹಿಂದಿನ ಬಾಕಿಯಲ್ಲಿ ಒಂದು ವರ್ಷದ ಕಂದಾಯ ಮಾತ್ರ ಈ ವರ್ಷದ ಡಿಸೆಂಬರ್ ಆಖೈರಿನೊಳಗೆ ವಸೂಲು ಮಾಡಬೇಕು ಎಂದು ತಿಳಿಸಿದ್ದೇವೆ. ಅದಕ್ಕಿಂತ ಹೆಚ್ಚಿಗೆ ವಸೂಲು ಮಾಡುವುದಕ್ಕೆ ತೊಂದರೆಗಳು ಆದರೆ, ಹೆಚ್ಚು ವಸೂಲು ಮಾಡುವುದಕ್ಕೆ ಜಿಲ್ಲಾಧಿಕಾರಿಗಳು ಕ್ರಮ ಕೈಕೊಂಡಿದ್ದರೆ, ಜನಗಳಿಗೆ ಕಿರುಕುಳ ಆಗಿದ್ದರೆ, ಅದನ್ನು ತಪ್ಪಿಸಿ ಹಿಂದೆ ತಿಳಿಸಿದ ರೀತಿಯಲ್ಲಿ 2 ವರ್ಷದ ಕಂದಾಯ ಮಾತ್ರ ಡಿಸೆಂಬರ್ ಆಖೈರಿನೊಳಗೆ ವಸೂಲು ಮಾಡಬೇಕು, ಅದಕ್ಕಿಂಥ ಹೆಚ್ಚಿಗೆ ವಸೂಲು ಮಾಡುವುದಕ್ಕೆ ಹೋಗಿ ಜನಗಳಿಗೆ ಕಿರುಕುಳ ಕೊಡಬೇಡಿ ಎಂದು ಮತ್ತೊಮ್ಮೆ ಜಿಲ್ಲಾಧಿಕಾರಿಗಳಿಗೆ ತಿಳಿಸುತ್ತೇನೆ ಎಂದು ಭರವಸೆ ಕೊಡಬಲ್ಲೆ.

ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಎರಡು ವರ್ಷ ಯಾವುದು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಹಾಲಿ ಇರತಕ್ಕ ಈ ವರ್ಷದ ಬಾಕಿ ಮತ್ತು ಹಿಂದಿನ ಒಂದು ವರ್ಷದ್ದು ಇಷ್ಟು ಮಾತ್ರ. ಇನ್ನು ಬೆಳೆ ಕಡಿಮೆ ಇರತಕ್ಕ ಕಡೆ ಕಂದಾಯ ವಜಾಮಾಡಬೇಕೆಂದು ಎದುರು ಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರು ಸಲಹೆಕೊಟ್ಟರು. ಈಗ ಇರುವ ಹಾಗೆ ಎಲ್ಲೆಲ್ಲಿ 4 ಆಣೆ ಬೆಳೆಗಿಂತ ಕಡಿಮೆ ಬೆಳೆಯಾಗಿದೆಯೋ ಅಂಥ ಕಡೆ ಜಿಲ್ಲಾಧಿಕಾರಿಗಳು ವರದಿಯನ್ನು ಕಳುಹಿಸಿದಕೂಡಲೇ ಕಂದಾಯವನ್ನು ವಸೂಲು ಮಾಡಬೇಕಿಲ್ಲ ಎಂದು ಈಗಾಗಲೇ ವಿಧಾಯಕವಾಗಿದೆ. ಇದರ ಜೊತೆಗೆ ಅಂಥ ಕಡೆಗಳಲ್ಲಿ ಕಂದಾಯ ರೆಮಿಷನ್ ಕೊಡಲಾಗುತ್ತದೆ. ಮತ್ತು ಕಂದಾಯ ಸಸ್‌ಪೆಂಡ್ ಮಾಡಿರುವ ಕಡೆ, ಬಡ್ಡಿ ಹಾಕುತ್ತಿದ್ದೇವೆ, ಪೀನಲ್ ಇಂಟರೆಸ್ಟ್ ಹಾಕುತ್ತಿದ್ದೇವೆಂದು ಹೇಳಿದರು. ಕಂದಾಯದ ಮೇಲೆ ಬಡ್ಡಿ ವಿಧಾಯಕ ಮಾಡಿಲ್ಲ. ಅದರಲ್ಲೂ ಸರ್ಕಾರದವರು ಪರಿಸ್ಥಿತಿಯನ್ನು ತಿಳಿದು ಸಸ್‌ಪೆಂಡ್ ಮಾಡಿರುವುದರಿಂದ, ಅದಕ್ಕೆ ಬಡ್ಡಿ ಹಾಕತಕ್ಕ ಪ್ರಮೇಯವಿಲ್ಲ. ಪೀನಲ್ ಇಂಟರೆಸ್ಟ್ ಹಾಕತಕ್ಕ ಪ್ರಮೇಯವೂ ಇಲ್ಲ, ಹಾಕುತ್ತಲೂ ಇಲ್ಲ.

ಇನ್ನು ವಾಟರ್ ರೇಟ್ ವಿಷಯ ತಿಳಿಸಿದರು. ಈ ವಾಟರ್ ರೇಟ್ ವಿಷಯದಲ್ಲೂ ಕೂಡ ನಮ್ಮ ಅರ್ಥಸಚಿವರು, ಅವರ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಅದನ್ನು ಮಾನ್ಯ ಸದಸ್ಯರು ಗಮನಿಸಿದ್ದಾರೆಂದು ನಾನು ಭಾವಿಸುತ್ತೇನೆ. ನೀರಾವರಿ ಪ್ರದೇಶಗಳಲ್ಲಿ ಎಲ್ಲಿ ಬೆಳೆ ಆಗಲಿಲ್ಲವೋ ಆ ಪ್ರದೇಶಗಳಲ್ಲಿ ವಾಟರ್ ರೇಟನ್ನು ವಸೂಲು ಮಾಡಬೇಕಾದುದು ಇಲ್ಲ ಎಂದು ಸ್ಪಷ್ಟಪಡಿಸಿದ್ದೇವೆ. ಹಿಂದಿನ ಸರ್ಕಾರದವರು ಕೂಡ ವಾಟರ್ ರೇಟನ್ನು ವಸೂಲು ಮಾಡತಕ್ಕ ಸಂದರ್ಭದಲ್ಲಿ ಅದಕ್ಕೆ ಕೆಲವು ತೊಂದರೆಗಳು ಉಂಟಾಗಿವೆ. 1967ನೇ ಸಾಲಿನಲ್ಲಿ ಕಾನೂನಾಗಿ ಅದನ್ನು 1965ನೇ ಇಸವಿಯಿಂದ ಜಾರಿಗೆ ಕೊಟ್ಟಿದ್ದರಿಂದ ಎಲ್ಲೆಲ್ಲಿ ಬೆಳೆಯಾಗಿದೆ, ಇಲ್ಲ ಎಂದು ನಿರ್ಧರಿಸುವುದು ಕಷ್ಟವಾಗಿದೆ. ಅದರಿಂದ ರೈತರಿಗೆ ಕಿರುಕುಳ ಆಗಿದ್ದು ನಿಜ. ಆದುದರಿಂದ ಎಲ್ಲೆಲ್ಲಿ ಅನುಮಾನ ಇದೆ ಅಂಥ ಕಡೆ ಸಂಬಂಧಪಟ್ಟ ಎಕ್ಸಿಕ್ಯೂಟೀವ್ ಇಂಜಿನಿಯರ್ ಮತ್ತು ಅಸಿಸ್ಟೆಂಟ್ ಕಮೀಷನರ್ ಸ್ಥಳಕ್ಕೆ ಹೋಗಿ ಸ್ಥಳದಲ್ಲಿ ವಿಚಾರಮಾಡಿ ಎಲ್ಲಿ ಬೆಳೆ ಆಗಿಲ್ಲ ಎನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ ಅಂಥ ಕಡೆ ನೀರಿನ ತೆರಿಗೆ ವಸೂಲು ಮಾಡಬೇಕಾದದ್ದು ಇಲ್ಲ ಎಂದು ಹಿಂದಿನ ಸರ್ಕಾರದವರೂ ಕೂಡ ತಿಳಿಸಿದ್ದಾರೆ.

Sri H. S. SIDDAPPA (Arsikere).—There are instances where one Tahsildar passed the demand for water rate and that Tahsildar was transferred and another Tashildar came. When the people represented to him that there was no rain and even the land revenue was exempted and hence for that period he should not levy water tax, he said 'It is not I who has passed the order, you may go on appeal to the Assistant Commissioner.' In my Taluk, hundreds of royts have gone on appeal by paying fees to lawyers. Would you direct that in such cases, the Tashildars should not levy water rate ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಾಗಲೇ ಸ್ಪಷ್ಟವಾಗಿ ತಿಳಿಸಿದೆ. ಎಲ್ಲಿ ಬೆಳೆ ಆಗಿಲ್ಲ ಆ ಕಡೆ ನಾವು ವಾಟರ್ ರೇಟನ್ನು ವಸೂಲು ಮಾಡಕೂಡದು ಎಂದು ಸ್ಪಷ್ಟವಾಗಿ ತಿಳುವಳಿಕೆ ಕೊಟ್ಟಿದ್ದೇವೆ. ಇದನ್ನು ಮರೆತು ಯಾಗಾದರೂ ಅಧಿಕಾರಿಗಳು ಬೆಳೆ ಆಗದ ಪ್ರದೇಶಗಳಲ್ಲಿ ಕಂದಾಯ ವಸೂಲು ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದರೆ, ಅದನ್ನು ನಿಲ್ಲಿಸುತ್ತೇವೆ ಎಂದು ಭರವಸೆ ಕೊಡುತ್ತೇನೆ. ಮತ್ತೆ ಪಹಣಿ ಆಧಾರದ ಮೇಲೆ ಕಂದಾಯ ವಸೂಲು ಮಾಡುತ್ತಾರೆ ಎಂದು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಸಾಮಾನ್ಯವಾಗಿ ಪಹಣಿ ಲೆಕ್ಕದ ಮೇಲೆ ಎಷ್ಟೆಷ್ಟು ಅಣೇವಾರಿ ಬೆಳೆ ಆಗಿದೆ ಎಂದು ತಿಳಿದುಕೊಳ್ಳತಕ್ಕದ್ದು ಇದೆ. ಪಹಣಿ ಎಲ್ಲಾ ಸಂದರ್ಭಗಳಲ್ಲೂ ನಂಬಿ ಅದರಂತೆ ಮಾಡಬೇಕು ಎನ್ನುವ ಪ್ರಸಂಗ ಇಲ್ಲದೆ ಇರಬಹುದು. ಎಲ್ಲಿ ಅನುಮಾನಗಳು ಇದೆ ಆ ವಿಷಯ ಸರ್ಕಾರದ ಗಮನಕ್ಕೆ ಬಂದಮೇಲೆ, ಪಹಣಿ ಆಧಾರಇಟ್ಟುಕೊಳ್ಳದೆ, ಸ್ಥಳದಲ್ಲಿ ವಿಚಾರಣೆ ಮಾಡಿ ಅಲ್ಲಿ ಇರತಕ್ಕ ಪರಿಸ್ಥಿತಿ ನೋಡಿಕೊಂಡು ವಿಧೇಯಕ ಮಾಡುವುದಕ್ಕೆ ಯಾವ ಅಡ್ಡಿಯೂ ಇಲ್ಲ. ಆ ಕೆಲಸ ಮಾಡುತ್ತೇವೆ.

ಇನ್ನು ಭೂಮಿ ಹಂಚಿಕೆ ವಿಷಯ ಆಗಲೇ ಹೇಳಿದೆ. ಪಟ್ಟೆಗಳನ್ನು ಹಂಚುವ ವಿಷಯದಲ್ಲಿ ಕಾರ್ಯಕ್ರಮ ಕೈಕೊಳ್ಳಬೇಕೆಂದು ಕೂಡ ಕೆಲವು ಮಾನ್ಯಸದಸ್ಯರು ಸಲಹೆ ಕೊಟ್ಟರು. ಈಗ ಇರುವಹಾಗೆ ನಾವು ಅಧಿಕಾರಕ್ಕೆ ಬಂದ ತರುಣದಲ್ಲಿ ಲೆಕ್ಕ ನೋಡಿದ್ದರಲ್ಲಿ 44 ಲಕ್ಷ 61 ಸಾವಿರಕ್ಕೆ ಮೇಲ್ಪಟ್ಟು ಹಿಡುವಳಿದಾರರು ಇದ್ದಾರೆ. ಹಿಂದಿನ ಅವಧಿಯಲ್ಲಿ 11 ಲಕ್ಷ 70 ಸಾವಿರ ಚಿಲ್ಲರೆ ಮಾತ್ರ ಪಟ್ಟೆಗಳ ವಿತರಣೆ ಮಾಡಿದ್ದು ಅಂಕಿ ಅಂಶಗಳಿಂದ ಗೊತ್ತಾಗಿದೆ. ಈ ಕೆಲಸ ಈ ವರ್ಷದ ಡಿಸೆಂಬರ್ ಆಖೈರಿನೊಳಗೆ ಮುಗಿಯಬೇಕು ಎಂದು ಗೊತ್ತುಮಾಡಿ, ಇದಕ್ಕೆ ಏನೇನು ವ್ಯವಸ್ಥೆ ಮಾಡಬೇಕು ಅದನ್ನು ಮಾಡಿ ಪಟ್ಟೆಗಳನ್ನು ಮುದ್ರಿಸಿ ಪ್ರತಿ ತಾಲ್ಲೋಕಿನಲ್ಲಿ ಈ ಪಟ್ಟೆಗಳನ್ನು ವಿತರಣೆ ಮಾಡಲು ವ್ಯವಸ್ಥೆ ಮಾಡಿದ್ದೇವೆ. ಡಿಸೆಂಬರ್ ಆಖೈರಿನೊಳಗೆ ಪಟ್ಟೆಗಳು ಪೂರಾ ವಿತರಣೆಯಾಗಬೇಕು ಎಂದು ಕಾಲ ಗೊತ್ತುಮಾಡಲಾಗಿದೆ.

ಇನ್ನು ಅಕ್ರಮ ಸಾಗುವಳಿಯಾಗಿರತಕ್ಕಂಥ ಜಮೀನಿನ ವಿಸ್ತೀರ್ಣ ಎಷ್ಟಿದೆ ಎಂದು ಮಾನ್ಯ ಸದಸ್ಯರು ಕೇಳಿದರು. ಒಟ್ಟು ಭೂಮಿಯ ವಿಸ್ತೀರ್ಣದಲ್ಲಿ ಸುಮಾರು 2 ಲಕ್ಷ 80 ಸಾವಿರ ಎಕರೆಗಳಷ್ಟು ಅಕ್ರಮ ಸಾಗುವಳಿಗೆ ಒಳಪಟ್ಟಿದೆ. ಈ ಅಕ್ರಮ ಸಾಗುವಳಿಗೆ ಒಳಪಟ್ಟಿರುವುದನ್ನು ಯಾವ ರೀತಿ ಹಂಚಬೇಕು ಎಂಬ ಬಗ್ಗೆ ಕೆಲವು ನಿಯಮಗಳಿವೆ. ಆ ಒಂದು ನಿಯಮಗಳ ಪ್ರಕಾರ ಹಂಚಬೇಕಾಗುತ್ತದೆ. ನೆನ್ನೆ ತಾನೆ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಅಕ್ರಮ ಸಾಗುವಳಿ ಮಾಡಿಕೊಂಡಿರುವವರಿಗೆಲ್ಲಾ ಅದನ್ನು ಕಾಯಂ ಮಾಡುವುದಿಲ್ಲ ಎಂದು ಹೇಳಿದೆ. ಸಫಿಷಿಯೆಂಟ್ ಹೋಲ್ಡರ್ ಆದವರಿಗೆ, ತಾಲ್ಲೂಕಿನ ಹೊರಗಡೆ ವಾಸ ಮಾಡುತ್ತಿರುವವರಿಗೆ ಮತ್ತು, ಯಾರು ನೇರವಾಗಿ ವ್ಯವಸಾಯ ಮಾಡುತ್ತಿರುವುದಿಲ್ಲ ಅಂತಹವರಿಗೆ ಈ ಭೂಮಿಯನ್ನು ಕೊಡುವುದಿಲ್ಲ ಎಂಬುದಾಗಿ ಸ್ಪಷ್ಟವಾಗಿ ತಿಳಿಸಿದ್ದೇನೆ. ಸಫಿಷಿಯೆಂಟ್ ಹೋಲ್ಡರ್ ಯಾರು ಎಂಬ ಬಗ್ಗೆ ಕೂಡ ವಿವರಣೆ ಕೊಟ್ಟಿದ್ದೇನೆ. ಹಿಂದಿನ ಆರ್ಡರ್ ಪ್ರಕಾರ 4 ಹೆಕ್ಟಾರ್ ಗದ್ದೆ ಅಥವಾ ತೋಟ ಇರುವವರು, 8 ಹೆಕ್ಟಾರ್ ಖುಷ್ಕಿ ಜಮೀನು ಇರುವವರು ಸಫಿಷಿಯೆಂಟ್ ಹೋಲ್ಡರ್ ಎಂದು ಇತ್ತು. ಈಗ ಅದನ್ನು ಬದಲಾವಣೆ ಮಾಡಿ ಒಂದು ಹೆಕ್ಟಾರ್ ತರಿ ಅಥವಾ ತೋಟ ಎರಡು ಹೆಕ್ಟಾರ್ ಖುಷ್ಕಿ ಇದ್ದರೆ ಅವರು ಸಫಿಷಿಯೆಂಟ್ ಹೋಲ್ಡರ್ ಆಗುತ್ತಾರೆ. ಇದಕ್ಕಿಂತ ಕಡಿಮೆ ಭೂಮಿ ಇರುವವರಿಗೆ ಸಫಿಷಿಯೆಂಟ್ ಹೋಲ್ಡರ್ ಆಗುವುದಕ್ಕೆ ಎಷ್ಟು ಭೂಮಿ ಬೇಕೋ ಅಷ್ಟನ್ನು ಕೊಡಬಹುದು. ಮುಖ್ಯವಾಗಿ ಅಕ್ರಮ ಸಾಗುವಳಿಯಾಗಿರತಕ್ಕಂಥ ಭೂಮಿಯನ್ನು ಭೂರಹಿತರಿಗೆ ಕೊಡುವುದಕ್ಕೆ ಯಾವ ಅಡ್ಡಿಯೂ ಇರುವುದಿಲ್ಲ. ಅಂತಹವರಿಗೆ ಕೊಡಿಸುವುದಕ್ಕೆ ಏರ್ಪಾಡು ಮಾಡಿದೆ. ಈ ಅಕ್ರಮ ಸಾಗುವಳಿಯನ್ನು ತಡೆಗಟ್ಟುವುದಕ್ಕಾಗಿ, ಯಾರು ಅಕ್ರಮ ಸಾಗುವಳಿ ಮಾಡುತ್ತಾರೋ ಅಂತಹವರಿಗೆ ಎಕರೆ ಒಂದಕ್ಕೆ 500 ರೂಪಾಯಿಗಳ ಪ್ರಕಾರ ಜುಲ್ಮಾನೆ ಹಾಕುವುದಕ್ಕೆ ಏರ್ಪಾಡು ಮಾಡಿದ್ದೇವೆ. ಇಷ್ಟು ಜುಲ್ಮಾನೆ

ಹಾಕಿದ್ದರೂ ಕೂಡ ಅಕ್ರಮ ಸಾಗುವಳಿ ಮಾಡಿರುವುದು ಉಂಟು. ಇಂತಹವರಲ್ಲಿ ಜಮೀನು ದಾರರು ಕೆಲವರು ಇರಬಹುದು. ಬಡವರು ಕೂಡ ಅನಿವಾರ್ಯವಾಗಿ ಜೀವನ ಮಾರ್ಗ ಕ್ಕೋಸ್ಕರ ಮಾಡಿರಬಹುದು. ಜಮೀನುದಾರರು ಏನಾದರೂ ಅಕ್ರಮ ಸಾಗುವಳಿ ಮಾಡಿದ್ದರೆ ಅಂತಹವರಿಗೆ ಜುರ್ಮಾನೆ ಹಾಕುವುದು ಅಷ್ಟೇ ಅಲ್ಲ, ಅದನ್ನು ಅವರ ಕೈಯಿಂದ ತಪ್ಪಿಸುವುದಕ್ಕೆ ಸಾಕಷ್ಟು ನಿಯಮಗಳನ್ನು ಮಾಡಿಕೊಂಡು ಅದರಂತೆ ಕಾರ್ಯಕ್ರಮ ಕೈಕೊಳ್ಳಲಾಗಿದೆ. ಆದರೆ ಭೂರಹಿತರಿಗೆ ಜುರ್ಮಾನೆ ಹಾಕುವುದನ್ನು ಕಡಿಮೆ ಮಾಡಿ, ಆ ಜಮೀನನ್ನು ಅವರ ಹೆಸರಿಗೇ ಕ್ರಮಪಡಿಸುವುದಕ್ಕೆ ಕಾರ್ಯಕ್ರಮ ಕೈಕೊಂಡಿದ್ದೇವೆ. ಈ ರೀತಿ ಕ್ರಮ ಪಡಿಸುವುದಕ್ಕೂ ಕೂಡ ಒಂದು ಕಾಲ ಮಿತಿಯನ್ನು ಹಾಕಿದೆ. ತಾರೀಖು 1-7-1968ಕ್ಕೆ ಮುಂಚೆ ಅಕ್ರಮ ಸಾಗು ವಳಿ ಮಾಡಿದ್ದರೆ ಅದನ್ನು ಅವರಿಗೇ ಕಾನೂನು ಪ್ರಕಾರ ಕಾಯಂಗೊಳಿಸಲಾಗುವುದು. ಅಲ್ಲಿಂದೀಚೆಗೆ ಅಕ್ರಮ ಸಾಗುವಳಿ ಮಾಡಿರುವವರಿಗೂ ಸಹ ಕಾಯಂ ಮಾಡಬೇಕೆಂದು ಮಾನ್ಯ ಸದಸ್ಯರು ಸಲಹೆ ಮಾಡಿದರು. ತಾರೀಖು 1-7-1968ಕ್ಕೆ ಮುಂಚೆ ಅಕ್ರಮಸಾಗುವಳಿ ಮಾಡಿರುವವರಿಗೆ ಯಾವ ನಿಯಮಗಳನ್ನು ಅನುಸರಿಸಲಾಗುವುದೋ ಅದೇ ನಿಯಮಗಳನ್ನು ಅಲ್ಲಿಂದೀಚೆಗೆ ಅಕ್ರಮ ಸಾಗುವಳಿ ಮಾಡಿರುವವರಿಗೂ ಸಹ ಅನುಸರಿಸಿ ಸಹಾಯ ಮಾಡುವುದಕ್ಕೆ ಸರ್ಕಾರ ಏರ್ಪಾಡು ಮಾಡಿದೆ. ದೊಡ್ಡ ದೊಡ್ಡ ಜಮೀನುದಾರರು ಏನಾದರು ಹೆಚ್ಚು ಆದಾಯ ಪಡೆಯುವ ದೃಷ್ಟಿ ಯಿಂದ ಸ್ವಲ್ಪ ಜಮೀನನ್ನು ಅಕ್ರಮ ಸಾಗುವಳಿ ಮಾಡಿದ್ದರೆ ಅಂಥಾದ್ದನ್ನು ಅವರಿಗೇ ಕಾಯಂ ಮಾಡಬೇಕೆಂದು ಕೆಲವರು ಸಲಹೆ ಮಾಡಿದರು. ಆ ಒಂದು ಸಲಹೆಯ ಪ್ರಕಾರ ಜಮೀನು ಇರತಕ್ಕಂ ತಹವರು ಬೆಟರ್ ಕಲ್ಟಿವೇಷನ್ ಮಾಡುವುದಕೋಸ್ಕರ ಸುಮಾರು ಒಂದು ಹೆಕ್ಟಾರ್ ಖುಷ್ಕಿ, ಅರ್ಧ ಹೆಕ್ಟಾರ್ ತರಿ ಅಥವಾ ಬಾಗಾಯಿತು ಅಕ್ರಮ ಸಾಗುವಳಿ ಮಾಡಿದ್ದರೆ ಅವರಿಗೆ ಕಾಯಂ ಮಾಡು ವುದಕ್ಕೆ ಕಾನೂನಿನಲ್ಲಿ ಅವಕಾಶವಿದೆ. ಈ ರೀತಿ ಕಾನೂನಿನಲ್ಲಿ ಅವಕಾಶವಿರುವುದರಿಂದ, ಇಷ್ಟು ಜಮೀನನ್ನು ಮಾತ್ರ ಅಕ್ರಮ ಸಾಗುವಳಿ ಮಾಡಿರುವವರಿಗೆ ಅದನ್ನು ಅವರ ಹೆಸರಿಗೇ ಕಾಯಂ ಮಾಡುವುದಕ್ಕೆ ಅಧಿಕಾರಿಗಳು ಕಾರ್ಯಕ್ರಮ ಕೈಕೊಂಡಿದ್ದಾರೆ.

ರೆಕಾರ್ಡ್ ಆಫ್ ರೈಟ್ಸ್ ವಿಷಯವನ್ನು ಕೆಲವರು ಪ್ರಸ್ತಾಪ ಮಾಡಿದರು. ರೆಕಾರ್ಡ್ ಆಫ್ ರೈಟ್ಸ್‌ನಲ್ಲಿ ಕೆಲವು ಸಲ ಜಮೀನುಗಳು ಮೂರು ನಾಲ್ಕು ಕೈಗಳು ಬದಲಾವಣೆಯಾಗಿದ್ದರೂ ಕೂಡ ಅವರ ಹೆಸರಿನಲ್ಲಿ ದಾಖಲಾತಿಗಳು ಇರುವುದಿಲ್ಲ. ಇದನ್ನು ಸರಿಪಡಿಸುವುದಕ್ಕೋಸ್ಕರ ವಿಶೇಷ ಸಿಬ್ಬಂದಿ ಗಳನ್ನು ಕೆಲವು ಭಾಗಗಳಲ್ಲಿ ನೇಮಕ ಮಾಡಲಾಗಿದೆ. ಬೆಳಗಾಂ ಮತ್ತು ಗುಲ್ಬರ್ಗ ಡಿವಿಜನ್‌ಗಳಲ್ಲಿ ಯಾವುದೂ ಬಾಕಿ ಇಲ್ಲ. ಆದರೆ ಹಳೆಯ ಮೈಸೂರು ಭಾಗದಲ್ಲಿ ಅಂದರೆ ಬೆಂಗಳೂರು ಮತ್ತು ಮೈಸೂರು ಡಿವಿಜನ್‌ಗಳಲ್ಲಿ ಇದರ ಬಾಕಿ ಇದೆ. ಇಂತಹ ಬಾಕಿ ಇರುವ ಕಡೆಗಳಲ್ಲಿ ವಿಶೇಷ ಸಿಬ್ಬಂದಿ ಗಳನ್ನು ಹಾಕಿ ಸರಿಪಡಿಸಲಾಗುತ್ತಿದೆ. ಮದ್ರಾಸ್ ಸ್ಟೇಟ್‌ನಿಂದ ಬಂದಂಥ ದಕ್ಷಿಣ ಕನ್ನಡ ಜಿಲ್ಲೆ, ಬಳ್ಳಾರಿ, ಕೊಳ್ಳೆಗಾಲ ಮತ್ತು ಕೊಡಗು ಜಿಲ್ಲೆಗಳಲ್ಲಿ ಇದು ಜಾರಿಯಲ್ಲಿರಲಿಲ್ಲ. ಅಲ್ಲಿಯೂ ಸಹ ಇದನ್ನು ಜಾರಿಗೆ ತರಬೇಕೆಂದು ಪ್ರಯತ್ನ ಮಾಡಿ, ಅದರ ಬಗ್ಗೆ ಕೆಲಸ ನಡೆಯುತ್ತಿದೆ. ಈ ರೀತಿ ರೆಕಾರ್ಡ್ ಆಫ್ ರೈಟ್ಸ್‌ನ್ನು ತಯಾರು ಮಾಡುವ ಕಾಲದಲ್ಲಿ ಕೆಲವು ತೊಂದರೆಗಳಾಗುತ್ತಿವೆ, ಅವುಗ ಳನ್ನು ಬಗೆಹರಿಸಬೇಕೆಂದು ಮಾನ್ಯ ದೇವೇಗೌಡರು ಮತ್ತು ಇತರ ಸದಸ್ಯರುಗಳು ಸಲಹೆ ಮಾಡಿದರು. ಯಾರ ಹೆಸರಿನಲ್ಲಿ ಜಮೀನು ಇದೆ ಎಂಬ ಬಗ್ಗೆ ರೆಕಾರ್ಡ್ ಆಫ್ ರೈಟ್ಸ್‌ನ್ನು ತಯಾರು ಮಾಡುವ ಕಾಲಕ್ಕೆ ಆಧಾರ ಇರತಕ್ಕಂಥ ಕಾಗದ ಪತ್ರಗಳು ಸಿಕ್ಕದೇ ಇರತಕ್ಕಂಥ ಸಂದರ್ಭಗಳುಂಟು. ಅಂತಹ ಪರಿಸ್ಥಿತಿ ಬಂದಾಗ ಸಂಬಂಧಪಟ್ಟ ಅಧಿಕಾರಿಗಳು ಆಯಾ ಗ್ರಾಮಕ್ಕೆ ಹೋಗಿ ಅಲ್ಲಿಯ ಮುಖ್ಯಸ್ಥರನ್ನು ಆಧಾರವಾಗಿ ಇಟ್ಟುಕೊಂಡು ಮಹಜರ್ ಮಾಡಿ, ಯಾರ ಸ್ವಾಧೀನದಲ್ಲಿ ಜಮೀನು ಇದೆ ಎಂಬುದನ್ನು ಗೊತ್ತು ಮಾಡಿಕೊಂಡು ನಂತರ ಅವರ ಹೆಸರುಗಳಿಗೆ ದಾಖಲೆಗಳನ್ನು ಮಾಡ ಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಗಿದೆ. ಅದರಂತೆ ಅವರು ಕೆಲಸ ಮಾಡುತ್ತಿ ದ್ದಾರೆ. ಕೆಲವು ಸಂದರ್ಭಗಳಲ್ಲಿ ಯಾರು ಜಮೀನನ್ನು ಸಾಗುವಳಿ ಮಾಡುತ್ತಿರುತ್ತಾರೋ ಅವರ ಹೆಸರಿನಲ್ಲಿ ಪಹಣಿ ಇಲ್ಲದಿರುವ ಸಂದರ್ಭಗಳಿರುತ್ತವೆ. ಅಂತಹ ಸಂದರ್ಭಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಹೋಗಿ ನೋಡಿ, ಯಾರು ನಿಜವಾಗಿ ಜಮೀನನ್ನು ಸಾಗುವಳಿ ಮಾಡುತ್ತಿರು ತ್ತಾರೋ ಅವರ ಹೆಸರಿಗೆ ರೆಕಾರ್ಡ್ ಆಫ್ ರೈಟ್ಸ್‌ನ್ನು ಬರೆಯುವುದಕ್ಕೆ ಕಾರ್ಯಕ್ರಮ ಕೈಕೊಳ್ಳು ತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಈಗ ತಾವು ಹೇಳಿದ್ದಕ್ಕೆ ವಿರುದ್ಧವಾಗಿ ಕೆಲವು ಕಡೆಗಳಲ್ಲಿ ನಡೆಯುತ್ತಿದೆ. ತಮ್ಮ ಕಡೆಯೂ ನಡೆಯುತ್ತಿರಬಹುದೆಂದು ಕಾಣುತ್ತದೆ. ಕೆಲವು ಹಳ್ಳಿಗಳಲ್ಲಿ ಊರಿಗೆ ಊರೇ ಒಂದಾಗಿ ಪಹಣಿಯನ್ನು ತಿದ್ದಿಸುವುದಕ್ಕೆ ಏರ್ಪಾಡು ಮಾಡುತ್ತಿದ್ದಾರೆ. ನಮ್ಮ ಜಿಲ್ಲೆಯ ಕೆಲವು ಹಳ್ಳಿಗಳಲ್ಲಿ ಇದು ನಡೆದಿದೆ. ಇಂತಹ ಸಂದರ್ಭಗಳಲ್ಲಿ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಅಂಥಾದ್ದು ಯಾವುದಾದರೂ ಸಂದರ್ಭಗಳಿದ್ದರೆ ಅದನ್ನು ತಾವು ನನ್ನ ಗಮನಕ್ಕೆ ತಂದರೆ ಅದನ್ನು ಯಾವ ರೀತಿ ಮಾಡಬೇಕೆಂದು ನೋಡಿ, ಆ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಕೊಳ್ಳುವುದಕ್ಕೆ ಭರವಸೆ ಕೊಡಬಲ್ಲೆ. ಪಹಣಿಯನ್ನು ತಾಲ್ಲೂಕ್ ಕಛೇರಿಯಲ್ಲಿ ಇಡಬೇಕೆಂದು ಕೆಲವರು ಸಲಹೆ ಮಾಡಿದರು. ಅದರಂತೆ ಇನ್ನು ಮುಂದೆ ತಾಲ್ಲೂಕ್ ಕಛೇರಿಯಲ್ಲಿ ಪಹಣಿಯ ನಕಲು ಕಾಪಿಯನ್ನು ಇಡುವ ಹಾಗೆ ಏರ್ಪಾಡು ಮಾಡುತ್ತೇವೆ.

12–30 P.M.

ಈಗ ಪಹಣಿ ಬರೆಯುವುದನ್ನು ವಿಲೇಜ್ ಅಕೌಂಟೆಂಟರು ಬರೆಯುತ್ತಾರೆ. ಅದು ಬರೆಯುವವರ ಹತ್ತಿರವೇ ಇದ್ದರೆ ಅವರೇನಾದರೂ ಬದಲಾವಣೆ ಮಾಡಬಹುದು, ಅದರಿಂದ ರೈತರಿಗೆ ಇನ್ನೂ ಹೆಚ್ಚಿನ ತೊಂದರೆಯಾಗುತ್ತದೆ ಎಂದು ಅದನ್ನು ತಪ್ಪಿಸುವ ದೃಷ್ಟಿಯಿಂದ ಆ ಪಹಣಿಯ ನಕಲನ್ನು ತಾಲ್ಲೂಕು ಆಫೀಸಿನಲ್ಲಿ ಇಡುವ ವ್ಯವಸ್ಥೆಯನ್ನು ಮಾಡಬೇಕೆಂದಿದ್ದೇವೆ. ಇದರಿಂದ ಇನ್ನು ಮುಂದೆ ಪಹಣಿ ಬದಲಾವಣೆ ಆಗುವುದಕ್ಕೆ ಅವಕಾಶವಿಲ್ಲ.

ಹೇಮಾವತಿ ಜಲಾಶಯವನ್ನು ಕಟ್ಟತಕ್ಕಂಥಾ ಪ್ರದೇಶದಲ್ಲಿ ಜಮೀನು ಮುಳುಗಡೆ ಆಗುವವರಿಗೆ ಮಾತ್ರ ಜಮೀನು ರಿಜರ್ವ್ ಮಾಡಿದ್ದೇವೆ. ಅದರಲ್ಲಿ ಯಾರ ಜಮೀನಿಗೆ ನಾಲೆ ಹೋಗುತ್ತದೆಯೋ ಅಂಥವರಿಗೆ ಜಮೀನನ್ನು ರಿಜರ್ವ್ ಮಾಡಿಲ್ಲ. ಶ್ರೀಮಾನ್ ದೇವೇಗೌಡರು ತಿಳಿಸಿದರು ಮಂಡ್ಯ ಜಿಲ್ಲೆಯಲ್ಲಿ ಕೂಡ ಯಾವ ಯಾವ ಭಾಗದಲ್ಲಿ ನಾಲಾ ಜಮೀನು ಇದೆ ಆ ಭಾಗದಲ್ಲೂ ಕೂಡ ಜಮೀನನ್ನು ರಿಜರ್ವ್ ಮಾಡಬೇಕೆಂದು ಹೇಳಿದರು. ಆ ಬಗ್ಗೆ ಈಗಾಗಲೇ ಆರ್ಡರ್ ಆಗಿದೆ. ನಾಲಾ ಜಮೀನನ್ನು ಕಳೆದುಕೊಂಡವರಿಗೆ ಜಮೀನು ಕೊಡಬೇಕೆಂದು ಹೇಳಿದರು. ನಾಲಾ ಜಮೀನನ್ನು ಕಳೆದುಕೊಂಡವರಿಗೆ ನಾಲೆ ಗದ್ದೆ ಆಗತಕ್ಕಂಥಾ ಪ್ರದೇಶದಲ್ಲಿ ಅವರಿಗೆ ಜಮೀನು ಇಲ್ಲದಿದ್ದರೆ ಅಂಥವರಿಗೆ ಜಮೀನು ಕೊಡುವುದಕ್ಕೆ ಏರ್ಪಾಡು ಮಾಡಿದೆ. ಈ ಯೋಜನೆಯಿಂದ ಪೂರ್ಣವಾಗಿ ನಾಲೆಗದ್ದೆಯನ್ನು ಕಳೆದುಕೊಳ್ಳದೆ, ಇದರಿಂದ ನಾಲೆಗದ್ದೆ ಆಗುವುದು ಇದ್ದರೆ ಅಂಥವರಿಗೆ ಜಮೀನು ಒದಗಿಸುವುದು ಕಷ್ಟ. ಆ ಪ್ರದೇಶದಲ್ಲಿ ಜಮೀನು ಸಾಕಷ್ಟು ಇಲ್ಲದೇ ಇರುವುದರಿಂದ ಜಮೀನು ಪೂರ್ಣವಾಗಿ ಇಲ್ಲದೇ ಇರುವವರಿಗೆ ಮಾತ್ರ ಜಮೀನು ಕೊಡುವುದಕ್ಕೆ ಏರ್ಪಾಡು ಮಾಡಿದೆ.

ಪಟೇಲರಿಗೆ ಮತ್ತು ಉಳಿದ ಸಣ್ಣ ಸಣ್ಣ ಗ್ರಾಮಾಧಿಕಾರಿಗಳಿಗೆ ಪರಿಹಾರವನ್ನು ಕೊಡತಕ್ಕಂಥಾ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಈ ವಿಷಯದಲ್ಲಿ ಶ್ಯಾನುಭೋಗರಿಗೂ ಮತ್ತು ಪಟೇಲರಿಗೂ ಅನುವಂಶಿಕವಾಗಿ ಇದ್ದಂತಹ ಹಕ್ಕನ್ನು ತೆಗೆದು ಹಾಕಿ ಗ್ರಾಮ ಲೆಕ್ಕಿಗರನ್ನು ನೇಮಿಸಿಕೊಳ್ಳಲಾಗಿದೆ. ಪಟೇಲರು ಮತ್ತು ಇನ್ನು ಉಳಿದ ಗ್ರಾಮ ನೌಕರರನ್ನು ಒಂದು ವರ್ಷದ ಅವಧಿಗೆ ಕೆಲಸಕ್ಕೆ ತೆಗೆದುಕೊಳ್ಳುತ್ತೇವೆ. ಅವರನ್ನು ಕೆಲಸದಿಂದ ನಿವೃತ್ತಿ ಮಾಡುವ ಸಂದರ್ಭ ಬಂದಾಗ ಅವರಿಗೆ ಯಾವರೀತಿ ಪರಿಹಾರ ಕೊಡಬೇಕು, ಯಾವರೀತಿ ಅವರಿಗೆ ಸಹಾಯ ಮಾಡಬೇಕು ಎನ್ನುವುದನ್ನು ಸರ್ಕಾರ ಯೋಚನೆ ಮಾಡಬೇಕಾಗುತ್ತದೆ. ಈಗ ಅವರನ್ನು ತೆಗೆಯುತಕ್ಕ ಏರ್ಪಾಡು ಇಲ್ಲ. ಒಂದೊಂದು ವರ್ಷಕ್ಕೆ ಅವರನು ಕೆಲಸಕ್ಕೆ ಗೊತ್ತುಮಾಡಿಕೊಂಡು ಅವರನ್ನು ಕೆಲಸಕ್ಕೆ ತೆಗೆದುಕೊಳ್ಳತಕ್ಕ ಏರ್ಪಾಡು ಇದೆ. ವಿಲೇಜ್ ಅಕೌಂಟೆಂಟರುಗಳನ್ನು ನೇಮಿಸಿಲ್ಲ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಈಗಾಗಲೇ 16 ಜಿಲ್ಲೆಗಳಲ್ಲಿ ವಿಲೇಜ್ ಅಕೌಂಟೆಂಟರುಗಳನ್ನು ಪೂರ್ತಿಯಾಗಿ ನೇಮಕ ಮಾಡಿದೆ. 3 ಜಿಲ್ಲೆಗಳಲ್ಲಿ ಮಾತ್ರ ವಿಲೇಜ್ ಅಕೌಂಟೆಂಟರುಗಳನ್ನು ಕೆಲಸಕ್ಕೆ ತೆಗೆದು ಕೊಳ್ಳಲು ಆರಿಸಿ ಅವರ ಲಿಸ್ಟನ್ನು ವಿಭಾಗಾಧಿಕಾರಿಗಳಿಗೆ ಕಳುಹಿಸಿ ಕೊಟ್ಟಿದ್ದಾರೆ. ಇಂಥಾ ಮೂರು ಜಿಲ್ಲೆಗಳು ವಿನಾ ಉಳಿದ ಎಲ್ಲಾ ಜಿಲ್ಲೆಗಳಿಗೂ ವಿಲೇಜ್ ಅಕೌಂಟೆಂಟರುಗಳನ್ನು ನೇಮಕ ಮಾಡುವುದು ಪೂರ್ಣವಾಗಿದೆ.

ಇನ್ನೊಂದು ವಿಷಯವನ್ನು ಶ್ರೀಮಾನ್ ದೇವೇಗೌಡರು ಹಾಗೂ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಹೇಳಿದರು, ಅದೇನೆಂದರೆ ಇನಾಮ್ ಅಬಾಲಿಷನ್ ಮಾಡತಕ್ಕ ಕಾಲದಲ್ಲಿ ಕಾಂಪೆನ್ ಸೇಷನ್ ಜಮೀನ್ದಾರರಿಗೆ ಕೊಟ್ಟಿದೆ ಮತ್ತು ಭೂ ಸುಧಾರಣೆ ಮಾಡತಕ್ಕ ಕಾಲದಲ್ಲಿ ಸೀಲಿಂಗ್ ಲಿಮಿಟ್ ಬಂದಾಗ ಮತ್ತೆ ಅವರಿಗೆ ಕಾಂಪೆನ್‌ಸೇಷನ್ ಕೊಡಬೇಕಾದ ಪ್ರಸಂಗ ಬರುತ್ತದೆ, ಅವರಿಗೆ ಒಂದೇ ಭೂಮಿಗೆ ಎರಡು ಸಾರಿ ಕಾಂಪೆನ್‌ಸೇಷನ್ ಕೊಟ್ಟ ಹಾಗಾಗುತ್ತದೆ ಎಂದು ಹೇಳಿದರು. ಇನಾಮ್ ಅಬಾಲಿಷನ್ ಆದಾಗ ಜಮೀನ್ದಾರರಿಗೆ ಸ್ವಂತ ಹಿಡುವಳಿಗೆ ಅವರ ಹೆಸರಿಗೆ ಖಾತೆ ಆಗತಕ್ಕಂಥಾ ಜಮೀನಿಗೆ ಕಾಂಪೆನ್‌ಸೇಷನ್ ಕೊಟ್ಟಿಲ್ಲ. ಯಾವ ಜಮೀನು ಗೇಣಿದಾರನಿಗೆ ಸೇರಿದೆ ಅಂಥಾ ಜಮೀನ್ದಾರನಿಗೆ ಕಾಂಪೆನ್‌ಸೇಷನ್ ಕೊಟ್ಟಿದೆ. ಆದ್ದರಿಂದ ಹಿಡುವಳಿ ಮಿತಿ ಬಂದಾಗ ಆ ಜಮೀನಿಗೆ ಕಾಂಪೆನ್‌ಸೇಷನ್ ಕೊಡುವುದಕ್ಕೆ ಯಾವ ಅಡ್ಡಿಯೂ ಇಲ್ಲ. ಇದರಿಂದ

ಎರಡುಬಾರಿ ಕಾಂಪೆನ್‌ಸೇಷನ್ ಕೊಟ್ಟಹಾಗೆ ಆಗುವುದಿಲ್ಲ. ನಮ್ಮ ಮಾನ್ಯ ಸ್ನೇಹಿತರು ಕೆಲವು ಸಂದರ್ಭಗಳಲ್ಲಿ ಜಮೀನು ಟೆನೆಂಟುಗಳಿಗೆ ಹೋಗುವಾಗ ಇನಾಂದಾರರು ಕಾಂಪೆನ್‌ಸೇಷನ್ ತೆಗೆದುಕೊಂಡುಬಿಟ್ಟಿದ್ದಾರೆ, ಆಮೇಲೆ ಆ ಇನಾಂದಾರರು ವ್ಯಾಜ್ಯ ಹೂಡಿ ಗೇಣಿದಾರನಿಗೆ ಹೋಗಿದ್ದಂತಹ ಜಮೀನನ್ನು ಮತ್ತೆ ತಮ್ಮ ವಶಕ್ಕೆ ಮಾಡಿಕೊಂಡಿದ್ದಾರೆ ಎಂದು ಹೇಳಿದರು. ಅಂಥಾ ಸಂದರ್ಭದಲ್ಲಿ ಅವರಿಗೆ ಕೊಟ್ಟಿರುವ ಕಾಂಪೆನ್‌ಸೇಷನ್ ನ್ಯಾಯವಾಗಿ ಅವರಿಗೆ ಸಲ್ಲಬೇಕಾದ್ದಿಲ್ಲ. ಅದನ್ನು ಸರ್ಕಾರ ವಾಪಸ್ಸು ಪಡೆಯಬೇಕಾಗುತ್ತದೆ. ಇಂಥಾ ನ್ಯೂನತೆಗಳು ಯಾವು ಯಾವುವು ಇದೆಯೆಂಬುದನ್ನು ಗೊತ್ತಿರತಕ್ಕಂಥವರು ಸರ್ಕಾರಕ್ಕೆ ತಿಳಿಸಿದರೆ ಆ ಬಗ್ಗೆ ಕ್ರಮತೆಗೆದುಕೊಳ್ಳುವುದಕ್ಕೆ ನಾವು ಹಿಂದೆಗೆಯುವುದಿಲ್ಲ. ಎಲ್ಲಿ ಗೇಣಿದಾರ ಮತ್ತು ಜಮೀನ್ದಾರನ ವ್ಯಾಜ್ಯ ಅಂತಿಮವಾಗಿ ತೀರ್ಮಾನವಾಗುವುದಕ್ಕಿಂತ ಮುಂಚೆ ಜಮೀನ್ದಾರನಿಗೆ ಕಾಂಪೆನ್‌ಸೇಷನ್ ಕೊಟ್ಟು ಮತ್ತೆ ಆ ಜಮೀನು ಗೇಣಿದಾರನಿಂದ ಜಮೀನ್ದಾರನ ವಶಕ್ಕೆ ಬಂದಿದೆ ಅಂಥಾ ಪ್ರಸಂಗಗಳು ವಿಶೇಷ ರೀತಿಯಲ್ಲಿವೆ. ಸಾಮಾನ್ಯವಾಗಿ ಜಮೀನ್ದಾರನಿಗೆ ಕಾಂಪೆನ್‌ಸೇಷನ್ ಕೊಡಬೇಕಾದರೆ ನಿರ್ದಿಷ್ಟವಾಗಿ ಅಂತಿಮವಾಗಿ ವ್ಯಾಜ್ಯ ತೀರ್ಮಾನವಾದಮೇಲೆ ಅವನಿಗೆ ಪರಿಹಾರವನ್ನು ಕೊಡಬೇಕು. ಕೋರ್ಟಿನಲ್ಲಿ ವ್ಯಾಜ್ಯ ಇರುವಾಗ ಪರಿಹಾರ ಕೊಟ್ಟರೆ ಅದು ಅಕ್ರಮವಾಗಿ ಕೊಟ್ಟಂತಾಗುತ್ತದೆ. ಅದನ್ನು ವಾಪಸು ಪಡೆಯುವುದಕ್ಕೆ ಕ್ರಮತೆಗೆದುಕೊಳ್ಳುತ್ತೇವೆ.

ಕೆಲವು ಮಾನ್ಯ ಸದಸ್ಯರು ಹೇಳಿದರು ಸಮಗ್ರವಾದ ಭೂಸುಧಾರಣೆಯನ್ನು ತರಬೇಕು ಎಂದು ಸರ್ಕಾರಕ್ಕೆ ಆ ಆಲೋಚನೆ ಇವೆ ಎಂದು ನಾನು ಈಗಾಗಲೇ ಹೇಳಿದ್ದೇನೆ. ಮತ್ತು ಒಬ್ಬರು ಸದಸ್ಯರು ಆಂಧ್ರಪ್ರದೇಶದಲ್ಲಿರುವಹಾಗೆ ಜಮೀನ್ದಾರರು ತಮ್ಮ ಜಮೀನನ್ನು ಪರಭಾರೆ ಮಾಡುವುದನ್ನು ತಪ್ಪಿಸಬೇಕೆಂದು ಹೇಳಿದರು. ಈ ಅಧಿವೇಶನದಲ್ಲೇ ಭೂಸುಧಾರಣೆಯ ಶಾಸನವನ್ನು ತರತಕ್ಕಂಥಾ ಸಂದರ್ಭ ಇರುವುದರಿಂದ ಪರಭಾರೆ ಆಗಿರುವ ಜಮೀನಿನ ಬಗ್ಗೆ ಯಾವ ಕ್ರಮಗಳನ್ನು ಕೈಗೊಳ್ಳಬೇಕು ಎನ್ನುವುದನ್ನು ಭೂಶಾಸನದಲ್ಲೇ ಸೇರಿಸುವುದಕ್ಕೆ ಅವಕಾಶ ಇರುವುದರಿಂದ ಭೂಮಿ ಪರಭಾರೆ ನಿಷೇಧಿಸುವ ಶಾಸನವನ್ನು ಹೊಸದಾಗಿ ಜಾರಿಗೆ ಕೊಡುವ ಅಗತ್ಯವಿಲ್ಲ ಎಂದು ನಾನು ಭಾವಿಸುತ್ತೇನೆ.

Sri J. P. SARWESH (Serum).—In view of the fact that if such registrations are not stopped, those complications will arise. If retrospective effect is given by such an Act, so many transactions will be held nul and viod. I want to know whether it is not proper to have such an Act ?

ಶ್ರೀ ಎನ್. ಹುಚ್ಚುಮಾಸ್ತಿಗೌಡ.—ಈಗಾಗಲೇ ನಾನು ಹೇಳಿದೆ, ಈ ಅಧಿವೇಶನದಲ್ಲಿ ನಮ್ಮ ಸಭೆಯ ಮುಂದೆ ಅದು ಬರಲಿದೆ. ಆಗ ಮಾನ್ಯ ಸದಸ್ಯರಿಗೆ ಎಲ್ಲಾ ಅದರಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ಆಗ ಸದಸ್ಯರು ಏನು ಸಲಹೆಗಳನ್ನು ಮಾಡುತ್ತಾರೋ, ಅದರಲ್ಲಿ ಸೂಕ್ತ ಕಂಡದ್ದನ್ನು ತಕ್ಷಣ ಆರ್ಡಿನೆನ್ಸ್ ಮುಖಾಂತರವಾಗಲಿ, ಅಥವಾ ಶಾಸನದ ಮುಖಾಂತರವಾಗಲಿ ಕಾರ್ಯರೂಪಕ್ಕೆ ಬರುವುದಕ್ಕೆ ಸಾಕಷ್ಟು ಅವಕಾಶ ಇದೆಯೆಂಬುದನ್ನು ಮಾತ್ರ ಹೇಳುತ್ತೇನೆ.

ಇನ್ನು ಭೂಮಿಯನ್ನು ಕೊಡತಕ್ಕಂತಹ ಸಂದರ್ಭದಲ್ಲಿ ಕಿಮ್ಮತ್ತು ವಿಧಾಯಕ ಮಾಡತಕ್ಕ ವಿಚಾರ. ಇದನ್ನು ಗೊತ್ತುಮಾಡುವಾಗ ಹರಿಜನ-ಗಿರಿಜನರಿಗೆ ಉಚಿತವಾಗಿ ಕೊಡುವುದಕ್ಕೆ ಅವಕಾಶ ಮಾಡಬೇಕು ಅಥವಾ ತೀರಾ ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೆಲವರು ಹೇಳಿದರು. ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಹೀಗೆ ಮಾಡುವಾಗ 100ಕ್ಕೆ 75 ಭಾಗ ಕಡಿಮೆ ಮಾಡುವ ಅಧಿಕಾರ ಕೊಟ್ಟಿದೆ. ಅದರಂತೆ ಮಾಡುವುದಕ್ಕೆ ಈಗಾಗಲೇ ಕಾರ್ಯಕ್ರಮ ಕೈಗೊಳ್ಳಲಾಗಿದೆ. ಹೊಸತಾಗಿ ಮಂಜೂರು ಮಾಡತಕ್ಕದ್ದಕ್ಕೆ ಕಿಮ್ಮತ್ತು ಹಾಕತಕ್ಕ ಪದ್ಧತಿ ಇದೆ. ಅದನ್ನು ಹರಿಜನರಿಗೆ ಹಾಕುವಾಗ ತೀರಾ ನಾಮಿನಲ್ಲಾಗಿ ಹಾಕಬೇಕೆಂದು ಅಧಿಕಾರಿಗಳಿಗೆ ತಿಳಿಸಿದ್ದೇವೆ. ಆದ್ದರಿಂದ ಅದರಂತೆ ಹರಿಜನರಿಗೆ ವಿನಾಯತಿ ಕೊಡುವುದಕ್ಕೆ ಸಾಧ್ಯವಿದೆ.

ಮತ್ತು ಶ್ರೀಮಾನ್ ಕಕ್ಕಿಲ್ಲಾಯರು ಮಾತನಾಡುತ್ತಾ, ರಾಜರ ಕಾಲದಲ್ಲಿ ರಾಜದಂಡದಲ್ಲಿ ಸಮಾಜವನ್ನು ಹೇಗೆ ನಡೆಸುತ್ತಿದ್ದರೋ, ಅದೇ ರೀತಿ ಮಾಡಬೇಕೆಂಬ ಕಲ್ಪನೆಯನ್ನು ವ್ಯಕ್ತಪಡಿಸಿದರು. ಈಗಿರತಕ್ಕಂತಹ ರೀತಿಯಲ್ಲಿ ಆ ಕಲ್ಪನೆಯನ್ನು ನಾವು ಕಾರ್ಯಗತ ಮಾಡುವುದಕ್ಕೆ ಸಿದ್ಧರಾಗಿಲ್ಲ. ಇರತಕ್ಕಂತಹ ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡಿ ಇದರಲ್ಲಿರುವ ತೊಂದರೆಗಳನ್ನು ನಿವಾರಣೆ ಮಾಡಿ, ಆಡಳಿತ ಸುಸೂತ್ರವಾಗಿ ನಡೆಸುವುದಕ್ಕೆ ಏರ್ಪಾಡು ಮಾಡಬೇಕೇ ಹೊರತು, ಅದನ್ನು ಸಂಪೂರ್ಣವಾಗಿ ನಾಶ ಮಾಡಿ, ಹೊಸ ಸಮಾಜವನ್ನು ಕಟ್ಟತಕ್ಕ ಕಾರ್ಯ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಕ್ರಮ ನಮ್ಮ ಮುಂದಿಲ್ಲ. ಈಗಿರತಕ್ಕಂತಹ ಪರಿಸ್ಥಿತಿಯಲ್ಲಿ ಅದು ಸರಿಯಾದ ಮಾರ್ಗವಲ್ಲವೆಂದು ತಿಳಿಯಬಹುದು. ಈಗಿರತಕ್ಕಂಥಹ ವ್ಯವಸ್ಥೆಯಲ್ಲಿ ಲೋಪದೋಷಗಳಿದ್ದರೆ ಅದನ್ನು ತೆಗೆದುಹಾಕಿ ಸರಿಪಡಿಸತಕ್ಕಂತಹ ಕಾರ್ಯಕ್ರಮ ನಮ್ಮ ಮುಂದಿರುವುದು. ಮಾನ್ಯ ಸದಸ್ಯರಿಗೆ ಗೊತ್ತಿದೆ. ರಾಜ್ಯಾಂಗ ಶಾಸನ ಇಂಥ ಕೆಲಸಗಳಿಗೆ ಅಡ್ಡಿ ಬಂದರೂ ಕೂಡ ಅದನ್ನು ತಿದ್ದುಪಡಿ ಮಾಡಿ ಇರತಕ್ಕಂತಹ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಸಾಕಷ್ಟು ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರದವರು ಕೈಗೊಂಡಿದ್ದಾರೆ. ನಾವು ಸಮಾಜದಲ್ಲಿ ಬದಲಾವಣೆಯನ್ನು ಮಾಡುವಾಗ ರಾಜ್ಯಾಂಗ ಶಾಸನ ಅಡ್ಡಿ ಬಂದರೆ ಅದನ್ನು ತಿದ್ದುಪಡಿ ಮಾಡಿ ಹೊಸ ಸಮಾಜ ಸೃಷ್ಟಿ ಮಾಡುವುದು ಎಷ್ಟುಮಟ್ಟಿಗೆ ಅಗತ್ಯ ಎಂಬುದನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತೇವೆಯೇ ಹೊರತು ಮಾನ್ಯ ಕಕ್ಕಿಲ್ಲಾಯರವರು ಹೇಳಿದಂತಹ ರೀತಿಯಲ್ಲಿ ಬದಲಾವಣೆ ಮಾಡುವ ಕಾರ್ಯಕ್ರಮ ನಮ್ಮ ಮುಂದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ನಿಮ್ಮ ಕಾರ್ಯಕ್ರಮ ಹಾವು ಸಾಯಲೂ ಬಾರದು, ಕೋಲು ಮುರಿಯಲೂಬಾರದು ಎಂಬ ರೀತಿಯಲ್ಲಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಾವು ಯಾವುದು ಎಂಬುದನ್ನು ಗೊತ್ತುಮಾಡಿ ಸಾಯಿಸಬೇಕು. ಭಂಡವಾಳಶಾಹಿಗಳಿಗೂ ಸಾಮಾನ್ಯ ಜನರಿಗೂ ಇರತಕ್ಕಂತಹ ವ್ಯತ್ಯಾಸವನ್ನು ಹೋಗಲಾಡಿಸತಕ್ಕಂತಹ ಕಾರ್ಯಕ್ರಮ ನಮ್ಮಲ್ಲಿರುವುದು.

ಇನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಮಲೆನಾಡಿನಲ್ಲಿ ನಾನಾ ನೆಪಗಳನ್ನು ಹೂಡಿ ಗೇಣೀದಾರರನ್ನು ಭೂಮಿಯಿಂದ ಎಬ್ಬಿಸುವ ಬಹಳ ಪ್ರಯತ್ನಗಳು ನಡೆದಿವೆ ಎಂದು ಕೂಡ ಹೇಳಿದರು. ಕೆಲವು ಭಾಗಗಳಲ್ಲಿ ಪೋಲೀಸರಿಗೆ ಸೆಕ್ಷನ್ 145 ಪ್ರಕಾರ ದೂರು ಕೊಟ್ಟು ಭೂಮಿಯಲ್ಲಿರತಕ್ಕಂತಹ ಒಕ್ಕಲುಗಳನ್ನು ಹೊರಗೆ ಓಡಿಸಿದ್ದಾರೆ ಎಂದು ಹೇಳಿದರು. ನಾನಾದರೂ ಹೇಳುವುದು ಇಷ್ಟೆ. ಗೇಣಿದಾರರನ್ನು ಹೊರಗಡೆ ಹಾಕುವುದನ್ನು ತಪ್ಪಿಸುವ ದೃಷ್ಟಿಯಿಂದ ಕಳೆದ ಅಧಿವೇಶನದಲ್ಲಿ ಒಂದು ಮಸೂದೆಯನ್ನು ತಂದು ಅದನ್ನು ಜಾರಿಗೆ ಕೊಡಲಾಗದಿದ್ದುದರಿಂದ ಪುನಃ ಈ ಅಧಿವೇಶನದಲ್ಲಿ ತಂದು ಪಾಸ್ ಮಾಡಿ ಅದನ್ನು ಜಾರಿಗೆ ಕೊಡುವುದಕ್ಕೆ ಏರ್ಪಾಡು ಮಾಡಿದ್ದೇವೆ. ಅದರ ಪ್ರಕಾರ ಭೂಮಿಯನ್ನು ಉಳಿಸಿಕೊಳ್ಳುವುದಕ್ಕೆ ಸಹಾಯಕವಾಗುತ್ತದೆ. ಇದೂ ಅಲ್ಲದೆ ಇನ್ನೂ ಕೆಲವು ಭೂಶಾಸನದ ನಿಯಮಗಳನ್ನು ಉಪಯೋಗಿಸಿಕೊಂಡು ಗೇಣಿದಾರರನ್ನು ಹೊರ ಹಾಕತಕ್ಕಂತಹ ಕೆಲಸವನ್ನು ತಪ್ಪಿಸುವುದಕ್ಕೆ ಸರ್ವ ಪ್ರಯತ್ನಗಳನ್ನೂ ಮಾಡುತ್ತೇವೆಂದು ತಮಗೆ ಇಲ್ಲಿ ಹೇಳಬಯಸುತ್ತೇನೆ. ಮುಂದೆ ಒಂದು ಸಮಗ್ರವಾದ ಭೂಶಾಸನ ನಮ್ಮ ಮುಂದೆ ಬರಲಿದೆ. ಆ ರೀತಿ ಎಲ್ಲಿ ನೀತಿ ಕ್ರಮಗಳನ್ನು ಮೀರಿ ಗೇಣಿದಾರರನ್ನು ಹೊರ ಹಾಕಲ್ಪಟ್ಟಿದೆಯೋ, ಅಲ್ಲಿ ಪುನಃ ಕ್ರಮಗಳನ್ನು ತೆಗೆದುಕೊಂಡು, ಗೇಣಿದಾರರ ವಶಕ್ಕೆ ಅವರ ಭೂಮಿಯನ್ನು ಕೊಡಲು ಸರ್ವ ಪ್ರಯತ್ನಗಳನ್ನು ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಇದರ ಬಗ್ಗೆ ರೆವೆನ್ಯೂ ಅಧಿಕಾರಿಗಳು ಮತ್ತು ಪೋಲೀಸ್ ಅಧಿಕಾರಿಗಳು ರೈತರ ರಕ್ಷಣೆಯನ್ನು ಸರಿಯಾಗಿ ಮಾಡದೆ ಈ ರೀತಿಯಾಗಿದೆ. ಆದ್ದರಿಂದ ಪೋಲೀಸ್ ಅಧಿಕಾರಿಗಳಿಗೆ ಸರಿಯಾಗಿ ನಡೆದುಕೊಳ್ಳಬೇಕೆಂದು ಅಪ್ಪಣೆಕೊಟ್ಟು ಸೂಚಿಸುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪೋಲೀಸ್ ಅಧಿಕಾರಿಗಳು ಯಾವ್ಯಾವ ಸಂದರ್ಭಗಳಲ್ಲಿ ಹೇಗೆ ವರ್ತಿಸಬೇಕೆಂದು ಅವರಿಗೆ ಗೊತ್ತಿದೆ. ಗೇಣೀದಾರರನ್ನು ಹೊರ ಹಾಕುವ ಉದ್ದೇಶದಿಂದ ಜಮೀನ್ದಾರರು ಪೋಲೀಸರಿಗೆ ದೂರು ಕೊಟ್ಟರೂ ಅದನ್ನು ಅರಿತುಕೊಳ್ಳುವ ಸಾಮರ್ಥ್ಯ ಪೋಲೀಸ್ ಅಧಿಕಾರಿಗಳಿಗೆ ಇದೆಯೆಂದು ನಾನು ಆಶಿಸುತ್ತೇನೆ.

ಇನ್ನು ಕುಮ್ಕಿ ಜಮೀನು ವರ್ಗದಾರರಿಗೆ ಇರತಕ್ಕಂತಹ ಸವಲತ್ತು. ವರ್ಗದ ಜಮೀನು ಯಾರ್ಯಾರ ವಶಕ್ಕೆ ಹೋಗುತ್ತದೆ, ಅವರಿಗೆ ಅದರ ಮೇಲೆ ಅಧಿಕಾರ ಇದೆ. ವರ್ಗದ ಭೂಮಿ ಗೇಣೀದಾರರ ವಶಕ್ಕೆ ಹೋದರೆ, ಗೇಣೀದಾರರಿಗೆ ನ್ಯಾಯವಾಗಿ ಅದರ ಮೇಲೆ ಹಕ್ಕು ಬರುತ್ತದೆ. ಈಗಿರತಕ್ಕಂತಹ ಪದ್ಧತಿಯನ್ನು ತಪ್ಪಿಸುವ ಉದ್ದೇಶ ಸದ್ಯಕ್ಕೆ ಸರ್ಕಾರದ ಮುಂದೆ ಇಲ್ಲ. ಈ ಕುಂಕಿ ಜಮೀನನ್ನು ಬೇರೆಯವರಿಗೆ ಮಂಜೂರು ಮಾಡಿಕೊಡುವುದೂ ಕೂಡ ಅಗತ್ಯವೆಂದು ಅನೇಕ ಜನಗಳ ಅಭಿಲಾಷೆ ಇದೆ. ಅದನ್ನು ಎಷ್ಟರಮಟ್ಟಿಗೆ ಮಾಡಿಕೊಡುವುದಕ್ಕೆ ಸಾಧ್ಯವಿದೆ, ಆ ಜಮೀನನ್ನು ಅನುಭವಿಸುವವರನ್ನು ಬಿಟ್ಟು ಬೇರೆಯವರಿಗೆ ಕೊಡುವುದು ಸೂಕ್ತವೇ ಎಂಬ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತಿದ್ದೇವೆ. ಮತ್ತೆ ಹಾರ್ವೆಸ್ಟ್ ಭಾಗದಲ್ಲಿ 100

ಗಜ ಜಾಗ ಬಿಟ್ಟು ಹೊರಗಡೆ ಜಮೀನು ಸಾಗುವಳಿ ಮಾಡುವ ಅಭಿಪ್ರಾಯ ಇತ್ತು. ಅದನ್ನು ತಪ್ಪಿಸಿ 400 ಮೀಟರ್ ಜಾಗ ಬಿಡಬೇಕೆಂಬುದನ್ನು ಒಪ್ಪಿಕೊಳ್ಳಲು ಈಗ ಒಂದು ತೊಂದರೆ ಇದೆ. ಅದನ್ನು ಈಗ ಕಳೆದುಕೊಳ್ಳುವ ಪರಿಸ್ಥಿತಿ ಇದೆಯೆಂದು ಮಾನ್ಯ ಶ್ರೀ ಕಕ್ಕಿಲಾಯ ಅವರು ಹೇಳಿದರು. ಇದರ ಬಗ್ಗೆ ಅರಣ್ಯ ಇಲಾಖೆಯವರ ಜೊತೆಯಲ್ಲಿ ವಿಚಾರಮಾಡಿ ಒಂದು ತೀರ್ಮಾನಕ್ಕೆ ಬರುತ್ತೇವೆ.

ಇನ್ನು ತಮ್ಮ ಸ್ವಂತ ಪಟ್ಟಾ ಜಮೀನಿನಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ಅವಕಾಶವಿತ್ತು. ಮೊದಲನೆಯದಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅದನ್ನು ತಪ್ಪಿಸಿ ಅವರಿಗೆ ಕನ್‌ವರ್‌ಷನ್ ಫೈನ್ ಹಾಕುವುದನ್ನು ತಪ್ಪಿಸಬೇಕೆಂದು ಮಾನ್ಯ ಶ್ರೀ ಕಕ್ಕಿಲಾಯ ಅವರು ಸಲಹೆ ಮಾಡಿದರು. ಮೊದಲಿನಿಂದಲೂ ದಕ್ಷಿಣ ಕನ್ನಡ ಜಿಲ್ಲೆ, ಮದರಾಸಿನಿಂದ ಬಂದಂಥವರಿಗೆ ಈ ಸೌಲಭ್ಯವಿತ್ತು. 1964ರಲ್ಲಿ ನಮ್ಮ ಭೂಕಂದಾಯದ ಬಗ್ಗೆ ಏಕರೂಪವಾದ ಕಾನೂನು ಬಂದಮೇಲೆ ಈ ಪ್ರದೇಶದಲ್ಲಿ ಮೊದಲು ಅವರು ಕನ್‌ವರ್‌ಷನ್ ಫೈನ್ ಕೊಟ್ಟು ಮನೆ ಕಟ್ಟುವ ಪರಿಸ್ಥಿತಿ ಇದೆ. ಆದ್ದರಿಂದ ಇದು ಅನಿವಾರ್ಯವಾಗಿದೆ. ಆದರೆ ತನ್ನ ಸ್ವಂತ ಸಾಗುವಳಿ ಜಮೀನಿನಲ್ಲಿ ಬೇರೆ ಉದ್ದೇಶಕ್ಕಾಗಿ ಜಮೀನನ್ನು ಬಿಡಿಸಿಕೊಳ್ಳುವಾಗ ಕನ್‌ವರ್‌ಷನ್ ಫೈನ್ ಕೊಡುವ ಪ್ರಸಂಗವಿದೆ.

ಶ್ರೀ ಬಿ. ವಿ. ಕಕ್ಕಿಲಾಯ (ಬಂಟವಾಳ್).—ಸಾಗುವಳಿ ಜಮೀನಿನಲ್ಲಿ ಎಂದು ನಾನು ಹೇಳಲಿಲ್ಲ. ಸಾಗುವಳಿಗೆ ಉಪಯೋಗವಾಗುವ ಜಮೀನು ಎಂದು ತಮ್ಮ ಕಾನೂನಿನ ಪ್ರಕಾರ ಇದೆ. ಸಾಗುವಳಿಗೆ ಯೋಗ್ಯವಿಲ್ಲದಂಥ ಜಮೀನುಗಳಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ಅನ್ವಯ ವಾಗುತ್ತದೆ ಅಲ್ಲಿ ವಿಶೇಷ ಪರಿಸ್ಥಿತಿ ಇರುತ್ತದೆ.

ಶ್ರೀ ಎನ್. ಹುಚ್ಚುಮಾಸ್ತಿಗೌಡ.—1964ನೇ ಇಸವಿಯಿಂದ ಕಾನೂನು ಏಕರೂಪವಾಗಿ ಎಲ್ಲಾ ಭಾಗಗಳಿಗೂ ಇರುವ ಪರಿಸ್ಥಿತಿ ಇದೆ. ಅದು ಒಂದು ಪಟ್ಟಾ ಭೂಮಿಯಾಗಿದ್ದರೆ ವ್ಯವಸಾಯ ಇಲ್ಲದೆ ಬೇರೆ ಉದ್ದೇಶಕ್ಕೆ ಉಪಯೋಗಿಸಿಕೊಳ್ಳಲು ಇದು ಅನಿವಾರ್ಯವಾಗುತ್ತದೆ. ಇನ್ನು ಕೆಲವು ಮಾನ್ಯ ಸದಸ್ಯರು ಒಂದೊಂದು ಗ್ರಾಮಪಂಚಾಯತಿಗೂ ಒಬ್ಬೊಬ್ಬ ವಿಲೇಜ್ ಅಕೌಂಟೆಂಟ್‌ನ್ನು ನೇಮಕ ಮಾಡಬೇಕೆಂದು ಮಾನ್ಯ ಶ್ರೀ ಧರ್ಮಸಿಂಗ್ ಅವರು ಸಲಹೆ ಮಾಡಿದರು. ಅವರ ಸಲಹೆ ಪ್ರಕಾರ ಈಗಿರುವ ಪ್ರತಿಯೊಂದು ಗ್ರಾಮಪಂಚಾಯತಿಗೂ ಒಬ್ಬೊಬ್ಬ ವಿಲೇಜ್ ಅಕೌಂಟೆಂಟನ್ನು ಗೊತ್ತುಮಾಡುತ್ತಿದ್ದೇವೆ. ಅಧಿಕಾರಿಗಳ ಅಧಿಕಾರಶಾಹಿಯಲ್ಲಿ ಇನ್ನೂ ವಿಚಾರ ಕ್ರಾಂತಿಯಾಗಿಲ್ಲ. ಪ್ರತಿಯೊಂದು ಇಂತಹ ಸಂದರ್ಭ ಬಂದಾಗ್ಗೆ ಆಯಾಯ ಪರಿಸ್ಥಿತಿಯನ್ನು ಮನಗಾಣಬೇಕಾದರೆ ಸ್ಥಳ ಅಜಮಾಯಿಷಿ ಮಾಡಿ ತೀರ್ಮಾನಮಾಡಬೇಕು. ಪಹಣಿ ಬರೆಯತಕ್ಕ ಸಂದರ್ಭದಲ್ಲಿ, ಅಕ್ರಮವಾಗಿರುವ ಸಂದರ್ಭದಲ್ಲಿ, ಭೂಮಿ ಹಂಚಿಕೆ ಮಾಡುವ ಸಂದರ್ಭದಲ್ಲಿ ತುಂಬಾ ಎಚ್ಚರಿಕೆ ವಹಿಸಬೇಕು. ಈ ಒಂದು ದೃಷ್ಟಿಯಿಂದ ನಾವು ಇದರ ಬಗ್ಗೆ ಎಲ್ಲಾ ಕಾರ್ಯಕ್ರಮ ಗಳನ್ನೂ ಮೊದಲೇ ಕೈಗೊಂಡಿದ್ದೇವೆ. ಸ್ಥಳ ಅಜಮಾಯಿಷಿ ಮಾಡಿ ತೀರ್ಮಾನ ತೆಗೆದುಕೊಳ್ಳುವುದು ಅಗತ್ಯ. ಅದನ್ನು ಮಾಡಬೇಕೆಂದು ಅಧಿಕಾರಿಗಳಿಗೆ ತಿಳಿಸಲಾಗಿದೆ. ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪನವರು ಕಾಫಿ ಬೆಳೆಯತಕ್ಕಂಥ ಸಂದರ್ಭದಲ್ಲಿ, ಉಳಿದ ಪ್ಲಾಂಟೇಷನ್ ಕ್ರಾಪ್‌ಗಳಿಗೆ ಭೂಶಾಸನದ ಬಗ್ಗೆ ಕನಿಷ್ಠ ಮಿತಿಯನ್ನು ಗೊತ್ತುಮಾಡುವ ಸಂದರ್ಭದಲ್ಲಿ ಕಾನೂನನ್ನು ಕೈಬಿಡ ಬೇಕಾದರೆ ತೆಂಗಿನ ತೋಟಗಳು, ಅಡಿಕೆ ತೋಟಗಳು ಮತ್ತು ಇತರ ಎಲ್ಲಾ ತೋಟಗಳ ಬಗ್ಗೆ ನಿಮ್ಮ ಶಾಸನಕ್ಕೆ ಮಹತ್ವ ಇಲ್ಲವೆಂದು ಹೇಳಿದರು. ಭೂಶಾಸನದ ಜೊತೆಯಲ್ಲಿ ಅದನ್ನೂ ಸಹ ತರಬೇಕೇ ಅಥವಾ ಪ್ರತ್ಯೇಕವಾಗಿ ಕಾಫಿ ಅಥವಾ ಟೀ ವಗೈರೆ ಪ್ಲಾಂಟೇಷನ್ ಕ್ರಾಪ್‌ಗಳಿಗೆ ಸಂಬಂಧಪಟ್ಟ ಮಿತಿಯನ್ನು ತರಬೇಕೇ ಎಂಬುದನ್ನು ಸರ್ಕಾರ ಆಲೋಚನೆ ಮಾಡುತ್ತಿದೆಯೆಂದು ನಾನು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ. ಮತ್ತೆ ಇನ್ನೂ ಕೆಲವು ಸಲಹೆಗಳನ್ನು ಹೇಳಿದರು. ನಿವ್ವಳ ಆದಾಯ 6 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಇರುವಹಾಗೆ ಎಲ್ಲಾ ಕ್ಷೇತ್ರಗಳಲ್ಲಿಯೂ ಈ ಮಿತಿಯನ್ನು ತರಬೇಕೆಂದು ಸಲಹೆ ಮಾಡಿದರು. ಎಷ್ಟು ಮಿತಿ ಉಪಯೋಗಿಸಬೇಕು, ಯಾವ್ಯಾವ ಕ್ಷೇತ್ರದಲ್ಲಿ ಯಾವಾಗ ಜಾರಿಗೆ ತರಬೇಕೆಂಬುದನ್ನು ಯೋಚನೆ ಮಾಡುತ್ತಿದ್ದೇವೆ. ರಾಜ್ಯ ರಾಜ್ಯ ಸರ್ಕಾರಗಳು ಮೀರಿ ಕೇಂದ್ರಸರ್ಕಾರದಲ್ಲಿ ಮಾಡತಕ್ಕ ಕೆಲವು ಇವೆ. ರಾಜ್ಯ ಸರ್ಕಾರದ ಅಧಿಕಾರಕ್ಕೆ ಒಳಪಟ್ಟು ಮಾಡುವಾಗ ಈ ಸಲಹೆಯನ್ನು ಸರ್ಕಾರ ತಮ್ಮ ದೃಷ್ಟಿಯಲ್ಲಿಟ್ಟುಕೊಳ್ಳಬಹುದೆಂದು ನಾನು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ ಮತ್ತೆ ಈ ಒಂದು ಮಿತಿಯನ್ನು ನಗರಕ್ಕೂ ಮತ್ತು ಹಳ್ಳಿಗಳಿಗೂ ಏಕ ಕಾಲದಲ್ಲಿ ಜಾರಿಗೆ ತರಬೇಕೆಂದು ಹೇಳಿದರು. ಇದು ಒಂದಾದಮೇಲೆ ಇನ್ನೊಂದು ಬರಬೇಕು. ಒಂದು ಚರ್ಚೆಯಾದ ಮೇಲೆ ಇನ್ನೊಂದು ಚರ್ಚೆಯಾಗಬೇಕು. ಅದೂ ಸಹ ಸರ್ಕಾರದ ದೃಷ್ಟಿಯಲ್ಲಿದೆಯೆಂದು ನಾನು ಹೇಳಬಯಸುತ್ತೇನೆ. ಈಗ ನಮ್ಮ ಮುಂದೆ ಬಹಳ ವೇಗವಾಗಿ ಬರತಕ್ಕದ್ದು ಭೂಮಿಗೆ ಸಂಬಂಧಪಟ್ಟದ್ದು. ಅದಾದಮೇಲೆ ನಗರ ಆಸ್ತಿಗೆ ಸಂಬಂಧಪಟ್ಟ ಮಸೂದಾ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಕಾನೂನನ್ನು ತರುತ್ತಿದ್ದೇವೆಂದು ತಿಳಿಸಿದ್ದೇವೆ. ಸರ್ಕಾರ ಅದನ್ನೂ ಸಹ ತನ್ನ ಕಾರ್ಯಕ್ರಮದಲ್ಲಿ ಸೇರಿಸಲಾಗುತ್ತದೆಂದು ಹೇಳಬಯಸುತ್ತೇನೆ.

ಇನ್ನು ಮಾನ್ಯ ಶ್ರೀ ಬೈರಪ್ಪಾಜಿಯವರು ಮಾತನಾಡುತ್ತಾ ಕೆಲವು ಉದಾಹರಣೆಗಳನ್ನು ಕೊಟ್ಟರು. ಕೆಲವು ಅಕ್ರಮ ಸ್ವಾಧೀನವಾಗಿದೆ, ಅಧಿಕಾರಿಗಳು ಜೊತೆಯಲ್ಲಿ ಸೇರಿಕೊಂಡಿದ್ದಾರೆಂಬ ವಿಷಯವನ್ನು ಹೇಳಿದರು. ಅಂತಹ ವಿಶೇಷ ಸಂದರ್ಭಗಳು ಇದ್ದರೆ, ನ್ಯಾಯವಾಗಿ ಜಮೀನು ಹಂಚಿಕೆ ಮಾಡುವುದರಲ್ಲಿ ಎಷ್ಟರಮಟ್ಟಿಗೆ ಅನ್ಯಾಯ ಆಗಿದೆ ಎನ್ನುವುದನ್ನು ನಾನು ವಿಚಾರಣೆ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಮತ್ತೆ ಹತ್ತಾರು ವರ್ಷಗಳಾಗಿದ್ದರೂ ಕೂಡ ಜಮೀನು ಕಳೆದುಕೊಂಡಿರುವ ವ್ಯಕ್ತಿಗಳಿಗೆ ಇನ್ನೂ ಪರಿಹಾರ ಕೊಟ್ಟಿಲ್ಲವೆಂದು ಉದಾಹರಣೆ ಕೊಟ್ಟರು. ಅದನ್ನೂ ಸಹ ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಮತ್ತೆ ಧರ್ಮಸ್ಥಳ ವಗೈರೆ ಮುಜರಾಯಿ ದೇವಸ್ಥಾನಗಳನ್ನು ತೆಗೆದುಕೊಳ್ಳಬೇಕೆಂದು ಸಲಹೆ ಮಾಡಿದರು. ಯಾವ್ಯಾವುದನ್ನು ಈಗಿರಕ್ಕ ಕಾನೂನು ಮೂಲಕ ತೆಗೆದುಕೊಳ್ಳಬಹುದು, ಮುಜರಾಯಿ ದೇವಸ್ಥಾನಗಳು ಅಲ್ಲದೇ ಇರತಕ್ಕ ಸಂಸ್ಥೆಗಳ ಮೇಲೆ ಸಾಕಷ್ಟು ಕ್ರಮ ತೆಗೆದುಕೊಳ್ಳುವುದಕ್ಕೆ ಅಧಿಕಾರವಿದೆಯೇ, ಅಲ್ಲಿ ಬರತಕ್ಕ ಹಣ ಸರಿಯಾಗಿ ಖರ್ಚಾಗುತ್ತಿದೆಯೇ ಎನ್ನುವುದನ್ನು ನೋಡಬೇಕು. ಈಗಿರತಕ್ಕ ಕಾನೂನು ಪ್ರಕಾರ ಸರ್ಕಾರಕ್ಕೆ ಅಧಿಕಾರ ಇದೆಯೇ ಎಂಬುದನ್ನು ನೋಡಬೇಕು. ಈ ಮೂಲಕವಾದರೂ ಇಂತಹ ಸಂಸ್ಥೆಗಳು ಸರಿಯಾಗಿ ನಡೆಯುತ್ತಿವೆಯೇ ಎಂಬುದನ್ನು ಸರ್ಕಾರ ತಿಳಿಯುವುದು ಮುಖ್ಯ. ಇನ್ನುಮುಂದೆ ಈ ಸಂಸ್ಥೆಗಳೂ ಕೂಡ ಸರ್ಕಾರದ ಸಂಪೂರ್ಣ ಹತೋಟಿಗೆ ಬರಬೇಕೆನ್ನುವುದು ಮಾನ್ಯ ಸದಸ್ಯರ ದೃಷ್ಟಿಯಲ್ಲಿ ಅವಶ್ಯಕವೆಂದು ಹೇಳುವುದಾದರೆ ಅದನ್ನು ಸರ್ಕಾರ ಆಲೋಚನೆ ಮಾಡುತ್ತಿದೆಯೆಂದು ಹೇಳುತ್ತೇನೆ.

ಶ್ರೀ ವಿ. ಎನ್. ಪಾಟೀಲ್.—ಹಳೆಯ ಮೈಸೂರಿನಲ್ಲಿರುವಂತೆ ಹೈದರಾಬಾದ್ ಕರ್ಣಾಟಕದಲ್ಲಿ ಧರ್ಮದ ದೇವಸ್ಥಾನಗಳು ಬಹಳ ಇವೆ. ಅವುಗಳ ಹೆಸರಿನ ಮೇಲೆ ಸಾವಿರಾರು ಎಕರೆ ಸರ್ಕಾರದ ಜಮೀನು ಇರುತ್ತವೆ. ಒಂದು ರೂಪಾಯಿ ಕಂದಾಯ ಕೊಡುತ್ತಿದ್ದಾರೆ. ಸರ್ಕಾರ ದೇವಸ್ಥಾನಗಳಿಗೆ ರಕ್ಷಣೆ ಕೊಡುತ್ತದೆ. ಸರ್ಕಾರ ಜಮೀನಿನ ಮೇಲೆ ಇರತಕ್ಕ ರೈತರಿಗೂ ರಕ್ಷಣೆ ಕೊಡುತ್ತಿದೆ. ಆದ್ದರಿಂದ ಬೇರೆ ಜಮೀನುಗಳ ಮೇಲೆ ಎಷ್ಟು ಕಂದಾಯ ಇದೆಯೋ ಅಷ್ಟನ್ನು ನಮ್ಮಲ್ಲಿಗೂ ಹಾಕುತ್ತೇವೆಂದು ಆಶ್ವಾಸನೆಯನ್ನು ಕೊಡುತ್ತೀರಾ ?

1-00 P.M.

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಮಾನ್ಯ ಸದಸ್ಯರು ತಿಳಿಸಿದ ಹಾಗೆ ಆ ಜಮೀನು ಏನು ಈಗಾಗಲೇ ಗೇಣೀದಾರನ ವಶದಲ್ಲಿದೆ ಆ ಜಮೀನು ದೇವಸ್ಥಾನಕ್ಕೇ ಸೇರಿರಲಿ, ಅಥವಾ ಒಂದು ವಿದ್ಯಾ ಸಂಸ್ಥೆಗೇ ಸೇರಿರಲಿ, ಇಲ್ಲವೇ ಇತರೇ ಜಮೀನ್ದಾರನಿಗೇ ಸೇರಿರಲಿ ಅದರ ಬಗ್ಗೆ ಈಗಾಗಲೇ ಶಾಸನವಾಗಿದೆ. ಇನ್ನು ಮುಂದೆ ತರತಕ್ಕ ಶಾಸನದಲ್ಲಿ ರೆಂಟ್ ಮತ್ತು ಕಂದಾಯ ಇತ್ಯಾದಿಗಳನ್ನೆಲ್ಲಾ ನಿಗದಿ ಮಾಡತಕ್ಕ ವಿಚಾರಗಳು ಬರುತ್ತವೆ. ಹಾಲಿ ಇರತಕ್ಕ ದೇವಾಲಯಗಳ ಜಮೀನಿನಲ್ಲಿ ಇದು ಮುಜ್ರಾಯಿ ದೇವಾಲಯದ ಭೂಮಿ, ಇದು ಖಾಸಗೀ ದೇವಾಲಯದ ಭೂಮಿ ಅನ್ನತಕ್ಕ ವ್ಯತ್ಯಾಸಗಳೇ ಇರುವುದಿಲ್ಲ.

ಇನ್ನು ಜಮೀನನ್ನು ಹಂಚತಕ್ಕ ವಿಚಾರದಲ್ಲಿ ಶ್ರೀ ಪ್ರಭಾಕರ್ ಅವರು ಕೆಲವು ಮಾತುಗಳನ್ನು ಹೇಳಿದ್ದಾರೆ. ಈ ದಿವಸ ಎಲ್ಲೆಲ್ಲಿ ವ್ಯವಸಾಯಕ್ಕೆ ಹಂಚತಕ್ಕ ಭೂಮಿ ಇದೆ ಅದರಲ್ಲಿ ಶೇಕಡ ಅರ್ಧ ಭೂಮಿಯನ್ನು ಹರಿಜನ ಗಿರಿಜನರಿಗೆ ಮೀಸಲಾಗಿಡಬೇಕೆಂದು ಹೇಳಿದ್ದಾರೆ. ಅದನ್ನು ನಾವಾಗಲೆ ಮಾಡಿದ್ದೇವೆ. ಅದಕ್ಕೆ ಸರಿಯಾಗಿ ಲ್ಯಾಂಡ್ ಗ್ರಾಂಟ್ ರೂಲ್ಸನ್ನು ಮಾಡಿದ್ದೇವೆ. ಅದಕ್ಕನುಸಾರವಾಗಿ ಕೆಲಸ ಮಾಡಲು ತಾಲ್ಲೂಕಾಮಟ್ಟೆ ಕಮಿಟಿಗಳನ್ನು ಮಾಡಿದ್ದೇವೆ. ಆ ಕಮಿಟಿಗಳಲ್ಲಿ ಹರಿಜನ ಪ್ರತಿನಿಧಿಗಳೂ ಇರುತ್ತಾರೆ. ಅವರು ಈ ನಿಯಮವನ್ನು ಕಡ್ಡಾಯವಾಗಿ ಪಾಲಿಸುವಂತೆ ಪ್ರಯತ್ನ ಮಾಡಬೇಕಾಗುತ್ತದೆ.

Sri C. M. ARUMUGAM (K.G.F.).—What the Hon. Minister saying is mere repetition of what that the previous Ministers have said. This has been going on for the past 25 years and it will go on for another 5 years also. It is just like the Magic man giving a fight

between a Cobra and a Mangoos. Every time you say there is going to be land reforms and wait for that. Why should the temples be maintained by Government when you call yourselves a secular Government Sir? Then no doubt you have appointed a commission to help Scheduled Caste People. But I want to know how many acres of land have been distributed so far and to what extent the Scheduled castes are benefited by that?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಭೂಮಿಯನ್ನು ಹಂಚತಕ್ಕ ವಿಚಾರದಲ್ಲಿ ಸರ್ಕಾರದವರ ನೀತಿಯೇನೆಂಬುದನ್ನು ನಾನಾಗಲೇ ಸ್ಪಷ್ಟವಾಗಿ ತಿಳಿಸಿದ್ದೇನೆ. ಉಳುವೆಗೆ ಬಿಟ್ಟು ಕೊಡಲು ಇರತಕ್ಕ ಭೂಮಿಯಲ್ಲಿ ಶೇಕಡ ಅರ್ಧ ಭಾಗವನ್ನು ಹರಿಜನ ಗಿರಿಜನರಿಗೆ ಬಿಟ್ಟು ಕೊಡಬೇಕೆಂದು ಸರ್ಕಾರ ಈಗಾಗಲೇ ತೀರ್ಮಾನ ಮಾಡಿಕೊಂಡಿದೆ.

ಇನ್ನು ದೇವಸ್ಥಾನದ ವಿಷಯದಲ್ಲಿ ನಾನಾಗಲೇ ಅನೇಕ ಸಂದರ್ಭಗಳಲ್ಲಿ ನನ್ನ ಅಭಿಪ್ರಾಯವೇನೆಂಬುದನ್ನು ತಿಳಿಸಿದ್ದೇನೆ. ಆ ಸಂಸ್ಥೆಗಳಿಗೆ ಸೇರಿರತಕ್ಕ ಜಮೀನುಗಳನ್ನು ಸರ್ಕಾರ ತನ್ನ ಸ್ವಾಧೀನಪಡಿಸಿಕೊಳ್ಳತಕ್ಕ ಬಗ್ಗೆ ಮುಂದೆ ಒಂದು ಮಸೂದೆಯನ್ನು ಈ ಸಭೆಯ ಮುಂದೆ ಮಂಡಿಸಲಾಗುತ್ತದೆ ಎಂಬುದಾಗಿ ನಾನಾಗಲೇ ಸ್ಪಷ್ಟವಾಗಿ ತಿಳಿಸಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಸರ್ಕಾರದವರು ತಮ್ಮ ಸಮಾಜವಾದಕ್ಕೂ ಈ ದೇವಸ್ಥಾನಗಳಿಗೂ ಹೇಗೆ ಸಂಬಂಧವನ್ನು ಗಂಟು ಹಾಕುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ದೇವರಲ್ಲಿ ಭಕ್ತಿ ಇಡುವುದಕ್ಕೂ, ಧಾರ್ಮಿಕ ಸಂಸ್ಥೆಗಳನ್ನು ನಡೆಸಿಕೊಂಡು ಹೋಗುವುದಕ್ಕೂ ಮತ್ತು ಈ ಸಮಾಜವಾದ ಸಿದ್ಧಾಂತಕ್ಕೂ ಒಂದಕ್ಕೊಂದಕ್ಕೆ ಯಾವ ವಿರೋಧವೂ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಅನೇಕ ಶತಮಾನಗಳಿಂದಲೂ ನಮ್ಮ ದೇಶದಲ್ಲಿ ನಡೆದುಕೊಂಡು ಬಂದಿರತಕ್ಕ ಒಂದು ಸಂಪ್ರದಾಯ ಏನಿದೆ ಅದನ್ನು ಕಿತ್ತುಹಾಕಿ ಇನ್ನೊಂದು ವಿನೂತನ ಸಮಾಜವನ್ನು ಸೃಷ್ಟಿ ಮಾಡುವಂಥ ಪರಿಸ್ಥಿತಿಯಲ್ಲಿ ನಾವಿಲ್ಲ. ನಮ್ಮ ಜನರ ಆಶೋತ್ತರಗಳೇನು ಇವೆಯೋ ಮತ್ತು ಈ ದಿವಸ ನಮ್ಮ ಸಮಾಜದಲ್ಲಿ ಎದ್ದು ಕಾಣತಕ್ಕ ಏರುಪೇರುಗಳೇನು ಇವೆಯೋ ಅವುಗಳನ್ನು ತೆಗೆದು ದರಿದ್ರನಾರಾಯಣ ಸೇವೆಯನ್ನು ಮಾಡುವುದೇ ಸಮಾಜವಾದ. ಈಶ ಸೇವೆಯೇ ದೇಶ ಸೇವೆ. ದೇಶ ಸೇವೆಯೇ ದರಿದ್ರನಾರಾಯಣನ ಸೇವೆ. ಸಮಾಜದಲ್ಲಿ ಒಬ್ಬ ಕೋಟ್ಯಾಧೀಶ್ವರನಾಗಿದ್ದು, ಇನ್ನೊಬ್ಬ ತಿನ್ನುವುದಕ್ಕೆ ಅನ್ನ ಉಡುವುದಕ್ಕೆ ಬಟ್ಟೆ ಇಲ್ಲದಿದ್ದರೆ—ಇಂಥಾ ತಾರತಮ್ಯಗಳನ್ನು ಹೋಗಲಾಡಿಸುವುದು ಈಶ ಸೇವೆಗೆ ಸಮ ಎಂಬುದು ನನ್ನ ಭಾವನೆ. ಕೆಲವರು ಧರ್ಮ ಎಂದರೇನು ಎಂಬುದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಇರತಕ್ಕವರು ತಪ್ಪು ಭಾವನೆಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಸರ್ಕಾರ ಅತ್ತ ಧರ್ಮವನ್ನು ಬಿಡುವುದಕ್ಕಾಗುವುದಿಲ್ಲ, ಇತ್ತ ಸಮಾಜದಲ್ಲಿರತಕ್ಕ ಏರುಪೇರುಗಳನ್ನೂ ಹಾಗೆ ಬಿಡುವುದಕ್ಕಾಗುವುದಿಲ್ಲ. ಅತ್ತ ದೇವಾಲಯದ ಪುರೋಭಿವೃದ್ಧಿ, ಇತ್ತ ಸಮಾಜದ ಪುರೋಭಿವೃದ್ಧಿ ಎರಡನ್ನೂ ಸಾಧಿಸಬೇಕಾಗಿದೆ. ದೇವಾಲಯಗಳ ಜೀರ್ಣೋದ್ಧಾರ ಕಾರ್ಯಕ್ಕೂ ಸರ್ಕಾರ ಗಮನ ಕೊಡಬೇಕು. ಆದುದರಿಂದ ಇವು ಒಂದಕ್ಕೊಂದಕ್ಕೆ ವಿರುದ್ಧವಾಗಿಲ್ಲ.

ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಈಗ ಮಾನ್ಯ ಮಂತ್ರಿಗಳೇನು ಆ ದರಿದ್ರನಾರಾಯಣನ ಸೇವೆಯೇ ಈಶ ಸೇವೆಯೆಂದು ಹೇಳುತ್ತಿದ್ದಾರೆ. ಅಂಥ ಸೇವೆಗೆ ಈ ದಿವಸ ನಮ್ಮ ರಾಜ್ಯದಲ್ಲಿರತಕ್ಕ ಧರ್ಮಸ್ಥಳ, ತಿರುಪತಿ ಮತ್ತು ಶೃಂಗೇರಿಯಲ್ಲಿರತಕ್ಕ ದೇವಾಲಯಗಳಿಗೆ ದಿನಂಪ್ರತಿ ಲಕ್ಷಾಂತರ ರೂಪಾಯಿಗಳು ಕಾಣಿಕೆಯ ರೂಪದಲ್ಲಿ ಬರುತ್ತಿವೆ. ಆ ಹಣದಲ್ಲಿ ಸ್ವಲ್ಪ ಭಾಗವನ್ನು ಈ ದರಿದ್ರನಾರಾಯಣರ ಸೇವೆಗೆ ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಪೂರ್ಣವಾಗಿ ಅರ್ಥಮಾಡಿಕೊಂಡಿಲ್ಲ. ದೇವಸ್ಥಾನಗಳಿಗೆ ಇಂದು ಸೇರಿರುವ ಜಮೀನುಗಳನ್ನು ಪೂರ್ಣವಾಗಿ ಗೇಣಿದಾರರಿಗೆ ಕೊಡಲು ವ್ಯವಸ್ಥೆಯಾಗಿದೆ. ದೇವಸ್ಥಾನಗಳಿಗೆ ಬರುವ ಕಾಣಿಕೆ ಪೂರ್ಣವಾಗಿ ಸರಕಾರಕ್ಕೆ ಬರುವುದು, ದೇವಸ್ಥಾನಗಳನ್ನು ನಡೆಸಿಕೊಂಡು ಹೋಗಲು ಬೇಕಾದ ಸಹಾಯವನ್ನು ಸರಕಾರದವರು ತಸ್ತೀಕ್ ರೂಪವಾಗಿ ಕೊಡಲು ವ್ಯವಸ್ಥೆ ಮಾಡಿದ್ದಾರೆ. ಆದುದರಿಂದ ದೇವಸ್ಥಾನಗಳಿಗೆ ಬರುವ ಕಾಣಿಕೆ ಬೇರೆ ಪೆಟ್ಟಿಗೆಗೆ ಹೋಗುವುದಿಲ್ಲವೆಂಬುದನ್ನು ಮಾನ್ಯ ಸದಸ್ಯರು ಗಮನಿಸಬೇಕು. ಇದೆಲ್ಲಾ ಲೆಕ್ಕಕ್ಕೆ ಬರುವುದು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ನಂಜನಗೂಡು ದೇವಸ್ಥಾನದಲ್ಲಿ ಮಂಗಳಾರತಿ ಮಾಡಿಸಬೇಕಾದರೂ ಕೂಡ ಟಿಕೆಟ್ ತೆಗೆದುಕೊಳ್ಳಬೇಕು, ಕಾಯಿ ಒಡೆಸಲು ಅನುಕೂಲವಿಲ್ಲದಿರುವವರು ಮಂಗಳಾರತಿ ಮಾಡಿಸುವುದಕ್ಕಾದರೂ ಅವಕಾಶವಿರಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ದೇವಸ್ಥಾನಕ್ಕೆ ಬರುವವರಲ್ಲಿ ಯಾರು ಪುಣ್ಯವಂತರು, ಯಾರು ಬಡವರು ಎಂದು ನೋಡುವುದಕ್ಕಾಗುವುದಿಲ್ಲ. ಕಾಣಿಕೆ ಕೊಡಲು ಶಕ್ತಿ ಇಲ್ಲದಿರುವವರು ಕನಕದಾಸರಂತೆ ಹೊರಗೆ ನಿಂತುಕೊಂಡೇ ತಮ್ಮ ಪ್ರಾರ್ಥನೆ ಸಲ್ಲಿಸಬಹುದು. ಅದಕ್ಕೆ ಸಾಧ್ಯವಿದೆ. ದೇವಸ್ಥಾನದ ಕೆಲಸಗಳನ್ನು ನಡೆಸಲು ಅವಕಾಶವಾಗುವಂತೆ ಸ್ವಲ್ಪ ಕಾಣಿಕೆ ಸಹ ಕೊಡಲು ಜನರು ಸಿದ್ಧವಾಗಿಲ್ಲದಿದ್ದರೆ ಕೆಲಸ ಹೇಗೆ ನಡೆಯಬೇಕು ? ಕೊಡಲು ಶಕ್ತಿ ಇಲ್ಲದಿರುವವರಿಗೆ ಆಗಲೇ ಹೇಳಿದಂತೆ ಕನಕದಾಸರ ಮಾರ್ಗವಿದೆ. ಅವರು ಆ ರೀತಿ ಮಾಡಬಹುದು.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು (ಶಾಂತಿನಗರ).—ತಿರುಪತಿಗೆ ಶೇಕಡ 40 ಮಂದಿ ಭಕ್ತರು ಮೈಸೂರಿನಿಂದ ಹೋಗುವರು. ಆದುದರಿಂದ ಅವರಿಗೆ ಅಂದರೆ ಮೈಸೂರಿನವರಿಗೆ ಕಾರ್ಯಕಾರಿ ಸಮಿತಿಯಲ್ಲಿ ಸದಸ್ಯತ್ವ ಪ್ರಾತಿನಿಧ್ಯ ಕೊಡಿಸಿಕೊಡಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಿರುಪತಿ ದೇವಸ್ಥಾನ ಆಂಧ್ರ ರಾಜ್ಯದಲ್ಲಿದೆ. ಅಲ್ಲಿ ಎಲ್ಲ ಭಕ್ತರಿಗೂ ಸರಿಸಮಾನವಾದ ಏರ್ಪಾಡು ಮಾಡುತ್ತಿದ್ದಾರೆ. ಯಾವ ಛತ್ರಕ್ಕೇ ಆಗಲಿ ಮೈಸೂರಿನವರು ಹೋಗಬಾರದೆಂಬ ನಿರ್ಬಂಧವಿಲ್ಲ, ಮೈಸೂರಿನ ಛತ್ರಕ್ಕೆ ಬೇರೆಯವರೂ ಹೋಗಬಹುದು. ಭಕ್ತಾದಿಗಳಿಗೆ ಸೌಕರ್ಯ ಕಲ್ಪಿಸಿಕೊಡಲು ಆಂಧ್ರ ಸರಕಾರದವರು ಬೇಕಾದಷ್ಟು ಶ್ರಮ ವಹಿಸುತ್ತಿದ್ದಾರೆ. ಆದುದರಿಂದ ರಾಜ್ಯದ ಪರವಾಗಿ ಮೈಸೂರಿನವರಿಗೆ ಕಾರ್ಯಕಾರಿ ಸಮಿತಿಯಲ್ಲಿ ಪ್ರಾತಿನಿಧ್ಯ ಕೊಡಬೇಕೆಂದು ಕೇಳಬೇಕಾದ ಪ್ರಮೇಯವಿಲ್ಲ. ನಮ್ಮ ರಾಜ್ಯದ ಪ್ರತಿನಿಧಿ ಅಲ್ಲಿದ್ದರೆ ನಮ್ಮ ಭಕ್ತಾದಿಗಳಿಗೆ ಸೌಕರ್ಯವಾಗುವುದು, ಇಲ್ಲದಿದ್ದರೆ ಇಲ್ಲ ಎಂಬುದಾಗಿ ಹೇಳಲು ಅವಕಾಶವಿಲ್ಲ. ಆ ದೃಷ್ಟಿಯಿಂದ ನಾವು ಆ ಬಗ್ಗೆ ಪ್ರಯತ್ನ ಮಾಡಿಲ್ಲ.

ಶ್ರೀ ಎಸ್. ಎಂ. ಚಂದ್ರಶೇಖರ್ (ಹೊಸನಗರ).—ಕೆಲವು ದೇವಸ್ಥಾನ, ಮಠ ಮುಂತಾದುವುಗಳಲ್ಲಿ ಅಲ್ಲಿನ ಉತ್ಪತ್ತಿ ಸರಿಯಾಗಿ ವಿನಿಯೋಗವಾಗುತ್ತಿಲ್ಲ, ದುರುಪಯೋಗವಾಗುತ್ತಿದೆ. ಅದನ್ನು ಸರಿಪಡಿಸಲು, ಅವುಗಳ ಉತ್ಪತ್ತಿ ಮುಟ್ಟುಗೋಲು ಹಾಕಿಕೊಳ್ಳಲು ಪ್ರಯತ್ನ ಮಾಡುವಿರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದನ್ನು ಈಗಾಗಲೇ ಹೇಳಿದೆ. ಸರಕಾರಿ ಹತೋಟಿಯಲ್ಲಿಲ್ಲದಿರುವ ದೇವಸ್ಥಾನಗಳನ್ನು ತೆಗೆದುಕೊಳ್ಳಲು ಈಗಾಗಲೆ ಕಾನೂನಿನಲ್ಲಿ ಅವಕಾಶ ಇದೆ. ಹಣ ದುರುಪಯೋಗವೆಲ್ಲಾದರೂ ಆಗಿರುವುದು ಕಂಡುಬಂದರೆ ಸರಕಾರ ಅದರ ಮೇಲ್ವಿಚಾರಣೆಯನ್ನು ಸ್ವಲ್ಪಮಟ್ಟಿಗೆ ವಹಿಸಿಕೊಳ್ಳಲು ಅವಕಾಶವಿದೆ. ಪ್ರತ್ಯೇಕ ಕಾನೂನಿನ ಆವಶ್ಯಕತೆ ಕಂಡುಬಂದರೆ ಮಾಡಿ ಸರಕಾರದ ವಶಕ್ಕೆ ದುರುಪಯೋಗ ಮಾಡುವ ಸಂಸ್ಥೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ದೇವಸ್ಥಾನ ಅಂದಾಗ ಅದರಲ್ಲಿ ಚರ್ಚು ಮತ್ತು ಮಸೀದಿಗಳೂ ಸೇರುತ್ತವಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹೌದು.

ಶ್ರೀ ವಾಟಾಳ್ ನಾಗರಾಜ್.—ವೃದ್ಧಾಪ್ಯ ವೇತನವನ್ನು ಈಗ 70 ವರ್ಷ ಆಗಿರುವವರಿಗೆ ಕೊಡುತ್ತಿದ್ದೀರಿ. ಬಹಳ ಮಂದಿ 65 ವರ್ಷವಾಗುವುದರೊಳಗೇ ಸಾಯುವರು. ಆದುದರಿಂದ 65 ವರ್ಷವಾಗಿರುವವರಿಗೂ ಕೊಡಿ, 5 ವರ್ಷವಾದರೂ ಅವರು ತೆಗೆದುಕೊಳ್ಳಲಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಡಿಮ್ಯಾಂಡಿನ ಬಗ್ಗೆ ಚರ್ಚೆಯಾದಾಗ ಮಾನ್ಯ ಸದಸ್ಯರು ಯಾರೂ ಕೂಡ ಈ ವಿಷಯವನ್ನು ಪ್ರಸ್ತಾಪ ಮಾಡಿದಂತೆ ಕಾಣಲಿಲ್ಲ. ಆದರೂ ಕೂಡ ಹೇಳುತ್ತೇನೆ. ಈಗ 70 ವರ್ಷವಾಗಿರುವವರಿಗೆ ಕೊಡಬೇಕೆಂದು ಮಾಡಿದೆ. ಕಾಯಿಲೆ ವಗೈರೆ ಇರುವವರಿಗೆ 65 ವರ್ಷವಾದರೂ ಕೂಡ ಕೆಲವರಿಗೆ ಕೊಡಲಾಗಿದೆ. ಸರಕಾರಕ್ಕೆ ಅನುಕೂಲವಾದಾಗ 60 ವರ್ಷಕ್ಕೆ ಇಳಿಸಬಹುದು. ಇದು ಸರಕಾರಕ್ಕೆ ಸಹಾಯ ಮಾಡಲು ಇರುವ ಸಾಮರ್ಥ್ಯದ ಮೇಲೆ ಹೋಗುವುದು.

ಶ್ರೀ ವಾಟಾಳ್ ನಾಗರಾಜ್.—ಹಿಂದೆ ತಾವು ಮುದುಕರನ್ನು ಹುಡುಕಿ ಕೊಡಲಾಗುವುದೆಂದು ಹೇಳಿದ್ದಿರಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹೌದು. ನಾವು ಹೇಳಿರುವುದನ್ನು ಕಾರ್ಯರೂಪಕ್ಕೆ ತರಲು ಸರ್ವಶಕ್ತಿಯನ್ನು ಉಪಯೋಗಿಸಿ ಪ್ರಯತ್ನ ಮಾಡಲಾಗಿದೆ. ಪ್ರತಿ ಊರಿಗೂ ಹೋಗಿ

ಜೀವನಕ್ಕೆ ಯಾರಿಗಿಲ್ಲ, ಜಮೀನು ವಗೈರೆ ಆಸ್ತಿ ಯಾರಿಗಿಲ್ಲ ಎಂಬುದನ್ನು ನೋಡಿ ಆಸ್ತಿ ಇಲ್ಲದಿರುವವರಿಗೆ ಕೊಡಬೇಕು ಎಂದು ಸ್ಪಷ್ಟವಾಗಿ ಅಧಿಕಾರಿಗಳಿಗೆ ತಿಳಿಸಲಾಗಿದೆ. 70 ವರ್ಷದವರಲ್ಲದೆ 65 ವರ್ಷಕ್ಕೆ ಮೇಲ್ಪಟ್ಟಿರುವವರಿಗೂ ನೂರಾರು ಜನರಿಗೆ ಈ ಸೌಲಭ್ಯ ಕೊಡಲು ಏರ್ಪಾಡಾಗಿದೆ; ಕೊಡುತ್ತಿದ್ದಾರೆ. ಈ ವಿಷಯದಲ್ಲಿ ಅನುಮಾನವಿಲ್ಲ. ಮಾನ್ಯ ಅಧ್ಯಕ್ಷರೇ, ಈಗಾಗಲೇ ಮುಖ್ಯವಾದ ವಿಷಯಗಳಿಗೆ ಉತ್ತರ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ವಿಶ್ವಾಸವಿಟ್ಟು ಹೇಳಿದರು, ಅವರ ವಿಶ್ವಾಸವನ್ನು ನಾನು ಎಷ್ಟುಮಟ್ಟಿಗೆ ಉಳಿಸಿಕೊಳ್ಳಲು ಸಾಧ್ಯವೋ ಅಷ್ಟುಮಟ್ಟಿಗೆ ಪ್ರಯತ್ನ ಮಾಡುತ್ತೇನೆ. ಈ ಭರವಸೆ ಕೊಟ್ಟು ಇಂದು ಸಭೆಯ ಮುಂದಿರುವ ಬೇಡಿಕೆಗಳಿಗೆ ಅನುಮತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಅನೇಕ ಮಾನ್ಯ ಸದಸ್ಯರು ಎದ್ದರು)

ಅಧ್ಯಕ್ಷರು.—ಒಂದು ಗಂಟೆಯೊಳಗಾಗಿ ಮಂತ್ರಿಗಳು ಉತ್ತರ ಕೊಡುವುದನ್ನು ಮುಗಿಸಬೇಕಾಗಿತ್ತು. ಆದರೆ ಮಧ್ಯೆ ಸದಸ್ಯರು ಪ್ರವೇಶಮಾಡಿ ಪ್ರಶ್ನೆಗಳನ್ನು ಹಾಕುತ್ತ ಬಂದುದರಿಂದ ವೇಳೆ ಜಾಸ್ತಿಯಾಯಿತು. ಬೇರೆ ಡಿಮ್ಯಾಂಡ್ ತೆಗೆದುಕೊಂಡು 6 ಗಂಟೆಗೆ ಓಟಿಗೆ ಹಾಕಬೇಕು. ಆದುದರಿಂದ ಈಗ ಕ್ಲಾರಿಫಿಕೇಷನ್ ಕೇಳಲು ಅವಕಾಶವಿಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ.—ಪಹಣಿ ಆಧಾರದಮೇಲೆ ಕಂದಾಯ ನಿಗದಿಮಾಡಬೇಕೆಂದು ಮಾನ್ಯಮಿತ್ರರು ಹೇಳಿದರು. ಅದೊಂದು ಚೋರ ಲೆಕ್ಕ. ಆ ಚೋರ ಲೆಕ್ಕದಮೇಲೆ ಕಂದಾಯ ನಿಗದಿಮಾಡಿದರು, ಹಾಗೆ ಮಾಡಿದರೆ ರೈತರಿಗೆ ತೊಂದರೆಯಾಗುವುದು. ಏಕೆಂದರೆ ಜಮೀನು ಸಾಗುಮಾಡುವವರೇ ಬೇರೆ, ಪಹಣಿ ಯಾರ ಹೆಸರಿನಲ್ಲಿ ಬರೆಯುವರೋ ಅವರೇ ಬೇರೆ. ಪೋಲೀಸು ಇಲಾಖೆಯಲ್ಲಿ ಡೈರಿ ಬರೆದು ಅದರ ಕಾಪಿಯನ್ನು ಎಸ್. ಪಿ. ಗೆ ಕಳುಹಿಸುವಂತೆ ಪಹಣಿ ಬರೆದು ಅದರ ಕಾಪಿಯನ್ನು ಪಂಚಾಯಿತಿಗೆ ಮತ್ತು ತಹಸಿಲ್ದಾರರಿಗೆ ಕಳುಹಿಸಿದರೆ ನಂತರ ಕಳ್ಳ ಪಹಣಿ ಬರೆಯಲು ಅವಕಾಶವಿರುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಪಹಣಿ ತಪ್ಪಾಗಿದ್ದರೆ ತಹಸಿಲ್ದಾರರು ಅದನ್ನು ಸರಿಪಡಿಸಬೇಕು, ನಂತರ ಬೇಕಾದರೆ ಅಸಿಸ್ಟೆಂಟ್ ಕಮಿಷನರಿಗೆ ಅಪೀಲು ಮಾಡಿಕೊಳ್ಳಲು ಅವಕಾಶ ಕೊಡಬಹುದು, ಅಸಿಸ್ಟೆಂಟ್ ಕಮಿಷನರೇ ಆಖೈರು ತೀರ್ಮಾನಮಾಡಬೇಕು. ಅದರಿಂದ ಅನುಕೂಲ. ಇನಾಂ ಅಬಾಲಿಷನ್ ಆಕ್ಟನ್ನು ಸಂಪೂರ್ಣವಾಗಿ ಜಾರಿಗೆಕೊಟ್ಟಿಲ್ಲ. ಅದನ್ನು ಜಾರಿಗೆಕೊಡಬೇಕು.

ಶ್ರೀ ವಿ. ಎನ್. ಪಾಟೀಲ್.—ಹಳೇ ಮೈಸೂರಿನಲ್ಲಿ ಲ್ಯಾಂಡ್ಸ್ ಆಕ್ರಮಣ ಮಾಡಿಕೊಂಡವರಿಗೆ ಪೆನಾಲ್ಟಿ ಹಾಕಿ ಟಿ.ಟಿ. ಕೊಡುತ್ತಾರೆ. ಅದೇ ರೀತಿ ನಮ್ಮ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲೂ ಕೂಡ ಕೆಲವು ಶಿವಾಯಿ ಜಮಾಯಿ ಲ್ಯಾಂಡ್ಸ್ ಇದೆ. ಆ ಶಿವಾಯಿ ಜಮಾಯಿ ಲ್ಯಾಂಡ್ಸ್‌ಗೆ ಸರ್ಕಾರದವರು ಪೆನಾಲ್ಟಿ ಹಾಕಿದ್ದಾರೆ. ಅಲ್ಲಿ ರೈತರು 1½ ಎಕರೆ, 2 ಎಕರೆ, 3 ಎಕರೆ ಭೂಮಿಯನ್ನು ಆಕ್ರಮಣ ಮಾಡಿಕೊಂಡು 10-15 ವರ್ಷದಿಂದಲೂ ಅಕ್ರಮ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಅವರಿಗೆ ಕ್ಲಿಯರೆನ್ಸ್ ಪಟ್ಟೆ ಕೊಟ್ಟಿಲ್ಲಾ. ಅವರಿಗೆ ಪಟ್ಟೆ ಸಿಕ್ಕಬೇಕಾದರೆ ಅವರು 10—15 ವರ್ಷದಿಂದಲೂ ಹಾಕಿರುವ ಜುಲ್ಮಾನೆಯನ್ನು ಕಟ್ಟಬೇಕಾಗುತ್ತದೆ. ಆ ಜುಲ್ಮಾನೆ 1,500 ರೂಪಾಯಿನಿಂದ 3 ಸಾವಿರ ರೂಪಾಯಿನವರೆಗೂ ಆಗುತ್ತದೆ. ಆದುದರಿಂದ ನಿಮ್ಮನ್ನು ನಾನು ಕೇಳುವುದು ಏನೆಂದರೆ ಈಗ ನಿಮ್ಮ ಸೋಷಿಯಲಿಸಮ್ ತತ್ವ ಏನು ಇದೆಯೋ ಅದರಂತೆ ಅವರಿಗೆ ಹಾಕಿರುವ ಜುಲ್ಮಾನೆಯನ್ನು ಬಿಟ್ಟು ಬಿಟ್ಟು ಕ್ಲಿಯರೆನ್ಸ್ ಪಟ್ಟೆ ಕೊಡಿಸುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಲ್ಲಿ ಶಿವಾಯಿ ಜಮಾಯಿ ಲ್ಯಾಂಡ್ಸ್ ಏನು ಇದೆ ಅದನ್ನು ಅವರು ಅಕ್ರಮ ಸಾಗುವಳಿ ಮಾಡಿಕೊಂಡಿದ್ದರೆ, ಅವರು ನ್ಯಾಯವಾಗಿ ಭೂರಹಿತರಾಗಿದ್ದ ಪಕ್ಷದಲ್ಲಿ ಅದರ ಪರಿಶೀಲನೆಗೆ ಬಂದಾಗ ಅವರಿಗೆ ಏನು ಜುಲ್ಮಾನೆ ಹಾಕಿದ್ದಾರೋ ಅದನ್ನು ಸರ್ಕಾರ ಯೋಚನೆ ಮಾಡಿ ಅವರಿಗೆ ಕಡಿಮೆ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡೋಣ.

MADAM SPEAKER.—The question is:

"That a sum not exceeding Rs. 4,84,95,000 inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 2 'Land Revenue'."

(MADAM SPEAKER)

"That a sum not exceeding Rs. 28,00,000 inclusive of the sum granted 'on account' be granted to the Government to defray the charges which will come in course of payment during the financial year for the period ending 31st day of March 1973, in respect of Demand No. 7, 'Stamps'."

ಕಾರ್ಮಿಕರಿಗೂ ಮಾಲೀಕರಿಗೂ ವಿವಾದಗಳು ಎದ್ದಾಗ, ತೊಂದರೆಗಳು ಸಂಭವಿಸಿದಾಗ ಸರ್ಕಾರದ ಮಂತ್ರಿಗಳು ಮುಂದೆ ಬಂದು ಮಾಲೀಕರನ್ನೂ ಕಾರ್ಮಿಕರನ್ನೂ ಕರೆಸಿ ಮಾತನಾಡಿದ್ದುಂಟು. ಈ ಒಂದು ಕಾರ್ಯವನ್ನು ಮಾನ್ಯ ಮಂತ್ರಿಗಳು ಮಾಡುತ್ತಿದ್ದಾರೆ, ಅದಕ್ಕಾಗಿ ನಾನು ಅವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಇದರಲ್ಲಿ ಮುಖ್ಯವಾಗಿ ಮೈಸೂರು ಮಿಷನರಿ ಕಾರ್ಖಾನೆ ಕಾರ್ಮಿಕರ ಪ್ರಶ್ನೆ ಈಗ ಬಂದಿದೆ. ಬೆಂಗಳೂರಿನಲ್ಲಿರುವ ಈ ಒಂದು ಕಾರ್ಖಾನೆಯಲ್ಲಿ 380 ಜನರನ್ನು ಕಿತ್ತು ಹಾಕಿಬಿಟ್ಟಿದ್ದಾರೆ. ಈ ದಿವಸ ಅವರು ಬಹಳ ತೊಂದರೆಪಡುತ್ತಿದ್ದಾರೆ. ಇದರಲ್ಲೂ ಕೂಡ ಆ ಕಾರ್ಖಾನೆಯ ಮಾಲೀಕರನ್ನೂ ಕಾರ್ಮಿಕರನ್ನೂ ಕರೆಸಿ ಮಾತನಾಡಿದರು. ಈ ವಿಷಯವನ್ನು ಇತ್ಯರ್ಥ ಮಾಡುವುದಕ್ಕೆ ಪ್ರಯತ್ನ ಮಾಡಿದರೂ ಪೂರ್ತಿ ಇತ್ಯರ್ಥವಾಗಲಿಲ್ಲ. ಆ ಮಾಲೀಕ ಮಾನ್ಯ ಮಂತ್ರಿಗಳಿಗೆ ಆಶ್ವಾಸನೆ ಕೊಟ್ಟನು. ಮಾನ್ಯ ಮಂತ್ರಿಗಳು ಆ ಮಾಲೀಕನಿಗೆ ಹೇಳಿದರು. ಕಾರ್ಖಾನೆಯಲ್ಲಿರುವ ಎಲ್ಲ ಕೆಲಸಗಾರರನ್ನು ತೆಗೆದುಕೊಳ್ಳಬೇಕು, ಮುಚ್ಚಿದ ಫ್ಯಾಕ್ಟರಿಯನ್ನು ತೆಗೆಯಬೇಕು, ವಿನಾ ಕಾರಣ ಯಾರನ್ನೂ ತೆಗೆಯಕೂಡದು ಎಂದು ಹೇಳಿದ್ದಕ್ಕೆ ಆ ಮಾಲೀಕ ಭರವಸೆ ಕೊಟ್ಟನು. ಆ ಭರವಸೆ ಲಿಖಿತಮೂಲಕವಾಗಿ ನಮಗೂ ಕೊಟ್ಟರು. ಆದರೆ ಆ ಭರವಸೆ ಕಾರ್ಯಗತವಾಗಲಿಲ್ಲ. ಆದುದರಿಂದ ಈವೊತ್ತು ಮೈಸೂರು ಮೆಷಿನರಿ ಕಾರ್ಖಾನೆ ಕಾರ್ಮಿಕರು ವಿಧಾನಸೌಧದ ಹತ್ತಿರ ಉಪವಾಸ ಮಾಡುವ ಪರಿಸ್ಥಿತಿ ಬಂದಿದೆ. ಇದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಈಗಲೂ ಸಹ ಮಂತ್ರಿಗಳು ಆ ಮಾಲೀಕನನ್ನು ಕರೆದು ನೀನು ತಪ್ಪಿ ನಡೆದಿದ್ದೀಯೇ ನೀನು ಕೊಟ್ಟ ಭರವಸೆ ಕಾರ್ಯಗತ ಮಾಡಿಲ್ಲ ಎಂದು ಹೇಳಿ ಇದನ್ನು ಕಾರ್ಯಗತ ಮಾಡಿಸುವ ಜವಾಬ್ದಾರಿ, ಮತ್ತು ಎದೆಗಾರಿಕೆ ತಮ್ಮಲ್ಲಿದೆ. ಇದರಲ್ಲಿ ಸರ್ಕಾರವೂ ಸಹಾಯ ಮಾಡಬೇಕು. ಅದರಲ್ಲೂ ಮಾನ್ಯ ಮುಖ್ಯಮಂತ್ರಿಗಳೂ ಮತ್ತು ಕೈಗಾರಿಕಾ ಮಂತ್ರಿಗಳೂ ಕೂಡ ಸಹಾಯ ಮಾಡಬೇಕು. ಯಾವನೇ ಮಾಲೀಕನಾಗಲಿ, ಅದು ಸರ್ಕಾರಿ ಕ್ಷೇತ್ರವೇ ಆಗಿರಲಿ, ಸಾರ್ವಜನಿಕ ಕ್ಷೇತ್ರವೇ ಆಗಿರಲಿ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಹಿಂಜರಿಯಬಾರದು. ಯಾವ ಮಾಲೀಕನೇ ಆಗಲಿ ಕೊಟ್ಟ ಭರವಸೆಯನ್ನು ಕಾರ್ಯರೂಪಕ್ಕೆ ತರದೇ ಹೋದರೆ ಆತನನ್ನು ಸರಿಯಾದ ಹದ್‌ಬಸ್ತಿನಲ್ಲಿ ತರುವ ಹತೋಟಿ ನಿಮ್ಮ ಹತ್ತಿರ ಇದೆ. ಕಾರ್ಮಿಕರಿಂದ ವಸೂಲ್ಮಾಡುವ ಪ್ರಾವಿಡೆಂಟ್ ಫಂಡ್ ಹಣ ತಿಂದು ಹಾಕಿದ್ದಾರೆ, ಜನಗಳ ಹಣ ತಿಂದು ಹಾಕಿ ಎಲ್ಲರಿಗೂ ಮೋಸ ಮಾಡಿದ್ದರೆ ಅವನ ಬಗ್ಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಿ. ಇದರ ಬಗ್ಗೆ ನೀವು ದಿಟ್ಟತನದಿಂದ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಇದರ ಬಗ್ಗೆ ತಾವು ಸಹಾಯ ಮಾಡುವ ರಾಮೆಟಿರಿಯಲ್ಸ್ ಕೊಡುವುದಿಲ್ಲ ಎಂದು ಹೇಳಿ, ಪೋಲೀಸಿನವರ ರಕ್ಷಣೆ ಕೊಡುವುದಿಲ್ಲ ಎಂದು ಹೇಳಿ, ಎಲೆಕ್ಟ್ರಿಸಿಟಿ ಕೊಡುವುದಿಲ್ಲ ಎಂದು ಹೇಳಿ ಆವಾಗ ಮಾಲೀಕ ತನ್ನಷ್ಟಕ್ಕೆ ತಾನೆ ನಿಮ್ಮ ದಾರಿಗೇ ಬರುತ್ತಾನೆ. ಇದೇ ರೀತಿ ಮೈಸೂರು ರಾಜ್ಯದಲ್ಲಿರುವ ದೀಪಕ್ ಕೇಬಲ್ಸ್, ಎನ್.ಜಿ.ಇ.ಎಫ್. ಈ ಕಾರ್ಮಿಕರ ಬಗ್ಗೆ ಇರುವ ವಿವಾದಗಳು ಇತ್ಯರ್ಥವಾಗಲಿಲ್ಲ. ಇನ್ನು ಮಹದೇಶ್ವರ ಮಿಲ್ಸ್ ಕಾರ್ಖಾನೆಯದು ನಿನ್ನೆ ತಾನೇ ಇತ್ಯರ್ಥವಾಗಿದೆ ಎಂದು ಪತ್ರಿಕೆಯಲ್ಲಿ ಬಂದಿದೆ, ಆದುದರಿಂದ ಮಾಲೀಕರ ಅವ್ಯವಹಾರಗಳನ್ನು ಇತ್ಯರ್ಥ

ಮಾಡುವ ಮನೋಭಾವನೆಯನ್ನು ಮಾನ್ಯ ಮಂತ್ರಿಗಳು ಇಟ್ಟುಕೊಳ್ಳಬೇಕು. ತಾವು ಇದರ ಬಗ್ಗೆ ಯೋಜನೆ ಮಾಡಬೇಕು. ಈರೀತಿ ಮಾಡಿದರೆ ಬಂಡವಾಳಗಾರರು ತಮ್ಮ ಮೇಲೆ ಬೇಕಾದಷ್ಟು ಒತ್ತಡ ತರುತ್ತಾರೆ ಮತ್ತು ಪಾರ್ಟಿಯ ಮೇಲೆ ಕೂಡ ಒತ್ತಡ ತರುತ್ತಾರೆ. ಅದು ಒಂದಕ್ಕೂ ತಾವು ಮಣಿಯಬಾರದು. ನೀವು ಸರಿಯಾದ ದಾರಿಯಲ್ಲಿ ನಡೆದರೆ ನಿಮ್ಮ ಗುರಿಯನ್ನು ಮುಟ್ಟಬಹುದು. ಇಂತಹ ಕಠಿಣ ಸಮಸ್ಯೆಯನ್ನು ತಾವು ಎದುರಿಸಬೇಕು. ಈ ಒಂದು ಹಾದಿಯಲ್ಲಿ ಹೋಗಬೇಕೆಂದು ತಮ್ಮ ಗಮನವನ್ನು ಸೆಳೆಯಬಯಸುತ್ತೇನೆ. ಈವೊತ್ತಿನ ದಿವಸ ರಾಜಕೀಯ ಪರಿಸ್ಥಿತಿ ಹಿಂದೆ ಇದ್ದ ಹಾಗೆ ಇಲ್ಲ. ಸ್ವಲ್ಪಮಟ್ಟಿಗೆ ಬದಲಾವಣೆಯಾಗಿದೆ. ಹಿಂದೆ ತಮಗೆ ಗೊತ್ತಿರುವ ಹಾಗೆ ಇಂತಹ ಪ್ರಶ್ನೆಗಳನ್ನು ಇತ್ಯರ್ಥಮಾಡುವ ಮನೋಭಾವ ಕೇಂದ್ರ ಸರ್ಕಾರದಲ್ಲೂ ಕಡಿಮೆ ಇತ್ತು. ಹಿಂದೆ ಕಾರ್ಮಿಕರಿಗೆ ಅಷ್ಟೊಂದು ಬೆಂಬಲ ಕೊಡುತ್ತಾ ಇರಲಿಲ್ಲ. ಈಗ ಸ್ವಲ್ಪ ಮಟ್ಟಿಗೆ ಬದಲಾವಣೆಯಾಗಿದೆ. ಹಿಂದೆ ಮಾಲೀಕರ ಪರವಾಗಿದ್ದರು ಅಲ್ಲದೆ ತಮಗೆ ಬೇಕಾದ ಸಂಘಗಳಿಗೆ ಸಂಸ್ಥೆಗಳಿಗೆ ಮಾತ್ರ ಮಾನ್ಯತೆ ಸಿಕ್ಕುತ್ತಿತ್ತು. ಬೇರೆಯವರಿಗೆ ಮಾನ್ಯತೆ ಸಿಕ್ಕುತ್ತಿರಲಿಲ್ಲ. ಕೇಂದ್ರದಲ್ಲೂ ರಾಜ್ಯದಲ್ಲೂ ಈ ರೀತಿ ನಡೆಯುತ್ತಾ ಇತ್ತು ಎಂದು ಕೇಳಿದ್ದೇನೆ. ಆದರೆ ಕಳೆದ ಚುನಾವಣೆಯಿಂದೀಚೆಗೆ ಸ್ವಲ್ಪ ಬದಲಾವಣೆಯಾಗಿದೆ. ಕೇಂದ್ರ ಸರ್ಕಾರದ ಮಂತ್ರಿಗಳಾದ ಶ್ರೀ ಖಾಡಿಲ್ಕರ್‌ರವರು ಹೊಸ ದೃಷ್ಟಿಕೋನವನ್ನು ಹೊಂದಿದ್ದಾರೆ. ನಮ್ಮ ದೇಶದಲ್ಲಿರುವ ಅನೇಕ ಸಂಸ್ಥೆಗಳು ಅಂದರೆ ಐ. ಎನ್. ಟಿ. ಯು. ಸಿ. ಹಿಂದ್ ಮಜ್ದೂರ್ ಸಭಾ ಮತ್ತು ಇನ್ನು ಯಾವ ಯಾವ ಸಂಸ್ಥೆಗಳು ಇವೆ. ಅವನ್ನೆಲ್ಲಾ ಒಂದುಗೂಡಿಸಬೇಕು ಎಂದು ನ್ಯಾಷನಲ್ ಕೌನ್ಸಿಲ್ ಕೂಡ ಅಭಿಪ್ರಾಯಪಟ್ಟಿದೆ ಎಂದು ತಿಳಿದು ಬಂದಿದೆ. ಈರೀತಿ ಮಾಡಿದರೆ ಕೆಲವು ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಅನುಕೂಲವಾಗುತ್ತದೆ. ಮುಖ್ಯವಾಗಿ 2-3 ವಿಷಯಗಳಲ್ಲಿ ಮಾತ್ರ ಕೈಗಾರಿಕಾ ಸಂಬಂಧವಾಗಿ ಹೇಳಬೇಕಾಗಿದೆ. ಕೇಂದ್ರ ಸರ್ಕಾರದವರು ಮತ್ತು ರಾಜ್ಯ ಸರ್ಕಾರದವರೂ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಬೇಕು ಎನ್ನುವ ದೃಷ್ಟಿಯಿಂದ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ.

ಮೊಟ್ಟಮೊದಲನೆಯದಾಗಿ ಕಾರ್ಮಿಕರಿಗೂ ಮಾಲೀಕರಿಗೂ ಕೈಗಾರಿಕಾ ವಿವಾದಗಳು ಬಂದರೆ ಕಾರ್ಮಿಕರ ಹಿತದೃಷ್ಟಿಯನ್ನು ಇಟ್ಟುಕೊಂಡು ಕನ್‌ಸಿಲಿಯೇಟ್ ಮಾಡಬೇಕು. ಯಾವಾಗಲೂ ಇಂಥಾ ಸಂದರ್ಭದಲ್ಲಿ ಲೇಬರ್ ಕಮಿಷನರ್ ಸರಿಯಾದ ತೀರ್ಮಾನ ಕೊಡಬೇಕು. ಒಂದು ವೇಳೆ ತೀರ್ಮಾನ ಸರಿಯಾಗಿಲ್ಲದೇ ಹೋದರೆ ಆವಾಗ ಕಾರ್ಮಿಕರಿಗೆ ಅಶಾಂತಿ ಮತ್ತು ಅತೃಪ್ತಿ ಉಂಟಾಗಿ ಕೈಗಾರಿಕಾ ರಂಗದಲ್ಲಿ ಅಶಾಂತಿ ಹೆಚ್ಚಾಗುವುದಕ್ಕೆ ಅವಕಾಶವಾಗುತ್ತದೆ. ಈ ರೀತಿ ಅಶಾಂತಿ ಉಂಟಾದರೆ ಆವಾಗ ಟ್ರೇಡ್ ಯೂನಿಯನ್ ಚಳುವಳಿ ಮಾಡಬೇಕಾಗಿ ಬರುತ್ತದೆ. ಈ ವೊತ್ತಿನ ದಿವಸ ಯಾವ ವಿಧದಲ್ಲೂ ಕೈಗಾರಿಕಾ ಕಾರ್ಮಿಕರಿಗೆ ಅತೃಪ್ತಿಯನ್ನು ಉಂಟುಮಾಡಬಾರದು. ಈವೊತ್ತು ಯಾವ ಟೆಕ್ಸ್‌ಟೈಲ್ ಕೈಗಾರಿಕೆಯಲ್ಲೇ ಆಗಲಿ, ಪೇಪರ್ ಕಾರ್ಖಾನೆಯಲ್ಲೇ ಆಗಲೀ, ಸಿಮೆಂಟ್ ಕಾರ್ಖಾನೆಯಲ್ಲೇ ಆಗಲಿ, ಷುಗರ್ ಫ್ಯಾಕ್ಟರಿಯಲ್ಲೇ ಆಗಲಿ, ಇಂತಹ ವಿವಾದಗಳು ಬಂದರೆ ಅಲ್ಲಿಯ ಮಾಲೀಕರನ್ನೂ ಕಾರ್ಮಿಕರನ್ನೂ ಕರೆಸಿಕೊಂಡು ತೀರ್ಮಾನ ಮಾಡಬೇಕು. ಆ ಕಾರ್ಮಿಕರಿಗೆ ಯಾವ ವಿಧದಲ್ಲೂ ಅತೃಪ್ತಿಯನ್ನು ಬೆಳೆಸುವುದಕ್ಕೆ ಅವಕಾಶ ಕೊಡಬಾರದು. ಈವೊತ್ತಿನ ದಿವಸ ಕಾರ್ಮಿಕರಿಗೆ ಆರ್ಬಿಟ್ರೇಷನ್‌ನಲ್ಲಿ ನಂಬಿಕೆ ಇಲ್ಲ, ಅಡ್ಜುಡಿಕೇಷನ್‌ನಲ್ಲಿ ನಂಬಿಕೆ ಇಲ್ಲ. ಮಾನ್ಯ ರಾಷ್ಟ್ರಾಧ್ಯಕ್ಷರಾದ ಗಿರಿಯವರೇ ಅವು ಎನಿಮಿ ನಂಬರ್ ಒನ್ ಎಂದು ಹೇಳಿದ್ದಾರೆ. ಏತಕ್ಕೆಂದರೆ ಈ ಕಾರ್ಮಿಕರ ವಿವಾದಗಳು ಆರ್ಬಿಟ್ರೇಷನ್‌ಗೆ ಹಾಕಿದರೆ ಈ ಸಣ್ಣ ಕೈಗಾರಿಕೆಗಳ ಬಗ್ಗೆ ತೀರ್ಮಾನಕೊಡಬೇಕಾದರೆ ಒಂದು ವರ್ಷವಾದರೂ ಆಯಿತು ಎರಡೂ ವರ್ಷವಾದರೂ ಆಯಿತು. ಬೇಗನೆ ತೀರ್ಮಾನವಾಗುವುದಿಲ್ಲ. ಆದುದರಿಂದ ಇಂಡಸ್ಟ್ರಿಯಲ್ ರಿಲೇಷನ್ ಮೆಷಿನರಿ ಸರಿಯಾಗಿ ಕೆಲಸ ಮಾಡಬೇಕು. ಈಗ ಅಡ್ಜುಡಿಕೇಷನ್‌ಗೆ ಹೆಚ್ಚಿನ ಪ್ರಾಮುಖ್ಯತೆ ಕೊಡುತ್ತಾ ಇಲ್ಲ. ಈಗ ಅದಕ್ಕೆ ಸರಿಯಾದ ಸ್ಥಾನವಿಲ್ಲ. ನ್ಯಾಷನಲ್ ಕೌನ್ಸಿಲ್‌ನವರು ಇದರ ಬಗ್ಗೆ ಚರ್ಚೆ ಮಾಡಿ ಹಲವಾರು ಸೂಚನೆಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ನನಗೆ ತಿಳಿದಮಟ್ಟಿಗೆ ಹೊಸ ಮೆಷಿನರಿ ಟ್ರೈಪಾರ್ಟಿಯೇಟ್ ಇಂಡಸ್ಟ್ರಿಯಲಿಸ್ಟ್ಸ್ ಕಾನ್‌ಫರೆನ್ಸ್‌ಗಳು ಮಾಡಿ ಈ ಇಂಡಸ್ಟ್ರಿಯಲ್ ಡಿಸ್ಪ್ಯೂಟ್‌ಗಳನ್ನು ಬೇಗನೆ ತೀರ್ಮಾನ ಮಾಡಬೇಕು ಎಂದು ಮಾಡಿದ್ದಾರೆ. ಗಜೇಂದ್ರಗಡ್ಕರ್ ಸಮಿತಿಯಲ್ಲಿ ಲೇಬರ್ ಕಮಿಷನರ್ ಕೂಡ ಹೇಳಿದ್ದಾರೆ. ಆ ಮನೋಭಾವವನ್ನು ಮೈಸೂರು ರಾಜ್ಯದಲ್ಲಿ ಬೆಳೆಸಬೇಕು. ಇಲ್ಲಿ ಹಲವಾರು ಸಮಸ್ಯೆಗಳಿವೆ. ಟೆಕ್ಸ್‌ಟೈಲ್ ಕೈಗಾರಿಕೆಯನ್ನು ತೆಗೆದುಕೊಳ್ಳಿ. ಮೈಸೂರು ರಾಜ್ಯದಲ್ಲಿ ಟೆಕ್ಸ್‌ಟೈಲ್ ಕಾರ್ಮಿಕರ ಪರಿಸ್ಥಿತಿ ಬೇರೆ ಎಲ್ಲ ರಾಜ್ಯಗಳಿಗಿಂತ ಅಧೋಗತಿಯಲ್ಲಿದೆ. ದಾವಣಗೆರೆಯಲ್ಲಿ ಮಾಲೀಕರು ಟೆಕ್ಸ್‌ಟೈಲ್ ವೇಜ್ ಬೋರ್ಡ್ ತೀರ್ಮಾನವನ್ನು ಜಾರಿಗೆ ತೆಗೆದುಕೊಂಡು ಬಂದಿಲ್ಲ. ಹಿಂದೆ

(ಶ್ರೀ ಎಂ. ಎಸ್. ಕೃಷ್ಣನ್)

ಶ್ರೀ ನಿಜಲಿಂಗಪ್ಪನವರು ಇದ್ದಾಗ ಅವರು ಟೆಕ್ಸ್‌ಟೈಲ್ ಕಾರ್ಮಿಕರಿಗೆ ಬೆಂಬಲ ಕೊಡುತ್ತಿದ್ದಾರೆ, ದಾವಣಗೆರೆಯಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹಿಂದೆ ಹೇಳುತ್ತಿದ್ದರು. ತಾವು ಈಗ ಅಧಿಕಾರಕ್ಕೆ ಬಂದಿದ್ದೀರಿ. ದಾವಣಗೆರೆ ಕಾರ್ಮಿಕರ ಪರಿಸ್ಥಿತಿ, ಹುಬ್ಬಳ್ಳಿ ಟೆಕ್ಸ್‌ಟೈಲ್ ಕಾರ್ಮಿಕರ ಪರಿಸ್ಥಿತಿ, ಬೆಂಗಳೂರು ಸೂರ್ಯೋದಯ ಮಿಲ್ಸ್ ಕಾರ್ಮಿಕರ ಪರಿಸ್ಥಿತಿ, ಕೃಷ್ಣ ವೀವಿಂಗ್ ಮಿಲ್ಸ್ ಕಾರ್ಮಿಕರ ಪರಿಸ್ಥಿತಿಯನ್ನು ನೋಡಿದರೆ ವೇಜ್ ಬೋರ್ಡ್ ತೀರ್ಮಾನವನ್ನು ಜಾರಿಗೆ ತಂದಿಲ್ಲ. ಯಾವುದನ್ನು ಸರ್ಕಾರ ಒಪ್ಪಿಕೊಂಡಿದೆಯೋ ಅದನ್ನು ಕೂಡ ಜಾರಿಗೆ ತಂದಿಲ್ಲ.

ಇಂಜಿನಿಯರಿಂಗ್ ಕಾರ್ಮಿಕರ ಬಗ್ಗೆ ಕೂಡ ಅದೇ ರೀತಿಯಾಗಿದೆ. ಅವರಿಗೆ ಒಂದು ವೇಜ್ ಬೋರ್ಡ್ ಮಾಡಿದರು. ವೇಜ್ ಬೋರ್ಡ್ ಮಾಡಿ ಐದು ವರ್ಷವಾದರೂ ಅದನ್ನು ಜಾರಿಗೆ ತರಬೇಕಾದರೆ, ರಾಜ್ಯ ಮಟ್ಟದಲ್ಲಿ ಒಂದು ಟ್ರೈ ಪಾರ್ಟೈಟ್ ಕಮಿಟಿಯನ್ನು ಮಾಡಿದರು. ಅವರಲ್ಲಿ ನಾನೂ ಇದ್ದೆ, ಲೇಬರ್ ಕಮೀಷನರು ಚೇರ್‌ಮನ್‌ರಾಗಿದ್ದರು. ಅವರು ನಮ್ಮನ್ನು ಕರೆಸಿ ಮಾತ ನಾಡಿ ಚರ್ಚೆ ಮಾಡಿದ್ದರೂ ಕೂಡ ಇನ್ನೂ ಇತ್ಯರ್ಥವಾಗುವುದಕ್ಕೆ ಸಾಧ್ಯವಾಗಿಲ್ಲ. ನಾವು ಹೇಳುವುದನ್ನು ಮಾಲೀಕರು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ವೇಜ್‌ಬೋರ್ಡ್ ಏನು ತೀರ್ಮಾನ ಮಾಡಿದೆ ಅದಕ್ಕಿಂತ ಕಡಿಮೆ ಕೊಡಲು ಮಾಲೀಕರು ಪ್ರಯತ್ನ ಮಾಡುತ್ತಾರೆ. ಚೇರ್‌ಮನ್ ಅವರ ಸಿಫಾರಸುಗಳು, ವರ್ಕರ್ಸ್‌ರೆಕಮೆಂಡೇಷನ್ ಮತ್ತು ಇಂಡಿಪೆಂಡೆಂಟ್ ಮೆಂಬರ್ಸ್ ರೆಕಮೆಂಡೇಷನ್ ಎಂದು ಮೂರು ರಿಪೋರ್ಟ್ ಇದೆ. ಈ ಮೂರರಲ್ಲಿ ಚೇರ್‌ಮನ್ ಅವರ ರೆಕಮೆಂಡೇಷನ್ಸ್ ಜಾರಿಗೆ ತೆಗೆದುಕೊಂಡು ಬನ್ನಿ ಎಂದು ಸರ್ಕ್ಯುಲರ್ ಹೊರಡಿಸಿದರೆ ಇದುವರೆಗೂ ಜಾರಿಗೆ ಬಂದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೇರು ಬೀಜ ಕಾರ್ಖಾನೆಯ ಕೆಲಸಗಾರರ ಪರಿಸ್ಥಿತಿಯೂ ಇದೇ ಆಗಿದೆ. ಅಲ್ಲಿ ಕಾರ್ಮಿಕರ ಪರಿಸ್ಥಿತಿ ಮಾತ್ರವಲ್ಲ ಕೈಗಾರಿಕೆಯ ಪರಿಸ್ಥಿತಿಯನ್ನೂ ಯೋಚನೆ ಮಾಡಬೇಕಾದ ಸ್ಥಿತಿ ಬಂದಿದೆ. ಕೇರಳದಲ್ಲಿ ಕ್ಯಾಷ್ಯೂ ಕಾರ್ಪೊರೇಷನ್ ಮಾಡಿ ಕಾರ್ಮಿಕರ ಹಿತವನ್ನು ರಕ್ಷಣೆ ಮಾಡಿದ್ದಾರೆ, ಸರಿಯಾದ ಮೆಷಿನರಿ ಏರ್ಪಾಡು ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಬೀಡಿ ಕೆಲಸಗಾರರು ಸಹಸ್ರಾರು ಜನರಿದ್ದಾರೆ. ನನಗಿಂತ ನಮ್ಮ ಮಂತ್ರಿಗಳಿಗೇ ಈ ಕಾರ್ಮಿಕರ ವಿಚಾರ ಜಾಸ್ತಿ ಗೊತ್ತಿದೆ. ಅವರು ಬೀಡಿ ಕಾರ್ಮಿಕರ, ಯೂನಿಯನ್ನಿನ ಅಧ್ಯಕ್ಷರಾಗಿದ್ದರು. ಅವರ ಪರಿಸ್ಥಿತಿ ಕೂಡ ಚಿಂತಾಜನಕವಾಗಿದೆ. ಬೀಡಿ ಪ್ರಿಮಿಸಸ್ ಆಕ್ಟ್ ಇದೆ. ಆ ಕಾನೂನಿನ ಬಗ್ಗೆ ಹೈಕೋರ್ಟಿನಲ್ಲಿ ಒಂದು ವಿವಾದವಿದ್ದು, ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್ ಆಕ್ಟ್ ಬೀಡಿ ಕೆಲಸಗಾರರಿಗೂ ಅನ್ವಯವಾಗುತ್ತದೆ ಎಂದು ಹೈಕೋರ್ಟಿನಲ್ಲಿ ತೀರ್ಮಾನ ಕೊಟ್ಟಿದ್ದಾರೆ. ಆದರೂ ಕೂಡ ಆ ವಿಚಾರ ಸುಪ್ರೀಂ ಕೋರ್ಟಿಗೆ ಹೋಗಿದ್ದು ಇನ್ನೂ ಇತ್ಯರ್ಥವಾಗದೆ ಇರುವ ಪರಿಸ್ಥಿತಿ ಇದೆ. ಇದರಿಂದ ಬೀಡಿ ಕೆಲಸಗಾರರಿಗೆ ಸಿಕ್ಕಬೇಕಾದ ಸೌಲಭ್ಯಗಳು ಸಿಕ್ಕುತ್ತಿಲ್ಲ.

ಸಕ್ಕರೆ ಕಾರ್ಖಾನೆ ಕಾರ್ಮಿಕರ ಸ್ಥಿತಿ ಕೂಡ ಹಾಗೆಯೇ ಇದೆ. ವೇಜ್ ಬೋರ್ಡ್ ತೀರ್ಮಾನ ಕೊಟ್ಟಿದ್ದರೂ ಅದು ಜಾರಿಗೆ ಬಂದಿಲ್ಲ. ಸಕ್ಕರೆ ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕರಲ್ಲದೆ ಇತರ ಎಲ್ಲ ಕೈಗಾರಿಕೆಗಳಲ್ಲಿಯೂ ಸಮಸ್ಯೆಗಳಿವೆ. ಸಮಸ್ಯೆಗಳನ್ನು ಯಾವ ರೀತಿ ಬಗೆಹರಿಸುತ್ತಾರೆ ಎನ್ನುವುದು ಮುಖ್ಯವಾದ ಪ್ರಶ್ನೆ. ಇದಕ್ಕೆ ಸರ್ಕಾರ ಒಂದು ಹೊಸ ಮಾರ್ಗ ದಲ್ಲಿ ಹೋಗಬೇಕು. ಅದೇನೆಂದರೆ ಕಾರ್ಮಿಕರ ಪ್ರತಿನಿಧಿ ಮತ್ತು ಮಾಲೀಕರ ಪ್ರತಿನಿಧಿ ಇಬ್ಬರನ್ನೂ ಕರೆಸಿ ಬೈಪಾರ್ಟೈಟ್ ನೆಗೋಷಿಯೇಷನ್ ಮಾಡುವುದಕ್ಕೆ ಮಾನ್ಯ ಮಂತ್ರಿಗಳು ಮತ್ತು ಲೇಬರ್ ಇಲಾಖೆಯವರು ಪ್ರಯತ್ನ ಮಾಡಬೇಕು. ಆರೀತಿ ಇನಿಷಿಯೇಟಿವ್ ತೆಗೆದುಕೊಂಡು ಸ್ಟೀಲ್ ಇಂಡಸ್ಟ್ರಿಯನ್ನು ಮಾಡುವುದಕ್ಕೆ ಸಾಧ್ಯವಾದರೆ ನಮ್ಮ ರಾಜ್ಯದಲ್ಲಿ ಏಕೆ ಮಾಡುವುದಕ್ಕಾಗುವುದಿಲ್ಲ ಎನ್ನುವುದು ಅರ್ಥವಾಗುವುದಿಲ್ಲ. ಇಲ್ಲಿಯೂ ಮಾಡುವುದಕ್ಕೆ ಸಾಧ್ಯವಿದೆ. ಸರ್ಕಾರದಿಂದ ಇನಿಷಿ ಯೇಟಿವ್ ಬಂದರೆ ಆಗ ಮಾತ್ರ ಇದನ್ನು ಇತ್ಯರ್ಥ ಮಾಡುವುದಕ್ಕೆ ಸಾಧ್ಯ. ಇವರು ಸೇರಿ ಮಾತ ನಾಡಿದಾಗ ಅವರಲ್ಲಿ ಏನಾದರೂ ತಕರಾರು ಬಂದು, ಯಾವುದಾದರೂ ಸಮಸ್ಯೆ ಇತ್ಯರ್ಥವಾಗದೆ ಇದ್ದರೆ ಅಂಥ ಸಂದರ್ಭದಲ್ಲಿ ಮಂತ್ರಿಗಳು ಮಧ್ಯೆ ಪ್ರವೇಶಿಸಿ ಇರಬಹುದಾದ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಕೂಡ ಸಾಧ್ಯವಾಗುತ್ತದೆ. ಆ ದಾರಿಯಲ್ಲಿ, ಆ ದಿಸೆಯಲ್ಲಿ ಮಾನ್ಯ ಮಂತ್ರಿಗಳು ಮತ್ತು ಸರ್ಕಾರ ಹೋಗಬೇಕೆಂಬುದು ನನ್ನ ಅಭಿಪ್ರಾಯ. ಹೀಗಾದರೆ ಕೈಗಾರಿಕಾ ಅಶಾಂತಿ ಸ್ವಲ್ಪ ಮಟ್ಟಿಗೆ ಕಡಮೆಯಾಗುತ್ತದೆ. ಇದರಿಂದ ಕಾರ್ಮಿಕರ ಪರಿಸ್ಥಿತಿಯೂ ಸ್ವಲ್ಪಮಟ್ಟಿಗೆ ಉತ್ತಮಗೊಳ್ಳುತ್ತದೆ. ಆದರೆ ಈ ದಾರಿಯಲ್ಲಿ ಹೋಗುವುದಕ್ಕೆ ಬರೀ ಮಂತ್ರಿಗಳು ಇನಿಷಿಯೇಟಿವ್ ತೆಗೆದುಕೊಂಡರೆ ಸಾಲದು, ಲೇಬರ್ ಇಲಾಖೆ ಕೂಡ ಇದರ ಕಡೆಗೆ ಗಮನ ಕೊಡಬೇಕು. ಅದರ ಎನ್‌ಟೈರ್ ಔಟ್‌ಲುಕ್, ಅಪ್ರೋಚ್, ಓರಿಯೆಂಟೇಷನ್ ಇವುಗಳಲ್ಲಿ ಬದಲಾವಣೆಯಾಗಬೇಕು. ಈ

ಹೊತ್ತು ಇರುವ ಅಪ್ರೋಚ್ ಮತ್ತು ಓರಿಯೆಂಟೇಷನ್ ಇದ್ದರೆ ಯಾರೇ ಅಧಿಕಾರಿಗಳನ್ನು ತೆಗೆದು ಕೊಂಡು ಬಂದರೂ ಪ್ರಶ್ನೆ ಇತ್ಯರ್ಥವಾಗುವುದಿಲ್ಲ. ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಹೊಸ ಅಪ್ರೋಚ್ ಇರಬೇಕು ಎನ್ನುವುದನ್ನು ಸರ್ಕಾರ ಪರಿಗಣಿಸಬೇಕು, ಮಂತ್ರಿಗಳು ನೋಡಬೇಕು, ಬೇರೆಯವರಿಗೆ ಹೇಳಬೇಕು. ಲೆಕ್ಚರ್ ಸ್ಟಡಿ ಕ್ಲಾಸಸ್, ಸೆಮಿನಾರ್ ಏನು ಬೇಕಾದರೂ ಮಾಡಿ ತಿಳುವಳಿಕೆಯನ್ನು ಕೊಡಬೇಕಾಗಿದೆ. ಹೊಸ ಪರಿಸ್ಥಿತಿಯೊಳಗೆ ಅವರೆಲ್ಲರಿಗೂ ಸಹ ಸಮತಾವಾದ ಎಂದರೆ ಏನು ಎಂದು ಹೇಳಬೇಕೆನ್ನುವುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಅನೇಕರಿಗೆ ಈ ಸಮತಾವಾದದ ವಿಚಾರ ಗೊತ್ತಿಲ್ಲ. ವರ್ಕಿಂಗ್ ಕ್ಲಾಸಿಗೂ ಸಮತಾವಾದಕ್ಕೂ ಸಂಬಂಧವಿದೆ ಎಂದು ಅನೇಕರಿಗೆ ಗೊತ್ತಿಲ್ಲ. ರೀಓರಿಯೆಂಟೇಷನ್ ಮಾಡಿದರೆ ಮಾತ್ರ ಈ ಪ್ರಶ್ನೆ ಸರಿಯಾಗಿ ಇತ್ಯರ್ಥವಾಗುವುದಕ್ಕೆ ಸಾಧ್ಯ.

ಸಂಘಗಳಿಗೆ ಮಾನ್ಯತೆಯನ್ನು ಕೊಡುವ ವಿಷಯ. ರೆಕಗ್ನಿಷನ್ ಟು ಟ್ರೇಡ್ ಯೂನಿಯನ್ಸ್ ಎನ್ನುವುದರ ಬಗ್ಗೆ ಎಲ್ಲ ಮಂತ್ರಿಗಳೂ ಹೇಳಿರುವುದನ್ನು ಕೇಳಿದ್ದೇನೆ. ಇಂಟರ್ ಯೂನಿಯನ್ ರೈವಲ್ರಿ ಇದೆ, ಕಾರ್ಮಿಕ ನಾಯಕರಲ್ಲಿ ತಿಕ್ಕಾಟವಿದೆ, ರಾಜಕೀಯ ತರುತ್ತಾರೆ ಜಗಳವಾಡುತ್ತಾರೆ. ನಾವು ಏನು ಮಾಡುವುದಕ್ಕಾಗುತ್ತದೆ, ಅವರೆಲ್ಲ ಸರಿಹೋದರೆ ನಾವೂ ಸರಿಹೋಗುತ್ತೇವೆನ್ನುವ ಅಭಿಪ್ರಾಯವನ್ನು ಅನೇಕ ಮಂತ್ರಿಗಳು ಕೊಡುತ್ತ ಬಂದಿದ್ದಾರೆ. ಈ ವಿಷಯವನ್ನು ಪರಿಶೀಲನೆ ಮಾಡಿ ಈವಾಗ ಎಲ್ಲಿಗೆ ಬಂದಿದ್ದೇವೆಂದರೆ ಕಾರ್ಮಿಕರ ಮುಖಂಡರು ಸೇರಿ ಕೆಲವು ಅಂಶಗಳ ಬಗ್ಗೆ ಒಪ್ಪಂದ ಮಾಡಿಕೊಂಡಿದ್ದಾರೆ. ಪೂರ್ತಿ ಒಪ್ಪಂದವಾಗಿಲ್ಲ, ಅದರ ವಿವರಗಳನ್ನು ಇಲ್ಲಿ ಹೇಳು ವುದಕ್ಕೆ ಹೋಗುವುದಿಲ್ಲ. ನಮ್ಮಲ್ಲಿ ಬಹಳ ಜಟಿಲವಾದ ಸಮಸ್ಯೆ ಬಂದಿದೆ. ಉದಾಹರಣೆಗೆ ಎಚ್.ಎಂ.ಟಿ. ಯಲ್ಲಿ ಎಂಪ್ಲಾಯೀಸ್ ಅಸೋಸಿಯೇಷನ್ ಇದೆ, ಕಾರ್ಮಿಕರ ಸಂಘ ಎಂದು ಇದೆ. ಎಂಪ್ಲಾಯೀಸ್ ಅಸೋಸಿಯೇಷನ್ ಹಳೆಯ ಸಂಘ, ಮೊದಲಿನಿಂದಲೂ ಇದೆ. ಕಾರ್ಮಿಕರ ಸಂಘ ನಂತರ ಪ್ರಾರಂಭವಾದುದು. ಕಾರ್ಮಿಕರ ಸಂಘಕ್ಕೆ ಮಾನ್ಯತೆಯನ್ನು ಕೊಟ್ಟಿದ್ದಾರೆ. ರಿಜಿಸ್ಟ್ರೇಷನ್ ಆಗಿದ್ದುದು ಕ್ಯಾನ್ಸಲ್ ಆಯಿತು ಎಂದು ಗೊತ್ತಾಗಿದೆ. 1968ನೇ ಇಸವಿಯಿಂದಲೂ ಕೋಡ್ ಆಫ್ ಡಿಸಿಪ್ಲಿನ ಮುಂತಾದ ಬಗ್ಗೆ ವೆರಿಫೈ ಮಾಡಿ ಎಂದು ಬರೆದಾಗ ವೆರಿಫಿಕೇಷನ್ ಮಾಡಿದರು. 1968ರಿಂದ 1970ರ ವರೆಗೂ ವೆರಿಫಿಕೇಷನ್ ನಡೆಯಿತು. ಕಾರ್ಮಿಕ ಸಂಘದವರು ಲೆಕ್ಕಪುಸ್ತಕ ಏನೂ ಕೊಡಲಿಲ್ಲ. ಎಂಪ್ಲಾಯೀಸ್ ಅಸೋಸಿಯೇಷನ್‌ನವರು ಕೊಟ್ಟರು. ಮಾನ್ಯ ಪುಟ್ಟಸ್ವಾಮಿಯವರು ಮಂತ್ರಿಗಳಾಗಿದ್ದಾಗ ನಾನು ಒಂದು ಪ್ರಶ್ನೆ ಕೇಳಿದೆ, ಯಾರದು ಹೆಚ್ಚು ಸದಸ್ಯ ಸಂಖ್ಯೆ ಇದೆ ಎಂದು ಕೇಳಿದ್ದಕ್ಕೆ ವೆರಿಫಿಕೇಷನ್ ಆದನಂತರ ಎಂಪ್ಲಾಯೀಸ್ ಅಸೋಸಿಯೇಷನ್‌ನವರದು ಮೆಂಬರ್‌ಷಿಪ್ ಹೆಚ್ಚಾಗಿದೆ ಎಂದು ಹೇಳಿದರೂ ಇದುವರೆಗೂ ರೆಕಗ್ನಿಷನ್ ಕೊಟ್ಟಿಲ್ಲ ಜನಗಳ ಬೆಂಬಲವಿದೆ, ಮೆಂಬರ್‌ಷಿಪ್ ಹೆಚ್ಚಾಗಿದೆ, ಆದರೆ ಕಾರ್ಮಿಕ ಸಂಘದವರು ಲೆಕ್ಕಪತ್ರ ಏನೂ ಕೊಡುವುದಕ್ಕೆ ತಯಾರಿಲ್ಲ, ವಿಚಾರಣೆಗೆ ಕೂಡ ಬರುವುದಕ್ಕೆ ತಯಾರಿಲ್ಲ. ಅವರ ರಿಜಿಸ್ಟ್ರೇಷನ್ ಕ್ಯಾನ್ಸಲ್ ಆಗಿದೆ ಎಂದು ತಿಳಿದುಬಂದಿದೆ. ಪುನಃ ರಿಜಿಸ್ಟ್ರೇಷನ್ ಮಾಡಿದ್ದರೆ ಮಾಡಿರಬಹುದು. ಹೀಗಿದ್ದರೂ ಸಹ ಮಾನ್ಯತೆಯನ್ನು ಕಾರ್ಮಿಕರು ಯಾವ ಸಂಘಕ್ಕೆ ಕೊಡ ಬೇಕು ಎಂದು ಕೇಳುತ್ತಾರೆ ಅದಕ್ಕೆ ಮಾನ್ಯತೆ ಇಲ್ಲ. ಇದರಲ್ಲಿ ರಾಜಕೀಯವಿದೆಯೋ ಏನೋ. ಮಂತ್ರಿಗಳು ಈ ತರಹ ರಾಜಕೀಯದಲ್ಲಿ ಪ್ರವೇಶ ಮಾಡಬಾರದು ಎಂದು ಹೇಳುತ್ತೇನೆ. ಇಂಟಕ್‌ಗೆ ಸೇರಿದ ಸಂಸ್ಥೆ ಎಂದು ಅದಕ್ಕೆ ಸಪೋರ್ಟ್ ಮಾಡಬೇಕೆಂದಿದ್ದರೆ ಅದು ಸರಿಯಲ್ಲ, ಯಾರು ತಪ್ಪು ಮಾಡಿದರೂ ತಪ್ಪು ಎಂದು ಹೇಳುವ ಸ್ಥಿತಿಯಲ್ಲಿ ಮಂತ್ರಿಗಳಿರಬೇಕು.

ಎನ್. ಜಿ. ಇ. ಎಫ್. ವರ್ಕರ್ಸ್ ಯೂನಿಯನ್ ರೆಕಗ್ನೈಸ್ ಮಾಡಬೇಕು ಎಂದು ಹಲವಾರು ಬಾರಿ ಈ ವಿಷಯ ಬಂದರೂ ಆ ಪ್ರಶ್ನೆ ಇನ್ನೂ ಇತ್ಯರ್ಥವಾಗಿಲ್ಲ. ಎನ್. ಜಿ. ಇ. ಎಫ್. ಫ್ಯಾಕ್ಟರಿ ಯಲ್ಲಿ ಯೂನಿಯನ್‌ಗೆ ಎಲೆಕ್ಷನ್ ನಡೆಯಬೇಕು ಎಂದು ಕೆಲಸಗಾರರು ಹೇಳುತ್ತಾರೆ. ಎಲೆಕ್ಷನ್ ನಡೆಸುವುದರ ಬಗ್ಗೆ ಏಕೋ ಜಿಜ್ಞಾಸೆ ತೋರಿಸುತ್ತಾರೆ. ಎಲೆಕ್ಷನ್ ನಡೆಯುತ್ತಾ ಇಲ್ಲ. ಟ್ರೇಡ್ ಯೂನಿಯನ್ ಆಕ್ಟ್ ಪ್ರಕಾರ ಎರಡು ವರ್ಷ ಎಲೆಕ್ಷನ್ ನಡೆಯದೇ ಹೋದರೆ ಆ ಅಸೋಸಿಯೇಷನ್ ಕಿತ್ತು ಹಾಕಬೇಕು. ಆದರೆ ಇಲ್ಲಿ ಆರು ವರ್ಷವಾದರೂ ಎಲೆಕ್ಷನ್ ಆಗಿಲ್ಲ. ಅಲ್ಲಿ ಎಲೆಕ್ಷನ್ ಮಾಡು ವುದಕ್ಕೆ ಅವಕಾಶ ಮಾಡಿಕೊಡಿ. ಈ ಕಾರ್ಖಾನೆ ಅಭಿವೃದ್ಧಿಗೆ ಬರಬೇಕಾದರೆ ಇಂಟರ್ ಲೇಬರ್ ರೈವಲರಿ ಹೋಗಬೇಕು.

(MR. DEPUTY SPEAKER in the Chair)

ಇನ್ನು ಬಿನ್ನಿ ಮಿಲ್ಸ್ ಎಂಪ್ಲಾಯೀಸ್ ಅಸೋಸಿಯೇಷನ್ ಬಗ್ಗೆ ಹೇಳಬೇಕಾಗಿದೆ. ಅಲ್ಲಿ ನಮ್ಮ ಸ್ನೇಹಿತರಾದ ಶ್ರೀ ಡಿ. ವೆಂಕಟೇಶ್ ಅವರು ಅಸೋಸಿಯೇಷನ್ ನಡೆಸುತ್ತಿದ್ದಾರೆ.

(ಶ್ರೀ ಎಂ. ಎಸ್. ಕೃಷ್ಣನ್)

ಶ್ರೀ ಮುನಿರತ್ನಂ ಅವರು ನಡೆಸುವ ಬಿನ್ನಿ ಮಿಲ್ಸ್ ಅಸೋಷಿಯೇಷನ್‌ಗೆ ಹೈಕೋರ್ಟಿನವರು ಫಂಕ್ಷನ್ ಮಾಡಕೂಡದು ಎಂದು ತೀರ್ಮಾನ ಕೊಟ್ಟರು. ಅದರ ರಿಜಿಸ್ಟ್ರೇಷನ್ ಕ್ಯಾನ್ಸಲ್ ಆಗಿದೆ. ಆದರೂ ಸಹ ಬಿನ್ನಿ ಮಿಲ್ ಮಾಲೀಕರು ಅವರಿಗೆ ಬೆಂಬಲ ಕೊಡುತ್ತಿದ್ದಾರೆ ವಿನಹ ಶ್ರೀ ವೆಂಕಟೇಶ್ ಅವರು ನಡೆಸುವ ಅಸೋಸಿಯೇಷನ್‌ಗೆ ಮಾನ್ಯತ ಕೊಟ್ಟಿಲ್ಲ. ಸರ್ಕಾರಕ್ಕೆ ಬರೆಯಲಾಗಿದೆ ಎಂದು ಹೇಳುತ್ತಿದ್ದಾರೆ. ಸರ್ಕಾರ ಇದನ್ನು ತೀರ್ಮಾನ ಮಾಡದೆ ನಿದ್ದೆ ಮಾಡುತ್ತಿದೆ. ಇದರಲ್ಲಿ ಪೊಲಿಟಿಕಲ್ ಡಿಸ್ಕ್ರಿಮಿನೇಷನ್ ಇದೆಯೋ ಇಲ್ಲವೋ ಎನ್ನುವ ಅನುಮಾನ ಬರುತ್ತದೆ. ಲೇಬರ್ ಡಿಪಾರ್ಟ್‌ಮೆಂಟಿನವರು ಮಾಲೀಕರಿಗೆ ಸಪೋರ್ಟ್ ಮಾಡುತ್ತಿದ್ದಾರೆ. ಮಾಲೀಕರಿಗೆ ಬೇಕಾದಂಥ ಸಂಘಕ್ಕೆ ಸರ್ಕಾರದವರು ಪ್ರೋತ್ಸಾಹ ಕೊಡುತ್ತಾರೆ ಎನ್ನುವ ಆರೋಪಣೆ ಬರಕೂಡದು ಎಂದು ಅಭಿಪ್ರಾಯ ಇದ್ದರೆ ಸರ್ಕಾರದವರು ತಕ್ಷಣ ತೀರ್ಮಾನ ತೆಗೆದುಕೊಳ್ಳಬೇಕು. ಬಿನ್ನಿ ಮಿಲ್ಸ್‌ನಲ್ಲಿ 50 ಜನ ಕೆಲಸಗಾರರನ್ನು ಕೆಲಸದಿಂದ ಕಿತ್ತು ಹಾಕಿದ್ದಾರೆಂದು ಅಲ್ಲಿ ಕೆಲಸಗಾರರು ಉಪವಾಸ ಮಾಡುತ್ತಿದ್ದಾರೆ. ಇನ್ನೊಂದು ನಿದರ್ಶನ ಕೊಡುತ್ತೇನೆ. ಬೆಂಗಳೂರು ವಾಟರ್ ಸಪ್ಲೈ ಸಿವರೇಜ್ ಬೋರ್ಡು ಅಸೋಸಿಯೇಷನ್ ಎಂದು ಮಾಡಿದ್ದಾರೆ. ಬೋರ್ಡಿನ ಚೇರ್ಮನರ ಬಗ್ಗೆ ಮಾತನಾಡುವುದಿಲ್ಲ. ಇಲ್ಲಿಯೂ ಕೂಡ ಒಂದೇ ಒಂದು ಅಸೋಸಿಯೇಷನ್ ಇರುವುದು. ಟ್ರೇಡ್ ಯೂನಿಯನ್ ಆಕ್ಟ್ ಪ್ರಕಾರ ರಿಜಿಸ್ಟರ್ಡ್ ಆಗಿರುವ ಅಸೋಸಿಯೇಷನ್‌ಗೆ ಮಾನ್ಯತೆ ಕೊಡಿ ಎಂದು ಟ್ರೇಡ್ ಯೂನಿಯನ್ ಕೇಳುತ್ತಿದೆ. ಲೇಬರ್ ಡಿಪಾರ್ಟ್‌ಮೆಂಟಿಗೆ ಬರೆಯಲಾಗಿದೆ ಎಂದು ಹೇಳುತ್ತಾರೆ. ಇದುವರೆಗೂ ಸರ್ಕಾರ ಈ ಬಗ್ಗೆ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಸುಮಾರು ಆರು ತಿಂಗಳಿಂದ ನಡೆಯುತ್ತಿದೆ, ಈ ಮಧ್ಯೆ ಅಲ್ಲಿನ ಆಡಳಿತ ಅಧಿಕಾರಿಗಳು ಚೇರ್ಮನರವರ ನೇತೃತ್ವದಲ್ಲಿ ಬೆಂಗಳೂರು ವಾಟರ್ ಸಪ್ಲೈ ಸಿವರೇಜ್ ಬೋರ್ಡು ವೆಲ್‌ಫೇರ್ ಅಸೋಸಿಯೇಷನ್ ಎಂದು ಇನ್ನೊಂದು ಮಾಡಿದ್ದಾರೆ. ಇದಕ್ಕೆ ಕೆಲಸಗಾರರಿಂದ ಕಡ್ಡಾಯವಾಗಿ ಹಣ ವಸೂಲು ಮಾಡಿ ಆ ಒಂದು ಅಸೋಸಿಯೇಷನ್‌ಗೆ ಸೇರಿಸಿಕೊಳ್ಳುತ್ತಿದ್ದಾರೆ. ಚೇರ್ಮನ್ನರ ಅನುಯಾಯಿಗಳು ಎಲ್ಲಾ ಡಿಪಾರ್ಟ್‌ಮೆಂಟಿಗೆ ಹೋಗಿ ತಮ್ಮದಾದ ಅಸೋಸಿಯೇಷನ್‌ಗೆ ಕಡ್ಡಾಯವಾಗಿ ಸೇರಿಸಿಕೊಳ್ಳುತ್ತಿದ್ದಾರೆ. ಇದಕ್ಕಿಂತಹ ಗ್ರಾಸ್ ವೈಲೇಷನ್ ಆಫ್ ದಿ ಕೋಡ್ ಇರುವುದು ಯಾವುದಿದೆ?, It is a gross violation of the policy enunciated under the code of discipline endorsed by the employees and employers ಇದು ಅಬ್ಸಲ್ಯೂಟ್ಲಿ ಅನ್‌ಫೇರ್ ಲೇಬರ್ ಪ್ರಾಕ್ಟೀಸ್. ಇದನ್ನು ಸರ್ಕಾರದ ಗಮನಕ್ಕೆ ತೆಗೆದುಕೊಂಡು ಬಂದಿದ್ದೇನೆ. ಈ ರೀತಿ ಕಡ್ಡಾಯವಾಗಿ ಹಣ ವಸೂಲು ಮಾಡುವುದು ಸರಿಯಲ್ಲ. ದುರಾದೃಷ್ಟವಶಾತ್ ಇದು ಇದುವರೆಗೂ ಸರ್ಕಾರದ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಅಧಿಕಾರಿಗಳ ಹತ್ತಿರ ಹೋದರೆ ಎಲ್ಲಾದರೂ ಆ ಚೇರ್ಮನ್ ಅನ್ನು ಹದ್ದುಬಸ್ತಿಗೆ ತರುವುದಕ್ಕೆ ಆಗುತ್ತದೆಯೇ, ಮಂತ್ರಿಗಳಿಗೆ ಹೇಳಿ ಎಂದು ಹೇಳುತ್ತಾರೆ. ಲೇಬರ್ ಡಿಪಾರ್ಟ್‌ಮೆಂಟಿನ ಉನ್ನತ ಅಧಿಕಾರಿಗಳು ಹೀಗೆ ಹೇಳಿದಮೇಲೆ ಇನ್ನು ನಾನು ಏನು ಹೇಳಲಿ.

It is very difficult for us to do anything when he is Chairman. Now you are MLA, you can talk to the Chief Minister ಎಂದು ಹೇಳುತ್ತಾರೆ. It is not the fault of the officer who told me. When a man is made Super Engineer ultimately he may be super Chief Minister also.

Sri AZEEZ SAIT (Minister for Labour).—I object to that part of the statement.

Sri M. S. KRISHNAN.—If it offends the Chief Minister, and if it hurts the Minister, I will withdraw that. I am only expressing that such a fear is there because he is practising such things.

Mr. DEPUTY SPEAKER.—Let not harsh things be said against those persons who are not present in this House to defend themselves. Pleasant things may be said. Secondly, the Hon'ble Minister also will take down notes and reply in his speech.

Sri AZEEZ SAIT.—If members speak for a long time, I will be able to touch upon only important points and make a short reply.

Sri M. S. KRISHNAN.—I want to bring to the notice of the Hon'ble Minister for Labour that the question of compulsory statutory recognition of Trade Union has become an absolute necessity. And my suggestion is that he must bring legislation for compulsory recognition of larger trade unions on the basis of secret ballot. They have got a right to vote and decide which labour union they prefer to have. ಈ ಒಂದು ರೀತಿಯ ಕಡ್ಡಾಯ ಶಾಸನ ತರಬೇಕು, ಇದು ನಮ್ಮ ಕೈಲಿ ಆಗುತ್ತದೆಯೋ? ಕೇರಳದಲ್ಲಿ ಮತ್ತು ಪಶ್ಚಿಮ ಬಂಗಾಳದಲ್ಲಿ ಇದನ್ನು ಮಾಡಿದ್ದಾರೆ. ರೆಕಗ್ನಿಷನ್ ಆಫ್ ಟ್ರೇಡ್ ಯೂನಿಯನ್ಸ್ ಬಗ್ಗೆ ತಮ್ಮನ್ನು ಕೇಳಿಕೊಳ್ಳುವುದು ಇಷ್ಟೆ.

ಇನ್ನೊಂದು ವಿಷಯ ಬಹಳ ಡಿಬೇಟ್ ಆಗಿದೆ. ಅದನ್ನು ಕೂಡ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಪೋಲೀಸ್ ಇಲಾಖೆಯ ಬಗ್ಗೆ ಮಾತನಾಡುತ್ತಾ Police interference in the industrial disputes ಬಗ್ಗೆ ಹೇಳಿದೆ. ಪೋಲೀಸರು ಕೈಗಾರಿಕಾ ವಿಭಾಗದಲ್ಲಿ ಮಧ್ಯ ಪ್ರವೇಶಿಸಿ ಬಂಡವಾಳ ಶಾಹಿಗಳಿಗೆ ರಕ್ಷಣೆ ಕೊಡುವ ಕ್ರಮ ತೆಗೆದುಕೊಳ್ಳುತ್ತಾರೆ. ತಾವು, ಕಾನೂನು ಮತ್ತು ಶಾಂತಿಯನ್ನು ಪರಿಪಾಲನೆ ಮಾಡುವುದು ಅವರ ಧರ್ಮ ಎಂದು ಹೇಳಬಹುದು, ಆದರೆ ಯಾರ ಕಾನೂನು, ಇದು ಯಾರಿಗೋಸ್ಕರ ಮಾಡಿರುವುದು, ಯಾರ ಹಿತರಕ್ಷಣೆಗೆ ಮಾಡುವುದು ಎಂದು ನಾನು ಕೇಳುತ್ತೇನೆ? ತಾವು ಸಮಾಜವಾದಿಗಳಾಗಿದ್ದರೆ ಜನಗಳ ಹಿತರಕ್ಷಣೆ ಆಗಬೇಕು, ಕಾರ್ಮಿಕರ ಹಿತರಕ್ಷಣೆಯಾಗಬೇಕು, ಆದರೆ ಆ ರೀತಿಯ ಮನೋಭಾವ ಪೋಲೀಸರಲ್ಲಿ ಕಂಡುಬರುತ್ತಿಲ್ಲ. ಮೈಸೂರು ಚಾಮುಂಡಿ ಕಾಫಿ ಕ್ಯೂರಿಂಗ್ ವರ್ಕ್ಸ್‌ನಲ್ಲಿ ಹೆಂಗಸರನ್ನು ಪೋಲೀಸರು ಸಿಕ್ಕಾಪಟ್ಟೆ ಹೊಡೆದರು, ಒಪ್ಪಿಕೊಳ್ಳುತ್ತೀರೋ ಇಲ್ಲವೋ ಗೊತ್ತಿಲ್ಲ. ಅಪಾಯದ ಸ್ಥಳಕ್ಕೆ ಹೊಡೆದಿದ್ದಾರೆ. ಕೆಲಸ ಕೇಳಿದರೆ ರಿವಾಲ್ವರ್‌ನಿಂದ ಷೂಟ್ ಮಾಡಿದ್ದ ಆ ಮಾಲಿಕ ಕಂಪನಿ ಮುಚ್ಚಿಕೊಂಡು ಹೋದ. ಕೇಸ್ ಯಾರ ಮೇಲೆ ಹಾಕಿದ್ದಾರೆ ಎಂದರೆ ಮಾಲೀಕರ ಮೇಲೆ ಅಲ್ಲ, ಕೂಲಿಗಾರರ ಮೇಲೆ. ನಂತರ ಎನ್.ಜಿ.ಇ. ಎಫ್. ನಲ್ಲಿ ಕೆಲಸಗಾರರ ಮೇಲೆ ಲಾಟಿ ಚಾರ್ಜ್ ಮಾಡಿ ಸಿಕ್ಕಾಪಟ್ಟೆ ಹೊಡೆದರು.

3–30 P.M.

ಹಿಂದೂಸ್ಥಾನ್ ಏರೋನಾಟಿಕ್ಸ್ ಕೆಲಸಗಾರರು ಸಾವಿರಾರು ಜನರು ಬೋನಸ್ ವಿಷಯ ತಮ್ಮ ಹತ್ತಿರ ಚರ್ಚೆ ಮಾಡಲು ಮೆರವಣಿಗೆ ಬಂದರೆ ಇಂಡಿಯನ್ ಎಕ್ಸ್‌ಪ್ರೆಸ್ ಬಿಲ್ಡಿಂಗ್ ಹತ್ತಿರ ತಡೆದು ಬಿಟ್ಟರು. ಯಾರ ರಕ್ಷಣೆಗಾಗಿ ಅವರನ್ನು ತಡೆದರು? ಇಂಡಿಯನ್ ಎಕ್ಸ್‌ಪ್ರೆಸ್ ಬಿಲ್ಡಿಂಗ್ ಶ್ರೀ ರಾಮನಾಥ್ ಗೋಯಂಕಾ ಅವರಿಗೆ ಸೇರಿದೆ, ಅದಕ್ಕೋಸ್ಕರ ತಡೆದರೋ ಅಥವಾ ಹಿಂದೂಸ್ಥಾನ್ ಏರೋನಾಟಿಕ್ಸ್ ಮ್ಯಾನೇಜ್‌ಮೆಂಟ್ ಭೇಟಿಯಾದಾಗ ಅವರ ಮೇಲೆ ಧಾಳಿ ಮಾಡಬಹುದೆಂದು ತಡೆದರೋ ಏತಕ್ಕಾಗಿ ತಡೆದರು ಎಂದು ವಿಚಾರಣೆ ಮಾಡಿದಾಗ, ಮ್ಯಾನೇಜ್‌ಮೆಂಟ್‌ನವರು ನಾವು ತಡೆಯಿರಿ ಎಂದು ಹೇಳಲಿಲ್ಲ ಎಂದು ಹೇಳಿದಮೇಲೆ ಯಾರು ಹೇಳಿದರು ಎಂದು ಗೊತ್ತಾಗಲಿಲ್ಲ. ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ವರದಿಗಾರರು ಅಂತೂ ಹೇಳಿರುವುದಿಲ್ಲ. ಹೇಳಿರಬೇಕಾದರೆ ಬಿಲ್ಡಿಂಗ್ ಮಾಲೀಕರೇ ಹೇಳಿರಬೇಕು. ಗೋಯಂಕ ಅವರ ಆಸ್ತಿಪಾಸ್ತಿ ದೃಷ್ಟಿಯಿಂದ ಹೇಳಿದ್ದಾರೋ ಎಂದು ಅನುಮಾನವಾಗಿದೆ. ಆ ತರಹ ಕಾರ್ಯಗಳಿಗೆ ಅವಕಾಶ ಮಾಡಿಕೊಡಕೂಡದು ಎಂದು ಕೇಳಿಕೊಳ್ಳುತ್ತೇನೆ. ಪೋಲೀಸ್‌ನವರು ಲಾ ಅಂಡ್ ಆರ್ಡರ್ ಪ್ರೊಟೆಕ್ಟ್ ಮಾಡುತ್ತೇವೆ ಎನ್ನುವ ದೃಷ್ಟಿಯಿಂದ ಇಂಟರ್‌ಫಿಯರ್ ಮಾಡಿ ಕೆಲಸಗಾರರಿಗೆ ಹೊಡೆಯುವುದು ಸರಿಯಲ್ಲ. ಇದರಿಂದ ಮಾಲೀಕರ ರಕ್ಷಣೆಯಾಗುತ್ತದೆಯೇ ವಿನಃ ಕೆಲಸಗಾರರ ರಕ್ಷಣೆಯಾಗುವುದಿಲ್ಲ. ಈ ಟ್ರಿಬ್ಯೂನಲ್ ಕೈಗಾರಿಕಾ ನ್ಯಾಯಾಲಯಗಳು ಮತ್ತು ಲೇಬರ್ ಕೋರ್ಟುಗಳು ಹೋಗಬೇಕು ಎಂದು ಆಗಲೇ ಹೇಳಿದ್ದೇನೆ. ಹೊಸ ರೀತಿಯಲ್ಲಿ ಯೋಚನೆ ಮಾಡಬೇಕು ಎಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಈಗ ಇರುವುದನ್ನು ಏನು ಮಾಡಬೇಕು! ತಕ್ಷಣ ರದ್ದು ಮಾಡುವುದಕ್ಕೆ ಬರುವುದಿಲ್ಲ. ಅದು ಇರುವ ತನಕ, ಅದನ್ನು ಸರಿಯಾಗಿ ನಡೆಸಿಕೊಂಡು ಹೋಗಬೇಕು. ಮೊದಲನೆಯದು ನ್ಯಾಯಲಯದ ಪ್ರಿಸೈಡಿಂಗ್ ಆಫೀಸರ್ಸ್ ಏನು ಇದ್ದಾರೆ ಅವರನ್ನು ಅಪಾಯಿಂಟ್ ಮಾಡುವುದಕ್ಕೆ ಸರ್ಕಾರಕ್ಕೆ ಡಿಸ್‌ಕ್ರಿಷನ್ ಇದೆ. ಡಿಸ್ಟ್ರಿಕ್ಟ್ ಜಡ್ಜರನ್ನು ಪ್ರಿಸೈಡಿಂಗ್ ಆಫೀಸರಾಗಿ ನೇಮಕ ಮಾಡುವ ಸಂಧರ್ಭದಲ್ಲಿ ಹೈಕೋರ್ಟಿನವರು ಒಂದು ಪ್ಯಾನಲ್ ಕಳುಹಿಸುತ್ತಿದ್ದರು. ಸರ್ಕಾರದವರು ಅಪಾಯಿಂಟ್ ಮಾಡುತ್ತಿದ್ದರು. ಮಾನ್ಯ ಪುಟ್ಟಸ್ವಾಮಿಯವರು ನ್ಯಾಯಾಂಗ ಮಂತ್ರಿಗಳಾಗಿ

(SRI M. S. KRISHNAN)

ದ್ದಾಗ ಆ ಡಿಸ್‌ಕ್ರಿಷನ್ ಹೈಕೋರ್ಟಿಗೆ ಬಿಟ್ಟುಕೊಟ್ಟಿದಾರೆ. ಹಾಗೆ ಹೈಕೋರ್ಟಿಗೆ ಬಿಟ್ಟುಕೊಟ್ಟ ಮೇಲೆ ಸರ್ಕಾರಕ್ಕೆ ನೇಮಕದ ಬಗ್ಗೆ ಅತಾರಿಟಿ ಇಲ್ಲ. ಪ್ರಿಸೈಡಿಂಗ್ ಆಫೀಸರ್ಸ್ ಏನು ಮಾಡುತ್ತಾರೆ, ಎತ್ತಕಡೆ ಹೋಗುತ್ತಾರೆ ಎಂದು ಕೇಳುವ ಪರಿಸ್ಥಿತಿ ಬರುವುದಿಲ್ಲ. ಯಾರನ್ನು ಬೇಕಾದರೂ ಅವರು ನೇಮಕ ಮಾಡುವ ಪರಿಸ್ಥಿತಿ ಬಂದಿದೆ. ಇಷ್ಟೇ ಅಲ್ಲ ಬರೀ ಒಬ್ಬರ ಹೆಸರನ್ನೇ ಕಳುಹಿಸುತ್ತಾರೆ, ಮೊದಲು ಪ್ಯಾನಲ್ ಕಳುಹಿಸುತ್ತಿದ್ದರು. ಆದರೆ ಈಗ ನನ್ನ ಸೂಚನೆ ಮತ್ತೆ ಪುನಃ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್ ಆಕ್ಟ್ ಪ್ರಕಾರ ಏನು ಒಂದು ಅಧಿಕಾರ ಸರ್ಕಾರಕ್ಕೆ ಇದೆ ಆ ಅಧಿಕಾರವನ್ನು ಕಳೆದುಕೊಳ್ಳುವುದು ಸರಿಯಲ್ಲ. ಹಿಂದಿನ ಮಂತ್ರಿ ಮಂಡಲದ ಧೋರಣೆಯನ್ನು ಬದಲಾವಣೆಮಾಡಿ ಆ ಅಧಿಕಾರವನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು.

ಇನ್ನೊಂದು ವಿಷಯ ಏನೆಂದರೆ ಆಗಲೇ ಇಂಡಸ್ಟ್ರಿಯಲ್ ಟ್ರಿಬ್ಯೂನಲ್‌ಗಳು 25 ವರ್ಷಗಳಿಂದ ಇದೆ. The Government has not made up its mind regarding the permanancy of these tribunals. Permanency of tribunals have been accepted in other places. ಮೈಸೂರಿನಲ್ಲಿ ಇದರ ಬಗ್ಗೆ ಇದುವರೆಗೂ ಆರ್ಡರ್ ಪಾಸ್ ಮಾಡಿಲ್ಲ. ಎಂದರೆ ಏನು ಹೇಳಬೇಕು ? ಪ್ರತಿಸಲ ಈ ಟ್ರಿಬ್ಯೂನಲ್‌ಗಳನ್ನು ರೀ ಕಾನ್‌ಸ್ಟಿಟ್ಯೂಟ್ ಮಾಡುವಾಗ ಈ ಪ್ರಶ್ನೆ ಬರುತ್ತದೆ. ಇದು ಆಗದ ಹಾಗೆ ನೋಡಿಕೊಳ್ಳಬೇಕು. ಮೂರನೆಯದು ಇಂಡಸ್ಟ್ರೀಯಲ್ ಟ್ರಿಬ್ಯೂನಲ್ ಮತ್ತು ಲೇಬರ್ ಕೋರ್ಟುಗಳಲ್ಲಿ ಈಗ ಪ್ರಿಸೈಡಿಂಗ್ ಆಫೀಸರ್ಸ್ ಏನು ಇದ್ದಾರೆ ಅವರು ಈಗಿನ ಸಮಾಜದಲ್ಲಿರುವುದೆಲ್ಲಾ ಬಹಳ ಕೆಟ್ಟದ್ದು ಎನ್ನುವ ಅಭಿಪ್ರಾಯ ಪಡೆದಿರುವಂತೆ ಕಾಣುತ್ತದೆ. ನೀವು ಏನು ಪ್ರಿಸೈಡಿಂಗ್ ಆಫೀಸರ್ಸ್ ಅಪಾಯಿಂಟ್ ಮಾಡುತ್ತೀರಿ ಅವರಿಗೆ ಇಂಡಸ್ಟ್ರಿಯಲ್ ಬ್ಯಾಕ್‌ಗ್ರೌಂಡ್ ಇರಬೇಕು, ಲೇಬರ್ ಲಾ ಬಗ್ಗೆ ಬ್ಯಾಕ್‌ಗ್ರೌಂಡ್ ಇರಬೇಕು, ಹಾಗೆಲ್ಲಾ ಇದ್ದರೆ ಮಾತ್ರ ಅವರಲ್ಲಿ ಪ್ರೊಸೀಜರ್ ಅಂಡರ್‌ಸ್ಟ್ಯಾಂಡಿಂಗ್ ಇರುತ್ತದೆ. ಮತ್ತು ಅವರು ಸರಿಯಾದಂಥ ತೀರ್ಮಾನ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಕಮಿಟೆಡ್ ಪ್ರಿಸೈಡಿಂಗ್ ಆಫೀಸರ್ಸ್ ಇರಬೇಕು ಎಂದು ಕೇಳುವಂತಹ ಜನ ನಾವು. ಕಮಿಟೆಡ್ ಆಗಿದ್ದರೆ ಒಳ್ಳೆಯದು. ಅದರ ಬಗ್ಗೆ ಕಾಂಟ್ರವರ್ಸಿ ದೇಶದಲ್ಲಿ ಇದೆ. ಆ ವಿಚಾರ ಮಾತನಾಡುವುದಕ್ಕೆ ನಾನು ಹೋಗುವುದಿಲ್ಲ. ಇದು ಇಲ್ಲದೆ ಹೋದರೆ ಹೊಸ ರೀತಿಯಾದಂಥ ಓರಿಯೆಂಟೇಷನ್ ಇರಬೇಕು. ಅನೇಕ ಕಂಪ್ಲೈಂಟ್ಸ್ ಬಂದಿವೆ. ಟ್ರಿಬ್ಯೂನಲ್ಸ್ ಮತ್ತು ಲೇಬರ್ ಕೋರ್ಟ್ಸ್ ಕೇಸಸ್ ಡಿಸ್‌ಪೋಸ್ ಆಫ್ ಮಾಡಬೇಕಾದರೆ ಒಂದು ವರ್ಷ ಆಗುತ್ತದೆ, 2 ವರ್ಷಗಳು ಆಗುತ್ತದೆ ಎಂದು ಅನೇಕ ಕಂಪ್ಲೈಂಟ್ಸ್ ಬಂದಿವೆ. ಪ್ರಿಸೈಡಿಂಗ್ ಆಫೀಸರ್ಸ್ ಆರ್ಗ್ಯೂಮೆಂಟ್ ನೋಟ್ ಮಾಡಿಕೊಂಡಿರುವುದಿಲ್ಲ. ಆಗ ರೀ ಆರ್ಗ್ಯೂಮೆಂಟ್ ಮಾಡಿ ಎಂದು ಹೇಳುತ್ತಾರೆ. ಆರ್ಗ್ಯೂಮೆಂಟ್ಸ್ ಮುಗಿದಕೂಡಲೇ ಜಡ್ಜ್‌ಮೆಂಟ್ ಕೊಡದ ವರ್ಷಾನುಗಟ್ಟಲೆ ಆಗಿರುವ ನಿದರ್ಶನಗಳು ಇವೆ. ಇವನ್ನು ಹೈ ಕೋರ್ಟ್ ಗಮನಕ್ಕೆ ತಂದು ಅಲ್ಲಿ ಚೀಫ್ ಜಸ್ಟೀಸ್ ಸರಿಯಾಗಿ ಡೈರೆಕ್ಷನ್ ಕೊಡುವ ಹಾಗೆ ಮಾಡಬೇಕು. ಇದಕ್ಕೆ ತಾವು ಗಮನಕೊಡಬೇಕು. ಒಂದು ಸಲ ಆರ್‌ಗ್ಯೂಮೆಂಟ್ ಮಾಡಿದ್ದನ್ನು ರೀ ಆರ್‌ಗ್ಯೂಮೆಂಟ್ ಮಾಡುವುದು ಸರಿಯಲ್ಲ. ತಪ್ಪೋ ರೈಟೋ ಬೇಗ ಅವಾರ್ಡ್ ಬರೆದುಕೊಡಬೇಕು ಎಂದು ಹೇಳಬೇಕು.

ಇನ್ನು ಒಂದು ವಿಷಯ. ನಮ್ಮ ಬೆಂಗಳೂರು ನಗರಕ್ಕೆ ಇನ್ನೂ ಒಂದು ಟ್ರಿಬ್ಯೂನಲ್ ಬೇಕು ಎಂದು ಸೂಚನೆ ಮಾಡುತ್ತೇನೆ. ನನ್ನ ಅಭಿಪ್ರಾಯದಲ್ಲಿ ಈಗ ಇರುವ ಟ್ರಿಬ್ಯೂನಲ್‌ಗೆ ಇವತ್ತಿನ ದಿವಸ ಇರುವ ಕೆಲಸದ ಹೊರೆ ನೋಡಿದರೆ ಯಾರಾದರೂ ಒಬ್ಬ ಕಾಂಪಿಟೆಂಟ್ ಅಡ್ವೊಕೇಟ್ ನೇಮಕ ಮಾಡಬೇಕು. ಹಿಂದೆ ಪ್ಯಾನಲ್ ಆಫ್ ಜಡ್ಜಸ್ ಇದ್ದರು. ಕಾರ್ಮಿಕರ ಪ್ರತಿನಿಧಿ ಒಬ್ಬರು, ಪ್ರಿಸೈಡಿಂಗ್ ಆಫೀಸರ್ ಒಬ್ಬರು ಮತ್ತು ಎಂಪ್ಲಾಯಿಸ್ ಪರವಾಗಿ ಒಬ್ಬರು ಈ ರೀತಿ ಮೂರು ಜನ ನೇಮಕ ಮಾಡಿದರೆ ಒಳ್ಳೆಯದು. ಈ ರೀತಿ ಹೊಂದಾಣಿಕೆ ಮಾಡಿ ತಂದರೆ ಚೆನ್ನಾಗಿ ನಡೆಯುತ್ತದೆ. ತೀರ್ಮಾನ ತೆಗೆದುಕೊಳ್ಳುವುದಕ್ಕೆ ಆಗುತ್ತದೆ. ಮತ್ತು ಕೆಲಸದ ಹೊರೆ ಕಮ್ಮಿಯಾಗುತ್ತದೆ. Industrial tribunal with a competent presiding officer, either an advocate who is committed or a three man tribunal ಆದರೆ ಅವಾರ್ಡ್ ಬೇಗ ಬರುವುದಕ್ಕೆ ಅವಕಾಶವಾಗುತ್ತದೆ. ಈಗ ಇರುವ ರೀತಿಯಲ್ಲಿ ಇಂಡಸ್ಟ್ರಿಯಲ್ ಟ್ರಿಬ್ಯೂನಲ್ ಮಾಡಿದರೆ ಪ್ರಯೋಜನವಾಗುವುದಿಲ್ಲ. ಹೊಸ ರೀತಿ ಇಂಡಸ್ಟ್ರಿಯಲ್ ಟ್ರಿಬ್ಯೂನಲ್ ನೇಮಕ ಮಾಡಬೇಕು ಎಂದು ಸೂಚನೆ ಮಾಡುತ್ತೇನೆ. ಇನ್ನು ಇಂಡಸ್ಟ್ರಿಯಲ ರಿಲೇಷನ್ ಬಗ್ಗೆ ಹೇಳುವುದಾದರೆ ಟ್ರೈಪಾರ್‌ಟೈಟ್ ನೆಗೋಸಿಯೇಷನ್ ಮಾಡಬೇಕು ಎಂದು ಇದೆ. ನ್ಯಾಷನಲ್

ಲೇಬರ್ ಕಮಿಷನ್ನವರು ವ್ಯಾಖ್ಯಾನ ಮಾಡಿದ್ದಾರೆ. "ಇಂಗ್ಲೀಷ್" ಅರ್ಬಿಟ್ರೇಷನ್ ಎನ್ನುವುದು ಒಂದು ಆರ್ಟ್. ಹಿಂದಿನ ಕಾಲದಲ್ಲಿ ಕೆಲವು ರೆವಿನ್ಯೂ ಅಧಿಕಾರಿಗಳು ಜಡ್ಜಸ್ ಆಗಿದ್ದರು. ನನಗೆ ತಿಳಿದಮಟ್ಟಿಗೆ ಶ್ರೀಮಾನ್ ಅಪ್ಪಾಜಿಗೌಡರು ಪ್ರಶ್ನೆಗಳನ್ನು ಇತ್ಯರ್ಥ ಮಾಡಿದ ರೀತಿಯೇ ಬೇರೆ. ನಾವು ಕ್ಲೈಮ್ ಸ್ಟೇಟ್‌ಮೆಂಟ್ ಕೊಟ್ಟು ನೀವು ಸ್ಟೇಟ್‌ಮೆಂಟ್ ಇತ್ಯರ್ಥ ಮಾಡುವ ರೀತಿಯಲ್ಲಿ ಇರಲ್ಲಿಲ್ಲ. ಪಾರ್ಟಿಗಳನ್ನು ಕರೆಸಿ ಅಕ್ರಾಸ್ ದಿ ಟೇಬಲ್ ಸೆಟ್ಲ್‌ಮೆಂಟ್ ಮಾಡಿ ಕಳುಹಿಸುತ್ತಿದ್ದರು. The main thing is to bring about a settlement at the level of Labour Officer or even at the level of presiding officer in the Industrial Tribunal. ಮುಖ್ಯವಾದ ಕೆಲಸ ಇದೆ. ಅದನ್ನು ತಾವು ಮಾಡುವುದಕ್ಕೆ ಗಮನ ಕೊಡಬೇಕು ಎಂದು ಕೇಳಿ ಕೊಳ್ಳುತ್ತೇನೆ.

ಇನ್ನೊಂದು ವಿಷಯವೆಂದರೆ, ಇಂಡಸ್ಟ್ರಿಯಲ್ ಟ್ರಿಬ್ಯುನಲ್ ಇರುವ ಕಟ್ಟಡವನ್ನು ಮಾನ್ಯ ಮಂತ್ರಿಗಳು ನೋಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಈ ಕಛೇರಿ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಆಫೀಸಿನ ಹಿಂದುಗಡೆ ಒಂದು ಗೂಡಿನಲ್ಲಿ ಇದೆ. ಅಲ್ಲಿ ಹೋದರೆ ನಿಂತುಕೊಳ್ಳುವುದಕ್ಕೆ ಜಾಗವಿಲ್ಲ. ಯಾವಾಗಲೂ ಗಲಾಟೆ ಇರುತ್ತದೆ. ಕಾರ್ಮಿಕರೇ ದೇಶದ ಬೆನ್ನೆಲುಬು ಎಂದು ಸರ್ಕಾರದವರು ಹೇಳುತ್ತಾರೆ, ಆದರೆ ಈ ಕಛೇರಿಗೆ ಒಂದು ಒಳ್ಳೆಯ ಕಟ್ಟಡವಿಲ್ಲ. ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ, ಇದಕ್ಕೆ ಒಂದು ಒಳ್ಳೆಯ ಕಟ್ಟಡವನ್ನು ಒದಗಿಸಿಕೊಡುವುದು ಅತ್ಯವಶ್ಯಕ. ಇಲ್ಲದಿದ್ದರೆ ಕೇಸ್‌ಗಳು ಜಾಗ್ರತೆ ಇತ್ಯರ್ಥವಾಗುವುದಕ್ಕೆ ಅವಕಾಶವಾಗುವುದಿಲ್ಲವೆಂದು ಹೇಳುತ್ತೇನೆ. ಇನ್ನೊಂದು ಗಹನವಾದ ವಿಷಯವೆಂದರೆ, ಕಾರ್ಮಿಕ ಮುಖಂಡರನ್ನು ಡಿಸ್‌ಮಿಸ್ ಮಾಡುವುದು. ಹಲವಾರು ಕಾರಣಗಳಿಗಾಗಿ ಇವರನ್ನು ಎನ್‌ಕ್ವೈರಿ ಮಾಡದೆ ಡಿಸ್‌ಮಿಸ್ ಮಾಡಿರುವ ಪ್ರಸಂಗಗಳು ಉಂಟು. ಎನ್‌ಕ್ವೈರಿ ಮಾಡಿ ಡಿಸ್‌ಮಿಸ್ ಮಾಡಿದ್ದೇವೆ ಎಂದು ಕೆಲವು ಸಲ ಹೇಳುತ್ತಾರೆ. ಆದರೆ ಅನೇಕ ಸಂದರ್ಭಗಳಲ್ಲಿ ಎನ್‌ಕ್ವೈರಿ ಮಾಡದೆ ಡಿಸ್‌ಮಿಸ್ ಮಾಡಿರುವ ಪ್ರಸಂಗಗಳು ನೂರಾರು ಇವೆ. ಅದರ ಒಂದು ಲಿಸ್ಟ್ ನನ್ನ ಬಳಿ ಇದೆ. ಆದರೆ ಅದನ್ನು ಮಾನ್ಯ ಮಂತ್ರಿಗಳಿಗೆ ಕೊಡುವುದಿಲ್ಲ. ಎಷ್ಟೆಷ್ಟು ಜನರನ್ನು ತೆಗೆದಿದ್ದಾರೆಂಬ ಬಗ್ಗೆ ಉದಾಹರಣೆಗಳನ್ನು ಮಾತ್ರ ಇಲ್ಲಿ ಕೊಡುತ್ತೇನೆ :

Mysore Electrical Industries	30
Binny Mills	37
MICO	8
BEL	9
H.M.T.	2

I request the Labour Minister to use his good offices and see that this matter of victimisation is settled at his level; it cannot be settled at any other level.

ಸಣ್ಣ ಸಣ್ಣ ಕೈಗಾರಿಕೆಗಳಾದ ಬೀಡಿ ಕೈಗಾರಿಕೆ, ಫೌಂಡರಿ ಕೈಗಾರಿಕೆ, ಟ್ಯಾನರಿ ಕೈಗಾರಿಕೆ, ಮುಂತಾದ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ನೌಕರರಿಗೆ ಕನಿಷ್ಠ ವೇತನವನ್ನು ಸರಿಯಾಗಿ ಕೊಡುತ್ತಿಲ್ಲ. ಇದರಿಂದ ಈ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಬಹಳ ರೀತಿಯಿಂದ ಅನ್ಯಾಯಗಳಾಗುತ್ತಿವೆ. There is an impression that the minimum wages in small industries must be lesser than what obtains in bigger industries. This theory has been expounded so many times. They are having sweated wages and not real wages. In this connection, I may bring to your notice A I R 1972, page 605, Supreme Court, J. P. Industries *Vs* Workmen. You must see to it that no worker normally gets less than Rs. 5 per day. That is the demand of the Karnataka Trade Union Congress in our State. It is not enough for a man to live in Bangalore; but at least let it be given. Our officers say that the wages cannot be linked with the cost of living. In Punjab they have said that wages must be linked with the cost of living. It is not a

(SRI M. S. KRISHNAN)

communist Government. Why not the Labour Minister Sri Azeez Sait who proclaims socialism and accepts it in principle bring it into force here also ? That is my humble submission.

ನಮ್ಮ ರಾಜ್ಯದಲ್ಲಿ ಕಾರ್ಮಿಕರಿಗೆ ಅನ್ವಯವಾಗುವಂತಹ ಅನೇಕ ಆಕ್ಟ್‌ಗಳು ಇವೆ. ಆದರೆ ಅವುಗಳನ್ನು ಯಾವ ಮಾಲೀಕರುಗಳು ಸಹ ಜಾರಿಯಲ್ಲಿ ತರುತ್ತಿಲ್ಲ. ಬೇಕಾದರೆ ಮಾನ್ಯ ಮಂತ್ರಿಗಳು ಸಾಯಂಕಾಲ ಮಾನ್ಯ ನಾಗಣ್ಣನವರ ಜೊತೆಯಲ್ಲಿ ಕಬ್ಬನ್‌ಪೇಟೆಗೆ ಹೋಗಿ ನೋಡಿದರೆ ಗೊತ್ತಾಗುತ್ತದೆ. ಅಲ್ಲಿರುವ ಸಿಲ್ಕ್ ಕೈಗಾರಿಕೆಗಳಲ್ಲಿ ಸಣ್ಣ ಸಣ್ಣ ಮಕ್ಕಳನ್ನು, ಹೆಂಗಸರನ್ನು ಇಟ್ಟುಕೊಂಡು ಕೆಲಸ ಮಾಡಿಸುತ್ತಿರುತ್ತಾರೆ. ಅವರಿಗೆ ಯಾವ ಕಾಲದ ಮಿತಿ ಇಲ್ಲ, ಮತ್ತು ಸರಿಯಾದ ಕೂಲಿ ಇಲ್ಲ. ಅದೇ ರೀತಿ ಬೆಂಗಳೂರಿನಲ್ಲಿರುವ ಊದುಬತ್ತಿ ಕೈಗಾರಿಕೆಗಳಲ್ಲಿಯೂ ಸಹ ನಡೆಯುತ್ತಿದೆ. ಯಾರಾದರೂ ಲೇಬರ್ ಇನ್‌ಸ್ಪೆಕ್ಟರ್ ಇನ್‌ಸ್ಪೆಕ್ಷನ್‌ಗೆ ಹೋದರೆ ಮಾಲೀಕರ ಅವರ ಕೈ ಬೆಚ್ಚಗೆಮಾಡಿ ಕಳಿಸಿಬಿಡುತ್ತಾರೆ. ಇದೇ ರೀತಿಯ ಅನ್ಯಾಯ ಕೆಲವು ದೊಡ್ಡ ದೊಡ್ಡ ಕೈಗಾರಿಕೆಗಳಲ್ಲಿಯೂ ಸಹ ನಡೆಯುತ್ತಿದೆ. ಇವರು ಸಹ ಕಾನೂನು ಪ್ರಕಾರ ನಡೆದುಕೊಳ್ಳುತ್ತಿಲ್ಲ.

There are violations of a number of Acts. Even in a public sector concern like the Hindustan Machine Tools and Bharat Electronics there are such violations which have been brought to the notice of the Central Government. I do not know whether they have been brought to the notice of the Labour Department at the Centre. They go on with these violations with impunity.

ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿಯಲ್ಲಿ ಕಾರ್ಮಿಕರಿಗೆ ಇನ್‌ಕ್ರಿಮೆಂಟ್ ಕೊಡಬೇಕು ಎಂದು ಹೈಕೋರ್ಟ್ ಆರ್ಡರ್ ಆಗಿದೆ. ಆದರೂ ಅವನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ಕೃಷ್ಣರಾಜಪುರಂನಲ್ಲಿರತಕ್ಕ ಇಂಡಿಯನ್ ಟಿನ್ ಫ್ಯಾಕ್ಟರಿಯ 21 ಜನ ಕಾರ್ಮಿಕರು ಒಂದು ದಿವಸ ಸ್ಟ್ರೈಕ್ ಮಾಡಿದ್ದಕ್ಕೆ ಅವರನ್ನು ಮನೆಗೆ ಕಳುಹಿಸಿದರು. ಕೆಲವು ಸರ್ಕಾರಿ ಕೈಗಾರಿಕೆಗಳಲ್ಲಿ ಜಂಗಲ್ ಲಾ ಇದೆಯೆಂದು ಕಾಣುತ್ತದೆ. ಆ ಫ್ಯಾಕ್ಟರಿಗಳಲ್ಲಿ ಇಂಥಾ ಕೆಲಸಗಳು ನಡೆಯುತ್ತಿವೆಯಲ್ಲಾ ಎಂದು ನನಗೆ ಆಶ್ಚರ್ಯವಾಗುತ್ತಿದೆ.

ಬೆಂಗಳೂರು ಡೈರಿಯಲ್ಲಿ ಒಬ್ಬ ಡ್ರೈವರಿಗೆ ಕಾಂಪೆನ್‌ಸೇಷನ್ ಕೊಡಬೇಕೆಂದು ಲೇಬರ್ ಕೋರ್ಟ್ ಅವಾರ್ಡ್ ಇದೆ. ಆದರೂ ಸಹ ಅವನಿಗೆ ಕಾಂಪೆನ್‌ಸೇಷನ್ ಅನ್ನು ಅವರು ಕೊಟ್ಟಿಲ್ಲ. ಇದನ್ನು ಸರ್ಕಾರದವರು ಗಮನಿಸಬೇಕು. ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿಯ ವಿಷಯದಲ್ಲಿ ತೀವ್ರಗಮನ ಕೊಡಬೇಕು. ಫ್ಯಾಕ್ಟರಿಯಲ್ಲಿ ಬ್ರೀಚ್ ಆಫ್‌ಪೀಸ್ ಆಗದಹಾಗೆ ನೋಡಿಕೊಳ್ಳಬೇಕು. ಒಂದುವೇಳೆ ಆದರೆ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಬೇಕು.

ನಾನು ಇಷ್ಟು ಮಾತ್ರ ಹೇಳುತ್ತೇನೆ, ಅವಾರ್ಡ್ಸ್ ಮತ್ತು ಸೆಟ್ಲ್‌ಮೆಂಟ್‌ಗಳನ್ನು ಇವರು ಜಾರಿಗೆ ತರುವುದಿಲ್ಲ. ಆದ್ದರಿಂದ ಅವುಗಳಿಗೆ ಸ್ಯಾಂಟಿಟಿ ಇಲ್ಲದಂತಾಗಿದೆ. ಯಾವುದಾದರೂ ಒಂದು ಅವಾರ್ಡ್ ಅಥವಾ ಸೆಟ್ಲ್‌ಮೆಂಟ್ ಆಗಬೇಕಾದರೆ Union must apply, Government have to think and send it to labour department. Then the Labour secretary sends to Law Secretary. ಇವುಗಳೆಲ್ಲಾ ಆಗುವ ವೇಳೆಗೆ ಅದಕ್ಕೆ ಸಂಬಂಧಪಟ್ಟ ಮನುಷ್ಯರೇ ಕ್ಲೋಜ್ ಆಗುತ್ತಾರೆ. ಏತಕ್ಕೆ ಈ ರೀತಿ ಮಾಡುತ್ತಾರೆ? ಸರ್ಕಾರ ಈ ಬಗ್ಗೆ ಕ್ರಮತೆಗೆದುಕೊಳ್ಳಬೇಕು. ಯಾರು ಈ ಕೆಲಸಗಳನ್ನು ಸರಿಯಾಗಿ ಮಾಡುವುದಿಲ್ಲ, ಅವರಿಗೆ ಚಡಿ ಏಟು ಕೊಡಬೇಕು. ಪಾಕೀಸ್ಥಾನದಲ್ಲಿ ಶ್ರೀ ಅಯೂಬ್‌ಖಾನ್ ಅವರು ಬ್ಲಾಕ್‌ಮಾರ್ಕೆಟಿಯರ್ಸ್ ಅನ್ನು ಕರಿಸಿ ಚಡಿ ಏಟು ಕೊಡುತ್ತಿದ್ದರಂತೆ. ಆ ರೀತಿ ನಮ್ಮಲ್ಲೂ ಮಾಡಿದರೆ ಈ ವಿಷಯಗಳೆಲ್ಲಾ ಸರಿಹೋಗಬಹುದು ಎಂದು ಕಾಣುತ್ತದೆ. ಸರ್ಕಾರದವರು ಕಾರ್ಮಿಕ ವರ್ಗದವರಿಗೆ ಅನುಕೂಲ ಮಾಡಿ ಅವರ ಸಹಕಾರವನ್ನು ಪಡೆಯುವುದಕ್ಕೆ ಪ್ರಯತ್ನಮಾಡಬೇಕು. ಆದ್ದರಿಂದ ಈಗ ನಾನು ಹೇಳತಕ್ಕಂಥ ವಿಷಯಗಳನ್ನು ಸರ್ಕಾರದವರು ಕಡ್ಡಾಯವಾಗಿ ಮಾಡಬೇಕು. ಇದರಲ್ಲಿ ಮೊದಲನೆಯದಾಗಿ Fresh Le islation ಆಗಬೇಕು. Since it is concurrent matter, you can initiate fresh legislation in the matter of labour.

ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್ ಆಕ್ಟ್ ಪ್ರಕಾರ ಯಾರನ್ನಾದರೂ ಒಬ್ಬ ಕಾರ್ಮಿಕನನ್ನು ಕೆಲಸದಿಂದ ಟರ್ಮಿನೇಟ್ ಮಾಡಿ ಅಥವಾ ಡಿಸ್‌ಮಿಸ್ ಮಾಡಿ ಮನೆಗೆ ಕಳುಹಿಸಿದಾಗ ಅವರು ಅಪೀಲ್ ಹಾಕಿಕೊಂಡರೆ ಅದು ತೀರ್ಮಾನ ಆಗುವವರೆಗೂ ಅವನಿಗೆ ಬೇರೆ ಕೆಲಸ ಇರುವುದಿಲ್ಲ. ಅವನು ಏನು ಮಾಡಬೇಕು ? ಅವನು ಬದುಕುವುದಕ್ಕೆ ಅವಕಾಶ ಮಾಡಿಕೊಡಬೇಕು. ಆದ್ದರಿಂದ ಅದು ತೀರ್ಮಾನ ಆಗುವವರೆಗೆ ಅವನಿಗೆ ಸಬ್ಸಿಸ್ಟೆನ್ಸ್ ಅಲೋಯನ್ಸ್ ಕೊಡಬೇಕು.

ಎಲ್ಲಾ ಕಾರ್ಮಿಕರಿಗೂ ಅನ್ವಯವಾಗುವ ಹಾಗೆ ಗ್ರ್ಯಾಚ್ಯುಯಿಟಿ ಬಿಲ್ ತೆಗೆದುಕೊಂಡು ಬರಬೇಕು. ಎಲ್ಲಾ ಫ್ಯಾಕ್ಟರಿಯ ಕಾರ್ಮಿಕರಿಗೂ 8. 3 ಪರ್ಸೆಂಟ್ ಬೋನಸ್ ಕೊಡಬೇಕೆಂದು ತೀರ್ಮಾನವಾಗಿದೆ. ಅದರಂತೆ ಎಲ್ಲರಿಗೂ 8.33 ಪರ್ಸೆಂಟ್ ಬೋನಸ್ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು.

ಈಗ ಕೆಲವು ಕೋ ಅಪರೇಟೀವ್ ಸೊಸೈಟಿಗಳು ಕೈಗಾರಿಕೆಗಳನ್ನು ನಡೆಸುತ್ತಿದ್ದಾರೆ. ಉದಾಹರಣೆಗೆ ಸಕ್ಕರೆ ಕಾರ್ಖಾನೆ, ಲೆದರ್ ಫ್ಯಾಕ್ಟರಿ ಮುಂತಾದ ಕಾರ್ಖಾನೆಗಳನ್ನು ಕೋ ಆಪ ರೇಟೀವ್ ಸೊಸೈಟಿಗಳವರು ನಡೆಸುತ್ತಿದ್ದಾರೆ. ಅಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ಇಂಡಸ್ಟ್ರಿಯಲ್ ಆಕ್ಟ್ ಅಪ್ಲೈ ಆಗುವುದಿಲ್ಲ. ಆದ್ದರಿಂದ ಕೋ ಆಪರೇಟೀವ್ ಬೇಸಿಸ್ ಮೇಲೆ ನಡೆಯತಕ್ಕಂಥಾ ಕೈಗಾರಿಕೆಯ ಕಾರ್ಮಿಕರಿಗೂ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್ ಆಕ್ಟ್ ಅನ್ವಯಿಸುವ ಹಾಗೆ ಆಕ್ಟನ್ನು ಬದಲಾವಣೆ ಮಾಡಬೇಕು. ಏತಕ್ಕೆಂದರೆ ಅವರು ಸಿಕ್ಕಾಪಟ್ಟೆ ಕಾರ್ಮಿಕರನ್ನು ವಜಾಮಾಡುತ್ತಿದ್ದಾರೆ. ಅವರಿಗೆ ರಕ್ಷಣೆ ಕೊಡುವ ದೃಷ್ಟಿಯಿಂದ ಇದನ್ನು ಮಾಡಬೇಕು. ಟ್ರೇಡ್ ಯೂನಿಯನ್‌ಗೆ ರೆಕಗ್ನಿಷನ್ ಕೊಡುವಾಗ ಬ್ಯಾಲೆಟ್ ಮುಖಾಂತರ ಕೊಡಬೇಕು.

ಪಬ್ಲಿಸಿಟಿ ಮತ್ತು ಇನ್‌ಫರ್‌ಮೇಷನ್ ಬಗ್ಗೆ ಲೇಬರ್ ಜರ್ನಲ್‌ನಲ್ಲಿ ಸಾಕಷ್ಟು ವಿವರಗಳನ್ನು ಕೊಡುತ್ತಿಲ್ಲ. ಆದ್ದರಿಂದ ಕಾರ್ಮಿಕರಿಗೆ ಸಂಬಂಧಪಟ್ಟ ತೀರ್ಮಾನಗಳು, ಟ್ರಿಬ್ಯೂನಲ್‌ನಲ್ಲಿ ಆದಂತಹ ತೀರ್ಮಾನಗಳು, ವೇಜಸ್ ಸ್ಟೇಟ್‌ಮೆಂಟ್ಸ್, ಆರ್ಬಿಟ್ರೇಷನ್ಸ್ ಇವುಗಳನ್ನೆಲ್ಲಾ ಕಂಪೈಲ್‌ಮಾಡಿ ಒಂದು ಡೈಜೆಸ್ಟ್‌ನಲ್ಲಿ ಹೊರಡಿಸಬೇಕು. ನಂತರ ಕಂಪೆಡಿಯಂ ಆಫ್‌ಸ್ಟ್ಯಾಟಿಸ್ಟಿಕ್ಸ್‌ಗಳನ್ನು ಪ್ರಿಪೇರ್‌ಮಾಡಿ ಅದರಲ್ಲಿ ಕೈಗಾರಿಕೆಗಳ ಮೇಲೆ ಹಾಕಿರುವ ಬಂಡವಾಳ, ರೇಟ್ ಆಫ್ ರಿಟರ್ನ್ ಮೊದಲಾದವುಗಳನ್ನೆಲ್ಲಾ ಕೊಟ್ಟರೆ ಅವರಿಂದ ಟ್ರೇಡ್ ಯೂನಿಯನ್ಸ್, ಎಂಪ್ಲಾಯರ್ಸ್ ಮತ್ತು ಲಾಯರ್ಸ್ ಎಲ್ಲರಿಗೂ ಅನುಕೂಲವಾಗುತ್ತದೆ.

ಇನ್ನೊಂದು ವಿಚಾರವೇನೆಂದರೆ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್ ಆಕ್ಟ್ ಏನಿದೆ ಅದನ್ನು ಕನ್ನಡದಲ್ಲಿ ಮಾಡಬೇಕು. ಏತಕ್ಕೆಂದರೆ ಕಾರ್ಮಿಕರಲ್ಲಿ ಹೆಚ್ಚು ಜನ ಕನ್ನಡಿಗರು ಇದ್ದಾರೆ. ಆದ್ದರಿಂದ ಕಾರ್ಮಿಕರಿಗೆ ಸಂಬಂಧಪಟ್ಟ ಕಾನೂನುಗಳು ಕನ್ನಡದಲ್ಲಿ ಆಗಬೇಕು. ಕನ್ನಡದಲ್ಲಿ ಒಂದು ಅರ್ಜಿಯನ್ನು ಕೊಟ್ಟರೆ ಸರ್ಕಾರದವರು ಅದನ್ನು ಪರಿಶೀಲನೆ ಮಾಡಬೇಕು. ಅಧಿಕಾರಿಗಳು ಅದನ್ನು ಪರಿಶೀಲನೆ ಮಾಡಬೇಕು. ಲೇಬರ್ ಕಮಿಷನರ್ ಆಫೀಸಿಗೆ ಕಾರ್ಮಿಕರು ಕನ್ನಡದಲ್ಲಿ ಅರ್ಜಿಯನ್ನು ಕೊಟ್ಟರೆ ಅವಕ್ಕೆ ಮರ್ಯಾದೆ ಇಲ್ಲ, ಇಂಗ್ಲೀಷಿನಲ್ಲಿ ಅರ್ಜಿ ತಂದರೆ ಮಾತ್ರ ಅವಕ್ಕೆ ಮಾನ್ಯತೆ ಕೊಡುತ್ತಾರೆ. ಇದು ಸರಿಯಲ್ಲ. ಆದ್ದರಿಂದ ಕನ್ನಡದ ಮೇಲೆ ನಿಮಗೆ ಮಮತೆ ಇದ್ದರೆ ಇದನ್ನೆಲ್ಲಾ ಕನ್ನಡದಲ್ಲಿ ತೆಗೆದುಕೊಂಡು ಬರಬೇಕೆಂದು ಹೇಳುತ್ತೇನೆ. ಅದೇ ರೀತಿ ಕನ್ನಡದಲ್ಲಿ ಕೋರ್ಟ್ ಕಚೇರಿ ವ್ಯವಹಾರಗಳನ್ನು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಸರ್ಕಾರದಿಂದ ರಚಿತವಾಗುವ ಬೋರ್ಡ್‌ಗಳಲ್ಲಿ ಲೇಬರ್ ರೆಪ್ರಸೆಂಟೇಶನ್ ಕೊಡಬೇಕೆಂದು ಹೇಳುತ್ತೇನೆ. ಉದಾಹರಣೆಗೆ ಹೌಸಿಂಗ್ ಬೋರ್ಡ್, ಪಿ ಎಫ್. ಕಮಿಟಿ, ಇತ್ಯಾದಿಗಳಲ್ಲಿ ಕಾರ್ಮಿಕ ಪ್ರತಿನಿಧಿಗಳಿಗೆ ಅವಕಾಶ ಕೊಡಬೇಕು. ಈಗ ಬರೇ ಎ.ಐ.ಟಿ.ಯು.ಸಿ.ಸಿ.ಗೆ ಮಾತ್ರ ಕೊಡುತ್ತಿದ್ದೀರಿ. ಅದೇ ರೀತಿ ಐ.ಎನ್.ಟಿ.ಯು.ಸಿ.ಗೂ ಕೊಡಿ ಎಂದು ನಾನು ಹೇಳುವುದು. ಇನ್ನೊಂದು ಸೂಚನೆ ಏನೆಂದರೆ ಈ ಮೇ ದಿನಾಚರಣೆಯನ್ನು ರಜಾ ದಿನವಾಗಿ ನೀವು ಮಾಡಬೇಕು. You must declare May Day as a holiday. The Tamil Nadu Government has done it. You must see that it is declared as a holiday and incorporated in the list of holidays under the Act. ಇದು ಮಹಾರಾಷ್ಟ್ರ, ಬಂಗಾಳ ಆಂಧ್ರಪ್ರದೇಶ ಮುಂತಾದ ಕಡೆಗಳಲ್ಲಿ ಇದೆ. ಆದ್ದರಿಂದ ಮೈಸೂರಿನಲ್ಲಿಯೂ ಇದನ್ನು ಮಾಡಬೇಕೆಂದು ಹೇಳುತ್ತೇನೆ.

(SRI M. S. KRISHNAN)

4-00 P.M.

ಇನ್ನು ನಿಮ್ಮ ಡಿಪಾರ್ಟ್‌ಮೆಂಟನ್ನು ಸ್ಟ್ರೀಮ್‌ಲೈನ್ ಮಾಡಬೇಕೆಂದು ಒಂದು ಮೆಮೊರಾಂಡಂ ಕೊಟ್ಟಿದೆ. ಆದರೆ ನಮ್ಮ ಮೆಮೊರಾಂಡಂಗೆ ಅಕ್‌ನಾಲೆಜ್‌ಮೆಂಟ್ ಕೂಡ ಇಲ್ಲ. My information is that a shabby note has been sent in respect of various points raised in that memorandum. I only request the hon. Minister to discuss with us these matters. We have a labour commissioner. He is a good man. ಅವರು ಒಳ್ಳೆಯವರು ನಿಜ. ಆದರೆ ಅಲ್ಲಿ ಡೈನಾಮಿಕ್ ಆಗಿ ಹೇಗೆ ನಡೆಯಬೇಕೋ ಅದು ನಡೆಯುತ್ತಾ ಇಲ್ಲ. ಅದೂ ಅಲ್ಲದೆ ಅವರು ಒಳ್ಳೆಯ ಕವಿಗಳು, ಮತ್ತು ಸಾಹಿತಿಯಾಗಿದ್ದಾರೆ. ಅವರು ನನಗೆ ಲೇಬರ್ ಡಿಪಾರ್ಟ್‌ಮೆಂಟೇ ಬೇಡ, ಬೇರೆ ಕಡೆಗೆ ಹೋಗುತ್ತೇನೆ ಎಂದು ಹೇಳುತ್ತಿದ್ದಾರಂತೆ. ಆದರೆ ಅವರು ನೌಕರರನ್ನು ಬಹಳ ಹೆರಾಸ್ ಮಾಡುತ್ತಾರಂತೆ. ಆದ್ದರಿಂದ ಅವರನ್ನು ತೆಗೆದು ಬೇರೆಯವರನ್ನು ಏಕೆ ಹಾಕಬಾರದು ? One of the employees I was told, has gone mad and is in the mental hospital and if that is true it does not bring credit to the labour department. ಆದ್ದರಿಂದ ಇದರ ಬಗ್ಗೆ ಸರ್ಕಾರದವರು ಗಮನ ಕೊಡಬೇಕೆಂದು ಹೇಳುತ್ತೇನೆ. A new person must be thought of. Secondly, the Labour Department must be expanded. They must appoint at least two to three more Deputy Labour Commissioners. One Deputy Labour Commissioner for Bangalore Division and one for implementation and evaluation exclusively.

ಇನ್ನೊಂದು ಏನೆಂದರೆ, ಈ ಲೇಬರ್ ಡಿಪಾರ್ಟ್‌ಮೆಂಟ್ ಅಧಿಕಾರಿಗಳಿಗೆ ಅಗತ್ಯವಾಗಿ ಬೇಕಾಗಿರುವಂತಹ ಜೀಪ್‌ಗಳನ್ನು ಕೊಟ್ಟಿಲ್ಲ. ಇಂತಹ ವಾಹನವು ಅವರಿಗೆ ಅಗತ್ಯವಾಗಿ ಬೇಕಾಗಿದೆ. Some of them will be going in employer's cars and who is to protect them from the wrath of the workers ? Jeep or a vehicle is an absolute necessity.

ಅದೇ ರೀತಿ ಹೆಡ್ ಆಫೀಸಿನಲ್ಲಿ ಅಡಿಕ್ವೇಟ್ ಸ್ಟಾಫ್ ಇಲ್ಲ, ಹೆಡ್ ಆಫೀಸಿನಲ್ಲಿ ಒಬ್ಬರು ಟೆಕ್ನಿಕಲ್ ಅಸಿಸ್ಟೆಂಟ್ ಇದ್ದಾರೆ. There is a technical assistant who is not of the cadre of Deputy Labour Commissioner. But he gets the reports above the Deputy Labour Commissioner's level and he has to send it to the Joint Commissioner and Commissioner of the Labour Department. Once he wrote to a Labour Commissioner as 'Dear Sir so and so'. That officer said why do you address me like that. You must address me only as Dear Sir. I am your superior officer, ಇನ್ನೂ ಬೇಕಾದಷ್ಟು ವಿಷಯಗಳನ್ನು ಹೇಳಬಹುದಿತ್ತು. ಆದರೆ ಸಮಯವಿಲ್ಲದ ಕಾರಣ ಇಷ್ಟೇ ಹೇಳಬಯಸುತ್ತೇನೆ. ಅದೇ ರೀತಿ ಕಂಟ್ರಾಕ್ಟ್ ಕ್ಯಾರಿಯೇಜಸ್ಸನ್ನು ತೆಗೆದುಹಾಕಿ ರಾಷ್ಟ್ರೀಕರಣ ಮಾಡಬೇಕೆಂದು ಹೇಳುತ್ತೇನೆ. ಇದರ ಬಗ್ಗೆ ನಾನು ಕೆಲವು ಕಟ್ ಮೋಷನ್ಸ್‌ಗಳನ್ನು ಕಳಿಸಿದ್ದೇನೆ. ಅದರ ಬಗ್ಗೆಯೂ ಸರ್ಕಾರದವರು ಗಮನಕೊಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

†ಶ್ರೀ ಎಸ್. ಎಚ್. ಪುಟ್ಟರಂಗನಾಥ್ (ಬೇಲೂರು).—ಮಾನ್ಯ ಅಧ್ಯಕ್ಷರೇ, ಈ ದಿವಸ ಮಂಡಿಸಿರತಕ್ಕಂತಹ ಡಿಮ್ಯಾಂಡ್ ನಂ. 3, 4, 26 ಮತ್ತಿತರ ಡಿಮ್ಯಾಂಡುಗಳನ್ನು ಸ್ವಾಗತ ಮಾಡುತ್ತಾ, ಎಲ್ಲಾ ಡಿಮ್ಯಾಂಡುಗಳ ಮೇಲೆ ಮಾತನಾಡುವುದಕ್ಕೆ ಅವಕಾಶ ಇಲ್ಲದಿದ್ದರೂ ಕೂಡ ಈ ಮೋಟಾರ್ ವೆಹಿಕಲ್ಸ್ ಎಂ.ಎಸ್.ಆರ್.ಟಿ.ಸಿ. ಎಕ್ಸೈಸ್ ಹಾಗೂ ಲೇಬರ್ ಈ ಡಿಮ್ಯಾಂಡುಗಳ ಮೇಲೆ ಇರತಕ್ಕಂತಹ ಕೆಲವು ಆರೋಪಗಳು ಏನಿವೆ, ಮತ್ತು ಅವುಗಳನ್ನು ತಡೆಯುವುದಕ್ಕೆ ಏನು ಮಾಡಬೇಕೆಂಬುದರ ಬಗ್ಗೆ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ.

ಸ್ವಾಮಿ, ನಾವು ಏನು ಈ ಡಿಮ್ಯಾಂಡುಗಳ ಮೇಲೆ ಚರ್ಚೆ ಮಾಡುತ್ತಿದ್ದೇವೆ, ಇವು ದೇಶದ ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡತಕ್ಕಂತಹ ಹಣ ಎಂಬುದನ್ನು ನಾವು ಒಪ್ಪಿಕೊಂಡರೂ, ಇದರ ಬಗ್ಗೆ ಇರುವ ಕೆಲವು ಕುಂದುಕೊರತೆಗಳನ್ನು ಕೂಡ ಸರ್ಕಾರದ ಗಮನಕ್ಕೆ ತರಬೇಕಾಗಿದೆ.

ಈ ಕುಂದುಕೊರತೆಗಳನ್ನು ಕೇವಲ ವಿರೋಧ ಪಕ್ಷದ ನಾಯಕರು ಮಾತ್ರ ಸರ್ಕಾರದ ಗಮನಕ್ಕೆ ತರುತ್ತಾರೆ. ಆದರೆ ನಾವು ಸಹ ಇದನ್ನು ಕಂಡು ಸುಮ್ಮನೆ ಕುಳಿತುಕೊಳ್ಳುವುದಿಲ್ಲವೆಂಬುದನ್ನು ಮಾತ್ರ ಇಲ್ಲಿ ಹೇಳುತ್ತೇನೆ. ಈ ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟ್ ಎಂಬುದು ಸುಮಾರು 1955 ರಲ್ಲಿ ಪ್ರಾರಂಭವಾಯಿತು. ಇಲ್ಲಿಯ ತನಕ ಇದರಿಂದ ನಮಗೆ ವರ್ಷಕ್ಕೆ ಸುಮಾರು 12 ಕೋಟಿ 73 ಲಕ್ಷ 11 ಸಾವಿರ ಚಿಲ್ಲರೆ ಹಣ ಉತ್ಪತ್ತಿಯಾಗುತ್ತಾ ಇದೆ. ಉತ್ಪತ್ತಿಯಾಗುವುದರ ಜೊತೆಗೆ ನಿಜವಾಗಿಯೂ ಬಹಳ ಕೆಲಸಗಳನ್ನು ಮಾಡುತ್ತಿದ್ದಾರೆಂಬುದನ್ನು ನಾವು ಒಪ್ಪಿಕೊಂಡರೂ ಸಹ, ಈ ಇಲಾಖೆ ಏನಿದೆ, ಇದರಲ್ಲಿರತಕ್ಕಂತಹ ಕೆಲವು ನ್ಯೂನತೆಗಳನ್ನು ನಾವು ಸರಿಮಾಡತಕ್ಕದ್ದು ನಮ್ಮ ಆದ್ಯ ಕರ್ತವ್ಯವೆಂದು ಹೇಳುತ್ತೇನೆ. ಇವತ್ತು ಈ ಡಿಪಾರ್ಟ್‌ಮೆಂಟ್ ಮಾಡತಕ್ಕ ಫಂಕ್ಷನ್ಸ್ ಏನಿವೆ ಅಂದರೆ ಬಹುಶಃ ರಿಜಿಸ್ಟ್ರೇಷನ್ ಆಫ್ ವೆಹಿಕಲ್ಸ್, ಗ್ರಾಂಟ್ ಆಫ್ ಪರ್ಮಿಟ್ಸ್, ಗ್ರಾಂಟ್ ಆಫ್ ಡ್ರೈವಿಂಗ್ ಲೈಸೆನ್ಸ್ ಅಂಡ್ ಕಂಡಕ್ಟರ್ಸ್ ಲೈಸೆನ್ಸ್, ಕಲೆಕ್ಷನ್ ಆಫ್ ಮೋಟಾರ್ ವೆಹಿಕಲ್ ಟ್ಯಾಕ್ಸಸ್. ಈ ನಾಲ್ಕು ಮುಖ್ಯ ಭಾಗಗಳನ್ನು ಆ ಇಲಾಖೆ ಈಗ ನಿರ್ವಹಿಸಿಕೊಂಡು ಹೋಗುತ್ತಿದೆ. ಈ ಕಾರ್ಯಗಳನ್ನು ನಿರ್ವಹಿಸುವಾಗ ಸಾಮಾನ್ಯ ಜನರಿಗೆ ಆಗುತ್ತಾ ಇರತಕ್ಕ ಕುಂದುಕೊರತೆಗಳನ್ನು ನಮ್ಮಲ್ಲಿ ಬಂದು ಹೇಳುತ್ತಾರೆ. ಸಾಲದ್ದಕ್ಕೆ ಒಂದು ರೆಫರೆನ್ಸ್ ಕೊಡುತ್ತಾರೆ. ಬಹುಶಃ ಅದನ್ನು ನಮ್ಮ ಮಂತ್ರಿಗಳು ಒಪ್ಪುತ್ತಾರೆಂಬ ಆಶಯವನ್ನು ನಾನು ವ್ಯಕ್ತಪಡಿಸುತ್ತೇನೆ. ಇವತ್ತು ರಿಜಿಸ್ಟ್ರೇಷನ್ ಆಗುವಾಗ ಏನೇನು ನ್ಯೂನತೆಗಳಿವೆ ಎಂಬುದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ರಿಜಿಸ್ಟ್ರೇಷನ್ ಬ್ರಾಂಚಿನಲ್ಲಿ ಕೆಲಸಮಾಡತಕ್ಕ ಈ ಅಧಿಕಾರಿಗಳು ಏನಿದ್ದಾರೆಯೋ ಆ ಅಧಿಕಾರಿಗಳು ಬಹಳವಾಗಿ ಹಿಂಸೆಯನ್ನು ಜನಗಳಿಗೆ ಕೊಡುತ್ತಿದ್ದಾರೆ. ಇಷ್ಟಿಷ್ಟೇ ಫೀಸುಗಳನ್ನು ಕೊಡಬೇಕೆಂದು ಸರ್ಕಾರದವರು ನಿಗದಿಮಾಡಿದರೆ ಅದರ ಮೇಲೆ ಬೇರೆ ಬೇರೆ ರೀತಿಯಲ್ಲಿ ಫೀಸ್ ಕಲೆಕ್ಟ್ ಮಾಡುತ್ತಾರೆ. ಇದರ ಬಗ್ಗೆ ಅನೇಕ ನಿದರ್ಶನಗಳಿವೆ. ಈಗ ಒಂದು ಕಟುವಾದ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಅದು ಬಹುಶಃ ನಮ್ಮ ಪಕ್ಷದ ಹಿತದೃಷ್ಟಿಯಿಂದಲ್ಲ. ನಾನು ಹಲವುಬಾರಿ ನೋಡಿದ್ದೇನೆ. ಪರ್ಮಿಟ್ಟುಗಳನ್ನು ಕೊಡುವಾಗ ಟೆಂಪೊರರಿ ಪರ್ಮಿಟ್, ಪಕ್ಕಾ ಪರ್ಮಿಟ್—ಹೀಗೆ ಅಲ್ಲಿ ಕೊಡುತ್ತಿದ್ದಾರೆ. ಆದರೆ ಇವತ್ತು ಸಮಗ್ರವಾಗಿ ಎಲ್ಲಾ ಜಿಲ್ಲೆಗಳಲ್ಲಿಯೂ ಬಸ್ ರಾಷ್ಟ್ರೀಕರಣ ಮಾಡುವುದಕ್ಕಾಗಲಿಲ್ಲ. ರಾಷ್ಟ್ರೀಕರಣ ಮಾಡುವ ಧ್ಯೇಯವಿದ್ದರೂ ಅವರಿಗೆ ಸಾಕಷ್ಟು ಶಕ್ತಿ ಇಲ್ಲವೆಂಬುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ನಮಗೆ ಬರುತ್ತಾ ಇರತಕ್ಕ ಅಂಕಿ ಅಂಶಗಳ ಆಧಾರದ ಮೇಲೆ ಇಷ್ಟೆಲ್ಲಾ ಇದ್ದರೂ ಕೂಡ ಈ ದೇಶದಲ್ಲಿ ಅನೇಕ ಕಷ್ಟಗಳು ಬರುತ್ತಿವೆ. ಆ ರೀತಿ ಬರುತ್ತಾ ಇರುವುದನ್ನು ತೊಲಗಿಸುವುದು ಸುಲಭವಾದ ಕೆಲಸವಲ್ಲ. ಇಷ್ಟಾದರೂ ಗ್ರಾಂಟ್ ಆಫ್ ಪರಿಮಿಟ್ ಯಾವ ರೀತಿ ನಡೆಯುತ್ತಿದೆ ಯೆಂಬುದನ್ನು ಸರ್ಕಾರದ ಗಮನಕ್ಕೆ ತರತಕ್ಕದ್ದು ನನ್ನ ಕರ್ತವ್ಯ. ಒಂದು ವೇಳೆ ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತರದೇ ಹೋದರೆ ಲೋಪಮಾಡಿದಂತಾಗುತ್ತದೆಂಬ ಮಾತನ್ನು ನಾನು ಇವತ್ತು ಹೇಳುತ್ತಿದ್ದೇನೆ. ಸ್ವಾಮಿ, ಇವತ್ತು ಎಲ್ಲಾ ಖಾಸಗೀ ಬಸ್ಸುಗಳಿಗೂ ಪರ್ಮಿಟ್ ಕೊಡುತ್ತಾರೆ. ಓಡಿಸದೇ ಇದ್ದರೂ ಕೂಡ ನ್ಯಾಷನಲೈಜ್ಡ್ ರೂಟ್ಸ್‌ನಲ್ಲಿ ಪ್ರೈವೇಟ್ ಬಸ್ಸುಗಳಿಗೂ ಲೈಸೆನ್ಸ್ ಕೊಡುವುದನ್ನು ನಾನು ಒಪ್ಪತಕ್ಕವನಲ್ಲ. ನಾವೇ ಕಾನೂನು ಮಾಡಿ ಕಾನೂನಿಗೆ ವಿರೋಧವಾಗಿ ನಾವೇ ವರ್ತಿಸುವುದು ಸರಿಯಾದ ಮಾರ್ಗವಲ್ಲ. ಇವತ್ತು ಸುಮಾರು 300 ಟೆಂಪೊರರಿ ಪರ್ಮಿಟ್ಟುಗಳನ್ನು ಈ ದೇಶದಲ್ಲಿ ಇಷ್ಯೂ ಮಾಡಿದ್ದಾರೆ. ಅನೇಕ ಕಡೆಗಳಲ್ಲಿ ರಾಷ್ಟ್ರೀಕರಣ ಮಾರ್ಗದಲ್ಲಿ ಬಸ್ಸುಗಳು ಓಡುತ್ತವೆ. ನ್ಯಾಷನಲೈಸ್ಡ್ ರೂಟ್‌ಗಳಲ್ಲಿ ಬಸ್ಸುಗಳಿಗೆ ಪರ್ಮಿಟ್ ಇಷ್ಯೂ ಮಾಡಿದರೆಂಬ ಬಗ್ಗೆ ಯೋಚನೆ ಮಾಡಿದರೆ ನನಗೆ ಇದರಲ್ಲಿ ಏನೋ ಅನುಮಾನಕ್ಕೆ ಆಸ್ಪದ ಇದೆ ಎಂದು ಗೊತ್ತಾಗುತ್ತದೆ. ಇವತ್ತು ಈ ಸದನದಲ್ಲಿ ಅನೇಕ ಬಾರಿ ಅನೇಕ ಪ್ರಶ್ನೆಗಳನ್ನು ಅನೇಕ ಸದಸ್ಯರು ಈ ವಿಚಾರದಲ್ಲಿ ಹಾಕಿದರೂ ಕೂಡ ಇವತ್ತು ಅದನ್ನು ಸರ್ಕಾರದವರು ಕಂಟ್ರೋಲ್ ಮಾಡುವುದಕ್ಕೆ ಆಗಲಿಲ್ಲ. ಇದಕ್ಕೆ ಕಾರಣ ಅಧಿಕಾರಿಗಳು ಪರ್ಮಿಟ್ಸ್ ಕೊಡುವುದರಲ್ಲಿ ನಾನಾ ವಿನ್ಯಾಸಗಳನ್ನು ಮಾಡಿಕೊಂಡು ಕೊಡುತ್ತಿರುವುದೇ ಆಗಿದೆ. ಇದರಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬಂದಿದೆ. ಎಂ.ಎಸ್.ಆರ್.ಟಿ.ಸಿ.ಯವರು ಕೊಟ್ಟಿರುವ ವರದಿಯಲ್ಲಿ ಒಂದು ಮಾತನ್ನು ಹೇಳಿದ್ದಾರೆ. 1971–72ನೇ ಸಾಲಿಗೆ 430 ಚಾಸಿಗಳನ್ನು ಸಪ್ಲೈ ಮಾಡಲು ಆರ್ಡರ್ಸ್ ಪ್ಲೇಸ್ ಮಾಡಿದರೆ ನಮಗೆ ಬಂದಿರತಕ್ಕದ್ದು ಕೇವಲ 85 ಚಾಸಿಗಳು ಮಾತ್ರ. ನಮಗೆ ಸಿಕ್ಕಿದ್ದು ಅಷ್ಟೇ ಎಂದು ಹೇಳುತ್ತಾರೆ. ನಮ್ಮಲ್ಲಿ ಹಣವಿಲ್ಲವೆಂದು ಹೇಳುತ್ತಾರೆ. ಆದ್ದರಿಂದ ಇವತ್ತು ಪ್ರೈವೇಟ್ ಬಸ್ಸುಗಳು ಏನಿವೆಯೋ ಅವನ್ನು ನ್ಯಾಷನಲೈಜ್ ಮಾಡುವುದು ಸೂಕ್ತ. ಇವತ್ತು ಬಸ್ಸುಗಳನ್ನು ನ್ಯಾಷನಲೈಜ್ ಮಾಡಿ ನೀವು ಒಬ್ಬರಿಗೆ ಒಂದು ರೀತಿ, ಇನ್ನೊಬ್ಬರಿಗೆ ಇನ್ನೊಂದು ರೀತಿಯಲ್ಲಿ ಪರ್ಮಿಟ್ ಕೊಡುವುದು ಸರಿಯಲ್ಲ. ಇದು ಜಮೀನ್ದಾರರಿಂದ ಜಮೀನು ಕಿತ್ತುಕೊಂಡು ಪುನಃ ಇನ್ನೊಬ್ಬ ಜಮೀನ್ದಾರರಿಗೆ ಬೇರೆ ಯಾವುದೋ ರೀತಿಯಲ್ಲಿ ಕೊಡುವಂತಾಗುತ್ತದೆ. ಬಸ್ಸುಗಳನ್ನು ನ್ಯಾಷನಲೈಜ್ ಮಾಡಿ

(ಶ್ರೀ ಎಸ್. ಎಚ್. ಪುಟ್ಟರಂಗನಾಥ್)

ಕೊಳ್ಳುವಾಗ ಡಿಪ್ರೀಸಿಯೇಷನ್ ಕಳೆದು ನಮಗೆ ಕಡಿಮೆ ದರದಲ್ಲಿ ಕೊಟ್ಟರೆ ಆಗ ಈ ಒಂದು ಕೊರತೆಯನ್ನು ನೀಗಿಸಲಿಕ್ಕೆ ಸಾಧ್ಯವಾಗುತ್ತದೆಂದು ಹೇಳಬಯಸುತ್ತೇನೆ. ಇದರಿಂದ ಎಂ.ಎಸ್.ಆರ್.ಟಿ.ಸಿ.ನಲ್ಲಿ ಇರತಕ್ಕ ತೊಂದರೆಗಳನ್ನು ಪರಿಹರಿಸಬಹುದು. ಆಗ ಯಾವುದೇ ಒಂದು ಟೀಕೆಗೂ ದಾರಿ ಕೊಡದಂತೆ ಮಾಡಬಹುದೆಂಬ ಮಾತನ್ನು ನಾನು ಒತ್ತಿ ಹೇಳುತ್ತೇನೆ. ಇವತ್ತು ಎಂ.ಎಸ್.ಆರ್.ಟಿ.ಸಿ. ಬಸ್ಸುಗಳು ಓಡುವ ರೂಟಿನಲ್ಲಿ ಪ್ರೈವೇಟ್ ಬಸ್ಸುಗಳೂ ಸಹ ಓಡುತ್ತಿವೆ. ಎಂ.ಎಸ್.ಆರ್.ಟಿ.ಸಿ.ಯ ಎರಡು ಬಸ್ಸುಗಳು ಒಂದು ರೂಟಿನಲ್ಲಿ ಓಡಾಡುತ್ತಿದ್ದರೆ, ಅದೇ ರೂಟಿನಲ್ಲಿ 12 ಪ್ರೈವೇಟ್ ಬಸ್ಸುಗಳಿಗೆ ಲೈಸೆನ್ಸ್ ಕೊಟ್ಟಿದ್ದಾರೆ. ಉದಾಹರಣೆಗೆ ಕೊಳ್ಳೇಗಾಲದಿಂದ ಬೆಂಗಳೂರಿಗೆ ಎಂ.ವೈ.ಎ. 639, ಎಂ.ವೈ.ಎ. 999, ಎಂ.ವೈ.ಎ. 555, ಎಂ.ಬಿ.ಎಸ್. 7731, ಎಂ.ವೈ.ಡಿ. 4271, ಎಂ.ವೈ.ಡಿ. 6099, ಎಂ.ವೈ.ಎಂ. 5278, ಎಂ.ವೈ.ಎನ್. 5122, ಎಂ.ಐ.ಡಿ. 7140, ಮತ್ತು ಎಂ.ಐ.ಡಿ. 5009—ಈ ನಂಬರಿನ ಬಸ್ಸುಗಳಿಗೆ ಲೈಸೆನ್ಸ್ ಕೊಟ್ಟಿದ್ದಾರೆ. ಈ ರೀತಿಯಾಗಿ ಲೈಸೆನ್ಸ್ ಕೊಟ್ಟಿರುವುದರಿಂದ ಅವು ಅಲ್ಲಿ ಓಡಾಡುತ್ತಿರುವುದರಿಂದ ಎಂ.ಎಸ್.ಆರ್.ಟಿ.ಸಿ. ಬಸ್ಸುಗಳಲ್ಲಿ ಸುಮಾರು 27 ಲಕ್ಷ ರೂಪಾಯಿಗಳಷ್ಟು ನಷ್ಟವಾಗುತ್ತಿದೆ ಎಂಬ ಮಾತನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ನಂತರ ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟಿನಲ್ಲಿ ಹೆರಾಸ್‌ಮೆಂಟ್ ಎಂಬುದಾಗಿ ನಾವೇನು ಹೇಳುತ್ತಿದ್ದೇವೋ ಅದು ಈಗ ಬಹಳ ಜಾಸ್ತಿಯಾಗುತ್ತಲಿದೆ. ಅದನ್ನು ತಾವು ಒಪ್ಪಿಕೊಳ್ಳಬೇಕು ಮತ್ತು ವಿರೋಧಪಕ್ಷದ ನಾಯಕರೂ ಸಹ ಒಪ್ಪಿಕೊಳ್ಳಬೇಕು. ಇನ್ನು ಕಂಡಕ್ಟರ್ ಮತ್ತು ಡ್ರೈವರುಗಳಿಗೆ ಲೈಸೆನ್ಸ್ ಇಷ್ಯೂ ಮಾಡುವಾಗ ಅವರೆಲ್ಲರೂ ಇಷ್ಟೇ ದುಡ್ಡು ಕೊಡಬೇಕೆಂಬ ನಿಗದಿಯನ್ನು ಆ ಆಫೀಸಿನವರು ಮಾಡಿಕೊಂಡಿದ್ದಾರೆ. ನಿಮಗೆ ಹೇಗೆ ಗೊತ್ತು ಎಂದು ನನ್ನನ್ನು ಕೇಳಬಹುದು. ನಾನು 1962—63ನೇ ಇಸವಿಯಲ್ಲಿ ಈ ಇಲಾಖೆಯಲ್ಲಿ ಕೆಲಸ ಮಾಡಿದ್ದೇನೆ. ಆ ವರ್ಷದಲ್ಲಿ ಅಲ್ಲಿ ಏನೇನು ನಡೆದಿದೆ ಎಂಬುದನ್ನು ಯಾವ ಸಂಕೋಚವಿಲ್ಲದೆ ಹೇಳಬಯಸುತ್ತೇನೆ. ಆ ಇಲಾಖೆಯಲ್ಲಿ ಯಾರು ಲಂಚರುಷುವತ್ತು ತೆಗೆದುಕೊಳ್ಳದೇ ಇರುವ ಅಧಿಕಾರಿ ಇದ್ದಾರೆಂಬುದನ್ನು ಇವರು ಹೇಳಲಿ. ನಾನು ಈ ವಿಷಯವನ್ನು ಮೊದಲಿನಿಂದಲೂ ಹೇಳುತ್ತಾ ಇದ್ದೇನೆ. ಆ ಇಲಾಖೆಯಲ್ಲಿ ನಾನು ನೋಡಿದ ಹಾಗೆ ಹಿಂದಿನ ಸರ್ಕಾರಗಳಿದ್ದಾಗ್ಯೂ, ಈಗಿನ ಸರ್ಕಾರದಲ್ಲಿಯೂ ಆ ಇಲಾಖೆಯ ತಪ್ಪುಗಳನ್ನೂ, ಲೋಪದೋಷಗಳನ್ನೂ ನಾವು ಈ ಸಭೆಯಲ್ಲಿ ಹೇಳುತ್ತಲೇ ಇದ್ದೇವೆ.

Sri H. S. SIDDAPPA.—Hearty Congratulations.

Sri H. D. DEVEGOWDA.—Most Welcome.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಇನ್ನು ಮೋಟಾರ್ ವೆಹಿಕಲ್ಸ್ ಟ್ಯಾಕ್ಸನ್ನು ಕಲೆಕ್ಟ್ ಮಾಡುವಾಗ ತಮಗೇ ಗೊತ್ತಿರಬಹುದು. ಇವತ್ತು ನಮ್ಮಲ್ಲಿ ಓಡಾಡುತ್ತಿರುವ ಬಸ್ಸುಗಳಿಗೆ ಇಂಟರ್ ಸ್ಟೇಟ್ ಪರ್ಮಿಟ್‌ಗಳನ್ನು ಇಷ್ಯೂ ಮಾಡಿರುವುದನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತಾ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದಲ್ಲಿ 262 ಪರ್ಮಿಟ್‌ಗಳು, ತಮಿಳುನಾಡಿನಲ್ಲಿ 38 ಪರ್ಮಿಟ್‌ಗಳು ಕೇರಳಾದಲ್ಲಿ 37 ಪರ್ಮಿಟ್‌ಗಳನ್ನು ಇಷ್ಯೂ ಮಾಡಿದ್ದಾರೆ. ಇವಕ್ಕೆ ಮೈಸೂರು ಮತ್ತು ಆಂಧ್ರಾ ರಾಜ್ಯಗಳ ಲಿಂಕ್ಸ್ ಇವೆ. ಮೈಸೂರು—ಮಹಾರಾಷ್ಟ್ರ ಲಿಂಕಿಗೆ ಒಂದು ಪರ್ಮಿಟ್, ಮೈಸೂರು ಗೋವಾ ಲಿಂಕ್‌ನಲ್ಲಿ 19 ಪರ್ಮಿಟ್ಟುಗಳಿವೆ. ಇವತ್ತು ಆ ಇಲಾಖೆಯಲ್ಲಿ ಕಲೆಕ್ಷನ್ ಆಗುವ ಹಣ ಎಷ್ಟಿದೆಯೆಂಬುದನ್ನು ಹೇಳಬಯಸುತ್ತೇನೆ. ನಾನೂ ಹಿಂದೆ ಒಂದಾವರ್ತಿ ಎಸ್ಟಿಮೇಟ್ ಕಮಿಟಿಯಲ್ಲಿ ಒಬ್ಬ ಸದಸ್ಯನಾಗಿದ್ದೆ. ನಾವು ಒಂದಾವರ್ತಿ ಆಂಧ್ರಕ್ಕೆ ಹೋಗಿದ್ದಾಗ ಅಲ್ಲಿ ಈ ಇಂಟರ್ ಸ್ಟೇಟ್ ಬಸ್ ವಿಚಾರ ಬಂದಾಗ್ಗೆ ಅವರು ಹೇಳಿದರು ಮೈಸೂರು ರಾಜ್ಯಕ್ಕೆ ಆಂಧ್ರದಿಂದ ಕೊಡಬೇಕಾದ್ದು ಮೂರೂವರೆ ಕೋಟಿ ಇದೆ ಎಂದೂ ಮತ್ತು ಆಂಧ್ರಕ್ಕೆ ಮೈಸೂರು ರಾಜ್ಯದಿಂದ ಬರಬೇಕಾದ್ದು ಎರಡೂವರೆ ಕೋಟಿ ಇದೆಯೆಂದೂ ಅವರು ತಿಳಿಸಿದರು. ಅಂದಾಗ ಆಂಧ್ರದಿಂದ ನಮಗೆ ಬರಬೇಕಾದ ಹಣ ಇದ್ದಾಗ ಇಲ್ಲಿ ನಮಗೆ ಹಣದ ಕೊರತೆಯಿದ್ದಾಗಲೂ ಇವರೇಕೆ ಅದನ್ನು ವಸೂಲ್ಮಾಡಲಿಲ್ಲ.

ಇನ್ನು ಎಂ. ಎಸ್. ಆರ್.ಟಿ. ಸಿ. ಇದು ಅಸ್ತಿತ್ವಕ್ಕೆ ಬಂದದ್ದು 1960 ನೇ ಮಾರ್ಚಿಯಲ್ಲಿ ಎಂದು ಕಾಣುತ್ತದೆ. ನಮ್ಮ ಹಾಸನ ಜಿಲ್ಲೆಯಲ್ಲಿ ಓಡುತ್ತಿದ್ದ ಎಲ್ಲಾ ಖಾಸಗೀ ಬಸ್ಸುಗಳನ್ನೂ ನ್ಯಾಷನಲೈಸ್ ಮಾಡಿ ಅಲ್ಲಿ ಸರ್ಕಾರದವರು ಬಸ್ಸನ್ನು ಓಡಿಸಿದ್ದು ತಾ. 1-10-1969 ರಲ್ಲಿ. ಇದನ್ನು ಇವರು ದೇಶದ ಹಿತದೃಷ್ಟಿಯಿಂದ ಮಾಡಿದ್ದಾರೆ. ಆಯಿತು. ಇನ್ನು ಈ ಬಸ್ ನ್ಯಾಷನಲೈಜೇಷನನ್ನು ಜಾರಿಗೆ ತಂದಮೇಲೆ ಅಲ್ಲಿ ಸ್ಥಾಪಿತವಾಗಿರತಕ್ಕ ಆಫೀಸು ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿದೆ ಎಂಬುದನ್ನು ಸ್ವಲ್ಪ ಅವಲೋಕನ ಮಾಡಬೇಕಾಗಿದೆ. ಈ ದಿವಸ ನಮಗೆ ಆ ಎಂ. ಎಸ್. ಆರ್.ಟಿ. ಸಿ.

ರಿಪೋರ್ಟನ್ನು ಕೊಟ್ಟಿದ್ದಾರೆ. ಹಿಂದೆ ಅರ್ಥಸಚಿವರಾಗಿದ್ದ ಶ್ರೀ ರಾಮಕೃಷ್ಣ ಹೆಗ್ಡೆಯವರು ಏನೋ ಮೋಡಿ ಮಾಡಿ ಅವರು ಬಡ್ಜೆಟ್ಟನ್ನು ಮಂಡಿಸುತ್ತಿದ್ದ ಹಾಗೆ ಈ ದಿವಸ ಈ ಇಲಾಖೆಯವರು 3 ಪುಟದ ಒಂದು ರಿಪೋರ್ಟನ್ನು ಕೊಟ್ಟಿದ್ದಾರೆ. ಇದರಲ್ಲಿ ಏನಾಗಿದೆ ಏನೆಂಬುದು ಒಂದೂ ಗೊತ್ತಾಗುವುದಿಲ್ಲ. ಇದರ ಬಗ್ಗೆ ಇನ್ನೂ ಡೀಟೈಲ್ಡ್ ರಿಪೋರ್ಟನ್ನು ಕೊಡಬೇಕು ಮತ್ತು ಅದನ್ನು ಚರ್ಚೆಮಾಡುವುದಕ್ಕೆ ಇಲ್ಲಿ ಅವಕಾಶ ಕೂಡ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ದಿವಸ ಆ ಎಂ. ಎಸ್. ಆರ್. ಟಿ. ಸಿ. ಆಫೀಸಿನಲ್ಲಿ 22809 ಜನ ಕೆಲಸ ಮಾಡುತ್ತಿದ್ದಾರೆ. ಇದು as on 31-3-1972. ಅಂದರೆ ಅಲ್ಲಿ ಅಷ್ಟು ಜನರನ್ನು ಕೆಲಸಕ್ಕೆ ಅಪಾಯಿಂಟ್ ಮಾಡಿಕೊಂಡಿದ್ದಾರೆ. ಅಷ್ಟು ಜನರನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳತಕ್ಕ ಆ ಒಂದು ಸಂದರ್ಭವಿದ್ದಾಗ ಕಾನೂನು ಬದ್ಧವಾಗಿ ಹರಿಜನ ಗಿರಿಜನರಿಗೆ ಕೊಡಬೇಕಾಗಿದ್ದ ಪರ್ಸೆಂಟೇಜ್ ಪ್ರಕಾರ ನೌಕರಿಗಳನ್ನು ಕೊಟ್ಟಿದ್ದಾರೆಯೇ ಎಂದು ಪ್ರಶ್ನೆಮಾಡಬಯಸುತ್ತೇನೆ. ಈ ವಿಚಾರದಲ್ಲಿ ಈ ವರದಿಯಲ್ಲಿ ಏನೂ ಹೇಳಿಲ್ಲ. ನಾವೆಲ್ಲರೂ ಇಲ್ಲಿ ಸಮಾಜವಾದವನ್ನು ಹೇಳಿದ್ದೂ ಹೇಳಿದ್ದೇ. ಪ್ರಗತಿಪರನೀತಿಯನ್ನು ಪ್ರತಿಪಾದನೆ ಮಾಡಿದ್ದೂ ಮಾಡಿದ್ದೆ. ಆದರೆ ಎಲ್ಲಿ ಏನು ತಿಳಿಸಬೇಕೋ ಅದನ್ನು ತಿಳಿಸುತ್ತಿಲ್ಲ. ಇಂಥ ಏನೂ ಇಲ್ಲದ ಅಂದರೆ ವಿವರಗಳಿಲ್ಲದ ವರದಿಯನ್ನು ಏತಕ್ಕೆ ಕೊಡುತ್ತಾರೆ? ಈ ಆಫೀಸಿನಲ್ಲಿ ಇನ್ನೂ ಅನೇಕ ನ್ಯೂನತೆಗಳಿರುತ್ತವೆ. ದೊಡ್ಡ ದೊಡ್ಡ ಹುದ್ದೆಗಳನ್ನು ಭರ್ತಿಮಾಡುವಾಗ ಯಾವ ನೋಟಿಫಿಕೇಷನ್ನುಗಳೂ ಇರುವುದಿಲ್ಲ. ಸಣ್ಣ ಪುಟ್ಟ ಪೀವನ್ನುಗಳ ಕೆಲಸಗಳನ್ನು ಕೊಡತಕ್ಕ ಕಾಲದಲ್ಲಿ ನೋಟಿಫಿಕೇಷನ್ ಮತ್ತು ರಿಜರ್ವೇಷನ್ ಇವುಗಳನ್ನೆಲ್ಲಾ ಕ್ರಮವಾಗಿ ನೋಟಿಫೈ ಮಾಡುತ್ತಿದ್ದಾರೆ. ಇಂಥ ಅವ್ಯವಸ್ಥೆಗಳನ್ನು ಸರಿಪಡಿಸಬೇಕಾಗಿದ್ದರೆ ಆ ಸ್ಟ್ಯಾಚುಟರಿ ಬಾಡಿಗಳಿಗೆ ಹೇಗೆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ಗಳನ್ನು ಮಾಡಿದ್ದಾರೋ ಹಾಗೇ ಇದಕ್ಕೂ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ಗಳನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಅಷ್ಟೆ ಅಲ್ಲದೆ ಇಲ್ಲಿಯತನಕ ಏನು ಇವರು ಈಗಾಗಲೇ ಭರ್ತಿಮಾಡಿದ್ದಾರೆ ಆ 22 ಸಾವಿರ ಚಿಲ್ಲರೆ ಜನರನ್ನು ಅವರಲ್ಲಿ ಯಾರು ಹರಿಜನ ಗಿರಿಜನರಿಲ್ಲದಿರುವ ಕಾರಣ ಇನ್ನು ಮುಂದಕ್ಕೆ ಅಲ್ಲಿ ಭರ್ತಿಮಾಡತಕ್ಕ ಹುದ್ದೆಗಳನ್ನೆಲ್ಲಾ ಹರಿಜನ ಗಿರಿಜನರಿಗೇ ರಿಜರ್ವ್ ಮಾಡುತ್ತೀರಾ ಎಂದು ಕೇಳುತ್ತೇನೆ?

ಇನ್ನೊಂದು ಅತ್ಯಾಶ್ಚರ್ಯಕರವಾದ ವಿಚಾರ ಎಂದರೆ 1967 ರಲ್ಲಿ ಸರ್ಕಾರದಲ್ಲಿ ಯಾರು ಟ್ರಾನ್ಸ್‌ಪೋರ್ಟ್ ಆಡಳಿತವನ್ನು ವಹಿಸಿಕೊಳ್ಳುತ್ತಿದ್ದರೋ ಆ ಮಂತ್ರಿಗಳು ಈ ಸಂಸ್ಥೆಗೆ ಎಕ್ಸ್ ಅಫಿಷಿಯೋ ಚೇರ್ಮನ್ನರಾಗಿರುತ್ತಿದ್ದರು. ಈಗ ಅದನ್ನು ಬದಲಾಯಿಸಿ ಆ ಸ್ಥಾನದಲ್ಲಿ ಒಬ್ಬ ಪ್ರತ್ಯೇಕ ಚೇರ್ಮನ್ನರನ್ನು ನೇಮಕ ಮಾಡಿದ್ದಾರೆ. ಇದರಿಂದ ಸರ್ಕಾರಕ್ಕೆ ಪ್ರತಿ ತಿಂಗಳೂ ಒಂದು ಸಾವಿರ ರೂಪಾಯಿ ಹಣ ವ್ಯಥಾ ವ್ಯಯವಾಗುತ್ತಿದೆ. ಇದನ್ನು ಉಳಿಸುವುದಕ್ಕೆ ಈಗ ಸಾಧ್ಯವಿಲ್ಲವೇ? ಆದರೆ ನಾನು ಕೇಳುತ್ತಿರುವುದರಲ್ಲಿ ಅಲ್ಲಿ ಆ ಚೇರ್ಮನ್ ಕೆಲಸವನ್ನು ಸಾಕ್ಷಾತ್ತಾಗಿ ಒಬ್ಬ ಎರಡನೇ ದರ್ಜೆಯ ಕ್ಲಾರ್ಕ್, ಪ್ರಿಂಟಿಂಗ್ ಮತ್ತು ಸ್ಟೇಷನರಿ ಬಾಬಿನಲ್ಲಿರತಕ್ಕ ವ್ಯಕ್ತಿ ನಡೆಸುತ್ತಿದಾನೆಂದು ತಿಳಿದು ಬಂದಿದೆ ಅದೇ ಕ್ಲಾರ್ಕ್ ಮೊನ್ನೆ 1972 ರಲ್ಲಿ ನಡೆದ ಜನರಲ್ ಎಲೆಕ್ಷನ್ ಬಗ್ಗೆ ಒಬ್ಬ ಎಕ್ಸ್ ಮೇಯರ್ ಚುನಾವಣೆಗಾಗಿ 30 ಸಹಸ್ರ ರೂಪಾಯಿಗಳನ್ನು ಟಿ. ಸೀಸ್ ಗಳಿಂದಲೂ ಮತ್ತು ಡಿವಿಜನಲ್ ಕಂಟ್ರೋಲರುಗಳಿಂದಲೂ ಕಲೆಕ್ಟ್ ಮಾಡಿ ಕೊಟ್ಟಿದ್ದಾನೆಂದು ಜನರಾಡಿಕೊಳ್ಳುತ್ತಿದ್ದಾರೆ. ಇಂಥಾದ್ದಕ್ಕೆಲ್ಲಾ ಅವಕಾಶ ಕೊಟ್ಟರೆ ನಮ್ಮ ಸರ್ಕಾರ ಟೀಕೆಗೆ ಗುರಿಯಾಗಲೇ ಬೇಕಾಗುವುದು.

ಇನ್ನು ಮೈಸೂರು ಡಿವಿಜನ್ನಿನಲ್ಲಿ ಯಾವಾಗಲೂ ಟೈರುಗಳು ಕಳುವಾಗುತ್ತಿವೆಯೆಂಬ ದೂರುಗಳನ್ನು ನಾವು ಕೇಳಿಯೂ ಇದ್ದೇವೆ ಮತ್ತು ಪೇಪರುಗಳಲ್ಲೂ ಕೂಡ ಓದಿದ್ದೇವೆ. ಆದರೆ ಹಾಗೆ ಕಳುವಾದ ಟೈರುಗಳೇನೂ ಇಲ್ಲಿಯವರೆಗೂ ಒಂದೂ ಪತ್ತೆಯಾಗಿಲ್ಲ. ಯಾರು ಅವನ್ನು ಕಳುವು ಮಾಡುತ್ತಿದ್ದಾರೆಂಬುದನ್ನು ಪತ್ತೆಮಾಡುವುದಕ್ಕಾಗಿಲ್ಲ. ಆದರೂ ಇಲ್ಲಿ ಒಂದು ವಿಚಾರ ನಾವು ಗಮನಿಸಬೇಕಾದ್ದು ಏನೆಂದರೆ ಅಲ್ಲಿ ಇರತಕ್ಕ ಚೇರ್ಮನ್ನರಿಗೆ ಸೀಕ್ರೆಟ್ ಫಂಡನ್ನು ಬೇರೆ ಕೊಟ್ಟಿದ್ದಾರೆ. ಅದು 30 ಸಾವಿರ ಇಟ್ಟಿದ್ದಾರೆ. ಅದನ್ನು ಯಾರು ಈ ಕಳವಾಗತಕ್ಕ ಸಾಮಾನುಗಳ ಬಗ್ಗೆ ಒಂದು Information ಕೊಡುತ್ತಾರೋ ಅಂಥವರಿಗೆ ರಿವಾರ್ಡ್ ಕೊಡುವುದಕ್ಕೆ ಅದನ್ನು ಕೊಟ್ಟಿದೆ. ಆದರೆ ಇಲ್ಲಿಯವರೆಗೂ ಎಷ್ಟು ಜನರಿಗೆ ಯಾವ ಯಾವ ಸಂದರ್ಭದಲ್ಲಿ ಎಷ್ಟು ಹಣವನ್ನು ರಿವಾರ್ಡ್ ರೂಪದಲ್ಲಿ ಕೊಟ್ಟಿದ್ದಾರೆಂಬುದನ್ನು ವಿವರವಾಗಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ವಿಚಾರಗಳನ್ನೆಲ್ಲಾ ಈಗ ನಮಗೆ ಕೊಟ್ಟಿರತಕ್ಕ ವರದಿಯಲ್ಲಿ ನಮೂದಿಸಿದ್ದರೆ ಚೆನ್ನಾಗಿತ್ತು. ಆದ್ದರಿಂದ ಈ ವರೆಗೆ ಹೇಗೆ ಎಷ್ಟು ಹಣವನ್ನು ಖರ್ಚುಮಾಡಿದ್ದಾರೆಂಬುದಕ್ಕೆ ವಿವರಗಳನ್ನು ಕೊಡಬೇಕು. ಇನ್ನು ಹೀಗೆ ಒಬ್ಬ ಪ್ರತ್ಯೇಕ ಚೇರ್ಮನ್ನನ್ನು ನೇಮಕ ಮಾಡಿದ್ದರಿಂದ ಸರ್ಕಾರಕ್ಕೆ ಪ್ರತಿ ವರ್ಷ 12 ಸಾವಿರ ರೂಪಾಯಿ ನಷ್ಟವಾಗುತ್ತಿದೆ ಆದ್ದರಿಂದ ಇವರನ್ನು ರದ್ದು ಮಾಡಿ

(ಶ್ರೀ ಎಸ್. ಎಚ್. ಪುಟ್ಟರಂಗನಾಥ್)

ಮೊದಲಿದ್ದ ಹಾಗೆ ಟ್ರಾನ್ಸ್‌ಪೋರ್ಟ್ ಮಂತ್ರಿಗಳನ್ನು ಇದಕ್ಕೆ ಎಕ್ಸ್‌ಅಫಿಷಿಯೋ ಚೇರ್ಮನ್ನರಾಗಿ ಮಾಡುವುದು ಒಳ್ಳೆಯದೆಂದು ಸಲಹೆ ಮಾಡುತ್ತೇನೆ.

ಇನ್ನು ಇವರು ಸ್ಟೋರ್ಸ್ ಪರ್ಚೇಸ್ ಕಮಿಟಿಯವರಿಂದ ಬಸ್ಸುಗಳನ್ನು ಕೊಳ್ಳತಕ್ಕಸಂದರ್ಭದಲ್ಲಿ ಸರಿಯಾದ ಷರತ್ತುಗಳನ್ನು ಹಾಕದೆ ಬಸ್ಸುಗಳನ್ನು ಕೊಳ್ಳುತ್ತಿದ್ದಾರೆಂಬ ಟೀಕೆ ಇದೆ. ಇದರ ಕಡೆಗೆ ಸರ್ಕಾರದವರು ಕೂಡಲೇ ಗಮನಕೊಡಬೇಕು.

ಇನ್ನು ಡೈಲಿ, ವೀಕ್ಲಿ ಮತ್ತು ಮಂತ್ಲಿ ಷೆಡ್ಯೂಲುಗಳ ಛಾರ್ಟರನ್ನು ಹಾಕಿದ್ದಾರೆ. ಆದರೆ ಅದನ್ನು ಯಾರೂ ಪಾಲಿಸುತ್ತಿಲ್ಲ. ನಾನೇ ಎಷ್ಟೋ ಸಾರಿ ದಾರಿಯಲ್ಲಿ ಓಡಾಡುತ್ತಿದ್ದ ಸಂದರ್ಭದಲ್ಲಿ ಬಸ್ಸುಗಳು ಕೆಟ್ಟು ನಿಂತುದನ್ನು ಕಂಡಿದ್ದೇನೆ. ಒಂದಾವರ್ತಿ ನಾನು ಪ್ರಯಾಣ ಮಾಡುತ್ತಿದ್ದ ಬಸ್ ಟೈರಿನಲ್ಲಿ ಕಲ್ಲು ಸಿಕ್ಕಿಕೊಂಡಿದ್ದರಿಂದ ಟೈರ್ ಬರಸ್ಟಾಯಿತು. ಆ ಬಸ್. ನಂ. ಎಂ.ವೈ.ಎಸ್. 6374. ನನಗೆ ಆಕಸ್ಮಿಕವಾಗಿ ಆ ದಿವಸ ಅಲ್ಲಿಗೆ ಶ್ರೀಕಂಠಯ್ಯನವರ ಕಾರು ಬಂದುದರಿಂದ ನಾನು ಊರನ್ನು ಸೇರಿದೆ. ಹೀಗೇ ಅನೇಕ ಕಡೆಗಳಲ್ಲಿ ಏನು ಎಕ್ಸ್ ಪ್ರೆಸ್ ಬಸ್ಸುಗಳನ್ನು ಹಾಕಿದ್ದಾರೋ ಅವು ಬಹಳ ಹಳೆ ಬಸ್ಸುಗಳು. ಅವು ಒಳ್ಳೆಯ ಕಂಡೀಷನಲ್ಲಿರುವುದಿಲ್ಲ. ಅಲ್ಲಿ ಹಾಕಿರತಕ್ಕ ಹಳೇ ಬಸ್ಸುಗಳನ್ನು ತೆಗೆದು ಹಾಕಿ ಹೊಸ ಬಸ್ಸುಗಳನ್ನು ಹಾಕಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ಪ್ರಯಾಣಿಕರಿಗೆ ಬಹಳ ತೊಂದರೆಯಾಗುತ್ತದೆ. ಆದರೆ ನಾವೇನು ಈ ದಿವಸ ಎಂ.ಎಸ್.ಆರ್.ಟಿ.ಸಿ.ಗೆ ಒಂದು ಬಂಡವಾಳವನ್ನು ಹಾಕಿದ್ದೇವೆ ಅದಕ್ಕೆ ತಕ್ಕ ಟರ್ನ್ ನಮಗೆ ಈ ದಿವಸ ಬರುತ್ತಿಲ್ಲ. ಅಲ್ಲಿ ಬುಡದಿಂದ ತುದಿಯವರೆಗೂ ಫಿಲ್ಟರೇಜ್ ನಡೆಯುತ್ತದೆ.

4-30 P.M.

ಎರಡನೆಯದಾಗಿ ಲೇಬರ್ ಬಗ್ಗೆ ಒಂದು ವಿಚಾರ ಪ್ರಸ್ತಾಪಮಾಡುತ್ತೇನೆ. ಈಗ ಶ್ರೀ ಎಂ. ಎಸ್. ಕೃಷ್ಣನ್‌ರವರು ಹೆಚ್ಚಿನ ರೀತಿಯಲ್ಲಿ ಮಾತನಾಡಿದರು, ಅವರು ಒಂದು ವಿಷಯ ಹೇಳಲಿಲ್ಲ. ಕಾರ್ಮಿಕ ಸಂಘಗಳು ಎಲ್ಲಾ ಕಾರ್ಖಾನೆಗಳಲ್ಲೂ ಇವೆ. ಆದರೆ ಎಸ್ಟೇಟುಗಳಲ್ಲಿ ಅದಿಲ್ಲ. ಅಲ್ಲಿ ಕೂಲಿಗಳಿಗೆ ಸರಿಯಾದ ರೀತಿಯಲ್ಲಿ ಪ್ರೋತ್ಸಾಹ ಸಿಕ್ಕುತ್ತಿಲ್ಲ. ಅಲ್ಲಿ ಕೆಲಸಗಾರರು ಒಂದು ವರ್ಷ ಟೆಂಪೊರೆರಿಯಾಗಿ ಕೆಲಸಮಾಡುವರು. ರಾಮ ಎಂದು ಹೆಸರಿದ್ದರೆ ಭೀಮ ಎಂದು ಬರೆಯುವರು. ಮರುವರ್ಷ ಅವರ ಹೆಸರೇ ಇರುವುದಿಲ್ಲ. ಹತ್ತು ವರ್ಷ ಕೆಲಸ ಮಾಡುತ್ತಿದ್ದರೆ ಹತ್ತು ಹೆಸರು ಬರೆದಿರುವರು. ಇದನ್ನು ಪರಿಶೀಲಿಸಬೇಕು. ತೊಂದರೆಯೇನಿದೆಯೆಂಬುದನ್ನು ನೋಡಬೇಕು. ಅವರಿಗೆ ಪ್ರಾವಿಡೆಂಟ್ ಫಂಡ್ ಸೌಲಭ್ಯ ಕೊಡಲು ಬರುವುದಿಲ್ಲ. ಅವರಿಗೆ ರೂಲ್ಸ್ ಪ್ರಕಾರ ಏನು ಕೊಡಬೇಕೋ ಅದನ್ನು ಸರಿಯಾದ ರೀತಿಯಲ್ಲಿ ಕೊಡುತ್ತಿಲ್ಲ. ಕಂಬಳಿ, ಲಾಂಗ್ ಕೋಟು, ಮೆಡಿಕಲ್ ಫೆಸಿಲಿಟಿ, ಅವರ ಮಕ್ಕಳಿಗೆ ವಿದ್ಯಾಭ್ಯಾಸಸೌಕರ್ಯ ಮುಂತಾದುವುಗಳನ್ನು ಕೊಡಬೇಕೆಂದಿದ್ದರೂ ಕೊಟ್ಟಿಲ್ಲ. ಆದುದರಿಂದ ತೋಟಗಳ ಮಾಲೀಕರಿಗೆ ಸರಿಯಾದ ತಿಳಿವಳಿಕೆ ಕೊಡಬೇಕು. ಅವರು ಸರಿಯಾದ ರೀತಿಯಲ್ಲಿ ನಡೆದುಕೊಳ್ಳದಿದ್ದರೆ ಹೆಚ್ಚಿನ ರೀತಿಯಲ್ಲಿ ಶಿಕ್ಷೆ ಮಾಡಬೇಕು. ನ್ಯೂನತೆ ಬಗ್ಗೆ ಒಂದು ಉದಾಹರಣೆ ಹೇಳುತ್ತೇನೆ. ಮೇ ತಿಂಗಳಲ್ಲಿ ಚಾಕನಹಳ್ಳಿ ಎಸ್ಟೇಟ್‌ನಲ್ಲಿ ನಮ್ಮ ತಾಲ್ಲೂಕಿನಲ್ಲಿ ಮಾಲೀಕರಿಗೂ ಮತ್ತು ಕಾರ್ಮಿಕರಿಗೂ ಘರ್ಷಣೆಯಾಗಿ ರಾತ್ರಿಯಲ್ಲಿ ಲಾರಿಯಲ್ಲಿ ಕೂಲಿಗಾರರನ್ನು ಕರೆದುಕೊಂಡುಹೋಗಿ ಕಾಡಿನಲ್ಲಿ ಬಿಟ್ಟಿದ್ದಾರೆ. ಪೋಲೀಸು ಸ್ಟೇಷನ್ನಿಗೆ ದೂರು ಕೊಡಲಾಯಿತು, ಸಬ್ ಇನ್ಸ್‌ಪೆಕ್ಟರು ವಿಚಾರಮಾಡಿ ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದರು. ಆದರೆ ಈವರೆಗೆ ಅವರ ಬಗ್ಗೆ ಒಂದು ಕ್ರಮವನ್ನು ಜರುಗಿಸಲಿಲ್ಲ. ಹೀಗೆ ಅನೇಕರು ಸೇರಿ ತೋಟದ ಮಾಲೀಕರು ಕಾರ್ಮಿಕರ ಕೈಕಾಲು ಕಟ್ಟಿ ಪೋಲೀಸ್ ಡ್ರೆಸ್‌ನಂತಹುದನ್ನು ಹಾಕಿಕೊಂಡು ಕಾರ್ಮಿಕರಿಗೆ ಹಿಂಸೆಮಾಡಿರುವುದು ಖಂಡನೀಯ. ಇದು ಸರಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಬಂದಿದ್ದರೆ ವಿಚಾರ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಎಸ್ಟೇಟ್ ಮಾಲೀಕರು ಮಾಡಿರುವ ಈ ಕೆಲಸದ ಬಗ್ಗೆ ಸೂಕ್ತ ಕ್ರಮ ಕೈಕೊಳ್ಳಬೇಕು.

ಕೊನೆಯದಾಗಿ ಪ್ರೈವೇಟ್ ಇಂಡಸ್ಟ್ರೀಸ್ ಏನಿವೆ ಅವುಗಳಲ್ಲಿ ಮೈಸೂರಿನವರಿಗೆ ಸರಿಯಾದ ಪ್ರೋತ್ಸಾಹ ಸಿಕ್ಕುತ್ತಿಲ್ಲ. ಈಗ ಕಾರ್ಮಿಕರ ವಿಚಾರ ತಿಳಿದಿರುವ ಮಂತ್ರಿಗಳೇ ಈ ಇಲಾಖೆ ವಹಿಸಿಕೊಂಡಿರುವುದರಿಂದ ಅವರು ಹೆಚ್ಚಿನ ಅನುಕೂಲ ಮಾಡುವರೆಂಬ ನಂಬಿಕೆಯಿದೆ. ಅವರು ಬೀಡಿ ಕಾರ್ಮಿಕ ಸಂಘದ ಅಧ್ಯಕ್ಷರಾಗಿದ್ದರು, ಬಹುಶಃ ಬಿನ್ನಿಮಿಲ್ಲಿನ ಸಂಘದ ಅಧ್ಯಕ್ಷರೂ ಆಗಿದ್ದರೆಂದು ಕಾಣುತ್ತದೆ. ಅವರು ಕಾರ್ಮಿಕರಿಗೆ ಹೆಚ್ಚಿನ ಸಹಾಯ ಮಾಡುವರೆಂದು

ನಂಬಿದ್ದೇನೆ. ನಾನು ಸಲಹೆಗಳನ್ನೇನು ಕೊಟ್ಟಿದ್ದೇನೆ ಅದಕ್ಕೆ ಗಮನಕೊಡಬೇಕು, ಇಲಾಖೆಯಲ್ಲಿ ನಡೆಯುವ ಅನ್ಯಾಯವನ್ನು ಗಮನಿಸಿ ಸೂಕ್ತ ಕ್ರಮ ಕೈಕೊಳ್ಳಬೇಕು ಎಂದು ಕೇಳಿಕೊಂಡು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† Sri C. M. ARUMUGAM (K.G.F.).—Mr. Deputy Speaker Sir, I am very happy that I have the occasion to speak on these demands parti cularly Labour and Employment. There are several demands like Excise, Transport, Labour and so many others. If I go on commenting on these demands, it will take a lot of time. Therefore, I confine myself to the labour demand. My friend Sri Krishnan spoke at length and brought before the House so many irregularities and suggested several remedies. I am speaking on labour who forms the backbone of the State and also the country. These labourers are there after 25 years of Independence without adequate means of living and without even the minimum wages. Both the Centre and the State Governments have failed in their duty to protect them and make them live a decent life. Discrimination has been created between the Central Government employees and the State Government employees. The workers in the cinema field and the workers in the hotel field are not being treated properly and are not given any assured wages for their decent living. I feel the Labour Department has completely neglected these workers working in Cinema and Hotel industries. There is disparity in D.A., basic wages and also in annual bonus paid to the various employees in various factories. Therefore it is necessary that the Government should bring about Wage Board or Pay Commission once in 3 years for the Unit or for the State to look into the grievances of the workers and see a uniform level in payment of all wages, allowances etc., is maintained. If a uniformity in this respect is maintained, I am sure there will be no discontintment among the workers. There are casual labourers who are not governed by any act and not protected by any kind of rules and regulations. Medical facilities are not being provided to them. The number of hours have also not been fixed. The Labour machinery has completely neglected the insterest of these causal labourers. This labour machinery has miserably failed in its primary duty. It is a failure on the part of the Labour Minister and his Department. They have not thought out a radical change in the working conditions and payment of wages to these workers. Mr. Deputy Speaker Sir, the Labour Commissioner assists in what you call the registration of Unions. I do not know what the hon. Minister for Labour is going to tell about this registration of unions which is not being attended to properly so far. Probably he knows that if 7 persons come together to form a union, that union has to be registered. You are all aware that there are several rival unions in the same factory.

I am suprised that the Government is supporting the formation of uch small rival unions. I am citing here the instance when one Chief Minister, with the Labour Minister, the Home Minister to protect him, and the Revenue Minister to feed these three Ministers, came to Kolar Gold Fields to inaugurate a new Union. As I have said, seven follows

(SRI C. M. ARUMUGAM)

can join together and form a union; to inaugurate this union of seven members which was called the Central Union-these four big Ministers came in a fleet of cars accompanied by police jeep and some lorry load of men. I am reminded of another instance now. On Saturday, on the road between Bangalore and Kolar at a distance of every furlong or every 100 yards, there was a Police constable standing. In every Circle a Police Sub-Inspector was standing with a jeep. At the entrance to Kolar, the Deputy Commissioner was there. I was wondering whether the Governor was going that way. But the Governor also does not need these. Is he so unpopular as to take protection of the Police ? During the time of Lord Linlithgow they wanted protection because they were against the interest of the common man. But on Saturday, When I saw these arrangements, I asked the Constable : 'What is this?'. He said four Ministers were going to Thirupathi. Let the Ministers go to the temple. If you are a Hindu, going to the temple is your personal affair. Going to the Church is purely personal ; going to the mosque is purely personal. But why do you want protection from Bangalore to Kolar up to Mulbagal ? It is a sheer waste. Suppose there is a murder or theft ; the Police are on the road. What happens? Similarly, four Ministers came to K.G.F. to inaugurate a new Union. I asked: 'What is the crowd ?'. 'Is it a big crowd ?'; 'Who are there ?'. I was told that they were all persons with red turbans. Then I thought 'Then they must be marwadis. What have marwadis got to do with a labour union meeting ?' Then I was told that they were wearing red turban and wearing khaki dress. Then I thought the Police were there. The Police were there to receive the Ministers and hear their speeches.

Ministers must not indulge in interference with labour unions and labour politics In our neighbouring State, recently, for having indulged in labour politics, they have been put into a lot of trouble. The present Government is backing I.N.T.U.C.

MR. DEPUTY SPEAKER.—You can dilate upon labour problems and not on Minister's problems.

SRI C. M. ARUMUGAM.—Ministers are indulging in acts such as creating labour Unions. I agree with the view that there must be one Union. One Minister wrote to the Commissioner of Labour to cancel the registration of one Union which was working against the Congress (R) or (O) or whatever it may be, on a flimsy ground that the Union did not submit an annual return. Because, an annual return or report was not submitted by a Union, you cannot cancel the registration of a regular union. I am not referring to Mr. Azeez Sait. He is there since only a couple of months. This has been happening in the State all the time. They are encouraging disunity and creating a situation for Law and Order and have become ineffective in regularising the unions and make them effective instruments in putting forth the grievances of workers. Government is the cause for all this. They are

indulging in labour politics on the one hand and on the other hand, saying that there must be unity. It is not a fitting reflection on the Government which says that it stands for the workers. One Minister of Government of India says that they should not take resort to strike. I declare in this House that strike is the last resort of the workers and it is a fundamental right of the workers of the state and the country and they cannot give up the strike. The Management is following the tradition of treating the workers with contempt and is not giving fair wages, overtime wages and is making them live in small shelters. I am coming from K.G.F. The bulk of the workers are provided small sheds. It is most disgraceful on the part of the Government of India and the State Government. So many Ministers have seen this including the Prime Minister, who came in helicopter—three helicopters were there as also cars. The workers live in small huts measuring 12'x9'. They will have to use it as a bath room, as a kitchen, as a dining hall, as a visitors room, as a bed room and ante-room also. This condition prevails. What is it you have done all these years ? You talk about labour.

I have got one suggestion to make. You can make anybody as a Minister. A man who does not know anything about construction work, about a dam or such things can be made a P.W. Minister. He survives. A man who has not seen the floor of a High School or College, sometimes becomes a Education Minister. A man who has not studied the A.B.C.D. of Law sometimes becomes the Law Minister. A Minister who does not know anything about industry becomes a Minister for Industries. But so far as the Labour Minister is cocerned, he must have a heart to help the worker. He must have the feeling from the bottom of his heart, to alleviate the conditions of the workers and try to do some good. Such a person should be the Labour Minister. Otherwise, it is not possible to improve the lot of the workers and their conditions. 25 years have passed since independence, but the condition of the workers is the same. You may talk sympathisingly but nobody has thought of any drastic measure to protect the worker. I do not know much about Mr. Azeez Sait. But somebody said he was a labour leader. I have been in the labour field for the last twelve years. I have also gone to the Police Station several times, struggling for the worker, but yet, I am not able to do much. Here is a Minister who was a labour leader. Let us see what he is going to do; how he is going to solve the labour problems.

Compulsory arbitration is no solution Some times Government Department refuses to refer any matter to arbitration, leave alone adjudication, because they know they will fail. These officers, IAS officers who know nothing about the ABC of an industry will be posted as Director of an Industry to manage 2,000 workers, with whom he will have to deal. One officer says, when he was asked 'why are you not doing something tangible for the workers in the Government Electric Factory?' he says : there is no co-operation from the workers. What co-operation do you want ? You want all these workers not to

(SRI C. M. ARUMUGAM)

resort to strike, not to resort to demonstrations, not to resort to picketing. The moment there is some labour agitation, they send for the police and lathi charge is made. We are having nothing but a police-raj so far as labour agitation is concerned. The workers have every right to fight for their legitimate demands as in other countries. We talk about socialism, disparity; the head of the unit gets Rs. 25,000 whereas the worker gets Rs. 50. Look at this vast difference. They are also human beings. They need minimum requirements. For 25 years Government has failed to provide the minimum requirements for workers.

I have also said about the machinery. The machinery is not effective. They listen more to the Minister and the Minister guides them. Some times the Minister is good and he will try to help the workers. Some times, the Minister will be with the management and such persons unfortunately are labour Ministers. It is the same here, in other States and in the Centre also. Therefore, I say that workers' interest should be protected by the labour machinery by conciliation, arbitration and adjudication. Officers who are not attuned to this kind of work, should not be there because they will not be able to deal with the labour and give them a fair deal.

So far as Employment Exchange is concerned, I have to say that the set up is not good. In every district, there is employment exchange. If it is professional, they will have to come to Bangalore. In the report I have seen they have made town employment exchanges. The employment exchange that was there in KGF was shifted from there because some Minister was interested. It was there for fourteen years and now it is shifted.

Mr. DEPUTY SPEAKER.—There are 14 Members who desire to speak so I request all the participants to be very brief.

ಶ್ರೀ ವಾಟಾಳ್ ನಾಗರಾಜ್.—ಬಹಳ ಜನ ಮಾತನಾಡುವವರಿದ್ದಾರೆ, ಈಗ 5 ಗಂಟೆ ಆಯಿತು. ಮಂತ್ರಿಗಳು ಯಾವಾಗ ಉತ್ತರ ಕೊಡುತ್ತಾರೆಯೋ ಗೊತ್ತಿಲ್ಲ. ನನ್ನ ಹೆಸರು ಪಟ್ಟಿಯಲ್ಲಿದೆ. ಎಷ್ಟು ಹೊತ್ತಿಗೆ ಅವಕಾಶ ಕೊಡುತ್ತೀರಿ. ನಾನು ಯಾವಾಗ ಮಾತನಾಡುವುದು ಎನ್ನುವುದೇ ದೊಡ್ಡ ಪ್ರಶ್ನೆಯಾಗಿದೆ. ಇಷ್ಟು ಹೊತ್ತಿಗೆ ಅವಕಾಶ ಕೊಡುತ್ತೇನೆಂದು ತಾವು ಹೇಳಿದರೆ ಕುಳಿತ ಕೊಳ್ಳುತ್ತೇನೆ.

Sri AZEEZ SAIT.—I require one hour for reply.

Mr. DEPUTY SPEAKER.—A certain understanding has been arrived between the Chief Minister and the Hon'ble Leader of the Opposition We are to abide by that. The understanding is that discussions will continue up to 6 P.M. and the reply will begin at Six.

ಶ್ರೀ ವಾಟಾಳ್ ನಾಗರಾಜ್.—ನಾನು ಮಾತನಾಡಬೇಕಾಗಿದೆ. ನನಗೆ ಅವಕಾಶ ಕೊಡಲಿಲ್ಲ ವೆಂದರೆ ಬೇರೆ ಮಾರ್ಗವನ್ನು ಅನುಸರಿಸಬೇಕಾಗುತ್ತದೆ.

Mr. DEPUTY SPEAKER.—Why do you presume things like that

Sri C. M. ARUMUGAM.—Sir, about Employment Exchange I said it was there for 14 years in KGF. It was a political decision in order to satisfy some Minister.

Sri AZEEZ SAIT.—Where has it been shifted to ?

Sri C. M. ARUMUGAM.—It is shifted to Kolar. In KGF, in addition to the Mining Labour there is the Bharat Earth Movers which has a labour strength of 4000. It has now been shifted to Kolar, the district headquarters. It need not necessarily be in district headquarters. You want everything in Bangalore only. Therefore I say these exchages are not very effective. I do not know what Mr. Azeez Sait is going to do. There is an industry Bharat Earth Movers Ltd., in KGF and most of the recruitment is not done through the Employment Exchange. The Employment exchange is conniving with the industry. They take a non-avilability certificate and advertise in the press and take men as they like. Mr. Deputy Speaker, you will be surprised to hear that a man coming from railway station in the morning at 11 O' clock, there will be interviewed at 12 O' clock and very soon, he will be appointed. That is how employment is going on in BEML in KGF. The employment exchange has no power if they recruit after advertising in the news papers. The Employment Exchange officer should go and see whether they have followed any procedure. When the Employment officer asked for the concerned establishment, the officer refused to allow him because they call it as part of defence department. Whether defence or any other department, they must follow certain rules in recruitment which they are not doing. And the Employment Exchange officer has no control because you post some fourth-class person. Some first division clerk is made the Employment Exchange officer. They are not even gazetted officers. What could he do in the face of a big officer drawing Rs. 3,000 salary ? You have other officers in Bangalore. Therefore I say, the Employment exchanges are not properly working. Some times the employment exchange officers do not give preference according to seniority. Anybody can register and in two week's time, he will be given a chance. I have got with me a letter I wrote to the Director. In the local exchange, there are persons who have registered 5-6 years ago and they have not been given any chance. There is no check. I was also told that when people went for registration in the Employment Exchange, I understand they refused registration. I do not know on what ground.

India is not like the United States where there is double citizenship. In the States, a citizen of one State cannot register his name in the Employment Exchange of another State ; a special permission is necessary for that. In India although there is single citizenship, these Employment Exchanges do not take cognizance of applications for appointment and refuse to register the names of persons seeking employment. The crowd for registration of names at the Employment Exchange is unmanageable. The Labour Minister passes on the road where the Employment Exchange is located. He has also noticed the long

(SRI C. M. ARUMUGAM)

queue of students and others waiting at the Emploment Exchange Office waiting for registration of their names. Some of them go and sleep in the Emplopment Exchange compound the previous night to get a chance for registration. It is better that two Employment Exchange Offices are opened in Bangalore one in City and another for Civil Area in Rajamahal Extension because the congestion at the Exchanges is so great and the consequent hardship on the applicants is indescribable. The present Employment Exchange is not promptly attending to the candidates presenting before the Exchange.

5-00 P.M.

There is an Advisory Board in I. T. I. and so far as nominating a member of the State on it is concerned it comes under the purview of the Labour Minister. This Government is dabbling in politics even in regard to the appointment of member on that Advisory Board. When that Board was reconstituted, a person who was defeated in the elections, was appointed to that Advisory Committee. No body need think that I wished to be appointed. I do not cringe anybody that I should be nominated to this committee and that. I do not want any mercy of the Government or any Minister. That fellow who is nominated by the Government does not know the A, B, C, D of the problems of workers. He was nominated because Sri Krishnan, M. P., recommended his name. What right has this Government to constitute committees with political motives; they want their own political background for the members of committees. A person who was defeated in the elections has been appointed Commissioner for Scheduled Castes and Scheduled Tribes. He is a defeated member of Parliament. Candidates defeated at Assembly polls are given good posts. Sri Azeez Sait has appointed defeated candidates and political orphans. They are such insignificant fellows that when they die there is nobody to weep; even their shadows will not follow them to their grave. Such persons are given encouragement by this Government. These political motives in making appointments and nominating members to Committees should be curbed. The important functions one has to perform and the service rendered in the concerned field should be taken into consideration in appointing members to advisory committees. At this rate, I am sure this Government will not survive for another three months. It is within the memory of the members how so many leaders disappeared in such a short time due to their unpopularity. History will repeat itself and such things will happen even to this Government within three months if they continue such misdeeds. These Ministers should put a brake to the bus in which they are travelling. Sri Azeez Sait is going in a bus which is going too fast without brake.

One other point I want to bring to notice of the Government is that these arrack shops and toddy shops are being opened in the midst

of localities where Scheduled Castes people reside. For instance, it is opened in Velamurugapuram. The former Governor of Mysore Sri Dharmaveera visited that place and there was a representation to him from the public that it should be removed from that place. He even went near the chops shop in the Scheduled Castes colony where the toddy shop was located. If Government think that they are providing an amenity by locating toddy shops, let them first provide them in Basavanagudi near Sri Shamanna's house, in Jayamahal, Vyalikaval and Rajamahal and other extensions in the midst of living localities. The Excise Department should give suitable instructions in this matter when toddy shops are auctioned and see that they are not located where poor people live and they are not spoiled.

I thank you very much and conclude.

SRI ABDUL KHUDDUS ANWAR (Bhadravathi).—Mr. Deputy Speaker, since Sri M. S. Krishnan has touched all the important points, I have only a few points to be brought to the notice of this hon. House.

While supporting the Demand under discussion, I wish to bring to the notice of the House the irregularities noticed in some of the industries located in my place. In my place, particularly where 20,000 workers are working there is one Department which is not functioning satisfactorily. And that is the Labour Department. In my place particularly the Employment Exchange is not working properly. There are lots of irregularities in the Employment Exchange. Most of the people who go to the Office of the Labour Department are not happy; the officials are in the habit of receiving bribe from the poor classes to register their names; they give appointments according to their whims and fancies. These malpractices must be checked.

Another thing is that in MISL and M. P. M. and Tungabhadra Sugar Factory most of the employments are made directly without consulting the Employment Exchange. Last time when the probationers were taken, out of 40 only two Scheduled Caste people and two minority people were taken; the rest were selected according to the whims and fancies of the management. The committee consists of a General Manager and we were fed up with the man. The work of this General Manager is only to dismiss workmen and take disciplinary action against them for which he is paid Rs. 2,000. In spite of the Government asking him not to give serious punishment, during the last six months he has dismissed about 28 persons, and suspended about 48 people. Such a person should be properly dealt with and he must be immediately removed from that place. He is a metallurgist and as such must be put in charge of the furnace and work extracted from him.

According to the High Court order the difference between the D.As. in 1964 which was not paid was remitted to the Court and it amounts to Rs. 5 lakhs. So far it is not disbursed and now they say that this disbursement will not be made unless there is a proper claimant. The

(SRI ABDUL KHUDDUS ANWAR)

workers have the right to get this amount due to them. It is better in the interest of increased production in the industry this amount should be paid to them. During the last eight months on account of the non-payment of this D. A. and non-introduction of production bonus pruduction has gone down by 50 per cent for which the management alone is responsible. The Industries Minister and Labour Minister have not asked them to take immediate action and come to a settlement with the Labour Association. The production in the Rolling Mill has gone down from 150 tons to 80 tons and as a result they are losing one lakh every day. The production bonus scheme should be immediately finalised.

The dearness allowance should be merged into the basic salary. I suggested at the tri-partite conference and it was agreed that the D. A. should be merged into the basic salary. As Sri M. S. Krishnan has pointed out, the cost of living will not go down; it will go on increasing. Therefore, the best thing is to see that the D. A. is merged into the basic salary, and the minimum wage for the farm workers and other workers should be fixed at Rs. 150 as suggested by Sri M. S. Krishnan.

Abolition of contract Labour :—Most of the mines come under the Government of India. The Government of India has formed certain rules and they have also agreed to abolish the contract labour.

As regards housing, the workers after putting a long service of 30 years have not got a single house. For this reason we had requested the Government to build some quarters in Shimoga, Bhadravathi, and Davangere for the retired employees as well as for those who are working in the factory. We had requested the Revenue Minister to give them some sites which he promised to do. Last time about 40 acres of land were given to M. I. S. and M. P. M. House building Society for this purpose but it was taken over by the management on the pretext that it was required for the development of the town. I request the Government to see that these retired employees are provided with house sites and houses are constructed on them by the Housing Board. In every district the industrial worker must be provided with house site.

Another thing is that the welfare amenities that are given are meagre. In an industry like the MISL there is no canteen. Even the private canteen which was there was closed down. The food that was supplied there was very bad. The estimate for the construction of a canteen is pending for the last 6 years. So far no proper canteen arrangements have been made in Tungabhadra Sugar Works and MISL.

The deceased employees' sons are not provided with work in spite of an order that it should be done. In spite of my repeated request to the Labour Department as well as to the Government, about 25 people who lost their limbs and lives in the course of their working have not

got their sons employed. I request the Government to provide the sons of these deceased employees with jobs.

Only about 25 per cent of the people have been provided with houses and the scheme of the Housing Board to construct 500 houses every year has been stopped. I request the Government to revive this scheme and see that at least 500 houses are constructed through the Housing Board every year.

The elections to the MISL labour association have not been conducted in spite of repeated requests to the Department. I requests that the elections should be conducted immediately and a good atmosphere should be created there.

Another difficulty is that the Personnel Department is directly under the General Manager and because of this it is not able to deliver the goods. The Personnel Department should be independent and should be under the top management.

The minimum $8\frac{1}{4}$ per cent bonus agreed to is not given. I request the Government that this Mysore Paper Mills which declares good dividend is asked to give 25 per cent bonus to the workers. Similarly the Bhadravati Iron and Steel Works must also declare the minimum bonus of $8\frac{1}{4}$ per cent.

The Government must declare the May Day as a paid holiday since it is a big festival to the workers.

For the last 20 years I am opposing introduction of E. S. I. scheme because it is not beneficial to the workers and to their families. I understand that the Government is thinking of bringing the Bhadravati Iron and Steel under the purview of this E. S. I. scheme. As this scheme is not advantageous to the workers I request the present condition may be allowed to continue because the workers are able to get better benefits under the present system. If on the other hand this E. S. I. scheme is extended the workers will not get proper care and doctors and other medical men will become corrupt. With these words I thank the Chair.

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ನಾನು ಸಾರಿಗೆ ಇಲಾಖೆಯಿಂದ ನನ್ನ ಭಾಷಣವನ್ನು ಪ್ರಾರಂಭ ಮಾಡುತ್ತೇನೆ. ಶ್ರೀಮಾನ್ ಅಜೀಜ್‌ಸೇಟ್ ಅವರು ಬಹಳ ನೊಂದ ರಾಜಕೀಯ ವ್ಯಕ್ತಿ. ಅವರ ಹೆಸರು ಮಂತ್ರಿಗಳ ಪಟ್ಟಿಯಲ್ಲಿ ಬಂದಾಗ ನನಗನ್ನಿಸಿತು, ನೊಂದಿದ್ದಕ್ಕೆ ಮಂತ್ರಿಗಳಾಗಿ ಆಯ್ಕೆಯಾದರು ಎಂಬುದಾಗಿ. ಇನ್ನು ಮೇಲೆ ಪರವಾಗಿಲ್ಲ ಎಂದು ನಾನು ಅಂದುಕೊಂಡೆ. ಪೋರ್ಟ್‌ಫೋಲಿಯೋ ಅನೌನ್ಸ್ ಆದಮೇಲೆ ಇವರಿಗೆ ಬಂದಂಥ ಖಾತೆಯನ್ನು ನೋಡಿ ಇವರು ಕೆಟ್ಟರು ಎಂದು ನಾನು ಅಂದುಕೊಂಡೆ. ಇವರಿಗೆ ಎಂ. ಎಸ್. ಆರ್. ಟಿ. ಸಿ. ಯನ್ನು ಕೊಟ್ಟಿದ್ದಕ್ಕೆ, ಅಯ್ಯೋ ಪಾಪ, ಅನ್ಯಾಯವಾಯಿತು ಎಂದು ನನಗೆ ವ್ಯಥೆಯಾಯಿತು. ರಿಯಲ್ ಅಂಡ್ ಡೈರೆಕ್ಟ್ ಸೋಸಿಯಲಿಜಂ ವ್ಯಕ್ತಿ ಇವರು. ಇವರು ಮಂತ್ರಿಯಾಗಿ ಆಯ್ಕೆಯಾದಮೇಲೆ ಒಳ್ಳೆಯ ಸೋಷಿಯಲಿಸ್ಟಿಕ್ ಬ್ಲಡ್ ಇಟ್ಟುಕೊಂಡು ಮಂಗಳೂರಿಗೆ ಹೋದರು. ಬಹಳ ಚೂಪಾದ ರೀತಿಯಲ್ಲಿ ಬಸ್ ಮಾಲೀಕರುಗಳಾದ ಡ್ರೈವರ್ ಮತ್ತು ಕಂಡಕ್ಟರ್‌ಗಳನ್ನು ಉದ್ಧಾರ ಮಾಡಬೇಕೆಂದು ಅವರು ಮಂಗಳೂರಿಗೆ ಹೋದರು. ಆದರೆ ಅವರು ವಾಪಸ್ ಬೆಂಗಳೂರಿಗೆ ಬಂದಾಗ ಅವರಲ್ಲಿದ್ದ ಚೂಪು, ಮನೆಯಲ್ಲಿ ಹೆಂಗಸರು ಖಾರವನ್ನು ಕುಟ್ಟುವ ಮೊಂಡು ಹಾರೆಯ ತರಹ ಆಗಿತ್ತು. ಬೆಂಗಳೂರಿಗೆ ಬಂದ ತಕ್ಷಣ ಬಿ. ಟಿ. ಎಸ್. ನ್ನು ಪ್ರೈವೇಟ್ ಮಾಲೀಕರಿಗೆ ಕೊಡುತ್ತೇ

(ಶ್ರೀ ಎಚ್. ಎಸ್. ಸಿದ್ದಪ್ಪ)

ವೆಂದು ಹೇಳಿದರು. ಅವರಲ್ಲಿ ಮೊದಲಿದ್ದ ಸೋಷಿಯಲಿಸ್ಟಿಕ್ ನೀತಿ ಮೊಂಡವಾಗಿತ್ತು. ಇವರ ಹೇಳಿಕೆ ನೋಡಿ ನನಗೆ ವ್ಯಥೆಯಾಯಿತು. ಇವರಿಗೆ ಎಂ. ಎಸ್. ಆರ್. ಟಿ. ಸಿ. ಅಲ್ಲದೆ ಬೇರೆ ಖಾತೆಯನ್ನು ಕೊಟ್ಟಿದ್ದರೆ ನಿಜವಾಗಿಯೂ ಸೋಷಿಯಲಿಸ್ಟಿಕ್ ಆಗಿ ಇರುತ್ತಿದ್ದರು. ಎಂ. ಎಸ್. ಆರ್ ಟಿ. ಸಿ. ಯನ್ನು ನಾನು ಡಿಫೈನ್ ಮಾಡುತ್ತೇನೆ.

M = Mad, S = Stupid, R = Rotton, Transport Corporation. This is how I define it. Mad ಅಂದರೆ ಒಬ್ಬ ಹುಚ್ಚ ಹುಡುಗನನ್ನು ಮನೆಯಿಂದ ಹೊರಗೆ ಬಿಟ್ಟರೆ, ಆ ಹುಚ್ಚ ಹುಡುಗ ಎಲ್ಲಿಗೆ ಹೋಗುತ್ತಾನೆ ಎಂಬುದನ್ನು ನಾವು ಯಾವ ರೀತಿಯಿಂದ ತಿಳಿದು ಕೊಳ್ಳುವುದಕ್ಕೆ ಸಾಧ್ಯವಿಲ್ಲವೋ, ಅದೇ ರೀತಿ ಎಂ. ಎಸ್. ಆರ್. ಟಿ. ಸಿ. ಬಸ್ ಡಿಪ್ಪೋದಿಂದ ಹೊರಟು ಬಿಟ್ಟರೆ ಅದು ಎಲ್ಲಿಗೆ ಹೋಗುತ್ತದೆ, ಯಾವ ರೂಟ್‌ನಲ್ಲಿ ಹೋಗುತ್ತದೆ, ಎಲ್ಲಿ ನಿಲ್ಲುತ್ತದೆ ಎಂಬುದು ಯಾರಿಗೂ ಗೊತ್ತಾಗುವುದಿಲ್ಲ.

Sri AZEEZ SAIT.—Since how long you came to know about it?

ಶ್ರೀ ಎಚ್. ಎಸ್. ಸಿದ್ದಪ್ಪ.—ನಿಮ್ಮ ಇಲಾಖೆಯವರ ಹತ್ತಿರ ಹೋಗಿ ತಿಳಿದುಕೊಂಡು ಬಂದೆ. ಸ್ಟುಪಿಡ್ ಅಂದರೆ, ಬೆಂಗಳೂರಿನಿಂದ ಕಾರವಾರಕ್ಕೆ ಲಕ್ಷುರಿ ಬಸ್ ಹೊರಡುತ್ತದೆ. ಅದು ಗುಬ್ಬಿ, ಬಿರೂರಿನಲ್ಲಿ ನಿಲ್ಲುವುದಿಲ್ಲ. ಅದರೆ ಡ್ರೈವರ್ ಊಟ ಮಾಡುವುದಕ್ಕೆ, ಸಾದೆ ತುಂಬಿಕೊಳ್ಳುವುದಕ್ಕೆ, ಕಳ್ಳೆಕಾಯಿ ತಿನ್ನುವುದಕ್ಕೆ ನಿಲ್ಲಿಸುತ್ತಾನೆ.

Mr. DEPUTY SPEAKER.—May I Know when had the member been in that bus?

Sri H. S. SIDDAPPA.—Myself and the Chief Whip of the Congress Party, both of us travelled in this Karwar Express on Saturday. He was going to Birur. I was also in that bus. The conductor stopped the bus at Gubbi, which was not a scheduled halting place, and he made some purchases. Sri Mallappa asked him to stop at Birur so that he can get down at Birur but he would not stop. He got down at Arsikere and went by a lorry.

After 'stupid' I said 'rotton'. I shall explain how it is rotton. The buses are not kept clean; lot of dust and comitting will be there. Even night-soil will be there. If the Minister travels with me I can show him all this. I request the ministers at least once in a way to travel in this Mad Stupid Rotton Transport Services and know the conditions. I am only telling facts and not exaggerating. I appreciate the concept of nationalisation but the implementation is very bad and there is lot of corruption and all that. Take the private luxury buses. Really God has saved the people by providing these private luxury buses. If there were not these private luxury buses, the travelling public would have been in the hell. Today from Bangalore to Mangalore there are 18 luxury buses; from Bangalore to Shimoga there are 28 luxury buses. The whole night they will be running and all these buses are full. These MSRTC buses will be full but still the earning is less. How does this happen? In the matter of constructing bus shelters there is discrimination and there is no definite planning. Arsikere is a big junction and if you look at the bus shelter provided there, it is just like the one we find near the Kempegowda Circle. On the other hand in J.C. pura where hardly two or three buses run, there is a big bus shelter. I want to know who asked them to construct like

these. Therefore this Transport Corporation has become an apology to nationalisation. If any minister were to get a bad name, it is only this Transport Minister when we see all the ministers with full blood and flesh on their faces, Sri Azeez Sait is becoming weaker and weaker because always he is thinking of these rotton buses. I am telling the fact. This is the condition of this transport buses. When our Chief Minister was Transport Minister he was also like like him; of course now he has put up some good health.

On Saturday we reserved our seats in the Transport bus. We phoned and went to the bus station. The bus was scheduled to leave at 1 P.M. But in the same route four other buses were ready but the bus we reserved never arrived in the station. We waited till 2-30 P.M. and we reached the place at 7-30 P.M. I asked the conductor and driver. ನಿಮ್ಮನ್ನು ಸುಖವಾಗಿ ತಂದು ಇಳಿಸಿದ್ದೇವೆ, ಆದ್ದರಿಂದ ನೀವು ಮನೆಗೆ ಹೋಗಿ ಎಂದು ಹೇಳಿದರು. ಮನೆಗೆ ಹೋದ ಮೇಲೆ ನನ್ನ ಹೆಂಡತಿ ಹೇಳಿದಳು, ನಿಮಗೆ ರಾಜಕೀಯ ಬೇಡ, ಕಂಡಕ್ಟರ್ ಆಗಿ ಎಂದು ಕಾಡಿದೆ, ಆದರೆ ತಾವು ಕೇಳಲಿಲ್ಲ ಎಂದು ಹೇಳಿದಳು. ನಮ್ಮ ಪಕ್ಕದ ಮನೆಯಲ್ಲಿ ಒಬ್ಬ ಕಂಡಕ್ಟರ್ ಇದ್ದಾನೆ. ಅವನು ಪಾಲು ತೆಗೆದುಕೊಂಡಾಗ 5 ಸಾವಿರ ರೂಪಾಯಿಗಳ ಸಾಲವಿತ್ತು. ಅವನು ಕಂಡಕ್ಟರ್ ಆದ ಎರಡು ವರ್ಷದಲ್ಲಿಯೇ ಸಾಲ ತೀರಿಸಿದ. ಅವನು ಕಂಡಕ್ಟರ್ ಆದ 5 ವರ್ಷಗಳ ಬಳಿಕ ಒಂದು ಮನೆ ಕಟ್ಟಿಕೊಂಡು, 20 ಸಾವಿರ ರೂಪಾಯಿಗಳ ವರೆಗೆ ವ್ಯವಹಾರ ಕೂಡ ಮಾಡುತ್ತಿದ್ದಾನೆ. ಆದರೆ ನಾನು ರಾಜಕೀಯಕ್ಕೆ ಇಳಿದು ತೋಟ ಮತ್ತು ಸೈಟನ್ನು ಮಾರಿದೆ. If the Minister can assure to give me the post of conductor after these 5 years, I shall he happy.

Sri AZEEZ SAIT.—He can resign and apply for the post of conductor. I shall consider then.

Sri H. S. SIDDAPPA.—If you promise.

Sri D. DEVARAJ URS.—Provided the Minister does not catch you.

5-30 P.M.

Sri H. S. SIDDAPPA.—Coming to the Labour I would request the Hon'ble Minister to kindly review what I had requested him during my speech on the vote on account budget. Further, in the Labour Employment Exchanges, I submit, it has become very difficult to the unemployed persons particularly the unemployed ladies at the taluka level to get their names registered. There are instances of suicidal cases because they cannot go over to District Headquarters and get themselves enrolled and even if they get their names enrolled there they require influence for seeking an appointment. These labour employment exchanges at taluka level have become a menace. They look on y to the Shop Act. They do not look after the welfare of the labourers. Kindly look to these matters very seriously and set them right.

With regard to civil supplies department I would like to state that the Hon. Minister should have kind heart towards the patients dying in hospitals for want of sugar. Is it fair on the part of the Minister if the patients curse? Supply of sugar fo. the patients in the hospitals is a very legitimate demand. The other day the Minister said that she

(SRI H. S. SIDDAPPA)

would issue orders in this regard. But so far it has not been done. You have miserably failed in this. At least from hereafter don't be a Minister of failure but be a Minister of successes. Kindly supply sugar to the hospitals for the patients.

With these words I thank the Chair and conclude my speech.

† ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ).—ಮಾನ್ಯ ಅಧ್ಯಕ್ಷರೇ ಈಗ ನಮ್ಮ ಮುಂದಿರತಕ್ಕ ಬೇಡಿಕೆಗಳನ್ನು ಒಪ್ಪುತ್ತಾ ನಾನು ಈ ಬೇಡಿಕೆಯ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಬೇಕೆಂದಿದ್ದೇನೆ. ಕಾರ್ಮಿಕರ ಬಗ್ಗೆ ಮತ್ತು ಕಾರ್ಮಿಕರ ಇಲಾಖೆಯ ಬಗ್ಗೆ ಅನೇಕ ವಿಷಯಗಳನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ವಿವರವಾಗಿ ಹೇಳುವುದಕ್ಕೆ ಸಾಕಷ್ಟು ಅವಕಾಶ ಇಲ್ಲದೇ ಇರುವುದರಿಂದ ಒಂದೆರಡು ಸಲಹೆಗಳನ್ನು ಮಾತ್ರ ನಾನು ಹೇಳುತ್ತೇನೆ. ಕಾರ್ಖಾನೆಗಳಲ್ಲಿ ಅನೇಕ ಸಂಘಗಳು ಇರುವುದಕ್ಕೆ ಅವಕಾಶವನ್ನು ಕೊಡಬಾರದು. ಒಂದೇ ಸಂಘ ಇರಬೇಕು. ಅನೇಕ ಅನುಭವದಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಹಿಂದೆ ಮೈಸೂರು ಲೇಬರ್ ಆಕ್ಟ್ ಪ್ರಕಾರ ಒಂದು ಕಾರ್ಖಾನೆಗೆ ಒಂದು ಸಂಘ ಮಾತ್ರ ಇತ್ತು. ಆ ರೀತಿ ಒಂದು ಸಂಘ ಇರುವುದಾದರೆ ಯಾವುದೇ ಒಂದು ಘರ್ಷಣೆ ಮತ್ತು ಉತ್ಪಾದನೆಗೆ ಯಾವುದೇ ತೊಂದರೆ ಇರುವುದಿಲ್ಲ. ಲೇಬರ್ ಕಮಿಷನರನ್ನು ನೇಮಕ ಮಾಡುವಾಗ ಲೇಬರ್ ಇಲಾಖೆಯ ಕಾನೂನುಗಳನ್ನು ತಿಳಿದುಕೊಂಡು ಲೇಬರ್ ವಿಷಯದಲ್ಲಿ ಅನುಭವವಿರುವವರನ್ನು ಲೇಬರ್ ಕಮಿಷನರಾಗಿ ನೇಮಕ ಮಾಡುವುದು ಒಳ್ಳೆಯದು. ಐ.ಎ.ಎಸ್. ಆಫೀಸರನ್ನು ಲೇಬರ್ ಕಮಿಷನರನ್ನಾಗಿ ನೇಮಿಸುವುದು ಸರಿಯಲ್ಲ. ಕೈಗಾರಿಕಾ ಪಂಚಾಯಿತಿ ಕೋರ್ಟುಗಳಲ್ಲಿ ಪ್ರಿಸೈಡಿಂಗ್ ಆಫೀಸರುಗಳನ್ನಾಗಿ ಹಾಕಬೇಕಾದರೆ ಕೈಗಾರಿಕಾ ಲಾ ಯಾರಿಗೆ ಗೊತ್ತಿರುತ್ತದೆ ಅಂಥವರನ್ನು ಕೈಗಾರಿಕಾ ಪಂಚಾಯಿತಿ ಕೋರ್ಟುಗಳಿಗೆ ಪ್ರಿಸೈಡಿಂಗ್ ಆಫೀಸರುಗಳನ್ನಾಗಿ ನೇಮಿಸಬೇಕು. ಮತ್ತು ಅವರಿಗೆ ಆ ವಿಷಯದಲ್ಲಿ ತರಪೇತಿಯನ್ನು ಕೊಡಬೇಕು. ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಒಂದು ಉದಾಹರಣೆಯನ್ನು ಹೇಳುವುದಾದರೆ ಬೆಂಗಳೂರು ಕೈಗಾರಿಕಾ ಪಂಚಾಯಿತಿ ಕೋರ್ಟಿಗೆ 1960 ನೇ ಇಸವಿಯಲ್ಲಿ ಒಂದು ಕೇಸು ರೆಫರ್ ಆಯಿತು. ಈಗ 1972 ನೇ ಇಸವಿ, ಎಂದರೆ 12 ವರ್ಷಗಳಾದರೂ ಕೂಡ ಆ ಕೇಸು ಇನ್ನೂ ಇತ್ಯರ್ಥವಾಗದೇ ಹಾಗೆಯೇ ಉಳಿದಿದೆ, ಇಂಥಾ ಕೇಸುಗಳು ಅನೇಕ ಇವೆ. ಪ್ರಿಸೈಡಿಂಗ್ ಆಫೀಸರಿಗೆ ಸಿವಿಲ್ ಲಾ ಎಕ್ಸ್‌ಪೀರಿಯನ್ಸ್ ಇದ್ದರೂಕೂಡ ಕೈಗಾರಿಕಾ ಲಾ ಅನ್ನು ತಿಳಿದುಕೊಳ್ಳಬೇಕಾದರೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಈ ದೃಷ್ಟಿಯಿಂದ ಇದರ ಬಗ್ಗೆ ನುರಿತಿರುವವರನ್ನು ಕೈಗಾರಿಕಾ ಪಂಚಾಯಿತಿ ಕೋರ್ಟುಗಳಿಗೆ ಪ್ರಿಸೈಡಿಂಗ್ ಆಫೀಸರನ್ನಾಗಿ ಹಾಕುವುದು ಒಳ್ಳೆಯದು. ಈ ವಿವಾದಗಳಿಗೆ ಕೊನೆ ಮೊದಲು ಎರಡೂ ಇಲ್ಲ. ಕೈಗಾರಿಕಾ ವಿವಾದಗಳಿಗೆ ಸಂಬಂಧಪಟ್ಟ ಕೇಸುಗಳು 10-15 ವರ್ಷಗಳಿಂದ ನಡೆಯುತ್ತಿವೆ. ಇವು ಎಷ್ಟು ದಿವಸಗಳಲ್ಲಿ ಮುಗಿಯುತ್ತವೆ ಎನ್ನುವ ಮಾತೇ ಇಲ್ಲ. ಕಾರ್ಮಿಕರಿಗೂ ಮತ್ತು ಮಾಲೀಕರಿಗೂ ಏನಾದರೂ ವಿವಾದಗಳು ಬಂದರೆ ಅವು ಮೂರು ತಿಂಗಳಲ್ಲಿ ಇತ್ಯರ್ಥವಾಗಬೇಕು. ಮಾನ್ಯ ಕಾರ್ಮಿಕ ಮಂತ್ರಿಗಳು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು. ನಿಂತು ಹೋಗತಕ್ಕಂಥಾ ಕೈಗಾರಿಕೆಗಳಿಗೆ ಆಯವ್ಯಯ ಪಟ್ಟಿಯಲ್ಲಿ ಯಾವುದೇ ದುಡ್ಡನ್ನು ಒದಗಿಸಿಲ್ಲ. ಒಂದುವೇಳೆ ನಿಂತು ಹೋಗತಕ್ಕಂಥಾ ಕಾರ್ಖಾನೆಯ ಕಾರ್ಮಿಕರು ನಮಗೆ ಸಹಾಯ ಮಾಡಿ ಎಂದು ಸರ್ಕಾರವನ್ನು ಕೇಳಿಕೊಳ್ಳುವುದಕ್ಕೆ ಬಂದಾಗ ಸರ್ಕಾರದವರು ನಮ್ಮ ಹತ್ತಿರ ದುಡ್ಡು ಇಲ್ಲ ಎಂದರೆ ಹಿಂದಿನ ಸರ್ಕಾರದ ಅಭ್ಯಾಸವೇ ಹೊಸ ಸರ್ಕಾರಕ್ಕೂ ಬಂದಿದೆ ಎಂದು ಕಾರ್ಮಿಕರು ಹೇಳುವಂತಾಗಬಾರದು. ಅಂಥಾದ್ದಕ್ಕೆ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಬೇಕು. ಒಂದುವೇಳೆ ಹಣದ ಕೊರತೆಯಿಂದ ಯಾವುದಾದರೂ ಕೈಗಾರಿಕೆ ನಿಂತು ಹೋದರೆ ಅಂತಹ ಕೈಗಾರಿಕೆಯನ್ನು ಸರ್ಕಾರದವರು ನಡೆಸತಕ್ಕಂಥಾ ವ್ಯವಸ್ಥೆ ಇರಬೇಕು.

ಇನ್ನೊಂದು ವಿಷಯವನ್ನು ಹೇಳುತ್ತೇನೆ. ನಮ್ಮಲ್ಲಿ ಅನೇಕ ಆಫೀಸರುಗಳು ಇದ್ದಾರೆ. ಅವರಿಗೆ ಬಹುಶಃ ಯಾವ ಯಾವ ವೃತ್ತಿಯಲ್ಲಿ ಅನುಭವ ಇದೆಯೋ ಗೊತ್ತಿಲ್ಲ. ಈಗ ನಮ್ಮ ರಾಜ್ಯದಲ್ಲಿ ಹತ್ತಿ ಗಿರಣಿಗಳು ಇವೆ. ಆ ವಿಷಯವನ್ನು ತಿಳಿದಂತಹವರು ಎಷ್ಟು ಜನ ಇದ್ದಾರೆ ಎಂಬುದು ಗೊತ್ತಿಲ್ಲ. ಕೈಗಾರಿಕೆಗಳಿಗೆ ಮ್ಯಾನೇಜಿಂಗ್ ಡೈರೆಕ್ಟರಾಗಿ ಐ.ಎ.ಎಸ್. ಆಫೀಸರುಗಳನ್ನೂ, ಮಿಲಿಟರಿ ಕೆಲಸ ಮಾಡಿದವರನ್ನೂ ಹಾಕುತ್ತಾರೆ. ಅವರಿಗೆ ಕಾರ್ಮಿಕರ ವಿಷಯಗಳು ಗೊತ್ತಿರುವುದಿಲ್ಲ ಕಾರ್ಖಾನೆಯಲ್ಲಿ ಯಾವ ಯಾವ ರೀತಿ ಉತ್ಪಾದನೆಯನ್ನು ಮಾಡಬೇಕು ಎಂಬುದು

ಗೊತ್ತಿರುವುದಿಲ್ಲ. ಯಾರಾದರೂ ಈ ರೀತಿ ಮಾಡಿ ಎಂದು ಹೇಳಿದರೆ ಅದನ್ನು ತಿಳಿದುಕೊಂಡು ಹಾಗೆ ನಡೆಯಿರಿ ಎಂದು ಹೇಳತಕ್ಕಂಥಾ ಶಕ್ತಿಯೂ ಅವರಿಗೆ ಇರುವುದಿಲ್ಲ. ಆದ್ದರಿಂದ ಇನ್ನು ಮುಂದೆ ಕೈಗಾರಿಕೆಗಳಿಗೆ ಅಧಿಕಾರಿಗಳನ್ನು ನೇಮಿಸುವಾಗ ಅವರಿಗೆ ತರಬೇತಿಯನ್ನು ಕೊಟ್ಟು ಅವರನ್ನು ಕೈಗಾರಿಕೆಗಳಿಗೆ ನೇಮಕ ಮಾಡಿದರೆ ಅದರಿಂದ ಸರ್ಕಾರಕ್ಕೆ ಒಳ್ಳೆಯದಾಗುತ್ತದೆಂದು ನಾನು ಹೇಳುತ್ತೇನೆ. ಲೇಬರ್ ಡಿಪಾರ್ಟ್‌ಮೆಂಟಿನಲ್ಲಿ ಅನೇಕ ವರ್ಷಗಳಿಂದ, 10–15 ವರ್ಷಗಳಿಂದ ವರ್ಗ ಆಗದೆ ಅಲ್ಲಿಯೇ ಕುಳಿತುಕೊಂಡಿರತಕ್ಕ ಅಧಿಕಾರಿಗಳು ಇದ್ದಾರೆ. ಇದಕ್ಕೆ ಕಾರಣ ವೇನು ? ಅವರಿಗೆ ಬೇರೆ ಜಾಗಗಳು ಇಲ್ಲಾ ಎಂದು ಹೇಳುತ್ತೀರಾ ಎಂದು ನಮಗೆ ಗೊತ್ತಾಗುತ್ತದೆ. ಲೇಬರ್ ಕಮಿಷನರು ಮತ್ತು ಜಾಯಿಂಟ್ ಲೇಬರ್ ಕಮಿಷನರುಗಳನ್ನು ಅನುಭವ ಇರುವವರನ್ನು ನೇಮಕ ಮಾಡಬೇಕು. ಒಂದು ವರ್ಷ ಎರಡು ವರ್ಷಗಳಾದ ಮೇಲೆ ಅವರನ್ನು ಬೇರೆ ಜಾಗಗಳಿಗೆ ಹಾಕಿ, ಬೇರೆಯವರನ್ನು ನೇಮಕ ಮಾಡಬೇಕು. ಕೆಲವು ಅಧಿಕಾರಿಗಳನ್ನು 10–15 ವರ್ಷಗಳಿಂದ ಒಂದೇ ಜಾಗದಲ್ಲಿ ಇಟ್ಟಿದ್ದಾರೆ. ಈ ರೀತಿ ಆದರೆ ಡಿಪಾರ್ಟ್‌ಮೆಂಟಿನ ಕೆಲಸಗಳು ನಡೆಯುವುದಿಲ್ಲ. ಕಾರ್ಮಿಕರಿಗೆ ಒಳ್ಳೆಯದಾಗುವುದಿಲ್ಲ. ಕಾರ್ಮಿಕರಿಗೆ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ ಕ್ಲಾಜ್ (9)(ಎ) ಪ್ರಕಾರ 21 ದಿವಸಗಳು ಮುಂಚಿತವಾಗಿ ನೋಟೀಸ್ ಕೊಟ್ಟು 100 ರೂಪಾಯಿ ಸಂಬಳ ಬರತಕ್ಕವನಿಗೆ 50 ರೂಪಾಯಿ ಮಾಡತಕ್ಕಂಥಾ ಸಂದರ್ಭಗಳೂ ಇವೆ. ಸಮಾಜವಾದದ ಬಗ್ಗೆ ಎಷ್ಟೇ ಮಾತನಾಡಿದರೂ ಕೂಡ ಕಾರ್ಮಿಕರಿಗೆ ತೊಂದರೆಯಾಗತಕ್ಕಂಥಾ ಕಾನೂನುಗಳು ಇರುವುದರಿಂದ ಸಮಾಜವಾದವನ್ನು ಜಾರಿಗೆ ತರುವುದಕ್ಕೆ ಆಗುವುದಿಲ್ಲ.

ಸ್ವಾಮಿ, ಇವತ್ತು ದುಡಿಯುತ್ತಿರುವ ರೈತರಿಗೆ ಹೆಚ್ಚಾಗಿ ಜಮೀನು ಕೊಡಬೇಕೆಂದು ಹೇಳುತ್ತಿದ್ದೇವೆ. ಮತ್ತು ಅದರ ಬಗ್ಗೆ ಕಾನೂನು ಸಹ ಮಾಡುತ್ತಿದ್ದೇವೆ. ಆದರೆ ದುಡಿಯುತಕ್ಕಂತಹ ಕಾರ್ಮಿಕರಿಗೆ ಏನು ಮಾಡುತ್ತಿದ್ದಾರೆಂಬುದನ್ನು ಸರ್ಕಾರದವರು ಹೇಳುತ್ತಾ ಇಲ್ಲ. ಉತ್ಪತ್ತಿ ಮಾಡತಕ್ಕ ಕಾರ್ಮಿಕರಿಗೆ ಏನೂ ಕೊಡುತ್ತಾ ಇಲ್ಲವೆಂಬುದು ಎಲ್ಲರಿಗೂ ಗೊತ್ತಿದೆ. ಈ ರೀತಿ ಇರತಕ್ಕ ಕಾರ್ಮಿಕರಲ್ಲಿ ಬಹಳ ಹಿಂದುಳಿದ ಜನರು ಇದ್ದಾರೆ. ಅದರಲ್ಲಿ ಹರಿಜನರು ಸಹ ಇದ್ದಾರೆ. ಇಂತಹ ಜನರು ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ನಾನಾದರೂ ಇವತ್ತು ಇಲ್ಲಿ ಹೇಳುತ್ತಿದ್ದೇನೆ, ನನ್ನನ್ನು ಸೇರಿ ಇಲ್ಲಿ ಯಾರಾದರೂ ಸದಸ್ಯರು ಪಾರ್ಟನರ್‌ಶಿಪ್‌ನಲ್ಲಿ ಯಾವುದಾದರೂ ಕಾರ್ಖಾನೆಗಳನ್ನು ನಡೆಸಿಕೊಂಡು ಅಲ್ಲಿ ಕಾರ್ಮಿಕರಿಗೆ 60-70 ರೂಪಾಯಿ ಸಂಬಳ ಕೊಡುವುದಾದರೆ, ಆಗ ಖಾಸಗೀ ಮಾಲೀಕರು ಸಹ ನೀವು ಏನಾದರೂ ಹೇಳಿದರೆ ಅದನ್ನು ಗಮನಿಸಲಾರರು. ಹೀಗೆ ಮಾಡಿದರೆ ಅದು ಸಮಾಜವಾದಕ್ಕೂ ವಿರೋಧವಾಗುತ್ತದೆ. ಅದೇ ರೀತಿ ಇವತ್ತು 8 ಗಂಟೆಗಳ ಕೆಲಸ ಮಾಡತಕ್ಕ ಕಾರ್ಮಿಕರಿಗೆ ಸಾಕಷ್ಟು ರಾಮೆಟೀರಿಯಲ್ಸ್ ಸಪ್ಲೈ ಆಗುತ್ತದೆಯೆ, ಕಾರ್ಖಾನೆಯಲ್ಲಿ ಸರಿಯಾದ ಉತ್ಪತ್ತಿ ಬರುತ್ತದೆಯೆ, ಮತ್ತು ಅದರಿಂದ ಲಾಭವಾಗುತ್ತದೆಯೇ ಎಂಬುದನ್ನು ಅಧಿಕಾರಿಗಳು ಪರಿಶೀಲನೆ ಮಾಡುತ್ತಾ ಇಲ್ಲ. ಆದ್ದರಿಂದ ಇವನ್ನು ಮಾಡುವುದಕ್ಕೆ ವ್ಯವಸ್ಥಿತವಾದ ಅಧಿಕಾರಿಗಳು ಇರಬೇಕು. ಇಲ್ಲವಿದ್ದರೆ ಯಾವ ಕಾರ್ಖಾನೆಯಾದರೂ, ಯಾವ ಕಾಲದಲ್ಲಿ ಆದರೂ ನಷ್ಟಕ್ಕೆ ಒಳಗಾಗುವ ಸಂದರ್ಭ ಬರಬಹುದು.

ಇನ್ನು ಈ ಇಲಾಖೆಯ ಬಗ್ಗೆ ಹೇಳುವುದಾದರೆ, ಮಾಲೀಕರನ್ನು ಸೆಕ್ಷನ್ 39ರ ಪ್ರಕಾರ ಯಾವಾಗ ಶಿಕ್ಷೆಗೆ ಒಳಪಡಿಸುತ್ತಿರೋ, ಆಗ ಅದನ್ನು ಜಾರಿಗೆ ಕೊಡುವುದನ್ನು ಬಿಟ್ಟು ವಾಪಸ್ಸು ತೆಗೆದುಕೊಳ್ಳುವುದು ಏಕೆ ? ಹೀಗೆ ಮಾಡುವುದಕ್ಕೆ ಏನು ಅಧಿಕಾರ ನಿಮಗೆ ಇವೆ ? ಮಾಲೀಕರಿಗೆ ಶಿಕ್ಷೆ ಕೊಡುವುದನ್ನು ವಾಪಸ್ಸು ತೆಗೆದುಕೊಂಡರೆ ಕಾರ್ಮಿಕರಿಗೆ ಮಾತ್ರ ಏಕೆ ಶಿಕ್ಷೆ ಕೊಡುತ್ತೀರಿ ? ಇಂಥ ರೀತಿಯಲ್ಲಿ ಇಲಾಖೆಯವರು ಮಾಡಿದರೆ, ಅದು ಸಮಾಜವಾದಕ್ಕೆ ವಿರೋಧವಾಗುತ್ತದೆ. ಆ ರೀತಿ ಮಾಡುವ ಅಧಿಕಾರಿಗಳನ್ನು ತೆಗೆದುಹಾಕಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† Sri BAPU RAO ANAND RAO (Basavakalyan).—[In Hindi].

[MADAM SPEAKER in the Chair]

† ಶ್ರೀಮತಿ ನಾಗಮ್ಮ ಸಿ ಕೇಶವಮೂರ್ತಿ (ದಾವಣಗೆರೆ).—ಮಾನ್ಯ ಅಧ್ಯಕ್ಷಿಣಿಯವರೇ ಈ ಸಭೆಯ ಮುಂದೆ ಇರುವ ಬೇಡಿಕೆಗಳನ್ನು ನಾನು ಬೆಂಬಲಿಸುತ್ತಾ ನನ್ನ ಕ್ಷೇತ್ರದ ಬಗ್ಗೆ ಕೆಲವಾರು ವಿಷಯಗಳನ್ನು ಪ್ರಸ್ತಾಪ ಮಾಡಲಿಕ್ಕೆ ಇಷ್ಟಪಡುತ್ತೇನೆ. ಮೊಟ್ಟಮೊದಲನೆಯದಾಗಿ ಬಹು ಅವಶ್ಯವಾದ ಇಂಟರ್‌ನಲ್ ಬಸ್ ಸರ್ವಿಸ್ ಬಗ್ಗೆ ಈಗಾಗಲೇ ನಮ್ಮ ಮಾನ್ಯ ಮಂತ್ರಿಗಳು ನಮ್ಮ ಊರಿಗೆ ಬಂದಾಗ್ಗೆ ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಅದರ ಬಗ್ಗೆ ಏನೂ ಆಗಿಲ್ಲ.

(ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ)

ಬೆಳೆಯುತ್ತಿರುವ ನಮ್ಮ ನಗರಕ್ಕೆ ಅದರಲ್ಲಿಯೂ ಈಚೆಗೆ ಅಭಿವೃದ್ಧಿ ಹೆಚ್ಚು ಹೆಚ್ಚಾಗಿ ಆಗುತ್ತಿರುವಂಥ ಈ ನಗರಕ್ಕೆ ಇದನ್ನು ಕೂಡಲೇ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಮತ್ತೊಂದು ವಿಷಯ. ನಮ್ಮಲ್ಲಿ ಬಸ್‌ಸ್ಟ್ಯಾಂಡ್ ನಿರ್ಮಿಸಿ ಹತ್ತಾರು ವರ್ಷಗಳು ಆಗಿರಬಹುದು. ಆಗಿನ ಅವಶ್ಯಕತೆಗೆ ಅನುಸಾರವಾಗಿ ಒಂದು ಸಣ್ಣ ಬಸ್‌ಸ್ಟ್ಯಾಂಡ್ ಇದೆ. ಈಗ ಅಲ್ಲಿ ನೂರಾರು ಬಸ್ಸುಗಳು ಓಡಾಡುತ್ತಿರುವುದರಿಂದ ಅಲ್ಲಿ ಇನ್ನೊಂದು ಬಸ್‌ಸ್ಟ್ಯಾಂಡಿನ ಅವಶ್ಯಕತೆ ಇದೆ. ಒಂದು ನವೀನ ಮಾದರಿಯ ಸೌಲಭ್ಯಗಳನ್ನೊಳಗೊಂಡಂಥ ಒಂದು ಪ್ರತ್ಯೇಕ ಬಸ್‌ಸ್ಟ್ಯಾಂಡನ್ನು ನಮ್ಮ ಕ್ಷೇತ್ರದಲ್ಲಿ ನಿರ್ಮಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ವಿಷಯ. ಇದರ ಬಗ್ಗೆ ಮಾನ್ಯ ಶ್ರೀ ಆಮರ್ಗಂ ಅವರು ಈಗಾಗಲೇ ಬಹಳ ಚೆನ್ನಾಗಿ ಮಾತನಾಡಿದ್ದಾರೆ. ನಮ್ಮ ಕ್ಷೇತ್ರದ ಎಲ್ಲಾ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜುಗಳನ್ನು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ ಆಫೀಸಿಗೆ ಷಿಫ್ಟ್ ಮಾಡಿದ್ದಾರೆ. ನಮ್ಮ ಕ್ಷೇತ್ರದ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜನ್ನೂ ಕೂಡ ಅಲ್ಲಿಗೆ ವರ್ಗಾಯಿಸಿ ನಮ್ಮ ಊರಿನ ಕಾರ್ಮಿಕರಿಗೆ ಇದರಿಂದ ಬಹಳವಾಗಿ ತೊಂದರೆಯಾಗಿದೆ. ಹಿಂದಿನ ಸಭೆಯಲ್ಲಿ ಮಾನ್ಯ ಮಂತ್ರಿಗಳು ಒಂದು ಮಾತನ್ನು ಹೇಳಿದ್ದರು. ಒಂದು ಲಕ್ಷಕ್ಕೆ ಮೇಲಿರುವ ಎಲ್ಲಾ ನಗರಗಳಿಗೂ ಒಂದು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಕೊಡುತ್ತೇವೆಂಬುದಾಗಿ. ಒಂದು ಇಂಡಿಪೆಂಡೆಂಟ್ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ನಮ್ಮ ಕ್ಷೇತ್ರಕ್ಕೆ ಬೇಕಾಗಿರುವುದರಿಂದ ಚಿತ್ರದುರ್ಗದಲ್ಲಿರುವ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜನ್ನು ನಮ್ಮ ಊರಿಗೆ ವರ್ಗಾಯಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಲೇಬರರ್ಸ್ ವಿಚಾರ. ಮಾನ್ಯ ಶ್ರೀಮಾನ್ ಕೃಷ್ಣನ್ ಅವರು ದಾವಣಗೆರೆಯ ವಿಷಯವಾಗಿ ಬಹಳ ಚೆನ್ನಾಗಿ ಹೇಳಿದ್ದಾರೆ. ಆದರೆ ನಾನು ಒಂದೆರಡು ವಿಷಯಗಳನ್ನು ಮಾತ್ರ ಈ ಸಂದರ್ಭದಲ್ಲಿ ಒತ್ತಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಯೂನಿಫಾರಂ ಪೆ ಮತ್ತು ಯೂನಿಫಾರಂ ಗ್ರಾಚುಯಿಟಿ ವಿಚಾರವಾಗಿ ಹೇಳಬೇಕಾಗಿದೆ. ಒಂದು ಊರಿನಲ್ಲಿ ಕೆಲವಾರು ಮಿಲ್ಲುಗಳು ಇದ್ದರೆ ಒಂದೊಂದು ರೀತಿಯಲ್ಲಿ ಅಲ್ಲಿನ ಕಾರ್ಮಿಕರಿಗೆ ಪೆ ಕೊಟ್ಟರೆ ನಿಜವಾಗಿಯೂ ಅತೃಪ್ತರಾಗುತ್ತಾರೆ. ಅವರಿಂದ ಸಮರ್ಪಕವಾಗಿ ಕೆಲಸಕಾರ್ಯಗಳೂ ಸಹ ಆಗುವುದಕ್ಕೆ ತೊಂದರೆಯಾಗುತ್ತದೆ. ಆದ್ದರಿಂದ ಇನ್ನು ಮುಂದೆ ಎಲ್ಲಾ ಮಿಲ್ಲುಗಳಲ್ಲಿಯೂ ಒಂದೇ ರೀತಿಯ ಯೂನಿಫಾರಂ ಪೆ ಮತ್ತು ಯೂನಿಫಾರಂ ಗ್ರಾಚುಯಿಟಿ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಸರ್ಕಾರದವರೂ ಸಹ ಲೇಬರ್ ಆಕ್ಟ್ ಪ್ರಕಾರ ಮ್ಯಾನೇಜ್‌ಮೆಂಟಿನವರೊಡನೆ ಈ ವಿಚಾರವಾಗಿ ಚರ್ಚೆಮಾಡಿ, ಆ ಒಂದು ವಿಷಯಕ್ಕಾಗಿ ಮ್ಯಾನೇಜ್‌ಮೆಂಟಿನವರ ಮುಂದೆ ಪ್ರವೇಶಿಸಿ ಇದರ ಬಗ್ಗೆ ಒಂದು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಒಟ್ಟಿನಲ್ಲಿ ಲೇಬರರುಗಳಿಗೆ ಹೆಚ್ಚಿಗೆ ಅನುಕೂಲ ಮಾಡಿಕೊಡಬೇಕು.

ಇನ್ನು ಜಿನ್ನಿಂಗ್ ಫ್ಯಾಕ್ಟರಿ ವಿಷಯ. ಅಲ್ಲಿ ಕೆಲಸ ಮಾಡುತ್ತಿರುವವರಿಗೆ ಸುಮಾರು 15 ವರ್ಷಗಳ ಹಿಂದೆ ಏನು ಪೇಸ್ಕೇಲ್ ಫಿಕ್ಸ್ ಮಾಡಿದ್ದರೋ ಅದನ್ನೆ ಕೊಡುತ್ತಿದ್ದಾರೆ. ಬೇರೆ ಫ್ಯಾಕ್ಟರಿಯವರಂತೆ ಕೆಲಸಮಾಡಿದರೂ ದಿನಕ್ಕೆ ಒಂದು, ಒಂದೂವರೆ, ಅಥವಾ ಎರಡು ರೂಪಾಯಿಗಳಿಗಿಂತ ಜಾಸ್ತಿ ಸಂಬಳ ಅವರಿಗೆ ಸಿಗುತ್ತಾ ಇಲ್ಲ. ಆದ್ದರಿಂದ ಅವರ ಪೇಸ್ಕೇಲನ್ನು ರಿವೈಜ್ ಮಾಡಬೇಕು. ಎಲ್ಲಾ ಫ್ಯಾಕ್ಟರಿಗಳಲ್ಲಿಯೂ ಮತ್ತು ಬೇರೆ ಮಿಲ್ಲುಗಳಲ್ಲಿ ಹೇಗೆ 8 ಗಂಟೆಗಳವರೆಗೆ ಕೆಲಸ ಮಾಡಿದರೆ ಸಂಬಳ ಸಿಗುತ್ತದೋ ಅದೇ ರೀತಿಯಲ್ಲಿ ಈ ಫ್ಯಾಕ್ಟರಿಯಲ್ಲಿಯೂ ಸಂಬಳ ಸಿಗುವ ಹಾಗೆ ಏರ್ಪಾಡು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಲೇಬರ್ ವೆಲ್‌ಫೇರ್ ಸೆಂಟರುಗಳ ವಿಷಯ. 15 ಸಾವಿರ ಲೇಬರರ್ಸ್ ಇರುವ ಕಡೆ ಕೇವಲ ಒಂದೆರಡು ಲೇಬರ್ ವೆಲ್‌ಫೇರ್ ಸೆಂಟರುಗಳು ಇವೆ. ಅವು ಏನೇನೂ ಸಾಲದು. ಅವರಿಗೆ ಹಾಸ್ಪಿಟಲ್ ಫ್ಯಾಸಿಲಿಟೀಸ್ ಬೇಕು. 15—20 ಸಾವಿರ ಲೇಬರರ್ಸ್ ಇರುವ ಕಡೆಗಳಲ್ಲಿ ಒಂದು ಇ. ಎಸ್. ಐ ಆಸ್ಪತ್ರೆ ಇರುವ ಹಾಗೆ ಮಾಡಬೇಕು. ಈಗಾಗಲೇ ಒಂದು ಆಸ್ಪತ್ರೆ ಸಣ್ಣ ಬಿಲ್ಡಿಂಗ್‌ನಲ್ಲಿದೆ. ಈ ಒಂದು ಸಣ್ಣ ಆಸ್ಪತ್ರೆಯನ್ನು ದೊಡ್ಡದಾಗಿ ಮಾಡಿ ಅಲ್ಲಿ ಕನಿಷ್ಠಪಕ್ಷ 20 ಬೆಡ್ಸ್ ಆದರೂ ಇರುವಂತೆ ವ್ಯವಸ್ಥೆಮಾಡಿ, ಅದನ್ನು ಇ. ಎಸ್. ಐ. ಆಸ್ಪತ್ರೆಯಾಗಿ ಪರಿವರ್ತಿಸಿ ಅಲ್ಲಿ ಇನ್ನೂ ಹೆಚ್ಚಿನ ಹೆಲ್ತ್ ಫೆಸಿಲಿಟೀಸ್ ಮಾಡಿಕೊಡುವುದಕ್ಕೆ ಅನುಕೂಲ ಮಾಡಿಕೊಡಬೇಕು.

ಇನ್ನು ಎಜುಕೇಷನಲ್ ಫೆಸಿಲಿಟೀಸ್, ಲೇಬರ್ ಪಾಕೆಟ್ಸ್ ಎಂದು ಏನಿವೆಯೋ ಅಲ್ಲಿ ಗಂಡ, ಹೆಂಡತಿ, ಇಡೀ ಮನೆಯವರೆಲ್ಲರೂ ಕೆಲಸಕ್ಕೆ ಹೋಗುತ್ತಾರೆ. ಆದರೆ ಅವರ ಮಕ್ಕಳು ಬೀದಿಯಲ್ಲಿದ್ದು ಈಗ ಅವರಿಗೆ ಯಾವ ರೀತಿಯಲ್ಲಿಯೂ ರಕ್ಷಣೆ ಸಿಗುತ್ತಾ ಇಲ್ಲ. ಅಂತಹ ಮಕ್ಕಳಿಗೆ ನರ್ಸರಿ

ಸ್ಕೂಲುಗಳನ್ನಾದರೂ ಮಾಡಿದರೆ, ಅವರಿಗೆ ಬಹಳವಾಗಿ ಅನುಕೂಲವಾಗುತ್ತದೆ. ಲೇಬರ್ ಪಾಕೆಟ್‌ಗಳಲ್ಲಿ ಅದಷ್ಟು ಜಾಗ್ರತೆಯಾಗಿ ಲೇಬರರ್ಸ್ ಮಕ್ಕಳಿಗೆ ಎಲ್ಲ ಸೌಲಭ್ಯಗಳೂ ದೊರೆಯುವಂತೆ ಏರ್ಪಾಡುಮಾಡಬೇಕು.

ಇನ್ನು ಲೇಬರ್ ಹೌಸಿಂಗ್ ಸ್ಕೀಂ ವಿಷಯ. ಸುಮಾರು 10-12 ವರ್ಷಗಳ ಹಿಂದೆ ನಮ್ಮ ಊರಿನಲ್ಲಿ 200—300 ಮನೆಗಳನ್ನು ಕಟ್ಟಿಸಿದ್ದರು. ಆದರೆ ಇತ್ತೀಚೆಗೆ ಇದರ ಬಗ್ಗೆ ಯಾವ ಅನುಕೂಲವನ್ನು ಮಾಡಿಕೊಟ್ಟಿಲ್ಲ. ಆದ್ದರಿಂದ ಎಲ್ಲೆಲ್ಲಿ ಲೇಬರ್ ಪಾಪುಲೇಷನ್ ಜಾಸ್ತಿಯಾಗಿ ಇದೆಯೋ ಎಲ್ಲೆಲ್ಲಿ ಸ್ಲಮ್ಸ್ ಜಾಸ್ತಿಯಾಗುತ್ತಿವೆಯೋ ಅಂತಹ ಕಡೆಗಳಲ್ಲಿ ಹೆಚ್ಚಿಗೆ ಮನೆಗಳ ಅವಶ್ಯಕತೆ ಇರುವುದರಿಂದ, ಅಂತಹವರಿಗೆ ಮನೆಗಳನ್ನು ಹೆಚ್ಚು ಹೆಚ್ಚಾಗಿ ಕಟ್ಟಿಸಿಕೊಡಬೇಕು. ಇದರಿಂದ ಸ್ಲಮ್ಸ್‌ಗಳನ್ನು ಅಬಾಲಿಷ್ ಮಾಡಬಹುದು. ಈಗ ನಮ್ಮ ಊರಿನ ಪ್ರತಿಯೊಂದು ಮಿಲ್ಲಿಗೆ ಸಂಬಂಧಪಟ್ಟಹಾಗೆ 25—30 ಎಕರೆಯಷ್ಟು ಜಮೀನು ಇದೆ. ಅಂತಹ ಪ್ರದೇಶಗಳಲ್ಲಿ ಲೇಬರ್ ಹೌಸಿಂಗ್ ಸ್ಕೀಮನ್ನು ತೆಗೆದುಕೊಳ್ಳಬೇಕು. ಆಯಾ ಮಿಲ್ಲಿನವರು ಆ 20—25 ಎಕರೆ ಜಮೀನನ್ನು ಸರ್ಕಾರದ ಕಡೆಗೆ ಈ ಯೋಜನೆಯನ್ನು ಕೈಗೊಳ್ಳುವುದಕ್ಕಾಗಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಲೇಬರರ್ಸ್‌ಗೆ ರಿಕ್ರಿಯೇಷನ್ ಫೆಸಿಲಿಟೀಸ್ ಕೊಡುವ ವಿಷಯ. ಲೇಬರರ್ಸ್ ಬಹಳ ಕಷ್ಟಪಟ್ಟು ಕೆಲಸ ಮಾಡಿದ ನಂತರ ಕೆಲವು ಕಡೆಗಳಲ್ಲಿ ಒಂದು ರೀತಿಯ ಕೆಟ್ಟ ಹವ್ಯಾಸದಲ್ಲಿ ತೊಡಗುವ ಸಂದರ್ಭಗಳೂ ಇವೆ. ಆದ್ದರಿಂದ ಅವರಿಗೆ ಲೇಬರ್ ಪಾಕೆಟ್ಸ್ ಏನು ಇವೆಯೋ ಅಲ್ಲಿ ರಿಕ್ರಿಯೇಷನ್ ಸೆಂಟರುಗಳನ್ನು ಮಾಡಿ ಕೊಡಬೇಕು. ಅದು ಬಹಳ ಮುಖ್ಯವಾದ ವಿಷಯ. ಲೇಬರ್ ಪಾಪುಲೇಷನ್ ನಿಜವಾಗಿ ಇಲ್ಲಿಟರೇಟ್ಸ್ ಅಲ್ಲ. ಅವರಲ್ಲಿ ಚಿಕ್ಕವರೂ, ದೊಡ್ಡವರೂ ಇರುತ್ತಾರೆ. ಅವರಲ್ಲಿ ಎಷ್ಟೋ ಜನರು ವಿದ್ಯಾವಂತರೂ ಸಹ ಇರುತ್ತಾರೆ. ಅವರಿಗೆ ರೀಡಿಂಗ್ ರೂಂ, ಪ್ಲೇ ಗ್ರೌಂಡ್, ಇತ್ಯಾದಿ ಸೌಕರ್ಯಗಳನ್ನು ಅಲ್ಲಿ ಒದಗಿಸುವುದರ ಮೂಲಕ ಅವರು ಕೆಟ್ಟ ಹವ್ಯಾಸಕ್ಕೆ ಹೋಗುವುದನ್ನು ನಿಜವಾಗಿ ತಡೆಯಬಹುದು. ಈ ಒಂದು ಸೌಕರ್ಯವನ್ನೂ ಸಹ ಅವರಿಗೆ ಕೂಡಲೇ ಸರ್ಕಾರದವರು ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಐ. ಟಿ. ಐ. ವಿಚಾರವಾಗಿ ಈಗಾಗಲೇ ಕೆಲವು ಮಿತ್ರರು ಹೇಳಿರುವುದರಿಂದ ನಾನು ಅದರ ಬಗ್ಗೆ ಹೆಚ್ಚಿಗೆ ಹೇಳದೆ ಒಂದೆರಡು ಅಂಶಗಳನ್ನು ಮಾತ್ರ ಹೇಳುತ್ತೇನೆ. ನಮ್ಮ ಊರಿನ ವ್ಯವಸಾಯದ ಬಗ್ಗೆ ಪ್ರಾಮುಖ್ಯತೆ ಇತ್ತೀಚೆಗೆ ಜಾಸ್ತಿಯಾಗಿ ಬರುತ್ತಿದೆ. ಸುತ್ತಲೂ ಚಾನಲ್ ಬಂದು ಎಲ್ಲರೂ ಟ್ರಾಕ್ಟರುಗಳನ್ನು ಇಟ್ಟುಕೊಂಡಿದ್ದಾರೆ. ಅಂತಹವರು ಬಹಳ ಜನರಿದ್ದಾರೆ. ಆದರೆ ಟ್ರಾಕ್ಟರುಗಳ ರಿಪೇರಿ ಬಗ್ಗೆ ಹಾಗೂ ಟ್ರಾಕ್ಟರುಗಳ ಡ್ರೈವಿಂಗ್ ಕೋರ್ಸಿನ ಬಗ್ಗೆ ಒಂದು ಐ. ಟಿ. ಐ. ಇಲ್ಲ. ಅಂತಹ ಒಂದು ಐ. ಟಿ. ಐ. ಯನ್ನು ನಮ್ಮಲ್ಲಿಯೂ ಶುರುಮಾಡಿದರೆ ನಮ್ಮ ಊರಿನ ಜನಗಳಿಗೆ ಹೆಚ್ಚಿನ ಅನುಕೂಲವಾಗಲು ಬಹಳ ಚೆನ್ನಾಗಿರುತ್ತದೆಂದು ನಾನು ಒತ್ತಿ ಹೇಳುತ್ತೇನೆ. ಈ ದಿವಸ ನನಗೆ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ನಾನು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri T. R. SHAMANNA (Bangalore Fort).—The time that has been allotted to me is very meagre. How can I complete my speech within 5 minutes? You are the Speaker for 216 members and not for the few members who have taken more time. ತಾವೇ ಮಾತನಾಡುವುದರಲ್ಲಿ ಹೆಚ್ಚು ಕಾಲವನ್ನು ತೆಗೆದುಕೊಳ್ಳುತ್ತಿದ್ದೀರಿ.

MADAM SPEAKER.—ನಿಮಗೆ ಕೊಟ್ಟ ಕಾಲ ಆಗಿಹೋಗುತ್ತದೆ. ಇಷ್ಟವಿದ್ದರೆ ಮಾತನಾಡಿ. If the members do not co-operate with me what can I do? The whole trouble is that the members are not co-operating in the allotment of time. For instance, Sri M. S. Krishnan asked for 30 minutes but he has taken 1—09 minutes. Sri Arumugam has taken 31 minutes. I cannot go over and ask them to sit down.

Sri VATAL NAGARAJ. - It is my privilege to speak in the House.

MADAM SPEAKER.— The hon. member Sri Vatal Nagaraj is an Independent Member. He does not belong to any recognised party.

(MADAM SPEAKER)

The Leader of the opposition is the Leader of the recognised party. He cannot be equated with that of the Leader of the Opposition or the Leader of the House.

Sri VATAL NAGARAJ.— If I am not given time, I will stage Dharana inside the House.

MADAM SPEAKER.— First of all, the Hon. Member must learn to obey the Chair. ನನ್ನನ್ನು ಹೆದರಿಸುವುದಕ್ಕೆ ಅವಕಾಶವಿಲ್ಲ. ನನ್ನ ಹಕ್ಕುಗಳನ್ನು ಚಲಾಯಿಸುವುದಕ್ಕೆ ಅಧಿಕಾರವಿದೆ. He should not stand when I am standing. He must sit down till I finish. Now Sri Shamanna may commence his speech.

6-00 P.M.

† ಶ್ರೀ ಟಿ. ಆರ್. ಶಾಮಣ್ಣ.—ಈ ದಿವಸ ನಮ್ಮ ಮುಂದಿರತಕ್ಕ ಬೇಡಿಕೆಗಳಲ್ಲಿ ಬಹಳ ಮುಖ್ಯವಾದ ಬೇಡಿಕೆಗಳೆಲ್ಲಾ ಸೇರಿರುತ್ತವೆ. ಇದರಲ್ಲಿ ಮುಖ್ಯ ಮಂತ್ರಿಗಳಿಗೆ ಸೇರಿರತಕ್ಕ ಬೇಡಿಕೆ ಕೂಡ ಇದೆ. ಇದರಿಂದಲೇ ನಮಗೆ ಬಹಳ ಅನಾನುಕೂಲವಾಗಿದೆ. ಆದರೆ ಎಲ್ಲಾ ಇಲಾಖೆಗಳನ್ನು ನಿರ್ಲಕ್ಷ್ಯ ಮಾಡುವುದಕ್ಕಿಂತ ಈ ಆಹಾರ ಇಲಾಖೆಯನ್ನು ಸರ್ಕಾರ ಬಹಳ ನಿರ್ಲಕ್ಷ್ಯ ಮಾಡಿದೆ. ಹೀಗೆ ಇಷ್ಟು ನಿರ್ಲಕ್ಷ್ಯ ಮಾಡಿರತಕ್ಕ ಇಲಾಖೆ ಇನ್ನೊಂದಿಲ್ಲ. ಇದನ್ನು ಅಷ್ಟು ನಿಕೃಷ್ಟವಾಗಿ ನಿರ್ಲಕ್ಷ್ಯ ಮಾಡಿದ್ದಾರೆ. ಇದು ಬಹಳ ಶೋಚನೀಯವಾದ ವಿಚಾರ. ಈ ದಿವಸ ಬೆಂಗಳೂರಿನಲ್ಲಿ ಜನಸಾಮಾನ್ಯರಿಗೆ ಒಳ್ಳೆಯ ಆಹಾರಧಾನ್ಯ ಸಿಕ್ಕುತ್ತಿಲ್ಲ. ಜನರು ಎಲ್ಲೆಲ್ಲೂ ಪರದಾಡುತ್ತಿದ್ದಾರೆ. ಇದಕ್ಕೇನು ಕಾರಣ? ಇನ್ನು ಜನರಿಗೆ ಈ ಇಲಾಖೆ ಒದಗಿಸುತ್ತಿರುವ ಅಕ್ಕಿ ಬಹಳ ಹೊಲಸಾದ್ದು. ಅದನ್ನು ತಪ್ಪಿಸಿ ಒಳ್ಳೇ ಅಕ್ಕಿಯನ್ನು ಒದಗಿಸುವುದಕ್ಕೇನು ವ್ಯವಸ್ಥೆ ಮಾಡಿದ್ದಾರೆ? ಇನ್ನು ಸಕ್ಕರೆಗೆ ಅಗಾಗ್ಗೆ ಅಭಾವ ಉಂಟಾಗುತ್ತಿರುವುದಕ್ಕೇನು ಕಾರಣ? ಹಾಗೇ ಜನಸಾಮಾನ್ಯರಿಗೆ ದಿನವಹಿ ವ್ಯವಹಾರಕ್ಕೆ ಬೇಕಾಗುವ ಟೈರ್‌ಗಳ ಅಭಾವಕ್ಕೇನು ಕಾರಣ ಇದಕ್ಕೆ ಕಾರಣಗಳನ್ನು ತಿಳಿಸಬೇಕು. ಇಂಥ ತೊಂದರೆಗಳನ್ನು ಪರಿಹರಿಸುವುದಕ್ಕೆ ಸರ್ಕಾರದವರು ಕೈಗೊಂಡಿರತಕ್ಕ ಕಾರ್ಯ ಕ್ರಮಗಳೇನು? ಈ ಇಲಾಖೆಯಿಂದ ಬೆಂಗಳೂರಿನ ನಾಗರೀಕರು ಎಷ್ಟು ಅನುಕೂಲಗಳನ್ನು ನಿರೀಕ್ಷಿಸುತ್ತಿದ್ದರೋ ಅಷ್ಟು ಅನುಕೂಲಗಳು ದೊರೆಯುತ್ತಿಲ್ಲ. ಆದರೆ ಒಬ್ಬ ಗೃಹಿಣಿಯ ಕೈಲಿ ಈ ಇಲಾಖೆ ಸಿಕ್ಕಿರುವುದರಿಂದ ಇದರಲ್ಲಿ ಒಳ್ಳೇ ಮಾರ್ಪಾಡಾಗುತ್ತದೆಂದು ಆಶಿಸುತ್ತೇನೆ.

ಆದರೆ ನನಗೀಗ ಈ ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ಇತ್ಯಾದಿ ಬಾಬುಗಳ ಮೇಲೆಲ್ಲಾ ಮಾತನಾಡುವುದಕ್ಕೆ ಕಾಲಾವಕಾಶವಿಲ್ಲದ್ದರಿಂದ ಮತ್ತು ಆ ವಿಷಯವನ್ನು ಅರ್ಧಗಂಟೆ ಕಾಲಾವಕಾಶದ ಚರ್ಚೆಯಲ್ಲಿ ಮಾತನಾಡಬಹುದಾದ್ದರಿಂದ ಅದನ್ನು ಈಗ ಪ್ರಸ್ತಾಪಮಾಡುವುದಿಲ್ಲ.

ಇನ್ನು ಶ್ರೀ ಪುಟ್ಟರಂಗನಾಥರವರು ಮಾತನಾಡುತ್ತಾ ಎಂ.ಎಸ್.ಆರ್.ಟಿ.ಸಿ. ಛೇರ್ಮನ್ನರನ್ನು ರಿಮೂವ್ ಮಾಡಬೇಕೆಂದು ಹೇಳಿದ್ದಾರೆ. ಹಾಗೆ ಮಾಡಬೇಡಿ. ಟ್ರಾನ್ಸ್‌ಪೋರ್ಟ್ ಸಚಿವರೇನಿದ್ದಾರೆ ಅವರ ಸ್ಥಾನ ಅಪಲೇಟ್ ಸ್ಥಾನ. ಅವರು ಆ ಛೇರ್ಮನ್ನರ ಸ್ಥಾನದಲ್ಲಿ ಇರುವುದಕ್ಕಾಗುವುದಿಲ್ಲ. ಮಂತ್ರಿಗಳಾಗಿರತಕ್ಕವರು ಆ ಸ್ಥಾನದಲ್ಲಿರಬಾರದು. ಇದ್ದರೆ ಮುಂದೆ ತಮಗೆ ಬಹಳ ಕೆಟ್ಟ ಹೆಸರು ಬರುತ್ತದೆ. ತಾವು ಅಲ್ಲಿ ನವಾಬರಾಗಿ ಇಲ್ಲಿ ಮಂತ್ರಿಗಳಾಗಿರುವುದಕ್ಕೆ ಸಾಧ್ಯವಿಲ್ಲ. ತಾವೇ ಅಪಲೇಟ್ ಅಥಾರಿಟಿ. ಅಲ್ಲಿ ಛೇರ್‌ಮನ್ ಆಗಬೇಡಿ ಎಂದು ಹೇಳುತ್ತೇನೆ. ಹೀಗೆ ಹೇಳಿದ ಮಾತ್ರಕ್ಕೆ ತಾವುಗಳ್ಯಾರೂ ನಾನೂ ವೆಂಕಾಜೀರಾಯರ ಪರವಾಗಿ ಅಡ್ವೋಕೇಟ್ ಮಾಡುತ್ತಿದ್ದಾನೆಂದು ಭಾವಿಸಬಾರದು. ಇನ್ನು ರೋಡ್ ಟ್ರಾನ್ಸ್‌ಪೋರ್ಟ್ ಬಗ್ಗೆ ಅನೇಕ ನ್ಯೂನತೆಗಳಿವೆ. ಸರ್ಕಾರದವರು ರೂಟುಗಳನ್ನು ನ್ಯಾಷನಲೈಜ್ ಮಾಡುವುದರಲ್ಲಿ ನನ್ನ ಅಭ್ಯಂತರವೇನೂ ಇಲ್ಲ. ಆದರೆ ಆ ಒಂದೇ ದೃಷ್ಟಿಯನ್ನಿಟ್ಟುಕೊಂಡು ಮಾಡುವಾಗ ಪ್ರಯಾಣೀಕರಿಗೆ ತೊಂದರೆ ಆಗಬಾರದು. ಈ ದಿವಸ ಎಷ್ಟು ಜನರು ಸರ್ಕಾರಿ ಬಸ್ಸುಗಳಲ್ಲಿ ಪ್ರಯಾಣ ಮಾಡುತ್ತಿದ್ದಾರೋ ಅದಕ್ಕಿಂತ ಹೆಚ್ಚು ಜನರು ಖಾಸಗೀ ಬಸ್ಸುಗಳಲ್ಲಿ ಪ್ರಯಾಣ ಮಾಡುತ್ತಿದ್ದಾರೆ. ಸರ್ಕಾರದವರು ಆ ಎಲ್ಲಾ ಖಾಸಗೀ ಬಸ್ಸುಗಳನ್ನು ಇಷ್ಟಪಟ್ಟಲ್ಲಿ ಕಮ್ಯಾಂಡಿಯರಿಂಗ್ ಮಾಡಿ, ಬೇಡವೆನ್ನುವುದಿಲ್ಲ. ಆದರೆ ಜನರಿಗೆ ಮಾತ್ರ ತೊಂದರೆ ಕೊಡಬೇಡಿ. ಇದರಲ್ಲಿ ಸರ್ಕಾರದವರು ಬಹಳ ಎಚ್ಚರಿಕೆಯಿಂದ ವರ್ತಿಸಬೇಕು. ಎಲ್ಲಿಯು

ವರೆಗೆ ಸಮರ್ಪಕವಾಗಿ ಬಸ್ಸುಗಳನ್ನು ಹಾಕುವುದಕ್ಕೆ ಸಾಧ್ಯವಿಲ್ಲವೋ ಅಲ್ಲಿಯತನಕ ರಸ್ತೆಗಳನ್ನು ನ್ಯಾಷನಲೈಜ್ ಮಾಡಬೇಡಿ. ಜನರಿಗೇನು ಕಷ್ಟವಾಗುತ್ತದೆ ಎಂಬುದನ್ನು ನೋಡಿ ಕೆಲಸ ಮಾಡಿ.

ಇನ್ನು ಮೋಟಾರ್ ವೆಹಿಕಲ್ಸ್ ಬಾಬಿನಿಂದ ಬರತಕ್ಕ ಟ್ಯಾಕ್ಸಿನಲ್ಲಿ ಲೋಕಲ್‌ಬಾಡೀಸ್‌ಗೆ ಕೊಡತಕ್ಕ ಹಣ ಏನೇನೂ ಸಾಲದು. ಆದರೆ ಅದನ್ನೆಲ್ಲಾ ಡಿಸ್‌ಕಸ್ ಮಾಡುವುದಕ್ಕೆ ಈಗ ಕಾಲ ಇಲ್ಲ. ಇನ್ನು ಈ ದಿವಸ ಆ ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯಲ್ಲಿ ಯಾವ ನ್ಯೂನತೆಗಳಿವೆಯೋ ಯಾವ ಅನಾನುಕೂಲಗಳಿವೆಯೋ ಅವೆಲ್ಲಾ ಆರ್.ಟಿ.ಓ. ನಲ್ಲೂ ಇರುತ್ತವೆ. ಆ ಆರ್.ಟಿ.ಓ. ನಲ್ಲಿ ಲಂಚರುಷವತ್ತುಗಳು ಹೆಚ್ಚುತ್ತಿವೆ. ಬ್ರೇಕ್ ಇನ್‌ಸ್ಪೆಕ್ಟರಿಂದ ಹಿಡಿದು ಮೇಲಿನ ಅಧಿಕಾರಿಗಳ ವರೆಗೂ ಇದು ತುಂಬಿ ತುಳುಕುತ್ತಿದೆ. ಇನ್ನು ನಿರುದ್ಯೋಗದ ನಿವಾರಣೆಗೆ ಸರ್ಕಾರ ತೀವ್ರ ಕ್ರಮ ಕೈಗೊಳ್ಳದಿದ್ದರೆ ದೇಶದಲ್ಲಿ ಕ್ರಾಂತಿಯೇಳುವುದು ತಪ್ಪುವುದಿಲ್ಲ. ಈ ದಿವಸ ಎಂಪ್ಲಾಯ್‌ಮೆಂಟ್ ಆಫೀಸಿನ ಹತ್ತಿರ ಹೋಗಿ ನೋಡಿದರೆ ಅವರ ಗೋಳೇನೆಂಬುದು ಗೊತ್ತಾಗುತ್ತದೆ. ಅವರಿಗೆ ತೀವ್ರವಾಗಿ ಅನುಕೂಲಗಳನ್ನು ಒದಗಿಸಬೇಕು.

ಅಧ್ಯಕ್ಷರು.—ನಿಮ್ಮ ವೇಳೆ ಮುಗಿಯಿತು.

ಶ್ರೀ ಟಿ. ಆರ್. ಶಾಮಣ್ಣ.—ಹಾಗಾದರೆ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ದಯವಿಟ್ಟು ಇನ್ನು ಇಬ್ಬರು ಸದಸ್ಯರಿಗೆ ಸ್ವಲ್ಪ ಅವಕಾಶ ಕೊಡಿ.

ಅಧ್ಯಕ್ಷರು.—ಲೇಬರ್ ಸಚಿವರಿಗೆ ಒಂದು ಗಂಟೆ, ಆಹಾರ ಸಚಿವರಿಗೆ ಅರ್ಧಗಂಟೆ ಮತ್ತು ಮುಖ್ಯ ಮಂತ್ರಿಗಳು ಬೇರೆ ಇದ್ದಾರೆ. ಹಾಗಾದರೆ ನಾವೇನು ಇಲ್ಲಿ ರಾತ್ರಿ 9 ಗಂಟೆಯವರೆಗೂ ಇರಬೇಕು ಅನ್ನುವುದು ತಮ್ಮ ಇಷ್ಟವೇ?

ಶ್ರೀ ಡಿ. ದೇವರಾಜ ಅರಸ್.—ಇನ್ನು 10 ನಿಮಿಷದಲ್ಲಿ ಅವರು ಮುಗಿಸಲಿ, ಪರವಾಇಲ್ಲ.

† ಶ್ರೀ ವಾಟಾಳ್ ನಾಗರಾಜ್.—ಈ ಎಲ್ಲಾ ಬೇಡಿಕೆಗಳನ್ನೂ ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಇಷ್ಟೇ ನನ್ನ ಭಾಷಣ.

† ಶ್ರೀ ಕೋಣಂದೂರು ಲಿಂಗಪ್ಪ.—ನಾನೀಗ ಹೆಚ್ಚು ವಿವರಗಳನ್ನು ಇಲ್ಲಿ ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಏನು ಬರೆದುಕೊಂಡು ಬಂದಿದ್ದೇನೋ ಅದಷ್ಟನ್ನು ಓದಿ ಬಿಡುತ್ತೇನೆ. 'ನಿರುದ್ಯೋಗ ಸಮಸ್ಯೆ ಬಗ್ಗೆ ರಾಜ್ಯ ಸರ್ಕಾರ 20,000 ಉದ್ಯೋಗಗಳನ್ನು 10 ತಿಂಗಳ ಮಟ್ಟಿಗೆ ಕಲ್ಪಿಸುವ ಸಂಕಲ್ಪಮಾಡಿದೆ. ಇದರಿಂದ ರಾಜ್ಯದ 175 ತಾಲ್ಲೂಕುಗಳಲ್ಲಿ ಪ್ರತಿ ಒಂದು ತಾಲ್ಲೂಕಿಗೆ 108 ಉದ್ಯೋಗಗಳೂ, 26,000 ಹಳ್ಳಿಗಳಿಗೆ ಹಳ್ಳಿಗೊಂದು ಉದ್ಯೋಗ ಸಿಕ್ಕುತ್ತದೆ. ಇದು ಸಮುದ್ರಕ್ಕೆ ಚಿಟಿಗೆ ಉಪ್ಪು ಹಾಕಿದ ಹಾಗಾಗುತ್ತದೆ. ಶ್ರಮದ ಆಧಾರದ ಮೇರೆ ಸರ್ಕಾರದಿಂದ ಉಚಿತ ಆಹಾರ, ವಸತಿ ಒದಗಿಸಲ್ಪಟ್ಟ ಉತ್ಪಾದನಾ ಸೇನೆಗಳಿಂದ ಮಾತ್ರ ನಿರುದ್ಯೋಗ ನಿವಾರಣೆ ಸಾಧ್ಯ.

ಅನ್ನಸೇನೆ, ಅಕ್ಷರ ಸೇನೆಯಂತಹ ಯುವಜನರ ಸೇನೆಯ ರಚನೆಯ ಬಗ್ಗೆ ಸರ್ಕಾರ ಆಲೋಚಿಸಬೇಕು. ಕಾರ್ಮಿಕರ ಬಗ್ಗೆ ಹೆಚ್ಚು ಹೇಳುವುದಿಲ್ಲ. ಖಾಸಗಿ ಮತ್ತು ಸರಕಾರಿ ಈ ಎರಡು ರಂಗಗಳಲ್ಲೂ ಒಂದೇ ರೀತಿಯಲ್ಲಿ ಲೂಟಿಯಾಗಿದೆ. ಬಿಳಿ ಅಂಗಿಯವರಿಗೆ ಒಂದು ಪಾಲು, ಬಂಡವಾಳಗಾರರಿಗೆ ಸಿಂಹಪಾಲು ಹೀಗಿದೆ. ನಿಜವಾದ ಕಾರ್ಮಿಕನ ಹಿತಸಾಧನೆಯಾಗುತ್ತಿಲ್ಲ. ಇದನ್ನು ತಪ್ಪಿಸಿ ದೇಶಕ್ಕೆ ಉತ್ಪತ್ತಿ ಸಾಕಷ್ಟು ದೊರೆಯುವಂತೆ ನೋಡಿಕೊಳ್ಳಬೇಕು.

ಇನ್ನು ಅಬ್ಕಾರಿ ಬಗ್ಗೆ ಒಂದು ಮಾತು. ಹಿಂದಿನವರೂ ಮತ್ತು ಈಗ ಅಧಿಕಾರಕ್ಕೆ ಬಂದಿರುವವರು ಮಹಾತ್ಮ ಗಾಂಧಿಯವರು ಇನಿದ್ದರು ಅವರ ಶಿಷ್ಯರು. ಮಹಾತ್ಮ ಗಾಂಧೀಕಿ ಜೈ ಎಂದು ಹೇಳುವರು. ಆದರೆ ಕುಡಿತಕ್ಕೆ ಅವಕಾಶ ಕೊಟ್ಟಿದ್ದಾರೆ. ಹಿಂದೆ ಜೋಡೆತ್ತಿನ ಗುರ್ತಿತ್ತು, ಈಗ ಹಸು ಕರು ಗುರುತಿದೆ, ಎರಡೂ ಒಂದೇ, ಮೂಕ ಪ್ರಾಣಿಗಳು. ಪಾನನಿರೋಧ ಮಾಡುವುದಾಗಿ ಆ ತತ್ವವನ್ನು ಒಪ್ಪಿಕೊಂಡಿದ್ದು ಈಗ ನಿರೋಧ ಮಾಡಿದ್ದನ್ನು ಮತ್ತೆ ತೆಗೆದುಹಾಕಿದ್ದಾರೆ. ಬಡವರು ಮತ್ತು ಹಿಂದುಳಿದವರ ಹಿತವನ್ನು ಕಡೆಗಾಣಿಸಿದ್ದಾರೆ. ಒಟ್ಟಿನಲ್ಲಿ ಸರಕಾರಕ್ಕೆ ಹೆಚ್ಚು ಉತ್ಪತ್ತಿ ಬರಬೇಕು. ಆ ದೃಷ್ಟಿಯಿಂದ ಮಾಡುವುದಾದರೂ ಒಂದೊಂದು ಅಂಗಡಿಯನ್ನೂ ಪ್ರತ್ಯೇಕವಾಗಿ ಹರಾಜು ಮಾಡಬೇಕು. ಹಿಂದೆಯೂ ಇದನ್ನು ಹೇಳಿರುವ ನೆನಪಿದೆ. ಈ ಗೀತಿ ಮಾಡಬೇಕು.

(ಶ್ರೀ ಕೋಣಂದೂರು ಲಿಂಗಪ್ಪ)

ಇನ್ನು ವಾರ್ತೆ ಮತ್ತು ಪ್ರಚಾರಶಾಖೆಗೆ ಸಂಬಂಧಪಟ್ಟಹಾಗೆ ಎರಡು ಮಾತು. ನಮ್ಮ ರಾಜ್ಯದಲ್ಲಿ ಈ ಇಲಾಖೆ ಬಹಳ ಕಾಲದಿಂದ ಇದೆ. ಇದು ನಮ್ಮ ರಾಜ್ಯದ ಬೊಕ್ಕಸವನ್ನು ವ್ಯರ್ಥ ಮಾಡುತ್ತಿರುವ ಇಲಾಖೆ. ಇದನ್ನು 25 ವರ್ಷಗಳಿಂದ ತಿಳಿದುಬಂದಿದೆ. ಮೊನ್ನೆ ಈ ಸಭೆ ಪ್ರಾರಂಭವಾಗುವುದಕ್ಕೆ ಮುಂಚೆ ಗೋವಾಕ್ಕೆ ಹೋಗಿದ್ದೆ. ಅಲ್ಲಿ ನಮ್ಮ ರಾಜ್ಯದ ವಾರ್ತಾ ಇಲಾಖೆಗೆ ಸಂಬಂಧಪಟ್ಟವರು ಹತ್ತು ಜನ ಪ್ಯಾಲೇಸ್ ಹೋಟಲಿನಲ್ಲಿ ಹತ್ತು ಜನರಿದ್ದರು. ಅಲ್ಲಿ ನಮ್ಮ ರಾಜ್ಯದ ಬಗ್ಗೆ ಕರ್ನಾಟಕದ ಬಗ್ಗೆ ಏನು ಪ್ರಚಾರ ಮಾಡುತ್ತಿದ್ದೀರಿ ಎಂದು ನೇರವಾಗಿ ಹೋಗಿ ಕೇಳಿದೆ. ರಾಜ್ಯ ಸರ್ಕಾರ ಈ ಬಗ್ಗೆ ಏನು ವ್ಯವಸ್ಥೆ ಮಾಡಿದೆ ಎಂದು ಕೇಳಿದಾಗ ಅವರು ಹುಡುಕಿನೋಡಿ ಎರಡು ಇಂಗ್ಲೀಷಿನಲ್ಲಿರುವ ಪ್ರತಿಗಳನ್ನು ಕೊಟ್ಟರು. ನಮ್ಮ ರಾಜ್ಯದ ಬಗ್ಗೆ ಬೇರೆ ಯಾವ ಸಾಹಿತ್ಯವೂ ಇರಲಿಲ್ಲ. ಆದುದರಿಂದ ನೇರವಾಗಿ ಹೇಳುತ್ತೇನೆ. ಕನ್ನಡ, ಮರಾಠಿ, ಇಂಗ್ಲೀಷ್ ಈ ಭಾಷೆಗಳಲ್ಲಿ ಕರ್ನಾಟಕದ ಬಗ್ಗೆ ಸಾಹಿತ್ಯ ಒದಗಿಸಿ ಜನರನ್ನು ಆಕರ್ಷಿಸಲು ಪ್ರಯತ್ನ ಮಾಡಬೇಕು. ಮೊದಲು ಇಷ್ಟು ಮಾಡಬೇಕು. ಇಲ್ಲಿರುವ ವಾರ್ತಾ ಇಲಾಖೆಯನ್ನು ಸಂಪೂರ್ಣವಾಗಿ ಪುನರುಜ್ಜೀವನಗೊಳಿಸಬೇಕು. ಸರಕಾರ ತನ್ನ ವ್ಯವಸ್ಥೆಯನ್ನು ಸಂಪೂರ್ಣವಾಗಿ ಬದಲಾಯಿಸಬೇಕು. ಹಿಂದಿನಿಂದ ಕಟ್ಟಿದ ಈ ಇಲಾಖೆ ಕೇವಲ ಕೆಲವು ಜನರ ಸ್ವತ್ತಾಗಿದೆ. ಮೈಸೂರು ಯೂನಿವರ್ಸಿಟಿಯಲ್ಲಿ ಜರ್ನಲಿಸಂ ತೆಗೆದುಕೊಂಡು ಪಾಸು ಮಾಡಿರುವ ಗ್ರಾಜುಯೇಟ್ಸ್ ಬೇಕಾದಷ್ಟಿದ್ದಾರೆ. ಅವರನ್ನು ಈ ಇಲಾಖೆಗೆ ತೆಗೆದುಕೊಂಡು ಅವರಿಗೆ ಸರಿಯಾದ ಸ್ಥಾನಮಾನ ಕೊಡಬೇಕು.

ಹಾಗೆಯೇ ಫಿಲಂ ಕಾರ್ಪೊರೇಷನ್ ಇದೆ. ಅಲ್ಲೂ ಕೂಡ ಫಿಲಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಮತ್ತು ಚಲನಚಿತ್ರ ಪ್ರಪಂಚದಲ್ಲಿ ಸಾಕಾದಷ್ಟು ಅನುಭವವಿರುವವರನ್ನು ನೇಮಕ ಮಾಡಬೇಕು. ಬೇರೆ ರಾಜ್ಯಗಳಲ್ಲಿ ನಮ್ಮ ವಾರ್ತಾ ಇಲಾಖೆ ಯಾವ ರೀತಿ ಪ್ರಚಾರ ಮಾಡಿದೆ ಎಂದು ನೋಡಿದರೆ ಸಾಧನೆ ಸೊನ್ನೆ. ಬೇರೆ ರಾಜ್ಯಗಳಲ್ಲಿ ನಮ್ಮ ರಾಜ್ಯದ ಬಗ್ಗೆ ಪ್ರಚಾರವಿಲ್ಲ. ಬೇರೆ ರಾಜ್ಯದವರು ನಮ್ಮ ರಾಜ್ಯದ ಸಾಧನೆಯನ್ನು ಬಂದು ನೋಡುವಂತೆ ಮಾಡಲು ಮತ್ತು ನಮ್ಮವರು ಬೇರೆ ಕಡೆ ಇರುವುದನ್ನು ನೋಡಿ-ಉತ್ತಮವಾದುದನ್ನು ಅನುಸರಿಸಲು ಆಸಕ್ತಿವಹಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಅವರಿಗೆ ಬಡ್ತಿಯಿಲ್ಲ. ಬೇರೆ ಇಲಾಖೆಗಳಿಂದ ಡೆಪ್ಯೂಟ್ ಮಾಡುವುದೂ ಉಂಟು. ಅಲ್ಲೇ ಇರುವ ಅಧಿಕಾರಿಗೆ ಯಾವ ಸೌಲತ್ತೂ ಇಲ್ಲ. ಇದರ ಬಗ್ಗೆ ಯೋಚನೆ ಮಾಡಬೇಕು. ಈ ಇಲಾಖೆಯಲ್ಲಿ ಸರಿಯಾದ ವ್ಯವಸ್ಥೆ ಮಾಡಬೇಕು.

ಆಹಾರ ಇಲಾಖೆ ಹೆಗ್ಗಣಗಳಿಗೆ ಪ್ರಸಿದ್ಧವಾಗಿದೆ. ಅದು ಸ್ವತಂತ್ರ ಇಲಾಖೆಯಲ್ಲ. ಗೃಹಣಿ ಆ ಇಲಾಖೆಯ ಆಡಳಿತ ನೋಡಿಕೊಳ್ಳುತ್ತಿರುವರು. ಅವರು ಈ ಇಲಾಖೆಯಲ್ಲಿರುವ ಹೆಗ್ಗಣಗಳಿಗೆ ಸರಿಯಾದ ಮದ್ದು ಮಾಡಬೇಕು. ಏಕೆಂದರೆ ಇವು ಮೂರು ತಿಂಗಳಿಂದ ಇರುವುದಲ್ಲ, 25 ವರ್ಷಗಳಿಂದ ಇವೆ, ಇವಕ್ಕೆ ದೊಡ್ಡ ಪಾಲಿಡಾಲ್ ಹಾಕಬೇಕು.

ಕಡೆಯದಾಗಿ ಇಂದಿನ ಸಾರಿಗೆ ಮಂತ್ರಿಗಳಾದ ಶ್ರೀ ಅಜೀಜ್‌ಸೇಟ್‌ರ ಬಗ್ಗೆ ನನಗೆ ತುಂಬ ವಿಶ್ವಾಸವಿದೆ, ಅವರು ಕೆಟ್ಟ ಹೆಸರು ತೆಗೆದುಕೊಳ್ಳಬಾರದು, ಅವರ ಬಗ್ಗೆ ನನಗೆ ವೈಯಕ್ತಿಕ ಅಭಿಮಾನವಿದೆ. ಪ್ರೈವೇಟ್ ಬಸ್ಸಿಗೆ ಒಂದು ರೂಟನ್ನು ಕೊಡಬೇಕಾದರೆ ಇಷ್ಟು ಮಾಮೂಲು ಕೊಡಬೇಕು ಎಂದೇನೋ ಇದೆಯೆಂದು ಹೇಳುವರು. ಇದನ್ನು ಪರಿಶೀಲಿಸಬೇಕು. ಇದರ ಬಗ್ಗೆ ತನಿಖೆ ಮಾಡಬೇಕು. ಶ್ರೀ ಸಿದ್ದಪ್ಪನವರು ಲಕ್ಸುರಿ ಬಸ್ಸಿನ ವಿಚಾರ ಹೇಳಿದರು, ಮೊನ್ನೆ ನಾನು ಅದೇ ಬಸ್ಸಿನಲ್ಲಿ ಬಂದೆ. ಗುಬ್ಬಿಯಲ್ಲಿ ಆ ಬಸ್ಸನ್ನು ನಿಲ್ಲಿಸಲಿಲ್ಲ. ಈ ಸಂಬಂಧವಾದ ದೂರುಗಳಿಗೆ ಅವಕಾಶ ಇಲ್ಲದಂತೆ ನೋಡಿಕೊಳ್ಳಬೇಕು ಎಂದು ಇಷ್ಟನ್ನು ತಿಳಿಸಿ ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಎಷ್ಟು ಅವಕಾಶ ಯಾರು ಯಾರಿಗೆ ಇದೆ ಎಂದುದನ್ನು ಮಾನ್ಯ ಅಧ್ಯಕ್ಷರು ತಿಳಿಸಿದರೆ ಒಳ್ಳೆಯದು. ಈಗ ಗೋರ್ಕಲ್ಲ ಮೇಲೆ ಮಳೆ ಸುರಿದಂತಾಗಿದೆ. ಯಾವರೀತಿ ಟೈಂ ಅಲಾಟ್ ಮಾಡುತ್ತೀರಿ? ಸ್ವತಂತ್ರ ಸದಸ್ಯರಿಗೆ ಅವಕಾಶವಿಲ್ಲವೇ? ನಾವು ಚೈನದಿಂದ ಬಂದವರೇ ! ದಯವಿಟ್ಟು ಇದನ್ನು ಸಭೆಗೆ ತಿಳಿಸಬೇಕು.

ಅಧ್ಯಕ್ಷರು.—ಈಗ ಅಪೋಜಿಷನ್ ಪಾರ್ಟಿ ರೆಕಗ್‌ನೈಜ್ಡ್ ಪಾರ್ಟಿ. ಅದಕ್ಕೆ ಲೀಡರ್ ಇದ್ದಾರೆ. ಕೆಲವು ಆಲ್ ಇಂಡಿಯಾ ಪಕ್ಷಗಳಿವೆ. ಇದನ್ನೆಲ್ಲಾ ಗಮನಿಸಿ ಸಾಧ್ಯವಾದಷ್ಟು ಟೈಂ ಅಲಾಟ್ ಮಾಡಲಾಗಿದೆ. ತಾವು ಎಲ್ಲಾ ಡಿಮ್ಯಾಂಡುಗಳ ಮೇಲೂ ಮಾತನಾಡಬೇಕೆಂದರೆ ಹೇಗೆ ಸಾಧ್ಯ ?

ಶ್ರೀ ವಾಟಾಳ್ ನಾಗರಾಜ್.—ಪ್ರತಿ ಡಿಮ್ಯಾಂಡಿನ ಮೇಲೂ ನಾನು ಮಾತನಾಡಿದ್ದೇನೆಯೇ ಎಂಬುದನ್ನು ತಾವು ನೋಡಿ ಹೇಳಬೇಕು.

(ಅಧ್ಯಕ್ಷರು ನಿಂತಿದ್ದರು ಶ್ರೀ ವಾಟಾಳ್ ನಾಗರಾಜ್ ಸಹ ನಿಂತಿದ್ದರು)

ಅಧ್ಯಕ್ಷರು.—ತಾವು ಕೂಡಿ.

ಶ್ರೀ ವಾಟಾಳ್ ನಾಗರಾಜ್.—ತಾವು ಹೆಡ್‌ಮಾಸ್ತರಿದ್ದಹಾಗೆ ಇದ್ದೀರಿ. ಹೀಗೆ ಹೇಳ ಬಾರದು. ತಾವು ಅಧ್ಯಕ್ಷರಾದಮೇಲೆ ನಮಗೆ ಕಷ್ಟ ಬಂದಿದೆ.

MADAM SPEAKER.— Will the hon. Member withdraw unconditionally from the House ? Who would like to take this insult ?

Sri D. DEVARAJ URS.—I move that the hon. Member should withdraw his remark.

MADAM SPEAKER.—Would you like to withdraw that insult or not ?

(ಶ್ರೀ ವಾಟಾಳ್ ನಾಗರಾಜ್‌ರವರು ಸುಮ್ಮನಿದ್ದರು)

ಅಧ್ಯಕ್ಷರು.—ಅನ್‌ಕಂಡೀಷನಲ್ಲಾಗಿ ಅವರು ಮಾತನಾಡಿರುವುದನ್ನು ವಾಪಸು ತೆಗೆದು ಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್.—ಅಧಿಕಾರವಿದೆ ಎಂದು ಅದನ್ನು ಈ ರೀತಿ ಪ್ರಯೋಗಮಾಡು ವುದು ಸರಿಯಲ್ಲ. ಅಧ್ಯಕ್ಷರ ಬಗ್ಗೆ ನನಗೆ ಅಪಾರವಾದ ಗೌರವವಿದೆ.

ಅಧ್ಯಕ್ಷರು.—ಅದು ಬೇರೆ ವಿಚಾರ. ನೀವು ಅಧ್ಯಕ್ಷರಾದಮೇಲೆ ಕಷ್ಟ ಬಂದಿದೆ ಎಂದು ನೀವು ಹೇಳಿರುವುದನ್ನು ವಾಪಸು ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್.—ಈವಾಗ ನೀವು ಅಧ್ಯಕ್ಷರಾದ ಮೇಲೆ ನಮಗೆ ಬಹಳ ಕಷ್ಟ ಬಂದಿದೆ.

MADAM SPEAKER.—Do you tolerate this insult ?

Sri D. DEVARAJ URS.—I appeal to him to please withdraw his remarks.

ಶ್ರೀ ವಾಟಾಳ್ ನಾಗರಾಜ್.—ನನಗೆ ಹೇಳಲು ಅವಕಾಶವಿಲ್ಲವೇ. ನಿಮಗೆ 160 ಜನರ ಬೆಂಬಲ ಇದೆ. ನೀವು ಹೇಗೆ ಬೇಕಾದರೂ ಮಾಡಬಹುದು. ಈ ದೇಶದಲ್ಲಿ ನಿಮ್ಮ ಪ್ರಜಾಪ್ರಭುತ್ವವೇ ನಡೆಯಲಿ.

MADAM SPEAKER.—Will you please withdraw from this House ?

ಶ್ರೀ ವಾಟಾಳ್ ನಾಗರಾಜ್.—ತಾವು ಹೇಳಿದುದನ್ನು ಗಮನಕ್ಕೆ ತೆಗೆದುಕೊಳ್ಳುತ್ತೇನೆ. ನಾನು ಹೋಗುವುದಿಲ್ಲ ಏನು ಮಾಡುತ್ತೀರಿ !

Sri D. DEVARAJ URS.—This kind of behaviour on the part of the hon'ble Member is highly objectionable.

Sri C. M. ARUMUGAM.—I appeal to Mr. Vatal Nagaraj to obey the Chair.

(*Sri Vatal Nagaraj withdrew from the House*)

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೇ, ಈ ಅಬ್ಕಾರಿ ಬೇಡಿಕೆ ಮೇಲೆ ಹೆಚ್ಚಾಗಿ ಯಾರೂ ಮಾತನಾಡಿಲ್ಲ. ಶ್ರೀಮಾನ್ ಆರುಮುಗಂರವರು ಕೆಲವು ವಿಚಾರಗಳನ್ನು ಮಾತ್ರ ಹೇಳಿದ್ದಾರೆ. ಶ್ರೀಮಾನ್ ಶಾಮಣ್ಣನವರು ಕೆಲವು ಕಟ್ ಮೋಷನ್‌ಗಳನ್ನು ಕಳುಹಿಸಿದ್ದಾರೆ. ಕೊನೆಯಲ್ಲಿ ಶ್ರೀ ಕೋಣಂದೂರು ಲಿಂಗಪ್ಪನವರು ನಿಮ್ಮ ಪಾಲಿಸಿ ಸರಿಯಿಲ್ಲ, ಗಾಂಧಿ ಹೆಸರಿನಲ್ಲಿ ಈರೀತಿ ಮಾಡಿದ್ದೀರಿ ಎಂದು ನೊಂದುಕೊಂಡು ಹೇಳಿದರು ನಿಜ. ಇಡೀ ಪ್ರಪಂಚದಲ್ಲಿ ಎಷ್ಟೋ ವಿಚಾರಗಳು

(ಶ್ರೀ ಡಿ. ದೇವರಾಜ ಅರಸ್)

ಮನುಷ್ಯ ಮಾಡಬಾರದು. ಮಾಡುವುದು ಒಳ್ಳೆಯದಲ್ಲ. ಕುಡಿಯುವುದೂ ಅಲ್ಲದೇ ಇನ್ನೂ ಅನೇಕ ಪಾಪಗಳು ಇವೆ Christian Definition of SIN ನಲ್ಲಿ "glutteny is one of the seven deadly sins" ಎಂದು ಇದೆ. ಇದು Oxford Conscise Dictionary ನಲ್ಲಿ ಇದೆ. ಇದರ ಬಗ್ಗೆ ಇನ್ನು ಹೆಚ್ಚು ವ್ಯಾಖ್ಯಾನ ಮಾಡುವುದಿಲ್ಲ. ಈಗ ಒಂದು ಪಾಲಿಸಿ ಇದೆ. ಪ್ರೊಹಿಬಿಷನ್‌ನನ್ನು ತೆಗೆದಿರುವುದು ನಿಜ. ಪಾನ ಕುಡಿಯುವುದು ಹರಾಜು ಮಾಡತಕ್ಕದ್ದು ಎಲ್ಲಾ ಇದೆ.

Sri H. SIDDAVEERAPPA.—I agree with my hon. friend that there are instances that have been brought to the notice of the Government where all the conditions that have been laid down are more honoured in breach than in observance. But, so far as admissions are concerned, inspite of our categorically telling them now and on they have told us that already advance admissions have been made, that too contrary to the original conditions that were imposed. We have been

(SRI H. SIDDAVEERAPPA)

waiting for their reaction Even now I plead and wish they will realise that it is in the interest of themselves as well as of the State that they follow the rules that have been set by the Government. If they fail, the last weapon in the armoury is with the Government. We know how to act as Government.

Sri M. S. KRISHNAN (Malleswaram).—From what you have said it looks as though these instructions have been issued strictly but there has been a continuous breach of whatever instructions that have been given by the Government. Under the circumstances what is the guarantee that these instructions which have been given now are going to be implemented by them ?

1-00 P.M.

Sri H. SIDDAVEERAPPA.—How can I give any guarantee ? This Government means what it says and we are not going to tolerate any breach of the directive given. As I have already stated Government is not so helpless.

ಒಬ್ಬ ಮಾನ್ಯ ಸದಸ್ಯರು:—ಹಿಂದೆ ಉಪವಾಸಮಾಡಿ ಮುಷ್ಕರ ಮಾಡಿದರು. ಅದಕ್ಕೆ ಸಂಬಂಧಪಟ್ಟಂತೆ ಈ ಸಭೆಯಲ್ಲಿ ಚರ್ಚೆಯಾಯಿತು. 1970 ರಲ್ಲಿ ಹೈದರಾಬಾದು ಕರ್ನಾಟಕ ಎಜುಕೇಷನ್ ಸೊಸೈಟಿಗೆ ಸಂಬಂಧಪಟ್ಟಂತೆ ಒಂದು ಎನ್‌ಕ್ವೈರಿ ಕಮಿಷನ್ ಮಾಡಿದ್ದರು. ಅದರ ಸಂಬಂಧದಲ್ಲಿ ಏನಾಗಿದೆ? ಎನ್‌ಕ್ವೈರಿ ಆಗಿದೆಯೋ ಎಂಬುದನ್ನು ತಿಳಿಸಬೇಕು.

ಅಧ್ಯಕ್ಷರು.—ಮಂತ್ರಿಗಳು ಇಂದು ಮೆಡಿಕಲ್ ಡಿಮ್ಯಾಂಡ್ ಮೇಲೆ ಚರ್ಚೆಯಾದ ನಂತರ ಉತ್ತರ ಕೊಡುವಾಗ ಅದನ್ನು ತಿಳಿಸಬಹುದು.

Statement by the Minister of State for Animal Husbandry

re : Worms in Bangalore Dairy Milk.

ಶ್ರೀ ಎನ್. ಚಿಕ್ಕೇಗೌಡ (ಪಶು ಸಂಗೋಪನಾ ಶಾಖೆಯ ಸ್ಥಿರಾಜ್ಯ ಮಂತ್ರಿಗಳು).—ಮಾನ್ಯ ಸದಸ್ಯ ಶ್ರೀ ಎಂ. ಎಸ್. ಕೃಷ್ಣನ್ ಅವರು ದಿನಾಂಕ 8—7—72 ರ ಶನಿವಾರ ಬೆಳಿಗ್ಗೆ ಬೆಂಗಳೂರು ಡ್ಯೆರಿ ಹಾಲಿನಲ್ಲಿ ಹುಳು ಇರುವುದನ್ನು ಈ ಸಭೆಯ ಮೂಲಕ ಸರ್ಕಾರದ ಗಮನಕ್ಕೆ ತಂದಿರುವ ಬಗ್ಗೆ ನಾನು ಈ ಹೇಳಿಕೆಯನ್ನು ಕೊಡಬಯಸುತ್ತೇನೆ.

ಮೊಟ್ಟಮೊದಲು ದಿನಾಂಕ 3—7—72ರ ನನ್ನ ಹೇಳಿಕೆಯಲ್ಲಿ ಪ್ರಸ್ತಾಪವಾಗಿರುವ ಮೂವರು ತಪ್ಪಿತಸ್ಥ ಕಾರ್ಮಿಕರು ಎಂಬುದರಲ್ಲಿ ಅಪಾರ್ಥವುಂಟಾಗಿರುವುದನ್ನು ಸ್ಪಷ್ಟೀಕರಿಸಲು ಇಚ್ಛಿಸುತ್ತೇನೆ. ಈ ಹಿಂದೆ ಸಸ್ಪೆಂಡ್ ಮಾಡಿರುವುದಾಗಿ ತಿಳಿಸಿರುವ ಕಾರ್ಮಿಕರು ಬೆಂಗಳೂರು ಡ್ಯೆರಿಯಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಲ್ಲ. ನಾನು ಈಗಾಗಲೇ ಈ ಸಭೆಯಲ್ಲಿ ಹೇಳಿರುವ ಹಾಗೆ ಅವರು ಸಂಬಂಧಪಟ್ಟ ಕಂಟ್ರಾಕ್ಟುದಾರರ ಕೂಲಿಕಾರರು.

ಮಾನ್ಯ ಸದಸ್ಯ ಶ್ರೀ ಎಂ. ಎಸ್. ಕೃಷ್ಣನ್ ಅವರು ಈ ಸಭೆಯಲ್ಲಿ ಡ್ಯೆರಿ ಹಾಲಿನ ಪ್ರಸ್ತಾಪನೆ ನಂತರ ನಾನು ದಿನಾಂಕ 8—7—72ರ ಶನಿವಾರ ಬೆಂಗಳೂರು ಡ್ಯೆರಿಗೆ ಸುಮಾರು 12.30 ಗಂಟೆ ಸಮಯಕ್ಕೆ ಅಪರೀಕ್ಷಿತ ಭೇಟಿ ಕೊಟ್ಟು ಎಲ್ಲಾ ವಿಭಾಗಗಳನ್ನು ಖುದ್ದಾಗಿ ನೋಡಿ ಅಧಿಕಾರಿಗಳಿಂದ ಸಂಬಂಧಿಸಿದ ವಿಷಯಗಳ ಬಗ್ಗೆ ಮಾಹಿತಿ ಪಡೆದು ಬಂದಿರುತ್ತೇನೆ. ಹಾಲಿನ ಸೀಸೆಗಳನ್ನು ಶುಚೀಕರಿಸುವ ಯಂತ್ರ ಇತ್ತೀಚೆಗೆ ಎಂದೂ ಕೆಟ್ಟಿರಲಿಲ್ಲ. ದಿನಾಂಕ 7—7—72ರ ಪ್ರಜಾವಾಣಿ

ಪತ್ರಿಕೆಯಲ್ಲಿ ವಾಚಕರೊಬ್ಬರು ಈ ಯಂತ್ರ 28—6—72 ರಂದು ಕೆಟ್ಟಿತ್ತು ಮತ್ತು ಕೈಯಲ್ಲಿ ಸಾವಿರಾರು ಸೀಸೆಗಳನ್ನು ಶುಚಿ ಮಾಡಿಸಿದರು ಎಂದು ದೂರು ಪತ್ರ ಪ್ರಕಟಿತವಾಗಿತ್ತು. ಈ ವಾಚಕ ಮಹನೀಯರು ನಿಜವಾಗಿಯೂ ಬೆಂಗಳೂರು ಜನತಾ ಸೇವೆ ಮಾಡಬೇಕೆಂದಿದ್ದಲ್ಲಿ ಹಾಗೂ ಕಾರ್ಮಿಕರ ಹಿತಾಶಕ್ತಿ ಕಾಪಾಡಬಯಸಿದ್ದಲ್ಲಿ 28—6—72 ರಂದೇ ಸಂಬಂಧಪಟ್ಟ ಡ್ಮೆರಿ ಅಧಿಕಾರಿಗಳಿಗಾಗಲೀ ಅಥವಾ ಸರ್ಕಾರದ ಗಮನಕ್ಕಾಗಲೀ ಈ ವಿಷಯವನ್ನು ತರಬೇಕಿತ್ತು. ಕೇವಲ ಪತ್ರಿಕೆ ಮುಖೇನ ಅಪರಾಧವನ್ನು ನಿರೂಪಿಸಲು ಪ್ರಯತ್ನಪಟ್ಟಿರುವ ಉದ್ದೇಶ ಈ ಮಹಾಸಭೆಯ ಗೌರವ ಸದಸ್ಯರು ಸದರ್ಥ ಮಾಡಿಕೊಳ್ಳುವರೆಂಬ ನಂಬಿಕೆ ನನಗಿದೆ. ಮತ್ತು ಅದರಲ್ಲಿ ಮಾಡಿರುವ ಆರೋಪಣೆಗಳು ಸತ್ಯಕ್ಕೆ ದೂರವಾದುವುಗಳು ಹಾಗೂ ಒಂದು ವರ್ಗದ ಹಿತಾಸಕ್ತಿಯಿಂದ ಮಾಡಿರುವುದು ಸ್ಪಷ್ಟವಾಗಿದೆ. ಮತ್ತು ಈ ದಿಶೆಯಲ್ಲಿ ಬೆಂಗಳೂರು ಡ್ಮೆರಿ ಹಾಲಿನ ಬಗ್ಗೆ ಜನರ ನಂಬಿಕೆ ಮತ್ತು ವಿಶ್ವಾಸಗಳನ್ನು ಬುಡಮೇಲು ಮಾಡಲು ಪಟ್ಟ ಭದ್ರ ವರ್ಗದ ಕೈವಾಡವಿರುವಂತಿದೆ. ಸರ್ಕಾರ ತನ್ನ ಗಮನವನ್ನು ಈ ಬಗ್ಗೆ ಹರಿಸಿ ಮುಂದಿನ ಸೂಕ್ತ ಕ್ರಮ ತೆಗೆದುಕೊಳ್ಳುವುದೆಂದು ತಿಳಿಸಬಯಸುತ್ತೇನೆ.

8—7—72 ರಂದು ಮಾನ್ಯ ಶ್ರೀ ಎಂ. ಎಸ್. ಕೃಷ್ಣನ್‌ರವರು ಸಭಾಧ್ಯಕ್ಷರಿಗೆ ತಲುಪಿಸಿರುವ ಸೀಸೆಯನ್ನು ಮತ್ತು ಹಾಲನ್ನು ಕೂಲಂಕುಷ ತರಿಶೀಲನೆಗೆ ಗುರಿಪಡಿಸಿದುದರಿಂದ ಅದರಲ್ಲಿ ಜಿಡ್ಡು (ಫ್ಯಾಟ್) 3.5% ಅಂಶ ಪಿಷ್ಟಾದಿಗಳು (ಎಸ್. ಎನ್. ಎಫ್) 7.86% ಅಂಶ ಇದು ಬಾಟಲಿಗೆ ಕೆಲ ಕ್ರಿಮಿಗಳು (ಮೆಗೋಟ್ಸ್) ಅಂಟಿಕೊಂಡಿರುವುದು ಮತ್ತು ಕೆಲವು ಹಾಲಿನಲ್ಲಿರುವುದು ವ್ಯಕ್ತವಾಗಿದೆ. ಬೆಂಗಳೂರು ಡ್ಮೆರಿಯ ಹಾಲಿನಲ್ಲಿರುವುದು ಜಿಡ್ಡು (ಫ್ಯಾಟ್) 3.8% ಅಂಶ ಪಿಷ್ಟಾದಿಗಳು (ಎಸ್. ಎನ್. ಎಫ್) 8.65% ಅಂಶ ಮತ್ತು ಹಾಲು ಪಾಶ್ಚೀಕರಿಸಿದುದು ಆಗಿರಲಿಲ್ಲ.

ಪ್ರತಿನಿತ್ಯವೂ ಹಾಲನ್ನು ಸೀಸೆಗೆ ಸ್ವಯಂಚಾಲಿತ ಸೀಸೆಯನ್ನು ತೊಳೆಯುವ ಮತ್ತು ತುಂಬುವ ಯಂತ್ರದಿಂದ ತುಂಬುವ ತಾರೀಖನ್ನು ಸ್ಪಷ್ಟವಾಗಿ ಸೀಸೆಯ ಮೇಲೆ ಮುದ್ರಿಸಲಾಗುವುದು. ಅಲ್ಲದೆ ಶ್ರೀ ಎಂ. ಎಸ್. ಕೃಷ್ಣನ್ ಅವರಿಂದ ಪಡೆದಿರುವ ಈ ತರಹದ ಮುದ್ರಿತ ಭಾಗ ಒಂದು ಪಕ್ಕದಲ್ಲಿ ಒಡೆದು ಹೋಗಿದೆ. ಈ ಸೀಸೆಗೆ ಮುಚ್ಚಿಗುವ ಅಲ್ಯೂಮಿನಿಯಂನ ಮುಚ್ಚಳವನ್ನು ಕೈಯಿಂದ ಮುಚ್ಚಬಹುದಾದ ಉಪಕರಣದಿಂದ ಮತ್ತೇ ಸೀಸೆಯ ಮೇಲೆ ಪುನಃ ಅದುಮಿ ಮುಚ್ಚಲಾಗಿದೆ, ಎಂಬುದು ಸ್ಪಷ್ಟವಾಗಿದೆ. ಹಾಲಿನ ಸೀಸೆಯಲ್ಲಿದ್ದ ಮಿಶ್ರಿತ ಹಾಲಿನಿಂದಲೂ ಮತ್ತು ಮುಚ್ಚಳವನ್ನು ಪುನಃ ಉಪಯೋಗಿಸಿರುವುದರಿಂದಲೂ ಮಿಶ್ರಿತ ಹಾಲು ಸೀಸೆಯಲ್ಲಿ ಸುರಿಯಲ್ಪಟ್ಟಿದೆ ಎಂಬುದು ವ್ಯಕ್ತವಾಗುತ್ತದೆ. ಕ್ರಿಮಿಗಳು ಹಾಲಿನಲ್ಲಿ ತೇಲುತ್ತಿದ್ದುದರಿಂದ ವ್ಯಕ್ತವಾಗುವುದೇನೆಂದರೆ ಕ್ರಿಮಿಗಳು ಮೊದಲೇ ಸೀಸೆಯಲ್ಲಿದ್ದು ಮಿಶ್ರಿತ ಹಾಲು ಸೀಸೆಯೊಳಗೆ ಸುರಿದ ತಕ್ಷಣ ಕ್ರಿಮಿಗಳ ಗುಂಪು ಬೇರ್ಪಟ್ಟು ಸೀಸೆಯಲ್ಲಿದ್ದ ಹಾಲಿನಲ್ಲಿ ವ್ಯಾಪಿಸಲ್ಪಟ್ಟವು. ಸೀಸೆಯಲ್ಲಿದ್ದ ಹಾಲು ಬಹು ಬೇಗ ಮೊಸರಾದುದರಿಂದ ವ್ಯಕ್ತವಾಗುವುದೇನೆಂದರೆ ಮಿಶ್ರಿತ ಹಾಲು ಸೀಸೆಯಲ್ಲಿ ಸುರಿಯುವುದಕ್ಕೆ ಮೊದಲು ಆ ಸೀಸೆಯಲ್ಲಿ ತಂಗಳ ಹಾಲು ಇತ್ತು ಎಂದು ಸ್ಪಷ್ಟವಾಗುತ್ತದೆ.

ಈ ಮೇಲಿನ ಅಂಶಗಳಿಂದ ನಿರ್ಣಯಿಸುವುದೇನೆಂದರೆ ಒಂದು ತೊಳೆಯದೆ ಇರುವ ಖಾಲಿ ಸೀಸೆಯು ಮಿಶ್ರಣ ಮಾಡಿದ ಹಾಲನ್ನು ತುಂಬಿ ಅದರ ಮೇಲೆ ಮುಚ್ಚಳವನ್ನು ಅದುಮಿ, ಬೆಂಗಳೂರು ಡ್ಮೆರಿಯವರಿಂದ ಪಾಶ್ಚೀಕರಿಸಿದ ಹಾಲು ಎಂಬ ಭಾವನೆ ಬರುವಂತೆ ಮಾಡಿ ಮಾರಾಟ ಮಾಡಲಾಗಿದೆ.

ಬೆಂಗಳೂರು ಡ್ಮೆರಿ ಅಲ್ಯೂಮಿನಿಯಂ ತೆಳುಮುಚ್ಚಳವನ್ನು ಸುಲಭವಾಗಿ ತೆಗೆದು ಅನಂತರ ಅದನ್ನು ಪುನಃ ಮುಚ್ಚಲು ಸಾಧ್ಯ, ಇದು ಹೇಗೆ ಎಂಬುದನ್ನು ಈ ಸಭೆಗೆ ತೋರಿಸುತ್ತೇನೆ. ಆದ್ದರಿಂದ ಸಾರ್ವಜನಿಕ ಹಾಲು ಗ್ರಾಹಕರು ಬೆಂಗಳೂರು ಡ್ಮೆರಿಯ ಹಾಲಿನ ಸೀಸೆಯ ಮೇಲಿನ ಮುಚ್ಚಳವನ್ನು ಹಾಲು ಕೊಂಡನಂತರ ಬಿಸಾಡದೆ ಹರಿದು ಹಾಕುವುದು ಒಳ್ಳೆಯದು.

ಈ ಪರಿಶೀಲನಾನಂತರ ಕಲಬೆರಕೆ ಹಾಲನ್ನು ಬೆಂಗಳೂರು ಡ್ಮೆರಿ ಹಾಲೆಂದು ಮಾರಿರುವ ಮಲ್ಲೇಶ್ವರಂ ಮಾರುಕಟ್ಟೆಯ ಏಜೆಂಟ್ ಶ್ರೀ ಬಲರಾಮನಾಯ್ಡು ಅವರ ಏಜನ್ಸಿಯನ್ನು 8-7-72 ರಿಂದ ಸಸ್ಪೆಂಡ್ ಮಾಡಲಾಗಿದೆ. ಪ್ರಜೆಗಳ ಹಿತದೃಷ್ಟಿಯಿಂದ ಆ ಜಾಗದಲ್ಲಿ ಬೆಂಗಳೂರು ಡ್ಮೆರಿ ಮಾರಾಟಗಾರನೊಬ್ಬನನ್ನು ತತ್‌ಕ್ಷಣದಿಂದ ನೇಮಿಸಲಾಗಿದೆ. ಬೆಂಗಳೂರು ಡ್ಮೆರಿ ಡೈರಕ್ಟರು ಈಗಾಗಲೇ ಮಾನ್ಯ ಸದಸ್ಯ ಶ್ರೀ ಎಂ. ಎಸ್. ಕೃಷ್ಣನ್ ಇವರಿಗೆ ಸೂಕ್ತ ವಿವರಣೆ ನೀಡಿ ಪತ್ರ ಬರೆದಿರುತ್ತಾರೆ. ಪರಿಶುದ್ಧ ಹಾಗೂ ಆರೋಗ್ಯಕರ ಪಾಶ್ಚೀಕರಿಸಿದ ಹಾಲನ್ನು ಹೆಚ್ಚಿನ ಪ್ರಮಾಣದಲ್ಲಿ ಮಾರಾಟ ಮಾಡಲು, ಮುಂದೆ ಈ ತರಹದ ಅಪಾದನೆಗಳನ್ನು ತಡೆಗಟ್ಟಲು ಬೇಕಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಇತ್ತೀಚಿನ ಆರೋಪಣೆಗಳನಂತರ ಬೆಂಗಳೂರು ಡ್ಮೆರಿ ಹಾಲು ಮಾರಾಟ 60,000 ಲೀಟರುಗಳಿಂದ 63,000 ಲೀಟರುಗಳಿಗೆ ಏರಿದೆ.

(ಶ್ರೀ ಎನ್. ಚಿಕ್ಕೇಗೌಡ)

ಈ ಸಂದರ್ಭದಲ್ಲಿ ಒಂದು ಮುಖ್ಯ ವಿಷಯವನ್ನು ಮಾನ್ಯ ಸದಸ್ಯರ ಹಾಗೂ ಹಾಲು ಉಪ
ಯೋಗಿಸುವವರ ಗಮನಕ್ಕೆ ತರಬಯಸುತ್ತೇನೆ. ಏನೆಂದರೆ ಈ ರೀತಿಯ ಕೃತ್ಯ ಕೇವಲ ಒಂದೇ
ಬಾಟಲಿನಲ್ಲಿ ಕಂಡುಬರುತ್ತಿರುವುದು ಎಲ್ಲರಿಗೂ ಆಶ್ಚರ್ಯ ಮತ್ತು ಸಂಶಯ ತರುವುದಾಗಿದೆ.
ನಿಜಕ್ಕೂ ಬೆಂಗಳೂರು ಡೈರಿ ಕಾರ್ಮಿಕರೇ ಆಗಲೀ, ಅಧಿಕಾರ ವರ್ಗದವರೇ ಆಗಲೀ ಅಸಡ್ಡೆ
ಮತ್ತು ದೋಷಯುಕ್ತ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಪಕ್ಷದಲ್ಲಿ ಒಂದೇ ಒಂದು ಬಾಟಲಿನಲ್ಲಿ
ಕೆಟ್ಟ ಹಾಲಿರದೆ ಸುಮಾರು ಸೀಸೆಗಳಲ್ಲಿ ಅವು ಕಂಡುಬರಲೇಬೇಕಾಗಿತ್ತು. ಇದನ್ನು ಸರ್ವರೂ
ಯೋಚಿಸಬೇಕಾದ ಅಂಶ. ಅಂದ ಮಾತ್ರಕ್ಕೆ ಸರ್ಕಾರ ಎಲ್ಲ ಸೂಕ್ತ ಕ್ರಮ ತೆಗೆದುಕೊಳ್ಳಬೇಕು
ಅದನ್ನು ಕೈಬಿಡುವುದೆಂದಲ್ಲ.

ಕೊನೆಯದಾಗಿ, ಮಾನ್ಯ ಸದಸ್ಯರು ಈ ಲೋಪದೋಷಗಳ ಬಗ್ಗೆ ಸರ್ಕಾರಕ್ಕೆ ನೇರವಾಗಿ
ಅಥವಾ ಸಂಬಂಧಪಟ್ಟ ಡೈರಿ ಅಧಿಕಾರಿಗಳಿಗಾಗಲೀ ಕಾಲಕಾಲಕ್ಕೆ ಮಾಹಿತಿ ಕೊಟ್ಟಲ್ಲಿ ಈ ಕಲಬೆರಿಕೆ
ಹಾಗೂ ಸಮಾಜ ಘಾತುಕ ಕೃತ್ಯವನ್ನು ಹತ್ತಿಕ್ಕುವುದಕ್ಕಾಗಿ ಸಹಾಯಮಾಡಿದಂತಾಗುತ್ತದೆ.
ಹಾಲು ಬಹಳ ಮುಖ್ಯವಾಗಿ ಎಲ್ಲರಿಗೂ ಬೇಕಾದದ್ದು. ಅದು ಅಮೃತ. ಯಾರಾದರೂ ತಪ್ಪು
ಮಾಡಿದರೆ ಅದನ್ನು ಸರಕಾರದ ಗಮನಕ್ಕೆ ತರಲು ಮಾನ್ಯ ಸದಸ್ಯರಿಗೆ ಹಕ್ಕುಂಟು. ಅದರಂತೆ
ಹಾಲಿನಲ್ಲಿ ದೋಷವಿದೆಯೆಂದು ಕಂಡುಬಂದಾಗ ತಂದು ತೋರಿಸಿದ್ದು ತಪ್ಪಲ್ಲ. ಅದನ್ನು
ಪರಿಶೀಲಿಸಲು ನಾನು ಡೈರಿಗೆ ಅನಿರೀಕ್ಷಿತವಾಗಿ ಭೇಟಿ ಕೊಟ್ಟೆ. ಅಲ್ಲಿನ ರಿಕಾರ್ಡ್ ನೋಡಿದೆ, ಅಲ್ಲಿ
ಬಾಟಲುಗಳನ್ನು ತೊಳೆಯುವ ಎರಡು ಮೆಷೀನುಗಳಿವೆ, ಅವು ಕೆಟ್ಟಿಲ್ಲ ಎಂಬುದನ್ನು ವಿಚಾರಿಸಿ
ನಾನೂ ನೋಡಿದೆ. ಆದುದರಿಂದ ಇರುವ ವಿಷಯವನ್ನು ಸಭೆಗೆ ತಿಳಿಸಿದ್ದೇನೆ.

(ಮಾನ್ಯ ಸಚಿವರು ಇಷ್ಟು ವಿವರ ಕೊಟ್ಟಮೇಲೆ ಹಾಲಿನ ಖಾಲಿ ಬಾಟಲು ಮತ್ತು ಅದಕ್ಕೆ
ಹಾಕುವ ಮುಚ್ಚಳ ತಂದು ಹೇಗೆ ಮುಚ್ಚಳವನ್ನು ಹಾಕಬಹುದು ಎಂಬುದನ್ನು ಪ್ರದರ್ಶಿಸಿದರು).

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಮಂತ್ರಿಗಳು ಹೇಳಿರುವುದು ಜೇಮ್ಸ್
ಬಾಂಡ್ 007 ಎಂದು ಹೇಳಿರುವ ಹಾಗಿದೆ. ಶ್ರೀಮಾನ್ ಕೃಷ್ಣರವರೂ ಸಹ ಫೋನ್ ಮಾಡಿದ್ದಾರೆ.
ಅವರೂ ತನಿಖೆಮಾಡಿದ್ದಾರೆ, ಸಂತೋಷ. ಇದಕ್ಕೆ ಡೈರಿ ಕಾರ್ಮಿಕರು ಜವಾಬ್ದಾರರಲ್ಲ ಎಂದು
ಹೇಳಿದ್ದಾರೆ, ಸಂತೋಷ. ಡೈರಿಯಿಂದ ಹಾಲು ಹೊರಕ್ಕೆ ಹೋದಮೇಲೆ ಮಾರಾಟವಾಗಬೇಕು;
ಹೊರಗೆ ಹೋದಮೇಲೆ ಯಾರು ಬೇಕಾದರೂ ತಪ್ಪು ಮಾಡಿರಬಹುದು." ಈಗ ಏನಾಗಿದೆಯೆಂದರೆ
ನಾನು ದೂರು ಕೊಟ್ಟಮೇಲೆ ಹಾಲು ಮಾರುತ್ತಿದ್ದ ಏಜೆಂಟನ್ನು ಸಸ್ಪೆಂಡ್ ಮಾಡಿದ್ದಾರೆ. ಇದು
ಹೇಗಾಯಿತು ಎಂದರೆ ಪೋಲೀಸ್ ಸ್ಟೇಷನ್‌ಗೆ ಹೋಗಿ ಕಂಪ್ಲೈಂಟ್ ಕೊಟ್ಟರೆ ಅವನನ್ನು ಲಾಕಪ್‌ಗೆ
ಹಾಕಿ ಹಿಡಿದುಕೊಂಡು ಹೊಡೆದಂಥ ರೀತಿಯಲ್ಲಿ ಆಗಿದೆ. ನನಗಂತೂ ಇದು ಅರ್ಥವಾಗದೇ ಇರುವ
ವಿಷಯವಾಗಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಸರ್ಕಾರದ ಧೋರಣೆಯೂ ಹಾಗೇ ಇದೆ.

ಒಬ್ಬ ಸದಸ್ಯರು.—ಸರ್ಕಾರದ ಧೋರಣೆ ಹಾಗೇನೂ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಾನೂ ಸಹ ಹಾಲಿನಲ್ಲಿ ಕಲಬೆರಕೆ ಆಗಬೇಕು ಎಂದು ಹೇಳುವ
ಮನುಷ್ಯನಲ್ಲ. ಬೆಂಗಳೂರು ಡೈರಿ ಚೆನ್ನಾಗಿ ಬೆಳೆಯಬೇಕು, ಇದು ಬೆಂಗಳೂರು ಸುತ್ತಮುತ್ತ
ಚೆನ್ನಾಗಿ ಬೆಳೆಯಬೇಕು ಆದುದರಿಂದ ಅದರ ಬಗ್ಗೆ ಮಾನ್ಯ ಮಂತ್ರಿಗಳು ಕಣ್ಣು ಇಡಬೇಕು ಎಂದು
ಹೇಳುತ್ತೇನೆ. ಆದರೆ ಈವೊತ್ತಿನ ದಿವಸ ಏನಾಗಿದೆ ಎಂದರೆ ಮಲ್ಲೇಶ್ವರದ ಏಜೆಂಟ್ ಮೇಲೆ ಕಣ್ಣು
ಇಟ್ಟಿದ್ದೀರಿ. ಅದು ಸರಿಯಲ್ಲ. ವ್ಯಾನ್‌ನಲ್ಲಿ ಬಂದ ಹಾಲನ್ನು ಹೊರಗಡೆ ಇಟ್ಟು ಮಾರಾಟ
ಮಾಡುತ್ತಿದ್ದಾನೆ. ನೀವು ಹೇಳುವುದು ನನಗೆ ಹೇಳುವುದಕ್ಕೆ ಗೊತ್ತಿಲ್ಲವೇ. ಅವನಿಗೆ 60 ಬಾಟಲ್
ಬಂತು, ಬಂದುದನ್ನು ಕೊಟ್ಟಿದ್ದಾನೆ. ಇದರ ಬಗ್ಗೆ ಪುನರ್‌ಪರಿಶೀಲನೆ ಮಾಡಿ ಮತ್ತೆ ಅವನಿಗೆ
ಅವನ ಏಜೆಂಟ್ ಕೆಲಸವನ್ನು ಕೊಡಿಸಿಕೊಡಬೇಕು. ಮೊನ್ನೆ ದಿವಸ ಇದು ಲಾ ಅಂಡ್ ಆರ್ಡರ್
ಡಿಸ್ಟರ್ಬ್ ಆಗುವ ಸಿಚುಯೇಷನ್ ಇತ್ತು. ಅಲ್ಲಿಗೆ ಪೋಲೀಸಿನವರು ಬಂದರು; ನೂರಾರು ಜನರು
ಗುಂಪು ಕಟ್ಟಿದರು. ವ್ಯಾನ್ ಬಂತು. ಅಲ್ಲಿಯ ಜನ ಹೇಳಿದರು ಅವನು ಒಳ್ಳೆಯ ಹಾಲನ್ನೇ
ಕೊಡುತ್ತಾನೆ ಅನ್ಯಾಯ ಮಾಡುವುದಿಲ್ಲ ಎಂದು. ತಾವು ಹೇಳುವುದು ಅವನು ಕಲಬೆರಕೆ
ಮಾಡಿದ್ದಾನೆ, ಆದುದರಿಂದ ಅವನನ್ನು ಸಸ್ಪೆನ್‌ಷನ್ ಮಾಡಿದ್ದೇವೆ ಎಂದು. ಆದುದರಿಂದ ತಾವು
ಮುಂದೆ ಈ ರೀತಿ ಆಗದೇ ಇದ್ದ ಹಾಗೆ ನೋಡಿಕೊಂಡು ಅವನ ಸಸ್ಪೆನ್‌ಷನ್ ವಾಪಸ್ಸು ತೆಗೆದು
ಕೊಳ್ಳಿ.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಸದಸ್ಯರು ಹೇಳಿದ್ದು ಬಲರಾಮು ನಾಯಿಡು ಅನ್ನುವವರೇ ದೂರು ಕೊಟ್ಟರು ಎಂದು. ದೂರು ಕೊಟ್ಟವರು ಅವರಲ್ಲ. ದೂರು ಕೊಟ್ಟವರು ಒಬ್ಬ ಕಸ್ಟಮರ್. ಮಾನ್ಯ ಎಂ. ಎಸ್. ಕೃಷ್ಣನ್‌ರವರು ಏನು ದೂರು ಕೊಟ್ಟರೋ ಮತ್ತು ಆ ಕಸ್ಟಮರ್ ಏನು ದೂರು ಕೊಟ್ಟರೋ ಅದರ ಮೇಲೆ ಅನುಮಾನ ಬಂದು ಅವರನ್ನು ಸಸ್ಪೆಂಡ್ ಮಾಡಿದ್ದೇವೆ. ಇದಲ್ಲದೆ 6-4-1972 ರಲ್ಲಿ ಒಬ್ಬರು ಎಂ. ಪಿ. ಶ್ರೀನಿವಾಸ ಅಯ್ಯಂಗಾರ್ ಅನ್ನುವವರು ಬೆಂಗಳೂರು ಡೈರಿಗೆ ಒಂದು ಪತ್ರ ಬರೆದು ಅವರು ಸರಿಯಾದ ಹಾಲು ಕೊಡುತ್ತಾ ಇಲ್ಲ ಕಲಬೆರಕೆಮಾಡಿ ಕೊಡುತ್ತಾರೆ. ಡೈರಿಯವರು ಇದನ್ನು ಕ್ರಮಪಡಿಸಬೇಕು ಎಂದು ಬರೆದರು. ಅನಂತರ ಬೆಂಗಳೂರು ಡೈರಿಯವರು ಹೋಗಿ ಶ್ರೀನಿವಾಸ ಅಯ್ಯಂಗಾರ್‌ರನ್ನೂ ಕರೆಸಿ ವಿಚಾರಿಸಿದ ಮೇಲೆ ಆ ಏಜೆಂಟರು ನಾನು ತಪ್ಪು ಮಾಡಿದ್ದೇನೆ ಕ್ಷಮಿಸಬೇಕು ಎಂದು ಕೇಳಿದ್ದಾನೆ. ಇದೇ ತರಹ ಆ ಏಜೆಂಟರ ಮೇಲೆ ಅನೇಕ ದೂರುಗಳು ಬಂದಿವೆ. ಇಷ್ಟಾದರೂ ಕೂಡ ಏನೋ ಸರಿಪಡಿಸಿಕೊಂಡು ಹೋಗುತ್ತಾನೆ ಎಂದು ಅವಕಾಶ ಕೊಟ್ಟರೂ ಕೂಡ ಈ ಸಾರಿಯೂ ಸರಿಯಾಗಿ ನಡೆದುಕೊಳ್ಳದೇ ಇದ್ದುದಕ್ಕೆ ಅವನನ್ನು ಸಸ್ಪೆಂಡ್ ಮಾಡಿರುವುದು. ಒಂದುವೇಳೆ ಈರೀತಿ ಹುಳಗಳನ್ನು ಆ ಏಜೆಂಟ್ ನೋಡಿದ್ದ ಕೂಡಲೇ ಅವರು ತಕ್ಷಣ ತೋರಿಸಬೇಕಾಗಿತ್ತು. ಆ ವ್ಯಾನಿನಲ್ಲೇ ವಾಪಸ್ ಕಳುಹಿಸಿ ತಕ್ಕ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನಿಸಿದ್ದರೆ ಚೆನ್ನಾಗಿತ್ತು. ಏಜೆಂಟ್ ಆದವರು ಅದಕ್ಕೆ ಗಮನ ಕೊಡದೆ ಹಾಲಿನ ಮೇಲೆ ಅಪಾದನೆ ಮಾಡಿದರೆ ಅದು ಸರಿಯಾದುದಲ್ಲ. ಅವರೇ ಮಾರುವ ಕಾಲದಲ್ಲಿ ತಕ್ಷಣ ಗಮನ ಕೊಡಬಹುದಾಗಿತ್ತು. ಅವರು ಹೊಸ ಕಸ್ಟಮರ್ ಅಲ್ಲ. ಆದುದರಿಂದ ಮಾನ್ಯ ಸದಸ್ಯರು ಏನು ಹೇಳಿದರೋ ಅವರನ್ನು ಸಸ್ಪೆಂಡ್ ಮಾಡಿ ಅಕ್ಯೂಸ್ ಮಾಡಿದ್ದೀರಿ ಎಂದು ಹೇಳುವುದು ಸತ್ಯಕ್ಕೆ ದೂರವಾದುದು.

ಶ್ರೀ ಎಂ. ಎಸ್. ಕೃಷ್ಣನ್.—ನನ್ನ ಪ್ರಶ್ನೆ ಏನೆಂದರೆ ಈ ಕೆಲಸವನ್ನು ಡೈರಿಯಿಂದ ಬಾಟಲ್ ತೆಗೆದುಕೊಂಡು ಬಂದಂಥ ಜನಗಳೂ ಮಾಡಬಹುದು ಮತ್ತು ಏಜೆಂಟರು ಸಹಾ ಮಾಡಬಹುದು. ಮಾಡುವುದಕ್ಕಾಗುವುದಿಲ್ಲ ಎಂದು ಹೇಳುವುದಿಲ್ಲ. ಇಲ್ಲಿ ಏನಾಗಿದೆ ಎಂದರೆ ಅವನಿಗೆ 60 ಬಾಟಲ್ ಆ ದಿನ ಬಂದವು, ಅದು 3 ಕ್ರೇಟ್‌ನಲ್ಲಿ ಬಂದವು. ಬೆಳಗ್ಗಿನಿಂದಲೂ ಬಂದವರಿಗೆ ಕೊಡುತ್ತಾ ಇದ್ದ. ಆ ಕ್ರೇಟ್‌ಗಳನ್ನು ಒಳಗೆ ಇಟ್ಟುಕೊಂಡಿರಲಿಲ್ಲ. ಅವನು 60 ಬಾಟಲ್‌ನ್ನೂ ಒಂದೊಂದಾಗಿ ನೋಡುವುದಕ್ಕಾಗುವುದಿಲ್ಲ. ಅವನು ಬಂದವರಿಗೆಲ್ಲಾ ಕೊಡುತ್ತಾ ಇದ್ದ ಅಲ್ಲಿ ಒಬ್ಬ ಮಾತ್ರ ಈರೀತಿ ಹೇಳಿದ. ಅಲ್ಲಿ ಬಲರಾಮುನಾಯುಡು ಇಲ್ಲ, ಹುಡುಗ ಹಾಲನ್ನು ಕೊಡುತ್ತಾ ಇದ್ದಾನೆ. ಅದರಲ್ಲಿ ಹುಳ ಬೆರೆತುಕೊಂಡಿತ್ತು. ಅದಕ್ಕೆ ದೂರು ಕೊಡುತ್ತೇನೆ ಎಂದು ನಿಮಗೆ ದೂರು ಕೊಟ್ಟರು. ಆಗ ಆ ಏಜೆನ್ಸಿಯವನನ್ನೂ ಕರೆಸಿ ದೂರುಕೊಟ್ಟವರನ್ನೂ ಕರೆಸಿ ತನಿಖೆ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ ಎಂದು ಸಮಾಧಾನ ಮಾಡಿ ಹೇಳಿ ಕಳುಹಿಸಿದೆ. ಆದುದರಿಂದ ಇದಕ್ಕೆ ಏಜೆಂಟರು ಜವಾಬ್ದಾರಿ ಅಲ್ಲ. ಏತಕ್ಕೋಸ್ಕರ ಅವನ ಮೇಲೆ ತಪ್ಪು ಹೊರಿಸುತ್ತೀರಾ? ಇದು ಟ್ರಾನ್ಸಿಟ್ ಮಾಡುವಾಗ ಬೇಕಾದರೂ ಆಗಬಹುದು. ಆದುದರಿಂದ ತಾವು ಇದರ ಬಗ್ಗೆ ಆಲೋಚನೆ ಮಾಡಿ ಸರಿಯಾದಂಥ ತನಿಖೆ ಮಾಡಬೇಕು ಎಂದು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಸದಸ್ಯರು ಹೇಳಿದಂತೆ ಏಜೆಂಟರು ಬೇಕಾದರೂ ಮಾಡಬಹುದು. ಆದರೆ ಇದರಲ್ಲಿ ಸಂಶಯ ಬರುವುದಕ್ಕೆ ಕಾರಣ ಏನು ಎಂದರೆ 6-4-1972 ರಲ್ಲಿ ಶ್ರೀ ಎಂ. ಪಿ. ಶ್ರೀನಿವಾಸ ಅಯ್ಯಂಗಾರ್‌ರವರು ಒಂದು ಕಂಪ್ಲೈಂಟ್ ಬರೆದು ಈರೀತಿ ಡಿ. ಟಿ. ಎಂ. ಮಿಲ್ಕ್ ಜೊತೆಗೆ ಹೋಲ್ ಮಿಲ್ಕ್ ಸೇರಿಸಿ ಮಾರಾಟ ಮಾಡುತ್ತಿದ್ದಾರೆ ಎಂದು ಬರೆದರು. ಆವಾಗ ಶ್ರೀಮಾನ್ ಎಂ. ಎಸ್. ಕೃಷ್ಣನ್‌ರವರು ಮಧ್ಯೆ ಬಂದು ಈರೀತಿ ಆಗದೇ ಇದ್ದಹಾಗೆ ಮುಂದೆ ನೋಡಿಕೊಳ್ಳುತ್ತೇನೆ ಆದುದರಿಂದ ಅವನ ಸಸ್ಪೆನ್‌ಷನ್ ಆರ್ಡರ್‌ನ್ನು ವಾಪಸ್ ತೆಗೆದುಕೊಳ್ಳಿ ಎಂದು ಹೇಳಿದರು.

ಶ್ರೀ ವಿ. ಎನ್. ಪಾಟೀಲ್.—ಇನ್ನು ಮುಂದಾದರೂ ಕೂಡ ಬೆಂಗಳೂರು ಡೈರಿ ಹಾಲು ಕೆಡದಂತೆ ಈ ಸಮಾಜ ಘಾತುಕರು ಏನು ಇರುತ್ತಾರೋ ಅವರ ಬಗ್ಗೆ ಮುಂಜಾಗ್ರತೆ ವಹಿಸಬೇಕು. ಈ ಹಾಲಿನ ಸಾಗಾಣಿಕೆಯಲ್ಲೇ ಆಗಲಿ, ಮ್ಯಾನೇಜ್‌ಮೆಂಟ್‌ನಲ್ಲೇ ಆಗಲಿ ಅವರ ಬಗ್ಗೆ ಎಚ್ಚರಿಕೆ ವಹಿಸಿ ಒಳ್ಳೆಯ ಹಾಲನ್ನು ಸಪ್ಲೈ ಮಾಡುವಂತೆ ಆಶ್ವಾಸನೆ ಕೊಡುತ್ತೀರಾ?

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಸದಸ್ಯರು ಆಶ್ವಾಸನೆ ಕೇಳುತ್ತಿದ್ದಾರೆ ಇದಕ್ಕೆ ಜನತೆಯ ಸಹಕಾರವು ಬೇಕು. ಇಂತಹ ಕೆಲಸಕ್ಕೆ ಮಾನ್ಯ ಸದಸ್ಯರ ಸಹಕಾರವೂ ಬೇಕು. ಅವರು ತಪ್ಪು ಕೆಲಸ ಮಾಡಿದವರ ಬಗ್ಗೆ ಪ್ರೋತ್ಸಾಹ ಕೊಡದೆ ಫೋನ್ ಮಾಡಿದರೆ ಅಂಥಾವರಿಗೆ ಬಲಿ ಹಾಕುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡುತ್ತೇವೆ. ಇದಕ್ಕೆ ಸರ್ವರ ಸಹಕಾರವೂ ಬೇಕು ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

Sri S. M. KRISHNA.—Hon. Member Sri M. S. Krishnan had dragged my name in this controversy. Let me make it clear. I have absolutely nothing to do with the Bangalore Dairy nor I have telephoned to anybody.

Sri M. S. KRISHNAN.—On enquiry, the Director himself told me that Sri S. M. Krishna had telephoned to him in this connection. The Hon. Minister has unnecessarily puts up the name as M. S. Krishnan. He as become James Bond 007 Agent.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಅಧ್ಯಕ್ಷಿಣಿಯವರೇ, ತಮ್ಮ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ. ಶ್ರೀಮಾನ್ ಎಂ. ಎಸ್. ಕೃಷ್ಣನ್‌ರವರೇ ಫೋನ್ ಮಾಡಿದರು ಎಂದು ಸಂಬಂಧಪಟ್ಟ ಅಧಿಕಾರಿಗಳು ಹೇಳಿದರು.

Revised Budget Estimates for 1972-73—Demands for Grants (Demand No. 18.—Medical, Public Health and Family Planning)

Sri H. SIDDAVEERAPPA (Minister for Health).—Madam, on the recommendation of the Governor, I beg to move :

"That a sum not exceeding Rs. 20,59,80,000, inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 18, 'Medical, Public Health and Family Planning'."

MADAM SPEAKER.—Motion moved:

"That a sum not exceeding Rs. 20,59,80,000, inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 18. 'Medical, Public Health and Family Planning'."

Sri H. D. Deve Gowda may initiate the Debate.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸಿಪುರ).—ಮಾನ್ಯ ಸಭಾಧ್ಯಕ್ಷಿಣಿಯವರೇ, ನಮ್ಮ ಮುಂದೆ ಇರತಕ್ಕ ಜನಾರೋಗ್ಯ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳ ಮೇಲೆ ಚರ್ಚೆಯನ್ನು ಆರಂಭಿಸತಕ್ಕ ಕಾಲದಲ್ಲಿ ಒಂದು ಮಾತು ಹೇಳಬೇಕಾಗಿದೆ. ಮಾನ್ಯ ಸಚಿವರು ಅಧಿಕಾರ ವಹಿಸಿಕೊಂಡ ಮೇಲೆ ಕೆಲವು ಒಳ್ಳೆಯ ಧೋರಣೆಗಳನ್ನು ಘೋಷಿಸಿದರು. ಆದರೆ ಅವರು ಇಟ್ಟಿರತಕ್ಕ ಹಣದಿಂದ ಅವರ ಧೋರಣೆಗಳನ್ನು ಈಡೇರಿಸುವುದಕ್ಕೆ ಕಷ್ಟವಾಗುತ್ತದೆ ಎಂದು ನನ್ನ ಭಾವನೆ. ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿಗೆ ಔಷಧಿಯ ಸೌಲಭ್ಯಗಳನ್ನು ಕೊಡಬೇಕೆಂಬ ಅವರ ಮಹದಾಕಾಂಕ್ಷೆ ಇರುವುದನ್ನು ಅವರ ಹಲವಾರು ಹೇಳಿಕೆಗಳಲ್ಲಿ ಕಂಡಿದ್ದೇನೆ. ಜನತೆಯ ಆರೋಗ್ಯ ಈ ದೇಶದ ಭಾಗ್ಯ ಎನ್ನುವುದನ್ನೂ, ಇದು ಒಂದು ಆಸ್ತಿ ಎನ್ನುವಂಥ ದಾಟಿಯಲ್ಲಿ ಅನೇಕಸಾರಿ ಹೇಳಿದ್ದಾರೆ. ಅದು ಒಪ್ಪತಕ್ಕ ವಿಷಯ. ನಾನು ವಿರೋಧ ಪಕ್ಷದ ನಾಯಕನಾಗಿ ವಿರೋಧಿಸಬೇಕು ಎನ್ನುವ ಪ್ರವೃತ್ತಿಯಿಂದ ಮಾತನಾಡುತ್ತಿಲ್ಲ. ಆದರೆ ಅವರು ಏನು ಘೋಷಣೆ ಮಾಡಿದರು ಅದಕ್ಕೆ ಸಾಕಷ್ಟು ಹಣವನ್ನು ಅರ್ಥ ಸಚಿವರು ಒದಗಿಸಿಲ್ಲ ಎಂದು ವಿಷಾದಪಡಬೇಕಾಗಿದೆ. ಈ ಇಲಾಖೆಗೆ ಎಷ್ಟು

ಹಣವನ್ನು ಒದಗಿಸಬೇಕಾಗಿತ್ತೋ ಅಷ್ಟು ಹಣವನ್ನು ಒದಗಿಸಿಲ್ಲ ಇದಕ್ಕೆ ಹೆಚ್ಚು ಹಣವನ್ನು ಪಡೆಯುವುದರ ಬಗ್ಗೆ ಪ್ರಯತ್ನ ಮಾಡಬೇಕು, ಹಾಗೆ ಮಾಡುತ್ತಾರೆಂದು ಆಸೆ ಇಟ್ಟುಕೊಂಡಿದ್ದೇನೆ.

ರಾಜ್ಯದ ಸುಮಾರು 2,90,00,000 ಜನತೆಯ ಆರೋಗ್ಯಕ್ಕೆ ಸಂಬಂಧಪಟ್ಟ ವಿಷಯದಲ್ಲಿ ಚರ್ಚೆ ಮಾಡುವ ಕಾಲದಲ್ಲಿ ಒಂದು ವಿಷಯಕ್ಕೆ ನಾನು ಮಾನ್ಯ ಸಚಿವರನು ಈ ಸಭೆಯಲ್ಲಿ ಅಭಿನಂದಿಸುತ್ತೇನೆ. ಅವರು ಎರಡು ಉತ್ತಮವಾದ ನಿರ್ಣಯಗಳನ್ನು ತೆಗೆದುಕೊಂಡರು; ತಾಲ್ಲೂಕು ಬೋರ್ಡ್ ವತಿಯಿಂದ ನಡೆಯುತ್ತಿದ್ದ ಆಸ್ಪತ್ರೆಗಳನ್ನು ಸರ್ಕಾರ ವಹಿಸಿಕೊಳ್ಳತಕ್ಕದ್ದು. ಈ ಬಗ್ಗೆ ಒಂದು ಒಳ್ಳೆಯ ಹೆಜ್ಜೆಯನ್ನು ಇಟ್ಟಿದ್ದಾರೆ. ನನ್ನ ಅನುಭವದಲ್ಲಿ ತಾಲ್ಲೂಕುಬೋರ್ಡ್ ಆಸ್ಪತ್ರೆಗಳು ಬಹಳ ಕಂಠಿತವಾಗಿ ನಡೆಯುತ್ತಿದ್ದುವು. ಬಹುಶಃ ಬಹಳ ಕೆಳದರ್ಜೆಯ ಮಾತಿನಲ್ಲಿ ಹೇಳುವುದಾದರೆ ಪಡಖಾನೆ ಇದ್ದ ಹಾಗೆ ಇದ್ದುವು. ಹಳೇ ಒಬೀರಾಯನ ಕಾಲದ ಮುಸಾಫರ ಖಾನೆಯಲ್ಲಿ ಏನು ಅವ್ಯವಸ್ಥೆಯನ್ನು ನೋಡುತ್ತೇವೆಯೋ ತಾಲ್ಲೂಕುಬೋರ್ಡ್ ವತಿಯಿಂದ ನಡೆಯುವ ಆಸ್ಪತ್ರೆಗಳು ಅಷ್ಟೊಂದು ಕೆಳಮಟ್ಟದಲ್ಲಿ ವ್ಯವಹಾರ ನಡೆಸುತ್ತಿವೆ. ಅದಕ್ಕೆ ಕಾರಣ ವಾದರೂ ಇಷ್ಟೆ. ತಾಲ್ಲೂಕು ಬೋರ್ಡುಗಳ ಹತ್ತಿರ ಹಣವಿಲ್ಲ, ಆ ದೃಷ್ಟಿಯಿಂದ ಅವು ಸರಿಯಾಗಿ ಕೆಲಸ ಮಾಡುವುದಕ್ಕೆ ಆಗುತ್ತಿರಲಿಲ್ಲ. ಈ ಆಸ್ಪತ್ರೆಗಳನ್ನು ಸರ್ಕಾರ ವಹಿಸಿಕೊಳ್ಳುವುದರಿಂದ ಗ್ರಾಮಾಂತರ ಜನತೆಗೆ ಇನ್ನೂ ಹೆಚ್ಚು ಸೌಲಭ್ಯವನ್ನು ಒದಗಿಸಬೇಕೆಂಬ ಆಸೆಯನ್ನು ಇಟ್ಟುಕೊಂಡು ಪ್ರಥಮ ಹೆಜ್ಜೆಯನ್ನು ಇಟ್ಟಿದ್ದಾರೆ. ಇದಕ್ಕೆ ನಾನು ಮಾನ್ಯ ಸಚಿವರನ್ನು ಅಭಿನಂದಿಸದೆ ಇರಲಾರೆ ಎನ್ನುವ ಮಾತನ್ನು ಹೇಳುತ್ತೇನೆ.

ಇದರ ಜೊತೆಗೆ ಇನ್ನೊಂದು ಹುಕುಂ ಮಾಡಿದ್ದರೆ ಚೆನ್ನಾಗಿತ್ತು. ಹಿಂದೆ ಅಸ್ತಿತ್ವದಲ್ಲಿದ್ದ ಡಿಸ್ಟ್ರಿಕ್ಟ್‌ಬೋರ್ಡುಗಳು ಸರ್ಕಾರಕ್ಕೆ ಕೊಡಬೇಕಾದ ಬಾಕಿ ಏನಿತ್ತು ಅದನ್ನು ತಾಲ್ಲೂಕುಬೋರ್ಡು ಗಳ ಮೇಲೆ ಹೊರಿಸಿದರು. ಆ ಬಾಕಿಯನ್ನು ಈಗಿನ ತಾಲ್ಲೂಕು ಬೋರ್ಡುಗಳು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಸುಮಾರು ಮೂರು, ಮೂರೂವರೆ ಕೋಟಿ ರೂಪಾಯಿಗಳ ಬಾಕಿ ಇದೆ ಎಂದು ಗೊತ್ತಾಗಿದೆ. ಈ ಬಾಕಿಯನ್ನು ವಸೂಲ್ಮಾಡುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ ಲೆಕ್ಕವಿಲ್ಲ, ದಾಖಲೆ ಇಲ್ಲ. ದಯಮಾಡಿ ಸ್ಥಿರವಾದ ನಿರ್ಣಯ ಈ ಬಗ್ಗೆ ತೆಗೆದುಕೊಳ್ಳಬೇಕು. ಹಣಕಾಸಿನ ಇಲಾಖೆ ಈ ವಿಚಾರದಲ್ಲಿ ಸ್ವಲ್ಪ ಅಡ್ಡಿ ಬರಬಹುದು. ಆದರೂ ಕೂಡ ಒಂದು ಸಲ ಇರುವಂಥ ಬಾಕಿಯನ್ನು ವೇವ್ ಮಾಡಿದರೆ, ಈಗಿರುವ ಅನಿಶ್ಚಿತ ಪರಿಸ್ಥಿತಿಯನ್ನು ಹೋಗಲಾಡಿಸಬಹುದು. ಈ ಬಗ್ಗೆ ಮಾನ್ಯ ಮಂತ್ರಿಗಳು ನಿರ್ಣಯ ತೆಗೆದುಕೊಳ್ಳತಕ್ಕದ್ದು ಸೂಕ್ತ ಎನ್ನುವ ಮಾತನ್ನು ಹೇಳುತ್ತೇನೆ.

ಸರ್ಕಾರ ಗ್ರಾಮಾಂತರ ಜನತೆಗೆ ಹೆಚ್ಚು ಸೌಲಭ್ಯವನ್ನು ಕೊಡತಕ್ಕ ಕಾಲದಲ್ಲಿ ದೊಡ್ಡ ಆಸ್ಪತ್ರೆಗಳನ್ನು ಮರೆಯಬೇಕು ಎನ್ನುವ ದೃಷ್ಟಿಯಿಂದ ಹೇಳುತ್ತಿಲ್ಲ. ಬೆಂಗಳೂರು, ಮೈಸೂರು ಮುಂತಾದ ದೊಡ್ಡ ನಗರಗಳಲ್ಲಿರುವ ಆಸ್ಪತ್ರೆಗಳಲ್ಲಿ ವಿವಿಧ ವೈದ್ಯಕೀಯ ಸೌಲಭ್ಯಗಳಿವೆ. ಇದನ್ನು ನಗರ ಸಭೆ ಪ್ರದೇಶಗಳಲ್ಲಿ ಸೀಮಿತವಾಗಿ ಇಡುವುದಕ್ಕೆ ಹಲವಾರು ಕಾರಣಗಳಿಂದ ಅವಶ್ಯಕವಿದೆ. ತಾಲ್ಲೂಕು ಮಟ್ಟದಲ್ಲಿರುವ ಆಸ್ಪತ್ರೆಯನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯ ಮಟ್ಟಕ್ಕೆ ತರುವುದಕ್ಕೆ ಆಗುವುದಿಲ್ಲ. ಆದರೂ ಮಿನಿಮಂ ರಿಕ್ವೈರ್‌ಮೆಂಟ್ಸ್ ಕೊಡಬೇಕಾಗುತ್ತದೆ. ಹಿಂದಿನ ಸರ್ಕಾರ ಪ್ರತಿ ತಾಲ್ಲೂಕು ಮಟ್ಟದಲ್ಲಿ 25 ಹಾಸಿಗೆಗಳಿರುವ ಜನರಲ್ ಆಸ್ಪತ್ರೆಯನ್ನಾಗಿ ಅಲ್ಲಿರು ವಂಥ ಆಸ್ಪತ್ರೆಯನ್ನು ಪರಿವರ್ತನೆ ಮಾಡುತ್ತೇವೆನ್ನುವ ಯೋಜನೆಯನ್ನು ಘೋಷಣೆ ಮಾಡಿತು. ಬಹುಶಃ ಅನೇಕ ಕಡೆ ಗವರ್ನ್ಮೆಂಟ್ ಆರ್ಡರ್ಸ್ ಆಗಿವೆ, ಹಾಗಿದ್ದರೂ ಇನ್ನೂ ಕಾರ್ಯಗತ ವಾಗಿಲ್ಲ. ಆಸ್ಪತ್ರೆಗಳಿಗೆ ಗ್ರಾಂಟ್ ಕೊಡತಕ್ಕದ್ದರ ಬಗ್ಗೆ ಕೂಡ ಈ ಸರ್ಕಾರದಲ್ಲಿ ಒಂದು ಧೋರಣೆ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಬೊಂಬಾಯಿ ಕರ್ಣಾಟಕದಲ್ಲಿ ಒಂದು ರೀತಿ, ಹಳೇ ಮೈಸೂರು ಭಾಗದಲ್ಲಿ ಒಂದು ರೀತಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ರೀತಿ ಇದೆ ಎಂದುನಾನು ತಿಳಿದುಕೊಂಡಿದ್ದೇನೆ. ಉದಾಹರಣೆಗೆ ಹೇಳುವುದಾದರೆ ಹೊಳೇನರಸೀಪುರದ ಆಸ್ಪತ್ರೆ ಯಲ್ಲಿ ಬೆಡ್ ಸ್ಟ್ರೆಂಗ್ತ್ 50 ಕ್ಕೆ ಹೆಚ್ಚಿಸಬೇಕು ಎಂದು ಹಿಂದೆ ಸರ್ಕಾರದವರು ತೀರ್ಮಾನ ಮಾಡಿ ದರು. ಆವಾಗ ರೆಕರಿಂಗ್ ಮತ್ತು ನಾನ್ ರೆಕರಿಂಗ್ ಖರ್ಚಿನಲ್ಲಿ ಸರ್ಕಾರ 50 ಪರ್ಸೆಂಟ್ ಕೊಡುತ್ತದೆ ಎಂದು ಹೇಳಿದರು. ನಾನು ಮಧ್ಯೆ ಪ್ರವೇಶ ಮಾಡಿದಾಗ, ನಾನ್ ರೆಕರಿಂಗ್ ಪೂರ್ತಿಯಾಗಿ ಸರ್ಕಾರದವರೇ ಕೊಡುತ್ತಾರೆ, ರೆಕರಿಂಗ್ ಖರ್ಚನ್ನು ತಾಲ್ಲೂಕುಬೋರ್ಡ್ ಒಂದು ಭಾಗ, ಮುನಿಸಿಪಾಲಿಟಿ ಒಂದು ಭಾಗ, ಸರ್ಕಾರ ಒಂದು ಭಾಗ ಎನ್ನುವ ಹುಕುಂ ಮಾಡಿದರು. ಕೆಲವು ಕಡೆ ನಾನ್ ರೆಕರಿಂಗ್ ಮತ್ತು ರೆಕರಿಂಗ್ ಖರ್ಚು ಎಲ್ಲವನ್ನೂ ಸರ್ಕಾರವೇ ಪೂರ್ತಿಯಾಗಿ ವಹಿಸಿಕೊಂಡಿರುವ ನಿದರ್ಶನಗಳಿವೆ. ಈ ಗೊಂದಲ ಹೋಗಬೇಕು. ತಾಲ್ಲೂಕು ಮಟ್ಟದಲ್ಲಿರುವ ಆಸ್ಪತ್ರೆಗಳನ್ನು ಅಪ್‌ಗ್ರೇಡ್ ಮಾಡತಕ್ಕ ಕಾಲದಲ್ಲಿ ಯೂನಿಫಾರಂ ಫೈನಾನ್‌ಷಿಯಲ್ ಅಸಿಸ್ಟೆನ್

(ಶ್ರೀ ಹೆಚ್. ಡಿ. ದೇವೇಗೌಡ)

ಕೊಡುವುದರ ಬಗ್ಗೆ ಸರ್ಕಾರ ಒಂದು ಧೋರಣೆಯನ್ನು ತಾಳಬೇಕು ಎಂದು ಹೇಳುತ್ತೇನೆ. ಮಿನಿಮಂ ರಿಕ್ವೈರ್‌ಮೆಂಟ್ಸ್, ಏನೇನು ಬೇಕು ಎನ್ನುವುದರ ಬಗ್ಗೆ ಯೋಚನೆ ಮಾಡಬೇಕು. ಎಕ್ಸ್‌ರೇ ಪ್ಲಾಂಟ್ ತಾಲ್ಲೂಕು ಮಟ್ಟದಲ್ಲಿ ಇಲ್ಲದೆ ಇದ್ದರೆ ಡಿಸ್ಟ್ರಿಕ್ಟ್ ಹಾಸ್ಪಿಟಲ್‌ಗೆ ಹೋಗಬೇಕು. ಅಲ್ಲಿ ಫಿಲಂ ಇಲ್ಲ ವೆಂದರೆ ಪ್ರೈವೇಟ್ ಎಕ್ಸ್‌ರೇ ಇರುವವರ ಹತ್ತಿರ ಹೋಗಬೇಕು. ಈ ತರಹ ಕಷ್ಟ ಸನ್ನಿವೇಶ ಉಂಟಾಗುವುದಕ್ಕೆ ಅವಕಾಶ ಕೊಡದಹಾಗೆ ತಾಲ್ಲೂಕು ಮಟ್ಟದಲ್ಲಿರುವ ಆಸ್ಪತ್ರೆಗಳಿಗೆ ಹೆಚ್ಚಿನ ರೀತಿಯಲ್ಲಿ ಸಲವತ್ತುಗಳನ್ನು ಕೊಡಬೇಕೆಂದು ಹೇಳುತ್ತಿದ್ದೇನೆ.

ಆಯುರ್ವೇದಕ್ಕೆ ಪ್ರತ್ಯೇಕ ಬೋರ್ಡ್ ಮುಂತಾದ್ದು ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆಂದು ಕೇಳಿದ್ದೇನೆ. ಅದು ಸ್ವಾಗತಾರ್ಹವಾದದು. ಮಾನ್ಯ ಮಂತ್ರಿಗಳು ತೆಗೆದುಕೊಂಡಿರುವ ನಿಲುವು ಬಹಳ ಒಳ್ಳೆಯದು. ಹಲವಾರು ಅಲೋಪಥಿಕ್ ಡ್ರಗ್ಸ್‌ನಿಂದ ಗುಣಪಡಿಸುವುದಕ್ಕೆ ಸಾಧ್ಯವಿಲ್ಲದೆ ಇರುವ ಕಾಯಿಲೆಗಳನ್ನು ಆಯುರ್ವೇದ ಔಷಧಿಗಳಿಂದ ಗುಣಪಡಿಸುವುದಕ್ಕೆ ಸಾಧ್ಯವಿದೆ. ಮಾನಸಿಕವಾಗಿ ಮತ್ತು ದೈಹಿಕವಾಗಿ ಇರುವ ಅನೇಕ ಕಾಯಿಲೆಗಳನ್ನು ಆಯುರ್ವೇದ ಔಷಧಿಗಳಿಂದ ಗುಣ ಪಡಿಸುವುದಕ್ಕೆ ಹೆಚ್ಚು ಅವಕಾಶವಿದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿದುಕೊಂಡು ಆಯುರ್ವೇದದ ಬಗ್ಗೆ ಹೆಚ್ಚಿನ ಗಮನ ಕೊಡಬೇಕೆಂದು ನಾನು ಹೇಳುತ್ತೇನೆ.

ತಮ್ಮ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಕೆಲವು ಅಧಿಕಾರಿಗಳಿಗೆ ಸೀನಿಯಾರಿಟಿಯಲ್ಲಿ ಅನ್ಯಾಯವಾಗಿದೆ ಎಂದು ಕೇಳಿದ್ದೇನೆ. ಮೆಡಿಕಲ್ ಅಂಡ್ ಪಬ್ಲಿಕ್ ಹೆಲ್ತ್ ಎರಡೂ ಒಂದಾದಾಗ ಸೀನಿಯಾರಿಟಿ ಲಿಸ್ಟ್‌ನ್ನು ತಯಾರು ಮಾಡುವುದರಲ್ಲಿ ಗೊಂದಲವಾಯಿತು ಎಂದು ಕೇಳಿದ್ದೇನೆ. ಇದರಿಂದ ಅನೇಕ ಜನ ಅಧಿಕಾರಿಗಳು ಅತೃಪ್ತರಾಗಿದ್ದಾರೆ. ಇದಕ್ಕೆ ಕಾರಣ ವಿದ್ಯಾರ್ಥಿಗಳಾಗಿದ್ದವರೆಲ್ಲಾ ಇಂದು ಪ್ರೊಫೆಸರುಗಳಾಗಿರುವುದು. ಮತ್ತೆ ಕೆಲವರು ಇದ್ದ ಜಾಗಗಳಲ್ಲಿಯೇ ಇರುವುದು. ಅನ್ಯಾಯ ಯಾರಿಂದರೇ ಆಗಿರಲಿ, ಅನ್ಯಾಯವಾಗಿರುವುದನ್ನು ಸರಿಪಡಿಸುವ ಬಗ್ಗೆ ಪುನರ್ವಿಮರ್ಶೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

1-30 P.M.

ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ತಾಲ್ಲೂಕ್ ಬೋರ್ಡ್‌ನ ಆಸ್ಪತ್ರೆಗಳನ್ನು ಸರ್ಕಾರದವರು ವಹಿಸಿಕೊಳ್ಳಬೇಕೆಂದಿರುವ ವಿಷಯ ಸಂತೋಷದ ವಿಷಯ. ಆದರೆ ತಾಲ್ಲೂಕ್ ಬೋರ್ಡಿನವರು ಕೆಲವು ಕಡೆ ಆಯುರ್ವೇದಿಕ್ ಡಿಸ್ಪೆನ್ಸರಿಗಳನ್ನು ನಡೆಸುತ್ತಿದ್ದಾರೆ., ಇಂತಹ ಆಸ್ಪತ್ರೆಗಳನ್ನು ನ್ಯೂ ಟೈಪ್ ಎಂದು ಟ್ರೀಟ್ ಮಾಡಿದರೆ ಅದರಲ್ಲಿ ಆಯುರ್ವೇದ ಮತ್ತು ಅಲೋಪತಿ ಎರಡೂ ಸಹ ಬರುತ್ತವೆ. ಆದರೆ ಆಯುರ್ವೇದವನ್ನು ಅಲೋಪತಿಯಿಂದ ಬೇರ್ಪಡಿಸಬೇಕೆಂದಿರುವಾಗ ಸರ್ಕಾರದವರು ತಾಲ್ಲೂಕ್ ಬೋರ್ಡಿನವರು ನಡೆಸುತ್ತಿರುವ ಆಯುರ್ವೇದದ ಆಸ್ಪತ್ರೆಗಳನ್ನು ಸಹ ವಹಿಸಿಕೊಳ್ಳುತ್ತಾರೆಯೇ ಎಂಬುದನ್ನು ಸ್ಪಷ್ಟಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಈಗ ಮೆಡಿಕಲ್ ಕಾಲೇಜ್‌ಗಳಲ್ಲಿ ಸೀಟುಗಳನ್ನು ಹಂಚುವ ವ್ಯವಸ್ಥೆ ಅಥವಾ ಪದ್ಧತಿ ಸರಿಯಾದುದಲ್ಲವೆಂದು ನನ್ನ ಅಭಿಪ್ರಾಯ. ಈಗ ಅಂಕಗಳನ್ನು ನೋಡಿ ಅದರ ಒಂದು ಆಧಾರದ ಮೇಲೆ ಸೀಟ್‌ಗಳನ್ನು ಹಂಚಲಾಗುತ್ತಿದೆ. ಇದರಿಂದ ಗ್ರಾಮಾಂತರ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಗ್ರಾಮಾಂತರ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳನ್ನು ಪಟ್ಟಣಗಳಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಹೋಲಿಕೆ ಮಾಡಿದಾಗ, ಅಂಕಗಳಲ್ಲಿ ಬಹಳ ವ್ಯತ್ಯಾಸವಿರುತ್ತದೆ. ಇದರಿಂದ ಅವರು ಸೀಟ್‌ಗಳನ್ನು ಪಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕೆ ನಾವು ಏನಾದರು ಒಂದು ಪರಿಹಾರವನ್ನು ಕಂಡುಹಿಡಿಯಬೇಕಾಗಿದೆ. ಆರ್ಥಿಕ ದೃಷ್ಟಿಯಿಂದ ಯಾರು ಹಿಂದುಳಿದಿರುತ್ತಾರೋ ಅವರ ಮಕ್ಕಳಿಗೆ ಕೆಲವು ಸೀಟ್‌ಗಳನ್ನು ಏನು ಕೊಡಲಾಗುತ್ತಿದೆ, ಆ ಸೀಟ್‌ಗಳು ಸಹ ಪಟ್ಟಣಗಳಲ್ಲಿರುವ ಹಿಂದುಳಿದವರ ಮಕ್ಕಳಿಗೆ ಸಿಕ್ಕಿ ಬಿಡುತ್ತದೆ. ಗ್ರಾಮಾಂತರ ಪ್ರದೇಶದಿಂದ ಬರುವ ಮಕ್ಕಳಿಗೆ ಅಂಕಗಳು ಕಡಿಮೆ ಬಂದಿರುವುದರಿಂದ ಅವರಿಗೆ ಸಿಕ್ಕುವುದು ಕಷ್ಟವಾಗಿದೆ. ಆದ್ದರಿಂದ ಇವರಿಗೂ ಕೆಲವು ಸೀಟ್‌ಗಳು ಸಿಗುವುದಕ್ಕೆ ಸರ್ಕಾರದವರು ಏನಾದರು ಏರ್ಪಾಡು ಮಾಡಬೇಕು.

ಶ್ರೀ ಎಚ್. ಸಿದ್ಧವೀರಪ್ಪ.—ರಾಜ್ಯಾಂಗವನ್ನು ತಿದ್ದುಪಡಿ ಮಾಡಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ರಾಜ್ಯಾಂಗವನ್ನು ಬದಲಾವಣೆ ಮಾಡಬೇಕಾಗಿದ್ದರೆ, ಅದನ್ನು ಮಾಡುವಂತೆ ತಾವು ಕೇಂದ್ರ ಸರ್ಕಾರಕ್ಕೆ ಸಲಹೆ ಮಾಡಬೇಕು. ತಾವು ಅನುಭವ ಹೊಂದಿ

ದವರಾಗಿದ್ದೀರಿ. ನನ್ನ ಸಲಹೆಯೆಂದರೆ, ಗ್ರಾಮಾಂತರ ಪ್ರದೇಶದಿಂದ ಬರುವ ವಿದ್ಯಾರ್ಥಿಗಳಿಗೆ ಹೆಚ್ಚು ಸೌಲಭ್ಯ ದೊರೆಯುವಂತೆ ಮಾಡಬೇಕು. ಅವರನ್ನು ನಿರ್ಲಕ್ಷ್ಯ ಮಾಡುವುದಕ್ಕಾಗುವುದಿಲ್ಲ. ಅವರು ಹಿಂದುಳಿದವರು ಎಂಬ ಕಾರಣದಿಂದ ಇನ್ನು ಎಷ್ಟು ಕಾಲದವರೆಗೆ ಅದುಮಿಡುವುದಕ್ಕೆ ಸಾಧ್ಯ ಎಂದು ಕೇಳುತ್ತೇನೆ. ಇದೇ ಪದ್ಧತಿಯನ್ನು ಮುಂದುವರೆಸುವುದು ಒಳ್ಳೆಯದಲ್ಲ ಎಂದು ಹೇಳುತ್ತೇನೆ. ಆದಕಾರಣ ಇದರ ಬಗ್ಗೆ ಆಲೋಚನೆ ಮಾಡಬೇಕೆಂದು ಸರ್ಕಾರದವರಲ್ಲಿ ಕೇಳಿ ಕೊಳ್ಳುತ್ತೇನೆ. ರಾಜ್ಯಾಂಗವನ್ನು ಇದಕ್ಕಾಗಿ ಬದಲಾವಣೆ ಮಾಡಬೇಕಾಗಿದ್ದರೆ, ಮಾಡುವಂತೆ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಸಲಹೆ ಮಾಡಬೇಕೆಂದು ಮತ್ತೊಮ್ಮೆ ಹೇಳುತ್ತೇನೆ.

ಇನ್ನು ಖಾಸಗೀ ಮೆಡಿಕಲ್ ಕಾಲೇಜ್‌ಗಳನ್ನು ಸರ್ಕಾರದವರು ವಹಿಸಿಕೊಳ್ಳಬೇಕೆಂದಿರುವುದು ಸ್ವಾಗತಾರ್ಹವಾದಂಥ ವಿಚಾರವಾಗಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಬಗಿ ಮುಷ್ಠಿಯಿಂದ ಕಾರ್ಯಕ್ರಮ ಕೈಕೊಳ್ಳುತ್ತಿದ್ದಾರೆಂದು ಕೇಳಿದ್ದೇನೆ. ಆದರೆ ಈ ರೀತಿ ವಹಿಸಿಕೊಳ್ಳುವ ಕಾಲದಲ್ಲಿ ಗೊಂದಲವಾಗುವುದು ಬೇಡ. ಈ ಖಾಸಗೀ ಮೆಡಿಕಲ್ ಕಾಲೇಜ್‌ಗಳ ಬಗ್ಗೆ ಆರೋಪವಿರುವುದು ನಿಜ. ಆದರೆ ನಾನು ಇದರ ಬಗ್ಗೆ ವೈಯುಕ್ತಿಕವಾಗಿ ಟೀಕೆ ಮಾಡುತ್ತಿಲ್ಲ. ಆ ಕಾಲೇಜ್‌ಗಳನ್ನು ವಹಿಸಿಕೊಳ್ಳುವ ಬಗ್ಗೆ ನಿಮ್ಮಲ್ಲಿ ಶಕ್ತಿ ಇಲ್ಲದಿದ್ದರೆ ಅದರ ಬಗ್ಗೆ ವ್ಯವಹಾರ ಮಾಡುವುದು ಬೇಡ ಎಂದು ಹೇಳುತ್ತೇನೆ. ಹಣದ ಅನುಕೂಲ ಇದ್ದರೆ ವಹಿಸಿಕೊಂಡು ಬಿಡಿ. ಹಿಂದಿನ ಸರ್ಕಾರ ದವರು ಕೆಲವು ಕಾಲದವರೆಗೆ ಅಡ್ವಾನ್ಸ್ ರಿಜರ್ವೇಷನ್ ಮಾಡುವುದಕ್ಕೆ ಖಾಸಗೀ ಕಾಲೇಜ್‌ನವರಿಗೆ ಅವಕಾಶ ಕೊಟ್ಟಿದ್ದರು. ಹಿಂದಿನ ಸರ್ಕಾರದವರ ಧೋರಣೆಯಿಂದಾಗಿ ಅವರೇನಾದರೂ ಅಡ್ವಾನ್ಸ್ ರಿಜರ್ವೇಷನ್ ಮಾಡಿದ್ದರೆ, ಅದರ ಬಗ್ಗೆ ಈಗಿನ ಸರ್ಕಾರದವರು ಅಪಾದನೆ ಮಾಡಿದರೆ ಅದು ತಪ್ಪಾಗುತ್ತದೆ. ಈ ವಿಚಾರದಲ್ಲಿ ಅವರು ಆಗಿನ ಸರ್ಕಾರದ ಅನುಮತಿ ತೆಗೆದುಕೊಂಡು ಕೆಲಸ ಮಾಡಿದ್ದಾರೆಂದು ಹೇಳಬಹುದು. ಖಾಸಗಿಯವರು ಆ ಕಾಲೇಜ್‌ಗಳನ್ನು ನಡೆಸುವುದು ಬೇಡ ಎಂಬುದು ಸರ್ಕಾರದ ಧೋರಣೆಯಾಗಿದ್ದರೆ, ಮತ್ತು ಅವುಗಳನ್ನು ಸರ್ಕಾರದವರು ವಹಿಸಿಕೊಳ್ಳು ವುದಾದರೆ, ಅರ್ಥಿಕವಾಗಿ ಸರ್ಕಾರಕ್ಕೆ ಶಕ್ತಿ ಇದೆಯೇ ಎಂಬುದನ್ನು ಮೊದಲು ನೋಡಿಕೊಂಡು ನಂತರ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

Sri H. SIDDAVEERAPPA.—You may use your good office to make them agree in response to the wishes of those people. As many as 100 Members of this House of all parties have given a petition to the Government asking the Government to examine. I am not so anxious to trouble them. But they must fall in line with the thinking of the Government.

ಶ್ರೀ ಎಚ್. ಡಿ. ದೇವೇಗೌಡ.—ಇವನ್ನು ರಾಜಕೀಯ ಪಕ್ಷದ ದೃಷ್ಟಿಯಿಂದ ನೋಡಬೇಕಾದ ಅವಶ್ಯಕತೆ ಇಲ್ಲ. ಯಾವುದೇ ಒಂದು ಕಾಲೇಜು ಸರಿಯಾಗಿ ಕೆಲಸ ಮಾಡದೇ ಇದ್ದರೆ ಅದನ್ನು ಬೇಕಾದರೆ ಸರ್ಕಾರದವರು ವಹಿಸಿಕೊಳ್ಳಲಿ. ಯಾವುದೇ ಒಂದು ರಾಜಕೀಯ ಪಕ್ಷ ಏನಾದರೂ ಖಾಸಗೀ ಕಾಲೇಜನ್ನು ಸರಿಯಾಗಿ ನಡೆಸದೆ ಇದ್ದರೆ, ಆ ಕಾಲೇಜಿನಲ್ಲಿ ಏನಾದರೂ ಅಕ್ರಮಗಳು ನಡೆಯುತ್ತಿದ್ದರೆ, ಅದು ಯಾವ ರಾಜಕೀಯ ಪಕ್ಷಕ್ಕೇ ಸೇರಿರಲಿ, ಅದನ್ನು ಬೆಂಬಲ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಈಗ ಮಣಿಪಾಲದಲ್ಲಿರುವ ಖಾಸಗೀ ಮೆಡಿಕಲ್ ಕಾಲೇಜನ್ನು 'ಒ' ಕಾಂಗ್ರೆಸ್‌ನವರಾಗಲೀ, 'ಆರ್' ಕಾಂಗ್ರೆಸ್‌ನವರಾಗಲೀ ನಡೆಸುತ್ತಿಲ್ಲ. ಆದ್ದರಿಂದ ಇವೊತ್ತು ಏನು ಖಾಸಗೀ ಮೆಡಿಕಲ್ ಕಾಲೇಜ್‌ಗಳಿವೆ, ಅವುಗಳನ್ನು ಸರ್ಕಾರದವರು ತಮ್ಮ ವಶಕ್ಕೆ ತ್ವರಿತ ವಾಗಿ ತೆಗೆದುಕೊಳ್ಳುವುದಕ್ಕೆ ಕ್ರಮ ಕೈಕೊಳ್ಳುವಾಗ ಅದಕ್ಕೆ ಯಾವುದೇ ಪಕ್ಷದ ಅಥವಾ ಪಾರ್ಟಿಯ ಬಣ್ಣ ಹಚ್ಚುವುದು ಬೇಡ.

ಶ್ರೀ ಎಚ್. ಸಿದ್ಧವೀರಪ್ಪ.—ಖಾಸಗೀ ಕಾಲೇಜ್‌ಗಳನ್ನು ಸರ್ಕಾರದವರು ತೆಗೆದುಕೊಳ್ಳು ತ್ತೇವೆಂದು ಹೇಳಲಿಲ್ಲ. ಅಥವಾ ರಾಷ್ಟ್ರೀಕರಣ ಮಾಡುತ್ತೇವೆಂದೂ ಸಹ ತಿಳಿಸಿಲ್ಲ. ನಾವು ಅವರಿಗೆ ಏನು ಹೇಳಿದ್ದೇವೆಂದರೆ, ಹಲವಾರು ಕಂಪ್ಲೈಂಟ್ಸ್ ಸರ್ಕಾರಕ್ಕೆ ಸಾರ್ವಜನಿಕರಿಂದ ಬರುತ್ತಿವೆ, ಆದ್ದರಿಂದ ಸಾರ್ವಜನಿಕರಿಗೆ ಹೊಂದಿಕೊಳ್ಳುವಂತೆ ತಮ್ಮ ಆಡಳಿತ ಪದ್ಧತಿಯನ್ನು ಬದಲಾವಣೆ ಮಾಡಲು ಗೌರ್ನಿಂಗ್ ಬಾಡಿ ಮೀಟಿಂಗ್ ಮಾಡಿ ಎಂದು ಹೇಳಿದ್ದೇವೆ. ಇಷ್ಟೇ ಹೊರತು ಆ ಖಾಸಗೀ ಕಾಲೇಜುಗಳನ್ನು ಸರ್ಕಾರದವರು ವಹಿಸಿಕೊಳ್ಳಬೇಕು, ಅವರ ಅಧಿಕಾರ ವನ್ನು ಕಸಿದುಕೊಳ್ಳಬೇಕೆಂಬ ಇಚ್ಛೆ ಸರ್ಕಾರಕ್ಕೆ ಇರಲಿಲ್ಲ. ಈಗಲೂ ಸಹ ಇಲ್ಲ. ಇದನು ನಾನು ಅನೇಕ ಸಲ ಹೇಳಿದ್ದೇನೆ. ಮುಖ್ಯವಾಗಿ ಸರ್ಕಾರದ ಇವೊತ್ತಿನ ನೀತಿ ಈ ಖಾಸಗೀ ಕಾಲೇಜ್‌ಗಳ

(ಶ್ರೀ ಎಚ್. ಸಿದ್ದವೀರಪ್ಪ)

ಬಗ್ಗೆ ಏನಿದೆ ಮತ್ತು ಮಾನ್ಯ ಸದಸ್ಯರು ಏನು ಅಭಿಪ್ರಾಯ ಪಡುತ್ತಾರೆ, ಅದಕ್ಕೆ ಹೊಂದಿಕೊಂಡು ಹೋಗುವ ರೀತಿಯಲ್ಲಿ ನಡೆಯಿರಿ ಎಂದು ಹೇಳಿದ್ದೇವೆ. ಆದ್ದರಿಂದ ತೆಗೆದುಕೊಳ್ಳುವ ಹಾಗಿದ್ದರೆ, ಎನ್ನುವ ಪ್ರಶ್ನೆ ಬೇಡ. ಸರ್ಕಾರಕ್ಕಿಂತ ಹೆಚ್ಚಿನ ಬಲ ಹೊಂದಿರುವವರು ಯಾರೂ ಇರಲಾರರು.

ಶ್ರೀ ಎಚ್. ಡಿ. ದೇವೇಗೌಡ.—ಸರ್ಕಾರದ ನೀತಿ ಮತ್ತು ಸರ್ಕಾರದವರು ಅವರಿಗೆ ಕೊಟ್ಟಿರ ತಕ್ಕಂಥ ಸಲಹೆಗಳು ಏನಿವೆ, ಆ ಸಲಹೆಗಳಿಗನುಗುಣವಾಗಿ ಅವರು ನಡೆಯದೇ ಹೋದರೆ ಆ ಕಾಲೇಜ್‌ಗಳನ್ನು ತೆಗೆದುಕೊಳ್ಳುವುದಕ್ಕೆ ತಾವು ಕೈಹಾಕಬೇಕಾಗುತ್ತದೆ. ಸರ್ಕಾರಕ್ಕಿಂತ ಅವರೇನೂ ದೊಡ್ಡವರಲ್ಲ. ಯಾರು ಮೇನೇಜ್‌ಮೆಂಟ್ ಮಾಡುತ್ತಿದ್ದಾರೆಂಬುದು ಇಲ್ಲಿ ಮುಖ್ಯವಾದ ಪ್ರಶ್ನೆಯಲ್ಲ. ಯಾರು ಸರ್ಕಾರದ ನಿರ್ದೇಶನದ ಪ್ರಕಾರ ಕೆಲಸ ಮಾಡುವುದಕ್ಕೆ ತಯಾರಿಲ್ಲವೋ ಅಂತಹ ಖಾಸಗೀ ಕಾಲೇಜ್‌ಗಳನ್ನು ಸರ್ಕಾರದವರೇ ವಹಿಸಿಕೊಳ್ಳುವುದು ಒಳ್ಳೆಯದು ಎಂದು ನಾನು ಸಲಹೆ ಮಾಡಿದೆ. ಈ ರೀತಿ ಮಾಡದೆ ಅದಕ್ಕೆ ಬೇರೆ ವ್ಯವಸ್ಥೆ ಮಾಡುವುದು ಬೇಡ ಎಂಬುದು ನನ್ನ ಸಲಹೆಯಾಗಿದೆ. ನಾನ್ ಪ್ರಾಕ್ಟೀಸಿಂಗ್ ಅಲೋಯನ್ಸ್‌ನ್ನು, ಡಾಕ್ಟರ್‌ಗಳು ಹೊರಗಡೆ ಪ್ರಾಕ್ಟೀಸ್ ಮಾಡುವುದನ್ನು ತಪ್ಪಿಸುವ ದೃಷ್ಟಿಯಿಂದ, ಕೊಡಬೇಕೆಂದು ಸರ್ಕಾರದವರು ನಿರ್ಣಯ ತೆಗೆದುಕೊಂಡಿದ್ದರೆಂದು ನಾನು ಕೇಳಿದ್ದೇನೆ. ಸರ್ಕಾರದವರು ತೆಗೆದುಕೊಂಡಿದ್ದ ತೀರ್ಮಾನ ಒಳ್ಳೆಯದು. ಆದರೆ ಅದು ಕಾರ್ಯಗತವಾಗುತ್ತದೆಯೇ ಎಂಬುದನ್ನು ನಾವು ಆಲೋಚನೆ ಮಾಡಬೇಕಾಗುತ್ತದೆ. ಹೊರಗಡೆ ಪ್ರಾಕ್ಟೀಸ್ ಮಾಡಬೇಡಿ ಎಂದು ನೀವು ಡಾಕ್ಟರ್‌ಗಳನ್ನು ಎಷ್ಟೇ ಹಿಡಿತದಲ್ಲಿ ಇಟ್ಟರೂ ಅದು ಕಷ್ಟದಾಯಕವಾದ ಕೆಲಸ.

ಶ್ರೀ ಎಚ್. ಸಿದ್ದವೀರಪ್ಪ.—ಈಗ ನಾನ್-ಪ್ರಾಕ್ಟೀಸಿಂಗ್ ಅಲೋಯನ್ಸ್ ಇಲ್ಲ. Out side the office hours ಅವರು practice ಮಾಡಬಹುದು.

Sri C. M. ARUMUGAM (K. G. F.).—By that you have opened the floodgates. They will make the hospital a good field for their private practice.

Sri H. SIDDAVEERAPPA.—If they do it, it will be deriliction of duty. They cannot open a clinic outside. You can go to his House. ನೀವು ಬೇಕಾದರೆ ಅವರ ಮನೆಗೆ ಹೋಗಿ ಏನು ಬೇಕಾದರೂ ಅವರ ಸಲಹೆ ಪಡೆಯಿರಿ.

Sri C. M. ARUMUGAM.—The Hon'ble Minister is a very experienced person and he may not be satisfied with Health port-folio. I do not know whether he is satified with it. That is a different thing.

Sri H. SIDDAVEERAPPA.—What is it that makes, you think that I am not satisfied with the Health port-folio ? I am indeed very happy.

Sri C. M. ARUMUGAM.—He is a very experienced Minister. I compliment him.

Sri H. SIDDAVEERAPPA.—I am indeed happy.

Sri C. M. ARUMUGAM.—What is the restriction he thinks of ? The doctors will ask the poor people to come to their house.

Sri H. SIDDAVEERAPPA.—This is not the only State where non-practising allowance has been abolished and for very valid reasons. The allowance was a mere pittance. In other places like Delhi they pay Rs. 600 to Rs. 700. Therefore, here it served no purpose.

ಶ್ರೀ ಎಚ್. ಡಿ. ದೇವೇಗೌಡ.—ಯಾವ ಒಂದು ಉದ್ದೇಶದಿಂದ ಈ ಕ್ರಮ ತೆಗೆದುಕೊಂಡಿದ್ದೀರಿ, ಆ ಉದ್ದೇಶ ಸಫಲ ಆಗುವುದು ಕಷ್ಟವಾಗಬಹುದು. ಡಾಕ್ಟರುಗಳು ಹಾಸ್ಪಿಟಲ್‌ನಲ್ಲಿರುವ ಡಗ್ಸ್‌ನ್ನು ಮನೆಯಲ್ಲಿ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಮನೆಯಲ್ಲಿ ಪ್ರಾಕ್ಟೀಸ್ ಮಾಡುವುದಕ್ಕೆ ಅವಕಾಶ ಕೊಟ್ಟರೆ ಡ್ರಗ್ಸ್‌ನ್ನು ಮನೆಯಲ್ಲಿ ತೆಗೆದುಕೊಂಡು ಹೋಗಿ ಉಪಯೋಗಮಾಡುವುದಕ್ಕೆ ಫ್ರೀ ಪಾಸ್ ಕೊಟ್ಟು ಹಾಗೆ ಆಗುತ್ತದೆ. ಅದನ್ನು ತಪ್ಪಿಸಬೇಕು

ಎನ್ನುವ ದೃಷ್ಟಿಯಿಂದ ಹೇಳುತ್ತೇನೆ. ತಾವು ತೆಗೆದುಕೊಂಡಿರತಕ್ಕ ನಿಲುವು ಪರಿಣಾಮಕಾರಿ ಯಾಗುವುದಿಲ್ಲ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ.

ಕೊನೆಯದಾಗಿ ಗ್ರಾಮಾಂತರ ಪ್ರದೇಶಕ್ಕೆ ವೈದ್ಯಕೀಯ ಸೌಕರ್ಯ ಕೊಡುವ ಕಾಲದಲ್ಲಿ ತಾಲ್ಲೋಕು ಮಟ್ಟ ಮತ್ತು ಜಿಲ್ಲಾ ಮಟ್ಟದಲ್ಲಿ ಇರುವ ಆಸ್ಪತ್ರೆಗಳನ್ನು ಹೆಚ್ಚು ಬಲಪಡಿಸಬೇಕು ಮತ್ತು ಅದಕ್ಕೆ ಆದ್ಯತೆ ಕೊಡಬೇಕು. ಜೊತೆಗೆ ಕಟ್ಟಡಗಳು ಮಂಜೂರು ಆದರೂ ಎಮರ್‌ಜೆನ್ಸಿ ಯಿಂದ ಕಟ್ಟುವುದಕ್ಕೆ ಪ್ರಾರಂಭವಾಗಿಲ್ಲ. ಮಾನ್ಯ ಶ್ರೀ ಚನ್ನಬಸಪ್ಪನವರು ಘೋಷಣೆ ಮಾಡಿದರು ಎಮರ್‌ಜೆನ್ಸಿ ಕಿತ್ತುಹಾಕಿದ್ದೇನೆ, ಅದು ಅಷ್ಟೊಂದು ಆಗುವುದಿಲ್ಲ ಎಂದು ಹೇಳಿದರು ಅದು ತಮ್ಮ ಇಲಾಖೆಗೆ ಅನ್ಯಾಯವಾಗುತ್ತದೆ ಎಂದು ತಿಳಿದುಕೊಂಡಿದ್ದೇನೆ. ಆದ್ದರಿಂದ ತಾಲ್ಲೋಕು ಲೆವೆಲ್ಲಿನಲ್ಲಿ ಮತ್ತು ಡಿಸ್ಟ್ರಿಕ್ಟ್ ಲೆವೆಲ್ಲಿನಲ್ಲಿ ಮಂಜೂರಾತಿ ಆಗಿ ನಿಂತಿರುವ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳಿ ಮಾನ್ಯ ಅಧ್ಯಕ್ಷಿಣಿಯವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಪುಟ್ಟದಾಸ್ (ಸಾತನೂರ).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ಆರೋಗ್ಯ ಸಚಿವರು ಮಂಡಿಸಿರತಕ್ಕ ಬೇಡಿಕೆಗೆ ನನ್ನ ಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತಾ ಕೆಲವು ಸೂಚನೆಗಳನ್ನು ಕೊಡಲು ಬಯಸುತ್ತೇನೆ. ಈ ಇಲಾಖೆ ಎಷ್ಟು ಇಳಿದು ಹೋಗಿದೆ ಎಂದರೆ ಮಾನ್ಯ ಸಚಿವರು ಈ ಇಲಾಖೆಯ ಸೂತ್ರ ನನ್ನ ಕೈಯ್ಯಲ್ಲಿ ಸಿಕ್ಕುತ್ತಾ ಇಲ್ಲ, ಎಂದು ಒಂದು ಕಡೆ ಹೇಳಿ ದ್ದಾರೆ. ಈ ಇಲಾಖೆ ಹಿನ್ನೆಲೆ ಅಷ್ಟು ಗಹನವಾಗಿದೆ. ಸಚಿವರು ದಕ್ಷರು ನಿಜ. ಅವರ ಕಾಲದಲ್ಲಿ ಈ ಇಲಾಖೆಯಲ್ಲಿ ಪ್ರಗತಿ ಸಾಧ್ಯವಾಗುತ್ತದೆ ಎನ್ನುವ ನಂಬಿಕೆ ನನಗಾದರೂ ಇದೆ. ಆದರ ಹಿನ್ನೆಲೆ ಯಲ್ಲಿ ಯೋಚನೆ ಮಾಡುತ್ತಾ ಹೋದರೆ ದಿವಂಗತ ಡಾಕ್ಟರ್ ಹೆಗ್ಗಡೆಯವರ ಕಾಲದಲ್ಲಿ ಕೆಲವು ಕೆಲಸ ಗಳು ನಡೆದುವು. ಮಾನ್ಯ ಮಲ್ಲಿಕಾರ್ಜುನಸ್ವಾಮಿ ಮಂತ್ರಿಗಳ ಯುಗ ಪ್ರಾರಂಭವಾಯಿತು. ಆಗತಾನೇ ಮೇಜರ್ ಜನರಲ್ ಭಾಟಿಯ ಅವರ ರಿಪೋರ್ಟು ಬಂತು. ನೂರಾರು ಹುದ್ದೆಗಳನ್ನು ಸೃಷ್ಟಿ ಮಾಡಿದರು. ಲೆಕ್ಚರರ್, ಅಸಿಸ್ಟೆಂಟ್ ಪ್ರೊಫೆಸರ್ಸ್, ಅಸೋಸಿಯೇಟ್ ಪ್ರೊಫೆಸರ್ಸ್, ರೀಡರ್ಸ್, ಪೋಸ್ಟ್ ಗ್ರಾಜುಯೇಟ್ ಪ್ರೊಫೆಸರ್ಸ್, ಲೆಕ್ಕವೇ ಇಲ್ಲದಷ್ಟು ಹುದ್ದೆಗಳನ್ನು ಸೃಷ್ಟಿ ಮಾಡಿದರು. ಒಬ್ಬರಿಗೂ ಕ್ವಾಯಂ ಆಗಿಲ್ಲ. ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಇರಲಿಲ್ಲ ಬಂದವರಿಗೆ ಕೆಲಸಕೊಟ್ಟು ಮುಗಿಸಿದರು ನಂತರ ಶುರುವಾಯಿತು ಪುಟ್ಟಸ್ವಾಮಿಯವರ ಯುಗ. ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಯುಗ. ಇವರು ಮಾರ್ಪಾಡು ಮಾಡಲಿಕ್ಕೆ ಎಷ್ಟೋ ಶ್ರಮಪಟ್ಟರು. ನಂತರ ಶುರು ಆಯಿತು ರಾಮಕೃಷ್ಣ ಅವರ ಯುಗ. ಅದು ನಿಜವಾಗಿಯೂ ಸುವರ್ಣ ಯುಗ. ಟ್ರಾನ್ಸ್‌ಫರ್ ಮಾಡಲಿಕ್ಕೆ ಅವರಿಗೆ ದಿನಕ್ಕೆ 24 ಗಂಟೆ ಸಾಲದು ಅವರ ಸ್ನೇಹಿತರು ಇದರಲ್ಲಿ ಭಾಗಿ ಆದರು. ಎಷ್ಟೋ ಕಷ್ಟಪಟ್ಟು ಟ್ರಾನ್ಸ್‌ಫರ್ ಮಾಡಿ, ಇನ್ನೂ 15 ಲಕ್ಷ ರೂಪಾಯಿ ಟಿ. ಎ. ಆಫೀಸರ್ಸ್‌ಗಳಿಗೆ ಕೊಡತಕ್ಕದ್ದು ಬಾಕಿ ಇದೆ. ಈ ಯುಗದ ನಂತರ ಶುರು ವಾಯಿತು ಗೌರ್ನರ್ ಯುಗ. ಇದು ಕೇವಲ ಉತ್ಪ್ರೇಕ್ಷೆ ಎಂದು ತಿಳಿದುಕೊಳ್ಳಬಹುದು ಅಥವಾ ಕಟ್ಟುಕಥೆ ಎಂದು ತಿಳಿದುಕೊಳ್ಳಬಹುದು. ಆದರೆ ಇಷ್ಟು ಮಾತ್ರ ನಿಜ. ಅವರ ಅವಧಿಯಲ್ಲಿ ಸಾಮಾನ್ಯ ಪ್ರಜೆಗಳ ಕುಂದುಕೊರತೆಗಳನ್ನು ಕೇಳಲು ಸರ್ಕಾರಕ್ಕೆ ಕಿವಿಯೇ ಇಲ್ಲ ಎಂದು ನಾನು ಹೇಳುತ್ತೇನೆ. ಕೋಲಾರದ ಆಸ್ಪತ್ರೆಯಲ್ಲಿ ಡೆಲಿವರಿ ಕೇಸನ್ನು ಅಡ್ಮಿಟ್ ಮಾಡಲು ಸೆಕ್ರೆಟರಿ ಹೇಳಿದರೂ ಆಗಲಿಲ್ಲವಂತೆ. ಗೌರ್ನರ್ ಯುಗ ಹೀಗೆ ನಡೆಯುತ್ತಾ ಇತ್ತು. ಶ್ರೀಮಾನ್ ಸಿದ್ದವೀರಪ್ಪನವರು ಆಗಿನಿಂದ ಇದ್ದ ಕೊಳೆಯನ್ನು ತೊಳೆಯಬೇಕಾಗಿದೆ. ಇಲಾಖೆಯಲ್ಲಿ ಮಾನವೀ ಯತೆ ದೃಷ್ಟಿಯಿಂದ ನೋಡಬೇಕು. ಮೊಟ್ಟಮೊದಲು ಮಂತ್ರಿಗಳಿಗೆ ಮಾಡತಕ್ಕ ನಮ್ರ ಸಲಹೆ ಇಷ್ಟೆ. ದಯಮಾಡಿ ಕ್ಲಾಸ್ ಒನ್ ವರ್ಗಾವರ್ಗಿ ಮಾತ್ರ ತಾವು ಇಟ್ಟುಕೊಂಡು ನಾಳೆಯಿಂದ ಕ್ಲಾಸ್ (2) ಕೆಳಗಿರತಕ್ಕ ವರ್ಗಾವರ್ಗಿಯನ್ನು ಅಡ್ಮಿನಿಸ್ಟ್ರೇಟಿವ್ ಆಫೀಸರಿಗೆ ವಹಿಸಿ, ನಂತರ ಇಲಾಖೆಯವರು ಏನಾದರೂ ಮಾಡುವುದಕ್ಕೆ ಸಾಧ್ಯ ಆಗುತ್ತದೆಂದು ಹೇಳುತ್ತೇನೆ. ಡೈರೆಕ್ಟರ್ ಆಫೀಸಿನಲ್ಲಿ ಒಂದು ಜಾತ್ರೆ, ಮಿನಿಸ್ಟರ್ ಆಫೀಸ್‌ನಲ್ಲಿ ಜಾತ್ರೆ, ಸೆಕ್ರೆಟರಿ ಆಫೀಸ್‌ನಲ್ಲಿ ಜಾತ್ರೆ ಇರು ವುದನ್ನು ನಾವು ನೋಡುತ್ತೇವೆ. ಮಂತ್ರಿಗಳು ಇದುವರೆಗೆ ಬರೀ ಟ್ರಾನ್ಸ್‌ಫರ್ ಮಾತ್ರ ಮಾಡಿ ದ್ದಾರೆ ಬೇರೆ ಏನೂ ಕೆಲಸ ಮಾಡುವುದಕ್ಕೆ ಸಮಯ ಇರುವುದಿಲ್ಲ. ನಾಳೆಯಿಂದ ಅಡ್ಮಿ. ಸ್ಟ್ರೇಟಿವ್ ಆಫೀಸರ್ ಅಥವಾ ಅಸಿಸ್ಟೆಂಟ್ ಅಡ್ಮಿನಿಸ್ಟ್ರೇಟಿವ್ ಆಫೀಸರ್ ಯಾರು ಇದ್ದಾರೋ ಅವರಿಗೆ ವರ್ಗಾವರ್ಗಿ ಕೆಲಸವನ್ನು ವಹಿಸಿ ತಾವು ಇಲಾಖೆ ಅಭಿವೃದ್ಧಿಪಡಿಸತಕ್ಕ ಕಾರ್ಯವನ್ನು ಮಾಡಬೇಕು ಎಂದು ನಮ್ರತೆಯಿಂದ ಸಲಹೆ ಮಾಡುತ್ತೇನೆ.

ಇನ್ನೊಂದು ಸಲಹೆಯನ್ನು ನಾನು ಮೊದಲೇ ಹೇಳಿದೆ. 1969ರಲ್ಲಿ ರೆವಿನ್ಯೂ ಡಿವಿಷನ್ ಯಾವರೀತಿ ಇದ್ದವೋ, ಅದೇ ರೀತಿ ನಾಲ್ಕು ರೆವಿನ್ಯೂ ಡಿವಿಷನ್ ಸೃಷ್ಟಿ ಮಾಡಿ ಅಲ್ಲಿಗೆ ಒಬ್ಬ ಜಾಯಿಂಟ್ ಡೈರೆಕ್ಟರ್ ಪೋಸ್ಟ್ ಮಾಡಿ ಆ ಡಿವಿಷನ್‌ನಲ್ಲಿ ವರ್ಗಾವರ್ಗಿ ಅವರೇ ಮಾಡಿಕೊಳ್ಳ

(ಶ್ರೀ ಎಚ್. ಪುಟ್ಟದಾಸ್)

ಬೇಕು ಎಂದು ಮಾಡಿದರೆ ಏನಾದರೂ ಈ ಇಲಾಖೆಗೆ ಉಪಕಾರವಾಡಿದಂತಾಗುತ್ತದೆ. ಈ ಇಲಾಖೆಯನ್ನು ತಾವು ಮಂತ್ರಿಗಳಾದ ಮೇಲೆ ಅಭಿವೃದ್ಧಿಪಡಿಸುತ್ತೀರೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಬೇರೆ ಇಲಾಖೆಯ ರೀತಿ ನಿಮ್ಮ ಇಲಾಖೆ ಹಣದ ಕೊರತೆಯನ್ನು ಎದುರಿಸಬೇಕಾಗಿಲ್ಲ. ವಿಶ್ವಸಂಸ್ಥೆಗಳಾದ ಡಬ್ಲ್ಯು.ಎಚ್.ಓ. ಯೂನಿಸೆಫ್, ನಾರ್ವೇಜಿಯನ್ ಏಡ್, ಹೀಗೆ ಬೇಕಾದಷ್ಟು ಸಂಸ್ಥೆಗಳು ನಮ್ಮ ನೆರವಿಗೆ ಬರುವ ಅವಕಾಶವಿದೆ. ಆದ್ದರಿಂದ ನನ್ನ ನಮ್ರತೆಯ ಸಲಹೆ ಏನೆಂದರೆ, ವರ್ಗಾವರ್ಗಿಗಳನ್ನು ಮಾಡುವುದನ್ನು ತಮ್ಮ ಕೈಯಿಂದ ಬೇಗನೆ ತಪ್ಪಿಸಿ ಆ ಕಡೆ ಗಮನ ಕೊಡಬೇಕು ಎಂದು ನನ್ನ ಪ್ರಾರ್ಥನೆಯನ್ನು ಸಲ್ಲಿಸುತ್ತೇನೆ, ಒಳ್ಳೆಯ ವಸತಿ, ಶುದ್ಧವಾದ ನೀರು, ಆಹಾರ ಇದರ ಕಡೆಗೆ ಈ ಇಲಾಖೆಯವರು ಗಮನ ಕೊಡಬೇಕು.

ಶ್ರೀ ಎಚ್. ಸಿದ್ಧವೀರಪ್ಪ.—ಈಗಲಾದರೂ, ಕ್ಲಾಸ್ ಒಂದು ವಿನಹ ಬಾಕಿ ಯಾವ ವರ್ಗಾವರ್ಗಿಗಳನ್ನು ಸರ್ಕಾರ ಮಾಡುತ್ತಿಲ್ಲ. ಯಾರಾದರೂ ಬಂದು ಕೇಳಿದರೆ, ಸಂಬಂಧಪಟ್ಟವರ ಹತ್ತಿರ ಹೋಗಿ ಎಂದು ಕಳುಹಿಸುತ್ತೇನೆ. ನಾನು ಯಾವುದೂ ಅಂತಹ ಆರ್ಡರ್ ಮಾಡಿಲ್ಲ. ಯಾರಾದರೂ ಮಾನ್ಯ ಸದಸ್ಯರು ನನ್ನ ಹತ್ತಿರ ವರ್ಗದ ವಿಷಯದಲ್ಲಿ ಬಾರದಿದ್ದರೆ ದೇವರಿಗೆ ಕೈಮುಗಿಯುತ್ತೇನೆ.

ಶ್ರೀ ಎಚ್. ಪುಟ್ಟದಾಸ್.—ನಮ್ಮ ದೇಶ ಬಡ ದೇಶ, ಒಳ್ಳೆಯ ವಸತಿ, ಒಳ್ಳೆಯ ಆಹಾರ, ಶುದ್ಧವಾದ ನೀರು, ಗ್ರಾಮ ನೈರ್ಮಲ್ಯ, ಕೊಳಚೆ ಪ್ರದೇಶ ನಿರ್ಮೂಲನ ಇವೆಲ್ಲ ಆಗುವವರೆಗೆ ದೇಶದ ಕಾಯಿಲೆಯನ್ನು ಹೊರತಕ್ಕ ಜವಾಬ್ದಾರಿ ಪೂರ್ತ ಆರೋಗ್ಯ ಇಲಾಖೆಯದಾಗಿದೆ. ಹೊಸ ಆಸ್ಪತ್ರೆಗಳನ್ನು ತೆರೆಯಬೇಕಾದುದು ನಿಜವಾದರೂ, ಇರುವ ಆಸ್ಪತ್ರೆಗಳನ್ನು ಒಳ್ಳೆಯ ಸ್ಥಿತಿಯಲ್ಲಿರುವ ಹಾಗೆ ಮಾಡಬೇಕು. ಅಲ್ಲಿಯವರೆಗೆ ಹೊಸ ಆಸ್ಪತ್ರೆಗಳನ್ನು ತೆರೆಯುವುದನ್ನು ನಿಲ್ಲಿಸಬೇಕು. ಈ ಇಲಾಖೆಯು ಉತ್ತಮವಾದ ಸ್ಥಿತಿಗೆ ಬರಬೇಕಾದರೆ, ಈ ವೃತ್ತಿಯನ್ನು ಅವಲಂಬಿಸಿದ ವೈದ್ಯರನ್ನು ಮಾಡುವುದು ಯಾವ ವಿಧದಲ್ಲಿಯೂ ಒಳ್ಳೆಯದಲ್ಲ. ಕೆಲವು ನೀಚ ಮಟ್ಟದ ವೈದ್ಯರು ಇರಬಹುದು.

ಇನ್ನು ಅಡ್ಮಿಷನ್ ಮಾಡುವಾಗ ಕೆಲವು ಪ್ರೊಫೆಸರ್ಸ್ ವಾರ್ಡ್ ಬಾಯ್ಸ್‌ಗೆ ಇಷ್ಟು ದುಡ್ಡು ಎಂದು ಇರುತ್ತದೆ. ಅಷ್ಟು ಕೊಡಬೇಕು ಕೊಟ್ಟರೆ ಅಡ್ಮಿಷನ್ ಸಿಕ್ಕುತ್ತದೆ. ಮೊನ್ನೆಯ ದಿವಸ ಒಬ್ಬರಿಗೆ ಪ್ರಮೋಷನ್ ಮಾಡಿ ಕಳುಹಿಸಿದ್ದಾರೆ. ಆತನಿಗೆ ಇಷ್ಟು ದುಡ್ಡು ಅಂತ ಕೊಟ್ಟರೆ ವಾರ್ಡಗೆ ಸೇರಿಸುತ್ತಿದ್ದರು. ಒಂದು ಸಾರಿ ಈ ಪುಣ್ಯಾತ್ಮ ಎಕ್ಸಾಮಿನರ್ ಆಗಿದ್ದಾಗ ಗುಂತಕಲ್‌ನಿಂದ ಹುಡುಗನ ಕಡೆಯವರು ಯಾರೋ ಬಂದು ಇವರಿಗೆ ಐದುನೂರು ರೂಪಾಯಿ ಕೊಡುತ್ತೇವೆ ಪಾಸ್ ಮಾಡಿಸಿ ಎಂದಾಗ ಅವರ ಹತ್ತಿರ ದುಡ್ಡು ತೆಗೆದುಕೊಂಡು ಪಾಸ್ ಮಾಡಿಸಿದರು. ಮತ್ತೆ ಅವರಿಗೆ ಪತ್ರ ಬರೆದು ಇನ್ನು ಯಾವುದಾದರೂ ಕ್ಯಾಂಡಿಡೇಟ್ ಇದ್ದರೆ ದಯವಿಟ್ಟು ಕಳುಹಿಸಿ, ಇನ್ನು ಮೇಲೆ ಬರುವವರು ಒಂದು ಸಾವಿರ ರೂಪಾಯಿ ಫೀಸ್ ಕೊಡಬೇಕೆಂದು ತಿಳಿಸಿದ್ದಾರೆ. ಎಲ್ಲರೂ ಅಂಥ ಅಯೋಗ್ಯರು ಎಂದು ಭಾವಿಸಬಾರದು.

ಆಯುರ್ವೇದಕ್ಕೆ ಪ್ರೋತ್ಸಾಹ ಕೊಡಬೇಕು ಎಂದು ನಾನು ಒಪ್ಪುತ್ತೇನೆ. ಶುದ್ಧ ಆಯುರ್ವೇದ ನಮ್ಮ ದೇಶದಲ್ಲಿ ಎಲ್ಲರೂ ಅವಲಂಬಿಸಬೇಕು ಎನ್ನುವ ಕಾಲ ಬಹು ಬೇಗ ಬರಲಿ ಎಂದು ಆಶಿಸುತ್ತೇನೆ. ಮಂತ್ರಿಗಳ ಮನೆಯಲ್ಲಿ ಒಂದು ಸಲ ಯಾರೋ ಒಬ್ಬರು ಹರಿಹರದ ಮುನಿಸಿಪಲ್ ಕೌನ್ಸಿಲರ್ ಬಂದು ಇಡೀ ಇಲಾಖೆಯ ಬಗ್ಗೆ ಮಾತನಾಡಿದರು. ಆಗ ಮಂತ್ರಿಗಳು ನಿಮ್ಮ ಕ್ವಾಲಿಫಿಕೇಷನ್ ಏನು ಎಂದು ಕೇಳಿದರು. ನನ್ನದು ಮಾಸ್ಟರ್ ಡಿಗ್ರಿ ಇನ್ ಆಯುರ್ವೇದ ಎಂದು ಹೇಳಿದರು. ಆದರೆ ಪೆನ್ಸಿಲಿನ್ ಯಾತಕ್ಕೆ ಕೊಡುತ್ತಾರೆ ಎಂದು ಕೇಳಿದರೆ, ಅದು ಒಂದು ತರಹ ಸಿಸ್ಟಮ್ ಎಂದು ಅವರು ಹೇಳಿದರು. ಈ ರೀತಿಯಾದರೆ ಒಳ್ಳೆಯದಲ್ಲ. ಆಯುರ್ವೇದವನ್ನು ಅವಲಂಬಿಸಿ ಅಲೋಪತಿ ಪ್ರಾಕ್ಟೀಸ್ ಮಾಡುವುದು ಒಳ್ಳೆಯದಲ್ಲ. ಆಯುರ್ವೇದ ಪಾಸ್ ಮಾಡಿಕೊಂಡು ಬೋರ್ಡು ಹಾಕಿಕೊಂಡು ನಂತರ ಒಂದೇ ಒಂದು ವೃತ್ತಿ ಮಾಡುತ್ತಾರೆ. ಅದು ಏನೆಂದರೆ, ಅವಿವಾಹಿತ ಹೆಣ್ಣು ಮಕ್ಕಳು ಅಡ್ಡದಾರಿಗೆ ಹೋದ ಸಂದರ್ಭದಲ್ಲಿ ಮಾನರಕ್ಷಣೆ ಮಾಡುವುದಕ್ಕೆ ಹೋಗುತ್ತಾರೆ. ಈ ರೀತಿ ಆಯುರ್ವೇದ ಪಾಸ್ ಮಾಡಿ ಬೋರ್ಡ್ ಹಾಕಿಕೊಂಡು ಲಕ್ಷಾಂತರ ರೂಪಾಯಿಗಳನ್ನು ಸಂಪಾದನೆ ಮಾಡುವ ಕ್ವಾಕ್‌ಡಾಕ್ಟರನ್ನು ಶಿಕ್ಷೆ ಮಾಡುವುದಕ್ಕೆ ಯಾವ ಕಾನೂನೂ ಇಲ್ಲ. 1962ನೇ ಇಸವಿಯಲ್ಲಿ ಪಾರ್ಲಿಮೆಂಟಿನಲ್ಲಿ ಒಂದು ಮಸೂದೆ ಇಂಟ್ರಡ್ಯೂಸ್ ಆಗಿತ್ತು, ಅದು ಮತ್ತೆ ಬರಲಿಲ್ಲ. ಆದುದರಿಂದ ಅವರ ಮೇಲೆ ಯಾವ ವಿಧವಾದ ನಿರ್ಬಂಧಗಳನ್ನು ಹಾಕಲೂ ಈಗ ಕಾನೂನಿಲ್ಲ. ಐಸೋಲೇಷನ್ ಆಸ್ಪತ್ರೆಯಲ್ಲಿ ಪ್ರತಿದಿವಸವೂ ಹೆಚ್ಚಾಗಿ ಟೆಟಾನಸ್ ಕೇಸುಗಳು ಮತ್ತು ಅಬಾರ್ಷನ್ ಕೇಸುಗಳು ಇರುತ್ತವೆ. ಆಯುರ್ವೇದಕ್ಕೆ

ಪ್ರೋತ್ಸಾಹ ಕೊಡಬೇಕು ಎನ್ನುವುದನ್ನು ನಾನು ಒಪ್ಪಿಕೊಳ್ಳುವುದಾದರೂ ಈ ರೀತಿಯ ಆಯುರ್ವೇದವನ್ನು ನಾನು ಒಪ್ಪುವುದಿಲ್ಲ. ಆದರೆ ಕೆಲವರು ಈ ಆಯುರ್ವೇದದಲ್ಲಿ ನಂಬಿಕೆ ಇಟ್ಟಿರುತ್ತಾರೆ. ನಮ್ಮ ತಾಯಿಯವರಿಗೆ ಸೀರಿಯಸ್ ಎಂದು ಒಂದು ಸಾರಿ ನಮ್ಮ ಊರಿನಿಂದ ಒಂದು ಟೆಲಿಗ್ರಾಂ ಬಂತು. ನಾನು ಆ ತಕ್ಷಣ ನನ್ನ ಸ್ನೇಹಿತರೊಬ್ಬರನ್ನು ಕರೆದುಕೊಂಡು ಹೋದೆ. ಅಲ್ಲಿ ನೋಡಿದರೆ, ಅವರಿಗೆ ಬ್ರಾಂಕೈಟಿಸ್ ಆಗಿತ್ತು. ಡಾಕ್ಟರ್ ಹತ್ತಿರ ಹೋಗೋಣ ಅವರು ಪ್ರಿಕ್ ಕೊಡುತ್ತಾರೆ ಎಂದು ಹೇಳಿದರೆ, ಅದಕ್ಕೆ ನಮ್ಮ ತಾಯಿಯವರು ಪ್ರಿಕ್ ಕೊಡುವುದು ಬೇಡ, ಇನ್ನೊಬ್ಬರು ಒಳ್ಳೆಯ ಡಾಕ್ಟರು ಇದ್ದಾರೆ, ಅವರಿಂದ ಔಷಧಿ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು. ಅವರ ಹೆಸರು ಮಲ್ಲಯ್ಯ ಎಂದು, ಅವರೇ ಆ ಊರಿಗೆ ವೈದ್ಯರು, ಅವರು ವೆಟರನರಿ ಆಸ್ಪತ್ರೆಯ ಕಾಂಪೌಂಡರು. ಅವರು ನಾಲ್ಕು ಆಣೆಗೊಂದು ಇಂಜಕ್ಷನ್ ಕೊಡುತ್ತಾರೆ. ಅದಕ್ಕೋಸ್ಕರ ಅವರಿಗೆ ಇರತಕ್ಕ ಮಹತ್ವ ಅಲೋಪತಿ ಪ್ರೊಫೆಸರಿಗೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ಸಮಾಜ ಕಲ್ಯಾಣ ಮತ್ತು ಅಭಿವೃದ್ಧಿ ಶಾಖೆಗಳ ಮಂತ್ರಿಗಳು).—ಅದು ರೋಗಿಗಳ ನಂಬಿಕೆ ಮೇಲೆ ಹೋಗುತ್ತದೆ.

ಶ್ರೀ ಎಚ್. ಪುಟ್ಟದಾಸ್.—ನಂಬಿಕೆ ಮೇಲೂ ಇರುತ್ತದೆ. ರೋಗಿಗಳಿಗೆ ಔಷಧಿ ಕೊಡುವ ವಿಷಯ ಒಂದು ಕಡೆ, ಇನ್ನು ರೋಗಿಗಳನ್ನು ನೋಡಿಕೊಳ್ಳತಕ್ಕ ಆಸ್ಪತ್ರೆಗಳಿಗೆ ನಾವು ಸರ್ಕಾರದ ವತಿಯಿಂದ ಒದಗಿಸಿರತಕ್ಕ ಸೌಲಭ್ಯಗಳು ಏನು ಎನ್ನತಕ್ಕ ಬಗ್ಗೆ ಕೊಂಚ ಹೊತ್ತು ಮಾತನಾಡುತ್ತೇನೆ.

ದೊಡ್ಡ ಆಸ್ಪತ್ರೆಗಳಲ್ಲಿ ಜರೂರಾದ ಮಹತ್ವದ ಕಾಯಿಲೆಗಳ ರೋಗಿಗಳನ್ನು ಒಂದು ಕಡೆ ಮಿಕ್ಸ್ ಮಾಡಿ ಮಲಗಿಸುವುದು ನೋಡಿದರೆ ಆಸ್ಪತ್ರೆಯಲ್ಲಿ ಇರತಕ್ಕ ಇಲಾಖೆಗಳಲ್ಲಿ ಸಹಕಾರ ಇಲ್ಲ ಎಂದು ಹೇಳಬೇಕಾಗಿದೆ. ಔಟ್ ಪೇಷಂಟ್ ಡಿಪಾರ್ಟ್‌ಮೆಂಟ್ ಬೇರೆ ಕಡೆ ಇಡತಕ್ಕ ಬಗ್ಗೆ ನಾವು ನಮ್ಮ ಗಮನವನ್ನು ಹರಿಸಿದ್ದೇವೆಯೋ ಎಂದು ನೋಡುವುದಾದರೆ, ಇದುವರೆಗೂ ನಾವು ಅದನ್ನು ಮಾಡಿಲ್ಲ. ಇದನ್ನು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ನಮ್ಮಲ್ಲಿ ಅತ್ಯುತ್ತಮ ವೈದ್ಯರಿದ್ದಾರೆ. ಲಂಡನ್‌ನಲ್ಲಿ ಮತ್ತು ಅಮೇರಿಕಾ ದೇಶದಲ್ಲಿ ನಮ್ಮ ವೈದ್ಯರು ಅಚ್ಚುಮೆಚ್ಚಿನ ಅರ್ಹತಾ ಪತ್ರಗಳನ್ನು ಪಡೆದಿದ್ದಾರೆಂದು ತಮ್ಮ ಗಮನಕ್ಕೆ ತರಲು ಇಚ್ಛೆ ಪಡುತ್ತೇನೆ. ಆದರೆ ಅವರು ಇಲ್ಲಿದ್ದಾರೆಂದು ಗಮನಿಸದೆ ಇರುವುದು ದುರಾದೃಷ್ಟಕರವಾದ ವಿಷಯ. ಶ್ರೀ ದೇಸಾಯಿಯವರಂತಹವರು ಈ ಇಲಾಖೆಯ ಮುಖ್ಯ ಅಧಿಕಾರಿಗಳಾಗಿದ್ದಾಗ ದಿವಂಗತ ಬಾಳಿಗಾ ಅವರು ಮದ್ರಾಸ್ ಸ್ಟೇಟ್‌ಗೆ ಟ್ರೀಟ್‌ಮೆಂಟ್‌ಗೆ ಹೋದರು ಅಂದರೆ ನಮ್ಮ ಮಟ್ಟ ಯಾವ ರೀತಿ ಇದೆಯೆಂದು ನಾವು ಒಪ್ಪಿಕೊಳ್ಳಬೇಕಾಗಿದೆ. ಆದರೆ ಇದು ವೈದ್ಯರ ಜ್ಞಾನದ ಅಭಾವ ಎಂದು ನಾನು ಒಪ್ಪುವುದಿಲ್ಲ. ಇದು ನಾವು ಒದಗಿಸಿರತಕ್ಕ ಸೌಲಭ್ಯಗಳ ಕೊರತೆ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಇದನ್ನು ತಾವೂ ಒಪ್ಪಿಕೊಳ್ಳಬೇಕು. ಇದಕ್ಕಾಗಿ ನಾಚಿಕೆ ಪಡುವುದಕ್ಕಿಂತ ಇನ್ನು ಮೇಲೆ ಆದರೂ ಎಚ್ಚರಿಕೆ ವಹಿಸುವುದನ್ನು ಕಲಿಯಬೇಕು. ಉದಾಹರಣೆಗೆ ಹಿಂದೆ ಆರೋಗ್ಯ ಮಂತ್ರಿಗಳಾದ ಶ್ರೀ ರಾಮಕೃಷ್ಣ ಅವರ ಸಹೋದರರಿಗೆ ಇಂಟಸ್ಟೈನಲ್ ಅಬ್ಸ್ಟ್ರಕ್ಷನ್ ಇತ್ತು. ಸಾಮಾನ್ಯವಾಗಿ ಇಂಟಸ್ಟೈನಲ್ ಅಬ್ಸ್ಟ್ರಕ್ಷನ್ ಇದೆ ಎಂದು ಗೊತ್ತಾದ ಕೂಡಲೆ ಆಪರೇಷನ್ ಮಾಡುತ್ತಾರೆ. ಆದರೆ ಇನ್‌ವೆಸ್ಟಿಗೇಷನ್ ರಿಪೋರ್ಟು ಬರುವುದಕ್ಕೆ 24 ದಿವಸಗಳಾಯಿತು. ಅಷ್ಟು ಹೊತ್ತಿಗೆ ಗ್ಯಾಂಗ್ರಿನ್ ಆರು ಇಂಚು ಜಾಸ್ತಿಯಾಗಿತ್ತು. ಆಪರೇಷನ್ ಮಾಡಿದರೂ ಪೇಷಂಟ್ ಸತ್ತುಹೋದರು. ನಂತರ ಮಂತ್ರಿಗಳು ಕೈಮುಗಿದು ಈ ವಿಷಯವನ್ನು ಅಸೆಂಬ್ಲಿಯಲ್ಲಿ ಮಾತನಾಡಬೇಡಿ, ಇಲಾಖೆಗೆ ಕೆಟ್ಟಹೆಸರು ಬರುತ್ತದೆ ಎಂದು ಹೇಳಿದರು. ಮಂತ್ರಿಗಳ ತಮ್ಮನ ಇನ್‌ವೆಸ್ಟಿಗೇಷನ್ ರಿಪೋರ್ಟು ಬರಬೇಕಾದರೆ, 24 ದಿವಸವಾಯಿತು ಎಂದರೆ ಎಷ್ಟೊಂದು ಸಮರ್ಪಕವಾದ ಏರ್ಪಾಡು ಇದೆ ಎಂಬುದನ್ನು ಖಂಡಿತವಾಗಿಯೂ ಗಮನಿಸಬೇಕು. ಈ ಸಂದರ್ಭದಲ್ಲಿ ನಾನಾದರೂ ಹೇಳುತ್ತೇನೆ, ಸರ್ಜನ್ ಮತ್ತು ಫಿಜಿಷಿಯನ್‌ಗೆ ಮಾತ್ರ ಕೆಟ್ಟ ಹೆಸರು ಬರುತ್ತದೆ. ರಿಪೋರ್ಟು ಕಳುಹಿಸದೆ ಇದ್ದ ಪೆಥಾಲಜಿಸ್ಟ ಅಥವಾ ರೇಡಿಯಾಲಜಿಸ್ಟ ಇವರು ಯಾರೂ ನಮ್ಮ ದೃಷ್ಟಿಗೆ ಬರುವುದಿಲ್ಲ. ನೇರವಾಗಿ ಸಿಕ್ಕಿಕೊಳ್ಳತಕ್ಕವರು ಸರ್ಜನ್ ಅಥವಾ ಫಿಜಿಷಿಯನ್. ಈ ಕ್ರಮ ತಪ್ಪಬೇಕೆಂದು ಸಲಹೆ ಮಾಡುತ್ತೇನೆ.

2-00 P.M.

ಗ್ರಾಮಾಂತರ ಪ್ರದೇಶಗಳ ಬಗ್ಗೆ ಕೆಲವು ವಿಷಯಗಳನ್ನು ನಾನು ಹೇಳುತ್ತೇನೆ. ಹಳ್ಳಿಗಳ ಕಡೆ ಹೋಗಿ ಕೆಲಸ ಮಾಡುವುದಕ್ಕೆ ವೈದ್ಯರು ಇಷ್ಟಪಡುವುದಿಲ್ಲ ಎನ್ನುವ ಮಾತು ಬಂದಿದೆ. ಇದು ನಿಜವಲ್ಲ. ಎಂ. ಎಸ್. ಮತ್ತು ಎಂ. ಡಿ. ಪಾಸು ಮಾಡಿರತಕ್ಕವರು ಹಳ್ಳಿಗಳ ಕಡೆ ಹೋಗುತ್ತಾರೆ. ಅವರಿಗೆ ಪೋಸ್ಟಿಂಗ್ ಆರ್ಡರ್, ಕೊಡಿ ಈಗಲೂ ಸಹ ಅವರು ಹಳ್ಳಿಗಳ ಕಡೆ ಹೋಗುವುದಿಲ್ಲ

(ಶ್ರೀ ಎಚ್. ಪುಟ್ಟದಾಸ್)

ಎನ್ನತಕ್ಕಂಥಾ ದೂರನ್ನು ನಿಲ್ಲಿಸೋಣ. ಬೇರೆ ಯಾವ ರಾಜ್ಯದಲ್ಲಿಯೂ ಇಲ್ಲದೇ ಇರುವಷ್ಟು ಮೆಡಿಕಲ್ ಕಾಲೇಜುಗಳು ನಮ್ಮ ರಾಜ್ಯದಲ್ಲಿ ಇವೆ. ಇವೊತ್ತು ಸುಮಾರು ಎರಡು ಸಾವಿರ ಜನ ವೈದ್ಯರನ್ನು ನಿರುದ್ಯೋಗಿಗಳಾಗಿ ನಿರ್ಮಾಣ ಮಾಡಿದ್ದಾರೆ. ಇವೊತ್ತು ಎಂ. ಡಿ. ಪಾಸು ಮಾಡಿರ ತಕ್ಕ ಒಬ್ಬ ಡಾಕ್ಟರನ್ನು ಪ್ರೈಮರಿ ಹೆಲ್ತ್ ಸೆಂಟರಿಗೆ ಹಾಕಿದರೆ ಅವರು ತಮ್ಮ ಜ್ಞಾನವನ್ನು ಬಳಸುವ ದೃಷ್ಟಿಯಿಂದ ಅವರಿಗೆ ಏನು ಸೌಲಭ್ಯವನ್ನು ಕಲ್ಪಿಸಿಕೊಟ್ಟಿದ್ದೀರಿ ? ಅತನಿಗೆ ಯಾವುದೇ ಒಂದು ಸಲಕರಣೆ ಬೇಕಾದರೂ ಆತ ಬೆಂಗಳೂರಿಗೆ ಬರಬೇಕು. ಆದ್ದರಿಂದ ಹೆಲ್ತ್ ಯೂನಿಟ್‌ಗಳಲ್ಲಿ ಆಪರೇಷನ್ ಮಾಡುವುದಕ್ಕೆ ಬೇಕಾಗಿರತಕ್ಕ ಹಾಗೂ ಇತರ ಸಲಕರಣೆಗಳನ್ನು ಒದಗಿಸುವುದರ ಕಡೆಗೆ ಸರ್ಕಾರದವರು ತಮ್ಮ ಗಮನವನ್ನು ಹರಿಸಬೇಕು. ಈ ರೀತಿ ಅವರಿಗೆ ಬೇಕಾದ ಸಲಕರಣೆಗಳನ್ನು ಒದಗಿಸದೆ ವೈದ್ಯರನ್ನು ನಿಂದಿಸುವುದು ಸರಿಯಲ್ಲ. ಹೆಲ್ತ್ ಯೂನಿಟ್‌ಗಳಿಗೆ ಗ್ರಾಮಾಂತರ ಆಸ್ಪತ್ರೆ ಗಳಿಗೆ ಪರಿಣತರಾದ ವೈದ್ಯರನ್ನು ಹಾಕಬೇಕೆಂದು ಎಲ್ಲರೂ ಹೇಳುತ್ತಾರೆ. ಆದರೆ ಆತನಿಗೆ ಬೇಕಾದ ಅಸಿಸ್ಟೆನ್ಸ್ ಎಂದರೆ ಕಾಂಪೌಂಡರ್, ನರ್ಸ್ ಮತ್ತು ಔಷಧಿ ಸಾಮಗ್ರಿಗಳು ಇವುಗಳನ್ನು ಸರಿಯಾಗಿ ಒದಗಿಸದೇಹೋದರೆ ಅವನು ಅಂಥಾ ಸ್ಥಳದಲ್ಲಿ ಒಬ್ಬ ತನ್ನ ಕೆಲಸವನ್ನು ನಿರ್ವಹಿಸುವುದು ಬಹಳ ಕಷ್ಟವಾಗುತ್ತದೆ. ಇದನ್ನು ಸರ್ಕಾರದವರು ಗಮನಿಸಬೇಕು. ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ ಔಟ್ ಪೇಷಂಟಿನಲ್ಲಿ 200 ರಿಂದ 400 ರವರೆಗೂ ರೋಗಿಗಳು ಬರುತ್ತಾರೆ. ಈ ಹೊಣೆಯನ್ನು ಡಾಕ್ಟರು ನಿರ್ವಹಿಸಬೇಕಾದರೆ ಅವರಿಗೆ ಸಾಕಷ್ಟು ಸೌಲಭ್ಯ ಮತ್ತು ಸಲಕರಣೆಗಳನ್ನು ಒದಗಿಸಬೇಕು. ಡಾಕ್ಟರಿಗೆ ಕಾಂಪೌಂಡರು ಮೊದಲನೆಯ ಶತ್ರು. ಏತಕ್ಕೆಂದರೆ ಡಾಕ್ಟರು ರೋಗಿಗೆ ಹೊರಗಡೆ ಒಂದು ಇಂಜಕ್ಷನ್-ಕೊಡಬೇಕಾದರೆ 3 ರೂಪಾಯಿಗಳನ್ನು ಚಾರ್ಜ್ ಮಾಡಿದರೆ, ಕಾಂಪೌಂಡರು 8 ಆಣೆ ತೆಗೆದುಕೊಂಡು ಒಂದು ಇಂಜಕ್ಷನ್ ಕೊಡುತ್ತಾನೆ. ಅದರ ಜೊತೆಗೆ ಕಾಂಪೌಂಡರು ರೋಗಿಗೆ ಒಳ್ಳೆಯ ಮಿಕ್ಸ್‌ಚರ್ ಬೇರೆ ಕೊಡುತ್ತಾನೆ. ಇದರಿಂದ ರೋಗಿಗೆ ಕಾಂಪೌಂಡರಿಂದ ಎರಡು ಬೆನಿಫಿಟ್ ಸಿಕ್ಕುತ್ತದೆ. ಅದಕ್ಕೋಸ್ಕರ ರೋಗಿಗಳು ಕಾಂಪೌಂಡರ ಹತ್ತಿರ ಹೋಗುತ್ತಾರೆ. ಇನ್ನು ಅವನಿಗೆ ಎರಡನೆಯ ಶತ್ರು ಮಿಡ್ ವೈಫ್ ಅವನು ಏನು ಮಾಡುತ್ತಾನೆ !

ಶ್ರೀ ಎಚ್. ಸಿದ್ದವೀರಪ್ಪ.—ಕಾಂಪೌಂಡರು ಮತ್ತು ಮಿಡ್‌ವೈಫ್ ಇಲ್ಲದಿದ್ದರೆ ಡಾಕ್ಟರ್ ಪುಂಗಿ ಬಂದಾಗುತ್ತದೆ.

ಶ್ರೀ ಎಚ್. ಪುಟ್ಟದಾಸ್.—ಹೀಗೆ ಡಾಕ್ಟರಿಗೆ ಮೊದಲನೆಯ ಶತ್ರು ಕಾಂಪೌಂಡರ್, ಎರಡನೆಯ ಶತ್ರು ಮಿಡ್‌ವೈಫ್. ಮಂತ್ರಿಗಳು ಇದನ್ನು ಬಾಯಿಬಿಟ್ಟು ಹೇಳುವುದಿಲ್ಲ. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ನರ್ಸುಗಳು ಮತ್ತು ಲೇಡಿ/ಡಾಕ್ಟರುಗಳಿಗೆ ಕೆಲವು ಕಡೆ ಕ್ವಾರ್ಟರ್ಸ್ ಇವೆ. ಕೆಲವು ಕಡೆ ಕ್ವಾರ್ಟರ್ಸ್‌ಗಳು ಇಲ್ಲ. ಅಂಥಾ ಸಂದರ್ಭದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ನರ್ಸುಗಳು ಆ ಪ್ರದೇಶದಲ್ಲಿರತಕ್ಕ ಲೋಕಲ್ ಲೀಡರುಗಳ ರಕ್ಷಣೆಗೆ ಹೋಗುತ್ತಾರೆ. ಹೀಗೆ ಯಾವುದೋ ಒಂದು ರೀತಿಯಲ್ಲಿ ಅವರು ಸ್ವಂತ ಏರ್ಪಾಟಿನಿಂದ ವಸತಿಯನ್ನು ವ್ಯವಸ್ಥೆ ಮಾಡಿಕೊಳ್ಳು ತ್ತಿದ್ದಾರೆ. ಡಾಕ್ಟರಿಗೆ ನರ್ಸುಗಳು ಬೇಕಾದಾಗ ಡಾಕ್ಟರೇ ಆಕೆಯನ್ನು ಹುಡುಕಿಕೊಂಡು ಹೋಗ ಬೇಕಾಗುತ್ತದೆಯೇ ವಿನಾ ನರ್ಸು ಆಸ್ಪತ್ರೆಯನ್ನು ಹುಡುಕಿಕೊಂಡು ಬರುವುದಿಲ್ಲ. ಒಂದು ಸಂದರ್ಭದಲ್ಲಿ ನರ್ಸು ಡಾಕ್ಟರ ಕಪಾಳಕ್ಕೆ ಹೊಡೆದ ಸಂದರ್ಭವು ಕೂಡ ಇದೆ. ಒಂದು ಸಂದರ್ಭ ದಲ್ಲಿ ಒಬ್ಬರು ಡಾಕ್ಟರು ವಿಪರೀತವಾಗಿ ಲಂಚತೆಗೆದುಕೊಳ್ಳುತ್ತಿದ್ದಾರೆ ಎಂದು ಅದನ್ನು ವಿಜಿಲೆನ್ಸ್ ಕಮಿಷನ್ನಿಗೆ ರಿಪೋರ್ಟ್ ಮಾಡಿದ್ದಾರೆ. ಇಂಥಾ ತೊಂದರೆಗಳೆಲ್ಲಾ ಉಂಟಾಗುತ್ತಿವೆ. ಈಗ ಸರ್ಕಾರ ದವರು ಒಂದು ಆಸ್ಪತ್ರೆಗೆ ಕೊಡತಕ್ಕಂಥಾ 4½ ಸಾವಿರ ರೂಪಾಯಿಗಳ ಗ್ರಾಂಟ್ ಏನಿದೆ ಅದರಲ್ಲಿ ಸುಮಾರು ಮೂರೂವರೆ ಸಾವಿರ ರೂಪಾಯಿಗಳು ಮಿಕ್ಸ್‌ಚರ್‌ಗೆ ಆಗುತ್ತದೆ. ನನ್ನ ಅಭಿಪ್ರಾಯ ದಲ್ಲಿ ಕಾಂಪೌಂಡರ ಹುದ್ದೆ ಬೇಕಾಗಿಲ್ಲ ಎಂದು ಕಾಣುತ್ತದೆ. ಏತಕ್ಕೆಂದರೆ ಮಿಕ್ಸ್‌ಚರ್‌ನಿಂದ ಯಾವ ಉಪಯೋಗವೂ ಆಗುತ್ತಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಇದರಲ್ಲಿ ನಾನು ನನ್ನ ಸ್ವಂತ ಅನುಭವವನ್ನು ಹೇಳುತ್ತೇನೆ. ಈಗ ಅನೇಕ ಪಾಯಿಜನ್ ಔಷಧಿಗಳು ಇರುತ್ತವೆ. ಅದನ್ನೆಲ್ಲಾ ಮಿಕ್ಸ್ ಮಾಡುವವರು ಯಾರು ; ಆದ್ದರಿಂದ ಇನ್ನು ಮುಂದೆ ನಾವು ಕಾಂಪೌಂಡರ್ ಎಂದು ಕರೆಯುವುದಿಲ್ಲ, ಡಿಪ್ಲೊಮಾ ಆದವರನ್ನು ಆ ಹುದ್ದೆಗೆ ನೇಮಿಸಿ ಫಾರ್ಮಸಿಸ್ಟ್ ಎಂದು ಕರೆಯುತ್ತೇವೆ.

ಶ್ರೀ ಎಚ್. ಪುಟ್ಟದಾಸ್.—ಇತ್ತೀಚೆಗೆ ಮಿಕ್ಸ್‌ಚರ್ ಉಪಯೋಗಕ್ಕೆ ಬರುತ್ತಿಲ್ಲ. ಎಲ್ಲಾ ಖಾಯಿಲೆಗಳಿಗೂ ಇಂಜಕ್ಷನ್ನೇ ಉಪಯೋಗಿಸುತ್ತಿದ್ದಾರೆ. ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ ಡಾಕ್ಟರು ಗಳಿಗೆ ಆಸ್ಪತ್ರೆಯ ಡ್ಯೂಟಿಯ ಜೊತೆಗೆ ಕೆಲವು ಲೋಕಲ್ ಕೇಸುಗಳು ಬೇರೆ ಬರುತ್ತವೆ. ಆದ್ದರಿಂದ

ತಾಲ್ಲೂಕು ಹೆಡ್‌ಕ್ವಾರ್ಟ್ರುಗಳಲ್ಲಿ ಡಾಕ್ಟರಿಗೆ ಹೆಚ್ಚಿನ ಕೆಲಸ ಇರುತ್ತದೆ. ಆದಕಾರಣ ತಾಲ್ಲೂಕು ಹೆಡ್‌ಕ್ವಾರ್ಟ್ರುಗಳಿಗೆ ಇಬ್ಬಿಬ್ಬರು ವೈದ್ಯರನ್ನು ನೇಮಕ ಮಾಡುವುದು ಸೂಕ್ತ. ಇದರಿಂದ ವೈದ್ಯರ ನಿರುದ್ಯೋಗವನ್ನು ಕೂಡ ಬಗೆಹರಿಸಿದಂತಾಗುತ್ತದೆ ಎಂದು ನಾನು ಸಲಹೆ ಮಾಡುತ್ತೇನೆ. ಪ್ರತಿಯೊಂದು ಕಡೆಯಲ್ಲಿಯೂ ಕೂಡ ಲೇಡಿ ಡಾಕ್ಟರು ಇಲ್ಲ, ಲೇಡಿ ಡಾಕ್ಟರು ಇಲ್ಲ, ಅವರನ್ನು ನೇಮಕ ಮಾಡಬೇಕೆಂದು ಅನೇಕರು ಹೇಳುತ್ತಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಕೆಲವು ಕಡೆ ಕ್ವಾರ್ಟ್ರುಗಳು ಇವೆ. ಕೆಲವು ಕಡೆ ಕ್ವಾರ್ಟರ್ಸ್ ಇಲ್ಲ. ಈಗ ಉದಾಹರಣೆಗೆ ಕೆ. ಆರ್. ನಗರಕ್ಕೆ ಒಬ್ಬರು ಲೇಡಿ ಡಾಕ್ಟರನ್ನು ನೇಮಕ ಮಾಡಿದ್ದಾರೆ. ಆಕೆ ಪಾಪ ಹೊಳೆಯಿಂದ ನೀರು ತರಿಸ ಬೇಕಾದರೆ ಒಂದು ತಿಂಗಳಿಗೆ 60 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಅದರಲ್ಲಿ ಅವರು ಸ್ನಾನ ಮಾಡುವುದಕ್ಕಾಗುವುದಿಲ್ಲ. ಅವರು ವಾರಕ್ಕೆ ಒಂದು ಸಾರಿ ಸ್ನಾನ ಮಾಡುವುದಕ್ಕೆ ಮೈಸೂರಿಗೆ ಬರಬೇಕಾಗುತ್ತದೆ. ಇಂಥಾ ಕೇಸುಗಳು ಬೇಕಾದಷ್ಟು ಇವೆ. ನನ್ನ ಕ್ಷೇತ್ರದಲ್ಲಿ ಒಬ್ಬರು ಷೆಡ್ಯೂಲ್ಡ್ ಕ್ಯಾಸ್ಟ್ ಲೇಡಿ ಡಾಕ್ಟರನ್ನು ನೇಮಕ ಮಾಡಿದ್ದಾರೆ. ಅವರಿಗೆ ವಾಸ ಮಾಡುವುದಕ್ಕೆ ಕ್ವಾರ್ಟರ್ ಇಲ್ಲ. ಅವರು ಏನು ಮಾಡಬೇಕು ? ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಲೇಡಿ ಡಾಕ್ಟರು ಮತ್ತು ನರ್ಸುಗಳಿಗೆ ಕ್ವಾರ್ಟ್ರುಗಳನ್ನು ಕಟ್ಟಿಸುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ನಾನು ಹೇಳುತ್ತೇನೆ.

ಈಗ ಬೆಂಗಳೂರು ನಗರದಲ್ಲಿ ಎರಡು ದೊಡ್ಡ ಆಸ್ಪತ್ರೆಗಳು ಇವೆ. ವಿಕ್ಟೋರಿಯಾ ಆಸ್ಪತ್ರೆಗೆ ಪ್ರತಿದಿವಸ ಸರಾಸರಿ ಎರಡು ಸಾವಿರ ಜನ ಬರುತ್ತಿದ್ದಾರೆ. ಆದರೆ ಈ ಜನಗಳಿಗೆ ಸರಿಯಾದ ಔಷಧೋಪಚಾರದ ವ್ಯವಸ್ಥೆ ಇಲ್ಲ. ಸಂಚಾರದ ಒತ್ತಡದಿಂದ ಆಕ್ಸಿಡೆಂಟ್ ಆದವರು, ಫ್ಯಾಕ್ಟರಿಯ ಕಾರ್ಮಿಕರು ಆಕ್ಸಿಡೆಂಟ್ ಆದವರು ನೂರಾರು ಜನ ಆ ಆಸ್ಪತ್ರೆಗೆ ಬರುತ್ತಿದ್ದಾರೆ. ಆದರೆ ಅದಕ್ಕೆ ಒಂದು ಸಪರೇಟ್ ಡಿಪಾರ್ಟ್‌ಮೆಂಟ್ ಇಲ್ಲ. ಇದನ್ನು ನೋಡಿದರೆ ನಿಜವಾಗಿಯೂ ಮನಸ್ಸಿಗೆ ವ್ಯಥೆಯಾಗುತ್ತದೆ. ಮದ್ರಾಸಿನಲ್ಲಿ ಕ್ಯಾಜುಯಾಲಟಿ ಡಿಪಾರ್ಟ್‌ಮೆಂಟ್ ಇದೆ. ನಮ್ಮಲ್ಲಿ ಕ್ಯಾಜು ಯಾಲಟಿ ಡಿಪಾರ್ಟ್‌ಮೆಂಟ್ ಇಲ್ಲ. ಈಗ ವಿಕ್ಟೋರಿಯಾ ಆಸ್ಪತ್ರೆಯಲ್ಲಿರತಕ್ಕ ಕ್ಯಾಜುಯಾಲಟಿ ಸೆಕ್ಷನ್‌ನಲ್ಲಿ ಒಬ್ಬಿಬ್ಬರು ಅಸಿಸ್ಟೆಂಟ್ ಸರ್ಜನ್ ಹಾಕಿರುತ್ತಾರೆ. ಇಬ್ಬರು ಜವಾನರನ್ನು ಕೊಟ್ಟಿರು ತ್ತಾರೆ, 3 ಕುರ್ಚಿ, 4 ಬೆಂಚು ಇವೆ. ಸ್ವಲ್ಪ ಚುಚ್ಚು ಮದ್ದು, ಪೌಡರ್, ದಬ್ಬಳ ಸೂಜಿ, ದಾರ ಮತ್ತು ಸ್ವಲ್ಪ ಲೋಷನ್ ಕೊಟ್ಟಿರುತ್ತಾರೆ. ಒಂದಷ್ಟು ದಾರ, ಒಂದೆರಡು ಲೋಶನುಗಳು— ಇವುಗಳನ್ನು ನೆನಸಿದರೆ ಇದು ಕ್ಯಾಜುಯಾಲಟಿ ಡಿಪಾರ್ಟ್‌ಮೆಂಟೇ ಎಂದು ಆಶ್ಚರ್ಯವಾಗುತ್ತದೆ. ಅಲ್ಲಿ ಮುಖ್ಯವಾಗಿ ಒಬ್ಬರು ಸರ್ಜನ್ ಗ್ರೇಡಿನವರು ಇರಬೇಕು. 24 ಗಂಟೆಗಳಲ್ಲಿ ಅಲ್ಲಿ ನಾಲ್ಕು ಜನ ಒಂದು ದಿವಸಕ್ಕೆ ಕೆಲಸ ಮಾಡಬೇಕು. ಅಲ್ಲಿ ಇವೊತ್ತಿನ ದಿವಸ ಕ್ಯಾಜುಯಾಲಟಿ ಡಿಪಾರ್ಟ್‌ಮೆಂಟಿನಲ್ಲಿ ಏನು ಅತೀ ಮುಖ್ಯವಾಗಿರಬೇಕೋ, ಅದು ಇಲ್ಲ. ಒಂದು ಆಕ್ಸಿಡೆಂಟ್ ಆದರೆ ಆಗ ಎಷ್ಟೋ ಅವಶ್ಯವಾಗಿರಬೇಕಾದಂತಹ ಸಾಮಗ್ರಿಗಳು ಇರಬೇಕಾಗುತ್ತದೆ. ಅಲ್ಲಿ ಎಕ್ಸ್‌ರೇ ಮತ್ತಿತರ ಮುಖ್ಯವಾದ ಸಾಮಗ್ರಿಗಳು ಇರಬೇಕಾಗುತ್ತದೆ. ಅಲ್ಲಿ ಯಾವುದಾದರೂ ಎಮರ್ಜೆನ್ಸಿ ಕೇಸ್ ಬಂದಾಗ ಅದನ್ನು ಕೂಡಲೆ ಅಟೆಂಡ್ ಮಾಡದಿದ್ದರೆ ಪೇಶೆಂಟ್‌ನ ನಂಬಿಕೆಯೇ ಇರುವುದಿಲ್ಲ. ಮತ್ತು ಮರುದಿನ ಪೇಪರಿನಲ್ಲಿ ಅಲ್ಲಿ ಬೇಕಾದಂತ ಸೌಲಭ್ಯವಿಲ್ಲದೆ ಸತ್ತು ಹೋದನೆಂದು ಬರುವುದಿಲ್ಲ ಪೇಶಂಟನ್ನು ಸರಿಯಾಗಿ ನೋಡಿಕೊಂಡಿಲ್ಲವೆಂದು ಬರುತ್ತದೆ. ಅಲ್ಲಿರಬೇಕಾದ ಅವಶ್ಯವಸ್ತುಗಳು ಇಲ್ಲ ಎಂಬುದು ಯಾರಿಗೂ ಗೊತ್ತಾಗುವುದಿಲ್ಲ. ಅಲ್ಲಿ ಏನೇನು ಎಸ್ಸೆನ್‌ಷಿಯಲ್ ಡ್ರಗ್ಸ್ ಇರಬೇಕು ಅದನ್ನು ಅಲ್ಲಿ ಒದಗಿಸಬೇಕೆಂದು ಹೇಳುತ್ತೇನೆ.

ಇನ್ನು ಇಲ್ಲಿ ಡಾಕ್ಟರುಗಳಿಗೆ ಹಿಂದೆ ಒಂದು ರೀತಿಯ ಡ್ಯೂಟಿ ಇಟ್ಟಿದ್ದರು. ಈಗ 9 ಗಂಟೆ ಯಿಂದ ನಾಲ್ಕು ಗಂಟೆಯವರೆಗೆ ಡ್ಯೂಟಿ ಮಾಡಿ, ನಾಲ್ಕು ಗಂಟೆಯ ಮೇಲೆ ಯಾರೂ ಇರುವುದಿಲ್ಲ. ಔಟ್‌ಸೈಡ್ ದಿ ವರ್ಕಿಂಗ್ ಅವರ್ಸ್‌ನಲ್ಲಿ ಡಾಕ್ಟರುಗಳು ಬರತಕ್ಕಂತಹ ನಿಬಂಧನೆಗಳು ಇಲ್ಲದಿರು ವುದರಿಂದ ರೋಗಿಗಳಿಗೆ ಬಹಳ ತೊಂದರೆಗಳು ಆಗುತ್ತಿವೆ. ಆದ್ದರಿಂದ ದಯವಿಟ್ಟು ಈ ಕೆಲಸದ ವೇಳೆಯಲ್ಲಿ ಬದಲಾವಣೆಗಳನ್ನು ಮಾಡಬೇಕೆಂದು ಹೇಳುತ್ತೇನೆ. ಅದೇ ರೀತಿ ಈ ಡಾಕ್ಟರುಗಳಿಗೆ ಮನೆಗೆ ಫೋನ್ ಒದಗಿಸಿದರೆ ತಕ್ಷಣ ಬೇಕಾದ ಸಂದರ್ಭಗಳಲ್ಲಿ ಕರೆಸಿಕೊಳ್ಳಲು ಅನುಕೂಲವಾಗು ತ್ತದೆ. ಅದನ್ನು ಸಹ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಮಾನ್ಯ ಡಾ॥ ಆಳ್ವರವರು ಬರೇ ಪೋಸ್ಟುಗಳನ್ನು ಸೃಷ್ಟಿಮಾಡಿದ್ದಾರೆಯೇ ಹೊರತು ಅಸೈನ್‌ಮೆಂಟ್ ಆಫ್ ವರ್ಕ್ ಮಾಡಿಲ್ಲ. ಪ್ರೊಫೆಸರ್ ವರ್ಕ್ ಏನು, ಅಸಿಸ್ಟೆಂಟ್ ಪ್ರೊಫೆಸರ್ ವರ್ಕ್ ಏನು, ಎಂಬುದರ ಬಗ್ಗೆ ಏನೂ ಮಾಡಿಲ್ಲ. ಹಿಂದೆಯೂ ಇದರ ಬಗ್ಗೆ ಹೇಳಿದ್ದೇನೆ. ಮಾನ್ಯ ಮಂತ್ರಿಯವರು ಅದನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಆದ್ದರಿಂದ ಈಗಲಾದರೂ ಅದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಶ್ರೀ ಎಚ್. ಪುಟ್ಟದಾಸ್)

ಇನ್ನು ನರ್ಸಿಂಗ್ ಬಗ್ಗೆ ಹೇಳುವುದಾದರೆ, ಒಂದು ವಾರ್ಡಿನಲ್ಲಿ 8—10 ಯುನಿಟುಗಳು ಇವೆ. ಅದಕ್ಕೆ ಒಬ್ಬ ನರ್ಸ್‌ನ್ನು ಹಾಕಿದರೆ ಬಹಳ ಕಷ್ಟ. ಅಲ್ಲಿ ಒಂದೇಸಮಯದಲ್ಲಿ ಏನಾದರೂ ಹೆಚ್ಚು ಕಡಿಮೆಯಾದರೆ ಯಾರ ಹತ್ತಿರ ಮೊದಲು ಹೋಗಬೇಕು, ಯಾರ ಹತ್ತಿರ ನಂತರ ಎಂದು ನೋಡಿಕೊಂಡು ಕೆಲಸ ಮಾಡುವುದಕ್ಕೆ ಬಹಳ ತೊಂದರೆಯಾಗುತ್ತದೆ. ನೀವು ಜಾಂಬಿಯಾಕ್ಕೆ 31 ಜನ ನರ್ಸುಗಳನ್ನು ಕಳಿಸುವುದಕ್ಕೆ ಏರ್ಪಾಡು ಮಾಡಿದ್ದೀರಿ. ಅದರಲ್ಲಿ ಒಂದು 20 ಜನರು ವಾಪಸ್ಸು ಬರುವುದೇ ಇಲ್ಲವೆಂದು ಇಟ್ಟುಕೊಳ್ಳೋಣ. ನಮ್ಮಲ್ಲಿ 5 ಜನರಿಗೆ ಒಬ್ಬರಂತೆ ನರ್ಸ್ ಇರಬೇಕೆಂದು ಲಕ್ಷ್ಮಣಸ್ವಾಮಿಮೊದಲಿಯಾರ್ ರಿಪೋರ್ಟಿನಲ್ಲಿ ಹೇಳಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ.—1:10 ಎಂದು ನಮ್ಮಲ್ಲಿ ಇರುವುದು.

ಶ್ರೀ ಎಚ್. ಪುಟ್ಟದಾಸ್.—1:5 ಇರಬೇಕೆಂದು ಆ ವರದಿಯಲ್ಲಿ ಹೇಳಿದ್ದಾರೆ. ಇಷ್ಟು ಆದರೂ ಸಹ 200—300 ನರ್ಸುಗಳು ಉದ್ಯೋಗವಿಲ್ಲದೆ ಇದ್ದಾರೆ.

ಇನ್ನು ಪೀಡಿಯಾಟ್ರಿಕ್ ಬಗ್ಗೆ ಡಬ್ಲ್ಯು. ಎಚ್. ಓ. ರವರದ್ದು ಒಂದು ರಿಪೋರ್ಟು ಇದೆ. ಅದೇನೆಂದರೆ 5 ವರ್ಷಗಳೊಳಗಿನ ವಯಸ್ಸಿನಲ್ಲಿ ಮಾರ್ಟಾಲಟಿ ರೇಟ್ 34.5 ಪರ್‌ಸೆಂಟ್ ಇದೆಯೆಂದು ಹೇಳಿದ್ದಾರೆ. ನಾವು ಇವತ್ತು ಹುಟ್ಟುತಕ್ಕ ಮಕ್ಕಳ ಬಗ್ಗೆ ಎಚ್ಚರ ವಹಿಸಿದಿದ್ದರೆ ನೀವು ಫ್ಯಾಮಿಲಿ ಪ್ಲಾನಿಂಗ್ ಅಡ್ವೈಸ್ ಮಾಡುವುದು ಏಕೆ ? ಈಗ ಜನರಲ್ಲಿ ಒಂದು ಸಾಮಾನ್ಯ ನಂಬಿಕೆ ಏನೆಂದರೆ, 20 ಜನ ಹುಟ್ಟಿದರೆ ಒಂದು 10—15 ಆದರೂ ಬದುಕುತ್ತದೆ ಎಂದು. ಆದ್ದರಿಂದ ಹೆಚ್ಚು ಮಕ್ಕಳು ಇರಬೇಕೆಂದು ಒಂದು ಅಭಿಪ್ರಾಯ ಇದೆ. ಸರ್ಕಾರದವರು ಮಕ್ಕಳ ರಕ್ಷಣೆ ಮಾಡುವುದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡದಿದ್ದರೆ ಜನರಲ್ಲಿ ಒಂದು ಒಳ್ಳೆಯ ಭಾವನೆಯಾದರೂ ಬರುವುದು ಹೇಗೆ ? ಸರ್ಕಾರದವರು ಮಕ್ಕಳ ರಕ್ಷಣೆ ಮಾಡುತ್ತಾರೆಂಬ ನಂಬಿಕೆ ಜನರಲ್ಲಿ ಬಂದರೆ ಬಹುಶಃ ನಿಮ್ಮ ಮೂರಲ್ಲ, ಎರಡಕ್ಕೆ ಬೇಕಾದರೆ ಜನರು ರಿಸ್ಟ್ರಿಕ್ಟ್ ಮಾಡಬಹುದೆಂದು ಹೇಳುತ್ತೇನೆ. ಇದಕ್ಕೆ ತಗಲತಕ್ಕ ಖರ್ಚು ಕೇವಲ ಒಂದೊಂದಕ್ಕೆ 50 ಪೈಸೆ. ಆದ್ದರಿಂದ ಪ್ರತಿಯೊಂದು ಹುಟ್ಟಿರತಕ್ಕ ಮಗುವಿಗೆ ಕಾಡ್‌ಲಿವರ್ ಆಯಿಲ್ ಒದಗಿಸಿದರೆ ಅದಕ್ಕೆ ಬರತಕ್ಕಂತಹ ಬ್ಲೈಂಡ್ ನೆಸ್‌ನ್ನು ತಡೆಗಟ್ಟಬಹುದು. ಅದೇ ರೀತಿ ಡಿಫ್ತೀರಿಯಾ ಇಮ್ಯುನೈಸೇಶನ್ ತೆಗೆದುಕೊಂಡರೂ ಮೊದಲು ಅದಕ್ಕೆ ಕೇವಲ 1—50 ಪೈಸೆ ಖರ್ಚು ಬೀಳುತ್ತದೆ. ಆದರೆ ಡಿಫ್ತೀರಿಯಾ ಬಂದಮೇಲೆ ಅದಕ್ಕೆ ರೂ. 250 ರಷ್ಟು ಖರ್ಚು ಮಾಡಬೇಕಾಗುತ್ತದೆ. ಅವಲ್ಲದೆ ಇಷ್ಟು ಖರ್ಚು ಮಾಡಿದರೂ ಮಗು ಬದುಕುತ್ತದೋ ಇಲ್ಲವೋ ಎಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಅಪ್ಲೈಡ್ ನ್ಯುಟ್ರಿಷನ್ ಪ್ರೋಗ್ರಾಂ ಬಗ್ಗೆ ಸರ್ಕಾರದವರು ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ. ಅದೇ ರೀತಿ ಮದ್ರಾಸಿನಲ್ಲಿ ಇದ್ದ ಹಾಗೆ ಮಕ್ಕಳಿಗೆ ಒಂದು ಪ್ರತ್ಯೇಕವಾದ ಆಸ್ಪತ್ರೆಯನ್ನು ಮಾಡುವುದರ ಬಗ್ಗೆಯೂ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಚಾರವೇನೆಂದರೆ, ಆಸ್ಪತ್ರೆಗೆ ಒಳಗೆ ಸೇರಿಸಬೇಕಾದರೆ ಹೆಂಗಸರಿಗೆ ಮಾತ್ರ ಅವಕಾಶ ಕೊಡುತ್ತಾರೆ, ಗಂಡಸರಿಗೆ ಕೊಡುತ್ತಾ ಇಲ್ಲ. ಗ್ರಾಮಾಂತರ ಪ್ರದೇಶಗಳಿಂದ ಬಂದ ಜನರಿಗೆ ಈ ವ್ಯವಸ್ಥೆಯಿಂದ ಬಹಳ ತೊಂದರೆಯಾಗುತ್ತದೆ. ಅಲ್ಲಿದ್ದ ಹೆಂಗಸು ಊಟ ಮಾಡುವುದ ಕ್ಕಾದರೂ ಹೊರಗಡೆ ಹೋಗಬೇಕಾಗುತ್ತದೆ. ಎಲ್ಲಿ ಹೋಗಬೇಕು, ಏನು ಮಾಡಬೇಕೆಂದು ಗೊತ್ತಿರುವುದಿಲ್ಲ. ಆದ್ದರಿಂದ ಆಸ್ಪತ್ರೆಯಲ್ಲಿ ಮಗು ಇದ್ದರೆ, ಮಗುವಿನ ತಾಯಿಗೂ ಆಹಾರ ಒದಗಿಸುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ಮಗುವಿನ ಖಾಯಿಲೆ ಅರ್ಧ ವಾಸಿಯಾಗುವುದರೊಳಗೆ ಅದರ ತಾಯಿ ಆ ಮಗುವನ್ನು ಎತ್ತಿಕೊಂಡು ಓಡಿ ಹೋಗತ ಕ್ಕಂತಹ ಪರಿಸ್ಥಿತಿ ಬರುತ್ತದೆ. ಇನ್ನು ಚೈಲ್ಡ್ ವೆಲ್‌ಫೇರ್‌ಬೋರ್ಡು ಬಗ್ಗೆ ಹೇಳುವುದಾದರೆ, ಅದರಲ್ಲಿ ಪೇಡಿಯಾಟ್ರಿಕ್ಸ್‌ನಲ್ಲಿ ಅನುಭವ ಇಲ್ಲದವರನ್ನು ಹಾಕಬಾರದು ಅದೇ ರೀತಿ ಪ್ರಿಮೆಚೂರ್ ಬೇಬಿ ಯುನಿಟ್ ಒಂದನ್ನು ವಾಣೀ ವಿಲಾಸ್ ಆಸ್ಪತ್ರೆಯಲ್ಲಿ ಪ್ರಾರಂಭ ಮಾಡಿದರು. ಅದಕ್ಕೆ ಏನೂ ಸೌಲಭ್ಯವನ್ನು ಒದಗಿಸದೆ ಆ ಯುನಿಟ್‌ನ್ನು ಸೇಯಿಂಟ್ ಜಾನ್ ಮೆಡಿಕಲ್ ಕಾಲೇಜಿಗೆ ಕೊಟ್ಟು a Blank cheque of three lakhs of rupees has been given to them. ಅದರಿಂದ ಅವರು ಉಪಯುಕ್ತವಾದ ಸೇವೆಯನ್ನು ಒದಗಿಸುತ್ತಾ ಇಲ್ಲ. ಆದ್ದರಿಂದ ಅದಕ್ಕೆ ಹೆಚ್ಚಿನ ಗಮನವನ್ನು ಕೊಡಬೇಕೆಂದು ಹೇಳುತ್ತೇನೆ.

ಇನ್ನು ಸ್ಕೂಲ್ ಹೆಲ್ತ್ ಯೂನಿಟ್ ಸರ್ವಿಸನ್ನು ಡೆಲ್ಲಿಯಲ್ಲಿರುವಂತೆ ಇಂಟ್ರೊಡ್ಯೂಸ್ ಮಾಡದಿದ್ದರೆ, ನಮ್ಮ ಮಕ್ಕಳ ಆರೋಗ್ಯವನ್ನು ಕಾಪಾಡುವುದರಲ್ಲಿ ನಾವು ವಿಫಲರಾಗುತ್ತೇವೆ.

ಡೆಲ್ಲಿಯಲ್ಲಿ ಯಾವ ರೀತಿ ಇದೆ, ಆ ರೀತಿ ಮಾಡಬೇಕೆಂದು ಸೂಚಿಸಿ, ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೆ, ಆರೋಗ್ಯ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡಬೇಕಾದರೆ ನನಗೆ ಸ್ವಲ್ಪ ಭಯವಾಗುತ್ತದೆ. ನಮ್ಮ ಮಾನ್ಯ ಸಚಿವರು ಏನಾದರೂ ಲೋಪದೋಷಗಳನ್ನು ಹೇಳಿದರೆ, ಅದಕ್ಕೆ ನಿವಾರಣೆಯ ಮಾರ್ಗವನ್ನು ತೋರಿಸಿ ಎಂದು ಹೇಳುತ್ತಿದ್ದಾರೆ. ಮೊದಲನೆಯದಾಗಿ ನಾನು ಡಾಕ್ಟರೂ ಅಲ್ಲ ಅಥವಾ ರೋಗಿಯೂ ಅಲ್ಲ. ಆದ್ದರಿಂದ ನನ್ನನ್ನು ಮಾತ್ರ ಲೋಪದೋಷಗಳನ್ನು ನಿವಾರಣೆ ಮಾಡುವುದು ಹೇಗೆ ಎಂದು ಕೇಳದೆ, ನಾನು ಹೇಳುವುದನ್ನು ಗಮನಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಆರೋಗ್ಯ ಇಲಾಖೆಯ ಬೇಡಿಕೆಗಳನ್ನು ನಾನು ಬಹಳ ವಿಷಾದದಿಂದ ವಿರೋಧಿಸಬೇಕಾಗಿದೆ. ಕಾರಣವಾದರೂ ಇಷ್ಟೆ. ನಮ್ಮ ಮಾನ್ಯ ಸಚಿವರು ದೇಶದ ಜನಸಂಖ್ಯೆ ಎಷ್ಟಿದೆ, ಅವರ ಆರೋಗ್ಯವನ್ನು ಕಾಪಾಡಲಿಕ್ಕೆ ಸರ್ಕಾರ ಎಷ್ಟರ ಮಟ್ಟಿನ ವೆಚ್ಚಮಾಡಬೇಕೋ ಅಷ್ಟರಮಟ್ಟಿನ ಬೇಡಿಕೆಯನ್ನು ಈ ಸಭೆಯ ಮುಂದೆ ಮಂಡಿಸಿಲ್ಲ. ಬಹಳ ಕಡಿಮೆ ಮೊತ್ತದ ಬೇಡಿಕೆಯನ್ನು ಮಂಡಿಸಿದ್ದಾರೆ. ಈಗ ಮಾನ್ಯ ಸಚಿವರು ಅಧಿಕಾರ ವಹಿಸಿಕೊಂಡ ಮೇಲೆ ಈ ಇಲಾಖೆ ಸ್ವಲ್ಪ ಚುರುಕಾಗಿ ಕೆಲಸ ಮಾಡುತ್ತಿದೆಯೆಂದು ಹೇಳಲಿಕ್ಕೆ ನನಗಾದರೂ ಸಂತೋಷವಾಗುತ್ತದೆ, ಒಂದು ನಿದರ್ಶನವನ್ನು ಹೇಳಬೇಕಾದರೆ, ಹಿಂದೆ ಒಬ್ಬ ರೋಗಿಯನ್ನು ವಿಕ್ಟೋರಿಯಾ ಆಸ್ಪತ್ರೆಗೆ ಕಳುಹಿಸಿದಾಗ್ಗೆ ಡಾಕ್ಟರ್ ಚಿಕಿತ್ಸೆ ನಡೆಸಲಿಲ್ಲ. ಒಂದು ಚೀಟಿ ಕೊಟ್ಟಿರುವ ಆಸ್ಪತ್ರೆಯಲ್ಲಿ ಔಷಧಿ ಇರಲಿಲ್ಲ. ಅವನು ಹೊರಗಡೆಯಿಂದ ಔಷಧಿ ತೆಗೆದುಕೊಂಡು ಬರಬೇಕಾಯಿತು. ಅವನ ಹತ್ತಿರ ಹಣ ಇರಲಿಲ್ಲ ಅವರೂ ಹೇಗೋ ಮಾಡಿ 20-25 ರೂಪಾಯಿಗಳನ್ನು ಖರ್ಚುಮಾಡಿ ಔಷಧಿಗಳನ್ನು ತೆಗೆದುಕೊಂಡು ಹೋಗಿ ಕೊಟ್ಟರು ಅನಂತರ ಡಾಕ್ಟರು ಚಿಕಿತ್ಸೆ ಮಾಡುತ್ತೇನೆಂದು ಹೇಳಿದರು ಎಂಬುದಾಗಿ ಅವನು ನನ್ನಲ್ಲಿಗೆ ಬಂದು ಹೇಳಿದಮೇಲೆ ಕೂಡಲೇ ನಾನು ಇದನ್ನೆಲ್ಲಾ ಚೆನ್ನಾಗಿ ಅರಿತುಕೊಂಡು ಮಾನ್ಯ ಸಚಿವರಿಗೆ ನಾನೇ ಒಂದು ಪತ್ರ ಬರೆದು ಈ ರೀತಿ ತಮ್ಮ ಆಳ್ವಿಕೆಯಲ್ಲಿ ನಡೆಯುತ್ತಿದೆಂದು ತಿಳಿಸಿವೆ. ತಕ್ಷಣ ಮಾನ್ಯ ಸಚಿವರೇ ಖುದ್ದಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಭೇಟಿ ಇತ್ತು, ಬಡವರಿಗೆ ಒದಗಿಸಿದ ಔಷಧಿ ಅವರಿಗೆ ಏಕೆ ಕೊಟ್ಟಿಲ್ಲ, ಅದು ಬಡವರಿಗಾಗಿ ಕೊಟ್ಟಿರತಕ್ಕದ್ದು, ಅವರಿಗೇನೇ ನೀವು ಹೊರಗಡೆ ಹೋಗಿ ಔಷಧಿ ತೆಗೆದುಕೊಂಡು ಬನ್ನಿ ಎಂದು ಹೇಳಿದ್ದು ಬಹಳ ತಪ್ಪು ಎಂದು ಡಾಕ್ಟರಿಗೆ ಹೇಳಿದರು ಮತ್ತು ಅದರ ಜೊತೆಗೆ ಆತ ಎಷ್ಟು ಹಣ ಖರ್ಚುಮಾಡಿ ಆ ಔಷಧದ ಬಿಲ್ ತಂದಿದ್ದಾನೋ ಆ ಹಣವನ್ನು ಅವನಿಗೆ ಕೊಡಿ ಎಂದು ಆಸ್ಪತ್ರೆಯವರಿಗೆ ಒಂದು ಆದೇಶವನ್ನು ಸಹ ನೀಡಿದ್ದಾರೆ. ಈ ತರಹ ಕ್ರಮವನ್ನು ಇದುವರೆಗೆ ಯಾವ ಸಚಿವರೂ ಸಹ ಮಾಡಲಿಲ್ಲ. ಈಗಿರತಕ್ಕ ಆರೋಗ್ಯ ಸಚಿವರು ಮಾಡಿದ್ದಾರೆ. ಅದಕ್ಕೆ ನಾವು ಸಂತೋಷಪಡಬೇಕು. ಈ ಒಂದು ಸಂದರ್ಭದಲ್ಲಿ ನಾನು ಮನವಿ ಮಾಡುವುದೇನೆಂದರೆ, ಈ ಆಸ್ಪತ್ರೆಗಳಲ್ಲಿ ಬಹುಮಟ್ಟಿಗೆ ಹಣ ಖರ್ಚುಮಾಡದೆ ಯಾವ ಕೆಲಸವೂ ನಡೆಯುವುದಿಲ್ಲ. ಹಣವಂತರು ನಿಜವಾಗಿ ಆಸ್ಪತ್ರೆಗಳಿಗೆ ಹೋಗುವುದೇ ಇಲ್ಲ. ಏಕೆಂದರೆ ಆಸ್ಪತ್ರೆಗಳಲ್ಲಿರುವವರೇ ಬೇರೆ ಬೇರೆ ನರ್ಸಿಂಗ್ ಹೋಂಗಳನ್ನು ಅನೇಕ ಕಡೆಗಳಲ್ಲಿ ಮಾಡಿಕೊಂಡಿದ್ದಾರೆ. ಹಣವಂತರು ಆಸ್ಪತ್ರೆಗಳಿಗೆ ಬರುವುದನ್ನು ತಪ್ಪಿಸುವುದಕ್ಕಾಗಿ ಆಸ್ಪತ್ರೆಗಳ ಡಾಕ್ಟರುಗಳೇ ಒಂದೊಂದು ನರ್ಸಿಂಗ್ ಹೋಂಗಳನ್ನು ಮಾಡಿಕೊಂಡಿದ್ದಾರೆ. ಅಲ್ಲಿ ಬಿಲ್‌ಗಳನ್ನು ಜಾಸ್ತಿ ಹಾಕಬಹುದು. ಅವರಿಗೆ ಕೊಡುವ ಶಕ್ತಿಯೂ ಇರುತ್ತದೆ. ಹೋಗಬಹುದು. ಆದರೆ ಬಡಜನಗಳು ಹಣ ಕೊಡುವುದಕ್ಕಾಗದೇ ಇರುವುದರಿಂದ ಆಸ್ಪತ್ರೆಗಳಿಗೇ ವಿಧಿ ಇಲ್ಲದೆ ಹೋಗಲೇ ಬೇಕಾಗುತ್ತದೆ. ಆದರೆ ಆಸ್ಪತ್ರೆಗಳಲ್ಲಿ ಇತ್ತೀಚೆಗಂತೂ ಡಾಕ್ಟರುಗಳೇ ಆಗಲಿ ಅಥವಾ ನರ್ಸುಗಳೇ ಆಗಲಿ ಹಣವಿಲ್ಲದೆ ಒಂದು ಹೆಜ್ಜೆ ಮುಂದಿಡುವುದಿಲ್ಲ. ಇಂಥಾದ್ದನ್ನು ಮಾರುವೇಶ ಹಾಕಿ ವಿಚಾರ ಮಾಡಿದರೆ ಒಳ್ಳೆಯದು. ಏಕೆಂದರೆ ಈ ಮಾನ್ಯ ಸಚಿವರು ಬಹಳ ದಿವಸಗಳಿಂದ ಬಹಳ ಜನಕ್ಕೆ ಗುರುತಿದ್ದಾರೆ. ಇವರ ಸೈಜು ನೋಡಿದರೆ ಇವರು ಇಂತಹವರು ಎಂದು ತಕ್ಷಣವೇ ಕಂಡುಹಿಡಿಯಬಹುದು. ಈಗಿರತಕ್ಕ ಹೊಸ ಸಚಿವ ಸಂಪುಟದಲ್ಲಿ ಯುವಕರಾದವರಲ್ಲಿ ಕೆಲವು ಮಂತ್ರಿಗಳು ಮಾರುವೇಶದಲ್ಲಿ ಹೋಗಿ ಅಲ್ಲಿನ ತಪ್ಪುಗಳನ್ನು ಕಂಡು ಹಿಡಿದರೆ ಬಹಳ ಒಳ್ಳೆಯದು. ನಿಮ್ಮ ಗುರುತುಗಳು ಬಹಳ ಜನಗಳಿಗೆ ಇಲ್ಲ. ಆಗ ವಿಷಯಗಳು ಬಹಳ ಚೆನ್ನಾಗಿ ಗೊತ್ತಾಗುತ್ತದೆ. ಬೇರೆ ಬೇರೆ ಸಚಿವರಿಗೂ ಅನುಭವ ಬರುತ್ತದೆ.

ಇನ್ನು ನಮ್ಮ ಸ್ನೇಹಿತರಲ್ಲಿ ಕೆಲವರು, ಕಾಂಪೌಂಡರ್ಸ್ ಅಷ್ಟು ಚೆನ್ನಾಗಿ ಇತ್ತೀಚೆಗೆ ಕೆಲಸ ಮಾಡುತ್ತಾ ಇಲ್ಲ, ಅವರನ್ನು ತಗೆಯಬೇಕೆಂದು ಹೇಳುತ್ತಾ ಇದ್ದರು. ನನಗನ್ನಿಸುತ್ತದೆ, ಹೊಸ ವೈದ್ಯರಿಗಿಂತ ಹಳೆಯ ರೋಗಿಯೇ ಮೇಲು ಎಂಬುದಾಗಿ. ಆದರೆ ಅನೇಕ ಕಡೆಗಳಲ್ಲಿ ಹೊಸದಾಗಿ ಕಾಂಪೌಂಡರುಗಳನ್ನು ನೇಮಿಸಬೇಕು. ಕೆಲವು ಕಡೆಗಳಲ್ಲಿ ಅವರು ಚೆನ್ನಾಗಿ ಪ್ರ್ಯಾಕ್ಟೀಸ್ ಮಾಡಿರು

(ಶ್ರೀ ಕೆ. ಎಂ. ನಾಗಣ್ಣ)

ವುದಿಲ್ಲ. ಒಳ್ಳೆಯ ಶಿಕ್ಷಣವನ್ನು ಪಡೆದಿರುವುದಿಲ್ಲ. ಸ್ಕೂಲಿನಲ್ಲಿ ಎಂ.ಬಿ.ಬಿ.ಎಸ್. ಪಾಸ್ ಆದ ತಕ್ಷಣ ಅವರಿಗೇನು ಅನುಭವ ಇರುತ್ತದೆ? ಅವರಿಗೆ ಅಷ್ಟಾಗಿ ಅನುಭವ ಸಾಲದ್ದಾಗಿರುತ್ತದೆ. ಕಾಂಪೌಂಡರುಗಳು ಇರುವುದು ಅಗತ್ಯ. ಕೆಲವರಿಗೆ ಡಾಕ್ಟರುಗಳಿಗಿಂತಲೂ ಅವರಿಗೇ ಹೆಚ್ಚಿಗೆ ಅನುಭವ ಇರುತ್ತದೆ. ಒಟ್ಟಿನಲ್ಲಿ ಕಾಂಪೌಂಡರ್‌ಗೆ ಸಾಕಷ್ಟು ಸೌಲಭ್ಯಗಳನ್ನು ಒದಗಿಸಿ ಅವರು ಇನ್ನೂ ಉನ್ನತವಾಟ್ಟದಲ್ಲಿದ್ದರೆ ಅವರು ನಿಜವಾಗಿಯೂ ಇನ್ನೂ ಹೆಚ್ಚಿಗೆ ಕಷ್ಟಪಟ್ಟು ಚೆನ್ನಾಗಿ ಕೆಲಸ ಮಾಡುತ್ತಾರೆ.

ಇನ್ನು ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ನಾನು ಡಾಕ್ಟರ್ ಅಲ್ಲ. ಹೆಚ್ಚು ಮಾತನಾಡುವುದಕ್ಕೆ ನನಗೆ ಅದರ ಬಗ್ಗೆ ಅರ್ಹತೆಯೂ ಇಲ್ಲ. ಈ ಫ್ಯಾಮಿಲಿ ಪ್ಲಾನಿಂಗ್ ನಮ್ಮ ಭಾರತ ದೇಶದಲ್ಲಿ ಏಕೆ ಬಂತು ಎಂಬುದು ಒಂದು ಪ್ರಶ್ನೆ. ಭಾರತ ಜಾತ್ಯಾತೀತ ರಾಷ್ಟ್ರವಾಗಿರುವುದರಿಂದ ಇಡೀ ದೇಶದ ಜನತೆಗೆ ಇದರ ಬಗ್ಗೆ ಒಂದೇ ಕಾನೂನು ಇರಬೇಕು. ಈಗ ಈ ಕಾನೂನು ಕೇವಲ ಹಿಂದೂಗಳಿಗೆ ಮಾತ್ರ ಇದೆ. ಮುಸಲ್ಮಾನರಿಗೆ ಇಲ್ಲ. ನಾನು ಮದುವೆ ಯಾಗಿರುತ್ತೇನೆ. ನನ್ನ ಹೆಂಡತಿ ಅಶಕ್ತಳಾಗಿರುತ್ತಾಳೆ. ಆಗ ಇನ್ನೊಬ್ಬಳನ್ನು ಮದುವೆಯಾದ ರೇನು ಎಂದು ಹೇಳುವ ಕಾಲ ಈಗ ಇದೆ. ಮುಸಲ್ಮಾನರಿಗೆ 16 ಜನ ಹೆಂಡತಿಯರು 92 ಮಕ್ಕಳು ಇರುತ್ತವೆ. ಅಂತಹವರು 12 ಮದುವೆಗಳನ್ನು ಮಾಡಿಕೊಂಡಿರುವುದೂ ಉಂಟು.

ಶ್ರೀ ಎಸ್. ಹಮೀದ್‌ಷಾ (ಶಿವಾಜಿನಗರ).—ಮಾನ್ಯ ಶ್ರೀ ನಾಗಣ್ಣನವರು ಹೇಳಿದ್ದು ಸತ್ಯಕ್ಕೆ ದೂರವಾದ ಮಾತು. ಅದನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ.

ಒಬ್ಬ ಸದಸ್ಯರು :—ಹೈದರಾಬಾದ್ ನವಾಬರಿಗೆ ಎಷ್ಟು ಜನ ಹೆಂಡತಿಯರು? ಅವರು ಮುಸಲ್ಮಾನರಲ್ಲವೇ?

ಶ್ರೀ ಎಸ್. ಹಮೀದ್‌ಷಾ.—ಅಂತಹವರನ್ನು ಮುಸಲ್ಮಾನರೆಂದು ಕರೆಯುವುದೂ ತಪ್ಪು. ಅವರಿಗೆ ನಾಲ್ಕು ಜನ ಹೆಂಡತಿಯರನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶವಿದೆ.

ಶ್ರೀ ಕೆ. ಎಂ. ನಾಗಣ್ಣ.—ಇನ್ನು 20 ವರ್ಷಗಳಲ್ಲಿ ಭಾರತ ಜನಸಂಖ್ಯೆಯಲ್ಲಿ ಹಿಂದೂಗಳು ಬಹಳವಾಗಿ ಕಡಿಮೆಯಾಗುತ್ತಾರೆ. ಆದರೆ ಮುಸಲ್ಮಾನರ ಜನಸಂಖ್ಯೆಯನ್ನು ಕಡಿಮೆಮಾಡುವು ದಕ್ಕೆ ಇವರಿಗೇನು ಅಧಿಕಾರವಿದೆ? ಅವರ ಮಕ್ಕಳು ಮರಿಗಳ ಜನಸಂಖ್ಯೆ ಜಾಸ್ತಿಯಾಗುತ್ತಲೇ ಇದೆ. ಅದಕ್ಕೆ ಸರ್ಕಾರದವರು ಅವಕಾಶ ಕೊಟ್ಟಿದ್ದಾರೆ. ಈ ಯೋಜನೆಯಿಂದ ಹೆಂಗಸರ ಆರೋಗ್ಯ ಕೆಡುತ್ತದೆ. ಗಂಡಸರ ಆರೋಗ್ಯವೂ ಕೆಡುತ್ತದೆ. ಆದ್ದರಿಂದ ಇನ್ನುಮುಂದೆ ಸರ್ಕಾರದವರೇ ಜನಗಳಿಗೆ ಈ ಯೋಜನೆಯ ಬಗ್ಗೆ ಸಾಕಷ್ಟು ಸೌಕರ್ಯಗಳನ್ನು ಒದಗಿಸಿಕೊಡಬೇಕು. ಅವರಿಗೆ ಮಕ್ಕಳನ್ನು ಸಾಕುವಷ್ಟು ಯೋಗ್ಯತೆ ಇಲ್ಲದೇ ಇರುವಾಗ ಫ್ಯಾಮಿಲಿ ಪ್ಲಾನಿಂಗ್ ಎಂದು ಹೇಳಿದರೆ, ಇದರಿಂದ ಇನ್ನೆಷ್ಟು ಜನ ಹೆಣ್ಣುಮಕ್ಕಳು ಕೆಟ್ಟುಹೋಗುತ್ತಾರೋ ಗೊತ್ತಿಲ್ಲ. ಎಷ್ಟೋ ಜನ ಲಂಚ ಗಳನ್ನು ತೆಗೆದುಕೊಂಡು ಅಂತಹ ಚಿಕಿತ್ಸೆ ಮಾಡಿಸಿದ್ದಾರೆ. ಅನೇಕ ಜನ ಹೆಣ್ಣುಮಕ್ಕಳು ಹಣವನ್ನು ತೆಗೆದುಕೊಂಡು ಹೋಗಿ ಹಾಳು ಮಾಡಿದ್ದಾರೆ. ಇದನ್ನು ಸರ್ಕಾರದವರು ಗಮನಿಸಬೇಕು. ಆದರೂ ಫ್ಯಾಮಿಲಿ ಪ್ಲಾನಿಂಗ್‌ನಲ್ಲಿ ಬಹುಮಟ್ಟಿನ ದೋಷಗಳಿವೆ. ಎಲ್ಲರಿಗೂ ಒಂದೇ ಕಾನೂನು ಅನ್ವಯಿಸದೇ ಇರುವಾಗ ಕೇವಲ ಹಿಂದೂಗಳನ್ನು ಮಾತ್ರ ಈ ಕಾನೂನು ಅನ್ವಯಿಸದೇ ಹೋದರೆ, ಸದೆ ಬಡಿಯುತ್ತೇವೆಂದು ಹೇಳುತ್ತಾರೆ. ಹೋದ ಜನಸಂಖ್ಯೆಯ ಪ್ರಕಾರ ಹಿಂದೂಗಳ ಜನಸಂಖ್ಯೆ ಬಹಳ ಕಡಿಮೆಯಾಗಿದೆ. ಬೇರೆಬೇರೆ ಕೋಮಿನವರೇನೋ ಬಹಳವಾಗಿ ಜಾಸ್ತಿಯಾಗುತ್ತಿದ್ದಾರೆ. ಇದು ನಮ್ಮ ರಾಷ್ಟ್ರಕ್ಕೆ ನಿಜವಾಗಿ ಒಳ್ಳೆಯದಲ್ಲ. ಈ ಕಾನೂನನ್ನು ಎಲ್ಲರಿಗೂ ಅನ್ವಯಿಸುವಂತೆ ಮಾಡಬೇಕು. ಆ ರೀತಿ ಮಾಡದೆ ಬರೀ ಒಂದು ವರ್ಗದ ಜನರಿಗೇ ಒಂದು ಕಾನೂನು, ಬೇರೆ ಯವರಿಗೆ ರಿಯಾಯಿತಿ ಕೊಡುವುದು ಬಹಳ ತಪ್ಪು. ಭಾರತ ಸರ್ಕಾರಕ್ಕೆ ಈ ವಿಚಾರವನ್ನು ತಿಳಿಸಿ ಇನ್ನುಮುಂದೆ ಈ ಕಾನೂನನ್ನು ಎಲ್ಲರಿಗೂ ಅನ್ವಯಿಸುವ ಹಾಗೆ ಮಾಡಿ. ಇಲ್ಲದಿದ್ದರೆ ಈ ಫ್ಯಾಮಿಲಿ ಪ್ಲಾನಿಂಗ್ ಕಾನೂನನ್ನು ಸ್ಕ್ರ್ಯಾಪ್ ಮಾಡಿ ಎಂಬುದಾಗಿ ನಾನು ಸಲಹೆ ಮಾಡುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ಈ ಫ್ಯಾಮಿಲಿ ಪ್ಲಾನಿಂಗ್ ಯೋಜನೆಯಲ್ಲಿ ಇದನ್ನು ಕಂಪಲ್ಸರಿ ಯಾಗಿ ನಡೆಸುವುದಿಲ್ಲ. ಕಾನೂನು ಪ್ರಕಾರವೇನೂ ಇಲ್ಲ. ವಾಲಂಟರಿಯಾಗಿ ಜನ ಮುಂದೆ ಬರ ಬೇಕು. ಕಾನೂನಿನ ಬಲದಿಂದ ಮಾಡತಕ್ಕದ್ದಲ್ಲ. ಇದರಲ್ಲಿ ಯಾರ್ಯಾರಿಗೆ ಇಷ್ಟವಿದೆ ಅವರು ಬರ

ಬಹುದು. ಅದರ ಬಗ್ಗೆ ನಮ್ಮವರು ಹೋಗಿ ಪರ್ಸುಯೇಡ್ ಮಾಡಿ ಹೇಳುತ್ತಾರೆ. ಆದ್ದರಿಂದ ಇದರಲ್ಲಿ ಇಷ್ಟವಿದ್ದವರು ಹೋಗುತ್ತಾರೆ. ಇಲ್ಲದಿದ್ದವರು ಇಲ್ಲ. ವ್ಯಾಸೆಕ್ಟಮಿ ಹಾಗೂ ಟ್ಯುಬೆಕ್ಟಮಿ ಮಾಡಿಸಿಕೊಳ್ಳಬೇಕಾಗುತ್ತದ.

ಶ್ರೀ ಕೆ. ಎಂ. ನಾಗಣ್ಣ.—ಸರ್ಕಾರದ ಅಧಿಕಾರಿಗಳಿಗೆ ಮೂರು ಮಕ್ಕಳ ಮೇಲೆ ಜಾಸ್ತಿ ಇದ್ದರೆ ಅವರಿಗೇನೂ ಇನ್ನುಮುಂದೆ ಅನುಕೂಲವಿಲ್ಲ, ಹೆಚ್ಚಿನ ಸೌಲಭ್ಯಗಳೂ ಇಲ್ಲವೆಂಬುದಾಗಿ ಕಾನೂನು ಮಾಡಿದ್ದಾರೆ. ಅದು ನಿಜವೇ ?

ಶ್ರೀ ಎಚ್. ಎಸ್. ಸಿದ್ದಪ್ಪ.—ಇನ್‌ಕ್ರಿಮೆಂಟ್ಸ್ ಕೊಡುವುದಿಲ್ಲವೆಂದು ಹೇಳಿದ್ದಾರೆ.

ಶ್ರೀ ಎಚ್. ಸಿದ್ಧವೀರಪ್ಪ.—ನನಗೆ ತಿಳಿದಿರುವ ಪ್ರಕಾರ, ಅಂಥಾ ಕಾನೂನು ಏನೂ ಇಲ್ಲ.

ಶ್ರೀ ಕೆ. ಎಂ. ನಾಗಣ್ಣ.—ನಮಗೆ ಇರತಕ್ಕ ಅಧಿಕಾರ ಸರಕಾರದ ಅಧಿಕಾರಿಗಳಿಗೂ ಇರಲಿ ಎಂದು ಹೇಳುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ನಾನು ಅದನ್ನು ಪರೀಕ್ಷೆಮಾಡಿ ತಿಳಿಸಬೇಕಾಗಿದೆ.

2-30 P.M.

† ಶ್ರೀ ಪುಟ್ಟಕಾಮಯ್ಯ (ಸಿರಾ).—ಅಧ್ಯಕ್ಷರೇ ಮಾನ್ಯ ಆರೋಗ್ಯ ಸಚಿವರು ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ, ಸರ್ಕಾರಕ್ಕೆ ನನ್ನ ಒಂದೆರಡು ಸಲಹೆಗಳನ್ನು ಹೇಳಬಯಸುತ್ತೇನೆ.

ನಮಗೆಲ್ಲರಿಗೂ ಗೊತ್ತಿರುವಂತೆ 'ಲಾಂಜಿವಿಟಿ ಆಫ್ ಲೈಫ್' ಎಂದರೆ ಮನುಷ್ಯನ ಆಯಸ್ಸು ಇತ್ತೀಚೆಗೆ ಜಾಸ್ತಿಯಾಗಿದೆ. ಇಲ್ಲಿಗೆ 30 ವರ್ಷಗಳ ಕೆಳಗೆ ಮನುಷ್ಯನ ಸಾಮಾನ್ಯ ಆಯಸ್ಸು 27 ಅಂದರೆ ಸರಾಸರಿ ಆಯುಸ್ಸು 27 ವರ್ಷಗಳಿತ್ತು. ಈಗ ಅದು 57 ವರ್ಷಕ್ಕೇರಿದೆ. ಸತತವಾಗಿ ಅಲೋಪತಿಕ್ ಡಾಕ್ಟರುಗಳು ಈ ದೇಶದಲ್ಲಿ ಹೋರಾಟ ನಡೆಸಿದ್ದರಿಂದ ಇದು ಸಾಧ್ಯವಾಯಿತು ಅಂತ ಹೇಳಿದರೆ ಅದು ತಪ್ಪಾಗಲಾರದು. ಇನ್ನು ಇತ್ತೀಚೆಗೆ ಅಲೋಪತಿಕ್ ಔಷಧಿಗಳನ್ನು ಈ ಸಿಸ್ಟಂಗೆ ಸೇರದವರೂ ಕೂಡ ಅಂದರೆ ಆಯುರ್ವೇದಿಕ್ ಮತ್ತು ಹೋಮಿಯೋಪತಿಕ್ ವೈದ್ಯರೂ ಕೂಡ ಹೆಚ್ಚಿಗೆ ಉಪಯೋಗಿಸುವುದಕ್ಕೆ ಪ್ರಾರಂಭಮಾಡಿದ್ದಾರೆ. ಅನೇಕ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವುದಕ್ಕೆ ಅಲೋಪತಿಕ್ ಔಷಧಿಗಳಲ್ಲಿದ್ದ ಗುಣವೇ ಕಾರಣ. ಅದರಿಂದಲೇ ಈ ದಿವಸ ಜನರ ಆಯುಸ್ಸು ಜಾಸ್ತಿಯಾಗಿದೆ. ಆದ್ದರಿಂದ ಈ ಅಲೋಪತಿಕ್ ಔಷಧಿಗಳ ಶ್ರಮದಿಂದಲೇ ಈ ಸಾಧನೆಯಾಗಿದೆ. ಆದ್ದರಿಂದ ಇದು ಅಭಿನಂದನಾರ್ಹ.

ಇನ್ನು ಆಯುರ್ವೇದ ಔಷಧಿಗಳ ವಿಚಾರಕ್ಕೆ ಬಂದರೆ ಅದನ್ನು ನಾನು ತೆಗಳುವುದಕ್ಕೆ ಹೋಗುವುದಿಲ್ಲ. ಅದೂ ಕೂಡ ನಮ್ಮ ದೇಶದಲ್ಲಿ ಉದ್ಧಾರವಾಗಬೇಕೆಂದು ನಾನು ಹೇಳುತ್ತೇನೆ. ಅದಕ್ಕೇ ಸರ್ಕಾರದವರು ಒಂದು ಪ್ರತ್ಯೇಕವಾದ ಇಲಾಖೆಯನ್ನು ಮಾಡಿ ಅದಕ್ಕೇ ಒಬ್ಬ ಪ್ರತ್ಯೇಕ ಮೆಡಿಕಲ್ ಆಫೀಸರನ್ನು ನೇಮಕ ಮಾಡಿ ಆ ಬಾಬಿಗೂ ಪ್ರೋತ್ಸಾಹ ಕೊಡಿ ಎಂದು ಹೇಳುತ್ತೇನೆ.

ಇನ್ನು ನಾನಾಗಲೇ ಹೇಳಿದಂತೆ ಈ ದಿವಸ ಎಲ್ಲರೂ ಅಂದರೆ ಆಯುರ್ವೇದದವರು ಮತ್ತು ಹೋಮಿಯೋಪತಿಕ್‌ನವರೂ ಅಲೋಪತಿಕ್ ಔಷದಿಗಳನ್ನು ಉಪಯೋಗ ಮಾಡುತ್ತಾ ಇರುವುದರಿಂದ ಜನರಿಗೆ ಇದರಿಂದ ಆಗತಕ್ಕ ಅನುಕೂಲಕ್ಕಿಂತ ಕೆಡಕೇ ಜಾಸ್ತಿಯಾಗುತ್ತಿದೆ. ಕಾರಣ ಈ ಅಲೋಪತಿಕ್ ಔಷದಿಗಳ ಬಗ್ಗೆ ಒಂದು ಹೆಚ್ಚಿನ ತಿಳುವಳಿಕೆ ಆಯುರ್ವೇದದ ಡಾಕ್ಟರಿಗಾಗಲೀ ಅಥವಾ ಹೋಮಿಯೋಪತಿಕ್ ಡಾಕ್ಟರಿಗಾಗಲೀ ಇರುವುದಿಲ್ಲ. ಬೇರೆ ಸಿಸ್ಟಂನಲ್ಲಿ ಅನುಭವಗಳಿಸಿರತಕ್ಕವರು ಈ ಔಷದಿಗಳನ್ನು ಉಪಯೋಗಿಸಬಾರದು. ಇಂಥ ಅಕ್ರಮ ನಡವಳಿಕೆಗಳನ್ನು ತಡೆಗಟ್ಟಲು ಸರ್ಕಾರದವರು ಒಂದು ಕಾನೂನನ್ನು ಜಾರಿಗೆ ತರಬೇಕಾದ್ದು ಅತ್ಯಗತ್ಯ. ಹೀಗೆ ಮಾಡಿದರೆ ಜನರಿಗೆ ಇದರಿಂದಾಗತಕ್ಕ ಅನಾಹುತಗಳನ್ನು ತಪ್ಪಿಸಿದಂತಾಗುತ್ತದೆ. ಈ ವಿಚಾರಕ್ಕೆ ನಮ್ಮ ಆರೋಗ್ಯ ಸಚಿವರು ಗಮನಕೊಡುತ್ತಾರೆಂದು ನಾನು ನಂಬಿದ್ದೇನೆ.

ಇನ್ನು ರಾಜ್ಯದಲ್ಲಿರತಕ್ಕ ಒಟ್ಟು ಹಾಸ್ಪಿಟಲ್ ಬೆಡ್ಡುಗಳ ಸಂಖ್ಯೆ : 27,700. ಇವುಗಳಲ್ಲಿ 23,200 ನಗರ ಪ್ರದೇಶಗಳಲ್ಲಿವೆ. ಇನ್ನುಳಿದ 4,500 ಬೆಡ್ಡುಗಳು ಮಾತ್ರ ಗ್ರಾಮಾಂತರ ಪ್ರದೇಶದಲ್ಲಿರುತ್ತವೆಂದರೆ ಅಲ್ಲಿಗೆ ಗ್ರಾಮಾಂತರ ಪ್ರದೇಶವನ್ನು ಎಷ್ಟು ನಿರ್ಲಕ್ಷದಿಂದ ಈ ಆರೋಗ್ಯ ಇಲಾಖೆ ಕಾಣುತ್ತಿದೆ ಎಂಬುದು ಗೊತ್ತಾಗುತ್ತದೆ. ಅಲ್ಲಿಗೆ ಸರಿಯಾಗಿ ಯಾವ ಒಂದು ಔಷದಿಗಳ ಸೌಲಭ್ಯವೂ ಇಲ್ಲ. ಈ ವಿಚಾರದಲ್ಲಿ ಮಾನ್ಯ ಆರೋಗ್ಯಸಚಿವರು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾ

(ಶ್ರೀ ಬಿ. ಪುಟ್ಟಕಾಮಯ್ಯ)

ರೆಂಬ ಭರವಸೆ ನನಗಿದೆ. ಕೆಲವು ಮಾನ್ಯ ಸದಸ್ಯರುಗಳು ಸಲಹೆ ಮಾಡಿರುವಂತೆ ಈಗ ಇರತಕ್ಕ ಬೆಡ್ಡುಗಳ ಸಂಖ್ಯೆಯನ್ನು ಹೆಚ್ಚುಮಾಡುವುದಕ್ಕೆ ಈಗಾಗಲೇ ಸರ್ಕಾರದವರು ಕೊಟ್ಟಿರತಕ್ಕ ಒಂದು ಹೇಳಿಕೆಯ ಪ್ರಕಾರ, ಎಲ್ಲೆಲ್ಲಿ 10 ರಿಂದ 15 ಸಾವಿರ ಪ್ರಜಾಸಂಖ್ಯೆ ಇರುತ್ತದೋ ಅಂಥ ಸ್ಥಳಗಳಿಗೆಲ್ಲಾ ಒಂದೊಂದು ಹೊಸ ಆಸ್ಪತ್ರೆಯನ್ನು ಕೊಡುವುದಾಗಿ ಹೇಳಿರುವುದರ ಮೂಲಕವೂ ಮತ್ತು ಇದಕ್ಕೆ ಸ್ವಲ್ಪ ಹೆಚ್ಚಿನ ಹಣವನ್ನು ಒದಗಿಸುವುದರ ಮೂಲಕವೂ ಈ ನ್ಯೂನತೆಯನ್ನು ನಿವಾರಣೆ ಮಾಡಬಹುದೆಂದು ನಾನು ಭಾವಿಸಿದ್ದೇನೆ.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನರ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. ಸರಿಯಾದ ಆಹಾರ ತೆಗೆದುಕೊಳ್ಳುವುದಕ್ಕೆ ಅವರಲ್ಲಿ ಚೈತನ್ಯವಿಲ್ಲ. ಅವರೀಗ ಮಾಲ್ ನ್ಯೂಟ್ರಿಷನ್ ಅಥವಾ ಅಂಡರ್ ನ್ಯೂಟ್ರಿಷನ್ ಇರತಕ್ಕ ಆಹಾರವನ್ನು ತೆಗೆದುಕೊಳ್ಳುತ್ತಿರುವುದರಿಂದ ಅವರ ಆರೋಗ್ಯ ಬೇಗ ಕೆಡುವುದಕ್ಕೆ ಕಾರಣವಾಗಿದೆ ಇದನ್ನು ನಾನು ಕಣ್ಣಾರೆ ನೋಡಿದ್ದೇನೆ. ನಾನೂ ಕೂಡ ಗ್ರಾಮಾಂತರ ಪ್ರದೇಶದಿಂದ ಬರತಕ್ಕ ಒಬ್ಬ ಡಾಕ್ಟರಾಗಿದ್ದೇನೆ. ಅದರಲ್ಲೂ ತತ್ರಾಪಿ ಈ ಹರಿಜನ ಗಿರಿಜನರ ಅವಸ್ಥೆಯನ್ನು ನೋಡುವುದಕ್ಕೆ ಸಾಧ್ಯವಿಲ್ಲ. ಅವರಿಗೆ ಸರಿಯಾದ ಬ್ಯಾಲೆನ್ಸ್‌ಡ್ ಆಹಾರ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಈ ಒಂದು ಕಾರಣದಿಂದ ಅಲ್ಲಿ ಚಿಲ್ಡ್ರನ್ ವೆಲ್‌ಫೇರ್ ಕ್ಲಿನಿಕ್ಕುಗಳನ್ನು ಪ್ರಾರಂಭಮಾಡಬೇಕು. ಅಲ್ಲಿಯ ಜನರ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. ಅವರಿಗೆ ಸರಿಯಾದ ಊಟ ಸಿಕ್ಕುತ್ತಿಲ್ಲ. ಅವರು ತೆಗೆದುಕೊಳ್ಳುತ್ತಿರುವ ಆಹಾರದಲ್ಲಿ ಮಾಲ್ ನ್ಯೂಟ್ರಿಷನ್ ಇರುವ ಕಾರಣದಿಂದ ಅವರು ಬಹುಬೇಗ ಕಾಯಿಲೆಗಳಿಗೆ ಗುರಿಯಾಗುತ್ತಿದ್ದಾರೆ. ಟ್ರಿಪಲ್ ಆಂಟಿಜೆನ್ ಇಂಜೆಕ್ಷನ್ ಮುಂತಾದ ಸೌಕರ್ಯಗಳು ಬರೀ ನಗರ ವಾಸಿಗಳಿಗೆ ಸಿಕ್ಕುತ್ತಿದೆಯೇ ವಿನಾ ಗ್ರಾಮಾಂತರ ಪ್ರದೇಶದ ಜನರಿಗೆ ಸಿಕ್ಕುತ್ತಿಲ್ಲ. ಈ ಚುಚ್ಚು ಮದ್ದು ಮೂರು ಕಾಯಿಲೆಗಳನ್ನು ನಿರೋಧಿಸತಕ್ಕ ಶಕ್ತಿಯನ್ನು ಹೊಂದಿದೆ. ಡೆಟ್ರನೆಸ್, ಡಿಫ್ತೀರಿಯಾ ಮತ್ತು ವೂಪಿಂಗ್ ಕಾಫ್ ಈ ಮೂರು ಕಾಯಿಲೆಗಳಿಗೆ ಮಕ್ಕಳಿಗೆ ಚುಚ್ಚು ಮದ್ದು ಕೊಡುವುದಕ್ಕೆ ಇದು ಬರುತ್ತದೆ. ಸಾಮಾನ್ಯವಾಗಿ ಈ ರೋಗಗಳು ಬಂದರೆ ಮಕ್ಕಳು ಬದುಕುವುದಿಲ್ಲ. ಆದ್ದರಿಂದ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಪ್ರತಿಯೊಬ್ಬ ಮಗುವಿಗೂ ಈ ಚುಚ್ಚು ಮದ್ದು ಬಹಳ ಅಗತ್ಯ. ಸರ್ಕಾರದವರು ಈ ಮದ್ದನ್ನು ಗ್ರಾಮಾಂತರ ಪ್ರದೇಶಕ್ಕೆ ಸಾಕಷ್ಟು ಒದಗಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನಮ್ಮ ರಾಜ್ಯದಲ್ಲಿ ಒಟ್ಟು ಹತ್ತು ಮೆಡಿಕಲ್ ಕಾಲೇಜುಗಳಿವೆ. ಅವುಗಳಲ್ಲಿ ಸುಮಾರು 1400 ಹುಡುಗರು ಸೇರುವುದಕ್ಕೆ ಅವಕಾಶವಿದೆಯೆಂದು ಕಾಣುತ್ತಿದೆ. ಕೆಲವು ಖಾಸಗಿ ಕಾಲೇಜುಗಳಲ್ಲಿ 50 ಪರ್ಸೆಂಟ್ ಸೀಟುಗಳಿಗೆ ಡೊನೇಷನ್ ತೆಗೆದುಕೊಂಡು ಹುಡುಗರಿಗೆ ಅಡ್ಮಿಷನ್ ಕೊಡಲಾಗುತ್ತಿದೆ. ಅಂದರೆ 500 ಜನರನ್ನು ಡೊನೇಷನ್ ಮೂಲಕ ಸೇರಿಸಿಕೊಂಡ ಹಾಗಾಯಿತು. ಇದರಿಂದ ಶ್ರೀಮಂತ ವರ್ಗದಲ್ಲಿರತಕ್ಕವರಿಗೆ ಅನುಕೂಲವಾಯಿತೇ ವಿನಾ ಬಡವರಿಗೇನೂ ಅನುಕೂಲವಾಗಲಿಲ್ಲ. ಆದ್ದರಿಂದ ಸರ್ಕಾರದವರು ಖಾಸಗೀ ಕಾಲೇಜುಗಳನ್ನು ಸರ್ಕಾರಿ ಕಾಲೇಜುಗಳನ್ನಾಗಿ ಪರಿವರ್ತನೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಅನಂತರ ಈ ಕಾಲೇಜುಗಳಲ್ಲಿರತಕ್ಕ ಅಧ್ಯಾಪಕರ ಹುದ್ದೆಗಳನ್ನು ಭರ್ತಿಮಾಡತಕ್ಕ ವಿಚಾರದಲ್ಲಿ ನ್ಯೂನತೆಗಳಿವೆ. ಇನ್ನೂ ಖಾಲಿ ಬಿದ್ದಿರತಕ್ಕ ಅನೇಕ ಹುದ್ದೆಗಳಿವೆ. ಆ ಸ್ಥಾನಗಳನ್ನು ಇಲ್ಲಿಯವರೆಗೂ ಭರ್ತಿಮಾಡಿಲ್ಲ. ಇದರಿಂದ ವಿದ್ಯಾರ್ಥಿಗಳಿಗೆ ಅಲ್ಲಿ ಸರಿಯಾದ ತರಬೇತಿ ಸಿಕ್ಕುತ್ತಿಲ್ಲ. ಈ ಹುದ್ದೆಗಳನ್ನು ಆದಷ್ಟು ಬೇಗ ಭರ್ತಿಮಾಡುವುದಕ್ಕೆ ಪ್ರಯತ್ನಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮಲ್ಲಿ ಎಷ್ಟು ಬೇಕೋ ಅಷ್ಟು ಹುದ್ದೆಗಳನ್ನು ನಿರ್ಮಿಸುವುದಕ್ಕೆ ಬದಲಾಗಿ ಅನೇಕ ಅನಗತ್ಯವಾದ ಹುದ್ದೆಗಳನ್ನೆಲ್ಲಾ ನಿರ್ಮಿಸಿಕೊಂಡಿದ್ದಾರೆ. ಬಹುಶಃ ತಮಗೆ ಬೇಕಾದವರಿಗೆ ಆ ಸ್ಥಾನಗಳನ್ನು ಕೊಡಬೇಕೆಂದು ಹೀಗೆ ಮಾಡಿಕೊಂಡಿದ್ದಾರೆಂದು ಕಾಣುತ್ತಿದೆ. ಇಂಥ ಒಂದು ಪದ್ಧತಿ ಬೇರೆ ಯಾವ ರಾಜ್ಯದಲ್ಲೂ ಇಲ್ಲ. ಮಾನ್ಯ ಮಂತ್ರಿಗಳು ಇಲ್ಲಿರತಕ್ಕ ಏರುಪೇರುಗಳನ್ನು ಕೂಡಲೇ ಸರಿಪಡಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಕೆಲಸ ಮಾಡುತ್ತಿರುವ ವೈದ್ಯರಲ್ಲಿ ಬಹಳ ಅತೃಪ್ತಿ ಮೂಡಿದೆ. ಕೆಲವರಿಗೆ ಅಪಾಯಿಂಟ್‌ಮೆಂಟ್ ಕೊಡುವುದರಲ್ಲಿ ಇನ್ನು ಕೆಲವರಿಗೆ ಪ್ರಮೋಷನ್ ಕೊಡುವುದರಲ್ಲಿ ಅನ್ಯಾಯವಾಗಿದೆಯೆಂದು ದೂರುಗಳು ಬರುತ್ತಿವೆ. ಅಲ್ಲಿ ಸರಿಯಾದ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್‌ಗಳಿಲ್ಲ. ಕಳೆದ 25 ವರ್ಷಗಳಿಂದ ಈ ಅವ್ಯವಸ್ಥೆ ಹಾಗೇ ಮುಂದುವರಿದು ಬಂದಿದೆ. ಕೆಲವರು ಕೆಲಸಕ್ಕೆ ಪ್ರಾರಂಭದಲ್ಲಿ ಸೇರುವಾಗ ಅಸಿಸ್ಟೆಂಟ್ ಸರ್ಜನ್ನಾಗಿ ಸೇರಿದರೆ ರಿಟೈರಾದರೂ ಅಸಿಸ್ಟೆಂಟ್

ಸರ್ಜನ್ನಾಗೇ ಆತ ರಿಟೈರಾಗಬೇಕು. ಇದು ಬಹಳ ಅನ್ಯಾಯ. ಇದನ್ನು ತಪ್ಪಿಸಲು ಸರ್ಕಾರದವರು ಡೆಪ್ಯುಟಿ ಸರ್ಜನ್ ಎಂತಲೋ ಅಥವಾ ಡೆಪ್ಯುಟಿ ಹೆಲ್ತ್ ಆಫೀಸರ್ ಎಂದೋ ಯಾವುದಾದರೊಂದು ಹೈಯರ್ ಹುದ್ದೆಯನ್ನು ಕ್ರಿಯೇಟ್ ಮಾಡಿ ಇವರಿಗೆ ಬಡ್ತಿ ಕೊಡಬೇಕೆಂದು ಹೇಳುತ್ತೇನೆ.

ಸೀನಿಯಾರಿಟಿ ಲಿಸ್ಟಿನ ವಿಚಾರದಲ್ಲೂ ಕೂಡ ಒಂದು ದೊಡ್ಡ ಗೊಂದಲವೆದ್ದಿದೆ. ಇದರಲ್ಲಿರತಕ್ಕ ಲೋಪದೋಷಗಳನ್ನು ಸರಿಪಡಿಸಬೇಕೆಂದು ಹೇಳುತ್ತೇನೆ.

ಪೋಸ್ಟ್ ಗ್ರ್ಯಾಜುಯೇಟ್ ಕೋರ್ಸಿನ ವಿಚಾರಕ್ಕೆ ಬಂದರೆ ಇದನ್ನು ಇನ್ನೂ ಮುಂದುವರಿಸುವುದು ಒಳ್ಳೆಯದು ಇದರಿಂದ ಸರ್ಕಾರಕ್ಕೇನೂ ಅಷ್ಟು ಹೆಚ್ಚಿನ ಖರ್ಚು ಬರುವುದಿಲ್ಲ. ಇದಕ್ಕಾಗಿ ಕೇಂದ್ರದವರು ಬೇರೆ ವರ್ಷಕ್ಕೆ 10 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆಂದು ನಾನು ತಿಳಿಯುತ್ತೇನೆ. ಆದ್ದರಿಂದ ನಮಗೇನೂ ಇದರಿಂದ ಅಂಥ ಹೆಚ್ಚಿನ ಖರ್ಚುಗಳು ಬರುವುದಿಲ್ಲ. ಆದ್ದರಿಂದ ಈ ಅನೆಸ್ತೇಷಿಯಾ ಮೊದಲಾದ, ನಮ್ಮಲ್ಲಿ ಇಲ್ಲದ ಕೋರ್ಸುಗಳನ್ನು ತೆರೆಯಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ).—ಸನ್ಮಾನ್ಯ ಸಭಾಧ್ಯಕ್ಷಿಣಿಯರೇ, ಈ ಸದನದ ಮುಂದೆ ಮಾನ್ಯ ಆರೋಗ್ಯ ಸಚಿವರು ಮಂಡಿಸಿರುವ ಬೇಡಿಕೆಯನ್ನು ಸ್ಪಷ್ಟವಾಗಿ ವಿರೋಧಿಸುತ್ತಾ, ಕೆಲವು ಸೂಚನೆಗಳನ್ನು ಕೊಡಲು ಬಯಸುತ್ತೇನೆ. ವಿರೋಧ ಪಕ್ಷದವರಾದುದರಿಂದ ಸರಕಾರ ಮಂಡಿಸುವ ಬೇಡಿಕೆಗಳನ್ನು ವಿರೋಧಿಸಬೇಕೆಂಬ ಸಂಪ್ರದಾಯವಿಲ್ಲ. ಆಡಳಿತ ದಕ್ಷತೆ, ರಾಜ್ಯ ಸರಕಾರದ ಗುರುತರವಾದ ಹೊಣೆ, ಹಾಗೂ ಸರಕಾರದ ಮಟ್ಟದಲ್ಲಿ ನಡೆಸುವ ಆಡಳಿತ ಮುಂತಾದುವುಗಳ ಬಗ್ಗೆ ಶಂಕೆ ಬಂದಾಗ ಈ ಸಭೆಯ ಸದಸ್ಯನಾಗಿ ನಮ್ಮ ಮುಂದಿಡುವ ಬೇಡಿಕೆಯನ್ನು ವಿರೋಧಿಸಬೇಕಾದ್ದು ಧರ್ಮ ಮತ್ತು ನ್ಯಾಯ. ವಿರೋಧಿಸುವುದಕ್ಕೆ ಕಾರಣ ಮೊದಲನೆಯದಾಗಿ ಇಲಾಖೆಯಲ್ಲಿರುವ ಪಿರುಪೇರು, ಅಧಿಕಾರಿಗಳ ಅದಕ್ಷತೆ, ಅಪ್ರಾಮಾಣಿಕತೆ, ಹೀಗಾದರೆ ಅಲ್ಲಿರುವ ಅವ್ಯವಸ್ಥೆ ಹೋಗಿ ಪರಿಪೂರ್ಣವಾಗುವುದು ಯಾವಾಗ ? ಶುದ್ಧವಾದ ಆಡಳಿತವನ್ನು ಜನರು ನಿರೀಕ್ಷೆ ಮಾಡುವುದು ಹೇಗೆ ? ಅಗೌರವದ ನಡೆ ನುಡಿ ಬಹಿರಂಗವಾಗಿ ಎದ್ದು ಕಾಣುವುದು. ಒಂದು ಸಭೆಯಲ್ಲಿ ಬಹಿರಂಗವಾಗಿ ಅಧಿಕಾರಿ ಟೀಕೆ ಮಾಡುವಾಗ ಸಂಬಂಧಪಟ್ಟ ಸಚಿವರು ಅದರ ಬಗ್ಗೆ ವಿವರಣೆ ಕೊಡಬೇಕೆಂದು ಕೇಳಿದರೆ ರಾಜ್ಯ ಸೂತ್ರ ವಹಿಸಿರುವ ಮುಖ್ಯಮಂತ್ರಿಗಳು ಆತನ ರಕ್ಷಣೆಗೆ ಹೊರಟರೆ ಏನು ಹೇಳುವುದು. ಶ್ರೀ ಚಾಮುಂಡೇಶ್ವರಿಯು ಅವರಿಗೆ ಸದ್ಬುದ್ಧಿಯನ್ನು ಕೊಡಲಿ ಎಂದು ನಾನು ಈ ಸಭೆಯ ಸದಸ್ಯನಾಗಿ ನೊಂದ ಮನಸ್ಸಿನಿಂದ ಹಾರೈಸುತ್ತೇನೆ.

ಈ ಬೇಡಿಕೆಯನ್ನು ವಿರೋಧಿಸುತ್ತಾ ಇರುವ ಅಂಶವನ್ನು ನಿರ್ದಾಕ್ಷಿಣ್ಯವಾಗಿ ಹೇಳಬೇಕಾದ್ದು ನನ್ನ ಧರ್ಮ.

[MR. DEPUTY SPEAKER in the Chair]

ಸೌಜನ್ಯಶೀಲರೂ ಅನುಭವಸ್ಥರೂ ಆದ ಶ್ರೀಮಾನ್ ಸಿದ್ಧವೀರಪ್ಪನವರು ದುರ್ಯೋಧನನ ಸಭೆಯ ಕರ್ಣ ಇದ್ದ ಹಾಗೆ ಎಂದು ಹೇಳಬಹುದು. ಕರ್ಣ ದುರ್ಯೋಧನನ ಸಭೆಯಲ್ಲಿ ಮಾಡಿದಂತೆ ಮಾನ್ಯ ಮಂತ್ರಿಗಳು ಯತ್ನವಿಲ್ಲದೆ ಅಧರ್ಮ ರೀತಿಯಲ್ಲಿ ನಡೆಯಬೇಕಾದ ಪರಿಸ್ಥಿತಿ ಇದೆ ಎಂದು ಹೇಳಿದರೆ ತಪ್ಪಾಗಲಾರದು. ಹಿರಿಯ ಸದಸ್ಯರಾದ ಆರೋಗ್ಯ ಶಾಖೆಯ ಸಚಿವರಲ್ಲಿ ನಮಗೆ ಅಪಾರವಾದ ಗೌರವ ಇದೆ. ಅವರಿಗೆ ದುರಾದೃಷ್ಟವಶಾತ್ ಈ ಇಲಾಖೆ ಸಿಕ್ಕಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಮುಖ್ಯ ಮಂತ್ರಿಗಳು, ಆರೋಗ್ಯ ಸಚಿವರು ಮತ್ತು ಇತರರು ಕೆಲವರು ಹಿರಿಯ ವ್ಯಕ್ತಿಗಳು ಮಂತ್ರಿ ಮಂಡಲದಲ್ಲಿದ್ದಾರೆ. ಹಿರಿಯರಾದ ಶ್ರೀ ಸಿದ್ಧವೀರಪ್ಪನವರು ಮಂತ್ರಿಗಳಾಗಿದ್ದಾರೆ. ಆದರೆ ರಾಜ್ಯದ ಜನರ ಹಿತಚಿಂತನೆಗೆ ಸಂಬಂಧಪಟ್ಟ ಇಲಾಖೆಯನ್ನು ಅವರು ವಹಿಸಿರುವಾಗ ಉಗ್ರತರವಾದ ಲೋಪಗಳಿರುವುದರಿಂದ ಅವರನ್ನು ಕ್ಷಮಿಸುವುದಕ್ಕೆ ಸಾಧ್ಯವಿಲ್ಲ. ಈ ಸಭೆಯ ಸದಸ್ಯನಾಗಿ ನಾನು ಇರುವ ನಿಜ ಸಂಗತಿಯನ್ನು ಅರಿತು ಕ್ಷಮಿಸಲು ತಯಾರಿಲ್ಲ. ಕಾರಣವಾದರೂ ಇಷ್ಟೇ. ಕೋಟ್ಯಾಂತರ ರೂಪಾಯಿಗಳನ್ನು ಅವರನ್ನು ನಂಬಿ ಅವರಿಗೆ ಕೊಡುವಾಗ ಸ್ಪಷ್ಟವಾಗಿ ಇರುವ ಲೋಪದೋಷಗಳನ್ನು ಹೇಳದಿದ್ದರೆ ಆ ದೋಷ ನನಗೆ ಬರುವುದು. ಅಷ್ಟು ಹಣ ಕೊಡುವಾಗ ಲಂಚಕೋರ ಅಧಿಕಾರಿಗಳನ್ನು ಅಂತರಂಗದಲ್ಲಿ ಸೃಷ್ಟಿ ಮಾಡುತ್ತಿದ್ದೀರಿ ಎಂಬ ಭಯ ನನ್ನೆಯಿಂದ ನನ್ನಲ್ಲುಂಟಾಗಿದೆ. ಇದು ಸರಿಯೇ ಎಂದು ಅವರು ಅವರ ಅಂತರಾತ್ಮದ ಸಾಕ್ಷಿಯಾಗಿ ಹೇಳಲಿ. ನಮ್ಮ ಅಧಿಕಾರಿಗಳಲ್ಲಿ ಅದಕ್ಷತೆ ಇದೆ, ಶುದ್ಧೀಕರಣವಾಗಬೇಕು ಎಂದು ದಿಟ್ಟತನದಿಂದ ಹೇಳಬೇಕಾಗಿದೆ. ಗ್ರಾಮಾಂತರಗಳಲ್ಲಿ ಬಟ್ಟಿ ಸಾರಾಯಿ ಕುಡಿಯುವ ಗೌಡ ಎಲ್ಲಾ ಸರಿಯಾಗಿದೆ ಎಂದು

(ಶ್ರೀ ಬಿ. ಪುಟ್ಟಸ್ವಾಮಯ್ಯ)

ಹೇಳಿದರೆ ಅದರಂತೆ ನಡೆಯುವುದಾದರೆ ಈ ರಾಜ್ಯದಲ್ಲಿ ಧರ್ಮ ಸ್ಥಾಪನೆಯಾಗುವುದು ಹೇಗೆ? ಹಿರಿಯರು ಸರಕಾರದಲ್ಲಿದ್ದಾರೆ, ಅವರೆಲ್ಲಾ ಮಹಾತ್ಮ ಗಾಂಧಿಯವರ ಭಕ್ತರು, ಹೀಗಿರುವಾಗ ಆಡಳಿತವನ್ನು ಸರಿಯಾಗಿ ದಕ್ಷತೆಯಿಂದ ನಡೆಸದಿದ್ದರೆ ಗಾಂಧೀಜೀಯವರು ನಿಮ್ಮನ್ನು ಕ್ಷಮಿಸುವರೇ? ಆಡಳಿತದಲ್ಲಿ ಶುದ್ಧೀಕರಣ ಮಾಡದಿದ್ದರೆ ರೋಗಿಗಳಿಗೆ ಸಹಾಯವಾಗುವುದಿಲ್ಲ. ಸ್ವಲ್ಪ ಎಚ್ಚರಿಕೆಯಿಂದ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಕೈಮುಗಿದು ಕೇಳಿಕೊಳ್ಳುತ್ತೇನೆ. ಮಾನ್ಯ ಸದಸ್ಯರಾಗಲೇ ಹೇಳಿದಂತೆ ಆಸ್ಪತ್ರೆಯಿದ್ದ ಕಡೆ ಡಾಕ್ಟರಿಲ್ಲ, ಡಾಕ್ಟರಿದ್ದರೆ ಔಷಧಿ ಇರುವುದಿಲ್ಲ. ಆತ್ಮಪೂರ್ವಕವಾಗಿ ಈ ಬೇಡಿಕೆಯನ್ನು ಒಪ್ಪುತ್ತೇವೆಂದು ಹೇಳಲು ಸಾಧ್ಯವಿಲ್ಲ. ಆತ್ಮದ ಕೊಲೆ ಮಾಡಲು ಸಾಧ್ಯವೇ? ಮಸೀದಿಗಳಿಗೆ ಹೋಗುತ್ತಾರೆ, ಚರ್ಚುಗಳಿಗೆ ಹೋಗುವರು, ದೇವಸ್ಥಾನಗಳಿಗೆ ಹೋಗುವರು. ಅವರು ಆತ್ಮಪೂರ್ವಕವಾಗಿ ಇಷ್ಟು ಹಣವನ್ನು ಇವರ ಕೈಲಿ ಕೊಡುವುದಕ್ಕೆ ಸಾಧ್ಯವೇ ಎಂಬುದನ್ನು ಹೇಳಲಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕೊಡಲು ಅವರ ಆತ್ಮ ಒಪ್ಪುವುದೇ?

ಒಬ್ಬ ಮಾನ್ಯ ಸದಸ್ಯರು.—20 ವರ್ಷಗಳಲ್ಲಿ ಮಾಡಿರುವುದನ್ನು ಮೂರು ತಿಂಗಳಲ್ಲಿ ಸರಿಪಡಿಸುವುದಕ್ಕಾಗುದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಹಿಂದೆ ಸ್ವಲ್ಪ ಲಂಚ ತಿಂದಿರಬಹುದು. ಈಗ ಮೂರು ತಿಂಗಳಲ್ಲಿ ಬಿಳಿ ಆನೆಯನ್ನು ಆಡಳಿತಗಾರರು ನುಂಗಿದ್ದಾರೆ. 20 ವರ್ಷದಲ್ಲಿ ಮಾಡದಿರುವುದನ್ನು ಮೂರು ತಿಂಗಳಲ್ಲಿ ಮಾಡಿದ್ದಾರೆ. ದೇಶದಲ್ಲಿ ಅನೇಕ ಮಂತ್ರಿಗಳ ಬಗ್ಗೆ ಅಪಾರ ಗೌರವವಿದೆ; ಜಿಜ್ಞಾಸೆಯೂ ಇದೆ. ದೇಶದಲ್ಲಿ ಆಡಳಿತ ಪಕ್ಷದ ಮಾನಮರ್ಯಾದೆ ಉಳಿದು, ಗೌರವ ಬರಬೇಕಾದರೆ ರಾಜ್ಯ ಉದ್ಧಾರವಾಗಬೇಕಾದರೆ ಯಾರಾದರೂ ಹರಿಜನರರೊಬ್ಬರನ್ನು ಮುಖ್ಯ ಮಂತ್ರಿ ಮಾಡಬೇಕು, ಇಲ್ಲದಿದ್ದರೆ ಒಬ್ಬ ಹೆಣ್ಣುಮಗಳನ್ನಾದರೂ ಮಂತ್ರಿ ಸ್ಥಾನದಲ್ಲಿ ಕೂಡಿಸಬೇಕು ಎಂದು ನಾನು ಹೇಳಿದೆ. ಇದನ್ನು ಹೇಳುವುದು ಅವರ ಪರವಾಗಿ ವಾದಿಸುವುದಕ್ಕಲ್ಲ.

ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀರಂಗಪಟ್ಟಣ).—ವಿರೋಧ ಪಕ್ಷದವರು ಒಬ್ಬ ಹೆಣ್ಣುಮಗಳನ್ನು ಚುನಾವಣೆಯಲ್ಲಿ ನಿಲ್ಲಿಸಿ ಸಭೆಗೆ ಕಳಿಸುವುದಕ್ಕಾಗಲಿಲ್ಲ. ಹಾಗಿರುವಾಗ ಅವರು ಈಗ ಹೇಳುವುದು ಸರಿಯೇ!

ಶ್ರೀ ಬಿ. ಪುಟ್ಟಸ್ವಾಮಯ್ಯ.—ಒಂದು ಗಾದೆಯಿದೆ. ಅದನ್ನು ಶ್ರೀಮಾನ್ ದಮಯಂತಿ ಬೋರೇಗೌಡರಿಗೆ ಹೇಳಲು ಇಷ್ಟಪಡುವುದಿಲ್ಲ. ಅದಕ್ಕೇ ನಾನು ಶ್ರೀಮಾನ್ ಎಂದು ಸಂಬೋಧನೆ ಮಾಡಿದ್ದೇನೆ. ಏಕೆ ನಾನು ಶ್ರೀ ಸಿದ್ಧವೀರಪ್ಪನವರನ್ನು ಕರ್ಣ ಎಂದು ಕರೆಯುತ್ತಿದ್ದೇನೆ ಎಂಬುದನ್ನು ಹೇಳುತ್ತೇನೆ. ಅವರು ನಿಷ್ಪಕ್ಷಪಾತವಾಗಿ ಆಡಳಿತ ನಡೆಸಬೇಕು, ದಕ್ಷತೆಯಿಂದ ಕೆಲಸ ಮಾಡಬೇಕು ಎಂಬ ಹಂಬಲ ನನಗಿದೆ. ಈ ರಾಜ್ಯದ ಕಲ್ಯಾಣ, ಸರ್ವರ ಹಿತರಕ್ಷಣೆ ಮತ್ತು ಪ್ರಾಣ ರಕ್ಷಣೆ ಆರೋಗ್ಯ ಇಲಾಖೆ ವಹಿಸಿಕೊಂಡಿರುವವರ ಕೈಲಿದೆ. ನಿಮಗೆ ವಿಶ್ವಾಸವಿದ್ದರೆ ದೇಶದಲ್ಲಿರುವ ಅನೀತಿಯನ್ನು ತೊಡೆದುಹಾಕಿ ಶುದ್ಧವಾದ ಆಡಳಿತ ಒದಗಿಸಬೇಕು. ಇರುವ ಲೋಪಗಳನ್ನು ನಿವಾರಣೆಮಾಡಿ ಸರಿಯಾಗಿ ಶುದ್ಧೀಕರಣ ಮಾಡದಿದ್ದರೆ ರಾಜ್ಯಕ್ಕೆ ಮತ್ತು ಪ್ರಜೆಗಳಿಗೆ ದ್ರೋಹಮಾಡಿದಂತಾಗುವುದು. ಇದನ್ನು ಒತ್ತಿ ಹೇಳಬೇಕಾಗಿದೆ. ಮಂತ್ರಿ ಮಂಡಲದಲ್ಲಿ ಅನೇಕ ಹೊಸ ಮಂತ್ರಿಗಳಿದ್ದಾರೆ, ಶ್ರೀ ಚನ್ನಬಸಪ್ಪನವರಂಥ ಹಿರಿಯರಿದ್ದಾರೆ, ಚೆನ್ನಾಗಿ ಆಡಳಿತ ನಡೆಸುವರು ಎಂಬ ವಿಶ್ವಾಸ ಇತ್ತು. ಆ ವಿಶ್ವಾಸವನ್ನು ಎಲ್ಲಿಗೆ ತೆಗೆದುಕೊಂಡುಹೋಗುವರೋ ತಿಳಿಯದು. ನಮ್ಮನ್ನೂ ತೆಗೆದುಕೊಂಡುಹೋಗಿ ಎಲ್ಲಿ ಡೆಡ್‌ಹೌಸಿಗೆ ಹಾಕುವರೋ ಎಂದು ಅನುಮಾನ ಬರುತ್ತಿದೆ. ಈ ದೇಶದ ಸತ್ಪ್ರಜೆಗಳ ಬಗ್ಗೆ ಕರುಣೆ ತೋರದೆ ನಿಷ್ಪಕ್ಷಪಾತವಾಗಿ ವರ್ತಿಸದೆ ಅವರನ್ನು ಡೆಡ್ ಹೌಸ್‌ಗೆ ಹಾಕುವುದಕ್ಕೆ ಹೊರಟಿರುವಿರಾ ಎಂದು ಪ್ರಶ್ನೆ ಮಾಡಬೇಕಾಗಿದೆ. ಈ ರಾಜ್ಯದ ಜನತೆಯ ಹಿತದೃಷ್ಟಿಯಿಂದ ಶ್ರೀಮಾನ್ ಹೆಚ್. ಎಸ್. ಸಿದ್ಧವೀರಪ್ಪನವರನ್ನು ಕರ್ಣ ಎಂದು ಸಂಭೋದಿಸುವುದರಲ್ಲಿ ಬಹುಶಃ ಅರ್ಥ ಇದೆ. ಹಿಂದೆ ಮಹಾಭಾರತದಲ್ಲಿ ಪಾಂಡವರು ಅಜ್ಞಾತವಾಸ ಮತ್ತು ವನವಾಸವನ್ನು ಮಾಡಿದ ಚರಿತ್ರೆ ಇದೆ. ಅದರಂತೆ ನಾವು ಈವಾಗ ಪಾಂಡವರಾಗಿದ್ದೇವೆ. ಅವರು ಕೌರವರಾಗಿದ್ದಾರೆ. ಅದರಂತೆ ಈವಾಗಿನ ಆಡಳಿತದಲ್ಲಿ ಶ್ರೀಮಾನ್ ಡಿ. ದೇವರಾಜ್ ಅರಸ್‌ರವರು ದುರ್ಯೋಧನ ಆಗಿದ್ದಾರೆ, ಶ್ರೀಮಾನ್ ಹೆಚ್. ಎಸ್. ಸಿದ್ಧವೀರಪ್ಪನವರು ಕರ್ಣ ಆಗಿದ್ದಾರೆ. ಕೃಷ್ಣ ಮೇಲುಗಡೆ ಇದ್ದಾನೆ. ಆದುದರಿಂದ ತಮ್ಮ ಮುಖಾಂತರ ನಾನು ಹೇಳುತ್ತೇನೆ. ನಾನು ಆವೇಶಪೂರಿತವಾಗಿ ಭಾಷಣ ಮಾಡತಕ್ಕಂಥ ಮನುಷ್ಯನಲ್ಲ. ಪತ್ರಿಕೆಗಳಲ್ಲಿ ನನ್ನ ಹೆಸರು ಬರಬೇಕು ಅನ್ನತಕ್ಕಂಥ ಮನುಷ್ಯನಲ್ಲ. ರಾಜ್ಯದ

ಹಿತದೃಷ್ಟಿಯಿಂದ ಪತ್ರಿಕೆಗಳವರಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ದೇಶದಲ್ಲಿ ದುರಾಡಳಿತವನ್ನೂ ಲಂಚಕೋರತನವನ್ನೂ ಉತ್ತೇಜನ ಮಾಡುತ್ತಿದ್ದೀರಿ. ನಾನು ವ್ಯಕ್ತಿಗತವಾಗಿ ಮಾತನಾಡುವುದಿಲ್ಲ. ನಾನು ಹೇಳುವುದು ಈ ಆಡಳಿತದಲ್ಲಿ ಶ್ರೀಮಾನ್ ದೇವರಾಜ ಅರಸ್‌ರವರು ದುರ್ಯೋಧನ ಇದ್ದ ಹಾಗೆ ಎಂದರೆ ತಪ್ಪಾಗುವುದಿಲ್ಲ. ಇನ್ನೂ ಅನೇಕ ಹಿರಿಯ ಮಂತ್ರಿಗಳು ಇದ್ದಾರೆ. ನಾನು ಹೇಳುವಾಗ ಈ ರೀತಿ ಮಾತು ಹೇಳುತ್ತಾರೆ ಎಂದು ತಿಳಿಯಕೂಡದು. ನಮ್ಮ ಅಪ್ಪ ನನಗೆ ಹೊಲ ಇಟ್ಟಿದ್ದಾರೆ. ನನಗೆ ಶಕ್ತಿ ಇದೆ. ನಾನು ಕೂಲಿ ಕೆಲಸವನ್ನಾದರೂ ಮಾಡಿಕೊಂಡು ಜೀವನ ಮಾಡುತ್ತೇನೆ. ಆದರೆ ಅವರು ಮಾಡುವ ದುರಾಡಳಿತವನ್ನು ಖಂಡಿಸುವುದು ಬಿಡುವುದಿಲ್ಲ. ಆ ಆಡಳಿತದವರು ಮಾಡುವ ದುರಾಡಳಿತ ಮತ್ತು ಲಂಚಕೋರತನವನ್ನು ಖಂಡಿಸುವುದೇ ನನ್ನ ಕರ್ತವ್ಯ. ಒಬ್ಬ ಮಹಾ ವ್ಯಕ್ತಿ ಹೇಳಿದರು. ಅವರು ಯಾರು ಎನ್ನುವುದು ಗೊತ್ತಿಲ್ಲ. ''ಬೋಲ್‌ನೇ ತೋ ಬೋಲ್ ರೇಂದೆ ಚೋಡ್'' ಎಂದು ಅಂದರು. ವಿರೋಧ ಪಕ್ಷದವರ ತಿಳುವಳಿಕೆಗೆ ಏನು ಹೇಳೋಣ ಎಂದು ಜನರು ಹೇಳುತ್ತಿದ್ದಾರೆ ಎಂದು ಒಬ್ಬ ಮಾನ್ಯ ಸದಸ್ಯರು ಹೇಳಿದರು. ಬಾವುಟದ ಕಾರು ಹೋದರೆ ಜನರು ಏನು ಹೇಳುತ್ತಾರೆ? ಇಲ್ಲಿ ಹಿರಿಯ ಮಂತ್ರಿಗಳು ಇರುವುದರಿಂದ ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಮುಖ್ಯ ವಾಗಿ ದೇಶದ ಕಲ್ಯಾಣವಾಗಬೇಕು, ಈ ಇಲಾಖೆ ಪ್ರಾಮುಖ್ಯವಾದ ಇಲಾಖೆ. ಸೃಷ್ಟಿಕರ್ತನು ಸೃಷ್ಟಿ ಮಾಡಿಸತಕ್ಕಂಥ ಮನುಷ್ಯನಿಗೆ ಖಾಯಿಲೆ ಬಂದರೆ ಗುಣ ಮಾಡತಕ್ಕಂಥ ಇಲಾಖೆ ಇದು. ಇದರ ಆಡಳಿತ ಶ್ರೀಮಾನ್ ಸಿದ್ಧವೀರಪ್ಪನವರ ಕೈಯ್ಯಲ್ಲಿ ಇದೆ. ಈ ರೋಗಗಳ ಮೇಲ್ವಿಚಾರಣೆ ನಿಮ್ಮ ಒಂದು ಇಲಾಖೆಯ ಹಿಡಿತದಲ್ಲಿದೆ. ಆದುದರಿಂದ ನಾನು ಹೇಳುವುದು ಅನೀತಿ, ಲಂಚಕೋರ ತನದ ಅಧಿಕಾರಿಗಳನ್ನೂ, ದುರಾಡಳಿತ ನಡೆಸತಕ್ಕ ಅಧಿಕಾರಿಗಳನ್ನೂ ರಕ್ಷಣೆ ಮಾಡತಕ್ಕಂಥ ಕಾರ್ಯ ಈ ಮಂತ್ರಿ ಮಂಡಲದಲ್ಲಿ ಇರತಕ್ಕಂಥ ನಿಮ್ಮ ಕಣ್ಣ ಎದುರಿಗೆ ಬಂದಿದೆಯಲ್ಲಾ ಎನ್ನುವುದೇ ನನಗೆ ದುಃಖ. ಅಂಥಾವರನ್ನು ರಕ್ಷಣೆ ಮಾಡಕೂಡದು. ಅವರಿಗೆ ಮೊದಲು ಔಷಧಿ ಕಂಡುಹಿಡಿದು ದೇಶದ ಜನರ ಆರೋಗ್ಯವನ್ನು ಉತ್ತಮಪಡಿಸಿ ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಗ್ರಾಮಾಂತರ ಪ್ರದೇಶದಲ್ಲಿ ವೈದ್ಯಕೀಯ ಸೌಲಭ್ಯ ಸಾಕಾಗುವುದಿಲ್ಲ. ಅನೇಕ ಗ್ರಾಮಗಳಲ್ಲಿ ಆಸ್ಪತ್ರೆ ಇದ್ದರೆ ಡಾಕ್ಟರ್ ಇಲ್ಲ, ಡಾಕ್ಟರ್ ಇದ್ದರೆ ಔಷಧಿ ಇಲ್ಲ, ಡಾಕ್ಟರ್ ಇದ್ದರೆ ಆಸ್ಪತ್ರೆ ಇಲ್ಲ ಈ ರೀತಿ ಆಗಿದೆ. ಇದರ ಬಗ್ಗೆ ಒಂದು ವಿಷಯ ಹೇಳುತ್ತೇನೆ. ರಾಮನಗರದಲ್ಲಿ ಒಂದು ಆಸ್ಪತ್ರೆ ಇದೆ. ಆ ಆಸ್ಪತ್ರೆಯನ್ನು ಈಗಾಗಲೇ ಮಾನ್ಯ ಮಂತ್ರಿಗಳು ನೋಡಿದ್ದಾರೆ. ತಾಲ್ಲೂಕು ಬೋರ್ಡು ಮತ್ತು ಮುನಿಸಿಪಾಲಿಟಿಯವರು ಯಾವ ವಂತಿಕೆಯನ್ನೂ ತೆಗೆದುಕೊಳ್ಳದೆ ನಾವು ನಡೆಸುತ್ತೇವೆ ಎಂದು ಹೇಳಿದ್ದಾರೆ. ಆದುದರಿಂದ ನಾನು ಕೇಳಿಕೊಳ್ಳುವುದು ಏನೆಂದರೆ ಈ ರಾಜ್ಯ ದಲ್ಲಿರುವ ಆರೋಗ್ಯ ಇಲಾಖೆಯನ್ನು ಸರಿಯಾಗಿ ನೋಡಿಕೊಳ್ಳಬೇಕು. ಪ್ರತಿಯೊಂದು ತಾಲ್ಲೂಕಿ ನಲ್ಲೂ ಕೂಡ ಆಸ್ಪತ್ರೆಯಲ್ಲಿ 25 ಬೆಡ್ ಇರುವ ಹಾಗೆ ಮಾಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳು ತ್ತೇನೆ. ತಾಲ್ಲೂಕು ಬೋರ್ಡು ಮತ್ತು ಮುನಿಸಿಪಾಲಿಟಿಯವರು ಒಂದು ಲಕ್ಷ ಚಿಲ್ಲರೆ ರೂಪಾಯಿ ಕಾಂಟ್ರಿಬ್ಯೂಷನ್ ಕೊಡಬೇಕೆಂದು ನಿಬಂಧನೆ ಇದೆ. ಆ ನಿಬಂಧನೆಯನ್ನೂ ಕೂಡ ತೆಗೆದು ಹಾಕಿ ಪೂರ್ತಾ ವೆಚ್ಚವನ್ನೂ ಸರ್ಕಾರವೇ ವಹಿಸಿಕೊಳ್ಳುವ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಪಟ್ಟಣಗಳಲ್ಲಿರುವ ಆಸ್ಪತ್ರೆಗಳಲ್ಲಿ ರೋಗಿಗಳನ್ನು ನೋಡಿಕೊಳ್ಳಬೇಕಾದರೆ ಹೆಚ್ಚು ಹೆಣ್ಣುಮಕ್ಕಳೇ ಇರುತ್ತಾರೆ. ನಾನು ಆಸ್ಪತ್ರೆಗೆ ಹತ್ತಿರದ ಮನುಷ್ಯ. ಏತಕ್ಕೆಂದರೆ ರೋಗಗ್ರಸ್ತ ರಾಗಿರುವ ನನ್ನ ಸಂಬಂಧಿಕರುಗಳನ್ನು ನೋಡಲು ಹಚ್ಚಾಗಿ ಹೋಗುತ್ತೇನೆ. ಅಲ್ಲಿ ನೋಡಿದರೆ ಇರುವ ಹೆಣ್ಣುಮಕ್ಕಳಲ್ಲಿ ಅರ್ಧ ಜನ ಗರ್ಭಿಣಿಯರಾಗಿ ಹೆರಿಗೆಗೆ ರಜಾ ತೆಗೆದುಕೊಂಡು ಹೋಗಿರುತ್ತಾರೆ; ಮತ್ತೆ ಕೆಲವರು ಬೇರೆ ರಜಾದ ಮೇಲೆ ಹೋಗಿರುತ್ತಾರೆ. ಕೆಲವು ಹೆಣ್ಣುಮಕ್ಕಳು ಬಹಳ ಜನ ರೋಗಿಗಳನ್ನು ನೋಡಿಕೊಳ್ಳಬೇಕು. ಆದುದರಿಂದ ಈ ವ್ಯವಸ್ಥೆಯನ್ನು ಹೋಗಲಾಡಿಸ ಬೇಕಾದರೆ ಆಸ್ಪತ್ರೆಗಳಲ್ಲಿ ಇವರ ಸಿಬ್ಬಂದಿಯನ್ನು ಜಾಸ್ತಿ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಈ ಆಸ್ಪತ್ರೆಗಳಲ್ಲಿರುವ ಲಂಚಗುಳಿತನದ ಬಗ್ಗೆ ಹೇಳಬೇಕಾಗುತ್ತದೆ. ವೈದ್ಯರಿಗೆ ಕೊಡತಕ್ಕಂಥ ಲಂಚ ಅನೂಚಾನವಾಗಿ ಬಂದಿದೆ. ಏತಕ್ಕೆಂದರೆ ಉಪಕಾರ ಮಾಡಿದವರಿಗೆ ನಾವೇ ಖುದ್ದಾಗಿ ಹಣ್ಣು ಕಾಯಿ, ಬಾಳೆಯೆಲೆ ಇವುಗಳನ್ನು ಕೊಡುತ್ತೇವೆ. ಇದು ರಕ್ತಗತವಾಗಿ ಬಂದಂಥ ನೀತಿ. ಪ್ರಾಣವನ್ನು ರಕ್ಷಣೆ ಮಾಡತಕ್ಕಂಥಾವರಿಗೆ ನಾವೇ ಖುದ್ದಾಗಿ ಸಂತೋಷವಾಗಿ ಕೊಟ್ಟರೆ ಅವನು ಲಂಚದ ಮನುಷ್ಯ ಎಂದು ಆಗುವುದಿಲ್ಲ. ಈ ಮನೆಯಲ್ಲಿ ಶ್ರೀಮಾನ್ ಚನ್ನಬಸಪ್ಪನವರು ಇನ್ನೂ ಕೆಲವರು ಹಿರಿಯ ಮಂತ್ರಿಗಳು ಇದ್ದಾರೆ. ಇವರೆಲ್ಲಾ ಹೇಗೆ ದೊಡ್ಡವರು ಆದರು. ಆದರೆ ಇವರು ಮಂತ್ರಿಗಳಾದ ತಕ್ಷಣ ಈ ಲಂಚಗುಳಿತನವನ್ನು ತೆಗೆಯುತ್ತೇವೆ ಎಂದು ಹೇಳಿದರೆ ಬಾಯಲ್ಲಿ ಹೇಳತಕ್ಕದ್ದನ್ನು ಕಾರ್ಯಗತ ಮಾಡತಕ್ಕಂಥ ನೈತಿಕ ಸಾಮರ್ಥ್ಯ ನಿಮಗೆ ನಿಜವಾಗಿಯೂ

(ಶ್ರೀ ಬಿ. ಪುಟ್ಟಸ್ವಾಮಯ್ಯ)

ಇದೆಯೇ? ಈ ದೇಶಕ್ಕೆ ಕಲ್ಯಾಣವಾಗಬೇಕು ಎಂದು ನೀವೆಲ್ಲರೂ ಇಂದಿರಾಗಾಂಧಿಯವರ ಬಾವುಟವನ್ನು ಹಿಡಿದುಕೊಂಡು ಬಂದ ತಕ್ಷಣವೇ ಆಗುವುದಿಲ್ಲ. ನಿಮಗೆ ನಾವು ಯಾವಾಗಲೂ ವಿರೋಧಿಗಳೇ. ನಾನು ಈ ಮಾತನ್ನು ಹೇಳಿದರೆ ನಿಮಗೆ ಟೀಕಿಸಿದಂತಾಗಬಹುದು. ಹೊಸದುರ್ಗ ತಾಲ್ಲೂಕಿನಲ್ಲಿ ಕಿಟ್ಟದಾಳ ಗ್ರಾಮಕ್ಕೆ ಒಂದು ಆಸ್ಪತ್ರೆ ಮಂಜೂರು ಆಯಿತು. ಮಂಜೂರಾದ ಆಸ್ಪತ್ರೆಗೆ ಪಿ. ಡಬ್ಲ್ಯು. ಡಿ. ಯವರು 26,600 ರೂಪಾಯಿಗೆ ಟೆಂಡರ್ ಕರೆದಿದ್ದಾರೆ. ಕಿಟ್ಟಧಾಳ ಗ್ರಾಮದಲ್ಲಿ ಇಂದಿರಾಗಾಂಧಿಯವರ ಬಾವುಟ ಹಿಡಿದುಕೊಂಡು ಧಾಳಿ ಮಾಡಿಕೊಂಡು ಬಂದು ಅಲ್ಲಿದ್ದ ಆಸ್ಪತ್ರೆಯನ್ನು ಕಿತ್ತು ಇನ್ನೊಂದು ಊರಿಗೆ ಹಾಕಿದರು. ತಾವು ವಯಸ್ಸಿನಲ್ಲಿ ದೊಡ್ಡವರಾಗಿದ್ದು, ಬುದ್ಧಿವಂತರಾಗಿ ದಕ್ಷತೆ ಇರುವವರು ಈ ತರಹ ಕೆಲಸವನ್ನು ಮಾಡಬೇಡಿ. ನಿಮ್ಮ ವಯಸ್ಸಿಗೆ ಇದು ತಕ್ಕುದಲ್ಲ. ಈ ರಾಜ್ಯಕ್ಕೆ ಯೋಗ್ಯ ಆಡಳಿತವನ್ನು ಸಾಧಿಸುವಂತೆ ಮಾಡಿ. ಈ ಇಲಾಖೆಯಲ್ಲಿ ದಕ್ಷತೆಯಿಂದ ಕೂಡಿದ ಆಡಳಿತವನ್ನು ಸೃಷ್ಟಿಮಾಡುತ್ತಾರೆ ಎನ್ನುವ ಬಯಕೆಯನ್ನು ನಾನು ಇಟ್ಟುಕೊಂಡಿದ್ದೇನೆ. ಇಷ್ಟು ಹೇಳಿ ಅಧ್ಯಕ್ಷರು ಇಷ್ಟು ಮಾತನಾಡಲು ನನಗೆ ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಸಿದ್ಧವೀರಪ್ಪ.—ಮಾನ್ಯ ಪುಟ್ಟಸ್ವಾಮಯ್ಯನವರು ಕಿಟ್ಟದಾಳುನಲ್ಲಿದ್ದ ಆಸ್ಪತ್ರೆಯನ್ನು ಕಿತ್ತು ಬೇರೆ ಊರಿಗೆ ಕೊಟ್ಟಿದ್ದಾರೆ ಎಂದು ಹೇಳಿದರು. ಇದರ ಬಗ್ಗೆ ಹೇಳಬೇಕಾದರೆ ಕಂಚೀಪುರದ ಗ್ರಾಮದ ಜನಸಂಖ್ಯೆ ತೆಗೆದುಕೊಂಡರೆ ಅಲ್ಲಿ 2,800 ಪ್ರಜಾಸಂಖ್ಯೆ ಇದ್ದಾರೆ, ಮತ್ತು ಹಿಂದುಳಿದ ಜನಸಂಖ್ಯೆ ಇದ್ದಾರೆ. ಆದುದರಿಂದ ಅಲ್ಲಿಗೆ ಆಸ್ಪತ್ರೆ ಕೊಡುವುದು ನ್ಯಾಯ. ಹಿಂದಿನ ಸರ್ಕಾರ ದುರುಪಯೋಗ ಮಾಡಿ ಕಂಚಿಪುರ ಗ್ರಾಮದಲ್ಲಿ ಇರಬೇಕಾದ ಆಸ್ಪತ್ರೆಯನ್ನು ಕಿಟ್ಟದಾಳ್‌ಗೆ ಕೊಟ್ಟಿತ್ತು. ಈ ಒಂದು ಗ್ರಾಮದಲ್ಲಿ ಜನಸಂಖ್ಯೆ ಜಾಸ್ತಿ ಇದ್ದುದರಿಂದ ಕಂಚಿಪುರ ಗ್ರಾಮಕ್ಕೆ ಕೊಟ್ಟಿದ್ದೇವೆ.

ಒಬ್ಬ ಸದಸ್ಯರು.—ಸ್ವಾಮಿ, ಎರಡು ಗ್ರಾಮಕ್ಕೂ ಈ ಮಧ್ಯೆ ಆಸ್ಪತ್ರೆಯನ್ನು ಮಾಡಿಬಿಡಿ.

ಶ್ರೀ ಹೆಚ್. ಸಿದ್ಧವೀರಪ್ಪ.—ಮಧ್ಯದಲ್ಲಿ ಕೆರೆ ಅಂಗಳ ಬರುತ್ತದೆ. ಮಾಡುವುದಕ್ಕಾಗುವುದಿಲ್ಲ.

ಕಂಚಿಪುರದ ಗ್ರಾಮದವರು, ನಮಗೆ 25 ವರ್ಷದಿಂದಲೂ ಅನ್ಯಾಯ ಮಾಡಿದ್ದಾರೆ, ನಮ್ಮ ಊರಿಗೆ ಆಸ್ಪತ್ರೆ ಇಲ್ಲ ಎಂದು ಮನವಿ ಮಾಡಿದ್ದರು. ನ್ಯಾಯವಾಗಿ ನೋಡಿದರೆ ಅಲ್ಲಿಗೇ ಆಸ್ಪತ್ರೆ ಇರುವುದು ನ್ಯಾಯ ಎಂದು ತಿಳಿದು ಕಿಟ್ಟದಾಳುನಲ್ಲಿದ್ದ ಆಸ್ಪತ್ರೆಯನ್ನು ಕಿತ್ತು ಕಂಚಿಪುರ ಗ್ರಾಮಕ್ಕೆ ಕೊಟ್ಟಿದೆ. ಇದರಲ್ಲಿ ತಪ್ಪು ಏನೂ ಇಲ್ಲ. ಕಂಚೀಪುರದಿಂದ ಆಸ್ಪತ್ರೆಯನ್ನು ತೆಗೆಯಬಾರದು, ನೀವು ಮಾಡುವುದು ಅನ್ಯಾಯ ಎಂದು ಪದೇ ಪದೇ ಸರ್ಕಾರಕ್ಕೆ ಬರೆಯುತ್ತಿದ್ದರು. ಆದರೂ ಆಗಿನ ಸರ್ಕಾರ ಅನ್ಯಾಯವನ್ನು ಸರಿಪಡಿಸಿರಲಿಲ್ಲ. ಅಲ್ಲಿಂದ ಕಿತ್ತುಕೊಂಡು ಹೋಗಿ ಕಿಟ್ಟದಾಳು ಗ್ರಾಮಕ್ಕೆ ಕೊಟ್ಟರು. ಹಾಗೆ ಮಾಡಿರುವುದು ಸರಿಯಲ್ಲ ಎಂದು ನಾನು ಅಲ್ಲಿ ಹೋಗಿ ನೋಡಿದಾಗ ತಿಳಿದುಬಂತು. ಎರಡೂ ಗ್ರಾಮಗಳಿಗೆ ಆರು ಫರ್ಲಾಂಗ್ ದೂರವಿದೆ. ನ್ಯಾಯ, ಧರ್ಮದಿಂದ ಕಂಚೀಪುರಕ್ಕೆ ಆಸ್ಪತ್ರೆ ಸೇರಬೇಕಾದ್ದೇ ಹೊರತು ಕಿಟ್ಟದಾಳು ಗ್ರಾಮಕ್ಕಲ್ಲ. ಎರಡೂ ಗ್ರಾಮಗಳ ಮಧ್ಯೆ ಕೆರೆ ಇದೆ. ಯಾರೋ ಕೊಟ್ಟಿದ್ದನ್ನು ನಾವು ಕಿತ್ತುಕೊಂಡು ಆ ಪಾಪದ ಕಾರ್ಯಕ್ಕೆ, ಮಾನ್ಯ ಸದಸ್ಯರಾದ ಬಿ. ಪುಟ್ಟಸ್ವಾಮಯ್ಯನವರು ಹೇಳಿದಂತೆ, ಹೋಗುವುದು ಬೇಡ ಎಂದು ಕಂಚೀಪುರದಲ್ಲಿ, ಮೊದಲು ಆಸ್ಪತ್ರೆ ಇದ್ದ ಕಡೆಗೆ ಒಂದು ಸಬ್ ಸೆಂಟರ್ ಕೊಟ್ಟು, ಕಿಟ್ಟದಾಳು ಗ್ರಾಮದಲ್ಲಿರುವುದನ್ನು ಅಲ್ಲಿಯೇ ಇಟ್ಟುಕೊಳ್ಳೋಣ ಎಂದು ಯೋಚನೆ ಮಾಡಿದೆ. ಅವರೂ ದುಡ್ಡು ಕೊಟ್ಟಿದ್ದಾರೆ, ಇವರೂ ಕೊಟ್ಟಿದ್ದಾರೆ. 35 ಸಾವಿರ ರೂಪಾಯಿ ಕಂಚೀಪುರದವರು ಕೊಟ್ಟಿದ್ದಾರೆ, ಅಲ್ಲಿ ಹಿಂದುಳಿದ ಜನಾಂಗದವರು ಬಹಳ ಜನರಿದ್ದಾರೆ. ಕಿಟ್ಟದಾಳು ಗ್ರಾಮಸ್ಥರು 26 ಸಾವಿರ ರೂಪಾಯಿ ಕೊಟ್ಟಿದ್ದಾರೆ. ಇಬ್ಬರೂ ಆಸ್ಪತ್ರೆ ಕಟ್ಟಿಕೊಡಿ, ನಿಮಗಷ್ಟು, ಅವರಿಗಷ್ಟು ಕೊಟ್ಟು ಯಾರಿಗೂ ಅನ್ಯಾಯ ಮಾಡುವುದಿಲ್ಲ ಎಂದು ಹೇಳಿದ್ದೇನೆ. ಮಾನ್ಯ ಸದಸ್ಯರಾದ ಮಂಜುನಾಥ್ ಅವರು ಕೊಟ್ಟಿರುವ ತಿಳುವಳಿಕೆ ಸರಿಯಲ್ಲ ಎಂದು ಮಾತ್ರ ಹೇಳುತ್ತೇನೆ.

3-00 P.M.

ಶ್ರೀ ಟಿ. ಎಂ. ಮಂಜುನಾಥ್.—ಎರಡೂ ಕಡೆಗೆ ಆಸ್ಪತ್ರೆಯನ್ನು ಕೊಡುವುದಾಗಿ ಉದಾರ ಮನಸ್ಸಿನಿಂದ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅದಕ್ಕೆ ಅವರನ್ನು ಅಭಿನಂದಿಸುತ್ತೇನೆ.

† Smt. WINNIFRED F. FERNANDEZ (Coondapur).—Hon'ble Mr. Deputy Speaker Sir, I thank the Hon'ble Health Minister for the Demands he has placed before the House and I support the same. It is most essential to a human being. It is a well known fact HEALTH IS WEALTH. However influential or rich a man may be, without health he is ruined. He will not have happiness in life and he will not have peace of mind. I, therefore make bold to tell the Hon'ble Minister that the budget provision for Health Department is not sufficient and must increase it.

Now coming to the point, I must place before the Health Minister the demands and needs of my constituency. Coondapur is the headquarters and has been linked with many villages having two constituencies Baindoor and Coondapur. The Coondapur general hospital is a 71 bedded hospital and it must be upgraded. Though it is a 71 bedded hospital, every day you will see that there are more than 130 in-patients and some will be on the cots and some will be on the floor. So this hospital must be upgraded to 100 beds at least. Even for the 71 beds, only serious cases are admitted and there is also a maternity ward which has no sufficient bedstrength. I therefore request the Hon'ble Minister for Health to kindly visit this hospital and he will surely realise the pitiable plight of the patients and that this hospital must be upgraded. I welcome him any moment and any day to visit the Coondapur Hospital.

Secondly about the hospital staff, *i.e.*, about nurses. According to rule I understand it is 10 : 1 ration that has to be maintained. For this 71 bedded hospital there are only five nurses. Even for the out-patient block there are only two nurses which is not sufficient. At least four nurses are very very essential. This I have brought to the notice of the Government several times. But nothing has happened so far. So I request you to see that the staff is posted in adequate measure because the in-patients need more care and nursing. Without sufficient care and nursing, they will go to their graves! It is just like family planning. So I request you to see that adequate staff is given to that hospital.

Then about fourth class meanials. Though there are vacancies, you have not posted the menial staff which are badly needed. You can just go and see the latrines of this hospital. They are worse than public latrines. It is stinking! and I can say none of the officers have visited the hospital for three or four years. If they had visited, they would have understood what it is. I see that the administration has been neglected all these years. So I request the Government to see that the cleanliness and tidyness of the hospital is kept up to the mark.

Regarding the X ray unit which is in the hospital for the last six years. Of course it is there, but there is no technician. I brought this to the notice of the Government right from 1967. Now it is about six years. No action has been taken. The X-ray unit without the X-ray technician is no use at all. The poor doctor has to attend to both

(SMT. WINNIFRED F. FERNANDES)

the jobs. I hope that at least now my request will not go in vain. I request the Hon'ble Minister to see that the X-ray technician is posted immediately. About the laboratory technicial, there is no body there and really all these cases have been sent to Manipal Hospital or Udipi Hospital. Though there are technicians available, I do not know why Government has not posted any laboratory technician to that place so far.

Then about the Ambulance. It is a very extensive area and without an ambulance it is very very difficult to get more serious cases from the interior villages. Take for example, if there are some accidents, snake bites or diphtheria cases, of course, there is no doctor nearby nor a vehicle. So it is the patients fate. So if Government is going to give the facility of an ambulance, surely it will be a boon to the hospital and so this is my earnest appeal to the Government to give an ambulance to the Coondapur hospital.

Then about, these Primary Health Centres and HUT Centres. They are under the care of the taluk boards. That of course you know how the taluk boards are running it. They do not have any medicine or any drugs. So I think it is better Government takes it over-both the Primary Health Centres and UTU Centres. In my area, there are only a few Primary Health Centres and HUT Centres. I request the Hon'ble Minister to see that at least in villages having a population of more than 2,000 a HUT Centre is established.

Regarding the Government Hospitals, I mean the General Hospitals, it is under the management of the District Health Officers. Of course these District Health Officers are only concerned with this family planning. They do not exercise proper supervision and attend to the administration of hospitals. Therefore my suggestion is that it should be as before, under the charge of the district surgeons of each district.

Next coming to the tuberculosis sanatorium, I wish to mention that there is only one Sanatorium near Mangalore. But, for Coondapur people, it is more than 80 miles, distance. The Rotary Club of Coondapur have collected public contributions to the extent of Rs. 40,000. They have informed the Government to have a Tuberculosis Sanatorium at Coondapur. The collections were made three years ago. The Board of Visitors have also passed a resolution in that respect and sent it to the Government. I do not know what Government has done with it. Every thing is at a standstill. A Tuberculosis Sanatorinm at Coondapur is very essential and therefore, I request the Government to provide that Hospital.

With these words, I thank the Chair and conclude.

MR. DEPUTY SPEAKER.—Before I call the next member, I want to make it clear that discussion will continue till 5 P.M. and the Hon'ble Minister for Health will commence his reply at 5 P.M. There are on the

list 18 members and still more members have expressed their desire to speak; but it is very difficult to accommodate all of them. So hon'ble members should restrict their speeches to 8 to 10 minutes. Sri V. N. Patil to speak.

† SRI V. N. PATIL (Humnabad).—[*In Urdu*]

Having protested against the concerned authorities for not making arrangements to record speeches in Urdu, I appeal to the Chair to make arrangements, at least in future, for official Reporters in minority languages of the State and to see that the speeches delivered in Hindi, Urdu and Marathi also go into the official records and justice done to us.

As regards the funds spent in Mysore State over Hospitals and health schemes, I am sorry to say that it is too meagre. I am astonished why the Health Minister did not try to secure more funds for his Department. It looks as if he was generous to other Departments, sacrificing the needs and interests of his own Department. The expenditure on some other Departments is more than on the Medical and Public Health Department which is expected to do social service. From the statistical return supplied to us, it is seen that the expenditure per head in Mysore State for health is Rs. 8·50. I think with the meagre amount of Rs. 8½, even quinine tablets cannot be made available to the patients. I do not know why the Health Minister did not realise the importance of his Department and allow other Ministers to dominate over him in respect of allocation of funds for expenditure. I never thought that a dynamic Minister would agree to this meagre allocation of funds. He should have fought for greater allocation of funds for the Medical and Public Health Department. Had he done so, we would have been one with him.

Regarding the deplorable conditions in Hospitals, most of my friends who spoke till now have narrated them and so I won't repeat them. Now let me start from the Victoria and Bowring Hospitals in the State Capital and then go to the other Hospitals in rural areas. I want to know, first of all, how many doctors are there in the Cardiology Section of Victoria Hospital who have specialised in cardiology. Because the Doctor in that section happens to be the senior-most person, he is kept there although he is not a specialist. Has the Government taken to care to post a specialist who has better training and qualifications? The Government does not give facilities to young men who are desirous of improving their qualifications and experience. Formerly, it was difficult to depute doctors to foreign countries to specialise themselves because it was a costly proposition; the former Governments could not afford that luxury. But now specialisation facilities and courses are available in India itself in places like Delhi and U.P. For instance, the All-India Mental Service Institute offers facilities of specialisation in neurology and psychiatry. Why not our Government avail of those specialist courses and depute our young

(SRI V. N. PATIL)

Doctors so that they become specialists ? So many doctors have applied for permission to undergo specialist courses but those applications are rotting in the Secretariat and no sanction is accorded to undergo specialist courses. When I go to the Victoria Hospital and present myself as an ordinary citizen, they say 'no film' and ask me to come the next day. The moment I announce that I am an M.L.A., they ask me to come in and attend to me. What is this rotten state of affairs ? Why this discrimination between man and man ? Can I call them doctors ? There are some doctors in Victoria Hospital who say 'no films' and ask us to go to some X-Ray clinics. If you go there and spend Rs. 70 or so for taking an X-Ray, what is the result ? We get sub-standard X-Ray prictures. We have sent this X-Ray picture to Bombay and they have said it is sub-standard. This is nothing but exploitation at the cost of human sufferings and this goes on deliberately. Are you going to tolerate it ? The hon. Health Minister Sri Siddaveerappa was militant when he was on this side and I want him to put that miltancy into practice now when he is a Minister. I went to the Victoria Hospital for an I V.P. on account of chronic stomach pain. There is no I.V.P. system there. The Honorary Srugeons there have got certain henchmen. The Honorary Surgeon goes to the Victoria Hospital to secure more and more clientele for himself and not with a service motive. Neither the missionary spirit nor dedication is there among the surgeons becuse the society is like that. The society is breeding corruption and bent upon exploitation. Everybody is bent upon earning more money under the very nose of the Hon. Health Minister because he is innocent and he does not know the niceties of present-day corruption. In U.S.A. a nurse gets more salary than even a doctor. In our country what is the fate of a doctor ? In rural parts doctors are posted. There are no facilities of water taps or lavatories. Can we expect any doctor to go there ? The father has given Rs. 20,000 or ever 40,000 as bribe for his admission and after his son becomes a doctor, he expects at least Rs. 80,000 within three years. And you want the doctor like the Ceaser's wife to be above board. How can that be ? Corruption starts from Vidhana Soudha. If you take steps to curb it at the right end it will stop.

There are several departments. For instance, take the Cardiology Department. There are no experts there. For cancer a separate institute has been started but no specialised training in this subject is given There is no research approach here.

In the End-crinology Section some specialisation is needed.

In foreign countries they ask about yoga. In U.S.S.R. they are interested in Naturopathi. Has our Health Department taken any pains to encourage research in this ? They are giving much importance to them. I had some nervous trouble. For that mud pastle is the best treatment. They mix the mud with certain things and a mud paste

is applied. They wanted me to use it for 21 days. Make further researches in this and develop this art. No attention is being given to Ayurveda, Unani and particularly Homoeopathy. Experts say that Homoeopathy is a most advanced way of treating most of the people. No attempt is made in that direction. I request the Government to make further researches in this direction.

In Bowring Hospital there is a system of giving free injections for two hours between 8 A.M. and 10 A.M. The doctor comes by about 9-15 A.M. and by about 9-50 A.M. all the drug is over. There can be only two possibilities : either there is pilferage or the drugs are not supplied properly. If it is due to pilferage it is for the Hon. Minister to check it and if it is due to non-supply of drugs he should take steps to supply them in adequate quantities.

Coming to hospital beds, the condition is awful. I had to take a cancer patient to the Victoria Hospital. There some German injection was to be given to him. The doctor said that I would have to be with the patient for about three hours. I accompanied the patient into one of the wards. The bed was so nausating with so many stains on it. Cotton, coconuts and all sundry things were lying there. They had to clean up the bed first for 10—15 minutes. They had to bring a pillow and several other things. In addition to the intra-venous injection the patient will have to be given some other injection for secondary infection due to the dirty condition of the beds.

On another occasion when I visited the Victoria Hospital Sri Veerendra Patil had also come there. Both of us wanted to pay homage to a person who had died. The R.M.O. took us straightaway to a patient who was alive. Is it not apathy on the part of the R.M.O ? I felt ashamed when Sri Veerendra Patil did not take any action.

3-30 P.M.

Coming to my constituency, the ex-Minister for Health Sri Y. Ramakrishna said that the hospital at Bidar will be upgraded.

Mr. DEPUTY SPEAKER.—He is not here. The hon. member may please speak about the present.

Sri V. N. PATIL.—The predecessor of the present Health Minister promised that the hospital at Bidar will be upgraded. I requst the hon. Minister to take action early. It is such a backward area that private practitioners are flourishing like anything and people are not getting in the hospital even ordinary medicines. In Humnabad, promise was made to provide a hospital with 25 beds. Similarly he promised for Chitaguppa. But so far nothing has been done. The present doctor there knows only how to extract money. He refuses to give even anti-tinanus injections and he gave some other injection and the patient died. I have received a representation from the villagers and a copy has been sent to the Health Minister also. If the doctor is innocent, I do not want him to be punished but if he is guilty, drastic action should be taken.

Sri H. SIDDAVEERAPPA.—When did the hon. member write to me? I have not received any.

Sri V. N. PATIL.—A registered letter is sent to you. I have received a copy of it.

Lastly regarding the primary health centres I have to say that at present there is a limit to purchase drugs. The limit is Rs. 250. This is inadequate. I request the Government to give better facilities and give a general hospital to every taluk headquarter irrespective of the fact whether the member elected from that place belongs to your party or any other party.

I thank the Chair for giving me this much of time. Thank you.

Smt. SHEILA IRANI (Nominated).—Hon. Speaker, at the outset I support the Demand placed before us and I have a few points to put before the Government.

Today the call all over the world is for the prevention and rehabilitation of mentally ill. It has been noted that in our country one in every 15 Indians is mentally ill. Industrialisation and urbanisation is slowly increasing and with this the number of mentally ill patients is also increasing. If we take a look at the figures that have been presented by the Government in November 1971, we will see that for 4 million blind in the country there are 126 institutions, for 2 million deaf there are 99 institutions and for 10 million mentally ill there are only 63 institutions. The Government both at the Centre, and in the State, should take a very serious view and try to do something in this matter. If funds are allocated for the lepers who number about 5 million, I do not know why the mentally ill should be considered is a separate category. It seems quite irrational for the mentally ill to be neglected. Social work has been carried on for nearly 20 years and those organisations should be encouraged to help the doctors in treating the mentally ill. In many places the mentally ill people are neglected by their own people. We hear instances where a person who has been mentally ill has been subjected to hit and run cases; women who are not quite fit have been abused, and in many instances both men and women have been beaten up for a few naya paise which they have managed to accumulate by begging during the day. Therefore, I would appeal to the Government to see that all social workers are given preference, and much consideration, so that they will be able to help the Government. In this plan of looking after mentally ill, people should not think that social workers are doing some charitable work, and they have taken up this work as their pass-time. They should be given encouragement for their ideas and facilities to do their dedicated service.

Then coming to the question of Family Planning, this is considered as a very personal and delicate aspect of life. Where a case of human ego is touched, individualised work and approach is necessary. The

done a sort of survey in all the States and they have found that just three or four states like Andhra Pradesh, Gujarat and Maharashtra have called upon voluntary organisations to help in family planning. The other States, I am afraid, are very guilty, and are half-hearted and indifferent to the voluntary organisations. They feel that they can cope with their own programmes. Large sections of the community have not been touched by the family planning scheme, and the State machinery has not been able to venture on this scheme in places of distance. Even the Health Centres in the rural areas have not been able to cater to certain parts of the State. So, it is up to the Government to try and organise with the voluntary organisations and their own State machinery, to see that the people are approached at a personal level and that the family planning idea makes an impact. Women take better to the idea of family planning, and here I would like to bring to the notice of the Government that women should be encouraged to have an independent decision In many instances in our experience of dealing with family planning. we find that sometimes a husband has already gone in for sterilisation and has refused to admit it to the wife, but when the voluntary worker approaches the wife for sterilisation, she is very much undecided and has to always ask for permission of her husband. I request the Government to consider whether something can be done in this regard. I feel women have to be definitely given encouragement and they should be allowed to take independent decisions so that they neednot haveany doubts about sterilisation. There are one hundred million Couples to-day who are all of child bearing age, and Government cannot spend crores of rupees on this family planning. Therefore, I appeal to the social workers and the Government to approach these young couples and set up a standard family of three children. Since all parts of the State cannot be approached I ask the Government when there are voluntary organisations who are willing to undertake this work, to provide one transport conveyance to them so that they could go out into the rural areas. There is certainly strength in numbers. The minorities in this State feel that they have no survival value. Discouragement of family planning is partly due sometimes to political elements who go to the people and try to frighten the minorities by telling them that there is strength in numbers. Therefore, I think all the political parties and members of the legislature should try, as far as possible, to remove this fear among minorities and encourage the family planning schemes.

With regard to the City of Mysore we have in the Krishnarajendra Hospital only one ambulance. Will the Government be pleased to see, if they cannot provide one other ambulance to K. R. hospital, at least the City Municipality could have two to three vans to be utilised for the general public as ambulances. In the last so many years this hospital, and the Childrens' hospital in Mysore City are managing with just one ambulance and patients are put to great hardship. The population of Mysore City has also increased to 9 lakhs. I feel it is really ...

(SMT. SEHEILA IRANI)

Further, I would like to bring to the notice of the Government that there is still a shortage of Nurses. We should have at least 1:4. At the moment, we have 1:10. The Government does not realise the difficulty when nurses are absent from their duty or go on leave the ratio becomes 1:20, and thereby the patients are put to inconvenience and at the same time the nurses on duty are over-burdened with work, and they cannot do justice to the patients.

Last but not the least is about Drugs. I feel that the Deans of the Hositals be empowered to distribute the drugs urgently needed in the hospitals. Instead of calling for tenders for the supply of these drugs the Government should give more powers to the Deans of the Hospitals to indent for the necessary drugs and supply to the hospitals at the earliest. They could send to Government details regarding what they have indented and what has been supplied.

With these words, I thank the Chair for having given me this opportunity to speak.

† ಶ್ರೀ ವಾಟಾಳ್‌ನಾಗರಾಜ್ (ಚಾಮರಾಜಪೇಟೆ)—ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ಈ ಸಭೆಯಮುಂದೆ ಇಟ್ಟಿರತಕ್ಕ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವೊಂದು ವಿಚಾರಗಳನ್ನು ಮಾತ್ರ ಸ್ವಾಗತ ಮಾಡುತ್ತಾ ನಾನು ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಶ್ರೀಮಾನ್ ಸಿದ್ದವೀರಪ್ಪನವರು ಆಡಳಿತದಲ್ಲಿ ಒಳ್ಳೆಯ ದಕ್ಷರು ಎಂದು ಹೆಸರನ್ನು ಪಡೆದಿದ್ದಾರೆ. ಇಂಥಾ ದಕ್ಷತೆಯನ್ನು ಪಡೆದಿರತಕ್ಕ ಶ್ರೀಮಾನ್ ಸಿದ್ದವೀರಪ್ಪನವರೇ ಈ "ಮೆಡಿಕಲ್ ಮತ್ತು ಪಬ್ಲಿಕ್ ಹೆಲ್ತ್ ಇಲಾಖೆ ಕಬ್ಬಿಣದ ಕಡಲೇ ಎನ್ನುವ ಮಾತನ್ನು ಹೇಳಿದ್ದಾರೆ. ಇದು ಪತ್ರಿಕೆಗಳಲ್ಲಿ ಬಂದಿವೆ. ಇದನ್ನು ನೋಡಿದಾಗ ನನಗೆ ಅನ್ನಿಸುತ್ತದೆ ಈ ಇಲಾಖೆಯನ್ನು ಸರಿಪಡಿಸುವುದಕ್ಕೆ ಇವರ ಕೈಯ್ಯಲ್ಲಿ ಸಾಧ್ಯವಿದೆಯೋ ಅಥವಾ ಇಲ್ಲವೋ ಎನ್ನತಕ್ಕಂಥಾ ಒಂದು ಶಂಕೆ ನಮಗೆ ಬರುತ್ತದೆ. ನಿನ್ನೆಯ ದಿವಸ ಒಂದು ವಿಚಾರದಲ್ಲಿ ಎಲ್ಲರಿಗೂ ಬಹಳ ದುಃಖವಾಯಿತು. ನಮ್ಮ ಮಿತ್ರರಾದ ಶ್ರೀಮಾನ್ ಪುಟ್ಟಸ್ವಾಮಯ್ಯನವರು ಕಣ್ಣೀರಿಟ್ಟರು. ದೇಶದಲ್ಲಿ ಪ್ರಜಾಪ್ರಭುತ್ವ ತತ್ವಕ್ಕೆ ಅನುಸಾರವಾಗಿ ರಾಜ್ಯಭಾರ ನಡೆಯುತ್ತಿದೆ. ಈ ಮನೆಯ ಸದಸ್ಯರಾದ ನಾವೆಲ್ಲರೂ ಈ ದೇಶದ ಹೊಣೆಗಾರಿಕೆಯನ್ನು ಹೊತ್ತಿರುವ ಜನ; ಯಾವ ಒಬ್ಬ ಅಧಿಕಾರಿಯ ಮೇಲೆ ಅಪಾದನೆಗಳು ಬಂದಾಗ, ಆ ಅಧಿಕಾರಿ ಸರಿಯಾಗಿಲ್ಲ, ಅವರ ಬಗ್ಗೆ ತನಿಖೆಯಾಗಬೇಕು, ಅವರ ಮೇಲೆ ಗುರುತರವಾದ ಅಪಾದನೆಗಳು ಇವೆಯೆಂದು ಹೇಳಿದಾಗ ಆಡಳಿತ ಪಕ್ಷದವರು ಅದಕ್ಕೆ ಸಪೋರ್ಟ್ ಮಾಡಿದರು. ಈ ರಾಜ್ಯದ ಹೊಣೆಗಾರಿಕೆಯನ್ನು ಹೊತ್ತಿರಕ್ಕ ಈ ರಾಜ್ಯದ ಮುಖ್ಯ ಮಂತ್ರಿಗಳು ಒಬ್ಬ ಯಃಕಶ್ಚಿತ್ ವ್ಯಕ್ತಿ ಬಗ್ಗೆ ವಹಿಸಿಕೊಂಡು ಅವರು ಸರಿಯಾಗಿದ್ದಾರೆ ಎನ್ನತಕ್ಕಂಥಾ ವಾದವನ್ನು ಹೂಡಿದ್ದು ನನಗೆ ಬಹಳ ಬೇಜಾರು ಆಯಿತು. ಯಾವ ರಾಜ್ಯ ಸರ್ಕಾರವೂ ಕೂಡ ಇಷ್ಟೊಂದು ರೀತಿಯಲ್ಲಿ ಒಬ್ಬ ಅಧಿಕಾರಿಯನ್ನು ವಹಿಸಿಕೊಂಡು ಅವರು ಸರಿಯಾಗಿದ್ದಾರೆ ಎಂದು ಹೇಳಿದ್ದು ನಾನು ನೋಡಲಿಲ್ಲ. ಮಾನ್ಯ ಮುಖ್ಯ ಮಂತ್ರಿಗಳ ಬಗ್ಗೆ ನನಗೆ ಅಪಾರ ಗೌರವವಿದೆ. ಅವರು ಮುಖ್ಯ ಮಂತ್ರಿಗಳಾದ ಮೇಲೆ ರಾಜ್ಯಕ್ಕೆ ಒಳ್ಳೆಯ ಆಡಳಿತವನ್ನು ಕೊಟ್ಟಿದ್ದಾರೆ. ಇದು ಈ ರಾಜ್ಯಕ್ಕೇ ಗೊತ್ತಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಅವರು ಸರ್ಕಾರದ ಬಗ್ಗೆ, ದೇಶದ ಬಗ್ಗೆ ಅಲ್ಲ, ಮಂತ್ರಿಗಳ ಬಗ್ಗೆ ಅಲ್ಲ, ಒಬ್ಬ ಅಧಿಕಾರಿಯ ಬಗ್ಗೆ ಇಷ್ಟೊಂದು ರೀತಿಯಲ್ಲಿ ವಹಿಸಿಕೊಂಡು ಮಾತಾಡಿದ್ದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ಇದರ ಔಚಿತ್ಯ ಏನು? ಇವೊತ್ತು ಈ ಸಭೆಯಲ್ಲಿ ಚರ್ಚೆ ನಡೆಯುತ್ತಿರುವುದು ಆಸ್ಪತ್ರೆ ಮತ್ತು ಔಷಧೋಪಚಾರಕ್ಕೆ ಸಂಬಂಧಪಟ್ಟದ್ದು. ಮಾನ್ಯ ಸದಸ್ಯರು ಮಾತನಾಡತಕ್ಕ ವಿಷಯಕ್ಕೂ ಈ ಚರ್ಚೆಯ ವಿಷಯಕ್ಕೂ ಏನು ಸಂಬಂಧ ಇದೆ.

ಶ್ರೀ ವಾಟಾಳ್ ನಾಗರಾಜ್.—ತಮ್ಮ ವಿಚಾರದಲ್ಲಿ ನನಗೆ ಅಪಾರವಾದ ಗೌರವ ಇದೆ. ತಾವು ಹಿಂದೆ ಗೃಹಸಚಿವರಾಗಿದ್ದಾಗ ಶ್ರೀಮಾನ್ ಬಾಬುರೆಡ್ಡಿಯವರ ಮೇಲೆ ಕೆಲವೊಂದು ಅಪಾ

ದನೆ ಬಂದಾಗ ತಾವು ಅವರ ಬಗ್ಗೆ ಯಾವ ರೀತಿ ಕ್ರಮವನ್ನು ತೆಗೆದುಕೊಂಡಿರಿ ಎಂಬುದನ್ನು ನಾನು ನೋಡಿದ್ದೇನೆ. ಡಾ. ದೇಸಾಯಿ ಅವರನ್ನು ಯಾವ ರೀತಿ ಮನೆಗೆ ಕಳುಹಿಸಿದಿರಿ ಎಂಬುದನ್ನು ನಾನು ನೋಡಿದ್ದೇನೆ. ಒಳ್ಳೆಯ ಗುಣಕ್ಕೆ ಯಾವೊತ್ತೂ ಮಾತ್ಸರ್ಯವಿಲ್ಲ. ಹಿಂದೆ ಆಡಳಿತವನ್ನು ನಡೆಸಿದಂತಹ ಶ್ರೀಮಾನ್ ಹನುಮಂತಯ್ಯನವರ ಆಡಳಿತವನ್ನು ನಾವು ಸ್ವಲ್ಪ ಒಪ್ಪಬೇಕಾಗಿದೆ. ಬಹಳ ಸಂತೋಷದಿಂದ ಅದನ್ನು ಸ್ವಾಗತ ಮಾಡಬೇಕಾಗಿದೆ. ಅವರ ಕಾಲದಲ್ಲಿ ಅವರು ಕೆಲವು ದಿಟ್ಟ ನಿಲುವನ್ನು ತೆಗೆದುಕೊಂಡಿದ್ದಾರೆ. ಶ್ರೀಮಾನ್ ಸಿದ್ಧವೀರಪ್ಪನವರು ಹಿಂದೆ ಗೃಹ ಸಚಿವರಾಗಿದ್ದಾಗ ನಾನು ಇನ್ನೂ ರಾಜಕೀಯಕ್ಕೆ ಬಂದಿರಲಿಲ್ಲ. ಅವರು ಮನೆಯಲ್ಲೇ ಇದ್ದುಕೊಂಡು ಶ್ರೀಮಾನ್ ಬಾಬುರೆಡ್ಡಿಯವರನ್ನು ಮನೆಗೆ ಕಳುಹಿಸಿದ್ದಾರೆ. ಆದ್ದರಿಂದ ಅವರ ಬಗ್ಗೆ ಒಪ್ಪಲೇ ಬೇಕು.

ಉಪಾಧ್ಯಕ್ಷರು.—ಇವೊತ್ತು ಈ ಸಭೆಯ ಮುಂದೆ ಯಾವ ವಿಚಾರ ಇದೆ ಅದರ ಬಗ್ಗೆ ಮಾನ್ಯ ಸದಸ್ಯರು ಮಾತನಾಡಬೇಕು. ನಿನ್ನೆಯ ವಿಷಯದ ಬಗ್ಗೆ ಇವೊತ್ತು ಮಾತನಾಡುವುದಕ್ಕೆ ಆಗುವುದಿಲ್ಲ.

Sri C. M. ARUMUGAM.—Sir, you were pleased to say that Sri Vatal Nagaraj should not speak about what happened yesterday. But you permitted him to speak what happened fifteen days ago!

Mr. DEPUTY SPEAKER.—I have understood it and I have also understood what Sri Vatal Nagaraj said. When there is a slight chance of some confusion, I do not want hon. members to make that confusion worst confounded. The hon. member referred to some administration in the past. It does not mean that I permitted him to speak about the past. We are today concerned only with the Demand before the House.

Sri H. D. DEVE GOWDA.—Since yesterday there is a little confusion about what we have to discuss in the House. So far as Opposition members are concerned, we are in a dilemma today.

Sri C. M. ARUMUGAM.—Sir, I will have to compliment the Hon'ble Health Minister for saying that we can criticise his Department, the doctors and the Minister. But our Chief Minister was a bit touchy yesterday. My friend Sri Vatal Nagaraj was making a comparison between the two.

Sri H. SIDDAVEERAPPA.—Sir, I was not present yesterday and I do not know the context also. I may tell the hon. members that they are at perfect liberty to criticise the working of the Deparment, the Head of the Department and the concerned Minister, and I am here to safaguard my Department and myself.

Mr. DEPUTY SPEAKER.—The hon. member will compliment the Hon'ble Minister further after hearing the reply to the debate.

ಶ್ರೀ ವಾಟಾಳ್ ನಾಗರಾಜ್.—ಆದ್ದರಿಂದ ನಾನು ಯಾವ ಉದ್ದೇಶದಿಂದ ಹೇಳುತ್ತಿದ್ದೇನೆಂದರೆ, ಮಾನ್ಯ ಸಿದ್ಧವೀರಪ್ಪನವರು ಸಹ ಬರೇ ನನ್ನ ಇಲಾಖೆ, ನನ್ನ ಬೇಡಿಕೆಯ ವಿಷಯದ ಬಗ್ಗೆ ಮಾತ್ರ ಹೇಳುವುದರಿಂದ ನಾನು ಅವರನ್ನು ಸುಮ್ಮನೆ ಬಿಡುವುದಿಲ್ಲ. ಇದರಿಂದ ಮುಖ್ಯಮಂತ್ರಿಗಳಿಗೂ ಅವರಿಗೂ ಸಂಬಂಧವಿಲ್ಲವೇ? ನನ್ನದು ಬರೇ ಆರೋಗ್ಯ ಇಲಾಖೆಯೆಂದು ಹೇಳುತ್ತಿದ್ದಾರೆ. ಆರೋಗ್ಯ ಇಲಾಖೆಯ ಡೈರೆಕ್ಟರಾದ ಶ್ರೀಮಾನ್ ದೇಸಾಯಿಯವರನ್ನು ರಜಾದ ಮೇಲೆ ಕಳಿಸಿದ್ದೇವೆಂದು ಪೇಪರಿನಲ್ಲಿ ಹಾಕಿದ್ದಾರೆ. ಅವರಿಗೆ ಇನ್ನೂ ಮೂರು ವರ್ಷಗಳ ಸರ್ವಿಸ್ ಇದೆ. ಈತನನ್ನು ಏನಾದರೂ ಮಂತ್ರ ಮಾಯ ಮಾಡಿದ್ದಾರೆಯೇ, ಎಂದು ಕೇಳಬೇಕಾಗಿದೆ. ಇವತ್ತು ಅಧಿಕಾರಿಗಳನ್ನು ಸರಿಯಾಗಿ ಇಟ್ಟುಕೊಳ್ಳುವುದಕ್ಕೆ ನಿಮಗೆ ಇಬ್ಬರಿಗೆ ಅಧಿಕಾರ ಇದೆ., ನೀವು ಮತ್ತು ಚನ್ನಬಸಪ್ಪನವರು. ನಿನ್ನೆ ಮಾನ್ಯ ಚನ್ನಬಸಪ್ಪನವರ ಪರಿಸ್ಥಿತಿ ಬಹಳ ಚಿಂತಾಜನಕ

(ಶ್ರೀ ವಾಟಾಳ್ ನಾಗರಾಜ್)

ವಾಗಿತ್ತು. ಒಂದು ಕಡೆಯಿಂದ ಮುಖ್ಯಮಂತ್ರಿಯವರು ಅವರನ್ನು ಕೂತುಕೊಳ್ಳಿ ಎಂದು
ಹೇಳುತ್ತಿದ್ದರು. ನಾನೇನಾದರೂ ಆ ಪಾರ್ಟಿಯಲ್ಲಿದ್ದಿದ್ದರೆ ಮುಖ್ಯಮಂತ್ರಿಯವರು ಹಾಗೆ
ಹೇಳಿದ್ದರೆ, ನೀವು ಸುಮ್ಮನಿರಿ, ಕೂತುಕೊಳ್ಳಿ ಎಂದು ಹೇಳುತ್ತಿದ್ದೆ. ಮಾನ್ಯ ಪುಟ್ಟಸ್ವಾಮಯ್ಯ
ನವರು ಸರ್ಕಾರದ ಆರೋಗ್ಯ ಕೆಟ್ಟಿದೆ ಎಂದು ಹೇಳಿದರು. ನನಗೆ ಇವತ್ತು ಗಾಬರಿಯಾಗುತ್ತಿದೆ;
ಸರ್ಕಾರ ಬದಲಾವಣೆಯಾಗುತ್ತದೆಯೇ ಎಂದು. ಏಕೆಂದರೆ ಮೂರು ಮೂರು ತಿಂಗಳಿಗೊಮ್ಮೆ
ಸರ್ಕಾರ ಬದಲಾವಣೆಯಾದರೆ ಅದು ಪ್ರಜಾಪ್ರಭುತ್ವಕ್ಕೆ ಲಕ್ಷಣವಲ್ಲ. ಮಾನ್ಯ ಸಿದ್ದವೀರಪ್ಪನವರು
ದಿಟ್ಟತನದಿಂದ ಕಾರ್ಯವನ್ನು ಮಾಡುವುದಕ್ಕೆ ಹೊರಟರೂ ಕೂಡ ಅವರಿಗೆ ಈ ಇಲಾಖೆ ಇವತ್ತು
ಕಬ್ಬಿಣದ ಕಡಲೆಯಾಗಿದೆ. ಅವರು ಹಿಂದೆ ಗೃಹಮಂತ್ರಿಯಾಗಿದ್ದರು. ಮತ್ತು ಕೈಗಾರಿಕಾ ಮಂತ್ರಿ
ಯಾಗಿದ್ದರು. ಅಂಥವರಿಗೆ ಈ ಇಲಾಖೆ ಕಬ್ಬಿಣದ ಕಡಲೆಯಾಯಿತೆಂದರೆ, ಈ ಆರೋಗ್ಯ ಇಲಾಖೆ
ಹೇಗೆ ಇರಬೇಕು? ಎಂಥೆಂಥ ಇಲಾಖೆಗಳನ್ನೋ ನೋಡಿಕೊಂಡು, ಜೀರ್ಣಿಸಿಕೊಂಡ ಮಹನೀಯ
ರಿಗೆ ಈ ಇಲಾಖೆ ಕಬ್ಬಿಣದ ಕಡಲೆಯಾಗಿದ್ದರೆ ಇದರಲ್ಲಿ ಭ್ರಷ್ಟಾಚಾರದ ನರಕ ಎಷ್ಟು ತುಂಬಿದೆ
ಎಂದು ನನಗನ್ನಿಸುತ್ತದೆ. ಇವರು ಈ ಇಲಾಖೆಯಲ್ಲಿ 10 ವರ್ಷ ಇದ್ದರೂ ಕೂಡ ಇದನ್ನು ಸರಿ
ಪಡಿಸುವುದಕ್ಕಾಗುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಇದನ್ನು ನಾವು ಸಮಾಜವೆಂದು
ಕರೆಯಬೇಕೇ? ಇವೊತ್ತಿನ ದಿವಸ ಎಲ್ಲಕ್ಕಿಂತಲೂ ಮುಖ್ಯವಾಗಿ ಸರ್ಕಾರದವರು ಆಹಾರ ಕೊಡ
ದಿದ್ದರೂ ಉತ್ತಮವಾದ ವೈದ್ಯಕೀಯ ಸೌಲಭ್ಯವನ್ನು ಒದಗಿಸುವುದರಲ್ಲಿ ವಿಫಲರಾದರೆ, ಅದರಿಂದ
ನಾವು ಯಾವ ಸಮಾಜವಾದವನ್ನು ನಿರೀಕ್ಷಣೆ ಮಾಡಬಹುದು! ಈ ವೈದ್ಯಕೀಯ ಸೌಲಭ್ಯವನ್ನು
ಒದಗಿಸುವುದರ ಹೆಚ್ಚಿನ ಜವಾಬ್ದಾರಿ ಈ ಇಲಾಖೆಗೆ ಇದೆ. ಈ ಇಲಾಖೆಯ ಮುಖಾಂತರ
ಸಾಮಾನ್ಯ ಜನರಿಗೆ ಇದರ ಸೌಲಭ್ಯಗಳನ್ನು ಒದಗಿಸುವುದು ಸರ್ಕಾರದ ಮುಖ್ಯ ಕರ್ತವ್ಯ.
ಇವೊತ್ತಿನ ದಿವಸ ವಿಕ್ಟೋರಿಯಾ ಆಸ್ಪತ್ರೆಯ ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ.
ಅಲ್ಲಿ ಹಳ್ಳಿಯಿಂದ ಬಂದಂತಹ ಜನರು ನರಕಯಾತನೆಯನ್ನು ಅನುಭವಿಸುತ್ತಿದ್ದಾರೆ. ಕೆಲವು
ಹಳ್ಳಿಯ ಜನರು ಒಬ್ಬ ರೋಗಿಯನ್ನು ಆಸ್ಪತ್ರೆಗೆ ತಂದು, ಅಲ್ಲಿ ಸತ್ತುಹೋದನಂತರ ಹೆಣವನ್ನು
ಪುಟ್‌ಪಾತಿನ ಮೇಲೆ ಮಲಗಿಸಿಕೊಂಡು ಇರಬೇಕಾದ ಪರಿಸ್ಥಿತಿ ಬಂದಿದೆ. ಹೀಗೆ ಹಳ್ಳಿಯಿಂದ
ಬಂದಂತಹ ಜನರನ್ನು ಅಲ್ಲಿ ಹೇಳುವವರೂ ಇಲ್ಲ, ಕೇಳುವವರೂ ಇಲ್ಲ. ಅಲ್ಲಿ ಒಂದು ಸ್ಪೆಷಲ್
ವಾರ್ಡ್ ಮತ್ತೊಂದು ಸಾಮಾನ್ಯ ವಾರ್ಡ್ ಎಂದು ಎರಡು ರೀತಿ ಇವೆ. ಶ್ರೀಮಂತರಿಗೆ ಒಂದು
ವಾರ್ಡ್, ಮತ್ತು ಸಾಮಾನ್ಯ ಜನರಿಗೆ ಒಂದು ವಾರ್ಡ್. ಇದು ಸಮಾಜವಾದವೇ? ನಿಮ್ಮ ದಕ್ಷ
ಆಡಳಿತದಲ್ಲಿ, ಸಮಾಜವಾದವನ್ನು ಜಾರಿಗೆ ತರುವ ದಿಸೆಯಲ್ಲಿ ಇದು ಸಮಾಜವಾದವೇ? ಆದ್ದರಿಂದ
ಈ ಸ್ಪೆಷಲ್ ವಾರ್ಡ್ ಎಂಬುದನ್ನು ತೆಗೆದು ಹಾಕಬೇಕು; ಮತ್ತು ಎಲ್ಲರಿಗೂ ಒಂದೇ ರೀತಿಯ
ವಾರ್ಡನ್ನು ಮಾಡಬೇಕೆಂದು ಹೇಳುತ್ತೇನೆ. ಅದೇ ರೀತಿ ಇಲ್ಲಿ ಶ್ರೀಮಂತರಿಗೆ ಆಪರೇಶನ್ ಬಹು
ಬೇಗ ಆಗುತ್ತದೆ. ಆದರೆ ಬಡವರಿಗೆ 6 ದಿನವಾದರೂ ಆಪರೇಶನ್ ಆಗುವುದಿಲ್ಲ. ಶ್ರೀಮಂತರಿಗೆ
ಆದರೆ ಬೇರೆ ಕತ್ತಿ, ಬೇರೆ ಚಾಕು; ಮತ್ತಿತ್ತರ ಬೇರೆಯೇ ಸಾಧನಗಳು. ಔಷಧಿ ಕೇಳಿದರೆ ಉಚಿತ
ವಾಗಿ ಔಷಧಿ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಆದರೆ ಆಸ್ಪತ್ರೆಗೆ ಹೋದರೆ ಅಲ್ಲಿ ಒಂದು
ಚೀಟಿ ಕೊಟ್ಟು ಕಳಿಸುತ್ತಾರೆ. ಆಸ್ಪತ್ರೆಗಳಿಗೆ ಕೊಟ್ಟಂತಹ ಔಷಧಿ ಎಲ್ಲಿಗೆ ಹೋಯಿತು? ಯಾರ
ಅಂಗಡಿಗೆ ಹೋಯಿತು? ಬರೇ ಬುಕ್ ಅಜಸ್ಟ್‌ಮೆಂಟ್ ಮಾಡಿ ಇವೊತ್ತಿನ ದಿವಸ ವ್ಯವಹಾರ ನಡೆಸು
ತ್ತಿದ್ದಾರೆ. ಆಸ್ಪತ್ರೆಗಳಿಗೆ ಕೊಟ್ಟಂತಹ ಔಷಧಿಗಳಲ್ಲಿ ಕೇವಲ 10 ಪರ್‌ಸೆಂಟ್ ಸಹ ಅಲ್ಲಿ ವಿನಿಯೋಗ
ವಾಗುತ್ತಾ ಇಲ್ಲ. ಅದು ಪುನಃ ವ್ಯಾಪಾರಸ್ಥರ ಹತ್ತಿರವೇ ಹೋಗುತ್ತಿದೆ.

ಇನ್ನೊಂದು ವಿಚಾರವೇನೆಂದರೆ, ಇವೊತ್ತಿನ ದಿವಸ ಸರ್ಕಾರಿ ಆಸ್ಪತ್ರೆಗಳು ಒಂದು ಕಡೆ
ಯಾದರೆ ಇನ್ನೊಂದು ಕಡೆಯಿಂದ ಈ ನರ್ಸಿಂಗ್ ಹೋಮುಗಳು ಬೆಳೆಯುತ್ತಾ ಇವೆ. ಅಲ್ಲಿ ಕೆಲಸ
ಮಾಡುವ ಡಾಕ್ಟರುಗಳು ಯಾರೆಂದರೆ ಸರ್ಕಾರೀ ಆಸ್ಪತ್ರೆಯಲ್ಲಿ ಕೆಲಸ ಮಾಡತಕ್ಕವರೇ. ಅದೂ
ಅಲ್ಲದೆ ಇವೊತ್ತಿನ ದಿವಸ ಇಂತಹ ನರ್ಸಿಂಗ್ ಹೋಮುಗಳಿಗೆ ಹೆಚ್ಚಿನ ಬೆಂಬಲ ಕೊಡುತ್ತಿದ್ದಾರೆ.
ನಾನು, ಈ ನರ್ಸಿಂಗ್ ಹೋಮುಗಳನ್ನು ರಾಷ್ಟ್ರೀಕರಣ ಮಾಡಿ ಇಲ್ಲವೇ ಇವುಗಳಿಗೆ ಯಾವುದಾದರೂ
ಹೆಚ್ಚಿನ ತೆರಿಗೆಯನ್ನು ಹಾಕಿ ಅದರಿಂದ ಬಂದ ಹಣವನ್ನು ಬಡವರಿಗಾಗಿ ಖರ್ಚು ಮಾಡುವುದಕ್ಕೋಸ್ಕರ
ಉಪಯೋಗಿಸಬೇಕೆಂದು ಸಲಹೆ ಮಾಡುತ್ತೇನೆ. ನೀವು ಇವತ್ತು ಅಲ್ಲಿ ಹೋಗಿ ನೋಡಿದರೆ ಎಲ್ಲವೂ
ಗೊತ್ತಾಗುತ್ತದೆ. ಯಾವ ರೀತಿಯಲ್ಲಿ ವಿದ್ಯಾ ಇಲಾಖೆಗಳಲ್ಲಿ ಖಾಸಗೀ ಶಾಲೆಯವರು ಮಾಡು
ತ್ತಿದ್ದಾರೋ ಅದೇ ರೀತಿಯಲ್ಲಿ ಇಲ್ಲಿಯೂ ಮಾಡುತ್ತಿದ್ದಾರೆ. ಒಂದು ಆಪರೇಶನಿಗೆ ಎರಡು-ಮೂರು
ಸಾವಿರ ರೂಪಾಯಿ ಚಾರ್ಜ್ ಮಾಡುತ್ತಿದ್ದಾರೆ. ಒಂದು ಸಣ್ಣ ಹೆರಿಗೆಗೆ 500 ರೂಪಾಯಿಗಿಂತ
ಕಡಿಮೆಯಾಗುವುದಿಲ್ಲ. ಈ ರೀತಿ ಜನಗಿಂದ ಅವರು ಹಣವನ್ನು ವಸೂಲು ಮಾಡುತ್ತಿದ್ದಾರೆ.

ಇನ್ನು ಡಾಕ್ಟರುಗಳ ವರ್ಗದ ವಿಚಾರ. ಈಗ ತಾನೇ ನನಗೆ ಒಂದು ಪತ್ರ ಬಂದಿದೆ. ಸುಮಾರು ಹತ್ತತ್ತು ವರ್ಷಗಳಿಂದಲೂ ಇರತಕ್ಕ ಡಾಕ್ಟರುಗಳು ಗೂಟ ಹೊಡೆದಂತೆ ಅಲ್ಲಿಯೇ ಕೂತಿದ್ದಾರೆ. ಆ ಪತ್ರ ಕೃಷ್ಣರಾಜನಗರದಿಂದ ಬಂದಿದೆ. ಅದನ್ನು ಆ ನಗರದ ಜಾಗೃತಿ ಸಮಿತಿ ಯವರು ಒಂದು ನೋಟೀಸ್ ತರಹದಲ್ಲಿ ಪ್ರಿಂಟ್ ಮಾಡಿದ್ದಾರೆ.

4–00 P.M.

ಶ್ರೀ ಎಚ್. ಸಿದ್ದವೀರಪ್ಪ.—ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಅಲ್ಲಿನ ಡಾಕ್ಟರಿನ ಹೆಸರು ಹರಿಶ್ಚಂದ್ರ ನಾಯಕ್. ಈ ಡಾಕ್ಟರ್ ಅಲ್ಲಿ ಸುಮಾರು 8 ವರ್ಷಗಳಿಂದಲೂ ಇದ್ದಾರೆ. ಅವರನ್ನು ಇಷ್ಟು ಕಾಲ ಯಾವ ಉದ್ದೇಶ ದಿಂದ ಇಟ್ಟುಕೊಂಡಿದ್ದಾರೆ? ಇದೇ ಪ್ರಕಾರ ಇನ್ನೂ ಕೆಲವು ಕಡೆಗಳಲ್ಲಿ ಹಾಗೆಯೇ ಇದೆ. ವೀರಾಜಪೇಟೆಗೆ ನಾನು ಹೋಗಿದ್ದಾಗ ಅಲ್ಲಿ ಡಾಕ್ಟರುಗಳನ್ನು ಕೇಳಿದಾಗ ನಾನು ಬಂದು ಕೇವಲ 8 ತಿಂಗಳುಗಳು ಮಾತ್ರ ಆಗಿರುವುದು, ಇನ್ನೂ ಮೂರು ವರ್ಷಗಳು ಆಗಿಲ್ಲವೆಂದು ಕೆಲವರು ಹೇಳಿದರು. ಸರ್ಕಾರದ ಕಾನೂನಿನ ಪ್ರಕಾರ 3 ವರ್ಷಗಳ ಮೇಲೆ ಆಗಿದ್ದರೆ ಮಾತ್ರ ಟ್ರಾನ್ಸ್‌ಫರ್ ಮಾಡಬೇಕು. ಆದರೆ ಅಲ್ಲಿ ಕೇವಲ 8 ತಿಂಗಳುಗಳಲ್ಲಿ ಟ್ರಾನ್ಸ್‌ಫರ್ ಮಾಡುವ ಅಪಾದನೆ ಏನಿತ್ತು? ಅಂತಹ ಅಪಾದನೆಯನ್ನು ಸಾಬೀತು ಮಾಡಿದ್ದೀರಾ? ಒಟ್ಟಿನಲ್ಲಿ ಆಸ್ಪತ್ರೆಗಳನ್ನು ಬಹಳ ಉನ್ನತ ಮಟ್ಟದಲ್ಲಿ ಮಾಡಬೇಕು. ಸುಮಾರು 8 ವರ್ಷಗಳಿಂದ ಕೂತಿರತಕ್ಕ ಹರಿಶ್ಚಂದ್ರ ನಾಯಕನ ಬಗ್ಗೆ, ತಾವು ಆ ಒಂದು ಹೆಸರಿನ ಬಗ್ಗೆ ಹೆದರಿದ್ದೀರಿ ಎಂದು ನನಗೆ ತಿಳಿಯುತ್ತಿದೆ. ಇ.ಎಸ್.ಐ. ಆಸ್ಪತ್ರೆ ಬಹಳ ಮುಖ್ಯವಾದುದು, ಅದು ಬರೀ ಕಾರ್ಮಿಕರಿಗೋಸ್ಕರವೇ ಇದೆ. ಆದರೆ ತೀರಾ ರೋಗಿ ಯಾದವನಿಗೆ ಸ್ನಾನ ಮಾಡುವುದಕ್ಕೆ ಬಿಸಿನೀರು ಸುಮಾರು 3 ದಿವಸಗಳಿಂದಲೂ ಸಿಕ್ಕಲಿಲ್ಲ. ಇಂತಹ ಗೋಳಿನ ಪರಿಸ್ಥಿತಿ ಅಲ್ಲಿ ಉಂಟಾಗಿದೆ. ಇನ್ನು ಕೆಲವು ಆಸ್ಪತ್ರೆಗಳಲ್ಲಿ ಫಸ್ಟ್ ಏಡ್ ಇರತಕ್ಕ ವ್ಯವಸ್ಥೆಯೇ ಇಲ್ಲ. ಟೇಪುಗಳಿಲ್ಲ. ಟಿಂಕ್ಚರ್ ಸಹ ಇರುವುದಿಲ್ಲ. ಇವನ್ನೆಲ್ಲಾ ಗಮನಿಸಿದರೆ, ನೀವು ನಿಜವಾಗಿ ಸಮಾಜವಾದದ ಅಡಿಪಾಯ ಹಾಕಿದಂತಾಗುತ್ತದೆಯೇ? ನೀವು ಒಂದು ವೇಳೆ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಂದೊಂದು ಆಸ್ಪತ್ರೆಗೆ ಈಗ ಕಟ್ಟಡ ಕಟ್ಟದೇ ಇದ್ದರೂ ನೀವು ಒಂದು ಸಂಚಾರಿ ಆಸ್ಪತ್ರೆಯನ್ನು ಪ್ರತಿಯೊಂದು ತಾಲ್ಲೂಕಿಗೂ, ಪ್ರತಿಯೊಂದು ಜಿಲ್ಲೆಗೆ ನಾಲ್ಕು ವ್ಯಾನುಗಳೂ, ಆಸ್ಪತ್ರೆಗಳಲ್ಲಿ ಸಾಕಷ್ಟು ಬೆಡ್‌ಗಳು ಮತ್ತು ಔಷಧಿಗಳ ಸರಬರಾಜು—ಇವುಗಳ ವ್ಯವಸ್ಥೆ ಮಾಡಿದರೆ ನಿಜವಾಗಿ ನಮ್ಮ ಜನಗಳಿಗೆ ಬಹಳ ಅನುಕೂಲವಾಗುತ್ತದೆನ್ನುವ ಮಾತನ್ನು ನಾನು ತಮಗೆ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ.

ಕೊನೆಯದಾಗಿ ಮೆಡಿಕಲ್ ಸೀಟುಗಳ ವಿಷಯ. ಇದರಲ್ಲಿ ಬಹಳ ದೊಡ್ಡ ಅವಾಂತರ, ಗಂಡಾಂತರ. ಯಾರಾದರೂ ಹೆಣ್ಣುಮಕ್ಕಳು ಇದ್ದರೆ ಅವರಿಗೆ ಮದುವೆ ಮಾಡಬೇಕಾದರೆ ಇಂಜನಿಯರಿಂಗ್, ಮೆಡಿಕಲ್ ಓದಿರತಕ್ಕ ವರಬೇಕು. ಇಂಜನಿಯರಿಂಗ್, ಮೆಡಿಕಲ್ ಓದತಕ್ಕವರಿಗೆ ತಾವು ಸೀಟುಗಳನ್ನು ಕೊಡುವಾಗ ಅವರ ಹತ್ತಿರ ಒಂದು ಬಾಂಡ್ ಬರೆಸಿಕೊಳ್ಳುತ್ತೀರಿ. ಅದೇ ರೀತಿ ಮಾವನ ಹತ್ತಿರ ವರದಕ್ಷಿಣೆ ಕೇಳಿ ಅದನ್ನು ಅವರು ಖರ್ಚುಮಾಡುವುದಕ್ಕೆ ಕೊಡದೇ ಇದ್ದರೆ, ಅಂತಹ ಮಾವನ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತಾ ಇದ್ದೇನೆ. ಹೊಸೂರು ರೋಡ್‌ನಲ್ಲಿ ಬುದ್ಧರಾಷ್ಟ್ರವೆಂಬ ಒಂದು ಹೆಲ್ತ್ ಸೆಂಟರ್ ಇದೆ. ಅಲ್ಲಿ ಒಂದೊಂದುಬಾರಿ ಮಾಯಾಬಜಾರ್ ನಿರ್ಮಾಣಮಾಡುತ್ತಿದ್ದಾರೆ. ಅಲ್ಲಿ ಒಂದು ಹೆಲ್ತ್ ಪ್ರಾಜೆಕ್ಟ್ ಎಂಬುದಾಗಿ ಮಾಡುತ್ತಿದ್ದಾರೆ ಅಲ್ಲಿ ಮಾನ್ಯ ಶ್ರೀ ಗಿರಿಯವರ ಹೆಸರಿನಲ್ಲಿ ಒಂದು ಗಿರಿಧಾಮ ಮಾಡಬೇಕೆಂದಿದ್ದಾರೆ. ಸುಮಾರು 16 ಎಕರೆಯಷ್ಟು ಪ್ರದೇಶ ಅಲ್ಲಿ ಇದೆ, ಅದಕ್ಕೆ ಗಿರಿಧಾಮವೆಂದು ಕರೆಯುವುದಲ್ಲದೆ, ಅಲ್ಲಿಗೆ ದೊಡ್ಡ ದೊಡ್ಡ ಕೈಗಾರಿಕೆ ಉದ್ಯಮಿಗಳನ್ನು ಕರೆಸಿ ಅವರಿಂದ ಡೊನೇಷನ್ ವಸೂಲು ಮಾಡಬೇಕೆಂದಿದ್ದಾರೆ. ಇಂತಹ ಕೆಲಸಗಳನ್ನು ಇವರು ಮಾಡದೇ ಇರಲಿ ಎಂದು ನಾನು ಹೇಳುತ್ತೇನೆ.

ಕೊನೆಯದಾಗಿ, ಕುಟುಂಬ ಯೋಜನೆಯ ವಿಷಯವಾಗಿ ಮಾತನಾಡುತ್ತೇನೆ.

ಉಪಾಧ್ಯಕ್ಷರು.—ಇದು ಹನುಮಂತನ ಬಾಲದಂತೆ ಬೆಳೆಯುತ್ತಿದೆ.

ಶ್ರೀ ವಾಟಾಳ್ ನಾಗರಾಜ್.—ಕೆಲವರಿಗೆ ವಯಸ್ಸಾಗಿದ್ದರೂ ಕೂಡ ಇದರ ಬಗ್ಗೆ ಮಾತನಾಡಿದ್ದಾರೆ. ಕುಟುಂಬ ಯೋಜನೆಯಲ್ಲಿ ನಾನು ಯಾವ ಜಾತಿಯ ಬಗ್ಗೆ ಮಾತನಾಡದೇ ಇದ್ದರೂ ಇವತ್ತು ಅನೇಕ ಮುಂದುವರಿದ ಜಾತಿಗಳು ಕುಟುಂಬ ಯೋಜನೆಯನ್ನು ಅನುಕರಣೆ ಮಾಡುವುದಕ್ಕೆ ಮುಂದೆ ಬಂದಿವೆ. ಮತ್ತು ಅವರೇ ಈ ಕುಟುಂಬ ಯೋಜನೆಯನ್ನು ತೆಗೆದುಕೊಂಡು ಬನ್ನಿ ಎಂಬುದಾಗಿ ಹೆಚ್ಚಿಗೆ

(ಶ್ರೀ ವಾಟಾಳ್ ನಾಗರಾಜ್)

ಮಾತನಾಡುತ್ತಿದ್ದಾರೆ. ಇತರೇಯವರು ಇಂತಹ ಯಾವ ಒಂದು ನಿರ್ಧಯವೂ ಬೇಡ ಫ್ರೀಯಾಗಿ ಇರಲಿ ಎಂದು ಅನ್ನುತ್ತಾರೆ. ಹೀಗಾಗಿ ಮುಂದುವರಿದ ಜನರಿಗೂ ಹಿಂದುಳಿದ ಜನರಿಗೂ ಜನಸಂಖ್ಯೆ ಯಲ್ಲಿ ಅಂತರ ಜಾಸ್ತಿ ಆಗುತ್ತಿದೆ. ಆದರೆ ಸರ್ಕಾರದವರು ಜಾತೀಯ ಅಂತರವನ್ನು ಹೋಗ ಲಾಡಿಸುವುದಕ್ಕಾಗುವುದಿಲ್ಲ. ಈ ಫ್ಯಾಮಿಲಿ ಪ್ಲಾನಿಂಗ್‌ನಲ್ಲಿ ನನ್ನ ಒಂದು ಪ್ಲಾನ್‌ನನ್ನು ತಾವು ಜಾರಿಗೆ ತಂದರೆ ನಿಜವಾಗಿ ಅದು ಸಕ್ಸೆಸ್‌ಫುಲ್ ಆಗುತ್ತದೆ. ನನ್ನದು ಮೇಜರ್ ಕಮ್ಯೂನಿಟಿ ಯೆಂದಿದೆ. ಈ ಒಂದು ದೊಡ್ಡ ಕಮ್ಯೂನಿಟಿಯೊಳಗೆ ಕಡ್ಡಾಯವಾಗಿ ಕುಟುಂಬ ಯೋಜನೆಯನ್ನು ತೆಗೆದುಕೊಂಡು ಬನ್ನಿ.

ಮಾನ್ಯ ಶ್ರೀ ಗೋಪಾಲ್‌ಗೌಡರು ಈ ಬಗ್ಗೆ ಒಂದು ಮಾತನ್ನು ಹೇಳಿದ್ದರು. ಎಲ್ಲಿಯವರೆಗೆ ಜನಗಳಿಗೆ ಸರಿಯಾಗಿ ಅನ್ನ, ಬಟ್ಟೆ, ವಸತಿ ಸೌಕರ್ಯಗಳನ್ನು ಕೊಡುತ್ತೀರೋ ಅಲ್ಲಿಯವರೆಗೆ ಇಡೀ ರಾಜ್ಯದಲ್ಲಿ ಜನಗಳಿಗೆ ಹಾಗೂ ಸರ್ಕಾರಕ್ಕೆ ಹೆಚ್ಚಿನ ಗೌರವ ಇರುತ್ತದೆ ಎಂದು. ಅದಕ್ಕಾಗಿ ಜನರ ಆರ್ಥಿಕ ಮಟ್ಟವನ್ನು ಹೆಚ್ಚಿಸಲು ಕೇಂದ್ರ ಸರ್ಕಾರದಿಂದ ಹಣವನ್ನು ಪಡೆದುಕೊಂಡು ಬಂದು ಅವರ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುವಂತೆ ಮಾಡಿ. ಆ ರೀತಿ ಮಾಡಿ ನಂತರ ನೀವು ಅದಾಯದ ಮೇಲೆ ಜಾತಿಯನ್ನು ವಿಂಗಡಣೆ ಮಾಡುವುದಕ್ಕೆ ಪ್ರಯತ್ನ ಮಾಡಿ. ಇದನ್ನು ವಾಟಾಳ್ ಥಿಯರಿ ಎಂಬು ದಾಗಿ ಹೇಳಬಹುದು. ಇದು ಬಹಳ ಚೆನ್ನಾಗಿದೆ. ಆದ್ದರಿಂದ ಅಧ್ಯಕ್ಷರು ಈ ವಿಚಾರವನ್ನು ಸರ್ಕಾರಕ್ಕೆ ತಿಳಿಸಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡಬೇಕು. ಇದು ನಿಜವಾಗಿ ಒಳ್ಳೆಯ ಸಲಹೆ. ಪ್ರತಿಯೊಬ್ಬರೂ ಆದಾಯ ಸರ್ಟಿಫಿಕೇಟ್ ಕೊಡುತ್ತಾ ಹೋದರೆ, ಆಗ ನಿಜವಾಗಿಯೂ ಜಾತಿಯಲ್ಲಿ ಅಂತರ ಹೊರಟುಹೋಗುತ್ತದೆ. ಇನ್ನು ಹತ್ತು ವರ್ಷಗಳಲ್ಲಿ ಜಾತೀಯ ಬಣ್ಣವೇ ಹೊರಟುಹೋಗುತ್ತದೆ. ಈ ಒಂದು ಹೊಸ ಸಲಹೆಯನ್ನು ನಾನು ಮಾನ್ಯ ಶ್ರೀ ಸಿದ್ದವೀರಪ್ಪನವರಿಗೆ ಕೊಡುತ್ತಿದ್ದೇನೆ.

ಇನ್ನು ಹೆಲ್ತ್ ಡಿಪಾರ್ಟ್‌ಮೆಂಟಿನಲ್ಲಿರತಕ್ಕ ನಾಲ್ಕನೆಯ ದರ್ಜೆಯ ನೌಕರರನ್ನು ವರ್ಗಮಾಡ ಬೇಡಿ. ಏಕೆಂದರೆ ನಿಮಗೆ ಅವರ ಗೋಳು, ಶಾಪ ತಟ್ಟುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಒಟ್ಟಿನಲ್ಲಿ ತಮ್ಮ ಆಡಳಿತದಲ್ಲಿ ಆರೋಗ್ಯ ಇಲಾಖೆಯ ಕಾರ್ಯಚಟುವಟಿಕೆಗಳನ್ನು ಹೆಚ್ಚಿಗೆ ಚೆನ್ನಾಗಿ ಸುಗಮಗೊಳಿಸಬೇಕೆಂದು ಹೇಳಿ, ನನಗೆ ಇಷ್ಟು ಕಾಲಾವಕಾಶವನ್ನು ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ಹಲಗೇಗೌಡ (ಪಾಂಡವಪುರ).—ಸನ್ಮಾನ್ಯ ಸಭಾಪತಿಯವರೇ : ನಮ್ಮ ದಕ್ಷ ಆರೋಗ್ಯ ಸಚಿವರು ಮಂಡಿಸಿರತಕ್ಕ ಆರೋಗ್ಯ ಶಾಖೆಯ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತ ಮತ್ತು ಅವುಗಳನ್ನು ಬೆಂಬಲಿಸುತ್ತ ಅವರು ಈ ಕಾರ್ಯಗಳನ್ನು ನಡೆಸುವುದರ ಬಗ್ಗೆ ನಾನು ಕೆಲವು ಸಲಹೆಗಳನ್ನು ಮಾನ್ಯ ಮಂತ್ರಿಗಳಿಗೆ ಅಧ್ಯಕ್ಷರ ಮೂಲಕ ಕೊಡಬಯಸುತ್ತೇನೆ.

ಈಗಾಗಲೇ ಅನೇಕ ಮಾನ್ಯ ಸದಸ್ಯರು ಹೇಳಿರುವಂತೆ ಮನುಷ್ಯನಿಗೆ ಎಲ್ಲ ಭಾಗ್ಯಗಳಿಗಿಂತಲೂ ಅತಿ ಮುಖ್ಯವಾದ ಭಾಗ್ಯ ಎಂದರೆ ಅದು ಆರೋಗ್ಯ ಭಾಗ್ಯವೇ. ಇದು ಒಂದು ಗಾದೆ ಇಲ್ಲವೇ ನಮ್ಮ ಹಿಂದಿನ ಹಿರಿಯರು ಹೇಳಿದಂಥ ಮಾತಾಗಿದೆ. ಮನುಷ್ಯನಿಗೆ ಏನಿಲ್ಲದಿದ್ದರೂ ಚಿಂತೆಯಿಲ್ಲ. ಆರೋಗ್ಯ ಒಂದಿದ್ದರೆ ಸಾಕೆಂಬ ಆಸೆ ಎಲ್ಲರಿಗೂ ಇದೆ. ಹೀಗೆ ಈ ಆರೋಗ್ಯ ಇಲಾಖೆ ಅಥವಾ ಈ ಒಂದು ಬಾಬು ಅಂಥ ಪ್ರಾಮುಖ್ಯತೆಯನ್ನು ಗಳಿಸಿಕೊಂಡಿದೆ. ಬುದ್ಧಿ ಜೀವಿಗಳನ್ನು ತಯಾರಿಸುವುದಕ್ಕೆ ಹೇಗೆ ವಿದ್ಯಾ ಇಲಾಖೆ ಹೆಸರಾಗಿದೆಯೋ ಹಾಗೇ ಬಲಾಢ್ಯರಾದ ಜನರನ್ನು ತಯಾರಿಸುವುದಕ್ಕೆ ಈ ಆರೋಗ್ಯ ಇಲಾಖೆ ಹೆಸರಾಗಿದೆ. ಇಂಥ ಒಂದು ಇಲಾಖೆಗೆ ನಾವು ಕೊಡತಕ್ಕ ಹಣ ಏನು ಸರಿಯಾಗಿ ಸದ್ವಿನಿಯೋಗವಾಗುತ್ತಿದೆಯೇ ಅಥವಾ ಇಲ್ಲವೇ ಎಂಬುದನ್ನು ನಾವು ನೋಡಬೇಕಾಗಿದೆ. ಈ ಒಂದು ಬೆಳಕಿನಲ್ಲಿ ನೋಡಿದಾಗ ನಾವು ಖರ್ಚು ಮಾಡತಕ್ಕ ಹಣ ಅನೇಕ ಒಳ್ಳೆಯದನ್ನೇ ಸಾಧಿಸಿದ್ದರೂ ಆ ಸಾಧನೆಯೆಲ್ಲಾ ನಗರ ಪ್ರದೇಶಗಳಿಗೆ ಸೇರಿ ಶ್ರೀಸಾಮಾನ್ಯನಿಗೆ ಆ ಹಣದಿಂದೇನೂ ಪ್ರಯೋಜನ ವಾಗಲಿಲ್ಲ ಎಂಬುದನ್ನು ತಿಳಿಸುವುದಕ್ಕೆ ವ್ಯಥೆಯಾಗುತ್ತದೆ. ಎಲ್ಲಿ ಯಾವ ಆಸ್ಪತ್ರೆಗಳನ್ನೂ ನೋಡಿ ದರೂ ಅಲ್ಲೆಲ್ಲಾ ನರಕ ಸದೃಶ್ಯ. ಅವು ಧನ್ವಂತರಿ ಮನೆಗಳಾಗಿ, ಮಂಗಳ ಗೃಹಗಳಾಗಿ ಕಾಣುತ್ತಿಲ್ಲ. ಅದಕ್ಕೆ ಕಾರಣ ಅಲ್ಲಿರತಕ್ಕ ಸಿಬ್ಬಂದಿ ವರ್ಗವೇ ಎಂದು ಹೇಳದಿದ್ದರೆ ವಿಧಿಯಿಲ್ಲ. ಆದ್ದರಿಂದ ಅಲ್ಲಿ ಕೆಲಸ ಮಾಡತಕ್ಕ ಡಾಕ್ಟರುಗಳ ಮನೋಭಾವ ಮೊದಲು ಬದಲಾವಣೆಯಾಗಬೇಕು. ನಾವು ಇಂದು ವರ್ಗ ರಹಿತ ಸಮಾಜ ರಚನೆ ಮಾಡುತ್ತಿದ್ದೇವೆಂದು ಹೇಳುತ್ತಿರುವ ಕಾಲದಲ್ಲಿ ಅದರಲ್ಲಿ ಕೆಲವು ಹೊಸ ಸಮಾಜಗಳನ್ನು ನಾವು ಇಂದು ನಿರ್ಮಾಣ ಮಾಡುತ್ತಿದ್ದೇವೆ. ಆ ಸಮಾಜಗಳು ಯಾವುವು ಎಂದರೆ

ಒಂದು—ಅಧಿಕಾರಿ ವರ್ಗ, ಇನ್ನೊಂದು ಅಧಿಕಾರೇತರ ವರ್ಗ. ಮತ್ತೆ ಅಧಿಕಾರಿ ವರ್ಗದಲ್ಲಿ ಮೂರು ಭಾಗ. ಒಂದು ವೈದ್ಯವರ್ಗ, ಇನ್ನೊಂದು ಇಂಜಿನಿಯರಿಂಗ್ ವರ್ಗ ಮತ್ತು ಮೂರನೆಯದು ಕಂಟ್ರಾಕ್ಟರ ವರ್ಗ. ಈ ದಿವಸ ಸಮಾಜದಲ್ಲಿ ಎಲ್ಲಾ ಸೌಲಭ್ಯಗಳನ್ನೂ ಪಡೆಯುತ್ತಿರುವ ವರ್ಗ ಎಂದರೆ ಈ ಮೂರು ವರ್ಗಗಳೇ. ಈ ದಿವಸ ಈ ವರ್ಗಗಳಿಗೆ ಬಹಳ ಹೆಚ್ಚಿನ ಪ್ರಾಧಾನ್ಯತೆ ದೊರೆಯುತ್ತಿದೆ. 600 ರೂಪಾಯಿ ಬರತಕ್ಕ ಲೆಕ್ಚರರಿಗೆ ತಂದೆತಾಯಿಗಳು ಹೆಣ್ಣನ್ನು ಕೊಡುವುದಕ್ಕೆ ಒಪ್ಪುತ್ತಿಲ್ಲ. ಅವರು ಸಂಬಳ 300 ಅಥವಾ 350 ರೂಪಾಯಿಗಳು ಬರತಕ್ಕ ಒಬ್ಬ ವೈದ್ಯನಿಗಾದರೆ ಹೆಣ್ಣನ್ನು ಕೊಡುತ್ತಾರಂತೆ. ಇಂದು ಸಮಾಜದಲ್ಲಿ ಇಂಥ ಒಂದು ಭಾವನೆ ಎದ್ದಿದೆ. ಇದಕ್ಕೆ ಕಾರಣ ಏನೆಂದು ಕೇಳಿದರೆ ಆ ವೈದ್ಯನಿಗೆ ಸಂಬಳ ಕಡಮೆ ಬಂದರೂ ಆತನಿಗೆ ಗಿಂಬಳ ಜಾಸ್ತಿ ಬರುತ್ತದೆಂದು ಹೇಳುತ್ತಾರೆ. ಆದ್ದರಿಂದ ಸರ್ಕಾರದವರು ಇತ್ತಕಡೆಗೆ ಅವರ ಗಮನ ಕೊಡಬೇಕಾದ್ದು ಬಹಳ ಅಗತ್ಯ. ಇಂಥ ಅನ್ಯಾಯಗಳು ನಗರ ಪ್ರದೇಶಗಳಲ್ಲಿ ಜಾಸ್ತಿ. ಆದರೆ ಸರ್ಕಾರದವರು ಸಾಮಾನ್ಯವಾಗಿ ನಗರಗಳ ಆಸ್ಪತ್ರೆಯ ಮೇಲೆ ಒಂದು ಹೆಚ್ಚಿನ ಗಮನ ಕೊಡುತ್ತಿರುವುದು ಸ್ವಾಭಾವಿಕವಾಗಿ ಬಂದಿದೆ. ಒಟ್ಟು ರಾಜ್ಯದಲ್ಲಿರತಕ್ಕ 24 ಸಾವಿರ ಚಿಲ್ಲರೆ ಬೆಡ್ಡುಗಳಲ್ಲಿ ಕೇವಲ 4 ಸಾವಿರ ಚಿಲ್ಲರೆ ಗ್ರಾಮಾಂತರ ಪ್ರದೇಶದಲ್ಲಿರುತ್ತವೆಂದರೆ ನಾವು ನಿಜವಾಗಿಯೂ ಇದಕ್ಕೆ ತಲೆ ತಗ್ಗಿಸಲೇಬೇಕು. ಇದಕ್ಕಿಂತ ನಾಚಿಗೇಡಾದ್ದು ನಮ್ಮಲ್ಲಿ ಬೇರೊಂದು ಇಲ್ಲ. ಆದ್ದರಿಂದ ಇನ್ನು ಮುಂದಕ್ಕಾದರೂ ಪ್ರತಿಯೊಂದು ತಾಲ್ಲೂಕುಗಳಲ್ಲೂ ಸುಸಜ್ಜಿತವಾದ ಎಲ್ಲರಿಗೂ ಒಂದು ಸರಿಸಮಾನತೆಯ ಚಿಕಿತ್ಸೆ ನೀಡಬಲ್ಲಂಥ ಒಳ್ಳೇ ಔಷಧಿಗಳನ್ನು ಒಳಗೊಂಡಂಥ 50 ಬೆಡ್ಡುಗಳನ್ನೊಳಗೊಂಡ ಒಂದೊಂದು ಆಸ್ಪತ್ರೆ ಇರುವಂತೆ ಮಾಡಬೇಕಾದ್ದು ಅತ್ಯವಶ್ಯಕ. ಅಲ್ಲಿ ಬಡಜನರ ಒತ್ತಡ ಜಾಸ್ತಿ ಇರುತ್ತದೆ. ಇನ್ನು ಇತ್ತೀಚೆಗೆ ಹೊರಟಿರತಕ್ಕ ಹೇಳಿಕೆ ಪ್ರಕಾರ ಪ್ರತಿ 15 ಸಾವಿರ ಜನಸಂಖ್ಯೆಯುಳ್ಳ ಪ್ರದೇಶದಲ್ಲಿ ಒಂದು ಆಸ್ಪತ್ರೆಯನ್ನು ನಿರ್ಮಾಣ ಮಾಡತಕ್ಕ ಒಂದು ಅಭಿಪ್ರಾಯ ಏನಿದೆ ಅದನ್ನು ಸ್ವಲ್ಪ ಮಾರ್ಪಾಡು ಮಾಡಿಕೊಂಡು ಕನಿಷ್ಠ 10 ಸಾವಿರ ಪ್ರಜಾ ಸಂಖ್ಯೆಯುಳ್ಳ ಪ್ರತಿ ಒಂದು ಗ್ರಾಮಕ್ಕೂ ಒಂದು ಸುಸಜ್ಜಿತವಾದ ಆಸ್ಪತ್ರೆಯನ್ನು ಒದಗಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಆದರೆ ಇನ್ನು ರಾಜ್ಯದ ಕೆಲವು ಮೂಲೆಗಳಲ್ಲಿ ಅಲ್ಲಿಗೆ ಯಾವ ಒಂದು ಆಧುನಿಕ ವಾಹನ ಸೌಕರ್ಯ ಇತ್ಯಾದಿಗಳ್ಯಾವುವೂ ಇಲ್ಲದೆ ಇರತಕ್ಕ ಪ್ರದೇಶಗಳಲ್ಲಿ ಜನ ಸಂಖ್ಯೆ ಕಡಿಮೆಯಾಗಿದ್ದರೂ ಅಲ್ಲಿಗೆ ವಿಶೇಷ ಕಾರಣಗಳ ಮೇಲೆ ಆಸ್ಪತ್ರೆಯನ್ನು ಒದಗಿಸಬೇಕೆಂದು ಹೇಳುತ್ತೇನೆ. ಅಲ್ಲಿಗೆ ಖಾಯಂ ಆಸ್ಪತ್ರೆಯನ್ನು ಒದಗಿಸುವುದಕ್ಕೆ ಆಗದಿದ್ದರೆ ಕನಿಷ್ಠ ಸಂಚಾರಿ ಆಸ್ಪತ್ರೆಗಳನ್ನಾದರೂ ಒದಗಿಸಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನು ತಾಲ್ಲೂಕಾಮಳೆ ಇರತಕ್ಕ ಆ ಹೆಲ್ತ್ ಯೂನಿಟ್ಟುಗಳಿಗೆ ತಾಲ್ಲೂಕ್ ಅಭಿವೃದ್ಧಿ ಬೋರ್ಡು ಗಳಿಂದ ವಂತಿಕೆಯನ್ನು ವಸೂಲ್ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅದು ಸಾಧ್ಯವಿಲ್ಲ. ಆದಕಾರಣ ಸರ್ಕಾರದವರೇ ಆ ಎಲ್ಲಾ ತಾಲ್ಲೂಕ್ ಮಟ್ಟದಲ್ಲಿರತಕ್ಕ ಹೆಲ್ತ್ ಯೂನಿಟ್ಟುಗಳನ್ನು ವಹಿಸಿಕೊಂಡು ಅವರೇ ಅವುಗಳನ್ನು ನಡೆಸಬೇಕೆಂದು ಹೇಳುತ್ತೇನೆ. ಸರ್ಕಾರದವರು ಇವುಗಳನ್ನು ವಹಿಸಿಕೊಳ್ಳುವುದನ್ನು ನಾನೂ ಕೂಡ ಸ್ವಾಗತಿಸುತ್ತೇನೆ. ಆದರೆ ಇಲ್ಲಿಯವರೆಗೂ ವಸೂಲಾಗದೆ ಹಾಗೇ ಬಾಕಿ ನಿಂತಿರತಕ್ಕ ಮೂರೂವರೆ ಕೋಟಿ ರೂಪಾಯಿಗಳನ್ನೂ ಕೂಡ ಕೈ ಬಿಡಬೇಕೆಂದು ಪ್ರಾರ್ಥಿಸುತ್ತೇನೆ. ಮೊದಲೇನು ಈ ತಾಲ್ಲೂಕ್ ಬೋರ್ಡುಗಳು ಬರುವುದಕ್ಕೆ ಮುಂಚೆ ಜಿಲ್ಲಾ ಬೋರ್ಡುಗಳೆಂದು ಇದ್ದವೋ ಆ ಕಾಲದಿಂದಲೂ ಈ ಹಣ ಹಾಗೇ ಬಾಕಿ ಉಳಿದು ಬಂದಿದೆ. ಅವು ಹೋದ ನಂತರ ಅವುಗಳು ಕೊಡಬೇಕಾಗಿದ್ದ ಬಾಕಿ ಈ ತಾಲ್ಲೂಕ್ ಬೋರ್ಡುಗಳ ಮೇಲೆ ಬತ್ತು. ಆದರೆ ಇವುಗಳಿಗೆ ಅಗತ್ಯವಾದ ಇನ್ನೂ ಅನೇಕ ಅಭಿವೃದ್ಧಿ ಕಾರ್ಯಗಳನ್ನು ನಡೆಸುವುದಕ್ಕೆ ಅವುಗಳಲ್ಲಿ ಹಣವಿಲ್ಲ. ಅವುಗಳಿಗೆ ಈ ಆಸ್ಪತ್ರೆಗಳಿಗೆ ಔಷಧಿಗಳಿಗೆ ಸಾಕಷ್ಟು ಹಣವನ್ನು ಕೊಡಲು ಸಾಧ್ಯವಿಲ್ಲ. ಅವುಗಳಿಗೆ ಹಣದ ಅಭಾವ ಜಾಸ್ತಿ ಇದೆ. ಆದ್ದರಿಂದ ಈ ಬಾಕಿ ಏನಿದೆ ಇದನ್ನು ಕೈಬಿಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ಸಾಮಾನ್ಯವಾಗಿ ಯಾವ ಆಸ್ಪತ್ರೆಯಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿ ಸರಿಯಾಗಿ ಯಾವ ಒಂದು ಔಷಧಿಯೂ ಇರುವುದಿಲ್ಲ. ಅಲ್ಲದೆ ಅಲ್ಲಿಗೆ ಯಾವುದು ಅನಗತ್ಯವೋ ಅಂಥ ಔಷಧಿಗಳನ್ನು ಕಳುಹಿಸಿ ಅಗತ್ಯವಾದ ಔಷಧಿಗಳನ್ನು ಕೈಬಿಡುತ್ತಾರೆ. ಇದು ಬಹಳ ಶೋಚನೀಯವಾದದ್ದು. ಇದಕ್ಕೆ ಅನೇಕ ಕಾರಣಗಳೂ ಇರಬಹುದು. ಆದುದರಿಂದ ಆಯಾಯಾ ಸ್ಥಳಗಳಿಗೆ ಅಗತ್ಯವಾದ ಮತ್ತು ಅವಶ್ಯಕವಾದ ಔಷಧಿಗಳನ್ನು ಕೊಳ್ಳಲು ಆಯಾಯಾ ಆಸ್ಪತ್ರೆಯ ಡಾಕ್ಟರುಗಳಿಗೇ ಹಣವನ್ನು ಒದಗಿಸಿ ಅವರೇ ಅಲ್ಲಿಗೆ ಬೇಕಾಗತಕ್ಕ ಔಷಧಿಯನ್ನು ಕೊಳ್ಳುವಂತೆ ಮಾಡುವುದು ಒಳ್ಳೆಯದೆಂದು ನಾನು ಹೇಳುತ್ತೇನೆ. ಈಗ ಅನಗತ್ಯವಾದ ಔಷಧಿಗಳನ್ನು ಏಕೆ ಅಧಿಕ ಪ್ರಮಾಣದಲ್ಲಿ ಒದಗಿಸುತ್ತಿದ್ದಾರೆಂದರೆ ಆ ಸ್ಟೋರ್ ಪರ್ಚೇಜ್ ಕಮಿಟಿಯವರು ತಮಗೆ ಮುಲಾಜಿರತಕ್ಕ ಜನರ ಒತ್ತಡದಿಂದ

(ಶ್ರೀ ಡಿ. ಹಲಗೇಗೌಡ)

ಅನಗತ್ಯವಾದ ಔಷಧಿಗಳನ್ನು ವಿಶೇಷವಾಗಿ ಕೊಳ್ಳುವುದಕ್ಕೆ ಅವಕಾಶವಿದೆ. ಇದನ್ನು ತಡೆಗಟ್ಟ ಬೇಕು ಎಂದು ಹೇಳುತ್ತೇನೆ.

ಇನ್ನು ಹಾಲಿ ಬೆಂಗಳೂರಿನಲ್ಲಿ ಅನೇಕ ದೊಡ್ಡ ದೊಡ್ಡ ಆಸ್ಪತ್ರೆಗಳೇನಿವೆ ಅಲ್ಲಿ ಕೆಲಸ ಮಾಡತಕ್ಕ ಡಾಕ್ಟರುಗಳು ನಿರ್ದಯರಾಗಿ ತಾತ್ಸಾರ ಮನೋಭಾವನೆಯಿಂದ ಕೆಲಸ ಮಾಡುತ್ತಿದ್ದಾರೆಂಬುದಕ್ಕೆ ಮೊನ್ನೆ ಇಲ್ಲಿನ ಒಂದು ನಿದರ್ಶನವೇ ಸಾಕು. ಇಲ್ಲಿಗೆ 2—3 ತಿಂಗಳ ಹಿಂದೆ ಶ್ರೀ ಖಾದ್ರಿ ಶಾಮಣ್ಣ ನವರು—ಅವರೊಬ್ಬ ದೊಡ್ಡ ಸಾಹಿತಿ ಅವರು ಕಾಲು ಮುರಿದುಕೊಂಡು ಆಸ್ಪತ್ರೆಗೆ ಸೇರಿ ಒಂದೂವರೆ ತಿಂಗಳು ಚಿಕಿತ್ಸೆ ಪಡೆದು ಮನೆಗೆ ಹೊರಟಾಗ ಅವರ ಕಾಲನ್ನು ಮತ್ತೆ ಪರೀಕ್ಷೆ ಮಾಡಲಾಗಿ ಮೊದಲು ಮುರಿದಾಗ ಹೇಗಿತ್ತೋ ಆಗಲೂ ಹಾಗೇ ಇತ್ತಂತೆ. ಅಂದಮೇಲೆ ಇವರು ಇನ್ನು ಆ ಹಳ್ಳಿಯ ಜನರಿಗೆ ಎಷ್ಟು ಮಾತ್ರ ಚಿಕಿತ್ಸೆ ಮಾಡಿಯಾರು ? ಹೀಗೆ ಡಾಕ್ಟರುಗಳಲ್ಲಿ ಬಹಳ ಅನಾದರಣೆ ಇದೆ. ಹೀಗಾಗಿ ಇವುಗಳೇನಿದ್ದರೂ ಕೇವಲ ಹಣವನ್ನು ಚೆಲ್ಲತಕ್ಕ ಶ್ರೀಮಂತರ ಆಸ್ಪತ್ರೆಗಳಾಗಿವೆ. ಈ ಆಸ್ಪತ್ರೆಗಳಲ್ಲಿ ಹಳ್ಳೀ ಜನರು ದುಡ್ಡು ಕೊಟ್ಟರೂ ಕೂಡ ಅವರಿಗೆ ಒಳ್ಳೆಯ ಔಷಧಿ ಕೊಡುತ್ತಾರೆ ಎಂಬ ನಂಬಿಕೆ ಜನರಲ್ಲಿ ಉಳಿದಿಲ್ಲ. ಅದಕ್ಕಾಗೇ ಅವರು ಖಾಸಗೀ ಜನರ ಆಸ್ಪತ್ರೆಗೆ ಹೋಗುತ್ತಿದ್ದಾರೆ. ಇಂಥ ಭಾವನೆ ಜನರಲ್ಲಿ ಹೋಗಬೇಕು. ಆದರೆ ಈ ಬಾಬಿಗೆ ಒದಗಿಸಿರತಕ್ಕ ಹಣ ಅಲ್ಪವಾಗಿದ್ದರೂ ಮಾನ್ಯ ಸಚಿವರು ಇದ್ದುದರಲ್ಲೇ ಸರಿದೂಗಿಸುವುದಾಗಿ ಹೇಳಿ ದ್ದಾರೆ. ಅದಕ್ಕೆ ಅವರಿಗೆ ನಮ್ಮ ಶುಭಾಶಯಗಳನ್ನು ಅರ್ಪಿಸೋಣ. ಗ್ರಾಮಾಂತರ ಪ್ರದೇಶ ಗಳಲ್ಲಿರತಕ್ಕ ಆಸ್ಪತ್ರೆಗಳನ್ನು ಉತ್ತಮಪಡಿಸಿದರೆ ನಗರಗಳಲ್ಲಿರತಕ್ಕ ಆಸ್ಪತ್ರೆಗಳಿಗೆ ಒತ್ತಡ ಬಹಳ ಕಡಿಮೆಯಾಗುತ್ತದೆ. ಆದ್ದರಿಂದ ತಾಲ್ಲೂಕ್ ಪ್ರದೇಶಗಳಲ್ಲಿ ಹೆಚ್ಚು ಆಸ್ಪತ್ರೆಗಳನ್ನು ತೆರೆಯಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಅನೇಕ ಜನರು ಡಾಕ್ಟರು ಬೆಂಗಳೂರಿನಲ್ಲಿರತಕ್ಕ ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ಏನೂ ಕೆಲಸವಿಲ್ಲದೆ ಕಾಲಹರಣ ಮಾಡುತ್ತಿದ್ದಾರೆ. ಇಂಥವರನ್ನೆಲ್ಲಾ ಗ್ರಾಮಾಂತರ ಪ್ರದೇಶಗಳ ಆಸ್ಪತ್ರೆಗಳಿಗೆ ಕಳುಹಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಇನು ಗ್ರಾಮಾಂತರ ಪ್ರದೇಶಗಳಲ್ಲಿ ಲೇಡೀ ಡಾಕ್ಟರ ಅಭಾವ ಕೂಡ ಜಾಸ್ತಿ ಇದೆ. ಗ್ರಾಮಾಂತರ ಪ್ರದೇಶಗಳಲ್ಲಿ ಒಂದೊಂದು ತಾಲ್ಲೂಕಿಗೆ ನಾಲ್ಕು ಹೆರಿಗೆ ಆಸ್ಪತ್ರೆಗಳನ್ನಾದರೂ ಕೊಡಬೇಕು. ಜೊತೆಗೆ ಸ್ಟೂಡೆಂಟ್ಸ್ ಮೆಡಿಕಲ್ ಫಂಡ್ ಇದೆ, ವರ್ಷಕ್ಕೆ ವಿದ್ಯಾರ್ಥಿಗಳಿಂದ 2 ಅಥವಾ 3 ರೂಪಾಯಿ ತೆಗೆದುಕೊಂಡು ಅವರ ತೂಕ, ಅಳತೆ ನೋಡಿ ಕಳಿಸುವರು. ಇದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಆದುದರಿಂದ ಶಾಲಾ ಕಾಲೇಜುಗಳು ಹೆಚ್ಚಾಗಿರುವ ಕಡೆ ವಿದ್ಯಾರ್ಥಿಗಳಿಗೇ ಪ್ರತ್ಯೇಕ ಆಸ್ಪತ್ರೆ ತೆರೆದು ಸರಿಯಾದ ವೈದ್ಯಕೀಯ ಸೌಲಭ್ಯ ಅವರಿಗೆ ದೊರೆಯು ವಂತೆ ಮಾಡಬೇಕು. ಜನರಲ್ ಆಸ್ಪತ್ರೆಗೆ ವಿದ್ಯಾರ್ಥಿಗಳು ಹೋಗಲು ಅವರಿಗೆ ವೇಳೆಯಿಲ್ಲದೆ ತೊಂದರೆಯಾಗುವುದು. ಆದುದರಿಂದ ವಿದ್ಯಾರ್ಥಿಗಳಿಗೇ ಪ್ರತ್ಯೇಕ ಆಸ್ಪತ್ರೆ ನಗರ ಪ್ರದೇಶದಲ್ಲಿ ತೆರೆಯಬೇಕು. ಜೊತೆಗೆ ವೈದ್ಯರು ಕೂಡ ತಮ್ಮ ಮನೋಭಾವನೆಯನ್ನು ಬದಲಾಯಿಸಬೇಕು. ಹಣವಿಲ್ಲದಿರುವವರು, ಬಡವರು ಹೋದರೆ ಒಳ್ಳೆಯ ರೀತಿಯಿಂದ ಅವರನ್ನು ಕಂಡು ಸರಿಯಾದ ಔಷಧಿ ಕೊಟ್ಟು ಸಾಮಾನ್ಯ ಜನರಿಗೆ ನಂಬಿಕೆ ಮತ್ತು ವಿಶ್ವಾಸ ಬರುವಂತೆ ವ್ಯವಸ್ಥೆ ಮಾಡಬೇಕು. ಇಷ್ಟು ಹೇಳಿ ಅಧ್ಯಕ್ಷರಿಗೆ ವಂದಿಸುತ್ತೇನೆ.

† ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಸನ್ಮಾನ್ಯ ಅಧ್ಯಕ್ಷರೇ ಆರೋಗ್ಯ ಸಚಿವರು ಮಂಡಿಸಿರತಕ್ಕ ಬೇಡಿಕೆ ಅವಶ್ಯಕತೆಗಳಿಗೆ ತಕ್ಕಂತಿಲ್ಲ ಎಂದು ಇದನ್ನು ವಿರೋಧಿಸುತ್ತೇನೆ. ಕೆಲವು ಸಲಹೆಗಳನ್ನು ಕೊಡುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಹಿಂದೆ ಸರಿಯಾದ ವೈದ್ಯಕೀಯ ಸೌಕರ್ಯ ಸಿಕ್ಕುತ್ತಿರಲಿಲ್ಲ. ತಾಲ್ಲೂಕು ಬೋರ್ಡ್ ಆಸ್ಪತ್ರೆಯಲ್ಲಿ ಸರಿಯಾದ ಸೌಕರ್ಯವಿರಲಿಲ್ಲ. ಇದರ ಬಗ್ಗೆ ಅನೇಕ ದೂರುಗಳು ಇದ್ದುವು. ಅನೇಕ ಸಂದರ್ಭಗಳಲ್ಲಿ ಜನರು ಸರ್ಕಾರವನ್ನು ಮತ್ತು ಆಡಳಿತವನ್ನು ದೂಷಿಸುತ್ತಿದ್ದರು. ಈ ನ್ಯೂನತೆಯನ್ನು ಹೋಗಲಾಡಿಸಲು ಸಚಿವರು ಗ್ರಾಮಾಂತ ಪ್ರದೇಶಗಳ ಜನರ ಬಗ್ಗೆ ಅನುಕಂಪ ತೋರಿಸಿ ತಾಲ್ಲೂಕು ಬೋರ್ಡ್ ಆಶ್ರಯದಲ್ಲಿರುವ ಎಲ್ಲ ಆಸ್ಪತ್ರೆಗಳನ್ನೂ ಸರ್ಕಾರವೇ ವಹಿಸಿಕೊಂಡು ಒಂದು ದೊಡ್ಡ ಕೆಲಸ ಮಾಡಿದ್ದಾರೆ. ಈ ದೃಷ್ಟಿಯಿಂದ ನಾನು ಅವರನ್ನು ಗ್ರಾಮಾಂತರ ಪ್ರದೇಶದ ಜನರ ಪರವಾಗಿ ಹೃತ್ಪೂರ್ವಕವಾಗಿ ವಂದಿಸುತ್ತೇನೆ.

ಇನು ಜಿಲ್ಲಾ ಕೇಂದ್ರದ ಆಸ್ಪತ್ರೆ ವಿಚಾರವಾಗಿ ಒಂದು ಮಾತು. ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲೂ ಒಂದೊಂದು ಜನರಲ್ ಆಸ್ಪತ್ರೆ ಇದೆ. ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ 50

ಸಾವಿರದಿಂದ ಹಿಡಿದು 2—3 ಲಕ್ಷ ಜನರಿರುವ ಪಟ್ಟಣಗಳಿವೆ. ಅಲ್ಲಿ ಒಂದೇ ಆಸ್ಪತ್ರೆ ಇದೆ. ಒಂದೇ ಆಸ್ಪತ್ರೆ ಅಲ್ಲಿರುವುದರಿಂದ ಆಪರೇಷನ್ನಿಗಾಗಲಿ ಅಥವ ಸಣ್ಣಪುಟ್ಟ ಕಾಯಿಲೆಗಾಗಲಿ ಎಲ್ಲರೂ ಅಲ್ಲಿಗೇ ಬರಬೇಕು. ಆದುದರಿಂದ ಸಣ್ಣಪುಟ್ಟ ಕಾಯಿಲೆಯವರು ಬೆಳಗಿನಿಂದ ಸಾಯಂಕಾಲದವರೆಗೆ ಕೆಲಸಕಾರ್ಯ ಬಿಟ್ಟು ಆಸ್ಪತ್ರೆಗೆ ಬಂದು ಔಷಧಿ ತೆಗೆದುಕೊಳ್ಳುವುದು ಕಷ್ಟ. ಇದಕ್ಕೆ ಒಂದು ಸಲಹೆಮಾಡುತ್ತೇನೆ. ಜಿಲ್ಲಾ ಕೇಂದ್ರಗಳಲ್ಲಿ ಇರುವ ದೊಡ್ಡ ಆಸ್ಪತ್ರೆಯ ಆಶ್ರಯದಲ್ಲಿ ಜನಸಂಖ್ಯೆ ಜಾಸ್ತಿಯಿರುವ ಹಳ್ಳಿಗಳಲ್ಲಿ ಜನಸಂಖ್ಯೆಗನುಗುಣವಾಗಿ ಔಟ್‌ಪೇಷೆಂಟ್ ವಾರ್ಡುಗಳನ್ನು ತೆರೆದು ಅಲ್ಲಿ ಸಣ್ಣಪುಟ್ಟ ಕಾಯಿಲೆಯವರಿಗೆ ಔಷಧಿ ತೆಗೆದುಕೊಳ್ಳಲು ಅವಕಾಶ ಮಾಡಬೇಕು.

ಇನ್ನೊಂದು ವಿಚಾರ. ಜಿಲ್ಲಾ ಕೇಂದ್ರಗಳಲ್ಲಿರುವ ಕೆಲವು ಆಸ್ಪತ್ರೆಗಳ ವಿಚಾರ ನೋಡಿದರೆ ವ್ಯಥೆಯಾಗುವುದು. ಕೆಲವರು ಅನುಕಂಪ ತೋರಿ ಮಾನವೀಯ ದೃಷ್ಟಿಯಿಂದ ರೋಗಿಗಳಿಗೆ ತಕ್ಕ ಚಿಕಿತ್ಸೆ ಮಾಡುವರು. ಮತ್ತೆ ಕೆಲವರು ಬಡ ರೋಗಿಗಳನ್ನು ಸರಿಯಾಗಿ ನೋಡುವುದಿಲ್ಲ. ಅನೇಕರು ಹಣ ಕೊಡದಿದ್ದರೆ ಆಪರೇಷನ್ ಮಾಡುವುದಿಲ್ಲ, ರೋಗಿಗಳ ಬಗ್ಗೆ ಸರಿಯಾಗಿ ನಿಗ ಕೊಡುವುದಿಲ್ಲ. ಇದರಿಂದ ಆಸ್ಪತ್ರೆ ನರಕದಂತೆ ಕಾಣುವುದು. ಆ ಭಾವನೆ ಬರುವುದು. ಇಂಥ ಸನ್ನಿವೇಶಗಳಲ್ಲಿ ದೂರು ಬಂದರೆ ಸಚಿವರು ನಿರ್ಭಯವಾಗಿ ಡಾಕ್ಟರುಗಳನ್ನು ಕೆಲಸದಿಂದ ತೆಗೆದುಹಾಕಬೇಕು. ತಪ್ಪಿತಸ್ಥರಮೇರೆ ತಕ್ಕ ಕ್ರಮ ತೆಗೆದುಕೊಳ್ಳಬೇಕು. ಮಾನವೀಯ ದೃಷ್ಟಿಯಿಂದ ನೋಡಿ ಅನುಕಂಪ ತೋರಿಸುವ ಡಾಕ್ಟರುಗಳಿಗೆ, ಉತ್ತಮವಾದ ಸೇವೆ ಮಾಡುವವರಿಗೆ ಪ್ರಮೋಷನ್ ಮತ್ತು ಒಂದು ಹೆಚ್ಚಿನ ದರ್ಜೆಯ ಕೆಲಸಕಾರ್ಯ ಕೊಡಬೇಕು.

ಇನ್ನು ಆಸ್ಪತ್ರೆಗಳಿಗೆ ಕೊಡುವ ಔಷಧಿಗಳ ವಿಚಾರದಲ್ಲಿ ಒಂದೆರಡು ಮಾತು. ರೇಟ್ ಕಾಂಟ್ರಾಕ್ಟ್‌ನಿಂದ ಪಡೆದು ಔಷಧಿಗಳನ್ನು ಆಸ್ಪತ್ರೆಗಳಿಗೆ ಒದಗಿಸುವರು. ಇದು ಸರಿಯಲ್ಲ. ಎಷ್ಟೋ ಸಂದರ್ಭಗಳಲ್ಲಿ ಈ ರೀತಿ ಪಡೆಯುವ ಔಷಧಿ ಉತ್ತಮವಾಗಿರುವುದಿಲ್ಲ. ಎಷ್ಟೋ ಸಂದರ್ಭಗಳಲ್ಲಿ ಕೆಳದರ್ಜೆ ಔಷಧಿ ಕಂಟ್ರಾಕ್ಟರುಗಳು ಸರಬರಾಯಿ ಮಾಡಿ ರೋಗಿಗಳಿಗೆ ತೊಂದರೆಯಾಗಿದೆ. ಒಂದು ರೂಪಾಯಿಗೆ 120 ಮಾತ್ರೆಗಳಂತೆ ಸರಬರಾಯಿ ಮಾಡಲು ಒಪ್ಪಿದ್ದಾರೆಂದು ಮೊನ್ನೆ ಡಾಕ್ಟರೊಬ್ಬರು ಹೇಳಿದರು. ಇಷ್ಟು ಸುಲಭ ಬೆಲೆಗೆ ಸಿಕ್ಕುವ ಔಷಧಿ ಎಷ್ಟು ಪರಿಣಾಮಕಾರಿಯಾಗಬಹುದು ಎಂಬುದನ್ನು ವಿಚಾರಮಾಡಬೇಕು.

ಇನ್ನೊಂದು ವಿಷಯ. ಬೆಂಗಳೂರು ಮೈಸೂರು ಮುಂತಾದ ದೊಡ್ಡ ಪಟ್ಟಣಗಳಲ್ಲಿ ದೊಡ್ಡ ಆಸ್ಪತ್ರೆಗಳಲ್ಲಿ ಔಷಧಿಗಳನ್ನು ಪರೀಕ್ಷೆಮಾಡುವರೆಂದು ಕೇಳಿದ್ದೇನೆ. ಆ ಸ್ಥಳಗಳು ಸರಕಾರವಿರುವ ಜಾಗ ಮತ್ತು ಹೆಚ್ಚು ಪ್ರಭಾವಶಾಲಿಗಳು ಅಲ್ಲಿರುವರು. ಅಲ್ಲಿ ಪರೀಕ್ಷೆ ಮಾಡುವುದಕ್ಕೆ ಬದಲಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ತಜ್ಞರು ಆಗಾಗ್ಗೆ ಪರೀಕ್ಷೆ ಮಾಡಿ ಸರಿಯಾದ ಔಷಧಿ ಇಲ್ಲದಿದ್ದರೆ, ಮತ್ತು ಕಾಲ ಮೀರಿರುವುದನ್ನು ಉಪಯೋಗಿಸುತ್ತಿದ್ದರೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಎಂ. ಬಿ. ಬಿ. ಎಸ್. ಪಾಸು ಮಾಡಿ ಕೆಲಸವಿಲ್ಲದಿರುವ ಅನೇಕ ಡಾಕ್ಟರುಗಳಿದ್ದಾರೆ. ಅಲ್ಲದೆ ಅನೇಕ ಡಾಕ್ಟರುಗಳು 5 ವರ್ಷಗಳ ಸರ್ವಿಸ್ ಆಗುವುದಕ್ಕೆ ಎರಡು ದಿವಸ ಮುಂಚೆ ಕೆಲಸ ಬಿಟ್ಟು ಹೊರದೇಶಗಳಿಗೆ ಹೋಗುವರು, ಅಮೇರಿಕ, ಇಂಗ್ಲೆಂಡ್, ಕೆನಡ ಮುಂತಾದ ದೇಶಗಳಿಗೆ ಹೋಗಿ ಅಲ್ಲಿ ಕೆಲಸಕ್ಕೆ ಸೇರಿ ಲಕ್ಷಾಂತರ ರೂಪಾಯಿಗಳ ಸಂಪಾದನೆ ಮಾಡುವರು. ಅವರ ಜಾಗ ಇಲ್ಲಿ ಖಾಲಿ ಇರುವುದು, ಅವರ ಜಾಗಕ್ಕೆ ಯಾರನ್ನೂ ಹಾಕುವುದಿಲ್ಲ. ಇದರಿಂದ ಜನರಿಗೆ ತೊಂದರೆಯಾಗುವುದು. ಕೆಲವು ಸಂದರ್ಭಗಳಲ್ಲಿ ಪ್ರೈವೇಟ್ ಪ್ರಾಕ್ಟೀಸ್ ಮಾಡುವರು. ಒಂದುವೇಳೆ ಅವರಿಗೆ ಅನುಕೂಲವಾಗದಿದ್ದರೆ ಮತ್ತೆ ಕೆಲಸಕ್ಕೆ ಬರುವರು. ಕೆಲಸ ಬಿಟ್ಟು ಪರದೇಶಗಳಿಗೆ ಡಾಕ್ಟರುಗಳು ನಾಲ್ಕಾರು ವರ್ಷ ಹೋದಾಗ ಆಸ್ಪತ್ರೆಗಳಿಗೆ ಬೇರೆ ಡಾಕ್ಟರನ್ನು ಹಾಕದೆ ಆ ಜಾಗ ಖಾಲಿ ಇಟ್ಟಿರುವುದು ಸರಿಯಲ್ಲ. ಎಷ್ಟೋ ಸಂದರ್ಭಗಳಲ್ಲಿ ದಕ್ಷತೆಯಿಂದ ಕೆಲಸಮಾಡಿದೆ ರಿವಾರ್ಡ್ ಪಡೆಯಬಹುದೆಂಬ ಭಾವನೆಯಿಂದ ಕೆಲವರು ಒಂದು ರೀತಿ ವರ್ತಿಸುವರು. 5 ವರ್ಷ ಹೊರಗೆ ಹೋಗಿ ಬರುವವರಿಗೆ ಪ್ರಮೋಷನ್ ಕೊಡುವುದು ಸರಿಯಲ್ಲ.

ಫ್ಯಾಮಿಲಿ ಪ್ಲಾನಿಂಗ್ ಯೋಜನೆಯನ್ನು ಒಳ್ಳೆಯ ಉದ್ದೇಶದಿಂದ ಜಾರಿಗೆ ತರಲಾಗಿದೆ. ಜನಸಂಖ್ಯೆ ಬೆಳೆಯುವುದನ್ನು ತಡೆಗಟ್ಟಲು ಇದನ್ನು ಜಾರಿಗೆ ತಂದಿರುವರು. ಸಂತೋಷ. ಆದರೆ ಪ್ಲಾನಿಂಗ್ ನಡೆಯುವ ರೀತಿ ನೀತಿ ನೋಡಿದರೆ ಒಳ್ಳೆಯದಾಗುವಂತಿಲ್ಲ. ತಿಳುವಳಿಕೆ ಇರುವವರು ವಿದ್ಯಾವಂತರು, ವಿವೇಕಶಾಲಿಗಳು, ಸಮಾಜದಲ್ಲಿ ಒಳ್ಳೆಯ ಸ್ಥಾನಮಾನಗಳಲ್ಲಿರುವವರು ಫ್ಯಾಮಿಲಿ ಪ್ಲಾನಿಂಗ್ ಅನುಸರಿಸುವರು. ಅವರ ವಂಶ ಬೆಳೆಯುವುದು ಕಡಿಮೆಯಾಗಿದೆ. ಅವರಲ್ಲಿ ಮೂರು ಮಕ್ಕಳಿಗಿಂತ ಹೆಚ್ಚು ಪಡೆಯುವುದಿಲ್ಲ. ತಿಳುವಳಿಕೆ ಇಲ್ಲದಿರುವವರು, ಆರ್ಥಿಕವಾಗಿ ಹಿಂದುಳಿದಿರುವವರು, ಬಡವರು ಮುಂತಾದವರು ಯಾರಿರುವರೋ ಅವರಮೇಲೆ ಈ

(ಶ್ರೀ ಕೆ. ಎಚ್. ಹನುಮೇಗೌಡ)

ಯೋಜನೆ ಪರಿಣಾಮಕಾರಿಯಾಗಿಲ್ಲ. ಅವರ ಜನಸಂಖ್ಯೆ ಹೆಚ್ಚುತ್ತಿದೆ. ಇದರಿಂದ ಪ್ರಯೋಜನವಾಗಿಲ್ಲ.

ಇನ್ನೊಂದು ದೃಷ್ಟಿಯಿಂದ ಹೇಳುವುದಾದರೆ ಕೆಲವರು 4-4 ಜನರನ್ನು ಮದುವೆ ಮಾಡಿಕೊಂಡು ಹತ್ತಾರು ಮಕ್ಕಳನ್ನು ಪಡೆಯುತ್ತಿದ್ದಾರೆ. ಇದರಿಂದ ಕೆಲವರು ಫ್ಯಾಮಿಲಿ ಪ್ಲಾನಿಂಗ್‌ನ್ನು ಅನುಸರಿಸುತ್ತಾ ಇಲ್ಲ. ಇದರಿಂದ ಏನಾಗುತ್ತದೆ ಎಂದರೆ ಹತ್ತಾರು ವರ್ಷದಲ್ಲಿ ಜನಸಂಖ್ಯೆ ವಿಪರೀತ ಬೆಳೆಯಲು ಕಾರಣವಾಗುತ್ತದೆ. ಆದುದರಿಂದ ಸರ್ಕಾರದವರು ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ಗಮನ ಕೊಟ್ಟು, ಇದನ್ನು ಬೆಳೆಸಿಕೊಂಡು ಹೋಗುವುದಕ್ಕೆ ಅವಕಾಶ ಕೊಡಬಾರದು ಅಲ್ಲದೆ ದೇಶದ ಮುಂದಿನ ಭವಿಷ್ಯದ ದೃಷ್ಟಿಯಿಂದ ಈ ಫ್ಯಾಮಿಲಿ ಪ್ಲಾನಿಂಗ್ ಎಲ್ಲರಿಗೂ ಅನ್ವಯಿಸುವಂತೆ ಮಾಡಬೇಕು ಎಂದು ಹೇಳುತ್ತೇನೆ.

4-30 P.M.

ಇನ್ನು ಕೆಲವರು ಮೊದಲಿನಿಂದ ಕೊನೆಯುವರೆಗೂ ರೋಗಗ್ರಸ್ಥರಾಗಿರುತ್ತಾರೆ. ಅದು ವಂಶಪಾರಂಪರ್ಯವಾಗಿ ಮುಂದುವರೆದುಕೊಂಡು ಬರುವುದು ಸರಿಯಲ್ಲ ಅಂಥವರಿಗೆ ಸಂತಾನ ಹರಡುವಿಕೆಯನ್ನು ಖಡ್ಡಾಯವಾಗಿ ತಡೆಗಟ್ಟುವಂಥ ಕಾನೂನು ತರಬೇಕು ಎಂದು ಹೇಳುತ್ತೇನೆ. ಅವರ ಕಾಯಿಲೆ ಶರೀರದ ದುರ್ಬಲತೆಯಿಂದ ವಂಶಪಾರಂಪರ್ಯವಾಗಿ ಮುಂದುವರೆಯುತ್ತಾ ಹೋಗುವುದರಿಂದ ತಮ್ಮ ವಂಶಸ್ಥರಿಗೆ ಅಂದರೆ ಮಕ್ಕಳಿಗೆ ಬರದೇ ಇದ್ದ ಹಾಗೆ ನೋಡಿಕೊಳ್ಳುವುದಕ್ಕೆ ಸಂತಾನ ಹರಡುವಿಕೆಯನ್ನು ತಡೆಗಟ್ಟಬೇಕೆಂದು ಹೇಳುತ್ತೇನೆ.

ಇನ್ನು ಹಾಸನ ಕ್ಷೇತ್ರದ ಕಟ್ಟಾಯ ಗ್ರಾಮದಲ್ಲಿ ಮೈಸೂರು ಟೈಪ್ ಹೆಲ್ತ್ ಯೂನಿಟ್‌ನ್ನು ಕಟ್ಟಬೇಕೆಂದು ತಾಲ್ಲೂಕ್ ಬೋರ್ಡ್‌ನವರು ರೆಸಲ್ಯೂಷನ್ ಮಾಡಿದ್ದಾರೆ. ಮತ್ತು ಅದರ ವಂತಿಗೆಯನ್ನು 37 ಸಾವಿರ ಕಟ್ಟುತ್ತೇವೆ ಎಂದು ರೆಸಲ್ಯೂಷನ್ ಮಾಡಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ಆದರೆ ಕಳೆದ 3—4 ವರ್ಷದಿಂದಲೂ ಇನ್ನೂ ತೀರ್ಮಾನವಾಗಿಲ್ಲ. ಆದುದರಿಂದ ಆರೋಗ್ಯ ಮಂತ್ರಿಗಳು ಆದಷ್ಟು ಜಾಗ್ರತೆ ಈ ಕೆಲಸವನ್ನು ಮಾಡಿಕೊಡುತ್ತಾರೆಂದು ನಂಬುತ್ತೇನೆ. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† **Sri D. B. KALMANKAR** (Afzalpur).—Mr. Deputy Speaker Sir, While welcoming the Demand, I want to make some suggestions.

These days admissions to the Medical Colleges are going on and we see a rush of parents going to the Tahsildar and they are obtaining certificates to show that they are economically backward. According to requirements the annual income has to be shown as Rs. 1,200 and the certificates are being issued to such of those people who belong to the higher strata of society. False certificates are being issued. Secondly, according to the said rule, we can very well imagine whether the ordinary constable or peon can take the benefit of there rules. Because even a peon gets these days more than Rs. 1,200 per annum. Even a constable gets more than Rs. 1,200 per annum. That is how the benefit of this rule does not go to the poor who are really deserving. So if the Government wants that the really socially and economically backward people should benefit from the rule, it must not hesitate to bring the income stipulated to Rs. 2,400 or Rs. 3,000, because it is impossible for a man to survive unless he gets that much amount in these hard days.

Sri H. SIDDAVEERAPPA.—It is already too late. Applications are already received. 10th was the last date.

Sri D. B. KALMANKAR.—Any way, what I suggest is that after this Government came into power, it should have spent some time on this important issue.

Sri H. SIDDAVEERAPPA.—We will note it for future guidance.

Sri D. B. KALMANKAR.—I thank the Hon'ble Minister. I know that the Hon'ble Minister is very sincere and he wants that the benefits should go to the have-nots as he said at the time of call-attention notice reply.

Another suggestion I want to make is about the Hyderabad Karnatak Society Medical college which is run at Gulbarga. Sir, it has been said that the Government has given them directions that they should also follow the directions or instructions issued by Government. But so far, the fact is that they have not accepted the instructions issued by the Government, so that this year, no effective control could be exercised. Already admissions are being made and such transactions, shady transactions are going to the benefit of those who could afford to pay, not only capitation fee, but over and above, the illegal gratification that is being paid. It is in vogue. That is why the Hon'ble Members have signed the representation and if the Government is sincere that these colleges should not become business Houses and if they should exist for the benefit of the have-nots, then these colleges should be brought under effective control of the Government. I welcome that the Hon'ble Minister has said that there will be a 7 member governing body for the college and the Chairman should be the nominee of the Government If that is done, I think admisisions to these colleges could be effectively controlled and really deserving, poor and meritorious students will get the benefit. So it is high time that the Hon'ble Minister takes some effective steps. Because after all various colleges are registered under the Societies Act and they are governed by that Act. I am very happy that the Hon'ble Minister is determined to see that some control is brought about. I do not know how he is going to control the colleges which are under the Societies Act. So he will have to take some steps. For example the hospital that is at Gulbarga is made available to the Gulbarga Medical College for clinical purposes. If the management does not listen to the Government, they may not give the facility of the hospital. That is one way of bringing pressure on this medical college management if they are not going to follow the instructions and if it is not going to make any changes in their rules as required by the Hon'ble Minister. I want that the Hon'ble Minister should take effective steps to see that the admissions are given to deserving students.

Regarding family planning—of course Government is doing much. Much is still to be done. Secondly, we find in our society that there are some minority communities who are still to make their mind. I am very sorry that though they are educated and though they know the problem, still they hesitate to follow family planning. So this

(SRI D. B. KALMANKAR)

type of attitude on the part of some communities because of so called religious or dogmatic principles, our family planning drive is not effective. Today, what is happening is, those sections of the people which are following family planning programme are reducing their population and those who are not following are continuing multiplying and increasing their numbers. That is a thing which should be avoided. Further, I do not know what effective stpes the Government is going to take against such a tendency on the part of one or two communities. Today unless that is done explosion in population cannot be stopped. Planning must be an integrated planning. When we want integrated planning, control of population becomes an important consideration. Increase of population is always in geometrical proportion to the increase in production which is in arithmetical proportion, according to Malthusian theory. We find today that family planning is not adopted by one and all. There are so many mental reservations on the part of minority commuuities. They must also realise that India is their country, they are citizens of this country and that they must be loyal national policies. They must voluntarily come forward to practise family planning.

Hyderabad Karnatak area is still very backward. I wish the Minister for Health pays more attention to the needs of Hyderabad Karnatak area. There are no Health Centres in villages; there are no adequate supplies of medicine; there are no sufficient number of nurses. For instance, in Yadgir Taluk there is a village called Gadarkote. If a Primary Health Centre is given, the 15 villages which are scattered with no medical facilities, can be catered. Similarly, Saidapur is a railway station and business centre. Although 30 villages are attached to it, there is no Health Centre there. Such big places are neglected. Aland and Afzalpur, are taluk headquarters and the civil dispensaries located in these two taluk head quarters, should be upgraded with the provision of laboratory equipment and X-Ray Plant.

There is a Doctor working in Hosur Village, Soundathi Taluk, Belgaum District. It is no fault of his that he belongs to the Scheduled Caste. Every day he has to go from the Taluk Headquarter to Hosur Village because he is not able to find accommodation in the Village where he is posted. What efficiency can we expect from the Doctor if has to travel to and from the Taluk Headquarter? How can he work with this great handicap of residential accommodation? The caste Hindus of the Village are treating him as untouchable. His services are not being utilised because caste prejudices and feelings are still prevalent in rural areas. So Government should come forward to provide quarters wherever they are necessary and wherever doctors are posted. Secondly, doctors of Scheduled caste communities should be posted to such places where caste feelings are not so rampant.

I am very glad that the Hon'ble Minister for Health stated that he welcomed criticisms and constructive suggestions to improve the

Department. He has also the dynamism and capacity to tone up the efficiency and the usefulness of the Medical and Health Department. I am also very happy that he is endeavouring to speedily reorganise the Department so that it may be of greater service to the people. I wish him unparalleled success during his tenure of office.

With these few words I thank the Hon. Deputy Speaker and conclude my speech.

†ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ಮೊಟ್ಟಮೊದಲನೆಯದಾಗಿ ನಾನು ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ ಅನೇಕ ಜನ ಹಿರಿಯರು ಪ್ರಸ್ತಾಪ ಮಾಡಿರತಕ್ಕ ಕುಟುಂಬ ಯೋಜನೆಯಿಂದ ಪ್ರಾರಂಭ ಮಾಡಬೇಕೆಂದಿದ್ದೇನೆ. ಕುಟುಂಬ ಯೋಜನೆ ಎಂದು ಏನು ಪ್ರಚಾರ ಮಾಡಿದ್ದಾರೆ, ಮಾಡುತ್ತಿದ್ದಾರೆ ಅದು ಅನೇಕ ಕಡೆ ಹಳ್ಳಿಗಳಲ್ಲಿ ಯಶಸ್ವಿ ಕೂಡ ಆಗಿದೆ. ಇದರ ಬಗ್ಗೆ ನಮ್ಮ ಅಭಿಪ್ರಾಯ, ಇದು ಬಹಳ ವಿನಾಶದ ಹಾದಿಯಲ್ಲಿ ಹೋಗತಕ್ಕ ಒಂದು ಪ್ರಯೋಗ. 25 ವರ್ಷಗಳಿಂದ ಈ ರಾಷ್ಟ್ರವನ್ನು ತನ್ನ ಕಪಿ ಮುಷ್ಟಿಯಲ್ಲಿ ಇಟ್ಟುಕೊಂಡಿದ್ದ ಕಾಂಗ್ರೆಸ್, ಅದಾಗಲೀ, ಇದಾಗಲೀ, ಈ ರಾಷ್ಟ್ರದ ಸಂಪನ್ಮೂಲಗಳನ್ನು ರೂಡಿಸಿಕೊಳ್ಳದೆ, ಸಾಧನ ಉತ್ಪನ್ನವನ್ನು ಕುಂಠಿತಗೊಳಿಸಿರುವುದರಿಂದ ಹೆಚ್ಚಿನ ಜನರಿಗೆ ಅನ್ನ ಹಾಕತಕ್ಕ ಯೋಗ್ಯತೆ ಈ ಸರ್ಕಾರ ಪಡೆದಿಲ್ಲ. ತಮ್ಮ ಅಸಮರ್ಥತೆಯನ್ನು ಮುಚ್ಚಿಕೊಳ್ಳುವುದರ ಸಲುವಾಗಿ ಕುಟುಂಬ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಜಗತ್ತಿನಲ್ಲಿ ಯಾವುದೇ ರಾಷ್ಟ್ರದಲ್ಲಿ ಈ ಕುಟುಂಬ ಯೋಜನೆ ಇದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಇದೆ. ಅನೇಕ ಮುಸ್ಲಿಂ ರಾಷ್ಟ್ರಗಳಲ್ಲಿ ಕೂಡ ಇದೆ.

ಶ್ರೀ ಕೋಣಂದೂರು ಲಿಂಗಪ್ಪ.—ಕುಟುಂಬ ಯೋಜನೆಯ ಪ್ರಚಾರಕ್ಕಾಗಿ ಕೋಟ್ಯಂತರ ರೂಪಾಯಿ ಖರ್ಚು ಮಾಡುವುದು ಯಾವ ರಾಷ್ಟ್ರದಲ್ಲಿಯೂ ಇಲ್ಲ. ಆದರೆ ಈ ಹೊತ್ತು ಜನಸಂಖ್ಯೆ ನಮ್ಮ ರಾಷ್ಟ್ರದಲ್ಲಿ ಮಾತ್ರವಲ್ಲ ಜಗತ್ತಿನಲ್ಲಿ ಎಲ್ಲಡೆಯೂ ಏರುತ್ತಿದೆ. ರಾಷ್ಟ್ರದ ಸಂಪನ್ಮೂಲಗಳನ್ನು, ಸಾಧನ ಸಾಮಗ್ರಿಗಳನ್ನು ಅಭಿವೃದ್ಧಿ ಪಡಿಸಿ, ಬರತಕ್ಕಂಥ ಹೊಸ ಜನಾಂಗಕ್ಕೆ ಬೇಕಾದಂಥ ಆಹಾರ, ವಸತಿ, ಇತರ ಸೌಲಭ್ಯಗಳನ್ನು, ಉದ್ಯೋಗಗಳನ್ನು ಕಲ್ಪಿಸಿಕೊಡತಕ್ಕ ಕೆಲಸವನ್ನು ಸರ್ಕಾರ ಮಾಡಬೇಕಾಗಿದೆಯೇ ಹೊರತು ಜನಗಳಿಗೆ ಇಂಥ ದುರುಪದೇಶ ಮಾಡಬಾರದು. ಇದರಿಂದ ದೊಡ್ಡ ಹಾನಿ ನಮ್ಮ ರಾಷ್ಟ್ರಕ್ಕೆ ಭವಿಷ್ಯದಲ್ಲಿ ಉಂಟಾಗುತ್ತದೆ ಎನ್ನುವುದನ್ನು ನಾನು ತಮಗೆ ತಿಳಿಸುತ್ತೇನೆ.

ಸಮಾನ ವೈದ್ಯಕೀಯ ಸೌಲಭ್ಯ ಸಮಾಜವಾದವನ್ನು ಹೇಳುವವರು, ಸಮತಾ ಸಮಾಜವನ್ನು ತರುವವರು, ಸಮಾನ ವೈದ್ಯಕೀಯ ಸೌಲಭ್ಯ ತರುವುದಕ್ಕೆ ಏನಾದರೂ ಯೋಜನೆ ಹಾಕಿದ್ದೀರಾ ? ವಿಕ್ಟೋರಿಯಾ ಆಸ್ಪತ್ರೆ ಅಥವಾ ಯಾವುದೇ ಸರ್ಕಾರಿ ಆಸ್ಪತ್ರೆಗೆ ಹೋಗಬೇಕಾದರೆ ಬಡ ಬೋರೇಗೌಡ. ಬಡವರಿಗೆ ಅಲ್ಲಿ. ಶ್ರೀಮಂತರಿಗೆ ಬೇರೆ ನರ್ಸರಿ ಹೋಂಗಳಿವೆ. ಸರ್ಕಾರಿ ಆಸ್ಪತ್ರೆಯಲ್ಲಿಯೂ ಅವರಿಗೆ ಸ್ಪೆಷಲ್ ವಾರ್ಡುಗಳಿವೆ. ನಮಗೂ ಇವೆ. ಆದರೆ ನಮ್ಮನ್ನು ಚುನಾಯಿಸಿ ಕಳುಹಿಸಿರುವವರಿಗೆ ಏನಿದೆ ? ಈಗಿನ ವೈದ್ಯಕೀಯ ಸೌಲಭ್ಯದ ಪದ್ಧತಿ ಏನಿದೆ ಅದನ್ನು ನಿರ್ಮೂಲನ ಮಾಡುವವರೆಗೆ ಜನರಿಗೆ ನಿಜವಾದ ಸಮಾಜವಾದವನ್ನು ತರುತ್ತೇವೆನ್ನುವ ಒಂದು ಭರವಸೆಯನ್ನು ಹುಟ್ಟಿಸಲಿಕ್ಕೆ ನಿಮ್ಮಿಂದ ಸಾಧ್ಯವಿಲ್ಲ. ಈಗ ವಿಶೇಷವಾಗಿ ಶ್ರೀಮಂತರ ಸಲುವಾಗಿ, ಅಥವಾ ಒಂದು ಮಟ್ಟದ, ಒಂದು ವರ್ಗದ ಜನರ ಸಲುವಾಗಿ ಏನು ನರ್ಸಿಂಗ್ ಹೋಮ್ಸ್, ಪ್ರೈವೇಟ್ ಪ್ರಾಕ್ಟೀಷನರ್ಸ್ ಇದ್ದಾರೆ, ನಿಮ್ಮ ಸರ್ಕಾರಿ ಆಸ್ಪತ್ರೆಗಳಲ್ಲಿ ಏನು ಸ್ಪೆಷಲ್ ವಾರ್ಡುಗಳೆಂದಿವೆ, ಅವುಗಳನ್ನು ತೆಗೆದು ಎಲ್ಲರಿಗೂ ಸಮಾನವಾದ ವೈದ್ಯಕೀಯ ಸೌಲಭ್ಯ ಕೊಡತಕ್ಕ ಯೋಜನೆಯನ್ನು ಜಾರಿಗೆ ತರಬೇಕು. ಆಗ ಸಮಾನತೆಯನ್ನು ಸಾಧಿಸುವುದಕ್ಕೆ ಒಂದು ಹೆಜ್ಜೆ ಇಟ್ಟಂತಾದೀತು. ಅಲ್ಲಿಯವರೆಗೂ ಸಮಾಜವಾದವನ್ನು ಕೇವಲ ಸರ್ಕಾರಿ ಸಮಾಜವಾದಕ್ಕಾಗಿ ಹೇಳುತ್ತೀರೇ ಹೊರತು ನಿಜವಾದ ಸಮಾಜವಾದವನ್ನು ಹೇಳುವವರಲ್ಲ ಎನ್ನುವ ಮಾತನ್ನು ನಾನು ಸುಸ್ಪಷ್ಟವಾಗಿ ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ.

ಶ್ರೀ ಆರ್. ಗುಂಡೂರಾವ್.—ಬಿಹಾರದಲ್ಲಿ ನಿಮ್ಮವರೇ ಮುಖ್ಯ ಮಂತ್ರಿಗಳಾಗಿದ್ದರು. ಅಲ್ಲಿ ಈ ರೀತಿ ಏನಾದರೂ ಮಾಡಿದ್ದಾರೆಯೇ ?

ಶ್ರೀ ಕೋಣಂದೂರು ಲಿಂಗಪ್ಪ.—ಮಾಡಿದ್ದಾರೆ. ನೀವು ಇತ್ತ ಕಡೆಗೆ ಬನ್ನಿ, ನಾವು ಆ ಕಡೆ ಕೂತು ಮಾಡುತ್ತೇವೆ.

(ಶ್ರೀ ಕೋಣಂದೂರು ಲಿಂಗಪ್ಪ)

ಹೆಲ್ತ್ ಯೂನಿಟ್ಸ್ ಮತ್ತು ಹೆಲ್ತ್ ಸೆಂಟರ್ಸ್ ಎಂದು ಮಾಡಿದ್ದಾರೆ. ಹೆಲ್ತ್ ಸೆಂಟರುಗಳಲ್ಲಿ ಮೆಡಿಕಲ್ ಆಫೀಸರುಗಳನ್ನು ನೇಮಕ ಮಾಡುತ್ತಾರೆ, ಅವರು ಡಾಕ್ಟರಿರುತ್ತಾರೆ ಅವರ ಕೈಕೆಳಗೆ 30-40 ಜನ ಸೂಪರ್‌ವೈಸರ್ಸ್, ಆಯಾಗಳು, ದಾದಿಗಳು ಇರುತ್ತಾರೆ. ಅವರೆಲ್ಲ ಹಳ್ಳಿಗಳಲ್ಲಿ ಪ್ರವಾಸ ಮಾಡಬೇಕಾಗಿರುತ್ತದೆ. ಇವರು ತಾಲ್ಲೂಕಾಮಳೆ ತಿರುಗಾಡುವಾಗ ಮೆಡಿಕಲ್ ಆಫೀಸರ್ ಆದವರು ಅವರ ಕೆಲಸಕಾರ್ಯಗಳನ್ನು ಸೂಪರ್‌ವೈಸ್ ಮಾಡಬೇಕಾಗುತ್ತದೆ. ಹೀಗೆ ಮೆಡಿಕಲ್ ಆಫೀಸರಾದವರು ಗ್ರಾಮಾಂತರ ಪ್ರದೇಶದಲ್ಲಿ ತಿರುಗಾಡುತ್ತಿದ್ದರೆ ಆಸ್ಪತ್ರೆಯಲ್ಲಿ ಕೆಲಸ ಮಾಡುವುದಕ್ಕೆ ಸಮಯವೆಲ್ಲಿರುತ್ತದೆ ? ಇದನ್ನು ಸ್ವಲ್ಪ ವಿಚಾರ ಮಾಡಬೇಕು. ಈ ಪದ್ಧತಿಯನ್ನು ವಿಶೇಷವಾಗಿ ಪರಿಗಣಿಸಿ, ಅಂಥ ಹೆಲ್ತ್ ಸೆಂಟರುಗಳ ಮೇಲೆ ಸೂಪರ್‌ವೈಸ್ ಮಾಡುವುದಕ್ಕೆ ಮೇಲ್ವಿಚಾರಣೆ ಮಾಡುವುದಕ್ಕೆ, ಸೂಕ್ತವಾದ ಸಲಹೆಗಳನ್ನು ಕೊಡುವುದಕ್ಕೆ ಒಂದು ವಿಶೇಷವಾದ ಹೊಸ ಹುದ್ದೆಯನ್ನು ನಿರ್ಮಾಣಮಾಡಿ ಒಬ್ಬ ವೈದ್ಯರನ್ನು ನೇಮಿಸಬೇಕು.

ಈಗ ಸ್ಥಳೀಯ ಮೆಡಿಕಲ್ ಆಫೀಸರ್ ಇರುತ್ತಾರೆ, ಅವರಿಗೆ ಸ್ವಂತ ಕೆಲಸ ಜಾಸ್ತಿ ಇರುವುದರಿಂದ ಆಸ್ಪತ್ರೆಗೆ ಸಂಬಂಧಪಟ್ಟ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. 250 ರೂಪಾಯಿ ಸಂಬಳ ಕೊಟ್ಟು ಹೆಲ್ತ್ ಯುನಿಟ್‌ಗೆ ಡಾಕ್ಟರುಗಳನ್ನು ನೇಮಕಮಾಡಿ ಗ್ರಾಮಾಂತರ ಪ್ರದೇಶಗಳಿಗೆ ಕಳುಹಿಸುವ ಒಂದು ಯೋಜನೆ ಮಾಡಿದ್ದೀರಿ. ಅದರ ಬಗ್ಗೆ ಚಿಕ್ಕಮಗಳೂರು ಮತ್ತು ಶಿವಮೊಗ್ಗ ಈ ಎರಡು ಜಿಲ್ಲೆಗಳನ್ನು ಕೈಬಿಟ್ಟಿದ್ದೀರಿ. ಇದನ್ನು ಕೇಳಿದರೆ ಜನಸಂಖ್ಯೆ ಆಧಾರ ಹೇಳುತ್ತೀರಿ.

ಶ್ರೀ ಎಚ್. ಸಿದ್ಧವೀರಪ್ಪ.—ಅದನ್ನು ನೋಡುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಮಲೆನಾಡಿನಲ್ಲಿ ಒಂದು ವಿಶೇಷವಾದಂಥ ಪರಿಸ್ಥಿತಿ ಇದೆ. ಒಂದು ಊರಿಗೆ ಒಂದೆರಡು ಮನೆಗಳು ಇರುವುದು ತಮಗೆ ಗೊತ್ತಿದೆ. ಅಲ್ಲಿ ಜನಸಂಖ್ಯೆಯೂ ವಿರಳವಾಗಿ ಇರುತ್ತದೆ. ಅಂಥ ಕಡೆ ತಾವು ವಿಶೇಷ ಗಮನಕೊಟ್ಟು ಅಲ್ಲಿಗೆ ಡಾಕ್ಟರುಗಳನ್ನು ಹೆಚ್ಚಾಗಿ ಕೊಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಆಯುರ್ವೇದ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಈ ಆಯುರ್ವೇದ ನಮ್ಮ ಭಾರತದಲ್ಲಿ ಅನೂಚಾನವಾಗಿ, ಅನಾದಿಕಾಲದಿಂದ ಬಂದಿರತಕ್ಕ ವೈದ್ಯ ಪದ್ಧತಿ. ಅದರ ಅಭಿವೃದ್ಧಿಗೆ, ಅದರ ಪುನರ್ ಜೀವನಕ್ಕೆ ತಾವು ವಿಶೇಷ ಆಸಕ್ತಿ ವಹಿಸಬೇಕು. ಈ ಆಯುರ್ವೇದದ ಕಾಲೇಜುಗಳನ್ನು ಹೆಚ್ಚಿಗೆ ಮಾಡಿದರೂ ತೊಂದರೆ ಇಲ್ಲ. ಇನ್ನು ಮೆಡಿಕಲ್ ಕಾಲೇಜುಗಳ ಬಗ್ಗೆ ಹೇಳಬೇಕಾಗಿಲ್ಲ. ನನ್ನ ಸ್ನೇಹಿತರು ಇವುಗಳ ಬಗ್ಗೆ ಸಾಕಷ್ಟು ಹೇಳಿದ್ದಾರೆ. ಮೊದಲು ಈ ಪ್ರೈವೇಟ್ ಮೆಡಿಕಲ್ ಕಾಲೇಜುಗಳನ್ನು ಮುಚ್ಚಬೇಕು. ಏಕೆಂದರೆ ಅಲ್ಲಿ ಕ್ಯಾಪಿಟೇಷನ್ ಫೀ ಏನು ತೆಗೆದುಕೊಳ್ಳುತ್ತಾರೆ, ಅದನ್ನು ಲೆಕ್ಕ ಬರೆಯದೆ ಲೂಟಿ ಹೊಡೆದು ಬಿಟ್ಟಿದ್ದಾರೆ. ಇವತ್ತು ಅದರ ಲೆಕ್ಕ ಸಿಗುತ್ತಾ ಇಲ್ಲ. ಆದ್ದರಿಂದ ಸರ್ಕಾರದವರು ತಕ್ಷಣ ಈ ಮೆಡಿಕಲ್ ಕಾಲೇಜುಗಳನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕು. ಅದರ ಮ್ಯಾನೇಜಿಂಗ್ ಕಮಿಟಿಗಳಲ್ಲಿ ಸ್ಥಳೀಯ ಎಂ. ಎಲ್. ಎ. ಅಥವಾ ಎಂ. ಎಲ್. ಸಿ. ಅವರು ಯಾರು ಇರುತ್ತಾರೆ. ಅಂಥವರಿಗೆ ಸ್ಥಾನವನ್ನು ಕೊಡುವುದಕ್ಕೆ ಏರ್ಪಾಡು ಮಾಡಬೇಕು.

ಇನ್ನು ಎಂ. ಡಿ. ಮತ್ತು ಎಂ. ಎಸ್. ಪರೀಕ್ಷೆಗಳ ವಿಷಯ. ಬಿ. ಫಾರ್ಮ ಶಿಕ್ಷಣದ ಬಗ್ಗೆ ತಾರತಮ್ಯ ನಡೆಯುತ್ತಾ ಇದೆ. ತಾವು ಇದರ ಬಗ್ಗೆ ಯೋಚನೆ ಮಾಡಬೇಕು. ಅನಂತರ ಟ್ರಾನ್ಸ್‌ಫರ್ ಬಗ್ಗೆ ನಮ್ಮನ್ನು ಡಾಕ್ಟರುಗಳ ಒತ್ತಡದಿಂದ ಪಾರು ಮಾಡಿ. ಸಂಬಂಧಪಟ್ಟ ಅಧಿಕಾರಿಗಳಿಗೆ ಅರ್ಜಿ ಬಂದರೆ ಅವರು ತಕ್ಷಣ ಕ್ರಮ ತೆಗೆದುಕೊಂಡರೆ, ಈ ಪರಿಸ್ಥಿತಿ ಸುಧಾರಿಸುತ್ತದೆ ಎಂದು ವಿನಂತಿಮಾಡಿಕೊಳ್ಳುತ್ತೇನೆ.

ಬಹಳ ಮುಖ್ಯವಾದ ವಿಷಯ ಎಂದರೆ, ತಾವು ಮೆಡಿಸನ್ ಕೊಳ್ಳುವುದು. ಈ ರೇಟ್ ಕಾಂಟ್ರ್ಯಾಕ್ಟ್ ಲಿಸ್ಟ್ ಏನು ಇದೆ, ಅದನ್ನು ತಾವು ಪುನರ್ ವಿಮರ್ಶೆಮಾಡಬೇಕು. ರೇಟ್ ಕಾಂಟ್ರ್ಯಾಕ್ಟ್ ಲಿಸ್ಟ್‌ನಲ್ಲಿ ಇರತಕ್ಕವರಿಗೂ ಮತ್ತು ಕೊಳ್ಳತಕ್ಕವರಿಗೂ ಒಂದು ವಿಶೇಷ ಆಂತರಿಕವಾದ ಸಂಬಂಧ ಇದೆ. ಇದರಲ್ಲಿ ಲಕ್ಷಗಟ್ಟಲೆ ದುಡ್ಡನ್ನು ದೋಚಿದ್ದಾರೆ ಎಂದು ಜನ ಹೇಳುತ್ತಿದ್ದಾರೆ. ಅನೇಕ ಸಾರಿ ಬೂದಿ ತುಂಬಿದ ಕ್ಯಾಪ್ಸಲ್ ಸಪ್ಲೈ ಮಾಡಿರುವುದು ನಡೆದಿದೆ. ಆದ್ದರಿಂದ ಡಿ.ಎಚ್.ಎಸ್.ರಿಟೈರ್ ಆಗಿರಲೀ, ಏನೇ ಆಗಿರಲಿ ಅವರ ಮತ್ತು ಡಿ.ಎಚ್.ಓ.ಗಳ ಆಸ್ತಿ ಪಾಸ್ತಿ ತನಿಖೆ

ಜೊತೆಗೆ ಕಾಂಟ್ರ್ಯಾಕ್ಟ್ ಮಾಡಿಕೊಂಡು ಜನಗಳಿಗೆ ಕೊಡುವ ಔಷಧಿ ಬಗ್ಗೆ ಮೋಸ ಮಾಡಿದ್ದಾರೆ. ಆದ್ದರಿಂದ ಇವರ ಆಸ್ತಿಪಾಸ್ತಿಗಳು ತನಿಖೆ ಆಗಬೇಕು. ಒಳ್ಳೆಯ ಔಷಧಿಗಳನ್ನು ಜನರಿಗೆ ದೊರಕಿಸಿ ಕೊಡುವುದಕ್ಕೆ ಹೆಚ್ಚಿನ ಸಹಾಯ ಮಾಡಬೇಕು ಎಂದು ಅಧ್ಯಕ್ಷರ ಮೂಲಕ ತಮ್ಮನ್ನು ಕೇಳಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† Sri BAPUR RAO ANAND RAO (Basava Kalyan).—Sir, I rise to support the Health Demand and put forth some suggestions to the Hon. Minister. I appeal to the House and to the Government that as Bidar is declared a backward area I want that more funds should be made available to it. At present, the Government hospital there is having only hundred beds. You may compare Bidar District with any other district of our State. So, I appeal to the Hon. Minister that at least 200 beds should be made available.

About supply of medicines that is also inadequate ; it is also not regular. I therefore request that due care should be taken to send adequate quantities while despatching medicines to the hospitals. Certain instances were brought to my notice that even the supply made by the Director of Health Services is not received intact. This may also be noted and I hope the Hon. Minister will issue proper instructions to the officers concerned in this behalf.

About the Taluk Dispensary at Basava Kalyan, no building has been provided; it is running in the same old building of the erstwhile Hyderabad State. A hospital should be constructed at Basava Kalyan proper. We say much about Basava Kalyan being the place of Lord Basaveswara but in respect of development nothing is done there. I appeal to the Hon. Minister to construct an hospital there with adequate beds and with all modern facilities in order to benefit the people of that area.

Speaking about Health Centres, the people of Hunsur have deposited Rs. 12,500 for a health centre long ago but still their demand has not been fulfilled. I appeal to the Hon. Minister to recommend the immediate establishment of a health centre there. As regards the health centre at Gajpur no doctor has been posted there since a long time and it is neglected. I appeal to the Hon. Minister that wherever vacant posts are there in any part of Bidar District, doctors may be immediately posted there.

Regarding National Leprosy Control programme, at Humnabad a centre has been established and it is a scheme financed by the Government of India. Till today the doctor in this centre has not received any vehicle to go round the sub-centres. There are about 30 Sub-centres and the doctor in the Humnabad centre is idling his time. In that place there is no bus arrangement also and the doctor is helpless. The Government has posted a doctor but he has not been given other facilities. He is sitting there corresponding with the Director and the Government. This matter should be looked into.

(SRI BAPU RAO ANANDA RAO)

5-00 P.M.

More attention should be paid to rural parts particularly in regard to health facilities. People are living in remote villages and they should be provided with health needs. More number of dispensaries should be established in rural parts so that people can be benefited.

Regarding Indian medicine, Government is taking keen interest in encouraging the Ayurvedic and Unani medicines. I am happy that the present Health Minister is taking personal interest in the matter to see this type of Indian medicine is encouraged at all costs.

As we all know in Bidar some minority languages are spoken and students while studying have to approach certain colleges other than in our State. Therefore such students if they are residents of our State should be made eligible to get admission in the medical colleges even though they go to adjoining States. If the general rules do not permit, the Government should make suitable changes and modify the rules or make some provision in this behalf so that needy persons may get admission and minority language speaking persons are not denied chances to have higher education.

With these words I support the demand and thank the Chair for giving me this opportunity.

† ಶ್ರೀ ಮಾಣಿಕ್‌ರಾವ್ ಆರ್. ಪುರೇಕರ್ (ಬೀದರ್).—ಉಪಾಧ್ಯಕ್ಷರೇ, ಇವೊತ್ತಿನದಿವಸ ಹೆಲ್ತ್ ಮಿನಿಸ್ಟರ್‌ರವರು ಡಿಮ್ಯಾಂಡ್ ಏನು ಇಟ್ಟಿದ್ದಾರೆ ಅದಕ್ಕೆ ನಾನು ಸಪೋರ್ಟ್ ಮಾಡುತ್ತಾ ಬೀದರ್ ಜಿಲ್ಲೆಯ ಬಗ್ಗೆ ಕೆಲವು ಸಜೆಷನ್ಸ್ ಕೊಡುತ್ತೇನೆ. ಬೀದರ್ ಬಹಳ ಹಿಂದುಳಿದ ಜಿಲ್ಲೆ ಇದೆ. ಈ ಜಿಲ್ಲೆಯೊಳಗೆ ಡಿಸ್ಟ್ರಿಕ್ಟ್ ಹಾಸ್ಪಿಟಲ್ ಇದೆ. ಈ ಹಾಸ್ಪಿಟಲ್‌ನಲ್ಲಿ 75 ಬೆಡ್ಸ್ ಇವೆ. ರೀ ಆರ್ಗನೈಜೇಷನ್ ಆಗುವುದಕ್ಕೆ ಮೊದಲು ಹೈದರಾಬಾದ್ ಸರ್ಕಾರದ ಕಾಲದೊಳಗೆ ಸ್ಯಾಂಕ್ಷನ್ ಆದ ಬೆಡ್ಸ್‌ನ್ನು ಇಲ್ಲಿಯವರೆಗೂ ಕೊಟ್ಟಿಲ್ಲ. ಮತ್ತು ಅಲ್ಲಿ ಆರ್.ಎಂ.ಓ. ಸಿವಿಲ್ ಸರ್ಜನ್ಸ್ ಮತ್ತು ಲೇಡಿ ಡಾಕ್ಟರ್ ಈ ಮೂರು ಡಾಕ್ಟರ್ಸ್ ಬಿಟ್ಟರೆ 4ನೇ ಡಾಕ್ಟರು ಇಲ್ಲಿಯವರೆಗೆ ಇಲ್ಲ ಅಲ್ಲಿ ಬೇಕಾದಷ್ಟು ಪೋಸ್ಟ್ಸ್ ವೇಕೆಂಟ್ ಇವೆ. ಲೇಡಿ ಡಾಕ್ಟರ್ ಅಪಾಯಿಂಟ್ ಮಾಡಿದರೆ ಅವರು ಬಂದು ಒಂದು ದಿವಸ ಚಾರ್ಜ್ ತೆಗೆದುಕೊಂಡು ಎರಡನೇ ದಿವಸ ಬೆಂಗಳೂರಿಗೆ ಬಂದು ಬಿಡುತ್ತಾರೆ. ಬೆಂಗಳೂರಿನಲ್ಲಿ ಮಿನಿಸ್ಟರ್ ಲೆವೆಲ್‌ನಲ್ಲಾಗಲಿ, ಸೆಕ್ರೆಟ್ರಿಯವರ ಲೆವಲ್‌ನಲ್ಲಾಗಲಿ, ಡೈರೆಕ್ಟರ್ ಲೆವೆಲ್‌ನಲ್ಲಾಗಲಿ, ಟ್ರಾನ್ಸ್‌ಫರ್ ಪ್ರಯತ್ನಮಾಡಿಕೊಂಡು ಟ್ರಾನ್ಸ್‌ಫರ್ ಮಾಡಿಸಿಕೊಳ್ಳುತ್ತಾರೆ. ಇದರ ಬಗ್ಗೆ ನನ್ನದು ಒಂದು ಸಜೆಷನ್ ಏನು ಇದೆ ಎಂದರೆ, ಯಾವರೀತಿ ಟ್ರಾನ್ಸ್‌ಫರ್ ನಮ್ಮ ಏರಿಯಾಕ್ಕೆ ಮಾಡುತ್ತೀರಿ, ಆ ಟ್ರಾನ್ಸ್‌ಫರ್ ಕ್ಯಾನ್ಸಲ್ ಮಾಡಬಾರದು. ಡಾಕ್ಟರು ಎಂ.ಬಿ.ಬಿ ಎಸ್. ಕೋರ್ಸ್ ಕಂಪ್ಲೀಟ್ ಮಾಡಿಕೊಂಡು ಹೌಸ್ ಸರ್ಜನ್ ಕಂಪ್ಲೀಟ್ ಮಾಡಿದನಂತರ ಸರ್ವೀಸ್‌ಗೆ ಬರುತ್ತಾರೆ. ಮಹಾರಾಷ್ಟ್ರ ಮತ್ತು ಆಂಧ್ರ ಗೌರ್ನಮೆಂಟ್‌ಗಳಲ್ಲಿ ಏನು ಇದೆ ಎಂದರೆ, 2 ವರ್ಷ ಹೆಲ್ತ್ ಯೂನಿಟ್ಸ್‌ನಲ್ಲಿ ಸರ್ವೀಸ್ ಮಾಡಿದನಂತರ ಎಂ.ಬಿ.ಬಿ.ಎಸ್ ಸರ್ಟಿಫಿಕೇಟ್ ಕೊಡುತ್ತಾರೆ. 2 ವರ್ಷ ಹೆಲ್ತ್ ಯೂನಿಟ್‌ನಲ್ಲಿ ಕೆಲಸಮಾಡದಿದ್ದರೆ ಸರ್ಟಿಫಿಕೇಟ್ ಕೊಡುವುದಿಲ್ಲ ಎಂದು ಕಡ್ಡಾಯವಾಗಿ ಅವರ ಮೇಲೆ ಒತ್ತಾಯ ತರದ ಹೊರತು ಡಾಕ್ಟರುಗಳು ಹಳ್ಳಿಗಳಿಗೆ ಬರುವುದಕ್ಕೆ ಸಾಧ್ಯವಿಲ್ಲ. ಹೆಲ್ತ್ ಯೂನಿಟ್ಸ್ ಎಷ್ಟು ಇದೆ ಆದರಲ್ಲಿ ಬಹಳಮಟ್ಟಿಗೆ ಡಾಕ್ಟರುಗಳು ಇಲ್ಲ. ಎಷ್ಟೋ ಹೆಲ್ತ್ ಯೂನಿಟ್ಸ್ ಕಾಂಪೌಂಡರುಗಳ ಮೇಲೆ ನಡೆಯುತ್ತಿದೆ. ಯಾವ ಡಾಕ್ಟರನ್ನು ಪೋಸ್ಟ್ ಮಾಡಿದರೂ ಅವರು 2 ದಿವಸ ಇದ್ದು ಮೂರನೇ ದಿವಸ ಅಲ್ಲಿಂದ ಬರುತ್ತಾರೆ. ಅದಕ್ಕೋಸ್ಕರ ಎಲ್ಲಿಯವರೆಗೆ ಹೆಲ್ತ್ ಯೂನಿಟ್‌ಗಳಲ್ಲಿ ಕೆಲಸಮಾಡಬೇಕೆಂದು ಒತ್ತಾಯ ಮಾಡುವುದಿಲ್ಲವೋ ಅಲ್ಲಿಯವರೆಗೆ ಈ ಪ್ರಶ್ನೆ ಬಗೆಹರಿಯುವುದಿಲ್ಲ. ಬೀದರ್ ಪ್ರಾಪರ್‌ನಲ್ಲಿ 75 ಬೆಡ್ಸ್ ಹಾಸ್ಪಿಟಲ್ ಇದೆ. ಅಲ್ಲಿ ಮೆಟರ್ನಿಟಿ ವಾರ್ಡ್ ಇಲ್ಲ. ಹೆಣ್ಣುಮಕ್ಕಳಿಗೆ ಹೆರಿಗೆ ಆದ ತಕ್ಷಣ ಅಲ್ಲಿ ಕೆಳಗೆ ಮಲಗಿಸುತ್ತಾರೆ. ಅದು

ತಾಲ್ಲೋಕು ಹಾಸ್ಪಿಟಲ್ ಆಗಿದೆ. ಮತ್ತು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್ ಹಾಸ್ಪಿಟಲ್ ಕೂಡ ಆಗಿದೆ. ಅಲ್ಲಿ ಔಟ್ ಪೇಷಂಟ್ ಒಂದು ದಿವಸಕ್ಕೆ 1000 ದಿಂದ 1300ರ ವರೆಗೆ ಬರುತ್ತಾರೆ. ಔಟ್ ಪೇಷಂಟ್ ನೋಡಿಕೊಳ್ಳುವುದಕ್ಕೆ ಡಾಕ್ಟರುಗಳು ಇಲ್ಲ. ಅಲ್ಲಿ ಎಂ.ಪಿ.ಸಿ.ಸಿ. ಮೀಟಿಂಗ್ ಆದ ಕಾಲಕ್ಕೆ, ಶ್ರೀ ವೀರೇಂದ್ರ ಪಾಟೀಲರು 250 ಬೆಡ್ಸ್‌ನ ದೊಡ್ಡ ಹಾಸ್ಪಿಟಲ್ ಕೊಡುತ್ತೇವೆ, ಜಾಗದ ಸೌಕರ್ಯ ಮಾಡಿಕೊಡಿ ಎಂದು ಹೇಳಿದ್ದಕ್ಕೆ ಮುನಿಸಿಪಲ್ ಲಿಮಿಟ್ಸ್‌ನಲ್ಲಿ ಅನುಕೂಲ ಮಾಡಿಕೊಟ್ಟಿದ್ದೇವೆ, ಇಲ್ಲಿಯವರೆಗೆ ಆ ಪ್ರೊಪೋಸಲ್ ಎಲ್ಲಿ ಇದೆಯೋ ಕಾಣಲಿಲ್ಲ. ನಂತರ ಹೋದ ವರ್ಷ 100 ಬೆಡ್ ಅಡಿಷನಲ್ ಸೌಕರ್ಯ ಕೊಡುತ್ತೇವೆ ಅದನ್ನು ಸ್ಯಾಂಕ್ಷನ್ ಮಾಡುತ್ತೇವೆಂದು ಹೇಳಿದರು. ಮತ್ತೆ ಮೇ ತಿಂಗಳಲ್ಲಿ ಫಂಡ್ಸ್ ಇರಲಿಲ್ಲ, 100 ಬೆಡ್ಸ್ ಕೊಡಲಿಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು. ಮತ್ತೆ ಹೆಲ್ತ್ ಮಿನಿಷ್ಟರು 100 ಬೆಡ್ಸ್ ಎಕ್ಸ್‌ಟೆನ್‌ಷನ್ ಮಾಡುವ ಪ್ರೊಪೋಸಲ್ ಕನ್ಸಿಡರ್ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಇದನ್ನು ಕನ್ಸಿಡರ್ ಮಾಡಿ ಹೆಚ್ಚು ಸೌಕರ್ಯ ಕೊಡಲಾರದೆ ಇದ್ದರೂ ಕನಿಷ್ಟಪಕ್ಷ 100 ಬೆಡ್ಸ್ ಸ್ಯಾಂಕ್ಷನ್ ಮಾಡಿ ಔಷಧ ಉಪಕರಣ ಕೊಟ್ಟರೆ ಸ್ವಲ್ಪ ಅನುಕೂಲವಾಗುತ್ತದೆ ಎಂದು ಅಧ್ಯಕ್ಷರ ಮೂಲಕ ಬೇಡಿಕೊಳ್ಳುತ್ತೇನೆ. ಎಕ್ಸ್‌ರೇ ಪ್ಲಾಂಟ್ ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ರೀತಿಯಿಂದ ಕೆಲಸ ಮಾಡುತ್ತಿಲ್ಲ. 3 ತಿಂಗಳಲ್ಲಿ ಮೂರು ನಾಲ್ಕು ದಿವಸಗಳು ಮಾತ್ರ ಕೆಲಸ ಮಾಡುತ್ತದೆ. ಯಾವಾಗ ಕೇಳಿದರೂ ಫಿಲ್ಮ್ಸ್ ಇಲ್ಲ ಎಂದು ಹೇಳುತ್ತಾರೆ. 15 ರೂಪಾಯಿ ಚಾರ್ಜು ಕೊಟ್ಟರೂ ಫಿಲ್ಮ್ಸ್ ಸಿಗುವುದಿಲ್ಲ. ಇದರ ಕಡೆಗೆ ಸರ್ಕಾರದವರು ಗಮನ ಕೊಟ್ಟು ಸಾಕಷ್ಟು ಫಿಲ್ಮ್ಸ್ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಸೆಂಟ್ರಲ್ ಫ್ಯಾಮಿಲಿ ಪ್ಲಾನಿಂಗ್ ಸ್ಕೀಮ್ ಸ್ಯಾಂಕ್ಷನ್ ಆಗಿದೆ. ಸ್ಯಾಂಕ್ಷನ್ ಆಗಿ ಒಂದು ವರ್ಷವಾದರೂ ಇನ್ನೂ ಇಂಪ್ಲಿಮೆಂಟ್ ಆಗಿಲ್ಲ. ಇದಕ್ಕೆ ಬೇಕಾದ ಕಟ್ಟಡವನ್ನು ಸಹ ಕಟ್ಟಿಸಿಲ್ಲ. ಅದೇ ರೀತಿ ಡಿಸ್ಟ್ರಿಕ್ಟ್ ಟಿ.ಬಿ. ಸೆಂಟರ್ ಸ್ಯಾಂಕ್ಷನ್ ಆಗಿದೆ. ಅದೂ ಕೂಡ ಇಂಪ್ಲಿಮೆಂಟ್ ಆಗಿಲ್ಲ. ನಮ್ಮ ಜಿಲ್ಲೆ ಹಿಂದುಳಿದ ಜಿಲ್ಲೆಯಾಗಿರುವುದರಿಂದ, ಸರ್ಕಾರದಿಂದ ಯಾವ ಯಾವ ಸ್ಕೀಮ್‌ಗಳು ಸ್ಯಾಂಕ್ಷನ್ ಆಗುತ್ತವೋ ಅವುಗಳನ್ನು ಕೂಡಲೇ ಇಂಪ್ಲಿಮೆಂಟ್ ಮಾಡಿಬಿಟ್ಟರೆ ಅದರಿಂದ ಬಡ ಜನರಿಗೆ ಉಪಕಾರ ಮಾಡಿದಂತಾಗುತ್ತದೆಂದು ಹೇಳುತ್ತೇನೆ. ಬಿದರ್ ಪ್ರಾಪರ್‌ನಲ್ಲಿ 60 ಸಾವಿರ ಜನಸಂಖ್ಯೆ ಇದೆ. ಇಷ್ಟು ಜನಸಂಖ್ಯೆಗೆ ಕೇವಲ 4 ಜನ ಡಾಕ್ಟರ್‌ಗಳಿದ್ದಾರೆ. 5 ಸಾವಿರ ಜನ ಸಂಖ್ಯೆಗೆ ಒಬ್ಬರು ಡಾಕ್ಟರ್ ಇರಬೇಕು ಎಂಬುದು ಸರ್ಕಾರದ ನಿಯಮವಾಗಿರುವುದರಿಂದ, ಈ ನಿಯಮಕ್ಕನುಸಾರವಾಗಿ ಡಾಕ್ಟರ್‌ಗಳನ್ನು ನಮ್ಮ ಬಿದರ್ ಪ್ರಾಪರ್‌ಗೆ ಪೋಸ್ಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳನ್ನು ಭೇಟಿ ಮಾಡಿ ಕೇಳಿದಾಗ ಅವರು ನಿಮ್ಮ ಜಿಲ್ಲೆಯ ಜನರು ಆರೋಗ್ಯದಿಂದ ಇದ್ದಾರೆ ಎಂದು ಹೇಳಿದರು. ನಾವು ಆರೋಗ್ಯದಿಂದ ಇದ್ದೇವೆ. ಆದರೆ ಕಾಯಿಲೆ ಬೀಳುವವರು ಬೀಳುತ್ತಾರೆ. ಮೊನ್ನೆ ಒಂದು ಹಳ್ಳಿ ಜಾತ್ರೆ ನಡೆದಾಗ ಕಾಲರಾ ಬೇನೆ ಬಂದು ಸುಮಾರು 300—400 ಜನ ತೀರಿಕೊಂಡರು. ಇದರ ಜೊತೆಗೆ ದಿನವೂ ಆಕ್ಸಿಡೆಂಟ್ ಕೇಸಸ್ ಕೂಡ ಬರುತ್ತಿರುತ್ತವೆ. ಆದ್ದರಿಂದ ಹೆಚ್ಚು ಜನ ಡಾಕ್ಟರ್‌ಗಳನ್ನು ಅಲ್ಲಿಗೆ ಪೋಸ್ಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಆಕ್ಸಿಜನ್ ಟ್ಯೂಬ್ಸ್ ನಮ್ಮಲ್ಲಿ ಸಾಕಷ್ಟು ಪ್ರಮಾಣದಲ್ಲಿ ಇಲ್ಲ. ಹಾರ್ಟ್ ಅಟ್ಯಾಕ್ ಆದವರಿಗೆ ಇದು ಬಹಳ ಮುಖ್ಯವಾಗಿ ಬೇಕಾಗುವುದರಿಂದ ಹೆಚ್ಚು ಪ್ರಮಾಣದಲ್ಲಿ ಒದಗಿಸಬೇಕೆಂದು ಹೇಳುತ್ತೇನೆ. ನಮ್ಮದು ಜಿಲ್ಲಾ ಕೇಂದ್ರವಾದ್ದರಿಂದ ಎಮರ್ಜೆನ್ಸಿ ಪೀರಿಯಡ್‌ಗೆ ಬೇಕಾದಂಥ ಎಲ್ಲ ಔಷಧ ಸಾಮಗ್ರಿಗಳನ್ನು ಒದಗಿಸಿಕೊಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರ್).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಹಿರಿಯರಾದಂಥ ಸನ್ಮಾನ್ಯ ಸಿದ್ಧವೀರಪ್ಪನವರು ಆರೋಗ್ಯ ಇಲಾಖೆಗೆ ಸಂಬಂಧಪಟ್ಟ ಕೆಲವು ಬೇಡಿಕೆಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅವರನ್ನು ಇದುವರೆಗೆ ಮಾತನಾಡಿದಂತಹ ಎಲ್ಲ ಮಾನ್ಯ ಸದಸ್ಯರೂ ಏಕ ಕಂಠದಿಂದ ಮತ್ತು ಮುಕ್ತ ಕಂಠದಿಂದ ಹೊಗಳಿದರು. ಇದರಿಂದ ಅವರಲ್ಲಿರುವಂತಹ ದಕ್ಷತೆ ಮತ್ತು ನಿಸ್ವಾರ್ಥ ಸೇವೆ ಎದ್ದುಕಾಣುತ್ತದೆಂದು ನಾನಾದರೂ ಭಾವಿಸಿದ್ದೇನೆ ಮತ್ತು ನಂಬಿಕೊಂಡಿದ್ದೇನೆ. ತ್ರಿಮೂರ್ತಿಗಳಲ್ಲಿ ಒಬ್ಬರಾದ ವಿಷ್ಣುವಿನ ಜಾಗದಲ್ಲಿ ಶ್ರೀಮಾನ್ ಸಿದ್ಧವೀರಪ್ಪನವರು ಇದ್ದುಕೊಂಡು ಮೈಸೂರು ರಾಜ್ಯದ ಎಲ್ಲ ಪ್ರಜೆಗಳಿಗೂ ಆರೋಗ್ಯಭಾಗ್ಯವನ್ನು ಮತ್ತು ಸರ್ವ ರಕ್ಷಣೆಯನ್ನು ಕೊಡುತ್ತಾರೆಂದು ನಾನಾದರೂ ಭಾವಿಸಿದ್ದೇನೆ. ಆದರೆ ಈಗ ಏನಾಗಿದೆ ಎಂದರೆ, ಅವರ ಇಲಾಖೆಯೊಳಗೆ ಕೆಲವು ಜನ ಯಮಧರ್ಮರು ಇದ್ದಾರೆ. ಅವರನ್ನು ಸಾಧ್ಯವಾದ ಮಟ್ಟಿಗೂ ಒಂದು ಸರಿಯಾದ ದಾರಿಗೆ ತರಲು ಸೂಕ್ತ ಕ್ರಮವನ್ನು ಮಾನ್ಯ ಮಂತ್ರಿಗಳು ತೆಗೆದುಕೊಳ್ಳುತ್ತಾರೆಂದು ತಿಳಿದುಕೊಂಡು ಆರೋಗ್ಯ ಇಲಾಖೆಯ ಬಗ್ಗೆ ಕೆಲವು ವಿಚಾರಗಳನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

(ಶ್ರೀ ಟಿ. ಎಂ. ಮಂಜುನಾಥ್)

ಸಾಂಕ್ರಾಮಿಕ ರೋಗಗಳಾದ ಮಲೇರಿಯಾ ಮತ್ತು ಕಾಲರಾ ರೋಗಗಳು ಬರದಂತೆ ತಮ್ಮ ಇಲಾಖೆಯವರು ಮೊದಲು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದರು. ಆದರೆ ಇಂದು ಆ ರೀತಿ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳದೆ, ಆ ಕೆಲಸ ಕುಂಠಿತವಾಗಿದೆ. ಈ ಸೊಳ್ಳೆಗಳನ್ನು ಸಾಯಿಸಲು ಉಪಯೋಗಿಸುವ ಎಣ್ಣೆಯ ಪ್ರಯೋಗಶಕ್ತಿ ಕಡಿಮೆಯಾಗಿದೆಯೋ ಅಥವಾ ಸೊಳ್ಳೆಗಳ ಶಕ್ತಿ ಜಾಸ್ತಿಯಾಗಿದೆಯೋ ಗೊತ್ತಿಲ್ಲ.

ಶ್ರೀ ಎಚ್. ಸಿದ್ಧವೀರಪ್ಪ.—ಸೊಳ್ಳೆಗಳ ರೆಸಿಸ್‌ಟೆನ್ಸ್ ಪವರ್ ಜಾಸ್ತಿಯಾಗಿದೆ.

ಶ್ರೀ ಟಿ. ಎಂ. ಮಂಜುನಾಥ್.—ಯಾವುದರಲ್ಲಿ ಲೋಪವಿದೆ ಎಂಬುದನ್ನು ಕಂಡುಹಿಡಿದು ಈ ಸೊಳ್ಳೆಗಳ ಕಾಟವನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಮಂತ್ರಿಗಳು ನಾನ್ ಪ್ರಾಕ್ಟೀಸ್ ಅಲೋಯೆನ್ಸ್ ವಜಾ ಮಾಡಿದ್ದೇವೆಂದು ಹೇಳಿದರು. ಬಹಳ ಸಂತೋಷ. ಆದರೂ ಪಟ್ಟಣಗಳಲ್ಲಿರುವ ವೈದ್ಯರು ಪ್ರಾಕ್ಟೀಸ್ ಮಾಡುವುದನ್ನು ಬಿಡುವುದಿಲ್ಲ. ಆರೋಗ್ಯ ಇಲಾಖೆಯಲ್ಲಿರುವ ಡಾಕ್ಟರ್‌ಗಳು ಯಾವಾಗಲೂ ಟೂರ್ ಮಾಡುತ್ತಿರುತ್ತಾರೆ. ಇದರಿಂದ ಅವರಿಗೆ ಹೆಚ್ಚು ಟಿ.ಎ. ಮತ್ತು ಡಿ.ಎ. ಸಿಗುತ್ತದೆ. ಆದರೆ ಆಸ್ಪತ್ರೆಗಳಲ್ಲಿರುವ ಡಾಕ್ಟರ್‌ಗಳು ಒಂದೇ ಜಾಗದಲ್ಲಿ ಬಹಳ ಕಾಲ ಇರುವುದರಿಂದ ಅವರಿಗೆ ಯಾವ ಅನುಕೂಲವೂ ಆಗುತ್ತಿಲ್ಲ. ಈ ಒಂದು ತಾರತಮ್ಯವನ್ನು ಹೋಗಲಾಡಿಸಲು ಅವರ ಜಾಗಕ್ಕೆ ಇವರನ್ನು, ಇವರ ಜಾಗಕ್ಕೆ ಅವರನ್ನು ವರ್ಗಾವರ್ಗಿ ಮಾಡಿದರೆ ಅವರಲ್ಲಿಯೂ ಸೋಸಿಯಲಿಜಂ ಬಂದ ಹಾಗೆ ಆಗುತ್ತದೆ. ಸಮಾಜವಾದವನ್ನು ಜಾರಿಗೆ ತರಬೇಕೆಂದು ತಾವು ಹೊರಟಿರುವಾಗ ಒಬ್ಬರಿಗೆ ಅನುಕೂಲ ಮಾಡಿ ಇನ್ನೊಬ್ಬರಿಗೆ ಅನಾನುಕೂಲ ಮಾಡುವುದು ಬೇಡ ಎಂದು ಹೇಳುತ್ತೇನೆ.

ಪೊಲಿಟಿಕಲ್ ಸಫರರ್ಸ್ ಏನಿದ್ದಾರೆ, ಅವರ ಮಕ್ಕಳಿಗೆ ಮೆಡಿಕಲ್ ಕಾಲೇಜ್‌ಗಳಲ್ಲಿ ಕೆಲವು ಸೀಟ್‌ಗಳನ್ನು ಮೀಸಲಾಗಿಡಲಾಗಿದೆ ಎಂದು ಸರ್ಕಾರದವರು ಹೇಳುತ್ತಾರೆ. ಆದರೆ ಆ ಸೀಟ್‌ಗಳನ್ನು ಹಂಚುವಾಗ ಅನೇಕ ಅನ್ಯಾಯಗಳಾಗುತ್ತಿವೆ. ಮಾನ್ಯ ಮಂತ್ರಿಗಳಲ್ಲಿ ನನಗೆ ನಂಬಿಕೆ ಇದೆ.

ಶ್ರೀ ಎಚ್. ಸಿದ್ಧವೀರಪ್ಪ.—ಅದನ್ನು ತೀರ್ಮಾನ ಮಾಡುವವರು ನಾವಲ್ಲ. ಕಮಿಟಿಯವರು ತೀರ್ಮಾನ ಮಾಡುತ್ತಾರೆ.

ಶ್ರೀ ಟಿ. ಎಂ. ಮಂಜುನಾಥ್.—ಈ ಸೀಟ್‌ಗಳನ್ನು ಯಾರಿಗೆ ಕೊಡುತ್ತಿದ್ದಾರೆಂದರೆ, ತಮ್ಮಂತಹ ಮಂತ್ರಿಗಳ ಬಂಧುಬಳಗದವರೆಂದು, ಸ್ನೇಹಿತರೆಂದು ಅಥವಾ ಆಳಿಯಂದಿರೆಂದು ಯಾರು ವೇಷ ಹಾಕಿಕೊಂಡು ಬರುತ್ತಾರೋ ಅಂತಹವರ ಮಕ್ಕಳಿಗೆ. ಜೈಲಿಗೆ ಹೋಗಿ ಬಂದವರ ಮಕ್ಕಳಿಗೆ ಇಂದು ಈ ರಿಜರ್ವ್ ಸೀಟ್‌ಗಳು ಸಿಕ್ಕುತ್ತಿಲ್ಲ. ಯಾರು ಜೈಲಿಗೆ ಕಳಿಸಿರುತ್ತಾರೋ ಅಂತಹವರ ಮಕ್ಕಳಿಗೆ ಈ ರಿಜರ್ವ್ ಸೀಟ್‌ಗಳು ಸಿಗುತ್ತಿವೆ. ಯಾರಿಗೆ ನಿಜವಾಗಿ ಸೀಟ್ ಸಿಗಬೇಕೋ ಅಂತಹವರ ಮಕ್ಕಳಿಗೆ ಒಂದು ಸೀಟ್ ಕೂಡ ಇದುವರೆಗೆ ಸಿಕ್ಕಿಲ್ಲ. ತಮ್ಮಲ್ಲಿ ನನಗೆ ಅಪಾರವಾದ ಗೌರವ ಇದೆ. ಆದ್ದರಿಂದ ತಾವು ಇನ್ನು ಮುಂದೆ ಸೂಕ್ತರಾದಂಥವರಿಗೆ ಈ ಸೀಟ್‌ಗಳು ಸಿಗುವಂತೆ ನೋಡಿಕೊಳ್ಳುತ್ತೀರಾ ಎಂದು ನಂಬಿಕೊಂಡಿದ್ದೇನೆ.

ಈಗ ಸರ್ಕಾರದವರು ಎಲ್ಲ ಆಸ್ಪತ್ರೆಗಳಿಗೆ ಏನು ಔಷಧಸಾಮಗ್ರಿಗಳನ್ನು ಸರಬರಾಜು ಮಾಡುತ್ತಿದ್ದಾರೆ ಅದರಿಂದ ಸಾರ್ವಜನಿಕರಿಗೆ ಸಾಕಷ್ಟು ಉಪಯೋಗವಾಗುತ್ತಿಲ್ಲ. ಏಕೆಂದರೆ ಆ ಔಷಧಸಾಮಗ್ರಿಗಳು ಸಾಕಷ್ಟು ಪ್ರಮಾಣದಲ್ಲಿ ಇರುವುದಿಲ್ಲ. ಇದಕ್ಕಾಗಿ ಕೇವಲ ಎರಡೂವರೆ ಕೋಟಿ ರೂಪಾಯಿಗಳನ್ನು ಒದಗಿಸಿದ್ದೀರಿ. ಇದು ಸಾಲುವುದಿಲ್ಲ. ಇನ್ನೂ ಹೆಚ್ಚು ಹಣವನ್ನು ಇದಕ್ಕಾಗಿ ಒದಗಿಸಬೇಕಾಗಿತ್ತು. ಇಷ್ಟು ಕಡಿಮೆ ಹಣದಲ್ಲಿ ಎಲ್ಲ ಜನರ ಆರೋಗ್ಯವನ್ನು ಯಾವ ರೀತಿ ಕಾಪಾಡುತ್ತೀರೋ ಎಂಬುದು ದೇವರಿಗೇ ಗೊತ್ತು. ತಮ್ಮ ಇಲಾಖೆಯಲ್ಲಿ ಸುಮಾರು 50 ಲಕ್ಷ ರೂಪಾಯಿಗಳಷ್ಟು ಎಕ್ಸ್‌ಪೈರಿ ಡೇಟ್ ಆಗಿರುವಂತಹ ಔಷಧಗಳು ಇವೆ ಎಂಬುದಾಗಿ ನಮ್ಮ ಸ್ನೇಹಿತರು ಹೇಳಿದರು. ಅದು ನಿಜವೋ ಅಥವಾ ಇಲ್ಲವೋ ಎಂಬ ಬಗ್ಗೆ ತಾವು ಸ್ಪಷ್ಟವಾದ ಹೇಳಿಕೆ ಕೊಡಬೇಕು.

ಶ್ರೀ ಎಚ್. ಸಿದ್ಧವೀರಪ್ಪ.—ರೂಲ್ಸ್ ಪ್ರಕಾರ ಯಾರು ಔಷಧಗಳನ್ನು ಸರಬರಾಜು ಮಾಡುತ್ತಾರೋ, ಅವರು ಆ ಔಷಧಗಳಿಗೆ ಕೊಟ್ಟಿರುವಂತಹ ಕಾಲಾವಧಿಯೊಳಗೆ ಖರ್ಚಾಗದಿದ್ದರೆ ಅದನ್ನು ಇಲಾಖೆಯವರು ಸರಬರಾಜು ಮಾಡಿದವರಿಗೆ ತಿಳಿಸಬೇಕು. ನಂತರ ಅವರು ಅದನ್ನು ವಾಪಸ್

ಪಡೆದುಕೊಂಡು ಬೇರೆ ಔಷಧಗಳನ್ನು ಒದಗಿಸಬೇಕು. ಇದರ ಬಗ್ಗೆ ನಾನು ಆಗಾಗ್ಗೆ ವಿಚಾರಣೆ ಕೂಡ ಮಾಡಿಸುತ್ತಿರುತ್ತೇನೆ. ಆದರೂ ವಾಸ್ತವಾಂಶ ಏನಿದೆ ಎಂಬುದನ್ನು ನೋಡೋಣ.

ಶ್ರೀ ಟಿ. ಎಂ. ಮಂಜುನಾಥ್.—ರೂಲ್ಸ್ ಏನೋ ಇದೆ. ಆದರೆ ಅದರಂತೆ ಇಲಾಖೆಯವರು ನಡೆಯುತ್ತಿದ್ದಾರೆಯೋ ಎಂಬುದನ್ನು ತಾವು ಪರೀಕ್ಷೆ ಮಾಡಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಕೆಲವು ಔಷಧಗಳು 5 ವರ್ಷಕ್ಕೆ ಆಗುವಷ್ಟು ಸ್ಟಾಕ್ ಇವೆ ಎಂದು ಗೊತ್ತಾಗಿದೆ. ಈ ರೀತಿ ಹೆಚ್ಚಿನ ಸ್ಟಾಕ್ ಇಡುವುದಕ್ಕೆ ಕಾರಣವೇನು ?

ಶ್ರೀ ಎಚ್. ಸಿದ್ಧವೀರಪ್ಪ.—ನಾನು ಅನೇಕ ಸಲ ಸರ್‌ಪ್ರೈಸ್ ವಿಜಿಟ್ ಕೊಟ್ಟು ನೋಡುತ್ತಿದ್ದೇನೆ ಏನಾದರು ಹೆಚ್ಚಿಗೆ ಸ್ಟಾಕ್ ಇದ್ದರೆ, ಏತಕ್ಕೆ ಇದೆ ಎಂಬುದನ್ನು ವಿಚಾರಿಸುತ್ತಿದ್ದೇನೆ. ಮಾನ್ಯ ಸದಸ್ಯರು ಹೇಳಿದಂತೆ ಎಕ್ಸ್‌ಫೈರಿ ಡೇಟ್ ಆದಂಥ ಔಷಧಗಳು ಏನಾದರು ಇದ್ದರೆ ನಾನು ವಿಚಾರಣೆ ಮಾಡುತ್ತೇನೆ. ತಾವು ಅದರ ಬಗ್ಗೆ ಸಂಶಯ ಪಡಬೇಕಾದ್ದಿಲ್ಲ.

ಶ್ರೀ ಟಿ.ಎಂ. ಮಂಜುನಾಥ್.—ನನ್ನ ಕ್ಷೇತ್ರದ ವಿಚಾರ ಹೇಳಬೇಕೆಂದರೆ, ತಿಪಟೂರು ಪುರಸಭೆಯವರು ತಿಪಟೂರಿಗೆ ಒಂದು ಫುಲ್ ಟೈಮ್ ಔಟ್ ಪೇಷೆಂಟ್ ಡಿಸ್‌ಪೆನ್‌ಸರಿ ಬೇಕೆಂದು ಅದಕ್ಕಾಗಿ ಆಗುವ ರೆಕರಿಂಗ್ ಚಾರ್ಜಿನಲ್ಲಿ 50 ಪರ್‌ಸೆಂಟ್ ಕೊಡುವುದಾಗಿ ಒಪ್ಪಿಕೊಂಡು ಒಂದು ನಿರ್ಣಯ ಪಾಸ್ ಮಾಡಿ ಕಳಿಸಿದ್ದಾರೆ.

ಶ್ರೀ ಎಚ್. ಸಿದ್ಧವೀರಪ್ಪ.—ದಾವಣಗೆರೆಯವರು ಪೂರ್ತಿ ಖರ್ಚು ಕೊಡುವುದಾಗಿ ಒಪ್ಪಿದ್ದಾರೆ, ಅದರಂತೆ ತಾವು ಸಹ ಕೊಡಿ. ತಮ್ಮ ಮುನಿಸಿಪಾಲಟಿಗೆ ವರಮಾನ ಜಾಸ್ತಿ ಇದೆ.

ಶ್ರೀ ಟಿ. ಎಂ. ಮಂಜುನಾಥ್.—ನಮ್ಮ ಮುನಿಸಿಪಾಲಟಿಗೆ ವರಮಾನ ಜಾಸ್ತಿ ಇಲ್ಲ. ಬರುವ ವರಮಾನವನ್ನು ನೀರಿಗಾಗಿ ಖರ್ಚು ಮಾಡಲಾಗಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ದೊಡ್ಡ ಮನಸ್ಸು ಮಾಡಿ ಮುನಿಸಿಪಾಲಟಿಯವರು ಪಾಸ್ ಮಾಡಿ ಕಳಿಸಿಕೊಟ್ಟಿರುವ ನಿರ್ಣಯವನ್ನು ತರಿಸಿಕೊಂಡು ನೋಡಿ, ಯಾವುದೇ ಕಾರಣವನ್ನು ಕೊಟ್ಟು ಪೆಂಡಿಂಗ್ ಇಡದೆ, ಅದನ್ನು ಸ್ಯಾಂಕ್ಷನ್ ಮಾಡಿ ಅಲ್ಲಿಗೆ ಕೂಡಲೇ ಒಬ್ಬ ಡಾಕ್ಟರ್‌ನ್ನು ನೇಮಕ ಮಾಡಬೇಕೆಂದು ಅತ್ಯಂತ ವಿನಯಪೂರ್ವಕವಾಗಿ ಕೇಳಿಕೊಂಡು, ತಮ್ಮ ಒಂದು ಕಾಲದಲ್ಲಿ ಎಲ್ಲ ವೈದ್ಯರನ್ನು ಮಾನವೀಯತೆ ದೃಷ್ಟಿಯುಳ್ಳವರನ್ನಾಗಿ, ಜನರಿಗೆ ರಕ್ಷಣೆ ಕೊಡತಕ್ಕಂಥವರನ್ನಾಗಿ, ಜನರಿಗೆ ಔದಾರ್ಯವನ್ನು ತೋರಿಸತಕ್ಕಂಥವರನ್ನಾಗಿ, ಸದ್ಗುಣವಂತರನ್ನಾಗಿ ಮಾಡಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸುತ್ತೇನೆ.

† Smt. SUMATI BALACHANDRA MADIMAN (Dharwar Rural).—Mr. Deputy Speaker, Sir,

I support the Demand placed before this House. I have a few suggestions and demands to make on health. I would like to bring to the notice of the Government that medical facilities have still to reach the remote villages. If we plan properly, many problems will be solved. There is over-crowding in Genaral hospitals and in Cities and towns whereby they cannot take proper care of the patients. If we provide proper medical facilities to the villagers, then I feel, we will be able to stop this overcrowding and proper attention could be given to the patients.

Now, I would like to make a demand for my constituency. In my constituency of Dharwar Taluk, there are two primary Health centres and one H.U.T.D. In Uppinabetageri, where I visited a Primary Health Centre, I found that there were four beds for maternity cases and ten patients were lying down on the floor. At the same time, tubectomy operations have been performed in the village; in 1970–71 there were 6 cases, and in 1971–72 the number has increased to 114. This pin-points that the concept of family planning has reached the villages. Therefore, it would be advisable to upgrade these health

(SMT. SUMATI BALACHANDRA MADIMAN)

centres and to provide more beds. Hereafter, we will have more patients for Tubectomy. I am sorry to state that in all aspects the care of women and children has always been neglected, though these hospitals are mainly meant for women and children. I appeal to the Government to upgrade these primary Health Centres and to provide more beds so that the women and children are looked after well in times of emergency. To make these facilities available to the remote villagers, I would suggest that we could have mobile vans so that even small villages can be given medical assistance by regular visits... This has a multipurpose benefit in the fact that it can also be used as an ambulance to bring emergency cases for treatment. In Panchayat groups there is need to start more out-patient dispensaries, at least one for each group Panchayat, with a doctor and a midwife. In cities and towns people get conveyance to go to the hospitals. But, in the villages, people do not have even bus service or even a bullock cart, and in case of emergency it becomes very difficult for them to take the patients to the hospital. Therefore, it would be very necessary to have mobile vans.

I am glad that under the W.H.O., three divisions have been selected for intensive family planning and child care programme. I would suggest that the budget alloted by the Government for these districts may be diverted to rural areas so that this programme could be efficiently conducted in the rural areas. My sincere request to the Government is that all our schemes should go down to the rural areas, and we should not bring the villagers to the cities or towns, by which neither they nor the people of the city can be attended to properly. If we want our schemes to be successful, I appeal to the Hon'ble Minister for Health to consider this matter and see that more medical facilities are provided for the rural areas for the benefit of the villagers.

I thank the Speaker for having allotted me time to speak.

†ಶ್ರೀ ಎಂ. ಎಂ. ಸಜ್ಜನ್ (ಮುದ್ದೇಬಿಹಾಳ್).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಆರೋಗ್ಯ ಮಂತ್ರಿಗಳು ಈ ಸಭೆಯಲ್ಲಿ ಮಂಡಿಸಿರುವ ಬೇಡಿಕೆಗಳನ್ನು ಒಪ್ಪುತ್ತಾ, ನಾನು ಕೆಲವು ಸೂಚನೆಗಳನ್ನು ಮಾಡಲು ಬಯಸುತ್ತೇನೆ. ರಾಜ್ಯದ ಜನತೆಯ ಆರೋಗ್ಯ ರಕ್ಷಣೆ ಮಾಡತಕ್ಕದ್ದು ಒಂದು ಮಹಾ ಕೆಲಸ. ಇದರ ಬಗ್ಗೆ ಬಹಳ ನಿಷ್ಠಾವಂತರಾದ ಹಾಗೂ ಪ್ರಾಮಾಣಿಕರಾದಂತಹ ಮಾನ್ಯ ಸಿದ್ಧವೀರಪ್ಪನವರು ಈ ಕೆಲಸವನ್ನು ಬಹಳ ಯಶಸ್ವಿಯಾಗಿ ಮಾಡುತ್ತಾರೆ ಎಂದು, ನನ್ನ ನಂಬಿಕೆ ಇದೆ. ಚಿಕ್ಕ ಮಕ್ಕಳಿಗೆ ಶಾಲಾ ಬಾಲಕರಿಗೆ ರೋಗನಿರೋಧಕ ಔಷಧಗಳನ್ನು ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಕೊಡುವ ವ್ಯವಸ್ಥೆ ಮಾಡಬೇಕು ಎಂದು ನಾನು ಸರ್ಕಾರಕ್ಕೆ ಸೂಚಿಸುತ್ತೇನೆ. ಹಳ್ಳಿಗಳಲ್ಲಿ ಡಾಕ್ಟರುಗಳು ಇಲ್ಲದೇ ಇರುವುದರಿಂದ ಅಲ್ಲಿ ಬಹಳ ಜನರು ಅಕಾಲ ಮರಣಕ್ಕೆ ಈಡಾಗುತ್ತಾರೆ. ಹಳ್ಳಿಗಳಲ್ಲಿ ಅನೇಕ ಜನರು ನಾನಾ ವಿಧವಾದ ರೋಗಗಳಿಗೆ ಈಡಾಗುತ್ತಾರೆ. ಅದರ ಸಲುವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಸಂಚಾರಿ ಆಸ್ಪತ್ರೆಗಳನ್ನು ಮಾಡಬೇಕು. ವಾರಕ್ಕೆ ಎರಡು ಸಾರಿ ಪ್ರತಿ ಹಳ್ಳಿಯಲ್ಲಿಯೂ ಅವರು ಸಂಚರಿಸಿ ರೋಗಿಗಳ ಶುಶ್ರೂಷೆ ಮಾಡುವ ವ್ಯವಸ್ಥೆ ಮಾಡಬೇಕು. ಗರ್ಭಿಣಿಯರಿಗೆ ಆರೋಗ್ಯ ವರ್ಧನೆ ಔಷಧಿ ಕೊಡುವ ವ್ಯವಸ್ಥೆ ಮಾಡಬೇಕು. ಇದರಲ್ಲಿ ಮುಖ್ಯವಾಗಿ ಬಡವರಿಗೆ ಆಯುರ್ವೇದ ಔಷಧಿ ಸಿಕ್ಕುವಂತೆ ಮಾಡಬೇಕು. ಅದಕ್ಕಾಗಿ ಆಯುರ್ವೇದ ಔಷಧಿಗೆ ಸಂಬಂಧಪಟ್ಟ ಹಾಗೆ ಬೇರೆ ಒಂದು ಖಾತೆಯನ್ನು ನಿರ್ಮಾಣ ಮಾಡುವ ವ್ಯವಸ್ಥೆ ಮಾಡಬೇಕು. ಆಯುರ್ವೇದ ಔಷಧಿ ಬಹಳ ಕಾಲದಿಂದಲೂ ನಮ್ಮ

ದೇಶದಲ್ಲಿ ಇದೆ. ಇದರಿಂದ ಖಾಯಿಲೆಗಳು ಬಹಳ ತೀವ್ರವಾಗಿ ಗುಣವಾಗುತ್ತವೆ. ಅದಕ್ಕಾಗಿ ಆಯುರ್ವೇದ ಔಷಧಿಯನ್ನು ಉಪಯೋಗ ಮಾಡುವುದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ತಾಲ್ಲೋಕು ಬೋರ್ಡ್ ದವಾಖಾನೆಗಳಲ್ಲಿ ಔಷಧಿ ಸರಿಯಾಗಿ ಸಿಕ್ಕುತ್ತಿಲ್ಲ. ಅದಕ್ಕಾಗಿ ಸರ್ಕಾರದವರು ಕೂಡಲೇ ತೀವ್ರ ಗತಿಯಿಂದ ಅಲ್ಲಿ ಔಷಧಿ ಸಿಕ್ಕುವಂತೆ ವ್ಯವಸ್ಥೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. 5 ಸಾವಿರ ಜನಸಂಖ್ಯೆ ಇರುವ ಹಳ್ಳಿಗಳಿಗೆ ಆಸ್ಪತ್ರೆಗಳನ್ನು ಒದಗಿಸಿಕೊಡಬೇಕು. ಇದರಿಂದ ಅಲ್ಲಿನ ರೋಗಿಗಳು ತಮ್ಮ ಖಾಯಿಲೆಯನ್ನು ನಿವಾರಣೆ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆಸ್ಪತ್ರೆಗಳಿಗೆ ಡಾಕ್ಟರನ್ನು ನೇಮಿಸುವಾಗ ಅಲ್ಲಿಗೆ ಬೇಕಾದ ಕಾಂಪೌಂಡರು ಮತ್ತು ನರ್ಸು ಇವರೆಲ್ಲರನ್ನೂ ನೇಮಿಸುವುದಕ್ಕೆ ಬದಲಾಗಿ ಎಂ.ಬಿ.ಬಿ.ಎಸ್. ಪದವಿಗಳನ್ನು ಪಡೆದಂತಹ ವಿದ್ಯಾವಂತರನ್ನು ಅಲ್ಲಿಗೆ ನೇಮಿಸಿದರೆ ಅವರಿಗೆ ಒಂದು ಉದ್ಯೋಗದ ಅವಕಾಶವನ್ನು ದೊರಕಿಸಿಕೊಟ್ಟ ಹಾಗಾಗುತ್ತದೆ. 50 ಹಳ್ಳಿಗಳ ಭಾಗಕ್ಕೆ ಒಂದು ಜನರಲ್ ಆಸ್ಪತ್ರೆಯನ್ನು ಒದಗಿಸುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡಬೇಕು. 'ಬಿ' ಫಾರ್ಮ್, ಅಥವಾ 'ಡಿ' ಫಾರ್ಮ್ ಪರೀಕ್ಷೆ ಪಾಸಾದವರಿಗೆ ಔಷಧಿ ಅಂಗಡಿಗಳನ್ನು ನಡೆಸುವುದಕ್ಕೆ ಪರವಾನಿಗೆ ಕೊಡಬೇಕು. ಪ್ರತಿಯೊಂದು ಔಷಧಿಯನ್ನು ಮಾರಾಟ ಮಾಡಿದ್ದಕ್ಕೂ ರಶೀತಿ ಕೊಡಬೇಕು. ಈಗ ಔಷಧಿ ಖರೀದಿ ಮಾಡಿದ್ದಕ್ಕೆ ರಶೀತಿಗಳನ್ನು ಕೊಡುತ್ತಾ ಇಲ್ಲ. ಆದ್ದರಿಂದ ಡ್ರಗ್ ಕಂಟ್ರೋಲ್ ಖಾತೆಯವರು ಇದನ್ನು ಗಮನಿಸಬೇಕು. ಔಷಧಿ ಅಂಗಡಿಯವರು ಔಷಧಿಯನ್ನು ಮಾರಾಟ ಮಾಡಿದ್ದಕ್ಕಾಗಿ ರಶೀತಿಯನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಮತ್ತು ಪ್ರತಿಯೊಂದು ಔಷಧಿಯೂ ಸಿಕ್ಕುವಂತೆ ವ್ಯವಸ್ಥೆ ಮಾಡಬೇಕು. ಕೆಲವೊಂದು ಕಿರಾಣಿ ಅಂಗಡಿಯಲ್ಲಿಯೂ ಕೂಡ ಔಷಧಿಯನ್ನು ಮಾರಾಟ ಮಾಡುತ್ತಿದ್ದಾರೆ. ಇದನ್ನು ತಪ್ಪಿಸಬೇಕು. ಔಷಧಿಯನ್ನು ಕಿರಾಣಿ ಅಂಗಡಿಯವರು ಮಾರಾಟ ಮಾಡಿದರೆ ಬೇರೆ ಔಷಧಿ ಅಂಗಡಿಯವರಿಗೆ ಲುಕ್ಸಾನಾಗುತ್ತದೆ. ಅದಕ್ಕಾಗಿ ಡ್ರಗ್ ಕಂಟ್ರೋಲರ್ ಅವರು ತೀವ್ರ ಕ್ರಮ ಕೈಗೊಂಡು ಅದು ಬಂದಾಗುವಂತೆ ಮಾಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ದವಾಖಾನೆಗಳು ಇರುವುದಿಲ್ಲ, ಆದ್ದರಿಂದ ಜನಗಳಿಗೆ ಖಾಯಿಲೆ ಬಂದಾಗ ಅವರಿಗೆ ಸರಿಯಾದಂತಹ ಔಷಧೋಪಚಾರ ಸಿಕ್ಕುವುದು ಕಷ್ಟವಾಗುತ್ತದೆ. ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಸಾಂಕ್ರಾಮಿಕ ರೋಗ, ಮುಂತಾದ ರೋಗಗಳು ಬಂದಾಗ ಸರ್ಕಾರದವರಿಗೆ ಅವರಿಗೆ ಸಕಾಲದಲ್ಲಿ ಮುಂಜಾಗ್ರತೆಯಾಗಿ ಔಷಧಿ ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ, ಒಬ್ಬೊಬ್ಬರಿಗೆ 25 ರೂಪಾಯಿ ಕೊಡುತ್ತಿರುವ ಒಂದು ಸ್ಕೀಮು ಏನಿದೆ, ಅದನ್ನು ತೆಗೆದು ಹಾಕಬೇಕು. ಏಕೆಂದರೆ ಇವತ್ತು ಏನೊಂದು ಹಣವನ್ನು ಕೊಡುತ್ತೀರಿ ಅದನ್ನು ಕಾಗದದ ಮೇಲೆ ತೋರಿಸಿ ಕೆಲವು ಡಾಕ್ಟರುಗಳೇ ತೆಗೆದುಕೊಳ್ಳುತ್ತಿದ್ದಾರೆ. ಇದರಿಂದ ಬಹಳ ಭ್ರಷ್ಟಾಚಾರ ನಡೆಯುತ್ತಿದೆ. ಆದ್ದರಿಂದ ಇದನ್ನು ನಿಲ್ಲಿಸಬೇಕೆಂದು ಸೂಚಿಸುತ್ತೇನೆ.

5-30 P.M.

ಇನ್ನು ಶಿಕ್ಷಣ ಮಂದಿರಗಳಲ್ಲಿ ಸರ್ಕಾರೀ ಡಾಕ್ಟರುಗಳಿಂದಲೇ ಮಕ್ಕಳನ್ನು ಪರೀಕ್ಷೆ ಮಾಡುವ ಹಾಗೆ ಮಾಡಬೇಕು. ಪ್ರತೀ ವರ್ಷವು ಅವರನ್ನು ಉಚಿತವಾಗಿ ಪರೀಕ್ಷೆ ಮಾಡುವ ಹಾಗೆ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮುದ್ದೇಬಿಹಾಳಿನಲ್ಲಿ 150 ಹಳ್ಳಿಗಳಿದ್ದರೂ ಒಂದು ಜನರಲ್ ಆಸ್ಪತ್ರೆ ಕೂಡ ಅಲ್ಲಿ ಇಲ್ಲ. ಬಹಳ ಕಾಲದ ಹಿಂದೆ ಇದ್ದಂತಹ ಒಂದು ಆಸ್ಪತ್ರೆ ಇದೆ. ಅಲ್ಲಿ ಸರಿಯಾಗಿ ಔಷಧಿಗಳು ಸಹ ಇಲ್ಲ. ಆದ್ದರಿಂದ ಅಲ್ಲಿಗೆ ಎರಡು ಜನರಲ್ ಆಸ್ಪತ್ರೆಗಳನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅದೇರೀತಿ ಬೆಂಗಳೂರು ನಗರದಲ್ಲಿ ದಿನನಿತ್ಯ ಬರುವಂತಹ ಜಾಡ್ಯಗಳಿಗೆ ಬೇರೆಯೇ ಒಂದು ವಿಭಾಗವನ್ನು ಮಾಡಬೇಕೆಂದು ಹೇಳುತ್ತೇನೆ. ದಿನನಿತ್ಯ ಬರತಕ್ಕಂತಹ ಸಣ್ಣಪುಟ್ಟ ಕಾಯಿಲೆಗಳನ್ನು ನೋಡಿಕೊಳ್ಳುವುದಕ್ಕೆ ಬೇರೆಯೇ ಒಂದು ವ್ಯವಸ್ಥೆಯಾದರೆ, ದೊಡ್ಡ ದೊಡ್ಡ ರೋಗಗಳನ್ನು ಬೇರೆ ಕಡೆಯೇ ನೋಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಇವುಗಳನ್ನು ವಿಕ್ಟೋರಿಯಾ ಮತ್ತು ಬೌರಿಂಗ್ ಆಸ್ಪತ್ರೆಗಳಲ್ಲಿ ನೋಡಿಕೊಳ್ಳುವುದಕ್ಕೆ ಮಾತ್ರ ವ್ಯವಸ್ಥೆ ಮಾಡಬೇಕೆಂದು ಹೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶ್‌ಪುರ)—ಸನ್ಮಾನ್ಯ ಅಧ್ಯಕ್ಷರೆ, ಈಗ ಆರೋಗ್ಯ ಇಲಾಖೆಯ ಮಂತ್ರಿಯವರು ಮಂಡಿಸಿರತಕ್ಕಂತಹ ಬೇಡಿಕೆಗಳನ್ನು ಸಮರ್ಥಿಸುತ್ತಾ, ಎರಡು ಮಾತುಗಳನ್ನು

(ಶ್ರೀ ಕೆ. ಎಂ. ರುದ್ರಪ್ಪ)

ಹೇಳಬಯಸುತ್ತೇನೆ. ಹಿಂದೆ ಮೆಡಿಕಲ್ ಮತ್ತು ಪಬ್ಲಿಕ್ ಹೆಲ್ತ್—ಇದು ಬೇರೆಬೇರೆಯಾಗಿತ್ತು. . ಈಗ ಇವು ಎರಡು ಕೂಡ ಅಮಾಲ್ಗಮೇಟ್ ಆಗಿವೆ. ಇದರಿಂದ ಕಾರ್ಯ ದಕ್ಷತೆಗೆ ಸ್ವಲ್ಪ ತೊಂದರೆಯಾಗಿದೆ ಯೆಂದು ನನ್ನ ಭಾವನೆ. ಅದನ್ನು ಅನುಭವವುಳ್ಳಂತಹ ಮಂತ್ರಿಯವರು ಕೂಲಂಕಷವಾಗಿ ಪರಿಶೀಲನೆ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಈ ಇಲಾಖೆಯು ಬಹಳ ಪ್ರಾಮುಖ್ಯವಾದಂತಹ ಇಲಾಖೆಯಾಗಿದೆ. ಏಕೆಂದರೆ ಜನರ ಆರೋಗ್ಯ ಚೆನ್ನಾಗಿದ್ದರೆ ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ ಜನರು ಚೆನ್ನಾಗಿರುತ್ತಾರೆ. ಆದ್ದರಿಂದ ಇಂಥ ಇಲಾಖೆಯನ್ನು ಅನುಭವವುಳ್ಳಂತಹ ಮಾನ್ಯ ಸಿದ್ಧವೀರಪ್ಪನವರು ವಹಿಸಿಕೊಂಡದ್ದು ತುಂಬಾ ಸಂತೋಷ. ಹಿಂದೆ ಈ ಇಲಾಖೆಗೆ ಒಂದು ತುಕ್ಕು ಹಿಡಿದ ಹಾಗೆ ಇತ್ತು. ಅದನ್ನು ತೆಗೆದು ಇವತ್ತು ಒಂದು ಹೊಳಪನ್ನು ಮಾನ್ಯ ಸಿದ್ಧವೀರಪ್ಪನವರು ಕೊಟ್ಟಿದ್ದಾರೆಂದರೆ ಆಶ್ಚರ್ಯವಾಗಲಾರದು. ಮೂರು ನಾಲ್ಕು ತಿಂಗಳಿಂದ ಈ ಇಲಾಖೆಯಲ್ಲಿ ಸ್ವಲ್ಪ ದಕ್ಷತೆ ಬಂದಿದೆ ಎಂದರೆ ತಪ್ಪಾಗಲಾರದು. ಇವತ್ತು ಜನರ ಆರೋಗ್ಯ ಚೆನ್ನಾಗಿರಬೇಕಾದರೆ, ಮುಖ್ಯವಾಗಿ ಅವರಿಗೆ ಕುಡಿಯುವ ನೀರು ಒಳ್ಳೆಯದು ಸಿಗಬೇಕು, ಮತ್ತು ಸೇವಿಸುವಂತಹ ಆಹಾರವೂ ಚೆನ್ನಾಗಿರಬೇಕು. ಹಳ್ಳಿಗಾಡುಗಳಲ್ಲಿ ಪ್ರೊಟೆಕ್ಟೆಡ್ ವಾಟರ್ ಸಪ್ಲೈ ಸಿಗುತ್ತಾ ಇಲ್ಲ. ಹಳ್ಳಿಗಾಡುಗಳಲ್ಲಿ ಕುಡಿಯುವ ನೀರು ಚೆನ್ನಾಗಿ ಸಿಕ್ಕಿದರೆ ಜನರ ಆರೋಗ್ಯ ಬಹಳ ಮಟ್ಟಿಗೆ ಸುಧಾರಿಸುತ್ತದೆಂದು ನಾನು ಹೇಳುತ್ತೇನೆ. ಅದೇ ರೀತಿ ಆಹಾರ ಕೂಡ. ಇವೊತ್ತಿನ ದಿವಸ ಪೇಟೆಗಳು ಜಾಸ್ತಿಯಾಗಿ ಅಲ್ಲಿ ವಿಪರೀತವಾಗಿ ಹೋಟೇಲುಗಳು ಹೆಚ್ಚಾಗಿರುವುದರಿಂದ ಹೆಚ್ಚಿನ ಜನರು ಹೋಟೇಲು ಆಹಾರವನ್ನು ಸೇವಿಸುತ್ತಿದ್ದಾರೆ. ಆದರೆ ಹೋಟೇಲುಗಳಲ್ಲಿ ದೊರೆಯುವಂತ ಆಹಾರ ಅಷ್ಟು ಉತ್ತಮ ತರಗತಿಯದ್ದಾಗಿಲ್ಲ. ಹೋಟೇಲುಗಳಿಗೆ ಮಾನ್ಯ ಮಂತ್ರಿಯವರು ಭೇಟಿ ಕೊಟ್ಟು, ಅಲ್ಲಿ ಸ್ಯಾನಿಟರಿ ಕಂಡಿಶನ್ ಮತ್ತು ಇತರ ಹೈಜೀನಿಕ್ (hygienic) ವ್ಯವಸ್ಥೆಗಳನ್ನು ಇಟ್ಟು ಕೊಂಡಿದ್ದಾರೆಯೋ ಎಂಬುದನ್ನು ನೋಡಿ, ಸರಿಪಡಿಸಬೇಕು. ಮತ್ತು ಅಲ್ಲಿರತಕ್ಕ ತಿಂಡಿ ಪದಾರ್ಥಗಳನ್ನು ಸಹ ಖುದ್ದಾಗಿ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಇದರಿಂದ ಜನರಿಗೆ ಒಳ್ಳೆಯ ಆಹಾರ ಸಿಕ್ಕಿ ಜನರ ಆರೋಗ್ಯ ಕೂಡ ಹೆಚ್ಚಾಗುತ್ತದೆ.

ಇನ್ನು ಹಾಸನ ಜಿಲ್ಲೆಯ ಒಂದು ವಿಚಾರ ಹೇಳುವುದಾದರೆ, ಅದು ಒಂದು ಪ್ರವಾಸಿಗರ ಕೇಂದ್ರವಾಗಿದೆ. ಅಲ್ಲಿ ದೊಡ್ಡ ದೊಡ್ಡ ಮುಖ್ಯ ದೇವಸ್ಥಾನಗಳು ಮತ್ತಿತರ ಯಾತ್ರಿಕರು ನೋಡುವಂತಹ ಸ್ಥಳಗಳು ಇರುವುದರಿಂದ ಪರದೇಶಗಳ ಜನರು ಕೂಡ ಅಲ್ಲಿ ಹೆಚ್ಚಾಗಿ ಬರುತ್ತಿದ್ದಾರೆ. ಆದರೆ ಅಲ್ಲಿ ಸೊಳ್ಳೆಗಳ ಕಾಟ ವಿಪರೀತವಾಗಿದೆ. ಯಾರಾದರೂ ಮಂತ್ರಿಯವರು ಸಹ ಹೋದರೆ ಅಲ್ಲಿ ಒಂದು ದಿವಸ ಕೂಡ ತಂಗುವುದಿಲ್ಲ. ಕಾರಣವೇನೆಂದರೆ ಅಲ್ಲಿರುವ ಸೊಳ್ಳೆಗಳ ಕಾಟ. ಆದ್ದರಿಂದ ಅಲ್ಲಿ ಈ ಸೊಳ್ಳೆಯ ಕಾಟವನ್ನು ತಪ್ಪಿಸುವುದಕ್ಕೋಸ್ಕರ ಇಲಾಖೆಯವರು ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ಕುಟುಂಬ ಯೋಜನೆ (Family Planning) ವಿಚಾರದಲ್ಲಿ ಹೇಳುವುದಾದರೆ, ಅನುಕೂಲಸ್ಥರು, ಮತ್ತು ಶ್ರೀಮಂತರು ಇದರ ಉಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ. ಆದರೆ ಕೂಲಿಗಾರರು ಮತ್ತು ಸಣ್ಣಪುಟ್ಟ ನೌಕರರು ಇದನ್ನು ಅಡಾಪ್ಟ್ ಮಾಡುತ್ತಾ ಇಲ್ಲ. ನಮ್ಮ ಆರೋಗ್ಯ ಮಂತ್ರಿಗಳು ನಮ್ಮ ಜನರ ಆರೋಗ್ಯದ ಬಗ್ಗೆ ಗಮನ ಕೊಡುವುದಲ್ಲದೆ ಜನಸಂಖ್ಯೆಯನ್ನು ಸಹ ತಡೆಗಟ್ಟುವುದಕ್ಕೆ ಹೆಚ್ಚಿನ ನಿಗಾ ಕೊಡಬೇಕು. ಮತ್ತು ಬಡವರಲ್ಲಿ ಮತ್ತು ಕೂಲಿಗಾರರಲ್ಲಿ ಸಹ ಮಿತ ಸಂತಾನವನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಇನ್ನು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಚಾರ. ಸಕಲೇಶಪುರದಲ್ಲಿ ಒಂದು 120 ಬೆಡ್ ಇರತಕ್ಕಂತಹ ದೊಡ್ಡ ಕ್ರಾಫರ್ಡ್ ಆಸ್ಪತ್ರೆ (Crowford Hospital) ಇದೆ. ಹಿಂದೆ ಕರ್ನಲ್ ಕ್ರಾಫರ್ಡ್ ಎನ್ನತಕ್ಕವರು ಈ ಆಸ್ಪತ್ರೆಯನ್ನು ಕಟ್ಟಿಸಿಕೊಟ್ಟಿದ್ದಾರೆ. ಆದರೆ ಕೆಲವು ದಿವಸ ಹಿಂದೆ ಅಲ್ಲಿನ ಡಾಕ್ಟರುಗಳಲ್ಲಿ ಒಂದು ವ್ಯಾಜ್ಯ ಬೆಳೆದು ಬಂದು ಆಸ್ಪತ್ರೆಯ ವ್ಯವಸ್ಥೆಯೇ ಕೆಟ್ಟು ಹೋಗಿದೆ. ಇದನ್ನು ಮಂತ್ರಿಯವರ ಗಮನಕ್ಕೂ ತಂದಿದ್ದೇವೆ. ಅದರ ಮೇಲೆ ಅಲ್ಲಿರತಕ್ಕಂತಹ ಡಾಕ್ಟರುಗಳನ್ನು ಟ್ರಾನ್ಸ್‌ಫರ್ ಮಾಡಬೇಕೆಂದು ಆರ್ಡರ್ ಮಾಡಿದರು. ಅದರ ಪ್ರಕಾರ ಎರಡು ಡಾಕ್ಟರುಗಳನ್ನು ಟ್ರಾನ್ಸ್‌ಫರ್ ಮಾಡಿದ್ದಾರೆ. ಇನ್ನು ಇಬ್ಬರು ಡಾಕ್ಟರುಗಳನ್ನು ಟ್ರಾನ್ಸ್‌ಫರ್ ಮಾಡಬೇಕೆಂದು ಆರ್ಡರ್ ಮಾಡಿದರೂ, ಇಲಾಖೆಯವರು ಅದನ್ನು ಕಾರ್ಯಗತ ಮಾಡಿಲ್ಲ. ಅದನ್ನು ಮಾನ್ಯ ಮಂತ್ರಿಯವರು ಪರಿಶೀಲನೆ ಮಾಡಿ ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮೆಡಿಕಲ್ ಕಾಲೇಜಿನಲ್ಲಿ ಸೀಟ್ ಕೊಡುವಾಗ ಹಳ್ಳಿಗಾಡಿನ ಜನರಿಗೆ ಬಹಳ ತೊಂದರೆಯನ್ನು ಉಂಟುಮಾಡುತ್ತಿದ್ದಾರೆ. ಹಳ್ಳಿಗಾಡುಗಳಿಂದ ಬಂದ ವಿದ್ಯಾರ್ಥಿಗಳಿಗೆ ಒಂದು ರೀತಿಯ

ರಿಯಾಯಿತಿಯನ್ನು ತೋರಿಸಬೇಕೆಂದು ಹೇಳಿ; ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

[MADAM SPEAKER in the Chair]

†ಶ್ರೀ ಬಿ. ಎಸ್. ವೀರಭದ್ರಪ್ಪ (ಕೂಡ್ಲಿಗಿ).—ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಈ ಬೇಡಿಕೆಯಲ್ಲಿ ನಿಗದಿ ಮಾಡಿದ ಹಣ ಬಹಳ ಕಡಿಮೆ ಇದೆ. ಅದಕ್ಕಾಗಿ ಇದನ್ನು ವಿರೋಧ ಮಾಡುತ್ತಾ ಇನ್ನೂ ಹೆಚ್ಚಿನ ಹಣವನ್ನು ಈ ಇಲಾಖೆಗೆ ಒದಗಿಸಿ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿನ ಆಸ್ಪತ್ರೆಗಳನ್ನು ತೆರೆದು ಅಲ್ಲಿಂತಕ್ಕ ಜನರಿಗೆ ವೈದ್ಯಕೀಯ ಸೌಲಭ್ಯವನ್ನು ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಸಚಿವರು, ಸ್ಥಳೀಯ ಸಂಸ್ಥೆಗಳ ಆಸ್ಪತ್ರೆಗಳನ್ನು ಸರ್ಕಾರ ತೆಗೆದುಕೊಂಡು ನಡೆಸುತ್ತೇವೆಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅದನ್ನು ಆದಷ್ಟು ಜಾಗ್ರತೆಯಾಗಿ ಮಾಡಿ ವೈದ್ಯಕೀಯ ಸೌಲಭ್ಯಗಳನ್ನು ಅಲ್ಲಿರತಕ್ಕ ಜನರಿಗೆ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿ ಸಂಚಾರೀ ಆಸ್ಪತ್ರೆಗಳನ್ನು ಸಹ ಅವಶ್ಯವಾಗಿರುವುದರಿಂದ ಎಲ್ಲೆಲ್ಲಿ ಸಾಧ್ಯವಾಗುತ್ತದೆ ಅಲ್ಲಿ ಪ್ರಾರಂಭ ಮಾಡಬೇಕೆಂದು ಹೇಳುತ್ತೇನೆ.

ನನ್ನ ಕೂಡ್ಲಿಗಿ ಕ್ಷೇತ್ರದಲ್ಲಿ ಕುಷ್ಠರೋಗವು ಬಹಳ ಹೆಚ್ಚಾಗಿದೆ. ಪ್ರತಿಯೊಂದು ಹಳ್ಳಿಗಳಲ್ಲಿಯೂ ಇದು ಬಹಳ ಜನರನ್ನು ಕಾಡುತ್ತಾ ಇದೆ. ಆದ್ದರಿಂದ ಇದಕ್ಕೆ ಬೇಕಾದ ವೈದ್ಯಕೀಯ ಸೌಲಭ್ಯಗಳನ್ನು ಇಲಾಖೆಯವರು ಕೂಡಲೇ ಒದಗಿಸಿ ಕೊಟ್ಟು ಅವರಿಗೆ ಆಹಾರವನ್ನು ಕೂಡ ಒದಗಿಸುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನನ್ನ ಕ್ಷೇತ್ರದಲ್ಲಿ ಹೊಸಹಳ್ಳಿ ಎಂಬ ಫಿರ್ಕಾ ಇದೆ. ಅಲ್ಲಿ 1958ರಲ್ಲಿ ಒಂದು ಆಸ್ಪತ್ರೆಗೆ ಕಟ್ಟಡವನ್ನು ಎಲ್. ಡಿ. ವರ್ಕ್ಸ್‌ನಲ್ಲಿ ಕಟ್ಟಿದರೂ ಈವೊತ್ತಿನವರೆಗೂ ಅಲ್ಲಿ ಆಸ್ಪತ್ರೆಗೆ ಬೇಕಾದ ಯಾವ ಸೌಲಭ್ಯಗಳನ್ನೂ ಒದಗಿಸಿಲ್ಲ. ಕಟ್ಟಡವು ಸಹ ಈಗಾಗಲೇ ಬೀಳುವ ಸ್ಥಿತಿಯಲ್ಲಿ ಇದೆ. ಆದ್ದರಿಂದ ಅಲ್ಲಿಯೂ ಎಲ್ಲಾ ಸೌಲಭ್ಯಗಳನ್ನು ಕೊಟ್ಟು ಆಸ್ಪತ್ರೆಯನ್ನು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಉಜ್ಜನಿ ಎಂಬ ಒಂದು ದೊಡ್ಡ ಗ್ರಾಮ ಇದೆ. ಅಲ್ಲಿ ಒಬ್ಬರು ಶೆಟ್ಟರು ಆಸ್ಪತ್ರೆ ಕಟ್ಟುವುದಕ್ಕೆ 10 ಸಾವಿರ ರೂಪಾಯಿ ದಾನ ಕೊಟ್ಟಿದ್ದಾರೆ. ಆದರೆ 15 ವರ್ಷಗಳಾದರೂ ಇನ್ನೂ ಜಮೀನನ್ನು ಅಕ್ವಯರ್ ಮಾಡಿಲ್ಲ. ಆದ್ದರಿಂದ ಬೇಗನೇ ಜಮೀನನ್ನು ಅಕ್ವಯರ್ ಮಾಡಿ ಒಂದು ಆಸ್ಪತ್ರೆಯನ್ನು ಕಟ್ಟಿಸಿ, ಜನರಿಗೆ ವೈದ್ಯಕೀಯ ಸೌಲಭ್ಯವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಬಳ್ಳಾರಿ ಮೆಡಿಕಲ್ ಕಾಲೇಜಿಗೆ ಈ ಬೇಡಿಕೆಯಲ್ಲಿ 23 ಲಕ್ಷ ರೂಪಾಯಿ ನಿಗದಿ ಮಾಡಿದ್ದಾರೆ. ಆದರೆ ಹುಬ್ಬಳ್ಳಿ ಮತ್ತು ಮೈಸೂರಿನಲ್ಲಿರುವ ಕಾಲೇಜುಗಳಿಗೆ 30—35 ಲಕ್ಷ ರೂಪಾಯಿ ಇಟ್ಟಿದ್ದಾರೆ. ಆದರೆ ಬಳ್ಳಾರಿಗೆ ಏಕೆ ಕಡಿಮೆ ಮಾಡಿದ್ದಾರೆಂದು ಗೊತ್ತಾಗಿಲ್ಲ. ಆದ್ದರಿಂದ ಬಳ್ಳಾರಿ ಕಾಲೇಜಿಗೂ ಹೆಚ್ಚಿನ ಹಣವನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಈಗಾಗಲೇ ಪಟ್ಟಣಗಳಲ್ಲಿ ಎನ್. ಆರ್. ಡಬ್ಲ್ಯು. ಎಸ್. ಕೆಳಗೆ ಕುಡಿಯುವ ನೀರಿನ ಯೋಜನೆಗಳನ್ನು ತೆಗೆದುಕೊಂಡಿದ್ದಾರೆ. ಅನೇಕ ಕಡೆಗಳಲ್ಲಿ ಚರಂಡಿಗಳೇ ಇಲ್ಲದೆ ಗ್ರಾಮಗಳು ಬಹಳ ಹೊಲಸು ಆಗಿವೆ. ಅನೇಕ ಕಡೆಗಳಲ್ಲಿ ನೀರು ನಿಂತು ಬಹಳವಾಗಿ ಮಲೇರಿಯಾ ಹರಡುತ್ತಿದೆ. ಪಟ್ಟಣಗಳಲ್ಲಿಯೂ ಕೂಡ ಈಗ ಇದೇ ಒಂದು ಪರಿಸ್ಥಿತಿ ಉಂಟಾಗುತ್ತಿದೆ. ಪಟ್ಟಣಗಳಲ್ಲಿಯೂ ಒಳಚರಂಡಿ ಯೋಜನೆಗಾಗಿ ಹೆಚ್ಚಿಗೆ ಹಣವನ್ನು ನಿಗದಿಮಾಡಬೇಕು. ಈ ಬಾಬಿಗೆ ಬಡ್ಜೆಟಿನಲ್ಲಿ ಇನ್ನೂ ಹಣವನ್ನು ಪ್ರೊವೈಡ್‌ಮಾಡಿಲ್ಲ.

ಇನ್ನೊಂದು ವಿಷಯ. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಡೆಂಟಲ್ ಡಾಕ್ಟರ್‌ಗಳನ್ನು ನೇಮಕಮಾಡಬೇಕು. ಏಕೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಹಲ್ಲಿನ ರೋಗ ಬಹಳವಾಗಿದೆ. ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ ಡೆಂಟಲ್ ಡಾಕ್ಟರುಗಳನ್ನು ಕೂಡಲೇ ನೇಮಕಮಾಡಬೇಕೆಂದು ನಾನು ಸೂಚಿಸುತ್ತೇನೆ.

ಇಷ್ಟು ಹೇಳಿ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವಿ. ರುದ್ರಪ್ಪ (ಹೊಸದುರ್ಗ).—ಮಾನ್ಯ ಅಧ್ಯಕ್ಷಿಣಿಯವರೇ, ಈ ದಿವಸ ನಮ್ಮ ಮಾನ್ಯ ಆರೋಗ್ಯ ಸಚಿವರು ಈ ಸಭೆಯ ಮುಂದೆ ಮಂಡಿಸಿರತಕ್ಕ ಆರೋಗ್ಯದ ಬೇಡಿಕೆಗಳನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಅವುಗಳ ಬಗ್ಗೆ ಬಹಳ ಸಂತೋಷದಿಂದ ಈ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಮಾನ್ಯ ಶ್ರೀ ಸಿದ್ದವೀರಪ್ಪ

(ಶ್ರೀ ಎಂ. ವಿ. ರುದ್ರಪ್ಪ)

ನವರು ಈಗ ಹೊಸ ಸರ್ಕಾರ ರಚನೆಯಾದ ಮೇಲೆ ಮಂತ್ರಿಗಳಾಗಿ ಪ್ರಪ್ರಥಮವಾಗಿ ನಮ್ಮ ತಾಲ್ಲೂಕ್ ಬೋರ್ಡಿನಲ್ಲಿ ಏನು ಕಷ್ಟವಿತ್ತು, ಅಲ್ಲಿರತಕ್ಕ ಆಸ್ಪತ್ರೆಗಳು ಎಷ್ಟು ಕಷ್ಟದಿಂದ ನಡೆಯುತ್ತಿದ್ದುವು ಎಂಬ ವಿಷಯವನ್ನು ತಮ್ಮ ಗಮನಕ್ಕೆ ತಂದಕೂಡಲೇ ತಾಲ್ಲೂಕು ಬೋರ್ಡಿನಿಂದ ಈ ಆಸ್ಪತ್ರೆಗಳಿಗೋಸ್ಕರ ಸರ್ಕಾರಕ್ಕೆ ಕೊಡತಕ್ಕ ರೆಕರಿಂಗ್ ಹಾಗೂ ನಾನ್ ರೆಕರಿಂಗ್ ಎಕ್ಸ್‌ಪೆಂಡಿಚರ್‌ನಲ್ಲಿ ಪೆನ್‌ಷನರಿ ಕಾಂಟ್ರಿಬ್ಯೂಷನ್ ಸೇಕಡ 50ರಷ್ಟು ಕೊಡಬೇಕಾದ್ದನ್ನು ಸರ್ಕಾರವು ಇನ್ನುಮುಂದೆ ಮನ್ನಾ ಮಾಡುತ್ತೇವೆಂದು ಆಶ್ವಾಸನೆಯನ್ನು ಮಂತ್ರಿಗಳು ನೀಡಿದರು. ಅದಕ್ಕಾಗಿ ಅವರನ್ನು ನಾನು ಪ್ರಪ್ರಥಮವಾಗಿ ವಂದಿಸುತ್ತೇನೆ. ಈಗಾಗಲೇ ತಾಲ್ಲೂಕು ಬೋರ್ಡಿನವರು ಬಾಕಿ ಕೊಡಬೇಕಾದುದು ಸುಮಾರು 3 ಕೋಟಿ ರೂಪಾಯಿಗಳು ಇವೆಯೆಂದು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ನಾನು ಅದನ್ನು ಒತ್ತಾಯಪೂರ್ವಕವಾಗಿ ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ನಾನು ಮಾನ್ಯ ಮಂತ್ರಿಗಳನ್ನು ಒತ್ತಾಯಪೂರ್ವಕವಾಗಿ ಪ್ರಾರ್ಥಿಸುವುದೇನೆಂದರೆ, ಇತ್ತೀಚೆಗೆ ತಾಲ್ಲೂಕುಬೋರ್ಡಿನ ಹೊರೆ ಬಹಳ ಜಾಸ್ತಿಯಾಗಿದೆ. ಆದ್ದರಿಂದ ಅವರು ಕೊಡತಕ್ಕ ಬಾಕಿಯನ್ನೂ ಕೂಡ ಸರ್ಕಾರದವರು ಕೂಡಲೇ ಮನ್ನಾ ಮಾಡಬೇಕೆಂದು ಹೇಳುತ್ತೇನೆ. ಈಗಾಗಲೇ ಆಸ್ಪತ್ರೆಗಳ ವಿಚಾರದಲ್ಲಿ ಅನೇಕ ಸದಸ್ಯರು ಮಾತನಾಡಿದ್ದಾರೆ. ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ನನ್ನ ಕ್ಷೇತ್ರವಾದ ಹೊಸದುರ್ಗ ತಾಲ್ಲೂಕು ಚಿತ್ರದುರ್ಗ ಜಿಲ್ಲೆಯಲ್ಲೆಲ್ಲಾ ಹಿಂದುಳಿದ ತಾಲ್ಲೂಕು. ಅಲ್ಲಿರತಕ್ಕ ಆಸ್ಪತ್ರೆಯಲ್ಲಿ 50 ಬೆಡ್‌ಗಳುಳ್ಳ ಒಂದು ಜನರಲ್ ಆಸ್ಪತ್ರೆಯನ್ನು ಮಾಡಿಕೊಡಬೇಕು. ಅಲ್ಲಿಗೆ ಒಬ್ಬ ಪೋಸ್ಟ್ ಗ್ರಾಜುಯೇಟ್ ಮಾಡಿರತಕ್ಕ ಡಾಕ್ಟರನ್ನು ನೇಮಿಸಬೇಕು. ಅಲ್ಲದೆ ಚಿತ್ರ ದುರ್ಗ ಮತ್ತು ಬೆಂಗಳೂರಿಗೆ ಬಂದು ಪಡೆಯತಕ್ಕ ಚಿಕಿತ್ಸೆಗಳನ್ನು ನಮ್ಮ ತಾಲ್ಲೂಕಿನಲ್ಲಿಯೇ ದೊರಕುವ ಹಾಗೆ ತಕ್ಕ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನೊಂದು ವಿಷಯ. ನಮ್ಮ ಸ್ನೇಹಿತರಾದಂಥ ಮಾನ್ಯ ಶ್ರೀ ಮಂಜುನಾಥ್ ಅವರು ಬಹಳ ಒಳ್ಳೆಯ ದೃಷ್ಟಿಯಿಂದ ಕೆಲವಾರು ಸಲಹೆಗಳನ್ನು ಆಸ್ಪತ್ರೆಗಳ ಬಗ್ಗೆ ನೀಡಿದರು. ನನ್ನ ಕ್ಷೇತ್ರದಲ್ಲಿ ಅವರು ಹೇಳಿದ ಹಾಗೆಯೇ ಒಂದು ಆಸ್ಪತ್ರೆ ಕಂಚೀಪುರದಲ್ಲಿ ಇದ್ದುದನ್ನು ಹಿಂದಿನ ಸರ್ಕಾರಕ್ಕೆ ಟ್ಟದಾಳಿಗೆ ಬದಲಾವಣೆ ಮಾಡಿದ್ದು; ಈ ಸಂದರ್ಭದಲ್ಲಿ ಒಂದು ನಿಯೋಗದ ಮೂಲಕ, ಸರ್ಕಾರಕ್ಕೆ ಒಂದು ಲಿಖಿತ ಮನವಿಯನ್ನೂ ಸಹ ಸಲ್ಲಿಸಿದ್ದೆವು. ಕೇವಲ 400–500 ಜನಸಂಖ್ಯೆ ಇರತಕ್ಕ ಕಿಟ್ಟದಾಳು ಗ್ರಾಮ ಹಾಗೂ 2,800 ಜನಸಂಖ್ಯೆ ಇರತಕ್ಕ ಕಂಚೀಪುರ— ಈ ಎರಡು ಪ್ರದೇಶಗಳನ್ನು ಸೇರಿಸಿಯಾದರೂ ಒಂದೇ ಒಂದು ಆಸ್ಪತ್ರೆಯನ್ನು ಮಧ್ಯದಲ್ಲಿ ಕಟ್ಟಿಸಬೇಕೆಂದು ತಾಲ್ಲೂಕು ಬೋರ್ಡ್ ರಿಜಲ್ಯೂಷನ್ ಸಹ ಮಾಡಿ ಕಳುಹಿಸಿದ್ದರು. ಆದರೂ ಆಗಿನ ಸರ್ಕಾರದಲ್ಲಿ ಯಾವುದೋ ಒಂದು ರಾಜಕೀಯ ಒತ್ತಡದಿಂದ ಹೆಚ್ಚು ಒಂದೇ ಜನಾಂಗ ಇರತಕ್ಕ ಕಿಟ್ಟದಾಳು ಗ್ರಾಮಕ್ಕೆ ಆ ರೀತಿ ಅನುಕೂಲ ಮಾಡಿಕೊಟ್ಟರು. ಇದು ಬಹಳ ಅನ್ಯಾಯವೆಂದು ಮಾನ್ಯ ಸಚಿವರಿಗೆ ಆಗಲೇ ಬರೆದೆವು. ಆದರೆ ಈಗಿನ ಸರ್ಕಾರದಲ್ಲಿ ಈ ಮಂತ್ರಿಮಂಡಲ ರಚನೆಯಾದಮೇಲೆ ಅವರು ನಿಜವಾದ ಒಂದು ಒಳ್ಳೆಯ ದೃಷ್ಟಿಯಿಂದ, ನ್ಯಾಯರೀತಿಯಿಂದ ಹಾಗೂ ನ್ಯಾಯಪಾಲನೆಯ ದೃಷ್ಟಿಯಿಂದ ಆ ಎರಡು ಊರಿಗೂ ಅನುಕೂಲವಾಗುವಂಥ ಒಂದು ಆಸ್ಪತ್ರೆಯನ್ನು ಕಂಚಿಪುರಕ್ಕೂ ಮತ್ತು ಕಿಟ್ಟದಾಳ ಗ್ರಾಮಕ್ಕೆ ಹೆಲ್ತ್ ಸೆಂಟರನ್ನು ಸಹ ಕೊಡಬೇಕೆಂದು ತೀರ್ಮಾನಮಾಡಿದ್ದಾರೆ. ಅಲ್ಲಿನ ಜನಗಳಿಗೆ ಈ ಒಂದು ಪರಿಹಾರವನ್ನು ಕೊಟ್ಟಿದ್ದಾರೆ. ಅದಕ್ಕೋಸ್ಕರ ನಾನು ಮಂತ್ರಿಗಳಿಗೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಇನ್ನು ಹೆಚ್ಚಿಗೆ ಈ ವಿಷಯದಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ.

ಇನ್ನು ಆಯುರ್ವೇದದ ವಿಚಾರದಲ್ಲಿ ಈಗಾಗಲೇ ಬಹಳ ಸದಸ್ಯರು ಚೆನ್ನಾಗಿ ಮಾತನಾಡಿದ್ದಾರೆ. ನಮ್ಮ ದೇಶದಲ್ಲಿಯೂ ಈಗ ಸಿಗತಕ್ಕ ಗಿಡ ಮೂಲಿಕೆಗಳಿಂದ ಬೇಕಾದಷ್ಟು ಔಷಧಿಗಳನ್ನು ತಯಾರು ಮಾಡಬಹುದು. ವಿದೇಶಗಳಿಂದ ಫಾರೆನ್‌ನಿಂದ ಅಲೋಪಥಿಕ್ ಔಷಧಿಗಳನ್ನು ತರುವುದಕ್ಕೆ ಅವಕಾಶ ಕೊಡದಿದ್ದರೆ, ನಮಗೆ ವಿದೇಶೀ ವಿನಿಮಯ ಉಳಿಯುತ್ತದೆ. ಆದ್ದರಿಂದ ನಮ್ಮ ದೇಶದಲ್ಲಿ ಯಥೇಚ್ಛವಾಗಿ ಸಿಗತಕ್ಕ ಗಿಡಮೂಲಿಕೆಗಳ ವಿಷಯದಲ್ಲಿ ಸರ್ಕಾರ ಹೆಚ್ಚಿಗೆ ಪ್ರೋತ್ಸಾಹ ಕೊಡಬೇಕು.

ಕೊನೆಯದಾಗಿ ಬಹುಶಃ ಒಂದು ವಿಷಯದಲ್ಲಿ ಯಾರೂ ಮಾತನಾಡಲಿಲ್ಲವೆಂದು ನನಗೆ ತೋರುತ್ತದೆ. ಅದು ಹೋಮಿಯೋಪತಿ ವಿಷಯ. ಈ ಸಿಸ್ಟಮನ್ನು ಕಂಡುಹಿಡಿದಿರುವ ಒಬ್ಬ ದೊಡ್ಡ ಡಾಕ್ಟರ್ ಜರ್ಮನಿಯವರು. ಅವರ ಹೆಸರು ಡಾ. ಷಾಮಿಲ್ ಹ್ಯಾನೊಮಿನ್ ಎಂಬುವವರು. ಅವರು

ಸುಪ್ರಸಿದ್ಧ ವೈದ್ಯರು. ಅವರು ಅಲೋಪ್ಯಥಿಕ್ ವೈದ್ಯರು. ಅನೇಕ ಪರೀಕ್ಷೆಗಳನ್ನು ಪಾಸ್ ಮಾಡಿ ಅನೇಕ ರೀತಿಯಲ್ಲಿ ಈ ಪದ್ಧತಿಯನ್ನು ಅಭ್ಯಾಸ ಮಾಡಿದವರು. ಇದು ಎಲ್ಲಕ್ಕಿಂತಲೂ ಒಳ್ಳೆಯದು ಇದರಲ್ಲಿ ಬಹಳ ಒಳ್ಳೆಯ ಗುಣಧರ್ಮವಿದೆ. ಹೋಮಿಯೋಪತಿ ಔಷಧಾಲವನ್ನು ತೆರೆದರೆ ವರ್ಷಕ್ಕೆ ಸಾಮಾನ್ಯವಾಗಿಯಾದರೂ ಒಂದು ಆಸ್ಪತ್ರೆಗೆ ಎರಡು ಸಾವಿರ ರೂಪಾಯಿಗಳಷ್ಟಾದರೂ ಔಷಧಿ ಬೇಕಾಗುತ್ತದೆ. ಸರ್ಕಾರದವರು ಈಗ ಅಲೋಪತಿಕ್ ಆಸ್ಪತ್ರೆಗೆ 7—8 ಸಾವಿರ ರೂಪಾಯಿಗಳನ್ನು ಕೊಟ್ಟರೂ ಕೇವಲ ಒಂದು ಆಸ್ಪತ್ರೆಗೆ ಸಾಕಾಗುವುದಿಲ್ಲ. ಕೇವಲ ಒಂದು ಸಾವಿರ ರೂಪಾಯಿಗಳ ಹೋಮಿಯೋಪತಿ ಔಷಧಿಯಲ್ಲಿ ಒಂದು ತಾಲ್ಲೂಕಿನ ಜನಗಳಿಗೆ ಉಪಯೋಗ ಆಗುತ್ತದೆ. ಹೋಮಿಯೋಪತಿ ಬಹಳ ಮುಖ್ಯವಾದುದು. ಅದನ್ನು ನಮ್ಮ ಭಾಗದ ಜನಗಳಿಗೆ ಅದಷ್ಟು ಜಾಗ್ರತೆಯಾಗಿ ಉಪಯೋಗಮಾಡಿಕೊಡಬೇಕು. ಏಕೆಂದರೆ ಹೋಮಿಯೋಪತಿ ಔಷಧಿಯಲ್ಲಿ ಒಳ್ಳೆಯ ಗುಣಮಟ್ಟವಿದೆ. ಚಿಕ್ಕಮಕ್ಕಳಿಗೂ ಸಹ ಬಾಯಲ್ಲಿ ಹಾಕಿ ತಿನ್ನಿಸಬಹುದು. ಅಲೊಪತಿ ಸಿಸ್ಟಂನಲ್ಲಿ ನೀವು ಯಾವುದಾದರೂ ಒಂದು ಔಷಧಿ ಕೊಡಬೇಕಾದರೆ ಸುಮಾರು 20 ರೂಪಾಯಿಗಳವರೆಗೆ ಹಣ ಕೊಡಬೇಕಾಗುತ್ತದೆ. ಆದರೆ ಅದೇ ಔಷಧಿಗೆ ಹೋಮಿಯೋಪತಿಯಲ್ಲಿ ಕೇವಲ 5 ರೂಪಾಯಿಗಳು ಮಾತ್ರ ಖರ್ಚಾಗುತ್ತದೆ. ಇದರಲ್ಲಿ ಜಾಗ್ರತೆಯಾಗಿ ಕಾಯಿಲೆ ಗುಣಪಡಿಸಬಹುದು. ಇಂತಹ ಔಷಧಿ ಈಗ ಬಹಳ ಅತ್ಯುತ್ತಮವಾದುದು. ಅದ್ದರಿಂದ ನಾನು ಹೇಳುವುದೇನೆಂದರೆ, ಈ ಹೋಮಿಯೋಪತಿಯಲ್ಲಿ ಒಂದು ಕಾಲೇಜನ್ನು ಸ್ಥಾಪನೆಮಾಡಿ ಅದಕ್ಕೆ ಸಂಬಂಧಪಟ್ಟ ಸಿಬ್ಬಂದಿಯನ್ನು ನೇಮಿಸಿ ಇದನ್ನು ಕೂಡಲೇ ರೀಓಪನ್ ಮಾಡಬೇಕು. 1972 ನೇ ಮೇ ಮಾಹೆಯಲ್ಲಿ ಸ್ಟಡೀಸ್ ಆಫ್ ಹೋಮಿಯೊತೀಪಕ್ ಎಜುಕೇಷನ್ ಬೋರ್ಡ್ ಎಂಬುದಾಗಿ ರಚನೆ ಮಾಡಿದ್ದಾರೆ. ಇದಕ್ಕೆ ಸಂಬಂಧಪಟ್ಟ ಹಾಗೆ 1961 ನೇ ಹೋಮಿಯೋಪತಿ ರೂಲ್ಸ್ ಪ್ರಕಾರ ಸೆಕ್ಷನ್ 16 ರಲ್ಲಿ ಹೇಳಿರುವ ಹಾಗೆ ಬೋರ್ಡ್ ಆಫ್ ಎಗ್ಸಾಮಿನರ್ಸ್ ಫಾರ್ ಹೋಮಿಯೋಪತಿ ಎಂಬುದಾಗಿ ರಚನೆಮಾಡಿ ಈಗ ಇರತಕ್ಕ ಬೋರ್ಡನ್ನು ಅಬಾಲಿಷ್ ಮಾಡಿ ಹೊಸ ಹೊಸದಾಗಿ ಡಾಕ್ಟರುಗಳನ್ನು ನೇಮಕಮಾಡಿಕೊಳ್ಳಬೇಕು. ತಮ್ಮ ವರದಿಯ 90ನೇ ಪುಟದಲ್ಲಿ ಹೋಮಿಯೋಪತಿಯ ಕಾಲೇಜಿನ ವಿಷಯದಲ್ಲಿ ಈ ರೀತಿಯಾಗಿ ಒಂದು ಮಾತನ್ನು ಹೇಳಿದ್ದಾರೆ. ಹಾಗೆಯೇ ಫ್ಯಾಮಿಲಿ ಪ್ಲಾನಿಂಗ್ ವಿಷಯದಲ್ಲಿಯೂ ಹೇಳಿದ್ದಾರೆ. ಅದು ಈ ರೀತಿ ಇದೆ.

> "The College of Homoeopathy has not been started yet for want of suitable qualified teaching staff and this matter is under consideration."

ಎಂದು ತಿಳಿಸಿದ್ದಾರೆ. ಆದರೆ ಅನೇಕ ಜನ ಹೋಮಿಯೋಪತಿಯಲ್ಲಿ ಡಿಗ್ರಿ ಪಡೆದಿದ್ದವರು ಇದ್ದು ಕೆಲವಾರು ಜನರು ಹೋಮಿಯೋಪತಿ ಪ್ರಾಕ್ಟೀಸ್ ಸುಮಾರು 20 ವರ್ಷದಿಂದ ಮಾಡುತ್ತಿದ್ದಾರೆ. ಕಲ್ಕತ್ತ, ಮದ್ರಾಸ್, ಬೊಂಬಾಯಿ, ಇತ್ಯಾದಿ ಕಡೆಗಳಿಂದ ಪೋಸ್ಟ್ ಗ್ರಾಜುಯೇಟ್ ವಿದ್ಯಾರ್ಥಿಗಳಾಗ ಹೋಮಿಯೋಪತಿ ಬಗ್ಗೆ ಶಿಕ್ಷಣ ಕೊಡಲು ಅರ್ಹತೆ ಹೊಂದಿದ್ದಾರೆ. ಆದರೆ ಅಂತಹವರಿಗೆ ನಮ್ಮ ಸರ್ಕಾರದಲ್ಲಿ ಪ್ರೋತ್ಸಾಹ ಸಿಗಲಿಲ್ಲ. ಆದರೆ ನಾನು ಕ್ವಾಲಿಫೈಡ್ ಡಾಕ್ಟರುಗಳನ್ನು ಕೊಡುವುದಕ್ಕೆ ಸಿದ್ಧನಾಗಿದ್ದೇನೆ. ಒಂದು ಕಾಲೇಜನ್ನು ಜಾಗ್ರತೆಯಾಗಿ ತೆಗೆದು ಅದರ ವಿಷಯದಲ್ಲಿ ಒಬ್ಬ ಡಾಕ್ಟರನ್ನು ಮತ್ತು ಜಾಯಿಂಟ್ ಡೈರೆಕ್ಟರನ್ನು ನೇಮಿಸಬೇಕಾಗುತ್ತದೆ. ಹೋಮಿಯೋಪತಿಯಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಜನಗಳಿಗೆ ಸೌಲಭ್ಯ ದೊರಕುವುದಕ್ಕೆ ಸರ್ಕಾರದವರು ಸಹಾಯ ಮಾಡಬೇಕು.

ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಮಾನ್ಯ ಅಧ್ಯಕ್ಷರು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಹಮೀದ್ ಷಾ (ಶಿವಾಜಿನಗರ).—ಮಾನ್ಯ ಅಧ್ಯಕ್ಷರೇ; ಈ ದಿವಸ ನನಗೆ ನವಾಬ್ ಸಾಹೇಬರು ಕನ್ನಡದಲ್ಲಿ ಮಾತನಾಡುವುದಕ್ಕೆ ಹೇಳಿದ್ದಾರೆ. ಆದುದರಿಂದ ನಾನು ಈ ದಿವಸ ಕನ್ನಡದಲ್ಲಿ ಮಾತನಾಡುತ್ತೇನೆ.

ನಾನು ಬರತಕ್ಕ ಕ್ಷೇತ್ರದಲ್ಲಿ ಇರತಕ್ಕ ಒಂದು ದೊಡ್ಡ ಆಸ್ಪತ್ರೆ ಎಂದರೆ ಅದು ಬೌರಿಂಗ್ ಆಸ್ಪತ್ರೆ; ಅಲ್ಲಿಗೆ ಬರತಕ್ಕ ರೋಗಿಗಳಿಗೆ ಊಟಕ್ಕೆ ಕೊಡತಕ್ಕ ಆ ಬರ್ತನ್ ಅಂದರೆ ತಟ್ಟೆ ಇದೆಯಲ್ಲಾ ಅದು ಜೈಲಿನಲ್ಲಿ ಖೈದಿಗಳಿಗೆ ಕೊಡತಕ್ಕ ತಟ್ಟೆಗಿಂತ ನಿಕೃಷ್ಟವಾಗಿರುತ್ತದೆ. ಅದನ್ನು ನೋಡುವುದಕ್ಕೂ ಕೂಡ ಆಗುವುದಿಲ್ಲ. ಅದು ಅಷ್ಟು ಅಸಹ್ಯವಾಗಿ ಕಾಣುತ್ತದೆ.

ಇನ್ನು ಅಲ್ಲಿಗೆ ಬರತಕ್ಕ ಬಡವರಿಗೆ ಅಲ್ಲಿರತಕ್ಕ ಡಾಕ್ಟರುಗಳು ಔಷಧಿಯನ್ನು ಹೊರಗಡೆಯಿಂದ ಕೊಂಡುಕೊಂಡು ಬನ್ನಿ ಎಂದು ಹೇಳುತ್ತಿದ್ದಾರೆ. ಹೀಗಾದರೆ ನಾವು ಏತಕ್ಕೆ ಈ ಆಸ್ಪತ್ರೆಗಳಿಗೆ

(ಶ್ರೀ ಎಸ್. ಹಮೀದ್ ಷಾ)

ಲಕ್ಷಾಂತರ ರೂಪಾಯಿಗಳನ್ನು ಔಷಧಿಗಳಿಗಾಗಿ ಕೊಡಬೇಕು ! ಇನ್ನಾದರೂ ಈ ಚೀಟಿ ಬರೆದು ಕೊಡತಕ್ಕ ಪದ್ಧತಿಯನ್ನು ನಿಲ್ಲಿಸಬೇಕೆಂದು ಹೇಳುತ್ತೇನೆ. ಈ ಚೀಟಿಯನ್ನು ಅವರು ಬರೆದು ಕೊಡುತ್ತಿರುವುದು ಕೇವಲ ಬಡವಗಾಗಿರತಕ್ಕವರಿಗೆ ಮಾತ್ರ. ಶ್ರೀಮಂತರು ಹೋದರೆ ಅವರಿಗೆ ಸ್ಟೋರುಗಳಲ್ಲಿ ಹುಡುಕಿಸಿ ಔಷಧಿಗಳನ್ನು ತರಿಸಿ ಕೊಡುತ್ತಾರೆ.

ಇನ್ನು ಎಮರ್ಜೆನ್ಸಿ ವಾರ್ಡುಗಳ ಸ್ಥಿತಿಗತಿಗಳನ್ನು ಹೇಳುವುದಕ್ಕೇ ಸಾಧ್ಯವಿಲ್ಲ. ಅಲ್ಲಿರತಕ್ಕ ನರ್ಸುಗಳ ಮಾತನ್ನು ಯಾರೂ ಕೇಳುತ್ತಿಲ್ಲ. ರಾತ್ರಿ ವೇಳೆಯಲ್ಲಿ ಡಾಕ್ಟರು ಮತ್ತು ನರ್ಸುಗಳು ಎಲ್ಲಿಗೋ ಹೋಗಿಬಿಡುತ್ತಾರೆ, ಅವರು ಎಲ್ಲಿರುತ್ತಾರೆ ಎಂಬುದೇ ಯಾರಿಗೂ ಗೊತ್ತಾಗುವುದಿಲ್ಲ. ಸಾಲದ್ದಕ್ಕೆ ರಾತ್ರಿಯಲ್ಲಿ ಇವರ ಮೆರವಣಿಗೆ ಬೇರೆ ಹೊರಡುತ್ತಾರೆ. ಇನ್ನು ಹಗಲಿನಲ್ಲಿ ಇವರ ವ್ಯವಹಾರವನ್ನು ಹೇಳುವುದಕ್ಕೆ ನನಗೇ ನಾಚಿಕೆ ಆಗುತ್ತೆ ಆಕ್ಸಿಡೆಂಟುಗಳಾಗಿ ಬರತಕ್ಕ ರೋಗಿಗಳ ನಿಗಾ ನೋಡುವುದಕ್ಕೆ ಅಲ್ಲಿ ಯಾವ ಡಾಕ್ಟರುಗಳೂ ಇರುವುದಿಲ್ಲ. ಹಾಗೂ ಒಂದು ವೇಳೆ ಅಲ್ಲಿ ಯಾರಾದರೂ ಡಾಕ್ಟರಿದ್ದರೆ ರೋಗಿಗೆ ಅಲ್ಲಿ ನೀನು ಮಲಗಿರಯ್ಯ ನಾನು ಬಂದು ನೋಡುತ್ತೇನೆ ಎಂದು ಹೇಳಿ ಹೊರಟು ಹೋಗಿ ಬಿಡುತ್ತಾರೆ. ಆದರೆ ಎಲ್ಲಾ ಡಾಕ್ಟರುಗಳೂ ಹೀಗೇ ಇದ್ದಾರೆಂದು ನಾನು ಹೇಳುವುದಿಲ್ಲ. ಅವರಲ್ಲಿ ಕೆಲವರು ಒಳ್ಳೆಯವರೂ ಇದ್ದಾರೆ. ಇನ್ನು ಪ್ರತಿ ದಿನವೂ ಆ ಬೌರಿಂಗ್ ಆಸ್ಪತ್ರೆಗೆ 200–300 ಮಕ್ಕಳು ಪರೀಕ್ಷೆಗಾಗಿ ಬರುತ್ತಿದ್ದಾರೆ. ಅಲ್ಲಿಗೆ ಒಬ್ಬ ಚಿಲ್ಡ್ರನ್ ಸ್ಪೆಷಲಿಸ್ಟ್‌ನ್ನು ಕೇಳುತ್ತಿದ್ದರೂ ಇಲ್ಲಿಯವರೆಗೂ ಕೊಟ್ಟಿಲ್ಲ. ಇನ್ನು ಸ್ವಲ್ಪ ಹೊತ್ತಿಗೆ ಹಿಂದೆ ಮಾತನಾಡಿದ ಶ್ರೀ ಪ್ರಭಾಕರ್ ಅವರು ಈ ಹಕೀಮರನ್ನೂ ಮತ್ತು ಉರ್ದು ಭಾಷೆಯನ್ನು ವಿರೋಧ ಮಾಡಬೇಕೆಂದು ಹೇಳಿದರು. ಈ ಯುನಾನಿ ವಿಷಯದಲ್ಲೂ ಅದನ್ನೇ ಹೇಳಿದರು. ಅವರು ಹೇಳಿದ್ದನ್ನು ನಾನು ಒಪ್ಪುವುದಿಲ್ಲ. ಈ ಆಯುರ್ವೇದ ಮತ್ತು ಯುನಾನಿ ಈ ಎರಡೂ ಇಲ್ಲಿ ಹುಟ್ಟಿ ಬೆಳೆದು ಸಾವಿರಾರು ವರ್ಷಗಳಿಂದ ಇಲ್ಲಿ ಚಲಾವಣೆಯಲ್ಲಿರುತ್ತವೆ. ಆದರೆ ನಮಗೆ ಒದಗಿಸಿರತಕ್ಕ ರಿಪೋರ್ಟಿನಲ್ಲಿ ಇವುಗಳ ಬಗ್ಗೆ ಒಂದು ಚಕಾರ ಶಬ್ದ ಕೂಡ ಇಲ್ಲ. ಆದಾಗ್ಯೂ ನಾವೆಲ್ಲರೂ ದೇಶ ಭಕ್ತರು ಮತ್ತು ಸೋಷಿಯಲಿಜಂ ತರತಕ್ಕವರು—ಇವುಗಳ ವಿಚಾರವಾಗಿ ನಾವೆಲ್ಲರೂ ಮಾತನಾಡಿದ್ದೂ ಆಡಿದ್ದೇ. ಬಹಳ ದಿನಗಳಿಂದಲೂ ಬೆಳೆದು ಬಂದಿರತಕ್ಕ ಒಂದು ಸಿಸ್ಟಂ ಅದು ಯಾವುದೇ ಆಗಿರಲಿ ಅದನ್ನು ಎಂದೂ ಹಾಳುಮಾಡಬಾರದು. ಮತ್ತೊಮ್ಮೆ ಇವುಗಳನ್ನು ಜಾರಿಗೆ ತರಬೇಕೆಂದು ನಾನು ಹೇಳುತ್ತೇನೆ.

ಇನ್ನು ನಾನು ಮಾನ್ಯ ಮಂತ್ರಿಗಳಿಗೆ ಮಾನ್ಯ ಅಧ್ಯಕ್ಷರ ಮೂಲಕ ಹೇಳುವುದೇನೆಂದರೆ ಆ ಬೌರಿಂಗ್ ಆಸ್ಪತ್ರೆಗೆ ಒದಗಿಸತಕ್ಕ ಹಾಸಿಗೆಗಳೇನಿವೆ ಅವು ನೆನ್ನೆ ಮೊನ್ನೆ ಒದಗಿಸಿದ ಹಾಸಿಗೆಗಳಲ್ಲ; ಅವುಗಳೆಲ್ಲಾ ಹಿಂದೆ 30 ವರ್ಷಗಳ ಕೆಳಗೆ ಅಲ್ಲಿ ಒಬ್ಬ ಕರ್ನಲ್ ಹೆನ್ಸ್ ಎಂದು ಇದ್ದರು, ಅವರ ಕಾಲದಲ್ಲಿ ಅವುಗಳನ್ನು ಒದಗಿಸಿದ್ದು ಅಲ್ಲಿಂದೀಚೆಗೆ ಅವುಗಳನ್ನು ಬದಲಾಯಿಸಿಲ್ಲ. ಅವುಗಳಲ್ಲಿ ತಗಣೆಗಳು ತುಂಕೊಂಡು ಅಲ್ಲಿಗೆ ಬರತಕ್ಕ ರೋಗಿಗಳ ಮೈಲಿ ಅಷ್ಟಿಷ್ಟು ರಕ್ತ ಇದ್ದರೆ ಅದನ್ನೆಲ್ಲಾ ಹೀರಿ ಬಿಡುತ್ತವೆ. ಹೀಗೆ ಸಾಮಾನ್ಯವಾಗಿ ಆಸ್ಪತ್ರೆಗೆ ಬರತಕ್ಕ ರೋಗಿಗಳಿಗೆ ಮೈನಲ್ಲಿ ರಕ್ತವಿರುವುದಿಲ್ಲ ಎಂದು ಅಲ್ಲಿ ರಕ್ತ ಕೊಡುವುದು ವಾಡಿಕೆ. ಆದರೆ ಈ ಆಸ್ಪತ್ರೆಯಲ್ಲಿ ರಕ್ತ ಕೊಡುವುದರ ಬದಲು ರೋಗಿಗಳ ರಕ್ತವನ್ನೇ ಅಲ್ಲಿ ಹೀರುವುದಕ್ಕೆ ವ್ಯವಸ್ಥೆಮಾಡಿದ್ದಾರೆಂದರೆ ತಪ್ಪಲ್ಲ.

ಇನ್ನು ಈ ಆಸ್ಪತ್ರೆಗಳಿಗೆ ಸೇರುವುದಕ್ಕೂ ಕೂಡ ರೋಗಿಗಳಿಗೆ ಏಕ್‌ದಂ ಸಾಧ್ಯವಿಲ್ಲ ಅದಕ್ಕೆ ಎಂ. ಎಲ್. ಎ. ಅಥವಾ ಎಂ. ಎಲ್. ಸಿ. ಇಲ್ಲವೇ ಯಾರಾದರೂ ಕಾರ್ಪೊರೇಟರು ಅಲ್ಲವೇ ದೊಡ್ಡ ಮನುಷ್ಯರ ಶಿಫಾರ್ಸುಬೇಕು. ಇಲ್ಲದಿದ್ದ ಅರವರು ಸೇರುವುದಕ್ಕೆ ಸಾಧ್ಯವಿಲ್ಲ.

ಇನ್ನು ಯಾರಾದರೂ ಎಕ್ಸ್‌ರೇ ತೆಗೆಸಬೇಕೆಂದು ಬಂದರೆ ಅಲ್ಲಿ ಫಿಲಂ ಸಪ್ಲೈ ಇಲ್ಲ ಎಂದು ಹೇಳಿ 3—4 ದಿನಗಳ ಗಟ್ಟಲೆ ತಿರುಗುವಂತೆ ಮಾಡುತ್ತಾರೆ. ಆ ಬೌರಿಂಗ್ ಆಸ್ಪತ್ರೆಯಲ್ಲಿ ಒಬ್ಬ ಲೇಡಿ ಸರ್ಜನ್ ಸಹಾ ಇಲ್ಲ.

ಇನ್ನು ಇದೇ ರೀತಿ ಬೆಂಗಳೂರು ಸಿಟಿಯಲ್ಲಿ ಒಂದು ದೊಡ್ಡ ಆಸ್ಪತ್ರೆ ಇದೆ. ಅದನ್ನು ಜನರು ವಿಕ್ಟೋರಿಯಾ ಆಸ್ಪತ್ರೆ ಎಂದು ಕರೆದರೆ ಅದನ್ನು ನಾನು ಮೆಕನ್ಸೈಜ್ಡ್ ಸ್ಲಾಟರ್ ಹೌಸ್, ಎಂದು ಕರೆಯುತ್ತಿದ್ದೇನೆ. ಈ ಹೆಸರನ್ನು ನಾನು ಆ ಆಸ್ಪತ್ರೆಗೆ ಇಟ್ಟಿದ್ದೇನೆ. ಇಲ್ಲಿಗೆ 2—3 ತಿಂಗಳ ಕೆಳಗೆ ಅಲ್ಲಿಗೆ ತಿಪಟೂರಿನಿಂದ ಒಬ್ಬ ಮರದಿಂದ ಕೆಳಗೆ ಬಿದ್ದು ಏನೋ ಒಂದು ರೋಗಬರುತ್ತಿದೆ ಎಂದು ಅದರ ಚಿಕಿತ್ಸೆಗೆ ಬಂದಿದ್ದ. ಅತನನ್ನು ನೋಡಿ ನನಗೆ ಬಹಳ ಸಂಕಟವಾಯಿತು ಆ ರೋಗಿಯು

ಮೈನಲ್ಲಿ ರಕ್ತದ ಚಿಹ್ನೆ ಕೂಡ ಇರಲಿಲ್ಲ. ಮೈನಲ್ಲಿ ಎಂಕೆ, ಚರ್ಮ ಮಾತ್ರ ಇದ್ದವು. ನಾನು ಮಂತ್ರಿಗಳನ್ನು ಕರೆದುಕೊಂಡು ಅಲ್ಲಿಗೆ ಹೋಗಬೇಕೆಂದಿದ್ದೆ. ಆದರೆ ನನಗೆ ಆಗ ಕಾಲ ಸಿಕ್ಕಲಿಲ್ಲ.

ಇನ್ನು ಆ ಲೇಡಿ ಹಾಜಿ ಇಸ್ಮಾಯಿಲ್ ಸೇಟ್ ಹೆರಿಗೆ ಆಸ್ಪತ್ರೆಯೇನಿದೆ ಅದನ್ನು ನಾನು ಒಂದು ಜೈಲಿಗೆ ಹೋಲಿಸಿದ್ದೇನೆ, ಆ ಆಸ್ಪತ್ರೆಗೆ ಹೋಗುವುದು ಜೈಲಿಗೆ ಹೋಗುವುದು ಎರಡೂ ಒಂದೇ. ಅಲ್ಲಿ ನಡೆಯುತ್ತಿರುವುದೆಲ್ಲಾ ಚೆನ್ನಾಗಿದೆ ಎಂದು ನನಗೂ ಮಾನ್ಯ ಮಂತ್ರಿಗಳಿಗೂ ಅನ್ನಿಸಬಹುದು. ಆದರೆ ಅದರ ನಿಜಾಂಶ ತಿಳಿಯಬೇಕಾದರೆ ಅಲ್ಲಿಗೆ ಹೋಗತಕ್ಕ ಹೆಣ್ಣುಮಕ್ಕಳನ್ನು ಕೇಳಬೇಕು.

ಶ್ರೀ ಎಚ್. ಸಿದ್ಧವೀರಪ್ಪ.—ಅಲ್ಲಿರತಕ್ಕ ಡಾಕ್ಟರುಗಳನ್ನು ವರ್ಗಮಾಡುತ್ತೇವೆಂದರೆ ಅಲ್ಲಿಯ ಜನರು ಬೇಡ ಎನ್ನುತ್ತಾರೆ. ಏಕೆ?

ಶ್ರೀ ಎಸ್ ಹಮೀದ್ ಷಾ.—ನನಗೆ ಬಂದಿರತಕ್ಕ ವರದಿ ಹಾಗಿದೆ. ಮಾನ್ಯ ಮಂತ್ರಿಗಳ ಗಮನ ಅತ್ತ ಹರಿಯಬೇಕು. ಇನ್ನು ಬೆಂಗಳೂರಿನಲ್ಲಿ ಮೂರು ದೊಡ್ಡ ಆಸ್ಪತ್ರೆಗಳು ಬೇರೆ ಇರುತ್ತವೆ. ಆ ಮೂರು ಆಸ್ಪತ್ರೆಗಳು ಯಾವುವೆಂದರೆ—ಸೆಯಿಂಟ್ ಮಾರ್ಥಾಸ್, ಸೆಯಿಂಟ್ ಫಿಲೋಮಿನಾ ಮತ್ತು ಸಿ. ಎಸ್. ಐ. ಆಸ್ಪತ್ರೆ. ಇವು ಬರೀ ಶ್ರೀಮಂತರಿಗಾಗಿಯೇ ಇರತಕ್ಕ ಆಸ್ಪತ್ರೆಗಳು. ಅಲ್ಲಿ ಬಡವರಿಗೆ ಅವಕಾಶವಿಲ್ಲ. ಹಾಗಾದರೆ ಬಡವರಿಗೇ ಒಂದು ರೀತಿಯ ರೋಗ ಶ್ರೀಮಂತರಿಗೇ ಒಂದು ರೀತಿಯ ರೋಗ. ಬಡವರಿಗೆ ಒಂದು ರೀತಿಯ ಔಷಧಿ ಮತ್ತು ಶ್ರೀಮಂತರಿಗೇ ಒಂದು ರೀತಿಯ ಔಷಧಿ, ಬಡವರಿಗೇ ಒಂದು ಸ್ಮಶಾನ ಶ್ರೀಮಂತರಿಗೇ ಒಂದು ಸ್ಮಶಾನ ಎಂದು ಬೇರೆ ಬೇರೆ ಕಟ್ಟುವುದಕ್ಕೆ ಸಾಧ್ಯವೇ? ಇಂಥ ಆಸ್ಪತ್ರೆಗಳಿಗೆಲ್ಲಾ ಹೋಗತಕ್ಕವರು ಬ್ಲಾಕ್ ಮಾರ್ಕೆಟಿಯರ್ಸ್ ಮತ್ತು ದೊಡ್ಡ ದೊಡ್ಡ ಅಧಿಕಾರಿಗಳ ಮಕ್ಕಳು ವೃಷಮ ತೋಂಕೆ ಬನಿಹುಯೆ ಬಚ್ಚೆ ಕಿತನಿ ಜಲ್ದಿ ಜವಾನ್ ಹೋತಾಹೈ? ಅಲ್ಲಿ ಬೇರೆ ಬಡವರಿಗೂ ಅನುಕೂಲವಾಗುವಂತೆ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಿಗೆ ಅಧ್ಯಕ್ಷರ ಮೂಲಕ ಪ್ರಾರ್ಥನೆ ಮಾಡಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri H. SIDDAVEERAPPA.—I want to tell my hon. friend Sri Hameed Shah that in indigenous system of medicine, Unani is also included. I have visited the places where unani medicine is manufactured. We are also supplyiag unani medicine to the public.

ಶ್ರೀ ಎಸ್. ಹಮೀದ್ ಷಾ.—ಹಾಗಿದ್ದರೆ ಈಗ ಮೈಸೂರಿನಲ್ಲಿ ಇರತಕ್ಕ ಯುನಾನಿ ಕಾಲೇಜು ಏನಾಗಿದೆ ಹೇಳುತ್ತೀರಾ?

Sri H. SIDDAVEERAPPA.—I have been given to understand that not even two or three students have applied. If there are sufficient number of students, even now, I am prepared to open a Unani Class.

MADAM SPEAKER.—The House will adjourn now, to meet at 12 Noon tomorrow. There will be no Question Hour tomorrow.

The House adjourned at Six of the Clock to meet again at twelve of the Clock on Wednesday, the 12th July 1972.

WD 18183—GPB—550—14-11-1972

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Wednesday, the 12th July 1972/Ashadha 21, 1894 (Saka)

The House met in the Assembly Chamber, Vidhana Soudha, at Twelve of the Clock.

MADAM SPEAKER [SMT. K. S. NAGARATHNAMMA] in the Chair.

REVISED BUDGET ESTIMATES FOR 1972-73

Demands for Grants: Demand No. 18, 20, 38, 51 and 22

† ಶ್ರೀ ಎಚ್. ಸಿದ್ದವೀರಪ್ಪ (ಆರೋಗ್ಯ ಶಾಖೆಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ನಿನ್ನೆದಿವಸ ನಾನು ಮಂಡಿಸಿರತಕ್ಕಂಥ ಡಿಮ್ಯಾಂಡ್ ಮೇಲೆ ವಿಪುಲವಾದ ಚರ್ಚೆಯಾಗಿ ಈ ಸಭೆಯ ಎರಡೂ ಭಾಗದ ಸುಮಾರು 22 ಜನ ಮಾನ್ಯ ಸದಸ್ಯರುಗಳು ಇದರಲ್ಲಿ ಭಾಗವಹಿಸಿದ್ದರು. ವೈಯಕ್ತಿಕವಾಗಿ ನನ್ನ ವಿಚಾರದಲ್ಲಿ ಬಹಳ ಆದರದ ಮಾತುಗಳನ್ನಾಡಿದ್ದಾರೆ. ಅದಕ್ಕಾಗಿ ಅಭಾರಿಯಾಗಿದ್ದೇನೆ ಮತ್ತು ಚಿರಋಣಿಯಾಗಿದ್ದೇನೆ. ಎಷ್ಟರಮಟ್ಟಿಗೆ ಅವರ ಆಶಯವನ್ನು ಪೂರೈಸುವುದಕ್ಕೆ ಭಗವಂತನು ಶಕ್ತಿ ಕೊಡುತ್ತಾನೋ ನನಗೆ ಗೊತ್ತಿಲ್ಲ. ಈ ಇಲಾಖೆಯಲ್ಲಿರುವವರಿಗೆ ತ್ರಿಕರಣಶುದ್ಧಿಯಾಗಿ ನಾನು ನನ್ನ ಕರ್ತವ್ಯವನ್ನು ನಿರ್ವಹಣೆ ಮಾಡುತ್ತೇನೆ ಅನ್ನತಕ್ಕಂಥ ಒಂದು ಭರವಸೆಯನ್ನು ಈ ಸಭೆಗೆ ಕೊಡುತ್ತೇನೆ. ಹೊಗಳಿಕೆಗೆ ಹಿಗ್ಗದೆ, ತೆಗಳಿಕೆಗೆ ಯಾವ ರೀತಿಯಿಂದಲೂ ಕುಗ್ಗದ ಒಂದು ದೃಢವಾದ ನಂಬಿಕೆಯನ್ನು ಕೆಲಸದಲ್ಲಿ ಇಟ್ಟುಕೊಂಡು ನನ್ನ ಕಾರ್ಯ ಮಾಡುತ್ತೇನೆ ಎಂದು ಇಷ್ಟು ಮಾತ್ರ ಹೇಳುತ್ತೇನೆ. ಈ ಬೇಡಿಕೆಗಳ ಮೇಲೆ ಮಾತನಾಡಬೇಕಾದರೆ ನನ್ನ ಮಾನ್ಯ ಸ್ನೇಹಿತರಾದ ರಾಮನಗರದ ಶ್ರೀಮಾನ್ ಪುಟ್ಟಸ್ವಾಮಯ್ಯನವರು ನನ್ನ ವಿಚಾರದಲ್ಲಿ ವೈಯಕ್ತಿಕವಾಗಿ ಒಳ್ಳೆಯ ಮಾತನ್ನು ಆಡಿದ್ದಾರೆ. ಆದರೆ ಅವರು ಅಭಾರ ಸಲ್ಲಿಸಿದರೂ ಅದರಲ್ಲಿ ರಾಜಕೀಯವನ್ನು ಸಹ ಬೆರೆಸಿದ್ದಾರೆ. ನನಗೆ ಅದು ಆಶ್ಚರ್ಯವಾಗುತ್ತದೆ. ಅವರು ಈ ಸಭೆಯನ್ನು ಭಾರತದ ಕಥೆಗೆ ಹೋಲಿಕೆಮಾಡಿ ಮಾನ್ಯ ಅಧ್ಯಕ್ಷರನ್ನು ಕೃಷ್ಣನಿಗೂ, ವಿರೋಧಪಕ್ಷದವರನ್ನು ಪಾಂಡವರಿಗೂ, ನಮ್ಮನ್ನು ಕೌರವರಿಗೂ ಹೋಲಿಕೆ ಮಾಡಿದ್ದಾರೆ. ಆದರೆ ವಾಸ್ತವಾಂಶ ಬೇರೆಯಾಗಿದೆ. ನಾನು ಸರ್ವಜ್ಞನ ನೀತಿಯನ್ನು ಒಪ್ಪತಕ್ಕ ಮನುಷ್ಯ. ಭಾರತದ ಕಥೆಯ ಬಗ್ಗೆ ಸರ್ವಜ್ಞ ಏನು ಹೇಳಿದ್ದಾನೆ ಎಂಬುದನ್ನು ಜ್ಞಾಪಕದಲ್ಲಿ ಇಟ್ಟುಕೊಂಡರೆ ಸಾಕು. ಅದಕ್ಕಿಂತ ಹೆಚ್ಚು ನಾನು ಹೇಳುವುದಿಲ್ಲ. ಇಷ್ಟರಮಟ್ಟಿಗೆ ಮಾತ್ರ ಹೇಳುತ್ತೇನೆ, ನೀವು ಪಾಂಡವರೂ ಅಲ್ಲ, ನಾವು ಕೌರವರೂ ಅಲ್ಲ, ನಮ್ಮ ಮುಖಂಡರು ದುರ್ಯೋಧನ ಕೂಡ ಅಲ್ಲ, ನಾನು ಕರ್ಣನೂ ಅಲ್ಲ, ನಾವೆಲ್ಲಾ ಹುಲು ಮನುಜರು.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಅಧ್ಯಕ್ಷರು ಕೃಷ್ಣ ಎಂಬುದನ್ನಾದರೂ ಒಪ್ಪುತ್ತೀರಾ?

ಶ್ರೀ ಎಚ್. ಸಿದ್ಧವೀರಪ್ಪ.—ನಮ್ಮ ದೃಷ್ಟಿಯಲ್ಲಿ ಇನ್ನು 5 ವರ್ಷವಾದ ಮೇಲೆ ಬಹುಶಃ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್ ಅವರು ಯು. ಎನ್. ಒ. ದಲ್ಲಿ ಅಧ್ಯಕ್ಷರಾಗಿ ಎಷ್ಟರಮಟ್ಟಿಗೆ

---

† Indicates that the remarks or speeches have not been revised by the member concerned.

(ಶ್ರೀ ಎಚ್. ಸಿದ್ದವೀರಪ್ಪ)

ಹೆಸರು ತೆಗೆದುಕೊಂಡರೋ ಅಷ್ಟೇ ಹೆಸರನ್ನು ತೆಗೆದುಕೊಳ್ಳುತ್ತಾರೆ. ಇದುವರೆಗೆ ಇಂತಹವರು ನಮಗೆ ಅಧ್ಯಕ್ಷರಾಗಿ ಸಿಕ್ಕಿರಲಿಲ್ಲ, ಮುಂದೆ ಕೂಡ ಸಿಗುತ್ತಾರೋ ಇಲ್ಲವೋ ಗೊತ್ತಿಲ್ಲ. ಅವರು ನಮಗೆ ಅಧ್ಯಕ್ಷರಾಗಿ ಈಗ ಸಿಕ್ಕಿರುವುದು ಬಹಳ ಸಂತೋಷವಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರು ಈ ರಾಜ್ಯದ ಲಕ್ಷ್ಮಿ ಎಂಬುದನ್ನು ತಾವು ಒಪ್ಪಿಕೊಳ್ಳುತ್ತೀರಾ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ತಮ್ಮನ್ನು ನೋಡಿದರೆ ಗಾಂಧಾರಿಯ ಮಕ್ಕಳಂತೆ ಕಾಣುತ್ತೀರಿ?

ಶ್ರೀ ಎಚ್. ಸಿದ್ದವೀರಪ್ಪ.—ನಮ್ಮ ಸ್ನೇಹಿತರಿಗೆ ಇಷ್ಟು ಮಾತ್ರ ಹೇಳುತ್ತೇನೆ; ನಾವೆಲ್ಲಾ ಪ್ರಪಂಚದಲ್ಲಿ ಹೇಗೆ ಇದ್ದೇವೆ ಎಂಬ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ:

"ಬದುಕು ಜಟಕಾಬಂಡಿ, ವಿಧಿಯದರ ಸಾಹೇಬ ।
ಕುದುರೆ ನೀನ್, ಅವನು ಪೇಳ್ದಂತೆ ಪಯಣಿಗರು ॥
ಮದುವೆಗೋ ಮಸಣಕೋ ಹೋಗೆಂದ ಕಡೆಗೋಡು ।
ಪದ ಕುಸಿಯೆ ನೆಲವಿಹುದು—ಮಂಕುತಿಮ್ಮ ॥

ಇದನ್ನು ನಾವು ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು. ಪರಮಾತ್ಮನು ಯಾವ ಕೆಲಸವನ್ನು ನಮಗೆ ಕೊಡುತ್ತಾನೋ ಅದನ್ನು ಮಾಡೋಣ. ಈ ಮಾತನ್ನು ಆಂಗ್ಲ ಕವಿ ಒಬ್ಬನು ಹೇಳಿದ್ದಾನೆ. ಮಾನ್ಯ ಅರ್ಮುಗಂ ಅವರು ನನ್ನ ಬಗ್ಗೆ ಮಾತನಾಡುತ್ತಾ, ಈ ಇಲಾಖೆಯಲ್ಲಿ ಕೆಲಸ ಮಾಡಲು ನಿಮಗೆ ಏನಾದರೂ ವ್ಯಸನ ಇದೆಯೋ ಎಂದು ಕೇಳಿದರು. ನಾನು ಹೇಳುತ್ತೇನೆ; "Honour and shame from no condition, rise, act well your part and therein lies all honour" ಎಂದು ಇವೊತ್ತಿನ ದಿವಸ ನಮಗೆ ಯಾವ ಒಂದು ಖಾತೆಯನ್ನೇ ಕೊಟ್ಟಿರಲಿ, ನಮಗೆ ಕೊಟ್ಟಿರುವ ಕೆಲಸವನ್ನು, ಒಳ್ಳೆಯ ಅಡಿಗೆಯವನಿಗೆ ಎಂತಹ ಸಾಮಾನುಗಳನ್ನು ಕೊಟ್ಟರೂ ರುಚಿಯಾಗಿ ಹೇಗೆ ಅಡಿಗೆ ಮಾಡುತ್ತಾನೋ ಅದರಂತೆ ತ್ರಿಕರಣಶುದ್ಧಿಯಿಂದ ಕೆಲಸ ಮಾಡಿದರೆ ಅದೇ ದೊಡ್ಡ ಕೆಲಸ. ನಮ್ಮ ಪಕ್ಷದ ಮುಖಂಡರ ವಿಚಾರದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಇವೊತ್ತು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರತಕ್ಕಂಥ ನಾವು ನಮ್ಮ ದೇಶದಲ್ಲಿ ಯಾವ ಒಂದು ಪ್ರಜಾಪ್ರಭುತ್ವದ ತಳಹದಿಯ ಮೇಲೆ ನಮ್ಮ ಪಕ್ಷದ ಒಬ್ಬರು ಮುಖಂಡರನ್ನು ಆರಿಸಿದ್ದೇವೋ ಆ ಮುಖಂಡರಿಗೆ ನಾವು ಲಾಯಲ್ ಆಗಿರುವುದು ಮುಖ್ಯ. ಇಲ್ಲದಿದ್ದರೆ ಪ್ರಜಾಪ್ರಭುತ್ವ ಬೆಳೆಯುವುದಿಲ್ಲ. ಎಲ್ಲರೂ ಲೀಡರ್ ಆಗುವುದಕ್ಕೆ ಸಾಧ್ಯವಿಲ್ಲ. ಒಂದೇಪಕ್ಷ ಅಧಿಕಾರಕ್ಕೆ ಬರಬೇಕು ಎಂದು ನಿಮ್ಮ ಪಕ್ಷವನ್ನು ತೆಗಳುವುದಕ್ಕೆ ನಾನು ಹೋಗುವುದಿಲ್ಲ. ಹಿಂದೆ ನಾನು ಆ ಕಡೆ ಕುಳಿತಿದ್ದಾಗ ಅನೇಕ ಸಲ ತೆಗಳಿದ್ದೇನೆ.

ಇವೊತ್ತು ನಾವೆಲ್ಲರೂ ಜವಾಬ್ದಾರಿ ಸ್ಥಾನದಲ್ಲಿದ್ದೇವೆ. ಆದ್ದರಿಂದ ನಮ್ಮ ಪಕ್ಷದ ಮುಖಂಡರ ವಿಚಾರದಲ್ಲಿ ನಾವೆಲ್ಲರೂ ಲಾಯಲ್ ಆಗಿ ಇರಬೇಕಾದ್ದು ನಮ್ಮ ಕರ್ತವ್ಯ. ಆದ್ದರಿಂದ ಆ ರೀತಿ ನಾವು ನಮ್ಮ ಕರ್ತವ್ಯವನ್ನು ಮಾಡುತ್ತೇವೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಒಂದು ವಿಷಯವನ್ನು ಮಾನ್ಯ ಸದಸ್ಯರೆಲ್ಲರೂ ಹೇಳಿದರು, ಅದೇನೆಂದರೆ ನಿಮ್ಮ ಹತ್ತಿರ ಹಣ ಇಲ್ಲ, ನೀವು ಬರೀ ಕೈಯಲ್ಲಿ ಏನು ಮಾಡುತ್ತೀರಿ, ಹೇಗೆ ಮಾಡುತ್ತೀರಿ ಎಂದು. ಈ ಇಲಾಖೆಗೆ ಬಡ್ಜೆಟ್ಟಿನಲ್ಲಿ ಇಟ್ಟಿರತಕ್ಕ ಹಣ ಅಷ್ಟೇ ಅಲ್ಲ. ಇದಕ್ಕೆ ಇನ್‌ವಿಜಿಬಲ್ ಸೋರ್ಸಸ್ ಬೇರೆ ಇವೆ. ಯೂನಿಸೆಫ್, ಡಬ್ಲ್ಯು. ಎಚ್. ಒ. ಮತ್ತು ವರ್ಲ್ಡ್ ಬ್ಯಾಂಕಿನಿಂದ ಬರುತ್ತದೆ, ಕೇಂದ್ರ ಸರ್ಕಾರದಿಂದ ಬರುತ್ತದೆ. ಇವೆಲ್ಲಾ ನಮ್ಮ ಬಡ್ಜೆಟ್ಟಿನಲ್ಲಿ ಬರುವುದಿಲ್ಲ. ನಮ್ಮ ಬಡ್ಜೆಟ್ಟನ್ನು ತೆಗೆದುಕೊಂಡು ನೋಡಿದರೆ 1970-71ನೇ ಸಾಲಿನ ಅಕ್ಚುಯಲ್ಸ್ ಮೆಡಿಕಲ್‌ಗೆ 874 ಲಕ್ಷ ರೂಪಾಯಿಗಳು ಖರ್ಚು ಆಗಿದ್ದು 1971–72ರಲ್ಲಿ ಪರಿಷ್ಕೃತ ಅಂದಾಜು 913.8 ಲಕ್ಷ, 72-73ರ ಅಂದಾಜು 984.40 ಲಕ್ಷ. ಇದೇ ರೀತಿ ಪಬ್ಲಿಕ್ ಹೆಲ್ತ್‌ನಲ್ಲಿ ಅಕ್ಚುಯಲ್ಸ್ 70-71ರಲ್ಲಿ 7 0.41 ಲಕ್ಷ ರೂಪಾಯಿಗಳು. 1971-72ರಲ್ಲಿ ಪರಿಷ್ಕೃತ ಅಂದಾಜು 583.65 ಲಕ್ಷ ರೂಪಾಯಿಗಳು. 72-73ರಲ್ಲಿ ಅಂದಾಜು 821 ಲಕ್ಷ ರೂಪಾಯಿಗಳು ಈ ರೀತಿ ಹಣವನ್ನು ಒದಗಿಸಲಾಗಿದೆ. ಇದರ ಜೊತೆಗೆ ಕೇಂದ್ರ ಸರ್ಕಾರದವರು ಕೊಟ್ಟಿರತಕ್ಕ ಅನೇಕ ಹಣಗಳು ಇವೆ. ಬೆಂಗಳೂರು ಡಿವಿಜನ್‌ನಲ್ಲಿ ಪ್ರಾಯೋಗಿಕವಾಗಿ ಕೈಗೊಳ್ಳುವ

ಆರೋಗ್ಯ ಯೋಜನೆಗೆ ವರ್ಲ್ಡ್ ಬ್ಯಾಂಕಿನಿಂದ ನಮಗೆ 11 ಕೋಟಿ ರೂಪಾಯಿಗಳು ಬರುತ್ತವೆ.
ಇದರಲ್ಲಿ ಕೇಂದ್ರ ಸರ್ಕಾರದವರು ಪ್ರಾಯೋಗಿಕವಾಗಿ ಒಂದು ಯೋಜನೆಯನ್ನು ಎರಡು ರಾಜ್ಯ
ಗಳಿಗೆ ಕೊಟ್ಟಿದ್ದಾರೆ. ಒಂದು ಮೈಸೂರು ರಾಜ್ಯ, ಇನ್ನೊಂದು ಉತ್ತರ ಪ್ರದೇಶ ಈ ಎರಡು
ರಾಜ್ಯಗಳಿಗೆ ಪ್ರಾಯೋಗಿಕವಾಗಿ ಒಂದು ಯೋಜನೆಯನ್ನು ಕೊಟ್ಟಿದ್ದಾರೆ. ನಮ್ಮಲ್ಲಿ ಕೆಲಸ
ಮಾಡತಕ್ಕ ಜನ ಯಾರು ಇದ್ದಾರೆ ಅವರು ಸರಿಯಾಗಿ ಕೆಲಸ ಮಾಡುತ್ತಾರೆ ಎಂದು ಅವರಿಗೆ ಕಂಡು
ಬಂದರೆ, ಆ ಯೋಜನೆಯನ್ನು ಬಾಕಿ ಕಡೆಗೂ ವಿಸ್ತರಿಸುವುದಕ್ಕೆ ಅವಕಾಶ ಇದೆ ಆದ್ದರಿಂದ
ಮಾನ್ಯ ಸದಸ್ಯರು ಹಣದ ಕೊರತೆಯನ್ನು ದಯಮಾಡಿ ಮನಸ್ಸಿಗೆ ಹಚ್ಚಿಕೊಳ್ಳಬಾರದು ಎಂದು
ನಾನು ಹೇಳುತ್ತೇನೆ. ಹಿಂದೆ ಈ ಬಾಬಿಗೆ ಬಡ್ಜೆಟ್ಟಿನಲ್ಲಿ ಕೊಟ್ಟಿರುವುದನ್ನು ತಿರುವಿಹಾಕಿ ನೋಡಿ
ತಮಗೆ ಗೊತ್ತಾಗುತ್ತದೆ, ಬಡ್ಜೆಟ್ಟಿನಲ್ಲಿ ಕೊಟ್ಟಷ್ಟು ಹಣವನ್ನು ಪೂರ್ಣವಾಗಿ ಖರ್ಚು ಮಾಡಿದ್ದರೆ
ನಮ್ಮ ಪುಣ್ಯ ಎಂದು ಹೇಳಬಹುದು. ನೌಕರರ ಸಂಬಳದ ಮಟ್ಟಿಗೆ ಮಾತ್ರ ಖರ್ಚು ಮಾಡುತ್ತಾರೆ.
ಅದನ್ನೇನೂ ಯೋಚನೆ ಮಾಡಬೇಕಾಗಿದ್ದಿಲ್ಲ. ಆದರೆ ಡೆವಲಪ್‌ಮೆಂಟ್ ಆಕ್ಟಿವಿಟೀಸ್ ಎನಿದ ಅದಕ್ಕೆ
ಸಂಬಂಧಪಟ್ಟ ಕೆಲಸಗಳನ್ನು ಮಾಡುವುದಕ್ಕೆ ಹಣವನ್ನು ಖರ್ಚು ಮಾಡಬೇಕಾಗಿದೆ. ಇದರ
ಜೊತೆಗೆ ನಾನು ತಮಗೆ ಇನ್ನೊಂದು ಅಂಕಿಅಂಶವನ್ನು ಕೊಡಬೇಕು ಎಂದರೆ ಈ ಇಲಾಖೆಯಲ್ಲಿ
34,252 ಜನ ನೌಕರರಿದ್ದಾರೆ. ಬಹುಶಃ ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ಬವರೀ
ನಾರಾಯಣ್ ಅವರ ಇಲಾಖೆಯನ್ನು ಬಿಟ್ಟರೆ ಹೆಚ್ಚಿಗೆ ನೌಕರರನ್ನು ಇಟ್ಟುಕೊಂಡಿರತಕ್ಕ ಇಲಾಖೆ
ಈ ನಮ್ಮ ಮೆಡಿಕಲ್ ಮತ್ತು ಪಬ್ಲಿಕ್ ಹೆಲ್ತ್ ಇಲಾಖೆ ಎಂದು ಕಾಣುತ್ತದೆ. ಈ ಎರಡು ಇಲಾ
ಗಳಲ್ಲಿ ನೌಕರರು ಮತ್ತು ಅಧಿಕಾರಿಗಳು ತುಂಬಿಕೊಂಡಿರುವುದು ಕಾಣುತ್ತದೆ. ನಮ್ಮ ರಾಜ್ಯ
ದಲ್ಲಿ ಪಟ್ಟಣ ಮತ್ತು ಹಳ್ಳಿ ಎಲ್ಲಾ ಸೇರಿ ಒಟ್ಟು 1,447 ಆಸ್ಪತ್ರೆಗಳು ಇವೆ. ಇದರ ಜೊತೆಗೆ 576
ಆಯುರ್ವೇದ ಆಸ್ಪತ್ರೆಗಳಿವೆ. ಹಾಸಿಗೆಗಳ ಸ್ಟ್ರೆಂಗ್ತ್ ಹಳ್ಳಿಗಳಲ್ಲಿ 4,526 ಇದೆ. ಪಟ್ಟಣಗಳಲ್ಲಿ
23 173 ಹಾಸಿಗೆಗಳಿವೆ. ಎಲ್ಲಾ ಒಟ್ಟು 27,699 ಹಾಸಿಗೆಗಳಿವೆ. ಹೊಸದಾಗಿ ಒಂದು ಹಾಸಿಗೆ
ಕೊಡಬೇಕು ಎಂದರೆ ಸಾಲಿಯಾನ 2,982.5 ರೂಪಾಯಿಗಳು ಖರ್ಚಾಗುತ್ತದೆ. 100ಕ್ಕೆ 80
ಭಾಗ ಜನರು ಇರತಕ್ಕ ಹಳ್ಳಿಗಾಡಿಗೆ ಡಾಕ್ಟರುಗಳು ಹೋಗಬೇಕು ಎನ್ನುವ ಮಾತನ್ನು ನಮ್ಮ
ಪ್ರಧಾನಿಗಳು ಮೊನ್ನೆತಾನೇ ಹೇಳಿದ್ದಾರೆ. ಪ್ರಪ್ರಥಮವಾಗಿ ಕೇಂದ್ರ ಸರ್ಕಾರದವರು ಮತ್ತು
ರಾಜ್ಯಸರ್ಕಾರದವರು ಕೊಡತಕ್ಕಂಥ ನೆರವು, ಮತ್ತು ಆರೋಗ್ಯಕ್ಕೆ ಸಂಬಂಧಪಟ್ಟ ಅನುಕೂಲತೆ
ಗಳು ಏನಿವೆ ಅವುಗಳನ್ನು ಇಲ್ಲಿಯವರೆಗೆ ನಾವು ಯಾರಿಗೆ ಕೊಟ್ಟಿಲ್ಲ ಅಂಥಾ ಜನಗಳಿಗೆ ನಾವು
ಮುಖ್ಯವಾಗಿ ಕೊಡಬೇಕು, ಇನ್ನು ಮೇಲೆ ನಮ್ಮ ಗಮನವನ್ನು ಹಳ್ಳಿಗಳ ಕಡೆಗೆ ಕೊಡಬೇಕು ಎನ್ನ
ತಕ್ಕಂಥಾದ್ದು ಕೇಂದ್ರಸರ್ಕಾರದ ಮತ್ತು ರಾಜ್ಯಸರ್ಕಾರದ ನೀತಿಯಾಗಿವೆ. ಇದೇ ರೀತಿ ಹಿಂದೆ
ಒಂದು ಸಾರಿ ಒಬ್ಬರು ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದಾಗ ನಾನು ಹೇಳಿದ್ದೇನೆ, ಇದು
ವರೆಗೆ ಯಾವ ಯಾವ ಅನುಕೂಲಗಳನ್ನು ಪಟ್ಟಣಗಳವರು ಅನುಭವಿಸುತ್ತಿದ್ದರೋ ಅದನ್ನು ಸ್ವಲ್ಪ
ಕಡಿಮೆ ಮಾಡಿ ಅನುಕೂಲಗಳು ಇಲ್ಲದೆ ಇರತಕ್ಕ ಬಡಜನಗಳು ಯಾರು ಇದ್ದಾರೆ ಅವರಿಗೆ ಅನುಕೂಲ
ಗಳನ್ನು ಒದಗಿಸಲು ಹಣವನ್ನು ಖರ್ಚು ಮಾಡಬೇಕಾಗಿವೆ ಎಂದು. ಆಸ್ಪತ್ರೆಗಳಿಗೆ ವೈದ್ಯಕೀಯ
ಸಹಾಯವನ್ನು ಕೊಡತಕ್ಕಂಥಾ ಜವಾಬ್ದಾರಿ ಕಾರ್ಪೊರೇಷನ್‌ಗಳಿಗೆ ಇದೆ. ದೊಡ್ಡ ದೊಡ್ಡ
ನಗರಗಳಲ್ಲಿ ಎಂದರೆ ಬೆಂಗಳೂರು, ಮೈಸೂರು ಮತ್ತು ದಾವಣಗೆರೆ ಮುಂತಾದ ಪಟ್ಟಣಗಳಲ್ಲಿ
ನಗರಸಭೆಗಳು ಆಸ್ಪತ್ರೆಗಳಿಗೆ ಬೇಕಾದ ಹಣವನ್ನು ಒದಗಿಸಿ ಜನಗಳಿಗೆ ವೈದ್ಯಕೀಯ ಸೌಲಭ್ಯವನ್ನು
ಒದಗಿಸಿಕೊಡುವ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು. ಹಳ್ಳಿಗಾಡಿನ ಕಡೆ ಸರ್ಕಾರದವರು
ಹೆಚ್ಚಿನ ಗಮನವನ್ನು ಕೊಡಲು ಅವಕಾಶವನ್ನು ಕೊಡಬೇಕು ಎಂದು ನಾವು ಅವರನ್ನು ಕೇಳಿಕೊಂಡಿ
ದ್ದೇವೆ. ಈಗ ದೇಶದಲ್ಲಿರತಕ್ಕ ಖಾಯಿಲೆ ಯಾವುವೆಂದರೆ ಹೊಟ್ಟೆಗೆ ಇಲ್ಲದೇ ಇರತಕ್ಕ ಜನಗಳ
ಖಾಯಿಲೆ, ನ್ಯೂಟ್ರೀಷಿಯಸ್ ಫುಡ್ ಇಲ್ಲದೆ ಯಾವ ರೀತಿಯಿಂದಲೂ ಸುಧಾರಿಸಿಕೊಳ್ಳುವುದಕ್ಕೆ
ಶಕ್ತಿಯಿಲ್ಲದೇ ಇರತಕ್ಕ ಜನಗಳ ಖಾಯಿಲೆ, ಈ ರೀತಿ 100ಕ್ಕೆ 80 ರಷ್ಟು ಜನ ಇರತಕ್ಕ ಹಳ್ಳಿ
ಗಾಡಿನಲ್ಲಿ ಜನರು ಈ ಖಾಯಿಲೆಗಳಿಂದ ನರಳುತ್ತಿರುತ್ತಾರೆ.

ಪಟ್ಟಣಗಳಲ್ಲಿರತಕ್ಕ ಜನ ಡಿಸೀಜ್ ಆಫ್ ಆಫ್ಲ್ಯೂಯೆನ್ಸ್‌ನಿಂದ ನರಳುತ್ತಿದ್ದಾರೆ ಎಂದು ಒಬ್ಬ
ತಜ್ಞರು ಈ ರೀತಿ ಹೇಳಿದ್ದಾರೆ. Sheila Gordon in her book "WORLD
PROBLEMS" says as follows :

"We of the richer nations have been fortunate. We have
learned some of these lessons already. It took us many
centuries to overcome our own ignorance and superstition, and
even now most people have some very odd and unscientific
ideas—'old wives' tales'—about health and hygiene.

(ಶ್ರೀ ಎಚ್. ಸಿದ್ದವೀರಪ್ಪ)

"Moreover we have our own problems born not of poverty but of affluence.

"Few doctors today in the United Kingdom see cases of malnutrition. Rickets, the vitamin-deficiency disease so common during times of unemployment and depression before the war, has virtually disappeared. But now many doctors are worried by the increasing number of children and adults who are overweight, and therefore likely to develop heart-disease, and other dangerous conditions, in later life.

" It is very pleasant to have shops full of sweets and money to buy them, not so pleasant to have thousands of young people needing false teeth because of dental decay, before they leave school.

"We are fortunate that most of us earn enough money for a few luxuries but not so fortunate that one of our most common luxuries—cigarettes—contain tars that can cause cancer. Lung cancer kills—very painfully—25,000 people in the U.K. every year, and despite the great campaign to

"Warn people of the dangers, despite the fact that a high percentage of doctors who see the effects of the disease have cut out smoking, there has been no appreciable decrease in cigarette sales.

"Life in a modern industrial country is varied, stimulating and for most of us, most of the time, great fun. But for many of us at some time in our lives, it will become too hurried, too complex. We shall have to rely on tranquillisers to calm us, and stimulants to peep us up. Some of us may become part of the half-million people in England and Wales or the million in the United States who need some degree of help from the mental health services."

ಇದು ನಮ್ಮ ದೇಶದಲ್ಲಿರತಕ್ಕಂತಹ ಪದ್ಧತಿ. ಸಾಮಾನ್ಯವಾಗಿ ಪಟ್ಟಣದಲ್ಲಿರುವವರು ಎಲ್ಲಾ ಈ ಡಿಸೀಸ್ ಆಫ್ ಅಫ್ಲುಯೆನ್ಸಿನಿಂದ ಸಫರ್ ಮಾಡುತ್ತಾರೆಂದು ನಾನು ಹೇಳುವುದಿಲ್ಲ. ಆದರೆ ಡಿಸೀಸ್ ಆಫ್ ಅಫ್ಲುಯೆನ್ಸಿನಿಂದ ಪಟ್ಟಣದಲ್ಲಿ ಸಫರ್ ಮಾಡಿದಷ್ಟು ಹಳ್ಳಿಗಾಡಿನಲ್ಲಿ ಸಫರ್ ಮಾಡುತ್ತಾ ಇಲ್ಲ. ಆದ್ದರಿಂದ ಯಾರಿಗೆ ಈ ಬಡತನದಿಂದ ಖಾಯಿಲೆ, ಕಸಾಲೆ ಬರುತ್ತದೆ, ಅವರ ಕಡೆ ಹೆಚ್ಚಿನ ಗಮನ ಕೊಡಬೇಕಾದುದು ಸರ್ಕಾರದ ಆದ್ಯ ಕರ್ತವ್ಯವೆಂದು ತಿಳಿದು, ಆ ರೀತಿಯಲ್ಲಿ ಸರ್ಕಾರವು ಕೆಲಸ ಮಾಡುತ್ತಿದೆ. ಆದ್ದರಿಂದ ನಮ್ಮ ರಾಜ್ಯವನ್ನು 1,116 ಬ್ಲಾಕುಗಳಾಗಿ ವಿಂಗಡಿಸಿದ್ದೇವೆ. ಅದರಲ್ಲಿ 15 ಸಾವಿರ ಪ್ರಜೆಗಳು ಒಂದು ಬ್ಲಾಕಿನಲ್ಲಿ ಬರುತ್ತಾರೆ. ಈಗ 261 ಬ್ಲಾಕಿನಲ್ಲಿ ಆಸ್ಪತ್ರೆಗಳು ಇಲ್ಲ. ಅದಕ್ಕೋಸ್ಕರ ನಾಳೆಯ ದಿವಸ ಸ್ಟೈಪೆಂಡರಿ ಬೇಸಿಸ್‌ನಲ್ಲಿ ಏನು ಡಾಕ್ಟರುಗಳನ್ನು ತೆಗೆದುಕೊಳ್ಳುತ್ತೇವೆ, ಅದಕ್ಕಾಗಿ ಒಂದು ಕಮಿಟಿ ಕೂಡ ನೇಮಕ ಮಾಡಿ, ಅದು ಕೆಲಸ ಮಾಡುತ್ತಿದೆ. ಈ 261 ಬ್ಲಾಕಿನಲ್ಲಿ ಸಾಧ್ಯವಾದಷ್ಟು ಆಸ್ಪತ್ರೆಗಳನ್ನು ತೆರೆಯಬೇಕೆಂದು ಸರ್ಕಾರದವರು ತೀರ್ಮಾನ ಮಾಡಿದ್ದಾರೆ. ಅದೇ ರೀತಿ ಈ ಡಾಕ್ಟರುಗಳು ಏನಿದ್ದಾರೆ, ಅವರು ಬೆಂಗಳೂರಿಗೆ ಹಾಕಿ, ಮೈಸೂರಿಗೆ ಹಾಕಿ, ನಾಗಮಂಗಲಕ್ಕೆ ಹಾಕಿ ಎಂದು ಕೇಳಿದರೆ ಖಂಡಿತವಾಗಿಯೂ ಆ ರೀತಿ ಕೊಡುವುದಿಲ್ಲವೆಂದು ಹೇಳಿದ್ದೇವೆ. ಇದು ದೇಶದಲ್ಲಿ ಬಂದಿರತಕ್ಕಂತಹ ದೊಡ್ಡ ದುರ್ದೈವ. ಈಗ ಒಬ್ಬ ಡಾಕ್ಟರ್ ಮೊದಲು ನಾನು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಇರಬೇಕು,

ಇಲ್ಲದಿದ್ದರೆ ಮೈಸೂರಿನಲ್ಲಿ, ಇಲ್ಲದಿದ್ದರೆ ಜಿಲ್ಲಾ ಕೇಂದ್ರಗಳಲ್ಲಿ ಅದೂ ಇಲ್ಲದಿದ್ದರೆ ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ನಲ್ಲಿ ಇರಬೇಕೆಂದು ಆಶೆ ಪಡುತ್ತಾನೆಯೇ ವಿನಹ ಹಳ್ಳಿಗಾಡಿಗೆ ಹೋಗಬೇಕೆಂದು ಮನಸ್ಸು ಮಾಡುತ್ತಾ ಇಲ್ಲ. ಇದು ಏಕೆ ಹೀಗೆ ಆಗುತ್ತದೆ? ಬಹುಶಃ ಇದು ಡಾಕ್ಟರುಗಳ ತಪ್ಪಲ್ಲವೆಂದು ಕಾಣುತ್ತದೆ. ಕಾರಣ, ಈ ರೀತಿಯ ಟ್ರೈನಿಂಗ್ ಅವರಿಗೆ ಆಗಿದೆ. ಅವರು ಒಂದು ಸಿಟಿಯ ವಾತಾವರಣದಲ್ಲಿ, ಸಿಟಿಯ ಸೌಕರ್ಯಗಳಿಗೆ ಹೊಂದಿಕೊಂಡು ಬೆಳೆದಂತಹ ಜನರಾಗಿರುತ್ತಾರೆ. ಅವರು ಇವತ್ತು ಹಳ್ಳಿಗಾಡಿನಲ್ಲಿ ಹೋಗಿ ಇರಬೇಕಾದರೆ, ಅವರಿಗೆ ಬಂದಿರತಕ್ಕಂತಹ ತೊಂದರೆ ಏನಂದರೆ ಅಲ್ಲಿ ಮೊದಲನೆಯದಾಗಿ ವಾಸಕ್ಕೆ ಮನೆ ಇರುವುದಿಲ್ಲ. ಅದೂ ಅಲ್ಲದೆ ಅಲ್ಲಿ ಮುಖ್ಯವಾಗಿ ಶೌಚಕ್ಕೆ ಹೋಗುವ ಒಂದು ದೊಡ್ಡ ಕೊರತೆ ಇದೆ. ಅದರಲ್ಲಿಯೂ ಹೆಣ್ಣುಮಕ್ಕಳಿಗೆ ಬಹಳ ತೊಂದರೆಯಾಗಿದೆ. ನನಗೆ ಒಬ್ಬಳು ಹೆಣ್ಣುಮಗಳು ಡಾಕ್ಟರು "ಹಳ್ಳಿಗಾಡಿನಲ್ಲಿ ಒಂದು ಲ್ಯಾಟ್ರಿನ್ ಕೂಡ ಇರುವುದಿಲ್ಲ; ನಾನು ಹೇಗೆ ತಂಬಿಗೆ ಹಿಡಿದುಕೊಂಡು ಹೊರಗೆ ಹೋಗಲಿ' ಎಂದು ಕೇಳಿದಳು. It appealed me very much. ಈ ರೀತಿ ಹಳ್ಳಿಗಾಡಿನ ಪರಿಸ್ಥಿತಿ ಇರುವುದರಿಂದ ಹೆಚ್ಚಿನ ಜನರು ಆ ಭಾಗಗಳಿಗೆ ಹೋಗುತ್ತಾ ಇಲ್ಲ. ಈ ರೀತಿ ನೀವು ಇರತಕ್ಕಂಥ ಆಸ್ಪತ್ರೆಗಳ ಹತ್ತಿರ ಮನೆಗಳನ್ನು ಕಟ್ಟಿದ್ದರೆ ಅವರು ಅಲ್ಲಿ ಹೇಗೆ ಹೋಗುತ್ತಾರೆಂದು ಕೆಲವರು ಕೇಳಿದರು. ಬಹುಶಃ ಆ ರೀತಿ ಮನೆಗಳು ಇಲ್ಲದಿರುವುದರಿಂದ ಹೆಚ್ಚಿನ ಜನರು ಹಳ್ಳಿಗಾಡಿಗೆ ಹೋಗುತ್ತಾ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕೋಸ್ಕರ ನಮ್ಮ ಸರ್ಕಾರದವರು ಈ ವರ್ಷ ಹೌಸಿಂಗ್ ಬೋರ್ಡಿನ ಮುಖಾಂತರ 500 ಮನೆಗಳನ್ನು ಕಟ್ಟಿಸಬೇಕೆಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಅದಕ್ಕಾಗಿ ಡಿಬೆಂಚರ್ ರೈಸ್ ಮಾಡಿ, ಎಲ್ಲೆಲ್ಲಿ ಯಾವ್ಯಾವ ಹಳ್ಳಿಗಳಲ್ಲಿ ಡಾಕ್ಟರುಗಳಿಗೆ, ಸ್ಟಾಫುಗಳಿಗೆ ವಾಸಕ್ಕೆ ಮನೆ ಇಲ್ಲ, ಅಂತ ಕಡೆಗಳಿಗೆ ಪ್ರಥಮ ಗಮನಕೊಡಬೇಕೆಂದು ನಾವು ಹೌಸಿಂಗ್ ಬೋರ್ಡಿನವರಿಗೆ ಕೇಳಿಕೊಂಡಿದ್ದೇವೆ. ಇದಕ್ಕೆ ಡಿಬೆಂಚರ್ ರೈಸ್ ಮಾಡುವುದಕ್ಕೂ ನಾವು ಅವಕಾಶ ಕೊಟ್ಟಿದ್ದೇವೆ ಈ ರೀತಿ ಡಾಕ್ಟರುಗಳಿಗೆ ಮತ್ತು ಸ್ಕೂಲ್‌ಮಾಸ್ಟರುಗಳಿಗೆ ಒಂದು ಕೋಟಿ ರೂಪಾಯಿ ಹಣದಿಂದ ಹಳ್ಳಿಗಳಲ್ಲಿ ಮನೆಗಳನ್ನು ಕಟ್ಟಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ಈ ವಿಚಾರವನ್ನು ತಮಗೆ ಹೇಳಲು ನನಗೆ ತುಂಬಾ ಸಂತೋಷವಾಗುತ್ತದೆ ಇದನ್ನು ಮಾಡಿದರೆ ಡಾಕ್ಟರುಗಳು ಈಗ ಹೋಗುವುದಕ್ಕೆ ಏನು ನಿರಾಕರಿಸುತ್ತಾರೆ, ಅದು ತಪ್ಪಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಹಾಗೆಯೇ ಇವತ್ತು ಸಾಮಾನ್ಯವಾಗಿ ಎಲ್ಲಾ ಹಳ್ಳಿಗಳಲ್ಲಿಯೂ ವಿದ್ಯುಚ್ಛಕ್ತಿ ವ್ಯವಸ್ಥೆ ಇದೆ. ಅದರ ಜೊತೆಗೆ ಎಲ್ಲೆಲ್ಲಿ ಹೆಚ್ಚು ಆಸ್ಪತ್ರೆಗಳ ಆವಶ್ಯಕತೆ ಇದೆ, ಅಲ್ಲಿ ಆಸ್ಪತ್ರೆಗಳನ್ನು ಕೊಡಬೇಕೆಂದು ಮಾಡಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಈ 261 ಬ್ಲಾಕಿನಲ್ಲಿ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳು ಇಲ್ಲ. ಆದ್ದರಿಂದ ಅದನ್ನೂ ಇದರಲ್ಲಿ ಸೇರಿಸಬೇಕು.

ಶ್ರೀ ಎಚ್. ಸಿದ್ದವೀರಪ್ಪ.—ನಿನ್ನೆಯ ದಿವಸ ತಾವು ಈ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದೀರಿ. ಇದರ ಬಗ್ಗೆ ನಾನು ಸೆಕ್ರೆಟರಿಯವರಿಗೆ ವಿಚಾರ ಮಾಡಿ ಎಂದು ಹೇಳಿದ್ದೇನೆ. ಅದನ್ನು ಅವರು ವಿಚಾರಮಾಡುತ್ತಿದ್ದಾರೆ.

ಈಗಾಗಲೇ ತಾಲ್ಲೂಕು ಬೋರ್ಡು ಆಸ್ಪತ್ರೆಗಳನ್ನು ಸರ್ಕಾರದವರು ವಹಿಸಿಕೊಂಡ ವಿಷಯದಲ್ಲಿ ತಾವು ಆಗಲೇ ಸ್ತುತ್ಯಾರ್ಹವಾದ ಕಾರ್ಯ ಮಾಡಿದ್ದೀರಿ ಎಂದು ಹೇಳಿದ್ದಕ್ಕಾಗಿ ನಾನು ತಮಗೆ ವಂದಿಸುತ್ತೇನೆ. ಈಗಿರತಕ್ಕಂತಹ ಪರಿಸ್ಥಿತಿಯಲ್ಲಿ ಅನೇಕ ವಿಷಯಗಳನ್ನು ನನ್ನ ಗಮನಕ್ಕೆ ತಂದಿದ್ದೀರಿ. ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಚಾರವನ್ನು ಹೇಳಿದರು. ಬೆಂಗಳೂರು ನಗರದಲ್ಲಿರತಕ್ಕಂತಹ ಅನುಕೂಲಗಳನ್ನು ಹಳ್ಳಿಗಾಡುಗಳಲ್ಲಿ ಇರತಕ್ಕಂತಹ ಜನರಿಗೂ ಸಿಗುವಂತೆ ಮಾಡಬೇಕೆಂದು ಹೇಳಿದರು. ಈಗಾಗಲೇ ಇದು ನನ್ನ ಗಮನಕ್ಕೆ ಬಂದಿದೆ. ನಾನೂ ಇದರ ಬಗ್ಗೆ ಯೋಚನೆ ಮಾಡಿದ್ದೇನೆ. ಬೆಂಗಳೂರು ನಗರದಲ್ಲಿರುವ ವಿಕ್ಟೋರಿಯಾ ಆಸ್ಪತ್ರೆ ಮತ್ತು ಇತರ ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ಒತ್ತಡವನ್ನು ತಪ್ಪಿಸುವುದಕ್ಕೋಸ್ಕರ ಜಿಲ್ಲಾ ಆಸ್ಪತ್ರೆಗಳು ಏನಿವೆ, ಅಲ್ಲಿ ಪ್ರತಿಯೊಂದು ಸ್ಪೆಷಲೈಸ್ಡ್ ಬ್ರಾಂಚ್‌ಗಳಾದ, ಇ. ಎನ್. ಟಿ. ಪೇಡಿಯಾಟ್ರಿಕ್ಸ್, ಆರ್ಥೋಪೇಡಿಯಾಟ್ರಿಕ್ಸ್—ಮುಂತಾದವುಗಳನ್ನು ಎಲ್ಲೆಲ್ಲಿ ಕೊಡುವುದಕ್ಕೆ ಸಾಧ್ಯವಿದೆ, ಅದೆಲ್ಲವನ್ನೂ ಕೊಡಬೇಕೆಂದು ಮಾಡಿದ್ದೇವೆ. ಶಿವಮೊಗ್ಗದಲ್ಲಿ ಮೆಗ್ಗಾನ್ ಆಸ್ಪತ್ರೆಯಲ್ಲಿರತಕ್ಕಂತಹ ಸ್ಟಾಫ್ ಇಲ್ಲಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿರತಕ್ಕಂತಹ ಸ್ಟಾಫಿಗಿಂತ ಯಾವ ರೀತಿಯಲ್ಲಿಯೂ ಕಡಿಮೆ ಇಲ್ಲದಂತಿದೆ. ಇವತ್ತು ನಮ್ಮಲ್ಲಿ ಪೋಸ್ಟ್ ಗ್ರಾಜ್ಯುಯೇಟ್ ಮಾಡಿರತಕ್ಕಂತವರೂ ಬರುತ್ತಿದ್ದಾರೆ. ಅವರು ತಾಲ್ಲೂಕು ಮತ್ತು ಜಿಲ್ಲಾ ಲೆವಲುಗಳಲ್ಲಿ ಸೇವೆ ಮಾಡುವುದಕ್ಕೆ ತಯಾರಾಗಿದ್ದಾರೆ. ಅವರನ್ನು ಅಂಥ ಕಡೆಗಳಿಗೆ ಕಳಿಸಬೇಕಾಗುತ್ತದೆ. ಈ ರೀತಿ ಎಲ್ಲಾ ಡಿಪಾರ್ಟ್‌ಮೆಂಟುಗಳನ್ನು ಜಿಲ್ಲಾ ಆಸ್ಪತ್ರೆಗಳಲ್ಲಿಯೂ ತೆರೆಯಬೇಕೆಂದುದು ಸರ್ಕಾರದ ಆಶೆಯಾಗಿದೆ. ಜಿಲ್ಲಾ ಆಸ್ಪತ್ರೆಗಳಲ್ಲಿಯೂ

(ಶ್ರೀ ಎಚ್. ಸಿದ್ಧವೀರಪ್ಪ)

ಸಹ 250 ಬೆಡ್ಡಿಗಿಂತ ಕಡಿಮೆ ಇಲ್ಲದ ರೀತಿಯಲ್ಲಿ ಆಸ್ಪತ್ರೆಗಳನ್ನು ಮಾಡಬೇಕೆಂದು ಸರ್ಕಾರದ ಇಚ್ಛೆ.

ನಮ್ಮ ಮಾನ್ಯ ಗುಲ್ಬರ್ಗದ ಸ್ನೇಹಿತರು ಆ ಭಾಗದಲ್ಲಿ ಬಹಳ ತೊಂದರೆ ಇದೆಯೆಂದು ಹೇಳಿದ್ದಾರೆ. ಅದನ್ನು ಒಪ್ಪಿಕೊಳ್ಳುತ್ತೇನೆ. ಬೀದರಿನಲ್ಲಿ ಈ ಆಸ್ಪತ್ರೆಯ ಕೆಲಸದ ಕಾರ್ಯ ನಿಲ್ಲಲು ಸರ್ಕಾರದ ಎಕಾನಮಿ ಆರ್ಡರ್ ಕಾರಣವಾಗಿದೆ. ಅದನ್ನು ಮಾನ್ಯ ಪಿ.ಡಬ್ಲ್ಯು.ಡಿ. ಮಂತ್ರಿಯವರು ಸಹ ಹೇಳಿದ್ದಾರೆ. ಅದನ್ನು ಈಗ ಲಿಫ್ಟ್ ಮಾಡಿದ್ದೇವೆ. ಬೀದರ್ ಸಹ ಬಹಳ ಹಿಂದುಳಿದ ಪ್ರದೇಶ. ಎಷ್ಟೋ ಎಪಿಡೆಮಿಕ್ ಡಿಸೀಸಸ್ ಆ ಪ್ರದೇಶವನ್ನು ತನ್ನ ತವರೂರನ್ನಾಗಿ ಮಾಡಿಕೊಂಡಿದೆ. ಅಂಥ ಕಡೆಯೂ ಆಸ್ಪತ್ರೆಗಳನ್ನು ಕೊಡಬೇಕೆಂದು ಸರ್ಕಾರದ ಆಶಯವಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮೆಡಿಕಲ್ ಕಾಲೇಜಿನಲ್ಲಿ ರಿಸರ್ವೇಷನ್ ಮಾಡುವ ಪದ್ಧತಿ ಸರಿಯಾಗಿಲ್ಲವೆಂದು ಹೇಳಿದರು. ಇದು ಒಂದು ಮೂಲಭೂತವಾದ ಪ್ರಶ್ನೆ. ಬಹುಶಃ ಅದಕ್ಕೆ ಈಗಲೇ ಜವಾಬು ಕೊಡತಕ್ಕದ್ದು ಸರಿಯಲ್ಲವೆಂದು ಕಾಣುತ್ತದೆ. ಅದು ಬಹಳ ಯೋಚನೆ ಮಾಡತಕ್ಕಂತಹ ವಿಚಾರ. ಈ ವಿಚಾರದಲ್ಲಿ ಉತ್ತರವನ್ನು ಹೇಳಬೇಕಾದರೆ, ರಾಜ್ಯಾಂಗವನ್ನು ನೋಡಬೇಕು, ಮತ್ತು ಇದುವರೆಗೆ ಮಾಡಿದಂತಹ ಇತರ ಕಾನೂನುಗಳನ್ನು ನೋಡಬೇಕಾಗಿದೆ. ಪಟ್ಟಣದಲ್ಲಿರತಕ್ಕಂತಹ ಮಕ್ಕಳು ಓದಿದ ಹಾಗೆ ಹಳ್ಳಿಗಾಡಿನಲ್ಲಿರತಕ್ಕಂತಹ ಮಕ್ಕಳು ಓದುವುದಕ್ಕೆ ಅಲ್ಲಿ ಆ ರೀತಿಯ ಎನ್‌ವಯರ್ನ್‌ಮೆಂಟ್ ಇರುವುದಿಲ್ಲ. ಅಲ್ಲಿ ವ್ಯವಸಾಯದಲ್ಲಿರತಕ್ಕಂತಹ ಜನರಿಗೆ ಈ ಒಂದು ಒಳ್ಳೆಯ ಅವಕಾಶ ಇರುವುದಿಲ್ಲ. ನಾನು ಓದಿದ್ದಕ್ಕೂ ನನ್ನ ಮಗ ಈಗ ಓದುವುದಕ್ಕೂ ಬಹಳ ವ್ಯತ್ಯಾಸ ಇದೆ. ನಾನು ಓದಿದ್ದಾಗ ಇದ್ದಂತಹ ಪದ್ಧತಿಯೇ ಬೇರೆ; ಈಗ ಇರತಕ್ಕಂತಹ ಪದ್ಧತಿಯೇ ಬೇರೆ. ಆ ಕಾಲಕ್ಕೂ ಈ ಕಾಲಕ್ಕೂ ಬಹಳ ವ್ಯತ್ಯಾಸ ಇದೆ. ಅವರು ಈ ಮೆರಿಟ್ ಎಂದು ಯಾವ ಒಂದು ಯಾರ್ಡ್‌ಸ್ಟಿಕ್ಕನ್ನು ಉಪಯೋಗಿಸುತ್ತಿದ್ದಾರೆ, ಅದರಿಂದ ಹಳ್ಳಿಗಾಡಿನಲ್ಲಿರತಕ್ಕಂತಹ ಮಕ್ಕಳಿಗೆ ಅನುಕೂಲವಾಗುವುದಿಲ್ಲವೆಂಬ ವಾದವನ್ನು ಎತ್ತಿದ್ದಾರೆ. ನಾನು ಇದರ ಬಗ್ಗೆ ಏನೂ ಹೇಳುವುದಿಲ್ಲ. ಈಗ ಹೇಳುವುದು ಸರಿಯಲ್ಲವೆಂದು ತಿಳಿದಿದ್ದೇನೆ.

ಇನ್ನು ಅನೇಕ ಇತರ ಸ್ನೇಹಿತರಾದ ಡಾ. ಪುಟ್ಟದಾಸರು, ವಿರೋಧಪಕ್ಷದ ನಾಯಕರು, ಕಲ್ಮಂಕರ್ ಅವರು, ಮತ್ತು ಮಾನ್ಯ ಪುಟ್ಟಶಾಮಯ್ಯನವರು,—ಮುಂತಾದವರು ಖಾಸಗೀ ಮೆಡಿಕಲ್ ಕಾಲೇಜಿನ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಾವು ಇವತ್ತು ಒಂದು ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ, ಕಾಲೇಜುಗಳನ್ನು ತೆಗೆದುಕೊಳ್ಳುವುದಕ್ಕಿಂತ, ಸಾಧ್ಯವಾದರೆ ಈಗಿರತಕ್ಕಂತಹ ಖಾಸಗೀ ಕಾಲೇಜುಗಳ ಆಡಳಿತವನ್ನು ನಮ್ಮ ಸಮಾಜವಾದ ಮತ್ತು ಪ್ರಜಾಪ್ರಭುತ್ವಕ್ಕನುಗುಣವಾಗಿ ತಿದ್ದುವುದಕ್ಕೆ ಸಾಧ್ಯವಾಗುತ್ತದೆಯೋ ಎಂಬುದನ್ನು ನೋಡಬೇಕಾಗುತ್ತದೆ. ನಾನು ಅವರಿಗೆ ಪದೇ ಪದೇ ಅಪೀಲ್ ಮಾಡಿಕೊಂಡು ಬರೆದಿದ್ದೇನೆ. ಹಣ ಇಲ್ಲದಿರುವುದರಿಂದ ಇದನ್ನು ಬಿಟ್ಟಿದ್ದೇವೆಂದು ನೀವು ಹೇಳಬಹುದು. ಸರ್ಕಾರದವರು ಮನಸ್ಸು ಮಾಡಿದರೆ ಹಣ ಹೇಗೆ ಬೇಕಾದರೂ ಮಾಡಿ ತರಬಹುದು. ಇವೊತ್ತಿನ ದಿವಸ ನಮ್ಮ ಸಮಾಜಕ್ಕೆ ಅನುಗುಣವಾಗಿ, ಬದಲಾದ ಪ್ರಜೆಗಳ ಸ್ಥಿತಿಗತಿಗಳಿಗೆ ಅನುಸಾರವಾಗಿ, ಅವುಗಳನ್ನು ಅರ್ಥಮಾಡಿಕೊಂಡು ಯಾವ ಯಾವ ರೀತಿಯಲ್ಲಿ ಸುಧಾರಣೆ ಮಾಡಬೇಕು ಆ ರೀತಿ ಮಾಡುವುದಕ್ಕೆ ಅವರು ಮೊದಲು ಕೆಲಸ ಮಾಡಬೇಕಾಗಿದೆ. ಇನ್ನು ಅಡ್ಮಿಷನ್ಸ್ ವಿಚಾರ. ನಾವೆಲ್ಲಾ ಪ್ರಜೆಗಳಿಂದ ಆರಿಸಿ ಬಂದವರೇ. ಯಾವಾಗ 97 ಜನ ಮಾನ್ಯ ಸದಸ್ಯರು ನನಗೆ ಲಿಖಿತ ಮೂಲಕ ತಿಳಿಸಿದಾಗ್ಯೂ ಅದನ್ನು ನಾನು ಸ್ವಲ್ಪ ಕಣ್ಣುಬಿಟ್ಟು ನೋಡಬೇಕಾಯಿತು. ಕೊನೆಯದಾಗಿ ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ಈಗಾಗಲೇ ಅಡ್ಮಿಷನ್ ತಿಂಗಳು ಕಮೆನ್ಸ್ ಆಗಿದೆ. ಹೆಚ್ಚಿಗೆ ವಿದ್ಯಾರ್ಥಿಗಳಿಗೆ ತೊಂದರೆಯೇನೋ ಆಗಿದೆ. ತಾವೂ ನಾವೂ ಕೂಟಿಗೆ ಸಿಕ್ಕಿದಂತೆ ಸರ್ಕಾರ ಹೇಳಿರತಕ್ಕ ಅಂಶವನ್ನು ಗಮನದಲ್ಲಿಟ್ಟುಕೊಂಡು ಅವರು ಆಲೋಚನೆ ಮಾಡುವುದು ಯುಕ್ತವೆಂದು ಅವರಿಗೆ ಮನವಿಯನ್ನು ಈ ಸ್ಥಳದಿಂದಲೇ ಸಲ್ಲಿಸುತ್ತೇನೆ. ಅದನ್ನು ಬಹುಶಃ ಅವರು ಒಪ್ಪಿಕೊಂಡರೆ ಬಹಳ ಒಳ್ಳೆಯದು. ಅನಿವಾರ್ಯವಾಗಿ ಏನಾದರೂ ಆದರೆ, ಅದರ ಬಗ್ಗೆ ಮುಂದೆ ಏನು ಮಾಡಬೇಕೆಂಬುದನ್ನು ನಾವು ನೋಡಬೇಕಾಗುತ್ತದೆ.

12-30 P.M.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಮಣಿಪಾಲ್ ಮೆಡಿಕಲ್ ಕಾಲೇಜು ಒಂದಿದೆ. ಅವರೂ ಸಹ ಹಿಂದೆ ಮನವಿ ಮಾಡಿದ್ದಾರೆ, ಕಸ್ತೂರಿಬಾ ಮೆಡಿಕಲ್ ಹಾಸ್ಪಿಟಲ್‌ನಿಂದ ಅವರು ಏನು

ಕ್ಲಿನಿಕಲ್ ಫೆಸಿಲಿಟೀಸನ್ನು ಪಡೆಯುತ್ತಿದ್ದಾರೋ ಅದನ್ನು ಕೈಬಿಡುವ ಪರಿಸ್ಥಿತಿ ಇದೆ. ಬಿಡಬೇಕೆಂಬ ಪ್ರಸ್ತಾಪಮಾಡುತ್ತಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ.—ಅದು ಸರಿಯಲ್ಲ. ಕ್ಲಿನಿಕಲ್ ಫೆಸಿಲಿಟೀಸ್ ಅವರು ತೆಗೆದುಕೊಳ್ಳುವುದು, ಬಿಡುವುದು ಮುಖ್ಯವಲ್ಲ, ಮಣಿಪಾಲ್ ಕಾಲೇಜು ಬೇರೆ, ಮಂಗಳೂರು ಕಾಲೇಜು ಬೇರೆ ಯೂನಿವರ್ಸಿಟಿ ಒಪ್ಪಿಕೊಂಡಿರುವ ಮಣಿಪಾಲ್ ಕಾಲೇಜು ಒಂದೇ. ಅದು ಮಂಗಳೂರಿನಲ್ಲಿ ಒಂದು ಬ್ರಾಂಚಾಗಿ ಇವತ್ತಿಗಲೂ ಕ್ಲಿನಿಕಲ್ ಫೆಸಿಲಿಟೀಸ್ ಇತ್ತು. ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಕ್ಲಿನಿಕಲ್ ಫೆಸಿಲಿಟೀಸನ್ನು ಕೊಟ್ಟಿದ್ದಾರೆ. ಆದರೆ ಕ್ಲಿನಿಕಲ್ ಫೆಸಿಲಿಟೀಸ್ ಕೊಟ್ಟಿದ್ದರಿಂದ ನಮ್ಮ ಕರ್ತವ್ಯ ಆಯಿತು ಎಂಬುದಾಗಿ ತಿಳಿದಿದ್ದರೆ ಅದು ತಪ್ಪು. ಅದು ಒಂದೇ ಮುಖ್ಯವಲ್ಲ. ರಾಜ್ಯದ ಹಿತದೃಷ್ಟಿಯಿಂದ ಎಲ್ಲವನ್ನೂ ನೋಡಿಕೊಂಡು ಕೆಲಸಮಾಡಬೇಕಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಣಿಪಾಲ್ ಕಾಲೇಜಿನವರು ಏನು ಡೊನೇಷನ್ ಕಲೆಕ್ಟ್ ಮಾಡಿದ್ದಾರೋ ಅದರಲ್ಲಿ 10-15 ಲಕ್ಷ ರೂಪಾಯಿಗಳನ್ನು ತಮ್ಮ ಗೌರ್ನಮೆಂಟ್ ಹಾಸ್ಪಿಟಲ್ಲಿನ ಮೇಂಟೆನೆನ್ಸ್‌ಗೋಸ್ಕರ ಕೊಡುತ್ತಿದ್ದಾರೆ. ಆದರೆ ಆ ಡೊನೇಷನ್ನನ್ನು ನೀವು ವಸೂಲುಮಾಡಬೇಡಿ ಎಂದು ಅವರಿಗೆ ಹೇಳಿದರೆ, ಅದನ್ನು ಅವರು ಕಲೆಕ್ಟ್‌ಮಾಡದೆ ನಿಲ್ಲಿಸಬೇಕಾಗಿ ಬರುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ಅವರು ಸುಮಾರು 20 ವರ್ಷಗಳಾದರೂ ಇನ್ನೂ ಆಡಿಟೆಡ್ ಅಕೌಂಟ್ಸ್ ಕೊಟ್ಟಿಲ್ಲ. ಅಕೌಂಟ್ಸನ್ನು ನಮ್ಮ ಕೈಲಿ ಬಂದರೆ, ಯಾವ್ಯಾವುದಕ್ಕೆ ಎಷ್ಟೆಷ್ಟು ಖರ್ಚು ಮಾಡಿದ್ದಾರೆಂಬುದು ಗೊತ್ತಾಗುತ್ತದೆ. ಒಂದು ವೇಳೆ ಅವರು ಆರೀತಿ ಮಾಡಿದ್ದರೆ, ಅಥವಾ ಆ ರೀತಿಯಾಗಿ ಖರ್ಚುಮಾಡಲು ಕೊಟ್ಟಿದ್ದರೆ ಸರ್ಕಾರದ ಮೂಲಕ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

Sri C. M. ARUMUGAM.—Has it come to the notice of the Government that the Manipal College reserves seats for the students who just complete S.S.L.C. and further that they have reserved seats to students from South-East Asian countries? Even though you have appealed to them, they may not be in a position to accommodate students from Mysore because on account of prior arrangement they have reserved seats for a period of 5 to 10 years. Will the Government instruct them to give seats to Mysoreans in preference to seats to students from South-East Asian Countries from whom they take abnormal capitation fees?

ಶ್ರೀ ಎಚ್. ಸಿದ್ದವೀರಪ್ಪ.—ಅವರು ಯಾರ್ಯಾರಿಗೆ ಎಷ್ಟೆಷ್ಟು ಸೀಟುಗಳನ್ನು ಕೊಟ್ಟಿದ್ದಾರೆ, ಎಷ್ಟು ಕ್ಯಾಪಿಟೇಷನ್ ಫೀಸ್ ತೆಗೆದುಕೊಂಡಿದ್ದಾರೆ, ಅವುಗಳ ಬಗ್ಗೆ ನನ್ನ ಹತ್ತಿರ ಯಾವ ಇನ್‌ಫರ್ಮೇಷನ್ ಇಲ್ಲ. ನನ್ನಲ್ಲಿ ಯಾವ ಕಾಗದ ಪತ್ರ ಇಲ್ಲದೆ ನಾನು ಏನೂ ಹೇಳುವುದಕ್ಕಾಗುವುದಿಲ್ಲ. ಅವರು ಇಂತಿಂಥವರ ಹತ್ತಿರ ಇಷ್ಟಿಷ್ಟು ದುಡ್ಡು ತೆಗೆದುಕೊಂಡಿದ್ದೀವೆ ಎಂದು ಹೇಳಿದ್ದರೆ ನಾನು ತಮಗೆ ತಿಳಿಸುತ್ತಿದ್ದೆ. ಇಷ್ಟುಮಟ್ಟಿಗೆ ಹೇಳುತ್ತೇನೆ, ನಿಮ್ಮ ಗವರ್ನಮೆಂಟ್ ಕೋಟಾ ಏನಿದೆಯೋ ಅದರ ಲೆಕ್ಕದಲ್ಲಿ 20 ಸೀಟುಗಳಿವೆ, ಬಾಕಿಯುದನ್ನು ನಾವು ಭರ್ತಿ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಅನೇಕ ಕಾಗದಗಳ ಮುಖಾಂತರ ಈ ವಿಚಾರವನ್ನು ಕೇಳಿಕೊಂಡಿದ್ದಾರೆ. ನಾನು ಅದಕ್ಕೆ ಒಪ್ಪಲಿಲ್ಲ. ನಾನು ಅವರಿಗೆ ಹೇಳಿರುವುದು ಇದು ಸರಿಯಾದುದಲ್ಲ. ಪ್ರತಿಯೊಂದೂ ನೀತಿಗೆ ಅನುಸರಿಸಿ ಹೋಗಬೇಕು, ಅದಕ್ಕಾಗಿ ನಮ್ಮ ಜೊತೆಯಲ್ಲಿ ಪರ್ಯಾಲೋಚನೆಮಾಡುವುದಕ್ಕೆ ಬನ್ನಿ ಎಂದು ಅವರನ್ನು ಕೇಳಿಕೊಂಡಿದ್ದೇನೆ.

ಇನ್ನು ಮಾನ್ಯ ಸ್ನೇಹಿತರೊಬ್ಬರು ಇನ್‌ಫೆಂಟ್ ಮಾರ್ಟಾಲಿಟಿ ಈಗ ಸೇಕಡ 34.5 ಇದೆ. ಮಕ್ಕಳು ಬಹಳವಾಗಿ ಸತ್ತುಹೋಗುತ್ತಿದ್ದಾರೆ. ಇದರ ವಿಚಾರದಲ್ಲಿ ಎಷ್ಟು ಆಸಕ್ತಿ ತೆಗೆದುಕೊಳ್ಳಬೇಕೋ ಅಷ್ಟು ತಗೆದುಕೊಳ್ಳುತ್ತಾ ಇಲ್ಲ. ಪ್ರಿಮೆಚೂರ್ ಬೇಬಿ ಯೂನಿಟ್ ತಗೆಯಬೇಕೆಂದು ಹೇಳಿದರು. ಅದರ ವಿಚಾರವಾಗಿ ಡಬ್ಲ್ಯು.ಎಚ್.ಓ. ಯುನಿಸೆಫ್‌ನವರು, ಕೆಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಸರ್ಕಾರ ಯೋಚನೆಮಾಡಿ ತಕ್ಕ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.

ಇನ್ನೊಬ್ಬ ಮಾನ್ಯ ಮಿತ್ರರು ಮಗುವಿನ ಜೊತೆಯಲ್ಲಿ ಇರತಕ್ಕ ತಾಯಿಯಂದಿರಿಗೆ ಆಸ್ಪತ್ರೆಗಳಲ್ಲಿ ಊಟವನ್ನು ಉಚಿತವಾಗಿ ಕೊಡಬೇಕು. ಇದನ್ನು ಹಿಂದೆ ಕೊಡುತ್ತಿದ್ದರು. ಅದರ ಬಗ್ಗೆ ಸರ್ಕಾರ

(ಶ್ರೀ ಎಚ್. ಸಿದ್ದವೀರಪ್ಪ)

ಯೋಚನೆಮಾಡಬೇಕೆಂದು ಸಲಹೆ ಮಾಡಿದರು. ಇದು ಬಹಳ ಮುಖ್ಯವಾದುದು. ಡಾಕ್ಟರುಗಳನ್ನೂ ಸಹ ನಾನು ಈ ವಿಚಾರವಾಗಿ ಕೇಳಿದ್ದೇನೆ. ಬಡವರು ಬಂದರೆ ಅವರಿಗೆ ಈ ಸೌಕರ್ಯ ಕೊಡಲಾಗುತ್ತದೆ. ಆದರೆ ಇವರು ಕೊಟ್ಟ ಊಟವನ್ನು ಯಾರೂ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲವೆಂದು ಹೇಳುತ್ತಾರೆ. ಬಹುಶಃ ಅದನ್ನೂ ಸಹ ಯೋಚನೆಮಾಡಿ ಸರ್ಕಾರ ಈ ವಿಷಯದ ಕಡೆಗೆ ಸಹಾನುಭೂತಿಯಿಂದ ವಿಚಾರಮಾಡುತ್ತದೆ. ಅಲ್ಲದೆ ಇದಕ್ಕೆ ಎಷ್ಟು ಖರ್ಚಾಗುತ್ತದೆಂಬುದನ್ನೂ ಕೂಡ ತಿಳಿದು ಏರ್ಪಾಡು ಮಾಡಲಾಗುತ್ತದೆ.

ಇನ್ನು ಸ್ಕೂಲ್ ಹೆಲ್ತ್ ಸರ್ವಿಸಸ್ ವಿಷಯ. ಈಗಿರತಕ್ಕದ್ದು ಸಾಕಷ್ಟು ಇಲ್ಲ. ಅದನ್ನು ರೀ ಆರ್ಗನೈಜ್ ಮಾಡಬೇಕು. ಇದನ್ನು ಸಹ ಇನ್ನೂ ಸರಿಯಾಗಿ ನೋಡಬೇಕೆನ್ನುವುದೇ ಸರ್ಕಾರದ ಆಶಯ.

ಇನ್ನು ಹಿರಿಯ ಸ್ನೇಹಿತರಾದಂಥ ಮಾನ್ಯ ಶ್ರೀ ನಾಗಣ್ಣನವರು ಹಾಗೂ ಶ್ರೀ ಲಿಂಗಪ್ಪನವರು ಫ್ಯಾಮಿಲಿ ಪ್ಲಾನಿಂಗ್ ವಿಷಯವಾಗಿ ಖಂಡತುಂಡವಾಗಿ ಖಂಡಿಸಿದ್ದಾರೆ. ಶ್ರೀ ನಾಗಣ್ಣನವರು ಮಾತನಾಡುತ್ತಾ ಬರೀ ಹಿಂದೂಗಳಿಗೇ ಇದನ್ನು ಅನ್ವಯಿಸುತ್ತಿದ್ದಾರೆ, ಈ ರೀತಿಯಾಗಿ ಯಾವ ದೇಶದಲ್ಲಿದೆ ಎಂಬುದಾಗಿ ಕೇಳಿದ್ದಾರೆ. ನನಗೆ ತಿಳಿದಿರುವ ಪ್ರಕಾರ ಅಧಿಕೃತ ವರದಿ ಮೂಲಕ ಹೇಳುವುದಾದರೆ, ಈ ಯೋಜನೆ 36 ದೇಶಗಳಲ್ಲಿ ಇದೆ. ಉದಾಹರಣೆಗೆ ಹೇಳುವುದಾದರೆ, ರಷ್ಯಾ, ಚೈನಾ, ಈಜಿಪ್ಟ್, ಇಂಡೋನೇಷಿಯಾ, ಬಂಗ್ಲಾದೇಶ, ಪಾಕೀಸ್ಥಾನ ಮುಂತಾದ ದೇಶಗಳಲ್ಲಿವೆ.

ಶ್ರೀ ಕೆ. ಎಂ. ನಾಗಣ್ಣ.—ಆ ದೇಶಗಳಲ್ಲಿ ಅದು ಒಂದೇ ಕೋಮಿನವರಿಗೆ ಇದೆಯೋ ಅಥವಾ ಇಡೀ ಕೋಮಿನವರಿಗೆಲ್ಲರಿಗೂ ಇದೆಯೋ ?

ಶ್ರೀ ಎಚ್. ಸಿದ್ದವೀರಪ್ಪ.—ಅಲ್ಲಿ ಎಲ್ಲಾ ಜಾತಿಯವರಿಗೂ ಇದೆ. ನಮ್ಮ ದೇಶದಲ್ಲಿಯೂ ಆ ರೀತಿಯೇ ಇದೆ. ನಮ್ಮ ದೇಶದಲ್ಲಿ ಒಂದೇ ಕೋಮಿನವರಿಗೆ ಇದನ್ನು ಅಳವಡಿಸಬೇಕೆಂದು ಹೇಳಿಲ್ಲ. ನಾನು ಮಾನ್ಯ ಸದಸ್ಯರಿಗೆ ಅಂಕಿ ಅಂಶಗಳನ್ನು ಕೊಟ್ಟರೆ ಬಹುಶಃ ನಿಜವಾದ ಅಂಶ ಅವರಿಗೆ ತಿಳಿಯಬಹುದು. ಕ್ರಿಶ್ಚಿಯನ್ನರು, ಮುಸಲ್ಮಾನರು ಎಲ್ಲರೂ ಆಪರೇಷನ್ ಮಾಡಿಸಿಕೊಂಡಿದ್ದಾರೆ. ಆದರೆ ಆಪರೇಷನ್ ಮಾಡಿಸಿಕೊಂಡವರಲ್ಲಿ ಹಿಂದೂಗಳೇ ಜಾಸ್ತಿ ಇದ್ದಾರೆ. ಈ ಬಗ್ಗೆ ಅಂಕಿ ಅಂಶಗಳನ್ನು ಹೇಳಬೇಕೆಂದು ಕೇಳಿದರೆ ಅದನ್ನೂ ಸಹ ಹೇಳುತ್ತೇನೆ. ಮಾನ್ಯ ಶ್ರೀ ನಾಗಣ್ಣನವರು ಅದರ ಬಗ್ಗೆ ವಿವರವಾದ ಅಂಕಿ ಅಂಶಗಳನ್ನು ಬೇಕೆಂದು ಇಷ್ಟಪಟ್ಟರೆ, ಅವರಿಗೆ ಅದನ್ನು ಕಳುಹಿಸುತ್ತೇನೆ. ಹಿಂದೂಗಳಲ್ಲದ ಬಾಕಿಯವರು ಕಡಿಮೆ ಸಂಖ್ಯೆಯಲ್ಲಿ ಇದ್ದಾರೆಂಬ ಅಂಶವನ್ನು ನಾನು ಒಪ್ಪಿಕೊಳ್ಳುತ್ತೇನೆ ಆದ್ದರಿಂದ ಈ ಫ್ಯಾಮಿಲಿ ಪ್ಲಾನಿಂಗ್ ಪ್ರೋಗ್ರಾಂ ಎನ್ನುವುದು ಯಾರನ್ನೂ ಬಲವಂತಪಡಿಸುವುದಿಲ್ಲ. ಇದರಲ್ಲಿ ಯಾವ ಕಾಯಿದೆಯೂ ಇಲ್ಲ. ಕಾಯಿದೆ ಇಲ್ಲದೆಯೇ ಮಾಡುವ ಯೋಜನೆ ಇದು.

ಶ್ರೀ ಕೆ. ಎಂ ನಾಗಣ್ಣ.—ನನಗೆ ಒಂದು ದೊಡ್ಡ ಅನುಮಾನ ವ್ಯಕ್ತಪಟ್ಟಿದೆ. ಇನ್ನು ಕೆಲವು ವರ್ಷಗಳ ಮೇಲೆ ಹಿಂದೂಗಳ ಸಂಖ್ಯೆ ಭಾರತ ದೇಶದಲ್ಲಿ ಕಡಿಮೆಯಾಗಿ, ಮುಸಲ್ಮಾನರ ಸಂಖ್ಯೆ ಜಾಸ್ತಿಯಾಗುತ್ತದೆ ಈ ದೇಶದಲ್ಲಿ ಮುಂದೆ ಅಂತಹ ಪರಿಸ್ಥಿತಿ ಬರಬಹುದೆಂದು ನನ್ನ ಸಂದೇಹ. ಅದಕ್ಕಾಗಿ ಯಾವ ಮಟ್ಟದಲ್ಲಿ ಮುಸಲ್ಮಾನರ ಸಂಖ್ಯೆ ಜಾಸ್ತಿಯಾಗುತ್ತದೋ ಅದೇ ಒಂದು ಮಟ್ಟದಲ್ಲಿ ಹಿಂದೂಗಳ ಸಂಖ್ಯೆಯೂ ಜಾಸ್ತಿಯಾದರೆ ಬಹಳ ಒಳ್ಳೆಯದು.

ಶ್ರೀ ಎಸ್. ಹಮೀದ್‌ಷಾ.—ಒಂದು ಸಾವಿರ ವರ್ಷಗಳಾದರೂ ಮುಸಲ್ಮಾರ ಸಂಖ್ಯೆಯು ಹಿಂದೂಗಳ ಸಂಖ್ಯೆಗೆ ಹೋಲುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಮೂರು ಮಕ್ಕಳಿಗೆ ಜಾಸ್ತಿ ಆದರೇ ಅಂಥ ನೌಕರರಿಗೆ ಇನ್‌ಕ್ರಿಮೆಂಟ್ ಕೊಡಬಾರದೆಂದು ಒಂದು ಸರ್ಕಾರದ ಆಜ್ಞೆ ಇದೆಯೆಂದು ಹೇಳುತ್ತಿದ್ದಾರಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗೆ ಇನ್‌ಕ್ರಿಮೆಂಟ್ ನಿಲ್ಲಿಸಬೇಕೆಂಬ ವಿಚಾರವೇನೂ ಇಲ್ಲ. ಹಿಂದೆ 1971ರಲ್ಲಿ ಒಂದು ಸರ್ಕಾರಿ ಆರ್ಡರ್ ಹೊರಟಿತ್ತು. ಅದರ ಪ್ರಕಾರ ಸರ್ಕಾರಿ ಕೆಲಸದಲ್ಲಿರತಕ್ಕ ಹೆಣ್ಣು ಮಕ್ಕಳಿಗೆ ಎರಡು ಮಕ್ಕಳಾದ ಮೇಲೆ ಮೂರನೆ ಮಗುವಿನ ಹೆರಿಗೆಗೆ ರಜಾ ಕೇಳಿದರೆ ಕೊಡಬಾರದು ಎಂಬುದಾಗಿತ್ತು. ಇತ್ತೀಚೆಗೆ ಆ ಆರ್ಡರನ್ನು ರದ್ದುಗೊಳಿಸಲಾಗಿದೆ. ಈಗ ಅಂಥ ಯಾವ ಒಂದು ನಿರ್ಬಂಧವೂ ಇರುವುದಿಲ್ಲ. ಹೆಚ್ಚಿಗೆ ಮಕ್ಕಳಾದರೆ ಅವರಿಂದ ಕಷ್ಟವೇ ಅಥವಾ ಸುಖವೇ ಎಂಬುದನ್ನು ಅವರೇ ಆಲೋಚನೆ ಮಾಡಿಕೊಳ್ಳಬೇಕಾಗಿದೆ. ಮಕ್ಕಳೇ ಅವರಿಗೆ ಒಂದು

ಅಸ್ತಿ ಅನ್ನುವುದಾದರೆ ಅದಕ್ಕೇನೂ ಹೇಳುವುದಕ್ಕೆ ಬರುವುದಿಲ್ಲ. ಅದರೆ, ಪ್ರಕೃತಿ ನಿಯಮದಲ್ಲಿ ಬಡವರಿಗೆ ಹೆಚ್ಚು ಮಕ್ಕಳಾಗುತ್ತಿದ್ದರೆ ಶ್ರೀಮಂತರಿಗೆ ಮಕ್ಕಳೇ ಆಗುತ್ತಿಲ್ಲ. ಅದಕ್ಕೆ ಏನು ಹೇಳುವುದಕ್ಕೂ ಆಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ರಷ್ಯಾ ದೇಶವಲ್ಲ ಎಷ್ಟು ಮಕ್ಕಳು ಜಾಸ್ತಿ ಆಗುತ್ತವೆ ಅಷ್ಟು ಬಹುಮಾನವನ್ನು ಒಂದೊಂದು ಮಕ್ಕಳಿಗೂ 100 ರೂಬೆಲ್ ಮತ್ತು 150 ರೂಬೆಲ್‌ಗಳನ್ನೂ ಬಹುಮಾನವಾಗಿ ಕೊಡುತ್ತಿದ್ದಾರಂತೆ.

ಶ್ರೀ ಎಚ್. ಸಿದ್ದವೀರಪ್ಪ.—ನನಗೆ ಗೊತ್ತಿರುವ ಪ್ರಕಾರ ರಷ್ಯಾದಲ್ಲಿ ಕೂಡ ಫ್ಯಾಮಿಲಿ ಪ್ಲಾನಿಂಗ್ ಇದೆ ಎಂದು ಹೇಳುತ್ತಾರೆ. ನಮ್ಮ ರಾಜ್ಯದಲ್ಲೂ ಕೂಡ ಈ ದಿವಸ ಎಲ್ಲರೂ ಅಂದರೆ ಹಿಂದೂಗಳೂ, ಮುಸಲ್ಮಾನರೂ ಮತ್ತು ಕ್ರೈಸ್ತರೂ ವ್ಯಾಸೆಕ್ಟಮಿ, ಟ್ಯೂಬೆಕ್ಟಮಿ ಮತ್ತು ಐ.ಯು. ಸಿ.ಡಿ. ಮಾಡಿಸಿಕೊಳ್ಳುತ್ತಿದ್ದಾರೆ. ತಮಗೆ ನಾನು ತಿಳಿಸಬೇಕೆಂದರೆ ಕಳೆದ 71-72 ರಲ್ಲಿ ವ್ಯಾಸೆಕ್ಟಮಿ ಮಾಡಿಸಿಕೊಂಡವರ ಸಂಖ್ಯೆ.—ಹಿಂದೂಗಳು 4,990 ; ಮುಸಲ್ಮಾನರು 398 ; ಮತ್ತು ಕ್ರೈಸ್ತರು 61; ಅದೇ ರೀತಿ ಟ್ಯೂಬೆಕ್ಟಮಿ ಮಾಡಿಸಿಕೊಂಡವರ ಸಂಖ್ಯೆ.—ಹಿಂದೂಗಳು. 9,054. ಮುಸಲ್ಮಾನರು 499: ಮತ್ತು ಕ್ರೈಸ್ತರು. 119. ಇದೇ ರೀತಿ ನನ್ನಲ್ಲಿ ಐ.ಯು.ಸಿ.ಡಿ. ಅಂಕಿಗಳೂ ಇವೆ. ಇದರ ಬಗ್ಗೆ ಇನ್ನೂ ಎಫೆಕ್ಟೀವಾಗಿ ಪ್ರೊಪಗ್ಯಾಂಡಾ ನಡೆದಿಲ್ಲ. ಇದನ್ನು ಯಾರೂ ಹೆಚ್ಚಿನ ಸಂಖ್ಯೆಯಲ್ಲಿ ವಿರೋಧಿಸುತ್ತಲೂ ಇಲ್ಲ.

ಇನ್ನು ಡಾ. ಪುಟ್ಟಕಾಮಯ್ಯನವರು ಒಂದು ವಿಚಾರ ಹೇಳಿದ್ದಾರೆ. ಟ್ರಿಪಲ್ ಆಂಟೀಜನ್ ಏನಿದೆ ಇದನ್ನು ಡಿಫ್ತೀರೀಯ ಮೊದಲಾದ ಖಾಯಿಲೆಗಳಿಗೆ ಕೊಡುವುದಕ್ಕೆ ಆರ್ಡರ್ ಮಾಡಿದ್ದೇವೆ. ಇನ್ನು ಡಾ. ಪುಟ್ಟಕಾಮಯ್ಯನವರು ಮತ್ತು ವಿ. ಎಲ್. ಪಾಟೀಲರವರು ಬಹುಶಃ ರಷ್ಯಾಕ್ಕೆ ಹೋಗಿ ಬಂದಿದ್ದಾರೆಂದು ಕಾಣುತ್ತದೆ. ಇವರು ಅಲ್ಲಿಗೆ ಹೋಗಿದ್ದಾಗ ಅವರು, ಆ ನಿಮ್ಮ ಯೋಗ ಮತ್ತು ಆಯುರ್ವೇದ ಎಲ್ಲಿ ! ಎಂದು ಕೇಳಿದರು ಎಂಬುದನ್ನು ಕೇಳಿ ನನಗೆ ಬಹಳ ಸಂತೋಷವಾಯಿತು. ಅಲ್ಲಿ ಮಡ್ ಫ್ಯಾಕಿಂಗ್ ಚಿಕಿತ್ಸೆಯನ್ನು ನಡೆಸುತ್ತಿದ್ದಾರಂತೆ. ಅದು ನೇಚರ್ ಕ್ಯೂರಿಗೆ ಸಂಬಂಧ ಪಟ್ಟಿದ್ದು. ಈ ದಿವಸ ನಮ್ಮ ಬೆಂಗಳೂರಿನ ಜಯನಗರದಲ್ಲಿ ಒಂದು ನೇಚರ್ ಆಸ್ಪತ್ರೆ ಇದೆ. ಅಲ್ಲಿಗೆ ಈಗಾಗಲೆ ಮೂವರು ಹೈಕೋರ್ಟಿನ ಜಡ್ಜಿಗಳು ಬಂದು ತಮ್ಮ ಖಾಯಿಲೆಯನ್ನು ವಾಸಿ ಮಾಡಿಕೊಂಡಿದ್ದಾರೆ. ಮಡ್ ಎಫಿಕೆಸಿಟ್ರೀಟ್‌ಮೆಂಟ್ ತಮಗ್ಯಾರಿಗಾದರೂ ಬೇಕಾಗಿದ್ದರೆ ಅಲ್ಲಿಗೆ ಬನ್ನಿ. ಒಂದಾವರ್ತಿ ತಾವು ಅಲ್ಲಿಗೆ ಬಂದಮೇಲೆ ನೀವು ಯಾವ ಡಾಕ್ಟರ ಹತ್ತಿರವೂ ಹೋಗಬೇಕಾ ಕಾಗಿಲ್ಲ ಎಂಬುದು ತಮಗೆ ಗೊತ್ತಾಗುತ್ತದೆ. ತಾವು ಖಾಯಿಲೆ ಬಂದಾಗ ಉಪವಾಸ ಮಾಡಿದರೆ ಬಹಳ ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್.—ಹಿರಿಯರು ಹೇಳಿದ್ದಾರಲ್ಲಾ ಲಂಘನಂ ಪರಮೌಷದಂ ಎಂದು.

ಶ್ರೀ ಎಚ್. ಸಿದ್ದವೀರಪ್ಪ.—ಅಷ್ಟೇ ಅಲ್ಲ ಹಳ್ಳಿಗಳ ಕಡೆ ಹೇಳುತ್ತಾರೆ 'ಊಟಬಲ್ಲವನಿಗೆ ರೋಗ ವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ' ಎಂದು.

ಶ್ರೀ ಎಂ. ಎಸ್. ಕೃಷ್ಣನ್.—ಹಾಗಾದರೆ ಇರತಕ್ಕ ಡಾಕ್ಟರುಗಳ ಗತಿಯೇನು !

ಶ್ರೀ ಎಚ್. ಸಿದ್ದವೀರಪ್ಪ.—ರಷ್ಯಾದವರು ನಮ್ಮ ಜನರನ್ನು ನಿಮ್ಮ ಯೋಗ ಮತ್ತು ಆಯುರ್ವೇದ ಎಲ್ಲಿ ? ಎಂದು ಕೇಳಿದ್ದಾರೆ ಅಂದಾಗ ನಾವು ಈ ಆಯುರ್ವೇದಕ್ಕೂ ಹೆಚ್ಚಿನ ನಿಗಾ ಕೊಡತಕ್ಕದ್ದು ಬಹಳ ಅಗತ್ಯ. ಅದಕ್ಕಾಗಿಯೇ ಸರ್ಕಾರದವರು ಈಗಾಗಲೇ ಅಲೋಪತಿಕ್ ಶಾಖೆಗೆ ಒಬ್ಬ ಡೈರೆಕ್ಟರ್ ಇರುವಂತೆ ಈ ಆಯುರ್ವೇದಕ್ಕೂ ಒಬ್ಬ ಪ್ರತ್ಯೇಕ ಡೈರೆಕ್ಟರನ್ನು ನೇಮಕ ಮಾಡಬೇಕೆಂದು ಮಾಡಿದ್ದಾರೆ. ಈ ವಿಚಾರದಲ್ಲಿ ಡಾ. ಮೇಲುಕೋಟೆಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ನೇಮಕ ಮಾಡಲಾಗಿದೆ. ಈಗಾಗಲೆ ಹೈದ್ರಾಬಾದಿನಲ್ಲಿ ಒಂದು ಈ ಸಂಸ್ಥೆ ಇದೆ. ವೆಲ್ಲೂರಿನಲ್ಲಿ ವಾಸಿಯಾಗದೆ ಇದ್ದಂಥ ಕಲವು ಖಾಯಿಲೆಗಳನ್ನು ಅಲ್ಲಿ ವಾಸಿಮಾಡಲಾಗಿದೆ ಎಂಬುದನ್ನು ಕೇಳಿ ನನಗೆ ಬಹಳ ಸಂತೋಷವಾಯಿತು 'ಪಾತಂಜಲಿ ಯೋಗ ರಿಸರ್ಚ್ ಇನ್‌ಸ್ಟಿಟ್ಯೂಟ್' ಎಂಬ ಒಂದು ರಿಸರ್ಚ್ ಇನ್‌ಸ್ಟಿಟ್ಯೂಟ್ ಅಲ್ಲಿ ಕೆಲಸ ಮಾಡುತ್ತಿದೆ. ಇದಕ್ಕೆ ನಮ್ಮ ಸರ್ಕಾರ ಕೂಡ ಹೆಚ್ಚಿನ ಗಮನ ಕೊಡಬೇಕೆಂದಿದೆ.

ಇನ್ನು ಶ್ರೀ ಪುಟ್ಟದಾಸ್ ಅವರು ಈ ಡಾಕ್ಟರುಗಳ ನೇಮಕದ ಬಗ್ಗೆ ಹಾಗೂ ಅವರ ಪ್ರಮೋಷನ್ ವಿಚಾರದಲ್ಲಿ ಸರಿಯಾದ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸನ್ನು ಮಾಡಿಲ್ಲ ಸೀನಿಯಾರಿಟಿ ಲಿಸ್ಟನ್ನು ಮೈಂಟೈನ್ ಮಾಡಿಲ್ಲ ಎಂದು ಹೇಳಿದ್ದಾರೆ. ಆದರೆ ಈ ದಿವಸ ಅನೇಕ ಸ್ಥಾನಗಳು ಹಾಗೇ ಖಾಲಿ ಬಿದ್ದಿವೆ. ಮೆಡಿಕಲ್ ಕಾಲೇಜಿನಲ್ಲೂ ಅನೇಕ ಸ್ಥಾನಗಳು ಹಾಗೇ ಖಾಲಿ

(ಶ್ರೀ ಎಚ್, ಸಿದ್ದವೀರಪ್ಪ)

ಬದ್ದಿವೆ. ಅದಕ್ಕೆ ಕಾರಣ ಗೊತ್ತಿಲ್ಲ. ಆದರೆ ಹಾಲಿ ಇರತಕ್ಕ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ನ್ನು ಸಬ್‌ಜೆಕ್ಟೀವಾಗಿದೆಯೇ ವಿನಾ ಅವು ಆಬ್‌ಜೆಕ್ಟಿವಾಗಿಲ್ಲ ಎಂದು ವಾದ ಮಾಡತಕ್ಕವರೂ ಇದ್ದಾರೆ. ಅಂತೂ ಇಲ್ಲಿಯವರೆಗೂ ಅಲ್ಲಿ ಸರಿಯಾಗಿ ಒಂದು ಸೀನಿಯಾರಿಟಿ ಲಿಸ್ಟನ್ನು ಇಟ್ಟಿಲ್ಲ. ಅದಕ್ಕೆ ಈಗ ಎಲ್ಲವನ್ನೂ ಹೊಸದಾಗಿ ರೀಆರ್ಗನೈಜ್ ಮಾಡಬೇಕಾಗಿದೆ. ಎಲ್ಲವನ್ನೂ ಸರಿಪಡಿಸಬೇಕಾಗಿದೆ. ಈ ವಿಚಾರದಲ್ಲಿ ಈಗಾಗಲೇ ನಮ್ಮ ಅಧಿಕಾರಿಗಳಿಗೆ ಇದನ್ನೆಲ್ಲಾ ಚಾಲ್ತೀ ಸಾಲಿನಲ್ಲಿ ಸರಿಪಡಿಸಬೇಕೆಂದು ತಿಳುವಳಿಕೆಯನ್ನು ಕೊಡಲಾಗಿದೆ. ಅದನ್ನೆಲ್ಲಾ ಬೇಗ ಸರಿಪಡಿಸುತ್ತೇನೆ,

ಶ್ರೀ ಕಾಗೋಡು ತಿಮ್ಮಪ್ಪ.—ಹಿಂದೆ ಹೆಲ್ತ್ ಮತ್ತು ಮೆಡಿಕಲ್ ಇಲಾಖೆಗಳೆರಡನ್ನೂ ಒಂದುಗೂಡಿಸಿದಾಗ ಮೆಡಿಕಲ್‌ನವರಿಗೆ ಬಹಳ ಅನ್ಯಾಯವಾಗಿದೆ.

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ನಾನು ಕೇಳಿದ್ದೇನೆ. ಕೆಲವು ಕಡೆ ಎಲ್. ಎಂ. ಪಿ. ಪಾಸ್‌ಮಾಡಿದ ಡಾಕ್ಟರ ಕೈಕೆಳಗೆ ಎಂ.ಡಿ. ಮತ್ತು ಎಂ. ಎಸ್. ಪಾಸ್ ಮಾಡಿದ ಡಾಕ್ಟರುಗಳು ಕೆಲಸಮಾಡಬೇಕಾಗಿ ಬಂದಿದೆ ಎಂಬ ವಿಷಯ ನನಗೂ ಗೊತ್ತಾಗಿದೆ ಆದರೆ ಒಬ್ಬ ವ್ಯಕ್ತಿ ಡಿ.ಎಚ್.ಒ. ಆಗಬೇಕಾಗಿದ್ದರೆ ಆತನಿಗೆ ಡಿ. ಪಿ. ಎಚ್. ಆಗಿರಲೇಬೇಕು ಎಂಬುದಾಗಿದೆ. ಕೆಲವು ಕಡೆ ಎಲ್. ಎಂ. ಪಿ. ಡಾಕ್ಟರು ಡಿ. ಎಚ್. ಒ. ಆಗಿ ಕೆಲಸ ಮಾಡುತ್ತಿದ್ದಾರೆ. ಆದರೆ ನಮ್ಮಲ್ಲಿ ಈ ದಿವಸ ಡಿ. ಪಿ. ಎಚ್. ಮಾಡಿರತಕ್ಕವರು 19 ಜನರಿದ್ದಾರೆ. ಅವರಲ್ಲಿ ಅವರ ಮೆರಿಟ್ ಆರ್ಡರಿನಲ್ಲಿ 7 ಜನರನ್ನು ನೇಮಕ ಮಾಡಿಕೊಂಡಿದ್ದೇವೆ. ನಾವು ಅವರಿಗೆ ನಿಮ್ಮನ್ನು ಖಾಯಂ ಆಗಿ ಅಲ್ಲ ಹಂಗಾಮಿಯಾಗಿ ಮಾತ್ರ ನೇಮಕ ಮಾಡಿಕೊಂಡಿದ್ದೇವೆ ಎಂದು ಅವರಿಗೆ ತಿಳಿಸಿದ್ದೇವೆ. ಇಲ್ಲ ಒಂದು ಸರಿಯಾದ ಸೂತ್ರವನ್ನು ಇವಾಲ್ವ್ ಮಾಡಬೇಕಾಗಿದೆ. ಆದಷ್ಟೂ ಪ್ರಯತ್ನ ಮಾಡಿ ಆಗಿಂತಕ್ಕ ಅನ್ಯಾಯಗಳನ್ನು ತಗ್ಗಿಸುವುದಕ್ಕೆ ಪ್ರಯತ್ನ ಮಾಡಲಾಗುತ್ತದೆ. ಮುಂದಕ್ಕೆ ಅನ್ಯಾಯಗಳಾಗುವುದಕ್ಕೆ ಅವಕಾಶ ಕೊಡುವುದಿಲ್ಲ.

ಇನ್ನು ಶ್ರೀ ವಾಟಾಳರು ದೇಸಾಯಿ ಡಾಕ್ಟರನ್ನು ಸದ್ದಿಲ್ಲದಂತೆ ಕಳುಹಿಸಿದ್ದೀರಿ ಎಂದು ಹೇಳಿದರು. ಅವರನ್ನು ನಾನೇನೂ ಕಳುಹಿಸಲಿಲ್ಲ. ಅವರಿಗೆ ಈಗ 50 ವರ್ಷಗಳ ವಯಸ್ಸಾಗಿದೆ. ಅಷ್ಟು ವಯಸ್ಸಾಗಿರತಕ್ಕವರು ಕೆಲಸದಿಂದ ನಿವೃತ್ತಿಯಾಗುತ್ತೇನೆಂದರೆ ಸರ್ಕಾರ ಅನುಮತಿ ಕೊಡುವುದಕ್ಕೆ ಕಾನೂನು ಪ್ರಕಾರ ಯಾವ ಅಡ್ಡಿಯೂ ಇಲ್ಲ. ಅವರಿಗೆ ಈಗ 4 ತಿಂಗಳ ಹಕ್ಕಿನ ರಜಾ ಇತ್ತು. ಆದನ್ನು ಅವರು ಬೇಕೇಬೇಕೆಂದು ಬಲವಂತ ಮಾಡಿದ್ದರಿಂದ ಅದನ್ನು ಮಂಜೂರು ಮಾಡಿದೆ. ಅವರು ರಜಾ ಹೋಗಿದ್ದಾರೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಅವರ ಮೇಲೆ ಸಿ. ಬಿ. ಐ. ಅವರೇನಾದರೂ ಪ್ರೋಬ್ ಮಾಡುತ್ತಿದ್ದಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ನನಗೆ ಗೊತ್ತಿಲ್ಲ. ವಿಜಿಲೆನ್ಸ್‌ನವರೇನೋ ಎನ್‌ಕ್ವೈರಿ ಮಾಡುತ್ತಿದ್ದಾರೆಂದು ಕೇಳಿದೆ. ನಾನು ತಪ್ಪುಮಾಡಿದ್ದಾರೆಂದು ಹೇಳುವುದಿಲ್ಲ. ಶ್ರೀ ವಾಟಾಳ್ ನಾಗರಾಜ್‌ರವರು ದಯೆಯಿಟ್ಟು ಉತ್ಪ್ರೇಕ್ಷೆ ಮಾಡಬಾರದು. ಈ ಸಂದರ್ಭದಲ್ಲಿ ಮಂಕುತಿಮ್ಮನ ಕಗ್ಗದಿಂದ ಒಂದು ವಾಕ್ಯವನ್ನು ಹೇಳುತ್ತೇನೆ. ''ಎದ್ದೆದ್ದು ಬೀಳುತಿಹ, ಗುದ್ದಾಡಿ ಸೋಲುತಿಹೆ, ಗದ್ದಲವ ತುಂಬಿ ಪ್ರಸಿದ್ಧನಾಗುತಿಹೆ, ಉದ್ಧರಿಸುವೆನು ಜಗವನ್ನೆನ್ನುತಿಹ ಸಖನೆ, ನಿನ್ನುದ್ಧಾರವೆಷ್ಟಾಯ್ತೊ, ಮಂಕುತಿಮ್ಮ.''

ಇನ್ನು ಮಿಸೆಸ್ ಶೀಲ ಇರಾನಿಯವರು ಮೆಂಟಲ್ ಹೆಲ್ತ್ ವಿಚಾರ ಹೇಳಿದರು. ನಾವು ಸ್ತುತ್ಯವಾದ ಕಾರ್ಯ ಮಾಡಿದ್ದೇವೆ. ಇದನ್ನು ಹೇಳಿದರೆ ಉತ್ಪ್ರೇಕ್ಷೆ ಮಾಡುತ್ತೇನೆಂದು ತಿಳಿಯಬಾರದು. ನಾನೂ ಸಹ ಒಂದು ಸಲ ಮೆಂಟಲ್ ಆಸ್ಪತ್ರೆಗೆ ಹೋಗಿ ಯಾರಿಗೂ ತಿಳಿಯದಂತೆ ಟೆಸ್ಟ್ ಮಾಡಿಸಿಕೊಂಡು ಬರಬೇಕೆಂದಿದ್ದೇನೆ. ಮಾಡಿಸಿಕೊಂಡು ಬರುವುದು ಒಳ್ಳೆಯದು ಎಂಬ ಅಭಿಪ್ರಾಯ ನನಗಿದೆ. ನರ್ವಸ್ ಬಲ ಎಷ್ಟಿದೆ ಮೆಂಟಲ್ ಎಕ್ಸ್‌ಪ್ರೆಸ್ ಏನಿದೆ ಮುಂತಾದ್ದನ್ನು ಅಲ್ಲ ಪರೀಕ್ಷೆ ಮಾಡಿಸಿ ತಿಳಿದುಕೊಳ್ಳುವುದು ಒಳ್ಳೆಯದು. ಅಲ್ಲ ಒಳ್ಳೆಯ ತಜ್ಞರಿದ್ದಾರೆ. ನನಗೆ ಕೆಲವು ದಿವಸ ಆ ಆಸ್ಪತ್ರೆಯಲ್ಲಿರಬೇಕೆಂಬ ಆಸೆ ಇದೆ. ಅಲ್ಲಿಯ ಎನ್‌ವೈರನ್‌ಮೆಂಟ್ ಬಹಳ ಚೆನ್ನಾಗಿದೆ. ನಾನು ಒಂದು ದಿನ ಯಾರಿಗೂ ಗೊತ್ತಾಗದಂತೆ ಹೋಗಿ ಒಂದು ಗಂಟೆ ನೋಡಿದೆ. ಅಲ್ಲಿರುವ ಡಾ. ರೆಡ್ಡಿ, ಡಾ. ವರ್ಮ ಒಳ್ಳೆಯ ಕೆಲಸ ಮಾಡುವರು. ಇದನ್ನು ಅನೇಕರು ಹೇಳುತ್ತಿದ್ದಾರೆ. ಬಹುಶಃ ಇಡೀ ಇಂಡಿಯಾದಲ್ಲಿ ಇಲ್ಲಿ ಒಳ್ಳೆಯ ಆಸ್ಪತ್ರೆ ಇರುವುದರಿಂದ ಇದಕ್ಕೆ ಪ್ರೆಸ್ಟ್ರಸ್ ಬರಬಹುದು. ಬಹುಶಃ ಈ ಸರ್ವಿಸ್ ಡಿಸ್ಟ್ರಿಕ್ಟ್ ಲೆವಲ್‌ನಲ್ಲೂ ಮಾಡಬೇಕಾಗಿ ಬರುವುದು.

ಶ್ರೀ ವಾಟಾಳ್ ನಾಗರಾಜ್.—ಶ್ರೀ ಕೆ. ಕೆ. ಮೂರ್ತಿಯವರು ಒಂದು ಆಸ್ಪತ್ರೆ ಓಪನ್ ಮಾಡಿದ್ದಾರಂತೆ.

ಶ್ರೀ ಎಚ್. ಸಿದ್ಧವೀರಪ್ಪ.—ನನಗೆ ಗೊತ್ತಿಲ್ಲ. ಶ್ರೀ ನಾಗರಾಜ್ ಅವರು "ರವಿ ಕಾಣದ್ದನ್ನು ಕವಿ ಕಂಡ" ಎಂಬಂತೆ ಯಾ ಗೂ ಗೊತ್ತಿಲ್ಲದಿರುವುದು ಏನಾದರೂ ಇದ್ದರೆ ಅದನ್ನು ತಿಳಿದು ಕೊಳ್ಳುವರು. ಅದು ಅವರಿಗೆ ಗೊತ್ತಾಗುವುದು.

ನರ್ಸಿಂಗ್ ಹೋಂ ಮತ್ತು ಕ್ಲಿನಿಕ್ ತೆರೆಯಬೇಕು ಎಂದು ಹೇಳಿದರು. ಅದು ಯಾರಿಗಾಗಿ ತೆರೆಯುವರು ? ಡಿಸೀಸಸ್ ಆಫ್ ಅಫ್ಲೂಯೆನ್ಸ್ ಇರುವವರು ಅಲ್ಲಿಗೆ ಹೆಚ್ಚಾಗಿ ಹೋಗುವರು. ಹೇಳಿರುವ ಸಲಹೆ ಸ್ತುತ್ಯವಾಗಿದೆ, ಅದಕ್ಕಾಗಿ ಒಂದು ಬಿಲ್ಲನ್ನು ತಯಾರುಮಾಡುವಂತೆ ಹೇಳಿದ್ದೇನೆ, ಅವಾಗುತ್ತಿದೆ. ಎಲ್ಲರಿಗೂ ಅದರ ಅನುಕೂಲ ದೊರೆಯಬೇಕು. ಸಿನೀಮಾಗಳಿಗೆ ಸಂಬಂಧ ಪಟ್ಟಂತೆ ಕಾನೂನಿದೆ, ಈಟಿಂಗ್ ಹೋಂಗಳಿಗೆ ಕಾನೂನಿದೆ. ಅವುಗಳಿಗೆ ಇರುವಂತೆ ಒಂದು ಬಿಲ್ಲನ್ನು ತಯಾರಿಸಬೇಕಾಗಿದೆ. 1969ರಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಕೇಂದ್ರ ಸರಕಾರದವರು ಒಂದು ಮಾಡಲ್ ಬಿಲ್ಲನ್ನು ಮಾಡಿ ನರ್ಸಿಂಗ್ ಹೋಂ ಮತ್ತು ಕ್ಲಿನಿಕ್‌ಗಳ ವಿಚಾರದಲ್ಲಿ ಯಾವರೀತಿ ವ್ಯವಸ್ಥೆ ಮಾಡಬೇಕು ಎಂದು ತಿಳಿಸಿದ್ದಾರೆ. ನಾವೂ ಒಂದು ಬಿಲ್ಲನ್ನು ಮಾಡುತ್ತಿದ್ದೇವೆ. ಯೋಚನೆ ಮಾಡಿ ಮುಂದೆ ಅದನ್ನು ಜಾರಿಗೆ ತರಬಹುದು.

ಇನ್ನು ಮೆಡಿಕಲ್ ಕಾಲೇಜ್ ಅಡ್ಮಿಷನ್ ವಿಚಾರ ಪ್ರಸ್ತಾಪಿಸಲ್ಪಟ್ಟಿದೆ. ಇದು ಬಹಳ ಕಠಿಣ ವಾದ ಸಮಸ್ಯೆ. ಈ ವರ್ಷದಲ್ಲಿ ಎಷ್ಟು ಹುಡುಗರನ್ನು ತೆಗೆದುಕೊಳ್ಳಬೇಕು ಎಂದು ಗೊತ್ತು ಮಾಡ ಬೇಕು. ಯೂನಿವರ್ಸಿಟಿಯವರು ಸೇಕಡ 50ರಷ್ಟು ತೆಗೆದುಕೊಳ್ಳಬೇಕೆಂದು ಹೇಳುವರು, ಆನ್ಯುಯಲ್ ಇನ್‌ಟೇಕ್ ಒಂದು ಸಾವಿರ ಹುಡುಗರನ್ನು ತೆಗೆದುಕೊಳ್ಳುತ್ತಿದ್ದೇವೆ. ನಾವು 500 ತೆಗೆದುಕೊಳ್ಳಬೇಕು. ಈಗ ಸಮಿತಿ ಇದೆ. ಸರಕಾರ ಎಷ್ಟು ತೆಗೆದುಕೊಳ್ಳಬೇಕು ಎಂದು ಸರಕಾರ ಯೋಚನೆ ಮಾಡುವುದು. ಯಾವ ರೀತಿಯಲ್ಲೂ ಅನ್ಯಾಯವಾಗದಂತೆ ವ್ಯವಸ್ಥೆಮಾಡಲು ಯಥಾ ಶಕ್ತಿ ಪ್ರಯತ್ನ ಮಾಡುತ್ತೇವೆ. ಫಾಲ್ಸ್ ಇನ್‌ಕಂ ಸರ್ಟಿಫಿಕೇಟುಗಳನ್ನು ತರುವರು ಎಂದು ಶ್ರೀ ದಿಗಂಬರ್‌ರಾವ್ ಹೇಳಿದರು, ಪ್ರೈವೇಟ್ ಕಾಲೇಜುಗಳ ವಿಚಾರ ಹೇಳಿದರು. ಫಾಲ್ಸ್ ಸರ್ಟಿಫಿಕೇಟ್ ತಂದರೆ ಅದನ್ನು ಗಮನಕ್ಕೆ ತಂದರೆ ಸರಕಾರ ಸೂಕ್ತ ಕ್ರಮ ತೆಗೆದುಕೊಳ್ಳುವುದು.

ಶ್ರೀ ರುದ್ರಪ್ಪನವರು ಒಂದು ಮುಖ್ಯವಾದ ವಿಚಾರ ಹೇಳಿದ್ದಾರೆ. ಹೋಟಲುಗಳಲ್ಲಿ ಒಳ್ಳೆಯ ಆಹಾರ ಸಿಕ್ಕುವುದಿಲ್ಲ, ಸರಿಯಾದ ವ್ಯವಸ್ಥೆಯಿಲ್ಲ, ಆದುದರಿಂದ ಅವು ಕಾಯಿಲೆಯ ಉಗಮ ಸ್ಥಾನಗಳಾಗಿವೆ ಎಂದು ಅವರು ಹೇಳಿರುವುದು ನಿಜ, ಒಪ್ಪುತ್ತೇನೆ. ಈ ದಿವಸ ಪಬ್ಲಿಕ್ ಹೆಲ್ತ್ ಆಕ್ಟ್ ಹಳೆಯ ಮೈಸೂರಿನಲ್ಲಿದೆ, ಉಳಿದ ಭಾಗಗಳಲ್ಲಿ ಸಹ ಒಂದಿದೆ. ಅಧಿಕಾರಿಗಳು ಬಹುಶಃ ಅವನ್ನು ನೋಡುವರೋ ಇಲ್ಲವೋ ಗೊತ್ತಿಲ್ಲ. ಇಷ್ಟು ಹೇಳುತ್ತೇನೆ. ಎಲ್ಲಿಯವರೆಗೆ ಪಬ್ಲಿಕ್ ಹೆಲ್ತ್ ಆಕ್ಟ್ ಸರಿಯಾಗಿ ಗಮನಿಸಿ ಅದರಂತೆ ಸೂಪರ್‌ವೈಜರಿ ಸಿಬ್ಬಂದಿ ಕೆಲಸ ಮಾಡುವುದಿಲ್ಲ ಅಲ್ಲಿಯವರೆಗೆ ಸಾರ್ವಜನಿಕರ ಆರೋಗ್ಯ ಸರಿಹೋಗುವುದಿಲ್ಲ. ಆಕ್ಟಿನಂತೆ ನಡೆಯಬೇಕಾದ್ದು ಮುಖ್ಯವಾದುದು. ಅದರ ಪ್ರಕಾರ ನಮ್ಮ ಅಧಿಕಾರಿಗಳು ಕೆಲಸಮಾಡಿದರೆ ಜನರ ಆರೋಗ್ಯ ಸುಧಾರಿಸುವುದು. ಅದುದರಿಂದ ಪಬ್ಲಿಕ್ ಹೆಲ್ತ್ ಆಕ್ಟನ್ನು ಇಡೀ ರಾಜ್ಯಕ್ಕೆ ಅನ್ವಯಿಸುವ ರೀತಿಯಲ್ಲಿ ಮಾಡಿ ಅದನ್ನು ನಿಮ್ಮ ಮುಂದಿಡುವ ಅವಕಾಶ ಜಾಗ್ರತೆ ಬರಲಿ ಎಂದು ಹಾರೈಸುತ್ತೇನೆ.

ಸೊಳ್ಳೆ ಕಾಟ. ನನಗೆ ಇದರ ಅನುಭವ ಬಹಳವಾಗಿದೆ. ಜಯನಗರದಲ್ಲಿರುವವರು ರಾತ್ರಿ 7 ಗಂಟೆಯಾದ ಕೂಡಲೆ ಸೊಳ್ಳೆ ಪರದೆಯೊಳಗೆ ಸೇರಿಕೊಳ್ಳಬೇಕು, ಹೊರಗೆ ಬರುವುದು ಕಷ್ಟ. ಜಯನಗರವು ಏಷ್ಯಾ ಖಂಡದಲ್ಲೇ ಬಹಳ ಉತ್ತಮವಾದ ಎಕ್ಸ್‌ಟೆನ್‌ಷನ್ ಆದರೂ ಅಲ್ಲಿ ಸೊಳ್ಳೆ ಕಾಟ ಕಡಿಮೆಯಾಗಿಲ್ಲ. ಅದರಿಂದ ಮಲೇರಿಯಾ ಇದೆ. ಕಾಲರ, ಸ್ಮಾಲ್‌ಪಾಕ್ಸ್, ಲೆಪ್ರಸಿ, ಎಪಿಡೆಮಿಕ್ ಡಿಸೀಸಸ್ ಇವೆ. ಎಷ್ಟೋ ಹಳ್ಳಿಗಳಲ್ಲಿ ಜನರು ಇವುಗಳಿಗೆ ತುತ್ತಾಗಿದ್ದಾರೆ ಅವು ಗಳಿಗೆ ಪ್ರಿವೆಂಟಿವ್ ಮೆಡಿಸಿನ್ಸ್ ತೆಗೆದುಕೊಳ್ಳಬೇಕು. ಈ ಬಗ್ಗೆ ಜಾಯಿಂಟ್ ಡೈರೆಕ್ಟರಿಗೆ ಆದೇಶ ಕೊಡಲಾಗಿದೆ. ಹೆಚ್ಚಿನ ರೀತಿಯಿಂದ ಕೆಲಸ ಮಾಡಬೇಕು, ಚುರುಕಾಗಿ ಕೆಲಸ ಮಾಡಬೇಕು ಎಂದು ತಿಳಿಸಲಾಗಿದೆ. ಕೇಂದ್ರ ಸರಕಾರದವರನ್ನು ಈ ವಿಚಾರದಲ್ಲಿ ಹೆಚ್ಚಿನ ಸಹಾಯ ನೀಡಬೇಕೆಂದು ಕೇಳಲಾಗಿದೆ.

ಇಷ್ಟೆಲ್ಲಾ ಅದಮೇಲೆ ಅನೇಕರು ಅವರವರ ಕ್ಷೇತ್ರಗಳ ಆಸ್ಪತ್ರೆ ವಿಚಾರ ಹೇಳಿದ್ದಾರೆ. ಶ್ರೀ ಪುಟ್ಟಸ್ವಾಮಯ್ಯನವರು ಆಸ್ಪತ್ರೆಗಳನ್ನು ಅಪ್‌ಗ್ರೇಡ್ ಮಾಡಬೇಕೆಂದು ಹೇಳಿದ್ದಾರೆ. ಹೊರಗಡೆ ಸಹ ಜನರು ಈ ಸಂಬಂಧವಾಗಿ ಹೇಳಿದ್ದಾರೆ. ಎಲ್ಲಾ ತಾಲ್ಲೂಕುಗಳ ಆಸ್ಪತ್ರೆಗಳಲ್ಲಿ 25 ಬೆಡ್‌ಗಳಿಗೆ ಕಡಿಮೆ ಇಲ್ಲದಂತೆ ವ್ಯವಸ್ಥೆಮಾಡಬೇಕು ಎಂಬ ನಿಯಮವಿದೆ, ಆಸೆಯೂ ಇದೆ,

(ಶ್ರೀ ಎಚ್. ಸಿದ್ದವೀರಪ್ಪ)

ಅದರಂತೆ ಮಾಡುತ್ತೇವೆ. ಕೆಲವು ಕಡೆ 50 ಬೆಡ್‌ಗಳಿಗೆ ಕೂಡ ಅವಕಾಶವಾಗಬಹುದು. 25 ಆದರೂ ಒದಗಿಸಬೇಕೆಂದು ತೀರ್ಮಾನವಾಗಿದೆ.

ಇನ್ನೊಂದು ಮಾತನ್ನು ಹೇಳುತ್ತೇನೆ. ಅದು ಇಲಾಖೆಯ ರೀ ಆರ್ಗನೈಜೇಷನ್‌ಗೆ ಸಂಬಂಧ ಪಟ್ಟಿದೆ. ಅನೇಕ ಅಧಿಕಾರಿಗಳಿದ್ದಾರೆ. ಅವರು ಒಂದು ಸಾವಿರದಿಂದ ಒಂದೂವರೆ ಸಾವಿರ ರೂಪಾಯಿಗಳವರೆಗೆ ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ಅವರಿಗೆ ಸರಿಯಾಗಿ ಕೆಲಸ ಹಂಚಬೇಕು. ಜಾಯಿಂಟ್ ಡೈರೆಕ್ಟರು, ಡೈರೆಕ್ಟರು ಮುಂತಾದ ಹೆಚ್ಚು ಸಂಬಳ ಪಡೆಯುವ ಅಧಿಕಾರಿಗಳಿದ್ದಾರೆ. ಅವರಿಗೆ ಸರಿಯಾದ ಜವಾಬ್ದಾರಿಯನ್ನು ವಹಿಸಬೇಕು. ಹಾಗೆ ಮಾಡಿದರೆ ಅವರು ಅದನ್ನು ನಿರ್ವಹಿಸುವರು. ಸರಿಯಾಗಿ ಅವರು ತಮ್ಮ ಜವಾಬ್ದಾರಿ ನಿರ್ವಹಿಸದಿದ್ದರೆ ಕ್ರಮ ತೆಗೆದುಕೊಳ್ಳಬಹುದು. ಆದುದರಿಂದ ರೀಆರ್ಗನೈಜೇಷನ್ ಮಾಡಬೇಕೆಂದು ಯೋಚನೆಮಾಡಲಾಗುತ್ತಿದೆ. ಯಾರಿಗೆ ಯಾವ ಕೆಲಸ ಕೊಡಬೇಕು ಎಂಬುದನ್ನು ಪರಿಶೀಲಿಸುತ್ತಿದ್ದೇವೆ. ನಾಲಕ್ಕು ಡಿವಿಜನ್ನುಗಳಿವೆ. ಒಂದೊಂದಕ್ಕೆ ಒಬ್ಬೊಬ್ಬ ಡೆಪ್ಯುಟಿ ಡೈರೆಕ್ಟರಿದ್ದಾರೆ. ಈಗ ಖರ್ಚು ಮಾಡುವುದಕ್ಕಿಂತ ಹೆಚ್ಚು ಹಣ ವ್ಯಯಮಾಡದೆ ಇರುವ ಸಿಬ್ಬಂದಿಯನ್ನು ರೀಆರ್ಗನೈಜ್ ಮಾಡಿ ಅವರಿಂದ ಸರಿಯಾದ ಕೆಲಸ ತೆಗೆದುಕೊಳ್ಳಬೇಕು ಎಂದು ಯೋಚನೆಮಾಡಿದ್ದೇವೆ.

ಆಸ್ಪತ್ರೆಗಳಿಗೆ ಔಷಧಿ ಸರಬರಾಜು ಮಾಡುವ ವಿಚಾರದಲ್ಲಿ ಮಾನ್ಯ ಮಿತ್ರರು ಅನೇಕ ವಿಚಾರ ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ರೀಟೈಲ್ ಸೆಲರ್‌ಸ್ ಏನಿದ್ದಾರೆ ಅವರೇ ಡಾಕ್ಟರುಗಳನ್ನು ಕೆಡಿಸಲು ಮೂಲ ಕಾರಣರು. ರೇಟ್ ಕಾಂಟ್ರ್ಯಾಕ್ಟ್ ಸಿಸ್ಟಂನಿಂದ ಅನ್ಯಾಯವಾಗಿದೆ. ಆದುದರಿಂದ ಈ ಸಿಸ್ಟಂ ತೆಗೆದುಹಾಕಬೇಕೆಂದು ಆರ್ಡರು ಮಾಡಲಾಗಿದೆ. ಇದಕ್ಕಿಂತ ಯಾರು ಮ್ಯಾನುಫ್ಯಾಕ್‌ಚರ್ ಮಾಡುವರೋ ಅವರಿಂದ ತೆಗೆದುಕೊಳ್ಳುವುದು ಸೂಕ್ತ ಎಂದು ಭಾವಿಸಲಾಗಿದೆ. ಆಲ್ ಇಂಡಿಯಾ ಟೆಂಡರ್ ಕರೆದು ಆ ಮೂಲಕ ತೆಗೆದುಕೊಳ್ಳಬೇಕೆಂದಿದ್ದೇವೆ. ಸೇಕಡ ತೊಂಭತ್ತು ಭಾಗ ಈ ದೇಶದಲ್ಲಿ ತಯಾರು ಆಗುವುದರಲ್ಲೇ ತೆಗೆದುಕೊಳ್ಳಬೇಕು, ಹೊರಗಡೆಯಿಂದ ತರಿಸಬಾರದು ಎಂದು ಮಾಡಿದ್ದೇವೆ. ಇದರಿಂದ ಸೇಕಡ 25ರಷ್ಟು ಖರ್ಚು ಕಡಿಮೆಯಾಗಬಹುದು. ಇದರ ಜೊತೆಗೆ 1967ರಲ್ಲಿ ಒಂದು ಹಾಸ್ಪಟಲ್ ಫಾರ್ಮಸಿ ಮಾಡಬೇಕೆಂದು ಇದ್ದರು. ಪ್ರತಿಯೊಂದು ಔಷಧಿಯನ್ನೂ ಅಲ್ಲೇ ತಯಾರು ಮಾಡಬೇಕೆಂಬ ಅಭಿಪ್ರಾಯವಿತ್ತು. ಸಾಮಾನುಗಳು ಏನು ಬೇಕೋ ಅವನ್ನು ತರಿಸಿ ತಯಾರಿಸಬೇಕು. ಮೆಡಿಕಲ್ ಗ್ರ್ಯಾಜುಯೇಟ್ಸ್ ಇದ್ದಾರೆ, ಡಿಪ್ಲೊಮ ಹೋಲ್ಡರ್ಸ್ ಇದ್ದಾರೆ, ಕಾಲೇಜ್ ಇದೆ, ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ಪ್ರತಿಯೊಂದು ಕಡೆ ಫಾರ್ಮಸಿ ಓಪನ್ ಮಾಡಿ ಅಲ್ಲಿ ಸಿಂಥ್‌ಸೈಸ್ ಮಾಡಿ ಔಷಧಿ ತಯಾರಿಸಿದರೆ ಹೊರಗಡೆ ಷಾಪಿನಲ್ಲಿ ಒಂದು ರೂಪಾಯಿ ಕೊಡುವುದಕ್ಕೆ ಹತ್ತು ಪೈಸೆ ಬೀಳುವುದು ಎಂದು ಹೇಳುವುದನ್ನು ಕೇಳಿದ್ದೇನೆ. ತಾವು ಪಾಕೀಸ್ಥಾನದ ಪೇಪರ್‌ನಲ್ಲಿ ಓದಿರಬಹುದು. ಆಯಾಯ ರಾಜ್ಯದಲ್ಲಿ ತಯಾರಾಗತಕ್ಕಂಥ ಔಷಧಿಯನ್ನೇ ಉಪಯೋಗಿಸುತ್ತಾರೆ. ಇಂಗ್ಲೆಂಡ್‌ನಲ್ಲೂ ಈ ರೀತಿ ಇದೆ. ಆದುದರಿಂದ ನಮ್ಮ ದೇಶದಲ್ಲೂ ಕೂಡ ಆ ರೀತಿ ಏತಕ್ಕೆ ಮಾಡಬಾರದು ಅಂತ ಯೋಚನೆ ಮಾಡಿದ್ದೇವೆ. ಅದಕ್ಕಾಗಿ ಪ್ರಾಯೋಗಿಕವಾಗಿ ಈ ವರ್ಷವೇ ಪ್ರಾರಂಭ ಮಾಡಬೇಕೆಂದು ಸರ್ಕಾರ ನಿರ್ಧರಿಸಿದೆ. ಒಟ್ಟು ಈವಾಗ ನಾವು ಈ ಔಷಧಿಗಳಿಗೆ 2 ಕೋಟಿ 40 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಬಹುಶಃ ಇದನ್ನು ಇಲ್ಲೇ ತಯಾರಿಸುವುದಾದರೆ ಕಾಲಕ ಮೇಣ ಕೊನೇ ಪಕ್ಷ 10 ಕೋಟಿ ರೂಪಾಯಿಯಷ್ಟು ಬೆಲೆ ಬಾಳತಕ್ಕ ಔಷಧಿಗಳನ್ನು ತಯಾರಿಸುವುದಕ್ಕೆ ಸಾಧ್ಯ ಇದೆ ಎಂದು ಹೇಳುತ್ತೇನೆ.

1–00 P.M.

ಇನ್ನು ಡಾಕ್ಟರ್‌ಗಳ ಬಗ್ಗೆ ಹೇಳುವುದಾದರೆ ಅವರು ವಿದ್ಯಾವಂತರು, ಅವರಿಗೆ ಜನರಲ್ಲಿ ಅನುಕಂಪ ಬರಬೇಕು, ತ್ಯಾಗ ಮನೋಭಾವನೆ ಬರಬೇಕು, ಅವರ ಬಗ್ಗೆ ಅನೇಕ ಫಿರ್ಯಾದುಗಳು ಬರುವುದರಿಂದ ಸರ್ಕಾರ ಸುಮ್ಮನೆ ಕೂತಿರಲು ಸಾಧ್ಯವಿಲ್ಲ. ಕಾರಣ ಏನು ಎಂದರೆ ಹಿಂದಿನ ಹಾಗೆ ಜನರು ಈಗ ಸುಮ್ಮನೆ ಇರುವುದಕ್ಕೆ ತಯಾರಾಗಿಲ್ಲ. ನಾವೇ ಪೋಲೀಸರಾಗಿ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳುವ ಕಾಲವೂ ಬರಬಹುದು. ಏತಕ್ಕೆಂದರೆ ಜನರು ಡಾಕ್ಟರ್ ಬಳಿಗೆ ಹೋದಾಗ ಅವರು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸದೇ ಹೋದರೆ ಅವರ ಬಗ್ಗೆ ಅಲ್ಲಿಯ ಜನರು ಸರ್ಕಾರಕ್ಕೆ ತಿಳಿಸುತ್ತಾರೆ. ಈ ರೀತಿ ಡಾಕ್ಟರ್ ಬಗ್ಗೆ ಬರತಕ್ಕಂಥ ಫಿರ್ಯಾದುಗಳು ಬಹಳವಾಗಿವೆ. ಆದರೆ 100 ಕ್ಕೆ 90 ಭಾಗ ಡಾಕ್ಟರುಗಳು ಸರಿಯಾಗಿಲ್ಲ ಎಂದು ಹೇಳಿದರೆ ನನ್ನ ಮನಸ್ಸಿಗೆ ನೋವು ಆಗುತ್ತದೆ. ನಾನೇನೂ ಅವರನ್ನು ಎಕ್ಸಾಜರೇಟ್ ಮಾಡುವುದಿಲ್ಲ. ಒಬ್ಬ ಡಾಕ್ಟರ್ ತನ್ನ ಕರ್ತವ್ಯ

ವನ್ನು ಸರಿಯಾಗಿ ನಿರ್ವಹಿಸಿದರೆ ನಮ್ಮ ಜನ ಅವರನ್ನು ದೇವರ ಹಾಗೆ ಕಾಣುತ್ತಾರೆ. ಅವರನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ಊಟ ಹಾಕಿ ಬೇಕಾದ ಹಾಗೆ ಉಪಚಾರ ಮಾಡುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಅಲ್ಲಿರುವ ಡಾಕ್ಟರುಗಳಿಗೆ ಡಿ.ಹೆಚ್.ಓ. ಅವರು ಕಿರುಕುಳ ಕೊಡುತ್ತಾರೆ.

ಶ್ರೀ ಹೆಚ್. ಸಿದ್ದವೀರಪ್ಪ.—ಅದನ್ನು ನೋಡಿಕೊಳ್ಳೋಣ. ಈವೊತ್ತಿನ ದಿವಸ ಒಬ್ಬ ಡಾಕ್ಟರನ್ನು ತಯಾರು ಮಾಡಬೇಕಾದರೆ ನಮ್ಮ ದೇಶದಲ್ಲಿ ಎಷ್ಟು ದುಡ್ಡು ಖರ್ಚಾಗುತ್ತದೆ ಎಂದು ನಿಮಗೆಲ್ಲಾ ಗೊತ್ತಿದೆ. ಆಸ್ಪತ್ರೆ ಖರ್ಚು ಇತರ ಎಲ್ಲಾ ಖರ್ಚು ಸೇರಿದರೆ ಒಬ್ಬ ಡಾಕ್ಟರನ್ನು ತಯಾರು ಮಾಡಬೇಕಾದರೆ 1 ಲಕ್ಷ 20 ಸಾವಿರ ರೂಪಾಯಿ ಖರ್ಚಾಗುತ್ತದೆ. ಇದು ಬಡಬೋರೇಗೌಡನ ದುಡ್ಡು, ಅವನ ಬೊಕ್ಕಸದಿಂದ ಈ ದುಡ್ಡನ್ನು ಖರ್ಚು ಮಾಡಬೇಕು. ಈ ಸೌಕರ್ಯ ಯಾರಿಗೆ ಸಿಕ್ಕುತ್ತದೆ ಎಂದರೆ ನಮ್ಮ ದೇಶದಲ್ಲಿರತಕ್ಕಂಥ ಮಕ್ಕಳಲ್ಲಿ ಒಂದು ಸಾವಿರ ಜನರಲ್ಲಿ ಒಬ್ಬನಿಗೆ ಈ ಸೌಕರ್ಯ ಸಿಕ್ಕುತ್ತದೆ. ಇವರ ಜವಾಬ್ದಾರಿ ಸರ್ಕಾರಕ್ಕೆ ಎಷ್ಟಿದೆ ಎಂಬುದನ್ನು ತಿಳಿಸುಕೊಳ್ಳಬೇಕು. ಆದುದರಿಂದ ಡಾಕ್ಟರ್ ಕೋರ್ಸ್‌ನಲ್ಲಿ ಒಂದು ಸರಿ ಸಿಲಬಸ್‌ನ್ನು ಸೇರಿಸಬೇಕು ಎಂತ ಮಾಡಿದ್ದೇವೆ ಅದು ಏನೆಂದರೆ the ethics of the morality they owe to the country ಎಂದು. ಕೇಂದ್ರ ಸರ್ಕಾರದಲ್ಲೂ ಕೂಡ ನ್ಯಾಷನಲ್ ಸರ್ವಿಸಸ್ ಅಂತ ಒಂದು ಬಿಲ್ ಮಾಡಿದ್ದಾರೆ. ಅದರ ಜೊತೆಗೆ ಮುಂದೆ ಅವರಿಗೆ ಈ ಒಂದು ಡಿಗ್ರಿ ಕೊಡಬೇಕಾದರೆ ಕೊನೆಯಲ್ಲಿ ಅವರು 1 ವರ್ಷವೋ ಅಥವಾ 2 ವರ್ಷವೋ ಹಳ್ಳಿಗಾಡಿಗೆ ಹೋಗಿ ಹಳ್ಳಿಗಾಡಿನವರ ಜೊತೆಯಲ್ಲಿ ನೆಲೆಸಿ ಜನರ ಜೊತೆಯಲ್ಲಿ ಕೆಲಸ ಮಾಡಿದ ಮೇಲೆ ಈ ಒಂದು ಡಿಗ್ರಿ ಕೊಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಇಲ್ಲದೇ ಹೋದರೆ ಹಳ್ಳಿಗಾಡಿನವರ ಮನಸ್ಸು ಕೆಟ್ಟು ಹೋಗುತ್ತದೆ, ಸೋಷಿಯಲಿಸ್ಟ್ ಪ್ಯಾಟರ್ನ್ ಆಫ್ ಸೊಸೈಟಿ ಸಹ ಕೆಟ್ಟು ಹೋಗುತ್ತದೆ. ಆದುದರಿಂದ ಅವರು ಯಾವಾಗಲೂ ದುಡ್ಡಿನ ಕಡೆಗೆ ಹೆಚ್ಚಿನ ಗಮನ ಕೊಡದೆ ಯಾವಾಗಲೂ ನಮ್ಮ ಜನತೆಯ ಸೇವೆಯನ್ನು ಮಾಡಬೇಕೆಂದು ಅವರ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕೆಂದು ನಾನು ಅವರಿಗೆ ಅರಿಕೆ ಮಾಡಿಕೊಂಡು ಈ ಒಂದು ವಾಕ್ಯವನ್ನು ಅವರ ಮನಸ್ಸಿಗೆ ಸೆಳೆಯುತ್ತೇನೆ.

"ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೇ
ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಗೆ
ಎಲ್ಲರೊಳಗೊಂದಾಗು—ಮಂಕುತಿಮ್ಮ."

ಶ್ರೀ ವಾಟಾಳ್ ನಾಗರಾಜ್.—ನಾಲ್ಕನೇ ವರ್ಗದ ನೌಕರರ ವರ್ಗಾವಣೆ ವಿಚಾರ ಹೇಳಲಿಲ್ಲ.

ಶ್ರೀ ಹೆಚ್. ಸಿದ್ದವೀರಪ್ಪ.—ವರ್ಗದ ವಿಚಾರದಲ್ಲಿ ಅನೇಕ ಸ್ನೇಹಿತರುಗಳು ಹೇಳಿದ್ದಾರೆ. ಇದರ ಬಗ್ಗೆ ನಾನಾದರೂ ಹೇಳುತ್ತೇನೆ. ಕ್ಲಾಸ್ ಫಸ್ಟ್ ಗ್ರೇಡ್ ಆಫೀಸರುಗಳು ಸರ್ಕಾರಕ್ಕೆ ಸಂಬಂಧಪಟ್ಟದ್ದು. ಕ್ಲಾಸ್ ಸೆಕೆಂಡ್ ಆಫೀಸರ್ ಮತ್ತು ಬಿಲೋ ಇರತಕ್ಕಂಥವನ್ನು ಹೆಡ್ ಆಫ್ ದಿ ಡಿಪಾರ್ಟ್‌ಮೆಂಟಿನವರು ಮಾಡುತ್ತಾರೆ. ಈಗ ನಾನು ಇದರ ವಿಷಯವಾಗಿ ವಿಶ್ವಾಸದಿಂದ ಹೇಳುತ್ತೇನೆ. ಏನಾದರೂ ವಿಷಯ ಇದ್ದರೆ ನನಗೆ ಕಾಗದ ಬರೆದು ತಿಳಿಸಿ. I am your representative. ಒಂದು ಉದಾಹರಣೆ ಹೇಳುವುದಾದರೆ ಒಂದು ದಿವಸ ಒಬ್ಬ ಹೆಲ್ತ್ ಆಫೀಸರ್ ನೇರವಾಗಿ ನನ್ನ ಮನೆಗೆ ಬಂದನು. ಆವೊತ್ತಿನ ದಿವಸ ಡೈರೆಕ್ಟರ್ ನನ್ನ ಪಕ್ಕದಲ್ಲೇ ಕೂತಿದ್ದರು. I want transfer ಎಂದು ಹೇಳಿದನು. ಅವನು ಡೈರೆಕ್ಟರ್ ಕಡೆಯೂ ಗಮನ ಕೊಟ್ಟಿಲ್ಲ, ಜಾಯಿಂಟ್ ಡೈರಕ್ಟರ್ ಕಡೆಯೂ ಗಮನ ಕೊಟ್ಟಿಲ್ಲ, ಡೆಪ್ಯೂಟಿ ಡೈರೆಕ್ಟರ್ ಕಡೆಯೂ ಗಮನ ಕೊಟ್ಟಿಲ್ಲ. ಇದು ನೋಡಿದರೆ it brings indiscipline. ನಿಮ್ಮ ಕಷ್ಟ ನನಗೆ ಗೊತ್ತು. ನೀವು ಪ್ರಜೆಗಳ ಪ್ರತಿನಿಧಿಗಳು. ನಿಮ್ಮ ಕ್ಷೇತ್ರದಲ್ಲಿ ಅಲ್ಲಿಯ ಅಮಲ್ದಾರ್, ಪೋಲೀಸ್ ಅಧಿಕಾರಿಗಳು, ಯಾರು ಯಾರು ಇರುತ್ತಾರೋ ಅವರಿಗೆ ಅಲ್ಲಿಯ ಸದಸ್ಯ ನರ್ಸ್ ಇದ್ದ ಹಾಗೆ. ಎಲ್ಲರೂ ಸರಿಯಾಗಿರಬೇಕು. ಸರಿಯಾಗಿ ಇಲ್ಲದೇ ಹೋದರೆ ಅವರ ಮೇಲೆ ನೀವು, ನಿಮ್ಮ ಕ್ಷೇತ್ರದ ನರ್ಸ್ ಕೆಲಸ ಮಾಡಬೇಕಾಗುತ್ತದೆ. ಅಲ್ಲಿಗೂ ಸರಿಹೋಗದಿದ್ದಾಗ ನೀವು ಅದರಮೇಲೆ ನನಗೆ ಹೇಳಬೇಕಾಗುತ್ತದೆ. ಆ ರೀತಿ ನೀವು ಹೇಳುವಾಗ ಒಂದು ರೂಲು ಮಾಡಿದ್ದುಂಟು, ಒಂದು ಕಾನೂನು ಮಾಡಿಕೊಂಡು ಒಂದು ಶಿಸ್ತು ಮಾಡಿಕೊಂಡು ನೀವು ಆ ಕೆಲಸವನ್ನು ಮಾಡಬೇಕು ಎಂದು ತಿಳಿಸುತ್ತೇನೆ. ಇನ್ನು ಏನಾದರೂ ನಿಮ್ಮ ಮನಸ್ಸಿಗೆ ನೋವಾಗುವಂಥ ವಿಷಯಗಳು ಇದ್ದರೆ ಅದನ್ನೂ ಗಮನದಲ್ಲಿಟ್ಟುಕೊಂಡು ನನಗೆ ತಿಳಿಸಿ. ನೇರವಾಗಿ ನನಗೆ ಕಾಗದ ಬರೆಯಿರಿ.

(ಶ್ರೀ ಎಚ್. ಸಿದ್ಧವೀರಪ್ಪ)

ಇನ್ನು ಹೋಮಿಯೋಪಥಿ ವಿಚಾರದ ಬಗ್ಗೆ ಹೇಳುವುದಾದರೆ ಇದಕ್ಕೆ ಒಂದು ಕಮಿಟಿಯನ್ನು ನೇಮಿಸಿದ್ದೇವೆ. ಇದರಲ್ಲಿ ಅವರನ್ನೂ ಸೇರಿಸಿದ್ದೇವೆ. ಅವರ ವಿಚಾರದಲ್ಲಿ ಹೆಚ್ಚಿನ ಗಮನ ಕೊಡುತ್ತೇವೆ.

ಶ್ರೀ ಎಸ್. ಹಮೀದ್‌ಷಾ.—ತಾವು ಯುನಾನಿ ವಿಚಾರದಲ್ಲಿ ಏನೂ ಹೇಳಲಿಲ್ಲ.

Sri H. SIDDAVEERAPPA.—Unani includes Ayurveda, ಅದು indigenous system.

ಇದುವರೆಗೆ ಮಾನ್ಯ ಸದಸ್ಯರುಗಳು ನಾನು ಮಾಡಿದ ಭಾಷಣವನ್ನು ಸಾವಧಾನವಾಗಿ ಕೇಳಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

MADAM SPEAKER.—The question is:

"That a Sum not exceeding Rs. 19,73,57,000, inclusive of the Sum granted 'on account', be granted to the Government to defray the charges which will come in course of payment during the financial year for the period ending with 31st day of March 1973 in respect of Demand No. 18 'Medical, Public Health and Family Planning'".

The motion was adopted and the Demand was granted.

DEMAND No. 20, 22, 38 AND 51.

Sri K. H. PATIL (Minister for Agriculture).—Madam, on the recommendation of the Governor, I beg to move:

"That a Sum not exceeding Rs. 14,95,15,000, inclusive of the sum granted 'on account' be granted to the Government to defray the charges which will come in course of payment during the financial year for the period ending 31st day of March 1973, in respect of Demand No. 20 'Agriculture'".

MADAM SPEAKER.—Motion moved:—

"That a Sum not exceeding Rs. 14,95,15,000, inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 20 'Agriculture'".

Along with this Demand, the other Demands Nos. 38 and 51 are also deemed to have been moved.

Sri N. CHIKKE GOWDA (Minister of State for Animal Husbandry).—Madam, on the recommendation of the Governor, I beg to move:

"That a sum not exceeding Rs. 2,83,00,000, inclusive of the sum granted 'on account', be granted to the Government to defray the charges which will come in course of payment

during the financial year for the peroid ending 31st day of March 1973, in respect of Demand No. 22 'Animal Husbandry''.

MADAM SPEAKER.—Motion moved :

"That a sum not exceeding Rs. 2,83,00,000, inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 22 'Animal Husbandry' ".

†ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಧ್ಯಕ್ಷಿಣಿಯವರೇ, ವ್ಯವಸಾಯಕ್ಕೆ ಸಂಬಂಧಪಟ್ಟಂತೆ, ಪಶುಸಂಗೋಪನೆಗೆ ಸಂಬಂಧಪಟ್ಟಂತೆ ಹಾಗೂ ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ಬೇಡಿಕೆಗಳನ್ನು ಸಭೆಯ ಮುಂದೆ ಮಾನ್ಯ ಮಂತ್ರಿಗಳು ನಮ್ಮ ಒಪ್ಪಿಗೆಗಾಗಿ ಇಟ್ಟಿರತಕ್ಕ ಕಾಲದಲ್ಲಿ ನಾನು ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂಬ ಭಾವನೆಯಿಂದ ಇದ್ದೇನೆ. ಮಂತ್ರಿಗಳು ನೇರವಾಗಿ ಕಳೆದ ಮೂರು ತಿಂಗಳಿನಿಂದ ಈಚೆಗೆ ಅಧಿಕಾರವನ್ನು ಹಿಡಿದಿರುವುದರಿಂದ ನಮ್ಮ ಮೇಲೆ ಹೆಚ್ಚು ಅಪಾದನೆಯನ್ನು ಹೊರಿಸಿದರೆ ನಾವು ಹೊಣೆಗಾರರಾಗುವುದಕ್ಕೆ ಸಾಧ್ಯವಿಲ್ಲವೆಂದು ಹೇಳಬಹುದು. ಕಳೆದ ಒಂದೂವರೆ ವರ್ಷಗಳಿಂದ ರಾಷ್ಟ್ರಾಧ್ಯಕ್ಷರ ಆಳ್ವಿಕೆಯಿಂದ ಪ್ರಾರಂಭವಾದ ನಿಮ್ಮ ಯುಗದಲ್ಲಿ ಏನೇನು ಪ್ರಗತಿಯನ್ನು ಸಾಧನೆ ಮಾಡಲಾಗಿವೆ ಎನ್ನುವ ಪ್ರಶ್ನೆಯನ್ನು ನಾವು ವಿಮರ್ಶೆ ಮಾಡಬೇಕಾಗಿದೆ. ಈ ಹೊತ್ತು ಎಲ್ಲರೂ ಗ್ರಾಮಾಂತರ ಜನತೆಯ ಅಭೀಷ್ಟೆಯನ್ನು ಈಡೇರಿಸತಕ್ಕ ಹೊಣೆಗಾರಿಕೆಯನ್ನು ಹೊತ್ತಿದ್ದೇವೆ ಎನ್ನುವ ಮಾತನ್ನು ಆಡುತ್ತೇವೆ. ನಾವು ನಮ್ಮ ಪ್ರತಿಯೊಂದು ಘೋಷಣೆಯಲ್ಲಿಯೂ ಕೂಡ ಅವರ ಹಿತಾಸಕ್ತಿಗಳನ್ನು ಕುರಿತೇ ಹೇಳುತ್ತ ಬಂದಿದ್ದೇವೆ. ಮಾನ್ಯ ಮಂತ್ರಿಗಳಿಗೆ ನಾನು ಹೇಳುತ್ತೇನೆ, ಬಜೆಟ್ ಭಾಷಣದ ಮೇಲೆ ಮಾತನಾಡುವಾಗ ಒಂದು ವಿಷಯವನ್ನು ಪ್ರಸ್ತಾಪ ಮಾಡಿದೆ: ಬ್ಯಾಂಕುಗಳ ರಾಷ್ಟ್ರೀಕರಣವಾಯಿತು. ಬ್ಯಾಂಕ್ ರಾಷ್ಟ್ರೀಕರಣವಾದ ಮೇಲೆ ರಾಷ್ಟ್ರಾಧ್ಯಕ್ಷರು ಒಂದು ಆರ್ಡಿನೆನ್ಸ್ ಹೊರಡಿಸಿದರು. ಆ ರಾತ್ರಿ ಇಂದಿರಾ ಗಾಂಧಿಯವರ ಭಾಷಣವನ್ನು ನಾನು ಕೇಳಿದೆ. "ಹೊಸ ಗಾಳಿ ಬೀಸುತ್ತಿದೆ, ಕಿಟಕಿ ಬಾಗಿಲನ್ನು ತೆಗೆದು ಈ ಹೊಸ ಗಾಳಿಗೆ ತಾವು ಹೊಂದಿಕೊಳ್ಳಬೇಕು" ಎಂದು ಹೇಳಿದ್ದು ಅವರ ಭಾಷಣದ ಒಂದು ಅಂಶ. ಈ ಹೊತ್ತು ಬ್ಯಾಂಕ್ ರಾಷ್ಟ್ರೀಕರಣವಾದ ವಿಷಯದ ಬಗ್ಗೆ ನಾವು ಯಾರೂ ವಿಚಾರ ಮಾಡುತ್ತಿಲ್ಲ. ಎಷ್ಟರಮಟ್ಟಿಗೆ ಇದರಿಂದ ಗ್ರಾಮಾಂತರ ಜನತೆಯ ಪುರೋಭಿವೃದ್ಧಿಯಾಗಿದೆ, ಇದು ಫಲಕಾರಿಯಾಗಿದೆ ಎಂದು ನಾನು ಕೇಳಬೇಕಾಗಿದೆ. ಎಷ್ಟು ಹಣವನ್ನು ಗ್ರಾಮಾಂತರ ಜನತೆಯ ಅಭ್ಯುದಯಕ್ಕಾಗಿ ರಾಷ್ಟ್ರೀಕರಣವಾದ ಮೇಲೆ ಒದಗಿಸಿದೆ ಎನ್ನುವ ಅಂಕಿ ಅಂಶಗಳನ್ನು ಕೊಟ್ಟರೆ ಬಹಳ ಒಳಿತು ಎನ್ನುವ ವಿಷಯವನ್ನು ನನ್ನ ಬಜೆಟ್ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದೆ. ಬಹುಶಃ ಮಾನ್ಯ ಮಂತ್ರಿಗಳು ಸಾಧ್ಯವಾದರೆ ತಮ್ಮ ಉತ್ತರದಲ್ಲಿ ಅಂಕಿ ಅಂಶಗಳನ್ನು ಕೊಡುವುದಾದರೆ ನಾನು ಸ್ವಾಗತ ಮಾಡುತ್ತೇನೆ.

ಈ ರಾಜ್ಯದಲ್ಲಿ ಇಂದು ಏನಾಗಿದೆ ಎಂದರೆ ಅಧಿಕಾರದ ಹಂಬಲ, ಎಲ್ಲರೂ ಅವರನ್ನೇ ಅವಲಂಬಿಸಬೇಕು. 80 ಪರ್ಸೆಂಟ್ ರೈತರು, ಹಳ್ಳಿಗಳಲ್ಲಿ ವಾಸ ಮಾಡತಕ್ಕ ಜನ ವ್ಯವಸಾಯದ ವೃತ್ತಿಯನ್ನೇ ಅವಲಂಬಿಸಿ ಜೀವನ ಮಾಡತಕ್ಕ ಜನ, ಅವರ ಮನಸ್ಸಿಗೆ ಇಚ್ಛೆಯಾಗುವ ಮಾತನ್ನು ಆಡದೆ ಹೋದರೆ ಉಳಿಗಾಲವಿಲ್ಲ, ಸ್ಥಾನ ಸಿಕ್ಕುವುದಿಲ್ಲ. ಆ ಸ್ಥಾನ ಸಿಕ್ಕುವುದಕ್ಕೆ ಈ ಒಂದು ಘೋಷಣೆಯ ರೂಪದಲ್ಲಿ ಅವನ್ನು ಎಳೆದುಕೊಳ್ಳಬೇಕಾಗುತ್ತದೆ. ಕೇಂದ್ರ ಸರ್ಕಾರದ ಹಣಕಾಸಿನ ಸಚಿವರಾದ ಚವಾಣ್ ಅವರು ಪಾರ್ಲಿಮೆಂಟಿನಲ್ಲಿ "Banks set apart Rs. 20 crores for lending to farmers at low rate of interest," ಎಂದು ಹೇಳಿದ್ದಾರೆ. ಇದರಲ್ಲಿ ಎಷ್ಟು ದುಡ್ಡನ್ನು ನಮ್ಮ ರಾಜ್ಯಕ್ಕೆ ತೆಗೆದುಕೊಂಡು ಬಂದಿದ್ದೀರಿ ಎಂದು ನಾನು ಕೇಳಬೇಕಾಗಿದೆ. ಇದನ್ನು ದಯಮಾಡಿ ತಿಳಿಸಬೇಕು ಎಂದು ತಮ್ಮನ್ನು ಪ್ರಾರ್ಥನೆ ಮಾಡುತ್ತೇನೆ. ನಾವು ಟೀಕೆಗೋಸ್ಕರ ಟೀಕೆ ಮಾಡುತ್ತಿದ್ದೇವೆ ಎನ್ನುವ ಭಾವನೆ ಬರುವುದು ಬೇಡ. ತಾವು ಏನು ಹೇಳುತ್ತೀರಿ ಅದನ್ನು ಕಾರ್ಯಗತ ಮಾಡುವ ಬಗ್ಗೆ ಎಷ್ಟು ಮುಂದೆ ಹೋಗಿದ್ದೀರಿ ಎಂದು ನಾನು ಕೇಳಬೇಕಾಗುತ್ತದೆ. ನಮ್ಮ ಸಭಾ ನಾಯಕರು, ಮುಖ್ಯ ಮಂತ್ರಿಗಳು ಮಡಿಕೇರಿಯಲ್ಲಿ ಮಾತನಾಡುವಾಗ ಕಡಮೆ ಬಡ್ಡಿ ದರದಲ್ಲಿ ರೈತರಿಗೆ ಸಾಲ ಸಿಕ್ಕುವ ಹಾಗೆ ಮಾಡಬೇಕು ಎಂದು ಹೇಳಿದ್ದಾರೆ. ನಾನು ಅದನ್ನು ಸ್ವಾಗತ ಮಾಡಿ, ಬೇಗ ಅದನ್ನು ಕಾರ್ಯಗತ ಮಾಡಿರಿ ಎಂದು ಹೇಳಿದೆ. ಅವರು ಹೇಳಿ ಮೂರು ನಾಲ್ಕು ತಿಂಗಳಾಯಿತು. ಈ ದಿಸೆಯಲ್ಲಿ ಎಷ್ಟರಮಟ್ಟಿಗೆ

(ಶ್ರೀ ಹೆಚ್. ಡಿ. ದೇವೇಗೌಡ)

ಸಾಧನೆ ಮಾಡಿದ್ದಾರೆ, ಕಡಮೆ ಬಡ್ಡಿ ದರದಲ್ಲಿ ರೈತರಿಗೆ ಸಾಲ ಕೊಡುವ ವಿಚಾರದಲ್ಲಿ ಏನು ಸಾಧನೆ ಮಾಡಿದ್ದಾರೆಂಬುದನ್ನು ತಿಳಿಸಬೇಕು. ಒಂದು ವೇಳೆ ಕಡಮೆ ದರದಲ್ಲಿ ರೈತರಿಗೆ ಸಾಲವನ್ನು ಕೊಡದೆ ಹೋದರೆ ಆಲ್ಟರ್ನೇಟಿವ್ ಏಜೆನ್ಸೀಸ್ ಮಾಡುತ್ತೇವೆನ್ನುವ ಬೆದರಿಕೆಯನ್ನೂ ಮಾನ್ಯ ಮುಖ್ಯ ಮಂತ್ರಿಗಳು ಪ್ರಯೋಗ ಮಾಡಿದ್ದಾರೆ. ಆ ದಿಸೆಯಲ್ಲಿ ಎಷ್ಟರಮಟ್ಟಿಗೆ ತಮ್ಮ ಕಾರ್ಯವನ್ನು ಸಾಧಿಸಿದ್ದಾರೆಂಬುವುದನ್ನೂ ನಾನು ಕೇಳಬೇಕಾಗುತ್ತದೆ.

ಇಂದು ವ್ಯವಸಾಯದಲ್ಲಿ ಸ್ವಲ್ಪ ಹೆಚ್ಚು ಉತ್ಪನ್ನವಾದರೆ ನಮ್ಮ ಡೆವಲಪ್‌ಮೆಂಟ್ ಆಕ್ಟಿವಿಟೀಸ್ ನಿಂದ ಆಯಿತು ಎನ್ನುವ ಒಂದು ದೊಡ್ಡಸ್ತಿಕೆಯ ಮಾತನ್ನು ಹೇಳುವ ಹವ್ಯಾಸವನ್ನು ಬೆಳೆಸಿ ಕೊಂಡು ಬಂದಿದ್ದೇವೆ. ಒಂದು ವೇಳೆ ಉತ್ಪನ್ನ ಬಿದ್ದು ಹೋದರೆ ಮಳೆ ಸರಿಯಾಗಿ ಆಗಲಿಲ್ಲ, ನ್ಯಾಚುರಲ್ ಕೆಲಾಮಿಟೀಸ್‌ನಿಂದ ಹೀಗಾಯಿತು ಎನ್ನುವ ವಾದವನ್ನು ಹೂಡುತ್ತೇವೆ. ಈ ಹೊತ್ತು 90—92 ಪರ್ಸೆಂಟ್ ಉಳುಮೆಯ ಭೂಮಿ ಮಳೆಯ ಆಧಾರದ ಮೇಲೆಯೇ ಅವಲಂಬನೆ ಯನ್ನು ಈ ರಾಜ್ಯದಲ್ಲಿ ಮಾಡಿಕೊಂಡಿವೆ. ಹೀಗಿರುವಾಗ ರೈತ ಎಷ್ಟರಮಟ್ಟಿಗೆ ಪ್ರಗತಿಯನ್ನು ಸಾಧಿಸಬಲ್ಲ ಎಂಬುದನ್ನು ನಾವು ಯೋಚನೆ ಮಾಡಬೇಕು. ಉತ್ಪನ್ನ ಜಾಸ್ತಿಯಾದಾಗ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಂಡುದರ ದೆಸೆಯಿಂದ ಆಯಿತು ಎನ್ನುವುದು, ಉತ್ಪನ್ನ ಕಡಮೆಯಾದರೆ ಮಳೆ ಇಲ್ಲದೆ ಇದ್ದುದರಿಂದ ಕಡಮೆಯಾಯಿತು ಎನ್ನುವ ವಾದ ಸರಿಯಾದುದಲ್ಲ. ಈ ದಿಸೆಯಲ್ಲಿ ಸರಿಯಾದ ಕಾರ್ಯಕ್ರಮವನ್ನು ಹಾಕಿಕೊಂಡು ಕೆಲಸ ಮಾಡುತ್ತಿಲ್ಲ ಎನ್ನುವ ದೃಷ್ಟಿಯಿಂದ ಈ ಮಾತು ನಾನು ಹೇಳುತ್ತಿದ್ದೇನೆ.

ಎಲ್ಲ ಕಡೆ ಭಾರಿ ನೀರಾವರಿ ಯೋಜನೆಗಳನ್ನು ಮಾಡುವುದಕ್ಕಾಗುವುದಿಲ್ಲ; ಎಲ್ಲ ಕಡೆ ಕೆರೆ ಗಳನ್ನು ಕಟ್ಟುವುದಕ್ಕಾಗುವುದಿಲ್ಲ. ಭೂಮಿಯಿಂದ ನೀರನ್ನು ಮೇಲಕ್ಕೆ ತೆಗೆಯುವುದರಲ್ಲಿ ನಾವು ಸಾಕಷ್ಟು ಪ್ರಗತಿಯನ್ನು ಸಾಧನೆ ಮಾಡಿಲ್ಲ. ಸಣ್ಣ ಸಣ್ಣ ರೈತರಿಗೆ ತಾವೇ ಸ್ವತಃ ಬಾವಿ ಹಾಕಿ ಕೊಂಡು ಕೆಲಸ ಮಾಡುವುದಕ್ಕೆ ಶಕ್ತಿ ಇಲ್ಲ. ಶ್ರೀ ಅರಸು ಅವರ ಭಾಷಣದ ಕೆಲವು ಭಾಗಗಳನ್ನು ಓದುವುದರಲ್ಲಿ ಸಭೆಯ ಕಾಲವನ್ನು ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. 'ಸಣ್ಣ ರೈತರಿಗೆ ಅನುಕೂಲವಾಗುವುದಕ್ಕೆ ಕಮ್ಯೂನಿಟಿ ಇರಿಗೇಷನ್ ವೆಲ್ಸ್ ಮಾಡಿ, ಅದರಿಂದ ನೀರನ್ನು ಒದಗಿಸಿ ಅನುಕೂಲ ಮಾಡಿಕೊಡುವುದರ ಬಗ್ಗೆ ಪ್ರಯತ್ನ ಮಾಡುವುದು ಒಳ್ಳೆಯದು'' ಎಂದು ಇದೇ ಸಭೆಯಲ್ಲಿ ಅವರು ಪ್ರತಿಪಾದನೆ ಮಾಡಿದ್ದಾರೆ. ಆದರೆ ಅವರೇ ಅಧಿಕಾರಕ್ಕೆ ಬಂದ ಮೇಲೆ ಆ ದಿಸೆಯಲ್ಲಿ ಏನು ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಎಂಬು ನಾನು ಕೇಳಬೇಕಾಗುತ್ತದೆ. ಕೇವಲ ಅಂದು ಆಡಳಿತವನ್ನು ಹಿಡಿದಿದ್ದಂತಹ ಜನತೆಯ ಮೇಲೆ ಆರೋಪ ಮಾಡುವ ದೃಷ್ಟಿಯಿಂದ ಈ ಮಾತನ್ನು ಹೇಳಿದ್ದರೆ ಅದಕ್ಕೆ ನಾನು ಹೆಚ್ಚು ಮಹತ್ವ ಕೊಡುವುದಿಲ್ಲ. ನಿಜವಾಗಿಯೂ ಅದನ್ನು ಕಾರ್ಯರೂಪಕ್ಕೆ ತರಬೇಕಾಗಿತ್ತು ಎನ್ನುವ ದೃಷ್ಟಿಯಿಂದ ಆ ಮಾತನ್ನು ಹೇಳಿದ್ದರೆ ನಾನು ಮೆಚ್ಚುತ್ತೇನೆ. ಮತ್ತು ಈಗ ತಾವೇ ಆಡಳಿತವನ್ನು ವಹಿಸಿಕೊಂಡಿರುವುದರಿಂದ ಅವರ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂದು ನಾನು ಕೇಳಬೇಕಾಗುತ್ತದೆ. ಭೂಮಿಯಲ್ಲಿರುವ ಜಲವನ್ನು ಸರಿಯಾಗಿ ಉಪಯೋಗಿಸಿಕೊಳ್ಳುವುದಕ್ಕೆ ನಮ್ಮಲ್ಲಿ ಸಾಕಷ್ಟು ಮಾಹಿತಿ ಇಲ್ಲ ಮತ್ತು ಸರ್ವೆಯಾಗಿಲ್ಲ ಈ ನೀರನ್ನು ಉಪಯೋಗಿಸಿಕೊಳ್ಳುವ ಕಡೆಗೆ ಮಾನ್ಯ ಮಂತ್ರಿಗಳು ಹೆಚ್ಚು ಗಮನ ಕೊಡುವುದು ಸೂಕ್ತ ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಇಂದು ರೈತರ ಪ್ರಗತಿಯಾಗಬೇಕಾದರೆ ಅವರಿಗೆ ಬೇಕಾದಂಥ ಬೀಜ, ಗೊಬ್ಬರ ಮತ್ತು ಇತರೇ ಸಲಕರಣೆಗಳನ್ನು ಸಕಾಲದಲ್ಲಿ ಒದಗಿಸಿಕೊಡಬೇಕಾಗುತ್ತದೆ. ಔಷಧದ ಅವಶ್ಯಕತೆ ಇದ್ದರೆ ಒದಗಿಸಿಕೊಡಬೇಕಾಗುತ್ತದೆ. ಇದರ ಬಗ್ಗೆ ಎಷ್ಟರಮಟ್ಟಿಗೆ ಪ್ರಗತಿಯಾಗಿದೆ ಎಂಬುದನ್ನು ನಾವು ನೋಡಬೇಕಾಗಿದೆ. ಇಂದು ಶೇಕಡ 70ರಷ್ಟು ಜನರು ಹಳ್ಳಿಗಳಲ್ಲಿ ವಾಸ ಮಾಡುತ್ತಿದ್ದಾರೆ. ಈ ಜನರು ಅವಿದ್ಯಾವಂತರಾಗಿರುವುದರಿಂದ, ಇವರನ್ನು ಶೋಷಣೆ ಮಾಡತಕ್ಕಂಥ ವರ್ಗದವರು ಇಂದು ಜಾಸ್ತಿಯಾಗಿದ್ದಾರೆ. ಈ ರೈತರ ಶೋಷಣೆಯಾಗತಕ್ಕಂಥ ಜಾಡ್ಯವನ್ನು ತಪ್ಪಿಸುವುದಕ್ಕೆ ಸರ್ಕಾರದವರು ಏನು ಪ್ರಯತ್ನ ಮಾಡಿದ್ದಾರೆಂದು ನಾನು ಕೇಳುತ್ತೇನೆ. ನನ್ನ ಕ್ಷೇತ್ರದಿಂದ ಒಬ್ಬ ರೈತ ನನಗೆ ಇಂದು ಒಂದು ಪತ್ರವನ್ನು ರಿಜಿಸ್ಟರ್ ಪೋಸ್ಟ್‌ನಲ್ಲಿ ಕಳಿಸಿಕೊಟ್ಟಿದ್ದಾನೆ. ಅದರಲ್ಲಿ ಆತ ಏನು ಬರೆದಿದ್ದಾನೆಂದರೆ; ಸರ್ಟಿಫೈಡ್ ಅಂಥ ಬೀಜವನ್ನು ನಾನು ಖರೀದಿ ಮಾಡಿ ಉಪಯೋಗಿಸಿದೆ, ಆದರೆ ಅದರಿಂದ ನಿರೀಕ್ಷಿಸಿದಂಥ ಫಲ ದೊರಕಿಲ್ಲ, ನಷ್ಟ ಉಂಟಾಗಿದೆ, ಎಷ್ಟು ನಷ್ಟ ಉಂಟಾಗಿದೆಯೋ ಅದಕ್ಕೆ ತಕ್ಕ ಪರಿಹಾರವನ್ನು ನಿಮ್ಮ ಮಂತ್ರಿಗಳಿಂದ ಕೊಡಿಸುವುದಕ್ಕೆ ಸಾಧ್ಯವೇ ಎಂಬುದಾಗಿ ಬರೆದಿದ್ದಾನೆ. ಸೀಡ್ಸ್‌ನ್ನು ಎಲ್ಲಿ ಖರೀದಿ ಮಾಡಲಾಗಿದೆ ಎಂಬುದಕ್ಕೆ ರಶೀದಿ

ಕೂಡ ಇದೆ. ಬೇಕಾದರೆ ಮಾನ್ಯ ಮಂತ್ರಿಗಳಿಗೆ ಕಳಿಸಿಕೊಡುತ್ತೇನೆ. ಇಂದು ಈ ಬೀಜದ ಮಾರಾಟವನ್ನು ಮೈಸೂರು ಸ್ಟೇಟ್ ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಅವರು ವಹಿಸಿಕೊಂಡಿದ್ದಾರೆ. ಇವರು ಸುಮಾರು 4 ಲಕ್ಷ ಕೆ. ಜಿ. ಯಷ್ಟು ಹೈಬ್ರಿಡ್ ಜವಾರನ್ನು ಖರೀದಿ ಮಾಡಿದ್ದಾರೆಂದು ಕೇಳಿದ್ದೇನೆ. ಕೆ. ಜಿ. ಒಂದಕ್ಕೆ 50 ಪೈಸೆ ಯಷ್ಟು ಹೆಚ್ಚು ಕೊಟ್ಟಿದ್ದಾರೆ. ಇದರಲ್ಲಿ ಹಂಚಿಕೆ ಮಾಡಿರುವ ಸುಮಾರು 3 ಲಕ್ಷ ಕೆ. ಜಿ. ಯಲ್ಲಿ ನಿರೀಕ್ಷಿಸಿದ ಫಲ ಕೊಟ್ಟಿಲ್ಲ. ಇದರಿಂದ ರೈತರಿಗೆ ನಷ್ಟವಾಗಿದೆ. ಈ ನಷ್ಟಕ್ಕೆ ಯಾರು ಕಾರಣರು ಎಂಬುದನ್ನು ತಾವು ಹೇಳಬೇಕು ಇನ್ನೂ 75 ಸಾವಿರ ಕೆ. ಜಿ. ಯಷ್ಟು ಸ್ಟಾಕ್ ಉಳಿದಿದೆ ಎಂದು ನಾನು ಕೇಳಿದ್ದೇನೆ. ಇದಕ್ಕೆ ಸಂಬಂಧಪಟ್ಟ ಒಬ್ಬ ಅಧಿಕಾರಿ ಮೊದಲು ಖಾಸಗೀ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದವರು ಎಂದು ಕೇಳಿದ್ದೇನೆ ಮತ್ತು ಅವರನ್ನು ಕೆಲಸದಿಂದ ಕಿತ್ತು ಹಾಕಿದ್ದರು. ಇದೆಲ್ಲಾ ಅನಾಹುತ ರಾಷ್ಟ್ರಪತಿಯವರ ಆಡಳಿತದ ಕಾಲದಲ್ಲಿ ನಡೆದಿದೆ. ಈ ರೀತಿಯ ಅವ್ಯವಹಾರ ನಡೆದಿರುವುದು ನಿಜವಾಗಿದ್ದಲ್ಲಿ ಸರ್ಕಾರದವರು ಸಂಬಂಧ ಪಟ್ಟವರಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಮನಸ್ಸು ಹರಿಸಬೇಕೆಂದು ಕೇಳುತ್ತಿದ್ದೇನೆ. ಮೈಸೂರು ಸ್ಟೇಸ್ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಎಂಬುದು ನಮ್ಮ ಸರ್ಕಾರದ ಒಂದು ಸಂಸ್ಥೆ. ಈ ಸಂಸ್ಥೆಯಲ್ಲಿ ಅನೇಕ ತರಹದ ಅವ್ಯವಹಾರಗಳು ನಡೆದಿರುವ ಬಗ್ಗೆ ಅಪಾದನೆಗಳಿವೆ. ಇದನ್ನು ಕ್ಷಮಿಸುವುದಕ್ಕೆ ಸಾಧ್ಯವಿಲ್ಲ. ಈ ಸಂಸ್ಥೆಯಲ್ಲ ಕೆಲಸ ಮಾಡುವ ಅಧಿಕಾರಿಗಳು ಸರ್ಟಿಫೈ ಮಾಡತಕ್ಕಂಥ ಧೋರಣೆ ಸರಿಯಾಗಿಲ್ಲವೆಂದು ಕೇಳಿದ್ದೇನೆ. ಸರಿಯಾದಂಥ ಬಿಗಿ ಕ್ರಮವನ್ನು ಅನುಸರಿಸುತ್ತಿಲ್ಲ. ಅಡಲ್‌ಟ್ರೇಟ್ ಆದಂಥ ಬೀಜಗಳನ್ನು ಚೀಲಕ್ಕೆ ಹಾಕಿ, ಅದರ ಮೇಲೆ ಸರ್ಟಿಫೈಡ್ ಸೀಲನ್ನು ಹಾಕಿ ರೈತರಿಗೆ ಹಂಚಲಾಗುತ್ತಿದೆ. ಅಧಿಕಾರಿಗಳು ತಮ್ಮ ಸ್ವಂತ ಲಾಭಕ್ಕೋಸ್ಕರ ಈ ರೀತಿ ಮಾಡುತ್ತಿದ್ದಾರೆ. ಸ್ವಾರ್ಥ ಪ್ರವೃತ್ತಿ ಅಧಿಕಾರಿಗಳಲ್ಲಿ ಇಂದು ನಡೆಯುತ್ತಿದೆ. ಕೆಲವರು ಒಳ್ಳೆಯ ಅಧಿಕಾರಿಗಳು ಇರಬಹುದು. ಅಡಲ್‌ಟ್ರೇಟ್ ಆದಂಥ ಬೀಜಗಳನ್ನು ಹಂಚುವುದನ್ನು ತಡೆಗಟ್ಟುವುದಕ್ಕೆ ಸರ್ಕಾರದವರು ಬಿಗಿಯಾದ ಕ್ರಮ ಕೈಕೊಳ್ಳಬೇಕೆಂಬ ಮಾತನ್ನು ನಾನು ಹೇಳುತ್ತಿದ್ದೇನೆ. ಇದರ ಜೊತೆಗೆ ರೈತರು ಉಪಯೋಗ ಮಾಡತಕ್ಕಂಥ ಗೊಬ್ಬರದ ಬೆಲೆಯು ಕಳೆದ 15 ವರ್ಷಗಳಲ್ಲಿ ಸುಮಾರು 200 ಪರ್‌ಸೆಂಟ್‌ನಷ್ಟು ಜಾಸ್ತಿಯಾಗಿದೆ. ನೈಟ್ರೋಜಿನಸ್ ಗೊಬ್ಬರದ ಬೆಲೆ ಈ ರೀತಿ ಹೆಚ್ಚಿರುವ ಸಂದರ್ಭದಲ್ಲಿ ರೈತರ ಪರಿಸ್ಥಿತಿ ಎಷ್ಟರ ಮಟ್ಟಿಗೆ ಸುಧಾರಿಸಿದೆ ಮತ್ತು ಕಾಸ್ಟ್ ಆಫ್ ಪ್ರೊಡಕ್ಷನ್ ಏನಾಗುತ್ತಿದೆ ಎಂಬುದನ್ನು ನಾವು ನೋಡಬೇಕು. ಇದೇ ವಿಷಯದಲ್ಲಿ ಕೇಂದ್ರದ ಮಂತ್ರಿಗಳಾದ ಶ್ರೀಮಾನ್ ಕೆ. ಹನುಮಂತಯ್ಯನವರು ಕೃಷಿ ಬೆಲೆ ಆಯೋಗ ರಚನೆ ಮಾಡುವುದು ಒಳ್ಳೆಯದೆಂದು ಹೇಳಿದ್ದಾರೆ. ಅದನ್ನು ಯಾರಿಗೆ ಸಲಹೆ ಮಾಡಿದ್ದಾರೆಂಬುದು ನನಗೆ ಗೊತ್ತಾಗಲಿಲ್ಲ. ಕಾಂಗ್ರೆಸ್ 'ಒ' ನವರಿಗೆ ಮಾಡಿದ್ದಾರೋ ಅಥವಾ ಪಿ.ಎಸ್.ಪಿ. ಅವರಿಗೆ ಮಾಡಿದ್ದಾರೋ ಎಂಬುದು ಗೊತ್ತಾಗಲಿಲ್ಲ. ನಮಗೆ ಮಾಡಿದರೆ ಅದರಿಂದ ಯಾವ ಪ್ರಯೋಜನವೂ ಇಲ್ಲ, ಏಕೆಂದರೆ ನಾವು ಚುನಾವಣೆಯಲ್ಲಿ ಫೇಲ್ ಆಗಿದ್ದೇವೆ. ಆದ್ದರಿಂದ ಈಗ ಅಧಿಕಾರದಲ್ಲಿರುವವರಿಗೇ ಸಲಹೆ ಮಾಡಿರಬಹುದು. ಈ ಒಂದು ಸಲಹೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಇರತಕ್ಕಂಥ ಅಡಚಣೆಗಳಾದರೂ ಏನು ಎಂದು ನಾನು ಸರ್ಕಾರದವರನ್ನು ಕೇಳುತ್ತೇನೆ. ಇವೊತ್ತು ಮಾರಾಟದ ಬೆಲೆ ಏನಿವೆಯೋ ಅವುಗಳು ರೈತರು ಉತ್ಪನ್ನದ ಖರ್ಚಿಗೆ ತಕ್ಕಂಥ ಬೆಲೆ ಇಲ್ಲವಾಗಿದೆ. ವ್ಯವಸಾಯ ಇಲಾಖೆಯ ಡೆವಲಪ್‌ಮೆಂಟ್ ಕಮೀಷನರ್ ಅವರು ಒಬ್ಬ ಕೂಲಿಯ ಮಿನಿಮಮ್ ವೇಜಸ್ 5 ರೂಪಾಯಿ ಇರಬೇಕು ಎಂದು ಸಲಹೆ ಕೊಟ್ಟಿದ್ದಾರೆ. ಅದಕ್ಕೆ ನಾನು ಸಂತೋಷಪಡುತ್ತೇನೆ. ವ್ಯವಸಾಯವನ್ನೇ ಅವಲಂಬಿಸಿಕೊಂಡಿರುವ ವ್ಯವಸಾಯ ಕೂಲಿಗಾರರು ಏನಿದ್ದಾರೆ, ಅವರು ತಮ್ಮ ಜೀವನವನ್ನು ನಡೆಸುವುದಕ್ಕೆ 5 ರೂಪಾಯಿ ಬೇಕಾಗುತ್ತದೆ ನಿಜ. ಆದರೆ ರೈತರು ಬೆಳೆದಂಥ ಪದಾರ್ಥಗಳಿಗೆ ಸರಿಯಾದ ಮಾರುಕಟ್ಟೆ ಇಲ್ಲದಿದ್ದರೆ, ರೈತರು ಯಾವ ರೀತಿಯಲ್ಲಿ ಕೂಲಿಗಾರರಿಗೆ 5 ರೂಪಾಯಿಗಳವರೆಗೆ ಕೂಲಿ ಕೊಡುವುದಕ್ಕೆ ಸಾಧ್ಯವಾಗುತ್ತದೆ? ಬಹುಶಃ ಇದು ಅರ್ಥಹೀನವಾದ ಸಲಹೆ ಎಂದು ಹೇಳಬೇಕಾಗುತ್ತದೆ. ಕೇಂದ್ರದ ಒಬ್ಬರು ಮಂತ್ರಿಗಳು ಕೃಷಿ ಬೆಲೆ ಆಯೋಗ ರಚನೆ ಮಾಡಬೇಕೆಂದು ಏನು ಸಲಹೆ ಮಾಡಿದ್ದಾರೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಅದು ಕೇವಲ ಹೇಳಿಕೆಯಲ್ಲಿಯೇ ಉಳಿಯಬಾರದು. ಅದು ಕಾರ್ಯರೂಪಕ್ಕೆ ಬರಬೇಕು. ಇದು ಕೇಂದ್ರ ಸರ್ಕಾರದ ಪಾಲಿಸಿಯಾದ್ದರಿಂದ, ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ಸರ್ಕಾರದವರು ಕೇಂದ್ರದ ಮೇಲೆ ಒತ್ತಾಯ ಮಾಡಬೇಕೆಂದು ಹೇಳುತ್ತಿದ್ದೇನೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಸಕ್ಕರೆ ಬೆಲೆ ವಿಚಾರದಲ್ಲಿ ಕೇಂದ್ರದ ನೀತಿ ಅಸಮಾಧಾನಕರವಾಗಿದೆ ಎಂದು ಹೇಳಿದಾರೆ. ಈಗ ಕೇಂದ್ರ ಮತ್ತು ರಾಜ್ಯಗಳಲ್ಲಿ ಒಂದೇ ಪಕ್ಷದ ಸರ್ಕಾರಗಳಿರುವುದರಿಂದ, ಅಸಮಾಧಾನವಾಗುವುದಕ್ಕೆ ಅವಕಾಶವಾದರೂ ಎಲ್ಲಿದೆ ಎಂದು ಕೇಳುತ್ತೇನೆ? ಈಗ ರೈತರ ಹೆಸರಿನಲ್ಲಿ, ಬಡವರ ಹೆಸರಿನಲ್ಲಿ ಮತ್ತು ದೀನದಲಿತರ ಹೆಸರಿನಲ್ಲಿ ರಾಜ್ಯವನ್ನಾಳುತ್ತಿದ್ದೇವೆಂದು ಹೇಳಿದ್ದಾರೆ. ಇದರ ಜೊತೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ

(ಶ್ರೀ ಹೆಚ್. ಡಿ. ದೇವೇಗೌಡ)

ನಡುವೆ ಹೊಸ ಯುಗವೊಂದು ಪ್ರಾರಂಭವಾಗಿದೆ ಎಂಬುದಾಗಿ ಬೇರೆ ಹೇಳಿಕೊಂಡಿದ್ದಾರೆ. ಇದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಮುಖ್ಯವಾಗಿ ಗೊಬ್ಬರದ ಬೆಲೆ ಕಳೆದ 15 ವರ್ಷಗಳಲ್ಲಿ ಏನು ಶೇಕಡ 200 ರಷ್ಟು ಹೆಚ್ಚಿದೆ, ಅದಕ್ಕನುಗುಣವಾಗಿ ಕಾಸ್ಟ್ ಆಫ್ ಪ್ರೊಡಕ್ಷನ್ ಎಷ್ಟು ಹೆಚ್ಚಿದೆ ಎಂಬುದನ್ನು ತಾವು ಆಲೋಚನೆ ಮಾಡಿ, ಅದಕ್ಕನುಗುಣವಾಗಿ ಬೆಲೆ ನಿಗದಿ ಮಾಡಲು ಏನಾದರೂ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇಂದು ಗೊಬ್ಬರದ ಮಾರಾಟ ಒಂದು ದೊಡ್ಡ ಸ್ಕ್ಯಾಂಡಲ್ ಆಗಿದೆ. ಇದನ್ನು ಹೇಳುವುದಕ್ಕೆ ಅಸಹ್ಯವಾಗುತ್ತದೆ. ಕೋಲಾರ ಜಿಲ್ಲೆಯಲ್ಲಿ ಮಾರಾಟವಾದ ಗೊಬ್ಬರದಲ್ಲಿ ಮರಳು ಇದ್ದುದು ಪತ್ರಿಕೆಯಲ್ಲಿ ವರದಿಯಾಗಿದೆ. ಇಂದು ರೈತರಿಗೆ ಗೊಬ್ಬರದ ಅವಶ್ಯಕತೆ ಇರುವುದರಿಂದ ಅವರು ಏನು ಕೊಟ್ಟರೂ ಸಹ ತೆಗೆದುಕೊಂಡು ಹೋಗುತ್ತಾರೆ. ಏನು ಕೊಟ್ಟರೂ ತೆಗೆದುಕೊಂಡು ಹೋಗುತ್ತಾರೆಂದು ಅಡಲ್ಟರೇಷನ್ ಮಾಡುವುದು ಸರಿಯಲ್ಲ. ಇದನ್ನು ತಪ್ಪಿಸುವುದಕ್ಕೆ ಅಧಿಕಾರಿಗಳು ಎಷ್ಟರಮಟ್ಟಿಗೆ ಕಾರ್ಯಸಾಧನೆ ಮಾಡಿದ್ದಾರೆಂದು ಕೇಳಬೇಕಾಗುತ್ತದೆ. ಇಂತಹ ವಿಷಯದಲ್ಲಿ ಎಷ್ಟು ಕೇಸ್‌ಗಳನ್ನು ಬುಕ್ ಮಾಡಿದ್ದಾರೆಂದು ಕೇಳುತ್ತೇನೆ. ಈ ಇಲಾಖೆಯಲ್ಲಿ ಅಧಿಕಾರಿಗಳ ಸಂಖ್ಯೆಯೇನೂ ಕಡಿಮೆಯಾಗಿಲ್ಲ, ಮತ್ತು ಅಧಿಕಾರಿಗಳ ಕೊರತೆ ಈ ಇಲಾಖೆಯಲ್ಲಿ ಇಲ್ಲ. ಅಧಿಕಾರಿಗಳ ಸಂಖ್ಯೆ ಹೆಚ್ಚಾಗಿ ಬೆಳೆದಿದೆ. ಈ ಕಾರಣದಿಂದ ನಿಮ್ಮ ಡೈರೆಕ್ಟರ್ ಅವರು ಅಧಿಕಾರಿಗಳ ನೆರವಿನಿಂದ ಅಡಲ್ಟರೇಷನ್ ಬಗ್ಗೆ ಎಷ್ಟು ಕೇಸ್‌ಗಳನ್ನು ಬುಕ್ ಮಾಡಿದ್ದಾರೆಂದು ಕೇಳಬೇಕಾಗುತ್ತದೆ. ಇಂತಹಂಥ ಗೊಬ್ಬರವನ್ನು ಮಾರಾಟ ಮಾಡುವುದಕ್ಕೆ ಸರಿಯಾದ ವ್ಯವಸ್ಥೆ ಇಲ್ಲ. ಮತ್ತು ಮಾರಾಟ ಮಾಡುವ ಗೊಬ್ಬರದಲ್ಲಿ ಸರಿಯಾದಂಥ ಗೊಬ್ಬರ ಇರುವುದಿಲ್ಲ. ಇದು ಎರಡೂ ಸಹ ದೊಡ್ಡ ಸಮಸ್ಯೆಯಾಗಿದೆ.

ಇಂದು ಪೆಸ್ಟಿಸೈಡ್ಸ್‌ನ್ನು ಕೃಷಿ ಕಾರ್ಪೊರೇಷನ್ ಅವರು ಮಾರಾಟ ಮಾಡುತ್ತಿದ್ದಾರೆ. ಅದಕ್ಕಾಗಿ ಅವರು ಏಜೆಂಟ್ಸ್‌ನ್ನು ಸಹ ಇಟ್ಟಿದ್ದಾರೆ. ಇದರಲ್ಲಿಯೂ ಸಹ ಅವ್ಯವಹಾರ ನಡೆಯುತ್ತಿದೆ. ಇದನ್ನು ತಡೆಗಟ್ಟುವುದಕ್ಕೆ ನಿಮ್ಮಲ್ಲಿ ಏನು ಕಾರ್ಯಕ್ರಮ ಇದೆ ಎಂದು ಕೇಳುತ್ತೇನೆ.

1-30 P.M.

ಇದಲ್ಲದೆ ಕಾಟನ್ ಸ್ಕೀಮ್ ಮತ್ತು ಇನ್ನಿತರ ಬೇರೆ ಬೇರೆ ಸ್ಕೀಮುಗಳು ಇವೆ. ಇದಕ್ಕೆ ಸಬ್ಸಿಡಿ ಕೊಡುತ್ತಾರೆ. ಸಬ್ಸಿಡಿ ಕೊಡತಕ್ಕ ಪೆಸ್ಟಿಸೈಡ್ಸ್‌ನ್ನು ಮಾರಾಟ ಮಾಡತಕ್ಕ ಪ್ರೈವೇಟ್ ಏಜೆಂಟ್ಸ್ ಇದ್ದಾರೆ ಅಗ್ರೋ ಇಂಡಸ್ಟ್ರೀಸ್ ಕೆಳಗೆ ಮಾರಾಟ ಮಾಡತಕ್ಕವನು ಸಬ್ಸಿಡಿ ಹಣವನ್ನು ದುರುಪಯೋಗ ಪಡಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ತಾವು ಇದನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡುವುದಕ್ಕೆ ಏನು ಹಿಡಿತವನ್ನು ಹಾಕಿದ್ದೀರಿ ? ಆದುದರಿಂದ ಈ ಒಂದು ದಿಶೆಯಲ್ಲಿ ಗಮನಕೊಡುವುದು ಸೂಕ್ತ ಎಂದು ಹೇಳುತ್ತಿದ್ದೇನೆ. ಮುಖ್ಯ ಮಂತ್ರಿಗಳು ಈ ವಿಷಯ ಬಂದಾಗ ಒಂದು ಮಾತು ಹೇಳಿದರು. ಬಹಳ ನೋವು ಆಯಿತು. ಈ ರಾಜ್ಯಕ್ಕೆ ಬೇಕಾಗತಕ್ಕ ಗೊಬ್ಬರದ ಪ್ರಮಾಣ ಎಷ್ಟು ಎಂದು ನಮ್ಮ ಅಧಿಕಾರಿಗಳು ಕೇಂದ್ರಕ್ಕೆ ತಿಳಿಸದೆ ಇರುವುದರಿಂದ ನಾವು ರಾಜ್ಯದಲ್ಲಿ ಕೊರತೆ ಅನುಭವಿಸುತ್ತಿದ್ದೇವೆ ಎನ್ನುವ ಮಾತನ್ನು ಹೇಳಿದರು. ಅಧಿಕಾರಿಗಳಿಗೆ ಅಷ್ಟೊಂದು ಕಷ್ಟವಾದ ಕೆಲಸವಾಗಿದೆಯೇ ? ರಾಜ್ಯಕ್ಕೆ ಎಷ್ಟು ಗೊಬ್ಬರ ವರ್ಷಕ್ಕೆ ಬೇಕು ಎನ್ನುವುದನ್ನು ಗೌರ್ನರ್ ಆಡಳಿತದಲ್ಲಿ ಇದ್ದಂಥ ಸನ್ನಿವೇಶದಲ್ಲಿ ಕೇಂದ್ರ ಸರ್ಕಾರಕ್ಕೆ ಮಾಹಿತಿ ಕೊಡದ ಪರಿಣಾಮವಾಗಿ ಈ ಪರಿಸ್ಥಿತಿ ಉಂಟಾಗಿದೆ. ಎನ್ನುವ ಮಾತನ್ನು ಮುಖ್ಯ ಮಂತ್ರಿಗಳು ಹೇಳಿ ಅವರ ಅಸಹಾಯಕತೆಯನ್ನು ಈ ಸಭೆಯಲ್ಲಿ ತೋರಿಸಿಕೊಂಡರು ಅಧಿಕಾರಿಗಳ ತಪ್ಪು ಆಗಿದ್ದರೆ ಯಾವನೇ ಅಧಿಕಾರಿ ಇರಲಿ ಆತನ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈ ರಾಜ್ಯ ಸರ್ಕಾರವನ್ನು ಪ್ರತಿನಿಧಿಸತಕ್ಕ ಕಾಲದಲ್ಲಿ, ಅವರು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಣೆ ಮಾಡದಿದ್ದರೆ, ಯಾರು ಹೊಣೆಗಾರರು ಎನ್ನುವುದನ್ನು ನಿಗದಿ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ಬರೇ ಅಗ್ರೋಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ಇರತಕ್ಕವರು ಮಾತ್ರ ಅವ್ಯವಹಾರಕ್ಕೆ ಕೈಹಾಕಿದ್ದರೆ, ಸೊಸೈಟಿಗಳು ಮಾರಾಟ ಮಾಡತಕ್ಕದ್ದು ಎಲ್ಲಾ ಸರಿಯಾಗಿ ನಡೆಯುತ್ತಿದೆ ಎಂದು ಹೇಳುವುದಿಲ್ಲ. ಅದನ್ನು ತಪ್ಪಿಸುವುದಕ್ಕೆ ಬಿಗಿಯಾದ ಕ್ರಮ ಹಾಕಬೇಕು. ಆ ದೃಷ್ಟಿಯಿಂದ ಸರ್ಕಾರಕ್ಕೆ ಈ ಸೂಚನೆ ಕೊಡುತ್ತಿದ್ದೇನೆ. ಅದರ ಜೊತೆಗೆ ಮೊದಲೇ ತಿಳಿಸಿದಂತೆ ಪೆಸ್ಟಿಸೈಡ್ಸ್ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿಗೆ ವಹಿಸಿದರೆ, ಸಬ್ಸಿಡಿ ಹಣ ದುರುಪಯೋಗ ಆಗದೇ ಸರಿಯಾದ ರೀತಿಯಲ್ಲಿ ರೈತರಿಗೆ ಒದಗಿಸುವ ವ್ಯವಸ್ಥೆ ಮಾಡಬೇಕು ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಅವರು ಅಧಿಕಾರಕ್ಕೆ ಬಂದ ಹೊಸತರಲ್ಲಿ ಪ್ರತಿ ಜಿಲ್ಲೆಯಲ್ಲಿ ಸಾಯಿಲ್ ಟೆಸ್ಟಿಂಗ್

ಲ್ಯಾಬರೇಟರಿ ಹಾಕುತ್ತೇವೆಂದು ಹೇಳಿದರು. ರೈತರಿಗೆ ಎಷ್ಟು ಪ್ರಮಾಣದ ಗೊಬ್ಬರವನ್ನು ಯಾವ ಭೂಮಿಯಲ್ಲಿ ಉಪಯೋಗ ಮಾಡಬೇಕು ಎನ್ನುವುದು ಗೊತ್ತಿಲ್ಲ. ಗ್ರಾಮ ಸೇವಕನಿಗೆ ಸಾಕಷ್ಟು ಮಾಹಿತಿ ಇಲ್ಲ. ವ್ಯವಸಾಯದ ಇಲಾಖೆಯ ಪ್ರಗತಿ ಗ್ರಾಮ ಸೇವಕನನ್ನು ಅವಲಂಬನೆ ಮಾಡಿದೆ. ಶ್ರೀ ಕೆ. ಎಚ್. ಪಾಟೀಲರು ಒಬ್ಬರನ್ನೇ ಹೊಣೆಗಾರರಾಗಿ ಮಾಡುವುದಿಲ್ಲ. ನಮ್ಮ ಧೋರಣೆ ನಮ್ಮ ಯೋಜನೆ, ಏನು ಇದೆ ಇದರಲ್ಲಿ ಮೂಲ ದೋಷ ಇದೆ. ಒಬ್ಬ ಗ್ರಾಮ ಸೇವಕನಿಗೆ 8-10 ತಿಂಗಳ ಟ್ರೈನಿಂಗ್ ಕೊಡುತ್ತೀರಿ. ಅವನು ಎಷ್ಟರಮಟ್ಟಿಗೆ ಅದರ ಬಗ್ಗೆ ಮಾಹಿತಿ ಪಡೆದಿರುತ್ತಾನೆ ಎಂದರೆ ಒಂದು ಬೆಳೆಗೆ ರೋಗ ಬಂದರೆ ಅಸಿಸ್ಟೆಂಟ್ ಡೈರೆಕ್ಟರ್‌ಗೆ ತೋರಿಸಿದರೆ ಅವರಿಗೂ ಹೇಳತಕ್ಕ ಶಕ್ತಿಯಿಲ್ಲ. ಅದನ್ನು ಅಗ್ರಿಕಲ್ಚರ್ ಯುನಿವರ್ಸಿಟಿ ರೀಸರ್ಚ್‌ಗೆ ಕಳುಹಿಸಿಕೊಡುತ್ತಾರೆ. ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ಸಬ್‌ಡಿವಿಜನ್ ಮಟ್ಟದ ಅಧಿಕಾರಿಗಳು ಹೇಳುವುದು ಗ್ರಾಮ ಸೇವಕನು ಹೇಳುವುದು ಮೇಲೆ ಅವಲಂಬಿಸಿದೆ. ಇದರಮೇಲೆ ಡ್ಯೂಯಲ್ ಕಂಟ್ರೋಲ್ ಇದೆ. ಅವರು ಕೆಲಸಮಾಡುವುದು ಎನ್.ಇ.ಎಸ್.ನಲ್ಲಿ ಅಡ್ಮಿನಿಸ್ಟ್ರೇಷನ್ ಕಂಟ್ರೋಲ್ ಇರುವುದು ವ್ಯವಸಾಯದ ಇಲಾಖೆಯಲ್ಲಿ ಬಿ.ಡಿ.ಓ ಕೆಲಸಮಾಡುವುದಕ್ಕೆ ಅನೇಕಸಾರಿ ಹೋಗುವುದಿಲ್ಲ. ಅವನ ಕೆಲಸ ಸಮರ್ಪಕವಾಗಿಲ್ಲ ಎಂದು ಬಿ. ಡಿ. ಓ. ಬರೆದರೆ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಡಿಸ್ಟ್ರಿಕ್ಟ್ ಆಫೀಸರ್ ಅವನ ಬಗ್ಗೆ ಕ್ರಮ ತಗೆದುಕೊಳ್ಳಬೇಕು. ಬಿ.ಡಿ.ಓ ಬರೆದ ಶಿಫಾರಸ್ಸು ಎಷ್ಟೋ ಸಾರಿ ಮೇಲಕ್ಕೆ ಹೋದಾಗ ಬಿದ್ದು ಹೋಗುತ್ತವೆ. ಆ ತರಹ ಡ್ಯೂವಲ್ ಕಂಟ್ರೋಲ್ ಇದೆ. ಸರ್ಕಾರ ಇದನ್ನು ಆಲೋಚನೆ ಮಾಡಬೇಕಾಗುತ್ತದೆ. ಗ್ರಾಮ ಸೇವಕನಿಗೆ 10 ಗ್ರಾಮ ಕೊಟ್ಟಿರುತ್ತಾರೆ. ಅವನಿಗೆ ವರ್ಷಕ್ಕೆ ಒಂದು ಗ್ರಾಮ ಫಿಕ್ಸ್‌ಮಾಡಿ, ಫಿಸಿಕಲ್ ಪರಫಾರಮೆನ್ಸ್ ಏನು ಎಂದು ವರ್ಷದ ಅಂತ್ಯದಲ್ಲಿ ಸರಿಯಾದ ರೀತಿ ಮಾಹಿತಿ ಕೊಡುವ ಹಾಗೆ ಮಾಡಿ. ಏನು ಪ್ರೊಡಕ್ಷನ್ ಆ ಗ್ರಾಮದಲ್ಲಿ ಇನ್‌ಕ್ರೀಸ್ ಆಗಿದೆ ಎಂದು ಮಾಹಿತಿ ಕೊಟ್ಟು ಅವನ ಕೆಲಸವನ್ನು ಸಮರ್ಥನೆ ಮಾಡಿಕೊಳ್ಳುವುದಾದರೆ ಸರಿ. ಸರ್ಕಾರದವರು ಮೂರೂವರೆ ಸಾವಿರ ರೂಪಾಯಿ ಇವೊತ್ತು ಆತನಮೇಲೆ ಖರ್ಚು ಮಾಡುತ್ತಿದ್ದಾರೆ. ಅವನಿಗೆ ಜವಾಬ್ದಾರಿ ಇಲ್ಲ. ಬಹುತೇಕವಾಗಿ ಹಳ್ಳಿಗಳಲ್ಲಿ ರಾಜಕಾರಣಿಗಳನ್ನು ಸ್ವಾಗತಮಾಡುವುದಕ್ಕೆ ಅವನು ಅನುಕೂಲವಾಗಬಹುದು. ಯಾವುಯಾವುದೇ ಸಮಾರಂಭಗಳಲ್ಲಿ ಓಟ್ ಆಫ್ ಥ್ಯಾಂಕ್ಸ್ ಹೇಳುವುದಕ್ಕೆ, ದೇವತಾ ಪ್ರಾರ್ಥನೆ ಮಾಡುವುದಕ್ಕೆ, ಅವನಿಗೆ ಸಂಬಳ ಸಾರಿಗೆ ಕೊಟ್ಟು ಇಟ್ಟುಕೊಂಡಿದ್ದೀರಿ. ಅವನ ಕೆಲಸವನ್ನು ರೀಆರ್ಗನೈಸ್ ಮಾಡುವ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಹಾಗೆಯೇ ಸಾಯಿಲ್ ಟೆಸ್ಟಿಂಗ್ ಲ್ಯಾಬೊರೇಟರಿ ಅತ್ಯಂಥ ಅವಶ್ಯಕ. ಜಿಲ್ಲೆಗಳಿಗಿಂಥ ತಾಲ್ಲೂಕು ಮಟ್ಟದಲ್ಲಿ ಅವು ಇದ್ದರೆ ನಾನು ಸಂತೋಷಪಡುತ್ತೇನೆ. ಯಾವ ಭೂಮಿಗೆ ಎಷ್ಟು ಫರ್ಟಿಲೈಸರ್ ಹಾಕಬೇಕು ಎನ್ನುವ ಮಾಹಿತಿ ಗೊತ್ತಿಲ್ಲ. ರೈತನಿಗೆ ಇದರ ಬಗ್ಗೆ ಸಾಕಷ್ಟು ಮಾಹಿತಿ ಕೊಟ್ಟರೆ ಒಳ್ಳೆಯದು. ಹೆಚ್ಚುಕಡಿಮೆ ಕೆಮಿಕಲ್ ಫರ್ಟಿಲೈಸರ್ ಹಾಕಿದರೆ ಭೂಮಿ ಕೆಟ್ಟುಹೋಗುತ್ತದೆ. 41 ಲಕ್ಷ ಟನ್ ಆರ್ಟಿಫಿಷಿಯಲ್ ಮೆನ್ಯೂರ್ ಉತ್ಪನ್ನ ಮಾಡುತ್ತಾರೆ ಎಂದು ಬೋಗಸ್ ಅಂಕಿಅಂಶಗಳು ಕೊಟ್ಟಿದ್ದಾರೆ. ಇದನ್ನೆಲ್ಲಾ ರೆವ್ಯೂ ಮಾಡಿದರೆ ವಿಧಾನಸೌಧದ ಕಂಪೋಸ್ಟ್ ಪಿಟ್ ಕೂಡ ಲೆಕ್ಕ ಹಾಕಿಕೊಳ್ಳಬೇಕಾಗುತ್ತದೆ. ಆರೀತಿ ಬೆನ್ನು ತಟ್ಟಿಕೊಳ್ಳುವ ಅಂಕಿ ಅಂಶಗಳು ಬೇಡ ಎಂದು ಹೇಳುತ್ತೇನೆ. ಹೆಚ್ಚಿಗೆ ಸಾಯಿಲ್ ಕನ್ಸರ್ವೇಷನ್ ವಿಚಾರದಲ್ಲಿ ಅವ್ಯವಹಾರ ನಡೆಯುತ್ತಿದೆ. ಲ್ಯಾಬರೇಟರಿ ಚಾರ್ಜಸ್ ಕೊಡುತ್ತಾರೆ ಅದರಲ್ಲಿ ಅವ್ಯವಹಾರ ನಡೆಯುತ್ತಿದೆ. ಇದರ ಬಗ್ಗೆ ಮಂತ್ರಿಗಳು ಸ್ವಲ್ಪಮಟ್ಟಿಗೆ ಬಿಗಿಯಾದ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನು ಅನಿಮಲ್ ಹಸ್ಬೆಂಡರಿ ಡಿಪಾರ್ಟ್‌ಮೆಂಟ್ ಬಗ್ಗೆ ಪ್ರತಿಯೊಂದು ತಾಲ್ಲೋಕಿನಲ್ಲೂ ಸರ್ವೀಸ್ ಮಾಡುತ್ತಾರೆ. ಆದರೆ ಅದು ಅಷ್ಟು ಸಮರ್ಪಕವಾಗಿ ನಡೆದಿಲ್ಲ. ಈ ದಿಶೆಯಲ್ಲಿ ಹೆಚ್ಚು ಅವಕಾಶ ಮಾಡಿಕೊಡುವ ಪ್ರಯತ್ನಮಾಡಬೇಕು ಎಂದು ಹೇಳುತ್ತೇನೆ.

ಶ್ರೀಮಾನ್ ಚಿಕ್ಕೇಗೌಡರು ಅವರ ಇಲಾಖೆ ಬಗ್ಗೆ ಹೆಚ್ಚು ಆಸಕ್ತಿಯಿಂದ ಕೆಲಸಮಾಡುತ್ತಾರೆ ಎಂದು ತಿಳಿದುಕೊಂಡಿದ್ದೇನೆ. ಅಧಿಕಾರಿಗಳು ಆಸ್ತಿಪಾಸ್ತಿಗಳನ್ನು ತನಿಖೆ ಮಾಡುವ ಬಗ್ಗೆ ತಾವು ಏನೇನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂದು ಅವರನ್ನು ಪ್ರಶ್ನೆ ಕೇಳಬೇಕಾಗುತ್ತದೆ. ಮಂತ್ರಿಗಳ ಕೆಲಸ ಶಾಶ್ವತವಾಗಿ ಇರುವುದಿಲ್ಲ. ಎಂ. ಎಲ್. ಎ. ಶಾಶ್ವತವಾಗಿ ಇರುವುದಿಲ್ಲ. ನಾವು ಇಲ್ಲಿಗೆ ಬಹಳ ಜವಾಬ್ದಾರಿಯಿಂದ ಬಂದಿದ್ದೇವೆ. ಅಧಿಕಾರಿಗಳು ಕಂಟ್ರಾಕ್ಟರುಗಳ ಜೊತೆಗೆ ಶಾಮೀಲಾಗಿ ಸರ್ಕಾರಕ್ಕೆ 70 ಕೋಟಿ ರೂಪಾಯಿ ಲಾಸ್ ಮಾಡಿದ್ದಾರೆ ಎಂದು ಹಿರಿಯ ರಾಜಕಾರಿಣಿಗಳು ಈ ಸಭೆಯ ಉಪನಾಯಕರು ಹೇಳಿದ್ದನ್ನು ಕೋಟ್ ಮಾಡಿದ್ದೇನೆ. ಮಂತ್ರಿಗಳು ಅಧಿಕಾರಿಗಳು ಶಾಮೀಲಾದರೆ ಬೇಲಿ ಎದ್ದು

(ಶ್ರೀ ಹೆಚ್. ಡಿ. ದೇವೇಗೌಡ)

ಹೊಲ ಮೇಯಿದ ಹಾಗೆ ಆಗುತ್ತದೆ. ಆ ರೀತಿ ದುರ್ದೈವದ ಪ್ರಸಂಗ ನಡೆಯಬಾರದು ಎಂದು ಕೇಳಿಕೊಳ್ಳುತ್ತೇನೆ. ಶ್ರೀ ಕೃಷ್ಣರವರು ಮಂತ್ರಿಗಳಾಗಿರುವ ಪ್ರಸಂಗದಲ್ಲಿ ಇದು ನಡೆಯುವುದಾದರೆ ನಾನು ವಿಷಾದಪಡಬೇಕಾಗಿದೆ. ಅವರ ಬಗ್ಗೆ ಗೌರವ ಇಟ್ಟುಕೊಂಡಿದ್ದೇನೆ. ಅವರು ಹಿಂದೆ ಈ ಸಭೆಯಲ್ಲಿ ಭಾಷಣ ಮಾಡುವ ಕಾಲದಲ್ಲಿ ಹೊರಗೆ ಇದ್ದರೂ ಅವರ ಭಾಷಣ ಕೇಳಲು ಓಡಿ ಬರುತ್ತಿದ್ದೆ. ಶ್ರೀ ಕೃಷ್ಣರವರು ಇರುವಂಥ ಮಂತ್ರಿ ಮಂಡಲದಲ್ಲಿ ಇಂಥ ವ್ಯವಹಾರಗಳು ನಡೆದರೆ, ರಾಜ್ಯದಲ್ಲಿ ಗೌರವ ಉಳಿಯುತ್ತದೆಯೇ?

ನೀವು ಅಧಿಕಾರದಲ್ಲಿರುವ ಕಾಲದಲ್ಲಿ ಇಂಥ ಅವ್ಯವಹಾರ ನಡೆಯುವುದಕ್ಕೆ ಅವಕಾಶ ಕೊಟ್ಟರೆ ಕಳಕಳಿಯಿಂದ ಹೇಳುತ್ತೇನೆ ತಾವು ರಾಜೀನಾಮೆ ಕೊಟ್ಟು ಒಬ್ಬ ಆರ್ಡಿನರಿ ಸದಸ್ಯನಾಗಿ ಕೂತು ಕೊಳ್ಳುವುದು ಒಳ್ಳೆಯದು ಮತ್ತು ತಮ್ಮ ಗೌರವವೂ ಉಳಿಯುತ್ತದೆ. ಹಿಂದೆ ಶ್ರೀಮಾನ್ ಎಂ ವಿ. ಕೃಷ್ಣಪ್ಪನವರು ರಾಜ್ಯಕ್ಕೆ ಬಂದಾಗ ಮುಖ್ಯ ಮಂತ್ರಿಗಳಾಗುತ್ತಾರೆ ಎಂದು ಜನರು ಕೂಗುವುದಕ್ಕೆ ಪ್ರಾರಂಭ ಮಾಡಿದರು. ಶ್ರೀಮಾನ್ ನಿಜಲಿಂಗಪ್ಪನವರು ಅವರನ್ನು ಇಲ್ಲಿಗೆ ತಂದರು. ನೀವು ಕೃಷ್ಣಪ್ಪನವರ ಹಾಗೆ ಆಗಿಬಿಟ್ಟೀರಿ ಎಂದು ಶಂಕೆ ಇದೆ. ಇದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ.

ಇನ್ನು ಶ್ರೀಮಾನ್ ಚಿಕ್ಕೇಗೌಡರ ಇಲಾಖೆಗೆ ಬಂದರೆ, ಮೊದಲು ನಾನು ಬೆಂಗಳೂರು ಡೈರಿಯ ಬಗ್ಗೆ ಪ್ರಸ್ತಾಪ ಮಾಡಬೇಕಾಗುತ್ತದೆ. ಸುಮಾರು 10-12 ರೂರಲ್ ಡೈರಿಗಳನ್ನು ತೆಗೆದಿದ್ದಾರೆ, ಒಂದೊಂದು ಡೈರಿಯಲ್ಲಿ ಪ್ರತಿ ದಿವಸ 10 ಸಾವಿರ ಲೀಟರ್ ಹಾಲು ಹ್ಯಾಂಡಲ್ ಮಾಡುವ ಗುರಿ ಇಟ್ಟುಕೊಂಡಿದ್ದಾರೆ. ಇದರ ಪ್ರಗತಿ ಇವತ್ತು ಹೆಚ್ಚು ಸಮರ್ಪಕವಾಗಿ ನಡೆದಿಲ್ಲ. ತಾವು ಕೊಟ್ಟಿರತಕ್ಕ ಅಂಕಿ ಅಂಶಗಳ ಪ್ರಕಾರ ಈ ಡೈರಿಗಳು ಎರಡೂವರೆ ಸಾವಿರ ಲೀಟರ್, ನಾಲ್ಕು ಸಾವಿರ, ಕೆಲವು ಐದು ಸಾವಿರ ಲೀಟರು ಹಾಲು ಹ್ಯಾಂಡಲ್ ಮಾಡುತ್ತಿವೆ. ಎಂದು ಇಲಾಖೆಯಿಂದ ಗೊತ್ತಾಗಿದೆ. ತತ್ಪರಿಣಾಮವಾಗಿ 8-10 ಸಾವಿರ ರೂಪಾಯಿಗಳವರೆಗೆ ನಷ್ಟವಾಗುತ್ತಿದೆ, ಇದನ್ನು ಚುರುಕುಗೊಳಿಸುವುದಕ್ಕೆ ಇದರಲ್ಲಿ ಟ್ರೈನ್ಡ್ ಪರ್ಸೊನೇಲ್ ಹಾಕಿಲ್ಲ. ಯಾರಿಗೆ ಜವಾಬಾರಿ ಕೊಡಬೇಕು ಅಂಥ ವ್ಯಕ್ತಿಗಳನ್ನು ನಿಗದಿಮಾಡಿಲ್ಲ ಎನ್ನುವುದು ಇದರಲ್ಲಿ ಮೂಲವಾಗಿರುವ ದೋಷ. ಇದರ ಬಗ್ಗೆ ಸರ್ಕಾರ ಗಮನವನ್ನು ಹರಿಸಬೇಕು. ಈ ದೃಷ್ಟಿಯಿಂದ ಈ ಒಂದು ಮಾತನ್ನು ಹೇಳುತ್ತಿದ್ದೇನೆ. ಜೊತೆಗೆ ರಾಷ್ಟ್ರಾಧ್ಯಕ್ಷರ ಆಳ್ವಿಕೆಯ ಕಾಲದಲ್ಲಿ ನಾವು 25 ವರ್ಷ ಹಿಂದಕ್ಕೆ ಹೋಗಿದ್ದೇವೆ ಎಂದರೆ ತಪ್ಪಾಗಲಾರದು. ಮಾನ್ಯ ಕೆ. ಎಚ್. ಪಾಟೀಲರು ಮತ್ತು ಮಾನ್ಯ ಕೃಷ್ಣ ಅವರು, ಅವರ ಶಕ್ತಿ ಮೀರಿ ಪ್ರಯತ್ನ ಮಾಡಿದರೂ ಸಾಧ್ಯವಾಗುವುದಿಲ್ಲ ಎಂದು ತಿಳಿದುಕೊಂಡಿದ್ದೇನೆ. ಇದರ ಬಗ್ಗೆ ವಿಚಾರಣೆ ನಡೆಸುತ್ತೀರಾ ಎಂದು ಕೇಳಬೇಕಾಗುತ್ತದೆ. ಇದರ ಬಗ್ಗೆ ವಿಚಾರಣೆ ನಡೆಸುತ್ತೇವೆ ಎಂದು ಈ ಸಭೆಯಲ್ಲಿ ನಮಗೆ ಆಶ್ವಾಸನೆ ಕೊಡಬೇಕು ಈಗಾಗಲೇ ಬೆಂಗಳೂರು ಡೈರಿಯ ಬಗ್ಗೆ ವಿಜಿಲೆನ್ಸ್ ಕಮಿಷನರ್ ಮುಂದೆ ಆಪಾದನೆ ಹಟ್ಟಿ ಇದೆ. ರೂರಲ್ ಡೈರೀಸ್‌ಗೆ ಸುಮಾರು 20 ಲಕ್ಷ ರೂಪಾಯಿಯ ಮೆಷಿನರಿ ಹೋದ ಸಾರಿ ಕೊಂಡಿದ್ದಾರೆ. ಕೆಲವು ಮೆಷಿನರಿಗಳು ಐಡಲ್ ಆಗಿ ಬಿದ್ದಿವೆ. ರಾಷ್ಟ್ರಾಧ್ಯಕ್ಷರ ಆಳ್ವಿಕೆಯಲ್ಲಿ ಅವನ್ನು ಏತಕ್ಕೆ ಕೊಳ್ಳಬೇಕಾಯಿತು! ಅದರ ಅವಶ್ಯಕತೆ ಏನು ಇತ್ತು ಎಂದು ಪ್ರಶ್ನೆ ಮಾಡಬೇಕಾಗುತ್ತದೆ. ಶ್ರೀಮಾನ್ ಚಿಕ್ಕೇಗೌಡರು ಇದರ ಕಡೆ ಗಮನಕೊಡುತ್ತಾರೆಂದು ತಿಳಿದುಕೊಂಡಿದ್ದೇನೆ. ರೈತನ ಮಗನಾಗಿ ಇದರ ಬಗ್ಗೆ ವಿಚಾರಣೆ ನಡೆಸುತ್ತಾರೆ ಎಂದು ಆಶ್ವಾಸನೆ ಇಟ್ಟುಕೊಂಡಿದ್ದೇನೆ. ಅಲ್ಲ ನಡೆದಿರತಕ್ಕ ಅವ್ಯವಹಾರ ಏನು ಎನ್ನುವುದನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಬೇಕು. 20 ಲಕ್ಷ ರೂಪಾಯಿಗಳ ಡೈರಿಗೆ ಸಂಬಂಧಪಟ್ಟ ಮೆಷರಿ ಪರ್ಚೇಸ್ ಮಾಡಿದ್ದಾರೆ. ಇದರ ಬಗ್ಗೆ ವಿವರಗಳನ್ನು ಕೊಡುವುದಕ್ಕೆ ಹೋಗುವುದಿಲ್ಲ. ಇದರ ಪೇಮೆಂಟ್ ಮಾಡುವುದಕ್ಕೆ ಡೈರೆಕ್ಟರ್ ಹಲವಾರು ಬಾರಿ ಬೊಂಬಾಯಿಗೆ ಹೋಗಿದ್ದರು. ಅದರ ಅವಶ್ಯಕತೆ ಏನು ಇತ್ತು? ದಯಮಾಡಿ ಇದರ ಬಗ್ಗೆ ವಿಚಾರಣೆ ಮಾಡಬೇಕು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇದರ ಜೊತೆಗೆ ನನ್ನ ಎರಡನೆಯ ಆಪಾದನೆ ಇದು. ಯುನಿಸೆಫ್‌ನಿಂದ ಮಿಲ್ಕ್ ಕ್ರೀಮ್ ಬಂತು. ಆ ಮಿಲ್ಕ್ ಕ್ರೀಮ್ ಉಪಯೋಗ ಮಾಡುವುದಕ್ಕೆ ಸರಿಯಾದದು ಅಲ್ಲ, ಅದು ಮಿಸ್ ಫಿಟ್ ಎಂದು ನಿರ್ಣಯ ತೆಗೆದುಕೊಂಡರು. ನಿರ್ಣಯ ತೆಗೆದುಕೊಂಡ ನಂತರ ಟೆಕ್ನಿಕಲ್ ಎಕ್ಸ್‌ಪರ್ಟ್ ಹೇಳುತ್ತಾರೆ ಅದನ್ನು ಉಪಯೋಗ ಮಾಡುವುದಕ್ಕೆ ಸಾಧುವಾಗಿದೆ ಎಂದು. ಆದರೂ ಕೂಡ ಸಂಬಂಧಪಟ್ಟ ಅಧಿಕಾರಿಗಳು ನಿರ್ಣಯ ತೆಗೆದುಕೊಂಡಿದ್ದಾರೆಂದು ಉಪಯೋಗ ಮಾಡುವುದು ಸರಿಯಿಲ್ಲ, ಅದು ಯೋಗ್ಯವಾದುದು ಅಲ್ಲ ಎಂದು ಅದನ್ನು ಏನು ಮಾಡಿದರು? ನಂತರ

ಇದನ್ನು ಕ್ಯಾಟರ್ ಫೀಡ್‌ಗೆ ಕೊಟ್ಟು ಬಿಡುವುದು ಸರಿಯೆಂದು ನಿರ್ಣಯ ತೆಗೆದುಕೊಂಡು, ಬೆಂಗಳೂರು ಶೇಷಾದ್ರಿಪುರದಲ್ಲಿರುವ ಶ್ರೀ ಮಿಲ್ಕ್ ಸಪ್ಲೈ ಅವರಿಗೆ ಒಂದು ಕೆ. ಜಿ. ಗೆ. 20 ಪೈಸೆಯಂತೆ ಕೊಟ್ಟರು. ಅವರು ಅದನ್ನು ಜಾಯ್ ಐಸ್ ಕ್ರೀಮ್ ಫ್ಯಾಕ್ಟರಿಗೆ ಮಾರಿದರು. ಅನೇಕರ್ ಮಿಲ್ಕ್ ಸಪ್ಲೈರ್ಸ್ ಸೊಸೈಟಿ ಮುಖೇನ ಅದು ಹಾಲಿಗೆ ಪರಿವರ್ತನೆಯಾಗಿ ಮತ್ತೆ ಈ ಡೈರಿಗೆ ವಾಪಸ್ ಬಂತು. ಇದರ ಬಗ್ಗೆ ಡೈರಿಯ ಕೆಲವು ಅಧಿಕಾರಿಗಳು ಕಾರ್ಪೊರೇಷನ್ ಕಮಿಷನರ್‌ಗೆ ಅರ್ಜಿ ಬರೆದರು. ಇಂಥ ಉಪಯೋಗಕ್ಕೆ ಬರಲಾಗದೆ ಇದ್ದಂಥ ರಿಜೆಕ್ಟ್ ಆಗಿರುವ ಕ್ರೀಮ್ ಅನ್ನು ಹಾಲಿಗೆ ಪರಿವರ್ತನೆಮಾಡಿ ಜನತೆಗೆ ಕುಡಿಸುತ್ತಿದ್ದಾರೆ, ಇದರ ಬಗ್ಗೆ ವಿಚಾರಣೆ ಮಾಡಿ ಎಂದು ಕಾರ್ಪೊರೇಷನ್ ಕಮಿಷನರ್ ಲಿಖಿತ ಮೂಲಕ ಬರೆದರು. ತಾವು ಅಧಿಕಾರಕ್ಕೆ ಬಂದು ಮೂರು ತಿಂಗಳಾಯಿತು. ಈ ಅಪಾದನೆ ನಿಮ್ಮ ಮುಂದೆ ಇದೆ. ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಬೇಕಾಗುತ್ತದೆ. ಸುಮಾರು ಎರಡು ಲಕ್ಷ ರೂಪಾಯಿಗಳ ಮಿಲ್ಕ್ ಕ್ರೀಮನ್ನು ಕೆ.ಜಿ. ಒಂದಕ್ಕೆ 15 – 20 ಪೈಸೆಯಂತೆ ಮಾರಿದ್ದಾರೆ. ಇದು ತಮಗೆ ಸಮಾಧಾನವನ್ನುಂಟುಮಾಡುವುದಾದರೆ, ತಾವು ಅಧಿಕಾರಿಗಳನ್ನು ಸಮರ್ಥನೆ ಮಾಡುವುದಾದರೆ, ನಾನು ಹೆಚ್ಚು ವ್ಯಾಖ್ಯಾನ ಮಾಡುವುದಿಲ್ಲ ಬೇಲಿಯೇ ಎದ್ದು ಹೊಲ ಮೇದಂತಾಗುತ್ತದೆ ಎಂದು ಮಾತ್ರ ಹೇಳುತ್ತೇನೆ. ಈ ಬಗ್ಗೆ ತಾವು ಕ್ರಮ ತೆಗೆದುಕೊಳ್ಳುತ್ತೀರಿ ಎಂಬ ನಂಬಿಕೆ ನನಗೆ ಇದೆ. ಅದಕ್ಕೆ ಕಾರಣ ಏನು ಎಂದರೆ, ಗುಜರಾತಿನಿಂದ ಒಬ್ಬ ಅಧಿಕಾರಿಯನ್ನು ಜನರಲ್ ಮ್ಯಾನೇಜರ್ ಆಗಿ ಕಾಂಟ್ರ್ಯಾಕ್ಟ್ ಬೇಸಿಸ್‌ನಮೇಲೆ ತಂದರು. ಅವರು ಶ್ರೀ ಮಿಲ್ಕ್ ಸಪ್ಲೈರ್ಸ್ ಪ್ರೊಪ್ರೈಟರ್ ಸಂಬಂಧಿಕರು. ಅವರೂ ಮತ್ತು ಶ್ರೀ ಮಿಲ್ಕ್ ಸಪ್ಲೈಸ್ ಪ್ರೊಪ್ರೈಟರ್ ಶಾಮೀಲು ಆಗಿ ಇಂಥ ಒಂದು ವ್ಯವಹಾರ ನಡೆಸುವುದಕ್ಕೆ ರಾಷ್ಟ್ರಾಧ್ಯಕ್ಷರ ಆಳ್ವಿಕೆಯ ಕಾಲದಲ್ಲಿ ಅವಕಾಶವಾಯಿತು. ಅದಾದಮೇಲೆ ಬಟರ್ ಮ್ಯಾನ್ಯುಫ್ಯಾಕ್ಚರ್ ಮಾಡುವುದಕ್ಕೆ ಕ್ರೀಮ್ ಪರ್ಚೇಸ್ ಮಾಡಿದರು. ಟೆಂಡರ್ ಕಾಲ್‌ಫಾರ್ ಮಾಡಿದರು. ಶ್ರೀ ಮಿಲ್ಕ್ ಸಪ್ಲೈರ್ಸ್ ಅವರು ರೇಟ್ ಹಾಕಿದರೆ ಕಷ್ಟವಾಗುತ್ತದೆ ಎಂದು ಬ್ಲಾಂಕ್ ಕೊಟೇಷನ್ ಕವರ್ ಅನ್ನು ಸೀಲ್‌ಮಾಡಿ ಹಾಕಿದರು. ಕೊಟೇಷನ್ ಎಲ್ಲಾ ಬಂತು. ಯಾರು ಯಾರು ಕೊಟೇಷನ್ ಕೊಟ್ಟಿದ್ದಾರೋ ಅವರ ಮುಂದೆ ಕೊಟೇಷನ್‌ಗಳನ್ನು ಒಡೆಯಬೇಕಾಗಿತ್ತು. ಆದರೆ ಅವರು ಮುಂದೆ ಕೊಟೇಷನ್ ಒಡೆಯಲಿಲ್ಲ. ನಾಳೆ ಒಡೆಯೋಣ ಎಂದು ಹೇಳಿ ರಾತ್ರಿ ಮನೆಯಲ್ಲಿ ಕೊಟೇಷನ್ಸ್ ಒಡೆದರು. ಶ್ರೀ ಮಿಲ್ಕ್ ಸಪ್ಲೈರ್ಸ್‌ಗೆ ಕಾಂಟ್ರ್ಯಾಕ್ಟ್ ಕೊಡಬೇಕೆಂದು, ಕೊಟೇಷನ್ ಫಿಲ್ ಅಪ್ ಮಾಡಿಕೊಂಡರು. ಮಾರನೆಯ ದಿನ ಬೆಳಿಗ್ಗೆ ಲೋಯಸ್ಟ್ ಕೊಟೇಷನ್ ಕೊಟ್ಟಂಥ ಮಹನೀಯರು, ಅದನ್ನು ನೋಡಿದಮೇಲೆ ಶ್ರೀ ಮಿಲ್ಕ್ ಸಪ್ಲೈರ್ಸ್ ಅವರ ಕೊಟೇಷನ್ ಅನ್ನು, ಆಫೀಸರ್ ಬರೆದಿದ್ದ ಫೋಟೋಸ್ಟ್ಯಾಟ್ ಕಾಪಿಯನ್ನು ವಿಜಿಲೆನ್ಸ್ ಕಮಿಷನ್ಸ್ ಮುಂದೆ ಪ್ರೊಡ್ಯೂಸ್ ಮಾಡಿದರು. ಆ ಮಹನೀಯರು ಆಮೇಲೆ ಶ್ರೀ ಧರ್ಮವೀರ ಅವರ ಹತ್ತಿರ ಹೋದರು. ಅವರು ನೀವು ಸ್ವಲ್ಪ ಅದೇ ರೇಟಿನಲ್ಲಿ ಸಪ್ಲೈ ಮಾಡಿಬಿಡಿ, ಏತಕ್ಕೆ ಸುಮ್ಮನೆ ಜಗಳ ಮಾಡಿಕೊಳ್ಳುತ್ತೀರಿ ಎಂದು ದಯಮಾಡಿಯ ಮಾಡಿ ಕಳುಹಿಸಿದರು. ಈ ಕೊಟೇಷನ್ ವ್ಯವಹಾರ ಶ್ರೀ ಧರ್ಮವೀರ ಅವರ ಕಾಲದಲ್ಲಿ ಅಲ್ಲಿಗೆ ಸ್ಥಗಿತವಾಯಿತು. ಅದಾದಮೇಲೆ ಮತ್ತೆ ಫ್ಲಷ್ ಸೀಸನ್ ಬಂತು. ನಮ್ಮಲ್ಲಿ ಸಾಕಷ್ಟು ಬಟರ್ ಮ್ಯಾನ್ಯುಫ್ಯಾಕ್ಚರ್ ಮಾಡುತ್ತೇವೆ, ನಾವು ಕೊಟೇಷನ್ ಕೇಳುವುದು ಬೇಡ ಎಂದು ಡೈರಿಯ ಅಧಿಕಾರಿಗಳು ರಿಪೋರ್ಟ್ ಕೊಟ್ಟರು. ಆದರೂ ಸಹ ಅದಕ್ಕೆ ಡಿಮ್ಯಾಂಡ್ ಬರುತ್ತದೆ ಎಂದು ಹೇಳಿ ಪರ್ಚೇಸ್ ಮಾಡುವುದನ್ನು ಕಂಟಿನ್ಯೂ ಮಾಡಿದರು. ಈ ಅಧಿಕಾರಿಯ ಕಾಲದಲ್ಲಿ ಈ ರೀತಿ 90 ಟನ್ ಬೆಣ್ಣೆ ಮಾಡಿದ್ದಾರೆ.

ಅವಿಭಾಜ್ಯ ಕಾಂಗ್ರೆಸ್ ಇದ್ದಾಗಲೇ ಶ್ರೀಮಾನ್ ದೇವರಾಜ್ ಅರಸ್ ಅವರು ಇಲಾಖೆಯ ಮಂತ್ರಿಗಳಾಗಿದ್ದಾಗ ಈ ಬೆಣ್ಣೆಯ ವ್ಯವಹಾರ ಪ್ರಾರಂಭವಾಯಿತು. ಅದು ಅವರ ಕಾಲದಲ್ಲಿ ಶುರುವಾಗಿದೆ. ದಯವಿಟ್ಟು ತಾವು ಡೈರಿಗೆ ಹೋಗಿ ಇನ್ಸ್‌ಪೆಕ್ಷನ್ ಮಾಡಿ ಡೈರಿ ತೃಪ್ತಿಕರವಾಗಿ ಕೆಲಸ ಮಾಡುತ್ತಿಲ್ಲ. ಆದ್ದರಿಂದ ದಯಮಾಡಿ ಈ ಡೈರಿ ವ್ಯವಹಾರದ ಬಗ್ಗೆ ಮಾನ್ಯ ಮಂತ್ರಿಗಳು ಗಮನಕೊಡಬೇಕೆಂದು ನಾನು ಹೇಳುತ್ತೇನೆ. ಈ ಡೈರಿಯಲ್ಲಿ ಸುಮಾರು ಒಂದೂವರೆ ವರ್ಷದಿಂದ ಅವ್ಯವಹಾರ ನಡೆಯುತ್ತಿದೆ. ಶ್ರೀಮಾನ್ ಚಿಕ್ಕೇಗೌಡರು ಈಗ 3 ತಿಂಗಳಿಂದ ಮಂತ್ರಿಗಳಾಗಿದ್ದಾರೆ. ಆದರೆ ಈ ಡೈರಿಯ ಅವ್ಯವಹಾರ ಹಿಂದಿನಿಂದಲೂ ನಡೆಯುತ್ತಿದೆ. ಅದಕ್ಕೋಸ್ಕರ ಅಲ್ಲಿ ನಡೆಯುತಕ್ಕ ಅವ್ಯವಹಾರಗಳು ಏನಿವೆ ಅವುಗಳ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಬೇಕು ಎಂದು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಮಿಲ್ಕ್‌ಕ್ಯಾನ್ ಬಗ್ಗೆ ಹೇಳುವುದಾದರೆ ಸುಮಾರು 60 ರೂಪಾಯಿಗಳ ಹೊಸ ಕ್ಯಾನ್‌ಗಳನ್ನು ಕೊಂಡುಕೊಂಡಿದ್ದೇವೆ ಎಂದು ಹೇಳಿದ್ದಾರೆ. ಆದರೆ ಅಲ್ಲಿ ಹಳೆಯ ಕ್ಯಾನ್‌ಗಳ ರಿಪೇರಿಯಾಗುತ್ತಿದೆ. ಈ ಕ್ಯಾನ್‌ಗಳ ರಿಪೇರಿಯನ್ನು ಒಬ್ಬ ಗುಜರಾತಿನ ಕಂಟ್ರ್ಯಾಕ್ಟರಿಗೆ ವಹಿಸಿದ್ದಾರೆ. ತಮಗೆ ಪ್ರಾಮಾ

(ಶ್ರೀ ಹೆಚ್. ಡಿ. ದೇವೇಗೌಡ)

ಣಿಕವಾಗಿ ಮನಸ್ಸಿದ್ದರೆ, ಇಚ್ಛೆ ಇದ್ದರೆ ಇದಕ್ಕೆ ಯಾರು ಯಾರು ಹೊಣೆಗಾರರು ಎಂಬುದನ್ನು ಕೇಳಬೇಕಾಗುತ್ತದೆ.

ಸೂಪರ್‌ಟೈಮ್ ಸ್ಕೇಲ್ ಅಧಿಕಾರಿಯೊಬ್ಬರು ಇದರಲ್ಲಿ ಸೇರಿ ಆ ಡೈರಿಯಲ್ಲಿ ಬಹಳ ಅವ್ಯವಹಾರಗಳನ್ನು ಮಾಡಿದ್ದಾರೆ. ಇಂಥಾ ಅಧಿಕಾರಿಗಳಿಗೆ ಬೆಂಬಲ ಕೊಡುವುದು ಸರಿಯಲ್ಲ. ಈ ಅವ್ಯವಹಾರಗಳ ಬಗ್ಗೆ ತನಿಖೆ ಮಾಡಬೇಕು ಎಂದು ನಾನು ಹೇಳುತ್ತೇನೆ.

ಇದರ ಜೊತೆಗೆ ಈ ಡೈರಿಯಲ್ಲಿ ಜನರಲ್ ಮ್ಯಾನೇಜರೊಬ್ಬರನ್ನು ನೇಮಕಮಾಡತಕ್ಕ ವಿಷಯದಲ್ಲಿ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ಅಡ್ವರ್ಟೈಜ್ ಮಾಡಿದರು. ಆ ಡೈರಿಯಲ್ಲಿ ಕೆಲಸ ಮಾಡುತ್ತಿದ್ದ ಎಂ.ಎಸ್.ಸಿ. ಡೈರಿ ಟೆಕ್ನಿಕಲ್ ಫಸ್ಟ್ ರ್‍ಯಾಂಕ್ ಪಡೆದಿದ್ದ ವ್ಯಕ್ತಿಗೆ ನೀವು ಆ ಕೆಲಸಕ್ಕೆ ಅಪ್ಲಿಕೇಷನ್ ಹಾಕಬೇಡಿ ಎಂದು ಮೆಮೋ ಕೊಟ್ಟರು. ಹಿಂದೆ ಆ ಡೈರಿಯಲ್ಲಿದ್ದ ಅಧಿಕಾರಿಯೊಬ್ಬರ ಸಂಬಂಧೀಕರಿಗೆ ಆ ಹುದ್ದೆಯನ್ನು ಕೊಡಲು ಆ ರೀತಿ ಮಾಡಿದ್ದಾರೆ. ಅವರನ್ನು ನೇಮಕ ಮಾಡತಕ್ಕ ಕಾಲದಲ್ಲಿ ಹಾಲಿ ಡೈರಿಯಲ್ಲಿ ಕೆಲಸ ಮಾಡುತ್ತಿದ್ದ ವ್ಯಕ್ತಿಗೆ ನೀವು ಅಪ್ಲಿಕೇಷನ್ ಹಾಕಬೇಡಿ ಎಂದು ಹೇಳಿದರೆ ಇದನ್ನು ನಿಜವಾಗಿಯೂ ಡಿಕ್ಟೇಟರ್‌ಷಿಪ್ ಎಂದು ಹೇಳಬೇಕಾಗುತ್ತದೆ. ಇದಕ್ಕೆ ಸಂಬಂಧಪಟ್ಟ ಫೈಲನ್ನು ಮಾನ್ಯ ಮಂತ್ರಿಗಳು ನೋಡಲು ತಮ್ಮ ಗಮನವನ್ನು ಆ ಕಡೆ ಹರಿಸಿದ್ದಾರೆಯೇ ಎಂದು ನಾನು ಅವರನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಆ ಎಂ. ಎಸ್. ಸಿ. ಡೈರಿ ಟೆಕ್ನಿಕಲ್ ಫಸ್ಟ್ ರ್‍ಯಾಂಕ್ ಪಡೆದ ವ್ಯಕ್ತಿ ಪಬ್ಲಿಕ್ ಸರ್ವೀಸ್ ಕಮಿಷನ್ನಿಗೆ ಅರ್ಜಿಯನ್ನು ಹಾಕಿದಾಗ ಅವರ ವಿರುದ್ಧ ಕಾನ್‌ಫಿಡೆನ್ಷಿಯಲ್ ರಿಪೋರ್ಟ್ 6 ಪುಟದಷ್ಟು ಬರೆದು ಪಬ್ಲಿಕ್ ಸರ್ವೀಸ್ ಕಮಿಷನ್ನಿಗೆ ಕಳುಹಿಸಿ ಅವರನ್ನು ಸೆಲೆಕ್ಟ್ ಮಾಡದಂತೆ ಮಾಡಿದರು. ಈ ಮಟ್ಟಕ್ಕೆ ಅವರು ಹೋಗಬಾರದಾಗಿತ್ತು. ಈಗ ಡೈರಿಯ ಜನರಲ್ ಮ್ಯಾನೇಜರ್ ಸಂಬಳವನ್ನು 900-1,800 ರೂಪಾಯಿಗಳ ಸ್ಕೇಲ್ ಮಾಡಿದ್ದಾರೆ. ಈ ಹುದ್ದೆಯನ್ನು ಮಾಸ್ಟರ್ ಡಿಗ್ರಿ ಪಡೆದುಕೊಂಡು ಡೈರಿ ಟೆಕ್ನಿಕ್‌ನಲ್ಲಿ ಫಸ್ಟ್ ರ್‍ಯಾಂಕ್ ಪಡೆದ ವ್ಯಕ್ತಿಗೆ ಕೊಡದೆ ಯಾರೋ ಒಬ್ಬರು ತಮಗೆ ಬೇಕಾದವರಿಗೆ ಕೊಟ್ಟಿದ್ದಾರೆ. ಇದು ರಾಷ್ಟ್ರಪತಿಯವರ ಆಳ್ವಿಕೆಯ ಕಾಲದಲ್ಲಿ ರಾಜ್ಯಪಾಲರು ಆಡಳಿತ ನಡೆಸುತ್ತಿದ್ದಾಗ ನಡೆದಿದೆ. ಎಷ್ಟರಮಟ್ಟಿಗೆ ಈ ವ್ಯವಹಾರ ನಡೆದಿದೆ ಎನ್ನುವುದನ್ನು ವಿಜಿಲೆನ್ಸ್ ಕಮೀಷನ್ ಮುಂದೆ ನಾನು ಪ್ರೂವ್ ಮಾಡುವುದಕ್ಕೆ ತಯಾರಾಗಿದ್ದೇನೆ. ಈ ರಾಜ್ಯದ ಒಬ್ಬರು ನಾಯಕರು ಹೇಳಿದರು ಅದನ್ನು ರೈಟಿಂಗ್‌ನಲ್ಲಿ ಕೊಡಿ ಅದನ್ನು ನಾವು ವಿಚಾರ ಮಾಡುತ್ತೇವೆ ಎಂದು. ಈ ದೃಷ್ಟಿಯಿಂದ ಇದಕ್ಕೆ ಸಂಬಂಧಪಟ್ಟ ಅಧಿಕಾರಿ ಯಾರೇ ಆಗಿರಲಿ ಆ ಅಧಿಕಾರಿಯ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಈ ಮಾನ್ಯ ಸಭೆಯ ಸದಸ್ಯರಾಗಿರಲಿ, ಲೋಕಸಭೆಯ ಸದಸ್ಯರಾಗಿರಲಿ, ಸಾರ್ವಜನಿಕರಿಗೆ ಸಂಬಂಧಪಟ್ಟ ಒಂದು ಇನ್‌ಫರಮೇಷನ್ ತಿಳಿದುಕೊಳ್ಳಲು ಅಧಿಕಾರಿಗಳಿಗೆ ಫೋನ್ ಮಾಡಿದಾಗ ಸರಿಯಾದ ರೀತಿಯಲ್ಲಿ ವರ್ತಿಸಿ ಅವರಿಗೆ ಇನ್‌ಫರ್ಮೇಷನ್ ಕೊಡದೇ ಹೋದರೆ ಹೇಗೆ? ಲೋಕಸಭೆಯ ಸದಸ್ಯರೊಬ್ಬರು ಈ ಇಲಾಖೆಯ ಅಧಿಕಾರಿಯೊಬ್ಬರಿಗೆ ಫೋನ್ ಮಾಡಿ ಒಂದು ಇನ್‌ಫರ್‌ಮೇಷನ್ ಕೇಳಿದಾಗ ಆ ಅಧಿಕಾರಿಗಳು ಸರಿಯಾಗಿ ವರ್ತಿಸಿಲ್ಲ. ಈ ಐ.ಎ.ಎಸ್. ಅಧಿಕಾರಿಗಳು ಚುನಾವಣೆಯಲ್ಲಿ ಗೆದ್ದು ಬಂದರೆ ಆಗ ಅವರಿಗೆ ಅದರ ಕಷ್ಟಗೊತ್ತಾಗುತ್ತದೆ. ಒಂದು ಚುನಾವಣೆಯಲ್ಲಿ ಗೆದ್ದು ಬರಬೇಕಾದರೆ ಅದರ ಕಷ್ಟ ಎಷ್ಟಿದೆ ಎಂಬುದು ನನಗೆ ಗೊತ್ತಿದೆ. ಈ ದೃಷ್ಟಿಯಿಂದ ಈ ಸಭೆಯ ಸದಸ್ಯರಾಗಲೀ, ಅಥವಾ ಲೋಕಸಭೆಯ ಸದಸ್ಯರಾಗಲೀ ಯಾರಾದರೂ ಅಧಿಕಾರಿಗಳಿಗೆ ಯಾವುದಾದರೂ ಒಂದು ಇನ್‌ಫರ್ಮೇಷನ್‌ಗೋಸ್ಕರ ಫೋನ್ ಮಾಡಿದರೆ ಅವರಿಗೆ ಆ ವಿಷಯವನ್ನು ಹೇಳಬೇಕು ನಿರಾಕರಣೆ ಮಾಡುವುದು ಸರಿಯಲ್ಲ. ಮಾನ್ಯ ಎಂ.ಪಿ. ಗಳಾದ ಶ್ರೀ ಮಲ್ಲೇಗೌಡರು ಯಾವುದೋ ಒಂದು ಇನ್‌ಫರ್ಮೇಷನ್ ಕೇಳಿದಾಗ ಅಧಿಕಾರಿಗಳು ಈ ರೀತಿ ಒಂದು ನಿಕೃಷ್ಟ ಭಾವನೆ ವರ್ತಿಸಿದ್ದಾರೆ. ಕೆಲವರು ಈಗ ಗೌಡರ ಕಾಲ ಹೋಯಿತು ಎಂದು ಹೇಳುತ್ತಿದ್ದಾರೆ ಒಂದು ಕಾಲ ಎಲ್ಲರಿಗೂ ಬರುತ್ತದೆ. ಆದ್ದರಿಂದ ದಯವಿಟ್ಟು ಇಂಥ ಸನ್ನಿವೇಶಗಳು ಉಂಟಾಗುವುದಕ್ಕೆ ಅವಕಾಶ ಕೊಡಬಾರದು ಎಂದು ಕೇಳಿಕೊಳ್ಳುತ್ತೇನೆ. ಇನ್ನು ಅಧಿಕಾರಿಗಳು,-ಸಣ್ಣವರು ಮತ್ತು ದೊಡ್ಡವರು— ಎಷ್ಟು ಆಸ್ತಿ ಮಾಡಿಕೊಂಡಿದ್ದಾರೆಂಬುದರ ಬಗ್ಗೆ ವಿಚಾರಣೆ ಮಾಡಿದರೆ ಗೊತ್ತಾಗುತ್ತದೆ. ಮಾತನಾಡುವುದಕ್ಕೆ ಬಹಳ ವಿಷಯಗಳು ಇವೆ. ಆದರೆ ಕಾಲಾವಧಿ ಕಡಿಮೆಯಾಗಿರುವುದರಿಂದ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ.

2-00 P.M.

ಇನ್ನು ಫಾರೆಸ್ಟ್ ಇಲಾಖೆಯ ಬಗ್ಗೆ ಒಂದು ಮಾತು ಹೇಳುತ್ತೇನೆ. ಶ್ರೀಮಾನ್ ಕೆ. ಎಚ್. ಪಾಟೀಲರು ಸ್ಯಾಂಡಲ್‌ವುಡ್‌ನಲ್ಲಿ ಸುಮಾರು ಒಂದು ಕೋಟಿ ರೂಪಾಯಿಯಷ್ಟು ನಷ್ಟ ಸರ್ಕಾರಕ್ಕೆ ಆಗಿದೆಯೆಂದು ಹೇಳಿದ್ದಾರೆ. ಆಮೇಲೆ ಸುಮಾರು 50 ಲಕ್ಷ ರೂಪಾಯಿಯಷ್ಟು ಸ್ಯಾಂಡಲ್‌ವುಡ್‌ನ್ನು ಹಿಡಿದ್ದಾರೆ ಎಂಬುದನ್ನು ಸಹ ಹೇಳಿದ್ದು ನಾನು ಕೇಳಿದ್ದೇನೆ. ಹಾಗೆಯೇ ಉಪಯೋಗಕ್ಕೆ ಬಾರದಿದ್ದುದನ್ನು ಅಧಿಕಾರಿಗಳು ರಾಶಿ ಹಾಕಿದ್ದು, ಅದರ ಬಗ್ಗೆ 50 ಲಕ್ಷ ರೂಪಾಯಿಯನ್ನು ರಿಕವರಿ ಮಾಡಿದ್ದಾರೆಂದು ಸಹ ಹೇಳಿದ್ದಾರೆ. ಇವರು ಹೆಚ್ಚು ಬಿಗಿಯಾದಂತಹ ಹಿಡಿತವನ್ನು ಇಟ್ಟುಕೊಂಡು ಕೆಲಸಮಾಡುವುದಕ್ಕೆ ಹೊರಟಿದ್ದಾರೆ ಬಹಳ ಸಂತೋಷ. ಅದೇ ರೀತಿಯಲ್ಲಿ ಹಿಂದಿನ ಸರ್ಕಾರ ಕೂಡ ಯಾವುದಾದರೂ ರಾಜ್ಯಕ್ಕೆ ನಷ್ಟವಾಗತಕ್ಕ ಕಾಂಟ್ರಾಕ್ಟನ್ನು ಕೊಟ್ಟಿದ್ದರೆ, ಅದರ ಬಗ್ಗೆಯೂ ಸಹ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇವೊತ್ತಿನ ದಿವಸ ರಾಜ್ಯದ ಬೊಕ್ಕಸಕ್ಕೆ ಯಾವುದೇ ರೀತಿಯ ಪೆಟ್ಟು ಬೀಳುವುದಾದರೆ, ಅಂಥವುಗಳ ಬಗ್ಗೆ ತಾವು ಬಿಗಿಯಾದ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಇದರ ಜೊತೆಗೆ ಒಬ್ಬ ಅಧಿಕಾರಿಯನ್ನು ಇದರ ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಹಾಕಿದ್ದೀರಿ ಎಂದು ಕೇಳಿದ್ದೇನೆ.

ಶ್ರೀ ಕೆ. ಎಚ್. ಪಾಟೀಲ್.—ನಾವು ಯಾವ ಅಧಿಕಾರಿಯನ್ನೂ ವಿಜಿಲೆನ್ಸಿಗಾಗಲಿ, ಇನ್‌ಕ್ವಾಯರಿಗಾಗಲಿ ಹಾಕಿಲ್ಲ. ಈಗ ಭೂಮಿಯ ಒಳಗೆ ಹುಗಿದಿಟ್ಟ ಕಟ್ಟಿಗೆಗಳನ್ನು ಸಹ ತೆಗಿಸಿದ್ದೇವೆ. ಅದೇ ಟ್ರಕ್‌ನಲ್ಲಿ ಹಿಡಿದಂತಹ ಕಟ್ಟಿಗೆಗಳು ಮತ್ತಿತರ ರೀತಿಯಲ್ಲಿ ಹಿಡಿದಂತಹ ಕಟ್ಟಿಗೆಗಳು ಇವೆಲ್ಲವನ್ನೂ ಎಷ್ಟೆಷ್ಟು ಎಂದು ಪಂಚನಾಮೆ ಮಾಡುವುದಕ್ಕಾಗಿ ಒಬ್ಬ ಅಧಿಕಾರಿಯನ್ನು ನೇಮಿಸಿದ್ದೇವೆ. ಅವರು ಕಾರಕೂನಿ ಕೆಲಸ ಮಾಡುತ್ತಾರೆಯೇ ಹೊರತು ಹೆಚ್ಚೇನೂ ಮಾಡುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ತಾವು ಇಷ್ಟು ಸ್ಟ್ರಿಕ್ಟಾಗಿ ಈ ಸ್ಯಾಂಡಲ್‌ವುಡ್ ರ್‍ಯಾಕೆಟ್ಟನ್ನು ತಪ್ಪಿಸುವುದಕ್ಕೆ ಕ್ರಮ ತೆಗೆದುಕೊಂಡಿದ್ದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಈ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಯಾವ ಅಧಿಕಾರಿಯನ್ನು ನೇಮಕ ಮಾಡಿದ್ದೀರಿ, ಅವರ ಚರಿತ್ರೆ ಚೆನ್ನಾಗಿಲ್ಲವೆಂದು ಹೇಳುತ್ತಿದ್ದಾರೆ. ಆದ್ದರಿಂದ ಅದರ ಬಗ್ಗೆ ಸ್ವಲ್ಪ ಎಚ್ಚರಿಕೆಯಿಂದ ಇರಬೇಕೆಂದು ಹೇಳುತ್ತಿದ್ದೇನೆ.

ಇನ್ನು ಈ ಐ.ಎಫ್.ಎಸ್. ಲಿಸ್ಟಿನ ಮೇಲೆ ಯಾರೋ ಒಬ್ಬರು ಸುಪ್ರೀಂ ಕೋರ್ಟಿಗೆ ಹೋದುದರಿಂದ ಸ್ಟೇ ಪಡೆದಿದ್ದರು. ಈಗ ಆ ಸ್ಟೇ ವೆಕೇಟ್ ಆಗಿದೆ. ಆದ್ದರಿಂದ ಇನ್ನೂ ಆ ಲಿಸ್ಟನ್ನು ಜಾರಿಗೆ ಕೊಡದಿದ್ದರೆ, ಆದಷ್ಟು ಜಾಗ್ರತೆ ಅದನ್ನು ಜಾರಿಗೆ ಕೊಡಬೇಕೆಂದು ಕೇಳಿಕೊಂಡು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಇನ್ನೊಬ್ಬ ಸದಸ್ಯರನ್ನು ಮಾತನಾಡಲು ಕರೆಯುವುದಕ್ಕೆ ಮುನ್ನ ಈ ಡಿಮ್ಯಾಂಡನ್ನು ಆರು ಗಂಟೆಗೆ ಓಟಿಗೆ ಹಾಕಬೇಕಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಆದಷ್ಟು ಕಡಿಮೆ ಸಮಯದಲ್ಲಿ ತಮ್ಮ ಭಾಷಣವನ್ನು ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮಂತ್ರಿಯವರಿಗೆ ಒಬ್ಬರಿಗೆ ಒಂದೂವರೆ ಗಂಟೆ, ಇನ್ನೊಬ್ಬರಿಗೆ ಒಂದು ಗಂಟೆ ಬೇಕೆಂದು ಹೇಳಿದ್ದಾರೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಇದರಲ್ಲಿ ಇನ್ನೊಬ್ಬ ಮಂತ್ರಿಯವರೂ ಬರಬೇಕು. ಫಿಷರೀಸ್ ಇಲಾಖೆಯೂ ಇದರಲ್ಲಿ ಇದೆ.

ಅಧ್ಯಕ್ಷರು.—ಹಾಗಿದ್ದರೆ ಇನ್ನೂ ಜಾಸ್ತಿ ಸಮಯ ಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ನಾವು ಇವತ್ತು ಆರು ಗಂಟೆಗೆ ಮುಗಿಸುವ ಬದಲು ಏಳು ಗಂಟೆಯವರೆಗೆ ಕೂತುಕೊಳ್ಳೋಣ. ನಾಳೆ ಬೆಳಿಗ್ಗೆ ರಿಪ್ಲೈ ಕೊಟ್ಟು, ನಂತರ ರೆಗ್ಯುಲರ್ ಬಿಸಿನೆಸ್ ತೆಗೆದುಕೊಳ್ಳಬಹುದು.

ಶ್ರೀ ಎಸ್. ಹೆಚ್. ಪುಟ್ಟರಂಗನಾಥ್.—ನಮಗೆ ಟೈಂ ಅಲಾಟ್ ಮಾಡುವಾಗ ವಿರೋಧ ಪಕ್ಷದವರಿಗೆ ಅಲಾಟ್ ಮಾಡುವುದಕ್ಕಿಂತ ಜಾಸ್ತಿ ಮಾಡಬೇಕಾಗುತ್ತದೆ. ಏಕೆಂದರೆ ನಾವು ಜಾಸ್ತಿ ಜನ ಇದ್ದೇವೆ.

Sri C. M. ARUMUGAM.—Every day the timings are being changed. Every day we are losing the question hour which is most important one. I feel that there should be some definite procedure with regard to the timings of this House.

Sri K. H. PATIL.—On behalf of this side of the House I assure that we are prepared to follow the time decided upon by the Speaker. Only in order to enable some hon. Members to speak on the demands I said we could have the reply to-morrow.

Mr. SPEAKER—Now I call upon hon. member Sri F. S. Thavare to speak.

† ಶ್ರೀ ಎಫ್. ಎಸ್. ತಾವರೆ (ಹಾವೇರಿ).—ಮಾನ್ಯ ಅಧ್ಯಕ್ಷರೇ, ಒಕ್ಕಲುತನದ ಸಚಿವರು ತಮ್ಮ ಬೇಡಿಕೆಗಳನ್ನು ಮಂಡಿಸಿದ್ದಾರೆ. ಅದನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತಾ ಕೆಲವು ಸೂಚನೆಗಳನ್ನು ಇಡಬಯಸುತ್ತೇನೆ. ಒಕ್ಕಲುತನದೊಳಗೇ ಒಂದು ಮಹಾಕ್ರಾಂತಿ ಆಯಿತು. ಕಳೆದ 10—12 ವರ್ಷಗಳ ಹಿಂದೆ ಈ ವಿಭಾಗದಲ್ಲಿ ಹೆಚ್ಚಿನ ಇಳುವರಿ ಕೊಡುವ ಒಂದು ಸಂಶೋಧನೆ ನಡೆದು ಹೆಚ್ಚಿಗೆ ಬೀಜಗಳು ಸಾಮಾನ್ಯ ರೈತರಿಗೆ ಸಿಕ್ಕಿ ರೈತನ ಬೆಳೆಯಲ್ಲಿ ಒಂದಕ್ಕೆ ನಾಲ್ಕರಷ್ಟು, ನಾಲ್ಕಕ್ಕೆ ಹತ್ತರಷ್ಟು ಉತ್ಪಾದನೆ ಹೆಚ್ಚಿದೆ. ಅಂತಲೇ ದೇಶದಲ್ಲಿ ಬಹಳಮಟ್ಟಿಗೆ ಸ್ವಾವಲಂಬನೆ ಸಾಧನೆ ನಡೆಯಿತು. ಈ ಪ್ರಸಂಗದೊಳಗೆ ಅಂಥಹ ಸಂಶೋಧನೆ ಮಾಡಿದಂಥ ಜನರನ್ನು ಅಭಿನಂದಿಸುತ್ತಾ ಒಂದು ಮಾತನ್ನು ಅವರ ಲಕ್ಷ್ಯಕ್ಕೆ ತರಬಯಸುತ್ತೇನೆ. ಯಾವಾಗ ಹೆಚ್ಚು ಇಳುವರಿ ಕೊಡತಕ್ಕ ಬೆಳೆ ಬಂತೋ ಆಗ ಅವರ ಸಂಗಡವೇ ಅನೇಕ ರೋಗರುಜಿನಗಳು ಹಾಗೂ ಕ್ರಿಮಿಕೀಟಾದಿಗಳು ಒಟ್ಟಿಗೇ ಹುಟ್ಟಿಕೊಂಡು ಬಂದಿವೆ ಎಂಬ ಭಯ ರೈತನನ್ನು ಆವರಿಸಿದೆ. ಇಂಥಾದ್ದನ್ನು ಹೋಗಲಾಡಿಸಲು ಪ್ರಯತ್ನಪಡುತ್ತಿರುವ ಒಕ್ಕಲುತನದ ವಿಭಾಗದಲ್ಲಿರುವ ಜನಗಳಿಗೆ ಹಾಗೂ ಸಂಶೋಧಕರಿಗೆ ಮತ್ತು ಸಂಶೋಧಕ ಸಂಸ್ಥೆಗಳಿಗೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಹೆಚ್ಚು ಇಳುವರಿ ಕೊಡತಕ್ಕ ಫಸಲುಗಳನ್ನು ಬೆಳೆಯುವಾಗ ಅವು ರೋಗರುಜಿನಗಳ ಭಾಧೆಗೆ ಎಡೆಯಾಗದಂತೆ ನೋಡಿಕೊಳ್ಳುವ ಸಂಶೋಧನೆ ಈ ದೇಶದಲ್ಲಿ ನಡೆಯಬೇಕು. ಹೆಚ್ಚು ಇಳುವರಿ ಕೊಡುವ ಫಸಲಿನ ಜೊತೆಗೆ ಹಾಗೂ ಬೀಜಗಳನ್ನು ಕೊಂಡುಕೊಳ್ಳುವುದರ ಜೊತೆಗೆ ಔಷಧಿಗಳನ್ನೂ ಸಹ ಕೊಂಡುಕೊಳ್ಳಬೇಕು. ಹೆಚ್ಚು ಇಳುವರಿ ಕೊಡಬೇಕಾದರೆ ಅದಕ್ಕೆ ಬರತಕ್ಕ ರೋಗರುಜಿನಗಳನ್ನು ಹೋಗಲಾಡಿಸುವುದರ ಕಡೆಗೆ ಮೊದಲು ಗಮನಕೊಡಬೇಕು. ಹೆಚ್ಚು ಇಳುವರಿ ಫಸಲನ್ನು ತೆಗೆಯಲು ರೈತರ ಆರ್ಥಿಕ ಪರಿಸ್ಥಿತಿ ಮತ್ತು ಅವರ ಬುದ್ಧಿವಂತಿಕೆ ಎಷ್ಟಿದೆಯೆಂಬುದನ್ನು ನಾವು ನೋಡಬೇಕು. ಯಾವ್ಯಾವ ಕಾಲಕ್ಕೆ ಯಾವ್ಯಾವ ರೀತಿಯಲ್ಲಿ ಹೆಚ್ಚು ಇಳುವರಿ ಫಸಲನ್ನು ತೆಗೆಯಬಹುದು ಎಂಬ ಜ್ಞಾನ ರೈತನಿಗೆ ಬಂದ ಕಾಲಕ್ಕೆ ಹೊಸ ತರಹ ಬೀಜವನ್ನು ಅವನಿಗೆ ಸರಬರಾಜು ಮಾಡಿದರೆ ಒಳ್ಳೆಯದು. ಹಾಗಲ್ಲದೆ 108 ಕಾಂಪ್ಲಿಕೇಟೆಡ್ ಸಮಸ್ಯೆಗಳನ್ನು ರೈತರ ಮುಂದೆ ಇಟ್ಟರೆ ರೈತನಾದವನು ನಾಳೆ ಅದರ ವಿಷಯದಲ್ಲಿ ಪರಿಜ್ಞಾನವಿಲ್ಲದೆ ಸಾಕಷ್ಟು ಔಷಧಿಗಳನ್ನು ಕೊಳ್ಳದೆ, ಕಷ್ಟನಷ್ಟಗಳಿಗೆ ಒಳಗಾಗಿ ಇನ್ನು ಮುಂದೆ ಹೆಚ್ಚು ಇಳುವರಿ ಕೊಡುವ ಬೆಳೆಗಳನ್ನು ಬಿಡಬೇಕಾಗಿ ಬಂದೀತು. ಒಟ್ಟಿನಲ್ಲಿ ರೋಗರುಜಿನಗಳನ್ನು ಹೋಗಲಾಡಿಸಬೇಕು. ಬೀಜಗಳ ಬಗ್ಗೆ ಹೆಚ್ಚಿನ ಪರಿಶೋಧನೆಯಾಗಬೇಕೆಂದು ನಾನು ಒಕ್ಕಲುತನದ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇದರ ಸಂಗ್ರಹಣೆ ಕಾರ್ಯ ಹಾಗೂ ಹೆಚ್ಚು ಇಳುವರಿ ಕೊಡುವ ಬೀಜೋತ್ಪಾದನೆಗೆ ಪ್ರೋತ್ಸಾಹ ಕೊಡುವ ನ್ಯಾಷನಲ್ ಸೀಡ್ ಕಾರ್ಪೊರೇಷನ್ ಸಂಸ್ಥೆಯನ್ನು ನಾವು ಅಭಿನಂದಿಸಬೇಕಾಗಿದೆ. ದುರ್ದೈವದಿಂದ ಇವತ್ತು ದೇಶದೊಳಗೆ ಒಂದು ಕಠಿಣ ಪರಿಸ್ಥಿತಿ ಇರುವಾಗ ಆ ಒಂದು ಸಂಸ್ಥೆ ಬಂದು ನಮಗೆ ಹೆಚ್ಚಿನ ಸಹಾಯ ಮಾಡಿದೆ. ಆದರೆ ಇದರಲ್ಲಿ ರಾಜ್ಯ ಸರ್ಕಾರ ಯಾವ ಹಿಡಿತವನ್ನು ಇಟ್ಟುಕೊಂಡಿದ್ದ ಹಾಗೆ ಕಾಣಲಿಲ್ಲ. ಇದರಲ್ಲಿ ಅನೇಕ ಬಂಡವಾಳ ಷಾಹಿಗಳು ವ್ಯಾಪಾರ ವರ್ಗದವರು ಇದ್ದಾರೆ. ಒಕ್ಕಲುತನ ಮಾಡಬೇಕೆಂದು ಇಚ್ಛೆಯುಳ್ಳವರು ಇದರೊಳಗೆ ಪ್ರವೇಶ ಮಾಡುತ್ತಾ ಇಲ್ಲ. ದಡ್ಡರಾದಂಥ ರೈತರನ್ನು ಹಿಂದೆ ಹಾಕಿ ಬುದ್ಧಿಜೀವಿಗಳಾದ ನಮಗೆ ಸಿಕ್ಕುವ ಲಾಭವನ್ನು ಪಡೆದುಕೊಂಡು ಹೋಗೋಣವೆಂಬ ದುರುದ್ದೇಶದಿಂದ ನ್ಯಾಷನಲ್ ಸೀಡ್ ಕಾರ್ಪೊರೇಷನ್‌ನ ಅನುಕೂಲವನ್ನು ಶ್ರೀಮಂತರು ಹಾಗೂ ವ್ಯಾಪಾರಸ್ಥರು ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತಿದ್ದಾರೆ. ಇಂತಹ ಒಂದು ಅಪವಿತ್ರತೆ ಸಾಕಷ್ಟು ಪ್ರಮಾಣದಲ್ಲಿ ಅಲ್ಲಿ ತುಂಬಿ ತುಳುಕಾಡುತ್ತದೆ. ಇದನ್ನು ಹೀಗೆಯೇ ಬಿಟ್ಟರೆ, ಮುಂದೆ ಅಲ್ಲಿ ಅನೀತಿಯುತವಾದ ವ್ಯವಹಾರ ನಡೆದು ಈ ಸಂಸ್ಥೆ ಕೆಳಮಟ್ಟಕ್ಕೆ ಇಳಿಯುತ್ತದೆ ಆದ್ದರಿಂದ ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ತಿಳಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ನ್ಯಾಷನಲ್ ಸೀಡ್ ಕಾರ್ಪೊರೇಷನ್ನಿನವರು ರೈತರಿಗೆ ಬಿತ್ತನೆ ಬೀಜಗಳನ್ನು ಬೆಳೆಯುವುದಕ್ಕೆ ಸ್ಕೀಮುಗಳನ್ನು ಮಂಜೂರು ಮಾಡುತ್ತಾರೆ. ಹಾಗೆ ಒಂದೊಂದು ಸ್ಕೀಮನ್ನು ಒಬ್ಬೊಬ್ಬರಿಗೆ ಮಂಜೂರು ಮಾಡಿ ಅವರಿಗೆ ರಿಜರ್ವ್ ಮಾಡಿದಮೇಲೆ ಅಲ್ಲಿ ರೈತರು ಸಾವಿರಾರು ರೂಪಾಯಿಗಳನ್ನು

ಖರ್ಚುಮಾಡಿ ಬಿತ್ತನೆ ಬೀಜಗಳನ್ನು ತಯಾರಿಸುತ್ತಾರೆ. ಹಾಗೆ ಅವರು ತಯಾರಿಸಿದ ಹೊಸ ಬೀಜಗಳನ್ನು ಕೆ. ಜಿ. ಒಂದಕ್ಕೆ 10 ರೂಪಾಯಿ ಪ್ರಕಾರ ಮಾರುತ್ತಿದ್ದಾಗ ಕೆಲವು ಕಡೆ ರೈತರು ಏನು ಈ ಬೀಜಗಳನ್ನು ಉತ್ಪಾದನೆ ಮಾಡಿರುತ್ತಾರೆ ಅಂಥವರ ಬೀಜಗಳನ್ನು ಅವರ ಹತ್ತಿರವೇ ಬಿಟ್ಟುಬಿಡುತ್ತಿರುವುದರಿಂದ ಅವರು ಆ ಹಳೆಯ ಬಿತ್ತನೆ ಬೀಜಗಳನ್ನು ಕೆ. ಜಿ. ಒಂದಕ್ಕೆ 2-3 ರೂಪಾಯಿಗಳಿಗೆ ಮಾರಾಟ ಮಾಡುತ್ತಿರುತ್ತಾರೆ. ಆ ಬಿತ್ತನೆ ಬೀಜಗಳಲ್ಲಿ ಹಳೆಯದು ಯಾವುದು ಹೊಸದು ಯಾವುದು ಎಂಬುದನ್ನು ಕಂಡ ಹಿಡಿಯುವುದು ಕಷ್ಟವಾದ್ದರಿಂದ ಅನೇಕರು ಆ ಹಳೇ ಬಿತ್ತನೆ ಬೀಜಗಳನ್ನು ಕೊಂಡು ಹಾಳಾಗಿ ಹೋಗಿದ್ದಾರೆ. ಹೀಗಾಗಿ ಆ ಬಿತ್ತನೆ ಬೀಜದ ಕ್ವಾಲಿಟಿ ಕೂಡ ಹಾಳಾಗಿ ಸರ್ವನಾಶವಾಗಿದೆ. ಆದುದರಿಂದ ಈ ಬಿತ್ತನೆ ಬೀಜಗಳನ್ನು ತಯಾರು ಮಾಡುವುದಕ್ಕೆ ಯಾರು ಯಾರಿಗೆ ತಾವು ಪರವಾನಿಗೆಯನ್ನು ಕೊಡುತ್ತೀರೋ ಅಂಥವರಿಂದ ಅಲ್ಲಿ ಉತ್ಪನ್ನವಾಗತಕ್ಕ ಬಿತ್ತನೆಬೀಜಗಳನ್ನು ತಮ್ಮ ತಾಬಾಕ್ಕೆ ತೆಗೆದುಕೊಳ್ಳಬೇಕು. ಏನು ಒಂದಾವರ್ತಿ ಉತ್ಪಾದನೆ ಮಾಡಿದ ಬಿತ್ತನೆ ಬೀಜ ಹಳತಾಗುತ್ತದೆ ಆಗ ಅದನ್ನು ಬಿತ್ತನೆ ಖಡಿತ ಕೊಡಬಾರದು. ಅದನ್ನು ಜನರಿಗೆ ಊಟಕ್ಕೋ ಅಥವಾ ಇನ್ನಾವುದಕ್ಕಾದರೂ ಉಪಯೋಗಿಸುವಂತೆ ಮಾಡಬೇಕು, ಹೀಗೆ ಮಾಡದಿದ್ದರೆ ಆ ಬಿತ್ತನೆ ಬೀಜದ ಪಾವಿತ್ರ್ಯತೆ ಉಳಿಯುವುದಿಲ್ಲ. ಇನ್ನೂ ಒಂದು ವಿಚಾರ ಎಂದರೆ ಅಲ್ಲಿ ಬಿತ್ತನೆ ಬೀಜಗಳನ್ನು ಉತ್ಪಾದನೆ ಮಾಡುವುದಕ್ಕೆ ರೈತನಿಗೇನು ಸ್ಪೈಟುಗಳನ್ನು ರಿಜರ್ವ್ ಮಾಡುತ್ತಾರೆ ಅಂಥ ಕಡೆಗಳಲ್ಲಿ ಅವನು ಬೆಳೆಯತಕ್ಕ ಬಿತ್ತನೆ ಬೀಜಗಳನ್ನು ಆಗಿಂದಾಗ್ಗೆ ಸರ್ಕಾರದವರು ಅವನಿಂದ ಅವನ್ನು ಕೊಂಡು ತಮ್ಮ ತಾಬಾಕ್ಕೆ ತೆಗೆದುಕೊಳ್ಳಬೇಕು. ಹಾಗೆ ತೆಗೆದುಕೊಳ್ಳದೆ ಆ ರೈತನಲ್ಲೇ ಬಿಟ್ಟರೆ ಅನೇಕರ ಹಾಳಾಗುತ್ತಾರೆ. ಇದಕ್ಕೆ ಅವಕಾಶ ಕೊಡದಂತೆ ಸರ್ಕಾರದವರು, ಸೂಕ್ತ ಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ಆದರೆ ಸರ್ಕಾರದವರಲ್ಲ ಇಲ್ಲಿಯವರೆಗಾದರೂ ಈ ಬಿತ್ತನೆ ಬೀಜಗಳ ವಿಚಾರದಲ್ಲಿ ಒಂದು ನಿಶ್ಚಿತವಾದ ಯೋಜನೆಯಿಲ್ಲ. ಎಲ್ಲಿ ಯಾವ ಬಿತ್ತನೆ ಬೀಜಗಳನ್ನು ತಯಾರು ಮಾಡಬೇಕು? ಎಷ್ಟು ಬಿತ್ತನೆ ಬೀಜಗಳನ್ನು ತಯಾರು ಮಾಡಬೇಕು? ಎಂಬ ಒಂದು ನಿರ್ಧಾರ ಸರ್ಕಾರದಲ್ಲಿ ಇಲ್ಲ. ಅವರು ಇಂಥ ಬಿತ್ತನೆ ಬೀಜಗಳನ್ನು ಕೋಲಾರದಲ್ಲೇ ಬೆಳೆಯಬೇಕು ಇಂಥ ಬಿತ್ತನೆ ಬೀಜಗಳನ್ನು ಮಂಡ್ಯದಲ್ಲೇ ಬೆಳೆಯಬೇಕು ಇಂಥ ಬಿತ್ತನೆ ಬೀಜಗಳನ್ನು ಧಾರವಾಡದಲ್ಲೇ ಬೆಳೆಯಬೇಕು ಎಂಬ ಒಂದು ನಿಲುವನ್ನು ಅವರು ತೆಗೆದುಕೊಳ್ಳಬೇಕು. ನಮ್ಮ ಇತಿಹಾಸದಲ್ಲೇ ಕೇಳದಿದ್ದಂಥ ಒಂದು ರೀತಿಯಲ್ಲಿ ನಮ್ಮ ಹಾವೇರಿ ತಾಲ್ಲೂಕಿನಲ್ಲಿ ಒಂದು ಎಕರೆಯಲ್ಲಿ ಮೊದಲೇನು ಒಂದು ಜೋಳದ ಬೆಳೆಯನ್ನು ಬೆಳೆಯುತ್ತಿದ್ದರು ಅದಕ್ಕೆ ಮೇಲೆ 5-10 ಕ್ವಿಂಟಾಲುಗಳನ್ನು ಜಾಸ್ತಿ ಬೆಳೆಯುವುದಕ್ಕೆ ಪ್ರಾರಂಭ ಮಾಡಿದರು. ಅಂಥ ಒಂದು ಉತ್ತಮ ತಳೀ ಬೀಜವನ್ನು ತಯಾರು ಮಾಡಿದರು. ಅದು ಖಂಡಿತವಾಗಿಯೂ ಒಂದು ಹೆಮ್ಮೆಯ ವಿಷಯ. ಅವರು ಎಕರೆಗೆ 4-5 ಸಾವಿರ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಅಂಥ ಸಂದರ್ಭದಲ್ಲಿ ಅವರು ತಯಾರಿಸಿದ ಬಿತ್ತನೆ ಬೀಜವನ್ನು ಈ ದಿವಸ ಈ ಅನೇಕ ಕಾರಣಗಳಿಂದ ಕೇಳತಕ್ಕವರೇ ಇಲ್ಲ. ಅವರು ಈ ಬಿತ್ತನೆ ಬೀಜಗಳನ್ನು ತಯಾರಿಸುವುದಕ್ಕಾಗಿ ಊರಲ್ಲಿ ಸೆಟ್ಟರ ಹತ್ತಿರ ದುಬಾರಿ ಬಡ್ಡಿಗೆ ಹಣವನ್ನು ತಂದು ಅವರೆಲ್ಲಾ ದೊಡ್ಡ ಸಾಲವಂದಿರಾಗಿದ್ದಾರೆ. ಆದ್ದರಿಂದ ಅವರಿಗೆ ಆ ತೊಂದರೆಯನ್ನು ತಪ್ಪಿಸಲು ನ್ಯಾಷನಲ್ ಸೀಡ್ ಕಾರ್ಪೊರೇಷನ್ನಿನವರು ಅಥವಾ ನಮ್ಮ ಸರ್ಕಾರದವರು ಯಾರಾದರೂ ಆ ಬಿತ್ತನೆ ಬೀಜಗಳನ್ನು ಕೂಡಲೆ ಖರೀದಿ ಮಾಡಿ ತೆಗೆದುಕೊಳ್ಳತಕ್ಕಂಥ ಒಂದು ಪರಿಸ್ಥಿತಿ ಈ ದಿವಸ ಉಂಟಾಗಿದೆ. ಸರ್ಕಾರದವರು ಈ ವಿಚಾರದಲ್ಲಿ ಒಂದು ಸ್ಥಿರವಾದ ಯಾವ ಯೋಜನೆಯನ್ನೂ ಮಾಡದಿರುವುದೇ ಇದಕ್ಕೆಲ್ಲಾ ಕಾರಣ. ಮೇಲಾಗಿ ಇಲ್ಲಿ ಆಫೀಸುಗಳಲ್ಲಿ ಕುಳಿತು ಕೆಲಸ ಮಾಡತಕ್ಕ ಚಿಕ್ಕ ಪುಟ್ಟ ನೌಕರರೇ ಇದ್ದಾರೆ ಅವರು ರೈತನಿಗೆ ಅಗತ್ಯವಾಗಿ ಬೇಕಾಗತಕ್ಕ ಬಿತ್ತನೆ ಬೀಜ ಗೊಬ್ಬರ ಇತ್ಯಾದಿಗಳಿಗೆ ಬೇಡಿಕೆಯನ್ನು ಕಳುಹಿಸಿದರೆ ಅವರಿಗೆ ಬಿತ್ತನೆ ಬೀಜದ ಅಗತ್ಯ ಮೇ ಅಥವಾ ಏಪ್ರಿಲ್ ತಿಂಗಳಲ್ಲಿ ಇದೆಯೆಂದು ಅವನ್ನು ಸರಬರಾಯಿ ಮಾಡ ವಂತೆ ಬರೆದರೆ ಜನರು ಬಿತ್ತನೆಯಲ್ಲಾ ಪೂರೈಸಿ ಜೋಳದ ಬಿತ್ತನೆ ಮುಗಿದು ಅದರ ಎಡೆಗೆ ಹೊಡೆಯತಕ್ಕ ಕಾಲಕ್ಕೆ ಇವರು ಆ ಬಿತ್ತನೆ ಬೀಜಗಳನ್ನು ಕಳುಹಿಸುತ್ತಾರೆ. ಅದಕ್ಕೆ ಕಾರಣ ಇವರಲ್ಲಿ ಯಾವ ಒಂದು ಪೂರ್ವಯೋಜನೆಯೂ ಇರುವುದಿಲ್ಲ. ಇದನ್ನು ನೋಡಿ ಜನರು ನಗುತ್ತಾರೆ. ಇಂಥ ಅಧಿಕಾರಿಗಳೂ ನೌಕರರೂ ಈ ದಿವಸ ಸರ್ಕಾರದಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರಿಗೆಲ್ಲಾ ಕಾಲಕಾಲಕ್ಕೆ ಸಾಕಷ್ಟು ಸಂಬಳಗಳನ್ನು ಕೊಡಲಾಗುತ್ತಿದೆ. ಇಂತಕ್ಕ ಜನರಾದರೋ ಅಪರಿಮಿತವಾಗಿದ್ದಾರೆ. ಇಂಥ ಒಂದು ಕಳಂಕವನ್ನು ತಪ್ಪಿಸಬೇಕಾಗಿದ್ದರೆ ಇದಕ್ಕೆ ಕೂಡಲೆ ಒಂದು ಪೂರ್ವಸಿದ್ಧತೆ ಯೋಜನೆಯನ್ನು ಸರ್ಕಾರದವರು ಹಾಕಿಕೊಳ್ಳಬೇಕು. ನಮ್ಮಲ್ಲಿ ರೈತನಿಗೆ ಯಾವಯಾವ ವಿಭಾಗಕ್ಕೆ ಎಷ್ಟು ಗೊಬ್ಬರ ಬೇಕಾಗುತ್ತದೆ, ಎಷ್ಟು ಬಿತನ್ತೆ ಬೀಜ ಬೇಕಾಗುತ್ತದೆ, ಎಷ್ಟು ಔಷಧಿಗಳು ಯಾವ ಯಾವ ಭಾಗಕ್ಕೆ ಏನೇನು ಔಷಧಿಗಳು ಬೇಕಾಗುತ್ತದೆಂಬುದನ್ನೆಲ್ಲಾ ಸಿದ್ಧಗೊಳಿಸಿ ಅವನ್ನು ಸ್ಟಾಕ್ ಮಾಡಿಡಬೇಕು. ಅವುಗಳನ್ನು ರೈತನು ಕೇಳಿದ ಕೂಡಲೆ ಹೊತ್ತಿಗೆ

(ಶ್ರೀ ಎಫ್. ಎಸ್. ತಾವರೆ)

ಸರಿಯಾಗಿ ಅವುಗಳನ್ನು ಸರಬರಾಯಿ ಮಾಡಬೇಕು. ಹಾಗೆ ಮಾಡದೆ ಈ ದಿವಸ ಧಾರ್ವಾಡದಲ್ಲಿ ಯಾರಾದರೂ ಬಿತ್ತನೆ ಬೀಜ ಬೇಕೆಂದರೆ ಆತನನ್ನು ಮಂಡ್ಯಾಕ್ಕೆ ಹೋಗು ಎಂಬುದು, ಮತ್ತು ಕೋಲಾರದಲ್ಲಿ ಯಾರಾದರೂ ಗೊಬ್ಬರ ಕೇಳಿದರೆ ಅವರನ್ನು ಧಾರ್ವಾಡಕ್ಕೆ ಹೋಗಿ ಎನ್ನುವುದು ಸರಿಯಾದ್ದಲ್ಲ. ಇವುಗಳನ್ನೆಲ್ಲಾ ಸರಿಯಾಗಿ ರೆಡಿ ಮಾಡಿ ಒಂದು ಕಡೆ ಇಟ್ಟುಕೊಳ್ಳದೆ ಆಯಾಯಾ ಸ್ಥಳಗಳಲ್ಲಿ ಅವುಗಳನ್ನು ಇಟ್ಟು ಅವು ರೈತರಿಗೆ ಹೊತ್ತಿಗೆ ಸರಿಯಾಗಿ ಸಿಕ್ಕುವಂತೆ ಮಾಡಬೇಕು. ಈ ಬಗ್ಗೆ ಇಂಥ ಒಂದು ಕ್ರಾಂತಿಕಾರಕ ಬದಲಾವಣೆಯನ್ನು ಮಾಡಬೇಕು.

ಇದೇ ಸಂದರ್ಭದಲ್ಲಿ ಇನ್ನೂ ಒಂದು ಮಾತನ್ನು ಸಭೆಯ ಗಮನಕ್ಕೆ ತರಬೇಕಾಗಿದೆ. ದೇಶದಲ್ಲಿ ಪ್ರಾಣಿಗಳಿಗೆ ಅನೇಕ ಬಗೆಯ ರೋಗಗಳು ಅಂದರೆ ಚಪ್ಪೇ ರೋಗ, ಗಂಟಲ ರೋಗ ಇತ್ಯಾದಿಗಳು ಬರುತ್ತವೆ. ಇವುಗಳನ್ನೆಲ್ಲಾ ಒಂದು ರಾಷ್ಟ್ರೀಯ ರೋಗಗಳೆಂದು ಪರಿಗಣಿಸಿ ಇವುಗಳಿಗೆ ಚಿಕಿತ್ಸೆ ಮಾಡಬೇಕು. ಇದರ ಸಂಪೂರ್ಣ ಜವಾಬ್ದಾರಿಯನ್ನು ಸರ್ಕಾರವೇ ಹೊರಬೇಕು. ಇನ್ನು ಬೆಳೆಗೆ ಬರತಕ್ಕ ರೋಗ ನಿವಾರಣೆಗೆ ಇಲ್ಲಿ ಸಭೆಯಲ್ಲಿ ನಾವು ಬಿ. ಎಸ್. ಸಿ. ಪೌಡರ್ ಅಥವ ಫಾಲೀಡಾಲ್ ಔಷಧಿಯನ್ನು ಕಳುಹಿಸುವುದಕ್ಕೆ ಏರ್ಪಾಡನ್ನು ಮಾಡಿದ್ದೇವೆಂದು ಹೇಳಿದರೆ ಸಾಲದು. ಈ ಔಷಧಿಗಳು ಜನರಿಗೆ ಸಕಾಲಕ್ಕೆ ಮುಟ್ಟುತ್ತಿಲ್ಲ. ಇಲ್ಲಿಗೆ ಕೆಲವಾರು ವರ್ಷಗಳಿಂದ ಅಂದರೆ 1950 ರಿಂದ ಧಾರ್ವಡ ಜಿಲ್ಲೆಯಲ್ಲಿ ಜೋಳದ ಬೆಳೆಗೆ ಬೆಂಕಿ ರೋಗ ಎಂದು ಬರುತ್ತಿದೆ. ಅದಕ್ಕೆ ಇಲ್ಲಿಯವರೆಗೂ ಸರ್ಕಾರದವರು ಕಾರ್ಯಕ್ರಮ ಕೈಗೊಂಡಿಲ್ಲ. ಅನೇಕರು ಹಾಳಾಗಿ ಹೋಗಿದ್ದಾರೆ. 1964-65ರಲ್ಲಿ ಮೊದಲು ಬಿ. ಎಸ್. ಸಿ. ಪೌಡರನ್ನು ಸ್ಪ್ರೇಮಾಡಿಸಿದರು. ಅದರಿಂದೇನೂ ಅನುಕೂಲವಾಗಲಿಲ್ಲ. ಆ ಚಿಚ್ಚೆಹುಳುಗಳ ಕಾಟ ಇನ್ನೂ ಹೆಚ್ಚಾಯಿತು. ಆಗ ಮತ್ತೆ 1966-67 ರಲ್ಲಿ ಏರಿಯಲ್ ಸ್ಪ್ರೇ ಮಾಡಿಸಲಾಯಿತು. ಆ ಒಂದು ಕಾರಣದಿಂದ ರೈತರು ಲಕ್ಷಗಟ್ಟಲೆ ಸಾಲವಂದಿಗರಾಗಿದ್ದಾರೆ. ಅವರ ಗೋಳನ್ನು ಕೇಳತಕ್ಕವರೇ ಇಲ್ಲ. ಇನ್ನು ಈ ವರ್ಷ ಅಲ್ಲಿನ ರೈತರಿಗೆ ಒಂದು ಸೇರು ಕೂಡ ಜೋಳ ಆಗುವಂತೆ ಕಾಣುವುದಿಲ್ಲ. ಅಲ್ಲಿ ಈಗಾಗಲೇ ಬೆಂಕೀಹುಳದ ಕಾಟ ವಿಪರೀತವಾಗಿದೆ. ಇದು ಜೂನ್ ತಿಂಗಳು. ಜುಲೈ ತಿಂಗಳು ಬರುವುದಲ್ಲದೆ. ಬೆಳೆಯಾಗುತ್ತದೆ ಎಂಬ ಭರವಸೆ ಅವರಿಗಿಲ್ಲ. ಅಲ್ಲಿ 8—10 ಲಕ್ಷ ಎಕರೆಗಳಲ್ಲಿ ಇಟ್ಟಿದ್ದ ಜೋಳದ ಬೆಳೆಯೆಲ್ಲಾ ಹಾಳಾಗಿದೆ. ಆದ್ದರಿಂದ ಸರ್ಕಾರದವರು ಇಂಥ ಸಂದರ್ಭದಲ್ಲಿ ಒಂದು ಊರಲ್ಲಿ ಬರತಕ್ಕ ರೋಗ ಅಲ್ಲಿಗೆ ಸೀಮಿತವಾದ್ದು ಎಂದು ತೀರ್ಮಾನ ಮಾಡದೆ ಅದನ್ನು ಒಂದು ರಾಷ್ಟ್ರೀಯ ಮಟ್ಟದಲ್ಲಿ ಪರಿಗಣಿಸಿ ಅದಕ್ಕೆ ಚಿಕಿತ್ಸೆ ಮಾಡಬೇಕು. ಇದರ ಸಂಪೂರ್ಣ ಖರ್ಚುವೆಚ್ಚಗಳನ್ನು ಸರ್ಕಾರದವರೇ ವಹಿಸಿಕೊಳ್ಳಬೇಕು. ಅದರ ಸಂಪೂರ್ಣ ಹೊಣೆಗಾರಿಕೆಯನ್ನು ಸರ್ಕಾರವೇ ಹೊರಬೇಕು. ಈ ದಿವಸ ನಮ್ಮ ಭಾಗದಲ್ಲಿ ಅಂದರೆ ರಾಣಿಬೆನ್ನೂರು ಹಾವೇರಿ ಅಲ್ಲೆಲ್ಲಾ ಜನರು ಬೆಳೆ ಹೋಗಿ ಬಹಳ ಕಂಗಾಲಾಗಿದ್ದಾರೆ. ಆದ್ದರಿಂದ ಸರ್ಕಾರದವರೇ ಅಲ್ಲಿ ಇದನ್ನು ಸಂಪೂರ್ಣವಾಗಿ ತಡೆಗಟ್ಟತಕ್ಕ ಹೊಣಗಾರಿಕೆಯನ್ನು ಹೊರಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

2-30 P.M.

Sri N. B. SIRDESAI (Khanapur).—Madam Speaker, I rise to oppose all the Demands tabled by the Hon'ble Minister for Agriculture and Forests and the Demand tabled by the Hon'ble Minister of State for Animal Husbandry, on some principles and grounds. I am not opposing the demands for the sake of opposition only. My constructive suggestions will help the Minister to streamline and overhaul the administration of the Department. I want the Minister, and the Government to be more realistic, more vigilant, honest and humane. If you discharge your duties towards the public most honestly and make your officers to work honestly, I am sure, you wi l be known as Dharmaviras. If you do not discharge your duties honestly, you will be called Adharma Veeras. I do not wish that you should be called as Adharmaveeras. This has no reference to the name of the Governor of Mysore. It is said God sees the people w th His thousand eyes. If the Hon. Minister has

regard to the representations submitted by the MLA's and the local leaders, he will also have that insight because thousands of people in the State will make you known who is who and what is what. You must know your Department with such a vision and find out who is who and what is what. So, I request you not to disregard to representations submitted by the MLAs and the local representatives. You must remember the slogans given out to the people on the eve of elections. You must remember them every day. You must exercise strict vigilance over the work of your officers in order to implement your promises made to the people.

With regard to your officers, I must say here that they are lethargic. Your Department is known for corruption and malpractices. If the Public Works Department is known as enemy No. 1 of the country then the Forest Department can be called as enemy No. 2 of the nation. The Officers of your department have neglected their duties and the Government has connived at their negligence. So, I request you not to spare the erring and the negligent officers of your Department. From a reliable source, I may tell you that much of the forest revenue is swallowed by the officers of your Department and the contractors. The officers are fed by the contractors. Therefore the officers connived at the wrong doings of the contractors. I may inform you that without the co-operation of your officers, the smugglers would not have carried on their business of smuggling. Crores of rupees worth of sandalwood, rosewood and timber have been smuggled uptill now. This smuggling has taken place at the connivance of the officers of your Department. Therefore the officers are wholly and solely responsible for the smuggling business. Thus the forest revenue which has been swallowed by your officers could have been saved with strict vigilance over their work and that amount could have been utilised for the benefit of the State.

As regards the knowledge af rules, I may bring to your kind notice that the Secretary of your Department is not conversant with the simple rules. When the Government desires to furnish certain information to the MLAS immediately, the Secretary pleads ignorance of the rules. The Secretary feels that information could be supplied at his whims and fancies and at the time when he likes. This is not desirable because when the Government themselves want to supply information to the MLAS, the Secretary should not stand in the way. If this is the attitude of the Head of the Department then what of other lower officers ? I therefore request you to issue instructions to all the officers of your department not to disregard the representations made by the MLAS or the local leaders. We approach the Officers or the Government to elicit certain information which will be required by the people. We should not be denied of such a facility. We are the elected representatives of the people and we owe a duty to the people. This Government is formed of the people, for the people and by the people. This Government is not constituted by the officers.

(SRI N. B. SIRDESAI)

As regards the afforestation programme of your Department, I would suggest here that this afforestation of the eucalyptus trees should be carried on on the barren lands and the pasture lands and in places where there is no growth of trees. This should not be undertaken in cleared up forest coupes. The plantation of the timber and Sandalwood treesshould be undertake on a large scale as that would bring much revenue and also earn foreign exchange to the State. You might be well aware of the great demand for soft wood and the rosewood. Inspite of this great demand for such a wood, Government is concentrating its attention upon the plantation of the eucalyptus trees. I do not decry plantation of eucalyptus because that would increase the forest area but more attention should be paid towards increasing the output of soft-wood and the rosewood which is in great demand.

I may bring to your notice another fact *i.e.*, though your Department is keeping quiet over the smuggling of timber and other products of the forest, and they are not taking any action against them but your Department is not sparing the cultivators who cut one or two trees for preparing agricultural implements. Your officers are punishing the agriculturists for minor offences but they are conniving at the major offences. That is the greatest mistake on the part of Government.

The **roads** in the forest area are not being maintained and repaired. They should be maintained and repaired atleast in my taluka.

As regards Vanamahotsava, I may tell you that each year pits are dug in the same pits and in the same old pits, the trees are planted. That has come to my notice. So, instead of celebrating Vanamahotsava in backyards and other public places, better celebrate it in the forest area or in places where the lands have been reserved.

Then as regards the forest land, I request the Hon. Minister to release the forest lands to the landless cultivators who are in need of the forest lands. The lands which have been granted to the personnel of your Department who are retired should not be taken over and they should be continued with the possession of the land granted to them. The request of the Military personnel should not be disregarded and the lands should be released to them for cultivation. There is one suggestion as regards the waste lands. These lands are not fit for cultivation. Some waste lands have been granted to some people. They should be taken over by the Forest Department and made use of for eucalyptus plantation.

As regards Horticulture, I would like to bring to the notice of the Government that there is a place called Pohavajra Falls near Jamboti Village in my Taluka where you can establish a Hill Station. I made this request several times, but the Government have not paid any attention to my request. Kindly attend to it.

As regards applied nutrition programme, I would like to bring to the notice of the Government that the Government has not sanctioned the scheme to my Taluka which is a Malnad and backward Taluka. I take it as an injustice done to my Taluka.

As regards the Animal Husbandry there is a big complaint that the Veterinary Graduates have not been treated on par with the Medical Graduates with regard to remuneration, status etc. These Veterinary Graduates also have to study more subjects and the duration of the course is also the same as that of M.B.B.S. But their request has not been conceded by Government and they and treated as low paid officials. In fact their life is always at risk because they have to handle more ferocious animals. The human doctors are treating only the human beings. It is wrong on the part of the Government to treat them below the rank of a Human Doctor. They should be treated on par with the human doctors as their duties and roles are one and the same.

As regards agriculture, I would like to speak one or two words. The fertilizers like Urea and Ammonium Sulphate are not supplied to my Taluka. The soil testing Laboratories must be located in each Taluka to facilitate the soil testing operation for the cultivators. The fertilizers should be supplied to my Taluka immediately. This is my sincere request and I hope the Government would consider my request and see all facilities are provided to my Taluka. With these few words I conclude my speech. Thank you.

ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).—ಮಾನ್ಯ ಸಭಾ ಅಧ್ಯಕ್ಷರೇ, ವ್ಯವಸಾಯ ಡಿಮ್ಯಾಂಡ್ ನಂಬರ್ 31 ರಲ್ಲಿ ಮೀನುಗಾರಿಕೆಯ ವಿಷಯದಲ್ಲಿ ಕೆಲವು ವಿಷಯಗಳನ್ನು ತಮ್ಮ ಮೂಲಕ ಸರಕಾರದ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಪ್ಲಾನ್ ಹಾಗೂ ನಾನ್ ಪ್ಲಾನ್ ಸ್ಕೀಮ್‌ಗಳಲ್ಲಿ ಮೀನುಗಾರಿಕಾ ಅಭಿವೃದ್ಧಿಗೆ ನಿಗದಿ ಮಾಡಲ್ಪಟ್ಟ ಹಣ ಬಹಳ ಕಡಿಮೆಯೆಂದು ನನಗನಿಸುತ್ತದೆ. ಮತ್ಸ್ಯೋದ್ಯಮ ತೀವ್ರವಾಗಿ ಬೆಳೆಯುವ ಉದ್ಯಮವಾಗಿದೆ. ನಮ್ಮ ದೇಶಕ್ಕೆ ಅತೀ ಜರೂರಾಗಿ ಬೇಕಾದ ವಿದೇಶ ವಿನಿಮಯ ಈ ಉದ್ಯಮದ ಮೂಲಕ ವರ್ಷಂಪ್ರತಿ 40 ಕೋಟಿ ರೂಪಾಯಿ ದೊರೆಯುತ್ತದೆ. ಮೈಸೂರು ರಾಜ್ಯದ 200 ಮೈಲಿ ಉದ್ದದ ಕರಾವಳಿಯಲ್ಲಿ ಈ ಸಂಪತ್ತು ವಿಪುಲವಾಗಿದ್ದು, ಈ ಸಂಪತ್ತನ್ನು ವೃದ್ಧಿ ಪಡಿಸುವರೇ ? ಕೋಟ್ಯಾಂತರ ರೂಪಾಯಿಗಳ ಯೋಜನೆ ತೀರಾ ಆವಶ್ಯವಾಗಿದೆ.

ಇನ್ನು ನಾನ್ ಪ್ಲಾನ್‌ನಲ್ಲಿ 1972–73 ರ ಅವಧಿಯಲ್ಲಿ ಬರೇ 66 ಲಕ್ಷ ರೂಪಾಯಿ ಮಿಂಗಡಿಸಿ ಇಟ್ಟಿರುತ್ತೀರಿ. ಈ ಹಣದಲ್ಲಿ ಕೆಲವಂಶ ಅನಗತ್ಯವಾಗಿ ಖರ್ಚಾಗಿ ಹೋಗುವ ಸಂಭವವಿದೆ. ಉದಾಹರಣೆಗೆ $1\frac{1}{2}$ ಲಕ್ಷ ರೂಪಾಯಿ ಫಿಷ್ ಕ್ಯೂರಿಂಗ್ ಯಾರ್ಡ್ಸ್‌ಗೆ ಇಟ್ಟಿದ್ದೀರಿ. ಈಗ ಕೆಲವು ವರ್ಷಗಳಿಂದ ಮೀನುಗಾರರು ಮೀನು ಜೋಪಾನೆಗೆ ಈ ಯಾರ್ಡ್ಸ್‌ಗೆ ಬರುವುದಿಲ್ಲವಾದುದರಿಂದ ಈ ಯಾರ್ಡ್ಸ್‌ನ್ನು ಮುಚ್ಚುವುದು ಒಳ್ಳೆಯದು.

ಇನ್ನು 15 ಲಕ್ಷ ರೂಪಾಯಿ ಫಿಷರೀಸ್ ಸ್ಕೂಲ್‌ಗಳಿಗೆ ಖರ್ಚಾಗುತ್ತದೆ. ಈ ಸ್ಕೂಲ್‌ಗಳನ್ನು ವಿದ್ಯಾ ಇಲಾಖೆಯವರು ವಹಿಸಿಕೊಳ್ಳುತ್ತಾರೆ ಎಂಬುದನ್ನು ಕೇಳಿದ್ದೇನೆ. ಹಾಗಾಗಿ ಈ ಹಣವನ್ನು ಇನ್ನಿತರ ಅಭಿವೃದ್ಧಿ ಕಾರ್ಯಂಗಳಿಗೆ ವಿನಿಯೋಗಿಸಬಹುದು.

ಇನ್ನು 20 ಲಕ್ಷ ರೂಪಾಯಿಗಳನ್ನು ತುಂಗಭದ್ರಾ ಯೋಜನೆ ಅಭಿವೃದ್ಧಿಗೆ ಮಿಂಗಡಿಸಿದ್ದೀರಿ. ಈ ಬೋರ್ಡಿನ ಮೂಲಕ ಒಂದು ಫಿಷ್ ನೆಟ್ ಮೇಕಿಂಗ್ ಪ್ಲಾಂಟೆಗೆ ತುಂಬಾ ಖರ್ಚಾಗುತ್ತದೆ. ಈ ಯಂತ್ರದಿಂದ ಬಡಮೀನುಗಾರರಿಗೆ ಕಷ್ಟವಾಗುತ್ತದೆ. ಅಂದರೆ ಮೀನುಗಾರರು ಮಳೆಗಾಲದಲ್ಲಿ ಮಾತ್ರ ತಮ್ಮ ಬಿಡುವು ಸಮಯದಲ್ಲಿ ತಮ್ಮ ಕೈಯಿಂದಲೇ ಈ ಮೀನಿನ ಬಲೆಯನ್ನು ಹೆಣೆಯುತ್ತಾರೆ.

(ಶ್ರೀಮತಿ ಮನೋರಮಾ ಮಧ್ವರಾಜ್)

ಇದು ಒಂದು ಗುಡಿಕೈಗಾರಿಕೆಯೂ ಆಗಿದೆ. ಹಾಗಾಗಿ ಈ ಯಂತ್ರದಿಂದ ಬಡ ಮೀನುಗಾರರ ಕೈ ಕಸುಬಿಗೆ ಧಕ್ಕೆ ಬರುತ್ತದೆ. ಹಾಗೂ ಅವರ ಜೀವನೋಪಾಯವು ಬಹಳ ಕಷ್ಟಮಯವಾಗುತ್ತದೆ.

ಇನ್ನು 5½ ಲಕ್ಷ ರೂಪಾಯಿ ಯಾಂತ್ರಿಕ ಮೀನುಗಾರರ ತರಬೇತಿಗೆ ಖರ್ಚು ಮಾಡುತ್ತೀರಿ. ಈಗ್ಯೆ ಎರಡು ವರ್ಷಗಳಿಂದ, ತರಬೇತು ಪಡೆದ ಮೀನುಗಾರರ ಯುವಕರಿಗೆ ಯಾಂತ್ರಿಕ ದೋಣಿಗಳ ವಿತರಣೆಯಾಗಲಿಲ್ಲ. ಹಾಗಾಗಿ ಇಷ್ಟರಲ್ಲಿ ತರಬೇತು ಪಡೆದ ಎಲ್ಲಾ ಮೀನುಗಾರ ಯುವಕರಿಗೆ ಯಾಂತ್ರಿಕ ದೋಣಿ ವಿತರಣೆಯಾಗುವ ತನಕ ಈ ಕೇಂದ್ರವನ್ನು ಮುಚ್ಚುವುದು ಒಳ್ಳೆಯದು.

ಈ ಎಲ್ಲ ಉಳಿತಾಯದ ಹಣವನ್ನು ಬಡಮೀನುಗಾರರ ದೈನಂದಿನ ಜೀವನಾವಶ್ಯಕತೆಗಳಿಗೆ ವಿನಿಯೋಗಿಸಬೇಕು. ಮೀನುಗಾರರ ಹಳ್ಳಿಗಳಿಗೆ ನೀರು ಸರಬರಾಜು, ವಸತಿ ಸೌಕರ್ಯ ಹಾಗೂ ವೈದ್ಯಕೀಯ ಸವಲತ್ತುಗಳನ್ನು ಒದಗಿಸಬೇಕು. ಎಲ್ಲ ಮೀನುಗಾರ ಹಳ್ಳಿಗಳನ್ನು ರಾಜ ರಸ್ತೆಗಳಿಗೆ ಸೇರ್ಪಡಿಸುವಂತಾಗಬೇಕು. ಸಾರಿಗೆ ಸಂಪರ್ಕ ವಿಷಯದಲ್ಲಿ ನಾನು ಸರಕಾರವನ್ನು ಅಭಿನಂದಿಸುತ್ತೇನೆ. 30 ಕ್ಕಿಂತಲೂ ಹೆಚ್ಚು ಫೀಡರ್ ರೋಡ್ಸ್ ನಿರ್ಮಾಣವಾಗಿರುವುದರಿಂದ ಮೀನುಗಾರರಿಗೆ ತುಂಬಾ ಪ್ರಯೋಜನವಾಗಿದೆ.

ಇನ್ನು ಎರಡನೇ ಹಂತವಾಗಿ ಫೀಡರ್ ರೋಡ್ಸ್‌ಗೆ ಸಮುದ್ರ ಕಿನಾರೆಯಿಂದ ಪ್ಯಾರಲೆಲ್ ರೋಡ್ಸ್ ನಿರ್ಮಾಣವಾಗಬೇಕು. ನನ್ನ ಕ್ಷೇತ್ರದಲ್ಲಿ ಮಟ್ಟು ಗ್ರಾಮದಿಂದ ಮಲ್ಪೆ ಪಡುಕರೆ ವರೆಗಿನ 10 ಮೈಲು ಉದ್ದದ ರಸ್ತೆ ಕೂಡಲೇ ನಿರ್ಮಾಣವಾಗಬೇಕೆಂದು ನಾನು ಮಾನ್ಯ ಸರಕಾರವನ್ನು ವಿನಂತಿಸುತ್ತೇನೆ. ಪರಗಟ್ಟ ರಸ್ತೆಯನ್ನು ಹೊಳೆ ತನಕ ವಿಸ್ತರಿಸಬೇಕಾಗಿಯೂ ಕೇಳುತ್ತೇನೆ. ಇದಕ್ಕೆ ಬೇಕಾದ ಸ್ಥಳವನ್ನು ಭೂಮಿಯ ಮಾಲೀಕರು ಧರ್ಮಾರ್ಥವಾಗಿ ಬಿಟ್ಟು ಕೊಡುವುದಾಗಿ ಒಪ್ಪಿದ್ದಾರೆ.

ಈ ವರ್ಷ ಮೀನುಗಾರಿಕಾ ರಸ್ತೆ ನಿರ್ಮಾಣಕ್ಕೆ ಬರೇ ಒಂದು ಲಕ್ಷ ರೂಪಾಯಿ 'ಪ್ಲಾನ್ ಸ್ಕೀಮು'ನಲ್ಲಿ ಎಂಗಡಿಸಿ ಇಟ್ಟಿದ್ದಾರೆ. ಈ ಹಣದಲ್ಲಿ ಒಂದು ಮೈಲ ರಸ್ತೆ ಕೂಡ ನಿರ್ಮಾಣ ಮಾಡಲಿಕ್ಕೆ ಸಾಧ್ಯವಿಲ್ಲ. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪ್ಯಾರಲೆಲ್ ರಸ್ತೆಗಳ ನಿರ್ಮಾಣಕ್ಕೆ ಕನಿಷ್ಠ ಒಂದು ಕೋಟಿ ರೂಪಾಯಿ ಯೋಜನೆಯನ್ನಾದರೂ ಮಾಡಬೇಕಾಗಿಯೂ, ಈ ವರ್ಷ ಕನಿಷ್ಠ 20 ಮೈಲು ರಸ್ತೆಯಾಗಬೇಕಾದ್ದು ಅನಿವಾರ್ಯವೆಂದೂ ಹೇಳುತ್ತೇನೆ.

ಈಗಾಗಲೇ ನಿರ್ಮಾಣವಾಗಿದ್ದ ಮೀನುಗಾರಿಕಾ ರಸ್ತೆಗಳ ದುರಸ್ತಿ ಕಾರ್ಯವನ್ನು ಲೋಕೋಪಯೋಗಿ ಇಲಾಖೆಯವರು ವಹಿಸಿಕೊಂಡದ್ದು ಬಹಳ ಸಂತೋಷದ ಸಂಗತಿ. ಈ ರಸ್ತೆಗಳು ಈಗ ಬಹಳ ನಿಕೃಷ್ಟಾವಸ್ಥೆಯಲ್ಲಿದ್ದು ಅದನ್ನು ಕೂಡಲೇ ದುರಸ್ತಿಗೊಳಿಸಿ ಸಾಗಾಟಕ್ಕೆ ಅನುಕೂಲತೆ ಮಾಡಿಸಿಕೊಡಬೇಕಾಗಿ ಲೋಕೋಪಯೋಗಿ ಇಲಾಖಾ ಸಚಿವರನ್ನು ವಿನಂತಿಸುತ್ತೇನೆ.

ನಾನು ಮೊದಲೇ ತಿಳಿಸಿದ್ದಂತೆ ಮಲ್ಪೆ, ಹೊನ್ನಾವರ, ಕಾರವಾರಗಳನ್ನು ಮೀನುಗಾರಿಕಾ ಬಂದರನ್ನಾಗಿ ಅಭಿವೃದ್ಧಿಗೊಳಿಸಬೇಕಾಗಿಯೂ ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನ ಮುಗಿಸುತ್ತೇನೆ.

† ಶ್ರೀ ಆರ್. ಗುಂಡೂರಾವ್ (ಸೋಮವಾರಪೇಟೆ).—ಸನ್ಮಾನ ಸಭಾಧ್ಯಕ್ಷಿಣಿಯವರೇ ಪ್ರಥಮವಾಗಿ ನಮ್ಮ ಅರಣ್ಯ ಮತ್ತು ಕೃಷಿ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ ಮುಖ್ಯವಾಗಿ ಈ ಅರಣ್ಯ ಇಲಾಖೆಯಲ್ಲಿ ಹಿಂದಿನ ಸರ್ಕಾರದಲ್ಲಿ ಆಗಿರುವಂಥ ಅನ್ಯಾಯ, ಅನಾಚಾರ, ಅಕ್ರಮಗಳನ್ನು ಈಗ ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ನಾನು ಬರುತ್ತಾ ಇರುವಂಥ ಜಿಲ್ಲೆ ಕೊಡಗು ಜಿಲ್ಲೆ. ಈ ಜಿಲ್ಲೆ ಅರಣ್ಯ ಸಂಪತ್ತು ಬಹಳ ಹೆಚ್ಚಾಗಿರುವಂಥ ಜಿಲ್ಲೆ. ಈ ಜಿಲ್ಲೆಯಲ್ಲಿ ಸಾಧಾರಣವಾಗಿ 10–15 ವರ್ಷಗಳಿಂದಲೂ ಅರಣ್ಯ ಲೂಟಿಯಾಗುತ್ತಾ ಇರುವುದನ್ನು ನೋಡಿದರೆ ನಾವು ಪ್ರಜಾಪ್ರಭುತ್ವದಲ್ಲಿ ಇದ್ದೇವೋ ಅಥವಾ ಸಮಾಜವಾದದಲ್ಲಿ ಇದ್ದೇವೋ ಅಥವಾ ಬಂಡವಾಳಶಾಹಿಗಳ ಕೈಯಲ್ಲಿ ಇದ್ದೇವೊ ಎನ್ನುವುದು ನನ್ನ ಮನಸ್ಸಿಗೆ ಗೊತ್ತಾಗುವುದಿಲ್ಲ. ಮುಖ್ಯವಾಗಿ ಕೊಡಗಿನಲ್ಲಿ ಸುಮಾರು 60 ಮೈಲಿ ಇರುವ ಕೇರಳ ಬಾರ್ಡರ್‌ನಲ್ಲಿ ಅರಣ್ಯ ಕಳ್ಳ ಸಾಗಾಣಿಕೆ ನಡೆಯುತ್ತಾ ಇರುವುದರಿಂದ ನನ್ನ ಒಂದು ಅಂದಾಜಿನಲ್ಲಿ ಸುಮಾರು 30 ಕೋಟಿ ರೂಪಾಯಿ ಹಣದಷ್ಟು ಮರಗಳು ಕೇರಳಕ್ಕೆ ಕಳ್ಳ ಸಾಗಾಣಿಕೆಯಾಗಿದೆ ಎಂದು ಹೇಳುತ್ತೇನೆ. ಕಳೆದ 10–15 ವರ್ಷಗಳಲ್ಲಿ 30 ಕೋಟಿ ರೂಪಾಯಿ ಬೆಲೆ ಬಾಳುವ ರೋಸ್‌ವುಡ್ ಕೊಡಗಿನ ಅರಣ್ಯದಿಂದ ಕೇರಳಕ್ಕೆ ಸಾಗಿ ಅಲ್ಲಿಂದ ಹೊರದೇಶಗಳಿಗೆ ಹೋಗಿದೆ. ನಾನು ಅರಣ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ, ಶರಾವತಿ

ಬಗ್ಗೆ ತನಿಖೆ ಆಗಲಿ. ಬೇರೆ ತನಿಖೆ ಆಗಲಿ ಎಂದು ಏನು ಹೇಳುತ್ತಾರೆ, ಅದಕ್ಕಿಂತ ಮುಖ್ಯವಾಗಿ ಕೊಡಗಿನ ಅರಣ್ಯದಿಂದ ಈ 15 ವರ್ಷಗಳಲ್ಲಿ ಮರಗಳ ಕಳ್ಳ ಸಾಗಾಣಿಕೆಯಾಗಲು ಯಾರು ಯಾರು ಕಾರಣರು, ಏನೇನು ಅನ್ಯಾಯ ಮತ್ತು ಅಕ್ರಮಗಳು ನಡೆದಿವೆ ಎನ್ನುವುದಕ್ಕೆ ಒಂದು ತನಿಖೆ ನಡೆಸುವುದಕ್ಕೆ ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಕೊಡಗಿನಲ್ಲಿ ಸಾವಿರಾರು ಎಕರೆ ಮಲೆಗಳ ಪ್ರದೇಶವಿದೆ. ಇದು ಕೇರಳ ಬಾರ್ಡರಿಗೆ ಹೊಂದಿಕೊಂಡಿದ್ದು 60 ಮೈಲು ದೂರದವರೆಗೂ ಅರಣ್ಯ ಇಲಾಖೆಗೆ ಸೇರದೆ ಇರುವುದರಿಂದ ಕ್ರಮ ತೆಗೆದುಕೊಳ್ಳುವುದಕ್ಕೆ ಯಾವುದೇ ತರಹ ರಕ್ಷಣೆ ವ್ಯವಸ್ಥೆ ಅಲ್ಲಿ ಇಲ್ಲ. ಕೇರಳದ ಜನ ಗುಂಪು ಕೂಡಿಕೊಂಡು ಬಂದು ಮರಗಳನ್ನು ಕಡಿದು ಹೊಳೆಯಲ್ಲಿ ಸಾಗಿಸಿಕೊಂಡು ಹೋಗುತ್ತಾರೆ. ಅರಣ್ಯ ಇಲಾಖೆಯವರಾಗಲೀ, ಪೋಲೀಸ್ ಇಲಾಖೆಯವರಾಗಲೀ ಇವನ್ನೆಲ್ಲ ನೋಡಿಕೊಂಡಿರಬೇಕಾಗುತ್ತದೆ ; ಏನು ಮಾಡುವುದಕ್ಕೂ ಆಗುವುದಿಲ್ಲ. ಇವರ ಹತ್ತಿರ ಒಂದು ಕೋವಿ ಇದ್ದರೆ ಅವರ ಹತ್ತಿರ 13 ಕೋವಿ ಇರುತ್ತವೆ, ಇವರು ಹತ್ತು ಜನರಿದ್ದರೆ ಅವರು ಸಾವಿರಾರು ಜನರಿರುತ್ತಾರೆ. ಪ್ರತಿಯೊಬ್ಬರಿಗೂ ಜೀವ ಭಯ ಇರುತ್ತದೆ. ಕೊಡಗಿನ ಅರಣ್ಯ ಸಂಪತ್ತು ಎಷ್ಟು ಲೂಟಿಯಾಗಿದೆ ಎನ್ನುವುದನ್ನು ವಿವರಿಸುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಮಂತ್ರಿಗಳಾದರೂ ಸಹ ಇನ್ನು ಮುಂದೆ ಈ ರೀತಿ ಆಗದಂತೆ ಸರಿಯಾದ ಸಿಬ್ಬಂದಿ ಇಟ್ಟು, ವಿಶೇಷ ಪೋಲೀಸ್ ಸಿಬ್ಬಂದಿ ಇಟ್ಟು ಈ ಹೊತ್ತು ಕ್ರಮ ತೆಗೆದುಕೊಂಡರೆ ಇನ್ನಾದರೂ 20—30 ಕೋಟಿ ರೂಪಾಯಿ ಬೆಲೆ ಬಾಳುವ ಮರಗಳ ಕಳ್ಳ ಸಾಗಾಣಿಕೆಯನ್ನು ತಡೆಗಟ್ಟಬಹುದು ಎಂದು ಕೇಳಿಕೊಳ್ಳುತ್ತೇನೆ.

ಟಿಂಬರ್ ವ್ಯಾಲ್ಯುಯೇಷನ್ ಮಾಡುವಾಗ ಎ.ಬಿ.ಸಿ. ಎಂದು ವಿಂಗಡಿಸಿ ಮರದ ಬೆಲೆ ಕಟ್ಟುತ್ತಾರೆ. ಹಿಂದೆ ಹೀಗೆಯೇ ಮಾಡಬೇಕು ಎಂದು ಇತ್ತು. ಈವಾಗ ಏನಾಗಿದೆ ಎಂದರೆ ಅಧಿಕಾರಿಗಳ ವಿವೇಚನೆಗೆ ಬಿಟ್ಟಿದ್ದಾರೆ. ಇದರಿಂದ 'ಎ' ವರ್ಗದ ಮರವನ್ನು 'ಸಿ' ವರ್ಗವೆಂದು ಮಾಡುತ್ತಾರೆ, 'ಬಿ' ವರ್ಗವನ್ನು 'ಎ' ವರ್ಗವೆಂದು ಮಾಡುತ್ತಾರೆ. ಇದರಿಂದ ಯಾವ ತರಹ ಪ್ರಯೋಜನ ಸರ್ಕಾರಕ್ಕೆ ಇಲ್ಲ, ಜನತೆಗೆ ಪ್ರಯೋಜನವಿಲ್ಲ. ಸಂಬಂಧಪಟ್ಟ ಅಧಿಕಾರಿಗೆ ಮಾತ್ರ ಬೇಕಾದಷ್ಟು ಪ್ರಯೋಜನವಾಗುತ್ತಿದೆ. ಯಾರು ಜಾಸ್ತಿ ಹಣ ಕೊಡುತ್ತಾರೆ ಆವಾಗ 'ಎ' ವರ್ಗದ ಮರವನ್ನು 'ಸಿ' ವರ್ಗ ಎಂದು ಮಾಡಿ ಬೆಲೆ ಕಟ್ಟುತ್ತಾರೆ, ಕಡಮೆ ಹಣ ಕೊಟ್ಟರೆ 'ಸಿ' ವರ್ಗದ ಮರವನ್ನು 'ಎ' ವರ್ಗ ಎಂದು ಮಾಡಿ ಬೆಲೆ ಕಟ್ಟುತ್ತಾರೆ. ಇದರಿಂದ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ಅನ್ಯಾಯವಾಗುತ್ತಿದೆ. ಈ ಪದ್ಧತಿಯನ್ನು ರದ್ದು ಮಾಡಿ, ಹಿಂದೆ ಯಾವ ರೀತಿ ಬೆಲೆ ನಿಗದಿ ಮಾಡುವ ಕ್ರಮವಿತ್ತು ಅದನ್ನೇ ಜಾರಿಗೆ ತರಬೇಕು. ಇಲ್ಲದೆ ಹೋದರೆ ಮಾನ್ಯ ಮಂತ್ರಿಗಳ ದಕ್ಷತೆ ಎಷ್ಟೇ ಇದ್ದರೂ ಸಹ ಅಧಿಕಾರಿಗೆ ಡಿಸ್ಕ್ರಿಕ್ಷನ್ ಕೊಟ್ಟಿರುವುದರಿಂದ ಅನಾನುಕೂಲತೆಯನ್ನು ತಪ್ಪಿಸುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದೇನೆ.

2,900 ಎಕರೆ ಅರಣ್ಯ ಪ್ರದೇಶವನ್ನು ಗುಜರಾತಿನ ಒಬ್ಬ ಮಾರ್ವಾಡಿ ಕೇಶವಲಾಲ್ ಬುಡಾನಿ ಎಂಬುವವರಿಗೆ ಲೀಸಿಗೆ ಕೊಟ್ಟಿದ್ದಾರೆ ಅಥವಾ ಕೊಡಬೇಕೆಂದಿದ್ದಾರೆಂದು ಗೊತ್ತಾಗಿದೆ. ಇದರೊಳಗೆ ಅಕ್ರಮ, ಅನ್ಯಾಯ ಇದೆ. ಈ ಗುಜರಾತಿ ನಮ್ಮ ಊರಿನ ಹತ್ತಿರ ಮೂರು ಸಾವಿರ ಎಕರೆ ಜಾಗವನ್ನು ಪಡೆದಿದ್ದಾನೆ. ಹಿಂದಿನ ಸರ್ಕಾರವಿದ್ದಾಗ ಆ ಜಾಗವನ್ನು ಕೊಡಬಾರದೆಂದು ನಾವು ಸತ್ಯಾಗ್ರಹ ಮಾಡುವವರೆಗೂ ಹೋಗಿದ್ದೆವು. ಅವರು ಯಾವುದೋ ರೀತಿಯಿಂದ ಅರಣ್ಯ ಸಚಿವರನ್ನು, ರವೆನ್ಯೂ ಸಚಿವರನ್ನು, ಮುಖ್ಯ ಮಂತ್ರಿಯವರನ್ನು, ಕೈಗಾರಿಕಾ ಮಂತ್ರಿಗಳನ್ನು, ಎಲ್ಲರನ್ನೂ ಕರೆಸಿಕೊಂಡು ಹೇಗೋ ಮಾಡಿ ಆ ಜಾಗವನ್ನು ಹೊಳೆ ದಡದಲ್ಲಿ ತೆಗೆದುಕೊಂಡಿದ್ದಾರೆ. ಬಹಳ ದೊಡ್ಡ ಅರಣ್ಯ ಸಂಪತ್ತು ಇದ್ದ ಜಾಗ ಅದು. ಆ ಜಾಗವನ್ನು ಅಧಿಕಾರವಿಲ್ಲದೆ, ಸರ್ಕಾರದ ಹುಕುಂ ಇಲ್ಲದೆ, ರವೆನ್ಯೂ ಅಧಿಕಾರಿಗಳ ಆಜ್ಞೆ ಇಲ್ಲದೆ, ಅರಣ್ಯ ಇಲಾಖೆಯ ಅಧಿಕಾರಿಗಳ ಆಜ್ಞೆ ಇಲ್ಲದೆ ತಾನು ಆ ಜಾಗವನ್ನು ಆಕ್ರಮಣ ಮಾಡಿ, 80 ಸಾವಿರ ರೂಪಾಯಿ, ಒಂದು ಲಕ್ಷ ರೂಪಾಯಿ ಬೆಲೆ ಬಾಳತಕ್ಕ ಮರಗಳನ್ನು, ಸಾವಿರಾರು ಮರಗಳನ್ನು ಕಡಿದು ದೊಡ್ಡದಾಗಿ ಬೆಂಕಿ ಹಾಕಿ ಸುಟ್ಟು ಹಾಕಿರುತ್ತಾರೆ. ಅವರು ಆರೊಮ್ಯಾಟಿಕ್ಸ್ ಮಾಡುತ್ತೇನೆಂದು ಹೇಳಿಕೊಂಡು ಈಗ 2,900 ಎಕರೆ ಜಮೀನು ತೆಗೆದುಕೊಳ್ಳಬೇಕೆಂದಿರುವುದು ಇಂಟರ್ ನ್ಯಾಷನಲ್ ಸ್ಮಗ್ಲಿಂಗ್ ಗ್ಯಾಂಗ್ ಇದ್ದ ಹಾಗೆ. ಫ್ರಾನ್ಸ್, ಇಟಲಿ ದೇಶಗಳಿಂದ ಯಾರನ್ನಾದರೂ ಕರೆದುಕೊಂಡು ಈ ಜಾಗ ಮೈಸೂರು ಸರ್ಕಾರ ಕೊಟ್ಟಿದೆ, ಇದು ನನ್ನ ಜಾಗ, ಈ ಮೂರು ಸಾವಿರ ಎಕರೆ ಜೊತೆಗೆ ಇನ್ನೂ ಮೂರು ಸಾವಿರ ಎಕರೆ ಸೇರಿಸಿಕೊಳ್ಳುತ್ತೇನೆಂದು ಹೇಳಿ ಇಂಟರ್ ನ್ಯಾಷನಲ್ ಕೊರ್ಪೊರೇಷನ್ ಮಾಡಿ ಅಲ್ಲಿಂದ ಎಷ್ಟೋ ಡಾಲರ್ ಹಣವನ್ನು ತಂದು, ನೀಲಗಿರಿ ಸಸಿಗಳನ್ನು ನೆಟ್ಟು ಆರೊಮ್ಯಾಟಿಕ್ಸ್ ಬೆಳೆಸುತ್ತೇನೆ ಎಂದು ಹೇಳುತ್ತಿರುವಂಥ ವ್ಯಕ್ತಿಗೆ 2,900 ಎಕರೆ ಲೀಸ್ ಅಥವಾ ಗ್ರಾಂಟ್ ಆಗಿ

(ಶ್ರೀ ಆರ್. ಗುಂಡೂರಾವ್)

ಕೊಡುವುದನ್ನು ನಾನು ಒಪ್ಪುವುದಿಲ್ಲ. ಮಾನ್ಯ ಮಂತ್ರಿಗಳು ಈ ಜಮೀನನ್ನು ಕೊಡದೇ ಹಾಗೆಯೇ ನಿಲ್ಲಿಸಬೇಕು. ಒಂದು ಗಾಡಿ ಸೌದೆ ಹೋದರೆ ಅಥವಾ ಒಂದು ಲಾರಿ ಸೌದೆ ಹೋದರೆ ಪ್ರಾಸಿಕ್ಯೂಟ್ ಮಾಡುತ್ತೇವೆಂದು ಹೇಳುವಾಗ ಮೂರು ಸಾವಿರ ಎಕರೆ ಜಾಗದಲ್ಲಿ ಲಕ್ಷಾಂತರ ರೂಪಾಯಿ ಬೆಲೆ ಬಾಳತಕ್ಕ ಟಿಂಬರ್ ಸುಟ್ಟು ಹಾಕಿರುವಾಗ ಸರ್ಕಾರ ಏನು ಮಾಡಿದೆ? ಯಾವ ಕನ್‌ಸರ್ವೇಟರ್ ಯಾವ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್ ಅಥವಾ ಇನ್ನು ಬೇರೆ ಯಾರಿಗಾದರೂ ಆ ಜಾಗಕ್ಕೆ ಹೋಗುವುದಕ್ಕೆ ಏನು ಧೈರ್ಯವಿದೆ? ಸರ್ಕಾರಿ ಜಾಗದಲ್ಲಿರುವ ಮರಗಳನ್ನು ಸಾಮಾನ್ಯ ರೀತಿಯಲ್ಲಿ ಕಡಿಯುವುದಕ್ಕೆ ಆಗದೆ, ಬುಲ್‌ಡೋಜರು ತೆಗೆದುಕೊಂಡು ಹೋಗಿ ಮರವನ್ನು ಕಡಿದು ಬೆಂಕಿ ಹಚ್ಚಿದ್ದಾರೆ. ಇಂಥ ವ್ಯಕ್ತಿಗೆ ಯಾವುದೇ ತರಹ ಅನುಕೂಲವನ್ನೂ ಮಾಡಬಾರದು, ಜಮೀನು ಕೊಡುವುದಕ್ಕೆ ಯಾವುದೇ ತರಹ ಒಪ್ಪಿಗೆಯನ್ನು ಕೊಡಬಾರದೆಂದು ನಾನು ಈ ಸಂದರ್ಭದಲ್ಲಿ ಅತಿ ವಿನಯದಿಂದ ಕೇಳಿಕೊಳ್ಳುತ್ತೇನೆ.

ಗಂಧದ ಮರದ ಕಳ್ಳ ಸಾಗಾಣಿಕೆ ವಿಚಾರದಲ್ಲಿ ಉಗ್ರವಾದ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಈಗಾಗಲೇ ಸಾಕಷ್ಟು ರೀತಿಯಲ್ಲಿ ಕಳ್ಳ ಸಾಗಾಣಿಕೆಯನ್ನು ಹಿಡಿಯುತ್ತಿದ್ದಾರೆ. ಇದರಲ್ಲಿ ಸಹ ಒಳ್ಳೆಯ ರೀತಿಯ, ವ್ಯವಸ್ಥಿತವಾದ ರಾಕೆಟ್ ಇದೆ. ಈ ಬಗ್ಗೆ ಕೂಡ ಆಳವಾಗಿ ಹೋಗಿ ವಿಚಾರ ಮಾಡಿದರೆ ರ್‍ಯಾಕೆಟ್ ಏನು ಎನ್ನುವುದು ಗೊತ್ತಾಗುತ್ತದೆ. ಇತ್ತೀಚೆಗೆ ಕೆಲವು ಕೇಸುಗಳು ಸಿಕ್ಕಿವೆ ಅದು ಸಾಲದು. ಇನ್ನೂ ಪ್ರತಿ ದಿವಸ ಮೈಸೂರಿನಿಂದ ಗುಜರಾತ್ ಮತ್ತು ರಾಜಾಸ್ಥಾನಕ್ಕೆ ಲಾರಿಗಟ್ಟಲೆ ಗಂಧದ ಮರ ಹೋಗುತ್ತಿದೆ. ಇದನ್ನು ನಿಲ್ಲಿಸುವುದಕ್ಕೆ ಕ್ರಮ ಕೈಕೊಳ್ಳಬೇಕೆಂದು ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಕೊಡಗಿಯಲ್ಲಿ ದೊಡ್ಡ ವ್ಯವಸಾಯ ಮತ್ತು ವೆಟರಿನರಿ ಕಾಲೇಜನ್ನು ಮಾಡುವುದಕ್ಕೆ ಅವಕಾಶ ಇದೆ. ಹಿಂದಿನ ಕೊಡಗು ಸರ್ಕಾರವಿದ್ದಾಗ ಬಹಳ ದೊಡ್ಡ ವ್ಯವಸಾಯ ಮತ್ತು ಪಶು ಸಂಗೋಪನಾ ಕೇಂದ್ರವನ್ನು ಮಾಡಬೇಕೆಂದು ಆಲೋಚನೆ ಮಾಡಿದ್ದರು. ಮಾನ್ಯ ಸಚಿವರು ಇದರ ಬಗ್ಗೆ ಗಮನಕೊಟ್ಟು ಕೊಡಗಿಯಲ್ಲಿ ಈ ಕೇಂದ್ರವನ್ನು ಉತ್ತಮಪಡಿಸಿ, ವೆಟರಿನರಿ ಹಾಸ್ಪಿಟಲು ತೆರೆದು ಡಾಕ್ಟರುಗಳನ್ನು ನೇಮಿಸತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ, ಮಾನ್ಯ ಅಧ್ಯಕ್ಷರು ಇಷ್ಟು ಅವಕಾಶ ಕೊಟ್ಟದ್ದಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ನಾನು ಪ್ರಥಮವಾಗಿ ಅರಣ್ಯ ಇಲಾಖೆಯ ಬೇಡಿಕೆಯನ್ನು ಮತ್ತು ವ್ಯವಸಾಯ ಇಲಾಖೆಯ ಬೇಡಿಕೆಯನ್ನು ಕಟುವಾಗಿ ವಿರೋಧ ಮಾಡುತ್ತ ಎರಡು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಕಾಡು ಮಲೆನಾಡು ಪ್ರದೇಶದಲ್ಲಿ ಹೆಚ್ಚಾಗಿರತಕ್ಕದ್ದು. ನಮ್ಮ ದುರದೃಷ್ಟಕ್ಕೆ ಕಾಡನ್ನು ರಕ್ಷಣೆ ಮಾಡುವುದಕ್ಕೆ ಕಾಡಿನ ಮಧ್ಯೆ ಬೆಳೆದು ಬಂದಂಥ ಒಬ್ಬ ಮಂತ್ರಿ ಸಿಕ್ಕಲಿಲ್ಲ. ಮೈದಾನ ಪ್ರದೇಶದಿಂದ ಬಂದಂಥ ಮಂತ್ರಿಗಳು ಈ ಜವಾಬ್ದಾರಿಯನ್ನು ಈಗ ತೆಗೆದುಕೊಂಡಿದ್ದಾರೆ. ಅವರ ಆಸಕ್ತಿ ಬಗ್ಗೆ ಮತ್ತು ಅವರು ಕೆಲಸಮಾಡುತ್ತಾರೆ ಎನ್ನುವ ಬಗ್ಗೆ ನನಗೆ ನಂಬಿಕೆ ಇದೆ. ಕಾಡನ್ನು ರಕ್ಷಣೆ ಮಾಡುತ್ತಾರೆಂಬ ಅಪಾರವಾದ ವಿಶ್ವಾಸವನ್ನು ನಾನು ಇಟ್ಟುಕೊಂಡಿದ್ದೇನೆ. ಅಷ್ಟು ಮಾತ್ರಕ್ಕೆ ನಾವು ತೃಪ್ತಿಯಾಗುವ ಹಾಗೆ ಇಲ್ಲ. ಅನೇಕ ಕಡೆ ಸಂಪೂರ್ಣವಾಗಿ ಕಾಡು ನಾಶವಾಗಿದೆ. ಅದರಲ್ಲಿಯೂ ಕೂಡ ಅರಣ್ಯ ಇಲಾಖೆಯ ಯೋಜನೆಯೇ ಮುಖ್ಯವಾಗಿ ಈ ಕಾಡಿನ ಸರ್ವನಾಶಕ್ಕೆ ಕಾರಣವಾಗಿದೆ ಎನ್ನುವುದನ್ನು ವಿಷಾದದಿಂದ ನಾವು ಹೇಳಿಕೊಳ್ಳಬೇಕಾಗಿದೆ.

3-00 P.M.

ನಿಮ್ಮ ಯೋಜನೆಯಲ್ಲಿ ವರ್ಕಿಂಗ್ ಪ್ಲಾನ್ ಎಂದು ಮಾಡಿಕೊಂಡು ಇರತಕ್ಕ ಕಾಡನ್ನು ಕಡಿದು ಮತ್ತು ಆ ಪ್ರದೇಶದಲ್ಲಿ ಹೊಸದಾಗಿ ಕಾಡನ್ನು ಬೆಳೆಸಬೇಕು ಎಂದು ಯೋಜನೆ ಇಟ್ಟುಕೊಂಡಿದ್ದೀರಿ. ಆ ಯೋಜನೆಯ ಪ್ರಕಾರ 100 ಎಕರೆಗೆ ಕಾಡನ್ನು ಕಡಿಯುವುದಕ್ಕೆ ಅನುಮತಿ ಕೊಟ್ಟರೆ ಡಿ.ಎಫ್.ಒ. ಮತ್ತು ರೇಂಜ್ ಆಫೀಸರ್ ಷರೀಕಾಗಿ 100 ಎಕರೆ ಪ್ರದೇಶ ಇರುವ ಕಾಡನ್ನು ನಾಶ ಮಾಡಿ, 50 ಎಕರೆಯಲ್ಲಿ ಹೊಸದಾಗಿ ಗಿಡವನ್ನು ಹಾಕುತ್ತಾರೆ. ಕಳೆದ ಐದು ವರ್ಷಗಳಿಂದ ಯಾವ ಯಾವ ರೇಂಜ್ ಆಫೀಸರಿಗೆ ಎಷ್ಟೆಷ್ಟು ಕಾಡನ್ನು ಬೆಳೆಸುವುದಕ್ಕೆ ಹಣ ಕೊಟ್ಟಿದ್ದೀರಿ, ಎಷ್ಟು ಎಕರೆ ಬೆಳೆದಿದ್ದಾರೆ, ಎಷ್ಟು ಎಕರೆ ಉಳಿದಿದೆ ಎಂದು ರೇಂಜ್ ಆಫೀಸರಿಂದ ವರದಿ ತರಿಸಿಕೊಳ್ಳಿ. ನನಗೆ ತಿಳಿದಿರುವಂತೆ ಶೇಕಡ 70 ಭಾಗ ಕಾಡು ಉಳಿದಿರಬಹುದು. ಕಳೆದ 15 ವರ್ಷಗಳ ಅಂಕಿ ಅಂಶದ ಪ್ರಕಾರ ಸುಮಾರು

10 ಸಾವಿರ ಎಕರೆ ಮೇಲೆ ಹೊಸ ಗಿಡಗಳನ್ನು ಹಾಕುವುದಕ್ಕೆ ಹಣ ಕೊಟ್ಟಿದ್ದಾರೆ, ಇವತ್ತು ಅಲ್ಲಿ ಎರಡು ಸಾವಿರ ಎಕರೆ ಕಾಡು ಕೂಡ ಬೆಳಸಿಲ್ಲ. ಒಬ್ಬೊಬ್ಬ ರೇಂಜರು 10-20 ಸಾವಿರ ಹೊಸ ಗಿಡಗಳನ್ನು ನೆಡುವ ಹೆಸರಿನಲ್ಲಿ ಸಂಪಾದನೆ ಮಾಡಿದ್ದಾರೆ. ತಾವು ವಿಶೇಷ ಅಧಿಕಾರಿಯನ್ನು ನೇಮಿಸಿ ಎಷ್ಟೆಷ್ಟು ದೊಡ್ಡ ದೊಡ್ಡ ಕಾಡನ್ನು ಕಡಿಸಿ ಎಷ್ಟೆಷ್ಟು ಹೊಸ ಗಿಡಗಳನ್ನು ಬೆಳೆಸುವ ಪ್ರದೇಶವನ್ನು ಮಾಡಿದ್ದಾರೆ, ಎಷ್ಟು ಗಿಡಗಳು ಉಳಿದಿವೆ, ಖರ್ಚು ಮಾಡಿರುವ ಹಣ ಎಷ್ಟು ಎಂಬುದನ್ನು ಪರಿಶೀಲನೆ ಮಾಡಿ ಅವರಿಂದ ವರದಿ ತರಿಸಿಕೊಂಡರೆ, ನಿಜವಾದ ವಿಚಾರ ಗೊತ್ತಾಗುತ್ತದೆ ಎಂದು ತಮ್ಮ ಗಮನಕ್ಕೆ ಈ ಸಂದರ್ಭದಲ್ಲಿ ತರುವುದಕ್ಕೆ ಇಚ್ಛೆಪಡುತ್ತೇನೆ. ಅರಣ್ಯ ಪ್ರದೇಶದಲ್ಲಿ ಸಾಗುವಳಿಗೆ ಯೋಗ್ಯವಾಗಿರತಕ್ಕ ಪ್ರದೇಶವನ್ನು ಸಾಗುವಳಿಗೆ ಕೊಡುವುದಕ್ಕೆ ಹಿಂದು ಮುಂದು ನೋಡುತ್ತಿದ್ದಾರೆ. ತಾವು ಕೊಟ್ಟಿರತಕ್ಕ ಅಂಕಿ ಅಂಶದ ಪ್ರಕಾರ ನಮ್ಮಲ್ಲಿ ಇರತಕ್ಕ ಕಾಡು ಶೇಕಡ 18ರಷ್ಟು ಮಾತ್ರ ಇದೆ. ಇದರಲ್ಲಿ ಸಾಗುವಳಿಗೆ ಬರತಕ್ಕ ತರೀ ಜಮೀನು ಯಾವುದು ಇದೆ, ಅದರಲ್ಲಿ ಪ್ರಮಾಣಿಕವಾಗಿ ಒಳ್ಳೆಯ ಕಾಡನ್ನು ಬೆಳೆಸುವುದಕ್ಕಾಗುವುದಿಲ್ಲ. ಅದು ಜಲದಿಂದ ಕೂಡಿರುವ ತಗ್ಗು ಪ್ರದೇಶ ಇರುವುದರಿಂದ ಅಂಥ ಕಡೆ ಕಾಡನ್ನು ಬೆಳೆಸುವುದಕ್ಕಾಗುವುದಿಲ್ಲ. ಆದ್ದರಿಂದ ತಾವು ಖುದ್ದು ಪರಿಶೀಲನೆ ನಡೆಸಿ ಸಾಗುವಳಿಗೆ ಯಾವ ಜಮೀನು ಯೋಗ್ಯವಾಗಿದೆ ಎಂದು ನೋಡಿ ಅದನ್ನು ಬಿಡುಗಡೆ ಮಾಡುವುದಕ್ಕೆ ಹಿಂದು ಮುಂದು ನೋಡಬಾರದು. ಹಿಂದಿನ ಸರ್ಕಾರ ಕೂಡ ಒಂದು ತೀರ್ಮಾನ ಕೈಕೊಂಡು ಅನೇಕ ಜಮೀನುಗಳನ್ನು ಬಿಡುಗಡೆ ಮಾಡುವುದಕ್ಕೆ ಅಜ್ಞೆ ಮಾಡಿ ಫೈನಲ್ ಡಿಸಫಾರಸ್ಟೇಷನ್ ನೋಟಿಫಿಕೇಷನ್ ಹಾಗುವ ಸಂದರ್ಭ ಇತ್ತು. ಅದನ್ನು ತಾವು ತಡೆ ಹಿಡಿದಿದ್ದೀರಿ ಎಂದು ಕೇಳಿದ್ದೇನೆ. ಅದನ್ನು ತಡೆಹಿಡಿಯದೆ ಫೈನಲ್ ನೋಟಿಫಿಕೇಷನ್ ಅನ್ನು ತಾವು ಹೊರಡಿಸಬೇಕೆಂದು ತಮ್ಮನ್ನು ಕೇಳುತ್ತೇನೆ. ಜೊತೆಗೆ ಕಾಡಿನಲ್ಲಿ ಅತಿಕ್ರಮಣ ನಡೆದಿದೆ. ಸಣ್ಣ ಪುಟ್ಟ ಜನರು ಅತಿಕ್ರಮಣ ಮಾಡಿದರೆ ಅವರಿಗೆ ಸಾಕಷ್ಟು ಹಿಂಸೆ ಕೊಡುತ್ತಾರೆ. ದೊಡ್ಡವರು ಅತಿಕ್ರಮಣ ಮಾಡಿದರೆ ಅವರ ಮೇಲೆ ತಮ್ಮ ಕಣ್ಣು ಬೀಳುವುದಿಲ್ಲ. ಅವರನ್ನು ಶಿಕ್ಷೆಗೆ ಗುರಿ ಪಡಿಸಿಲ್ಲ. ಅಂಥ ಕೆಲವು ಉದಾರಣೆಯನ್ನು ಕೊಡುತ್ತೇನೆ. ನರಸಿಂಹರಾಜಪುರ ತಾಲ್ಲೂಕಿನಲ್ಲಿ ವರ್ಗೀಸ್, ಕುಡಗಲು ಮನೆ ಹತ್ತಿರ ಆಗಸ್ಟೀನ್, ಶೃಂಗೇರಿಯ ಹತ್ತಿರ ಶ್ರೀಕಂತ ಭಟ್ಟ, ಹಲ್ಲೂಕು ಭಟ್ಟ ಇವರು ದೊಡ್ಡ ಪ್ರಮಾಣದಲ್ಲಿ ಅತಿಕ್ರಮಣ ಪ್ರವೇಶಮಾಡಿ ಶ್ರೀಗಂಧದ ಕಾಡನ್ನು ಲೂಟಿ ಹೊಡೆದಿದ್ದಾರೆ. ಅವರ ಮೇಲೆ ಉಗ್ರವಾದ ಕ್ರಮ ಕೈಗೊಳ್ಳಬೇಕು. ಉದಾಹರಣೆಗೋಸ್ಕರ ಇದನ್ನು ಕೊಟ್ಟಿದ್ದೇನೆ. ಹಿಂದಿನ ಸರ್ಕಾರ ಉದಾರಣೆಯನ್ನು ತೋರಿಸಿ ಮೆದು ಮರಗಳನ್ನು ದೊಡ್ಡ ಕಂಪನಿಗಳವರಿಗೆ ಕೊಟ್ಟಿದ್ದಾರೆ. ಕೆಲವು ಕಂಪನಿಗಳು ಮಾತ್ರ ಈ ರಾಜ್ಯದಲ್ಲಿ ಕಾರ್ಖಾನೆಗಳನ್ನು ಹೊಂದಿವೆ. ಇನ್ನು ಕೆಲವು ಕಂಪನಿಗಳು ಈ ರಾಜ್ಯದಲ್ಲಿ ಯಾವುದೇ ತರಹ ಕಾರ್ಖಾನೆಗಳನ್ನು ಹೊಂದಿಲ್ಲ. ಇವರಿಗೆ ಕೊಡತಕ್ಕ ಮರವನ್ನು ನೋಡಿದರೆ ದಿಗ್ಭ್ರಮೆಯಾಗುತ್ತದೆ. ನನಗೆ ತಿಳಿದ ಪ್ರಕಾರ ಹೆಚ್ಚು ಕಡಿಮೆ ಸರ್ಕಾರದ ತಲೆಯಮೇಲೆ ಕೂತುಕೊಂಡು ಆರ್ಡರ್ ಬರೆಸುವ ಮಟ್ಟಿಗೆ ಆ ಕಂಪನಿಗಳು ಹೋಗುತ್ತವೆ. ಅವರನ್ನು ನೋಡಿದರೆ ಸರ್ಕಾರದವರು ಹೆದರುತ್ತಾರೆ. ಏಕೆಂದರೆ ಚುನಾವಣೆಯ ಕಾಲದಲ್ಲಿ ಇವರ ಪಕ್ಷಕ್ಕೆ ಸಹಾಯ ಮಾಡಿದ ಉದಾಹರಣೆ ಗೊತ್ತಿದೆ. ಅವರನ್ನು ತಡೆಹಿಡಿಯಬೇಕು. ನಿಜವಾಗಿ ಪ್ರಮಾಣಿಕವಾಗಿ ಮಾರ್ಕೆಟ್ಟಿನಲ್ಲಿ ಒಳ್ಳೆಯ ದರ ಇದ್ದರೆ ಕಡಿಮೆ ದರದಲ್ಲಿ ಲಕ್ಷಾಂತರ ರೂಪಾಯಿ ಮರವನ್ನು ಅವರಿಗೆ ಕೊಟ್ಟಿದ್ದಾರೆ. ಯಾವ ಕಂಪನಿ ರಾಜ್ಯದಲ್ಲಿ ಕಾರ್ಖಾನೆ ಹೊಂದಿಲ್ಲ, ಅವರಿಗೆ ಮರ ಕೊಡಬೇಕಾದ ಅಗತ್ಯವಿಲ್ಲ. ನಮ್ಮ ಮರ ಹಾಳಾಗುತ್ತದೆ ಎಂದು ಭಾವಿಸಬೇಡಿ. ನಮ್ಮಲ್ಲಿ ಬೆಳೆಯತಕ್ಕ ಮರವನ್ನು ಯಾರು ಬೇಕಾದರೂ ಉಪಯೋಗಮಾಡಿಕೊಳ್ಳುತ್ತಾರೆ. ನಮ್ಮ ರಾಜ್ಯದಲ್ಲಿ ಕಾರ್ಖಾನೆ ನಡೆಸುವವರಿಗೆ ಕೊಟ್ಟರೆ ನಮ್ಮಲ್ಲಿ ಕಾರ್ಖಾನೆಗಳನ್ನು ಜಾಸ್ತಿ ಮಾಡಿದಂತಾಗುತ್ತದೆ. ಮತ್ತು ಅಲ್ಲಿ ಉದ್ಯೋಗ ಜಾಸ್ತಿಮಾಡಿದಂತಾಗುತ್ತದೆ. ವಿಮ್‌ಕೋ ಕಂಪನಿ ಯಾವುದೇ ಕಾರ್ಖಾನೆಯನ್ನು ನಮ್ಮ ರಾಜ್ಯದಲ್ಲಿ ಹೊಂದಿಲ್ಲ. ಕೇರಳ ರಾಜ್ಯದಲ್ಲಿ ಬಲಿಯಪಟ್ಟದಲ್ಲಿ ಕಾರ್ಖಾನೆಯನ್ನು ಹೊಂದಿದ್ದಾರೆ. ವಿಮ್‌ಕೋ ಕಂಪನಿ ಅವರು ರಾಜ್ಯದ ಹೊರಗೆ ಮರ ಸಾಗಿಸಿಕೊಂಡು ಹೋಗುತ್ತಾರೆ. ಅವರಿಗೆ ಕೊಟ್ಟಿರತಕ್ಕ ಮರಗಳನ್ನು ಬೇರೆ ಕಡೆಗೆ ಮಾರಾಟ ಮಾಡಿಕೊಳ್ಳುತ್ತಿದ್ದಾರೆ. ನಿಜವಾಗಿ ಅವರ ಕಾರ್ಖಾನೆಯಲ್ಲಿ ಉಪಯೋಗ ಮಾಡುತ್ತಿದ್ದಾರೆಯೇ ಎಂದು ಯಾರು ನೋಡಿದ್ದಾರೆ? ಅಷ್ಟು ಪ್ರಮಾಣದಲ್ಲಿ ಅವರಿಗೆ ಮರ ಕೊಡತಕ್ಕ ಅಗತ್ಯ ಏನು ಇದೆ ನಮ್ಮ ರಾಜ್ಯದಲ್ಲಿ ಮರಗಳಿಗೆ ಬೇಡಿಕೆ ಇಲ್ಲವೇ ! ಸಣ್ಣಪುಟ್ಟ ಪ್ಯಾಕಿಂಗ್ ಕೇಸ್ ಮಾಡತಕ್ಕವರು, ಮ್ಯಾಚ್‌ಸ್ಟಿಕ್ಸ್ ಮಾಡತಕ್ಕ ಬೇಕಾದಷ್ಟು ಸಣ್ಣಪುಟ್ಟ ಕೈಗಾರಿಕೆಗಳು ನಮಗೆ ಮರ ಕೊಡಿ ಎಂದು ಕೇಳುವಾಗ, ಅವರಿಗೆ ಕೊಡುತ್ತಾ ಇಲ್ಲ. ದೊಡ್ಡ ಉದ್ದಿಮೆದಾರರಿಗೆ, ಮುಂಬೈಯಲ್ಲಿ ಕಾರ್ಖಾನೆ ಇಟ್ಟು ಕೊಂಡು ಲಕ್ಷಾಂತರ ರೂಪಾಯಿ ಮರ ಸಾಗಿಸಿಕೊಂಡು ಹೋಗಿ ಎರಡು ರೂಪಾಯಿಯಂತೆ ಕೊಟ್ಟ ಮರವನ್ನು 5-10 ರೂಪಾಯಿಗಳವರೆಗೂ ಮಾಡಿಕೊಂಡಿರುವ ನಿದರ್ಶನಗಳು ಇವೆ. ವಿಮ್‌ಕೋ ಕಂಪನಿ ಮತ್ತು ಇನ್ನೊಂದು ಕಂಪನಿಯವರು ರಾಜ್ಯದ ಹೊರಗಡೆ ಮರಗಳನ್ನು ಸಾಗಿಸಿಕೊಂಡು

(ಶ್ರೀ ಕಾಗೋಡು ತಿಮ್ಮಪ್ಪ)

ಹೋಗುತ್ತಿದ್ದಾರೆ. ಇದನ್ನು ಸರ್ಕಾರದವರು ತಡೆಹಿಡಿಯಬೇಕು. ದೊಡ್ಡ ಕಂಪನಿಗಳಿಗೆ ಮರ ಕಡಿಯುವುದಕ್ಕೆ ಅವಕಾಶ ಕೊಟ್ಟರೆ, ಅವರು ಕಡಿಯತಕ್ಕ ಮರಗಳ ಲಾಪ್ಸ್ ಮತ್ತು ಟಾಪ್ಸ್ ಅಲ್ಲಿಯೇ ಬಿಡುತ್ತಾರೆ. ಅವನ್ನು ಯಾರೂ ತೆಗೆದುಕೊಂಡು ಹೋಗಬೇಕು? ಅಲ್ಲಿಯೇ ಬಿಟ್ಟು ಹೋಗಿರತಕ್ಕ ಲಕ್ಷಾಂತರ ರೂಪಾಯಿ ಬೆಲೆ ಬಾಳತಕ್ಕ ಈ ಲಾಪ್ಸ್ ಮತ್ತು ಟಾಪ್ಸ್ ಅನ್ನು ಇವತ್ತಿನ ವರೆಗೂ ಯಾರಿಗೂ ಕೊಟ್ಟಿಲ್ಲ. ಒಂದು ಮರ ಕಡಿದಾಗ 200 ಅಡಿ ಸುತ್ತಮುತ್ತ ಪ್ರದೇಶದ ಕಾಡನ್ನು ನಾಶ ಮಾಡುತ್ತಾರೆ. ಇದರಿಂದ ಕಾಡು ದೊಡ್ಡ ಪ್ರಮಾಣದಲ್ಲಿ ನಾಶವಾಗುತ್ತಿದೆ. ತಾವು ಖುದ್ದಾಗಿ ಬಂದು ನೋಡಿದರೆ ಎಷ್ಟರಮಟ್ಟಿಗೆ ಕಾಡನ್ನು ನಾಶಮಾಡಿದ್ದಾರೆಂದು ಗೊತ್ತಾಗುತ್ತದೆ. ಲಾಗ್ಸ್ ಮತ್ತು ಟಾಪ್ಸ್ ಅನ್ನು ಏತಕ್ಕೆ ವಿತರಣೆ ಮಾಡುವುದಿಲ್ಲ? ಸಾಗರ ಪ್ರದೇಶದಲ್ಲಿ ಇದು ಹೆಚ್ಚಿನ ಪ್ರಮಾಣದಲ್ಲಿದೆ. ಇದನ್ನು ಕೇಳಿದರೆ ಯಾರಿಗೂ ಕೊಡುವುದಿಲ್ಲ. ದೊಡ್ಡ ಕಂಪನಿಗಳವರಿಗೆ ಯಾವ ದರದಲ್ಲಿ ಕೊಡುತ್ತೀರೋ ಅದೇ ದರದಲ್ಲಿ ಎಲ್ಲರಿಗೂ ಕೊಡಬೇಕು ಎಂದು ಹೇಳುತ್ತೇನೆ. ಈ ದೊಡ್ಡ ಕಂಪನಿಗಳವರು ರೌಂಡ್ಸ್ ಲ್ಯಾಗ್ಸ್ ತೆಗೆಯುತ್ತಾರೆ, ಅದೇ ದರದಲ್ಲಿ ಲಾಪ್ಸ್ ಮತ್ತು ಟಾಪ್ಸ್ ವಿತರಣೆ ಮಾಡುವುದರಿಂದ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ಸಂಪಾದನೆಯಾಗುತ್ತದೆ. ಇದು ಅನಾವಶ್ಯಕವಾಗಿ ಕೊಳೆತು ಹಾಳಾಗುತ್ತದೆ. ಆದ್ದರಿಂದ ಸಣ್ಣ ಉದ್ದಿಮೆದಾರರಿಗೆ ಇದನ್ನು ವಿತರಣೆ ಮಾಡಿ ಅವರಿಗೆ ಪ್ರಯೋಜನವಾಗುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಜೊತೆಗೆ ನಮ್ಮ ಷಿಕಾರಿಪುರದಲ್ಲಿ ಶ್ರೀಗಂಧದ ಕಳ್ಳಸಾಗಾಣಿಕೆಯನ್ನು ಪತ್ತೆ ಹೆಚ್ಚುವುದಕ್ಕೆ ಒಬ್ಬ ಅಧಿಕಾರಿಯನ್ನು ಕಳುಹಿಸಿದ್ದಾರೆ. ಮಾನ್ಯ ದೇವೇಗೌಡರು ಹೇಳಿದ ಹಾಗೆ ಕಳ್ಳನನ್ನು ಹಿಡಿಯುವುದಕ್ಕೆ ದೊಡ್ಡ ಕಳ್ಳನನ್ನು ಕಳುಹಿಸಿದ್ದಾರೆ. ಹಿಂದಿನ ಅರಣ್ಯಮಂತ್ರಿಗಳು ಅವರಿಗೆ ಒಂದು ಷೋಕಾಸ್ ನೋಟೀಸ್ ಕೊಟ್ಟಿದ್ದು ಸರ್ಕಾರದ ಫೈಲಿನಲ್ಲಿದೆ. ಇವರು ಹುದ್ದೆಯಲ್ಲಿದ್ದಾಗ ನಡೆಸಿರತಕ್ಕ ಅಕ್ರಮಗಳು ಇವೆ.

ಶ್ರೀ ಕೆ. ಎಚ್. ಪಾಟೀಲ್.—ಅಧಿಕಾರಿಗಳ ವಿಚಾರ ಮಾತನಾಡಿ ಸಂತೋಷಪಡಬೇಕಾದರೆ ನನ್ನ ಅಡ್ಡಿ ಇಲ್ಲ. ಆ ಅಧಿಕಾರಿಯನ್ನು ಕಳುಹಿಸಿರುವುದು ಮೆಷರ್ ಮಾಡುವುದಕ್ಕೆ. ಅದನ್ನು ನಾನು ನೀವು ಹೋಗಿ ಮಾಡುವುದಕ್ಕಾಗುವುದಿಲ್ಲ ಅಥವಾ ಸೆಕ್ರೆಟರಿಯನ್ನು ಕಳುಹಿಸಿ ಮಾಡಿಸುವುದಕ್ಕಾಗುವುದಿಲ್ಲ. ಇದರ ಬಗ್ಗೆ ರಿಪೋರ್ಟು ಮಾಡುವುದಕ್ಕೆ ಕಳುಹಿಸಿದ್ದೇನೆ, ಆ ರಿಪೋರ್ಟಿನ ಮೇಲೆ ಯಾವ ತರಹ ಎನ್‌ಕ್ವೈರಿ ಮಾಡಬೇಕು ಅದನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಾರೆ. ಯಾರಿಗೂ ಏನೂ ಎನ್‌ಟ್ರಸ್ಟ್ ಮಾಡಿಲ್ಲ. ಈ ವಿಷಯದಲ್ಲಿ ದೂಷಿಸುವುದಕ್ಕಿಂತ ಮೊದಲು ತಿಳಿದು ಮಾತನಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ನಾಲ್ಕು ಲಕ್ಷ ರೂಪಾಯಿ ಬೆಲೆ ಬಾಳತಕ್ಕ ಶ್ರೀಗಂಧದ ಮರಗಳನ್ನು ಶೇಖರಣೆ ಮಾಡಿದ್ದಾರೆಂದು ವರದಿ ಕೊಟ್ಟಿದ್ದಾರೆ. ಹೊಸನಗರದಲ್ಲಿ ಆ ಪ್ರಕರಣ ಹಿಡಿದಿದ್ದಾರೆಂದು ಇದೇ ಸದನದಲ್ಲಿ ಹೇಳಿದ್ದಾರೆ ಆದರೆ, ಅದನ್ನು ಆಕ್ಷನ್ ಮುಖಾಂತರ ವಿತರಣೆ ಮಾಡಿದಾಗ 30,000 ರೂಪಾಯಿಗಳು ಬಂದಿವೆ. ಉಳಿದದ್ದು ಎಲ್ಲಿ ಹೋಯಿತು ?

ಶ್ರೀ ಕೆ. ಎಚ್. ಪಾಟೀಲ್.—ವಿತರಣೆ ಪೂರ್ತಿಯಾಗಿಲ್ಲ. ಬೆಲೆ ಬಾಳುವ ಮರ ಇದ್ದರೂ, ಕಡಿಮೆ ಬೆಲೆಗೆ ಕೇಳಿದ್ದರಿಂದ ಆಕ್ಷನ್ ಕ್ಯಾನ್ಸಲ್ ಮಾಡಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಕಡಿಮೆ ಬೆಲೆಗೆ ಕೇಳಿರುವುದಕ್ಕೆ ಅಧಿಕಾರಿಗಳ ಕುಮ್ಮಕ್ಕು ಇದೆ ಎಂದು ನನಗೆ ತಿಳಿದುಬಂದಿದೆ.

ಸರ್ಕಾರಕ್ಕೆ ವರದಿ ಕೊಡುವಾಗ ಉದ್ದೇಶ ಇದೆ. ಅವರು ಒಂದು ಸಾರಿ ಚೀಫ್ ಕನ್ಸರ್ವೇಟರ್ ಆಫ್ ಫಾರೆಸ್ಟ್ ಆಗಬೇಕೆಂಬ ಆಕಾಂಕ್ಷೆ ಇರುವುದರಿಂದ, ಸರ್ಕಾರದ ಮನಸ್ಸನ್ನು ಹೆಚ್ಚು ಒಲಿಸಿಕೊಳ್ಳುವ ದೃಷ್ಟಿಯಿಂದ ಅಂಥ ವರದಿಕೊಡುವುದಕ್ಕೆ ಸಾಧ್ಯ.

ಶ್ರೀ ಕೆ. ಎಚ್. ಪಾಟೀಲ್.—ಕೆಳಮಟ್ಟದಲ್ಲಿ ಸರ್ಕಾರದ ಮನಸ್ಸನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯ ಎಂದು ಯಾರಾದರೂ ತಿಳಿದುಕೊಂಡಿದ್ದರೆ ಅದು ತಪ್ಪು.

ಶ್ರೀ ಕಾಗೋಡು ತಿಮ್ಮಪ್ಪ.—ಶ್ರೀಗಂಧದ ಮರವನ್ನು ಕಡಿದು ಸ್ಥಳದಲ್ಲಿ ಇರತಕ್ಕ ಲೇಬರರ್ಸ್‌ನ್ನು ಮಾತ್ರ ಹಿಡಿದಿದ್ದಾರೆ. ನಮಗೆ ಗೊತ್ತಿದೆ, ಹುಬ್ಬಳ್ಳಿ ಪ್ರದೇಶದಲ್ಲಿ ಗಂಧ ಸಾಗಾಣಿಕೆ ಮಾಡುವ ಒಬ್ಬ ಪ್ರಮುಖ ವ್ಯಾಪಾರಿ ಇದ್ದಾರೆ, ಅವರನ್ನು ಶೋಧನೆ ಮಾಡುವುದಕ್ಕೆ ಪ್ರಯತ್ನಪಟ್ಟಿಲ್ಲ, ಬಿಟ್ಟಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ಅಂಥವನು ಇದ್ದಾನೆಂದ್ಯು ಅಧಿಕಾರಿ ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಶ್ರೀಗಂಧದ ಕಳ್ಳಸಾಗಾಣಿಕೆ ಮಾಡುವಂಥ ದೊಡ್ಡ ಗ್ಯಾಂಗ್ ಇದೆ. ಅವರನ್ನು ಬಲಿಹಾಕದೆ ಹೋದರೆ, ಶ್ರೀಗಂಧದ ಕಳ್ಳಸಾಗಾಣಿಕೆ ತಡೆಯುವುದಕ್ಕೆ ಆಗುವುದಿಲ್ಲ. ಒಂದು ಲಾರಿಗೆ 2—2 ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಇಟ್ಟುಕೊಂಡು ಲಾರಿಯಲ್ಲಿ ಕಳ್ಳಸಾಗಾಣಿಕೆ ಮಾಡುತ್ತಾರೆ. ಮೇಲ್‌ಮಟ್ಟದಲ್ಲಿ ಯಾರು ಕಳ್ಳಸಾಗಾಣಿಕೆ ಮಾಡುತ್ತಾರೆ, ಅವರನ್ನು ಪತ್ತೆ ಹಚ್ಚಿ ಶೋಧನೆ ಮಾಡಬೇಕು, ನಮ್ಮ ಊರಿನಲ್ಲಿ ಅಜುಬಾಜುನಲ್ಲಿ ಒಂದು ಗಂಧದ ಮರವೂ ಉಳಿದಿಲ್ಲ ಎಲ್ಲಾ ನಿರ್ನಾಮವಾಗಿ ಹೋಯಿತು. ಆದುದರಿಂದ ಸಂಕಟದಿಂದ ಹೇಳಬೇಕಾಗಿದೆ. ಸ್ವಾಮಿ ಇನ್ನು ಮಲೆನಾಡಿಗೆ ಒಂದು ವಿಶೇಷ ಸೌಕರ್ಯ ಹಿಂದೆ ಒಂದು ಕಾಲದಲ್ಲಿ ಇತ್ತು. ಎಂ. ಆರ್. ಪಿ. ಲೈಸೆನ್ಸ್ ಮೂಲಕ ವ್ಯವಸಾಯಗಾರರು ರಿಯಾಯಿತಿ ದರದಲ್ಲಿ ಮರಗಳನ್ನು ಪಡೆದು ಮನೆ ಕಟ್ಟಿಕೊಳ್ಳುವುದಕ್ಕೆ ಅವಕಾಶವಿತ್ತು. ಹೊಸದಾಗಿ ಫಾರೆಸ್ಟ್ ಆಕ್ಟ್ ತಂದು ಈ ಮೂಲಭೂತವಾದ ಹಕ್ಕನ್ನು ನಾಶಪಡಿಸಿದರು. ಬೇರೆ ತರಹದಲ್ಲಿ ಏನಾದರೂ ಸಹಾಯ ಮಾಡುತ್ತೇವೆ ಎಂದು ಸರ್ಕಾರದವರು ಭರವಸೆ ಕೊಟ್ಟಿದ್ದಾರೆ. ಅದನ್ನು ಇವತ್ತಿನವರೆಗೂ ಕಾರ್ಯಗತ ಮಾಡಿಲ್ಲ. ಎಂ. ಆರ್. ಪಿ. ಇದ್ದಂಥ ಕಾಲದಲ್ಲಿ, ಕೆಲವು ದುರುಪಯೋಗ ಆದಂಥ ಘಟನೆಗಳು ನಡೆದಿದ್ದವು ಮಲೆನಾಡು ಪ್ರದೇಶದಲ್ಲಿ ಇರತಕ್ಕ ಜನರಿಗೆ ನೂರಾರು ವರ್ಷಗಳಿಂದ ಇದ್ದಂಥ ಸೌಕರ್ಯವನ್ನು ಸರ್ಕಾರದವರು ಹಠಾತ್ತನೆ ಕಿತ್ತುಕೊಂಡರೆ ಅದರಿಂದ ಹೆಚ್ಚು ವ್ಯಥೆಯಾಗುತ್ತದೆ, ವಿಷಾದವಾಗುತ್ತದೆ. ಆದ್ದರಿಂದ ಸರ್ಕಾರ ಆದರೂ ಕೂಡ ಮಲೆನಾಡು ಪ್ರದೇಶದ ಒಂದೆರಡು ಜಿಲ್ಲೆಗಳಲ್ಲಿ ಹಿಂದೆ ಇದ್ದಂಥ ಎಂ. ಆರ್. ಪಿ. ಲೈಸೆನ್ಸ್ ಕೊಡಬೇಕು. ವ್ಯವಸಾಯಗಾರರು ಮನೆ ಕಟ್ಟುವ ಸಂದರ್ಭದಲ್ಲಿ ನಾಟವನ್ನು ಒಂದು ಗೊತ್ತಾದ ದರದಲ್ಲಿ ಕೊಡುವುದಕ್ಕೆ ಆಲೋಚನೆ ಮಾಡಬೇಕು. ಯಾವ ತಪ್ಪು ಮಾಡದೆ ಇದ್ದಂಥ ಮಲೆನಾಡು ವ್ಯವಸಾಯಗಾರರು ಅವರಿಗೆ ಇದ್ದಂಥ ಸೌಕರ್ಯವನ್ನು ಕಳೆದುಕೊಂಡಿದ್ದಾರೆ. ಅವರ ಪ್ರತಿನಿಧಿಗಳು ಯಾರಾದರೂ ಮಂತ್ರಿಗಳ ಸ್ಥಾನದಲ್ಲಿ ಇದ್ದಿದ್ದರೆ ಇಂಥ ದುರ್ದಶೆ ಮಲೆನಾಡು ಪ್ರದೇಶದಲ್ಲಿ ಇರತಕ್ಕ ಜನರಿಗೆ ಬರುತ್ತಾ ಇರಲಿಲ್ಲ. ಆದುದರಿಂದ ಸರ್ಕಾರ ಇದನ್ನು ಪುನರ್‌ಪರಿಶೀಲನೆಮಾಡಿ ಮಲೆನಾಡಿನ ಜನರಿಗೆ ಯಾವುದಾದರೂ ಗೊತ್ತಾದ ಪ್ರಮಾಣದಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ಉಚಿತವಾಗಿ ನಾಟವನ್ನು ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಜೊತೆಗೆ ತಮ್ಮ ಇಲಾಖೆಯಲ್ಲಿ ಅಧಿಕಾರಿಗಳು ಸಾಕಷ್ಟು ಪ್ರಮಾಣದಲ್ಲಿ ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಹಣ ಸಂಪಾದನೆ ಮಾಡಿಕೊಂಡಿದ್ದಾರೆ. ಅದರಲ್ಲಿ 3 ಜನ ಡಿ. ಎಫ್. ಓ. ರವರನ್ನು ಸಸ್ಪೆಂಡ್ ಮಾಡಿದ್ದೀರಿ. ಅದರಲ್ಲಿ ಒಬ್ಬ ಕದೀಮ ಇದ್ದಾರೆ ಅವರ ಇತಿಹಾಸ ಕೇಳಿದ್ದೇನೆ. ಒಂದು ಕೋಟಿ ರೂಪಾಯಿಗಳಷ್ಟು ಶ್ರೀಗಂಧದ ಕಳ್ಳಸಾಗಾಣಿಕೆ ಮಾಡುವುದಕ್ಕೆ ಅವರೇ ಮುಖ್ಯಸ್ಥರು. ತಮ್ಮ ಮಕ್ಕಳ ಹೆಸರಿಗೆ ಮೆಡಿಕಲ್ ಕಾಲೇಜಿನಲ್ಲಿ ಸೀಟು ರಿಸರ್ವ್ ಮಾಡಿದ್ದಾರೆ. ಅವರು ಬೆಂಗಳೂರು ನಗರದಲ್ಲಿ ಸುಮಾರು 10 ಲಕ್ಷ ಬೆಲೆ ಬಾಳುವ ಮನೆಗಳನ್ನು ಕಟ್ಟಿದ್ದಾರೆ ಇಷ್ಟು ಸಂಪಾದನೆ ಮಾಡುವುದಕ್ಕೆ ಹೇಗೆ ಸಾಧ್ಯವಾಯಿತು ಇದೇ ರೀತಿ ಅಬ್ದುಲ್ ಷರೀಫ್ ಅವರು ಸಹ ಸಂಪಾದನೆ ಮಾಡಿದ್ದಾರೆ. ಇನ್ನೂ ಬೇಕಾದಷ್ಟು ಜನ ಇಲಾಖೆಯಲ್ಲಿ ಇದ್ದಾರೆ. ಅವರನ್ನು ಬಯಲಿಗೆ ಎಳೆದು ಅವರನ್ನು ಶಿಸ್ತಿನ ಕ್ರಮಕ್ಕೆ ಒಳಪಡಿಸಬೇಕು. ನಾಮಕಾವಸ್ತೆ 3 ಜನ ಸಸ್ಪೆಂಡ್ ಮಾಡಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—3 ಮಂದಿ ಸಸ್ಪೆಂಡ್ ಮಾಡಿದ್ದೇವೆ.

[MR. DEPUTY SPEAKER in the Chair]

ಶ್ರೀ ಕಾಗೋಡು ತಿಮ್ಮಪ್ಪ.—ಇವರು ಕೇವಲ ಮೂರು ಜನ ಅಲ್ಲ.

ಶ್ರೀ ಕೆ. ಎಚ್. ಪಾಟೀಲ್.— ಟೀಕೆ ಮಾಡುವುದು ಮಾಡಿರಿ ಯಾತಕ್ಕೆ ನಾಮಕಾವಸ್ತೆ ಸಸ್ಪೆಂಡ್ ಮಾಡುತ್ತಾರೆ?

ಶ್ರೀ ಕಾಗೋಡು ತಿಮ್ಮಪ್ಪ.—ಸರ್ಕಾರಕ್ಕೆ ಇಷ್ಟು ನಷ್ಟ ಆಗಿರಬೇಕಾದರೆ ಅರಣ್ಯ ಸಂಪತ್ತು ಇಷ್ಟೊಂದು ನಷ್ಟ ಹೊಂದಿರಬೇಕಾದರೆ ಇದಕ್ಕೆ ಜವಾಬ್ದಾರಿ ಅಧಿಕಾರಿಗಳು ಮುಖ್ಯವಾಗಿ ಕಾರಣಕರ್ತರು. ಇವರು ಸರಿಯಾಗಿ ಇದ್ದಿದ್ದರೆ ಬಹುಶಃ ಇಷ್ಟೊಂದು ನಡೆಯುತ್ತಾ ಇರಲಿಲ್ಲ. ಯಾವುದಾದರೂ ಡಿ.ಎಫ್.ಓ. ವಾಪಸ್ ಬರುವಾಗ ಎರಡುವರೆ ಮೂರು ಲಕ್ಷ ರೂಪಾಯಿ ಸಂಪಾದನೆ ಮಾಡಿರುತ್ತಾರೆ. ಡಿ.ಎಫ್.ಓ. ಹೋದಾಗ ಮನೆ ಕಟ್ಟದೆ ಇರುತ್ತಾರೆಯೇ ತೋರಿಸಿಕೊಡಿ! ಆದುದರಿಂದ ತಮ್ಮ ಇಲಾಖೆಯಲ್ಲಿ ಅಕ್ರಮವಾಗಿ ಸಂಪಾದನೆ ಮಾಡಿಕೊಂಡಿರುವಂಥ ಅಧಿಕಾರಿಗಳು ಸಾಕಷ್ಟು ಪ್ರಮಾಣದಲ್ಲಿ ಇದ್ದಾರೆ. ಇಲ್ಲಿಯವರೆಗೆ ಶಿಕ್ಷೆ ಮಾಡದೆ ಇರುವ ಕಾರಣಕ್ಕಾಗಿ ಅವರು

(ಶ್ರೀ ಕಾಗೋಡು ತಿಮ್ಮಪ್ಪ)

ಹಾಗೆ ಮುಂದುವರಿದುಕೊಂಡು ಬಂದು, ಇಲಾಖೆಯಲ್ಲಿ ಅವರದೇ ಸಿಬ್ಬಂದಿ ವರ್ಗವನ್ನು ನಿರ್ಮಾಣ ಮಾಡಿದ್ದಾರೆ. ಯಾವುದೇ ತಪ್ಪುಮಾಡಿದರೂ, ಯಾರ ಮುಖಾಂತರವಾದರೂ ನಾನಾತರಹ ಇನ್‌ಫ್ಲೂಯೆನ್ಸ್ ತಂದು ತಪ್ಪಿಸಿಕೊಳ್ಳುತ್ತಾರೆ. ಅವನು ಎಷ್ಟೋ ರೀತಿಯಲ್ಲಿ ತಪ್ಪಿಸಿಹೊಳ್ಳುತ್ತಾನೆ. ಅವರ ಜಾಲ ಇವೊತ್ತು ನಮ್ಮ ಇಲಾಖೆಯಲ್ಲಿ ಇರುವುದರಿಂದ ಅಪಾರವಾಗಿ ಅರಣ್ಯ ನಾಶವಾಗಿದೆ. ಆದ್ದರಿಂದ ಶ್ರೀಗಂಧ ವಿನಾಶ ಹೊಂದುತ್ತಿದೆ. ಇನ್ನು ಅನೇಕ ಅಧಿಕಾರಿಗಳನ್ನು ಶಿಕ್ಷೆಗೆ ಒಳಪಡಿಸುವ ದೃಷ್ಟಿಯಲ್ಲಿ ತಮ್ಮ ಪ್ರಯತ್ನ ಶೀಘ್ರಗತಿಯಲ್ಲಿ ನಡೆಯಬೇಕೆಂದು ತನ್ಮೂಲಕ ಇಲಾಖೆಯನ್ನು ಭದ್ರಪಡಿಸುವ ವ್ಯವಸ್ಥೆಯನ್ನು ಮಾಡಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥಿಸಿಕೊಂಡು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ದಾಮೋದರ ಮುಲ್ಕಿ (ಮೂಡಬಿದ್ರಿ).—ಸನ್ಮಾನ್ಯ ಅಧ್ಯಕ್ಷರೇ, ಈ ದಿನ ವ್ಯವಸಾಯ ಇಲಾಖೆಯ ಬೇಡಿಕೆಗಳನ್ನು ಅನುಮೋದಿಸುತ್ತಾ, ಈ ಇಲಾಖೆಯಲ್ಲಿ ಕಂಡುಬರುವ ಲೋಪದೋಷಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಲಿಚ್ಛಿಸುತ್ತೇನೆ. ಮೊಟ್ಟಮೊದಲನೆಯದಾಗಿ ನಮ್ಮ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಇತ್ತೀಚೆಗೆ ಉಂಟಾದ ಅನಾಹುತವನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರಲಿಚ್ಛಿಸುತ್ತೇನೆ. ಯಾವಾಗಲೂ ನಮ್ಮ ಜಿಲ್ಲೆಯಲ್ಲಿ ಜೂನ್ 7ಕ್ಕೆ ಮತ್ತು ಜೂನ್ 10ಕ್ಕೆ ಮಳೆ ಬರುವುದು ವಾಡಿಕೆ. ಆದರೆ ಈ ಸಲ 20 ದಿನ ತಡವಾಗಿ ಮಳೆಯಾಗಿದೆ. ಆದರೆ ರೈತರು ವಾಡಿಕೆಯಂತೆ 7 ಮತ್ತು 10 ನೇ ತಾರೀಖುಗಳಿಗನುಗುಣವಾಗಿ ಬೆಳೆಯನ್ನು ಬೆಳೆಯುವುದಕ್ಕೆ ಪ್ರಾರಂಭ ಮಾಡಿದರು. ಮಳೆ ಬರುವುದು ನಿಧಾನವಾದ್ದರಿಂದ ಬೆಳೆದಂಥ ಬೆಳೆಗೆ ಹುಳ ಬಿದ್ದು ಬೆಳೆಯೆಲ್ಲಾ ಹಾಳಾಯಿತು. ಇದರಿಂದ ರೈತರು ತೊಂದರೆಗೆ ಒಳಗಾಗಿದ್ದಾರೆ. ಕಳೆದ 50 ವರ್ಷಗಳಿಂದ ಈ ರೀತಿ ತಡವಾಗಿ ಮಳೆ ಬಂದಿರಲಿಲ್ಲ. ಈ ಸಾಲಿನಲ್ಲಿ ತಡವಾಗಿ ಬಂದಿದ್ದರಿಂದ ರೈತರಿಗೆ ತೊಂದರೆಯಾಗಿದೆ. ಇದನ್ನು ವ್ಯವಸಾಯ ಇಲಾಖೆಯವರು ಗಮನಕ್ಕೆ ತಂದುಕೊಂಡು ಅಲ್ಲಿಯ ರೈತರಿಗೆ ಉತ್ತಮವಾದ ಬೀಜಗಳನ್ನು, ಗೊಬ್ಬರವನ್ನು, ಇನ್‌ಸೆಕ್ಟಿಸೈಡ್ಸ್‌ನ್ನು ಉಚಿತವಾಗಿ ಹಂಚಿಕೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಈ ವ್ಯವಸಾಯ ಇಲಾಖೆಯಿಂದ ಬಹುಶಃ ವಿದ್ಯೆ ಇದ್ದ ರೈತರಿಗೆ ಏನಾದರೂ ಪ್ರಯೋಜನ ಆಗಬಹುದೆಂದು ನನ್ನ ಅಭಿಪ್ರಾಯ. ಅವಿದ್ಯಾವಂತ ರೈತರಿಗೆ ಈ ಇಲಾಖೆಯಿಂದ ಯಾವ ಅನುಕೂಲಗಳು ಸಿಗುವುದಿಲ್ಲವೆಂದು ಹೇಳಬೇಕಾಗಿದೆ. ನಾನೂ ಒಬ್ಬ ಕೃಷಿಕನಾಗಿದ್ದೇನೆ. ಕಳೆದ 5—10 ವರ್ಷಗಳಿಂದ ನಾನು ಸರ್ಕಾರದವರು ನೇಮಕ ಮಾಡುವ ಗ್ರಾಮ ಸೇವಕರನ್ನು ನಮ್ಮ ಕ್ಷೇತ್ರದಲ್ಲಿ ನೋಡಿಲ್ಲ. ಗ್ರಾಮಸೇವಕರ ಕೆಲಸಕ್ಕೆ ಸರ್ಕಾರದವರು ಹೆಚ್ಚಾಗಿ ಪೇಟೆಯಲ್ಲಿರುವವರನ್ನು ಆರಿಸಿರುವುದರಿಂದ ಅವರು ಹಳ್ಳಿಗಳಲ್ಲಿ ಹೋಗಿ ಕೆಲಸ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಇವರು ಡಾಮರು ರಸ್ತೆಗಳನ್ನು ಬಿಟ್ಟು ಬೇರೆ ರಸ್ತೆಗಳಲ್ಲಿ ನಡೆಯುವುದಿಲ್ಲ. ಇವರು ತಮ್ಮ ಸ್ನೇಹಿತರನ್ನು ಹಿಡಿದುಕೊಂಡು, ತಮಗೆ ಬೇಕಾದವರ ಜಮೀನುಗಳಲ್ಲಿ ನಾಲ್ಕೈದು ಕಡೆಗಳಲ್ಲಿ ಬೋರ್ಡ್ ಹಾಕಿಸಿ ಇಂತಹ ತಳಿಗಳನ್ನು ಬೆಳೆಯಲಾಗಿದೆ ಎಂದು ಬೋರ್ಡ್‌ಗಳಲ್ಲಿ ಬರೆಸಿಬಿಡುತ್ತಾರೆ. ಅಲ್ಲಿಗೆ ಅವರ ಕೆಲಸ ಪೂರೈಸಿತು. ಈ ಒಂದು ಪರಿಸ್ಥಿತಿ ಬದಲಾಗಬೇಕು. ಗ್ರಾಮದಲ್ಲಿರುವ ಎಲ್ಲ ರೈತರಿಗೂ ಈಗಿನ ಹೊಸ ತಳಿಗಳ ಪರಿಚಯ ಗ್ರಾಮಸೇವಕರಿಂದ ಆಗುವಂತೆ ಏರ್ಪಾಡು ಮಾಡಬೇಕು. ಇನ್ನು ಮುಂದೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗ್ರಾಮಸೇವಕರಿಂದ ಹೆಚ್ಚಿನ ಕೆಲಸವಾಗುವಂತೆ ಸರ್ಕಾರದವರು ನೋಡಿಕೊಳ್ಳಬೇಕು. ಈಗ ವ್ಯವಸಾಯ ಇಲಾಖೆಯವರು ರೈತರ ಅನುಕೂಲಕ್ಕಾಗಿ ಬುಕ್‌ಲೆಟ್ಸ್‌ನ್ನು ತಯಾರಿಸಿ ಕಳಿಸಿಕೊಡುತ್ತಿದ್ದಾರೆ. ಇವು ಕೇವಲ ಅಧಿಕಾರಿಗಳ ಮನೆಯಲ್ಲಿ ಮತ್ತು ಲೈಬ್ರರಿಯಲ್ಲಿ ಕಂಡುಬರುತ್ತವೆಯೇ ಹೊರತು, ಎಲ್ಲ ರೈತರಿಗೂ ಇವು ಸಿಗುತ್ತಿಲ್ಲ. ಎಲ್ಲ ಅವಿದ್ಯಾವಂತ ರೈತರಿಗೂ ಸಹ ಇದರ ಒಂದು ತಿಳಿವಳಿಕೆ ಸಿಗುವಂತೆ ಮತ್ತು ಅವರಿಗೆ ಮನದಟ್ಟಾಗುವಂತೆ ತಿಳಿಸಲು ಸೂಕ್ತ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಈಗ ತೋಟಗಾರಿಕೆ ಇಲಾಖೆ ಎಂದು ಇದೆ. ಈ ಇಲಾಖೆಯ ಅಗತ್ಯ ಇದೆಯೇ, ಎಂದು ಮಾನ್ಯ ಸಚಿವರನ್ನು ಕೇಳಬೇಕಾಗಿದೆ. ತಮಗೆ ಬೇಕಾದಂಥ ಕೆಲವು ಜನರಿಗೆ ಉತ್ತಮವಾದ ಹುದ್ದೆಗಳನ್ನು ಕೊಡುವುದಕ್ಕಾಗಿ ಈ ಇಲಾಖೆಯನ್ನು ಇಟ್ಟಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಈ ಇಲಾಖೆಯಲ್ಲಿ ಇತ್ತೀಚೆಗೆ ನಡೆದಂಥ ಒಂದು ಸಣ್ಣ ವಿಷಯವನ್ನು ಸಚಿವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಶ್ರೀ ಯಶವಂತ ಎಲ್ ಡೆಪ್ಯೂಟಿ ಡೈರೆಕ್ಟರ್ ಆಗಿ ಬೆಳಗಾಂನಲ್ಲಿ ಇದ್ದರು. ಅವರನ್ನು ಬೆಟ್ಟಹಳ್ಳಿಗೆ ಡೆಪ್ಯುಟೇಷನ್ ಮೇಲೆ ಟ್ರಾನ್ಸ್‌ಫರ್ ಮಾಡಲಾಯಿತು. ಆದರೆ ಬೆಟ್ಟಹಳ್ಳಿಯಲ್ಲಿರುವ ಕೇಂದ್ರಸರ್ಕಾರದ ಕೇಂದ್ರದವರು ತಮ್ಮ ಸೇವೆಯ ಅಗತ್ಯ ಇಲ್ಲ ಎಂದು ಅವರಿಗೆ ಹೇಳಿಬಿಟ್ಟರು.

ಅವರು ಹಿಂದಕ್ಕೆ ಬಂದಾಗ ಅವರನ್ನು ಸರ್ಕಾರದವರು ಎಲ್ಲಿಗೂ ಮತ್ತೆ ಟ್ರಾನ್ಸ್‌ಫರ್ ಮಾಡಲಿಲ್ಲ. ಅವರು ಈಗ ಮನೆಯಲ್ಲಿಯೇ ಇದ್ದಾರೆ. ಸಂಬಳ ಕೂಡ ಇಲ್ಲ. ಇತ್ತೀಚೆಗೆ ಅವರನ್ನು ಬೆಂಗಳೂರಿಗೆ ವರ್ಗ ಮಾಡಲಾಯಿತು. ಆದರೆ ಇಲ್ಲಿಯ ಡೈರೆಕ್ಟರ್ ಅವರು ಅವರ ಜಾಯಿನಿಂಗ್ ರಿಪೋರ್ಟ್ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದ್ದಾರೆಂದು ಕೇಳಿದ್ದೇನೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಸೂಕ್ತ ಕಾರ್ಯಕ್ರಮ ಕೈಕೊಂಡು ಅವರನ್ನು ಎಲ್ಲಿಯಾದರೂ ಪೋಸ್ಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಪಶುಸಂಗೋಪನೆ ವಿಚಾರದಲ್ಲಿ ಹೇಳುವುದಾದರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇನ್‌ಸೆಮಿನೇಷನ್ ಸೆಂಟರ್‌ಗಳಿಗೆ ದನಗಳನ್ನು ತೆಗೆದುಕೊಂಡು ಹೋಗುವುದು ಜಾಸ್ತಿಯಾಗಿದೆ. ಇದರಿಂದ ಪ್ರಯೋಜನ ಇದೆ ಎಂಬ ಅರಿವು ರೈತರಲ್ಲಿ ಉಂಟಾಗಿದೆ. ಆದರೆ ಕಳೆದ 2 ವರ್ಷಗಳಿಂದ ಈ ಸೆಂಟರ್‌ಗಳಿಂದ ಹೆಚ್ಚು ಪ್ರಯೋಜನವಾಗುತ್ತಿಲ್ಲ. ಸೆಮನ್ ಕಲೆಕ್ಟ್ ಮಾಡುವ ಕೇಂದ್ರ ಮಂಗಳೂರಿನಲ್ಲಿದೆ. ಅಲ್ಲಿಗೆ ಹೋಗಿ ಕೇಳಿದರೆ ನಮ್ಮಲ್ಲಿ ಬುಲ್ಸ್ ಹೆಚ್ಚು ಇಲ್ಲ ಎಂದು ಹೇಳುತ್ತಾರೆ. ಈ ದಿಶೆಯಲ್ಲಿ ಮಾನ್ಯ ಮಂತ್ರಿಗಳು ಸೂಕ್ತ ಗಮನ ಹರಿಸಬೇಕೆಂದು ಹೇಳುತ್ತೇನೆ.

ಮುಲ್ಕಿಯಲ್ಲಿ ಒಂದು ರೂರಲ್ ವೆಟರ್‌ನರಿ ಆಸ್ಪತ್ರೆ ಇದೆ. ಅದನ್ನು ಅಲ್ಲಿಯ ಪಂಚಾಯಿತಿಯವರು ಅಪ್‌ಗ್ರೇಡ್ ಮಾಡಬೇಕೆಂದು ಸರ್ಕಾರದವರನ್ನು ಕೇಳಿದ್ದಾರೆ. ಆದಕಾರಣ ಮಾನ್ಯ ಸಚಿವರು ಈ ದಿಶೆಯಲ್ಲಿ ಗಮನ ಹರಿಸಬೇಕೆಂದು ಹೇಳುತ್ತೇನೆ.

ಮೀನುಗಾರಿಕೆಯ ಬಗ್ಗೆ ಹೇಳಬೇಕೆಂದರೆ, ಇತ್ತೀಚೆಗೆ ಮೀನುಗಾರಿಕೆ ಕಾರ್ಪೊರೇಷನ್‌ಗೆ ಅಧ್ಯಕ್ಷರನ್ನಾಗಿ ಒಬ್ಬರನ್ನು ನೇಮಕ ಮಾಡಿದ್ದಾರೆ. ಈ ರೀತಿ ಅಧ್ಯಕ್ಷರನ್ನಾಗಿ ನೇಮಕ ಮಾಡುವಾಗ, ಯಾರು ಕೋಸ್ಟಲ್ ಪ್ರದೇಶದಲ್ಲಿಯೇ ಇದ್ದುಕೊಂಡು ಅದರ ಬಗ್ಗೆ ಹೆಚ್ಚಿನ ಅನುಭವ ಪಡೆದವರಾಗಿರುತ್ತಾರೋ ಅಂತಹವರನ್ನೇ ನೇಮಕ ಮಾಡುವುದಕ್ಕೆ ಸರ್ಕಾರದವರು ಮೊದಲು ಆದ್ಯತೆ ಕೊಡಬೇಕು. ಮಾನ್ಯ ಸಚಿವರು ನಮ್ಮ ಕ್ಷೇತ್ರಕ್ಕೆ ಬಂದು ಅಲ್ಲಿಗೆ ಏನೇನು ಅಗತ್ಯಗಳು ಬೇಕಾಗಿದೆ ಎಂಬುದನ್ನು ಕಂಡುಕೊಂಡಿದ್ದಾರೆ. ನಮ್ಮಲ್ಲಿ ಮಧ್ಯಮ ವರ್ಗದ ಐಸ್‌ಪ್ಲಾಂಟ್ ಇದೆ. ಅದನ್ನು ಫ್ರೀಸಿಂಗ್ ಪ್ಲಾಂಟ್ ಆಗಿ ಮಾಡಬೇಕು. ಮತ್ತು ಹೊಳೆಯಲ್ಲಿ ಕಳೆದ ಹತ್ತು ವರ್ಷಗಳಿಂದ ಮಣ್ಣು ಬಂದು ಸೇರಿಕೊಂಡು ಮೆಕನೈಸ್ಡ್ ಬೋಟ್ಸ್ ಹೋಗುವುದಕ್ಕೆ ಅವಕಾಶವಾಗುತ್ತಿಲ್ಲ. ಇದನ್ನು ಸರಿಪಡಿಸಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸುತ್ತೇನೆ.

† ಶ್ರೀ ಎಂ. ಬಿ. ರಾಮಸ್ವಾಮಿ (ಆನೇಕಲ್).—ಸನ್ಮಾನ್ಯ ಸಭಾಪತಿಯವರೇ, ಈ ದಿವಸ ನಮ್ಮ ವ್ಯವಸಾಯ ಮತ್ತು ಅರಣ್ಯ ಇಲಾಖೆಯ ಸಚಿವರಾದಂಥ ಶ್ರೀಮಾನ್ ಕೆ. ಎಚ್. ಪಾಟೀಲ್ ಅವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಹೃತ್ಪೂರ್ವಕವಾಗಿ ಬೆಂಬಲಿಸುತ್ತಾ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಮಂತ್ರಿಗಳು ರೈತರ ಮಕ್ಕಳಾಗಿ ಈ ಖಾತೆಯನ್ನು ವಹಿಸಿಕೊಂಡಿರುವುದರಿಂದ, ಆ ಶಾಖೆಯಲ್ಲಿರತಕ್ಕಂಥ ಕುಂದುಕೊರತೆಗಳನ್ನು ಸುಲಭವಾಗಿ ನಿವಾರಣೆ ಮಾಡುತ್ತಾರೆಂಬ ನಂಬಿಕೆ ನನಗಿದೆ. ಮಾನ್ಯ ಮಂತ್ರಿಗಳು ದಕ್ಷರು ಮತ್ತು ಧೈರ್ಯಶಾಲಿಗಳಾಗಿರುವುದರಿಂದ, ತಮಗೆ ಎಲ್ಲ ಅನುಕೂಲಗಳು ಸಿಗುತ್ತದೆಂದು ಜನರು ತಮ್ಮನ್ನು ನಂಬಿಕೊಂಡಿದ್ದಾರೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಹಾಗೂ ವ್ಯವಸಾಯ ಇಲಾಖೆಯಲ್ಲಿ ಹೆಚ್ಚಿಗೆ ಪ್ರಗತಿಯಾಗಬೇಕು, ಬಡ ಜನತೆಯ ಉದ್ಧಾರವಾಗಬೇಕು, ಬಡವರು ಬಡವರಾಗಿಯೇ ಉಳಿಯಬಾರದು, ಅವರು ವ್ಯವಸಾಯ ಇಲಾಖೆಯಲ್ಲಿ ಸಿಗುವಂತಹ ಎಲ್ಲ ಸವಲತ್ತುಗಳನ್ನು ಪಡೆದುಕೊಂಡು ಮುಂದುವರೆಯಬೇಕು, ಒಳ್ಳೆಯ ಸತ್ಪ್ರಜೆಗಳಾಗಬೇಕು, ಆ ರೀತಿ ಒಳ್ಳೆಯ ರೈತರಾಗಲು ಎಲ್ಲ ಸಹಾಯ ಮಾಡುವುದಾಗಿ ನಾವು ಚುನಾವಣೆಯ ಸಂದರ್ಭದಲ್ಲಿ ಅವರಿಗೆ ಆಶ್ವಾಸನೆಯನ್ನು ಕೊಟ್ಟಿದ್ದೇವೆ. ಈ ದಿಶೆಯಲ್ಲಿ ಈಗಾಗಲೇ ಬ್ಯಾಂಕ್‌ಗಳ ರಾಷ್ಟ್ರೀಕರಣ ಮಾಡಲಾಗಿದೆ. ಇದರಿಂದ ಬಡವರಿಗೆ ಎಷ್ಟರಮಟ್ಟಿಗೆ ಅನುಕೂಲವಾಗುತ್ತಿದೆ ಎಂಬ ಬಗ್ಗೆ ನಾನು ಪ್ರಶ್ನೆ ಮಾಡಬೇಕಾಗಿದೆ. ಬ್ಯಾಂಕ್‌ಗಳ ರಾಷ್ಟ್ರೀಕರಣವಾದ ಮೇಲೆ ಎಲ್ಲ ರೈತರಿಗೂ ಸುಲಭವಾಗಿ ಹಾಗೂ ಸುಲಲಿತವಾಗಿ ಸಾಲ ಸೌಲಭ್ಯಗಳು ಸಿಗುತ್ತದೆಂಬ ಪ್ರತೀತಿ ಇತ್ತು. ಆದರೆ ಇಂದಿನ ಪರಿಸ್ಥಿತಿಯನ್ನು ನೋಡಿ ನನಗೆ ದಿಗ್‌ಭ್ರಾಂತಿಯಾಗಿದೆ. ತಾಲ್ಲೂಕ್ ಮಟ್ಟದಲ್ಲಿ ವಿಚಾರಣೆ ಮಾಡಿ ನೋಡಿದ್ದೇ ಆದರೆ ಈ ಬ್ಯಾಂಕ್‌ಗಳಿಂದ ಬಡವರಿಗೆ ಯಾವ ರೀತಿಯ ಸಾಲವೂ ಸಿಗುತ್ತಿಲ್ಲ. ಸಾಲ ಸೌಲಭ್ಯವನ್ನೆಲ್ಲಾ ಕೆಲವೇ ಶ್ರೀಮಂತರು ಉಪಯೋಗಿಸಿಕೊಂಡು ಬಡ ರೈತರಿಗೆ ಅನ್ಯಾಯ ಮಾಡುತ್ತಿದ್ದಾರೆಂದು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ. ಇದರ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಯವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಶ್ರೀ ಎಂ. ಬಿ. ರಾಮಸ್ವಾಮಿ)

ನಮ್ಮ ತಾಲ್ಲೂಕ್‌ನಲ್ಲಿರುವ ಪ್ರೈಮರಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನಲ್ಲಿ ಎರಡು ಮೂರು ಲಕ್ಷ ರೂಪಾಯಿಗಳವರೆಗೆ ಫ್ರೋಲಾಗಿದೆ. ಒಂದೇ ರಾಜಕೀಯ ಪಕ್ಷದವರು ಸೇರಿಕೊಂಡು ಈ ಬ್ಯಾಂಕ್‌ನಿಂದ ಸಿಗುವ ಎಲ್ಲ ಅನುಕೂಲಗಳನ್ನು ತಾವೇ ಉಪಯೋಗಿಸಿಕೊಂಡು ಸಾಮಾನ್ಯ ಜನತೆಗೆ ಯಾವ ವಿಧವಾದ ಅನುಕೂಲವನ್ನೂ ಮಾಡಿಕೊಡುತ್ತಿಲ್ಲ. ಇದರ ಬಗ್ಗೆ ಸೂಕ್ತ ಕಾರ್ಯ ಕ್ರಮ ಕೈಕೊಳ್ಳಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ರೈತರು ಸುಗಮವಾಗಿ ಜೀವನ ಮಾಡಬೇಕಾದರೆ, ಅವರು ತಮ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳಬೇಕಾದರೆ, ಅವರಿಗೆ ಬೀಜ ಮತ್ತು ಗೊಬ್ಬರ ಅತ್ಯಾವಶ್ಯಕ. ಆದರೆ ಅಧಿಕಾರ ವರ್ಗದವರು ರೈತರಿಗೆ ಸಕಾಲದ ದಲ್ಲಿ ಬೀಜ ಮತ್ತು ಗೊಬ್ಬರವನ್ನು ಒದಗಿಸುತ್ತಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಈ ಒಂದು ಇಲಾಖೆಯಲ್ಲಿ ಅಧಿಕಾರಿಗಳು ಏನು ಬಂದಿದ್ದಾರೆ ಅವರು ಹಿಂದಿನ ಸರ್ಕಾರದವರ ಪ್ರಭಾವವನ್ನು ಪಡೆದುಕೊಂಡು ಬಂದಂತಹವರಾಗಿದ್ದಾರೆ. ಆದ್ದರಿಂದ ಅಲ್ಲಿರತಕ್ಕ ಅಧಿಕಾರ ವರ್ಗ ದವರಿಗೆ ಹಿಂದಿನ ಸರ್ಕಾರದಲ್ಲಿದ್ದಂತಹ ಒಂದು ಮನೋಭಾವನೆಯೇ ಈಗಲೂ ಇದೆ. ಆದ್ದರಿಂದ ಇನ್ನು ಮುಂದೆ ಅಧಿಕಾರವರ್ಗದವರು ಹಿಂದಿನ ಮನೋಭಾವನೆಯನ್ನು ಬಿಟ್ಟು ಈಗಿನ ಸಮಾಜವಾದ ತತ್ವಕ್ಕನುಗುಣವಾಗಿ ನಡೆಯಬೇಕು ಎಂದು ಮಾನ್ಯ ಮಂತ್ರಿಮಹೋದಯರು ಅವರಿಗೆ ಆದೇಶವನ್ನು ನೀಡಬೇಕೆಂದು ನಾನು ಹೇಳುತ್ತೇನೆ. ಈಗ ವ್ಯವಸಾಯ ಇಲಾಖೆಯಲ್ಲಿ ಸರ್ಟಿಫೈಯ್ಡ್ ಸೀಡ್ಸ್ ಎಂದು ಏನು ಬೇರೆಕಡೆಯಿಂದ ತರಿಸುತ್ತಿದ್ದಾರೆ ಆ ಸೀಡ್ಸ್ ಫಲಕಾರಿಯಾಗಿಲ್ಲ. ಇದಕ್ಕೆ ಕಾರಣವೇ ನೆಂಬುದು ಗೊತ್ತಾಗಲಿಲ್ಲ.

3-30 P.M.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರು ಎಲ್ಲಿ ಆ ರೀತಿಯಾಗಿದೆ ಎಂಬುದನ್ನು ಹೇಳಿದರೆ ಆ ಬಗ್ಗೆ ಕ್ರಮತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಬೆಂಗಳೂರು ಜಿಲ್ಲೆಯ ಆನೇಕಲ್ಲಿಗೆ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರು 90 ಕೆ. ಜಿ. ಸರ್ಟಿಫೈಯ್ಡ್ ಸೀಡ್ಸ್ ಕೊಟ್ಟಿದ್ದಾರೆ. ಅದು ಫಲಕಾರಿ ಯಾಗಿಲ್ಲ. ಅದು ಫಲಕಾರಿಯಾಗದೇ ಇರುವುದಕ್ಕೆ ಕಾರಣವೇನು ? ಅಧಿಕಾರವರ್ಗದವರು ಎಕ್ಸ್ ಪರ್ಟ್ ಅಲ್ಲದಿದ್ದರೆ ಅವರನ್ನು ಅಲ್ಲಿಂದ ಬೇರೆ ಕಡೆಗೆ ವರ್ಗ ಮಾಡಿ ಅಲ್ಲಿಗೆ ಒಳ್ಳೆಯ ಎಕ್ಸ್‌ಪರ್ಟ್ ಆದವರನ್ನು ಹಾಕಬೇಕು. ಅವರ ಮೇಲೆ ಒಳ್ಳೆಯ ಸೂಪರ್‌ವಿಜನ್ ಇರಬೇಕು. ಆ ರೀತಿ ಮಾಡಿದರೆ ಮಾತ್ರ ಅನುಕೂಲವಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಗ್ರೋ ಇಂಡ ಸ್ಟ್ರೀಸ್ ಕಾರ್ಪೊರೇಷನ್ನಿನಲ್ಲಿ ಹರಿಜನರಿಗೆ ಸಾಕಷ್ಟು ಪ್ರಾತಿನಿಧ್ಯವಿಲ್ಲ. ಆದ್ದರಿಂದ ಅಲ್ಲಿ ಹರಿಜನ ಗಿರಿ ಜನರಿಗೆ ಪ್ರಾತಿನಿಧ್ಯವನ್ನು ಕೊಡಬೇಕೆಂದು ನಾನು ಹೇಳುತ್ತೇನೆ.

ವಿಲೇಜ್‌ವೆಲ್ ವರ್ಕಿಗೆ ಸಂಬಂಧಪಟ್ಟ ಹಾಗೆ ನಾನು ಒಂದೆರೆಡು ವಿಷಯಗಳನ್ನು ಹೇಳಬಯ ಸುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ವ್ಯವಸಾಯ ಇಲಾಖೆಯವರು ಹೆಚ್ಚು ಫಲಕಾರಿಯಾ ದಂತಹ ಕೆಲಸಗಳನ್ನು ಮಾಡಿಲ್ಲ. ರಾಜಕೀಯ ಗೊಂದಲಕ್ಕೆ ಸಿಕ್ಕಿಹಾಕಿಕೊಂಡು ಗ್ರಾಮಾಂತರ ಪ್ರದೇ ಶಗಳಲ್ಲಿ ವ್ಯವಸಾಯ ಇಲಾಖೆಯಿಂದ ಎಷ್ಟರಮಟ್ಟಿನ ಒಂದು ಕೆಲಸ ಆಗಬೇಕಾಗಿತ್ತೋ ಅದು ಆಗಿಲ್ಲ. ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಒಬ್ಬೊಬ್ಬರು ವ್ಯವಸಾಯ ಅಧಿಕಾರಿಗಳನ್ನು ನೇಮಿಸಬೇಕು. ಈಗ ವ್ಯವಸಾಯ ಇಲಾಖೆಗೆ ಸಂಬಂಧಪಟ್ಟ ಅಧಿಕಾರವನ್ನು ಏನು ಬಿ.ಡಿ ಓ.ಗಳಿಗೆ ಕೊಟ್ಟಿದ್ದಾರೆ ಅದನ್ನು ತಪ್ಪಿಸಬೇಕು. ಸಾಯಿಲ್ ಟೆಸ್ಟಿಂಗ್ ಲ್ಯಾಬೊರೇಟರಿ ಸರಿಯಾಗಿ ಫಲಕಾರಿಯಾಗಿಲ್ಲ. ಯಾವ ಯಾವ ಗೊಬ್ಬರವನ್ನು ಎಷ್ಟೆಷ್ಟು ಪ್ರಮಾಣದಲ್ಲಿ ಯಾವ ಯಾವ ಭೂಮಿಗೆ ಹಾಕಬೇಕೆಂಬುದನ್ನು ಅವರು ಕಂಡುಹಿಡಿದಿಲ್ಲ. ಇದನ್ನು ಸರಿಯಾದ ರೀತಿಯಲ್ಲಿ ನೋಡಿ ಕೊಳ್ಳಬೇಕು. ನಾನು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಸಾಯಿಲ್ ಕನ್‌ಸರ್‌ವೇಷನ್ ಕೆಲಸವನ್ನು ಮಾಡಿಸುವುದರಲ್ಲಿ ಹೆಚ್ಚು ಶ್ರದ್ಧೆವಹಿಸಿ ಕೆಲಸ ಮಾಡಬೇಕು. ಮತ್ತು ಅದು ಸರಿಯಾದ ರೀತಿಯಲ್ಲಿ ನಡೆಯುವ ಹಾಗೆ ಮಾಡಬೇಕೆಂದು ನಾನು ಹೇಳುತ್ತೇನೆ.

ನಮ್ಮಲ್ಲಿ ರೀಹ್ಯಾಬಿಲಿಟೇಷನ್ ಆಫ್ ಲ್ಯಾಂಡ್ ಲೆಸ್ ಅಗ್ರಿಕಲ್‌ಚರಲ್ ಸ್ಕೀಮ್ ಎಂದು ಸುಮಾರು 18 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಮಾಡಲಾಗಿತ್ತು. ಆದರೆ ಅದನ್ನು ಕಾರ್ಯಗತ ಮಾಡದೆ ಅದನ್ನು ಹಿಂದೆ ಲ್ಯಾಪ್ಸ್ ಮಾಡಿದ್ದಾರೆ.

ಈಗ ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಆದ್ದರಿಂದ ಈಗ ಆ ರೀಹ್ಯಾಬಿಲಿಟೇಷನ್ ಆಫ್ ಲ್ಯಾಂಡ್ ಲೆಸ್ ಅಗ್ರಿಕಲ್ಚರಲ್ ಸ್ಕೀಮನ್ನು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮುಂದುವರಿಸಿಕೊಂಡು ಹೋಗಬೇಕು. ಅದರಿಂದ ಬಡವರಿಗೆ ಮತ್ತು ಹರಿಜನರಿಗೆ ಅನುಕೂಲ ವಾಗುತ್ತದೆ. ಆದ್ದರಿಂದ ಆ ಒಂದು ಯೋಜನೆಯನ್ನು ಕಾರ್ಯಗತ ಮಾಡುವ ಬಗ್ಗೆ ಮಾನ್ಯ ಮಂತ್ರಿಗಳು ಆಶ್ವಾಸನೆಯನ್ನು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಗ್ರಿಕಲ್ಚರಲ್ ಯೂನಿವರ್ಸಿಟಿ ಹುಟ್ಟಿದಾಗಿನಿಂದಲೂ ಒಬ್ಬರೇ ವೈಸ್‌ಛಾನ್ಸಲರ್ ಇದ್ದಾರೆ. ಅವರನ್ನು ಬದಲಾವಣೆ ಮಾಡುವುದು ಸೂಕ್ತ. ಮತ್ತು ಅಲ್ಲಿ ಹರಿಜನರಿಗೆ ಪ್ರಾತಿನಿಧ್ಯವಿಲ್ಲ. ಅಲ್ಲಿ ಒಬ್ಬ ಹರಿಜನ ಅಧಿಕಾರಿಯೂ ಇಲ್ಲ. ಆದ್ದರಿಂದ ಈಗಲಾದರೂ ತಮ್ಮ ಕಾಲದಲ್ಲಿ ದೊಡ್ಡ ಮನಸ್ಸು ಮಾಡಿ ರಾಜ್ಯಾಂಗದ ಪ್ರಕಾರ ಅಲ್ಲಿ ಹರಿಜನರಿಗೆ ಕೆಲಸವನ್ನು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಅಗ್ರಿಕಲ್ಚರಲ್ ಯೂನಿವರ್ಸಿಟಿಯಲ್ಲಿ ಪಿ.ಡಬ್ಲ್ಯು.ಡಿ ಡಿಪಾರ್ಟ್‌ಮೆಂಟಿನಿಂದ ಕೆಲವು ಇಂಜಿನಿಯರನ್ನು ಲೆಂಟ್ ಸರ್ವೀಸ್ ಮೇಲೆ ತೆಗೆದುಕೊಂಡಿದ್ದಾರೆ. ಅವರಿಗೆ ವರ್ಗಾವರ್ಗಿ ಇಲ್ಲ. ಆದರೆ ಬೇರೆ ಅಧಿಕಾರಿಗಳನ್ನು ವರ್ಗ ಮಾಡುತ್ತಾರೆ. ಆದರೆ ಈ ಇಂಜಿನಿಯರುಗಳಿಗೆ ವರ್ಗವೇ ಇಲ್ಲ. ಈ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕು. ಒಂದೇ ಕಡೆ ಅಧಿಕಾರಿಗಳನ್ನು ಇಡಬಾರದು. ಬೋರ್ಡ್ ಆಫ್ ರೀಜೆಂಟಿನಲ್ಲಿ ಹರಿಜನರಿಗೆ ಒಬ್ಬರಿಗೆ ಮಾತ್ರ ಪ್ರಾತಿನಿಧ್ಯ ಕೊಟ್ಟಿದ್ದಾರೆ. ಒಂದಕ್ಕಿಂತ ಹೆಚ್ಚು ಪ್ರಾತಿನಿಧ್ಯವನ್ನು ಬೋರ್ಡ್ ಆಫ್ ರೀಜೆಂಟಿನಲ್ಲಿ ಕೊಡಬೇಕು. ಈ ಯೂನಿವರ್ಸಿಟಿಯಲ್ಲಿ ರೆಕ್ರೂಟ್‌ಮೆಂಟ್ ರೂಲ್ಸ್ ಇಲ್ಲ, ಆದ್ದರಿಂದ ಅಲ್ಲಿ ರೆಕ್ರೂಟ್‌ಮೆಂಟ್ ಸರಿಯಾಗಿ ನಡೆಯುವಂತೆ ಮಾಡಬೇಕು.

ಪಶುಸಂಗೋಪನೆಯ ವಿಚಾರದಲ್ಲಿ ಹೇಳುವುದಾದರೆ ಈ ಇಲಾಖೆಯನ್ನು ವಹಿಸಿಕೊಂಡಿರತಕ್ಕ ಮಾನ್ಯ ಮಂತ್ರಿಗಳು ಪಶುಸಂಗೋಪನೆಯ ವಿಚಾರದಲ್ಲಿ ಬಹಳ ಆಸಕ್ತಿಯನ್ನು ಇಟ್ಟುಕೊಂಡಿದ್ದಾರೆ. ಅವರು ರೈತರ ಮಕ್ಕಳೂ ಆಗಿದ್ದಾರೆ. ಅವರ ಬಗ್ಗೆ ನನಗೆ ಅಪಾರ ಗೌರವ ಇದೆ. ಈ ಇಲಾಖೆಗೆ ಸಂಬಂಧಪಟ್ಟ ಹಾಗೆ ಬೆಂಗಳೂರು ಡೈರಿ ವಿಷಯವನ್ನು ತೆಗೆದುಕೊಂಡರೆ ಇದರಲ್ಲಿ ಪ್ರತಿದಿವಸವೂ ಗೊಂದಲ ಇದೆ. ಏತಕ್ಕೆಂದರೆ ಅಲ್ಲಿ ಒಬ್ಬರು ಎಕ್ಸ್‌ಪರ್ಟ್ ಆದ ಒಬ್ಬ ಟೆಕ್ನಾಲಜಿ ಅಧಿಕಾರಿಯನ್ನು ಹಾಕಬೇಕು. ಈಗ ಅಲ್ಲಿಗೆ ಒಬ್ಬರು ಐ.ಎ.ಎಸ್. ಅಧಿಕಾರಿಯನ್ನು ಹಾಕಿದ್ದಾರೆ. ಆದ್ದರಿಂದ ಅಲ್ಲಿನ ಆಡಳಿತ ಸರಿಯಾಗಿಲ್ಲ. ಆದಕಾರಣ ಅಲ್ಲಿಗೆ ಒಬ್ಬರು ಎಕ್ಸ್‌ಪರ್ಟ್ ಆದ ಅಧಿಕಾರಿಯನ್ನು ಹಾಕಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಪಶುಸಂಗೋಪನಾ ಇಲಾಖೆಯಲ್ಲಿ ಯಾವ ಒಬ್ಬ ಅಧಿಕಾರಿ ಆ ಜಾಗದಲ್ಲಿರಲು ಸೂಕ್ತವಲ್ಲ ಯೋಗ್ಯವಲ್ಲ ಎಂದು ಹೈಕೋರ್ಟ್ ತೀರ್ಪು ಆಗಿದೆಯೋ ಅಂಥಾ ಅಧಿಕಾರಿಯನ್ನು ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಮಾಡಿದ್ದಾರೆ. ಅದು ಸರಿಯಲ್ಲ. ಯಾರು ಅಲ್ಲಿ ಯೋಗ್ಯರು, ತಜ್ಞರು, ಅನುಭವಪಡೆದಂತಹವರೂ ಇದ್ದಾರೆಯೋ ಅಂಥವರನ್ನು ಇಲಾಖೆಯ ಮುಖ್ಯಾಧಿಕಾರಿಗಳನ್ನಾಗಿ ಹಾಕಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಫಾರೆಸ್ಟ್ ಇಲಾಖೆಯ ವಿಚಾರವನ್ನು ಹೇಳುವುದಾದರೆ ನಮ್ಮಲ್ಲಿ ಫಾರೆಸ್ಟ್ ಇಲ್ಲದಂತಾಗಿದೆ. ನಮ್ಮ ರಾಜ್ಯದಲ್ಲಿ ಒಬ್ಬ ಹರಿಜನರಿಗೂ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ ಹುದ್ದೆಯನ್ನು ಕೊಟ್ಟಿಲ್ಲ. ಹರಿಜನರಿಗೆ ಬರೀ ಗುಮಾಸ್ತರ ಹುದ್ದೆಗಳನ್ನು ಮಾತ್ರ ಕೊಟ್ಟಿದ್ದಾರೆ. ಆದ್ದರಿಂದ ಹರಿಜನರಿಗೂ ಈ ಇಲಾಖೆಯಲ್ಲಿ ಗೆಜಿಟೆಡ್ ಹುದ್ದೆಗಳನ್ನು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅದಲ್ಲದೆ ಈ ಅರಣ್ಯ ಇಲಾಖೆಯಲ್ಲಿ ಎಲ್ಲಾ ರೆಗ್ಯುಲರ್ ಕ್ಷೇತ್ರದಲ್ಲಿಯೂ ಹರಿಜನರಿಗೆ ಹುದ್ದೆಗಳನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ಮೀನುಗಾರಿಕೆ ಇಲಾಖೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಈ ಇಲಾಖೆಯಲ್ಲಿ ತಾಲ್ಲೂಕು ಮಟ್ಟದಲ್ಲಿ ಹರಿಜನರಿಗೆ ಹೆಚ್ಚಿನ ಪ್ರಾತಿನಿಧ್ಯವನ್ನು ಕೊಡಬೇಕು. ಇಷ್ಟು ಹೇಳಿ ಇವೊತ್ತು ಈ ಸಭೆಯ ಮುಂದಿಟ್ಟಿರುವ ಬೇಡಿಕೆಗಳನ್ನು ಪುಷ್ಟೀಕರಿಸಿ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಮಾನ್ಯ ಅಧ್ಯಕ್ಷರೆ, ಈ ಡಿಮ್ಯಾಂಡ್ ಬಗ್ಗೆ ಕೆಲವು ಸಲಹೆಗಳನ್ನು ಕೊಡುತ್ತೇನೆ. ನನ್ನ ಮಿತ್ರರು ಕನ್ನಡದಲ್ಲಿಯೇ ಮಾತನಾಡು ಎಂದು ಹೇಳುವುದರಿಂದ ನಾನು ಕನ್ನಡದಲ್ಲಿಯೇ ಮಾತನಾಡಲು ಪ್ರಯತ್ನ ಮಾಡುತ್ತೇನೆ. ನಮ್ಮ ಕಡೆ ಈ ದನಗಳಿಗೆ ಎರಡು ರೋಗಗಳು ಬರುತ್ತವೆ. ಒಂದು ಬಾಯಿ ರೋಗ ಮತ್ತು ಇನ್ನೊಂದು ಕಾಲು ರೋಗ. ಅವಕ್ಕೆ ಡಾಕ್ಟರುಗಳು ಬಂದು ಒಂದು ಇಂಜೆಕ್ಷನ್ ಕೊಡುತ್ತಾರೆ. ಆದರೆ

(ಶ್ರೀ ಎ. ಎನ್. ಪಾಟೀಲ್)

ಅದನ್ನು ಸರಿಯಾದ ಸಮಯಕ್ಕೆ ಕೊಡದಿರುವುದರಿಂದ ಅದರಿಂದ ಏನೂ ಫಲ ಬರುವುದಿಲ್ಲ. ಪ್ರಾಣಿಯ ಸ್ಕೆಲಟನ್ ಮಾತ್ರ ಸಿಗುತ್ತದೆ. ಒಬ್ಬ ಮನುಷ್ಯ ಸತ್ತರೆ ಅವನಿಗೆ ಇಷ್ಟು ವರ್ತ್ ಇದೆಯೆಂದು ವ್ಯಾಲ್ಯು ಇಲ್ಲ. ಆದರೆ ಪ್ರಾಣಿಗಳು ಸತ್ತರೆ ಅದಕ್ಕೆ ಇಷ್ಟು ವ್ಯಾಲ್ಯು ಇದೆಯೆಂದು ಹೇಳಬಹುದು. ಇಂಥ ಹಸುಗಳ ಪ್ರಾಣ ಏನಿದೆ, ಇದು ರೈತನಿಗೆ ಮತ್ತು ಹಳ್ಳಿಗಳಲ್ಲಿರತಕ್ಕ ಕಾರ್ಮಿಕನಿಗೆ ಒಂದು ದೊಡ್ಡ ಭೂಮಿ ಇದ್ದ ಹಾಗೆ ಇರುತ್ತದೆ. ಹಿಂದಿನ ಸರ್ಕಾರದವರು ಈ ಬಗ್ಗೆ ಬರೇ ಲಪ್ ಸಿಂಪತಿಯನ್ನು ಹೇಳಿಕೊಂಡು ಬಂದಿರುತ್ತಾರೆ ಅಲ್ಲದೆ ಯಾವ ಖಚಿತವಾದ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಬಂದಿಲ್ಲ. ಬರೇ ಭಾಷಣಗಳನ್ನು ಬಿಗಿಯುತ್ತಿದ್ದರಲ್ಲದೆ ಕೆಲಸ ಗಳನ್ನು ಹೆಚ್ಚು ಮಾಡಿಲ್ಲ. ಆದ್ದರಿಂದ ಈಗಿನ ಸರ್ಕಾರದವರು ಇದರ ಕಡೆ ಹೆಚ್ಚಿನ ಲಕ್ಷ ಕೊಡ ಬೇಕು. ನಮ್ಮ ಅರಣ್ಯ ಮಂತ್ರಿಯವರು ಹೆಚ್ಚಿನ ಲಕ್ಷ ಇದರ ಬಗ್ಗೆ ಕೊಡುತ್ತಾರೆಂದು ನಾನು ನಂಬಿದ್ದೇನೆ. ಕಾರಣ ಅವರು ರೈತಾಪಿ ಜನರ ವರ್ಗದಿಂದ ಬಂದಿದ್ದಾರೆ. ಅವರು ಈ ದೆಸೆಯಲ್ಲಿ ದಿಟ್ಟತನ ಹೆಜ್ಜೆ ಎಲ್ಲೆಲ್ಲಿ ಈ ರೋಗಗಳು ಬಂದಿವೆ, ಅಲ್ಲಿ ಮೂರು ದಿವಸದೊಳಗೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ತೆಗೆದುಕೊಳ್ಳದಿದ್ದರೆ, ಅಂಥವರ ಮೇಲೆ ಉಗ್ರವಾದ ಕ್ರಮವನ್ನು ತೆಗೆದು ಕೊಳ್ಳಬೇಕಾಗಿದೆ. ಬೇಕಾದರೆ ಅಂಥ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ, ಇಲ್ಲವೇ ಜನರಿಂದ ಛೀಮಾರಿ ಮಾಡಿಸಿ. ಏಕೆಂದರೆ ಇದರಿಂದ ನಮ್ಮ ರೈತರ ಜೀವನವೇ ಹಾಳಾಗಿ ಹೋಗುತ್ತದೆ. ಒಬ್ಬ ರೈತನು ಒಂದು ಹಸು ತರಬೇಕಾದರೆ ಅವನು ಎಷ್ಟೋ ಸಾಲ ಮಾಡಿರುತ್ತಾನೆ. ಆ ಸಾಲವನ್ನು ಆತನ ಮಗ ಕೂಡ ತೀರಿಸಬೇಕಾಗುತ್ತದೆ ಮತ್ತು ಆತನು ಅದಕ್ಕೆ ಬಡ್ಡಿ ಕೊಟ್ಟುಕೊಂಡು ಬರ ಬೇಕಾಗಿದೆ. ಇಷ್ಟರಲ್ಲೇ ರೈತನ ಮತ್ತು ಆತನ ಮಗನ ಆಯುಷ್ಯ ತೀರಿಹೋಗುತ್ತದೆ. ಆದ್ದರಿಂದ ಇಂತಹ ಅಮಾನುಷ ಕೃತ್ಯ ನಡೆಯಬಾರದು ಎಂದು ಹೇಳುತ್ತೇನೆ.

ಇವೊತ್ತಿನ ದಿವಸ ಡೈರಿ ಹಾಲಿನಲ್ಲಿ ಹುಳ ಬಿದ್ದಿದೆ ಎಂದು ಪ್ರಸ್ತಾಪ ಮಾಡಿದಾಗ ತಾವು ಸ್ವತಃ ಅದನ್ನು ನೋಡಿಕೊಂಡು ಬರುವುದಕ್ಕೆ ಹೋಗಿದ್ದೀರಿ. ಅಂಥ ನಡವಳಿಕೆಯನ್ನು ತಾವು ಇಟ್ಟು ಕೊಂಡಿದ್ದೀರಿ. ಅದೇ ರೀತಿ ಎಲ್ಲಾ ಮಂತ್ರಿಗಳು ಮಾಡುತ್ತಾರೆಂದು ನಾನು ಆಶಿಸುತ್ತೇನೆ. ಇವತ್ತು ಪ್ರಾಣಿಗಳಿಗೆ ಬರುವಂತಹ ರೋಗಗಳಿಗೆ ಪ್ರೈವೇಟ್ ಪ್ರಾಕ್ಟಿಶನರ್ ಹತ್ತಿರ ಹೋದರೆ ಇಂಜೆಕ್ಷನ್ ಸಿಗುತ್ತದೆ. ಆದರೆ ಸರ್ಕಾರಿ ಆಸ್ಪತ್ರೆಗೆ ಹೋದರೆ 'ನೋ ಸ್ಟಾಕ್' ಎಂದು ಹೇಳು ತ್ತಿದ್ದಾರೆ. ಆದರೆ ಒಂದು 10—15 ರೂಪಾಯಿ ನೋಟು ಬಿಚ್ಚಿದರೆ ಆ ಪ್ರಾಣಿ ಉಳಿಯುತ್ತದೆ. ಈ ರೀತಿ ಮಾಡುವವರನ್ನು ರಾಕ್ಷಸರೆಂದು ಕರೆಯಲೇ, ಅಥವಾ ಕಟುಕರೆಂದು ಕರೆಯಬೇಕೊ? ಇವತ್ತು ಎಂ.ಎಲ್.ಎ. ರೆಪ್ರಸೆಂಟೇಷನ್ ಮಾಡಿದರೆ, ಅದು ರೈಟಿಂಗ್‌ನಲ್ಲಿ ಬಂದಿಲ್ಲವೆಂದು ಹೇಳುತ್ತಿದ್ದಾರೆ. ನಿಮ್ಮ ಕಿವಿ ಕೇಳುವುದನ್ನು ಒಪ್ಪಿಕೊಳ್ಳುವುದಿಲ್ಲ; ಕಣ್ಣು ಕಾಣುವುದನ್ನು ನೋಡುತ್ತಾ ಇಲ್ಲ. ಆದ್ದರಿಂದ ನಿಮ್ಮ ಕಣ್ಣಿಂದಲಾದರೂ ಸ್ವಲ್ಪ ಕಣ್ಣೀರ ಹನಿ ಸುರಿಯುವಂತಾಗಿ ಈ ಪ್ರಾಣಿಗಳ ರಕ್ಷಣೆಯಾಗಲಿ.

ಇನ್ನು ಕೋಳಿಗಳಿಗೆ ಒಂದು ರೋಗ ಬರುತ್ತದೆ. ಅದು ಬಂದರೆ ಬಾಕಿ ಉಳಿದ ಗೂಡಿನಲ್ಲಿ ರತಕ್ಕ ಕೋಳಿಗಳು ಸಹ ಉಳಿಯುವುದಿಲ್ಲ. ಅದರ ಬಗ್ಗೆ ತಾವು ಏನು ಮಾಡಿದ್ದೀರಿ? ಅದರ ವೈರಸ್ ಏನೆಂಬುದರ ಬಗ್ಗೆ ವಿಚಾರಣೆ ಮಾಡಿದ್ದೀರಾ? ಇದಕ್ಕೆ ತಜ್ಞರನ್ನು ನೇಮಿಸಿ ಬಾಕಿ ಉಳಿದ ಕೋಳಿಗಳಾದರೂ ಬದುಕುವಂತೆ ಮಾಡುವ ಏನಾದರೂ ವ್ಯವಸ್ಥೆಯನ್ನು ಮಾಡಿದ್ದೀರಾ ಎಂದು ಕೇಳುತ್ತೇನೆ. ಇವತ್ತು ರಿಸರ್ಚ್ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ ರಿಸರ್ಚ್ ಮಾಡುತ್ತಾರೆ; ಅದರ ರಿಸಲ್ಟ್ ಇಲ್ಲವೇ ಇಲ್ಲ. ಕುತೂಹಲದಿಂದ ಯಾವುದಾದರೂ ಒಂದು ರೋಗ ಬಂದರೆ ಅದರ ಸ್ಯಾಂಪಲುಗಳನ್ನು ರಿಸರ್ಚಿಗೆಂದು ತೆಗೆದುಕೊಂಡು ಹೋಗುತ್ತಾರೆ. ಆದರೆ ಅದರ ರಿಸಲ್ಟ್ ಎಲ್ಲಿ ಹೋಯಿತು ಏನಾಯಿತು ಎಂದು ಗೊತ್ತಿಲ್ಲ. ಇದರ ಬಗ್ಗೆ ಮಾನ್ಯ ಹಮೀದ್‌ಶಾರವರು ಒಂದು ಉದಾಹರಣೆಯನ್ನು ಕೊಟ್ಟು ಹೇಳಿದರು. ಹಸುವಿಗೆ ಯಾವುದೋ ಒಂದು ರೋಗ ಬಂತು. ಸ್ಯಾಂಪಲ್ ಸಲುವಾಗಿ ಅದರ ಎಂಜಲು ಇತ್ಯಾದಿಗಳನ್ನು ತೆಗೆದುಕೊಂಡು ಹೋದರು. ಆದರೆ ಹಸು ಮಾತ್ರ ಹೋಯಿತು; ಇದರ ರಿಸಲ್ಟ್ ಇಲ್ಲ, ಏನೂ ಇಲ್ಲ. ಇದಕ್ಕೆ ಕಾರಣವಾದರೂ ಏನು? ಅಧಿ ಕಾರಿಗಳಿಗೆ ನೀವು ಪ್ರೋತ್ಸಾಹ ಕೊಡುವುದಿಲ್ಲವೇ? ಅಥವಾ ಅಧಿಕಾರಿಗಳಿಗೆ ಪ್ರೊಮೋಷನ್ಸ್ ಸಿಗಬೇಕಾಗಿದ್ದು ಸಿಗಲಿಲ್ಲವೆಂದು ಇಂಟರೆಸ್ಟ್ ಇಲ್ಲವೇ? ಒಮ್ಮೆ ಬೆಂಗಳೂರು ಡೈರಿಯ ಕೆಲವು ಅಧಿಕಾರಿಗಳ ಹತ್ತಿರ ''ಏನು ಸ್ವಾಮಿ ಹಾಲಿನಲ್ಲಿ ಹುಳು ಸಿಕ್ಕಿದೆಯಂತಲ್ಲ'' ಎಂದು ಕೇಳಿದೆ. ಇದಕ್ಕೆ ಒಂದು ಕನ್ಸಲ್ಟೇಟೀವ್ ಕಮಿಟಿ ಮಾಡಿ, ಅದರಲ್ಲಿ ನಾನ್ ಅಫಿಷಿಯಲ್ಸ್ ಯಾರಾದರೂ ಇದರ ಬಗ್ಗೆ ಅನುಭವ ಇದ್ದರೆ, ಅಂಥವರ ಅಭಿಪ್ರಾಯಗಳನ್ನು ತೆಗೆದುಕೊಂಡು ಇಂತಹ ಕೆಲಸಗಳನ್ನು ಮಾಡಿದರೆ ಅದರಿಂದ ಬಹಳ ಸುಧಾರಣೆ ಮಾಡಬಹುದು ಎಂದು ಹೇಳುತ್ತಿದ್ದರು. ನ್ಯಾಯವಾದ

ಟೀಕೆಗಳನ್ನು ಮಾಡಿದರೆ ಮನಸ್ಸಿಗೆ ವ್ಯಥೆಯಾಗುವುದಿಲ್ಲ. ಆದರೆ ಇಲ್ಲದ ಸಲ್ಲದ ಟೀಕೆಗಳನ್ನು ಮಾಡಿದರೆ ಮನಸ್ಸಿಗೆ ಸ್ವಲ್ಪ ನೋವಾಗುತ್ತದೆ ಎಂದು ಸಹ ಆ ಅಧಿಕಾರಿಗಳು ಹೇಳಿದರು. ಆದ್ದರಿಂದ ನಾನಾದರೂ ಕೇಳುತ್ತೇನೆ ಈ ರೀತಿ ಹುಳುಗಳು ಬೀಳದಂತೆ ಏನಾದರೂ ಪ್ರೂಫ್‌ಪ್ರೂಫ್ ಸಿಸ್ಟಂ ಇಟ್ಟುಕೊಂಡಿದ್ದೀರಾ ? ಅದಲ್ಲದೆ ಬೆಂಗಳೂರು ಡ್ಯೆರಿಗೆ ಹುಳು ಬಿದ್ದದನ್ನು ಪ್ರಚಾರ ಮಾಡುವ ಶಕ್ತಿಗಳು ಬೇರೆ ಇಲ್ಲವೇ ? ಈ ಸಬೋಟೇಜ್ ಮಾಡುವ ಶಕ್ತಿಗಳು ಏನಿವೆ, ಅವುಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ? ಅಂಥ ಶಕ್ತಿಗಳು ಇವತ್ತು ಬೆಂಗಳೂರಿನಲ್ಲಿ 6—6 ಹಂತದ ಹೋಟೇಲುಗಳನ್ನು ಕಟ್ಟಿಸುತ್ತಿದ್ದಾರೆ. ಅಂಥವರು ಮಿಲ್ಕ್ ವಾಟರ್ ಮಾರಿ ನಿಮ್ಮ ಡ್ಯೆರಿಗೆ ಕೆಟ್ಟ ಹೆಸರು ಇವತ್ತು ತರುತ್ತಿದ್ದಾರೆ. ನಿಮ್ಮ ಬೆಂಗಳೂರು ಡ್ಯೆರಿ ಹಾಲು ತಂದು ಕೌಂಟರ್‌ಫೀಟ್ ಮಾಡಿ ಸೀಲ್ ಹೊಡೆದು ಮಾಡುತ್ತಿದ್ದಾರೆ. ಇವತ್ತು ಬರೀ ಪ್ರೈವೇಟ್ ಡ್ಯೆರಿ ಮಾಡಿಕೊಂಡವರು ಬಹಳ ಮುಂದುವರಿಯುತ್ತಿದ್ದಾರೆ. ಆದರೆ ನಿಮ್ಮ ಡ್ಯೆರಿಯು ಮಾತ್ರ ಮುಂದುವರಿಯುವುದೇ ಇಲ್ಲ. ಇದಕ್ಕೆ ಕಾರಣವೇನು ? ಬರೀ ಲೆಕ್ಕ ಮಾತ್ರ ಜಾಸ್ತಿಯಾಗುತ್ತಿದೆಯೆಂದು ಕಾಣುತ್ತದೆ. ಇವತ್ತು ಹಾಲಿನಲ್ಲಿ ಬೇರೆ ಕಡೆಗಳಲ್ಲಿ 60ಕ್ಕಿಂತಲೂ ಹೆಚ್ಚು ಐಟಮುಗಳನ್ನು ತಯಾರಿಸುತ್ತಿದ್ದಾರೆ. ಆದರೆ ನಿಮ್ಮ ಡ್ಯೆರಿಯಲ್ಲಿ ಸಿಗುವುದು ಒಂದು ಕರ್ಡ್ಸ್, ಇನ್ನೊಂದು ತುಪ್ಪ. ಆದರೆ ಆ ತುಪ್ಪಕ್ಕೆ ತುಪ್ಪದ ವಾಸನೆ ಕೂಡ ಇಲ್ಲ. ಇನ್ನು ಬೇರೆ ಯಾವುದೋ ಕೆಸಿನ್ ತಯಾರು ಮಾಡುತ್ತಿದ್ದೀರಿ ಎಂದು ಕಾಣುತ್ತದೆ. ಆ ಒಂದು ಕೇಸಿನ್ ಬಗ್ಗೆ ಬೇಕಾದಷ್ಟು ಚರ್ಚೆಯಾಗಿದೆ. ಫ್ಲೇವರ್ಡ್ ಮಿಲ್ಕ್ ಕೊಡುತ್ತಿದ್ದಾರೆ. ಅದಕ್ಕೆ ಎಸೆನ್ಸ್ ಸೇರಿಸುತ್ತಿದ್ದಾರೆ. ಇದರಲ್ಲಿ ಸ್ವಲ್ಪಮಟ್ಟಿಗೆ ಸಂಶಯ ಬರುತ್ತಿದೆ. ಕೆಟ್ಟ ವಾಸನೆ ಇರತಕ್ಕ ಹಾಲನ್ನು ಕೊಡುವುದು ಸರಿಯಲ್ಲ.

ಇನ್ನು ಅರಣ್ಯ ವಿಚಾರ. ನಾನು ಬಂದಿರುವ ಭಾಗ ಹೈದರಾಬಾದ್ ಕರ್ಣಾಟಕದಲ್ಲಿ ಪಾರ್ಸಾ ಜಹಗೀರ್ ಎಂಬ ಒಂದು ಅರಣ್ಯ ಪ್ರದೇಶ ಇದೆ. ಅಲ್ಲಿ 21 ಅಡಿಗಳ ಒಬ್ಬ ನವಾಬ 101 ಹಳ್ಳಿಗಳಿಗೆ ಒಬ್ಬ ಜಹಗೀರ್‌ದಾರ. ಮಹಾರಾಷ್ಟ್ರ ಮುಖ್ಯಮಂತ್ರಿ ಮಾನ್ಯ ಶ್ರೀ ವಿ. ಪಿ. ನಾಯಿಕ್ ಅವರ ಕಾಲದಲ್ಲಿ ಅಂತಹ ಒಬ್ಬ ನವಾಬ ಈಗಲೂ ಹುಲಿ ಬೇಟೆಗೆ ಬಿಲ್ಲನ್ನು ತೆಗೆದುಕೊಂಡು ಹೋಗತಕ್ಕ ಒಬ್ಬ ನವಾಬನಾಗಿದ್ದಾನೆ. ಹಿಂದಿನ ನವಾಬರು ಇಂತಹ ಕೆಲಸಗಳನ್ನು, ಮಾಡಿದ್ದಾರೆ. ಬಿದರ್ ಜಿಲ್ಲೆಯಲ್ಲಿ ಈಗ 9 ತರಹ ನವಾಬರು ಇದ್ದಾರೆ. ಹುಲಿಯ ಬೇಟೆ ಆಡುವ ಚಟ ಇವರಿಗೆ ಇದೆ. ಗೇಮ್ ಸ್ಯಾಂಕ್ಚುಯರಿ ಮಾಡಿದ್ದೀರಿ. ರೈತರು ಬೆಳೆಯುತಕ್ಕ ಭೂಮಿಗೂ ರಿಜರ್ವ್ ಫಾರೆಸ್ಟ್‌ಗೂ ಡಿಮಾರ್ಕೇಷನ್ ಈಗಲೂ ಕಾಣುತ್ತಿದ್ದೇವೆ. ಆದರೆ ಅದು ಅಲ್ಲಿನ ನವಾಬರ ಕಣ್ಣಿಗೆ ಬೀಳುವಂತಿಲ್ಲ. ಅವರು ಮಾಡತಕ್ಕ ಅನ್ಯಾಯ ಬಾಯ್ದೆರೆದರೆ ನೆಲಕ್ಕೆ ಹಾಕಿ ಅಪ್ಪಳಿಸುತ್ತಾರೆ. ಇವತ್ತು ನಮ್ಮಲ್ಲಿ ನಾಮಿನಲ್ ಫಾರೆಸ್ಟ್ ಲ್ಯಾಂಡ್ 25 ಸಾವಿರ ಎಕರೆಗಳಿಗಿಂತ ಹೆಚ್ಚಾಗಿದೆ. ನಮ್ಮಲ್ಲಿ ಎಷ್ಟೆಷ್ಟು ನಾಮಿನಲ್ ಫಾರೆಸ್ಟ್ ಲ್ಯಾಂಡ್ ಇದೆಯೋ ಅದನ್ನು ರೈತರು ಉಳುತ್ತಿದ್ದಾರೆ. 1948 ರಲ್ಲಿ ಈ ಲ್ಯಾಂಡಿನ ಸ್ವಲ್ಪ ಸ್ವಲ್ಪ ಭಾಗವನ್ನು ಪ್ರತಿಯೊಬ್ಬ ರೈತನೂ ಹೊಡೆದುಕೊಂಡಿದ್ದಾನೆ. ಎಲ್ಲಿ ರೈತ ಉಳುಮೆಮಾಡಿ ಕೊಂಡಿದ್ದಾನೋ ಎಲ್ಲಿ ಅವನು ಬೆಳೆಯುತ್ತಾನೋ ಅದು ಬರೀ ನಾಮಿನಲ್ ಫಾರೆಸ್ಟ್ ಲ್ಯಾಂಡ್‌ನಿಂದ ಎಂಬುದಾಗಿ ಹೇಳಬಹುದು. [illegible]ರಿಂದಲೇ ರೈತ ಸುಮಾರು ನಾಲ್ಕೈದು ವರ್ಷಗಳಿಂದ ಬೆಳೆ ಕಾಣುತ್ತಿದ್ದಾನೆ. ಶಿವಾ ಜಮಾಬಂ[illegible]ಡೆಗಳಲ್ಲಿ ರೈತ ಉಳುತ್ತಿದ್ದಾನೆ, ಅಂತಹ ಜಮೀನುಗಳಿಂದ ಅವರನ್ನು ಒಕ್ಕಲೆಬ್ಬಿಸ[illegible]ಗ ಕ್ರಮ ತೆಗೆದುಕೊಳ್ಳುತ್ತಾರೋ ಗೊತ್ತಿಲ್ಲ. ಅದಕ್ಕೆ ಮೊದಲು ಸಾಗುವಳಿದಾರರೇ ಒಂ[illegible]ನ್ನ ಕಟ್ಟಿದ್ದಾರೆ. ಆದ್ದರಿಂದ With a single stroke of pen undo the justice tha[illegible]s been done so far ಎಂದು ಹೇಳುತ್ತೇನೆ.

ಕೊನೆಯದಾಗಿ, [illegible]ದೆರಡು ಮೂರು ವಿಷಯಗಳನ್ನು ಮಾತನಾಡಿ ನನ್ನ ಮಾತನ್ನು ಮುಗಿಸುತ್ತೇನೆ. ಉತ್ತರ ಕನ[illegible]ಟಕ ಜಿಲ್ಲೆಯಲ್ಲಿ ಫಾರೆಸ್ಟ್ ಪ್ರಿವಿಲೇಜ್ ಎಂದು ಇದೆ. ಇದರಲ್ಲಿ ಒಬ್ಬ ಕಾರ್ಮಿಕ ರೈತ ಕಾಡಿನ[illegible] ಸೌದೆ ತೆಗೆದುಕೊಂಡು ಬರುತ್ತಾನೆ. ಅಂತವನಿಗೆ ಮಿನಿಮಂ ಸಬ್‌ಸಿಸ್ಟೆನ್ಸ್ ಲೆವಲ್‌ಗೆ ಎ[illegible]ಬೇಕೋ ಅಷ್ಟು ಮಾತ್ರ ಬಿಟ್ಟುಬಿಡಿ. ನಾಗರಿಕರಾಗಿ ಹುಟ್ಟಿರುವಾಗ ಜೀವನ ಮಟ್ಟ ಸರಿಯಾಗು[illegible]ರೆಗೆ ಆತನಿಗೆ ಅನ್ನ ಕೊಡದಿದ್ದರೆ ಹೇಗೆ? ತನ್ನ ಅನ್ನ ಸಂಪಾದನೆ ಮಾಡಿಕೊಳ್ಳಲು ಆತನು ಕ[illegible]ಯ ಪಕ್ಕ ಬೆಟ್ಟದಿಂದ ಸೌದೆ ಕಡಿದು ತೆಗೆದುಕೊಂಡು ಬರುತ್ತಾನೆ. ಅದರಿಂದ ಜೀವನಮಾಡು[illegible]ನೆ. ಅಂತಹವನಿಗೆ ನೀವು ಇನ್ನು ಏನೂ ಮಾಡಬೇಡಿ ಸ್ವಲ್ಪ ಜಮೀನನ್ನು ಕೊಡಿ. ಈಗ ನ[illegible]ಲ್ಲಿ 6 ಲಕ್ಷ 12 ಸಾವಿರ ಎಕರೆಗಳಷ್ಟು ಫಾರೆಸ್ಟ್ ಜಮೀನು ಇದೆ. ಇದನ್ನು ಈ ವರ್ಷ 15ನೇ ಆ[illegible]ನಿಂದ ಮುಂದಿನ ವರ್ಷ 15ನೇ ಆಗಸ್ಟ್ ಒಳಗೆ ಭೂಹೀನ ರೈತರಿಗೆ ಹಂಚುವಲುವಾಗಿ [illegible]ದು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಅದು ವ್ಯವಸಾಯಕ್ಕೆ ಯೋಗ್ಯವಾದುದಲ್ಲವೆಂದು ಹೇಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಫಾರೆಸ್ಟಿಗೆ ಅನ್‌ಫಿಟ್ ಎಂದು ಹೋಲ್ಡ್ ಮಾಡಿದರೆ, ಅದು ಅಗ್ರಿಕಲ್ಚರ್‌ಗೆ ಅನ್‌ಫಿಟ್ ಆಗುತ್ತದೆಯೋ ?

ಶ್ರೀ ವಿ. ಎನ್. ಪಾಟೀಲ್.—ಅಂಥದ್ದ ಉದಾಹರಣೆಯನ್ನು ಬೇಕಾದರೆ ತಮಗೆ ಕೊಡುತ್ತೇನೆ. ಅಲ್ಲಿನ ಹೊಲಗಳಲ್ಲಿ ಸಜ್ಜೆ, ನವಣೆ, ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಅದೇ ಬದರೆ ಜಿಲ್ಲೆಯಲ್ಲಿ ಏನನ್ನೂ ಮಾಡುವುದಕ್ಕಾಗುವುದಿಲ್ಲ.

ಕೊನೆಯದಾಗಿ, 18 ಲಕ್ಷ ರೂಪಾಯಿಗಳನ್ನು ಮೂರನೆಯ ಪಂಚವಾರ್ಷಿಕ ಯೋಜನೆಯ ಕೆಳಗೆ ರಿಹ್ಯಾಬಿಲಿಟೇಷನ್ ಮಾಡುವುದಕ್ಕೋಸ್ಕರ ಏನು ಸರ್ಕಾರದಲ್ಲಿಟ್ಟಿದ್ದಾರೋ ಅದನ್ನು ಲ್ಯಾಂಡ್‌ಲೆಸ್ ಜನರಿಗೆ ಕೊಡದೇ ಇರುವುದರಿಂದ, ಅದು ಈಗ ಲ್ಯಾಪ್ಸ್ ಆಗಿದೆ. ಆದರೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ರೀತಿಯಾಗಿ ಈ ಬಾಬಿನಲ್ಲಿ ಲ್ಯಾಪ್ಸ್ ಆಗುವುದಕ್ಕೆ ಅವಕಾಶವನ್ನು ಕೊಡಬಾರದೆಂದು ನಾನು ಕೇಳಿಕೊಂಡು, ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಹೆಚ್ಚು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಅಂದಾನಪ್ಪ (ಹಡಗಲಿ).—ಸನ್ಮಾನ್ಯ ಸಭಾಪತಿಗಳೇ, ಈ ದಿನದ ವ್ಯವಸಾಯ ಖಾತೆಯ ಬೇಡಿಕೆಯನ್ನು ಬೆಂಬಲಿಸುತ್ತಾ, ಮುಖ್ಯವಾದ ಎರಡು ಮೂರು ವಿಚಾರಗಳಲ್ಲಿ ಮಾತ್ರ ನಾನು ಕೆಲವು ಸಲಹೆಗಳನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

ಈಗ ಈ ವ್ಯಸಾಯಯೋದ್ಯಮ ಏನಿದೆಯೋ ಇದು ನಮ್ಮ ಹಿಂದೂಸ್ಥಾನದಲ್ಲಿ ಸುಮಾರು ಸೇಕಡ 75 ರಿಂದ ಸೇಕಡ 80 ರಷ್ಟು ಜನಸಂಖ್ಯೆಯ ಮೇಲೆ ಒಂದು ಆಧಾರ ಪಡೆದಿದೆ. ಆದರೆ ನಾವು ಇದಕ್ಕೆ ಕೊಡತಕ್ಕ ಪ್ರಾಮುಖ್ಯತೆ ಮಾತ್ರ ಅದಕ್ಕೆ ಹೊಂದಿಕೊಂಡಿಲ್ಲ. ಸೇಕಡ 80 ರಷ್ಟು ಈ ಜನಗಳ ಪೈಕಿ ಸೇಕಡ 20 ಭಾಗದಷ್ಟು ಜನರಿಗೆ ಮಾತ್ರ ಈಗ ನಾವು ಪ್ರಾಮುಖ್ಯತೆ ಕೊಡುತ್ತಿದ್ದೇವೋ ಏನೋ ಎಂಬುದನ್ನು ಅಂಕಿ ಸಂಖ್ಯೆಗಳಿಂದ ನೋಡಬೇಕಾಗಿದೆ. ಆದುದರಿಂದ ಈಗ ಮಂತ್ರಿಗಳೇನು ತಮ್ಮ ಒಂದು ಬೇಡಿಕೆಯನ್ನು ಇಲ್ಲಿ ಇಟ್ಟಿದ್ದಾರೆ ಮತ್ತು ಏನು ಅದಕ್ಕೆ ಈ ದಿವಸ ಒಂದು ಹಣವನ್ನು ಒದಗಿಸಿದ್ದಾರೆ ಅದು ಬಹಳ ಕಡಿಮೆ ಎಂಬುದಾಗಿ ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ದಿವಸ ಯಾವ ಜನರು ಈ ಉದ್ದಿಮೆಯಲ್ಲಿ ತೊಡಗಿದ್ದಾರೆ ಅವರು ಶೇ 80 ರಷ್ಟು ಇದ್ದಾರೆ ವೊಟ್ಟ ಮೊದಲನೆಯದಾಗಿ ಇವರಲ್ಲಿ ಒಂದು ಆರ್ಗನೈಜೇಷನ್ ಶಕ್ತಿ ಇಲ್ಲ. ರೈತರಿಗೆ ಅವರು ತಮ್ಮಲ್ಲಿ ಸರಿಯಾಗಿ ಒಂದು ಆರ್ಗನೈಜಿಂಗ್ ಶಕ್ತಿಯನ್ನು ಬೆಳೆಸಿಕೊಳ್ಳುವುದಕ್ಕೆ ಈ ಸರ್ಕಾರದವರು ಮಂಡಿಸಿರತಕ್ಕ ಬಡ್ಜೆಟ್ಟಿನಲ್ಲಿ ಯಾವ ಒಂದು ಪ್ರಾವಿಜನ್ನನ್ನೂ ಮಾಡಿಲ್ಲ. ಆದರೆ ಇರುವುದರಲ್ಲೇ ಅವರು ಅಡ್‌ಜಸ್ಟ್ ಮಾಡಿಕೊಂಡು ಒಂದು ಯೋಜನೆಯನ್ನು ರೂಪಿಸಿ ಕೊಳ್ಳಬೇಕಾಗಿದೆ.

4–00 P.M.

ಇನ್ನು ನಮ್ಮಲ್ಲಿ ಈಗ ಇರತಕ್ಕ ನೀರಾವರಿ ಪ್ರದೇಶ ಶೇ. 12 ರಿಂದ 15 ಇರಬಹುದು. ನಮ್ಮಲ್ಲಿ ಸಾಧ್ಯವಿರತಕ್ಕ ಎಲ್ಲಾ ಸೋರ್ಸುಗಳನ್ನೂ ಟ್ಯಾಪ್‌ಮಾಡಿದಾಗ ಅದು ಶೇ. 25ಕ್ಕೆ ಇಲ್ಲವೇ 30 ಕ್ಕೆ ಹೋಗಬಹುದು. ಅಂದರೆ ಅಲ್ಲಿಗೆ ನಮ್ಮ ರಾಜ್ಯದಲ್ಲಿ ಇನ್ನು ನೀರಾವರಿ ಅನುಕೂಲಗಳಿಲ್ಲದಂಥ ಭೂಮಿ ಅಷ್ಟೂ ಆಕಾಶದಿಂದ ಬೀಳತಕ್ಕ ಮಳೆಯನ್ನೇ ಅವಲಂಬಿಸಿರುತ್ತದೆ. ಹೀಗೆ ನಮ್ಮಲ್ಲಿ ಅಗಾಧ ರೀತಿಯಲ್ಲಿ ವ್ಯವಸಾಯ ಮಾಡತಕ್ಕ ಭೂಮಿಯ ಬಗ್ಗೆ ಅಂದರೆ ಖುಷ್ಕಿ ಬೆಳೆಯ ವಿಚಾರದಲ್ಲಿ ಸಾಕಷ್ಟು ಗಮನವನ್ನು ಕೊಡುತ್ತಿಲ್ಲ. ಅದಕ್ಕೆ ಎಷ್ಟು ಪ್ರಾಮುಖ್ಯತೆ ಕೊಡಬೇಕೋ ಅಷ್ಟನ್ನು ಕೊಡುತ್ತಾ ಇಲ್ಲ. ದೇಶದಲ್ಲಿ ನಮ್ಮ ಆಹಾರದ ಪರಿಸ್ಥಿತಿ ಸುಧಾರಿಸಿ ಈ ಆಹಾರಾಭಾವ ಹೋಗಬೇಕಾಗಿದ್ದರೆ ನಾವು ಖುಷ್ಕಿ ಬೆಳೆಗೆ ಸಾಕಷ್ಟು ಪ್ರೋತ್ಸಾಹವನ್ನು ನೀಡಬೇಕಾದ್ದು ಅವಶ್ಯಕ. ಈಗತಾನೆ ನಾನು ಕೇಳಿದ್ದರಲ್ಲಿ ಕೇಂದ್ರ ಸರ್ಕಾರದವರು ರಾಜ್ಯದ ಕೆಲವು ಭಾಗಗಳಲ್ಲಿ ಡ್ರೈ ಫಾರ್ಮಿಂಗುಗಳನ್ನು ಮಾಡುವುದಕ್ಕೆ ಒಂದು ಸ್ಕೀಮನ್ನು ತಯಾರಿಸಿದ್ದಾರೆಂದೂ ಆದರ ಅಂಗವಾಗಿ ನಮ್ಮ ರಾಜ್ಯದ 2–3 ಜಿಲ್ಲೆಗಳಲ್ಲಿ ಇದನ್ನು ಪ್ರಾಯೋಗಿಕವಾಗಿ ನಡೆಸಲಾಗುತ್ತಿದೆ ಎಂದು ಕೇಳುತ್ತಿದ್ದೇನೆ, ಈ ಯೋಜನೆಯನ್ನು ನಮ್ಮ ಸರ್ಕಾರದವರು ಎಲ್ಲಾ ತಾಲ್ಲೂಕುಗಳಿಗೂ ವಿಸ್ತರಿಸುವಂತೆ ಹಾಗೂ ರಾಜ್ಯದ ಎಲ್ಲಾ ಭಾಗಗಳಿಗೂ ಇದನ್ನು ಹರಡುವಂತೆ ಕೇಂದ್ರ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳಬೇಕೆಂದು ನಾನು ನಮ್ಮ ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾವು ಬರೀ ಈ ನೀರಾವರಿ ಬೆಳೆಯಿಂದಲೇ ದೇಶದ ಆಹಾರ ಪರಿಸ್ಥಿತಿಯನ್ನು ಸುಧಾರಣೆ ಮಾಡುತ್ತೇವೆಂದರೆ ಅದು ಅಸಾಧ್ಯವಾದ ಮಾತು.

ಇನ್ನೊಂದು ವಿಚಾರ. ಅರಣ್ಯ ಖಾತೆಯ ವಿಚಾರದಲ್ಲಿ ಸಾಕಷ್ಟು ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಆದರೆ ನಮ್ಮ ಅರಣ್ಯವನ್ನು ಬೆಳೆಸತಕ್ಕ ವಿಚಾರದಲ್ಲಿ ನಾನು ಒಂದು ಸಲಹೆ ಮಾಡಬಯಸುತ್ತೇನೆ. ಇಲ್ಲಿಯವರೆಗೂ ಈ ಅರಣ್ಯಗಳ ಪ್ರಾಮುಖ್ಯತೆಯನ್ನು ನಮ್ಮ ಜನರಾಗಲ ಸರ್ಕಾರದವರಾಗಲ ಸರಿಯಾಗಿ ಅರಿತುಕೊಂಡಿರುವಂತೆ ಕಾಣುತ್ತಿಲ್ಲ. ಆದರೆ ಎಲ್ಲರೂ ಸಾಕಷ್ಟು ಭಾಷಣಗಳನ್ನೇನೋ ಮಾಡುತ್ತಿದ್ದಾರೆ. ಆದರೆ ಯಾವ ಅರಣ್ಯವೂ ಉತ್ತಮಗೊಂಡಿಲ್ಲ. ಬರೀ ಮಾತಿನಲ್ಲೇ ಎಲ್ಲ ಮುಕ್ತಾಯವಾಗಿದೆ. ಅದು ಕಾರ್ಯರೂಪಕ್ಕೆ ಮಾತ್ರ ಇಳಿದಿಲ್ಲ ಅಂದರೆ ಸ್ವಲ್ಪವಾತ್ರವೂ ಇಳಿದಿಲ್ಲ. ನಾನು ಕಳೆದ 25 ವರ್ಷಗಳಿಂದಲೂ ನೋಡುತ್ತಿದ್ದೇನೆ ನಾವೇನಿದ್ದರೂ ಬರಿ ಭಾಷಣಗಳನ್ನು ಮಾಡುವುದರಲ್ಲೇ ತೃಪ್ತರಾಗಿದ್ದೇವೆ. ಆದರೆ ಅದನ್ನು ಅಭಿವೃದ್ಧಿ ಮಾಡಲು ಯಾವ ಒಂದು ಯೋಜನೆಯನ್ನೂ ಕೂಡ ಹಾಕಿಕೊಂಡಿಲ್ಲ. ನಾವು ಅರಣ್ಯವನ್ನೂ ಕೂಡ ಬೆಳೆಸುತ್ತಿಲ್ಲ. ಇಧಕ್ಕೆ ಒಂದು ನಿರ್ದಿಷ್ಟವಾದ ಯೋಜನೆಯನ್ನು ತಯಾರು ಮಾಡಬೇಕು. ನಾವು ಎಷ್ಟು ಎಕರೆಗಳಲ್ಲಿ ಅರಣ್ಯವನ್ನು ಬೇಳೆಸಬೇಕು—ಮತ್ತು ಅದನ್ನು ಎಷ್ಟು ವರ್ಷಗಳಲ್ಲಿ ಬೆಳೆಸಬೇಕು ಎಂಬುದನ್ನು ನಿರ್ಧರ ಮಾಡಿಕೊಂಡು ಅದಕ್ಕನುಸಾರವಾಗಿ ಕಾರ್ಯಗಳನ್ನು ಕೈಗೊಳ್ಳಬೇಕು. ಅದಕ್ಕೆ ಸಾಕಷ್ಟು ಹಣವನ್ನು ಒದಗಿಸಿಕೊಂಡು ಅದನ್ನು ಪೂರೈಸಬೇಕು. ಆದರೆ ದುರ್ದೈವದಿಂದ ಇಂಥ ಯಾವ ಒಂದು ಯೋಜನೆ ಕೂಡ ನಮ್ಮ ಮುಂದಿಲ್ಲ. ಈ ವಿಚಾರದಲ್ಲಿ ಏನು ಮಾಡಬೇಕೆಂಬ ಬಗ್ಗೆ ನಮ್ಮ ಮಂತ್ರಿಗಳು ಒಂದು ಸ್ಟೇಟ್‌ಮೆಂಟನ್ನು ಕೊಡುತ್ತಾರೆಂದು ನಾನು ಭಾವಿಸುತ್ತೇನೆ. ನಾನು ಒಂದು ಯೋಜನೆಯನ್ನು ಸರ್ಕಾರಕ್ಕೆ ಕೊಡುತ್ತೇನೆಂದರೆ ಮಂತ್ರಿಗಳು ಸರ್ಕಾರದಲ್ಲಿ ಸಾಕಷ್ಟು ಹಣವಿಲ್ಲ ಎನ್ನಬಹುದು, ಅದಕ್ಕೆ ನನ್ನ ಇನ್ನೂ ಒಂದು ಸಲಹೆ ಏನೆಂದರೆ ಈ ದಿವಸ ರೈತರಿಗೆ ವ್ಯವಸಾಯಕ್ಕೆ ಜಮೀನನ್ನು ಬಿಟ್ಟು ಕೊಡಿ ಎಂದರೆ ಅದು ಫಾರೆಸ್ಟಿಗೆ ರಿಜರ್ವಾಗಿದೆ ಎಂದು ಹೇಳುತ್ತಾರೆ. ಆದರೆ ಅಲ್ಲಿ ಹೋಗಿ ನೋಡಿದರೆ ಒಂದು ಗಿಡ ಸಹಿತ ಅಲ್ಲಿರುವುದಿಲ್ಲ. ಆದಾಗ್ಯೂ ರಿಪೋರ್ಟುಗಳಲ್ಲ ಮಾತ್ರ ಅಲ್ಲಿ ಅಡವಿ ಇದೆಯೆಂದು ತಿಳಿಸುತ್ತದೆ. ಈ ಅರಣ್ಯಗಳನ್ನು ಬೆಳೆಸುವುದಕ್ಕೆ ಸರ್ಕಾರದವರಲ್ಲಿ ಹಣವಿಲ್ಲದೆ ಹೋದರೆ ಅಲ್ಲಿ ಅರಣ್ಯವನ್ನು ಬೆಳೆಸತಕ್ಕ ಭೂಮಿ ಎಷ್ಟಿರುತ್ತದೋ ಆದನ್ನು ಸಣ್ಣ ಸಣ್ಣ ಪ್ಲಾಟುಗಳನ್ನಾಗಿ ವಿಂಗಡಿಸಿ ಅರಣ್ಯವನ್ನು ಬೆಳೆಸಿಕೊಡುತ್ತೇವೆಂದು ಹೇಳತಕ್ಕ ಜನರಿಗೆ ಲೀಜ್ ಮೇಲೆ ಅಂದರೆ 20 ವರ್ಷದ ಒಂದು ಲೀಜ್ ಪೀರಿಯಡ್ಡನ್ನು ನಿಗದಿ ಮಾಡಿಕೊಡಿ ಆ 20 ವರ್ಷಗಳು ಕಳೆದನಂತರ ಅಲ್ಲಿ ಬೆಳೆಸಿರತಕ್ಕ ಅರಣ್ಯದಲ್ಲಿ ಸರ್ಕಾರಕ್ಕೆ ಅರ್ಧ ಅವರಿಗೆ ಅರ್ಧ ಎಂದು ಭಾಗ ಮಾಡಿಕೊಂಡು ಅವರು ಬೇಕಾಗಿದ್ದರೆ ಆವರ ಭಾಗವನ್ನು 20 ವರ್ಷಗಳ ನಂತರ ಕಡಿದು ತೆಗೆದುಕೊಳ್ಳಬಹುದು ಎಂದು ಒಂದು ಷರತ್ತನ್ನು ಹಾಕಿಕೊಟ್ಟರೆ ಇದು ಸುಲಭವಾಗಿ ನಡೆಯುತ್ತದೆಂದು ನನಗೆ ಅನಿಸುತ್ತದೆ. ಆದರೆ ಇಲ್ಲಿಯೂ ಕೂಡ ಸರ್ಕಾರದವರು ಬಂಡವಾಳಷಾಹಿಗಳನ್ನು ತರಬಾರದು. ಯಾರೊಬ್ಬರಿಗೇ ಆಗಲಿ 100 ಎಕರೆಗಳಿಗೆ ಜಾಸ್ತಿ ಕೊಡಬಾರದು. ಒಂದು ವಯಬಲ್ ಯೂನಿಟ್ ಎಷ್ಟಿರಬೇಕು ಎಂಬುದನ್ನು ನೋಡಿ ನಿಗದಿ ಮಾಡಬೇಕೆಂದು ಹೇಳುತ್ತೇನೆ. ಇದಕ್ಕೆ ಒಂದು ಉದಾಹರಣೆಯನ್ನು ಹೇಳಬೇಕೆಂದರೆ ಹಿಂದೆ ಜಪಾನಿನಲ್ಲಿ ರಸ್ತೆಗಳನ್ನು ನಿರ್ಮಾಣ ಮಾಡುವುದಕ್ಕೆ ಅವರಲ್ಲಿ ದುಡ್ಡೇ ಇಲ್ಲ ಎಂದು ಹೇಳತಕ್ಕ ಒಂದು ಕಾಲದಲ್ಲಿ ಆ ರಸ್ತೆಗಳನ್ನು ಮಾಡುವುದಕ್ಕೆ ಆಲ್ಲಿದ್ದ ದೊಡ್ಡ ದೊಡ್ಡ ಸಂಘ ಸಂಸ್ಥೆಗಳನ್ನು ಮತ್ತು ಬ್ಯಾಂಕುಗಳನ್ನು ಕರೆಸಿಕೊಂಡು ಅವರಿಗೆ 10—20 ವರ್ಷಗಳ ಒಂದು ಲೀಜಿನ ಮೇಲೆ ಅಲ್ಲಿನ ಸರ್ಕಾರದವರು ತಯಾರಿಸತಕ್ಕ ಒಂದು ಎಷ್ಟಿಮೇಟಿನ ಆಧಾರದ ಮೇಲೆ ಆ ಪ್ರಕಾರ ರಸ್ತೆಗಳನ್ನು ನಿರ್ಮಾಣಮಾಡಿ ಅವರು 20 ವರ್ಷಗಳ ಕಾಲ ಅಲ್ಲಿ ವಾಹನಗಳನ್ನು ಓಡಿಸತಕ್ಕವರಿಂದ ಬರತಕ್ಕ ಟ್ಯಾಕ್ಸನ್ನು ಅವರೇ ವಸೂಲ್ಮಾಡಿಕೊಳ್ಳಬಹುದು ಎಂದು ಹೇಳಿದ್ದರಿಂದ ಅಂಥ ಒಂದು ಕರಾರಿನ ಮೇಲೆ ಅಲ್ಲಿ ರಸ್ತೆಗಳನ್ನು ಮಾಡಿಸಿದ್ದರಿಂದ ಈ ದಿವಸ ಪ್ರಪಂಚದಲ್ಲಿ ಎಲ್ಲೂ ಇಲ್ಲದಂಥ ಸುಂದರವಾದ ರಸ್ತೆಗಳು ಅಲ್ಲಿರುವುದಕ್ಕೆ ಕಾರಣ ಆಯಿತು ಎಂದು ಹೇಳುತ್ತಿದ್ದಾರೆ. ಹಾಗೇ ನಾವಿಲ್ಲಿ ನಮ್ಮ ಅರಣ್ಯಗಳ ಅಭಿವೃದ್ಧಿಗೆ ಒಂದು ಯೋಜನೆಯನ್ನು ತಯಾರು ಮಾಡಬೇಕೆಂದು ಹೇಳುತ್ತಿದ್ದೇನೆ. ಹೀಗೆ ಮಾಡಿದರೆ ಇನ್ನು 5 ವರ್ಷದಲ್ಲಿ ಇಲ್ಲಿ ಒಳ್ಳೇ ಆರಣ್ಯಗಳನ್ನು ಕಾಣಲು ಸಾಧ್ಯ.

ಇನ್ನು ಒಂದು ವಿಷಯ ಏನೆಂದರೆ, ಸುಧಾರಿಸಿದ ಬೀಜ ಮತ್ತು ಗೊಬ್ಬರ ಇವುಗಳಿಗೆ ಸಾಕಷ್ಟು ಪ್ರಾಮುಖ್ಯತೆ ಇದೆ. ಈ ದಿವಸ ಈ ಸುಧಾರಿಸಿದ ಬತ್ತನೆ ಬೀಜ ಏನಿವೆ ಅಂದರೆ ಆ ಹೈಬ್ರೀಡ್ ಜೋಳ ಬಂದ ನಂತರ ನಮ್ಮ ಆಹಾರ ಪರಿಸ್ಥಿತಿ ಬಹಳಮಟ್ಟಿಗೆ ಸುಧಾರಿಸುತ್ತದೆ ಎಂದು ತಿಳಿದಿದ್ದೆವು. ಆದರೆ ಈ ವಿಚಾರದಲ್ಲಿ ಬಹಳ ಅನ್ಯಾಯಗಳು ನಡೆಯುತ್ತಿವೆ. ಒಂದು ರ್‍ಯಾಕೆಟ್ಟೇ ನಡೆಯುತ್ತಿದೆ. ಈ ಹೈಬ್ರೀಡ್ ಬತ್ತನೆ ಬೀಜದ ಹೆಸರಿನಲ್ಲಿ ಕೆಲವರು ಲಕ್ಷಾಂತರ ರೂಪಾಯಿಗಳನ್ನು ಗಳಿಸಿದ್ದಾರೆ. ಇಂಥದನ್ನು ತಡೆಯಲಿಕ್ಕೆ ನಮ್ಮಲ್ಲಿ ಸರಿಯಾದ ಕಾಯಿದೆಯಿಲ್ಲ. ಅದಕ್ಕೆ ಸರ್ಕಾರದವರು ತೀವ್ರವಾಗಿ ಒಂದು ಕಾಯಿದೆಯನ್ನು ತಯಾರಿಸಿ ಅದನ್ನು ಜಾರಿಗೆ ತರಬೇಕು. ಈ ದಿವಸ ಬತ್ತನೆ ಬೀಜಗಳನ್ನು

(ಶ್ರೀ ಸಿ. ಅಂದಾನಪ್ಪ)

ಬೆಳೆಸುವುದು ಮತ್ತು ಮಾರಾಟ ಮಾಡುವುದೇ ಒಂದು ದೊಡ್ಡ ಹುದ್ದೆಯಾಗಿದೆ. ಈ ದಿವಸ ಬಿತ್ತನೆ
ಬೀಜಗಳ ವಿತರಣೆಯನ್ನು ಆ ಅಗ್ರೋ ಇಂಡಸ್ಟ್ರಿಯಲ್ ಕಾರ್ಪೊರೇಷನ್ನಿಗೆ ಕೊಟ್ಟಿದ್ದಾರೆ. ಅಲ್ಲಿ
ಸಾಕಷ್ಟು ಹಣವನ್ನು ಈಗಾಗಲೇ ಗೈರು ವಿಲೆ ಮಾಡಿದ್ದಾರೆ. ಆದರೆ ಅದರ ರಿಪೋರ್ಟ್ ಇನ್ನೂ
ಬಂದಿಲ್ಲ. ಇಲ್ಲಿ ಚರ್ಚೆಯೂ ಆಗಿಲ್ಲ. ಜನರು ಅಲ್ಲಿ 30–40 ಸಾವಿರ ರೂಪಾಯಿ ಲುಕ್ಸಾನಾಗಿದೆ
ಎನ್ನುತ್ತಿದ್ದಾರೆ. ಇದು ಒಂದು ಬಿಜಿನೆಸ್ ಕನ್‌ಸರ್ನ್ ಆಗಿದ್ದರೂ ಇದು ಒಂದು ಸರ್ಕಾರಿ ಇಲಾಖೆ
ಯಂತೆ ವರ್ತಿಸುತ್ತದೆ. ಕಾರಣ ಅಲ್ಲಿ ಸರ್ಕಾರೀ ನೌಕರರೇ ಹೆಚ್ಚು ಮಂದಿ ಇದ್ದಾರೆ. ಈ ಸಂಸ್ಥೆಗೆ
ಹೈಬ್ರೀಡ್ ಕಾಟನ್ ಸೀಡ್ಸನ್ನು ಹಂಚತಕ್ಕ ಅಧಿಕಾರ ಅದಕ್ಕೆ ಕೊಟ್ಟಿದ್ದಾರೆ. ಅದನ್ನು ಒಂದು
ಕೆ.ಜಿ.ಗೆ 80 ರೂಪಾಯಿಗಳಂತೆ ಮಾರಾಟ ಮಾಡಬೇಕೆಂದು ಕಂಡೀಷನ್ ಹಾಕಿದ್ದಾರೆ. ಹೀಗೆ ಇನ್ನೂ
ಅನೇಕ ಕಂಡೀಷನ್‌ಗಳನ್ನು ಹಾಕಿದ್ದಾರೆ. ಎರಡು ಪಕ್ಷಗಳೂ ಕೂಡಿ ಅಗ್ರಿಮೆಂಟ್ ಮಾಡಿಕೊಳ್ಳ
ಬೇಕೇ ಹೊರತು ಸರಕಾರಿ ಆರ್ಡರು ಮಾಡುವ ರೀತಿಯಲ್ಲಿ ಅಗ್ರೋ ಇಂಡಸ್ಟ್ರೀಸ್ ಕಾರ್ಪೊ
ರೇಷನ್ ಈ ದಿವಸ ಸೇಕಡ 68 ಜರ್ಮಿನೇಷನ್ ಇರಬೇಕು, ಸೇಕಡ 9 ಮಾಯಿಸ್ಚರ್ ಇರಬೇಕು
ಎಂದು ಹೇಳುವುದು ವ್ಯವಹಾರ ಯೋಗ್ಯವಲ್ಲ. ಜೂನ್ 15 ರೊಳಗೆ ಪ್ರೊಕ್ಯೂರ್‌ಮೆಂಟ್ ಮಾಡ
ಬೇಕಾಗಿತ್ತು. ಈ ದಿವಸದವರೆಗೂ ಅದನ್ನು ಮಾಡಿಲ್ಲ. ಜುಲೈ ಆಖೈರಿನೊಳಗೆ ಬಿತ್ತನೆ ಮಾಡ
ಬೇಕು. ಪ್ರೊಕ್ಯೂರ್‌ಮೆಂಟೇ ಆಗದಿರುವಾಗ ಬಿತ್ತನೆ ಮಾಡುವುದು ಯಾವಾಗ? ಹೀಗಾದರೆ
ಮಾಡುವುದಕ್ಕೆ ಸಾಧ್ಯವೇ ಇಲ್ಲ. ಇದನ್ನು ಗಮನಿಸಿ ತಕ್ಷಣ ಅವರ ಮೇಲೆ ಕ್ರಮ ತೆಗೆದುಕೊಳ್ಳ
ಬೇಕು. ಪ್ರೊಕ್ಯೂರ್ ಮಾಡಿದ ಕೂಡಲೆ ನಾಟಿ ಮಾಡಿದರೆ ಕೆಟ್ಟ ಹೆಸರು ಬರುವುದೆಂದು ಈ ರೀತಿ
ಮಾಡುತ್ತಿದ್ದಾರೆ. ಅವರಿಗೆ 10 ರೂಪಾಯಿ ಮಾರ್ಜಿನ್‌ಗೆ ಅವಕಾಶ ಮಾಡಿದ್ದೀರಿ. ಆದರೆ ಅವರು
10 ಪೈಸೆ ಕೆಲಸವನ್ನು ಸಹ ಮಾಡುತ್ತಿಲ್ಲ. ಅಗ್ರಿಕಲ್ಚರಲ್ ಇಲಾಖೆಯಿಂದ ಎಲ್ಲಾ ಕೆಲಸವನ್ನೂ
ಮಾಡಿಸುತ್ತಿದ್ದಾರೆ. ಹಾಗಿರುವಾಗ ಅವರಿಗೆ ಇಷ್ಟು ಹಣ ಕೊಡುವುದೇಕೆ? ಕೆಲಸ ಮಾಡದೆ
ಅವರು ಲಾಭ ಪಡೆಯುವರು. ಅವರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಆ ಕಾರಣದಿಂದ ತಕ್ಷಣ
ಇದನ್ನು ಸರಿಪಡಿಸಬೇಕು.

ರಸಾಯನಿಕ ಗೊಬ್ಬರದ ಬಗ್ಗೆ ಕೆಲವರು ಮಾತನಾಡಿದ್ದಾರೆ. ಈ ಬಾಬಿನಲ್ಲಿರುವ ಅವ್ಯವಸ್ಥೆ
ಯನ್ನು ಮಂತ್ರಿಗಳು ಆದಷ್ಟು ಬೇಗ ಸರಿಪಡಿಸಬೇಕು. ಸರಕಾರ ಸರಿಯಾಗಿ ವಿತರಣೆ ಮಾಡು
ವಂತೆ ಅಧಿಕಾರಿಗಳಿಗೆ ಸೂಚನೆ ಕೊಡಬೇಕು ಎಂದು ವಿನಂತಿ ಮಾಡಿ ನಮ್ಮ ಮುಂದಿರುವ ಬೇಡಿಕೆ
ಗಳಿಗೆ ಹೃತ್ಪೂರ್ವಕವಾಗಿ ಬೆಂಬಲಕೊಟ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ
ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಎಂ. ಮಲ್ಲಪ್ಪ (ಬೀರೂರು).—ಸನ್ಮಾನ್ಯ ಉಪಾಧ್ಯಕ್ಷರೇ, ಕೃಷಿ, ಅರಣ್ಯ, ಪಶುಪಾಲನೆ
ಈ ಇಲಾಖೆಗಳ ಬಗ್ಗೆ ಸಚಿವರು ಮಂಡಿಸಿರುವ ಬೇಡಿಕೆಯನ್ನು ಸ್ವಾಗತಿಸಿ ಒಂದೆರಡು ಸಲಹೆಗಳನ್ನು
ನೀಡಲು ಬಯಸುತ್ತೇನೆ. ನಮ್ಮದು ಕೃಷಿ ಪ್ರಧಾನವಾದ ದೇಶ ಎಂಬುದು ಎಲ್ಲರಿಗೂ ತಿಳಿದ
ವಿಷಯ. ವ್ಯವಸಾಭಿವೃದ್ಧಿಯಾಗದೆ ವ್ಯವಸಾಯಗಾರರ ಸ್ಥಿತಿಗತಿ ಉತ್ತಮವಾಗದೆ ರೈತರ
ಆರ್ಥಿಕ ಮಟ್ಟ ಹೆಚ್ಚುವುದಿಲ್ಲ ಎಂಬುದು ಸರ್ವವಿದಿತವಾಗಿದೆ. ಈ ವಿಷಯವನ್ನು ಗಮನಿಸಿ
ಕೆಲವು ಸಲಹೆಗಳನ್ನು ಕೊಡಲು ಬಯಸುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಕೃಷಿ ವಿಶ್ವವಿದ್ಯಾನಿಲಯವು
ಒಂದಿದೆ. ಎರಡು ಕಾಲೇಜುಗಳ ಕೃಷಿಗೆ ಸಂಬಂಧಪಟ್ಟಂತೆ ಇವೆ, ಒಂದು ಬೆಂಗಳೂರಿನಲ್ಲಿದೆ,
ಮತ್ತೊಂದು ಧಾರವಾಡದಲ್ಲಿದೆ. ಇವುಗಳಲ್ಲಿ ಕೃಷಿಕರ ಮಕ್ಕಳಿಗೆ ಹೆಚ್ಚು ಅವಕಾಶವಿರಬೇಕು.
ಆದರೆ ಈಗ ನಡೆಯುತ್ತಿರುವುದನ್ನು ನೋಡಿದರೆ ಮೆರಿಟ್‌ಗೆ ಪ್ರಾಧಾನ್ಯತೆ ಕೊಡುತ್ತಿರುವುದರಿಂದ
ವ್ಯವಸಾಯವನ್ನೇ ಮುಖ್ಯ ಕಸಬಾಗಿ ಇಟ್ಟುಕೊಂಡಿರುವವರ ಮಕ್ಕಳಿಗೆ ವ್ಯವಸಾಯ ಕಾಲೇಜು
ಗಳಲ್ಲಿ ಓದಲು ಅವಕಾಶ ಸಿಕ್ಕುತ್ತಿಲ್ಲ. ಮಹಾರಾಷ್ಟ್ರದಲ್ಲಿ ನಾಲ್ಕು ಕೃಷಿ ವಿಶ್ವವಿದ್ಯಾಲಯ
ಗಳಿರುವಂತೆ ನಮ್ಮ ರಾಜ್ಯದಲ್ಲೂ ಕೂಡ ಒಂದೆರಡು ಹೆಚ್ಚು ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಿ
ತನ್ಮೂಲಕ ಕೃಷಿಕರ ಮಕ್ಕಳಿಗೆ ಕೃಷಿಯ ಬಗ್ಗೆ ತರಬೇತಿ ಪಡೆಯಲು ಅವಕಾಶ ಮಾಡಬೇಕು ಎಂದು
ಒತ್ತಾಯಪೂರ್ವಕವಾಗಿ ಸಲಹೆ ಮಾಡುತ್ತೇನೆ. ಈ ವರ್ಷದಲ್ಲಿ ಕೂಡ ಮಾನ್ಯ ಮಂತ್ರಿಗಳು ಕೃಷಿ
ಕರ ಮಕ್ಕಳಿಗೆ ಇಂತಿಷ್ಟು ಸೇಕಡಾವರು ಸೀಟುಗಳನ್ನು ಮೀಸಲಾಗಿಡಬೇಕು. ಹಾಗೆ ಮಾಡಿದರೆ
ತನ್ಮೂಲಕ ಕೃಷಿಕರಿಗೆ ಹೆಚ್ಚಿನ ಬೆಂಬಲ ಮತ್ತು ಪ್ರೋತ್ಸಾಹ ನೀಡಿದಂತಾಗುವುದು. ಹಿಂದೆ
ಎಷ್ಟೋ ಸಲ ನೋಡಿದರೆ ಅಂಕಗಳ ಆಧಾರದಮೇಲೆ ಪ್ರತಿಭೆಯ ಆಧಾರದಮೇಲೆ ಸೀಟುಗಳನ್ನು
ಕೊಟ್ಟಿರುವುದರಿಂದ ಕೃಷಿಯಲ್ಲಿ ಅನುಭವವಿರುವ ಕೃಷಿಕರ ಮಕ್ಕಳಿಗೆ ಕೃಷಿ ವಿಶ್ವವಿದ್ಯಾಲಯದಲ್ಲಿ
ಓದಲು ಅವಕಾಶ ಸಿಕ್ಕಲಿಲ್ಲ. ಇದರಿಂದ ತೊಂದರೆಯಾಗಿದೆ. ಬರೀ ಉದ್ಯೋಗ ದೊರಕಿಸುವ

ದೃಷ್ಟಿಯಿಂದ ಮೆರಿಟ್‌ಗೆ ಅವಕಾಶ ಮಾಡಿರುವುದರಿಂದ ಕೃಷಿಕರಿಗೆ ಅವಕಾಶವಿಲ್ಲದಂತಾಗಿದೆ. ಆದುದರಿಂದ ಇನ್ನೂ ಒಂದೆರಡು ಕೃಷಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿ ಕೃಷಿಕರ ಮಕ್ಕಳಿಗೆ ಹೆಚ್ಚಿನ ಅವಕಾಶ ಕಲ್ಪಿಸಿಕೊಡಬೇಕು ಎಂಬುದು ನನ್ನ ಮುಖ್ಯವಾದ ಸಲಹೆ.

ಸಾಯಿಲ್ ಕನ್‌ಸರ್ವೇಷನ್ ವಿಚಾರ ಹೇಳುವುದಾದರೆ ಇಡೀ 20 ಜಿಲ್ಲೆಗಳಲ್ಲಿ ಈ ಕೆಲಸ ಸಮರ್ಪಕವಾಗಿ ನಡೆದಿಲ್ಲ. ಕರಿ ಭೂಮಿಯಿರುವ ಎಷ್ಟೋ ಕಡೆ ಈ ಕೆಲಸ ಮಾಡಿಲ್ಲ. ಇದನ್ನು ಗಮನಿಸಿ ಸಚಿವರು ಕೆಂಪು ಭೂಮಿ, ಬಿಳಿಯ ಭೂಮಿ, ಕಪ್ಪು ಭೂಮಿ ಯಾವುದೇ ಇದ್ದರೂ ಎಲ್ಲಾ ಕಡೆಯೂ ಸಾಯಿಲ್ ಕನ್‌ಸರ್ವೇಷನ್ ಕೆಲಸ ಮಾಡುವಂತೆ ಕಾರ್ಯಕ್ರಮದಲ್ಲಿ ಅಳವಡಿಸಬೇಕು. ಇದರಿಂದ ಕೃಷಿ ಉತ್ಪತ್ತಿ ಹೆಚ್ಚಾಗುವುದು.

ಈಗ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಇದೆ. ಇದರ ಮುಖ್ಯವಾದ ಉದ್ದೇಶ ರೈತರಿಗೆ ಬೀಜ, ಗೊಬ್ಬರ, ಕ್ರಿಮಿನಾಶಕ ಸಕಾಲದಲ್ಲಿ ಒದಗಿಸಬೇಕು ಎಂಬುದು. ಆದರೆ ಈ ಕೆಲಸ ಎಲ್ಲಾ ಜಿಲ್ಲೆಗಳಲ್ಲೂ ಕೂಡ ಸಮರ್ಪಕವಾಗಿ ಆಗಿಲ್ಲ. ಅದು ಇಂದು ಸರ್ಟಿಫೈಡ್ ಸೀಡ್ಸ್ ಎಂದು ಅಂಗಡಿಗಳಿಗೆ ಎಷ್ಟೋ ಕಡೆ ಕೊಡುವ ಪದ್ಧತಿ ಇದೆ. ಆ ಬೀಜ ಬಿತ್ತಿದರೆ ಹುಟ್ಟಲಿಲ್ಲವೆಂದರೆ ಸರಕಾರಕ್ಕೆ ಕೆಟ್ಟ ಹೆಸರು ಬರುವುದು. ಇದಕ್ಕಾಗಿ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರು ಪ್ರತಿಯೊಂದು ತಾಲ್ಲೂಕಿನಲ್ಲೂ ಕೂಡ ಬೀಜ, ಗೊಬ್ಬರ ಮತ್ತು ಕ್ರಿಮಿನಾಶಕ ಮುಂತಾದವುಗಳನ್ನು ಮಾರಾಟಮಾಡುವ ಕೇಂದ್ರ ಸ್ಥಾಪಿಸಿ ತನ್ಮೂಲಕ ರೈತರಿಗೆ ಸಹಾಯಮಾಡಬೇಕು ಎಂದು ಹೇಳುತ್ತೇನೆ.

ಗೊಬ್ಬರವನ್ನು ಮಾರಾಟಮಾಡುವ ಏಜೆನ್ಸಿ ನೋಡಿದರೆ ಈಗ ಮೈಸೂರು ಕೋ-ಆಪರೇಟೀವ್ ಫೆಡರೇಷನ್ ಸೊಸೈಟಿ ಉಂಟು. ಅದಕ್ಕೆ ಸಂಬಂಧಪಟ್ಟಹಾಗೆ ತಾಲ್ಲೂಕು ಸೊಸೈಟಿ ಇದೆ. ಗೊಬ್ಬರವನ್ನು ಈ ತಾಲ್ಲೂಕು ಸೊಸೈಟಿಗಳ ಮೂಲಕ ಹಂಚಬಹುದು. ಈಗ ಡ್ಯೂಯಲ್ ಏಜೆನ್ಸಿ ಇದೆ, ಅಗ್ರೋ ಇಂಡಿಸ್ಟ್ರೀಸ್ ಕಾರ್ಪೊರೇಷನ್ ಮತ್ತು ಮಾರ್ಕೆಟಿಂಗ್ ಕೋ-ಆಪರೇಟೀವ್ ಸೊಸೈಟಿ. ಇದರಿಂದ ಇಂದು ತೊಂದರೆಯಾಗಿದೆ. ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಎಷ್ಟೋ ಜನ ವರ್ತಕರನ್ನು ಕರೆಸಿ ಗೊಬ್ಬರ, ಬೀಜ ಮುಂತಾದುವುಗಳನ್ನು ಹಂಚಿಕೆ ಮಾಡುವುದು, ಅವರಿಗೆ ಏಜೆನ್ಸಿ ಕೊಡುವುದು. ಇದರಿಂದ ಕೋ-ಆಪರೇಟೀವ್ ಸೊಸೈಟಿ ವ್ಯಾಪಾರ ಹಾಳಾಗುವುದೂ ಅಲ್ಲದೆ ಕೋ-ಆಪರೇಷನ್ ವ್ಯಾಪಾರದಲ್ಲಿ ಲಂಚಗುಳಿತನಕ್ಕೆ ಅವಕಾಶವಾಗುವುದು, ಈ ರೀತಿ ವ್ಯವಹಾರ ಮಾಡುತ್ತಿದ್ದಾರೆ. ಇದನ್ನು ತಪ್ಪಿಸಬೇಕು. ಇಂದು ಸಣ್ಣ ವ್ಯವಸಾಯಗಾರರಿಗೆ ಟ್ರ್ಯಾಕ್ಟರ್ ಮತ್ತು ಬುಲ್‌ಡೋಜರ್ ಸೌಲಭ್ಯ ಹೆಚ್ಚಬೇಕು. ಯಾವ ತಾಲ್ಲೂಕಿನಲ್ಲೇ ಆಗಲಿ ರೈತರಿಗೆ ಅವಶ್ಯಕವಾದ ಟ್ರ್ಯಾಕ್ಟರು ಮತ್ತು ಬುಲ್‌ಡೋಜರ್ ಪಡೆಯಲು ಯಾವ ತೊಂದರೆಯೂ ಇರಬಾರದು.

ಈವೊತ್ತಿನ ದಿವಸ ಯಾರಾದರೂ ಬುಲ್‌ಡೋಜರ್ ಸೌಕರ್ಯ ಪಡೆಯಬೇಕಾದರೆ ತಿಂಗಳಾನುಗಟ್ಟಲೆಯಾದರೂ ಕಾಯಬೇಕಾಗುತ್ತದೆ, ವರ್ಷಾನುಗಟ್ಟಲೆಯಾದರೂ ಕಾಯಬೇಕಾಗುತ್ತದೆ. ಇದರಿಂದ ರೈತರಿಗೆ ಅದರಿಂದ ಸೌಕರ್ಯಗಳು ಸರಿಯಾದ ಕಾಲಕ್ಕೆ ದೊರೆಯುತ್ತಾ ಇಲ್ಲ. ಮತ್ತು ಸಣ್ಣಪುಟ್ಟ ಹಿಡುವಳಿದಾರರೂ ಟ್ರ್ಯಾಕ್ಟರುಗಳನ್ನು ಇಟ್ಟುಕೊಂಡು ತಮ್ಮ ಜಮೀನುಗಳನ್ನು ಅಭಿವೃದ್ಧಿ ಮಾಡಬೇಕು. ಇಂಥಾ ವ್ಯವಸ್ಥೆಯನ್ನು ಸರ್ಕಾರದವರು ಮಾಡಿಕೊಡಬೇಕು. ಈ ಟ್ರ್ಯಾಕ್ಟರುಗಳನ್ನು ಕೆಟ್ಟು ಹೋದರೆ ಅವರು ರಿಪೇರಿ ಮಾಡಿಸಿ ಕೊಳ್ಳಬೇಕಾದರೆ ಈವೊತ್ತಿನ ದಿವಸ ನೂರಾರು ಮೈಲಿಯಿಂದ ಬೆಂಗಳೂರಿಗೆ ಬರಬೇಕು. ಇದರಿಂದ ಅವರಿಗೆ ಹೆಚ್ಚು ವೆಚ್ಚವಾಗುತ್ತದೆ. ಆದುದರಿಂದ ಇದರ ಬಗ್ಗೆ ನಾನು ಸಲಹೆ ಮಾಡುವುದು ಏನೆಂದರೆ ಪ್ರತಿಯೊಂದು ಜಿಲ್ಲೆಯಲ್ಲೂ ಒಂದೊಂದು ಸರ್ವಿಸ್ ಸ್ಟೇಷನ್ ತೆಗೆದರೆ ಖಾಸಗಿಯವರು ಇಟ್ಟುಕೊಂಡಿರುವ ಟ್ರ್ಯಾಕ್ಟರುಗಳ ರಿಪೇರಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಇದು ಅಗ್ರೋ ಇಂಡಸ್ಟ್ರೀಸ್ ಕರ್ತವ್ಯವಾಗಿರುವುದರಿಂದ ಅವರು ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಸೆಂಟರ್ ತೆಗೆದು ವ್ಯವಸಾಯಗಾರರಿಗೆ ಅನುಕೂಲ ಮಾಡಿಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಉದ್ಯಾನ ಇಲಾಖೆ ವಿಷಯ ಹೇಳುವುದಾದರೆ ಈ ಇಲಾಖೆ ಬಹಳ ಚೆನ್ನಾಗಿ ಕೆಲಸ ನಡೆಸುತ್ತಾ ಇದೆ. ಪ್ರತಿಯೊಂದು ತಾಲ್ಲೂಕಾ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ. ರಾಜ್ಯಮಟ್ಟದಲ್ಲಿ ಈ ಇಲಾಖೆಯಲ್ಲಿ ದಕ್ಷತೆಯಿಂದ ಕೆಲಸ ನಡೆಯುತ್ತಾ ಇದೆ. ನಾನು ಅದನ್ನು ಬಹಳ ಸಮರ್ಥನೆಮಾಡಿ ಹೇಳುತ್ತೇನೆ. ಏತಕ್ಕೆಂದರೆ ತಾವು ಯಾರಾದರೂ ಹೋಗಿ ಕೆಮ್ಮಣ್ಣುಗುಂಡಿ ಗಿರಿಧಾಮವನ್ನು ಹೋಗಿ ನೋಡಬಹುದು. ಅದನ್ನು ಪೂರ್‌ಮ್ಯಾನ್ಸ್ ಊಟಿ ಎಂದು ಒಬ್ಬರು ಹೇಳಿದರು, ಸ್ವಿಜರ್‌ಲ್ಯಾಂಡ್ ಎಂದು ಹೇಳಿದರು. ಅಲ್ಲಿ ಒಂದು ಊಟಕ್ಕಾಗಲಿ, ವಸತಿಗಾಗಲಿ ಬಹಳ ಕಡಿಮೆ ದರದಲ್ಲಿ

(ಶ್ರೀ ಎಂ. ಮಲ್ಲಪ್ಪ)

ಹೆಚ್ಚು ಸೌಕರವನ್ನು ಒದಗಿಸಿರತಕ್ಕಂಥ ವ್ಯವಸ್ಥೆ ಮಾಡಿದ್ದಾರೆ, ಈವೊತ್ತಿನ ದಿವಸ ಆ ಗಿರಿಧಾಮವನ್ನು ಟೂರಿಸ್ಟ್ ಸೆಂಟರ್ ಮಾಡಬೇಕು, ಹೆಚ್ಚು ಸೌಕರ್ಯಗಳನ್ನು ಒದಗಿಸಿ ಕೊಡಬೇಕು ಎಂದು ಹೇಳುತ್ತೇನೆ. ಈಗಾಗಲೇ ಬೆಂಗಳೂರಿನಿಂದ ಗಿರಿಧಾಮಕ್ಕೆ ಒಂದು ಸರ್ಕಾರಿ ಬಸ್ಸನ್ನು ಹಾಕಬೇಕು ಎಂದು ಯೋಚನೆ ಮಾಡಿದ್ದಾರೆ. ಅದೇರೀತಿ ಮೈಸೂರು ಹಾಸನದಿಂದಲೂ ಬಸ್ಸುಗಳನ್ನು ಹಾಕಿ ಹೆಚ್ಚಿಗೆ ಅನುಕೂಲ ಮಾಡಿಕೊಟ್ಟರೆ ಬೇಕಾದಷ್ಟು ಜನ ಹೋಗಿ ಅಲ್ಲಿ ಉಳಿದು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದಕ್ಕೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಆದುದರಿಂದ ಈ ಒಂದು ಅವಕಾಶವನ್ನು ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ರೈಲ್ವೆಯಿಂದ ಬರತಕ್ಕ ಜನರು ಹುಬ್ಬಳ್ಳಿಯಿಂದ ಕೆಮ್ಮಣ್ಣುಗುಂಡಿಗೆ ಬರಬೇಕಾದರೆ ತರೀಕೆರೆ ಅಥವಾ ಬೀರೂರು ಬಳಿ ಇಳಿಯುತ್ತಾರೆ. ಅಲ್ಲಿಂದ ಇಳಿದು ಕೆಮ್ಮಣ್ಣುಗುಂಡಿಗೆ ಹೋಗಬೇಕಾದರೆ ಈವಾಗ ಹೆಚ್ಚು ಸೌಕರ್ಯಗಳು ಇಲ್ಲ. ಆದುದರಿಂದ ಕೆಮ್ಮಣ್ಣುಗುಂಡಿಗೆ ಹೋಗತಕ್ಕಂಥ ಜನರಿಗೆ ಹೆಚ್ಚು ಸೌಕರ್ಯಗಳನ್ನು ಒದಗಿಸಿಕೊಡಲು ಆ ಸ್ಥಳಗಳಲ್ಲಿ 2-3 ಟೂರಿಸ್ಟ್ ಕಾರನ್ನು ಇಡಬೇಕು ಎಂದು ಹೇಳುತ್ತೇನೆ. ಹಾಗೇನಾದರೂ ಇಟ್ಟರೆ ಜಾಸ್ತಿ ಜನ ಬಂದು ಹೋಗುವುದಕ್ಕೆ ಅನುಕೂಲವಾಗುತ್ತದೆ. ಇದರ ಬಗ್ಗೆ ಹೇಳುವುದಾದರೆ 3 ವರ್ಷದ ಹಿಂದೆ ಇದರಲ್ಲಿ ಒಂದು ಸಾವಿರ 2 ಸಾವಿರ ರೂಪಾಯಿ ಇತರಕ್ಕಂಥ ಉತ್ಪತ್ತಿ ಈವೊತ್ತಿನ ದಿವಸ 40 ಸಾವಿರ ರೂಪಾಯಿಯಿಂದ 50 ಸಾವಿರ ರೂಪಾಯಿಯವರೆಗೆ ಉತ್ಪತ್ತಿ ಇದೆ. ಆದುದರಿಂದ ಇದಕ್ಕೆ ಹೆಚ್ಚಿನ ವ್ಯವಸ್ಥೆ ಮಾಡಿಕೊಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಫರ್ಟಿಲೈಸರ್ಸ್ ಫ್ಯಾಕ್ಟರಿ ಬಗ್ಗೆ ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ ಸ್ಥಾಪನೆ ಮಾಡುವ ಉದ್ದೇಶ ಏನು ಇದೆಯೋ ಅದಕ್ಕೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಿ ಕೊಡಬೇಕು ಮತ್ತು ಆದಷ್ಟು ಜಾಗ್ರತೆ ಆ ಕೆಲಸವನ್ನು ಪೂರೈಸಿಕೊಡಬೇಕು ಎಂದು ಹೇಳುತ್ತೇನೆ. ಈವಾಗ ರೈತರಿಗೆ ಫರ್ಟಿಲೈಸರ್ಸ್ ಕೊಂಡುಕೊಳ್ಳುವುದಕ್ಕೆ ಒದಗಿಸಿರುವ ಹಣ ಸಾಕಾಗುವುದಿಲ್ಲ. ಅವರಿಂದ ರಿಪೋರ್ಟ್ ಬರುತ್ತಾ ಇದೆ. ನಮ್ಮ ಕಡೆ ಇರುವ ಅಡಿಕೆ ಬೆಳೆಗಾರರಿಗೆ ಆ ಸರಿಯಾದ ಧಾರಣೆ ಇಲ್ಲದೆ ತುಂಬಾ ಕಷ್ಟವಾಗಿದೆ. ಆದುದರಿಂದ ಸರ್ಕಾರದವರು ಅಡಿಕೆ ಬೆಳೆಗಾರರಿಗೆ ಒಂದು ಸಪೋರ್ಟಿಂಗ್ ಪ್ರೈಸ್ ಕೊಡುವ ಹಾಗೆ ಕೂಡಲೇ ಯೋಚನೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಅರಣ್ಯ ಇಲಾಖೆ ಬಗ್ಗೆ ಹೇಳುವುದಾದರೆ ಇದರ ಬಗ್ಗೆ ಇನ್ನೂ ಅನೇಕ ಸುಧಾರಣೆಗಳು ಆಗಬೇಕು. ಅರಣ್ಯದಲ್ಲಿರುವ ಯೋಗ್ಯವಾದ ಜಮೀನನ್ನು ಕೊಡಬೇಕಾದರೆ ಯಾರಿಗೆ ಜಮೀನು ಇಲ್ಲವೋ, ಯಾರಿಗೆ ಹೆಚ್ಚು ವರಮಾನ ಇಲ್ಲವೋ ಇಂಥಾವರಿಗೆ ಕೊಡಬೇಕು. ಅಂಥಾವರಿಗೆ ಕೊಟ್ಟರೆ ಹೆಚ್ಚು ಉತ್ಪನ್ನವೂ ಬರುವುದಲ್ಲದೆ ಅರಣ್ಯವನ್ನೂ ಕೂಡ ಹದ್‌ಬಸ್ತಿನಲ್ಲಿ ಇಟ್ಟುಕೊಳ್ಳಬಹುದು. ಲಕ್ಷಾಂತರ ರೂಪಾಯಿ ಹಾಕಿ ಅರಣ್ಯವನ್ನು ಬೆಳೆಸುವುದಕ್ಕೆ ಈವಾಗ ಹಣ ಇಲ್ಲ. ಆದುದರಿಂದ ವ್ಯವಸಾಯಗಾರರಿಗೆ ಯೋಗ್ಯವಾದ ಜಮೀನು ಕೊಟ್ಟರೆ ವ್ಯವಸಾಯಗಾರರಿಗೂ ಅನುಕೂಲವಾಗುತ್ತದೆ ನಿಮಗೂ ಒಳ್ಳೆಯ ಹೆಸರು ಬರುತ್ತದೆ. ಅಲ್ಲದೇ ಅರಣ್ಯವನ್ನು ಹದ್‌ಬಸ್ತಿನಲ್ಲಿ ಇಟ್ಟುಕೊಳ್ಳುತ್ತಾರೆ ಎಂದು ಹೇಳ ಬಯಸುತ್ತೇನೆ.

ಇನ್ನು ನಮ್ಮ ಜಿಲ್ಲೆ ಮಲೆನಾಡು ಜಿಲ್ಲೆ. ಇದುವರೆಗೆ ನಮ್ಮ ಪ್ರದೇಶದಲ್ಲಿ ಇರತಕ್ಕಂಥ ಜನರಿಗೆ ಮಲನಾಡ್ ರಯಟ್ಸ್ ಪ್ರಿವಿಲೇಜಸ್ ಇತ್ತು. ಅಂದರೆ ಅವರಿಗೆ ಬೇಕಾದ ಸೌದೆ ಮಾರಾಟ ಮಾಡುವುದು, ಮತ್ತು ಅವರಿಗೆ ಬೇಕಾದ ಮರಮುಟ್ಟುಗಳನ್ನು ಪಡೆಯುವುದಕ್ಕೆ ಇದುವರೆಗೆ ಯಾರ ಹಂಗೂ ಇರಲಿಲ್ಲ. ನಮ್ಮ ಕಡೆ ದೇವರೇ ಬೆಳೆಸಿರತಕ್ಕಂಥ ನಮ್ಮ ಅರಣ್ಯ ಪ್ರದೇಶಕ್ಕೆ ಅಲ್ಲಿಯ ಜನರಿಗೆ ಅವಶ್ಯಕವಾದ ಪದಾರ್ಥಗಳನ್ನು ಪಡೆಯುವುದಕ್ಕೆ ಇದುವರೆಗೆ ಯಾರ ಹಂಗೂ ಇರಲಿಲ್ಲ. ಈಗ ಸರ್ಕಾರ ಇದಕ್ಕೆ ನಿಗದಿ ಮಾಡಿದ್ದಾರೆ. ಈಗ ಏನು ಮಾಡಿದ್ದಾರೆ ಎಂದರೆ ಈ ಪ್ರಿವಿಲೇಜಸ್ ಕೊಡಬೇಕಾದರೆ ಅವನಿಗೆ 1,00ಗೆ ರೂಪಾಯಿ ಕಡಿಮೆ ವರಮಾನ ಇದ್ದರೆ ಅವನಿಗೆ ಕೊಡುತ್ತೇವೆ ಎಂದು ಹೇಳುತ್ತಾರೆ. ಆದುದರಿಂದ ದಯವಿಟ್ಟು ಮಲೆನಾಡು ರಯಟ್ಸ್ ಪ್ರಿವಿಲೇಜಸ್ ಹಿಂದೆ ಏನು ಇತ್ತೋ ಅದನ್ನು ಪುನಃ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಅಮೃತಮಹಲ್ ಕಾವಲಿನ ಬಗ್ಗೆ ಹೇಳುವುದಾದರೆ ಇಲ್ಲಿ 19 ವರ್ಷದಿಂದಲೂ ವ್ಯವಸಾಯವನ್ನು ಮಾಡಿಕೊಂಡು ಹೋಗುತ್ತಾ ಇರುವ ರೈತರಿಗೆ ಮಾನ್ಯ ಮಂತ್ರಿಗಳು ಸಂಚಾರ ಮಾಡುವಾಗ ಈವಾಗ ಆ ಜಮೀನನ್ನು ನಾವೇ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. 10 ವರ್ಷದಿಂದಲೂ

ಅವರು ಆ ಜಮೀನನ್ನು ಸಾಗುವಳಿ ಮಾಡಿ ಹುರುಳಿ ಸಾಗು ಫಸಲನ್ನು ಬೆಳೆದು ಯೋಗ್ಯವಾದ ಜಮೀನಾಗಿ ಮಾಡಿದ್ದರು, ಮತ್ತು ಸರ್ಕಾರಕ್ಕೂ ಕೂಡ ಸಂಪಾದನೆ ಆಗುತ್ತಿತ್ತು. ಆದುದರಿಂದ ನಾನು ಹೇಳುವುದು ಏನೆಂದರೆ ಬೋನಾಫೈಡ್ ಅಗ್ರಿಕಲ್‌ಚರಿಸ್ಟ್ ವಶದಲ್ಲಿ ಆ ಜಮೀನು ಇದ್ದರೆ ಅದನ್ನು ಅವನಿಗೇ ಬಿಟ್ಟುಕೊಡಬೇಕು. ವ್ಯವಸಾಯಕ್ಕೆ ಯೋಗ್ಯವಾದಂಥ ಲ್ಯಾಂಡ್ಸ್‌ನ್ನು ಅವನಿಗೆ ಬಿಟ್ಟುಕೊಡಬೇಕು. ಅವನು ಅದರಿಂದ ಹುರುಳಿ ಸಾಗುವಳಿ ಮಾಡಿ ಹುರುಳಿ ಪಡೆದುಕೊಂಡು ಜಮೀನನ್ನು ಅಭಿವೃದ್ಧಿ ಮಾಡಿಕೊಳ್ಳುತ್ತಾನೆ. ಮತ್ತು ಸರ್ಕಾರಕ್ಕೂ ಇದರಿಂದ ಲಾಭವೂ ಇರುವುದರಿಂದ ರೈತರ ಹಿತವನ್ನು ಕಾಪಾಡಬೇಕು ಎಂದು ಹೇಳುತ್ತೇನೆ. ಇನ್ನು ಹೆಚ್ಚು ಮಾತನಾಡಲು ಕಾಲವಕಾಶ ಇಲ್ಲದೇ ಇರುವುದರಿಂದ ಇಷ್ಟು ಹೇಳಿ ಅಧ್ಯಕ್ಷರಿಗೆ ಹೃತ್ಪೂರ್ವಕವಾಗಿ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವ್ಯವಸಾಯ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಅರ್ಥ ಸಚಿವರು ತಮ್ಮ ಬಡ್ಜೆಟ್ ಭಾಷಣದಲ್ಲಿ ಒಂದು ಮಾತನ್ನು ಹೇಳಿದರು. ಗ್ರಾಮಾಂತರ ಪ್ರದೇಶದ ಹಳ್ಳಿಗಳು ಮುಖ್ಯವಾಗಿ ನವೀನಕರಣ ಆಗಬೇಕು ಮತ್ತು ನಗರೀಕಣ ಆಗಬೇಕು ಎಂದು ಹೇಳಿದ್ದಾರೆ. ಇದು ಬಹಳ ಸೂಕ್ತವಾದುದು. ಇದನ್ನು ಆಲೋಚನೆ ಮಾಡಿದರೆ ಅಂತಾ ಸನ್ನಿವೇಶಗಳು ಕಾಣುತ್ತಾ ಇಲ್ಲ. ಗ್ರಾಮಾಂತರ ಪ್ರದೇಶದ ಜನತೆಯ ಆರ್ಥಿಕ ಸ್ಥಿತಿ ಉತ್ತಮವಾಗಬೇಕು. ಟೌನ್‌ನಲ್ಲಿರತಕ್ಕಂಥ ಜನಗಳ ಹಾಗೆ ಅವರೂ ಕೂಡ ನೆಮ್ಮದಿಯಿಂದ ಸುಖವಾಗಿರಬೇಕು ಮತ್ತು ಉತ್ತಮವಾದ ಮಟ್ಟದಲ್ಲಿ ಜೀವನವನ್ನು ಸಾಗಿಸುವುದಕ್ಕೆ ಅನುಕೂಲವಾಗಿರತಕ್ಕಂಥ ಒಂದು ವಾತಾವರಣವನ್ನು ಕಲ್ಪಿಸಿಕೊಡಬೇಕು ಎನ್ನುವುದು ಸರ್ಕಾರದ ಉದ್ದೇಶವಾಗಿತ್ತು ಎಂದು ಕಾಣುತ್ತದೆ. ಇದನ್ನು ಚೆನ್ನಾಗಿ ಆಲೋಚನೆ ಮಾಡಿದರೆ ಇವರು ಮೂರು ತಿಂಗಳಿನಿಂದಲೂ ಆಡಳಿತವನ್ನು ನಡೆಸಿಕೊಂಡು ಬಂದುದನ್ನು ಆಲೋಚಿಸಿ ನೋಡಿದರೆ ಅಂಥಾ ದೊಡ್ಡ ಹೆಚ್ಚಿನ ಸಾಧನೆ ಸರ್ಕಾರ ಮಾಡಿದಹಾಗೆ ಕಾಣುತ್ತಾ ಇಲ್ಲ. ವ್ಯವಸಾಯದ ಬಗ್ಗೆ ಹೇಳುವುದಾದರೆ 100ಕ್ಕೆ 80 ಭಾಗ ಇರತಕ್ಕಂಥ ವ್ಯವಸಾಯಗಾರರೇ ಜಾಸ್ತಿ. ಅವರಿಗೆ ವ್ಯವಸಾಯಕ್ಕೆ ಕೊಡತಕ್ಕಂಥ ಸಾಲವಾಗಲಿ, ವ್ಯವಸಾಯದ ಬೀಜವಾಗಲಿ, ರಾಸಾಯನಿಕ ಗೊಬ್ಬರವಾಗಲಿ ಸಕಾಲಕ್ಕೆ ಒದಗಿಸಿ ಕೊಡಬೇಕು. ಇದಕ್ಕೆ ಬೇಕಾದಷ್ಟು ಅಡ್ಡಿ ಅಡಚಣೆಗಳು ಬಂದರೂ ಕೂಡ ಅವರ ಬಗ್ಗೆ ಮಧ್ಯವರ್ತಿಗಾರರ ದುರುಪಯೋಗವಾಗದಂತೆ ಗಮನ ತೆಗೆದುಕೊಂಡು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಇಲ್ಲದೇ ಹೋದರೆ ರೈತನು ಈ ವ್ಯವಸಾಯದಲ್ಲಿ ಉತ್ತಮವಾದ ಜೀವನವನ್ನು ನಡೆಸುವುದಕ್ಕಾಗುವುದಿಲ್ಲ. ಮತ್ತು ಇದರ ಜೊತೆಗೆ ವ್ಯವಸಾಯಗಾರರ ಜೀವನವನ್ನು ಉತ್ತಮಪಡಿಸುವುದಕ್ಕೆ ಪಶುಪಾಲನಾ ಇಲಾಖೆಯಲ್ಲಿ ಕೋಳಿ ಸಾಕಾಣಿಕೆ, ಮೀನುಗಾರಿಕೆ ಇವುಗಳನ್ನು ಉಪಕಸುಬನ್ನಾಗಿ ಇಡುವ ಒಂದು ಕಾರ್ಯಕ್ರಮವನ್ನು ಗ್ರಾಮಾಂತರ ಪ್ರದೇಶದಲ್ಲಿರುವ ರೈತರಿಗೆ ಅನುಕೂಲವಾಗುವ ಹಾಗೆ ಮಾಡಿಕೊಡಬೇಕು. ಅವರು ಯಾವುದಾದರೂ ಒಂದು ರೀತಿಯಲ್ಲಿ ಸಂಪಾದನೆ ಮಾಡಿಕೊಂಡು ಉತ್ತಮವಾದ ಜೀವನವನ್ನು ನಡೆಸಬೇಕು. ವ್ಯವಸಾಯ ಸಚಿವರು ಈಗ ಮಂಡಿಸಿರತಕ್ಕಂಥ ಡಿಮ್ಯಾಂಡ್‌ನಲ್ಲಿ ಈರೀತಿಯಾದ ಒಂದು ಲಕ್ಷಣವೂ ಕಾಣುತ್ತಾ ಇಲ್ಲ. ಆದುದರಿಂದ ಇದನ್ನು ವಿರೋಧಿಸಬೇಕಾಗುತ್ತದೆ. ಅಲ್ಲದೆ ವ್ಯವಸಾಯ ಇಲಾಖೆಯಲ್ಲಿರುವ ಅಧಿಕಾರಿಗಳು ಮಾಡತಕ್ಕಂಥ ಕೆಲಸಕಾರ್ಯಗಳನ್ನು ಕೂಲಂಕಷವಾಗಿ ನೋಡಿದರೆ ಬಹುಶಃ ಅವರಿಂದ ಹೆಚ್ಚಿನ ಪ್ರಯೋಜನ ರೈತರಿಗೆ ಆಗುತ್ತಾ ಇಲ್ಲ ಎಂದು ಧೈರ್ಯವಾಗಿ ಈ ಸಭೆಯ ಮುಂದೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸಚಿವರಮೇಲೆ ನನಗೆ ಬಹಳ ಗೌರವ ಇದೆ, ದಕ್ಷರು ಅನುಭವಿಗಳು ಆಗಿರುವುದರಿಂದ ತಮ್ಮ ಒಂದು ಕಾರ್ಯವ್ಯಾಪ್ತಿಯಲ್ಲಿ ಉತ್ತಮವಾದ ಒಂದು ಸೇವೆಯನ್ನು ದೇಶಕ್ಕೆ ಮಾಡಬೇಕು. ಇಂಥಾ ದಕ್ಷರಾದ ಒಳ್ಳೆಯ ಭಾವನೆ ಇಟ್ಟುಕೊಂಡಿರುವಂಥಾವರ ಕೈಗೆ ಈ ವ್ಯವಸಾಯ ಆಡಳಿತ ಒಳಪಟ್ಟಿರುವುದರಿಂದ ಇದನ್ನು ಮೊದಲು ಇದ್ದಹಾಗೆ ನಿಶ್ಚೇತನವಾದ ರೂಪದಲ್ಲಿ ಇರುವುದು ಅಷ್ಟೊಂದು ಶೋಭಾಯಮಾನವಾಗಿ ತೋರುವುದಿಲ್ಲ ಎಂದು ಹೇಳುತ್ತೇನೆ.

ಒಂದು ಉದಾಹರಣೆ ಹೇಳುವುದಾದರೆ ಕಳೆದ 6–7 ತಿಂಗಳಿನಲ್ಲಿ ರಾಜ್ಯದಲ್ಲಿ ರಾಸಾಯನಿಕ ಗೊಬ್ಬರದ ಕೊರತೆ ಬಹಳವಾಗಿತ್ತು. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ಆ ಸಮಯದಲ್ಲಿ ರೈತರ ಅವಶ್ಯಕತೆಗನುಗುಣವಾಗಿ ಈ ರಾಜ್ಯಕ್ಕೆ ಎಷ್ಟು ಗೊಬ್ಬರ ಬೇಕು ಎಂದು ಕೇಂದ್ರ ಸರ್ಕಾರಕ್ಕೆ ತಿಳಿಸದೇ ಇದ್ದ ಕಾರಣ ಈ ರಾಜ್ಯದಲ್ಲಿ ಈ ರೀತಿ ಗೊಬ್ಬರದ ಕೊರತೆ ಉಂಟಾಯಿತು ಎಂದು ಹೇಳಿದರು. ನಿಜ ಇದ್ದರೂ ಇರಬಹುದು. ಆದರೆ ನಿರ್ಲಕ್ಷ್ಯತೆಯಿಂದ ಈ ದಿವಸ ಸಾವಿರಾರು ಜನ ರೈತರನ್ನು ತೊಂದರೆಗೆ ಒಳಗು ಮಾಡಿರತಕ್ಕ

(ಶ್ರೀ ಕೆ. ಎಚ್. ಹನುಮೇಗೌಡ)

ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ ? ತೆಗೆದುಕೊಳ್ಳುವುದಾದರೆ ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ಹೇಳಬೇಕೆಂದು ಒತ್ತಾಯಮಾಡಿ ಕೇಳುತ್ತೇನೆ.

4-30 P.M.

ರಾಸಾಯನಿಕ ಗೊಬ್ಬರ ನಮ್ಮ ದೇಶದಲ್ಲಿ ಕೋಟ್ಯಂತರ ರೂಪಾಯಿ ಬೆಲೆ ಬಾಳುವಷ್ಟು ಉತ್ಪಾದನೆಯಾಗಿ ವಿತರಣೆಯಾಗುತ್ತಿದೆ. ಹೆಚ್ಚು ದುಡ್ಡನ್ನು ಯಾವ ರೈತ ಬೇಕಾದರೂ ಕೊಟ್ಟು ಎಷ್ಟು ಗೊಬ್ಬರ ಬೇಕಾದರೂ ಕೊಂಡುಕೊಳ್ಳಬಹುದು. ಗೊಬ್ಬರದ ಅಭಾವವುಂಟಾಗಿರುವುದು ಸರ್ಕಾರಿ ಮಟ್ಟದಲ್ಲಿ ಮತ್ತು ಸೊಸೈಟಿಗಳಲ್ಲಿ. ದೇಶದಲ್ಲಿ ಗೊಬ್ಬರದ ಅಭಾವವಿಲ್ಲ. ಈ ಅಭಾವ ವನ್ನು ಅಧಿಕಾರಿಗಳು ಸೇರಿಕೊಂಡು ಮಾಡುತ್ತಿದ್ದಾರೆಂದರೆ ತಪ್ಪಾಗಲಾರದು. ಈ ಕೃತಕ ಅಭಾವ ವನ್ನು ಸೃಷ್ಟಿ ಮಾಡುವುದಲ್ಲದೆ, ಅದರಲ್ಲಿ ಪಾಲುದಾರರಾಗಿದ್ದಾರೆಂದು ಹೇಳುತ್ತೇನೆ. ಹಾಸನ ಜಿಲ್ಲೆಯಲ್ಲಿ 25 ಸಾವಿರ ಎಕರೆಯಲ್ಲಿ ಆಲೂಗೆಡ್ಡೆ ಹಾಕಿದ್ದಾರೆ. ಕಳೆದ ಒಂದು ತಿಂಗಳಿಂದ ಸೋನ ಮಳೆ ಸುರಿದು ಬೆಳೆ ಹಾಳಾಗುತ್ತಿದೆ, ನಾನು ಮಾನ್ಯ ಸಚಿವರನ್ನು ಭೇಟಿ ಮಾಡಿ ಕೇಳಿದಾಗ 300 ಟನ್ ಗೊಬ್ಬರವನ್ನು ಹಾಸನಕ್ಕೆ ಅಲಾಟ್ ಮಾಡಿದ್ದೇವೆಂದು ಹೇಳಿದರು. ಮೂರು ದಿವಸದ ಹಿಂದೆ ನಾನು ಹಾಸನಕ್ಕೆ ಹೋಗಿ ನೋಡಿದರೆ ನನಗೆ ಬಹಳ ವ್ಯಥೆಯಾಯಿತು. ಸಾವಿರಾರು ಜನ ಗೊಬ್ಬರ ಕ್ಕೋಸ್ಕರ ಅಲೆದಾಡುತ್ತಿದ್ದರು. ಮನೆಯಲ್ಲಿದ್ದ ಒಡವೆಗಳನ್ನು ಮಾರಿ ಸೊಸೈಟಿಗಳ ಮುಂದೆ ಮತ್ತು ಅಂಗಡಿಗಳ ಮುಂದೆ ಕ್ಯೂ ನಿಂತುಕೊಂಡು ಗೊಬ್ಬರ ತೆಗೆದುಕೊಳ್ಳುತ್ತಿದ್ದರು. ಉಪ್ಪು ಅಮೋನಿಯಂ ಸಲ್ಫೇಟ್ 555 ರೂಪಾಯಿ ಬೆಲೆ ಇದ್ದರೆ ಅದನ್ನು 1,100 ರೂಪಾಯಿಗಳಿಗೆ ಮಾರಾಟ ಮಾಡು ತ್ತಿದ್ದಾರೆ. ಇಂಥ ಅನ್ಯಾಯ ನಡೆಯುತ್ತಿದೆ. ಸರ್ಕಾರದವರು ಏಕೆ ಕಣ್ಣು ಮುಚ್ಚಿ ಕುಳಿತಿದ್ದಾ ರೆಂದು ಕೇಳುತ್ತೇನೆ. ಬ್ಲಾಕ್ ಮಾರ್ಕೆಟ್ ಹೇಗೆ ನಡೆಯುತ್ತಿದೆ ಎಂದು ನೋಡಿ ಬ್ಲಾಕ್ ಮಾರ್ಕೆಟ್ ಮಾಡುವವರ ಮೇಲೆ ಅಧಿಕಾರಿಗಳು ಏನೂ ಕ್ರಮ ತೆಗೆದುಕೊಂಡಿಲ್ಲ. ಅಧಿಕಾರಿಗಳು/ ಸುಮ್ಮನೆ ನೋಡಿಕೊಂಡು ಇದ್ದಾರೆ. ಮಾನ್ಯ ಮಂತ್ರಿಗಳು ಈ ಬಗ್ಗೆ ಏನು ಮಾಡುತ್ತಿದ್ದಾರೆಂದು ಕೇಳುತ್ತೇನೆ.

ಡೆಪ್ಯುಟಿ ಡೈರೆಕ್ಟರ ಹತ್ತಿರ ಹೋಗಿ 'ಗೊಬ್ಬರದ ಬಗ್ಗೆ ಕೇಳಿದಾಗ, ನಾನು ಬರೆದಿದ್ದೆ, 60 ಟನ್ ಮಾತ್ರ ಬಂದಿದೆ ಎಂದು ಹೇಳಿದರು. ಅಲ್ಲಿ ಸಾವಿರಾರು ಟನ್ ಗೊಬ್ಬರದ ಅವಶ್ಯಕತೆ ಇದೆ. ನಾನು ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ, ಹೋಗಿ ವಿಚಾರಿಸಿದಾಗ ಯೂರಿಯಾ ಬರುವುದಿದೆ, ಮೂರು ನಾಲ್ಕು ದಿವಸಗಳಲ್ಲಿ ಕಳುಹಿಸುತ್ತೇವೆಂದು ಹೇಳಿದರು. ರೈತ ಅಭಿವೃದ್ಧಿಗೆ ಬರಬೇಕು, ಅವನು ಚೆನ್ನಾಗಿ ಬಾಳಿ ಬದುಕಬೇಕು. ಅವನನ್ನು ನೋಡಿ ಸಂತೋಷಪಡಬೇಕು, ನಿಮ್ಮ ಮುಕ್ತಿಯೇ ನಮ್ಮ ಮುಕ್ತಿ ಎಂದು ಹೇಳುವ ಜನ ಅವನು ತೊಂದರೆಪಡುತ್ತಿದ್ದರೂ ಕೂಡ ನೋಡದೆ ಅವನ ಬಗ್ಗೆ ಸುಮ್ಮನೆ ಮೊಸಳೆ ಕಣ್ಣೀರು ಸುರಿಸಿ ವೋಟು ತೆಗೆದುಕೊಂಡು ಬಂದು ಪಡಬಾರದ ಕಷ್ಟವನ್ನು ಪಡುತ್ತಿದ್ದರೂ ಸುಮ್ಮನೆ ಇರುವುದನ್ನು ನೋಡಿ ಅವನು ಶಾಪವನ್ನು ಹಾಕಿದರೆ ನೀವು ಅದಕ್ಕೆ ಒಳಗಾಗುತ್ತೀರಿ ಎಂದು ಹೇಳುತ್ತೇನೆ. ನಾಳೆಯೇ ಮಂತ್ರಿಗಳಾಗಲೀ ಅಥವಾ ಯಾರಾದರೂ ಉನ್ನತಾಧಿಕಾರಿಗಳು ಪ್ರೋಗ್ರಾಂ ಕೊಡದೆ ಹೋಗಿ ನೋಡಿಕೊಂಡು ಬಂದರೆ ಏನು ಅನ್ಯಾಯವಾಗುತ್ತಿದೆ, ಅದಕ್ಕೆ ಕಾರಣರು ಯಾರು ಎನ್ನುವುದು ಗೊತ್ತಾಗುತ್ತದೆ. ಈ ರೀತಿ ಆಗುವುದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಎರಡು ಮೂರು ವರ್ಷದಿಂದ ಇಲಾಖೆಯಲ್ಲಿ ಬೇಕಾದಷ್ಟು ಹುದ್ದೆಗಳನ್ನು ನಿರ್ಮಾಣ ಮಾಡಿ ದ್ದಾರೆ. ನಿನ್ನೆ ನಮಗೆ ಇಲಾಖೆಯಿಂದ ಕೊಟ್ಟ ಪುಸ್ತಕವನ್ನು ಓದಿದರೆ ಯಾರಿಗಾದರೂ ತಲೆ ತಿರುಗಬೇಕು. ಮಾಡಬಾರದ ಕೆಲಸ ಮಾಡಿದರೆ ದೇಶದ ಗತಿ ಏನು ? ಅವರು ಹೇಳಿರುವುದನ್ನು ನೋಡಿದರೆ ರೈತನನ್ನು ಹಿಡಿಯುವವರೇ ಇಲ್ಲವೆನ್ನುವ ರೀತಿ ಇದೆ. ಮೋಸ, ವಂಚನೆ, ಸುಳ್ಳು ಡೈರಿ ಕೊಟ್ಟು ಜೀವನ ಸಾಗಿಸತಕ್ಕ ಬೇಕಾದಷ್ಟು ಅಧಿಕಾರಿಗಳಿಗೆ ರಕ್ಷಣೆ ಕೊಟ್ಟು ಪ್ರೋತ್ಸಾಹ ಮಾಡಿಕೊಂಡು ಹೋಗುತ್ತಿದ್ದಾರೆ. ಯೋಗ್ಯರಿಗೆ ಪುರಸ್ಕಾರವಿಲ್ಲ, ಅಯೋಗ್ಯರಿಗೆ ರಕ್ಷಣೆ ಕೊಡುವ ಮತ್ತು ರೈತರ ಕಣ್ಣೀರನ್ನು ನೋಡಿ ಕಲ್ಲು ಹೃದಯವಿರುವ ಸರ್ಕಾರ ರೈತನು ಕೊಡುವ ಶಾಪಕ್ಕೆ ಖಂಡಿತ ಒಳಗಾಗುತ್ತೀರಿ ಎಂದು ಹೇಳುತ್ತೇನೆ.

ಮೂರು ನಾಲ್ಕು ವರ್ಷಗಳಿಗೆ ಮೊದಲು ಒಂದು ಜಿಲ್ಲೆಯಲ್ಲಿ ಒಬ್ಬ ಅಸಿಸ್ಟೆಂಟ್ ಡೈರೆಕ್ಟರ್ ಇದ್ದು ಬೀಜದ ಉತ್ಪಾದನೆ, ಗೊಬ್ಬರ, ಸಾಯಿಲ್ ಕನ್‌ಸರ್ವೇಷನ್ ಮುಂತಾದ ಎಲ್ಲ ಕೆಲಸ ಕಾರ್ಯಗಳನ್ನೂ ನೋಡಿಕೊಳ್ಳುತ್ತಿದ್ದರು. ಅವರ ಜಾಗಕ್ಕೆ ಇಂದು ಒಬ್ಬ ಡೆಪ್ಯುಟಿ ಡೈರೆಕ್ಟರನ್ನು ಹಾಕಿದ್ದೀರಿ. ಯಾರಾದರೂ ರೈತ ಆಫೀಸಿಗೆ ಹೋಗಿ ಗೊಬ್ಬರಬೇಕು ಎಂದರೆ ಆಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್ ಡಿಪೋಗೆ ಹೋಗಿ ತಗೆದುಕೋ ಎನ್ನುತ್ತಾರೆ, ಬಿತ್ತನೆ ಬೀಜ ಬೇಕು ಎಂದರೆ ತಾಲ್ಲೂಕು ಬೋರ್ಡ್ ಆಫೀಸಿಗೆ ಹೋಗು ಎನ್ನುತ್ತಾರೆ. ಹೀಗೆ ಒಬ್ಬೊಬ್ಬರಿಗೆ ಒಂದೊಂದು ರೀತಿ ಹೇಳುತ್ತ, ಸುಳ್ಳು ಡೈರಿ ಬರೆದುಕೊಂಡು ಕಾಲಹರಣ ಮಾಡುತ್ತಾರೆ. ಇಂಥವರಿಂದ ರೈತರಿಗೆ ಆಗುತ್ತಿರುವ ಪ್ರಯೋಜನವೇನು ಎನ್ನುವುದನ್ನು ತಿಳಿಸಬೇಕು. ಸಾವಿರಾರು ರೂಪಾಯಿ ಸಂಬಳ ಕೊಟ್ಟು ಇಟ್ಟಿರುವ ಅಧಿಕಾರಿಯ ಕೆಲಸ ಗುಮಾಸ್ತರನ್ನು ಕರೆದು ಇಲ್ಲದ ಸಲ್ಲದ ಮಾತುಗಳನ್ನು ಹೇಳುವುದು, ಜವಾನರನ್ನು ವರ್ಗ ಮಾಡುವುದು, ಇಲ್ಲವೆ ಹೋದರೆ ಗ್ರಾಮಸೇವಕರನ್ನು ಕರೆದು ವರ್ಗ ಮಾಡಿದ್ದೇನೆ ಎಂದು ಹೇಳುವುದು. ಸಾವಿರಾರು ರೂಪಾಯಿ ಸಂಬಳ ಪಡೆಯುವ ಸ್ಥಾನಗಳಿಗೆ ಪ್ರಮೋಷನ್ ಕೊಟ್ಟು ಅವರ ಕೃಪಾಕಟಾಕ್ಷದಲ್ಲಿ ಬಾಳಿ ಬದುಕಬೇಕು ಎಂದು ಸರ್ಕಾರ ಅವರ ಹೊಗಳಿಕೆಗೆ ಪಾತ್ರವಾಗಿ, ರೈತರು ಕಣ್ಣೀರು ಇಡುವುದನ್ನು ನೋಡದೆ ಇರುವಂಥ ಸರ್ಕಾರಕ್ಕೆ ಕರುಣೆ ಇದೆಯೇ ಎಂದು ಕೇಳುತ್ತೇನೆ.

ವ್ಯವಸಾಯ ಇಲಾಖೆಯಲ್ಲಿ ಏನು ಕೇಳಿದರೂ ಆಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್ ಕಡೆ, ಇಲ್ಲ ಸೊಸೈಟಿ ಕಡೆ, ಇಲ್ಲ ನ್ಯಾಷನಲ್ ಸೀಡ್ ಕಾರ್ಪೊರೇಷನ್ ಕಡೆ ಇಲ್ಲವೇ ತಾಲ್ಲೂಕು ಬೋರ್ಡ್ ಕಡೆ ತೋರಿಸುತ್ತಿದ್ದರೆ ಅವರು ಮಾಡುವ ಕೆಲಸವಾದರೂ ಏನು ? ನಮ್ಮ ಕಡೆ 'ಸುಬ್ರಹ್ಮಣ್ಯ ಪಾರುಪತ್ಯ' ಎಂದು ಹೇಳುತ್ತಾರೆ. ಸುಬ್ರಹ್ಮಣ್ಯದಲ್ಲಿ ಎಷ್ಟೋ ಜನ ಯಾತ್ರಿಕರು ಹೋಗಿರುತ್ತಾರೆ. ದೇವರ ದರ್ಶನವಾದ ಮೇಲೆ ಯಾರೋ ಅಡಿಗೆ ಮಾಡಿರುತ್ತಾರೆ, ಯಾರೋ ಬಡಿಸುತ್ತಾರೆ, ಯಾರೋ ಊಟ ಮಾಡಿ ಎದ್ದು ಹೋಗುತ್ತಾರೆ. ಇನ್ನು ಕೆಲವರು ನಿಂತಿರುತ್ತಾರೆ, ಅವರು ಅನ್ನ ತರುವವನನ್ನು ನಿಲ್ಲಿಸಿ ಏನಯ್ಯ ತಂದಿರುವುದು ಎಂದು ಕೇಳಿ ಅನ್ನ ತೆಗೆದುಕೊಂಡು ಬಂದಿದ್ದೀಯಾ, ಅತ್ತ ಕಡೆ ಹೋಗು ಎನ್ನುತ್ತಾರೆ, ಸಾರು ತರುವವನನ್ನು ನಿಲ್ಲಿಸಿ ಕೇಳಿ ಸಾರನ್ನು ಆ ಕಡೆ ತೆಗೆದುಕೊಂಡು ಹೋಗು ಎಂದು ಹೇಳುತ್ತಿರುತ್ತಾರೆ. ಇಂಥ ಕೆಲಸ ವ್ಯವಸಾಯದ ಇಲಾಖೆಯಲ್ಲಿ ನಡೆಯುತ್ತಿದೆ. ಮಾನ್ಯ ಮಂತ್ರಿಗಳ ಬಗ್ಗೆ "ಸುಬ್ರಹ್ಮಣ್ಯ ಪಾರುಪತ್ಯ" ಎಂದು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಐದಾರು ತಿಂಗಳು ಟೈಂ ಕೊಟ್ಟು ಅವರು ಯಾವರೀತಿ ಕೆಲಸ ಮಾಡುತ್ತಾರೆಂದು ನೋಡಿಕೊಂಡು ನಂತರ ಹೇಳುತ್ತೇನೆ. ಕಷ್ಟಪಟ್ಟು ಬೆಳೆಯುವ ರೈತನಿಗೆ ಬೇಕಾದ ಗೊಬ್ಬರ, ಬೀಜ ಮುಂತಾದುವನ್ನು ಒದಗಿಸದೆ, ಸುಬ್ರಹ್ಮಣ್ಯ ಪಾರುಪತ್ಯ ಮಾಡಿ ಸಾವಿರಾರು ರೂಪಾಯಿ ಸಂಬಳ ತೆಗೆದುಕೊಂಡು ಸುಖಲೋಲುಪರಾಗಿ ಜೀವನ ಸಾಗಿಸುತ್ತಿರುವಂಥ ಅನ್ಯಾಯ ನಮ್ಮ ಸರ್ಕಾರದಲ್ಲಿ ನಡೆಯುತ್ತಿದೆ. ಇದನ್ನು ಸರಿಪಡಿಸಬೇಕೆಂದು ಹೇಳುತ್ತೇನೆ.

ಲ್ಯಾಂಡ್ ರೆಕ್ಲಮೇಷನ್ನಿಗೆ ಐದು ಲಕ್ಷ ರೂಪಾಯಿ ಇಟ್ಟಿದ್ದಾರೆ. ಇದರಲ್ಲಿ ಮೋಸ ವಂಚನೆ ನಡೆಯುತ್ತಿದೆ. ಯಾರಾದರೂ ಒಬ್ಬ ರೈತ ಭೂಮಿಯನ್ನು ಉತ್ತಮಪಡಿಸಿದ್ದರೆ, ಅಲ್ಲಿ ಹಕ್ಕಿ ಎರಗಿದಹಾಗೆ ಎರಗಿ ಚಲೋ ಮಾಡಿದ್ದೀಯಾ ಎಂದು ಅವನ ರುಜು ಹಾಕಿಸಿಕೊಂಡು ಅವನಿಗೆ ಅಷ್ಟು ದುಡ್ಡು ಕೊಟ್ಟು ತಾವು ಅಷ್ಟು ತೆಗೆದುಕೊಳ್ಳುತ್ತಾರೆ. ಇದರಿಂದ ಯಾರಿಗೂ ಪ್ರಯೋಜನವಾಗಿಲ್ಲ. ಯಾರೋ ಮಾಡಿದ ಕೆಲಸವನ್ನು ಅವರು ಮಾಡಿರುವುದಾಗಿ ಹೇಳಿಕೊಂಡು ಮೋಸ ಮಾಡುತ್ತಿದ್ದಾರೆ. ಇದನ್ನು ಬೇಕಾದರೆ ನಾನು ರುಜುವಾತು ಮಾಡಿಕೊಡುತ್ತೇನೆ.

ಪ್ರತಿಯೊಂದು ಜಿಲ್ಲೆಯಲ್ಲಿಯೂ ಸೀಡ್ ಡೆವಲಪ್‌ಮೆಂಟ್ ಆಫೀಸರಿದ್ದಾರೆ. ಬೀಜ ಬೆಳೆಯುವ ರೈತ, ಅದನ್ನು ಕೊಂಡುಕೊಳ್ಳುವವರು ಎನ್.ಐ.ಎಸ್. ಆಫೀಸರ್. ಹಂಚುವವರು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರು ಅಥವಾ ಅವರ ಏಜೆಂಟರು. ಹೀಗಿರುವಾಗ ಸೀಡ್ ಡೆವಲಪ್‌ಮೆಂಟ್ ಆಫೀಸರ್ ಇರುವುದರ ಆವಶ್ಯಕತೆ ಆದರೂ ಏನು ? ಅವರ ಮೇಲ್ವಿಚಾರಣೆಯಲ್ಲಿ ಯಾವ ಕೆಲಸವೂ ನಡೆಯುವುದಿಲ್ಲ. ಆದರೂ ಕೂಡ ಒಬ್ಬ ಆಫೀಸರ್ ಮತ್ತು ಅವರಿಗೆ ಬೇಕಾದ ಸಿಬ್ಬಂದಿ ಇರುತ್ತದೆ. ಇದೇ ರೀತಿ ಮೆನ್ಯೂರ್ ಡೆವಲಪ್‌ಮೆಂಟ್ ಆಫೀಸರ್ ಹೀಗೆ ಬೇಕಾದಷ್ಟು ಜನರಿದ್ದಾರೆ. ಅವರನ್ನೆಲ್ಲ ತೆಗೆಯಬೇಕೆಂದು ಮಾನ್ಯ ಸಚಿವರನ್ನು ನಾನು ಒತ್ತಾಯ ಮಾಡುತ್ತೇನೆ.

ಇನ್ನು ಪಶುಪಾಲನೆಯ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಹಾಸನ ಟೌನಿನಲ್ಲಿ ರೂರಲ್ ಡೈರಿ ಫಾರಂ ಸ್ಯಾಂಕ್ಷನ್ ಆಗಿದೆ. ಕೆಲಸ ಶುರು ಆಗುತ್ತಾ ಇದೆ. ಮಾನ್ಯ ಮಂತ್ರಿಗಳು ದೊಡ್ಡ ಮನಸ್ಸು ಮಾಡಿ ಜಲ್ದಿ ಡೈರಿ ಫಾರಂ ಮಾಡಬೇಕು. ಡೈರಿ ಫಾರಂನಿಂದ ಲಕ್ಷಾಂತರ ಜನಕ್ಕೆ ಅನುಕೂಲವಾಗಬೇಕಾದರೆ ಇಂಟೆನ್‌ಸೀವ್ ಕ್ಯಾಟಲ್ ಸ್ಕೀಂನಲ್ಲಿ ಒಂದನ್ನಾದರೂ ತಾವು ದೊಡ್ಡ ಮನಸ್ಸು ಮಾಡಿ ನಮ್ಮ ಹಾಸನಕ್ಕೆ ಕೊಡಬೇಕು.

(ಶ್ರೀ ಕೆ. ಎಚ್. ಹನುಮೇಗೌಡ)

ಇನ್ನು ಮೀನುಗಾರಿಕೆ ಬಗ್ಗೆ ಹೇಳುವುದಾದರೆ, ಉತ್ತಮವಾದ ಕೆಲಸಗಳು ಆಗುತ್ತಾ ಇಲ್ಲ. ಇದರಲ್ಲಿ ಏನು ತೊಂದರೆ ಇದೆಯೆಂದರೆ, ಕೆರೆ ತುಂಬಿದಾಗ ಮೀನು ಇರುವುದಿಲ್ಲ; ಮೀನು ಇದ್ದಾಗ ನೀರು ಇರುವುದಿಲ್ಲ. ಮೀನಿನ ಮರಿಗಳು ಉತ್ಪಾದನೆ ಮಾಡುವ ಯೋಜನೆ ಯಾವುದೂ ಮಂಜೂರು ಆಗಿಲ್ಲ. ನಮ್ಮ ಜಿಲ್ಲೆಗೆ ಮೀನು ನರ್ಸರಿ ಒಂದನ್ನು ಮಂಜೂರು ಮಾಡಬೇಕು. ನಮ್ಮ ಜಿಲ್ಲೆಗೆ ಎರಡು ಮೂರು ವರ್ಷಗಳಲ್ಲಿ ಹೇಮಾವತಿ ನೀರನ್ನು ಕೊಡುತ್ತೇವೆಂದು ಹೇಳಿದ್ದೀರಿ. ಈ ಯೋಜನೆ ಯನ್ನು ಬೇಗನೇ ಕಾರ್ಯಗತ ಮಾಡಬೇಕು ಎಂದು ಹೇಳುತ್ತೇನೆ.

ಕಾಡಿನ ಬಗ್ಗೆ ಹೇಳುವುದಾದರೆ, ಕಾಡನ್ನು ಯಥೇಚ್ಛವಾಗಿ ಕಡಿದು ಬಿಟ್ಟು ನಮ್ಮ ಕಡೆ ಮಳೆ ಬರುವುದು ನಿಂತುಹೋಗಿದೆ. ಲಕ್ಷಾಂತರ ರೂಪಾಯಿ ಮರ ಮಾರಾಟವಾಗುತ್ತಿದೆ. ಆದುದರಿಂದ ಚೆಕ್‌ಪೋಸ್ಟ್‌ಗಳನ್ನು ಹಾಕಿ ಕಾಡು ಕಡಿಯುವುದನ್ನು ತಪ್ಪಿಸಬೇಕು.

ಇನ್ನು ಹಾರ್ಟಿಕಲ್ಚರ್ ಬಗ್ಗೆ ಒಂದು ಮಾತು ಹೇಳುತ್ತೇನೆ. ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟಿ ನಲ್ಲಿ ಕೆಲಸಕಾರ್ಯಗಳು ಆಗುತ್ತಿದೆ. ಬಹುಶಃ ದೋಷ ರಹಿತವಾದ ಪೊಟ್ಯಾಟೋ ಸೀಡ್ಸ್ ಸಪ್ಲೈ ಆಗುವುದಿಲ್ಲ. ರೈತರು ಚಿಕ್ಕಬಳ್ಳಾಪುರದಿಂದ ತೆಗೆದುಕೊಂಡು ಹೋಗುತ್ತಾರೆ. ಈ ಆಕ್ಟನ್ನು ಸ್ಟ್ರಿಕ್ಟ್ ಆಗಿ ಎನ್‌ಫೋರ್ಸ್ ಮಾಡಿ ಒಳ್ಳೆಯ ಸೀಡ್ಸ್‌ಗಳನ್ನು ಹಾಸನ ಜಿಲ್ಲೆಯಲ್ಲಿ ಉತ್ಪತ್ತಿ ಮಾಡಿ ಜನಗಳಿಗೆ ಕೊಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ರೈತರ ಮಕ್ಕಳಿಗೆ ಕಾಲೇಜಿನಲ್ಲಿ ಸೀಟ್ ರಿಸರ್ವ್ ಮಾಡುವ ಒಂದು ಅವಕಾಶ ವನ್ನು ಕಲ್ಪಿಸಿಕೊಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು).—ಮಾನ್ಯ ಅಧ್ಯಕ್ಷರೇ, ಈ ಮನೆಯ ಮುಂದಿರುವ ವ್ಯವಸಾಯ ಇಲಾಖೆ ಅನಿಮಲ್ ಹಸ್‌ಬೆಂಡರಿ, ಫಾರೆಸ್ಟ್ ಮತ್ತು ಫಿಷರೀಸ್ ಇಲಾಖೆಗಳ ಬೇಡಿಕೆ ಗಳನ್ನು ನಾನು ಸಂಪೂರ್ಣವಾಗಿ ಸ್ವಾಗತಿಸಿ ಒಂದೆರಡು ಸಲಹೆಗಳನ್ನು ಹೇಳಬಯಸುತ್ತೇನೆ. ನಮ್ಮ ಮೈಸೂರು ರಾಜ್ಯ ಕೃಷಿ ಪ್ರಧಾನವಾಧ ರಾಜ್ಯ. ನಮ್ಮ ಮೈಸೂರು ರಾಜ್ಯದಲ್ಲಿ ವ್ಯವಸಾಯವೇ ದೊಡ್ಡ ಕೈಗಾರಿಕೆ. ಸಾಧಾರಣವಾಗಿ ವರ್ಷಕ್ಕೆ 500 ಕೋಟಿ ರೂಪಾಯಿ ಉತ್ಪಾದನಾ ಶಕ್ತಿ ಇರುವ ದೊಡ್ಡ ಕೈಗಾರಿಕೆ ವ್ಯವಸಾಯ. ಕೃಷಿ ಉತ್ಪನ್ನ, ಕೃಷಿಗೆ ಬೇಕಾದ ಪ್ರಗತಿ ಎಷ್ಟು ಹೆಚ್ಚು ಹೆಚ್ಚಾಗಿ ಆಗುತ್ತದೋ ಅಷ್ಟು ನಮ್ಮ ದೇಶದ ಪ್ರಗತಿಯಾಗುತ್ತದೆ ಎಂದು ನಾನು ಈ ಸಂದರ್ಭ ದಲ್ಲಿ ಒತ್ತಿ ಹೇಳುತ್ತೇನೆ. ಈ ಕೃಷಿ ಇಲಾಖೆಗೆ ಕೃಷಿಕರಾದ ಮಾನ್ಯ ಶ್ರೀ ಕೆ. ಎಚ್. ಪಾಟೀಲರು ಮಂತ್ರಿಗಳಾಗಿ ಅಧಿಕಾರವಹಿಸಿಕೊಂಡಿದ್ದಾರೆ. ಅವರು ಕೃಷಿ ವಿಚಾರದಲ್ಲಿ ಹೆಚ್ಚಿನ ಗಮನ ಕೊಡುತ್ತಾರೆ ಎಂದು ನಾನು ನಂಬಿದ್ದೇನೆ. ನಮ್ಮ ದೇಶದಲ್ಲಿ ಕೃಷಿಯಲ್ಲಿ ವಿಭಿನ್ನವಾದ ರೀತಿ ಇದೆ. ಮಾನ್ಯ ದೇವೇಗೌಡರು ಹೇಳಿದ ಹಾಗೆ ನಮ್ಮಲ್ಲಿ ನೀರಾವರಿ ಪ್ರದೇಶ ಬಹಳ ಕಡಿಮೆ. ಅಂದರೆ, ಶೇಕಡ 14 ಪರ್ಸೆಂಟ್ ಇದೆ ಉಳಿದ ಆರು ಪಾಲು ವರುಣದ ಕೃಪಾ ದೃಷ್ಟಿಯನ್ನು ಅವಲಂಬಿಸಿ ಕೊಂಡು ವ್ಯವಸಾಯ ಆಗುವ ಸ್ಥಳ. ಉಳಿದ 80ಪಾಲು ಸ್ಥಳ ವರುಣನ ವಕ್ರದೃಷ್ಟಿಗೆ ಬದ್ಧರುವ ಖುಷ್ಕಿ ಜಮೀನು. ಈ ಖುಷ್ಕಿ ಜಮೀನಿನ ವಿಚಾರದಲ್ಲಿ ಕೃಷಿ ತಜ್ಞರು, ಕೃಷಿ ಪ್ರಯೋಗ ಮಾಡುವವರು ಇದರ ಕಡೆಗೆ ಹೆಚ್ಚಿನ ದೃಷ್ಟಿ ಹರಿಸಬೇಕು ಎಂದು ಹೇಳುತ್ತೇನೆ. ಖುಷ್ಕಿ ಜಮೀನಿನಲ್ಲಿ ಶೀಘ್ರವಾಗಿ ಬೆಳೆ ಬರುವ ಬೀಜಗಳ ಉತ್ಪನ್ನವನ್ನು ಹೆಚ್ಚು ಹೆಚ್ಚಾಗಿ ಕಂಡುಕೊಂಡು ಅದರ ಉತ್ಪಾದನೆಯನ್ನು ಎಷ್ಟು ಹೆಚ್ಚು ಮಾಡುತ್ತಾರೋ ಅಷ್ಟು ನಮ್ಮ ದೇಶದ ಕೃಷಿ ಉತ್ಪನ್ನ ಜಾಸ್ತಿ ಆಗಬಹುದು ಎಂದು ನಾನಾದರೂ ಬಲವಾಗಿ ನಂಬಿಕೊಂಡಿದ್ದೇನೆ. ಕೃಷಿ ವಿಶ್ವವಿದ್ಯಾನಿಲಯ ಮತ್ತು ಕೃಷಿ ತಜ್ಞರು, ಕೃಷಿ ವಿಚಾರದಲ್ಲಿ ಅವರು ದೃಷ್ಟಿಯನ್ನು ಹರಿಸಬೇಕು. ಮೈಸೂರು ರಾಜ್ಯದ 104 ಲಕ್ಷ ಎಕರೆ ಪ್ರದೇಶಗಳಲ್ಲಿ ಶೇಕಡ 80ಪಾಲು ಕೃಷಿ ಪ್ರದೇಶ, ಖುಷ್ಕಿ ಜಮೀನನ್ನು ಹೊಂದಿಕೊಂಡಿದೆ. ಇದು ನೀರು ಇಲ್ಲದೆ ವ್ಯವಸಾಯ ಆಗುವ ಜಾಗ. ಇದರ ಮೇಲೆ ವರುಣನ ವಕ್ರದೃಷ್ಟಿ ಪದೇ ಪದೇ ಬೀಳುವುದರಿಂದ, ಅನಾವೃಷ್ಟಿ ಹೆಚ್ಚಾಗಿ ಇರುವುದರಿಂದ ಖುಷ್ಕಿ ಜಮೀನು ವ್ಯವಸಾಯಕ್ಕೆ ಎಷ್ಟು ಅಭಿವೃದ್ಧಿ ಹೊಂದುತ್ತದೋ ಅಷ್ಟು ನಮ್ಮ ಕೃಷಿಯಲ್ಲಿ ಅಭಿವೃದ್ಧಿ ಹೊಂದುವುದಕ್ಕೆ ಸಾಧ್ಯವಿದೆ ಎಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಮೂಲಕ ಒತ್ತಾಯ ಮಾಡುತ್ತಿದ್ದೇನೆ. ಈ ಖುಷ್ಕಿ ಜಮೀನಿನ ವಿಚಾರದಲ್ಲಿ ತಾವು ಆಲೋಚನೆ ಮಾಡಿ ಆದಷ್ಟು ಜಾಗ್ರತೆ ಬೆಳೆ ಬರುವ ಬೀಜಗಳನ್ನು ಉತ್ಪತ್ತಿ ಮಾಡುವಂತೆ ವ್ಯವಸಾಯ ತಜ್ಞರಿಗೆ ಆದೇಶ ಕೊಡಬೇಕು ಎಂದು ಈ ಸಭೆಯಲ್ಲಿ ಒತ್ತಿ ಹೇಳುತ್ತೇನೆ. ಆಮೇಲೆ ಮೈಸೂರು ರಾಜ್ಯದ 104ಲಕ್ಷ ಎಕರೆ ಭೂಮಿಯಲ್ಲಿ, 11 ಲಕ್ಷ ಎಕರೆ ಭೂಮಿಯಲ್ಲಿ ಭತ್ತದ ಬೆಳೆ ಬೆಳೆಯುತ್ತೇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೋಡಿದರೆ, 2,15,000 ಹೆಕ್ಟ್ಯಾರುಗಳ ಪ್ರದೇಶ

ದಲ್ಲಿ ನಾವು ಭತ್ತವನ್ನು ಬೆಳೆಯುತ್ತಿದ್ದೇವೆ. ಒಟ್ಟು ಮೈಸೂರು ರಾಜ್ಯದ ಐದನೆ ಒಂದು ಭಾಗದ ಭತ್ತದ ಬೆಳೆಯನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳೆಯುತ್ತಿದ್ದೇವೆ. ನಮ್ಮ ರಾಜ್ಯದ ಬೇರೆ ಭಾಗಗಳಲ್ಲಿ ಅನಾವೃಷ್ಟಿಯಿಂದ ಬೆಳೆಯಾಗುತ್ತಿದ್ದರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಬೆಳೆಯಾಗುತ್ತಿದೆ. ಇದನ್ನು ಅಧ್ಯಯನ ಮಾಡಬೇಕು. ವಿಪರೀತ ಮಳೆ ಬಂದು ಮಣ್ಣಿನ ಸಾರ ಕಿತ್ತುಕೊಂಡು ಹೋಗಿದೆ, ಮಣ್ಣಿನ ಸಾರ ಇಲ್ಲದೆ ಇರುವುದರಿಂದ ಮಣ್ಣನ್ನು ಸಾರ ತುಂಬುವಂತೆ ಏನು ಮಾಡಬೇಕು ಎಂದು ಆಲೋಚನೆ ಮಾಡಿದರೆ ನಮ್ಮ ಪ್ರದೇಶದಲ್ಲಿ ಇನ್ನೂ ಹೆಚ್ಚಿನ ಉತ್ಪಾದನೆಯಾಗುತ್ತದೆ. ಮಂಡ್ಯ, ಶಿವಮೊಗ್ಗ ಜಿಲ್ಲೆಯಲ್ಲಿ ನೋಡಿದರೆ, ನಮ್ಮ ಜಿಲ್ಲೆಯಲ್ಲಿ ಒಂದು ಎಕರೆಯ ಉತ್ಪನ್ನ ಬಹಳ ಕಡಿಮೆ. ನಮ್ಮ ಜಿಲ್ಲೆಯಲ್ಲಿ ಮಣ್ಣಿನ ಸಾರ ಇಲ್ಲ. ಪ್ರತಿ ವರ್ಷ ಹೆಚ್ಚಾಗಿ ಮಳೆಬಂದು ಮಣ್ಣಿನ ಸಾರವನ್ನು ನೀರು ಕೊಚ್ಚಿಕೊಂಡು ಹೋಗುವುದರಿಂದ ಸಾರ ತುಂಬಲು ಕಾರ್ಯಕ್ರಮ ಕೈಗೊಳ್ಳಬೇಕಾಗಿದೆ. ಈ ವಿಚಾರದಲ್ಲಿ ತಜ್ಞರು ಆಳವಾಗಿ ಅಭ್ಯಾಸ ಮಾಡಿ ಏನಾದರೂ ಒಂದು ಪರಿಹಾರ ಕಂಡುಕೊಂಡರೆ ನಮ್ಮ ಜಿಲ್ಲೆಯಲ್ಲಿ, ಮಂಡ್ಯ, ಶಿವಮೊಗ್ಗ ಜಿಲ್ಲೆಗಳಿಗಿಂತ ಹೆಚ್ಚಾಗಿ ಭತ್ತದ ಉತ್ಪನ್ನ ತೆಗೆಯಬಹುದು. ಏಕೆಂದರೆ ಮೈಸೂರು ರಾಜ್ಯದಲ್ಲಿ ಅತಿ ಪ್ರಾಮುಖ್ಯವಾಗಿ ಅಕ್ಕಿ ಬೆಳೆಯುವ ಜಾಗ, ನಮ್ಮ ಜಿಲ್ಲೆಯಲ್ಲಿ ಇರುವುದರಿಂದ ಹೆಚ್ಚಿನ ಉತ್ಪತ್ತಿ ಆಗುವ ಹಾಗೆ ಕೃಷಿ ತಜ್ಞರು, ಕೃಷಿ ಇಲಾಖೆಯವರು ಪರಿಶೀಲನೆ ನಡೆಸಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಮೊನ್ನೆ ನನ್ನ ಕ್ಷೇತ್ರದಲ್ಲಿ 10—20 ದಿವಸಗಳಿಂದ ಉಳ್ಳಾಲ ಗ್ರಾಮದಲ್ಲಿ ನೆರೆ ಬಂದು ಸುಮಾರು ಎರಡು ಸಾವಿರ ಎಕರೆಯಲ್ಲಿ ಒಂದಾಣಿ ಬೆಳೆಯನ್ನು ಬೆಳೆಯುವ ಹಾಗಿಲ್ಲ. ಎರಡು ಸಾವಿರ ಎಕರೆ ಪ್ರದೇಶದಲ್ಲಿ ಉಳಿಯಾಲ ಕೋಡಿ, ಮತ್ತೂರು ಗ್ರಾಮಗಳಲ್ಲಿ ನೀರು ತುಂಬಿ ಹೋಗಿದೆ ಎಂದು ಟೆಲಿಗ್ರಾಂ ಬಂದಿದೆ. ಇಂತಹ ಅತಿ ವೃಷ್ಟಿಯಿಂದ ಅಲ್ಲಿರುವ ಬೆಳೆ ನಷ್ಟವಾಗಿದೆ. ಆದುದರಿಂದ ರೈತರಿಗೆ ಕೃಷಿ ಇಲಾಖೆಯವರು ಆವಷ್ಟು ಪರಿಹಾರ ಒದಗಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಗೊಬ್ಬರವನ್ನು ವಿತರಣೆ ಮಾಡುವಲ್ಲಿ ಅನೇಕ ತೊಂದರೆಗಳನ್ನು ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಇದನ್ನು ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ಗೆ ವಹಿಸಿಕೊಟ್ಟಿದ್ದಾರೆ. ಸಂತೋಷ, ಆದರೆ ನಮ್ಮ ಜಿಲ್ಲೆಯಲ್ಲಿ ನಮ್ಮ ತಾಲ್ಲೂಕಿನಲ್ಲಿ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಬ್ರಾಂಚಸ್ ಇರುವುದಿಲ್ಲ. ಆದ್ದರಿಂದ ಗೊಬ್ಬರದ ವಿತರಣೆ ಸರಿಯಾಗಿ ಸಕಾಲಕ್ಕೆ ಆಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅವರ ಏಜನ್ಸಿಯು ಏನಿದೆ, ಅದರ ಒಂದು ಬ್ರಾಂಚನ್ನು ಅಲ್ಲಿ ತೆಗೆಯುವುದಿದ್ದರೆ, ಅದರ ಮೂಲಕ ರೈತರಿಗೆ ಅನುಕೂಲವಾಗುವಂತೆ ಒಂದು ಯೋಜನೆಯನ್ನು ಪ್ರತಿ ತಾಲ್ಲೂಕ್ ಕೇಂದ್ರಗಳಲ್ಲಿ ಅಥವಾ ಒಂದೊಂದು ಅಸೆಂಬ್ಲಿ ಕ್ಷೇತ್ರದಲ್ಲಿ ಮಾಡಬೇಕು. ರೈತರು ಗೊಬ್ಬರ ಮತ್ತು ಬೀಜಗಳಿಗಾಗಿ ಸಕಾಲದಲ್ಲಿ ಎಲ್ಲಿಗೆ ಹೋಗಬೇಕು ? ಏನು ಮಾಡಬೇಕು ಎಂದು ಕಂಗೆಟ್ಟಿದ್ದಾರೆ. ಅದಕ್ಕಾಗಿ ತೀವ್ರ ಗಮನಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೃಷಿ ಉತ್ಪಾದನೆಗೆ ಪ್ರೋತ್ಸಾಹದಾಯಕವಾದ ಬೆಲೆ ಬರಬೇಕು ಎಂದು ಮಾನ್ಯ ಮಿತ್ರರನೇಕರು ಹೇಳಿದ್ದಾರೆ. ಉತ್ಪತ್ತಿ ಮಾಡುವ ರೈತನಿಗೆ ಪ್ರೋತ್ಸಾಹದಾಯಕವಾದ ಬೆಲೆ ಸಿಗದಿದ್ದರೆ ಕೃಷಿಯಲ್ಲಿ ಅವನಿಗೆ ಏನು ಇಂಟರೆಸ್ಟ್ ಇದೆ, ಅದು ಕಳೆದುಹೋಗುತ್ತದೆ. ಕೃಷಿಕನಿಗೆ ಉತ್ಪತ್ತಿಗೆ ಯೋಗ್ಯ ಪ್ರತಿಫಲ ಸಿಗುತ್ತದೆ ಎಂದು ಆಗಬೇಕು. ಪ್ರೋತ್ಸಾಹದಾಯಕವಾದ ಬೆಲೆ ಏನು ಇದೆ ಅದು ರೈತರ ಉತ್ಪನ್ನಕ್ಕೆ ಸಿಗುವಂತಾಗಬೇಕು. ಅದನ್ನು ತೀವ್ರ ರೀತಿಯಲ್ಲಿ ಯೋಚನೆ ಮಾಡಬೇಕು. ಮುಖ್ಯವಾಗಿ ಮೀನುಗಾರಿಕೆ ಇಲಾಖೆ ವಿಚಾರದಲ್ಲಿ ನಮ್ಮ ಸರ್ಕಾರದವರು ಏತಕ್ಕೋ ದೃತರಾಷ್ಟ್ರ ದೃಷ್ಟಿಯನ್ನು ಹಾಕಿದ್ದಾರೆ. ನಮಗೆ ಕೊಟ್ಟ ಕಾರ್ಯಕ್ರಮ ಪಟ್ಟಿಯಲ್ಲಿ ಕೂಡ ಮೀನುಗಾರಿಕೆ ಇಲಾಖೆಯನ್ನು ನಿಕೃಷ್ಟವಾಗಿ ತಾತ್ಸಾರ ಭಾವನೆಯಿಂದ ನೋಡುತ್ತಿರುವುದನ್ನು ನೋಡಿದರೆ ಮೀನಿನ ಮೇಲಿನ ವೈಷಮ್ಯದಿಂದಲೋ ಏನೋ ಎಂದು ಗೊತ್ತಾಗುವುದಿಲ್ಲ. ಮೀನು ಅತಿ ಪೌಷ್ಟಿಕ ಆಹಾರ ಒದಗಿಸುವ ವಸ್ತು. ಅಷ್ಟೇ ಅಲ್ಲದೆ ಮೈಸೂರು ಪ್ರದೇಶದಲ್ಲಿ ನಮ್ಮ ದೇಶದ ನಾಲ್ಕನೇ ಒಂದು ಪಾಲು ಮೀನು ಉತ್ಪಾದನೆ ಮಾಡುತ್ತಾರೆ. 70-71 ಸಾಲಿನಲ್ಲಿ 1 ಲಕ್ಷ 27 ಸಾವಿರ ಟನ್ ಸಮುದ್ರ ಮೀನಿನ ಉತ್ಪಾದನೆ ಮತ್ತು 63 ಸಾವಿರ ಟನ್ ಒಳನಾಡು ಮೀನಿನ ಉತ್ಪಾದನೆಯನ್ನು ನಮ್ಮ ರಾಜ್ಯದಲ್ಲಿ ಮಾಡಿ 2 ಕೋಟಿ ರೂಪಾಯಿ ವಿದೇಶಿ ವಿನಿಮಯವನ್ನು ಮೈಸೂರು ರಾಜ್ಯ ಗಳಿಸಿಕೊಟ್ಟಿದೆ. 1970-71ನೇ ಇಸವಿಯಲ್ಲಿ ಅಷ್ಟು ಉತ್ಪಾದನೆ ಆದರೆ, ಕಳೆದ ವರ್ಷ ಅಂದರೆ 71-72ಕ್ಕೆ ಮೀನಿನ ಉತ್ಪಾದನೆಯಲ್ಲಿ ಸ್ವಲ್ಪ ಕೊರತೆ ಉಂಟಾಗಿದೆ. 71-72ರಲ್ಲಿ ಮೀನಿನ ಉತ್ಪಾದನೆಯು ಸಾವಿರ ಟನ್ನಿಗೆ ಬಂದು ನಿಂತಿದೆ. ಇದು ಮಾತ್ರವಲ್ಲದೆ ಅತಿ ಪ್ರಾಮುಖ್ಯವಾದ ವಿದೇಶಿ ವಿನಿಮಯ ಗಳಿಸಿಕೊಡುವ ಸಿಗಡಿಮೀನು ಏನು ಇವೆ ಇದು ಸಮುದ್ರದಲ್ಲಿ ಬಹಳ ಕಡಿಮೆಯಾಗಿರುವುದು ಶೋಚನೀಯವಾದ ವಿಚಾರ.

ಶ್ರೀ ಕೋಣಂದೂರು ಲಿಂಗಪ್ಪ.—ಮಂಗಳೂರು ಶೆಟ್ಟರು ಮೀನು ಮೀನು ... ಬೆಂಗಳೂರು ಸೆಟ್ಟರಿಗೆ ಮೀನು ಎಂದರೆ ...

ಶ್ರೀ ಬಿ. ಭಾಸ್ಕರ ಶೆಟ್ಟಿ.—ಬೆಂಗಳೂರು ಶೆಟ್ಟರೇ ಬೇರೆ, ಮಂಗಳೂರು ಶೆಟ್ಟರೇ ಬೇರೆ.
ಸಿಗದಿ ಮೀನು ಹೆಚ್ಚಿಗೆ ವಿದೇಶಿ ವಿನಿಮಯ ಕೊಡುವುದು. ಈ ಮೀನಿನ ಕೊರತೆಗೆ ಕಾರಣ ಏನು
ಎಂದು ತಜ್ಞರು ನೋಡಬೇಕು. 1092 ಯಾಂತ್ರಿಕ ದೋಣಿಗಳಲ್ಲಿ ಎರಡು ಯಾಂತ್ರಿಕ ದೋಣಿಗಳು
ಸಮುದ್ರ ಕರಾವಳಿಯಲ್ಲಿ ಕೆಲಸಮಾಡುತ್ತಿವೆ ಎಂದು ಹೇಳಿದ್ದೀರಿ. ಯಾಂತ್ರಿಕ ದೋಣಿಗಳಲ್ಲಿ
ಹೆಚ್ಚಿನವು ಆಳವಾದ ನೀರಿಗೆ ಹೋಗಲು ಶಕ್ತಿಯುತವಾಗಿಲ್ಲ. 34-40 ಅಶ್ವ ಶಕ್ತಿಯ ದೋಣಿಗಳು
ಹೆಚ್ಚಿಗೆ ಇರುವುದರಿಂದ ಅವು 10-15 ಮೈಲಿ ಒಳಗೆ ಪ್ರದೇಶಕ್ಕೆ ಹೋಗಿ ಮೀನುಗಳನ್ನು ಹಿಡಿಯ
ಬಹುದು. 100-150 ಮೈಲಿ ದೂರಕ್ಕೆ ಹೋಗಿ ಆಳವಾದ ಸಮುದ್ರದಲ್ಲಿ ಮೀನು ಹಿಡಿಯುವುದಕ್ಕೆ
ಆಗುವುದಿಲ್ಲ. ಆಳವಾದ ಸಮುದ್ರಕ್ಕೆ ಹೋಗಲು ದೊಡ್ಡ ಯಾಂತ್ರಿಕ ದೋಣಿಗಳನ್ನು ತಯಾರಿಸಿ
ಮೀನುಗಾರರಿಗೆ ಕೊಟ್ಟು ಮೀನಿನ ಉತ್ಪಾದನೆಯಲ್ಲಿ ಹೆಚ್ಚಿನ ಪ್ರಗತಿ ತೋರಿಸಬೇಕು. ಮತ್ತು
ಇದರಬಗ್ಗೆ ಆಸಕ್ತಿ ವಹಿಸಿ ಹೆಚ್ಚು ಹೆಚ್ಚಾಗಿ ಕೆಲಸಮಾಡಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ
ವಿನಂತಿ ಮಾಡಿಕೊಳ್ಳುತ್ತೇನೆ. ಆಮೇಲೆ ಮೀನಿನ ಇಲಾಖೆ ಬಗ್ಗೆ ತಾತ್ಸಾರ ತೋರಿಸಿದ್ದಾರೆ.
ಕಳೆದ ವರ್ಷ 73 ಲಕ್ಷ ರೂಪಾಯಿ ಯೋಜನೆ ವಿಚಾರದಲ್ಲಿ ನಮಗೆ ಹಣವನ್ನು ಒದಗಿಸಿದರೆ ಈಗ
ಕೇವಲ 66 ಲಕ್ಷ ರೂಪಾಯಿ ಒದಗಿಸಿದ್ದಾರೆ. ಇದು ಕಡಿಮೆ. ಬೇರೆ ಬೇರೆ ಇಲಾಖೆಗಳಿಗೆ ಒದಗಿಸಿ
ರುವ ಹಣವನ್ನು ನೋಡಿದರೆ ಇದರಲ್ಲಿ ಕೆಲಸಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳು
ತ್ತೇನೆ. ಆದುದರಿಂದ ಸರ್ಕಾರದವರು ದೊಡ್ಡ ಮನಸ್ಸುಮಾಡಿ ವಿದೇಶಿ ವಿನಿಮಯಗಳಿಸುವ ಈ
ವಿಚಾರದಲ್ಲಿ ಹೆಚ್ಚು ಹೆಚ್ಚಾಗಿ ಹಣ ಒದಗಿಸಿ ಕರಾವಳಿಯ ಮೀನಿನ ಉತ್ಪಾದನೆ ಹೆಚ್ಚುಮಾಡ
ಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಇನ್ನು ಮೀನು ಹಿಡಿಯುವ ಯಾಂತ್ರಿಕ
ದೋಣಿಗಳಿಗೆ ಕೆಲವು ಸಹಾಯ ಧನವನ್ನು ಕೊಡುವ ಕಾರ್ಯಕ್ರಮವನ್ನು ಸರ್ಕಾರದವರು
ಇಟ್ಟುಕೊಂಡಿದ್ದಾರೆ. ಕೆಲವರು ಸಹಾಯಧನ ಎಂದರೆ ಮೀನುಗಾರರಿಗೆ ಮಾತ್ರ ಏತಕ್ಕೆ ಕೊಡು
ತ್ತಾರೆ, ನಮಗೆ ಏತಕ್ಕೆ ಕೊಡುವುದಿಲ್ಲ ಎಂದು ವಿಭಿನ್ನ ಯೋಚನೆಮಾಡಿ ಸಹಾಯಧನವನ್ನು ಕೊಡ
ಬಾರದು ಎನ್ನುವ ವಿಚಾರಕ್ಕೆ ಪ್ರೋತ್ಸಾಹ ಕೊಡುತ್ತಿದ್ದಾರೆ ಮತ್ತು ಆರೀತಿ ಮಾತನಾಡುತ್ತಿ
ದ್ದಾರೆ. ಮೀನುಗಾರರು ನಿಜವಾಗಿಯೂ ಬಡವರು ಅವರಿಗೆ ಮೀನಿನ ಉತ್ಪಾದನೆಯಲ್ಲಿಯೇ
ದಿವಸ ಹೋಗಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಪ್ರಭಾವಿ ಜನರಿಗೆ ಕೊಡಬಾರದು.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಪ್ರಭಾವಿ ಜನರಿಗೆ ಕೊಡಬಾರದು ಎಂದು ಹೇಳುವವರಲ್ಲಿ ನಾನೂ
ಒಬ್ಬ. ಬಡ ಮೀನುಗಾರರು ಹಿಂದೆ ದೋಣಿಗಳಿಗೆ ಬೇಕಾದ ಇಂಜಿನನ್ನು ಪರದೇಶಗಳಿಂದ ಕಡಿಮೆ
ಕ್ರಯದಲ್ಲಿ ತರಿಸುತ್ತಿದ್ದರು. 34 ಹಾರ್ಸ್ ಪವರ್ ಇಂಜಿನ್ನಿಗೆ 15 ಸಾವಿರ ರೂಪಾಯಿ ಆಗುವುದು
ಇದ್ದರೆ ನಮ್ಮ ದೇಶದಲ್ಲಿ ತಯಾರು ಆಗುತ್ತಿರುವ ಅದೇ ಅಶ್ವಶಕ್ತಿ ಇಂಜನಿಗೆ 30 ಸಾವಿರ 34
ಸಾವಿರ ರೂಪಾಯಿಗಳಾಗುತ್ತದೆ. 100ಕ್ಕೆ 100 ಪಾಲು ಹೆಚ್ಚು ಇದೆ. ಹೆಚ್ಚುಬಡವರಿಗೆ ಇದನ್ನು
ಕೊಂಡುಕೊಳ್ಳುವ ಶಕ್ತಿ ಇರುವುದಿಲ್ಲ. ಹಿಂದೆ ಸೇಕಡ 50 ಸಹಾಯಧನವನ್ನು ಕೊಡುತ್ತಿದ್ದರು
ಈಗ ಸೇಕಡ 25ರಷ್ಟು ಸಹಾಯಧನವನ್ನು ಕೊಡುತ್ತಿದ್ದಾರೆ. ಇದನ್ನು ಸೇಕಡ 50 ಮಾಡಿ
ಇನ್ನು ಹೆಚ್ಚಿನ ಸಹಾಯಧನವನ್ನು ಒದಗಿಸಿ ಹೆಚ್ಚಿನ ಅಶ್ವಶಕ್ತಿ ಇರುವ ಯಾಂತ್ರಿಕ ದೋಣಿಗಳನ್ನು
ತಯಾರು ಮಾಡುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮೀನುಗಾರಿಕೆ ಇಲಾಖೆಯನ್ನು ಮೇಜರ್ ಡಿಪಾರ್ಟ್‌ಮೆಂಟ್ ಮಾಡಬೇಕು. ಮೈನ್ಸ್
ಮತ್ತು ಜಿಯಾಲಾಜಿ, ಪ್ರಿಂಟಿಂಗ್ ಮತ್ತು ಸ್ಟೇಷನರಿ ಇಂತಹ ಕಮ್ಮಿ ಖರ್ಚು ಆಗುವ ಡಿಪಾರ್ಟ್
ಮೆಂಟ್‌ನ್ನೂ ಮೇಜರ್ ಡಿಪಾರ್ಟ್‌ಮೆಂಟ್ ಮಾಡಿದ್ದೀರಿ. ಹಾಗಿರುವಾಗ ಮೀನುಗಾರಿಕೆ ಇಲಾಖೆ
ಮೇಲೆ ಏತಕ್ಕೆ ತಾತ್ಸಾರ ಮಾಡುತ್ತಾ ಇದ್ದೀರಿ ಎಂದು ಪ್ರಶ್ನೆ ಕೇಳಬೇಕಾಗಿದೆ. ಸರ್ಕಾರದವರು
ಈ ಮೀನುಗಾರಿಕೆ ಇಲಾಖೆಯನ್ನು ತಾತ್ಸಾರ ಭಾವದಿಂದ ನೋಡದೆ ಮೇಜರ್ ಡಿಪಾರ್ಟ್‌ಮೆಂಟ್
ಎಂದು ಮಾಡಬೇಕು. ಈ ಮೀನುಗಾರಿಕೆ ಇಲಾಖೆ ಹೊಸ ಮಂತ್ರಿಗಳು ಉತ್ಸುಕತೆಯಿಂದ ಕೆಲಸ
ಮಾಡುತ್ತಾ ಇದ್ದಾರೆ. ಅವರ ಕಾಲದಲ್ಲಿ ಇದು ಮೇಜರ್ ಡಿಪಾರ್ಟ್‌ಮೆಂಟ್ ಆಗಿ ಇನ್ನು ಹೆಚ್ಚಿನ
ಕೆಲಸ ಮಾಡುವಂತಾಗಲಿ ಎಂದು ಅವರನ್ನು ವಿನಂತಿ ಮಾಡಿಕೊಂಡು ನನಗೆ ಇಷ್ಟು ಅವಕಾಶ
ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5-00 P.M.

† ಶ್ರೀ ಬಿ. ಜಿ. ಬಣಕಾರ್ (ಹಿರೇಕೆರೂರು).—ಸನ್ಮಾನ್ಯ ಅಧ್ಯಕ್ಷರೇ, ಇವೊತ್ತಿನದಿವಸ
ಒಕ್ಕಲುತನ ಖಾತೆಯ ಮಂತ್ರಿಗಳು ಹಾಗೂ ಪಶುಸಂಗೋಪನ ಶಾಖೆಯ ಮಂತ್ರಿಗಳು ಮಂಡಿಸಿ

ದಂಥ ಕೇಳಿಕೆಗಳನ್ನು ತುಂಬಾ ಸ್ವಾಗತಿಸುತ್ತಾ, ಅದಕ್ಕೆ ಬೆಂಬಲ ಕೊಡುತ್ತಾ, ನನ್ನ ಕೆಲವು ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುತ್ತೇನೆ. ನಮ್ಮ ದೇಶ ಹಾಗೂ ರಾಜ್ಯ ಕೃಷಿಕರಿಂದ ತುಂಬಿದ ರಾಜ್ಯವಾಗಿದೆ. ಇಂದು ನಮ್ಮ ದೇಶದಲ್ಲಿ ಶೇಕಡ 80-90 ಜನರು ವ್ಯವಸಾಯದಿಂದ ಜೀವನ ಮಾಡುತ್ತಿದ್ದಾರೆ. ಒಕ್ಕಲುತನ ಶಾಖೆ ನಮ್ಮ ರಾಜ್ಯದ ಜನತೆಯ ಬೆನ್ನೆಲುಬಾಗಿದೆ. ಮತ್ತು ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಗೆ ಈ ಇಲಾಖೆ ಬೆನ್ನೆಲುಬಾಗಿದೆ ಎಂದು ಹೇಳಬಹುದು. ಒಕ್ಕಲುತನ ಸರಿಯಾಗಿ ಊರ್ಜಿತವಾಗಿ ಸಾಗಿ ಅದರಿಂದ ಸರಿಯಾದಂಥ ಉತ್ಪನ್ನ ಬಂದಿದ್ದೇ ಆದರೆ, ಆ ಉತ್ಪನ್ನದಿಂದ ದೇಶದ ಎಲ್ಲ ಜನತೆಗೂ ವಸತಿ, ವಸ್ತ್ರ ಮತ್ತು ಆಹಾರವನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ಒಕ್ಕಲುತನದಿಂದ ಸರಿಯಾಗಿ ಉತ್ಪನ್ನ ಬರದಿದ್ದರೆ, ಅಥವಾ ಒಕ್ಕಲುತನ ಏನಾದರು ಮುಗ್ಗರಿಸಿದರೆ, ಅವರಿಂದ ಎಲ್ಲ ಜನತೆ ಹಾಗೂ ಸರ್ಕಾರ ಮುಗ್ಗರಿಸುತ್ತದೆಂದು ಹೇಳುತ್ತೇನೆ. ಸರ್ಕಾರದವರು ಒಕ್ಕಲುತನದ ಬಗ್ಗೆ ಏನಾದರು ಸುಧಾರಣೆ ಮಾಡಿದ್ದಾರೆಯೇ ಎಂದು ನೋಡುವುದಾದರೆ, ಅದಕ್ಕೆ ಉತ್ತರ ನಕಾರ ಬರುತ್ತದೆ. ಒಕ್ಕಲುತನ ಶಾಖೆ ನಿರ್ಲಕ್ಷಿಸಿರುವಷ್ಟು ಬೇರೆ ಯಾವ ಖಾತೆಯೂ ನಿರ್ಲಕ್ಷಿಸಲ್ಪಟ್ಟಿಲ್ಲ ಎಂದು ಹೇಳಬಹುದು. ಇದಕ್ಕೆ ಉದಾಹರಣೆಯಾಗಿ ಕೃಷಿ ಶಿಕ್ಷಣವನ್ನು ತೆಗೆದುಕೊಳ್ಳೋಣ. ಇದು ನಿಜವಾಗಿಯೂ ಕನಿಕರ ಪಡುವಂತಹ ಸನ್ನಿವೇಶವಾಗಿದೆ. ಕೃಷಿ ಶಿಕ್ಷಣವನ್ನು ಸರ್ಕಾರದವರು ಬಹಳ ರೀತಿಯಿಂದ ತಾತ್ಸಾರ ಮಾಡಿದ್ದಾರೆಂದು ಹೇಳಬಹುದು. ನಮ್ಮ ರಾಜ್ಯದಲ್ಲಿ ಸುಮಾರು ಹದಿಮೂರು ನೂರಕ್ಕಿಂತ ಹೆಚ್ಚು ಪ್ರೌಢಶಾಲೆಗಳಿವೆ. 200ಕ್ಕೆ ಮೇಲ್ಪಟ್ಟು ಕಾಲೇಜುಗಳಿವೆ. ಮೂರು ವಿಶ್ವವಿದ್ಯಾನಿಲಯಗಳು ನಮ್ಮ ರಾಜ್ಯದಲ್ಲಿ ಇವೆ. ಇವೆಲ್ಲವನ್ನೂ ಕೃಷಿ ಶಿಕ್ಷಣಕ್ಕೆ ಹೋಲಿಕೆ ಮಾಡಿ ನೋಡಿದರೆ, ತುಲನಾತ್ಮಕ ದೃಷ್ಟಿಯಿಂದ ನೋಡಿದರೆ ಕೇಡೆನಿಸುತ್ತದೆ. ಈಗ ನಮ್ಮ ರಾಜ್ಯದಲ್ಲಿ ಕೃಷಿ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಒಂದು ವಿಶ್ವವಿದ್ಯಾನಿಲಯ ಮತ್ತು ಎರಡು ಕಾಲೇಜ್‌ಗಳು ಮಾತ್ರ ಇವೆ. ಸರ್ಕಾರದವರು ಕೃಷಿಯನ್ನು ಉದ್ಧಾರ ಮಾಡುವುದಕ್ಕೆ ಹೊರಟಿದ್ದಾರೆ. ಆದರೆ ಕೃಷಿ ಕಾಲೇಜುಗಳನ್ನು ಮತ್ತು ಕೃಷಿ ವಿಶ್ವವಿದ್ಯಾನಿಲಯಗಳನ್ನು ಹೆಚ್ಚಿಗೆ ಮಾಡುವುದನ್ನು ಬಿಟ್ಟು, ನೌಕರಿ ಸಲುವಾಗಿ, ವೃತ್ತಿ ಸಲುವಾಗಿ ಕ್ಯೂ ನಿಲ್ಲುವುದಕ್ಕೆ ರಹದಾರಿ ಕೊಡುವ ಮತ್ತು ಡಿಗ್ರಿ ಮಾರಾಟ ಮಾಡತಕ್ಕಂಥ ಕಾಲೇಜ್‌ಗಳನ್ನು ಹೆಚ್ಚು ಮಾಡುತ್ತಿದ್ದಾರೆ. ಈ ರೀತಿ ಡಿಗ್ರಿ ಮಾರಾಟ ಮಾಡತಕ್ಕಂಥ ಮತ್ತು ಡಿಗ್ರಿ ತೆಗೆದುಕೊಂಡಮೇಲೆ ನೌಕರಿ ಬೇಕು ಎಂದು ಕೇಳುವ ಪದವೀಧರರನ್ನು ತಯಾರು ಮಾಡುವ ಮೂರು ವಿಶ್ವವಿದ್ಯಾನಿಲಯಗಳು ನಮ್ಮ ರಾಜ್ಯದಲ್ಲಿವೆ. ಆದರೆ ಕೃಷಿ ಕಾಲೇಜ್‌ನಲ್ಲಿ ಪದವಿ ಪಡೆದವರು ಕೆಲಸ ಬೇಕು ಎಂದು ಕೇಳುವವರು ವಿರಳ. ಇಂದು ರೈತರ ಮಕ್ಕಳು ಕೃಷಿಯಲ್ಲಿ ತರಬೇತಿ ಹೊಂದಿ, ನಮ್ಮ ಕೃಷಿ ಅಭಿವೃದ್ಧಿಗೆ ಒಂದು ತಾರಕವಾಗುವ ವಿದ್ಯೆಯನ್ನು ಕಲಿಯಬೇಕೆಂದು ವಿದ್ಯಾರ್ಥಿ ದೆಶೆಯಲ್ಲಿ ಇಚ್ಛೆಪಟ್ಟರೆ ಅವರಿಗೆ ಪ್ರವೇಶ ಸಿಕ್ಕುವ ಹಾಗಿಲ್ಲ. ಇನ್ನು ಮುಂದೆಯಾದರೂ ಕೂಡ ನಮ್ಮ ರಾಜ್ಯದಲ್ಲಿ ಕೃಷಿ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುವಂತಾಗಲು ಕ್ರಾಂತಿಕಾರಕವಾದ ಬದಲಾವಣೆ ಮಾಡಬೇಕು ಮತ್ತು ವೈಚಾರಿಕ ಕೃಷಿ ಕ್ರಾಂತಿ ಮಾಡಬೇಕು. ಈ ದಿಶೆಯಲ್ಲಿ ನಮ್ಮ ರಾಜ್ಯ ಸರ್ಕಾರದವರು ನಮ್ಮ ರಾಜ್ಯದ ನಾಲ್ಕು ಭಾಗಗಳಲ್ಲಿ ಅಂದರೆ ಗುಲ್ಬರ್ಗ, ಮುಂಬೈ ಕರ್ನಾಟಕ, ಮೈಸೂರು ಹಾಗೂ ಬೆಂಗಳೂರಿನಲ್ಲಿ ನಾಲ್ಕು ಕೃಷಿ ವಿಶ್ವವಿದ್ಯಾನಿಲಯಗಳನ್ನು ಮುಂದಿನ ನಾಲ್ಕು ವರ್ಷಗಳಲ್ಲಿಯಾದರೂ ಸ್ಥಾಪನೆ ಮಾಡುವ ಧೋರಣೆಯನ್ನು ಇಟ್ಟುಕೊಳ್ಳಬೇಕು. ಈಗ ಧಾರವಾಡದಲ್ಲಿ ಕೃಷಿ ಕಾಲೇಜ್ ಇನಿವೆ, ಅದನ್ನು ಬೆಂಗಳೂರಿನಲ್ಲಿರುವಂತೆ ಕೃಷಿ ವಿಶ್ವವಿದ್ಯಾನಿಲಯವನ್ನಾಗಿ ಮಾರ್ಪಡಿಸಬಹುದಾಗಿದೆ. ಈ ಕೆಲಸ ಈ ವರ್ಷದಲ್ಲಿಯೇ ಆಗಬೇಕೆಂದು ಹೇಳುತ್ತೇನೆ. ಅದೇ ಪ್ರಕಾರ ಮುಂದಿನ 5 ವರ್ಷಗಳಲ್ಲಿ ಪ್ರತಿ ಜಿಲ್ಲೆಗೆ ಒಂದರಂತೆ ಕೃಷಿ ಕಾಲೇಜನ್ನು ಸ್ಥಾಪಿಸುವುದಕ್ಕೆ ಸರ್ಕಾರದವರು ಮುಂದೆ ಬರಬೇಕೆಂದು ಹೇಳುತ್ತೇನೆ. ಅದೇ ಪ್ರಕಾರ ತಾಲ್ಲೂಕ್ ಕೇಂದ್ರಗಳಲ್ಲಿರುವ ಮಾಧ್ಯಮಿಕ ಶಾಲೆಗಳಲ್ಲಿ ಕಡ್ಡಾಯವಾಗಿ ಕೃಷಿ ವಿದ್ಯೆಯನ್ನು ಹೇಳಿಕೊಡುವಂತಾಗಲು ಆ ಶಾಲೆಗಳನ್ನು ಕೃಷಿ ಶಾಲೆಗಳನ್ನಾಗಿ ಮಾರ್ಪಾಡು ಮಾಡಬೇಕು. ಸರ್ಕಾರದವರು ನಿಷ್ಠೆಯಿಂದ ಈ ಕೆಲಸ ಮಾಡಲು ಕಾರ್ಯೋನ್ಮುಖರಾಗಬೇಕೆಂದು ಹೇಳುತ್ತೇನೆ. ಇಂದು ಪ್ರತಿಯೊಂದು ಹಳ್ಳಿಗಳಲ್ಲಿಯೂ ಕೃಷಿಕರಿದ್ದಾರೆ. ಈ ಕೃಷಿಕರಿಗೆ ಕೃಷಿಯ ವಿಚಾರದಲ್ಲಿ ಮಾರ್ಗದರ್ಶನ ಇದೆಯೇ ಎಂದರೆ ಇಲ್ಲ. ಯಾವ ರೀತಿ ಗೊಬ್ಬರ ಹಾಕಬೇಕು, ಯಾವ ರೀತಿ ಬೆಳೆಯಬೇಕು, ಯಾವ ರೀತಿ ಕ್ರಿಮಿನಾಶಕವನ್ನು ಉಪಯೋಗಿಸಬೇಕು ಎಂಬ ಬಗ್ಗೆ ಇಂದು ರೈತರು ತಿಳಿದುಕೊಂಡಿದ್ದಾರೆ ಮತ್ತು ಬುದ್ಧಿವಂತರಾಗಿದ್ದಾರೆ. ಆದರೆ ಮಾರ್ಗದರ್ಶನ ಮಾಡುವಂತಹ ಅಧಿಕಾರಿಗಳು ಬೇಕು. ಸರ್ಕಾರದವರು ಇದಕ್ಕಾಗಿ ಪ್ರತಿಯೊಂದು ತಾಲ್ಲೂಕ್‌ನಲ್ಲ ಅಲ್ಲಲ್ಲ ಗ್ರಾಮಸೇವಕರೆಂದು ಇಟ್ಟಿದ್ದಾರೆ. ಆದರೆ ಇವರು ರೈತರಿಗೆ ಅನುಕೂಲ ಮಾಡುವ ಬದಲು ಶೋಷಕರಾಗಿದ್ದಾರೆ. ಹಳ್ಳಿಯ ರೈತರು ಯಾವ ಯಾವ ಗೊಬ್ಬರವನ್ನು ಯಾವಾಗ ಉಪಯೋಗ ಮಾಡಬೇಕು ಎಂಬ ಬಗ್ಗೆ ಇವರು ಮಾರ್ಗದರ್ಶನ ಮಾಡುತ್ತಿಲ್ಲ, ಬೆಳೆಗೆ ಏನಾದರೂ ರೋಗ ಬಂದರೆ ಅದನ್ನು ಕೂಡಲೆ ಸರ್ಕಾರಕ್ಕೆ ತಿಳಿಸಿ, ಸರಿಯಾ

(ಶ್ರೀ ಬಿ. ಜಿ. ಬಣಕಾರ್)

ದಂಥ ಔಷಧವನ್ನು ತರಿಸಿ ರೈತರಿಗೆ ಪೂರೈಕೆ ಮಾಡುತ್ತಿಲ್ಲವೆಂದು ಹೇಳುತ್ತೇನೆ. ಈಗ ಡೆಮಾನ್ಸ್ಟ್ರೇಷನ್ ಪ್ಲಾಟ್ಸ್ ಎಂದು ರೈತರಿಗೆ ಮಾದರಿಯಾಗಿ ತೋರಿಸಲು ಈ ಗ್ರಾಮ ಸೇವಕರು ಮಾಡುತ್ತಾರೆ. ಲೋಕಲ್ ಲೀಡರ್ ಆದಂಥ ಪಂಚಾಯಿತಿ ಅಥವಾ ತಾಲ್ಲೂಕು ಬೋರ್ಡಿನ ಸದಸ್ಯರು ಯಾರು ಇರುತ್ತಾರೋ, ಯಾವುದಾದರು ಒಂದು ರಾಜಕೀಯ ಪಕ್ಷದ ಮುಖಂಡರಾದಂತಹವರು ಯಾರು ಇರುತ್ತಾರೋ ಅಂತಹವರ ಜಮೀನಿನಲ್ಲಿ ಸರ್ಕಾರದಿಂದ ಪುಕ್ಕಟೆಯಾಗಿ ಬರುವ ಬೀಜ, ಗೊಬ್ಬರವನ್ನು ಮತ್ತು ಕ್ರಿಮಿನಾಶಕ ವಸ್ತುಗಳನ್ನು ಉಪಯೋಗಿಸಿ ಬೆಳೆಯನ್ನು ಬೆಳೆಯುತ್ತಾರೆ. ಒಂದು ಪಕ್ಷ ಸರಿಯಾದಂಥ ಪೀಕ್ ಏನಾದರು ಬೆಳೆದಿದ್ದರೆ, ಅಲ್ಲಿಯ ಸುತ್ತಮುತ್ತಲಲ್ಲಿ ಯಾರಾದರೂ ಚೆನ್ನಾಗಿ ಅದೇ ತರಹದ ಬೆಳೆಯನ್ನು ಏನಾದರು ಬೆಳೆದಿದ್ದರೆ, ಆ ಗ್ರಾಮ ಸೇವಕರು ತಮ್ಮ ಮೇಲಿನ ಅಧಿಕಾರಿಗಳನ್ನು ಅಲ್ಲಿಗೇ ಕರೆದುಕೊಂಡು ಹೋಗಿ ತೋರಿಸಿ ಅವರಿಂದ ಶಹಭಾಸ್‌ಗಿರಿಯನ್ನು ಪಡೆಯುತ್ತಿದ್ದಾರೆ. ಗ್ರಾಮಸೇವಕರೆಲ್ಲರೂ ಕೆಟ್ಟವರಿದ್ದಾರೆಂದು ನಾನು ಹೇಳುವುದಿಲ್ಲ. ಇದ್ದರೆ ಶೇಕಡ 10 ರಷ್ಟು ಮಾತ್ರ ಒಳ್ಳೆಯವರಿರಬಹುದು. ಉಳಿದ ಶೇಕಡ 90 ರಷ್ಟು ಜನ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಈ ಗ್ರಾಮ ಸೇವಕರ ಮೇಲೆ ಅಸಿಸ್ಟೆಂಟ್ ಡೈರೆಕ್ಟರ್, ಡೆಪ್ಯೂಟಿ ಡೈರಕ್ಟರ್, ಜಾಯಿಂಟ್ ಡೈರೆಕ್ಟರ್, ಡೈರಕ್ಟರ್, ಕಾರ್ಯದರ್ಶಿ ಮತ್ತು ಮಂತ್ರಿಗಳಿದ್ದಾರೆ. ಈಗಿನ ಮಂತ್ರಿಗಳು ಒಕ್ಕಲುತನದಿಂದ ಬಂದವರೇ ಆಗಿದ್ದಾರೆ. ಆದ್ದರಿಂದ ಈ ಗ್ರಾಮಸೇವಕರಿಂದ ಒಳ್ಳೆಯ ಕೆಲಸವಾಗುವಂತೆ ನೋಡಿಕೊಳ್ಳಬೇಕಲ್ಲದೆ, ಅವರು ರೈತರ ಶೋಷಕರಾಗುವುದಕ್ಕೆ ಬಿಡಬಾರದೆಂದು ಹೇಳುತ್ತೇನೆ. ಮುಖ್ಯವಾಗಿ ಒಕ್ಕಲುತನದ ಸುಧಾರಣೆಯಾಗಬೇಕು. ಈ ದೇಶದಲ್ಲಿ ಕೋಟಿ ವಿದ್ಯೆಗಳಿಗಿಂತ ಮೇಟಿ ವಿದ್ಯೆಯೇ ಲೇಸು ಎಂದು ಹಿರಿಯರು ಹೇಳಿದ್ದಾರೆ. ಆದ್ದರಿಂದ ನಮ್ಮ ದೇಶದ ಎಲ್ಲ ಯುವಕರಿಗೂ ನೌಕರಿ ಕೇಳುವಂತಹ ವಿದ್ಯೆಯನ್ನು ಕೊಡುವುದರ ಬದಲು ಒಕ್ಕಲುತನದಲ್ಲಿ ಶಿಕ್ಷಣ ಕೊಟ್ಟು ಅವರೆಲ್ಲರೂ ಒಕ್ಕಲುತನ ಮಾಡುವಂತೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ಮುಖ್ಯವಾಗಿ ಕೃಷಿ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕು. ಈಗ ಇದಕ್ಕಾಗಿ ಕೇವಲ 23 ಲಕ್ಷ ರೂಪಾಯಿಗಳನ್ನು ಮಾತ್ರ ಒದಗಿಸಿದ್ದೀರಿ. ಕೃಷಿ ಶಿಕ್ಷಣಕ್ಕೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಬೇಕೆಂದು, ಇದರ ಕಡೆಗೆ ಸರ್ಕಾರ ಮನಸ್ಸು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ವಿಚಾರ ಹೇಳಬೇಕೆಂದರೆ, ಈಗ ಸರ್ಕಾರದ್ದು ಈ ವಿಷಯದಲ್ಲಿ ಡ್ಯೂಯಲ್ ಪಾಲಿಸಿಯಾಗಿದೆ. ಮೊದಲು ರಾಜ್ಯ ಸಹಕಾರಿ ಸಂಘಗಳು ಬೀಜ, ಗೊಬ್ಬರ ಮತ್ತು ಟ್ರಾಕ್ಟರ್‌ಗಳನ್ನು ಹಂಚುವ ಕೆಲಸವನ್ನು ಮಾಡುತ್ತಿತ್ತು. ಅದು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಈ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನನ್ನು ರಚನೆ ಮಾಡಲಾಯಿತು. ಆದರೆ ಇದೂ ಕೂಡ ಈಗ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಈ ಕಾರ್ಪೊರೇಷನ್ ಸರಿಯಾಗಿ ಕೆಲಸ ಮಾಡುವುದು ಇದ್ದರೆ ಇರಲಿ, ಇಲ್ಲದಿದ್ದರೆ ರದ್ದುಮಾಡಿ ಎಂದು ಸರ್ಕಾರಕ್ಕೆ ಹೇಳುತ್ತೇನೆ.

ಇವೊತ್ತಿನದಿವಸ ತಾಲ್ಲೂಕು ಮಾರ್ಕೆಟಿಂಗ್ ಸಹಕಾರ ಸಂಘಗಳು, ಮತ್ತು ಇತರೇ ಯಾವುದೇ ಕ್ರೆಡಿಟ್ ಕೋ-ಆಪರೇಟಿವ್ ಸಹಕಾರ ಸಂಘಗಳು ಏನಿವೆ ಇವುಗಳಲ್ಲಿ ಯಾವ ಸಂಘಗಳು ಸರಿಯಾಗಿ ಕೆಲಸ ಮಾಡುವುದಿಲ್ಲ ಅಂಥವುಗಳನ್ನು ಕ್ಲೋಜ್ ಮಾಡಿ ಯಾವ ಯಾವ ಸಂಘಗಳು ಸರಿಯಾಗಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತವೆ. ಅಂಥವುಗಳಿಗೆ ಸರ್ಕಾರದವರು ಪ್ರೋತ್ಸಾಹ ಕೊಡುವುದು ಒಳ್ಳೆಯದು. ಸುದೈವದಿಂದ ಈ ಸಹಕಾರ ಇಲಾಖೆಯನ್ನು ವಹಿಸಿಕೊಂಡಿರತಕ್ಕ ಮಂತ್ರಿಗಳು ಒಳ್ಳೆಯ ದಕ್ಷರು ಮತ್ತು ಒಳ್ಳೆಯ ರೀತಿಯಿಂದ ಕೆಲಸ ಮಾಡತಕ್ಕವರು ಆಗಿದ್ದಾರೆ. ಹಿಂದೆ ಈ ಸಹಕಾರಿ ಸಂಘಗಳು ರೈತರಿಗೆ ಬೇಕಾದ ಬೀಜ ಗೊಬ್ಬರ, ಇತ್ಯಾದಿ ವ್ಯವಸಾಯಕ್ಕೆ ಬೇಕಾದ ಸಲಕರಣೆಗಳನ್ನು ಸಾಧ್ಯವಾದಮಟ್ಟಿಗೂ ಒದಗಿಸುತ್ತಿದ್ದವು, ಆದರೆ ಇತ್ತೀಚೆಗೆ ಅವುಗಳು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ಇದನ್ನೆಲ್ಲಾ ಮಾನ್ಯ ಮಂತ್ರಿಗಳು ಸರಿಪಡಿಸುತ್ತಾರೆ ಎಂದು ನಂಬಿ, ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರಂ).—ಸನ್ಮಾನ್ಯ ಸಭಾಧ್ಯಕ್ಷರೇ, ಈಗ ಈ ಸಭೆಯ ಮುಂದೆ ಮಂಡಿಸಿರತಕ್ಕ ವ್ಯವಸಾಯ, ಅರಣ್ಯ ಮತ್ತು ಪಶುಸಂಗೋಪನೆ ಇಲಾಖೆಗಳ ಬೇಡಿಕೆಗಳು ಏನಿವೆ ಅವುಗಳನ್ನು ನಾನು ಸ್ಪಷ್ಟವಾಗಿ ವಿರೋಧಿಸುತ್ತಾ, ನನ್ನ ವಿರೋಧಕ್ಕೆ ಸಮರ್ಥನೆ ಕೊಡಬೇಕಾದ್ದು ಅವಶ್ಯಕ ಮತ್ತು ಉಚಿತ. ನೂರಕ್ಕೆ 80 ರಷ್ಟು ವ್ಯವಸಾಯಗಾರರು, ರೈತರು ಇರತಕ್ಕ ಈ ರಾಜ್ಯದಲ್ಲಿ ಆ ರೈತರ ಬಗ್ಗೆ ಸರ್ಕಾರದವರು ಸಾಕಷ್ಟು ಅನುಕಂಪವನ್ನು ತೋರಿಸಿ

ಅವರಿಗೆ ಬೇಕಾದಂತಹ ಸೌಲಭ್ಯಗಳನ್ನು ಒದಗಿಸುವಂತಹ ಪ್ರಯತ್ನವನ್ನು ಮಾಡಿಲ್ಲ. ರೈತರ ಸಮಸ್ಯೆಯನ್ನು ಸಂಪೂರ್ಣವಾಗಿ ಬಗೆಹರಿಪಬೇಕಾದರೆ ಈ ಖಾತೆಯನ್ನು ವಹಿಸಿಕೊಂಡಿರತಕ್ಕ ಮಂತ್ರಿಗಳ ಹೃದಯ ಪರಿವರ್ತನೆ ಆಗಬೇಕು. ಆ ರೀತಿ ಹೃದಯ ಪರಿವರ್ತನೆಯಾಗುವದರ ಜೊತೆಗೆ ಈ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಆಡಳಿತಗಾರರ ಹೃದಯವೂ ಪರಿವರ್ತನೆಯಾಗಬೇಕು. ಈ ದೇಶದಲ್ಲಿ ಉಳುವವನ ಹೃದಯವೂ ಪರಿವರ್ತನೆಯಾಗಬೇಕು. ಆ ರೀತಿ ಇವರೆಲ್ಲರ ಹೃದಯ ಪರಿವರ್ತನೆಯಾದಾಗ ಮತ್ತೆ ಈ ಸಮಸ್ಯೆ ಬಗೆಹರಿಯುತ್ತದೆ. ಈ ರಾಜ್ಯದ ಸಕಲ ಚರಾಚರ ಪ್ರಾಣಿಗಳೂ ಸಂತೃಪ್ತಿಯಿಂದ ಬೆಳೆದು ಬಾಳಬೇಕಾದರೆ ನೀತಿಯುತವಾಗಿ ಬಾಳಬೇಕಾದರೆ ವ್ಯವಸಾಯ ಕ್ಷೇತ್ರದಲ್ಲಿ ಸಮಸ್ಯೆಗಳು ಬಗೆಹರಿದರೆ ಮಾತ್ರ ಅದು ಸಾಧ್ಯ. ಈ ಸಮಸ್ಯೆಗಳು ಬಗೆಹರಿಯದಿದ್ದರೆ ಅಧಿಕಾರಿಗಳು ಮತ್ತು ದುರಾಡಳಿತವನ್ನು ನಡೆಸತಕ್ಕ ಮಂತ್ರಿಗಳು ಬದುಕುವುದಕ್ಕೆ ಸಾಧ್ಯವಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈ ವ್ಯವಸಾಯ ಖಾತೆಯನ್ನು ವಹಿಸಿಕೊಂಡಿರತಕ್ಕ ಶ್ರೀಮಾನ್ ಕೆ. ಎಚ್. ಪಾಟೀಲರ ಪರಿಚಯ ನನಗೆ ಅಷ್ಟಾಗಿ ಇಲ್ಲದಿದ್ದರೂ ಕೂಡ ಅವರ ಹಿನ್ನಲೆಯನ್ನು ನಾನು ತಿಳಿದಿದ್ದೇನೆ. ಅವರು ಬಹಳ ವೇಗದಲ್ಲಿ ಹೋಗತಕ್ಕಂಥ ವ್ಯಕ್ತಿಗಳು. ಅವರು ವಹಿಸಿಕೊಂಡಿರತಕ್ಕ ಖಾತೆ ಭೂಮಿಯಲ್ಲಿ ಉತ್ಪತ್ತಿಯನ್ನು ತೆಗೆಯುವಂತಹ ಹೊಣೆಯನ್ನು ಹೊತ್ತಿರುವ ಖಾತೆ. ಅವರು ಅವತಾರ ಪುರುಷರಾಗಬೇಕು. ಅವರು ಬಹಳ ಗುರುತರವಾದ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕು. ಬಹುಶಃ ಅವರಿಗೆ ಪಂಚಗುಂಡಿಗೆಯೂ ಇರಬೇಕು. ಆದ್ದರಿಂದ ಶ್ರೀಮಾನ್ ಪಾಟೀಲರು ಸ್ವಲ್ಪ ಹೆಚ್ಚಿನ ಶ್ರಮವನ್ನು ವಹಿಸಿದರೆ ಸಾಧ್ಯವಾದಮಟ್ಟಿಗೆ ರೈತರ, ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಹಾಗೆಯೇ ಶ್ರೀಮಾನ್ ಚಿಕ್ಕೇಗೌಡರು ಪಶುಸಂಗೋಪನಾ ಇಲಾಖೆಯ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಅವರೂ ಸಹ ಪಶುಸಂಗೋಪನೆಯ ವಿಚಾರದಲ್ಲಿ ಅನುಭವ ಉಳ್ಳವರಾಗಿದ್ದಾರೆ. ಆದ್ದರಿಂದ ಇಬ್ಬರ ಅನುಭವಿಗಳ ಸಮ್ಮೇಳನದಿಂದ ಈ ರಾಜ್ಯಕ್ಕೆ ಶುಭ ಆಗಬಹುದು ಎಂದು ನಾನು ತಿಳಿದುಕೊಂಡಿದ್ದೆ. ಆದರೆ ಅವರು ಅಧಿಕಾರವನ್ನು ವಹಿಸಿಕೊಂಡಮೇಲೆ ಇವರು ಏನು ಮಾಡಿದ್ದಾರೆ ಎಂಬುದನ್ನು ನಾನು ನೊಂದ ಮನಸ್ಸಿನಿಂದ ಹೇಳುತ್ತೇನೆ. ಈ ಇಲಾಖೆಯ ಅಧಿಕಾರಿಗಳ ಮೇಲೆ ದಕ್ಷರಾದವರು ಇದ್ದರೂ ಕೂಡ ಅಧಿಕಾರಿಗಳ ಹೃದಯ ಪರಿವರ್ತನೆ ಮಾಡುವುದಕ್ಕೆ ಇವರು ಹೋಗಿಲ್ಲ. ಅಧಿಕಾರಿಗಳ ವರ್ಗಾವರ್ಗಿ ವಿಚಾರದಲ್ಲಿಯೂ ಮುಖ್ಯ ಮಂತ್ರಿಗಳು ಪ್ರವೇಶ ಮಾಡಿದ್ದಾರೆ. ಒಬ್ಬ ಬಿ. ಡಿ. ಓ. ಡೆಪ್ಯುಟಿ ಡೈರೆಕ್ಟರು, ಜಾಯಿಂಟ್ ಡೈರೆಕ್ಟರು ಇಂಥಾ ಅಧಿಕಾರಿಗಳ ವರ್ಗಾವರ್ಗಿ ವಿಷಯದಲ್ಲಿ ಮಂತ್ರಿಗಳು ಪ್ರವೇಶ ಮಾಡಿದ್ದಾರೆ. ಇದು ಸರಿಯಲ್ಲ. ಈ ಇಲಾಖೆಯಲ್ಲ ಕೆಲಸಕಾರ್ಯಗಳು ಚೆನ್ನಾಗಿ ನಡೆಯಬೇಕಾದರೆ ನಿಷ್ಠಾವಂತರಾಗಿರತಕ್ಕ ಅಧಿಕಾರಿಗಳಿಗೆ ಮತ್ತು ಪ್ರಾಮಾಣಿಕರಾಗಿರತಕ್ಕ ಅಧಿಕಾರಿಗಳಿಗೆ ಸರ್ಕಾರದವರು ಪ್ರೋತ್ಸಾಹವನ್ನು ಕೊಡಬೇಕು. ನಾನು ಬಹಳ ನಮ್ರತೆಯಿಂದ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಪಾಟೀಲರಿಗೆ ಹೇಳುತ್ತೇನೆ ಈ ಇಲಾಖೆಯನ್ನು ತಾವು ಶುದ್ಧೀಕರಣಮಾಡಬೇಕು. ನಿಮಗೆ ಆ ಒಂದು ಧೈರ್ಯ ಇದೆ. ತಾವು ರೈತರ ಬಗ್ಗೆ ಅನುಕಂಪವನ್ನು ತೋರಿಸಬೇಕು. ಯಾರೇ ಆಗಲೀ ಒಳ್ಳೆಯಕೆಲಸವನ್ನು ಮಾಡಿದವರಿಗೆ ಶಹಭಾಶ್‌ಗಿರಿಯನ್ನು ಕೊಡಬೇಕು. ಉತ್ತಮವಾದ ಕೆಲಸವನ್ನು ಮಾಡಿದವರಿಗೆ ನಾವು ವಿರೋಧಪಕ್ಷದಲ್ಲಿದ್ದರೂ ಅವರನ್ನು ಆತ್ಮಸಾಕ್ಷಿಯಾಗಿ ಒಪ್ಪುತ್ತೇವೆ. ನಾವು ಮನಸ್ಸಿನಲ್ಲಿ ಒಂದು ಹೊರಗಡೆ ಒಂದು ತೋರಿಸುವುದಿಲ್ಲ: ಈಗ ಶ್ರೀಮಾನ್ ಸಿದ್ದವೀರಪ್ಪನವರ ಖಾತೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ನಾವು ವಿರೋಧ ಮಾಡಲಿಲ್ಲ. ಈ ದೃಷ್ಟಿಯಿಂದ ಮಾನ್ಯ ಮಂತ್ರಿಗಳು ಈ ಇಲಾಖೆಯಬಗ್ಗೆ ಹೆಚ್ಚು ಆಸಕ್ತಿಯನ್ನು ವಹಿಸಿ ಕೆಲಸ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಆಗ್ರೋಇಂಡಸ್ಟ್ರೀಸ್ ಕಾರ್ಪೊರೇಷನ್ ಬಗ್ಗೆ ಅಲ್ಲ ನಡೆಯುತಕ್ಕ ಪ್ರತಿಯೊಂದು ವಿಚಾರವನ್ನೂ, ಮತ್ತು ಅಲ್ಲಿ ನಡೆಯುತಕ್ಕ ಅಕ್ರಮಗಳನ್ನೂ ನಮ್ಮ ಮಿತ್ರರು ಪ್ರಸ್ತಾಪ ಮಾಡಿದ್ದಾರೆ. ಈ ಇಲಾಖೆಯಲ್ಲಿ ಅಕ್ರಮ ನಡೆದಿರುವ ಸಂಬಂಧದಲ್ಲ ಒಂದು ನಿದರ್ಶನವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ನಾನು ತರಬಯಸುತ್ತೇನೆ. ಆದಕಾರಣ ಅದಕ್ಕೆ ಸಂಬಂಧಪಟ್ಟ ಒಂದು ಕಾಗದವನ್ನು ಶ್ರೀಮಾನ್ ಪಾಟೀಲರಿಗೆ ಕಳುಹಿಸುತ್ತೇನೆ, ಅವರ ಬಗ್ಗೆ ಮಾನ್ಯ ಮಂತ್ರಿಗಳು ವಿಚಾರಣೆ ನಡೆಸಿ ಅದರ ಮಾಹಿತಿಯನ್ನು ನನಗೆ ಕಳುಹಿಸಿಕೊಡಬೇಕೆಂದು ನಾನು ಹೇಳುತ್ತೇನೆ. ಈಗ ಹರಿಜನರಿಗೆ ಮನೆಕಟ್ಟಿಕೊಳ್ಳಲು 200 ರೂಪಾಯಿಗಳ ಬೆಲೆ ಬಾಳುವ ಮರಮುಟ್ಟುಗಳನ್ನು ಸರ್ಕಾರದವರು ಫ್ರೀಯಾಗಿ ಕೊಡುತ್ತಿದ್ದಾರೆ. ಆ ಪ್ರಕಾರವಾಗಿ ಹುಣಸೂರು ಟಿಂಬರ್ ಡಿಪೋದಲ್ಲ ಈ ಹಿಂದೆ ಹರಿಜನರಿಗಾಗಿ ಕೊಟ್ಟಂತಹ ಮರಮುಟ್ಟುಗಳನ್ನೆಲ್ಲಾ ಒಬ್ಬ ವ್ಯಕ್ತಿ ನೇರವಾಗಿ ತೆಗೆದುಕೊಂಡುಹೋಗಿ ಲಕ್ಷಾಂತರ ರೂಪಾಯಿಗಳನ್ನು ಹೊಡದಿದ್ದಾರೆ. ಇದನ್ನು ಮಾನ್ಯ

(ಶ್ರೀ ಬಿ. ಪುಟ್ಟಸ್ವಾಮಯ್ಯ)

ಮಂತ್ರಿಗಳು ವಿಚಾರಣೆ ಮಾಡಬೇಕು. ಅವರು ಕಾಂಗ್ರೆಸ್ (ಆರ್) ಪಕ್ಷಕ್ಕೆ ಸೇರಿದ್ದಾರೆ. ಈ ರೀತಿ ಅವರು ದುಡ್ಡು ತಿಂದು ತಾಲ್ಲೂಕುಬೋರ್ಡ್ ಪ್ರೆಸಿಡೆಂಟರಾಗಿದ್ದಾರೆ. ಅವರು ಮಾನ್ಯ

[MADAM SPEAKER in the Chair]

ಮುಖ್ಯಮಂತ್ರಿಗಳಿಗೆ ಬಹಳ ಕುಮ್ಮಕ್ಕು ಕೊಟ್ಟಿದ್ದಾರೆ. ಏಕೆಂದರೆ ನೀವು ಇವತ್ತು ವೇಗವಾಗಿ ಹೋಗತಕ್ಕಂತಹ ಮಂತ್ರಿಯವರು ಆಗಿದ್ದೀರಿ. ಆದ್ದರಿಂದ ಇಂತಹ ವಿಷಯಗಳಲ್ಲಿ ನಿಮಗೆ ಕರುಣೆ ಬರಬಾರದು ಮತ್ತು ತಪ್ಪು ಮಾಡಿದವರಿಗೆ ಶಿಕ್ಷೆ ಮಾಡಲೇಬೇಕೆಂದು ಹೇಳುತ್ತೇನೆ.

ಇನ್ನು ಶ್ರೀಮಾನ್ ಚಿಕ್ಕೇಗೌಡರ ಇಲಾಖೆಯ ಬಗ್ಗೆ ಸ್ವಲ್ಪ ಹೇಳುತ್ತೇನೆ. ಇವತ್ತು ವ್ಯವಸಾಯ ಉತ್ಪನ್ನ ಆಗಬೇಕಾದರೆ ನ್ಯಾಚುರಲ್ ಫರ್ಟಿಲೈಸರ್ಸ್ ಕೊಡಬೇಕೆಂದು ತಜ್ಞರು ಸಹ ಹೇಳಿದ್ದಾರೆ. ಆದ್ದರಿಂದ ಈ ಗೋಸಂಪತ್ತನ್ನು ಅಧಿಕವಾಗಿ ಬೆಳೆಸಬೇಕೆಂದು ಹೇಳುತ್ತೇನೆ. ಮಾನ್ಯ ಎಂ. ವಿ. ಕೃಷ್ಣಪ್ಪನವರು ಇದ್ದಾಗ ಏರೋಪ್ಲೇನಿನಲ್ಲಿ ಬೇರೆ ಕಡೆಯಿಂದ ತಳಿಗಳನ್ನು ತರಿಸುತ್ತಿದ್ದರು. ನಮ್ಮಲ್ಲಿ ಸೀಮೆ ಹಸುಗಳು ಬೇಕಾದಷ್ಟು ಇವೆ. ಇನ್ನು ಬತ್ತನೆ ಹೋರಿಗಳು ಕಣ್ಮರೆಯಾಗುತ್ತಿವೆ. ನಮಗೆ ಇವತ್ತು ಉತ್ತಮವಾದ ತಳಿಗಳ ಬಹಳ ಅವಶ್ಯವಿದೆ. ಆದ್ದರಿಂದ ಉತ್ತಮವಾದ ತಳಿಗಳನ್ನು ಹಳ್ಳಿಗಳಲ್ಲಿ ಹೆಚ್ಚಿಸಲು ಇನ್ನೂ ಹೆಚ್ಚಿನ ಕಾರ್ಯಕ್ರಮಗಳನ್ನು ತಗೆದುಕೊಳ್ಳುವಂತೆ ಸರ್ಕಾರದವರು ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಫಾರೆಸ್ಟ್ ಏರಿಯಾದಲ್ಲಿ ಉತ್ತಮವಾದ ಕಾಡು ಇರಬೇಕು. ಇವತ್ತು ಮಾನ್ಯ ಪಾಟೀಲರ ಆಡಳಿತದಲ್ಲಿ ಅನೇಕ ಕಾಡುಗಳು ಬರಿದಾಗುತ್ತಾ ಇವೆ. ಕಾಡಿನಲ್ಲಿ ಒಂದು ಇಂಚು ಸಹ ಕೊಡುವುದಿಲ್ಲವೆಂದು ಹೇಳುತ್ತಿದ್ದಾರೆ. ಇವತ್ತು ಅನೇಕ ರೈತಾಪಿ ಜನರು ನೀವು ಜಮೀನು ಕೊಡುತ್ತೀರಿ, ಬಡವರನ್ನು ಉದ್ಧಾರ ಮಾಡುತ್ತೀರೆಂದು ನಂಬಿಕೊಂಡು ಕೂತಿದ್ದಾರೆ. ಎಷ್ಟೋ ಕಡೆಗಳಲ್ಲಿ ಇಂದಿರಾ ಗಾಂಧಿ ಮಕ್ಕಳು ಬರುತ್ತಾರೆ ನಮಗೆ ಜಮೀನು ಕೊಡುತ್ತಾರೆ ಎಂದು ಜಮೀನನ್ನು ಉತ್ತುಬಿಟ್ಟಿದ್ದಾರೆ. ಆದ್ದರಿಂದ ದಟ್ಟವಾದ ಕಾಡನ್ನು ಬೆಳೆಸುವುದಕ್ಕೆ ಅಯೋಗ್ಯವಾದ ಜಮೀನನ್ನು ಇಂಥ ಬಡ ರೈತಾಪಿ ಜನರಿಗೆ ಮತ್ತು ಇತರ ಹಿಂದುಳಿದ ಜನರಿಗೆ ಕೊಡಬೇಕೆಂದು ಹೇಳುತ್ತೇನೆ. ಅದೇ ರೀತಿ ರೈತರು ಹೊಲಗಳ ಬದಿಗಳಲ್ಲಿ ಮತ್ತು ದಿಬ್ಬಗಳಲ್ಲಿ ಫಲವೃಕ್ಷಗಳನ್ನು ಬೆಳೆಸುವುದಕ್ಕೆ ಉತ್ತೇಜನವನ್ನು ಕೊಡಬೇಕು. ಏಕೆಂದರೆ ಈಗ ಹಲಸಿನ ಮರಗಳು ಮತ್ತಿತರ ಫಲವೃಕ್ಷಗಳು ಮಾಯವಾಗುತ್ತಾ ಇವೆ. ಫಲ ವೃಕ್ಷಗಳನ್ನು ಹೆಚ್ಚು ಬೆಳೆಸಿದರೆ ಅದು ಕೂಡ ಕಾಡೆ. ಅಲ್ಲಿರತಕ್ಕಂತಹ ವಿಸ್ತರಣೆ ಹೆಚ್ಚಾಗಿ, ಹೆಚ್ಚು ಫಲವೃಕ್ಷಗಳನ್ನು ಸಹ ಬೆಳೆಸುವುದಕ್ಕೆ ಏರ್ಪಾಡು ಮಾಡಬೇಕು.

ಇನ್ನು ಅನೇಕ ಕಡೆಗಳಲ್ಲಿ ಈ ಕಳ್ಳ ಸಾಗಾಣಿಕೆ ಬಹಳ ಹೆಚ್ಚಾಗಿದೆಯೆಂದು ಮಾನ್ಯ ಗುಂಡೂರಾಯರು ಹೇಳಿದರು. ಇವತ್ತು ಅನೇಕ ಅಧಿಕಾರಿಗಳನ್ನು ಮೂರು ಮೂರು ತಿಂಗಳಿಗೊಮ್ಮೆ ವರ್ಗ ಮಾಡುತ್ತಿದ್ದಾರೆ. ಇದರಿಂದ ಅವರಿಗೆ ಕಳ್ಳ ಸಾಗಾಣಿಕೆಯನ್ನು ತಡೆಯುವುದಕ್ಕೂ ಮನಸ್ಸು ಬರುವುದಿಲ್ಲ. ಮತ್ತು ಅವರ ಮಕ್ಕಳು ಮರಿಗಳು ನೊಂದುಕೊಳ್ಳುವ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಅನೇಕ ಅಧಿಕಾರಿಗಳು ಹೊತ್ತಂಥ ಅಪಾದನೆಯನ್ನು ನೀವು ಹೊರಬೇಡಿ. ಅದೇ ರೀತಿ ನಮ್ಮ ಮುಖ್ಯಮಂತ್ರಿಯವರು ಅಧಿಕಾರಿಗಳನ್ನು ರಕ್ಷಣೆ ಮಾಡಿದ ಹಾಗೆ ಮಾಡಬೇಡಿ. ನಿಮಗೆ ಇಬ್ಬರಿಗೆ ಇದನ್ನು ಮಾಡಬೇಡಿ ಎಂದು ಹೇಳುತ್ತಿದ್ದೇನೆ. ಆದ್ದರಿಂದ ದಯವಿಟ್ಟು ನಮ್ಮ ರಾಜ್ಯದಲ್ಲಿ ಒಳ್ಳೆಯ ಆಡಳಿತಗಾರರಿಗೆ ಹೆಚ್ಚಿನ ಪ್ರೋತ್ಸಾಹ ಕೊಡಿ; ದುಷ್ಟ ಆಡಳಿತಗಾರರನ್ನು ದಂಡಿಸಿ. ಇಷ್ಟು ಹೇಳಿ ಕೃಷ್ಣನಂತಿರುವ ಅಧ್ಯಕ್ಷಣಿಯವರಿಗೆ ಪಾಂಡವರ ಪರವಾಗಿ ಹೃತ್ಪೂರ್ವಕವಾಗಿ ವಂದನೆಗಳನ್ನು ನಾನು ಸಲ್ಲಿಸಿ, ಮುಂದಾದರೂ ಕೌರವ ಪುತ್ರರಿಗೆ ಒಳ್ಳೆಯ ಬುದ್ಧಿ ಬರಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† Sri MANIK RAO R. PHULEKAR (Bidar).—[In Hindi].

5-30 P.M.

† ಶ್ರೀ ಜಿ. ಮಾದೇಗೌಡ (ಕಿರುಗಾವಲು).—ಸಭಾಧ್ಯಕ್ಷಣಿಯವರೇ, ಇವತ್ತಿನ ಬೇಡಿಕೆಗಳ ಮೇಲೆ ಚರ್ಚೆಯನ್ನು ಆರಂಭಿಸುತ್ತಾ, ವ್ಯವಸಾಯ ಇಲಾಖೆಯಲ್ಲಿ ಮೂಲಭೂತವಾಗಿ ಮೊಟ್ಟ ಮೊದಲನೆಯದಾಗಿ ಅದ್ಯಂತ ಏನು ಸರ್ಕಾರ ಗಮನಕೊಡಬೇಕೋ ಅದನ್ನು ಇವತ್ತಿನ ದಿವಸ

ಕೊಡುತ್ತಾ ಇಲ್ಲ. ಅದರಲ್ಲಿ ಲೋಪದೋಷಗಳು ಏನಿದ್ದರೂ ಕೂಡ ಅದನ್ನು ಸರ್ಕಾರ ಅಗತ್ಯವಾಗಿ ಗಮನಕೊಟ್ಟು ಸರಿಪಡಿಸಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ನಮ್ಮ ದೇಶದಲ್ಲಿರತಕ್ಕ ವ್ಯವಸಾಯ ಇಲಾಖೆಯಾದರೂ ಕೂಡ ಮುಖ್ಯವಾಗಿ ಹೆಚ್ಚಿನ ಉತ್ಪಾದನೆಯ ದೃಷ್ಟಿಯಿಂದ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ಬಹುಶಃ ಇನ್ನಾವ ಕೆಲಸಕಾರ್ಯಗಳೂ ಸಹ ಈ ಒಂದು ಇಲಾಖೆಗೆ ಇಲ್ಲ. ಆದರೆ ಉತ್ಪಾದನೆ ರೈತರಿಂದ ಹೆಚ್ಚಿಗೆ ಆಗಬೇಕಾದರೆ ಮೂಲಭೂತವಾಗಿ ನಾವು ಈ ಇಲಾಖೆಯ ಸಂಬಂಧವಾಗಿ ಏನು ಮಾಡಬೇಕೆಂಬುದನ್ನು ಸರ್ಕಾರ ಗಮನಿಸಿದೆಯೇ ಅಥವಾ ಇಲ್ಲವೇ ಎಂಬುವನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ರೈತನ ಮೊದಲ ಕರ್ತವ್ಯ ನಾಟಿ ಮತ್ತು ಟ್ರಾನ್ಸ್‌ಪ್ಲಾಂಟೇಷನ್. ಹಗೆ ಹಾಕುವ ಕಾಲದಲ್ಲಿ ಮುಖ್ಯವಾಗಿ ರೈತನಿಗೆ ಏನೇನು ಸೌಲಭ್ಯಗಳು ಬೇಕೋ ಅವನ್ನೆಲ್ಲಾ ಒದಗಿಸುವ ಜವಾಬ್ದಾರಿ ಈ ಇಲಾಖೆಗೇ ಸೇರಿದೆ, ಅದರಲ್ಲಿಯೂ ಯಾವ ರೈತ ನೀರಾವರಿಯನ್ನು ಅವಲಂಬಿಸಿ ನಾಟಿಯನ್ನು ಮಾಡಬೇಕೆಂದು ಇಚ್ಛೆಪಟ್ಟಿರುತ್ತಾನೋ ಆ ಒಂದು ಸಂದರ್ಭದಲ್ಲಿ ನಿಮ್ಮ ಇಲಾಖೆಯವರು ಸಾಧಾರಣವಾಗಿ ಮಾಡಬೇಕಾದಂಥ ಕೆಲಸವನ್ನು ಇವತ್ತಿನ ದಿವಸ ಸರಿಯಾದಂಥ ರೀತಿಯಲ್ಲಿ ಮಾಡುತ್ತಾ ಇಲ್ಲ. ಈ ಒಂದು ಅಪಾದನೆಯನ್ನು ಇವತ್ತು ಈ ಇಲಾಖೆಯ ಮೇಲೆ ಹೊರಿಸಬೇಕಾಗಿದೆ. ನಿಮ್ಮ ಆಬ್ಲಿಗೇಟರಿ ಡ್ಯೂಟೀಸ್ ಏನಿವೆಯೋ ಅವನ್ನು ಮಾಡಬೇಕು ಮತ್ತು ಇರತಕ್ಕ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಬೇಕು. ಇದರ ಬಗ್ಗೆ ತಮ್ಮ ಅಧಿಕಾರಿಗಳಿಗೆ ಸೂಚನೆ ಕೊಡಬೇಕು. ಯಾವ ಯಾವ ನದಿಯಲ್ಲಿ ಯಾವ ದಿವಸ ನೀರನ್ನು ಇಲಾಖೆಯವರು ಒದಗಿಸುತ್ತಾರೆಂಬುದನ್ನು ಸರ್ಕಾರ ರೈತರಿಗೆ ತಿಳಿಸಬೇಕು. ಮತ್ತೆ ಈ ನೀರು ಹಗೆ ಹಾಕುವ ಕಾಲದಲ್ಲಿ ಬಂದು, ನಾಟಿ ಹಾಕುವ ಕಾಲದಲ್ಲಿ ನಿಂತುಹೋಗುತ್ತದೆ. ಇದರಿಂದ ಮೂಲಭೂತವಾಗಿ ನಮ್ಮ ಉತ್ಪಾದನಾ ಶಕ್ತಿ ನಿಜವಾಗಿ ಕಡಿಮೆಯಾಗುತ್ತದೆ. ಆ ಶಕ್ತಿ ಕೊಡುವ ಕಾಲದಲ್ಲಿ ಸರಿಯಾದಂಥ ಕ್ರಮವನ್ನು ಇಲಾಖೆಯವರು ತೆಗೆದುಕೊಳ್ಳದೇ ಹೋದರೆ ಅನಂತರ ಎಷ್ಟೇ ಕ್ರಮ ತೆಗೆದುಕೊಂಡರೂ ಉತ್ಪಾದನೆ ಜಾಸ್ತಿಯಾಗುವುದಿಲ್ಲ. ಈ ಇಲಾಖೆ ಇರುವುದು ವ್ಯವಸಾಯ ಮಾಡುವ ಸಾವಿರಾರು ರೈತ ಜನಾಂಗದವರ ಅಭಿವೃದ್ಧಿ ಮಾಡಲಿಕ್ಕಾಗಿ ಎಂಬುದು ಎಲ್ಲರಿಗೂ ಗೊತ್ತಾಗುತ್ತದೆ. ಹಗೆ ಹಾಕುವ ಕಾಲಕ್ಕೆ ಅಮೋನಿಯಂ ಸಲ್ಫೇಟ್ ಬಹಳ ಅವಶ್ಯಕ. ಅದನ್ನು ಸರಿಯಾದಂಥ ಟೈಂನಲ್ಲಿ ಇಲಾಖೆಯವರು ಒದಗಿಸಿಕೊಡುವುದಿಲ್ಲ. ಅದೂ ಕೂಡ ಮೂಲಭೂತವಾಗಿ ತಪ್ಪು ಎಂಬುದಾಗಿ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ರೈತರಿಗೆ ಹಗೆ ಹಾಕುವ ಕಾಲದಲ್ಲಿ ಅಮೋನಿಯಂ ಸಲ್ಫೇಟ್ ಒದಗಿಸಿಕೊಡುವ ಕೆಲಸ ನಿಮ್ಮ ಇಲಾಖೆಯ ಕೆಲಸ. ಅದೂ ಕೂಡ ಈಗ ಸರಿಯಾಗಿ ನಡೆಯುತ್ತಿಲ್ಲವೆಂದು ನಾನು ಹೇಳುತ್ತಿದ್ದೇನೆ.

ಇನ್ನೊಂದು ವಿಷಯ. ದೇಶಾದ್ಯಂತ ಈ ವರ್ಷ ಅಂದರೆ 72—73ನೇ ಸಾಲಿಗೆ ಗೊಬ್ಬರದ ಅಭಾವ ಬಹಳವಾಗಿ ಹೆಚ್ಚಾಗಿದೆ. ಅದಕ್ಕೆ ಇರತಕ್ಕ ನಾನಾ ಕಾರಣಗಳನ್ನು ಕೂಡ ಈ ಸಭೆಯಲ್ಲಿಯೇ ಮಾನ್ಯ ಮುಖ್ಯಮಂತ್ರಿಗಳೂ ಮತ್ತು ಸಂಬಂಧಪಟ್ಟ ಮಂತ್ರಿಗಳೂ ಘೋಷಿಸಿದ್ದಾರೆ. ಅಧಿಕಾರಿಗಳಾದವರು ಸರಿಯಾದ ಕಾಲದಲ್ಲಿ ಇದರ ಬಗ್ಗೆ ಇಂಡೆಂಟ್ ಹಾಕದೇ ಇರುವುದರಿಂದ ಈ ಅಭಾವಕ್ಕೆ ಕಾರಣವಾಗಿದೆ. ಆದರೆ ಇವತ್ತಿನದಿವಸ ಈ ಒಂದು ಸಂದರ್ಭದಲ್ಲಿ ಎಲ್ಲರೂ ಒಪ್ಪಿರುವ ವಿಚಾರವೇನೆಂದರೆ ಸೇಕಡ 80ಭಾಗದಷ್ಟು ಜನ ವ್ಯವಸಾಯದಲ್ಲಿಯೇ ಅವಲಂಬಿಸಿರುವಾಗ ಈ ಒಂದು ದೊಡ್ಡ ತಪ್ಪನ್ನು ಯಾರು ಮಾಡಿದ್ದಾರೋ ಅವರ ಬಗ್ಗೆ ಯಾವ ಒಂದು ಕ್ರಮವನ್ನು ಕೂಡ ತೆಗೆದುಕೊಂಡಿಲ್ಲ. ಬಹುಶಃ ನಾನು ಈ ಸಂದರ್ಭದಲ್ಲಿ ನಿಮ್ಮ ದಕ್ಷತೆಯ ಅಥವಾ ಪ್ರಾಮಾಣಿಕತೆಯನ್ನು ಪ್ರಶ್ನೆ ಮಾಡಬೇಕಾಗಿದೆ. ಗೊಬ್ಬರದ ಅಭಾವಕ್ಕೆ ಮುಖ್ಯ ಕಾರಣ ಸಕಾಲಕ್ಕೆ ಸರಿಯಾಗಿ ಇಲ್ಲಿ ಸರ್ಕಾರದ ಆಡಳಿತ ನಡೆಸತಕ್ಕವರು ಇಂಡೆಂಟ್ ಮಾಡದೆ ಇದ್ದುದರಿಂದ. ಇದನ್ನು ತಿಳಿಸಿದ ಮೇಲೂ ಕೂಡ ಸರ್ಕಾರದವರು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳದೆ ಅವರ ಬಗ್ಗೆ ಅನುಕಂಪವನ್ನು ತೋರಿಸುತ್ತಿರುವುದು ಅಥವಾ ಇದನ್ನು ಇಷ್ಟು ಲೈಟಾಗಿ ನೋಡತಕ್ಕದ್ದು ದಕ್ಷ ಆಡಳಿತೆಯ ಲಕ್ಷಣವಲ್ಲ. ಹೀಗೆ ಏನಾದರೂ ವಿಚಾರದಲ್ಲಿ ವಿರೋಧ ಪಕ್ಷದವರು ಒಂದು ಅಪಾದನೆ ಮಾಡಿದರೆ ಅದರ ಬಗ್ಗೆ ಪರಿಶೀಲನೆ ಮಾಡಿ ಕೂಲಂಕಷವಾಗಿ ವಿಚಾರ ವಿಮರ್ಶೆ ಮಾಡಿ ಅದರ ಬಗ್ಗೆ ನಿಜಾಂಶವೇನೆಂಬುದನ್ನು ತಿಳಿಸಬೇಕಾದ್ದು ಸರ್ಕಾರದವರ ಕರ್ತವ್ಯ. ಆದರೆ ಹಾಗೆ ಮಾಡದೆ ಇಲ್ಲಿ ವಿರೋಧಪಕ್ಷದವರು ಏನಾದರು ಒಂದು ಅಪಾದನೆ ಮಾಡಿದರೆ ಕೂಡಲೇ ಮಂತ್ರಿಗಳು ತಮ್ಮ ಸ್ಥಾನದಿಂದ ಎದ್ದು ಆ ಅಪಾದನೆಯನ್ನು ನಿರಾಕರಿಸತಕ್ಕ ರೀತಿಯಲ್ಲಿ ಉತ್ತರವನ್ನು ಕೊಡುತ್ತಿರುವುದು ಈ ಸರ್ಕಾರದ ಅಪ್ರಾಮಾಣಿಕ ವರ್ತನೆ ಯಾವ ಮಟ್ಟಕ್ಕೇರಿದೆ ಎಂಬುದನ್ನು ಸೂಚಿಸುತ್ತಿದೆ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಮಾದೇಗೌಡರಿಗೆ ನಾನು ಯಾವತ್ತೂ ಹಾಗೆ ಡಿಫೆಂಡ್ ಮಾಡಿಲ್ಲ ತಪ್ಪಿದ್ದರೆ ತಪ್ಪು ಎಂದು ಒಪ್ಪಿಕೊಳ್ಳುವುದು ನನ್ನ ಸ್ವಾಭಾವ. ನಾನು ಉತ್ತರಕೊಡತಕ್ಕ ಕಾಲದಲ್ಲಿ ಈ ವಿಚಾರದಲ್ಲಿ ಯಾರು ತಪ್ಪು ಮಾಡಿದ್ದಾರೆಂಬುದನ್ನು ಹೇಳುತ್ತೇನೆ.

ಶ್ರೀ ಜಿ. ಮಾದೇಗೌಡ.—ನಾನು ಈ ವ್ಯವಸಾಯದ ಇಲಾಖೆಯ ಬಗ್ಗೆ ಮೊದಲೇ ಹೇಳಿದ ಹಾಗೆ ಸರಿಯಾದ ಕಾಲಕ್ಕೆ ಗೊಬ್ಬರವನ್ನು ಸರಿಯಾದ ಕಾಲಕ್ಕೆ ಅಗ್ರಿಕಲ್ಚರ್ ಮಾರ್ಕೆಂಟಿಂಗ್ ಕೋ-ಅಪರೇಟಿವ್ ಸೊಸೈಟಿಗಳಿಗೂ, ಅಲ್ಲಿಂದ ಮಾರ್ಕೆಟಿಂಗ್ ಕೋಆಪರೇಟಿವ್ ಸೊಸೈಟಿಗಳಿಗೂ ಅನಂತರ ಅಲ್ಲಿಂದ ಸರ್ವೀಸ್ ಕೋ-ಆಪರೇಟಿವ್ ಸೊಸೈಟಿಗಳಿಗೂ ಅಲ್ಲಿಂದ ರೈತರಿಗೂ ಸಕಾಲಕ್ಕೆ ಸಿಕ್ಕುವಂತೆ ಒಂದು ವ್ಯವಸ್ಥೆಯನ್ನು ಮಾಡಬೇಕು, ಆದರೆ ಇಂಥ ವಿಚಾರಗಳಲ್ಲಿ ನಮ್ಮ ಅಧಿಕಾರಿಗಳು ಬಹಳ ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆ. ಇವರು ಈ ಗೊಬ್ಬರ ಸರಿಯಾದ ರೀತಿಯಲ್ಲಿ ಸಕಾಲಕ್ಕೆ ಅಗ್ರಿಕಲ್ಚರಲ್ ಮಾರ್ಕೆಂಟಿಗ್ ಕೋ-ಆಪರೇಟಿವ್ ಸೊಸೈಟಿಯಿಂದ ಸೆಂಟ್ರಲ್ ಮಾರ್ಕೆಟಿಂಗ್ ಕೋ-ಆಪರೇಟಿವ್ ಸೊಸೈಟಿಗೂ ಅಲ್ಲಿಂದ ಸರ್ವಿಸ್ ಕೋ-ಆಪರೇಟಿವ್ ಸೊಸೈಟಿಗಳಿಗೂ ಬರುತ್ತಿದೆಯೇ ಎಂಬುದನ್ನು ಅಲ್ಲಲ್ಲೆ ಚೆಕ್ ಮಾಡಿ ನೋಡಬೇಕು. ಹೀಗೆ ಪ್ರತಿಯೊಂದು ಹಂತದಲ್ಲೂ ಅದು ಸರಿಯಾಗಿ ಹಂಚಲ್ಪಡುತ್ತಿದೆಯೇ ಎಂಬುದನ್ನು ಇವರು ಚೆಕ್ ಮಾಡುತ್ತಿದ್ದರೆ ಇದು ರೈತರಿಗೆ ಕಾಲಕ್ಕೆ ಸರಿಯಾಗಿ ಸಿಕ್ಕುತ್ತದೆ. ಅದ್ದರಿಂದ ಇದನ್ನು ಚೆಕ್ ಮಾಡತಕ್ಕ ಅಧಿಕಾರವನ್ನು ಇಲಾಖೆಯ ಅಧಿಕಾರಿಗಳಿಗೆ ಕೊಡಬೇಕು. ಒಂದು ವೇಳೆ ಯಾವುದಾದರೂ ಸೊಸೈಟಿ ತಪ್ಪು ಮಾಡಿದರೆ ಅಂಥ ಸೊಸೈಟಿಗೆ ಈ ಹಂಚಿಕೆ ಬದಲು ಕನ್ನು ಕೂಡಲೆ ನಿಲ್ಲಿಸಿ ಅದನ್ನು ಬೇರೆಯಾವುದಾದರೂ ಒಂದು ಏಜನ್ಸಿಗೆ ವಹಿಸಿಬಹುದು. ಆದ್ದರಿಂದ ಇಂಥ ಒಂದು ಅಧಿಕಾರ ತಮ್ಮ ಇಲಾಖೆಯ ಅಧಿಕಾರಿಗಳಿಗೆ ಇರಬೇಕು.

ಇನ್ನು ಅನಿಮಲ್ ಹಸ್‌ಬೆಂಡ್ರಿ ವಿಷಯಕ್ಕೆ ಬಂದರೆ ಇದರ ಬಗ್ಗೆ ಸರ್ಕಾರದವರು ಏನು ಒಂದು ತಮ್ಮ ಪಾಲಸಿಯನ್ನು ನಿರ್ಧರ ಮಾಡುತ್ತಾರೋ ಅದರಂತೆ ಎಲ್ಲವೂ ಒಂದು ವ್ಯವಸ್ಥಿತವಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಇನ್ನು ನಮ್ಮ ಸಮಾಜದಲ್ಲಿ ಇರತಕ್ಕ ಜನರಿಗೆಲ್ಲಾ ಕುಡಿಯುವುದಕ್ಕೆ ಹಾಲನ್ನು ಒದಗಿಸತಕ್ಕ ಒಂದು ವ್ಯವಸ್ಥೆಯನ್ನು ಕೈಗೊಂಡಿದ್ದಾರೆ. ಇದರಲ್ಲಿ ಎಲ್ಲರಿಗೂ ಒಂದೇ ರೀತಿ ಸರಿಸಮಾನವಾದ ಅವಕಾಶಗಳನ್ನು ಕೊಡಬೇಕಾದ್ದು ಅವಶ್ಯಕ. ಈ ದಿವಸ ಸರ್ಕಾರದವರು ಅವರಿಗೆ ಹಾಲನ್ನು ಕೊಳ್ಳತಕ್ಕ ಬಗ್ಗೆ ಬಡವರಿಗೆ ಹಸು ಎಮ್ಮೆಗಳನ್ನು ಸಾಲವಾಗಿ ಅವರಿಗೆ ಕೊಟ್ಟು ಅವರಿಂದ ಹಾಲನ್ನು ಪಡೆಯುತ್ತಿದ್ದಾರೆ. ಹೀಗೆ ಸಹಾಯ ಮಾಡುವುದರಿಂದ ಅವನ ಆರ್ಥಿಕ ಪರಿಸ್ಥಿತಿ ಸ್ವಲ್ಪಮಟ್ಟಿಗಾದರೂ ಉತ್ತಮವಾಗುತ್ತದೆಂದು ಸರ್ಕಾರದವರು ಭಾವಿಸಿದ್ದಾರೆ. ಆದರೆ ಇಲ್ಲಿ ಸರ್ಕಾರದವರು ನಡೆಸತಕ್ಕ ಡೈರಿಗೆ ಹಾಲನ್ನು ಕೊಡತಕ್ಕ ವಿಚಾರದಲ್ಲಿ ಕೆಲವರಿಗೇ ಆದ್ಯತೆಯನ್ನು ಕೊಡಲಾಗಿದೆ ಎಂದು ಕೇಳುತ್ತೇನೆ. ಹೀಗಾಗಿ ಅಯ್ಯನವರು ಒಂದು ಕಡೆ ಅಮ್ಮನವರು ಒಂದು ಕಡೆ ಡೈರಿಯನ್ನು ನಡೆಸುವುದಕ್ಕೆ ಅವಕಾಶವಾಗಿದೆ ಎಂದು ಹೇಳುತ್ತಿದ್ದಾರೆ. ಆದರೆ ಅಲ್ಲಿ ಅಮ್ಮನವರು ಮಾರಾಟ ಮಾಡತಕ್ಕ ಹಾಲು ಮಾತ್ರ ಚೆನ್ನಾಗಿರುತ್ತದೆಂದು ಹೇಳುತ್ತಿದ್ದಾರೆ. ಅಲ್ಲಿ ಹೀಗೇ ಇನ್ನೂ ಏನೇನು ಅಕ್ರಮಗಳು ನಡೆಯುತ್ತಿರುತ್ತವೆಂದು ಕೇಳುತ್ತಿದ್ದೇವೆ. ಮಾನ್ಯ ಮಂತ್ರಿಗಳು ಇದನ್ನೆಲ್ಲಾ ಸರಿಪಡಿಸಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಎಸ್. ಎಚ್. ಪುಟ್ಟರಂಗನಾಥ್ (ಬೇಲೂರು ಎಸ್. ಸಿ.).—ಸನ್ಮಾನ್ಯ ಅಧ್ಯಕ್ಷಣಿಯರೇ, ಈ ದಿವಸ ಮಾನ್ಯ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಈ ದಿವಸ ನಮ್ಮ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳಾದರೋ ಬಹಳ ಇವೆ. ಆದರೆ ನಾನು ಈ ಸಂದರ್ಭದಲ್ಲಿ ಈ ಅರಣ್ಯ ಇಲಾಖೆ ಒಂದರ ಬಗ್ಗೆ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೂ ಮಾತನಾಡಿದ ನನ್ನ ಅನೇಕ ಸ್ನೇಹಿತರು ಅರಣ್ಯದ ಬಗ್ಗೆ ಅನೇಕ ಸಲಹೆಗಳನ್ನು ಮಂಡಿಸಿದ್ದಾರೆ. ಆದರೆ ನಾನು ನೋಡಿರುವಂತೆ ನಮ್ಮ ಮಂತ್ರಿಗಳು ಭೂರಹಿತವರ್ಗಕ್ಕೆ ಭೂಮಿಯನ್ನು ಹಂಚಲು ಒಂದು ದಿಟ್ಟತನದ ನಿಲುವನ್ನು ತೆಗೆದುಕೊಂಡಿದ್ದಾರೆ. ನಮ್ಮಲ್ಲಿ ಇರತಕ್ಕ ಅರಣ್ಯವಾದರೋ ಬಹಳ ಕಡಮೆ ಇದೆ. ನಾವು ಈ ದಿವಸ ಒಂದು ಕಡೆ ಅರಣ್ಯವನ್ನು ಬೆಳೆಸಿದರೆ ಇನ್ನೊಂದು ಕಡೆ ಅದನ್ನು ಕಡಿದು ಹಾಳು ಮಾಡುತ್ತಿದ್ದೇವೆ. ಈ ದಿವಸ ನಾವು ಆ ರೆಂಕೋ ಫ್ಯಾಕ್ಟರಿಗೆ ಬೆಂಕೀ ಕಡ್ಡಿಯನ್ನು ತಯಾರಿಸುವುದಕ್ಕಾಗಿ ಮಲೆನಾಡು ಮಂಗಳೂರು ಹಾಸನ ಮತ್ತು ದಾಂಡೇಲಿ ಇಲ್ಲೆಲ್ಲಾ ಇರತಕ್ಕ ಸಾಫ್ಟ್ ಉಡ್ಡನ್ನು ಕಡಿದು ಮದ್ರಾಸಿಗೆ ಸಾಗಿಸುತ್ತಿದ್ದಾರೆ ಆದರೆ ಅವರು ಹಾಗೆ ಸಾಫ್ಟ್ ಉಡ್ಡನ್ನು ಕಡಿದು ಸಾಗಿಸುವುದರ ಜೊತೆಗೆ ಎಷ್ಟು

ಹಾರ್ಡ್ ಉಡ್ಡನ್ನು ಕಡಿದು ಸಾಗಿಸುತ್ತಿದ್ದಾರೆಂಬುದನ್ನು ಯಾರೂ ನೋಡುತ್ತಿಲ್ಲ. ಹೀಗಾಗಿ ಈ
ದಿವಸ ನಮ್ಮ ಮಲೆನಾಡಿನಲ್ಲಿ ಬೆಲೆಬಾಳತಕ್ಕ ಕಡ್ಡಿ ಒಂದೂ ಇಲ್ಲ. ಅಲ್ಲದ್ದ ಕಾಡೆಲ್ಲಾ ಸಂಪೂರ್ಣ
ವಾಗಿ ನಾಶವಾಗಿ. ಇನ್ನು ಅಲ್ಲಲ್ಲೆ ಇದ್ದ ಕುರುಚಲು ಗಿಡಗಳನ್ನು ಸರ್ಕಾರದವರು ಇದ್ದಿಲನ್ನು
ಸುಡುವುದಕ್ಕೆ ಕೊಟ್ಟಿದ್ದಾರೆ. ಹೀಗಾಗಿ ಅಲ್ಲಿ ಸಂಪೂರ್ಣವಾಗಿ ಯಾವ ಸಸ್ಯಗಳೂ ಬೆಳೆಯುವುದಕ್ಕೆ
ಅವಕಾಶವಿಲ್ಲದಂತಾಗಿದೆ. ಆದ್ದರಿಂದ ನಾನು ಈ ದಿವಸ ಸರ್ಕಾರಕ್ಕೆ ಶಿಫಾರ್ಸುಮಾಡುವುದೇ
ನೆಂದರೆ ಆ ಮ್ಯಾಚ್‌ಫ್ಯಾಕ್ಟರಿಗೆ ಕೊಡತಕ್ಕ ಸಾಫ್ಟ್ ಉಡ್ ಏನಿದೆ ಅದನ್ನು ಸಂಪೂರ್ಣವಾಗಿ ನಿಲ್ಲಿಸಿ
ನಮ್ಮ ಕಾಡಿನ ಸಂಪದಭಿವೃದ್ಧಿಗೆ ಅವಕಾಶ ಮಾಡಿಕೊಡಿ ಎಂದು ಕೇಳುತ್ತೇನೆ. ಇನ್ನು ಕಾಡು
ಇರತಕ್ಕ ಕಡೆಗಳಲ್ಲಿ ಕಾಫಿ ಕಾರ್ಡಮಂ ಇತ್ಯಾದಿ ವಿದೇಶಿ ವಿನಿಮಯ ಗಳಿಸತಕ್ಕ ಬೆಳೆಗಳನ್ನು ಬೆಳೆಸು
ವುವಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಪದೇ ಪದೇ ಇಲ್ಲಿ ಕೇಳುತ್ತಲೇ ಬಂದಿದ್ದೇನೆ. ಆದರೆ
ಏನೂ ಆಗಲಿಲ್ಲ. ನಾನು ಒಂದಾವರ್ತಿ ಮಾನ್ಯ ಸಚಿವರನ್ನು ನಮ್ಮ ಭಾಗಕ್ಕೆ ಕರೆದುಕೊಂಡು ಹೋಗಿ
ಅಲ್ಲಿರತಕ್ಕ ವಾಸ್ತವಾಂಶವನ್ನು ತೋರಿಸಬೇಕೆಂದಿದ್ದೇನೆ. ಇನ್ನು ಅಲ್ಲಿ ಕೆಲವು ಭಾಗದಲ್ಲಿ ಯೂಕ
ಲಿಪ್ಟಸ್ ಮರಗಳನ್ನು ಬೆಳೆಸುತ್ತಿದ್ದಾರೆ. ಅಲ್ಲಿ ಅವು ಬೆಳೆಯತಕ್ಕ ಕಡೆ ಭೂಮಿಯಲ್ಲಿರತಕ್ಕ ಸಬ್
ಸಾಯಿಲ್ ನೀರನ್ನೆಲ್ಲಾ ಹೀರುತ್ತದೆ. ಆದರೆ ಅಲ್ಲಿ ಕಾಫಿ ಬೆಳೆಯುವುದಕ್ಕೆ ಜಮೀನಿಲ್ಲ ಎನ್ನುತ್ತಾರೆ.
ಕಾಫಿ ಬೆಳೆಗೆ ಮಲೆನಾಡಿನಲ್ಲಿರುವ ರೈತರಿಗೆ ಅರಣ್ಯ ಭೂಮಿಯನ್ನು ಬಿಟ್ಟರೆ ಬೇರೆ ಭೂಮಿ ಇಲ್ಲ.
ಆದುದರಿಂದ ಬಹಳ ವಿಚಕ್ಷಣೆಯಿಂದ ವರದಿ ತರಿಸಿಕೊಂಡು ಪರಿಶೀಲಿಸಬೇಕೆಂದು ಹೇಳುತ್ತೇನೆ.
ಗಂಧದ ಮರಗಳ ಕಳ್ಳ ಸಾಗಾಣಿಕೆ ಜಾಸ್ತಿಯಾಗಿದೆ ಎಂದು ಅನೇಕರು ಹೇಳಿದ್ದಾರೆ. ನಮ್ಮ
ಭಾಗದಲ್ಲಿ ಸ್ಟೇಟ್‌ಫಾರೆಸ್ಟಿನ ಸರ್ವೆ ನಂಬರುಗಳಾದ 187, 192 ಮತ್ತು 193 ಇವುಗಳಲ್ಲಿರುವ
ಗಂಧದ ಮರಗಳನ್ನು ಕಳ್ಳ ಸಾಗಣಿಕೆಯಲ್ಲಿ ಸಂಪೂರ್ಣವಾಗಿ ನಾಶಮಾಡಿದ್ದಾರೆ. ಇದರ
ಜೊತೆಗೆ ಈ ಕಾಡಲ್ಲಿ ಮುತ್ತಯ್ಯಚೆಟ್ಟಿಯಾರ್‌ರವರು ಒಂದು ಕಂಪೆನಿ ಎಸ್ಟೇಟ್ ಮಾಡಿ ಸರ್ವೆ
ನಂಬರಿನಲ್ಲಿ 50-60 ಎಕರೆಯಲ್ಲಿ ಕಾಫಿ ಗಿಡ ಬೆಳೆಸಿದ್ದಾರೆ. ಅವರು ಮರ ಕಡಿದು ಸಾಗಿಸಿದ್ದೂ ಅಲ್ಲದೆ
ಕಾಫಿ ಬೆಳೆಸಿದ್ದಾರೆ. ಹಿಂದೆ ಪ್ರಶ್ನೆ ಹಾಕಿ ಈ ವಿಚಾರ ತಿಳಿಸಿದಾಗ ಅವರಿಗೆ ಕೊಡುವ
ಗ್ರ್ಯಾಂಟನ್ನು ಕ್ಯಾನ್ಸಲ್ ಮಾಡುವುದಾಗಿ ಹೇಳಿದ್ದರು. ಏನೂ ಮಾಡಿದಂತೆ ಕಾಣಲಿಲ್ಲ. ಜಮೀ
ನನ್ನು ಕೂಡ ಅವರು ಮಾರಿದ್ದಾರೆ. ಇದನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.
ಬಗರ್ ಹುಕುಂ ಸಾಗುವಳಿ ಮಾಡಿದ್ದಾರೆ. ಅರಣ್ಯ ಇಲಾಖೆ ಆ ಪ್ರವೇಶವನ್ನು ಹರಾಜು ಮಾಡಿ
ದರೆ ಉತ್ಪತ್ತಿ ಬರುವುದು. ಕಾಡಿನಲ್ಲಿ ಅಕ್ರಮವಾಗಿ ಸಾಗುವಳಿ ಮಾಡಲು ಯಾರಿಗೂ ಅವಕಾಶ
ಕೊಡಬಾರದೆಂದು ಒತ್ತಾಯಮಾಡುತ್ತೇನೆ. ಅರಣ್ಯ ಇಲಾಖೆಯಲ್ಲಿ ಅಧಿಕಾರಿಗಳಲ್ಲಿ ಅನೇಕವಾಗಿ
ಜಿಜ್ಞಾಸೆಯಿದೆ. ಬಹುಶಃ ಇದು ಸರಕಾರದ ಗಮನಕ್ಕೆ ಒಂದು ಅನೇಕ ವಿಭಾಗ ಮಾಡಿದ್ದಾರೆ.
ಯಾರು ಕೆಲಸ ಮಾಡುವರೋ ಅವರನ್ನು ಎರಡು ವರ್ಷಗಳಿಗೊಂದು ಸಲ ಒಂದು ಡಿವಿಜನ್ನಿನಿಂದ
ಇನ್ನೊಂದು ಡಿವಿಜನ್ನಿಗೆ ಬದಲಾಯಿಸಬಾರದು. ಈ ನೀತಿ ಅನುಸರಿಸಬೇಕು.

ಇನ್ನು ವ್ಯವಸಾಯದ ಇಲಾಖೆಯ ಬಗ್ಗೆ ಒಂದು ವಿಚಾರ ಗಮನಕ್ಕೆ ತರುತ್ತೇನೆ. ಈ ಇಲಾಖೆ
ಯಲ್ಲಿ ಗೊಬ್ಬರ ಮತ್ತು ಪೆಸ್ಟಿಸೈಡ್ಸ್ ಕೊಳ್ಳುವುದರಲ್ಲಿ ಅನ್ಯಾಯ ನಡೆಯುತ್ತಿದೆ. ಕಮಿಷನ್
ಬೇಸಿಸ್‌ಮೇಲೆ ಗೊಬ್ಬರ ಕೊಳ್ಳುವ ನೀತಿಯಿದೆ. ಗೊಬ್ಬರದಲ್ಲಿ ಬಹಳ ಮುಖ್ಯವಾದುದು ಯಾವ
ಪ್ರಮಾಣದಲ್ಲಿ ಮಿಶ್ರಣ ಮಾಡಬೇಕು ಎಂಬುದು. ಅದು ಸರಿಯಾಗಿ ಇರಬೇಕು ಎಂಬ ಒಂದು ನೀತಿ
ಇದೆ. ಮೈಸೂರು ಫರ್ಟಿಲೈಜರ್ಸ್‌ನಿಂದ ಎಷ್ಟು ಗೊಬ್ಬರ ಪ್ರತಿವರ್ಷ ಕೊಳ್ಳುವುದು? ಗೊಬ್ಬರ
ಮತ್ತು ಪೆಸ್ಟಿಸೈಡ್ಸ್ ಸರಿಯಾದ ರೀತಿಯಲ್ಲಿವೆಯೇ, ಎಫೆಕ್ಟಿವ್ ಆಗಿವೆಯೇ ಎಂಬುದನ್ನು ಪರಿಶೀಲಿಸ
ಬೇಕು.

ಹಾರ್ಟಿಕಲ್ಚರ್ ಇಲಾಖೆ ಇದೆ, ಇದು ವ್ಯವಸಾಯಕ್ಕೆ ಸಂಬಂಧಪಟ್ಟಿರುವುದು. ಈ ಇಲಾಖೆ
ಒಂದೇ ಒಂದು ಜಾತಿಗೆ ಸೀಮಿತವಾಗಿದೆ ಎಂದು ಸಂಕಟದಿಂದ ಹೇಳುತ್ತೇನೆ. 20 ವರ್ಷವಾದರೂ
ಬೇರೆ ಜನಾಂಗದವರಿಗೆ ಅವಕಾಶ ಸಿಕ್ಕಿಲ್ಲ. ಈ ಇಲಾಖೆಯಲ್ಲಿರುವ ನ್ಯೂನತೆಗಳನ್ನು ಸರಿಪಡಿಸ
ಬೇಕು. ಇಂದು 30—40 ವರ್ಷ ಇಲಾಖೆಯಲ್ಲಿ ಸೇವೆ ಮಾಡಿರುವವರನ್ನು ಬಿಟ್ಟು ಬೇರೆ ಇಲಾಖೆಯ
ರೆಂಟ್ ಆಫೀಸರುಗಳಿಗೆ ಪ್ರಮೋಷನ್ ಕೊಡುತ್ತಿದ್ದಾರೆ, ಇಂಥಹ ಅಕ್ರಮಗಳವೆ ಕೇಡರ್
ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಸರಿಯಾಗಿಲ್ಲ. ಅದರ ಪ್ರಕಾರ ನಡೆಯುತ್ತಿಲ್ಲ, ಪರಿಶೀಲಿಸಬೇಕು.

† ಶ್ರೀ ಎಂ. ನಂಜೇಗೌಡ (ಗಂಡಸಿ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರುವ ಬೇಡಿಕೆ
ಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, ಕೆಲವು ಸಲಹೆಗಳನ್ನು ಸರಕಾರಕ್ಕೆ ಕೊಡುತ್ತೇನೆ.
ವ್ಯವಸಾಯದ ಇಲಾಖೆಗೆ ಸಂಬಂಧಪಟ್ಟ ಹಾಗೆ ನಮ್ಮ ಜಿಲ್ಲೆಯಲ್ಲಿ ಈ ಇಲಾಖೆಯ ಕಾರ್ಯ ವೈಖರಿ
ಯನ್ನು ಸ್ವಲ್ಪಮಟ್ಟಿಗೆ ಗಮನಕ್ಕೆ ತರುತ್ತೇನೆ. ಈ ಇಲಾಖೆಯಲ್ಲಿ ಅಧಿಕಾರಿಗಳ ಕೇಂದ್ರೀಕೃತ
ಯನ್ನು ಪ್ರತಿಯೊಬ್ಬರೂ ಕಾಣಬಹುದು. ಪ್ರತಿಯೊಬ್ಬರೂ ಕೂಡ ರೈತರ ಬಗೆ . . .

(ಶ್ರೀ ಎಂ. ನಂಜೇಗೌಡ)

ಅಸಮಾಧಾನ ವ್ಯಕ್ತಪಡಿಸುವ ಪರಿಸ್ಥಿತಿ ಈ ದಿವಸ ನಮ್ಮ ಜಿಲ್ಲೆಯಲ್ಲಿದೆ. ಉದಾಹರಣೆಗೆ ಒಂದೇ ಒಂದು ವಿಷಯವನ್ನು ಹೇಳುತ್ತೇನೆ. ಕೆಲವು ದಿನಗಳಹಿಂದೆ ನಡೆದ ಆಲೂಗಡ್ಡೆ ಬೆಳೆಗಾರರ ಸಮ್ಮೇಳನ ದಲ್ಲಿ ಈ ಇಲಾಖೆಯ ಮುಖ್ಯಾಧಿಕಾರಿಗಳು ಬಂದ ಟೀಕೆಗಳಿಗೆ ಉತ್ತರ ಕೊಡುತ್ತಾ ಸಂಯುಕ್ತ ಕರ್ನಾಟಕದಲ್ಲಿ 15 ದಿವಸಗಳಿಗೆ ಒಂದು ಸಲ ರೈತರ ಕೆಲಸಕಾರ್ಯದ ಬಗ್ಗೆ ವಿವರಣೆ ಬರುತ್ತಾ ಇದೆ, ಅವನ್ನು ಓದಬಹುದು ಎಂದು ಹೇಳಿದರು. ರೈತರ ಕಷ್ಟನಷ್ಟಗಳ ಬಗ್ಗೆ ಈ ಇಲಾಖೆ ಮುಖ್ಯಾಧಿಕಾರಿ ಎಷ್ಟರಮಟ್ಟಿಗೆ ವಿಚಾರಮಾಡುವರು, ಅವರ ಕಾರ್ಯದಕ್ಷತೆ ಎಷ್ಟುಮಟ್ಟಿಗಿದೆ ಎಂಬುದನ್ನು ಇದರಿಂದ ತಿಳಿಯಬಹುದು, ಈ ಕಡೆ ಸರಕಾರ ಗಮನ ಹರಿಸಬೇಕು.

ಇನ್ನೊಂದು ವಿಷಯ. ಫರ್ಟಿಲೈಜರ್ ಬಗ್ಗೆ ಕಂಟ್ರೋಲ್ ತೆಗೆದಮೇಲೆ ಮಿಶ್ರಣ ಗೊಬ್ಬರದ ಧಾರಣೆ ಜಾಸ್ತಿಯಾಗಿ ಅನ್ಯಾಯವಾಗಿದೆ. ಕಂಟ್ರೋಲ್ ತೆಗೆಯುವವರೆಗೆ ಸಣ್ಣ ಸಣ್ಣ ಮಿಶ್ರಣ ಮಾಡುವ ಕಂಪನಿಯವರು ಬಹಳ ಕಡಮೆ ಬೆಲೆಯಲ್ಲಿ ರೈತರಿಗೆ ಗೊಬ್ಬರ ಕೊಡುತ್ತಿದ್ದ ಒಂದು ಸಂದರ್ಭವಿತ್ತು. ಈಗ ಧಾರಣೆಗೆ ರಕ್ಷಣೆಕೊಟ್ಟು ಹೆಚ್ಚಿನ ರೀತಿಯಲ್ಲಿ ಲಾಭ ಸಂಪಾದನೆ ಮಾಡಲು ಅವಕಾಶವಿರುವುದರಿಂದ ಫರ್ಟಿಲೈಜರ್ ಅಥವ ಕಾಂಪ್ಲೆಕ್ಸ್ ಗೊಬ್ಬರ ಕೊಳ್ಳುವಾಗ ಕಂಪನಿಯ ಮಿಕ್ಸ್‌ಚರ್ ಗೊಬ್ಬರ ಕೊಂಡರೆ ಅದನ್ನು ಸರಬರಾಯಿ ಮಾಡುತ್ತೇವೆ ಎಂದು ಹೇಳುವರು. ಇದಕ್ಕೆ ಗಮನಕೊಟ್ಟು ಸರಿಪಡಿಸಬೇಕು.

ಪಶುಪಾಲನೆ ಇಲಾಖೆ ಬಗ್ಗೆ ಕೆಲವು ವಿಚಾರ ಹೇಳುತ್ತೇನೆ. ಈ ಇಲಾಖೆಯವರು ಕಳೆದ 25 ವರ್ಷಗಳಿಂದ ಪ್ರಾಮುಖ್ಯತೆ ಪಡೆದ ತಳಿಗಳಾದ ಹಳ್ಳಿಕಾರ್ ಮತ್ತು ಅಮೃತಮಹಲ್ ರಾಸುಗಳ ಅಭಿವೃದ್ಧಿಗೆ ಸಾಕಷ್ಟು ಗಮನ ಕೊಟ್ಟಿಲ್ಲ ಎಂದು ವಿಷಾದದಿಂದ ಹೇಳುತ್ತೇನೆ. ಹಳ್ಳಿಕಾರ ದನಗಳು ಪ್ರಪಂಚದಲ್ಲೇ ವಿಖ್ಯಾತವಾಗಿದ್ದರೂ ಇದುವರೆಗೆ ಸರಿಯಾದ ಒಂದು ಬೀಜದ ಹೋರಿ ಕೊಡುವುದಕ್ಕೆ ಪ್ರಯತ್ನಮಾಡಿಲ್ಲ. ಫಾರಂಗಳಿಗೆ ಅದನ್ನು ಒದಗಿಸಿಲ್ಲ. ಬೇರೆ ಅಭಿವೃದ್ಧಿ ಮಾರ್ಗವನ್ನು ಸಹ ಅನುಸರಿಸಿಲ್ಲ ಎಂದು ವಿಷಾದದಿಂದ ಹೇಳುತ್ತೇನೆ. ಹಾಗೆಯೇ ಅಮೃತಮಹಲ್ ತಳಿಗಳ ಬಗ್ಗೆ ಸಹ ಮಾಡಿದ್ದಾರೆ. ಹಿಂದೆ 14 ಸಾವಿರ ತಳಿ ಇತ್ತು, ಈ ದಿವಸ ಅವು ನಶಿಸಿ ಹೋಗಿ ಕೇವಲ 3 ಸಾವಿರ ದನಗಳಿರುವ ಇಲಾಖೆಯಾಗಿದೆ.

6-00 P.M.

ಲಕ್ಷಾಂತರ ಎಕರೆ ಜಮೀನನ್ನು ಸರ್ಕಾರದ ಧೋರಣೆಗಳಿಗನುಗುಣವಾಗಿ, ಜಮೀನುಗಳ ಬೇಡಿಕೆಗಳಿಗನುಗುಣವಾಗಿ ಬಿಡುಗಡೆ ಮಾಡದೇ ಕೇವಲ ಕೆಲವೇ ಜನರು ಉಳಿಸಿಕೊಂಡಿರತಕ್ಕಂಥ ಸಂದರ್ಭ ಇದೆ. ಆದುದರಿಂದ ಇದನ್ನು ಬಿಡುಗಡೆ ಮಾಡಿ ಉತ್ತಮಪಡಿಸಬೇಕು ಎಂದು ಹೇಳುತ್ತೇನೆ. ಈಗ ಇರತಕ್ಕಂಥ ಕಾವಲುಗಳನ್ನು ಬಿಡುಗಡೆ ಮಾಡುವುದಿಲ್ಲ ಎಂದು ಹೇಳಿದರೆ ಈಗ ಇರತಕ್ಕಂಥ ಅಮೃತ್‌ಮಹಲ್ ತಳಿಯನ್ನು ಅಭಿವೃದ್ಧಿಪಡಿಸಿಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ರೈತರ ಬೇಡಿಕೆಗಳಿಗನುಗುಣವಾಗಿ ಅದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಮಾಡಬೇಕು, ಅಂತಹ ಒಂದು ವಾತಾವರಣವನ್ನು ಉಂಟುಮಾಡಬೇಕು ಎಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ನನಗೆ ತಿಳಿದಮಟ್ಟಿಗೆ ಉತ್ತರ ಕರ್ನಾಟಕದ ಫಾರೆಸ್ಟ್ ಏರಿಯಾದಲ್ಲಿರತಕ್ಕಂಥ ಕಾವಲುಗಳನ್ನೂ, ಉಪಯೋಗಿಸಿಕೊಂಡು ಅಮೃತಮಹಲ್ ತಳಿಗಳನ್ನು ಇನ್ನೂ ಹೆಚ್ಚು ಹೆಚ್ಚಾಗಿ ಬೆಳೆಸುವುದಕ್ಕೆ ಅವಕಾಶ ಇದೆ. ಇದನ್ನು ತಜ್ಞರಿಂದ ಪರಿಶೀಲಿಸಿ ಸಾಧ್ಯವಾದಷ್ಟು ಜಾಗ್ರತೆ ಅಮೃತ್‌ಮಹಲ್ ತಳಿಯನ್ನು ಬೆಳೆಸುವುದಕ್ಕೆ ಉತ್ತಮವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ. ಮತ್ತು ಈ ಇಲಾಖೆಯಲ್ಲಿ ಅಮೃತ್‌ಮಹಲ್ ಕಾವಲಿನ ದನಗಳ ಬಗ್ಗೆ ಆಸಕ್ತಿ ಇರುವ ಸದಸ್ಯರಾಗಲಿ, ಮಂತ್ರಿಗಳಾಗಲಿ ಇನ್ನೂ ಹೆಚ್ಚು ತಿಳಿದುಕೊಳ್ಳಬೇಕಾದರೆ ಒಂದು ವಿಷಯ ಹೇಳುತ್ತೇನೆ. ನಮ್ಮ ಕಡೆ ಪ್ರತಿ ಡಿಸೆಂಬರ್‌ನಲ್ಲಿ ನಡೆಯುತಕ್ಕ ಹರಾಜಿನಲ್ಲಿನ ಕಾಲದಲ್ಲಿ ಒಂದು ದಿನದ ಮಟ್ಟಿಗೆ ಬರುವುದಾದರೆ ಅಲ್ಲಿ ಒಬ್ಬ ಸಾಮಾನ್ಯ ರೈತರಾಗಿರತಕ್ಕವನು ಇದರಲ್ಲಿ ಎಷ್ಟು ಮಟ್ಟಿಗೆ ಆಸಕ್ತಿ ಹೊಂದಿದ್ದಾನೆ ಎನ್ನುವುದನ್ನು ತೋರಿಸಿಕೊಡುತ್ತೇನೆ. ಅಲ್ಲಿ ಕೆಲವರು ಬ್ರೀಡಿಂಗ್ ಬುಲ್ಸ್ ಕರುಗಳನ್ನು ಮಾರತಕ್ಕಂಥಾದ್ದನ್ನು ನೋಡಿದರೆ ಅದು 1,500 ರಿಂದ 2,000 ರೂಪಾಯಿ ನವರೆಗೆ ಬೆಲೆ ಆಗುತ್ತದೆ. ರೈತರು ಆ ತಳಿಗಳನ್ನು ಎಷ್ಟರಮಟ್ಟಿಗೆ ಬೆಳೆಸುತ್ತಾರೆ ಎನ್ನುವುದು ತಮಗೇ ತಿಳಿಯುತ್ತದೆ. ಆದುದರಿಂದ ನಾನು ಇಷ್ಟು ಮಾತ್ರ ಹೇಳುತ್ತೇನೆ.

ಇನ್ನು ಈ ಕಾವಲುಗಳಲ್ಲಿ ವಂಶಪಾರಂಪರ್ಯವಾಗಿ ಕಾವಲುಗಾರರಾಗಿರತಕ್ಕವರ ಬಗ್ಗೆ ಒಂದೆರಡು ವಿಷಯಗಳನ್ನು ಮಾತ್ರ ಹೇಳುತ್ತೇನೆ. ಸ್ವಾಮಿ ಅಲ್ಲಿನ ಕಾವಲುಗಾರರು ಯಾವುದನ್ನೂ ಅಪೇಕ್ಷೆ ಮಾಡದೇ ತಮಗೆ ವಂಶಪಾರಂಪರ್ಯವಾಗಿ ಕೊಟ್ಟಿರತಕ್ಕಂಥ ಕೇವಲ 30 ಎಕರೆ ಜಮೀನಿನಲ್ಲಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ಅವರ ಬಗ್ಗೆ ಕರುಣೆ ತೋರಿ ಅವರಿಗೆ ವಂಶಪಾರಂಪರ್ಯವಾಗಿ ಬಂದಿರತಕ್ಕಂಥಾದ್ದು ಏನು ಇದೆಯೋ ಅದರಲ್ಲಿ ಕೆಲವು ಅಂಶವನ್ನಾದರೂ ಕೊಟ್ಟು ಅವರು ಗೌರವವಾಗಿ ಜೀವನ ಮಾಡುವಂತೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಆಸ್ಪತ್ರೆ ವಿಷಯವಾಗಿ ಒಂದೆರಡು ಸಲಹೆಗಳನ್ನು ಕೊಡುತ್ತೇನೆ. ಪ್ರತಿ ಹೋಬಳಿಯಲ್ಲೂ ಒಂದೊಂದು ಆಸ್ಪತ್ರೆಯನ್ನು ಕೊಡತಕ್ಕ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಎಂದು ಹೇಳುತ್ತೇನೆ. ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಒಂದು ಜೀಪನ್ನು ಕೊಟ್ಟು ಜರೂರಾಗಿ ಆವಶ್ಯಕತೆ ಇದ್ದಾಗ ಅದನ್ನು ಉಪಯೋಗಿಸಬೇಕು ಎಂದು ಹೇಳುತ್ತೇನೆ. ಈ ವಿಚಾರದಲ್ಲಿ ಮುಖ್ಯವಾಗಿ ರೈತರ ಸಂಬಂಧವಾದ ದನಗಳ ಬಗ್ಗೆ ಸರ್ಕಾರ ಉದಾಸೀನದಿಂದ ನೋಡುತ್ತಾ ಇದೆ. ಈ ವಿಷಯದಲ್ಲಿ ಹೇಳುವುದಾದರೆ ಮುಖ್ಯವಾಗಿ ದನಗಳಿಗೆ ಚಪ್ಪೆ ರೋಗ ಬಂದಂಥ ಸಂದರ್ಭದಲ್ಲಿ ತಕ್ಷಣವಾಗಿ ಅದಕ್ಕೆ ಔಷಧೋಪಚಾರಗಳನ್ನು ಮಾಡದೇ ಹೋದರೆ ರೈತ ಭಾರಿ ನಷ್ಟವನ್ನು ಹೊಂದಬೇಕಾಗುತ್ತದೆ. ದುರ್ದೈವದಿಂದ ತಾವು ಆ ರೈತರ ಪಶುಪಾಲನಾ ವಿಚಾರದಲ್ಲಿ ಒಂದು ಹೆಚ್ಚಿನ ಗಮನ ಕೊಟ್ಟಿಲ್ಲ. ಆದುದರಿಂದ ಈಗಲಾದರೂ ಕೂಡ ರೈತರ ಕಷ್ಟಸುಖಗಳನ್ನು ನೋಡಿಕೊಳ್ಳುವುದಕ್ಕೆ ಪಶುಪಾಲನಾ ಇಲಾಖೆಗೆ ಜಿಲ್ಲಾ ಕೇಂದ್ರದ ಆಸ್ಪತ್ರೆಗೆ ಒಂದೊಂದು ಜೀಪನ್ನು ಕೊಟ್ಟು ತುರ್ತಾಗಿ ಅವಶ್ಯಕತೆ ಬಿದ್ದಾಗ ಈ ಜೀಪನ್ನು ಉಪಯೋಗಿಸಬೇಕೆಂದು ಕಾನೂನು ಮಾಡಬೇಕು ಎಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಆಸ್ಪತ್ರೆಗಳಲ್ಲಿ ಮುಖ್ಯವಾಗಿರತಕ್ಕಂಥ ಔಷಧಿಗಳು ಬಡ ರೈತರಿಗೆ ಸಿಕ್ಕುತ್ತಾ ಇಲ್ಲ. ಪ್ರಭಾವಶಾಲಿಯಾದವರಿಗೆ ಔಷಧಿಗಳು ಸಿಕ್ಕುತ್ತಾ ಇವೆ. ಆದುದರಿಂದ ತಾವು ಇದರ ಬಗ್ಗೆ ಗಮನ ಕೊಟ್ಟು ಮುಖ್ಯವಾಗಿರತಕ್ಕಂಥ ಈ ಔಷಧಿಗಳ ಪ್ರಯೋಜನವನ್ನು ಬಡವರಿಗೆ ದೊರಕತಕ್ಕಂಥ ಒಂದು ಏರ್ಪಾಡು ಮಾಡಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ಪ್ರಮುಖ್ಯವಾದ ವಿಷಯ ಅಮೃತ್‌ಮಹಲ್ ಹೋರಿಗಳನ್ನು 750 ರೂಪಾಯಿಗಳಿಗೆ ಒದಗಿಸುತ್ತಾ ಇದ್ದೀರಿ ಎಂದು ತಿಳಿದು ಬಂದಿದೆ. ಅದು ದುಬಾರಿ ಬೆಲೆಯಾಗಿರುವುದರಿಂದ ಹಿಂದೆ ಇದ್ದ ರಿಯಾಯಿತಿ ದರದಲ್ಲಿ ಅಂದರೆ 250 ರೂಪಾಯಿಗಳಿಗೆ ಕೊಡಬೇಕು ಎಂದು ತಮ್ಮ ಗಮನಕ್ಕೆ ತರುತ್ತೇನೆ. ಮತ್ತು ಅಮೃತ್‌ಮಹಲ್ ಕಾವಲ್‌ನಲ್ಲಿರತಕ್ಕಂಥ ಜಮೀನುಗಳನ್ನು ಬಿಡುಗಡೆ ಮಾಡಬೇಕೆಂದು ಏನು ಒತ್ತಡ ಇದೆಯೋ ಅದರಲ್ಲಿ ಕೆಲವು ಎಕರೆ ಜಮೀನುಗಳನ್ನಾದರೂ ಸಾಗುವಳಿಗೆ ಬಿಡುಗಡೆ ಮಾಡಬೇಕು. ಇದು ಯೋಗ್ಯವಾದ ಸಲಹೆ. ಈಗಾಗಲೇ ಕೊಟ್ಟಿರತಕ್ಕಂಥ ಜಮೀನುಗಳು ಪ್ರಾಪರ್ ಆಗಿದ್ದರೆ ಹಿಂದೆ ಇದ್ದಂತೆ ಹುರುಳಿ ಸಾಗುವಳಿ ಮಾಡಿ ಆ ಜಮೀನುಗಳನ್ನೂ ಕೂಡ ಅಭಿವೃದ್ಧಿಪಡಿಸಿಕೊಂಡು ರೈತನೂ ಕೂಡ ಸಂಪಾದನೆ ಮಾಡಿಕೊಳ್ಳುತ್ತಾನೆ. ಇದರಿಂದ ಸರ್ಕಾರಕ್ಕೂ ಕೂಡ ಉತ್ಪತ್ತಿ ಆಗುತ್ತದೆ ಎಂದು ಹೇಳುತ್ತೇನೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಬ್ರೀಡಿಂಗ್ ಬುಲ್ಸ್ ವಿಷಯ. ಇದನ್ನು ಬೆಳೆಸುವುದಕ್ಕೆ ಸರ್ಕಾರದವರು ಹೆಚ್ಚು ಪ್ರೋತ್ಸಾಹ ಕೊಡಬೇಕು. ಈ ದನವನ್ನು ಬೆಳೆಸುವುದಕ್ಕೆ ಬಾಂಬೆ ಕರ್ನಾಟಕ ಏರಿಯಾದಲ್ಲಿ ಮತ್ತು ಇನ್ನು ಎಲ್ಲೆಲ್ಲಿ ಅವಕಾಶ ಇದೆಯೋ ಅಲ್ಲೆಲ್ಲಾ ಬೆಳೆಸುವುದಕ್ಕೆ ಗಮನಕೊಡಬೇಕು. ಫಾರೆಸ್ಟ್ ಇಲಾಖೆಯವರು ಮತ್ತು ಫಾರೆಸ್ಟ್ ಇಲಾಖೆಯಲ್ಲಿರತಕ್ಕಂಥ ಹಿಡುವಳಿ ಜಮೀನ್ದಾರರು ಹುಲ್ಲನ್ನು ಮೇಯಿಸುವುದಕ್ಕೆ ವ್ಯವಸ್ಥೆ ಮಾಡಿಕೊಂಡು ಪ್ರಪಂಚದ ವಿಖ್ಯಾತಿ ಪಡೆದಿರುವ ಈ ಅಮೃತ್‌ಮಹಲ್ ದನಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಸುವುದಕ್ಕೆ ಸರ್ಕಾರದವರು ಗಮನಕೊಡಬೇಕು ಎಂದು ಹೇಳುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಜಿ. ಚನ್ನಪ್ಪ (ಮಾಗಡಿ).—ಮಾನ್ಯ ಸಭಾಪತಿಗಳೇ, ಈ ವ್ಯವಸಾಯ ಮತ್ತು ಪಶುಪಾಲನೆ ಇಲಾಖೆಯ ಬೇಡಿಕೆಯನ್ನು ಮಂಡಿಸಿರತಕ್ಕಂಥ ವಿಷಯದಮೇಲೆ ಕೆಲವು ಸಲಹೆಗಳನ್ನು ಕೊಡುವುದಕ್ಕೆ ನಾನು ಇಚ್ಛಿಸುತ್ತೇನೆ. ಈಗ ನಮ್ಮ ಇಂಡಿಯಾ ದೇಶದಲ್ಲಿ 100ಕ್ಕೆ 85 ಜನ ವ್ಯವಸಾಯದಿಂದ ಜೀವನ ಮಾಡತಕ್ಕಂಥಾ ಜನ ಇದ್ದಾರೆ. ಈಗ ನಾವು ರೈತರ ಕಡೆಗೆ ಹೆಚ್ಚಿನ ಒಂದು ಗಮನವನ್ನು ಹರಿಸಬೇಕಾದ್ದು ನಮ್ಮ ಒಂದು ಕರ್ತವ್ಯ ಮತ್ತು ದೇಶದ ಹಿತದೃಷ್ಟಿಯಿಂದ ಒಳ್ಳೆಯದು ಎಂದು ನಾನಾದರೂ ಭಾವಿಸಿಕೊಂಡಿದ್ದೇನೆ. ಇದುವರೆಗೆ ಏನಾದರೂ ಸಾಧಿಸಿ

(ಶ್ರೀ ಎಚ್. ಜಿ. ಚನ್ನಪ್ಪ)

ದ್ದಾರೇನೋ ಎಂದು ನೋಡುವುದಾದರೆ ಯಾವ ರೀತಿಯಾಗಿಯೂ ಸಾಧನೆಯಾಗಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ರೈತರು 20 ವರ್ಷದಿಂದ ಯಾವ ಮಟ್ಟದಲ್ಲಿ ಇದ್ದರೋ ಈಗಲೂ ಕೂಡ ಅದೇ ಮಟ್ಟದಲ್ಲಿ ತಮ್ಮ ವ್ಯವಸಾಯವನ್ನು ಕುಂಠಿತ ರೂಪದಲ್ಲಿ ನಡಸಿಕೊಂಡು ಹೋಗುತ್ತಿದ್ದಾರೆ. ಅತನಿಗೆ ಯಾವ ವ್ಯವಸಾಯದ ಸೌಲಭ್ಯವೂ ದೊರೆಯುತ್ತಾ ಇಲ್ಲ. ಆದರೆ ಈ ವ್ಯವಸಾಯದ ಇಲಾಖೆ ಯಾವ ರೀತಿಯಲ್ಲಿ ಸುಧಾರಣೆಯಾಗಿದೆ ಎಂದರೆ ಅಧಿಕಾರಿಗಳನ್ನು ಹೆಚ್ಚಿಸಿ ಡಿಪಾರ್ಟ್‌ಮೆಂಟನ್ನು ದೊಡ್ಡದು ಮಾಡಿದ್ದಾರೆಯೇ ವಿನಃ ನಿಜವಾಗಿಯೂ ರೈತರ ಸುಧಾರಣೆ ಆಗಿಲ್ಲ ಎಂದು ಹೇಳಬಹುದು. ಮೊದಲು ಒಬ್ಬ ಡೈರೆಕ್ಟರ್, ಒಬ್ಬ ಡೆಪ್ಯೂಟಿ ಡೈರೆಕ್ಟರ್ ಮತ್ತು ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಆಫೀಸರುಗಳಿದ್ದರು. ಈ ಹೊತ್ತು ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಆಫೀಸರಿದ್ದಾರೆ, ಅವರ ಮೇಲೆ ಅಸಿಸ್ಟೆಂಟ್ ಡೈರೆಕ್ಟರಿದ್ದಾರೆ, ಅವರ ಮೇಲೆ ಡೆಪ್ಯೂಟಿ ಡೈರೆಕ್ಟರಿದ್ದಾರೆ, ಅವರ ಮೇಲೆ ಜಾಯಿಂಟ್ ಡೈರೆಕ್ಟರಿದ್ದಾರೆ, ಅವರ ಮೇಲೆ ಡೈರೆಕ್ಟರಿದ್ದಾರೆ. ಇಷ್ಟು ಹುದ್ದೆಗಳು ಜಾಸ್ತಿ ಯಾದರೂ ವ್ಯವಸಾಯದಲ್ಲಿ ಏನಾದರೂ ಸುಧಾರಿಸಿದೆಯೇ ಎಂದರೆ ನಿಜವಾಗಿ ಯಾವ ಸುಧಾರಣೆಯೂ ಆಗಿಲ್ಲವೆಂದರೆ ತಪ್ಪಾಗಲಾರದು. ಈಗಾಗಲೇ ನನ್ನ ಮಿತ್ರರು ಹೇಳಿದಂತೆ ಯಾವು ದಾದರೂ ಒಂದು ವಿಷಯವನ್ನು ಸಂಬಂಧಪಟ್ಟ ಅಧಿಕಾರಿಗಳಲ್ಲಿ ಕೇಳಿದರೆ ಯಾರೋ ಒಬ್ಬರನ್ನು ತೋರಿಸಿ ತಮ್ಮ ಜವಾಬ್ದಾರಿಯನ್ನು ಕಳೆದುಕೊಳ್ಳುವ ಕೆಲಸ ಜಾಸ್ತಿಯಾಗುತ್ತಿದೆ.

ರಿಸರ್ಚ್ ಸ್ಟೇಷನ್ ಎಂದು ಕರೆಯುತ್ತಾರೆ. ಹೊರಗಡೆ ದೇಶಗಳಲ್ಲಿ ರಿಸರ್ಚ್ ಮಾಡಿರುವ ಬುಲೆಟಿನ್‌ಗಳನ್ನು ಓದಿ ಉತ್ತರ ಕೊಡುತ್ತಾರೆ. ಅವರು ನಿಜವಾಗಿ ಕಷ್ಟಪಟ್ಟು, ದೇಹ ದಂಡಿಸಿ ಏನು ಪ್ರಯೋಗ ಮಾಡುತ್ತಾರೆ, ಏನು ಪ್ರಯೋಗ ಮಾಡಿದ್ದಾರೆ ಎನ್ನುವ ಭಾವನೆ ಅವರಿಗೆ ನಿಜವಾಗಿ ಬರುವುದಿಲ್ಲ. ಹೊರಗಡೆಯಿಂದ ಬಂದಿರತಕ್ಕ ಬುಲೆಟಿನ್‌ಗಳನ್ನು ಓದಿ ಉತ್ತರ ಕೊಡುವಂಥ ನಿದರ್ಶನ ಗಳು ನಮ್ಮ ರಾಜ್ಯದಲ್ಲಿ ನಡೆಯುತ್ತಿವೆ. ನನ್ನ ಅನುಭವವನ್ನು ಹೇಳುವುದಾದರೆ ನನ್ನ ತೋಟದಲ್ಲಿ ತೆಂಗಿನ ಗಿಡಗಳಿಗೆ ಒಂದು ರೋಗ ಬಂತು. ಸಂಬಂಧಪಟ್ಟ ಅಧಿಕಾರಿಗಳಿಗೆ ಬರೆದಾಗ, ರಿಸರ್ಚ್ ಸ್ಟೇಷನ್‌ನಿಂದ ಅವರು ಬಂದು ನೋಡಿ, ನಮಗೆ ಗೊತ್ತಿಲ್ಲ, ಎರ್ನಾಕುಲಂಗೆ ಬರೆಯಿರಿ ಎಂದು ಹೇಳಿದರು. ಕೇರಳದಲ್ಲಿರುವ ಎರ್ನಾಕುಲಂ ರಿಸರ್ಚ್ ಸೆಂಟರ್‌ಗೆ ಬರೆಯಬೇಕಾದರೆ, ಆ ಕೇಂದ್ರವೇ ಸಾಕು. ನಮ್ಮ ರಾಜ್ಯದಲ್ಲಿ ಒಂದು ಸಂಶೋಧನಾ ಕೇಂದ್ರ ಏಕೆ ಬೇಕು, ಅವರಿಗೆ ಸಂಬಳವನ್ನು ಏಕೆ ಕೊಡಬೇಕು, ಅವರ ಹೊರೆ ಏಕೆ ಬೇಕಾಗಿತ್ತು? ಈ ರೀತಿ ನಮ್ಮ ವ್ಯವಸಾಯದ ಸುಧಾರಣೆ ಯಾಗುತ್ತಿದೆ. ಇನ್ನೊಂದು ಕಡೆ ಹೊಸ ಹೊಸದಾಗಿ ತಳಿಗಳನ್ನು ಕಂಡು ಹಿಡಿಯುತ್ತಿದ್ದೇವೆಂದು ಹೇಳುತ್ತಿದ್ದಾರೆ. ಆ ತಳಿಗಳನ್ನು ಯಾರೋ ಒಬ್ಬ ಪ್ರೈವೇಟ್ ಏಜೆನ್ಸಿಗೆ ಕೊಟ್ಟಿರುತ್ತಾರೆ. ಅದರ ಲ್ಲಿಯೂ ಲೋಪ ದೋಷಗಳಿರುತ್ತವೆ. ಮೇಲುಗಡೆ ಲೇಬಲ್ ಯಾವುದೋ ಇರುತ್ತದೆ, ಒಳಗಡೆ ಕಾಳು ಯಾವುದೋ ಇರುತ್ತದೆ. ಅದನ್ನು ತೆಗೆದುಕೊಂಡು ಹೋಗಿ ರೈತ ಬಿತ್ತಿದರೆ 25 ಪರ್ಸೆಂಟ್ ಕೂಡ ಜರ್ಮಿನೇಷನ್ ಆಗುವುದಿಲ್ಲ. ನನ್ನ ಸ್ವಂತ ಜಮೀನಿನಲ್ಲಿ ನಾನು ಜೋಳ ಹಾಕಿದಾಗ 25 ಪರ್ಸೆಂಟ್ ಕೂಡ ಜರ್ಮಿನೇಷನ್ ಆಗಲಿಲ್ಲ. ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿ ಅವರನ್ನು ಕರೆದುಕೊಂಡು ಬಂದು ತೋರಿಸಿದೆ ಮತ್ತು ಡಿಸ್ಟ್ರಿಕ್ಟ್ ಸೆಮಿನಾರ್‌ನಲ್ಲಿ ಕೂಡ ಹೇಳಿದೆ. ಆ ಬಗ್ಗೆ ವಿಚಾರಣೆ ಮಾಡು ವುದಾಗಿ ಹೇಳಿದರು. ಏನು ವಿಚಾರಣೆ ಮಾಡಿದರೋ ಗೊತ್ತಿಲ್ಲ. ರೈತ ಕಷ್ಟಪಟ್ಟು ಜಮೀನನ್ನು ಉತ್ತು, ಗೊಬ್ಬರ ಹಾಕಿ ಬೇಸಾಯ ಮಾಡಿ ಬೀಜವನ್ನು ತೆಗೆದುಕೊಂಡು ಹೋಗಿ ಹಾಕಿದಾಗ ಮೊಳಕೆ ಬಾರದೆ ಇದ್ದರೆ ಅವನ ಗತಿ ಏನು? ಅವನು ಮಾಡಿರುವ ಸಾಲಕ್ಕೆ ಯಾರು ಜವಾಬ್ದಾರರು? ಇಂಥ ಸಂದರ್ಭಗಳಲ್ಲಿ ರೈತನಿಗೆ ಏನು ಲುಕ್ಸಾನಾಗಿದೆ, ಅವನಿಗೆ ಏನು ಪರಿಹಾರ ಕೊಡಬೇಕು ಎನ್ನು ವುದನ್ನು ಸರ್ಕಾರ ನೋಡಬೇಕು.

ಲ್ಯಾಂಡ್ ರೆಕ್ಲಮೇಷನ್ ಅತಿ ಮುಖ್ಯವಾದುದು. ಜಮೀನನ್ನು ಒತ್ತುವರಿ ಮಾಡುತ್ತ ಇದ್ದಂಥ ಬದುಗಳು ಮಾಯವಾಗಿವೆ. ಇದರಿಂದ ಮಳೆ ನೀರು ಜಮೀನಿನಲ್ಲಿ ನಿಲ್ಲದೆ ಕೆರೆ ಕುಂಟೆಗಳಿಗೆ ಹರಿದು ಹೋಗುವ ಪರಿಸ್ಥಿತಿ ಇದೆ. ಮಾನ್ಯ ಸ್ನೇಹಿತರೊಬ್ಬರು ಲ್ಯಾಂಡ್ ರೆಕ್ಲಮೇಷನ್ ಡಿಪಾರ್ಟ್ ಮೆಂಟ್ ತೆಗೆಯಿರಿ ಎಂದು ಹೇಳಿದರು. ಇದರಿಂದ ಏನೂ ಪ್ರಯೋಜನವಿಲ್ಲ ಎಂದು ಅವರಿಗೆ ಆ ಇಲಾಖೆಯ ಕಾರ್ಯಗಳ ಬಗ್ಗೆ ಬೇಸರ ಬಂದು ಹಾಗೆ ಹೇಳಿದರು ಎಂದು ನಾನು ಭಾವಿಸುತ್ತೇನೆ. ಕಾಂಟೂರ್ ಬಂಡಿಂಗ್ ಎಂದು ದೇಶದ ಎಲ್ಲ ಭಾಗದಲ್ಲಿಯೂ ಮಾಡಿದರೆ ಮಳೆ ಬಂದಾಗ ಹೆಚ್ಚಿನ ನೀರು ಜಮೀನಿನಲ್ಲಿ ಇಂಗಿ ಮಳೆ ಕಡಮೆ ಬಿದ್ದರೂ ಕೂಡ ಪೈರು ಒಣಗದಂತೆ ತಡೆಯುವ ಶಕ್ತಿ ಬರು ತ್ತದೆ. ಅದರಿಂದ ಬೆಳೆ ಖಂಡಿತವಾಗಿ ಬರುತ್ತದೆ ಎನ್ನುವ ಗ್ಯಾರಂಟಿ ಇರುತ್ತದೆ.

ಆರ್ಟಿಫಿಷಿಯಲ್ ಮೆನ್ಯೂರ್ ಉಪಯೋಗಿಸುವುದು ಜಾಸ್ತಿಯಾಗುತ್ತಿದೆ. ಯಾವ ಭೂಮಿಗೆ ಯಾವ ಗೊಬ್ಬರ ಹಾಕಬೇಕು ಎನ್ನುವುದರ ಬಗ್ಗೆ ನಮಗೆ ಇನ್ನೂ ಜ್ಞಾನೋದಯವಾಗಿಲ್ಲ. ಅಮೋನಿಯಂ ಸಲ್ಫೇಟ್ ಯಾವುದಕ್ಕೆ ಹಾಕಬೇಕು, ಉಪ್ಪು ಯಾವ ಜಮೀನಿಗೆ ಹಾಕಬೇಕು, ಪೊಟಾಷ್ ಯಾವುದಕ್ಕೆ ಹಾಕಬೇಕು ಎನ್ನುವುದು ಗೊತ್ತಿಲ್ಲ. ಬೆಳೆ ಚೆನ್ನಾಗಿ ಬರುತ್ತದೆ ಎಂದು ನಾವು ಉಪ್ಪು ಹಾಕುತ್ತಿರುತ್ತೇವೆ. ಇದರಿಂದ ಆಗತಕ್ಕ ಅನಾನುಕೂಲಗಳು ನಮಗೆ ಗೊತ್ತಿಲ್ಲ. ಆದುದರಿಂದ ವ್ಯವಸಾಯ ಇಲಾಖೆಯವರು ಹಳ್ಳಿಗಳಿಗೆ ಹೋಗಿ ಮಣ್ಣಿನ ಪರೀಕ್ಷೆ ಮಾಡತಕ್ಕ ಮೊಬೈಲ್ ವ್ಯಾನಗಳನ್ನು ಹೆಚ್ಚು ಮಾಡಿ ಎಲ್ಲ ಹಳ್ಳಿಗಳಿಗೂ ಹೋಗಿ, ಅಲ್ಲಿ ಎಲ್ಲ ಭೂಮಿಯನ್ನೂ ಪರೀಕ್ಷೆ ಮಾಡಿ, ಯಾವ ವಿಧವಾದ ಗೊಬ್ಬರ ಹಾಕಬೇಕು ಎನ್ನುವ ತಿಳುವಳಿಕೆಯನ್ನು ರೈತರಿಗೆ ಕೊಟ್ಟರೆ ಭೂಮಿಯ ಸಾರ ಇನ್ನೂ ಕೆಲವು ಕಾಲ ಉಳಿಯುತ್ತದೆ. ಇಲ್ಲದೆ ಹೋದರೆ ಕ್ಷಾರ ಜಾಸ್ತಿಯಾಗಿ ಚೌಳು ಭೂಮಿಯಾಗಿ ಯಾವ ಬೆಳೆಗೂ ಯೋಗ್ಯವಿಲ್ಲದಂತಾಗುತ್ತದೆ. ಇದರ ಕಡೆ ಹೆಚ್ಚಿನ ಗಮನವನ್ನು ಕೊಡಬೇಕೆಂದು ಹೇಳುತ್ತೇನೆ.

ಪಶುಸಂಗೋಪನೆಯ ವಿಷಯ ಹೇಳಬೇಕೆಂದರೆ, ನಮ್ಮಲ್ಲಿ ಜನಗಳನ್ನು ಆಸ್ಪತ್ರೆಗೆ ಕರೆದು ಕೊಂಡು ಹೋಗುತ್ತೇವೆ. ಆದರೆ ಜಾನುವಾರುಗಳನ್ನು ಕಾಯಿಲೆ ಬಂದಾಗ ತೆಗೆದುಕೊಂಡು ಹೋಗಬೇಕಾದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಪ್ರತಿ ಐದು ಮೈಲಿಗೊಂದು ರೂರಲ್ ವೆಟರಿನರಿ ಡಿಸ್ಪೆನ್ಸರಿ ಮಂಜೂರು ಮಾಡಿಕೊಟ್ಟು ಜಾನುವಾರುಗಳ ಕಾಯಿಲೆಯನ್ನು ಸುಧಾರಿಸುವುದಕ್ಕೆ ವ್ಯವಸ್ಥೆ ಮಾಡಬೇಕು ಮತ್ತು ಕಾಯಿಲೆ ಬಂದ ಮೇಲೆ ಔಷಧಿಗಳನ್ನು ತರಲು ಆಸ್ಪತ್ರೆಗಳಲ್ಲಿ ಚೀಟಿಗಳನ್ನು ಬರೆದುಕೊಡುತ್ತಾರೆ. ಇದು ತಪ್ಪಬೇಕು. ಆಸ್ಪತ್ರೆಗಳಲ್ಲಿ ಸಾಕಷ್ಟು ಸ್ಟಾಕ್ ಇದ್ದು ಯಾವ ಕಾಯಿಲೆ ಬರುತ್ತದೆ ಅದಕ್ಕೆ ತಕ್ಷಣ ಔಷಧಿ ಕೊಡುವ ವ್ಯವಸ್ಥೆಯಾಗಬೇಕು.

ಹೊರ ದೇಶಗಳಿಂದ ಸಾವಿರಾರು ರೂಪಾಯಿ ಕೊಟ್ಟು ಉತ್ತಮವಾದ ತಳಿಗಳನ್ನು ಎಲ್ಲರೂ ತರುವುದಕ್ಕೆ ಸಾಧ್ಯವಾಗುವುದಿಲ್ಲ. ರೂರಲ್ ವೆಟರಿನರಿ ಡಿಸ್ಪೆನ್ಸರಿಗಳಲ್ಲಿ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಪ್ರಯೋಗದಿಂದ ಉತ್ತಮ ತಳಿಗಳನ್ನು ಪಡೆದು ನಮ್ಮ ರೈತರು ಹೆಚ್ಚಿನ ಲಾಭ ಪಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಸಭಾಪತಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ನಮ್ಮ ಅರಣ್ಯ ಶಾಖೆಯ ಮಂತ್ರಿಗಳು ಭಾರತದ ಯುದ್ಧದಲ್ಲಿ ಭೀಮನಿದ್ದಂತೆ ಶರೀರದಲ್ಲಿಯೂ ಕೂಡ, ಗಟ್ಟಿತನದಲ್ಲಿಯೂ ಕೂಡ ಇದ್ದಾರೆ. ಪಾಂಚಾಲಿಯ ವಸ್ತ್ರಾಪಹರಣ ಮಾಡಿದಾಗ ಹೇಗೆ ಭೀಮ ಗದಾಧರನಾಗಿ ತಾನು ಎಲ್ಲಿಯವರೆಗೆ ಈ ಸೇಡನ್ನು ತೀರಿಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೂ ಗದೆಯನ್ನು ಇಳಿಸುವುದಿಲ್ಲ ಎಂದು ಪ್ರತಿಜ್ಞೆಯನ್ನು ಮಾಡಿದನೋ ಅದೇ ರೀತಿಯಲ್ಲಿ ದೇಶದ್ರೋಹಿ, ಸಮಾಜದ್ರೋಹಿ ಕಂಟ್ರಾಕ್ಟರುಗಳು ಮತ್ತು ಅಧಿಕಾರಿಗಳೇನಿದ್ದಾರೆ ಅವರಿಗೆ ಸರಿಯಾದ ರೀತಿಯಲ್ಲಿ ಶಾಸ್ತಿಯನ್ನು ಮಾಡತಕ್ಕ ಪ್ರತಿಜ್ಞೆಯನ್ನು ತೆಗೆದುಕೊಂಡಿರುವ ಅರಣ್ಯ ಮಂತ್ರಿಗಳು ಧೀರೋದಾತ್ತ ಅರಣ್ಯ ಶಾಖೆಯ ಮಂತ್ರಿಗಳು ಎಂದು ನಾನು ಕರೆಯುವುದಕ್ಕೆ ಇಚ್ಛೆಪಡುತ್ತೇನೆ. ಈ ಪ್ರತಿಜ್ಞೆಯನ್ನು ಕೊನೆಯ ಹಂತದವರೆಗೂ ಉಳಿಸಿಕೊಂಡು ಬರಬೇಕು. ಆರಂಭಶೂರತ್ವವಿದ್ದರೆ ಸಾಲದು ಎನ್ನುವ ಮಾತನ್ನು ನಾನು ಅವರಿಗೆ ಅರಿಕೆ ಮಾಡಿಕೊಳ್ಳಲು ಇಚ್ಛಿಸುತ್ತೇನೆ. ನಮ್ಮ ರೋದನವೇನಿದೆ ಅದು ಅರಣ್ಯರೋದನವಾಗಬಾರದು ಎಂದು ಹೇಳುತ್ತೇನೆ.

ಸಾಗರ ಡಿವಿಜನ್‌ನಲ್ಲಿ ಅಂಡಗನೂರು ಬಳಿ ಸುಮಾರು 20 ಎಕರೆ ಜಾಗ ಕೊಟ್ಟದ್ದನ್ನು ನೂರಾರು ಎಕರೆ ಅರಣ್ಯ ಪ್ರದೇಶ ಕಡಿದು ಹಾಕಿರುವುದನ್ನು ತಾವು ತಲಾಸೆ ಮಾಡಿದ್ದೀರಿ. ಜಿರಳೆಗೆ ಮೀಸೆ ಹೋಗುವುದಕ್ಕೆ ಜಾಗ ಸಿಕ್ಕಿದರೆ ಇಡೀ ದೇಹವೇ ಪ್ರವೇಶ ಮಾಡುವಂತೆ, ಅವರು ತೆಗೆದುಕೊಳ್ಳತಕ್ಕದ್ದು ಒಂದಂಗುಲ ಜಾಗ, ಪ್ರಸರಿಸುವುದು ಮೈಲಿಗಟ್ಟಲೆ ವಿಸ್ತೀರ್ಣದ ಜಾಗ. ನಾನು ಒಂದು ಪ್ರಶ್ನೆ ಕಳುಹಿಸಿದ್ದೆ; ಹುಲಿಕಲ್ ಘಾಟಿಯಲ್ಲಿ ಗೇಟ್ ಕೀಪರ್ ಕೆಲಸ ಕೊಡಿ ಎಂದು. ನಾನು ಏಕೆ ಕೇಳುತ್ತಿದ್ದೇನೆಂದರೆ ಇಡೀ ಅರಣ್ಯ ಸಂಪತ್ತು ಈ ಹೊತ್ತು ಹೊಸನಗರ ತಾಲ್ಲೂಕಿನ ಹುಲಿಕಲ್ ಘಾಟ್ ಮೂಲಕ ಸಾಗಿ ಹೋಗುತ್ತಿದೆ. ಹುಲಿ ಚರ್ಮ ಹೊದ್ದ ಕತ್ತೆಯಂತೆ ಎಷ್ಟೊಂದು ಗಂಧದ ಮರ ಹೋಗುತ್ತಿದೆ ಎಂದರೆ ಅದಕ್ಕೆ ಮಿತಿಯೇ ಇಲ್ಲ. ಬಾಡಿಗೆ ಕಾರನ್ನು ಇಟ್ಟುಕೊಂಡಿರುವಂಥ ಮಹನೀಯರು, ಅಂಬಾಸಿಡರ್ ಕಾರ್‌ಗಳಲ್ಲಿ ಹಾಕಿಕೊಂಡು ಹೋಗುತ್ತಾರೆ. ಇದನ್ನು ತಲಾಸೆ ಮಾಡತಕ್ಕ ಮಂತ್ರಿಗಳು ನಮಗೆ ಬೇಕಾಗಿತ್ತು. ಈ ಹೊತ್ತು ಅಂಥ ಮಂತ್ರಿಗಳು ಬಂದಿದ್ದಾರೆ. ಅವರ ಆ ಕೆಲಸವನ್ನು ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ದೇಶದ್ರೋಹಿಗಳು ಎಂದರೆ ಎಲ್ಲರೂ ದೇಶದ್ರೋಹಿಗಳು ಎಂದು ಕರೆಯುವುದಕ್ಕೆ ನಾನು ಸಿದ್ಧನಾಗಿಲ್ಲ.

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ಒಳ್ಳೆಯವರೂ ಇದ್ದಾರೆ, ಕೆಟ್ಟವರೂ ಇದ್ದಾರೆ. ದೇಶದ್ರೋಹಿಗಳು ಎಂದು ಯಾರನ್ನು ಕರೆದಿದ್ದೇನೆ ಅವರು ಸಮಾಜದಲ್ಲಿ ನಾಲ್ಕು ರೂಪಾಯಿ, ಹತ್ತು ರೂಪಾಯಿ ಲಂಚ ತಿನ್ನುವವರು, ಸಮಾಜ ದ್ರೋಹಿಗಳಾಗುತ್ತಾರೆ.

ಆಫೀಸರ್ಸ್ ಏನು ಶಾಮೀಲ್ ಆಗಿ ಕಂಟ್ರಾಕ್ಟರುಗಳ ಜೊತೆಗೆ ಕೆಲಸ ಮಾಡುತ್ತಿದ್ದಾರೆ, ಅವರನ್ನು ತಲೆ ಬೋಳಿಸಿ ಕತ್ತೆಯಮೇಲೆ ಸವಾರಿ ಮಾಡಿಸಿದರೂ ಕೂಡ ಸಾಲದು. ಈ ದೃಷ್ಟಿಯಿಂದ ತಾವು ಈ ವ್ಯವಹಾರವನ್ನು ಮಟ್ಟಹಾಕಬೇಕೆಂದು ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ಪಶ್ಚಿಮಘಟ್ಟದಲ್ಲಿ ಬಹಳ ವಿಸ್ತೀರ್ಣ ಪ್ರದೇಶದ ಕಾಡನ್ನು ಬೋಳಿಸಿ ದುರುಪಯೋಗ ಮಾಡಿದ್ದಾರೆ. ಇದನ್ನು ತಾವು ನೋಡಬೇಕು. ಈಹೊತ್ತು ಪಶ್ಚಿಮ ಘಟ್ಟವನ್ನು ನಿಂತುಕೊಂಡು ನೋಡಿದರೆ, ಒಳ್ಳೆಯ ಬೋಳು ತಲೆ ಕಂಡ ಹಾಗೆ ಕಾಣುತ್ತದೆ. ಮೈಲಿಗಟ್ಟಲೆ ಮರಗಳನ್ನು ಕಡಿದಂಥ ನೀಚರನ್ನು ಶಿಕ್ಷೆ ಮಾಡುವಂಥ ಫಾರೆಸ್ಟ್ ಸಿಬ್ಬಂದಿಯ ಸರ್ಕಾರ ಬೇಕಿತ್ತು. ದಾಂಡೇಲಿ, ಭದ್ರಾವತಿ ಈ ಮುಖ್ಯ ಕಾರ್ಖಾನೆಗಳಿಗೆ ಮರವನ್ನು ಕೊಡುತ್ತಿದ್ದೇವೆ. ಕಡಿದಂಥ ಜಾಗವನ್ನು ಸರಿಯಾದ ರೀತಿಯಲ್ಲಿ ಹೊಸ ಮರಗಳನ್ನು ಇವತ್ತಿನವರೆಗೂ ಬೆಳೆಸತಕ್ಕ ಸರ್ಕಾರ ಬಂದಿರಲಿಲ್ಲ. ಈಹೊತ್ತು ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ತಾವು ಏನು ಪ್ರಯತ್ನ ತೆಗೆದುಕೊಂಡಿದ್ದೀರಿ? ಏನು ತೀರ್ಮಾನ ತೆಗೆದುಕೊಂಡಿದ್ದೀರಿ ? ಕೆಲವಾರು ಜನ ರೈತರು ಸಾಗುವಳಿ ಮಾಡಿಕೊಂಡು ಬಂದ ಜಮೀನು ಅರಣ್ಯ ಜಾಗಕ್ಕೆ ಸೇರಿದ್ದು ಎಂದು ಅಲ್ಲಿಯ ಬಡ ಬಗ್ಗರಿಗೆ ಕಟ್ಟು ಪ್ರಹಾರ ಬಂದು ನಿಂತಿದೆ. ಸಾವಿರಾರು ಕುಟುಂಬಗಳವರು ಮಲೆನಾಡಿನಲ್ಲಿ ಬಳಲುತ್ತಿದ್ದಾರೆ. ಈ ಬಗ್ಗೆ ಅವರು ಸರ್ಕಾರಕ್ಕೆ ಅರ್ಜಿ ಕೊಟ್ಟರೂ, ಅವರ ಗೋಳನ್ನು ಕೇಳುವ ಹಾಗಿಲ್ಲ ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ಸಾಗುವಳಿ ಮಾಡಿಕೊಂಡು ಬಂದಿರತಕ್ಕ ಜಮೀನು ಏನು ಇದೆ, ಸಾಗುವಳಿಗೆ ಯೋಗ್ಯವಾದ ಜಮೀನು ಏನು ಇದೆ, ಅದು 100ಕ್ಕೆ 99 ಭಾಗ ಅರಣ್ಯ. ಈ ಅರಣ್ಯವನ್ನೇ ಕೊಡುವುದಿಲ್ಲ ಎಂದರೆ, ಮಲೆನಾಡಿನಲ್ಲಿನ ರೈತರು ನಾಲ್ಕು ಹೊತ್ತು ಊಟ ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ. ಇವತ್ತು ಹೊಸನಗರ, ತೀರ್ಥಹಳ್ಳಿ, ಸಾಗರ ತಾಲ್ಲೂಕುಗಳಲ್ಲಿ ಪ್ರಪೋಸ್ಡ್ ಫಾರೆಸ್ಟ್ ಎಂದು ಹೇಳಿ ಅಲ್ಲಿಯ ನೂರಾರು ಎಕರೆ ಗೋಮಾಳ ಜಮೀನನ್ನು ಶಿಫಾರಸು ಮಾಡಿ ತಮಗೆ ಕಳುಹಿಸಿಬಿಟ್ಟಿದ್ದಾರೆ. ಸರ್ವೆ ನಂಬರ್ ಹಾಕಿ ಸಾವಿರಾರು ಅರ್ಜಿಗಳು, ದರಖಾಸ್ತು ಅರ್ಜಿಗಳಿಗೆ ಪ್ರಪೋಸ್ಡ್ ಫಾರೆಸ್ಟ್ ಎಂದು ಇರುವುದರಿಂದ ಕೊಡುವುದಕ್ಕಾಗುವುದಿಲ್ಲ ಎಂದು ರಾಸಿ ಗಟ್ಟಲೆ ಫೈಲ್ಸ್ ಬಿದ್ದಿದೆ. ದರಖಾಸ್ತು ವಿಲೇವಾರಿ ಆಗಬೇಕು, ಸಮಾಜವಾದ ಹೇಳುವ ಸರ್ಕಾರ ನಾಲ್ಕು ಹೊತ್ತು ಊಟ ಕೊಡದಿದ್ದರೆ ಹೇಗೆ ಸಮಾಜವಾದವಾಗುತ್ತದೆ ಎಂದು ಕೇಳುತ್ತೇನೆ. ತಾಲ್ಲೂಕು ಬೋರ್ಡ್‌ಗೆ ಫಾರೆಸ್ಟ್‌ನಿಂದ ಬಂದಿರತಕ್ಕ ಇನ್‌ಕಂ ಏನು ಇದೆ, ಅದರ ಒಂದಂಶವನ್ನು ತಾವು ಮಲೆನಾಡಿಗೆ ಕೊಡಬೇಕೆಂದು ಹೇಳುತ್ತೇನೆ. ಅಧ್ಯಕ್ಷರು ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಸ್. ವೀರಭದ್ರಪ್ಪ (ಕೂಡ್ಲಿಗಿ).—ಮಾನ್ಯ ಮಂತ್ರಿಗಳು ತಮ್ಮ ಡಿಮಾಂಡ್ ಬೇಡಿಕೆಯಲ್ಲಿ ಇಟ್ಟಿರುವ ಹಣ, ಈ ವ್ಯವಸಾಯ ಇಲಾಖೆಯನ್ನು ಬೆಳೆಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ತಿಳಿಸಲಿಕ್ಕೆ ವಿಷಾದವಾಗುತ್ತದೆ. ಮಾನ್ಯ ವ್ಯವಸಾಯ ಮಂತ್ರಿಗಳು ರೈತರಿಗೆ ಬೇಕಾಗುವಂಥ ಗೊಬ್ಬರ, ಔಷಧಿಗಳನ್ನು ಸಾಕಷ್ಟು ಹೆಚ್ಚಿನ ರೀತಿಯಲ್ಲಿ ಒದಗಿಸಿಕೊಡಲಿಕ್ಕೆ ಪ್ರಯತ್ನಪಡಬೇಕು. ಬೆಳೆಯ ಸಂರಕ್ಷಣೆಯ ಔಷಧಿಗಳನ್ನು ಮುಂಚೆಯೇ ಸರ್ಕಾರದವರು ರಿಯಾಯಿತಿ ದರದಲ್ಲಿ ಕೊಟ್ಟಂತೆ ಮುಂದುವರಿಸಿಕೊಂಡು ಹೋಗಬೇಕು. ಎಂದು ನಾನು ಅವರನ್ನು ವಿನಂತಿಸುತ್ತೇನೆ. ರೈತ ತನಗೆ ಬೇಕಾದಷ್ಟು ಕಬ್ಬಿಣವನ್ನು ಕೊಂಡುಕೊಳ್ಳುವುದಕ್ಕೆ ಶಕ್ತಿಯಿಲ್ಲ, ಒಂದು ವರ್ಷದ ಹಿಂದೆ ಸಾವಿರ ರೂಪಾಯಿಗೆ ಒಂದು ಟನ್ ಇದ್ದಂಥ ಕಬ್ಬಿಣ ಇವತ್ತು ಮಾರ್ಕೆಟ್ಟಿನಲ್ಲಿ 2,200 ರೂಪಾಯಿಯವರೆಗೆ ಆಗಿದೆ. ರೈತ ತನಗೆ ಬೇಕಾದ ಕಬ್ಬಿಣದ ಆಳಿ, ಅಚ್ಚು, ಕುಳಕ್ಕೆ ಸೊಸೈಟಿ ಅಥವಾ ಯಾವುದಾದರೂ ಏಜನ್ಸಿಯ ಮೂಲಕ ರಿಯಾಯಿತಿ ದರದಲ್ಲಿ ಕೊಡುವಂತೆ ಮಾಡಿಕೊಡಬೇಕು ಎಂದು ವಿನಂತಿಸುತ್ತೇನೆ.

ಇನ್ನು ರೈತರ ಮಕ್ಕಳಿಗೆ ವ್ಯವಸಾಯ ಕಾಲೇಜಿನಲ್ಲಿ ಸೀಟುಗಳನ್ನು ಕನಿಷ್ಟ 25 ಪರ್ಸೆಂಟ್ ರಿಸರ್ವ್ ಮಾಡಬೇಕು. ಏಕೆಂದರೆ, ನಮ್ಮಲ್ಲಿ ಮೂರು ವ್ಯವಸಾಯದ ಕಾಲೇಜುಗಳು ಇವೆ. ಇದರಲ್ಲಿ ಕೇವಲ ಕೆಲವೇ ವರ್ಗದ ಜನರಿಗೆ ಸೀಟು ಸಿಗುತ್ತಿದೆ. ನಗರದಲ್ಲಿ ದೊಡ್ಡ ಪಟ್ಟಣಗಳಲ್ಲಿ ವಿದ್ಯಾಭ್ಯಾಸ ಮಾಡಿ ಹೆಚ್ಚಿನ ಅಂಕಗಳನ್ನು ಪಡೆಯಲಿಕ್ಕೆ ಒಳ್ಳೆಯ ವಾತಾವರಣ ಇರುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಒಳ್ಳೆಯ ವಾತಾವರಣ ಇಲ್ಲದ ಕಾರಣ ಹೆಚ್ಚಿನ ಅಂಕಗಳನ್ನು ಅವರು

ಪಡೆಯಲಿಕ್ಕೆ ಆಗುವುದಿಲ್ಲ. ಆದ್ದರಿಂದ ಅವರಿಗೆ ಈ ಮೂರು ಕಾಲೇಜುಗಳಲ್ಲಿ ಸೀಟು ಸಿಗುವುದಿಲ್ಲ. ಅಧಕ್ಕಾಗಿ ಗ್ರಾಮಾಂತರ ಪ್ರದೇಶದಿಂದ ಬರುವ ಮಕ್ಕಳಿಗೆ ಶೇಕಡ 25 ಸೀಟನ್ನು ಕೊಡಬೇಕು ಎಂದು ಕಂಡೀಷನ್ ಹಾಕಬೇಕು. 10—15 ಎಕರೆ ಜಮೀನು ಇರುವವರಿಗೆ ಸೀಟು ಕೊಟ್ಟರೆ ಅವರು ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಮಾರ್ಗದರ್ಶಕರಾಗುವುದಕ್ಕೆ ಅನುಕೂಲವಾಗುತ್ತದೆ. ಆದಕಾರಣ ಮಾನ್ಯ ಮಂತ್ರಿಗಳು ವಿಚಾರ ಮಾಡಿ ರೈತರ ಮಕ್ಕಳಿಗೆ ವ್ಯವಸಾಯದ ಕಾಲೇಜಿನಲ್ಲಿ ಸೀಟುಗಳನ್ನು ರಿಸರ್ವ್ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಅರಣ್ಯ ಸಂಪತ್ತಿನಲ್ಲಿ ಸಿಗುವಂಥ ಊಟದ ಎಲೆಯನ್ನು ಹಚ್ಚುವ ಕೆಲಸವನ್ನು ಕೂಡ್ಲಿಗಿ ಮತ್ತು ಬಳ್ಳಾರಿಯಲ್ಲಿ ಮಾಡುತ್ತಿದ್ದರು ಈ ಊಟದ ಎಲೆಯನ್ನು ಹಿಂದೆ ಅರಣ್ಯ ಸಂಪತ್ತಿನಲ್ಲಿ ಸೇರಿಸಿರಲಿಲ್ಲ. ಎರಡ ವರ್ಷಗಳಿಂದ ಸೇರಿಸಿರುವುದರಿಂದ ಬಡ ಕೂಲಿಗಾರರಿಗೆ ತೊಂದರೆಯಾಗಿದೆ. ಅದನ್ನು ಈ ದೃಷ್ಟಿಯಿಂದ ಅರಣ್ಯ ಸಂಪತ್ತಿನಿಂದ ತೆಗೆದು ಹಾಕಬೇಕು. ಇದು ಬಡವರಿಗೆ ಎಲೆಗಳನ್ನು ಹಚ್ಚಿ ಜೀವನ ಮಾಡುವ ಸಣ್ಣ ಕೈಗಾರಿಕೆಯಾಗಿದೆ. ಅವಕ್ಕೆ ಪ್ರೋತ್ಸಾಹ ಕೊಡುವುದಕ್ಕೋಸ್ಕರ ಅರಣ್ಯದಿಂದ ಫ್ರೀ ಆಗಿ ಎಲೆಗಳನ್ನು ಕೊಡುವ ವ್ಯವಸ್ಥೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ವಿನಂತಿಸುತ್ತೇನೆ. ನಮ್ಮ ರಾಜ್ಯದಲ್ಲಿ ಹಿಂದುಳಿದ ಜನಾಂಗಗಳ ಪೈಕಿ ಒಡ್ಡರ ಜನಾಂಗ ಇದೆ. ಅವರ ಕಸುಬು ಕಲ್ಲು ಹೊಡೆಯುವುದು. ಬಂಡೆಗಳನ್ನು ಒಡೆದು ಜೀವನ ಮಾಡುತ್ತಾರೆ, ಅವರಿಗೆ ಅರಣ್ಯದಲ್ಲಿರುವ ಬಂಡೆಗಳನ್ನು ಹೊಡೆದು ಕಲ್ಲು ತರುವುದಕ್ಕೆ ಪರ್ಮಿಟ್ ತೆಗೆದುಕೊಂಡು ತರಬೇಕು ಎಂದು ಮಾಡಿದ್ದಾರೆ. ಇದರಿಂದ ಅವರ ಕಸುಬಿಗೆ ತೊಂದರೆಯಾಗಿದೆ, ಆದ್ದರಿಂದ ಅವರಿಗೆ ಉಚಿತವಾಗಿ ಕಲ್ಲುಗಳನ್ನು ಅರಣ್ಯದಿಂದ ತರುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ. ಫಾರೆಸ್ಟ್ ಏರಿಯಾ ಅನ್ನು ತಾವು ಹೊಸದಾಗಿ ಸರ್ವೆ ಮಾಡಿ ಸರ್ವೆ ಕಲ್ಲುಗಳನ್ನು ಫಿಕ್ಸ್ ಮಾಡಬೇಕು. ಅನೇಕ ವರ್ಷಗಳಿಂದ ಫಾರೆಸ್ಟ್ ಲ್ಯಾಂಡ್‌ನಲ್ಲಿ ಸಾಗುವಳಿ ಮಾಡುತ್ತಿದ್ದಾರೆ. ಅಧಿಕಾರಿಗಳು ಆ ಜನಗಳಿಗೆ ಕಿರುಕುಳ ಕೊಡುತ್ತಿದ್ದಾರೆ. ಫಾರೆಸ್ಟ್ ಲ್ಯಾಂಡ್ ಅನ್ನು ಕೊಡುವುದಿಲ್ಲ ಆದ್ದರಿಂದ ತಾವು ಫಾರೆಸ್ಟ್ ಅನ್ನು, ಅದರ ಹದ್ದನ್ನು ಅಳತೆ ಮಾಡಿದರೆ ಮುಂದೆ ರೈತರಿಗೆ ಜಮೀನುಗಳನ್ನು ಸಾಗುವಳಿ ಮಾಡುವುದಕ್ಕೆ ಅವಕಾಶವಾಗುತ್ತದೆ. ಸಾಗುವಳಿ ಮಾಡಿದ ಜಮೀನುಗಳಿಗೆ ಅರಣ್ಯ ಇಲಾಖೆಯವರು ತೊಂದರೆ ಕೊಡಬಾರದು ಎಂದು ತಾವು ಆದೇಶ ಕೊಡಬೇಕು, ಎಂದು ಹೇಳುತ್ತೇನೆ. ನಮ್ಮ ತಾಲ್ಲೂಕಿನ 54 ಹಳ್ಳಿಗಳಲ್ಲಿ ತುಂಗಭದ್ರ ಅಣೆಕಟ್ಟಿನಿಂದ ಮಣ್ಣು ಬಂದು ಊಳು ಮುಚ್ಚಿಕೊಳ್ಳುತ್ತದೆ. ಸರ್ಕಾರ ಅಂಥ ಜಮೀನುಗಳಿಗೆ ಪಟ್ಟ ಕೊಡಬಾರದು ಎಂದು ಗವರ್ನರ್ ಆಡಳಿತದಲ್ಲಿ ಒಂದು ಆಜ್ಞೆ ಹೊರಡಿಸಿದ್ದಾರೆ. 10—12 ವರ್ಷಗಳಿಂದ ಸಾಗುವಳಿ ಮಾಡಿದಂಥ ಜಮೀನುಗಳಿಗೆ ಪಟ್ಟ ಕೊಡಬಾರದು ಎಂದು ಡೆಪ್ಯೂಟಿ ಕಮಿಷನರ್ ಮತ್ತು ತಹಸೀಲ್ದಾರ್ ಅವರು ಆದೇಶ ಕೊಟ್ಟಿದ್ದಾರೆ. ಇದು ಅನ್ಯಾಯ, ಆದ್ದರಿಂದ ಆದಷ್ಟು ಬೇಗ ಈ ಹಳ್ಳಿಗಳವರಿಗೆ ಪಟ್ಟ ಕೊಡ ಬೇಕೆಂದು ಸೂಚಿಸುತ್ತೇನೆ. ಮತ್ತು ಮುಖ್ಯವಾಗಿ ರೈತರಿಗೆ ಕ್ರಾಪ್ ಇನ್‌ಷ್ಯೂರೆನ್ಸ್ ಜಾರಿಗೆ ತರಬೇಕು. ನೀರಾವರಿ ಪ್ರದೇಶ ಇರುವ ಮಳೆ ಬಂದರೆ ಬೆಳೆಗಳಿಗೆ ತೊಂದರೆಯಾಗುತ್ತದೆ. ಆದ್ದರಿಂದ ಕ್ರಾಪ್ ಇನ್‌ಷ್ಯೂರೆನ್ಸ್ ಸ್ಕೀಂ ಅನ್ನು ತಂದರೆ ರೈತನಿಗೆ ತಾನು ಬೆಳೆಯುವ ಪೈರಿಗೆ ಒಂದು ಗ್ಯಾರಂಟಿ ಸಿಗುತ್ತದೆ ಎಂದು ಈ ಸಂದರ್ಭದಲ್ಲಿ ಸೂಚಿಸಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

6-30 P.M.

† ಶ್ರೀ ಧರ್ಮಸಿಂಗ್ ನಾರಾಯಣ್‌ಸಿಂಗ್ (ಜೇವರ್ಗಿ).—ಮಾನ್ಯ ಅಧ್ಯಕ್ಷಿಣಿಯವರೇ, ಇವೊತ್ತಿನ ದಿವಸ ಅರಣ್ಯ ಇಲಾಖೆ ಮಂತ್ರಿಗಳು ಮತ್ತು ಪಶುಪಾಲನೆ ಮಂತ್ರಿಗಳು ಮಂಡಿಸಿರುವ ಬೇಡಿಕೆಗಳಿಗೆ ಬೆಂಬಲವನ್ನು ವ್ಯಕ್ತಪಡಿಸುತ್ತಾ ಕೆಲವು ಸಲಹೆ ಸೂಚನೆಗಳನ್ನು ಅವರ ಗಮನಕ್ಕೆ ತರಲುಬಯಸುತ್ತೇನೆ. ಈ ಹೈದರಾಬಾದ್ ಕರ್ನಾಟಕ ಏರಿಯಾ ಬಹಳ ನೆಗ್ಲೆಕ್ಟೆಡ್ ಏರಿಯಾ ಇದೆ. ಹೈದರಾಬಾದ್ ಕರ್ನಾಟಕ ಏರಿಯಾದಲ್ಲಿ ಸಾಕಷ್ಟು ಕೆಲಸ ಆಗಬೇಕಾಗಿದೆ. ಅಲ್ಲಿ ಒಂದು ಸೀಡ್ ಫಾರಮ್ ಫಾರ್ ವೆಜಟೆಬಲ್ಸ್ ಆಗಬೇಕು. ಸೆಂಟ್ರಲ್‌ಪ್ಲೇಸ್ ಗುಲ್ಬರ್ಗದಲ್ಲಿ ಕೊಡಬೇಕು ಎಂದು ಮಂತ್ರಿಮಂಡಲದವರನ್ನು ಕೇಳಿಕೊಳ್ಳುತ್ತೇನೆ. ಈಗ ಜಾಯಿಂಟ್ ಡೈರೆಕ್ಟರ್ ಆಫೀಸ್ ರಾಯಚೂರ್‌ನಲ್ಲಿ ಇದೆ. ಗುಲ್ಬರ್ಗಾ ಡಿವಿಜನಲ್ ಹೆಡ್‌ಕ್ವಾರ್ಟರ್ಸ್ ಮತ್ತು ಅಲ್ಲಿ ಎಲ್ಲಾ ಆಫೀಸುಗಳು ಇವೆ. ಆದ್ದರಿಂದ ಜಾಯಿಂಟ್ ಡೈರೆಕ್ಟರ್ ಆಫೀಸ್ ಗುಲ್ಬರ್ಗಕ್ಕೆ ಬರಬೇಕು. ಎಂದು ಕೇಳಿಕೊಳ್ಳು[illegible] ಇಂಟೆನ್ಸೀವ್ ಡ್ರೈ ಲ್ಯಾಂಡ್ ಡೆವಲಪ್‌ಮೆಂಟ್ ಸ್ಕೀಮ್ ಇದೆ. ಅದು ಬಳ್ಳಾರಿ ಬಿಜಾಪುರದಲ್ಲಿ ಮಾಡಿದ್ದಾರೆ. ಗುಲ್ಬರ್ಗಾದಲ್ಲಿ ಜವಾರ್ ಬೆಳೆಯುತ್ತಾರೆ. ಆದುದರಿಂದ ಗುಲ್ಬರ್ಗಾದಲ್ಲಿಯೂ ಆ ರೀತಿ ಸ್ಕೀಮ್ ಆಗಬೇಕು ಎಂದು ಕೇಳಿಕೊಳ್ಳುತ್ತೇನೆ. ಒಂದು ಫಾರ್ಮರ್ಸ್

(ಶ್ರೀ ಧರ್ಮಸಿಂಗ್ ನಾರಾಯಣ್‌ಸಿಂಗ್)

ಟ್ರೈನಿಂಗ್ ಸೆಂಟರು ಗುಲ್ಬರ್ಗಾದಲ್ಲಿ ಆಗಬೇಕು. ಗಂಗಾವತಿಯಲ್ಲಿ ರೂರಲ್ ಡೆವಲಪ್‌ಮೆಂಟ್ ಟ್ರೈನಿಂಗ್ ಸೆಂಟರ್ ಇದೆ. ಇದು ಗುಲ್ಬರ್ಗದಲ್ಲಿ ಆಗಬೇಕು. ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಆಗುವುದು ಇದೆ. ಅಲ್ಲಿ ಮಾಡುವ ಸಲುವಾಗಿ ನನ್ನ ಕ್ಷೇತ್ರವಾದ ಜೆವರ್ಗಿಯಲ್ಲಿ ಭೂಮಿ ಥಂಡಿಯಾಗಿ ಇದೆ ವಾಟರ್ ಉಪಯೋಗವನ್ನು ಮಾಡುವ ಸಲುವಾಗಿ ಒಂದು ಸೆಂಟರ್ ಕಾಯಂ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಒಕ್ಕಲಿಗರಿಗೆ ಡಿ. ಡಿ. ಟಿ. ಸರಿಯಾಗಿ ಸಪ್ಲೈ ಆಗುವುದಿಲ್ಲ. ಈಗ ಏನು ಡಿ. ಡಿ. ಟಿ. ಸಪ್ಲೈ ಮಾಡುತ್ತಿದ್ದಾರೆ, ಅದು ಜನರಿಗೆ ಬೇಕಿಲ್ಲ. ಟಾಟಾ ಅವರ ಡಿ.ಡಿ.ಟಿ. ಬೇಕು. ಕೆಲವು ಇನ್‌ಫ್ಲೂಯೆನ್ಸ್ ಪರ್‌ಸನ್ಸ್‌ಗೆ ಆ ಡಿ.ಡಿ.ಟಿ. ಸಿಕ್ಕುತ್ತಿದೆ. ಸಾಧಾರಣ ಜನರಿಗೆ ಸಿಕ್ಕುವುದಿಲ್ಲ. ನಮ್ಮಲ್ಲಿ ತೊಗರಿಬೇಳೆ ಹೆಚ್ಚು ಇದೆ. ಅದಕ್ಕೆ 50 ಪರ್ಸೆಂಟ್ ಡಿ.ಡಿ.ಟಿ. ಬೇಕು. ಟಾಟಾ ಡಿ.ಡಿ.ಟಿ. ಕೊಡಬೇಕೆಂದು ಬೇಡಿಕೊಳ್ಳುತ್ತೇನೆ. ರಿಸರ್ಚ್ ಸ್ಟೇಷನ್ ಚಿತ್ತಾಪುರದಲ್ಲಿ ಆಗಬೇಕೆಂದು ಆಗಿತ್ತು, ಇಲ್ಲಿಯವರೆಗೆ ಆಗಿಲ್ಲ ಅದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಚಿಂಚೋಳಿ ತಾಲ್ಲೂಕಿನಲ್ಲಿ ಬೃಂದಾವನ್ ಗಾರ್ಡನ್ಸ್ ಮಾಡಬೇಕು ಎಂದು ಹೇಳಿದ್ದಾರೆ. ಇನ್ನು ಫಂಡ್ಸ್ ಅಲಾಟ್ ಆಗಿಲ್ಲ. ಆದಕಾರಣ ತ್ವರಿತವಾಗಿ ಅಲ್ಲಿ ಕೆಲಸ ಪ್ರಾರಂಭ ಆಗಬೇಕು ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೊಂದು ಕೇಳುವುದು ಹಾರ್ಟಿಕಲ್ಚರಲ್ ಡಿಪಾರ್ಟ್‌ಮೆಂಟಿನಲ್ಲಿರುವ ಕೆಲವು ಜನರು ಲಾಲ್‌ಬಾಗ್‌ನಲ್ಲಿ ಹುಟ್ಟಿದ್ದಾರೆ, ಲಾಲ್‌ಬಾಗ್‌ನಲ್ಲಿ ಬೆಳೆಯುತ್ತಾರೆ ಮತ್ತು ಲಾಲ್‌ಬಾಗ್‌ನಲ್ಲಿ ರಿಟೈರ್ ಆಗುತ್ತಾರೆ. ಈ ತರಹ ಅನ್ಯಾಯ ಇದೆ. ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್ ಇದಕ್ಕೆ ಸರಿಯಾಗಿ ಗಮನಕೊಡಬೇಕು 1969ರಲ್ಲಿ ಸೀನಿಯಾರಿಟಿ ಲಿಸ್ಟ್ ತಯಾರಾಗಿತ್ತು. ಆ ಸೀನಿಯಾರಿಟಿ ಲಿಸ್ಟ್‌ನ್ನು ಓವರ್‌ಲುಕ್ ಮಾಡಿ ಮನಸ್ಸಿಗೆ ಬಂದಾಹಾಗೆ ಪ್ರೊಮೋಷನ್ ಕೊಡುತ್ತಿದ್ದಾರೆ. ಎಷ್ಟೋ ಮಂದಿ ಎಲ್.ಎಸ್.ಜಿ., ಬಿ.ಎಸ್.ಸಿ. ಪಾಸ್ ಮಾಡಿದ ಗ್ರ್ಯಾಜುಯೇಟ್ ಇದ್ದಾರೆ. ಅವರಿಗೆ ನೌಕರಿ ಸಿಕ್ಕುವುದಿಲ್ಲ. ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ಅಟೆಂಡರ್ ಚಪ್ರಾಸಿಯಾಗಿ ಸೇರಿದವರು ಈಗ ಹಾರ್ಟಿಕಲ್ಚರ್ ಅಸಿಸ್ಟೆಂಟ್ ಡೈರೆಕ್ಟರಾಗಿದ್ದಾರೆ. ಉದಾಹರಣೆಗೆ ಶ್ರೀ ವಿಷಕಂಠ ಅನ್ನುವವರು ಮತ್ತು ಕೃಷ್ಣಮೂರ್ತಿ ಅನ್ನುವವರು ಕ್ಲಾಸ್‌ಫೋರ್ ಆಗಿದ್ದವರು ಈಗ ಅವರು ಅಸಿಸ್ಟೆಂಟ್ ಡೈರೆಕ್ಟರ್ ಆಗಿದ್ದಾರೆ. ಬಿ.ಎಸ್.ಸಿ. ಮತ್ತು ಎಂ.ಎಸ್.ಸಿ. ಪಾಸ್ ಇದ್ದವರಿಗೆ ಗಮನ ಕೊಡುವುದಿಲ್ಲ. ಗುಲ್ಬರ್ಗದಲ್ಲಿ ಅನಿಮಲ್ ಹಸ್ಬೆಂಡರಿ ಇಲಾಖೆಯಲ್ಲಿ ಇದ್ದಾರೆ. ನಮ್ಮ ತಾಲ್ಲೋಕಿನಲ್ಲಿ ಒಂದು ಸಾರಿ ದನಗಳಿಗೆ ಚಪ್ಪೆಬೇನೆ ಬಂತು. ಎಲ್ಲಾ ಜನರು ಹೋಗಿ ಹೇಳಿದರು. ಅದಕ್ಕೆ ಡಾಕ್ಟರು ಪಂಚಾಯತಿ ರೆಸಲ್ಯೂಷನ್ ಬೇಕು ಇಲ್ಲದಿದ್ದರೆ ತಾನು ಬರುವುದಿಲ್ಲ ಎಂದು ಹೇಳಿದರು. ಅಲ್ಲಿ 15—20 ದನಗಳು ಸತ್ತು ಹೋಗಿವೆ. ಈ ರೀತಿ ಡಿಪಾರ್ಟ್‌ಮೆಂಟಿನಲ್ಲಿ ಇರೆಗ್ಯೂಲಾರಿಟೀಸ್ ಇವೆ. ಡಾಕ್ಟರ್ಸ್ ಹಳ್ಳಿಗಳಿಗೆ ಹೋಗಿ ನೋಡುವುದಿಲ್ಲ ಎಂದು ವರದಿ ಬಂದಿದೆ. ಇದಕ್ಕೆ ಸರಿಯಾದ ವ್ಯವಸ್ಥೆ ಮಾಡಿಕೊಡಬೇಕು.

† ಶ್ರೀ ಎನ್. ಎಸ್. ಗುರುಸಿದ್ದಪ್ಪ (ಬಿಳಿಗೆರೆ).—ಮಾನ್ಯ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳ ವಿಷಯವಾಗಿ ಕೆಲವು ಮಾತುಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಈಗಾಗಲೇ ನನ್ನ ಸ್ನೇಹಿತರು ಏನು ಹೇಳಬೇಕೋ ಅವೆಲ್ಲವನ್ನು ಹೇಳಿಬಿಟ್ಟಿದ್ದಾರೆ. ಯಾವ ವಿಷಯ ಮಾತನಾಡಬೇಕು ಎಂದು ಗೊತ್ತಾಗುತ್ತಿಲ್ಲ. ವ್ಯವಸಾಯ ಇಲಾಖೆಯಿಂದ ಜನಸಾಮಾನ್ಯರಿಗೆ ಎಷ್ಟು ಪ್ರಯೋಜನ ಆಗಬೇಕೋ ಅಷ್ಟು ಆಗುತ್ತಾ ಇಲ್ಲ ಎಂದು ನನ್ನ ಭಾವನೆ. ಉದಾಹರಣೆಗೆ ಹೇಳುವುದಾದರೆ ಹುಲ್ಲಹಳ್ಳಿ ಡ್ಯಾಮಿನ ಕೆಳಗೆ 14 ಸಾವಿರ ಎಕರೆ ತರಿ ಜಮೀನು ಇದೆ. ಅಲ್ಲಿ ಮುಂಗಾರು ಜೋಳ, ಹೆಸರು ಕಾಳು, ಅಲಸಂಧೆ ಬಿತ್ತಿದ್ದರೆ ಬೆಳೆಯಾಗುವುದಿಲ್ಲ. ನೊರಜು ಆಗುತ್ತದೆ. ಹಿಂದೆ 10 ಪಲ್ಲ 50 ಪಲ್ಲ 100 ಪಲ್ಲ ಆಗುತ್ತಿತ್ತು. ಈಗ 5 ಸೇರು ಆಗುತ್ತದೆ ಎಂದು ಹೇಳುತ್ತಾರೆ. ಅಲ್ಲಿ ಬೇಕಾದಷ್ಟು ಅಧಿಕಾರಿಗಳು ಇರುತ್ತಾರೆ. ಏತಕ್ಕೆ ಬೆಳೆ ಹೋಯಿತು, ಅದಕ್ಕೆ ಏನು ಕಾರಣ ಎಂದು ಹೇಳುವುದರಲ್ಲಿ ವಿಫಲರಾಗಿದ್ದಾರೆ. ಮುಂಗಾರು ಜೋಳ ಬಿತ್ತುತ್ತಾರೆ ಗಾಳಿ ಬೀಸಿದರೆ ಮುರೋಡಯಾಗುತ್ತದೆ. ಮುರೊಡೆಗೆ ಕಾರಣ ಏನು ಗೊತ್ತಾಗುತ್ತಿಲ್ಲ. ಸಾವಿರಾರು ಎಕರೆ ಜಮೀನು ಹಾಳುಗುತ್ತಿದೆ. ಇದಕ್ಕೆ ಕಾರಣ ಏನು ಎಂದು ಪತ್ತೆ ಹಚ್ಚದೆ ವಿಫಲರಾಗಿದ್ದಾರೆ. ಬಡ ರೈತರಿಗೆ ಈ ರೀತಿ ತೊಂದರೆಯಾಗಿ ಅವರು ಬೇಸತ್ತು ಹೋಗಿದ್ದಾರೆ. ಸಾಯಿಲ್ ಕನ್ಸರ್‌ವೇಷನ್ ಡಿಪಾರ್ಟ್‌ಮೆಂಟ್‌ನವರು ಹಳ್ಳಿಗಳಿಗೆ ಬಂದು ಬಂಡ್ಸ್ ಹಾಕುತ್ತಾರೆ. ಅದೇ ರೀತಿ ಡ್ರೈನೇಜ್ ಸಿಸ್ಟಮ್ ಮಾಡಿದರೆ ಒಳ್ಳೆಯದು. ಎಲ್ಲಿ ಜಮೀನಿನಲ್ಲಿ ಜಾಸ್ತಿ ನೀರು ನಿಂತು ಬೆಳೆ ಹಾಳಾಗುತ್ತಿದೆಯೋ ಅಂಥ ಕಡೆ ಡ್ರೈನೇಜ್ ಸಿಸ್ಟಮ್ ಮಾಡಲು ಸರ್ಕಾರದವರು ಹಣದ ಸಹಾಯ ಮಾಡಿ

ದರೆ ಮಳೆ ಆದಾಗ ಕೂಡ ಜಾಸ್ತಿ ಬೆಳೆ ಆಗುವುದಕ್ಕೆ ಅನುಕೂಲವಾಗುತ್ತದೆ ಎಂದು ನನ್ನ ಅಭಿಪ್ರಾಯ. ಈಗ ಟ್ರಾಕ್ಟರ್‌ಗೆ 35 ಸಾವಿರ ರೂಪಾಯಿ ಸಾಲ ಕೊಡುತ್ತಿದ್ದೀರಿ. ಆ ಟ್ರಾಕ್ಟರನ್ನು ಮೇನ್‌ಟೇನ್ ಮಾಡುವುದು ಕಷ್ಟ. ಅದರ ಬದಲು ಎತ್ತುಗಳನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲ ಮಾಡಿಕೊಟ್ಟರೆ ಬಹಳ ಒಳ್ಳೆಯದು. ಒಂದು ಜೊತೆ ಎತ್ತುಗಳನ್ನು ಕೊಳ್ಳಲು ಒಂದು ಸಾವಿರ, ಒಂದೂವರೆ ಸಾವಿರ ರೂಪಾಯಿ ಕೊಟ್ಟರೆ, ಹತ್ತಾರು ಬಡ ಸಂಸಾರಗಳಿಗೆ ಅನುಕೂಲವಾಗುತ್ತದೆ, ಎಲ್ಲರಿಗೂ ಅನುಕೂಲವಾಗುತ್ತದೆ ಎಂದು ಬ್ಯಾಂಕ್ ರಾಷ್ಟ್ರೀಕರಣ ಮಾಡಿದ್ದೇವೆ. ಜನಸಾಮಾನ್ಯರು ಬ್ಯಾಂಕಿಗೆ ಹೋದರೆ 25 ರಿಕಾರ್ಡುಗಳನ್ನು ಕೇಳುತ್ತಾರೆ. ಅವರಿಗೆ ಕಾಲಕ್ಕೆ ಸರಿಯಾಗಿ ಹಣ ಸಿಕ್ಕುವುದಿಲ್ಲ. ಸರ್ಕಾರದವರು ಇದಕ್ಕೆ ನಿಗಾ ಕೊಟ್ಟು ಸಕಾಲದಲ್ಲಿ ಅವರಿಗೆ ಸಾಲ ಸಿಕ್ಕುವ ಹಾಗೆ ಮಾಡಬೇಕು. ಬೆಳೆಗಳು ಲಾಸ್ ಆದರೆ ರೈತರಿಗೆ ಯಾವ ತರಹ ಪ್ರೋತ್ಸಾಹ ಸಿಕ್ಕುವುದಿಲ್ಲ. ಕ್ರಾಪ್ ಇನ್‌ಷ್ಯೂರೆನ್ಸ್ ಮಾಡಿ ಜನಗಳ ದುಡ್ಡು ವಾಪಸ್ ಬರುವಂತೆ ಮಾಡಬೇಕು ಪ್ರತಿಯೊಂದು ತಾಲ್ಲೋಕಿನಲ್ಲಿ ಪ್ರತಿ ಹಳ್ಳಿಗಳಲ್ಲಿ ಕ್ಯಾಟಲ್ ಷೇಡ್ ಮತ್ತು ಪೌಲ್ಟ್ರಿ ಫಾರಮ್ಸ್ ಏರ್ಪಾಡು ಮಾಡಿ ರೈತರ ಮಕ್ಕಳಿಗೆ ಶಾಶ್ವತವಾದ ಜೀವನ ನಡೆಸುವ ಹಾಗೆ ಮಾಡಬೇಕು. ಈ ನಿರುದ್ಯೋಗ ದೊಡ್ಡ ಸಮಸ್ಯೆ. ಈ ಸಮಸ್ಯೆ ಮುಂದುವರಿದರೆ ಕ್ರಾಂತಿಗೆ ಅವಕಾಶ ಮಾಡಿ ಕೊಟ್ಟಂತಾಗುತ್ತದೆ.

ಇಂದು ನಮ್ಮ ರಾಜ್ಯದಲ್ಲಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಎಂಬುದು ಇದೆ. ಅದರಿಂದ ರೈತರಿಗೆ ಯಾವ ಉಪಯೋಗವೂ ಆಗುತ್ತಿಲ್ಲ. ಟ್ರಾಕ್ಟರ್ ಕೇಳಲಿ, ಬುಲ್ಡೋಜರ್ ಕೇಳಲಿ ಕೇಳಿದಾಗಲೆಲ್ಲಾ ರಿಪೇರಿಯಾಗುತ್ತಿದೆ ಎಂದು ಹೇಳುತ್ತಾರೆ. ಯಾವಾಗ ರೈತರು ತಮ್ಮ ಉಪಯೋಗಕ್ಕೆ ಬೇಕು ಎಂದು ಕೇಳುತ್ತಾರೋ ಆಗಲೇ ಅವು ಇಲ್ಲವೆಂದು ಹೇಳುತ್ತಾರೆ. ಕೆಟ್ಟಿರುವುದನ್ನು ಕೂಡಲೇ ರಿಪೇರಿ ಮಾಡಿಸಿ ಏತಕ್ಕೆ ಕೊಡಬಾರದು ಎಂದು ಕೇಳುತ್ತೇನೆ. ರಿಪೇರಿ ಮಾಡಲು ಸಾಕಷ್ಟು ಜನ ಮೆಕ್ಯಾನಿಕ್‌ಗಳು ಸಹ ಇಲ್ಲ. ಕಿರ್ಲೋಸ್ಕರ್ ಮತ್ತು ಸಿಂಪಸನ್ ಕಂಪನಿಯ ಟ್ರಾಕ್ಟರ್‌ಗಳು ಏನಾದರೂ ಕೆಟ್ಟು ಹೋದರೆ ಅವುಗಳನ್ನು ರಿಪೇರಿ ಮಾಡಲು ಜಿಲ್ಲಾ ಮಟ್ಟದಲ್ಲಿ ಮೆಕ್ಯಾನಿಕ್‌ಗಳು ಇಲ್ಲದಿರುವುದರಿಂದ ಅವುಗಳನ್ನು ಕಂಪನಿಗೇ ಕಳಿಸಿಕೊಡಬೇಕಾಗಿದೆ. ಈ ರೀತಿ ಕಳಿಸಿ ರಿಪೇರಿ ಮಾಡಿಸಲು ಒಂದು ಸಲಕ್ಕೆ 3 –4 ಸಾವಿರ ರೂಪಾಯಿಗಳ ಖರ್ಚು ಬರುತ್ತದೆ. ಇದನ್ನು ತಪ್ಪಿಸಲು ಪ್ರತಿ ಜಿಲ್ಲೆಯಲ್ಲಿಯೂ ಸಹ ಟ್ರಾಕ್ಟರ್ ರಿಪೇರಿ ಮಾಡುವ ಮೆಕ್ಯಾನಿಕ್‌ಗಳನ್ನು ಇಟ್ಟರೆ ರೈತರಿಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಈಗ ಪ್ರತಿ ತಾಲ್ಲೂಕ್‌ನಲ್ಲಿ ಒಂದೆರಡು ಪಶುವೈದ್ಯಶಾಲೆಗಳಿವೆ. ಇವು ಸಾಕಾಗುವುದಿಲ್ಲವಾದ್ದರಿಂದ ಪ್ರತಿಯೊಂದು ಹಳ್ಳಿಗೂ ಒಂದೊಂದು ಪಶುವೈದ್ಯಶಾಲೆಗಳನ್ನು ಕೊಡಬೇಕೆಂದು ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಚ್. ಬಿ. ಕೆಂಚೇಗೌಡ (ಕೃಷ್ಣರಾಜನಗರ).—ಸನ್ಮಾನ್ಯ ಅಧ್ಯಕ್ಷಣಿಯವರೇ, ಇಂದು ವ್ಯವಸಾಯ ಮಂತ್ರಿಗಳು, ಅರಣ್ಯ ಮಂತ್ರಿಗಳು ಹಾಗೂ ಪಶುಸಂಗೋಪನಾ ಮಂತ್ರಿಗಳು ಕೇಳಿರತಕ್ಕಂಥ ಈ ಬೇಡಿಕೆಗಳನ್ನು ನಾನು ಅನುಮೋದಿಸುತ್ತೇನೆ. ಹಾಗೂ ಕೆಲವು ಸಲಹೆಗಳನ್ನು ಕೊಡಲು ಇಚ್ಛೆಪಡುತ್ತೇನೆ. ಈ ಬೇಡಿಕೆಗಳ ಬಗ್ಗೆ ಈಗ ಎಲ್ಲ ಮಾನ್ಯ ಸದಸ್ಯರು ಸಹ ಮಾತನಾಡುವಾಗ, ಅಧಿಕಾರಿಗಳ ದುರಾಡಳಿತ, ಹಾಗೂ ದೇಶದ ಹಿತದೃಷ್ಟಿಯಿಂದ ಎಲ್ಲ ಅಧಿಕಾರಿಗಳು ಕೆಲಸ ಮಾಡುವುದಿಲ್ಲ ಎನ್ನುವ ವಿಷಯವನ್ನು ಹೇಳಿದರು. ಮುಖ್ಯವಾಗಿ ಅಧಿಕಾರಿಗಳಲ್ಲಿರುವ ಒಂದು ಮನೋಭಾವ ಬದಲಾಣೆಯಾಗಬೇಕಾದುದು ಬಹಳ ಅವಶ್ಯಕ ಇದೆ. ಪಾರ್ಲಿಮೆಂಟಿನಲ್ಲಿ ರಾಜ್ಯಾಂಗದ 24, 25, 26ನೇ ಸೆಕ್ಷನ್‌ಗಳನ್ನು ತಿದ್ದುಪಡಿ ಮಾಡಿದಮೇಲೆ ಪಾರ್ಲಿಮೆಂಟೇ ಸುಪ್ರೀಂ ಎಂದು ತೀರ್ಮಾನವಾದಂತಾಯಿತು. ಈ ಸೆಕ್ಷನ್‌ಗಳನ್ನು ತಿದ್ದುಪಡಿ ಮಾಡಲು ಜನರು ಚುನಾವಣೆಯ ಸಂದರ್ಭದಲ್ಲಿ ಬೆಂಬಲ ಕೊಟ್ಟಿರುವುದರಿಂದ, ಈಗ ಜನರಿಗೆ ಅನುಕೂಲವಾಗುವ ಹಾಗೆ ಅಧಿಕಾರಿಗಳು ನಡೆದುಕೊಳ್ಳಬೇಕು. ಈಗ ಶೇಕಡ 90 ಜನ ಅಧಿಕಾರಿಗಳ ಮನಸ್ಸಿನಲ್ಲಿ ಹೇಗೂ ಸರ್ಕಾರದವರು ಸಂಬಳ ಕೊಡುತ್ತಾರೆ ಎನ್ನುವ ಒಂದು ಮನೋಭಾವ ಬಂದುಬಿಟ್ಟಿದೆ. ಕೆಲಸ ಮಾಡಬೇಕು ಎನ್ನುವ ಮನೋಭಾವವೇ ಇಲ್ಲವಾಗಿದೆ. ಏನಾದರೂ ರೆಮ್ಯೂನರೇಷನ್ ಬಂದರೆ ಕೆಲಸ ಮಾಡೋಣ ಎನ್ನುವ ಮನೋಭಾವ ಏನು ಅಧಿಕಾರಿಗಳಲ್ಲಿ ಇದೆ, ಅದು ಬದಲಾವಣೆಯಾಗಬೇಕು. ಈ ರೀತಿ ಬದಲಾವಣೆಯಾಗದಿದ್ದರೆ ಯಾವ ಅಭಿವೃದ್ಧಿ ಕಾರ್ಯಗಳು ಕಾರ್ಯಗತವಾಗುವುದಿಲ್ಲವೆಂಬ ವಿಷಯವನ್ನು ಹೇಳಬಯಸುತ್ತೇನೆ. ನಮ್ಮ ದೇಶದಲ್ಲಿ ಶೇಕಡ 75 ಜನರು ವ್ಯವಸಾಯದಲ್ಲಿ ನಿರತರಾಗಿದ್ದಾರೆ. ಈ ಕಾರಣದಿಂದ ಜನಸಾಮಾನ್ಯರ ಹಿತದೃಷ್ಟಿಯನ್ನು ಕಾಯಬೇಕಾದರೆ, ವ್ಯವಸಾಯ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಗಳಿಗೆ ಹೆಚ್ಚಿನ ಅದರಲ್ಲೂ ಮೊದಲು ಆದ್ಯತೆ

(ಶ್ರೀ ಎಚ್. ಬಿ. ಕೆಂಚೇಗೌಡ)

ಕೊಡಬೇಕೆಂದು ಹೇಳುತ್ತೇನೆ. ಮತ್ತು ಈ ಇಲಾಖೆಗಳ ಬಗ್ಗೆ ಸರ್ಕಾರದ ಈಗಿನ ಧ್ಯೇಯ ಮತ್ತು ಧೋರಣೆಗಳೇನಿವೆ ಅವುಗಳನ್ನು ಇನ್ನೂ ಉತ್ತಮಪಡಿಸಬೇಕೆಂದು ಹೇಳುತ್ತೇನೆ. ಕಳೆದ 25 ವರ್ಷಗಳಿಂದ ವ್ಯವಸಾಯದಲ್ಲಿ ಎಷ್ಟು ಪ್ರಗತಿಯಾಗಬೇಕಾಗಿತ್ತೋ ಅಷ್ಟು ಪ್ರಗತಿಯಾಗಿಲ್ಲವೆಂದು ಹೇಳುತ್ತೇನೆ. ವ್ಯವಸಾಯ ಇಲಾಖೆಯವರು ಹಸಿರು ಕ್ರಾಂತಿಯಾಗಿದೆ, ಹೆಚ್ಚು ಹೆಚ್ಚು ಬೆಳೆಗಳನ್ನು ಬೆಳೆಯಲಾಗಿದೆ ಎಂದು ಏನು ಅಂಕಿಅಂಶಗಳನ್ನು ಕೊಡುತ್ತಿದ್ದಾರೆ, ಅದನ್ನು ನಂಬುವುದಕ್ಕಾಗುವುದಿಲ್ಲ. ಅಧಿಕಾರಿಗಳು ಕೇವಲ ಕಛೇರಿಗಳಲ್ಲಿ ಕುಳಿತು ರಿಪೋರ್ಟ್ ತಯಾರಿಸುತ್ತಿದ್ದಾರೆಯೇ ಹೊರತು ನಿಜವಾದ ಪ್ರಗತಿ ಏನಾಗಿದೆ ಎಂಬುದನ್ನು ಅವರು ತಿಳಿಸುತ್ತಿಲ್ಲ. ಈ ಇಲಾಖೆಯಲ್ಲಿ ಅಧಿಕಾರಿಗಳಿಗೆ ಸಂಬಳ ಕೊಡುವುದನ್ನು ಒಂದು ಬಿಟ್ಟರೆ ಮತ್ತ್ಯಾವ ಪ್ರಗತಿಯೂ ಆಗಿಲ್ಲ ಎಂದು ಹೇಳುವುದರಲ್ಲಿ ಅನುಮಾನವಿಲ್ಲ. ನಿಜವಾಗಿಯೂ ವ್ಯವಸಾಯದಲ್ಲಿ ಪ್ರಗತಿಯಾಗಬೇಕಾದರೆ, ರೈತರಿಗೆ ತಾಂತ್ರಿಕ ಜ್ಞಾನ ದೊರೆಯಬೇಕಾದರೆ, ಅಧಿಕಾರಿಗಳು ಹಳ್ಳಿಗಳಲ್ಲಿರುವ ಜಮೀನುಗಳಲ್ಲಿ ಪ್ರಯೋಗ ಶಾಲೆಗಳನ್ನು ನಡೆಸಬೇಕೇ ವಿನಃ ಕೇವಲ ಪಟ್ಟಣಗಳಲ್ಲಿ ಪ್ರಯೋಗ ಶಾಲೆಗಳನ್ನು ನಡೆಸಿದರೆ, ಅಥವಾ ಬೆಂಗಳೂರು, ಮೈಸೂರು ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಕಾನ್ಫರೆನ್ಸ್ ನಡೆಸುವುದರಿಂದ ನಾವು ನಿರೀಕ್ಷಿಸಿದಷ್ಟು ವ್ಯವಸಾಯದ ಪ್ರಗತಿಯಾಗುವುದಿಲ್ಲವೆಂದು ಹೇಳುತ್ತೇನೆ. ಇದಕ್ಕೆ ನನ್ನ ಒಂದು ಸಲಹೆ ಏನೆಂದರೆ, ತಾಲ್ಲೂಕ್ ಮಟ್ಟದಲ್ಲಿರುವ ಅಸಿಸ್ಟೆಂಟ್ ಡೈರೆಕ್ಟರ್ ಅವರು ಏನಿದ್ದಾರೆ, ಅವರಿಗೆ 25—50 ಎಕರೆಗಳಷ್ಟು ಜಮೀನನ್ನು ಕೊಟ್ಟು ಆ ಜಮೀನಿನಲ್ಲಿ ಪ್ರಯೋಗ ನಡೆಸುವುದಕ್ಕೆ ಏರ್ಪಾಡು ಮಾಡಬೇಕು. ಈ ರೀತಿ ಮಾಡಿದರೆ ಆಯಾ ಕ್ಷೇತ್ರದ ಜಮೀನುಗಳಲ್ಲಿ ಏನು ಗುಣವಿದೆ, ಏನು ಬೆಳೆದರೆ ಹೆಚ್ಚಿನ ಫಲ ದೊರಕುತ್ತದೆ ಎಂಬುದನ್ನು ರೈತರಿಗೆ ತಿಳಿಸಲು ಅನುಕೂಲವಾಗುತ್ತದೆ. ಈ ರೀತಿಯಿಂದ ರೈತರಿಗೆ ಜ್ಞಾನ ದೊರೆಯಬೇಕಾಗಿದೆ. ಆದರೆ ಈ ರೀತಿಯ ಜ್ಞಾನ ವ್ಯವಸಾಯವನ್ನು ಮಾಡತಕ್ಕಂಥ ರೈತರಿಗೆ ದೊರೆಯುತ್ತಿಲ್ಲ. ಈಗ ನಮ್ಮ ರಾಜ್ಯದಲ್ಲಿ ಒಟ್ಟು ನಾಲ್ಕು ಡಿವಿಜನ್‌ಗಳಿವೆ, ಈ ಡಿವಿಜನ್ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ತಾಲ್ಲೂಕ್ ಮಟ್ಟದಲ್ಲಿ ಅನೇಕ ಜನ ಅಸಿಸ್ಟೆಂಟ್ ಡೈರೆಕ್ಟರ್‌ಗಳು, ಡೆಪ್ಯೂಟಿ ಡೈರೆಕ್ಟರ್‌ಗಳು, ಜಾಯಿಂಟ್ ಡೈರೆಕ್ಟರ್‌ಗಳು ಇದ್ದಾರೆ. ಇದರ ಜೊತೆಗೆ ರಾಜ್ಯಮಟ್ಟದಲ್ಲಿ ಡೈರೆಕ್ಟರ್ ಮತ್ತು ಅವರ ಸಿಬ್ಬಂದಿ ವರ್ಗದವರು ಇದ್ದಾರೆ. ಇಷ್ಟೊಂದು ಅಧಿಕಾರ ವರ್ಗದವರು ಈ ಇಲಾಖೆಯಲ್ಲಿ ಇದ್ದರೂ ಸಹ ವ್ಯವಸಾಯದಲ್ಲಿ ಯಾವ ಒಂದು ಪ್ರಗತಿಯೂ ಸಾಧನೆಯಾಗಿಲ್ಲವೆಂದು ಹೇಳುತ್ತೇನೆ. ಈ ಒಂದು ಅನುಭವವನ್ನು ನಾನು ತಾಲ್ಲೂಕ್ ಬೋರ್ಡಿನ ಅಧ್ಯಕ್ಷನಾಗಿ 5 ವರ್ಷ ಕೆಲಸ ಮಾಡಿ ತಿಳಿದುಕೊಂಡು ಹೇಳುತ್ತಿದ್ದೇನೆ. ಇದಕ್ಕೆ ಉದಾಹರಣೆಯಾಗಿ ನನ್ನ ಕ್ಷೇತ್ರವನ್ನೇ ತೆಗೆದುಕೊಂಡರೆ, ನನ್ನ ತಾಲ್ಲೂಕ್‌ನಲ್ಲಿ ಹೆಚ್ಚಾಗಿ ಭತ್ತವನ್ನು ಬೆಳೆಯಲಾಗುತ್ತಿದೆ. ಈ ಭಾಗದಲ್ಲಿ ಹೈಬ್ರಿಡ್ ವೆರೈಟೀಸ್ ಜವಾರನ್ನು ಬೆಳೆಯಲಾಯಿತು. ಆದರೆ ಅದು ಸರಿಯಾಗಿ ಬೆಳೆಯುತ್ತಿಲ್ಲ. ರೈತರು ಹೈಬ್ರಿಡ್ ವೆರೈಟೀಸ್ ಜವಾರನ್ನು ಬೆಳೆಯುವುದಕ್ಕೆ ಏನು ಖರ್ಚು ಮಾಡುತ್ತಾರೋ ಆ ಖರ್ಚನ್ನು ಕಳೆದು ಬರತಕ್ಕಂಥ ಆದಾಯವನ್ನು ಹೋಲಿಸಿ ನೋಡಿದರೆ, ಹಿಂದಿನ ಹಳೆಯ ಪದ್ಧತಿಯೇ ವಾಸಿ ಎನ್ನುವ ಅಭಿಪ್ರಾಯಕ್ಕೆ ರೈತರು ಬಂದಿದ್ದಾರೆ. ಈಗಿನ ಆಧುನಿಕ ಪದ್ಧತಿಯಿಂದ ರೈತರಿಗೆ ಲಾಭವಾಗುತ್ತಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಲಾಭದಾಯಕವಾಗುವಂತೆ ಮಾಡಲು ವ್ಯವಸಾಯ ಇಲಾಖೆಯ ಅಧಿಕಾರಿಗಳು ಯಾವ ವಿಧಾನವನ್ನೂ ಸಹ ಕಂಡುಹಿಡಿದಿಲ್ಲವೆಂದು ಹೇಳಬಯಸುತ್ತೇನೆ. ಒಬ್ಬ ರೈತ ಒಂದು ಎಕರೆಯಲ್ಲಿ ಬೆಳೆ ತೆಗೆಯುವುದಕ್ಕೆ ಎಷ್ಟು ಖರ್ಚು ಮಾಡುತ್ತಾನೆ. ಅದರಿಂದ ಎಷ್ಟು ಆದಾಯ ಖರ್ಚು ಕಳೆದು ಬರುತ್ತದೆ ಎಂದು ಯಾರಾದರೂ ಅಧಿಕಾರಿಗಳು ಹೇಳುವುದಕ್ಕೆ ಶಕ್ತಿ ಇದೆಯೇ ಎಂದು ಕೇಳುತ್ತೇನೆ. ಆದ್ದರಿಂದ ರೈತನ ಹಿಂದಿನ ಆರ್ಥಿಕ ಪರಿಸ್ಥಿತಿ ಏನಿತ್ತು, ಈಗ ಯಾವ ರೀತಿ ಇದೆ ಎಂಬುದನ್ನು ಕಂಡುಹಿಡಿಯಲು ಒಂದು ಕಮೀಷನನ್ನು ಅಪಾಯಿಂಟ್ ಮಾಡಬೇಕೆಂದು, ಇದರ ಕಡೆಗೆ ಮಾನ್ಯ ಮಂತ್ರಿಗಳು ಹೆಚ್ಚಿನ ನಿಗಾ ಕೊಡಬೇಕೆಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ವೈ. ಪಾಟೀಲ್ (ಸಿಂದಗಿ).—ಮಾನ್ಯ ಸಭಾಧ್ಯಕ್ಷಿಣಿಯವರೇ, ಸಾಧಾರಣವಾಗಿ ತಮ್ಮ ಮೂಲಕ ಎಲ್ಲ ಮಾನ್ಯ ಸದಸ್ಯರಿಗೂ ಒಂದು ಅಂಶವನ್ನು ನಮ್ರತೆಯಿಂದ ಸೂಚಿಸಬಯಸುತ್ತೇನೆ. ಏನೆಂದರೆ ಸರ್ಕಾರದ ಎಲ್ಲ ವ್ಯವಸ್ಥೆಗಳನ್ನು ಕೇವಲ ಸರ್ಕಾರೀ ಅಧಿಕಾರಿಗಳು ಮಾಡುತ್ತಾರೆಂದು ಮಾನ್ಯ ಸದಸ್ಯರು ತಿಳಿದುಕೊಳ್ಳುತ್ತಾರೆ. ಅದು ತಪ್ಪು ಭಾವನೆ. ಪ್ರತಿಯೊಬ್ಬ ಸದಸ್ಯರೂ ಸಹಾಯ ಮಾಡಿದರೆ ಮಾತ್ರ ಈ ಇಲಾಖೆ ಮುಂದುವರೆಯುತ್ತದೆ. ಸುದೈವದಿಂದ ವಕ್ಕಲುತನ

ಶಾಖೆಗೆ ಒಕ್ಕಲುತನದಲ್ಲಿ ಅನುಭವವಿರುವವರು ಮಂತ್ರಿಗಳಾಗಿ ಬಂದಿದ್ದಾರೆ. ಅನ್ನದ ಸಮಸ್ಯೆಯನ್ನು ಮುಖ್ಯವಾಗಿ ನಾವು ಬಿಡಿಸಬೇಕಾಗಿದೆ. ಏಕೆಂದರೆ ಮನುಷ್ಯರು ಅರಿವೆ ಇಲ್ಲದಿದ್ದರೆ ಬದುಕಬಹುದು, ವಿದ್ಯೆ ಇಲ್ಲದಿದ್ದರೆ ಮುಂದೆ ಹೋಗದೆ ಹಿಂದೆ ಉಳಿಯಬಹುದು. ಆದರೆ ಮನುಷ್ಯನಿಗೆ ಅನ್ನ ಇಲ್ಲದಿದ್ದರೆ ಯಾವ ಸಮಸ್ಯೆಯೂ ಬಗೆಹರಿಯುವುದಿಲ್ಲ. ಈ ದೃಷ್ಟಿಯಿಂದ ವ್ಯವಸಾಯಕ್ಕೆ ಗೊಬ್ಬರದ ಅವಶ್ಯಕತೆ ಬಹಳ ಮುಖ್ಯವಾದುದೆಂದು ನನ್ನ ಅಭಿಪ್ರಾಯ. ಇನ್ನು ಮುಂದೆಯೂ ಸಹ ಜಮೀನುಗಳಿಗೆ ಸಗಣಿ ಮತ್ತು ಗೊಬ್ಬರವನ್ನು ಹಾಕುತ್ತಾ ಹೋದರೆ ನಮ್ಮ ಜಮೀನುಗಳು ಇನ್ನು 7–8 ವರ್ಷಗಳಲ್ಲಿ ಸಿಮೆಂಟ್ ತರಹ ಬಂಡೆಗಳಾಗಿಬಿಟ್ಟು ಯಾವುದನ್ನೂ ಬೆಳೆಯುವುದಕ್ಕೆ ಸಾಧ್ಯವಾಗದೇ ಹೋಗಬಹುದು. ವ್ಯವಸಾಯ ಇಲಾಖೆಗಾಗಿ ಬಡ್ಜೆಟ್‌ನಲ್ಲಿ ಎಷ್ಟೇ ರೊಕ್ಕ ಇಟ್ಟರಲ್ಲಿ ಅದು ಮುಖ್ಯವಾದ ವಿಷಯವಲ್ಲ, ಯಾವ ಯಾವ ಜಮೀನಿನಲ್ಲಿ ಯಾವ ಯಾವ ತರಹದ ಗೊಬ್ಬರ ಉಪಯೋಗಿಸಬೇಕು ಎಂಬ ಬಗ್ಗೆ ರೈತರಿಗೆ ಟೆಕ್ನಿಕಲ್ ಅಡ್ವೈಸ್ ಕೊಟ್ಟರೆ ರೈತರಿಗೆ ಉಪಕಾರ ಮಾಡಿದಂತಾಗುತ್ತದೆ. ಆದ್ದರಿಂದ ಯಾವ ಯಾವ ಸರ್ವೆ ನಂಬರ್‌ಗಳಲ್ಲಿ ಯಾವ ಯಾವ ಗೊಬ್ಬರ ಹಾಕಬೇಕು ಎಂಬ ಬಗ್ಗೆ ಮೊದಲು ಸರ್ವೆ ನಡೆಸಬೇಕು. ಈಗ ಹಳ್ಳಿಯ ಪದ್ಧತಿಯಲ್ಲಿ ಒಮ್ಮೆ ಪೀಕ್ ಬಂದಮೇಲೆ ಯಾವ ರೀತಿ ಗೊಬ್ಬರ ಹಾಕಬೇಕು ಎಂಬುದು ರೈತರಿಗೆ ಗೊತ್ತಿರುವುದಿಲ್ಲ. ಇದರಿಂದ ಬೇರಿನ ಸಮೇತ ಬೆಳೆ ನಷ್ಟವಾಗುವ ಸಂದರ್ಭಗಳಿವೆ. ಅನೇಕ ಸಲ ರೈತರು ಸರಿಯಾಗಿ ಗೊಬ್ಬರವನ್ನು ಉಪಯೋಗ ಮಾಡದೆ ಸಮುದ್ರದಷ್ಟು ಬೆಳೆ ನಾಶವಾಗಿದೆ.

ಮಾನ್ಯ ಸಭಾಧ್ಯಕ್ಷಿಣಿಯವರೇ ಭಾರತದಲ್ಲಿ ಅದರಲ್ಲಿಯೂ ಕರ್ನಾಟಕದಲ್ಲಿ ನೂರಕ್ಕೆ ಎಂಭತ್ತರಷ್ಟು ಜನರು ಒಕ್ಕಲುತನವನ್ನೇ ಅವಲಂಬಿಸಿರುತ್ತಾರೆ. ಆದ್ದರಿಂದ ರಾಜ್ಯದ ಎಲ್ಲಾ ಖಾತೆಗಳಲ್ಲಿಯೂ ಒಕ್ಕಲತನ ಖಾತೆಯೇ ಮುಖ್ಯವಾದುದು. ಈ ಖಾತೆಗೆ ರೈತರಾದ ಶ್ರೀ ಕೆ. ಎಚ್. ಪಾಟೀಲರು ಮಂತ್ರಿಗಳಾಗಿರುವುದು ಆನಂದದ ಸಂಗತಿ.

ಮಾನವನು ಅರಿವೆ ಇಲ್ಲದಿದ್ದರೆ ಬದುಕಬಹುದು. ವಿದ್ಯೆ ಸಿಗದಿದ್ದರೂ ಹಿಂದೆ ಬೀಳಬಹುದು. ಆದರೆ ಆಹಾರವಿಲ್ಲದಿದ್ದರೆ ಮನುಷ್ಯನು ಬದುಕಲಿಕ್ಕೇ ಸಾಧ್ಯವಿಲ್ಲ. ಆಹಾರ ನಿರ್ಮಾಣಕ್ಕೆ ಆಧಾರ ಭೂಮಿಯು. ಆದ್ದರಿಂದ ಭೂಸುಧಾರಣೆಯೇ ದೇಶದ ಸುಧಾರಣೆಯು.

ಭೂಸುಧಾರಣೆಯಲ್ಲಿ ಮೊದಲನೆಯ ಕೆಲಸವೆಂದರೆ ಕರಕಿಯನ್ನು ತೆಗೆದು ಭೂಮಿಯನ್ನು ಸ್ವಚ್ಛ ಮಾಡುವುದು. ಕರಕೆಯುಳ್ಳ ಭೂಮಿಗೆ ಒಡ್ಡು ಹಾಕಿದರೆ ಮತ್ತಷ್ಟು ಅಪಾಯ. ಆದ್ದರಿಂದ ಸರ್ಕಾರದವರು ರೈತರಿಂದ ಅರ್ಜಿಗಳನ್ನು ಅಪೇಕ್ಷಿಸದೆ ತಾವಾಗಿಯೇ ಮುಂದೆ ಬಂದು ಸರ್ಕಾರಿ ಟ್ರಾಕ್ಟರುಗಳಿಂದ ರೈತರ ಭೂಮಿಯನ್ನು ಸ್ವಚ್ಛಮಾಡಿಸಿಕೊಡಬೇಕು. ಟ್ರಾಕ್ಟರು ಬಗ್ಗೆ ಕೊಡಬೇಕಾದ ಬಾಡಿಗೆ ಹಣವನ್ನು ಸಾಲರೂಪದಿಂದ ಮಂಜೂರು ಮಾಡಿ ಕೊಡಬೇಕು.

ಅನಂತರ ಬಂಡಿಂಗ್. ಹರಿದುಹೋಗುವ ಮಣ್ಣನ್ನು ತಡೆಹಿಡಿಯದಿದ್ದರೆ ಭೂಮಿಯ ಮೇಲ್ ಭಾಗದ ಫಲವತ್ತಾದ ಮಣ್ಣು ಹರಿದುಹೋಗಿ ಭೂಮಿಯು ನಿಸ್ಸತ್ವವಾಗಿ ಬೆಳೆ ಬೆಳೆಯಲಾರದ ಬಿಜಾಪುರ ಜಿಲ್ಲೆಗೆ ಬಂಡಿಂಗ್ ಖಾತೆಯ ಉಪಯೋಗ ಬಹಳವಾಗಿದೆ. ಮತ್ತು ಬಂಡಿಂಗ್ ಖಾತೆಯವರು ರೈತರಿಗಾಗಿ ಬಹಳ ಕಾಳಜಿ ತೆಗೆದುಕೊಳ್ಳುತ್ತಾರೆ.

ತದನಂತರ ಸಮಪಾತಳಿ—ಹೆಚ್ಚು ಬೆಳೆ ಬೆಳೆಯಬೇಕಾದರೆ ಸ್ವಲ್ಪ ಮಳೆ ಬಂದರೂ ನೀರು ಉಂಡು ಹಸಿಯಾಗಲು ಭೂಮಿ ಸಮಪಾತಳಿ ಇರುವುದು ಅತಿ ಅವಶ್ಯ. ಆದ್ದರಿಂದ ಕರಿಕೆ ತೆಗೆಯುವುದು ಒಡ್ಡು ಹಾಕುವುದು ಮತ್ತು ಸಮಪಾತಳಿ ಮಾಡುವುದು ಭೂಸುಧಾರಣೆಯ ಮಹತ್ವದ ಘಟಕಗಳು.

ನೀರಾವರಿ ಅವಶ್ಯಕತೆ - ಭೂಮಿ ಎಷ್ಟೇ ಫಲವತ್ತಾಗಿದ್ದರೂ ಬಿಜಾಪುರ ಜಿಲ್ಲೆಯಂತೆ ಕಡಿಮೆ ಮಳೆ ಬರುವ ಭೂಮಿಗೆ ನೀರಾವರಿ ನೆರವು. ಅತಿ ಅವಶ್ಯ. ನೀರಿನ ನೆರವು ಇರದ ಪರಿಣಾಮವಾಗಿಯೇ ಬಿಜಾಪುರ ಜಿಲ್ಲೆಯು ಅದರಲ್ಲೂ ಸಿಂದಗಿ, ಇಂಡಿ ತಾಲ್ಲೂಕುಗಳು ಉತ್ತಮ ಭೂಮಿ ಇದ್ದರೂ ಆಹಾರ ಸಮಸ್ಯೆಯನ್ನು ಸದಾ ಎದುರಿಸುತ್ತಲೇ ಇರುತ್ತವೆ.

ಬಿಜಾಪುರ ಜಿಲ್ಲೆಗೆ ಕರ್ನಾಟಕ ಸರ್ಕಾರವು ಕೃಷ್ಣಾ ಮೇಲ್ದಂಡೆಯ ಯೋಜನೆ, ದೋಣಿ ನದಿಯ ಯೋಜನೆ, ಪಸರುವ ಕೆರೆಗಳು (ಪರ್‌ಕೋಲೇಷನ್ ಟ್ಯಾಂಕ್) ಸಣ್ಣ ನೀರಾವರಿಗಳು ಮತ್ತು ನೀರಾವರಿ ಬಾವಿಗಳನ್ನು ನಮ್ಮ ಭಾಗದಲ್ಲಿ ಮಾಡಿಸಿಕೊಡಬೇಕು. ಮುಖ್ಯವಾಗಿ ಭೀಮಾ ನದಿ ದಂಡೆಗುಂಟಾ ಇರುವ ಸಿಂದಗಿ ಇಂಡಿ ತಾಲ್ಲೂಕುಗಳ ಎಲ್ಲ ಊರುಗಳಿಗೂ ಲಿಫ್ಟ್ ಇರಿಗೇಷನ್ ಮಾಡಿಸಿಕೊಡಬೇಕು. ರೈತರಾದರೂ ಯಾವಾಗಲೂ ಕೇವಲ ಸರ್ಕಾರದ ಮೇಲೆ ಅವಲಂಬಿಸಿ ಕೈಕಟ್ಟಿಕೊಂಡು ಕೊಡದೆ ತಮ್ಮ ಭೂಮಿಯನ್ನು ಸುಧಾರಿಸಿಕೊಂಡು ನೀರಾವರಿ ಬಾವಿಗಳನ್ನು ಮಾಡಿಕೊಂಡು ಆಹಾರದ ದೃಷ್ಟಿಯಿಂದ ಸ್ವಾವಲಂಬಿಗಳಾಗಬೇಕು. ಇಂದು ನಮ್ಮ ಜನತೆಗೆ ಪ್ರತಿ ಮಾತಿಗೂ ಸರ್ಕಾರದ ಸಾಲದ ಕಡೆಗೆ ನೋಡುತ್ತಾ ಕೂಡುವ ಕೆಟ್ಟ ಚಟ ಬಿದ್ದಿದೆ.

(ಶ್ರೀ ಎಸ್. ವೈ. ಪಾಟೀಲ್)

ಗೊಬ್ಬರ ವಿಷಯ—ಇತ್ತೀಚೆಗೆ ರೈತರಿಗೆ ಗೊಬ್ಬರ ಹಾಕುವ ಪ್ರವೃತ್ತಿ ಸಾಕಷ್ಟು ಬೆಳೆದಿದೆ. ಆದರೆ ಯಾವ ಯಾವ ಗೊಬ್ಬರ ಯಾವ ಯಾವ ಪ್ರಮಾಣದಲ್ಲಿ, ಯಾವ ಯಾವ ಸಮಯದಲ್ಲಿ ಎಷ್ಟೆಷ್ಟು ಸಲ ಹಾಕಬೇಕೆನ್ನುವ ಜ್ಞಾನವಿಲ್ಲ.

ಸಗಣಿ ಗೊಬ್ಬರ ಹಾಕದೆ ಕೇವಲ ಅಮೋನಿಯ ಸಲ್ಫೇಟ್, ಯೂರಿಯಾ ಸೂಪರ್ ಫಾಸ್ಫೇಟ್ ಇತ್ಯಾದಿ ಆಧುನಿಕ ಗೊಬ್ಬರ ಹಾಕುತ್ತಾ ಹೋದರೆ 10–15 ವರ್ಷಗಳಲ್ಲಿ ಭೂಮಿಯು ಕಲ್ಲುಬಂಡೆ ಯಂತೆ ಆಗುವುದು ಮುಂದೆ ಬೆಳೆಯುವುದೇ ಇಲ್ಲ. ಆದ್ದರಿಂದ ಸಗಣಿ ಗೊಬ್ಬರ ಹಾಕದೆ ಆಧುನಿಕ ಗೊಬ್ಬರ ಹಾಕಬಾರದು. ಸಗಣಿ ಗೊಬ್ಬರ ನಿರ್ಮಾಣ ಮಾಡಲು ದನಗಳು ಬೇಕು. ಬಡವರಿಗೆ ದನಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಪಶುಸಂಗೋಪನಾ ಶಾಖೆಯವರು 10 ರೂಪಾಯಿ ಗಳಿಗಿಂತ ಕಡಿಮೆ ಕಂದಾಯ ಕೊಡುವ ರೈತರಿಗೆಲ್ಲಾ ಒಕ್ಕಲುತನ ಖಾತೆಯಿಂದ ಒಂದೊಂದು ಉತ್ತಮ ಆಕಳನ್ನು 20 ಕಂತಿನಿಂದ ಸಾಲರೂಪವಾಗಿ ಕೊಡಿಸಬೇಕು. ಇದರಿಂದ ಗೊಬ್ಬರದ ಸಹಾಯವಾಗುವುದಲ್ಲದೆ ರೈತನಿಗೆ ಹೈನದ ಉಪದಂಧೆಯಿಂದ ಆರ್ಥಿಕ ನೆರವು ಸಿಕ್ಕುತ್ತದೆ.

ಸರ್ಕಾರದವರು ಪ್ರತಿ ತಾಲ್ಲೂಕಿಗೊಂದು ಅಲ್ಲಿ ಸಿಗುವ ಕಸಕಡ್ಡಿಯನ್ನೂ, ತೊಪ್ಪಲವನ್ನೂ (ಸೊಪ್ಪನ್ನು) ಉಪಯೋಗಿಸಿ ಗೊಬ್ಬರ ತಯಾರು ಮಾಡುವ ಕಾರ್ಖಾನೆಯನ್ನು ನಿರ್ಮಾಣ ಮಾಡಬೇಕು. ಸಗಣಿ ಗೊಬ್ಬರ ಸಿಗದಿದ್ದಲ್ಲಿ ಹಿಂದಿನ ಹಿರಿಯರಂತೆ ಬದಲಾವಣೆ (ಕಾಲ್ಗೈ ಮಾಡುವ) ಪದ್ಧತಿಯನ್ನು ಅನುಸರಿಸಬೇಕು. ಸಗಣಿ ಗೊಬ್ಬರವಿಲ್ಲದೆ ಕೇವಲ ಸರ್ಕಾರಿ ಗೊಬ್ಬರವನ್ನು ಹಾಕುವುದು ಸರ್ವಥಾ ಸರಿಯಲ್ಲ. ಹಾಕಲೇಬಾರದು.

ಉತ್ತಮ ಬೀಜ—ಅಧಿಕಾರಿಗಳ ತಪ್ಪು ಸಲಹೆಗಳಿಂದ ಉತ್ತಮ ಬೀಜ ಸಿಗಲಾರದೆ ಅವರು ಹೇಳಿದ ದೋಷಯುಕ್ತ ಜೋಳದ ಬೀಜವನ್ನು ಬಿತ್ತಿ, ಒಂದು ವರ್ಷ ಬೆಳೆಬಾರದೆ ಅಪಾರ ಲುಕ್ಸಾನು ಆದದ್ದು ನನ್ನ ಸ್ವಂತ ಅನುಭವದ ಮಾತು. ಆದ್ದರಿಂದ ಅಧಿಕಾರಿಗಳು ಯಾರ ಆಶೆ ಮೂರವತ್ತುಗಳಿಗೆ ಬದ್ದು ಕೆಟ್ಟ ಬೀಜವನ್ನು ಶಿಫಾರಸ್ಸು ಮಾಡುವ ಪಾಪ ಕಾರ್ಯವನ್ನು ಎಂದೂ ಮಾಡಬಾರದು ಎಂದು ನಾನು ಬೇಡಿಕೊಳ್ಳುತ್ತೇನೆ. ಭಾರತ ಸರ್ಕಾರದ ಪ್ರತಿನಿಧಿಗಳು ಸ್ವಾತಂತ್ರ್ಯವಾದಂದಿನಿಂದಲೂ ಇಂದಿನವರೆಗೂ ಹೊರದೇಶಕ್ಕೆ ಆಹಾರದ ಸಲುವಾಗಿ ಭಿಕ್ಷೆ ಬೇಡಲು ಮಾಡುವ ಪ್ರವಾಸದ ಸಂಗತಿ ಮತ್ತು ಆ ಬಗ್ಗೆ ಪರದೇಶಗಳೊಡನೆ ಮಾಡಿಕೊಳ್ಳುವ ಒಪ್ಪಂದ ಪೇಪರಿ ನಲ್ಲಿ ಓದಿದಾಗ ಸ್ವಾಭಿಮಾನಿ ಭಾರತೀಯರು ತಲೆತಗ್ಗಿಸಬೇಕಾಗುತ್ತದೆ.

ಸುಧಾರಣೆಯಾದ ಭೂಮಿ, ನೀರಿನ ಅನುಕೂಲತೆ ಉತ್ತಮ ಗೊಬ್ಬರ ಸಹಾಯ ಸಿಕ್ಕಿದರೆ ರೈತರು ಈ ದೇಶಕ್ಕೆ ಸಾಕಾಗುವಷ್ಟು ಆಹಾರವನ್ನು ನಿರ್ಮಾಣ ಮಾಡಬಲ್ಲರು. ಆಮೇಲೆ ಹೊರ ದೇಶಕ್ಕೆ ಆಹಾರಕ್ಕಾಗಿ ಕೈ ಒಡ್ಡುವ ಪ್ರಸಂಗ ತಪ್ಪುತ್ತದೆ.

ಈ ಡಿಮ್ಯಾಂಡುಗಳಿಂದ ನನ್ನ ಜಿಲ್ಲೆಯ ಉದ್ಧಾರವಾಗಲಾರದು. ಈಗ ಸಮಯವಿಲ್ಲದ್ದರಿಂದ ಒಂದೇ ಮಾತನ್ನು ಹೇಳಬಯಸುತ್ತೇನೆ. ಮಾನ್ಯ ಮಂತ್ರಿ ಶ್ರೀ ಕೆ. ಎಚ್. ಪಾಟೀಲರು ಅಸೆಂಬ್ಲಿ ಮುಗಿದನಂತರ ಸಹಕಾರ ಮತ್ತು ಪಶುಸಂಗೋಪನ ಮಂತ್ರಿಗಳೊಂದಿಗೆ ಬಿಜಾಪುರಕ್ಕೆ ಹೋಗಿ (ಆರ್) ಕಾಂಗ್ರೆಸ್ (ಒ) ಕಾಂಗ್ರೆಸ್ ಎಂದು ಭೇಧ ಮಾಡದೆ ಎಲ್ಲಾ ಎಂ.ಎಲ್.ಎ. ಗಳನ್ನೂ ಅನುಭವಿಕ ರೈತರನ್ನೂ ಕರೆಸಿ ಚರ್ಚಿಸಿ ಹಿಂದುಳಿದ ಬಿಜಾಪುರ ಜಿಲ್ಲೆಯ ಅದರಲ್ಲಿಯೂ ದುರ್ದೈವಿ ಸಿಂದಗಿ, ಇಂಡಿ ತಾಲ್ಲೂಕುಗಳ ರೈತರ ಸಮಸ್ಯೆ ಬಿಡಿಸಲು ಪ್ರಯತ್ನ ಮಾಡಬೇಕೆಂದು ಪ್ರಾರ್ಥನೆ.

ಡೈರಿ ಸ್ಕೀಮು—ಇದರಿಂದ ಬಿಜಾಪುರ ಜಿಲ್ಲೆಗೆ ಎಳ್ಳಷ್ಟೂ ಉಪಯೋಗವಾಗಿಲ್ಲ. ಇದರ ಉಪಯೋಗ ನಮಗೆ ಮಾಡಿಕೊಡಿರಿ. ಇಲ್ಲವೇ ಈ ಖಾತೆ ಬಂದುಮಾಡಿರಿ. ಹೈನದ ಉದ್ಯೋಗಕ್ಕೆ ಬಿಜಾಪುರ ಜಿಲ್ಲೆಯಲ್ಲಿ ಸಾಕಷ್ಟು ಅವಕಾಶವಿದೆ. ಆದ್ದರಿಂದ ಇಂಡಿ, ಸಿಂದಗಿ ತಾಲ್ಲೂಕುಗಳ ಸಲುವಾಗಿ ಈ ಹೈನದ ಉದ್ಯೋಗದ ಬಗ್ಗೆ ಒಂದು ಸ್ಪೆಷಲ್ ಯೋಜನೆ ಮಾಡಿ ನಿರುದ್ಯೋಗ ಸಮಸ್ಯೆಯನ್ನು ಬಿಡಿಸಬೇಕು. ಸರ್ಕಾರದ ಕಾಗದ ಪತ್ರದಲ್ಲಿ ಸ್ಕೀಮುಗಳ ಸಂಖ್ಯೆ ಬಹಳ, ಆದರೆ ಅವುಗಳಲ್ಲಿ ಕೃತಿಯಲ್ಲಿ ಬರುವುದು ಕಡಿಮೆ. ಪ್ರತಿ ಊರಿಗೂ ಕನಿಷ್ಟ ನೂರಾರು ಜನಗಳಿಗಾದರೂ ಹೈನದ ಉದ್ಯೋಗ ಒದಗಿಸಿಕೊಡಬೇಕು.

ಕೇವಲ ಅಧಿಕಾರಿಗಳಿಂದಲೇ ಜನತೆಯ ಕಲ್ಯಾಣವಾಗಲಾರದು. ಅವರೊಂದಿಗೆ ಸಾರ್ವ ಜನಿಕರೂ ಕೂಡಿ ಕೆಲಸ ಮಾಡಬೇಕು. ಅಧಿಕಾರಿಗಳು ಲಂಚಕೋರರೆಂದು ಟೀಕಿಸಿದರೆ ಆಗದು. ಅವರು ಲಂಚತಿನ್ನುವುದನ್ನು ನಿಮ್ಮ ಟೀಕೆಗೆ ಅಂಜಿ ಬಿಡಲಾರರು. ದೇವರು, ನೀತಿಗಳ ಭಯವಿದ್ದರೆ ಮಾತ್ರ ಸಾಧ್ಯ. ಲಂಚ ತಿನ್ನುವುದು ಎಂದೂ ಬಂದಾಗಲಾರದು. ಕೊಡುವುದು ಬಂದಾಗಬೇಕು.

ಲಂಚಕೋರರನ್ನು ಟೀಕಿಸುವುದರಿಂದ ಮತಷ್ಟು ತೊಂದರೆ ಕೊಡುವುದು ಆಗುತ್ತದೆ. ಆದ್ದರಿಂದ ಸಾಧ್ಯವಿದ್ದರೆ ಯುಕ್ತಿ ಪ್ರಯುಕ್ತಿಗಳಿಂದ ಲಂಚಕೋರರನ್ನು ಹಿಡಿಯಬೇಕು. ಮತ್ತು ಅವರಿಗೆ ತಕ್ಕ ಶಾಸನ ಮಾಡಿಸಬೇಕು. ಮಂದಿಗೆ ಬೋಧಿಸುವವರು ತಮ್ಮ ಆತ್ಮ ನಿರೀಕ್ಷಣೆಯನ್ನು ಮೊದಲು ಮಾಡಿಕೊಳ್ಳಬೇಕು.

ಕಳ್ಳಸಾಗಾಣಿಕೆಯ ಗಂಧದ ಮರಗಳನ್ನು ಹಿಡಿದ ಬಗ್ಗೆ ಶ್ರೀ ಕೆ. ಎಚ್. ಪಾಟೀಲರಿಗೆ ಭಾರತದ ಭೀಮನಿಗೆ ಹೋಲಿಸಿದ್ದೀರಿ. ಶ್ರೀ ಪಾಟೀಲರು ಭೀಮನಾಗಿದ್ದರೆ ಕಳ್ಳರು ಬಲಭೀಮರಾಗಿದ್ದಾರೆ, ಗಿಡಗಳ ಬೆಳವಣಿಗೆ—ಕಳೆದ 20 ವರ್ಷಗಳಲ್ಲಿ ನಮ್ಮ ಭಾಗದಲ್ಲಿ ಬಡತನಕ್ಕಾಗಿ ಇದ್ದ ಗಿಡಗಳನ್ನೆಲ್ಲಾ ಕಡಿದು. ಹೊಟ್ಟೆಪಾಡಿಗಾಗಿ ಮಾರಿಕೊಂಡಿದ್ದಾರೆ. ಸರ್ಕಾರದವರು ಗಿಡ ಬೆಳೆಸುವ ಕುರಿತು ಮಾಡಿದ ಪ್ರಯತ್ನ ಯಶಸ್ವಿಯಾಗಿಲ್ಲ. ರೈತರು ಪ್ರತಿಹೊಲದಲ್ಲೂ 5 ಗಿಡಗಳನ್ನು ಇಡಲೇಬೇಕೆಂದೂ ಸಾಲ ಮಂಜೂರು ಮಾಡುವಾಗ ಹೊಸದಾಗಿ 5 ಗಿಡಗಳನ್ನು ಹಚ್ಚಲೇ ತೀರಬೇಕೆಂದೂ ಕಾಯಿದೆ ಮಾಡಬೇಕು. ಗೊಬ್ಬರಕ್ಕೆ ಅತಿ ಉಪಯುಕ್ತವಿರುವ ಸಗಣಿಯನ್ನು ಉರುವಲಕ್ಕೆ ಉಪಯೋಗಿಸಿದವರಿಗೆ ಶಾಸನವಾಗಲೇಬೇಕು.

ಅಧಿಕಾರಿಗಳಲ್ಲಿ ಪ್ರಾರ್ಥನೆ. ನಿಮಗೆ ನಾನು ಬೇಡಿಕೊಳ್ಳುವುದು ಏನೆಂದರೆ ಗಾಂಧೀಜಿಯವರು ಕಷ್ಟಪಟ್ಟು ಸ್ವಾತಂತ್ರ್ಯ ಗಳಿಸಿಕೊಟ್ಟರು. ಸ್ವತಂತ್ರ ಭಾರತದ ಅಧಿಕಾರಿಗಳಾದ ತಾವು ಲಂಚ ಬಿಡುವ ಮನಸ್ಸು ಮಾಡಿರಿ. ಆ ಧೈರ್ಯ ನಿಮಗೆ ಇರದಿದ್ದರೆ ಸ್ವಲ್ಪವಾದರೂ ಕಡಿಮೆ ಮಾಡಿ. ಬಡರೈತರ ಹಣದಿಂದ ತಮಗೆ ಪಗಾರ ಸಿಗುತ್ತಿದ್ದು ಅವನ ಕಲ್ಯಾಣಕ್ಕಾಗಿ ಮಾನವೀಯತೆಯಿಂದ ಪ್ರಯತ್ನಿಸಿರಿ.

ಕೊನೆಯದಾಗಿ ಈ ರಾಜ್ಯಸರ್ಕಾರವು ಇಲ್ಲಿಯವರೆಗೆ ಅಲಕ್ಷಿಸಿದಂತೆ ಇನ್ನು ಮುಂದೆ ನಮ್ಮ ಭಾಗವನ್ನು ಅಲಕಿಸಬೇಡಿ. ಈ ಮೇಲೆ ಪ್ರಾರ್ಥಿಸಿದಂತೆ ಬಿಜಾಪುರ ಜಿಲ್ಲೆಯ ಎಲ್ಲ ಭೂಮಿಯನ್ನೂ ಟ್ರ್ಯಾಕ್ಟರುಗಳಿಂದ \ ಸ್ವಚ್ಛ ಮಾಡಿಸಿ, ಉತ್ತಮ ಒಡ್ಡುಗಳನ್ನು ಹಾಕಿ ಬುಲ್ಡೋಜರ್‌ನಿಂದ ಸಮಪಾತಳಿ ಮಾಡಿಸಿ, ಕೃಷ್ಣಾ ಮೇಲ್ದಂಡೆ ಯೋಜನೆಯಂತಹ ದೊಡ್ಡ ಮತ್ತು ನೀರಾವರಿ ಸಣ್ಣ ಯೋಜನೆಗಳನ್ನು ಕಾರ್ಯಗತಗೊಳಿಸಿ ಅನ್ನ ನಿರ್ಮಾಣವಾಗುವಂತೆ ಮಾಡಿ ದುಷ್ಕಾಲ ರಾಕ್ಷಸನ ದವಡೆಯಲ್ಲಿ ಸಿಕ್ಕಿರುವ ನಮ್ಮನ್ನು ಉದ್ಧರಿಸಬೇಕೆಂದು ಪ್ರಾರ್ಥಿಸಿ ಸಭಾಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

7-00 P.M.

CALLING ATTENTION TO MATTERS OF URGENT PUBLIC IMPORTANCE

(i) *re* : Fall in Prices of Arecanut in the State.

Sri S. M. SHEERNALY CHANDRASEKHAR (Hosanagar).—I call the attention of the Minister for Agriculture and Forest to the steep fall in the prices of Arecanut in the various Markets in the State.

†**Sri K. H. PATIL** (Minister for Agriculture).—Sir, in reply to the Call Attention Notice given by Sriyuths V. N. Patil, Kagodu Thimmappa and B. V. Kakkilaya, I state as follows:

Government are aware of the present fall in the prices of Arecanut in the various Markets in the State. Government have also received representations from the Areca growers requesting Government to take steps to arrest further fall in the prices of Areca.

(SRI K. H. PATIL)

The following table shows the production of Arecanut in tonnes in the State and its internal consumption during the last four years :—

Table

Year	Production in tonnes	Consumption in tonnes
1967-68	1,35,400	1,35,274
1968-69	1,39,700	1,39,362
1969-70	1,47,800	1,47,574
1970-71	1,51,000 (Approx.)	1,51,000 (Approx.)

The table shows that the internal consumption of Areca has not gone up and the demand has kept up pace with the production. The Hon'ble Members also know that retail price of Arecanut is still high and there are no signs of any fall in this retail price of Areca. Imports of Arecanut are not allowed from Bangla Desh. On the contrary, the Government of Bangla Desh has invited tenders for supply of 500 tons of Arecanut to Bangla Desh. It is understood that according to the agreement between the Government of India and the Government of Ceylon, about 500 tons of arecanut are to be imported from Ceylon. The quantity to be imported being insignificant, is not likely to affect adversely the conditions of the internal markets in the State.

Since the production of arecanut has not been more than our internal requirements, there is no reason why internal conditions should creates a situation in which the prices of arecanut should fall in the State.

It is well known that the areca trade is to a large extent in the hands of middlemen working at Bombay and Delhi and the enquiries made by Government go to show that the local agents of the middlemen working at Bombay and Delhi have refused to purchase arecanut under instructions from their Principals and that has resulted in the collapse of prices in the areca market. This is a temporary phase and the market should pick up in due course. Government are, however, aware that the economic condition of the agriculturists as they are presently placed do not enable them to keep their production without sales for any length of time and it is necessary that they are enable to dispose of their production which will on the other hand enable them to continue their agricultural production and raise areca during the current season.

Government have examined this situation at length and feel that Marketing Societies in the areas where areacanut is sold should step in

and purchase the produce brought to their premises. There is no doubt that the prices of areca are below what they were in 1970–71 in some cases. The point, however, is whether these prices are below the cost of production, and their sale at the price at the present level is uneconomic. There is at present no scientific and authentic data giving the cost of production of arecanut in the State. In the absence of such data, it is difficult to work out the reasonable margin of profit for areca growers. Government are considering separately the question of collecting this data and keeping an upto date record enabling them to determine whether any rate of arecanut ruling on any particular date is economic and whether it leaves a reasonable margin for the agriculturists. The Hon'ble Members will bear with me that this exercise will take some time and in the absence of such data, Government do not propose to enter the areca market and purchase arecanut themselves. Government, however, do propose to take effective measures to enable the Co-operative Marketing Societies in those regions to come forward and take over the arecanut brought to their respective premises. Introductions have accordingly been issued to the respective Co-operative Marketing Societies to announce their intention to purchase any quantity of arecanut that is brought to their premises by the Agricuturists and to pay them 60% of the price at the ruling price, the balance being paid as and when the arecanut is sold at the rates prevailing at that time. Instructions have also been issued to the Registrar of Co-operative Societies to make necessary arrangements enabling the Marketing Societies to secure production loans immediately as a temporary measure from the Mysore State Co-operative Apex Bank. The Mysore State Agro Industries Corporation Limited has been advised to visit the various Markets and purchase immediately substantial quantities of arecanut. These steps are expected to prevent further fall in the prices of arecanut. It will, however, take some time before these steps leave conspicuous imprints in the Areca markets.

Government are aware of the difficulties which the Agriculturists will have to face if their produce is not sold at the economic rate. Government have, therefore, taken steps to convert the short term loans taken by the Agriculturists into medium term or long term loans and the Registrar of Co-operative Societies has been advised to take up this matter with the Mysore State Co-operative Apex Bank and the Reserve Bank of India.

The Hon'ble Members will agree with me that the steps taken by the State Government so far are calculated to give the areca growers relief of a temporary nature. It is necessary that measures capable of giving permanent or long range relief to the growers of arecanut are required to be taken quickly. The State Government have, therefore requested the Government of India to consider this question at the National Level. The Hon'ble Members will recall that I have referred earlier in the statement to the tenders invited by the Bangla Desh

(SRI K. H. PATIL)

Government for supply of 500 tons of arecanut and appreciate that while the State Government are anxious to take advantage of this offer and have in fact issued instructions to the State Registrar of Co-operative Societies to participate in the tender, it may not be possible for the State Government to compete with the rates tendered by the other countries. The State Government have, therefore, urged the Government of India to use their good offices to see that the requirements of Bangla Desh are met by the Government of India through negotiations and through Mysore. The results of such negotiations will have to be awaited.

The Government of India have also been informed that in the opinion of the State Government, this is the right time for the State Trading Corporation to step in and effect bulk purchase of arecanut in Mysore State. It has been impressed on them that at least 10,000 tons of arecanut should be purchased by the State Trading Corporation immediately to overcome the present difficult situation concerning the areca growers. It is hoped that the Government of India will act promptly in this behalf.

Government have also given deep thought for the constitution of an Areca Board, on the lines of the Coffee Board and feel that such a Board will have to be ultimately constituted. Instructions have accordingly been iseued to formulate proper and adequate proposals for the purpose.

With the temporary measures already taken by Government, it is expected that the areca growers will be relieved of the present difficulties and should the Government of India step in through the State Trading Corporation to effect bulk purchase of arecanut in Mysore State, there should be no apprehension that the areca will not regain its price thus bringing relief to all areca growers in the State. The establishment of the Areca Board will, however, a measure of long range Significance setting free areca growers from the clutches of middlemen who are presently controlling the areca markets.

ಶ್ರೀ ಎಸ್. ಎಂ. ಚಂದ್ರಶೇಖರ್.—ಸಮ್ಮೇಳನದ ವಿಚಾರಗೋಷ್ಠಿಯ ಅಧ್ಯಕ್ಷನಾಗಿ ನಾನು ಡೆಲ್ಲಿಗೆ ಹೋಗಿದ್ದೆ. ಅಲ್ಲಿ ಹೋದಾಗ ಸ್ಟೇಟ್ ಟ್ರೇಡಿಂಗ್-ಕಾರ್ಪೊರೇಷನ್ ಅಧ್ಯಕ್ಷರು ಕೇಂದ್ರ ಸರ್ಕಾರದ ವ್ಯವಸಾಯ ಮಂತ್ರಿಗಳಲ್ಲಿ ತಮಗೆ ಪರವಾನೆ ಕೊಡುವುದಾದರೆ ಅರಕನಟ್ ಏನಿದೆಯೋ ಅದನ್ನು ಸಂಪೂರ್ಣವಾಗಿ ತೆಗೆದುಕೊಳ್ಳುವುದಕ್ಕೆ ಅಡ್ಡಿ ಇಲ್ಲವೆಂದು ಹೇಳಿದರು. ಅಲ್ಲಿ 4 ದಿನಗಳು ಕಾದರೂ ಕೇಂದ್ರದ ವ್ಯವಸಾಯ ಮಂತ್ರಿಗಳನ್ನು ನೋಡುವುದಕ್ಕಾಗಲಿಲ್ಲ. ಆದ್ದರಿಂದ ಸಂಸ್ಥಾನ ವತಿಯಿಂದ ಕೇಂದ್ರ ಸರ್ಕಾರದ ಮಂತ್ರಿಗಳಿಗೆ ಏನಾದರೂ ಒತ್ತಡ ತರುತ್ತೀರಾ ಎಂದು ನಾನು ಕೇಳುತ್ತೇನೆ.

SRI K. H. PATIL.—The Government of Mysore is already in contact both on telephone and through correspondence with the Government of India in this matter.

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ 10 ಸಾವಿರ ಟನ್ನುಗಳಷ್ಟು ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್ ಕೊಳ್ಳುವುದನ್ನು ಪ್ರಾಸ್ತಾಪಮಾಡಿದೆ. ಅವರು ಯಾವ ದರದಲ್ಲಿ ಕೊಳ್ಳುವ ಹಾಗೆ ಪರಿಶೀಲನೆ ಮಾಡಿದ್ದೀರಿ? ಸರ್ಕಾರದವರು ಒಂದು ದರವನ್ನು ಗೊತ್ತುಮಾಡಿದರೆ ಅದರ ಪ್ರಕಾರ ಕೊಳ್ಳುವುದಕ್ಕೆ ಸಾಧ್ಯವೇ ?

ಶ್ರೀ ಕೆ. ಎಚ್. ಪಾಟೀಲ್.—ಸರ್ಕಾರ ಈ ವಿಷಯದಲ್ಲಿ ದರವನ್ನು ಜಾಸ್ತಿಮಾಡುವುದಕ್ಕೆ ಆಗುವುದಿಲ್ಲ. ಮಾರ್ಕೆಟ್ ರೇಟ್ ನೋಡಿ ರೈತರಿಗೆ ಹಾನಿ ಆಗಲಾರದಂತೆ ಅದಿನ್ನು ಖರೀದಿ ಮಾಡಬೇಕೆಂಬುದೇ ಸರ್ಕಾರದ ಉದ್ದೇಶ.

ಶ್ರೀ ವಿ. ಎನ್. ಪಾಟೀಲ್.—ಇದರಲ್ಲಿ ಏನೋ ಕಾಂಟ್ರಡಿಕ್ಷನ್ ಇದೆ. ಇದು ಇಕಾನಮಿ ಸ್ಟೇಟ್ ಆಗಿರುವುದರಿಂದ ಇದರ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಯಾವುದಾದರೂ ಒಂದು ಮೆಷಿನರಿಯನ್ನು ಇಟ್ಟಿದ್ದೀರಾ ?

ಶ್ರೀ ಕೆ. ಎಚ್. ಪಾಟೀಲ್.—ಅದಕ್ಕೆ ಈಗಾಗಲೇ ಪ್ರಯತ್ನಮಾಡಿದ್ದೇವೆ.

ಶ್ರೀ ಎಸ್. ಎಂ. ಚಂದ್ರಶೇಖರ್.—ಈಗ ಅನೇಕ ತರಗತಿಗಳ ಅಡಿಕೆ ಇರುತ್ತದೆ. ಯಾವ್ಯಾವುದಕ್ಕೆ ಎಷ್ಟೆಷ್ಟು ಕಾಸ್ಟ್ ಬರುತ್ತದೆ ? ಅದರ ಬಗ್ಗೆ ಒಂದು ನಿರ್ದಿಷ್ಟವಾದ ವರದಿ ಬರಬೇಕಾದರೆ ಬಹಳ ಕಾಲವಾಗುತ್ತದೆ. ಅದಕ್ಕೆ ಏನು ಹೇಳುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಅಗ್ರಿಕಲ್‌ಚರಲ್ ಇನ್‌ಕಂಟ್ರ್ಯಾಕ್ಸ್ ಆಫೀಸಿನಲ್ಲಿ ಅಡಿಕೆ ಬಗ್ಗೆ ದರವನ್ನು ಇಷ್ಟು ಎಂದು ನಿಗದಿಮಾಡಿದ್ದಾರೆ. ಈ ವಿಚಾರದಲ್ಲಿ ಒಂದು ನಿರ್ದಿಷ್ಟವಾದ ವರದಿ ಬರುತ್ತದೆ. ಆದರೂ ನಾವು ಪ್ರೊಡ್ಯೂಸರ್ಸ್ ಹಿತ ದೃಷ್ಟಿಯಿಂದ ನೋಡಬೇಕು. ದರ ನಿಜವಾಗಿ ಏನಿದ್ದಿತೆಂಬುದನ್ನೂ ಸಹ ನಾವು ತಿಳಿದುಕೊಳ್ಳಬೇಕಾಗಿದೆ.

(*ii*) *re* : **Damage caused to hybrid Jawar Crop in Dharwar District.**

ಶ್ರೀ ಬಿ. ಜಿ. ಬಣಕಾರ್ (ಹಿರೇಕೆರೂರು).—ಧಾರವಾಡ ಜಿಲ್ಲೆಯ ದಕ್ಷಿಣ ಭಾಗಗಳಲ್ಲಿ ಹಾಲಿ ಇರುವ ಮಿಶ್ರ ತಳಿಯ ಜೋಳದ ಬೆಳೆಗೆ ನಷ್ಟ ಉಂಟಾಗಿದೆ ಎಂಬ ವಿಚಾರದ ಬಗ್ಗೆ ಒಕ್ಕಲುತನದ ಶಾಖೆಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

Sri K. H. PATIL.—In reply to the Call Attention notice given by Sriyuths F. S. Taware, V. V. Wai and K. F. Patil I state as follows :

The pest which comes by the name (ಬೆಂಕಿಹುಳು) ear-head midge on Jowar is usually observed while the ear-head emerges and at present the Khariff Jowar crop which is sown in these Taluks is not in the ear-head stage, but is in a very young stage of growth.

The Summer Hybrid Jowar which was sown during the latter half of May and June, 1972 has come to ear-head stage at present. The total area is approximately about 1,000 acres and the pest has been observed on about 300 acres only in Villages Agadi and Kotenahally. It is not of a serious kind at present. Arrangements have been made to rush the pesticide needed from Davangere to Haveri for stocking in that taluka.

Regarding the protection of the Khariff crop during the succeeding months when the ear-head emerge out, arrangements have already been made to stock sufficient pesticide in Haveri as usual and there will be no difficulty for the farmers in obtaining their needs of pesticide like Malathion 5 per cent dust, Methyl Parathion 2 per cent dust etc. The farmers are being educated to take up timely control measures to dust in the crop just while the ear-head emerges so that the possible damages are prevented well in time.

(SRI K. H. PATIL)

The farmers have also been advised through various means to undertake this work. Care will be taken to see that all precautions are taken to educate the farmers in time for this purpose and sufficient quantity of pesticides are stocked in the places where it is needed. The Agro Industries Corporation has been instructed to take immediate action to stock the pesticides.

10 Tonnes of Methyl parathion 2 per cent dust has already reached Haveri. Another 10 tonnes of the chemical are under transit.

Further 16 tonnes of Malathion and 5 tonnes of Methyl Parathion are being supplied to Dharwar. Similarly 10 tonnes of Methyl parathion are being sent to Hubli. Further supply of the chemicals will be made as and when indents from the Deputy Director of Agriculture, Dharwar are received.

ಶ್ರೀ ಎಫ್. ಎಸ್. ತಾವರೆ.—ಮಾನ್ಯ ಸಚಿವರು ತ್ವರಿತಗತಿಯಿಂದ ಈ ವಿಷಯವನ್ನು ಕಳುಹಿಸಿಕೊಟ್ಟಿದ್ದಕ್ಕಾಗಿ ನಾನು ಅಭಿನಂದಿಸುತ್ತೇನೆ. ಇದನ್ನು ಇಷ್ಟಕ್ಕೇ ಬಿಡದೆ, ಚೆಕ್ ಮಾಡ ಬೇಕು. ಕಳೆದ 3—4 ವರ್ಷಗಳಿಂದ ಈ ವ್ಯಾಧಿ ಬೆಳೆಯುತ್ತಿದೆ. ಮುಂದೆ ಇದು ಇನ್ನೂ ಜಾಸ್ತಿ ಯಾಗುತ್ತದೆ. ಸುಮಾರು ಒಂದು ಸಾವಿರ ಎಕರೆಯಷ್ಟು ಬೆಳೆಗೆ ಹುಳು ಬಿದ್ದಿದೆ. ಮೇ ಮತ್ತು ಜೂನ್‌ನಲ್ಲಿ ರೋಹಿಣಿ ಮಳೆ ಬಿತ್ತು. ನಮ್ಮ ಜಿಲ್ಲೆಯ 8 ತಾಲ್ಲೂಕುಗಳಲ್ಲಿ ಸುಮಾರು ಒಂದೂವರೆ ಲಕ್ಷ ಎಕರೆಯಷ್ಟು ಬೆಳೆ ಕಟ್ಟಿತ್ತು. ಅಗ್ರಿಕಲ್‌ಚರಲ್ ಯೂನಿವರ್ಸಿಟಿ ಸಂಶೋಧನೆಯವರು ಅಲ್ಲಿಗೆ ತಕ್ಕ ಸಿಬ್ಬಂದಿಯನ್ನು ಕಳುಹಿಸಿ ಆ ಬೆಳೆಗೆ ಹುಳು ಏಕೆ ಬೀಳುತ್ತದೆ ಎಂಬ ಬಗ್ಗೆ ತೀವ್ರ ಪರೀಕ್ಷೆ ಮಾಡಿಸಿ ನಿರಂತರವಾದ ಪರಿಹಾರವನ್ನು ಕಂಡುಹಿಡಿಯಬೇಕು. ಎರಡನೆಯದಾಗಿ ಇದು ಒಂದು ರಾಷ್ಟ್ರೀಯ ವ್ಯಾಧಿ ಎಂಬುದಾಗಿ ಹೇಳಿದರೆ ತಪ್ಪಾಗಲಾರದು. ಆದ್ದರಿಂದ ಸರ್ಕಾರದವರು ಇದನ್ನು ಕಂಟ್ರೋಲ್ ಮಾಡುವುದು ಬಹು ಮುಖ್ಯವಾದ ಹೊಣೆಯಲ್ಲವೇ ?

ಶ್ರೀ ಕೆ. ಎಚ್. ಪಾಟೀಲ್.—ಈಗಾಗಲೇ ಸರ್ಕಾರ ಆ ಬಗ್ಗೆ ಕ್ರಮ ತೆಗೆದುಕೊಂಡಿದೆ. ಅಗ್ರಿಕಲ್‌ಚರಲ್ ಯೂನಿವರ್ಸಿಟಿಯವರು ಈಗಾಗಲೇ ಸೂಕ್ತ ಕ್ರಮ ತೆಗೆದುಕೊಂಡಿದ್ದಾರೆ ಎಂಬುದಾಗಿ ನಾನು ಆಶಯಮಾಡುತ್ತೇನೆ.

MADAM SPEAKER.—The House will now adjourn and meet again to-morrow at 10 A.M.

The house adjourned at Twenty minutes past Seven of the Clock to meet again at Ten of the Clock on Thursday, the 13th July 1972.

WD 18196—GPB—550—27-11-1972

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Thursday, 13th July 1972/Ashadha 22, 1894 (Saka Era).

The House met in the Assembly Chamber, Vidhana Soudha, at Ten of the Clock.

MADAM SPEAKER (SMT. K. S. NAGARATHNAMMA) in the Chair.

Revised Budget Estimates for 1972-73—Demands for Grants Demand Nos. 20, 38, 51 and 22—(*Debate Continued*).

MADAM SPEAKER.—We have three hours at our disposal and we have to conclude the discussion on Demands 20, 38, 51 and 22. The Hon'ble Minister for Agriculture and Forests may take 1½ hours for reply; the Hon'ble Minister of State for Animal Husbandry may take 40 to 45 minutes; and the Hon'ble Minister of State for Fisheries may take about half-an-hour. Anyhow the Demands should be voted by One O' Clock.

† ಶ್ರೀ ಕೆ. ಎಚ್. ಪಾಟೀಲ್ (ವ್ಯವಸಾಯ ಮತ್ತು ಅರಣ್ಯ ಶಾಖೆಗಳ ಮಂತ್ರಿಗಳು).—ಸನ್ಮಾನ, ಸಭಾಧ್ಯಕ್ಷಣಿಯವರೇ, ನಿನ್ನೆಯ ದಿವಸ ಒಕ್ಕಲುತನ, ಅರಣ್ಯ ಹಾಗೂ ಮೀನುಗಾರಿಕೆ, ತೋಟಗಾರಿಕೆ ಮತ್ತು ಪಶುಸಂಗೋಪನೆ ಈ ಇಲಾಖೆಗಳಿಗೆ ಸಂಬಂಧಪಟ್ಟಂತೆ ಈ ಸದನದ ಎದುರು ಇಟ್ಟಂತಹ ಸರ್ಕಾರದ ಮಾಗಣಿ ವಿಷಯವಾಗಿ ಅನೇಕ ಮಾನ್ಯ ಸದಸ್ಯರು ಮಾತನಾಡುವಾಗ ಸಮಯದ ಅಭಾವದಿಂದ ಅವರು ಸಮರ್ಪಕವಾಗಿ ವಿಷಯಗಳನ್ನು ನಿವೇದನೆ ಮಾಡುವುದಕ್ಕೆ ಆಗಿಲ್ಲ ಎನ್ನುವ ಅರಿವು ಸರ್ಕಾರಕ್ಕೆ ಆಗಿದೆ. ಆದರೂ ಅವರು ಅವರಿಗೆ ಸಿಕ್ಕಿದ ಅವಧಿಯಲ್ಲಿ ಉಭಯ ಕಡೆಯ ಮಾನ್ಯ ಸದಸ್ಯರೂ ಮಾಡಿರುವ ಎಲ್ಲಾ ಸಲಹೆಗಳನ್ನು ಅಕ್ಷರಶಃ ಸರ್ಕಾರ ಗಮನಿಸಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಅನೇಕ ಮಾನ್ಯ ಸದಸ್ಯರು ಉಗ್ರವಾದ ಭಾಷೆಯನ್ನು ಉಪಯೋಗ ಮಾಡಿದರೂ ಸಹ ವಿರೋಧ ಪಕ್ಷದವರು ಉತ್ತಮವಾದ ಸಲಹೆಗಳನ್ನು ಮಾಡಿದ್ದಾರೆ, ಮತ್ತು ಆಡಳಿತ ಪಕ್ಷದ ಸದಸ್ಯರೂ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಆ ಎಲ್ಲಾ ಮಾನ್ಯ ಸದಸ್ಯರಿಗೂ ಸರ್ಕಾರದ ಪರವಾಗಿ ನನ್ನ ಕೃತಜ್ಞತೆಯನ್ನು ಮೊಟ್ಟಮೊದಲನೆಯದಾಗಿ ಅರ್ಪಿಸುತ್ತೇನೆ. ವಿರೋಧಪಕ್ಷದವರು ಕರ್ತವ್ಯ ದೃಷ್ಟಿಯಿಂದ ಸರ್ಕಾರದ ಲೋಪ ದೋಷಗಳನ್ನು ಎತ್ತುವುದಕ್ಕಿಂತ ಹೆಚ್ಚು ವ್ಯಾಪಕತೆಯ ರಾಹುಗನ್ನಡಿಯನ್ನು ಸರ್ಕಾರದ ಜನರಿಗೆ ತೋರಿಸುವುದು ಅವರ ಆದ್ಯ ಕರ್ತವ್ಯ ಎನ್ನುವ ಮಾತನ್ನು ನಾನು ನಂಬಿಕೊಂಡಿದ್ದೇನೆ. ಅವರು ಹೇಳುವಂತಹ ಉಗ್ರ ಟೀಕೆಗಳನ್ನು ನಾನು ಯೋಗ್ಯ ರೀತಿಯಲ್ಲಿ ಗಮನಿಸಿದ್ದೇನೆ.

---

† Indicates that the remarks or speeches ...

(ಶ್ರೀ ಕೆ. ಎಚ್. ಪಾಟೀಲ್)

ಮಾನ್ಯ ವಿರೋಧ ಪಕ್ಷದ ನಾಯಕರು ರಾಷ್ಟ್ರಾಧ್ಯಕ್ಷರ ಆಳ್ವಿಕೆಯನ್ನು ಪ್ರತ್ಯೇಕವಾದ ಒಂದು ಯುಗ ಎಂದು ಕರೆದು ಆ ಯುಗವನ್ನು ಆಳುವ ಕಾಂಗ್ರೆಸ್ಸಿನ ಯುಗಕ್ಕೆ ಒಂದು ಹೊಂದಾಣಿಕೆ ಮಾಡುವಂತಹ ಸಾಹಸವನ್ನು ಮಾಡಿದ್ದಾರೆ. ನಿಜ. ಅವರು ಪಟ್ಟ ಸಾಹಸಕ್ಕೆ ನನ್ನ ಅಭಿನಂದನೆಗಳು. ಈ ಸರ್ಕಾರ ಬಂದು ಕೇವಲ 3-4 ತಿಂಗಳಾಯಿತು. ಈ 3-4 ತಿಂಗಳ ಅವಧಿಯಲ್ಲಿ ಪರಿಶ್ರಮಪಟ್ಟರೂ ವಕ್ಕಲುತನ ಇಲಾಖೆಯಲ್ಲಿ ಲೋಪದೋಷಗಳು ಸಿಕ್ಕದಿದ್ದರೂ ಲೋಪದೋಷಗಳನ್ನು ಹುಡುಕುವ ದೃಷ್ಟಿಯಿಂದ ಹಿಂದಿನ ಆಡಳಿತಗಾರರಲ್ಲಿ ಬಂದ ಲೋಪದೋಷಗಳನ್ನು ಹೊಂದಿಕೆ ಮಾಡಿ ಟೀಕೆ ಮಾಡಿದ್ದಾರೆ. ಹಿಂದಿನ ಆಡಳಿತಗಾರರ ಟೀಕೆಗೂ ನಮ್ಮ ಸರ್ಕಾರಕ್ಕೂ ಯಾವ ಸಂಬಂಧವಿಲ್ಲದಿದ್ದರೂ ಸಹ ಆ ಟೀಕೆಯಲ್ಲಿ ಅಡಗಿರುವಂತಹ ತತ್ವವನ್ನು ನಾನು ಪರಿಪಾಲನೆ ಮಾಡಿ ಅವರು ಮಾಡಿರುವ ತಪ್ಪು ನಮ್ಮ ಅವಧಿಯಲ್ಲಿ ಆಗಬಾರದು ಎನ್ನುವ ದೃಷ್ಟಿಯಿಂದ ಎದುರು ಪಕ್ಷದವರ ಪ್ರತಿಯೊಂದು ವಾಕ್ಯವನ್ನೂ. ಉಪದೇಶವನ್ನೂ ನಾನು ಪಾಲನೆ ಮಾಡುವುದಕ್ಕೆ ಹತ್ತಿದ್ದೇನೆ. ಇದು ಟೀಕೆಗಳ ಯುಗ, ಎಲ್ಲರೂ ಎಲ್ಲಾ ಟೀಕೆಗಳನ್ನೂ ಮಾಡಲಿ, ಆ ಟೀಕೆಗಳಲ್ಲಿ ಯೋಗ್ಯವಾದ ಟೀಕೆಗಳಿದ್ದರೆ ಅವುಗಳನ್ನು ಸ್ವೀಕಾರ ಮಾಡುವುದು ಸಾಧುವಾದ ಸರ್ಕಾರದ ಕರ್ತವ್ಯ. ಟೀಕೆಗಳು ಎದುರು ಪಕ್ಷದಿಂದಲೇ ಬಂದಿರಲಿ, ಆಳುವ ಪಕ್ಷದವರಿಂದಲೇ ಬಂದಿರಲಿ ಅವರು ನಮ್ಮ ತಪ್ಪುಗಳನ್ನು ಸರಿಪಡಿಸಿ ಎಂದು ಹೇಳಿದಾಗ ಅವುಗಳನ್ನು ಸರಿಪಡಿಸಿಕೊಳ್ಳುವುದಿಲ್ಲ ಎಂದು ಹೇಳುವ ಉದ್ಧಾಮ ವೃತ್ತಿಗೆ ಸರ್ಕಾರ ಪ್ರಯತ್ನ ಮಾಡುವುದಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮೊಟ್ಟಮೊದಲನೆಯದಾಗಿ ಬ್ಯಾಂಕ್ ರಾಷ್ಟ್ರೀಕರಣ ಮಾಡಿದಾಗ ನಮ್ಮ ನಾಯಕಿಯಾದ ಇಂದಿರಾಜಿಯವರ ಆದಿಯಾಗಿ ನಮ್ಮ ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ದೇವರಾಜ ಅರಸರವರೆಲ್ಲರೂ ಬಡ ಜನರಿಗೆ ಹಣ ಕೊಡುತ್ತೇವೆ, ಬಡವರ ಬಡತನ ನಿವಾರಣೆ ಮಾಡುವ ಕಾಲ ಬಂತು ಎಂಬ ಆಶ್ವಾಸನೆಯನ್ನು ಕೊಟ್ಟದ್ದು ಈಗ ಗಾಳಿಯ ರೂಪದಲ್ಲಿದೆ ಎಂದು ಸಹ ಮಾನ್ಯ ವಿರೋಧ ಪಕ್ಷದ ಸದಸ್ಯರು ಹೇಳಿದರು. ನಿಜ; ಆದರೆ ಅದನ್ನು ಮಾಡುವುದಕ್ಕಾಗಿ ನಾವು ಪರಿಶ್ರಮ ಪಡಬೇಕಾಗಿದೆ. ಎಷ್ಟೋ ವರ್ಷಗಳಿಂದ ಬಂದಂತಹ ಬಡತನವನ್ನು ನಾವು ಒಂದೇ ವರ್ಷದಲ್ಲಿ ತೆಗೆದು ಹಾಕುತ್ತೇವೆಂದು ಹೇಳುವುದು ಕಷ್ಟ. ಒಂದು ವರ್ಷದಲ್ಲಿ ಅದನ್ನು ಪರಮಾತ್ಮನಿಗೂ ತೆಗೆದು ಹಾಕಲು ಸಾಧ್ಯವಿಲ್ಲವೆನ್ನುವ ಮಾತನ್ನು ನಾನು ಹೇಳುತ್ತೇನೆ. ಆದರೆ ಆಡಿದಂತಹ ಮಾತನ್ನು ಮಾಡುವಂತಹ ಕಾರ್ಯವನ್ನು ನಮ್ಮ ಸರ್ಕಾರದವರು ಮಾಡುವುದಕ್ಕೆ ದಿನೇ ದಿನೇ ಪ್ರಗತಿಪರವಾದ ಹೆಜ್ಜೆಯನ್ನು ಇಡುತ್ತಿದ್ದೇವೆ. ಅದನ್ನು ಮಾನ್ಯ ವಿರೋಧ ಪಕ್ಷದ ಸದಸ್ಯರು ಒಪ್ಪಿಕೊಳ್ಳುತ್ತಾರೆಂದು ನಾನು ನಂಬಿದ್ದೇನೆ. ಈಗಾಗಲೇ ವಕ್ಕಲುತನದ ಬಗ್ಗೆ ಹೇಳುವುದಾದರೆ, ಟ್ರಾಕ್ಟರುಗಳನ್ನು ಖರೀದಿ ಮಾಡುವಾಗ ಮತ್ತು ಅದರ ಕಂತುಗಳನ್ನು ಕೊಡುವಾಗ ಅನೇಕ ವಕ್ಕಲಿಗರಿಗೆ ತಾಯಿಗಿಂತ ಮಗಳು ಭಾರವಾದ ಹಾಗೆ ಬಡ್ಡಿ ಹೆಚ್ಚಾಗಿದೆ. ಆದರ ಬಗ್ಗೆ ದಿನಂಪ್ರತಿ ಅರ್ಜಿಗಳು ಬರುತ್ತಿವೆ. ಅದರಲ್ಲಿ ಅಗ್ರೋ ಇಂಡಸ್ಟ್ರೀಸ್‌ಗೆ ಸಂಬಂಧಪಟ್ಟದ್ದೂ ಇದೆ, ಡೈರೆಕ್ಟರ್ ಆಫ್ ಅಗ್ರಿಕಲ್ಚರಗೆ ಸಂಬಂಧಪಟ್ಟದ್ದೂ ಇದೆ. ಅದರ ಬಗ್ಗೆ ನಾನು ಈಗಾಗಲೇ ಅಧಿಕಾರಿಗಳಿಗೆ ಆದೇಶಗಳನ್ನು ಕೊಟ್ಟಿದ್ದೇನೆ. ಸಾಧ್ಯವಾದಷ್ಟು ಈ ದಂಡದ ಬಡ್ಡಿಯನ್ನು ಹೆಚ್ಚಾಗಿ ವಸೂಲು ಮಾಡುವುದನ್ನು ನಿಲ್ಲಿಸಬೇಕೆಂದು ಹೇಳಿದ್ದೇನೆ. ಆದರೆ ಒಮ್ಮೆಲೇ ನಿಲ್ಲಿಸಿದರೂ ಕಷ್ಟವಾಗುತ್ತದೆ. ಏಕೆಂದರೆ ನಮ್ಮ ರೈತರು ತೆಗೆದುಕೊಂಡ ಸಾಲದಮೇಲೆ ಅಥವಾ ಟ್ರಾಕ್ಟರ್‌ಮೇಲೆ ಕೊಡಬೇಕಾದಂತಹ ಹಣವನ್ನು ಸರಿಯಾದ ಸಮಯಕ್ಕೆ ಕೊಡದಿದ್ದರೆ ಸರ್ಕಾರದವರು ಡಿಫಾಲ್ಟರ್ ಆಗುವ ಸಂದರ್ಭ ಬರುವುದು ತಮಗೆಲ್ಲರಿಗೂ ಗೊತ್ತಿದೆ. ಆದ್ದರಿಂದ ಕೊಡಬೇಕಾದವರು ಸಮಯಕ್ಕೆ ಸರಿಯಾಗಿ ಕೊಡಲಿ ಎನ್ನುವ ದೃಷ್ಟಿಯಿಂದ ಈ ಪೀನಲ್ ಇಂಟರೆಸ್ಟ್ ಹಾಕುತ್ತಿದ್ದೇವೆ. ಆದ್ದರಿಂದ ನನ್ನ ಖಾತೆಗೆ ಸಂಬಂಧಪಟ್ಟಂತೆ ಇದರ ಬಗ್ಗೆ ಈಗಾಗಲೇ ಸೂಚನೆಯನ್ನು ಅಧಿಕಾರಿಗಳಿಗೆ ಕೊಟ್ಟಿದ್ದೇನೆ.

ಇನ್ನು ಸಹಕಾರ ರಂಗದದಲ್ಲಿ ಈ ತ್ರಿ ಟೈಯರ್ ಪದ್ಧತಿಯಿಂದಾಗಿ ಅಪೆಕ್ಸ್ ಬ್ಯಾಂಕ್, ಜಿಲ್ಲಾ ಬ್ಯಾಂಕ್ ಮತ್ತು ಪ್ರೈಮರಿ ಸೊಸೈಟಿ—ಇವರು ಹೇರಳವಾದ ಮಾರ್ಜಿನ್ ಆಫ್ ಪ್ರೊಫಿಟ್ ತೆಗೆದುಕೊಂಡು, ರಿಸರ್ವ್ ಬ್ಯಾಂಕಿನಿಂದ ಸಿಗತಕ್ಕಂತಹ ಬಡ್ಡಿಯ ಸೌಲಭ್ಯ ರೈತಾಪಿ ಜನರಿಗೆ ಸಿಗುತ್ತಾ ಇಲ್ಲ. ಈ ಒಂದು ಪರಂಪರೆ ಬಹಳ ದಿವಸಗಳಿಂದಲೂ ನಡೆದುಕೊಂಡು ಬಂದಿದೆ. ಇದನ್ನು ಬದಲಾವಣೆ ಮಾಡಬೇಕಾದರೆ, ಸಹಕಾರಿ ರಂಗದಲ್ಲಿ ಕ್ರಾಂತಿಕಾರಿ ಬದಲಾವಣೆಯಾಗಬೇಕು. ಸರ್ಕಾರದ ಇದರ ಬಗ್ಗೆಯೂ ವಿಚಾರ ಮಾಡುತ್ತಿದ್ದಾರೆ. ಆದರೆ ಒಮ್ಮೆಲೆ ಸರ್ಕಾರದವರು ಇಂತಹ ಕ್ರಾಂತಿಕಾರಿ ಬದಲಾವಣೆಗಳನ್ನು ಆಮೂಲಾಗ್ರವಾಗಿ ಮಾಡುವುದಕ್ಕಾಗುವುದಿಲ್ಲ.

ಏಕೆಂದರೆ ಈ ಚಳವಳಿಯಾಗಿರುವುದು ಜನತೆಯಿಂದ. ಆದ್ದರಿಂದ ಜನತೆಯ ಮನಸ್ಸಿನಲ್ಲಿ ಪರಿವರ್ತನೆಯಾಗಬೇಕು. ಅದನ್ನು ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಿದ್ದಾರೆ. ಇನ್ನೂ ನಾವು ಪ್ರಾರಂಭದ ಹಂತದಲ್ಲಿದ್ದೇವೆಂದು ಹೇಳುತ್ತೇನೆ.

ಇನ್ನು ನಮ್ಮ ರಾಜ್ಯ ಅಧಿಕಾರಿಗಳ ರಾಜ್ಯವಾಗಿದೆ, ಮಂತ್ರಿಗಳ ರಾಜ್ಯವಲ್ಲ, ಎಂ. ಎಲ್. ಎ. ಗಳ ರಾಜ್ಯವಲ್ಲ, ಮತ್ತು ಜನತೆಯ ರಾಜ್ಯವಲ್ಲವೆಂದು ಹೇಳುವಂತಹ ಮಾತುಗಳು ಕೇಳಿ ಬರುತ್ತಿದೆ. ನನಗೆ ಆಡಳಿತದಲ್ಲಿ ಮೂರು ತಿಂಗಳ ಅನುಭವ ಆಗಿದ್ದರೂ, ಆ ಕಡೆ ಕೂತು ತಿಳಿದುಕೊಂಡಂತಹ ಅನುಭವ ಬಹಳವಾಗಿ ಇದೆ. ಹೆಚ್ಚು ಕಮ್ಮಿ ಈಗಲೂ ಹಿಂದೆ ಆ ಕಡೆ ಕೂತು ಮಾತನಾಡಿದಂತಹ ಮಾತುಗಳು ನನ್ನ ಬಾಯಿಂದ ಬರುತ್ತಿವೆ. ನನ್ನಮಟ್ಟಿಗೆ ಹೇಳುವುದಾದರೆ, ಯಾವುದೇ ಅಧಿಕಾರಿ ನಮ್ಮ ಪ್ರಜಾಪ್ರಭುತ್ವದಲ್ಲಿ ಒಬ್ಬ ಸಾಮಾನ್ಯ ನಾಗರೀಕನಿಗಿಂತ ದೊಡ್ಡವನೇನೂ ಅಲ್ಲವೆಂದು ನಾನು ತಿಳಿಯುತ್ತೇನೆ. ನನ್ನ ದೃಷ್ಟಿಯಲ್ಲಿ ಅವರು ಟ್ರಸ್ಟೀಸ್ ಆಫ್ ದಿ ಪಬ್ಲಿಕ್ ಎನ್ನುವ ರೀತಿಯಲ್ಲಿ ಕೆಲಸಮಾಡಬೇಕು. ಇನ್ನು ಒಬ್ಬರು ಇಂದು ಮಂತ್ರಿಯಾಗಿರಬಹುದು, ಒಬ್ಬರು ಎಂ. ಎಲ್.ಎ. ಆಗಿರಬಹುದು ಅಥವಾ ಒಬ್ಬರು ಎಂ. ಎಲ್. ಎ. ಆಗದೆ ಸೋತಿರಬಹುದು. ಆದರೆ ಇವತ್ತು ಆ ರೀತಿಯಾಗಿದ್ದರೂ, ಇದು ಏನೂ ಶಾಶ್ವತವಲ್ಲ. ಎಲ್ಲರೂ ಸುಪರ್ ಹ್ಯೂಮನ್ಸ್ ಏನೂ ಅಲ್ಲ. ಎಲ್ಲರೂ ಮಾನವೀಯತೆಯ ದೃಷ್ಟಿಯಿಂದ ಮಾನವೀಯ ಸಮಸ್ಯೆಗಳನ್ನು ಬಗೆಹರಿಸಬೇಕಾಗುತ್ತದೆ. ಯಾವಾಗ ಅಧಿಕಾರಿಗಳು ಜನತೆಯ ಕಾರ್ಯಗಳನ್ನು ಮಾಡುವುದರಲ್ಲಿ ಲೋಪವನ್ನು ಮಾಡುತ್ತಾರೆ, ಮತ್ತು ಅವರ ಕರ್ತವ್ಯಗಳಲ್ಲಿ ಲೋಪ ಮಾಡುತ್ತಾರೆ, ಅಂಥವರು ಎಂತಹ ಅಧಿಕಾರಿಗಳೇ ಆಗಿರಲಿ, ಯಾವ ಹುದ್ದೆಯಲ್ಲೇ ಇರಲಿ, ಅವರ ಮೇಲೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ. ಈ ಮಾತನ್ನು ಹೇಳುವಾಗ ಮಾನ್ಯ ಸದಸ್ಯರಲ್ಲಿ ಕಳಕಳಿಯ ಪ್ರಾರ್ಥನೆ ಏನೆಂದರೆ, ಯಾವುದೇ ಒಂದು ಕೆಲಸವನ್ನು ಮಾಡಬೇಕಾದರೆ, ಒಬ್ಬ ಅಧಿಕಾರಿ ನಮ್ಮಿಂದ ನೇಮಿಸಲ್ಪಟ್ಟು, ನಮ್ಮ ಸರ್ಕಾರದಿಂದ ಸಂಬಳ ತೆಗೆದುಕೊಳ್ಳುತ್ತಿದ್ದರೂ ಸಹ ಆ ಅಧಿಕಾರಿಯ ಜವಾಬ್ದಾರಿ, ಅಥವಾ ಗೌರವ ಹೆಚ್ಚಬೇಕಾದರೆ ನಾವು ಅವನಿಗೆ ಸೂಕ್ತವಾದಂತಹ ಬೆಂಬಲವನ್ನು, ಸೂಕ್ತವಾದ ಗೌರವವನ್ನು ಮತ್ತು ರಕ್ಷಣೆಯನ್ನೂ ಕೊಡಬೇಕಾಗುತ್ತದೆಂಬ ಮಾತನ್ನು ಅನುಭವಿಗಳಾದ ವಿರೋಧಪಕ್ಷದ ಸದಸ್ಯರಿಗೆ ತಮ್ಮ ಮುಖಾಂತರ ಹೇಳಲಪೇಕ್ಷೆಪಡುತ್ತೇನೆ. ಆದರೆ ಯಾವುದೋ ಒಬ್ಬ ಅಧಿಕಾರಿ ಎಲ್ಲೋ ತಿಂದಾಗ ಅಥವಾ ತಿನ್ನುವುದಕ್ಕೆ ತೊಡಗಿದಾಗ ಅಥವಾ ದುರುಪಯೋಗ ಪಡಿಸುವುದಕ್ಕೆ ಹೊರಟಾಗ, ಅದು ನನ್ನ ನಜರಿಗೆ ಬಂದರೆ ಅವರು ಯಾರೇ ಆಗಲಿ, ಅಥವಾ ಅವನು ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನೇ ಇರಲಿ, ಅಂಥವರಿಗೆ ನನ್ನ ಕೈಯಲ್ಲಿ ರಕ್ಷಣೆ ಸಿಗಲಾರದು. ಹಿಂದೆ ಯಾರೋ ಯಾವುದೋ ತಪ್ಪುಗಳನ್ನು ಮಾಡಿದ್ದಾರೆ ಎಂದಾಕ್ಷಣಕ್ಕೆ ಅವರದ್ದೇ ತಪ್ಪು ಎಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಇವತ್ತು ನಾನು ಮಂತ್ರಿಯಾಗಿ ಲಂಚಕೋರನಾಗಿದ್ದರೆ, ನನ್ನ ಕೆಳಗಿರುವ ಅಧಿಕಾರಿಗಳೂ ಲಂಚಕೋರರಾಗುತ್ತಾರೆ. ಉದಾಹರಣೆಗೆ ನಾನು ಪ್ರವಾಸದಲ್ಲಿ ಹೋದ ಕಾಲಕ್ಕೆ ಅಲ್ಲಿಯ ಖರ್ಚುಗಳನ್ನು ಅಧಿಕಾರಿಗಳು ಮಾಡಬೇಕೆಂದರೆ, ಆ ಅಧಿಕಾರಿಗಳು ಹಣವನ್ನು ಎಲ್ಲಿಂದ ತರಬೇಕು ? ಮಂತ್ರಿಯಾದವನು ಪ್ರಾಮಾಣಿಕತನದಿಂದ ಜೀವನ ಮಾಡಿದರೆ, ಅವನ ಕೈಕೆಳಗಿನ ಅಧಿಕಾರಿಗಳೂ ಅದೇ ರೀತಿಯಲ್ಲಿ ಜೀವನ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಒಬ್ಬ ಸಣ್ಣ ಅಧಿಕಾರಿ ತನ್ನ ಕೈಯಿಂದ ಖರ್ಚು ಮಾಡಬೇಕಾದರೆ ಅವನು ಯಾವ ರೀತಿಯಲ್ಲಿ ಅದನ್ನು ಮಾಡಬಲ್ಲ ! ಆದ್ದರಿಂದ ಇಲ್ಲಿಯವರೆಗೆ ಇದ್ದದ್ದನ್ನು ನಾವು ಸ್ವಲ್ಪ ಮಾನವೀಯತೆಯ ದೃಷ್ಟಿಯಿಂದ ಪರಿಶೀಲನೆ ಮಾಡದೆ ಗತ್ಯಂತರವಿಲ್ಲ. ಅನೇಕ ಸಂದರ್ಭಗಳಲ್ಲಿ ಹಿಂದಿನ ಆಡಳಿತಗಾರರು ಯಾವ ರೀತಿಯಲ್ಲಿ ಸಲಹೆಗಳನ್ನು ಕೊಡುತ್ತಿದ್ದರೋ, ಆ ರೀತಿಯಲ್ಲಿ ಆಡಳಿತವನ್ನು ಅಧಿಕಾರಿಗಳು ನಡಿಸುತ್ತಿದ್ದರು. ಉದಾಹರಣೆಗೆ ನಾನು ಒಬ್ಬ ಗ್ರಾಮಸೇವಕನನ್ನು ಲಂಚಕೋರನೆಂದು ಅವನನ್ನು ತೆಗೆದು ಮುಂದೆ ಎಲ್ಲಿಗೆ ಕಳಿಸಬೇಕು ! ಇನ್ನೊಂದು ಗ್ರಾಮಕ್ಕೆ ಅವನನ್ನು ಕಳಿಸಿದರೆ ಈ ಲಂಚಕೋರನ ಜಾಡ್ಯ ಇನ್ನೊಂದು ಗ್ರಾಮಕ್ಕೂ ತಟ್ಟುವಂತಾಗುತ್ತದೆ. ಇದು ನಿಮ್ಮ ವಾದವೇ? ಲಂಚಕೋರ ಅಧಿಕಾರಿಯನ್ನು ಲಂಚಕೋರನಾದ ಸ್ಥಳದಲ್ಲಿಯೇ ಹಿಡಿದು ಅವನನ್ನು ಮನೆಗೆ ಕಳಿಸುವಂತಹ ಒಂದು ಚಳವಳಿಯನ್ನು ನಾವು ಮಾಡುವುದು ಸೂಕ್ತವಲ್ಲವೇ ? ಇದಕ್ಕೆ ಸಹಕಾರ ತಮ್ಮಿಂದ ಬಂದುದಾದರೆ, ಸರ್ಕಾರದವರು ಇಂತಹ ಲಂಚಕೋರ ಅಧಿಕಾರಿಗಳ ಬಗ್ಗೆ ಉಗ್ರವಾದ ಕ್ರಮವನ್ನು ಕೈಗೊಳ್ಳುವುದಕ್ಕೆ ಬಹಳ ಸಹಾಯವಾಗುತ್ತದೆ ಎಂಬ ಮಾತನ್ನು ಬಹಳ ಪ್ರಾಮಾಣಿಕತೆಯಿಂದ ಹೇಳುತ್ತಿದ್ದೇನೆ. ಇವತ್ತು ಲಂಚಕೋರ ಅಧಿಕಾರಿಗಳು ಬಹಳ ನಿಪುಣರಾಗಿರುತ್ತಾರೆ. ಲಂಚ ತೆಗೆದುಕೊಳ್ಳದ ಅಧಿಕಾರಿಗಳು ಬಹಳ ಪೇಚಿನಲ್ಲಿ ಬೀಳುತ್ತಾರೆ. ಆದ್ದರಿಂದ ಲಂಚ ತೆಗೆದುಕೊಳ್ಳುವ ಅಧಿಕಾರಿಗಳು ಇಂತಹ ಯಾವ ಪೇಚಿನಲ್ಲಿಯೂ ಬೀಳುವುದಿಲ್ಲ. ಅದೂ ಅಲ್ಲದೆ ಲಂಚ ತೆಗೆದುಕೊಳ್ಳುವ ಅಧಿಕಾರಿಗಳು ಅವರನ್ನು ಯಾರು ಪೇಚಿಗೆ ಬೀಳಲು ಪ್ರಯತ್ನ ಮಾಡಿದರೋ, ಅಂಥವರನ್ನೇ ಪೇಚಿಗೆ ಸಿಗುವಂತೆ ಮಾಡುತ್ತಾರೆ. ಅಷ್ಟು ನಿಪುಣರಾಗಿರುತ್ತಾರೆ ಆ ಅಧಿಕಾರಿಗಳು.

(ಶ್ರೀ ಕೆ. ಎಚ್. ಪಾಟೀಲ್)

ಇದರಿಂದಾಗಿ ಮಂತ್ರಿಗಳ ನಿಲುವಿಗೆ ಅಂಥವರು ಸಿಗುವುದಿಲ್ಲವೆಂದು ಕೆಲವು ಸದಸ್ಯರು ತಿಳಿದುಕೊಂಡಿದ್ದಾರೆ. ಅದಲ್ಲದೆ ಇವರು ರೀಜನಲ್ ಭಾವನೆಯಿಂದ ಹೀಗೆ ಮಾಡುತ್ತಿದ್ದಾರೆ, ಅವನು ತಿನ್ನದಿದ್ದರೂ ಇವರಿಗೆ ಕೊಡಲಿಲ್ಲ; ಅಥವಾ ಅದನ್ನು ಮುಚ್ಚಿಡುವುದಕ್ಕೆ ಹೀಗೆ ಹೇಳುತ್ತಿದ್ದಾರೆ ಎಂದು ಇತ್ಯಾದಿಯಾಗಿ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆದ್ದರಿಂದ ಯಾವಾಗ ನಮಗೆ ನಮ್ಮ ಆಡಳಿತದ ಶುದ್ಧೀಕರಣವಾಗಬೇಕೋ ಅದಕ್ಕೆ ನಿಮ್ಮಿಂದ ಸಹಕಾರವನ್ನು ಕೇಳುತ್ತೇವೆಯೇ ಹೊರತು ಹೊಸದೇನೂ ಕೇಳುವುದಿಲ್ಲ. ನಿನ್ನೆಯ ದಿವಸದ ಇಡೀ ಭಾಷಣದಲ್ಲಿ ಅನೇಕ ಮಾತುಗಳನ್ನು ನಾನು ಕೇಳಿದ್ದೇನೆ. ಅದಕ್ಕಾಗಿ ಅಧ್ಯಕ್ಷಿಣಿಯವರ ಮುಖಾಂತರ ಮಾನ್ಯ ಸದಸ್ಯರನ್ನು ಈ ಮೂಲಕ ಇದರ ಬಗ್ಗೆ ಸಹಕಾರ ಕೊಡಬೇಕೆಂಥು ಪ್ರಾರ್ಥಿಸಿಕೊಳ್ಳುತ್ತೇನೆ.

ಇಷ್ಟು ಮಾತುಗಳನ್ನು ಹೇಳಿ ನಾನು ಆಡಳಿತದ ವಿಷಯದ ಬಗ್ಗೆ ಕೆಲವಾರು ಮಾತುಗಳನ್ನು ಹೇಳಬಯಸುತ್ತೇನೆ. ಮೊಟ್ಟಮೊದಲನೆಯದಾಗಿ ಸಾಯಿಲ್ ಟೆಸ್ಟಿಂಗ್ ಲ್ಯಾಬೋರೇಟರಿ ಬಗ್ಗೆ ಅನೇಕ ಸದಸ್ಯರು ವ್ಯಾಖ್ಯಾನಮಾಡಿದ್ದಾರೆ. ಒಬ್ಬಿಬ್ಬರನ್ನು ಬಿಟ್ಟರೆ, ಉಳಿದವರು ಇದರ ಒಂದು ಕೃತಿಯನ್ನು ಸ್ವಾಗತಿಸಿದ್ದಾರೆ. ಮತ್ತೆ ಇಬ್ಬರು ಸದಸ್ಯರು ಸಾಯಿಲ್ ಟೆಸ್ಟಿಂಗ್ ಕೆಲಸ ನಡೆದಿಲ್ಲವೆಂದು ಹೇಳಿದ್ದಾರೆ. ಗುಲ್ಬರ್ಗದ ಸ್ನೇಹಿತರು ಹಾಗೂ ಬೀದರ್ ಸ್ನೇಹಿತರಿಗೆ ನನ್ನ ಉತ್ತರವಿಷ್ಟೇ. ಇಂದು ನಾವು ಇನ್ನೂ ಶೈಶವಾವಸ್ಥೆಯಲ್ಲಿ ಇದ್ದೇವೆ. ಈ ಸ್ಥಿತಿಯಲ್ಲಿ ಸಮರ್ಪಕ ಕೆಲಸ ನಡೆದಿಲ್ಲವೆಂಬ ಅರಿವೂ ಸಹ ನಮಗೆ ಇದೆ. ಅಷ್ಟೇ ಅಲ್ಲ ಕೆಲಸ ನಡೆದಿಲ್ಲವೆಂಬ ಅರಿವೂ ಆಗಿದೆ. ಈಗಾಗಲೇ ಸರ್ಕಾರ 10 ಸಾಯಿಲ್ ಟೆಸ್ಟಿಂಗ್ ಲ್ಯಾಬೋರೇಟರಿಗಳನ್ನು ಮಂಜೂರು ಮಾಡಿದೆ. ಒಂದು ನಾರ್ತ್ ಕೆನರಾ ಜಿಲ್ಲೆಯ ಒಂದು ಸಹಕಾರ ಬ್ಯಾಂಕಿನಿಂದ ನಡೆಯುತ್ತಿದೆ. ಅವರು ಬಿಟ್ಟರೆ ನಾವು ಇನ್ನೊಂದು ಅಲ್ಲಿಯೇ ಪ್ರಾರಂಭಮಾಡಬೇಕೆಂದು ಇಚ್ಛೆ ಇದೆ.

Sri H. S. SIDDAPPA (Arsikere).—Madam Speaker, you can kindly see that the House is thin; the Whip and Secretary of the ruling party are not here. It is very inconvenient to us to come so early. We do not get hot water in the General Hostel. We are experiencing great inconvenience there.

Sri K. H. PATIL.—Will the hon. member be justified in raising all those matters here?

MADAM SPEAKER.—The hon. member can ascertain these things from the Leader of the Opposition. The hon. member being a new comer probably he does not know the conventions here.

ಶ್ರೀ ಕೆ. ಎಚ್. ಪಾಟೀಲ್.—ಈ ದೃಷ್ಟಿಯಿಂದ ಇನ್ನೂ ಎರಡು ಸಾಯಿಲ್ ಟೆಸ್ಟಿಂಗ್ ಲ್ಯಾಬೊರೇಟರಿಗಳನ್ನು ಕೋಲಾರ ಮತ್ತು ಬೀದರ್ ಜಿಲ್ಲೆಗಳಲ್ಲಿ ಪ್ರಾರಂಭಮಾಡುವ ಯೋಜನೆ ಸರ್ಕಾರದ ಮುಂದೆ ಇದೆ. ಉಳಿದ ಎಲ್ಲಾ ಜಿಲ್ಲೆಗಳಲ್ಲಿಯೂ ಸಹ ಮಂಜೂರಾಗಿದೆ. 8 ಜಿಲ್ಲೆಗಳಲ್ಲಿ ಈಗಾಗಲೇ ಕೆಲಸ ಪ್ರಾರಂಭವಾಗಿದೆ. ಇನ್ನು 8 ಜಿಲ್ಲೆಗಳಲ್ಲಿ ಕೆಲಸ ಪ್ರಾರಂಭಮಾಡುವ ಸಲುವಾಗಿ, ತೀವ್ರಗತಿಯಿಂದ ಕೆಲಸಮಾಡುವ ಸಲುವಾಗಿ ಪ್ರೊಪೋಜಲ್ ಹೋಗಿದೆ. ಕೆಲವು ಕಡೆ ಬಿಲ್ಡಿಂಗ್ಸ್ ಏನೋ ದೊಡ್ಡದಾಗಿವೆ ಮತ್ತು ಎಲ್ಲಿ ಬಾಡಿಗೆ ಬಿಲ್ಡಿಂಗ್ ಇದೆಯೋ ಅಲ್ಲಿ ಕೆಲಸಗಳನ್ನು ಪ್ರಾರಂಭಮಾಡಬೇಕೆಂದು ತಿಳಿಸಿದ್ದೇವೆ. ಪಿ.ಡಬ್ಲ್ಯೂ.ಡಿ. ಖಾತೆಯವರು ಇಕಾನಮಿ ಆರ್ಡರ್ ಅನ್ವಯ ಮಾಡುವುದರ ಮೂಲಕ ಅಗ್ರಿಕಲ್ಚರಲ್ ಖಾತೆಯ ಕೆಲಸವನ್ನು ತಡ ಮಾಡಿದ್ದಾರೆ. ಅದನ್ನೂ ಸಹ ಪ್ರಾರಂಭಮಾಡಬೇಕೆಂದು ತಿಳಿಸಿದ್ದೇವೆ. ಅವರಿಗೂ ನಾನು ಕೃತಜ್ಞತೆಗಳನ್ನು ಹೇಳುತ್ತೇನೆ. ಸಾಯಿಲ್ ಟೆಸ್ಟಿಂಗ್ ಲ್ಯಾಬೊರೇಟರಿ ಜೊತೆಗೆ ಪ್ಲಾಂಟ್ ಎಗ್ಸಾಮಿನ್ ಮಾಡುವುದಕ್ಕೋಸ್ಕರ ಲ್ಯಾಬೋರೇಟರಿ ಎಕ್ವಿಪ್‌ಮೆಂಟ್ ಕೊಡುವುದು ಸರ್ಕಾರದ ಉದ್ದೇಶವಾಗಿದೆ. ಆ ಬಗ್ಗೆ ಸಲಹೆಗಳನ್ನು ಕೊಟ್ಟಿದೆ. ತೀವ್ರಗತಿಯಿಂದ ಅಂತಹ ಉಪಕರಣಗಳನ್ನು ಅಲ್ಲಿಗೆ ಒದಗಿಸಲಾಗುತ್ತದೆಂದು ಹೇಳುತ್ತಿದ್ದೇವೆ. ಅದರ ಜೊತೆಗೆ ಮೊಬೈಲ್ ವ್ಯಾನನ್ನು ನಾಲ್ಕು ಜಿಲ್ಲೆಗಳಿಗೆ ಒಂದರಂತೆ ಕೊಡಬೇಕೆಂದು ಸರ್ಕಾರದ ಉದ್ದೇಶವಾಗಿದೆ. ಈಗ ನಮ್ಮಲ್ಲಿ ಕೇವಲ ಎರಡು ವ್ಯಾನುಗಳು ಮಾತ್ರ ಇರುತ್ತವೆ. ಇನ್ನು ನಮಗೆ ಮೂರು ವ್ಯಾನುಗಳು ಬೇಕಾಗಿರುವುದರಿಂದ ಅವುಗಳಿಗಾಗಿ ಈಗಾಗಲೇ ಕೇಂದ್ರ ಸರ್ಕಾರದಲ್ಲಿ ಮಾತುಕತೆ ನಡೆಸಿದ್ದೇವೆ. ಅದರಿಂದ ಉಪಯುಕ್ತವಾಗಿದೆ. ಅವರು

ಅದಕ್ಕೆ ಒಪ್ಪಿದಂತಾಗಿದೆಯೆಂದು ಹೇಳುವುದಕ್ಕೆ ನಾನು ಬಹಳ ಸಂತೋಷಪಡುತ್ತೇನೆ. ಆದರೆ ಅಧಿಕೃತವಾಗಿ ಅವರಿಂದ ಅಪ್ಪಣೆ ಬರಬೇಕು. ಅದು ಬಂದನಂತರ 4 ಜಿಲ್ಲೆಗಳಿಗೆ ಒಂದರಂತೆ ಮೊಬೈಲ್ ವ್ಯಾನುಗಳನ್ನು ಇಡುತ್ತೇವೆ. ಅದರಲ್ಲಿ ಸುಸಜ್ಜಿತವಾದ ಲ್ಯಾಬೊರೇಟರಿ ಸೌಕರ್ಯ ಇದ್ದು ಪ್ರತಿಯೊಂದು ಜಮೀನಿನ ಮಣ್ಣನ್ನು ಪರೀಕ್ಷೆಮಾಡಿ ಯಾವ ರೀತಿ ಮಣ್ಣು ಇದೆ, ಅದಕ್ಕೆ ಬೇಕಾದ ಗೊಬ್ಬರವೇನು, ಯಾವ್ಯಾವ ಕಾಲಕ್ಕೆ ಎಷ್ಟು ಪ್ರಮಾಣದಲ್ಲಿ ಗೊಬ್ಬರ ಹಾಕಬೇಕು ಎಂಬ ಸಲಹೆ ಅವರು ಕೊಡಬೇಕೆಂಬುದೇ ಸರ್ಕಾರದ ಉದ್ದೇಶ. ಆದಷ್ಟು ಜಾಗ್ರತೆಯಾಗಿ ಅದನ್ನು ಮಾಡಬೇಕಾಗಿದೆ. ಇನ್ನು ಕೆಲವಾರು ಸ್ನೇಹಿತರು ಹೇಳಿದರು, ಪ್ರತಿ ತಾಲ್ಲೂಕಿಗೆ ಒಂದೊಂದು ಸಾಯಿಲ್ ಟೆಸ್ಟಿಂಗ್ ಲ್ಯಾಬೊರೇಟರಿ ಆಗಬೇಕೆಂದು. ಎಷ್ಟು ಭೂಮಿ ಇರುತ್ತದೋ ಅದನ್ನು ಗಣನೆಗೆ ತೆಗೆದುಕೊಂಡು ಅದನ್ನು ಮಾಡಬೇಕಾಗುತ್ತದೆ. ಜಿಲ್ಲೆಗೆ ಒಂದರಂತೆ ಸಾಯಿಲ್ ಟೆಸ್ಟಿಂಗ್ ಲ್ಯಾಬೊರೇಟರಿ ಮಾಡಬೇಕೆಂಬ ಒಂದು ನಿರ್ಣಯ ತೆಗೆದುಕೊಂಡಿದ್ದಾರೆ. ಇದು ಅತ್ಯಂತ ಪ್ರಗತಿಯಾದುದಾಗಿದೆ. ಕೇಂದ್ರಸರ್ಕಾರದವರೂ ಸಹ ಜಿಲ್ಲೆಗೆ ಒಂದರಂತೆ ಮಾಡಬೇಕೆಂಬ ನಿರ್ಣಯವನ್ನು ತೆಗೆದುಕೊಂಡಿರುವುದನ್ನು ಬಹಳವಾಗಿ ಪ್ರಶಂಶೆ ಮಾಡಿದ್ದಾರೆ. ಈ ದೇಶದಲ್ಲಿ ನಮ್ಮ ರಾಜ್ಯ ಎಲ್ಲಾರಾಜ್ಯಗಳಿಗಿಂತ ಮೇಲಾಗಿದೆಯೆಂದು ಹೇಳಿದ್ದಾರೆ. ಬಹಳ ಸಂತೋಷವಾಗುತ್ತದೆ. ಇದಾದನಂತರ ಸಾಯಿಲ್ ಕನ್‌ಸರ್‌ವೇಷನ್ ಬಗ್ಗೆ ಬಹಳ ಸದಸ್ಯರು ಮಾತನಾಡಿದ್ದಾರೆ. ಎರೇ ಭೂಮಿಯೊಳಗೆ ಆ ಕೆಲಸ ನಡೆಯುತ್ತಾ ಇಲ್ಲ. ಅದರಲ್ಲಿಯೂ ಆ ಕೆಲಸ ಆಗಬೇಕೆಂದು ಹೇಳುತ್ತಿದ್ದಾರೆ. ನಾನು ಆ ಮಾತನ್ನು ಬಹಳ ಸಂತೋಷದಿಂದ ಸ್ವಾಗತಿಸುತ್ತಿದ್ದೇನೆ. ನಾನು ಎರಡು ಪಕ್ಷದೊಳಗೆ ಇದ್ದಾಗಲೂ ಸಹ ಈ ಮಾತನ್ನು ಹೇಳಿದೆ. ನಾನು ಅಧಿಕಾರಕ್ಕೆ ಬಂದಕೂಡಲೇ ಮೊಟ್ಟಮೊದಲು ಈ ಎರೇ ಭೂಮಿಯೊಳಗೆ ಬದು ಹಾಕಬೇಕೆಂದು ಹೇಳಿದ್ದರಿಂದ ಆ ಕೆಲಸವನ್ನು ಮಾಡುತ್ತಿದ್ದಾರೆ. ಅನೇಕ ಸಂದರ್ಭಗಳಲ್ಲಿ ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ನಮ್ಮನ್ನು ಪ್ರಗತಿದಾಯಿಕವಾದ ಹೆಜ್ಜೆಗೆ ಹೋಗುವುದಕ್ಕೆ ಬಿಡುವುದಿಲ್ಲ. ಏನೋ ಒಂದು ಹಾದಿ ಹೂಡುತ್ತಾರೆ. ಅಂಥಾದ್ದರೊಳಗೆ ಇದು ಒಂದು ಬಂತು. ತಪ್ಪಲ್ಲ. ಆದರೂ ಸಹ ಕೊನೆಯುದಾಗಿ ನಮ್ಮ ಅಧಿಕಾರಿಗಳು ನಮ್ಮ ಅಭಿಪ್ರಾಯಕ್ಕೆ ಸಹಕರಿಸಿದ್ದಾರೆ. ಈಗಾಗಲೇ ರಾಜ್ಯಾಂದ್ಯಂತ ಎಲ್ಲಾ ಕಡೆಗೂ ಎರೇ ಭೂಮಿಯೊಳಗೆ ಬದುಹಾಕುವ ಕೆಲಸವನ್ನು ಮಾಡಬೇಕೆಂದು ಸರ್ಕಾರ ಆದೇಶ ನೀಡಿದೆ. ಅದಗ ಜೊತೆಗೆ ಅಧಿಕಾರಿಗಳು ಬಹಳ ಉಗ್ರವಾಗಿ ನನ್ನ ಅಭಿಪ್ರಾಯಕ್ಕೆ ವಿರೋಧ ಮಾಡುವವರೂ ಕೆಲವರು ಇದ್ದಾರೆ, ಕೆಲವರು ವ್ಯೈಯಾಮಿಡಿಯಾ ಕೂಡ ಸಹಕಾರ ಮಾಡಿದ್ದಾರೆ. ಕಂಪಲ್ಸರಿಯಾಗಿ ಯಾವ ರೈತ ಎರೆ ಭೂಮಿ ಇರತಕ್ಕವನು ತನ್ನ ಭೂಮಿಯೊಳಗೆ ಬದು ಹಾಕಲು ತೆಗೆದುಕೊಳ್ಳುವುದಕ್ಕೆ ತಕರಾರು ಇಲ್ಲವೆಂದು ಹೇಳುತ್ತಾನೋ ಅಂತಹ ಭೂಮಿಯೊಳಗೆ ಹೋಗಿರಿ ಎಂಬುದಾಗಿ ಸರ್ಕಾರದ ಆದೇಶವಿದೆ. ತಾವೆಲ್ಲರೂ ಇದರಲ್ಲಿ ಸಹಕಾರ ಮಾಡಬೇಕು. ತಮ್ಮ ಮುಖಾಂತರ ಮೈಸೂರು ರಾಜ್ಯದ ರೈತರೆಲ್ಲರಿಗೂ ಇದರ ಲಾಭ ಸಿಗಬೇಕು. ಈ ರಾಜ್ಯದಲ್ಲಿ 262 ಲಕ್ಷ ಎಕರೆ ಭೂಮಿ ಸಾಯಿಲ್ ಕನ್‌ಸರ್‌ವೇಷನ್‌ಗೆ ಒಳಪಡುತ್ತದೆ. ಅದರೊಳಗೆ ಬಂಡ್ ಮಾಡುವುದಕ್ಕೆ ಯೋಗ್ಯ ಭೂಮಿ, 127 ಲಕ್ಷ ಎಕರೆ ಭೂಮಿ ಇದೆ. ಇದರಲ್ಲಿ ಇಲ್ಲಿಯುವರೆಗೆ ತೆಗೆದುಕೊಂಡ ಭೂಮಿ ಕೇವಲ 27 ಲಕ್ಷ ಎಕರೆ. ಮೈಸೂರು ರಾಜ್ಯದಲ್ಲಿ ಇನ್ನೂ 100 ಲಕ್ಷ ಎಕರೆ ಭೂಮಿಯಲ್ಲಿ ನಾವು ಬದು ಹಾಕಬೇಕಾಗಿದೆ. ಅದಕ್ಕಾಗಿ ನಾವು ನಾವು ಕನಿಷ್ಠಪಕ್ಷ 10 ವರ್ಷಗಳ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಪ್ರತಿವರ್ಷ 10 ಸಾವಿರ ಎಕರೆಗಳನ್ನು ಈ ಸಾಯಿಲ್ ಕನ್‌ಸರ್‌ವೇಷನ್ನಿನಲ್ಲಿ ಅಳವಡಿಸಬೇಕೆಂಬುದು ನಮ್ಮ ಇಚ್ಛೆಯಾಗಿದೆ. ಇವತ್ತಿನ ಡಿಪಾರ್ಟ್‌ಮೆಂಟ್ ಪ್ಲಾನ್ ಪ್ರಕಾರ ಅದು ಇನ್ನೂ ಕಡಿಮೆಯಾಗಿದೆ. ಅದು ಇನ್ನೂ ಹೆಚ್ಚು ಸ್ಟೇಜಿಗೆ ಬಂದು ಕನಿಷ್ಠಪಕ್ಷ 10 ವರ್ಷಗಳಲ್ಲಿ ಎಲ್ಲಾ ಭೂಮಿಯನ್ನೂ ಬದು ಹಾಕಿ ಮುಗಿಸಬೇಕೆಂಬುದೇ ಇವತ್ತು ಸರ್ಕಾರದ ಉದ್ದೇಶ.

10-30 A.M.

ಇದು ಆಗಬೇಕು. ಆದರೆ ಅಧಿಕಾರಿಗಳು ಹೇಳುತ್ತಾರೆ ನಾವು ಹಣ ಕೊಡಬಹುದು, ಆದರೆ ನಮಗೆ ಬೇಕಾದ್ದು ಟೆಕ್ನಿಕಲ್ ಜನ ಬೇಕು, ಕೆಲಸಗಾರರು ಬೇಕು ಮತ್ತು ಅದಕ್ಕೆ ತಕ್ಕ ಮೆಷನರಿ ಬೇಕು ಇದಕ್ಕೆಲ್ಲಾ ಕಾಲಾವಕಾಶ ಬೇಕೆಂದು ಅವರು ಹೇಳುತ್ತಿದ್ದಾರೆ. ಅದಕ್ಕೆ ನಾನು ಹೇಳಿದ್ದೇನೆ ಆಕಾಲವೇನಿದ್ದರು ದಿನಗಟ್ಟಲೆ ಇರಬಹುದೇ ವಿನಾ ಅದಕ್ಕೂ ಹೆಚ್ಚು ತೆಗೆದು ಕೊಳ್ಳುವುಕ್ಕಾಗುವುದಿಲ್ಲ ಎಂದು. ಈ ವಿಚಾರದಲ್ಲಿ ಎಷ್ಟು ತೀವ್ರವಾಗಿ ಇದನ್ನು ಸಾಧಿಸಬಹುದೋ ಅಷ್ಟು ತೀವ್ರವಾಗಿ ಮಾಡಬೇಕೆಂಬ ಆಸೆ ಸರ್ಕಾರಕ್ಕಿದೆ. ಇದರ ಸಲುವಾಗಿ ಒಂದು ಸಮಗ್ರ ಯೋಜನೆಯನ್ನು ಹಾಕಿಕೊಂಡು ಇದನ್ನು ರಾಜ್ಯಾದ್ಯಂತವೂ 10 ವರ್ಷಗಳ ಅವಧಿಯಲ್ಲಿ ಮುಗಿಸಬೇಕೆಂಬ ಕಾಳಜಿ ಸರ್ಕಾರಕ್ಕಿದೆ. ಇದಕ್ಕೆ ಅಗತ್ಯವಾದ ಸಾಯಿಲ್ ಕನ್‌ಸರ್ವೇಷನ್ ಸೆಂಟರುಗಳಲ್ಲಿ ಕೆಲಸಮಾಡುವುದಕ್ಕೆ ಜನರನ್ನು

(ಶ್ರೀ ಕೆ. ಎಚ್. ಪಾಟೀಲ್)

ತಯಾರು ಮಾಡತಕ್ಕ ಟ್ರೈನಿಂಗ್ ಸೆಂಟರುಗಳನ್ನು ಸಾಕಷ್ಟು ತೆರೆದು ಅವುಗಳಲ್ಲಿ ಎರಡು ಪಟ್ಟು ವರ್ಷದಲ್ಲಿ ಟ್ರೈನೀಸುಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿರುವಂತೆ ವ್ಯವಸ್ಥೆ ಮಾಡಲಾಗುತ್ತದೆ. ಒಟ್ಟಿನಲ್ಲಿ ಈ ಸಾಯಿಲ್ ಕನ್‌ಸರ್ವೇಷನ್ ಕೆಲಸವನ್ನು ರಾಜ್ಯಾದ್ಯಂತವೂ ಒಂದು ಸಮರ್ಪಕವಾದಂಥ ರೀತಿಯಲ್ಲಿ ಮಾಡುತ್ತೇವೆಂಬ ಒಂದು ಆಶ್ವಾಸನೆಯನ್ನು ನಾನು ತಮಗೆ ಈ ಸಂದರ್ಭದಲ್ಲಿ ಕೊಡಬಯಸುತ್ತೇನೆ.

ಇನ್ನು ಗೊಬ್ಬರದ ವಿಚಾರ: ಇದರ ವಿತರಣೆ ರಾಜ್ಯದಲ್ಲಿ ಸರಿಯಾಗಿಲ್ಲ ಎಂದು ಅನೇಕ ಸದಸ್ಯರು ಆರೋಪಣೆ ಮಾಡಿದ್ದಾರೆ. ಈ ಆರೋಪಣೆಗಳು ಈ ಕಡೆಯುವರಿಂದಲೂ ಬಂದಿವೆ. ಆ ಕಡೆಯುವರಿಂದಲೂ ಬಂದಿವೆ. ಇನ್ನು ಕೆಲವರು ಉಗ್ರವಾಗಿಯೂ ಟೀಕೆ ಮಾಡಿದ್ದಾರೆ. ಇನ್ನು ಕೆಲವರು ಬಹುಶಃ ನಮ್ಮ ನಾಯಕರು ಇರಬಹುದು ಈ ಗೊಬ್ಬರದ ಧಾರಣೆ ಇನ್ನೂರು ಪಟ್ಟು ಏರಿದೆ ಎಂಬುದಾಗಿ ಹೇಳಿದರು. ಆದರೆ ಅಷ್ಟು ಏರಿಲ್ಲ. ಆದರೆ ಅದು ಸ್ವಲ್ಪ ಪ್ರಮಾಣದಲ್ಲಿ ಮಾತ್ರ ಏರಿದೆ. ಅವರೆ ಮೊದಲಿಗಿಂತ ಈಗ ಸ್ವಲ್ಪ ಜಾಸ್ತಿಯಾಗಿದೆ. ನನ್ನಲ್ಲಿ ರೈತರಿಗೆ ಯಾವ ದರದಲ್ಲಿ ಗೊಬ್ಬರವನ್ನು ಮಾರಾಟಮಾಡಲಾಗುತ್ತಿತ್ತು ಎನ್ನತಕ್ಕ ಬಗ್ಗೆ 1968 ರಿಂದಲೂ ಅಂಕಿ ಅಂಶಗಳಿವೆ. ಅದಕ್ಕೆ ಹಿಂದಿನದಿಲ್ಲ. 1968 ರಲ್ಲಿ ಸಲ್ಫೇಟ್ 502ರಂತೆ ಮಾರಾಟವಾಗುತ್ತಿತ್ತು, 1970ರಲ್ಲಿ ಅದು 529ಕ್ಕೆ ಏರಿತು. ಮತ್ತು ಈಗ 549 ಇದೆ. ಅಂದರೆ ಮೊದಲಿಗೂ ಈಗ್ಗೂ ಶೇ 8 ಜಾಸ್ತಿ ಆಗಿದೆ ಎನ್ನಬಹುದು. ಇನ್ನು ಯೂರಿಯಾ 1968 ರಲ್ಲಿ 768 ಇತ್ತು; ಅನಂತರ 1970ರಲ್ಲಿ 923 ಆಯಿತು; ಈಗ ಅದು 959 ಕ್ಕೇರಿದೆ. ಹಾಗೇ ಕ್ಯಾಲ್ಸಿಯಂ—1968 ರಲ್ಲಿ 525 ಇತ್ತು; ಅನಂತರ 1970-71ಕ್ಕೆ 571ಕ್ಕೇರಿತು. ಈಗ ಅದು 594 ಇದೆ. ಅಂದರೆ ಈಗ 19 ರೂಪಾಯಿ ಜಾಸ್ತಿ ಆಗಿದೆ. ಅದರಂತೆ ಅಮೋನಿಯಂ ಸಲ್ಫೇಟ್—ನೈಟ್ರೇಟ್: 1968ರಲ್ಲಿ 515 ಇತ್ತು; 1970 ರಲ್ಲಿ 625 ಕ್ಕೇರಿತು. ಈಗ ಅದು 626 ಇದೆ. ಅಂದರೆ ಒಂದು ರೂಪಾಯಿ ಜಾಸ್ತಿ ಆಯಿತು. ಅಂದರೆ ಇದರ ಟ್ರೆಂಡ್ ಹೆಚ್ಚುವುದರ ಕಡೆಗಿದೆಯೇ ವಿನಾ ತಗ್ಗುತ್ತಿಲ್ಲ. ಆದರೆ ಮೊದಲು ರೈತರಿಗೆ ಈ ಗೊಬ್ಬರದ ಬಗ್ಗೆ ಒಂದು ಹೆಚ್ಚಿನ ಪ್ರಚಾರ ಬೇಕಾಗಿತ್ತು. ಈ ದಿವಸ ಅಂಥ ಪ್ರಚಾರವೇನೂ ಬೇಕಾಗಿಲ್ಲ. ಜನರೆಲ್ಲರೂ ಮೆನ್ಯೂರ್ ಮೈಂಡೆಡ್ ಆಗಿದ್ದಾರೆ. ಆದರಿಂದ ಸ್ವಲ್ಪ ಗೊಬ್ಬರದ ಧಾರಣೆ ಜಾಸ್ತಿ ಆಗಿದೆ. ಆದರೆ ಇದರ ಧಾರಣೆಯನ್ನು ಕಡಮೆ ಮಾಡದ ವಿನಾ ರೈತರ ಕಲ್ಯಾಣವಾಗುವುದಿಲ್ಲ. ಈ ದಿವಸ ನಾವು ಈ ಗೊಬ್ಬರವನ್ನು ಪರದೇಶದಿಂದ ತರಿಸಬೇಕು ಮತ್ತು ಅವರು ಹೇಳಿದಂಥ ಧಾರಣೆಗೇ ನಾವು ಅದನ್ನು ಕೊಳ್ಳಬೇಕಾಗಿದೆ. ಆದರೆ, ನಾವು ಎಂದು ಈ ಗೊಬ್ಬರವನ್ನು ಪರದೇಶದಿಂದ ತರಿಸುವುದು ಬಂದಾಗುತ್ತದೋ ಮತ್ತು ಎಂದು ನಾವು ಈ ಗೊಬ್ಬರವನ್ನು ನಮ್ಮ ದೇಶದಲ್ಲೇ ಉತ್ಪನ್ನ ಮಾಡಬಲ್ಲೆವೋ ಆ ದಿವಸ ಇದರ ಧಾರಣೆ ಕಡಮೆ ಆಗಲಿಕ್ಕೆ ಸಾಧ್ಯ ಎನ್ನುವಂಥ ಮಾತನ್ನು ನಾನು ತಮಗೆ ತಿಳಿಸುತ್ತಿದ್ದೇನೆ. ಈಗಾಗಲೆ ನಮ್ಮ ಮಂಗಳೂರಲ್ಲಿ ಒಂದು ಗೊಬ್ಬರದ ಕಾರ್ಖಾನೆಯನ್ನು ಪ್ರಾರಂಭ ಮಾಡುವುದಕ್ಕೆ ಷುರುವು ಮಾಡಿದ್ದೇವೆ, ಅದು 1974ರ ವೇಳೆಗೆ ಸ್ವಲ್ಪ ಪ್ರೊಡಕ್ಷನ್ ಕೊಡಬಹುದೆಂಬ ನಿರೀಕ್ಷಣೆ ನಮಗಿದೆ. ಆದರೆ ಈ ದಿವಸ ನಮ್ಮಲ್ಲಿ ಈ ಗೊಬ್ಬರದ ಬಗ್ಗೆ ಯಾವ ರೈತರಿಗೂ ಚಳವಳಿಯನ್ನೇನೂ ಮಾಡಬೇಕಾಗಿಲ್ಲ. ಅವರೆಲ್ಲಾ ಈಗಾಗಲೆ ಮೆನ್ಯೂರ್ ಮೈಂಡೆಡ್ ಆಗಿದ್ದಾರೆ. ಗೊಬ್ಬರವನ್ನು ಸಕಾಲಕ್ಕೆ ಕೊಡದಿದ್ದರೆ ಅಧಿಕಾರಿಗಳ ಕೊರಳು ಹಿಡಿದು ಗೊಬ್ಬರ ಕೊಡಿ ಎನ್ನತಕ್ಕಂಥ ಸ್ಥಿತಿಯಲ್ಲಿದ್ದಾರೆ ಅವರು. ಆದರೆ ಈ ದಿವಸ ಸರ್ಕಾರದವರೇನಿದ್ದರೂ ಎಲ್ಲಿ ಎಂಥ ಗೊಬ್ಬರ ಹಾಕಬೇಕು, ಎಲ್ಲಿ ಎಂಥ ಬೆಳೆಯನ್ನು ಇಡಬೇಕು, ಯಾವಾಗ ಯಾವ ಬೆಳೆಯನ್ನು ಇಡಬೇಕು, ಯಾವ ಬೆಳೆಗೆ ಏನು ಗೊಬ್ಬರ ಹಾಕಬೇಕು ಎಂಬ ವಿಚಾರದಲ್ಲಿ ಚಳವಳಿಯನ್ನು ಮಾಡಿದರೆ ಸಾಕಾಗಿದೆ. ಆದ್ದರಿಂದ ಈಗ ನಮ್ಮ ಪ್ಲಾನ್ ಆಫ್ ಆಕ್ಷನ್ ಈ ವ್ಯವಸಾಯದ ಬಗ್ಗೆ ಬದಲಾವಣೆಯಾಗಬೇಕಾಗಿದೆ. ಈ ದಿವಸ ಅಪ್ಪ ಏನು ಬೆಳೆಯನ್ನು ಬೆಳೆಯುತ್ತಿದ್ದ ಅಷ್ಟೇ ಪ್ರದೇಶ ವ್ಯವಸಾಯಕ್ಕೆ ಇರುವುದು. ಆದರೆ ಅದರಲ್ಲಿ ಬರತಕ್ಕ ಉತ್ಪತ್ತಿಯನ್ನು ತಿನ್ನತಕ್ಕ ಜನರಲ್ಲಿ ಆಗ್ಗೂ ಈಗ್ಗೂ ಬದಲಾವಣೆಯಾಗಿದೆ. ಈದಿನ ಆ ಭೂಮಿ ಅಷ್ಟೇ ಇದ್ದರೂ ಅದರಲ್ಲಿ ಬೆಳೆ ಹೆಚ್ಚು ತೆಗೆಯದಿದ್ದರೆ ಆ ಕುಟುಂಬದಲ್ಲಿ ಇಂದು ಆ ಅಪ್ಪ, ಮಗ, ಮೊಮ್ಮಗ ಇಷ್ಟೆಲ್ಲಾ ಜನರು ಹೊಟ್ಟೆ ಹೊರೆಯಬೇಕಾಗಿದ್ದರೆ ಅದರಲ್ಲಿ ಬರತಕ್ಕ ಉತ್ಪತ್ತಿ ಏನಿತ್ತು ಅದನ್ನು ಮೊದಲಿಗಿಂತ ಉತ್ತಮ ಪಡೆಯಬೇಕು. ಆದ್ದರಿಂದ ಉತ್ತಮ ವ್ಯವಸಾಯ ನಡೆಯಬೇಕು. ಉತ್ತಮ ಬೀಜಗಳು ಬೇಕು, ಉತ್ತಮ ಗೊಬ್ಬರ ಬೇಕು. ಇಷ್ಟೆಲ್ಲಾ ಮಾಡಿದರೇ ಆ ಒಕ್ಕಲುತನ ಅಭಿವೃದ್ಧಿಗೆ ಬರುವುದು. ಇಲ್ಲದಿದ್ದರೆ ಅದು ಸಾಧ್ಯವಿಲ್ಲ ಎಂದು ಕೈ ಎತ್ತಿ ಹೇಳಬಹುದು. ಆದ್ದರಿಂದ ಈ ಒಕ್ಕಲುತನದ ವಿಚಾರದಲ್ಲಿ ಸರ್ಕಾರದವರೇನಾದರೂ ಅಶ್ರದ್ಧೆ ಮಾಡಿದರೆ ಮಾನ್ಯ ವಿರೋಧಪಕ್ಷದ ಸದಸ್ಯರು ಆಡಳಿತಪಕ್ಷವನ್ನು ಕಟುವಾಗಿ ಟೀಕಿಸಿ ನಮ್ಮನ್ನು ದಾರಿಗೆ ತರಬೇಕಾದ್ದು ಅವರ ಆದ್ಯ

ಕರ್ತವ್ಯ ಎಂದು ತಿಳಿಸ ಬಯಸುತ್ತೇನೆ. ನಾವು ಈ ದಿವಸ ಈ ಟೀಕೆಗಳನ್ನೆಲ್ಲಾ ಒಂದು ಗಣನೀಯ ವಾದ ರೀತಿಯಲ್ಲಿ ಕಡಮೆ ಮಾಡುವುದಕ್ಕೆ ಅವಕಾಶವಿತ್ತು ಎಂದು ಕಾಣುತ್ತದೆ. ಹಿಂದೆ ಇದೇ ಸಭೆ ಯಲ್ಲಿ ಡಾ: ಆರ್. ನಾಗನಗೌಡ ಅವರು ಹೇಳುತ್ತಿದ್ದ ಆ ಅಮೋನಿಯಂ ನೈಟ್ರೋಜನ್ ಗ್ಯಾಸನ್ನು ನಾವು ಈ ದಿವಸ ತಯಾರು ಮಾಡುತ್ತಿದ್ದ ಪಕ್ಷಕ್ಕೆ, ಅವರು ಅ ದಿವಸವೇ ಹೇಳುತ್ತಿದ್ದರೂ ಅದನ್ನು ರೈತರಿಗೆ ಏಕೆ ಪುರವಟೆ ಮಾಡಬಾರದು ಎಂದು, ಅದನ್ನು ನಾವು ಗಮನಿಸಿದ್ದರೆ ಈ ದಿವಸ ಈ ಟೀಕೆ ಗಳಿಗೆಲ್ಲ ಅವಕಾಶ ಇರುತ್ತಿರಲಿಲ್ಲ. ಅಮೋನಿಯ in the form of Water ತಯಾರು ಮಾಡಿದ್ದರೆ ಅದನ್ನು ಎಕರೆ ಒಂದಕ್ಕೆ 4 ರೂಪಾಯಿನ ದರದಲ್ಲಿ ಒದಗಿಸಬಹುದಾಗಿತ್ತೆಂದು ಅವರು ಹೇಳು ತ್ತಿದ್ದರು. ಅಗ ನಾವು ಅದಕ್ಕೆ ಅಷ್ಟು ಹೆಚ್ಚಿನ ಗಮನ ಕೊಡಲಿಲ್ಲ. ಆದ್ದರಿಂದಲೇ ಇಂದು ಗೊಬ್ಬರ ಬೆಲೆ ಎಲ್ಲೆ ಮೀರಿ ಹೋಗಿದೆ. ಈ ದಿವಸ ಇದರ ಬೆಲೆಯನ್ನು ಕಡಿಮೆ ಮಾಡುವುದಕ್ಕೆ ಒಂದು ತಜ್ಞರ ಸಮಿತಿಯನ್ನು ನೇಮಕಮಾಡಿ ಅವರ ಸಲಹೆಯನ್ನೂ ಮತ್ತು ಪರರಾಷ್ಟ್ರದ ತಜ್ಞರ ಸಲಹೆ ಗಳನ್ನು ಪಡೆದು ನಮ್ಮಲ್ಲಿ ಇಷ್ಟು ಯಥೇಷ್ಟವಾಗಿ ನೀರು ಗಾಳಿ ಮತ್ತು ವಿದ್ಯುಚ್ಛಕ್ತಿ ಇರುವುದರಿಂದ ಇಲ್ಲೇ ಆ ಅಮೋನಿಯಂ ತಯಾರಿಸುವುದಕ್ಕೆ ಸಾಧ್ಯಇದೆಯೇ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡುತ್ತಿದ್ದೇವೆ. ನಾನು ಈ ವಿಚಾರವನ್ನು ಕೇಂದ್ರ ಸರ್ಕಾರದವರ ಗಮನಕ್ಕೂ ಕೂಡ ತಂದಿದ್ದೇನೆ. ಅವರು ಈ ವಿಚಾರದಲ್ಲಿ ಸಾಕಷ್ಟು ಪ್ರಯತ್ನ ನಡೆಸುತ್ತಿದ್ದಾರೆಂದು ನಾನು ಆಶಿಸು ತ್ತೇನೆ. ಅದನ್ನು ಕಾರ್ಯರೂಪಕ್ಕೆ ತಂದರೆ ಇಲ್ಲಿ ಗೊಬ್ಬರವನ್ನು ಸೋವಿ ರೇಟಿನಲ್ಲಿ ಪುರೋಟೆ ಮಾಡುವುದಕ್ಕೆ ಸಾಧ್ಯವಾಗಬಹುದೆಂದು ನನ್ನ ಆಸೆ. ಇನ್ನು ಈ ಗೊಬ್ಬರದ ವಿಚಾರದಲ್ಲಿ ಶ್ರೀ ಕಾಗೋಡು ತಿಮ್ಮಪ್ಪನವರು ಕೆಲವು ಬಹಳ ಯೋಗ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ವಂದನೆಗಳು. ನಮ್ಮ ರಾಜ್ಯದಲ್ಲಿ ಗೊಬ್ಬರದ ಪುರಾವಟೆ ವಿಚಾರದಲ್ಲಿ ಆತಂಕ ಪಡಿಸಿದ ಅಧಿಕಾರಿಗಳ ಬಗ್ಗೆ ಸರ್ಕಾರದವರು ಏಕೆ ಅವರಿಗೆ ಸೂಕ್ತ ಶಿಕ್ಷೆ ವಿಸಧಿಲಲ್ಲ ಎಂಬ ಅಂಶ ವನ್ನು ಎತ್ತಿ, ಈ ಕ್ರಮವನ್ನು ಕೈಗೊಳ್ಳದಿದ್ದ ಕಾರಣ ಅವರು ಸರ್ಕಾರವನ್ನೂ ಕೂಡ ಶಂಕಿಸ ಬೇಕಾದ ಪ್ರಸಂಗ ಉಂಟಾಗಿದೆ ಎಂದು ಹೇಳಿದ್ದಾರೆ. ನಾನು ಈ ವಿಚಾರದಲ್ಲಿ ಸಾಕಷ್ಟು ಪ್ರಯತ್ನ ಮಾಡಿ ನೋಡಿದೆ. ಆದರೆ ಅಲ್ಲಿ ಶಿಕ್ಷೆಗೆ ಅರ್ಹರಾದವರು ಯಾರೂ ಇಲ್ಲ. ಅವರನ್ನು ಶಿಕ್ಷೆಗೊಳ ಪಡಿಸುವಂಥ ಶಕ್ತಿ ನನಗಿಲ್ಲ. ಕಾರಣ ಅವರು ಸಕಾಲಕ್ಕೆ ನಮ್ಮ ರಾಜ್ಯಕ್ಕೆ ಎಷ್ಟು ಗೊಬ್ಬರ ಬೇಕು ಎಂಬುದನ್ನು ಕೂಲಂಕ್ಷವಾಗಿ ವಿಚಾರಮಾಡಿದ್ದಾರೆ. ಆದರೆ ಆ ದಿವಸ ನಮ್ಮ ಮಾರ್ಕೆಟ್ಟಿನಲ್ಲಿ ಸಾಕಷ್ಟು ಸ್ಟಾಕಿದ್ದು ಅದು ಮಾರಾಟವಾಗದ ಹಾಗೆ ಉಳಿದಿದ್ದ ಕಾರಣ ಅದನ್ನು ಖರ್ಚುಮಾಡದೆ ಮತ್ತೆ ಹೊಸದಾಗಿ ಗೊಬ್ಬರ ತರಿಸಿದರೆ ಸರ್ಕಾರಕ್ಕೆ ಆದರಿಂದ ದೊಡ್ಡ ಹಾನಿಯಾಗುತ್ತದೆಂದು ಹೇಳಿದ್ದರಿಂದ ನಾನು ಅವರ ಬಗ್ಗೆ ಕ್ರಮ ಕೈಗೊಳ್ಳಲು ಅಸಹಾಯಕನಾಗಿದ್ದೇನೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರಾರೂ ತಮ್ಮ ಮನಸ್ಸಿನಲ್ಲಿ ಯಾವ ತರಹೆ ಕಲ್ಮಷವನ್ನೂ ಇಟ್ಟುಕೊಳ್ಳಬಾರದೆಂದು ಕೇಳಿಕೊಳ್ಳುತ್ತೇನೆ. ಆ ಒಂದು ದೃಷ್ಟಿಯಿಂದ ಅಧಿಕಾರಿಗಳು ಆ ದಿವಸ ಹೊಸದಾಗಿ ಗೊಬ್ಬರಕ್ಕೆ ಆರ್ಡರನ್ನು ಕೊಡಲಿಲ್ಲ. ಮತ್ತು ಈ ವಿಚಾರದಲ್ಲಿ ಸರ್ಕಾರವೇನೂ ಮರೆತು ಮಗಲಿಲ್ಲ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳೆಲ್ಲರೂ ಆ ಮದ್ರಾಸಿನಲ್ಲಿ ಜೋನಲ್ ಕೌನ್ಸಿಲ್ ಮೀಟಿಂಗ್ ನಡೆದಕಾಲಕ್ಕೆ ನಮ್ಮ ರಾಜ್ಯಕ್ಕೆಷ್ಟು ಗೊಬ್ಬರ ಬೇಕಾಗುತ್ತದೆ ಎಂಬುದನ್ನು ಆ ದಿವಸವೇ ಅವರ ನಜರಿಗೆ ತಂದಿದ್ದಾರೆ. ಆ ಕಾಲಕ್ಕೆ ಅಲ್ಲಿನ ಅಧಿಕಾರಿಗಳು ಈಗಾಗಲೇ ತಮ್ಮ ಇಂಡೆಂಟ್ ಕೈ ಬಿಟ್ಟು ಹೋಗಿದೆ, ಆದಾಗ್ಗೂ ಬರತಕ್ಕ ಗೊಬ್ಬರದಲ್ಲೇ ಇಡೀ ರಾಜ್ಯಕ್ಕೆಲ್ಲಾ ವಿನಿಯೋಗಿಸಬೇಕಾಗಿದೆ, ಆ ಇಂಪೋರ್ಟಿನಲ್ಲಿ ಸಾಧ್ಯವಾದ ಮಟ್ಟಿಗೂ ನಮಗೆ ಎಷ್ಟು ಅಗತ್ಯವೋ ಅಷ್ಟನ್ನು ಕೊಡುವುದಕ್ಕಾಗದಿದ್ದರೂ ಒಂದು ಸಮಾಧಾನಕರ ವಾಗುವಷ್ಟು ಮಟ್ಟದಲ್ಲಿ ಕೊಡುವುದಾಗಿ ಅವರಿಂದ ಒಂದು ಆಶ್ವಾಸನ ಬಂದಿದೆ. ಅದಕ್ಕಾಗಿ ನಾನು ಕೇಂದ್ರ ಸರಕಾರದವರನ್ನು ವಂದಿಸುತ್ತಿದ್ದೇನೆ. ಇದಾದ ನಂತರ ಈಗ ಕೊಟ್ಟಿರುವ ಆಶ್ವಾಸನೆ ಸಾಲದು ಮತ್ತೇ ಸರಿಯಾದ ಆಶ್ವಾಸನೆ ಕೊಡಬೇಕು ಎಂದು ಹೇಳಿದ್ದೇವೆ. ಅವರು ಹೆಚ್ಚು ಕೊಡಲು ಪ್ರಯತ್ನಮಾಡಿದ್ದಾರೆ ಮತ್ತು ಆಶ್ವಾಸನೆ ಸಹ ಕೊಟ್ಟಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಜುಲೈನಿಂದ ಯಾವುದೇ ರೀತಿಯಲ್ಲಿ ಗೊಬ್ಬರದ ಕೊರತೆ ಬೀಳುವುದಿಲ್ಲ. ಜುಲೈ ಕಳೆಯುವವರೆಗೆ ಕೊರತೆಯಾದರೂ ಅದನ್ನು ನಿವಾರಣೆ ಮಾಡಬಹುದು. ಜನರಿಗೆ ಅಮೋನಿಯ ಮತ್ತು ಯೂರಿಯ ಸರಬರಾಯಿ ಮಾಡಬೇಕೆಂದು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಎನ್ ಪಿ ಕೆ ಪ್ರಮಾಣವನ್ನು ಯಾವರೀತಿ ಹಾಕಬೇಕು ಎಂಬ ವಿಚಾರದಲ್ಲಿ ವ್ಯವಸಾಯ ಇಲಾಖೆ ಡೈರೆಕ್ಟರು ಮತ್ತು ತಜ್ಞರ ಸಲಹೆ ಪ್ರಕಾರ ಮಾಡಿದರೆ ಅನುಕೂಲವಾಗುವುದು. ಉಳಿದ ಗೊಬ್ಬರಗಳನ್ನು ಸಹ ಕಾರ್ಖಾನೆಗಳಿಂದ ತಯಾರಿಸಿ ಹಂಚುವುದರಿಂದ ಕೊರತೆ ನೀಗಬಹುದು. ಅದುದರಿಂದ ಮಾನ್ಯ ಸದಸ್ಯರು ಇಂದು ಸಂಶಯ ಪಡಬೇಕಾದ ಕಾರಣವಿಲ್ಲ. ಆದರೆ ಗೊಬ್ಬರದ ಹಂಚಿಕೆ ಯಲ್ಲಿ ಮಹಾದೋಷವಿದೆ, ನಿಜ. ಒಂದೇ ದಿವಸದಲ್ಲಿ [illegible]

(ಶ್ರೀ ಕೆ. ಹೆಚ್. ಪಾಟೀಲ್)

ಗೊಬ್ಬರದ ವಿತರಣೆ ಮೂರು ರೀತಿಯಲ್ಲಾಗುತ್ತಿದೆ. ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ ಮೂಲಕ, ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮೂಲಕ ಮತ್ತು ಖಾಸಗಿ ಜನರ ಮೂಲಕ ಹೀಗೆ ಮೂರು ಏಜೆನ್ಸಿಗಳಿಂದ ಹಂಚಲಾಗುತ್ತಿದೆ. ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಗೊಬ್ಬರವನ್ನು ಹಂಚುವಾಗ ಡೈರೆಕ್ಟಾಗಿ ಅಥವ ಖಾಸಗಿಯವರ ಮೂಲಕ ಕೊಡುವ ವ್ಯವಸ್ಥೆ ಇದೆ. ಅದರ ಪರಿಣಾಮವಾಗಿ ಸೇಕಡ 50 ಭಾಗ ಸೊಸೈಟಿ ಮೂಲಕ ಉಳಿದ 50 ಭಾಗ ಖಾಸಗಿಯವರ ಮೂಲಕ ಹಂಚುವುದು. ಖಾಸಗಿಯವರು ಸರಿಯಾಗಿ ಹಂಚದಿರುವಾಗ ಅವರ ಲೈಸನ್ಸ್ ರದ್ದುಮಾಡಲು ಅವಕಾಶವಿತ್ತು, ಅದನ್ನು ಮಾಡಿದೆ. ಇದರ ಮೇಲೆ ನಿಯಂತ್ರಣಕ್ಕೆ ಸಾಕಷ್ಟು ಅವಕಾಶವಿಲ್ಲದಿದ್ದುದರಿಂದ ರೈತರಿಗೆ ತೊಂದರೆ ಆಗಿದೆ. ಇದಕ್ಕಾಗಿ ಸಭೆ ಕರೆದು ಖಾಸಗಿ ಜನರ ಮೂಲಕ ಫರ್ಟಿಲೈಜರ್ಸ್‌ನ್ನು ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಹಂಚುವುದನ್ನು ಸಂಪೂರ್ಣವಾಗಿ ನಿಲ್ಲಿಸಬೇಕು ಎಂದು ತಿಳಿಸಲಾಗಿದೆ. ಹಾಗೆ ಮಾಡಿ ಸೇಕಡ 50 ಭಾಗ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ ಮೂಲಕ ಮತ್ತು ಸೇಕಡ 50 ಭಾಗ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮೂಲಕ ಹಂಚಬೇಕು, ಹಂಚಿ ಕೊರತೆ ನೀಗಿಸಬೇಕು ಎಂಬ ಆಲೋಚನೆ ಮಾಡಿದೆ. ಮಾರ್ಕೆಟಿಂಗ್ ಸೊಸೈಟಿ ವಿತರಣೆ ಅಸಮಂಜಸ ವಾಗಿರುವ ಕಡೆ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮುಂದೆ ಬಂದು ರೈತರಿಗೆ ಅನುಕೂಲಮಾಡಬೇಕೆಂದಿದ್ದಾರೆ. ಅವರೆಡಕ್ಕೂ ಹೊಂದಾಣಿಕೆಯಾದರೆ ಅನುಕೂಲವಾಗುವುದು. ವಿತರಣೆಯಲ್ಲಿ ಈಗಾಗಲೆ ಪ್ರಗತಿಯಾಗಿದೆ, ಒಂದೇ ದಿವಸದಲ್ಲಿ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಕೆಲವು ದಿವಸ ಸಮಾಧಾನ ಪಟ್ಟುಕೊಳ್ಳಬೇಕು. ನಾನು ಒಂದು ನಿಮಿಷವೂ ಸುಮ್ಮನೆ ಕೂಡದೆ ಗೊಬ್ಬರದ ವಿತರಣೆಯ ವಿಚಾರದಲ್ಲಿ ಸೂಕ್ತ ಕ್ರಮ ಕೈಕೊಳ್ಳಲು ಪ್ರಯತ್ನ ಮಾಡುತ್ತಿದ್ದೇನೆ. ತೊಂದರೆಯಾಗಬಾರದು ಎಂಬುದೇ ಮುಖ್ಯ ಉದ್ದೇಶ. ಈಗ ಪರ್ಮಿಟ್ ವ್ಯವಸ್ಥೆ ಪ್ರಾರಂಭಿಸಲಾಗಿದೆ. ಇದು ಹೊಸ ಪದ್ಧತಿ ಎಂದು ಹೇಳಬಹುದು. ಪರ್ಮಿಟ್ ಪದ್ಧತಿಯನ್ನು ಜಾರಿಗೆ ತಂದಿರುವುದರ ಉದ್ದೇಶ ಗೊಬ್ಬರದ ವಿತರಣೆಯ ಸಂಬಂಧದಲ್ಲಿ ಯಾವುದೇ ರೀತಿಯಲ್ಲಿ ದುರುಪಯೋಗವಾಗಬಾರದು ಎಂಬುದು. ಒಂದರಿಂದ ಐದು ಚೀಲ ಬೇಕಾದರೆ ಬಿಡಿಓ ಮೂಲಕ, ಅದರಮೇಲೆ ತಾಲ್ಲೂಕು ಅಗ್ರಿಕಲ್ಚರಲ್ ಅಧಿಕಾರಿ ಮೂಲಕ, ಅದರಮೇಲೆ ಡೆಪ್ಯುಟಿ ಡೈರೆಕ್ಟರ್ ಮೂಲಕ, ಪಡೆಯಬಹುದು. ಕೆಲವು ಸಂದರ್ಭಗಳಲ್ಲಿ ಅದನ್ನು ಮೀರಿ ಪರ್ಮಿಟ್ ಪಡೆದು ಬ್ಲಾಕ್ ಮಾರ್ಕೆಟ್ ಮಾಡಿರುವುದು ಸಹ ಇದೆ. ಇದರ ಸಲುವಾಗಿ ನಾನು ನಿವೇದನೆ ಮಾಡುವುದು ಸಹಕಾರ ಕೊಡಬೇಕು, ಎಲ್ಲ ಅವ್ಯವಹಾರಗಳನ್ನೂ ತಡೆಗಟ್ಟಲು ಕಾರ್ಯಕ್ರಮ ತೆಗೆದುಕೊಳ್ಳುತ್ತಿದೆ, ಸರಕಾರ ಸಾಧ್ಯವಾದ ಪ್ರಯತ್ನ ಮಾಡಿ ಬೇಕಾದ ಗೊಬ್ಬರ ಕೊಡಲು ಪ್ರಯತ್ನಮಾಡುವುದು. ಒಕ್ಕಲತನದ ಖಾತೆ ಅಧಿಕಾರಿಗಳಿಗೆ ಈಗ ಅತ್ಯಂತ ಕಠಿಣವಾಗಿ ಆಜ್ಞೆ ಮಾಡಲಾಗಿದೆ. ಗೊಬ್ಬರದ ವಿತರಣೆಯಲ್ಲಿ ಎಳ್ಳಷ್ಟೂ ಅಪ್ರಾಮಾಣಿಕತೆಗೆ ಅವಕಾಶ ಕೊಡಬಾರದು ಎಂದು ತಿಳಿಸಲಾಗಿದೆ. ತಪ್ಪು ಮಾಡಿದ ವರ್ತಕರಿಗೆ ಶಿಕ್ಷೆ ಮಾಡಬೇಕು ಎಂದು ತಿಳಿಸಿದೆ. ಇನ್ನು ಅಡಲ್ಟರೇಷನ್ ವಿಷಯವಿದೆ. ಅಡಲ್ಟರೇಷನ್ ಗೊಬ್ಬರಕ್ಕೆ ಸಂಬಂಧಪಟ್ಟಂತೆ ಬಹಳವಾಗಿ ಆಗುತ್ತಿದೆ ಎಂಬ ದೂರಿದೆ. ಈ ಅಪಾದನೆಯಲ್ಲಿ ಬಹಳಮಟ್ಟಿಗೆ ನಿಜಾಂಶವಿದೆ. ಬಹಳ ಮಟ್ಟಿಗೆ ಈ ವಿಚಾರದಲ್ಲಿ ಎಚ್ಚರಿಕೆ ವಹಿಸಲಾಗಿದೆ. ಕೋಲಾರದಲ್ಲಿ ನಡೆದಿರುವ ವಿಚಾರ ಪತ್ರಿಕೆಯಲ್ಲಿ ಬಂದಿದೆ ಎಂದು ಹೇಳುತ್ತಾರೆ. ಪತ್ರಿಕೆಯಲ್ಲಿ ಬರುವುದೆಲ್ಲಾ ನಿಜವಲ್ಲ, ಇಲ್ಲದಿರುವುದನ್ನೂ ಕೆಲವು ವೇಳೆ ಪ್ರಕಟಮಾಡುವರು. ಇದನ್ನು ಹೇಳುವಾಗ ಪತ್ರಿಕೆಗಳ ವಿಷಯದಲ್ಲಿ ಅನುಭವವಿರುವ ನಾನು ಅಭಿಮಾನವಿರುವ ನಾನು ಬಹಳ ಜಾಗ್ರತೆಯಿಂದ ಹೇಳುತ್ತಿದ್ದೇನೆ. ಕೆಲವು ಪತ್ರಿಕೆಗಳು ಉತ್ತಮವಾದ ಕೆಲಸ ಮಾಡುತ್ತಿವೆ. ಅವು ಬಹಳ ಹೆಚ್ಚಿನ ಕಾರ್ಯ ಮಾಡುತ್ತಿವೆ.

Sri C. M. ARUMUGAM (K. G. F.).—I request the Hon'ble Minister to yield for a minute. The Deputy Director of Agriculture, Kolar, did not say that what appeared in the Press is incorrect. Has the Hon'ble Minister called for the report from the Deputy Director of Agriculture? For the information of the Hon'ble Minister I might say that in a meeting of the District Development Council, the Deputy Director of Agriculture stated that there was adulteration in the fertilizers, and he also stated that it had happened at Mangalore.

Sri K. H. PATIL.—Have I said 'no'? Please allow me to have my say.

SrI C. M. ARUMUGAM.—The Hon'ble Minister was commenting about the Press, about the incorrectness of the report in the Press. Did the Hon'ble Minister call for a report from the Deputy Director of Agriculture and whether he has that information before him ?

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರು ನನ್ನನ್ನು ತಿದ್ದುವ ರೀತಿಯಿಂದ ಮಾತನಾಡಿರಬೇಕು. ಡೆಪ್ಯುಟಿ ಡೈರೆಕ್ಟರ ಅಭಿಪ್ರಾಯ ತೆಗೆದುಕೊಳ್ಳದೆ ಮಂತ್ರಿಗಳು ಮಾತನಾಡಿ ಪೇಚಿನಲ್ಲಿ ಬೀಳುವರು ಎಂಬ ಅಭಿಪ್ರಾಯವಿರಬಹುದು. ಬರೀ ಡೆಪ್ಯುಟಿ ಡೈರೆಕ್ಟರ ಅಭಿಪ್ರಾಯ ಮಾತ್ರವಲ್ಲ, ಡೈರೆಕ್ಟರು, ಸೆಕ್ರೆಟರಿ ಮತ್ತು ಸಂಬಂಧಪಟ್ಟ ಟೆಕ್ನಿಕಲ್ ಇಲಾಖೆಯವರ ಅಭಿಪ್ರಾಯವನ್ನು ಸಹ ತೆಗೆದುಕೊಳ್ಳಲಾಗಿದೆ. ಈ ವಿಷಯದಲ್ಲಿ ಲ್ಯಾಬೊರೇಟರಿ ಟೆಸ್ಟ್‌ಗೆ ಸಹ ಪ್ರಯತ್ನ ಮಾಡಿದೆ. ಹಾಗೆ ಮಾಡಿ ವರದಿ ತರಿಸಿ ನೋಡಲಾಗಿದೆ, ಎಲ್ಲಾ ಸರಿಯಾಗಿದೆಯೆಂದು ಗೊತ್ತಾಗಿದೆ. ಹೈಲೈಟ್ ಮಾಡುವಾಗ ಪ್ರಪೋರ್ಷನ್ ಸರಿಯಾಗಿರಬೇಕು, ಅದಿಲ್ಲದಿದ್ದರೆ ಸರಿ ಯಾಗಿರುವುದಿಲ್ಲ. ನೋಡಿದ ತಕ್ಷಣ ಆರ್ಡರ್ ಮಾಡಿದೆ. ಎನ್‌ಕ್ವೈರಿ ಮಾಡಬೇಕು, ಸಾಯಿಲ್ ಟೆಸ್ಟಿಂಗ್ ಲ್ಯಾಬರೇಟರಿ ರಿಪೋರ್ಟ್ ಮಾಡಬೇಕು ಸಾಧ್ಯವಾದರೆ ಲೈಸನ್ಸ್ ಕ್ಯಾನ್ಸಲ್ ಮಾಡಬೇಕು ಎಂದು ಹೇಳಿದೆ. ಅಭಿಪ್ರಾಯ ತೆಗೆದುಕೊಳ್ಳದೆ ದುಡುಕಿದೆ. ಸಾಯಿಲ್ ಟೆಸ್ಟ್ ಲ್ಯಾಬರೋಟರಿ ರಿಪೋರ್ಟ್ ಬಂದ ತಕ್ಷಣ ಹೆಚ್ಚಿಗೆ ಸಮಾಧಾನವಾಯಿತು. ಇದನ್ನು ಹೇಳುವಾಗ ಅಡಲ್ಟ್ರೇಷನ್ ಇಲ್ಲವೇ ಇಲ್ಲ ಎಂದಲ್ಲ. ಅಡಲ್ಟ್ರೇಷನ್ ಬಹಳ ಕಡೆ ಆಗುತ್ತದೆ. ನನಗೆ ನಿನ್ನೆ ಮೊನ್ನೆ ಒಬ್ಬ ಜವಾಬ್ದಾರಿಯುತನಾದ ನೌಕರನಿಂದ ವರದಿ ಬಂದಿದೆ. ಫುಡ್ ಕಾರ್ಪೊರೇಷನ್ ಇಟ್ಟಿರುವ ಚೀಲದಲ್ಲಿ ಅಡಲ್ಟ್ರೇಷನ್ ಆಗಿದೆ. ಈ ಬಗ್ಗೆ ತನಿಖೆ ನಡೆಯುತ್ತಾ ಇದೆ. ಮತ್ತು ಯೋಗ್ಯ ಕ್ರಮ ಕೈಗೊಳ್ಳುತ್ತೇವೆ. ಇನ್ನು ಒಂದು ಮಾತು ಹೇಳಬಲ್ಲೆ. ಅಡಲ್ಟ್ರೇಷನ್ ಯಾರಿಂದಲೇ ನಡೆಯಲಿ, ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್‌ನಿಂದಲೇ ನಡೆಯಲಿ, ಕೇಂದ್ರ ಸರ್ಕಾರದ ಖಾತೆಗಳಿಂದಲೇ ನಡೆಯಲಿ, ಅಥವಾ ಖಾಸಗಿ ಜನರಿಂದಲೇ ನಡೆಯಲಿ ಅಥವಾ ಸಹಕಾರ ಸಂಘಗಳಿಂದಲೇ ನಡೆಯಲಿ ಎಲ್ಲಿ ಅಡಲ್ಟ್ರೇಷನ್ ಆಗಿರುವುದನ್ನು ನೋಡಿದರೂ ಸಹ ಅಡಲ್ಟ್ರೇಷನ್ ಸಲುವಾಗಿ ಟೆಸ್ಟ್ ಮಾಡಿ ಕಟ್ಟಳೆ ಹಾಕುವ ಅಧಿಕಾರವನ್ನು ಡೈರೆಕ್ಟರ್ ಆಫ್ ಅಗ್ರಿಕಲ್ಚರ್‌ಗೆ ಕೊಟ್ಟಿದ್ದೇವೆ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಯಾರ ಮುಲಾಜನ್ನೂ ನೋಡದೆ ಟೆಸ್ಟ್ ಮಾಡಿ, ತಪ್ಪಿತಸ್ಥನ ಮೇಲೆ ಕಟ್ಟಳೆ ಹಾಕಬೇಕು ಎಂದು ಹೇಳಿದ್ದೇನೆ. ಅಧಿಕಾರಿಗಳು ಯಾರೇ ಇರಲಿ, ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರು ಸಿಕ್ಕಿದರೂ ಸಹಿತ ಕೂಡಲೇ ಕಟ್ಟಳೆ ಹಾಕಬೇಕು ಎಂದು ನನ್ನ ಅಭಿಪ್ರಾಯ. ಅಡಲ್ಟ್ರೇಷನ್ ಮಾಡುವುದನ್ನು ಕಡಿಮೆ ಮಾಡಿ ಎಂದು ಹೇಳಿದರೆ ಅದು ನನ್ನ ಕೈಯಲ್ಲಿ ಇಲ್ಲ. ಎಲ್ಲಿಯವರೆಗೆ ಸೊಸೈಟಿಯಲ್ಲಿ ಕೆಟ್ಟ ಪ್ರವೃತ್ತಿ ಮಾಡುವ ದುಷ್ಟ ಜನ ಇರುತ್ತಾರೋ ಅಲ್ಲಿಯವರೆಗೆ ಈ ಅಡಲ್ಟ್ರೇಷನ್ ನಡೆಯುತ್ತದೆ. ಅಂಥಾವರಿಗೆ ಉಗ್ರವಾದ ಶಾಸನ ಮಾಡಿ ಬಂದೋಬಸ್ತು ಮಾಡಬೇಕು. ಅಧಿಕಾರಿಗಳು ಚುರುಕಾಗಿ ಆಗಬೇಕು. ಅಧಿಕಾರಿಗಳು ನಿಷ್ಪಕ್ಷಪಾತವಾಗಿ ಪ್ರಾಮಾಣಿಕರಾಗಿ ಸೇವೆಯನ್ನು ಮಾಡುವ ಅವಕಾಶ ಅವರಿಗೆ ಈಗ ದೊರಕಿದೆ. ಅದಕ್ಕಾಗಿ ಅವರು ಪ್ರಯತ್ನ ಮಾಡಬೇಕು. ಹಿಂದೆ ಯಾರನ್ನಾದರೂ ಅವರನ್ನು ಮೈಮೇಲೆ ಹಾಕಿಕೊಳ್ಳುವ ಮಂತ್ರಿಗಳು ಇರುತ್ತಿದ್ದರು. ಈಗ ಆ ತರಹ ಪರಿಸ್ಥಿತಿ ಇಲ್ಲ. ಮುಲಾಜು ನೋಡದೆ ಅವರ ಮೇಲೆ ಕ್ರಮ ತೆಗೆದುಕೊಂಡು ಆಮೇಲೆ ನನ್ನ ಕಡೆಗೆ ಕಳುಹಿಸಬಹುದು ಎಂದು ಹೇಳಿದ್ದೇನೆ. ಹಾಗೆ ಮಾಡದೇ ಇದ್ದರೆ ಒಂದು ದಾಕ್ಷಿಣ್ಯಕ್ಕೆ ಬೀಳಬೇಕಾಗಿತ್ತು. ಈಗ ಗೊಬ್ಬರದ ಮಿಕ್ಸ್ಚರ್‌ನ್ನು ಪರೀಕ್ಷೆ ಮಾಡಬೇಕಾದರೆ ಸಾಯಿಲ್ ಟೆಸ್ಟಿಂಗ್‌ಗೆ ಬೆಂಗಳೂರಿಗೆ ಕಳುಹಿಸಬೇಕಾಗಿದೆ. ಅದಕ್ಕಾಗಿ ಫರ್ಟಿಲೈಸರ್ ಟೆಸ್ಟಿಂಗ್ ಮಾಡುವ ಲ್ಯಾಬೊರೇಟರಿಯನ್ನು 2-3 ರೀಜನ್‌ವೈಸ್ ಪ್ರಾರಂಭ ಮಾಡಬೇಕು ಎನ್ನುವ ಉದ್ದೇಶ ಇದೆ. ಈ ಬಗ್ಗೆ ಕೇಂದ್ರ ಸರ್ಕಾರದೊಡನೆ ವ್ಯವಹಾರ ನಡೆಸಿ ಪ್ರಯತ್ನ ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ತಮಗೆ ಹೇಳಬಯಸುತ್ತೇನೆ.

ಇನ್ನು ಕ್ರಾಪ್ ಪ್ರೊಟೆಕ್ಷನ್ ವಿಷಯವಾಗಿ ಸಹಿತ ಅನೇಕ ಸದಸ್ಯರು ಮಾತನಾಡಿದ್ದಾರೆ. ಕ್ರಾಪ್ ಪ್ರೊಟೆಕ್ಷನ್ ವಿಷಯವಾಗಿ ಎಲ್ಲೆಲ್ಲಿ ಸಾಧ್ಯ ಇದೆ ಅಲ್ಲಿ ಏರಿಯಲ್ ಸ್ಪ್ರೇ ಕೇಂದ್ರ ಸರ್ಕಾರದ ಸಹಾಯದಿಂದ ತೆಗೆದುಕೊಳ್ಳಲಿಕ್ಕೆ ಈಗಾಗಲೇ ಆಜ್ಞೆ ಹೊರಡಿಸಲಾಗಿದೆ. ಇದು ಬಡಬೋರೇಗೌಡನ ಬೊಕ್ಕಸಕ್ಕೆ ಖರ್ಚು ಬೀಳುವುದರಿಂದ ಎಲ್ಲಿ ಅವಶ್ಯವಾಗಿ ಬೀಳುತ್ತದೆ ಅಲ್ಲಿ ಮಾಡಿ, ಇಲ್ಲದಿದ್ದರೆ ಗ್ರೌಂಡ್ ಸ್ಪ್ರೇಯಿಂಗ್ ಮಾಡಿ ಎಂದು ಹೇಳಿದ್ದೇವೆ. ಎಲ್ಲಿ ಗ್ರೌಂಡ್ ಸ್ಪ್ರೇಯಿಂಗ್ ಎಪಿಡಮಿಕ್ ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಿಲ್ಲ ಅಲ್ಲಿ ಏರಿಯಲ್ ಸ್ಪ್ರೇಯಿಂಗ್ ತೆಗೆದುಕೊಳ್ಳಲಾಗಿದೆ ಎಂದು ನೋಟಿಫಿಕೇಷನ್ ತೆಗೆದಿದ್ದೇವೆ ಪೆಸ್ಟ್ ಕಂಟ್ರೋಲ್ ಆಕ್ಟ್ ಮೈಸೂರಿನಲ್ಲಿ ಅಮಲ್‌ನಲ್ಲಿ ಬಂದಿರುವುದನ್ನು ಗಮನದಲ್ಲಿಡಬೇಕು. ಇದನ್ನು ತೀವ್ರವಾಗಿ ಗಮನಕ್ಕೆ ತೆಗೆದು

(ಶ್ರೀ ಕೆ. ಎಚ್. ಪಾಟೀಲ್)

ಕೊಳ್ಳುತ್ತೇನೆ ಎಂದು ಹೇಳುತ್ತೇನೆ. ಸರ್ಕಾರದವರಿಗೆ ಗೊತ್ತಿರುವಹಾಗೆ ಕೇಂದ್ರದಿಂದ ಮಂಜೂರಾಗುವ ಸ್ಕೀಮುಗಳು ಜನವರಿ, ಫೆಬ್ರುವರಿಯಲ್ಲಿ ಮಂಜೂರು ಆಗಿ ಮಾರ್ಚಿಯಲ್ಲಿ ಲ್ಯಾಪ್ಸ್ ಆಗುತ್ತಿತ್ತು. ಆರೀತಿ ಹಿಂದಿನ ಸದನದಲ್ಲಿ ಟೀಕೆ ಮಾಡಿದ್ದು ನನ್ನ ಗಮನಕ್ಕೆ ಬಂದಿದೆ. ಆರೀತಿ ಆಗದಂತೆ ಕೇಂದ್ರ ಸರ್ಕಾರದವರ ಕಾಂಪೋಜಿಟ್ ಸ್ಕೀಮುಗಳು ಮಂಜೂರಾಗಿ ಏನು ಬಂದಿವೆ ಅವುಗಳನ್ನು ಈಗಾಗಲೇ ಕಾರ್ಯಗತಗೊಳಿಸಬೇಕು ಎನ್ನುವ ಉದ್ದೇಶ ಇದೆ. ಒಂದೊಂದು ಸ್ಕೀಮನ್ನೂ ಒಂದೊಂದು ಭಾಗಕ್ಕೆ ಮಾಡಿ ಎಲ್ಲೆಲ್ಲಿ ಯಾವ ಯಾವ ಪೀಕುಗಳು ಬೆಳೆಯುತ್ತಾರೋ ಅದನ್ನು ಶೋಧಿಸಿ ಆ ಸ್ಕೀಮ್ ಕೊಡಬೇಕೆಂದು ಆಜ್ಞೆ ಮಾಡಿದ್ದೇನೆ. ಆ ರೀತಿ ಸಮಸ್ತ ಮೈಸೂರು ರಾಜ್ಯದ ಜನತೆ ವ್ಯವಸಾಯಗಾರರು ಲಾಭವನ್ನು ಪಡೆಯುತ್ತಾರೆ.

ಇನ್ನು ಹಾರ್ಟಿಕಲ್‌ಚರ್ ವಿಷಯದಲ್ಲಿ ಯಾವುದೇ ತರಹ ಟೀಕೆಗಳು ಬರಲಿಲ್ಲ. ಸೀಡ್ಸ್ ವಿಷಯದಲ್ಲಿ ಸಹ ಮಾನ್ಯ ಸದಸ್ಯರು ಮಾತನಾಡಿರುವ ವಿಷಯವನ್ನು ನಾನು ಬಹಳ ಗಮನಿಸಿದೆ. ಹಿರಿಯ ಮಾನ್ಯ ಸದಸ್ಯರಾದ ಶ್ರೀ ಪುಟ್ಟಸ್ವಾಮಿಯವರು ಒಂದು ಅರ್ಜಿಯನ್ನು ಕಳುಹಿಸಿದರು. ಅವರು ಕಳುಹಿಸಿದ ಕೂಡಲೇ ತನಿಖೆಗಾಗಿ ಹಿಂದಿನ ದಿವಸವೇ ಕಳುಹಿಸಿಕೊಟ್ಟೆ. ಈ ತನಿಖೆಯಿಂದ ಅವರಿಗೆ ಸಮಾಧಾನವಾಯಿತೋ ಇಲ್ಲವೋ ಗೊತ್ತಿಲ್ಲ. ಅವರು ಹೇಳಿದ ವಾದ ಇಷ್ಟೆ. ನಾವು ಹೋದ ವರ್ಷ 4½ ರೂಪಾಯಿಗೆ ಖರೀದಿ ಮಾಡಿದೆವು. ಬೀಜಗಳು ಬೇಕಾದವರು ಯಾರು ಯಾರಿಂದ ಖರೀದಿ ಮಾಡಬೇಕೋ ಅವರಿಂದ ಖರೀದಿ ಮಾಡಲು ಒಬ್ಬರಿಗೆ ಒಂದು ರೇಟು, ಒಬ್ಬರಿಗೆ ಒಂದು ರೇಟು ಮಾಡಿಲ್ಲ. ಬೀಜಗಳು ಸಿಕ್ಕಿದ ಮೇಲೆ 4 ರೂಪಾಯಿ ರೇಟು ಮಾಡಿದ್ದೇವೆ. ಇಷ್ಟು ಹೇಳಿದ ಮೇಲೆ ಮಾನ್ಯ ಸದಸ್ಯರು ಸಮಾಧಾನ ಮಾಡಿಕೊಳ್ಳಬಹುದು ಎಂದು ನಾನು ತಿಳಿದಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಹೊಳೆನರಸೀಪುರ).—ಕಳಪೆ ಸೀಡ್ಸ್ ಮಾರಿದ್ದಾರೆ.

ಶ್ರೀ ಕೆ. ಹೆಚ್. ಪಾಟೀಲ್.—ಕೆಲವು ಸಂದರ್ಭಗಳಲ್ಲಿ ಬೀಜವನ್ನು ಹಂಚುವಾಗ ನ್ಯಾಷನಲ್ ಸೀಡ್ಸ್ ಕಾರ್ಪೋರೇಷನ್‌ನವರಿಂದ ಸರ್ಟಿಫೈ ಆಗಿದ್ದ ಸೀಡ್ಸ್ ಸಮರ್ಪಕವಾಗಿ ಹುಟ್ಟಲಿಲ್ಲ ಎಂದು ನನಗೆ ವರದಿ ಬಂದಿದೆ. ಆಗ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ನಿನವರು 'ಸಮರ್ಪಕವಾದ ರೀತಿಯಲ್ಲಿ ಬೀಜಗಳನ್ನು ವಿತರಣೆ ಮಾಡಬೇಕು, ಸರಿಯಾಗಿ ಟೆಸ್ಟ್ ಮಾಡಿದ್ದಾರೆ ಮತ್ತು ನಮ್ಮ ಜರ್ಮಿನೇಷನ್ ಟೆಸ್ಟ್ 90 ಪರ್ಸೆಂಟ್‌ಗಿಂತ ಹೆಚ್ಚು ಬಂದಿದೆ' ಎನ್ನುವ ಮಾತನ್ನು ಹೇಳಿದರು. ಅದರೂ ಕೆಲವು ಕಡೆ ಹುಟ್ಟಲಿಲ್ಲ ಎಂದು ನನಗೆ ಗೊತ್ತಿರುವುದರಿಂದ ಅಲ್ಲಿಗೆ ಅಧಿಕಾರಿಗಳನ್ನು ಕಳುಹಿಸಿ ಎಲ್ಲೆಲ್ಲಿ ತೀರ ಹಾನಿಗೆ ಈಡಾಗಿದ್ದಾರೆ ಅಲ್ಲಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಸೀಡ್ಸ್‌ನ್ನು ಅವರಿಗೆ ಪುಕ್ಕಟೆ ಕೊಟ್ಟು ಕಾಂಪನ್ಸೇಟ್ ಮಾಡಬೇಕು ಮತ್ತು ಆಗ್ರೋ ಇಂಡಸ್ಟ್ರೀಸ್ ಪರವಾಗಿ ಅಪಾಲಜಿ ಕೇಳಿರಿ ಎನ್ನುವ ಮಾತು ಹೇಳಿದ್ದೇನೆ. ಇಷ್ಟೊಂದು ಹೇಳಿದ ಮೇಲೆ ಮಾನ್ಯ ಸದಸ್ಯರಿಗೆ ಸಮಾಧಾನವಾಗಬಹುದು ಎಂದು ತಿಳಿದುಕೊಂಡಿದ್ದೇನೆ. ಈ ರೀತಿ ಬೀಜಗಳ ವಿತರಣೆ ಈಗಾಗಲೇ ಆಗಿದೆ. ಎಲ್ಲಿಯಾದರೂ ಆಗದೇ ಇದ್ದಂಥ ಸಂದರ್ಭ ಇದ್ದರೆ ನನ್ನ ಗಮನಕ್ಕೆ ತಂದರೆ ಎನ್‌ಕ್ವೈರಿ ಮಾಡಿ ಸಮರ್ಪಕವಾಗಿ ನಿರ್ಣಯವನ್ನು ಸರ್ಕಾರ ಮಾಡುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

Sri C. ANDANEPPA (Hadagali).—They are not certified by the NSC.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸದಸ್ಯರು ಹೇಳಿದ ಮಾತನ್ನು ಗಮನಿಸಿದ್ದೇನೆ. ಅನ್‌ಸರ್ಟಿಫೈಡ್ ಸೀಡ್ಸ್ ಮಾರಿದ್ದರೆ ಹಾಗೆ ಮಾಡಬಾರದು ಎಂದು ಈ ಸದನದ ಮೂಲಕ ಹೇಳುತ್ತಿದ್ದೇನೆ. ಇದನ್ನೇ ಸರ್ಕಾರದ ಆಜ್ಞೆ ಎಂದು ತಿಳಿಯಬಹುದು ಎಂದು ಹೇಳುತ್ತೇನೆ.

Sri C. ANDANEPPA.—They are not certified by the NSC.

ಶ್ರೀ ಕೆ. ಎಚ್. ಪಾಟೀಲ್.—ಎಲ್ಲಾ ಎನ್.ಎಸ್.ಸಿ. ಯವರೇ ಸರ್ಟಿಫೈ ಮಾಡಬೇಕೆಂದು ಇಲ್ಲ. ಬೀಜವನ್ನು ಸರ್ಟಿಫೈ ಮಾಡಬೇಕಾದರೆ ಡೈರೆಕ್ಟರ್ ಆಫ್ ಅಗ್ರಿಕಲ್‌ಚರ್ ಕೂಡ ಸರ್ಟಿಫೈ ಮಾಡಬಹುದು. ಡೈರೆಕ್ಟರ್ ಆಫ್ ಅಗ್ರಿಕಲ್‌ಚರ್ ಅವರು ಸರ್ಟಿಫೈ ಮಾಡುವಾಗ ತೊಂದರೆ ಇದೆ ಎಂದು ಹೇಳುವುದಾದರೆ ಆ ಬಗ್ಗೆ ತನಿಖೆ ಮಾಡೋಣ. ಎನ್.ಎಸ್.ಸಿ. ಗೆ ಹೋಗಿ ನಮ್ಮ ಸರ್ಕಾರದ ಬೀಜ ಸರ್ಟಿಫೈ ಮಾಡಬೇಕು ಎಂದು ಹೇಳುವುದು ಸೂಕ್ತವಲ್ಲ. ಆ ಧೋರಣೆ ನಾನು ಒಪ್ಪುವುದಿಲ್ಲ.

11-00 A.M.

ಹಾರ್ಟಿಕಲ್ಚರ್ ವಿಷಯವಾಗಿ ಯಾವುದೇ ಟೀಕೆಯನ್ನು ಮಾಡಿಲ್ಲ. ಒಂದು ಟೀಕೆಯನ್ನು ಮಾತ್ರ ನಾನು ನೋಡಿದೆ. ಬಿದರೆಯ ಸ್ನೇಹಿತರು ಮಾತ್ರ ಅವರ ಭಾಗದಲ್ಲಿ ಹಾರ್ಟಿಕಲ್ಚರ್ ಡೆವಲಪ್ ಆಗಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಹರಿಹರದವರೆಗೆ ಹಾರ್ಟಿಕಲ್ಚರ ಡೆವಲಪ್‌ಮೆಂಟ್ ಬಹಳ ಚೆನ್ನಾಗಿ ಆಗಿದೆ. ಅಲ್ಲಿಂದ ಮುಂದಕ್ಕೆ ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕ ಎಲ್ಲಿಯೂ ತೋಟಗಾರಿಕೆ ವಿಭಾಗ ಸಾಕಷ್ಟು ರೀತಿಯಿಂದ ಬೆಳವಣಿಗೆ ಮಾಡಿಲ್ಲ. ಅದಕ್ಕೆ ಕಾರಣ, ಇಲ್ಲಿ ಬಹುಪುರಾತನ ಕಾಲದಿಂದ ತೋಟಗಾರಿಕೆ ಬಗ್ಗೆ ಆಸ್ಥೆ ಇದ್ದಂಥ ಪ್ರವೃತ್ತಿ ಬೆಳೆದು ಬಂದಿದೆ. ಅದಕ್ಕೆ ಅನುಕೂಲವಾದ ವಾತಾವರಣ, ಹವೆ ಇಲ್ಲದೆ. ಅಲ್ಲಿರುವ ವಾತಾವರಣದಲ್ಲಿ ತೋಟಗಾರಿಕೆ ಚೆನ್ನಾಗಿ ಬರುವುದಿಲ್ಲವೆಂಬ ಭಾವನೆ ಇದೆ. ಅದಕ್ಕಾಗಿಯೇ ಅಲ್ಲಿಯೂ ಕೂಡ ಹಾರ್ಟಿಕಲ್ಚರ್ ಡೆವಲಪ್ ಮಾಡಲೇ ಬೇಕು ಎಂಬುದು ಈ ಸರ್ಕಾರದ ಉದ್ದೇಶವಾಗಿದೆ. ಎಲ್ಲ ಭಾಗಗಳಲ್ಲಿಯೂ ಸಮಾನವಾದ ರೀತಿಯಿಂದ ತೋಟಗಾರಿಕೆ ಬೆಳೆಯಬೇಕೆಂದು ಆದೇಶವನ್ನು ಕೊಟ್ಟಿದ್ದೇವೆ. ಬೆಂಗಳೂರಿನಲ್ಲಿ ತೋಟಗಾರಿಕೆ ಬೆಳೆದರೂ ಕೂಡ ಬೆಂಗಳೂರಿನ ಸುತ್ತಮುತ್ತ ಗ್ರೀನ್ ಬೆಲ್ಟ್ ನಶಿಸಿಹೋಗಿದೆ. ಬೆಂಗಳೂರಿನಿಂದ 20—30 ಮೈಲಿ ದೂರ ಹೋದರೂ ಬರೀ ಗುಡ್ಡ ಕಾಣುತ್ತಿದೆ, ಬೆಂಗಳೂರಿನ ಸುತ್ತ ಅರಣ್ಯವನ್ನು ಬೆಳೆಸಬೇಕೆಂದು ತೀವ್ರ ಪ್ರಯತ್ನ ಮಾಡಲಾಗುತ್ತಿದೆ. ಅದು ಮೆಕಾನೈಸ್ಡ್ ಕಲ್ಟಿವೇಷನ್‌ನಿಂದ ಪ್ರಾರಂಭವಾಗಬೇಕು. ಇನ್ನು ನಾಲ್ಕು ವರ್ಷದಲ್ಲಿ ಈ ಸ್ಕೀಂ ಪ್ರಕಾರ ಕಾಡು ಬೆಳೆಯಬೇಕು. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟು ಗ್ರೀನ್ ಬೆಲ್ಟ್ ಬೆಳೆಯುವ ದೃಷ್ಟಿಯಿಂದ 30 ಮೈಲಿ ಫಾಸಲೆಯಲ್ಲಿ ಅಫಾರೆಸ್ಟೇಷನ್ ತೆಗೆದುಕೊಳ್ಳಬೇಕೆಂದು ಸರ್ಕಾರದ ಇಚ್ಛೆಯನ್ನು ಅಧಿಕಾರಿಗಳಿಗೆ ತಿಳಿಸಿದ್ದೇವೆ. ಕೆಲಸ ಇನ್ನು ಸ್ವಲ್ಪ ದಿವಸದಲ್ಲಿಯೇ ನಡೆಯುತ್ತದೆ ಎಂದು ಹೇಳುತ್ತೇನೆ.

ಒಬ್ಬ ಅಧಿಕಾರಿ ಯಶವಂತರಾವ್ ಐಲಿ ಎನ್ನುವವರ ವಿಷಯವಾಗಿ ಮಾನ್ಯ ಸದಸ್ಯರು ಹೇಳಿದರು. ನಾನು ಆ ಬಗ್ಗೆ ನೋಡಿದೆ. ಈಗಾಗಲೇ ಸ್ಪಷ್ಟವಾದ ಆದೇಶವನ್ನು ಕೊಟ್ಟಿದ್ದೇವೆ. ಸರ್ಕಾರದ ಆಜ್ಞೆ ಅವರ ಕೈ ಮುಟ್ಟಿದೆ. ಈ ಆಜ್ಞೆ ಸಂಬಂಧಪಟ್ಟ ಅಧಿಕಾರಿಗೆ ಮುಟ್ಟಬೇಕಾದರೆ ಅದಕ್ಕೆ ಒಂದು ಪ್ರೊಸೀಜರ್ ಇದೆ. ಪ್ರೊಸೀಜರ್ ವಿಷಯದಲ್ಲಿ ಮಾನ್ಯ ಸದಸ್ಯರು ಸಹಕಾರ ಮಾಡಬೇಕು. ಡೈರೆಕ್ಟರವರು ಯಶವಂತ ಐಲಿ ಎನ್ನುವವರು ಹಾಜರಿ ಮಾಡಿಕೊಳ್ಳಲು, ನನ್ನ ಅಭ್ಯಂತರವಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಅವರು ಹೋದರೂ ತೆಗೆದುಕೊಳ್ಳಲಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಸರ್ಕಾರದ ಆಜ್ಞೆ ಪ್ರಕಾರ ಟ್ರಾನ್ಸ್‌ಫರ್ ಆಗಿರುವುದರಿಂದ ಆ ಆಜ್ಞೆ ದೊರಕುವ ಮೊದಲೇ ಹೇಗೆ ಹೋದ ಎಂದು ಕೇಳಬೇಕಾಗುತ್ತದೆ. ಈ ವಿಚಾರದಲ್ಲಿ ಡೈರೆಕ್ಟರನ್ನು ಅಭಿನಂದಿಸುತ್ತೇನೆ. ಸರ್ಕಾರದ ಆಜ್ಞೆ ಕೈ ಸೇರುವ ಮೊದಲೇ ಈ ಅಧಿಕಾರಿ ಯಾವರೀತಿಯಿಂದ ಹೋಗಿ ಹಾಜರಾಗುತ್ತೇನೆಂದು ಕೇಳುತ್ತಿದ್ದಾನೆ! ಕೇಳುವುದೂ ಸೂಕ್ತವಲ್ಲ, ಹೇಳುವುದೂ ಸೂಕ್ತವಲ್ಲ. ಡೈರೆಕ್ಟರ್ ಆರ್ಡರ್ ಕೊಡದೆ ಹೇಗೆ ಹೋದ! ಆ ಅಧಿಕಾರಿಯನ್ನು ಹಾಜರು ಮಾಡಿಸಿಕೊಳ್ಳಲಿಕ್ಕೆ ಡೈರೆಕ್ಟರ್ ಒಪ್ಪಿದ್ದಾರೆ. ನಿಜವಾಗಿ ಈ ರೀತಿ ಅಧಿಕಾರಿಗೆ ಒಂದು ಸಾರಿ ಕ್ಷಮಾಪಣೆ ಮಾಡಬಹುದೇ ವಿನಾ, ಇಂಥ ವಿಚಾರಗಳು ಪುನರಪಿ ಬಂದರೆ ಅಂಥ ಅಧಿಕಾರಿಗಳ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳದೆ ಗತ್ಯಂತರವಿಲ್ಲ ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಕೃಷಿ ವಿಶ್ವವಿದ್ಯಾಲಯದ ಸಲುವಾಗಿ ಅನೇಕ ಸದಸ್ಯರು ಹೇಳಿದ್ದಾರೆ. ಅದರೊಳಗೆ ಕೆಲವು ಸದಸ್ಯರು ಒಕ್ಕಲುತನ ಮಾಡುವಂಥ ವ್ಯವಸಾಯಗಾರರ ಮಕ್ಕಳಿಗೆ ಇಲ್ಲದಂಥ ಶಿಕ್ಷಣ ಎಂಥ ಶಿಕ್ಷಣ ಎಂದು ಕರೆದಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ನಾನು ಪರೀಕ್ಷೆ ಮಾಡಿ ನೋಡಿದ್ದರಲ್ಲಿ ಬಂದಂಥ ಅರ್ಜಿಗಳಲ್ಲಿ 50 ಪರ್ಸೆಂಟ್ ಅರ್ಜಿಗಳಲ್ಲಿ ಉದ್ಯೋಗವೆಂದರೆ ಒಕ್ಕಲುತನ ಎಂದು ಬರೆದಿರುತ್ತಾರೆ. ಅದು ಇದೆಯೋ ಇಲ್ಲವೋ ಗೊತ್ತಿಲ್ಲ ಒಕ್ಕಲುತನ ಅಥವಾ ವ್ಯವಸಾಯ ಎಂದು ಬರೆದಿರುತ್ತಾರೆ. ಹಿಂದೆ ಇರತಕ್ಕ ಆಜ್ಞೆ ಪ್ರಕಾರ ನೋಟಿಫಿಕೇಷನ್ ತೆಗೆದಿದ್ದರು. ವ್ಯವಸಾಯ ವಿಶ್ವವಿದ್ಯಾಲಯದ ವೈಸ್ ಛಾನ್ಸಲರು ವ್ಯವಸಾಯಗಾರರು 50 ಪರ್ಸೆಂಟ್ ಇದ್ದಾರೆ ಎಂದು ಹೇಳಿದ್ದಾರೆ. ಅದರ ಬಗ್ಗೆ ನನಗೆ ಸಮಾಧಾನವಾಗಿಲ್ಲ. ಆದರೂ ಸಹ ಹೊಸ ಕಾಯಿದೆ ಮಾಡಿ, ಈ ವರ್ಷಕಾಲ ಮೀರಿದೆ, ಮುಂದಿನ ವರ್ಷ ಒಕ್ಕಲಿಗರ ಮಕ್ಕಳಿಗೆ ಸಾಕಷ್ಟು ಪ್ರಮಾಣದಲ್ಲಿ ಅವಕಾಶ ಸಿಕ್ಕಬೇಕೆಂಬುದು ನನ್ನ ಆಸೆ. ಆ ಬಗ್ಗೆ ಈಗಿರುವ ಕಾಯಿದೆಯನ್ನು ಬದಲಾವಣೆ ಮಾಡುವ ಸಲುವಾಗಿ ತಮ್ಮ ಎದುರಿಗೆ ತರುತ್ತೇನೆ. ಆವಾಗ ತಮ್ಮ ಬೆಂಬಲವನ್ನು ಕೋರುತ್ತೇನೆ. ಅಗ್ರಿಕಲ್ಚರಲ

(ಶ್ರೀ ಕೆ. ಎಚ್. ಪಾಟೀಲ್)

ಯೂನಿವರ್ಸಿಟಿಯಲ್ಲಿ ಅನೇಕ ರೀತಿಯ ಮಾರ್ಪಾಡುಗಳು ಆಗಬೇಕಾಗಿವೆ. ಕಾಯಿದೆ ಇಲಾಖೆಯ ಪರಿಣತರನ್ನು ಕೇಳಿ ಸೂಕ್ತವಾದ ತಿದ್ದುಪಡಿಗಳನ್ನು ಮಾಡಿ ಕಾಯಿದೆಯನ್ನು ತಮ್ಮ ಮುಂದೆ ಇಡುತ್ತೇನೆ.

ಮಹಾರಾಷ್ಟ್ರದಲ್ಲಿ ವಿಶ್ವವಿದ್ಯಾಲಯಗಳು ಬಹಳವಾಗಿವೆ, ಇಲ್ಲಿ ಬಹಳ ಆಗಿಲ್ಲ ಎನ್ನುವ ವಿಷಯವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುತ್ತಾರೆ. ಮಹಾರಾಷ್ಟ್ರದಲ್ಲಿ ಮೂರು ವಿಶ್ವವಿದ್ಯಾಲಯಗಳಿದ್ದರೆ ನಮ್ಮಲ್ಲಿ ಒಂದು ಒಕ್ಕಲುತನದ ವಿಶ್ವವಿದ್ಯಾಲಯವಿದೆ. ನಮ್ಮಲ್ಲಿಯೂ ಇನ್ನೂ ಒಂದೆರಡು ಒಕ್ಕಲುತನದ ವಿಶ್ವವಿದ್ಯಾಲಯಗಳ ಸಲುವಾಗಿ ನಾವು ಪ್ರಯತ್ನ ಮಾಡಬೇಕು. ಇನ್ನೂ ಒಂದೆರಡು ಜನರಲ್ ಯೂನಿವರ್ಸಿಟಿಗಳಾಗಬೇಕು ಎಂದು ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಅದು ಆಗುವುದರ ಜೊತೆಗೆ ಒಕ್ಕಲುತನದ ಯೂನಿವರ್ಸಿಟಿ ಸಹಿತ ಹೆಚ್ಚಾಗಬೇಕು. ಕೇಂದ್ರ ಸರ್ಕಾರದೊಡನೆ ಪರಿಶೀಲನೆ ಮಾಡಿ ನಮಗೆ ಎಷ್ಟು ವಿಶ್ವವಿದ್ಯಾಲಯಗಳ ಅವಶ್ಯಕತೆ ಇದೆ ಎನ್ನುವುದನ್ನು ನೋಡಿಕೊಂಡು ಮಾಡೋಣ. ಈ ವಿಷಯವಾಗಿ ಮುಖ್ಯ ಮಂತ್ರಿಗಳೊಡನೆ ವಿಚಾರ ಮಾಡಿ ಅವರನ್ನೂ ಕರೆದುಕೊಂಡು ಕೇಂದ್ರ ಸರ್ಕಾರದ ಮಂತ್ರಿಗಳಲ್ಲಿ ಆಲೋಚನೆ ಮಾಡುತ್ತಿದ್ದೇನೆ. ಅವಶ್ಯವಿದ್ದರೆ ಎರಡೋ ಅಥವಾ ಅದಕ್ಕಿಂತ ಹೆಚ್ಚೋ ಅಗ್ರಿಕಲ್ಚರಲ್ ಯೂನಿವರ್ಸಿಟಿ ಮಾಡುವುದರ ಅವಶ್ಯಕತೆ ನಮ್ಮ ರಾಜ್ಯದಲ್ಲಿದೆ ಎನ್ನುವ ವಿಷಯವನ್ನು ಕೂಡ ಬೆಂಬಲಿಸುತ್ತೇವೆ.

ಅಗ್ರಿಕಲ್ಚರಲ್ ಪಾಲಿಟೆಕ್ನಿಕ್ ಸಲುವಾಗಿ ಕೇಂದ್ರ ಸರ್ಕಾರದ ಎದುರಿಗೆ ವಿಚಾರವಿದೆ. ಅದರ ಪೂರ್ಣ ಜವಾಬ್ದಾರಿ ಕೇಂದ್ರ ಸರ್ಕಾರದ್ದು. ನಮ್ಮ ರಾಜ್ಯಕ್ಕೆ ಒಂದು ಅಂಥ ಪಾಲಿಟೆಕ್ನಿಕ್ ಕೊಡಲಿಕ್ಕೆ ಈಗಾಗಲೇ ಔಪಚಾರಿಕವಾಗಿ ಒಪ್ಪಿದ್ದಾರೆ. ಒಂದಕ್ಕಿಂತ ಹೆಚ್ಚು ಎಂದರೆ ಎರಡು ಪಾಲಿಟೆಕ್ನಿಕ್ ಬೇಕು ಎಂದು ಕೇಳುತ್ತಿದ್ದೇವೆ.

ತಮ್ಮೆಲ್ಲರ ಇಚ್ಛೆಯನ್ನು, ಮನಸ್ಸನ್ನು ಕೆರಳಿಸಿರುವಂಥ ಅರಣ್ಯ ಸಂಪತ್ತಿನ ವಿಷಯವಾಗಿ ನಾನು ಕೆಲವು ಮಾತುಗಳನ್ನು ಹೇಳಲು ಇಚ್ಛೆಪಡುತ್ತೇನೆ. ಅರಣ್ಯ ಸಂಪತ್ತಿನ ಸಂಬಂಧದಲ್ಲಿ ಪ್ರಾಮುಖ್ಯವಾಗಿ ಮೂರು ಮಾತುಗಳನ್ನು ಹೇಳಿದ್ದಾರೆ. ಒಂದನೆಯದು ಫಾರೆಸ್ಟ್ ವಿಷಯದಲ್ಲಿ ಪ್ಲಾನ್ ಆಫ್ ವರ್ಕ್ ಇಲ್ಲ, ಎರಡನೆಯದು ಸ್ಮಗ್ಲಿಂಗ್ ಇನ್ನೂ ಸಾಕಷ್ಟು ಕಂಟ್ರೋಲ್ ಆಗಿಲ್ಲ, ಮೂರನೆಯದು ಲ್ಯಾಂಡ್ ಕೊಡುವಂಥ ವಿಷಯದಲ್ಲಿ ಸರ್ಕಾರದಿಂದ ತೆಗೆದುಕೊಳ್ಳುವ ಧೋರಣೆಯಿಂದ ಭೂ ರಹಿತರಿಗೆ ಬಹಳ ತೊಂದರೆಯಾಗಿದೆ. ಅದಕ್ಕೆ ಭೂಮಿ ಇಲ್ಲದವರಿಗೆ ಭೂಮಿ ಕೊಡಬೇಕು ಎನ್ನುವುದನ್ನು ಆ ಕಡೆಯ ಸದಸ್ಯರೂ, ಈ ಕಡೆಯ ಸದಸ್ಯರು ಎಲ್ಲರೂ ಹೇಳಿದ್ದಾರೆ. ಈ ಮೂರು ಮಾತುಗಳ ಜೊತೆಗೆ ಇನ್ನೂ ಕೆಲವು ಏನು ಹೇಳಿದ್ದಾರೆಂದರೆ, ಇಲಾಖೆ ಕರಪ್ಟ್ ಅಧಿಕಾರಿಗಳಿಂದ ತುಂಬಿದೆ, ಲೋಕೋಪಯೋಗಿ ಇಲಾಖೆ ಎನಿಮಿ ನಂಬರು ಒಂದು ಆದರೆ, ಫಾರೆಸ್ಟ್ ಡಿಪಾರ್ಟ್‌ಮೆಂಟ್ ಎನಿಮಿ ನಂಬರ್ ಎರಡು ಆಗಿದೆ ಎಂದು ಹೇಳಿದ್ದಾರೆ. ಎಲ್ಲಿ ಬೆಲ್ಲವಿರುತ್ತದೆ ಅಲ್ಲಿ ನೊಣ ಕೂಡುತ್ತದೆ.

ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ದುಡ್ಡನ್ನು ನಿರಾಯಾಸವಾಗಿ ತಿನ್ನಲಿಕ್ಕೆ ಬರುತ್ತದೆ. ಹಣ ತಿನ್ನುವವರು ಫಾರೆಸ್ಟ್ ಇಲಾಖೆಯಲ್ಲಿಯೂ ಹಣವನ್ನು ದೋಚಲಿಕ್ಕೆ ಅವಕಾಶವಿದೆ. ಅದಕ್ಕೋಸ್ಕರ ಈ ಕೆಟ್ಟ ಹುಳುಗಳು ಕಾಡುತ್ತಿವೆ. ಕೆಟ್ಟ ಹುಳುಗಳಿಂದ ಹೇಗೆ ದೇಶವನ್ನು ರಕ್ಷಣೆ ಮಾಡಬೇಕು ಎನ್ನುವುದನ್ನು ನಾವು ನೀವು ಆಲೋಚನೆ ಮಾಡಬೇಕು. ಇವೊತ್ತು ಅಧಿಕಾರಸ್ಥರು ಪರಿಶುದ್ಧರಾಗಿದ್ದಾರೆ ಎಂದು ಹೇಳಿದರೆ ಅವರು ಲಂಚದಿಂದ ದೂರವಾಗುವುದಿಲ್ಲ. ಅಧಿಕಾರಿಗಳು ಲಂಚಕೋರರು ಎಂದರೆ ಅವರು ಲಂಚದಿಂದ ದೂರವಾಗುವುದಿಲ್ಲ. ಈ ಎರಡು ಮಾತುಗಳನ್ನು ತಿಳಿದುಕೊಂಡು ಅಧಿಕಾರಿಗಳಿಂದ ಸಮರ್ಪಕವಾಗಿ ಕೆಲಸ ಹೇಗೆ ತೆಗೆದುಕೊಳ್ಳಬೇಕು ಎಂದು ನಾವು ನೀವೂ ಆಲೋಚನೆ ಮಾಡಬೇಕು. ಅಧಿಕಾರಸ್ಥರು ಎಂದರೆ ಬಿಡಲಾರದ ಕರ್ಮ, ಒಂದು ಕಡೆ ವರ್ಗ ಮಾಡಿದರೆ ಕೆಟ್ಟತನ ಹೋಗುವುದಿಲ್ಲ ಕೆಟ್ಟತನ ಹಬ್ಬುತ್ತದೆ. ಲಂಚಕೋರ ಎಂದು ಹೇಳಿದರೆ, ಲಂಚಕೋರತನ ಹೋಗುವುದಿಲ್ಲ ಲಂಚಕೋರ ಎಂದು ಹೇಳಿದ ಮೇಲೆ ಇನ್ನು ಏನು ಉಳಿಯಿತು ಎನ್ನುವುದು ಆಗುತ್ತದೆ. ಎರಡನ್ನು ಹೊಂದಾಣಿಸಿ ಕಾರ್ಯ ಮಾಡಬೇಕಾಗಿದೆ. ಇದಕ್ಕೆ ತಮ್ಮ ಸಹಕಾರ ಹೆಚ್ಚಾಗಿ ಬೇಕು. ವಿರೋಧಪಕ್ಷದ ಸದಸ್ಯರ ಸಹಕಾರ ಒಂದೇ ಅಲ್ಲ, ಎಲ್ಲಾ ಮಾನ್ಯ ಸದಸ್ಯರ ಸಹಕಾರವೂ ಬೇಕು ಎಂದು ಸಭಾಧ್ಯಕ್ಷರಿಯವರ ಮೂಲಕ ಕೇಳಿಕೊಳ್ಳುತ್ತೇನೆ. ಏಕೆಂದರೆ ಬೆಳೆದು ಬಂದಂಥ ಲಂಚಕೋರತನ, ಕಳ್ಳತನ ಸುಮ್ಮನೆ ಇದ್ದರೂ ಇರಗೊಡುವುದಿಲ್ಲ. ಅಧಿಕಾರಸ್ಥರು ಮಡಿಯಲ್ಲಿ ಇದ್ದರೂ ಏನಾದರೂ ಮಾಡಿ ಮೈಲಿಗೆ ಮಾಡುವುದಕ್ಕೆ ಪ್ರಯತ್ನ ಮಾಡುವ ಕದೀಮ ಕಂಟ್ರಾಕ್ಟರುಗಳು ಇರುತ್ತಾರೆ. ಅವರು ಅಧಿಕಾರಿಗಳಿಂದ ದೂರ ಇರಬೇಕು ಎಂದು ಎಷ್ಟು ಹೇಳಿದರೂ ಬೆಳೆದು ಬಂದಂಥ ಚಾಳಿಯ ಪರಿಣಾಮವಾಗಿ ಅವರು ಸಮೀಪ ಸಮೀಪಕ್ಕೆ ಹೋಗುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ). —ಸಮೀಪಕ್ಕೆ ಹೋಗುವ ಪರಿಣಾಮವಾಗಿದೆ.

ಶ್ರೀ ಕೆ. ಎಚ್. ಪಾಟೀಲ್.—ಬಡವರಿಗೆ ಮತ್ತು ಶ್ರೀಮಂತರಿಗೆ ಆಗುತ್ತಿರುವ ಒಂದು ರೀತಿಯ ಅವ್ಯವಹಾರಿಕ ನಡವಳಿಕೆಗಳನ್ನು ನಾವು ಈ ಖಾತೆಯಲ್ಲಿ ಕಾಣುತ್ತಿದ್ದೇವೆ. ಅನೇಕ ಜನ ಲ್ಯಾಂಡ್ ಇಲ್ಲದವರಿಗೆ ಲ್ಯಾಂಡ್ ಕೊಡಿ ಎಂದು ವಾದವಾಡುತ್ತಿದ್ದಾರೆ. ಇವೊತ್ತಿನ ದಿವಸ ಹೊಲ ಇಲ್ಲದ ವರಿಗೆ ಹೊಲ ಹಂಚಲಿಕ್ಕೆ ಕೊಟ್ಟಂಥ ಭೂಮಿ ಅಷ್ಟು ಸಮರ್ಪಕವಾಗಿ ಹಂಚಿಕೆಯಾಗಿಲ್ಲ. ಕಾರವಾರ ದಲ್ಲಿ ಒಂದು ಸಾ ನೋಟಿಫಿಕೇಷನ್ ರದ್ದು ಮಾಡಿದ್ದೇವೆ. ಅನೇಕ ಸ್ನೇಹಿತರು ಇವತ್ತು ವಾದ ಮಾಡುತ್ತಿದ್ದಾರೆ, ಆದರೆ ನಾನು ಅವರನ್ನು ಇಷ್ಟು ಮಾತ್ರ ಕೇಳುತ್ತೇನೆ. ನಾವು ಕೊಟ್ಟಂಥ ಹೊಲ ಎಷ್ಟು ಜನ ಬಡವರಿಗೆ ಮುಟ್ಟಿದೆ ಎಂದು ? ಇದಕ್ಕೆ ತಾವು ಏನು ಉತ್ತರ ಹೇಳಬಲ್ಲಿರಿ ? ಮಾನ್ಯ ಸ್ನೇಹಿತರಾದ ಗುಂಡುರಾವ್ ಅವರು, ಒಬ್ಬರಿಗೆ 2900 ಎಕರೆ ಜಮೀನನ್ನು ಕೊಟ್ಟು ಬಿಟ್ಟಿದ್ದಾರೆ ಎಂದು ಒಂದು ಮಾತು ಹೇಳಿದರು. ಜಮೀನು ಕೊಡಬೇಕಾದರೆ, ಸರ್ಕಾರಕ್ಕೆ ಯಾರು ಅಧಿಕಾರ ಕೊಟ್ಟವರು ? ಬಡವರ ಹೆಸರಿನಿಂದ ಇವತ್ತು ಲಕ್ಷ ಎಕರೆ ಭೂಮಿ ಕೊಟ್ಟಿರಿ, ಆದರೆ ಅದೇ ಬಡವ ಅರ್ಜಿ ಹಾಕಿದರೆ, ಅದು ನನ್ನ ತನಕ ಮುಟ್ಟುವುದಿಲ್ಲ. ಬಡವರ ರಕ್ತ ಹೀರುವವರನ್ನು ತಡೆದು ನಿಲ್ಲಿಸಿದರೆ ರಾಜ್ಯದ ಸಂಪತ್ತು ಉಳಿಯಬಲ್ಲದು., ಇಲ್ಲದಿದ್ದರೆ ಹಾಳಾಗಿಹೋಗುತ್ತದೆ. ಖರೇ ಹೇಳುತ್ತೇನೆ, ಒಬ್ಬರಿಗೆ ಭೂಮಿ ಹಂಚಲಿಕ್ಕೆ ಕೊಟ್ಟರೆ, ಬಡವನನ್ನು ಬಿಟ್ಟು ಯಾರೋ ಒಬ್ಬ ತೆಗೆದು ಕೊಳ್ಳುತ್ತಾನೆ, ಆದ್ದರಿಂದ ಹೊಲ ಕೊಡಿ ಎಂದು ಹೇಳುವುದರಿಂದ ಏನೂ ಲಾಭ ಇಲ್ಲ. ಇವತ್ತಿನ ದಿವಸ, ಏನಾದರೂ ಕೂಡ ಮಾಡಿದ್ದರೆ, ಸ್ಟೇಟ್ ಇಂಟರೆಸ್ಟ್ ನಿಂದ ಮಾಡಿದ್ದೇನೆ. ಅದಕ್ಕೆ ವಿರೋಧಪಕ್ಷದ ಮಾನ್ಯ ಸದಸ್ಯರು ನನಗೆ ಶಭಾಸ್‌ಗಿರಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹೊಲ ಕೊಡುವ ವಿಷಯದಲ್ಲಿ ನಾನು ಮಾಡಿದಂಥ ಕಪಿ ಮುಷ್ಟಿಯಿಂದ ರಾಜ್ಯದ ಹಿತವನ್ನು ಕಾಪಾಡಲಿಕ್ಕೆ ಒಬ್ಬ ಮಂತ್ರಿ ಬಂದರಲ್ಲಾ ಎನ್ನುವ ಹೆಮ್ಮೆ ಬರಬೇಕಾಗಿತ್ತು. ಆದರೆ, ಅದು ಬರಲಿಲ್ಲ, ಎಂದು ನನಗೆ ವ್ಯಥೆಯಾಗಿದೆ. ಇವತ್ತು ವಿಚಾರ ಮಾಡಿ. ಮಾನವೀಯತೆಯ ದೃಷ್ಟಿಯಿಂದ ನೋಡಿ, ಒಂದು ಲಕ್ಷ ಎಕರೆ ಭೂಮಿಯನ್ನು ರಿಲೀಸ್ ಮಾಡಬೇಕು ಎಂದು ಆರ್ಡರ್ ಅನ್ನು ಪಾಟೀಲರು ಮಾಡು ತ್ತಾರೆ ಹೊರತು ಅದು ಬಡವರಿಗೆ ಮುಟ್ಟುವುದಿಲ್ಲ. ಲ್ಯಾಂಡ್ ಇಲ್ಲದ ಮನುಷ್ಯನ ಅರ್ಜಿ ಮಂತ್ರಿಗಳ ತನಕ ಮುಟ್ಟುವುದಿಲ್ಲ. ನೋಟಿಫೈ ಆಗಿ, ಡಿ ನೋಟಿಫೈ ಆಗಿ ಮತ್ತೊಂದು ನೋಟಿಫಿಕೇಷನ್ ಆಗುವವರೆಗೆ ಬಡವ ಎಲ್ಲಿಗೆ ಹೋಗುತ್ತಾನೆ. ಅವನಿಗೆ ಹೊಲ ಮಾಡಲಿಕ್ಕೆ ಆಸೆ ಇದೆ, ಆದರೆ ಹೊಲ ಮುಟ್ಟುವುದು ಯಾರಿಗೆ ? ಫಾರೆಸ್ಟ್ ಲ್ಯಾಂಡ್ ಅನ್ನು ನನ್ನ ಕೈಯಿಂದ ಬಿಡಿಸಬಹುದು. ನಿಮ್ಮ ಸರ್ಕಾರ ನೀವು ಹೇಳಿದಂತೆ ನಾನು ಬದಲಾವಣೆ ಮಾಡಬೇಕಾಗುತ್ತದೆ. ಇದಕ್ಕೆ ನಾನು ಒಪ್ಪಿದೆ ಅಂದರೆ, ಲ್ಯಾಂಡ್ ಅನ್ನು ಕೊಡಬಹುದು, ಆದರೆ ಹೊಲ ಮಾತ್ರ ನೀವು ಹೇಳಿದ ಹಾಗೆ ಬಡವರಿಗೆ ಹೋಗುವುದಿಲ್ಲ. ಇದನ್ನು ಲಕ್ಷದಲ್ಲಿಟ್ಟುಕೊಂಡು ತಾವು ಸಲಹೆ ಕೊಡಿ ಎಂದು ಕೇಳುತ್ತೇನೆ. ತಾವು ಸಲಹೆ ಕೊಡುವಾಗ, ಫಾರೆಸ್ಟ್ ಲ್ಯಾಂಡ್ ಅನ್ನು ಕೊಡುವುದರಿಂದ ದೇಶದ ಭದ್ರತೆಗೆ ಬಹಳ ಹಾನಿ ಯಾಗುತ್ತದೆ ಎನ್ನುವ ಮಾತನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಈ ಸಭೆಯಲ್ಲಿ ಅನೇಕ ಹಿರಿಯ ಮಾನ್ಯ ಸದಸ್ಯರು ಇದ್ದಾರೆ, ಅನುಭವಸ್ಥರು ಇದ್ದಾರೆ, ಇದನ್ನು ಆಲೋಚನೆ ಮಾಡಿ ಎಂದು ನಾನು ಬೇರೆ ಹೇಳಬೇಕಾಗಿಲ್ಲ. ನಮ್ಮ ದೇಶದಲ್ಲಿ ದುರಾದೃಷ್ಟವಶಾತ್ 100ಕ್ಕೆ 18ರಷ್ಟು ಮಾತ್ರ ಫಾರೆಸ್ಟ್ ಲ್ಯಾಂಡ್ ಇವೆ. ಬೇರೆ ದೇಶಗಳಲ್ಲಿ ಶೇಕಡ 35 ರಷ್ಟು ಫಾರೆಸ್ಟ್ ಲ್ಯಾಂಡ್ ಇರುವಾಗ ಹಿಂದೂಸ್ಥಾನದಲ್ಲಿ ಶೇಕಡ 28ರಷ್ಟು ಫಾರೆಸ್ಟ್ ಲ್ಯಾಂಡ್ ಇದೆ. ನಮ್ಮ ರಾಜ್ಯದಲ್ಲಿ 100ಕ್ಕೆ 18ರಷ್ಟು ಮಾತ್ರ ಆಗಿದೆ. ಹಿಂದೆ ಇದು ಶೇಕಡ 20ರಷ್ಟು ಇತ್ತು, ಈಗ ಪುನಃ ಫಾರೆಸ್ಟ್ ಲ್ಯಾಂಡ್ ಅನ್ನು ಸಾಗುವಳಿ ಮಾಡುವುದಕ್ಕೆ ಕೊಟ್ಟರೆ ಶೇಕಡ 15ರಷ್ಟಾಗುತ್ತದೆ. 1957ರಿಂದ ಇಲ್ಲಿಯತನಕ ಎಷ್ಟು ಫಾರೆಸ್ಟ್ ಲ್ಯಾಂಡ್ ಕೊಟ್ಟಿದ್ದೇವೆ ಎನ್ನುವುದಕ್ಕೆ ವಿವರಗಳು ಈ ಕೆಳಗೆಕಂಡಂತಿವೆ :—

Area of land under submersion	29,390	hectares
Area released for rehabilitation	20,089	,,
Area given for cultivation	63,595	,,
Areas under mining	19,850	,,
Areas given to townships	1,531	,,
Areas given for other non-Agricultural purposes	4,477	,,

Total : 1,47,549 hectares or 3 lakhs 50 thousand acres.

ಇಷ್ಟಾದರೂ ಬಡವನಿಗೆ ತೃಪ್ತಿಯಾಗಿಲ್ಲ, ಬಡವನಿಗೆ ಇನ್ನೂ ಹೊಲ ಮುಟ್ಟಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಬಡವನಿಗೆ ಕೊಟ್ಟಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಬಡವನಿಗೆ ಸಿಗುವುದಿಲ್ಲ, ಏಕೆಂದರೆ ಪ್ರೊಸಿಜರ್ ಪ್ರಕಾರ ಬಡವನಿಗೆ ಗೋಮಾಳ ಲ್ಯಾಂಡ್ ಸಿಕ್ಕುತ್ತದೆ. ಹೊಲ ಕೊಡಲಿಕ್ಕೆ ಲ್ಯಾಂಡ್ ಗ್ರ್ಯಾಂಟ್ ಕಮಿಟಿ ಮಾಡಿದ್ದಾರೆ. ಅದರಲ್ಲಿ ಆಯಾ ಕ್ಷೇತ್ರದ ಎಲ್ಲಾ ಸದಸ್ಯರು ಇರುತ್ತಾರೆ. ಅದರಲ್ಲ ಬಡವನಿಗೆ ಹೊಲ ಕೊಡಲಿಕ್ಕೆ ಪ್ರಯತ್ನ ಮಾಡೋಣ. ಫಾರೆಸ್ಟ್ ಲ್ಯಾಂಡ್ ಅನ್ನು ಒಂದು ಎಕರೆ ಸಹಿತ ಕೊಡಬಾರದು ಎಂದು ಇದ್ದರೂ ಎಲ್ಲೆಲ್ಲಿ ಅತ್ಯಂತ ಅವಶ್ಯ ಇದೆಯೋ, ಎಲ್ಲಿ ಫಾರೆಸ್ಟ್ ಲ್ಯಾಂಡ್ ಕೊಡದಿದ್ದರೆ ಆ ಮನುಷ್ಯನ ಮನೆ ಹಾಳಾಗಿ ಹೋಗುತ್ತದೋ ಅಂಥ ಕಡೆ ಹೊಲ ಕೊಡುವುದಕ್ಕೆ ಪ್ರಯತ್ನ ಮಾಡೋಣ. ಇದರ ಅರ್ಥ ಹೇಳುವಾಗ, ಹೊಲಕ್ಕೆ ಫಾರೆಸ್ಟ್ ಲ್ಯಾಂಡ್ ಅನ್ನು ಬಿಡಬಾರದು ಎಂದಿದ್ದುದನ್ನು ಸರ್ಕಾರ ಬದಲಾವಣೆ ಮಾಡಿದೆ ಎಂದು ಯಾರೂ ತಿಳಿಯಬಾರದು. ಯಾರಿಗಾದರೂ ಈ ಭೂಮಿಯನ್ನು ಕೊಡದಿದ್ದರೆ, ಅವನು ನಿರ್ಗತಿಕನಾಗುತ್ತಾನೆ ಎಂದರೆ ಸರ್ಕಾರಕ್ಕೆ ಹಾನಿಯಾದರೂ ಪರವಾಗಿಲ್ಲ ಹೊಲ ಕೊಡೋಣ. ಹಣಕಾಸಿನ ಮಂತ್ರಿಗಳು ಒಪ್ಪುವುದಾದರೆ, ಕೆಲವೊಂದು ಎಕರೆ ಜಮೀನನ್ನು ಜಹಗೀರ್‌ದಾರರಿಂದ ಆಗಲೀ ಅಥವಾ ದೇಸಾಯಿಯವರ ಕಡೆಯಿಂದಾಗಲೀ ಖರೀದಿ ಮಾಡಿ, ಸರ್ಕಾರಕ್ಕೆ ತೆಗೆದುಕೊಂಡು ಫಾರೆಸ್ಟನ್ನು ಬೆಳೆಸಬೇಕು. ಫಾರೆಸ್ಟ್ ಅನೇಕ ಕಡೆ ನಾಶವಾಗಿದೆ ಎಂದು ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ದುರಾದೃಷ್ಟದಿಂದ ಅನೇಕ ಜನರಿಗೆ ಪರ್ಮಿಟ್ಟನ್ನು ಕೊಟ್ಟುಬಿಟ್ಟಿದ್ದಾರೆ, ಅದರಿಂದ ಫಾರೆಸ್ಟ್ ನಾಶವಾಗಿದೆ. ಅದಕ್ಕೆ ನಾನು ಭಾದ್ಯಸ್ಥನಲ್ಲ. ಹೇಗೆ ಇರಲಿ, ಯಾವುದೇ ರೀತಿಯಿಂದ ಹುಟ್ಟಿರಲಿ ತಂದೆ ತಾಯಿಗಳ ಪಾಪದಿಂದ ಹುಟ್ಟಿದ ಪಿಂಡವನ್ನು ಪಾಲಿಸುವುದು ಸರ್ಕಾರದ ಕರ್ತವ್ಯ. ಹಿಂದೆ ಮಾಡಿದ್ದು ಎಂದು/ತುಟ್ಟೀಕರಿಸಲಿಕ್ಕೆ ಆಗುವುದಿಲ್ಲ. ಇವತ್ತಿನ ದಿವಸ ನಾವು ವಿಚಾರ ಮಾಡುವಾಗ, ಬೆಳೆದುಬಂಥಂಥ ಇಂಡಸ್ಟ್ರೀಸ್‌ಗಳು, ಬೆಳೆದು ಬಂದಂಥ ಉದ್ಯೋಗಗಳನ್ನು ಮುಂದೆ ಬೆಳೆಸಲಿಕ್ಕೆ ಫಾರೆಸ್ಟ್ ಮೆಟೀರಿಯಲ್ ಇಲ್ಲ. ಫಾರೆಸ್ಟ್ ಮೆಟೀರಿಯಲ್ ಅನ್ನು ಸಮನಾಗಿ ಹಂಚಿಕೆಯಾಗಬೇಕು ಎಂದು ನಿಜವಾಗಿಯೂ ಆಲೋಚನೆ ಮಾಡಿದರೆ, ಫಾರೆಸ್ಟ್ ಮೆಟೀರಿಯಲ್ ಸಿಕ್ಕದೆ ಕೆಲವು ಉದ್ಯೋಗ ದಂದೆಗಳನ್ನು ಸದಾ ಮುಚ್ಚಬೇಕಾಗುತ್ತದೆ. ಹೀಗೆಯೇ ಹೋದರೆ ಅರಣ್ಯ ಸಂಪತ್ತನ್ನು ಬೆಳೆಸುವುದಕ್ಕಾಗುವುದಿಲ್ಲ. ಅದಕ್ಕಾಗಿ ಮುಂಜಾಗ್ರತೆ ವಹಿಸಿ ನಿಮ್ಮೆಲ್ಲರ ಸಹಕಾರ ಪಡೆದು ಅರಣ್ಯ ಸಂಪತ್ತನ್ನು ಬೆಳೆಸಬೇಕಾಗುತ್ತದೆ, ಇಲ್ಲದಿದ್ದರೆ ಹೊಸ ಉದ್ಯೋಗಗಳನ್ನು ಬಂದ್ ಮಾಡಬೇಕಾಗುತ್ತದೆ. ಶ್ರೀಮಾನ್ ಗುಂಡೂರಾವ್ ಅವರು ಹೇಳಿದಂಥ ವ್ಯಕ್ತಿಗೆ 2900 ಎಕರೆ ಜಮೀನನ್ನು ಯೋಚನೆ ಮಾಡದೆ ಕೊಟ್ಟುಬಿಟ್ಟಿದ್ದಾರೆ. ನಾನು ಕೂರ್ಗಗೆ ಪ್ರವಾಸ ಹೋದಾಗ ಇದು ಯಾರ ಫಾರಂ ಎಂದು ಕೇಳಿದೆ, ಕೇಳಿದ ಕೂಡಲೇ ಇಂಥ ವ್ಯಕ್ತಿಯದು ಸರ್ಕಾರದವರು ಸುಮಾರು 2900 ಎಕರೆ ಭೂಮಿಯನ್ನು ಆ ವ್ಯಕ್ತಿಗೆ ಕೊಟ್ಟಿದ್ದಾರೆ ಎಂದು ಹೇಳಿದರು. ಅಂದೆ ನಾನು ಒಂದು ಮಿನಿಟ್ ಅನ್ನು ಕಳುಹಿಸಿದೆ. ಆದರೆ ಆಗಲೇ 600 ಎಕರೆ ಭೂಮಿಯನ್ನು ಕೊಟ್ಟಿದ್ದರು, ಉಳಿದಂಥ 2300 ಎಕರೆ ಜಮೀನಿಗೆ ಸ್ಟೇ ಆರ್ಡರ್ ಕೊಟ್ಟಿದ್ದೇನೆ. ಆದ್ದರಿಂದ ಅದನ್ನು ಅವರು ಇನ್ನೂ ಆ ವ್ಯಕ್ತಿಗೆ ಕೊಟ್ಟಿಲ್ಲ. ಈ 600 ಎಕರೆಯೂ ಸಹ ಅಗ್ರಿಮೆಂಟ್ ಬ್ರೀಚ್ ಆಗಿದೆ ಎಂದು ಎಕ್ಸಾಮಿನ್ ಮಾಡುವುದಕ್ಕೆ ಹೇಳಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಯಾವ ಕಾರಣಕ್ಕಾಗಿ ಕೊಟ್ಟರು ?

ಶ್ರೀ ಕೆ. ಎಚ್. ಪಾಟೀಲ್.—ನಿಷ್ಕಾರಣವಾಗಿ 600 ಎಕರೆ ಕೊಟ್ಟರು ಅದನ್ನು ಸಹ ಪರಿಶೀಲನೆ ಮಾಡಲಿಕ್ಕೆ ಹೊರಟಿದ್ದೇನೆ. ಅದನ್ನು ಸರ್ಕಾರ ತಿರುಗಿ ಪಡೆಯಲಿಕ್ಕೆ ಸಾಧ್ಯವಿದೆಯೇ ಎಂದು ನೋಡುತ್ತಿದ್ದೇವೆ. ಅದು ಒಂದು ಉದಾಹರಣೆ ಗಮನಕ್ಕೆ ಬಂದಿದೆ. ಇಂಥ ಅನೇಕ ಮಹನೀಯರು 50 ಎಕರೆ 100 ಎಕರೆ ತೆಗೆದುಕೊಂಡು ಬೆಳೆಸಿಕೊಂಡು ಬಿಟ್ಟಿದ್ದಾರೆ. ಹೀಗೆ ಅಧಿಕಾರಸ್ಥರು ಕೊಟ್ಟಿದ್ದಾರೆ. ಅವರ ಮಾತು ಇವರು ಹೇಳುವ ಹಾಗಿಲ್ಲ. ಇವರ ಮಾತು ಅವರು ಹೇಳುವ ಹಾಗಿಲ್ಲ. ಯಾರು ಯಾರಿಗೆ ಕೊಟ್ಟಿದ್ದಾರೆಂದು ಹುಡುಕಬೇಕಾದರೆ ನಿಮ್ಮ ಸಹಕಾರಬೇಕು. ಲಿಂಗಪ್ಪನವರು ಇಂಥವರಿಗೆ ಕೊಡಿ ಎಂದು ಹೇಳಿ ಅವರಿಗೆ ಕೊಟ್ಟಿದ್ದರೂ ಹಣದ ಆಸೆಯಿಂದ ಅದನ್ನು ಆತ ಮಾರುತ್ತಾನೆ. ಅವನು ಮುಂದೆಯೂ ಲ್ಯಾಂಡ್‌ಲೆಸ್ ಆಗಿ ಇರುತ್ತಾನೆ. ಲ್ಯಾಂಡ್‌ಲೆಸ್ ಆಗಿ ಉಳಿಯುತ್ತಾನೆ. ರಾಜದ ದೃಷ್ಟಿ ನಮಗೆ ಹೆಚ್ಚು ಬೇಕು. ಇವೊತ್ತು ನಾನು ಮಂತ್ರಿಯಾಗಿ ಮಾತನಾಡುವುದು ಒಳ್ಳೆಯ ಹಿತಕರವಾಗಬಹುದು. ನೀವು ನಾಳೆ ದಿವಸ ಕೆಲವು ದಿವಸಗಳಾದಮೇಲೆ ನನ್ನ ಹೊಣೆಗಾರಿಕೆ ಸ್ಥಾನಕ್ಕೆ ಬಂದಾಗ, ನೀವು ರಾಜ್ಯ ಬರಿದುಮಾಡಿ ಹೋದಿರಿ ಎಂದು ಹಿಂದಿನ ಸರ್ಕಾರಕ್ಕೆ ಬಂದಂಥ ಟೀಕೆಗಳು ನನ್ನ ಮೇಲೆ ಬರುತ್ತದೆ. ಈ ಟೀಕೆ ಬರದಹಾಗೆ ನಡೆದುಕೊಳ್ಳಬೇಕು ಎನ್ನುವುದು ನನ್ನ ಉದ್ದಿಶ್ಯ.

ಇನ್ನು ಕಳ್ಳಸಾಗಾಣಿಕೆ ವಿಷಯವಾಗಿ ತಾವು ಹೇಳಿದ್ದೀರಿ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ವಿಮ್ಕೋ ಮ್ಯಾಚ್ ಕಂಪನಿ ಸಲುವಾಗಿ ಹೇಳಿದ್ದಾರೆ. ತಾತ್ವಿಕವಾಗಿ ನಮ್ಮ ರಾಜ್ಯದಲ್ಲಿ ಇಲ್ಲದೆ ಇದ್ದಂತ ಕೈಗಾರಿಕೆಗಳಿಗೆ ಏಕೆ ಸಹಾಯ ಮಾಡಬೇಕು ಎಂದು ನಮಗೂ ಅನಿಸುತ್ತದೆ. ಹೆಚ್ಚು ಇದ್ದಾಗ ಎಲ್ಲರಿಗೂ ಕೊಡೋಣ ಕಡಿಮೆ ಇರುವಾಗ ಏತಕ್ಕೆ ನಿಲ್ಲಿಸಬಾರದು ಅನ್ನಿಸುತ್ತದೆ. ಆದರೆ ಮೊದಲೇ ಅಗ್ರಿಮೆಂಟ್ ಮಾಡಿದ್ದಾರೆ. ಇದನ್ನು ರದ್ದು ಮಾಡುವುದಕ್ಕೆ ನನಗೆ ಮಿತಿ ಇದೆ ಆ ಮಿತಿಯನ್ನು ಮೀರಿ ಹೋಗುವುದಕ್ಕೆ ಬರುವುದಿಲ್ಲ. ಸಾಫ್ಟ್‌ವುಡ್ ಕೊಟ್ಟದ್ದನ್ನು ಹಾರ್ಡ್ ಉಡ್ ತೆಗೆದುಕೊಂಡಿದ್ದಾರೆಂದು ನಿಜವಾಗಿ ನನ್ನ ಗಮನಕ್ಕೆ ಬಂದಿದ್ದರೆ, ಅಂದೇ ಅಗ್ರಿಮೆಂಟ್ ರದ್ದು ಮಾಡುತ್ತಿದ್ದೆ. ಶ್ರೀ ಕಾಗೋಡು ತಿಮ್ಮಪ್ಪನವರಿಗೆ ಪ್ರಾರ್ಥನೆ ಮಾಡುತ್ತೇನೆ. ಯಾವುದೇ ದೃಷ್ಟಿಯಿಂದ ಸರ್ಕಾರದ ಗಮನವನ್ನು ತೆಗೆದುಕೊಳ್ಳುವಂತ ರೀತಿಯಲ್ಲಿ ನನ್ನ ಗಮನವನ್ನು ಸೆಳೆದರೆ ನಿಜವಾಗಿ ಉಗ್ರವಾದ ಕ್ರಮವನ್ನು ಅಗ್ರಿಮೆಂಟ್ ಇದ್ದರೂ ಸಹಿತ ತೆಗೆದುಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಲೀಸ್ ಪೀರಿಯೇಡ್ ಮುಗಿದಮೇಲೆ ಏನು ಮಾಡುತ್ತೀರಿ !

ಶ್ರೀ ಕೆ. ಎಚ್. ಪಾಟೀಲ್.—ನಮ್ಮ ರಾಜ್ಯದಲ್ಲಿ ಕಡಿಮೆ ಇರುವಾಗ ಮುಂದಿನದು ಕೊಡುವುದಿಲ್ಲ. ಈಗ ಇರುವ ಲೀಸ್ ರದ್ದು ಮಾಡಬೇಕಾದರೆ ಅದು ಬ್ರೀಚ್ ಆಫ್ ಅಗ್ರಿಮೆಂಟ್ ಆಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಒಂದು ಮರ ಕಡಿದರೆ 200 ಅಡಿ ಸುತ್ತಳತೆ ಕಾಡು ನಾಶ ಮಾಡುತ್ತಾರೆ. ಸೇಫ್ಟಿಮೆಷರ್ಸ್ ಅಪ್ಲೈ ಮಾಡಬೇಕು.

ಶ್ರೀ ಕೆ. ಎಚ್. ಪಾಟೀಲ್.—ಆ ಬಗ್ಗೆ ಅಧಿಕಾರಸ್ಥರು ಸೂಕ್ತ ನಿಗಾ ಇಡುವ ಸಲುವಾಗಿ ತಿಳಿಸುತ್ತೇನೆ. ಇಷ್ಟು ಮಾತ್ರ ಹೇಳಬಲ್ಲೆ ಕಳ್ಳಸಾಗಾಣಿಕೆ ವಿಷಯವಾಗಿ ಗಮನೀಯವಾದ ಸಲಹೆ ಮಾಡಿದ್ದೀರಿ. ಇನ್ನು ಗಣನೀಯವಾಗಿ ಸಹಾಯ ಅಪೇಕ್ಷೆ ಮಾಡಿದ್ದೆ. ಚೆಕ್‌ಪೋಸ್ಟು ಸಲುವಾಗಿ ಯಾವ ರೀತಿ ಸಲಹೆ ಮಾಡುತ್ತೀರಿ ಎಂದು ನೋಡುತ್ತಿದ್ದೆ. ಕಳ್ಳಸಾಗಾಣಿಕೆ ಸಂಬಂಧದಲ್ಲಿ ಹುಬ್ಬಳ್ಳಿಯಲ್ಲಿ ಇರುವವರೊಬ್ಬರಿಗೆ ಟೀಕೆ ಮಾಡಿದ್ದೀರಿ ಅದು ಅಧಿಕಾರಿಯು ಕೊಟ್ಟ ವರದಿಯಲ್ಲಿ ಇದೆ. ಮುಖ್ಯವಾಗಿ ಆ ಗ್ಯಾಂಗಿಗೆ ಸಂದಂಧಿಸಿದ ಗ್ಯಾಂಗಸ್ಟರ್ ಹುಬ್ಬಳ್ಳಿಯಲ್ಲಿ ಇದ್ದಾನೆಂದು ಹೇಳಿದ್ದಾರೆ. 10-15 ವರ್ಷಗಳಾಯಿತು ಅವನ ಮೇಲೆ ಅಪಾದನೆ ಒಳಗೊಳಗೆ ಇದ್ದರೂ ಅವನು ತಪ್ಪಿಸಿಕೊಳ್ಳುತ್ತಿದ್ದಾನೆ. ಅಧಿಕಾರಿಗಳು ಹೋಗಬೇಕು ಅವನು ಇರುವುದು ಬಾಂಬೆ ಅಥವಾ ಡೆಲ್ಲಿಯಲ್ಲಿ ಖೂನಿ ಪತ್ತೆ ಮಾಡಲು ಮುತುವರ್ಜಿ ವಹಿಸಿ ಕಂಡುಹಿಡಿಯುವ ರೀತಿಯಲ್ಲಿ ಚಳುವಳಿ ನಡೆದಿದೆ. ಶಿವಮೊಗ್ಗಾ ಜಿಲ್ಲೆಯಲ್ಲಿ ಕೆಲವು ಹಳ್ಳಿಯವರು ಸರ್ಕಾರಕ್ಕೆ ಸಹಕಾರ ಕೊಟ್ಟಿದ್ದಾರೆ. ಕೆಲವು ಮಾನ್ಯ ಸದಸ್ಯರು ಟೀಕೆ ಮಾಡುತ್ತಾ ಕಾಡು ಬೇಕಾದಂತೆ ಕಡಿದು ಹಾಕಿದುದರಿಂದ ಅದು ಕಡಿಮೆಯಾಗಿದೆ ಎಂದು ಹೇಳಿದರು ನಿಜ. ಆದರೆ ಗಂಧದ ಕಟ್ಟಿಗೆಯಲ್ಲಿ\ ಎಣ್ಣೆ ಎಲ್ಲಿ ಇರುತ್ತದೆ ಎನ್ನುವ ಪ್ರತ್ಯಕ್ಷ ಅನುಭವ ಅಗತ್ಯ. ಖುದ್ದಾಗಿ ನಾನು ಕಾಡನ್ನು ಸಂದರ್ಶಿಸಿ ಬಂದಿದ್ದೇನೆ. ಸಂದರ್ಶಿಸಿ ನೋಡಿದಾಗ ಕಳುವು ಮಾಡಿಕೊಂಡು ಹೋದ ಗಿಡದ ಮೇಲುಭಾಗ ಕಡಿದಿದ್ದಾರೆ. ಕಡಿಯಬೇಕಾಗಿದ್ದದ್ದು ಬಹಳ ಇದೆ. ಮೇಲು ಬಾಗ ಏನು ಕಡಿದಿದ್ದಾರೆ ಅದರಲ್ಲಿ ಗಂದದ ಎಣ್ಣೆಗೆ ಬೇಕಾಗುವಂತೆ ಹೆಚ್ಚು ಕಡಿಮೆ ಇದೆ. ಹೆಚ್ಚು ಕೆಚ್ಚು ಇರುವುದು ಕೆಳಗಿನ ಬಾಗದಲ್ಲಿ ಅವನ್ನು ಪಂಚನಾಮ ಮಾಡಿ ಹಿಡಿದಿದ್ದಾರೆ. ಕಡಿದುಕೊಂಡು ಹೋಗಿ ಬಿಟ್ಟಂತೆ ಮೋಟುಗಳು ಎಷ್ಟು ಹಿಡಿದಂಥ ಕಟ್ಟಿಗೆ ಎಷ್ಟು ಎಂದು ವರದಿ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ದುಡ್ಡು ಎಷ್ಟು ಖರ್ಚುಮಾಡದ್ದೀರಿ ?

ಶ್ರೀ ಕೆ. ಎಚ್. ಪಾಟೀಲ್.—ತಾವು ಇದುವರೆಗೆ ಮಾಡಿರುವ ವರದಿಯನ್ನು ಒಪ್ಪಿಸುತ್ತೇನೆ. ದುಡ್ಡು ಎಷ್ಟು ಖರ್ಚಾಗಿದೆ ಎಂದರೆ 2-3 ಸಾವಿರ 4 ಸಾವಿರ ಆಗಿದ್ದರೆ ಪಗಾರ ಸೇರಿ ಹೆಚ್ಚು ಆಗಬಹುದು. ಆದರೆ ಬರತಕ್ಕ ಹಣ 30 ಸಾವಿರ ಎಂದು ಹೇಳಿದರೆ, ಅದು ಅಕ್ಷನ್‌ನಲ್ಲಿ 8 ಸಾವಿರಕ್ಕೆ ಇಳಿದಿದೆ. ಟ್ರಿಕ್ ಮಾಡ ತ್ತಾರೆ. ಟ್ರಿಕ್ ಮಾಡಿರುವುದು ನಮ್ಮ ನಜರಿಗೆ ಬಂದ ತಕ್ಷಣ ಅಕ್ಷನ್ ರದ್ದು ಮಾಡಿದೆ. ಎಷ್ಟು ಬೆಲೆ ಬರುತ್ತದೆ ಎಂಬುದನ್ನು ಸ್ವಲ್ಪ ದಿವಸ ಕಾದು ನೋಡಿ ಉಳಿದ ಗಂಧದ ಕಟ್ಟಿಗೆಗೆ ಕಡಿಮೆ ಬರುವುದಕ್ಕೆ ಆಗುವುದಿಲ್ಲ. ತೂಕದ ಆದಾರದಿಂದ ಎಣ್ಣೆ ಪರ್ಸೆಂಟೇಜ್ ನಿಗದಿ ಮಾಡುತ್ತಾರೆ, ಯಾವ ಬಾಗಕ್ಕೂ ಸಹಿತ ಕಡಿದು ಗುಡ್ಡೆ ಇಟ್ಟಂಥ ಗಂಧದ ಕಟ್ಟಿಗೆ 50 ಲಕ್ಷಕ್ಕೆ ಕಡಿಮೆ ಬರುವುದಕ್ಕೆ ಸಾಧ್ಯವಿಲ್ಲ. ರಾಜ್ಯದ ಇದುವರೆಗೆ ಎಲ್ಲಾ ಭಾಗದಿಂದ ಕಳಿಸಿರತಕ್ಕ ಕಟ್ಟಿಗೆಯನ್ನು ಹಿಡಿದಿದ್ದೇವೆ ರೋಸ್ ಉಡ್ ತೆಗೆದುಕೊಂಡು ಹೋಗುವಂತ ಟ್ರಕ್ಕುಗಳನ್ನು ಹಿಡಿದಿದ್ದೇವೆ. ಎಲ್ಲಾ ಕೂಡಿದರೆ ಒಂದು ಕೋಟಿ ರೂಪಾಯಿ ಕಡಿಮೆ ಇಲ್ಲದಷ್ಟು ಆದಾಯ ಸರ್ಕಾರಕ್ಕೆ ಹುಟ್ಟಿದೆ

(ಶ್ರೀ ಕೆ. ಎಚ್. ಪಾಟೀಲ್)

ಎಂಬ ಮಾತು ಹೇಳಿದರೆ ಶಹಬಾಸ್‌ಗಿರಿ ಪಡೆಯುಲಕ್ಕೆ ಹೇಳುತ್ತೇನೆಂದು ಭಾವಿಸಬಾರದು. ಒಂದು ಕೋಟಿ ರೂಪಾಯಿ ಕಳ್ಳಸಾಗಾಣಿಕೆ ನಡೆದಿದೆ. ಇನ್ನು ಹೆಚ್ಚಿನದು ನಡೆಯುತ್ತಿದೆ. ಅದನ್ನು ಬಂದ್ ಮಾಡಬೇಕು. ನಾವು ನೀವು ಕೂಡಿ ಸಹಕರಿಸಿ ಮಾಡಬೇಕು. ಶಹಬಾಸ್‌ಗಿರಿ ಒಬ್ಬರಿಗೇ ಅಲ್ಲ. ಅದು ಎಲ್ಲರಿಗೂ ಬರಬೇಕಾಗುತ್ತದೆ. ಅಧಿಕಾರಸ್ಥರು ಹಿಡಿದವರಿಗೂ ಬರಬೇಕಾಗುತ್ತದೆ. ಕಳ್ಳಸಾಗಾಣಿಕೆ ಹಿಡಿಯುಲು ಸಹಕಾರ ಮಾಡಿದ ಹಳ್ಳಿ ಜನರಿಗೂ ಶಹಬಾಸ್‌ಗಿರಿ ಕೊಡಬೇಕು. ಅಧಿಕಾರಸ್ಥರು ಇನ್ನೊಬ್ಬರ ಮೇಲೆ ಹೇಳಿದಂಥ ದೂರಿನ ಆಧಾರದ ಮೇಲೆ ತಪಾಸಣೆ ಮಾಡಿದ್ದಾರೆ. ನಾನ್ ಅಫಿಷಿಯಲ್ಸ್ ಟೆಲಿಫೋನ್ ಮುಖಾಂತರ ಪತ್ರದ ಮುಖಾಂತರ ಹೇಳಿದ್ದಾರೆ. ಖಾಸಗಿ ಯವರು ಆ ರೀತಿ ವರ್ತಮಾನ ಕಳುಹಿಸಿದಾಗ 100 ರಲ್ಲಿ 97 ಕ್ಕಿಂತ ಹೆಚ್ಚಿನದು ಸತ್ಯ ಎಂದು ಕಂಡು ಬಂದಿದೆ. ಅಂಥ ಅಧಿಕಾರಿಗಳಿಗೆ ಮತ್ತು ಅಧಿಕಾರೇತರರಿಗೆ ಬಹುಮಾನ ಕೊಡುವುದು ನನ್ನ ಗಮನ ದಲ್ಲಿದೆ. ಮುಖ್ಯಮಂತ್ರಿಗಳು ಕೂಡಿ, ಮಾತನಾಡಿದ್ದೇನೆ. ತಪಾಸಣೆ ಮುಗಿದ ನಂತರ, ಕಾಲ ನೋಡಿಕೊಂಡು, ಯೋಗ್ಯವಾದ ಬಹುಮಾನ ಎಲ್ಲರ ಗಮನಕ್ಕೆ ತಂದುಕೊಡಬೇಕೆಂದು ಇಚ್ಛೆ ಇದೆ. ಅಧಿಕಾರಸ್ಥರು ಸಹಿತ ಕೆಲವು ಜನರನ್ನು ಸಸ್‌ಪೆಂಡ್ ಮಾಡಿದ್ದೇನೆ. ಸಸ್‌ಪೆಂಡ್ ಆಗದೆ ಇರುವ ಅಧಿಕಾರಸ್ಥರು ಇನ್ನೂ ಅನೇಕ ಜನರು ಇದ್ದಾರೆ. ಸಸ್‌ಪೆಂಡ್ ಆಗದೇ ಇರುವವರು ನಿರ್ಮೂಲವಾಗಿದ್ದಾರೆಂದು ನಾನು ಹೇಳುವುದಿಲ್ಲ. ಇದರಲ್ಲಿ ಕದೀಮರೂ ಇದ್ದಾರೆ ಎಲ್ಲರೂ ಅಪ್ರಾಮಾಣಿಕ ರೆಂದು ಹೇಳುವುದಿಲ್ಲ. ಅದರಲ್ಲಿ ಪ್ರಾಮಾಣಿಕಸ್ಥರೂ ಇದ್ದಾರೆ. ಬಹು ಜನರು ಫಾರೆಸ್ ಡಿಪಾರ್ಟ್‌ಮೆಂಟನ್ನು ಎಸಿಯಿ ನಂಬರ್ 2 ಎಂದು ಕಾಣಲಿಕ್ಕೆ ಹತ್ತಿದ್ದಾರೆ. ಇದನ್ನು ಬದಲಾವಣೆ ಮಾಡಬೇಕು ನಿಮ್ಮ ಟೀಕೆ ಔಚಿತ್ಯ ಮತ್ತು ನಿಮ್ಮ ಟೀಕೆಯ ಉಗ್ರತೆಯನ್ನು ಅಧಿಕಾರ ವರ್ಗ ಗಮನಿಸುತ್ತದೆ. ಏನಾದರೂ ಅವರ ಮನಸ್ಸಿನ ಬದಲಾವಣೆ ಮಾಡಿಕೊಂಡು ಒಂದು ಪುನರ್ ಜೀವನ ಫಾರೆಸ್ಟ್ ಡಿಪಾರ್ಟ್‌ಮೆಂಟಿನಲ್ಲಿ ಆಗಲಿಕ್ಕೆ ಅವಕಾಶ ವಾಗುತ್ತದೆಂದು ಪ್ರಾರ್ಥನೆ ಮಾಡೋಣ. ಆದರೆ ನಾನು ಇವತ್ತಿನ ದಿವಸ ಸಂಪೂರ್ಣ ವಾಗಿ ಅರಣ್ಯ ಇಲಾಖೆಯನ್ನು ನಿರ್ಮೂಲ ಮಾಡುತ್ತೇನೆ, ಪವಿತ್ರವಾದ ಇಲಾಖೆಯನ್ನಾಗಿ ಮಾಡುತ್ತೇನೆ ಎನ್ನುವ ಉದ್ಧಟತನಕ್ಕೆ ನಾನು ಹೋಗುವುದಿಲ್ಲ. ನಾನು ಸಾಧ್ಯವಾದಮಟ್ಟಿಗೆ ಮಾಡುತ್ತೇನೆ ಮತ್ತು ಹೆಚ್ಚಿನ ಪ್ರಯತ್ನ ಮಾಡುತ್ತೇನೆ ಎಂದು ಮಾತ್ರ ಹೇಳುತ್ತೇನೆ. ಇದಕ್ಕಿಂತ ಹೆಚ್ಚು ಹೇಳುವುದಿಲ್ಲ. ಕಳ್ಳತನದ ಸಾಗಾಣಿಕೆ ಏನು ನಡೆಯುತ್ತಿದೆ ಅದರ ಬಗ್ಗೆ ಉಗ್ರ ಕ್ರಮ ತೆಗೆದುಕೊಳ್ಳುವುದು ಅವಶ್ಯಕವಿದೆ. ಅದಕ್ಕಾಗಿ ನಾನು ಎಲ್ಲೆಲ್ಲ, ಯಾವ ಯಾವ ಕಡೆಗೆ ಪ್ರವಾಸ ಹೋಗುತ್ತೇನೆ ಆಗ ಸಪ್ರೈಸ್ ವಿಜಿಟ್ ಮಾಡುತ್ತೇನೆ. ಮೊನ್ನೆ ನಾನು ಹುಣಸೂರಿಗೆ ಹೋದಾಗ ಅಲ್ಲಿಯ ಸಾಮಿಲ್‌ನವರು 18 ತಿಂಗಳಿಂದ ಲೆಕ್ಕವನ್ನೇ ಇಟ್ಟಿರಲಿಲ್ಲ. ನಾನು ಮಂತ್ರಿಯಾಗಿ ಹೇಳು ತ್ತಿದ್ದೇನೆ, ಏನೆಂದರೆ, ಇಂತಹ ಸಾಮಿಲ್‌ಗಳನ್ನು ನಂಬಿಕೊಂಡು ನಮ್ಮ ಸರ್ಕಾರ ಇರುವುದಾದರು ಹೇಗೆ ! ಮಾನ್ಯ ಸದಸ್ಯರಾರೂ ಈ ವಿಷಯವನ್ನು ಹೇಳಿದ್ದರೂ ಸಹ ನಾನೇ ಹೇಳುತ್ತಿದ್ದೇನೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಯನ್ನು ಕೂಡಲೇ ನಾನು ಸಸ್ಪೆಂಡ್ ಮಾಡಬೇಕಾಯಿತು. ಸಸ್ಪೆಂಡ್ ಆದ ವ್ಯಕ್ತಿ ತಮ್ಮಂತಹವರ ಹತ್ತಿರ ಬಂದು ನಾನು ಹೊಸದಾಗಿ ಕೆಲಸಕ್ಕೆ ಬಂದಿದ್ದೆ, ಆ ಸಾಮಿಲ್‌ನ ಲೆಕ್ಕಕ್ಕೂ ನನಗೂ ಏನೂ ಸಂಬಂಧವಿಲ್ಲ, ಕೆ. ಎಚ್. ಪಾಟೀಲರು ತಮ್ಮ ಕಡೆಯವರನ್ನು ಅಲ್ಲಿಗೆ ಹಾಕುವುದರ ಸಲುವಾಗಿ ನನ್ನನ್ನು ಸಸ್ಪೆಂಡ್ ಮಾಡಿದ್ದಾರೆಂದು ಹೇಳಬಹುದು. ಅಂತಹ ಪ್ರಸಂಗ ಬಂದಾಗ ಮಾನ್ಯ ಸದಸ್ಯರು ತಮ್ಮ ಕಿವಿಯನ್ನು ಮತ್ತು ಹೃದಯವನ್ನು ಸಮರ್ಪಕ ವಾದಂಥ ರೀತಿಯಿಂದ ತೂಗಿ ನೋಡಿ, ಅಂತಹ ಅಧಿಕಾರಿಗಳ ಟೀಕೆಗೆ ಮಹತ್ವ ಕೊಡಬಾರದೆಂದು ತಮ್ಮಲ್ಲಿ ನಿವೇದನೆ ಮಾಡುತ್ತಿದ್ದೇನೆ. ಲಂಚಗುಳಿತನವನ್ನು, ಭ್ರಷ್ಟಾಚಾರವನ್ನು ತೊಡೆದು ಹಾಕುವುದಕ್ಕೆ ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲೆಲ್ಲಾ ಉಗ್ರವಾಗಿ ಕ್ರಮವನ್ನು ಕೈಕೊಳ್ಳುತ್ತಿದ್ದೇನೆ. ಅದಕ್ಕೆ ನಮ್ಮ ಮುಖ್ಯಮಂತ್ರಿಗಳಿಂದ ಹಿಡಿದು ಎಲ್ಲರೂ ಸಹಾಯಕರಾಗಿದ್ದಾರೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

11-30 A.M.

ಮಲೆನಾಡಿನ ಪ್ರಿವಿಲೇಜಸ್ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರು ಕೆಲವು ಮಾತುಗಳನ್ನು ಹೇಳಿದ್ದಾರೆ. ನಾರ್ತ್‌ಕೆನರಾ ಏರಿಯಾ ಮತ್ತು ಮಲೆನಾಡು ಪ್ರದೇಶಗಳಲ್ಲಿರುವ ಜನರಿಗೆ ಕೆಲವು ಸೌಕರ್ಯಗಳನ್ನು ಅನಾದಿ ಕಾಲದಿಂದ ಕೊಟ್ಟುಕೊಂಡು ಬರಲಾಗುತ್ತಿತ್ತು. ಈ ಸೌಕರ್ಯ ಗಳನ್ನು ಕೊಡುವ ಬಗ್ಗೆ ನಮ್ಮ ರಾಜ್ಯದಲ್ಲಿ ನಾನಾ ಭಾಗಗಳಿಗೆ ಅನ್ವಯವಾಗುವಂತೆ ಬೇರೆ ಬೇರೆ

ಕಾಯಿದೆಗಳಿದ್ದವು. ಈ ಎಲ್ಲ ಕಾಯಿದೆಗಳನ್ನು ಸೇರಿಸಿ ಏಕರೂಪತೆ ಮಾಡಬೇಕೆಂಬ ದೃಷ್ಟಿಯಿಂದ ಮೊನ್ನೆ ಹೊಸದಾಗಿ ಒಂದು ಜಿ. ಓ. ಅನ್ನು ಹೊರಡಿಸಿದ್ದೇವೆ. ಅದರ ಪ್ರಕಾರ ಯಾವ ಯಾವ ಏರಿಯಾದವರಿಗೆ ಎಷ್ಟೆಷ್ಟು ಸೌಕರ್ಯ ಕೊಡಬೇಕು ಎಂಬುದನ್ನು ಅದರಲ್ಲಿ ನಮೂದಿಸಲಾಗಿದೆ. ಅದನ್ನು ಓದುವುದಕ್ಕೆ ಸಮಯ ಇಲ್ಲವಾದ್ದರಿಂದ ಅದನ್ನು ಸಭೆಯ ಟೇಬಲ್ ಮೇಲೆ ಇಡುತ್ತೇನೆ. ಅದನ್ನು ಮಾನ್ಯ ಸದಸ್ಯರು ನೋಡಿ ಏನಾದರು ಬದಲಾವಣೆ ಮಾಡುವುದು ಇದ್ದರೆ, ಅದನ್ನು ನನ್ನ ಗಮನಕ್ಕೆ ತಂದರೆ ಸೂಕ್ತ ಬದಲಾವಣೆ ಮಾಡುವುದಿದ್ದರೆ ಮಾಡೋಣ. ಹರಿಜನರಿಗೆ ಕಟ್ಟಿಗೆ ಕೊಡುವ ವಿಷಯವನ್ನು ಕೆಲವು ಮಾನ್ಯ ಸದಸ್ಯರು ಹೇಳಿದರು. ಹರಿಜನರಿಗೆ ಕೊಡುತ್ತಿದ್ದ ಕಟ್ಟಿಗೆ ಸೌಕರ್ಯವನ್ನು ಅವರ ಹೆಸರಿನಲ್ಲಿ ಸಮಾಜದ್ರೋಹಿಗಳು ಲಕ್ಷಗಟ್ಟಲೆ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಈ ರೀತಿ ದುರುಪಯೋಗವಾಗ ಬಾರದು, ಅವರಿಗೆ ಕೊಡುವುದು ಅವರಿಗೇ ಮುಟ್ಟುವಂತಾಗಲು, ಮರದಿಂದ ಕಿಟಕಿ ಮತ್ತು ಬಾಗಿಲುಗಳನ್ನು ತಯಾರಿಸಿ ಅವರಿಗೆ ಮುಟ್ಟಿಸುವುದು ಒಳ್ಳೆಯದು ಎಂಬ ಬಗ್ಗೆ ಸರ್ಕಾರದವರು ತೀವ್ರವಾದಂಥ ಪರಿಶೀಲನೆ ಮಾಡುತ್ತಿದ್ದಾರೆ. ಇದರ ಬಗ್ಗೆ ತಮ್ಮೆಲ್ಲರ ಅಭಿಪ್ರಾಯವನ್ನು ತಿಳಿದುಕೊಂಡು ಮತ್ತು ವಿರೋಧಪಕ್ಷದ ನಾಯಕರೊಡನೆ ವಿಚಾರ ಮಾಡಿ ಒಂದು ಸೂಕ್ತವಾದ ನಿರ್ಣಯವನ್ನು ಸರ್ಕಾರ ಹೊರಡಿಸುತ್ತದೆಂದು ಹೇಳುತ್ತೇನೆ.

ಮಾನ್ಯ ಸದಸ್ಯರು ಅಧಿಕಾರಿಗಳ ಬಗ್ಗೆ ಮಾತನಾಡುತ್ತಾ, ಅಧಿಕಾರಿಗಳಿಗೆ ಹೆಚ್ಚಿನ ರೀತಿಯ ಪ್ರಮೋಷನ್ ಇಲ್ಲ, ಹರಿಜನರಿಗೆ ಸೂಕ್ತವಾದಂಥ ಪ್ರಾತಿನಿಧ್ಯ ಇಲ್ಲ ಎಂದು ಹೇಳಿದ್ದಾರೆ ಈ ಬಗ್ಗೆ ಸೂಕ್ತವಾದ ಕಾರ್ಯಕ್ರಮಗಳನ್ನು ಕೈಕೊಳ್ಳುತ್ತೇವೆ. ಹರಿಜನರಿಗೆ ರಾಜ್ಯಾಂಗದ ಪ್ರಕಾರ ಎಲ್ಲ ಕಡೆಗಳಲ್ಲಿಯೂ ಪ್ರಾತಿನಿಧ್ಯ ಕೊಡುವುದಕ್ಕೆ ತೀವ್ರವಾದಂಥ ಕ್ರಮವನ್ನು ಕೈಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

Sri C. M ARUMUGAM.—The Director of Agriculture is noe moving about. He has not visited certain Centres. For instance, ht has not visited the Rural Centres in Mandya and Dharwar. He has not visited them ever since he took over as Director. Because he is not touring, the Department is not functioning effectively. The Hon'ble Minister has not touched that point.

ಶ್ರೀ ಕೆ. ಎಚ್. ಪಾಟೀಲ್.—ಮಂಡ್ಯ ಮತ್ತು ಧಾರವಾಡದ ಟ್ರೈನಿಂಗ್ ಕಾಲೇಜ್‌ಗಳಲ್ಲಿ ಯೋಗ್ಯವಾದಂಥ ಬದಲಾವಣೆ ಮಾಡಬೇಕೆಂದು ಮಾನ್ಯ ಸದಸ್ಯರು ಸಲಹೆ ಮಾಡಿದ್ದಾರೆ. ಮತ್ತು ಈ ಬಗ್ಗೆ ಡೈರೆಕ್ಟರ್ ಅವರು ತೀವ್ರವಾದಂಥ ಕಾರ್ಯಕ್ರಮ ಕೈಕೊಂಡಿಲ್ಲವೆಂದು ಹೇಳಿದ್ದಾರೆ. ಇದರ ಬಗ್ಗೆ ನಾನೇ ಸ್ವತಃ ಪರಿಶೀಲನೆ ಮಾಡಿ ಅವಶ್ಯಕವಾದಂಥ ಕ್ರಮಗಳನ್ನು ತೆಗೆದುಕೊಳ್ಳುವುದಿದ್ದರೆ ಅದನ್ನು ತೆಗೆದುಕೊಳ್ಳುತ್ತೇನೆ. ಒಕ್ಕಲುತನದ ಸುಧಾರಣೆಯ ಬಗ್ಗೆ ಅರಣ್ಯದ ಸಿರಿಸಂಪತ್ತನ್ನು ಕಾಪಾಡುವುದರ ಸಲುವಾಗಿ, ತೋಟಗಾರಿಕೆ ಇಲಾಖೆಯಿಂದ ಜನರಿಗೆ ಎಲ್ಲ ಸೌಕರ್ಯಗಳು ಸಿಗುವಂತಾಗಲು ತಮ್ಮೆಲ್ಲರ ಸಹಕಾರವನ್ನು ಮತ್ತೊಮ್ಮೆ ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಕೊಟ್ಟ ಉತ್ತರಕ್ಕಾಗಿ ಅಭಿನಂದಿಸುತ್ತೇನೆ. ಬಹಳ ಚೆನ್ನಾಗಿ ಉತ್ತರ ಕೊಟ್ಟರು. ಅವರ ನಿಷ್ಠೆಯ ಬಗ್ಗೆ ನಾನು ಪ್ರಶ್ನೆ ಮಾಡುತ್ತಿಲ್ಲ. ಅವರು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ ಒಳ್ಳೆಯ ಕೆಲಸ ಮಾಡಿದ್ದಾರೆ. ಆದರೆ ಒಂದು ಕಡೆ ಎಡವಿದ್ದಾರೆ. ಈ ಇಲಾಖೆಯನ್ನು ಸ್ವಚ್ಛಗೊಳಿಸಬೇಕೆಂಬ ಕಾತುರತೆ ನಿಮ್ಮಲ್ಲಿ ಇದೆ. ಅದಕ್ಕಾಗಿ ಅಭಿನಂದಿಸುತ್ತೇನೆ. ಆದರೆ ಬಡ್ಜೆಟ್ ಸೆಷನ್ ಡಿಸ್‌ಕಷನ್ ಆಗುತ್ತಿರುವ ಸಂದರ್ಭದಲ್ಲಿ ವ್ಯವಸಾಯ ವಿಶ್ವವಿದ್ಯಾನಿಲಯದ ಬೋರ್ಡ್ ಆಫ್ ರೀಜೆಂಟ್‌ಗೆ ಒಬ್ಬರನ್ನು ನಾಮಿನೇಟ್ ಮಾಡಿದ್ದೀರಿ. ಆ ವ್ಯಕ್ತಿಯ ಇತಿಹಾಸವನ್ನು ತಾವು ಸಮರ್ಥನೆ ಮಾಡುವುದಾದರೆ ನನ್ನ ಅಡ್ಡಿಯಿಲ್ಲ. ಮತ್ತು ಇವರನ್ನು ನಾಮಿನೇಟ್ ಮಾಡಿರುವುದರಿಂದ ಈ ಇಲಾಖೆಯ ಸ್ವಚ್ಛತೆ ಸಹಕಾರಿಯಾಗುತ್ತದೆಯೇ ಎಂಬುದನ್ನು ತಾವು ಸಮರ್ಥನೆ ಮಾಡುತ್ತೀರಾ ಎಂಬುದನ್ನು ಹೇಳಬೇಕು. ಎರಡನೆಯದಾಗಿ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ಗೆ ಇಬ್ಬರು ಖಾಸಗೀ ವ್ಯಕ್ತಿಗಳನ್ನು ನಾಮಿನೇಟ್ ಮಾಡಿದ್ದೀರಿ. ಇದರ ಅವಶ್ಯಕತೆ ಏನಾದರೂ ಇತ್ತೇ? ತಮ್ಮ ಪಕ್ಷದವರ ಅತೃಪ್ತಿಗೆ ಇಂಬು ಕೊಡಬಾರದೆಂದು ಈ ಕೆಲಸಕ್ಕೆ ಕೈಹಾಕಿದ್ದೀರಿ ಎಂದು ಹೇಳಬೇಕಾಗುತ್ತದೆ. ಆದ್ದರಿಂದ ಈ ವಿಷಯಗಳಿಗೆ ತಾವು ಉತ್ತರ ಕೊಡಬೇಕು.

ಶ್ರೀ ಎಸ್. ವೈ. ಪಾಟೀಲ್ (ಸಿಂದಗಿ).—ರೈತರ ಮಹತ್ತರವಾದ ಸಮಸ್ಯೆಗೆ ತಾವು ಉತ್ತರ ಕೊಡಲಿಲ್ಲ. ರೈತರು ಬೆಳೆದ ಬೆಳೆಗೆ ಸರಿಯಾದಂಥ ಬೆಲೆ ಸಿಗುತ್ತದೆಂಬ ಗ್ಯಾರಂಟಿ ಇಲ್ಲವಾಗಿ, ರೈತರು ಆ ಬಗ್ಗೆ ನಿಸ್ಸಹಾಯಕರಾಗಿದ್ದಾರೆ. ಈ ಬಗ್ಗೆ ರೈತರ ಪರಿಸ್ಥಿತಿ ಚಿಂತಾಜನಕವಾಗಿದೆ. ಯಾವ ಮಾಲು ಬೆಳೆದರೆ ಹೆಚ್ಚು ಬೆಲೆ ಸಿಗುತ್ತದೆ ಎಂಬುದನ್ನು ರೈತರು ವಿಚಾರ ಮಾಡಬೇಕಾಗಿದೆ. ಇದನ್ನು ತಪ್ಪಿಸಲು ರೈತರು ಬೆಳೆದ ಎಲ್ಲ ರೀತಿಯ ಬೆಳೆಗೂ ಗ್ಯಾರಂಟಿ ಇರಬೇಕು. ಇದರ ಕಡೆಗೆ ಸರ್ಕಾರದವರು ವಿಚಾರ ಮಾಡಬೇಕು.

ಶ್ರೀ ಕೆ. ಪ್ರಭಾಕರ್ (ವರ್ತೂರು).—ಬೇಸಾಯಕ್ಕೆ ಸಂಬಂಧಪಟ್ಟಹಾಗೆ ಸರ್ಕಾರದವರು ಒದಗಿಸತಕ್ಕಂಥಾ ಪ್ರತಿಯೊಂದು ಸೌಲಭ್ಯಗಳು ಏನೇನು ಇವೆಯೋ ಅವುಗಳನ್ನು ಅವನಿಗೆ ಸಕಾಲಕ್ಕೆ ದೊರೆಯುವ ಹಾಗೆ ಮಾಡಬೇಕು.

ಡೆಮಾನ್‌ಸ್ಟ್ರೇಷನ್ ಫಾರಂಗಳನ್ನು ಸರ್ಕಾರದವರು ಏನು ಮಾಡಿಸುತ್ತಿದ್ದಾರೆ, ಆ ಫಾರಂ ಗಳನ್ನು ಮಾಡುವುದಕ್ಕೆ ಬಡವರಿಗೆ ಅವಕಾಶ ಮಾಡಿಕೊಡಬೇಕು.

ಹಾರ್ಟಿಕಲ್‌ಚರಲ್ ಮತ್ತು ಅಗ್ರಿಕಲ್‌ಚರಲ್ ಡಿಪಾರ್ಟ್‌ಮೆಂಟ್‌ಗಳನ್ನು ಸಂಪೂರ್ಣವಾಗಿ ಬೇರ್ಪಡಿಸಿ ಅವು ಒಂದು ವ್ಯವಸ್ಥಿತವಾದ ರೀತಿಯಲ್ಲಿ ನಡೆಯುವ ಹಾಗೆ ಮಾಡಬೇಕು.

ಫಾರೆಸ್ಟ್ ಜಮೀನು ಬಡವರಿಗೆ ಸಿಕ್ಕುವುದು ಕಷ್ಟವಾಗಿರುವುದರಿಂದ, ಫಾರೆಸ್ಟ್ ಲ್ಯಾಂಡಿನಲ್ಲಿ ಎಂ.ಸಿ.ಆರ್.ಪಿ. ಯೋಜನೆಯಲ್ಲಿ ಕೋ-ಆಪರೇಟಿವ್ ಫಾರ್ಮಿಂಗ್ ಕಾಲೋನಿಗಳನ್ನು ಮಾಡಿ ಅದನ್ನು ಬಡವರಿಗೆ ಕೊಡಬೇಕು. ಮತ್ತು ಅದರ ಓನರ್‌ಷಿಪ್ ಸರ್ಕಾರಕ್ಕೆ ಇರಬೇಕು. ಅದನ್ನು ಅವರು ವ್ಯವಸಾಯ ಮಾಡುವುದಕ್ಕೆ ಅವರಿಗೆ ಬೇಕಾದ ಸೌಲಭ್ಯವನ್ನು ಒದಗಿಸಿಕೊಡಬೇಕು. ಈ ವಿಷಯ ದಲ್ಲಿ ಮಾನ್ಯ ಮಂತ್ರಿಗಳು ತಮ್ಮ ಅಭಿಪ್ರಾಯವನ್ನು ಹೇಳಬೇಕು.

ಶ್ರೀ ಜಿ. ಎಲ್. ಕಬಾಡಿ (ಬಳ್ಳೊಳ್ಳಿ).—ಈಗ ನಮ್ಮ ಭಾಗದಲ್ಲಿ ಸಾಯಿಲ್ ಕನ್‌ಸರ್‌ವೇಷನ್ ಯೋಜನೆಯಲ್ಲಿ ಬಂಡ್ ಹಾಕುವಂಥಾ ಕೆಲಸಗಳು ಏನು ಆಗಿವೆ ಅವುಗಳ ಕಾಸ್ಟ್ ಜಮೀನು ಬೆಲೆಗಿಂತ 5 ಪಟ್ಟು 6 ಪಟ್ಟಿಗಿಂತ ಜಾಸ್ತಿಯಾಗಿರುವುದರಿಂದ ಅದನ್ನು ಮಾಫಿಮಾಡಬೇಕೆಂದು ಆ ಭಾಗದ ಜನರು ಸರ್ಕಾರಕ್ಕೆ ಮನವಿಮಾಡಿಕೊಂಡಿದ್ದಾರೆ. ಆದ್ದರಿಂದ ಆ ಬಗ್ಗೆ ಸರ್ಕಾರದವರು ಏನು ಕ್ರಮತೆಗೆದುಕೊಂಡಿದ್ದಾರೆ ಎಂಬುದನ್ನು ದಯವಿಟ್ಟು ಹೇಳುತ್ತೀರಾ?

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).—ಫಾರೆಸ್ಟಿನಲ್ಲಿ ಜಮೀನು ರಿಲೀಜ್ ಮಾಡುವುದಕ್ಕೆ ದೊಡ್ಡವರು ಮತ್ತು ಶ್ರೀಮಂತರಿಂದ ಮಾತ್ರ ಅರ್ಜಿಗಳು ಬಂದಿವೆಯೇ ವಿನಾ ಬಡವರಿಂದ ಅರ್ಜಿಗಳು ಬಂದಿಲ್ಲ ಎಂದು ಹೇಳಿದರು ಪ್ರಾಜೆಕ್ಟಿನಲ್ಲಿ ಮುಳುಗಡೆಯಾದ ಜಮೀನಿನ ರೈತರು ತಮಗೆ ಫಾರೆಸ್ಟ್ ಲ್ಯಾಂಡ್ ಕೊಡಬೇಕೆಂದು ಕೇಳಿರತಕ್ಕ ಸಾವಿರಾರು ಅರ್ಜಿಗಳನ್ನು ನಾನೇ ಮಾನ್ಯ ಮಂತ್ರಿಗಳಿಗೆ ಕೊಟ್ಟಿದ್ದೇನೆ. ಅದನ್ನು ಮಾನ್ಯ ಮಂತ್ರಿಗಳು ಗಮನಕ್ಕೆ ತೆಗೆದು ಕೊಂಡಿದ್ದಾರೆಯೇ ಹೇಗೆ ?

ಎರಡನೆಯದು ಹೊಸನಗರ, ಸೊರಬ, ಸಾಗರ ಈ ಪ್ರದೇಶದಲ್ಲಿರುವ ಗೋಮಾಳದ ಜಮೀನನ್ನು ಪ್ರಪೋಜ್ಡ್ ಫಾರೆಸ್ಟಿಗೆ ಎಂದು ಇಟ್ಟಿದ್ದಾರೆ; ಆದ್ದರಿಂದ ಆ ಜಮೀನನ್ನು ಕೊಡು ವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಆ ಜಮೀನಿಗೆ ರೈತರು ಹಾಕಿದಂತಹ ಅರ್ಜಿಗಳು ಪೆಂಡಿಂಗ್‌ನಲ್ಲಿವೆ.

ಮೂರನೆಯದು ಈಗ ಸರ್ಕಾರದವರು ರೈತರಿಗೆ ಏನು ಬಿತ್ತನೆ ಬೀಜವನ್ನು ಒದಗಿಸು ತ್ತಿದಾರೆ ಅದನ್ನು ಸಮಯಕ್ಕೆ ಸರಿಯಾಗಿ ಒದಗಿಸುವುದಿಲ್ಲ. ಬಿತ್ತನೆ ಕಾಲದಲ್ಲಿ ವ್ಯವಸಾಯ ಇಲಾಖೆಯಲ್ಲಿ ಬೀಜಇರುವುದಿಲ್ಲ. ಮತ್ತು ಈಗ ವ್ಯವಸಾಯ ಇಲಾಖೆಯವರು ರೈತರಿಗೆ ಔಷಧಿ ಯನ್ನು ಏನು ಒದಗಿಸುತ್ತಿದ್ದಾರೆ ಅದು ಅಷ್ಟು ಎಫೆಕ್ಟೀವ್ ಆಗಿ ಇಲ್ಲ. ಆದ್ದರಿಂದ ಬೇರೆ ಸ್ವಲ್ಪ ಪವರ್‌ಫುಲ್ ಆಗಿರುವ ಹೊಸ ಔಷಧಿಗಳನ್ನು ಒದಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ಮತ್ತು ಬೀಜವನ್ನು ರೈತರಿಗೆ ಕಾಲಕ್ಕೆ ಸರಿಯಾಗಿ ಒದಗಿಸುವ ವ್ಯವಸ್ಥೆ ಮಾಡುತ್ತೀರಾ ಮತ್ತು ವ್ಯವಸಾಯ ಇಲಾಖೆಗೆ ಬರತಕ್ಕಂಥಾ ಗೊಬ್ಬರ ಮತ್ತು ಔಷಧಿ ಇವುಗಳನ್ನೆಲ್ಲಾ ಖಾಸಗೀ ವ್ಯಾಪಾರಸ್ಥರಿಗೆ ಕೊಟ್ಟು ರೈತರಿಗೆ ಗೊಬ್ಬರ ಇಲ್ಲ, ಔಷಧಿ ಇಲ್ಲ ಎಂದು ಹೇಳುತ್ತಾರೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಬೇಕು.

ಅಧ್ಯಕ್ಷರು.— ಎಲ್ಲಾ ಮಾನ್ಯ ಸದಸ್ಯರು ಈ ರೀತಿ ಕ್ಲಾರಿಫಿಕೇಷನ್ ಕೇಳುತ್ತಾ ಹೋದರೆ ಅದಕ್ಕೆ ಬಹಳ ವೇಳೆ ಹೋಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ತಮ್ಮ ಕ್ಲಾರಿಫಿಕೇಷನ್‌ಗಳನ್ನು ಒಂದೊಂದು ಪೇಪರಿನಲ್ಲಿ ಬರೆದು ಮಾನ್ಯ ಮಂತ್ರಿಗಳಿಗೆ ಕಳುಹಿಸಿದರೆ ಅದಕ್ಕೆಲ್ಲಾ ಅವರು ಕೊನೆ ಯಲ್ಲಿ ಉತ್ತರವನ್ನು ಹೇಳುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಸದಸ್ಯರು ಉತ್ತಮ ಪ್ರಶ್ನೆಗಳನ್ನು ಬರೆದು ಮಂತ್ರಿಗಳಿಗೆ ಕಳುಹಿಸಿ ಎಂದು ತಾವು ಹೇಳಿದರೆ ಹೇಗೆ? ಈಗ ನಾವು ಹೇಳಿದಂತಹ ಕೆಲವು ವಿಚಾರಗಳಿಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿಲ್ಲ. ಆದ್ದರಿಂದ ನಾವು ಮಾನ್ಯ ಮಂತ್ರಿಗಳನ್ನು ಕೆಲವು ಕ್ಲಾರಿಫಿಕೇಷನ್ ಕೇಳಬೇಕಾಗಿದೆ. ಅದಕ್ಕೆ ತಾವು ಅವಕಾಶ ಮಾಡಿಕೊಡಬೇಕು.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್ (ಸಿರ್ಸಿ).—ಮಾನ್ಯ ಮಂತ್ರಿಗಳು ಉತ್ತರ ಕೊಡತಕ್ಕ ಕಾಲದಲ್ಲಿ ಮಧ್ಯ ಕ್ಲಾರಿಫಿಕೇಷನ್ ಕೇಳಬಾರದು ಉತ್ತರ ಕೊಟ್ಟಮೇಲೆ ಕೊನೆಯಲ್ಲಿ ಬೇಕಾದರೆ ಕ್ಲಾರಿಫಿಕೇಷನ್ ಕೇಳಿ ಎಂದು ತಾವು ಹೇಳಿದ್ದಿರಿ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ತಾವು ಮಧ್ಯೆ ಕ್ಲಾರಿಫಿಕೇಷನ್ ಕೇಳಿದರೆ ಅವರಿಗೆ ಟ್ರೆಂಡ್ ಹೋಗುತ್ತದೆ. ಕೊನೆಯಲ್ಲಿ ಏನೋ ನಾಲ್ಕೈದು ಕ್ಲಾರಿಫಿಕೇಷನ್ ಕೇಳಿದರೆ ಪರವಾಯಿಲ್ಲ, ಎಲ್ಲ ಮಾನ್ಯ ಸದಸ್ಯರು ಎದ್ದುನಿಂತು ಕ್ಲಾರಿಫಿಕೇಷನ್ ಕೇಳುತ್ತಾ ಹೋದರೆ ಅದಕ್ಕೆ ಗಂಟೆಗಟ್ಟಲೇ ಕಾಲ ಬೇಕಾಗುತ್ತದೆ. ಅದರಿಂದ ಸಭೆಯ ಮುಂದಿನ ಕಾರ್ಯಕಲಾಪಗಳಿಗೆ ತೊಂದರೆಯಾಗುತ್ತದೆ. ಮಾನ್ಯ ಸದಸ್ಯರು ಹೇಳಿದಂತಹ ವಿಷಯಗಳಿಗೆ ಎಲ್ಲಕ್ಕೂ ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕಾಗುವುದಿಲ್ಲ. ಆ ರೀತಿ ಉತ್ತರ ಕೊಡುತ್ತಾ ಹೋದರೆ 3 ದಿವಸಗಳಾದರೂ ಈ ಚರ್ಚೆ ಮುಗಿಯುವುದಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಹೇಳಿದಂತಹ ವಿಷಯಗಳಿಗೆ ಮಂತ್ರಿಗಳು ಸಾಧ್ಯವಾದ ಮಟ್ಟಿಗೆ ಉತ್ತರ ಕೊಡುತ್ತಾರೆ. ಆದಕಾರಣ ದಯಮಾಡಿ ಮಾನ್ಯ ಸದಸ್ಯರು ತಮಗೆ ಏನೇನು ಕ್ಲಾರಿಫಿಕೇಷನ್ ಬೇಕು ಎನ್ನುವ ಬಗ್ಗೆ ಬರೆದು ಕಳುಹಿಸಿದ್ದರೆ ಅದಕ್ಕೆಲ್ಲಾ ಮಂತ್ರಿಗಳು ಒಟ್ಟಿಗೆ ಉತ್ತರವನ್ನು ಹೇಳುತ್ತಾರೆ.

Sri C. M. ARUMUGAM.—The suggestion of the Hon. Minister that we might sen l chits in writing and he will answer the points raised therein is a new procedure; we have not seen that procedure either here or elsewhere.

MADAM SPEAKER.—Otherwise, it will take one more hour for the Hon. Minister to reply to the clarifications.

Sri D. DEVARAJ URS (Chief Minister).—Madam, it is not a new procedure. In any debate which has taken place today or previously or in any other Assembly—of course, the Minister is expected to touch upon all important matters raised by hon. members—it may not be possible for the Government to refer to every subject that has been raised in the debate. I hope you will all appreciate that. Another thing is that supposing as a Minister I do not reply to an important point raised during the debate to that extent it is not the member who loses anything; it is the Government that stands to lose something. To that extent the image of the Government may not be proper. Members may raise so many points but it is not possible to meet every point for want of time and due to so many other things. Members will kindly appreciate that point.

Sri C. M. ARUMUGAM.—Still we feel that what the Hon. Minister is suggesting is a new procedure.

Sri K H. PATIL.—I do not want to curtail the right of hon. members.

Sri C. M. ARUMUGAM.—The Hon. Minister has not dealt with all the points raised by hon. Members. He has only elaborated on what best he could do during the three months since the new Government has taken over. He said he would answer questions after he had finished his reply.

Sri K. H. PATIL.—I do not wish to curtail the privileges or rights of the hon. members. I am sure they must ask clarifications they want. I have tried to cover as many points as were raised in the debate. The hon. member Sri C. M. Arumugam was not present here yesterday when the debate went on. Therefore, he cannot say that I have not covered all the points raised. However, I am prepared to reply to all the queries that are likely to be raised by the hon. members. It is only to facilitate them that I suggested they can put down their points and send them to me. Even now I am prepared to give replies to the queries raised within two minutes.

Sri C. M. ARUMUGAM.—He need not do so now. Other Ministers can give reply.

ಶ್ರೀ ಎಸ್. ಎಚ್. ಪುಟ್ಟರಂಗನಾಥ್ (ಬೇಲೂರು).—ಇತ್ತೀಚೆಗೆ ಬೀಟೆ ಮರಗಳನ್ನು ಹೊರ ದೇಶಕ್ಕೆ ಕಳಿಸುವ ರಹದಾರಿ ಬಗ್ಗೆ ಉನ್ನತ ಮಟ್ಟದ ಅಧಿಕಾರಿಗಳು ತಿಳುವಳಿಕೆ ಕೊಟ್ಟಿದ್ದಾರೆಯೇ ! ಎರಡನೆಯದು ಈ ತೋಟಗಾರಿಕೆ ಇಲಾಖೆಯಲ್ಲಿ ಒಂದೇ ಜನಾಂಗದವರ ಕೈವಾಡ ಜಾಸ್ತಿಯಾಗಿದೆ. ಅಲ್ಲಿ ಬೇರೆ ಜನಾಂಗದವರಿಗೆ ಅವಕಾಶ ಇಲ್ಲದಂತಾಗಿದೆ. ಅದನ್ನು ಪರಿಶೀಲನೆ ಮಾಡುತ್ತೀರಾ ? ಮೂರನೆಯದು ಏನೆಂದರೆ, ಇವತ್ತು ಇದ್ದ ಕಾಡನ್ನು ನಾಶ ಮಾಡಿ, ಕಳ್ಳಸಾಗಾಣಿಕೆ/ ಮಾಡಿ ಹಣ ಸಂಪಾದಿಸಿ, ಎಷ್ಟೋ ಜನರು ದೊಡ್ಡ ದೊಡ್ಡ ಕಾಫಿ ತೋಟಗಳನ್ನು ಮಾಡಿಕೊಂಡಿದ್ದಾರೆ. ಅಂಥವುಗಳ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಮತ್ತು ಇದರಲ್ಲಿ ನಿಮ್ಮ ನಿಲುವು ಏನು ?

ಶ್ರೀ ಐ. ಜಿ. ಸನದಿ (ಹುಬ್ಬಳ್ಳಿ).—ಅಧ್ಯಕ್ಷರೆ, ಈಗಾಗಲೇ ಮಂತ್ರಿಯವರು ತಮ್ಮ ಭಾಷಣದಲ್ಲಿ ಕೆಲವು ಮಾತುಗಳನ್ನು ಹೇಳಿದ್ದಾರೆ. ಆದರೆ ಧಾರವಾಡ ಜಿಲ್ಲೆಯಲ್ಲಿ ಗದಗ್, ಶಿರಹಟ್ಟಿ ಮತ್ತು ಮುಂಡರಗಿಯಲ್ಲಿ ಬೇಚರಾಕ್ ಭೂಮಿ ಸರ್ಕಾರದ ವಶದಲ್ಲಿ ಇದೆ. ಅಲ್ಲಿರತಕ್ಕಂತಹ ಜನರು ಈಗಾಗಲೇ ಬಳ್ಳಾರಿ ಜಿಲ್ಲೆಗೆ ವಲಸೆ ಹೋಗಿರುತ್ತಾರೆ. ಆದ್ದರಿಂದ ಅದನ್ನು ಅಭಿವೃದ್ಧಿ ಮಾಡಿ ಆ ಜನರಿಗೆ ಕೊಟ್ಟು ವಸತಿ ಕಲ್ಪಿಸುವುದಕ್ಕೆ ಏನಾದರೂ ಯೋಜನೆ ಮಾಡಿಕೊಂಡಿದ್ದೀರಾ ?

ಎರಡನೆಯದಾಗಿ ಕೊಪ್ಪದಗುಡ್ಡ ಎಂಬಲ್ಲಿ ಚಿನ್ನದ ಪರಿಶೋಧನೆಗಾಗಿ 60 ಸಾವಿರ ರೂಪಾಯಿ ಖರ್ಚು ಮಾಡಿದ್ದಾರೆ. ಅದನ್ನು ಕಾರ್ಯಗತ ಮಾಡುವುದಕ್ಕೆ ಏನಾದರೂ ಸರ್ಕಾರದವರು ಪರಿಶೀಲನೆ ಮಾಡುತ್ತಾರೆಯೇ !

ಮೂರನೆಯದು ಏನೆಂದರೆ, ಧಾರವಾಡ ಅಗ್ರಿಕಲ್ಚರಲ್ ಕಾಲೇಜ್ ಏನು ಇದೆ, ಅದು ಸಾಕಾಗುವುದಿಲ್ಲ. ಇನ್ನೊಂದು ಮಾಡಬೇಕೆಂದು ಹೇಳುತ್ತಿದ್ದೇವೆ. ಮಂತ್ರಿಯವರೂ ಇನ್ನೊಂದು ಅಗ್ರಿಕಲ್ಚರಲ್ ಕಾಲೇಜು ಮಾಡಬೇಕೆಂದು ಇದ್ದಾರೆ. ಆದ್ದರಿಂದ ಆ ವಿಷಯ ಬಂದಾಗ ಧಾರವಾಡ ಜಿಲ್ಲೆಗೆ ಸಾಕಷ್ಟು ಗಮನ ಕೊಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್—ಮಾನ್ಯ ಪುಟ್ಟರಂಗನಾಥರವರು ಕೇಳಿದಂತಹ ಮೊದಲನೆಯ ಪ್ರಶ್ನೆಗೆ ಉತ್ತರ ಆಗಲೇ ಹೇಳಿದ್ದೇನೆ. ಇನ್ನು ಹಾರ್ಟಿಕಲ್ಚರ್ ಇಲಾಖೆಯಲ್ಲಿ ಷೆಡ್ಯೂಲ್ ಕ್ಯಾಸ್ಟ್ ಮತ್ತು ಟ್ರೈಬ್ಸ್‌ನವರಿಗೂ ಯೋಗ್ಯವಾದ ಪ್ರಾತಿನಿಧ್ಯ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇದರ ಬಗ್ಗೆ ಓವರ್‌ಹಾಲ್ ಬದಲಾವಣೆ ಒಂದೇ ಸಾರಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಮುಂದೆ ಅದನ್ನು ಮಾಡುತ್ತೇವೆ. ಇನ್ನು ಕಾಫಿ ತೋಟದ ಬಗ್ಗೆ ಅವರು ಹೇಳಿದ್ದಾರೆ. ಅದಕ್ಕೂ ಉತ್ತರ ಆಗಲೇ ಹೇಳಿದ್ದೇನೆ. ಇದರ ಬಗ್ಗೆ ಸೂಕ್ತವಾದ ಗಮನ ಕೊಟ್ಟು ಎಲ್ಲೆಲ್ಲಿ ಶ್ರೀಮಂತರ ವಶದಲ್ಲಿ ಅರಣ್ಯ ಸಂಪತ್ತು ಇದೆ ಅದನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಹಾಗೆ ಮಾಡುವಾಗ ಸಹ ನಾವು ಕಾಯಿದೆ ಕಾನೂನುಗಳಿಗೆ ಅನುಗುಣವಾಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಇನ್ನು ಮಾನ್ಯ ಸನದಿಯವರು ಧಾರವಾಡದಲ್ಲಿ ಮಾಡುವ ಯೂನಿವರ್ಸಿಟಿ ಆಫ್ ಅಗ್ರಿಕಲ್ಚರ್ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ನಾನು ಮತ್ತು ಮುಖ್ಯ ಮಂತ್ರಿಯವರು ಕೇಂದ್ರ ಸರ್ಕಾರದೊಡನೆ ಮಹಾರಾಷ್ಟ್ರ ಟೈಪ್ ಅಗ್ರಿಕಲ್ಚರಲ್ ಯುನಿವರ್ಸಿಟಿ ಕೊಡಬೇಕೆಂದು ಕೇಳಿಕೊಂಡಿದ್ದೇವೆ. ಅವರು ಕೊಟ್ಟ ನಂತರ ಯಾವ ಸ್ಥಳದಲ್ಲಿ ಮಾಡಬೇಕೆಂದು ವಿಚಾರ ಬಂದಾಗ ಮಾನ್ಯ ಸದಸ್ಯರ ಸಲಹೆಯನ್ನು ಸಹ ಗಮನದಲ್ಲಿಟ್ಟುಕೊಂಡು ಯೋಗ್ಯ

ಮೂರನೆಯದಾಗಿ ಹಳ್ಳಿಗಳಲ್ಲಿರತಕ್ಕಂತಹ ಜನರಿಗೆ ನಿವೇಶನ ಕೊಡುವ ಸಲುವಾಗಿ ಕೇಳಿದ್ದಾರೆ. ಅವರು ಹೇಳಿದಂತಹ ಪ್ರದೇಶವಲ್ಲದೆ, ರಾಜ್ಯದ ಇತರ ಅನೇಕ ಕಡೆಗಳಲ್ಲಿಯೂ ಅಂಥ ಪರಿಸ್ಥಿತಿ ಇದೆ. ಶಿವಮೊಗ್ಗದ ಕಡೆಗಳಲ್ಲಿ ಮತ್ತು ಹುಣಸೂರು ಕಡೆಯಲ್ಲಿ ಸಹ ಇಂತಹ ಪರಿಸ್ಥಿತಿ ಇದೆ. ಇವೆಲ್ಲ ಪರಿಸ್ಥಿತಿಗಳನ್ನೂ ಗಮನದಲ್ಲಿಟ್ಟುಕೊಂಡು ಎಲ್ಲಾ ಕಡೆಗಳಲ್ಲೂ ಒಂದೇ ತರನಾದ ನೀತಿಯನ್ನು ಇಟ್ಟುಕೊಂಡು ಸರ್ಕಾರ ಮುಂದುವರಿಯುತ್ತದೆ ಎಂದು ಹೇಳುತ್ತೇನೆ. ಇನ್ನು ಮಾನ್ಯ ಪ್ರಭಾಕರ್‌ರವರು ಒಂದು ವಿಚಾರ ಹೇಳಿದರು. ಈಗ ಫ್ಯಾಮಿಲಿ ಹೆಲ್ಪ್ ಈಸ್ ದಿ ಬೆಸ್ಟ್ ಹೆಲ್ಪ್ ಅಂದ ಹಾಗೆ ಫ್ಯಾಮಿಲಿ ಹೆಲ್ಪ್ ಕೊಡುವುದಕ್ಕೆ ಅಗ್ರಿಕಲ್ಚರಲ್ ಇಲಾಖೆಯವರು ಪ್ರಯತ್ನ ಮಾಡುತ್ತಾರೆ. ಇನ್ನು ಬಡವರಿಗೆ ಸಬ್ಸಿಡಿ ಸೌಲಭ್ಯದ ಬಗ್ಗೆ ಹೇಳುವುದಾದರೆ ಇದನ್ನು ಬೇರೆ ಬೇರೆ ಮಾಡುವುದಕ್ಕೆ ಬರುವುದಿಲ್ಲ. ಸಬ್ಸಿಡಿ ವಕ್ಕಲಿಗರಿಗೆ ಸಿಗುತ್ತದೆ. ಅದೇ ರೀತಿ ಮಾಡುತ್ತಿದ್ದೇವೆ ಅಷ್ಟೆ.

ಇನ್ನು ಹಾರ್ಟಿಕಲ್ಚರ್ ಇಲಾಖೆಯನ್ನು ಬೇರ್ಪಡಿಸಬೇಕೆಂದು ಹೇಳುತ್ತಿದ್ದಾರೆ. ಅದು ಈಗಾಗಲೇ ಬೇರೆ ಬೇರೆ ಇದೆ. ಕೆಲವರು ಎರಡನ್ನೂ ಕೂಡಿಸಿಕೊಳ್ಳಬೇಕೆಂದು ಸಲಹೆ ಮಾಡುತ್ತಿದ್ದರು. ಸದ್ಯಕ್ಕೆ ಅದು ಬೇರೆ ಬೇರೆ ಇದೆ. ಮತ್ತು ಕೋಆಪರೇಟಿವ್ ಫಾರ್ಮಿಂಗ್ ಬಗ್ಗೆ ನನಗೂ ಆಸಕ್ತಿ ಇದೆ. ಅದರ ಬಗ್ಗೆ ನಾನು ಹಾಗೂ ಸಹಕಾರ ಮಂತ್ರಿಯವರು ಸೇರಿ ಒಂದು ಯೋಗ್ಯವಾದ ನಿಲುವನ್ನು ತಾಳುತ್ತೇವೆಂದು ಮಾತ್ರ ಹೇಳುತ್ತೇನೆ. ಮಾನ್ಯ ಎಸ್. ವೈ. ಪಾಟೀಲರು ಸಹ ಒಂದು ಸಲಹೆ ಮಾಡಿದ್ದಾರೆ. ಅದನ್ನೂ ಗಮನದಲ್ಲಿಟ್ಟುಕೊಳ್ಳುತ್ತೇವೆ. ಇನ್ನು ಮಾನ್ಯ ಚಂದ್ರಶೇಖರವರು ಒಂದು ವಿಚಾರ ಹೇಳಿದರು. ಜಮೀನುಗಳನ್ನು ಡಿ—ಫಾರೆಸ್ಟ್ ಆದ ನಂತರ ಬಡವರ ಹೆಸರಿನಲ್ಲಿ ರಿಲೀಸ್ ಮಾಡುತ್ತಾರೆ. ಆದರೆ ಅದು ಬಡವರಿಗೆ ಹೋಗುವುದಿಲ್ಲ. ಸರ್ಕಾರದವರು ಸಹ ನೇರವಾಗಿ ಇಂಥವರಿಗೆ ಎಂದು ಕೊಡುವುದಕ್ಕಾಗುವುದಿಲ್ಲ. ಕೊಡುವವರು ಜಿಲ್ಲಾಧಿಕಾರಿಗಳಾಗಿರುವುದರಿಂದ ಅದು ಬೇರೆಯವರಿಗೆ ಹೋಗುತ್ತದೆ. ಹಿಂದೆ ಕೂಡ ಬಡವರ ಹೆಸರಿನಲ್ಲೇ ಅರ್ಜಿಗಳು ಬರುತ್ತಿದ್ದವು. ಸರ್ಕಾರದವರು ಇದರ ಬಗ್ಗೆ ಒಂದು ನಿರ್ದಿಷ್ಟವಾದ ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಂಥ ಪರಿಸ್ಥಿತಿ ಬಂದಾಗ ಸರ್ಕಾರ ಅದನ್ನು ಪುನರ್ ಪರಿಶೀಲಿಸುತ್ತದೆ.

ಇನ್ನು ಸಾಯಿಲ್ ಕನ್‌ಸರ್ವೇಷನ್ ಬಗ್ಗೆ 5–6 ಪಟ್ಟು ಧಾರಣೆ ಹೆಚ್ಚಾಗಿದೆ ಎಂದು ಹೇಳಿದರು. ಭೂಮಿ ಬಹಳ ಕೆಟ್ಟ ಸ್ಥಿತಿಯಲ್ಲಿದ್ದರೆ ಹಾಗೆ ಆಗಿರಬಹುದು. ಅಂಥ ಕಡೆ ಎಷ್ಟು ಖರ್ಚು ಮಾಡಿದರೂ ಜಮೀನು ಧಾರಣೆ ಹೆಚ್ಚಾಗುವುದಿಲ್ಲ. ಸುಧಾರಣೆ ಆದಾಗ ಮಾತ್ರ ಜಮೀನು ಧಾರಣೆ ಹೆಚ್ಚಾಗುತ್ತದೆ.

ಇನ್ನು ಮಾನ್ಯ ದೇವೇಗೌಡರು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನಿಗೆ ಎರಡು ನಾಮಿನೇಟ್ ಮಾಡಿದ ಬಗ್ಗೆ ಹೇಳಿದ್ದಾರೆ. ಹೋದ ಸಲ ಶ್ರೀಮಾನ್ ವಾಲ, ಚೇಂಬರ್ ಆಫ್ ಕಾಮರ್ಸಿನಿಂದ ಇದ್ದರು. ಮತ್ತು ಶ್ರೀಮಾನ್ ಶಿರೂರ್—ಇವರು ವಕ್ಕಲಿಗರಿದ್ದು ಒಳ್ಳೆಯ ಅನುಭವದವರಿದ್ದಾರೆ. ಮತ್ತು ಶ್ರೀ ಎಸ್. ಬಿ. ಪಾಟೀಲ್—ಇವರು ರಿಟೈರ್ಡ್ ಸರ್ಕಾರೀ ಅಧಿಕಾರಿಯವರು. ಅವರಿಗೆ ಅಗ್ರಿಕಲ್ಚರ್ ಮತ್ತು ಎಜುಕೇಷನ್ ಇಲಾಖೆಯಲ್ಲಿದ್ದು ಅದರ ಅನುಭವ ಇದೆ. ಅದೂ ಅಲ್ಲದೆ ಅವರು ಸ್ವತಃ ವಕ್ಕಲಿಗರೆಂದು ತಿಳಿದುಕೊಂಡು ಅವರನ್ನು ಹಾಕಿದ್ದೇವೆ. ಅದೇ ರೀತಿ ಕಬ್ಬಿನ ವ್ಯವಸಾಯ ಮಾಡತಕ್ಕವರು ಶ್ರೀ ಎಚ್. ಟಿ. ರೆಡ್ಡಿಯವರಾಗಿರುವುದರಿಂದ ಅವರನ್ನು ಸಹ ಹಾಕಿದ್ದೇವೆ.

ಅಗ್ರಿಕಲ್‌ಚರಲ್ ಯೂನಿವರ್ಸಿಟಿಗೆ ಶ್ರೀಮಾನ್ ಮೂರ್ತಿಯವರನ್ನು ನಾಮಿನೇಟ್ ಮಾಡಿರುವ ವಿಷಯದಲ್ಲಿ ಹೇಳಬೇಕಾದರೆ, ಬಿ.ಎಸ್.ಸಿ. ಪಿ. ಎಚ್.ಡಿ. ಗ್ರಾಜುಯೇಟ್ ಎಂಬ ಕಾರಣದಿಂದ ಅವರನ್ನು ನಾಮಿನೇಟ್ ಮಾಡಿದ್ದಾರೆಂದು ನಾನು ಹೇಳುತ್ತೇನೆ. ಅವರು ಅಲ್ಲಿಗೆ ಮೊದಲೇ ನಾಮಕರಣವಾಗಿರುವುದರಿಂದ ನಾನು ಈಗ ಏನೂ ಮಾಡುವುದಕ್ಕಾಗುವುದಿಲ್ಲ.

ಆದ್ದರಿಂದ ತಾವೆಲ್ಲರೂ ನಾನು ಇಷ್ಟು ಹೇಳಿದ್ದನ್ನೆಲ್ಲಾ ಕೇಳಿದ ನಂತರ ಒಮ್ಮತದಿಂದ ಈ ಅಗ್ರಿಕಲ್‌ಚರಲ್ ಬಡ್ಜೆಟ್ಟನ್ನು ಒಪ್ಪಬೇಕೆಂದು ನಾನು ಹೇಳುತ್ತೇನೆ.

12—00 NOON

ಅಧ್ಯಕ್ಷರು.—ಇನ್ನು 60 ನಿಮಿಷಗಳಷ್ಟು ಕಾಲಾವಕಾಶವಿದೆ. ಇಬ್ಬರೂ ಮಂತ್ರಿಗಳು ಈ ಕಾಲಾವಧಿಯಲ್ಲಿ ಭಾಗವಹಿಸಿಕೊಂಡು ತಮ್ಮ ಉತ್ತರಗಳನ್ನು ಮುಗಿಸಬೇಕು.

ಶ್ರೀ ಕೆ. ಎಚ್. ಹನುಮೇಗೌಡ.—ಇದು ರೈತರ ಪ್ರಶ್ನೆ. ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಎಚ್. ಡಿ. ದೇವೇಗೌಡ. — ನಾನು ನಿನ್ನೆ ಮಾತನಾಡಿದ್ದೇನೆ.

ಅಧ್ಯಕ್ಷರು. — ಮಂತ್ರಿಗಳು ಇನ್ನೂ ಉತ್ತರ ಹೇಳಲಿಲ್ಲ.

Sri D. DEVARAJ URS. — That will bs attended to and you will get a reply later.

ಶ್ರೀ ಸಿ. ಬೈರೇಗೌಡ. — ಗೊಬ್ಬರದ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಕೆ. ಎಚ್. ಪಾಟೀಲ್. — ಗೊಬ್ಬರದ ನಿಯಂತ್ರಣ ಮಾಡುವ ಜವಾಬ್ದಾರಿ ಕೇಂದ್ರ ಸರ್ಕಾರಕ್ಕೆ ಸೇರಿದ್ದು.

†ಶ್ರೀ ಎನ್. ಚಿಕ್ಕೇಗೌಡ (ಪಶುಸಂಗೋಪನ ಶಾಖೆಯ ರಾಜ್ಯಮಂತ್ರಿಗಳು). — ಸಭಾಧ್ಯಕ್ಷಿಣಿಯವರೇ, ಪಶುಸಂಗೋಪನ ಹಾಗೂ ಪಶು ವೈದ್ಯಕೀಯ ಇಲಾಖೆಗಳ ಬಗ್ಗೆ ಮಾನ್ಯ ಸದಸ್ಯರು ಹೇಳಿದಂಥ ವಿಚಾರಗಳನ್ನು ನಾನು ಬಹಳ ಕೂಲಂಕಷವಾಗಿ ತಿಳಿದುಕೊಂಡಿದ್ದೇನೆ. ಅನೇಕ ಮಾನ್ಯ ಸದಸ್ಯರು ಇಲಾಖೆಗಳ ಕೃತಿ ಹಾಗೂ ಕೆಲವು ನ್ಯೂನತೆಗಳ ಬಗ್ಗೆ ಏನೇನು ಸಲಹೆಗಳನ್ನು ಕೊಟ್ಟಿದ್ದಾರೋ ಅವನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಅವುಗಳ ಬಗ್ಗೆ ಸೂಕ್ತ ಹಾಗೂ ಯೋಗ್ಯ ಸಲಹೆಗಳನ್ನು ಪರಿಶೀಲಿಸುವುದಕ್ಕೆ ಸರ್ಕಾರ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತದೆಂದು ನಾನು ಹೇಳುತ್ತೇನೆ.

ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿರುವ ಪಶು ಸಂಪತ್ತನ್ನು ಬೆಳೆಸುವ ಬಗ್ಗೆ ನಮ್ಮ ರಾಜ್ಯದಲ್ಲಿರುವ ಪಶು ಹಾಗೂ ಪ್ರಾಣಿಗಳ ಸಂಬಂಧದ ಬಗ್ಗೆ ಲೆಕ್ಕ ಹಾಕಿದರೆ, ಇಬ್ಬರು ಮನುಷ್ಯನ ಲೆಕ್ಕಕ್ಕೆ ಒಂದು ಪಶು ಬರುತ್ತದೆ. ಇವತ್ತು ರಾಜ್ಯದಲ್ಲಿರುವ ಪಶು ಸಂಪತ್ತನ್ನು ಹೇಗೆ ಬೆಳೆಸಬೇಕು, ಅದಕ್ಕೆ ಬರತಕ್ಕ ತಳಿಯ ಅಭಿವೃದ್ಧಿ, ರೋಗಗಳನ್ನು ತಡೆಗಟ್ಟುವ ಬಗ್ಗೆ ಇನ್ನೂ ಇತರ ವಿಷಯಗಳ ಬಗ್ಗೆ ಅನೇಕ ಸಲಹೆಗಳು ಬಂದಿವೆ. ಇವತ್ತು ನಮ್ಮ ರಾಜ್ಯದಲ್ಲಿರತಕ್ಕ ಎರಡು ಮುಖ್ಯವಾದ ತಳಿಗಳು ಅಂದರೆ, ಹಳ್ಳಿಕಾರ್ ಮತ್ತು ಅಮೃತಮಹಲ್. ಅಮೃತಮಹಲ್ ಎಂಬುದು ಈ ಪ್ರಪಂಚದಲ್ಲಿ ಹೆಸರುವಾಸಿಯಾದಂಥ ತಳಿ ಎಂಬುದಾಗಿ ಹೇಳುವುದು ಒಂದು ನಿರ್ವಿವಾದವಾದ ಸಂಗತಿ. ಕಳೆದ ಅನೇಕ ಯುದ್ಧಗಳಲ್ಲಿ ಅಮೃತಮಹಲ್ ಎತ್ತುಗಳನ್ನು ಕಟ್ಟಿ ಫಿರಂಗಿ, ಮುಂತಾದುವನ್ನು ಸಾಗಾಣಿಕೆ ಮಾಡುತ್ತಿದ್ದರು. ಈಗ ಆ ತಳಿಯನ್ನು ಉಳಿಸಬೇಕು, ಅದನ್ನು ಅಭಿವೃದ್ಧಿಗೆ ತರಬೇಕೆಂದು ಆ ಒಂದು ಪ್ರದೇಶದಿಂದ ಬಂದಂಥ ಸದಸ್ಯರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಇವತ್ತು ನಮ್ಮ ರಾಜ್ಯದಲ್ಲಿರತಕ್ಕ ಅಮೃತಮಹಲ್ ಕಾವಲು 60 ಸಾವಿರ ಎಕರೆ. ಹಳ್ಳಿಕಾರ್ ತಳಿಯನ್ನು ಅಮೃತ್‌ಮಹಲ್ ಕಾವಲ್‌ನಲ್ಲಿರುವ 3 ಸಾವಿರ ದನಗಳನ್ನು ಇಟ್ಟುಕೊಂಡು ಅಭಿವೃದ್ಧಿ ಮಾಡುತ್ತಿದ್ದಾರೆ. ಇನ್ನೂ ಹೆಚ್ಚಿಗೆ ಅಂತಹ ತಳಿಯನ್ನು ಅಭಿವೃದ್ಧಿಮಾಡಿ ರೈತರಿಗೆ ಸಾಗುವಳಿಗೆ ಅನುಕೂಲವಾಗುವಂತೆ ಮಾಡಬೇಕೆಂದು ಕೆಲವು ಸದಸ್ಯರು ಸೂಚನೆಕೊಟ್ಟಿದ್ದಾರೆ. ಇವತ್ತು ಅಮೃತಮಹಲ್ ಕಾವಲನ್ನು ಯೋಗ್ಯ ಜಮೀನೆಂದು ಪರಿಗಣಿಸಿ ಸಾಗುವಳಿಗೆ ಕೊಡಬೇಕೆಂದು ಕೆಲವು ಸದಸ್ಯರು ಹೇಳಿದ್ದಾರೆ. ಈಗಾಗಲೇ ಸರ್ಕಾರದ ನೀತಿ ಇದರ ಬಗ್ಗೆ ಏನೆಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಕಳೆದ ಅಧಿವೇಶನದಲ್ಲಿಯೇ ಪ್ರಶ್ನೋತ್ತರವೇಳೆಯಲ್ಲಿ ಹೇಳಿದ್ದಾರೆ. ಅಮೃತಮಹಲ್ ಕಾವಲು ಏನಿದೆ ಅಲ್ಲಿ ಹೆಚ್ಚು ಹಾಲು ಕೊಡತಕ್ಕ ಮಿಶ್ರ ತಳಿಯನ್ನು ಸಾಕುವುದಕ್ಕೆ ಪ್ರಯತ್ನ ಮಾಡಿ ಸಣ್ಣ ಹಾಗೂ ಮಧ್ಯಮವರ್ಗದ ರೈತರಿಗೆ ಅವನ್ನು ಹಂಚುವುದಕ್ಕೆ ಅನುಕೂಲವಾಗಬೇಕು. ಯೋಗ್ಯವಾದ ಜಮೀನನ್ನು ಹೀಗೆ ಅಭಿವೃದ್ಧಿ ಮಾಡಿ ಹುಲ್ಲನ್ನು ಹೆಚ್ಚಿಗೆ ಬೆಳೆದು ಈ ಪಶುಸಂಪತ್ತನ್ನು ಹೆಚ್ಚಿಗೆ ಮಾಡಿ ವ್ಯವಸಾಯಕ್ಕೆ ಯೋಗ್ಯವಾದ ಹಾಗೂ ಉತ್ತಮವಾದ ಹಾಲು ಕೊಡತಕ್ಕ ಹಸುಗಳನ್ನು ಯಾವಾಗಲೂ ಅಭಿವೃದ್ಧಿಪಡಿಸಬೇಕೆಂಬುದೇ ಸರ್ಕಾರದ ನೀತಿಯಾಗಿದೆ. ಆದ್ದರಿಂದ ವ್ಯವಸಾಯ ಮತ್ತು ಅರಣ್ಯ ಖಾತೆಯ ಮಂತ್ರಿಗಳು ಹೇಳಿದ ಹಾಗೆ ಸರ್ಕಾರದ ನೀತಿಯ ಪ್ರಕಾರ ಅಮೃತಮಹಲ್ ಕಾವಲ್ ಜಮೀನನ್ನು ಸಾಗುವಳಿಗೆ ಕೊಡುವುದಕ್ಕಾಗುವುದಿಲ್ಲವೆಂಬ ಮಾತನ್ನು ನಾನು ಮತ್ತೆ ಸ್ಪಷ್ಟವಾಗಿ ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಪಶುಸಂಪತ್ತನ್ನು ಮತ್ತು ತಳಿಯನ್ನು ಒಂದೇ ಕಾಲದಲ್ಲಿ ಅಭಿವೃದ್ಧಿಮಾಡಬೇಕೆಂದು ಹೇಳುವಾಗ ಅದೇ ಮಾತಿನಲ್ಲಿ ಈ ಜಮೀನನ್ನು ಹಂಚುವ ಬಗ್ಗೆ ಯೋಗ್ಯವಾದ ಸಲಹೆಯೇನೂ ಇಲ್ಲ. ಈ ತಳಿಯನ್ನು ಅಭಿವೃದ್ಧಿ ಮಾಡುವುದಕ್ಕೆ ಎಲ್ಲರ ಸಹಕಾರವನ್ನು ನಾನು ಕೋರುತ್ತೇನೆ. ಈ ಅಭಿವೃದ್ಧಿಯ ಬಗ್ಗೆ ತಳಿಯನ್ನು ಇನ್ನೂ ಹೆಚ್ಚು ಹೆಚ್ಚಾಗಿ ಸಾಕ ರೈತರಿಗೆ ವ್ಯವಸಾಯಕ್ಕೆ ಬೇಕಾದಂಥ ಎತ್ತುಗಳನ್ನು ಕಡಿಮೆ ದರದಲ್ಲಿ ಕೊಡುವುದಕ್ಕೆ ಸರ್ಕಾರ ಪ್ರಯತ್ನಮಾಡಬೇಕೆಂದು ಹೇಳಿದ್ದಾರೆ. ಆ ವಿಷಯದಲ್ಲಿ ಹೆಚ್ಚಿನ ಕಾರ್ಯವನ್ನು ತ್ವರಿತವಾಗಿ ತೆಗೆದುಕೊಳ್ಳುತ್ತೇವೆಂದು ನಾನು ಆಶ್ವಾಸನೆಯನ್ನು ಕೊಡುತ್ತೇನೆ. ಅಮೃತಮಹಲ್ ಕಾವಲ್‌ನಲ್ಲಿ ಎಡೆಡ್ ಕ್ಯಾಟಲ್ ಬ್ರೀಡರ್ಸ್ ಇಟ್ಟುಕೊಂಡು ಸಾಕುತ್ತಿದ್ದರು.

ಅವರಿಗೆ ಈಗ ತೊಂದರೆಯಾಗಿದೆ. ಇವತ್ತು ಅಲ್ಲಿ ಆ ರೀತಿ ಮೇಯಿಸತಕ್ಕ ಹಕ್ಕನ್ನು ತೆಗೆದಿದ್ದರಿಂದ ಈಗ ಪುನಃ ಏಡೆಡ್ ಕ್ಯಾಟಲ್ ಬ್ರೀಡರ್ಸ್‌ನಿಂದ ಮನವಿಗಳು ಬಂದಿವೆ. ನಮ್ಮ ಸರ್ಕಾರದ ದನಗಳು ಅಲ್ಲಿ ಮೇದಿನನಂತರ ಬೇರೆಯವರಿಗೆ ಕೊಡುವುದನ್ನು ಸಾವಧಾನವಾಗಿ ಪರಿಶೀಲಿಸಿ ಅದರ ಬಗ್ಗೆ ಕೆಲವು ಟರ್ಮ್ಸ್ ಅಂಡ್ ಕಂಡೀಷನ್ಸ್ ಹಾಕಿ ತೀರ್ಮಾನ ಮಾಡಬೇಕಾಗಿದೆ. ಈಗ ಅಲ್ಲಿ ದನಗಳನ್ನು ಸಾಕುವ ಕಾವಲುಗಾರರನ್ನು ಟೆಂಪೊರರಿಯಾಗಿ ಇಟ್ಟಿದ್ದಾರೆ. ಅವರನ್ನು ಪರ್ಮನೆಂಟಾಗಿ ಮಾಡ ಬೇಕೆಂಬುದಾಗಿ ಮಾನ್ಯ ಶ್ರೀ ಹನುಮೇಗೌಡರು ಹೇಳಿದ್ದಾರೆ. ಆ ವಿಷಯವನ್ನು ಸರ್ಕಾರ ಪರಿಶೀಲಿಸಿ ಇದರ ಬಗ್ಗೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಿಂದ ಅಪ್ಲಿಕೇಷನ್ಸ್ ಕರೆಯದೆ ಒಂದು ವಿಶೇಷವಾದಂಥ ಕಾರ್ಯವಾಗಬೇಕಾಗಿದ್ದುದರಿಂದ ಅವರ ಕೆಲಸಗಳನ್ನು ರೆಗ್ಯುಲರೈಜ್ ಮಾಡುವ ಕೆಲಸದಲ್ಲಿದ್ದೇವೆ. ಇಷ್ಟು ಹೇಳುವಾಗ ಅಮೃತ ಮಹಲ್ ಕಾವಲಿನಲ್ಲಿ ಯೋಗ್ಯ ಜಮೀನುಗಳಲ್ಲಿ ಹುಲ್ಲು ಬೆಳೆದು ಬಂದಿದ್ದರೆ, ಅಲ್ಲಿನ ಕೆಲವು ಪ್ರದೇಶಗಳನ್ನು ಗ್ರೇಜಿಂಗ್ ಅನಿಮಲ್ಸ್‌ಗೋಸ್ಕರ ಕೊಡ ಬೇಕೆಂದೂ ಯೋಚನೆ ಮಾಡಿದ್ದಾರೆ. ಆ ದೃಷ್ಟಿಯಲ್ಲಿ ನಮಗೆ ಹೆಚ್ಚಿಗೆ ಕೇಂದ್ರಸರ್ಕಾರದಿಂದ ಹಣ ಸಹಾಯ ಬೇಕಾಗಿರುತ್ತದೆ. ಈ ಯೋಜನೆಯನ್ನು ಕೇಂದ್ರಸರ್ಕಾರಕ್ಕೂ ಕಳುಹಿಸಿದ್ದೇವೆ. ನ್ಯಾಷನಲ್ ಅಗ್ರಿಕಲ್‌ಚರಲ್ ಕಮಿಷನ್ನಿನವರನ್ನೂ ಸಹ ನಾವು ಒತ್ತಾಯಮಾಡಿದ್ದೇವೆ. ಅವರೂ ಸಹ ಇದರ ಬಗ್ಗೆ ಸಹಾನುಭೂತಿಯಿಂದ ಪರಿಶೀಲಿಸುತ್ತೇವೆಂದು ಹೇಳಿದ್ದಾರೆ. ಈ ರಾಜ್ಯದಲ್ಲಿ ಹಾಸನ, ಮೈಸೂರು, ಬೆಂಗಳೂರು, ಮುಂತಾದ ಕಡೆಗಳಲ್ಲಿ ಕಾವ್ಸ್ ಅಂಡ್ ಹೀಫರ್ಸ್ ಬೆಳವಣಿಗೆಯ ದೃಷ್ಟಿಯಿಂದ ಕೆಲವಾರು ಕೇಂದ್ರಗಳನ್ನು ಮಾಡಬೇಕೆಂದು ಕೆಲವರು ಹೇಳುತ್ತಾರೆ. ಇವತ್ತಿನದಿವಸ ತಮಗೆಲ್ಲಾ ತಿಳಿದಿರುವ ಹಾಗೆ ಈಗ ಸಮಗ್ರ ಭೂಸುಧಾರಣೆ ಜಾರಿಗೆ ಬರುತ್ತಿರು ವಾಗ ರೈತನು ತನ್ನ ಆರ್ಥಿಕ ಸಮಸ್ಯೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಈ ಯೋಜನೆಯನ್ನು ಮಿಕ್ಸೆಡ್ ಫಾರ್ಮಿಂಗ್ ರೀತಿ ಮಾಡಬೇಕು. ರೈತ ಬರೀ ಜಮೀನು ಸಾಗುವಳಿ ಮಾಡಿ ಅದರಿಂದ ಬರತಕ್ಕ ಹಣದಲ್ಲಿ ತಾನೂ ಕೂಡ ಬಾಳುವುದಕ್ಕೆ ಪ್ರಯತ್ನಪಡಬೇಕಾಗಿದೆ. ಇನ್ನೂ ಹೆಚ್ಚಿಗೆ ಅನುಕೂಲವಾಗಲಿ ಎಂದು ಮಿಶ್ರತಳಿ ಹಸುಗಳನ್ನು ಕಟ್ಟುತ್ತೇನೆಂದು ಹೇಳುತ್ತಾನೆ. ಹಸುರು ಕ್ರಾಂತಿ ಜೊತೆಗೆ ಕ್ಷೀರ ಕ್ರಾಂತಿ ಮಾಡಬೇಕೆಂದು ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮಹತ್ವ ಕೊಟ್ಟಿದ್ದಾರೆ. ಅದಕ್ಕೆ ಪ್ಲಾನಿಂಗ್ ಕಮಿಷನ್ನಿನವರೂ ಸಹ ಮಹತ್ವ ಕೊಟ್ಟಿದ್ದಾರೆ. ರಾಜ್ಯ ಸರ್ಕಾರದವರೂ ಸಹ ಹೆಚ್ಚಿಗೆ ಕ್ಷೀರ ಕ್ರಾಂತಿಯಾಗಿ ರೈತನ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸಲು ಸಹಕಾರಿಯಾಗಬೇಕು. ಹೆಚ್ಚಿಗೆ ಹಾಲು ಕೊಡತಕ್ಕ ಹಸುಗಳನು ಸಾಕುವುದು, ಕೋಳಿ ಸಾಕಾಣಿಕೆ, ಮತ್ತು ಕುರಿ ಸಾಕಾಣಿಕೆಗೆ ಸರ್ಕಾರದವರು ಹೆಚ್ಚಿನ ಗಮನವನ್ನು ಈಗಾಗಲೇ ಕೊಡುತ್ತಿದ್ದಾರೆ. ಮಿಶ್ರ ತಳಿಯನ್ನು ಉತ್ಪತ್ತಿ ಮಾಡುವುದಕ್ಕೆ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಒಂದು ಪ್ರಾಜೆಕ್ಟನ್ನೂ ಕೇಂದ್ರ ಸರ್ಕಾರದ ಯೋಜನೆಯಲ್ಲಿ ಇದುವರೆಗೂ ಸೇರಿಸಿಲ್ಲ. ಅದರ ಬಗ್ಗೆ ಈಗಾಗಲೇ ನಾವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೇವೆ. ಅದರ ಬಗ್ಗೆ ಸೂಕ್ತ ವಾಗಿ ಪರಿಶೀಲಿಸಿ ಕೂಡಲೇ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನಾನು ಈ ಸಭೆಯ ಮೂಲಕ ಮತ್ತೊಮ್ಮೆ ಕೇಂದ್ರಸರ್ಕಾರಕ್ಕೆ ಪ್ರಾರ್ಥಿಸುತ್ತೇನೆ. ಅಷ್ಟೇ ಪ್ರಾಮುಖ್ಯವಾದ ಯು.ಎನ್.ಡಿ.ಬಿ. ಪ್ರಾಜೆಕ್ಟ್ ಹಾಗೂ ಗ್ರಾಸ್ ಲ್ಯಾಂಡ್ ಡೆವಲಪ್‌ಮೆಂಟ್ ಪ್ರಾಜೆಕ್ಟ್ ಕೂಡ ಇಲ್ಲಿ ಆಗಬೇಕೆಂದು ಕೇಂದ್ರ ಸರ್ಕಾರದಲ್ಲಿ ಒತ್ತಾಯಪೂರ್ವಕವಾಗಿ ಕೇಳಿದ್ದೇವೆ.

ಇಷ್ಟನ್ನು ಹೇಳಿದರೂ ಪಶುವೈದ್ಯ ಶಾಲೆಗಳೂ ಮತ್ತು ಗ್ರಾಮಾಂತರ ಪಶುವೈದ್ಯಶಾಲೆಗಳೂ ಸಾಕಷ್ಟು ಇಲ್ಲ ಈ ದಿಶೆಯಲ್ಲಿ ಬಹಳ ಕೊರತೆ ಇದೆ ಎಂದು ಅನೇಕರು ಹೇಳಿದ್ದಾರೆ. ಈ ವಿಚಾರದಲ್ಲಿ ಅನೇಕರು ಶಾಸಕರೂ ಅಂದರೆ ಮೇಲ್ಮನೆಯವರೂ ಮತ್ತು ಈ ಮನೆಯ ಶಾಸಕರೂ ನನಗೆ ಕಳೆದ ಎರಡು ತಿಂಗಳಿಂದ ಅಂದರೆ ನಾನು ಇಲ್ಲಿ ಮಂತ್ರಿಪದವಿಯನ್ನು ಸ್ವೀಕಾರ ಮಾಡಿದ ನಂತರ ತಾಲ್ಲೂಕ್ ಬೋರ್ಡಿನವರೂ ಮತ್ತು ಗ್ರಾಮಪಂಚಾಯಿತಿಯವರೂ ಅನೇಕರೂ ಇದರ ಬಗ್ಗೆ ಹೇಳಿದ್ದಾರೆ. ನಮ್ಮಲ್ಲಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಆಸ್ಪತ್ರೆಗಳ ಸಂಖ್ಯೆ 570; ತಾಲ್ಲೂಕ್ ಹಾಗೂ ಜಿಲ್ಲಾ ಮಟ್ಟದಲ್ಲಿರತಕ್ಕ ವೆಟ್‌ರಿನ ಆಸ್ಪತ್ರೆಗಳು 256 ಇವೆ. ರಾಜ್ಯದಲ್ಲಿರತಕ್ಕ ತಜ್ಞರ ಅಭಿಪ್ರಾಯದ ಪ್ರಕಾರ ನಮಗೆ ಗ್ರಾಮಾಂತರ ಪ್ರದೇಶದಲ್ಲಿ ಇನ್ನೂ ಹೆಚ್ಚಿನ ಪಶುವೈದ್ಯಶಾಲೆಗಳು ಬೇಕಾಗಿರುವುದರಿಂದ ಹಾಲಿ ಇರತಕ್ಕವುಗಳನ್ನು ಉತ್ತಮ ಪಡಿಸಿದಾಗ್ಯೂ ಗ್ರಾಮಾಂತರ ಪ್ರದೇಶ ಗಳಿಗೆ ಇನ್ನೂ 516 ಆರ್. ವಿ. ಡೀಸ್ ಗಳೂ ಮತ್ತು 115 ವೆಟ್‌ರಿನರಿ ಡಿಸ್ಪೆನ್ಸ್‌ರಿಗಳೂ ಬೇಕಾಗುತ್ತವೆ. ಈ ದಿಶೆಯಲ್ಲಿ ರಾಜ್ಯಾದ್ಯಂತ ಎಲ್ಲೆಲ್ಲಿ 10 ಸಾವಿರ ಜಾನುವಾರುಗಳು ಇರುತ್ತವೋ ಅಂದರೆ ಮೈದಾನ ಪ್ರದೇಶದಲ್ಲಿ ಅಲ್ಲಿಗೆ ಒಂದು ಆಸ್ಪತ್ರೆಯನ್ನು ಕೊಡಬೇಕೆಂದೂ ಮತ್ತು ಮಲೆನಾಡು ವಿಭಾಗ[illegible]ಮೂರು ಸಾವಿರ ಜಾನುವಾರುಗಳು ಇರತಕ್ಕ ಪ್ರದೇಶಕ್ಕೆ ಅಥವಾ 6 ಮೈಲಿ ಪ್ರದೇಶ[illegible]ದು ಆಸ್ಪತ್ರೆಯನ್ನು ಒದಗಿಸಬೇಕಾದ್ದು ಅತ್ಯಗತ್ಯವೆಂದು ಸರ್ಕಾರಕ್ಕೆ ಮನವರಿಕೆ

(ಶ್ರೀ ಎನ್. ಚಿಕ್ಕೇಗೌಡ)

ಯಾಗಿದೆ. ಹೀಗೆ ಆಸ್ಪತ್ರೆಗಳನ್ನು ಒದಗಿಸಬೇಕಾಗಿದ್ದರೆ ನಮಗೆ ಹೊಸದಾಗಿ 116 ಆಸ್ಪತ್ರೆಗಳೂ ಮತ್ತು 516 ಆರ್. ವಿ. ಡೀಸ್‌ಗಳೂ ಬೇಕಾಗುತ್ತವೆ. ಆದರೆ ನಾನು ತಮಗೆ ಈ ದಿವಸ ಒಂದು ವಿಷಯವನ್ನು ತಿಳಿಸಬೇಕಾಗಿದೆ. ಈ ಎಲ್ಲಾ ಆಸ್ಪತ್ರೆಗಳನ್ನೂ ಒಂದೇವರ್ಷದಲ್ಲಿ ಒದಗಿಸುವುದಕ್ಕೆ ಸರ್ಕಾರಕ್ಕೆ ಸಾಧ್ಯವಿಲ್ಲ ಈ ಚಾಲ್ತಿ ಸಾಲಿನಲ್ಲಿ ಕೆಲವು ಗ್ರಾಮಾಂತರ ಪ್ರದೇಶಗಳಿಗೆ ಒದಗಿಸುವುದರ ಜೊತೆಗೆ ಹಾಲಿ ಇರತಕ್ಕ ಕೆಲವನ್ನು ಅಪ್‌ಗ್ರೇಡ್ ಮಾಡಲಾಗುತ್ತದೆ. ಇಷ್ಟಕ್ಕೆ ಬೇಕಾಗುವಷ್ಟು ಹಣವನ್ನು ಒದಗಿಸುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಇನ್ನು ಈ ದಿವಸ ಸರ್ಕಾರದವರ ವಶದಲ್ಲಿರತಕ್ಕ ಪಶುವೈದ್ಯಶಾಲೆಗಳಿಗೆ ಮತ್ತು ವೈದ್ಯಶಾಲೆಗಳಿಗೆ ತಾಲ್ಲೂಕ್ ಬೋರ್ಡಿನವರೂ ಮತ್ತು ಗ್ರಾಮಪಂಚಾಯತಿಯವರು ಏನು ಒಂದು ವಂತಿಕೆಯನ್ನು ಕೊಡಬೇಕಾಗಿದೆ ಅದು ಈ ರೆಕರಿಂಗ್ ಎಕ್ಸ್‌ಪೆಂಡಿಚರ್ ಬಗ್ಗೆ ಶೇಕಡ 25 ರಷ್ಟನ್ನು ಅನ್ಯುಯಲ್ ಕಾಂಟ್ರಿಬ್ಯೂಷನ್ ರೀತಿಯಲ್ಲಿ ಕೊಡಬೇಕಾಗಿದೆ ಎನ್ನತಕ್ಕ ವಿಷಯ ತಮಗೆಲ್ಲರಿಗೂ ತಿಳಿದಿರತಕ್ಕದ್ದೇ ಇದೆ.

ಇನ್ನು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಆಸ್ಪತ್ರೆಗಳಿಗೆ ಔಷಧಿಗಳನ್ನು ಒದಗಿಸುವುದಕ್ಕಾಗಿ ಸಾಕಷ್ಟು ಹಣವನ್ನು ಒದಗಿಸಲಾಗಿದೆ. ಆದರೆ ಶ್ರೀ ವಿ. ಎನ್. ಪಾಟೀಲರವರು ಟಲ್ಬರಾನ್ ಮತ್ತು ಮೆಫೆಕ್ಸ್ ಔಷಧಿಗಳು ಗ್ರಾಮಾಂತರ ಪ್ರದೇಶದಲ್ಲಿ ಸರಿಯಾಗಿ ಸಿಕ್ಕುತ್ತಿಲ್ಲ ಎಂದು ಹೇಳಿದ್ದಾರೆ. ಆದರೆ ಅವರು ಹೇಳಿದವುಗಳು ಔಷಧಿಗಳಲ್ಲ. ಅವು ಟಾನಿಕ್ಕುಗಳು. ಹಸುಗಳಲ್ಲಿ ಹಾಲು ಹೆಚ್ಚುವುದಕ್ಕಾಗಿ ಅವುಗಳನ್ನು ಕೊಡುತ್ತಾರೆ. ಅವುಗಳೇನಿದ್ದರೂ ಒಂದು ಜನರಲ್ ಟಾನಿಕ್ ಇದ್ದಹಾಗೆ. ಅವುಗಳ ಕೊರತೆ ಸ್ವಲ್ಪ ಮಟ್ಟಿಗೆ ಇದೆ. ಅವುಗಳನ್ನು ದುರುಪಯೋಗಮಾಡಿ ಮಾರುಕಟ್ಟೆಯಲ್ಲಿ ಬ್ಲಾಕ್ ಮಾರ್ಕೆಟ್ ಮಾಡುತ್ತಾರೆಂಬ ಪುಕಾರೂ ಇದೆ. ಆದರೆ ಅದು ಮಾರುಕಟ್ಟೆಯಲ್ಲಿ ಸರಳವಾಗಿ ಸಿಕ್ಕುತ್ತಿಲ್ಲ. ಸ್ವಲ್ಪ ತೊಂದರೆ ಇದೆ. ಅದನ್ನು ಎಲ್ಲಿ ಸಿಕ್ಕುತ್ತದೋ ಅಲ್ಲಿಂದ ತರಿಸುವುದಕ್ಕೆ ಸರ್ವಪ್ರಯತ್ನಗಳನ್ನೂ ಮಾಡಲಾಗುತ್ತದೆಂದು ನಾನು ತಮಗೆ ಭರವಸೆ ಕೊಡಬಲ್ಲೆ.

ಇನ್ನು ಜಾನುವಾರುಗಳಿಗೆ ಬರತಕ್ಕ ಅಂಟು ರೋಗಗಳ ವಿಚಾರದಲ್ಲಿ ಹೇಳುವುದಾದರೆ ಈ ದೊಡ್ಡ ರೋಗ ಚಪ್ಪೇರೋಗ, ಕೋಳಿಗಳಿಗೆ ಬರತಕ್ಕ ರಾಣಿಕೆಟ್ ಡಿಸೀಜ್ ಮತ್ತು ಕುರಿಗಳಿಗೆ ಬರತಕ್ಕ ರೋಗಗಳ ವಿಚಾರದಲ್ಲ ಅನೇಕರು ಮಾತನಾಡಿದ್ದಾರೆ. ಈ ದಿವಸ ನಮ್ಮ ಹೆಬ್ಬಾಳದಲ್ಲಿರತಕ್ಕ ಆ ಸೀರಂ ಇನ್‌ಸ್ಟಿಟ್ಯೂಟ್ 1926 ರಲ್ಲಿ ಸ್ಥಾಪಿತವಾಯಿತು. ಅದು ಇಲ್ಲಿಯತನಕ ನಮ್ಮ ರಾಜ್ಯದ 10 ಜಿಲ್ಲೆಗಳಿಗೆ ಸೀರಂ ವ್ಯಾಕ್ಸೀನ್ ಕೊಡತಕ್ಕ ಶಕ್ತಿಯನ್ನು ಗಳಿಸಿರುತ್ತೆ. ಅದನ್ನು ಇನ್ನೂ ಅಭಿವೃದ್ಧಿ ಮಾಡುವುದಕ್ಕಾಗಿ ಅಲ್ಲಿಗೆ ಇನ್ನೂ ಹೆಚ್ಚಿನ ಸಲಕರಣೆಗಳನ್ನೂ ಮತ್ತು ತಜ್ಞರ ಒಂದು ಸಮಿತಿಯನ್ನೂ ಕೂಡ ಮಾಡಿ ಅವರ ವರದಿಯನ್ನು ಈಗಾಗಲೇ ತರಿಸಿಕೊಂಡಿದ್ದೇವೆ. ಇನ್ನು ಮುಂದಕ್ಕೆ ಅಲ್ಲಿ ಮಾಡರನ್ ಮೆಥೆಡ್ಸ್ ಪ್ರಕಾರ ವ್ಯಾಕ್ಸೀನನ್ನು ತಯಾರು ಮಾಡಿ ರಾಜ್ಯಕ್ಕೆ ಹೆಚ್ಚಿನ ಮಟ್ಟದಲ್ಲಿ ಸರಬರಾಯಿ ಮಾಡತಕ್ಕ ಬಗ್ಗೆ ಸಾಕಷ್ಟು ಹಣವನ್ನು ಒದಗಿಸಿದ್ದೇವೆ. ಇನ್ನು ಮಿಶ್ರಥಳಿ ಹಸುಗಳಿಗೆ ಬರತಕ್ಕ ಕಾಲುಜ್ವರ ಬಾಯಿಜ್ವರ ಇದನ್ನು ವಾಸಿಮಾಡತಕ್ಕ ಹಾಗೂ ಆ ರೋಗ ಬಾರದಂತೆ ಅದನ್ನು ತಡೆಗಟ್ಟತಕ್ಕ ವ್ಯಾಕ್ಸೀನನ್ನು ತರಿಸುವುದಕ್ಕೆ ಸರ್ವಪ್ರಯತ್ನಗಳನ್ನೂ ಮಾಡುತ್ತಿದ್ದೇವೆ. ಆದರೆ ಈ ಔಷಧಿಯನ್ನು ಇಲ್ಲಿಯವರೆಗೂ ನಾವು ಆ ಇಜ್‌ತ್‌ನಗರದಿಂದಲೇ ತರಿಸಬೇಕಾಗಿತ್ತು. ಆದರೆ ಈ ದಿವಸ ಈ ಔಷಧಿಯನ್ನು ಇಲ್ಲೇ ತಯಾರಿಸತಕ್ಕ ಬಗ್ಗೆ ಡೆನ್ಮಾರ್ಕಿನ ಕೊಲಾಬೊರೇಷನ್ ಮೂಲಕ ಕಾರ್ಯನಡೆದಿದೆ ಅವರಿಗೆ ನಮ್ಮ ಸರ್ಕಾರ ಸುಲಭವಾಗಿ ಭೂಮಿಯನ್ನೂ ನೀರನ್ನೂ ಹಾಗೂ ಬಿಲ್ಡಿಂಗುಗಳನ್ನೂ ಒದಗಿಸಿದೆ. ಅದನ್ನು ಒಂದು ಕೋಟಿ ರೂಪಾಯಿ ಬಂಡವಾಳದಲ್ಲಿ ಪ್ರಾರಂಭವಾಗತಕ್ಕ ಒಂದು ಪ್ರಾಜೆಕ್ಟಾಗಿದೆ. ಇದನ್ನು ನಾವು ಕೇಂದ್ರ ಸರ್ಕಾರದವರ ನೆರವಿನಿಂದ ಮಾಡುತ್ತಿದ್ದೇವೆ.

ಇನ್ನು ನಮ್ಮಲ್ಲಿ ಜನರ ಪೂರೈಕೆಯನ್ನು ಈ ಕ್ರಾಸ್‌ಬ್ರೀಡ್ ಹಸುಗಳ ಬಗ್ಗೆ ನಡೆಸಲು ನಮಗೆ ಸಾಕಷ್ಟು ಹಸುಗಳು ಸಿಕ್ಕುತ್ತಿಲ್ಲ. ಒಂದು ವೇಳೆ ಸಿಕ್ಕಿದರೂ ಅವು ಸುಲಭ ದರದಲ್ಲಿ ಸಿಕ್ಕುತ್ತಿಲ್ಲ. ನಮ್ಮ ರಾಜ್ಯದಲ್ಲಿ ಕೆಲವು ಹೆಚ್ಚು ಮಳೆ ಬರತಕ್ಕ ಜಿಲ್ಲೆಗಳನ್ನು ಬಿಟ್ಟು ಬಾಕಿ ಜಿಲ್ಲೆಗಳಿಗೆ ಈ ಮಿಶ್ರಥಳಿ ಹಸುಗಳನ್ನು ಸಾಧ್ಯವಾದ ಮಟ್ಟಿಗೂ ಒದಗಿಸುತ್ತಿದ್ದೇವೆ. ಬೆಂಗಳೂರು ಮತ್ತು ಇದರ ಸುತ್ತಮುತ್ತ ಇರತಕ್ಕ ಗ್ರಾಮಗಳಗಲ್ಲಿ ಮತ್ತು ತುಮಕೂರು ಹಾಗೂ ಕೋಲಾರ ಜಿಲ್ಲೆಗಳಲ್ಲಿ ಈ ಮಿಶ್ರಥಳಿ ಹಸುಗಳನ್ನು ಸಾಕುವುದು ಬಹಳ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿದೆ. ನಮ್ಮ ಬೆಂಗಳೂರಿನ ಹಾಲಿನ ಕೇಂದ್ರಕ್ಕೆ ಈ ಸ್ಥಳಗಳಿಂದ ಈ ದಿವಸ ದಿವಸಕ್ಕೆ 600 ಲೀಟರ್ಸ್ ಹಾಲು ಬರುತ್ತಿದೆ. ಇನ್ನು ಈಗ ಸರ್ಕಾರದವರು ಈ ಮಿಶ್ರಥಳಿ ಹಸುಗಳನ್ನು ಹಾಸನ ಮಂಗಳೂರು ಭಾಗಗಳಿಗೆ ಒದಗಿಸುವುದಕ್ಕೆ ಹಾಗೂ ಅಲ್ಲಿ ಕ್ಷೀರ ಕೇಂದ್ರಗಳನ್ನು ತಯಾರು ಮಾಡುವುದಕ್ಕೆ ಸರ್ವಪ್ರಯತ್ನ

ಗಳನ್ನೂ ಮಾಡುತ್ತಿದ್ದಾರೆ. ಈ ದಿಶೆಯಲ್ಲಿ ಸರ್ಕಾರದವರು ಈ ಮಿಶ್ರತಳಿ ಹಸುಗಳನ್ನು ಸಾಕಿ ಅವುಗಳ ಕರುಗಳು ಗರ್ಭಧಾರಣೆ ಮಾಡಿದ ಕೂಡಲೇ ಅವುಗಳನ್ನು ಅಲ್ಲಿ ರೈತರಿಗೆ ಒದಗಿಸುವುದಕ್ಕೆ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಇದರಿಂದ ಮಧ್ಯಮ ವರ್ಗದವರಿಗೂ ಈ ಹಾಲನ್ನು ಹಂಚುವುದಕ್ಕೆ ಸಾಧ್ಯವಾಗುತ್ತದೆ. ಇದಕ್ಕೆ ತಮ್ಮೆಲ್ಲರ ಸಹಕಾರ ಬೇಕಾಗಿದೆ.

ಇನ್ನು ರಾಜ್ಯದಲ್ಲಿ 8 ಕ್ಯಾಟಲ್ ಫಾರಂಗಳಿವೆ. ಆದರೆ ಅಲ್ಲಿ ಕೆಲಸಗಳು ಈದಿವಸ ವೇಗದಾಯಕ ರೀತಿಯಲ್ಲಿ ನಡೆಯುತ್ತಿಲ್ಲ. ನಮ್ಮಲ್ಲಿ ಆ ಹಸಿರು ಕ್ರಾಂತಿ, ಬಿಳಿ ಕ್ರಾಂತಿ ಮತ್ತು ಕ್ಷೀರ ಕ್ರಾಂತಿ ಯೋಜನೆಗಳು ಅಷ್ಟು ಬೇಗ ಆಗುವುದು ಕಷ್ಟವಾದ್ದರಿಂದ ಸರ್ಕಾರದವರು ಇಂಟೆನ್‌ಸೀವ್ ಕ್ಯಾಟಲ್ ಡೆವಲಪ್‌ಮೆಂಟ್ ಪ್ರಾಜೆಕ್ಟುಗಳನ್ನು ಮಾಡಲು ಕೆಲವು 'ಕೀ' ವಿಲೇಜುಗಳ ಸ್ಕೀಮನ್ನು ಜಾರಿಗೆ ತಂದಿದ್ದಾರೆ. ಇದನ್ನು ಪ್ರಾರಂಭಮಾಡುವುದಕ್ಕಾಗಿ ಚಾಮರಾಜನಗರ ಮತ್ತು ಹುಣಸೂರುಗಳನ್ನು ಈಗಾಗಲೇ ಈ 'ಕೀ' ವಿಲೇಜ್ ಸ್ಕೀಮಿಗೆ ನಿರ್ಧಾರಮಾಡಿದೆ ಅಲ್ಲಿ ಈ ಸ್ಕೀಮನ್ನು ಪ್ರಾರಂಭಮಾಡಲಾಗುತ್ತಿದೆ.

ಇನ್ನು ಕೃತಕ ಗರ್ಭಧಾರಣೆಯ ಕೇಂದ್ರಗಳು ನಮ್ಮಲ್ಲಿ 410 ಇವೆ. ಇನ್ನು ಕೆಲವು ಕೇಂದ್ರಗಳನ್ನು ಮಂಗಳೂರಲ್ಲಿ ಮಾಡಬೇಕಾಗಿದೆ. ಜನರು ಈ ದಿವಸ ಆ ಮುರಾಬ್ರೀಡ್ ಮತ್ತು ದೇವನೀ ಬ್ರೀಡ್ ಗೂಳಿಗಳಿಗೂ ಮತ್ತು ಕೋಣಗಳಿಗೂ ಡಿಮ್ಯಾಂಡ್ ಜಾಸ್ತಿ ಇದೆ. ಆದರೆ ಅವುಗಳ ಸಪ್ಲೈ ಸಾಕಷ್ಟು ಆಗುತ್ತಿಲ್ಲ. ಅದಕ್ಕಾಗಿ ನಾವು ಡಿಫೆನ್ಸ್ ಇಲಾಖೆಯವರಿಗೆ ಕೇಂದ್ರಕ್ಕೆ ಬರೆದಿದ್ದೇವೆ. ಅಲ್ಲಿಂದ ಇವನ್ನು ತರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇವತ್ತು ವರ್ಲ್ಡ್ ಫುಡ್ ಪ್ರೋಗ್ರಾಂನಲ್ಲಿ ಬೇಕಾದ ಮೈಜ್ ಮತ್ತು ಜೋಳ ಕೊಟ್ಟಿದ್ದಾರೆ. ಅದನ್ನು ರೈತರಿಗೆ ಹಾಲು ಕರೆಯುವ ಹಸುಗಳು ಮತ್ತು ಕೋಳಿಗಳಿಗೆ ಫೀಡ್ ಮಾಡಲು ಕೊಡಲಾಗಿದೆ. ಇದಕ್ಕೆ ಸುಮಾರು 7 ಲಕ್ಷ ಹಣವಿದೆ, ಇದನ್ನು ಯಾವ ರೀತಿಯಲ್ಲಿ ಉಪಯೋಗಿಸಬೇಕೆಂಬುದನ್ನು ಯೋಚನೆಮಾಡುತ್ತಿದ್ದೇವೆ. ಇದರ ಜೊತೆಗೆ ರಾಜ್ಯದ ಆದ್ಯಂತ ಸಾಕುವವರಿಗೆ ಒಂದೊಂದು ಒಳ್ಳೆಯ ಹೋರಿಯನ್ನು ಕೊಡಬೇಕೆಂದಿದ್ದೇವೆ, ಈ ರೀತಿ ನೂರು ಹೋರಿ ಸುಲಭ ದರದಲ್ಲಿ ಕೊಡಬೇಕು, ಸಬ್ಸಿಡಿ ರೂಪವಾಗಿ 500 ರೂಪಾಯಿ ಕೊಟ್ಟು ಸಹಾಯಮಾಡಬೇಕು ಎಂದು ಗೊತ್ತುಮಾಡಿದ್ದೇವೆ. ತಾಲ್ಲೂಕು ಬೋರ್ಡಿನಿಂದ ಶಿಫಾರ್ಸು ಮಾಡಲ್ಪಟ್ಟವರಿಗೆ ಈ ವರ್ಷ ಅದನ್ನು ಕೊಡಲಾಗುವುದು. ಇಂದು ಜಾತ್ರೆಗಳಲ್ಲಿ ಹಾಲು ಕೊಡುವ ಹಸುಗಳಿಗೆ ಸಂಬಂಧಪಟ್ಟಂತೆ ಕಾಂಪಿಟಿಷನ್ ಇಟ್ಟು ಪ್ರೋತ್ಸಾಹ ಕೊಡಬೇಕೆಂದು ಯೋಚಿಸಿದ್ದೇವೆ, ಬಜೆಟ್ಟಿನಲ್ಲಿ ಸಾಕಷ್ಟು ಹಣ ಮಂಜೂರಾದನಂತರ ಅದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ರಾಜ್ಯದಲ್ಲಿ ಕುರಿಗಳನ್ನು ಅಭಿವೃದ್ಧಿ ಮಾಡಲು ಚಳ್ಳಕೆರೆಯಲ್ಲಿ 10 ಸಾವಿರ ಎಕರೆಯಲ್ಲಿ ಕುರಿಗಳ ಫಾರಂ ಪ್ರಾರಂಭಿಸಿ ಆಸ್ಟ್ರೇಲಿಯಾದಲ್ಲಿರುವ ಕಾರ್ಡಿಯಲ್ ಬ್ರೀಡ್ ತಂದು ಕ್ರಾಸ್ ಮಾಡಿ ರೈತರಿಗೆ ಹಂಚಬೇಕೆಂದಿದ್ದೇವೆ. ಬನ್ನೂರು ಬ್ರೀಡ್ ಹೆಸರುವಾಸಿಯಾಗಿದೆ, ಅದು ಮಟನ್ ಬ್ರೀಡ್, ಪ್ರಪಂಚದಲ್ಲೆಲ್ಲಾ ಪ್ರಖ್ಯಾತವಾಗಿದೆ. ಮಳವಳ್ಳಿ ತಾಲ್ಲೂಕಿನ ಧನಗೂರಿನಲ್ಲಿ ಇದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ. ಕೋಳಿ ಸಾಕಲು ಈಗ ಬಹಳ ಜನರು ಮುಂದೆ ಬರುತ್ತಿದ್ದಾರೆ. ಇದರಿಂದ ರೈತರಿಗೆ ಶೀಘ್ರವಾಗಿ ಹಣ ಸಿಕ್ಕುವುದು. ಸೆಂಟ್ರಲ್ ಪೌಲ್ಟ್ರಿ ಫಾರಂ ಹೆಸರಗಟ್ಟದಲ್ಲಿದೆ, 11 ರೀಜನಲ್ ಫಾರಂಗಳನ್ನು ತೆರೆಯಲಾಗಿದೆ, 11 ಪೌಲ್ಟ್ರಿ ಎಕ್ಸ್‌ಟೆನ್‌ಷನ್ ಸ್ಕೀಮ್ಸ್ ಇದೆ. ಅವುಗಳ ಮೂಲಕ ರೈತರಿಗೆ ಬೇಕಾದ ಕೋಳಿ ಮರಿಗಳನ್ನು ಸಾಕಲು ಒದಗಿಸುವುದಕ್ಕೆ ಪ್ರಯತ್ನಮಾಡಿದೆ. ಹೆಸರುಗಟ್ಟದಲ್ಲಿ ಅಭಿವೃದ್ಧಿ ಮಾಡಿದ ವೈಟಿಕ್‌ಸ್ಟೀನ್ ಕೋಳಿ ತಳಿ, ಇದೆ ವೈಟ್ ಲೆಗ್ ಹಾರನ್, ಇದು ಮೊದಲನೆಯ ದರ್ಜೆಯದು. ಇದು ವರ್ಷಕ್ಕೆ ಸುಮಾರು 240 ಮೊಟ್ಟೆಗಳನ್ನು ಕೊಡುವುದು. ಐ.ಪಿ.ಡಿ.ಸಿ. ಪ್ರಾಜೆಕ್ಟ್ ಮೈಸೂರು, ಮತ್ತು ಹುಬ್ಬಳ್ಳಿ–ಧಾರವಾಡದಲ್ಲಿ ಪ್ರಾರಂಭಿಸಲಾಗಿದೆ. ಆದರೂ ಅನೇಕರು ಕೋಳಿ ಫಾರಂ ತೆರೆಯಲು ಅವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಬೇಕೆಂದು ಬೇಡಿಕೆಯನ್ನು ಇಡುತ್ತಿದ್ದಾರೆ. ಅದಕ್ಕನುಗುಣವಾಗಿ ನಮ್ಮ ಕೇಂದ್ರದಲ್ಲಿ ವೈಟಿಕ್ಸ್ ಮುಂತಾದ ತಳಿಗಳನ್ನು ಬೆಳೆಸಿ ಕೊಡಲು ಸರಕಾರ ಏರ್ಪಾಡು ಮಾಡುತ್ತಿದೆ. ಈಗ ಎಗ್ ಬೋರ್ಡ್ ಮಾಡಲು ಒಂದು ಕನ್‌ಸಲ್ಟೇಷನ್ ಬೋರ್ಡ್ ಆಸ್ಟ್ರೇಲಿಯಾದಲ್ಲಿರುವ ಹಾಗೆ ಇಲ್ಲೂ ಮಾಡಬೇಕೆಂದಿದ್ದೇವೆ. ನಮ್ಮ ಬೆಂಗಳೂರು ಸುತ್ತಮುತ್ತ ಪೌಲ್ಟ್ರಿ ಫಾರಂನಲ್ಲಿ ಈಗ ಮೊಟ್ಟೆಗಳನ್ನು ಉತ್ಪತ್ತಿ ಮಾಡುತ್ತಿದ್ದಾರೆ. ಮೈಸೂರು ಪ್ರಾಡ್ಯೂಸರ್ಸ್ ಸೊಸೈಟಿಯವರು ಮೊಟ್ಟೆಗಳನ್ನು ಶೇಖರಿಸುತ್ತಿದ್ದಾರೆ, ಅದಕ್ಕೆ ಮದ್ರಾಸಿನಿಂದ ಬೇಡಿಕೆ ಇದೆ. ಮದ್ರಾಸಿನಲ್ಲಿ ಹೆಚ್ಚು ಕೋಳಿ ಸಾಕುವುದಕ್ಕೆ ಕಷ್ಟವಿದೆ, ಅಲ್ಲಿ ಮೊಟ್ಟೆಗಳ ಉತ್ಪತ್ತಿ ಕಡಮೆಯಿರುವುದರಿಂದ ಅಲ್ಲಿಗೆ ರೈಲಿನ ಮುಖಾಂತರ ಕಳಿಸಬೇಕು ಎಂದು ಯೋಚನೆಮಾಡುತ್ತಿದ್ದೇವೆ. ಈ ಬೋರ್ಡನ್ನು ಮಾಡಲು ಸ್ಟ್ಯಾಚ್ಯೂಟರಿ ಪವರ್ ಏನು ಬೇಕು ಅದನ್ನು ತಿಳಿಯಕೊಳ್ಳಲು ಆಸ್ಟ್ರೇಲಿಯದಲ್ಲಿರುವ ಕಾಯಿದೆ ಮತ್ತು ರೂಲ್ಸ್ ತರಿಸಿ

ಲೀಟರ್ ಹಂಚುತ್ತಿದ್ದರು. ಚಾಲ್ತಿ ಸಾಲಿನಲ್ಲಿ ಆಗಸ್ಟ್, ಸೆಪ್ಟೆಂಬರ್ ಮತ್ತು ನವಂಬರ್ ಸೀಸನ್ ನಲ್ಲಿ ಫ್ಲೆಷ್ ಸೀಸನ್ ಬರುತ್ತದೆ. ಆವಾಗ ಇದು 80 ಸಾವಿರ ಲೀಟರ್‌ಗೆ ಏರಬಹುದು ಎಂದು ಲೆಕ್ಕ ಹಾಕಿದ್ದೇವೆ. ಟ್ರೇಡಿಂಗ್ ಲಾಸ್ 1968—69 ರಲ್ಲಿ 34.44 ಲಕ್ಷ ಇತ್ತು, 1971—72 ರಲ್ಲಿ 1.25 ಲಕ್ಷಕ್ಕೆ ಇಳಿಸಿದ್ದೇವೆ. 1972-73 ಕ್ಕೆ ಲಾಸ್ ಕಡಿಮೆ ಮಾಡಿ ನಷ್ಟ ಆಗದೇ ಇದ್ದ ರೀತಿಯಲ್ಲಿ ನಡೆಸಬೇಕು ಎಂದು ಮಾಡುತ್ತಿದ್ದೇವೆ. ಮುಂದಿನ ವರ್ಷದಲ್ಲಿ ಭರವಸೆ ಕೊಡಬಲ್ಲೆ. ಲಾಸ್ ಇಲ್ಲದೇ ನಡೆಸುತ್ತೇವೆ ಎಂದು. ಮಾನ್ಯ ಸದಸ್ಯರೊಬ್ಬರು ಹೇಳಿದರು ಬೆಂಗಳೂರು ಡೈರಿಯಲ್ಲಿ ಹಾಲು ಮಾರುತ್ತಾರೆ, ಕೊಂಚ ಬೆಣ್ಣೆ ಮಾರುತ್ತಾರೆ ಎಂದು. 1971-72 ರಲ್ಲಿ 100 ಟನ್ ಬೆಣ್ಣೆ, 21 ಟನ್ ತುಪ್ಪ, 15 ಟನ್ ಕ್ಯಾಸಿನ್, 150 ಟನ್ ಐಸ್ ಕ್ರೀಂ ಮಿಕ್ಸ್, ಕೊಟ್ಟಿದ್ದೇವೆ. ಅದೇರೀತಿಯಲ್ಲಿ ಹೋಲ್ ಮಿಲ್ಕ್ ಜೊತೆಗೆ ಡಬ್ಬಲ್ ಟೋನ್ ಮಿಲ್ಕ್, ಚಾಕ್ಲೇಟ್ ಮಿಲ್ಕ್ ಸಂಬಂಧಪಟ್ಟ ಐಸ್ ಕ್ರೀಂ ಮಿಲ್ಕ್, ಚಾಯ್ಸ್ ಐಸ್ ಕ್ರೀಂ ಮಾರುತ್ತಿದ್ದೇವೆ. ಬೆಂಗಳೂರಿನ ಜನತೆಯ ಹಾಲಿನ ಕನ್ಸ್ಯೂಮರ್ಸ್ 4 ರಲ್ಲಿ ಒಬ್ಬರು ನಮ್ಮ ಡೈರಿ ಹಾಲನ್ನು ಉಪಯೋಗಿಸುತ್ತಿದ್ದಾರೆ. ಇಷ್ಟು ಮಾತ್ರ ಹೇಳಬಲ್ಲೆ. ಬೆಂಗಳೂರಿನಲ್ಲಿ ಸರ್ಕಾರದ ವತಿಯಿಂದ ಮಾಡಿರುವ ಡೈರಿ ಖಾಸಗಿ ಹಾಲು ಮಾರುವವರ ಜೊತೆಗೆ ಕಾಂಪಿಟಿಷನ್ ಮಾಡುವುದರಿಂದ ಹಾಲಿನ ಗುಣಮಟ್ಟ ಉತ್ತಮವಾಗಿ ಉತ್ತಮ ದರ್ಜೆ ಹಾಲು ಬೆಂಗಳೂರು ಜನತೆಗೆ ಸಿಕ್ಕುವುದಕ್ಕೆ ಅನುಕೂಲವಾಗಿದೆ. ಡೈರಿಯವರು ಹಾಲು ಮಾರಾಟ ಮಾಡುವ ಕಾಲದಲ್ಲಿ ಸೆಲಿಂಗ್ ಬೂತ್ಸ್ ಇದ್ದಾಗ ಹಾಲು ಮಾರಾಟವಾಗದೆ ಕೊಳೆತು ನಷ್ಟವಾಗುತ್ತಿತ್ತು. ಈಗ ಆ ಸೆಲಿಂಗ್ ಬೂತ್ಸ್‌ನ್ನು ತಪ್ಪಿಸಿ ಕಮೀಷನ್ ಏಜೆಂಟ್ ಅಂತ ನೇಮಕ ಮಾಡಿ ಹಾಲು ಮಾರುತ್ತಾ ಇರುವುದರಿಂದ ಈಗ ಚೆನ್ನಾಗಿ ಕೆಲಸ ಮಾಡುತ್ತಾ ಇದೆ. ಮಾನ್ಯ ಕೃಷ್ಣನ್‌ರವರು ಹೇಳಿದಂತೆ ಒಬ್ಬಿಬ್ಬರು ತಪ್ಪುದಾರಿಗೆ ಹೋಗಿರುವವರು ಇದ್ದಾರೆ. ಆರೀತಿ ಹೋಗಿದ್ದವರಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಇನ್ನು ಬಡವರ ಮಕ್ಕಳಿಗೆ 3 ವರ್ಷದ ಕೆಳಗೆ ಇರುವ ಮಕ್ಕಳಿಗೆ ಸ್ಲಮ್ ಏರಿಯಾಗಳಲ್ಲಿರುವವರಿಗೆ ಬೆಂಗಳೂರು ಹಾಗೂ ಕೆ. ಜಿ. ಎಫ್. ನಲ್ಲಿರುವವರಿಗೆ 7,893 ಲೀಟರ್ಸ್ ಹಾಲನ್ನು ಕೊಡುತ್ತಿದ್ದೇವೆ. ಯೂನಿಸೆಫ್ ಅಗ್ರಿಮೆಂಟ್ ಪ್ರಕಾರ 72380 ಮಕ್ಕಳಿಗೆ ಹಾಲನ್ನು ಕೊಡುತ್ತಿದ್ದೇವೆ.

ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರಾದಂಥ ದೇವೇಗೌಡರು ಕೆಲವು ವಿಚಾರಗಳನ್ನು ನನ್ನ ಖಾತೆ ಬಗ್ಗೆ ಹೇಳಿದ್ದಾರೆ. ಇದರ ಜೊತೆಗೆ ಅನೇಕ ಸದಸ್ಯರು ಗ್ರಾಮಾಂತರ ಪ್ರದೇಶದಲ್ಲಿ ಅನೇಕ ಆಸ್ಪತ್ರೆಗಳನ್ನು ಪ್ರಾರಂಭ ಮಾಡಬೇಕು ಮತ್ತು ಅದಕ್ಕೆ ಬೇಕಾದ ಔಷಧಿಗಳನ್ನು ಒದಗಿಸಬೇಕು ಎಂದು ಹೇಳಿದ್ದಾರೆ ಮತ್ತು ಶೇವಣಿ ಬ್ರೀಡ್ ಅಭಿವೃದ್ಧಿ ಮಾಡುವ ವಿಷಯದಲ್ಲಿ ಸಲಹೆ ಕೊಟ್ಟಿದ್ದಾರೆ. ಇನ್ನೂ ಅನೇಕ ಮಾನ್ಯ ಸದಸ್ಯರು ಇನ್ನೂ ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ, ಅದರ ಕಡೆಯೂ ಗಮನ ಕೊಡುತ್ತೇನೆ. ಬಿಜಾಪುರ, ಕುಮಟ ಮತ್ತು ಹಾಸನದಲ್ಲಿ ರೂರಲ್ ಡೈರಿ ಸೆಂಟರ್ಸ್ ಪ್ರಾರಂಭ ಮಾಡುತ್ತೇವೆ. ಮತ್ತು ಬಳ್ಳಾರಿ ಮತ್ತು ರಾಯಚೂರು ಕ್ಷೇತ್ರಗಳಲ್ಲಿ ಇನ್ನೂ 2 ಡೈರಿಗಳನ್ನು ಪ್ರಾರಂಭ ಮಾಡಬೇಕೆಂದು ಕೇಳಿದ್ದಾರೆ. ಇದರ ಬಗ್ಗೆ ಸರ್ಕಾರ ಈ ವರ್ಷದಲ್ಲಿ ತೀವ್ರವಾಗಿ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಹೇಳುತ್ತೇನೆ. ಇದರ ಜೊತೆಗೆ ರಾಜ್ಯದಲ್ಲಿರುವ ಹೆಸರುಘಟ್ಟದಲ್ಲಿ ಪ್ರಾರಂಭವಾಗಿದ್ದಂಥ ಇಂಡೋ ಡ್ಯಾನಿಷ್ ಅಗ್ರಿಮೆಂಟ್ ಪ್ರಕಾರ ಇನ್ನೂ 2 ಸಬ್ ಸ್ಟೇಷನ್ಸ್ ಕುಡ್ಲಗಿ ಮತ್ತು ಮುನಿರಾಬಾದ್ ನಲ್ಲಿ ಪ್ರಾರಂಭ ಮಾಡಿದ್ದೇವೆ. 30 ಜೆರ್ಸಿ ಹಸುಗಳನ್ನು ಉಚಿತವಾಗಿ ಕೊಟ್ಟಿದ್ದಾರೆ. ಕುಡ್ಲಗಿಯಲ್ಲಿ ಸ್ಥಳದ ರಾಸುಗಳನ್ನು ಕ್ರಾಸ್ ಬ್ರೀಡ್ ಮಾಡಿ ಹುಟ್ಟಿದಂಥ ಕರುಗಳನ್ನು ಹಂಚಬೇಕು ಎಂದು ತೀರ್ಮಾನ ಮಾಡಿದ್ದೇವೆ.

ಇನ್ನು ಶ್ರೀಮಾನ್ ದೇವೇಗೌಡರು ಬೆಂಗಳೂರು ಡೈರಿ ಮೇಲೆ ಮಾಡಿದ ಅಪಾದನೆಗಳ ಬಗ್ಗೆ ಈ ಸಭೆಯ ಮೂಲಕ ಅವರ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಶ್ರೀಮಾನ್ ದೇವೇಗೌಡರು ಈ ಒಂದು ಸದನದಲ್ಲಿ ಬೆಂಗಳೂರು ಡೈರಿ ನೋಡಿಕೊಳ್ಳತಕ್ಕ ಅಧಿಕಾರಿಯ ಒಂದು ಜವಾಬ್ದಾರಿ ಬಗ್ಗೆ ಪ್ರಶ್ನೆ ಮಾಡಿದ್ದಾರೆ. ಆದಷ್ಟು ಬೇಗ ಸವಿಸ್ತಾರವಾಗಿ ಸಂಬಂಧಪಟ್ಟ ದಾಖಲೆಗಳನ್ನು ಸಂಬಂಧಪಟ್ಟವರಿಂದ ತರಿಸಿ ನಿನ್ನೆಯಿಂದ ಈವೊತ್ತಿನವರೆಗೂ ಪರಿಶೀಲನೆ ಮಾಡುತ್ತಿದ್ದೇನೆ. ಅವರು ಹೇಳಿದಂಥ ಒಂದು ಜನರಲ್ ಮ್ಯಾನೇಜರ್ ಪೋಸ್ಟ್ ಹಾಗೆಯೇ ಖಾಲಿ ಇಟ್ಟಿದ್ದೇವೆ. ಜನರಲ್ ಮ್ಯಾನೇಜರ್ ಪೋಸ್ಟ್‌ಗೆ ಅರ್ಜಿ ಹಾಕಿದಂಥ ಮಂಚೇಗೌಡರ ಬಗ್ಗೆ ಕಡೆಗಾಣಿಸಿದ್ದೇವೆ ಆತನ ವಿಚಾರದಲ್ಲಿ ಕಾನ್ಫಿಡೆನ್ಸಿಯಲ್ ರಿಪೋರ್ಟ್ ಅಡ್ವರ್ಸ್ ಆಗಿ ಬರೆದು ಪಿ.ಎಸ್.ಸಿ. ಯಲ್ಲಿ ಅವನಿಗೆ ಸೌಲಭ್ಯ ದೊರಕದ ಹಾಗೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆತ ಅರ್ಜಿ ಹಾಕಿದ್ದು ಜನರಲ್ ಮ್ಯಾನೇಜರ್ ಪೋಸ್ಟ್‌ಗೆ ಅಲ್ಲ. ಡೈರಿ ಟೆಕ್ನಾಲಜಿಕಲ್ ಪೋಸ್ಟ್‌ಗೆ ಜನರಲ್ ಮ್ಯಾನೇಜರ್ ಪೋಸ್ಟ್ ವೇಕೆಂಟ್ ಆಗಿದೆ. ಯಾರನ್ನೂ ಜನರಲ್ ಮ್ಯಾನೇಜರ್ ಪೋಸ್ಟ್‌ಗೆ ಹಾಕಿಲ್ಲ.

(ಶ್ರೀ ಎನ್. ಚಿಕ್ಕೇಗೌಡ)

ನೋಡುತ್ತಿದ್ದೇವೆ. ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಬೆಂಗಳೂರಿನಲ್ಲಿ ಒಂದು ಕ್ಯಾಟಲ್ ಮಾರ್ಕೆಟ್ ಮಾಡಬೇಕೆಂದು ಪ್ರಯತ್ನಮಾಡಿದ್ದೇವೆ. ಇಂದು ತಳಿ ಹಸು ಒಳ್ಳೆಯದನ್ನು ಆರಿಸಿ ತರಲು ಗೋಪಾಲಕರಿಗೆ ಅನುಕೂಲವಾಗುವಂತೆ ತಜ್ಞ ಪಶು ವೈದ್ಯರ ಸಲಹೆ ದೊರೆಯುವಂತೆ ಮಾಡಲಾಗುವುದು. ಬೆಂಗಳೂರಿನಲ್ಲಿ ಮಾರ್ಕೆಟ್ ಆದರೆ ರೈತರಿಗೆ ಅನುಕೂಲವಾಗುವುದು. ಇದಕ್ಕೆ ನಿವೇಶನ ಪಡೆಯಲು ಕಾರ್ಪೊರೇಷನ್ನಿನೊಂದಿಗೆ ವ್ಯವಹರಿಸುತ್ತಿದ್ದೇವೆ. ಜಾಗ್ರತೆ ಇದನ್ನು ಕಾರ್ಯಗತ ಮಾಡುತ್ತೇವೆ.

ಕ್ಷೀರ ಕ್ಷೇತ್ರ. ಬೆಂಗಳೂರು ಡೈರಿ ಬಗ್ಗೆ ಶ್ರೀ ದೇವೇಗೌಡರು ಮತ್ತಿತರರು ಕೆಲವು ಮಾತುಗಳನ್ನು ಹೇಳಿದ್ದಾರೆ. ಇದರಲ್ಲಿ ನಷ್ಟ ಬಹಳವಾಗಿದೆ ಎಂದು ಹೇಳಿದ್ದಾರೆ. ವಿವರ ಹೇಳುತ್ತೇನೆ. ಪಶುವೈದ್ಯ ಇಲಾಖೆ ಸರಕಾರಿ ಡೈರಿ ಬೆಂಗಳೂರು, ಧಾರವಾಡ, ಭದ್ರಾವತಿ, ಗುಲ್ಬರ್ಗ, ಮಂಗಳೂರು, ಮೈಸೂರು ಮತ್ತು ಕೊಡಗು ಈ ಭಾಗಗಳಲ್ಲಿದೆ. ಇವುಗಳನ್ನು ಪ್ರಾರಂಭ ಮಾಡಿರುವ ತಾರೀಖುಗಳನ್ನು ಹೇಳುತ್ತೇನೆ. ಅವು 10 ಸಾವಿರ ಲೀಟರುಗಳನ್ನು ಸರಬರಾಯಿ ಮಾಡಬೇಕೆಂದೇನು ಗುರಿಯಿತ್ತು ಅದು ಇನ್ನೂ ಎಲ್ಲಾ ಕಡೆ ಮುಟ್ಟಿಲ್ಲ. ಕೆಲವುಕಡೆ ಕಡಮೆ ಸರಬರಾಯಿ ಆಗುತ್ತಿದೆ. ಎಷ್ಟು ಸರಬರಾಯಿಯಾಗುತ್ತಿದೆಯೆಂಬುದನ್ನು ಹೇಳುತ್ತೇನೆ. ಹುಬ್ಬಳ್ಳಿ—ಧಾರವಾಡದಲ್ಲಿ 15-12-68 ರಲ್ಲಿ ಡೈರಿ ಪ್ರಾರಂಭವಾಯಿತು, ಮೇ 72 ರಿಂದ ದಿನಕ್ಕೆ 10,800 ಲೀಟರು ಸರಬರಾಯಿ ಆಗುತ್ತಿದೆ; ಭದ್ರಾವತಿಯಲ್ಲಿ 21-5-71 ರಲ್ಲಿ ಪ್ರಾರಂಭವಾಗಿ ದಿನಕ್ಕೆ 1,025 ಲೀಟರನ್ನು ಸರಬರಾಯಿ ಮಾಡುತ್ತಿದ್ದಾರೆ. ಬೆಳಗಾಂನಲ್ಲಿ 6-8-71 ರಲ್ಲಿ ಪ್ರಾರಂಭವಾಗಿ 2,965 ಲೀಟರನ್ನು ಸರಬರಾಯಿ ಮಾಡುತ್ತಿದ್ದಾರೆ. ಗುಲ್ಬರ್ಗದಲ್ಲಿ 24-1-71 ರಲ್ಲಿ ಪ್ರಾರಂಭವಾಗಿದೆ, 1,872 ಲೀಟರುಗಳನ್ನು ಸರಬರಾಯಿ ಮಾಡುತ್ತಿದ್ದಾರೆ. ಮಂಗಳೂರಿನಲ್ಲಿ 6-5-71 ರಲ್ಲಿ ಪ್ರಾರಂಭವಾಗಿದೆ, 3544 ಲೀಟರುಗಳನ್ನು ಸರಬರಾಯಿ ಮಾಡುತ್ತಿದ್ದಾರೆ. ಮೈಸೂರಿನಲ್ಲಿ ಈ ವರ್ಷ ಸೆಪ್ಟೆಂಬರಿನಲ್ಲಿ ಪ್ರಾರಂಭವಾಗುವುದು. ಆಗ 1,378 ಲೀಟರ್ ಸರಬರಾಯಿ ಆಗಬಹುದು. ಕೂಡ್ಲಿಗಿಯಲ್ಲಿ ಕೆಪ್ಯಾಸಿಟಿ 2 ಸಾವಿರ ಲೀಟರು, 1,019 ಲೀಟರು ಹಂಚುತ್ತಿದ್ದಾರೆ. ಕೆಲವು ಚೆನ್ನಾಗಿ ಕೆಲಸ ಮಾಡುತ್ತಿವೆ. ಕೆಲವು ಕಡೆ ವೆಂಡರುಗಳು ಖಾಸಗಿಯಾಗಿ ಅನೂಚಾನವಾಗಿ ಒಂದು ರೀತಿಯಲ್ಲಿ ಹಾಲನ್ನು ಸರಬರಾಯಿ ಮಾಡುತ್ತಿದ್ದಾರೆ. ಅಂಥ ಕಡೆಗಳಲ್ಲಿ ಡೈರಿ ತೆರೆದು ಸಹಕಾರ ಸಂಘಗಳ ಮೂಲಕ ಹಾಲನ್ನು ಒದಗಿಸಿಕೊಳ್ಳಲು ಸ್ವಲ್ಪ ನಿಧಾನವಾಗುವುದು, ಇದಕ್ಕೆ ಕಾಲಾವಕಾಶ ಬೇಕು.

ಇಂದು ಎಷ್ಟು ಹಣ ಕೊಟ್ಟರೂ ಕೂಡ ಒಳ್ಳೆಯ ತಳಿ ಹಸು ಸಿಕ್ಕುವುದು ಕಷ್ಟ. ನಮ್ಮ ರಾಜ್ಯದಲ್ಲಿ ಕೊಂಡು ಮದ್ರಾಸು, ಊಟಿ, ಸೇಲಂ ಜಿಲ್ಲೆಗಳಲ್ಲಿ ಸಾಕುವರು. ಒಂದು ಲೀಟರ್ ಕೊಡುವ ಹಸುವಿಗೆ 250 ರೂಪಾಯಿ ಬೆಲೆಯಾದರೆ 10 ಲೀಟರ್ ಕೊಡುವುದಕ್ಕೆ 2,500 ರೂಪಾಯಿ ಬೆಲೆಯಾಗುವುದು. ಈಗ ಹಣ ಕೊಟ್ಟರೂ ಯೋಗ್ಯವಾದ ಹಸು ಸಿಕ್ಕುವುದಿಲ್ಲ. ಆದುದರಿಂದ ಇದಕ್ಕಾಗಿ ಪ್ರತ್ಯೇಕ ಕೇಂದ್ರವನ್ನು ತೆರೆಯಲಾಗಿದೆ. ಹಳ್ಳಿಗಳಲ್ಲಿ ಸ್ವಲ್ಪ ಹಾಲು ಕೊಡುವ ಹಸುಗಳಿಂದ ಡೈರಿಗೆ ಬೇಕಾದಷ್ಟು ಹಾಲು ದೊರೆಯುವುದಿಲ್ಲ. ಆದುದರಿಂದ ಹೆಚ್ಚು ಹಾಲುಕೊಡುವ ತಳಿಗಳನ್ನು ಕೇಂದ್ರದಿಂದ ಹಂಚಬೇಕೆಂದಿದೆ.

ರೈತರು ಮುಂದೆ ಬಂದು ಅಲ್ಲಿಂದ ಹಸುಗಳನ್ನು ತೆಗೆದುಕೊಂಡು ಹಾಲನ್ನೊದಗಿಸಬೇಕು. ಇದರಿಂದ ಏಕಾಏಕಿ ಲಾಭ ಪಡೆಯುವುದಕ್ಕಾಗುವುದಿಲ್ಲ, ಸ್ವಲ್ಪ ನಷ್ಟವಾಗಲು ಕಾರಣವಿದೆ. ಕೇವಲ ಒಂದು ವರ್ಷದ ಹಿಂದೆ ಪ್ರಾರಂಭವಾಗಿದೆ.

ಸರಕಾರಿ ಡೈರಿ ಬೇರೆ, ಅಮ್ಮಾವರ ಡೈರಿ ಬೇರೆ ಇದೆ ಎಂದು ಒಬ್ಬರು ಹೇಳಿದರು. ಅಂಥಾದ್ದು ನಮ್ಮ ಗಮನಕ್ಕೆ ಬಂದಿಲ್ಲ. ಅದು ಎಲ್ಲಿದೆ ಎಂಬುದನ್ನು ಹೇಳಿಲ್ಲ. ಎಲ್ಲಿದೆ ಎಂದು ತಿಳಿಸಿದರೆ ಆ ಬಗ್ಗೆ ತೀವ್ರವಾಗಿ ಕ್ರಮ ತೆಗೆದುಕೊಳ್ಳುತ್ತೇವೆ.

12-30 P.M.

ಆವೊತ್ತು ಬೆಂಗಳೂರು ಡೈರಿ ಬಗ್ಗೆ 3—4 ವರ್ಷದ ಅಂಕಿ ಅಂಶಗಳು ನೋಡುವುದಾದರೆ ಬೆಂಗಳೂರು ಡೈರಿಯಲ್ಲಿ 60 ಸಾವಿರ ಲೀಟರ್ಸನ್ನು ಸಹಕಾರ ಸಂಘಗಳವರು ಹಾಗೂ ಖಾಸಗಿಯವರು ಸಪ್ಲೈ ಮಾಡುತ್ತಿದ್ದಾರೆ. ಆ ಹಾಲನ್ನು ಪಾಶ್ಚೀಕರಿಸಿ ಬೆಂಗಳೂರು ಜನತೆಗೆ ಮತ್ತು ಬೃಹತ್ ಕೈಗಾರಿಕೆಗಳಿಗೆ ಹಂಚುತ್ತಿದ್ದಾರೆ. ಕಳೆದ 3 ವರ್ಷದ ಹಿಂದೆ ನೋಡಿದರೆ 20 ಸಾವಿರ

(ಶ್ರೀ ಎನ್. ಚಿಕ್ಕೇಗೌಡ)

ಗುಜರಾತ್‌ನಿಂದ ಶ್ರೀ ಭಾಸ್ಕರ್ ರಾವ್ ಎಂದು ಬಂದಿದ್ದಾರೆ. ಅವರು ಡೈರಿ ಸೂಪರಿಂಟೆಂಡೆಂಟ್ ಅಷ್ಟೆ. ಅವರನ್ನು ಇನ್‌ಛಾರ್ಜ್ ಇಟ್ಟಿದ್ದೇವೆ. ಡೈರಿ ಟೆಕ್ನಾಲಜಿಕಲ್ ಪೋಸ್ಟ್ ಬಗ್ಗೆ ಪಿ.ಎಸ್.ಸಿ. ಅವರು ಒಂದು ಅಡ್ವರ್ಟೈಸ್ ಮಾಡಿದುದನ್ನು ನೋಡಿದ್ದೇನೆ. ಅವರು ಮಾಡಿದ ಕಾಲದಲ್ಲಿ ಶ್ರೀ ಮಂಚೇಗೌಡರು ಅರ್ಜಿ ಹಾಕಿದ ಕಾಲದಲ್ಲಿ ಸಂಬಂಧಪಟ್ಟ ಡೈರಕ್ಟರ್ ಹಾಗೂ ಜನರಲ್ ಮ್ಯಾನೇಜರ್ ಆಗಿದ್ದವರು ಆರ್. ಡಿ. ಪಟೇಲ್ ಅವರು 31-3-1972 ರಲ್ಲಿ ನ್ಯಾಷನಲ್ ಡೈರಿ ಡೆವಲಪ್‌ಮೆಂಟ್ ಬೋರ್ಡ್‌ಗೆ ಹೋಗಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಅವರಿಗೆ ಅರ್ಜಿ ಹಾಕಬೇಡಿ ಎಂದು ಮೆಮೋ ಕೊಟ್ಟಿಲ್ಲವೇ?

ಶ್ರೀ ಎನ್. ಚಿಕ್ಕೇಗೌಡ.— ಸಂಬಂಧಪಟ್ಟ ಅಡ್ವರ್ಟೈಸ್‌ಮೆಂಟ್ ಓದಿದ್ದೇನೆ.

The post of General Manager, Bangalore Dairy has not been advertised at any time. The post of Dairy Technologist was advertised by the Mysore Public Service Commission in the Mysore Gazette on 20th May 1971 at Part VII, page 145 of the Mysore State Gazette. For the post of Dairy Technologist they have prescribed the following minumum qualifications for recruitment :

(a) A Master's Degree in Dairy Technology, Food Technology, Chemical Engineering or in any related discipline.

(b) Five Years research or field experience in Dairying, Dairy Food Technology, as evidenced by published work.

ಶ್ರೀ ಮಂಚೇಗೌಡರು ಕೇವಲ 4 ವರ್ಷದಿಂದ ಆ ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದರು. ಅವರು ಎಂ. ಎಸ್. ಸಿ. ಇನ್ ಡೈರಿ ಟೆಕ್ನಾಲಜಿ ಮಾಡಿರುವುದು ನಿಜ. ಆದರೆ ಆ ಹುದ್ದೆಯಲ್ಲಿ ಕೆಲಸ ಮಾಡಿರತಕ್ಕ ಅನುಭವ ಇಲ್ಲ. ಆದ್ದರಿಂದ ಅವರ ಅರ್ಜಿಯನ್ನು ಕಳುಹಿಸುವುದಕ್ಕೆ ಆಗುವುದಿಲ್ಲ ಎಂದು ಮೆಮೋ ಕೊಟ್ಟಿದ್ದಾರೆ. ಆ ಮೆಮೋ ಕೊಟ್ಟನಂತರ ಡೈರಿ ಟೆಕ್ನಾಲಜಿಸ್ಟ್ ಹುದ್ದೆಗೆ ನನ್ನ ಅಪ್ಲಿಕೇಷನ್‌ನ್ನು ಕಳುಹಿಸಿಕೊಡಿ, ಪಬ್ಲಿಕ್ ಸರ್ವಿಸ್ ಕಮೀಷನ್‌ನವರು ಏನಾದರೂ ತೀರ್ಮಾನ ತೆಗೆದುಕೊಳ್ಳಲಿ ಎಂದು ಮಂಚೇಗೌಡರು ಹೇಳಿದರು. ಆಮೇಲೆ ಸಂಬಂಧಪಟ್ಟ ಡೈರಿ ಅಧಿಕಾರಿಗಳು ಅಪ್ಲಿಕೇಷನ್ ಕಳುಹಿಸಿಕೊಟ್ಟರು. Three candidates including Sri Manche Gowda had applied for the post. The P.S.C. did not select Sri Manche Gowda or any other candidate who applied for it.

ಶ್ರೀ ಎಚ್. ಡಿ. ದೇವೇಗೌಡ.— ಸಭೆಯನ್ನು ತಪ್ಪು ದಾರಿಗೆ ಎಳೆಯುವುದಕ್ಕೆ ಪ್ರಯತ್ನ ಮಾಡಬೇಡಿ. ಪೋಸ್ಟ್ ಅಡ್ವರ್ಟೈಸ್ ಮಾಡಿದ್ದು, ಪಬ್ಲಿಕ್ ಸರ್ವಿಸ್ ಕಮಿಷನ್‌ಗೆ ಅರ್ಜಿ ಹಾಕತಕ್ಕದ್ದು ಅಭ್ಯರ್ಥಿಗೆ ಸಂಬಂಧಪಟ್ಟ ವಿಷಯ. ಅರ್ಜಿ ಹಾಕಬೇಡಿ ಎಂದು ಮೆಮೋ ಕೊಡುವುದಕ್ಕೆ ಏನು ಅಧಿಕಾರವಿದೆ? ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಮಾಡುವ ನಿಬಂಧನೆಗಳಿಗೆ ಸರಿಯಾಗಿ ಅರ್ಜಿ ಇಲ್ಲದೆ ಇದ್ದರೆ ಅವರು ಅದನ್ನು ರಿಜೆಕ್ಟ್ ಮಾಡುತ್ತಾರೆ.

What made your Director issue a memo not to apply for that post? I want to know that. I do not want any other agrument. There were six pages of confidential report. Is it not? Is it not a fact that the report of the General Manager is an adverse report? ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಅವರನ್ನು ಸೆಲೆಕ್ಟ್ ಮಾಡದೆ ಇರುವುದಕ್ಕೆ ಕಾರಣ ಮತ್ತೊಂದು ಇದೆ. ಕಾನ್‌ಫಿಡೆನ್‌ಷಿಯಲ್ ಮೆಮೊ ಆರು ಪುಟಗಳಷ್ಟು ಬರೆದಿದ್ದಾರೆ. ಯಾವುದಾದರೂ ಅಪಾದನೆಯನ್ನು ಮಾಡುವಾಗ ಜವಾಬ್ದಾರಿಯಿಂದ ಮಾಡಬೇಕು ಎಂದು ಮಾನ್ಯ ಮುಖ್ಯ ಮಂತ್ರಿಗಳು ಮೊನ್ನೆ ದಿವಸ ಹೇಳಿದರು. ಈ ಬಗ್ಗೆ ತಾವಾಗಲೀ, ಮುಖ್ಯ ಮಂತ್ರಿಗಳಾಗಲೀ ಅಥವಾ ವಿಜಿಲೆನ್ಸ್ ಕಮಿಷನ್‌ನಿಂದಾಗಲೀ ಎನ್‌ಕ್ವೈರಿ ಮಾಡಿಸಿದರೆ ನಾನು ಎವಿಡೆನ್ಸ್ ಕೊಡುವುದಕ್ಕೆ ಸಿದ್ಧನಾಗಿದ್ದೇನೆ. ತಮ್ಮ ಅಧಿಕಾರಿಗಳು ಮಾಡಿರುವುದನ್ನು ಸಮರ್ಥನೆ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಸದಸ್ಯರಿಗೆ ಒಂದು ವಿಷಯವನ್ನು ಹೇಳುತ್ತೇನೆ, ನನ್ನ ಮುಂದೆ ಇರುವಂತೆ ಸಂಬಂಧಪಟ್ಟ ಫೈಲುಗಳನ್ನು ತರಿಸಿ ನೋಡಿದ್ದರಲ್ಲಿ It is a fact that the report of the General Manager is an adverse report. I never said that he has not given an adverse report. He has given an adverse report.

Sri H. D. DEVE GOWDA.—Will the Government come forward to hold an impartial enquiry ?

ಶ್ರೀ ಎನ್. ಚಿಕ್ಕೇಗೌಡ.—ಈ ಪೋಸ್ಟ್ ಬಗ್ಗೆ ಅರ್ಜಿ ಹಾಕಿದಾಗ ಆಗ ಇದ್ದ ಜನರಲ್ ಮ್ಯಾನೇಜರ್ ಅಡ್ವರ್ಸ್ ರಿಪೋರ್ಟ್ ಬರೆದರು. ಶ್ರೀ ಮಂಚೇಗೌಡ ಎನ್ನುವವರು ಡೈರಿ ಟೆಕ್ನಾಲಜಿಸ್ಟ್ ಹುದ್ದೆಗೆ ಅರ್ಜಿ ಹಾಕುವಾಗ ಅದನ್ನು ಸಂಬಂಧಪಟ್ಟ ಇಲಾಖೆಯ ಮೂಲಕ ಸಂಬಂಧಪಟ್ಟ ಆಯ್ಕೆ ಸಮಿತಿಗೆ ಕಳುಹಿಸಬೇಕು. ಹಾಗೆ ಕಳುಹಿಸುವಾಗ ನಾಲ್ಕು ವರ್ಷ ಅನುಭವ ಸಾಲದು ಮತ್ತು ನಿನ್ನ ಬಗ್ಗೆ ಅಡ್ವರ್ಸ್ ರಿಪೋರ್ಟ್ ಇದೆ ಎಂದು ತಿಳಿಸಿದರೂ ಸಹ ಅಪ್ಲಿಕೇಷನ್ ಕಳುಹಿಸಿ ಕೊಡಿ ಎಂದು ಹೇಳಿರುವುದು ನಿಜವಾದ ವಿಷಯ.

Sri H. D. DEVE GOWDA.—I want to know whether the Government is prepared to hold an impartial enquiry. I do not want any other argument. If you say there is some force in what I had alleged, are you prepared to hold an impartial enquiry ? I want to know that.

ಶ್ರೀ ಎನ್. ಚಿಕ್ಕೇಗೌಡ.—ಅಧ್ಯಕ್ಷರವರೇ, ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತೇನೆ, ನನಗೆ ಹೆಚ್ಚು ಕಾಲಾವಕಾಶವಿರಲಿಲ್ಲ. ಈ ಬಗ್ಗೆ ಇನ್ನೂ ಹೆಚ್ಚಾಗಿ ನೋಡಿ, ಅದರಲ್ಲಿ ಅನ್ಯಾಯವಾಗಿದ್ದರೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಹಿಂಜರಿಯುವುದಿಲ್ಲವೆಂದು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ದೇವೇಗೌಡರು ಬೆಂಗಳೂರು ಡೈರಿಯಿಂದ ಸ್ಕಿಮ್ಡ್ ಮಿಲ್ಕ್ ಪೌಡರ್ ಟೆಂಡರ್ ಕರೆದು ಮಾರಾಟ ಮಾಡಿದ್ದರಲ್ಲಿ ಅವ್ಯವಹಾರ ನಡೆದಿದೆ ಎಂದು ಹೇಳಿದ್ದಾರೆ. ಮಿಲ್ಕ್ ಪೌಡರನ್ನು ನಮಗೆ ಕಳುಹಿಸಿದವರು ಯೂನಿಸೆಫ್‌ನವರು. ಕಾಲ ಮೀರಿ ಹೋಗಿದ್ದುದರಿಂದ ನಾವು ಯೂನಿಸೆಫ್‌ಗೆ ತಿಳಿಸಿದೆವು.

The UNICEF people have said that it should not be used after a certain period. The Bangalore Dairy received the Skim Milk Powder under the World Food Programme in 1971. This Powder was received at Bangalore Dairy after 2 years from the date of its manufacture. According to the manufacturing conditions, Skim Milk Powder must be used within 14 months. Since this powder was time-barred, the matter was taken up with the World Food Programme authorities. On the advice of the Government of India and the World Food Programme authorities, the Bangalore Dairy decided to auction the Skim Milk Powder for the manufacture of Cattle Feed or Poultry Feed and accordingly, tenders were called for. Sri Milk Supply was not a tenderer in the disposal of this Milk Powder received in 1971. The Bangalore Dairy received four tenders duly sealed. The highest rate offered was Rs. 2.25 per K.G. The hon. member is aware that the only method adopted by the Dairy to dispose of Milk Powder was by calling for tenders and not by auction.

Sri H. D. DEVE GOWDA.—Who is the person that has been selected ?

Sri N. CHIKKE GOWDA.—

1. Sri S. V. Venkatesh,
   Dealer in Oil Seeds Oils,
   Bangalore-2.

(SRI N. CHIKKE GOWDA)

2. Murugesh & Co.,
Oil Merchants, No. 32,
Avenue Road, Bangalore-2.

The rates quoted by them were the same *viz.*, Rs. 2.25 per k.g. These two persons were given at the rate of 5.012 tonnes each. Because their tender rates were equal, they were given the skim milk powder.

The person who, you said had applied, is not at all present. The other two tenderers were :

M/s. Royal Stores,
No. 11, M. G. Road, Bangalore-1.
and
The Empire Stores,
No. 77, Commercial Street, Bangalore-1.

Then there is the allegation that these tenderers misused this milk powder and supplied it to the private dairies and to one of the societies in nekal Taluk.

SRI H. D. DEVE GOWDA.—The Dairy authorities made a complaint to the Corporation Commissioner.

SRI N. CHIKKE GOWDA.—The aggreament was that it should not be used for human consumption and it should be used as poultry feed and cattle feed. It is a fact that the Bangalore Dairy complained to the Corporation authorities about the sub-standard milk supplied by Sri Milk Supply to the consumers.

SRI H. D. DEVE GOWDA.—That means the milk cream powder passed on through the Sri Milk Supplies for human consumption in Bangalore. You agree to that extent that the Bangalore Dairy Authorities have made a complaint to the Corporation Commissioner that such a quality of milk is supplied by Sri Milk Supplies. The proprietor of Sri Milk Supplies is a relative of the then General Manager R. D. Patel.

SRI N. CHIKKE GOWDA.—Regarding the allegation made about Sree Milk Supply, I bring it to your kind notice that the cream we are getting is from Erode and the tender is from different parties. I will give the tender rates also. It is being supplied from M/s. K. C. Ramaswamy and Sri Armugam of Erode and not Sree Milk Supplies. As per information available, at no time has the Sree Milk Supply has supplied Cream to Bangalore Dairy. It is only M/s. K. C. Ramaswamy and Armugam from Erode.

SRI H. D. DEVE GOWDA.—How many tenders were received for cream supply for making butter and whose tender was the least ? During the rule of the Governor, the concerned aggrieved party made a complaint. I am making this allegation with a certain sense of responsibility. That complaint is pending before vegilance commission. Whether there is any idea to couduct an impartial enquiry ?

1	M/s. K. V. Armugam of Erode	Rs. 7·80 per KG
2	M/s. K. C. Ramaswamy of Erode	Rs. 7·80 per KG
3	M/s. Sree Milk Supply, Seshadripuram	Rs. 7·9) per KG
4	M/s. Tulasimani, Erode	Rs. 7·80 per KG

So the lowest tenders were accepted. Cream supply was stopped in November 1971. There was adequate milk supply from February 1972. Sree Milk supply has not made any supply of cream to Bangalore Dairy so far.

Regarding repairs to CANS, I want to bring it to the notice of the Hon'ble Speaker that this person is in no way related to the then General Manager.

SRI H. D. DEVE GOWDA.—I never said he is related to the General Manager. I said he is from Gujarat.

SRI N. CHIKKE GOWDA.—He is a Muslim and it is a fact that he has got a good reputation for repairing.

SRI C. M. ARUMUGAM.—Why do you say he is Muslim? He only said that he is a man from Gujarat.

SRI N. CHIKKE GOWDA.—He said he is his distant relative.

SRI H. D. DEVE GOWDA.—I never said that he is related to the general Manager. I said that he comes from Gujarat.

SRI N. CHIKKE GOWDA.—It is a fact that he is from Gujarat.

SRI D. DEVARAJ URS.—Supposing he is there for a number of years what are we to do?

SRI N. CHIKKE GOWDA.—For repairing the CANS the General Manager called for tenders. One tender quoted Rs. 34·75 per can and another quoted Rs. 33·00 per can. The later tender was considered because it was the lowest tender. He had experience of having repaired cans in Gujarat and Maharashtra.

SRI C. M. ARUMUGAM.—It is said here that they have spent about Rs. 65,000 for repairing cans and the work is unsatisfactory.

SRI N. CHIKKE GOWDA.—The work is satisfactry. Cans are being made use of now.

SRI H. D. DEVE GOWDA.—How many new cans were got? Rs. 60,000 he has swindled!

SRI N. CHIKKE GOWDA.—I will verify these facts. If the Hon'ble House wants further information, I am ready to furnish.

SRI H. D. DEVE GOWDA.—I only want that a proper impartial enquiry on this should be made and the culprits should be suitably punished.

SRI D. DEVARAJ URS.—If the Hon'ble Leader of the Opposition thinks that there may be misuse of funds with a view to help X or Y that requires further probe, we will do it and bring it to the notice of the House. We will get it further checked and find out whether this

(SRI D. DEVARAJ URS)

expenditure incurred on repairs to Cans was infructuous or was not necessary. Let the Hon'ble Minister go into the question and see whether it was done with a view to help X or Y or whether it was an act of favouritism. We will look into that and if there is any suspicion or doubts about the *bona fides* of the transaction, it will be further looked into and proper action taken. If it is *bona fide* that also we will tell you.

Sri H. D. DEVE GOWDA.—There is already a written allegation that all necessary documents and photostat copies of evidence which is pending before the Vigilance Commissioner. You may request the Vigilance Commissioner to see that the enquiry is expedited and a report furnished early.

Sri D. DEVARAJ URS.—Madam Speaker, I may assure the House that we are not interested in shielding or covering or safeguarding anybody if he has committed an error or if anything is done maliciously. The case is already before the Vigilance Commission. You know the Vigilance Commissioner is impartial and he cannot be influenced by anybody. We are not interested in influencing anybody. Let it be looked into. I will request the Vigilance Commission to expedite the matter. Whatever report comes from the Vigilance Commission, we will take action accordingly.

1-00 P.M.

Sri C. M. ARUMUGHAM.—Madam, the Director of Animal Husbandry is a highly qualified and experienced person and such persons should be put in charge of the Dairy. What can an I.A S. Officer do in a Dairy? What experience will he have about the working of Dairies? The Government must put proper persons in proper places. Instead of posting an I.A.S. Officer to the Bangalore Dairy, I think the Director of Animal Husbandry is the proper person for the Dairy Project.

Sri D. DEVARAJ URS.—I understand the general statement of the Hon. Member that a qualified person who can comprehend the dairy schemes and plans and implement them, should be posted as Director of the Dairy. If the present Director of Animal Hubandry is to be put to the Bangalore Dairy, I have to find another Director for the Department of Animal Husbandry. I have had some experience of the Bangalore Dairy. If the Director of Animal Husbandry is also put in additional charge of the Bangalore Dairy, it becomes difficult for one and the same person to handle two Departments. The Bangalore Dairy requires an exclusive Officer. The general proposition as to why we should not put a technically qualified and experienced person to the Bangalore Dairy is a matter which we have to really consider. We will have to examine it. ನಿಮಗೆ ಬಂದಿರುವ ಇನ್‌ಫರ್ಮೇಷನ್ ಸರಿಯಾಗಿದೆಯೋ ಇಲ್ಲವೋ ಗೊತ್ತಿಲ್ಲ. ನಮಗೆ ಗೊತ್ತಿರುವ ಪ್ರಕಾರ ಯಾವುದೂ ಆ ರೀತಿಯಾಗಿಲ್ಲ.

ಶ್ರೀ ಎಂ. ಬಿ. ರಾಮಸ್ವಾಮಿ (ಆನೇಕಲ್).—ದಯವಿಟ್ಟು ಇದನ್ನು ಪರಿಶೀಲನೆ ಮಾಡಬೇಕು.

ಶ್ರೀ ಡಿ. ದೇವರಾಜ್ ಅರಸ್.—ಮಾಡೋಣ.

ಶ್ರೀ ಎನ್. ಚಿಕ್ಕೇಗೌಡ.—ಹಾಲ ಬಂದಿರತಕ್ಕವರು ಗುಜರಾತಿನಿಂದ ಬಂದಿದ್ದಾರೆ. He is an S.S.L.C. Also he has got a dairy diploma. At present, the General Manager's Post is vacant and we have not posted any one as General Manager. The Dairy Superintendent, to whom a reference was made by the Leader of Opposition, was drawing Rs 870 per month. He has been posted as Dairy Superintendent and he is also in charge of the responsibilities of the General Manager. It is not true that he was formerly drawing Rs. 250.

SRI H. D. DEVE GOWDA.—But he had applied to the post of Supervisor carrying a pay of Rs. 250.

ಶ್ರೀ ಎನ್. ಚಿಕ್ಕೇಗೌಡ.—ಅವರು 870 ರೂಪಾಯಿ ತೆಗೆದುಕೊಳ್ಳುತ್ತಿದ್ದಾರೆ. ಮಾನ್ಯ ಸದಸ್ಯರು ಹೇಳಿದ್ದಕ್ಕೆ ಮುಖ್ಯಮಂತ್ರಿಗಳು ಉತ್ತರ ಹೇಳಿದ್ದಾರೆ. ಇದರ ಬಗ್ಗೆ ಇನ್ನು ಏನಾದರೂ ವಿಚಾರಣೆ ಮಾಡಬೇಕಾದ ವಿಷಯ ಇದ್ದರೆ ವಿಚಾರ ಮಾಡುತ್ತೇನೆ. ಮಾನ್ಯ ರಾಮಸ್ವಾಮಿಯವರು ಹೇಳಿದಂಥ ವಿಷಯ ಸತ್ಯಕ್ಕೆ ದೂರವಾದ ವಿಚಾರ. ಹೈಕೋರ್ಟಿನಲ್ಲಿ ತೀರ್ಮಾನವಾಗಿಲ್ಲ. ಹೈಕೋರ್ಟಿನಲ್ಲಿ ಸೀನಿಯಾರಿಟಿ ಬಗ್ಗೆ ಪರಿಶೀಲಿಸಬೇಕು ಎಂದು ಹೇಳಿದ್ದಾರೆ ಸರ್ಕಾರ ಸುಪ್ರೀಂ ಕೋರ್ಟಿನ ಮುಂದೆ ಹೋಗಿದ್ದಾರೆ. ಅದು ಸುಪ್ರೀಮ್ ಕೋರ್ಟಿನ ಮುಂದೆ ಇರುವುದರಿಂದ ಅದರ ಬಗ್ಗೆ ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಯಾರಿಗೂ ಅನ್ಯಾಯವಾಗಿಲ್ಲ. ಅನ್ಯಾಯವಾಗಿರುವುದು ಇದ್ದರೆ ಕೋರ್ಟಿನವರ ಮುಂದೆ ಇದೆ. ಅವರು ವಿಚಾರ ಮಾಡುತ್ತಾರೆ. ಮಾನ್ಯ ಸದಸ್ಯರು ಅನೇಕ ವಿಷಯಗಳ ಬಗ್ಗೆ ಸೂಕ್ತ ಸಲಹೆ ಕೊಟ್ಟಿದ್ದಾರೆ, ಇದರ ಬಗ್ಗೆ ಸರ್ಕಾರ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಂದು ಹೇಳುತ್ತಾ ಪಶುಪಾಲನೆ ಮತ್ತು ಪಶು ವೈದ್ಯಕೀಯ ಬೇಡಿಕಗೆ ಮಾನ್ಯ ಸದಸ್ಯರು ಸರ್ವಾನುಮತದಿಂದ ಮಂಜೂರಾತಿಯನ್ನು ಕೊಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.

(Some Hon. Members stood up)

MADAM SPEAKER.—Let me explain to the members the time taken on Demands by the Congress and Opposition Members :

29th June		6 Opposition Members spoke and took 1.57 hours 2 Congress Members spoke and took 0.52 hours
30th June and 1st July	On Education Deamand	15 Opposion Members spoke and took 3.32 hours 16 Congress Members spoke and took 3.03 hours
3rd and 4th July	On Chief Minister's Demands	15 Opposition Members spoke and took 4.46 hours 15 Congress Members spoke and took 3.26 hours
5th July	Demand of Minister for Co-operation	7 Opposition Members spoke and took 1.18 hours 6 Congress members spoke and took 1.12 hours
6th and 7th July	Public Works Demand	16 Opposition Members spoke and took 5·0 hours 18 Congress Members spoke and took 3.10 hours
8th July	Demands of Minister for Revenue	5 Opposition Members spoke and took 1.43 hours 7 Congress Members spoke and took 1.36 hours

(MADAM SPEAKER)

10th July	Labour Demand	7 Opposition Members spoke and took 2.25 hours 4 Congress Members spoke and took 0.58 hours
11th July	Medical and Public Health Demand	10 Opposition members spoke and took 2.28 hours 12 Congress Members spoke and took 2.11 hours
12th July	Agriculture, Forests and Animal Husbandary Demands.	11 Opposition Members spoke and took 3.05 hours 15 Congress Members spoke and took 2.39 hours

ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಶ್ರೀಮಾನ್ ಹನುಮೇಗೌಡರು ನಾವು ಇಲ್ಲಿಗೆ ಏತಕ್ಕೆ ಬರಬೇಕಾಗಿತ್ತು ಎಂದು ಪ್ರಶ್ನೆ ಮಾಡಿದರು. ಮಾನ್ಯ ಸದಸ್ಯರೇ ಮಾತನಾಡಿದರೆ , ಮಾನ್ಯ ಮಂತ್ರಿಗಳು ಉತ್ತರ ಕೊಡುವುದು ಬೇಡವೇ ? ಈಗ ಮೂರು ಗಂಟೆಗೆ ಸಭೆ ಸೇರಬೇಕೆಂದು ಗೊತ್ತಾಗಿತ್ತು. ಅಗ್ರಿಕಲ್ಚರ್ ಮಂತ್ರಿಗಳು 2 ಗಂಟೆ ಉತ್ತರ ಕೊಟ್ಟಮೇಲೆ, ಎಲ್ಲರೂ ಕ್ಲಾರಿಫಿಕೇಷನ್ ಕೇಳಬೇಕೆಂದು ನಿಂತುಕೊಂಡರೆ ಹೇಗೆ ? ಬಿಸಿನೆಸ್ ಅಡ್ವೈಸರಿ ಕಮಿಟಿಯವರು ಡಿಸೈಡ್ ಮಾಡಿದಂತೆ ನಾನು ಈ ಸಭೆಯನ್ನು ನಡೆಸಬೇಕಾಗುತ್ತದೆ. 216 ಜನ ಸದಸ್ಯರೂ ಇಚ್ಛೆ ಬಂದಹಾಗೆ ಮಾತನಾಡಲು ಎದ್ದರೆ ಸಭೆ ನಡೆಸುವುದಕ್ಕೆ ಆಗುವುದಿಲ್ಲ. ದಯಮಾಡಿ ಪಾರ್ಟಿ ಲೀಡರ್ಸ್ ಮತ್ತು ವಿಪ್ಸ್ ಜೊತೆಗೆ ಮಾತನಾಡಿಕೊಂಡು ಇಲ್ಲಿ ಮಾತನಾಡಬೇಕು. ಈಗ ಫಿಷರೀಸ್ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಕೆ. ಟಿ. ರಾಥೋಡ್.—(ಮೀನುಗಾರಿಕೆ ಇಲಾಖೆ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನನ್ನ ಖಾತೆಯ ಬೇಡಿಕೆಗಳ ಮೇಲೆ ಮಾತನಾಡಿದ ಮಾನ್ಯ ಸದಸ್ಯರು ಕೆಲವು ಸಲಹೆಗಳನ್ನು ಮಾಡಿದ್ದಾರೆ. ಅವರು ಮಾಡಿರುವ ಸಲಹೆಗಳನು ಕೇಳಿದಮೇಲೆ ನನಗೆ ಎರಡು ವಿಚಾರಗಳು ಸ್ಪಷ್ಟವಾಗಿ ಕಂಡುಬಂದವು. ನನ್ನ ಖಾತೆಯ ಬಗ್ಗೆ ಯಾವ ಆರೋಪಗಳೂ ಸಾಮಾನ್ಯವಾಗಿ ಇರಲಿಲ್ಲ. ಎರಡನೇದು ನನ್ನ ಬೇಡಿ ಗಳ ಬಗ್ಗೆ ಯಾವ 'ಕಟ್ ಮೋಷನ್'ಗಳೂ' ಸಹ ಇರಲಿಲ್ಲ. ಇದರಿಂದಾಗಿ ಮಾನ್ಯ ಸದಸ್ಯರು ಈ ಖಾತೆ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತ ಮಾಡಿದ್ದಾರೆಂದು ನಾನು ತಿಳಿದುಕೊಳ್ಳುತ್ತೇನೆ.

ಶ್ರೀ ಭಾಸ್ಕರಶೆಟ್ಟಿಯವರು ಇಲ್ಲಿ ಒಂದು ಸವಾಲು ಮಾಡಿದರು. "ಈ ಖಾತೆಯ ಬೇಡಿಕೆ ಮಂಡಿಸಿದ್ದುದನ್ನು ಈ ಸದನದ ಮಾನ್ಯ ಸದಸ್ಯರಿಗೆ ತಿಳಿಸಿಲ್ಲ, ಮತ್ತು ಮೀನುಗಾರಿಕೆಯ ಮಂತ್ರಿಗಳೂ ಅದನ್ನು ಮಂಡಿಸಲಿಲ್ಲ. ಇದನ್ನು ನೋಡಿದರೆ ಈ ಖಾತೆಯನ್ನು ಇಷ್ಟೊಂದು ಕಡೆಗಣಿಸಿದುದರ ಕಾರಣವೇನು ಎನ್ನುವುದು ತಿಳಿಯಲಿಲ್ಲ" ಎಂದು ಹೇಳಿದರು. ಈ ಖಾತೆ ತುಂಬ ಮಹತ್ವದ ಖಾತೆಯಾಗಿದೆಯೆಂದೇ ನನ್ನ ಭಾವನೆ. ಕರಾವಳಿಯಲ್ಲಿರುವ ಎರಡು ಮುಖ್ಯ ಜಿಲ್ಲೆಗಳಲ್ಲಿ ಇದೊಂದು ಮುಖ್ಯ ಉದ್ದಿಮೆಯಾಗಿ ಮೀನುಗಾರಿಕೆಯ ಕೆಲಸಗಳು ನಡೆಯುತ್ತಿವೆ. ಈ ಖಾತೆ ನನ್ನ ಕೈಗೆ ಬಂದಾಗ ನನಗೂ ಹೀಗೆಯೇ ಭಾಸವಾಗಿತ್ತು. ಮಾನ್ಯ ಮುಖ್ಯ ಮಂತ್ರಿಗಳು ನನಗೆ ಈ ಖಾತೆಯನ್ನು ವಹಿಸಿದಾಗ, ಅವರು ಇದು ಅಷ್ಟು ಸಣ್ಣ ಖಾತೆಯೆಂದು ತಿಳಿಯಬಾರದು, ಅಭಿವೃದ್ಧಿಗೆ ತುಂಬಾ ಅವಕಾಶವಿದೆ, ಕೆಲಸ ಮಾಡುತ್ತಾ ಹೋದಹಾಗೆಲ್ಲಾ ಇದರ ಮಹತ್ವ ಗೊತ್ತಾಗುತ್ತದೆ ಎಂದೂ ಹೇಳಿದ್ದರು. ಅದನ್ನು ಗಮನದಲ್ಲಿಟ್ಟುಕೊಂಡು ನಾನು ಈ ಖಾತೆಯ ಪೂರ್ಣ ಅಭ್ಯಾಸವನ್ನು ಕಳೆದ ಮೂರು ತಿಂಗಳಿಂದಲೂ ಮಾಡುತ್ತಾ ಬಂದಿದ್ದೇನೆ. ಮೈಸೂರು ರಾಜ್ಯದಲ್ಲಿ ಇದು ಒಂದು ಅತಿ ಮಹತ್ವವಾದ ಉದ್ದಿಮೆಯಾಗಿದೆ., ಈ ಬಗ್ಗೆ ಕೆಲವಾರು ವಿಚಾರಗಳನ್ನು ತಮ್ಮ ಮುಂದೆ ಇಡಬಯಸುತ್ತೇನೆ. ಮೈಸೂರು ರಾಜ್ಯದಲ್ಲಿ 200 ಮೈಲಿ ಕರಾವಳಿ ಪ್ರದೇಶವಿದೆ. ಇದರ ಜೊತೆಗೆ ಸುಮಾರು ಹತ್ತು ಲಕ್ಷ ಎಕರೆಗಳಷ್ಟು ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ನೀರು ಸರಬರಾಜು ಇದೆ. ಇದರಲ್ಲಿ ಆರು ಲಕ್ಷ ಎಕರೆಗಳಷ್ಟು ಭಾಗದಲ್ಲಿ ಮೀನು ಅಭಿವೃದ್ಧಿ ಮಾಡುವ ಕಾರ್ಯ ನಡೆದಿದೆ. ನಮ್ಮ ರಾಜ್ಯದಲ್ಲಿ ಮೀನುಗಾರಿಕೆ ಸಂಪತ್ತಿನ ಅಭಿವೃದ್ಧಿಗೆ ಒಳ್ಳೇ ಅವಕಾಶವಿದೆ. ಎಂದು ನಾನು ಹೇಳಬಯಸುತ್ತೇನೆ.

ಈ ಇಲಾಖೆಯನ್ನು ಪ್ರಾರಂಭಿಸಿದ್ದು 1957 ರಲ್ಲಿ, ಎಂದರೆ, ಸುಮಾರು ಹದಿನೈದು ವರ್ಷಗಳಾದವು. ಈ ಹದಿನೈದು ವರ್ಷದಲ್ಲಿ ಸಾಕಷ್ಟು ಪ್ರಗತಿಯನ್ನೂ ಸಾಧಿಸಲಾಗಿದೆ. ಕರಾವಳಿಯಲ್ಲಿ ಸುಮಾರು 1094 ಯಾಂತ್ರಿಕ ದೋಣಿಗಳನ್ನು ಒದಗಿಸಲಾಗಿದೆ. 1971-72 ರಲ್ಲಿ ಈ ಉದ್ದಿಮೆ ನಮ್ಮ ರಾಜ್ಯಕ್ಕೆ ಸುಮಾರು 2.14 ಕೋಟಿ ರೂಪಾಯಿಗಳ ವಿದೇಶೀ ವಿನಿಮಯವನ್ನು ಗಳಿಸಿ ಕೊಟ್ಟಿದೆ. ಇದರ ಜೊತೆಗೆ 1-1-1971 ರಿಂದ 'ಫಿಷರೀಸ್ ಕಾರ್ಪೊರೇಷನ್' ಒಂದನ್ನೂ ಸ್ಥಾಪನೆ ಮಾಡಲಾಗಿದೆ. ಈ ಕಾರ್ಪೊರೇಷನ ಆಧೀನ ಕಕ್ಷೆಯಲ್ಲಿ '14 ಐಸ್-ಕಂ ಕೋಲ್ಡ್ ಸ್ಟೋರೇಜು' ಸೆಂಟರುಗಳೂ, ಎಂಟು ಮೀನುಸಾಗಣೆ ವಾಹನಗಳೂ ಹಾಗೂ 57 ಅಡಿ ಉದ್ದದ ಫಿಷ್ ಟ್ರಾಲರುಗಳೂ ಇದ್ದು ಈ ಸಾಧನೆಗಳ ಉಪಯೋಗಪಡೆದು ಸುಮಾರು ಐದು ಲಕ್ಷ ರೂಪಾಯಿ ಬೆಲೆಯ ಮೀನುಗಳನ್ನು ಹಿಡಿದು ರಫ್ತು ಮಾಡಲಾಗಿದೆ. ಇದರ ಜೊತೆಗೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದೂ, ಒಟ್ಟು ಎರಡು ಫೆಡರೇಷನ್‌ಗಳನ್ನು ಸಹಕಾರಿ ತತ್ವದಮೇಲೆ ರೂಪಿಸಿ ಮೀನುಗಾರರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲಿಕ್ಕಾಗಿ ಸ್ಥಾಪಿಸಲಾಗಿದೆ. ಈ ಸಂಸ್ಥೆಗಳು ಉತ್ಸಾಹಿ ನಾಯಕರ ನೇತೃತ್ವದಲ್ಲಿ ತಮ್ಮ ಗುರಿಸಾಧನೆಯತ್ತ ಬಹಳ ಚೆನ್ನಾಗಿ ಕೆಲಸ ಮಾಡುತ್ತ ಬರುತ್ತಿವೆ. ನಮ್ಮಲ್ಲಿ 19 ಫಿಷರೀಸ್ ಬಂದರುಗಳು ಇವೆ. (ಇದರಲ್ಲಿ ನಾಲ್ಕು ಮೇಜರು ಪೋರ್ಟುಗಳಿವೆ ಎಂದರೆ ಮಂಗಳೂರು, ಕಾರವಾರ) ಮಲ್ಪೆ ಮತ್ತು ಹೊನ್ನಾವರಗಳಲ್ಲಿರುವ ಬಂದರುಗಳನ್ನು ಇಲ್ಲಿ ಅನುಕೂಲತೆಗಳನ್ನು ಪಡೆದ ಮೀನುಗಾರಿಕೆ ಬಂದರುಗಳೆಂದು ಅಭಿವೃದ್ಧಿಪಡಿಸಲು ಯೋಜನೆ ರೂಪಿತವಾಗಿದ್ದು ಕೇಂದ್ರದ ಮಂಜೂರಾತಿ ನಿರೀಕ್ಷಿಸಲಾಗಿದೆ. ಇವು ನಮ್ಮ ಮೀನು ಅಭಿವೃದ್ಧಿಯ ಬಗ್ಗೆ ಬಹಳವಾಗಿ ಸಹಾಯ ಮಾಡುತ್ತೇವೆ. ಇದರ ಜೊತೆಗೆ ಉಳಿದ ಕಡೆಗಳಲ್ಲೂ ಮೀನುಗಳನ್ನು ಇಳಿಸಲು Landing ಮತ್ತು Beything ಅನುಕೂಲಗಳನ್ನು ಒದಗಿಸಲಾಗಿದೆ. ಇವೆಲ್ಲಾ ನೋಡಿದರೆ ನಮ್ಮ ಖಾತೆ ನಿಜವಾಗಿಯೂ ಬಹಳ ಸಮರ್ಪಕವಾಗಿ ಕೆಲಸ ಮಾಡುತ್ತಿವೆಯೆಂದು ಹೇಳಬಹುದು. ನಾನು ಅಧಿಕಾರ ಸ್ವೀಕಾರ ಮಾಡಿದಾಗಿನಿಂದ ಅನೇಕ ಕೆಲಸಕಾರ್ಯಗಳನ್ನೂ ಹಾಗೂ ಅಭಿವೃದ್ಧಿ ಕೆಲಸಗಳನ್ನೂ ತೆಗೆದುಕೊಂಡಿದ್ದೇನೆ. ಈ ಅಧಿವೇಶನ ಮೊದಲು ಜರುಗಿದಾಗ ಕರಾವಳಿ ಪ್ರದೇಶಗಳಾದ ಎರಡೂ ಜಿಲ್ಲೆಯಲ್ಲಿರುವ ಮಾನ್ಯ ವಿಧಾನಸಭಾ ಸದಸ್ಯರುಗಳು ಹಾಗೂ ವಿಧಾನ ಪರಿಷತ್ತಿನಲ್ಲಿರುವ ಸದಸ್ಯರುಗಳನ್ನೂ ಬರಮಾಡಿಕೊಂಡು ಅವರೊಡನೆ ವಿಚಾರ ವಿನಿಮಯ ಮಾಡಿ ಅವರ ಸಲಹೆ ಸೂಚನೆಗಳನ್ನು ಕೇಳಿದೆ. ಅವರು ಅನೇಕ ಉತ್ತಮ ಸಲಹೆಗಳನ್ನು ನನಗೆ ಕೊಟ್ಟರು ನಾನು ಈ ಬಗ್ಗೆ ಟಿಪ್ಪಣಿಗಳನ್ನು ತಯಾರು ಮಾಡಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳ ಕಡೆಗೆ ಕಳುಹಿಸಿದ್ದೇನೆ. ಅವರೂ ಸಹ ಇದರಲ್ಲಿ ಇರುವ ಮುಖ್ಯವಾದ ಎರಡು ಸಮಸ್ಯೆಗಳನ್ನು ಮನಸ್ಸಿಗೆ ತೆಗೆದುಕೊಂಡು ಅವಕ್ಕೆ ಸೂಕ್ತ ಮಾರ್ಗದರ್ಶನವನ್ನು ದೊರಕಿಸಿಕೊಟ್ಟಿದ್ದಾರೆ; ಮುಖ್ಯವಾಗಿ ಮೀನುಗಾರಿಕೆಯಲ್ಲಿ ಕೆಲಸ ಮಾಡುವ ಜನಕ್ಕೆ ಸಾಕಷ್ಟು ವಸತಿ ಸೌಕರ್ಯಗಳಿಲ್ಲ. ಇವರಿಗೆ ಮನೆಗಳ ಸೌಕರ್ಯ ಕಲ್ಪಿಸಿ ಕೊಡಬೇಕೆಂದು ಯತ್ನ ಮಾಡುತ್ತಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು 'ಹೌಸಿಂಗ್ ಬೋರ್ಡು' ಮೂಲಕ ಇವರಿಗೆ ಮನೆಗಳನ್ನು ಕಟ್ಟಿಸಬೇಕೆಂಬ ಉದ್ದೇಶದಿಂದ ಸೂಕ್ತವಾದ ಯೋಜನೆಯೊಂದನ್ನು ರೂಪಿಸಲೂ ಸಹ ಆದೇಶ ನೀಡಿದ್ದಾರೆ. ಇದಕ್ಕೆ ಬೇಕಾಗುವ ಹಣವನ್ನೂ ಒದಗಿಸಲೂ ಆಲೋಚಿಸುತ್ತಿದ್ದಾರೆ. ಈ ಬಗ್ಗೆ ಈಗಾಗಲೇ ಸಾಕಷ್ಟು ಪ್ರಯತ್ನಗಳೂ ನಡೆಯುತ್ತಿವೆ. ಮೀನುಗಾರಿಕೆ ಮುಖ್ಯವಾಗಿರುವ ಎರಡು ಕರಾವಳಿ ಜಿಲ್ಲೆಗಳಲ್ಲಿ ನಡೆಯುತ್ತಿರುವ ಕೆಲಸಕಾರ್ಯಗಳನ್ನು ಪ್ರತ್ಯಕ್ಷವಾಗಿ ತಿಳಿದುಕೊಳ್ಳಬೇಕೆಂದು ನಾನು ಸುಮಾರು ಎಂಟು ದಿನಗಳ ಪ್ರವಾಸವನ್ನು ಕೈಕೊಂಡು ಇಲ್ಲಿರುವ ಜನರ ಭೇಟಿಮಾಡಿ ಅವರ ಅನೇಕ ಕುಂದುಕೊರತೆಗಳನ್ನು ಪ್ರತ್ಯಕ್ಷವಾಗಿ ತಿಳಿದುಕೊಂಡು ಅದಕ್ಕೆ ತಕ್ಕ ಪರಿಣಾಮವನ್ನು ದೊರಕಿಸಿಕೊಡಲು ಕೆಲಸ ಮಾಡುತ್ತಿದ್ದೇನೆ. ಇಲ್ಲಿನ ಜನರಿಗೆ ಇದ್ದ ಅಡಚಣೆಗಳೇನು ಎನ್ನುವುದನ್ನು ಲಕ್ಷಕ್ಕೆ ತೆಗೆದುಕೊಂಡು ಅದಕ್ಕೆ ಸೂಕ್ತ ಪರಿಹಾರಗಳನ್ನು ದೊರಕಿಸಿಕೊಡಲು ಈಗಾಗಲೇ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದೇನೆ. ಇಲ್ಲಿರುವ ಸಮಸ್ಯೆಗಳೇನು ಎನ್ನುವುದು ಸರಕಾರಕ್ಕೆ ಗೊತ್ತಾಗಿದೆ. ಇಲ್ಲಿರುವ ಎಲ್ಲ ಜನರ ಸಹಾಯ ಸೌಕರ್ಯಗಳನ್ನು ಪಡೆದು ಇಲ್ಲಿನ ಮೀನುಗಾರಿಕೆಯಲ್ಲಿ ತೊಡಗಿರುವವರಿಗೆ ಅನುಕೂಲವಾಗುವ ಅಭಿವೃದ್ಧಿಕಾರ್ಯಗಳನ್ನು ಮಾಡುವತ್ತ ಸಾಕಷ್ಟು ಪ್ರಗತಿಯನ್ನುಸಾಧಿಲಾಗಿದೆ. ಈ ರೀತಿಯಾಗಿ ನಮ್ಮ ಮೀನುಗಾರಿಕೆ ಅಭಿವೃದ್ಧಿ ತ್ವರಿತವಾಗಿ ಬಹಳ ಸಮಾಧಾನಕರವಾದ ಕೆಲಸಕಾರ್ಯಗಳನ್ನು ಮಾಡುತ್ತಿದೆ ಎಂದು ತಮ್ಮಲ್ಲಿ ಹೇಳಬಯಸುತ್ತೇನೆ. ನಮ್ಮ ಅನೇಕ ಮಾನ್ಯ ಸದಸ್ಯರು ತಮ್ಮ ಉತ್ತಮ ಸಲಹೆ ಸೂಚನೆಗಳನ್ನು ಈ ಸವನದಲ್ಲಿ ಈಗ ಹೇಳಿದ್ದಾರೆ. ಪ್ರಥಮವಾಗಿ, ಹಾಸನದ ಮಾನ್ಯ ಸದಸ್ಯ ಶ್ರೀ ಹನುಮೇಗೌಡರು ಒಂದು ಸಲಹೆ ಕೊಟ್ಟರು. ಕೆರೆಗಳಲ್ಲಿ ಮೀನುಗಳನ್ನು ಬೆಳೆಸಲು ಸಾಕಾದಷ್ಟು ಮೀನು ಮರಿಗಳು ಸಿಕ್ಕುತ್ತಿಲ್ಲ ಎಂದೂ ಮತ್ತು ಇದನ್ನು ಪೂರೈಕೆ ಮಾಡಬೇಕೆಂದೂ ಹೇಳಿದರು. ಎಲ್ಲ ಕಡೆಗಳಿಗೂ ಸಾಕಷ್ಟು ಮೀನುಮರಿಗಳನ್ನು ಪೂರೈಕೆ ಮಾಡಲು ಆಗುತ್ತಿಲ್ಲ ಎಂದು ತಿಳಿದು

(ಶ್ರೀ ಕೆ. ಟಿ. ರಾಥೋಡ್)

ಬಂದಮೇಲೆ, ಈ ಕೊರತೆ ನಿವಾರಿಸುವ ಬಗ್ಗೆ ಸೂಕ್ತವಾದ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ಮೀನು ಮರಿಗಳಿಗೆ ಇರುವ ಬೇಡಿಕೆಯನ್ನು ಪೂರ್ತಿಯಾಗಿ ನಿರ್ವಹಿಸಬೇಕಾದರೆ ನಮ್ಮ ರಾಜ್ಯಕ್ಕೆ ಸುಮಾರು ಇಪ್ಪತ್ತು ಕೋಟಿಗಳಷ್ಟು ಮೀನುಮರಿಗಳು ಬೇಕಾಗುತ್ತವೆ. ಇದಕ್ಕಾಗಿ ಒಂದು 'ಫೇಜ್ಡ್-ಪ್ರೋಗ್ರಾಮ್' ಹಾಕಿಕೊಂಡು ಈ ಕೊರತೆಯನ್ನು ತುಂಬಬೇಕು ಎಂದು ಪ್ರಯತ್ನ ಮಾಡುವುದರಲ್ಲಿದ್ದೇವೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದು ನರ್ಸರಿಯನ್ನು ಪ್ರಾರಂಭ ಮಾಡಿ ಅಲ್ಲಲ್ಲಿ ಫಿಷ್ ಫಾರ್ಮುಗಳನ್ನು ಮಾಡಬೇಕೆಂಬ ಉದ್ದೇಶದಿಂದ ಅವಶ್ಯ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಪಿ.ಡಬ್ಲ್ಯು.ಡಿ. ಇಲಾಖೆಯ ಮೂಲಕ ನೀರಿನ ಸೌಕರ್ಯ ಇರುವ ಕಡೆಗಳಲ್ಲೆಲ್ಲಾ ಇದಕ್ಕೆ ಬೇಕಾಗುವ ಕೆಲಸಕಾರ್ಯಗಳನ್ನು ತಕ್ಕೊಳ್ಳಬೇಕೆಂದು ಪ್ರಯತ್ನ ಮಾಡಲಾಗುತ್ತಿದೆ. ಇನ್ನು ಒಂದು ವರ್ಷದಲ್ಲಿ ಈ ದಿಶೆಯಲ್ಲಿ ಆಗಬೇಕಾದ ಕೆಲಸ ಕಾರ್ಯಗಳನ್ನು ತ್ವರಿತವಾಗಿ ಮುಗಿಸಬೇಕೆಂದು ಪ್ರಯತ್ನ ಮಾಡಲಾಗುತ್ತಿದೆ.

ಇನ್ನು ಮಾನ್ಯ ಶ್ರೀ ದಾಮೋದರ ಮುಲ್ಕೀಯವರು ಕೆಲವು ಸಲಹೆಗಳನ್ನು ಕೊಟ್ಟರು. ಅವರು 'ಫಿಷರೀಸ್ ಕಾರ್ಪೋರೇಷನ್ನಿಗೆ' ಚೇರ್ಮನ್ನರನ್ನು ನೇಮಕ ಮಾಡಿರುವುದರ ಬಗ್ಗೆ ಪ್ರಸ್ತಾಪಿಸಿದರು. ಕರಾವಳಿ ಭಾಗದ ಮೀನುಗಾರಿಕೆಯಲ್ಲಿ ತಜ್ಞರಾದವರು ಒಬ್ಬರು ಇದರ ಚೇರ್ಮನ್ನರಾಗಿದ್ದರೆ ಇಲ್ಲಿನ ಕೆಲಸಕಾರ್ಯಗಳಿಗೆ ಸರಿಹೋಗುತ್ತಿತ್ತು ಎನ್ನುವ ಅಭಿಪ್ರಾಯವನ್ನು ಸೂಚಿಸಿದರು. ಈಗ ನೇಮಕವಾಗಿರುವವರು ಅಷ್ಟು ತಜ್ಞರಲ್ಲ ಎನ್ನುವ ಅಭಿಪ್ರಾಯ ವ್ಯಕ್ತ ಮಾಡಿದರು. ನಾನು ಅವರಿಗೆ ಹೇಳಬಯಸುತ್ತೇನೆ. ಈಗ ಇರುವ ಚೇರ್ಮನ್ನರವರೂ ಬಹಳ ದಕ್ಷತೆಯಿಂದ ಕೆಲಸ ಮಾಡಬಲ್ಲರು ಮತ್ತು ಅವರು ಬಂದು ಕೇವಲ ಹದಿನೈದು ದಿನಗಳಾದವು. ಇನ್ನು ಕೆಲವು ಕಾಲ ನಾವು ನೋಡಿದರೆ ಅವರು ಎಷ್ಟು ದಕ್ಷತೆಯಿಂದ ಕೆಲಸ ಮಾಡುತ್ತಾರೆ ಎನ್ನುವುದು ನಮಗೆಲ್ಲಾ ಗೊತ್ತಾಗುತ್ತದೆ. ಅವರು ಇದರ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ಕೆಲಸ ಕಾರ್ಯಗಳನ್ನು ಮಾಡಿ ಪ್ರಗತಿ ಸಾಧಿಸಲಿಕ್ಕೆ ಅವಕಾಶವಾಗುತ್ತದೆ ಎಂಬ ಸದಿಚ್ಛೆಯಿಂದ ಅವರನ್ನು ನೇಮಕ ಮಾಡಲಾಗಿದೆ. ಮುಲ್ಕಿಯಲ್ಲಿರುವ 'ಐಸ್ ಪ್ಲಾಂಟನ್ನು' ಸುಧಾರಿಸಿ ಇಂಪ್ರೂವ್ ಮಾಡಿ ಇದಕ್ಕೆ ಒಂದು 'ಫ್ರೀಜಿಂಗ್ ಪ್ಲಾಂಟನ್ನು' ಸೇರಿಸಬೇಕೆಂದೂ ಸಹಾ ಶ್ರೀ ಮುಲ್ಕಿಯವರು ಹೇಳಿದರು. ಇದನ್ನು ಪರಿಶೀಲನೆ ಆದಷ್ಟು ಜಾಗ್ರತೆ ದೊರಕಿಸಿ ಕೊಡಲು ಪ್ರಯತ್ನ ಮಾಡುತ್ತೇನೆ, ಎಂದು ಇಲ್ಲಿ ಹೇಳಬಯಸುತ್ತೇನೆ.

ಇನ್ನು ಮಾನ್ಯ ಸದಸ್ಯೆಯರಾದ ಶ್ರೀಮತಿ ಮನೋರಮ ಮಧ್ವರಾಜ್‌ರವರೂ ಕೆಲವು ಸಲಹೆಗಳನ್ನು ಹಾಗೂ ಸೂಚನೆಗಳನ್ನು ಕೊಟ್ಟಿದ್ದಾರೆ. ಅವರು ಪ್ಲಾನು ಸ್ಕೀಂನ್‌ನಲ್ಲಿ ದುಡ್ಡನ್ನು ಬಹಳ ಕಡಿಮೆ ಕೊಟ್ಟಿದ್ದಾರೆ ಎಂದು ಹೇಳಿದರು. ಕಳೆದ ವರ್ಷ ರೂ. 73 ಲಕ್ಷ ಇತ್ತು ಈ ವರ್ಷ 66 ಲಕ್ಷ ರೂಪಾಯಿ ಮಾತ್ರ ಒದಗಿಸಿದ್ದಾರೆ ಇದಕ್ಕೆ ಕಾರಣವೇನು ಎಂದು ಕೇಳಿದರು. ಇದಕ್ಕೆ ಕಾರಣ ಇದೆ. ನಮ್ಮ 'ಪ್ಲಾನು ಪ್ರಾವಿಷನ್' ನಾಲ್ಕನೇ ಯೋಜನೆಯಲ್ಲಿ ಸುಮಾರು 300 ಲಕ್ಷ ರೂಪಾಯಿ ಇತ್ತು. ಮೊದಲಿನ ಮೂರು ವರ್ಷಗಳಲ್ಲಿ ಪ್ಲಾನ್ ಸ್ಕೀಂಗಳ ವೆಚ್ಚ ಸ್ವಲ್ಪ ಹೆಚ್ಚು ಬಂದುದರಿಂದ, ಈ ವರ್ಷ ಪ್ಲಾನಿಂಗ್ ಕಮಿಷನ್‌ರವರು ಸ್ವಲ್ಪ ಕಡಿತ ಮಾಡಿ, ಸುಮಾರು 66 ಲಕ್ಷ ರೂಪಾಯಿ ಮಾತ್ರ ಒದಗಿಸಿದ್ದಾರೆ. ಈ ಬಗ್ಗೆ ಹೆಚ್ಚು ಹಣ ಪಡೆಯಲು ಪ್ರಯತ್ನ ಮಾಡೋಣ. ನಮ್ಮ ಮಾನ್ಯ ಹಣಕಾಸಿನ ಸಚಿವರಿಗೆ ನಮ್ಮ ಇಲಾಖೆಯ ಅಧ್ಯತೆಗಳನ್ನೂ ಅವಶ್ಯಕತೆಗಳನ್ನೂ ಒತ್ತಿ ಹೇಳಿ ಇನ್ನೂ ಹೆಚ್ಚು ಹಣವನ್ನು ಒದಗಿಸಿಕೊಡಲು ಪ್ರಯತ್ನಮಾಡಬೇಕೆಂದು ಕೇಳುತ್ತೇವೆ, ಎಂದು ಮಾತ್ರ ಈಗ ಇಲ್ಲಿ ಹೇಳಬಯಸುತ್ತೇನೆ.

ಅದರಂತೆ ಫಿಷ್ ಕ್ಯೂರಿಂಗ್ ಯಾರ್ಡ್ಸ್‌ನ್ನು ರದ್ದುಮಾಡಬೇಕು, ಅದು ಇರುವುದು ಅನಾವಶ್ಯಕ ಎಂಬುದಾಗಿ ಶ್ರೀಮತಿ ಮನೋರಮ ಮಧ್ವರಾಜ್ ಅವರು ತಿಳಿಸಿದ್ದಾರೆ. ರಾಜ್ಯ ಪುನರ್ವಿಂಗಡಣೆಗೆ ಮುಂಚಿತವಾಗಿ ಮದ್ರಾಸ್ ಮತ್ತು ಮುಂಬೈ ಸರ್ಕಾರದವರೇ ಈ ವ್ಯವಸ್ಥೆ ಮಾಡಿದ್ದರು ಅದನ್ನೇ ನಾವೂ ಮುಂದುವರಿಸಿಕೊಂಡು ಬಂದಿದ್ದೇವೆ. ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 15 ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ 15, ಈ ಪ್ರಕಾರ ಒಟ್ಟು 30 ಫಿಸ್ ಕ್ಯೂರಿಂಗ್ ಯಾರ್ಡ್‌ಗಳಿವೆ. ಈ ಸೆಂಟರ್‌ಗಳನ್ನು ಈಗ ಫಿಷರ್‌ಮನ್ ಕೋ ಆಪರೇಟಿವ್ ಸೊಸೈಟಿಗಳಿಗೆ ವಹಿಸಬೇಕೆಂದು, ಆ ಬಗ್ಗೆ ವಿಚಾರವಿನಿಮಯ ನಡೆದಿದೆ. ಈ ಸೊಸೈಟಿಗಳ ಮುಖಾಂತರ ಯಾವ ರೀತಿಯಾಗಿ ಈಗ ಕೆಲಸ ಮಾಡುತ್ತಿರುವವರ ಸೇವೆಯನ್ನು ಮಾರ್ಪಾಡು ಮಾಡಿಕೊಳ್ಳುವುದಕ್ಕೆ ಸಾಧ್ಯ ಎಂಬುದನ್ನು ಸಹ ಸರ್ಕಾರದವರು ಅವರೊಡನೆ ವಿಚಾರ ಮಾಡುತ್ತಿದ್ದಾರೆ. ಈ ಸಿಬ್ಬಂದಿಯ ಸೇವೆ ನಮಗೆ ಬಹಳ ಅವಶ್ಯಕವಿದೆ: ಏಕೆಂದರೆ "the yard staff in addition to the issue of salt for

fish curing, are collecting statistics of marine fish landed in their jurisdiction. ಮತ್ತು A proposal to convert these yards into improved fish handling and processing centres is also under consideration." ಇದೇ ಮಾನ್ಯ ಸದಸ್ಯರು ಮತ್ತೊಂದು ಸೂಚನೆಯನ್ನು ಮಾಡಿದ್ದಾರೆ. ಫಿಷರೀಸ್ ಸ್ಕೂಲ್‌ಗಳನ್ನು ವಿದ್ಯಾ ಇಲಾಖೆಗೆ ವಹಿಸಿಕೊಟ್ಟು, ಅದರಿಂದ ಉಳಿತಾಯವಾಗುವ ಸುಮಾರು 15 ಲಕ್ಷ ರೂಪಾಯಿಗಳನ್ನು ಈ ಇಲಾಖೆಯು ಇನ್ನಿತರ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಬಹುದು ಎಂದು. ನಿಜವಾಗಿ ಹೇಳಬೇಕೆಂದರೆ ನಮ್ಮ ಮೀನುಗಾರರು ಬಹಳ ಹಿಂದುಳಿದ ವರ್ಗದವರು. ಅವರ ಪರಿಸ್ಥಿತಿ ಬಹಳ ಚಿಂತಾಜನಕದ್ದಾಗಿದೆ. ನಾನು ಪ್ರವಾಸ ಹೋದಾಗ ಅವರ ಪರಿಸ್ಥಿತಿಯನ್ನು ಕಣ್ಣಾರೆ ನೋಡಿದ್ದೇನೆ. ಈ ಜನರು ನಿಜವಾಗಿಯೂ ಶಿಕ್ಷಣವನ್ನು ಪಡೆಯಲು ಸಾಮಾನ್ಯವಾಗಿ ತಾವೇ ಮುಂದೆ ಬರುವವರಲ್ಲ. ಶಿಕ್ಷಣ ಎಂದರೆ ಹಿಂದಿರುವವರು, ಇವರಿಗೆ ಶಿಕ್ಷಣದ ಅಭಿಮಾನವನ್ನು ದೊರಕಿಸಿಕೊಡುವ ಸಲುವಾಗಿಯೂ ಮತ್ತು ಅವರ ಮಕ್ಕಳನ್ನು ಶಾಲೆಗೆ ಕಳಿಸಿಕೊಡುವಂತೆ ಅನುಕೂಲ ಮಾಡಲು ಅವರ 'ಲೊಕ್ಯಾಲಿಟಿ'ಯೊಳಗೇ ಫಿಷರೀಸ್ ಸ್ಕೂಲ್‌ಗಳನ್ನು ತರೆಯಲಾಗಿದೆ. ಈ ಶಾಲೆಗಳನ್ನು ಇನ್ನು ಮೇಲೆ ಶಿಕ್ಷಣಖಾತೆಗೆ ವಹಿಸಿಕೊಡಬೇಕೋ ಅಥವಾ ನಾವೇ ಉಳಿಸಿಕೊಳ್ಳಬೇಕೋ ಎಂಬ ಬಗ್ಗೆ ರಾಜ್ಯಮಟ್ಟದ 'ಅಡ್ವೈಸರಿ ಕಮಿಟಿಯಲ್ಲಿ' ಈಗಾಗಲೇ ವಿಚಾರ ಮಾಡಿದ್ದೇವೆ. ಈ ಬಗ್ಗೆ ಎರಡು ತರಹದ ಅಭಿಪ್ರಾಯಗಳು ಬಂದಿವೆ. ಉತ್ತರಕನ್ನಡ ಜಿಲ್ಲೆಯವರು ವಿದ್ಯಾ ಇಲಾಖೆಗೆ ವರ್ಗ ಮಾಡೋಣ ಎಂದು ಹೇಳುತ್ತಾರೆ. ಆದರೆ ದಕ್ಷಿಣಕನ್ನಡ ಜಿಲ್ಲೆಯವರು ನಮ್ಮ ಇಲಾಖೆಯವರ ಆಡಳಿತದಲ್ಲಿಯೇ ಇರಬೇಕು ಎಂದು ಹೇಳುತ್ತಾರೆ. ಆದರೂ ಈ ವಿಷಯವನ್ನು ಪೂರ್ತಿಯಾಗಿ ಪರಿಶೀಲಿಸುವ ಉದ್ದೇಶದಿಂದ 5 ಜನ ಸದಸ್ಯರಿರುವ ಒಂದು ಉಪಸಮಿತಿಯನ್ನು ಮಾಡಿದ್ದೇವೆ. ಆ ಸಮಿತಿಯಲ್ಲಿ ಈ ಕೆಳಗಿನವರು ಸದಸ್ಯರು ಇದ್ದಾರೆ:

1. Secretary to Government, Social Welfare Department.
2. Director of Public Instruction.
3. Director of Fisheries.
4 Sri S. K. Amin.
5. Sri P. M. Tandel.

ಈ ಕಮಿಟಿಯವರ ವರದಿ ಬಂದಮೇಲೆ ಅದನ್ನು ಸರ್ಕಾರದವರು ವಿಚಾರಮಾಡಿ ನೋಡಿ ಎಲ್ಲರೂ ಇಷ್ಟಪಟ್ಟರೆ ಈ ಶಾಲೆಗಳನ್ನು ಶಿಕ್ಷಣ ಇಲಾಖೆಗೇ ವರ್ಗಮಾಡಲು ಯೋಚನೆ ಮಾಡುತ್ತೇವೆ.

ಯಾಂತ್ರಿಕ ಮೀನುಗಾರಿಕೆಯಲ್ಲಿ ತರಬೇತು ಕೊಟ್ಟ ಮೀನುಗಾರರ ಯುವಕರಿಗೆ ಯಾಂತ್ರಿಕ ದೋಣಿಗಳನ್ನು ಒದಗಿಸದಿದ್ದರೆ ಅವರಲ್ಲಿಯೂ ನಿರುದ್ಯೋಗದ ಸಮಸ್ಯೆ ಉಂಟಾಗುತ್ತದೆ ಎಂಬುದಾಗಿ ಶ್ರೀಮತಿ ಮನೋರಮಾ ಮಧ್ವರಾಜ್ ಅವರು ಹೇಳಿದ್ದಾರೆ. ಈ ವಿಷಯ ಕುರಿತು ನಾವು ಈಗಾಗಲೇ ಪರಿಶೀಲಿಸುತ್ತಿದ್ದೇವೆ. ಟ್ರೈನಿಂಗ್ ಆದವರಿಗೆಲ್ಲಾ ಹೆಚ್ಚು ಪ್ರಮಾಣದಲ್ಲಿ ದೋಣಿಗಳು ಸಿಕ್ಕುವ ಹಾಗೆ ಸರ್ಕಾರ ಪ್ರಯತ್ನ ಮಾಡುತ್ತದೆಂದು ಅವರಿಗೆ ತಿಳಿಸುತ್ತೇನೆ. ಈಗಾಗಲೇ 340 ಯಾಂತ್ರಿಕ ದೋಣಿಗಳ ಪೂರೈಕೆ ಮಾಡಿದ್ದೇವೆ. ಈ ವರ್ಷ ಮತ್ತೆ 84 ದೋಣಿಗಳನ್ನು ಕೊಡುವುದಕ್ಕೆ ವಿಚಾರ ಮಾಡುತ್ತೇವೆ.

'ಫಿಷರೀಸ್ ರೋಡ್ಸ್' ಬಗ್ಗೆಯೂ ಶ್ರೀಮತಿ ಮನೋರಮಾ ಮಧ್ವರಾಜ್ ಅವರು ಕೆಲವು ಸಲಹೆಗಳನ್ನು ಮಾಡಿದ್ದಾರೆ. ಇದಕ್ಕಾಗಿ ನಾವು ಒಂದು ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಆದರೆ ಇಷ್ಟು ಹಣ ಸಾಲುವುದಿಲ್ಲ. ಅಂತೆಯೇ 'ರೂರಲ್ ಕಮ್ಯುನಿಕೇಷನ್ ರೋಡ್ಸ್' ಕೆಳಗೆಯೂ ಕೆಲ ರಸ್ತೆಗಳನ್ನು ತೆಗೆದುಕೊಳ್ಳಬೇಕೆಂಬುದನ್ನು ಸಹ ವಿಚಾರ ಮಾಡುತ್ತಿದ್ದೇವೆ. ಈ ವಿಚಾರವನ್ನು ಸಂಬಂಧಪಟ್ಟ ಇಲಾಖೆಯವರಿಗೆ ಈಗಾಗಲೇ ತಿಳಿಸಿದ್ದೇವೆ. ಅವರೂ ಸಹ ಕೆಲವು ಸಲಹೆಗಳನ್ನು ಮಾಡಿದ್ದಾರೆ. ಅವರ ಸಲಹೆಗಳು ಮತ್ತು ನಮ್ಮ ಸಲಹೆಗಳೂ ಸಂಯುಕ್ತವಾಗಿ ಒಳ್ಳೆಯ ಸಲಹೆಗಳಾಗಿರುವುದರಿಂದ ಸರ್ಕಾರ ಇವೆಲ್ಲವನ್ನೂ ಗಮನಿಸಿ ಯೋಗ್ಯ ಕ್ರಮವನ್ನು ಕೈಕೊಳ್ಳುವುದೆಂದು ತಿಳಿಸುತ್ತೇನೆ. ಇದರ ಜೊತೆಗೆ ಮಾನ್ಯ ಭಾಸ್ಕರಶೆಟ್ಟರು ಕೆಲವು ವಿಷಯಗಳನ್ನು ಹೇಳಿದ್ದಾರೆ. ಸಿಗಡಿ ಮೀನು ಮತ್ತು ಪ್ರಾನ್ಸ್ ಮೀನುಗಳ ಕ್ಯಾಚ್‌ನ ಪ್ರಮಾಣದಲ್ಲಿ ಕಡಿಮೆಯಾಗುತ್ತಿದೆ, ಇದರ ಬಗ್ಗೆ ಕಾರಣ ಕಂಡುಹಿಡಿಯಲೂ ವಿಚಾರವಿನಿಮಯ ಮಾಡಬೇಕು ಎಂದು ಹೇಳಿದ್ದಾರೆ. ನಾನು ಅವರ ಕ್ಷೇತ್ರದಲ್ಲಿ ಪ್ರವಾಸ ಕೈಕೊಂಡಾಗ ಈ ವಿಷಯವೂ ಸಹಾ ನನ್ನ ಗಮನಕ್ಕೆ ಬಂದು ನಾನು ಅದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಸಿಗಡಿ ಮೀನನ್ನು ಮೀನು ಎಂಬುವನ್ನು ಒಪ್ಪುತ್ತೀರಾ ?

ಶ್ರೀ ಕೆ. ಟಿ. ರಾಥೋಡ್.— ಆ ಬಗ್ಗೆ ಪರಿಶೀಲನೆ ನಡೆಯುತ್ತಿದೆ. ಈ ಮೀನುಗಳು ಕಡಿಮೆಯಾಗಿರುವುದಕ್ಕೆ ಕಾರಣವೇನು ಎಂಬ ಬಗ್ಗೆ ಸೆಂಟ್ರಲ್ ಮೇರಿನ್ ಫಿಷರೀಸ್ ರಿಸರ್ಚ್ ಇನ್ಸ್ಟಿಟ್ಯೂಟ್‌ನವರು ವಿಚಾರ ಮಾಡುತ್ತಿದ್ದಾರೆ. ನಮ್ಮ ರಾಜ್ಯದ ತಜ್ಞರೂ ಸಹ ಈ ವಿಷಯದಲ್ಲಿ ಪರೀಕ್ಷಾ ಪರಿಶೀಲನಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಮತ್ತು ಇವರ ಬಗ್ಗೆ ಒಂದು ಟೆಕ್ನಿಕಲ್ ಕಮಿಟಿಯನ್ನು ನೇಮಕ ಮಾಡುತ್ತಿದ್ದೇವೆ. ಆ ಕಮಿಟಿಯಲ್ಲಿ ಅಗ್ರಿಕಲ್ಚರಲ್ ರೀಫೈನಾನ್ಸ್ ಕಾರ್ಪೊರೇಷನ್ ರೆಪ್ರಸೆಂಟೇಟಿವ್ ಒಬ್ಬರು, ಕೇಂದ್ರ ಸರ್ಕಾರದ ಮೀನುಗಾರಿಕೆ ಖಾತೆ ಪ್ರತಿನಿಧಿ ಒಬ್ಬರು ಮತ್ತು ನಮ್ಮ ಇಲಾಖೆ ಡೈರೆಕ್ಟರೂ ಮತ್ತು ಸೆಕ್ರೆಟರಿಯವರೂ ಇದ್ದಾರೆ.

ದೊಡ್ಡ ದೋಣಿಗಳನ್ನು ಮೀನುಗಾರರಿಗೆ ಕೊಡಬೇಕೆಂದು ಮಾನ್ಯ ಸದಸ್ಯರೊಬ್ಬರು ಸೂಚನೆ ಕೊಟ್ಟಿದ್ದಾರೆ. ದೊಡ್ಡ ದೋಣಿಗಳನ್ನು ತಯಾರು ಮಾಡುವ ಸಲುವಾಗಿ ಎ. ಆರ್. ಸಿ. ಅವರ ಸಹಾಯ ಸ್ಥಗಿತವಾಗಿದೆ. ನಾನು ಕೆಲವು ದಿವಸಗಳ ಹಿಂದೆ ದೆಹಲಿಗೆ ಹೋಗಿದ್ದಾಗ ಈ ಬಗ್ಗೆ ಸಂಬಂಧಪಟ್ಟ ಮಂತ್ರಿಗಳ ಹತ್ತಿರ ವಿಚಾರವಿನಿಮಯ ಮಾಡಿದ್ದೇನೆ. ಅವರೂ ಮತ್ತೆ ಎ.ಆರ್.ಸಿ. ಸ್ಕೀಮನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡೋಣ ಎಂದು ಹೇಳಿದ್ದಾರೆ ಮತ್ತು ಭರವಸೆಯನ್ನೂ ಕೂಡ ಕೊಟ್ಟಿದ್ದಾರೆ. ಆದ್ದರಿಂದ ಇನ್ನು ಮುಂದೆ ದೊಡ್ಡ ದೋಣಿಗಳನ್ನು ಹೆಚ್ಚು ಪ್ರಮಾಣದಲ್ಲಿ ಹಂಚುವುದಕ್ಕೆ ಅವಕಾಶವಾಗುತ್ತದೆಂದು ಆಶಿಸುತ್ತೇನೆ. ಮೀನುಗಾರಿಕಾ ಅಭಿವೃದ್ಧಿಗೆ ಒದಗಿಸಿರುವ ಹಣ ಬಹಳ ಕಡಿಮೆ ಎಂಬುದಾಗಿ ಶ್ರೀಮತಿ ಮನೋರಮ ಮಧ್ವರಾಜ್ ಅವರು ತಿಳಿಸಿದ್ದಾರೆ. ನಮ್ಮ ಕೆಲಸಕಾರ್ಯಗಳಿಗಾಗಿ ಹೆಚ್ಚು ಹಣವನ್ನು ಒದಗಿಸಿಕೊಳ್ಳಲು ಇನ್ನು ಮುಂದೆ ಪ್ರಯತ್ನ ಮಾಡುತ್ತೇವೆ. ಮೀನುಗಾರಿಕಾ ಅಭಿವೃದ್ಧಿ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಮಾನ್ಯ ಸದಸ್ಯರನೇಕರು ಸೂಕ್ತವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಅವುಗಳನ್ನು ಗಮನದಲ್ಲಿಟ್ಟುಕೊಂಡು, ಯೋಗ್ಯ ಪರಿಹಾರ ದೊರಕಿಸಿಕೊಡುವುದಕ್ಕೆ ಸರ್ಕಾರ ಪ್ರಯತ್ನಿಸುತ್ತದೆಂದು ತಿಳಿಸಿ, ನಮ್ಮ ಖಾತೆಯ ಬಗ್ಗೆ ಆ ಕಡೆಯ ಸದಸ್ಯರಿಂದ ಯಾವ ತರಹದ ಟೀಕೆಗಳು ಬರದಿದ್ದರೂ ಸಹಾ ಒಳ್ಳೆಯ ಸಲಹೆಗಳನ್ನು ಮಾಡಿದ್ದಾರೆ. ಆ ಸಲಹೆಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು, ಅವುಗಳನ್ನು ಕಾರ್ಯರೂಪದಲ್ಲಿ ತರಲೂ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇನೆಂಬ ಭರವಸೆಯನ್ನು ಕೊಡುತ್ತೇನೆ. ಈಗ ನಮ್ಮ ಖಾತೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಸಭೆಯ ಮುಂದೆ ಸಾದರಪಡಿಸಿದ್ದೇವೆ, ಅವುಗಳಿಗೆ ಮಂಜೂರಾತಿ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

MADAM SPEAKER.—I will put the Demands to the Vote of the House. The question is :

"That a sum not exceeding Rs. 14,95,15,000 inclusive of the sum granted 'on account' be granted to the Government to defray the charges which will come in course of payment during the financial year for the period ending 31st day of March 1973, in respect of Demand No. 20 'Agriculture'."

"That a sum not exceeding Rs. 8,84,90,000 inclusive of the sum granted 'on account' be granted to the Government to defray the charges which will come in course of payment during the financial year for the period ending 31st day of March, 1973 in respect of Demand No. 38 'Forest'."

"That a sum not exceeding Rs. 22,00,000, inclusive of the sum granted 'an account' be granted to the Government to defray the charges which will come in course of payment during the financial year for the period ending 31st day of March 1973, in respect of Demand No. 51 'Capital Outlay on Forests'."

"That a sum not exceeding Rs. 2,83,00,000 inclusive of the sum granted 'on account' be granted to the Government to defray the charges which will come in oourse of payment during the financial year for the period ending 31st day of March 1973, in respect of Demand No. 22 'Animal Husbandry'."

The Motions were adopted and the Demands were granted.

Now the House will rise and meet again at 3 p.m.

The House adjourned at Thirty Minutes pist One of the Clock and re-assembled at Three of the Clock.

(MADAM SPEAKER in the Chair)

STARRED QUESTIONS

(to which oral answers were given)

Construction of a Bridge Across the halla near Karur Village

186 Sri B. E. RAMAIAH (Siruguppa).—

Will the Minister for Public Works and Electricity be pleased to state :—

(*a*) whether provision was made in the budget for 1971-72 for the construction of a bridge across the Halla near Karur Village in Siruguppa Taluk ;

(*b*) if so, the reasons for delay in taking up and executing the work ?

Sri H. M. CHANNABASAPPA (Minister for Public Works and Electricity).—

(*a*) Yes.

(*b*) The work could not be taken up due to Economy Measures.

ಶ್ರೀ ಬಿ. ಇ. ರಾಮಯ್ಯ.—ಕರೂರು ಗ್ರಾಮದ ಬಳಿಯ ಹಳ್ಳಕ್ಕೆ ಅಡ್ಡಲಾಗಿ ಸೇತುವೆಯನ್ನು ನಿರ್ಮಿಸುವ ಬಗ್ಗೆ ಎಸ್ಟಿಮೇಟ್ ತಯಾರಾಗಿದೆ ಎಂದು ಹೇಳಿದ್ದೀರಿ, ಅದು ಎಷ್ಟಕ್ಕೆ ಎಸ್ಟಿಮೇಟ್ ಆಗಿದೆ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಎಸ್ಟಿಮೇಟು 4,20,000 ರೂಪಾಯಿಗಳಿಗೆ ತಯಾರು ಆಗಿದೆ.

ಶ್ರೀ ಬಿ. ಇ. ರಾಮಯ್ಯ.—ಇದು 1971-72ನೇ ಇಸವಿಯ ಬಜೆಟ್ಟಿನಲ್ಲಿ ಇದೆಯೆಂದು ಹೇ[illegible] ಕಾ[illegible]ರಿ, ಇವೊತ್ತಿನವರೆಗೂ ಎಮರ್ಜೆನ್ಸಿ ಬಂದಕಾರಣ ಆ ಕೆಲಸವನ್ನು ಷುರು ಮಾಡಲಿಲ್ಲ ಎಂದು ಷು[illegible]ದೆ, ಹಾಗಾದರೆ ಯಾವಾಗ ಎಮರ್ಜೆನ್ಸಿ ತೆಗೆಯುತ್ತೀರಿ, ಯಾವಾಗ ಈ ಕೆಲಸವನ್ನು [illegible]ಡುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—1971ನೇ ಇಸವಿಯಲ್ಲಿ ತಯಾರಾಗಿದ್ದ ಎಸ್ಟಿಮೇಟಿನಲ್ಲಿ ಊರಿನ ಒಳಗಡೆ ರಸ್ತೆ ಮಾಡಿ ಕಾಸ್‌ವೇ ಮಾಡಬೇಕೆಂಬ ಉದ್ದೇಶ ಇತ್ತು. ಆದರೆ ಈಗ ಆ ಊರಿನ ಹೊರಗಡೆ ಒಂದು ಸೇತುವೆ ಮಾಡಬೇಕೆಂದಿದ್ದೇವೆ. 4 ಲಕ್ಷ 20 ಸಾವಿರ ರೂಪಾಯಿಗಳಿಗೆ ಅವರ ಅಂದಾಜು ತಯಾರಾಗಿದೆ.

ಶ್ರೀ ಬಿ. ಇ. ರಾಮಯ್ಯ.—ಈ ವರ್ಷ ಅದಕ್ಕೆ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಆಗಿದೆಯೇ ?

ಶ್ರೀ ಎಚ್. ಎ. ಚನ್ನಬಸಪ್ಪ.—ಅದರ ಅಂದಾಜು ತಯಾರಾಗಿದೆ. ಅದು ಮಂಜೂರಾತಿಗೆ ಇನ್ನೂ ಬಂದಿಲ್ಲ. ಬಂದಮೇಲೆ ಆ ಬಗ್ಗೆ ಸೂಕ್ತ ಕ್ರಮತೆಗೆದುಕೊಳ್ಳುತ್ತೇವೆ.

MADAM SPEAKER.—Hon. member Sri D. B. Kalmankar has been authorised to put Question No. 230.

Statement of Assets and Liabilities of Executive Engineers of P.W.D.

230. Sri D. B. KALMANKAR (Afzalpur) [on Behalf of Sri PRABHAKAR TELKAR (Kalagi)].—

Will the Minister for Public Works and Electricity be pleased to state :—

(*a*) whether there are rules and Executive Orders that Executive Engineers of Public Works Department should furnish statements of assets and liabilities held by them to Government every year ;

(*b*) if so the number of Executive Engineers (P.W.D.) who have furnished their statements during the last one year (Districtwise information may be furnished) ;

(*c*) the action taken against these Executive Engineers who have not furnished the statements ?

Sri H. M. CHANNABASAPPA (Minister for Public Works and Electricity).—

(*a*) (i) Yes.

(ii) Rule 23 of the Mysore Civil Services (Conduct) Rules, 1966 requires that every Government servant shall, on his first appointment to any service or post and thereafter at the interval of every twelve months submit a return of his assets and liabilities in the form prescribed under the Rules. This rule applies to the Executive Engineers of Public Works Department also requiring them to furnish annual property returns.

(*b*) There are 209 Executive Engineers in the Public Works Department of whom 142 have sent their statements for the year 1971.

It is not possible to furnish district-wise information as the jurisdiction of the Executive Engineers is not districtwise.

(*c*) They have been asked to send their returns of assets and liabilities, in accordance with the rules.

Sri D. B. KALMANKAR.—In answer to (*b*) you have stated that there are 209 Executive Engineers in the Public Works Department of whom 142 have sent their statements for the year 1971. May I know whether these persons have sent their returns of income from the date of their entering into service ?

†Sri H. M. CHANNABASAPPA.—I do not have those details at present. If the hon. Member were to put a separate question I will furnish the reply.

Sri D. B. KALMANKAR.—How many of the Superintending Engineers and the Chief Engineers have sent their returns ?

Sri H. M. CHANNABASAPPA.—Out of 10 Chief Engineers 4 have been prompt and the returns from others are still to be received.

ಶ್ರೀ ಕೊಣಂದೂರು ಲಿಂಗಪ್ಪ.—ಇದರಲ್ಲಿ ಎಗ್ಸಿಕ್ಯೂಟೀವ್ ಇಂಜಿನಿಯರು ತಮ್ಮ ಆಸ್ತಿಪಾಸ್ತಿಗಳ ವಿವರಣೆಯನ್ನು ಕೊಡಬೇಕೆಂದು ಕೇಳಿದೆ. ಅವರದು ವೈಯ್ಯಕ್ತಿಕವಾಗಿ ಒಬ್ಬರದು ಮಾತ್ರ ಕೇಳಿದ್ದೀರೋ ಅಥವಾ ಕುಟುಂಬ ವರ್ಗದವರು ಮತ್ತು ಅವರ ಸಂಬಂಧೀಕರ ಆಸ್ತಿಪಾಸ್ತಿಗಳ ವಿವರಣೆಯನ್ನೂ ಕೇಳಿದ್ದೀರೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಏನೇನು ಇನ್‌ಫರ್‌ಮೇಷನ್ ಕೊಡಬೇಕು ಎನ್ನತಕ್ಕಂಥಾದ್ದನ್ನು ಸರ್ಕಾರಿ ನೌಕರರ ನಿಯಮ 13 ಸಬ್‌ಕಲಮ್ 5ರಲ್ಲಿ ಹೇಳಿದೆ. ಅದರಲ್ಲಿ ವಿಧಿತವಾಗಿರತಕ್ಕ ಫಾರಂ ಪ್ರಕಾರ ಕೊಡತಕ್ಕದ್ದು.

Sri S. M. YAHYA.—Has it come to the notice of the Government that the Engineers who have filed their statements have not furnished full and accurate assets and liabilities they have ?

Sri H. M. CHANNABASAPPA.—In some cases where the statements have not been inconsistence with their incomes Government do call for explanations and take necessary action according to the rules.

Sri H. S. SIDDAPPA.—Will it be possible to furnish the details to the Members of this House so that we could inform the Hon. Minister about the real picture ?

Sri H. M. CHANNABASAPPA.—As I have already pointed out there are about 1100 Assistant Engineers and 209 Executive Engineers. Further it is also a matter for consideration whether it is necessary to place these things before this House. In the rules it is provided that these assets and liabilities will be kept secret and that would be enquired into whenever the information obtained is not in-consistence with their incomes.

ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ್.—ನಿವೃತ್ತರಾಗಿರತಕ್ಕ ಎಗ್ಸಿಕ್ಯೂಟೀವ್ ಇಂಜಿನಿಯರುಗಳು ಅವರು ನಿವೃತ್ತಿ ಹೊಂದಿದ ಮೇಲೆ ಹೊಸದಾಗಿ ಮನೆಗಳನ್ನು ಆಸ್ತಿಯನ್ನು ಹೊಂದಿದ್ದರೆ ಅದನ್ನೂ ಲೆಕ್ಕಕ್ಕೆ ತೆಗೆದುಕೊಂಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರು ನಿವೃತ್ತರಾದ ಮೇಲೆ ಕೂಡ ಅವರ ಪೆನ್‌ಷನ್ ಮೇಲೆ ಸರ್ಕಾರಕ್ಕೆ ಹತೋಟಿ ಇರುತ್ತದೆ. ಅದ್ದರಿಂದ ಅವರು ದಾರಿ ತಪ್ಪಿ ಹಣವನ್ನು ಸಂಪಾದನೆ ಮಾಡಿದ್ದ ಪಕ್ಷದಲ್ಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ರೂಲ್ಸಿನಲ್ಲಿ ಅನೇಕ ಅವಕಾಶಗಳು ಇವೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರ ಆಸ್ತಿಪಾಸ್ತಿಗಳ ವಿವರವನ್ನು ಕೇಳಿದ ನಂತರ ಅವರು ತಮಗೆ ಕೊಟ್ಟಿರುವ ಆಸ್ತಿಪಾಸ್ತಿಗಳ ವಿವರ ಸರಿಯಾಗಿಲ್ಲ, ಅದು ಅನುಮಾನಾಸ್ಪದವಾಗಿದೆ ಎಂದು ಏನಾದರೂ ತಿಳಿದು ಬಂದಿದೆಯೇ ? ಹಾಗೆ ತಿಳಿದು ಬಂದಿದ್ದರೆ ಎಷ್ಟು ಜನಗಳ ಬಗ್ಗೆ ತಿಳಿದು ಬಂದಿದೆ ಆ ಬಗ್ಗೆ ತಾವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—1970ರ ವರೆಗೂ ಆ ರೀತಿ ಅವರಿಂದ ಬಂದಂತಹ ವಿವರಗಳನ್ನು ಸೀಲ್ಡ್ ಡಾಕ್ಯುಮೆಂಟಾಗಿಟ್ಟಿದ್ದು. ಯಾವುದಾದರೂ ಒಬ್ಬ ಆಫೀಸರ ಮೇಲೆ ಏನಾದರೂ ಕಂಪ್ಲೈಂಟ್ ಬಂದು ಅವನ ನಡವಳಿಕೆಗಳ ವಿಷಯದಲ್ಲಿ ಅನುಮಾನ ಬಂದರೆ ಆಗ್ಯೆ ಅವುಗಳನ್ನು ಪರಿಶೀಲನೆ ಮಾಡಲಾಗುತ್ತಿತ್ತು. 1970ರಲ್ಲಿ ಒಂದು ಹೊಸ ಆಜ್ಞೆಯನ್ನು ಮಾಡಿ ಅದರಲ್ಲಿ ಆ ವಿವರಗಳನ್ನು ಆಗಿಂದಾಗ್ಗೆ ಪರಿಶೀಲನೆ ಮಾಡಬೇಕೆಂದೂ ಮತ್ತು ಅದಕ್ಕೆಲ್ಲಾ ಯಾವ ಯಾವ ಮಟ್ಟದ ಆಫೀಸರು ಇರಬೇಕೆಂಬುದನ್ನು ನಿರ್ದೇಶನ ಮಾಡಿ ಆ ಆಜ್ಞೆಯಲ್ಲಿ ಹೇಳಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ಅವರು ಆಸ್ತಿಪಾಸ್ತಿಗಳ ವಿವರಗಳನ್ನು ಕೊಟ್ಟಮೇಲೆ, ಅದಕ್ಕಿಂತ ಹೆಚ್ಚು ಆಸ್ತಿಪಾಸ್ತಿಗಳು ಇರುವುದು ಕಂಡುಬಂದರೆ ಅದನ್ನು ಸರ್ಕಾರದವರು ವಶಪಡಿಸಿಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರಿಗೆ ಇರತಕ್ಕ ಆದಾಯ ಏನಿದೆ ಅದಕ್ಕಿಂತ ಮಿತಿಮೀರಿದ ಆಸ್ತಿಪಾಸ್ತಿಗಳನ್ನು ಮಾಡಿ ಅವರು ತಪ್ಪುದಾರಿಯಲ್ಲಿ ಆಸ್ತಿಯನ್ನು ಸಂಪಾದನೆ ಮಾಡಿದ್ದಾರೆ ಎಂದು ಗೊತ್ತಾದರೆ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆಗಳನ್ನು ಹಾಕಿ ಸೂಕ್ತಕ್ರಮವನ್ನು ತೆಗೆದುಕೊಳ್ಳುತ್ತೇವೆ.

Sri D. B. KALMANKAR.—Has the Government held any enquiries to find out the genuineness or otherwise of these returns and if so, what is the agency through which the said enquiries were held; secondly what action the Government proposes to take against those who have not submitted their returns ?

Sri H. M. CHANNABASAPPA.—I would like to submit that Government has created an agency sometime in April 1972 to examine whether the assets and liabilities submitted vary or they are disproportionate to their incomes and the office has not fully enforced that. The Government is anxious to see that the administrative machinery is geared up and with that object in view Government will take necessary action in the matter.

Increasing the Capacity of Gondi Channel

250. Sri ABDUL KHUDDUS ANWAR (Bhadravathi).—

Will the Minister for Public Works and Electricity be pleased to state :—

(a) the atchkat irrigated by Gondi Channel (at right and left Bank);

(b) whether silt is being removed from the channel every year ;

(c) whether complaints from the ryots have been received that there is no regular supply of water to this channel and that crops were dried up during the lasit 2 years ;

(*d*) whether Government intends to sanction adequate funds to desilt the channel and increase its capacity to irrigate about 1,500 at its right bank?

Sri H. M. CHANNABASAPPA (Minister for Public Works and Electricity).—

(*a*) The atchkat irrigated under right bank channel is 10,520 acres and that under left Bank channel is 520 acres.

(*b*) Yes.

(*c*) No.

(*d*) Localised heavy deposits of silt in the channel are being removed to the extent of funds made available under Annual Maintenance. Further, the Executive Engineer, MII Dn. Shimoga, has taken up detailed survey for preparing an estimate to improve the old channel upto 20 miles. There is no proposal to increase the atchkat.

Sri ABDUL KHUDDUS ANWAR.—In answer to (c) "whether complaints from the ryots have been received that there is no regular supply of water to this channel and that crops were dried up during the last 2 years", the reply is 'No.' When the Hon. Minister visited Bhadravati last, he was pleased to hear the grievances of the ryots, a representation was given to him and he directed the authorities to take up the work immediately. Inspite of that, may I know why the answer has been given as 'No'?

† Sri H. M. CHANNABASAPPA.—The question as a whole attracts an answer 'No.' If the Hon. Member had asked whether representation had been received, it would have been a different matter.

Sri ABDUL KHUDDUS ANWAR.—Crops are withering away for want of water and the Hon. Minister was pleased to direct the Engineers to take up the work immediately!

Sri H. M. CHANNABASAPPA.—I quite agree with the spirit behind the question. Government do agree that there have been some difficulties for supply of water in Gondi Channel for the reason that on account of upper contour canals both on the Right and Left side of Bhadra there has been a lot of silting up and the bunds also are getting dilapidated. Government have already got an estimate prepared for the First Stage of 10 miles, and the estimate for improving the Second Stage for another 12 miles is also under consideration. Government do appreciate the anxiety of the Hon. Member and will take proper action.

Sri ABDUL KHUDDUS ANWAR.—The atchkat irrigated under the left Bank channel is given as 520 acres, but it is actually 1800 acres. Will the Hon. Minister clarify and see that water is made available to the whole area?

Sri H. M. CHANNABASAPPA.—The authorised cultivation is in 520 acres, and the rest of it, I should say, is unauthorised cultivation.

Sri ABDUL KHUDDUS ANWAR.—I want to know whether the rest of the area would be regularised by the Government?

Sri H. M. CHANNABASAPPA.—Regularisation is only possible when there is adequate water in the channel.

Village Accountants

268. Sri KAGODU THIMMAPPA (Sagar).—

Will the Minister for Revenue be pleased to state :—

(*a*) the number of Village Accountants appointed so far in the State;

(*b*) out of them, the number belonging to Scheduled Castes/Scheduled Tribes and Backward Classes;

(*c*) whether it has come to the notice of the Government that public is put to hardship as these Village Accountants are not staying in respective Villages?

(*d*) whether the Government have issued any suitable directions to them, that they should compulsorily stay in respective Village Panchayat limits?

Sri N. HUTCHAMASTHY GOWDA (Minister for Revenue).—

(*a*) 7,944.

(*b*) The details are being collected.

(*c*) No.

(*d*) The Government have issued suitable instructions to the Village Accountants that they should stay in respective Village Panchayat limits.

(ಸಿ) ಪ್ರಶ್ನೆಯ ಉತ್ತರಕ್ಕೆ "ನೋ" ಎಂದು ಹೇಳಿದೆ. ಅದರ ಬದಲು "ಹೌದು" ಎಂದು ತಿಳಿದುಕೊಳ್ಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ ಮೂಲಭೂತವಾದ ಒಂದು ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ. (ಬಿ) ಯಲ್ಲಿ ಕೇಳಿದ ಪ್ರಶ್ನೆಗೆ ವಿವರಗಳನ್ನು ಸಂಗ್ರಹಿಸಲಾಗುತ್ತದೆ ಎಂದು ಹೇಳಿದ್ದೀರಿ. ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ. ಆದ್ದರಿಂದ ಇದನ್ನು ಹೆಲ್ಡ್ ಓವರ್ ಮಾಡುವುದು ಒಳ್ಳೆಯದು.

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಕೆಲವು ಜಿಲ್ಲೆಗಳಿಂದ ಈಗಾಗಲೇ ಅಂಕಸಂಖ್ಯೆಗಳು ಬಂದಿವೆ. ಕೆಲವು ಜಿಲ್ಲೆಗಳಿಂದ ವಿವರ ಬಂದಿಲ್ಲ ಪೂರಾ ವಿವರ ಬಂದ ಮೇಲೆ ಅದನ್ನು ಒದಗಿಸಬಹುದೆಂದು ಆ ರೀತಿ ಸಂಗ್ರಹಿಸಲಾಗುತ್ತದೆಂದು ಹೇಳಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಹಾಗಾದರೆ ತಮಗೆ ವಿವರಗಳು ಸಿಕ್ಕಿರುವ ಆಧಾರದ ಮೇಲೆ ಒಟ್ಟು ಎಷ್ಟು ವಿಲೇಜ್ ಲೆಕ್ಕಾಧಿಕಾರಿಗಳು ಇದ್ದಾರೆ; ಅವುಗಳಲ್ಲಿ ಹರಿಜನರು,—ಗಿರಿಜನರು ಎಷ್ಟು ಮತ್ತು ಹಿಂದುಳಿದ ವರ್ಗದ ಜನರು ಎಷ್ಟು ಇದ್ದಾರೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಿರತಕ್ಕಂಥಹ ವಿವರದ ಪ್ರಕಾರ 7944 ಜನರನ್ನು ನೇಮಕ ಮಾಡಿಕೊಂಡಿದ್ದೇವೆ. ಒಟ್ಟು ಇರುವುದು 8941 ಜನ. ಅದರಲ್ಲಿ ಇಷ್ಟು ನೇಮಕ ಮಾಡಲಾಗಿದೆ. ಕೆಲವು ಜಿಲ್ಲೆಗಳಿಂದ ವಿವರ ಬಂದಿದೆ, ಕೆಲವು ಜಿಲ್ಲೆಗಳಿಂದ ಬಂದಿಲ್ಲ. ವಿವರಗಳು ಬಂದಿರತಕ್ಕ ಜಿಲ್ಲೆಗಳ ವಿವರ ಹೀಗೆ ಇದೆ.—

ಬೀದರ ಜಿಲ್ಲೆಯಲ್ಲಿ 314 ಜನರನ್ನು ನೇಮಿಸಿಕೊಂಡಿರುವುದರಲ್ಲಿ 36 ಜನ ಹರಿಜನರಿದ್ದಾರೆ.

ಕೋಲಾರ ಜಿಲ್ಲೆಯಲ್ಲಿ 541 ,, ,, 86 ,,

ಮಂಡ್ಯ ಜಿಲ್ಲೆಯಲ್ಲಿ 434 ,, ,, 35 ,,

ಮತ್ತು ಒಬ್ಬರು ಗಿರಿಜನರು ಇದ್ದಾರೆ.

ಬೆಂಗಳೂರು ಜಿಲ್ಲೆಯಲ್ಲಿ ಎರಡು ಸಾರಿ ನೇಮಕ ಮಾಡಲಾಗಿದೆ. ಒಟ್ಟು 274 ಜನರನ್ನು ನೇಮಕ ಮಾಡಲಾಗಿದೆ. ಆದರೆ ಅದು ಇನ್ನೂ ಕೊನೆಯ ಹಂತಕ್ಕೆ ಬಂದಿಲ್ಲ. ಡಿವಿಜನಲ್ ಕಮಿಶನರ್ ಲೆವಲಿನಲ್ಲಿ ಇದೆ.

ಚಿಕ್ಕಮಗಳೂರಲ್ಲಿ 247 ಜನ ನೇಮಿಸಿಕೊಂಡಿರುವುದರಲ್ಲಿ ಹರಿಜನರು 7 ಜನ ಇದ್ದಾರೆ. ಗಿರಿಜನರು 2 ಜನ ಇದ್ದಾರೆ. ಧಾರವಾಡ ಜಿಲ್ಲೆಯಲ್ಲಿ 2 ಸಾರಿ ನೇಮಕ ಮಾಡಲಾಗಿದೆ. ಕೊನೆಯ ಸಾರಿ 466 ಜನರನ್ನು ನೇಮಕಮಾಡಲಾಗಿದೆ. ಅದರಲ್ಲಿ 66 ಜನ ಹರಿಜನರು ಇದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ 452 ಜನರನ್ನು ನೇಮಕಮಾಡಿಕೊಂಡಿರುವುದರಲ್ಲಿ 69 ಜನ ಹರಿಜನರು ಇದ್ದಾರೆ. ಕೊಡಗಿನಲ್ಲಿ 415 ಜನರನ್ನು ನೇಮಕ ಮಾಡಿಕೊಂಡಿರುವುದರಲ್ಲಿ 69 ಹರಿಜನರು, ಒಬ್ಬರು ಗಿರಿಜನರು ಇದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ ಕೇವಲ ಹರಿಜನ ಗಿರಿಜನರ ಸಂಖ್ಯೆಯನ್ನು ಕೊಟ್ಟಿದ್ದೀರಿ. ಆದರೆ ಹಿಂದುಳಿದ ವರ್ಗದವರ ಅಂಕೆ ಸಂಖ್ಯೆಯನ್ನು ಕೊಟ್ಟಿಲ್ಲ. ಜೊತೆಗೆ, ಕೊಟ್ಟಿರತಕ್ಕಂತಹ ರೀತಿಯಲ್ಲಿ ಎಷ್ಟು ಪ್ರಮಾಣದಲ್ಲಿ ಕೊಡಬೇಕೋ, ಅಷ್ಟು ಪ್ರಮಾಣದಲ್ಲಿ ಕೊಟ್ಟಿಲ್ಲ. ಅಂದರೆ ಸರ್ಕಾರದ ನಿಯಮದ ಪ್ರಕಾರ ಶೇಕಡಾ 18 ಕೊಡಬೇಕಾದ್ದನ್ನು ಇದರಲ್ಲಿ ಏಕೆ ಕೊಟ್ಟು ಪಾಲಿಸಿಲ್ಲ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಿಂದೆ ನೇಮಕವಾಗಿರುವುದರಲ್ಲಿ ಏಕೆ ಪಾಲಿಸಿಲ್ಲವೆಂಬುದರ ಬಗ್ಗೆ ನನ್ನ ಹತ್ತಿರ ವಿವರಗಳು ಇಲ್ಲ. ಇತ್ತೀಚೆಗೆ ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಎಲ್ಲೆಲ್ಲಿ ನೇಮಕವಾಗುತ್ತದೋ, ಅಲ್ಲಿ ಕಡ್ಡಾಯವಾಗಿ ಈ ನಿಯಮವನ್ನು ಪಾಲಿಸಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ನನಗೆ ತಿಳಿದ ಪ್ರಕಾರ ಇದರಲ್ಲಿ ಹಿಂದೆ ಗ್ರಾಮಾಧಿಕಾರಿಗಳಲ್ಲಿ ಏನೊಂದು ಅನುವಂಶಿಕ ಪದ್ಧತಿ ಇತ್ತೋ, ಅದನ್ನು ಇನ್ನೂ ಮುಂದುವರಿಸಿಕೊಂಡು ಹೋಗುವಂತೆ ಪ್ರಯತ್ನ ಮಾಡಿದ್ದೀರೆಂದು ಕಾಣುತ್ತದೆ. ಆದ್ದರಿಂದ ಇದನ್ನು ಕೈಬಿಟ್ಟು ಹಿಂದುಳಿದ ವರ್ಗದ ಜನರಿಗೆ ಮತ್ತು ಹರಿಜನ—ಗಿರಿಜನರಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಿಂದೆ ನೇಮಕ ಮಾಡಿಕೊಳ್ಳುವಾಗ 50 ವರ್ಷ ವಯಸ್ಸಿನ ಒಳಗಿದ್ದು ಎಸ್. ಎಸ್. ಎಲ್. ಸಿ. ಪಾಸಾಗಿದ್ದರೆ ಅಂಥವರನ್ನು ಅನುವಂಶಿಕವಾಗಿ ನೇಮಿಸಿಕೊಳ್ಳಬಹುದೆಂದು ಸರ್ಕಾರದ ಹುಕುಂ ಇತ್ತು. ಆ ನಿಯಮದ ಪ್ರಕಾರ ಯಾರ್ಯಾರು ಇದ್ದರು, ಅಂಥವರನ್ನು ನೇಮಿಸಿಕೊಂಡಿದ್ದಾರೆ. ಉಳಿದುದನ್ನು ಅರ್ಜಿಗಳನ್ನು ನೋಡಿಕೊಂಡು ಚುನಾಯಿಸಲಾಗಿದೆ. ಆದ್ದರಿಂದ ಹೊಸದಾಗಿ ನೇಮಕ ಮಾಡಿಕೊಳ್ಳುವ ಸಂದರ್ಭ ಇರುವಾಗ ಮಾತ್ರ ಈ ನಿಯಮವನ್ನು ಕಡ್ಡಾಯವಾಗಿ ಪಾಲಿಸಬಹುದೇ ಹೊರತು ಈ ನೇಮಕಗಳನ್ನು ಮಾಡುವಾಗ ಯಾರು ಅಧಿಕಾರದಲ್ಲಿದ್ದರು, ಅಂಥವರನ್ನು ಬದಲಾವಣೆ ಮಾಡುವುದು ಕಷ್ಟ.

ಶ್ರೀ ಎಂ. ಬಿ. ರಾಮಸ್ವಾಮಿ.—ಹಿಂದೆ ಶೇಕಡಾ 18 ಮೀಸಲಾಗಿಟ್ಟಿಲ್ಲವೆಂದು ಹೇಳಿದ್ದೀರಿ. ಇದ್ದರಿಂದ ಅದು ರಾಜ್ಯಾಂಗವನ್ನು ಉಲ್ಲಂಘನೆ ಮಾಡಿದ ಹಾಗೆ ಆಯಿತು. ಆದ್ದರಿಂದ ತಮ್ಮ ಕಾಲದಲ್ಲಿಯಾದರೂ ಶೇಕಡಾ 18 ಭಾಗವನ್ನು ಸರಿಯಾಗಿ ಪಾಲಿಸುವುದಕ್ಕೆ ಆದೇಶವನ್ನು ಕೊಡುತ್ತೀವೆಂದು ಆಶ್ವಾಸನೆಯನ್ನು ಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಾಗಲೇ ನೇಮಕ ಮಾಡಿಕೊಂಡಿರುವವರ ವಿಷಯದಲ್ಲಿ ನಾವು ಬದಲಾವಣೆ ಮಾಡುವುದು ಕಷ್ಟ. ಹೊಸದಾಗಿ ನೇಮಕ ಮಾಡಿಕೊಳ್ಳುವ ಸ್ಥಳಗಳಲ್ಲಿ

ಶ್ರೀ ಎಂ. ಎಸ್. ಕೃಷ್ಣನ್.—ಈಗ 18 ಪರ್‌ಸೆಂಟ್ ನೇಮಕ ಮಾಡಿಕೊಳ್ಳದಿರುವುದಕ್ಕೆ ಕಾರಣವೇನಾದರೂ ಕಂಡುಹಿಡಿದಿದ್ದೀರಾ? ಬರೀ ಅಡ್ಮಿನಿಸ್ಟ್ರೇಟಿವ್ ರೀಸನ್ಸ್‌ನಿಂದ ಅದನ್ನು ಮಾಡಿಕೊಳ್ಳಲಾಗಲಿಲ್ಲವೇ, ಅಥವಾ ನೀವು ಏನೊಂದು ರೂಲ್ಸ್ ಹಾಕಿದ್ದೀರಿ ಅದು ಇಲ್ಲದಿದ್ದುದರಿಂದಲೇ; ಹಾಗಿದ್ದರೆ, ಎರಡನೆಯದನ್ನು ಸಡಿಲಗೊಳಿಸುವುದಕ್ಕೆ ವಿಚಾರ ಮಾಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಕೆಲವು ಜಿಲ್ಲೆಗಳಲ್ಲಿ ಖಾಲಿಯಾಗಿವೆ ಆ ಸ್ಥಳಗಳಿಗೆ ಭರ್ತಿ ಮಾಡುವಾಗ ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಬೇಕೆಂದು ಕಡ್ಡಾಯವಾಗಿ ತಿಳಿಸಿದ್ದೇವೆ. ಅದಲ್ಲದೆ ಹಿಂದೆ ಏತಕ್ಕೋಸ್ಕರ ಪಾಲಿಸಿಲ್ಲವೆಂಬುದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ ವಿವರ ತೆಗೆದುಕೊಂಡು ತಿಳಿಸುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಮಂತ್ರಿಗಳು ಕೊಟ್ಟಂಥ ಅಂಕಿ ಅಂಶಗಳನ್ನು ನೋಡಿದರೆ, ನೇಮಕ ಮಾಡತಕ್ಕ ಡೈರೆಕ್ಟ್ ರೆಕ್ರೂಟ್‌ಮೆಂಟ್ ರೂಲ್ಸನ್ನು ಹಾಗೂ ಸರ್ಕಾರದ ನಿಯಮವನ್ನೇ ಉಲ್ಲಂಘನೆ ಮಾಡಿ ಈ ನೇಮಕಗಳನ್ನು ಅಕ್ರಮವನ್ನಾಗಿ ಮಾಡಿದ್ದಾರೆಂದು ಗೊತ್ತಾಗುತ್ತದೆ. ಇದನ್ನು ರದ್ದುಮಾಡಿ ಸರ್ಕಾರದ ನೀತಿ ಇದರ ಬಗ್ಗೆ ಏನಿದೆಯೋ ಅದರಂತೆ ಮಾಡುವುದಕ್ಕೆ ಸರ್ಕಾರ ಪರಿಶೀಲನೆ ಮಾಡುತ್ತದೆಯೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದು ಬಹಳ ವರ್ಷಗಳ ಹಿಂದೆ ನಡೆದಿರತಕ್ಕಂಥಾದ್ದು. ಈ ಮಾನ್ಯ ಸಭೆಗೇ ಗೊತ್ತಿರುವ ಹಾಗೆ ಅನುವಂಶಿಕವಾಗಿ ಬಂದಂಥಾದ್ದನ್ನು ತೆಗೆದು ಹೊಸದಾಗಿ ನೇಮಕವಾದುವುಗಳು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟಿಗೆ ಹೋಗಿ ಪುನಃ ನೇಮಕವಾಗಿವೆ. ಆದ್ದರಿಂದ ಮತ್ತೆ ಅವನ್ನು ಪುನರ್ವಿಮರ್ಶೆ ಮಾಡುವ ಕಾಲ ಮೀರಿ ಹೋಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಈಗ ಅಲ್ಲಿ ಉಳಿದಿರತಕ್ಕ ಸ್ಥಾನಗಳು ಏನಿವೆಯೋ ಅವುಗಳಿಗೆ ಮುಂದೆ ಕಡ್ಡಾಯವಾಗಿ ಸಮದೂಗಿಸುವುದಕ್ಕೆ ಸರ್ಕಾರದವರು ಪ್ರಯತ್ನಮಾಡುತ್ತಾರೆಯೇ? ಗ್ರಾಮಾಧಿಕಾರಿಗಳಿಗೆ ಪರೀಕ್ಷೆ ನಡೆಸುವಾಗ ಹಿಂದುಳಿದ ಜಾತಿಗಳ ಜನರಿಗೆ ವಿನಾಯತಿ ತೋರಿಸಿ ಅವರಿಗೆ ಹೆಚ್ಚಿಗೆ ಇದರಲ್ಲಿ ಸೌಲಭ್ಯವನ್ನು ಒದಗಿಸುತ್ತೀರಾ!

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪರೀಕ್ಷೆಗಳಲ್ಲಿ ವಿನಾಯತಿ ತೋರಿಸುವುದು ಕಷ್ಟ. ನಿಯಮಗಳ ಪ್ರಕಾರ ನೇಮಕಮಾಡಬೇಕು. ಮುಂದೆ ಖಾಲಿ ಬಿದ್ದ ಸ್ಥಳಗಳಿಗೆ ಯಾರ್ಯಾರು ಹಿಂದುಳಿದ ಪಂಗಡಗಳು ಇವೆ, ಯಾರು ಹರಿಜನರು ಗಿರಿಜನರು, ಇದ್ದಾರೆ, ಯಾರಿಗೆ ಪ್ರಾತಿನಿಧ್ಯ ಬಂದಿಲ್ಲವೋ ಅಂತಹವರಿಗೆ ಆ ಅಪಾಯಿಂಟ್‌ಮೆಂಟ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಗಟ್ಟಿ ಚಂದ್ರಶೇಖರ್.—ಅನುವಂಶಿಕವಾಗಿ ಬಂದಂಥ ಗ್ರಾಮಾಧಿಕಾರಿಗಳನ್ನು ತೆಗೆಯುವುದು ವೆಸ್ಟೆಡ್ ಇಂಟರೆಸ್ಟ್‌ನಿಂದ ಎಂಬುದಾಗಿ ನಾನು ತಿಳಿದುಕೊಂಡಿದ್ದೇನೆ. ಕೆಲವರು ಆಯಾ ಗ್ರಾಮದಲ್ಲಿ ಸೇರಿಕೊಂಡೇ ಅಲ್ಲಿಯೇ ಇದ್ದು ಇಲ್ಲದ ಸಲ್ಲದ ರಾಜಕೀಯ ಮಾಡುತ್ತಿದ್ದಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ರೀತಿಯಾಗಿ ಅನೇಕ ಕಡೆಗಳಿಂದ ದೂರು ಬಂದಿದೆ. ಅದರ ಬಗ್ಗೆ ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದೇವೆ. ಆಯಾ ತಾಲ್ಲೂಕ್‌ನಲ್ಲಿ ಇರತಕ್ಕವನನ್ನು ಅಲ್ಲಿ ಇಟ್ಟುಕೊಳ್ಳಬಾರದು, ಬೇರೆ ತಾಲ್ಲೂಕುಗಳಿಗೆ ವರ್ಗಮಾಡಬೇಕೆಂದು ಸ್ಪಷ್ಟವಾಗಿ ಅವರಿಗೆ ತಿಳಿಸಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಇತ್ತೀಚೆಗೆ ಗ್ರಾಮ ಲೆಕ್ಕಾಧಿಕಾರಿಗಳು ಆಯಾ ಪಂಚಾಯತಿಗಳಲ್ಲಿ ವಾಸಮಾಡುತ್ತಾ ಇಲ್ಲ. ಅದರ ಬಗ್ಗೆ ಸ್ಪಷ್ಟ ನಿರ್ದೇಶನವನ್ನು ಅವರಿಗೆ ಕೊಡುತ್ತೀರಾ? ಏಕೆಂದರೆ ಹರಿಜನ ಹಾಗೂ ಗಿರಿಜನ ಮಕ್ಕಳ ಬೇರೆ ಜನಾಂಗದ ಮಕ್ಕಳ ಜೊತೆಗೆ ಕಾಂಪಿಟೇಟಿವ್ ಎಗ್ಸಾಮಿನೇಷನ್‌ಗಳಲ್ಲಿ ಉತ್ತೀರ್ಣರಾಗುವುದಕ್ಕೆ ಆಗುವುದಿಲ್ಲ, ಸಮಾಜ ಗೌರವದೃಷ್ಟಿಯಿಂದ ಅವರಿಗೇನಾದರೂ ವಿನಾಯಿತಿ ಕೊಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ—ಉತ್ತರದಲ್ಲಿ ಕೊಟ್ಟಿರುವ ಹಾಗೆ ಆಯಾ ಊರಿನಲ್ಲಿ ಕಡ್ಡಾಯವಾಗಿ ಅವರು ವಾಸಮಾಡಬೇಕೆಂದು ತಿಳಿಸಲಾಗಿದೆ. ಎಲ್ಲೆಲ್ಲಿ ವಾಸಮಾಡುತ್ತಿಲ್ಲವೋ ಅಂತಹ ಕಡೆಗಳಲ್ಲಿ ಅಲ್ಲಿಯೇ ವಾಸಮಾಡಬೇಕೆಂದು ಮತ್ತೆ ತಿಳಿಸುವ ಕಾರ್ಯಕ್ರಮವನ್ನು ಕೈಗೊಳ್ಳಲಾಗುತ್ತದೆ. ಹರಿಜನ ಗಿರಿಜನ ಮಕ್ಕಳು ಇನ್ನೂ ಸಾಕಷ್ಟು ವಿದ್ಯೆಯಲ್ಲಿ ಪರಿಣತರು ಆಗದೇ ಇರುವುದರಿಂದ, ಅವರಿಗೆ ವಿನಾಯಿತಿ ಕೊಡಬೇಕು, ಸರಿ. ಆದರೆ ಪೈಪೋಟಿ ಮೇಲೆ ಆರಿಸುವಾಗ, ಆ ... ವಿನಾಯಿತಿ ಕೊಡುವುದಕ್ಕಾಗುವುದಿಲ್ಲ

Nationalisation of all Bus Routes in the State

301. **Sri M. MALLAPPA** (Birur).—Will the Minister for Labour be pleased to state :—

(*a*) the number of buses plying on the nationalised routes of the State during the last one year up to the latest convenient date ;

(*b*) the number of passengers travelling daily in Government buses during the last one year up to the latest convenient date ;

(*c*) the gross and net income derived from the nationalised routes during the last one year up to the latest convenient date ;

(*d*) the per capita income derived on passengers during the last one year up to the latest convenient date ;

(*e*) whether the Government intends to nationalise all the routes in Mysore State to have effective control over the routes and to derive the maximum income ?

Sri AZEEZ SAIT (Minister for Labour).—

(*a*) 2,334 Buses on an average during 1971–72.

(*b*) 10.18 Lakhs passengers per day on an average during 1971-72.

(*c*) Mysore State Road Transport Corporation had earned gross profit of Rs. 484.24 lakhs during 1970-71 before deduction of depreciation and interest. The net income for the said period was Rs. 155.58 lakhs. The balance sheet for the year 1971-72 is under preparation.

(*d*) Re. 0.68 paise per passenger in 1971-72.

(*e*) M.S.R.T.C. proposes to nationalise all the bus routes by the end of Fifth Five Year Plan subject to availability of funds and chassis.

ಶ್ರೀ ಎಂ. ಮಲ್ಲಪ್ಪ.—ಇಷ್ಟೊಂದು ಬಸ್ಸುಗಳು ಈ ರೂಟ್‌ಗಳಲ್ಲಿ ಓಡಾಡುವಾಗ ನೀವು ಗಳಿಸಿರತಕ್ಕ ಲಾಭಕ್ಕೂ, ಖಾಸಗೀ ಸಂಸ್ಥೆಗಳವರು ಗಳಿಸಿರತಕ್ಕ ಲಾಭಕ್ಕೂ ಹೋಲಿಸಿದರೆ ನೀವು ಗಳಿಸಿರತಕ್ಕ ಲಾಭ ಬಹಳ ಕಡಿಮೆಯಲ್ಲವೇ ?

† ಶ್ರೀ ಅಜೀಜ್‌ಸೇಟ್.—ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಏಕೆಂದರೆ, ಖಾಸಗೀ ಮಾಲೀಕರ ಉತ್ಪತ್ತಿ, ಕಾರ್ಪೊರೇಷನ್ ಪ್ರಾಫಿಟ್ ಅಂಡ್ ಲಾಸ್ ಲೆಕ್ಕ ಮಾಡುವುದರಲ್ಲಿ ಅವಲಂಬಿಸುತ್ತದೆ. ನಮ್ಮಲ್ಲಿ ಕೊಟ್ಟಿರುವ ಅಮೆನಿಟೀಸ್ ನೋಡಬೇಕು. ನಾನ್ ಪ್ರಾಫಿಟ್ ರೂಟುಗಳಲ್ಲಿ ಹಾಕಿರತಕ್ಕ ಬಸ್ಸುಗಳನ್ನು ತೆಗೆದು ಕೊಂಡಿಲ್ಲ. ನಾವು ವೆಸ್ಟೆಡ್ ಇಂಟರೆಸ್ಟ್ ಇಟ್ಟುಕೊಂಡು ಮಾಡುತ್ತಿದ್ದೇವೆ. ಬರೀ ಪ್ರಾಫಿಟ್ ಯೋಚನೆಯನ್ನು ಇಟ್ಟುಕೊಂಡು ಮಾಡುತ್ತಾ ಇಲ್ಲ. ಅದರ ಜೊತೆಗೆ ನಮ್ಮ ಸಿಬ್ಬಂದಿ ಖರ್ಚಿನಲ್ಲೂ ಪ್ರಾಫಿಟ್ ಬರುವುದು ಬಹಳ ಕಡಿಮೆ. ನಮಗೆ ಷ್ಯಾಡೋಸ್ ಬಸ್‌ಸ್ಟ್ಯಾಂಡ್ ಬೇಕು ಎಂದು ಹೇಳುತ್ತಲೇ ಇರುತ್ತಾರೆ. ಇವೆಲ್ಲವನ್ನೂ ಪ್ರೊವೈಡ್ ಮಾಡಿಕೊಂಡು ಬಂದರೆ, ನಮಗೇನು ಲಾಭಬರುತ್ತದೆ? ಆದರೂ ಬೋನಸ್ ಕೊಡುತ್ತಿದ್ದೇವೆ. ಅದನ್ನು ನೋಡಿದರೆ All is not well. There is nothing hide and seek about it. We are going to improve the profits. As I have already said things will be improved within the next 3—4 months. You will see better results in the M.S.R.T.C.

ಶ್ರೀ ಎಂ. ಮಲ್ಲಪ್ಪ.—ಖಾಸಗಿ ಬಸ್ಸುಗಳನ್ನು ಓಡಿಸುವ ಲೈನುಗಳಲ್ಲಿ ಅವರಿಗೆ ಬರತಕ್ಕ ಲಾಭವೆಷ್ಟು ಮತ್ತು ನಿಮಗೆ ಬರತಕ್ಕ ಲಾಭವೆಷ್ಟೆಂಬುದನ್ನು ಕಂಪೇರ್ ಮಾಡುತ್ತೀರಾ ?

ಶ್ರೀ ಅಜೀಜ್ ಸೇಟ್.—ಅದನ್ನು ನಾನು ಒಪ್ಪುತ್ತೇನೆ. ಆದರೆ ಸಂಪೂರ್ಣವಾಗಿ ತಾವು ಹೇಳಿದ ಹಾಗೆ ನಾನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಎಂ. ಚಂದ್ರಶೇಖರ್.—ಮಂತ್ರಿಗಳಾದರೂ ಸ್ವಲ್ಪ ಈ ಕಡೆ ಲಾಲಿಸಬೇಕು. ಮಂತ್ರಿಗಳು ಹೇಳಿದ್ದೇನೋ ಸರಿ. ಆದರೆ ತಮ್ಮ ಆಡಳಿತ ವರ್ಗದಲ್ಲಿ ಈಗ ಇರತಕ್ಕ ಅಪ್ರಾಮಾಣಿಕತೆ ಅದಕ್ಷತೆ, ಅಜಾಗರೂಕತೆ—ಇವುಗಳ ಪರಿಣಾಮವಾಗಿ ನಮಗೆ ಇದರಿಂದ ಬರತಕ್ಕ ಆದಾಯ ದಿನೇ ದಿನೇ ಕಡಿಮೆಯಾಗುತ್ತಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ? ನಿಮಗೆ ಇದು ನಿಮ್ಮ ಸಾಮರ್ಥ್ಯಕ್ಕೆ ತಕ್ಕ ಹಾಗೆ ಬಾರದೇ ಹೋದರೆ, ಆಗ ನಿಮ್ಮ ಬಸ್ಸು ಮಾರ್ಗಗಳನ್ನು ರಾಷ್ಟ್ರೀಕರಣಗೊಳಿಸುವ ರೀತಿ ನೀತಿಗೆ ದೇವರೇ ಗತಿಯಲ್ಲವೇ ?

ಶ್ರೀ ಅಜೀಜ್ ಸೇಟ್.—ನಾನು ಈ ವಿಚಾರದಲ್ಲಿ ಅನೇಕ ಸಾರಿ ಈಗಾಗಲೇ ಹೇಳಿದ್ದೇನೆ ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಈಗ ಸ್ವಲ್ಪಮಟ್ಟಿಗೆ ನಷ್ಟವಾಗುತ್ತಿದ್ದರೂ ಅದನ್ನು ಸರಿಪಡಿಸುವುದಕ್ಕೆ ಅವಕಾಶವಿದೆ. ಅದಕ್ಕೆ ಅಷ್ಟೊಂದು ತೀವ್ರಾಲೋಚನೆ ಇಲ್ಲದೆ ಲಘುವಾಗಿ ಮಾತನಾಡಿದರೆ ಇದರ ಪೂರ್ತ ಯೋಜನೆಯೇ ಹಾಳಾಗಿ ಹೋಗುತ್ತದೆ. ಸ್ವಲ್ಪ ನಮಗೆ ಸುಧಾರಿಸುವುದಕ್ಕೆ ಅವಕಾಶ ಕೊಡಿ.

ಶ್ರೀ ವಾಟಾಳ್ ನಾಗರಾಜ್.—71—72ನೇ ಸಾಲಿನಲ್ಲಿ ತಮ್ಮಲ್ಲಿರತಕ್ಕ ಬಸ್ಸುಗಳ ಸಂಖ್ಯೆಯನ್ನು ಉತ್ತರದಲ್ಲಿ 2334 ಎಂಬುದಾಗಿ ಕೊಟ್ಟಿದ್ದೀರಿ. ಈ ರಾಜ್ಯದಲ್ಲಿ ಎಂ.ಎಸ್ ಆರ್.ಟಿ.ಸಿ. ಇಲಾಖೆಯಲ್ಲಿ ಸರ್ಕಾರೀ ಬಸ್ಸುಗಳ ಸಂಖ್ಯೆಯೆಷ್ಟು ? ಅವುಗಳಲ್ಲಿ ಎಷ್ಟು ಬಸ್ಸುಗಳು ನಿಂತಿವೆ ? ಅವುಗಳನ್ನು ಯಾವಾಗ ರಿಪೇರಿ ಮಾಡಿಸಿ ರಸ್ತೆಗಳಿಗೆ ಬಿಡುತ್ತೀರಾ ?

ಶ್ರೀ ಅಜೀಜ್ ಸೇಟ್.—ನಮ್ಮಲ್ಲಿ ಈಗ ಒಟ್ಟು 3200 ಬಸ್ಸುಗಳಿವೆ. ಅದರಲ್ಲಿ 500–600 ಹಾಲಿ ರೋಡಿನಲ್ಲಿವೆ. ಡಿವಿಷನಲ್ ವರ್ಕ್‌ಷಾಪ್‌ನಲ್ಲಿ ನಮ್ಮ ಬಸ್ಸುಗಳನ್ನು ರಿಪೇರಿ ಮಾಡಿಸುವುದರ ಜೊತೆಗೆ ಬೇರೆ ಕಾರ್ಖಾನೆಗಳಲ್ಲಿಯೂ ರಿಪೇರಿ ಮಾಡಿಸಿ ಇನ್ನು 3—4 ತಿಂಗಳುಗಳಲ್ಲಿ ರಸ್ತೆಗಳಿಗೆ ಅವನ್ನು ಬಿಡುತ್ತೇವೆ.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಎಂ.ಎಸ್.ಆರ್.ಟಿ.ಸಿ. ಮೂಲಕ ನಡೆಯುತ್ತಿರುವ ಬಸ್ಸುಗಳಲ್ಲಿ ಯೂಟಿಲೈಜೇಷನ್ ಆಫ್ ಬಸಸ್ಸಿನಲ್ಲಿ ರನಿಂಗ್ ಮೈಲ್ ಪರ್ ಬಸ್, ಇನ್‌ಕಂ ಪರ್ ಕಿಲೋಮೀಟರ್ ಬಹಳ ಕಡಿಮೆ. ಸ್ಟಾಫ್ ರೇಷಿಯೋ ಬಹಳ ಜಾಸ್ತಿ. ಇವನ್ನು ಸುಧಾರಿಸುವುದಕ್ಕೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಅಜೀಜ್ ಸೇಟ್.—ಅದಕ್ಕೆ ನೋಟೀಸ್ ಬೇಕು. ರೂಲ್ಸ್ ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಐಡಲಿಂಗ್ ಬಸಸ್ಸನ್ನು ರನ್ ಮಾಡಿಕೊಂಡು ಇರುವುದಕ್ಕೆ ಸಾಧ್ಯವಿಲ್ಲವಲ್ಲವೇ ?

ಶ್ರೀ ಅಜೀಜ್ ಸೇಟ್.—ಅವನ್ನು ರಿಪೇರಿ ಮಾಡಿಸಿ ಬಹು ಶೀಘ್ರದಲ್ಲಿ ಎಲ್ಲಾ ಬಸ್ಸುಗಳನ್ನು ರೋಡಿನಲ್ಲಿ ಹಾಕುತ್ತೇವೆಂದು ಈಗತಾನೇ ಹೇಳಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—(ಇ)ಗೆ ಉತ್ತರವಾಗಿ ಐದನೆಯ ಪಂಚವಾರ್ಷಿಕ ಯೋಜನೆಯ ಕೊನೆಯಲ್ಲಿ ನಾವು ಎಲ್ಲಾ ಬಸ್ಸುಗಳನ್ನೂ ರಾಷ್ಟ್ರೀಕರಣಮಾಡುತ್ತೇವೆ ಎಂದು ಹೇಳಿದ್ದೀರಿ ಹಾಗೆ ಮಾಡಬೇಕಾದರೆ ಚಾಸಿ ಮತ್ತು ಹಣದ ಲಭ್ಯತೆ ಬೇಕಾಗಿದೆ. ಆದ್ದರಿಂದ ಇದರ ಬಗ್ಗೆ ತಮ್ಮಲ್ಲಿ ಏನಾದರೂ ಪರ್‌ಸ್ಪೆಕ್ಟಿವ್ ಪ್ಲಾನಿಂಗ್ ಇದೆಯೇ ? ಇದರಿಂದ ವರ್ಷವರ್ಷಕ್ಕೆ ಎಷ್ಟು ಫಂಡ್ಸ್ ಬರುತ್ತದೆ, ಎಷ್ಟು ಚಾರ್ಜ್ ಬರುತ್ತದೆಂಬ ಬಗ್ಗೆ ಏನಾದರೂ ಒಂದು ಅಂದಾಜು ಇದೆಯೇ ? ಆ ರೀತಿ ಅಂದಾಜು ಇದ್ದರೆ ಹೇಳುತ್ತೀರಾ ?

ಶ್ರೀ ಅಜೀಜ್ ಸೇಟ್.—ಅದಕ್ಕೆ ನೋಟೀಸ್ ಬೇಕು.

ಶ್ರೀ ಎಸ್. ಎಂ. ಚಂದ್ರಶೇಖರ್.—ಸರ್ಕಾರೀ ಬಸ್ಸುಗಳಲ್ಲಿ ಬಸ್ ಫುಲ್, ಗೇಟ್ ಪಾಸ್ ನಿಲ್ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಅಜೀಜ್ ಸೇಟ್.—ಆ ಪ್ರಶ್ನೆ ಮಾನ್ಯ ಸದಸ್ಯರಿಗೇ ಅರ್ಥವಾಗಬೇಕು.

V-31 N 72
N73-5-1-10

ಶ್ರೀ ಎಸ್. ಎಂ. ಚಂದ್ರಶೇಖರ್.—ಈಗ ಕೆಲವು ಕಡೆಗಳಲ್ಲಿ ರಾಷ್ಟ್ರೀಕರಣ ಮಾಡಿರುವುದರಿಂದ, ಅದರಲ್ಲಿಯೂ ಕೋಲಾರದಲ್ಲಿ ಒಂದೇ ದಿವಸದಲ್ಲಿ ಕಾಂಟ್ರಾಕ್ಟ್ ಬಸ್ಸುಗಳನ್ನು ಪಡೆದಂಥ ಖಾಸಗೀಯವರಿಗೆ 5 ಸಾವಿರ ರೂಪಾಯಿಗಳ ಆದಾಯ ಜಾಸ್ತಿ ಬಂದಿದೆ. ಆ ರೀತಿಯಾಗಿ ಆಗುತ್ತಿರುವಾಗ, ಎಲ್ಲಾ ಕಾಂಟ್ರಾಕ್ಟ್ ಬಸ್ಸುಗಳನ್ನು ನಿಲ್ಲಿಸಿ ಸರ್ಕಾರೀ ಬಸ್ಸುಗಳಲ್ಲಿಯೇ ಹೆಚ್ಚಿಗೆ ಲಾಭ ಬರುವಂತೆ ಇನ್ನು ಮುಂದೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಅಜೀಜ್ ಸೇಟ್.—ಎಲ್ಲಾ ಕಾಂಟ್ರಾಕ್ಟ್ ಬಸ್ಸುಗಳಿಂದ ನಮಗೇನೂ ತೊಂದರೆಯಾಗಿಲ್ಲ ಅದು ಜಾಸ್ತಿ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. 4 ಸಾವಿರ ರೂಪಾಯಿಗಳಷ್ಟು ಆದಾಯ ಅವರಿಗೆ ಜಾಸ್ತಿ ಆಗಿತ್ತು. The private owners in collusion with some officals were running the buses without permit. Action has been taken against the officials and they have been transferred from that place.

ಶ್ರೀ ಎಸ್. ಎಂ. ಚಂದ್ರಶೇಖರ್.—ಈಗಲೂ ಕೂಡ ಅದೇ ಪ್ರಕಾರ ನಡೆಯುತ್ತಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

Sri AZEEZ SAIT.—If it is brought to my notice severe action will be taken against the concerned officials.

3-30 P.M.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಈಗ ಉತ್ತರದಲ್ಲಿ ತಾವು ತಿಳಿಸಿರತಕ್ಕ 2334 ಬಸ್ಸುಗಳೇನಿವೆ ಇವುಗಳ ಎಲ್ಲ ಅಡ್ಮಿನಿಸ್ಟ್ರೇಷನನ್ನೂ ಒಂದೇ ಕಡೆ ಕೇಂದ್ರೀಕರಿಸಿರುವುದರಿಂದ ಇದು ಹೀಗೆ ಆಗುತ್ತಿದೆ. ಆದ್ದರಿಂದ ಈ ಅಡ್ಮಿನಿಸ್ಟ್ರೇಷನ್ನನ್ನು ಡೀಸೆಂಟ್ರಲೈಜ್ ಮಾಡುವುದಕ್ಕೆ ಏನು ಮಾಡಿದ್ದೀರಾ ?

ಶ್ರೀ ಅಜೀಜ್ ಸೇಟ್.—ಈಗಾಗಲೇ ರಾಜ್ಯದಲ್ಲಿ ಅನೇಕ ಕಡೆ ಡಿಪೋಗಳನ್ನು ಮತ್ತು ವರ್ಕ್‌ಷಾಪುಗಳನ್ನು ಪ್ರೊವೈಡ್ ಮಾಡಿದ್ದೇವೆ. ಇನ್ನುಳಿದ ವಿಷಯಗಳಲ್ಲೂ ಪರಿಶೀಲನೆ ಮಾಡುತ್ತಿದ್ದೇವೆ.

Government Primary Schools in Arsikere Town

307. Sri H. S. SIDDAPPA (Arsikere).—

Will the Minister for Education be pleased to state:—

(*a*) the names and number of Government Primary Schools run in Arsikere Town ;

(*b*) the number of them situated in Government buildings and the number of them situated in rented buildings ;

(*c*) whether those buildings are suitable for running the schools?

Sri A. R. BADARINARAYANA (Minister for Education).—

(*a*) 13 (List appended).

(*b*) In Government buildings ... 4
In rented buildings ... 6
Run in a Mosque

(SRI A. R. BADARINARAYANA)

(*c*) The buildings taken on rent having been constructed for other purposes, their suitability for running schools does not arise.

LIST

Sl. No.	Name of the School
1.	Branch Lower Primary Boys School, Arsikere
2.	Main Basic Lower Primary Boys School, Arsikere
3.	Girls Lower Primary School, Arsikere
4.	Petta L.P. B.S., Arsikere
5.	Santhepet L.P. B.S., Arsikere
6.	Hassan Road L.P. B.S., Arsikere
7.	Tamil H.P. B.S., Arsikere
8.	H.P. B.S. (Old), Arsikere
9.	H.P. B.S., (New), Arsikere
10.	H.P. G.S., Arsikere
11.	Urdu L.P.B.S., D. M. Kurke Road, Arsikere
12.	Urdu N.T.M.S., Boys, Arsikere
13.	Urdu Girls' School, N.T.M.S., Arsikere.
	Total Number of Schools—13

Sri H. S. SIDDAPPA.—Out of 13 Schools, 9 Schools are run in private buildings and you have stated in your answer that suitability of the buildings does not arise as they are constructed for other purposes. Is it the intention of the Government to have the Schools in buildings unsuited for it ?

†ಎ. ಆರ್. ಬದರಿನಾರಾಯಣ್.—ತಾವು ಕೇಳಿದ ಪ್ರಶ್ನೆ ('ಂಡಿಗೆ ಮನೆಗಳು ಶಾಲೆಗಳನ್ನು ನಡೆಸುವುದಕ್ಕೆ ಸೂಟಬಲ್ಲಾಗಿವೆಯೇ ಎಂದು ಕೇಳಿದ್ದುದಕ್ಕೆ ಸರ್ಕಾರದವರು ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಕಾರಣ ಅವುಗಳನ್ನು ವಾಸಕ್ಕಾಗಿ ಕಟ್ಟಿಸಿದ್ದೇ ವಿನಾ ಶಾಲೆಗಾಗಿ ಕಟ್ಟಿಸಿಲ್ಲ, ಆದ್ದರಿಂದ ಅವು ಸೂಟಬಲ್ಲಾಗಿಲ್ಲ ಎಂದು ಹೇಳಿದ್ದೇವೆ.

ಶ್ರೀ ಎಚ್. ಎಸ್ ಸಿದ್ದಪ್ಪ.—ಯಾವಾಗ ಅಲ್ಲಿಗೆ ಸೂಟಬಲ್ಲಾದ ಕಟ್ಟಡಗಳನ್ನು ಒದಗಿಸಲಾಗುತ್ತದೆ ?

ಶ್ರೀ ಎ. ಆರ್. ಬದರಿನಾರಾಯಣ್.—ಈ ಕಟ್ಟಡಗಳನ್ನು ಕಟ್ಟಿಸತಕ್ಕ ಉದ್ದೇಶಕ್ಕಾಗೇ ಬಡ್ಜೆಟ್ಟಿನಲ್ಲಿ 57 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಅದರಲ್ಲಿ ಸೇ.'20 ಭಾಗ ಅರ್ಬನ್ ಏರಿಯಾಕ್ಕೆ ಹೋದರೆ ಇನ್ನುಳಿದುದೆಲ್ಲಾ ರೂರಲ್ ಏರಿಯಾಕ್ಕೆ ಸೇರಿರುತ್ತದೆ. ಅದರಲ್ಲಿ ತಮ್ಮ ಅರಸೀಕೆರೆಯ ವಿಚಾರವನ್ನೂ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಇಲ್ಲಿಯವರೆಗೂ ನಮ್ಮ ಅರಸೀಕೆರೆಗೆ ಒಂದು ಕಾಸನ್ನೂ ಸರ್ಕಾರ ಖರ್ಚುಮಾಡಿಲ್ಲ ಎಂದರೆ ಒಪ್ಪುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ್.—ಮುಂದೆ ಬರಲಿರತಕ್ಕ ಬಡ್ಜೆಟ್ಟಿನಲ್ಲಿ ನಿಮ್ಮ ಊರಿನ ವಿಚಾರವನ್ನೂ ಪರಿಶೀಲನೆ ಮಾಡಲಾಗುತ್ತದೆ.

Government Arts and Science College at Tumkur

317. Sri T. TARE GOWDA (Kallambella).—

Will the Minister for Education be pleased to state:—

(*a*) when the new building for Government Arts and Science College was constructed at Tumkur ;

(*b*) the total strength of the said college during 1971-72 (Total number of Arts and Science Course Students may kindly be given separately);

(*c*) whether the Government is aware that in view of the total strength of the College it requires bifurcation of Arts and Science Course Students in separate buildings ;

(*d*) whether the college authorities had represented to the Director of Collegiate Education to permit them to hold Arts Classes in morning and evening and Science Classes during regular class hours in the same building because of larger number of students ; if so, the action taken in the matter ;

(*e*) whether there is any proposal before Government to construct another building in the college premises for a Government Arts and Commerce College separately at Tumkur in view of increase in the number of college-going students ?

Sri A. R. BADARINARAYANA (Minister for Education).—

(*a*) During the year 1966.

(*b*) The total strength of the College during 1971-72 was 3,043.

Arts and Commerce	*Science*	*Total*
1,612	1,431	3,043

(*c*) and (*d*) Yes. The bifurcation of this College is under consideration of the Government.

(*e*) No.

ಶ್ರೀ ಟಿ. ತಾರೇಗೌಡ.—ಸರ್ಕಾರದವರು ತಮ್ಮ (ಇ) ಉತ್ತರಕ್ಕೆ ಅನುಗುಣವಾಗಿ 1972—73ಕ್ಕೆ ಅಲ್ಲಿ ಪ್ರತ್ಯೇಕ ಮಾಡುವುದಕ್ಕೆ ಆರ್ಡರನ್ನು ಮಾಡಿದ್ದೀರಾ ?

†ಶ್ರೀ ಎ. ಆರ್. ಬದರಿನಾರಾಯಣ್.—ಹಾಗೆ ಪ್ರತ್ಯೇಕ ಮಾಡಬೇಕೆಂದು ಮೂರರ ಬಗ್ಗೆ ಶಿಫಾರ್ಸ್ ಬಂದಿದೆ. ಆದರೆ ಅವುಗಳಿಗೆ ಇನ್ನೂ ಫೈನಾನ್ಷಿಯಲ್ ಕನ್‌ಕರೆನ್ಸ್ ಬಂದಿಲ್ಲ. ಅಂತೂ ಮೂರು ಕಾಲೇಜುಗಳನ್ನು ಪ್ರತ್ಯೇಕ ಮಾಡಬೇಕೆಂದು ಡೈರೆಕ್ಟರು ಶಿಫಾರ್ಸುಮಾಡಿದ್ದಾರೆ.

ಶ್ರೀ ಟಿ. ತಾರೇಗೌಡ.—1972—73 ಸಾಲಿಗೆ ಕಾಲೇಜುಗಳಲ್ಲಿ ಎಲ್ಲೆಲ್ಲಿ ಎಷ್ಟು ಜನರು ಓದುತ್ತಿದ್ದಾರೆಂಬ ಬಗ್ಗೆ ಅಂಕಿಗಳನ್ನು ಒದಗಿಸುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ್.—ಬೆಂಗಳೂರಿನಲ್ಲಿ—3093; ತುಮಕೂರಿನಲ್ಲಿ—2940; ಬೆಂಗಳೂರು ಮಹಾರಾಣಿ ಕಾಲೇಜ್—2634; ಚಿತ್ರದುರ್ಗ—2669 ; ಹಾಸನ—2008 ; ಶಿವಮೊಗ್ಗ—2000 ಮತ್ತು ಮಹರಾಣಿ ಕಾಲೇಜ್ ಮೈಸೂರು—2383.

Appointment of Mysoreans in R. B. I. Bangalore Branch

330. Sri T. R. SHAMANNA (Fort).—

Will the Minister for Labour be pleased to state :—

(*a*) whether Government has taken any steps to impress upon the concerned authorities the necessity of giving preference to the Mysoreans while recruiting personnel to the Offices of Reserve Bank of India, Bangalore Branch to be opened in the new premises at Cubbon Park ;

(*b*) if so, the nature of steps taken and whether the concerned authorities have agreed to give preference to Mysoreans?

Sri AZEEZ SAIT (Minister for Labour).—

(*a*) The Reserve Bank of India, Bangalore Branch, do not propose to recruit additional staff on opening of their new premises in the Cubbon Park.

(*b*) Does not arise.

ಶ್ರೀ ಟಿ. ಆರ್. ಶಾಮಣ್ಣ.—ನಮ್ಮ ರಾಜ್ಯದಲ್ಲಿ ಇರತಕ್ಕ ಕೇಂದ್ರ ಸರ್ಕಾರದ ಕಛೇರಿಗಳಲ್ಲಿ ಹಾಗೂ ಕೈಗಾರಿಕೆಗಳಲ್ಲಿ ನಮ್ಮ ಮೈಸೂರಿನ ಜನಕ್ಕೆ ಪ್ರಾತಿನಿಧ್ಯವೇ ಸಿಕ್ಕದೆ ಇಲ್ಲಿ ಮಲಬಾರಿನ ಅಧಿಕಾರಿಗಳಿದ್ದರೆ ಮಲಬಾರಿನವರಿಗೂ, ಪಂಜಾಬಿನವರಿದ್ದರೆ ಪಂಜಾಬಿಗಳಿಗೂ ಮತ್ತು ಮದ್ರಾಸಿನವರಿದ್ದರೆ ತಮಿಳರಿಗೂ, ಬಂಗಾಳದವರಿದ್ದರೆ ಬೆಂಗಾಳಿಗಳಿಗೂ ಆಶ್ರಯ ಸಿಕ್ಕುತ್ತಿದೆ. ಇದನ್ನು ತಪ್ಪಿಸುವುದಕ್ಕೆ ನಮ್ಮ ಜನರಿಗೆ ಇಲ್ಲಿ ಪ್ರಾತಿನಿಧ್ಯ ಸಿಕ್ಕುವಂತೆ ಮಾಡುವುದಕ್ಕೆ ಏನು ಕ್ರಮ ಕೈಗೊಳ್ಳಲಾಗಿದೆ ?

† ಶ್ರೀ ಅಜೀಜ್ ಸೇಟ್.—ಇಲ್ಲಿ ಮಾನ್ಯ ಸದಸ್ಯರು ಪಂಜಾಬ, ಬಂಗಾಳ ಮತ್ತು ಕೇರಳದ ವಿಚಾರ ಕೇಳಿದರೆ ನಾನು ಏನು ಉತ್ತರ ಕೊಡಲಿ ? ಇಲ್ಲಿ ಪ್ರಶ್ನೆ ಇರುವುದೇ ಒಂದು ಮಾನ್ಯ ಸದಸ್ಯರು ಕೇಳುತ್ತಿರುವುದೇ ಒಂದು ?

ಶ್ರೀ ಕೋಣಂದೂರು ಲಿಂಗಪ್ಪ.—ಈ ಅನ್ಯಾಯವನ್ನು ತಡೆಗಟ್ಟುವುದಕ್ಕೆ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಬರೆಯುವುದಕ್ಕಾಗುವುದಿಲ್ಲವೇ ?

Sri AZEEZ SAIT.—In answer to (a) I have stated that the Reserve Bank of India, Bangalore Branch do not propose to recruit additional staff on opening of their new premises in the Cubbon Park. If the Hon. Member says that Bangalis, Madrasis, Maharastrians and Kerala people are being taken and the Mysoreans are not taken, it is very difficult to answer. If the Hon. Member puts a separate question, I will reply.

ಶ್ರೀ ಕೆ. ಎಂ. ನಾಗಣ್ಣ.—ಅಲ್ಲಿ ಇನ್ನು ಮುಂದಕ್ಕೆ ಹೊಸದಾಗಿ ಯಾರನ್ನೂ ಕೆಲಸಕ್ಕೆ ನೇಮಕ ಮಾಡಿಕೊಳ್ಳುವುದಿಲ್ಲ ಎಂದು ಹೇಳಿದ್ದಾರೆಂದು ತಿಳಿಸೋಣವಾಗಿದೆ. ಆದರೆ ಅವರು ಹಾಗೇನಾದರೂ ಕೆಲಸಕ್ಕೆ ಜನರನ್ನು ತೆಗೆದುಕೊಂಡರೆ ಆಗ ಎಲ್ಲರನ್ನೂ ಮೈಸೂರಿನವರನ್ನೇ ತೆಗೆದುಕೊಳ್ಳಬೇಕೆಂದು ಸರ್ಕಾರದಿಂದ ಒಂದು ಆದೇಶವನ್ನು ಹೊರಡಿಸುತ್ತೀರಾ ?

Sri AZEEZ SAIT.—The Bank Authorities have stated that they are not going to recruit anybody and they are only shifting. If at all they recruit personnel, they recruit them through our Employment Exchanges. This is the assurance given by them. I will take up the matter with the concerned Authorities and see that if there is any recruitment, Mysoreans

are accommodated as far as possible. ನಮಗೆ ಅವರಿಂದ ಬಂದಿರತಕ್ಕ ವರದಿಯ ಪ್ರಕಾರ ಕ್ಲಾಸ್ ತ್ರಿ ಮತ್ತು ಕ್ಲಾಸ್ ಫೋರನ್ನು ರೆಕ್ರೂಟ್ ಮಾಡಿಕೊಳ್ಳಲಾಗುತ್ತದೆಂದು ತಿಳಿದು ಬಂದಿದೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಅಪಾಯಿಂಟ್‌ಮೆಂಟ್‌ಗಳನ್ನು ಕೊಡತಕ್ಕ ಬಗ್ಗೆ ಅವರಲ್ಲಿ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ಗಳೇನಾದರೂ ಇವೆಯೇ ಅಥವಾ ಅವರು ತಮ್ಮ ಇಚ್ಛೆಗನುಸಾರ ಈ ಕೆಲಸಗಳನ್ನು ಕೊಡುತ್ತ ಇದ್ದಾರೋ ? ಈ ವಿಚಾರದಲ್ಲಿ ಡೈರೆಕ್ಷನ್ ಕೊಡುವುದಕ್ಕೆ ತಮಗೆ ಅವಕಾಶವಿದೆಯೇ ?

Sri AZEEZ SAIT.—The Government of India have made it clear that appointments up to Rs. 500 should be made from the region concerned. This is the standing order to all Central Government Institutions. When the Authorities of the Reserve Bank were contacted they told me that the new building at Cubbon Park would be ready within next 8 or 9 months and they will be shifting all the Departments which are housed in diffierent buildings in the City to the new buildings and they are not recruiting anybody. If there is likelihood of recruiting some new force, I will certainly take up the matter and see that Mysoreans are recruited.

ಶ್ರೀ ಎಚ್. ಡಿ. ದೇವೇಗೌಡ.—ಅಂಥ ಒಂದು ನಿಯಮಾವಳಿಗಳನ್ನು ಅವರು ಇಟ್ಟುಕೊಂಡಿಲ್ಲ ದಿದ್ದರೆ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಬರೆದು ಇಂಥ ನಿಯಮಾವಳಿಗಳನ್ನು ಅನುಸರಿ ಸುವಂತೆ ಮಾಡುವುದಕ್ಕೆ ಸಾಧ್ಯವಿದೆಯೇ ? ಈಗ ಅಲ್ಲಿ ಕೊಡುತ್ತಿರುವ ಹುದ್ದೆಗಳೆಲ್ಲಾ ಕೇವಲ ಒಂದು ವರ್ಗದವರಿಗೆ ಮೀಸಲಾಗಿದೆ ಎಂಬ ದೂರಿದೆ. ಆದ್ದರಿಂದ ಅದನ್ನು ತಪ್ಪಿಸುವುದಕ್ಕೆ ಸಾಧ್ಯ ವಿದೆಯೇ ಎಂದು ಕೇಳುತ್ತೇನೆ ?

ಶ್ರೀ ಡಿ. ದೇವರಾಜ್ ಅರಸ್ (ಮುಖ್ಯ ಮಂತ್ರಿಗಳು).—ಈ ಸಂಸ್ಥೆಯ ಮೇಲೆ ನಮಗೆ ನೇರ ವಾದ ಹತೋಟಿ ಇಲ್ಲ. ಸಂಬಂಧಪಟ್ಟ ಮಂತ್ರಿಗಳೂ ಸಹ ಹತೋಟಿಯಿದೆಯೆಂದು ಹೇಳುತ್ತಿಲ್ಲ. ಅನೇಕ ವರ್ಷಗಳಿಂದ ಕೇಂದ್ರ ಸರಕಾರಕ್ಕೆ ಸಂಬಂಧಪಟ್ಟ ಕೈಗಾರಿಕೆಗಳು ಮತ್ತು ಆಫೀಸುಗಳು ಏನು ರಾಜ್ಯಗಳಲ್ಲಿವೆ ಆ ಸಂಸ್ಥೆಗಳಲ್ಲಿ ಸ್ಥಳೀಯ ಜನರಿಗೆ ಕೆಲಸ ಸಿಕ್ಕುವುದು ಬಹಳ ಕಡಿಮೆ ಎಂಬ ದೂರಿದೆ. ಆ ದೂರಿನಮೇಲೆ ಹಿಂದೆಯೇ ಸರಕಾರದವರು ಕೇಂದ್ರ ಸರಕಾರದೊಡನೆ ಪತ್ರವ್ಯವಹಾರ ನಡೆಸಿದ್ದಾರೆ. ಅದೆಲ್ಲದರ ಪರಿಣಾಮವಾಗಿ ಈಗ ಮಂತ್ರಿಗಳು ಹೇಳಿದಹಾಗೆ ಇನ್ನುಮೇಲೆ ರೆಕ್ರೂಟ್ ಮೆಂಟ್ ಮಾಡಬೇಕಾದರೆ ಲೋಕಲ್ ಎಂಪ್ಲಾಯಿಮೆಂಟ್ ಎಕ್ಸ್‌ಛೇಂಜಿನಿಂದ ಸ್ಥಳೀಯ ಜನರನ್ನು ಹೆಚ್ಚಾಗಿ ತೆಗೆದುಕೊಳ್ಳುವುದಾಗಿ ತಿಳಿಸಿದ್ದಾರೆ. ಜನರಲ್ ರೆಕ್ರೂಟ್‌ಮೆಂಟ್ ರೂಲ್ಸ್ ಅವರಲ್ಲೂ ಒಂದಿರುವುದು. ಕೇಂದ್ರ ಸರಕಾರದವರೂ ಕೂಡ ಒಂದು ಸೂಚನೆ ಕೊಟ್ಟಿದ್ದಾರೆ. ಈಗ ಎಚ್.ಎಂ.ಟಿ. ಎಚ್.ಎ.ಎಲ್., ಐ.ಟಿ.ಐ., ಬಿ.ಇ.ಎಲ್. ಮುಂತಾದ ಕೇಂದ್ರದ ಸಂಸ್ಥೆಗಳು ಬೆಂಗಳೂರಿನಲ್ಲಿವೆ. ಅವುಗಳಲ್ಲಿ ನಮ್ಮವರಿಗೆ ಹೆಚ್ಚು ಅವಕಾಶವಿರಲಿಲ್ಲ. ಈಗ ಕೇಂದ್ರ ಸರಕಾರದವರು ನಮ್ಮ ಪ್ರತಿನಿಧಿ ಯನ್ನು ಅವರ ರೆಕ್ರೂಟ್‌ಮೆಂಟ್ ಬೋರ್ಡಿನಲ್ಲಿ ಎಲ್ಲಾ ಕಡೆ ಇಟ್ಟುಕೊಳ್ಳಲು ಒಪ್ಪಿದ್ದಾರೆ. ಹೀಗೆ ನಮ್ಮ ಸ್ಥಳೀಯ ಜನರಿಗೆ ಹೆಚ್ಚು ಅವಕಾಶ ಕೊಡುವ ದೃಷ್ಟಿಯಿಂದ ಕೇಂದ್ರ ಸರಕಾರದವರು ಒಂದು ರೀತಿಯಲ್ಲಿ ಒಪ್ಪಿ ನಮ್ಮವರಿಗೆ ಪ್ರಾತಿನಿಧ್ಯ ಕೊಡಲು ಒಪ್ಪಿದ್ದಾರೆ. ರಿಸರ್ವ್ ಬ್ಯಾಂಕು ಸಹ ಹೀಗೆಯೆ ಹೇಳಿದೆ. ಅಂದಮಾತ್ರಕ್ಕೆ ರೆಕ್ರೂಟ್‌ಮೆಂಟ್ ರೂಲ್ಸ್ ನಾವು ಸ್ಕ್ರೂಟಿನೈಜ್ ಮಾಡುವಂತಿಲ್ಲ. ಹಿಂದೆ ಇಂಡಿಯಾದರು ಯಾರು ಬಂದರೂ ಒಂದೇ ಎಂದು ಹೇಳಿದ್ದರು. ಈಗ ಆ ಆಟಿಟ್ಯೂಡ್ ಬದಲಾಯಿ ಸಿದ್ದಾರೆ. ನಮ್ಮವರಿಗೆ ಅವಕಾಶವಿಲ್ಲದಂತೆ ಮಾಡಬಾರದೆಂದು ಹೇಳಿದಮೇಲೆ ಅವಕಾಶ ಮಾಡಿ ದ್ದಾರೆ. ಕೆಲವು ಸಂದರ್ಭಗಳಲ್ಲಿ ಅಧಿಕಾರಿಗಳು ಅವರಿಗೆ ಬೇಕಾದವರನ್ನು ತೆಗೆದುಕೊಳ್ಳುತ್ತಿದ್ದರು. ಇದರಿಂದ ಅನ್ಯಾಯವಾಗುವುದು ಎಂದು ನಮ್ಮ ರಾಜ್ಯದಿಂದ ದೂರು ಹೋದಮೇಲೆ ಅದನ್ನು ಸರಿ ಪಡಿಸಲು ನಮ್ಮ ಜನರಿಗೆ ಅವಕಾಶ ಸಿಕ್ಕುವಂತೆ ಮಾಡಲು ಈಗ ಒಂದು ಏರ್ಪಾಡು ಮಾಡಲಾಗಿದೆ. ಹಿಂದೆ ನಮ್ಮ ಪ್ರತಿನಿಧಿಯನ್ನು ಬೋರ್ಡಿಗೆ ತೆಗೆದುಕೊಳ್ಳಲು ಒಪ್ಪಿರಲಿಲ್ಲ. ಈಗ ಒಪ್ಪಿ ದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಈಗ ರಿಸರ್ವ್ ಬ್ಯಾಂಕು, ಎಲ್.ಐ.ಸಿ. ಮುಂತಾದ ಕಡೆಗಳಲ್ಲಿ ನೇಮಕಗಳನ್ನು ಮಾಡುವಾಗ ಬ್ಯಾಕ್‌ವರ್ಡ್ ಕ್ಲಾಸ್ ಮುಂತಾದುವಕ್ಕೆ ಹುದ್ದೆಗಳನ್ನು ಇದುವರೆಗೆ ಮೀಸಲಾಗಿಡುವಂತೆ ಕಾಣಲಿಲ್ಲ. ರಿಸರ್ವೇಷನ್‌ಗೆ ಸಂಬಂಧಪಟ್ಟ ನಿಯಮಗಳನ್ನು ವಯೊಲೇಟ್

(ಶ್ರೀ ಎಚ್. ಡಿ. ದೇವೇಗೌಡ)

ಮಾಡಿರುವುದು ಗೊತ್ತಿಲ್ಲ. ಈಗ ಈ ಸಂಬಂಧವಾದ ನಿಯಮಾವಳಿ ಇಲ್ಲವೆಂದು ತಿಳಿದುಬಂದಿದೆ. ಈಗ ರಾಷ್ಟ್ರೀಕರಣ ಕೆಲವನ್ನು ಮಾಡಿದ್ದಾರೆ. ಆದುದರಿಂದ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಮಾಡಿ ಸೇಕಡ ಇಷ್ಟು ಹುದ್ದೆಗಳನ್ನು ರಿಸರ್ವ್ ಮಾಡಬೇಕೆಂದು ಸಲಹೆ ಮಾಡಲು ಸಾಧ್ಯವೇ ?

Sri D. DEVARAJ URS.—There are two aspects. The first is whether to give more encouragement and take more and more people of the region, wherever these institutions are located. The second is whether these institutions of the Central Government or institutions governed by the Central Government have such regulations, as to provide for reservation to backward classes or Scheduled Castes, as you have just now suggested. I have no idea about it. There is one thing. I think they hold examinations even for Class III employees, in respect of those governed by the Central Government rules, unlike ours. We are thinking on these lines even here. Whoever comes out of the examination successfully is selected; interviews are also there. I will bear your suggestion in mind. So far as taking local people more and more and giving accommodation to them in these institutions, he has replied to it. Regarding the other aspect which you now mentioned, whether reservation has been made for backward classes or Scheduled Classes, I think a provision must also be there, because it is a Constitutional provision. Now that there is a suggestion, we will discuss with them, communicate with the Central Government and find out to what extent it is possible to implement the suggestion which you have just now made.

ಶ್ರೀ ಟಿ. ಆರ್. ಶಾಮಣ್ಣ.—ರಿಸರ್ವ್ ಬ್ಯಾಂಕಿಗೆ ನೌಕರರನ್ನು ತೆಗೆದುಕೊಳ್ಳುವಾಗ ಮೈಸೂರಿನವರನ್ನು ತೆಗೆದುಕೊಳ್ಳುವರು ಎಂದು ಅಷ್ಯೂರೆನ್ಸ್ ಕೊಡುವಿರಾ ?

Sri AZEEZ SAIT.—I have already assured this House that there will be no recruitment. However, I will find out whether there is any possibility of recruitment.

Sri M. S. KRISHNAN.—From what the Hon. Chief Minister said, one thing arises. That is, in other States like Andhra Pradesh and Maharashtra my information is specific—instructions have been given to such undert kings like Reserve Bank that persons from the locality, persons who know the local language and have experience must be taken. It is a fact. Is it the intention of the Government of Mysore, to see that such advice could be given to the various undertakings here ?

Sri AZEEZ SAIT.—Government of India have already said that recruitment in respect of posts carrying emoluments below Rs. 500 should be made from the region. But here in the Banks, I think that applications are being called for from the competent candidates. I am assuring you that I shall take up the matter with the concerned.

Prevention of Cruelty to Animals

334. Sri K. R. SRINIVASULU NAYADU (Shanthinagar).—

Will the Minister of State for Animal Husbandry be pleased to state:—

(*a*) when did the State Co-ordinating Committee for prevention of cruelty to animals constituted as per G. O. No. AF 176 VAD 70, dated 22nd October 1970 meet last :

(*b*) the decisions taken for the implementation of the objective of the Committee ?

Sri N. CHIKKE GOWDA (Minister of State for Animal Husbandry)—

(*a*) The State Co-ordinating Committee for Prevention of Cruelty to Animals has not met so far.

(*b*) Does not arise in view of reply to clause (*a*).

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—(ಅ) ಪ್ರಶ್ನೆಗೆ ಉತ್ತರವಾಗಿ ರಾಜ್ಯದ ಪ್ರಾಣಿ ಹಿಂಸಾ ನಿರೋಧಕ ಸಮನ್ವಯ ಸಮಿತಿಯು ಈವರೆವಿಗೂ ಸಭೆಸೇರಿಲ್ಲ ಎಂದು ತಿಳಿಸಲಾಗಿದೆ. ಆ ಸಮಿತಿ ಏಕೆ ಸಭೆ ಸೇರಿಲ್ಲ ? ಅದರ ಸದಸ್ಯರು ಯಾರು ?

† Sri N. CHIKKE GOWDA.—The Committee was constituted in G.O. No. AF. 176 VAD 70 dated 22nd October 1970. The Minister of State for Animal Husbandry and Veterinary Services is the Chairman of the Committee. Before the meeting of the Committee could be convened, the President's Rule was introduced in the State and the Committee could not meet for the purpose for which it was constituted. Now that the popular Government has been installed in the State, it is proposed to convene the meeting of the Committee on the 15th of July, 1972. After the committee meets, steps to be taken for implementing the objectives for which the Committee has been constituted will be decided.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಮೂಕ ಪ್ರಾಣಿಗಳು, ಬಾಯಿಲ್ಲದಿರುವ ಪ್ರಾಣಿಗಳು ಯಾವುವು ಇವೆಯೋ ಅವುಗಳನ್ನು ಕಾಪಾಡುವ ಜವಾಬ್ದಾರಿ ಸರಕಾರದ್ದಲ್ಲವೇ ? ಆ ಸಂಬಂಧವಾಗಿ ಏನು ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಎನ್. ಚಿಕ್ಕೇಗೌಡ.—ಪ್ರಾಣಿಗಳಿಗೆ ದಯೆ ತೋರಿಸಬೇಕಾದ ಮತ್ತು ಅವುಗಳನ್ನು ಕಾಪಾಡಬೇಕಾದ ಜವಾಬ್ದಾರಿ ಸರಕಾರಕ್ಕೆ ಮಾತ್ರವಲ್ಲದೆ ಜನರಿಗೂ ಸೇರಿದೆ. ಅದರ ಬಗ್ಗೆ ಈಗಾಗಲೆ ಒಂದು ಸಮಿತಿ ಇದೆ, ಅದು ಕೆಲಸ ಮಾಡುತ್ತಿದೆ. ಅದು ತನ್ನ ವ್ಯಾಪ್ತಿಗೆ ಸಂಬಂಧಪಟ್ಟ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿದೆ. ನಾಳೆಯ ದಿವಸ 10 ಗಂಟೆಗೆ ಸಮಿತಿ ಸೇರಿ ಏನು ಸಲಹೆ ಮಾಡುವುದೋ ನೋಡಿ ಹೇಳಬೇಕು. ಕೇರಳ ಮದ್ರಾಸಿನಲ್ಲಿರುವ ಹಾಗೆ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದ್ದಾರೆ. ಅದನ್ನು ಪರಿಶೀಲಿಸುತ್ತಿದ್ದೇವೆ. ಸಂಬಂಧಪಟ್ಟ ಸಮಿತಿಯು ಸೇರಿ ಏನು ಕ್ರಮ ತೆಗೆದುಕೊಳ್ಳಬೇಕೆಂದು ಸಲಹೆ ಮಾಡಿದಮೇಲೆ ವಿವರ ಹೇಳಲು ಸಾಧ್ಯವಾಗುವುದು.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಪ್ರತಿದಿವಸವೂ ಬೆಂಗಳೂರಿಗೆ ಬರುತ್ತಾ ಇರತಕ್ಕಂಥ ಪಶುಗಳ ಹಿಂಡು ಎಷ್ಟು ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪಶುಗಳ ಬಗ್ಗೆ ಬೇರೆ ಪ್ರಶ್ನೆ ಕೇಳಿದರೆ ಅದರ ಮಾಹಿತಿ ಒದಗಿಸುತ್ತೇನೆ.

ಶ್ರೀ ಬಿ. ಎನ್. ಪಾಟೀಲ್.—ಸುಮಾರು 1½ ವರ್ಷದಿಂದಲೂ ಪಾಪ್ಯುಲರ್ ಮಿನಿಸ್ಟ್ರಿ ಇರಲಿಲ್ಲ. ಗೌರ್ನರ್ ರೂಲು ಇತ್ತು. ಈಗ ಪಾಪ್ಯುಲರ್ ಮಿನಿಸ್ಟ್ರಿ ಬಂದು ಎಷ್ಟೋ ದಿವಸಗಳಾಯ್ತು. ಇದಾಗ್ಯೂ ಕೂಡ ಒಂದು ಕಮಿಟಿ ಮೀಟಿಂಗನ್ನೂ ಕರೆದಿಲ್ಲ. ಆದುದರಿಂದ ಇದು ಹೆಚ್ಚು ನೆಸಸರಿ ಇರಲಿಲ್ಲ ಎಂದು ಬಿಟ್ಟಿದ್ದೀರಾ ಅಥವಾ ಸುಮ್ಮನೆ ಡೆಕೋರೇಟಿಂಗ್‌ಗೆ ಇಟ್ಟುಕೊಂಡಿದ್ದೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಸರ್ಕಾರ ಬಂದ ನಂತರ ಇದರ ಬಗ್ಗೆ ಶೀಘ್ರ ಕ್ರಮ ತೆಗೆದುಕೊಂಡು ಈ ಕಮಿಟಿಯನ್ನು ಸೇರಿಸುವುದಕ್ಕೆ ತೀರ್ಮಾನ ಮಾಡಿದ್ದೇವೆ. ಅದರ ಬಗ್ಗೆ ಈಗಾಗಲೇ ಹೇಳಿದ್ದೇನೆ ನಾಳೆ 10 ಗಂಟೆಗೆ ಸೇರುತ್ತದೆ ಎಂದು. ಇದರ ಬಗ್ಗೆ ಅನೇಕ ಹಿತಚಿಂತಕರು ಹೇಳಿದ್ದಾರೆ. ನಾಳೆ ಸಮಿತಿ ಸೇರಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಪ್ರಿವೆನ್‌ಷನ್ ಆಫ್ ಕ್ರೂಯಲ್ಟಿ ಟು ಅನಿಮಲ್ಸ್ ಆಕ್ಟ್ 1960 ಅದು ನಮ್ಮ ದೇಶದಲ್ಲಿ ಇದೆ ಎಂದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದರ ಬಗ್ಗೆ ಸಪರೇಟ್ ಕೊಶ್ಚನ್ ಕೇಳಿದರೆ ಹೇಳುತ್ತೇನೆ.

MADAM SPEAKER.—Now Question Hour is over.

QUESTION FOR ANSWERS ON THE DAY (BUT NOT TAKEN UP)

Sujaloor pickup in Malavalli Taluk

Will the Minister for Public Works and Electricity be pleased to state:—

(*a*) whether the Sujaloor pickup in Malavalli Taluk has been constructed at a cost of more than Rs. 4 lakhs and was expected to irrigate about 800 acres ;

(*b*) the area now irrigating under this pickup;

(*c*) whether the pickup was proposed to be constructed only after Sujaloor tank was restored ;

(*d*) if so, the reasons for not restoring the Sujaloor tank so far?

SRI H. M. CHANNABASAPPA (Minister for Public Works and Electricity).—

(*a*) An estimate for construction of a pickup across breached tank valley near Sujaloor was sanctioned for Rs. 3.45 lakhs to benefit an area of 685 acres. The work has been completed.

(*b*) 485 acres.

(*c*) No. There is no proposal to restore Sujaloor tank.

(*d*) the restoration would involve submersion of 20 acres of wet and 140 acres of dry land. Also there is seepage from Turaganur Branch Eextension atchkat to Sujaloor pickup, which is sufficint for irrigating the lands under it.

Buses Running from Chickballapur

273. Sri C. V. VENKATARAYAPPA (Chickballapur).—

Will the Minister for Labour be pleased to state:—

(*a*) the number of buses as on 1st of April, 1970, 1971 and 1972 starting from Chickballapur bus stand with details of routes and timings ;

(*b*) the average daily passengers carried in each bus ;

(*c*) the number of routes missed ;

(i) On account of breakdown ;

(ii) for want of drivers and conductors during last 4 months *viz.*, January, February, March and April, 1972 ;

(*d*) the average collection per day during 1971-72 from each bus ;

(*e*) the average earnings per K. M. on each route starting from Chickballapur ;

(*f*) whether they have finalised any plans to improve the transport facilities at Chickballapur ?

Sri AZEEZ SAIT (Minister for Labour).—

(*a*) Buses starting from Chickballapur Stand as on—

1-4-1970	1-4-1971	1-4-1972
64	61	70

(*b*)

1969-70	1970-71	1971-72
257	296	333.

(*c*) The number of trips cancelled are indicated below :

(i) On account of Breakdown

1971

Jan.	Feb.	March	April
6	2	—	2

(ii) For want of Drivers and Conductors

1971

Jan.	Feb.	March	April
166	152	27	144

(SRI AZEEZ SAIT)

(*d*) Rs. 270-58 Ps. per day per bus.

(*e*) 114.1 Paise per K.M.

(*f*) it is proposed to augment trips on the following routes:—

		No. of Trips	Type of service
1.	Bangalore Chickballapur *via* Yelahanka and Devanahally.	1½ round trips	Ordinary
2.	Chickballapur - Dibburhalli *via* Dibbur and Ajjakadirenahally	1 round trip	do
3.	Chickballapur–Sidlaghatta *via* Jatavara	1 round trip	do
4.	Chickballapur–Vijayapura *via* Siddlahatta	2 round trips	do
5.	Chickballapur — Venkatagirikota *via* Siddlaghatta, Chintamani, Srinivasapur, Yeldur, Mulbagal, Tayalur.	2 round trips	do
6.	Chickballapur–Siddlaghatta *via* Malur Chadlapur.	1 round trip	do
7.	Siddlaghatta—Cheemangala	1 round trip	do

Declaring Bellary as Backward District

275. **Sri H. LINGA REDDY** (Kurugodu).—

Will the Chief Minister be pleased to state :—

(*a*) the number of districts declared as backward in the State ;

(*b*) whether Bellary District has been declared as backard ;

(*c*) whether Government has received representations from the District Development Council and Chamber of Commerce, Bellary and others to declare Bellary as a backward district ;

(*d*) if so, the steps taken by the Government in that regard ?

Sri D. DEVARAJ URS (Chief Minister).—

(*a*) On the basis of weighted mean of relevant economic indicators, Bidar District has been recognised as the most backward district.

In addition, the Planning Commission has informed the State Government that the following districts are industrially backward for giving financial incentives to entrepreneurs starting industries in these districts:

1 Belgaum
2 Bidar
3 Bijapur
4 Dharwar
5 Gulbarga
6 Hassan
7 Mysore
8 North Kanara
9 Raichur
10 South Kanara
11 Tumkur

Among them, Raichur District has been recognised by the Central Government as industrially most backward, eligible for 10 per cent Central grant or subsidy for new Industries started whose capital does not exceed Rs. 50 lakhs.

(*b*) Does not arise in view of reply to question (*a*).

(*c*) No.

(*d*) Does not arise in view of reply to question (*c*).

CALLING ATTENTION TO MATTERS OF URGENT PUBLIC IMPORTANCE

re: Scarcity conditions in Gulbarga District.

Sri D. B. KALMANKAR (Afzalpur).—I call the attention of the Hon'ble Minister for Revenue to the acute scarcity conditions prevailing in Gulbargr District in Alland and Afzalpur Taluks.

Sri N. HUTCHAMASTHY GOWDA (Minister for Revenue).—In reply to the notice by Sriyuths D. B. Kalmankar and A. V. Patil, I state as follows :—

The rainfall figures recorded during the months of May and June 1972 in Aland and Afzalpur taluks are as under.

Sl. No.	Name of the taluk	Rainfall recorded during May 1972.	Rainfall recorded up to 25th June 1972.
1	Aland	nil (In MM)	69.3
2	Afzalpur	10.8	42.3

(SRI N. HUTCHAMASTHY GOWDA)

Relief Works :—From the rainfall figures mentioned it is seen that while rainfall during May 1972 in both the taluks was inadequate, rainfall in June 1972 (up to 25th) has been beneficial for agricultural operations. However, untimely rains during last year contributed to the failure of crops, with the result that the average yield ranged between 4 to 6 annas. Therefore, the relief works taken up last year were continued to provide employment to the landless and the Agricultural labourers. The executive agencies have been directed to step up the relief works and to utilise the allotments made to them under "64 Famine" before the end of June 1972. Scarcity Relief works are in progress in the two taluks of Aland and Afzalpur, providing employment opportunities to the Agricultural labourers and landless poor persons.

Allotments of Rs. 30,000 and Rs. 20,000 have been made to Aland and Afzalpur taluks, respectively, under Crash Scheme Rural Employment (fresh works) for creating employment opportunity to the poor agriculturists and landless labourers. Details of allotment and expenditure under 64 Famine Relief-b-relief works in Afzalpur and Aland taluks are as follows :

	Allotment	*Expenditure*
1. Afzalpur	Rs. 50,000-00	Rs 8,250-00
2. Aland	Rs. 85,000-00	Rs. 23,100-00 (in addition, an amount of Rs 7,500 has been spent out of Taluk Development Boards funds)

Block Davelopment Officers have been instructed to take up construction of Irrigation wells and deepening of drinking water wells. The Executive Engineer, P.W.D., Gulbarga, has reported that 8 incomplete works have been taken up for completion with an estimated cost of Rs. 30,000, in Afzalpur taluk. He has reported that 6 incomplete communication works have been taken up for completion in Aland taluk. In addition, Soil Conservation work also is in progress in both the taluks.

Drinking Water :—In view of the recent rainfall, the question of scarcity of drinking water would have been solved by now. However, 14 bore wells in Afzalpur taluk and 12 Bore wells in Alland taluk have been sanctioned and the work of sinking these wells is in progress. In addition, many wells are proposed to be deepened in the villages where scarcity of drinking water is felt. The deepening of existing drinking water wells has been taken up out of "64 Famine" funds. The Block Development Officers were instructed to take up temporary wells in Nallas or tank beds, where there was acute scarcity of drinking water.

Fodder :—It is reported that scarcity of fodder is felt. The following funds have been allotted to Aland and Afzalpur taluks for granting Takavi loans for purchase of fodder, if scarcity of fodder is felt in any area of the taluks.

Sl No.	Head of account	Name of taluk	
		Aland	Afzalpur
1	Land Improvement Loans	Rs. 8,000	Rs. 8,000
2	C. Takavi Loans	Rs. 22,000	Rs. 22,000
		Rs. 30,000	Rs. 30,000

Postponement of recovery of Government dues :

The Deputy Commissioner, Gulbarga has suspended fully the collections of land revenue in respect of 90 villages in Afzalpur taluk and 45 villages in Aland taluk on 8-5-1972.

Sri D. B. KALMANKAR.—May I know when this allotment of Rs. 50,000 and 75,000 were made, on what date and what is the reason that only small fragment of these amounts have been spent so far ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ವಿವರ ನನ್ನಲ್ಲಿಲ್ಲ.

ಶ್ರೀ ಎ. ವಿ. ಪಾಟೀಲ್.—ಸ್ವಾಮಿ, ಸ್ಕೇರ್ಸಿಟಿ ರಿಲೀಫ್ ವರ್ಕ್ಸ್ ಪ್ರೋಗ್ರಾಂ ಏನು ಇದೆಯೋ ಅದನ್ನು ಮಳೆ ಬರುವವರೆಗೂ ಮುಂದುವರೆಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಳೆ ಬರುವವರೆಗೂ ಕೆಲಸ ಮಾಡಬೇಕು ಎನ್ನುವ ಅವಶ್ಯಕತೆ ಕಂಡುಬಂದರೆ ಮುಂದುವರೆಸಿಕೊಂಡು ಹೋಗುತ್ತೇವೆ.

Sri D. B. KALMANKAR.—May I know how many people in each of these taluks are employed utilising the allotments made under "64 Famine" works undertaken by the Government ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಎಷ್ಟು ಜನ ಕೆಲಸ ಮಾಡುತ್ತಾರೆ ಎನ್ನುವ ವಿವರ ನನ್ನಲ್ಲಿಲ್ಲ.

Sri V. N. PATIL —Sir, admittedly you have spent on 8,000 people under famine relief works so far; even if you pay at the rate of 75 pise per head, you would not have employed more than 10,000. Can it be called famine relief work ? Unless the next crop comes, if you continue famine relief work, it cannot be called famine relief work. Can the Hon'ble Minister assure this House that the famine relief works will be continued till the next crop comes ?

4-00 P.M.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಎರಡನೆಯ ಭಾಗಕ್ಕೆ ನಾನಾಗಲೇ ಉತ್ತರ ಕೊಟ್ಟಿದ್ದೇನೆ. ಮಳೆ ಬರುವವರೆಗೆ ಕೆಲಸ ಮುಂದುವರೆಯುತ್ತದೆ. ಬೆಳೆ ಬರುವವರೆಗೂ ಉಳಿದ ವಿಧಾನದಲ್ಲ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಅವರಿಗೆ ಕೆಲಸ ಸಿಕ್ಕತಕ್ಕ ಅವಕಾಶವಿದೆ. ಅದಕ್ಕೆ ಫ್ಯಾಮಿನ್ ರಿಲೀಫ್ ಒಂದರಲ್ಲಿಯೇ ಒದಗಿಸ ಬೇಕಾಗಿಲ್ಲ. ಪಬ್ಲಿಕ್ ವರ್ಕ್ ಇಲಾಖೆಯು ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಹಿಂದೆ ಹಾಕಿದ್ದ ಬ್ಯಾನ್ ತೆಗೆದಿರುವುದರಿಂದ ಅವರಲ್ಲಿಯೂ ಅಷ್ಟು ಕೆಲಸ ದೊರೆಯುತ್ತದೆ. ಖರ್ಚಾಗಿರುವ ದುಡ್ಡಿನಲ್ಲಿ ಎಷ್ಟು ಜನ ಕೆಲಸ ಮಾಡಿದ್ದಾರೆಂದು ಅವರಿಗೇ ಗೊತ್ತಾಗುತ್ತದೆ. ಒಂದು ದಿನಕ್ಕೆ ಒಬ್ಬ ಆಳಿಗೆ ಒಂದು ರೂಪಾಯಿ 30 ಪೈಸೆಯಂತೆ ಲೆಕ್ಕ ಹಾಕಿಕೊಳ್ಳಬಹುದು.

Sri D. B. KALMANKAR.—In view of the fact that there is no sufficient rainfall and in the majority of villages in these two taluks, no khariff sowing has taken place, may I request the Government to intensify these works in both these Taluks? The amount spent for the purpose is meagre. I had suggested already that the tank work in Afzalpur Taluk and the tank work of Salgaon which was taken up as a budgeted work in Aland Taluk, may be intensified.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಹೆಚ್ಚು ಹಣ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಯಾವ ಯಾವ ಕೆರೆಗಳಿಗೆ ಅಂದಾಜು ಮಂಜೂರಾಗಿ, ಅವರ ಬಗ್ಗೆ ವಿವರಗಳೆಲ್ಲ ಸರ್ಕಾರಕ್ಕೆ ಬಂದಿವೆ ಅಂಥ ಕೆರೆ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಒಂದು ಕಾಗದ ಬರೆದು ಕಳುಹಿಸಿರುವುದರಿಂದ ಶ್ರೀ ಕೋಣಂದೂರು ಲಿಂಗಪ್ಪನವರ ಗಮನ ಸೆಳೆಯುವ ಸೂಚನೆಯನ್ನು ಆಮೇಲೆ ತೆಗೆದುಕೊಳ್ಳುತ್ತೇನೆ.

Change in the Sitting hour of the House.

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ನಾನು ಸಭಾಧ್ಯಕ್ಷಿಣಿಯವರಿಗೆ ಸಲ್ಲತಕ್ಕ ಗೌರವವನ್ನು ಸಲ್ಲಿಸುತ್ತ ನಮ್ಮ ಸಭೆಯ ಕಾರ್ಯಕಲಾಪಗಳು ಯಾರಿಗೂ ಅನಾನುಕೂಲವಾಗದ ಹಾಗೆ ನಡೆಯುವ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ಸೂಚಿಸುತ್ತೇನೆ. ಸೃಷ್ಟಿಕರ್ತರಾದ ಬ್ರಹ್ಮ, ವಿಷ್ಣು, ಮಹೇಶ್ವರರಂತೆ ಸಭಾನಾಯಕರು, ವಿರೋಧ ಪಕ್ಷದ ನಾಯಕರು ಮತ್ತು ತಾವು ಈ ಸಭೆಯನ್ನು ಆಳುತ್ತಿದ್ದೀರಿ. ಈ ಹೊತ್ತು ಮಧ್ಯಾಹ್ನ ಎರಡು ಗಂಟೆಗೆ ಸಭೆ ಇದೆ ಎಂದು ತಿಳಿಸ ಲಾಗಿತ್ತು. ಅದರಂತೆ ಕೆಲವು ಸದಸ್ಯರು ಊಟಕ್ಕೆ ಕೂಡ ಹೋಗಲಿಲ್ಲ, ಕೆಲವರಿಗೆ ಊಟ ಸಿಕ್ಕಲಿಲ್ಲ. ಮಂತ್ರಿಗಳು ಕೂಡ ಎರಡು ಗಂಟೆಗೆ ಬಂದು ಕೂತಿದ್ದರು, ಅನೇಕ ಪತ್ರಿಕಾ ಪ್ರತಿನಿಧಿಗಳೂ ಊಟಕ್ಕೆ ಹೋಗದೆ ಅವರಿಗೂ ತೊಂದರೆಯಾಯಿತು. ಮುಂಚೆಯೇ ಮೂರು ಗಂಟೆಗೆ ಸಭೆ ಸೇರುತ್ತದೆ ಎಂದು ತಿಳಿಸಿದ್ದರೆ ಅನುಕೂಲವಾಗುತ್ತಿತ್ತು. ಆದುದರಿಂದ ದಯವಿಟ್ಟು ಯಾರಿಗೂ ತೊಂದರೆ ಯಾಗದ ಹಾಗೆ ಸಹಾಯ ಮಾಡಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯರು ಹೆಚ್ಚಾಗಿ ಇಲ್ಲಿರುವುದೇ ಇಲ್ಲ. ಅದೇ ನಮಗೆ ಬಂದಿರುವ ಕಷ್ಟ. ಅದಕ್ಕೋಸ್ಕರವೇ ಸಭೆಯಲ್ಲಿ ಏನು ನಡೆಯುತ್ತದೆ ಎನ್ನುವುದು ಅವರಿಗೆ ಗೊತ್ತಾಗುವುದಿಲ್ಲ.

Taking up a certain Call attention Notice.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಲೋಕೋಪಯೋಗಿ ಮಂತ್ರಿಗಳ ಗಮನವನ್ನು ಸೆಳೆಯುವ ಒಂದು ಸೂಚನೆಯನ್ನು ತಮಗೆ ಬೆಳಿಗ್ಗೆ ಕಳುಹಿಸಿದ್ದೆ. ಅದನ್ನು ಯಾವಾಗ ತೆಗೆದು ಕೊಳ್ಳುತ್ತೀರಿ ?

ಅಧ್ಯಕ್ಷರು.—ಬೆಳಿಗ್ಗೆ ಕಳುಹಿಸಿದ್ದರೆ ಈಗಲೇ ಬರುವುದಕ್ಕೆ ಹೇಗೆ ಸಾಧ್ಯ ? ನನ್ನ ಹತ್ತಿರ ಅನೇಕ ಗಮನ ಸೆಳೆಯುವ ಸೂಚನೆಗಳು ಬಂದಿರುವುದು ಇದೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಸಭಾಪತಿಗಳೇ, ಈ ಹೊತ್ತಿನ ಪತ್ರಿಕೆಯಲ್ಲಿ ಶಾಸಕರ ಭವನದಲ್ಲಿ ಇಸ್ಪೀಟು ಸಾಕು, ಗಮನ ಬೇಕು ಎಂದು ಹೇಳಿರುವುದಾಗಿ ದೊಡ್ಡದಾಗಿ ಬಂದಿವೆ. ನಾವು ಯಾರೂ ಇಸ್ಪೀಟು ಆಡುವವರಲ್ಲ, ಬೀಡಿ ಸೇದುವವರಲ್ಲ. ಯಾರನ್ನು ಕುರಿತು ಹೇಳಿದರು ಏನು ಎನ್ನುವುದನ್ನು ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ತಿಳಿಸಬೇಕು ಎಂದು ಕೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೇ, ಇವರು ಇಸ್ಪೀಟು ಆಡುವವರಲ್ಲ. ಬೀಡಿ ಸೇದುವವರಲ್ಲ, ಸಿಗರೇಟು ಮುಟ್ಟುವವರಲ್ಲ, ಸಿನಿಮಾ ನೋಡುವುದಕ್ಕೆ ಹೋಗುವವರಲ್ಲ....

ಶ್ರೀ ವಾಟಾಳ್ ನಾಗರಾಜ್.—ಸಿನಿಮಾ ನೋಡುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ನಮ್ಮ ದೇಶದಲ್ಲಿ ನಾನಾ ತರಹ ಆಟಗಳಿವೆ. ಈ ಆಟ ಆಡದೆ ಇದ್ದರೆ ಇನ್ನು ಯಾವ ಆಟವಾಡುತ್ತಾರೋ ನನಗೇನು ಗೊತ್ತು ಸ್ವಾಮಿ (ನಗು).

ಅಧ್ಯಕ್ಷರು.—ಇಸ್ಪೀಟು ಆಟ ಆಡುವುದು ಪಾಪ ಎಂದು ನನಗೆ ಗೊತ್ತಾಗಿಲ್ಲ. ಏನೇ ಇರಲಿ ಈ ವಿಷಯವನ್ನು ಇಲ್ಲಿಗೆ ಸಾಕು ಮಾಡೋಣ.

PAPERS LAID ON THE TABLE.

SRI N HUTCHAMASTHY GOWDA (Minister for Revenue).—Madam, I beg to lay :

(1) Notification No. RD 173 MVS 68 dated 25th March, 1970.

The Mysore General Services (Revenue Subordinate Branch) Village Accountants (Recruitment) Rules, 1970.

(2) Nocification No. GSR 133 dated 10th May 1971.

The Mysore General Services (Revenue Subordinate Branch) Village Accountants (Recruitment) (Second Amendment) Rules, 1971.

Under Section 198 of the Mysore Land Revenue Act, 1964.

MADAM SPEAKER.—The notifications are laid on the Toble of the House.

REVISED BUDGET ESTIMATES FOR 1972-73 DEMANDS FOR GRANTS

Demand Nos. 1, 5, 34, 35, 36, 40, 41, 52 and 54.

SRI M. Y. GHORPADE (Minister for Finance) —Madam, on the recommendation of the Governor, I beg to move :

"That a sum not exceeding Rs. 10,98,000 inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 1 "Taxes on Income Other than Corporation Tax'."

MADAM SPEAKER.—Motion moved :

> "That a sum not exceeding Rs. 10,98,000 inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 1 "Taxes on Income other than Corporation Tax'."

Demand Nos. 5, 34, 35, 36, 40, 41, 52 and 54 are also deemed to have been moved and all the Demands are before the House for discussion.

† ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಧ್ಯಕ್ಷಿಣಿಯವರೇ, ನಮ್ಮ ಮುಂದೆ ಇಟ್ಟಿರತಕ್ಕ 1, 5, 34, 35, 36, 40, 41, 52 ಮತ್ತು 54 ಈ ಬೇಡಿಕೆಗಳ ಮೇಲೆ ಚರ್ಚೆ ಮಾಡುವ ಕಾಲದಲ್ಲಿ ನಾನು ಪ್ರಥಮವಾಗಿ ಸರ್ಕಾರಕ್ಕೆ ಒಂದು ಸೂಚನೆಯನ್ನು ಮಾಡುತ್ತಿದ್ದೇನೆ. ಮಾನ್ಯ ಮಂತ್ರಿಗಳು ಈ ಇಲಾಖೆಯನ್ನು ವಹಿಸಿಕೊಂಡಮೇಲೆ ಈ ದಿಸೆಯಲ್ಲಿ ಸ್ವಲ್ಪ ಗಮನಕೊಟ್ಟಿದ್ದಾರೆಂದು ತಿಳಿದುಕೊಂಡಿದ್ದೇನೆ. ಬಹುಶಃ ಸೇಲ್ಸ್ ಟ್ಯಾಕ್ಸ್ ಈ ರಾಜ್ಯಕ್ಕೆ ಹೆಚ್ಚಾಗಿ ಮೊದಲನೆ ಶ್ರೇಣಿಯ ರೆವೆನ್ಯೂ ಕೊಡುತ್ತದೆ ಎನ್ನುವುದು ನಮಗೆಲ್ಲರಿಗೂ ಗೊತ್ತಿರತಕ್ಕ ವಿಚಾರ. ಮಾನ್ಯ ಮಂತ್ರಿಗಳು ಮತ್ತಷ್ಟು ಬಿಗಿಯಾದ ಕ್ರಮವನ್ನು ಅನುಸರಿಸುವುದಾದರೆ ಬಹುಶಃ ಆ ದಿಸೆಯಲ್ಲಿ ಅವರು ಕಾಲು ಇಟ್ಟಿರಬಹುದು—ಇನ್ನೂ ಹತ್ತು ಕೋಟಿ ರೂಪಾಯಿ ಹೆಚ್ಚಾಗಿ, ಇಂದು ಹಾಕಿರತಕ್ಕ ಟ್ಯಾಕ್ಸ್‌ಗಳಿಂದಲೇ ಪಡೆಯುವುದಕ್ಕೆ ಅವಕಾಶವಾಗುತ್ತದೆ ಎಂದು ನನ್ನ ಅಭಿಪ್ರಾಯ.

ಈವೊತ್ತು ನಮ್ಮ ರಾಜ್ಯದಲ್ಲಿ ಕನ್ಸೂಮರ್ಸ್ ಇಂದ, ಸಾಮಾನ್ಯ ಪ್ರಜೆಯಿಂದ ವಸೂಲು ಮಾಡತಕ್ಕ ಟ್ಯಾಕ್ಸ್ ಏನು ಇದೆ, ಅದನ್ನು ವಸೂಲು ಮಾಡತಕ್ಕ ಮಿಡಲ್‌ಮ್ಯಾನ್ ಏನು ಇದ್ದಾರೆ ಅವರು ಅದರ ಒಂದು ಲಾಭವನ್ನು ಪಡೆಯುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ. ಏಕೆಂದರೆ, ಅವರು ಅವರ ಕಿಸೆಯಿಂದ ಕೊಡುತ್ತಿಲ್ಲ, ಕೊಡತಕ್ಕವರು ಕನ್ಸೂಮರ್ಸ್. ರಾಜ್ಯದ ಪ್ರಜೆಗಳು ಕೊಡತಕ್ಕ ಟ್ಯಾಕ್ಸನ್ನು ವಸೂಲು ಮಾಡತಕ್ಕ ಜನ ಏನಿದ್ದಾರೆ, ಇವರು ಸರ್ಕಾರಕ್ಕೆ ಧೋಕಾ ಮಾಡತಕ್ಕ ಪ್ರಯತ್ನ ಮಾಡುತ್ತಿದ್ದಾರೆ. ಅದರಿಂದ ದೇಶದಲ್ಲಿ ಕಪ್ಪು ಹಣ ಜಾಸ್ತಿಯಾಗುತ್ತಿದೆ, ಎನ್ನುವ ಒಂದು ವಾದ ಇದೆ. ಇದರ ಕಡೆಗೆ ಬಿಗಿ ಮುಷ್ಟಿ ಇಟ್ಟುಕೊಳ್ಳಬೇಕು ಎಂದು ಹೇಳುತ್ತೇನೆ. ಲೋಕೋಪಯೋಗಿ ಇಲಾಖೆಯಲ್ಲಿ ಬಹಳ ಅಧಿಕಾರಿಗಳು ಲಂಚ ತೆಗೆದುಕೊಳ್ಳುವವರು ಇದ್ದಾರೆ ಎನ್ನುವ ವಾದ ಇದೆ. ಆದರೆ ಟ್ಯಾಕ್ಸೇಷನ್ ಡಿಪಾರ್ಟ್‌ಮೆಂಟಿನಲ್ಲಿ ಲಂಚ ತೆಗೆದುಕೊಳ್ಳುವವರು ಕಡಿಮೆ ಇದ್ದಾರೆ ಎಂದು ಒಪ್ಪಿಕೊಳ್ಳಲು ನಾನು ತಯಾರಿಲ್ಲ. ಅಧಿಕಾರಿಗಳಲ್ಲಿ ಒಳ್ಳೆಯವರು ಇರಬಹುದು, ಬಹುತೇಕವಾಗಿ ಹೇಳುವುದಾದರೆ, ಲಂಚದ ಅಪಾದನೆ ಹೊಂದಿರತಕ್ಕ ಇಲಾಖೆಯ ಪೈಕಿ ಇದು ಒಂದಾಗಿದೆ. ಆದ್ದರಿಂದ ಬಿಗಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಬೆಂಗಳೂರಿನಲ್ಲಿ ಬಹಳ ಜನ ಅಧಿಕಾರಿಗಳು ಕ್ಲಾಸ್—1 ಕ್ಲಾಸ್—2, ಅಥವಾ ಗೆಜೆಟೆಡ್ ಪೋಸ್ಟ್‌ನಲ್ಲಿರಕ್ಕವರು 8—10 ವರ್ಷಗಳಿಂದ ಇಲ್ಲಿ ಕಂಬ ಸುತ್ತುವ ಕೆಲಸಮಾಡಿ ಸರ್ಕಾರದ ಪ್ರಭಾವವನ್ನು ಉಪಯೋಗ ಮಾಡಿಕೊಂಡು ಅವರು ಇಲಾಖೆಯ ಉತ್ಪನ್ನಕ್ಕೆ ಧಕ್ಕೆ ಉಂಟುಮಾಡುವ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಎಂದು ಕೇಳಿದ್ದೇನೆ. ಇಂಥ ಒಂದು ಅಧಿಕಾರಿಗಳು ಬಹಳ ವರ್ಷಗಳಿಂದ ಸ್ಕ್ವಾಡ್‌ನಲ್ಲಿ ಮತ್ತು ಚೆಕ್‌ಪೋಸ್ಟ್‌ನಲ್ಲಿ ಇರುತ್ತಾರೆ, ಇಂಥವರನ್ನು ನೀವು ಹೊರಗೆ ಹಾಕುವ ಪ್ರಯತ್ನಮಾಡಿ, ಇಲಾಖೆಯ ರಿಸೋರ್ಸಸ್ ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇದರ ಜೊತೆಗೆ ಟ್ಯಾಕ್ಸ್ ಇವೇಡ್ ಮಾಡುವವರನ್ನು ಹಿಡಿದಂಥ ಅಧಿಕಾರಿಗಳಿಗೆ ಒಂದು ಇನ್‌ಸೆಂಟೀವ್ ಕೊಡತಕ್ಕ ಪದ್ಧತಿ ತಂದರೆ ಬಹುಶಃ ಒಳ್ಳೆಯ ಅಧಿಕಾರಿಗಳು ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಸಹಾಯಕವಾಗಬಹುದು. ಗವರ್ನ್‌ಮೆಂಟ್ ಆಫ್ ಇಂಡಿಯಾದಲ್ಲಿ ಈ ಪದ್ಧತಿಯನ್ನು ಎಕ್ಸೈಜ್ ಡಿಪಾರ್ಟ್‌ಮೆಂಟಿನಲ್ಲಿ ಇಟ್ಟುಕೊಂಡಿದ್ದಾರೆಂದು ಕೇಳಿದ್ದೇನೆ. ಇದರಿಂದ ನಮ್ಮ ಬೊಕ್ಕಸಕ್ಕೆ ಧೋಕಾ ಮಾಡುವ ಅಧಿಕಾರಿಗಳು ಹೋಗಿ ಸರ್ಕಾರಕ್ಕೆ ಹೆಚ್ಚಿನ ಆದಾಯ ಬರುವಂತಾಗುತ್ತದೆ. ಆದ್ದರಿಂದ ಇಂಥ ಅಧಿಕಾರಿಗಳಿಗೆ ಒಂದು ಇವೇಡ್ ಮಾಡಿದಂಥ ಹಣದ ಒಂದೂವರೆ ಪರ್ಸೆಂಟ್ ಏನಾದರೂ ಒಂದು ತರಹ ಇನ್‌ಸೆಂಟೀವ್ ಕೊಡುವ ಹೊಸ ಪದ್ಧತಿ ಜಾರಿಗೆ ತಂದರೆ, ತನ್ಮೂಲಕ ಸರ್ಕಾರಕ್ಕೆ ಹೆಚ್ಚು

ರೆವಿನ್ಯೂ ಗಳಿಸುವುದಕ್ಕೆ ಸಹಕಾರಿ ಆಗುತ್ತದೆ. ಈ ದೃಷ್ಟಿಯಿಂದ ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈವೊತ್ತು ಸೇಲ್ಸ್ ಟ್ಯಾಕ್ಸ್ ಆಕ್ಟ್ ಸೆಕ್ಷನ್—6ರ ಪ್ರಕಾರ ಲೆವಿ ಆಫ್ ಪರ್ಚೇಸ್ ಟಾಕ್ಸ್ ಏನು ಇದೆ, ಇದನ್ನು ಕನ್‌ಸ್ಯೈನ್‌ಮೆಂಟ್ ಗೂಡ್ಸ್‌ಮೇಲೆ ಹಾಕುವುದಕ್ಕೆ ಅವಕಾಶ ಮಾಡಿದ್ದೀರಿ. ಇದರಿಂದ ಕೆಲವು ವರ್ತಕರಿಗೆ ಬಹಳ ತೊಂದರೆಯಾಗಿದೆ. ಉದಾಹರಣೆಗೆ, ಇವತ್ತು ರೈಸ್ ಮಿಲ್‌ಗೆ ಹಲ್ ಮಾಡುವುದಕ್ಕೆ ಭತ್ತ ತರುತ್ತಾರೆ. ಭತ್ತದ ಮೇಲೆ ಒಂದೂವರೆ ಪರ್ಸೆಂಟ್ ಪರ್ಚೇಸ್ ಟ್ಯಾಕ್ಸ್ ಕೊಡಬೇಕಾಗುತ್ತದೆ. ಪ್ಯಾಡಿ ಹಲ್ ಮಾಡಿದಮೇಲೆ ರೈಸ್ ಟ್ಯಾಕ್ಸ್ ಕೊಡಬೇಕಾಗುತ್ತದೆ. (ಪರ್ಚೇಸ್ ಟ್ಯಾಕ್ಸ್ ಅನ್ನು) ಆರ್ಟಿಕಲ್ಸ್—ಗೂಡ್ಸ್, ಕನ್‌ಸ್ಯೈನ್‌ಮೆಂಟ್ ಮಾಡುವುದರ ಮೂಲ ಉದ್ದೇಶ, ಟ್ಯಾಕ್ಸ್ ಹಾಕುವುದು. ಈ ವ್ಯಾಪ್ತಿಯನ್ನು ಹಲವಾರು ಕಡೆಗೆ ತೆಗೆದುಕೊಂಡು ಹೋಗತಕ್ಕ ಪ್ರಯತ್ನ ಮಾಡಿದ್ದಾರೆ. ಇಂಟರ್‌ಪ್ರಿಟೇಷನ್ ಮಾಡುವಾಗ ಅಧಿಕಾರಿಗಳು ನಾನು ಹೇಳಿದ ಹಾಗೆ, ಮಿಲ್ಲಿಗೆ ಭತ್ತ ಬಂದರೆ, ಅದರಮೇಲೆ ಪರ್ಚೇಸ್ ಟ್ಯಾಕ್ಸ್, ಅಕ್ಕಿ ಮಾಡಿದ ನಂತರ, ಸೇಲ್ಸ್ ಟ್ಯಾಕ್ಸ್ ಹಾಕುತ್ತಾರೆ. ಇದು ಸರಿಯಾದುದು ಅಲ್ಲ. ಇದರ ಬಗ್ಗೆ ಸರ್ಕಾರ ಸ್ವಲ್ಪ ಯೋಚನೆ ಮಾಡಬೇಕು. ಕೆಲವು ಮ್ಯಾನುಫ್ಯಾಕ್ಚರ್ಡ್ ಗೂಡ್ಸ್‌ಗಳ ಮೇಲೆ ಹೀಗೆ ಆಗುತ್ತದೆ. ಉದಾಹರಣೆಗೆ, ಹಳ್ಳಿಗಳ ಕಡೆ ವೆಸೆಲ್ಸ್ ರಿಪೇರಿ ಮಾಡುವುದಕ್ಕೆ ಸಾಧ್ಯವಿಲ್ಲದೆ ಇರುವಾಗ ಸೇಲ್ ಮಾಡುತ್ತಾರೆ. ಅದನ್ನು ತೆಗೆದುಕೊಂಡು ಹೋಗಿ ಪುನಃ ವೆಸಲ್ ಮಾಡುತ್ತಾರೆ. ಡ್ಯಾಮೇಜ್ ಆಗಿರುವ ರಾ ಮೆಟೀರಿಯಲ್ಸ್ ಆದರೂ ಪರ್ಚೇಸ್ ಟ್ಯಾಕ್ಸ್ ಕೊಡಬೇಕು. ಹೀಗೆ ಪರ್ಚೇಸ್ ಟ್ಯಾಕ್ಸ್ ಅನ್ನು ಹಾಕತಕ್ಕ ಉದ್ದೇಶ ಏನು ಇದೆ, ಅದು ತದ್ವಿರುದ್ಧವಾಗಿದೆ ಎಂದು ನಾನು ಕೇಳಿದ್ದೇನೆ. ಒಂದು ವೇಳೆ ನಿಜವಾಗಿ ಸರ್ಕಾರದವರು ಇದನ್ನು ತಪ್ಪು ಎಂದು ತಿಳಿದುಕೊಂಡರೆ, ಸ್ಯೂಟಬಲ್ ಅಮೆಂಡ್‌ಮೆಂಟ್ ತರತಕ್ಕ ಪ್ರಯತ್ನ ಮಾಡಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ಸೇಲ್ಸ್ ಟ್ಯಾಕ್ಸ್ ಅನ್ನು, ಸಣ್ಣ ರೈತರ ಕಡೆ ತೆಗೆದುಕೊಂಡಾಗ ಹಾಕುವುದಕ್ಕೆ ಆಗುವುದಿಲ್ಲ. ಪರ್ಚೇಸ್ ಟ್ಯಾಕ್ಸ್ ಹಾಕುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಕೊಂಡುಕೊಳ್ಳತಕ್ಕವರಿಗೆ ಒಂದುಕಡೆ ರೈಸ್ ಮೇಲೆ ಹಾಕುವ ಸೇಲ್ಸ್ ಟ್ಯಾಕ್ಸ್ ಅನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇದು ಪ್ಯಾಡಿ ಮೇಲೂ ಬೀಳುತ್ತದೆ. ಅದನ್ನು ತಾವು ಯೋಚನೆ ಮಾಡಿ.

ಇನ್ನು 25,000 ರೂಪಾಯಿಗಳಿಗೆ ಟ್ಯಾಕ್ಸ್ ಎಕ್ಸೆಂಪ್‌ಷನ್ ಕೊಟ್ಟಿದ್ದೀರಿ. ಸಣ್ಣ ಹೋಟೆಲ್ ಇಟ್ಟುಕೊಂಡಿರುವವನಿಗೆ 20—24 ಸಾವಿರ ರೂಪಾಯಿ ಲೆಕ್ಕಾಚಾರ ಇರುತ್ತದೆ ಎಂದು ಇಟ್ಟುಕೊಳ್ಳೋಣ. ಎಕ್ಸೆಂಪ್‌ಷನ್ ಲಿಮಿಟ್ ಒಳಗೆ ಅವನು ಅಷ್ಟು ಸೇಲ್ಸ್ ಮಾಡಬೇಕಾದರೆ, ಅವನು ಪಡೆಯತಕ್ಕ ಮೆಟೀರಿಯಲ್ಸ್, ಅಕ್ಕಿ, ಬೇಳೆ, ಮುಂತಾದ ಸಾಮಾನುಗಳ ಪರ್ಚೇಸ್ ವ್ಯಾಲ್ಯೂ ಏನು ಇದೆ, ಅದನ್ನು ಕಲೆಕ್ಟ್ ಮಾಡಿ ಟ್ಯಾಕ್ಸ್ ಅಸೆಸ್ ಮಾಡುತ್ತಾರೆ. ಇದರ ಉದ್ದೇಶ ಏನಾಗುತ್ತದೆ ಎಂದರೆ.........

ಶ್ರೀ ಎಂ. ವೈ. ಘೋರ್ಪಡೆ.—ಅಷ್ಟೊಂದು ಸಿಂಪಲ್ ಇಲ್ಲ, ಹೋಟೆಲ್ ಉದಾಹರಣೆ ಕೊಟ್ಟಿರಿ, ಹೋಟೆಲ್ ಮಾಲೀಕನ ಹತ್ತಿರ, ಅವನು ಕೊಂಡ ಪದಾರ್ಥಗಳ ಮೇಲೆ ಟ್ಯಾಕ್ಸ್ ಹಾಕಿದ ರಸೀತಿ ಇದ್ದರೆ, ಅವರ ಮೇಲೆ ಪರ್ಚೇಸ್ ಟ್ಯಾಕ್ಸ್ ಹಾಕುವುದಕ್ಕೆ ಆಗುವುದಿಲ್ಲ. ಹೋಟೆಲಿನವರ ಹತ್ತಿರ ರಸೀತಿ ಇರುವುದಿಲ್ಲ, ಅಂಗಡಿಯವನು ಟ್ಯಾಕ್ಸ್ ಕೊಡದಿದ್ದರೆ, ಹೋಟೆಲ್‌ನವನು ಕೊಡಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ರಸೀತಿ ಪ್ರಡ್ಯೂಸ್ ಮಾಡಿದರೆ ಟ್ಯಾಕ್ಸ್ ಕೊಡಬೇಕಾದದು ಇಲ್ಲ. 25 ಸಾವಿರ ಟರ್ನ್ ಓವರ್ ಕೊಡತಕ್ಕವರು ರಸೀತಿ ಕೊಡತಕ್ಕ ಪದ್ಧತಿ ಇಟ್ಟುಕೊಂಡಿಲ್ಲ. ದೊಡ್ಡ ದೊಡ್ಡ ಅಂಗಡಿಗಳವರು ಕೊಡತಕ್ಕದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಸಣ್ಣ ಅಂಗಡಿಯವರಿಗೆ 25 ಸಾವಿರ ರೂಪಾಯಿ ಎಕ್ಸೆಂಪ್‌ಷನ್ ಸಿಗುತ್ತದೆ. ಅವರು ಲೈಸನ್ಸ್ ಫೀ ಮಾತ್ರ ಕೊಡಬೇಕಾಗುತ್ತದೆ, ಅಕೌಂಟ್ಸ್ ಇಡುವ ಅಭ್ಯಾಸ ಇಟ್ಟುಕೊಂಡಿಲ್ಲ. ಎಂದರೆ ರಸೀತಿ ಕೊಡತಕ್ಕ ಪ್ರಶ್ನೆ ಎಲ್ಲಿ ಇದೆ? ಆದ್ದರಿಂದ ಸರಳವಾದ ನಿವಾರಣಾ ಪದ್ಧತಿಯನ್ನು ಕಂಡುಹಿಡಿಯುವುದಕ್ಕೆ ಮಂತ್ರಿಗಳು ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ.

ಇವತ್ತು ಟಿ ಸ್ಪೆಡ್ ಸಿಲ್ಕ್‌ಮೇಲೆ ಎರಡು ಪರ್ಸೆಂಟ್ ಟ್ಯಾಕ್ಸ್ ಲೆವಿ ಮಾಡುತ್ತೀರಿ, ಮಂತ್ರಿಗಳು ಲಾಭ ಪಡೆಯುವುದಕ್ಕೆ ಹೊರಟಿದ್ದಾರೆ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಕೆಲವು ಮಧ್ಯವರ್ತಿ ಜನ 2-3 ಲಕ್ಷ ರೂಪಾಯಿ ಎಕ್ಸೆಂಪ್‌ಷನ್ ಪಡೆಯುವುದಕ್ಕೋಸ್ಕರ ಪ್ರಯತ್ನ ಮಾಡುತ್ತಿದ್ದಾರೆ ಎಂದು ಕೇಳಿದ್ದೇನೆ. ರಾ ಸಿಲ್ಕ್ ಮೇಲೆ ಎಕ್ಸೆಂಪ್‌ಷನ್ ಕೊಡಿ, ನಾನು ಒಪ್ಪಿಕೊಳ್ಳು

(ಶ್ರೀ ಹೆಚ್. ಡಿ. ದೇವೇಗೌಡ)

ತ್ತೇನೆ. ಆದರೆ ಈಗ ತಾವು ಹಾಕಿರುವ ಎರಡು ಪರ್ಸೆಂಟ್ ಟ್ಯಾಕ್ಸ್ ಅನ್ನು ಎಕ್ಸೆಂಪ್ಟ್ ಮಾಡಿಕೊಳ್ಳುವುದಕ್ಕೆ ಕೆಲವು ಮಧ್ಯವರ್ತಿ ಜನ, ಹಣವನ್ನು ಕಲೆಕ್ಟ್ ಮಾಡಿ ಸರಿಯಾದಂಥ ಇನ್‌ಫ್ಲೂಯನ್ಸ್ ತಂದು, ಇದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎಂದು ಕೇಳಿದ್ದೇನೆ. ಅವರು ತಮ್ಮವರೆಗೆ ಬಾರದಿದ್ದರೆ ಸಂತೋಷ, ತಾವು ಇದಕ್ಕೆ ಅವಕಾಶ ಕೊಡದಿದ್ದರೆ ಸಂತೋಷ. ತಾವು ಇದಕ್ಕೆ ಅವಕಾಶ ಕೊಡಬಾರದು ಎಂದು ಮುನ್ನೆಚ್ಚರಿಕೆಯಿಂದ ಬಿಗಿಯಾದ ನಿಲುವನ್ನು ತಾಳಬೇಕು ಎಂದು ಹೇಳುತ್ತಿದ್ದೇನೆ. ಸೇಲ್ಸ್ ಟ್ಯಾಕ್ಸ್ ಡಿಪಾರ್ಟಮೆಂಟಿನಲ್ಲಿ ಕೆಲವು ರೆವಿನ್ಯೂ ಡಿಪಾರ್ಟಮೆಂಟ್ ಅಫಿಷಿಯಲ್ಸ್ ಅನ್ನು ಒ. ಒ. ಡಿ. ಬೇಸಿಸ್ ಮೇಲೆ ತಂದಿದ್ದಾರೆ. ಅದು ಸರಿಯಾದದು ಅಲ್ಲ. ಕಮಿಷಿಯಲ್ ಡಿಪಾರ್ಟಮೆಂಟಿನವರಿಗೆ ನೇರವಾಗಿ ಅಪಾಯಿಂಟ್ ಮಾಡಲು ಅಧಿಕಾರ ಇರುವಾಗ, ಅಪಾಯಿಂಟ್ ಮಾಡಿಕೊಂಡು ಅವರಿಗೆ ಸಾಕಷ್ಟು ಟ್ರೈನಿಂಗ್ ಕೊಟ್ಟು ಈ ಇಲಾಖೆ ಚೆನ್ನಾಗಿ ಕೆಲಸ ಮಾಡತಕ್ಕ ವ್ಯವಸ್ಥೆ ಮಾಡಬೇಕು. ರೆವಿನ್ಯೂ ಡಿಪಾರ್ಟಮೆಂಟಿನಿಂದ ಹಾಗೆ ತೆಗೆದುಕೊಳ್ಳುವುದು ಸರಿಯಾದುದು ಅಲ್ಲ. ಈ ಕಡೆ ತಾವು ಗಮನಕೊಡಬೇಕು ಎಂದು ಹೇಳುತ್ತೇನೆ.

Sri M. Y. GHORPADE.—You are not for exchange of departmental officials.

ಶ್ರೀ ಎಚ್. ಡಿ. ದೇವೇಗೌಡ.—Commercial tax Officials ಇವರಿಂದ ಕೆಲಸವನ್ನು ಎಕ್ಸ್‌ಟ್ರಾಕ್ಟ್ ಮಾಡುವುದಕ್ಕೆ ಸಾಧ್ಯವಿದೆ. ಅಲ್ಲಿ ಆಗುವ ಫಿಲ್‌ಫ್ರೇಜ್ ಅನ್ನು ತಡೆಗಟ್ಟುವುದಕ್ಕೆ ಅಲ್ಲಿಯ ಅಧಿಕಾರಿಗಳಿಗೆ ಅವಕಾಶ ಮಾಡಿಕೊಟ್ಟರೆ ಸಾಕಾಗುತ್ತದೆ. ರೆವಿನ್ಯೂ ಡಿಪಾರ್ಟಮೆಂಟಿನ ಸ್ಪೆಷಲೈಸೇಷನ್ ಬೇಕಾಗುವುದಿಲ್ಲ, ಆ ಪದ್ಧತಿ ಇದ್ದರೆ, ಕೈಬಿಡುವುದು ಸೂಕ್ತ ಎಂದು ನನ್ನ ಅಭಿಪ್ರಾಯ. ಡಿವಿಷನಲ್ ಪೂಲ್ ವಿಚಾರ. ಷುಗರ್, ಟೊಬಾಕೋ, ಮತ್ತು ಕ್ಲಾತ್ ಮೇಲೆ ಎಕ್ಸೈಜ್ ಡ್ಯೂಟಿ ಹಾಕುವುದಕ್ಕೆ ಅವರ ಪರಿಮಿತಿಗೆ ಬಿಟ್ಟುಕೊಟ್ಟಿದ್ದೀರಿ. ಬರತಕ್ಕ ಡಿವಿಜನಲ್ ಪೂಲ್‌ನಲ್ಲಿ ಹೆಚ್ಚು ಹಣ ಗಳಿಸಲು ಸಾಧ್ಯವಾಗುವುದಿಲ್ಲ. ಎರಡೂವರೆ ಕೋಟಿಯಿಂದ ಮೂರು ಕೋಟಿ ಬರುತ್ತಿತ್ತು ಎಂದು ಕಾಣುತ್ತದೆ. ನಾವು ಈ ಅಧಿಕಾರವನ್ನು ಕೇಂದ್ರಕ್ಕೆ ಸರೆಂಡರ್ ಮಾಡಿದಾಗ ನಮಗೆ ಡಿವಿಜನಲ್ ಪೂಲ್‌ನಿಂದ ಬಂದಿರತಕ್ಕ ಹಣ ಕಡಿಮೆ ಇತ್ತು. ಈಗ ಸೆಂಟ್ರಲ್ ರೆವೆನ್ಯೂ ಬಹಳ ಜಾಸ್ತಿಯಾಗಿದೆ. ಆದುದರಿಂದ ಡಿವಿಜನಲ್ ಪೂಲ್‌ನಿಂದ ಹೆಚ್ಚು ಹಣವನ್ನು ಪಡೆಯತಕ್ಕ ಪ್ರಯತ್ನ ಮಾಡಬೇಕು ಎಂದು ಹೇಳುತ್ತಿದ್ದೇನೆ. ಆಗಲೇ ಆ ದಿಶೆಯಲ್ಲಿ ಪ್ರಯತ್ನ ಮಾಡಿದ್ದರೆ ಸ್ವಾಗತಾರ್ಹವಾಗಿತ್ತು ಎಂದು ಈ ಸಭೆಯಲ್ಲಿ ತಿಳಿಸಲಿಚ್ಛಿಸುತ್ತೇನೆ. ಆಕ್ಟ್ರಾಯ್ ವಜಾ ಮಾಡಬೇಕು ಎಂದು ಹಿಂದಿನ ಸರ್ಕಾರ ಯೋಚನೆ ಮಾಡಿತ್ತು, ಎಂದು ತಾವು ಹೇಳಿದಿರಿ, 8 ಕೋಟಿ ರೂಪಾಯಿ ಆಕ್ಟ್ರಾಯಿ ಬರುತ್ತಿದ್ದುದನ್ನು ಕೈಬಿಟ್ಟರೆ ಸ್ಥಳೀಯ ಸಂಸ್ಥೆಗಳಿಗೆ ತೊಂದರೆಯಾಗುತ್ತದೆ ಎಂದು ನಾನಾದರೂ ಹೇಳುತ್ತೇನೆ. ಇದರಲ್ಲಿ ಸುಮಾರು 32 ರಿಂದ 35 ಪರ್ಸೆಂಟ್ ಎಸ್ಟಾಬ್ಲಿಷ್‌ಮೆಂಟ್ ಗೋಸ್ಕರ ಹೋಗುತ್ತದೆ. ಬಹುಶಃ ಸರಿಯಾದ ವ್ಯವಸ್ಥೆಯಲ್ಲ ಎಂದು ನನ್ನ ಅಭಿಪ್ರಾಯ. ಈಗ 60 ರಿಂದ 65 ಕೋಟಿ ರೂಪಾಯಿ ಸೇಲ್ಸ್‌ಟ್ಯಾಕ್ಸ್‌ನಿಂದ ಬರುತ್ತದೆ. ಅದರಮೇಲೆ 10 ಪರ್ಸೆಂಟ್ ಸರಚಾರ್ಜ್ ಹಾಕಿದರೂ, 6ರಿಂದ ಆರೂವರೆ ಕೋಟಿ ರೂಪಾಯಿ ಗಳಿಸುವುದಕ್ಕೆ ಸಾಧ್ಯವಿದೆ. ಆರೀತಿ ಮಾಡಿ ಈ ಆಕ್ಟ್ರಾಯಿ ಪದ್ಧತಿ ಕೈಬಿಡುವುದು ಒಳ್ಳೆಯದು. ಟೋಲ್ ಗೇಟ್ ಹತ್ತಿರ ಲಾರಿಗಳು ಸಂಜೆ ಆರು ಗಂಟೆಗೆ ಬಂದರೆ, ಬೆಳಗ್ಗೆ 6 ಗಂಟೆ ತನಕ ಇರಬೇಕಾಗುತ್ತದೆ. ಇದನ್ನು ತಪ್ಪಿಸುವುದಕ್ಕೆ ಸಾಧ್ಯ ಮತ್ತು ಖರ್ಚುಮಾಡತಕ್ಕ ಎಸ್ಟಾಬ್ಲಿಷ್‌ಮೆಂಟ್ ಚಾರ್ಜಸ್ ಅವಾಯಿಡ್ ಮಾಡುವುದಕ್ಕೆ ಸಾಧ್ಯ ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಜೊತೆಗೆ ಎಂಟರ್‌ಟೇನ್‌ಮೆಂಟ್ ಟ್ಯಾಕ್ಸ್ ಪಿಲ್‌ಫ್ರೇಜ್ ಇದೆ. ಹೆಚ್ಚುಜನ ಡೂಪ್ಲಿಕೇಟ್ ಟಿಕೇಟ್ ಇಷ್ಯೂ ಮಾಡುವುದು ಗೊತ್ತಿದೆ. ಇಂಥ ಸ್ಥಳಗಳಲ್ಲಿ ಎಲ್ಲಿ ಟ್ಯಾಕ್ಸ್ ಅವಾಯಿಡ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ ಅಲ್ಲಿ ಬಿಗಿಯಾದಂಥ ಕ್ರಮವನ್ನು ಅನುಸರಿಸಿ ಉತ್ಪನ್ನ ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎನ್ನತಕ್ಕ ಸಲಹೆಯನ್ನು ಕೊಡುತ್ತೇನೆ. ಇವೊತ್ತು ನಾನು ಹೆಚ್ಚುಕಾಲ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ.

ಕೊನೆಯದಾಗಿ ಆರು ತಿಂಗಳು ಕನ್‌ವಿಕ್ಷನ್ ಆಗಿದ್ದರೆ 75 ರೂಪಾಯಿ ಪೊಲಿಟಿಕಲ್ ಪೆನ್‌ಷನರ್ಸ್‌ಗೆ ಕೊಡತಕ್ಕದ್ದೆಂದು ಒಂದು ವ್ಯವಸ್ಥೆ ಮಾಡಿದ್ದೀರಿ ಎಂದು ಕೇಳಿದ್ದೇನೆ. ಕೇಂದ್ರ ಸರ್ಕಾರದವರು ಕೂಡ ಆಗಸ್ಟ್ 15 ರಿಂದ ಆಚೆಗೆ 200 ರೂಪಾಯಿ ಕೊಡಬೇಕು ಎಂದು ಮಾಡಿದ್ದಾರೆಂದು ಕೇಳಿದ್ದೇನೆ. ಕಲವರು ಆಕ್ಚುಯಲ್ ಆಗಿ ಜೈಲ್ ವಾಸ ಅನುಭವಿಸಿದ್ದಾರೆ,

ಡಿಟೆನ್‌ಷನ್ನಿನಲ್ಲಿ ಇದ್ದರು. ಆದರೆ ಕನ್‌ವಿಕ್ಷನ್ ಆಗಿಲ್ಲ. ಅಂಥವರಿಗೆ ಇದರ ಬೆನಿಫಿಟ್ ಸಿಕ್ಕುವುದಕ್ಕೆ ಅವಕಾಶವಿಲ್ಲ. ತಾವು ಏನು ಹಿಂದಿನ ಸರ್ಕಾರದವರು ಹಾಕಿರತಕ್ಕ ರಿಸ್ಟ್ರಿಕ್ಷನ್ ಇದೆ ಅದನ್ನು ಸ್ವಲ್ಪ ಸಡಿಲಮಾಡಿ. ಅಷ್ಟರಲ್ಲಿ ನಮಗೆ ಇಂಡಿಪೆಂಡೆನ್ಸ್ ಬಂತು. ಫ್ರೀಡಂ ಮೂವ್‌ಮೆಂಟಿನಲ್ಲಿ ಭಾಗ ವಹಿಸಿ ಯಾರು ಡಿಟೆನ್‌ಷನ್ನಿನಲ್ಲಿ ಇದ್ದರೋ ಅವರಿಗೆ ಆ ಸೌಲತ್ತು ಕೊಡುವುದಕ್ಕೆ ಪ್ರಯತ್ನಮಾಡ ಬೇಕು ಎಂದು ಸಲಹೆ ಮಾಡುತ್ತೇನೆ. ಜೊತೆಗೆ ಓಲ್ಡೇಜ್ ಪೆನ್‌ಷನ್ನಿಗೆ 70 ವರ್ಷ ಮಿತಿ ಮಾಡಿದ್ದೀರಿ ಮತ್ತು ಅಂಗವಿಕಲರಿಗೆ ಅದನ್ನು 65 ವರ್ಷದವರೆಗೂ ಕೊಡುವುದಕ್ಕೆ ರಿಯಾಯಿತಿ ಇದೆ. 70 ವರ್ಷ ವಯಸ್ಸಾಗಿರುವವರು ಬಹುತೇಕ ಕಡಿಮೆ ಇದ್ದಾರೆ. ಬಹುತೇಕ ಕಡಿಮೆ ವಯಸ್ಸಿನವರು ಡಾಕ್ಟರು ಗಳಿಗೆ 10–20 ರೂಪಾಯಿ ಕೊಟ್ಟು 60 ವರ್ಷಗಳಾಗಿರುವವರು 70 ವರ್ಷ ಎಂದು ಬರೆಸಿಕೊಳ್ಳು ತ್ತಾರೆ. ಡಾಕ್ಟರ್ ಸರ್ಟಿಫಿಕೇಟ್ ಮೇಲೆ ಡಿಪೆಂಡ್ ಆಗಬೇಕು. ಈಗಲೇ 65 ವರ್ಷದವರಿಗೆ ಕೊಡತಕ್ಕ ಅವಕಾಶವಾಗಿದೆ. 65 ವರ್ಷ ಎಂದು ಮಾಡುವುದರಿಂದ ಹೆಚ್ಚು ತೊಂದರೆಯಾಗುವುದಿಲ್ಲ. ಆದುದರಿಂದ ಈ ವಯಸ್ಸಿನ ಮಿತಿಯನ್ನು ಸ್ವಲ್ಪ ಸಡಿಲಮಾಡುವುದಕ್ಕೆ ಸಾಧ್ಯವಿದ್ದರೆ ಮಾಡಿ. ಅದನ್ನು ತಮ್ಮ ನಿರ್ಣಯಕ್ಕೆ ಬಿಡುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ನೀವು ಹೇಳುವ ಪ್ರಕಾರ ಆದರೆ ಅದನ್ನು ಸಡಿಲ ಮಾಡುವ ಅವಶ್ಯಕತೆ ಎಲ್ಲಿ ಇದೆ?

ಶ್ರೀ ಎಚ್. ಡಿ. ದೇವೇಗೌಡ.—60 ವರ್ಷಕ್ಕೆ ರೆಡ್ಯೂಸ್ ಮಾಡುವುದರಿಂದ ಡಾಕ್ಟರುಗಳ ಹತ್ತಿರ ಹೋಗಿ ದುಡ್ಡುಕೊಟ್ಟು ಸರ್ಟಿಫಿಕೇಟ್ ತರುವುದನ್ನು ಅವಾಯ್ಡ್ ಮಾಡಬಹುದು. ಪ್ರಾಕ್ಟಿಕಲ್ ದೃಷ್ಟಿಯಿಂದ ಮಾಡಿ ಎಂದು ಈ ಮಾತನ್ನು ಹೇಳುತ್ತಿದ್ದೇನೆ. ಕೊನೆಯದಾಗಿ ಪ್ರಿವಿ ಪರ್ಸ್ ಬಗ್ಗೆ ಸಂಶಯ ಬಂದಿದೆ. ತಮ್ಮ ಉತ್ತರದಲ್ಲಿ ನನಗೆ ಉಂಟಾಗಿರತಕ್ಕ ಅನುಮಾನವನ್ನು ಬಗೆಹರಿಸಬೇಕು. ನಾನು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ಮಹಾರಾಜರಿಗೆ ಸಂಬಂಧ ಪಟ್ಟ ಮೂರು ಪ್ಯಾಲೆಸ್‌ಗಳಿಗೆ ನಾನ್-ಎಲಿಯನೇಷನ್ ಕಂಡೀಷನ್ ಇದ್ದಾಗ್ಯೂಕೂಡ ಮರ್ಜರ್ ಅಗ್ರಿಮೆಂಟ್ ಬಿಟ್ಟು ಕೊಡುವುದಕ್ಕೆ ಪ್ರಯತ್ನಮಾಡಿದ್ದಾರೆ. ನಾನು ಬರೆದಂಥ ಪತ್ರಕ್ಕೆ ಉತ್ತರ ಬರೆದಿದ್ದಾರೆ. ನಾವು ವರ್ಷಕ್ಕೆ 60—70 ಸಾವಿರ ರೂಪಾಯಿ ಮೇಂಟೇನೆನ್ಸ್ ಕೊಡುತ್ತಿದ್ದೇವೆ. ಮರ್ಜರ್ ಅಗ್ರಿಮೆಂಟ್ ಆದಮೇಲೆ ಮಹಾರಾಜರ ವಂಶೀಕರು ಇರುವ ಕಾಲಕ್ಕೆ ಸ್ವಂತ ಉಪಯೋಗಕ್ಕೆ ಇಟ್ಟುಕೊಳ್ಳುವುದಕ್ಕೆ ಮಾತ್ರ ಅವಕಾಶ ಮರ್ಜರ್ ಅಗ್ರಿಮೆಂಟ್ ಇತ್ತು ಎಂದು ನಾನು ತಿಳಿದುಕೊಂಡಿದ್ದೇನೆ. ಮರ್ಜರ್ ಅಗ್ರಿಮೆಂಟ್ ಏನು ನಾನ್ ಅಲಿನಿಯೇಷನ್ ಕಂಡೀಷನ್ ಹಾಕಿತ್ತು ಅದನ್ನು ತೆಗೆಯತಕ್ಕ ಬಗ್ಗೆ ರಾಜ್ಯ ಸರ್ಕಾರದ ಅಭಿಪ್ರಾಯವನ್ನು ಕೇಳಿದ್ದಾರೆ ರಾಜ್ಯ ಸರ್ಕಾರದವರು 2 ಪ್ಯಾಲೆಸ್ ಕೊಡುವುದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ. ಒಂದು ಪ್ಯಾಲೆಸ್‌ನ್ನು ಟ್ರಸ್ಟ್ ಮಾಡಿ ಮ್ಯೂಸಿಯಮ್ ವ್ಯವಸ್ಥೆ ಮಾಡುವ ಬಗ್ಗೆ ಅಭಿಪ್ರಾಯ ಇದೆ ಎಂದು ತಿಳಿಸಿದ್ದಾರೆ. ಮುಖ್ಯಮಂತ್ರಿಗಳು ಬರೆದ ಕಾಗದದ ಅಭಿಪ್ರಾಯ ಇಷ್ಟೆ ಎಂದು ನನ್ನ ಭಾವನೆ. ನಾನು ಕೇಳುತ್ತೇನೆ ಇದು ಡಿಸ್ಕ್ರಿಮಿನೇಷನ್ ಆಗುವುದಿಲ್ಲವೇ! ಒಂದು ವೇಳೆ ಫಾರ್‌ಮರ್ ರೂಲರ್‌ಗೆ, ಅಧಿಕಾರ ಇದ್ದರೆ, ನಾನ್-ಎಲಿಯನೇಷನ್ ಕಂಡಿಷನ್ ಹಾಕಿದ್ದು ಕ್ರಮಬದ್ಧವಲ್ಲ ಲೀಗಲ್ ಇಂಪ್ಲಿ ಕೇಷನ್ ಬರುತ್ತದೆ ಎಂದು ತಾವು ಹೇಳಬಹುದು. ಇವೊತ್ತು ಕೇಳಬೇಕಾಗುತ್ತದೆ, ಒಂದು ಟ್ರಸ್ಟ್ ಮಾಡಿ ಮ್ಯೂಸಿಯಮ್ ಮಾಡುವುದಕ್ಕೆ ನಿಮ್ಮ ಅಭಿಪ್ರಾಯವಿದೆ ಎಂದು ಸೂಚಿಸತಕ್ಕದ್ದು ಇನ್ನು 2 ಪ್ಯಾಲೇಸ್ ಏನು ಬೇಕಾದರೂ ಮಾಡಿಕೊಳ್ಳಬಹುದು, ಎಂದು ಹೇಳಿ ನಾನ್-ಅಲಿನೇಷನ್ ಕಂಡೀಷನ್ ಕಿತ್ತು ಹಾಕುವುದಕ್ಕೆ ರಾಜರು ಏನು ಸಮ್ಮತಿ ಸೂಚಿಸಿದ್ದಾರೆ ಅದು ಕಾನೂನಿನ ದೃಷ್ಟಿ ಕೋಣದಲ್ಲಿ ಸರಿಯೇ! ಲಾ ಡಿಪಾರ್ಟ್‌ಮೆಂಟ್ ಇದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆಯೇ! ಮರ್ಜರ್ ಅಗ್ರಿಮೆಂಟ್‌ನ್ನು ನಿಮ್ಮ ಪರಿಶೀಲನೆಗೆ ಅವಕಾಶ ಮಾಡಿಕೊಡುವುದು ಸೂಕ್ತ ಎಂದು ಹೇಳುತ್ತೇನೆ. ತಾವು ಆರೀತಿ ಮಾಡಬಾರದಾಗಿತ್ತು ಎಂದು ನನ್ನ ಭಾವನೆ. 10 ಕೋಟಿ ರೂಪಾಯಿಗಳ ಪ್ರಾಪರ್ಟಿ ಮೇಂಟೆನೆನ್ಸಿಗೆ ಕಳೆದ ಹಲವಾರು ವರ್ಷಗಳಿಂದ ವರ್ಷಕ್ಕೆ 70 ಸಾವಿರ ರೂಪಾಯಿಗಳನ್ನು ರಾಜ್ಯದ ಬೊಕ್ಕಸದಿಂದ ಕೊಡುತ್ತಿದ್ದೀರಿ. ಆದ್ದರಿಂದ ಈ ರೀತಿ ಮಾಡಿರತಕ್ಕದ್ದು ಕ್ರಮಬದ್ಧವಲ್ಲ. ನೀವು ಏನು ಉತ್ತರ ಕೊಡುತ್ತೀರಾ ಮತ್ತು ತಮ್ಮ ಸಮರ್ಥನೆ ಏನು ಎಂದು ನಾನು ನೋಡ ಬೇಕಾಗಿದೆ. ನಿಮ್ಮ ಉತ್ತರದಲ್ಲಿ ಡಿಸ್ಕ್ರಿಮಿನೇಷನ್ ಇದೆ. ಒಂದು ಕಡೆ ಟ್ರಸ್ಟ್ ಮಾಡುವುದು ಇನ್ನೊಂದು ಕಡೆ ಪ್ಯಾಲೆಸ್‌ಗೆ ಬಿಟ್ಟು ಕೊಡುವುದು ಎಂದರೆ ಡಿಸ್ಕ್ರಿಮಿನೇಷನ್ ಆಗುತ್ತದೆ. ಈಗಾಗಲೇ ಮೈಸೂರು ಪ್ಯಾಲೇಸಿನವರು ಸುಮಾರು 15 ಲಕ್ಷಕ್ಕೋ ಏನೋ ಬನುಮಯ್ಯ ಕಾಲೇಜಿನವರಿಗೆ ಮಾರಿದ್ದಾರೆ ಎಂದು ಕೇಳುತ್ತೇನೆ. ಇದರ ಬಗ್ಗೆ ಸರಕಾರದಿಂದ ಸ್ಪಷ್ಟೀಕರಣ ಕೇಳುತ್ತಿದ್ದೇನೆ. ಹಿಂದೆ ಸರಕಾರ ಇದರ ಬಗ್ಗೆ ತಮ್ಮ ಅಭಿಪ್ರಾಯ ಏನಿತ್ತೋ ಅದನ್ನು ಒಪ್ಪಿ ಕೊಂಡಿದ್ದೇವೆಂದು ಹೇಳುವುದಾದರೆ ಇದು ಸರಿಯಾದುದಲ್ಲ ಮತ್ತು ಸರಕಾರ ಇದರಲ್ಲಿ ಎಡವಿದೆ

(ಶ್ರೀ ಹೆಚ್. ಡಿ. ದೇವೇಗೌಡ)

ಎಂದು ಹೇಳಬೇಕಾಗಿದೆ. ಇದು ತಪ್ಪು ಇದನ್ನು ಕೇಂದ್ರ ಸರಕಾರಕ್ಕೆ ಹೇಳಬೇಕು ಎಂದು ಹೇಳುವುದಾದರೆ ಈ ಸರಕಾರ ಇದರಲ್ಲಿ ಮಧ್ಯೆ ಏಕೆ ಪ್ರವೇಶಿಸಬೇಕು ಎಂದು ಕೇಳಬೇಕಾಗಿದ್ದು ಇದರ ಅವಶ್ಯಕತೆ ಏನಿತ್ತು? ಸುಮಾರು 60-70 ಸಾವಿರ ರೂಪಾಯಿಗಳಷ್ಟು ಮೇಂಟೆನನ್ಸ್ ಗ್ರಾಂಟು ಎಂದು ಕೊಡುವಾಗ ಇದರಲ್ಲಿ ಸರಕಾರ ಎಲ್ಲೋ ಎಡವಿ ತಪ್ಪು ಮಾಡಿದೆ ಎಂದು ನನಗೆ ತೋರುತ್ತೆ. ಇದರ ಬಗ್ಗೆ ಮಾನ್ಯ ಅರ್ಥಮಂತ್ರಿಗಳು ಸ್ಪಷ್ಟೀಕರಣ ಕೊಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

4-30 P.M.

†ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ನಾನು ಅರ್ಥ ಸಚಿವರು ಸಭೆಯ ಮುಂದೆ 1,5, 34, 35, 36, 40, 41, 52 ಮತ್ತು 54 ರಲ್ಲಿ ಇಟ್ಟಿರುವ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳಲು ಇಚ್ಛೆಪಡುತ್ತೇನೆ.

ಮೊದಲನೇದಾಗಿ ನಮ್ಮ ಅರ್ಥ ಸಚಿವರಾಗಿರುವ ಶ್ರೀ ಘೋರ್ಪಡೆಯವರು ಸ್ವಲ್ಪ ವಿಷಯ ತಿಳಿದುಕೊಂಡವರು ಮತ್ತು ವಿವೇಚನಾಪರರು ಎಂದು ನನ್ನ ಅನುಭವದಿಂದ ಗೊತ್ತಾಗಿದೆ. ಮತ್ತು ಅವರು ಪ್ರಗತಿಪರವಾದ ಧೋರಣೆಗಳನ್ನು ಇಟ್ಟುಕೊಂಡಿದ್ದಾರೆ ಎಂದು ನಾನು ನಂಬುತ್ತೇನೆ. ಆದುದರಿಂದ ಇವೊತ್ತಿನ ದಿವಸ ಸರಕಾರದ ಧೋರಣೆ ಏನಿದೆ ಅದು ಮುಖ್ಯವಾಗಿ ಆಡಳಿತ ಪಕ್ಷದ ಧೋರಣೆಯಾಗಿ ಜನತೆಯ ಮುಂದೆ ಇಟ್ಟು ಅದನ್ನು ಜಾರಿಗೆ ತರುವುದರಲ್ಲಿ ಮಾನ್ಯ ಘೋರ್ಪಡೆಯವರು ಆಸಕ್ತಿ ವಹಿಸುತ್ತಾರೆ ಎಂದು ನಾನು ತಿಳಿದುಕೊಂಡಿದ್ದೆ. ಜನರ ಮುಂದೆ ಯಾವ ನೀತಿ ನಿರೂಪಣೆಗಳನ್ನು ಮಾಡುತ್ತೇವೆ ಎಂದು ಒಪ್ಪಿಕೊಂಡು ಅದೇ ಧೋರಣೆಯನ್ನು ಕಾರ್ಯಗತ ಮಾಡಲು ಪ್ರಯತ್ನ ಮಾಡಿದರೆ ಅದೇ ಒಂದು ಸರಕಾರದ ನೀತಿಗೆ ಅತಿ ಮುಖ್ಯವಾದ ಒರೆಗಲ್ಲು ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಆ ರೀತಿ ಒರೆಗಲ್ಲಿಗೆ ಹಚ್ಚಿ ನೋಡಿದರೆ ಕಳೆದ ನಾಲ್ಕು ತಿಂಗಳಿಂದ ಸರಕಾರ ಅನುಸರಿಸುತ್ತಿರುವ ನೀತಿಗಳನ್ನು ನೋಡಿದರೆ ಇವರ ತತ್ವಗಳನ್ನು ಎಷ್ಟು ದೂರ ತೆಗೆದುಕೊಂಡು ಬಂದಿದ್ದಾರೆ ಎನ್ನುವುದನ್ನು ಪ್ರಶ್ನೆ ಮಾಡಬೇಕಾದ ಕಾಲ ಬಂದಿದೆ. ನಾನು ಬಜೆಟ್ಟಿನ ಬಗ್ಗೆ ಈಗ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೂ ಇದರಲ್ಲಿ ಕೆಲವು ಸಂಶಯಗಳು ಬರಲು ಅವಕಾಶವಾಗಿದೆ. ಇಂತಹ ಸಂಶಯಗಳನ್ನು ನಾನು ನಿವಾರಣೆ ಮಾಡಿಕೊಳ್ಳುವ ಪರಿಸ್ಥಿತಿಯಲ್ಲಿ ಇಲ್ಲ. ಇದು ಮೂಲಭೂತವಾಗಿ ಬಜೆಟ್ಟು ಮೇಲೆ ಇರುವುದರಿಂದ ಅದರ ಬಗ್ಗೆ ಹೇಳಲು ಹೋಗುವುದಿಲ್ಲ. ಆದರೆ ಇಲ್ಲಿ ಸೇಲ್ಸ್ ಟ್ಯಾಕ್ಸ್ ಹಾಗೂ ಇನ್ನಿತರ ತೆರಿಗೆಗಳನ್ನು ಜನರ ಮೇಲೆ ಹೊರಿಸುವಾಗ ನಿಮ್ಮ ಹೊಸ ಧೋರಣೆ ಪ್ರಕಾರ ಏನೇನು ಕೆಲಸಕಾರ್ಯಗಳನ್ನು ನಿಮ್ಮ ಇಲಾಖೆಯವರು ಮಾಡುತ್ತಿದ್ದಾರೆ ಅದನ್ನು ನೋಡಬೇಕಾಗಿದೆ. ಸರಕಾರಕ್ಕೆ ಗೊತ್ತಿರುವ ಹಾಗೆ ಹಿಂದೆ ಇದ್ದ ಸರಕಾರ ಎಕಾನಮಿ ಅಂಡ್ ರಿಸೋರ್ಸಸ್ ಕಮಿಟಿ ಎಂದು ಶ್ರೀ ಭೂತಲಿಂಗಂರವರ ನೇತೃತ್ವದಲ್ಲಿ ನೇಮಿಸಿದ್ದರು. ಈ ಸಮಿತಿಯವರು ಸರಕಾರಕ್ಕೆ ಎರಡು ವರದಿಗಳನ್ನು 1969ನೇ ಜುಲೈನಲ್ಲಿ ಒಂದು ಮತ್ತು 1971ನೇ ಸೆಪ್ಟಂಬರಿನಲ್ಲಿ ಒಂದು ವರದಿಯನ್ನು ಸಲ್ಲಿಸಿದೆ. ಸರಕಾರಕ್ಕೆ ಈ ವರದಿಗಳು ಈಗಾಗಲೇ ಸೇರಿರುವುದರಿಂದ ಸರಕಾರ ಇದರಲ್ಲಿ ಮಾಡಿರುವ ಶಿಫಾರಸುಗಳನ್ನು ಏನಾದರೂ ಕಾರ್ಯಗತ ಮಾಡಿದ್ದಾರೆಯೇ ಇಲ್ಲವೇ ಎನ್ನುವುದನ್ನು ಇಲ್ಲಿ ಕೇಳಬೇಕಾಗಿದೆ. ಈ ಸಮಿತಿಯಲ್ಲಿ ಮಾನ್ಯ ಹಣಕಾಸು ಮಂತ್ರಿಗಳಾಗಿರುವ ಶ್ರೀ ಘೋರ್ಪಡೆಯವರು ಹಾಗೂ ಮಾನ್ಯ ಸಿದ್ದವೀರಪ್ಪನವರು ಇಬ್ಬರೂ ಇದರಲ್ಲಿ ಸದಸ್ಯರಾಗಿದ್ದರು. ಆ ಸಮಿತಿ ಮಾಡಿದ ಶಿಫಾರಸುಗಳು ಏನಾಗಿವೆ? ಇದರ ಬಗ್ಗೆ ಸರಕಾರ ಏನಾದರೂ ಯೋಚನೆ ಮಾಡಿದೆಯೇ? ಇದರ ಬಗ್ಗೆ ಹೇಳುವಾಗ ಮುಖ್ಯವಾಗಿ ಇದರಲ್ಲಿ ಸೇಲ್ಸ್ ಟ್ಯಾಕ್ಸ್ ಕೂಡ ಬರುತ್ತದೆ. ಹಿಂದೆ ಇದ್ದ ಸರಕಾರದವರು ತಾವು ಏನು ನೀತಿ ನಿರೂಪಣೆಗಳನ್ನು ಅನುಸರಿಸಬೇಕೆಂದು ಇದ್ದರೋ ಅದನ್ನು ಇನ್ನೂ ಯೋಚನೆ ಮಾಡಿಲ್ಲ. ಮುಂದೆ ಇದನ್ನು ಮಾಡುತ್ತೇವೆ ಎಂದು ಆಗ ಹೇಳಿದರು. ನಾನು ಈಗ ಇಲ್ಲಿ ಸರಕಾರವನ್ನು ಕೇಳುವುದು ಹಿಂದೆ ಭೂತಲಿಂಗಂ ಕಮಿಟಿ ಮಾಡಿರುವ ಶಿಫಾರಸುಗಳನ್ನು ಯೋಚನೆ ಮಾಡಿ ಇದರ ಬಗ್ಗೆ ಏನಾದರೂ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆಯೇ ಎಂದು ನಾನು ಇಲ್ಲಿ ಸರಕಾರದವರನ್ನು ಕೇಳಬೇಕಾಗಿದೆ. ಮುಖ್ಯವಾಗಿ ಸೇಲ್ಸ್ ಟ್ಯಾಕ್ಸ್ ಬಗ್ಗೆ ಹೇಳುವುದಾದರೆ ಇಲ್ಲಿರುವ ಪಟ್ಟಿಯಂತೆ ನೋಡಿದರೆ ಸುಮಾರು 68-69 ಪದಾರ್ಥಗಳ ಮೇಲೆ ಸೇಲ್ಸ್ ಟ್ಯಾಕ್ಸ್ ಹಾಕುವುದು ಇದೆ. ಇದರ ಪೂರ್ತಿ ಪಟ್ಟಿ ಈಗ ನನ್ನಲ್ಲಿಲ್ಲ. ಸರಕಾರ ಇದರ ಜೊತೆಗೆ ಇನ್ನೂ ಕೆಲವು ಪದಾರ್ಥಗಳಮೇಲೆ

ಸೇಲ್ಸ್ ಟ್ಯಾಕ್ಸ್ ಹಾಕಬೇಕೆಂದು ಇದ್ದಾರೆ. ಸರಕಾರಕ್ಕೆ ಸೇಲ್ಸ್ ಟ್ಯಾಕ್ಸಿನಿಂದಲೇ ಹೆಚ್ಚಿನ ವರಮಾನ ಬರುತ್ತದೆ. ಇದು ನನಗೂ ಗೊತ್ತು. ನಾನು ಸೇಲ್ಸ್‌ಟ್ಯಾಕ್ಸನ್ನು ಅಬಾಲಿಷ್ ಮಾಡಬೇಕು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಈ ಸೇಲ್ಸ್ ಟ್ಯಾಕ್ಸನ್ನು ಯಾವ ಪದಾರ್ಥಗಳ ಮೇಲೆ ಮತ್ತು ಯಾರಮೇಲೆ ಹೊರಿಸಬೇಕು ಎನ್ನುವುದು ಇದರಲ್ಲಿರುವ ಮುಖ್ಯ ಪ್ರಶ್ನೆ. ಇದರಲ್ಲಿ ನನಗೆ ತಿಳಿದಮಟ್ಟಿಗೆ ನಿಮ್ಮ ತತ್ವಗಳಿಗನುಸಾರವಾಗಿ ಯಾವ ಸಾಮಗ್ರಿಗಳು ಜನತೆಯ ಬಳಕೆಗೆ ಅತಿ ಮುಖ್ಯವಾಗಿ ಬೇಕಾಗಿದೆಯೋ ಅಂತಹ ಅತ್ಯವಶ್ಯಕವಾದ ಸಾಮಗ್ರಿಗಳ ಮೇಲೆ ತೆರಿಗೆಯನ್ನು ಹೊರಿಸಿದರೆ ಅದು ಜನ ಸಾಮಾನ್ಯರ ಮೇಲೆ ಬೀಳುತ್ತದೆ. ನಮ್ಮ ದೇಶದಲ್ಲಿ ಹಾಕಿರುವಂತಹ ತೆರಿಗೆಗಳು ಬೇರೆ ಯಾವ ದೇಶದಲ್ಲೂ ಇಲ್ಲ. ಇದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಈಗ ಸೇಲ್ಸ್ ಟ್ಯಾಕ್ಸ್ ಬಳಕೆದಾರರುಗಳ ಮೇಲೆ ಹೇಗೆ ಬೀಳುತ್ತದೆ ಎನ್ನಲು ಒಂದೆರಡು ಉದಾಹರಣೆಗಳನ್ನು ಇಲ್ಲಿ ಹೇಳುತ್ತೇನೆ. ಇದರಲ್ಲಿರುವಂತೆ ವನಸ್ಪತಿ ಹಾಗೂ ರಿಫೈನ್ಡ್ ಆಯಿಲ್ ಇದರಮೇಲೆ ತೆರಿಗೆ ಇದೆ. ಸಾಮಾನ್ಯವಾಗಿ ಎಲ್ಲ ಜನರೂ ಇದನ್ನು ಉಪಯೋಗಿಸಬೇಕಾಗಿದೆ. ಇದು ಜನರಮೇಲೇ ಬೀಳುತ್ತದೆ ಇದಕ್ಕೆ ಶೇಕಡಾ ಆರುವರೆ ಸಿಂಗಲ್ ಪಾಯಿಂಟ್ ಸೇಲ್ಸ್ ಟ್ಯಾಕ್ಸ್ ಎಂದು ಇದೆ. ಇದೇ ರೀತಿ ಬಡ ಜನರು ಉಪಯೋಗ ಮಾಡುವ ಸೀಮೆ ಎಣ್ಣೆ ಮೇಲೆ ಸೇಲ್ಸ್ ಟ್ಯಾಕ್ಸ್ ಹಾಕಿದ್ದಾರೆ, ಹಾಗೆ ಟೀ ಕಾಫಿ ಇನ್ನೂ ಅನೇಕ ಸಾಮಗ್ರಿಗಳ ಮೇಲೆಲ್ಲಾ ಹಾಕಿದ್ದಾರೆ. ಈ ರೀತಿ ಬಡ ಜನರ ಮೇಲೆ ತೆರಿಗೆಯನ್ನು ಹಾಕುವುದು ಉಚಿತವೇ ಎಂದು ನಾನು ಇಲ್ಲಿ ಸರಕಾರವನ್ನು ಪ್ರಶ್ನೆ ಮಾಡಬೇಕಾಗಿದೆ. ಭೂತಲಿಂಗಂ ಕಮಿಟಿಯವರು ಇದರ ಬಗ್ಗೆ ವಿಚಾರ ಮಾಡುವಾಗ ಈ ತೆರಿಗೆಯನ್ನು ತೆಗೆದುಹಾಕುವುದಕ್ಕೆ ತಯಾರಾಗಿರಲಿಲ್ಲ ಮತ್ತು ಇದರ ಪಟ್ಟಿಗೆ ಇನ್ನೂ ಹೆಚ್ಚು ಪದಾರ್ಥಗಳನ್ನು ಸೇರಿಸಬೇಕಾಗಿದೆ ಎಂದು ಸಲಹೆ ಮಾಡಿದ್ದರು. ಜನರ ಹಿತದೃಷ್ಟಿಯಿಂದ ಸರಕಾರ ಇವೆಲ್ಲವನ್ನೂ ಯೋಚನೆ ಮಾಡಬೇಕಾಗಿದೆ. ಆ ಕಮಿಟಿಯವರು ಮಾಡಿರುವ ಶಿಫಾರಸುಗಳು ಅಷ್ಟು ಸರಿಯಾದುದಲ್ಲ ಮತ್ತು ನ್ಯಾಯವಾದುದಲ್ಲ ಎಂದು ಇಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ. ನಾನು ಭೂತಲಿಂಗಮ್ ಸಮಿತಿಯವರು ಕೊಟ್ಟಿರುವ ವರದಿಯನ್ನು ಓದಿದ್ದೇನೆ. ಅದರಲ್ಲಿ ಕೇರಳ, ಮದ್ರಾಸ್, ಆಂಧ್ರ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಯಾವ ರೀತಿ ತೆರಿಗೆಗಳನ್ನು ಹಾಕಿದ್ದಾರೆಂಬ ಬಗ್ಗೆ ಅಂಕಿಅಂಶಗಳನ್ನು ಒದಗಿಸಿದ್ದಾರೆ. ಈ ಸ್ಟೇಟ್‌ಮೆಂಟನ್ನು ನೋಡಿದರೆ ಕೆಲವು ಐಟಂಗಳ ಮೇಲೆ ತೆರಿಗೆ ಕಡಿಮೆ ಹಾಕಬಹುದೆಂದು ತಮಗೇ ಗೊತ್ತಾಗುತ್ತದೆ. ಆ ರೀತಿ ತೆರಿಗೆ ಕಡಿಮೆ ಮಾಡುವುದಕ್ಕೆ ನಮ್ಮ ರಾಜ್ಯದಲ್ಲಿ ಅವಕಾಶವಾಗುತ್ತದೆಂದು ಕಾಣುತ್ತದೆ. At least there is a case for reduction of tax on some of the items.

Sri M. Y. GHORPADE.—The point is whether it will automatically result in reduction in price or only be absorbed in this middleman's profit margin is a doubtful proposition on the Indian conditions.

Sri M. S. KRISHNAN.—Of course, that is a point for consideration. But I would like to subject that today the inflationary trend in our country is due to various conditions, one of the reasons is also the incidence of taxation. Taxation is terrible on our people. If there is a tendency in a progressive Government to reduce the tax, naturally you could catch hold the people who increase the prices. It may be possible to see that an atmosphere is created for reduction of prices. On the other hand, you go on adding to the list. So, the tendency is to increase the prices and create more inflation in our country. This tendency goes against the principles which you have enunciated. Here is a statement showing the rates of tax of different commodities in different States on certain items in the Bhootalingam Committee Report. In Kerala, Andhra and Tamil Nadu the rates are :—

	Mysore	Madras	Andhra	Kerala
Vanaspathi	$6\frac{1}{2}$% SP.	7 %SP.	5%SP.	3%MP.

Sri M. Y. GHORPADE.—Does the hon. member realise that on none of the items that has mentioned I have increased the tax whether it is food, kerosine or Vanaspathi ?

Sri M. S. KRISHNAN.—I am not saying that they have increased it. I am only trying to point out that there is a case for reduction and there is a case for equalisation with the rate in some other States like Tamil Nadu, Andhra and Kerala

I think the Government must be more forward-looking and that can arise only by comparison with the rest of the States, pa ticularly in regard to consumar goods and goods that are consumed by the common man. Take for exa ple Kerosene. The rate in Kerala and Mysore is the same, in Madras it is more—5½% single-point, and in Andhra it is 3% single-point. At the same time, on some of the items it could be increased. On liquor, other than country liquor, it is 25% SP. in Mysore, 3% M.P. in Madras, 25% S.P. in Andhra and 50% S.P. in Kerala. If it is 50% in Kerala, why not in Mysore ? I don't see any reason why it should be less here. It will help you, if not for prohibition, at least to restrict drinking, and if you adopt to this, my friend Sri Prabhakar may be very happy. Apart from that, it increases the State's revenue.

Anoter point which should be considered is multi-point versus single point. Everyb dy agrees that multi-point tax leads to harassment and lot of trouble to traders, merchants, etc. There have been lot of complaints in regard to this multi-point tax. Of course, it is difficult for the Government to see that all the taxes are mopped up. As far as this multi-point versus single-point is concerned, of course again it has been held that single-point should be more and multi-point should be less. The Bhootalingam committee report has removed 30 items from multi-point to single point. That, I think is a good thing. I do not know whether it is accepted by the Government or not.

Sri M. Y. GHORPADE.—We have accepted.

Sri M. S. KRISHNAN.—The next point is about the collection of these taxes. The progress in the finalisation of assessments is indicated below:

1969–70	...	58,621
1970–71	...	45,587
1971–72	...	51,295

ಇಲ್ಲಿನ ಮುಖ್ಯವಾದ ಪ್ರಶ್ನೆ ಎಂದರೆ ಪ್ರೋಗ್ರೆಸೀವ್‌ನಲ್ಲಿ ಜಾಸ್ತಿಯಾಗಿರುವುದು. ಅದು ಕಡಿಮೆ ಯಾಗಿಲ್ಲ. ಇನ್ನೂ ತೆರಿಗೆ ಬಾಕಿ ಬರುವುದು ಇದೆ ಎನ್ನುವುದು ಗೊತ್ತಾಗುತ್ತದೆ. ಒಟ್ಟು ಅಸೆಸೀ ಇರುವಂಥಾದ್ದು, 1,38,000. ಇದರಲ್ಲಿ ಡಿಸ್‌ಪೋಸಲ್ ಆಗಿರುವುದು 87 ಸಾವಿರ. ಈ ಅಂಕಿ ಅಂಶಗಳು ಸರಿಯೇ ಎಂದು ನಾನು ಕೇಳುತ್ತೇನೆ. ಏಕೆಂದರೆ ತಾರೀಖು 25–3–1970ರಲ್ಲಿ ಮಾನ್ಯ ನಾಗಪ್ಪನವರು ಇದೇ ವಿಷಯದಲ್ಲಿ ಮಾತನಾಡುತ್ತಾ ಏನು ಹೇಳಿದ್ದಾರೆಂದರೆ: "... ಉದಾಹರಣೆಗೆ 1969-70ನೇ ಇಸವಿಯ ಅಂಕಿಸಂಖ್ಯೆ ತೆಗೆದುಕೊಳ್ಳೋಣ. ಒಟ್ಟು ಅಸೆಸೀ ಇರುವಂಥಾದ್ದು, 1,78,601. ಅದರಲ್ಲಿ ಅಸೆಸ್‌ಮೆಂಟ್ ಆಗಿರುವುದು 93,009 ಬ್ಯಾಲೆನ್ಸ್ ಇರ

ತಕ್ಕಂಥಾದ್ದು 85,592 ಹಾಗಾದರೆ ಅಲ್ಲಿಗೆ 100ಕ್ಕೆ 50 ಪರ್‌ಸೆಂಟ್ ಅಸೆಸ್‌ಮೆಂಟ್ ಆಗುವುದು ಉಳಿದಿದೆ.'' ಎಂಬುದಾಗಿ. ಇದು ಬಡ್ಜೆಟ್‌ನಲ್ಲಿ ಬಂದಿರುವ ವರದಿ. ಇವೊತ್ತು ಸರ್ಕಾರದವರು ಕೊಟ್ಟಿರುವ ವರದಿಯಲ್ಲಿ 51 ಸಾವಿರಕ್ಕೆ ಇಳಿಸಿದ್ದಾರೆ. 1969–70ರಲ್ಲಿ ಬ್ಯಾಲೆನ್ಸ್ ಇರ ತಕ್ಕಂಥಾದ್ದು 85,592 ಎಂದು ಗೊತ್ತಾಗಿದೆ. ಅಲ್ಲಿಗೆ ವ್ಯತ್ಯಾಸ ಇರುವುದು ಸುಮಾರು 26 ಸಾವಿರ. ಆ 26 ಸಾವಿರ ಎಲ್ಲಿಹೋಯಿತು ? ಆ ಕೇಸುಗಳೆಲ್ಲವೂ ಇನ್ನೂ ತೀರ್ಮಾನವಾಗಿಲ್ಲ. ಅದೆಲ್ಲವೂ ಎಲ್ಲಿಹೋಯಿತು ? ಅದನ್ನು ಯಾರು ನುಂಗಿಹಾಕಿದರು ಎನ್ನುವ ಪ್ರಶ್ನೆ ಬರುತ್ತದೆ. ಈ ವರದಿಯ ಮೇಲೆ ಮಾತನಾಡಬೇಕೇ ಅಥವಾ ಹಿಂದಿನ ವರದಿಯಮೇಲೆ ಮಾತನಾಡಬೇಕೇ ಎನ್ನುವ ಸಂಶಯ ಬಂದಿದೆ. ಈ ಬಗ್ಗೆ ಬಂದಿರುವ ಸಂಶಯವನ್ನು ಮಾನ್ಯ ಅರ್ಥ ಮಂತ್ರಿಗಳು ನಿವಾರಣೆ ಮಾಡು ತ್ತಾರೆ ಎಂದು ನಾನು ನಂಬಿದ್ದೇನೆ. ಇದರಲ್ಲಿ ಅಸೆಸ್‌ಮೆಂಟ್ ಮಾಡುವುದು ಸರಿಯಾಗಿ ಆಗುತ್ತಿಲ್ಲ. ಅದನ್ನು ಏತಕ್ಕೆ ಕಂಪ್ಲೀಟ್ ಮಾಡಲಿಲ್ಲ ಎಂದರೆ ಅದಕ್ಕೆ ಹಲವಾರು ಕಾರಣಗಳು ಇರಬಹುದು. ಒಂದು ಕಡೆ ಲೀಗಲ್ ಕ್ವೆಶ್ಚನ್ ಬರುತ್ತದೆ. ಇನ್ನೊಂದು ಕಡೆ ಹೈಕೋರ್ಟ್ ಮತ್ತು ಸುಪ್ರೀಮ್ ಕೋರ್ಟಿನ ಕಾನೂನಿನ ಪ್ರಶ್ನೆ ಬರುತ್ತದೆ. ಅದನ್ನು ಲಾ ಡಿಪಾರ್ಟ್‌ಮೆಂಟಿಗೆ ಕಳುಹಿಸಿದರೆ ಅದು ಅಲ್ಲಿಂದ ಬರಬೇಕಾದರೆ 2–3 ವರ್ಷಗಳಾಗುತ್ತವೆ. ಈಗ ನಾನು ತಮಗೆ ಒಂದು ಉದಾಹರಣೆ ಯನ್ನು ಹೇಳುತ್ತೇನೆ. ಅರಸೀಕೆರೆಯಲ್ಲಿರುವ ಕೋಕನಟ್ ಮರ್ಚೆಂಟ್ ಶ್ರೀ ಕೆ. ಕೆ. ವಾಸುದೇವ್ ಎನ್ನುವವರಿಗೆ 1968 ನೇ ಇಸವಿಯಲ್ಲಿ ನೋಟೀಸ್ ಕೊಟ್ಟರು. ಅದು ಇನ್ನೂ ಅಸೆಸ್‌ಮೆಂಟ್ ಆಗಿಲ್ಲ. ಅಂಥವುಗಳು ಬೇಕಾದಷ್ಟು ನಿದರ್ಶನಗಳು ಇವೆ. 1967–68 ನೇ ಇಸವಿಯ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ರಿಪೋರ್ಟ್ ನೋಡಿದರೆ ತಮಗೆ ಗೊತ್ತಾಗುತ್ತದೆ. ಅದರಲ್ಲಿ ಸೇಲ್ಸ್ ಟ್ಯಾಕ್ಸ್ ಬಾಕಿ ಕೊಟ್ಟಿರುವುದನ್ನು ಗಮನಕ್ಕೆ ತೆಗೆದುಕೊಳ್ಳಬೇಕು. 1967–68ನೇ ಇಸವಿಯ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವರದಿಯ ಪುಟ 64 ರಲ್ಲಿ 183. The committee desire that the results of the appeal may be intimated.

184. The Committee also recommend that internal check on the assessments be strengthened to avoid smaller turnovers escaping correct assessment of tax. ಎಂದು ಹೇಳಿದ್ದಾರೆ.

ಆ ಮೇಲೆ 1968–69ನೇ ಸಾಲಿನ ಆಡಿಟ್ ರಿಪೋರ್ಟ್‌ನಲ್ಲಿ ಹೇಳಿರುವುದನ್ನು ನೋಡಿದರೆ ಅದರಲ್ಲಿ ಬಹಳ ಕಟುವಾದ ಟೀಕೆಗಳನ್ನು ಮಾಡಿದ್ದಾರೆ. ಅವುಗಳನ್ನು ತಾವು ಗಮನಕ್ಕೆ ತೆಗೆದು ಕೊಂಡು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದು ನನ್ನ ಮುಖ್ಯ ಪ್ರಶ್ನೆ. 1970 ನೇ ಇಸವಿಯ ಆಡಿಟ್ ರಿಪೋರ್ಟಿನಲ್ಲಿ ಪುಟ 83 ರಲ್ಲಿ ಈ ರೀತಿ ಹೇಳಿದ್ದಾರೆ.

Audit Report 1970—page 83: Sales Tax:

> "In the case of a manufacturer of Kandasari, the purchase turnover of sugarcane of Rs. 1,28,000 relating to the period from 9th February 1966 to 12th November 1966, was assessed to tax in March 1969 at 3 per cent instead of 15 per cent. This resulted in short-levy of Rs. 15,360."

"The Commercial Tax Officer agreed in September 1969 to recover the short levy. Report of recovery is awaited (December 1969)" ಎಂದು ಹೇಳಿದ್ದಾರೆ. ಇದು ಏನಾಗಿದೆ ಎಂಬುದು ಗೊತ್ತಾಗಲಿಲ್ಲ. ಇಂಥಾ ನಿದರ್ಶನಗಳು ಬೇಕಾದಷ್ಟು ಇವೆ. ಆಡಿಟ್ ರಿಪೋರ್ಟಿನಲ್ಲಿ ಇರುವುದನ್ನು ನೋಡಿದರೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಸೇಲ್ಸ್ ಟ್ಯಾಕ್ಸ್ ಕಲೆಕ್ಷನ್ ಬಗ್ಗೆ ಸರಿಯಾದ ಕ್ರಮಗಳನ್ನು ತೆಗೆದುಕೊಂಡಿಲ್ಲ ಎಂಬುದು ಗೊತ್ತಾಗುತ್ತದೆ. ಸೇಲ್ಸ್ ಟ್ಯಾಕ್ಸ್ ಕಲೆಕ್ಷನ್ ಬಗ್ಗೆ ತಮಿಳುನಾಡಿನಲ್ಲಿ ಪ್ರೊಸೀಜರ್ ಚೆನ್ನಾಗಿದೆ ಎಂದು ತಾವು ಹೇಳಿದಿರಿ, ಅಲ್ಲಿ ಯಾವರೀತಿ ಮಾಡಿದ್ದಾರೆ ಎಂಬುದನ್ನು ಪರಿಶೀಲಿಸಿ ಇನ್ನೂ ಹೆಚ್ಚಿನ ರಿಸೋರ್ಸಸ್ ಬರುವ ಹಾಗೆ ಪ್ರಯತ್ನ ಮಾಡಬೇಕು.

ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕೆಂದಿದ್ದೇನೆ, ಅದೇನೆಂದರೆ ಯಾರು ಭ್ರಷ್ಟಾಚಾರಿಗಳಾಗಿದ್ದಾರೆಯೋ ಅವರಿಗೆ ಅಡಿಕೆ ವ್ಯಾಪಾರದ ಬಗ್ಗೆ ಸೇಲ್ಸ್ ಟ್ಯಾಕ್ಸ್‌ನ್ನು 5 ಪರ್ಸೆಂಟ್ ಇದ್ದದನ್ನು 3 ಪರ್ಸೆಂಟ್ ಮಾಡಿದರು. Sri Hegde reduced the sales tax on Areca from 5 per cent to 3 per cent and on copra from 3 per cent to 2

(SRI M. S. KRISHNAN)

per cent. That was due to political consideration. ಅವರು ಚುನಾವಣೆಯ ದೃಷ್ಟಿಯನ್ನು ಇಟ್ಟು ಕೊಂಡು ಆ ರೀತಿ ಮಾಡಿದರು. ಅದರಿಂದ ಅವರಿಗೆ ಸ್ವಲ್ಪ ಅನುಕೂಲವಾಗಿದೆ. ಅದರಿಂದ ತಿಪಟೂರು ಮತ್ತು ಅರಸೀಕೆರೆ ಕ್ಷೇತ್ರದಿಂದ ಕಾಂಗ್ರೆಸ್ (ಒ) ಪಾರ್ಟಿಯವರು ಚುನಾಯಿತರಾಗಿ ಬಂದಿದ್ದಾರೆ. ಈ ರೀತಿ ಟ್ಯಾಕ್ಸನ್ನು ಕಡಿಮೆ ಮಾಡಿದ್ದರಿಂದ ಅಲ್ಲಿನ ಬಹಳ ಜನಗಳಿಗೆ ಅನುಕೂಲವಾಯಿತು. ಆದರೆ ಸರ್ಕಾರಕ್ಕೆ ಬರತಕ್ಕಂಥಾ ಆದಾಯ ಕಡಿಮೆ ಆಯಿತು. ಇದನ್ನೆಲ್ಲಾ ತಾವು ಪುನರ್‌ಪರಿಶೀಲನೆ ಮಾಡಬೇಕಾಗುತ್ತದೆ. Copra rate is low and more than 90 per cent goes outside the State. Since more than 90 per cent goes out of the State, even if there is slow increase in the rate, it is not going to affect our State. But you are going to get more revenues. I hope I have made myself clear.

Sri M. Y. GHORPADE.—Let the consumers outside the State pay more.

Sri M. S. KRISHNAN.—I am also paying more. I am doubtful whether the consumer outside the State pays more. It again depends upon the machinery of the Government to what extent it is able to check the prices. Anyway that is a policy matter. What is happening is, in the name of sales tax, tax evasion is on the increase. ತಿಪಟೂರು ಮತ್ತು ಅರಸೀಕೆರೆ ಈ ಪ್ರದೇಶಗಳಲ್ಲಿ ಟ್ಯಾಕ್ಸ್ ಇವೇಷನ್ ಜಾಸ್ತಿ ಇದೆ. ಅದನ್ನೆಲ್ಲಾ ಮಾನ್ಯ ಮಂತ್ರಿಗಳು ಗಮನಿಸಬೇಕು ಎಂದು ನಾನು ಹೇಳುತ್ತೇನೆ.

Sri Jayappa, an officer of the Sales Tax Department has been transferred to some other place. ಅವರ ಬಗ್ಗೆ ತನಿಖೆ ಮಾಡುತ್ತೇವೆ ಎಂದು ಹಿಂದೆ ಆಶ್ವಾಸನೆ ಕೊಟ್ಟಿದ್ದರು. ಅದನ್ನು ತಾವು ವಿಚಾರ ಮಾಡಬೇಕು. ಒಳ್ಳೆಯವರ ಮೇಲೆ ಕೇಸು ಹಾಕಿ ಕೆಟ್ಟವರನ್ನು ಬಿಟ್ಟು ಬಿಡುತ್ತಿದ್ದಾರೆ. ಇದು ಸರಿಯಲ್ಲ. ಯಾರು ತಪ್ಪಿತಸ್ಥರಾಗಿರುತ್ತಾರೆಯೋ ಅಂಥವರಿಗೆ ಶಿಕ್ಷೆಯನ್ನು ವಿಧಿಸಬೇಕು. ಜನ ಬಳಕೆ ವಸ್ತುಗಳ ಮೇಲೆ ಮಾರಾಟ ತೆರಿಗೆಯನ್ನು ವಿಧಿಸುವುದು ಸರಿಯಲ್ಲ. ಆದರಿಂದ ಸರ್ಕಾರಕ್ಕೆ ವರಮಾನ ಬರಬಹುದು; ಆದರೆ ಜನಹಿತ ದೃಷ್ಟಿಯಿಂದ ಅದು ಪ್ರಗತಿಪರ ಕಾರ್ಯಕ್ರಮವಲ್ಲ.

ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು 58 ವರ್ಷ ಮಾಡಬೇಕು.

Sri K. H. PATIL (Minister for Agriculture and Forests).—By increasing the retirement age to 58 years, will it not reduce the employment potential?

Sri M. S. KRISHNAN.—That theory does not hold good now. I know in other countries the people are fighting for increase in the retirement age. For instance, in France, people are agitating for increase in retirement age. ಇಷ್ಟು ಮಾತ್ರ ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

5-00 P.M.

ಶ್ರೀ ಕೆ. ಎನ್. ವೀರಪ್ಪ ಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೆ, ಈಗಿರತಕ್ಕಂತಹ ಅರ್ಥಿಕ ಮಂತ್ರಿಯವರು ಕೆಲವು ಏನು ಬೇಡಿಕೆಗಳನ್ನು ಇಟ್ಟಿದ್ದಾರೆ ಅದನ್ನು ಸ್ವಾಗತಿಸಿ, ಕೆಲವು ಸಲಹೆಗಳನ್ನು ಕೊಡುತ್ತೇನೆ. ಈ ಟ್ಯಾಕ್ಸೇಷನ್ ವಿಚಾರದಲ್ಲಿ ಬಹಳ ಬದಲಾವಣೆಗಳು ಆಗಬೇಕಾಗಿದೆ. ಕಾರಣ ಹಣ ವಸೂಲು ಮಾಡತಕ್ಕಂತಹ ಸಂದರ್ಭದಲ್ಲಿ ನೇರವಾಗಿ ಕರಪ್ಷನ್‌ಗೆ ಜಾಸ್ತಿ ಅವಕಾಶಗಳು ಆಗುತ್ತಿವೆ. ಇವೊತ್ತಿನ ದಿವಸ ಸೇಲ್ಸ್‌ಟ್ಯಾಕ್ಸ್ ವಿಷಯದಲ್ಲಿ ನೋಡಿದರೆ, ಇದಕ್ಕೆ ಯಾವುದೇ

ರೀತಿಯ ಒಂದು ಸ್ಲಾಬ್ ಸಿಸ್ಟಂ ಹಾಕಿ ಫಿಕ್ಸ್ ಮಾಡತಕ್ಕ ಪದ್ಧತಿ ಇವತ್ತಲ್ಲ ನಾಳೆಯಾದರೂ ತರದಿದ್ದರೆ ಜನರಿಗೆ ಇದರಿಂದ ದುಡ್ಡು ಸಹ ಉಳಿಯುತ್ತಾ ಇಲ್ಲ ಮತ್ತು ಸರ್ಕಾರಕ್ಕೆ ಹಣ ಕೂಡ ಬರುತ್ತಾ ಇಲ್ಲ, ಸ್ವಾಭಾವಿಕವಾಗಿ ಇದು ಎಲ್ಲರಿಗೂ ಗೊತ್ತಿರತಕ್ಕಂತಹ ವಿಷಯ. ಇದಕ್ಕೆ ಏನು ಪರಿಹಾರ ಕಂಡುಹಿಡಿಯಬೇಕೆಂಬುದನ್ನು ಮಾನ್ಯ ಹಣಕಾಸಿನ ಮಂತ್ರಿಯವರು ಬಹಳ ಯೋಚನೆ ಮಾಡಬೇಕಾಗಿದೆ. ಈಗಿರತಕ್ಕಂತಹ ಪದ್ಧತಿಯನ್ನು ತಪ್ಪಿಸಿ ಒಂದು ಹೊಸ ರೀತಿಯ ಪದ್ಧತಿಯನ್ನು ಜಾರಿಗೆ ತಂದರೆ ಅದರಿಂದ ಜನರಿಗೆ ಆಗುವಂತಹ ಹೆರಾಸ್‌ಮೆಂಟ್ ಕಡಿಮೆಯಾಗಿ, ಈ ರಾಮನ ಲೆಕ್ಕ, ಕೃಷ್ಣನ ಲೆಕ್ಕವನ್ನೂ ತಪ್ಪಿಸಿ, ಸರ್ಕಾರಕ್ಕೂ ಒಂದಿಷ್ಟು ಒಳ್ಳೆಯ ಹೆಸರು ಬರುವುದಕ್ಕೆ ಸಾಧ್ಯವಾಗುತ್ತದೆ. ಇದರಿಂದ ದೇಶದಲ್ಲಿ ಜನರು ಕಳ್ಳತನದ ಮಾರ್ಗ ಹಿಡಿಯುವುದನ್ನು ತಪ್ಪಿಸಿ ಸ್ವಲ್ಪಮಟ್ಟಿಗೆ ಸತ್ಯವಂತರು ಬಾಳುವುದಕ್ಕೆ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ಅದೇ ರೀತಿ ಸರ್ಕಾರದವರು ಅನೇಕ ರೀತಿಯಲ್ಲಿ ಉಳಿತಾಯ ಮಾಡುವುದಕ್ಕೆ ಹೆಚ್ಚಿನ ಗಮನ ಕೊಡಬೇಕು. ಪ್ರತಿ ವರ್ಷ ಎಷ್ಟೇ ಟ್ಯಾಕ್ಸ್ ಹಾಕಿದರೂ ಅಭಿವೃದ್ಧಿ ಕಾರ್ಯಗಳಿಗೆ ಏನು ಹಣ ಸಿಗುತ್ತಾ ಇಲ್ಲ. ಯಾವ ದೃಷ್ಟಿಯಿಂದ ನೋಡಿದರೂ ಖರ್ಚು ಜಾಸ್ತಿಯಾಗುತ್ತಿದೆ. ಒಂದು ಕಡೆ ಸರ್ಕಾರಿ ನೌಕರರಿಗೆ ಹೆಚ್ಚು ಅನುಕೂಲ ಕೊಡುವುದಕ್ಕೆ ಕೋಟಿಗಟ್ಟಲೆ ಹಣ ಕೊಡುತ್ತಿದ್ದಾರೆ. ಅವರಲ್ಲೂ ಸಣ್ಣಪುಟ್ಟ ಅಧಿಕಾರಿಗಳಿಗೆ, ಯಾವ ಪ್ರಯೋಜನವೂ ಇಲ್ಲ ದೊಡ್ಡ ನೌಕರರಿಗೆ ಜಾಸ್ತಿ ಕೊಡುತ್ತಿದ್ದೀರಿ. ಇನ್ನೊಂದು ಕಡೆ ಸಣ್ಣ ನೌಕರರಿಗೆ ಹೆಚ್ಚು ಕೊಡುವಾಗ ಬೇರೆ ವರ್ಗದ ಅಧಿಕಾರಿಗಳಿಗೂ ಹೆಚ್ಚು ಕೊಡುತ್ತಿದ್ದೀರಿ. ಆದ್ದರಿಂದ ಇದಕ್ಕೆಲ್ಲಾ ಖರ್ಚು ಹೆಚ್ಚಾಗಿ ಎಸ್ಟಾಬ್ಲಿಷ್‌ಮೆಂಟ್ ಖರ್ಚು ಜಾಸ್ತಿಯಾಗುತ್ತಾ ಇದೆ. ಇವತ್ತು ಪ್ರತೀ ಇಲಾಖೆಯಲ್ಲಿಯೂ ಸಾಕಷ್ಟು ಸಿಬ್ಬಂಧಿ ಇದ್ದರೂ ಇನ್ನೂ ಜಾಸ್ತಿ ಸಿಬ್ಬಂಧಿ ಕೊಡಿ ಎಂದು ಕೇಳುತ್ತಿದ್ದಾರೆ. ಇವುಗಳನ್ನು ತಾವು ಸಾಕಷ್ಟು ವಿಮರ್ಶೆ ಮಾಡಿ ಮುಂದೆ ಇಂಥದ್ದಕ್ಕೆ ಅವಕಾಶ ಕೊಡದೆ ಖರ್ಚು ಕಡಿಮೆ ಮಾಡಿದ್ದೇವೆಂದು ದೇಶಕ್ಕೆ ತೋರಿಸಬೇಕು. ಇಂತಿಂತಹ ಖರ್ಚು ಕಡಿಮೆ ಮಾಡಿದ್ದೇವೆ, ಆದ್ದರಿಂದ ಇಂತಿಂಥ ಟ್ಯಾಕ್ಸ್ ಹಾಕಿದ್ದೇವೆ ಎಂದರೆ ಯಾರಿಗಾದರೂ ಸಮಾಧಾನವಾಗುತ್ತದೆ. ಇವತ್ತು ನಾವು ಸಮಾಜವಾದವನ್ನು ಪ್ರಚಾರ ಮಾಡತಕ್ಕಂತಹ ಕಾಲದಲ್ಲಿ ಇಂಥ ಕೆಲಸಗಳನ್ನು ಮುಖ್ಯವಾಗಿ ಮಾಡಬೇಕಾಗಿದೆ. ಇನ್ನೊಂದು ವಿಚಾರವೇನೆಂದರೆ ಈ ನಿವೃತ್ತಿ ವೇತನ ಕೊಡತಕ್ಕದ್ದು. ನಾನು ಬಹಳ ಸಾರಿ ಇದನ್ನು ಪ್ರಸ್ತಾಪ ಮಾಡಿದ್ದೇನೆ. ಇದನ್ನು ಇನ್ನೂ ಜಾಸ್ತಿ ಮಾಡಿದ್ದೇನೆ ಎಂದು ಹೇಳಿದ್ದೀರಲ್ಲದೆ ನಿವೃತ್ತಿ ವೇತನವನ್ನು ಯಾರಿಗೆ ಕೊಡಬೇಕು, ಹೇಗೆ ಕೊಡಬೇಕು ಎನ್ನುವ ವಿಷಯ ಈವರೆಗೂ ವಿಮರ್ಶೆ ಮಾಡಿಲ್ಲ. ಹಿಂದೆ ಮೈಸೂರು ರಾಜರ ಕಾಲದಲ್ಲಿ, ಸರ್ವಿಸ್, ಸೇವೆ —ಎಂದು ಕರೆದು ಆವಾಗ ಕೆಲಸ ಕೊಡುತ್ತಿದ್ದರು. ಆಗಿನವರು ಇಂದಿನ ಹಾಗೆ ಸಾಮಾನುಗಳ ಬೆಲೆ ಜಾಸ್ತಿಯಾಗಿದೆ, ಆದ್ದರಿಂದ ನಮಗೆ ಜಾಸ್ತಿ ಕೊಡಿ ಎಂದು ಕೇಳುತ್ತಾ ಇರಲಿಲ್ಲ. ಆಗಿನ ಕಾಲದಲ್ಲಿ 30 ವರ್ಷ ಸರ್ವಿಸ್ ಮಾಡಿದರೆ ಈ ನಿವೃತ್ತಿ ವೇತನ ಕೊಡಬೇಕೆಂದು ಮಾಡಿದ್ದರು. ಇವೊತ್ತಿನ ದಿವಸ ಒಬ್ಬ ಮನುಷ್ಯನಿಗೆ ಜೀವನಕ್ಕೆ ಕಷ್ಟವಾಗಿರುವಾಗ, ಮತ್ತು ನಿರುದ್ಯೋಗ ಸಮಸ್ಯೆ ಜಾಸ್ತಿಯಾಗಿರುವಾಗ, ಹಲವಾರು ಅಧಿಕಾರಿಗಳಿಗೆ ಮನೆಬಾಡಿಗೆ ಮತ್ತಿತರ ಆಸ್ತಿಗಳಿಂದ ಆದಾಯ ಸಾವಿರಾರು ರೂ ಬರುತ್ತಿದ್ದ ರೂ. ಪುನಃ ಸರ್ಕಾರದ ಖಜಾನೆಯಿಂದ ಕೊಡುತ್ತಾ ಇರುವುದು ಯಾವ ನ್ಯಾಯ? ನಾವು ಸಮಾಜವಾದವನ್ನು ಹರಿಜನರಿಗೆ ಮತ್ತು ಸಾಮಾನ್ಯ ಜನರಿಗೆ ಹೇಳುತ್ತಿದ್ದೇವೆ ಅಷ್ಟೆ. ನೀವು ರಾಜಕೀಯ ಸಂತ್ರಸ್ತರಿಗೆ ಯಾವ ಜೀವನದ ಮಾರ್ಗ ಇಲ್ಲದೆ ಯಾವ ರೀತಿಯಲ್ಲಿ ಕೊಡುತ್ತೀರೋ ಆ ರೀತಿಯಲ್ಲಿ ಕೊಡಿ. ಯಾರಿಗೆ ಜೀವನಕ್ಕೆ ಬೇರೆ ಮಾರ್ಗ ಇಲ್ಲವೋ ಅಂಥವರಿಗೆ ಜೀವನಕ್ಕೆ 300 ಏಕೆ, 500 ರೂಪಾಯಿ ಕೊಡಿ. ಅದು ಬಿಟ್ಟು ಯಾರಿಗಾದರೂ ಎಷ್ಟೇ ಜಮೀನು ಇರಲಿ, ಅವರ ಮಗ ಅಸಿಸ್ಟೆಂಟ್ ಕಮೀಷನರೇ ಆಗಿರಲಿ, ಅಥವಾ ಡೆಪ್ಯೂಟಿ ಕಮೀಷನರೇ ಆಗಿರಲಿ—ಅಂಥವರಿಗೆ ಟ್ರೆಜರಿಯಿಂದ ಹಣ ಕೊಡುವುದನ್ನು ಸಮಾಜವಾದದ ಹೆಸರಿನಲ್ಲಿ ಮುಂದುವರಿಸುವುದು ಯಾವ ನ್ಯಾಯ? ನೀವು ಯಾವುದಾದರೂ ಖರ್ಚು ಕಡಿಮೆ ತೋರಿಸಿ ಜನರಿಗೆ ಟ್ಯಾಕ್ಸ್ ಹಾಕಿ. ಈ ರೀತಿ ಮಾಡುವುದಕ್ಕೆ ನಿಮಗೆ ಏನೂ ತೊಂದರೆಯಿಲ್ಲ. ಕೇಂದ್ರ ಸರ್ಕಾರದಲ್ಲಿಯೂ ಮಂತ್ರಿಯವರು ಇದ್ದಾರೆ; ಅವರೊಡನೆ ಸಮಾಲೋಚನೆ ಮಾಡಿ ಈ ವಿಚಾರದಲ್ಲಿ ಮೂವ್ ಮಾಡಬಹುದು ಅದರ ಬದಲು ಇದು ಕೇಂದ್ರದ ಪಾಲಿಸಿ ಎಂದು ಹೇಳಿದರೆ ಆಗುವುದಿಲ್ಲ. ಆದ್ದರಿಂದ ಈ ವಿಷಯವನ್ನು ಪ್ರತ್ಯೇಕವಾಗಿ ಲಿಸ್ಟ್ ಮಾಡಿ ಯಾರು ನಿಜವಾಗಿ ದೇಶಕ್ಕೆ ಸೇವೆ ಸಲ್ಲಿಸಿ, ಜೀವನಕ್ಕೂ ತೊಂದರೆಯಾಗಿದೆ, ಅಂಥವರಿಗೆ ಎಷ್ಟು ಬೇಕಾದರೂ ಕೊಡಿ. ಆದ್ದರಿಂದ ಅದನ್ನು ಬದಲಾವಣೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ರಾಜಕೀಯ ಸಂತ್ರಸ್ತರಿಗೆ ಇನ್ನು ಕೊಡುವ ಹಣದ ವಿಚಾರದಲ್ಲಿ ಒಂದು ವಿಚಾರ. ಮೊದಲು ಅವರಿಗೆ 6 ತಿಂಗಳು ಜೈಲು ಶಿಕ್ಷೆ ಅನುಭವಿಸಿರಬೇಕೆಂದು ಇದೆ. ಆಮೇಲೆ ಸ್ವಲ್ಪ ಗಲಾಟೆ ಎಲ್ಲಾ ಮಾಡಿ ಅದನ್ನು ಕಡಿಮೆ ಮಾಡಿಸಿದ್ದೇವೆ. ಆದರೆ ಬರೇ ಜೈಲು ಅನುಭವಿಸಿದರೆ ಸಾಲದು. ಏಕೆಂದರೆ 10—6 ವರ್ಷ ದೇಶಕೋಸ್ಕರ ದುಡಿದಿದ್ದವರು ಬಹಳ ಜನರಿದ್ದಾರೆ. ಆದ್ದರಿಂದ ಇದನ್ನು ಪುನರ್‌ವಿಮರ್ಶೆ ಮಾಡಿ ಯಾರು

(ಶ್ರೀ ಕೆ. ಎನ್. ವೀರಪ್ಪಗೌಡ)

ರಾಜಕೀಯದಲ್ಲಿ ದುಡಿದಿದ್ದಾರೆ, ಎಷ್ಟು ವರ್ಷಗಳ ಕಾಲ ಸೇವೆ ಮಾಡಿದ್ದಾರೆ, ಎಂಬುದನ್ನೆಲ್ಲಾ ಸ್ವಲ್ಪಮಟ್ಟಿಗೆ ಗಣನೆಗೆ ತೆಗೆದುಕೊಂಡು ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ.

ಇನ್ನು ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಇದು ಮೊದಲು ಪ್ರಾರಂಭವಾದಾಗಲೂ ನಾನು ಆಗಿನ ವರ್ಕಿಂಗ್ ಕಮಿಟಿಯಲ್ಲಿ ಇದ್ದೆ. ಇದರಿಂದ ಕೂಡ ಜನರಿಗೆ ಬಹಳ ಹೆರಾಸ್‌ಮೆಂಟ್ ಆಗುತ್ತದೆ. ಕಂದಾಯವನ್ನು ಜಾಸ್ತಿ ಮಾಡಬೇಕೆಂಬುದು ನಮ್ಮ ಅಭಿಪ್ರಾಯ. ಇದರಿಂದ ಇವತ್ತು ಲಂಚ ಕೊಟ್ಟರೆ ಎಲ್ಲರೂ ಉಳಿಯುತ್ತಾರೆ, ಇಲ್ಲದಿದ್ದರೆ ಯಾವ ಕೆಲಸವೂ ಆಗುವುದಿಲ್ಲ. ಇವತ್ತಿನ ದಿವಸ ಏನಾಗಿದೆಯೆಂದರೆ, ನೀವು ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಹಾಕಿದ್ದೇವೆ ಅಂದಾಗ ಎಲ್ಲರೂ ಪಾರ್ಟಿಶನ್ ಮಾಡಿಕೊಳ್ಳುತ್ತಿದ್ದಾರೆ. ಒಂದು ಮನೆಯಲ್ಲಿ 15 ಜನ ಇದ್ದರೂ, ಬೇರೆ ಬೇರೆ ಪಾರ್ಟಿಶನ್ ಮಾಡಿಕೊಂಡಿದ್ದೇವೆ ಎಂದು ಪತ್ರ ಮಾಡಿಕೊಂಡಿರುತ್ತಾರೆ. ಆದರೆ ಮನೆಯಲ್ಲಿ ಒಟ್ಟಿಗೆ ಇರುತ್ತಾರೆ. ಇದು ನಿಮ್ಮ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರ ಹೀಗೆ ಜನರು ಮಾಡುತ್ತಿದ್ದಾರೆ. ಇದರ ಬಗ್ಗೆ ಯಾವ ಅಧಿಕಾರಿಯಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ ? ಅದೂ ಅಲ್ಲದೆ ನಿಜವಾಗಿ ಪಾಲು ಮಾಡಿಕೊಂಡವರ ಸಂಖ್ಯೆ ಬೇರೆಯೇ ಇದೆ. ಯಾವುದೇ ಕಾನೂನು ಮಾಡುವಾಗ ಜನರನ್ನು ಕೆಟ್ಟ ಮಾರ್ಗಕ್ಕೆ ಎಳೆಯುವಂತಹ ಅವಕಾಶ ಇಲ್ಲದಂತೆ ಮಾಡಬೇಕು. ಹಾಗೆ ಮಾಡಿದರೆ, ಯಾವುದಾದರೂ ಹೆಚ್ಚಿಗೆ ಹಣದ ಬೆಳೆ ಬೆಳೆಯುವಂತಹ ಜಮೀನಿಗೆ ಒಂದಕ್ಕೆ ಎಂಡರಷ್ಟು ಹಾಕಿದರೂ ಕೂಡ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಸಾಧಾರಣ ಎರಡು ಕೋಟಿ ಬರಹುದು. ಆದರೆ ಈಗ ಟ್ಯಾಕ್ಸ್ ಬಂದಿರತಕ್ಕದ್ದು ಒಂದು ಕೋಟಿ 60 ಲಕ್ಷ, ಖರ್ಚು ಸುಮಾರು 8 ಲಕ್ಷ 83 ಸಾವಿರ ರೂಪಾಯಿ ಎಂದು ತೋರಿಸಿದ್ದಾರೆ. ಈಗಿನ ಪದ್ಧತಿಯನ್ನು ಒಪ್ಪಿಸಿ ಹೊಸ ಪದ್ಧತಿಯಲ್ಲಿ ಮಾಡಿದರೆ ಈಗ ಬರುವಂತಹ ಟ್ಯಾಕ್ಸಿನ ಎರಡರಷ್ಟು ಬರಬಹುದು. ಅದೂ ಅಲ್ಲದೆ ಇದರಿಂದ ಜನರಿಗೆ ಆಗುವಂತಹ ಹೆರಾಸ್‌ಮೆಂಟನ್ನು ಕೂಡ ತಪ್ಪಿಸಬಹುದು. ಆದ್ದರಿಂದ ಕಂದಾಯದ ಜೊತೆಯಲ್ಲಿ ವಸೂಲು ಮಾಡತಕ್ಕಂತಹ ಒಂದು ಅವಕಾಶ ಮಾಡಿ, ಸಾಮಾನ್ಯ ರೈತನು ಲೆಕ್ಕಪತ್ರ ವಗೈರೆ ಇಡುವಂತದ್ದನ್ನು ತಪ್ಪಿಸಿ, ಸರ್ಕಾರಕ್ಕೆ ನೇರವಾಗಿ ಆ ಹಣ ಬರುವಂತೆ ಮಾಡುವುದು ಒಳ್ಳೆಯದೆಂದು ನಾನು ಸಲಹೆ ಮಾಡುತ್ತೇನೆ. ಇದನ್ನು ಮಾಡಿ ಈಗ ಅಧಿಕಾರಿಗಳು ತಿಳುವಳಿಕೆ ಇಲ್ಲದಿರತಕ್ಕಂತಹ ಮತ್ತು ಅವಿದ್ಯಾವಂತರಾಗಿರತಕ್ಕಂತಹ ರೈತರಿಗೆ ಏನೊಂದು ತೊಂದರೆಗಳನ್ನು ಕೊಡುತ್ತಿದ್ದಾರೆ ಅದನ್ನು ತಪ್ಪಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಸರ್ಕಾರದವರು ಟ್ಯಾಕ್ಸ್ ಏನು ವಸೂಲು ಮಾಡುತ್ತಾರೆ, ಏನು ಸರ್ಕಾರಕ್ಕೆ ಟ್ಯಾಕ್ಸ್ ಬರುತ್ತಿದೆಯೋ ಅದರ ಮೇಲೆ ಅಷ್ಟಾಗಿ ಸರ್ಕಾರ ಪ್ರಾಮುಖ್ಯತೆ ವಹಿಸುತ್ತಾ ಇಲ್ಲ. ಜನರನ್ನು ತಪ್ಪು ಮಾರ್ಗಕ್ಕೆ ತರುವುದನ್ನು ಮತ್ತು ಕಳ್ಳತನದ ಮಾರ್ಗವನ್ನು ತಪ್ಪಿಸುವುದಕ್ಕೆ ಸಕಾಲದಲ್ಲಿ ಸರ್ಕಾರ ಸಾಕಷ್ಟು ಬೇಗ ಪ್ರಯತ್ನಪಡಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯ. ಇನ್‌ಷ್ಯೂರೆನ್ಸ್‌ನಲ್ಲಿ ಮೋಟಾರ್ ಬ್ರ್ಯಾಂಚ್ ಎಂಬುದಾಗಿ ಒಂದು ಇದೆ. ಸಾಮಾನ್ಯವಾಗಿ ಗೌರ್ನಮೆಂಟ್ ವೆಹಿಕಲ್ಸನ್ನು ಇನ್‌ಷ್ಯೂರೆನ್ಸ್ ಡಿಪಾರ್ಟ್‌ಮೆಂಟಿನಲ್ಲಿ ಮೋಟಾರ್ ಇನ್‌ಷ್ಯೂರೆನ್ಸ್ ಮಾಡತಕ್ಕ ಒಂದು ಪದ್ಧತಿ ಇದೆಯೆಂದು ನಾನು ಹೇಳುತ್ತೇನೆ. ನಮ್ಮ ಮೈಸೂರಿನಲ್ಲಿ ಖಾಸಗೀ ಬಸ್ಸುಗಳು, ಕಾರುಗಳು ಎಷ್ಟೇ ಇರಲಿ, ಅವುಗಳನ್ನು ಪಡೆದಿರುವವರೆಲ್ಲರೂ ಕೂಡ ಕಂಪಲ್ಸರಿಯಾಗಿ ನಮ್ಮ ಮೈಸೂರು ಗೌರ್ನಮೆಂಟ್ ಇನ್‌ಷೂರೆನ್ಸ್ ಡಿಪಾರ್ಟ್‌ಮೆಂಟ್ ಏನಿದೆಯೋ ಅಲ್ಲಿ ಇನ್‌ಷ್ಯೂರ್ ಮಾಡುವುದಾದರೆ ಆಗ ಬಹಳ ಹಣ ನಮ್ಮ ಸರ್ಕಾರಕ್ಕೆ ಬರುತ್ತದೆ. ಈಗ ಯಾವುದೋ ಕಾರ್ಪೊರೇಷನ್ನಿನಲ್ಲಿ ಇನ್‌ಷ್ಯೂರ್ ಮಾಡುವುದರಿಂದ ಅದು ಹೆಚ್ಚಿಗೆ ಕೇಂದ್ರ ಸರ್ಕಾರಕ್ಕೇ ಹೋಗುತ್ತಾ ಇರುವುದರಿಂದ, ಜಾಸ್ತಿ ಹಣ ಸಂಪಾದನೆ ಅವರಿಗೆ ಹೋಗಿದೆ. ಆದ್ದರಿಂದ ಈ ಬ್ರಾಂಚ್ ಒಂದರಿಂದಲೇ ನಾವು ಹೆಚ್ಚಿಗೆ ಹಣಸಂಪಾದನೆ ಮಾಡಬಹುದು. ಆದ್ದರಿಂದ ಇನ್ನುಮುಂದೆ ಖಾಸಗೀ ಎಲ್ಲಾ ಮೋಟಾರ್ ವೆಹಿಕಲ್ಸ್ ಇನ್‌ಷ್ಯೂರೆನ್ಸ್ ನಮ್ಮ ಒಂದು ಮೋಟಾರ್ ಬ್ರ್ಯಾಂಚಿನಲ್ಲಿಯೇ ಆಗುವಂತೆ ಮಾಡತಕ್ಕದ್ದು ಒಳ್ಳೆಯದೆಂದು ಹೇಳಿ, ನನಗೆ ಇಷ್ಟು ಮಾತನಾಡಲು ಇಲ್ಲಿ ಅವಕಾಶವನ್ನು ಕೊಟ್ಟಂಥ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri D. B. KALMANKAR (Afzalpur).—Sir, I am very happy that the collection of sales tax has gone high. It is 5906.39 lakhs during 1971-72. It is an indirect tax and it shows that the poor man is being

taxed more and more. As it was stated by some hon. Members earlier, everything is not good as far as sales tax—i.e., the Commercial Taxes Department is concerned. If some strictness is brought about, I think you can increase the sales tax and you need not resort to further taxation.

Now, I want to quote one or two instances to show how things are going on in the Commercial Tax Department. In Gulbarga, Sir, there is one C.T.O. Right from 1966-67 to 70-71, the entertainment tax from the local Hirandas Talkies to the extent of Rs. 2 lakhs and 28 thousand rupees was not recovered. There were bogus challans submitted. The Manager of Hirandas Talkies went on submitting bogus challans. As a matter of fact, he was not depositing the amount in the Bank. It has come in almost all the papers. It has come in SAMYUKTHA KARNATAKA of 12-5-1972. It has also come in the local papers like KRANTHI. No enquiries have taken place. I met the Commissioner and brought this to his notice and said that some action should be taken against him that he should be suspended. He told me, if he were to be suspended, we will have to pay salary while under suspension. So, the best thing is to make an enquiry and see something is done. He was transferred to some other Check Post, Sirigoppa or some other place. I do not know what happened. I think some people prevailed upon the officers to re-post him there and he has been brought there. Such things are going on. Then, there is an instance of a Bill Collector, who has used counterfeit stamps and deceived the Department. Still, no action is taken against him. If you want, I will give you his name. His name is Sri K. S. Channiahswamy, ACTO. I do not know why this Government which has started its new career, should be indifferent towards such activities of officers who are deceiving the Government and making money and they are hushing up the things. All these things are being done and still, we speak of socialism; we speak of distribution of money, wealth and property. I do not know why the higher officers are winking at such things. This is one instance.

There is another man by name Marappa Deodurg, CTO, Gulbarga. He sends his subordinates and they are made to inform the parties that they had to pay so much sales tax. Then again, he comes and compromises with them saying: "If tax is levied, you will have to pay 1,000 rupees; you pay me something, and settle the matter." Like that, I can quote several instances. I am prepared to even bring some persons to you. They prefer to pay tax rather than submit to his illegal demands. That gentleman still continues there. He is a horror to the merchants. I would request the hon. Finance Minister and the hon. Minister for P. W. D. who has started making a list of officers who are efficient officers and a list of officers who are inefficient and corrupt and are well known for such illegal activities, to pay attention to such persons.

The young Finance Minister who wants to do a lot to bring the finanaces of the State on the right path should look into these things and

(SRI D. B. KALMANKAR)

prepare a list and make arrangements to see that such things do not occur. These are some instances and they can be multiplied and the same modus operandi is obtaining in almost all the districts of the State. So my submission is that drastic action should be taken against these officers. Transfers cancelled should be cancelled. If he is continued to remain there, I am afraid that any impartial enquiry cannot be held. He will try to hush up things. It must also be the duty of the Department to see that amounts collected should be deposited. Except warning a Bill collector who deceives the Government to the tune of thousands of rupees no action is taken against him, and he is working in the Department. These things should be avoided and the whole administration should be streamlined.

Sri C. M. ARUMUGAM.—What are the names of the officers ?

Sri D. B. KALMANKAR.—Marappa, Deodurg—C. T. O. and K. S. Channayyaswamy, ACTO.

Sri C. M. ARUMUGAM.—Sir, I am glad that on this occasion the Chief Minister is not present in the House. Otherwise he would have defended and he would not have permitted names of officers to be mentioned here. It is at least one good thing and I am happy about it.

Mr. DEPUTY SPEAKER.—It is not right on the part of the hon. member to interrupt and say this. He knows the rules of procedure which do not contain any provision to express his happiness or joy. Whether happiness or otherwise, he should keep it to himself. It is his personal matter and he should contain it.

Sri V. N. PATIL.—The Hon'ble Member was saying that the Hon'ble Minister for Finance is making a list of good and bad officers. There is a system in judiciary of presenting gloves. I would like to suggest......

Mr. DEPUTY SPEAKER.—If Sri Kalmankar, yields like this, then his time is lost. I will not give him more time.

Sri D. B. KALMANKAR.—Then Sir, it is well known that the revenue from the lottery is not dependable and it is not a dependable source of income to the State. Our gross income is Rs. 556·95 lakhs and gross expenditure is Rs. 362·60 lakhs. The net income is Rs. 194·75 lakhs and for this we have been encouraging this lottery. Sir, this is a system which is anachronism as far as the concept of socialism is concerned and by doing all this, what we are gaining is not exceeding two crores. Moreover, it is not a dependable source. So I would like to request that the Finance Minister takes it seriously and take steps to see that the expenditure is reduced and there is very good income from that item.

Then about the old age pension, if the intention of the Government is really to do good to the old people who have no dependents to fall back upon and nobody to look after, then I would request that you must make it incumbent on the part of the Tahsildar to go from village to village and find out such persons and give them the pension due. Otherwise, in order to get this pension, he has to do a lot of home work. He has to go to Tahsildar and he has got to do so many things with the result that the poor man will be deprived of the full advantage and full benefit as he has to pay for some middle man. Secondly, I request that the age limit prescribed for this should be brought down to 60 years, if you really want that he must benefit from it, because Government servant has got the age of retirement. Normally, a man may not be in a position to work beyond sixty. It is therefore better to bring down the age limit to 60 years from 70 years.

Then Sir, about political sufferers. You want to give some benefit to persons who participated in the struggle for Independence of this country. Similarly such struggles have taken place in the erstwhile States of Hyderabad and Mysore. Now arbitrarily, you want to limit the period of imprisonment in order that they may derive some benefit. It was six months and it has been brought to three months. I say, why not those who suffered one or two months rigorous imprisonment or why not those on whom false cases were launched and they had to go to courts for years together and they were put to a lot of trouble ? They had to face so many difficulties. What about them ? Why not bring down this so that such cases are examined ? In the case of those who are not able to eke out their livelihood and those against whom warrants of arrest were served and those who had to conceal themselves, why not such cases also be examined ? I am told the Maharashtra Government has come forward and they are giving benefit to those political sufferers who have attended courts or those who are able to produce the proceedings of the court and warrants issued for attendance in the courts. Even that would suffice for the award of these benefit. If you want to recognise the services of these people who have sacrificed at the altar of freedom movement in this country, I wish that there should be no discrimination. You may fix up different grades or different amounts for different categories of sufferers. You can calculate the amount that would give them some benefit.

With these words, I thank the Chair.

5-30 P.M.

†ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು ಕೋಟೆ).—ಮಾನ್ಯ ಅಧ್ಯಕ್ಷರೇ, ಈ ದಿನ ನಮ್ಮ ಮುಂದಿರುವ ಮುಖ್ಯ ಬೇಡಿಕೆಯಾದ ಮಾರಾಟ ತೆರಿಗೆ ಬಗ್ಗೆ ಕೆಲವು ಸಲಹೆಗಳನ್ನು ಕೊಡುತ್ತೇನೆ. ನಮ್ಮ ರಾಜ್ಯಕ್ಕೆ ವರಮಾನ ಬರುವ ಬಾಬಿನಲ್ಲಿ ಮಾರಾಟ ತೆರಿಗೆಯೂ ಒಂದು. ವಿಶದವಾಗಿ ಹೇಳುವುದಾದರೆ ಇದು ಸರಿಯಾಗಿ ವಸೂಲಾಗುತ್ತಿಲ್ಲ, ಸರಿಯಾಗಿ ತೆರಿಗೆ ವಿಧಿಸಿ ವಸೂಲು ಮಾಡಿದ್ದರೆ ಹೆಚ್ಚು ವರಮಾನ ಇದರಿಂದ ಬರುತ್ತಿತ್ತು. ಆದುದರಿಂದ ನಮ್ಮ ಅರ್ಥಸಚಿವರು ಈ ತೆರಿಗೆ ಬಗ್ಗೆ ಸಾಕಷ್ಟು ಅನುಭವ ಅವರಿಗಿರುವುದರಿಂದ ಇದನ್ನು ಸರಿಯಾದ ರೀತಿಯಲ್ಲಿ ವಸೂಲು ಮಾಡಿದರೆ, ಅದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಂಡರೆ ಎಷ್ಟೋ ಸಾಧಿಸಿದಂತಾಗುವುದು. ಇದರಲ್ಲಿ ಹೆಚ್ಚಿನ

(ಶ್ರೀ ಟಿ. ಆರ್. ಶಾಮಣ್ಣ)

ಜವಾಬ್ದಾರಿ ತೆರಿಗೆಯನ್ನು ವಸೂಲು ಮಾಡುವ ಅಧಿಕಾರಿಗಳ ಮೇಲಿದೆ. ಅನೇಕ ಅಧಿಕಾರಿಗಳು ಬೇಲಿ ಎದ್ದು ಹೊಲ ಮೇಯುವ ಹಾಗೆ ಈ ತೆರಿಗೆ ಪೋಲಾಗುವುದಕ್ಕೆ ಅವಕಾಶ ಕೊಡುತ್ತಿದ್ದಾರೆ. ಒಂದನೆಯದಾಗಿ ಆಫೀಸರುಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಬದಲಾಯಿಸುವ ಬಗ್ಗೆ ಸಾಕಷ್ಟು ತೀವ್ರವಾಗಿ ಕಾರ್ಯಕ್ರಮ ತೆಗೆದುಕೊಳ್ಳಬೇಕು. ನನಗೆ ತಿಳಿದಿರುವ ಹಾಗೆ ಒಬ್ಬ ಅಧಿಕಾರಿ ಬೆಂಗಳೂರು ಸರ್ಕಲನಂಥ ಜಾಗಕ್ಕೆ ಬರಲು 10-15 ಸಾವಿರ ರೂಪಾಯಿ ಖರ್ಚು ಮಾಡುವರು. ಪ್ರೊಸೆಸ್ ಸರ್ವರ್‌ನಿಂದ ಹಿಡಿದು ಆಫೀಸರವರೆಗೆ ಒಂದು ಮಾಮೂಲಿದೆ. ಇದರಿಂದ ಬರಬೇಕಾದ ವರಮಾನ ಪೋಲಾಗುವುದು. ಪೋಲಾಗುವುದಕ್ಕೆ ಕಾರಣ ಒಂದನೆಯದಾಗಿ ಬಿಲ್ಲನ್ನು ಆದಷ್ಟು ಲೆಕ್ಕಕ್ಕೆ ತೆಗೆದುಕೊಳ್ಳದಿರುವುದು, ಎರಡನೆಯದಾಗಿ ಸಾಮಾನು ಮಾರುವಾಗ ಬಿಲ್ ಕೊಡದಿರುವುದು, ಇದು ಅನೇಕ ಸಂದರ್ಭಗಳಲ್ಲಿ ನಡೆಯುವುದು. ರಾಮನ ಲೆಕ್ಕ ಮತ್ತು ಕೃಷ್ಣನ ಲೆಕ್ಕ ಎಂದು ಅನೇಕ ವರ್ತಕರು ಎರಡು ಲೆಕ್ಕ ಇಡುವರು. ಮಾರಿದಾಗ ಬಿಲ್ಲು ಕೊಡಬೇಕು ಎಂದು ವ್ಯವಸ್ಥೆ ಮಾಡಿದರೆ ಸಾಧ್ಯವಾದಷ್ಟು ವರಮಾನ ಪಡೆಯಬಹುದು. ಲೆಕ್ಕದ ಪುಸ್ತಕವನ್ನು ಆರಂಭ ಮಾಡುವಾಗ ಅದಕ್ಕೆ ಒಂದು ಸೀಲು ಹಾಕುವುದು ಅಥವ ಅಂಥ ಯಾವುದಾದರೂ ಒಂದು ಕ್ರಮ ಇದ್ದರೆ ಬರತಕ್ಕ ಬಿಲ್ಲುಗಳೆಲ್ಲವನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ, ಮಾರುವುದಕ್ಕೆ ಸರಿಯಾಗಿ ಬಿಲ್ಲು ಕೊಡುವ ವ್ಯವಸ್ಥೆ ಮಾಡಿದರೆ ಹೆಚ್ಚು ಉತ್ಪತ್ತಿ ಬರುವುದು. ಜೊತೆಗೆ ಆಫೀಸರುಗಳು ಹೋಗಿ ಇಷ್ಟು ತೆರಿಗೆ ಹಾಕುವುದಾಗಿ ಹೆದರಿಸುವರು, ಆಗ ವರ್ತಕರು ಖಾಜಿ ನ್ಯಾಯ ಮಾಡಿ ಮಾಮೂಲು ಕೊಟ್ಟರೆ ಎಲ್ಲಾ ಸರಿಹೋಗುವುದು. ಆದುದರಿಂದ ಆಫೀಸರ ಲೆವಲ್‌ನಲ್ಲಿ ಬಿಗಿ ಮಾಡಿದರೆ ಹೆಚ್ಚು ವರಮಾನ ಬರುವುದು. ಸೋರಿಹೋಗುವ ತೆರಿಗೆಯನ್ನು ಸರಿಯಾಗಿ ವಸೂಲು ಮಾಡಿದರೆ ಹೆಚ್ಚು ಆದಾಯ ಪಡೆಯಲು ಅವಕಾಶವಾಗುವುದು. ಇದರ ಜೊತೆಗೆ ಅನೇಕರು ಸೇಲ್ಸ್ ಟ್ಯಾಕ್ಸ್ ವಸೂಲು ಮಾಡುವುದನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ವರ್ತಕರು ಸಾಮಾನುಗಳ ಮೇಲೆ ಲಾಭ ತೆಗೆದುಕೊಂಡು ಸರಕಾರದ ಪರವಾಗಿ ವಸೂಲು ಮಾಡುವ ಮಾರಾಟ ತೆರಿಗೆಯನ್ನು ಸ್ವಂತಕ್ಕೆ ಬಳಸಿಕೊಳ್ಳಲು ಅವಕಾಶವಿದೆ. ಆದುದರಿಂದ ಮಾರಾಟ ತೆರಿಗೆ ಬಗ್ಗೆ ಸಾಕಾದಷ್ಟು ಶ್ರದ್ಧೆವಹಿಸಿ ಸರಿಯಾಗಿ ವಸೂಲು ಮಾಡಲು ಕ್ರಮ ತೆಗೆದುಕೊಳ್ಳಬೇಕು ಎಂದು ಸಲಹೆ ಮಾಡುತ್ತೇನೆ. ಈ ತೆರಿಗೆಯನ್ನು ಅನೇಕ ಸೋರ್ಸ್‌ನಲ್ಲಿ ವಿಧಿಸಿ ತೆಗೆದುಕೊಳ್ಳುವರು, ಇದರಿಂದ ತೊಂದರೆಯಾಗುವುದು, ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಹಾಕಬೇಕು ಎಂಬ ಒತ್ತಾಯವಿದೆ. " ಈಗಿರುವ ಪದ್ಧತಿಯಿಂದ ಕಿರುಕುಳವಿದೆ, ಈಗ ಕಾಂಪ್ಲಿಕೇಟೆಡ್ ಮೆಥೆಡ್ ಇದೆ, ತೆರಿಗೆ ಕೊಡುವವರಿಗೆ ತೊಂದರೆಯಾಗಬಾರದು ಎಂದು ಹೇಳುತ್ತಿದ್ದಾರೆ. ಆದುದರಿಂದ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಹಾಕಿದರೆ ಅನುಕೂಲ. ಆದುದರಿಂದ ಮಾಹಿತಿ ತರಿಸಿ ನೋಡಿ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಹಾಕುವುದರಿಂದ ನಷ್ಟವೇನು ಎಂದು ಯೋಚನೆ ಮಾಡಿ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಹಾಕಿದರೆ ವಸೂಲು ಮಾಡುವುದಕ್ಕೂ ಸುಲಭವಾಗುವುದು ಇವೇಷನ್ ಸಹ ಕಡಿಮೆಯಾಗುವುದು, ವರ್ತಕರಿಗಿರುವ ಕಿರುಕುಳವೂ ಕಡಮೆಯಾಗುವುದು. ಸಿಂಗಲ್ ಪಾಯಿಂಟ್ ತೆರಿಗೆ ಹಾಕುವುದರಿಂದ ವರಮಾನ ಕಡಮೆಯಾಗುವುದೇ ಎಂಬುದನ್ನು ಪರಿಶೀಲಿಸಿ ನ್ಯೂನತೆಯನ್ನು ಸರಿಪಡಿಸಬಹುದು.

ಅರ್ಥ ಸಚಿವರು ಸಾಮಾನ್ಯವಾಗಿ ಆಹಾರ ಪದಾರ್ಥಗಳ ಮೇಲೆ ತೆರಿಗೆ ಹಾಕುವುದನ್ನು ಕಡಮೆ ಮಾಡಬೇಕು, ಅಕ್ಕಿ, ಬೇಳೆ ಮುಂತಾದ ಸಾಮಾನುಗಳ ಮೇಲೆ ಹಾಕುವುದು ಸರಿಯೇ ಎಂದು ಯೋಚನೆ ಮಾಡಬೇಕಾಗಿದೆ. ಈಗ ಅನೇಕ ಸಾಮಾನುಗಳ ಮೇಲೆ ಸೇಕಡ 10 ರಿಂದ 14ರ ವರೆಗೆ ತೆರಿಗೆ ಇದೆ. ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಹಾಕಿ ಆದಷ್ಟು ಆಹಾರ ಪದಾರ್ಥಗಳ ಮೇಲೆ ಹಾಕದಂತೆ ನೋಡಿಕೊಳ್ಳಬೇಕು ಎಂದು ಒತ್ತಾಯ ಮಾಡುತ್ತೇನೆ.

ಆಕ್ಟ್ರಾಯಿ ತೆಗೆಯಬೇಕೆಂದು ವರ್ತಕರು ಒತ್ತಿ ಹೇಳುತ್ತಿದ್ದಾರೆ. ಇದು ಓಬೀರಾಯನ ಕಾಲದ್ದು, ತೆಗೆದುಹಾಕಬೇಕು ಎಂದು ಹೇಳುತ್ತಿದ್ದಾರೆ. ನನಗೆ ಸ್ಥಳೀಯ ಸಂಸ್ಥೆಗಳ ಸಂಪರ್ಕ ಇರುವುದು. ಸುಮಾರು 10 ವರ್ಷಗಳ ಕೆಳಗೆ ಬೆಂಗಳೂರು ಕಾರ್ಪೊರೇಷನ್ನಿಗೆ 75 ಲಕ್ಷ ರೂಪಾಯಿ ವರಮಾನ ಆಕ್ಟ್ರಾಯಿಂದ ಬರುತ್ತಿತ್ತು, ಈಗ ಹೆಚ್ಚು ಕಡಮೆ ಎರಡೂಮುಕ್ಕಾಲು ಕೋಟಿ ಬರುವುದು. ಇಷ್ಟು ವರಮಾನ ಹೋದರೆ ತೊಂದರೆಯಾಗುವುದು. ಇದನ್ನು ಯೋಚನೆಮಾಡಬೇಕು. ಆಕ್ಟ್ರಾಯಿ ಹೋಗುವಾಗ ಬೇರೆ ಅದನ್ನು ಸರಿದೂಗಿಸಲು ಆದಾಯ ಬರುವಂತಿರಬೇಕು. ಇಲ್ಲದಿದ್ದರೆ ಕಷ್ಟ. ಸಾಧಾರಣವಾಗಿ ಲೋಕಲ್ ಬಾಡೀಸ್‌ಗೆ ತೆರಿಗೆ ಮೂಲ ಕೇವಲ ಎರಡು ಮೂರು ಮಾತ್ರ ಇರುವಾಗ 'ಆಕ್ಟ್ರಾಯಿ ಹೋದರೆ ತೊಂದರೆಯಾಗುವುದು. ಆದುದರಿಂದ ಆಕ್ಟ್ರಾಯಿ ತೆಗೆಯುವುದಾದರೆ ಲೋಕಲ್ ಬಾಡೀಸ್‌ಗೆ ಬರುತ್ತಿದ್ದ ವರಮಾನ ಕಡಮೆಯಾಗದಂತೆ ನೋಡಿ ವ್ಯವಸ್ಥೆಮಾಡಿ

ತೆಗೆಯಬೇಕೆಂದು ಒತ್ತಾಯಮಾಡುತ್ತೇನೆ : ಆ ಆದಾಯ ಹೋದರೆ ಬೇರೆ ಪ್ರೋಗ್ರೆಸಿವ್ ಇನ್‌ಕಂ ಬರುವಹಾಗಿರಬೇಕು. ಹಾಗೆ ಮಾಡಿ ಬದಲಾಯಿಸಬೇಕು. ಸುಮ್ಮನೆ ಒಂದು ಸಲ ಅದರಿಂದ ನಷ್ಟವಾಗುವುದನ್ನು ಸರಿದೂಗಿಸಿದರೆ ಸಾಲದು. ಹಿಂದೆ ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ಸಂಬಂಧದಲ್ಲಿ 1957 ರಲ್ಲಿ ಕೊಡುತ್ತಿದ್ದ ನಾಲ್ಕೂವರೆ ಲಕ್ಷ ರೂಪಾಯಿಗಳನ್ನೇ ಈಗಲೂ ಕೊಡುತ್ತಿದ್ದಾರೆ. ಹಾಗೆ ಮಾಡಿದರೆ ತೊಂದರೆಯಾಗುವುದು. ಆದುದರಿಂದ ಎಲ್ಲಾ ವಿಚಾರ ಗಳನ್ನೂ ಗಮನಿಸಿ ಆಕ್ಟ್ರಾಯ್ ತೆಗೆಯಬೇಕೆಂದು ಹೇಳುತ್ತೇನೆ.

ಎರಡನೆಯದಾಗಿ ಓಲ್ಡ್ ಏಜ್ ಪೆನ್‌ಷನ್ ಇದೆ, ಇದರಿಂದ ಅನೇಕರಿಗೆ ಸಹಾಯವಾಗಿದೆ. ಆದರೆ ಕೆಲವರಿಗೆ ವರ್ಷವಾದರೂ ಪೆನ್‌ಷನ್ ಸಿಕ್ಕಿಲ್ಲ. ಆದಷ್ಟು ಬೇಗ ಕೊಡಬೇಕು. ಅನೇಕರಿಗೆ ಹೇಗೆ ತೆಗೆದುಕೊಳ್ಳಬೇಕೆಂಬುದೇ ಗೊತ್ತಿರುವುದಿಲ್ಲ. ನಿಜವಾಗಿಯೂ ವಯಸ್ಸಾದವರಿಗೆ ಅನುಕೂಲ ವಾಗಬೇಕೆಂದಿದ್ದರೆ ಬೇಗ ಕೊಡಲು ವ್ಯವಸ್ಥೆ ಮಾಡಬೇಕು. ಅನೇಕರಿಗೆ ಓದು ಬರಹ ಬರುವುದಿಲ್ಲ, ಹೇಗೆ ತೆಗೆದುಕೊಳ್ಳಬೇಕೆಂಬುದು ಗೊತ್ತಿರುವುದಿಲ್ಲ. ಆದುದರಿಂದ ತೆಗೆದುಕೊಳ್ಳಲು ಅನುಸರಿಸ ಬೇಕಾದ ಕ್ರಮವನ್ನು ಆದಷ್ಟು ಸುಲಭ ಮಾಡಿ ನಿಜವಾದ ಬಡವರಿಗೆ ಓಲ್ಡ್ ಏಜ್ ಪೆನ್‌ಷನ್ನಿನಿಂದ ಅನುಕೂಲವಾಗುವಂತೆ ಏರ್ಪಾಡು ಮಾಡಬೇಕು. ಕೆಲವರು 70 ವರ್ಷವಾಗಿರುವವರಿಗೆ ಇದನ್ನು ಕೊಡಬೇಕೆಂದಿರುವುದನ್ನು 65 ವರ್ಷಕ್ಕೆ ಇಳಿಸಬೇಕೆಂದು ಹೇಳಿದ್ದಾರೆ. 70 ವರ್ಷವಾಗಿರುವವರಿಗೇ ಇನ್ನೂ ಸಿಕ್ಕಿಲ್ಲದಿರುವಾಗ ಅವರಿಗೆ ಈ ಸೌಲಭ್ಯ ಮೊದಲು ಒದಗಿಸಿ ನಂತರ ಸಾಧ್ಯವಾದರೆ 65 ವರ್ಷವಾಗಿರುವವರಿಗೆ ಕೊಡುವ ವಿಚಾರವನ್ನು ಯೋಚನೆಮಾಡಬೇಕು.

ಪೊಲಿಟಿಕಲ್ ಪೆನ್‌ಷನ್ ಬಗ್ಗೆ ಕೂಡ ಆದಷ್ಟು ತೀವ್ರವಾಗಿ ಕಾರ್ಯಕ್ರಮ ಕೈಕೊಳ್ಳಬೇಕು. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಪಿ. ಎಂ. ಬಂಗಿ (ಜಮಖಂಡಿ).—ಮಾನ್ಯ ಅಧ್ಯಕ್ಷರೇ, ನಮ್ಮ ಅರ್ಥ ಮಂತ್ರಿಗಳು ಈವೊತ್ತಿನ ದಿವಸ ಮಂಡಿಸಿರತಕ್ಕ 9 ಬೇಡಿಕೆಗಳನ್ನು ಬೆಂಬಲಿಸುತ್ತಾ ಅದರಲ್ಲಿ ಕೆಲವು ಸಲಹೆಗಳನ್ನು ಸೂಚಿಸಬಯಸುತ್ತೇನೆ. ಮೊಟ್ಟಮೊದಲನೆಯದಾಗಿ ಸೇಲ್ಸ್‌ಟ್ಯಾಕ್ಸ್ ವಿಚಾರದಲ್ಲಿ ಹೇಳುವುದಾದರೆ, ನಮ್ಮ ಜಿಲ್ಲೆಯಲ್ಲಿ ಹಲಕೆಲವು ದೊಡ್ಡ ವ್ಯಾಪಾರಿಗಳು ಡೂಪ್ಲಿಕೇಟ್ ಲೆಕ್ಕದ ಪುಸ್ತಕಗಳನ್ನು ಇಟ್ಟು ಸೇಲ್ಸ್‌ಟ್ಯಾಕ್ಸ್ ಅಧಿಕಾರಿಗಳಿಗೆ ತೋರಿಸುವ ಪುಸ್ತಕಗಳೇ ಬೇರೆ, ಮತ್ತು ತಮ್ಮ ಸ್ವಂತದ ಮಾಹಿತಿಗೋಸ್ಕರ ಇಟ್ಟ ಪುಸ್ತಕಗಳೇ ಬೇರೆ. ಇಂಥಾ ಅಂಗಡಿಕಾರರ ಮೇಲೆ ಪೋಲೀಸ್ ಅಧಿಕಾರಿಗಳು ರೇಡ್ ಮಾಡಿಸಿ ಅವುಗಳನ್ನು ಪತ್ತೆ ಹಚ್ಚಿ ಅಂತಹ ವ್ಯಾಪಾರಸ್ಥರುಗಳನ್ನು ಗುರಿ ಮಾಡಬೇಕೆಂದು ಹೇಳಬಯಸುತ್ತೇನೆ. ಸೇಲ್ಸ್ ಟ್ಯಾಕ್ಸ್ ಅಧಿಕಾರಿಗಳು ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಲಂಚದ ಅಧಿಕಾರಿಗಳು ಇರುವುದರಿಂದ ಅವರು ವ್ಯಾಪಾರಸ್ಥರಿಗೆ ಕಿರುಕುಳ ಕೊಡುತ್ತಾರೆ. ಮತ್ತು ಈ ರೀತಿ ಅವರಿಗೆ ತ್ರಾಸ ಕೊಟ್ಟು ಅವರ ಕಡೆಯಿಂದ ಲಂಚದ ಹಣವನ್ನು ತೆಗೆದುಕೊಳ್ಳುತ್ತಾರೆ. ನಮ್ಮ ಜಮಖಂಡಿ ತಾಲ್ಲೂಕಿನ ಬಗ್ಗೆ ಮಾತನಾಡಬೇಕಾದರೆ ಅಲ್ಲಿನ ಅಧಿಕಾರಿಗಳು ಸಾಕಷ್ಟು ಲಂಚದಾರುಣವನ್ನು ಸ್ವೀಕರಿಸಿ ಪ್ರತಿದಿನ 100—200 ರೂಪಾಯಿ ತೆಗೆದುಕೊಳ್ಳುತ್ತಿದ್ದಾರೆಂದು ತಿಳಿದುಬಂದಿದೆ. ಆದುದರಿಂದ ಅಂತಹ ಅಧಿಕಾರಿಗಳಮೇಲೆ ಉಗ್ರವಾದ ಕಾರ್ಯಕ್ರಮಗಳನ್ನು ತೆಗೆದುಕೊಂಡು ಇದಕ್ಕೆ ಒಂದು ಕಾನೂನು ಮಾಡಿ ಆ ಶಾಸನಕ್ಕೆ ಅವರನ್ನು ಗುರಿ ಮಾಡಿದರೆ ಅನುಕೂಲವಾಗುತ್ತದೆ ಇಲ್ಲದಿದ್ದರೆ ಲಂಚಗುಳಿತನವನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಬಯಸುತ್ತೇನೆ.

[MADAM SPEAKER in the Chair]

ಇನ್ನು ಎರಡನೆಯದಾಗಿ ರಾಮದುರ್ಗ, ಮುಧೋಳ್ ಮತ್ತು ಜಮಖಂಡಿ ಸಂಸ್ಥಾನದ ನಿವೃತ್ತಿಹೊಂದಿದ ಪ್ರಾಥಮಿಕ ಶಾಲಾ ಶಿಕ್ಷಕರ ಪೆನ್‌ಷನ್ ಹಣ ಇನ್ನೂ ಫೈನಲೈಸ್ ಆಗಿಲ್ಲ. ಇಂಥಾ ಶಿಕ್ಷಕರಿಗೆ ಈವೊತ್ತಿನ ದಿವಸ ಅವರು ಪೆನ್‌ಷನ್ ಪಗಾರ ಇಲ್ಲದೇ ಬಹಳ ತ್ರಾಸದಲ್ಲಿದ್ದಾರೆ. ಆದುದರಿಂದ ಇದರ ಬಗ್ಗೆ ಆರ್ಥಿಕ ಮಂತ್ರಿಗಳು ತನಿಖೆ ಮಾಡಿ ಕಾನೂನಿನ ಪ್ರಕಾರ ಅವರಿಗೆ ಪೆನ್‌ಷನ್ ದೊರೆಯುವಂತೆ ವ್ಯವಸ್ಥೆ ಮಾಡಬೇಕೆಂದು ಈ ಸಮಯದಲ್ಲಿ ಸೂಚಿಸಬಯಸುತ್ತೇನೆ.

ಇನ್ನು ರಾಜಕೀಯ ಸಂತ್ರಸ್ತರಿಗೆ ನಮ್ಮ ಕಡೆಯಲ್ಲಿರುವ ಜಮಖಂಡಿಯಲ್ಲಿ ಕೆಲವರಿಗೆ ರಾಜಕೀಯ ಪೆನ್‌ಷನ್ ಎರಡು ವರ್ಷಗಳವರೆಗೆ ಕೊಡಲಾಗಿತ್ತು. ಆ ಹಣವನ್ನು ತಪ್ಪಿ ಕೊಡ ಲಾಗಿದೆಯೆಂದು ಹೇಳಿ ವಾಪಸ್ಸು ಕೊಡಬೇಕೆಂದು ಕೇಳಿದ್ದಾರೆ. ಅವರು ಆ ಹಣವನ್ನು ಖರ್ಚು ಮಾಡಿದ್ದಾರೆ. ಈವೊತ್ತಿನ ದಿವಸ ಅದನ್ನು ವಾಪಸ್ಸು ಕೊಡಲಿಕ್ಕೆ ಅವರಿಂದ ಶಕ್ಯವಿಲ್ಲ. ಆದುದರಿಂದ

(ಶ್ರೀ ಪಿ. ಎಂ. ಬಂಗಿ)

ಅವರಿಗೆ ಕೊಟ್ಟಿರುವ ಹಣವನ್ನು ವಸೂಲ್ಮಾಡಬಾರದೆಂದು ತಿಳಿಸಬೇಕೆಂದು ಈ ಸಮಯದಲ್ಲಿ ತಮಗೆ ಸೂಚಿಸಬಯಸುತ್ತೇನೆ.

ಇನ್ನು ರಾಜಧನದ ವಿಚಾರದಲ್ಲಿ ಹೇಳುವುದಾದರೆ ಜಮಖಂಡಿ ರಾಜರಿಗೆ ಮರ್ಜರ್ ಅಗ್ರಿಮೆಂಟ್ ಪ್ರಕಾರ 98 ಸಾವಿರ ರೂಪಾಯಿ ದೊರೆಯುತ್ತಿತ್ತು. ಅನಂತರ ಸ್ಟೇಟ್ ರೀ ಆರ್ಗನೈಸೇಷನ್ ಆಕ್ಟ್ ಬಂದಮೇಲೆ ಈ ಹಣ ಜಮಖಂಡಿ ರಾಜರಿಗೆ ಮಹಾರಾಷ್ಟ್ರ ಸರ್ಕಾರದ ಮುಖಾಂತರ ತಲುಪುತ್ತಿತ್ತು. ಆದರೆ ರಾಜಧನ ರದ್ದತಿ ಕಾಯಿದೆ ಪಾರ್ಲಮೆಂಟ್‌ನಲ್ಲಿ ಪಾಸಾದ ಮೇಲೆ ಈ ರಾಜರಿಗೆ ರಾಜಧನವನ್ನು ಮತ್ತು ಬೇರೆ ಬೇರೆ ಸೌಕರ್ಯಗಳನ್ನು ಕೊಡುವುದು ಅವಶ್ಯಕ ವಿಲ್ಲ ಎಂದು ಮಾಡಿದ್ದಾರೆ. ಆ ಬಗ್ಗೆ ವಿಚಾರ ಮಾಡಬೇಕು ಎಂದು ಹೇಳುತ್ತೇನೆ. ಜಮಖಂಡೀ ರಾಜರಿಗೆ ಇದ್ದ 10 ಲಕ್ಷ ರೂಪಾಯಿ ಬೆಲೆ ಬಾಳುವಂಥ ಸುಮಾರು 8—10 ಸಾವಿರ ಎಕರೆ ಜಮೀನುಗಳನ್ನು, ಗೇಣಿದಾರರಿಂದ ತಮಗೆ ಬರತಕ್ಕ ಪರಿಹಾರ ಧನವನ್ನು ಮೈಸೂರು ಸರ್ಕಾರಕ್ಕೆ ದಾನ ರೂಪವಾಗಿ ಕೂಡ ಮಾಡಿದ್ದರು. ಆ ಬಗ್ಗೆ ಇನ್ನೂವರೆಗೆ ಜಮಖಂಡಿ ರಾಜರಿಗೆ ಉತ್ತರ ದೊರಕಲಿಲ್ಲ. ಇದನ್ನು ವಿಚಾರಮಾಡಿ ಜಮಖಂಡಿ ರಾಜರಿಗೆ ಕೊಡತಕ್ಕ ಪರಿಹಾರ ಧನ ಏನು ಇದೆಯೋ ಆ ಹಣ ಮೈಸೂರು ಸರ್ಕಾರಕ್ಕೆ ದಾನರೂಪವಾಗಿ ಬರುತಿತ್ತು. ಜಮಖಂಡಿ ರಾಜರು ಇದರ ಬಗ್ಗೆ ಮೈಸೂರು ರಾಜ್ಯಕ್ಕೆ ಬರೆದು ಕೊಟ್ಟಿದ್ದಾರೆ. ಈಗಿನ ಸರ್ಕಾರ ಇದನ್ನು ಸ್ವೀಕರಿಸಿ, ಮೈಸೂರು ಸರ್ಕಾರದ ಬೊಕ್ಕಸಕ್ಕೆ ಆ ಜಮೀನನ್ನು ಮಾಡಿಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಇನ್ನು ಮುಧೋಳ, ಜಮಖಂಡಿ ಮತ್ತು ರಾಮದುರ್ಗ ಈ ರಾಜರುಗಳ ಪ್ಯಾಲೇಸುಗಳು ಖಾಲಿಯಾಗಿದೆ ಎಂದು ತಿಳಿದಿರುತ್ತೇನೆ. ಆ ರಾಜರುಗಳ ಪ್ಯಾಲೇಸ್‌ಗಳನ್ನು ಶಿಕ್ಷಣ ಸಂಸ್ಥೆಯವರಿಗೆ ಇಲ್ಲವೇ ಸರ್ಕಾರದವರಿಗೆ ಬಿಟ್ಟುಕೊಡಲು ಸಿದ್ಧವಾಗಿದ್ದಾರೆ. ಈ ಕಟ್ಟಡಗಳನ್ನು ತೆಗೆದುಕೊಂಡರೆ ಅವನ್ನು ದುರಸ್ತು ಮಾಡಲು ಮತ್ತು ಟ್ಯಾಕ್ಸ್ ಇವುಗಳಿಗೆ ಸುಮಾರು ಹಣ ಖರ್ಚಾಗುತ್ತದೆ. ಆದುದರಿಂದ ರಾಜರು ತಮ್ಮ ರಾಜಭವನಗಳನ್ನು ಮೈಸೂರು ಸರ್ಕಾರಕ್ಕೆ ಮುಫತ್ತಾಗಿ ಕೊಡಲು ಸಿದ್ಧವಾಗಿದ್ದಾರೆ. ಅಂತಹ ಪ್ಯಾಲೇಸ್‌ಗಳನ್ನು ತೆಗೆದುಕೊಂಡು ನಮ್ಮ ಸರ್ಕಾರದವರು ಬೇರೆ ಯಾವುದಾದರೂ ಸಾರ್ವಜನಿಕ ಕಾರ್ಯಗಳಿಗೆ ಉಪಯೋಗಿಸಬೇಕೆಂದು ನಾನು ಈ ಸಮಯದಲ್ಲಿ ಸೂಚಿಸಬಯಸುತ್ತೇನೆ. ಇಷ್ಟು ನನ್ನ ಸಲಹೆಗಳನ್ನು ನೀಡಿ ಇವೊತ್ತಿನ ದಿವಸ ಮಂಡಿಸಿರತಕ್ಕ 9 ಬೇಡಿಕೆಗಳನ್ನು ಸಮರ್ಥಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ.)—ಮಾನ್ಯ ಅಧ್ಯಕ್ಷರೇ, ಇವೊತ್ತು ತಂದಿರ ತಕ್ಕಂಥ ಈ ಬೇಡಿಕೆಯನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತಾ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಅನೇಕ ಮಾನ್ಯ ಸದಸ್ಯರು ಇದುವರೆಗೂ ಮಾತನಾಡಿದ್ದಾರೆ. ಇವೊತ್ತಿನ ದಿವಸ ಈ ಸೇಲ್ಸ್ ಟ್ಯಾಕ್ಸ್ ಮತ್ತು ಇನ್‌ಕಂಟ್ಯಾಕ್ಸ್ ಅಂತ ಏನು ತೆರಿಗೆ ಹಾಕಿದ್ದೀರಿ ಅದನ್ನು ಯಾವ ರೂಪದಲ್ಲಿ ಸರ್ಕಾರ ತರುತ್ತಾರೋ ಅದೇ ರೀತಿ ಲೆಕ್ಕಗಳನ್ನು ಬದಲಾಯಿಸಿಕೊಳ್ಳುವುದಕ್ಕೆ ವರ್ತಕರು ಹುಡುಕಿಕೊಂಡಿದ್ದಾರೆ. ಎಲ್ಲಾ ವರ್ಗದ ಮೇಲೂ ಯಾವರೀತಿ ಟ್ಯಾಕ್ಸ್ ಹಾಕುತ್ತಿರೋ ಅದನ್ನು ತಪ್ಪಿಸಿಕೊಳ್ಳಲು ಅವರು ತಮಗೆ ಬೇಕಾದ ರೀತಿಯಲ್ಲಿ ಲೆಕ್ಕವನ್ನು ಇಡಲು ದಾರಿಯನ್ನು ಹುಡುಕಿಕೊಂಡಿದ್ದಾರೆ. ಇದರ ಬಗ್ಗೆ ಶ್ರೀ ಶಾಮಣ್ಣನವರು ಹೇಳಿದರು ರಾಮನ ಲೆಕ್ಕ, ಕೃಷ್ಣನ ಲೆಕ್ಕ, ಅಂತ ಬೇರೆ ಬೇರೆ ಪುಸ್ತಕವನ್ನು ಇಟ್ಟುಕೊಂಡಿದ್ದಾರೆ ಎಂದು. ಒಂದೊಂದು ಅಂಗಡಿ ಯವನು ಸಹ ತಮ್ಮ ಕಣ್ಣನ್ನೂ ಮುಚ್ಚಿಸಿ ಬೇರೆ ಕಡೆ ಕಳ್ಳ ಹಣವನ್ನು ಸಂಪಾದನೆ ಮಾಡುವ ದೃಷ್ಟಿಯಿಂದ ಬೇರೆ ಬೇರೆ ಲೆಕ್ಕವನ್ನು ಇಟ್ಟುಕೊಂಡಿದ್ದಾನೆ. ಅದೇ ಪ್ರಕಾರ ನಾವು ಕಪ್ಪು ಹಣ ಎಂದು ಏನು ಹೇಳುತ್ತೇವೊ ಅದು ಕೋಟ್ಯಾಂತರ ರೂಪಾಯಿ ನಮ್ಮ ಲೆಕ್ಕಕ್ಕೂ ಸಿಕ್ಕದೆ, ನಿಮ್ಮ ಲೆಕ್ಕಕ್ಕೂ ಸಿಕ್ಕದೇ ಇದೆ. ಆ ಹಣದ ಬಗ್ಗೆ ಯಾವರೀತಿ ಪತ್ತೆ ಮಾಡಬೇಕು ಎನ್ನುವುದಕ್ಕೆ ಒಂದು ಸರಿಯಾದ ನೀತಿಯನ್ನು ರೂಪಿಸದೇ ಇದ್ದರೆ ಬಹುಶಃ ನನಗೆ ಅನಿಸುತ್ತದೆ ನೀವು ಯಾವ ರೀತಿಯಾಗಿ ಕಾರ್ಯಕ್ರಮ ತೆಗೆದುಕೊಂಡರೂ, ಎಷ್ಟೇ ದಕ್ಷತೆಯಿಂದ ಆಡಳಿತ ಮಾಡುವುದಕ್ಕೆ ಹೋದರೂ ತಮ್ಮನ್ನೂ ಮರೆಸಿ ಬೇರೆ ರೂಪದಲ್ಲಿ ಆ ಹಣವನ್ನು ಇಡುವುದಕ್ಕೆ ಏರ್ಪಾಟು ಮಾಡಿಕೊಂಡಿದ್ದಾರೆ. ಇದರ ಬಗ್ಗೆ ವಾಂಚೂ ಸಮಿತಿ ನೇಮಕ ಮಾಡಿದ್ದರು. ಅವರ ಲೆಕ್ಕದಲ್ಲಿ 700 ಕೋಟಿ ರೂಪಾಯಿ ಕಪ್ಪು ಹಣ ಸಿಕ್ಕಿದೆ ಎಂದು ಗೊತ್ತಾಗಿದೆ. ನಮ್ಮ ರಾಜ್ಯದಲ್ಲಿ ಕೋಟ್ಯಂತರ ರೂಪಾಯಿ ಕಪ್ಪು ಹಣ ಭಾರಿ ಉದ್ದಿಮೆದಾರರಲ್ಲಿದೆ. ದೇಶದಲ್ಲಿ ಸಮಾಜವಾದ ಸರ್ಕಾರ ನಿರ್ಮಾಣ ಮಾಡುತ್ತೇವೆಂದು ಹೊರಟಿರತಕ್ಕ ಜನ ಇಂಥವರ ಮೇಲೆ ಯಾವುದಾದರೂ ರೀತಿಯಲ್ಲಿ ಉಗ್ರವಾದ ಕಾರ್ಯಕ್ರಮ ವನ್ನು ಕೈಕೊಂಡು ಕಪ್ಪು ಹಣವನ್ನು ಹೊರಗೆ ತೆಗೆಯುವುದಕ್ಕೆ ಶ್ರಮ ವಹಿಸಬೇಕು. ತಮ್ಮ

ಆಡಳಿತದಲ್ಲಿ ಇಂಥ ಕ್ರಮವನ್ನು ಮಾಡುವುದಾದರೆ ಸಮಾಜವಾದದ ಕಾರ್ಯಕ್ರಮಕ್ಕೆ ಒಂದು ಅಡಿಗಲ್ಲನ್ನು ಹಾಕಿದಂತಾಗುತ್ತದೆ ಎಂದು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ.

ವೃದ್ಧಾಪ್ಯ ವೇತನದ ಬಗ್ಗೆ ನಾನು ತಮ್ಮಲ್ಲಿ ಒಂದು ಪ್ರಾರ್ಥನೆ ಮಾಡುತ್ತೇನೆ. 70 ವರ್ಷ ವಯಸ್ಸು ಆದವರಿಗೆ ವೃದ್ಧಾಪ್ಯ ವೇತನವನ್ನು ಕೊಡುತ್ತಿದ್ದೇವೆ. ಅಂಥವರು ಸಾವಿರಾರು ಜನರಿದ್ದಾರೆ. ಆ ಜನರಿಗೆ ವೃದ್ಧಾಪ್ಯ ವೇತನವನ್ನು ಕೊಡುವುದು ಬರೀ ಘೋಷಣೆಯಲ್ಲಿ ಇದೆಯೇ ಹೊರತು ಸರಿಯಾದ ರೀತಿಯಲ್ಲಿ ಸಹಾಯ ತಲುಪಿಲ್ಲ. ವೃದ್ಧಾಪ್ಯ ವೇತನವನ್ನು ಕೊಡುವ ವಯಸ್ಸನ್ನು 70 ವರ್ಷಗಳಿಂದ 65 ವರ್ಷಗಳಿಗೆ ಇಳಿಸಬೇಕು ಎನ್ನುವುದು ನನ್ನ ಒತ್ತಾಯ ಮತ್ತು ಸಲಹೆ. ಹೀಗೆ ಮಾಡಿದರೆ ಬಹಳ ಜನ ಇದರಿಂದ ಸಂತೃಪ್ತರಾಗುತ್ತಾರೆ. ತಮ್ಮ ಘೋಷಣೆ ಘೋಷಣೆಯಾಗಿಯೇ ಉಳಿಯಬಾರದು ಅದು ಕಾರ್ಯರೂಪಕ್ಕೆ ಇಡೀ ರಾಜ್ಯದಲ್ಲಿ ಬಂದು ಎಲ್ಲೆಲ್ಲಿ 65 ವರ್ಷ ಆಗಿರುವಂಥ ವೃದ್ಧರಿದ್ದಾರೆ ಅವರಿಗೆಲ್ಲ ಒಂದು ಅಥವಾ ಒಂದುವರೆ ವರ್ಷದಲ್ಲಿ ಎಷ್ಟು ಜನಗಳಿಗೆ ವೃದ್ಧಾಪ್ಯವೇತನ ಕೊಡುವುದಕ್ಕೆ ಸಾಧ್ಯ ಎನ್ನುವುದನ್ನು ತಮ್ಮ ಮನಸ್ಸಿನಲ್ಲಿ ಇಟ್ಟು ಕೊಳ್ಳಬೇಕು. 70 ವರ್ಷ ಆಗಿರುವಂಥ ಸುಮಾರು ಜನ ವೃದ್ಧರು ನನ್ನ ಹತ್ತಿರ ಬಂದು ಒಂದು ವರ್ಷದಿಂದ ನಾನು ತಹಸೀಲ್ದಾರರ ಆಫೀಸಿಗೆ, ಮಂತ್ರಿಗಳ ಆಫೀಸಿಗೆ, ಜಿಲ್ಲಾಧಿಕಾರಿಗಳ ಆಫೀಸಿಗೆ ಹೋಗಿದ್ದೆ, ಈ ಹೊತ್ತಿನವರೆಗೂ ನನಗೆ ಹಣ ದೊರಕಿಲ್ಲ ಎಂದು ಹೇಳಿದರು. ಇಂಥವರು ಸಾವಿರಾರು ಜನರಿದ್ದಾರೆ. ಸರ್ಕಾರದ ಹಣವನ್ನು ಸಂತೋಷವಾಗಿ ಅವರು ಬದುಕಿರುವಾಗಲೇ ಒಂದೆರಡು ವರ್ಷವಾದರೂ ತಿನ್ನತಕ್ಕ ರೀತಿಯಲ್ಲಿ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ. ವಯಸ್ಸಿನ ಮಿತಿಯನ್ನು 70 ರಿಂದ 65 ಕ್ಕೆ ಇಳಿಸಿ ಅವರಿಗೆ ಕೂಡಲೇ ವೃದ್ಧಾಪ್ಯವೇತನವನ್ನು ಕೊಡುವ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ.

ಸ್ವಾತಂತ್ರ್ಯ ಹೋರಾಟಗಾರರಿಗೆ ಆರು ತಿಂಗಳು ಅಥವಾ ಒಂದು ವರ್ಷ ಶಿಕ್ಷೆಯಾಗಿದ್ದರೆ ಮಾತ್ರ ವೇತನವನ್ನು ಕೊಡುವುದಾಗಿ ಮಾಡಿರುವುದನ್ನು ಬದಲಾಯಿಸಿ ಒಂದು ತಿಂಗಳು ಜೈಲಿಗೆ ಹೋಗಿದ್ದರೂ ಅಂಥವರನ್ನೆಲ್ಲ ಪತ್ತೆ ಹಚ್ಚಿ, ಅವರ ಸರ್ಟಿಫಿಕೇಟ್ ತರಿಸಿ ಅಂಥವರಿಗೂ ಸ್ವಾತಂತ್ರ್ಯ ಹೋರಾಟದ ವೇತನವನ್ನು ಕೊಡುವಂತೆ ಮಾಡಬೇಕು ಎಂದು ಹೇಳುತ್ತೇನೆ.

ಕುದುರೆ ಜೂಜಿನ ಮೇಲೆ ಬೆಟಿಂಗ್ ಟ್ಯಾಕ್ಸ್ ಹಾಕುತ್ತಿದ್ದೀರಿ. ತಾವು ಸಮಾಜವಾದದ ಸರ್ಕಾರವನ್ನು ನಿರ್ಮಾಣ ಮಾಡಲು ಹೊರಟವರು. ಕುದುರೆ ಜೂಜು ರಾಜ ಮಹಾರಾಜರು ಆಡುತ್ತಿದ್ದ ಆಟ. ಈ ಕುದುರೆ ಜೂಜನ್ನು ಸಂಪೂರ್ಣವಾಗಿ ನಿಲ್ಲಿಸಬೇಕು ಎಂದು ತಮಗೆ ಅರಿಕೆ ಮಾಡಿಕೊಳ್ಳುತ್ತೇನೆ. ಅದನ್ನು ನಿಲ್ಲಿಸುವುದಕ್ಕೆ ನಿಮ್ಮಿಂದ ಆಗುವುದಿಲ್ಲ, ಕಾರಣ 50 ವರ್ಷದ ಲೀಸಿಗೆ ಕೊಟ್ಟಿರುತ್ತೀರಿ. ಹೀಗಿರುವಾಗ ಜನಸಾಮಾನ್ಯರು ಸಮಾಜವಾದದ ಕಾರ್ಯಕ್ರಮವನ್ನು ಎಲ್ಲಿ ನಿರೀಕ್ಷಣೆ ಮಾಡಬಲ್ಲರು ? ಕುದುರೆ ಜೂಜಿನಲ್ಲಿ ಬೆಟಿಂಗ್ ಕಟ್ಟುವವರು ಶ್ರೀಮಂತರು ಮತ್ತು ತೀರ ಬಡತನದಿಂದ ನಮಗೆ ದುಡ್ಡು ಬರಬಹುದು ಎನ್ನುವ ಆಸೆಯಿಂದ, ಯಾವುದೋ ಕುದುರೆ ಗೆದ್ದರೆ, ಒಂದು ಲಕ್ಷ ರೂಪಾಯಿ ಬರಬಹುದು ಎಂದು ತಮ್ಮ ಮನೆಮಠಗಳನ್ನು ಮಾರಿಕೊಂಡಿರುವವರು. ತಾವು ಯಾವುದೇ ಒತ್ತಡಕ್ಕೆ ಒಳಗಾಗದೆ ಕುದುರೆ ಜೂಜನ್ನು ನಿಲ್ಲಿಸತಕ್ಕ ದಿಟ್ಟ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಅನೇಕ ಸರ್ಕಾರಗಳು ಘೋಷಣೆ ಮಾಡಿವೆ. ಹಿಂದೆ ಮದ್ರಾಸ್ ಸರ್ಕಾರ ಸಹ ಈರೀತಿ ಘೋಷಣೆ ಮಾಡಿತ್ತು, ಆದರೆ ಅವರೂ ನಿಲ್ಲಿಸುವುದಕ್ಕೆ ಆಗಿಲ್ಲ. ನಿಮಗೆ ಬಹಳ ಮೆಜಾರಿಟಿ ಇದೆ. ನಿಮ್ಮನ್ನು ಪ್ರಶ್ನೆ ಮಾಡುವವರು ಅಷ್ಟಾಗಿ ಯಾರೂ ಕಾಣುವುದಿಲ್ಲವೆಂದು ತಿಳಿದುಕೊಂಡಿದ್ದೇನೆ. ಒಂದು ಕ್ರಾಂತಿಕಾರಿ ಕಾರ್ಯಕ್ರಮವನ್ನು ಹಾಕಿಕೊಂಡು ಕುದರೆ ಜೂಜು ಏನಿದೆ ಅದನ್ನು ಸಂಪೂರ್ಣವಾಗಿ ನಿಲ್ಲಿಸಬೇಕು ಎಂದು ಕಳಕಳಿಯಿಂದ ಅರಿಕೆ ಮಾಡಿಕೊಳ್ಳುತ್ತೇನೆ.

ಕೆಲವು ಸಂಘಸಂಸ್ಥೆಗಳು ಸಹಾಯಾರ್ಥ ಪ್ರದರ್ಶನಗಳನ್ನು ಏರ್ಪಡಿಸುವಾಗ ಮನರಂಜನೆ ತೆರಿಗೆಯನ್ನು ಮನ್ನಾ ಮಾಡಬೇಕೆಂದು ಕೇಳುವುದಕ್ಕೆ ಬರುತ್ತಾರೆ. ಈ ಕೆಲಸವನ್ನು ಮಾಡಿಸಿ ಕೊಳ್ಳಬೇಕಾದರೆ 200—300 ರೂಪಾಯಿ ಖರ್ಚು ಇಲ್ಲದೆ ಮಾಡಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಪೋಲೀಸಿನವರ ಹತ್ತಿರ ಹೋಗಿ, ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಹೋಗಿ ಕೊನೆಗೆ ಹಣಕಾಸಿನ ಕಾರ್ಯದರ್ಶಿಯವರಿಂದ ಮಂಜೂರಾಗಬೇಕು ಎನ್ನುವ ಮಟ್ಟಕ್ಕೆ ಬಂದಿದೆ. ಸಹಾಯಾರ್ಥವಾಗಿ ನಡೆಸುವಂಥ ಪ್ರದರ್ಶನಗಳಿಗೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿಯ ಮಟ್ಟದಲ್ಲಿಯೇ ಮನರಂಜನಾ ತೆರಿಗೆಯನ್ನು ಮಾಫಿಮಾಡಿಕೊಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದೂ, ಆ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದೂ ಹೇಳುತ್ತೇನೆ.

ಬೆಂಗಳೂರು ಅರಮನೆಯನ್ನು ಒಂದು ಹೋಟೆಲ್ಲಾಗಿ ಮಾಡಬೇಕೆಂದು ಕೆಲವು ಆಸಕ್ತ ಗುಂಪಿನವರು ಸೇರಿಕೊಂಡು, ಭಾರಿ ಭಾರಿ ಕಂಟ್ರಾಕ್ಟರುಗಳು ಸೇರಿಕೊಂಡು ಸನ್ನಾಹ ಮಾಡುತ್ತಿದ್ದಾರೆ.

(ಶ್ರೀ ವಾಟಾಳ್ ನಾಗರಾಜ್)

ಕಾರ್ಪೊರೇಷನ್‌ನವರು ಅದಕ್ಕೆ ಲೈಸೆನ್ಸ್ ಕೊಟ್ಟಿಲ್ಲ ಆದರೂ ಅರಮನೆಯಲ್ಲಿ ರೂಮುಗಳನ್ನು ಸೃಷ್ಟಿಸಲಾಗುತ್ತಿದೆ. ಇವರಲ್ಲಿ ಒಬ್ಬರು ಧರಣಿಪಾಲ್ ಎನ್ನುವವರು, ಮತ್ತೊಬ್ಬರು ಚಾಮರಾಜು ಎನ್ನುವ ದೊಡ್ಡ ಕಂಟ್ರಾಕ್ಟರು. ಅರಮನೆಯ ಉಪಯೋಗವನ್ನು ಪಡೆಯುವುದು ಒಂದಾದರೆ, ಇದರಿಂದ ಕೋಟ್ಯಾಂತರ ರೂಪಾಯಿಗಳ ಲಾಭ ಮಾಡಿರತಕ್ಕ ಮೂರು ಜನರಿದ್ದಾರೆ. ಅವರೆಂದರೆ ಎ.ಡಿ.ಸಿ. ಮಹದೇವಯ್ಯ ಧರಣಿಪಾಲ......

ಅಧ್ಯಕ್ಷರು.—ಯಾರ ಹೆಸರನ್ನೂ ಹೇಳಬಾರದು ಎಂದು ನಾನು ಹಿಂದೆಯೇ ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಮತ್ತು ಹುಜೂರ್ ಸೆಕ್ರೆಟರಿಯಾಗಿದ್ದವರು. ಈ ಮೂರು ಜನರ ಆಸ್ತಿಯನ್ನು ತನಿಖೆ ಮಾಡುವುದಾದರೆ 10 ಕೋಟಿ ರೂಪಾಯಿ ಆಸ್ತಿ ನಿಮಗೆ ಸಿಕ್ಕುತ್ತದೆ. ಮೈಸೂರು ಮಹಾರಾಜರ ಆಸ್ತಿ ಎಷ್ಟು ಇದೆಯೋ ಅಷ್ಟು ಆಸ್ತಿಯನ್ನು ಈ ಮೂರು ಜನರೂ ಮಾಡಿಕೊಂಡಿದ್ದಾರೆ ಇದರ ಬಗ್ಗೆ ತನಿಖೆ ನಡೆಸಿ ಆ ಆಸ್ತಿಯನ್ನು ಸಾರ್ವಜನಿಕರಿಗಾಗಲೀ, ಬಡವರಿಗಾಗಲೀ ಕೊಡಿ. ತಾವು ಈ ಬಗ್ಗೆ ತನಿಖೆಯನ್ನು ಕೈಕೊಳ್ಳುವ ದಿಟ್ಟ ನಿಲುವನ್ನು ತೆಗೆದುಕೊಳ್ಳಬೇಕು. ಅರಮನೆಗಳನ್ನು ಹೋಟೆಲ್ ನಡೆಸುವುದಕ್ಕಾಗಲೀ, ಬೇರೆ ಯಾವುದೇ ಕೆಲಸಕ್ಕಾಗಲೀ ಕೊಡುವುದು ಬೇಡ. ಅರಮನೆಗಳು ರಾಜ್ಯದ ಸಂಕೇತ, ರಾಜ್ಯದ ಸಂಸ್ಕೃತಿಯನ್ನು ಕಾಯುತಕ್ಕ ಸಂಕೇತಗಳು. ಇವನ್ನು ಬೇರೆ ಯಾರಿಗೂ ಪರಭಾರೆ ಮಾಡದೆ ಸರ್ಕಾರ ಅಧೀನದಲ್ಲಿ ಇಟ್ಟುಕೊಂಡು ಇಡೀ ದೇಶದ, ವಿಶ್ವದ ಜನ ನೋಡಿ ಸಂತೋಷ ಪಡತಕ್ಕ ಸಂಕೇತವಾಗಿ ಉಳಿಸಬೇಕೆಂದು ಹೇಳುತ್ತೇನೆ.

6-00 P.M.

†ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷಣಿಯವರೇ, ಈಗಾಗಲೇ ಸಾಕಷ್ಟು ಸದಸ್ಯರು ಈ ಡಿಮ್ಯಾಂಡಿನ ಮೇಲೆ ಮಾತನಾಡಿದ್ದಾರೆ. ಬೇಕಾದಷ್ಟು ಕಟ್ ಮೋಷನ್ಸ್‌ಅನ್ನೂ ಕಳುಹಿಸಿದ್ದಾರೆ. ಮಾನ್ಯ ಶಾಮಣ್ಣನವರು, ಕೃಷ್ಣನ್‌ರವರು, ವಿ. ಎನ್. ಪಾಟೀಲ್‌ರವರು ಮತ್ತು ಕೋಣಂದೂರು ಲಿಂಗಪ್ಪನವರು ಎಲ್ಲರೂ ಕಟ್ ಮೋಷನ್ಸ್ ಕಳುಹಿಸಿದ್ದಾರೆ. ಸಾಧ್ಯವಾದ-ಮಟ್ಟಿಗೆ ಕಟ್ ಮೋಷನ್ಸ್ ವಿಷಯದಲ್ಲಿ ಹಾಗೂ ಚರ್ಚೆಯಲ್ಲಿ ಮಾಡಿರತಕ್ಕ ಸಲಹೆಗಳ ಬಗ್ಗೆ ಸಂಕ್ಷಿಪ್ತವಾಗಿ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅದೇ ರೀತಿ ವಿರೋಧಪಕ್ಷದ ನಾಯಕರು ಈ ಸೇಲ್ಸ್‌ಟ್ಯಾಕ್ಸ್‌ನಲ್ಲಿರತಕ್ಕ ಕರಪ್ಷನ್ ಬಗ್ಗೆ ಹೇಳಿದ್ದಾರೆ. ಪ್ರತಿಯೊಬ್ಬರೂ ಈ ಕರಪ್ಷನ್ ಬಗ್ಗೆ ಮಾತನಾಡಿದ್ದಾರೆ ಎಂದು ನನಗನ್ನಿಸುತ್ತದೆ. ಎಲ್ಲರಿಗೂ ಗೊತ್ತಿರುವ ಹಾಗೆ ಈ ಸೇಲ್ಸ್‌ಟ್ಯಾಕ್ಸ್‌ನಲ್ಲಿ ಆದಾಯ ಹೆಚ್ಚಿಸಲಿಕ್ಕೆ ಎಳ್ಳಷ್ಟೂ ಅಸ್ಪದವಿಲ್ಲ ಎಂದು ನಾನಾದರೂ ಹೇಳುತ್ತಾ ಇಲ್ಲ. ಆದರೆ ಇದನ್ನು ಯಾವ ರೀತಿಯಿಂದ ಮಾಡಬೇಕು ಎನ್ನುವುದರ ಬಗ್ಗೆ ಸಾಕಷ್ಟು ರಚನಾತ್ಮಕವಾಗಿ, ಸ್ಪಷ್ಟವಾಗಿ ಸಲಹೆಗಳು ಬರುತ್ತಿಲ್ಲ. ಅದರಲ್ಲಿ ಕರಪ್ಷನ್ ಇರಬಹುದು, ಲೀಕೇಜ್ ಇರಬಹುದು, ಆದರೆ, ಈಗಿನ ನಮ್ಮ ದೇಶದ ಪರಿಸ್ಥಿತಿಯಲ್ಲಿ ಸಮಾಜದ ಪರಿಸ್ಥಿತಿಯಲ್ಲಿ, ಆಡಳಿತದ ಪರಿಸ್ಥಿತಿಯಲ್ಲಿ ಇಂಥದ್ದು ಮಾಡಿದರೆ, ಎಷ್ಟರಮಟ್ಟಿಗೆ ಇದನ್ನು ಕಡಿಮೆ ಮಾಡಲಿಕ್ಕೆ ಸಾಧ್ಯ ಎಂಬುದರ ಬಗ್ಗೆ ಸ್ಪಷ್ಟವಾದ ಸೂಚನೆಗಳು ಸಾಕಷ್ಟು ಪ್ರಮಾಣದಲ್ಲಿ ಬಂದಿಲ್ಲ ಎಂದು ನಾನು ಹೇಳಬಯಸುತ್ತೇನೆ. ಆದರೂ ಕೂಡ ಸರ್ಕಾರಕ್ಕೆ ತಿಳಿದಮಟ್ಟಿಗೆ, ನಮ್ಮ ಗಮನಕ್ಕೆ ಬಂದಿರತಕ್ಕ ಅಂಶಗಳಿಗೆ ಪರಿಹಾರ ಹುಡುಕುವ ಸ್ಥಿತಿಯಲ್ಲಿದ್ದೇವೆ. ಅದರ ಬಗ್ಗೆ ನಾನು ಹೇಳುತ್ತೇನೆ, ಈಗ ಕಾನೂನು ದೃಷ್ಟಿಯಿಂದ ಅಡ್ಡಿ ಆತಂಕಗಳು ಇವೆ. ಉದಾಹರಣೆಗಾಗಿ, ಇತ್ತೀಚೆಗೆ ಆಗಿದ್ದು ಒಂದು ಆತಂಕ, ಫೈನ್ ಅರಿಯರ್ಸ್ ಕಲೆಕ್ಟ್ ಮಾಡುವಾಗ ಎರಡು ಸಾವಿರ ರೂಪಾಯಿಗಳಿಗಿಂತ ಹೆಚ್ಚಾಗಿ ಫೈನ್ ವಸೂಲು ಮಾಡಕೂಡದು ಎಂಬುದು. ಏತಕ್ಕೆಂದರೆ, ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ, ಮ್ಯಾಜಿಸ್ಟ್ರೇಟರಿಗೆ ಎರಡು ಸಾವಿರ ರೂಪಾಯಿಗಳವರೆಗೂ ಫೈನ್ ಮಾಡುವುದಕ್ಕೆ ಅಧಿಕಾರ ಇದೆ. ಸೇಲ್ಸ್ ಟ್ಯಾಕ್ಸ್ ಕಾನೂನು ಪ್ರಕಾರ ಎರಡು ಸಾವಿರ ರೂಪಾಯಿಗಿಂತ ಹೆಚ್ಚಿಗೆ ಇದ್ದರೆ ಅದನ್ನು as if it is a fine ವಸೂಲು ಮಾಡಬಹುದು ಎಂದು ಒಂದು ಕೋರ್ಟಿನಲ್ಲಿ ತೀರ್ಮಾನವಾಗಿದೆ. ಮದ್ರಾಸಿನಲ್ಲಿ ಬೇರೆ ತೀರ್ಮಾನವಾಗಿದೆ. ಅದು ಸುಪ್ರೀಂಕೋರ್ಟಿಗೆ ಅಪೀಲು ಹೋಗಿದೆ. ನಮ್ಮ ತಿಳುವಳಿಕೆ ಪ್ರಕಾರ ಕ್ರಿಮಿನಲ್ ಪ್ರೊಸೀಜರ್ ಕೋಡು ಇದಕ್ಕೆ ಅನ್ವಯವಾಗುವುದಿಲ್ಲ ಎಂದು ಸುಪ್ರೀಂಕೋರ್ಟಿಗೆ

ಎಂದು ಸ್ಪಷ್ಟವಾಗಿ ಹೇಳುವ ರೀತಿಯಿಂದ ಇಷ್ಟರಲ್ಲೇ ಬಿಲ್ ತರುತ್ತಿದ್ದೇವೆ. ಇನ್ನು ಕಾನೂನು ದೃಷ್ಟಿಯಿಂದ ಸೇಲ್ಸ್ ಟ್ಯಾಕ್ಸ್ ಕೊಡುವಾಗ ಸೆಲ್ಫ್ ಅಸೆಸ್ಮೆಂಟ್ ಮಾಡಬೇಕು. ಹೆರಾಸ್‌ಮೆಂಟ್ ಕಡಿಮೆ ಮಾಡುವ ದೃಷ್ಟಿಯಿಂದ ಪ್ರತಿ ತಿಂಗಳು ಇಷ್ಟು ಅಸೆಸ್‌ಮೆಂಟ್ ಪೇಮೆಂಟ್ ಮಾಡಬೇಕು ಎಂದು ಕಾನೂನು ಮಾಡಿದೆ. ಈ ಕಾನೂನು ಕೂಡ ನಮಗೆ ಅನ್ವಯಿಸುವುದಿಲ್ಲ, ಲೂಪ್ ಹೋಲ್ಸ್ ಇವೆ ಎಂದು, ಲೂಪ್ ಹೋಲ್ಸ್ ಕಂಡುಹಿಡಿದು ಎಷ್ಟೋ ಜನ ತಿಂಗಳು ತಿಂಗಳು ಪೇಮೆಂಟ್ ಮಾಡುತ್ತಾ ಇಲ್ಲ. ಫೈನಲ್ ಅಸೆಸ್‌ಮೆಂಟ್ ಮಾಡುವಾಗ ಅವರ ಮೇಲೆ ಪೆನಾಲ್ಟಿ ಬೀಳುತ್ತದೆ. ಈ ದೃಷ್ಟಿಯಿಂದ ಕೂಡ ಕಾನೂನು ಸ್ಪಷ್ಟವಾಗಿ ಪೆನಾಲ್ಟಿ ಕೊಡಲೇಬೇಕು ಎನ್ನುವ ರೀತಿಯಿಂದ ಮಾಡಬೇಕು ಎಂದು ಒಂದು ಅಮೆಂಡ್‌ಮೆಂಟ್‌ನ್ನು ತರುತ್ತಿದ್ದೇವೆ. ನಾನೂ ಭೂತಲಿಂಗಮ್ ಕಮಿಟಿಯಲ್ಲಿ ಮೆಂಬರ್ ಆಗಿದ್ದಾಗ ಇದರ ಬಗ್ಗೆ ಮುಖ್ಯ ಉದ್ದೇಶ ಏನು ಇತ್ತು, ಎಂದರೆ, ಸಣ್ಣ ಜನ ಏನು ಇದ್ದಾರೆ, 10-15 ಸಾವಿರ ರೂಪಾಯಿ ಟರ್ನ್ ಓವರ್ ಇರುವ ಜನ, ಇವರಿಗೆ ಹೆಚ್ಚು ಹೆರಾಸ್‌ಮೆಂಟ್ ಆಗುತ್ತಿತ್ತು. ಎಕ್ಸೆಂಪ್ಷನ್ ಅನ್ನು 25 ಸಾವಿರಕ್ಕೆ ಏರಿಸುವುದಕ್ಕೆ ಸರ್ಕಾರ ಒಪ್ಪಿಕೊಂಡಿತ್ತು. 25 ಸಾವಿರ ರೂಪಾಯಿಯವರೆಗೆ ಎಕ್ಸೆಂಪ್ಷನ್ ಮಾಡುವುದರಿಂದ 36 ಸಾವಿರ ಅಸೆಸ್ಸಿಗಳಿಗೆ ರಿಲೀಫ್ ಸಿಕ್ಕಿತು. ಅವರ ಮೇಲೆ ಟ್ಯಾಕ್ಸ್ ಇಲ್ಲ. It is roughly one-third of the assessees. ನಮ್ಮ ದೇಶದಲ್ಲಿ ಒಂದು ಲಕ್ಷ ಜನ ಅಸೆಸ್ಸಿಗಳು ಇದ್ದಾರೆ. ಅದರಲ್ಲಿ 36 ಸಾವಿರ ಅಸೆಸ್ಸಿಗಳಿಗೆ ಎಕ್ಸೆಂಪ್ಷನ್ ಆಯಿತು. ಅನಂತರ 25 ಸಾವಿರ ರೂಪಾಯಿಯಿಂದ 75 ಸಾವಿರ ರೂಪಾಯಿಯವರೆಗೆ ಐದು ಕಂಪೋಜಿಷನ್ ಸ್ಲ್ಯಾಬ್ ಮಾಡಿದ್ದೇವೆ. 75 ಸಾವಿರ ರೂಪಾಯಿಗಳ ಟರ್ನ್ ಓವರ್ ಇರುವವರಿಗೆ ಲೆಕ್ಕ ಇಡುವ ತೊಂದರೆ ಇರುವುದಿಲ್ಲ. ಹಳೆ ಸರ್ಕಾರ 25 ಸಾವಿರದಿಂದ, 50 ಸಾವಿರ, 50 ಸಾವಿರದಿಂದ 75 ಸಾವಿರ ರೂಪಾಯಿಯವರೆಗೆ ಎರಡು ಕಾಂಪೋಸಿಷನ್ ಸ್ಲ್ಯಾಬ್ ಮಾಡಿತ್ತು. ಇದು ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ, ತೊಂದರೆ ಆಯಿತು ಎಂಬುದಾಗಿ ತಿಳಿದು ಬಂತು. ಸರ್ಕಾರ ಇದನ್ನು ಸರಿಪಡಿಸಿ 25 ಸಾವಿರದಿಂದ 75 ಸಾವಿರದ ವರೆಗೆ ಐದು ಸ್ಲ್ಯಾಬ್ಸ್ ಮಾಡಿದ್ದೇವೆ. ಕಾಂಪೋಸಿಷನ್ ಮಾಡಿದರೆ, ಕಾಂಪೌಂಡಬಲ್ ರೇಟು ಮೂರು ಪರ್ಸೆಂಟ್ ಕಡಿಮೆ ವರ್ಕ್ ಔಟ್ ಆಗುತ್ತದೆ. ಕಾಂಪೌಂಡ್ ಮಾಡಿದ್ದಕ್ಕೆ ಇನ್‌ಸೆಂಟೀವ್ ಇದೆ. ಅದನ್ನು ಮಾಡಿದರೆ, ಒಂದು ಲಕ್ಷ ಜನ ಏನಿದ್ದಾರೆ, ಅವರಲ್ಲಿ ಬಹಳ ಜನ ಕಾಂಪೌಂಡಬಲ್ ಲಿಮಿಟ್‌ನಲ್ಲಿ ಬರುತ್ತಾರೆ. ಇನ್ನು ಆಫೀಸರ್ಸ್ ಬೆಸ್ಟ್ ಜಡ್ಜ್‌ಮೆಂಟ್ ಉಪಯೋಗಿಸಿ ಇಷ್ಟು ಟರ್ನ್ ಓವರ್ ಇದೆ ಎಂದು ಜಡ್ಜ್‌ಮೆಂಟ್ ಪಾಸ್ ಮಾಡಿದಾಗ ಅದಕ್ಕೆ ವಿರುದ್ಧವಾಗಿ ಮಾತನಾಡುವುದಕ್ಕೆ ಬರುತ್ತದೆ. ಆದುದರಿಂದ ಕ್ರಮಬದ್ಧವಾದ ಬೆಸ್ಟ್ ಜಡ್ಜ್‌ಮೆಂಟ್ ನಾರ್ಮ್ಸ್ ಅಳವಡಿಸಿಕೊಳ್ಳುವ ದೃಷ್ಟಿಯಿಂದ ಒಂದು ಕೋಡನ್ನು ಮಾಡುತ್ತಾ ಇದ್ದೇವೆ. ಅದಕ್ಕಾಗಿ ಹೋಟೆಲ್‌ನಲ್ಲಿ ಇಷ್ಟು ಟರ್ನ್ ಓವರ್ ಎಂದು ಹೇಳಲಿಕ್ಕೆ ನಾರ್ಮ್ಸ್ ಹಾಕಿದ್ದೇವೆ. ಇಷ್ಟು ಎಸ್ಟ್ಯಾಬ್ಲಿಷ್‌ಮೆಂಟ್ ಚಾರ್ಜಸ್ ಇದ್ದರೆ, establishment charges ನ so many times ಟರ್ನ್‌ಓವರ್ ಇರುತ್ತದೆ ಎಂದು ಸುಲಭವಾಗಿ ಲೆಕ್ಕ ಹೇಳಬಹುದು. ಹೋಟೆಲ್‌ಗೆ ಹೋದರೆ ಬೆಸ್ಟ್ ಜಡ್ಜ್‌ಮೆಂಟ್ ಬೇಸಿಸ್ ಮೇಲೆ ಟರ್ನ್‌ಓವರ ಲೆಕ್ಕ ರೂಲ್ಸ್ ಪ್ರಕಾರ ಮಾಡಬೇಕು. ಈ ರೀತಿ ಒಂದು ಕೋಡು ಮಾಡಿ ನಮ್ಮ ಆಫೀಸರ್ಸ್‌ಗೆ ಹಂಚಬೇಕು ಎಂದು ತೀರ್ಮಾನ ಮಾಡಿದ್ದೇವೆ. It will be a departmental code.

ಅದರ ಜೊತೆಗೆ ಎಲ್ಲಾ ಜನತೆಗೂ ಸೇಲ್ಸ್ ಟ್ಯಾಕ್ಸ್ ವಿಷಯದ ಬಗ್ಗೆ ಸ್ಪಷ್ಟವಾಗಿ ತಿಳಿಸುವ ದೃಷ್ಟಿಯಿಂದ ಇಂಗ್ಲೀಷ್ ಮತ್ತು ಕನ್ನಡದಲ್ಲಿ ಸುಲಭವಾಗಿ ಬರೆದು, ಒಂದು ಪಬ್ಲಿಕೇಷನ್ ಮಾಡಿ ಅದನ್ನು ಮಾರಬೇಕು. ಯಾರಿಗಾದರೂ ಸುಲಭವಾಗಿ ಕೊಂಡುಕೊಳ್ಳುವುದಕ್ಕೆ ಸಾಧ್ಯವಾಗಬೇಕು ಎಂದು ಮಾಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಯೂನಿಫಾರಂ ಅಸೆಸ್‌ಮೆಂಟ್ ಇಯರ್ ಬಗ್ಗೆ ಏನು ಹೇಳುತ್ತೀರಾ? ಈಗ ಏನಾಗಿದೆ ಎಂದರೆ, ಕೆಲವರು ಡಿಸೆಂಬರ್‌ನಲ್ಲಿ ಲೆಕ್ಕವನ್ನು ಕ್ಲೋಸ್ ಮಾಡುತ್ತಾರೆ, ಅದರಿಂದ ಅಸೆಸ್‌ಮೆಂಟ್ ಡಿಸ್ಪೋಸ್ ಮಾಡುವುದಕ್ಕೆ ತೊಂದರೆಯಾಗಿದೆ. ಯೂನಿಫಾರಂ ಅಸೆಸ್‌ಮೆಂಟ್ ಇಯರ್ ಇದ್ದರೆ ಹೆಚ್ಚು ಜನಕ್ಕೆ ಲೆಕ್ಕ ಒಪ್ಪಿಸುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—ಆಮೇಲೆ, I will try to reply ... [illegible] ಕಲಮಣಕರ್ ಅವರು ಗುಲ್ಬರ್ಗದ [illegible] ಹೆಸರು ...

(ಶ್ರೀ ಎಂ. ವೈ. ಘೋರ್ಪಡೆ)

ಚಾರ್ಜ್ ದುಡ್ಡು ಬಗ್ಗೆ ಸ್ಪೆಸಿಫಿಕ್ ಇನ್‌ಸ್ಟೆನ್ಸ್ ಕೊಟ್ಟರು. It is seen Entertainment tax, surcharge due to Government was not actually credited to the treasury by the proprietor of the Talkies. The Accountant General was requested to take up the special audit of the Accounts of the talkies. It is seen from the special audit report received from the Accountant General that the Entertainment surcharge tax amounting to Rs. 2 lakhs 28 thousand is due from the proprietor of the talkies. The Commissioner of Commercial taxes took action to recover the amount from the proprietor. The proprietors of the talkies filed a writ petition before the High Court of Mysore and obtained a stay order. The Departmental enquiry against officers responsible is being taken. ಇಂತಹ ಇನ್‌ಸ್ಟೆನ್ಸಸ್ ಬಂದರೆ ಉತ್ತರ ಹೇಳಬಹುದು. ಪ್ರತಿಯೊಂದು ಇನ್‌ಸ್ಟೆನ್ಸ್‌ಗೂ ಅಸೆಂಬ್ಲಿಯಲ್ಲಿ ಉತ್ತರ ಹೇಳುವುದಕ್ಕೆ ಆಗುವುದಿಲ್ಲ. ರಾಮನ ಅಕೌಂಟು, ಕೃಷ್ಣನ ಅಕೌಂಟು ಎಂದು ಎರಡು ಅಕೌಂಟುಗಳ ವಿಷಯವನ್ನು ಪ್ರತಿಯೊಬ್ಬರೂ ಹೇಳಿದ್ದಾರೆ. ಇದರಲ್ಲಿ ಒಂದು ತೊಂದರೆ ಇದೆ. ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್ ಏನು ಇದ್ದಾರೆ, ಅವರು they are not empowered to raid residential premises. ಈ ರೀತಿ ಬೇಕಾದಷ್ಟು ಲೀಗಲ್ ಡಿಫಿಕಲ್ಟೀಸ್ ಇವೆ. ಲೀಗಲ್ ಡಿಫಿಕಲ್ಟೀಸ್ ಎಷ್ಟರಮಟ್ಟಿಗೆ ಕಡಿಮೆ ಮಾಡಿಕೊಳ್ಳುವುದಕ್ಕೆ ಸಾಧ್ಯ ಎಂಬುದನ್ನು ಸರ್ಕಾರ ಯೋಚನೆ ಮಾಡುತ್ತಿದೆ. ಅನಂತರ ಸೇಲ್ಸ್‌ಟ್ಯಾಕ್ಸ್ ವರ್ಷೇ ವರ್ಷೇ ಜಾಸ್ತಿಯಾಗುತ್ತಾ ಬರುತ್ತಿದೆ. ಉದಾಹರಣೆಗೆ 1960ರಲ್ಲಿ ಸೇಲ್ಸ್‌ಟ್ಯಾಕ್ಸ್ ಇನ್‌ಕಂ ಏಳೂವರೆ ಕೋಟಿ ರೂಪಾಯಿ ಇತ್ತು. ಇವೊತ್ತು 59 ಕೋಟಿ, 60 ಕೋಟಿ ರೂಪಾಯಿಗಳವರೆಗೆ ಹೋಗಬಹುದು. 12 ವರ್ಷಗಳಲ್ಲಿ 8ರಷ್ಟು ಸೇಲ್ಸ್‌ಟ್ಯಾಕ್ಸ್ ಇನ್‌ಕಂ ಜಾಸ್ತಿಯಾಗಿದೆ. ಇದು ಕಡಿಮೆ ಅಲ್ಲ ಎಂದು ಅನಿಸುತ್ತದೆ. ಇನ್ನು ಇಡೀ ದೇಶದಲ್ಲಿ ಎಕ್ಸೈಜ್ ಇನ್‌ಕಂ 1960ರಲ್ಲಿ 400 ಕೋಟಿ ರೂಪಾಯಿ ಇದ್ದದ್ದು ಟೋಟಲ್ ಎಕ್ಸೈಜ್ ಇನ್‌ಕಂ 2400 ಕೋಟಿ ರೂಪಾಯಿ ಆಗಿದೆ. ಎಕ್ಸೈಜ್ ಇನ್‌ಕಂ 6ರಷ್ಟು ಆಗಿದೆ. ಸೇಲ್ಸ್‌ಟ್ಯಾಕ್ಸ್ ಇನ್‌ಕಂ 8ರಷ್ಟು ಆಗಿದೆ. ಹೇಗೆ ಹೇಗೆ ಇನ್‌ಕಂ ಜಾಸ್ತಿಯಾಗಿದೆ ಹಾಗೆ ಸೇಲ್ಸ್‌ಟ್ಯಾಕ್ಸ್ ಇನ್‌ಕಂ ಕೂಡ ಜಾಸ್ತಿಯಾಗಿದೆ. ಸೇಲ್ಸ್‌ಟ್ಯಾಕ್ಸ್ ಇನ್‌ಕಂ ನೂರಕ್ಕೆ ನೂರು ಬರುತ್ತಾ ಇಲ್ಲ. ಆದರೂ ಕೂಡ ಅತೃಪ್ತಿಕರವಾಗಿಲ್ಲ ಎಂದು ಹೇಳುವುದಕ್ಕೆ ಬಯಸುತ್ತೇನೆ. ಇದರ ಬಗ್ಗೆ ಮಾನ್ಯ ಸದಸ್ಯರಿಂದ ಸಲಹೆ ಮತ್ತು ಅವರ ಅನುಭವದ ಲಾಭ ಸರ್ಕಾರಕ್ಕೆ ಬರಲಿ ಎಂದು ಕಮರ್ಷಿಯಲ್ ಟ್ಯಾಕ್ಸ್ ಗೋಸ್ಕರ ಒಂದು ಅಡ್ವೈಸರಿ ಕಮಿಟಿ ಮಾಡುವವರಿದ್ದೇವೆ. ಅದು ಈಗಾಗಲೇ ಇದೆ. ಅದನ್ನು ರಿಕಾನ್ಸ್ಟಿಟ್ಯೂಟ್ ಮಾಡುತ್ತೇವೆ. ರೀಕಾನ್ಸ್ಟಿಟ್ಯೂಟ್ ಮಾಡುವಾಗ ಯಾರು ಯಾರು ಸದಸ್ಯರಿಗೆ ಅದರಲ್ಲಿ ಆಸಕ್ತಿ ಇದೆಯೋ ಮತ್ತು ಗೌರ್ನಮೆಂಟ್‌ಗೆ ನೇರವಾಗಿ ಸಹಾಯ ಮಾಡುವ ಪರಿಸ್ಥಿತಿಯಲ್ಲಿದ್ದಾರೋ ಅಂಥವರನ್ನೆಲ್ಲಾ ಕಮರ್ಷಿಯಲ್ ಟ್ಯಾಕ್ಸ್ ಅಡ್ವೈಸರಿ ಕಮಿಟಿಯಲ್ಲಿ ಹಾಕುತ್ತೇವೆ. 2—3 ದಿನದಲ್ಲಿ ಬ್ರಾಡ್ ಬೇಸ್ಡ್ ಕಾಂಪಿಟೆಂಟ್ ಕಮರ್ಷಿಯಲ್ ಟ್ಯಾಕ್ಸ್ ಕಮಿಟಿ ಕಾನ್ಸ್ಟಿಟ್ಯೂಟ್ ಮಾಡುತ್ತೇವೆ. ಅದರಲ್ಲಿ ಆ ಸದಸ್ಯರು ಅಷ್ಟೇ ಅಲ್ಲ ಯೂನಿವರ್ಸಿಟಿಯಿಂದ ಕೂಡ ತಿಳಿದವರನ್ನು ಅದರಲ್ಲಿ ಹಾಕುತ್ತೇವೆ. ಚೇಂಬರ್ ಆಫ್ ಕಾಮರ್ಸ್ ಪ್ರೆಸಿಡೆಂಟ್ ಮತ್ತು ವೈಸ್ ಪ್ರೆಸಿಡೆಂಟ್ ಇದರ ಬಗ್ಗೆ ಅನುಭವ ಇರುವ ಜನರನ್ನು ಎಲ್ಲಾ ಸೇರಿಸಿ ಒಂದು ಕಮಿಟಿ ಮಾಡಿ ಇದರ ಮುಖಾಂತರ ಎಷ್ಟರ ಮಟ್ಟಿಗೆ ಸರ್ಕಾರದ ಕೆಲಸ ಮಾಡುವುದಕ್ಕೆ ಸಾಧ್ಯ ಎಂದು ನೋಡೋಣ, ಶಾಮಣ್ಣನವರು ಮುಂದೆಯೂ ಕೂಡ ಬಹಳ ಸ್ಪೆಸಿಫಿಕ್ ಆಗಿ ಸಲಹೆ ಕೊಡಲಿ ಎಂದು ಹಾರೈಸುತ್ತೇನೆ. ಸೇಲ್ಸ್ ಟ್ಯಾಕ್ಸ್ ಆಫೀಸರ್ಸ್‌ಗೆ ಇನ್ಸೆಂಟೀವ್ ಕೊಡಬೇಕೆಂದು ಹೇಳಿದರು. ಅದು ಬಹಳ ಕಷ್ಟ. It is elastic tax responsible to income ಆಗುತ್ತದೆ. ಒಂದು ಪ್ರದೇಶದಲ್ಲಿರತಕ್ಕ ಸೇಲ್ಸ್ ಟ್ಯಾಕ್ಸ್ ಇನ್‌ಕಂ ಜಾಸ್ತಿ ಆದಹಾಗೆ ಎಷ್ಟರಮಟ್ಟಿಗೆ ಅಧಿಕಾರಿಗಳ ಸ್ವಂತ ಪ್ರಯತ್ನದಿಂದ ಸೇಲ್ಸ್ ಟ್ಯಾಕ್ಸ್ ಜಾಸ್ತಿ ಆಯಿತು ಎಂದು ಕಂಡು ಹಿಡಿಯುವುದು ಬಹಳ ಕಷ್ಟ.

ಇನ್ನು ಟ್ರಾನ್ಸ್‌ಫರ್ ಬಗ್ಗೆ ಸಾಕಷ್ಟು ಹೇಳಿದರು. ಇದರ ಬಗ್ಗೆ ನಾನು ವಿಷಾದದಿಂದ ಹೇಳಬೇಕಾಗುತ್ತದೆ. ಕೆಲವು ಅಧಿಕಾರಸ್ಥರು ಇದ್ದಾರೆ. ಅವರು ನಾನ್ ಅಫಿಷಿಯಲ್ಸ್ ಸಹಾಯವನ್ನು ಪಡೆದು ಅವರಿಗೆ ಎಲ್ಲಿ ಬೇಕೋ ಅಲ್ಲಿಗೆ ಟ್ರಾನ್ಸ್‌ಫರ್ ಮಾಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುವ ಸಂಪ್ರದಾಯ ಬೆಳೆದು ಬಂದಿದೆ. ನನಗೆ ಅನಿಸುತ್ತದೆ. 'ಅದು ಒಳ್ಳೆಯ ಸಂಪ್ರದಾಯವಲ್ಲ. ಮುಂದೆ

ಅಧಿಕಾರಸ್ಥರು ನಾನ್ ಅಫಿಷಿಯಲ್ಸ್‌ನ್ನು ಉಪಯೋಗಿಸಿ ಹಲವಾರು ರೀತಿ ನನ್ನ ಮೇಲೆ ಇನ್‌ಫ್ಲೂಯೆನ್ಸ್ ತರುವ ಪ್ರಯತ್ನ ಮಾಡಿದರೆ ನನ್ನ ದೃಷ್ಟಿಯಲ್ಲಿ ಆ ಆಫೀಸರ್ಸ್ ಬಗ್ಗೆ ಬ್ಲಾಕ್‌ಮಾರ್ಕ್ ಆಗುತ್ತದೆ ಎಂದು ಬಹಿರಂಗವಾಗಿ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಆಮೇಲೆ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಮಾಡಬೇಕು ಎಂದು ಹೇಳಿದರು. ಈ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಬಗ್ಗೆ ಸರ್ಕಾರದ ಧೋರಣೆ ಸ್ಪಷ್ಟವಾಗಿದೆ. ಎಲ್ಲೆಲ್ಲಿ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಹಾಕಲಿಕ್ಕೆ ಸಾಧ್ಯವೋ ಅಲ್ಲಿ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಹಾಕಲೇಬೇಕು. ಇದನ್ನು ಕೂಡ ಭೂತಲಿಂಗಂ ಕಮಿಟಿಯವರು ಚರ್ಚೆಮಾಡಿದ್ದಾರೆ. ಇಂಥ ಐಟಂಗಳ ಮೇಲೆ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಹಾಕಬಹುದು. ನಾವು ಹೊಸದಾಗಿ 33 ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಕಮಾಡಿಟೀಸ್ ಸೇರಿಸಿದ್ದೇವೆ. ಇನ್ನು ಏನಾದರೂ ಐಟಂ ಸಿಂಗಲ್ ಪಾಯಿಂಟ್ ಟ್ಯಾಕ್ಸ್‌ನಲ್ಲಿ ತೆಗೆದುಕೊಳ್ಳಲಿಕ್ಕೆ, ಅದನ್ನು ಸೇರಿಸೋಣ. ಇಷ್ಟು ಮಾಡಿದರೂ ಕೂಡ ಮಲ್ಟಿ ಪಾಯಿಂಟ್ ಟ್ಯಾಕ್ಸ್ ಪೂರ್ತಿ ಬಿಟ್ಟು ಕೊಡಲಿಕ್ಕೆ ಆಗುವುದಿಲ್ಲ. ಅದು ಹಲವಾರು ವರ್ಷಗಳ ನಂತರ ಆಗಬಹುದು. ಮಲ್ಟಿಪಾಯಿಂಟ್ ಸೇಲ್ಸ್‌ಟ್ಯಾಕ್ಸ್ ಪೂರ್ತಿ ಬಿಟ್ಟು ಬಿಟ್ಟರೆ, ಸ್ಟೇಟಿನ ಆದಾಯಕ್ಕೆ ಪೆಟ್ಟಾಗುತ್ತದೆ. ಎಲ್ಲಾ ಐಟಂಗಳ ಮೇಲೆ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಹಾಕುವ ಪರಿಸ್ಥಿತಿಯಲ್ಲಿ ಇಲ್ಲ. ಹಾಕುವುದಕ್ಕೆ ಸಾಧ್ಯವಿದ್ದರೆ ಮಾಡೋಣ. ಯಾವ ಯಾವ ಪಾಯಿಂಟ್ ಮೇಲೆ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಹಾಕುವುದಕ್ಕೆ ಸಾಧ್ಯವಿದೆಯೋ ಅದನ್ನು ಮಾಡಿದ್ದೇವೆ. ಮುಂದೆ ಸೇರಿಸುತ್ತಾ ಹೋಗೋಣ. ಮಲ್ಟಿ ಪಾಯಿಂಟ್ ಟ್ಯಾಕ್ಸ್ ಕೈಬಿಡಬೇಕು ಎಂದರೆ ಸರ್ಕಾರದ ಆದಾಯಕ್ಕೆ ಪೆಟ್ಟಾಗುತ್ತದೆ. ಅದನ್ನು ಬಿಡುವುದಕ್ಕೆ ಆಗುವುದಿಲ್ಲ.

Sri C. M. ARUMUGHAM.—It is a very philosphic way of saying that if officia's use political influence for transfer they will be black-listed. What happens if a Minister uses his power and position and nominates his men to some committees, appointments and promotions? What action you are going to take against that Minister? If you want an instance just now, I will give.

Sri D. DEVARAJ URS.—If Mr. Arumugam is willing to give it in writing, let him give it. The only point I wish to make out is this, he has taken the officers as well as the non-officials together. With regard to officers, the question of promotion and transfer does arise. But with regard to promotion and transfer of non-officials, the question dose not arise. So, the question of non officials comes in only with regard to their nomination or appointment to certain Boards or Bodies or committees. I would like to know from the Hon. Member whether he is clubbing both the cases of officials as well as non-officials? To nominate a member on any committee is a different thing, With regard to transfers and promotions of officers, if any Minister does it out of way or against the rules, then the Hon. Member will have a case in his favour; but what objection can anybody has if the Government decides to nominate sombody or non-official on committees? How can that be a matter for anybody to take objection? Nominating anybody on the committee is the right of the Government.

ಶ್ರೀ ಎಂ. ವೈ. ಘೋರ್ಪಡೆ.—ಅತ್ಯಾವಶ್ಯಕ ವಸ್ತುಗಳ ಮೇಲೆ ಸೇಲ್ಸ್ ಟ್ಯಾಕ್ಸ್ ಹಾಕಕೂಡದು ಎಂದು ಸಾಕಷ್ಟು ಮಂದಿ ಸದಸ್ಯರು ಇಲ್ಲಿ ಮಾತನಾಡಿದ್ದಾರೆ. ಇತರ ರಾಜ್ಯಗಳಲ್ಲಿ ಕೂಡ ಇದು ಇದೆ. ಇದು ಹೇಗಿದೆ ಎಂದರೆ Kerala 1%, Andhra Pradesh 2%, Tamilnadu 1% multipoint. ಇದಕ್ಕೆ ಹೆಚ್ಚಾಗಿ ಮಾಡಬೇಕು ಎಂದು ಸರ್ಕಾರದ ಉದ್ದೇಶ ಇಲ್ಲ. 1956 ರಿಂದಲೂ ಇದು ಬರುತ್ತಲೇ ಇದೆ. ಇದನ್ನು ತೆಗೆಯುವುದರಿಂದ ಆಹಾರ ಪದಾರ್ಥಗಳ ಬೆಲೆ ಕಡಿಮೆಯಾಗುತ್ತದೆ ಎನ್ನುವ ಭರವಸೆ ಸರ್ಕಾರಕ್ಕೆ ಇಲ್ಲ. ಇದೇನೂ ಅಂತಹ ಮಹತ್ವವಾದ ಸಾಕಷ್ಟು ಹೆಚ್ಚು ಭಾರ ಬೀಳುವ ಟ್ಯಾಕ್ಸ್ ಆಗಿಲ್ಲ. ಈ ಟ್ಯಾಕ್ಸ್ ತೆಗೆದರೆ ಮಿಡಲ್‌ಮೆನ್ ಲಾಭ ಸಂಪಾದನೆ ಮಾಡಲು ಅವಕಾಶವಾಗುತ್ತದೆ. ಇದನ್ನು ತಪ್ಪಿಸಬೇಕೆಂದು ಸೇಲ್ಸ್ ಟ್ಯಾಕ್ಸ್ ಇದೆ. ಇದೇನೂ ಅಷ್ಟು ಹೆಚ್ಚಾಗಿ ಬರುತ್ತಿಲ್ಲ.

(ಶ್ರೀ ಎಂ. ವೈ. ಘೋರ್ಪಡೆ)

They must also treat on the same basis as any other commodity. There should not be any low tax, ಇತರ ಕೆಲವು ಪದಾರ್ಥಗಳ ಮೇಲೆ ಸೇಲ್ಸ್ ಟ್ಯಾಕ್ಸನ್ನು ಹಾಕಿದ್ದಾರೆ ಎಂದು ಕೆಲವು ಸದಸ್ಯರು ಹೇಳಿದರು. ಅದು ಸೀಮೆಎಣ್ಣೆ ಹಾಗೂ ವನಸ್ಪತಿ ಇತ್ಯಾದಿ ಪದಾರ್ಥಗಳ ಮೇಲೆ ಹಾಕಲಾಗಿದೆ ಎಂದು ಹೇಳಿದರು. ಇದನ್ನು ನಾನೇನೂ ಜಾಸ್ತಿ ಮಾಡಿ ಹಾಕಲು ಹೋಗಲಿಲ್ಲ. ಇದು ಜಾಸ್ತಿಯಾಗಿದೆ, ಕಡಿಮೆ ಮಾಡಬೇಕೆಂದು ಸಲಹೆ ಮಾಡಿದರೆ ಅದರ ಬಗ್ಗೆ ಯೋಚನೆ ಮಾಡೋಣ. I as a Finance Minister will not agree to increase the tax. We have frozen it on that level on food.

ಇನ್ನು ರಾಜ್ಯದ ಪೆನ್‌ಷನ್‌ರುಗಳ ಬಗ್ಗೆ ಇಲ್ಲಿ ಹೇಳಬೇಕು ಎಂದರೆ ನಮ್ಮ ರಾಜ್ಯದಲ್ಲಿ ಸುಮಾರು 62 ಸಾವಿರ ಪೆನ್‌ಷನ್‌ದಾರರುಗಳು ಇದ್ದಾರೆ. ಇವರಲ್ಲಿ ಸುಮಾರು 54 ಸಾವಿರ ಜನರು ಒಂದು ನೂರು ರೂಪಾಯಿಗಳಿಗಿಂತ ಕಡಿಮೆ ವಿಶ್ರಾಂತಿ ವೇತನ ಪಡೆಯುತ್ತಿದ್ದಾರೆ ಮತ್ತು ಸುಮಾರು 7300 ಜನರು ಒಂದು ನೂರು ರೂಪಾಯಿಗಳಿಂದ ಮುನ್ನೂರು ರೂಪಾಯಿಗಳವರೆಗೆ ವಿಶ್ರಾಂತಿ ವೇತನ ಪಡೆಯುತ್ತಿದ್ದಾರೆ. ಇದರ ಬಗ್ಗೆ ಕೇಂದ್ರ ಸರ್ಕಾರವನ್ನು ಹೋಲಿಸಿ ನೋಡಿದರೆ ನಮಗೆ ಇದರ ವ್ಯತ್ಯಾಸ ಗೊತ್ತಾಗುತ್ತದೆ. ಕೇಂದ್ರ ಸರ್ಕಾರ ಹಾಲಿ ಒಬ್ಬರಿಗೆ ಕೊಡುತ್ತಿರುವ ಮಿನಿಮಂ ಪೆನ್‌ಷನ್ ಒಂದು ತಿಂಗಳಿಗೆ 40 ರೂಪಾಯಿಗಳು ಮಾತ್ರ. ಆದರೆ ನಮ್ಮ ರಾಜ್ಯದಲ್ಲಿ ಒಬ್ಬರು ಪೆನ್‌ಷನರ್‌ರವರಿಗೆ ಕೊಡುತ್ತಿರುವ ಮಿನಿಮಂ ಪೆನ್‌ಷನ್ ಒಂದು ತಿಂಗಳಿಗೆ 55ರೂಪಾಯಿಗಳಷ್ಟು ಬರುತ್ತಿದೆ.

Pensioners in Mysore State: There are 62,000 pensioners in the State out of which 54,000 are drawing less than 100 rupees pension and 7300 pensioners are drawing Rs. 100–300 pension per mensem. The minimum pension in Mysore State is Rs. 55 whereas the Government of India's minimum pension is Rs 40 per mensem.

ಇನ್ನು Oldage pension ಬಗ್ಗೆ ಹೇಳಬೇಕೆಂದರೆ ಇದು ನಮ್ಮ ಮೈಸೂರು ರಾಜ್ಯದಲ್ಲಿ 70 ವರ್ಷ ವಯಸ್ಸು ಆದವರಿಗೆ ಹಾಗೂ ನಿರ್ಗತಿಕರಿಗೆ ತಿಂಗಳಿಗೆ 30 ರೂಪಾಯಿ ಪೆನ್‌ಷನ್ ಇದೆ. Rs. 30 p. m. is paid as oldage pension. The Chief Minister is anxious to help them. Rs. 25 lakhs have been provided in the Budget ನಮ್ಮ ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಹೆಚ್ಚು ಕಳಕಳಿ ಇದೆ. ಇಂತಹ ಜನಕ್ಕೆ ಏನಾದರೂ ಸ್ವಲ್ಪ ಸಹಾಯ ಮಾಡಬೇಕು ಎಂದು ಹೇಳಿ ಇದಕ್ಕೆ ಯತ್ನ ಮಾಡುತ್ತಿದ್ದಾರೆ. Since the scheme came into operation, 10,000 cases of pension have been sanctioned. ಇನ್ನು ಇಂತಹ ಅಶಕ್ತರಾದವರ ಬಗ್ಗೆ ಅಪ್ಲಿಕೇಷನ್‌ಗಳು ಬರುತ್ತಲೇ ಇವೆ. ಇದರಲ್ಲಿ ಬಹಳ ಮಿಸ್‌ಯೂಸ್ ಆಗುತ್ತಿವೆ ಎಂದು ಹೇಳಿದರು. ಆದರೆ ಎಲ್ಲ ಕಡೆಗಳಲ್ಲೂ ಇದು ಸರಿಯಾಗಿ ನಡೆಯುತ್ತಿವೆ ಎಂದು ಹೇಳುತ್ತಿಲ್ಲ ಕೆಲವು ಕಡೆ ಲೋಪದೋಷಗಳು ಇರಬಹುದು. ಅಂತಹವನ್ನು ಸರಕಾರದ ಗಮನಕ್ಕೆ ತಂದರೆ ಅದನ್ನು ಸರಿಪಡಿಸಬಹುದು. ಇದರಲ್ಲಿ ಏಜ್ ಲಿಮಿಟ್ಟನ್ನು ಕಡಿಮೆ ಮಾಡಬೇಕು ಎಂದು ಕೆಲವರು ಸಲಹೆ ಮಾಡಿದುದರ ಮೇಲೆ. ಇದನ್ನು ಈಗ 70 ರಿಂದ 65 ವರ್ಷ ವಯಸ್ಸು ಇದ್ದರೆ ಸಾಕು ಎಂದು ಮಾಡಲಾಗಿದೆ. ಇದರಲ್ಲಿ ಅಂಗವಿಕಲರಾದವರು ಇದ್ದರೆ ಅಂತಹವರ ವಯಸ್ಸು 60 ಇದ್ದರೂ ಸಾಕು, ಅವರಿಗೂ ಪೆನ್‌ಷನ್ ಕೊಡಬೇಕೆಂದು ಸರಕಾರ ಯೋಚನೆ ಮಾಡಿ ಸೂಚನೆಗಳನ್ನು ಕೊಡಲಾಗಿದೆ, ಇದರಿಂದಾಗಿ ಸರಕಾರಕ್ಕೆ ಸುಮಾರು ರೂ. 20 ಲಕ್ಷದಿಂದ ರೂ 30 ಲಕ್ಷದವರೆಗೆ ಖರ್ಚು ಬರುತ್ತಿದೆ. ಈಗಾಗಲೇ ಇವರಲ್ಲಿ ಸುಮಾರು ಹನ್ನೊಂದು ಸಾವಿರ ಪೆನ್‌ಷನ್‌ದಾರರುಗಳು ಇದ್ದಾರೆ. ಇನ್ನೂ ಕೆಲವು ವರ್ಷಗಳಲ್ಲಿ ಇದು ಇನ್ನೂ ಐದಾರು ಸಾವಿರ ರೂಪಾಯಿಗಳಷ್ಟು ಹೆಚ್ಚು ಆಗಬಹುದು ಮತ್ತು ಮುಂದೆ 15–20 ಲಕ್ಷ ರೂಪಾಯಿ ಇದಕ್ಕಾಗಿ ಕೊಡಬೇಕಾಗಬಹುದು. ಇನ್ನು ಕಮ್ಯುಟೇಷನ್ ಪೆನ್‌ಷನ್ ಬಗ್ಗೆ ಈಗ ಇರುವುದನ್ನು ಮಾರ್ಪಾಡು ಮಾಡಬೇಕೆಂದು ಸಲಹೆ ಮಾಡಿದರು. ಇದನ್ನು ಮಾರ್ಪಾಡು ಮಾಡುವುದಕ್ಕೆ ಆಗುವುದಿಲ್ಲ. ಇದನ್ನು ಎಲ್ಲೂ ಈಗ ಮಾಡಿಲ್ಲ. ಈಗಿರುವುದೇ ಸರಿಯಾಗಿದೆ. If the pensioner dies before the retirement date, his family gets the benfit. If he lives longer, he cannot have both ways. The commutation pension has been established on well established principles.

ಇನ್ನು ಪೆನ್‌ಷನ್ ರೂಲ್ಸ್‌ಗಳನ್ನು ಸಿಂಪ್ಲಿಫೈ ಮಾಡಬೇಕೆಂದು ಸಲಹೆ ಮಾಡಿದರು. ಇದರ ಬಗ್ಗೆ ವಿಚಾರ ಮಾಡಬೇಕಾದರೆ ಇದರ ಪೂರ್ತಿ ಅಂಕೆ ಅಂಶಗಳನ್ನು ತಿಳಿದುಕೊಂಡರೆ ಆಗ ಮಾಡಲು ಸಾಧ್ಯ. ವರ್ಷ ವರ್ಷವೂ ರಾಜ್ಯದಲ್ಲಿ ಸುಮಾರು ಆರು ಸಾವಿರ ಜನರು ಪೆನ್‌ಷನ್ ಪಡೆಯಲು ಹೆಚ್ಚಾಗುತ್ತಾರೆ. 1-4-1972 ರಲ್ಲಿ ನಮ್ಮ ರಾಜ್ಯದಲ್ಲಿ ಪೆಂಡಿಂಗ್ ಪೆನ್‌ಷನ್ ಕೇಸುಗಳು ಸುಮಾರು 3,000 ಇತ್ತು. ಇದರಲ್ಲಿ ಯಾವುದಾದರೂ ಕಠಿಣ ಕೇಸುಗಳು ಇದೆ ಎಂದು ಸರಕಾರದ ಗಮನಕ್ಕೆ ತಂದರೆ ಅದನ್ನು ವಿಚಾರ ಮಾಡಬಹುದು. ಈಗಿರುವ ಪ್ರೋಸೆಸ್‌ನ್ನು ಇನ್ನು ಸಿಂಪ್ಲಿಫೈ ಮಾಡಬೇಕೆಂದು ಸಲಹೆ ಮಾಡಿದ್ದಾರೆ. ಅದನ್ನು ಸರಕಾರ ಮಾಡುತ್ತಿದೆ. ಇವನ್ನೆಲ್ಲಾ ಪೆನ್‌ಷನ್ ಫೈನಲೈಸು ಮಾಡುವಾಗ ಗಮನದಲ್ಲಿ ಇಟ್ಟುಕೊಂಡು ಮಾಡುತ್ತಿದ್ದಾರೆ.

ಇನ್ನು ಫ್ರೀಡಂ ಫೈಟರ್ಸ್ ಬಗ್ಗೆ ನಮ್ಮ ಮುಖ್ಯ ಮಂತ್ರಿಗಳು ಯೋಚನೆ ಮಾಡಿ ಇದರಲ್ಲಿರುವ ನಿಯಮಗಳನ್ನು ಮಾರ್ಪಾಡು ಮಾಡುವ ಅವಶ್ಯಕತೆ ಇದೆ ಎಂದು ಸಲಹೆ ಕೊಟ್ಟಿದ್ದಾರೆ. ಇಂತಹ ವಿಚಾರಗಳಲ್ಲಿ ಈಗಿರುವ ನಿಯಮದಂತೆ ಆರು ತಿಂಗಳು ಜೈಲಿನಲ್ಲಿದ್ದರೆ ಸಾಕು ಎಂದು ಇರುವುದನ್ನು ಮೂರು ತಿಂಗಳು ಇದ್ದರೇ ಸಾಕು ಎಂದು ಅಂತಹವರಿಗೂ ಪೆನ್‌ಷನ್ ಕೊಡಬಹುದೆಂದು ತೀರ್ಮಾನ ಮಾಡಲಾಗಿದೆ, ಇಂತಹವರಿಗೆ ಸುಮಾರು 75 ರೂಪಾಯಿಗಳಷ್ಟು ವಿಶ್ರಾಂತಿ ವೇತನ ಕೊಡಬೇಕೆಂದು ಮಾಡಲಾಗಿದೆ. ಇದರಲ್ಲಿ ಜೈಲು ಸರ್ಟಿಫಿಕೇಟು ಎಂದು ತರುವಾಗ ಮೂರು ತಿಂಗಳು ಒಂದೇ ಕಡೆ ಇಲ್ಲದಿದ್ದರೂ ಪರವಾಗಿಲ್ಲ. ಒಟ್ಟಿನಲ್ಲಿ ಮೂರು ತಿಂಗಳು ಕಾಲ ಜೈಲಿನಲ್ಲಿದ್ದರೆ ಸಾಕು ಎಂದು ನಿಯಮವನ್ನು ಸಡಿಲ ಮಾಡಲಾಗಿದೆ. ಆದರೆ ಇದರಲ್ಲಿ ಅದರ್ ಸೋರ್ಸಸ್ ಆಫ್ ಇನ್‌ಕಂ ಪೆನ್‌ಷನರ್‌ಗಳಿಗೆ ಎರಡು ಸಾವಿರಕ್ಕೆ ಮೀರಿರಕೂಡದು. ಒಟ್ಟಿನಲ್ಲಿ ನಮ್ಮ ರಾಜ್ಯದಲ್ಲಿ ಇರುವ ಸುಮಾರು 5440 ಫ್ರೀಡಂ ಫೈಟರುಗಳಿಗೆ ಒಂದು ತಿಂಗಳಿಗೆ ಪೆನ್‌ಷನ್ 75 ರಂತೆ ಕೊಡುತ್ತಿರುವುದರಿಂದ ಸರಕಾರಕ್ಕೆ ಸುಮಾರು 48,96,000 ರೂಪಾಯಿ ಖರ್ಚು ಬರುತ್ತಿದೆ. ಎಂದರೆ ಪೊಲಿಟಿಕಲ್ ಪೆನ್‌ಷನರುಗಳಿಗೆ ಈಗಿರುವ ನಿಯಮಗಳಂತೆ ಸುಮಾರು ಅರ್ಧ ಕೋಟಿಯಷ್ಟು ಖರ್ಚು ಸರಕಾರಕ್ಕೆ ಬರುತ್ತದೆ.

6–30 P.M.

ಶ್ರೀ ಡಿ. ದೇವರಾಜ ಅರಸ್.—ಕೆಲವರು ಜೆನ್ಯುಯಿನ್ ಆಗಿ ಜೈಲಿಗೆ ಹೋಗಿರುತ್ತಾರೆ. ಆದರೆ ಅವರಿಗೆ ಸರ್ಟಿಫಿಕೇಟ್ ಸಿಗುವುದು ಕಷ್ಟವಾಗುತ್ತದೆ. ಏಕೆಂದರೆ ರಿಕಾರ್ಡ್ ಇರುವುದಿಲ್ಲ. ಅದಕ್ಕೋಸ್ಕರವೇ ಈಗಿನ ಪದ್ಧತಿಯನ್ನು ಜಾರಿಗೆ ತಂದಿರುವುದು. ಯಾವುದೋ ಒಂದು ಸಂದರ್ಭದಲ್ಲಿ ಜಾಸ್ತಿ ಅರ್ಜಿಗಳು ಬಂದಿದ್ದವು ಎಂಬುದನ್ನು ನಾನು ಕೇಳಿದ್ದೇನೆ. ಕೆಲವರು ಅವನು ಜೈಲಿಗೆ ಹೋಗಿದ್ದನ್ನು ನಾನು ನೋಡಿದ್ದೆ, ಇವನು ಜೈಲಿಗೆ ಹೋಗಿದ್ದನ್ನು ನಾನು ನೋಡಿದ್ದೆ ಎಂಬುದಾಗಿ ಸರ್ಟಿಫೈ ಮಾಡುತ್ತಾರೆ. ಆದರ ಒಂದು ಆಧಾರದಮೇಲೆ ಅವರು ಜೈಲಿಗೆ ಹೋಗಿದ್ದರೇ ಇಲ್ಲವೇ ಎಂಬುದನ್ನು ಸರ್ಕಾರೀ ಮಟ್ಟದಲ್ಲಿ ರೆಕಾರ್ಡ್ ಹುಡುಕುವುದು ಕಷ್ಟವಾಗುತ್ತದೆ. ಆದ್ದರಿಂದ ಯಾರಾದರೂ ಅನುಮಾನಾಸ್ಪದವಾಗಿ ಸುಳ್ಳು ಹೇಳಿ, ಮೋಸದಿಂದ ತೆಗೆದುಕೊಳ್ಳುತ್ತಿರುವುದು ತಮಗೇನಾದರು ಗೊತ್ತಾದರೆ, ಅದರ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟರೆ, ಜೆನ್ಯುಯಿನ್ ಅಲ್ಲ ಎಂಬುದಾಗಿ ಹೇಳಿದರೆ, ಕೊಡುವುದನ್ನು ಸ್ಟಾಪ್ ಮಾಡುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಕರ್ನಾಟಕ ರಾಜ್ಯದ ಬಗ್ಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದವರ ವಿಷಯದಲ್ಲಿ ಒಂದು ಪುಸ್ತಕವನ್ನು ಬರೆಯಲಾಗಿದೆ. ಅದರಲ್ಲಿ ವಾಸ್ತವಾಂಶಕ್ಕೆ ದೂರವಾದ ಅಂಶಗಳಿವೆ. ಆದ್ದರಿಂದ ಅದರ ಬಗ್ಗೆ ವಿಶೇಷವಾದಂಥ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕಾಗಿದೆ.

ಶ್ರೀ ಕೆ. ಪ್ರಭಾಕರ್.—ಕರ್ನಾಟಕದ ಇತಿಹಾಸದಲ್ಲಿ ಜೈಲು ಮುಖವನ್ನೇ ನೋಡದಿದ್ದವರನ್ನು ಜೈಲಿಗೆ ಹೋಗಿದ್ದಾರೆ ಎಂಬುದಾಗಿ ಬರೆದಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಜೈಲಿಗೆ ಹೋದ ನಂತರ ಜಾಮೀನು ಮೇಲೆ ಹೋದವರು ಪೆರೋಲ್ ಮೇಲೆ ಹೋದಂತಹವರು ಸಹ ಇಂದು ಜೈಲಿನಲ್ಲಿ ಇದ್ದೆ ಎಂಬುದಾಗಿ ಹೇಳಿಕೊಂಡು, ರಾಜಕೀಯ ವಿಶ್ರಾಂತಿ ವೇತನ ಪಡೆಯುತ್ತಿದ್ದಾರೆ. ಇದನ್ನೆಲ್ಲಾ ಸರ್ಕಾರದವರು ತನಿಖೆ ಮಾಡಿ ಸೂಕ್ತರಾದಂಥವರಿಗೆ ಕೊಡಬೇಕು.

ಶ್ರೀ ಎಂ. ವೈ. ಘೋರ್ಪಡೆ.—ಕೆಲವು ಸಂದರ್ಭಗಳಲ್ಲಿ ಇವರು ಪೊಲಿಟಿಕಲ್ ಸಫರರ್ಸ್ ಹೌದೇ ಅಲ್ಲವೇ ಎಂಬುದನ್ನು ಪ್ರೂವ್ ಮಾಡುವುದು ಕಷ್ಟವಾಗುತ್ತದೆ. ಆದರೂ ಸಾಧ್ಯವಾದಷ್ಟು

(ಶ್ರೀ ಎಂ. ವೈ. ಘೋರ್ಪಡೆ)

ರಿಪೋರ್ಟ್‌ಗಳನ್ನು ಸಂಬಂಧಪಟ್ಟ ಎಲ್ಲ ಜಿಲ್ಲಾಧಿಕಾರಿಗಳಿಂದಲೂ ಪ್ರತಿ ತಿಂಗಳೂ ಸಹ ತರಿಸಿಕೊಂಡು ಅದರ ಆಧಾರದ ಮೇಲೆ ತೀರ್ಮಾನ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀಮಾನ್ ಬಂಗಿಯವರು ಜಮಖಂಡಿ ರಾಜರಿಗೆ ಕೊಡುತ್ತಿರುವ ರಾಜಧನವನ್ನು ರದ್ದು ಮಾಡಿರುವ ವಿಷಯ ಪ್ರಸ್ತಾಪ ಮಾಡಿದರು. ಅದರ ವಿಚಾರ ನನಗೆ ಗೊತ್ತಿಲ್ಲ. ಹಿಂದೆ ಸೊಂಡೂರು ಸಂಸ್ಥಾನ ಮರ್ಜರ್ ಆಗುವ ಕಾಲಕ್ಕೆ ಕೇಂದ್ರ ಸರ್ಕಾರದೊಡನೆ ಕೆಲವೊಂದು ಅಗ್ರಿಮೆಂಟ್‌ಗಳನ್ನು ಮಾಡಿಕೊಳ್ಳಲಾಗಿತ್ತು. ಅದರ ಪ್ರಕಾರ ರಾಜಧನ ಸಿಗುತ್ತಿತ್ತು. ಅದರಂತೆ ಜಮಖಂಡಿ ರಾಜರು ಸಹ ಕೇಂದ್ರಸರ್ಕಾರದೊಡನೆ ಅಗ್ರಿಮೆಂಟ್ ಮಾಡಿಕೊಂಡಿರಬಹುದೆಂದು ಕಾಣುತ್ತದೆ. ಇದು ಹಳೆಯ ಪ್ರಶ್ನೆಯಾಗುತ್ತದೆ. ಇದನ್ನು ಮತ್ತೆ ಕೇಂದ್ರಸರ್ಕಾರದೊಡನೆ ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ರಾಜಧನ ಕೊಡಬಾರದೆಂಬ ಬಗ್ಗೆ ಈಗಾಗಲೇ ಪಾರ್ಲಿಮೆಂಟ್‌ನಲ್ಲಿ ಅದಕ್ಕೆ ಸಂಬಂಧಪಟ್ಟ ಕಾಯಿದೆ ಪಾಸಾಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಸೊಂಡೂರು ಸಂಸ್ಥಾನದಲ್ಲಿ 100 ರೂಪಾಯಿ ರಾಜಧನ ಪಡೆಯುತ್ತಿದ್ದ ರಾಜರು ಯಾರಾದರು ಇದ್ದಾರೇ?

Sri M. Y. GHORPADE.—I remember my grand-mother used to get some pension. She died. I do not think any provision has been made to any member of the family of Sandoor Family.

ಆಮೇಲೆ ಭಾರತದ ರಾಜರುಗಳಿಗೆ ಕೊಡುವ ರಾಜಧನ ಮತ್ತು ಭತ್ಯಗಳ ಬಗ್ಗೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಅದರ ಬಗ್ಗೆ ಹೇಳಬೇಕಾದ್ದು ಏನೂ ಇಲ್ಲ. ಇದರ ಬಗ್ಗೆ ರಾಜ್ಯಾಂಗದ ತಿದ್ದುಪಡಿಯಾಗಿದೆ. ರಾಜರ ಎಲ್ಲ ಪ್ರಿವಿಲೇಜಸ್‌ನ್ನು ರದ್ದು ಮಾಡಲಾಗಿದೆ. ನಮ್ಮ ಚೀಫ್ ಸೆಕ್ರೆಟರಿಯವರು ಎಲ್ಲ ರಾಜರುಗಳಿಗೂ ಕಾಗದ ಬರೆದು 1971ನೇ ಇಸವಿಯಿಂದ ಎಲ್ಲ ಪ್ರಿವಿಲೇಜಸ್‌ನ್ನು ತೆಗೆದುಹಾಕಿದ್ದೇವೆ ಎಂಬುದನ್ನು ತಿಳಿಸಿದ್ದಾರೆ. ಆದ್ದರಿಂದ ಇದರ ಬಗ್ಗೆ ಅನುಮಾನದ ಪ್ರಶ್ನೆಯೇ ಇಲ್ಲ. ರಾಜಧನ ರದ್ದತಿ ವಿಷಯದ ಬಗ್ಗೆ ನನ್ನ ವೈಯಕ್ತಿಕ ಅಭಿಪ್ರಾಯ ಹೇಳಬೇಕೆಂದರೆ, ಆ ಕಾಯಿದೆ ಪಾರ್ಲಿಮೆಂಟ್ ಮುಂದೆ ಬಂದ ಕಾಲಕ್ಕೇ ಬಹಿರಂಗವಾಗಿ ಒಂದು ಹೇಳಿಕೆ ಕೊಟ್ಟು ಇದು ಹೋಗಬೇಕು ಎಂದು ಹೇಳಿದ್ದೆ. ಅದು ಎಲ್ಲರಿಗೂ ಗೊತ್ತಿರುವ ವಿಷಯ.

ಶ್ರೀ ಕಾಗೋಡು ತಿಮ್ಮಪ್ಪ.—ಬೆಂಗಳೂರು ಅರಮನೆ ಏನು ಮಾಡುತ್ತೀರಾ?

ಶ್ರೀ ಎಂ. ವೈ. ಘೋರ್ಪಡೆ.—ಅದರ ಬಗ್ಗೆ ಎಲ್ಲ ವಿವರಗಳನ್ನು ಈಗಾಗಲೇ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ರಚನಾತ್ಮಕವಾಗಿ ಈ ಅರಮನೆಯನ್ನು ಏನು ಮಾಡುವುದಕ್ಕೆ ಸಾಧ್ಯ ಎಂಬ ಬಗ್ಗೆ ಕ್ಯಾಬಿನೆಟ್‌ನಲ್ಲಿ ಚರ್ಚೆಯಾಗಿ, ಈಗ ಮುಖ್ಯ ಮಂತ್ರಿಗಳು ಅದರ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ಸೂಕ್ತ ಸಮಯದಲ್ಲಿ ಅದರ ಬಗ್ಗೆ ಒಂದು ಹೇಳಿಕೆಯನ್ನು ಅವರು ಕೊಡುತ್ತಾರೆ. ಬೆಂಗಳೂರು ಅರಮನೆಯ ಬಗ್ಗೆ ನನ್ನ ವೈಯಕ್ತಿಕ ಅಭಿಪ್ರಾಯ ಹೇಳಬೇಕೆಂದರೆ, ಅದು ರಮ್ಯವಾದಂಥ ಸ್ಥಳವಾಗಿದೆ. ಮತ್ತು ಐಡಿಯಲ್ ಪ್ಲೇಸ್ ಆಗಿರುವುದರಿಂದ ಅದನ್ನು ವಿಶ್ವವಿದ್ಯಾನಿಲಯವನ್ನಾಗಿ ಮಾರ್ಪಡಿಸುವುದಕ್ಕೆ ತಕ್ಕುದಾದ ವಾತಾವರಣ ಅಲ್ಲದೆ ಎಂದು ಮಾತ್ರ ಹೇಳುತ್ತೇನೆ.

ಶ್ರೀಮಾನ್ ದೇವೇಗೌಡರು ಹುರಿಮಾಡಿದ ರೇಷ್ಮೆಗೆ ತೆರಿಗೆಯಿಂದ ವಿನಾಯಿತಿ ಕೊಡಬಾರದೆಂದು ಹೇಳಿದರು. ಅದೇ ರೀತಿ ಶ್ರೀಮಾನ್ ಶಾಮಣ್ಣನವರು ಆಕ್ಟ್ರಾಯ್ ಇರುವುದು ಒಳ್ಳೆಯದಲ್ಲ. ಅದನ್ನು ತೆಗೆಯುವಾಗ ಹುಷಾರಿಂದ ತೆಗೆಯಿರಿ, ಅದನ್ನು ತೆಗೆಯುವುದರಿಂದ ಮುನಿಸಿಪಾಲಿಟಿಯವರಿಗೆ ಬರುವ ಆದಾಯಕ್ಕೆ ಅಪಾಯವಾಗಬಾರದು ಎಂಬುದಾಗಿ ಹೇಳಿದರು. ಮಾನ್ಯ ಸದಸ್ಯರುಗಳು ಸಭೆಯಲ್ಲಿ ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಈಗ ಸಕ್ಕರೆ, ಟೆಕ್ಸ್‌ಟೈಲ್ಸ್ ಮತ್ತು ಟೊಬ್ಯಾಕೋ ಮೇಲೆ ಸರ್‌ಚಾರ್ಜ್ ಹಾಕುವುದಕ್ಕೆ ನಮಗೆ ಅಧಿಕಾರವಿಲ್ಲ. ಈಗ ಸೇಲ್ಸ್ ಟ್ಯಾಕ್ಸ್‌ನಿಂದ ಸರ್ಕಾರಕ್ಕೆ ಏನು ಆದಾಯ ಬರುತ್ತಿದೆ ಅದರ ಮೂರನೇ ಎರಡು ಭಾಗದಷ್ಟು ಆದಾಯ ಬೆಂಗಳೂರು ಒಂದರಿಂದಲೇ ಬರುತ್ತಿದೆ. ಒಟ್ಟು 60 ಕೋಟಿ ರೂಪಾಯಿಗಳ ಪೈಕಿ ಸುಮಾರು 40 ಕೋಟಿ ರೂಪಾಯಿಗಳು ಬೆಂಗಳೂರು ನಗರದಿಂದಲೇ ಬರುತ್ತಿದೆ. ಆಕ್ಟ್ರಾಯನ್ನು ಯಾವ ಯಾವ ಐಟಮ್ಸ್ ಮೇಲೆ ಹಾಕಲಾಗುತ್ತಿದೆಯೋ, ಆ ಐಟಮ್ಸ್ ಮೇಲಿಂದ ತೆಗೆಯಬೇಕಾದರೆ, ಯಾವ ಯಾವ ಐಟಮ್ಸ್ ಮೇಲೆ ಆಕ್ಟ್ರಾಯ್ ಇಲ್ಲವೋ ಅವುಗಳಮೇಲೆ 10 ಪರ್‌ಸೆಂಟ್ ತೆರಿಗೆ ಹಾಕಬೇಕಾಗುತ್ತದೆ.

ಸೇಲ್ಸ್ ಟ್ಯಾಕ್ಸಿನಿಂದ ಸರಾಸರಿ 60 ಕೋಟಿ ರೂಪಾಯಿಗಳು ಆದಾಯ ಬರುತ್ತದೆ. ಈಗ ಆಕ್ಟ್ರಾಯ್‌ನಿಂದ 6—7 ಕೋಟಿ ರೂಪಾಯಿಗಳ ಆದಾಯ ಬರುತ್ತದೆ. ಅದನ್ನು ರದ್ದುಗೊಳಿಸಿ ಶೇಕಡಾ 10ರಷ್ಟು ಸೇಲ್ಸ್ ಟ್ಯಾಕ್ಸ್ ಸರ್‌ಚಾರ್ಜ್ ವಿಧಿಸಿದರೆ ಇಡೀ ರಾಜ್ಯದ ಜನ ಇದನ್ನು ಒಪ್ಪ ಬೇಕಾಗುತ್ತದೆ. ಇದರ ಬಗ್ಗೆ ಒಂದು ಅಡ್ವೈಸರಿ ಕಮಿಟಿಯನ್ನು ನೇಮಕಮಾಡಿ ಅವರ ಅಭಿ ಪ್ರಾಯವನ್ನು ತೆಗೆದುಕೊಂಡು ಇದರಿಂದ ಯಾರಿಗೂ ತೊಂದರೆಯಾಗದ ರೀತಿಯಲ್ಲಿ ಇದನ್ನು ಮಾಡಬೇಕಾಗುತ್ತದೆ. ಬೆಂಗಳೂರು ಕಾರ್ಪೊರೇಷನ್ನಿಗೆ ಆಕ್ಟ್ರಾಯ್‌ನಿಂದ ಎರಡು ಕೋಟಿ ರೂಪಾಯಿಗಳ ಆದಾಯ ಬರುತ್ತದೆ. ಅದನ್ನು ರದ್ದುಗೊಳಿಸಿದರೆ ಕಾರ್ಪೊರೇಷನ್ ನಡೆಯು ವುದು ಹೇಗೆ? ಆದ್ದರಿಂದ ಇದರಲ್ಲಿ ಅವಸರದ ಕ್ರಮ ತೆಗೆದುಕೊಂಡರೆ ಬೆಂಗಳೂರು ಬಂದ್ ಶುರು ಮಾಡುತ್ತಾರೆ.

ಶ್ರೀ ಕೆ. ಪ್ರಭಾಕರ್.—ಲ್ಯಾಂಡ್‌ರೆವಿನ್ಯೂ ವಿಚಾರ ಏನು ಮಾಡುತ್ತೀರಿ ಎನ್ನುವ ಬಗ್ಗೆ ನನಗೆ ಉತ್ತರ ಹೇಳಬೇಕು.

ಶ್ರೀ ಎಂ. ವೈ. ಘೋರ್ಪಡೆ.—ಈ ಬಗ್ಗೆ ನಾನು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ. ಈಗ ಇದನ್ನು ತೆಗೆಯುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ನಾವು ಇನ್ನೂ ಯೋಚನೆ ಮಾಡು ತ್ತಿದ್ದೇವೆ. ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ಹಾಕಿದರೆ ಸಣ್ಣ ರೈತರಿಗೆ ಎಗ್ಸಂಪ್ಷನ್ ಸಿಕ್ಕು ತ್ತದೆ. ಅವರಿಗೆ ತೊಂದರೆಯಾಗುವುದಿಲ್ಲ. ಆದರೆ ದೊಡ್ಡ ರೈತರು ಅಗ್ರಿಕಲ್‌ಚರಲ್ ಇನ್‌ಕಂ ಟ್ಯಾಕ್ಸ್ ಕೊಡಬೇಕಾದರೆ ಅವರು ಲೆಕ್ಕ ಇಡಬೇಕು. ಲ್ಯಾಂಡ್‌ರೆವಿನ್ಯೂ ಏನಿದೆ ಇದು ಹಿಸ್ಟಾರಿಕ್ ಟ್ಯಾಕ್ಸ್. ಇದನ್ನು ತೆಗೆದರೆ ಸೋಷಿಯಲ್ ಕಂಡೀಷನ್‌ನಲ್ಲಿ ರೈತರಿಗೆ ಅಪಾಯವಾಗುವ ಸಂಭವ ಇದೆ. ಆದ್ದರಿಂದ 1—2 ರೂಪಾಯಿ ಲ್ಯಾಂಡ್ ರೆವಿನ್ಯೂ ಏನಿದೆ ಅವನ್ನು ಕೊಡುವುದಕ್ಕೆ ಏನೂ ತೊಂದರೆಯಾಗುವುದಿಲ್ಲ ಎನ್ನುವ ವಿಚಾರವೂ ಇದೆ. ಆದ್ದರಿಂದ ಈ ಬಗ್ಗೆ ರಾಜ್ಯ ಸರ್ಕಾರದವರು ನೇಮಿಸಿರುವ ಕಮಿಟಿಯ ವರದಿಯು ಬಂದನಂತರ ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ಬಂದಾಗ ಲ್ಯಾಂಡ್ ರೆವಿನ್ಯೂ ತೆಗೆಯುವ ವಿಚಾರವನ್ನು ಯಾವ ರೀತಿ ಮಾಡಬೇಕೆಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಆದ್ದರಿಂದ ಬಡ ಜನರ ಹಿತದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ ಏನೇನು ಮಾಡಬೇಕೋ ಅದನ್ನು ನಾವು ಮಾಡುತ್ತೇವೆ, ಆ ವಿಚಾರದಲ್ಲಿ ಯಾರೂ ಅನುಮಾನ ಪಡಬೇಕಾಗಿಲ್ಲ.

ಶ್ರೀಮಾನ್ ದೇವೇಗೌಡರು ಅಡಿಷನಲ್ ಎಕ್ಸೈಜ್ ಟ್ಯಾಕ್ಸಿನ ವಿಚಾರವನ್ನು ಹೇಳಿದರು. ಇದು ಪೂರ್ತಿ ನಮಗೆ ಬರುತ್ತಿದೆ. ಅಡೀಷನಲ್ ಎಕ್ಸೈಜ್ ಟ್ಯಾಕ್ಸ್ ಹಾಕಿದ್ದು ಕೆಲವು ಐಟಂಗಳ ಮೇಲೆ ಮಾತ್ರ. ಕೆಲವು ಐಟಂಗಳ ಮೇಲೆ ಮಾತ್ರ ಸೇಲ್ಸ್ ಟ್ಯಾಕ್ಸ್ ಹಾಕಿದರೆ ಅದು ಅಪಾಯ ಕಾರಿ. ಇದನ್ನು ಎಲ್ಲರೂ ಒಪ್ಪುತ್ತಾರೆ. ಈಗ ಕೆಲವು ಐಟಂಗಳಮೇಲೆ ಮಾತ್ರ ಅಡೀಷನಲ್ ಎಕ್ಸೈಜ್ ಟ್ಯಾಕ್ಸ್ ಹಾಕಿರುವುದರಿಂದ ಅದು ಸಂಪೂರ್ಣವಾಗಿ 100ಕ್ಕೆ 100ರಷ್ಟು ಭಾಗ ರಾಜ್ಯಕ್ಕೆ ಆದಾಯ ಬರುತ್ತದೆ. ಅಡೀಷನಲ್ ಎಕ್ಸೈಜ್ ಟ್ಯಾಕ್ಸ್ ಹಾಕುವುದಕ್ಕೆ ಒಪ್ಪಿಕೊಂಡದ್ದರಿಂದ ನಮಗೆ 7 ಕೋಟಿ ರೂಪಾಯಿ ಆದಾಯ ಬರುತ್ತದೆ. ನಾವು ಅಡೀಷನಲ್ ಎಕ್ಸೈಜ್ ಟ್ಯಾಕ್ಸ್ ಹಾಕುವುದಕ್ಕೆ ಒಪ್ಪದೆ ಸೇಲ್ಸ್ ಟ್ಯಾಕ್ಸ್ ಹಾಕಿದ್ದರೆ ನಮಗೆ 7 ಕೋಟಿ ರೂಪಾಯಿ ಆದಾಯ ಬರುತ್ತಾ ಇರಲಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಬ್ಲಾಕ್‌ಮನಿ ವಿಷಯದಲ್ಲಿ ಏನು ಹೇಳುತ್ತೀರಿ?

ಶ್ರೀ ಎಂ. ವೈ. ಘೋರ್ಪಡೆ.—ಸೇಲ್ಸ್‌ಟ್ಯಾಕ್ಸ್ ಇವೇಜನ್ಸ್ ಫಲಿತಾಂಶದಿಂದ ಬ್ಲಾಕ್‌ಮನಿ ಅಕ್ಯುಮಿಲೇಟ್ ಆಗುವುದಕ್ಕೆ ಪ್ರಾರಂಭವಾಯಿತು. ಟ್ಯಾಕ್ಸ್ ಇವೇಜನ್ ಆಗದಿದ್ದರೆ ಇದು ಇರುತ್ತಿರಲಿಲ್ಲ. ಅದಕ್ಕಾಗಿ ಈಗ ಫಿಜಿಕಲ್ ಸೀಲಿಂಗ್ ಹಾಕುವ ಪ್ರಶ್ನೆ ಬಂದಿರುವುದು. ಅರ್ಬನ್ ಸೀಲಿಂಗ್ ಪ್ರಾಪರ್ಟಿ ವಿಚಾರ ಬಂದದ್ದು ಬ್ಲಾಕ್‌ಮನಿ ಇರುವುದರಿಂದ. I think I have given a sufficiently full reply. I request the hon. Members to extend their wholoe-hearted support to these demands.

MADAM SPEAKER.—The question is :

"That the respective sums not exceeding the amounts mentioned in the list of demands, which include the sums already voted on account be granted to the Government to defray the charges which will come in course of payment during the financial year for the period ending with the 31st day of March, 1973 in respect of Demends Nos. 1, 5, 34, 35, 36, 40, 41, 52, and 54."

The motion was adopted and the Demands were granted As ordered by the Chair the Motion for Demands for Grants adopted by the House, are reproduced below:—

4. Taxes on Income Other than Corporation Tax.

"That a sum not exceeding Rs. 10,98,000, inclusive of the sum granted 'on account' be granted to the Government to defray the charges which will come in course of payment during the financial year for the period ending 31st day of March 1973, in respect of Demand No. 1. 'Taxes on Income Other than Corporation Tax'."

"That a sum not exceeding Rs. 1,36,98,000 inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 5 'Sales Tax'."

"That a sum not exceeding Rs. 6,48,89,000, inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 34 'Pensions and Other Retirement Benefits'."

"That a sum not exceeding Rs. 53,45,000, inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 35 'Territorial and Political Pensions'."

"That a sum not exceeding Rs. 13,000, inclusive of the sum granted 'on account' be granted to the Government to defray the charges which will come in course of payment during the financial year for the period ending 31st day of March 1973, in respect of Demand No. 36 'Privy Purses and Allowances of Indian Rulers'."

"That a sum not exceeding Rs. 56,00,000, inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 40 'Commutation of Pensions'."

"That a sum not exceeing Rs. 2,03,50,000, inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 41 'Other Miscellaneous Compensations and Assignments'".

"That a sum not exceeding Rs. 54,00,000 inclusive of the sum granted 'on account' be granted to the Government to defray the charges which will come in course of payment during the financial year for the period ending 31st day of March 1973, in respect of Demand No. 52 'Payments of Commuted Value of Pensions'."

"That a sum not exceeding Rs. 15,90,17,000 inclusive of the sum granted 'on account', be granted to the Government to defray the charges which will come in course of payment during the financial year for the Period ending 31st day of March 1973, in respect of Demand No. 54 'Loans and Advances by State/Union Territory Governments'."

Calling attention to a matter of Urgent Public Importance

re: Non Revision of electorol Rolls for T.D.B. Elections.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಈ ಸಭೆಯು ಆರಂಭವಾದಾಗಲೇ ಅನೇಕ ಜನ ಮಾನ್ಯ ಸದಸ್ಯರು ಸರ್ಕಾರದ ಗಮನಸೆಳೆದಿದ್ದರೂ ಕೂಡ ಇನ್ನೂ ಮತದಾರರ ಪಟ್ಟಿ ಪರಿಷ್ಕರಿಸದೇ ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ಚುನಾವಣೆಗೆ ಅದೇ ಪಟ್ಟಿಯ ಆಧಾರದ ಮೇಲೆ ನಡೆಸುವ ಪ್ರಕಟಣೆ ಸರ್ಕಾರ ಮಾಡಿರುವುದನ್ನು ಸಭೆಯು ಚರ್ಚಿಸಬೇಕೆಂದು ನಾನು ಸಂಬಂಧಪಟ್ಟವರ ಗಮನವನ್ನು ತಮ್ಮ ಮುಖಾಂತರ ಸೆಳೆಯುತ್ತೇನೆ.

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ಸಮಾಜ ಕಲ್ಯಾಣ ಮತ್ತು ಸಮಾಜ ವಿಕಾಸ ಶಾಖೆಗಳ ಮಂತ್ರಿಗಳು).—ಪ್ರಸ್ತುತ ಚಾಲ್ತಿ ಕ್ರಮದಂತೆ ಮೈಸೂರು ವಿಧಾನಸಭೆಗಾಗಿ ಸಿದ್ಧಪಡಿಸಿರುವ ಚುನಾವಣಾ ಮತದಾರರ ಪಟ್ಟಿಗಳೇ ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ಚುನಾವಣಾ ಕಾರ್ಯಕ್ರಮಕ್ಕೂ ಅನ್ವಯವಾಗುತ್ತವೆ. ಮತದಾರರ ಪಟ್ಟಿಯನ್ನು ಮುಖ್ಯ ಚುನಾವಣಾ ಅಧಿಕಾರಿಯು ಪರಿಷ್ಕರಿಸತಕ್ಕುದು.

ಶ್ರೀ ಕೋಣಂದೂರು ಲಿಂಗಪ್ಪ.—ವಿಧಾನಸಭೆಯ ಚುನಾವಣೆಗೆ ಮತದಾರರ ಪಟ್ಟಿಯನ್ನು ಏನೂ ತಯಾರು ಮಾಡಿದ್ದರು ಅದರಲ್ಲಿ ಅನೇಕ ಲೋಪದೋಷಗಳು ಇವೆ. ಇದನ್ನು ಪರಿಷ್ಕರಿಸಬೇಕೆಂದು ಎಲ್ಲಾ ಪಕ್ಷದವರು ಅಭಿಪ್ರಾಯ ಪಟ್ಟಿದ್ದಾರೆ. ಇದನ್ನು ಮುದ್ರಿಸುವುದರಲ್ಲಿ ಬೇಕಾದಷ್ಟು

(ಶ್ರೀ ಕೋಣಂದೂರು ಲಿಂಗಪ್ಪ)

ಲೋಪದೋಷಗಳು ಇವೆ ಎನ್ನುವುದನ್ನು ಈಗಾಗಲೇ ಅನೇಕರು ಹೇಳಿದ್ದಾರೆ. ಈಗ ನವೆಂಬರ್ ಒಂದನೆಯ ತಾರೀಖು ತಾಲ್ಲೂಕು ಅಭಿವೃದ್ಧಿ ಮಂಡಲಗಳ ಚುನಾವಣೆ ನಡೆಸಬೇಕೆಂದು ಸರ್ಕಾರದವರು ಪ್ರಯತ್ನ ಮಾಡುತ್ತಿದ್ದಾರೆ. ಈ ಚುನಾವಣೆಯಲ್ಲಿ ಎಲ್ಲಾ ಮತದಾರರೂ ತಮ್ಮ ಮತವನ್ನು ಚಲಾಯಿಸುವುದಕ್ಕೆ ಅವಕಾಶ ಸಿಕ್ಕುತ್ತದೆಯೇ ಎನ್ನುವುದನ್ನು ಪರಿಶೀಲನೆ ಮಾಡಬೇಕು. ಈಗಿರತಕ್ಕ ಮತದಾರರ ಪಟ್ಟಿ ಏನಿದೆ ಅದರಲ್ಲಿ ಬಿಟ್ಟುಹೋಗಿರತಕ್ಕ ಹೆಸರುಗಳನ್ನು ಸೇರಿಸಿಕೊಳ್ಳುವುದಕ್ಕೆ ಈಗಲಾದರೂ 10—15 ದಿವಸಗಳ ಕಾಲಾವಕಾಶವನ್ನು ಕೊಡಬೇಕು. ಇದನ್ನು ಹೊಸದಾಗಿ ಪ್ರಿಂಟ್ ಮಾಡುವುದಕ್ಕೆ ಹೆಚ್ಚು ಖರ್ಚು ಬೀಳುತ್ತದೆ ಎಂದು ತಾವು ಹೇಳಬಹುದು. ಅಂಥ ಹೆಚ್ಚು ಖರ್ಚು ಬೀಳುವುದಿಲ್ಲ. ಈ ಮತದಾರರ ಪಟ್ಟಿಯನ್ನು ಹೊಸದಾಗಿ ಅಚ್ಚು ಹಾಕಿಸಬೇಕೆಂದು ನಾನು ಹೇಳುತ್ತೇನೆ.

†ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಈಚೆಗೆ ಅಸೆಂಬ್ಲಿ ಚುನಾವಣೆಯಾದಾಗ ನಮ್ಮ ಅನುಭವಕ್ಕೆ ಇದು ಬಂದಿದೆ. ಒಂದು ಏರಿಯಾದಲ್ಲಿ ಇದ್ದ ಹೆಸರುಗಳೇ ಪಟ್ಟಿಯಲ್ಲಿ ಕೈಬಿಡಲಾಗಿತ್ತು. ಕೆಲವು ಕಡೆ ಎರಡು ಎರಡು ಹೆಸರುಗಳನ್ನ ಸೇರಿಸಲಾಗಿತ್ತು. ಹೀಗೆ ಇವನ್ನು ತಿದ್ದುಪಡಿ ಮಾಡಬೇಕೆಂದು ಸಲಹೆ ಕೊಟ್ಟರೆ ಅಧಿಕಾರಿಗಳು ಅದನ್ನು ಸರಿಯಾಗಿ ಮಾಡದೆ ಇದರಲ್ಲಿ ತಪ್ಪುಗಳೇ ಹೆಚ್ಚಾಗಿವೆ. ಆದುದರಿಂದ ಇರುವ ಪಟ್ಟಿಯನ್ನು ಪರಿಷ್ಕಾರ ಮಾಡುವುದಕ್ಕೆ ಬದಲಾಗಿ ಎಲ್ಲ ಮತದಾರರ ಹೆಸರುಗಳೂ ಇರುವಂತೆ ಸರಿಯಾದ ಒಂದು ಪಟ್ಟಿಯನ್ನು ತಯಾರು ಮಾಡಿ, ಅದನ್ನು ಅಚ್ಚು ಮಾಡುವುದು ಅಗತ್ಯ. ಇದಕ್ಕೆ ಹೆಚ್ಚು ಖರ್ಚು ಸರಕಾರಕ್ಕೆ ಬರುವುದಿಲ್ಲ. ಇರುವ ಅಧಿಕಾರಿಗಳೇ ಸರಿಯಾದ ಸೂಚನೆ ಕೊಟ್ಟರೆ ಮಾಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಸನ್ಮಾನ್ಯ ಸದಸ್ಯರು ಇದರ ಅರಿವು ಚೆನ್ನಾಗಿ ಮಾಡಿಕೊಂಡಿದ್ದಾರೆಂದು ಭಾವಿಸುತ್ತೇನೆ. ಕಾನೂನು ಪ್ರಕಾರ ಮತದಾರರ ಪಟ್ಟಿಯನ್ನು ಘೋಷಣೆ ಮಾಡಿದ ನಂತರ ಇದನ್ನು ಪರಿಷ್ಕಾರ ಮಾಡತಕ್ಕದ್ದು ಕೇಂದ್ರ ಸರಕಾರಕ್ಕೆ ಸೇರಿದ್ದು. ಕೇಂದ್ರ ಸರಕಾರವೇ ಚುನಾವಣೆಗಳನ್ನು ನಡೆಸುವುದು. ಐದು ವರ್ಷಗಳಿಗೊಮ್ಮೆ ಸಾರ್ವತ್ರಿಕ ಚುನಾವಣೆ ಆಗತಕ್ಕ ಸಂದರ್ಭದಲ್ಲಿ ಅದನ್ನು ಪರಿಷ್ಕಾರ ಮಾಡುತ್ತಾರೆ. ರೆಪ್ರಸೆಂಟೇಷನ್ ಆಫ್ ಪೀಪಲ್ಸ್ ಆಕ್ಟ್ ಪ್ರಕಾರ ಸೆಕ್ಷನ್ 21ರ ಪ್ರಕಾರ ಚುನಾವಣಾ ಪಟ್ಟಿಯನ್ನು ತಯಾರು ಮಾಡುತ್ತಾರೆ. ಇದು ಐದು ವರ್ಷಕ್ಕೊಮ್ಮೆ ನಡೆಯುತ್ತದೆ ಮತ್ತು ಆರ್ಟಿಕಲ್ 324—327 ರ ಪ್ರಕಾರ ಮಾಡತಕ್ಕದ್ದು. ಇದರಲ್ಲಿ ಹೆಸರುಗಳೇನಾದರೂ ಬಿಟ್ಟಿದ್ದರೆ ಇದಕ್ಕೆ ಇರುವ ಅರ್ಜಿ ತೆಗೆದುಕೊಂಡು ಅದರಲ್ಲಿ ಹತ್ತು ಪೈಸೆ ಸ್ಟಾಂಪು ಹಚ್ಚಿ ಸಂಬಂಧಪಟ್ಟ ಮತದಾರರು ಅವರ ಹೆಸರುಗಳನ್ನು ಸೇರಿಸಿಕೊಳ್ಳಬೇಕೆಂದು ನಿಯಮ ಇದೆ. ಇದರಲ್ಲಿ ಎಲ್ಲ ಪಕ್ಷದವರು ಬರುತ್ತಾರೆ. ಆಯಾ ತಾಲ್ಲೂಕು ಹಾಗೂ ಜಿಲ್ಲಾ ಘಟಕಗಳಲ್ಲಿರುವ ಅಧಿಕಾರಿಗಳೊಡನೆ ಅಲ್ಲಿರುವ ಪಕ್ಷದವರು ಸಂಪರ್ಕ ಬೆಳೆಸಿ ಮತದಾರರುಗಳ ಪಟ್ಟಿಯಲ್ಲಿ ಎಲ್ಲ ಹೆಸರುಗಳನ್ನು ಸೇರಿಸುವ ಪ್ರಯತ್ನ ಮಾಡಬೇಕಾಗಿದೆ. ಇದನ್ನು ಈಗ ಸರಕಾರ ಹೊಸದಾಗಿ ಅಚ್ಚು ಹಾಕುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಮಂತ್ರಿಗಳು ಹೇಳುವಂತೆ ನಮಗೆ ಎಲ್ಲ ನಿಯಮಗಳೂ ಗೊತ್ತಿವೆ. ನಾವೇನೂ ರೂಲ್ಸುಗಳು ತಿಳಿಯದ ಹುಂಬರಲ್ಲ. ಪ್ರತಿಯೊಂದು ಕಡೆಯಲ್ಲೂ ಇದು ತಾಲ್ಲೂಕು ಬೋರ್ಡು ಹಾಗೂ ಪಂಚಾಯಿತಿಗಳ ಚುನಾವಣೆಯಲ್ಲಿ ಮತದಾರರ ಪಟ್ಟಿಗಳು ಇರುತ್ತವೆ. ಇದಕ್ಕಾಗಿ ಆಯಾ ತಾಲ್ಲೂಕಾ ಬೋರ್ಡುಗಳು ಪಂಚಾಯತಿಗಳು ಸರಕಾರಕ್ಕೆ ಹಣ ಕೂಡ ಕೊಡುತ್ತವೆ ಸರಕಾರ ಪಟ್ಟಿಗಳನ್ನು ಮುದ್ರಣ ಮಾಡುವಾಗ ಅನೇಕ ತಪ್ಪುಗಳು ಈಚೆಗೆ ಬರುತ್ತಿವೆ. ಇದನ್ನು ಸರಿಪಡಿಸಬೇಕಾಗಿದೆ. ಈಗ ಆಗುತ್ತಿರುವ ತಪ್ಪುಗಳನ್ನು ಸರಿಪಡಿಸಬೇಕಾದರೆ ಇದನ್ನು ಕೇಂದ್ರ ಸರಕಾರ ಮಾಡಬೇಕೆಂದು ಹೇಳಬಹುದು. ಆದರೆ ಕೇಂದ್ರದವರೇ ಈ ಸರಕಾರದ ಅಧಿಕಾರಿಗಳಿಗೆ ಇದರ ಕೆಲಸಗಳನ್ನು ಮಾಡಲು ನೇಮಿಸುತ್ತಾರೆ. ಆಗ ಇದರ ಪಟ್ಟಿ ಮಾಡುವಾಗ ಈಗಿರುವ ಪಟ್ಟಿಯನ್ನು ಅನುಸರಿಸುತ್ತಾರೆ. ಇದನ್ನು ತಪ್ಪಿಸಬೇಕು. ಈಗ ಇರುವ ಪಟ್ಟಿಗಳಲ್ಲಿ ಏನಾಗಿದೆ ಎಂದರೆ ಸತ್ತವರು ಪಟ್ಟಿಯಲ್ಲಿದ್ದಾರೆ, ಕೆಲವು ಕಡೆ ಬದುಕಿರುವವರು ಸತ್ತಿದ್ದಾರೆ. ಇಂತಹ ತಪ್ಪುಗಳು ವಿಪರೀತವಾಗಿ ಆಗಿವೆ. ಇದರಿಂದ ನ್ಯಾಯವಾದ ಚುನಾವಣೆ ನಡೆಸುವುದು ಕಷ್ಟವಾಗುತ್ತದೆ. ಬೋಗಸ್ ವೋಟರುಗಳೂ ಇದರಲ್ಲಿ ಬರುತ್ತಾರೆ. ಇದನ್ನು ಸರಿಯಾಗಿ ಯೋಚನೆ ಮಾಡಿ ಸರಿಪಡಿಸಬೇಕು.

ಶ್ರೀ ವಾಟಾಳ್ ನಾಗರಾಜ್.—ಈಚೆಗೆ ನಡೆದ ಚುನಾವಣೆಯಲ್ಲಿ ಬೆಂಗಳೂರು ನಗರದ ಕಾರ್ಪೊರೇಷನ್ ಅಧಿಕಾರಿಗಳೇ ಮತದಾರರ ಪಟ್ಟಿಯನ್ನು ಮಾಡಿದ್ದಾರೆ. ಇದರಲ್ಲಿ ಗಂಡು ಆಗಿದ್ದವರು ಹೆಣ್ಣಾಗಿದ್ದಾರೆ, ಹೆಣ್ಣಾಗಿರುವವರು ಗಂಡಾಗಿದ್ದಾರೆ ಮತ್ತು ಎಷ್ಟೋ ಹೆಸರುಗಳು ಕೆಲವು ಕಡೆ ಪಟ್ಟಿಯಿಂದ ತೆಗೆದು ಹಾಕಿದ್ದಾರೆ, ಇವನ್ನೆಲ್ಲಾ ತಿದ್ದುಪಡಿಮಾಡಿ ಅದೇ ಪಟ್ಟಿಯನ್ನು ಪುನಃ ಮಾಡಿದರೆ ಅದು ಸರಿಹೋಗುವುದಿಲ್ಲ ಇದಕ್ಕಾಗಿ ಈಗಿರುವ ಪಟ್ಟಿಯನ್ನು ತಿದ್ದುಪಡಿ ಮಾಡಿ ಅದನ್ನು ಮತ್ತೆ ಅಚ್ಚು ಹಾಕಿಸಲು ಸರಕಾರ ತಕ್ಕ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದರಲ್ಲಿ ನಾನು ಹೆಚ್ಚು ಹೇಳುವುದೇನಿಲ್ಲ. ಇದರಲ್ಲಿ ಎಲೆಕ್ಷನ್ ಅಧಿಕಾರಿಗಳು ಸಂಬಂಧಪಟ್ಟ ರಾಜ್ಯಗಳ ಚುನಾವಣೆ ಅಧಿಕಾರಿಗಳಿಗೆ ಸೂಚನೆಗಳನ್ನು ಕೊಟ್ಟು ಪತ್ರಿಕೆಗಳಲ್ಲಿ ಪ್ರಕಟಣೆಗಳನ್ನು ಇಸ್ತಿಹಾರು ಮೂಲಕ ಹೊರಡಿಸುತ್ತಾರೆ. ಈಗಾಗಲೇ ಹಿಂದೆ ಚುನಾವಣೆಗಳು ನಡೆದಾಗ ಆರು ಸಾರಿ ಪತ್ರಿಕೆಗಳಲ್ಲಿ ಇಂತಹ ಇಸ್ತಿಹಾರುಗಳು ಬಂದಿದ್ದವು. ಆಗ ಮತದಾರರುಗಳು ಅವರ ಹೆಸರನ್ನು ಅದರಲ್ಲಿ ಸೇರಿಸಬಹುದಾಗಿತ್ತು. ತಪ್ಪು ಹೆಸರುಗಳನ್ನು ಕೊಟ್ಟು ಸೇರಿಸಿದರೆ ಅದು ಒಂದು ಅಫೆನ್ಸ್ ಆಗುತ್ತೆ.

Programme of Business of the House—Announcement

MADAM SPEAKER.—Before we rise, I have got to make an announcement about the programme of further business drawn up by the Business Advisory Committee which had met today.

At a sitting of the Business Advisory Committee held today the 13th July, 1972 the Committee after considering the business which is likely to come before the House, have decided that the House may sit till 5th August, 1972. The Committee have also recommended the following programme of business for the sittings between 17th and 22nd July 1972.

Monday, 17th July 1972	(i) Appropriation Bill (ii) Discussion for short duration regarding the working of Bangalore Transport Service given notice of by Sri T. R. Shamanna (iii) Discussion for short duration regarding the drought conditions prevailing in several areas of the State given notice of by Sri H. D. Deve Gowda and others.
Tuesday, 18th July 1972 ...	Non-official Business

(MADAM SPEAKER)

Wednesday, 19th July 1972		
Thursday, 20th July 1972	...	Legislative Business
Friday, 21st July 1972		
Saturday, 22nd July 1972	...	Non-official Business

The House will now adjourn and meet tomorrow at 1-00 P. M.

The House adjourned at Seven of the Clock to meet again at One of the Clock on Friday the 14th July 1972.

WD 18215—GPB—550+10—30-12-1972

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Friday, the 14th July 1972/Ashadha 23, 1894 (Saka Era)

The House met in the Assembly Chamber, Vidhana Soudha, at One of the Clock.

MADAM SPEAKER [SMT. K. S. NAGARATHNAMMA] in the Chair.

STARRED QUESTIONS

(to which oral Answers were given)

Construction of Shiradon Bridge

120. **Sri J. L. KABADE** (Ballbolli).—

Will the Minister for Public Works and Electricity be pleased to state:—

(*a*) the estimated cost of the construction of Shiradon bridge on the State High Way near Bijapur-Pandarapura Road ;

(*b*) when the estimate was prepared ;

(*c*) the reasons for not taking up the said work so far ?

Sri H. M. CHANNABASAPPA (Minister for Public Works and Electricity).—

(*a*) Detailed estimate has not yet been got up.

(*b*) Does not arise in view of reply to clause (*a*) above.

(*c*) Paucity of funds.

ಶ್ರೀ ಜೆ. ಎಲ್. ಕಬಾಡಿ.—ಈ ಸೇತುವೆಯನ್ನು ಮಾಡಬೇಕೆಂದು ಬಹು ದಿನಗಳಿಂದ ಕೇಳುತ್ತಿದ್ದರೂ ಸರ್ಕಾರದವರು ಇದಕ್ಕೆ ಗಮನ ಕೊಡದಿರಲು ಕಾರಣವೇನು ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಉತ್ತರದಲ್ಲಿ "ಪಾಸಿಟಿ ಆಫ್ ಫಂಡ್ಸ್" ಎಂದು ಹೇಳಿದ್ದೇನೆ.

---

† Indicates that the remarks or speeches have not been revised by the member concerned.

ಶ್ರೀ ಜೆ. ಎಲ್. ಕಬಾಡಿ.—ಇದು ಅತೀ ಮುಖ್ಯವಾದ ಸೇತುವೆಯಾಗಿರುವುದರಿಂದ ಇದಕ್ಕೆ ಹಣ ಒದಗಿಸಿಕೊಡುವುದು ಸರ್ಕಾರದ ಮುಖ್ಯ ಧೋರಣೆಯಲ್ಲವೇ ?

ವಾಗುತ್ತದೆ ಎನ್ನುವುದನ್ನು ತಾವು ಯೋಚನೆ ಮಾಡಬೇಕು. ಹೊಸ ಹೊಸ ಎಂಟರ್‌ಪ್ರೈಜರ್ಸ್ ಏಷ್ಟೋ ಉತ್ಸಾಹದಿಂದ ಬರುತ್ತಾರೆ, ಆದರೆ ಅವರಿಗೆ ಯಾವ ರೀತಿ ಅನುಕೂಲತೆಗಳು ದೊರಕುತ್ತವೆ ಎನ್ನುವುದನ್ನು ತಾವು ಯೋಚನೆಮಾಡಬೇಕಾಗುತ್ತದೆ. ದೊಡ್ಡ ದೊಡ್ಡ ಎಂಟರ್ ಪ್ರೈಜರ್ಸ್‌ಗಳು ಮುಖ್ಯಮಂತ್ರಿಗಳ ಲೆವಲ್‌ನಿಂದ ಡೆಲ್ಲಿ ಇತ್ಯಾದಿ ಕಡೆಗಳಿಂದ ಬರತಕ್ಕ ಪ್ರಭಾವಶಾಲಿಗಳೇನಿದ್ದಾರೆ ಅವರಿಗೆ ಜಮೀನುಬೇಕು ನೀರು ಬೇಕು, ಲೈಟ್ ಬೇಕು ಮತ್ತು ಅವಶ್ಯವಾದಂಥ ರಾಮೆಟೀರಿಯಲ್ಸ್ ಬೇಕು ಎಂದರೆ, ಒಂದು ನಿಮಿಷದಲ್ಲಿ ಡೈರೆಕ್ಟರಿಗೆ ಹೇಳಿ ಕೆಲಸ ಮಾಡಿಸಿಕೊಡುತ್ತಾರೆ. ಆದರೆ ನನ್ನಂಥ ರಾಮ್ಯಾನ್ ಅನುಭವ ಇಲ್ಲದೆ ಇದ್ದವನು ಬಂದರೆ, ಭೂಮಿಗೆ ಅರ್ಜಿ ಹಾಕಿಕೊಂಡು ಕೇಸ್ ಪ್ರೊಸೆಸ್ ಆಗಬೇಕು ಎಂದರೆ, ಹೆಚ್ಚು ಸಮಯ ಬೇಕಾಗುತ್ತದೆ. ಈ ಧಾಟಿ ಸರಿಯಾದ್ದಲ್ಲ. ಎಂಟರ್‌ಪ್ರೈಜರುಗಳಿಗೆ ಸಹಾಯ ಮಾಡುತ್ತೇವೆಂದು ಹೇಳುವಾಗ ಹೆಚ್ಚು ನೆರವನ್ನು ಕೊಡಬೇಕಾದರೆ, ನಮ್ಮ ನೀತಿ ಸರಳವಾದ ರೀತಿಯಲ್ಲಿ ಇರಬೇಕು ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಶ್ರೀಮಾನ್ ಕೃಷ್ಣ ಅವರು ಹೇಳಬಹುದು, ಅವರು ಆಡಳಿತ ವಹಿಸಿ ಇನ್ನು ಮೂರು-ನಾಲ್ಕು ತಿಂಗಳು ಆಗಿಲ್ಲ ಎಂದು. ಅವರ ಮೇಲೆ ನಾನು ಆರೋಪಣೆ ಮಾಡುತ್ತಾ ಇಲ್ಲ. ಹಿಂದಿನಿಂದಲೂ ಈ ರೀತಿ ನಡೆದುಕೊಂಡು ಬಂದಿದೆ. ಆ ರೀತಿ ಆಗಬಾರದು, ಕೈಗಾರಿಕೆ ಹೆಚ್ಚು ಬೆಳೆಯಬೇಕಾದರೆ, ಹಿಂದಿನ ಸರ್ಕಾರದವರು ಇಂಡಸ್ಟ್ರಿಯಲ್ ಕನ್‌ಸ್ಟ್ರಕ್ಷನ್‌ಗೆ ಏನು ಕೊಟ್ಟಿದ್ದಾರೆ, ಅದರ ಜೊತೆಗೆ ಪ್ರಗತಿದಾಯಕವಾಗಿ ಬೆಳೆಯುವುದಕ್ಕೆ ಅವಕಾಶ ಮಾಡಿ ಕೊಡಬೇಕು. ಈ ಧೋರಣೆಯ ದೃಷ್ಟಿಯಿಂದ ಹೇಳುತ್ತಿದ್ದೇನೆ. ಇವತ್ತು ಒಂದೇ ಮಾತಿನಲ್ಲಿ ಹೇಳಬೇಕಾದರೆ, ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಹನ್ನೊಂದು ಜಿಲ್ಲೆಗಳನ್ನು ಬ್ಯಾಕ್‌ವರ್ಡ್ ಏರಿಯಾಸ್ ಎಂದು ಪ್ರಶ್ನೆಯೊಂದಕ್ಕೆ ಉತ್ತರ ಕೊಟ್ಟಿದ್ದಾರೆ. ಯಾವ ಯಾವ ಜಿಲ್ಲೆಗಳಲ್ಲಿ ಈ ಬ್ಯಾಕ್‌ವರ್ಡ್ ಏರಿಯಾಸ್ ಇದೆ ಎಂದು ತಿಳಿಸಿಲ್ಲ. ಬಹುಶಃ ನನಗೆ ಗೊತ್ತಿರುವ ಹಾಗೆ 100ಕ್ಕೆ 65 ಪರ್ಸೆಂಟ್ ಬ್ಯಾಕ್‌ವರ್ಡ್ ಏರಿಯಾ ನಮ್ಮ ರಾಜ್ಯದಲ್ಲಿ ಇದೆ ಎಂದು ನನ್ನ ಅಭಿಪ್ರಾಯ. ಹನ್ನೊಂದು ಜಿಲ್ಲೆಗಳು ಬ್ಯಾಕ್‌ವರ್ಡ್ ಏರಿಯಾಸ ಎಂದು ಡಿಕ್ಲೇರ್ ಆಗಿ ಸುಮಾರು ಎರಡು ವರ್ಷಗಳಾಗಿರಬಹುದು. ಈ 11ಜಿಲ್ಲೆಗಳಲ್ಲಿ ಏನು ಕೈಗಾರಿಕೆ ಮಾಡಬೇಕು ಎನ್ನುವ ಬಗ್ಗೆ ಸರಿಯಾದಂಥ ರಿಪೋರ್ಟು ನಮ್ಮ ಹತ್ತಿರ ಇಲ್ಲ; ಅಂಕಿ ಅಂಶಗಳು ಇಲ್ಲ. ಎಲ್ಲೆಲ್ಲಿ ಯಾವ ಮೆಟೀರಿಯಲ್ಸ್ ಸಿಕ್ಕುತ್ತದೆ ಎಲ್ಲೆಲ್ಲಿ ಏನು ಕೈಗಾರಿಕೆ ಮಾಡಬಹುದು ಎನ್ನುವ ಬಗ್ಗೆ ಒಂದು ಟೆಕ್‌ನಿಕಲ್ ರಿಪೋರ್ಟನ್ನು ನಮ್ಮಲ್ಲಿ ತಯಾರಿಸಿಲ್ಲ ಎಂದು ನನ್ನ ಅಭಿಪ್ರಾಯ. ಸರ್ಕಾರ ಹಾಕತಕ್ಕ ಯೋಚನೆ ಇವತ್ತು ಕುಂಠಿತವಾದರೆ, ಯಾವ ಉದ್ದೇಶದಿಂದ 11 ಜಿಲ್ಲೆಗಳನ್ನು ಬ್ಯಾಕ್‌ವರ್ಡ್ ಏರಿಯಾ ಎಂದು ಸೆಲೆಕ್ಟ್ ಮಾಡಿದ್ದಾರೋ, ಆ ಉದ್ದೇಶದ ಫಲ ಶೀಘ್ರವಾಗಿ ದೊರಕಿಸಿಕೊಳ್ಳಲಿಕ್ಕೆ ಆಗುವುದಿಲ್ಲ. ಕೇಂದ್ರ ಸರ್ಕಾರದವರು ಹಣ ಕೊಡತಕ್ಕ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಆದೇಶವನ್ನು ಸರ್ಕಾರಕ್ಕೆ ಕೊಟ್ಟಿರಬಹುದು. ನಮ್ಮಲ್ಲಿ ಟೆಕ್ನೋ ಎಕಾನಾಮಿಕ್ ಸರ್ವೆ ಮಾಡಿಸಿ, ಎಲ್ಲೆಲ್ಲಿ ಏನು ಮಾಡಿಸಬಹುದು ಎನ್ನುವ ಮಾಹಿತಿ ನಮ್ಮ ಹತ್ತಿರ ಸಾಕಾದಷ್ಟು ಇಲ್ಲದೆ ಇರುವ ಕಾಲದಲ್ಲಿ, ಯಾವ ಜಿಲ್ಲೆಯಲ್ಲಿ ಯಾವ ಇಂಡಸ್ಟ್ರೀಸ್ ಹಾಕುವುದಕ್ಕೆ ಸಾಧ್ಯವಾಗುತ್ತದೆ? ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಬಗ್ಗೆ ಮಾತನಾಡುವುದಾದರೆ, ನಮ್ಮ ಜಾಯಿಂಟ್ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅವರಿಗೆ ಕೊಟ್ಟಿರುವ ಕೆಲಸ ಏನು ಎಂದರೆ, ರಾಮೆಟೀರಿಯಲ್ಸ್ ಡಿಸ್ಟ್ರಿಬ್ಯೂಟ್ ಮಾಡುವುದು. ಅದು ಒಂದೇ ಒಂದು ಕೆಲಸ. ಇಲ್ಲಿ ಯಾರಾದರೂ ಇಂಡಸ್ಟ್ರೀಸ್ ಸ್ಟಾರ್ಟ್ ಮಾಡಬೇಕು ಎಂದರೆ, ಎಸ್.ಐ.ಎಸ್.ಐ.ಗೆ ಹೋಗಿರಿ ಎಂದು ಹೇಳುತ್ತಾರೆ. ರಾಜ್ಯದ ಯಾವಭಾಗದಲ್ಲಿ ಯಾವ ಇಂಡಸ್ಟ್ರೀಸ್ ಮಾಡುವುದಕ್ಕೆ ಸಾಧ್ಯ, ಲೋಕಲ್ ರಾಮೆಟೀರಿಯಲ್ಸ್ ಎಲ್ಲೆಲ್ಲಿ ಏನು ಸಿಕ್ಕುತ್ತದೆ ಎನ್ನುವ ಬಗ್ಗೆ ಸಾಕಷ್ಟು ಮಾಹಿತಿ ಹೊಂದಿದ ರಿಪೋರ್ಟು ನಮ್ಮ ಸರ್ಕಾರದವರು ಇನ್ನೂ ತಯಾರು ಮಾಡಿಲ್ಲ. ಈ ಕಡೆ ಅವರ ಗಮನವನ್ನು ಹರಿಸಬೇಕು ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಇವತ್ತು ಎಸ್ ಐ ಎಸ್ ಐ ತಯಾರು ಮಾಡಿರತಕ್ಕ ಓಬಿರಾಯನ ಕಾಲದ ರಿಪೋರ್ಟು ಆಧಾರ ಇಟ್ಟುಕೊಂಡು ಹೇಳುವುದು ಸರಿಯಲ್ಲ. ಒಂದು ಟೆಕ್ನಿಕಲ್ ಸೆಲ್ ಮಾಡಿ ಅದರ ಬಗ್ಗೆ ಹೆಚ್ಚು ಮಾಹಿತಿಯನ್ನು ಪ್ರತಿ ಜಿಲ್ಲೆಯವರು ಇಟ್ಟುಕೊಳ್ಳುವುದು ಸೂಕ್ತ.

ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಬಗ್ಗೆ ಹೇಳುವುದಾದರೆ ಇದು ಸಹ ಏನಿನಲ್ಲದೆಯೇ ಹೊರತಾಗಿ ಇನ್ನೂ ಕೃತಿಯಲ್ಲಿ ಬಂದಿಲ್ಲ. ಸಾಕಷ್ಟು ವೇಗದಲ್ಲಿ ಬೆಳೆದಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಹೊಸದಾಗಿ ಯಾರಾದರೂ ಯಾವುದಾದರೂ ಕೈಗಾರಿಕಾ ಸ್ಥಾಪನೆಗೆ ಪ್ರಯತ್ನ ಮಾಡಬೇಕಾದರೆ ಅಂಥವರಿಗೆ ಇಲ್ಲಿ ಹಣ ಸಿಕ್ಕುವುದಿಲ್ಲ, ಭೂಮಿ ಸಿಕ್ಕುವುದಿಲ್ಲ, ರಾ ಮೆಟೀರಿಯಲ್ಸ್

ಸಿಕ್ಕುವುದಿಲ್ಲ, ನಿಜವಾಗಿ ಕಾರ್ಯಸಾಧನೆ ಮಾಡತಕ್ಕವನಿಗೆ ಯಾವುದೂ ಸಿಕ್ಕುವುದಿಲ್ಲ. ಯಾರು ಬೋಗಸ್ ಇರುತ್ತಾರೋ ಯಾರು ಕೋಟಾ ತೆಗೆದುಕೊಂಡು ವ್ಯಾಪಾರ ಮಾಡುವವರು ಇದ್ದಾರೋ ಅಂಥವರಿಗೆ ಕೆಲವು ಸಂದರ್ಭದಲ್ಲಿ ಕೆಲವು ಅಧಿಕಾರಿಗಳ ಸಹಕಾರ ಸಿಕ್ಕಿದೆಯೆಂದು ಕೇಳಿದ್ದೇನೆ. ಇದು ಎಲ್ಲವನ್ನು ತಪ್ಪಿಸಿ ರಾಜ್ಯದಲ್ಲಿ ವೇಗವಾಗಿ ಕೈಗಾರಿಕೆಗಳನ್ನು ನಡೆಸತಕ್ಕವರ ಬಗ್ಗೆ ಹೆಚ್ಚು ಉತ್ಸುಕತೆ ತೋರಿಸಬೇಕು ಎಂದು ಹೇಳುತ್ತಿದ್ದೇನೆ. ದೊಡ್ಡ ದೊಡ್ಡ ಇಂಡಸ್ಟ್ರೀಸ್ ಬಗ್ಗೆ ಅನ್ಸಿಲರಿ ಇಂಡಸ್ಟ್ರೀಸ್ ಬೆಳೆಯುವ ಬಗ್ಗೆ ಉತ್ತೇಜನ ಕೊಡಬೇಕು. ಅವರಿಗೆ ಎಲ್ಲಾ ಸಲಕರಣೆಗಳನ್ನು ಮತ್ತು ಸವಲತ್ತುಗಳನ್ನು ಕೊಡುವುದು ಅವಶ್ಯಕ. ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಹೆಚ್ಚು ಬೆಳೆಯಬೇಕಾದರೆ ಇದರ ಬಗ್ಗೆ ಆಲೋಚನೆ ಮಾಡಬೇಕು ಎನ್ನುವುದನ್ನು ತಮಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಇವೊತ್ತು ಕೆಲವು ರಾಜ್ಯಸರ್ಕಾರದ ಇಂಡಸ್ಟ್ರೀಸ್ ಉತ್ತಮವಾಗಿ ಕೆಲಸ ಮಾಡು ವುವು ಇರಬಹುದು. ಎನ್.ಜಿ.ಎಫ್. ಗೆ ಹೋದರೆ ಬ್ಯಾಲನ್ಸ್‌ಷೀಟ್ ನೋಡಿದರೆ ಅದು 1970-71ರ ಈಚೆಗೆ ಸ್ವಲ್ಪ ಲಾಭಗಳಿಸಿದೆ. ಭದ್ರಾವತಿ ಐರನ್ ವರ್ಕ್ಸ್ ಕಳೆದ ವರ್ಷ ಲಾಭಗಳಿಸಿಕೊಟ್ಟಿದೆ. ಇಕ್ವಿಟಿ ಪುನರ್‌ವಿಮರ್ಶೆ ಮಾಡಿದ ಫಲವಾಗಿ 75 ಲಕ್ಷ ಇಂಟರೆಸ್ಟ್ ಕೊಡುವುದು ಉಳಿದಿದೆ ಎಂದು ಪತ್ರಿಕೆಯಲ್ಲಿ ಓದಿದ್ದೇನೆ. ಅದು ಏನೇ ಇರಲಿ, ಜಾಯಿಂಟ್ ಸ್ಟಾಕ್ ಕಂಪನಿಗಳು ಉತ್ತಮವಾಗಿ ಕೆಲಸಮಾಡಿ ಲಾಭದಾಯಕವಾಗಿ ನಡೆಯುತ್ತಿವೆ ಎನ್ನುವ ಮಾತನ್ನು ಹೇಳುತ್ತೇನೆ. ಅವು ರಾಜ್ಯಕ್ಕೆ ಹೆಚ್ಚು ಆದಾಯಗಳಿಸುವಂತೆ ಕೆಲಸ ಮಾಡುವ ಅವಶ್ಯಕ ಇದೆ ಎಂದು ಹೇಳುತ್ತೇನೆ. ನಮ್ಮ ಸರ್ಕಾರದ ವತಿಯಲ್ಲಿ ಇರತಕ್ಕ ಜಿ.ಇ.ಎಫ್. ಬಗ್ಗೆ ಒಂದು ರಿಪೋರ್ಟು ಈ ಸಭೆ ಮುಖಾಂತರ ಸರ್ಕಾರಕ್ಕೆ ಕಳುಹಿಸುವವರು ಇದ್ದೇವೆ. ಅಲ್ಲಿ ಬಹಳ ಗೊಂದಲ ಇದೆ. ಈ ಫ್ಯಾಕ್ಟರಿ ಮುಚ್ಚಿಬಿಡುವುದು ಒಳ್ಳೆಯದು ಎಂದು ನನಗೆ ಅನಿಸುತ್ತದೆ. ಹೋದಸಾರಿ 54 ಲಕ್ಷ ರೂಪಾಯಿ ನಷ್ಟ ಉಂಟಾಗಿದೆ, ಅಲ್ಲಿ ಬಹಳ ಉತ್ತಮ ಮೆಷಿನರಿ ಇದೆ. ಅದನ್ನು ಸರಿಮಾಡಬೇಕಾದರೆ, ಇನ್ನು ಮೆಷಿನರಿ ಹಾಕಬೇಕಾಗುತ್ತದೆ ಎಂದು ಕೆಲವು ಅಧಿಕಾರಿಗಳು ಹೇಳುತ್ತಾರೆ. ನಾನು ಪೂರ್ತಿ ವಿವರಣೆ ಕೊಡುವುದಕ್ಕೆ ಹೋಗುವುದಿಲ್ಲ. ಅದರ ಬಗ್ಗೆ ರಿಪೋರ್ಟ್ ತಮ್ಮ ಮುಂದೆ ಕೊಡತಕ್ಕದ್ದು ಇದೆ. ಆದು ಒಂದು ಬಿಟ್ಟರೆ ಕ್ರೋಮ್ ಫ್ಯಾಕ್ಟರಿ ಸ್ವಲ್ಪ ಲಾಸ್‌ನಲ್ಲಿ ವರ್ಕ್ ಮಾಡುತ್ತಾ ಇದೆ. ಯಾವುದೇ ಇಂಡಸ್ಟ್ರಿ ಲಾಸ್ ಇಲ್ಲದೆ ಕೆಲಸ ಮಾಡುವ ಬಗ್ಗೆ ತೀವ್ರವಾಗಿ ಕ್ರಮ ತೆಗೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಇವೊತ್ತು ನಮ್ಮಲ್ಲಿ ಕೆಲವು ಮಿನರಲ್ ಬೇಸ್ಡ್ ಇಂಡಸ್ಟ್ರೀಸ್ ಮಾಡುವುದು ಸೂಕ್ತ ಎಂದು ಭಾವನೆ ಇದೆ. ನಮ್ಮ ರಾಜ್ಯದಲ್ಲಿ ಹಲವಾರು ತರಹ ಮಿನರಲ್ಸ್ ಸಿಕ್ಕುತ್ತವೆ. ಉದಾಹರಣೆಗಾಗಿ ಹೇಳಬೇಕಾದರೆ ನಾವು ಬಹುಶಃ ಐರನ್‌ಓರ್‌ನ್ನು ಪರ್ ಟನ್‌ಗೆ 55-54 ರೂಪಾಯಿಯಂತೆ ಜಪಾನಿಗೆ ಕಳುಹಿಸುತ್ತಿದ್ದೇವೆ. ಅದಕ್ಕೆ ಬದಲಾಗಿ ನಾವು ಅದನ್ನು ಪೆಲೇಟ್ಸ್ ಮಾಡಿ, ಪಿಗ್ ಐರನ್ ಮಾಡಿ, ಆದು ಇಲ್ಲದಿದ್ದರೆ ಸ್ಪಂಜ್ ಐರನ್‌ಮಾಡಿ ಮಾರಾಟಮಾಡಿದರೆ ಮತ್ತಷ್ಟು ಒಳ್ಳೆಯದು ಮತ್ತು ಅದರಿಂದ ಫಾರಿನ್ ಎಕ್ಸ್‌ಚೇಂಜ್‌ಗಳಿಸುವುದಕ್ಕೆ ಸಾಧ್ಯವಾಗುತ್ತದೆ. ಅದಲ್ಲದೆ ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ ಕೂಡ ಸಾಲ್ವ್ ಮಾಡುವುದಕ್ಕೆ ಹೆಚ್ಚು ಫಲಕಾರಿಯಾಗುತ್ತದೆ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಇದರ ಕಡೆ ಗಮನವನ್ನು ಕೊಡತಕ್ಕದ್ದು ಸೂಕ್ತ. ಜೊತೆಗೆ ಹೊಸಪೇಟೆ ಸ್ಟೀಲ್ ಪ್ಲಾಂಟ್ ಬರುತ್ತದೆ, 7 ವರ್ಷಗಳಲ್ಲಿ ಆ ಕಾರ್ಖಾನೆಯನ್ನು ಮಾಡುತ್ತೇವೆ ಎಂದು ಕೂಡ ಕೇಂದ್ರ ಸರ್ಕಾರದವರು ಆಶ್ವಾಸನೆ ಕೊಟ್ಟಿರುವುದನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಇದಕ್ಕೆ ಅದು ಹೆಚ್ಚು ಸಹಕಾರವಾಗುತ್ತದೆ. ಮಿನರಲ್ ಬೇಸ್ಡ್ ಇಂಡಸ್ಟ್ರೀಸ್ ಮಾಡಿದರೆ, ಮೊದಲು ಹೇಳಿದಹಾಗೆ ಕೇವಲ ಐರನ್ ಓರ್ ಜಪಾನಿಗೆ ಕಳುಹಿಸುವುದಕ್ಕಿಂತ ಹೆಚ್ಚು ಫಾರಿನ್ ಎಕ್ಸ್‌ಚೇಂಜ್ ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಆ ಕಡೆ ಗಮನಕೊಡತಕ್ಕದ್ದು ಸೂಕ್ತ. ಇನ್ನು ಫಾರೆಸ್ಟ್ ಬೇಸ್ಡ್ ಇಂಡಸ್ಟ್ರೀಸ್, ಪೇಪರ್ ಮಿಲ್ಸ್ ಮತ್ತು ಹೀಗೆ ಅನೇಕ ಇಂಡಸ್ಟ್ರೀಸ್ ಮಾಡತಕ್ಕದ್ದು ಇದೆ. ದಾವಣಗೆರೆಯಲ್ಲಿ ಫೈಬರ್ ಫ್ಯಾಕ್ಟರಿ ಬಂದಿದೆ ಎಂದು ಕಾಣುತ್ತದೆ. ಒಂದು ಕೋ-ಆರ್ಡಿನೇಟೆಡ್ ಎಫರ್ಟ್ ಇರುವುದು ಒಳ್ಳೆಯದು. ಬ್ಯಾಂಬೂ ಬೆಳೆಯುವ ಬಗ್ಗೆ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಹೆಚ್ಚಿಗೆ ಉತ್ತೇಜನ ಕೊಡದೆ ಹೋದರೆ ಇಂಥ ಇಂಡಸ್ಟ್ರೀಸ್ ಕುಂಠಿತವಾಗುತ್ತದೆ. ಎರಡು ಇಲಾಖೆಗಳು ಕೋ-ಆರ್ಡಿನೇಟೆಡ್ ಎಫರ್ಟ್ಸ್ ಹಾಕಿದರೆ ಫಾರೆಸ್ಟ್ ಬೇಸ್ಡ್ ಇಂಡಸ್ಟ್ರೀಸ್ ಚೆನ್ನಾಗಿ ಡೆವಲಪ್ ಮಾಡುವುದಕ್ಕೆ ಹೆಚ್ಚು ಫಲಕಾರಿಯಾಗುತ್ತದೆ ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಅಗ್ರೋ ಬೇಸ್ಡ್ ಇಂಡಸ್ಟ್ರೀಸ್ ರಾಜ್ಯ ಸರ್ಕಾರದವರು ತಯಾರುಮಾಡತಕ್ಕ ರಿಪೋರ್ಟಿನಲ್ಲಿ ಇದೆ. ಇದರ ಬಗ್ಗೆ ಇವೊತ್ತು ಸಲಹೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಸ್ಟಾರ್ಚ್ ಫ್ಯಾಕ್ಟರಿ ಮಾಡಬೇಕು. ಬೆಳಗಾಂನಲ್ಲಿ ಇದಕ್ಕೆ ಲೈಸೆನ್ಸ್ ಸಿಕ್ಕಿದೆಯೋ ಇಲ್ಲವೋ ಗೊತ್ತಿಲ್ಲ. ಹಿಂದಿನಿಂದ ಇದರ ಬಗ್ಗೆ ವ್ಯವಹಾರ ನಡೆಯುತ್ತಿದೆ ಎನ್ನುವುದು ಗೊತ್ತಿದೆ. ಇನ್ನು ಹೈಬ್ರಿಡ್ ಜೋಳ ಅಹಮದಾಬಾದಿಗೆ ಹೋಗುತ್ತದೆ. ಅದನ್ನು ಇಲ್ಲೇ ಉಪಯೋಗಿಸಲು ಸ್ಟಾರ್ಚ್ ಫ್ಯಾಕ್ಟರಿಯನ್ನು ಇಲ್ಲಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು.

(ಶ್ರೀ ಹೆಚ್. ಡಿ. ದೇವೇಗೌಡ)

1970ರಲ್ಲಿ 6–7 ಫ್ಯಾಕ್ಟರಿಗಳು ಬರುತ್ತವೆ ಎಂದು ಹಿಂದೆ ಕೈಗಾರಿಕೆ ಮಂತ್ರಿಗಳು ಹೇಳಿದ್ದಾರೆ. ಕೆಲವು ಲೆಟರ್ ಆಫ್ ಇಂಟೆಂಟ್ ತೆಗೆದುಕೊಂಡಿದ್ದಾರೆ. ಕಾರ್ಯಗತ ಮಾಡಿಲ್ಲ. ಕೋ-ಆಪರೇಟೀವ್ ಸೆಕ್ಟಾರ್‌ನಲ್ಲಿ ಸಾಕಷ್ಟು ಶೇರ್‌ಗಳನ್ನು ಕೂಡಿಸುವುಧಕ್ಕೆ ತೊಂದರೆಯಾಗಿ, ಕೊಳ್ಳೇಗಾಲ ಷುಗರ್ ಪ್ಯಾಕ್ಟರಿ ಹಾಗೆಯೇ ಇನ್ನು 4–5 ಷುಗರ್ ಪ್ಯಾಕ್ಟರಿಗಳು ಸಾಕಷ್ಟು ರೀತಿಯಲ್ಲಿ ಪ್ರಗತಿಯಾಗಿಲ್ಲವೆಂದು ತಿಳಿದುಕೊಂಡಿದ್ದೇನೆ. ಇವೊತ್ತು ನೆರೆ ರಾಜ್ಯಗಳಿಗೆ ಹೋಲಿಸಿಕೊಳ್ಳುವುದಾದರೆ ಮಹಾರಾಷ್ಟ್ರದಲ್ಲಿ 65–66 ಷುಗರ್ ಫ್ಯಾಕ್ಟರಿಗಳು ಕೋ-ಆಪರೇಟಿವ್ ಸೆಕ್ಟಾರಿನಲ್ಲಿ ಹೆಚ್ಚು ಪ್ರಗತಿದಾಯಕವಾಗಿ ಬಂದಿವೆ ಎಂದು ಕೇಳಿದ್ದೇನೆ. ನಮ್ಮ ರಾಜ್ಯದಲ್ಲಿ ಕೋ-ಆಪರೇಟಿವ್ ಸೆಕ್ಟಾರ್ ಹೆಚ್ಚು ಉತ್ತೇಜನಕಾರಿಯಾಗಿ ಬೆಳೆಸುವುದಕ್ಕೆ ಅಷ್ಟು ಅವಕಾಶ ದೊರೆತಿಲ್ಲ, ಕಾರಣ ಏನು ಎಂದರೆ, ಮಹಾಷ್ಟ್ರದಲ್ಲಿ ಲ್ಯಾಂಡ್ ಡೆವಲಪ್ ಮೆಂಟ್ ಬ್ಯಾಂಕುಗಳು ಡಿಬೆಂಚರ್ಸ್ ಫ್ಲೋಟ್‌ಮಾಡಿ ಸಂಬಂಧಪಟ್ಟ ರೈತರ ಭೂಮಿಯ ಮೇಲೆ ಸಾಲಕೊಟ್ಟು ಷೇರ್ಸ್ ಡೆವಲಪ್ ಮಾಡುವುದಕ್ಕೆ ಹೆಚ್ಚು ಉತ್ಸಾಕತೆಯಿಂದ ಕೆಲಸ ಮಾಡಿದುದರ ಪರಿಣಾಮವಾಗಿ ಅಷ್ಟು ಕೋ-ಆಪರೇಟಿವ್ ಸೆಕ್ಟರ್ ಷುಗರ್ ಫ್ಯಾಕ್ಟರಿಗಳು ಬರುವುದಕ್ಕೆ ಅವಕಾಶವಾಯಿತು ಎಂದು ಕೇಳಿದ್ದೇನೆ. ನಮ್ಮ ರಾಜ್ಯದಲ್ಲಿ 10 ಶುಗರ್ ಫ್ಯಾಕ್ಟರಿಗಳನ್ನು ಮಾಡಬಹುದು. ಟೆಕ್ನಿಕಲ್ ರಿಪೋರ್ಟ್ ಆಧಾರದ ಮೇಲೆ ಹೇಳುವುದಾದರೆ ತಾವು ಇದರ ಬಗ್ಗೆ ಕೇಂದ್ರದಲ್ಲಿ ಹೆಚ್ಚು ಪ್ರಭಾವ ಬೀರಿ, ಸಕ್ಕರೆ ಕಾರ್ಖಾನೆಗಳನ್ನು ಮಾಡಬೇಕು. ನನ್ನ ಜಿಲ್ಲೆಯಲ್ಲಿ ಒಂದು ಹಾಕತಕ್ಕದ್ದು ಸಾಧ್ಯವಿದೆ. ಇದರ ಬಗ್ಗೆ ಹಿಂದೆ ಪ್ರಸ್ತಾಪ ಮಾಡಿದ್ದೇನೆ. ಇವೊತ್ತು ಹೇಮಾವತಿ ಪ್ರಾಜೆಕ್ಟು ಬರುತ್ತಿದೆ. ಯಗಚಿ ಪ್ರಾಜೆಕ್ಟು ಬರುತ್ತಿದೆ. ಒಂದು ಶುಗರ್ ಫ್ಯಾಕ್ಟರಿ ಹಾಸನದಲ್ಲಿ ಹಾಕುವ ಬಗ್ಗೆ ಸರ್ಕಾರ ಗಮನ ಹರಿಸಿ ಅದನ್ನು ಕೋ-ಆಪರೇಟಿವ್ ಸೆಕ್ಟಾರಿನಲ್ಲಾಗಲಿ ಕೊನೆಗೆ ಜಾಯಿಂಟ್‌ವೆಂಚರ್ ನಲ್ಲಾಗಲಿ, ಮಾಡುವ ಬಗ್ಗೆ ಪ್ರಯತ್ನ ಮಾಡಬೇಕು ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಬ್ಯಾಂಕ ಡಿಬೆಂಚರ್ ಫ್ಲೋಟ್ ರೈತರಿಗೆ ಭೂಮಿ ಆಧಾರಮಾಡಿಕೊಂಡು ಸಾಲ ಕೊಟ್ಟು ಷೇರ್ ಬಿಲ್ಡ್ ಅಪ್ ಮಾಡುವುದಕ್ಕೆ ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆ. ಕೋ-ಅಪರೇಟೀವ್ ಸೆಕ್ಟರಿಗೆ ಸಂಬಂಧಪಟ್ಟ ಮೆಷಿನರಿ ಏನು ಇದೆ ಅದು ಕೆಲಸ ಮಾಡತಕ್ಕವರ ಮೇಲೆ ಹೋಗುತ್ತದೆ.

Sri D. DEVARAJ URS (Chief Minister).—We do not want to give encouragement to private sector. ಕೋ-ಆಪರೇಟಿವ್ ಸೆಕ್ಟಾರ್ ಡೆವಲಪ್ ಮಾಡೋಣ.

ಶ್ರೀ ಎಚ್. ಡಿ. ದೇವೇಗೌಡ.— ನಾನು ಒಪ್ಪುತ್ತೇನೆ. ಪ್ರೈವೇಟ್ ಸೆಕ್ಟಾರ್‌ಗೆ ಕೊಡಬೇಕು ಎನ್ನುವುದು ನನ್ನ ವಾದವಲ್ಲ.

Sri D. DEVARAJ URS.—We will try to develop co-operative sector in your area.

ಶ್ರೀ ಎಚ್. ಡಿ. ದೇವೇಗೌಡ.—ಇನ್ನು ಒಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಂಡಸ್ಟ್ರೀಸ್ ಇಲಾಖೆಗೆ ಸೆಪರೇಟ್ ಕೇಡರ್ ಮಾಡುವುದು ಸೂಕ್ತ ಎನ್ನುವುದು ನನ್ನ ಅಭಿಪ್ರಾಯ. ಪಿಎಸ್‌ಸಿ ಚೇರ್‌ಮನ್ ದೃಷ್ಟಿಯಿಂದ ಹೇಳುವುದಾದರೆ, ಬೇರೆ ಬೇರೆ ಇಲಾಖೆಗಳಿಂದ ಅಧಿಕಾರಿಗಳನ್ನು ಹಾಕಿ ಕೆಲಸ ಮಾಡುವ ಪದ್ಧತಿ ಏನು ಬೆಳಸಿಕೊಂಡು ಬಂದಿದ್ದಾರೆ ಅದು ಸರಿಯಾದುದಲ್ಲ. ತಮಗೆ ಉದಾಹರಣೆಯಾಗಿ ಇಲ್ಲಿ ಹೇಳುವುದಾದರೆ ಒಂದು ಮ್ಯಾನೇಜ್‌ಮೆಂಟಿನಲ್ಲಿ ಎಂ. ಎಸ್. ಇ. ಬಿ. ಚೇರ್ಮನ್ನರು ಇರುತ್ತಾರೆ, ಸಿ.ಸಿ.ಎಫ್. ಇರುತ್ತಾರೆ ಹಾಗೂ ಇನ್ನೂ ಅನೇಕ ಇಲಾಖೆಯ ಬೇರೆ ಬೇರೆ ಅಧಿಕಾರಿಗಳು ಇರುತ್ತಾರೆ. ಈ ಒಂದು ಬೋರ್ಡ್ ಆಫ್ ಮ್ಯಾನೇಜ್ ಮೆಂಟಿನಲ್ಲಿ ಕೆಲಸ ಮಾಡುವ ಅಧಿಕಾರಿಗಳು ಆ ಕೈಗಾರಿಕೆಗಳ ಪೂರ್ಣ ಮಾಹಿತಿ ಪಡೆಯಬೇಕಾದರೆ ಸುಮಾರು ಒಂದೆರಡು ವರ್ಷಗಳ ಕಾಲ ಬೇಕಾಗುತ್ತದೆ. ಆದರೆ ಯಾವುದಾದರೂ ಒಂದು ನಿರ್ಣಯ ತೆಗೆದುಕೊಳ್ಳುವ ಕಾಲಕ್ಕೆ ಆ ಅಧಿಕಾರಿಗಳು ಇರುವುದಿಲ್ಲ. ಬೇರೆ ಒಬ್ಬರು ಅಧಿಕಾರಿಗಳು ಬಂದಿರುತ್ತಾರೆ. ಮತ್ತು ಅನೇಕ ಕಡೆ ಕೈಗಾರಿಕೆಗಳಲ್ಲಿ ಪರಿಶ್ರಮ ಹೊಂದಿರುವ ಅಧಿಕಾರಿಗಳು ಇರುವುದಿಲ್ಲ. ರೆವಿನ್ಯೂ ಇಲಾಖೆಯ ಅಧಿಕಾರಿಗಳು ಕೆಲವು ಕಡೆ ಇರುತ್ತಾರೆ. ಇವೊತ್ತು ರೆಂಕೋ ತೆಗೆದುಕೊಳ್ಳಬಹುದು. ಇಲ್ಲವೇ ಎಲೆಕ್ಟ್ರಿಸಿಟಿ ಬೋರ್ಡು ನೋಡಬಹುದು. ಇದರಲ್ಲಿರುವ ಚೇರ್ಮನರವರು ಇಲ್ಲಿನ ಕೈಗಾರಿಕೆಗಳ ಬಗ್ಗೆ ಸರಿಯಾಗಿ ತಿಳಿದುಕೊಂಡು ಪರಿಪೂರ್ಣವಾಗಿ ಕೆಲಸ ಮಾಡುವುದಕ್ಕೆ ಆಗುತ್ತದೆ ಎಂದು ಇಲ್ಲಿ ಹೇಳುವುದಕ್ಕೆ ಸಾಧ್ಯವಿಲ್ಲ. ಉದಾಹಾರಣೆಯಾಗಿ

ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಎನ್ನುವ ಒಬ್ಬರು ಅಧಿಕಾರಿಗಳನ್ನು ಮಾಡಿದ್ದಾರೆ. ಇವರು ಐ.ಎ.ಎಸ್. ಅಥವಾ ಐ. ಪಿ. ಎಸ್. ಅಧಿಕಾರಿಗಳು ಆಗಿರಬಹುದು. ಇವರನ್ನು ಎರಡು ಮೂರು ವರ್ಷಗಳಾದ ಮೇಲೆ ಬೇರೆ ಕಡೆಗೆ ವರ್ಗಾವಣೆ ಮಾಡುತ್ತಾರೆ. ಇದರಿಂದ ಅಲ್ಲಿನ ಕೆಲಸಕಾರ್ಯ ಗಳಿಗೆ ಕುಂದಕ ಉಂಟಾಗುತ್ತದೆ ಮತ್ತು ಇಂಡಸ್ಟ್ರಿ ಬೆಳೆಯಲು ಕಷ್ಟವಾಗುತ್ತದೆ. ಇದರ ಬಗ್ಗೆ ಸರಿಯಾಗಿ ಯೋಚನೆ ಮಾಡಬೇಕಾಗಿದೆ. ಇದಕ್ಕಾಗಿ ನಾನು ಸಲಹೆಮಾಡುವುದು ಈ ಇಲಾಖೆಗೇನೇ ಪ್ರತ್ಯೇಕವಾದ ಒಂದು ಕೇಡರನ್ನು ನಿರ್ಮಾಣಮಾಡಿದರೆ ಇದು ಸರಿಯಾಗಿ ಕೆಲಸ ಮಾಡಲು ಅನುಕೂಲವಾಗುತ್ತದೆ. ಹಿಂದೆ ಕೇಂದ್ರ ಸರಕಾರದಲ್ಲಿ ಮಾನ್ಯ ಶ್ರೀ ಕೆ. ಸಿ. ಪಂತರು ಇಂತಹ ಒಂದು ಕೇಡರನ್ನು ಮಾಡಬೇಕೆಂದು ಪ್ರಯತ್ನ ಮಾಡಿದ್ದರು. ಆದರೆ ಅದನ್ನು ಆಗ ಸರಿಯಾಗಿ ಫಾಲೋ ಅಪ್ ಮಾಡದೆ ಹಾಗೇ ಕೈ ಬಿಡಲಾಯಿತು. ಆದುದರಿಂದ ನಮ್ಮ ಸರಕಾರ ಈಗಲಾದರೂ ಇದರ ಕಡೆಗೆ ಗಮನ ಕೊಡಬೇಕೆಂದು ಇಲ್ಲಿ ಹೇಳಲು ಇಚ್ಛೆಪಡುತ್ತೇನೆ.

ಇನ್ನು ನಮ್ಮ ಹೊಳೆನರಸೀಪುರದಲ್ಲಿ ನಾವೆಲ್ಲ ಒತ್ತಾಯ ಮಾಡಿದಂತೆ ಹಿಂದೆ ಇದ್ದ ಸರಕಾರ ಇಲ್ಲಿ ಒಂದು ಅಸ್‌ಬೆಸ್ಟೋಸ್ ಫ್ಯಾಕ್ಟರಿ ಮಾಡಿದ್ದಾರೆ. ಇದು ಮಾಡಿದಾಗಲೇ ಇದರ ಬಗ್ಗೆ ಒಂದು ರೀತಿಯಾದ ಜಿಜ್ಞಾಸೆ ಇತ್ತು. ಇದಕ್ಕೆ ಬೇಕಾಗುವ ಕಚ್ಚಾ ಪದಾರ್ಥಗಳು ಇಲ್ಲಿ ಸಾಕಷ್ಟು ಪ್ರಮಾಣ ದಲ್ಲಿ ಸಿಕ್ಕುತ್ತಿಲ್ಲ. ಇಲ್ಲಿ ಸಿಗತಕ್ಕ ಫೈಬರು ಇಲ್ಲಿಗೆ ಸಾಕಾಗುವುದಿಲ್ಲ. ಇದಕ್ಕಾಗಿ ಪರದೇಶಗಳಿಂದ ಕ್ರೈಸರ್ ಟೈಪು ಫೈಬರನ್ನು ತರಿಸಿಕೊಂಡು ಇಲ್ಲಿಗೆ ಒದಗಿಸಿದರೆ ಈ ಫ್ಯಾಕ್ಟರಿ ಚೆನ್ನಾಗಿ ಕೆಲಸ ಮಾಡಲು ಅನುಕೂಲವಾಗುತ್ತದೆ. ಇದಕ್ಕಾಗಿ ಇಲ್ಲಿ ಹಿಂದೆ ಒಂದು ಪ್ರಾಜೆಕ್ಟ್ ರಿಪೋರ್ಟ್ ಕೂಡ ತಯಾರು ಮಾಡಲಾಗಿದೆ. ಸರಕಾರ ಅದನ್ನು ತರಿಸಿಕೊಂಡು ನೋಡಿ ಅದರಂತೆ ತಕ್ಕ ಕಾರ್ಯ ಕ್ರಮವನ್ನು ತೆಗೆದುಕೊಂಡರೆ ಇದು ಲಾಭದಾಯಕವಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ಇಲ್ಲಿ ಬರುವ ರಾ ಮೆಟೀರಿಯಲ್ಸ್‌ಗಳು ಸಾಕಾಗುವುದಿಲ್ಲ. ಇದಕ್ಕಾಗಿ ಬೇರೆ ಕಡೆಗಳಿಂದ ಹೆಚ್ಚು ರಾ ಮೆಟೀರಿಯಲ್ಸ್‌ಗಳನ್ನು ತರಿಸಿಕೊಂಡು ಸಪ್ಲೈ ಮಾಡಿದರೆ ಇದು ಚೆನ್ನಾಗಿ ಕೆಲಸ ಮಾಡಲು ಸಾಧ್ಯವಾದೀತು. ಸರಕಾರ ಇದರ ಕಡೆಗೆ ಗಮನ ಕೊಟ್ಟು ಪರದೇಶದಿಂದ ಕ್ರೈಸರು ಟೈಪು ಫೈಬರನ್ನು ತರಿಸಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ನಮ್ಮ ಹಾಸನ ಜಿಲ್ಲೆಯಲ್ಲಿ ಒಂದು ಇಂಪ್ಲಿಮೆಂಟು ಫ್ಯಾಕ್ಟರಿ ಇದೆ. ಇಲ್ಲಿ ಒಂದು ಕೈಗಾರಿಕೆಯನ್ನು ಮಾಡಲು ಅವಕಾಶ ಇದೆ. ಇದರ ಕಡೆಗೆ ಹೆಚ್ಚು ಗಮನ ಕೊಟ್ಟು ಸರಕಾರ ಇಲ್ಲಿ ಕೈಗಾರಿಕೆ ಮಾಡಲು ಯತ್ನ ಮಾಡಬೇಕೆಂದು ಹೇಳುತ್ತೇನೆ. ಮತ್ತು ಈಗಿರುವ ಇಂಪ್ಲಿಮೆಂಟು ಫ್ಯಾಕ್ಟರಿಯನ್ನೂ ಇನ್ನೂ ಹೆಚ್ಚು ಇಂಪ್ರೂವ್ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇನ್ನು ನಮ್ಮ ರಾಜ್ಯದಲ್ಲಿ ಟ್ರಾಕ್ಟರು ಕಾರ್ಖಾನೆ ಮಾಡಬೇಕೆಂದು ಇದ್ದಾರೆ. ಆದರೆ ಟ್ರಾಕ್ಟರು ಫ್ಯಾಕ್ಟರಿಯ ಅವಶ್ಯಕತೆ ಇಲ್ಲ ಎಂದು ನನಗೆ ತೋರುತ್ತೆ. ಮಾನ್ಯ ಮಂತ್ರಿಗಳಾದ ಶ್ರೀ ಕೆ. ಹೆಚ್. ಪಾಟೀಲ್‌ರವರು ಹೇಳಿದ ಹಾಗೆ ಇಲ್ಲಿ ಒಂದು ಅನ್‌ಸಿಲಿಯರಿ ಇಂಡಸ್ಟ್ರಿಯನ್ನು ಮಾಡಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಬ್ರೂವರೀಸ್ ಬಗ್ಗೆ ಹೇಳಬೇಕಾದರೆ ಹಿಂದೆ ರಾಷ್ಟ್ರಾಧ್ಯಕ್ಷರು ಆಡಳಿತ ನಡೆಸುತ್ತಿದ್ದಾಗ ಅನೇಕ ಖಾಸಗಿಯವರಿಗೆ ಪರ್ಮಿಟ್ಟುಗಳನ್ನು ಕೊಟ್ಟು ಬ್ರೂವರಿಗಳನ್ನು ನಡೆಸುತ್ತಿದ್ದಾರೆ. ಮತ್ತು ಬೀರುಗಳನ್ನು ಮಾರಾಟ ಮಾಡುತ್ತಿದ್ದಾರೆ. ಹರಿಯಾಣದಲ್ಲಿರುವ ಇಂಡಸ್ಟ್ರಿಯಲ್ ಕಾರ್ಪೊರೇಷನ್‌ನವರು ಇದರ ಬಗ್ಗೆ ಒಂದು ಇಂಡಸ್ಟ್ರಿಯನ್ನೇ ಮಾಡಿದ್ದಾರೆ. ಮತ್ತು ಇದರಲ್ಲಿ ಶೇಕಡಾ ಐನೂರರಷ್ಟು ಲಾಭ ಸಿಗುತ್ತೆ ಎಂದು ಗೊತ್ತಾಗಿದೆ. ಯಾವ ಬ್ರೂವರಿಗಳೂ ಈಗ ನಷ್ಟ ದಲ್ಲಿಲ್ಲ. ಎಲ್ಲವೂ ಲಾಭ ಪಡೆಯುತ್ತವೆ. ನಮ್ಮ ರಾಜ್ಯದಲ್ಲಿ ಇಂತಹ ಬ್ರೂವರಿಗಳನ್ನು ನ್ಯಾಷನ ಲೈಸು ಮಾಡಬೇಕು ಎಂದು ಹೇಳಿದರೆ ನಾನು ಅದನ್ನು ಒಪ್ಪಿಕೊಳ್ಳಲು ತಯಾರಿಲ್ಲ. ಇದರ ಬಗ್ಗೆ ಸಾಕಷ್ಟು ಗಮನವನ್ನು ಸರಕಾರ ಕೊಡಬೇಕು ಮತ್ತು ಇದರ ಬಗ್ಗೆ ಸರಕಾರದ ಧೋರಣೆ ಸರಿಯಾಗಿಲ್ಲ.

ಅಡ್ಮಿನಿಸ್ಟ್ರೇಷನ್ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಇಂಡಸ್ಟ್ರಿಯಲ್ ಇಲಾಖೆಯಲ್ಲಿ ಒಬ್ಬರು ಜಾಯಿಂಟು ಡೈರೆಕ್ಟರು ಇದ್ದಾರೆಂದು ಕೇಳುತ್ತೇನೆ. ಮಾನ್ಯ ಸಿದ್ದವೀರಪ್ಪನವರೂ ಇಲ್ಲದ್ದಾರೆ. ಹಿಂದೆ ಜತ್ತಿ ಸರಕಾರ ಇದ್ದಾಗ ಮಾನ್ಯ ಶ್ರೀ ಸಿದ್ದವೀರಪ್ಪನವರು ಖಾದಿ ಬೋರ್ಡ್ ಚೇರ್ಮನ್ನರಾಗಿದ್ದಾಗ ಇದೇ ಅಧಿಕಾರಿಗಳು ಆಗ ಅವರಿಗೆ ಸೆಕ್ರೆಟರಿಗಳಾಗಿ ಕೆಲಸ ಮಾಡಿದ್ದರು ಮತ್ತು ಅವರು ಸರಿಯಾಗಿ ಕೆಲಸ ಮಾಡಲಿಲ್ಲ ಎಂದು ಆಗ ಶ್ರೀ ಸಿದ್ದವೀರಪ್ಪನವರೇ ಸರಕಾರಕ್ಕೆ ಇದರ ಬಗ್ಗೆ ಬರೆದಿದ್ದರು ಎಂದೂ ಕೇಳುತ್ತೇನೆ. ನಾನು ವೈಯಕ್ತಿಕವಾಗಿ ಯಾವ ಅಧಿಕಾರಿಗಳ ಮೇಲೂ ಹೇಳಲು ಬಯಸುವುದಿಲ್ಲ. ಆದರೆ ಈ ಇಲಾಖೆಯಲ್ಲಿ ಕೆಲಸ ಮಾಡುವ ಇಂತಹ ಒಬ್ಬರು ಅಧಿಕಾರಿಗಳ ಮೇಲೆ ನಿಂದನೆ ಮಾಡಬೇಕು ಎಂದು ಹೇಳುತ್ತಿಲ್ಲ. ನಾನು ಮೇಲೆ ಹೇಳಿದ

(ಶ್ರೀ ಎಚ್. ಡಿ. ದೇವೇಗೌಡ)

ಅಧಿಕಾರಿಗಳ ಮೇಲೆ ಅನೇಕ ದೂರುಗಳು ಬಂದಿವೆ ಎಂದು ಕೇಳುತ್ತೇನೆ. ಒಟ್ಟಿನಲ್ಲಿ ಈ ಅಧಿಕಾರಿಗಳ ಇತಿಹಾಸ ಚೆನ್ನಾಗಿಲ್ಲ ಎಂದು ಹೇಳಬೇಕಾಗಿದೆ. ಸುಮಾರು ಇಪ್ಪತ್ತು ವರ್ಷಗಳ ಅವಧಿಯಲ್ಲಿ ಇವರ ಮೇಲೆ ಬೇಕಾದಷ್ಟು ಅಪಾದನೆಗಳು ಬಂದಿವೆ. ಬಹುಶಃ ಇಂತಹ ಅಧಿಕಾರಿಗಳನ್ನು ಈ ಇಲಾಖೆಯಿಂದ ತೆಗೆದು ಬೇರೆ ಕಡೆ ಹಾಕುವುದು ಸರಿಯಾಗಿರುತ್ತದೆ ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಸರಕಾರದ ಇಲಾಖೆಯಲ್ಲಿ ಇಂತಹ ಇಂಪೆಡಿಮೆಂಟ್ಸ್‌ಗಳನ್ನು ತೆಗೆದು ಸರಿಮಾಡಬೇಕೆಂದು ಇಲ್ಲಿ ತಿಳಿಸುತ್ತೇನೆ. ಈ ಇಲಾಖೆಯಲ್ಲಿ ಇನ್ನೊಂದು ಕೂಗು ಏನಿದೆ ಎಂದರೆ, ಕನ್ನಡಿಗರಿಗೆ ಕೆಲಸ ಸಿಗುತ್ತಿಲ್ಲ ಎಂಬುದು. ಈ ಮಾತನ್ನು ನಾನು ಉತ್ಪ್ರೇಕ್ಷೆ ಮಾಡಿ ಹೇಳುತ್ತಿಲ್ಲ. ನಾವು ಭಾವೈಕ್ಯತೆಯ ಬಗ್ಗೆ ಮಾತನಾಡುತ್ತೇವೆ, ರಾಷ್ಟ್ರೀಯ ಮನೋಭಾವನೆಯ ತತ್ವಗಳನ್ನು ಹೇಳುತ್ತೇವೆ. ಅದು ಏನೇ ಇರಲಿ. ಆದರೆ ಹೊರಗಿನ ರಾಜ್ಯದವರು ನಮ್ಮ ರಾಜ್ಯಕ್ಕೆ ಬಂದು ನಮ್ಮ ರಾಜ್ಯದಲ್ಲಿ ವಾಸ ಮಾಡುವವರ ಕೇರ್‌ಆಫ್ ಅಡ್ರೆಸ್‌ನ್ನು ಕೊಟ್ಟು ತಾವು ಈ ರಾಜ್ಯದವರೇ ಎಂದು ಹೇಳಿಕೊಂಡು ಕಲಸಕ್ಕೆ ಸೇರಿಕೊಳ್ಳುವ ಪ್ರವೃತ್ತಿ ಇದೆ. ಎಚ್. ಎಂ. ಟಿ., ಎನ್.ಜಿ.ಇ.ಎಫ್ ಎಚ್. ಎ. ಎಲ್. ಮುಂತಾದ ಕಡೆಗಳಲ್ಲಿ ಕೇರಳ ಮತ್ತು ಇತರೇ ನೆರೆ ರಾಜ್ಯದವರು ಕೆಲಸ ಪಡೆಯುವುದಕ್ಕೆ ಪ್ರಯತ್ನ ನಡೆಸುತ್ತಿದ್ದಾರೆ. ಇದರಿಂದ ನಮ್ಮ ರಾಜ್ಯದ ಜನರಿಗೆ ಕೆಲಸ ಸಿಗುತ್ತಿಲ್ಲವೆಂಬ ವಾದ ಏನಿದೆ ಅದನ್ನು ಮಾನ್ಯ ಮಂತ್ರಿಗಳು ಗಮನದಲ್ಲಿಟ್ಟುಕೊಂಡು ಅದಕ್ಕೆ ಸೂಕ್ತ ಪರಿಹಾರ ಕಂಡು ಹಿಡಿಯಬೇಕು. ಹೆಚ್ಚಾಗಿ ನಮ್ಮ ಸ್ಥಳದ ಜನರಿಗೆ ಕೆಲಸ ಸಿಗುವುದಕ್ಕೆ ಅವಕಾಶ ಮಾಡಿಕೊಡಬೇಕು. ಈ ಬಗ್ಗೆ ಬಿಗಿಯಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

2-30 P.M.

ಶ್ರೀ ಕೆ. ಪ್ರಭಾಕರ (ವರ್ತೂರು).—ತಾವು ಹೇಳುವುದರಲ್ಲಿ ನಿಜಾಂಶವಿದೆ.

ಶ್ರೀ ಎಚ್. ಡಿ. ದೇವೇಗೌಡ.—ನೆರೆ ರಾಜ್ಯದಿಂದ ಬಂದು ಮೈಸೂರಿನವರ ವಿಳಾಸ ಕೊಟ್ಟು ಕೆಲಸ ಪಡೆಯುತ್ತಿದ್ದಾರೆಂದು ಕೇಳಿದ್ದೇನೆ. ಇದರ ಕಡೆಗೆ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕು.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಕೇರಳಾ ವಿಶ್ವವಿದ್ಯಾನಿಲಯದವರು ಉದ್ದೇಶ ಪೂರ್ವಕವಾಗಿ ತಮ್ಮ ರಾಜ್ಯದ ವಿದ್ಯಾರ್ಥಿಗಳಿಗೆ ಕಾಂಪಿಟಿಷನ್‌ನಲ್ಲಿ ಭಾಗವಹಿಸುವುದಕ್ಕೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ನೂರಕ್ಕೆ 90 ರಿಂದ 99 ರವರೆಗೆ ನಂಬರ್‌ಗಳನ್ನು ಕೊಡುತ್ತಿದ್ದಾರೆ. ಇದರಿಂದ ನಮ್ಮ ರಾಜ್ಯದ ವಿದ್ಯಾರ್ಥಿಗಳು ಫಸ್ಟ್‌ಕ್ಲಾಸ್‌ನಲ್ಲಿ ಪಾಸಾಗಿದ್ದರೂ ಸಹ ಅವರ ಜೊತೆಯಲ್ಲಿ ಕಾಂಪಿಟ್ ಮಾಡುವುದಕ್ಕಾಗುತ್ತಿಲ್ಲ. ಈ ವಿಚಾರವನ್ನು ಸಹ ಮಾನ್ಯ ಮಂತ್ರಿಗಳು ಗಮನದಲ್ಲಿಡಬೇಕು.

ಶ್ರೀ ಎಚ್. ಡಿ. ದೇವೇಗೌಡ.—ನಾನು ಮೊದಲೇ ಹೇಳಿದ ಹಾಗೆ ಈ ಇಲಾಖೆಯಲ್ಲಿ ಕೇಡರ್‌ನ್ನು ಜಾಗ್ರತೆ ಮಾಡಬೇಕು. ನಿಧಾನ ಮಾಡುವುದು ಒಳ್ಳೆಯದಲ್ಲ. ಒಳ್ಳೆಒಳ್ಳೆಯ ಅಧಿಕಾರಿಗಳು ಈ ಇಲಾಖೆಯಲ್ಲಿ ಇದ್ದಾರೆ. ಅವರ ಸೇವೆಯನ್ನು ಪಡೆದುಕೊಳ್ಳುವುದಕ್ಕೆ ಸರ್ಕಾರದವರು ಜಾಗ್ರತೆ ಕೇಡರ್‌ನ್ನು ಮಾಡಬೇಕು. ಕೆಲವು ಪ್ರೊಬೇಷನರ್ಸ್ ಅಧಿಕಾರಿಗಳು ಬೇರೆ ರಾಷ್ಟ್ರಕ್ಕೆ ಹೋಗುತ್ತಿದ್ದಾರೆಂದು ಕೇಳಿದ್ದೇನೆ. ಅದಕ್ಕೆ ಅವಕಾಶ ಕೊಡದೆ ಒಳ್ಳೆಯ ಅಧಿಕಾರಿಗಳ ಸೇವೆಯನ್ನು ಪಡೆದುಕೊಂಡು ಈ ಇಲಾಖೆಯನ್ನು ಪ್ರಗತಿದಾಯಕವಾಗಿ ತೆಗೆದುಕೊಂಡು ಹೋಗುವುದಕ್ಕೆ ಮನಸ್ಸು ಮಾಡುವುದು ಸೂಕ್ತ ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri S. M. KRISHNA (Minister for Industries).—Madam, I also beg to move on the recommendation of the Governor.........

Sri C. M. ARUMUGAM.—How is it relevant now when the Demand is already moved and the discussion has already commenced on it, and one member has already spoken. Unless it is moved in the beginning, the Hon. Minister cannot move it in-between. It is against the procedure to move it in-between.

MADAM SPEAKER —Only a very small amount is involved in this Demand No 14.

Sri H. SIDDAVEERAPPA (Minister for Health) —Under what rule is the hon. Member raising that objection ?

Sri C. M. ARUMUGHAM.—Under what rule is the Hon Minister moving the Demand now ?

ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಆರ್ಮುಗಂ ಅವರು ಎತ್ತಿರತಕ್ಕಂಥ ವಿಷಯ ಸರಿಯಾಗಿದೆ. ಮಾನ್ಯ ಮಂತ್ರಿಗಳು ಒಂದು ಸಾರಿ ಆ ದಿವಸಕ್ಕೆ ಸಂಬಂಧಪಟ್ಟಂತೆ ಕೆಲವು ಬೇಡಿಕೆಗಳನ್ನು ಮಂಡಿಸಿದ ಮೇಲೆ, ಅದರ ಬಗ್ಗೆ ಚರ್ಚೆ ನಡೆಯುತ್ತಿರುವಾಗ ಮಧ್ಯದಲ್ಲಿ ಯಾವುದೋ ಬೇಡಿಕೆ ಬಿಟ್ಟುಹೋಗಿದೆ ಎಂಬುದಾಗಿ ಮತ್ತೆ ಮೂವ್ ಮಾಡುವುದಕ್ಕೆ ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಾಗಲೀ, ಕಾನ್‌ಸ್ಟಿಟ್ಯೂಷನ್‌ನಲ್ಲಾಗಲೀ ಅವಕಾಶವಿಲ್ಲ. 1967—1971 ರ ಮಧ್ಯೆ ಅಸೆಂಬ್ಲಿ ನಡೆಯುತ್ತಿದ್ದಾಗ ಇಂತಹ ಪ್ರಸಂಗ ಬಂದಾಗ, ಒಂದು ಸಲ ಬೇಡಿಕೆಗಳನ್ನು ಮೂವ್ ಮಾಡಿದ ಮೇಲೆ ಅದು ಚರ್ಚೆಯಾಗಿ ಪಾಸಾಗುವವರೆಗೂ ಬೇರೆ ಬೇಡಿಕೆಗಳನ್ನು ಮಧ್ಯದಲ್ಲಿ ತೆಗೆದುಕೊಳ್ಳುವ ಹಾಗಿಲ್ಲ ಎಂದು ತೀರ್ಮಾನವಾಗಿದೆ. ತಾವು ಹಿಂದಿನ ಪ್ರೊಸೀಡಿಂಗ್ಸ್‌ನ್ನು ನೋಡಬಹುದು. ಈಗ ಮೂವ್ ಮಾಡತಕ್ಕಂಥ ಬೇಡಿಕೆ ಕಡಿಮೆ ಹಣದ್ದಾದರೂ ಮಧ್ಯದಲ್ಲಿ ಮೂವ್ ಮಾಡುವುದಕ್ಕೆ ಅವಕಾಶವಿಲ್ಲ ಎಂಬುದಾಗಿ ನಾನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದೇನೆ. ಅದಕ್ಕೆ ತಾವು ರೂಲಿಂಗ್ ಕೊಡಬೇಕು.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ). —ಮಾನ್ಯ ಅಧ್ಯಕ್ಷಿಣಿಯವರೇ, ರೂಲ್ 161 ರಿಂದ ಹಿಡಿದು 166 ರವರೆಗೆ ಡಿಮ್ಯಾಂಡ್ಸ್ ಫಾರ್ ಗ್ರ್ಯಾಂಟ್ಸ್ ಬಗ್ಗೆ ವಿವರವಾಗಿ ಹೇಳಲಾಗಿದೆ. ಪ್ರೊಸೀಜರ್ ಯಾವ ರೀತಿ ಇರಬೇಕು ಎಂಬ ಬಗ್ಗೆ ಹೇಳಲಾಗಿದೆ. ಈ ರೂಲ್ಸ್‌ಗಳ ಪ್ರಕಾರ ಬಿಟ್ಟುಹೋದಂಥ ಬೇಡಿಕೆಗಳನ್ನು ಚರ್ಚೆಯ ಮಧ್ಯದಲ್ಲಿ ಮತ್ತೆ ಮೂವ್ ಮಾಡುವುದಕ್ಕೆ ಅವಕಾಶವಿಲ್ಲ. ಈಗ ಒಂದು ಸಲ ಮೂವ್ ಆಗಿ, ಅದರ ಮೇಲೆ ಒಬ್ಬರು ಮಾತನಾಡಿ ಮುಗಿಸಿ ಇನ್ನೊಬ್ಬರು ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಈ ಮಧ್ಯದಲ್ಲಿ ಇನ್ನೊಂದು ಬೇಡಿಕೆಯನ್ನು ಮಂಡನೆ ಮಾಡಿದರೆ ಅದು ರೂಲ್ಸ್ ಆಫ್ ಪ್ರೊಸೀಜರ್‌ಗೆ ವಿರುದ್ಧವಾಗುತ್ತದೆ. ಮಾನ್ಯ ಮಂತ್ರಿಗಳು ಮೊದಲೇ ಮೂವ್ ಮಾಡುವುದಕ್ಕೆ ಮರೆತರು ಎಂದು ಕಾಣುತ್ತದೆ. ಏನೇ ಆಗಲಿ, ಮಧ್ಯದಲ್ಲಿ ಮೂವ್ ಮಾಡಿದರೆ ಅದು ರೂಲ್ಸ್‌ಗೆ ವಿರುದ್ಧ ಎಂಬುದು ಸ್ಪಷ್ಟವಾಗಿರುವುದರಿಂದ ಅದರ ಬಗ್ಗೆ ತಾವು ರೂಲಿಂಗ್ ಕೊಡಬೇಕು.

ಅಧ್ಯಕ್ಷರು. —ಇದಕ್ಕೆ ರೂಲಿಂಗ್ ಕೊಡಬೇಕಾದ್ದು ಏನೂ ಇಲ್ಲ. It is an oversight. If all the hon. Members agree it will be moved; otherwise it will be taken up afterwards.

SOME HON. MEMBERS.—It may be moved now.

Demand No. 41 (25 SUPPLIES AND DISPOSALS.)

Sri S. M. KRISHNA (Minister for Industries). —Madam, on the recommendation of the Governor, I beg to move :

"That a sum not exceeding Rs. 3, 50, 000, inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect. Demand No. 14 'Supplies and Disposals".

MADAM SPEAKER.—Motion moved :

"That a sum not exceeding Rs. 3, 50, 000, inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 14 "Supplies and Disposals".

†ಶ್ರೀ ಜಿ. ಪಿ. ನಂಜಯ್ಯನಮಠ (ಗುಳೇದಗುಡ್).—ಸನ್ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ನಾನು ಮೊಟ್ಟಮೊದಲನೆಯದಾಗಿ ನಮ್ಮ ಅರ್ಥಮಂತ್ರಿಗಳು ಈ ಸಭೆಯ ಮುಂದೆ ಇಟ್ಟಂತಹ ಆಯವ್ಯಯ ಪತ್ರಿಕೆ ಏನಿದೆ ಅದರ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಿ ನಂತರ ಈ ಬೇಡಿಕೆಯ ಪ್ರಸ್ತಾಪಕ್ಕೆ ಬರುತ್ತೇನೆ. ನಮ್ಮ ಮಾನ್ಯ ಅರ್ಥ ಮಂತ್ರಿಗಳು ಈ ಸಭೆಯ ಮುಂದೆ ಇಟ್ಟಂತಹ ಆಯವ್ಯಯ ಪತ್ರಿಕೆ ಏನಿದೆ ಅದು ಸಮಾಜವಾದ ರಚನೆಗೆ ಭದ್ರವಾದ ಒಂದು ಬುನಾದಿಯನ್ನು ಹಾಕಿ ಅಂಥಾ ಒಂದು ತತ್ವಕ್ಕೆ ಸಾಕಷ್ಟು ಪುಷ್ಟಿಯನ್ನು ಕೊಡತಕ್ಕಂಥಾದ್ದಾಗಿದೆ. ಅದಕ್ಕಾಗಿ ನಾನು ಅವರಿಗೆ ನನ್ನ ಮೊದಲನೆಯ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಇವೊತ್ತು ಈ ಸಭೆಯ ಮುಂದೆ ಇಟ್ಟಿರುವ ಬೇಡಿಕೆಗಳಿಗೆ ಸಂಬಂಧಪಟ್ಟ ಹಾಗೆ ನಾನು ಹೆಚ್ಚು ಮಾತನಾಡುವ ವಿಷಯ ಎಂದರೆ ಕೈಮಗ್ಗದ ಸಮಸ್ಯೆ. ಇಡೀ ಕರ್ನಾಟಕದಲ್ಲೇ ಅತಿ ಮುಖ್ಯವಾಗಿ ಇರುವಂತಹ ಕೈಮಗ್ಗದ ಸಮಸ್ಯೆಗಳ ಬಗ್ಗೆ ನಾನು ಕೆಲವೊಂದು ವಿಚಾರಗಳನ್ನು ಈ ಸಭೆಯ ಮುಂದೆ ಇಡಲು ಬಯಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಈ ಕರ್ನಾಟಕದಲ್ಲಿ ಕೃಷಿ ಮೊದಲನೆಯ ಉದ್ಯೋಗ. ಅದರೆ ಕೈಮಗ್ಗ ಎರಡನೆಯ ಉದ್ಯೋಗ ಮತ್ತು ಬಹಳ ಮಹತ್ವದ ಉದ್ಯೋಗ. ಒಕ್ಕಲಿಗರಿಗೆ ಸಾಕಷ್ಟು ಪ್ರಾಶಸ್ತ್ಯವನ್ನು ಕೊಟ್ಟರೆ ಹಸಿರು ಕ್ರಾಂತಿಯಾಗುತ್ತದೆ. ಹಾಗೆಯೇ ಈ ಕೈಮಗ್ಗದ ಉದ್ಯಮಕ್ಕೂ ಸರ್ಕಾರದವರು ಸಾಕಷ್ಟು ಪ್ರಾಶಸ್ತ್ಯವನ್ನು ಕೊಟ್ಟರೆ ಈ ಒಂದು ಉದ್ಯಮವನ್ನು ಅವಲಂಬಿಸಿಕೊಂಡಿರುವವರಿಗೆ ಹೆಚ್ಚು ಅನುಕೂಲವಾಗುತ್ತದೆ. ಹಿಂದಿನ ಬಡ್ಜೆಟ್ಟಿನಲ್ಲಿ ಕೈಮಗ್ಗದ ಉದ್ದಿಮೆಯ ಬಗ್ಗೆ ಸಾಕಷ್ಟು ಹಣವನ್ನು ಒದಗಿಸಿಲ್ಲ. ಇದು ನಿಜವಾಗಿಯೂ ಅತ್ಯಂತ ವಿಷಾದಕರವಾದ ಸಂಗತಿ. ಇಡೀ ಕರ್ನಾಟಕದಲ್ಲಿ ಸುಮಾರು ಎರಡು ಲಕ್ಷ ಜನ ನೇಕಾರರು ಒಂದು ಉದ್ಯಮವನ್ನು ಅವಲಂಬಿಸಿ ಕೊಂಡಿದ್ದಾರೆ. ಆದರಲ್ಲಿಯೂ ಬಿಜಾಪುರ ಜಿಲ್ಲೆಯಲ್ಲಿರತಕ್ಕ ನೇಕಾರರು ಅವಲಂಬಿಸಿಕೊಂಡಿರತಕ್ಕ ಕೈಮಗ್ಗದ ದಂಧೆಯ ವಿಚಾರವಾಗಿ ನಾನು ಕೆಲವೊಂದು ವಿಚಾರವನ್ನು ತಮ್ಮ ಮುಂದಿಡುತ್ತೇನೆ. ಬಿಜಾಪುರ ಜಿಲ್ಲೆಯಲ್ಲಿ ಸುಮಾರು 30 ಸಾವಿರ ಕೈಮಗ್ಗಗಳಿಂದ ನೇಕಾರರು ತಮ್ಮ ಉಪಜೀವನವನ್ನು ನಡೆಸುತ್ತಿದ್ದಾರೆ. ಸುಮಾರು ಎರಡು ಲಕ್ಷ ಜನರು ಈ ಕೈಮಗ್ಗದ ಉದ್ದಿಮೆಯನ್ನು ಅವಲಂಬಿಸಿಕೊಂಡು ಜೀವನ ಮಾಡುತ್ತಿದ್ದಾರೆ. ಅವರ ಒಂದು ಕುಟುಂಬದಲ್ಲಿ ಗಂಡ ಹೆಂಡತಿ ಮಕ್ಕಳು, ಎಲ್ಲರೂ ಕೆಲಸ ಮಾಡುತ್ತಿದ್ದಾರೆ. ಆದರೂ ಸಹ ಅವರಿಗೆ ಒಂದು ತಿಂಗಳಿಗೆ ಕೇವಲ 60–70 ರೂಪಾಯಿಗಳು ಮಾತ್ರ ಅದಾಯ ಬರುತ್ತದೆ. ಇದರಿಂದಾಗಿ ಅವರ ಆರ್ಥಿಕ ಸ್ಥಿತಿ ಚೆನ್ನಾಗಿಲ್ಲ. ಅವರ ಸ್ಥಿತಿ ತುಂಬಾ ಚಿಂತಾಜನಕವಾಗಿದೆ. ಅವರಿಗೆ ಬಡತನ ಕ್ಷಯರೋಗ ಮುಂತಾದವು ನರಕಸದೃಶವಾಗಿದೆ. ಆದ್ದರಿಂದ ಈ ಜನರ ದುಸ್ಥಿತಿಯ ಬಗ್ಗೆ ಸರ್ಕಾರದವರು ಸಾಕಷ್ಟು ಗಮನವನ್ನು ಕೊಡಬೇಕು. ಬಿಜಾಪುರ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಬರಗಾಲ ಇದ್ದೇ ಇರುತ್ತದೆ. ಇಂಥಾ ಪರಿಸ್ಥಿತಿಯಲ್ಲಿ ಕೈಮಗ್ಗದ ಉದ್ದಿಮೆಯನ್ನು ಅವಲಂಬಿಸಿಕೊಂಡಿರತಕ್ಕ ಜನಗಳಿಗೆ ಹೆಚ್ಚಿನ ತೊಂದರೆಯಾಗಿದೆ. ಆದ್ದರಿಂದ ಮಾನ್ಯ ಕೈಗಾರಿಕಾ ಮಂತ್ರಿಗಳು ನೇಕಾರರ ದಂಧೆಗೆ ಸಾಕಷ್ಟು ಲಕ್ಷ್ಯ ಕೊಟ್ಟು ಆ ಜನಗಳಿಗೆ ಉದ್ಯೋಗವನ್ನು ಕಲ್ಪಿಸಿಕೊಡಬೇಕು. ನೇಕಾರರು ನಿರುದ್ಯೋಗಿಗಳಲ್ಲ. ಅವರು ಪ್ರತಿದಿವಸ 12 ತಾಸು ದುಡಿಯುತ್ತಿದ್ದರೂ ಕೂಡ 7 ದಿವಸ ದಾಟಿದರೆ 5 ದಿವಸಗಳಿಗೆ ಸಾಕಾಗುವಷ್ಟು ಅನ್ನ ಅವರಿಗೆ ಸಿಕ್ಕುವುದಿಲ್ಲ. ಅವರಿಗೆ ಅಂಥಾ ಒಂದು ಪರಿಸ್ಥಿತಿ ಇದೆ. ಆದಕಾರಣ ಅವರ ಬಗ್ಗೆ ಸರ್ಕಾರದವರು ಸಾಕಷ್ಟು ಲಕ್ಷ್ಯವನ್ನು ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಬಿನ್ನವಿಸಿಕೊಳ್ಳುತ್ತೇನೆ. ಇಂಥಾ ಒಂದು ಪರಿಸ್ಥಿತಿಯಲ್ಲಿ ಅವರ ಸುಧಾರಣೆ ಮಾಡುವುದಕ್ಕೆ ಸಂಬಂಧಪಟ್ಟ ಹಾಗೆ ನಾನು ಕೆಲವೊಂದು ಸೂಚನೆಗಳನ್ನು ತಮ್ಮ ಮುಂದೆ ಇಡುವುದಕ್ಕೆ ಬಯಸುತ್ತೇನೆ. ಹಿಂದಿನ ಸರ್ಕಾರ ಇದ್ದಾಗ ಕೇಂದ್ರ ಸರ್ಕಾರದವರು ಇವರ ಸಲುವಾಗಿ ಸೆಸ್‌ಫಂಡ್ ಎಂದು ಕೊಡುತ್ತಿದ್ದರು. ಆ ಹಣವನ್ನು ಸರ್ಕಾರದವರು ಕೈಮಗ್ಗದ ಸಲುವಾಗಿ ಖರ್ಚು ಮಾಡದೆ ಬೇರೆ ಉದ್ದಿಮೆಗೆ ಖರ್ಚು ಮಾಡುತ್ತಿದ್ದರು. ಆದ್ದರಿಂದ ಕೈಮಗ್ಗದ ಸಲುವಾಗಿ ಬಂದಂತಹ ಹಣವನ್ನು

ಬೇರೆ ರೀತಿ ಖರ್ಚು ಮಾಡದಂತೆ ನೋಡಿಕೊಳ್ಳಬೇಕು. ಮತ್ತು ಕೈಮಗ್ಗದ ಬಗ್ಗೆ ಕೆಲವೊಂದು ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಬೇಕು. ಕೇಂದ್ರ ಸರ್ಕಾರದಿಂದ ಬರತಕ್ಕ ಸೆಸ್ ಹಣವನ್ನು ನೇಕಾರ ಸಲುವಾಗಿ ಖರ್ಚು ಮಾಡಬೇಕು ಎಂದು ನಾನು ಹೇಳುತ್ತೇನೆ.

ಎರಡನೆಯದಾಗಿ ರೇಷ್ಮೆ ಕೈಗಾರಿಕೆ, ಮೀನುಗಾರಿಕೆ ಮುಂತಾದ ಇಲಾಖೆಗಳಿಗೆ ಪ್ರತ್ಯೇಕವಾದ ಡೈರೆಕ್ಟೊರೇಟ್ ಇರುವ ಹಾಗೆ ಇದಕ್ಕೂ ಒಂದು ಪ್ರತ್ಯೇಕವಾದ ಡೈರೆಕ್ಟೊರೇಟ್ ಮಾಡಬೇಕು ಮತ್ತು ಈ ಕೈಮಗ್ಗದ ಇಲಾಖೆಗೆ ಸಂಬಂಧಪಟ್ಟ ಹಾಗೆ ಒಬ್ಬರು ಮಂತ್ರಿಗಳನ್ನು ನೇಮಿಸಬೇಕು. ಮತ್ತು ಈ ಇಲಾಖೆಗೆ ಸಾಕಷ್ಟು ಹಣವನ್ನು ಒದಗಿಸಬೇಕು. ಇದರ ಮುಖಾಂತರ ನೇಕಾರರ ಅಭಿವೃದ್ಧಿಯನ್ನು ಸಾಧನೆ ಮಾಡಬೇಕು. ಈ ಕೈಮಗ್ಗದ ಉದ್ದಿಮೆಯನ್ನು ಅವಲಂಬಿಸಿಕೊಂಡಿರತಕ್ಕ ಜನ ಈ ಪ್ರಗತಿಪರ ಸರ್ಕಾರದಲ್ಲಿ ನಾವು ಹೆಚ್ಚಿನ ಅನುಕೂಲವನ್ನು ಪಡೆಯುತ್ತೇವೆ ಎನ್ನುವ ಆಶೆಯನ್ನು ಇಟ್ಟುಕೊಂಡಿದ್ದಾರೆ. ಆದ್ದರಿಂದ ಸರ್ಕಾರದವರು ಅವರ ಆಸೆಯನ್ನು ಪೂರೈಸಬೇಕು. ಅವರ ಪರಿಸ್ಥಿತಿಯನ್ನು ಸುಧಾರಣೆ ಮಾಡಬೇಕು. ಅವರನ್ನು ಸುಧಾರಣೆ ಮಾಡುವ ವಿಚಾರದಲ್ಲಿ ಎಷ್ಟೋ ಜನ ಮಾನ್ಯ ಸದಸ್ಯರು ಎಷ್ಟೋ ಸೂಚನೆಗಳನ್ನು ತಮ್ಮ ಮುಂದೆ ಇಟ್ಟಿದ್ದಾರೆ. ನಾನೂ ಕೂಡ ಯೋಗ್ಯ ಸಲಹೆಗಳನ್ನು ಈ ಸಭೆಯಮುಂದೆ ಇಟ್ಟಿದ್ದೇನೆ. ಇದನ್ನು ಸರ್ಕಾರದವರು ಗಮನಿಸಬೇಕು. ಈ ದಂಧೆಯನ್ನು ಸುಧಾರಿಸಬೇಕಾದರೆ ನಾನು ಒಂದು ಸೂಚನೆಯನ್ನು ಕೊಡುತ್ತೇನೆ. ಅದೇನೆಂದರೆ ನೇಕಾರ ದಂಧೆಯಲ್ಲಿ ತರಬೇತಿಯನ್ನು ಪಡೆದು ಅದರಲ್ಲಿ ತಜ್ಞರಾಗಿರತಕ್ಕ ಆಫೀಸರನ್ನೊಳಗೊಂಡ ಒಂದು ಸಮಿತಿಯನ್ನು ನೇಮಕ ಮಾಡಬೇಕು, ಅದರಲ್ಲಿ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಬೇಕು, ಆ ಸಮಿತಿಯವರ ಸಲಹೆಯಂತೆ ಬಿಜಾಪುರ ಜಿಲ್ಲೆ ಹಾಗೂ ಇಡೀ ಕರ್ನಾಟಕದಲ್ಲಿರತಕ್ಕ ನೇಕಾರ ಪರಿಸ್ಥಿತಿಯನ್ನು ಸುಧಾರಣೆ ಮಾಡಬೇಕು, ಮತ್ತು ಈ ಕೈಮಗ್ಗದ ಉದ್ದಿಮೆಯನ್ನು ರಕ್ಷಣೆ ಮಾಡಬೇಕು. ಪವರ್‌ಲೂಮ್‌ನಿಂದ ಹ್ಯಾಂಡ್ಲೂಮ್ ಉದ್ದಿಮೆಗೆ ಯಾವ ರೀತಿಯ ಪರಿಣಾಮವೂ ಆಗಬಾರದು. ಆ ಸಮಿತಿಯವರು ಕೊಟ್ಟಂತಹ ವರದಿಯನ್ನು ಚಾಚೂ ತಪ್ಪದೆ ಕಾರ್ಯರೂಪಕ್ಕೆ ತರಬೇಕು. ಈ ಸೂಚನೆಯನ್ನು ತಮ್ಮ ಮುಂದೆ ಇಡುವುದಕ್ಕೆ ನಾನು ಬಯಸುತ್ತೇನೆ.

ಈಗ ಕೈಮಗ್ಗದ ಬಟ್ಟೆಗೆ ಒಂದು ಗಜಕ್ಕೆ ಎರಡೂವರೆ ರೂಪಾಯಿ ಬೆಲೆ ಬಾಳುವ ಬಟ್ಟೆಗೆ ಮಾತ್ರ ಸರ್ಕಾರದವರು ರಿಬೇಟ್ ಕೊಡುತ್ತಿದ್ದಾರೆ. ಇವೊತ್ತು ಸಾಧಾರಣವಾದ ಬಟ್ಟೆಗೂ ಕೂಡ ಬಜಾರ್‌ನಲ್ಲಿ ಜಾಸ್ತಿ ಬೆಲೆ ಇದೆ. ಎರಡೂವರೆ ರೂಪಾಯಿಗೆ ಬಿಳಿ ಅರಿವೆ ಕೂಡ ಸಿಕ್ಕುವುದಿಲ್ಲ. ಆದ್ದರಿಂದ ನೇಕಾರರು ನೇಯುವ ಸೀರೆ, ಕಣ ಯಾವುದಕ್ಕೂ ರಿಬೇಟ್ ಸಿಕ್ಕುವುದಿಲ್ಲ. ಆದ್ದರಿಂದ ಸರ್ಕಾರದವರು ನೆಯ್ಗೆ ಬಟ್ಟೆಗೆ ಏನು ರಿಬೇಟ್ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ ಅದು ಅವರಿಗೆ ಸಿಕ್ಕುತ್ತಾ ಇಲ್ಲ. ನಾನು ಒಂದು ಸೂಚನೆ ಮಾಡುತ್ತೇನೆ. ಈ ರಿಬೇಟನ್ನು ಸರ್ವೇ ಸಾಧಾರಣವಾಗಿ ಎರಡೂವರೆ ರೂಪಾಯಿಗಳಿಗಿಂತ ಇಂದಿನ ಪರಿಸ್ಥಿಯಲ್ಲಿ 5 ರೂಪಾಯಿವರೆಗೆ ಸಿಗುವಂತೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಒಕ್ಕಲಿಗನಿಗೆ ಬಾಳುವುದಕ್ಕೆ ಬದುಕುವುದಕ್ಕೆ ಭೂಮಿ ಎಷ್ಟು ಅವಶ್ಯಕತೆಯೋ, ಅಷ್ಟೇ ಅವಶ್ಯಕತೆ ನೇಕಾರರಿಗೆ ಮನೆಗಳು, ಅವರಿಗೆ ಮನೆ ಇಲ್ಲದಿದ್ದರೆ ಯಾವ ಕೆಲಸವೂ ನಡೆಯುವುದಿಲ್ಲ. ಇಂದಿನ ನಮ್ಮ ಸರ್ಕಾರದವರು ಮನೆ ಇಲ್ಲದವರಿಗೆ ಮನೆಕಟ್ಟಿಸಿಕೊಡುತ್ತೇವೆ, ಸೈಟ್ ಇಲ್ಲದವರಿಗೆ ಸೈಟ್ ಕೊಡಬೇಕೆಂದು ಹೇಳುತ್ತಿದ್ದಾರೆ. ಆದ್ದರಿಂದ ಒಂದು ಉದ್ಯೋಗ ಮಾಡತಕ್ಕವರಿಗೆ ಒಂದು ಮನೆಯಾದರೂ ಬೇಕು. ಆದ್ದರಿಂದ ಅಂತಹ ಮನೆಯನ್ನು ಪ್ರತಿಯೊಬ್ಬ ನೇಕಾರನಿಗೂ ಒದಗಿಸಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ನೇಕಾರರಿಗೆ ಅತ್ಯಾವಶ್ಯಕವಾಗಿ ಬೇಕಾಗುವಂತಹ ಕಚ್ಚಾಮಾಲುಗಳ ಬೆಲೆಯೂ ಬಹಳ ಏರುತ್ತಾ ಇದೆ. ಅವರಿಗೆ ಬೇಕಾದಂತಹ ನೂಲು, ರೇಷ್ಮೆ, ಮತ್ತು ರಾಸಾಯನಿಕ ವಸ್ತು ಇವುಗಳಿಗೆ ಹಿಂದೆ 1962 ರಿಂದ 1972ರ ವರೆಗಿನ ಲೆಕ್ಕ ತೆಗೆದುಕೊಂಡರೆ ಈಗ ಹಿಂದಿನ ಧಾರಣೆಗೆ ಎರಡರಷ್ಟು ಧಾರಣೆ ಹೆಚ್ಚಾಗಿದೆ. ಈ ರೀತಿ ಬೆಲೆಗಳು ಹೆಚ್ಚಾದಾಗ ನೇಕಾರನಿಗೆ ಸಿಗುವಂತಹ ಲಾಭಾಂಶ ಬಹಳ ಕಡಿಮೆಯಾಗುತ್ತಿದೆ. ಈ ಕಚ್ಚಾಮಾಲುಗಳ ಬೆಲೆ ಈ ರೀತಿಯಾಗಿ ಹೆಚ್ಚುತ್ತಿರುವುದರಿಂದ ಒಬ್ಬ ನೇಕಾರನು ಮೂರು ನೆಯ್ಗೆ ಮಗ್ಗಗಳನ್ನು ಇಟ್ಟರೂ ಅದರಿಂದ ಕನಿಷ್ಠ ಪಕ್ಷ ಅವನಿಗೆ 15 ರೂಪಾಯಿ ಲಾಭ ಸಿಗಬೇಕಾದರೂ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಇವುಗಳನ್ನು ವಿಚಾರ ಮಾಡಿ ಸರ್ಕಾರದವರು ನೇಕಾರನಿಗೆ ದೀರ್ಘಾವಧಿಯ ಸಾಲವನ್ನು ಸೊಸೈಟಿಯ ಮುಖಾಂತರವಾಗಲಿ, ಅಥವಾ ಬ್ಯಾಂಕುಗಳ ಮುಖಾಂತರವಾಗಲಿ ಒದಗಿಸಿಕೊಡಬೇಕು. ಒಬ್ಬನು ಒಂದು ಮಗ್ಗ ಇಟ್ಟುಕೊಂಡಿದ್ದರೆ ಸಾವಿರ ರೂಪಾಯಿ ಸಾಲವನ್ನು ಕೊಡುವಂತಹ ಏರ್ಪಾಡು ಮಾಡಬೇಕು. ಈಗ ನೇಕಾರರು ಎಷ್ಟೋ ಪರಿಷತ್ತುಗಳನ್ನು ಮಾಡಿಕೊಂಡು ಠರಾವು

(ಶ್ರೀ ಜಿ. ಪಿ. ನಂಜಯ್ಯನ ಮಠ)

ಗಳನ್ನು ಮಾಡಿ ಸರ್ಕಾರಕ್ಕೆ ಕಳಿಸಿದ್ದಾರೆ. ಮಂತ್ರಿಯವರು ಇವರಿಗೆ ಆಶ್ವಾಸನೆಯನ್ನು ಸಹ ಕೊಟ್ಟಿದ್ದಾರೆ. ಇವತ್ತು ಒಂದು ಮಣ ಮಾತಿಗಿಂತಲೂ, ಒಂದು ಗುಂಜಿಯಷ್ಟು ಕೃತಿ ಲೇಸು ಎನ್ನುವ ಹಾಗೆ ಸಹಾಯ ಮಾಡಬೇಕಾಗುತ್ತದೆ. ಆದ್ದರಿಂದ ಸರ್ಕಾರದವರು ಈ ನೇಕಾರ ವರ್ಗದ ಜನರಿಗೆ ಒಂದು ವಿಶಿಷ್ಟ ತರಗತಿಯ ಯೋಜನೆಯನ್ನು ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇವೊತ್ತಿನ ದಿವಸ ನೇಕಾರ ಜನರು ಮಂತ್ರಿಯವರ ಮನೆಯ ಮುಂದೆ ಸತ್ಯಾಗ್ರಹ ಹೂಡುವುದರಲ್ಲಿದ್ದಾರೆ. ಅದು ಏಕೆ ಮಾಡುತ್ತಾರೆಂದರೆ, ಇವರನ್ನು ಅವಹೇಳನ ಮಾಡುವುದಕ್ಕೆ ಅಲ್ಲ. ತಮ್ಮ ಕೂಗನ್ನು ಇಲ್ಲಿಯವರೆಗೆ ಯಾರೂ ಕೇಳಲಿಲ್ಲ, ಇನ್ನಾದರೂ ಸರ್ಕಾರಕ್ಕೆ ಮುಟ್ಟಲಿ ಎಂದು ಅದನ್ನು ಮಾಡುತ್ತಾರೆ. ಏಕೆಂದರೆ ರೋಗಿ ಆಸ್ಪತ್ರೆಗೆ ಹೋಗದೆ ಡಾಕ್ಟ್ರು ಔಷಧಿ ಕೊಡಲಾರ. ಆದ್ದರಿಂದ ಈ ರಿಬೇಟಿನ ಬಗ್ಗೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಂಡು ನೇಕಾರ ಜನರಿಗೆ ಅನುಕೂಲಮಾಡಿ ಅವರ ಇತರ ಸಮಸ್ಯೆಗಳನ್ನೂ ಹೋಗಲಾಡಿಸಬೇಕೆಂದು ಮಾನ್ಯ ಅರ್ಥ ಮಂತ್ರಿಯವರಿಗೂ, ಮತ್ತು ಕೈಗಾರಿಕಾ ಮಂತ್ರಿಯವರಿಗೂ ವಿನಂತಿ ಮಾಡಿಕೊಂಡು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಡಿಮ್ಯಾಂಡ್‌ನ ಮೇಲೆ ಮಾತನಾಡುವುದಕ್ಕೆ ಬಹಳ ಜನರು ಇದ್ದಾರೆ. ಮಂತ್ರಿಗಳಿಗೆ ಉತ್ತರ ಕೊಡಲು ಒಂದೂವರೆ ಗಂಟೆ ಬೇಕಾಗುತ್ತದೆ. ಅಂದಾಗ ಬಾಕಿ ಇದ್ದ ಸಮಯವನ್ನು ಸದಸ್ಯರು ಅಳವಡಿಸಿಕೊಂಡು ಮಾತನಾಡಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೆಗೌಡ.—ನಾವು ಒಂದು ಗಂಟೆ ಹೆಚ್ಚು ಬೇಕಾದರೆ ಕೂತುಕೊಳ್ಳೋಣ. 7 ಗಂಟೆಯವರೆಗೆ ಕೂತು ಮುಗಿಸೋಣ.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸನ್ಮಾನ್ಯ ಸಭಾಧ್ಯಕ್ಷಣಿಯವರೇ, ಈ ದಿನ ಶ್ರೀಮಾನ್ ಕೃಷ್ಣನವರು ಇಟ್ಟಿರುವಂತಹ ಬೇಡಿಕೆಯನ್ನು ಮತ್ತು ಮಾನ್ಯ ಮುಖ್ಯಮಂತ್ರಿಯವರು ಇಟ್ಟಿರುವಂತಹ ಬೇಡಿಕೆಯನ್ನು ವಿರೋಧಿಸುತ್ತಾ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ಮೊದಲನೆಯದಾಗಿ ನಮ್ಮ ರಾಜ್ಯದಲ್ಲಿ ಕೈಗಾರಿಕೆಯ ಬೆಳವಣಿಗೆಯ ಬಗ್ಗೆ ಎಲ್ಲರಿಗೂ ಗೊತ್ತಿರುವ ಹಾಗೆ ಬೇರೆ ರಾಜ್ಯಗಳಿಗಿಂತ ನಾವು ಬಹಳ ಹಿಂದುಳಿದವರಾಗಿದ್ದೇವೆ. ಇವರ ಬಗ್ಗೆ ನ್ಯಾಷನಲ್ ಕೌನ್ಸಿಲ್ ಆಫ್ ಅಪ್ಲೈಡ್ ಎಕನಾಮಿಕ್ ರಿಸರ್ಚ್—ಇವರು ಇಂಡಸ್ಟ್ರಿಯಲ್ ಪ್ರೋಗ್ರೆಸ್ ಫಾರ್ ಫೋರ್ತ್ ಪ್ಲಾನ್ ಆಫ್ ಮೈಸೂರು ಎಂದು ಒಂದು ರಿಪೋರ್ಟ್ ಪಬ್ಲಿಷ್ ಮಾಡಿದ್ದಾರೆ. ಅದರಲ್ಲಿ ಮೈಸೂರು ಬಹಳ ಹಿಂದುಳಿದಿದೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಅದು ಹೀಗೆ ಇದೆ:

> "It will be noticed from the above that in 1960-61 Mysore contributed only 4.5 per cent of the industrial income of the country and ranks 8th among the 15 States of the Indian Union. In the matter of Industrial growth also Mysore is sixth in the list."

ಒಟ್ಟಿನಲ್ಲಿ ಇವರ ವರದಿಯ ಪ್ರಕಾರ ಮೈಸೂರು ಕೈಗಾರಿಕೆಗಳಲ್ಲಿ ಬಹಳ ಹಿಂದುಳಿದಿದೆ. ಅದೇ ರೀತಿ ಬೇರೆಯವರು ಸಹ ವರದಿಗಳಲ್ಲಿ ಇದನ್ನೇ ಹೇಳಿದ್ದಾರೆ. ಇದರಿಂದ ನಾವು ಕೈಗಾರಿಕೆಗಳಲ್ಲಿ ಹಿಂದುಳಿದಿದ್ದೇವೆ ಎಂಬುದು ಸ್ಪಷ್ಟ. ನಮ್ಮ ಮಂತ್ರಿಯವರು ಹಿಂದೆ ಪಿ.ಎಸ್.ಪಿ.ಯಲ್ಲಿದ್ದವರು. ಆಗ ಸಮತಾವಾದವನ್ನು ಪೂರ್ತಿಯಾಗಿ ಒಪ್ಪಿಕೊಂಡಂತಹ ಜನ ತಾವು. ಎಲ್ಲ ಮಂತ್ರಿಗಳಿಗಿಂತಲೂ ತಮ್ಮಿಂದ ಹೆಚ್ಚು ಸಮತಾವಾದವನ್ನು ನಾವು ನಿರೀಕ್ಷಣೆ ಮಾಡುತ್ತಿದ್ದೇವೆ. ಈ ದಾರಿಯಲ್ಲಿ ತಾವು ವರ್ತಿಸಿದ್ದೀರೋ ಇಲ್ಲವೋ ಎಂಬುದರ ಬಗ್ಗೆ ನೋಡಬೇಕಾಗಿದೆ.

3-00 P.M.

ನಾವು ಹೆಚ್ಚು ನಿರೀಕ್ಷಣೆಯನ್ನು ತಮ್ಮಿಂದ ಇಟ್ಟುಕೊಂಡಿದ್ದೇವೆ. ಹಾಗೆ ಹೇಳುವಾಗ ನಮ್ಮ ರಾಜ್ಯದಲ್ಲಿ ಕೈಗಾರಿಕೆಯ ಬೆಳವಣಿಗೆ ಹೆಚ್ಚಿಗೆ ಆಗಬೇಕಾದರೆ ಈಗ ಹೊಸ ರಾಜಕೀಯ ಪರಿಸ್ಥಿತಿಯಲ್ಲಿ ಕೆಲವಾರು ವಿಷಯಗಳನ್ನು ನಾವು ಕಣ್ಣಿನಿಂದ ನೋಡುತ್ತಿದ್ದೇವೆ. ಏನು ಕೇಂದ್ರ ಸರ್ಕಾರದವರು ಒಪ್ಪಿಕೊಂಡಿದ್ದಾರೋ ಆ ತತ್ವಗಳ ಆಧಾರದ ಮೇಲೆ ಯಾವುದಾದರೂ ಒಂದು ಧೋರಣೆ ಇರಬೇಕು. ನನಗೆ ತಿಳಿದಂತೆ ಐದು ಮುಖ್ಯಾಂಶಗಳ ಬಗ್ಗೆ ತಾವು ಗಮನ ತೆಗೆದುಕೊಳ್ಳಬೇಕು. ಮೊಟ್ಟಮೊದಲನೆಯದಾಗಿ ಈ ರಾಜ್ಯದಲ್ಲಿರುವ ಸರ್ಕಾರೀ ಕ್ಷೇತ್ರದಲ್ಲಿರತಕ್ಕ ಕೈಗಾರಿಕೆ

ಗಳು ಅಥವಾ ಸರ್ಕಾರವೇ ನಡೆಸುವ ಕೈಗಾರಿಕೆಗಳಿಗೆ ಸರ್ಕಾರವೇ ಹಣ ಕೊಟ್ಟು ಮೆಜಾರಿಟಿ ಷೇರು ಹಾಕಿದಮೇಲೆ ಆ ಕೈಗಾರಿಕೆಗಳನ್ನು ಉಳಿಸಿ ಇನ್ನೂ ಹೆಚ್ಚು ಸರ್ಕಾರೀ ಕ್ಷೇತ್ರದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದು ಮೊದಲನೆಯ ಕರ್ತವ್ಯ. ಇನ್ನು ಎರಡನೆಯದು, ನಮ್ಮ ದೇಶದ ಬಂಡವಾಳಗಾರರು ಅಂದರೆ ಪ್ರೈವೇಟ್ ಇಂಡಸ್ಟ್ರಿಯಲಿಸ್ಟ್ಸ್ ಅದರಲ್ಲಿಯೂ ಟಾಟಾ ಹಾಗೂ ಬಿರ್ಲಾ ಅವರು ಸೇರಿಕೊಂಡು ಇಲ್ಲಿನ ಇತರ ಎಲ್ಲಾ ಕೈಗಾರಿಕಾ ರಂಗಗಳಿಗೂ ಆಸ್ಪದ ಕೊಡದಂತೆ ಮಾಡದ ಹಾಗೆ ನೋಡಿಕೊಳ್ಳುವುದು. ಆ ರೀತಿ ಅವರು ಮಾಡದೆ ಇರುವಂತೆ ಅದಕ್ಕೆ ತಡೆ ಹಾಕಬೇಕು. ಮೂರನೆಯದು, ನಮ್ಮ ದೇಶವಲ್ಲ ಸಮತಾವಾದಿ ರಾಷ್ಟ್ರಗಳು, ಅಂದರೆ, ತಮಗೆ ಗೊತ್ತಿರುವ ಹಾಗೆ ಅಮೇರಿಕಾ, ಜಪಾನ್, ವೆಸ್ಟ್ ಜರ್ಮನಿ ಮುಂತಾದ ವಿದೇಶಗಳಿಂದ ಬರತಕ್ಕ ಸಹಾಯವನ್ನು ನಾವು ಬೇಡವೆಂದು ಹೇಳುವುದಿಲ್ಲವೆಂಬುದು. ಮೈಸೂರು ರಾಜ್ಯದಲ್ಲಿ ಇದು ಮೊದಲಿನಿಂದಲೂ ಬಂದಿರುವ ಅಭ್ಯಾಸ. ಇದು ಯಾರಿಂದಲೋ ಆಗಿದೆ. ಇದು ಟಚ್ ಮಿ ನಾಟ್, ಮುಟ್ಟಿದರೆ ಮುನಿ ಎಂಬಂತಾಗಬಾರದು. ಸಮತಾವಾದೀ ರಾಷ್ಟ್ರಗಳಿಂದ ನಮಗೆ ಬೇಕಾದಷ್ಟು ಸಹಾಯ ಬರಬೇಕು. ಸಾರ್ವಜನಿಕ ಕ್ಷೇತ್ರದಲ್ಲಿ ನಮ್ಮ ರಾಷ್ಟ್ರವನ್ನು ಸೋವಿಯಟ್ ರಾಷ್ಟ್ರವನ್ನಾಗಿ ಮಾಡಬೇಕು. ಇನ್ನು ನಾಲ್ಕನೆಯದು, ತಮ್ಮ ಆಡಳಿತದಲ್ಲಿ ಯಾವುದೇ ಇಲಾಖೆಯಲ್ಲಿ ಯಾರೇ ಇರಲಿ, ಅವರು ನಮ್ಮ ಸಮತಾವಾದೀ ತತ್ವಗಳಿಗೆ ವಿರೋಧವಾಗಿ ನಡೆದರೆ, ಅಂತಹವರನ್ನು ಕಂಡುಹಿಡಿದು ಅವರಿಗೆ ಸಮಾಜದಲ್ಲಿ ಹೆಚ್ಚಿನ ಸ್ಥಾನಮಾನವನ್ನು ಕೊಡಬಾರದು. ಅಲ್ಲಿಂದ ಅವರನ್ನು ಕಿತ್ತುಹಾಕಬೇಕು. ಇಲ್ಲವೇ ಹೋದರೆ ಕೈಗಾರಿಕೆಯ ಅಭಿವೃದ್ಧಿ ಕುಂಠಿತವಾಗುತ್ತದೆ. ಐದನೆಯದು ನಮ್ಮ ಸ್ನೇಹಿತರು ಹೇಳಿದ ಹಾಗೆ, ರೀಜನಲ್ ಇಂಬ್ಯಾಲೆನ್ಸನ್ನು ಸ್ಟೇಟ್ ಇಂಬ್ಯಾಲೆನ್ಸ್ ಎಂದು ಹೇಳಬಹುದು. ನಮ್ಮಲ್ಲಿ ಬಹಳ ಜಿಲ್ಲೆಗಳು ಹಿಂದುಳಿದಿವೆ. ಅವುಗಳಲ್ಲಿ ಮುಖ್ಯವಾದುವು— ಬಿಜಾಪುರ, ರಾಯಚೂರು ಮತ್ತು ಬಿದರೆ. ಈ ತರಹ ಯಾವ್ಯಾವ ಜಿಲ್ಲೆಗಳು ಬಹಳವಾಗಿ ಹಿಂದುಳಿದಿವೆಯೋ ಅಲ್ಲಿ ಹೊಸಹೊಸ ಕೈಗಾರಿಕೆಗಳನ್ನು ಸ್ಥಾಪಿಸುವ ಜವಾಬ್ದಾರಿಯನ್ನು ಆದಷ್ಟು ಜಾಗ್ರತೆಯಾಗಿ ಸರ್ಕಾರ ವಹಿಸಿಕೊಳ್ಳಬೇಕು. ಈ ಐದು ಮುಖ್ಯಾಂಶಗಳ ಆಧಾರದ ಮೇಲೆ ತಮ್ಮ ಧೋರಣೆ ಏನಿದೆಯೋ ಅದನ್ನು ಕಾರ್ಯರೂಪಕ್ಕೆ ಎಂದು ತರುತ್ತೀರಿ ಎಂಬುದನ್ನು ನಾವು ಯೋಚನೆ ಮಾಡಬೇಕು. ಈ ದೃಷ್ಟಿಯಿಂದ ತಮ್ಮ ಕೈಗಾರಿಕೆಯ ನೀತಿ ಸರಿಯಾಗಿದೆಯೇ ಎಂದು ಕೇಳುತ್ತೇನೆ. ಮೊಟ್ಟಮೊದಲನೆಯದಾಗಿ ನೀವು ಸರ್ಕಾರೀ ಕ್ಷೇತ್ರದ ಕೈಗಾರಿಕೆಗಳನ್ನು ಬೆಳೆಸುವುದರಲ್ಲಿ ತೀರಾ ಅಸಮರ್ಥರಾಗಿದ್ದೀರಿ. ನಮ್ಮ ರಾಜ್ಯದಲ್ಲಿ ಒಂದು ವಿಶೇಷ ವಿಷಯ ಒಂದಿದೆ. ಸ್ಟೇಟ್ ಸೆಕ್ಟರ್ ಕೈಗಾರಿಕೆಗಳು ಬಹಳ ಇವೆ. ಈ ಒಂದು ಮನೋಭಾವ ಹಿಂದಿನ ಸರ್ಕಾರದ ನೀತಿ. ಈಗಿನ ಸರ್ಕಾರದ ಅಧಿಕಾರಿಗಳ ನೀತಿಯೇ ಬೇರೆ. ಅದರಲ್ಲಿಯೂ ನಿಮ್ಮ ಕೈಗಾರಿಕೆ ಇಲಾಖೆಯಲ್ಲಿ ತ್ರಿಮೂರ್ತಿಗಳು ಇದ್ದಾರೆ. ಒಬ್ಬರು ಕೈಗಾರಿಕೆ ಸೆಕ್ರೆಟರಿ, ಇನ್ನೊಬ್ಬರು ಕಮಿಷನರ್ ಫಾರ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಮತ್ತು ಎಲ್ಲ ಕೈಗಾರಿಕೆಗಳಲ್ಲೂ ಚೇರ್ಮನ್ ಅಥವಾ ಡೈರೆಕ್ಟರ್‌ಗಳು ಇದ್ದಾರೆ. ಈ ಮೂರು ಜನರೂ ಸೇರಿ ಅವನ್ನು ಸ್ಯಾಬೊಟೇಜ್ ಮಾಡುತ್ತಿದ್ದಾರೆಂದು ಹೇಳುತ್ತೇನೆ. ಉದಾಹರಣೆಗೆ ತೆಗೆದುಕೊಂಡರೆ, ಮೈಸೂರು ಟೊಬ್ಯಾಕೊ ಕಂಪೆನಿಯಿಂದ ಹೆಚ್ಚಿಗೆ ವರಮಾನ ಬರುತ್ತಿದೆ. ಇದು ಬಹಳ ಮುಂದುವರಿದಿರುವ ಕೈಗಾರಿಕೆ. ಇದನ್ನು ಡಹನೂಕ ಎಂಬ ಪ್ರೈವೇಟ್ ಎಂಟರ್‌ಪ್ರೈಜಸ್ ಕೈಗಾರಿಕೋದ್ಯಮಿಗಳಿಗೆ ಮಾರಿದರೆ ಇನ್ನೂ ಹೆಚ್ಚು ವರಮಾನ ಬರುತ್ತದೆ. ಇನ್ನು ಇಂಡಸ್ಟ್ರಿಯಲ್ ಟೆಸ್ಟಿಂಗ್ ಲ್ಯಾಬೊರೇಟರಿ. ಇದು ಚಿನ್ನದಂಥ ಕೈಗಾರಿಕೆ. ನನ್ನ ಅಭಿಪ್ರಾಯದಲ್ಲಿ ಅಲ್ಲಿ ಬಹಳ ಲಾಭ ಬರುತ್ತಿದೆ. ಅಲ್ಲಿ ಪೆಟ್ರೊ ಕೆಮಿಕಲ್ ಕಾಂಪ್ಲೆಕ್ಸಿನಿಂದ ಫಾರ್ಮ್ಯಾಟಿಕಲ್ ಡ್ರಗ್ಸ್ ಆಗಬೇಕೆಂದು ಹೇಳುತ್ತಿರುವಾಗ, ಅದನ್ನೇನು ಮಾಡಿದಿರಿ? ಹಿಂದಿನ ಸರ್ಕಾರ ಇದಕ್ಕೆ ತೊಂದರೆ ಮಾಡಿದರು, ಈಗ ಅದನ್ನು ಕಂಟ್ರೋಲ್ ಮಾಡುವವರು ಇನ್ನೊಬ್ಬರು. ಈಗ ಖಾಸಗಿಯಾಗಿ ಮಾನ್ಯ ಶ್ರೀ ಎಂ. ಶ್ರೀನಿವಾಸಾಚಾರ್ಲು ಅಂಡ್ ಕಂಪೆನಿ ಅವರಿಗೋ ಅಥವಾ ಇನ್ನು ಯಾರಿಗೋ ಇದನ್ನು ಮಾರಿದರೆ ಏನು ಪ್ರಯೋಜನ? ಏಕೆ ಮಾರಬೇಕು? ಮೂರನೆಯದು, ಮೈಸೂರು ಪೇಪರ್ ಮಿಲ್ಸ್. ತಮಗೆ ಗೊತ್ತಿರುವಹಾಗೆ ಮೈಸೂರು ಚೇಂಬರ್ ಆಫ್ ಕಾಮರ್ಸ್‌ನಲ್ಲಿ ಈ ಬಗ್ಗೆ ತೀರ್ಮಾನಮಾಡಿ ಕಳುಹಿಸಿದ್ದಾರೆ. ಅದು 29-4-72ರಲ್ಲಿ ಫೈನಾನ್ಸಿಯಲ್ ಎಕ್ಸ್‌ಪ್ರೆಸ್‌ನಲ್ಲಿ ಬಂದಿದೆ. ಅದು ಈ ರೀತಿ ಇದೆ. Please do not sell it to a private capitalist. ಇದನ್ನು ಜಾಲನ್ ಅಂಡ್ ಕಂಪೆನಿಯ ಒಬ್ಬ ಮಾರವಾಡಿಗೆ ಮಾರಬೇಕೆಂದು ವ್ಯವಹಾರ ನಡೆಯುತ್ತಿದೆ. ತಾವು ಅದಕ್ಕೆ ಉತ್ತರ ಹೇಳಿ. ಇದನ್ನು ಮಾರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ತಮ್ಮ ಅಭಿಪ್ರಾಯ ಇದರ ಬಗ್ಗೆ ಏನಿದೆಯೋ ನನಗೆ ಗೊತ್ತಿಲ್ಲ. ಮೈಸೂರು ಚೇಂಬರ್ ಆಫ್ ಕಾಮರ್ಸ್‌ನವರು ಇದರ ವಿಷಯದಲ್ಲಿ ತೀರ್ಮಾನಮಾಡಿರುವ ಬಗ್ಗೆ ನಾನು ತಮ್ಮ ಗಮನವನ್ನು ಸೆಳೆಯುತ್ತಿದ್ದೇನೆ. ಇನ್ನು ಮಂಡ್ಯಾ ನ್ಯಾಷನಲ್ ಪೇಪರ್ ಮಿಲ್ಸ್ ವಿಷಯ ಅವರಿಗೆ ಗೊತ್ತಿದೆ. ಇದರಲ್ಲಿ ಕಾರ್ಮಿಕರಿಗೂ ಮೋಸ, ಪ್ರೈವೇಟ್ ಇಂಡಸ್ಟ್ರಿಯಲಿಸ್ಟ್ಸ್‌ಗೂ ಮೋಸ,

(ಶ್ರೀ ಎಂ. ಎಸ್. ಕೃಷ್ಣನ್)

ಮತ್ತು ಸರ್ಕಾರಕ್ಕೂ ಮೋಸ. ಅವರು ಈ ಸರ್ಕಾರಕ್ಕೆ ಕೊಡಬೇಕಾದುದು ಯಾವ ಹಣವೂ ಇಲ್ಲ; ಸರ್ಕಾರ ಇದಕ್ಕೆ ಗ್ಯಾರಂಟಿ ನಿಂತಿತ್ತು. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು 1969-70ನೇ ಇಸವಿಯ ಕಮಿಟಿಯ ವರದಿಯಲ್ಲಿ ಅದರ ಬಗ್ಗೆ ಚೆನ್ನಾಗಿ ವರದಿಮಾಡಿದ್ದಾರೆ ನನಗೆ ತಿಳಿದು ಬಂದಿರುವ ಪ್ರಕಾರ, ತಾವು ಬಂದಮೇಲೆ ಈಗ ಅವರಿಗೆ ಏನು ಸರ್ಕಾರದವರು ಲೋನ ಕೊಟ್ಟಿದ್ದಾರೋ ಅದನ್ನು ಕ್ಯಾಪಿಟಲ್ಲಾಗಿ ಕನ್‌ವರ್ಟ್ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಅದನ್ನು ಕೈಗಾರಿಕೆಯ ಬೆಳವಣಿಗೆಯ ದೃಷ್ಟಿಯಿಂದ ಕೊಟ್ಟಿದ್ದೀರೆಂದು ತಿಳಿದು ಬಂದಿದೆ. ಅದರ ಬಗ್ಗೆ ನನಗೆ ವಿರೋಧವಿಲ್ಲ. ಆದರೆ ಅದರ ಬಗ್ಗೆ ನೀವು ಹತೋಟಿಯನ್ನು ಎಷ್ಟರಮಟ್ಟಿಗೆ ಇಡುತ್ತಿದ್ದೀರಿ ಎಂಬುದು ಗೊತ್ತಿಲ್ಲ. ನೀವು ಒಳ್ಳೆಯ ರೀತಿಯಲ್ಲಿ ಖಾಸಗೀ ಕ್ಷೇತ್ರಗಳನ್ನು ಬೆಳೆಸುವುದಕ್ಕೆ ಅವಕಾಶಮಾಡಿಕೊಡುತ್ತಿದ್ದೀರೆಂದು ನಾನು ತಿಳಿದಿದ್ದೇನೆ. ಇನ್ನು ಮತ್ತೊಂದು ಪ್ರಶ್ನೆ. ಮೈಸೂರು ಲ್ಯಾಂಪ್ ವರ್ಕ್ಸ್‌ಗೆ ಇನ್ನೊಂದು ಹೆಸರನ್ನು ಕೊಟ್ಟು ಅದು ಜನರಲ್ ಎಲೆಕ್ಟ್ರಿಕ್ ಕಂಪೆನಿ, ಮೈಸೂರು ಎಂಬುದಾಗಿ ಮಾಡಿದ್ದಾರೆ. ಇವತ್ತು ನಮ್ಮ ತತ್ವಕ್ಕೆ ಅದು ಸರಿಯಾಗಿಲ್ಲವೆಂದು ಹೇಳಬೇಕಾಗಿದೆ. ಅದರ ಪ್ರಮಾಣ 49:51 ಇವತ್ತು ನಮ್ಮದು 49, ಅವರದು 51 ಆಗಿದೆ. ವಿದೇಶೀಯರು ಫಾರಿನ್ ಕೊಲ್ಯಾಬೊರೇಷನ್ನಿಂದ ಇಲ್ಲಿಗೆ ಬಂದು ನಮ್ಮ ಹಣವನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಇದರ ಬಗ್ಗೆ ಯಾವ ಧೋರಣೆಯೂ ಇನ್ನೂ ಕಾರ್ಯ ರೂಪಕ್ಕೆ ಬಂದಿಲ್ಲ. ರಾಜ್ಯದಲ್ಲಿ ಈ ಒಂದು ಹವ್ಯಾಸ ಕೂಡಲೇ ತಪ್ಪಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಎರಡನೆಯದು ಮನಾಪಲಿಯ ರೀತ್ಯ ಬಿರ್ಲಾರವರು ಎಲ್ಲರನ್ನೂ ಈಗ ನುಂಗಿಹಾಕಲಿಕ್ಕೆ ಪ್ರಯತ್ನ ಪಡುತ್ತಿದ್ದಾರೆ. ಅವರ ಬಗ್ಗೆ ಪಾರ್ಲಿಮೆಂಟಿನಲ್ಲಿಯೂ ಚರ್ಚೆ ನಡೆದಿದೆ. ಇವತ್ತು ನಮ್ಮ ರಾಜ್ಯದಲ್ಲಿಯೂ ಅಮ್ಮಸಂದ್ರ ಸಿಮೆಂಟ್ ಕಂಪೆನಿ ಹತ್ತಿರ ಕೆಲವು ಫ್ಯಾಕ್ಟರಿಗಳು ಆಗಿವೆ. ಅದರಲ್ಲಿ ಸ್ಟೋನ್ ವೇರ್ ಪೈಪ್ ಫ್ಯಾಕ್ಟರಿಯೂ ಒಂದು.

ಒಬ್ಬ ಸದಸ್ಯರು.—ಅದಕ್ಕೆ ಮಾನ್ಯ ಶ್ರೀ ನಿಜಲಿಂಗಪ್ಪನವರು ಆಶೀರ್ವಾದ ಕೊಟ್ಟಿದ್ದರು.

ಶ್ರೀ ಬಿ. ಎನ್. ಪಾಟೀಲ್.—ಅದನ್ನು ಈಗ ಕ್ಯಾನ್ಸಲ್ ಮಾಡಿ.

ಶ್ರೀ ಎಂ. ಎಸ್. ಕೃಷ್ಣನ್.—ಮನಾಪಲಿಯನ್ನು ಇವತ್ತು ಎನ್‌ಟ್ರೆಂಚ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅದನ್ನು ಉರುಳಿಸುವುದಕ್ಕೂ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ.—ನಾನು ಮಧ್ಯೆ ಬಂದದ್ದರಿಂದ ಕ್ಷಮಿಸಬೇಕು. ರಮ್ಕೊ ಕಂಪೆನಿಯವರ ದೊಡ್ಡತನದಿಂದ ಅದು ಇವತ್ತಿನವರೆಗೂ ನಿಂತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ದಿವಸ ಆ ರೆಂಕೋ ಫ್ಯಾಕ್ಟರಿಯಲ್ಲಿ ತಯಾರಾಗತಕ್ಕ ಎನರ್ಜಿ ಮೀಟರುಗಳನ್ನು ಏಕ್‌ದಂ ಕಡಮೆ ಮಾರಾಟ ಮಾಡುವಂತೆ ಅವುಗಳ ಬೆಲೆಯನ್ನು ಇಳಿಸಿದರು. ಬೇರೆಯವರು ಯಾರೂ ಕಾಂಪಿಟ್ ಮಾಡದ ರೀತಿಯಲ್ಲಿ ಅದರ ಬೆಲೆಯನ್ನು ಇಳಿಸಿದರು. ಈ ದಿವಸ ಬರೋಡಾದಲ್ಲಿ ಮಹಾರಾಷ್ಟ್ರದಲ್ಲಿ ಈ ಎನರ್ಜಿ ಮೀಟರುಗಳನ್ನು ತಯಾರಿಸಲಾಗುತ್ತದೆ. ಅಲ್ಲಿ, ಅವರು ಈ ಎನರ್ಜಿ ಮೀಟರುಗಳ ಬೆಲೆಯನ್ನು 29 ರಿಂದ 43 ವರೆಗೆ ಏರಿಸಿದ್ದಾರೆ. ಅಲ್ಲಿ ಈ ಕೈಗಾರಿಕೆಗಳೆಲ್ಲಾ ಸ್ಟೇಟ್ ಸೆಕ್ಟಾರಿನಲ್ಲಿವೆ. ಆದ್ದರಿಂದ ಈಗ ನಮ್ಮಲ್ಲಿರತಕ್ಕ ಈ ರೆಂಕೋ ಫ್ಯಾಕ್ಟರಿಯನ್ನು ಸರ್ಕಾರದವರೇ ಇಟ್ಟುಕೊಳ್ಳಬೇಕು. ಇದನ್ನು ಪ್ರೈವೇಟ್ ಸೆಕ್ಟಾರಿಗೆ—ಟಾಟಾ, ಬಿರ್ಲಾ ಇಂಥವರಿಗೆ ಬಿಟ್ಟು ಕೊಡಬಾರದು. ಆದರೆ ನನಗೆ ತಿಳಿದಿರುವ ಹಾಗೆ ಈ ದಿವಸ ಈ ಎನರ್ಜಿ ಮೀಟರುಗಳನ್ನು ಕೊಳ್ಳತಕ್ಕ ವಿಚಾರದಲ್ಲಿ ನಮ್ಮ ಮಂತ್ರಿಮಂಡಲದಲ್ಲೇ ಭಿನ್ನಾಭಿಪ್ರಾಯಗಳಿರುತ್ತೆಂದು ಹೇಳುತ್ತಿದ್ದಾರೆ. ಕೆಲವು ಜನ ಮಂತ್ರಿಗಳು ರೆಂಕೋ ಮೀಟರುಗಳನ್ನು ಕೊಳ್ಳಬೇಕೆಂದೂ ಈ ಕಂಪೆನಿಗೇ ಪ್ರೋತ್ಸಾಹ ಕೊಡಬೇಕೆಂದರೆ ಇನ್ನು ಕೆಲವು ಮಂತ್ರಿಗಳು ಅದೇಕೆ ಬೇರೆ ಹೊರಗಿನ ಫ್ಯಾಕ್ಟರಿಗಳಿಗೆ ಪ್ರೋತ್ಸಾಹ ಕೊಡಬಾರದೆಂದು ವಾದ ಮಾಡುತ್ತಿದ್ದಾರೆಂದು ಕೇಳುತ್ತಿದ್ದೇನೆ. ಅದರ ಈ ವಿಚಾರದಲ್ಲಿ ನಮ್ಮ ಕೈಗಾರಿಕಾ ಮಂತ್ರಿಗಳು ಧಿಟ್ಟತನದಿಂದ ನಮ್ಮ ರಾಜ್ಯದ ಕೈಗಾರಿಕೆಗಳಿಗೇ ಉತ್ತೇಜನ ಕೊಡಬೇಕೆಂದೂ, ಈ ರೆಂಕೋ ಫ್ಯಾಕ್ಟರಿಯನ್ನು ಉಳಿಸಬೇಕೆಂದೂ ಇದಕ್ಕೆ ಇನ್ನೂ ಹೆಚ್ಚಿನ ಸಹಾಯ ನೀಡಬೇಕೆಂದೂ ನಾನು ಕೇಳಿಕೊಳ್ಳುತ್ತೇನೆ.

ಇನ್ನು ಈ ಮನಾಪಲೀಸ್‌ಗೇ ನಮ್ಮ ಸರ್ಕಾರ ಹೆಚ್ಚು ಹೆಚ್ಚು ಅವಕಾಶವನ್ನು ಕೊಡುತ್ತಿದೆ. ಈ ದಿವಸ ಆ ಬೆಳಗಾಂನಲ್ಲಿ ಮೂರು ಕೋಟಿ ರೂಪಾಯಿಗಳಲ್ಲಿ ಒಂದು ಸ್ಕೂಟರ್ ಮತ್ತು ತ್ರೀವ್ಹಿಲರ್ಸ್ ಪ್ರಾಜೆಕ್ಟನ್ನು ಹಾಕುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ ಆದರೆ ಯು. ಪಿ. ನಲ್ಲಿ ಇಂಥದೇ ಒಂದು ಪ್ರಾಜೆಕ್ಟನ್ನು ಅಲ್ಲಿ ಅವರು ಇಟ್ಯಾಲಿಯನ್ ಕೊಲ್ಯಾಬೊರೇಷನ್ ಮೂಲಕ ಪಬ್ಲಿಕ್ ಸೆಕ್ಟಾ

ರಿನಲ್ಲಿ ಮಾಡಿದ್ದಾರೆ. ಅವರಿಗೆ ಅಲ್ಲಿ ಹಣ ಹೇಗೆ ಬಂತು ? ಇಲ್ಲಿ ನಮ್ಮ ಸರ್ಕಾರಕ್ಕೆ ಹಣ ಏಕೆ ಇಲ್ಲ ಎನ್ನುತ್ತಿದ್ದಾರೆ ? ಮನಸ್ಸಿದ್ದರೆ ಹಣ ಹೇಗೂ ಸಿಕ್ಕುತ್ತದೆ. ಆದರೆ ನಮ್ಮಲ್ಲಿ ಏನೋ ಒಂದು ಕಾರಣ ಹೇಳಿ ಇಲ್ಲಿನ ಕೈಗಾರಿಕೆಗಳನ್ನು ಬೇರೆಯವರಿಗೆ ಮಾರಾಟ ಮಾಡುತ್ತಿದ್ದಾರೆ. ಹೀಗಾಗೇ ಆ ಟೊಬ್ಯಾಕೋ ಕೈಗಾರಿಕೆಯನ್ನು ಅಂದರೆ ಫ್ಯಾಕ್ಟರಿಯನ್ನು ಆಟೊಬ್ಯಾಕೋ ಕಿಂಗಿಗೆ ಮಾರಾಟ ಮಾಡಿದ್ದಾರೆ. ಈ ನೀತಿ ಬದಲಾವಣೆಯಾಗಬೇಕು.

ಇನ್ನು ಈ ಸಮತಾವಾದ ರಾಷ್ಟ್ರಗಳ ಬಗ್ಗೆ ನಮ್ಮ ಸರ್ಕಾರ ಏನು ಒಂದು ನೀತಿಯನ್ನು ಅನುಸರಿಸುತ್ತ ಬಂದಿದೆ ಅದನ್ನು ಬದಲಾವಣೆ ಮಾಡಬೇಕು. ಅಲ್ಲಿ ಆ ಇಂಡೋ ಸೋವಿಯಟ್ ಟ್ರೀಟಿ ಆದ ಮೇಲೆ ಇಲ್ಲಿ ನಮ್ಮ ತ್ರಿಮೂರ್ತಿಗಳು ನಮ್ಮ ಸರ್ಕಾರ ನಡೆಸತಕ್ಕ ಕೈಗಾರಿಗಳ ಬಗ್ಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸುವುದು ಜಾಸ್ತಿಯಾಗಿದೆ. ಆ ತ್ರಿಮೂರ್ತಿಗಳ ಅಭಿಪ್ರಾಯ ಏನೆಂಬುದನ್ನು ನಾನು ಬಲ್ಲೆ. ಅವರ ಸಿದ್ಧಾಂತ ಯಾವತ್ತೂ ಈ ಪಬ್ಲಿಕ್ ಸೆಕ್ಟಾರಿನಲ್ಲಿರತಕ್ಕ ಕೈಗಾರಿಕೆಗಳಿಗೆ ಸಹಾಯ ಮಾಡಬಾರದು ಮತ್ತು ಎಂದಿದ್ದರೂ ಪ್ರೈವೇಟ್ ಸೆಕ್ಟಾರಿನಲ್ಲಿರತಕ್ಕ ಉದ್ಯಮಗಳಿಗೇ ಸಹಾಯ ಮಾಡಬೇಕು ಎಂಬುದು ಅವರ ಸಿದ್ಧಾಂತವಾಗಿದೆ, ಆದಕ್ಕೆ ಸರಿಯಾಗಿ ಅವರಿಗೆ ಸಹಾಯ ಮಾಡತಕ್ಕ ಅವರ ಸ್ನೇಹಿತರು ಡೆಲ್ಲಿಯಿಂದ ಬೆಂಗಳೂರುವರೆಗೂ ಮತ್ತು ಆ ಬೊಂಬಾಯಿಂದ ಬೆಂಗಳೂರ.ವರೆಗೂ ಇದ್ದಾರೆ. ಅದುದರಿಂದ ನಮ್ಮ ಸರ್ಕಾರ ಕೂಡಲೆ ಈ ವಿಚಾರದಲ್ಲಿ ತಮ್ಮ ನೀತಿಯನ್ನು ಬದಲಾವಣೆ ಮಾಡಿಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಹಿಂದೆ ನಡೆದಿದ್ದು ಆಯಿತು ಇನ್ನು ಮುಂದಕ್ಕೆ ತಮ್ಮ ನೀತಿಯನ್ನು ಏಕೆ ಬದಲಾಯಿಸಿ ನಡೆದುಕೊಳ್ಳಬಾರದು ? ನೀವು ಹೊಸಪಾಲಸಿಯನ್ನು ಜಾರಿಗೆ ತನ್ನಿ. ಈ ದಿನ ಆ ಕುದುರೆಮುಖದ ಪ್ರಾಜೆಕ್ಟ್ ವಿಷಯ ಮಾನ್ಯ ಮಂತ್ರಿಗಳಿಗೂ ಚೆನ್ನಾಗಿ ಗೊತ್ತಿದೆ. ಹಾಗೆ ಮಂಗಳೂರಲ್ಲೂ ಇದಕ್ಕೆ ಅನುಕೂಲವಾಗುವಂತೆ ಒಳ್ಳೇ ಬಂದರನ್ನು ಮಾಡುತ್ತಿದ್ದಾರೆ ಹೀಗಿದ್ದರೂ ಈ ದಿವಸ ಜಪಾನಿ ಟ್ಯಾಂಕರ್ಸುಗಳಿಗೆ ಓರನ್ನು ತುಂಬುತ್ತಿದ್ದಾರೆ. ನಾವು ನಮ್ಮಲ್ಲಿ ಸಿಕ್ಕತಕ್ಕ ಓರನ್ನು ಇಲ್ಲಿ ನಮಗೆ ಅಗತ್ಯವಾದ ಸಾಮಾನುಗಳನ್ನು ತಯಾರಿಸಲು ಒಂದು ಪ್ಯಾಲಿಟೈಜೇಷನ್ ಪ್ಲಾಂಟನ್ನು ಏಕೆ ಹಾಕಬಾರದು ? ಇಲ್ಲವೇ ನಮ್ಮಲ್ಲಿಂದ ಹೋಗತಕ್ಕ ಓರನ್ನು ನಮ್ಮ ಷಿಪ್ಪುಗಳಿಗೇ ಏಕೆ ತುಂಬಬಾರದು ? ಅದನ್ನು ಜಪಾನೀ ಷಿಪ್‌ಗೆ ಏಕೆ ಕೊಡಬೇಕು ? ಅವರಿಗೇಕೆ ಅನುಕೂಲ ಮಾಡುತ್ತಿದ್ದಾರೆ ಎಂಬುದೇ ಗೊತ್ತಾಗುತ್ತಿಲ್ಲ.

ಇನ್ನು ಒಂದು ವಿಚಾರ ; ನಾನು ಮೊದಲೇ ಹೇಳಿದ ಹಾಗೆ ಕೈಗಾರಿಕೆಯಲ್ಲಿ ಇಂಬ್ಯಾಲೆನ್ಸ್ ಆಗಿರತಕ್ಕ ಪ್ರದೇಶಗಳ ಬಗ್ಗೆ ನಾನಾಗಲೇ ಹೇಳಿದಂತೆ ಬೀದರ್ ಇತ್ಯಾದಿ ಜಿಲ್ಲೆಗಳಲ್ಲಿ ಸರ್ಕಾರದವರು ಕೈಗಾರಿಕೆಗಳನ್ನು ಕೂಡಲೆ ಸ್ಥಾಪಿಸುವುದಕ್ಕೆ ಪ್ರಯತ್ನ ಮಾಡಬೇಕು. ಆದರೆ ನಮ್ಮಲ್ಲಿರತಕ್ಕ ಸಾರ್ವಜನಿಕ ಕೈಗಾರಿಕೆಗಳೇನಿವೆ ಅವು ಈ ದಿವಸ ಲಾಸಿನಲ್ಲಿ ರನ್ ಆಗುತ್ತಿವೆ. ಆ ಕೇಂದ್ರದವರು ಪ್ರೈವೇಟ್ ಕೈಗಾರಿಕೆಗಳ ಮೇಲೆ ಯಾವರೀತಿ ಒಂದು ಹೋಲ್ಡಿಂಗ್ ಇಟ್ಟುಕೊಂಡಿದ್ದಾರೋ ಹಾಗೇ ನಮ್ಮ ಸರ್ಕಾರವೂ ಇಲ್ಲಿ ಇವುಗಳ ಮೇಲೆ ಒಂದು ಸರಿಯಾದ ಹೋಲ್ಡಿಂಗನ್ನು ಇಟ್ಟುಕೊಳ್ಳಬೇಕು. ಹಣಕಾಸಿನ ವಿಚಾರದಲ್ಲಿ ಒಂದು ಎಫಿಸಿಶಿಯೆಂಟಾದ ಅಡ್ಮಿನೇಷ್ಟ್ರನ್ ಮೂಲಕ ಸರಿಯಾದ ಕಂಟ್ರೋಲನ್ನು ಇಟ್ಟುಕೊಂಡು ಕೆಲಸ ಮಾಡಿ ಎಂದು ಹೇಳುತ್ತೇನೆ. ಇನ್ನು ಅದರ ಜೊತೆಗೆ ಸರ್ಕಾರದವರು ಒಂದು ವಿಷಯವನ್ನು ಗಮನಕ್ಕೆ ತೆಗೆದುಕೊಳ್ಳಬೇಕಾದ್ದು ಏನೆಂದರೆ ಆಯಾಯ ಕೈಗಾರಿಕೆಗಳಲ್ಲಿ ಕೆಲಸಮಾತಕ್ಕ ಲೇಬರರ್ಸ್ ಪಾರ್ಟಿಸಿಪೇಷನ್ ಇಟ್ಟು ಕೊಂಡು ಕೆಲಸ ಮಾಡುವುದು ಒಳ್ಳೆಯದು. ಅದನ್ನು ಬಿಟ್ಟು ಕೇವಲ ಐ. ಎ. ಎಸ್. ಅಧಿಕಾರಿಗಳನ್ನು ಇಟ್ಟುಕೊಂಡು ಕೆಲಸ ಮಾಡುವುದರಿಂದ ಕಂಪೆನಿಗಳು ಉದ್ಧಾರವಾಗುವುದಿಲ್ಲ. ಅವರಿಂದ ಇವು ಬೆಳೆಯುವುದೂ ಇಲ್ಲ. ಅವರು ಕೈಗಾರಿಕೆಗಳನ್ನು ನಿರ್ನಾಮ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆದ್ದರಿಂದ ತಾವು ಲೇಬರ ಸಹಾಯ ತೆಗೆದುಕೊಂಡು ಕೆಲಸ ಮಾಡಿ ಎಂದು ಹೇಳುತ್ತೇನೆ, ಅಷ್ಟೇ ಅಲ್ಲದೆ ಅಲ್ಲಿ ಏನೇನು ಕಮಿಟಿಗಳನ್ನು ಆಟ್ ಡಿಫರೆಂಟ್ ಲೆವಲ್ಸ್ ಮಾಡುತ್ತಾರೋ ಆಂಥಾ ಎಲ್ಲಾ ಕಮಿಟಿಗಳಲ್ಲೂ ಮ್ಯಾನೇಜ್‌ಮೆಂಟಿನವರೂ ಮತ್ತು ಲೇಬರ್‌ಲೀಡರ್ಸನ್ನು ಇರುವಂತೆ ಮಾಡಿದರೆ ಯಾವ ತೊಂದರೆ ಇರುವುದಿಲ್ಲ ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಯಪ್ರಕಾಶ ಸೆಟ್ಟಿ ಕೊಳ್ಕೆಬೈಲ್ (ಬ್ರಹ್ಮಾವರ).—ಈ ದಿವಸ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತ ನಾನು ಈ ಬೈಕ್ಯಾಮರಲ್ ಲೆಜಿಸ್ಲೇಚರ್ ಬಗ್ಗೆ ಎರಡು ಮಾತುಗಳನ್ನಾಡುವುದಕ್ಕೆ ಇಚ್ಛಿಸುತ್ತೇನೆ. ನಮ್ಮ ರಾಜ್ಯದಲ್ಲಿ ಈ ಬೈಕಾಮರಲ್ ಲೆಜಿಸ್ಲೇಚರ್ ಯಾವಾಗ ಬಂತು, ಹೇಗೆ ಬಂತು, ಏತಕ್ಕೆ ಬಂತು ಇದು ಯಾವ ಕಾಲದಲ್ಲಿ ಬಂತು ಎಂಬುದನ್ನು ಕುರಿತು ಎರಡು ಮಾತುಗಳನ್ನು ಆಡಲಿಚ್ಛಿಸುತ್ತೇನೆ.

(ಶ್ರೀ ಜಯಪ್ರಕಾಶ ಸೆಟ್ಟಿ ಕೊಳ್ಕೆಬೈಲ್)

ನಮ್ಮ ದೇಶದಲ್ಲಿರತಕ್ಕ ನಮ್ಮ ಸಂವಿಧಾನ ಆ ಇಂಗ್ಲೆಂಡಿನಲ್ಲಿ ಇರತಕ್ಕ ಸಂವಿಧಾನಕ್ಕೆ ಹೊಂದಿ ಕೊಂಡಿದೆ. ಅಷ್ಟೇ ಏಕೆ ಅದು ಎಲ್ಲಾ ಕಾಮನ್ ವೆಲ್ತ್ ದೇಶಗಳಿಗೂ ಆ ಇಂಗ್ಲೆಂಡಿನ ಸಂವಿಧಾನದ ಸಂಬಂಧವಿದೆ. ಆ ಒಂದು ಕಾರಣದಿಂದ ನಮ್ಮ ರಾಜ್ಯದಲ್ಲೂ ಆ ಇಂಗ್ಲೆಂಡಿನಲ್ಲಿದ್ದ ಹಾಗೆ ಬೈಕಾ ಮರಲ್ ಲೆಜಿಸ್ಲೇಚರ್ ಸ್ಥಾಪಿತವಾಯಿತು. 1919ನೇ ಗೌರ್ನಮೆಂಟ್ ಆಫ್ ಇಂಡಿಯಾ ಆಕ್ಟ್ ಪ್ರಕಾರ ನಮ್ಮಲ್ಲಿ ಇದು ರಚಿತವಾಯಿತು. ನಮ್ಮ ಕಾನ್‌ಸ್ಟಿಟ್ಯೂಷನ್ನು ಫೆಡರಲ್ ರೀತಿಯದಾಗಿರ ಬೇಕೇ ಅಥವಾ ಪಾರ್ಲಿಯಮೆಂಟರೀ ರೀತಿಯದಾಗಿರಬೇಕೇ ಎಂಬುದನ್ನು ನಿರ್ಧಾರ ಮಾಡಲು ಹಿಂದೆ ನೆಹರೂ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಲಾಯಿತು. ಆಗ್ಗೆ ನೆಹರೂರವರು ನಮಗೆ ಫೆಡರಲ್ ರೀತಿಯ ಕಾನ್‌ಸ್ಟಿಟ್ಯೂಷನ್ನೇ ಆಗತ್ಯವಾದ್ದು, ಅದಕ್ಕಾಗಿ ನಮ್ಮಲ್ಲಿ ಒಂದು ಸೆಕೆಂಡ್ ಛೇಂಬರ್ ಇರಬೇಕೆಂದು ಒಂದು ನಿರ್ಧಾರಕ್ಕೆ ಬಂದು, ಆ ನಂತರ ಈ ಮೇಲ್ಮನೆಗೂ ಮತ್ತು ಕೆಳಮನೆಗೂ ಯಾವ ರೀತಿಯ ಸಂಬಂಧವಿರಬೇಕು, ಇನ್ನು ಇವುಗಳ ಸಂಖ್ಯಾ ಬಲ ಯಾವ ದಾವಾಷದಲ್ಲಿರಬೇಕು, ಸದಸ್ಯರ ಸಂಖ್ಯೆ ಯಾವ ರೇಷಿಯೋದಲ್ಲಿರಬೇಕು ಎಂಬುದನ್ನೆಲ್ಲಾ ನಿರ್ಧಾರ ಮಾಡಿದರು. ಅದರಂತೆ ಇದು ಜಾರಿಗೂ ಬಂತು. ಆದರೆ ಆ ದಿವಸ ಇದನ್ನು ಏಕೆ ರಚಿಸಬೇಕಾ ಯಿತು, ಇದರ ಆಗತ್ಯವಾದರೂ ಏನಿತ್ತು ಎಂದರೆ ಕೆಳಮನೆಗೆ ಮೈನಾರಿಟಿ ಮತ್ತು ಬ್ಯಾಕ್‌ವರ್ಡ್ ಕಮ್ಯೂನಿಟೀಸ್ ಜನರೇನಿದ್ದಾರೆ ಅವರಿಗೆ ಸಾರ್ವತ್ರಿಕ ಚುನಾವಣೆಗಳಲ್ಲಿ ನಿಂತು ಗೆದ್ದುಬರುವುದಕ್ಕೆ ಸಾಧ್ಯವಿಲ್ಲ ಎಂಬ ಒಂದು ಉದ್ದೇಶದಿಂದ ಇದನ್ನು ಆ ದಿವಸ ಚರ್ಚಾವಣೆಯಲ್ಲಿ ತರಬೇಕಾಯಿತು.

ಆದರೆ ಈಗ ಇದರ ಅಗತ್ಯವಿಲ್ಲ. ಈಗ ಮೈನಾರಿಟಿ ಕಮ್ಯೂನಿಟಿಗಳು ಮತ್ತು ಹಿಂದುಳಿದ ಪಂಗಡಗಳು ಬೇಕಾದಷ್ಟಿವೆ, ಆ ವಿಚಾರ ಮುಂದೆ ಹೇಳುತ್ತೇನೆ. ಫೆಡರಲ್ ಸ್ಟ್ರಕ್ಚರ್ ಎಂಬ ಕಮಿಟಿ ಆಯಿತು. ಮೇಲು ಮನೆ ವಿಷಯದಲ್ಲಿ ಮತ್ತು ಪ್ರಾತಿನಿಧ್ಯ ಯಾರಿಗೆ ಹೇಗೆ ಕೊಡಬೇಕೆಂಬ ವಿಚಾರದಲ್ಲಿ ವರದಿ ಮಾಡಲು ಅದಕ್ಕೆ ಸೂಚಿಸಲಾಯಿತು. ಆ ಸಮಿತಿಯು ರೆಪ್ರೆಸೆಂಟೇಷನ್ ವಿಷಯದಲ್ಲಿ ವಾಸ್ತವ ವಿಷಯವನ್ನು ತಿಳಿಸಲಿಲ್ಲ, ಅವರ ಸೂಚನೆಯನ್ನು ತಿರಸ್ಕರಿಸಿ ಸರಕಾರದವರು 1935ರಲ್ಲಿ ಗವರ್ನ ಮೆಂಟ್ ರೆಪ್ರೆಸೆಂಟೇಷನ್ ಕೊಟ್ಟರು. ನಂತರ ಸಪ್ರೂ ಸಮಿತಿ ರಚನೆಯಾಯಿತು. ಅದೂ ಕೂಡ ರೆಪ್ರಸೆಂಟೇಷನ್ ಮತ್ತು ಮೇಲ್ಮನೆ ವಿಷಯದಲ್ಲಿ ಶಿಫಾರಸು ಮಾಡಲಿಲ್ಲ. ಆದುದರಿಂದ ಕಾನ್‌ಸ್ಟಿ ಟ್ಯೂಯೆಂಟ್ ಅಸೆಂಬ್ಲಿಯಲ್ಲಿ ಚರ್ಚೆಯಾಗಿ ಮೇಲ್ಮನೆ ಬೇಕೇ, ಬೇಡವೇ ಪ್ರಾತಿನಿಧ್ಯವೆಷ್ಟಿರಬೇಕು ಎಂಬುದು ನಿರ್ಣಯವಾಗಿ ಕಾನ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿಯು ಎರಡು ಉಪಸಮಿತಿಗಳನ್ನು ರಚಿಸಿತು. ಒಂದು ಯೂನಿಯನ್ ಕಾನ್‌ಸ್ಟಿಟ್ಯೂಷನ್ ಕಮಿಟಿ, ಮತ್ತೊಂದು ಪ್ರೊವಿನ್‌ಷಿಯಲ್ ಕಾನ್‌ಸ್ಟಿಟ್ಯೂಷನ್ ಕಮಿಟಿ. ಈ ಎರಡೂ ಕೂಡ ಮೇಲ್ಮನೆ ವಿಷಯದಲ್ಲಿ ತುಂಬಾ ವಿಚಾರ ಮಾಡಿ ತಮ್ಮ ವರದಿಯನ್ನು ಕಾನ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿಗೆ 1947 ನೆಯ ಜುಲೈ—ಆಗಸ್ಟ್‌ನಲ್ಲಿ ಸಲ್ಲಿಸಿ ದುವು, ಆ ವಿಷಯ ಸಭೆಯ ಮುಂದೆ ಬಂದು ಚರ್ಚೆಯಾಯಿತು. ಆ ಚರ್ಚೆಯಲ್ಲಿ ಮೇಲ್ಮನೆ ಬೇಕೆಂದು ಕೆಲವರೂ, ಬೇಡವೆಂದು ಕೆಲವರೂ ಟೀಕೆ ಮಾಡಿದರು. ಇದಕ್ಕೆ ಸಂಬಂಧಪಟ್ಟಂತೆ ಶ್ರೀ ಎನ್. ಜಿ. ಐಯ್ಯಂಗಾರ್‌ರವರು ತಮ್ಮ ಅಭಿಪ್ರಾಯವನ್ನು ಈ ರೀತಿ ತಿಳಿಸಿದ್ದಾರೆ.—"ಮೇಲ್ಮನೆ ಅಗತ್ಯ ವಾಗಿದೆ, ಆದರೆ ಅದು ಸಹಾಯಕಾರಿ ಅಲ್ಲ". ಶ್ರೀ ಎಚ್. ವಿ ಕಾಮತ್‌ರವರು ಮೇಲ್ಮನೆ ವಿಷಯ ದಲ್ಲಿ ಈ ರೀತಿ ಅಭಿಪ್ರಾಯಪಟ್ಟರು.—The upper house in Delhi is exceptional. But such houses in States are pernicious

ಕೇಂದ್ರದ ಮೇಲ್ಮನೆ ವಿಷಯದಲ್ಲಿ ಹೆಚ್ಚು ಟೀಕೆ ಬರಲಿಲ್ಲ. ಆದರೆ ರಾಜ್ಯದ ಮೇಲ್ಮನೆ ವಿಷಯ ದಲ್ಲಿ ಟೀಕೆ ತುಂಬ ಬಂದಿವೆ. ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿ ಮೇಲ್ಮನೆ ನಮ್ಮ ದೇಶಕ್ಕೆ ಅಗತ್ಯವೆಂದು ಅಭಿಪ್ರಾಯಪಟ್ಟಿದೆ. ಇದಕ್ಕೆ ಮುಂಚೆ ಬಂಗಾಳ, ಯುನೈಟೆಡ್ ಪ್ರಾವಿನ್ಸಸ್ ಮತ್ತು ಬಿಹಾರದಲ್ಲಿ ಈ ಮೂರು ರಾಜ್ಯಗಳಲ್ಲಿ ರೌಂಡ್ ಟೇಬಲ್ ಕಾನ್‌ಫರೆನ್ಸಿನ ಪ್ರಕಾರ ಮೇಲ್ಮನೆ ಜಾರಿಗೆ ಬಂತು. ಅದೇ ಪ್ರಕಾರ ಮದ್ರಾಸು ಮತ್ತು ಬೊಂಬಾಯಿಗಳಲ್ಲಿ ಜಾಯಿಂಟ್ ಸೆಲೆಕ್ಟ್ ಕಮಿಟಿ ಅಭಿಪ್ರಾಯದ ಪ್ರಕಾರ ಮೇಲ್ಮನೆ ರಚಿಸಲ್ಪಟ್ಟಿತು ಪಂಜಾಬ್ ರಾಜ್ಯದಲ್ಲಿ 1922 ರಲ್ಲಿ ಮೇಲ್ಮನೆ ಬೇಡ, ಅದರಿಂದ ಪ್ರಯೋಜನವಿಲ್ಲ ಎಂದು ಆಗಿನ ಕಾಲದಲ್ಲಿ ನಿಶ್ಚಯವಾಯಿತು, ಆದರೆ ಸ್ವಲ್ಪ ಸಮಯದ ನಂತರ ಮೇಲ್ಮನೆ ಅಲ್ಲಿ ಆಯಿತು. ಆದರೆ 1969 ರಲ್ಲಿ ರದ್ದುಮಾಡಿದರು. ಸಿಂಧ್ ಮತ್ತು ಸೆಂಟ್ರಲ್ ಇಂಡಿಯಾದಲ್ಲಿ ಮೇಲ್ಮನೆಯನ್ನು ರಚಿಸುವ ವಿಷಯವನ್ನು ತಿರಸ್ಕರಿಸಲಾಯಿತು. ಅಸ್ಸಾಂನಲ್ಲಿ ಎರಡನೆ ಮನೆ ಆಗಿದೆ. ಏಳು ರಾಜ್ಯಗಳಲ್ಲಿ ಮೇಲ್ಮನೆ ಇದೆ. ಉತ್ತರ ಪ್ರದೇಶ, ಬಿಹಾರ, ಮಹಾರಾಷ್ಟ್ರ, ಮೈಸೂರು, ಆಂಧ್ರ, ಜಮ್ಮು—ಕಾಶ್ಮೀರ, ತಮಿಳುನಾಡು ಈ ಪ್ರಾಂತ ಗಳಲ್ಲಿ ಮೇಲ್ಮನೆಯಿದೆ. ಬಾಕಿ ರಾಜ್ಯಗಳಲ್ಲಿ ಇಲ್ಲ. ನಮ್ಮ ರಾಜ್ಯದಲ್ಲಿ ಸೆಕೆಂಡ್ ಛೇಂಬರ್

ಕಾನ್‌ಸ್ಟಿಟ್ಯೂಷನ್ ಸೆವೆಂತ್ ಅಮೆಂಡ್‌ಮೆಂಟ್ ಆಕ್ಟ್ 1956 ಇದರ ಪ್ರಕಾರ ಮೇಲ್ಮನೆಯಾಗಿದೆ. 1956 ರಲ್ಲಿ ಮೈಸೂರು ರಾಜ್ಯ ಎ ಸ್ಟೇಟ್ ಆಯಿತು. ಅದಕ್ಕೆ ಮುಂಚೆ ಬಿ ಸ್ಟೇಟ್ ಆಗಿತ್ತು. ಆಗಲೂ ಮೇಲ್ಮನೆಯಿತ್ತು.

ಮೇಲ್ಮನೆ ಉದ್ದೇಶವೇನು, ಆದರಿಂದ ಪ್ರಯೋಜನವೇನು ಎಂಬುದನ್ನು ಹೇಳುತ್ತೇನೆ. ಮುಂಚೆ ವೆಸ್ಟ್ ಬೆಂಗಾಲ್ ಮತ್ತು ಪಂಜಾಬು ಈ ಎರಡು ರಾಜ್ಯಗಳಲ್ಲಿ ಪ್ರಜಾಪ್ರಭುತ್ವದಲ್ಲಿ ಪಾರ್ಲಿಮೆಂಟರಿ ಸಿಸ್ಟಂ ಆಫ್ ಗವರ್ನಮೆಂಟ್‌ನಲ್ಲಿ ಮೇಲ್ಮನೆ ಅಗತ್ಯವಿಲ್ಲ ಎಂದು 1968 ಅಥವಾ 1969 ರಲ್ಲಿ ವಿಧಾನಸಭೆಯಲ್ಲಿ ನಿರ್ಣಯಮಾಡಿ ಪಾರ್ಲಿಮೆಂಟಿನಲ್ಲಿ ಒಪ್ಪಿಗೆಯಾಗಿದೆ. ಈಗ ಈ ಎರಡು ರಾಜ್ಯಗಳಲ್ಲಿ ಅದಿಲ್ಲ. ಬಿಹಾರಿನಲ್ಲಿ ದರೋಗಾರಾಯ ಮಂತ್ರಿಮಂಡಲ ಇರುವಾಗ ವಿಧಾನ ಪರಿಷತ್ತು ಬೇಡ, ಮೇಲ್ಮನೆ ರದ್ದುಮಾಡಬೇಕು ಎಂದು ವಿಧಾನಸಭೆ ನಿರ್ಣಯವಾಡಿ ಪಾರ್ಲಿ ಮೆಂಟಿಗೆ ಕಳಿಸಿದಾಗ ಆಗ ಗೋವಿಂದಮೆನನ್‌ರವರು ಲಾ ಸಚಿವರಾಗಿದ್ದರು. ಅವರು ಅದಕ್ಕೆ ಕೆಲವು ಕಾರಣಗಳಿಂದ ಅವಕಾಶ ಕೊಡಲಿಲ್ಲ. ಅದು ಇನ್ನೂ ಪೆಂಡಿಂಗ್ ಇದೆ. ಗುಜರಾತಿನಲ್ಲಿ ಸಹ ಒಂದೇ ಮನೆಯಿದೆ, ಅಲ್ಲಿ ಮೇಲ್ಮನೆ ಬಗ್ಗೆ ಒಂದು ಬಿಲ್ಲನ್ನು ಪಾಸ್ ಮಾಡಿದರು, ಅದು ಪುನರಾಲೋಚನೆಯಲ್ಲಿದೆ. ನಮ್ಮ ಸಂವಿಧಾನದ ಆರ್ಟಿಕಲ್ 198 ರಲ್ಲಿ ಅಧಿಕಾರವಿದೆ. ಆ ಆರ್ಟಿಕಲ್ ಪ್ರಕಾರ ಮೇಲ್ಮನೆಗೆ ಯಾವ ವಿಧವಾದ ಅಧಿಕಾರವೂ ಇಲ್ಲ. ಅದಕ್ಕೆ ಕಳಿಸುವ ಬಿಲ್ಲಿನಲ್ಲಿ ಒಂದು ಅಕ್ಷರವನ್ನೂ ಬದಲಾಯಿಸುವುದಕ್ಕಾಗುವುದಿಲ್ಲ. ಮೇಲ್ಮನೆ 4 ತಿಂಗಳು ಬಿಲ್ಲನ್ನಿಟ್ಟುಕೊಂಡು ವಾಪಸು ಕಳಿಸಬಹುದು. ನಾವು ಕಳಿಸುವ ಬಿಲ್ಲನ್ನು ಅದು ಸ್ವೀಕರಿಸಬೇಕಾದ ಅಗತ್ಯವಿಲ್ಲ. ತಿದ್ದುಪಡಿ ಮಾಡಿ ಕಳಿಸಬಹುದು, ಅದನ್ನು ನಾವು ಸ್ವೀಕರಿಸಬೇಕಾಗಿಲ್ಲ. ನಾವು ಕಳಿಸುವ ಬಿಲ್ಲನ್ನು ತಿರಸ್ಕಾರ ಮಾಡಿ ಅಥವ ತಿದ್ದುಪಡಿ ಮಾಡಿ ಹಿಂದಕ್ಕೆ ಕಳಿಸಬಹುದು. ಒಂದೇ ತಿಂಗಳಲ್ಲಿ ಹಿಂದಕ್ಕೆ ಕಳಿಸಬೇಕಾಗಿಲ್ಲ, 4 ತಿಂಗಳ ಅವಕಾಶವಿದೆ. ಅವಸರದಲ್ಲಿ ಕೆಳಗಿನ ಮನೆ ಬಿಲ್ ಪಾಸ್ ಮಾಡಬಾರದು ಎಂದು ಸ್ಪೀಡ್ ಚೆಕ್ ಮಾಡುವುದು. ನಾವು ಪಾಸು ಮಾಡಿರುವ ಬಿಲ್ಲನ್ನು ಮೇಲ್ಮನೆ ಮೂಲಕ ರಾಜ್ಯಪಾಲರಿಗೆ ಕಳಿಸುವರು ಆದುದರಿಂದ ಮೇಲ್ಮನೆ ಅಗತ್ಯವಿಲ್ಲ. ಕೇಂದ್ರದಲ್ಲಾದರೆ ರಾಜ್ಯಸಭೆ ಮತ್ತು ಲೋಕಸಭೆಗಳ ಜಾಯಿಂಟ್ ಸೆಷನ್ ಆಗುವುದು. ಇಲ್ಲಿ ನಮಗೆ ಅವಕಾಶವಿಲ್ಲ. ರಾಜ್ಯದ ಮೇಲ್ಮನೆಗೆ ಯಾವ ರೀತಿಯ ಅಧಿಕಾರವೂ ಇಲ್ಲ ಎಂದು ಸೂಚನೆ ಮಾಡುತ್ತೇನೆ.

ಇದಲ್ಲದೆ ಪ್ರಜಾಪ್ರಭುತ್ವದಲ್ಲಿ ಒಂದು ಬಿಲ್ಲು ಕಾನೂನಾಗಬೇಕಾದರೆ ಅಥವ ಸರಕಾರ ಸಾಗಬೇಕಾದರೆ ಮೇಲ್ಮನೆಗಿಂತಲೂ ನಮಗೆ ವಿರೋಧ ಪಕ್ಷದ ಅಗತ್ಯವಿದೆ. ಆ ಪಕ್ಷ ನಮ್ಮ ಲೋಪ ದೋಷಗಳನ್ನು ತೋರಿಸಿ ಎಚ್ಚರಿಸುವುದು.

[MR DEPUTY SPEAKER in the chair]

ಇಲ್ಲಿರುವ ವಿರೋಧ ಪಕ್ಷದ ಸಂಖ್ಯೆ ಕಡಿಮೆಯಾದರೂ ಈಗಿರುವ ಆ ಪಕ್ಷದವರು ಬುದ್ಧಿವಂತರು. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಲೋಪದೋಷಗಳಿರುವ ಬಿಲ್ಲನ್ನು ಸರಿಪಡಿಸುವ ಜವಾಬ್ದಾರಿ ವಿರೋಧ ಪಕ್ಷಕ್ಕೆ ಸೇರಿದೆ. ವಿರೋಧಪಕ್ಷದ ನಾಯಕರಿಗೆ ಎಲ್ಲಾ ರೀತಿಯಿಂದಲೂ ಒಳ್ಳೆಯ ಸೌಲತ್ತನ್ನು ಕೊಡಬೇಕು. ಇಂಗ್ಲೆಂಡಿನಲ್ಲಿ ಪ್ರಧಾನಿಗಳಿಗೆ ಕೊಡುವ ಸೌಲತ್ತನ್ನು ಅವರಿಗೆ ಕೊಡುವರು ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲೂ ಮನೆ, ಟೆಲಿಫೋನ್ ಮುಂತಾದ ಎಲ್ಲಾ ಸೌಲತ್ತನ್ನು ಅವರಿಗೆ ಕೊಡಬೇಕು. ಇದಕ್ಕೆ ಈ ಅಧಿವೇಶನದಲ್ಲೇ ಬಿಲ್ಲನ್ನು ತರಬೇಕು ಎಂದು ಕೇಳಿಕೊಳ್ಳುತ್ತೇನೆ.

ನಾವು ಇಲ್ಲಿ ಪಾಸು ಮಾಡಿದ ಬಿಲ್ಲನ್ನು ಹೈಕೋರ್ಟು ಮತ್ತು ಸುಪ್ರೀಂ ಕೋರ್ಟು ಇಂಟರ್‌ಪ್ರಿಟ್ ಮಾಡುವುವು. ಮೇಲ್ಮನೆ ವಿಷಯದಲ್ಲಿ ಕೆಲವು ಕಾನ್‌ಸ್ಟಿಟ್ಯೂಷನ್ ಎಕ್ಸ್‌ಪರ್ಟ್ಸ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಶ್ರೀ ಕೆ. ಸಂತಾನಂರವರು ರಾಜ್ಯಸಭೆಯ ಸದಸ್ಯರಾಗಿದ್ದಾಗ ಮೇಲ್ಮನೆ ವಿಷಯದಲ್ಲಿ ಹೀಗೆ ಹೇಳಿದ್ದಾರೆ :

"It is unfortunate that the Central Government and the State Governments should treat consideration and discussion of the Bill as a mere formality." ಫಿಯರ್‌ಫಾರ್ಮ್ಯಾಲಿಟಿ ಹೆಚ್ಚು ಕಡಿಮೆ ಮಾಡುವ ಅಧಿಕಾರವಿಲ್ಲ.

(ಶ್ರೀ ಜಯಪ್ರಕಾಶ ಸೆಟ್ಟಿ ಕೊಳ್ಕೆಬೈಲ್)

3-30 P.M.

Mr. Rao has stated: "It needs careful watching and the question of its total abolition should be carefully considered." ಶ್ರೀ ರಾವ್ ಹೇಳಿದ ರೀತಿಯಲ್ಲಿ ನಮ್ಮ ಸರ್ಕಾರ ಕನ್ಸಿಡರ್ ಮಾಡಬೇಕು ಎಂದು ಹೇಳುತ್ತೇನೆ.

Mr. Shukla: said. "The House of Lords has been almost divested of its legislative powers—general and financial powers. This can have no place in Democracy. ಆದುದರಿಂದ ನಮ್ಮ ಕಾನ್‌ಸ್ಟಿಟ್ಯೂಷನ್‌ನಲ್ಲಿ ಮೇಲ್ಮನೆಯನ್ನು ಅಬಾಲಿಷ್ ಮಾಡುವುದಕ್ಕೆ ಆರ್ಟಿಕಲ್ 169ರ ಪ್ರಕಾರ ಕಾನೂನು ಇವೆ. ಪ್ರಜಾಪ್ರಭುತ್ವದಲ್ಲಿ ಈ ತರಹ ಬಿಲ್ಲನ್ನು ತಂದು ಮೇಲ್ಮನೆಯನ್ನು ತೆಗೆಯಬಹುದು ಎಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಒಂದುವೇಳೆ ಮೇಲ್ಮನೆ ಇರಬೇಕು ಎಂದು ಹೇಳುವುದಾದರೆ ಹೆಚ್ಚಿನ ಅಧಿಕಾರ ಕೊಡಿ. ಒಂದು 'ವೀಟೋ ಪವರ್' ಕೊಡಿ. ಹಾಗೇನಾದರೂ ಕೊಡದೇ ಇದ್ದ ಪಕ್ಷದಲ್ಲಿ ಆರ್ಟಿಕಲ್ 169ರ ಪ್ರಕಾರ ತೆಗೆಯಬೇಕು ಎಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ನ್ಯಾಯ ವಿಚಾರಣೆ ಮತ್ತು ತೀರ್ಪು ನೀಡತಕ್ಕಂಥ ಬಗ್ಗೆ ದೂರುಗಳು ಬೇಕಾದಷ್ಟು ಬರುತ್ತದೆ. ಈ ವಿಚಾರದಲ್ಲಿ ತೀರ್ಪು ನಿಧಾನವಾಗಿ ಬಂದರೆ ಇದರಿಂದ ಬಡ ಕಕ್ಷಿಗಾರರಿಗೆ ತುಂಬಾ ಕಷ್ಟವಾಗುತ್ತದೆ. ಆದುದರಿಂದ ಈ ನಿಧಾನವಾಗುವ ಸಮಸ್ಯೆಯನ್ನು ನಮ್ಮ ರಾಜ್ಯ ಸರ್ಕಾರ ಪರಿಶೀಲನೆ ಮಾಡಬೇಕು. ಇದಕ್ಕೆ ನಾನು ಸರ್ಕಾರಕ್ಕೆ ಒಂದು ಸಲಹೆ ಕೊಡುತ್ತೇನೆ. ಈ ನಿಧಾನ ಸಮಸ್ಯೆ ಬಗೆ ಹರಿಯಲಿಕ್ಕೆ ಗಜೇಂದ್ರಗಡ್ಕರ್ ಆಯೋಗದ ಸಲಹೆಗಳನ್ನು ವಿಶೇಷವಾಗಿ ಗಮನವಲ್ಲಿಟ್ಟುಕೊಂಡು ಆದಷ್ಟು ಬೇಗ ಜಾರಿಗೆ ತಂದು ಪೆಂಡಿಂಗ್ ಇರುವ ಕೇಸುಗಳನ್ನು ಆದಷ್ಟು ಬೇಗ ಡಿಸ್‌ಪೋಸಲ್ ಮಾಡುವ ಹಾಗೆ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇದಲ್ಲದೆ ಇನ್ನು ಸೌತ್ ಕೆನರಾ ಜಿಲ್ಲೆಯಲ್ಲಿ ತೀರ್ಪು ಕೊಡಬೇಕಾದ ಕೇಸುಗಳು ಬಹಳ ಜಾಸ್ತಿ ಇರುವುದರಿಂದ ಅದನ್ನು ಕಡಿಮೆ ಮಾಡಲಿಕ್ಕೆ 5 ಅಡಿಷನಲ್ ಮುನ್ಸೀಫ್ ಕೋರ್ಟ್ ಅಗತ್ಯ ಉಂಟು. ಇದರಲ್ಲಿ ಉಡುಪಿಯಲ್ಲಿ ಬಹಳ ಅಗತ್ಯ ಇರುವುದರಿಂದ ಅವರ ಬಗ್ಗೆ ಹೈಕೋರ್ಟ್‌ನವರ ಸಲಹೆ ತೆಗೆದುಕೊಂಡು ಕೂಡಲೇ ಒಂದು ಮುನ್ಸೀಫ್ ಕೋರ್ಟನ್ನು ಸ್ಯಾಂಕ್ಷನ್ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಉಪಾಧ್ಯಕ್ಷರೇ ತಮ್ಮ ಬಗ್ಗೆ ನನಗೆ ಅಪಾರ ಗೌರವವಿದೆ. ತಾವು ನನ್ನ ಮಾತನ್ನು ಕೇಳಬೇಕು. ವಿರೋಧ ಪಕ್ಷದವರು ಈ ಸಭೆಯಲ್ಲಿ ಭಾಗವಹಿಸಬೇಕೇ ಬೇಡವೇ? ಭಾಷಣ ಮಾಡುವುದು ಬೇಡ ಎಂದು ಹೇಳಿಬಿಟ್ಟರೆ ನಾವುಯಾರೂ ಬರುವುದಿಲ್ಲ. ಹೊರಗೇ ಇದ್ದುಕೊಂಡು 25 ರೂಪಾಯಿ ತೆಗೆದುಕೊಂಡು ಹೋಗುತ್ತೇವೆ. ನನಗೆ ಭಾಷಣ ಮಾಡಲು ಒಂದು ಗಂಟೆ ಹಿಂದೆಯೇ ಅವಕಾಶ ಸಿಕ್ಕಬೇಕಾಗಿತ್ತು, ಇದುವರೆಗೂ ಸಿಕ್ಕಲಿಲ್ಲ. ಇದರಲ್ಲಿ ಏನೋ ರಾಜಕೀಯ ಇದೆ ಎಂದು ನನಗೆ ಅನಿಸುತ್ತದೆ. ಆಡಳಿತ ಕಾಂಗ್ರೆಸ್ಸಿನವರು ಅವರ ಪಾರ್ಟಿಯಲ್ಲಿ ಮಾತನಾಡಬಹುದು. ಇಲ್ಲೂ ಅವರ ಪಾರ್ಟಿಯವರೇ ಭಾಷಣ ಮಾಡುವುದಾದರೆ ನಿಮ್ಮ ಉದ್ದೇಶ ಏನು ಇದೆ? ನಮ್ಮನ್ನು ಕೈ ಕಟ್ಟಿಬಿಟ್ಟಿದ್ದೀರಿ. ನಿಮಗೆ ನಾವು ಏನು ಆಡಳಿತ ಸೂತ್ರವನ್ನು ಕೊಟ್ಟಿದ್ದೇವೋ, ಏನು ಆಡಳಿತ ಜವಾಬ್ದಾರಿಯನ್ನು ವಹಿಸಿದ್ದೇವೋ ಅದರ ನಿರ್ವಹಣೆಯಲ್ಲಿ ನಿಮ್ಮ ಲೋಪದೋಷಗಳು ಏನು ಇರುತ್ತದೆ ಆ ಲೋಪದೋಷಗಳನ್ನು ತಿದ್ದತಕ್ಕಂಥ ಅಧಿಕಾರ ವಿರೋಧ ಪಕ್ಷದವರಿಗೆ ಇದೆ. ಅದು ಬಿಟ್ಟು "ಜನ ನಮ್ಮನ್ನು ಕಳುಹಿಸಿ ಕೊಟ್ಟಿದ್ದಾರೆ, ನಮಗೆ 165 ಜನರ ಬೆಂಬಲ ಇದೆ, ನಾವು ಭಾರಿ ಸಂಖ್ಯೆಯಲ್ಲಿದ್ದೇವೆ" ಎಂದು ತಿಳಿದುಕೊಂಡು ವಿರೋಧ ಪಕ್ಷದವರನ್ನು ತಳ್ಳಿ ಹಾಕುವಂಥ ನೀತಿ ಅನುಸರಿಸಬಾರದು. ನೀವು ನಮ್ಮನ್ನು ಸದಸ್ಯರು ಅಂತ ಪರಿಗಣನೆ ಮಾಡುತ್ತೀರೋ ಇಲ್ಲವೊ! ಸಂಜೆ 5½ ಗಂಟೆಯವರೆಗೂ ಅವರೇ ಮಾತನಾಡಿಬಿಟ್ಟು, ಅನಂತರ 5-5 ನಿಮಿಷ ಮಾತನಾಡಿ ಎಂದು ನಮಗೆ ಹೇಳಿಬಿಟ್ಟು ನಮ್ಮನ್ನು ತುಳಿಯುವಂಥ ನೀತಿ ಸರಿಯಿಲ್ಲ. 3 ಜನ ಮಂತ್ರಿಗಳಿಗೆ 4 ಗಂಟೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರಿ. ಅವರು ಉದ್ದುದ್ದವಾದ ಭಾಷಣ ಮಾಡುವುದಕ್ಕೆ ಗಂಟೆ ಗಂಟೆಗೆ ನೀರನ್ನು ಕುಡಿದುಕೊಂಡು ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರಿ. ಆಡಳಿತ ಪಕ್ಷದವರಿಗೆ ಮಾತನಾಡು

ವುದಕ್ಕೆ ಹೆಚ್ಚು ಕಾಲಾವಕಾಶ ಕೊಟ್ಟು ನಾವು ಮಾತನಾಡುವುದಕ್ಕೆ ನಮಗೆ ಕೊಟ್ಟಿರತಕ್ಕಂಥ 5 ನಿಮಿಷಕ್ಕೆ ಮುಂಚೆಯೇ ಬೆಲ್ಲು ಹೊಡೆದು ನಮ್ಮ ಮನಸಿನಲ್ಲಿ ಏನು ಮಾತನಾಡಬೇಕೆಂದು ಇರುತ್ತದೆಯೋ ಆ ಅಭಿಪ್ರಾಯಗಳನ್ನು ಹಾಳುಮಾಡುತ್ತೀರಿ. ವೈಯುಕ್ತಿಕವಾಗಿ ತಮ್ಮ ಬಗ್ಗೆ ನಮಗೆ ಅಪಾರ ಗೌರವ ಇದೆ. ಇದರಲ್ಲಿ ನಿಮ್ಮ ಜವಾಬ್ದಾರಿ ಹೆಚ್ಚಿಗೆ ಇದೆ. ಆದುದರಿಂದ ನಮಗೆ ಮಾತನಾಡಲು ಹೆಚ್ಚು ಕಾಲಾವಕಾಶ ಕೊಡಬೇಕು. ನಾವು ಇಲ್ಲಿಗೆ ಬಂದಿರುವುದು ನಮ್ಮ ಸರ್ಕಾರ ಮಾಡಿರತಕ್ಕಂಥ ಲೋಪದೋಷಗಳನ್ನು ಬಯಲಿಗೆ ಎಳೆಯುವುದಕ್ಕೆ. ಈ ಒಂದು ಅಧಿಕಾರ ವಿರೋಧ ಪಕ್ಷದವರಿಗೆ ಇದೆ. ವಿರೋಧಪಕ್ಷದಲ್ಲಿ ಇರತಕ್ಕಂಥ ಜನ ಕಡಿಮೆ, ಕೇವಲ 45 ಜನ ಇದ್ದಾರೆ ಆ ರೀತಿ ತುಳಿಯುವ ಮಟ್ಟಕ್ಕೆ ಹೋಗದೆ ನಮಗೆ ರಕ್ಷಣೆ ಕೊಡಬೇಕೆಂದು ತಮ್ಮಲ್ಲಿ ಅಂಕೆ ಮಾಡಿಕೊಳ್ಳುತ್ತೇನೆ.

Sri C. M. ARUMUGAM (K G.F.).—First of all Mr. Deputy Speaker, there are several demands put up on the List of Business today and three Ministers are going to reply. It is unfortunate that so many demands are put up for a day and the Ministers require so much time for reply. The Ministers will get enough opportunities of making speeches when they go on tour. They can make public speeches. On this side, we have given a list. We are not here to question the discretion of the Speaker. The Speaker has enormous power and authority to regulate business in this House. It is purely the discretion of the Speaker to give chances for Members to speak. What we submit is: we have given a list from this side and a list is given from the other side. If you recognise the Leader of the Opposition and if he is really given due respect as Leader of the Opposition, the list must be followed. It has not been followed now. I understand that Mr. Bangarappa's name stands first in the list given by the Leader of the Opposition.

Mr. DEPUTY SPEAKER.—He is going to get the next chance.

Sri C. M. ARUMUGAM.—Instead of following the list, in your discretion, you have called other Members. How far the lists are being followed and whether such lists are necessary in future in view of our experience has to be examined. You gave two chances to the other side.

Sri R. GUNDU RAO (Somwarpet).—You are wasting time.

Sri C. M. ARUMUGAM.—I am not wasting time. Please withdraw what you have said. Yesterdy Sri K. H. Patil wasted one full day by his speech.

ಶ್ರೀ ವಾಟಾಳ್ ನಾಗರಾಜ್.—ಉದ್ದೇಶಪೂರ್ವಕವಾಗಿ ಕಾಲಹರಣ ಮಾಡುತ್ತಿರುವವರು ಗುಂಡೂರಾವ್ ಮತ್ತು ಅವರ ಮಿತ್ರರು. ಯಾರೂ ಮಾತನಾಡಬೇಡಿ ಎಂದರೆ ನಾವು ಎದ್ದು ಹೋಗುತ್ತೇವೆ. ಅವರೇ ಎಲ್ಲ ಮಾತನಾಡಲಿ.

Mr. DEPUTY SPEAKER.—In my opinion, the difficulty is created by the Opposition itself. Yesterday the Hon'ble Speaker has informed the House the time taken by the Ruling Party and also the Opposition. In fact, double the time has been taken by the Opposition. These are matters which should have been discussed in the Business Advisory Committee. The Hon'ble Leader of the Opposition has been a party to many of the decisions arrived at unanimously and these decisions the Presiding Officers have been striving to adhere. That exactly has been

(MR. DEPUTY SPEAKER)

done. Please remember that the Presiding Officer has no ill-will or rancour against anybody. In fact there are double the number of members on this side today in the list. Even the Leader of the Opposition has been gracious enough to give to make some adjustments here and there, to make room for members and groups who do not exactly belong to any party or group. In fact the Presiding Officers have been gracious enough time to the Leaders of other parties, whoever it is. Taking into consideration the time taken by the Hon'ble Member Sri Vatal Nagaraj, he has been so vociferous—Sri Arumugam, will kindly realise that no wrong has been done to him. On the other hand, abundant good-will has been shown towards both. In order to make some adjustment, two Members on this side have been given chances. It is not that it will be done every time. Probably a time will come when one member on this side and one Member from the other side will be called.

When there are double the number of members who have given their names, what is to be done?

If I could make a reference to the Rules, these lists have no place in the Rules of Procedure. The Rules of Procedure states that the Member should stand and catch the eye of the Speaker. But certain conventions are there and we are adhering to them as far possible and let there be no impression that some harm is done to somebody. In fact, sufficient goodwill has been displayed towards the Members in Opposition Party. Let it be clearly borne in mind.

ಹಿಂದೆ ಇದ್ದ ಸರ್ಕಾರ ಎಂ.ಎಸ್.ಕೆ. ಮಿಲ್ ಗುಲ್ಬರ್ಗಾದಲ್ಲಿ ಏನು ಇದೆ ಅದರ ಸಲುವಾಗಿ ಒಂದು ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ. ಮಾನ್ಯ ಬಂಗಾರಪ್ಪನವರು ಹೇಳಿದ ಹಾಗೆ ಭದ್ರಾವತಿ ಕಾರ್ಖಾನೆಯಲ್ಲಿ ಚಂದಪ್ಪ ಪಾಟೀಲ್ ಏನು ಛೇರ್ಮನ್ ಆಗಿದ್ದಾರೋ ಅವರನ್ನೇ ಎಂ.ಎಸ್.ಕೆ. ಮಿಲ್‌ಗೂ ಛೇರ್ಮನ್‌ರಾಗಿ ಹಿಂದೆ ಇದ್ದ ಸರ್ಕಾರದವರು ನೇಮಿಸಿದ್ದಾರೆ. ಹಿಂದೆ ಇದ್ದ ಸರ್ಕಾರ ಯಾವ ಉದ್ದೇಶದಿಂದ ಎಂ. ಎಸ್. ಕೆ. ಮಿಲ್‌ಗೆ ಹಣವನ್ನು ಒದಗಿಸಿ ಕೊಟ್ಟಿತ್ತೊ ಆ ಉದ್ದೇಶ ಸಫಲವಾಗುತ್ತಾ ಇಲ್ಲವೆಂದು ನಾನು ಹೇಳಬಯಸುತ್ತೇನೆ. ಏತಕ್ಕೆಂದರೆ ಅದು ಡೆಲ್ಲಿ ಕ್ಯಾಪಿಟಲಿಸ್ಟ್‌ರುಗಳಾದ ಶ್ರೀ ಕೇಸರಿವಾಲ ಮತ್ತು ಹೆಚ್. ಆರ್. ಕೇಸರಿವಾಲ ಅವರಿಗೆ ಕೊಟ್ಟಂತಾಗಿದೆ. ಸರ್ಕಾರದವರು ಲೇಬರರ್ಸ್‌ಗೆ ಒಳ್ಳೆಯದಾಗಲಿ ಎನ್ನುವ ಉದ್ದೇಶದಿಂದ ಈ ದುಡ್ಡು ಕೊಟ್ಟಿದ್ದರೇ ವಿನಃ ಅವರ ಸ್ವಂತ ಉಪಯೋಗಕ್ಕಲ್ಲ. ಎಂ.ಎಸ್.ಕೆ ಮಿಲ್‌ನಲ್ಲಿ ಹೋದ ವರ್ಷ 20 ಲಕ್ಷ ರೂಪಾಯಿ ಲಾಸ್ ಆಯಿತು, ಈ ವರ್ಷ 16 ಲಕ್ಷ ರೂಪಾಯಿ ಲಾಸ್ ಆಯಿತು. ಈ ರೀತಿಯಾಗಿ ವರ್ಷೇ ವರ್ಷೇ ಈ ಮಿಲ್ ಲಾಸ್ ಆಗುತ್ತಾ ಇದೆ. ಇದಕ್ಕೆ ಕಾರಣಕರ್ತರು ಯಾರು ಎಂದರೆ ಹಿಂದಿನ ಸರ್ಕಾರದಲ್ಲಿದ್ದ ಕೈಗಾರಿಕಾ ಮಂತ್ರಿಗಳಾಗಿದ್ದ ಶ್ರೀಮಾನ್ ರಾಜಶೇಖರ ಮೂರ್ತಿಯವರು. ಅವರು ಗುಲ್ಬರ್ಗಾಕ್ಕೆ ಬಂದಿದ್ದರು. ಆವಾಗ ಎಂ.ಎಸ್.ಕೆ. ಮಿಲ್ ಕೆಲಸಗಾರರು ಇವರನ್ನು ಕಂಡು ನಮಗೆ ಆಲ್ ಇಂಡಿಯಾ ಟೆಕ್ಸ್‌ಟೈಲ್ ವೇಜ್ ಬೋರ್ಡ್‌ನ್ನು ಕೊಡಿಸಿ ಕೊಡಬೇಕೆಂದು ಅರಿಕೆ ಮಾಡಿಕೊಂಡರು. ಶ್ರೀಮಾನ್ ರಾಜಶೇಖರ ಮೂರ್ತಿಯವರು ಹೇಳಿದರು ಅದು ಲಾಸ್‌ನಲ್ಲಿ ನಡೆಯುತ್ತಾ ಇದೆ ಆದಕಾರಣ ಕೆಲಸಗಾರರಿಗೆ ಡಿಯರ್‌ನೆಸ್ ಅಲೋಯೆನ್ಸ್ ಎನ್‌ಹಾನ್ಸ್ ಮಾಡುವುದಕ್ಕಾಗುವುದಿಲ್ಲ ಎಂದು. ಆಗ ಕೆಲಸಗಾರರು ರಾಜಶೇಖರಮೂರ್ತಿ

ಮೈದಾಬಾದ್ ಎಂದು ಕೂಗಿದರು. ಆಗ ರಾಜಶೇಖರ ಮೂರ್ತಿಯವರು ಆ ಮಿಲ್‌ನ್ನು 2 ತಿಂಗಳು ಕಾಲ ಬಂದ್ ಮಾಡಿ ಲಾಕ್‌ಔಟ್ ಮಾಡಿದರು. ಇದರಿಂದ ಕೆಲಸಗಾರರಿಗೆ ಕೆಲಸ ಇಲ್ಲದ ಹಾಗೆ ಆಯಿತು, ಸರ್ಕಾರಕ್ಕೆ ಲಾಭವೂ ಇಲ್ಲದಂತಾಯಿತು. ಆದುದರಿಂದ ಇದಕ್ಕೆ ಯಾರು ಕಾರಣ ಭೂತರು ಎನ್ನುವುದನ್ನು ತಿಳಿಯುವುದಕ್ಕೆ ಒಂದು ಎನ್‌ಕ್ವೈರಿ ಕಮಿಟಿಯನ್ನು ನೇಮಿಸಬೇಕು. ಶ್ರೀಮಾನ್ ಕೇಸರಿವಾಲಗಳು ಇದರಲ್ಲಿ ಈ ಮಿಲ್‌ಗೆ ಒಂದು ನಯಾಪೈಸೇ ಕೂಡ ಇನ್‌ವೆಸ್ಟ್ ಮಾಡಿಲ್ಲ. ಆದರೆ ಈವೊತ್ತಿನ ದಿವಸ ಅವರು ಲಕ್ಷಾಧಿಪತಿಗಳಾಗಿ ಲಕ್ಷಗಟ್ಟಲೆ ಹಣವನ್ನು ತೆಗೆದುಕೊಂಡು ಹೋಗುತ್ತಾರೆ. ಎಷ್ಟು ಟಿ. ಎ. ತೆಗೆದುಕೊಂಡು ಹೋಗಿದ್ದಾರೆ ನೋಡಿ. ಅವರ ಬ್ಯಾಲೆನ್ಸ್ ಷೀಟ್ ತೆಗೆದು ನೋಡಿದರೆ ಅವರು ಟಿ. ಎ. ಗಾಗಿ 1 ಲಕ್ಷ 50 ಸಾವಿರ ರೂಪಾಯಿ, ಟೆಲಿಫೋನ್ ಮತ್ತು ಟ್ರಂಕ್ ಕಾಲ್ ಛಾರ್ಜಸ್‌ಗಾಗಿ 60 ಸಾವಿರ ರೂಪಾಯಿ ತೆಗೆದುಕೊಂಡು ಹೋಗಿದ್ದಾರೆ, ಅವರು ಇರತಕ್ಕಂಥ ಸ್ಥಳಗಳು ಡೆಲ್ಲಿ, ಕಲ್ಕತ್ತಾ, ಬಾಂಬೆ ಮತ್ತು ಬೆಂಗಳೂರು. ಅವರು ತಿಂಗಳಿಗೊಂದು ಸಾರಿ ಬಂದು ಎಂ.ಎಸ್.ಕೆ. ಮಿಲ್‌ಗೆ ಭೇಟಿ ಕೊಟ್ಟು ತಮ್ಮ ಮಾಮೂಲ್ ತೆಗೆದುಕೊಂಡು ಮನೆಗೆ ಹೋಗುತ್ತಾರೆ. ಇದರ ಬಗ್ಗೆ ಸರ್ಕಾರ ಲಕ್ಷ ಕೊಡುತ್ತಾ ಇಲ್ಲ. ಅಲ್ಲಿರತಕ್ಕಂಥ ಲೇಬರರ್ಸ್‌ಗೆ ಆಲ್ ಇಂಡಿಯಾ ಟೆಕ್ಸ್‌ಟೈಲ್ ವೇಜ್ ಬೋರ್ಡನ್ನು ಇಂಪ್ಲಿಮೆಂಟ್ ಮಾಡಬೇಕು ಎಂದು ಕೇಳಿದಾಗ ಹಿಂದಿನ ಕೈಗಾರಿಕಾ ಮಂತ್ರಿಗಳು ಅದೇ ಛಲ ಹಿಡಿದುಕೊಂಡು ವರ್ಕರ್ಸ್‌ಗೆ ಯಾವ ಸೌಕರ್ಯವನ್ನೂ ಒದಗಿಸಿ ಕೊಡಲಿಲ್ಲ. ಅದಕ್ಕೆ ನಾನು ಹೇಳುವುದು ಏನೆಂದರೆ ಈ 2 ತಿಂಗಳಿನಲ್ಲಿ ಲಾಸ್ ಏನು ಆಯಿತು ಇದಕ್ಕೆ ಹಿಂದಿನ ಸರ್ಕಾರವೇ ಕಾರಣವಾದ್ದರಿಂದ ಸರ್ಕಾರದವರು ಎನ್‌ಕ್ವೈರಿ ನಡೆಸಬೇಕು ಎಂದು ಹೇಳುತ್ತೇನೆ.

ಇನ್ನು ಶ್ರೀ ಚಂದಪ್ಪ ಪಾಟೀಲ್‌ರವರ ಬಗ್ಗೆ ಹೇಳುವುದಾದರೆ ಅವರಿಗೆ ಟೆಕ್ಸ್‌ಟೈಲ್ ಬಗ್ಗೆ ಏನೂ ಮಾಹಿತಿ ಇಲ್ಲ. ಅವರು ಪ್ರತಿ ತಿಂಗಳೂ ಬರುತ್ತಾರೆ. ಬಂದು ತಮ್ಮ ಟಿ.ಎ. ಮತ್ತು ಡಿ.ಎ. ಮಾಡಿಕೊಂಡು 4 ಜನಗಳ ಜೊತೆಗೆ ಚಹಾ ಕುಡಿದುಕೊಂಡು ಹೊರಟು ಹೋಗುತ್ತಾರೆ. ಅದಕ್ಕೆ ಬದಲು ನೀವು ಯಾರನ್ನಾದರೂ ಟೆಕ್ಸ್‌ಟೈಲ್ ಎಕ್ಸ್‌ಪರ್ಟ್‌ನ್ನು ಕಳುಹಿಸಿ ಪ್ರತಿವರ್ಷವೂ 20 ಲಕ್ಷ ರೂಪಾಯಿ ಲಾಸ್ ಆಗುತ್ತಾ ಇರುವುದನ್ನು ತಪ್ಪಿಸಲು ಪ್ರಯತ್ನ ಮಾಡಬೇಕು. ಹಿಂದೆ ಇದ್ದ ಸರ್ಕಾರದವರೂ ಲೇಬರರ್ಸ್‌ಗೆ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ಒಂದು ಕೋಟಿ ರೂಪಾಯಿ ಕೊಟ್ಟಿದ್ದರು. ಅದು ಸರಿಯಾಗಿ ಖರ್ಚಾಗಿದೆಯೋ ಇಲ್ಲವೋ ಎನ್ನುವುದನ್ನು ನೋಡಬೇಕು ಏತಕ್ಕೆಂದರೆ ಹಿಂದೆ ಇದ್ದ ಸರ್ಕಾರ ಇದರ ಬಗ್ಗೆ ಗಮನ ಕೊಟ್ಟಿಲ್ಲ.

ಅದೇ ರೀತಿ ಇನ್ನೊಂದು ವಿಷಯ ಹೇಳುವುದಾದರೆ ಅಲ್ಲಿಗೆ ಹೊಸ ಮಿಷನರಿ ಬೇಕಾದರೆ ಹಳೇ ಮಿಷನರಿ ಮಾರ್ಕಿಟ್ಟು ಅವರಿಗೆ ಪರಿಚಯ ಇದ್ದಂಥ ಕಡೆ ಇಂಡೆಂಟ್ ಹಾಕಿಸಿಬಿಟ್ಟು ಫಾಲ್ಸ್ ಅಕೌಂಟ್‌ನ್ನು ತೋರಿಸುತ್ತಾರೆ. ಈ ಮಿಲ್‌ನಲ್ಲಿ ಲಕ್ಷಾಂತರ ರೂಪಾಯಿ ಲಾಸ್ ಆಗುತ್ತಾ ಇದೆ. ಲೇಬರರ್ಸ್‌ಗೂ ಲಾಭವಾಗುತ್ತಾ ಇಲ್ಲ, ಸರ್ಕಾರಕ್ಕೂ ಲಾಭವಾಗುತ್ತಾ ಇಲ್ಲ. ಒಂದು ಪೈಸೇ ಕೂಡ ಈ ಮಿಲ್‌ಗೆ ಇನ್‌ವೆಸ್ಟ್ ಮಾಡದೇ ಇರತಕ್ಕಂಥ ಕೇಸರಿವಾಲ್‌ಗಳು ಮಿಲ್ ಓನರ್ ಆಗಿಬಿಟ್ಟಿದ್ದಾರೆ. ಅಪೋಸಿಷನ್ ಲೀಡರ್‌ನವರು ಒಂದು ಮಾತು ಹೇಳಿದರು ಏನೆಂದರೆ ಎಷ್ಟೋ ಮೈಸೂರಿನವರು ಹೊರಗಡೆ ಹೋಗಿ ಕೆಲಸ ಮಾಡಿ ಹೆಸರು ತೆಗೆದುಕೊಂಡಿದ್ದಾರೆ ಎಂದು. ಅದು ಹೆಮ್ಮೆಯ ಮಾತು. ಹೀಗಿರುವಾಗ ಡೆಲ್ಲಿಯಲ್ಲಿರುವ ಕೇಸರಿವಾಲ್, ಹೀರೇವಾಲ್, ಆ ಲಾಲ್ ಈ ಲಾಲ್ ಅನ್ನುವವರನ್ನು ಏತಕ್ಕೆ ಈ.ಎಂ.ಎಸ್.ಕೆ.ಮಿಲ್‌ಗೆ ಕರೆಸಬೇಕಾಗಿತ್ತು ? ಅವರು ಏನು ಮಾಡಿದ್ದಾರೆ ಎಂದರೆ ಇಲ್ಲಿ ಒಂದು ಅಪಾಯಿಂಟ್‌ಮೆಂಟ್ ಕೊಡಬೇಕಾದರೆ ರಾಜಾಸ್ತಾನ ಮತ್ತು ಡೆಲ್ಲಿಯಿಂದ ಕರೆಸಿ ಕೊಡುತ್ತಾರೆ. ಇದಕ್ಕೆ ಸರ್ಕಾರ ಗಮನ ಕೊಡುತ್ತಾ ಇಲ್ಲ. ಇನ್ನೊಂದು ವಿಷಯ ಹೇಳಬೇಕಾದರೆ ಅವರ ಕಾರಿಗೆ ಪ್ರತಿವರ್ಷವೂ 22 ಸಾವಿರ ರೂಪಾಯಿ ಖರ್ಚು ಆಗಿದೆ ಮತ್ತು ಲೀಗಲ್ ಛಾರ್ಜಸ್ 30 ಸಾವಿರ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಅದಕ್ಕಾಗಿ ತಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಅವರು ಏನು ಮಾಡಿದ್ದಾರೆ ಎನ್ನುವುದನ್ನು ಪರಿಶೀಲಿಸಲು ಸರ್ಕಾರದ ವತಿಯಿಂದ ಒಬ್ಬ ಅಕೌಂಟ್ ಆಫೀಸರ್ ಮತ್ತು ಒಬ್ಬ ಲೇಬರ್ ವೆಲ್‌ಫೇರ್ ಆಫೀಸರ್‌ನ್ನು ಕಳುಹಿಸಿಕೊಡಬೇಕು. ಈ ಮಿಲ್‌ಗೆ ಒಂದು ಕೋಟಿ ರೂಪಾಯಿ ಸರ್ಕಾರ ಗ್ರಾಂಟ್ ಕೊಟ್ಟಿದ್ದೂ ಕೂಡ ಲಾಸ್ ಆಗಿದೆ. ಹಿಂದಿನ ಸರ್ಕಾರದವರು ಯಾವ ಉದ್ದೇಶದಿಂದ ಕೊಟ್ಟಿದ್ದರೋ ಅದು ಸಫಲವಾಗುತ್ತಾ ಇಲ್ಲ. ಆದಕಾರಣ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಈವೊತ್ತು ಈ ಮಿಲ್ ಲಾಸ್ ಆಗುವುದಕ್ಕೆ ಕಾರಣ ಏನೆಂದರೆ ಶ್ರೀ ಸಿ. ಕೆ. ಕೇಸರಿವಾಲ, ಶ್ರೀ ಹೆಚ್. ಆರ್. ಕೇಸರಿವಾಲ, ಶ್ರೀ ಸತೀಶ್‌ಚಂದ್ರ, ಶ್ರೀ ರಮೇಶ ಚಂದ್ರ ಮತ್ತು ಶ್ರೀ ಚಂದಪ್ಪ ಪಾಟೀಲ್ ಈ 5 ಮಂದಿ ಡೈರಕ್ಟರುಗಳಾಗಿದ್ದಾರೆ. ಈ 5 ಜನ ಡೈರಕ್ಟರ್ಸ್‌ನಲ್ಲಿ ರಮೇಶ ಚಂದ್ರ ಅವರು ಒಬ್ಬರು ಬಿಟ್ಟು ಬೇರೆ ಯಾರಿಗೂ ತಾಂತ್ರಿಕ ಜ್ಞಾನ ಇಲ್ಲ. ಇಂಡಸ್ಟ್ರೀಸ್ ಬಗ್ಗೆ ಯಾವ ಮಾಹಿತಿಯೂ ಇಲ್ಲ,

(ಶ್ರೀ ಮಲ್ಲಿಕಾರ್ಜುನ್)

ಅಂಥವರನ್ನು ಇಲ್ಲಿಗೆ ನೇಮಿಸಿರುವುದರಿಂದ ಸರ್ಕಾರದ ದುಡ್ಡು ಹಾಳಾಗುತ್ತಾ ಇದೆ. ಆದುದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದು ಈ ಇಂಡಸ್ಟ್ರೀಸ್ ಯೋಗ್ಯರೀತಿಯಲ್ಲಿ ನಡೆಯಬೇಕಾದರೆ ಸರ್ಕಾರದ ವತಿಯಿಂದ ಒಬ್ಬ ಅಕೌಂಟ್ಸ್ ಆಫೀಸರ್ ಮತ್ತು ಒಬ್ಬ ವೆಲ್‌ಫೇರ್ ಆಫೀಸರ್‌ನ್ನು ನೇಮಿಸಬೇಕು.

ಇನ್ನೊಂದು ವಿಷಯ ಏನೆಂದರೆ ಶ್ರೀಮಾನ್ ಸಿ. ಕೆ. ಕೇಸರಿವಾಲ ಮತ್ತು ಶ್ರೀಮಾನ್ ಹೆಚ್. ಆರ್. ಕೇಸರಿವಾರ್‌ರವರು ಇದೇ ರೀತಿಯಾಗಿ ಕೆ.ಆರ್. ಮಿಲ್ ಕೂಡ ನಡೆಸುತ್ತಿದ್ದಾರೆ ಎಂದು ನನಗೆ ತಿಳಿದು ಬಂದಿದೆ. ಕೆ.ಆರ್. ಮಿಲ್‌ನಲ್ಲಿರುವ ಲೇಬರರ್ಸ್‌ಗೆ ಕೊಡುವ ಡಿ. ಎ. 132 ರೂಪಾಯಿಗಳು. ಎಂ. ಎಸ್. ಕೆ. ಮಿಲ್‌ನಲ್ಲಿರುವ ಲೇಬರರ್ಸ್‌ಗೆ ಕೊಡುವ ಡಿ. ಎ. 78 ರೂಪಾಯಿಗಳು. ಸರ್ಕಾರವೇ ಇವೆರಡಕ್ಕೂ ಕ್ಯಾಪಿಟಲ್ ಹಾಕಿ ನಡೆಸುತ್ತಾ ಇದ್ದರೂ ಕೂಡ ಏತಕ್ಕೆ ಈವೊತ್ತಿನ ದಿವಸ ಕೆ. ಆರ್. ಮಿಲ್‌ನಲ್ಲಿರುವ ಲೇಬರರ್ಸ್‌ಗೆ 132 ರೂಪಾಯಿಗಳು, ಎಂ. ಎಸ್. ಕೆ. ಮಿಲ್‌ನಲ್ಲಿರುವ ಲೇಬರರ್ಸ್‌ಗೆ 78 ರೂಪಾಯಿಗಳು ಕೊಡುತ್ತಾ ಇರುವುದು. ಈ ಡಿಸ್ಕ್ರಿಮಿನೇಷನ್ ಏತಕ್ಕೆ ? ಇದು ನ್ಯಾಯವೇ ? ಈ ಎರಡು ಮಿಲ್‌ಗಳನ್ನೂ ಶ್ರೀ ಸಿ. ಕೆ. ಕೇಸರಿವಾಲ ಮತ್ತು ಹೆಚ್. ಆರ್. ಕೇಸರಿವಾರ್‌ರವರಿಗೆ ಯಾವ ಟರ್ಮ್ಸ್ ಅಂಡ್ ಕಂಡೀಷನ್ಸ್ ಮೇಲೆ ಕೊಟ್ಟಿದ್ದೀರಿ ? ಇದನ್ನು ಲೀಸ್ ಬೇಸಿಸ್‌ಮೇಲೆ ಕೊಟ್ಟಿದ್ದೀರಾ ? ಇದರ ಬಗ್ಗೆ ನ್ಯಾಯವನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಗುಲ್ಬರ್ಗ ಡಿಸ್ಟ್ರಿಕ್ಟ್‌ನಲ್ಲಿ ಯಾದಗಿರಿಯಲ್ಲಿ ಸಾಕಷ್ಟು ರಾಮೆಟೀರಿಯಲ್ಸ್ ಇವೆ. ಆದರೂ ಕೂಡ ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳುತ್ತಾ ಇಲ್ಲ. ಆದುದರಿಂದ ಅಲ್ಲಿಗೆ ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ಕಳುಹಿಸಿ, ಸರ್ವೆ ಮಾಡಿಸಿ, ಏನು ರಾಮೆಟೀರಿಯಲ್ಸ್ ಸಿಕ್ಕುತ್ತದೆ ಅದನ್ನು ಉಪಯೋಗಿಸಿಕೊಂಡು ಒಂದು ಗ್ಲಾಸ್ ಫ್ಯಾಕ್ಟರಿಯನ್ನು ಹಾಕಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಖಾದಿ ಬೋರ್ಡ್ ವಿಷಯವಾಗಿ ಹೇಳಬೇಕಾದರೆ ಅಲ್ಲಿ ಬಹಳ ಅನ್ಯಾಯ ನಡೆಯುತ್ತಾ ಇದೆ. ಅದನ್ನು ಸೂಪರ್‌ಸೀಡ್ ಮಾಡಿ ಇಲ್ಲವೇ ರೀಕಾನ್ಸ್ಟಿಟ್ಯೂಟ್ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಗುರುಮಿಟ್‌ಕಲ್‌ನಲ್ಲಿ ಒಂದು ಕಲೆಕ್ಟೀವ್ ಸೆಂಟರ್ ಕೊಡಬೇಕು. ಏತಕ್ಕೆಂದರೆ ಅಲ್ಲಿ ಕೈಮಗ್ಗದವರ ಪಾಪ್ಯುಲೇಷನ್ ಕಡಿಮೆಯಾಗುತ್ತದೆ. ಅದಕ್ಕೋಸ್ಕರ ಪಾಪ್ಯುಲೇಷನ್ ರೇಷಿಯೋವನ್ನು ಮೆಂಟೇನ್ ಮಾಡುವುದಕ್ಕೆ ಒಂದು ಕಲೆಕ್ಟೀವ್ ವೀವಿಂಗ್ ಸೆಂಟರ್ ಕೊಡಬೇಕಾದ್ದು ಅವಶ್ಯಕ ಎಂದು ಹೇಳುತ್ತೇನೆ.

5-30 P.M.

ಇನ್ನೊಂದೇನೆಂದರೆ ಬಡ ಜನರಿಗೆ ಉಪಯುಕ್ತವಾಗುವ ಲೆದರ್ ಬೋರ್ಡ್ ಒಂದನ್ನು ಸ್ಥಾಪನೆ ಮಾಡಬೇಕು. ಯಾವ ರೀತಿ ಖಾದಿ ಬೋರ್ಡ್ ಇದೆಯೋ ಅದೇ ರೀತಿ ಲೆದರ್ ಬೋರ್ಡ್ ಮಾಡಿ ಬಡ ಜನರಿಗೆ ಉಪಯೋಗವಾಗುತ್ತದೆ. ಇಷ್ಟು ತಮ್ಮಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

As regards Legislature, in all the States the scale of pay of a Reporter is on par with that of the Section Officer of the Secretariat, but in our State the Tukol Pay Commission has not done justice to them and have given them a lesser scale of pay than the Section Officers. Further, the qualifications prescribed for the Reporters here are higher than those prescribed for Judgment Writers of the High Court. The starting pay of a Reporter is Rs. 200 whereas the starting pay of a Judgment Writer is Rs. 250. This is a discrimination since the qualification of Reporters is higher than those of Judgment Writers. I therefore feel that the Reporters should be given the same scale as that of a Section Officer in the Secretariat.

-Due to the heavy load of work on the Reporters during session and non-session time, a special pay is given to them in other States like Andhra and Maharashtra. Similarly, the Reporters of this Legislature should also be given a special pay.

With these few words, I thank the Chair for giving me this opportunity to speak.

ಶ್ರೀ ಎಚ್. ಡಿ. ದೇವೇಗೌಡ.—ಈ ದಿನ 5-30ಕ್ಕೆ ಮಂತ್ರಿಗಳು ಉತ್ತರ ಕೊಡಬೇಕು ಎಂದು ಒಂದು ತೀರ್ಮಾನಕ್ಕೆ ಬಂದಿದ್ದೆವು. ಆದರೆ ಸುಮಾರು 45 ನಿಮಿಷ ಎಷ್ಟು ಸಮಯದವರೆಗೆ ಮಾತನಾಡಲು ಅವಕಾಶ ಕೊಡಬೇಕು ಎಂಬ ವಿಷಯದಲ್ಲಿನ ಚರ್ಚೆಯಲ್ಲಿ ಹೋಯಿತು. ನಮ್ಮ ಕಡೆಯಿಂದ ನಾಲ್ಕು ಜನರು ಮಾತ್ರ ಮಾತನಾಡಿದ್ದಾರೆ. ಆ ಕಡೆಯೂ ಮಾತನಾಡುವವರಿದ್ದಾರೆ. ಆದುದರಿಂದ ಈ ದಿವಸ 7 ಗಂಟೆಯವರೆಗೂ ಮಾನ್ಯ ಸದಸ್ಯರು ಮಾತನಾಡಲು ಅವಕಾಶ ಕೊಟ್ಟು, ನಾಳೆ ಬೆಳಿಗ್ಗೆ ಮಂತ್ರಿಗಳು ಉತ್ತರ ಕೊಡುವುದಕ್ಕೆ ಅವಕಾಶ ಮಾಡಿ ಕೊಡಬೇಕೆಂದು ನನ್ನ ಸಲಹೆ. ನಾಳೆ ಬೆಳಿಗ್ಗೆ ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳದೆ, ಸಾಧ್ಯವಾದರೆ 9 ಗಂಟೆಗೆ ಬದಲಾಗಿ 8-30 ಗಂಟೆಗೆ ಸೇರಬಹುದು. ಮಾನ್ಯ ಸಭಾ ನಾಯಕರು ಇದಕ್ಕೆ ಒಪ್ಪುತ್ತಾರೆಂದು ಭಾವಿಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ವಿರೋಧಪಕ್ಷದ ನಾಯಕರು ಹೇಳಿರುವುದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಆದರೆ ಬೆಳಿಗ್ಗೆ 9 ಗಂಟೆಗೆ ಸೇರೋಣ.

† ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಮಾನ್ಯ ಸಭಾಧ್ಯಕ್ಷರೇ, ಈ ದಿವಸ ಕೈಗಾರಿಕೆಯ ಬಗ್ಗೆ ಮಾತನಾಡಬೇಕಾದರೆ ಒಂದು ವಿಷಯವನ್ನು ನಮ್ಮ ಕೈಗಾರಿಕಾ ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ಮೈಸೂರು ರಾಜ್ಯ 1947ನೇ ಇಸವಿಗೆ ಹಿಂದೆ ಕೈಗಾರಿಕೆಯಲ್ಲಿ ಬಹಳ ಮುಂದುವರಿದ ರಾಜ್ಯವೆಂಬುದಾಗಿ ಹೆಸರಾಗಿತ್ತು. ಯಾವ ದಿವಸದಿಂದ ಜನತಾ ಸರ್ಕಾರ ಮೈಸೂರು ರಾಜ್ಯದಲ್ಲಿ ಬಂತೋ ಆ ದಿವಸದಿಂದ ಕೈಗಾರಿಕೆ ಬಹಳಮಟ್ಟಿಗೆ ಕುಂಠಿತ ಸ್ಥಿತಿಯಲ್ಲಿದೆ ಎಂದರೆ ತಪ್ಪಾಗಲಾರದು. ಇದಕ್ಕೆ ಉದಾಹರಣೆಯಾಗಿ, ಜನತಾ ಸರ್ಕಾರ ಅಥವಾ ಪ್ರಜೆಗಳಿಂದ ಆಡಳಿತ ನಡೆಸುವ ಸರ್ಕಾರ ಬಂದ ಮೇಲೆ ನಮ್ಮ ಮೈಸೂರು ರಾಜ್ಯದಲ್ಲಿ ಎಷ್ಟು ಕೈಗಾರಿಕೆಗಳು ಸ್ಥಾಪನೆಯಾದುವು ಮತ್ತು ನೆರೆ ರಾಜ್ಯವಾದ ಮದ್ರಾಸಿನಲ್ಲಿ ಎಷ್ಟು ಕೈಗಾರಿಕೆಗಳು ಸ್ಥಾಪನೆಯಾದುವು ಎನ್ನುವುದನ್ನು ನೋಡಿದರೆ ನಾವು ಬಹಳ ಹಿಂದುಳಿದಿದ್ದೇವೆ. ಇದಕ್ಕೆ ಸರ್ಕಾರದವರ ಕರ್ತವ್ಯಲೋಪ ಕಾರಣವೆಂದರೆ ತಪ್ಪಲ್ಲವೆಂದು ನನ್ನ ಭಾವನೆ. ಬೇಕಾದಷ್ಟು ಕೈಗಾರಿಕೆಗಳು ಮದ್ರಾಸು ರಾಜ್ಯದಲ್ಲಿ ಆಗಿದ್ದರೂ ಅದರಲ್ಲಿ ಅರ್ಧ ಭಾಗ ಕೂಡ ಮೈಸೂರು ರಾಜ್ಯದಲ್ಲಿ ಆಗಿಲ್ಲ.

ಕೈಗಾರಿಕೆಗಳ ಬಗ್ಗೆ ಮಾತನಾಡುತ್ತ ಒಂದು ನಿದರ್ಶನವನ್ನು ಕೊಡುತ್ತೇನೆ. ಮಂಡ್ಯ ಸಕ್ಕರೆ ಕಾರ್ಖಾನೆ ಸ್ಥಾಪಿತವಾಗಿ ಎಷ್ಟೋ ವರ್ಷಗಳಾದುವು. ನಮ್ಮ ಜನತಾ ಸರ್ಕಾರದ ಮೇಲ್ವಿಚಾರಣೆ ಅದಕ್ಕೆ ದೊರಕುವ ಮುನ್ನ ಅದರ ಷೇರ್ ವಾಲ್ಯೂ 10 ರೂಪಾಯಿಗಳಿತ್ತು. ಆಗ ಆ ಷೇರಿನ ಬೆಲೆ 52-60 ರೂಪಾಯಿಗಳವರೆಗೂ ಹೋಗಿತ್ತು. ನಮ್ಮವರು ಆಡಳಿತಕ್ಕೆ ಬಂದ ಮೇಲೆ ಅದರ ಗತಿ ಈಗ ಏನಾಗಿದೆ ಎಂಬುದಾಗಿ ಸರ್ಕಾರದವರೇ ಪರ್ಯಾಲೋಚನೆ ಮಾಡಬೇಕು. ನಮ್ಮ ಕೈಗಾರಿಕಾ ಮಂತ್ರಿಗಳವರಿಗೆ ಮಂಡ್ಯ ಸಕ್ಕರೆ ಕಾರ್ಖಾನೆಯ ಬಗ್ಗೆ ಒಳ್ಳೆಯ ಮಾಹಿತಿ ಇದೆ. ಅವರು ಅದೇ ಜಿಲ್ಲೆಯವರು. ಅವರಾದರೂ ಏಕೆ ಈ ದುರ್ದೆಶೆ ಈ ಕಾರ್ಖಾನೆಗೆ ಬಂತು ಎಂದು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ.—ಈ ವರ್ಷ ಒಂದೂವರೆ ಕೋಟಿ ರೂಪಾಯಿ ಲಾಭ ಬಂದಿದೆ.

ಶ್ರೀ ಕೆ. ಎಂ. ನಾಗಣ್ಣ.—1949 ರಿಂದ 1970 ರ ವರೆಗೆ ಅದರ ಗತಿ ಏನಾಗಿದೆ ಎಂಬುದನ್ನು ಹೇಳುತ್ತೀರಾ ?

[MADAM SPEAKER in the Chair.]

ಹೊಸದಾಗಿ ನಮ್ಮ ರಾಜ್ಯದಲ್ಲಿ ಸಿನಿಮಾ ಹಿಡಿಯುವ ಫಿಲಂ ಕಾರ್ಪೊರೇಷನ್ ಮಾಡುತ್ತಿದ್ದೇವೆ. ಅದಕ್ಕೆ ಹಲವಾರು ಕೋಟಿ ರೂಪಾಯಿಗಳನ್ನು ಸರ್ಕಾರ ವೆಚ್ಚ ಮಾಡಬೇಕಾಗಿ ಬರಬಹುದು. ಅದರ ಬಗ್ಗೆ ನಾಗರಿಕರಲ್ಲಿ ಒಳ್ಳೆಯ ಭಾವನೆ ಇಲ್ಲ. ಅವರು ಒಂದು ಲಕ್ಷ ರೂಪಾಯಿ ಷೇರು ಬಂಡವಾಳವನ್ನು ವಸೂಲ್ಮಾಡಿದ್ದಾರೆಂದು ಹೇಳಿರುವ. ಹಾಗೆ ಜ್ಞಾಪಕ. ಒಂದು ಲಕ್ಷ ರೂಪಾಯಿ

(ಶ್ರೀ ಕೆ. ಎಂ. ನಾಗಣ್ಣ)

ಷೇರು ಹಣವನ್ನು ವಸೂಲ್ಮಾಡುವುದಕ್ಕೆ ಆಗಿರುವ ಖರ್ಚಿನ ಪ್ರಮಾಣವನ್ನು ನೋಡಿದರೆ ಬಹಳ ಅಂತರವಿದೆ. ಇದು ಮಾನ್ಯ ಮುಖ್ಯ ಮಂತ್ರಿಗಳ ಖಾತೆಯಲ್ಲಿ ಸೇರಬಹುದು ಎಂದು ಕಾಣುತ್ತದೆ. ಕೈಗಾರಿಕಾ ಮಂತ್ರಿಗಳಿಗೇನಾದರೂ ಸೇರುತ್ತದೆಯೋ ಏನೋ ಗೊತ್ತಿಲ್ಲ. ಒಳ್ಳೆಯ ಹೆಸರು ಬರಬೇಕಾದರೆ ಇಲಾಖೆಯಲ್ಲಿ ಬಹಳ ದಕ್ಷರಾದ ಅಧಿಕಾರಿಗಳನ್ನು ಹಾಕಬೇಕು, ಅನುಭವ ವಿರುವವರನ್ನು ಹಾಕಬೇಕು. ನಾಲ್ಕೈದು ಕೋಟಿ ರೂಪಾಯಿ ಮೈಸೂರು ಸರ್ಕಾರ ಖರ್ಚು ಮಾಡಬೇಕಾದರೆ ಅದಕ್ಷರಾದ ಮತ್ತು ಅನುಭವವಿಲ್ಲದ ಅಧಿಕಾರಿಗಳನ್ನು ಹಾಕಿದರೆ ಈ ಕೈಗಾರಿಕೆಯ ಮೇಲೆ ಹಾಕುವ ಹಣ ಪೋಲಾಗುವುದಕ್ಕೆ ಅವಕಾಶವಿದೆ. ಹೇಸರುಘಟ್ಟದ ಬಳಿ 300 ಎಕರೆ ಜಮೀನನ್ನು ಕೊಟ್ಟಿದ್ದಾರೆ. ಅಗರಲ್ಲಿ ಅವರು ಏನೇನೋ ಪ್ಲಾನ್ ಹಾಕಿಕೊಂಡಿದ್ದಾರೆ. ಎಷ್ಟರ ಮಟ್ಟಿಗೆ ಅದು ನಡೆಯುತ್ತದೆ ಎಂದು ಯೋಚನೆ ಮಾಡುವುದು ಒಳ್ಳೆಯದು. ದಕ್ಷರಾದ ಅಧಿಕಾರಿಗಳನ್ನು ಹಾಕದ ಹೊರತು ಅಲ್ಲಿ ಕೆಲಸ ಸರಿಯಾಗಿ ನಡೆಯುವುದಕ್ಕೆ ಸಾಧ್ಯವಿಲ್ಲ. ಫಿಲಂ ಸ್ಟುಡಿಯೋ ಕೈಗಾರಿಕೆ ಎಲ್ಲ ಕಡೆಗಳಲ್ಲಿಯೂ ಸಾಕಷ್ಟು ಸರಿಯಾದ ರೀತಿಯಲ್ಲಿ ಕೆಲಸ ನಡೆಯದೆ ಇರುವುದಕ್ಕೆ ಅವಕಾಶವಿದೆ. ಅದನ್ನು ಕಂಡು ಹಿಡಿಯುವುದಕ್ಕೆ ಬಹಳ ಕಷ್ಟ. ನನಗೆ ಇದರಲ್ಲಿ 30 ವರ್ಷಗಳ ಅನುಭವವಿದೆ. 1940 ನೆ ಇಸವಿಯಲ್ಲಿ ಎಕ್ಸಿಬಿಟರ್ ಆದೆ, 1945 ರಲ್ಲಿ ಡಿಸ್ಟ್ರಿಬ್ಯೂಟರ ಆದೆ, 1952 ರಿಂದ ಪ್ರೊಡ್ಯೂಸರ್ ಆಗಿದ್ದೇನೆ. ಆದ್ದರಿಂದ ಅಲ್ಲಿ ಏನೇನು ನಡೆಯುತ್ತದೆ, ಅದರಲ್ಲಿ ಏನೇನು ಕಷ್ಟಗಳಿವೆ, ಏನೇನು ತೊಡಕುಗಳಿವೆ, ಯಾವ ರೀತಿಯಲ್ಲಿ ಹಣ ಪೋಲಾಗುತ್ತದೆ ಎನ್ನುವುದರ ಅನುಭವವಿದೆ. ಆದುದರಿಂದ ಮಾನ್ಯ ಸರ್ಕಾರದಲ್ಲಿ ಹೇಳುವುದೇನೆಂದರೆ, ಈ ಬಗ್ಗೆ ಬಹಳ ಜಾಗ್ರತೆ ವಹಿಸಿ, ಯಾರೂ ಸರ್ಕಾರದ, ಬಡ ಜನರ ಬಡ ಬೋರೇಗೌಡನ ಹಣವನ್ನು ಪೋಲು ಮಾಡದ ಹಾಗೆ ಸಾಕಷ್ಟು ದಕ್ಷತೆಯಿಂದ ಕೆಲಸ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಬೆಂಗಳೂರು ನಗರದಲ್ಲಿನ ಕೋರ್ಟುಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಕೋರ್ಟುಗಳ ಗತಿ ಏನಾಗಿದೆ ಎಂದರೆ ಕುರ್ಚಿಗಳಿಗೆ ಮೂರು ಕಾಲು ಇದ್ದು ಬ್ಯಾಕ್ ಇರುವುದಿಲ್ಲ, ಹಣ ಕೊಟ್ಟು ಕೋರ್ಟಿಗೆ ಹೋದವರು ಕೂಡುವುದಕ್ಕೆ ಆಸನಗಳಿಲ್ಲ. ಇಂಥ ದುಸ್ಥಿತಿ ಇದೆ. ಕೋರ್ಟಿನ ಆವರಣದಲ್ಲಿ ದೇಹಬಾಧೆ ತೀರಿಸಿಕೊಳ್ಳುವುದಕ್ಕೆ ಸಾಕಷ್ಟು ವ್ಯವಸ್ಥೆ ಕೂಡ ಇಲ್ಲ. ಹೆಣ್ಣು ಮಕ್ಕಳು ನ್ಯಾಯಾಲಯಕ್ಕೆ ಹೋದಾಗ ಅವರ ಗತಿ ಏನು ಎಂದು ಸರ್ಕಾರ ಯೋಚನೆ ಮಾಡಬೇಕಾಗಿದೆ. ಆದುದರಿಂದ ಜನಗಳಿಗೆ ಸಾಕಷ್ಟು ಅನುಕೂಲಗಳನ್ನು ಕಲ್ಪಿಸಿಕೊಡಬೇಕು. ನಿಸಾನ್ ಷೆಡ್ಸ್‌ನಲ್ಲಿ ಕೋರ್ಟುಗಳು ನಡೆಯುತ್ತಿವೆ. ಅಲ್ಲಿ ಕುಳಿತುಕೊಳ್ಳುವುದಕ್ಕೆ ಅವಕಾಶವಿಲ್ಲ. ಜನ ನಿಂತುಕೊಂಡೇ ಬರಬೇಕಾಗಿದೆ. ಈ ಅವ್ಯವಸ್ಥೆಗಳನ್ನು ಆದಷ್ಟು ಜಾಗ್ರತೆ ಸರಿಪಡಿಸಿದರೆ ಒಳ್ಳೆಯದು ಎಂದು ಹೇಳುತ್ತೇನೆ.

ರೇಷ್ಮೆ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿ ಬರುತ್ತದೆ. ನಾನು ಹಿಂದೆ ಒಂದು ಠರಾವನ್ನು ಮಂಡಿಸಿ ಅದರ ಬಗ್ಗೆ ಭಾಷಣ ಮಾಡುವಾಗ ಮಾನ್ಯ ಮುಖ್ಯ ಮಂತ್ರಿಗಳು ಆದಷ್ಟು ಜಾಗ್ರತೆ ಬಡ ನೇಕಾರರಿಗೆ ಏನಾದರೂ ಒಂದು ರೀತಿ ಮಾಡುವುದಕ್ಕೆ ಯೋಚನೆ ಮಾಡುತ್ತೇನೆ, ಒಂದು ಕಮಿಟಿ ಮಾಡುತ್ತೇನೆ ಎಂದು ಹೇಳಿದ್ದರೆಂದು ಜ್ಞಾಪಕವಿದೆ. ಆ ದೆಸೆಯಲ್ಲಿ ಏನು ಯೋಚನೆ ಮಾಡಿದ್ದಾರೆ ಎನ್ನುವುದು ಗೊತ್ತಿಲ್ಲ. ಈಗ ಕೊಳ್ಳೇಗಾಲದಲ್ಲಿ ಗೂಡು ಹರಾಜು ಹಾಕುತ್ತಾರೆ. ಗೂಡು ಹರಾಜು ಹಾಕುವಾಗ ಮಧ್ಯವರ್ತಿಗಳ ಕೈವಾಡ ಬಹಳವಿದೆ.

ಈ ಮಧ್ಯವರ್ತಿಗಳ ಕೈವಾಡ ಹೇಗೆ ಇದೆಯೆಂದರೆ, ಗೂಡನ್ನು ತಯಾರಿಸತಕ್ಕ ಬಡ ಜನರು ಹಣದ ಅಭಾವದಿಂದ ಇರುವಾಗ ಮಧ್ಯವರ್ತಿಗಳು ಅವರಿಂದ ಗೂಡನ್ನು ತೆಗೆದುಕೊಂಡು ಆಮೇಲೆ ಹರಾಜು ಹಾಕುತ್ತಾರೆ. ಯಾರು ಗೂಡು ತಯಾರು ಮಾಡುತ್ತಾರೋ ಅವರಿಗೆ ಲಾಭವಿಲ್ಲ. ಮಧ್ಯವರ್ತಿಗಳಿಗೆ ಲಾಭ ಹೋಗುತ್ತದೆ. ಇದನ್ನು ತಪ್ಪಿಸಲಿಕ್ಕೆ ಸರ್ಕಾರ ಪ್ರಯತ್ನ ಪಡಬೇಕು ಇನ್ನು ನಮ್ಮ ಮೈಸೂರು ದೇಶದಲ್ಲಿ ತಯಾರಾದಂಥ ಫಿಲೇಚರ್ ಸಿಲ್ಕ್ ಜಪಾನ್ ಮುಂತಾದ ಕಡೆಗಳಿಗೆ ರಫ್ತು ಆಗುವ ಹಾಗೆ ಏರ್ಪಾಡು ಮಾಡಬೇಕು. ಈ ಬಗ್ಗೆ ಕೇಂದ್ರ ಸರ್ಕಾರದಿಂದ 9 ಕೋಟಿ ರೂಪಾಯಿ ನೆರವು ಬರುತ್ತದೆ ಎಂದು ಹೇಳುತ್ತಾರೆ. ಬೆಂಗಳೂರು ನಗರದಲ್ಲಿ ರೇಷ್ಮೆ ಬೆಲೆ ವಿಪರೀತ ಜಾಸ್ತಿಯಾಗಿ ಹತ್ತಾರು ಮಗ್ಗಗಳು ಈಚೆಗೆ ನಿಂತು ಹೋಗಿವೆ. ಇದರಿಂದ ಮೈಸೂರು ರಾಜ್ಯದಲ್ಲಿ ಕೊನೆಯಪಕ್ಷ ಒಂದುಲಕ್ಷ ಜನರಿಗಿಂತ ಹೆಚ್ಚಾಗಿ ಕೈಮಗ್ಗದ ನೇಕಾರರುಗಳಿಗೆ ಬಹಳ ತೊಂದರೆಯಾಗಿದೆ. ಈ ವಿಚಾರವನ್ನು ಹಿಂದೆ ನಾನು ಮುಖ್ಯಮಂತ್ರಿಗಳ ಹತ್ತಿರ ಪ್ರಸ್ತಾಪ ಮಾಡಿದೆ. ಈಗಂತೂ ಸುತರಾಂ ವ್ಯಾಪಾರ ಇಲ್ಲ. ಕಾರ್ಖಾನೆಗಳವರಿಗೆ ದಿವಸಕ್ಕೆ ಎರಡು ಗಂಟೆಕಾಲ ಕೆಲಸಮಾಡಬೇಕೆಂದು ಹೇಳುತ್ತಿದ್ದಾರೆ. ಇವರು ತಯಾರು ಮಾಡಿದ ಮಾಲು ಖರ್ಚಾಗುತ್ತಿಲ್ಲ. ಏಕೆ ಖರ್ಚಾಗು

ತ್ತಿಲ್ಲ ಎಂದರೆ, ಅದಕ್ಕೆ ಕೋರಿಕೆ ಇಲ್ಲ. ರೇಷ್ಮೆ ತಯಾರು ಮಾಡುವವರಿಗೆ, ಕಕೂನ್ ತಯಾರು ಮಾಡುವವರಿಗೆ ಎಷ್ಟರಮಟ್ಟಿಗೆ ಸರ್ಕಾರ ಸಹಕಾರ ನೀಡುತ್ತದೋ ಅದೇ ರೀತಿ ಸಹಕಾರವನ್ನು ರೇಷ್ಮೆಯಿಂದ ಜವಳಿಯನ್ನು ತಯಾರು ಮಾಡಿ ಬಿಕರಿ ಮಾಡುವವರಿಗೂ ಕೊಡಬೇಕು. ರೇಷ್ಮೆ ಕೈಗಾರಿಕೆಯಿಂದ ಹೊರಗಡೆಯ ದೇಶಗಳಿಗೆ ರಫ್ತಾಗುವ ಮಾಲು ಹೋದ ವರ್ಷ 10 ಕೋಟಿ ರೂಪಾಯಿ ಆಗಿತ್ತು ಎಂದು ಕಾಣುತ್ತದೆ. ಸರ್ಕಾರ ಈ ವಿಚಾರದಲ್ಲಿ ಆಸಕ್ತಿ ವಹಿಸಿ ಹೊರ ದೇಶಕ್ಕೆ ರಫ್ತಾಗುವ ವಸ್ತುಗಳನ್ನು ಮಗ್ಗದಲ್ಲಿ ತಯಾರು ಮಾಡುವುದಕ್ಕೆ ಅವಕಾಶ ಕೊಟ್ಟು ಹೆಚ್ಚಿನ ಹಣ ಸಂಪಾದನೆ ಮಾಡಲಿಕ್ಕೆ ಅವಕಾಶ ಕೊಡಬೇಕು. ಬೆಂಗಳೂರು ನಗರದಲ್ಲಿ ಈದಿವಸ ಈ ಉದ್ಯಮವನ್ನು ಅವಲಂಬಿಸಿರುವ ಜನರು ಹೊಟ್ಟೆಗೆ ಇಲ್ಲದೆ ಸಾಯುತ್ತಿದ್ದಾರೆ. ತಕ್ಷಣ ಅವರ ರಕ್ಷಣೆಗೆ ಹೋಗದಿದ್ದರೆ, ಅವರಿಗೆ ಊಟಕ್ಕೆ ಇರುವುದಿಲ್ಲ, ನೀವೇ ಊಟ ಹಾಕಬೇಕಾಗುತ್ತದೆ. ನಾನು ವಾಸ್ತವಾಂಶವನ್ನು ಹೇಳುತ್ತಿದ್ದೇನೆ. ಎರಡು ಗಂಟೆ ಕೆಲಸಮಾಡಲು ಕೂಡ ಅವರಿಗೆ ಕೆಲಸ ಸಿಗುತ್ತಿಲ್ಲ. ಏಕೆಂದರೆ, ರೇಷ್ಮೆ ಬೆಲೆ ಎಷ್ಟು ಜಾಸ್ತಿಯಾಗಿದೆ ಎಂದರೆ ಒಂದು ಕೆ. ಜಿ. ಗೆ 120 ರೂಪಾಯಿ ಇದ್ದುದು ಈಗ 220 ರೂಪಾಯಿ ಆಗಿದೆ. ಅದಕ್ಕೆ ಹಲವಾರು ಕಾರಣಗಳು ಇವೆ. ಸರ್ಕಾರದವರು ರೇಷ್ಮೆ ತಯಾರು ಮಾಡುವವರಿಗೆ ಹೆಚ್ಚಿನ ಪ್ರೋತ್ಸಾಹ ಕೊಡುವ ಹಾಗೆ ನೇಕಾರರಿಗೂ ರಕ್ಷಣೆ ಕೊಡುವುದು ಜಗತ್ಯ. ಈ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳಬೇಕು. ಈ ಬಗ್ಗೆ ಮಾತನಾಡುವಾಗ ಕೆಲವು ವಿಷಯಗಳನ್ನು ನಾವು ಗಮನಕ್ಕೆ ತೆಗದುಕೊಳ್ಳಬೇಕಾಗಿದೆ. ಮುಖ್ಯಮಂತ್ರಿಗಳಿಗೆ ಪುನಃ ಮನವಿ ಮಾಡುತ್ತೇನೆ—ಬೆಂಗಳೂರು ನಗರದಲ್ಲಿಯೇ ಅಲ್ಲ ಇಡೀ ಮೈಸೂರು ದೇಶದಲ್ಲಿ ನೇಕಾರರು ದುಸ್ಥಿತಿಯಲ್ಲಿದ್ದಾರೆ. ಅವರ ನೆರವಿಗೆ ತಾವು ಬಾರದೆ ಹೋದರೆ ತಾವು ಇಲ್ಲಿ ಆಡಳಿತ ನಡೆಸಿ ಏನು ಪ್ರಯೋಜನ? ಅವರಿಗೆ ತಕ್ಷಣ ಸಹಾಯ ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಅಂದಾನಯ್ಯ (ಕುಣಿಗಲ್).—ಅಧ್ಯಕ್ಷಿಣಿಯವರೇ, ನಮ್ಮ ಮುಂದೆ ಮಂಡಿಸಿರತಕ್ಕ ಈ ಮೂರು ಬೇಡಿಕೆಗಳ ಬಗ್ಗೆ ನಾನು ಪೂರ್ತಿಯಾಗಿ ಬೆಂಬಲಿಸುತ್ತಾ ಕೆಲವು ಸಲಹೆಗಳನ್ನು ಕೊಡಲು ಇಚ್ಛಿಸುತ್ತೇನೆ. ಮೊದಲನೆಯದಾಗಿ, ಕೈಗಾರಿಕಾ ವಿಚಾರದಲ್ಲಿ ಮಾತನಾಡುತ್ತೇನೆ. ಸರ್ಕಾರದವರು ಯಾವುದೇ ಹೊಸ ಕೈಗಾರಿಕೆಯನ್ನು ತೆರೆದರೂ ಬೆಂಗಳೂರಿನಲ್ಲಿ ತೆರೆಯುತ್ತಾರೆ. ಇದರಿಂದ ಜನಸಂಖ್ಯೆ ಬೆಂಗಳೂರಿನಲ್ಲಿ ಜಾಸ್ತಿಯಾಗಿ, ಸಿಟಿಯಲ್ಲಿ ಮನೆಗಳು ಬಾಡಿಗೆಗೆ ದೊರೆಯುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಇದರಿಂದ ಜನಗಳಿಗೆ ಬಹಳ ತೊಂದರೆಯಾಗುತ್ತದೆ. ಮಾನ್ಯ ಮಂತ್ರಿಗಳಲ್ಲಿ ನಾನು ಅರಿಕೆ ಮಾಡಿಕೊಳ್ಳುವುದು ಏನೆಂದರೆ, ತಾಲ್ಲೂಕುಗಳಲ್ಲಿ ಮತ್ತು ಬೇರೆ ಬೇರೆ ಜಿಲ್ಲೆಗಳಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳನ್ನು ತೆರೆದು ಅಲ್ಲಿ ಕೆಲಸ ಸಿಕ್ಕುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಈ ಸಮಯದಲ್ಲಿ ನಾನು ಹೇಳಬಯಸುತ್ತೇನೆ. ಇವತ್ತು ಜನ ಕೈಗಾರಿಕೆಗಳನ್ನು ಷುರು ಮಾಡುವ ನೆಪದಲ್ಲಿ ಇಲ್ಲದ ಸಲ್ಲದ ಸುಳ್ಳುಗಳನ್ನು ಹೇಳಿಕೊಂಡು ಸುಳ್ಳು ಬೋರ್ಡುಗಳನ್ನು ಹಾಕಿಕೊಂಡು ಸಿಕ್ಕಿದಷ್ಟು ಸಾಲ ತೆಗೆದುಕೊಂಡು ದುರುಪಯೋಗ ಮಾಡುತ್ತಿದ್ದಾರೆ. ಸರ್ಕಾರದವರು ಇದರ ಕಡೆಗೆ ಗಮನಕೊಡಬೇಕು. ಯಾರು ಯಾರು ಕೈಗಾರಿಕೆಗಾಗಿ ಹಣವನ್ನು ತೆಗೆದುಕೊಂಡು ಹೋಗುತ್ತಾರೆ, ರಾ ಮೆಟೀರಿಯಲ್ಸ್ ತೆಗೆದುಕೊಂಡು ಹೋಗುತ್ತಾರೆ, ಅದನ್ನು ಅವರು ಸರಿಯಾದ ರೀತಿಯಲ್ಲಿ ಉಪಯೋಗ ಮಾಡುತ್ತಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಸಂಬಂಧಪಟ್ಟ ಅಧಿಕಾರಿಗಳು ಚೆಕ್‌ಮಾಡಿ, ಕೊಟ್ಟಂಥ ಸಾಲ ತೆಗೆದುಕೊಂಡು ಹೋದಂಥ ರಾಮೆಟೀರಿಯಲ್ಸ್ ಸದ್ವಿನಿಯೋಗವಾಗುತ್ತಿದೆಯೇ ಇಲ್ಲವೇ ಎನ್ನುವುದನ್ನು ತನಿಖೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇಡೀ ತುಮಕೂರು ಜಿಲ್ಲೆಯಲ್ಲಿ ಎಷ್ಟು ತರೀ ವ್ಯವಸಾಯವಾಗುತ್ತಿದೆ, ಅದರಲ್ಲಿ 58 ಪರ್ಸೆಂಟ್ ಕುಣಿಗಲ್ ತಾಲ್ಲೂಕು ಒಂದರಲ್ಲೇ ನಡೆಯುತ್ತದೆ. ಅನೇಕ ಜನ ರೈತರು ಕಬ್ಬು ಬೆಳೆಯುತ್ತಾರೆ; ರೈತ ಬೆಳದಂಥ ಕಬ್ಬಿಗೆ ಸರಿಯಾದ ಬೆಲೆ ಸಿಗುವುದಿಲ್ಲ. ಖಚ ಮಾಡಿದಷ್ಟು ಹಣವನ್ನು ವಾಪಾಸ್ ತೆಗೆದುಕೊಳ್ಳುವುದಕ್ಕ ಆಗುತ್ತಾ ಇಲ್ಲ. ಈ ಸಂದರ್ಭದಲ್ಲಿ ಕೈಗಾರಿಕಾ ಮಂತ್ರಿಗಳಲ್ಲಿ ಹೇಳಿಕೊಳ್ಳುತ್ತೇನೆ, ಕುಣಿಗಲ್ ತಾಲ್ಲೂಕಿನಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ತೆಗೆಯುವುದಕ್ಕೆ ಅವಕಾಶ ಮಾಡಿಕೊಟ್ಟು ಅದರಿಂದ ಅಲ್ಲಿನ ರೈತ ವರ್ಗದವರಿಗೆ ಸರಿಯಾದ ಬೆಲೆ ಸಿಗುವುದಕ್ಕೆ ಏರ್ಪಾಡು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಕೈಗಾರಿಕಾ ಮಂತ್ರಿಗಳು ಒಳ್ಳೆಯ ತರುಣರು ಇದ್ದಾರೆ. ಬಹಳ ಉತ್ಸಾಹಶಾಲಿಗಳು ಆಗಿದ್ದಾರೆ. ಕೈಗಾರಿಕಾ ಕ್ಷೇತ್ರದಲ್ಲಿ ಅನೇಕ ಜನ ಬಂಡವಾಳಶಾಹಿಗಳು ಸೇರಿಕೊಂಡು ಹೆಚ್ಚಿನ ಲಾಭ ಸಂಪಾದನೆ ಮಾಡುತ್ತಿದ್ದಾರೆ. ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದು ಏನೆಂದರೆ, ಈ ಬಂಡವಾಳಶಾಹಿಗಳಿಗೆ ಅವಕಾಶ ಕೊಡದೆ, ಸಾಮಾನ್ಯ ಜನಕ್ಕೆ, ಹಿಂದುಳಿದ ವರ್ಗದವರಿಗೆ, ರೈತಾಪಿ ಜನಕ್ಕೆ ಅನುಕೂಲವಾಗತಕ್ಕ ಕಾರ್ಖಾನೆಗಳನ್ನು ತಾಲ್ಲೂಕು ಮಟ್ಟದಲ್ಲಿ ತೆರೆದು ಅದರಿಂದ ಬಡ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಶ್ರೀ ಅಂದಾನಯ್ಯ)

ಇನ್ನು ರೇಷ್ಮೆ ಕೈಗಾರಿಕೆ ವಿಚಾರದಲ್ಲಿ ಹೇಳುವುದಾದರೆ, ಕುಣಿಗಲ್ ತಾಲ್ಲೂಕಿನಲ್ಲಿ ಇಡೀ ಮೈಸೂರು ದೇಶಕ್ಕೆ ಬೇಕಾಗುವಂಥ ಚಿತ್ತನೆ ಬೀಜವನ್ನು ತಯಾರು ಮಾಡತಕ್ಕ ಜನಕ್ಕೆ ಅಲ್ಲಿ ಏನಾಗಿದೆ ಎಂದರೆ ಕಷ್ಟಪಟ್ಟು ರೈತ ಚಿತ್ತನೆ ಬೀಜ ಬೆಳೆದಾಗ ಯಾವುದೇ ಒಂದು ಸರಿಯಾದ ಬೆಲೆ ಅವನಿಗೆ ಸಿಗುತ್ತಾ ಇಲ್ಲ. ಇವತ್ತು, ಇಡೀ ಮೈಸೂರು ದೇಶಕ್ಕೆ ಬೇಕಾಗುವಂಥ ರೇಷ್ಮೆ ಚಿತ್ತನೆ ಬೀಜವನ್ನು ಕುಣಿಗಲ್ ತಾಲ್ಲೂಕಿನ ಜನತೆಗೆ ಒದಗಿಸಬೇಕಾಗಿರುತ್ತದೆ. ಅಷ್ಟು ಕಷ್ಟಪಟ್ಟು ಬೆಳೆದಂಥ ಗೂಡಿಗೆ ಸರಿಯಾದ ಬೆಲೆ ಬಾರದೆಹೋದರೆ, ರೇಷ್ಮೆ ಕೈಗಾರಿಕೆಗೆ ಕುಂದಕ ಉಂಟಾಗುತ್ತದೆ. ನಾನಾದರೂ ಸರ್ಕಾರಕ್ಕೆ ಸಲಹೆ ಮಾಡುತ್ತೇನೆ, ‘‘ಸೀಡ್ ಏರಿಯಾ’’ ಎಂದು ಡಿಕ್ಲೇರ್ ಮಾಡಿ ಅಲ್ಲಿ ಬೆಳೆವಂಥ ಗೂಡನ್ನು ಸರ್ಕಾರದವರು ನ್ಯಾಯವಾದ ಬೆಲೆ ಕೊಟ್ಟು ಕೊಳ್ಳಬೇಕು. ಇದಕ್ಕೆ ಸೂಕ್ತ ಏರ್ಪಾಡು ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಏನು ಮೊಟ್ಟೆಗಳನ್ನು ತಯಾರು ಮಾಡಿ, ಸರ್ಕಾರ ರೈತನಿಗೆ ಕೊಡುತ್ತಾರೆ ಅದರಲ್ಲಿ ಕುಂದುಕಗಳು ಇವೆ. ನಮ್ಮಲ್ಲಿ ಯಾವಾಗಲೂ ರೋಗ ರಹಿತ ಮೊಟ್ಟೆಗಳನ್ನು ತಯಾರು ಮಾಡುತ್ತಾರೆ. ಆದರೆ ಮೊನ್ನೆ ನಮ್ಮ ತಾಲ್ಲೂಕಿನಲ್ಲಿ ಚಪ್ಪೆ ರೋಗ ಬಂತು, ಹೀಗಾಗಿ ಕಷ್ಟಪಟ್ಟು ಸಾಕಿದಂಥ ಬೆಳೆ ನಾಶವಾಗುತ್ತದೆ. ಸರ್ಕಾರ ಇದರ ಕಡೆಗೆ ಹೆಚ್ಚು ಗಮನ ಕೊಡಬೇಕು. ರೈತನಿಗೆ ರೋಗ ರಹಿತ ಮೊಟ್ಟೆಯನ್ನು ಸಪ್ಲೈ ಮಾಡಿ. ಇಡೀ ಪ್ರಪಂಚದಲ್ಲಿ ಪ್ರಖ್ಯಾತಿ ಹೊಂದಿದಂಥ ಮೈಸೂರು ಸಿಲ್ಕ್ ಆಕರ್ಷಣೀಯ ಸಿಲ್ಕ್ ಆಗಿದೆ. ಅನೇಕ ಪಾಶ್ಚಿಮಾತ್ಯ ಸ್ತ್ರೀಯರು ಈ ನಮ್ಮ ಮೈಸೂರು ಸೀರೆಗಳನ್ನು ಉಡುವುದಕ್ಕೆ ಅಭ್ಯಾಸ ಮಾಡಿದ್ದಾರೆ. ಈ ಉದ್ಯಮಕ್ಕೆ ಸರ್ಕಾರ ಹೆಚ್ಚಿನ ಪ್ರೋತ್ಸಾಹ ಕೊಡಬೇಕು ಎಂದು ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳಿಗೆ ಬೇಡಿಕೊಳ್ಳುತ್ತೇನೆ.

ಕೊನೆಯದಾಗಿ ನ್ಯಾಯಾಂಗದ ಇಲಾಖೆಯ ಬಗ್ಗೆ ಒಂದೆರಡು ಸಲಹೆಗಳನ್ನು ಕೊಡುತ್ತೇನೆ. ನ್ಯಾಯಾಂಗ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಜಡ್ಜಿಗಳಿಗೆ ಸಾಕಷ್ಟು ವೇತನ ದೊರಕುತ್ತಾ ಇಲ್ಲ. ಇವತ್ತು ನಾವು ನೋಡುವುದರಲ್ಲಿ ಅಲ್ಪಸ್ವಲ್ಪ ನ್ಯಾಯ ದೊರಕುತ್ತದೆ ಎಂಧರೆ ಮತ್ತು ಅಲ್ಪಸ್ವಲ್ಪ ಲಂಚಗುಳಿತನ ಕಡಿಮೆ ಇದೆ ಎಂದರೆ, ಅದು ಈ ನ್ಯಾಯಾಂಗ ಇಲಾಖೆ ಒಂದರಲ್ಲೇ. ಆದ್ದರಿಂದ ಈ ಸಂದರ್ಭದಲ್ಲಿ ನಾನು ಹೇಳುವುದು, ಈ ಜಡ್ಜಿಗಳಿಗೆ ಸಾಕಷ್ಟು ಹೆಚ್ಚು ವೇತನ ಮತ್ತು ಪ್ರೋತ್ಸಾಹ ಕೊಟ್ಟರೆ ಎಲ್ಲರಿಗೂ ನ್ಯಾಯ ದೊರಕುವುದಕ್ಕೆ ಅವಕಾಶವಾಗುತ್ತದೆ. ಜಡ್ಜಿಗಳಿಗೆ ಕ್ವಾರ್ಟರ್ಸ್ ಇಲ್ಲದೆ ಇರುವುದರಿಂದ ಇವರು ಎಲ್ಲರ ಜೊತೆಯಲ್ಲಿ ಸಂಪರ್ಕ ಬೆಳೆಸಿಕೊಂಡು ವಾಸ ಮಾಡುವುದಕ್ಕೆ ತೊಂದರೆಯಾಗುತ್ತದೆ. ಆದ್ದರಿಂದ ನಾನು ಸಲಹೆ ಮಾಡುವುದು ಏನೆಂದರೆ, ಈ ಕೋರ್ಟ್ ಆವರಣದಲ್ಲಿ ಪ್ರತಿಯೊಬ್ಬ ಜಡ್ಜಿಗೂ ಕ್ವಾರ್ಟರ್ಸ್ ಕಟ್ಟಿಸಿಕೊಡಬೇಕು ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕೊನೆಯದಾಗಿ ಈ ಜಡ್ಜುಗಳ ಒಂದು ನಿವೃತ್ತಿ ವಯಸ್ಸಿನ ಬಗ್ಗೆ ಇನ್ನು ಮುಂದೆ 55 ವರ್ಷಗಳಿಂದ 58 ವರ್ಷಗಳು ಮಾಡಬೇಕೆಂದು ಪ್ರೊಪೋಸಲ್ ಅನ್ನು ತರುತ್ತಾ ಇರುವ ವಿಷಯ ಗೊತ್ತಾಯಿತು. ಇದನ್ನು ಮಾಡುವುದಾದರೆ, ಅನೇಕ ಜನ ನ್ಯಾಯಾಧೀಶರಿಗೆ ತೊಂದರೆಯಾಗುತ್ತದೆ. ಏತಕ್ಕೆ ಈ ಮಾತು ಹೇಳುತ್ತೇನೆಂದರೆ ಇದೇ ರೀತಿ ಮದ್ರಾಸ್ ಮತ್ತು ಇತರ ರಾಜ್ಯಗಳಲ್ಲಿ ನ್ಯಾಯಾಧೀಶರ ನಿವೃತ್ತಿ ವಯಸ್ಸನ್ನು ಹೆಚ್ಚಿಸಬೇಕು ಎಂದು ಶಾಸನ ತಂದರು. ಒಂದು ವರ್ಷದಲ್ಲಿ ಅದನ್ನು ವಾಪಸ್ ತೆಗೆದುಕೊಂಡರು. ಆ ರೀತಿ ಆಗುವುದರಿಂದ ಅನೇಕ ಜನ ಒಂದು ವರ್ಷ 6 ತಿಂಗಳಲ್ಲಿ ಬಡ್ತಿ ಸಿಗುವ ನ್ಯಾಯಾಧೀಶರಿಗೆ ತೊಂದರೆಯಾಗುತ್ತದೆ. ಇದನ್ನು ಸರ್ಕಾರ ಕೂಲಂಕಷವಾಗಿ ಪರಿಶೀಲನೆ ಮಾಡಿ ನಿವೃತ್ತಿ ವಯಸ್ಸು ಏನು ಇದೆ ಅದನ್ನು ಹೆಚ್ಚಿಗೆ ಮಾಡುವುದನ್ನು ಕೂಲಂಕಷವಾಗಿ ನೋಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರಂ)—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ನಮ್ಮ ಮುಂದೆ ಇರತಕ್ಕಂಥ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ಸೂಚನೆಗಳನ್ನು ಕೊಡಲು ಬಯಸುತ್ತೇನೆ. ನ್ಯಾಯಾಂಗ ಸಚಿವರಿಗೆ ನ್ಯಾಯಾಲಯಗಳಲ್ಲಿ ಇರತಕ್ಕ ಕೆಲವು ಕಟ್ಟಡಗಳನ್ನು ನೋಡಿದರೆ ಬಹಳ ಮನಸ್ಸಿಗೆ ಆತಂಕವಾಗುತ್ತದೆ. ನ್ಯಾಯಾಲಯಗಳ ಕಟ್ಟಡಗಳು ಶುದ್ಧವಾಗಿರಬೇಕು ಸ್ವಲ್ಪ ಭದ್ರವಾಗಿರಬೇಕು. ಅನೇಕ ಕಳ್ಳತನ ಮಾಡಿದಂಥ ಪದಾರ್ಥಗಳು ಒಂದೇ ಕಡೆ ಇದ್ದು ನ್ಯಾಯಾಧೀಶರು ಅಲ್ಲೇ ಇದ್ದು ಬಹಳ ಹಿಂಸೆಯಾಗುತ್ತದೆ. ರೈತಾಪಿ ಜನ ಮತ್ತು ಕಕ್ಷಿಗಾರರಿಗೆ ಕೋರ್ಟ್ ಕಛೇರಿ ಹತ್ತಿರ ಅವರನ್ನು ಕರೆಯುವವರೆಗೆ ಅವರು ಕುಳಿತುಕೊಳ್ಳುವುದಕ್ಕೆ ಸ್ಥಳವಿಲ್ಲದೆ ಕಾಫಿ ತಿಂಡಿ ಸಿಕ್ಕದೇ ಇರತಕ್ಕ ಅನೇಕ ದುರವಸ್ಥೆಗಳಿಗೆ ಒಳಗಾಗಿದ್ದಾರೆ, ಅದಕ್ಕೆ ನಾನು ಸಲಹೆ ಮಾಡುವುದು ಏನೆಂದರೆ, ಕಟ್ಟಡಗಳನ್ನು ಕಟ್ಟಿಸಿ ಆ ಕ್ಯಾಂಟೀನನ್ನು ಟೆಂಡರ್

ರೂಪದಲ್ಲಿ ಕರೆದರೆ ನಿಮಗೆ ಆಗತಕ್ಕ ಖರ್ಚು ಎಲ್ಲವೂ ಬರುತ್ತದೆ ಎಂದು ನಾನು ಸಲಹೆ ಮಾಡುತ್ತೇನೆ. ಇನ್ನು ಕೈಗಾರಿಕಾ ಮಂತ್ರಿಗಳಿಗೆ ಒಂದು ಮಾತು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಭೂಮಿಯಲ್ಲಿ ಬೆಳೆಯುವ ಆಹಾರ ಪದಾರ್ಥಗಳು ಸಿವಾಯಿ ದಿನನಿತ್ಯದ ಬಳಕೆಗೆ ಬೇಕಾಗುವಂತ ಎಲ್ಲಾ ವಸ್ತುಗಳು ಕಾರ್ಖಾನೆಗಳಲ್ಲಿ ತಯಾರಾಗಬೇಕು. ಕಾರ್ಖಾನೆಗಳಲ್ಲಿ ತಯಾರು ಆಗತಕ್ಕ ವಸ್ತು ಅಲ್ಪ ಬೆಲೆಗೆ ಮನುಷ್ಯನಿಗೆ ದೊರೆಯಬೇಕು. ಆಗ ಪ್ರಜಾಪ್ರಭುತ್ವದಲ್ಲಿ ನೆಮ್ಮದಿ ಮತ್ತು ಶಾಂತಿ ಉಳಿಯತಕ್ಕದ್ದು ಕಂಡುಬರುತ್ತದೆ. ಈಗ ಏನಾಗಿದೆ ಒಂದು ಹೆಣ್ಣು ಮಗು ತುಟಿಗೆ ಬಳಿಯುವ ಬಣ್ಣ, ಕಣ್ಣಿಗೆ ಇಟ್ಟುಕೊಳ್ಳುವ ಬಣ್ಣ, ಜಡೆಗೆ ಹಣೆಯುವ ಟೇಪು, ಕ್ಷೌರ ಮಾಡಿಕೊಳ್ಳುವ ಬ್ಲೇಡ್ ಬಹಳ ಬೆಲೆಯಾಗಿದೆ. ಅನೇಕ ಹೆಣ್ಣುಮಕ್ಕಳು ಪೌಡರ್ ಹಚ್ಚಿಕೊಳ್ಳುವುದು ಬಿಟ್ಟಿರುತ್ತಾರೆ. ಅನುಕೂಲಸ್ಥರು ಮೈ ತಂಬಾ ಪೌಡರ್ ಹಚ್ಚಿಕೊಳ್ಳುವಭೋಗ ವಸ್ತುವನ್ನು ಸಾಮಾನ್ಯವಾಗಿ ಎಲ್ಲರೂ ಹಚ್ಚಬೇಕು. ಅಂಥಾದ್ದು ಸುಲಭ ಬೆಲೆಗೆ ದೊರೆಯಬೇಕಾದರೆ ಕಾರ್ಖಾನೆಯಲ್ಲಿ ಇರತಕ್ಕ ಕಾರ್ಮಿಕರು ಬಹಳ ಶ್ರದ್ಧಾಶಕ್ತಿಯಿಂದ ಕೆಲಸಮಾಡಬೇಕು ಮತ್ತು ಕಾರ್ಖಾನೆಗಳಲ್ಲಿ ವಹಿವಾಟು ನಡೆಸತಕ್ಕ ಇಲಾಖೆಯ ಅಧಿಕಾರಿಗಳ ತಜ್ಞರು ಆಗಿರಬೇಕು. ಶ್ರೀಮಾನ್ ಕೃಷ್ಣರವರು ಯುವಕರು ಮತ್ತು ಬಹಳ ಉತ್ಸಾಹಿಗಳು ಅವರು ಡೆಲ್ಲಿಯಿಂದ ಮೈಸೂರಿಗೆ ಬಂದಿದ್ದಾರೆ. ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರ ಹಾಗೆ ಆಗಬಾರದು, ಅವರು ಬೆಳೆಯಲಿ ಎಂದು ಈ ಮಾತುಗಳನ್ನು ಹೇಳುತ್ತೇನೆ. ಒಳ್ಳೆಯ ದಕ್ಷ ಮತ್ತು ತಜ್ಞ ಅಧಿಕಾರಿಗಳನ್ನು ಕಾರ್ಖಾನೆಗಳಿಗೆ ಹಾಕಿ. ಯಾವ ಒತ್ತಾಯ ಬಂದರೂ ಲಂಚಕೋರ ಅಧಿಕಾರಿಗಳನ್ನು ಮಾತ್ರ ಹಾಕಬಾರದು, ಮತ್ತು ಅದಕ್ಷ ಅಧಿಕಾರಿಗಳನ್ನು ಹಾಕಬೇಡಿ, ದಕ್ಷರಾಗಿ ಇದ್ದವರಿಗೆ ನಿಮ್ಮ ಕಾಲದಲ್ಲಿ ಪ್ರೋತ್ಸಾಹ ಬರಲಿ. ಖಾಸಗಿ ಜನ ಕಾರ್ಖಾನೆ ಇಟ್ಟರೆ, ಲಕ್ಷೋಪಲಕ್ಷ ರೂಪಾಯಿ ಲಾಭ ಆಗಿರತಕ್ಕದ್ದನ್ನು ಕಣ್ಣಾರೆ ನೋಡುತ್ತಿದ್ದೇವೆ. ಆದರೆ ಸರ್ಕಾರಿ ಕಾರ್ಖಾನೆ ಇಟ್ಟರೆ, ಲುಕ್ಸಾನು ಕಾಣುತ್ತದೆ. ಶ್ರೀಮಾನ್ ದೇವರಾಜ್ ಅರಸ್ ಅವರಿಗೆ ರೇಷ್ಮೆ ಖಾತೆಯ ವಿಷಯ ಚೆನ್ನಾಗಿ ಗೊತ್ತು. ನಮ್ಮ ಸರ್ಕಾರದವರು ಇದರಲ್ಲಿ ಮುಂದುವರೆದಿಲ್ಲ. ನಾಲ್ಕು ಬೇಸಿನ್ ಇಟ್ಟುಕೊಂಡು ಸರ್ಕಾರವನ್ನು ಎದುರಿಸುವ ಶಕ್ತರು ಆಗುತ್ತಾರೆ. ಶ್ರೀಮಾನ್ ಕೃಷ್ಣ ಅವರು ಏನು ರಾಜಕೀಯ ಒತ್ತಡ ಬಂದರೂ ಅದಕ್ಕೆ ಮಣಿಯದೆ ತಜ್ಞ ಅಧಿಕಾರಿಯನ್ನು ಲಂಚಕೋರರು ಇಲ್ಲದೆ ಇರುವವರನ್ನು ನಿಮ್ಮಂಥ ಯುವಕರು ಪ್ರೋತ್ಸಾಹ ಮಾಡಿ ಕೈಗಾರಿಕಾ ಕ್ಷೇತ್ರದಲ್ಲಿ ಲಂಚಕೋರತನ ನಿವಾರಣೆ ಮಾಡಿ ದಕ್ಷ ಆಡಳಿತ ಬೆಳಕಿಗೆ ಬಂದರೆ ಆಗ ಕೈಗಾರಿಕೆ ಚೆನ್ನಾಗಿ ನಡೆಯುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಬಂಡವಾಳಗಾರರು ಮತ್ತು ಲಂಚಕೋರ ಅಧಿಕಾರಿಗಳ ಹಿಡಿತಕ್ಕೆ ತಾವು ಯಾವಾಗಲೂ ಹೋಗಬಾರದು ಎಂದು ಹೇಳಿ ಇನ್ನು ರೇಷ್ಮೆ ವಿಭಾಗಕ್ಕೆ ಹೋಗುತ್ತೇನೆ. ಈ ರೇಷ್ಮೆ ವಿಭಾಗ ನಮ್ಮ ರಾಜ್ಯದಲ್ಲಿ ಇಬ್ಬರ ಕೈಗೆ ಸಿಕ್ಕಿಕೊಂಡಿದೆ. ವಾಣಿಜ್ಯ ವಿಭಾಗ ಮುಖ್ಯಮಂತ್ರಿಗಳಿಗೆ ಸೇರಿದೆ, ಸೆರಿಕಲ್ಚರ್, ಸ್ಟೇಟ್ ಮಿನಿಷ್ಟರ್ ಕೈಯಲ್ಲಿ ಇದೆ. ಯಾರಾದರೂ ಇಟ್ಟುಕೊಂಡು ರಾಜ್ಯ ಆಳಲಿ, ನನಗೆ ವ್ಯಸನವಿಲ್ಲ. ಇಲಾಖೆಯಲ್ಲಿ ದಕ್ಷತೆಯಿಂದ ಕಾರ್ಯ ನಡೆಯದೇ ಇರುವುದಕ್ಕೆ ಈ ರೀತಿ ವ್ಯವಸ್ಥೆ ಮಾಡಿರುವುದರಿಂದ ತೊಂದರೆಯಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ. ಈ ರೇಷ್ಮೆ ಕೈಗಾರಿಕೆ ಮೈಸೂರು ರಾಜ್ಯದಲ್ಲಿ ಬಹಳ ಪ್ರಮುಖ್ಯವಾದ ಕೈಗಾರಿಕೆಯಾಗಿದೆ. ರೇಷ್ಮೆ ಉತ್ತಮ ರೀತಿಯಲ್ಲಿ ಚೆನ್ನಾಗಿ ಬೆಳೆದರೆ ಪ್ರಾಯಶಃ ಅನೇಕ ರೈತರ ಮನೆ ಉದ್ಧಾರವಾಗುತ್ತದೆ. ರೈತರ ಮನೆ ಉದ್ಧಾರವಾದರೆ ನೀವು ಉಳಿಯುವುದು ಎಂದು ಅನೇಕಸಾರಿ ಹೇಳಿದ್ದೇನೆ. ನಿಜವಾಗಿ ಮುಂದುವರಿಯಬೇಕಾದರೆ ಒಳ್ಳೆಯ ಹೆಸರು ಎತ್ತಿ ಬೆಳೆಯಬೇಕಾದರೆ, ನಾನು ಜನರಿಗೆ ರೋಗವಿಲ್ಲದೆ ಇರುವ ಮೊಟ್ಟೆ ಕೊಡಬೇಕು. ಏತಕ್ಕೆ ಇಷ್ಟು ವರ್ಷಗಳಿಂದ ಆಗಲಿಲ್ಲ? ಇಲಾಖೆಯಲ್ಲಿ ಪರಿಣತಿ ಪಡೆದಂಥ ತಜ್ಞತೆ ಪಡೆದಂಥ ಅಧಿಕಾರಿಗಳು ಬರಲಿಲ್ಲ, ಅದು ಒಂದು ಶಾಪವಾಗಿತ್ತು. ದೇವರ ದಯೆಯಿಂದ ಇವೊತ್ತು ತಜ್ಞರು ಇಲಾಖೆಯಲ್ಲಿ ಇದ್ದಾರೆ, ಅವರಿಗೆ ಅತ್ಯಗತ್ಯವಾಗಿ ಪ್ರೋತ್ಸಾಹ ಸಕಾಲದಲ್ಲಿ ಸಿಕ್ಕಲೇಬೇಕು. ಆಗ ರೈತರ ಗೋಳು ಏನು ಇದೆ ಇದು ನಿವಾರಣೆಯಾಗುತ್ತದೆ ಎಂದು ನಾನು ನಮ್ರತೆಯಿಂದ ಸರ್ಕಾರಕ್ಕೆ ಸೂಚನೆ ಮಾಡುತ್ತೇನೆ. ರೋಗರಹಿತ ಮೊಟ್ಟೆಗಳನ್ನು ಕೊಡುವ ಕೆಲಸ ಮಾಡಬೇಕು ಎಂದು ಹೇಳುತ್ತೇನೆ. ರೈತ ಬೆಳೆಯತಕ್ಕ ಗೂಡನ್ನು ಸರ್ಕಾರದ ಮಾರ್ಕೆಟ್ಟಿಗೆ ತರಬೇಕು ಎಂದು ಕಡ್ಡಾಯವಾಗಿ ಕಾಯಿದೆ ಮಾಡಿದ್ದಾರೆ. ರೈತರು ಪ್ರೀತಿ ವಿಶ್ವಾಸದಿಂದ ಬೆಳೆದು ತಂದಂಥ ಗೂಡು ಮಾರ್ಕೆಟ್ಟಿಗೆ ಹೋದಾಗ ಏನು ಗತಿ ಆಗುತ್ತದೆ! ಆರೀತಿ ಆಗಬಾರದು. ಮಾರ್ಕೆಟ್ಟು ವ್ಯವಸ್ಥೆ ಚೆನ್ನಾಗಿ ಇರಬೇಕು. ಅವ್ಯವಸ್ಥೆ ಇದ್ದರೆ ಸರ್ಕಾರ ಟೀಕೆಗೆ ಒಳಗಾಗಬೇಕಾಗುತ್ತದೆ. ಆದ್ದರಿಂದ ನಾನು ನಮ್ರತೆಯಿಂದ ಪ್ರಾರ್ಥನೆ ಮಾಡುತ್ತೇನೆ. ಸರ್ಕಾರ ಗೂಡಿನ ಮಾರ್ಕೆಟಿಗೆ ಸೂಕ್ತ ಕಟ್ಟಡ ಕೊಡಬೇಕು. ಪ್ರಾಮುಖ್ಯವಾಗಿ ಮೈಸೂರು ರಾಜ್ಯದಲ್ಲಿ ರೇಷ್ಮೆ ಗೂಡಿನ ಮಾರ್ಕೆಟಿನಲ್ಲಿ ರಾಮನಗರ ಮೊದಲನೆಯದು. ಸಿಡ್ಲಗಟ್ಟ ಮತ್ತು ರಾಮನಗರ ಎರಡೂ ಪ್ರಾಮುಖ್ಯವಾದುವು. ಸರ್ಕಾರ ಶೀಘ್ರವಾಗಿ ಇಲ್ಲಿ ಕಟ್ಟಡಗಳ ವ್ಯವಸ್ಥೆ

(ಶ್ರೀ ಬಿ. ಪುಟ್ಟಸ್ವಾಮಯ್ಯ)

ಮಾಡಬೇಕು. ಇನ್ನು ಒಂದು ಕಡೆ ಸರ್ಕಾರ ಇನ್ನೂ ಗಮನಕೊಟ್ಟಿಲ್ಲ. ನಾನು ಮಾನ್ಯ ಮುಖ್ಯ ಮಂತ್ರಿಗಳನ್ನು ಪ್ರಾರ್ಥನೆ ಮಾಡುತ್ತೇನೆ. ರೈತ ಬೆಳೆದಂಥ ಗೂಡು ಮಾರ್ಕೆಟ್ಟಿಗೆ ಬಂದು ಬಹಿರಂಗವಾಗಿ ವ್ಯಾಪಾರವಾಗಬೇಕು ಎಂದು ಕಡ್ಡಾಯ ಮಾಡಿದ್ದಾರೆ ಸಂತೋಷ. ಬೀಜವಾಗತಕ್ಕ ರೇಷ್ಮೆ ರಾಜ್ಯದಲ್ಲಿ ಬೆಂಗಳೂರು ನಗರದಲ್ಲಿ ಒಂದೇ ಕಡೆ ಬಹಿರಂಗವಾಗಿ ರೆಗ್ಯೂಲೇಟೆಡ್ ಮಾರ್ಕೆಟ್ಟಿನಲ್ಲಿ ಬರಬೇಕಾಗಿದೆ. ಹಾಗೆ ತಂದಂಥ ಬೀಜದ ರೇಷ್ಮೆ ಬೆಳೆಗಾರರಿಗೆ ಸೂಕ್ತವಾದಂಥ ಬೆಲೆಗೆ ದೊರಕುವಂತೆ ವ್ಯವಸ್ಥೆ ನಿಮ್ಮ ಕಾಲದಲ್ಲಿ ಆಗಬೇಕು. ಸಮಾಜವಾದ ಎಂದು ಹೇಳತಕ್ಕ ಜನ ನೀವು ಈ ರೇಷ್ಮೆ ಕೋಟಿಯವರನ್ನು ಬಂಡವಾಳಗಾರರನ್ನು ಬೆಳೆಯುವುದಕ್ಕೆ ಬಿಡುವುದು ಸರಿಯಲ್ಲ. ಶ್ರೀಮಾನ್ ದೇವರಾಜ್ ಅರಸ್ ಅವರಿಗೆ ಈ ರೇಷ್ಮೆ ವ್ಯವಸಾಯದ ಬಗ್ಗೆ ನೈಪುಣ್ಯತೆ ತುಂಬಿ ಇದೆ ಎಂಬುದು ನನಗೆ ಗೊತ್ತು. ಅನೇಕ ಬಡ ಜನರು ಇಂದು ರೇಷ್ಮೆ ಕೋಠಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ರೇಷ್ಮೆ ಮಾರಾಟಕ್ಕಾಗಿ ಸ್ಟೇಟ್ ಸಿಲ್ಕ್ ಮಾರ್ಕೆಟಿಂಗ್ ಸೊಸೈಟಿ ಎಂದು ಮಾಡಿದ್ದಾರೆ. ಇದರಲ್ಲಿ ಬಹಳ ಅನಾಯಕತ್ವ ನಡೆಯುತ್ತಿದೆ. ಮಾನ್ಯ ಮುಖ್ಯ ಮಂತ್ರಿಗಳು ಟಕ್ನಿಕಲ್ ಆಡಿಟ್ ಸೆಲ್ ಎಂದು ಮಾಡಿದ್ದಾರೆ. ಅವರ ಮೂಲಕ ಈ ಸಂಸ್ಥೆಯ ಲೆಕ್ಕಗಳನ್ನು ಪರಿಶೀಲನೆ ಮಾಡಿ ಇವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಮತ್ತು ರೇಷ್ಮೆ ಮಾರತಕ್ಕ ವ್ಯವಸಾಯಗಾರರಿಗೆ ರೋಗವಿಲ್ಲದ ಮೊಟ್ಟೆಗಳನ್ನು ಸರಬರಾಜು ಮಾಡಿ ಮಾರಬೇಕು ಎಂದು ಸಲಹೆ ಮಾಡುತ್ತೇನೆ.

ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

6–00 P.M.

† ಶ್ರೀ ಹೆಗ್ರೆ ಪರಶುರಾಂ ಪದ್ಮಣ್ಣ (ಚಿಕ್ಕೋಡಿ).—ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ಮಾನ್ಯ ಮಂತ್ರಿಗಳು ಸಭೆಯ ಮುಂದೆ ಇಟ್ಟಿರುವ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಬೆಂಬಲಿಸಿ ನಮ್ಮ ಸರಕಾರಕ್ಕೆ ಕೆಲವು ಸೂಚನೆಗಳನ್ನು ಕೊಡಬಯಸುತ್ತೇನೆ. ಕೆಲವಾರು ವಿಷಯಗಳಲ್ಲಿ ನನ್ನಲ್ಲಿ ನಿರ್ದಿಷ್ಟ ಸೂಚನೆಗಳು ಇಲ್ಲದಿದ್ದರೂ ಸಮಾಜ ವಾದವನ್ನು ನಮ್ಮ ರಾಜ್ಯದಲ್ಲಿ ತರುವ ಎಲ್ಲಿಲ್ಲಿ ಉದ್ದೇಶವನಿಟ್ಟುಕೊಂಡು ಸಾಧ್ಯವಿದೆಯೋ ಅಲ್ಲೆಲ್ಲಾ ಉದ್ಯಮಗಳನ್ನು ನಿರ್ಮಿಸಿ ನಿರುದ್ಯೋಗಿ ಜನರಿಗೆ ತಕ್ಕ ಉದ್ಯೋಗ ದೊರಕಿಸಿಕೊಟ್ಟು ಅವರಿಗೆ ಒಂದು ಉಪ ಜೀವನ ಮಾಡಲು ಅವಕಾಶ ಮಾಡಿಕೊಡಬೇಕೆಂದು ಸರಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಆಮೇಲೆ ನಮ್ಮ ರಾಜ್ಯದಲ್ಲಿರುವ ಕಾಯಿದೆಗಳು ಸಾಮಾನ್ಯ ಜನರ ಉನ್ನತಿಗೆ ಬಹಳ ಅಡಚಣೆಗಳನ್ನು ಉಂಟು ಮಾಡುತ್ತಿವೆ. ಇಂತಹ ಕಾನೂನು ಕಾಯಿದೆಗಳನ್ನು ಸರಕಾರದವರು ಬದಲಿಸಿ ಇದನ್ನು ತಿದ್ದುಪಡಿ ಮಾಡಿ ಸಾಮಾನ್ಯ ಜನಕ್ಕೆ ಅನುಕೂಲವಾಗುವಂತಹ ಕಾಯಿದೆಗಳನ್ನು ತರಬೇಕೆಂದು ಸಲಹೆ ಮಾಡುತ್ತೇನೆ. ಇದರ ಬಗ್ಗೆ ಮುಂದೆ ಕೆಲವಾರು ಉದಾಹರಣೆಗಳನ್ನು ಕೊಡುತ್ತೇನೆ. ನಮ್ಮದು ಪ್ರಜಾಸತ್ತಾತ್ಮಕವಾದ ರಾಜ್ಯ. ರಾಜನೀತಿಜ್ಞರು ಪ್ರಜಾಸತ್ತಾತ್ಮಕರಾಜ್ಯ ಪದ್ಧತಿಯು. ಇದು ಒಂದು ಉತ್ತಮವಾದ ರಾಜಕೀಯ ಪದ್ಧತಿ ಎಂದು ಹೇಳುತ್ತಾರೆ. ಇಂತಹ ಪ್ರಜಾಸತ್ತೆಯನ್ನು ನಾವು ರಕ್ಷಣೆ ಮಾಡಬೇಕೆಂದು ಇದನ್ನು ಸ್ವೀಕರಿಸಿದ್ದೇವೆ ಮತ್ತು ಅದರಲ್ಲೂ ಸಮಾಜವಾದವನ್ನು ತರಬೇಕೆಂದು ನಿರ್ಧಾರ ಮಾಡಿದ್ದೇವೆ ಮತ್ತು ಈ ದಾರಿಯಲ್ಲಿ ನಾವು ಹೊರಟಿದ್ದೇವೆ. ಸರಕಾರ ಕಾಯಿದೆ ಮಾಡುವಾಗ ಅದು ಜನರ ಹಿತಕ್ಕಾಗಿ ಮಾಡಬೇಕು. ಆದರೆ ಜನರ ಹಿತಕ್ಕೆ ಅಡಚಣೆಯುಂಟು ಮಾಡುವಂತೆ ಮಾಡಬಾರದು, ಇದು ಸ್ಪಷ್ಟವಾದ ಮಾತು. ನಮ್ಮ ಘಟನಕಾರರು ಇದನ್ನು ಒಪ್ಪಿ ಒಂದು ಘಟನೆಯನ್ನು ಮಾಡಿದ್ದಾರೆ. ಇದರಲ್ಲಿ ಫಂಡಮೆಂಟಲ್ ರೈಟ್ಸ್ ಹಾಗೂ ಡೈರೆಕ್ಟೀವ್ ಪ್ರಿನ್ಸಿಪಲ್ಸ್‌ಗಳನ್ನು ನಿರ್ಮಿಸಿದ್ದಾರೆ. ಇವುಗಳ ಮಧ್ಯೆ ವಾದ ನಡೆದು ಇವುಗಳಲ್ಲಿ ಯಾವುದು ಶ್ರೇಷ್ಠ ಎನ್ನುವ ವಾದಗಳು ನಡೆಯುತ್ತಿವೆ. ಇದರಲ್ಲಿ ಕೆಲ ತಜ್ಞರು ಡೈರೆಕ್ಟೀವ್ ಪ್ರಿನ್ಸಿಪಲ್ಸ್‌ಗಳು ಶ್ರೇಷ್ಠವೆಂದು ಹೇಳುತ್ತಾರೆ. ಇನ್ನು ಕೆಲವರು ಫಂಡಮೆಂಟಲ್ ರೈಟ್ಸ್‌ಗಳು ಶ್ರೇಷ್ಠ ಎಂದು ಹೇಳುತ್ತಾರೆ. ಇವು ಒಂದಕ್ಕೊಂದು ಸಹಾಯಕವಾಗಿ ಹೋಗಬೇಕೇ ಹೊರತು ವಿರುದ್ಧವಾಗಿ ಅಲ್ಲ. ಈಚೆಗೆ ಕೆಲವು ಕೇಸುಗಳಲ್ಲಿ ಅಂದರೆ ಗೋಲಕ್‌ನಾಥ್ ಕೇಸಿನ ಬಗ್ಗೆ ಹಾಗೂ ಬ್ಯಾಂಕುಗಳ ರಾಷ್ಟ್ರೀಕರಣಗಳ ಕೇಸುಗಳು ಬಂದಾಗ ಇದರಲ್ಲಿನ ನ್ಯಾಯಾಧೀಶರುಗಳು ಫಂಡಮೆಂಟಲ್ ರೈಟುಗಳೇ ಶ್ರೇಷ್ಠವೆಂದು ತೀರ್ಮಾನವನ್ನು ಕೊಟ್ಟಿದ್ದಾರೆ. ಆದರೆ ಇದರಲ್ಲಿ ಡೈರೆಕ್ಟೀವ್ ಪ್ರಿನ್ಸಿಪಲ್ಸ್‌ಗಳಿಗೆ ಯಾವ ಬೆಲೆಯೂ ಇಲ್ಲವೆಂಬಲಾಗಿದೆ. ಫಂಡಮೆಂಟಲ್ ರೈಟ್ಸ್‌ಗಳು ಸಾಮಾನ್ಯ

ಜನರ ಹಕ್ಕು. ಆದರೂ ಅವು ಆಸ್ತಿವಂತರ ಆಸ್ತಿಯನ್ನು ರಕ್ಷಣೆ ಮಾಡುವ ಹಕ್ಕುಗಳಾಗಿವೆ. ಆದರೆ ಸರಕಾರದಲ್ಲಿರುವ ಅಧಿಕಾರಿಗಳು ಕಾಯಿದೆ ಬಗ್ಗೆ ಸಾಮಾನ್ಯ ಜನಕ್ಕೆ ಸರಿಯಾದ ತಿಳುವಳಿಕೆ ಕೊಡದೆ ಇಲ್ಲದ ಅಡಚಣೆಗಳನ್ನು ಮಾಡುತ್ತಿದ್ದಾರೆ. ಸಾಮಾನ್ಯವಾಗಿ ಕೆಲವು ಕಾಯಿದೆಗಳು ಬಂದಿವೆ. ಉದಾಹರಣೆಯಾಗಿ ಟೆನೆನ್ಸಿ ಆಕ್ಟು ಬಂತು. ಇದರ ಜೊತೆ ಟೆನೆನ್ಸಿ ಲಾಸ್‌ಗಳೂ ಬಂದವು. ಆದರೆ ಇದರಿಂದ ಸಾಮಾನ್ಯ ಬಡ ರೈತರಿಗೆ ಹೆಚ್ಚು ಅನುಕೂಲವಾಗುವುದಿಲ್ಲ, ಇಲ್ಲದ ಅಡ್ಡಿ ಆತಂಕಗಳು ಇದರಿಂದ ಬರುತ್ತಿವೆ. ಉದ್ಯಮಗಳನ್ನು ಮಾಡಿ ಜನರಿಗೆ ಉದ್ಯೋಗಗಳನ್ನು ದೊರಕಿಸಿ ಕೊಡುವಾಗ ಸರಿಯಾದ ಅನುಕೂಲಗಳನ್ನು ಕೊಡುತ್ತಿಲ್ಲ. ಸಾಮಾನ್ಯ ಜನರಿಗೆ ಅನುಕೂಲವಾಗುವ ಹಾಗೆ ಅವರು ಒಂದು ಉಪಜೀವನ ಮಾಡಿಕೊಳ್ಳಲು ಸರಕಾರ ಸಹಾಯ ಮಾಡಬೇಕು. ಇದಕ್ಕಾಗಿ ಸಮತಾವಾದ ತರುತ್ತೇವೆ ಎಂದು ಸರಕಾರ ಘೋಷಣೆ ಮಾಡಿದೆ, ಅದರಂತೆ ಜನರಿಗೆ ಅನುಕೂಲ ಮಾಡಿ ಸಹಾಯ ಮಾಡುತ್ತಿಲ್ಲ. ಕೆಲವು ಕಡೆ ಹರಿಜನರಿಗೆ ಜಮೀನುಗಳನ್ನು ಕೊಡಬೇಕೆಂದು ಕಾಯಿದೆ ಇದ್ದರೂ ಅದರಂತೆ ಹರಿಜನರಿಗೆ ಅಲ್ಲಿ ಭೂಮಿಗಳನ್ನು ಕೊಡುತ್ತಿಲ್ಲ. ಇದರಿಂದ ಬಡ ಹರಿಜನರಿಗೆ ತೊಂದರೆಯಾಗಿದೆ. ಹೀಗಾದರೆ ಹರಿಜನರು ಉಪ ಜೀವನ ನಡೆಸಲು ಹೇಗೆ ಅನುಕೂಲವಾಗುತ್ತದೆ. ಇದಕ್ಕಾಗಿ ಇರುವ ಕಾಯಿದೆಯನ್ನು ಬದಲಾವಣೆ ಮಾಡಬೇಕು. ಕೂಳಿಲ್ಲದ ಮಾನವನೇ ಸಂಕಟದಲ್ಲಿದ್ದಾಗ ದನಗಳ ಬದುಕಿನ ಬಗ್ಗೆ ಚಿಂತೆ ಮಾಡುವುದು ಯಾವ ದೃಷ್ಟಿಯಿಂದಲೂ ಯೋಗ್ಯವೆನಿಸಲಾರದು.

ಸಹಕಾರ ಇಲಾಖೆಯಲ್ಲಿ ಜಾಯಿಂಟು ಫಾರ್ಮಿಂಗು ಸೊಸೈಟಿಗಳನ್ನು ಮಾಡುವಾಗ ಇಲ್ಲದ ಆತಂಕಗಳನ್ನು ತಂದು ಜನಕ್ಕೆ ಕೊಡುತ್ತಿದ್ದಾರೆ. ಜಾಯಿಂಟ್ ಫಾರ್ಮಿಂಗ್ ಸೊಸೈಟಿಗಳು ಸರಕಾರದ ಕಡೆಗೆ ಅಥವಾ ಬೇರೆ ಕಡೆಯೂ ಯಾವ ಸಹಾಯವನ್ನೂ ಕೇಳದೆ ಅವು ತಮ್ಮ ಕಾಲ ಮೇಲೆ ನಿಂತು ಕೆಲಸ ಮಾಡಬೇಕು ಎಂದು ಸಹಕಾರ ಇಲಾಖೆಯವರು ಸೊಸೈಟಿಗಳನ್ನು ಪ್ರತಿಬಂಧಿಸುತ್ತಿದ್ದಾರೆ. ಇಂತಹ ಸೊಸೈಟಿಗಳಿಂದ ಜನಕ್ಕೆ ಅನುಕೂಲವಾಗದೆ ಇದ್ದರೆ ಇಂತಹ ಸಂಸ್ಥೆಗಳನ್ನು ಬಂದ್ ಮಾಡುವುದೇ ಸರಿಯಾಗಿರುತ್ತದೆ. ಇದರ ಬಗ್ಗೆ ಸರಕಾರ ಸರಿಯಾದ ನಿರ್ಧಾರ ತೆಗೆದುಕೊಳ್ಳಬೇಕು. ಸರಕಾರ ಭೂಮಿಹೀನ ಜನ ತಮ್ಮ ಸ್ವಂತ ಕಾಲಿನ ಮೇಲೆ ನಿಲ್ಲಬೇಕು ಎಂದು ಹೇಳುತ್ತಾ ಸಮಾಜವಾದವನ್ನು ತರುತ್ತೇವೆ ಎಂದು ಹೇಳಿದರೆ ಅದರಿಂದ ಜನತೆಗೆ ಅನುಕೂಲವಾಗುತ್ತಿದೆಯೇ ಈ ವಿಷಯದಲ್ಲಿ ಯೋಗ್ಯ ಪರಿಶೀಲನೆ ಮಾಡಿ ಇಂತಹ ಅಡಚಣೆಗಳನ್ನು ಸರಕಾರ ಕೂಡಲೇ ತೆಗೆದುಹಾಕಬೇಕು. ಹೀಗೆ ಮಾಡದೇ ಬರೀ ಸಮಾಜವಾದ ತರುತ್ತೇವೆ ಎಂದು ಹೇಳುವುದನ್ನು ನೋಡಿ ನನಗೆ ತುಂಬಾ ವಿಷಾದವಾಗುತ್ತದೆ.

ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†Sri **M. VEERAPPA MOILY** (Karkal).—Madam Speaker, I welcome the Demands for grant presented by our dynamic Minister for Industries Sri S. M. Krishna. We can classify the industries into two categories, (1) large scale industries, and (2) small scale industries. In these industries, the Government involves itself firstly by way of capital formation by the institutions like the Mysore Industrial Development Corporation and Mysore State Financial Corporation, and secondly by providing infra-structure for the industrial base. But from the practical experience we can find out that they have not provided finance to the industries started on Joint Stock basis as also on public sector basis. They have also not provided finance to the establishments based on proprietor and partnership basis. I understand that the Government will step into those industries which would be started on Proprietory and partnership basis. By providing finance by these financial institutions and also by providing infra-structure, we have not been able to achieve much in our State. One thing we can understand that whenever the Government proposes a plan, it will plan for the people of the State and it is for the industrial and economic development of the State. But by providing finance of the nature which I

(SRI VEERAPPA MOILY)

have already stated, we have only invited the entrepreneurs of outside. For example, somewhere in the latter half of 1970, we have attracted quite a large number of entrepreneurs from Calcutta. They came over to our State because there was industrial unrest in West Bengal. The Cauvery Steel Limited and the Baruqa Steel Limited, have come from Calcutta and have settled in our State. I understand that the Government has financed to the extent of Rs. 22 lakhs to Cauvery Steel Limited. On account of the financial assistance rendered to that firm, that firm has come to stay in our State. After all, as I have already pointed out, we have not done much to the industrial development of our State by providing financial assistance. If we teak the assessment of the industrial development in the State, we can find out that 60 per cent of the entrepreneurs are from Calcutta. We know that by developing the industries, we will be improving our economic condition and we will be solving the unemployment problem.

I would like to offer some suggestions with regard to the development of industries in our State. But before I deal with this point, I would like to state that few officers of the industries department are controlling our industries. If we take the over all position with regard to the Industrial development, I do not think the Industries Department has done much in this direction.

We have the history of industrial development in our State. In fact, our great man Dr. Sir M. Visveswarayya is the person who gave a clarion call to our industrial development in our State. At that time, Madras and some other industrially advanced States were far behind Mysore State. It was Mysore State which came forward for establishing industries. It is only after few years later, the Tatas started the Steel Industry. We were the first to start the Iron Works at Bhadravati. We had started Cement Factory and Paper Mills and the Silk Mills. We cannot say that we have no entrepreneurs in our State to start the industries.

With regard to the localisation of industries, I can say that we have to go on a phased programme. Wherever raw materials are there we have to develop the industrial complex. For example, wherever the sugar factories are there, we can obtain molasses. We can develop the Plastic industries. Wherever Cotton is available, we can start Mills. We have got a number of Engineers working in Textile Mills in Bombay and other places. These engineers are occupying highest position in those Mills. We have not made any attempts to attract our Engineers working elsewhere.

Regarding starting of Carpet Industries, I may inform you that the Government of India has given a letter of intent to some person to start that industry. I am told the OCM which is owned by Birla Company. I request the Government to advice the Central Government

not to issue licence for starting this industry. This matter may kindly be looked into by the Industrial Development authority and take steps to see that the licence is not given to this company.

As far as South Kanara is concerned, there are raw materials, like sand and silica are available in plenty. On account of the removal of prohibition, bottles are required for filling in beer and other alcoholic liquors. There is ample scope for starting a Glass Industry in South Kanara District. This would be a profitable concern. I request Government to examine the feasibility of starting a Glass Industry in South Kanara District. White clay and China clay are available in plenty in South Canara and also in Malnad areas. The availability of this raw material will be helpful in starting a Ceramic Factory at South Kanara. This would be a beneficial concern. The Porcelain Factory at Bangalore, prepares only insulators for the MSEB and it has not fulfilled the requirements of our State.

We are selling the highest grade ore at Rs. 8 per ton. In fact we can get Rs. 300 if it is properly processed. This matter may also be examined by the Industries Department.

I urge upon the Government to take up the starting of woodbased industries. I am told that a survey has been made in this respect. There is great demand for the articles from France. This will be an attractive industry if it is takenup in Malnad areas including Mangalore. A woodbased industry was started at Hunsur but that did not succeed well. This would be a good industry if it is started with proper intellectual people It would be a successful project in our State.

SRI S. M. KRISHNA.—The Hon. member mentioned something about the licence and letter of intent etc. May I know to whom the Government of India has issued letter of intent ?

SRI M. VEERAPPA MOILY.- I shall pass on the information to the Hon. Minister.

With these few words, I conclude my speech. I thank the Chair for having given me this opportunity to speak on this Demand.

†ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಮಾನ್ಯ ಸಚಿವರು ಇವೊತ್ತು ಏನು ಬೇಡಿಕೆಗಳನ್ನು ಈ ಸಭೆಯ ಮುಂದೆ ಮಂಡನೆ ಮಾಡಿದ್ದಾರೆ ಅವುಗಳನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತಾ ಎರಡು ಮಾತುಗಳನ್ನು ಹೇಳುವುದಕ್ಕೆ ನಿಂತಿದ್ದೇನೆ. ಮೊಟ್ಟಮೊದಲನೆಯದಾಗಿ ನ್ಯಾಯಾಲಯದ ಬಗ್ಗೆ ಹೇಳುವುದಾದರೆ ಇವೊತ್ತು ಸರ್ಕಾರ ನ್ಯಾಯವನ್ನು ವಿತರಣೆ ಮಾಡುವ ಬಗ್ಗೆ ಜನಾಭಿಪ್ರಾಯವನ್ನು ಸಂಗ್ರಹಣೆ ಮಾಡಿದರೆ ಯಾವ ರೀತಿ ಜನತೆಗೆ ನ್ಯಾಯವನ್ನು ವಿತರಣೆ ಮಾಡುತ್ತಿದ್ದಾರೆ ಎಂಬುದು ತಿಳಿಯುತ್ತದೆ. ನ್ಯಾಯ ವಿತರಣೆಯು ವೇಗವಾಗಿ ಬೇಗ ಆಗಬೇಕಾದುದು ಅವಶ್ಯಕ. ಅದಕ್ಕೋಸ್ಕರ ತೀವ್ರ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕು ಮತ್ತು ಸಂಬಂಧಪಟ್ಟವರಿಗೆ ಆ ಬಗ್ಗೆ ಸೂಚನೆಗಳನ್ನು ಕೊಡಬೇಕು. ಮುಖ್ಯವಾಗಿ ಪ್ರತಿಯೊಂದು ತಾಲ್ಲೂಕಿಗೂ ಕೋರ್ಟನ್ನು ಕೊಡಬೇಕು. ಈ ಬಗ್ಗೆ ಬಹಳ ಜನ ಕೇಳುತ್ತಿದ್ದಾರೆ. ಪ್ರತಿಯೊಂದು ಸಣ್ಣ ಪುಟ್ಟ ಕೇಸುಗಳಿಗೂ ಕೂಡ ಜಿಲ್ಲಾಮಟ್ಟಕ್ಕೆ ಬಂದು ಹೋಗಬೇಕು: ಇದರಿಂದ ಕೇಸುಗಳು ಇತ್ಯರ್ಥವಾಗುವುದು ವಿಳಂಬವಾಗುವುದಲ್ಲದೆ ಬಡವರಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲಿಯೂ ಒಂದೊಂದು ಕೋರ್ಟನ್ನು ಕೊಡಬೇಕು ಎನ್ನುವುದನ್ನು ಈ ಸಂದರ್ಭದಲ್ಲಿ ಸೂಚಿಸುತ್ತೇನೆ.

(ಶ್ರೀ ಕೊಣಂದೂರು ಲಿಂಗಪ್ಪ)

ಇವೊತ್ತು ಎಲ್ಲಾ ಕೋರ್ಟುಗಳಲ್ಲಿಯೂ ಎಷ್ಟು ಕೇಸುಗಳು ಇತ್ಯರ್ಥವಾಗದೆ ಉಳಿದಿವೆ ಎಂಬುದನ್ನು ಪರಿಗಣಿಸಿದರೆ ಜನತೆಗೆ ಎಷ್ಟು ತೊಂದರೆ ಆಗುತ್ತದೆ ಎಂಬುದು ತಮಗೆ ಗೊತ್ತಾಗುತ್ತದೆ. ಮುಖ್ಯವಾಗಿ ಇವೊತ್ತು ನಮ್ಮ ಜನಗಳಿಗೆ ಯಾವ ಭಾಷೆಯಲ್ಲಿ ನ್ಯಾಯಾಲಯದ ವ್ಯವಹಾರ ಮತ್ತು ತೀರ್ಪು ಆಗಬೇಕೋ ಅದು ಆ ಭಾಷೆಯಲ್ಲಿ ಆಗದೇ ಇರುವುದು ಒಂದು ದೊಡ್ಡ ಲೋಪ. ಯಾರ ಸಲುವಾಗಿ ಈ ಸರ್ಕಾರ ಇದೆಯೋ ಅವರಿಗೆ ಅವರ ಭಾಷೆಯಲ್ಲಿ ನ್ಯಾಯಾಲಯದ ವ್ಯವಹಾರಗಳು ಮತ್ತು ತೀರ್ಪುಗಳು ದೊರಕದೆ ಬೇರೆಯವರ ಭಾಷೆಯಾದ-ಮೆಕಾಲೆಯವರ ಭಾಷೆಯಾದ ಇಂಗ್ಲೀಷ್‌ನಲ್ಲಿ ಅದು ದೊರೆಯುತ್ತಿದೆ. ಇದು ಸರಿಯಲ್ಲ. ಕನ್ನಡ ನಾಡಿನ ಸರ್ಕಾರದ ಆಡಳಿತ ಮತ್ತು ನ್ಯಾಯಾಲಯದ ವ್ಯವಹಾರ ಮತ್ತು ನ್ಯಾಯಾಲಯದ ತೀರ್ಪುಗಳು ಕನ್ನಡ ಭಾಷೆಯಲ್ಲಿ ಆಗಬೇಕು. ಕಾಯಿದೆ ಪುಸ್ತಕಗಳು ಕನ್ನಡದಲ್ಲಿ ಬರಬೇಕು. ಈ ಮೂರು ವಿಚಾರಗಳನ್ನು ಸರ್ಕಾರ ತಕ್ಷಣ ಜಾರಿಗೆ ತರಬೇಕು.

ಪಾರ್ಲಿಮೆಂಟ್ ಅಫೇರ್ಸ್ ಬಗ್ಗೆ ಹೇಳುವುದಾದರೆ ಆ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಈ ಬಗ್ಗೆ ಅನೇಕ ಸ್ನೇಹಿತರು ಹೇಳಿದ್ದಾರೆ. ಇವೊತ್ತು ನಮ್ಮ ಇಡೀ ಕರ್ನಾಟಕ ರಾಜ್ಯದ ವಿಧಾನ ಮಂಡಲದಲ್ಲಿ ಕೇವಲ 11 ಮಂದಿ ಕನ್ನಡ ವರದಿಗಾರರು ಇದ್ದಾರೆ. ಅವರ ಸಂಖ್ಯೆಯನ್ನು 16ಕ್ಕೆ ಏರಿಸಬೇಕು. ಮಹಾರಾಷ್ಟ್ರ ಮತ್ತು ಆಂಧ್ರ ಈ ರಾಜ್ಯಗಳಲ್ಲಿ ವರದಿಗಾರರಿಗೆ ಏನು ವೇತನ ಮತ್ತು ಅಲೋಯನ್ಸ್‌ಗಳನ್ನು ಕೊಡುತ್ತಿದ್ದಾರೆಯೋ ಅದೇ ರೀತಿ ನಮ್ಮ ಈ ವರದಿಗಾರರಿಗೂ ಕೊಡಬೇಕು. ಈಗ ನಮ್ಮ ರಾಜ್ಯದಲ್ಲಿ ಕನ್ನಡ ಟೈಪಿಸ್ಟ್ಸ್ ಮತ್ತು ಕನ್ನಡ ಸ್ಟೆನೋಗ್ರಾಫರುಗಳಿಗೆ ಏನು ಟೈಪಿಂಗ್ ಭತ್ಯವನ್ನು ಕೊಡುತ್ತಿದ್ದಾರೆಯೋ ಅದೇ ರೀತಿ ನಮ್ಮ ಕನ್ನಡ ವರದಿಗಾರರಿಗೂ ಟೈಪಿಂಗ್ ಭತ್ಯವನ್ನು ಕೊಡಬೇಕು. ನಮ್ಮ ವಿಧಾನ ಮಂಡಲದ ಅಧಿವೇಶನ ನಡೆಯುವಾಗ ಅವರಿಗೆ ಓವರ್ ಟೈಮ್ ಅಲೋಯನ್ಸ್ ಅನ್ನು ಒಂದು ಗಂಟೆಗೆ 5 ರೂಪಾಯಿಗಳಂತೆ ಓವರ್‌ಟೈಮ್ ಅಲೋಯನ್ಸ್ ಕೊಡಬೇಕು ಎಂದು ನಾನು ಹೇಳುತ್ತೇನೆ.

ನಮ್ಮ ಲೆಜಿಸ್ಲೇಚರ್‌ನಲ್ಲಿ ಪ್ರೊಸೀಡಿಂಗ್ಸ್ ಒಂದು ಕಡೆ, ಲೈಬ್ರರಿ ಒಂದು ಕಡೆ, ರೀಡಿಂಗ್ ರೂಮ್ ಒಂದು ಕಡೆ ಇದೆ. ಇದು ಶಾಸಕರಿಗೆ ಅನುಕೂಲವಾಗಿಲ್ಲ. ಆದಕಾರಣ ಇವೆಲ್ಲವನ್ನೂ ಸೇರಿಸಿ ಒಂದೇ ಕಡೆ ಒಂದು ಸುಂದರವಾದ ಮಂದಿರವನ್ನು ಕಟ್ಟಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಅಪೇಕ್ಷೆ ಮಾಡುತ್ತೇನೆ.

ರೆವಿನ್ಯೂ ಅಧಿಕಾರಿಗಳಿಗೆ ಎಂದರೆ ತಹಶೀಲ್ದಾರರು ಮತ್ತು ಅಸಿಸ್ಟೆಂಟ್ ಕಮಿಷನರುಗಳ ಕೈಯಲ್ಲಿ ನ್ಯಾಯ ವಿತರಣೆಯ ಅಧಿಕಾರವನ್ನು ಕೊಟ್ಟಿದ್ದಾರೆ. ಅದನ್ನು ಸಂಪೂರ್ಣವಾಗಿ ನ್ಯಾಯಾಲಯಕ್ಕೆ ಕೊಡಬೇಕು. ಅದರಿಂದ ಜನಗಳಿಗೆ ಹೆಚ್ಚಿನ ಪ್ರಯೋಜನ ಆಗುತ್ತದೆ. ಈ ದೃಷ್ಟಿಯಿಂದ ರೆವಿನ್ಯೂ ಅಧಿಕಾರಿಗಳ ಕೈಯಲ್ಲಿ ನ್ಯಾಯಾಂಗದ ಕಾನೂನನ್ನು ಕೊಡುವುದರಿಂದ ಬಹಳ ಅನ್ಯಾಯವಾಗುತ್ತದೆ. ಅದು ಸಾಧುವಾದದ್ದಲ್ಲ. ಆದ್ದರಿಂದ ಅದನ್ನು ತಕ್ಷಣ ನ್ಯಾಯಾಧಿಕಾರಿಗಳಿಗೆ ವಹಿಸಿಕೊಡಬೇಕು.

ವಿಧಾನಪರಿಷತ್ತಿನ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಇದು ಒಂದು ರೀತಿಯಿಂದ ತಲೆಶಿರೋಭಾರವಾಗಿದೆ. ಇದು ಇರಬೇಕಾದ ಅವಶ್ಯಕತೆ ಇಲ್ಲ. ಉತ್ತರ ಪ್ರದೇಶ, ಬಿಹಾರ, ಮುಂತಾದ ರಾಜ್ಯಗಳಲ್ಲಿ ವಿಧಾನ ಪರಿಷತ್ತನ್ನು ತೆಗೆದುಹಾಕಿದ್ದಾರೆ. ಆದ್ದರಿಂದ ಈ ರಾಜ್ಯದಲ್ಲಿಯೂ ವಿಧಾನ ಪರಿಷತ್ತನ್ನು ತೆಗೆಯಬೇಕೆಂದು ನಾನು ಅಪೇಕ್ಷೆ ಮಾಡುತ್ತೇನೆ. ರಾಜ್ಯಪಾಲರ ಹುದ್ದೆ ಮೂಗಿಗಿಂತ ಮೂಗುತಿ ಭಾರ ಎನ್ನುವ ಹಾಗೆ ಆಗಿದೆ. ಅವರಿಗೆ ಲಕ್ಷಾಂತರ ರೂಪಾಯಿಗಳನ್ನು ಸರ್ಕಾರದವರು ಖರ್ಚು ಮಾಡುತ್ತಿದ್ದಾರೆ. ಇದನ್ನೂ ಮತ್ತು ಸ್ವಲ್ಪ ಯೋಚನೆ ಮಾಡಿ ಈ ವಿಧಾನಪರಿಷತ್ತನ್ನು ತೆಗೆಯಬೇಕು.

ಸರ್ಕಾರದವರು ಸಮಾಜವಾದವನ್ನು ಜಾರಿಗೆ ತರುತ್ತೇವೆಂದು ಹೇಳುತ್ತಿದ್ದಾರೆ. ಈಗ ಸುಮಾರು 25 ವರ್ಷಗಳಿಂದ ಇದುವರೆಗೆ ಕಾಂಗ್ರೆಸ್ ಪಕ್ಷದ ಚಿನ್ಹೆ ಜೋಡೆತ್ತು ಇತ್ತು. ಈಗ ಹಸುಕರು ಬಂದಿದೆ. ಆದರೆ ಎರಡೂ ಒಂದೇ ಜಾತಿಯ ಪ್ರಾಣಿಗಳು. ಅದರಲ್ಲೇನು ವ್ಯತ್ಯಾಸ ಇಲ್ಲ. ಈಗ ವಿಧಾನ ಪರಿಷತ್ತಿಗೆ ನಾಮಕರಣ ಮಾಡಿರತಕ್ಕ 3 ಜನ ಸದಸ್ಯರೇನಿದ್ದಾರೆ ಅವರಿಗೆ ಯಾವ ಅರ್ಹತೆ ಇದೆ? ಅವರೇನು ಕಲಾವಿದರೇ, ಕವಿಗಳೇ, ಸಾಹಿತಿಗಳೇ, ವೈದ್ಯರೇ ಅಥವಾ ಪತ್ರಿಕೋದ್ಯಮಿಗಳೇ, ಇಲ್ಲ ಪರಿಣತರೇ, ಸಂಸ್ಕೃತಿ ಅಥವಾ ಸಾಹಿತ್ಯಕ್ಕೋಸ್ಕರ ಅವರು ತಮ್ಮ ಜೀವನವನ್ನು ಮುಡುಪಾಗಿಟ್ಟು ದೇಶಕ್ಕಾಗಿ ತಮ್ಮ ಸೇವೆಯನ್ನು ಏನಾದರೂ ಸಲ್ಲಿಸಿದ್ದಾರೆಯೇ?

ಅದನ್ನೇನಾದರೂ ಗಮನಿಸಿ ಅವರನ್ನು ನಾಮಕರಣ ಮಾಡಿದ್ದೀರಾ? ತಮ್ಮ ಪಕ್ಷದವರೆಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರೊಬ್ಬರನ್ನು ಇನ್ನೊಬ್ಬರು ಶ್ರೀಮತಿ ಕಮಲಾನಿ ಎನ್ನುವವರು ಒಬ್ಬರನ್ನೂ ಮತ್ತೊಬ್ಬರು ಮಾಜಿ ಮಂತ್ರಿಗಳು ಈ ರೀತಿ 3 ಜನರನ್ನು ನಾಮಕರಣ ಮಾಡಿದ್ದೀರಿ. ಹಿಂದಿನವರ ಜಾಡಿನಲ್ಲಿಯೇ ನೀವು ಮುಂದುವರಿದಿದ್ದೀರಿ, ನಿಮ್ಮ ಪಕ್ಷದ ಹಿತವನ್ನು ರಕ್ಷಣೆ ಮಾಡುವುದಕ್ಕೆ ಪುಢಾರಿಗಳಿಗೆ ಸ್ಥಾನವನ್ನು ಕಲ್ಪಿಸುವುದಕ್ಕೆ ಮತ್ತು ಯಾರಿಗೋ ಸಮಾಧಾನವನ್ನುಂಟು ಮಾಡುವುದಕ್ಕೆ ನಾಮಕರಣ ಮಾಡಿದ್ದೀರಿ. ಇದನ್ನು ನೋಡಿದರೆ ನೀವು ನಾಚಿಕೆಯಿಂದ ಮುಖ ಮುಚ್ಚಿಕೊಳ್ಳಬೇಕು. ಇದು ಆಡಳಿತ ಕಾಂಗ್ರೆಸ್ಸಿನವರು ಸಮಾಜವಾದವನ್ನು ಜಾರಿಗೆ ತರತಕ್ಕ ವೈಖರಿ!

ಕೈಗಾರಿಕೆಯ ಬಗೆಗೂ ಎರಡು ಮಾತುಗಳನ್ನು ಹೇಳುತ್ತೇನೆ. ನಮ್ಮ ಕೈಗಾರಿಕಾ ಮಂತ್ರಿಗಳು ಸಮಾಜವಾದದಲ್ಲಿ ಮುಳುಗಿ ಬಂದಿದ್ದಾರೆ. ಅವರು ಹಿಂದೆ ನಮ್ಮ ಪಕ್ಷದಲ್ಲಿದ್ದರು. ನಮ್ಮ ಸ್ನೇಹಿತರು. ಅವರಿಗೆ ಸಮಾಜವಾದದ ಬಗ್ಗೆ ಪೂರ್ಣವಾದ ಪ್ರಜ್ಞೆ ಇದೆ. ಇವೊತ್ತು ಕೈಗಾರಿಕೆಗಳನ್ನು ವಿಕೇಂದ್ರೀಕರಣ ಮಾಡುವ ಬಗ್ಗೆ ಸರ್ಕಾರದವರು ಹೆಚ್ಚಿನ ಆಸಕ್ತಿಯನ್ನು ವಹಿಸಬೇಕು. ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಕೇಂದ್ರೀಕರಿಸುವುದು ನಮಗೆ ಅಪಾಯ, ಕಟ್ಟಿಟ್ಟ ಬುತ್ತಿ. ಕೈಗಾರಿಕೆಯನ್ನು ಕೇಂದ್ರೀಕೃತ ಮಾಡುವುದರಿಂದ ರಾಜ್ಯದ ಹಿತಕ್ಕೆ ಅಪಾಯ ಆದ್ದರಿಂದ ಕೈಗಾರಿಕೆಗಳನ್ನು ವಿಕೇಂದ್ರೀಕರಣ ಮಾಡಿ ಹಳ್ಳಿಗಳಲ್ಲಿ ತಾಲ್ಲೂಕು ಮಟ್ಟದಲ್ಲಿ ಇಡೀ ಕರ್ನಾಟಕ ರಾಜ್ಯಾದ್ಯಂತ ಒಳ್ಳೆಯ ಕೈಗಾರಿಕೆಗಳು ಸ್ಥಾಪನೆಯಾಗಬೇಕು. ಇವೊತ್ತು ಉದಾಹರಣೆಗೆ ತೀರ್ಥಹಳ್ಳಿ, ಸಾಗರ ಹೊಸನಗರ ಇವು ಸ್ವಚ್ಛ ಮಲೆನಾಡು. ಅಲ್ಲಿ ಬೇಕಾದಷ್ಟು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶ ಇದೆ. ಇವುಗಳನ್ನು ತಜ್ಞರಿಂದ ಪರಿಶೀಲನೆ ಮಾಡಿಸಿ ಪ್ರತಿಯೊಂದು ತಾಲ್ಲೂಕಿಗೂ ಒಂದೊಂದು ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು. ಈಗ ಇದಕ್ಕೆ ಮುಖ್ಯವಾಗಿರತಕ್ಕ ಕೊರತೆ ವರ್ಕಿಂಗ್ ಕ್ಯಾಪಿಟಲ್ ಇಲ್ಲದೇ ಇರುವುದು. ಕಚ್ಚಾವಸ್ತುಗಳ ಅಭಾವ, ಇತರ ಇಲಾಖೆಗಳ ಸಹಕಾರ ಇಲ್ಲದೇ ಇರುವುದು, ಮಾರ್ಕೆಟ್ ಇಲ್ಲದೇ ಇರುವುದು. ಈ ನಾಲ್ಕು ಕೊರತೆಗಳನ್ನು ನೀಗಿಸುವುದಕ್ಕೆ ಸರ್ಕಾರದವರು ಏನು ಏರ್ಪಾಡು ಮಾಡಬೇಕೋ ಅದನ್ನು ಮಾಡಬೇಕೆಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಈ ಖಾದಿ ಮಂಡಲಿ ಏನಿದೆ ಈ ಖಾದಿ ಮಂಡಲಿಗೂ ಶರಾವತಿ ಹಾಗೂ ಭದ್ರಾವತಿಯಷ್ಟೇ ಹಣ ವ್ಯಯವಾಗಿದೆ. ಖಾದಿ ಮಂಡಲಿಯನ್ನು ರಚಿಸಿದ ತಾರೀಖಿನಿಂದ ಇಲ್ಲಿಯವರೆಗೂ ಅಲ್ಲಿ ಆವಂತಹ ವ್ಯವಹಾರ ಅವ್ಯವಹಾರ, ಅನೈತಿಕ ವ್ಯವಹಾರಗಳನ್ನು ತನಿಖೆ ಮಾಡಬೇಕು. ಮೊಟ್ಟ ಮೊದಲು ಈ ಖಾದಿ ಮಂಡಲಿಯನ್ನು ರದ್ದು ಮಾಡಬೇಕು. ಈಗಿರತಕ್ಕ ಇದರ ಅಧ್ಯಕ್ಷರು ಯಾರೋ ನನಗೆ ಗೊತ್ತಿಲ್ಲ. ಈಗಿನ ಮಂತ್ರಿಮಂಡಲದಲ್ಲಿರತಕ್ಕವರು ಒಬ್ಬರು ಹಿಂದೆ ಈ ಖಾದಿ ಬೋರ್ಡಿಗೆ ಅಧ್ಯಕ್ಷರಾಗಿದ್ದರು. ಕಾಂಗ್ರೆಸ್ ಮುಖಂಡರೊಬ್ಬರು ಮತ್ತೊಬ್ಬರು ದಿವಂಗತರಾದ ಶ್ರೀಮಾನ್ ಹಳ್ಳಿಕೇರಿಯವರು ಇವರೆಲ್ಲರೂ ಖಾದಿ ಬೋರ್ಡಿನ ಅಧ್ಯಕ್ಷರಾಗಿ ಎಷ್ಟು ಹಣವನ್ನು ಲೂಟಿ ಮಾಡಿದ್ದಾರೆ? ಖಾದಿಯ ಹೆಸರಿನಲ್ಲಿ ಎಷ್ಟು ಹಣ ಅಪವ್ಯಯವಾಗಿದೆ ಎಂಬುದನ್ನು ತನಿಖೆ ನಡೆಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಬಿ. ಎಂ. ಡಿ. ಎಂತ ಒಂದು ಮ್ಯಾಂಗನೀಸ್ ಬೋರ್ಡ್ ಇದೆ. ಇದರಲ್ಲಿ ಏನು ಮ್ಯಾಂಗನೀಸನ್ನು ಸಾಗಿಸುವುದಕ್ಕೆ ಖಾಸಗಿಯವರಿಗೆ ಕಂಟ್ರಾಕ್ಟ್ ಕೊಟ್ಟಿದ್ದಾರೆ. ಇದರಿಂದ ಸರ್ಕಾರಕ್ಕೆ ಅಪಾರವಾದ ನಷ್ಟವಾಗುತ್ತಿದೆ. ಆದ್ದರಿಂದ ಸರ್ಕಾರದವರು ಅದನ್ನು ಪೂರ್ತಿಯಾಗಿ ವಹಿಸಿಕೊಳ್ಳುವುದು ಅವಶ್ಯಕ. ಕೊಡಚಾದ್ರಿ ಬೆಟ್ಟದಲ್ಲಿ ಬೇಕಾದಷ್ಟು ಮ್ಯಾಂಗನೀಸ್ ಇದೆ. ಅದನ್ನು ಉಪಯೋಗ ಮಾಡಿಕೊಳ್ಳಲು ಒಂದು ಫ್ಯಾಕ್ಟರಿಯನ್ನು ಓಪನ್ ಮಾಡಬೇಕು.

ಕೈಗಾರಿಕೆಗಳಿಗೆ ಕಾರ್ಮಿಕರನ್ನು ನೇಮಿಸುವಾಗ ತಮಿಳುನಾಡು ಮತ್ತು ಮಹಾರಾಷ್ಟ್ರದಲ್ಲಿ ಸ್ಥಳೀಯ ಕಾರ್ಮಿಕರಿಗೆ ಮೊದಲು ಕೆಲಸ ಕೊಡಬೇಕೆಂದು ಅವರು ಒಂದು ಕಾನೂನು ಮಾಡಿಕೊಂಡಿದ್ದಾರೆ. ಅದೇ ರೀತಿ ನಮ್ಮ ರಾಜ್ಯದಲ್ಲಿಯೂ ಸಹ ನಿಯಮಗಳನ್ನು ಮಾಡಿಕೊಂಡು ಕರ್ನಾಟಕದಲ್ಲಿ ಸ್ಥಾಪನೆ ಆಗತಕ್ಕಂಥಾ ಕೈಗಾರಿಕೆಗಳಲ್ಲಿ ಸರ್ಕಾರಿ ಕೈಗಾರಿಕೆಯಾಗಲೀ ಅಥವಾ ಖಾಸಗೀ ಕೈಗಾರಿಕೆಯಾಗಲೀ, ಅದರಲ್ಲಿ 100ಕ್ಕೆ 100 ಅಥವಾ 100 ಕ್ಕೆ 95 ಕೆಲಸಗಳನ್ನು ಕನ್ನಡ ಜನರಿಗೆ ಕೊಡುವಂತೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಂಡು ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

6-30 P.M.

† ಶ್ರೀ ಆರ್. ರಾಜೇಗೌಡ (ಹಾನೂರು).—ಸನ್ಮಾನ್ಯ ಸಭಾಪತಿಗಳೇ, ಈ ದಿವಸ ಕೈಗಾರಿಕೆಯ ಬೇಡಿಕೆಯನ್ನು ನಾನು ಬೆಂಬಲಿಸುತ್ತಾ, ಈ ರೇಶ್ಮೆ ಕೈಗಾರಿಕೆಯ ಬಗ್ಗೆ ಮಾತ್ರ ಮಾತನಾಡಲು ಇಚ್ಛೆಪಡುತ್ತೇನೆ. ನಮ್ಮ ದೇಶದಲ್ಲಿ ಸುಮಾರು 10 ಲಕ್ಷ ಜನ ಈ ಗೃಹ ಕೈಗಾರಿಕೆಯಲ್ಲಿ ನಿರತರಾಗಿದ್ದಾರೆ ಎನ್ನುವುದು ನಿರ್ವಿವಾದ. ಇಷ್ಟು ಜನ ಈ ಕೈಗಾರಿಕೆಯಲ್ಲಿ ನಿರತರಾಗಿದ್ದರೂ ಕೂಡ ಶತಮಾನಗಳ ಹಿಂದೆ ಇದು ಯಾವ ರೀತಿಯಲ್ಲಿ ಇತ್ತೋ ಅದೇ ರೀತಿಯಲ್ಲಿ ಇದು ಈಗಲೂ ಮುಂದುವರಿಯುತ್ತಾ ಇರುವುದು ಬಹಳ ಶೋಚನೀಯವಾಗಿದೆ. ಕೈಗಾರಿಕೆಯಲ್ಲಿ ಯಾವ ಅಭಿವೃದ್ಧಿಯೂ ಸಾಧನೆಯಾಗಿಲ್ಲ. ನಾವು ಸುಮಾರು ಶತಮಾನಗಳಿಂದ ಕೈಗಾರಿಕೆಗಳಲ್ಲಿದ್ದರೂ ಕೂಡ ಪರದೇಶಗಳಾದ ಜಪಾನ್ ಮತ್ತು ರಷ್ಯಾಕ್ಕೆ ಸರಿಸಮಾನಾಗಿ ನಮ್ಮ ಕೈಗಾರಿಕೆಗಳನ್ನು ಬೆಳೆಸಿಕೊಂಡು ಹೋಗುವುದಕ್ಕೆ ಅವಕಾಶ ಇಲ್ಲದಿರುವುದು ನನಗೆ ಬಹಳ ದುಃಖವನ್ನುಂಟು ಮಾಡುತ್ತದೆ. ಇದಕ್ಕೆ ಕಾರಣವಾದರೂ ಇಷ್ಟೆ. ನಾವು ಇದನ್ನು ಸಾಕಷ್ಟು ವೈಜ್ಞಾನಿಕ ರೀತಿಯಲ್ಲಿ ಅಭಿವೃದ್ಧಿ ಪಡಿಸದಿರುವುದೇ ಇದಕ್ಕೆ ಕಾರಣವೆಂದು ನನ್ನ ಅಭಿಪ್ರಾಯ. ಈ ಸೆಂಟ್ರಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಎನ್ನುವುದು ಪ್ರಾರಂಭವಾಗಿ 10—12 ವರ್ಷಗಳಾಗಿದೆ. ಬಿಳಿ ಗೂಡಿನಲ್ಲಿ ವೈಜ್ಞಾನಿಕವಾಗಿ ರೇಶ್ಮೆ ತಯಾರು ಮಾಡತಕ್ಕ ಕಾರ್ಯ ನಡೆದಿದೆ. ಆದರೆ ಇಷ್ಟು ದಿವಸವಾದರೂ ಕೂಡ ಜನರಿಗೆ ಸಾಮಾನ್ಯವಾಗಿ ಎಷ್ಟು ಮಟ್ಟಿಗೆ ಈ ಬಿಳಿ ಗೂಡನ್ನು ಸಪ್ಲೈ ಮಾಡಬೇಕೋ, ಅಷ್ಟು ಮಟ್ಟಿಗೆ ಸರಬರಾಯಿ ಮಾಡುವುದಕ್ಕೆ ಇನ್ನೂ ಸಾಧ್ಯವಾಗಿರುವುದಿಲ್ಲ. ಬಹುಶಃ ನಮ್ಮ ಇಲಾಖೆಯವರು ಈ ಬಿಳಿ ಗೂಡು ನಮಗೆ ಸಾಕಷ್ಟು ದೊರೆಯುತ್ತಾ ಇದೆ, ನಮಗೆ ಎಷ್ಟು ಬೇಕೋ ಅಷ್ಟು ದೊರೆಯುತ್ತಾ ಇದೆ ಎಂದು ತಮ್ಮ ಲೆಕ್ಕಪತ್ರಗಳಲ್ಲಿ ಬರೆದುಕೊಂಡಿರುವಂತೆ ಕಾಣುತ್ತದೆ. ನಾನಾದರೂ ಹೇಳುತ್ತೇನೆ, ಈ ಬಿಳಿ ಗೂಡು ನಮ್ಮ ಇಲಾಖೆಯಲ್ಲಿ ಜನರಿಗೆ ಎಷ್ಟು ಸಿಗಬೇಕೋ ಅಷ್ಟು ಸಿಗುತ್ತಾ ಇಲ್ಲ. ಅವರು ಕೂಡ ಹೊರಗಡೆಯಿಂದ ಖಾಸಗೀ ಜನರಿಂದ ಇದನ್ನು ಕೊಂಡುಕೊಳ್ಳುತ್ತಿದ್ದಾರೆಂದು ತಿಳಿದಿದ್ದೇನೆ. ಇದು ನಮ್ಮ ಇಲಾಖೆಗೆ ಒಂದು ಕುಂದಿತವನ್ನು ತರತಕ್ಕ ವಿಷಯವೆಂದು ಹೇಳುತ್ತೇನೆ. ಈ ಮಿಶ್ರತಳಿ ಸುಮಾರು 1928 ನೇ ಇಸವಿಯಲ್ಲಿ ಪ್ರಾರಂಭವಾದರೂ ಹಿಂದೆ ಒಬಿರಾಯನ ಕಾಲದಲ್ಲಿ ಹೇಗೆ ಇದು ಇತ್ತೋ ಅದೇ ರೀತಿಯಲ್ಲಿ ಇಂದೂ ಇದೆಯಲ್ಲದೆ ಅಭಿವೃದ್ಧಿಯನ್ನು ಹೊಂದಿಲ್ಲ. ಸೆಂಟ್ರಲ್ ರಿಸರ್ಚ್ ಇನ್‌ಸ್ಟಿಟ್ಯೂಟಿನವರು ಕೆಲವು ಒಳ್ಳೆಯ ತಳಿಗಳನ್ನು ಪ್ರಾರಂಭ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೆ ಇದು ಎಗ್ಸಿಬಿಷನಿನಲ್ಲಿಡತಕ್ಕ ಮಟ್ಟಿಗೆ ಮಾತ್ರ ದೊರೆಯುತ್ತಿದೆಯಲ್ಲದೆ ಸಾಮಾನ್ಯ ಜನರಿಗೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲವೆಂದು ಹೇಳುತ್ತೇನೆ. ಇವತ್ತು ರೇಶ್ಮೆ ಸಂಶೋಧನೆಗೆ ಕೇಂದ್ರ ಸರ್ಕಾರದವರು ಹೆಚ್ಚಿನ ಉತ್ತೇಜನ ಕೊಟ್ಟರೆ ಮಾತ್ರ ಇದರಲ್ಲಿ ಸುಧಾರಣೆ ಮಾಡಿ ಮುಂದುವರಿಯಬಹುದಲ್ಲದೆ ಈಗ ಇದ್ದ ರೀತಿಯಲ್ಲೇ ಮುಂದುವರಿಯಲು ಸಾಧ್ಯವಿಲ್ಲ. ಕೇಂದ್ರ ಸರ್ಕಾರದವರು ಈಗ ಕ್ರಾಷ್ ಪ್ರೋಗ್ರಾಂನಲ್ಲಿ 80 ಕೋಟಿ ರೂಪಾಯಿ ಕೊಟ್ಟಿದ್ದಾರೆಂದು ಗೊತ್ತಾಗಿದೆ. ಈ 80 ಕೋಟಿ ರೂಪಾಯಿಯನ್ನು ವಿತರಣೆ ಮಾಡತಕ್ಕ ಸಂದರ್ಭದಲ್ಲಿ ಈ ರೇಶ್ಮೆ ಬೆಳೆಯತಕ್ಕ ಜನರಿಗೆ ಹೆಚ್ಚಿನ ಅನುಕೂಲವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ಆ ಜನರು ಸಾಮಾನ್ಯವಾಗಿ ಬಂಡವಾಳಸ್ಥರಾಗಿರುವುದಿಲ್ಲ. ಆದ್ದರಿಂದ ಕೇಂದ್ರ ಸರ್ಕಾರದವರು ಕೊಟ್ಟಿರತಕ್ಕ ಹಣದಿಂದ ಈ ರೇಶ್ಮೆ ಬೆಳೆಯತಕ್ಕಂತಹ ಜನರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿ, ಹೆಚ್ಚು ಉತ್ಪಾದನೆ ಮಾಡುವ ಹಾಗೆ ಮಾಡಬೇಕೆಂದು ಹೇಳುತ್ತೇನೆ.

ಒಂದು ಉದಾಹರಣೆಯನ್ನು ಕೊಡುತ್ತೇನೆ. ಸುಮಾರು ಒಂದು ವರ್ಷದ ಹಿಂದೆ ಒಬ್ಬ ಕೊಳ್ಳೆಗಾಲದ ರೈತ ಒಂದು 50—60 ಕೆ. ಜಿ. ರೇಶ್ಮೆಯನ್ನು ಯಾವ ಒಂದು ಅಡ್ವಾನ್ಸನ್ನು ತೆಗೆದುಕೊಳ್ಳದೆ ಒಬ್ಬರ ಹತ್ತಿರ ಒತ್ತೆ ಇಟ್ಟಿದ್ದ. ಆದರೆ ಆ ಒತ್ತೆ ಇಟ್ಟುಕೊಂಡಿದ್ದ ಮನುಷ್ಯನ ಅಪ್ಪಣೆಯಿಲ್ಲದೆ ತನಗೆ ಇಷ್ಟ ಬಂದ ಹಾಗೆ ಬೇರೆಯವರಿಗೆ ಮಾರಿಬಿಟ್ಟ. ಪುನಃ ರೇಶ್ಮೆ ತಂದಿಟ್ಟಂತಹ ಮನುಷ್ಯ ಕೇಳಲಿಕ್ಕೆ ಬಂದಾಗ ಇನ್ನೊಂದು ಸಾರಿ ಬಂದಾಗ ಕೊಡುತ್ತೇನೆ, ದಯವಿಟ್ಟು ಗಲಾಟೆ ಮಾಡಬೇಡಿ ಎಂದು ಸಮಾಧಾನ ಮಾಡಿ ಕಳುಹಿಸಿದ. ಇಂಥ ಅವ್ಯವಹಾರ ನಡೆಯಬಾರದು ಎಂದು ಸಂಬಂಧಪಟ್ಟವರಿಗೆ ಕೇಳಿಕೊಳ್ಳುತ್ತಿದ್ದೇನೆ.

ಇನ್ನೊಂದು ವಿಚಾರವೇನೆಂದರೆ, ಈಗಾಗಲೇ ನನಗೆ ತಿಳಿದಮಟ್ಟಿಗೆ ಈ ನಮ್ಮ ಇಲಾಖೆಗೆ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಆಗಿ ಒಬ್ಬ ಐ. ಎ. ಎಸ್. ಆಫೀಸರನ್ನು ಹಾಕುತ್ತಾರೆಂದು ನಾನು ತಿಳಿದಿದ್ದೇನೆ. ಇವತ್ತು ನಮ್ಮ ಕೈಗಾರಿಕೆಯನ್ನು ಅಭಿವೃದ್ಧಿ ಮಾಡಬೇಕಾದರೆ ಇಂಥ ಇಲಾಖೆಗಳಿಗೆ ಒಳ್ಳೆಯ ನುರಿತ ಸೀನಿಯರ್ ಅಧಿಕಾರಿಗಳನ್ನು ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ನ್ಯಾಯಾಂಗ ವಿಚಾರವಾಗಿ ಒಂದು ಮಾತು. ನಮ್ಮ ಕೊಳ್ಳೆಗಾಲ ತಾಲ್ಲೂಕಿನಲ್ಲಿರುವ ಮುನ್ಸೀಫ್ ಕೋರ್ಟಿನಲ್ಲಿ ಒಂದು ವರ್ಷದ ಹಿಂದೆ ಒಂದು ಕೇಸ್ ದಾಖಲಾಗಿದೆ. ಆದರೆ ಆ ಕೇಸ್ ಇನ್ನೂ ಕೂಡ ವಿಚಾರಣೆಗೆ ಬಂದಿಲ್ಲ. ಆದ್ದರಿಂದ ಎಲ್ಲೆಲ್ಲಿ ಕೇಸುಗಳು ಜಾಸ್ತಿ ಇವೆಯೋ ಅಂಥ ತಾಲ್ಲೂಕು ಕಸಬಾದಲ್ಲಿ ಒಬ್ಬ ಸ್ಪೆಷಲ್ ಮ್ಯಾಜಿಸ್ಟ್ರೇಟುಗಳನ್ನು ನೇಮಿಸಬೇಕೆಂದು ಪ್ರಾರ್ಥಿಸಿಕೊಂಡು, ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು (ಶಾಂತಿನಗರ).—ಸನ್ಮಾನ್ಯ ಸಭಾಧ್ಯಕ್ಷರೆ, ಈಗ ನಮ್ಮ ಮುಂದೆ ಮಂಡಿಸಿರತಕ್ಕಂತಹ ರೇಶ್ಮೆ ಕೈಗಾರಿಕೆ ಮತ್ತು ಸಂಸದೀಯ ಇಲಾಖೆಯವರು ಇಟ್ಟಿರುವ ಬೇಡಿಕಗಳನ್ನು ಅನುಮೋದಿಸುತ್ತಾ ಕೆಲವು ಸೂಕ್ತವಾದ ಸಲಹೆಗಳನ್ನು ಕೊಡಲಚ್ಛಿಸುತ್ತೇನೆ. ಕೈಗಾರಿಕೆಯ ವಿಷಯದಲ್ಲಿ ಹೇಳುವುದಾದರೆ, ಇದು ಮೈಸೂರಿನವರಿಗೆ ಹೊಸದೇನೂ ಅಲ್ಲ. ನನಗನಿಸುತ್ತದೆ. ಈ ನಮ್ಮ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗಳು ನಮ್ಮ ಭಾರತದ ದೇಶದದಲ್ಲಿಯೇ ಮೊದಲನೆಯ ಇಲಾಖೆಗಳೆಂದು ತಿಳಿಯುತ್ತೇನೆ. 1911 ರಲ್ಲಿ ಒಂದು ಎಕನಮಿಕ್ ಕಾನ್‌ಫರೆನ್ಸ್ ನಡೆದಿತ್ತು. ಆ ಸಮಯದಲ್ಲಿ ಹೇಳುವುದಾದರೆ ನಮ್ಮ ಎಲೆಕ್ಟ್ರಿಕ್ ರೇಟ್ ಟ್ಯಾರಿಫ್ ರೇಟ್ ಇತ್ಯಾದಿಗಳು ನಮ್ಮ ದೇಶದಲ್ಲಿ ಬಹಳ ಕಡಿಮೆಯಾಗಿದೆ. ಇವೆಲ್ಲ ಇದ್ದರೂ ಕೂಡ ಕೈಗಾರಿಕಾ ಕ್ಷೇತ್ರದಲ್ಲಿ ನಾವು 8 ನೇ ಸ್ಥಾನವನ್ನು ಇವತ್ತು ಪಡೆದಿದ್ದೇವೆ. ಇದಕ್ಕೆ ಕಾರಣವಾದರೂ ಏನು? ನಮ್ಮಲ್ಲಿ ಹೆಚ್ಚಿನ ಅರಣ್ಯ ಸಂಪತ್ತು ಇವತ್ತು ಸಹ ಇದೆ, ಖನಿಜ ಸಂಪತ್ತು ಇದೆ ಮತ್ತು ನೈಸರ್ಗಿಕ ಸಂಪತ್ತು ಇದ. ಇವೆಲ್ಲಾ ಇದ್ದರೂ ಸಹ ಏಕೆ ಹೀಗಾಯಿತು! ಇದಕ್ಕೆ ಕಾರಣವೇನೆಂದು ನೋಡಿದಾಗ ನನಗೆ ಇಷ್ಟು ಕಂಡು ಬರುತ್ತದೆ. ಇವತ್ತು ನಮ್ಮ 25 ವರ್ಷಗಳ ಆಳ್ವಿಕೆಯಲ್ಲಿ ನಾವು ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ಹಾಕಿಕೊಂಡಂತೆ ಕಾಣುವುದಿಲ್ಲ. ನಾವು ಇಂದು ಸಾರ್ವಜನಿಕ ಕ್ಷೇತ್ರ ಮತ್ತು ಖಾಸಗಿ ಕ್ಷೇತ್ರ—ಎಂದು ಎರಡು ಕ್ಷೇತ್ರಗಳಲ್ಲಿ ಕೈಗಾರಿಕೆಗಳನ್ನು ನಡೆಸುತ್ತಿದ್ದೇವೆ. ಸಾರ್ವಜನಿಕ ಕ್ಷೇತ್ರದಲ್ಲಿಯೂ ಎಲ್ಲಾ ಅನುಕೂಲತೆಗಳನ್ನು ಕೊಟ್ಟರೂ ಏಕೆ ಹಿಂದುಳಿದಿದ್ದಾರೆ? ಹಾಗೆಯೇ ಖಾಸಗೀ ಕ್ಷೇತ್ರದಲ್ಲಿ ಮುಂದೆ ಬರುವುದಕ್ಕೆ ಏನು ಕಾರಣ? ಇದನ್ನು ನಾವು ಯೋಚನೆ ಮಾಡಬೇಕಾಗಿದೆ. ಇದರ ಜೊತೆಗೆ ನಮ್ಮಲ್ಲಿ ಇವತ್ತು ಅನೇಕ ತರದ ಕೈಗಾರಿಕೆಗಳು ಇವೆ. ಕಾಟೇಜ್ ಇಂಡಸ್ಟ್ರೀಸ್ ಇವೆ, ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಇವೆ ಮತ್ತು ಲಾರ್ಜ್ ಸ್ಕೇಲ್ ಇಂಡಸ್ಟ್ರೀಸ್ ಸಹ ನಮ್ಮಲ್ಲಿ ಇವೆ. ಹೀಗಿದ್ದರೂ 100ಕ್ಕೆ 80 ಭಾಗ ಕೈಗಾರಿಕೆಗಳನ್ನು ನಾವು ಉತ್ತೇಜನ ಕೊಡದೆ ಇರುವುದರಿಂದ ಹಿಂದೆ ಬಿದ್ದಿವೆ. ನಿತ್ಯ ವಸ್ತುಗಳ, ಮತ್ತು ಅವಶ್ಯವಿರುವ ವಸ್ತುಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡದೆ ಹಿಂದೆ ಬಿದ್ದಿದ್ದೇವೆ. ಇದಕ್ಕೆ ನಾನು ಒಂದೆರಡು ಸಲಹೆಗಳನ್ನು ಕೊಡಲು ಬಯಸುತ್ತೇನೆ. ಇನ್ನು ಮುಂದಾದರೂ ಈ ಕ್ಷೇತ್ರದಲ್ಲಿ ನಾವು ಮುಂದೆ ಬರಬೇಕಾದರೆ ಒಂದು "ಲಾಂಗ್ ಟರ್ಮ್ ಪ್ಲಾನ್," ಮತ್ತೊಂದು 'ಷಾರ್ಟ್ ಟರ್ಮ್ ಪ್ಲಾನ್'—ಹೀಗೆ ಎರಡು ಭಾಗಗಳಾಗಿ ವಿಂಗಡಿಸಬೇಕು. ಇದಕ್ಕೆ "ಟೆಕ್ನೋ ಎಕನಾಮಿಕ್ ಸರ್ವೆ" ಮಾಡಬೇಕು. ಇನ್ನೊಂದು ಪ್ರತಿಯೊಂದು ಗ್ರಾಮದಲ್ಲಿಯೂ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕು. ಅದನ್ನು ತಾಲೂಕು ಕೇಂದ್ರಗಳಲ್ಲಿರುವಂತೆ ಮಾಡಬೇಕು. ಅದಕ್ಕೋಸ್ಕರ ಒಂದು "ರೂರಲ್ ಇಂಡಸ್ಟ್ರಿಯಲ್ ಪ್ಲಾನಿಂಗ್ ಕಮಿಟಿ" ಪ್ರತಿಯೊಂದು ಗ್ರಾಮದಲ್ಲಿಯೂ ಇರಬೇಕೆಂದು ಹೇಳುತ್ತೇನೆ. ಇದೂ ಅಲ್ಲದೆ ನಮ್ಮಲ್ಲಿ ತುಮಕೂರಿನಿಂದ ಹೊಸದುರ್ಗದವರೆಗೆ ಬೇಕಾದಷ್ಟು ತೆಂಗಿನ ನಾರು ಸಿಗುತ್ತದೆ. ನಾವು ಇವಕ್ಕೆ ಒಂದು ಕಾಯಿರ್ ಕೋಪರೇಟಿವ್ ಸೊಸೈಟಿ ಎಂದು ಹೆಸರು ಇಟ್ಟು ಉತ್ಪತ್ತಿಯಾದ ವಸ್ತುಗಳನ್ನು ಪರದೇಶಗಳಿಗೆ ಕಳಿಸುವಂತಹ ವಸ್ತುಗಳನ್ನು ತಯಾರಿಸಿ ಹೊರದೇಶಗಳಿಗೆ ಕಳಿಸುವಂತಹ ಏರ್ಪಾಡು ಮಾಡಬೇಕು. ಅಂತಹ ಕಾಲ ನಮ್ಮಲ್ಲಿ ಬೇಗನೇ ಬರುತ್ತದೆ ಎಂದು ಆಶಿಸುತ್ತೇನೆ. ಆದರ ಜೊತೆಗೆ ಲೆದರ್ ಬೋರ್ಡ್ ಎನ್ನುವುದು ಸಾಧಾರಣವಾಗಿ ನಮ್ಮಲ್ಲಿ ಆಗಿಲ್ಲ. ವಾನಿಯಂಬಾಡಿ ಮತ್ತು ಮದ್ರಾಸ್‌ನಲ್ಲಿ ಬೇಕಾದಷ್ಟು ಲೆದರ್ ಇಂಡಸ್ಟ್ರಿಸ್ ಡೆವಲಪ್ ಆಗಿದೆ. ಖಾನಾಪುರದಲ್ಲಿ ಇದ್ದಹಾಗೆ ನಾವು ಇಂಪ್ರೂವ್ ಮಾಡಬೇಕು. ಆದ್ದರಿಂದ ಈ ಸಂದರ್ಭದಲ್ಲಿ ಒಂದು ಬೋರ್ಡ್‌ಮಾಡಲು ಉತ್ತೇಜನ ಕೊಡಬೇಕೆಂದು ಹೇಳುತ್ತೇನೆ.

ಮೂರನೆಯದಾಗಿ ಸಿಲ್ಕ್ ಇಂಡಸ್ಟ್ರಿ. ಅದು ಕ್ವೀನ್ ಆಫ್ ಟೆಕ್ಸ್‌ಟೈಲ್ ಇಂಡಸ್ಟ್ರಿ ಎಂದು ಕರೆಯುತ್ತಾರೆ ಇದಕ್ಕೆ ಪ್ರಪಂಚದಲ್ಲಿ ನಾಲ್ಕನೆಯ ಸ್ಥಾನ ಬಂದಿದೆ. ನಮ್ಮ ಮೈಸೂರಿನಲ್ಲಿ ರೇಷ್ಮೆ ಕೈಗಾರಿಕೆಗೆ ಒಂದು ಕಾಲದಲ್ಲಿ ಒಳ್ಳೆಯ ಹೆಸರಿತ್ತು ಇವತ್ತಿನದಿವಸ ಅದು ಬಹಳ ಹೀನ ಪರಿಸ್ಥಿತಿಗೆ ಬಂದಿದೆ. ಕಾರಣ, ಇದಕ್ಕೆ ಸರಿಯಾದ ಮಾರ್ಕೆಟ್, ಇದಕ್ಕೆ ಇರುವ ವಸತಿ, ಹಣದ ಸೌಲಭ್ಯ ಸಾಕಷ್ಟು ಇದ್ದಹಾಗೆ ಕಾಣಲಿಲ್ಲ. ಆದ್ದರಿಂದ ಈ ಸಂದರ್ಭದಲ್ಲಿ ನಮ್ಮ ಮೈಸೂರಿನಲ್ಲಿ ಇರತಕ್ಕ ಇಂಡಸ್ಟ್ರಿಯಲ್ ಫೈನಾನ್ಷಿಯಲ್ ಕಾರ್ಪೊರೇಷನ್ ಸಂಸ್ಥೆಯ ನೆರವು ಬರಬೇಕೆಂದು ಒತ್ತಿ ಹೇಳುತ್ತೇನೆ.

(ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು)

ಇನ್ನು ಸ್ಯಾಂಡಲ್‌ವುಡ್‌ನಲ್ಲಿ ಗುಡಿಕಾರರು ಚನ್ನಪಟ್ಟಣದಲ್ಲಿ ಮಾಡತಕ್ಕ ಸಾಮಾನುಗಳ ಬಣ್ಣದ ಸಾಮಾನು ಹಾಗೂ ಐರನ್ ಮತ್ತು ಮ್ಯಾಂಗನೀಸ್ ಅಭಿವೃದ್ಧಿಯ ಬಗ್ಗೆ ಸರ್ಕಾರದವರು ಹೆಚ್ಚಿನ ರೀತಿಯಲ್ಲಿ ಉತ್ತೇಜನ ಕೊಡಬೇಕೆಂದು ಹೇಳುತ್ತೇನೆ. ಏಕೆಂದರೆ ಇದರಲ್ಲಿ ತಯಾರಿಸಿದ ಅನೇಕ ಸಾಮಾನುಗಳು ಪರದೇಶಗಳಿಂದ ನಮಗೆ ಪುನಃ ಇನ್ನೊಂದು ರೀತಿಯಲ್ಲಿ ವಾಪಸ್ ಬರುತ್ತಿವೆ. ನಮ್ಮಲ್ಲಿರತಕ್ಕ ಕೈಗಾರಿಕೆ ಹೆಚ್ಚಿನ ಪ್ರಗತಿ ಸಾಧನೆಯಾಗಬೇಕಾದರೆ ಈ ಸಂದರ್ಭದಲ್ಲಿ ಒಂದು ಸೂಕ್ತ ಸಲಹೆಯನ್ನು ಕೊಡಬಯಸುತ್ತೇನೆ. ಆದಷ್ಟು ಜಾಗ್ರತೆಯಾಗಿ ಒಂದು ಇಂಡಸ್ಟ್ರಿಯಲ್ ಕಮಿಷನ್ನು ಒಂದನ್ನು ಅಪಾಯಿಂಟ್ ಮಾಡಿ ತನ್ಮೂಲಕ ನಮ್ಮಲ್ಲಿರತಕ್ಕ ಲೋಪ ದೋಷಗಳನ್ನು ಕಂಡುಹಿಡಿದು ಅವುಗಳನ್ನು ಬೇಗ ತಿದ್ದಿಕೊಂಡು ನಾವು ಮುಂದೆ ಹೋಗಬೇಕು. ಹಿಂದೆಯೇ ನಮ್ಮ ಮಾನ್ಯ ಶ್ರೀ ವಿಶ್ವೇಶ್ವರಯ್ಯನವರೇ ಇಂಡಸ್ಟ್ರಿಯಲೈಜ್ ಅರ್ ಪೆರಿಷ್ ಎಂಬ ಮಾತನ್ನು ಹೇಳಿದ್ದಾರೆ. ಇದರ ಜೊತೆಗೆ ಸರ್ಕಾರದ ನೆರವೂ ಸಹ ಬೇಕು. ಈ ಇಲಾಖೆಯ ಬಗ್ಗೆ ಹೇಳುವುದಾದರೆ, ಇನ್ನು ಮುಂದೆ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಡಿಪಾರ್ಟ್‌ಮೆಂಟ್ ಏನಿದೆಯೋ ಅದನ್ನು ಎರಡು ಭಾಗಗಳಾಗಿ ವಿಂಗಡಿಸಿ ನ್ಯೂ ಪ್ರಾಜೆಕ್ಟಿಗೇ ಒಬ್ಬ ಜಾಯಿಂಟು ಡೈರೆಕ್ಟರನ್ನು ಹಾಕಿದರೆ ಬಹಳ ಒಳ್ಳೆಯದು. ಆಗ ಸುಗಮವಾಗಿ ಕೆಲಸಕಾರ್ಯಗಳು ನಡೆಯುತ್ತವೆ. ಈ ಇಲಾಖೆಯಲ್ಲಿ ಹಿಂದುಳಿದವರಿಗೆ ಕೆಲವು ಸ್ಥಾನಗಳನ್ನು ಕೊಡಬೇಕೆಂದು ಒತ್ತಿ ಹೇಳುತ್ತೇನೆ.

ಕೊನೆಯದಾಗಿ, ನನಗೆ ಇಷ್ಟು ಹೊತ್ತು ಮಾತನಾಡಲು ಕಾಲಾವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಕೈಗಾರಿಕೆ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವೊಂದು ಮಾತುಗಳನ್ನು ಹೇಳಬಿಚ್ಛಿಸುತ್ತೇನೆ. ಈ ದೇಶದಲ್ಲಿ ಜನರಿಗೆ ಉದ್ಯೋಗದ ಅವಶ್ಯಕತೆ ದಿನದಿನಕ್ಕೂ ಬಹಳ ಜಾಸ್ತಿಯಾಗುತ್ತಿದೆ. ವ್ಯವಸಾಯ ಒಂದರಲ್ಲೇ ಎಲ್ಲಾ ಜನರಿಗೂ ಈ ಕಸುಬನ್ನು ಒದಗಿಸುವುದು ಬಹಳ ಕಷ್ಟವಾಗುತ್ತಿದೆ. ಒಂದು ದೃಷ್ಟಿಯಿಂದ ಸರ್ಕಾರದವರು ಕೆಲಸವಿಲ್ಲದ ಗ್ರಾಮಾಂತರ ಯುವಕರಿಗೆ ಕೆಲಸಗಳನ್ನು ಕೊಡುತ್ತೇವೆ ಎನ್ನುವ ಒಂದು ಯೋಜನೆಯನ್ನು ಷುರು ಮಾಡಿದ್ದಾರೆ. ಕೇಂದ್ರಸರ್ಕಾರದವರು ವರ್ಷಕ್ಕೆ 50 ಕೋಟಿ ರೂಪಾಯಿಗಳನ್ನು ಕ್ರಾಷ್ ಪ್ರೋಗ್ರಾಂಗಳಿಗೆ ಕೊಡುತ್ತೇವೆಂದು ಹೇಳಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ನಿರುದ್ಯೋಗಿ ಯುವಕರಿಗೆ ಕೆರೆಗಳ ನಿರ್ಮಾಣದ ಕೆಲಸಮಾಡಿಸುವುದು, ಎರಡನೆಯದು, ಲ್ಯಾಂಡ್ ಆರ್ಮಿ ಪ್ರಾಜೆಕ್ಟ್ ಎಂದು ಷುರು ಮಾಡಿ, ಅವರಿಗೆ ಇದೇ ತರಹ ಕೆಲಸಗಳನ್ನು ಮಾಡಿಸುತ್ತಾ ಇದ್ದಾರೆ. ಆದರೆ ಸರ್ಕಾರದವರು ಕೆಲವು ಭಾಗಗಳಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿದ್ದರಿಂದ ದೇಶದಲ್ಲಿ ಉಪಯುಕ್ತವಾದ ಕೆಲಸಕಾರ್ಯಗಳು ಆಗಿದ್ದರೂ ಕೂಡ, ಜೀವನದಲ್ಲಿ ಸ್ವತಂತ್ರವಾಗಿ ಕಾಯಂ ಮುಂದೆ ಆತ ಕೆಲಸಮಾಡುವುದಕ್ಕೆ ಒಂದು ಮಾರ್ಗವನ್ನು ತೋರಿಸಿಕೊಡಬೇಕು. ಇಲ್ಲದಿದ್ದರೆ ಆತ ಈ ರೀತಿಯಾಗಿ ಪರಾವಲಂಬಿಯಾಗಿ ಎಷ್ಟು ದಿವಸಗಳವರೆಗೆ ಕೆಲಸಮಾಡಬೇಕೆಂಬುದು ಗೊತ್ತಿಲ್ಲ. ಈ ಸಂದರ್ಭದಲ್ಲಿ ಒಂದು ಸಲಹೆಯನ್ನು ನಾನು ಕೈಗಾರಿಕೆಯ ಸಚಿವರಿಗೆ ಕೊಡುತ್ತೇನೆ. ಲ್ಯಾಂಡ್ ಆರ್ಮಿ ಮತ್ತು ಕ್ರಾಷ್ ಪ್ರೋಗ್ರಾಂಗಳಲ್ಲಿ ಕೆಲಸಮಾಡುವುದಕ್ಕೆ ಹುಡುಗರನ್ನು ಸೇರಿಸಿಕೊಂಡು ಅಲ್ಲಿ ನಡೆಯತಕ್ಕ ಕೈಗಾರಿಕೆಗಳಲ್ಲಿ ಆರು ತಿಂಗಳೋ ಅಥವಾ ಒಂದು ವರ್ಷವೋ ತರಪೇತನ್ನು ಕೊಟ್ಟು ಅವರಿಂದ ಸ್ವತಂತ್ರವಾಗಿ ಕೈಗಾರಿಕೆಗಳನ್ನು ಮಾಡುವ ಹಾಗೆ ಹಣವನ್ನು ಒದಗಿಸಿಕೊಡಬೇಕು. ಮತ್ತು ದೊಡ್ಡದೊಡ್ಡ ಕೈಗಾರಿಕೆಗಳಲ್ಲಿ ಕೆಲಸ ಮಾಡಿಕೊಂಡು ಜೀವನ ಮಾಡುವ ವ್ಯವಸ್ಥೆಮಾಡಬೇಕು. ಒಟ್ಟಿನಲ್ಲಿ ನಿರುದ್ಯೋಗಿ ಯುವಕರಿಗೆ ಕೈಗಾರಿಕೆಗಳಲ್ಲಿ ತರಪೇತನ್ನು ಕೊಡಬೇಕು. ಇದರಿಂದ ದೇಶದ ಉತ್ಪತ್ತಿ ಹೆಚ್ಚಾಗುವುದಲ್ಲದೆ ಉತ್ಪತ್ತಿ ಬರತಕ್ಕಂಥ ಬಾಬುಗಳಿಗೆ ಇನ್ನೂ ಹೆಚ್ಚಿಗೆ ಹಣ ಖರ್ಚುಮಾಡುವುದಕ್ಕೆ ಪ್ರಯತ್ನಪಡಬೇಕಾಗುತ್ತದೆ. ಈ ರಾಜ್ಯದ 19 ಜಿಲ್ಲೆಗಳಲ್ಲಿ 11 ಜಿಲ್ಲೆಗಳು ಬಹಳವಾಗಿ ಹಿಂದುಳಿದಿವೆ. ಈ ಜಿಲ್ಲೆಗಳಲ್ಲಿ ಹಾಸನ ಜಿಲ್ಲೆಯೂ ಒಂದು ಹಿಂದುಳಿದ ಜಿಲ್ಲೆ. ಸರ್ವೆ ಕೆಲಸ ಕಾರ್ಯಗಳನ್ನು ನಡೆಸಿ ಅವಶ್ಯಕವಾದಂಥ ಕಾರ್ಯಕ್ರಮಗಳನ್ನು ತ್ವರಿತವಾಗಿ ತೆಗೆದುಕೊಳ್ಳುವಂತೆ ಸರ್ಕಾರದವರು ವ್ಯವಸ್ಥೆಮಾಡಬೇಕು. ಎಷ್ಟು ಜಾಗ್ರತೆಯಾಗಿ ಕೈಗಾರಿಕೆಗಳಲ್ಲಿ ಹೆಚ್ಚು ಸಂಖ್ಯೆ ಯುವಕರಿಗೆ ಕೆಲಸಗಳು ಸಿಕ್ಕಿದರೆ, ಅಷ್ಟು ಜಾಗ್ರತೆಯಾಗಿ ಅವರು ಆರ್ಥಿಕವಾಗಿ ಅಭಿವೃದ್ಧಿಗೆ ಬಂದು ಹೆಚ್ಚು ಉತ್ಪತ್ತಿ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಇನ್ನೊಂದು ವಿಷಯ. ಹಾಸನದಲ್ಲಿ ಒಂದು ಇಂಪ್ಲಿಮೆಂಟ್ಸ್ ಫ್ಯಾಕ್ಟರಿ ಇದೆ. ಅಲ್ಲಿ ವ್ಯವಸಾಯಕ್ಕೆ ಬೇಕಾಗಿರತಕ್ಕ ಉಪಕರಣಗಳನ್ನು ತಯಾರುಮಾಡುತ್ತಿದ್ದರೂ ಅದು ಈಗಲೂ ಮೊದಲಿದ್ದ

ಹಾಗೆಯೇ ಇದೆ. ಅಲ್ಲಿ ಹೆಚ್ಚಿನ ಬೆಳವಣಿಗೆಯಾಗಿಲ್ಲ. ಈ ಕಾರ್ಖಾನೆಯಲ್ಲಿ ಉತ್ತಮವಾದಂಥ ಕೆಲಸಕಾರ್ಯಗಳು ನಡೆಯುತ್ತಿದ್ದರೂ ಹೆಚ್ಚು ಬಡಾವಣೆ ಮಾಡುವುದಕ್ಕೆ ಅಲ್ಲಿ ಅವಕಾಶ ವಿದ್ದರೂ ಅದನ್ನು ಇದುವರೆಗೆ ಯಾವರೀತಿಯಲ್ಲಿಯೂ ಬೆಳವಣಿಗೆಗೆ ತರದೆ ಹಾಗೆಯೇ ಇಟ್ಟಿದ್ದಾರೆ. ಹೆಚ್ಚು ಬಂಡವಾಳವನ್ನು ಹಾಕಿ ಆ ಕಾರ್ಖಾನೆಯಲ್ಲಿ ಇತರ ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ನಡೆಯುತ್ತಾ ಇರತಕ್ಕ ರೀತಿಯಲ್ಲಿ ಇಲ್ಲಿಯೂ ದೊಡ್ಡ ದೊಡ್ಡ ಮೆಷಿನ್ ಭಾಗಗಳನ್ನು ಮಾಡುವುದಕ್ಕೂ ಮತ್ತು ಬಿಡಿ ಭಾಗಗಳನ್ನು ಮಾಡುವುದಕ್ಕೂ ಅವಕಾಶವನ್ನು ಕಲ್ಪಿಸಿಕೊಡಬೇಕು. ಹಂಗೇರಿ ಸರ್ಕಾರದ ಕೊಲಾಬೊರೇಷನ್ನಿನಲ್ಲಿ ಮೈಸೂರು ಸರ್ಕಾರದವರು ಹಾಸನ ಇಂಪ್ಲಿಮೆಂಟ್ ಫ್ಯಾಕ್ಟರಿಯಲ್ಲಿ ಸಣ್ಣ ಸಣ್ಣ ಟ್ರಾಕ್ಟರುಗಳ ಬಿಡಿ ಭಾಗಗಳನ್ನು ತಯಾರು ಮಾಡುವುದರಿಂದ ಬಹುಶಃ ಈ ಯೋಜನೆಯೇನಾದರೂ ಆಲೋಚನೆಯಲ್ಲಿದ್ದರೆ ಶೀಘ್ರವಾಗಿ ಇದನ್ನು ಸರ್ಕಾರದವರು ಕಾರ್ಯಗತ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಹಾಸನದಲ್ಲಿ ಒಂದು ಇಂಡಸ್ಟ್ರಿಯಲ್ ಎಸ್ಟೇಟ್ ಇದೆ. ಸುಮಾರು 10–15 ವರ್ಷಗಳಿಂದ ಅಲ್ಲಿ ಯಾವ ಒಂದು ಕೈಗಾರಿಕೆಯೂ ಆಗುತ್ತಾ ಇಲ್ಲ. ಈ ಇಂಡಸ್ಟ್ರಿಯಲ್ ಎಸ್ಟೇಟಿಗೆ ಲಕ್ಷಾಂತರ ರೂಪಾಯಿಗಳನ್ನು ಸರ್ಕಾರ ಹಾಕಿದರೂ ಎಸ್ಟೇಟ್ ಕೆಲಸ ಏಕೆ ಆಗಲಿಲ್ಲವೆಂದು ನಾನು ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ. ಆದ್ದರಿಂದ ಈಗಲಾದರೂ ಆದಷ್ಟು ಇಂಡಸ್ಟ್ರಿಯಲ್ ಎಸ್ಟೇಟ್ ಕೆಲಸಗಳನ್ನು ಜಾಗ್ರತೆಯಾಗಿ ಮುಗಿಸಿ ಹೆಚ್ಚು ಹೆಚ್ಚಾಗಿ ಕೈಗಾರಿಕೆಗಳು ಆಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ. ಮಾನ್ಯ ಶ್ರೀ ದೇವೇಗೌಡರು ಮಾತನಾಡುವಾಗ ಹಾಸನಕ್ಕೆ ಒಂದು ಸಕ್ಕರೆ ಕಾರ್ಖಾನೆ ಬೇಕೆಂದು ಹೇಳಿದರು. ಅದನ್ನು ಮಾಡುವುದು ಒಳ್ಳೆಯದು. 25 ಸಾವಿರ ಎಕರೆಯಲ್ಲಿ ಆಲೂಗಡ್ಡೆಯನ್ನು ಅಲ್ಲಿ ಬೆಳೆಯುವುದರಿಂದ ಅಲ್ಲಿ ಒಂದು ಚಿಪ್ಸ್ ಫ್ಯಾಕ್ಟರಿಯನ್ನು ಮಾಡಬೇಕು. ಮತ್ತು ಅಲ್ಲಿ ಒಂದು ಸ್ಟಾರ್ಚ್ ಫ್ಯಾಕ್ಟರಿಯನ್ನೂ ಸಹ ಮಾಡಬೇಕು. ಒಟ್ಟಿನಲ್ಲಿ ಹೇಳುವುದಾದರೆ ಸುಮಾರು ಸೇಕಡ 51ರಷ್ಟು ಕೈಗಾರಿಕೆಗಳು ನಮ್ಮ ದೇಶದಲ್ಲಿ ನಷ್ಟದಲ್ಲಿ ಕೆಲಸಮಾಡುತ್ತಿವೆಯೆಂದು ಹೇಳಬಹುದು. ಆದ್ದರಿಂದ ನಮ್ಮ ದೇಶದ ಕೈಗಾರಿಕೆಗಳು ನಿಜವಾಗಿ ಪ್ರಗತಿಪರವಾಗಬೇಕಾದರೆ, ದಕ್ಷರಾದ ಹಾಗೂ ನಿಸ್ಪೃಹರಾದ ಡೈರೆಕ್ಟರುಗಳನ್ನೂ ನೇಮಿಸಬೇಕು.

ಕೊನೆಯದಾಗಿ, ನನಗೆ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† **Sri BAPU RAO ANANDA RAO** (Basavakalyan).—Madam Speakr, I support the demands under consideration and put forth two suggestions before the Hon'ble Minister.

It is declared that all the districts of Hyderabad Karnatak are industrially most backward. It is a fact and I request the Hon'ble Chief Minister that even though they are backward industrially there are ample raw-materials available in the area. The only thing is: we have to utilise the people and raw material resources at our command and put forth whatever industries that are possible and establish them in our area.

In this connection, I can safely suggest that we can establish another cement factary in Chitapur and also a glass factory in that area. We can have a large oil industriy. Fortunately at Bidar there are sugar factories and we can think of utilising the raw materials available in the area and also the bye-product of the sugar factory and manufacture whatever that is possible. In this connection I want to draw the attention of our Minister that the previous Government had granted licences to utilise the bye-product of the sugar factory and licence was given to one contractor. But that contractor has not utilised the bye-products and therefore such licences deserve to be cancelled forthwith because they have not proved fruitful.

(SRI BAPU RAO ANANDA RAO)

A license is given for manufacturing alcohol to one Sri Lalchand ro Narayan Chand. I do not know the exact name of the licensee and, therefore, cannot mention it. Since the raw material and by-products are not utilised in Bidar District, we are losing another source of revenue to our factory. This point may be enquired into and necessary steps may be taken to utilise them.

Cotton and groundnut are grown in our area and they can be utilised by agro-industries in our area. For that also necessary steps may be taken.

We can establish a textile industry also, particularly at Raichur.

Now coming to the Demand on Administration of Justice, I have some representations to make to the Hon'ble Minister for Law and Parliamentary Affairs. More funds should be given to such of the Courts as have been established very recently so that they may purchase books, furniture, etc. Recently a Court has been sanctioned for Basavakalyan. But I feel the Court is not provided with enough funds to purchase the necessary books, furniture, materials, etc. I am not making an appeal only in respect of Basavakalyan. Wherever new Courts are sanctined and established, *ad hoc* grants should be made available to them in the interests of justice. If the Courts are equipped with a good library, latest books and necessary conveniences, it will conduce to the best administration of justice; they can serve the people in a better way.

I have another suggestion to make to the Government. At present, the Industrial Co-operative Societies come under the purview of the Co-operative Department. The Co-operative Department, I feel, is looking more after the interests of agriculturists and consumers. As such, it cannot devote sufficient attention to the growth of industries. I, therefore, suggest that the Industrial Co-operatives should be brought under the Industries Department.

At present no sheds are attached to the Court buildings for the use of the ryots and others who come to Courts. Their lot is miserable during rainy season and severe summer. They will have to take shelter under trees. Therefore, I suggest that suitable sheds may be provided in the premises of Courts so that litigants and other public may use them.

I have one last request to make to the Hon'ble Law Minister. A Court has been recently estabished at Basavakalyan. But the Court jurisdiction of 25 villages are still not transferred to the Basavakalyan Court; it is still under the jurisdiction of the Bhalki Court. I request the Hon'ble Minister kindy to take necessary action to transfer the Court jurisdiction of those 25 villages from Bhalki Court to Basavakalyan Court as the people of those villages are at present being put to lot of suffering and hardship.

With these few words, I thank the Chair and close my speech.

ಶ್ರೀ ಎಂ. ವಿ. ರುದ್ರಪ್ಪ (ಹೊಸದುರ್ಗ).—ಈ ದಿವಸ ನಮ್ಮ ಕೈಗಾರಿಕಾ ಮಂತ್ರಿಗಳೂ ಮತ್ತು ಕಾನೂನು ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ಹೃತ್ಪೂರ್ವಕವಾಗಿ ನಾನು ಸ್ವಾಗತಿಸುತ್ತಾ ಈ ಸಂದರ್ಭದಲ್ಲಿ ಎರಡು ಸಲಹೆಗಳನ್ನು ಸರ್ಕಾರದವರ ಮುಂದಿಡುವುದಕ್ಕೆ ಇಚ್ಛಿಸುತ್ತೇನೆ.

ಈ ಕೈಗಾರಿಕೆಗಳ ವಿಚಾರದಲ್ಲಿ ಈಗಾಗಲೇ ಸಾಕಷ್ಟು ಚರ್ಚೆ ನಡೆದಿದೆ. ಆದರೆ ಹೊಸದುರ್ಗ ದಲ್ಲಿ ಒಂದು ಸಿಮೆಂಟ್ ಫ್ಯಾಕ್ಟರಿಯನ್ನು ಸ್ಥಾಪಿಸಬೇಕೆಂದು ಸರ್ಕಾರದವರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಒಂದು ಹೊಸ ಕೈಗಾರಿಕೆಗೆ ಬೇಕಾಗತಕ್ಕ ರಾ ಮೆಟೀರಿಯಲ್ಸ್ ಅಲ್ಲಿ ಹೇರಳವಾಗಿ ಸಿಕ್ಕುತ್ತವೆ ಅಲ್ಲಿ ಮರಳು—ಸುಣ್ಣ—ನೀರು ಇವು ಯಥೇಷ್ಟವಾಗಿದೊರೆಯುತ್ತವೆ. ಇಲ್ಲಿಗೆ ಮೂರು ಮೈಲಿ ದೂರದಲ್ಲಿ ವೇದಾವತಿ ನದೀ ದಡದಲ್ಲಿ ಕಲ್ಲೋಡುಗ್ರಾಮ ಎಂಬುದು ಇದೆ. ಅಲ್ಲಿಗೆ 4—5 ಮೈಲಿದೂರದಲ್ಲಿ ಈ ರಾ ಮೆಟೀರಿಯಲ್ಸ್‌ಗಳೆಲ್ಲಾ ಹೇರಳವಾಗಿ ಸಿಕ್ಕುತ್ತವೆ. ಅಲ್ಲಿಗೆ ಆಗಲೇ ಸರ್ಕಾರದ ಪರವಾಗಿ ಜಿಯಲಾಜಿಕಲ್ ಡಿಪಾರ್ಟ್‌ಮೆಂಟಿನವರು ಮತ್ತು ಬೇರೆ ಇಲಾಖೆಗಳ ತಜ್ಞರವರೂ ಬಂದು ನೋಡಿ ಅಲ್ಲಿ ಈ ಒಂದು ಕಾರ್ಖಾನೆ ಸ್ಥಾಪನೆ ಮಾಡುವುದಕ್ಕೆ ಯೋಗ್ಯವಾಗಿದೆಯೆ ಎಂದು ಶಿಫಾರ್ಸ್ ಮಾಡಿದ್ದಾರೆ. ಅಲ್ಲಿ ದಿನ ಒಂದಕ್ಕೆ 200 ಟನ್ ಸಿಮೆಂಟನ್ನು ಮಾಡುವುದಕ್ಕೆ ಸಾಧ್ಯವಿದೆ 1200 ಜನರಿಗೆ ಡೈರೆಕ್ಟಾಗಿ ನೌಕರಿಗಳುಸಿಕುತ್ತವೆ. ಅಷ್ಟೇ ಅಲ್ಲದೆ ಮೂರು ಸಾವಿರ ನಾಲ್ಕು ಸಾವಿರ ಜನರಿಗೆ ಇಂಡೈರೆಕ್ಟಾಗಿ ಕೆಲಸ ಸಿಕ್ಕುತ್ತದೆ. ಆದ್ದರಿಂದ ಅಲ್ಲಿ ಸರ್ಕಾರದವರು ಒಂದು ಕಾರ್ಖಾನೆಯನ್ನು ಪ್ರೈವೇಟ್ ಸೇಕ್ಟಾರಿನಲ್ಲೋ ಅಥವಾ ಪಬ್ಲಿಕ್ ಸೆಕ್ಟಾರಿನಲ್ಲೋ ಸ್ಥಾಪನೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಸಿಮೆಂಟ್ ಫ್ಯಾಕ್ಟರಿಯನ್ನು ಖಂಡಿತವಾಗಿಯೂ ಮಾಡಿಕೊಡಬೇಕಾಗಿ ಮಾನ್ಯ ಮುಖ್ಯಮಂತ್ರಿಗಳಲ್ಲೂ ಮತ್ತು ಕೈಗಾರಿಕಾ ಮಂತ್ರಿಗಳಲ್ಲೂ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಉಣ್ಣೆ ಕೈಗಾರಿಕೆ ವಿಚಾರ ಅಲ್ಲಿ ಎಲ್ಲಾ ಜನಾಂಗದವರು ಕುರಿ ಸಾಕುವುದನ್ನು ಒಂದು ಕಸುಬನ್ನಾಗಿ ನಡೆಸಿಕೊಂಡು ಬಂದಿದ್ದಾರೆ. ಆದರೆ ಮುಖ್ಯವಾಗಿ ಅದನ್ನೇ ತಮ್ಮ ಒಂದು ಜೀವನದ ಕಸುಬನ್ನಾಗಿ ಇಟ್ಟುಕೊಂಡಿರತಕ್ಕ ಕುರುಬರ ಜನಾಂಗಕ್ಕೆ ಸರ್ಕಾರದವರು ಬಹಳ ಹಿಂದಿನಿಂದಲೂ ಏನೂ ಅಂಥ ಹೆಚ್ಚಿನ ಸಹಾಯವನ್ನು ಮಾಡಿಲ್ಲ. ಆದರೆ ಅಲ್ಲಿ ಇತ್ತೀಚೆಗೆ ಕೆಲವರಿಗೆ ಮೆರೀನೋ ಕುರಿಗಳನ್ನು ಸಾಕಲು ಕೊಡಿಸಿದ್ದಾರೆ. ಇದಕ್ಕಾಗಿ ಅಲ್ಲಿ ಒಂದು ಕಾವಲನ್ನೂ ತೆರೆದು ಅಲ್ಲಿ ಮೆರೀನೋ ತಳಿಕುರಿಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಆದರೆ ಸರ್ಕಾರದವರೀಗ ಅಲ್ಲಿ ತಯಾರಾಗತಕ್ಕ ಉಣ್ಣೆಗೆ ಒಂದು ಸಹಾಯ ನೀಡಬೇಕಾಗಿದೆ. ಅಲ್ಲಿ ಈಗ ಹಂಜಿ ಮಾಡುವುದು ನೂಲುವುದು, ನೇಯುವುದೂ ಈ ಕಸುಬುಗಳು ಆ ಕುರುಬರ ಜನಾಂಗದವರಿಂದ ನಡೆಯುತ್ತಿವೆ. ಆದರೆ ಅವರು ಬಹಳ ಹಿಂದುಳಿದಿದ್ದಾರೆ. ಈ ಹೊತ್ತೂ ಕೂಡ ಯಾರಾದರೂ ಬುದ್ಧಿವಂತರ ಹತ್ತಿರ ಹೋಗಿ ಏನಾದರೂ ಒಂದು ವಿಷಯವನ್ನು ತಿಳಿಸಿ ಅವರನ್ನು ಅದರ ಬಗ್ಗೆ ನಂಬಬೇಕೆಂದು ಕೇಳಿದರೆ ನಾನೇನು ಅಷ್ಟು ಕುರುಬನೇ ಇದನ್ನು ನಂಬುವುದಕ್ಕೆ ಎಂದು ಹೇಳುತ್ತಿರುವುದು ಈಗಲೂ ರೂಢಿಯಲ್ಲಿದೆ. ಅಂದರೆ ಅವರು ಸಮಾಜದಲ್ಲಿ ಈ ದಿವಸ ಸಹಾ ಬಹಳ ಹಿಂದುಳಿದಿದ್ದಾರೆ ಎಂಬುದಕ್ಕೆ ಈ ಮಾತೇ ಸಾಕು. ಅದೇ ಒಂದು ದೊಡ್ಡ ಸಾಕ್ಷಿ. ಅವರಿಗೆ ಕುರಿ ಮೇಯಿಸುವುದು, ಕಂಬಳಿಗಳನ್ನು ಮಾಡುವುದು, ಅವುಗಳನ್ನು ಮಾರಾಟ ಮಾಡುವುದು ಇಷ್ಟೇ ಅವರ ಕಸಬು. ಅವರ ಆರ್ಥಿಕಾಭಿವೃದ್ಧಿಗೆ ಅನುಕೂಲವಾಗುವಂತೆ ಒಂದು ಊಲ್ ಬೋರ್ಡನ್ನು ಸ್ಥಾಪಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ಮುಖ್ಯ ಮಂತ್ರಿಗಳೂ ಮತ್ತು ಕೈಗಾರಿಕಾ ಮಂತ್ರಿಗಳೂ ಇದಕ್ಕೆ ಹೆಚ್ಚಿನ ಗಮನ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದರಿಂದ ಅಲ್ಲಿ ಸುಮಾರು 10 ಲಕ್ಷ ಜನರು ಜೀವನ ಮಾಡುವುದಕ್ಕೆ ಒಂದು ಅವಕಾಶವಾಗುತ್ತದೆ. ಇಂದು ಇಲ್ಲಿ ತಯಾರಾಗತಕ್ಕ ಕಂಬಳಿಗಳೇನಿವೆ, ಅವು ಸಿಲೋನ್ ಮತ್ತು ಬರ್ಮಾ ಇತ್ಯಾದಿ ದೇಶಗಳಿಗೆ ಹೋಗುತ್ತಿವೆ. ಆ ಕಂಬಳಿಗಳು ಕಾಶ್ಮೀರಿ ಶಾಲನ್ನೂ ಮೀರಿಸತಕ್ಕ ಮಾದರಿಯಲ್ಲಿ ಇಂದು ತಯಾರಾಗುತ್ತಿವೆ. ಇವನ್ನು ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ರವಾನೆ ಮಾಡಿದರೆ ನಮಗೆ ವಿದೇಶಿವಿನಿಮಯ ಕೂಡ ಗಳಿಸುವುದಕ್ಕೆ ಸಾಧ್ಯವಿದೆ. ಈ ಬಾಬಿನಲ್ಲಿ ತಜ್ಞರನ್ನು ತಯಾರಿಸಲು ಇಲ್ಲಿ ಒಂದು ಊಲ್ ಇಂಡಸ್ಟ್ರಿಯಲ್ ಸ್ಕೂಲನ್ನು ತೆರೆಯಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಈ ವಿಷಯಗಳ ಬಗ್ಗೆ ತಿಳಿಸಬೇಕೆಂದು ಪ್ರಾರ್ಥಿಸಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಜಿ. ಚನ್ನಪ್ಪ (ಮಾಗಡಿ).—ಮಾನ್ಯ ಸಭಾಪತಿಯವರೇ, ಈ ದಿವಸ ಲಾ ಮತ್ತು ಇಂಡಸ್ಟ್ರೀಸ್ ಮಿನಿಷ್ಟರುಗಳು ಸಭೆಯ ಮುಂದೆ ಇಟ್ಟಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ ನಾನು ಕೆಲವು ಸಲಹೆಗಳನ್ನು ಸರ್ಕಾರದವರ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಈ ದಿವಸ ಹಳ್ಳಿಗಳ ಕಡೆ ಕೋರ್ಟಿಲ್ಲದೆ ಜನರಿಗೆ ಬಹಳ ತೊಂದರೆಯಾಗಿದೆ. ಅವರು ದೊಡ್ಡ ದೊಡ್ಡ ಪಟ್ಟಣಗಳಾದ ಬೆಂಗಳೂರಂಥ ನಗರಗಳಿಗೆ ಬಂದು ಇಲ್ಲಿ ಒಂದು, ಎರಡು ದಿನಗಳು ತಂಗಬೇಕೆಂದರೆ ಅವರಿಗೆ ಬಹಳ ಕಷ್ಟವಿದೆ, ತೊಂದರೆ ಇದೆ. ಅವರಿಂದ ಸಾಧ್ಯವಿಲ್ಲ. ಈ ಅನಾನುಕೂಲವನ್ನು ತಪ್ಪಿಸುವುದಕ್ಕೆ ಜಿಲ್ಲಾ ಮಟ್ಟದಲ್ಲಿ ತಾಲ್ಲೂಕು ಮಟ್ಟದಲ್ಲಿ ಕೋರ್ಟುಗಳನ್ನು ಸ್ಥಾಪಿಸಬೇಕೆಂದು ಕೇಳಿಕೊಳ್ಳುತ್ತೇನೆ, ಕೆಲವು ತಾಲ್ಲೂಕುಗಳಲ್ಲಿ ಈ ಹಿಂದೆಯೇ ಕೋರ್ಟುಗಳು ಮಂಜೂರಾಗಿದ್ದರೂ ಅವುಗಳನ್ನು ಇನ್ನೂ ಸ್ಥಾಪನೆ ಮಾಡಿಲ್ಲ. ಉದಾಹರಣೆಗೆ ಮಾಗಡಿಯಲ್ಲಿ ಒಂದು ಕೋರ್ಟಿನ ಸ್ಥಾಪನೆಗೆ ಆರ್ಡರಾಗಿ 2 ವರ್ಷಗಳಾದವು. ಆದರೆ ಈ ತಹಲ್‌ವರೆಗೆ ಷುರು ಮಾಡಿಲ್ಲ. ಅಲ್ಲಿಗೆ ಈ ಹಿಂದೆ ಸಂಬಂಧಪಟ್ಟವರೆಲ್ಲಾ ಬಂದು ಸ್ಥಳ ಪರಿಶೀಲನೆ ನಡೆಸಿ ಅಲ್ಲಿ ಮೊದಲು ಕೋರ್ಟನ್ನು ಸ್ಥಾಪಿಸಲು ಒಂದು ಕಟ್ಟಡವನ್ನು ಕೊಡಬೇಕೆಂದು ಅಲ್ಲಿನ ಮುನಿಸಿಪಾಲಿಟಿಯವರನ್ನೂ ಮತ್ತು ತಾಲ್ಲೂಕ್ ಬೋರ್ಡಿನವರನ್ನೂ ಕೇಳಿದ್ದರು. ಅವರು ಆ ಕಟ್ಟಡವನ್ನು ಕೊಡುವುದಕ್ಕೆ ಒಪ್ಪಿದ್ದರು. ಆದನ್ನಿನ್ನೂ ಪ್ರಾರಂಭ ಮಾಡಿಲ್ಲ. ಜನಗಳಿಗೆ ಬಹಳ ತೊಂದರೆಯಾಗಿದೆ, ಇದರಿಂದ ಬಡವರಿಗೆ ತುಂಬಾ ಅನ್ಯಾಯವಾಗುತ್ತಿದೆ—ಅವರಿಗೆ ನ್ಯಾಯ ದೊರೆಯದಂತಾಗಿದೆ. ಆದುದರಿಂದ ಅಲ್ಲಿಗೆ ಕೂಡಲೇ ಒಂದು ಕೋರ್ಟು ಸ್ಥಾಪಿತವಾಗಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

7-00 P.M.

ಇನ್ನು ಕೈಗಾರಿಕೆಗಳ ವಿಷಯ, ಕೈಗಾರಿಕೆಗಳ ವಿಕೇಂದ್ರೀಕರಣವಾಗಬೇಕು, ಈಗ ಕೈಗಾರಿಕೆಗಳೆಲ್ಲಾ ಒಂದೇ ಕಡೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿವೆ. ಆದುದರಿಂದ ಪಟ್ಟಣಗಳಲ್ಲಿ ಜನರ ಒತ್ತಡ ಜಾಸ್ತಿಯಾಗಿ ಜನರು ಹೆಚ್ಚಾಗಿ ಬಂದು ಪಟ್ಟಣಗಳಲ್ಲಿ ನೆಲಸುತ್ತಿದ್ದಾರೆ, ಅಲ್ಲಿ ಸಾಕಷ್ಟು ಸ್ಥಳ ದೊರೆಯದೆ ತೊಂದರೆಯಾಗುತ್ತಿದೆ. ಕಾರ್ಖಾನೆಗಳಲ್ಲಿ ಕೆಲಸ ದೊರೆತರೆ ದಿನಕ್ಕೆ ಎರಡುಮೂರು ರೂಪಾಯಿ ಕೂಲಿ ದೊರೆಯುತ್ತದೆ. ಅದು ಏತಕ್ಕೂ ಸಾಲುವುದಿಲ್ಲ, ನೀರಿನ ಸೌಕರ್ಯ, ಮನೆ ಸೌಕರ್ಯ ದೊರೆಯುವುದಿಲ್ಲ, ಅನೇಕರು ಸಣ್ಣ ಗುಡಿಸಲುಗಳಲ್ಲಿ ವಾಸಮಾಡುತ್ತಿದ್ದಾರೆ. ಇದನ್ನು ತಪ್ಪಿಸಲು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಕೈಗಾರಿಕೆಗಳನ್ನು ಪ್ರಾರಂಭಿಸಿದರೆ ಅಲ್ಲಿನ ಜನರಿಗೆ ಅಲ್ಲೇ ಕೆಲಸ ದೊರೆತು ಅವರು ಅಲ್ಲೇ ಉಳಿಯಲು ಅವಕಾಶವಾಗುವುದಲ್ಲದೆ, ಹೆಚ್ಚಿನ ಸೌಲಭ್ಯ ದೊರೆತು ಜನರು ಉತ್ತಮವಾದ ಜೀವನ ನಡೆಸಲು ಅವಕಾಶವಾಗುವುದು. ಈಗ ಕೇಂದ್ರೀಕೃತವಾಗಿರುವುದನ್ನು ತಪ್ಪಿಸಿ ವಿಕೇಂದ್ರೀಕರಣ ಮಾಡಿದರೆ ಅನುಕೂಲವಾಗುವುದು, ದೇಶಕ್ಕೆ ವಿಪತ್ತು ಬಂದಾಗ ಕಾರ್ಖಾನೆಗಳು ಕೇಂದ್ರೀಕೃತವಾಗಿದ್ದರೆ ಅವು ನಷ್ಟಕ್ಕೆ ಈಡಾಗಿ ದೇಶಕ್ಕೆ ತೊಂದರೆಯಾಗುವುದು. ಕೈಗಾರಿಕೆಗಳನ್ನು ವಿಕೇಂದ್ರೀಕರಣ ಮಾಡಿದರೆ ಹೆಚ್ಚು ಜನಗಳಿಗೆ ಅನುಕೂಲವಾಗುವುದಲ್ಲದೆ ದೇಶಕ್ಕೆ ಆಗುವ ಹಾನಿ ಕೂಡ ಕಡಿಮೆಯಾಗುವುದು ಅದಷ್ಟು ಹಿಂದುಳಿದ ಪ್ರದೇಶಗಳಲ್ಲಿ ಎಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಅವಕಾಶವಿದೆಯೋ ಅಲ್ಲಿ ಸ್ಥಾಪಿಸುವುದರಿಂದ ಜನತೆಗೆ ಹೆಚ್ಚಿನ ಪ್ರಯೋಜನವಾಗುತ್ತದೆ.

ರೇಷ್ಮೆ ಕೈಗಾರಿಕೆ. ರೇಷ್ಮೆ ಬೆಳೆಯುವವರ ಮತ್ತು ನೇಕಾರರ ಸ್ಥಿತಿ ಚಿಂತಾಜನಕವಾಗಿದೆ. ಕಾರಣ ಹೊರದೇಶಗಳಲ್ಲಿ ನಮ್ಮ ರೇಷ್ಮೆಗೆ ಹೆಚ್ಚು ಬೇಡಿಕೆ ಇದ್ದುದು ಕಡಮೆ ಆಗಿದೆ. ನಮ್ಮ ದೇಶದ ಕೆಲವರು ಹೊರದೇಶಕ್ಕೆ ಮಾಲುಗಳನ್ನು ಕಳಿಸುವಾಗ ಒಳ್ಳೆಯ ಮಾಲನ್ನು ಕಳಿಸದೆ ಮೋಸ ಮಾಡಿದ್ದಾರೆ. ಇದರಿಂದ ಹೊರಗಿನವರಿಗೆ ನಮ್ಮ ವಿಷಯದಲ್ಲಿ ಅಪನಂಬಿಕೆ ಬಂದು ನಮ್ಮ ಮಾಲನ್ನು ಕೊಳ್ಳುವುದನ್ನು ಕಡಮೆ ಮಾಡಿದ್ದಾರೆ. ಇದಕ್ಕಾಗಿ ಒಂದು ಎಕ್ಸ್‌ಪರ್ಟ್ ಕಮಿಟಿ ಮಾಡಿ ನಮ್ಮಲ್ಲಿರುವ ಮಾಲು ಸರಿಯಾಗಿದೆಯೇ ಎಂಬುದನ್ನು ನೋಡಿ ಒಳ್ಳೆಯ ಸರಕನ್ನು ಹೊರದೇಶಗಳಿಗೆ ಕಳಿಸಲು ಏರ್ಪಾಡು ಮಾಡಬೇಕು. ಹಾಗೆ ಮಾಡಿ ನಮ್ಮ ಮಾಲುಗಳಿಗೆ ವಿದೇಶಗಳಲ್ಲಿ ಸರಿಯಾದ ಮಾರ್ಕೆಟ್ ಸಿಕ್ಕುವಂತೆ ಮಾಡಿದರೆ ಈಗ ನಮ್ಮಲ್ಲಿರುವ ಅಶಾಂತಿ ತಪ್ಪುತ್ತದೆ. ಇದಕ್ಕೆ ಗಮನ ಕೊಡದಿದ್ದರೆ. ನಮ್ಮಲ್ಲಿ ಮಗ್ಗಗಳಲ್ಲಿ ನಿರತರಾಗಿರುವವರು ನಿತ್ಯಜೀವನ ನಡೆಸಲು ಸಾಧ್ಯವಾಗದೆ ರೇಷ್ಮೆಯ ಕಸಬು ಸರಿಯಾದ ಉತ್ತೇಜನವಿಲ್ಲದೆ ನಶಿಸಿಹೋಗಲು ಅವಕಾಶವಾಗುವುದು. ಅನೇಕರಿಗೆ ರೇಷ್ಮೆ ಗೃಹ ಕೈಗಾರಿಕೆ, ಗೃಹ ಕೈಗಾರಿಕೆಯಾಗಿದೆ. ರೇಷ್ಮೆ ಬಟ್ಟೆ ನೇಯುವವರು ಸಾವಿರಾರು ಜನರಿದ್ದಾರೆ. ಮಾಗಡಿಯಲ್ಲಿ ನೂರಾರು ಜನರು ಈ ಕಸಬಿನಿಂದ ಜೀವನ ಮಾಡುತ್ತಿದ್ದಾರೆ. ಅವರಿಗೆ ಇಂದು ತೊಂದರೆಯಾಗಿ ಕಣ್ಣೀರಿಡುತ್ತಿದ್ದಾರೆ. ಇಂದು ಮಾಲು ಹೊರಕ್ಕೆ ಹೋಗುತ್ತಿಲ್ಲ. ರೇಷ್ಮೆ

ತಂದು ನೇಯುವವರಿಗೆ ಸರಿಯಾದ ಬೆಲೆ ಸಿಕ್ಕದೆ ನಷ್ಟವಾಗುತ್ತಿದೆ. ಇದರಿಂದ ಅವರು ಬದುಕುವುದಕ್ಕೆ ಕಷ್ಟವಾಗಿದೆ. ಅವರಿಗೆ ಬೇರೆ ಕೆಲಸಮಾಡಲು ಶಕ್ತಿ ಇಲ್ಲ. ಆದುದರಿಂದ ಈ ಪರಿಸ್ಥಿತಿಯನ್ನು ಸುಧಾರಿಸಲು ಕೈಗಾರಿಕಾ ಮಂತ್ರಿಗಳು ಒಂದು ತಜ್ಞರ ಸಮಿತಿ ಮಾಡಿ ಸುಧಾರಣೆಯೇನು ಮಾಡಬೇಕೆಂದು ಸಲಹೆ ಪಡೆದು ಬೇಕಾದ ಸೌಲಭ್ಯ ಕಲ್ಪಿಸಿಕೊಡಬೇಕು ಎಂಬುದನ್ನು ಈ ಸಂದರ್ಭದಲ್ಲಿ ಮಂತ್ರಿಗಳ ಗಮನಕ್ಕೆ ತರುತ್ತೇನೆ.

ನಾನು ಅನೇಕ ವಿಷಯಗಳನ್ನು ಹೇಳಬೇಕಾಗಿತ್ತು, ಕಾಲಾವಕಾಶವಿಲ್ಲದೆ ಕಷ್ಟವಾಗಿದೆ. ಆದುದರಿಂದ ಇನ್ನು ಮುಂದಾದರೂ ಕಾಲು ಗಂಟೆಯಾದರೂ ಅವಕಾಶ ಕೊಡಬೇಕು ಎಂದು ಕೇಳಿಕೊಂಡು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸುತ್ತೇನೆ.

† ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಸಭಾಪತಿಯವರೇ, ಸಭೆಯಮುಂದೆ ಮಾನ್ಯ ಮಂತ್ರಿಗಳು ಮಂಡಿಸಿರುವ ಬೇಡಿಕೆಗಳನ್ನು ಹೃತ್ಪೂರ್ವಕವಾಗಿ ಅನುಮೋದಿಸುತ್ತಾ ಒಂದೆರಡು ವಿಷಯಗಳನ್ನು ಪ್ರಸ್ತಾಪಿಸಬಚ್ಛಿಸುತ್ತೇನೆ. ಬಹಳ ಮುಖ್ಯವಾಗಿ ಕೈಗಾರಿಕಾ ಖಾತೆಯನ್ನು ವಹಿಸಿರುವ ಮಾನ್ಯ ಕೃಷ್ಣರವರು ಬಹಳ ದಕ್ಷತೆಯಿಂದ ಇಲಾಖೆಯ ಆಗುಹೋಗುಗಳನ್ನು ಸರಿಪಡಿಸಿ ದೇಶದಲ್ಲಿ ಕೈಗಾರಿಕೆಗಳು ಉತ್ತಮವಾಗಿ ನಡೆಯುವಂತೆ ಒಂದು ಒಳ್ಳೆಯ ವಾತಾವರಣವನ್ನು ಕಲ್ಪಿಸುವ ದಾರಿಯಲ್ಲಿ ಪ್ರಯತ್ನ ಪಡುವರು ಎಂದು ಆಶಿಸುತ್ತಿದ್ದೇನೆ. ಪ್ರಾಮುಖ್ಯವಾದ ಒಂದು ಕಾರ್ಖಾನೆ ಎಂದರೆ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ. ಅಲ್ಲಿ ನಡೆಯುತ್ತಿರುವ ವ್ಯವಹಾರಗಳ ಬಗ್ಗೆ ದೇಶದ ಜನರೆಲ್ಲಾ ಕಳವಳಗೊಂಡಿದ್ದಾರೆ, ಅದರ ಬಗ್ಗೆ ಇದ್ದ ಆಸೆ ನಿರಾಸೆಯಾಗಿದೆ. ಅನೇಕ ಲೋಪದೋಷಗಳಿಗೆ ಎಡೆಕೊಟ್ಟಿರುವ ಜನರ ಟೀಕೆಟಿಪ್ಪಣಿಗಳಿಗೊಳಗಾಗಿರುವ ಈ ಕಾರ್ಖಾನೆಯನ್ನು ಸರಿಪಡಿಸುವ ದಾರಿಯಲ್ಲಿ ಮಾನ್ಯ ಮಂತ್ರಿಗಳು ಪ್ರಯತ್ನಪಟ್ಟಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಒಂದು ಉದಾಹರಣೆಯನ್ನು ಕೊಡುತ್ತೇನೆ. ಕೆಲವು ಕಡೆ ನೆಪಕ್ಕೆ ಮಾತ್ರ ಏಜೆನ್ಸಿ ಬೋರ್ಡನ್ನು ತಗಲುಹಾಕಿದ್ದಾರೆ, ವ್ಯವಹಾರಗಳನ್ನೆಲ್ಲಾ ಕಾರ್ಖಾನೆಯ ವತಿಯಿಂದ ನಡಿಸುವರು, ಸೇಲ್ಸ್ ಆಫೀಸರಿರುವರು, ಪ್ರತಿಯೊಂದನ್ನೂ ಅವರು ಮಾರುವರು. ಆದರೆ ನೂರಕ್ಕೆ ಎರಡು ರೂಪಾಯಿ ಮಾತ್ರ ಪ್ರತಿಯೊಂದು ವ್ಯವಹಾರದಲ್ಲೂ, ವ್ಯಾಪಾರದಲ್ಲೂ ಕಂಪೆನಿ ಲೆಕ್ಕಕ್ಕೆ ಜಮಾ ಆಗುವುದು. ಇಂಥ ಸಂದರ್ಭಗಳಲ್ಲಿ ಕಂಪೆನಿಗಳಲ್ಲಿದ್ದ ಕೋಟ್ಯಾಂತರ ರೂಪಾಯಿ ಕಂಪೆನಿಯಿಂದ ಏಜೆಂಟರಿಗೆ ಸಂಪಾದಾಯವಾಗಿದೆ. ಇದು ರಾಜ್ಯಕ್ಕೆ ಸಂದಾಯವಾಗಬೇಕಾಗಿರುವ ಹಣ ಎಂದು ಹೇಳಿದರೆ ತಪ್ಪಲ್ಲ. ಇಂಥ ವ್ಯವಹಾರಗಳು ಹಿಂದೆ ಬಹಳಷ್ಟು ನಡೆದು ಕೋಟ್ಯಾಂತರ ರೂಪಾಯಿಗಳ ನಷ್ಟವಾಗಿದೆ. ಇದನ್ನು ಸರಿಪಡಿಸುವ ಜವಾಬ್ದಾರಿ ಸರಕಾರದ ಮೇಲಿದೆ. ಮಾನ್ಯ ಮಂತ್ರಿಗಳೇ ಈ ಕಂಪೆನಿಗೆ ಛೇರ್ಮನ್ ಆಗುವುದು ಹಿಂದಿನ ಸಂಪ್ರದಾಯ. ಅದರ ಬದಲಾವಣೆಯಾಗಿದೆ. ಈಗಲಾದರೂ ಅದನ್ನು ಬದಲಾಯಿಸಿ ಅಲ್ಲಿರುವವರಿಗೆ ಬೇರೆ ಕೆಲಸ ಕೊಟ್ಟು ಅಲ್ಲಿ ನಡೆಯುವ ಅನ್ಯಾಯ ಅಕ್ರಮಗಳನ್ನು ಅದಷ್ಟು ಬೇಗ ಕಡಮೆ ಮಾಡಬೇಕು. ಮಂತ್ರಿಗಳೇ ಆ ಕಂಪೆನಿಗಳಿಗೆ ಛೇರ್ಮನ್ ಆಗುವುದು ಉತ್ತಮವೆಂದು ಭಾವಿಸುತ್ತೇನೆ.

ಇನ್ನು ನಮ್ಮ ಜಿಲ್ಲೆಯಮಟ್ಟಿಗೆ ಪ್ರಸ್ತಾಪಿಸುತ್ತೇನೆ. ನಮ್ಮಲ್ಲಿರುವ ರಾ ಮೆಟೀರಿಯಲ್ಸ್ ತಾವೇಕೆ ಉಪಯೋಗಿಸಬಾರದು ? ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಕಬ್ಬಿಣದ ಅದುರು ಮುಂತಾದ ರಾ ಮೆಟೀರಿಯಲ್ಸ್ ಬೇಕಾದಷ್ಟಿವೆ. ಅವುಗಳನ್ನು ಉಪಯೋಗಮಾಡಿ ಕಾರ್ಮಿಕರು ಮುಂತಾದವರಿಗೆ ಕೆಲಸ ಕೊಡುವ ದೃಷ್ಟಿಯಿಂದ ಸಂಬಂಧಪಟ್ಟ ಇಲಾಖೆಯವರು ಅಲ್ಲಿ ಕಾರ್ಖಾನೆಗಳನ್ನು ತೆರೆದು ದೇಶದ ಸಂಪತ್ತನ್ನು ಹೆಚ್ಚಿಸುವುದಲ್ಲದೆ ಕಾರ್ಮಿಕರಿಗೆ ಹೆಚ್ಚಿನ ಕೆಲಸ ಒದಗಿಸಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ಇಲಾಖೆಯಲ್ಲಿ ಬೇಕಾದಷ್ಟು ಲೋಪದೋಷಗಳಿವೆ. ಶ್ರೀಮಾನ್ ಕೃಷ್ಣರವರು ದಕ್ಷತೆಯಿಂದ ಕೆಲಸಮಾಡಿ ಅದಷ್ಟು ಬೇಗ ಈ ಇಲಾಖೆಯಲ್ಲಿರುವ ನ್ಯೂನತೆಗಳನ್ನು ಸರಿಪಡಿಸಿ ದೇಶದ ಉತ್ಪತ್ತಿಯನ್ನು ಹೆಚ್ಚಿಸಲು ಪ್ರಯತ್ನಪಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಕೋರ್ಟುಗಳು ಏನಿವೆ ಅವುಗಳ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ.

ಪ್ರತಿಯೊಂದು ತಾಲ್ಲೂಕಿಗೂ ಒಂದೊಂದು ಕೋರ್ಟನ್ನು ಕೊಡದೇ ಇದ್ದರೂ ಕೂಡ ಕೋರ್ಟುಗಳು ಇರತಕ್ಕಂಥಾಕಡೆ ಜನಗಳಿಗೆ ಆಗತಕ್ಕ ತೊಂದರೆಯನ್ನು ಅರಿತು ಅವರಿಗೆ ಕುಳಿತುಕೊಳ್ಳಲು ಸ್ಥಳ ಮತ್ತು ಕೋರ್ಟಿಗೆ ಬರುವವರಿಗೆ ನೆಮ್ಮದಿಯಿಂದ ಇದ್ದು ಹೋಗತಕ್ಕಂಥ ಒಂದು ಸ್ಥಳದ ವ್ಯವಸ್ಥೆ ಮಾಡುವುದು ಸೂಕ್ತವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ರೇಷ್ಮೆ ಇಲಾಖೆಗೆ ಸಂಬಂಧಪಟ್ಟಂತೆ ಎಲ್ಲೆಲ್ಲಿ ಸಾಧ್ಯವಾಗುತ್ತದೋ ಅಂಥಾ ಕಡೆಗಳಲ್ಲಿ ರೇಷ್ಮೆ ಫಾರಂಗಳನ್ನು ಮಾಡಿ ರೈತರು ಅವರ ಉತ್ಪಾದನೆ ಹೆಚ್ಚಿಸಿಕೊಳ್ಳುವುದಕ್ಕೆ ಸರಕಾರ ಸಹಕಾರ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

(ಶ್ರೀ ಬಿ. ಬೈರಪ್ಪಾಜಿ)

ಇನ್ನು ಖಾದಿ ಬೋರ್ಡ್ ಬಗ್ಗೆ ಹೇಳುವುದಾದರೆ ಖಾದಿಬೋರ್ಡ್‌ನ್ನು ರದ್ದುಪಡಿಸಿ ಅಲ್ಲಿರತಕ್ಕಂಥ ಅವ್ಯವಸ್ಥೆ ಅನ್ಯಾಯಗಳನ್ನು ಸರಿಪಡಿಸತಕ್ಕಂಥ ಒಂದು ಕಾರ್ಯವನ್ನು ಕೈಗೊಳ್ಳಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್ (ಸಿರ್ಸಿ).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ನಾನು ಈಗ 24 ನೇ ಭಾಷಣಗಾರನಾಗಿ ಮಾತನಾಡುತ್ತಿದ್ದೇನೆ. ಈ ದಿವಸ ಸರ್ಕಾರದವರು ಮಂಡಿಸಿರತಕ್ಕಂಥ ಬೇಡಿಕೆಗಳಲ್ಲಿ ಮುಖ್ಯವಾಗಿ ಕೈಗಾರಿಕೆಯ ಕ್ಷೇತ್ರದಲ್ಲಿ ಸಮಾಜವಾದ ನೀತಿಯನ್ನು ನಮ್ಮ ಸರ್ಕಾರ ಈ ಸಮಯದಲ್ಲಿ ಪ್ರದರ್ಶನ ಮಾಡಬೇಕಾಗಿ ಬಂದಿದೆ. ಇದನ್ನು ರಾಜ್ಯಾದ್ಯಂತ ಜಾರಿಗೆ ತರತಕ್ಕ ಮಾರ್ಗದಲ್ಲಿ ಅಡ್ಡಬರತಕ್ಕ ಅಡಚಣೆಗಳನ್ನು ನಿವಾರಣೆ ಮಾಡುವುದಕ್ಕೆ ಮಾನ್ಯ ಮಂತ್ರಿಗಳಾಗಿರತಕ್ಕ ಶ್ರೀಮಾನ್ ಕೃಷ್ಣ ಅವರು ಪ್ರಯತ್ನಪಟ್ಟು ಬಡವರಿಗೆ, ಕೂಲಿಗಾರರಿಗೆ, ಗ್ರಾಮಾಂತರ ಜನಕ್ಕೆ ಹೆಚ್ಚು ಹೆಚ್ಚು ಪ್ರಯೋಜನವನ್ನು ಮಾಡಿಕೊಡಬೇಕು. ಇದಕ್ಕೂ ಮಿಗಿಲಾಗಿ ನಾನು ಚರ್ಮದ ಕೈಗಾರಿಕೆ ವಿಷಯವಾಗಿ ಎರಡು ಮಾತುಗಳನ್ನು ಹೇಳಬೇಕೆಂದು ಇಷ್ಟಪಡುತ್ತೇನೆ. ಈ ಕೈಗಾರಿಕೆ ಇಡೀ ರಾಜ್ಯದಲ್ಲಿ ಅತ್ಯಂತ ಶ್ರೇಷ್ಠವಾದದ್ದು, ಹೆಚ್ಚು ಉತ್ಪನ್ನ ಕೊಡತಕ್ಕಂಥಾದ್ದು ಮತ್ತು ವಿದೇಶಿ ವಿನಿಯಮಯವನ್ನು ಕೊಡತಕ್ಕಂಥ ಕೈಗಾರಿಕೆ. ಅಲ್ಲದೆ ಈ ರಾಜ್ಯದಲ್ಲಿ ಬಡವರು, ಕೂಲಿಗಾರರು ಮತ್ತು ನಿರ್ಗತಿಕ ನಿಮ್ನವರ್ಗ ಮತ್ತು ನಿಮ್ನಪಂಗಡದ ಜನಕ್ಕೆ ಅನುಕೂಲ ಕಲ್ಪಿಸತಕ್ಕ ಈ ಕೈಗಾರಿಕೆಯನ್ನು ಬೆಳೆಸಲು ಇರತಕ್ಕ ಅಡ್ಡಿ ಅಡಚಣೆಗಳನ್ನು ಮಾನ್ಯ ಮಂತ್ರಿಗಳು ಪುನರ್ವಿಮರ್ಶೆ ಮಾಡಿ ಇದಕ್ಕೆ ಒಂದು ಲೆದರ್ ಇಂಡಸ್ಟ್ರಿಸ್ ಬೋರ್ಡ್ ಅಂತ ಮಾಡಿ ಜನತೆಗೆ ಹೆಚ್ಚು ಪ್ರಯೋಜನವಾಗುವ ರೀತಿಯಲ್ಲಿ ಮಾಡಬೇಕು ಎಂದು ಹೇಳುತ್ತೇನೆ. ಈಗ ನಮ್ಮಲ್ಲಿ 20—25 ಪಬ್ಲಿಕ್ ಅಂಡರ್ ಟೇಕಿಂಗ್ಸ್ ಏನು ಇವೆ, ಅವುಗಳಲ್ಲಿ ಸ್ಕಿಲ್ಡ್ ಲೇಬರ್ಸ್ ಮತ್ತು ನಾನ್ ಸ್ಕಿಲ್ಡ್ ಲೇಬರ್ಸ್‌ನಲ್ಲಿ ಬಡವರಿಗೆ ಮತ್ತು ಕೂಲಿಗಾರರಿಗೆ ಮತ್ತು ನಿರ್ಗತಿಕರಾದ ನಿಮ್ನವರ್ಗ ಮತ್ತು ನಿಮ್ನ ಪಂಗಡದವರಿಗೆ ಕೆಲಸಗಳನ್ನು ಪಡೆಯಲು ಅವಕಾಶವಿಲ್ಲದಂತಾಗಿದೆ. ಆದುದರಿಂದ ಈ ಪಬ್ಲಿಕ್ ಅಂಡರ್ ಟೇಕಿಂಗ್ಸ್‌ನ್ನು ಒಂದು ಹತೋಟಿಯಲ್ಲಿಟ್ಟುಕೊಂಡು ಅದಕ್ಕೆ ಒಂದು ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್‌ನ್ನು ಮಾಡಿ ಜನತೆಗೆ ಅನುಕೂಲ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಭದ್ರಾವತಿ ಉಕ್ಕಿನ ಕಾರ್ಖಾನೆಯ ಆಡಳಿತದಲ್ಲೂ ಅನೇಕ ಲೋಪದೋಷಗಳು ಉಂಟು. ಆದರಲ್ಲಿ ಕೂಡ ಒಂದು ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಏನು ಇದೆಯೋ ಅದನ್ನು ಬದಲಾಯಿಸಿ ಡೈರೆಕ್ಟ್ ರಿಕ್ರೂಟ್‌ಮೆಂಟ್ ಪದ್ಧತಿಯನ್ನು ಜಾರಿಗೆ ತಂದರೆ ಅದರಿಂದ ಅನೇಕ ಬಡವರಿಗೆ, ಕೂಲಿಗಾರರಿಗೆ, ನಿಮ್ನವರ್ಗ ಮತ್ತು ನಿಮ್ನ ಪಂಗಡದವರಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ.

ಇನ್ನು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಮತ್ತು ಖಾದಿ ಅಂಡ್ ವಿಲೇಜ್ ಇಂಡಸ್ಟ್ರೀಸ್ ಏನು ಇವೆಯೋ ಅವುಗಳಲ್ಲೂ ನಿಮ್ನವರ್ಗದ ಮತ್ತು ನಿಮ್ನ ಪಂಗಡದವರಿಗೆ ಶೇಕಡ ಒಂದರಷ್ಟಾದರೂ ಈ ಕೈಗಾರಿಕೆಯಲ್ಲಿ ಮುಂದಕ್ಕೆ ಬರುವಂತೆ ಉತ್ತೇಜನ ಕೊಡಬೇಕು. ಅದಕ್ಕಾಗಿ ಅವರು ಒಂದು ಉದ್ಯಮವನ್ನು ಸ್ಥಾಪನೆ ಮಾಡಿಕೊಳ್ಳುವುದಕ್ಕೆ ಮುಂದೆ ಬಂದರೆ ಸರ್ಕಾರದವರು ಅವರಿಗೆ 50 ಪರ್ಸೆಂಟು ಸಬ್ಸಿಡಿ ಮತ್ತು 50 ಪರ್ಸೆಂಟು ಪರ್ಸನಲ್ ಸೆಕ್ಯೂರಿಟಿ ಕೊಟ್ಟು ಉತ್ತೇಜನ ಕೊಡಬೇಕು. ಹಾಗೆ ಅವಕಾಶ ಮಾಡಿಕೊಟ್ಟರೆ ಮಾತ್ರ ಈ ಕೈಗಾರಿಕಾ ಕ್ಷೇತ್ರದಲ್ಲಿ ಅವರು ಪ್ರಯೋಜನ ಹೊಂದುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ಆ ರೀತಿ ಮಾಡಬೇಕು ಎಂದು ಹೇಳುತ್ತೇನೆ.

ಹಿಂದೆ ನಿಮ್ನವರ್ಗ ಮತ್ತು ನಿಮ್ನಪಂಗಡದವರಿಗೆ ಒಂದು ವೆಲ್ಫೇರ್ ಸ್ಕೀಮ್ ಇತ್ತು. ಹೋಟೇಲುಗಳನ್ನು ನಡೆಸುವುದಕ್ಕೆ, ಕಂಟ್ರಾಕ್ಟುಗಳನ್ನು ಮಾಡುವುದಕ್ಕೆ ಒಂದು ಯೋಜನೆ ಇತ್ತು. ಅವೆಲ್ಲಾ ಈಗ ರದ್ದಾಗಿವೆ. ದಯವಿಟ್ಟು ನಮ್ಮ ಕೈಗಾರಿಕಾ ಮಂತ್ರಿಗಳು ನಿಜವಾದ ಸೋಷಲಿಸ್ಟ್ ಆಗಿರುವುದರಿಂದ ಈ ಯೋಜನೆಗೆ ಗಮನ ಕೊಟ್ಟು ಬಡವರ ಉದ್ಧಾರಕ್ಕಾಗಿ ಇರತಕ್ಕಂಥ ಈ ಯೋಜನೆಗಳನ್ನು ಪರಿವರ್ತನೆ ಆಗತಕ್ಕಂಥ ರೀತಿಯಲ್ಲಿ ಮಾಡುತ್ತಾರೆಂದು ತಿಳಿದುಕೊಂಡಿದ್ದೇನೆ. ಇಷ್ಟು ಹೇಳಿ ಅಧ್ಯಕ್ಷಿಣಿಯವರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಈ ಪೊತ್ತಿನ ದಿವಸ ಈ ಬೇಡಿಕೆಯ ಮೇಲೆ ಮಾತನಾಡಬೇಕಾದರೆ 2—3 ಜನ ಮಂತ್ರಿಗಳ ಬಾಬನ್ನು ಸೇರಿಸಿ ''ಸಬ್‌ಲೋಗ್-ವನ್'' ಅಂತ ಮಾಡಿದ್ದೀರಿ. ಇದರ ಬಗ್ಗೆ ನಾನು ಕೆಲವು ವಿಷಯಗಳನ್ನು ಹೇಳಬೇಕಾಗಿದೆ.

ಮೊಟ್ಟಮೊದಲನೆಯದಾಗಿ ಕೆಲವು ಮಿತ್ರರು ಹೇಳಿದಂತೆ ವಿರೋಧಪಕ್ಷದ ನಾಯಕರಿಗೆ ಸಕಲಸೌಲಭ್ಯಗಳನ್ನು ಕೊಡಬೇಕೆಂದು ಒತ್ತಾಯ ಮಾಡಿದ್ದಾರೆ. ಈ ಪ್ರಜಾಪ್ರಭುತ್ವದಲ್ಲಿ ಈ ಸರ್ಕಾರಕ್ಕೆ ನಂಬಿಕೆ ಇದ್ದರೆ ವಿರೋಧ ಪಕ್ಷದ ನಾಯಕರಿಗೂ ಕೂಡ ಮಾನ್ಯ ಮುಖ್ಯ ಮಂತ್ರಿಗಳು ತಮಗೆ ಯಾವ ಸೌಲಭ್ಯ ಇವೆಯೋ ಅದೇ ಮಟ್ಟದಲ್ಲಿ ಅವುಗಳನ್ನು ಇವರಿಗೂ ಒದಗಿಸಿ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ.—ವಿರೋಧಪಕ್ಷದ ನಾಯಕರ ಸ್ಥಾನ, ಹಾಸನ ಜಿಲ್ಲೆಗೆ ಹೋಗುತ್ತದಲ್ಲಾ?

ಶ್ರೀ ಸಿ. ಬೈರೇಗೌಡ.—ಈ ವಿಚಾರದಲ್ಲಿ ಜಿಲ್ಲೆಯ ಪ್ರಶ್ನೆ ಬರುವುದಿಲ್ಲ. ಒಟ್ಟಿನಲ್ಲಿ ವಿರೋಧ ಪಕ್ಷದ ನಾಯಕರಿಗೆ, ಮಾನ್ಯ ಮುಖ್ಯ ಮಂತ್ರಿಗಳಿಗೆ ಯಾವ ಸೌಲಭ್ಯಗಳು ಇವೆಯೋ ಅದೇ ಮಟ್ಟದಲ್ಲಿ ಆ ಸೌಲಭ್ಯಗಳು ಇವರಿಗೂ ದೊರೆಯಬೇಕು ಎನ್ನುವ ಪ್ರಶ್ನೆ ಈಗ ಮುಖ್ಯವಾಗಿ ಎದ್ದಿದೆ. ಈ ಸಂದರ್ಭದಲ್ಲಿ ಮಾನ್ಯ ಕೈಗಾರಿಕಾ ಮಂತ್ರಿಗಳಾದ ಶ್ರೀ ಕೃಷ್ಣ ಅವರ ಬಗ್ಗೆ ಹೇಳಬೇಕಾದರೆ ಅವರು ಮೊದಲು ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯಲ್ಲಿದ್ದವರು. ಅವರು ಸಮಾಜವಾದದಬಗ್ಗೆ ಹೆಚ್ಚಿನ ವಿಷಯಗಳನ್ನು ತಿಳಿದುಕೊಂಡಿದ್ದಾರೆ. ಈವೊತ್ತು ನಮ್ಮ ರಾಜ್ಯದ ಇಂಡಸ್ಟ್ರಿಯಲ್ ಪಾಲಿಸಿ ಯಾವರೀತಿ ಎಂದರೆ ಕಳೆದ 25 ವರ್ಷಗಳಿಂದಲೂ ಇದ್ದ ರೀತಿಯಲ್ಲಿಯೇ ಇದೆ. ಏನೂ ಬದಲಾವಣೆಯಾಗಿಲ್ಲ. ಕಳೆದ 25 ವರ್ಷಗಳಿಂದಲೂ ನಮ್ಮ ದೇಶದಲ್ಲಿರತಕ್ಕಂಥಾ ಗುತ್ತಿಗೆದಾರರು ಬಂಡವಾಳಶಾಹಿಗಳು ಏನು ಇದ್ದಾರೆ ಅವರಿಗೆ ರಕ್ಷಣೆ ಆಗುವ ಸರ್ಕಾರ ಇಲ್ಲಿಯವರೆಗೂ ಇತ್ತು. ಇದರ ಬಗ್ಗೆ ಯಾವ ನೀತಿಯನ್ನೂ ರೂಪಿಸುವುದಕ್ಕಾಗಲಿಲ್ಲ. ಈವೊತ್ತು ಅದೇ ಜಾಗದಲ್ಲಿ ನಮ್ಮ ಕೃಷ್ಣ ಅವರು ಬಂದಿದ್ದಾರೆ. ಇದು ಇನ್ನುಮುಂದೆ ಮುಂದುವರೆದುಕೊಂಡು ಹೋಗಬಾರದ ರೀತಿಯಲ್ಲಿ ಶ್ರೀ ಕೃಷ್ಣ ಅವರು ಇದರ ಬಗ್ಗೆ ಒಂದು ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡಬೇಕಾಗಿದೆ ಎಂದು ಹೇಳುತ್ತೇನೆ. ನಮ್ಮ ದೇಶದಲ್ಲಿರತಕ್ಕಂಥ ಗುತ್ತಿಗೆದಾರರು, ಬಂಡವಾಳಶಾಹಿಗಳು ದೊಡ್ಡ ದೊಡ್ಡ ಬಿಸಿನೆಸ್ ಫರ್ಮ್ ಮಾಡಿ ಬಿಸಿನೆಸ್ ಹೌಸ್ ಅಂತ ಏನು ಇಟ್ಟು ಕೊಂಡಿದ್ದಾರೋ ಅವರಿಗೆ ಯಾವ ವಿಧವಾದಂಥ ಕಾನೂನು ತಂದರೂ ಅವರ ಆಸ್ತಿಯನ್ನು ಮುಟ್ಟುವುದಕ್ಕೆ ಇನ್ನೂವರೆಗೆ ಆಗಲಿಲ್ಲ. ಆದುದರಿಂದ ಈ ಸಮಾಜದಲ್ಲಿ ಜನಗಳಿಗೆ ನಂಬಿಕೆ ಬರಬೇಕಾಗಿದ್ದರೆ ಇನ್ನು 6 ತಿಂಗಳಲ್ಲಿ ಈ ಸಮಾಜವಾದದ ನೀತಿಯನ್ನು ಉಪಯೋಗ ಮಾಡಿ ತೋರಿಸಿಕೊಡಬೇಕು. ಹಾಗಾದರೆ ಜನಗಳಿಗೂ ಕೂಡ ಈ ಸಮಾಜವಾದದಲ್ಲಿ ನಂಬಿಕೆ ಬರುತ್ತದೆ ಮತ್ತು ನನಗೂ ಕೂಡ ನಂಬಿಕೆ ಬರುತ್ತದೆ. ಈವೊತ್ತಿನ ದಿವಸ ಅವರ ಮೇಲೆ ಏನೂ ಕ್ರಮ ತೆಗೆದುಕೊಳ್ಳದೆ ಅವರು ಇದೇ ರೀತಿ ಮುಂದುವರೆಯುವುದಾದರೆ ನೀವು ಹೇಗೆ ಸಮಾಜವಾದವನ್ನು ಜಾರಿಗೆ ತರುತ್ತೀರಿ ಎನ್ನುವ ವಿಷಯದಲ್ಲಿ ಶ್ರೀ ಕೃಷ್ಣ ಅವರ ಬಗ್ಗೆ ಸಂಶಯ ಬರುತ್ತದೆ. ಆದುದರಿಂದ ಸಮಾಜವಾದದ ರೀತಿಯಲ್ಲಿ ಎಲ್ಲರನ್ನೂ ಸಮನಾದ ರೀತಿಯಲ್ಲಿ ನೋಡಿಕೊಳ್ಳಬೇಕು ಎಂದು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಈವೊತ್ತಿನ ದಿವಸ ಬಂಡವಾಳಶಾಹಿಗಳಾಗಿ, ಗುತ್ತಿಗೆದಾರರಾಗಿ, ಅನೇಕ ಕಂಪನಿಗಳನ್ನು ಮಾಡಿ ಕೊಂಡು ಏನು ಇದ್ದಾರೋ ಅವನ್ನೆಲ್ಲಾ ರಾಷ್ಟ್ರೀಕರಣ ಮಾಡಿ ಈ ಸಮಾಜವಾದವನ್ನು ದೇಶಾದ್ಯಂತ ಸಾಧನೆ ಮಾಡಬೇಕು. ಇದರ ಬಗ್ಗೆ ಶ್ರೀ ಕೃಷ್ಣ ಅವರು ಪ್ರಯತ್ನ ಪಟ್ಟು ತೋರಿಸಿಕೊಡಬೇಕು ಎಂದು ವಿನಂತಿ ಮಾಡುತ್ತೇನೆ.

ಇನ್ನು ಸಣ್ಣ ಕಾರಿನ ಯೋಜನೆ ಬಗ್ಗೆ ಹೇಳುವುದಾದರೆ ಈ ಯೋಜನೆಯನ್ನು ಕೇಂದ್ರ ಸರ್ಕಾರ ನಮ್ಮ ಮೈಸೂರು ರಾಜ್ಯಕ್ಕೆ ಕೊಡಬೇಕು ಎಂದು ಇತ್ತು. ಆದರೆ ಹಿಂದೆ ಇದ್ದ ಸರ್ಕಾರ ಪ್ರಗತಿಗಾಮಿ ವಿರೋಧಿಗಳಾಗಿದ್ದುದರಿಂದ ಇದುವರೆಗೆ ಆ ಯೋಜನೆ ಬಗ್ಗೆ ಏನು ಮಾಡಿದರೋ ಏನೋ ಎನ್ನುವುದು ಗೊತ್ತಿಲ್ಲ.

ಹಾಸನದಲ್ಲಿರುವ ಇಂಪ್ಲಿಮೆಂಟ್ಸ್ ಫ್ಯಾಕ್ಟರಿಯಲ್ಲಿ ಸಣ್ಣ ಟ್ರಾಕ್ಟರು ತಯಾರು ಮಾಡುವ ಯೋಚನೆ ಇತ್ತು. ಈ ಹೊತ್ತು ಇಂಪ್ಲಿಮೆಂಟ್ಸ್ ಫ್ಯಾಕ್ಟರಿ ನಷ್ಟದಲ್ಲಿ ನಡೆಯುತ್ತಿದೆ ಎಂದು ತಿಳಿದು ಬಂದಿದೆ. ಸಣ್ಣ ಟ್ರಾಕ್ಟರ್ ಉತ್ಪಾದನೆ ಮಾಡತಕ್ಕ ಕೆಲಸವನ್ನು ಇದಕ್ಕೆ ವಹಿಸಿದ್ದರೆ ಬಹಳ ಅನುಕೂಲವಾಗುತ್ತಿತ್ತು.

(ಶ್ರೀ ಸಿ. ಬೈರೇಗೌಡ)

ಕೋಲಾರ ಜಿಲ್ಲೆಯ ವಿಷಯವನ್ನು ಹೇಳಬೇಕು ಎಂದರೆ ದೇಶಕ್ಕೆ ಮತ್ತು ರಾಷ್ಟ್ರಕ್ಕೆ ಮುಖ್ಯವಾಗಿರತಕ್ಕ ಮತ್ತು ಹೊರದೇಶಗಳಿಗೆ ರೇಷ್ಮೆ ಬಟ್ಟೆಯನ್ನು ತಯಾರುಮಾಡಿ ಕಳುಹಿಸಿ ವಿದೇಶಿ ವಿನಿಮಯವನ್ನು ಸಂಪಾದನೆ ಮಾಡುತ್ತಿರುವಂಥ ಕೈಗಾರಿಕೆ ಎಂದರೆ ರೇಷ್ಮೆ ಕೈಗಾರಿಕೆ. ಕೋಲಾರ, ಬೆಂಗಳೂರು, ತುಮಕೂರಿನ ಕೆಲವು ಭಾಗಗಳು, ಮೈಸೂರು ಜಿಲ್ಲೆ, ಮಂಡ್ಯಜಿಲ್ಲೆಯ ಕೆಲವು ಭಾಗಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಸಾಮಾನ್ಯ ಜನರ, ಮಧ್ಯಮವರ್ಗದ ಜನರ, ಇನ್ನೂ ಕೆಳಮಟ್ಟದಲ್ಲಿರುವ ಕೂಲಿಗಾರರ ಕಸಬಾಗಿದೆ, ಈ ರೇಷ್ಮೆ ಕೈಗಾರಿಕೆ. ರೇಷ್ಮೆ ಉದ್ಯಮವನ್ನು ಅಭಿವೃದ್ಧಿ ಮಾಡಿ ನಮ್ಮ ದೇಶದಲ್ಲಿರತಕ್ಕ ಪ್ರತಿಯೊಬ್ಬರಿಗೂ ಉದ್ಯೋಗವನ್ನು ಒದಗಿಸುವುದಕ್ಕೆ ಅವಕಾಶವಿದೆ. ಕೋಲಾರ ಜಿಲ್ಲೆಯಲ್ಲಿ ರೇಷ್ಮೆ ಕಡ್ಡಿ ಬೆಳೆ ಹೆಚ್ಚು ಪ್ರದೇಶದಲ್ಲಿ ಆಗುತ್ತಿದೆ. ಅಲ್ಲಿಗೆ ಒಂದು ಸಿಲ್ಕ್ ಫಿಲೇಚರ್ ಕಾರ್ಖಾನೆ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದರೂ ಕೂಡ ಇಲ್ಲಿಯವರೆಗೂ ಅದಕ್ಕೆ ಮನ್ನಣೆ ಮಾಡಿಲ್ಲ. ಈಗಲಾದರೂ ಅದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಇಷ್ಟು ಮಾತುಗಳನ್ನು ಹೇಳಿ, ಅಧ್ಯಕ್ಷರು ಹೆಚ್ಚು ಕಾಲಾವಕಾಶವಿಲ್ಲವೆಂದು ಹೇಳುತ್ತಿರುವುದರಿಂದ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಮಾನ್ಯ ಅಧ್ಯಕ್ಷರೇ, ವಂದನಾರ್ಪಣೆ ಕಾರ್ಯವನ್ನು ನನಗೆ ಕೊಟ್ಟಿರುವುದರಿಂದ ನಾನು ಬಹಳ ಸಂತೋಷಪಡುತ್ತೇನೆ. ಈ ಹೊತ್ತು ಮಾನ್ಯ ಕೈಗಾರಿಕಾ ಮಂತ್ರಿಗಳು ತಂದಿರತಕ್ಕ ಬೇಡಿಕೆಗಳನ್ನು ಒಪ್ಪಬೇಕೋ ಬಿಡಬೇಕೋ ಎನ್ನುವ ವಿಚಾರದಲ್ಲಿ ಬಹಳ ಸಂಶಯವಾಗಿದೆ. ಆದರೂ ಕೆಲವು ವಿಷಯಗಳನ್ನು ಹೇಳಬೇಕಾಗಿದೆ.

ಮೈಸೂರು ರಾಜ್ಯದ ಚಲನ ಚಿತ್ರೋದ್ಯಮ ಅಭಿವೃದ್ಧಿ ನಿಗಮ, ಇದಕ್ಕೆ 10 ಲಕ್ಷ ರೂಪಾಯಿಗಳನ್ನು ಆಯವ್ಯಯದಲ್ಲಿ ಒದಗಿಸಿದ್ದಾರೆ. ಮೈಸೂರು ಸ್ಟೇಟ್ ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್ ಬಗ್ಗೆ ಹೇಳುವುದಕ್ಕೆ ಮೊದಲು ಒಂದು ವಿಷಯ ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಖಾಸಗಿಯವರು ನಡೆಸುತ್ತಿರುವ ಪ್ರೀಮಿಯರ್ ಸ್ಟುಡಿಯೋ, ಕಂಠೀರವ ಸ್ಟುಡಿಯೋ, ಅಭಿಮಾನ್ ಸ್ಟುಡಿಯೋ ಮತ್ತು ಇನ್ನೊಂದು ಸ್ಟುಡಿಯೋ ಹೀಗೆ ಒಟ್ಟು ನಾಲ್ಕು ಸ್ಟುಡಿಯೋಗಳು ನಮ್ಮ ರಾಜ್ಯದಲ್ಲಿವೆ. ಕಂಠೀರವ ಸ್ಟುಡಿಯೋಗೆ 12 ಲಕ್ಷ ರೂಪಾಯಿ ಸರ್ಕಾರ ಸಾಲವಾಗಿ ಕೊಟ್ಟಿದೆ, ಷೇರು ಬಂಡವಾಳವಾಗಿ 5 ಲಕ್ಷ ರೂಪಾಯಿ ಕೊಟ್ಟಿದೆ. ಒಟ್ಟು 17 ಲಕ್ಷ ರೂಪಾಯಿ ಕೊಟ್ಟಿದೆ. ಅಭಿಮಾನ್ ಸ್ಟುಡಿಯೋಗೆ ಐದು ಲಕ್ಷ ರೂಪಾಯಿ ಕೊಟ್ಟಿದೆ. ಮೈಸೂರಿನಲ್ಲಿರುವ ಪ್ರೀಮಿಯರ್ ಸ್ಟುಡಿಯೋಗೆ ಏನೂ ದುಡ್ಡು ಕೊಟ್ಟಿಲ್ಲ. ನಮ್ಮಲ್ಲಿ ಈ ಹೊತ್ತು ವರ್ಷಕ್ಕೆ 40 ಕನ್ನಡ ಚಿತ್ರಗಳು ತಯಾರಾದರೆ ಸಾಕು. ಈಗ ಇರುವ ನಾಲ್ಕು ಸ್ಟುಡಿಯೋಗಳಲ್ಲಿ ಚಲನಚಿತ್ರ ತೆಗೆಯುವ ಜನರು ಬರುವುದೇ ಕಷ್ಟವಾಗಿದೆ. ಅಲ್ಲದೆ ತಯಾರಾಗಿರುವ ಚಿತ್ರಗಳನ್ನು ಪ್ರದರ್ಶನ ಮಾಡುವುದಕ್ಕೆ ಥಿಯೇಟರುಗಳ ತೊಂದರೆ ಇದೆ. ಅಂಥದ್ದರಲ್ಲಿ ಸರ್ಕಾರದವರು 300 ಎಕರೆ ಜಾಗವನ್ನು ಕೊಟ್ಟು ಚಲನ ಚಿತ್ರದ್ಯೋಮಕ್ಕಾಗಿ ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮಾಡಿ ಅದಕ್ಕೆ ಈಗಾಗಲೇ ಐದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದು ಮತ್ತೆ ಈಗಿನ ಬಜೆಟ್ಟಿನಲ್ಲಿ 10 ಲ: ರೂಪಾಯಿಗಳನ್ನು ಒದಗಿಸಿದ್ದಾರೆ. ಅದರ ಮ್ಯಾನೇಜಿಂಗ್ ಡೈರೆಕ್ಟರ್, ಬಹುಶಃ ನಾನು ಹಿಂದೆ ಈ ಸಭೆಗೆ ಹೇಳಿದೆ, ಅವರಿಗೆ ಚಲನಚಿತ್ರದ ಬಗ್ಗೆ ಸ್ವಲ್ಪವೂ ಗಂಧವಿಲ್ಲ. ಅವರು ಚಲನಚಿತ್ರಗಳನ್ನು ನೋಡಿರಬಹುದು. ಈ ಮ್ಯಾನೇಜಿಂಗ್ ಡೈರೆಕ್ಟರವರಿಗೆ ಯಾವ ವಿಧವಾದ ತಜ್ಞತೆ ಇಲ್ಲ, ಚಲನಚಿತ್ರದ ಬಗ್ಗೆ ಆಳವಾದ ಅಭ್ಯಾಸವಿಲ್ಲ. ಅಂಥವರಿಗೆ ತಮ್ಮ ಸ್ವಾರ್ಥಕ್ಕೋಸ್ಕರವಾಗಿ ಮಾನ್ಯ ಮುಖ್ಯ ಮಂತ್ರಿಗಳು ಅವರನ್ನು ಇಟ್ಟುಕೊಂಡಿದ್ದಾರೆ. ನಿಮಗೆ ಆ ಚಾಳಿ ಏಕೆ ಬಂತು ಎಂದು ಕೇಳುತ್ತಿದ್ದೇನೆ. ಮುಖ್ಯ ಮುಖ್ಯ ಮಂತ್ರಿಗಳು ಏನು ಕಾರಣದಿಂದ ಇಟ್ಟುಕೊಂಡಿದ್ದಾರೆಯೋ ಗೊತ್ತಿಲ್ಲ. ಸರ್ಕಾರದಲ್ಲಿ ಈ ಹೊತ್ತು ಅವರು ಮಾನ್ಯ ಮುಖ್ಯ ಮಂತ್ರಿಗಳಿಗಿಂತಲೂ ಬಹಳ ದೊಡ್ಡ ಮುಖ್ಯ ಸ್ಥಾನವನ್ನು ಅಲಂಕರಿಸಿದ್ದಾರೆ. ಅಧ್ಯಕ್ಷರೇ, ನನಗನ್ನಿಸುತ್ತದೆ, ನಾನು ವಿರೋಧ ಪಕ್ಷದಲ್ಲಿದ್ದರೂ ಮಂತ್ರಿಯಾಗಬೇಕು ಎಂದು ಅವರನ್ನು ಹೋಗಿ ಕೇಳಿಕೊಂಡರೆ ಏನಾದರೂ ಮಾಡಿ ಮಂತ್ರಿ ಪದವಿ ಕೊಡಿಸತಕ್ಕ ಚಾಕಚಕ್ಯತೆಯನ್ನು ಹೊಂದಿರತಕ್ಕ ಒಬ್ಬ ದೊಡ್ಡ ಪ್ರಭಾವಶಾಲಿಯಾಗಿದ್ದಾರೆ. ಅವರ ಬಗ್ಗೆ ಅನೇಕವಿಧವಾಗಿ ಹೇಳಿದ್ದರೂ, ಪ್ರತಿಭಟನೆಗಳು ಬಂದಿದ್ದರೂ ಅವರನ್ನು ಅಲ್ಲೇ ಇಟ್ಟುಕೊಂಡಿರುವುದಕ್ಕೆ ಇರತಕ್ಕ ಪ್ರಬಲವಾದ ಕಾರಣಗಳಾದರೂ ಏನು ? ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗಾಗಿ ಖರ್ಚು ಮಾಡತಕ್ಕ 10 ಲಕ್ಷ ರೂಪಾಯಿ ಸಂಪೂರ್ಣವಾಗಿ ಫಲಪ್ರದವಾಗುವುದಿಲ್ಲ. ಇದು ಐದು ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಇದೆ. ನಾನು ಆಗಲೇ ಹೇಳಿದಂತೆ ನಮ್ಮಲ್ಲಿ ನಾಲ್ಕು

ಸ್ಟುಡಿಯೋಗಳಿವೆ. ಸರ್ಕಾರದವರು ಅವುಗಳಿಗೆ ಲಕ್ಷಾಂತರ ರೂಪಾಯಿ ಕೊಟ್ಟಿದ್ದಾರೆ. ನಮ್ಮ ಸರ್ಕಾರದವರು ಈ ಯೋಜನೆಯನ್ನು ರದ್ದು ಮಾಡಿ, ಈಗ ಇರುವ ಮ್ಯಾನೇಜಿಂಗ್ ಡೈರೆಕ್ಟರನ್ನು ತೆಗೆದು ಹಾಕಬೇಕು ಎಂದು ತಮಗೆ ಹೇಳುತ್ತಿದ್ದೇನೆ. ಹಾಗೆ ಮಾಡಲು ತಮಗೆ ಅವಕಾಶವಿಲ್ಲ ವೆಂದು ಸಹ ಹೇಳುತ್ತೇನೆ.

ಈ ಹೊತ್ತು ನಮ್ಮಲ್ಲಿ ಪಬ್ಲಿಕ್ ಸೆಕ್ಟಾರ್ ಇಂಡಸ್ಟ್ರೀಸ್ ಬೆಳೆಯಬೇಕು ಎಂದು ಹೇಳುತ್ತೇವೆ. ಬೆಂಗಳೂರಿನಲ್ಲಿ ರೆಂಕೋ ಕಾರ್ಖಾನೆ ಇದೆ. ರಾಜ್ಯ ಸರ್ಕಾರದ ಸಹಾಯದಿಂದ ನಡೆಸುತ್ತಿರುವ ಕಾರ್ಖಾನೆ ಅದು. ಅಲ್ಲಿರುವ ಒಬ್ಬ ಅಕೌಂಟ್ಸ್ ಆಫೀಸರಿಗೆ 1100 ರೂಪಾಯಿ ಸಂಬಳ, ಒಬ್ಬ ಪರ್ಚೇಸ್ ಆಫೀಸರಿಗೆ 2500 ರೂಪಾಯಿ ಸಂಬಳ. ಇವರಿಗೆ 10 ಸಾವಿರ ರೂಪಾಯಿ ಕಾರ್ ಅಲೋಯನ್ಸ್ ಬೇರೆ ಕೊಟ್ಟಿದ್ದಾರೆ ಪರ್ಚೇಸ್ ಆಫೀಸರಾದವರು ಯಾರು ಎಂದರೆ ನಮ್ಮ ರಾಜ್ಯದ ವಿದ್ಯಾ ಸಚಿವರ ಹತ್ತಿರ ಸಂಬಂಧಿ. ಅಲ್ಲಿರುವ ಮ್ಯಾನೇಜಿಂಗ್ ಡೈರೆಕ್ಟರ್ ಅವರು ಹಿಂದೆ ಇಲ್ಲಿ ರಾಜ್ಯಪಾಲರಾಗಿದ್ದವರ ಹತ್ತಿರ ಸಂಬಂಧಿ. ಆರು ತಿಂಗಳಿನಿಂದ ಈ ಕೈಗಾರಿಕೆ ಕೆಲಸ ಮಾಡದೆ ಇದೆ. ಅಲ್ಲಿ ಸುಮಾರು 150 ಜನ ಇಂಜನಿಯರುಗಳಿದ್ದಾರೆ. ಅವರೆಲ್ಲ ಯಾರು ಎಂದರೆ ಮಂತ್ರಿಗಳ ಪ್ರಭಾವದಿಂದ, ನಿಮ್ಮ ಪಾರ್ಟಿಯವರ ಪ್ರಭಾವದಿಂದ ಮತ್ತು ಹಿಂದೆ ಇದ್ದಂಥ ರಾಜ್ಯಪಾಲರ ಪ್ರಭಾವದಿಂದ ಸೇರಿದವರು. ಸುಮಾರು ಎರಡು ಸಾವಿರ ಜನ ಕಾರ್ಮಿಕರು ಅಲ್ಲಿದ್ದಾರೆ. ಆರು ತಿಂಗಳಿನಿಂದ ಈ ಹೊತ್ತಿನವರೆಗೂ ಅಲ್ಲಿ ಕೆಲಸ ನಡೆಯುತ್ತಿಲ್ಲ, ಸಂಬಳ ಮಾತ್ರ ಕೊಡುತ್ತಿದ್ದಾರೆ. ಕಾರಣ ಇದನ್ನೆಲ್ಲ ತಾವು ಪರಿಶೀಲನೆ ಮಾಡಬೇಕು. ಕೆಲಸವಿಲ್ಲದೆ ನಡೆದಿರತಕ್ಕ ಈ ಕಾರ್ಖಾನೆ ಯನ್ನು ಮುಂದುವರಿಸುವುದರಲ್ಲಿ ಈ ಅಧಿಕಾರಿಗಳ ಕೈವಾಡ ಬಹಳವಿದೆ. ಇಂಥ ಅಧಿಕಾರಿಗಳನ್ನು ತೆಗೆದು ಹಾಕಿ ಹೆಚ್ಚು ರೀತಿಯಲ್ಲಿ ಸಾಮಾನ್ಯ ನೌಕರರನ್ನು, ನಾಲ್ಕನೇ ದರ್ಜೆ ನೌಕರರನ್ನು ನೇಮಿಸಿ ಕೊಂಡು ಪ್ರೊಡಕ್ಷನ್ ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಅಲ್ಲಿ ಮ್ಯಾನೇಂಜಿಗ್ ಡೈರೆಕ್ಟ ರಾಗಿರುವವರು ಅಲ್ಲಿ ರಾಜಕೀಯವನ್ನು ತಂದೊಡ್ಡಿ, ಒಂದು ದರ್ಪವನ್ನು ನಡೆಸಿಕೊಂಡ ಅಲ್ಲಿ ಕುಳಿತಿದ್ದಾರೆ. ಅವರ ಚರಿತ್ರೆಯನ್ನು ಹೇಳುವುದಕ್ಕೆ ಹೋದರೆ ಬಹಳ ಅಶ್ಲೀಲವಾಗುತ್ತದೆ. ಅದ್ದರಿಂದ ಅದನ್ನೆಲ್ಲ ಹೇಳುವುದಕ್ಕೆ ಹೋಗುವುದಿಲ್ಲ. ಆದುದರಿಂದ ನಾನು ತಮಗೆ ಕೈ ಮುಗಿದು ಪ್ರಾರ್ಥನೆ ಮಾಡುವುದೇನೆಂದರೆ, ರೆಂಕೊ ಕಾರ್ಖಾನೆಯನ್ನು ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿದೆ. ಅಲ್ಲಿ ತಯಾರಾದ ಮೀಟರುಗಳನ್ನು ರಾಜ್ಯದ ಎಲೆಕ್ಟ್ರಿಸಿಟಿ ಬೋರ್ಡ್ ಮತ್ತು ಮಿಕ್ಕ ಬೇರೆ ಬೇರೆ ಜನ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡಬಹುದು. ಇದರಲ್ಲಿ ಒಂದು ರಾಜಕೀಯವಾಗಿದೆ.

7-30 P.M.

ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ರಾಜಕೀಯ ಮತ್ತು ಇನ್ನೊಂದು ಕಾರ್ಖಾನೆಯಲ್ಲಿ ರಾಜಕೀಯ ಮಾಡುತ್ತಿರುವುದು ನನಗೆ ತಿಳಿದಿದೆ. ಈ ರೆಂಕೋ ಕಾರ್ಖಾನೆಯನ್ನು ಬಿರ್ಲಾರವರಿಗೆ ಮಾರು ತ್ತಾರೆಂದೂ ಕೇಳಿದ್ದೆ. ಬಿರ್ಲಾರವರು ಎಲ್ಲ ಕಡೆಗಳಲ್ಲೂ ಇರುವ ಪಬ್ಲಿಕ್ ಸೆಕ್ಟರು ಕಂಪನಿಯನ್ನು ಹಾಳುಮಾಡುತ್ತಿದ್ದಾರೆ ಮತ್ತು ಸರಕಾರದಿಂದ ಕೈಗಾರಿಕೆಗಳನ್ನು ತೆಗೆದುಕೊಳ್ಳುವಾಗ ಬಹಳ ಕಡಿಮೆ ರೇಟು ಕೊಟ್ಟು ಕೊಂಡುಕೊಳ್ಳುತ್ತಾರೆ, ಆ ನಂತರ ಅದನ್ನು ಹಾಳುಮಾಡುತ್ತಾರೆ. ನಮ್ಮ ಸಮಾಜವಾದೀ ಮಂತ್ರಿಗಳು ಯಾವ ಕಾಲಕ್ಕೂ ನಮ್ಮ ರಾಜ್ಯದ ಕೈಗಾರಿಕೆಗಳನ್ನು ಬಿರ್ಲಾರವರಿಗೆ ವಹಿಸಬಾರದು ಎನ್ನುವ ಮಾತನ್ನು ನಾನು ಇಲ್ಲಿ ಒತ್ತಾಯವಾಗಿ ಹೇಳುತ್ತೇನೆ, ಇನ್ನು ನಮ್ಮ ಕೈಗಾರಿಕಾ ಮಂತ್ರಿಗಳು ರಾಜ್ಯಕ್ಕೆ ಬಂದ ಮೇಲೆ ನಮ್ಮ ರಾಜ್ಯದ ಮಂಡ್ಯದಲ್ಲಿರುವ ಸಕ್ಕರೆ ಕಾರ್ಖಾನೆಯ ಚೇರ್ಮನ್ನರವರಿಗೆ ಕೊಡುತ್ತಿದ್ದ ಸಂಭಾವನೆಯನ್ನು 500 ರೂಪಾಯಿಗಳಿಂದ 1,500 ರೂಪಾಯಿಗಳಷ್ಟು ಸಂಬಳ ಕೊಡುವಂತೆ ಮಾಡಿದ್ದಾರೆ. ಇದು ಸಮಾಜವಾದ ಮಾಡು ತ್ತೇವೆಂದು ಹೇಳುವ ಮಂತ್ರಿಗಳು ಮಾಡಿರುವ ಮೊದಲ ಸಮಾಜವಾದಿಯ ಮಾದರಿ. ಇದು ಕೂಡ ಒಂದು ಸಂತೋಷದ ಸುದ್ದಿ. ಸಮಾಜವಾದದ ರೇಟು 500 ರೂಪಾಯಿಗಳಿಂದ 1,500 ರೂಪಾಯಿ ಗಳವರೆಗೆ ಏರಿದೆ. ಅದು ತುಂಬಾ ಸಂತೋಷ.

ಇನ್ನು ಮೈಸೂರು ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಬಗ್ಗೆ ಹೇಳುವು ದಾದರೆ ನಾನು ತಿಳಿದುಕೊಂಡಿರುವ ಮಟ್ಟಿಗೆ ಇದು ಸ್ವಲ್ಪ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿದೆ ಮತ್ತು ಇಲ್ಲಿರುವ ಚೇರ್ಮನ್ನರವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ಎಂದು ನಾನು ತಿಳಿದು ಕೊಂಡಿದ್ದೇನೆ. ಆದರೂ ಕೂಡ ಇಲ್ಲೂ ಕೂಡ ಕೆಲವು ಅಪಾದನೆಗಳು ಬಂದಿವೆ ಎಂದು ಕೇಳುತ್ತೇನೆ. ಈ ಕಾರ್ಪೊರೇಷನ್‌ನ್ನು ಒಂದು ಒಳ್ಳೆಯ ಉದ್ದೇಶದಿಂದ ಮಾಡಿದ್ದಾರೆ. ಇದಕ್ಕೆ ಸರಿಯಾದ ಪ್ರೋತ್ಸಾಹವನ್ನು ಸರಕಾರ ಕೊಡಬೇಕು.

(ಶ್ರೀ ವಾಟಾಳ್ ನಾಗರಾಜ್)

ಕೊನೆಯದಾಗಿ ಇಷ್ಟು ದಿವಸ ಇಲ್ಲಿ ಭದ್ರಾವತಿ ಪ್ರಕರಣದ ಬಗ್ಗೆ ಇಡೀ ರಾಜ್ಯದ ಒಳಗೆ ಹಾಗೂ ಹೊರಗಡೆ ಬೇಕಾದಷ್ಟು ಲೋಪದೋಷಗಳು ಬಂದಿರುವುದನ್ನು ಇಲ್ಲಿ ಸರಕಾರದ ಗಮನಕ್ಕೆ ತರಲಾಗಿದೆ ಮತ್ತು ಇದರ ಬಗ್ಗೆ ಎಸ್ಟಿಮೇಟ್ಸ್ ಕಮಿಟಿಯವರ ರಿಪೋರ್ಟ್‌ನಲ್ಲೂ ಬಂದಿದೆ. ಇಷ್ಟೆಲ್ಲಾ ಹಗರಣಗಳು ಬಂದಿದ್ದರೂ ಇದರ ಬಗ್ಗೆ ಸರಕಾರ ಸರಿಯಾಗಿ ವಿಚಾರಣೆ ನಡೆಸಲು ಹಿಂದು ಮುಂದು ನೋಡುತ್ತಿದೆ. ನಮ್ಮ ಸರಕಾರದಲ್ಲಿ ಧೈರ್ಯ ಇದ್ದರೆ ಮತ್ತು ಎದೆಗಾರಿಕೆ ಇದ್ದರೆ ಇದರ ಬಗ್ಗೆ ಸಮಗ್ರವಾದ ಒಂದು ವಿಚಾರಣೆಯನ್ನು ನಡೆಸಲೇಬೇಕು. ಇಲ್ಲಿ ಲಕ್ಷಾಂತರ ರೂಪಾಯಿಗಳಷ್ಟು ಲೂಟಿ ನಡೆದಿದೆ. ಇಲ್ಲಿ ಆಗಿರತಕ್ಕ ಪ್ರಕರಣ ನಮ್ಮ ಇಡೀ ರಾಜ್ಯದಲ್ಲಿ ಎಲ್ಲೂ ನಡೆದಿರಲಿಲ್ಲ. ಹಿಂದೆ ರಾಜ್ಯಪಾಲರ ಆಡಳಿತ ಇದ್ದಾಗ ಆಗಿದ್ದ ರಾಜ್ಯಪಾಲರಿಗೆ ಇದರ ಬಗ್ಗೆ ದೂರುಗಳು ಬಂದಾಗ ಅವರು ಕೂಡ ಒಂದು ತನಿಖೆ ಮಾಡುತ್ತೇವೆ ಎಂದು ಒಂದು ವಿಚಾರಣೆ ಸಮಿತಿ ಮಾಡಿದರು. ಅವರು ಕೊಟ್ಟ ವರದಿ ಏನಾಯಿತು ಎನ್ನುವುದು ಇದುವರೆಗೂ ತಿಳಿಯಲಲ್ಲ ಇದರ ಬಗ್ಗೆ ಅನೇಕ ಅವ್ಯವಹಾರಗಳು ಆಗಿವೆ ಎನ್ನುವುದು ಎಲ್ಲರಿಗೂ ತಿಳಿದ ಸಂಗತಿ. ಈಗಲಾದರೂ ನಮ್ಮ ಕೈಗಾರಿಕೆ ಮಂತ್ರಿಗಳಿಗೆ ಧೈರ್ಯ ಇದ್ದರೆ ಹಾಗೂ ಎದೆಗಾರಿಕೆ ಇದ್ದರೆ ಇಲ್ಲಿನ ಹಗರಣವನ್ನು ಪುತ್ತ ತೆಗೆದು ಸಾರ್ವಜನಿಕರ ಮುಂದೆ ಇಲ್ಲಿರುವ ಎಲ್ಲ ಲೋಪ ದೋಷಗಳನ್ನು ಎತ್ತಿ ತಿಳಿಸಬೇಕಾದುದು ಅವರ ಕರ್ತವ್ಯ. ಇದರಲ್ಲಿ ಯಾವ ದೊಡ್ಡ ಅಧಿಕಾರಿಗಳೇ ಇರಲಿ ಇಲ್ಲವೇ ದೊಡ್ಡ ರಾಜಕಾರಣಿಗಳೇ ಇರಲಿ ಅದರಲ್ಲಿ ತಪ್ಪು ಮಾಡಿದ್ದರೆ ಅಂತಹವರಿಗೆ ಶಿಕ್ಷೆಯಾಗಲೇಬೇಕು. ಇದರಕಡೆಗೆ ತೀವ್ರವಾಗಿ ಸರಕಾರ ಗಮನ ಕೊಡಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಸಭೆ ಈಗ ಎದ್ದು ಮತ್ತೆ ನಾಳೆ ಬೆಳಿಗ್ಗೆ 9 ಗಂಟೆಗೆ ಸಮಾವೇಶಗೊಳ್ಳುತ್ತದೆ.

The House adjourned at Thirty Minutes past Seven of the Clock to meet again at Nine of the clock on Saturday the 15th July 1972.

WD 18223—GPB—550—20-1-1973

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Saturday, 15th July 1972/Ashadha 24, 1894 (Saka Era).

The House met in the Assembly Chamber, Vidhana Soudha, at Nine of the Clock.

MADAM SPEAKER (SMT. K. S. NAGARATHNAMMA) in the Chair.

Revised Budget Estimates for 1972-73—Demands for Grants Demand Nos. 24, 16, 43, 44, 9, 11 and 14

† ಶ್ರೀ ಎಸ್. ಎಂ. ಕೃಷ್ಣ (ಕೈಗಾರಿಕೆಯ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದ ಕೈಗಾರಿಕೆ ಶಾಖೆಯ ಬೇಡಿಕೆಗಳ ಬಗ್ಗೆ ನಿನ್ನೆ ನಡೆದ ಚರ್ಚೆಯಲ್ಲಿ ಭಾಗವಹಿಸಿದಂಥ ಮಾನ್ಯ ಸದಸ್ಯರುಗಳು ರಚನಾತ್ಮಕವಾದಂಥ ಹಲವಾರು ಸಲಹೆಗಳನ್ನು ಈ ಸದನದ ಮುಂದೆ ಮಂಡಿಸಿದ್ದಾರೆ. ಜೊತೆಗೆ ಕೈಗಾರಿಕೆಯ ಶಾಖೆಯಲ್ಲಿ ಏನೇನು ಸುಧಾರಣೆಗಳು ನಡೆಯಬೇಕು ಎನ್ನುವುದರ ಬಗ್ಗೆ ಹಲವು ಕಟುತರವಾದಂಥ ಟೀಕೆಗಳನ್ನೂ ಸಹ ಮಾಡಿದ್ದಾರೆ. ಆ ಸಲಹೆಗಳನ್ನೂ ಹಾಗೂ ಟೀಕೆಗಳನ್ನೂ ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಮೈಸೂರು ರಾಜ್ಯ ಒಂದು ಕಾಲದಲ್ಲಿ ನಮ್ಮ ದೇಶದಲ್ಲಿಯ ಕೈಗಾರಿಕೆಯ ಅಭಿವೃದ್ಧಿ ಕ್ಷೇತ್ರದಲ್ಲಿ ವಿಶಿಷ್ಟವಾದಂಥ ಸ್ಥಾನವನ್ನು ಗಳಿಸಿತ್ತು. ಮೈಸೂರಿಗೆ ಮಾದರೀ ಮೈಸೂರು ಎನ್ನುವ ಹೆಸರು ಬರಬೇಕಾದರೆ, ಭಾರತ ರತ್ನ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಏನೊಂದು ದೂರದೃಷ್ಟಿಯಿಂದ ಭವ್ಯವಾದಂಥ ಭದ್ರವಾದಥ ಅಡಿಪಾಯವನ್ನು ಹಾಕಿದರೆ ಆ ಅಡಿಪಾಯದ ಆಧಾರದ ಮೇಲೆ ಕೈಗಾರಿಕೆಗಳ ಅಭಿವೃದ್ಧಿ ನಡೆದು ಮೈಸೂರು ನಮ್ಮ ದೇಶದಲ್ಲಿ ಕೈಗಾರಿಕೆಯ ಭೂಪಟದಲ್ಲಿ ಒಂದು ಅಗ್ರ ಪ್ರಧಾನ ಸ್ಥಾನವನ್ನು ಪಡೆದಿತ್ತು. ಇದಕ್ಕೆ ಐತಿಹಾಸಿಕ ಕಾರಣಗಳಿವೆ. ರಾಜ ಮಹಾರಾಜರುಗಳು ಕೈಗಾರಿಕೆಗಳಿಗೆ ಕೊಟ್ಟಂಥ ಪ್ರೋತ್ಸಾಹದ ಜೊತೆಗೆ ಆಗಿದ್ದಂಥ ದಿವಾನರುಗಳು ಅಂದರೆ ಸರ್ ಮಿರ್ಜಾ ಇಸ್ಮೈಯಿಲ್ ಅವರು, ಶ್ರೀ ಶೇಷಾದ್ರಿ ಐಯ್ಯರ್ ಅವರು, ಶ್ರೀ ರಂಗಾಚಾರ್ಲು ಅವರು ಮುಂತಾದವರ ದೂರದೃಷ್ಟಿಯಿಂದ ಮತ್ತು ಅವರು ನಮ್ಮ ಮೈಸೂರಿನ ಕೈಗಾರಿಕೆಗಳ ಅಭಿವೃದ್ಧಿಯ ಬಗ್ಗೆ ಹೆಚ್ಚಿಗೆ ಕಾರ್ಯಕರ್ತರಾಗಿದ್ದುದರಿಂದ ಅವರನ್ನು ನಾವು ಇಂದು ಸ್ಮರಿಸಿಕೊಳ್ಳಬೇಕಾಗಿದೆ. ಅಂದು ಒಂದು ಕಾಲದಲ್ಲಿ ನಮ್ಮ ರಾಜ್ಯದ ಕೈಗಾರಿಕೆಗಳು ನಾಗಾಲೋಟದಲ್ಲಿ ನಡೆಯಿತು. ಅದೀಗ ಮಾನ್ಯ ಶ್ರೀ ನಾಗಣ್ಣನವರು ನಿನ್ನೆ ಹೇಳಿದಂತೆ ಕುಂಠಿತವಾಯಿತು. ಇದಕ್ಕೂ ಕೂಡ ನಾನಾ ಕಾರಣಗಳಿವೆ. 1950ನೇ ಇಸವಿಯಲ್ಲಿ ಹಾಗೂ 1960 ನೇ ಇಸವಿಯಲ್ಲಿ ನಮ್ಮ ಕೈಗಾರಿಕೆಯ ಬೆಳವಣಿಗೆಯ ಪ್ರಮಾಣ ಯಾವ ಪ್ರಮಾಣದಲ್ಲಿ ಯಾವ ಗಾತ್ರದಲ್ಲಿ, ಯಾವ ವೇಗದಲ್ಲಿ ಹೋಗಬೇಕಾಗಿತ್ತೋ ಆ ರೀತಿಯಲ್ಲಿ ಹೋಗುವುದಕ್ಕೆ ಕಾರಣಾಂತರಗಳಿಂದ ಸಾಧ್ಯವಾಗಲಿಲ್ಲ. ಇದಕ್ಕೆ ಪ್ರಧಾನ ಕಾರಣವೇನೆಂದರೆ, ನಮ್ಮ ರಾಜ್ಯದಲ್ಲಿ ಉಂಟಾದಂಥ ವಿದ್ಯುಚ್ಛಕ್ತಿಯ ಅಭಾವ. ಶರಾವತಿ ವಿದ್ಯುಚ್ಛಕ್ತಿ ನಮ್ಮ ಕೈಗಾರಿಕೆಗಳಿಗೆ ದೊರಕುವವರೆಗೆ ನಾವು ಕೈಗಾರಿಕೆ ಕ್ಷೇತ್ರದಲ್ಲಿ ಅಭಿವೃದ್ಧಿ ಮಾಡುವುದಕ್ಕೆ, ಅದನ್ನು ವಿಕಾಸ ಮಾಡುವುದಕ್ಕೆ, ಅತಿ ಪ್ರಾಮುಖ್ಯವಾಗಿ ಬೇಕಾದಂಥ ವಿದ್ಯುತ್ ಉತ್ಪಾದನೆ ಏನಿದೆಯೋ ಅದು ನಮ್ಮ ರಾಜ್ಯದಲ್ಲಿರಲಿಲ್ಲ. ಶರಾವತಿ ಏನೋ ಬಂತು. ಅದು ಹೇಗೆ ಬಂತು ಅಂದರೆ ಹಲವಾರು ಕೈಗಾರಿಕೆಗಳನ್ನು ಪ್ರಾರಂಭ

---

† Indicates that the remarks or speeches have not been revised by the member concerned.

(ಶ್ರೀ ಎಸ್. ಎಂ. ಕೃಷ್ಣ)

ಮಾಡುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದುದರ ಕಾರಣ ಶರಾವತಿ ವಿದ್ಯುಚ್ಛಕ್ತಿ ಬಂತು. ಈಗ ಒಂದು ಅಭಿಪ್ರಾಯ ಏನೆಂದರೆ, ಮೈಸೂರು ರಾಜ್ಯ ವಿದ್ಯುಚ್ಛಕ್ತಿಯಲ್ಲಿ ಸರ್‌ಪ್ಲಸ್ ಸ್ಟೇಟ್ ಆಗಿದೆ ಇವತ್ತಿನ ಪರಿಸ್ಥಿತಿಯನ್ನು ಗಮನಿಸಿದರೆ ಬಹುಶಃ ನಾವು ವಿದ್ಯುಚ್ಛಕ್ತಿಯ ಕ್ಷೇತ್ರದಲ್ಲಿ ಅನಾಗರೀಕವಾದಂಥ ಸ್ಥಿತಿಯಲ್ಲಿದ್ದೇವೆ. ಆದರೆ ಇನ್ನು ಕೈಗಾರಿಕೆಗಳನ್ನು ಹೆಚ್ಚಿಗೆ ಬೆಳೆಸಬೇಕು ಎನ್ನುವ ಏನೊಂದು ಕಳಕಳಿಯನ್ನು ನಿನ್ನೆ ಮಾತನಾಡಿದಂಥ ಪ್ರತಿಯೊಬ್ಬ ಸದಸ್ಯರು ವ್ಯಕ್ತಪಡಿಸಿದ್ದರೋ ಅದರ ಬಗ್ಗೆ ಇವತ್ತು ಯಾರೂ ಆ ಒಂದು ಚರ್ಚೆಯಲ್ಲಿ ಭಾಗವಹಿಸಲಿಲ್ಲ. ಇದರ ಬಗ್ಗೆ ಅಷ್ಟೇ ಕಳಕಳಿಯನ್ನು ಅದು ಹೊಂದಿದೆ ಎಂದು ನಾನಾದರೂ ಕೂಡ ಭಾವನೆ ಮಾಡುತ್ತೇನೆ. 1973ರ ಕೊನೆ ಅಥವಾ 1974ರ ಮೊದಲ ಭಾಗದಲ್ಲಿ ಮತ್ತೆ ಇದೇ ವಿದ್ಯುಚ್ಛಕ್ತಿ ಪ್ರಾರಂಭವಾಗುತ್ತದೆಂಬುದನ್ನು ನಾವು ಕಂಡಿದ್ದೇವೆ. ನಾವು ಕಾಳೀ ನದಿಗೆ ಕೇಂದ್ರ ಸರ್ಕಾರದ ಜೊತೆಯಲ್ಲಿ ವ್ಯವಹಾರ ಮಾಡಿ, ಮಾನ್ಯ ಮುಖ್ಯಮಂತ್ರಿಗಳು, ಆರ್ಥಿಕ ಮಂತ್ರಿಗಳು ಕೇಂದ್ರ ಸರ್ಕಾರದ ಜೊತೆಯಲ್ಲಿ ಬಹಳ ಬುದ್ಧಿವಂತಿಕೆಯಿಂದ ಸಮಾಲೋಚನೆ ಮಾಡಿ, ಕಾಳೀ ನದಿಗೆ ಏನು ಅಗತ್ಯವಾದ ಆದ್ಯತೆಯನ್ನು ಕೊಡಬೇಕೋ ಅದನ್ನು ದೊರಕಿಸಿ ಕೊಡುವುದು ಕೈಗಾರಿಕೆಯ ಅಭಿವೃದ್ಧಿಯ ದೃಷ್ಟಿಯಿಂದ ಯಥೋಚಿತವಾದುದೆಂದು ನಾನಾದರೂ ಭಾವನೆ ಮಾಡುತ್ತೇನೆ. ನಮ್ಮ ಮೈಸೂರು ರಾಜ್ಯದಲ್ಲಿ ಇದುವರೆಗೂ ಒಟ್ಟು ಕೈಗಾರಿಕೆಗಳಲ್ಲಿ ಖಾಸಗೀ ಹಾಗೂ ಸರ್ಕಾರಿ ಉದ್ಯಮಗಳಲ್ಲಿ ನಾವು ಹಾಕಿರತಕ್ಕ ಬಂಡವಾಳ ಸುಮಾರು 320 ಕೋಟಿ ರೂಪಾಯಿಗಳು. ಆದರೆ ಇದು ಏನೇನೂ ಸಾಕಾಗುತ್ತಾ ಇಲ್ಲವೆಂದು ನಾನು ಹೇಳುತ್ತೇನೆ. ಅದರ ಬಗ್ಗೆ ಎರಡು ಅಭಿಪ್ರಾಯಗಳಿವೆ. ಈಗ ನಮ್ಮ ಮುಂದೆ ಇರತಕ್ಕದ್ದು ಮುಂದಿನ 10 ವರ್ಷಗಳಲ್ಲಿ ಇದರ ಪ್ರಗತಿ ಎಷ್ಟೆಂಬುದು. 1970 ನೇ ವರ್ಷದಲ್ಲಿ ಕೈಗಾರಿಕೆಗಳ ಬಗ್ಗೆ ಏನು ಕನಸನ್ನು ನಾವು ಕಾಣುತ್ತಿದ್ದೇವೋ ಅದರ ಒಂದು ವಿಹಂಗಮ ದೃಷ್ಟಿಯಿಂದ ನಾವು ನಮ್ಮ ಕೈಗಾರಿಕೆಗಳನ್ನು ಸಮೀಕ್ಷೆ ಮಾಡಬೇಕೆಂದು ಸದಸ್ಯರ ಹಾಗೂ ಅಧ್ಯಕ್ಷರ ಅಪ್ಪಣೆಯನ್ನು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ. 1970 ನೇ ಇಸವಿ ಏನಿದೆ ಅದು ಕೈಗಾರಿಕೆಗಳ ಬೆಳವಣಿಗೆಗೆ ನಿಖರವಾದಂಥ ವಾತಾವರಣವನ್ನು ಸೃಷ್ಟಿ ಮಾಡತಕ್ಕ ವರ್ಷವೆಂದು ನಾನು ಭಾವನೆ ಮಾಡುತ್ತೇನೆ. ಕೈಗಾರಿಕೆಗಳನ್ನು ಬೆಳೆಸತಕ್ಕದ್ದು ಕೇವಲ ಸರ್ಕಾರದ ಜವಾಬ್ದಾರಿ ಎಂಬುದಾಗಿ ನಾವು ಕೂರತಕ್ಕ ಕಾಲ ಇದಲ್ಲ. ತಮಗೇ ಗೊತ್ತಿರುವ ಹಾಗೆ ಸರ್ಕಾರದ ಸಂಪನ್ಮೂಲಗಳು ಈ ದಿವಸ ಬಹಳಮಟ್ಟಿಗೆ ಮಿತಿಯಾಗಿದೆ. ಆದ್ದರಿಂದ ಹೊಸ ಕೈಗಾರಿಕೆಗಳು ಈ ರಾಜ್ಯದಲ್ಲಿ ಸ್ಥಾಪನೆಯಾಗಬೇಕಾದರೆ ಸರ್ಕಾರವೇ ಅದನ್ನು ನೇರವಾಗಿ ಸ್ಥಾಪನೆ ಮಾಡಬೇಕು ಎನ್ನುವ ಆಕಾಂಕ್ಷೆ ಇದ್ದರೂ, ಇಚ್ಛೆ ಇದ್ದರೂ ಅದನ್ನು ಆಗು ಮಾಡುವುದಕ್ಕೆ ಸರ್ಕಾರದಲ್ಲಿ ಹಣಕಾಸಿನ ಕೊರತೆಯಿಂದ ಸಾಧ್ಯವಾಗುವುದಿಲ್ಲ. ಈ ಸಮಯದಲ್ಲಿ ಮಾನ್ಯ ಶ್ರೀ ಎಂ. ಎಸ್. ಕೃಷ್ಣನ್ ಅವರು ಈ ಸಭೆಯಲ್ಲಿ ಐದು ಸೂತ್ರಗಳನ್ನು ಮಂಡಿಸಿದರು. ಅವನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ದೊಡ್ಡ ದೊಡ್ಡ ಬಂಡವಾಳಷಾಹಿಗಳಿಗೆ, ಯಾರು ಮನಾಪಲಿ ಮಾಡಿಕೊಂಡಿದ್ದಾರೋ ಅವರಿಗೆ ಇನ್ನು ಮುಂದೆ ಉತ್ತೇಜನವನ್ನು ಕೊಡುವುದು ಸಾಧುವಾದುದಲ್ಲವೆಂಬ ತತ್ವವನ್ನು ನಾನು ಹಿಂದಿನಿಂದಲೂ ಒಪ್ಪಿಕೊಂಡಿರುವ ಮನುಷ್ಯ. ಆದರೆ ನಮ್ಮ ದೇಶದ ಸರ್ಕಾರೀ ಕ್ಷೇತ್ರಕ್ಕೆ ನಮ್ಮ ಕೈಗಾರಿಕೆಯ ಕ್ಷೇತ್ರದಲ್ಲಿ ಪ್ರಥಮ ಸ್ಥಾನ ಸಿಗಬೇಕು. ಡಾಮಿನೆಂಟ್ ಪೊಜಿಷನ್ ಸಿಗಬೇಕು. ನಮ್ಮ ದೇಶದ ಆರ್ಥಿಕ ಧೋರಣೆಗಳನ್ನು ಮತ್ತು ತತ್ವಗಳನ್ನು ಸರಿಯಾದಂಥ ರೀತಿಯಲ್ಲಿ ನಾವು ಪ್ರೊಜೆಕ್ಟ್ ಮಾಡಬೇಕಾದರೆ ನಮ್ಮ ದೇಶದಲ್ಲಿರತಕ್ಕ ಸರ್ಕಾರೀ ಉದ್ಯಮಗಳಿಗೆ ನಾವು ಅಗತ್ಯವಾದ ಮನ್ನಣೆಯನ್ನು ಕೊಡಬೇಕು, ಆದ್ಯತೆಯನ್ನು ಕೊಡಬೇಕು. ಅಂತಹ ತತ್ವಕ್ಕೆ ಈ ಸರ್ಕಾರ ಬದ್ಧವಾಗಿದೆ ಎನ್ನುವುದನ್ನು ನಾನು ಪುನಃ ಪ್ರತಿಪಾದನೆ ಮಾಡಲು ಇಚ್ಛೆಪಡುತ್ತೇನೆ. ಹಾಗೆಯೇ ಟೈರ್ಸ್ ಪ್ರಾಜೆಕ್ಟ್ ಬಗ್ಗೆ ಸೋಷಿಯಲಿಸ್ಟ್ ರಾಷ್ಟ್ರಗಳೊಡನೆ ಕೊಲ್ಯಾಬೋರೇಷನ್ ಅಗ್ರಿಮೆಂಟ್ ಮಾಡಿಕೊಳ್ಳಬೇಕೆಂದು ಶ್ರೀ ಎಂ. ಎಸ್. ಕೃಷ್ಣನ್‌ರವರು ಹೇಳಿದರು. ನಾನೂ ಆ ತತ್ವವನ್ನು ಒಪ್ಪಿಕೊಳ್ಳುತ್ತೇನೆ. ಇದುವರೆಗೆ ಅಮೇರಿಕ, ಇಂಗ್ಲೆಂಡ್ ಮುಂತಾದ ರಾಷ್ಟ್ರಗಳ ಕಡೆ ನೋಡುತ್ತಿದ್ದೇವೆ. ಈಗ ಹಂಗೇರಿ, ಜೆಕೋಸ್ಲೋವೇಕಿಯ, ರಷ್ಯ ಮುಂತಾದ ರಾಷ್ಟ್ರಗಳ ಕಡೆ ನೋಡುತ್ತಿದ್ದೇವೆ, ಮೈಸೂರಿನಲ್ಲಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಒಂದು ಟೈರ್ ಫ್ಯಾಕ್ಟರಿ ಪ್ರಾರಂಭಿಸಬೇಕೆಂದಿದೆ. ಅದಕ್ಕೆ ಖಾಸಗಿ ಬಂಡವಾಳ ಹಾಕಬೇಕಾಗಿದೆ. ಅದಕ್ಕೆ ಜೆಕೋಸ್ಲೋವೇಕಿಯಾದ ಕೊಲ್ಯಾಬೊರೇಷನ್ ಇದೆ. ಶ್ರೀ ಹನುಮೇಗೌಡರು ಹಾಸನದ ಇಂಪ್ಲಿಮೆಂಟ್ಸ್ ಫ್ಯಾಕ್ಟರಿ ವಿಚಾರ ಹೇಳಿದರು. ಹಂಗೇರಿಯ ಜೊತೆಗೆ ಅದಕ್ಕೆ ಸಂಬಂಧಪಟ್ಟಂತೆ ಕೊಲ್ಯಾಬೊರೇಷನ್ ಮಾಡಿಕೊಳ್ಳಲು ಪ್ರಯತ್ನ ನಡೆದು ಹಾಕಿದ ಷರತ್ತುಗಳು ಕೇಂದ್ರ ಸರ್ಕಾರಕ್ಕೆ ಅನುಕೂಲಕರವಾಗಿ ಕಾಣದೇ ಹೋದುದರಿಂದ ಭಿನ್ನಾಭಿಪ್ರಾಯ ಬಂತು. ಹಾಗೆಯೇ ಮುಂದಿನ ಐದು ವರ್ಷಗಳಲ್ಲಿ ನಾನಾ ಉದ್ಯಮಗಳನ್ನು ಪ್ರಾರಂಭಿಸಿ ನಡೆಸಬೇಕೆಂಬ ಆಸೆಯನ್ನಿಟ್ಟುಕೊಂಡಿದ್ದೇವೆ.

SRI M. S. KRISHNAN (Malleswaram).—I request the Hon'ble Minister to yield for a moment. I am not referring to socialist countries. We have letters of intent for 34 industries. What has happened previously is, licences have been got by the Mysore Government and Government started industries. Those industries have not been running on profit, and then they have been handed over either to the private sector or this Government has requested the Central Government to take them over. We are worried as to what will happen if such a policy is followed. What does the Hon'ble Minister say about that ?

ಶ್ರೀ ಎಸ್. ಎಂ. ಕೃಷ್ಣ.—ನಾನು ಅದರ ಬಗ್ಗೆ ಸ್ಪಷ್ಟಮಾಡಿದ್ದೇನೆ. ಬಹಳ ವಿವರಗಳ ಬಗ್ಗೆ ನಾನು ಈಗ ಹೋಗಲು ಸಾಧ್ಯವಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಇದು ಪಾಲಿಸಿ ಪ್ರಶ್ನೆ ?

ಶ್ರೀ ಎಸ್. ಎಂ. ಕೃಷ್ಣ.—ಅದರ ವಿಚಾರದಲ್ಲಿ ನಮ್ಮ ನಿಮ್ಮಲ್ಲಿ ಭಿನ್ನಾಭಿಪ್ರಾಯ ಇಲ್ಲ. ಇಂಪ್ಲಿಮೆಂಟ್ ಮಾಡುವಾಗ ಅಲ್ಪಸ್ವಲ್ಪ ಭಿನ್ನಾಭಿಪ್ರಾಯ ಬರಲು ಅವಕಾಶವಿದೆ. ಆದರೆ ನಾವು ಹಾಕಿರುವ ಚೌಕಟ್ಟಿನಲ್ಲಿ ಭಿನ್ನಾಭಿಪ್ರಾಯ ಬಗೆಹರಿಸಲು ಸಾಧ್ಯವಿದೆ. ಈಗ ನನ್ನ ಕಲ್ಪನೆ ಪ್ರಕಾರ ಮುಂದಿನ 10 ವರ್ಷಗಳಲ್ಲಿ ನಮ್ಮ ಅಭಿವೃದ್ಧಿ ಕಾರ್ಪೊರೇಷನ್ ಸಕ್ರಿಯ ಪಾತ್ರ ವಹಿಸಿ ಕೆಲಸಮಾಡುವುದು, ಸುಮಾರು 200 ಕೋಟಿ ರೂಪಾಯಿಗಳವರೆಗೆ ಕಾರ್ಯಕ್ರಮ ಹಾಕಿದೆ. ಸಣ್ಣ ಉದ್ಯಮಗಳ ಕ್ಷೇತ್ರದಲ್ಲಿ ಸುಮಾರು 50 ಕೋಟಿ ರೂಪಾಯಿ, ಈಗಿರತಕ್ಕ ಕೈಗಾರಿಕೆಗಳೇನಿವೆ ಅವುಗಳನ್ನು ಅಭಿವೃದ್ಧಿಪಡಿಸಲು ಸುಮಾರು 30 ಕೋಟಿ ರೂಪಾಯಿ ವಿನಿಯೋಗಿಸಬೇಕೆಂಬ ಅಭಿಪ್ರಾಯವಿದೆ. ಖಾಸಗಿ ಬಂಡವಾಳ ಸುಮಾರು 200 ಕೋಟಿ ರೂಪಾಯಿ ಬರಬಹುದು ಎಂಬ ನಿರೀಕ್ಷೆಯಿದೆ. ಒಟ್ಟು 10 ವರ್ಷಗಳಲ್ಲಿ ಈ ರಾಜ್ಯದಲ್ಲಿ 500 ಕೋಟಿ ರೂಪಾಯಿಗಳ ಕೈಗಾರಿಕಾ ಚಟುವಟಿಕೆ ನಡೆಯಬೇಕೆಂಬ ಗುರಿಯಿದೆ. ಇದರ ಜೊತೆಗೆ ಕೇಂದ್ರ ಸರ್ಕಾರ ಮೈಸೂರು ರಾಜ್ಯದಲ್ಲಿ ಏನು ಯೋಜನೆ ಕೈಕೊಳ್ಳುವುದು ಎಂಬ ಸಮೀಕ್ಷೆ ನಡೆಸುವುದು ಬಹಳ ಅವಶ್ಯಕವಾಗಿದೆ. ಬಹುಶಃ ಮೈಸೂರು ರಾಜ್ಯದ ಕೈಗಾರಿಕೆಯ ಇತಿಹಾಸವನ್ನೇ ಬದಲಾವಣೆ ಮಾಡುವ ಒಂದು ಮಹತ್ಕಾರ್ಯ ಎಂದರೆ ವಿಜಯನಗರ ಉಕ್ಕಿನ ಕಾರ್ಖಾನೆ ಸ್ಥಾಪನೆ. ಈ ಕಾರ್ಖಾನೆಯ ಬಗ್ಗೆ ಇದ್ದಂಥ ಅಲ್ಪಸ್ವಲ್ಪ ಒಡಕಿನ ಶಬ್ದಗಳು ಮಾಯವಾಗಿರುವುದು ಈ ಸಭೆಯ ಎಲ್ಲ ಸದಸ್ಯರಿಗೂ ಸಮಾಧಾನ ತಂದಿರುವ ವಿಚಾರ. ಇದಕ್ಕಾಗಿ ಪ್ರಧಾನಿಯವರು ಮತ್ತು ಉಕ್ಕಿನ ಇಲಾಖೆಯ ಮಂತ್ರಿಗಳಾದ ಶ್ರೀ ಮೋಹನ ಕುಮಾರ ಮಂಗಳಂರವರು ಈ ಸಭೆಯ ಮತ್ತು ಸರ್ಕಾರದ ಅಭಿನಂದನೆಗೆ ಪಾತ್ರರಾಗಿದ್ದಾರೆ, ಅವರಿಗೆ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ. ಇದು ಬಹಳ ಅಗತ್ಯವಾಗಿದೆ. ಸುಮಾರು 750 ಕೋಟಿ ರೂಪಾಯಿಗಳ ಬಂಡವಾಳವನ್ನು ಕೇಂದ್ರ ಸರ್ಕಾರದವರು ಈ ವಿಜಯನಗರದ ಉಕ್ಕಿನ ಕಾರ್ಖಾನೆಯ ಮೇಲೆ ಹಾಕುವರು. ಇದರ ಬಗ್ಗೆ ಸ್ವಲ್ಪ ಯೋಚನೆಮಾಡಬೇಕು. ನಮ್ಮ ಮೈಸೂರು ರಾಜ್ಯ ಹುಟ್ಟಿದಂದಿನಿಂದ ಇವತ್ತಿನವರೆಗೆ ಕೇವಲ 320 ಕೋಟಿ ರೂಪಾಯಿಗಳ ಬಂಡವಾಳ ಹಾಕಿ ಕೈಗಾರಿಕೆಗಳ ಚಟುವಟಿಕೆ ಆರಂಭಿಸಿರುವಾಗ ಒಂದೇ ಒಂದು ಉಕ್ಕಿನ ಕಾರ್ಖಾನೆಗೆ ಸುಮಾರು 750 ಕೋಟಿ ರೂಪಾಯಿಗಳ ಬಂಡವಾಳವನ್ನು ಹಾಕುತ್ತಿರುವುದು ಒಂದು ಮಹತ್ ಕಾರ್ಯ ಎಂಬುದನ್ನು ಯೋಚನೆಮಾಡಬೇಕು, ಇದನ್ನು ಕೇಂದ್ರ ಸರ್ಕಾರದವರೇ ಮಾಡುವರು. ಯಾವಾಗ ಇಂಥ ಒಂದು ಮಹಾ ಉಕ್ಕಿನ ಕಾರಾಗಾರ ಬರುವುದೋ ಆಗ ಅದರ ಜೊತೆಗೆ ನೂರಾರು ಸಹಸ್ರಾರು ಸಣ್ಣ ಉದ್ಯಮಗಳು ಅದರ ಸುತ್ತುಮುತ್ತ ಹರಡಲು ಅವಕಾಶವಾಗುವುದು. ಈಗಾಗಲೇ ವಿಜಯನಗರದ ಉಕ್ಕಿನ ಕಾರ್ಖಾನೆಯ ಬಗ್ಗೆ ರಾಜ್ಯ ಸರ್ಕಾರ ವ್ಯವಸ್ಥಿತವಾದ ಕಾರ್ಯಕ್ರಮ ತೆಗೆದುಕೊಂಡಿದೆ. ಇದಕ್ಕೆ 10 ಸಾವಿರ ಎಕರೆ ಪ್ರದೇಶ ಬೇಕು ಎಂಬುದಾಗಿ ಮೊದಲೇ ಕೇಂದ್ರ ಸರ್ಕಾರದವರು ನಮ್ಮನ್ನು ಕೇಳಿದರು. ಆದರೆ ಆ 10 ಸಾವಿರ ಎಕರೆ ಪೂರ್ತಿ ಇಂದು ಬೇಕಾಗಿಲ್ಲ, ಈಗ 6 ಸಾವಿರ ಎಕರೆ ಸಾಕು ಎಂದು ಕೇಂದ್ರ ಸರ್ಕಾರದವರು ತಿಳಿಸಿದ್ದಾರೆ. ಈಗಾಗಲೇ ರಾಜ್ಯ ಸರ್ಕಾರ 6 ಸಾವಿರ ಎಕರೆಯನ್ನು ಅಕ್ವೈರ್ ಮಾಡಿ ಅದರ ಬೆಳವಣಿಗೆಗೆ ಕಾರ್ಯಕ್ರಮ ರೂಪಿಸಲಾಗಿದೆ. ಮತ್ತು ರಾಜ್ಯ ಸರ್ಕಾರದ ಲೈಸಾನ್ ಆಫೀಸರನ್ನು ನೇಮಕ ಮಾಡಲಾಗಿದೆ. ಆ ಏರಿಯಾ ಡೆವಲಪ್ ಮಾಡಲು ಡೆವಲಪ್‌ಮೆಂಟ್ ಬೋರ್ಡಿಗೆ ತಿಳಿಸಲಾಗಿದೆ. ಈ ಕೈಗಾರಿಕೆ ಶೀಘ್ರದಲ್ಲಿ ಕಾರ್ಯ ಪ್ರಾರಂಭಿಸಲು ಏನು ಅನುಕೂಲ, ವ್ಯವಸ್ಥೆ ಮಾಡಬೇಕು, ಸಹಾಯ ಸಹಕಾರವೇನು ನೀಡಬೇಕು ಎಂದು ನೋಡಿ ಅದೆಲ್ಲವನ್ನು ಮಾಡಲು ಉನ್ನತ ಅಧಿಕಾರಿಗಳಿಗೆ ತಿಳಿಸಿ ನಮ್ಮ ಇಲಾಖೆ ಕಾರ್ಯಕ್ರಮ ತೆಗೆದುಕೊಂಡಿದೆ ಎಂದು ಈ ಸಭೆಗೆ ತಿಳಿಸುತ್ತೇನೆ.

(ಶ್ರೀ ಎಸ್. ಎಂ. ಕೃಷ್ಣ)

ಜೊತೆಗೆ ಈ ವಿಜಯನಗರದ ಉಕ್ಕಿನ ಕಾರ್ಖಾನೆ ಬಗ್ಗೆ ಶ್ರೀಮಾನ್ ಆರ್ಮುಗಂರವರು ಕೆಲವು ವಿಚಾರ ಹೇಳಿದರು. ಸೇಲಂನಲ್ಲಿ ಸ್ಥಾಪಿಸುವ ಕಾರ್ಖಾನೆಗೆ ಬೇಕಾದ್ದನ್ನು ತಯಾರಿಸಲು ಹೆಚ್ಚು ಅವಕಾಶವಿದೆ, ಇಲ್ಲಿ ಏನಾಗುವುದೋ ಎಂದು ಅನುಮಾನ ವ್ಯಕ್ತಮಾಡಿದ್ದರು. ಉಕ್ಕಿನ ಕಾರ್ಖಾನೆ ಎಲ್ಲಿ ಸ್ಥಾಪಿಸಲ್ಪಡಬೇಕು, ಏನು ಕೆಲಸ ಅಲ್ಲಿ ಆಗಬೇಕು ಎಂದು ತೀರ್ಮಾನ ಮಾಡುವವರು ಕೇಂದ್ರ ಸರಕಾರದವರು. ಅವರು ಸಮಗ್ರ ದೇಶದ ದೃಷ್ಟಿಯಿಂದ ಯಾವ ಯಾವ ಕಾರ್ಖಾನೆಯಲ್ಲೇನು ಮಾಡಬೇಕೆಂಬುದನ್ನು ತೀರ್ಮಾನ ಮಾಡುವರು ನಮ್ಮ ಉಕ್ಕಿನ ಕಾರ್ಖಾನೆಗೂ ಸೇಲಂ ಕಾರ್ಖಾನೆಗೂ ಹೋಲಿಕೆ ಮಾಡಿ ನೋಡಿದರೆ ನಮ್ಮದಕ್ಕೆ ಹೆಚ್ಚು ಅವಕಾಶವಿದೆ. ಇದಕ್ಕೆ ಈಗ ಹಾಕುವುದು 350 ಅಥವಾ 400 ಕೋಟಿ ರೂಪಾಯಿ. ಯೋಜನೆಯ ಅಂದಾಜು 700 ಕೋಟಿ ರೂಪಾಯಿ. ಆದುದರಿಂದ ನಮ್ಮ ಕಾರ್ಖಾನೆಯಲ್ಲಿ ಎಂಥ ಕೆಲಸ ಮಾಡಲು ಅವಕಾಶವಿದೆ ಅದರ ಬಗ್ಗೆ ಒತ್ತಾಯಮಾಡಬಹುದು. ಈಗ ಇರುವಂತೆ ಮುಂದುವರೆಯಬೇಕು ಎಂದು ನಿವೇದನೆ ಮಾಡುತ್ತೇನೆ. ಎರಡನೆಯದಾಗಿ ಕೇಂದ್ರ ಸರಕಾರದವರು ಕುದುರೆಮುಖ ಐರನ್ ಓರ್ ಪ್ರಾಜೆಕ್ಟ್‌ಗೆ ಸುಮಾರು 200 ಕೋಟಿ ರೂಪಾಯಿಗಳ ಒಂದು ಮಹಾ ಯೋಜನೆ ಮಾಡಿದ್ದಾರೆ. ಕಳೆದ ಸಾರಿ ದೆಹಲಿಗೆ ಹೋಗಿದ್ದಾಗ ಶ್ರೀ ಮೋಹನ ಕುಮಾರಮಂಗಳಂ ರವರಿಗೆ ಇದರ ಬಗ್ಗೆ ಹೇಳಿದೆ, ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಕೇಂದ್ರ ಸರ್ಕಾರದವರು ತತ್ವಶಃ ಈ ಕುದುರೆ ಮುಖ ಪ್ರಾಜೆಕ್ಟನ್ನು ಒಪ್ಪಿದ್ದಾರೆ. ಕೇಂದ್ರ ಸರಕಾರದವರು ಇಂದು ಸರಿದೂಗಿಸುವುದಕ್ಕೆ ಪ್ರಯತ್ನಮಾಡಿದ್ದಾರೆ. ಈಗ ವಿಜಯನಗರ ಉಕ್ಕಿನ ಕಾರ್ಖಾನೆ, ಮಂಗಳೂರು ಕಾರ್ಖಾನೆ ಮತ್ತು ಕುದುರೆಮುಖದ ಪ್ರಾಜೆಕ್ಟ್ ಈ ಮೂರಕ್ಕೆ ಮನ್ನಣೆ ಇದೆ. ಮಂಗಳೂರು ಫರ್ಟಿಲೈಜರ್ ಪ್ರಾಜೆಕ್ಟ್‌ಗೆ ಕೊಡುವ ನೂರು ಮೈಲಿ ಕ್ಷೇತ್ರದಲ್ಲಿ ಪರಿಶುದ್ಧವಾದ ಕೈಗಾರಿಕಾ ಚಟುವಟಿಕೆ ಪ್ರಾರಂಭವಾಗುವುದು. ಅದು ಆ ಪ್ರದೇಶವನ್ನು ಸರ್ವತೋಮುಖವಾಗಿ ಅಭಿವೃದ್ಧಿ ಪಡಿಸಲು ಅವಕಾಶ ಮಾಡಿ ಕೊಡುವುದು. ಆದುದರಿಂದ ಸುಮಾರು ಒಂದು ಸಾವಿರ ಕೋಟಿ ರೂಪಾಯಿ ಬಂಡವಾಳ ಹಾಕಿ ಕೈಗಾರಿಕೆಗಳನ್ನು ಬೆಳೆಸಲಾಗುತ್ತಿದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಹೆಚ್ಚು ಹೊಣೆ ಕೇಂದ್ರ ಸರಕಾರದಮೇಲಿದೆ. ದೋಣಿಮಲೈ ಐರನ್ ಓರ್ ಪ್ರಾಜೆಕ್ಟಿದೆ. ಮೈಸೂರು ರಾಜ್ಯದಲ್ಲಿ ಸಿಕ್ಕುವ ಉತ್ಕೃಷ್ಟವಾದ ಐರನ್ ಓರ್ ಏನಿದೆ ಅದನ್ನು ನಾವು ಈ ದಿವಸ ಬಿಕರಿಮಾಡುವುದು ಬುದ್ಧಿವಂತಿಕೆಯ ಕೆಲಸವಾಗಿದೆ. ಈಗ ಪ್ರಪಂಚದಲ್ಲಿ ತೀವ್ರವಾದಂಥ ಪೈಪೋಟಿ ಪ್ರಾರಂಭವಾಗಿದೆ. ಇಂಡಿಯಾ ದೇಶದ ಕಬ್ಬಿಣದ ಅದುರಿಗೆ ಆಸ್ಟ್ರೇಲಿಯಾ ದೇಶದ ಕಬ್ಬಿಣದ ಅದುರಿನಿಂದ ಪ್ರಚಂಡವಾದ ಪೈಪೋಟಿ ನಡೆಯುತ್ತಾ ಇದೆ. ಈ ಪೈಪೋಟಿ ಇನ್ನೂ ಹೆಚ್ಚಾಗುವುದಕ್ಕೆ ಮೊದಲೇ ನಮ್ಮಲ್ಲಿರುವ ಕಬ್ಬಿಣದ ಓರನ್ನು ಯಾರೇ ಕೊಂಡುಕೊಳ್ಳುವುದಕ್ಕೆ ಬರಲಿ ಈಗ ಜಪಾನಿಯುವರು ಬಂದಿದ್ದಾರೆ. ಇನ್ನು ಮುಂದೆ ಯಾವುದೇ ದೇಶ ಬರಲಿ, ಯಾವುದೇ ರಾಷ್ಟ್ರ ಬರಲಿ, ನಮ್ಮ ಕಬ್ಬಿಣದ ಅದುರನ್ನು ನಾವು ಯಾರಿಗೆ ಬೇಕಾದರೂ ಮಾರುತ್ತೇವೆ. ಆದುದರಿಂದ ಈ ಕಬ್ಬಿಣದ ಅದುರಿನ ಯೋಜನೆ ಏನು ಇದೆ, ಅದು ಇನ್ನೂ ಕ್ಷಿಪ್ರದಲ್ಲಿ, ಹೆಚ್ಚಿನ ತೀವ್ರಗತಿಯಲ್ಲಿ ಮುಂದೆ ಹೋಗಬೇಕು ಎನ್ನತಕ್ಕಂಥಾದ್ದು ನಮ್ಮ ಆಸೆ. ಅದಕ್ಕೆ ಒಂದೇ ಒಂದು ವಿಘ್ನ ಏನೆಂದರೆ...

9.30 A.M.

ಶ್ರೀ ಎಂ. ಎಸ್. ಕೃಷ್ಣನ್.—ಕುದುರೆಮುಖ ಐರನ್ ಓರ್ ಪ್ರಾಜೆಕ್ಟನ್ನು ದೊಡ್ಡ ಪ್ರಾಜೆಕ್ಟ್‌ನ್ನಾಗಿ ಮಾಡಬೇಕೆಂದು ಹೇಳಿದುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಬೇರೆ ರಾಷ್ಟ್ರಗಳು ನಮ್ಮ ಕಬ್ಬಿಣದ ಅದುರುಗಳನ್ನು ಕೊಂಡುಕೊಳ್ಳುವುದಕ್ಕೆ ತಯಾರು ಆಗಿದ್ದರೆ ಆಗಬಹುದು. ಬರೇ ಜಪಾನಿಯುವರ ಜೊತೆಗೆ ಅಗ್ರಿಮೆಂಟ್ ಮಾಡಿಕೊಂಡು ಅದಿರನ್ನು ಪೈಪು ಮೂಲಕ ಟ್ಯಾಂಕರ್‌ಗೆ ಹಾಕುವಂತೆ ಮಾಡಿದ್ದೀರಿ. ಬೇರೆ ರಾಷ್ಟ್ರದವರು ಈ ರೀತಿಯಲ್ಲಿ ಪೆಲೆಟೈಸೇಷನ್ ಪ್ಲಾಂಟ್ ಹಾಕಿಕೊಡಬೇಕು ಎಂದು ಹೇಳಿದ್ದಾರೆ. ಅದಕ್ಕೆ ತಾವು ಏನು ಯೋಚನೆ ಮಾಡಿದ್ದೀರಿ ?

ಶ್ರೀ ಎಸ್. ಎಂ. ಕೃಷ್ಣ.—ಪೆಲೆಟೈಸೇಷನ್ ಪ್ಲಾಂಟ್ ಹಾಕಬೇಕು ಎನ್ನುವುದು ಆ ಯೋಜನೆಯಲ್ಲಿ ಅಡಕವಾಗಿದೆ, ಜೊತೆಗೆ ಕಬ್ಬಿಣದ ಅದುರನ್ನು ಕ್ಷಿಪ್ರವಾಗಿ ಸಾಗಿಸಬೇಕು ಎನ್ನತಕ್ಕಂಥಾದ್ದು ಇದೆ. ಇನ್ನು ನಮ್ಮ ಕೆಲವು ಮುಖ್ಯ ಕೈಗಾರಿಕೆಗಳ ಬಗ್ಗೆ ಸಮೀಕ್ಷೆ ಮಾಡಬೇಕಾಗಿದೆ. ಅದಕ್ಕೆ ಹೋಗುವುದಕ್ಕೆ ಮುನ್ನ ಕೇಂದ್ರ ಸರ್ಕಾರದವರು ಮೈಸೂರು ರಾಜ್ಯದಲ್ಲಿ ಇದುವರೆಗೆ ಕೈಗಾರಿಕಾ ಕ್ಷೇತ್ರದಲ್ಲಿ ಏನು ಬಂಡವಾಳ ಹಾಕಿದ್ದಾರೆ ಎನ್ನುವುದನ್ನು ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ನಾನು ಪಾರ್ಲಿಮೆಂಟ್ ಸದಸ್ಯನಾಗಿದ್ದಾಗ ಒಂದು ಅಭಿಪ್ರಾಯ ದೇಶದಲ್ಲಿ ಮೂಡಿ ಬಂದಿತ್ತು. ಕೇಂದ್ರ ಸರ್ಕಾರದ ಉದ್ಯಮಗಳು ಬೆಂಗಳೂರಿನಲ್ಲಿ ಕೇಂದ್ರೀಕೃತವಾಗಿದೆ, ಕ್ರೋಢೀಕೃತವಾಗಿದೆ, ಮೈಸೂರಿಗೆ ಎಲ್ಲಾ ಉದ್ಯಮಗಳೂ ಹೊರಟು ಹೋಗುತ್ತಿವೆ ಎಂದು ಬಿಹಾರ ಮತ್ತು ಉತ್ತರ ಪ್ರದೇಶದಲ್ಲಿರತಕ್ಕಂಥ ನನ್ನ ಸ್ನೇಹಿತರು ಹೇಳುತ್ತಿದ್ದರು. ಅದು ಎಷ್ಟು ತಪ್ಪು ಅಭಿಪ್ರಾಯ ಎನ್ನತಕ್ಕದ್ದು ಈ ಸಭೆಯ ಮುಂದೆ ಮಂಡಿಸತಕ್ಕ ಅಂಕಿಅಂಶಗಳು ಸಾಬೀತು ಮಾಡುತ್ತವೆ. In the First Five Year Plan allocation for industries in Central Sector was Rs. 45.3 Crores. Central Investment in Mysore State was just 7.1 percent. In the II Five-Year Plan allocation for industries in Central Sector was 694 crores of rupees. Central investment in Mysore State came down to 3.3 per cent. In the III Five Year Plan the allocation in the Central Sector was Rs. 1144 crores and the Central investment in Mysore State rose to 17.2 per cent. In the IV Five Year Plan it was Rs. 3150 crores. Our percentage rose to 32.4 per cent ಇದರಿಂದ ಏನು ಸ್ಪಷ್ಟಪಡುತ್ತದೆ ಎಂದರೆ ಕೇಂದ್ರದವರು ಮೈಸೂರಿನಲ್ಲಿ ಇನ್‌ವೆಸ್ಟ್‌ಮೆಂಟ್ ಏನು ಅಗತ್ಯವಾಗಿ ಹಾಕಬೇಕೋ ಅದಕ್ಕಿಂತ ಕಡಿಮೆ ಹಾಕಿದ್ದಾರೆಯೇ ಹೊರತು ಹೆಚ್ಚು ಹಾಕಲಿಲ್ಲ ಎಂದು ಈಗ ನಾನು ಮಂಡಿಸಿರತಕ್ಕಂಥ ಅಂಕಿ ಅಂಶಗಳಿಂದ ಅರ್ಥವಾಗುತ್ತದೆ ಎಂದು ನಾನು ಈ ಸದನಕ್ಕೆ ತಿಳಿಸಬಚ್ಛಿಸುತ್ತೇನೆ. ಸರ್ಕಾರದ ಉದ್ದಿಮೆಗಳು ಲಾಭದಾಯಕವಾಗಿ ಕೆಲಸ ಮಾಡಬೇಕು ಎನ್ನತಕ್ಕಂಥಾದ್ದು ಎಲ್ಲ ಸದಸ್ಯರ ಏಕಮುಖ ಅಭಿಪ್ರಾಯವಾಗಿದೆ. ನಮ್ಮ ಅಭಿಪ್ರಾಯ ಕೂಡ ಸರ್ಕಾರದ ಉದ್ಯಮದಲ್ಲಿರತಕ್ಕ ಕಂಪನಿಗಳು ಚೆನ್ನಾಗಿ ಕೆಲಸ ಮಾಡಬೇಕು ಎನ್ನತಕ್ಕಂಥಾದ್ದು. ನಮ್ಮಲ್ಲಿರತಕ್ಕ ಎನ್.ಜಿ.ಇ.ಎಫ್. 1970-71ನೇ ಇಸವಿಯಲ್ಲಿ ಸುಮಾರು 15 ಲಕ್ಷ ರೂಪಾಯಿ ಲಾಭವನ್ನು ಮಾಡಿದೆ. ಹಾಗೆಯೇ 1971-72 ನೇ ಇಸವಿಯಲ್ಲಿ 40 ಲಕ್ಷ ರೂಪಾಯಿ ಲಾಭವನ್ನು ಮಾಡಿದೆ, ಮೈಸೂರು ಷುಗರ್ ಕಂಪನಿ 1970-71 ನೇ ಇಸವಿಯಲ್ಲಿ ನೂರು ಲಕ್ಷ ರೂಪಾಯಿ ಲಾಭವನ್ನು ಮಾಡಿದೆ. ಹಾಗೆಯೇ ಹಟ್ಟಿ ಗೋಲ್ಡ್ ಮೈನ್ಸ್ 1971-72 ನೇ ಇಸವಿಯಲ್ಲಿ 23 ಲಕ್ಷ ರೂಪಾಯಿ ಲಾಭವನ್ನು ಮಾಡಿತ್ತು. ಹಟ್ಟಿ ಗೋಲ್ಡ್ ಮೈನ್ಸ್ ಬಗ್ಗೆ 60 ಲಕ್ಷ ರೂಪಾಯಿ ಚಿನ್ನ ಹಾಗೆಯೇ ಇದೆ ಎಂದು ಹೇಳಿದರು. ಗೋಲ್ಡ್ ಕಂಟ್ರೋಲ್ ಜಾರಿಯಲ್ಲಿದೆ, ಆದ್ದರಿಂದ ಇದಕ್ಕೆ ಸಂಬಂಧಪಟ್ಟಂತೆ ರಿಸರ್ವ್ ಬ್ಯಾಂಕ್ ನಮ್ಮ ಚಿನ್ನದ ಗಣಿ ಹಾಗೂ ಕೇಂದ್ರ ಸರ್ಕಾರ ಈ ಮೂರು ಭಾಗಗಳಲ್ಲಿ ಕೆಲಸಕಾರ್ಯಗಳು ಆಗಬೇಕಾಗಿದೆ. ಕೇಂದ್ರ ಸರ್ಕಾರದಿಂದ ನಮಗೆ ಆಶ್ವಾಸನೆ ದೊರಕಿದೆ, 60 ಲಕ್ಷ ರೂಪಾಯಿನ ಚಿನ್ನ ಏನು ಇದೆ ಅದನ್ನು ರಿಸರ್ವ್ ಬ್ಯಾಂಕ್‌ನವರು ತೆಗೆದುಕೊಳ್ಳುತ್ತಾರೆ ಎಂದು. ಅದರ ಜೊತೆಗೆ 4 ಕೋಟಿ ರೂಪಾಯಿಗಳ ಸಾಲವನ್ನು ಮಾಡಿದ್ದಾರೆ. ಈ 4 ಕೋಟಿ ರೂಪಾಯಿಗಳ ಸಾಲಕ್ಕೆ ಬಡ್ಡಿಯನ್ನು ಪ್ರತಿ ತಿಂಗಳೂ ಪ್ರತಿ ವರ್ಷವೂ ಕಟ್ಟಿಕೊಂಡು ಹೋಗಬೇಕಾಗಿದೆ. ಈ ಸಮಸ್ಯೆ ಅತಿ ಶೀಘ್ರದಲ್ಲೇ ಬಗೆಹರಿಯುತ್ತದೆ ಎನ್ನತಕ್ಕ ವಿಷಯ ಇದೆ. ಮೈಸೂರು ಲ್ಯಾಕ್ ಅಂಡ್ ಪೈಂಟ್ ವರ್ಕ್ಸ್ ಈ ಸಾರಿ ಸುಮಾರು 2 ಲಕ್ಷ ರೂಪಾಯಿ ಕಡಿಮೆ ಲಾಭವನ್ನು ಮಾಡಿವೆ. ರೆವ್ಕೋ ಕಾರ್ಪೊರೇಷನ್ 3 ಲಕ್ಷ 49 ಸಾವಿರ ರೂಪಾಯಿ ಲಾಭವನ್ನು 1971-72ನೇ ಇಸವಿಯಲ್ಲಿ ಮಾಡಿದೆ. ಹಾಗೆಯೇ ಮೈಸೂರು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೋರೇಷನ್ $12\frac{1}{2}$ ಲಕ್ಷ ರೂಪಾಯಿ ಲಾಭವನ್ನು ಮಾಡಿದೆ, ಮೈಸೂರು ಐರನ್ ಅಂಡ್ ಸ್ಟೀಲ್, ಭದ್ರಾವತಿ 59 ಲಕ್ಷ ರೂಪಾಯಿ ಲಾಭವನ್ನು ಮಾಡಿದೆ, ಮೈಸೂರು ಸ್ಟೇಟ್ ಕ್ರೋಮ್ ಟ್ಯಾನಿಂಗ್ ಕಂಪನಿಯವರು 30 ಲಕ್ಷ ರೂಪಾಯಿ ಲಾಭವನ್ನು ಮಾಡಿದ್ದಾರೆ. ಈ ರೀತಿ ಸರ್ಕಾರದ ಕಂಪನಿಗಳು ಎಲ್ಲವೂ ಕೂಡ ಲಾಭವನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದೆ ಎನ್ನುವುದು ಸ್ವಲ್ಪ ಸಮಾಧಾನವಾದ ಮಾತು.

SRI M. S. KRISHNAN.—The profit earned by the Bhadravathi Iron and Steel Limited was stated to be one crore of rupees. How is it that the Minister has reduced it to Rs. 59 lakhs.

ಶ್ರೀ ಎಸ್. ಎಂ. ಕೃಷ್ಣ.—ಒಂದು ಕೋಟಿ ರೂಪಾಯಿ ಲಾಭ ಮಾಡಬೇಕೆಂದು ಅವರು ಇಚ್ಛೆ ಮಾಡುತ್ತಾ ಇದ್ದರು. ಡಿಪಾರ್ಟ್‌ಮೆಂಟ್‌ಲ ಮ್ಯಾನೇಜ್ಡ್ ಗೌರ್ನಮೆಂಟ್ ಕನ್‌ಸರ್ನ್ಸ್ ಇದರಲ್ಲಿ ಮಾತ್ರ ಅಲ್ಪಸ್ವಲ್ಪ ನಿರಾಸೆಗೆ ಕಾರಣವಾಗಿದೆ ಎನ್ನತಕ್ಕಾಂಥಾದ್ದನ್ನು ಒಪ್ಪಬೇಕಾಗಿದೆ. ಗೌರ್ನಮೆಂಟ್ ಸ್ಯಾಂಡಲ್ ಆಯಿಲ್ ಫ್ಯಾಕ್ಟರಿ, ಮೈಸೂರು ಮತ್ತು ಶಿವಮೊಗ್ಗ, 14 ಲಕ್ಷ ರೂಪಾಯಿ ಲಾಭವನ್ನು ಮಾಡಿದೆ. ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ 33 ಲಕ್ಷ ರೂಪಾಯಿ ಲಾಭವನ್ನು

(ಶ್ರೀ ಎಸ್. ಎಂ. ಕೃಷ್ಣ)

ಮಾಡಿದೆ. ಗೌರ್ನಮೆಂಟ್ ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಷಾಪ್ 7½ ಲಕ್ಷ ರೂಪಾಯಿ ನಷ್ಟವನ್ನು ಅನುಭವಿಸಿದೆ. ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಷಾಪ್, ಮರ್ಕರ, 89 ಸಾವಿರ ರೂಪಾಯಿ ನಷ್ಟದಲ್ಲಿ ಇವೆ. ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ 25 ಲಕ್ಷ ರೂಪಾಯಿ ನಷ್ಟವನ್ನು ಅನುಭವಿಸಿದೆ. ಆದರೆ ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ ಬಗ್ಗೆ ನಾನು ಒಂದು ಸಮಾಧಾನ ಹೇಳಿದರೆ ಅದು ನನ್ನ ಮೇಲೆ ಬರುತ್ತದೆ ಎನ್ನುವುದು ಗೊತ್ತು. ಆದರೂ ಕೂಡ ಹೇಳುತ್ತೇನೆ 1969-70 ರಲ್ಲಿ 40 ಲಕ್ಷ ರೂಪಾಯಿ ನಷ್ಟ ಇದ್ದುದನ್ನು ಕಷ್ಟಪಟ್ಟು 25 ಲಕ್ಷಕ್ಕೆ ಇಳಿಸಿದ್ದಾರೆ. ಹಾಗೆಯೇ ಮೈಸೂರು ಇಂಪ್ಲಿಮೆಂಟ್ ಫ್ಯಾಕ್ಟರಿ, ಹಾಸನ ಇದು 9 ಲಕ್ಷ ರೂಪಾಯಿ ನಷ್ಟದಲ್ಲಿ ಕೆಲಸ ಮಾಡುತ್ತಾ ಇದೆ. ನಷ್ಟದಲ್ಲಿ ಕೆಲಸ ಮಾಡುತ್ತಾ ಇರುವ ನೇರವಾಗಿ ಸರ್ಕಾರದವರೇ ನಡೆಸುತ್ತಾ ಇರತಕ್ಕಂಥ ಕೈಗಾರಿಕೆಗಳ ಬಗ್ಗೆ ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾವುದು ಸರಿಯಾಗಿ ಕೆಲಸ ಮಾಡುತ್ತಿಲ್ಲ ಅಂಥಾ ಉದ್ಯಮಗಳ ಬಗ್ಗೆ ನಮ್ಮ ಇಲಾಖೆ ಗಮನವನ್ನು ಹರಿಸುತ್ತದೆ. ಹೇಗೆ ಉತ್ತಮಪಡಿಸಬೇಕು ಹೇಗೆ ಇದನ್ನು ಲಾಭದಾಯಕವಾಗಿ ಬಂಡವಾಳವನ್ನಾಗಿ ಪರಿವರ್ತನೆ ಮಾಡಬೇಕು ಎನ್ನುವ ಬಗ್ಗೆ ನಾವು ಈಗಾಗಲೇ ಕಾರ್ಯಕ್ರಮ ಕೈಗೊಂಡಿದ್ದೇವೆ. ಬಹುಶಃ ಈ ವರ್ಷದ ಕೊನೆ ಹೊತ್ತಿಗೆ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೋ ಅವುಗಳೆಲ್ಲವನ್ನೂ ಕೂಡ ಕಾರ್ಯ ರೂಪಕ್ಕೆ ತರುವುದಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕ ವಿಶ್ವಾಸವನ್ನು ನಾವು ಪಡೆದಿದ್ದೇವೆ.

ಗವರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ ವಿಚಾರದಲ್ಲಿ ಸಾಕಾದಷ್ಟು ಟೀಕೆಗಳು ಬಂದಿವೆ. ಮಾನ್ಯ ದೇವೇಗೌಡರು, ಪಬ್ಲಿಕ್ ಅಕೌಂಟ್ಸ್ ಸಮಿತಿಯವರು ಕೂಡ ಇದರ ಬಗ್ಗೆ ಸುದೀರ್ಘವಾದ ಅಧ್ಯಯನವನ್ನು ನಡೆಸಿದ್ದಾರೆ. ಬಹಳ ಸಂತೋಷ. ನಮ್ಮ ಸರ್ಕಾರದ ಉದ್ದಿಮೆಗಳು ಯಾವುವು ನಷ್ಟದಲ್ಲಿ ನಡೆಯುತ್ತಿವೆ, ಅದರ ಬಗ್ಗೆ ನಮ್ಮ ಪಬ್ಲಿಕ್ ಅಕೌಂಟ್ಸ್ ಕಮಿಟಿ ಮತ್ತು ಕಮಿಟಿ ಆನ್ ಪಬ್ಲಿಕ್ ಅಂಡರ್‌ಟೇಕಿಂಗ್ಸ್, ಈ ಎರಡೂ ಸಮಿತಿಗಳು ಸುದೀರ್ಘವಾಗಿ, ಅಧ್ಯಯನ ಮಾಡಿ ಸರ್ಕಾರಕ್ಕೆ ತಮ್ಮ ಶಿಫಾರಸುಗಳನ್ನು ಮಾಡಿ ಈ ಕಂಪೆನಿಗಳನ್ನು ನಾವು ಹೇಗೆ ಲಾಭದ ದಾರಿಯಲ್ಲಿ ತೆಗೆದುಕೊಂಡು ಹೋಗಬೇಕು ಎನ್ನುವುದರ ಬಗ್ಗೆ ತಿಳುವಳಿಕೆ ಕೊಡಬೇಕು, ಮಾರ್ಗದರ್ಶನ ಮಾಡಬೇಕು ಎಂದು ಸರ್ಕಾರ ಅಪೇಕ್ಷೆ ಪಡುತ್ತದೆ.

ಫ್ಯಾನ್ ವಿಚಾರ ಬಂತು. ಫ್ಯಾನ್ ಬಗ್ಗೆ ಅಗ್ರಿಮೆಂಟ್ ಏನಾಗಿದೆ ಅದರಿಂದ ನಮಗೆ ಪ್ರತಿಕೂಲವೇ ಹೆಚ್ಚಾಗಿದೆ ಎನ್ನುವ ಬಗ್ಗೆ ನನಗೆ ಯಾವ ಅನುಮಾನವೂ ಇಲ್ಲ. ಬಹುಶಃ ನಾನು ಕೈಗಾರಿಕಾ ಮಂತ್ರಿಯಾಗಿ, ಅಂಥ ಒಪ್ಪಂದಕ್ಕೆ ನಮ್ಮ ಇಲಾಖೆಯ ಅಧಿಕಾರಿಗಳು ರುಜು ಹಾಕುವುದಕ್ಕೆ ಅವಕಾಶ ಕೊಡುತ್ತಿರಲಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಬಹುಶಃ ಇದು ಮಿಸ್ ಕ್ಯಾಲ್ಕುಲೇಷನ್ ಇದೆಯೋ ಅಥವಾ ಅಗ್ರಿಮೆಂಟ್ ನಡೆದಾಗ ಸಾಕಾದಷ್ಟು ತೀವ್ರವಾಗಿ, ಸಾಕಾದಷ್ಟು ಪ್ರಮಾಣದಲ್ಲಿ ಅಧ್ಯಯನ ನಡೆಯಲಿಲ್ಲವೋ ಎನ್ನುವುದನ್ನು ಈಗ ಹೇಳುವುದಕ್ಕೆ ಬರುವುದಿಲ್ಲ. ಇಷ್ಟನ್ನು ಮಾತ್ರ ನಾನು ಹೇಳುತ್ತೇನೆ, ಬಹುಶಃ ಇದು ಮಿಸ್ ಕ್ಯಾಲ್ಕುಲೇಷನ್ ಅಥವಾ ಲ್ಯಾಕ್ ಆಫ್ ಆಪ್ರೀಸಿಯೇಷನ್ ಆಫ್ ಫ್ಯಾಕ್ಟ್ಸ್ ಇದರಿಂದ ಈ ಒಂದು ಅಗ್ರಿಮೆಂಟ್ ನಡೆದು ಹೋಗಿದೆ. ಈಗ ಸರ್ಕಾರದ ಕೈಗಳು ಕಟ್ಟಿ ಹೋಗಿವೆ. ಈ ಅಗ್ರಿಮೆಂಟನ್ನು ನಾವು ಈ ದಿವಸ ಹೊಡೆದು ಹಾಕಬಹುದು. ಆದರೆ ಒಂದು ಮಾತನ್ನು ಈ ಸದನದವರು ಗಂಭೀರವಾಗಿ ಪರಿಶೀಲಿಸಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ. ಕೈಗಾರಿಕಾ ಇಲಾಖೆಯವರು ಇನ್ನು ಮುಂದೂ ಕೂಡ ಖಾಸಗಿ ಜನರ ಜೊತೆಯಲ್ಲಿ ಒಪ್ಪಂದಗಳನ್ನು ಆಗಿಂದಾಗ್ಗೆ ಮಾಡಿಕೊಳ್ಳಲೇಬೇಕಾಗುತ್ತದೆ. ಏಕೆಂದರೆ ಕೈಗಾರಿಕಾ ವಿಕಾಸ, ಕೈಗಾರಿಕಾ ಅಭಿವೃದ್ಧಿ ನಡೆಯುವುದಕ್ಕೆ ಸಾಧ್ಯವಾಗುವುದಕ್ಕೆ ಖಾಸಗಿ ಬಂಡವಾಳ ಹಾಗೂ ಸರ್ಕಾರಿ ಬಂಡವಾಳ ಎರಡೂ ಜೊತೆಯಲ್ಲಿ ಮುಂದೆಯೂ ಹೋಗಬೇಕಾಗುತ್ತದೆ. ಈ ಅಗ್ರಿಮೆಂಟ್ ಏಕಾಏಕಿ ಕ್ಯಾನ್ಸಲ್ ಮಾಡುತ್ತಾ ಹೋದರೆ, ರಿವೋಕ್ ಮಾಡುತ್ತ ಹೋದರೆ ಆದರಿಂದ ಏನಾದರೂ ಕೆಟ್ಟ ಪರಿಣಾಮ ನಮ್ಮ ರಾಜ್ಯದ ಕೈಗಾರಿಕಾ ಅಭಿವೃದ್ಧಿಗೆ ಬರಬಹುದೋ ಏನೋ ಎನ್ನುವ ಶಂಕೆ ನನ್ನನ್ನು ಕಾಡುತ್ತಿದೆ. ಅಂದ ಮೇಲೆ ಈ ಅಗ್ರಿಮೆಂಟಿನ ಬಗ್ಗೆ ಸರ್ಕಾರ ಪರಿಶೀಲನೆ ಮಾಡಬೇಕು. ನಿರಂತರವಾಗಿ ಹತ್ತಿಪ್ಪತ್ತು ವರ್ಷ ಫ್ಯಾನುಗಳನ್ನು ಕಂಪೆನಿಯವರಿಗೆ ಕಡಮೆ ದರದಲ್ಲಿ ಕೊಟ್ಟುಕೊಂಡು ಹೋಗುವುದಕ್ಕೆ ಸಾಧ್ಯವಾಗಲಾರದೋ ಏನೋ ಎಂದೆನ್ನಿಸುತ್ತದೆ. ಗವರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿಗೆ ಸರ್ಕಾರದವರು ಸಹಾಯ ಮಾಡದೆ ಹೋದರೆ ಅದನ್ನು ಮುಚ್ಚಬೇಕಾದ ಪರಿಸ್ಥಿತಿ ಬರುತ್ತದೆ. ಆದುದರಿಂದ ನಾವು ಇದರ ಬಗ್ಗೆ ಯೋಚನೆ ಮಾಡುವುದಕ್ಕೆ ಸರ್ಕಾರಕ್ಕೆ ಬಹಳ ಅವಕಾಶವನ್ನು ಕೊಡಬೇಕು ಎಂದು ತಮ್ಮನ್ನು ಪ್ರಾರ್ಥನೆ ಮಾಡುತ್ತೇನೆ.

ಮಾನ್ಯ ವಿರೋಧಪಕ್ಷದ ನಾಯಕರು, ಶ್ರೀ ಬಂಗಾರಪ್ಪನವರು, ಶ್ರೀ ಕೋಣಂದೂರುಲಿಂಗಪ್ಪನವರು, ಸರ್ವತೋಮುಖವಾಗಿ ಭಾಷಣ ಮಾಡಿ ಖುದ್ದೂಸ್ ಅನ್ವರ್ ಅವರು ಎಲ್ಲರೂ ಭದ್ರಾವತಿ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಭದ್ರಾವತಿ ನಮ್ಮ ರಾಜ್ಯದ ಅತ್ಯಂತ ಹೆಮ್ಮೆಯ ಕಾರ್ಖಾನೆ. ಹಿರಿಯ ಕಾರ್ಖಾನೆಯೂ ಹೌದು, ಹೆಮ್ಮೆಯ ಕಾರ್ಖಾನೆಯೂ ಹೌದು. ಸಂಪೂರ್ಣವಾಗಿ ಸರ್ಕಾರಿ ಬಂಡವಾಳದಿಂದ, ಮೈಸೂರಿನ ಮಕ್ಕಳು ಕಟ್ಟಿರತಕ್ಕ ಕಾರ್ಖಾನೆ ಅದು. ಶ್ರೀ ಎಂ. ವಿಶ್ವೇಶ್ವರಯ್ಯನವರ ಆಶೀರ್ವಾದದಿಂದ ಬೆಳೆದಿರತಕ್ಕ ಕಾರ್ಖಾನೆ; ಇಡೀ ಇಂಡಿಯಾ ದೇಶಕ್ಕೆ ಒಂದು ಕಾಲದಲ್ಲಿ ಮಾದರಿಯಾಗಿದ್ದ ಕಾರ್ಖಾನೆ ಈ ಭದ್ರಾವತಿ ಕಾರ್ಖಾನೆ. ಈ ಹೊತ್ತು ಭದ್ರಾವತಿ ಕಾರ್ಖಾನೆ ಬಗ್ಗೆ ಸಾಕಾದಷ್ಟು ಜಿಜ್ಞಾಸೆ, ಸಾಕಾದಷ್ಟು ಗಡಿಬಿಡಿ, ಸಾಕಾದಷ್ಟು ಗೊಂದಲ ಉಂಟಾಗಿರತಕ್ಕದು ನಮ್ಮೆಲ್ಲರಿಗೂ ಗೊತ್ತಿರತಕ್ಕ ವಿಚಾರ. ಭದ್ರಾವತಿ ಕಾರ್ಖಾನೆಯನ್ನು ಅನೇಕ ತಂಡಗಳು ಕೆಲವಾರು ವರ್ಷಗಳಿಂದ ಅಧ್ಯಯನ ಮಾಡುವುದಕ್ಕೆ ಪ್ರಯತ್ನ ಮಾಡಿವೆ. ಕೇಂದ್ರ ಸರ್ಕಾರದ ಒಂದು ತಂಡ, ಹೈದರಾಬಾದ್ ಅಡ್ಮಿನಿಸ್ಟ್ರೇಷನ್ ಸ್ಟಾಫ್ ಕಾಲೇಜ್‌ನಿಂದ ಬಂದಿರುವ ತಂಡ, ಜಮಷೆಡ್‌ಪುರದ ಟಿಸ್ಕೋ ತಂಡ ಹೀಗೆ ಇನ್ನೂ ನಾಲ್ಕಾರು ತಂಡಗಳು ಬಂದು ಅಧ್ಯಯನ ಮಾಡಿವೆ. ಭದ್ರಾವತಿಯಲ್ಲಿ ಈಗಲೂ ಕೂಡ ಒಬ್ಬ ವಿದೇಶಿ ಇಂಜಿನಿಯರ್ ಇದ್ದಾರೆ ಎಂದು ಮಾನ್ಯ ಸದಸ್ಯರಾದ ಖುದ್ದೂಸ್ ಅವರು ಪ್ರಸ್ತಾಪ ಮಾಡಿದ್ದಾರೆ. ನಾನು ಆ ಪ್ರಸ್ತಾಪಕ್ಕೆ ಹೋಗುವುದಿಲ್ಲ. ಕಾರಣವೇನೆಂದರೆ ಅವರು ಹೊರಟುಹೋಗಿದ್ದಾರೆ, ಅವರು ನಮ್ಮ ದೇಶವನ್ನೇ ಬಿಟ್ಟು ಹೋಗಿದ್ದಾರೆ. ಆದುದರಿಂದ ಅದು ಅಪ್ರಕೃತವಾಗುತ್ತದೆ. ಈಗ ನಾನು ಹೇಳತಕ್ಕ ವಿಚಾರ ಸಂಪೂರ್ಣವಾಗಿ ನೂರಕ್ಕೆ ನೂರು ಭಾಗ ಮೈಸೂರು ಜನಗಳಿಂದಲೇ ನಡೆಸುತ್ತಿರತಕ್ಕ ಕಾರ್ಖಾನೆ, ಈ ಭದ್ರಾವತಿ ಕಾರ್ಖಾನೆ. ಈಗ ಅಲ್ಲಿನ ಒಂದು ವಿಶೇಷವಾದ ಪರಿಸ್ಥಿತಿ ಏನೆಂದರೆ ಮೈಸೂರು ರಾಜ್ಯ ಸರ್ಕಾರದ ಬಂಡವಾಳ 60 ಭಾಗ ಮತ್ತು ಕೇಂದ್ರ ಸರ್ಕಾರದ ಬಂಡವಾಳ 40 ಭಾಗ ಇರತಕ್ಕದು. ಅದುದರಿಂದಲೇ ನಾವು ಏನೇ ಕೆಲಸ ಮಾಡಬೇಕಾದರೂ ಭದ್ರಾವತಿ ಕಾರ್ಖಾನೆಯ ಬಗ್ಗೆ ಕೇಂದ್ರ ಸರ್ಕಾರದೊಡನೆ ಆಗಿಂದಾಗ್ಗೆ ಸಮಾಲೋಚನೆ ಮಾಡಿ ಅವರ ಅನುಮತಿಯನ್ನು ಪಡೆದು ಕೆಲಸಕಾರ್ಯಗಳನ್ನು ಮಾಡಬೇಕಾಗುತ್ತದೆ. ಜೊತೆಗೆ ಭದ್ರಾವತಿ ಕಾರ್ಖಾನೆಯ ಕಾರ್ಯನಿರ್ವಾಹಕ ಮಂಡಲಿಯಲ್ಲಿ ಕೇಂದ್ರ ಸರ್ಕಾರದ ಪ್ರತಿನಿಧಿಗಳೂ ಇದ್ದಾರೆ. ಆದುದರಿಂದ ಅಲ್ಲಿ ಇನ್ನು ಮುಂದೆ ಯಾವ ವಿಧವಾದ ಗೊಂದಲಕ್ಕೂ ಕೂಡ ಕಾರಣವಿಲ್ಲ, ಅವಕಾಶವೂ ಕೂಡ ಇಲ್ಲ ಎನ್ನುವುದು ಮಾನ್ಯ ಸದಸ್ಯರು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಬೇಕಾದ ವಿಚಾರ.

ಭದ್ರಾವತಿಯಲ್ಲಿ ಇದುವರೆಗೆ ಏಕೆ ಬಹಳ ನಷ್ಟವಾಯಿತು ಎನ್ನುವುದರ ಬಗ್ಗೆ ಹಲವಾರು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನಾಲ್ಕು ವಿಚಾರಗಳನ್ನು ಈ ಬಗ್ಗೆ ಮಾನ್ಯ ಸದನದ ಗಮನಕ್ಕೆ ತಂದು ಅಂಕಿ ಅಂಶಗಳನ್ನು ಕೊಟ್ಟು ಈ ನಷ್ಟಗಳು ಸಂಭವಿಸುವುದಕ್ಕೆ ಕಾರಣ ಮತ್ತು ಈ ಕಾರ್ಖಾನೆ ಈಗ ನಡೆಯುತ್ತಿರುವ ಬಗ್ಗೆ ಈ ಎರಡನ್ನೂ ಕೂಡ ನಾನು ಸದನದ ಮುಂದೆ ಇಡುವುದಕ್ಕೆ ಇಷ್ಟಪಡುತ್ತೇನೆ.

ಭದ್ರಾವತಿ ಕಾರ್ಖಾನೆಯಲ್ಲಿ ನಾನಾವಿಧವಾದ ಪಿಗ್ ಐರನ್ ಪ್ರೊಡಕ್ಷನ್ 1970-71ನೇ ಇಸವಿಯಲ್ಲಿ 77,478 ಟನ್ ಮತ್ತು 1971-72 ರಲ್ಲಿ 1,22,552 ಟನ್ ಆಗಿದೆ. 77 ಸಾವಿರ ಟನ್‌ಗಳಿಂದ, ಒಂದು ಲಕ್ಷ 22 ಸಾವಿರ ಟನ್‌ಗಳಿಗೆ ಪಿಗ್ ಐರನ್ ಪ್ರೊಡಕ್ಷನ್ ಹೆಚ್ಚಾಗಿದೆ ಎನ್ನುವುದನ್ನು ತಾವು ಗಮನಿಸಬೇಕು. ಹಾಗೆಯೇ ಸ್ಟೀಲ್ ಇನ್‌ಗಾಟ್ಸ್ 1970-71 ರಲ್ಲಿ 1 ಲಕ್ಷ 6 ಸಾವಿರ ಟನ್ ಇದ್ದುದು 1971-72 ರಲ್ಲಿ ಒಂದು ಲಕ್ಷ 23 ಸಾವಿರ ಟನ್ ಪ್ರೊಡಕ್ಷನ್ ಆಗಿದೆ. ಹಾಗೆಯೇ ಫಿನಿಷ್ಡ್ ಸ್ಟೀಲ್‌ನಲ್ಲಿ 1970-71 ರಲ್ಲಿ 95,900 ಟನ್ ಪ್ರೊಡಕ್ಷನ್ ಆಗಿದ್ದರೆ 1971-72 ರಲ್ಲಿ ಒಂದು ಲಕ್ಷ 34 ಸಾವಿರ ಟನ್ ಮಾಡಿದ್ದಾರೆ. ಇದು ಏನನ್ನು ಸ್ಪಷ್ಟಪಡಿಸುತ್ತದೆ ಎಂಬುದನ್ನು ನೋಡಬೇಕು. ನಾನು ನಿನ್ನೆಯೇ ಹೇಳಿದಂತೆ ಮಾನ್ಯ ಖುದ್ದೂಸ್ ಅನ್ವರ್ ಅವರು ನಮ್ಮ ಸ್ಟೀಲ್ ಎಕ್ಸ್‌ಪರ್ಟ್. ಅವರೇ ಈ ಸ್ಟೀಲ್ ಮಿಲ್ಲನ್ನು ಬೆಳೆಸಿದವರು. ಆದುದರಿಂದ ನಮ್ಮ ಸ್ಟೀಲ್ ಮಿಲ್ಲಿನಲ್ಲಿ ಈಗ ಒಂದು ಲಕ್ಷ 34 ಸಾವಿರ ಟನ್ ಉತ್ಪಾದನೆಯಾಗುತ್ತಿದೆ. ಮುಂದಿನ ವರ್ಷ ಒಂದು ಲಕ್ಷ 73 ಸಾವಿರ ಟನ್‌ವರೆಗೂ ಹೋಗಬಹುದು. ನಮ್ಮ ಅಂಟಿಸಿಪೇಟೆಡ್ ಪ್ರೊಡಕ್ಷನ್ ಹಾಗೆಯೇ ಸ್ಟೀಲ್ ಇನ್‌ಗಾಟ್ಸ್ ಮುಂದಿನ ವರ್ಷಕ್ಕೆ ಒಂದು ಲಕ್ಷ 60 ಸಾವಿರ ಟನ್‌ಗೆ ಹೋಗಬಹುದು ಎಂದು ಯೋಚನೆ ಮಾಡುತ್ತಿದ್ದೇವೆ. ಅದೇ ರೀತಿ ಪಿಗ್ ಐರನ್ ಒಂದು ಲಕ್ಷ 50 ಸಾವಿರ ಟನ್‌ಗೆ ಹೋಗಬೇಕೆಂದು ಯೋಚನೆ ಮಾಡುತ್ತಿದ್ದೇವೆ.

ಇನ್ನು ಸೇಲ್ಸ್ ಬಗ್ಗೆ ಹೇಳಬೇಕೆಂದರೆ, 1970-71 ರಲ್ಲಿ 67 ಲಕ್ಷ ರೂಪಾಯಿ ಪಿಗ್ ಐರನ್ ಮಾಡಿದ್ದೇವೆ, 1971-72 ರಲ್ಲಿ 149 ಲಕ್ಷ ರೂಪಾಯಿ ಪಿಗ್ ಐರನ್ ಮಾಡಿದ್ದೇವೆ. ಮೈಲ್ಡ್

(ಶ್ರೀ ಎಸ್. ಎಂ. ಕೃಷ್ಣ)

ಸ್ಟೀಲ್ ತೆಗೆದುಕೊಂಡರೆ 1970-71 ರಲ್ಲಿ 441 ಲಕ್ಷ ರೂಪಾಯಿನಷ್ಟು ಮತ್ತು 1971--72 ರಲ್ಲಿ 788 ಲಕ್ಷ ರೂಪಾಯಿನಷ್ಟು ಮಾಡಿದ್ದೇವೆ.

1972-73ನೇ ಇಸವಿಯಲ್ಲಿ 10.24 ಲಕ್ಷ ರೂಪಾಯಿನ ಮೈಲ್ಡ್ ಸ್ಟೀಲ್ ಅನ್ನು ಮಾಡಬೇಕಾಗಿ ಯೋಚನೆ ಮಾಡುತ್ತಾ ಇದ್ದೇವೆ. ಸ್ಪೆಷಲ್ ಸ್ಟೀಲ್ 1970-71 ರಲ್ಲಿ 809 ಲಕ್ಷ ರೂಪಾಯಿಗಳ ಮಾರಾಟ ಮಾಡಿದ್ದೆವು. 1971-72ರಲ್ಲಿ 12.68 ಲಕ್ಷ ರೂಪಾಯಿಗಳ ಮಾರಾಟ ಮಾಡಿದ್ದೇವೆ. 1970-71 ರಲ್ಲಿ 1.37 ಲಕ್ಷ ರೂಪಾಯಿಗಳು, 1971-72 ರಲ್ಲಿ 144 ಲಕ್ಷ ರೂಪಾಯಿಗಳ ಸಿಮೆಂಟನ್ನು ಮಾರಾಟ ಮಾಡಿದ್ದೇವೆ. ಒಟ್ಟು 19ಕೋಟಿ ರೂಪಾಯಿಗಳ ಸೇಲ್ಸ್ ಆಯಿತು. ಭದ್ರಾವತಿ ಕಾರ್ಖಾನೆಯಲ್ಲಿ 1971-72ನೇ ಇಸವಿಯಲ್ಲಿ ಸೇಲ್ಸ್ 30 ಕೋಟಿ ರೂಪಾಯಿಗಳನ್ನು ದಾಟಿ ಹೋಗಿದೆ. ನಮ್ಮ ಅಂಕಾಕ್ಷೆ ಪ್ರಕಾರ ಈ ಕಾರ್ಯ ನಡೆದರೆ, ನಾವು 40 ಕೋಟಿ ರೂಪಾಯಿಗಳನ್ನು ಈ ವರ್ಷ ದಾಟಬೇಕು ಎನ್ನುವ ಟಾರ್ಗೆಟ್ ಇಟ್ಟುಕೊಂಡಿದ್ದೇವೆ. ಕೆಲವರು ಮಾನ್ಯ ಸ್ನೇಹಿತರುಗಳು ಭದ್ರಾವತಿಯ ಫ್ಯಾಕ್ಟರಿಯಲ್ಲಿ ಲಾಸ್ ಆಗಿರುವುದಕ್ಕೆ ಕಾರಣ ಏನು ಎಂದು ಕೇಳಿದರು. ಈ ಕಾರ್ಖಾನೆ ನಷ್ಟವನ್ನು ಅನುಭವಿಸಬೇಕಾದರೆ, ನಾನಾ ಕಾರಣಗಳು ಇವೆ. ಉದಾಹರಣೆಗಾಗಿ ಅದಕ್ಕೆ ಬೇಕಾಗಿರತಕ್ಕ ರಾಮೆಟೀರಿಯಲ್ಸ್ ಬೆಲೆಗಳು ದಿನೇದಿನೇ ಹೆಚ್ಚಾಗುತ್ತಾ ಹೋಗುತ್ತಿವೆ. ಎರಡು ಉದಾಹರಣೆಗಳು ಕೋಲ್ ಮತ್ತು ಕೋಕ್. 1967 ನೇ ಇಸವಿಯಲ್ಲಿ ಕೋಲ್‌ನ ಬೆಲೆ ಒಂದು ಟನ್‌ಗೆ 37ರೂಪಾಯಿ ಇತ್ತು. 1970-71 ರಲ್ಲಿ 39 ರೂಪಾಯಿಗೆ ನಿಂತಿತ್ತು. 1971-72 ರಲ್ಲಿ ಒಂದು ಟನ್‌ಗೆ 44 ರೂಪಾಯಿಗಳನ್ನು ಕೊಟ್ಟು ಕೊಂಡಿದ್ದೇವೆ. ಇನ್ನು ಕೋಕ್‌ನ ಬೆಲೆ 1970-71 ರಲ್ಲಿ 105 ರೂಪಾಯಿ ಆಗಿದೆ, ಈ ದಿವಸ ಕೋಕ್‌ನ ಬೆಲೆ 125ರೂಪಾಯಿಗಳಿಗೆ ಏರಿದೆ. ಕೋಕ್ ಮತ್ತು ಕೋಲ್ ಎರಡನ್ನೂ ಬಂಗಾಳದಿಂದ ತರಿಸಬೇಕಾಗಿದೆ. ಅಲ್ಲಿಂದ ಇದು ರೇಲ್ವೆ ವ್ಯಾಗನ್‌ಗಳಲ್ಲಿ ಬರಬೇಕಾಗಿದೆ. ಈ ಚಾರಕೋಲ್ 67-68 ರಲ್ಲಿ 126 ರೂಪಾಯಿ ಇತ್ತು. ಈಗ 198 ರೂಪಾಯಿ ಆಗಿದೆ. ನಮ್ಮ ಸ್ನೇಹಿತರಾದಂಥ ಶ್ರೀಮಾನ್ ಪಾಟೀಲರು, ಸಭೆ ಸೇರಿಸಿ ಈ ಚಾರ್‌ಕೋಲ್ ರೇಟ್ ಹಿಂದೆ ಮಾಡಿದ್ದು ಕಡಿಮೆ ಇದೆ, ಇದನ್ನು ಈಗ ಜಾಸ್ತಿ ಮಾಡಬೇಕು, ಅರಣ್ಯ ಸಂಪತನ್ನು ನಾಶ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ. ಕೋಕ್ ಬೆಲೆ ಜಾಸ್ತಿಯಾಗಿದೆ. ಇದರಿಂದ ಸ್ವಲ್ಪಮಟ್ಟಿಗೆ ನಷ್ಟ ಉಂಟಾಯಿತು ಎನ್ನತಕ್ಕಂಥಾದನ್ನು ಸಭೆ ಗಮನಿಸಬೇಕಾಗಿದೆ. ಕಾರ್ಮಿಕರ ವಿಚಾರದಲ್ಲಿ ಒಂದು ಮಾತನ್ನು ಈ ಸಮಯದಲ್ಲಿ ಹೇಳಬಯಸುತ್ತೇನೆ. ಭದ್ರಾವತಿ ಕಾರ್ಖಾನೆಯಲ್ಲಿ ಮಿನಿಮಮ್ ಬೇಸಿಕ್ ವೇಜ್ 31-8-1970ರಲ್ಲಿ 163ರೂಪಾಯಿ ಇತ್ತು. 1-9-1970ರಲ್ಲಿ ಜಾಯಿಂಟ್ ನೆಗೋಷಿಯೇಷನ್ ಮೂಲಕ ಏನು ಸಂಧಾನ ನಡೆಯಿತೋ ಅದರ ಮೂಲಕ 240 ರೂಪಾಯಿಗಳು ಆಗಿವೆ. This is inclusive of Rs. 33 as interim relief. ಈ ಒಂದೇ ಒಂದು ಸುಧಾರಣೆಯಿಂದ ನಮ್ಮ ಕಾರ್ಖಾನೆ 93ಲಕ್ಷ ರೂಪಾಯಿಗಳನ್ನು ವೇಜಸ್ ಮೂಲಕ ಹೆಚ್ಚು ಕೊಡಬೇಕಾಗಿ ಬಂತು ಎಂದು ಮಾನ್ಯ ಸದಸ್ಯರು ಗಮನಿಸಬೇಕು ಎಂಬುದಾಗಿ ನಾನು ಆಸೆ ಪಡುತ್ತೇನೆ. ಹಾಗೆ ಸಿಮೆಂಟ್ ಕಾರ್ಖಾನೆಯ ಕೆಲಸಗಾರರಿಗೂ ಮತ್ತು ಉಕ್ಕಿನ ಕಾರ್ಖಾನೆಯ ಕೆಲಸಗಾರರಿಗೂ ವೇತನದಲ್ಲಿ ವ್ಯತ್ಯಾಸವಿತ್ತು ಉಕ್ಕಿನ ಕಾರ್ಖಾನೆಯ ಕೆಲಸಗಾರರಿಗೆ 30 ರೂಪಾಯಿ ಜಾಸ್ತಿ ಸಿಗುತ್ತಿತ್ತು. ಒಂದೇ ಛಾವಣಿಯಲ್ಲಿ ಕೆಲಸ ಮಾಡುವ ಕಾರ್ಮಿಕ ನೌಕರರಿಗೆ ಅನುಕೂಲವಾಗಲೀ ಎನ್ನುವ ದೃಷ್ಟಿಯಿಂದ ಸಿಮೆಂಟ್ ಕಾರ್ಖಾನೆಯ ಕೆಲಸಗಾರರಿಗೂ ಈ 30 ರೂಪಾಯಿಗಳ ವ್ಯತ್ಯಾಸವನ್ನು ಸರಿಪಡಿಸಿದುದರಿಂದ ಸ್ವಲ್ಪ ಹೆಚ್ಚು ಖರ್ಚು ಉಂಟಾಯಿತು. ಈ ಎಲ್ಲಾ ಕಾರಣಗಳಿಂದ ಕಾರ್ಖಾನೆಗಳು ನಷ್ಟವನ್ನು ಅನುಭವಿಸಬೇಕಾಗಿ ಬಂತು ಎನ್ನುವುದನ್ನು ಮಾನ್ಯ ಸದಸ್ಯರು ಗಮನಿಸಬೇಕು ಎಂದು ನಾನಾದರೂ ಪ್ರಾರ್ಥನೆ ಮಾಡುತೇನೆ. ಜೊತೆಗೆ ನಮ್ಮ ಕಬ್ಬಿಣಕ್ಕೆ ಮಾರ್ಕೆಟಿನಲ್ಲಿ ತೀವ್ರವಾದ ಪೈಪೋಟಿ ಇತ್ತು. ಈ ಪೈಪೋಟಿಯನ್ನು ಎದುರಿಸಕ್ಕದ್ದು ಬಹಳ ಕಷ್ಟ. ಭದ್ರಾವತಿ ಕಾರ್ಖಾನೆಯಲ್ಲಿ ತಯಾರಾದಂಥ ಕಬ್ಬಿಣಕ್ಕೆ ಇಡೀ ನಮ್ಮ ದೇಶದಲ್ಲಿ ಒಳ್ಳೆಯ ಹೆಸರು ಇದೆ ಎನ್ನತಕ್ಕದ್ದು ನಾವು ಹೆಮ್ಮೆಯಿಂದ ಸ್ಮರಿಸಕೊಳ್ಳಬೇಕಾಗಿದೆ. ಈ ಕಾರ್ಖಾನೆಯಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರು, ಅಧಿಕಾರಿಗಳು ಮತ್ತು ಸಂಬಂಧಪಟ್ಟವರೆಲ್ಲರಿಗೂ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ. ಇಡೀ ದೇಶದ ಯಾವ ಭಾಗಕ್ಕೆ ಹೋದರೂ ಭದ್ರಾವತಿಯ ಕಬ್ಬಿಣಕ್ಕೆ ಹೆಚ್ಚಿನ ಬೇಡಿಕೆ ಇದೆ. ಅದಕ್ಕೆ ಬಹಳ ತೀವ್ರತರವಾದ ಪೈಪೋಟಿ ಖಾಸಗೀ ಕ್ಷೇತ್ರದಿಂದ ಬರುತ್ತಿದೆ. ಬಾಂಬೆಯಲ್ಲಿರುವ ಒಂದೆರಡು ಕಂಪೆನಿಗಳು, ಅಂದರೆ, ಟಾಟಾ ಒಂದು ಕಡೆ, ಮತ್ತು ಮಹೀಂದ್ರ ಇನ್ನೊಂದು ಕಡೆ, ಪೈಪೋಟಿ ಮಾಡುತ್ತಿವೆ. ಭದ್ರಾವತಿಯಲ್ಲಿ ಇನ್ನುಮುಂದೆ ಮಾಡಬೇಕಾದ ಕೆಲವು ವಿಚಾರಗಳ ಬಗ್ಗೆ ಮಾನ್ಯ ಸದಸ್ಯರು ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ದೇವೇಗೌಡರು ಬಹಳ ಪ್ರಮುಖ್ಯವಾದ ಸಲಹೆಯನ್ನು

ಕೊಟ್ಟಿದ್ದಾರೆ. ಅದನ್ನು ಬಹಳ ಜನ ಸದಸ್ಯರು ಅನುಮೋದನೆ ಮಾಡಿದ್ದಾರೆ. ಅದು ಏನೆಂದರೆ, ಕೈಗಾರಿಕಾ ಕ್ಷೇತ್ರದಲ್ಲಿ ಒಂದು ಇಂಡಸ್ಟ್ರಿಯಲ್ ಕೆಡರ್ ಆಗಬೇಕು ಎಂದು. ಈ ಮಾತನ್ನು ನಾನೂ ಒಪ್ಪುತ್ತೇನೆ. ನಾವು ಸಹ ಇದನ್ನು ಒಪ್ಪದೇ ವಿಧಿಯಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಘೋರ್ಪಡೆಯವರ ನೇತೃತ್ವದಲ್ಲಿ ಎಸ್ಟಿಮೇಟ್ ಕಮಿಟಿ ಕೆಲವು ಶಿಫಾರಸ್‌ಗಳನ್ನು ಮಾಡಿದೆ. ಅವನ್ನು ಎಷ್ಟು ಮಟ್ಟಿಗೆ ಜಾರಿಗೆ ತಂದಿದ್ದೀರಿ, ಅಥವಾ ತಂದಿಲ್ಲ, ಎಂದು ಹೇಳಿದರೆ ಸಂತೋಷ.

ಶ್ರೀ ಎಸ್. ಎಂ. ಕೃಷ್ಣ.—ಇಂಡಸ್ಟ್ರಿಯಲ್ ಕೇಡರ್ ಏನು ಇದೆ ಅದನ್ನು ಮಾಡಬೇಕು ಎಂದು ನಾವು ಕೂಡ ಉದ್ದೇಶ ಪಟ್ಟಿದ್ದೇವೆ. ಕಾರ್ಖಾನೆಗಳಲ್ಲಿ ತರಬೇತಿ ಪಡೆದು ಇರತಕ್ಕ ಅಧಿಕಾರಿಗಳ ಒಂದು ಪೂಲ್ ಮಾಡಬೇಕು ಎನ್ನತಕ್ಕಂಥಾದ್ದನ್ನು ತತ್ವಶಃ ನಾವು ಒಪ್ಪಿದ್ದೇವೆ. ಮತ್ತು ಅದರ ರೂಪರೇಖೆಗಳನ್ನು ಮುಂದಿನ ತಿಂಗಳಲ್ಲಿ ನಾವು ಸ್ಪಷ್ಟವಾಗಿ ಆಚರಣೆಗೆ ತರಬೇಕಾಗಿದೆ. ಒಂದು ಮಾತನ್ನು ನಾನು ಒಪ್ಪುತ್ತೇನೆ, ಎಲ್ಲಾ ಸಮಸ್ಯೆಗೂ ಕೂಡ ಐ.ಎ.ಎಸ್. ಎಂಬ ಮೂರು ಶಬ್ದಗಳು ಸಂಜೀವನಿ ಎಂದು ನಾವು ಯಾರೂ ತಿಳಿದುಕೊಂಡಿಲ್ಲ. ಕೆಲವರು, ಕ್ರಿಟಿಸೈಸ್ ಮಾಡಿದರು, ಐ.ಎ.ಎಸ್. ಆಫೀಸರುಗಳನು ಅಲ್ಲಿಗೆ ಹಾಕುತ್ತಾರೆ ಎಂದು ಐ.ಎ.ಎಸ್. ಅಧಿಕಾರಿಗಳು ಬಹುಶಃ ಖಾಸಗೀ ಕಾರ್ಖಾನೆಯಲ್ಲಿ ಇರತಕ್ಕ ಪರಿಣತರಷ್ಟೆ, ಪರಿಣತೆಯನ್ನು ಪಡಿದಿದ್ದಾರೆ ಎನ್ನುವುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಭದ್ರಾವತಿ ಕಾರ್ಖಾನೆಯಲ್ಲಿ ಈಗಾಗಲೇ ಕೆಲವು ಸ್ಟ್ರಕ್ಚರಲ್ ಚೇಂಜಸ್ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಈ ಒಂದು ಸ್ಟ್ರಕ್ಚರಲ್ ಚೇಂಜಸ್ ಮಾಡಬೇಕು ಎಂದು ಏನು ಆಸೆ ಇದೆ ಅದನ್ನು ಸಂಪೂರ್ಣವಾಗಿ ಜಾರಿಗೆ ತರುವುದಕ್ಕೆ ಇನ್ನು ಕೆಲವು ತಿಂಗಳು ನಮಗೆ ಅವಕಾಶ ಬೇಕಾಗುತ್ತದೆ. ಶ್ರೀಮಾನ್ ಖುದ್ದೂಸ್ ಅನ್ವರ್ ಸಾಹೇಬ್ ಅವರು ಹೇಳಿದರು, ಮೆಟಲರ್ಜಿಸ್ಟ ಯಾವುದೋ ಒಂದು ಕಡೆಗೆ ಹಾಕಿದ್ದೇವೆ ಎಂದು. ಅದರಲ್ಲಿ ಸಾಕಾದಷ್ಟು ಸತ್ಯವಿದೆ. ಅದನ್ನು ನಾವು ಸರಿಪಡಿಸುವುದಕ್ಕೆ ಈಗಾಗಲೇ ಗಮನವನ್ನು ಹರಿಸಿದ್ದೇವೆ ಎಂದು ಈ ಸಮಯದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಬಂಗಾರಪ್ಪನವರು ಭದ್ರಾವತಿ ಕಾರ್ಖಾನೆಯ ಬಗ್ಗೆ ಬಂಗಾರದಂಥ ಮಾತುಗಳನ್ನು ಆಡದೆ ಕಬ್ಬಿಣದಂಥ ಮಾತುಗಳನ್ನು ಆಡಿದ್ದಾರೆ. ಅವರು ಆರೋಪಣೆ ಮಾಡಬೇಕು ಎನ್ನುವ ಆವೇಶದಲ್ಲಿ ಅಂಕಿ ಅಂಶಗಳನ್ನು ಸಭೆಯ ಮುಂದೆ ಇಟ್ಟರು. ಕೋಕ್ ಕೋಲ್ ಬಗ್ಗೆ ಕೊಟ್ಟಿರತಕ್ಕ ಕಮಿಷನ್ ವಿಚಾರದಲ್ಲಿ

10-00 A.M.

7 ಲಕ್ಷದ 60 ಸಾವಿರ ರೂಪಾಯಿ ಕಮಿಷನ್ ಕೊಟ್ಟಿದ್ದಾರೆ ಎಂದು ಏನು ಹೇಳಿದ್ದಾರೆ ಅದು 4—5 ವರ್ಷಗಳಲ್ಲಿ ಕೊಟ್ಟಿರತಕ್ಕಂಥದ್ದು. ಸಭೆಯಲ್ಲಿ ಬಂದಿರತಕ್ಕ ಟೀಕೆಗಳನ್ನು ಗಮನದಲ್ಲಿ ಇಟ್ಟುಕೊಂಡು ಭದ್ರಾವತಿ ಕಾರ್ಖಾನೆಗೆ ಬೇಕಾದ ಕೋಕ್ ಮತ್ತು ಕೋಲ್ ಇವುಗಳೆಲ್ಲವನ್ನೂ ಮಧ್ಯವರ್ತಿ ಸಹಾಯವನ್ನು ಉಪಯೋಗಿಸದೆ ನಾವೇ ನೇರವಾಗಿ ಕೇಂದ್ರ ಸರ್ಕಾರದ ಸಹಾಯದಿಂದ ಕೋಕ್ ಮತ್ತು ಕೋಲ್ ಮೈನ್ಸ್‌ನಿಂದ ತೆಗೆದುಕೊಂಡಿದ್ದೇವೆ. ಆದುದರಿಂದ ಕೋಲ್ ಮತ್ತು ಕೋಕ್ ವಿಚಾರದಲ್ಲಿ ಮಧ್ಯವರ್ತಿಗಳು ಬರತಕ್ಕ ಅವಕಾಶವಿಲ್ಲವೆಂಬುದನ್ನು ಸಭೆ ಗಮನಿಸಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ. ಇನ್ನು ಸೇಲ್ಸ್ ವಿಚಾರದಲ್ಲಿ, ಕಮಿಷನ್ ಕೊಡುವ ಬಗ್ಗೆ ಸಭೆಯಲ್ಲಿ ಟೀಕೆಗಳು ಬಂದಿವೆ. ಆಗ ನಾನು ಹೇಳಿಕೆಯನ್ನು ಕೊಟ್ಟೆ. [ಮೈಸೂರು] ಸೇಲ್ಸ್ ಇಂಟರ್ ನ್ಯಾಷನಲ್ ಸಂಸ್ಥೆ ಏನು ಇದೆ ಆ ಸಂಸ್ಥೆಯ ಮೂಲಕ ಕಬ್ಬಿಣದ ಎಲ್ಲಾ ಪದಾರ್ಥಗಳನ್ನು ಮಾರುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ. ಈ ಸೇಲ್ಸ್ ಇಂಟರ್ ನ್ಯಾಷನಲ್ ಸಂಸ್ಥೆ ಭದ್ರಾವತಿ ಕಾರ್ಖಾನೆಯ ಏಜೆನ್ಸಿ ಲಿಸ್ಟ್‌ನಲ್ಲಿ ಇದೆ. ಅದನ್ನು ಈ ದಿವಸ ಜೀವಂತ ಮಾಡಬೇಕು ಎಂದು ನಿರ್ಧಾರವನ್ನು ನಾವು ತೆಗೆದುಕೊಂಡಿದ್ದೇವೆ. ಇನ್ನು ಮುಂದೆ ಬಹುಶಃ ನನ್ನ ಕಲ್ಪನೆಯಲ್ಲಿ, ನನ್ನ ಯೋಚನೆಯಲ್ಲಿ, ಮೈಸೂರು ಸೇಲ್ಸ್‌ಗೆ ಇಂಟರ್‌ನ್ಯಾಷನಲ್, ಸೇಲ್ಸ್ ಪ್ರೊಮೋಷನ್ ವರ್ಕ್‌ನಲ್ಲಿ ಆದಷ್ಟು ಪ್ರಮುಖವಾದ ಪ್ರಯತ್ನವನ್ನು ಮಾಡುತ್ತದೆ ಎಂದು ತಿಳಿದುಕೊಂಡಿದ್ದೇನೆ. ಆ ಉದ್ದೇಶದಿಂದ ಈ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಭದ್ರಾವತಿಯ ಸೈಯಾಸನ್ ಆಫೀಸ್‌ಗಳನ್ನು ಮದ್ರಾಸ್, ಬಾಂಬೆ, ಕಲ್ಕತ್ತದಲ್ಲಿ ತೆಗೆಯಲು ಸಂಪೂರ್ಣ ಸಜ್ಜು ಮಾಡಬೇಕು, ಮತ್ತು ಅವಶ್ಯವಾಗಿ ಅಲ್ಲಿ ಆಗ ಬೇಕು ಎಂದು ಕಂಡು ಬಂದರೆ ಇನ್ನು ಕೆಲವು ಜನ ಚುರುಕು ಆಗಿರತಕ್ಕ ಯುವಕ ಇಂಜಿನಿಯರ್‌ಗಳನ್ನು ರಿಕ್ರೂಟ್ ಮಾಡಿಕೊಂಡು ಸೇಲ್ಸ್ ಪ್ರೊಮೋಷನ್ ವರ್ಕ್ ಮಾಡಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಬಹುಷಃ ಈ ಸದನ ಅದಕ್ಕೆ ಒಪ್ಪುತ್ತದೆ ಎಂದು ನಾನು ಭಾವನೆ ಮಾಡುತ್ತೇನೆ. ಈ ಭದ್ರಾವತಿ ಬಗ್ಗೆ ನಾನಾ ವಿದವಾದಂಥ ಟೀಕೆ ಟಿಪ್ಪಣಿಗಳು ಪತ್ರಿಕೆಯಲ್ಲಿ ಬಂದಿದೆ. ಈ ಶಾಸನ ಸಭೆಯಲ್ಲಿಯೂ ಬಂದಿದೆ ಮತ್ತು ಹೊರಗಡೆ

(ಶ್ರೀ ಎಸ್. ಎಂ. ಕೃಷ್ಣ)

ಕೂಡ ಬಂದಿದೆ. ಇವೆಲ್ಲ ಸಲಹೆಗಳನ್ನು ಕೂಡ ಸುದೀರ್ಘವಾಗಿ ಪರಿಶೀಲಿಸುತ್ತಿದ್ದೇವೆ. ಬಹುಶಃ ಈ ಸೆಷನ್ ಅಡ್ಜರ್ನ್ ಆಗುವ ಹೊತ್ತಿಗೆ ಸರ್ಕಾರದ ನಿಲುವನ್ನು, ಸರ್ಕಾರದ ಧೋರಣೆಯನ್ನು ಸ್ಪಷ್ಟಪಡಿಸುವುದಕ್ಕೆ ಈ ಸಭೆಯಲ್ಲಿ ಕಾಲಾವಕಾಶವನ್ನು ಕೇಳುತ್ತೇನೆ. ಒಂದು ಮಾತ್ರ ಶ್ರೀಮಾನ್ ದೇವೇಗೌಡರು ನಿನ್ನೆ ಪ್ರಸ್ತಾಪ ಮಾಡಿದರು. ಸೆಂಟ್ರಲ್ ಬ್ಯೂರೋ ಆಫ್ ಇನ್‌ವೆಸ್ಟಿಗೇಷನ್ ಅವರು ಏನನ್ನು ನೋಡುತ್ತಿದ್ದಾರೆ ಎಂದು. ನಾನು ಆ ಬಗ್ಗೆ ಹೇಳಿಕೆ ಕೊಡುವಾಗ ಅವುಗಳೆಲ್ಲ ವನ್ನು ನಾನು ನಮೂದಿಸುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳಲಿಚ್ಛೆಪಡುತ್ತೇನೆ. ಇನ್ನು ಕೆಲವು ವಿಚಾರಗಳನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಈ ಸದನದ ಅಪ್ಪಣೆ ಕೇಳುತ್ತಿದ್ದೇನೆ. ಒಂದನೆಯದು ನಮ್ಮ ಬಳ್ಳಾರಿ ವಿಜಯನಗರ ಉಕ್ಕಿನ ಕಾರ್ಖಾನೆ, ಎರಡನೆಯದು, ಮಂಗಳೂರು ಫರ್ಟಿಲೈಸರ್ ಮತ್ತು ಕುದುರೆಮುಖ ಐರನ್ ಓರ್ ಯೋಜನೆ ಇದರ ಜೊತೆಗೆ ಅಗತ್ಯವಾಗಿ ನಮ್ಮ ರಾಜ್ಯಕ್ಕೆ ಆಗಬೇಕಾದುದು ಆಯಿಲ್ ರೀಫೈನರಿ. ಪೆಟ್ರೋಲ್ ಕೆಮಿಕಲ್ ಕಾಂಪ್ಲೆಕ್ಸನ್ನು ನಾವು ಆಲೋಚನೆ ಮಾಡುತ್ತಿದ್ದೇವೆ. ಈ ಪೆಟ್ರೋ ಕೆಮಿಕಲ್ ಕಾಂಪ್ಲೆಕ್ಸ್ ಸಂಪೂರ್ಣವಾಗಿ ಆಗ ಬೇಕಾದರೆ ನಮ್ಮ ರಾಜ್ಯಕ್ಕೆ ಅತ್ಯವಶ್ಯವಾಗಿ ಆಯಿಲ್ ರೀಫೈನರಿ ಆಗಲೇಬೇಕು. ಕೇಂದ್ರ ಸರ್ಕಾರದ ಮುಂದೆ ಆಗಿಂದಾಗ್ಗೆ ನಮ್ಮ ಬೇಡಿಕೆಯನ್ನು ಮಂಡಿಸುತ್ತಿದ್ದೇವೆ. ನಮ್ಮ ರಾಜ್ಯದ ಸಂಸತ್ ಸದಸ್ಯರು ಎಲ್ಲರೂ ಕೂಡ ಕೇಂದ್ರ ಸರ್ಕಾರದ ಮೇಲೆ ಸಾಕಾದಷ್ಟು ಪ್ರಭಾವವನ್ನು ಇದರ ಬಗ್ಗೆ ಬೀರುತ್ತಿದ್ದಾರೆ ಮತ್ತು ಮುಖ್ಯಮಂತ್ರಿಗಳು ಇದರ ಬಗ್ಗೆ ಸಾಕಷ್ಟು ಆಸಕ್ತಿ ವಹಿಸುತ್ತಿದ್ದಾರೆ. ನಮ್ಮ ರಾಜ್ಯಕ್ಕೆ ಅಗತ್ಯವಾಗಿ ಆಯಿಲ್ ರಿಫೈನರಿ ಮಾಡಿಕೊಡಬೇಕು ಎಂದು ಕೇಂದ್ರ ಸರ್ಕಾರ ವನ್ನು ನಾವು ಕೇಳುತ್ತಿದ್ದೇವೆ. ನಮ್ಮ ಸರ್ಕಾರದ ಉದ್ಯಮಗಳಲ್ಲಿ ಕಾರ್ಮಿಕರಿಗೆ ಪ್ರಾತಿ ನಿಧ್ಯವನ್ನು ಕೊಡಬೇಕು ಎನ್ನತಕ್ಕ ಒಂದು ತತ್ವ ಏನು ಇದೆ ಆ ತತ್ವವನ್ನು ಭಾವನಾತ್ಮಕವಾಗಿ ಈ ಕಡೆ ಕೂತಿರತಕ್ಕ ನಾವು ಸಂಪೂರ್ಣವಾಗಿ ಒಪ್ಪಿರತಕ್ಕ ತತ್ವ. ಆದರೆ ಒಂದು ವಿಚಾರವನ್ನು ನಾವು ಗಮನದಲ್ಲಿ ಇಟ್ಟುಕೊಳ್ಳಬೇಕಾಗಿದೆ. ಈ ಸರ್ಕಾರಿ ಉದ್ಯಮಗಳಲ್ಲಿ ಹಾಕಿರತಕ್ಕ ಬಂಡವಾಳ ಯಾರದು ? ಇಲ್ಲಿ ಹಾಕಿರತಕ್ಕ ಕೋಟ್ಯಾನು ಕೋಟಿ ರೂಪಾಯಿ ಬಂಡವಾಳ ಜನಗಳು ಕೊಟ್ಟಿರತಕ್ಕ ತೆರಿಗೆ. ಆದುದರಿಂದ they are in a way participating indirectly. They have elected you and me. Are we not answerable to the people ? You are answerable. I am sure I am also answerable to the people. Equity capital is participation. ತಾತ್ವಿಕವಾಗಿ ಆಗಲೇ ಪಾರ್ಟಿಸಿಪೇಟ್ ಮಾಡಿದ್ದೇವೆ. ಇದು ಒಂದು ಮುಖ. ಇನ್ನೊಂದು ಮುಖ, ಎಂ. ಎಸ್. ಕೃಷ್ಣನ್ ಅವರು ಲೇಬರ್ ಲೀಡರ್, ಶ್ರೀ ವಾಟಾಳ್ ನಾಗರಾಜ್ ಅವರು ಲೀಡರ್ ಇವರಿಬ್ಬರಿಗೆ ಕೇಳುತ್ತಿದ್ದೇನೆ, ಕೋಣಂದೂರು ಲಿಂಗಪ್ಪನವರಿಗೂ ಕೇಳುತ್ತಿದ್ದೇನೆ, ನನ್ನ ಇರಾದೆ ಮತ್ತು ಸರ್ಕಾರದ ಇರಾದೆ ಲೇಬರ್ ರೆಪ್ರ ಸೆಂಟೇಷನ್ ಅನ್ನು ಎನ್.ಜಿ.ಇ.ಎಫ್. ಮ್ಯಾನೇಜ್‌ಮೆಂಟ್‌ನಲ್ಲಿ ಕೊಡಬೇಕು ಎನ್ನತಕ್ಕದ್ದು. ಯಾರನ್ನು ಲೇಬರ್ ರೆಪ್ರಸೆಂಟೇಟಿವ್ ಆಗಿ ಮಾಡಬೇಕು ? ಅದನ್ನು ತೀರ್ಮಾನ ಮಾಡತಕ್ಕವರು ಯಾರ್‍ಯಾರು ? ಎನ್.ಜಿ.ಎಫ್. ನಲ್ಲಿ 2 ಯೂನಿಯನ್‌ಗಳು ಇವೆ.

ಶ್ರೀ ಡಿ. ದೇವರಾಜ್ ಅರಸ್.—ನೀವು ಹೇಳಿದವರಿಗೆ ಮಾಡಿಕೊಂಡು ಹೋದರೆ ಆಯಿತು ?

ಶ್ರೀ ಎಂ. ಎಸ್. ಕೃಷ್ಣನ್.—ಕೆಲಸಗಾರರು ಯಾರನ್ನು ತೀರ್ಮಾನ ಮಾಡುತ್ತಾರೋ ಅವರಿಗೆ ಕೊಡಿ.

ಶ್ರೀ ಎಸ್. ಎಂ. ಕೃಷ್ಣ.—ಶ್ರೀಮಾನ್ ಕೃಷ್ಣನ್‌ರವರು ಹೇಳಿದಮೇಲೆ ಜಾಯಿಂಟ್ ನೆಗೋಸಿಯೇಷನ್ ಸ್ಟೀರ್ ಕಮಿಟಿ ಇಲ್ಲಿ ಬಂದಿತ್ತು. ಕೃಷ್ಣನ್‌ರವರು ಪ್ರತಿನಿಧಿಸತಕ್ಕ ಕಾರ್ಮಿಕರ ಮಹಾನಾಯಕರು ಬಂದಿದ್ದರು. ಅವರ ಜೊತೆಗೆ ಪ್ರಸ್ತಾಪ ಮಾಡಿದೆ. ನಾನು ಸಮಾಜವಾದದಲ್ಲಿ ನಂಬಿಕೆ ಇರತಕ್ಕಂಥವನು. ಸರ್ಕಾರಿ ಉದ್ಯಮಗಳಲ್ಲಿ ಕಾರ್ಮಿಕರಿಗೆ ಪ್ರಾತಿನಿಧ್ಯವನ್ನು ಕೊಡ ಬೇಕು ಎಂದು ಅಚಲವಾಗಿ ಅದಕ್ಕೆ ಕಟ್ಟುಬಿದ್ದಿರುವವನು. ಪ್ರಾತಿನಿಧ್ಯ ಹೇಗೆ ದೊರಕಿಸಿಕೊಡಬೇಕು, ಇದರ ಬಗ್ಗೆ ತಿಳುವಳಿಕೆ ಕೊಡಬೇಕೆಂದು ಅವರನ್ನು ಕೇಳಿದಾಗ ಆ ಪ್ರಶ್ನೆಗೆ ಅವರಿಂದ ಉತ್ತರ ಕಂಡುಬಂದಿಲ್ಲ. 3 ಯೂನಿಯನ್‌ಗಳು ಏನು ಇವೆ, ಐ.ಎನ್.ಟಿ.ಯು.ಸಿ, ಎ.ಐ.ಟಿ.ಯು.ಸಿ, ಎಚ್.ಎಂ.ಎಸ್. ಅವುಗಳ ಪ್ರತಿನಿಧಿಗಳು ಅದರ ಬಗ್ಗೆ ಏನೂ ಸ್ಪಷ್ಟವಾಗಿ ಹೇಳಿಲ್ಲ. ಆದುದರಿಂದ ಕಾರ್ಮಿಕ ನಾಯಕರುಗಳಿಗೆ ಕಾರ್ಮಿಕ ಸಂಘಸಂಸ್ಥೆಗಳು ಇದರ ಬಗ್ಗೆ ಆಳವಾಗಿ ಯೋಚನೆ ಮಾಡಿ ಕಾರ್ಮಿಕರ ಪ್ರತಿನಿಧಿಗಳನ್ನು ಮ್ಯಾನೇಜ್‌ಮೆಂಟ್ ಬೋರ್ಡಿನಲ್ಲಿ ನೇಮಿಸುವ ಸೂತ್ರವನ್ನು

ಕೊಟ್ಟರೆ ಸರ್ಕಾರ ಅದರ ಬಗ್ಗೆ ತೀವ್ರವಾಗಿ ಪರಿಶೀಲನೆಮಾಡಿ ಕಾರ್ಯವನ್ನು ಮಾಡುತ್ತದೆ ಎಂದು ನಾನು ಭರವಸೆಯನ್ನು ಕೊಡುತ್ತೇನೆ.

ನಮ್ಮ ದೇಶದಲ್ಲಿ ಅತ್ಯಂತ ಹಿರಿದಾದ ಸಮಸ್ಯೆ ಏನು ಎಂದರೆ ನಿರುದ್ಯೋಗ ಸಮಸ್ಯೆ. ಈ ಪೆಡಂಭೂತ ನಿರುದ್ಯೋಗ ಸಮಸ್ಯೆಯನ್ನು ಸರ್ಕಾರದವರು, ಸಾರ್ವಜನಿಕರು ಮತ್ತು ಸದನ ಬಹಳ ಗಂಭೀರವಾಗಿ ಯೋಚನೆ ಮಾಡಬೇಕು. ನಾವು ಯಾವಾಗ ಈ ಸಮಸ್ಯೆಯನ್ನು ಸಂಪೂರ್ಣ ವಾಗಿ ಪರಿಹಾರ ಮಾಡುತ್ತೇವೆ ಎನ್ನತಕ್ಕ ಧೈರ್ಯ ಇಲ್ಲದೆ ಹೋದರೂ ಈ ಸಮಸ್ಯೆ ಪರಿಹಾರ ಮಾಡುವುದಕ್ಕೆ ಇಲಾಖೆಗಳು ತಮ್ಮ ಕೆಲಸಕಾರ್ಯಗಳನ್ನು ಮಾಡಬೇಕಾಗಿವೆ. ಅದಕ್ಕೋಸ್ಕರ ನಾನು ಎರಡು ಸ್ಕೀಂಗಳನ್ನು ಈ ಸಂದರ್ಭದಲ್ಲಿ, ನಮ್ಮ ಇಂಡಸ್ಟ್ರಿ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟ ಹಾಗೆ ಸಭೆಯ ಮುಂದೆ ಮಂಡಿಸಬೇಕೆಂದು ಯೋಚನೆ ಮಾಡುತ್ತಿದ್ದೇನೆ. ಒಂದು, ನಮ್ಮ ಸಣ್ಣ ಉದ್ಯಮಗಳು ಏನಿವೆ ಅವು ಬೆಳೆಯುತ್ತ ಇರಬೇಕು, ಸಣ್ಣ ಉದ್ಯಮಗಳು ನಮ್ಮ ರಾಜ್ಯದಲ್ಲಿ ಹೆಚ್ಚು ಪ್ರಮಾಣದಲ್ಲಿ ಬೆಳೆಯಬೇಕು ಎನ್ನುವುದನ್ನು ನಾವೆಲ್ಲರೂ ಒಪ್ಪಬೇಕು. ರಾಜ್ಯದಲ್ಲಿ ಇಂದು ಹತ್ತು ಸಾವಿರ ಸ್ಮಾಲ್ ಇಂಡಸ್ಟ್ರೀಸ್‌ಗಳು ಇರಬೇಕೆಂದು ಒಂದು ಘಟಕಮಾಡ ಲಾಗಿದೆ. ಇದರಲ್ಲಿ ಸುಮಾರು ಎರಡು ಸಾವಿರ ಇಂಡಸ್ಟ್ರಿಗಳು ಇನ್ನೂ ರಿಜಿಸ್ಟರು ಆಗದೆ ಇರತಕ್ಕಂತಹವು ಕೊನೆಯ ಪಕ್ಷ ಮುಂದಿನ ಐದನೇ ಯೋಜನೆ ಅವದಿಯೊಳಗೆ ಒಂದೊಂದು ಜಿಲ್ಲೆಯಲ್ಲೂ ಒಂದುನೂರು ಸಣ್ಣ ಕೈಗಾರಿಕೆ ಘಟಕಗಳು ಇರಬೇಕು, ಅದರಂತೆ ಪ್ರಾರಂಭ ಮಾಡಬೇಕೆಂದೂ ಯೋಚನೆ ಇದೆ. ಇವೊತ್ತು ನಮಗೆ ಬಂದಿರುವ ತೊಂದರೆ ಏನೆಂದರೆ ನಮ್ಮ ಸದನದ ಸದಸ್ಯರು ಹಾಗೂ ನನ್ನ ಸ್ನೇಹಿತರೂ ಆದ ಶ್ರೀ ತಾವರೆಯವರು ನನ್ನಲ್ಲಿ ಬಂದು ಒಂದು ಮಾತು ಹೇಳಿದರು. ನಾನು ರಾಜಕೀಯದಲ್ಲಿ ಇದ್ದರೂ ಅದನ್ನು ಬಿಟ್ಟು ನಾನೇ ಸ್ವಂತವಾದ ಒಂದು ಕೈಗಾರಿಕೆ ಉದ್ಯಮ ಹಾಕಬೇಕೆಂದು ಇದ್ದೇನೆ. ಇದಕ್ಕಾಗಿ ಯಾವ ರೀತಿಯಾದ ಕೈಗಾರಿಕೆಯನ್ನು ಸರಕಾರದವರು ಸಲಹೆ ಮಾಡುತ್ತಾರೆ ಎಂದು ನನ್ನನ್ನು ಕೇಳಿದರು. ನನಗೆ ತಿಳಿದಮಟ್ಟಿಗೆ ಎಲ್ಲಿ ಯಾವ ಕೈಗಾರಿಕೆ ಮಾಡುವುದಕ್ಕೆ ಸಾಧ್ಯ ಎನ್ನುವುದಕ್ಕೆ ಉತ್ತರ ಕೊಡುವುದು ಆಗಲಿಲ್ಲ. ಏಕೆಂದರೆ ನಮ್ಮ ಇಲಾಖೆಯಲ್ಲಿ ಯಾವ ಯಾವ ರೀತಿಯ ಕೈಗಾರಿಕೆಗಳನ್ನು ಮಾಡಬೇಕು ಎನ್ನುವುದಕ್ಕೆ ಸಾಕಾದಷ್ಟು ಅಂಕೆ ಅಂಶಗಳು ಇಲ್ಲ. ಜೊತೆಗೆ ಸಣ್ಣ ಕೈಗಾರಿಕೆಗಳ ಬಗ್ಗೆ ಪ್ರಾಜೆಕ್ಟ್ ರಿಪೋರ್ಟನ್ನು ತಯಾರು ಮಾಡಲು ನಮ್ಮಲ್ಲಿ ಸಾಕಾದಷ್ಟು ಎಕ್ಸ್‌ಪರ್ಟುಗಳು ಇಲ್ಲ. ಸಾಕಾದಷ್ಟು ವ್ಯವಸ್ಥೆ ಮಾಡಲು ಸರಿಯಾದ ಸವಲತ್ತುಗಳೂ ಇಲ್ಲ. ಆದುದರಿಂದ ಸರಕಾರದವರು ಯಾವುದಾದರೂ ಒಂದು ಇಲಾಖೆ ರಿಪೋರ್ಟು ಬೇಕಾದರೆ ಮೊದಲು ಮೈಸೂರು ಸ್ಟೇಟ್ ಇಂಡಸ್ಟ್ರಿಯಲ್ ಡೆವಲಪ್ ಮೆಂಟ್ ಕಾರ್ಪೊರೇಷನ್‌ಗೆ ಹೋಗಬೇಕು. ಅವರಕಡೆ ಇಲ್ಲ ಎಂದರೆ ಸ್ಮಾಲ್‌ಸ್ಕೇಲ್ ಇಂಡಸ್ಟ್ರಿಸ್ ಕಾರ್ಪೊರೇಷನ್‌ಗೆ ಹೋಗಬೇಕು. ಇಲ್ಲವೇ ಸ್ಮಾಲ್ ಇಂಡಸ್ಟ್ರೀಸ್ ಸರ್ವಿಸ್ ಇನ್‌ಸ್ಟಿಟ್ಯೂಟ್ ಇವರ ಕಡೆ ಹೋಗಬೇಕಾಗುತ್ತದೆ. ಈ ರೀತಿ ಗರುಡಗಂಭ ಸುತ್ತುವುದನ್ನು ತಪ್ಪಿಸಬೇಕೆಂದು ಸರಕಾರ ಇದಕ್ಕೆ ವಿರಾಮ ಹಾಕಿದೆ. ಇನ್ನು ಮುಂದೆ ರಾಜ್ಯದಲ್ಲಿ ಇರುವ ಸ್ಟೇಟ್ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್, ಸ್ಮಾಲ್ ಇಂಡಸ್ಟ್ರೀಸ್ ಕಾರ್ಪೊರೇಷನ್, ಮತ್ತು ಇಂಡಸ್ಟ್ರಿಯಲ್ ಇನ್‌ಸ್ಟಿಟ್ಯೂಟು ಇವು ಮೂರು ಇಲಾಖೆಗಳನ್ನು ಸಮನ್ವಯಗೊಳಿಸಿ ಒಂದೇ ಸ್ಥಳದಲ್ಲಿ ಪ್ರಾಜೆಕ್ಟ್ ರಿಪೋರ್ಟು ದೊರೆಯುವಂತೆ ಏರ್ಪಾಡು ಮಾಡಬೇಕೆಂದು ಸರಕಾರ ಉದ್ದೇಶ ಮಾಡಿದೆ. ಮತ್ತು ತಾತ್ವಿಕವಾಗಿ ಸರಕಾರ ಇದನ್ನು ಮಾಡಬಹುದು ಎಂದು ನಿರ್ಧಾರವನ್ನು ತೆಗೆದುಕೊಂಡಿದೆ. ಇದಕ್ಕಾಗಿ ನಮಗೆ ಒಳ್ಳೆಯ ಟೆಕ್ನಿಷಿಯನ್‌ಗಳು, ಎಕ್ಸ್‌ಪರ್ಟುಗಳು ಎಂದರೆ Experts in the field of Chemical Industries, Experts in the field of Electronic Industries, Experts in the field of Engineering I dustries, and Experts in other fields ಬೇಕಾಗಿದ್ದಾರೆ.

ನಮ್ಮ ಇಲಾಖೆಯಲ್ಲಿ ರಿಕ್ರೂಟು ಮಾಡಿಕೊಂಡು ಯಾವಯಾವ ಭಾಗದಲ್ಲಿ ಸಣ್ಣ ಕೈಗಾರಿಕೆ ಗಳನ್ನು ಸ್ಥಾಪನೆ ಮಾಡಬೇಕೆಂದು ಸರಕಾರ ಇಷ್ಟಪಡುತ್ತದೋ ಅಂತಹ ಕಡೆಗಳಲ್ಲಿ ಒಂದು ಪ್ರಾಜೆಕ್ಟು ರಿಪೋರ್ಟನ್ನು ತಯಾರು ಮಾಡಿ ಅದನ್ನು ಮುಂದೆ ಕೈಗಾರಿಕೆಮಾಡಬೇಕೆಂದು ಬರುವ ಪ್ರಾಸ್‌ಪೆಕ್ಟೀವ್ ಎಂಟರ್‌ಪ್ರನರ್ಸ್‌ಗಳಿಗೆ ಕೊಡಬೇಕೆಂದು ಸರಕಾರ ಉದ್ದೇಶಿಸಿದೆ. ಮತ್ತು ಇದರ ಬಗ್ಗೆ ಸರಕಾರ ತೀರ್ಮಾನ ಮಾಡಿದೆ. ಇಂತಹ ಎಕ್ಸ್‌ಪರ್ಟುಗಳನ್ನು ಪರ್ಮನೆಂಟಾಗಿ ತೆಗೆದು ಕೊಳ್ಳಬೇಕೆಂದೇನೂ ಇಲ್ಲ. We can buy their services on contractual basis for a period of three or four years. They are known to be acknowledged experts in their own field. In india there is no dearth for Experts. ಈಗ ಇಂತಹ ಎಕ್ಸ್‌ಪರ್ಟು ಇಂಜಿನಿಯರುಗಳು ಪರದೇಶಗಳಲ್ಲಿ ಎಂದರೆ, ಅಮೆರಿಕಾ, ಕ್ಯಾನಡಾ

(ಶ್ರೀ ಎಸ್. ಎಂ. ಕೃಷ್ಣ)

ಆಸ್ಟ್ರೇಲಿಯಾ ಹಾಗೂ ರಷ್ಯಾ ದೇಶಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ನಾನು ಹೊರದೇಶಗಳಿಗೆ ಹೋಗಿದ್ದಾಗ ಇಂತಹ ಎಕ್ಸ್‌ಪರ್ಟುಗಳನ್ನು ನೋಡಿದಾಗ ಅವರೆಲ್ಲಾ ನನಗೆ ಆಗ ತಿಳಿಸಿದರು, ನಾವು ಅಲ್ಲಿ 8000 ಡಾಲರುಗಳು ಹಾಗೂ 200 ಪೌಂಡುಗಳಷ್ಟು ವೇತನವನ್ನು ತಿಂಗಳಿಗೆ ಪಡೆಯುತ್ತಿದ್ದೇವೆ. ನಿಮ್ಮ ರಾಜ್ಯದಲ್ಲಿ ನಮ್ಮನ್ನು ಉಪಯೋಗಿಸಿಕೊಳ್ಳಲಾಗಲಿಲ್ಲ. ಪರದೇಶಗಳವರು ನಮ್ಮನ್ನು ಇಲ್ಲಿ ತೆಗೆದುಕೊಂಡಿದ್ದಾರೆ. ಈಗಲೂ ನಿಮ್ಮ ಕೈಗಾರಿಕೆಗಳಲ್ಲಿ ನಮಗೆ ಅವಕಾಶ ಕೊಟ್ಟರೆ ನಾವು ವಾಪಸು ಬರಲು ತಯಾರಾಗಿದ್ದೇವೆಂದೂ ಹೇಳಿದರು ಮತ್ತು ಅಂತಹವರನ್ನು ನಾವು ಇಲ್ಲಿಗೆ ಕರೆಸಿದರೆ ಅವರೂ ಬರಲು ಇಷ್ಟಪಡುತ್ತಾರೆ.

ನಮ್ಮ ದೇಶದಲ್ಲಿರುವ ದೊಡ್ಡ ಸ್ಟೀಲು ಕಾರ್ಖಾನೆಗಳಲ್ಲಿ ಕೂಡ ನಮ್ಮ ರಾಜ್ಯದ ಎಕ್ಸ್‌ಪರ್ಟುಗಳು ಕೆಲಸಮಾಡುತ್ತಿದ್ದಾರೆ. ಹಿಂದೆ ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲಿ ಕೆಲಸ ಮಾಡಿದವರು ಇಂದು ರೂರ್‌ಕೆಲಾ ಭಿಲ್ಲೈ ಹಾಗೂ ದುರ್ಗಾಪುರ ಸ್ಟೀಲ್ ಪ್ಲಾಂಟುಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರೆಲ್ಲ ನಮ್ಮ ರಾಜ್ಯದ ಕನ್ನಡಿಗರು ಪಬ್ಲಿಕ್ ಅಕೌಂಟು ಸಮಿತಿಯ ಚೇರ್ಮನ್ನರಾದ ಮಾನ್ಯ ಶ್ರೀ ದೇವೇಗೌಡರವರು ಹಾಗೂ ಶ್ರೀ ಕೆ. ಹೆಚ್. ರಂಗನಾಥರವರೂ ಕೂಡ ಈಚೆಗೆ ಅಲ್ಲಿಗೆ ಹೋಗಿ ಅಲ್ಲಿ ನಮ್ಮ ಜನ ಕೆಲಸ ಮಾಡುತ್ತಿರುವುದನ್ನು ನೋಡಿಕೊಂಡು ಬಂದಿದ್ದಾರೆ. ಇವರೆಲ್ಲಾ ನಮ್ಮ ರಾಜ್ಯಕ್ಕೆ ಬರಲು ಇಷ್ಟಉಳ್ಳವರಾಗಿದ್ದಾರೆ.

All of them have expressed unconditional desire to come back to Mysore if we only provide an opportunity to them. I am only hoping that this giant Vijayanagar Steel complex will provide the needed opportunity for all Engineers to come back to Mysore State. ಇದರ ಪ್ರಸ್ತಾವನೆ ಮಾಡತಕ್ಕ ಕಾಲದಲ್ಲಿ ನಮ್ಮ ರಾಜ್ಯ ಒಂದು ಅದೃಷ್ಟವಂತ ರಾಜ್ಯ ಎಂದು ಹೇಳಬೇಕಾಗಿದೆ. ನಮ್ಮ ರಾಜ್ಯದಲ್ಲೇ ಕಬ್ಬಿಣದ ಕಾರ್ಖಾನೆ ಇರುವುದು. ಇದಕ್ಕೆ ಹೊಂದಿಕೊಂಡಂತೆ ಈಗ ವಿಜಯನಗರದ ಉಕ್ಕಿನ ಕಾರ್ಖಾನೆಯೂ ಬರುತ್ತಿದೆ. ಉಕ್ಕಿನ ಕೈಗಾರಿಕೆಯ ಮಟ್ಟಿಗೆ ಹೇಳಬೇಕಾದರೆ ಈಗ ಆಂಧ್ರದಲ್ಲಿರುವ ವಿಶಾಖಪಟ್ಟಣದಲ್ಲಿ ಉಕ್ಕಿನ ಕಾರ್ಖಾನೆ ಇಲ್ಲ, ತಮಿಳುನಾಡಿನಲ್ಲಿರುವ ಸೇಲಂನಲ್ಲಿ ಉಕ್ಕಿನ ಕಾರ್ಖಾನೆ ಇಲ್ಲ. ನಮ್ಮ ರಾಜ್ಯ ಒಂದರಲ್ಲೇ ಇಂತಹ ಒಂದು ಉಕ್ಕಿನ ಕಾರ್ಖಾನೆ ಭದ್ರಾವತಿಯಲ್ಲಿದೆ. ಮುಂದೆ ನಮ್ಮ ರಾಜ್ಯದಲ್ಲಿ ವಿಜಯನಗರದ ಉಕ್ಕಿನ ಕಾರ್ಖಾನೆ ಆರಂಭವಾದಾಗ ನಮಗೆ ಸುಮಾರು ಇಪ್ಪತ್ತೈದು ಸಹಸ್ರ ಜನ ಇಂಜನೀಯರುಗಳು ಹಾಗೂ ಎಕ್ಸ್‌ಪರ್ಟುಗಳು ಹಾಗೂ ಇಂಜನೀಯರಿಂಗು ಗ್ರಾಜುಯೇಟುಗಳು ಬೇಕಾಗುತ್ತಾರೆ ಮತ್ತು ಡಿಪ್ಲೋಮಾ ಹೋಲ್ಡರುಗಳು ಬೇಕಾಗುತ್ತಾರೆ ಹಾಗೂ ಇಂಡಸ್ಟ್ರಿಯಲ್ ಟ್ರೇನಿಂಗ್ ಸರ್ಟಿಫಿಕೇಟು ಪಡೆದಿರುವಂತಹ ಯುವಕರು ಬೇಕಾಗುತ್ತಾರೆ. ಇವರನ್ನೆಲ್ಲಾ ನಾವು ರೆಕ್ರೂಟು ಮಾಡುವಾಗ ಯಾವ ರೀತಿ ನಾವು ಮಾಡಬೇಕಾಗುತ್ತೆ ಎಂದರೆ ಎರಡು ಅರ್ಜಿಗಳು ಸರಕಾರಕ್ಕೆ ಬಂದಾಗ ಒಂದು ಟ್ರೇನ್ಡ್ ಆಗಿರುವವರದೂ ಬರುತ್ತದೆ ಮತ್ತು ಅನ್‌ಟ್ರೇನ್ಡ್ ಆಗಿರವವರದೂ ಬರುತ್ತದೆ. ಇದರಲ್ಲಿ ನಮ್ಮ ಪಾಲಿಸಿ ಪ್ರಕಾರ ಮೊದಲಿಗೆ ಟ್ರೇನಿಂಗು ಅರ್ಹತೆ ಪಡೆದಿರುವವರನ್ನು ಮೊದಲು ರಿಕ್ರೂಟು ಮಾಡಿ ಆ ನಂತರ ಅನ್‌ಟ್ರೇನ್ಡ್ ಆಗಿರುವವರನ್ನು ತೆಗೆದುಕೊಳ್ಳುತ್ತೇವೆ. ಟ್ರೇನಿಂಗ್ ಆಗಿರುವವರಿಗೆ ಮೊದಲನೇ ಪ್ರಾಧಾನ್ಯತೆ ಕೊಡತಕ್ಕದ್ದು. ಮೈಸೂರಿನಲ್ಲಿರುವ ಭದ್ರಾವತಿ ಉಕ್ಕಿನ ಕಾರ್ಖಾನೆಯಲ್ಲಿ ವಿಜಯನಗರದ ಉಕ್ಕಿನ ಕಾರ್ಖಾನೆಗೆ ಬೇಕಾಗತಕ್ಕ ಇಂಜನೀಯರುಗಳು, ಡಿಪ್ಲೊಮಾ ಹೋಲ್ಡರುಗಳು ಇವರಿಗೆ ಸರಿಯಾದ ಒಂದು ತರಬೇತಿ ಕೊಟ್ಟು ಅವರನ್ನು ವಿಜಯನಗರದಲ್ಲಿರುವ ಉಕ್ಕಿನ ಕಾರ್ಖಾನೆಗೆ ತೆಗೆದುಕೊಳ್ಳುವ ಪ್ರಯತ್ನ ಮಾಡಬೇಕೆಂದು ಇದೆ. ಇದಕ್ಕಾಗಿ ಸರಕಾರದವರು ಒಂದು ಫೀಜಬಿಲಿಟಿ ರಿಪೋರ್ಟನ್ನು ಇನ್ನೆರಡು ವರ್ಷದೊಳಗೆ ಮಾಡಬೇಕೆಂದು ಇದ್ದಾರೆ. ಈ ರಿಪೋರ್ಟು ಮಾಡಿದ ಮೇಲೆ ಪ್ರಾಜೆಕ್ಟ್ ರಿಪೋರ್ಟು ಮಾಡಬೇಕಾಗುತ್ತೆ. ಒಂದು ಪ್ರಾಜೆಕ್ಟ್ ರಿಪೋರ್ಟು ಮಾಡಲು ಸುಮಾರು 12-18 ತಿಂಗಳ ಕಾಲ ಬೇಕಾಗುತ್ತದೆ. ಇವನ್ನೆಲ್ಲಾ ತಯಾರು ಮಾಡಿದ ಮೇಲೆ ಈ ಕಾರ್ಖಾನೆ ಜನರನ್ನು ರೆಕ್ರೂಟು ಮಾಡುವ ಕೆಲಸ ಆರಂಭವಾಗುತ್ತದೆ. ರೆಕ್ರೂಟುಮೆಂಟು ಸ್ಟೇಜಿನಲ್ಲಿ ಮೈಸೂರು ರಾಜ್ಯಕ್ಕೆ ಇರುವಷ್ಟು ಅನುಕೂಲ ಬೇರೆ ರಾಜ್ಯಗಳಲ್ಲಿ ಇಲ್ಲ. ಇದಕ್ಕಾಗಿ ಒಂದು ಟ್ರೇನಿಂಗ್ ಪ್ರೋಗ್ರಾಂ ಸ್ಕೀಂನ್ನು ತಯಾರು ಮಾಡಿ ವಿದ್ಯಾವಂತ ಇಂಜನೀಯರುಗಳಿಗೆ ಭದ್ರಾವತಿಯಲ್ಲಿ ತರಬೇತಿ ಕೊಡಬೇಕೆಂದು ಸರಕಾರ ಉದ್ದೇಶ ಮಾಡಿದೆ ಎಂದು ಇಲ್ಲಿ ಹೇಳಲು ಇಚ್ಛಿಸುತ್ತೇನೆ. ನಾವು ಕೂಡ ಇವರ ಬಗ್ಗೆ ಕೇಂದ್ರ ಸರಕಾರಕ್ಕೆ ಒಂದು ಸ್ಕೀಂನ್ನು ಕಳುಹಿಸಿದ್ದೆವು. ಅದನ್ನು ಕೇಂದ್ರ ಸರಕಾರದವರು ಒಪ್ಪಿ ನಮಗೆ ವಾಪಸು

ಕಳುಹಿಸಿದ್ದಾರೆ. ನಮ್ಮ ಮೈಸೂರು ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳ ಮಾಲೀಕರುಗಳಿಗೆ ಸಾಕಾದಷ್ಟು ಹಣದ ಅನುಕೂಲ ಇಲ್ಲ. ಅವರು ತರಬೇತಿ ಪಡೆದ ಗ್ರ್ಯಾಜುಯೇಟು ಇಂಜಿನೀಯರು ಗಳನ್ನು ನೇಮಕ ಮಾಡಿಕೊಳ್ಳಬೇಕಾದರೆ ಅವರಿಗೆ ತಿಂಗಳಿಗೆ 400 ರೂಪಾಯಿಗಳವರೆಗೆ ಸಂಬಳ ಕೊಡಬೇಕಾಗುತ್ತದೆ. ಅದಕ್ಕಾಗಿ ಅವರು ಈಗ ಏನು ಮಾಡುತ್ತಿದ್ದಾರೆಂದರೆ ಇತರ ಕೈಗಾರಿಕೆ ಗಳಲ್ಲಿ ಫೋರ್‌ಮನ್ ಆಗಿ ಚೆನ್ನಾಗಿ ಕೆಲಸ ಮಾಡಿರುವವರನ್ನು ನೇಮಕ ಮಾಡಿಕೊಂಡು ಕಡಿಮೆ ಸಂಬಳ ಕೊಡುತ್ತಿದ್ದಾರೆ. ಇದಕ್ಕಾಗಿ ನಾವು ಕೇಂದ್ರ ಸರಕಾರಕ್ಕೆ ಕಳುಹಿಸಿರುವ ಸ್ಕೀಂ ಪ್ರಕಾರ ಇಂತಹ ಸಣ್ಣ ಕೈಗಾರಿಕೆ ಉದ್ಯಮಗಳಲ್ಲಿ ನೇಮಿಸಿಕೊಳ್ಳುವ ಇಂಜಿನೀಯರಿಂಗ್ ಗ್ರ್ಯಾಜು ಯೇಟುಗಳಿಗೆ 400 ರೂಪಾಯಿಗಳ ಸಂಬಳ ಕೊಟ್ಟರೆ ಆಗ ಸರಕಾರದವರು ಇದರ ಅರ್ಧದಷ್ಟನ್ನು ಆ ಸಣ್ಣ ಕೈಗಾರಿಕೆಗಳಿಗೆ ಸಹಾಯ ಮಾಡಬೇಕೆಂದು ಉದ್ದೇಶ ಮಾಡಲಾಗಿದೆ. ಎಂದರೆ ಮಾಲೀಕರು ಅರ್ಧ ಸಂಬಳ ಹಾಗೂ ಸರಕಾರದವರು ಅರ್ಧಸಂಬಳ ಕೊಟ್ಟು ಆ ಕೈಗಾರಿಕೆಗಳನ್ನು ಮುಂದೆ ತರಲು ಅನುಕೂಲವಾಗುತ್ತದೆ. ಇದೇ ರೀತಿ ಡಿಪ್ಲೋಮಾ ಹೋಲ್ಡರುಗಳನ್ನು ಅಥವಾ ಐ. ಟಿ. ಐ. ಸರ್ಟಿಫಿಕೇಟು ಹೋಲ್ಡರುಗಳನ್ನು ನೇಮಕ ಮಾಡಿಕೊಂಡು ಅವರಿಗೆ 300 ರೂಪಾಯಿಗಳಷ್ಟು ಸಂಬಳ ಕೊಟ್ಟರೆ ಇದರಲ್ಲಿ ಸರಕಾರ ಅರ್ಧದಷ್ಟು ಸಂಬಳವನ್ನು ಸಹಾಯವಾಗಿ ಕೊಡುತ್ತದೆ ಮತ್ತು ಕೈಗಾರಿಕೆ ಮಾಲೀಕರು ಅರ್ಧದಷ್ಟು ಹಣ ಕೊಡುತ್ತಾರೆ. ಎಂದರೆ 150 ರೂಪಾಯಿಗಳನ್ನು ಸರಕಾರ ಕೊಡುತ್ತದೆ ಮತ್ತು ಕೈಗಾರಿಕೆ ಸಂಸ್ಥೆ ಉಳಿದ 150 ರೂಪಾಯಿಗಳನ್ನು ಕೊಡುತ್ತದೆ. ಇದರಿಂದಾಗಿ ಎಲ್ಲ ಕೈಗಾರಿಕಾ ಸಂಸ್ಥೆಗಳಲ್ಲೂ ಎಕ್ಸ್‌ಪರ್ಟು ಗಳನ್ನು ನೇಮಿಸಿಕೊಳ್ಳಲು ಒಂದು ಅವಕಾಶ ಸಿಗುತ್ತದೆ ಮತ್ತು ಅವು ಚೆನ್ನಾಗಿ ಬೆಳೆಯಲು ಅನುಕೂಲವಾಗುತ್ತದೆ ಮತ್ತು ಇದರಿಂದ ಸ್ವಲ್ಪಮಟ್ಟಿಗೆ ನಿರುದ್ಯೋಗದ ಬವಣೆಯೂ ಕಡಿಮೆ ಯಾಗುತ್ತದೆ ಮತ್ತು ಡಿಪ್ಲೋಮೊ ಹೋಲ್ಡರುಗಳನ್ನು ನೇಮಕ ಮಾಡುವ ಸಮಸ್ಯೆಯೂ ಪರಿಹಾರ ವಾದಂತಾಗುತ್ತದೆ.

ಎರಡನೇದು ಇನ್ನು ಮುಂದಿನ ಐದು ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿ ಸುಮಾರು ಇನ್ನೂರು ಇಂಜನೀಯರಿಂಗು ಷೆಡ್ಸ್‌ಗಳನ್ನು ಹಾಕಬೇಕೆಂದು ತೀರ್ಮಾನ ಮಾಡಿದ್ದೇವೆ. ಈ ವರ್ಷ 200 ಷೆಡ್ಸ್‌ಗಳನ್ನು ಹಾಕುತ್ತೇವೆ. ಕಳೆದ ವರ್ಷ 176 ಷೆಡ್ಡುಗಳನ್ನು ಹಾಕಿಯಾಗಿದೆ. ಇನ್ನು ಮುಂದಿನ ಐದನೇ ಯೋಜನೆ ಅವಧಿಯೊಳಗೆ 200 ಇಂಡಸ್ಟ್ರಿಯಲ್ ಷೆಡ್ಸ್‌ಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ಮಾಡಬೇಕೆಂದು ಇದೆ ಮತ್ತು ಎಲ್ಲೆಲ್ಲಿ ಇಂಡಸ್ಟ್ರಿಯಲ್ ಪೊಟೆನ್‌ಷಿಯಲ್ ಇದೆಯೋ ಅವನ್ನೆಲ್ಲಾ ಗುರುತಿಸಿ ಅಲ್ಲಿ ಷೆಡ್ಡುಗಳನ್ನು ಹಾಕುತ್ತೇವೆ ಎಂದು ಈ ಸಮಯದಲ್ಲಿ ತಿಳಿಸಲು ಇಚ್ಛೆ ಪಡುತ್ತೇನೆ.

ಮತ್ತೊಂದು ವಿಚಾರವೆಂದರೆ, ನಮ್ಮ ಬೆಂಗಳೂರಿನಲ್ಲಿ ಟಾಟಾ ಇನ್‌ಸ್ಟಿಟ್ಯೂಟ್ ಇದೆ. ಅದು ನಮ್ಮ ಇಡೀ ದೇಶಕ್ಕೆ ಅತ್ಯಂತ ಮಾದರಿಯಾಗಿರತಕ್ಕಂಥ ಉನ್ನತವಾದಂಥ ಸೈಂಟಿಫಿಕ್ ಇನ್ಸ್ಟಿಟ್ಯೂ ಷನ್ ಆಗಿದೆ. ಆದರೆ ಇದುವರೆಗೆ ನಮ್ಮ ಮೈಸೂರು ಸರ್ಕಾರಕ್ಕೂ ಈ ಇನ್‌ಸ್ಟಿಟ್ಯೂಷನ್‌ಗೂ ಹೆಚ್ಚಿನ ಸಂಬಂಧವಿರಲಿಲ್ಲ. ಈಗ ಧವನ್ ಅವರು ಸ್ಪೇಸ್ ರೀಸರ್ಚ್ ಕಮೀಷನ್ ಅಧ್ಯಕ್ಷರಾಗಿದ್ದಾರೆ. ಅವರು ಇಂಡಿಯನ್ ಸೈನ್ಸ್ ಇನ್‌ಸ್ಟಿಟ್ಯೂಟ್‌ನ ಡೈರೆಕ್ಟರ್ ಕೂಡ ಆಗಿದ್ದಾರೆ. ಅವರು ಮುಖ್ಯ ಮಂತ್ರಿಗಳನ್ನು, ಮಾನ್ಯ ಆರ್ಥಿಕ ಮಂತ್ರಿಗಳನ್ನು ಮತ್ತು ಇತರೇ ಮಂತ್ರಿಗಳನ್ನು ಭೇಟಿ ಮಾಡಿ ಸರ್ಕಾರಕ್ಕೂ ಈ ಸೈಂಟಿಫಿಕ್ ಇನ್‌ಸ್ಟಿಟ್ಯೂಷನ ಸೈಂಟಿಸ್ಟ್‌ಗಳಿಗೂ ಮಧ್ಯೆ ಒಂದು ರ್‍ಯಾಪೋರ್ಟ್ ಪ್ರಾರಂಭವಾಗಬೇಕು ಎಂದು ಹೇಳಿದ್ದಾರೆ. ಈಗ ಕೇಂದ್ರಸರ್ಕಾರದಲ್ಲಿ ಪ್ರಧಾನಮಂತ್ರಿಗಳಿಗೂ ಮತ್ತು ಹೆಸರಾಂಥ ವಿಜ್ಞಾನಿಗಳಿಗೂ ನೇರವಾದ ರ್‍ಯಾಪೋರ್ಟ್ ಅಂದರೆ ಸಂಪರ್ಕ ಇದೆ. ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲಿ ಇದುವರೆಗೆ ಡೈಲಾಗ್ ಇರಲಿಲ್ಲ. ಇನ್ನು ಮುಂದೆ ಸರ್ಕಾರಕ್ಕೂ ಮತ್ತು ಈ ಇನ್‌ಸ್ಟಿಟ್ಯೂಷನ್‌ಗೂ ಮಧ್ಯೆ ನೇರವಾದ ಸಂಪರ್ಕ ಇಟ್ಟುಕೊಳ್ಳಬೇಕೆಂದು ಯೋಚನೆ ಮಾಡಿ ಅದರ ಬಗ್ಗೆ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ.

ಇನ್ನು ಮೈಸೂರಿನ ಜನರಿಗೆ ಕೈಗಾರಿಕೆಗಳಲ್ಲಿ ಹೆಚ್ಚಾಗಿ ಕೆಲಸ ಸಿಗುತ್ತಿಲ್ಲ ಎಂಬುದಾಗಿ ಅನೇಕ ಮಾನ್ಯ ಸದಸ್ಯರು ಹೇಳಿದರು. ಎಲ್ಲ ಉದ್ಯಮದಾರರಿಗೂ ಕೂಡ ನಾವು ಈ ಬಗ್ಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಹೇಳಿದ್ದೇವೆ. ಅವರನ್ನು ಟೀಗೆ ಕರೆದಾಗ, ಅವರು ನಮ್ಮನ್ನು ಊಟಕ್ಕೆ ಕರೆದಾಗಲೆಲ್ಲಾ ಇದನ್ನು ಹೇಳಿಕೊಂಡು ಬಂದಿದ್ದೇವೆ. ಕೇಂದ್ರಸರ್ಕಾರದ ಉದ್ಯಮಗಳಲ್ಲಿಯೂ ಸಹ ಮೈಸೂರಿನವರಿಗೆ ಸಾಕಾದಷ್ಟು ಪ್ರಮಾಣದಲ್ಲಿ ಪ್ರಾತಿನಿಧ್ಯ ಕೊಡಬೇಕೆಂಬ ಬಗ್ಗೆ ಆಗಿಂದಾಗ್ಗೆ ಕೇಂದ್ರಸರ್ಕಾರದ ಗಮನವನ್ನು ಸೆಳೆದಿದ್ದೇವೆ. ನಮ್ಮ ಮುಖ್ಯಮಂತ್ರಿಗಳು ಸಹ ಕೇಂದ್ರಸರ್ಕಾರದ ಜೊತೆಯಲ್ಲಿ ಈ ವಿಚಾರವನ್ನು ಪ್ರಸ್ತಾಪಮಾಡುತ್ತಲೇ ಬಂದಿದ್ದಾರೆ.

(ಶ್ರೀ ಎಸ್. ಎಂ. ಕೃಷ್ಣ)

ಇನ್ನು ಭೂಗರ್ಭ ಇಲಾಖೆಯ ಬಗ್ಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಈ ಇಲಾಖೆ ಬಹಳ ಕೆಲಸ ಮಾಡಿದೆ. ಮಾನ್ಯ ಸದಸ್ಯರು ಚಿತ್ರದುರ್ಗದ ಕಡೆಗೆ ಹೋದರೆ ಅಲ್ಲಿರುವ ಕಾಪರ್ ಕಂಪನಿಯನ್ನು ಸಂದರ್ಶಿಸಬೇಕು. ಈ ಕಂಪನಿ ಸುಂದರವಾದಂಥ ಆವರಣದಲ್ಲಿ ಪ್ರಕೃತಿದತ್ತವಾದಂಥ ಆವರಣದಲ್ಲಿ ಇವೆ. ಒಂದು ಕಡೆ ಚಿತ್ರದುರ್ಗದ ಕೋಟೆಗಳು ಇನ್ನೊಂದು ಕಡೆ ಸಹ್ಯಾದ್ರಿ ಪರ್ವತಗಳು, ಇವುಗಳ ನಡುವೆ ಈ ಕಂಪನಿ ಇದೆ. ಇದಕ್ಕೆ 20 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. 1974ನೇ ಇಸವಿಯಲ್ಲಿ ಈ ಕಂಪನಿಯ ಕೆಲಸ ಪ್ರಾರಂಭವಾಗುತ್ತದೆ.

ಕೈಮಗ್ಗದ ಬಗ್ಗೆ ಮಾನ್ಯ ನಂಜಯ್ಯನಮಠ ಅವರು, ಮಾನ್ಯ ನಾಗಣ್ಣನವರು ಮಾತನಾಡಿದ್ದಾರೆ. ಮಾನ್ಯ ಭಂಗಿ ಅವರಿಗೆ ಮಾತನಾಡುವುದಕ್ಕೆ ಸಾಧ್ಯವಾಗಲಿಲ್ಲ. ಆದರೆ ಈ ಕೈಮಗ್ಗದ ನತದೃಷ್ಟ ಜನರ ಬಗ್ಗೆ ಕಳಕಳಿ ಇಟ್ಟುಕೊಂಡಿದ್ದಾರೆಂಬುದು ನನಗೆ ಗೊತ್ತು. ಸರ್ಕಾರ ಕೂಡ ಈ ಜನರ ಬಗ್ಗೆ ಸಂಪೂರ್ಣವಾದ ಸಹಾನುಭೂತಿ ಹೊಂದಿದೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಕೇವಲ ಕಣ್ಣೀರ ಸಹಾನುಭೂತಿ ಬೇಕಾಗಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಆ ರೀತಿ ತಾವು ಹೇಳುತ್ತೀರಾ ಎಂಬುದು ನನಗೆ ಗೊತ್ತಿತ್ತು. ನಮ್ಮದು ಕೇವಲ ಕಣ್ಣೀರ ಸಹಾನುಭೂತಿ ಅಲ್ಲ. ಹೃದಯಾಂತರಾಳದಿಂದ ಬರುತ್ತಿರುವ ಸಹಾನುಭೂತಿಯಾಗಿದೆ.

ಶ್ರೀ ವಾಟಾಳ್ ನಾಗರಾಜ್.—ಇನ್ನು ಅವರು ಸ್ವರ್ಗವನ್ನು ಮುಟ್ಟಬಹುದು.

ಶ್ರೀ ಎಸ್. ಎಂ. ಕೃಷ್ಣ.—ತಾವು ಯಾವ ರೀತಿ ಬೇಕಾದರೂ ತಿಳಿದುಕೊಳ್ಳಿ. ಆದರೆ ಈ ನೇಕಾರರ ವಿಚಾರದಲ್ಲಿ ಪ್ರಸ್ತಾಪ ಮಾಡುವಾಗ ಮಾತ್ರ ಸರ್ಕಾರ ಅವರ ಬಗ್ಗೆ ಬಹಳಮಟ್ಟಿಗೆ ಕಳಕಳಿಯನ್ನು ಇಟ್ಟುಕೊಂಡಿದೆ. ಅವರ ಸ್ಥಿತಿಗತಿಗಳನ್ನು ಉತ್ತಮಪಡಿಸುವುದಕ್ಕೆ ನಾವು ಕಟ್ಟುಬಿದ್ದಿದ್ದೇವೆ. ಅವರ ಒಂದು ಬೆಂಬಲದಿಂದ ಈ ಸರ್ಕಾರ ಹುಟ್ಟಿದೆ. ಆದ್ದರಿಂದ ಅವರ ಸ್ಥಿತಿಗತಿಗಳನ್ನು ಸಂಪೂರ್ಣವಾಗಿ ನಾವು ಗಮನಿಸಿದ್ದೇವೆ. ಅನೇಕ ಮಂದಿ ಸ್ನೇಹಿತರು ಇವರಿಗಾಗಿಯೇ ಒಂದು ಪ್ರತ್ಯೇಕ ಇಲಾಖೆ ಮಾಡಬೇಕು, ಡೈರೆಕ್ಟೊರೇಟ್ ಮಾಡಬೇಕು ಎಂಬ ಒತ್ತಾಯವನ್ನು ಆಗಿಂದಾಗ್ಗೆ ಮಾಡುತ್ತಲೇ ಇದ್ದಾರೆ. ನಾವು ಸಹ ಆ ಒಂದು ಒತ್ತಾಯವನ್ನು ತತ್ವಶಃ ಒಪ್ಪಿದ್ದೇವೆ. ಅವರ ಬಗ್ಗೆ ಎಲ್ಲ ರೀತಿಯ ಗಮನವನ್ನು ಸರ್ಕಾರ ಕೊಡುತ್ತದೆ. ಇವರಿಗಾಗಿಯೇ ಪ್ರತ್ಯೇಕವಾದ ಡೈರೆಕ್ಟೊರೇಟ್ ಆಂಧ್ರ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಈಗ ಇದೆ. ಅದರಂತೆ ಮೈಸೂರು ರಾಜ್ಯದಲ್ಲಿಯೂ ಏತಕ್ಕೆ ಇರಬಾರದು ಎಂಬ ಬಗ್ಗೆ ನಾವು ತೀವ್ರವಾದಂಥ ಆಲೋಚನೆಯನ್ನು ಮಾಡುತ್ತಿದ್ದೇವೆ. ಆ ಬಗ್ಗೆ ಅನತಿ ದೂರದಲ್ಲಿಯೇ ಒಂದು ನಿರ್ಧಾರ ಕೈಕೊಳ್ಳುತ್ತೇವೆಂದು ಹೇಳುತ್ತೇನೆ.

ಮಾನ್ಯ ರುದ್ರಪ್ಪನವರು ಹೊಸದುರ್ಗದಲ್ಲಿ ಒಂದು ಸಿಮೆಂಟ್ ಕಾರ್ಖಾನೆಯನ್ನು ಪ್ರಾರಂಭ ಮಾಡುವ ಬಗ್ಗೆ ಪ್ರಸ್ತಾಪ ಮಾಡಿದರು. 10—12 ವರ್ಷಗಳ ಕೆಳಗೆ ಒಬ್ಬರು ಸಿಮೆಂಟ್ ಕಾರ್ಖಾನೆಯನ್ನು ಪ್ರಾರಂಭ ಮಾಡುತ್ತೇನೆಂದು ಮುಂದೆ ಬಂದಾಗ, ನಾನು ಅವರಿಗೆ ಮಾಡಿ ಎಂದು ಹೇಳಿದ್ದಲ್ಲದೆ, ಅವರನ್ನು ದೆಹಲಿಗೆ ಕೂಡ ಕರೆದುಕೊಂಡು ಹೋಗಿದ್ದೆ. ಅಲ್ಲಿ ಸಿಮೆಂಟ್ ತಯಾರು ಮಾಡಲು ಬೇಕಾದ ಲೈಮ್ ಸ್ಟೋನ್ ಸಾಕಷ್ಟು ಇದೆ ಎಂಬುದು ಗೊತ್ತು. ಆದರೆ ಒಂದು ತೊಡಕು ಎಂದರೆ ಆ ಭಾಗಕ್ಕೆ ರೈಲ್ವೆ ಲೈನ್ ಇಲ್ಲ. ಸುಮಾರು 12—15 ಮೈಲಿಗಳವರೆಗೆ ರೈಲ್ವೆ ಲೈನ್ ಹಾಕಬೇಕಾಗಿದೆ. ಈ ಲೈನ್ ಹಾಕಿಸಿಕೊಡಲು ಮಾನ್ಯ ಹನುಮಂತಯ್ಯನವರ ಆಶೀರ್ವಾದಬೇಕು. ಈ ಕಾರ್ಖಾನೆಯನ್ನು ಪ್ರಾರಂಭ ಮಾಡಲು ಈಗಾಗಲೇ ಕೇಂದ್ರ ಸರ್ಕಾರದವರು ಒಬ್ಬರಿಗೆ ಲೆಟರ್ ಆಫ್ ಇಂಟೆಂಟ್ ಕೊಟ್ಟುಬಿಟ್ಟಿದ್ದಾರೆ. ಆದರೆ ಅವರು ಸರ್ಕಾರಕ್ಕೆ ಕಾಗದ ಬರೆದು, ಕಂಪನಿಯನ್ನು ರಿಜಿಸ್ಟರ್ ಮಾಡಿಸಲು ಹಣವಿಲ್ಲ, ಸಹಾಯ ಮಾಡಿ ಎಂದು ಕೇಳಿದ್ದಾರೆ. ಅವರ ಹತ್ತಿರ ಒಂದು ಟೈಪ್‌ರೈಟರ್ ಮತ್ತು ಕೆಲವು ಮರದ ಸಾಮಾನುಗಳನ್ನು ಬಿಟ್ಟರೆ ಬೇರೆ ಏನೂ ಇಲ್ಲ ಎಂಬುದಾಗಿ ಮಾನ್ಯ ರುದ್ರಪ್ಪನವರು ಹೇಳಿದರು.

ಶ್ರೀ ಎಂ. ವಿ. ರುದ್ರಪ್ಪ (ಹೊಸದುರ್ಗ).—ಅವರ ಹತ್ತಿರ ಫೋನ್ ಕೂಡ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಸಿಮೆಂಟ್ ಕಾರ್ಪೊರೇಷನ್ ಅವರಿಗೆ ವಹಿಸಿಕೊಟ್ಟರೆ, ಅವರೇ ಪ್ರಾರಂಭ ಮಾಡುತ್ತಾರೆ;

ಶ್ರೀ ಎಸ್. ಎಂ. ಕೃಷ್ಣ.—ಅವರು ಈಗಾಗಲೇ ಸೇಡಂನಲ್ಲಿ ಒಂದನ್ನು ವಹಿಸಿಕೊಂಡು ಮಾಡುತ್ತಿದ್ದಾರೆ. ಈಗ ಲೆಟರ್ ಆಫ್ ಇಂಟೆಂಟ್ ಬೇರೆಯವರ ಹೆಸರಿನಲ್ಲಿ ಇರುವುದರಿಂದ, ನಾವು ಏನೂ ಮಾಡುವುದಕ್ಕೂ ಆಗುವುದಿಲ್ಲ. ಹೊಸದಾಗಿ ಅರ್ಜಿ ಹಾಕುವುದಕ್ಕೂ ಸಹ ಬರುವುದಿಲ್ಲ.

ಶ್ರೀ ಎಂ. ವಿ. ರುದ್ರಪ್ಪ.—ಮಾನ್ಯ ಮಂತ್ರಿಗಳು ಏನೂ ಮಾಡುವುದಕ್ಕೂ ಆಗುವುದಿಲ್ಲ ಎಂದು ಹೇಳಿದರು. ಇರುವ ಪರಿಸ್ಥಿತಿಯನ್ನು ಕೇಂದ್ರಸರ್ಕಾರದ ಗಮನಕ್ಕೆ ತಂದು, ಸರ್ಕಾರದ ವತಿಯಿಂದಲೇ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ.—ಅದನ್ನು ವಿಚಾರ ಮಾಡುತ್ತೇನೆ. ಶ್ರೀಮಾನ್ ರುದ್ರಪ್ಪನವರು ಮತ್ತು ಶ್ರೀಮಾನ್ ರಾಚೇಗೌಡರು ನಮ್ಮ ರಾಜ್ಯದಲ್ಲಿರುವ ಕುರಿ ಸಂಪತ್ತಿನ ಉಪಯೋಗವನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕು ಎಂಬ ಬಗ್ಗೆ ಸೂಚನೆ ಕೊಟ್ಟರು. ನಮ್ಮ ರಾಜ್ಯದಲ್ಲಿ ನಾನಾ ತರಹದ ಕುರಿಗಳಿವೆ. ಮಾನ್ಯ ವಾಟಾಳ್ ನಾಗರಾಜ್ ಅವರಿಗೆ ಬನ್ನೂರು ಕುರಿಯ ರುಚಿ ಗೊತ್ತೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ನಾನು ಮೊನ್ನೆ ಬಳ್ಳಾರಿಯ ಕಡೆ ಪ್ರವಾಸ ಹೋದಾಗ, ಮೊಳಕಾಲ್ಮೂರು, ಚೆಳ್ಳಕೆರೆ, ಚಿತ್ರದುರ್ಗ, ರಾಯಚೂರು, ಹಟ್ಟಿ ಗೋಲ್ಡ್ ಮೈನ್ಸ್, ಹಿರಿಯೂರು ಮುಂತಾದ ಕಡೆಗಳಲ್ಲಿ ಕುರಿಯ ಸಂಪತ್ತು ಹೆಚ್ಚಾಗಿರುವುದನ್ನು ನೋಡಿದೆ. ಇಷ್ಟೊಂದು ಹೇರಳವಾದ ಕುರಿ ಸಂಪತ್ತು ನಮ್ಮ ರಾಜ್ಯದಲ್ಲಿರುವಾಗ, ಆ ಕುರಿಗಳ ತುಪ್ಪಟವನ್ನು ಅಭಿವೃದ್ಧಿ ಮಾಡುವುದಕ್ಕೆ ಏನಾದರು ಮಾಡಬೇಕೆಂದು ತೀವ್ರವಾದಂಥ ಆಲೋಚನೆ ಮಾಡುತ್ತಿದ್ದೇವೆ. ಊಲ್ ಬೋರ್ಡನ್ನು ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಇದರ ಬಗ್ಗೆ ಅನತಿದೂರದಲ್ಲಿಯೇ ಒಂದು ನಿರ್ಧಾರ ಕೈಕೊಳ್ಳುತ್ತೇವೆ.

ಮಾನ್ಯ ಜಯಪ್ರಕಾಶ್‌ನಾರಾಯಣ್, ಮಾನ್ಯ ಪುಟ್ಟದಾಸ್, ಮಾನ್ಯ ಪುಟ್ಟರಂಗನಾಥ್ ಅವರು ಡಿಮ್ಯಾಂಡ್ ಮೇಲೆ ಭಾಷಣ ಮಾಡದಿದ್ದರೂ ಸಹ ನನ್ನ ಹತ್ತಿರ ಸಂಭಾಷಣೆ ಮಾಡಿ ಚರ್ಮದ ಕೈಗಾರಿಕೆ ಬಗ್ಗೆ ಒಂದು ಬೋರ್ಡ್ ಮಾಡಬೇಕೆಂದು ಹೇಳಿದರು. ಕೇವಲ ಬೋರ್ಡ್‌ಗಳನ್ನು ಮಾಡುವ ಮಾತ್ರದಿಂದಲೇ ಚರ್ಮದ ಕೈಗಾರಿಕೆ ಒಳ್ಳೆಯ ಅಭಿವೃದ್ಧಿಯಾಗುತ್ತದೆಂದು ನಾನು ನಂಬುವುದಿಲ್ಲ. ಇದನ್ನೇ ನಂಬಿಕೊಂಡು ಜೀವನ ಮಾಡತಕ್ಕಂಥ ಜನರು ನಮ್ಮ ರಾಜ್ಯದಲ್ಲಿ ಸಹಸ್ರಾರು ಜನರು ಇದ್ದಾರೆ. ಅವರಿಗೂ ಕೂಡ ಸ್ವಲ್ಪಮಟ್ಟಿಗೆ ಸವಲತ್ತುಗಳನ್ನು ಮಾಡಿಕೊಡಬೇಕಾಗಿದೆ. ಇವೊತ್ತು ಖಾದಿ ಬೋರ್ಡ್ ಆಶ್ರಯದಲ್ಲಿ ನಾನಾ ತರಹದ ಸೊಸೈಟಿಗಳನ್ನು ಏನು ಮಾಡಿದ್ದೇವೆ, ಆ ಸೊಸೈಟಿಗಳಲ್ಲಿ ಚರ್ಮದ ಕೋಆಪರೇಟೀವ್ ಸೊಸೈಟಿಗಳು ಸಹ ಇವೆ. ಬಹುಶಃ ಅವುಗಳಲ್ಲಿ ಶೇಕಡ 90ರಷ್ಟು ಮೂಲೆಗೆ ಬಿದ್ದಿವೆ ಎಂದು ಹೇಳಿದ್ದಾರೆ. ಈ ರೀತಿ ಮೂಲೆಗೆ ಬಿದ್ದಿರುವ ಸೊಸೈಟಿಗಳ ವಿಚಾರವನ್ನು ಮರೆತು ಹೊಸದಾಗಿ ಯಾವುದಾದರೂ ಒಂದು ಸ್ಕೀಮನ್ನು ಜಾರಿಗೆ ತರಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಈಗಾಗಲೇ ನಮ್ಮ ರಾಜ್ಯದಲ್ಲಿ ಲೆದರ್ ಪೊಟೆನ್ಷಿಯಲ್ ಸರ್ವೆ ಮಾಡುವುದಕ್ಕಾಗಿ ಮದ್ರಾಸ್ ರಾಜ್ಯದ ಸೆಂಟ್ರಲ್ ಲೆದರ್ ರೀಸರ್ಚ್ ಇನ್‌ಸ್ಟಿಟ್ಯೂಟ್‌ನವರು ಸರ್ವೆ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ.

10-30 A.M.

ಸೆಂಟ್ರಲ್ ಲೆದರ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನವರು ಮೈಸೂರು ರಾಜ್ಯದ ಸರ್ವೆ ಕೆಲಸವನ್ನು ಈಗಾಗಲೇ ಪ್ರಾರಂಭ ಮಾಡಿದ್ದಾರೆ. ಅವರಿಂದ ಸರ್ವೆ ರಿಪೋರ್ಟ್ ಬಂದಮೇಲೆ ಬಡವರಿಗೆ ಮತ್ತು ಸಮಾಜದಲ್ಲಿ ಯಾರು ದುರ್ಬಲರಾಗಿದ್ದಾರೆಯೋ ಅಂಥವರಿಗೆ ಅನುಕೂಲವಾಗತಕ್ಕಂಥಾ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಕಲ್ಬುರ್ಗಿ ಎಂ. ಎಸ್. ಕೆ. ಮಿಲ್ಲಿನ ಬಗ್ಗೆ ಮಾನ್ಯ ಸದಸ್ಯರು ಬಹಳ ತೀಕ್ಷ್ಣವಾದ ಟೀಕೆಗಳನ್ನು ಮಾಡಿದ್ದಾರೆ. ಮತ್ತು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಆ ಸಲಹೆಗಳನ್ನು ಸ್ವಾಗತ ಮಾಡುತ್ತೇನೆ. ಎಂ. ಎಸ್. ಕೆ. ಮಿಲ್ಲು ಕಾರಣಾಂತರಗಳಿಂದ ನಾನಾ ವಿಧವಾದ ಬದಲಾವಣೆಗಳನ್ನು ಕಳೆದ 5—6 ವರ್ಷಗಳಲ್ಲಿ ಪಡೆದಿದೆ. ಈ ಬಗ್ಗೆ ಕೇಂದ್ರ ಸರ್ಕಾರದವರು ಒಂದು ಎನ್‌ಕ್ವೈರಿ ಸಮಿತಿಯನ್ನು ನೇಮಕ ಮಾಡಿದ್ದಾರೆ. ರಾಜ್ಯ ಸರ್ಕಾರದವರ ಸಲಹೆಯ ಮೇಲೆ ಕೇಂದ್ರ ಸರ್ಕಾರದವರು ಅದರ ಎನ್‌ಕ್ವೈರಿಯನ್ನು ಈಗಾಗಲೇ ಪ್ರಾರಂಭ ಮಾಡಿ ಆ ಎನ್‌ಕ್ವೈರಿ ರಿಪೋರ್ಟ್ ಬಂದಮೇಲೆ ಅದರ ಆಧಾರದಮೇಲೆ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ರೆಗ್ಯುಲೇಷನ್ ಆಕ್ಟ್ ಪ್ರಕಾರ ಈಗಾಗಲೇ ಅವರು ಒಂದು ವರದಿಯನ್ನು ಸಲ್ಲಿಸಿದ್ದಾರೆ. ಆ ವರದಿಯನ್ನು ಅವರು ರಾಜ್ಯಸರ್ಕಾರಕ್ಕೆ ಕಳುಹಿಸಿದ ಮೇಲೆ, ಎಂ. ಎಸ್. ಕೆ. ಮಿಲ್ಲಿನ ಸುಧಾರಣೆ

(ಶ್ರೀ ಎಸ್. ಎಂ. ಕೃಷ್ಣ)

ಆಗಬೇಕಾದರೆ ಏನು ತತ್ವಗಳನ್ನು ಅನುಸರಿಸಬೇಕು ಎನ್ನತಕ್ಕಂಥಾ ವಿಚಾರಗಳನ್ನು ಅವರು ಅವರ ವರದಿಯಲ್ಲಿ ನಮೂದಿಸಿದ್ದಾರೆಯೋ ಅವುಗಳ ಬಗ್ಗೆ ನಾವು ಸೂಕ್ತ ಕ್ರಮಗಳನ್ನು ತೆಗೆದು ಕೊಳ್ಳುತ್ತೇವೆ.

ಖಾದಿ ಬೋರ್ಡಿನ ವಿಚಾರದಲ್ಲಿ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಬಹಳ ಆಗ್ರಹ ಪೂರ್ವಕವಾಗಿ ಮಾತನಾಡಿದ್ದಾರೆ. ಖಾದಿ ಬೋರ್ಡು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎನ್ನುವ ಧಾಟಿಯಲ್ಲಿ ಕೆಲವರು ಮಾತನಾಡಿದ್ದಾರೆ ಮತ್ತು ಆ ಬಗ್ಗೆ ವೈಯ್ಯಕ್ತಿಕವಾಗಿ ನನಗೆ ಕೆಲವು ಪತ್ರಗಳನ್ನು ಕೂಡ ಅವರು ಬರೆದಿದ್ದಾರೆ. ಖಾದಿ ಬೋರ್ಡು ಕಾಂಗ್ರೆಸ್ಸಿನ ಧ್ಯೇಯ ಧೋರಣೆಗಳನ್ನು ಜಾರಿಗೆ ತರುವುದಕ್ಕೋಸ್ಕರ ರಚನೆಯಾಗಿರತಕ್ಕ ಒಂದು ಮಂಡಲಿ. ಈ ಒಂದು ಮಂಡಲಿ ಸರಿಯಾದ ರೀತಿಯಲ್ಲಿ ಕೆಲಸ ಮಾಡಿ ತನ್ನ ಉದ್ದೇಶವನ್ನು ಸಾರ್ಥಕಗೊಳಿಸತಕ್ಕ ರೀತಿಯಲ್ಲಿ ಕೆಲಸ ಮಾಡಬೇಕೆಂಬುದು ನಮ್ಮೆಲ್ಲರ ಆಶೆ. ಅದರಲ್ಲಿ ಲೋಪದೋಷಗಳು ಇದ್ದರೆ ಅವುಗಳನ್ನು ತಿದ್ದುವುದಕ್ಕೆ ಮತ್ತು ಅಂಥಾ ಗಹನವಾದ ಆಪಾದನೆಗಳೇನಾದರೂ ಕಂಡು ಬಂದರೆ ಅವುಗಳನ್ನು ಕೂಲಂಕಷವಾಗಿ ತನಿಖೆ ಮಾಡುವುದಕ್ಕೆ ನಾವು ಸಿದ್ಧರಾಗಿದ್ದೇವೆ. ಈಗ ಈ ಬಗ್ಗೆ ಬಂದಿರತಕ್ಕ ಆರೋಪಣೆಗಳನ್ನು ತನಿಖೆ ಮಾಡಿಸುತ್ತೇನೆ ಎಂದು ನಾನು ಮಾನ್ಯ ಸದಸ್ಯರಿಗೆ ಈ ಸಮಯದಲ್ಲಿ ಹೇಳುತ್ತೇನೆ.

ಕಾಯರ್ ಬೋರ್ಡ್ ವಿಚಾರದಲ್ಲಿ ಕೆಲವು ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಈ ಕಾಯರ್ ಇಂಡಸ್ಟ್ರಿಯಿಂದ ತಯಾರಾದ ವಸ್ತುಗಳನ್ನು ನಮ್ಮ ರಾಷ್ಟ್ರದಿಂದ ಹೊರದೇಶಕ್ಕೆ ಕಳುಹಿಸುವುದರಿಂದ ನಮ್ಮ ರಾಷ್ಟ್ರಕ್ಕೆ 12 ಕೋಟಿ ರೂಪಾಯಿಗಳ ಆದಾಯ ಬರುತ್ತದೆ. ಅದರಲ್ಲಿ ನಮ್ಮ ಮೈಸೂರಿಗೆ 2 ಲಕ್ಷ ರೂಪಾಯಿಗಳ ಕಾಂಟ್ರಿಬ್ಯೂಷನ್, ಕೇಂದ್ರ ಸರ್ಕಾರದಿಂದ ಬರುತ್ತದೆ. ಅದ್ದರಿಂದ ಕಾಯರ್ ಇಂಡಸ್ಟ್ರಿಯ ಬೆಳವಣಿಗೆ ಹೆಚ್ಚು ಆಗಬೇಕಾಗಿದೆ.

ಹಾಸನದ ಶ್ರೀಮಾನ್ ಹನುಮೇಗೌಡರು ಹಾಸನದ ಇಂಡಸ್ಟ್ರೀಯಲ್ ಎಸ್ಟೇಟಿನ ವಿಚಾರವನ್ನು ಹೇಳಿದ್ದಾರೆ. ಈಗಾಗಲೇ ಅಲ್ಲಿ 4 ಎಸ್ಟೇಟುಗಳು ಇವೆ. ಹಾಸನಕ್ಕೆ ಹೊಸ ಎಸ್ಟೇಟುಗಳನ್ನು ಬೇಕಾದರೆ ಕೊಡುವುದಕ್ಕೆ ನಾವು ತಯಾರಾಗಿದ್ದೇವೆ. ಎಸ್ಟೇಟ್ ಬೇಕು ಎಂದು ಹೇಳತಕ್ಕ ಉದ್ದಿಮೆದಾರರು ತಮ್ಮ ಭಾಗದ ಹಣವನ್ನು ಡಿಪಾಜಿಟ್ ಮಾಡಿದರೆ ಆ ಮೇಲೆ ನಾವು ಅಲ್ಲಿಗೆ ಇಂಡಸ್ಟ್ರಿಯಲ್ ಎಸ್ಟೇಟ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಟೆಕ್ಸ್‌ಟೈಲ್ ಮಿಲ್ ರಾಯಚೂರಿನಲ್ಲಿ ಈಗಾಗಲೇ ಒಂದು ಸ್ಪಿನ್ನಿಂಗ್ ಮಿಲ್ ಇದೆ. ಆದ್ದರಿಂದ ಮತ್ತೊಂದು ಟೆಕ್ಸ್‌ಟೈಲ್ ಮಿಲ್ಲಿನ ಅವಶ್ಯಕತೆ ಇದೆಯೋ ಅಥವಾ ಇಲ್ಲವೋ ಎಂಬುದನ್ನು ನಾವು ನೋಡಬೇಕಾಗಿದೆ.

ಅಸ್‌ಬೆಸ್ಟೋಸ್‌ಷೀಟ್ಸ್ ಕಾರ್ಖಾನೆಯನ್ನು ಹುಬ್ಬಳ್ಳಿ ಧಾರವಾಡದ ಮಧ್ಯದಲ್ಲಿ ಸ್ಥಾಪನೆ ಮಾಡುವ ಉದ್ದೇಶ ಇದೆ. ಆದ್ದರಿಂದ ಯಾರಾದರೂ ಖಾಸಗೀ ಉದ್ದಿಮೆದಾರರನ್ನು ಕರೆದು ಕೊಂಡು ಬಂದರೆ ಅವರಿಗೆ ಏನು ಸಹಕಾರ ಮತ್ತು ಸೌಲಭ್ಯಗಳು ಬೇಕೋ ಅವುಗಳೆಲ್ಲವನ್ನೂ ಕೊಡುವುದಕ್ಕೆ ಪ್ರಯತ್ನ ಮಾಡಬಹುದು.

ಬ್ರೂಯರೀಸ್ ಈಗಾಗಲೇ ಪ್ರೈವೇಟ್ ಸೆಕ್ಟಾರಿನಲ್ಲಿ ಬೆಂಗಳೂರಿನಲ್ಲಿ ಯೂನೈಟೆಡ್ ಬ್ರೂಯರೀಸ್, ಮತ್ತು ಕೋತ ಬ್ರೂಯರೀಸ್, ನಂದೀ ಬ್ರೂಯರೀಸ್ ಇವೆ. ರಾಜ್ಯದಲ್ಲಿ ಅವುಗಳ ಅವಶ್ಯಕತೆಗಳನ್ನು ಗಮನಿಸಿ ಅನಂತರ ಅವುಗಳಿಗೆ ಲೈಸೆನ್ಸ್ ಕೊಡುತ್ತೇವೆ. ಪಬ್ಲಿಕ್ ಸೆಕ್ಟಾರಿನಲ್ಲಿ ಇವುಗಳಿಗೆ ಅವಶ್ಯಕತೆ ಇದೆಯೋ ಇಲ್ಲವೋ ಈ ಬಗ್ಗೆ ನನಗೆ ಸ್ವಲ್ಪ ಅನುಮಾನ ಇದೆ.

ಡೆವಲಪ್‌ಮೆಂಟ್ ಆಫ್ ಷುಗರ್‌ಫ್ಯಾಕ್ಟರಿಯ ಬಗ್ಗೆ ಹೇಳುವುದಾದರೆ ಈಗ ಕೆಲವು ಷುಗರ್ ಫ್ಯಾಕ್ಟರಿಗೆ ಲೈಸೆನ್ಸ್ ಬಂದಿವೆ. ಅವು ನಾನಾ ಹಂತದಲ್ಲಿವೆ.

ಊದುಬತ್ತಿ ಫ್ಯಾಕ್ಟರಿಯ ಬಗ್ಗೆ ಹೇಳಬೇಕಾದರೆ ಈಗ ನಮ್ಮ ರಾಜ್ಯದಲ್ಲಿ ಕಾದಮದ್ದು, 'ಗೋಕಾಕ್, ನಗರ, ದೂದ್‌ಗಂದ್ ಮುಂತಾದ ಪ್ರದೇಶಗಳಲ್ಲಿ' ಊದುಬತ್ತಿಯ ಕೈಗಾರಿಕೆಗಳು ನಡೆಯುತ್ತಾ ಇವೆ.

ಜಾಯಿಂಟ್ ಸೆಕ್ಟಾರ್ ಉದ್ದಿಮೆಗಳ ವಿಚಾರವಾಗಿ ಹೇಳಬೇಕಾದರೆ ನಮ್ಮ ಪ್ರಧಾನ ಮಂತ್ರಿಗಳು ಜಾಯಿಂಟ್ ಸೆಕ್ಟಾರಿನಲ್ಲಿ ಉದ್ದಿಮೆಯನ್ನು ನಡೆಸುವುದಕ್ಕೆ ನಮ್ಮ ರಾಜ್ಯದಲ್ಲಿ ಮಾಗ್ಸಿಮಮ್ ಉಪಯೋಗಿಸಿಕೊಳ್ಳಬಹುದು ಎನ್ನುವ ಮಾತನ್ನು ಹೇಳಿದ್ದಾರೆ. ಜಾಯಿಂಟ್

ಸೆಕ್ಟಾರ್ ಉದ್ದಿಮೆಯಲ್ಲಿ ಸರ್ಕಾರದ ಬಂಡವಾಳ ಇರುತ್ತದೆ, ಮತ್ತು ಖಾಸಗಿಯವರ ಬಂಡ ವಾಳವೂ ಇರುತ್ತದೆ. ಎರಡು ಬಂಡವಾಳವೂ ಸೇರಿ ನಮ್ಮ ರಾಜ್ಯದಲ್ಲಿ ಸರ್ವತೋಮುಖವಾದ ಕೈಗಾರಿಕಾಭಿವೃದ್ಧಿಗೆ ನಾಂದಿಯಾಗುತ್ತದೆಂದು ನಾನು ಭಾವಿಸುತ್ತೇನೆ. ಇಷ್ಟು ಹೇಳಿ ಮಾನ್ಯ ಸದಸ್ಯರೆಲ್ಲರೂ ನಮ್ಮ ಖಾತೆಗೆ ಸಂಬಂಧಪಟ್ಟ ಬೇಡಿಕೆಗಳಿಗೆ ತಮ್ಮ ಅನುಮತಿಯನ್ನು ಕೊಡ ಬೇಕೆಂದು ನಾನು ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಪ್ರಭಾಕರ್ (ವರ್ತೂರು).—ಬೆಂಗಳೂರಿನಲ್ಲಿರತಕ್ಕ ಕೈಗಾರಿಕೆಗಳಲ್ಲಿ ಮೈಸೂರಿನ ಜನತೆಗೆ ಸಾಕಷ್ಟು ಪ್ರಾತಿನಿಧ್ಯ ಸಿಕ್ಕಿಲ್ಲ ಎಂದು ಅನೇಕರು ಹೇಳುತ್ತಿದ್ದಾರೆ. ನಮ್ಮ ಬೆಂಗಳೂರಿನ ಸುತ್ತಮುತ್ತ ಇರತಕ್ಕ ಪ್ರದೇಶಗಳಲ್ಲಿ ಅನೇಕ ನಿರುದ್ಯೋಗಿಗಳು ಇದ್ದಾರೆ. ಆದ್ದರಿಂದ ಸಾಧ್ಯ ವಾದಷ್ಟು ಮಟ್ಟಿಗೆ ಕೇಂದ್ರ ಸರ್ಕಾರದ ಮತ್ತು ಇತರ ಕೈಗಾರಿಕೆಗಳಲ್ಲಿ ನಮ್ಮ ಮೈಸೂರಿನವರಿಗೆ ಹಾಗೂ ಈಗ ಬೆಂಗಳೂರಿನ ಸುತ್ತಮುತ್ತ ಇರತಕ್ಕ ಪ್ರದೇಶಗಳಲ್ಲಿ ನಿರುದ್ಯೋಗಿಗಳೇನಿದ್ದಾರೆ ಅವರಿಗೆ ಈ ಕೈಗಾರಿಕೆಗಳಲ್ಲಿ ಕೆಲಸವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಮುಂದೆ ಆ ಕೈಗಾರಿಕೆಗಳಲ್ಲಿ ನೌಕರರನ್ನು ಕೆಲಸಕ್ಕೆ ತೆಗೆದುಕೊಳ್ಳುವಾಗ ಮೈಸೂರಿನವರಿಗೆ ಪ್ರಾತಿನಿಧ್ಯ ಸಿಕ್ಕುವಂತೆ ಪ್ರಯತ್ನವನ್ನು ಮಾಡಲಾಗುತ್ತದೆ.

† ಶ್ರೀ ಡಿ. ಕೆ ನಾಯ್ಕರ್ (ನ್ಯಾಯಾಂಗ ಮತ್ತು ಸಂಸದೀಯ ವ್ಯವಹಾರ ಶಾಖೆಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನಿನ್ನೆ ಮಂಡಿಸಿದ ಡಿಮ್ಯಾಂಡ್ ನಂ. 9 ಮತ್ತು 11ರ ಮೇಲೆ ಸಾಕಷ್ಟು ಚರ್ಚೆಗಳನ್ನು ಮಾನ್ಯ ಸದಸ್ಯರು ಮಾಡಿದ್ದಾರೆ. ಚರ್ಚೆಯ ಕಾಲದಲ್ಲಿ ಹಲವಾರು ಉಪ ಯುಕ್ತವಾದ ಸಲಹೆಗಳನ್ನು ವ್ಯಕ್ತಪಡಿಸಿದ್ದಾರೆ. ಹೀಗೆ ಅವರು ಸೂಚಿಸಿದಂತಹ ಉಪಯುಕ್ತವಾದ ಸಲಹೆಗಳನ್ನು ಸರ್ಕಾರದವರು ಗಮನದಲ್ಲಿಟ್ಟುಕೊಳ್ಳುತ್ತಾರೆ ಎನ್ನುವ ಭರವಸೆಯನ್ನು ನಾನು ನೀಡಬಯಸುತ್ತೇನೆ. ಅದೇ ರೀತಿ ಉಪಯುಕ್ತವಾದ ಸಲಹೆಗಳನ್ನು ನೀಡಿದಂತಹ ಎಲ್ಲಾ ಮಾನ್ಯ ಸದಸ್ಯರಿಗೂ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಕೆಲವು ಸದಸ್ಯರು ನ್ಯಾಯಾಲಯಗಳಲ್ಲಿ ಸಾಕಷ್ಟು ಕೇಸುಗಳು ಪೆಂಡಿಂಗ್ ಇವೆ; ಯೋಗ್ಯ ವಾದ ಕಾಲದಲ್ಲಿ ಡಿಸ್ಪೋಸಲ್ಸ್ ಆಗುತ್ತಾ ಇಲ್ಲ; ಲಿಟಿಗೆಂಟ್ ಪಬ್ಲಿಕ್ಸ್‌ಗೆ ನ್ಯಾಯ ದಾನ ಸಿಗುತ್ತಾ ಇಲ್ಲ—ಇತ್ಯಾದಿ ಟೀಕೆಗಳನ್ನು ಮಾಡಿದ್ದಾರೆ. ಈ ಬಗ್ಗೆ ನಾನಾದರೂ ಹೇಳುವುದೇ ನೆಂದರೆ ಇಂತಹ ಕೇಸುಗಳನ್ನು ಡಿಸ್ಪೋಸ್ ಮಾಡುವುದರ ಬಗ್ಗೆ ಎಷ್ಟು ಗಮನ ಸರ್ಕಾರದವರು ಕೊಡಬೇಕೋ ಅಷ್ಟು ಗಮನವನ್ನು ದಕ್ಷತೆಯಿಂದ ಕೊಟ್ಟಿದ್ದಾರೆಂದು ಹೇಳುತ್ತೇನೆ. 70-71ನೇ ಸಾಲಿನಿಂದ ಇಲ್ಲಿಯ ವರೆಗೆ 10 ಅಡಿಶನಲ್ ಕೋರ್ಟುಗಳನ್ನು ಮತ್ತು 10 ಸಪರೇಟ್ ಕೋರ್ಟು ಗಳನ್ನು ಈ ಬಗ್ಗೆ ತೆರೆಯಲಾಗಿದೆ. ಆದ್ದರಿಂದ ತಾವು ಕೋರ್ಟುಗಳನ್ನು ತೆಗೆದ ತಕ್ಷಣಕ್ಕೆ ಕೇಸುಗಳು ಡಿಸ್ಪೋಸ್ ಆಗುತ್ತವೆಂಬ ನಂಬಿಕೆಯನ್ನು ಇಟ್ಟುಕೊಳ್ಳಬಾರದು. ಏಕೆಂದರೆ ಇನ್ನೂ ಇತರ ಕಾರಣಗಳಿಂದ ಕೋರ್ಟುಗಳಲ್ಲಿ ಕೇಸುಗಳು ಪೆಂಡಿಂಗ್ ಬೀಳುವ ಸಂದರ್ಭ ಇರುತ್ತದೆ. ಅದೇನೆಂದರೆ ಈ ಕಟ್ಲೆಗಳನ್ನು ಮಾಡಿದಾಗ, ಈ ಮೂವ್‌ಮೆಂಟ್ ಆಫ್ ಕೇಸಸ್ ಏನಿವೆ, ಅವುಗಳ ಬಗ್ಗೆ ಈ ಲಿಟಿಗೆಂಟ್ ಪಬ್ಲಿಕ್‌ಗಳು ಸರಿಯಾದ ಕಾಲದಲ್ಲಿ ತಕ್ಕ ಕ್ರಮಗಳನ್ನು ತೆಗೆದುಕೊಳ್ಳದೆ ಇರುವಂತಹ ಪ್ರಸಂಗಗಳು ಅನೇಕ ಇರುತ್ತವೆ. ಆದ್ದರಿಂದ ಕೆಲವು ಕೋರ್ಟುಗಳನ್ನು ಸರ್ಕಾರ ದವರು ಈಗಾಗಲೇ ತೆರೆದಿದ್ದಾರೆ; ಇನ್ನೂ ಕೆಲವು ತೆರೆಯುವುದರ ಬಗ್ಗೆ ಯೋಚನೆ ಮಾಡುತ್ತಿ ದ್ದಾರೆ. ಮತ್ತು ಸರ್ಕಾರದವರು ಹೈಕೋರ್ಟಿನ ಶಿಫಾರಸಿನ ಮೇಲೆ ಮತ್ತು ಅಂಕಿ ಅಂಶಗಳ ಆಧಾರದ ಮೇಲೆ ಇವುಗಳನ್ನು ಮಾಡಬೇಕಾಗುತ್ತದೆ. ಆದ್ದರಿಂದ ಸದ್ಯಕ್ಕೆ ಕೋರ್ಟುಗಳ ಅವಶ್ಯಕತೆ ಎಲ್ಲೆಲ್ಲಿ ಇದೆಯೋ, ಅದನ್ನು ನೋಡಿಕೊಂಡು ಕೋರ್ಟುಗಳನ್ನು ತೆರೆಯುವುದಕ್ಕೆ ಸರ್ಕಾರದವರು ಯೋಚನೆ ಮಾಡುತ್ತಾರೆಂದು ಮಾತ್ರ ಹೇಳಬಯಸುತ್ತೇನೆ. ಇನ್ನು ಪ್ರತೀ ತಾಲ್ಲೂಕಿಗೆ ಒಂದು ಕೋರ್ಟು ತೆಗೆಯಬೇಕೆಂದು ಮಾನ್ಯ ಲಿಂಗಪ್ಪನವರು ಸೂಚನೆ ಮಾಡಿದರು. ಆದರೆ ತಾಲ್ಲೂಕಿಗೆ ಒಂದು ಕೋರ್ಟು ಕೊಟ್ಟರೆ ಬಹುಶಃ ಕೆಲವು ತಾಲೂಕುಗಳಲ್ಲಿ ಅಷ್ಟೊಂದು ಕಟ್ಲೆಗಳು ಬರದಿರುವುದರಿಂದ ಹಾಗೆ ಎಲ್ಲಾ ತಾಲೂಕುಗಳಲ್ಲಿ ಮಾಡುವುದಕ್ಕೆ ಹೋಗುವುದಿಲ್ಲ. ಮತ್ತು ಎಲ್ಲೆಲ್ಲಿ ಅವಶ್ಯವಿದೆ, ಅವುಗಳನ್ನು ನೋಡಿಕೊಂಡು, ಹೈಕೋರ್ಟಿನ ಶಿಫಾರಸಿನ ಮೇಲೆ, ಕಟ್ಲೆಗಳನ್ನು ಅನುಸರಿಸಿ, ಕಾನೂನು ಬದ್ಧವಾಗಿ ಮಾಡಬೇಕಾಗುತ್ತದೆ. ಇದರಲ್ಲಿ ಆದಷ್ಟು ತಾಲೂಕುಗಳು ಬಂದರೂ ಬರಬಹುದು.

ಇನ್ನು ಜಡ್ಜಸ್ ಪೇ ಸ್ಕೇಲ್ ಜಾಸ್ತಿ ಮಾಡಬೇಕು, ಮತ್ತು ಅವರಿಗೆ ಪ್ರೋತ್ಸಾಹ ನೀಡುವ ರೀತಿಯಲ್ಲಿ ಅದನ್ನು ಕೊಟ್ಟರೆ ಕೇಸುಗಳನ್ನು ಡಿಸ್ಪೋಸಲ್ ಮಾಡುವುದರಲ್ಲಿಯೂ ಒಂದು ಪ್ರೋಗ್ರೆಸ್

(ಶ್ರೀ ಡಿ. ಕೆ. ನಾಯ್ಕರ್)

ಮಾಡಿದ ಹಾಗೆ ಆಗುತ್ತದೆಂದು ಸಹ ಕೆಲವು ಸದಸ್ಯರು ಹೇಳಿದರು. ಅವರಿಗೆ ಪ್ರೋತ್ಸಾಹ ಕೊಡುವ ಬಗ್ಗೆ ಯೋಗ್ಯವಾದ ವೇತನವನ್ನು ಕೊಡುವುದು ಒಳ್ಳೆಯದೆಂದು ನಾನು ತಿಳಿದು ಕೊಂಡಿದ್ದೇನೆ, ಆದರೆ ಕಾನೂನು ಬದ್ಧವಾಗಿ ಅಥವಾ ಸರ್ಕಾರದ ಯೋಚನೆಯಲ್ಲಿ ಈ ಬಗ್ಗೆ ಸದ್ಯಕ್ಕೆ ಯಾವುದೇ ಪ್ರಪೋಸಲ್ಸ್ ಇಲ್ಲದಿರುವುದರಿಂದ ಯಾವುದೇ ನಿರ್ಣಯವನ್ನು ಸರ್ಕಾರ ದವರು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳುತ್ತೇನೆ.

ಇನ್ನು ನಿವೃತ್ತಿ ವಯಸ್ಸನ್ನು 58 ರ ವರೆಗೆ ಏರಿಸಬಾರದು ಎಂದು ಕೆಲವು ಸ್ನೇಹಿತರು ಖಂಡ ತುಂಡವಾಗಿ ಹೇಳಿದ್ದಾರೆ. ಅವರಿಗೆ ನಾನು ಒಂದು ಮಾತನ್ನು ಹೇಳುತ್ತೇನೆ. ಒಂದು ಕಡೆ ಅವರಿಗೆ ಯೋಗ್ಯವಾದ ವೇತನ ಕೊಟ್ಟು ಪ್ರೋತ್ಸಾಹ ಕೊಡಬೇಕೆಂದು ಹೇಳುತ್ತಾರೆ. ಇನ್ನೊಂದು ಕಡೆ 58ರ ವರೆಗೆ ಸರ್ವಿಸ್ ಕೊಡಬಾರದು ಎಂದು ಹೇಳುತ್ತಿದ್ದಾರೆ. ಈ ಬಗ್ಗೆ ನಾನು ಹೇಳುವುದು ಇಷ್ಟೆ. ಜಜ್ಜ್‌ಸ್‌ನ್ನು ರಿಕ್ರೂಟ್ ಮಾಡುವುದು ಅವರಿಗೆ 35 ವಯಸ್ಸು ಆದ ನಂತರ. ಅದರ ಮೊದಲು ಅವರು 4 ವರ್ಷದವರೆಗೆ ಪ್ರಾಕ್ಟೀಸ್ ಮಾಡಿರಬೇಕೆಂದು ಇದೆ. ಆದ್ದರಿಂದ ಅವರು 35 ವಯಸ್ಸಿನ ವರೆಗೆ ಕೋರ್ಟುಗಳಲ್ಲಿ ಎಂಗೇಜ್ ಆಗಿರುವುದರಿಂದ ನಿರುದ್ಯೋಗಿ ಗಳಾಗಿರುವುದಿಲ್ಲ. ಅದೇ ರೀತಿ ಇತರ ಇಲಾಖೆಯಲ್ಲಿ ನೇಮಕ ಮಾಡುವಾಗ 25 ವರ್ಷಗಳ ವಯಸ್ಸನ್ನು ಇಟ್ಟುಕೊಂಡಿರುತ್ತಾರೆ. ಅವರಿಗೂ ಇವರಿಗೂ 10 ವರ್ಷಗಳ ವ್ಯತ್ಯಾಸ ಇರುತ್ತದೆ. ಆದ್ದರಿಂದ ಅವರು ಮ್ಯಾಜಿಸ್ಟ್ರೇಟ್ ಆಗಿ, ಸಿವಿಲ್ ಜಜ್ಜ್ ಆಗಿ ಮತ್ತು ಡಿಸ್ಟ್ರಿಕ್ಟ್ ಜಜ್ಜ್ ಆಗಿ—ಈ ಮೂರು ಕೆಟಗರಿಯಲ್ಲಿ ಸರ್ವಿಸ್ ಮಾಡಿರುವುದರಿಂದ ಅವರ ಬುದ್ಧಿ ಇನ್ನೂ ಸೂಕ್ಷ್ಮವಾಗಿ ಬೆಳೆಯುತ್ತದೆ. ಹೀಗೆ ಅವರ ಬುದ್ಧಿ ಬಹಳ ಬೆಳೆದಾಗ ನಮ್ಮ ಸರ್ಕಾರಕ್ಕೆ ಅವರ ಸೇವೆಯಿಂದ ಬಹಳ ಉಪಯೋಗವಾಗುತ್ತದೆ. ಆದ್ದರಿಂದ ಯಾವ ವೇಳೆಯಲ್ಲಿ ಅವರ ಸರ್ವಿಸ್ ಬೇಕಾಗುತ್ತದೋ ಆ ವೇಳೆಯಲ್ಲಿ ನಾವು ಬೇಡ ಎಂದು ಹೇಳುವುದು ಸರಿಕಾಣುವುದಿಲ್ಲ. ಇನ್ನೊಂದು ಏನೆಂದರೆ, ಈ ಜುಡಿಶಿಯಲ್ ಆಫೀಸರ್ಸ್ ರಿಟೈಯರ್ ಆಗುವಾಗ 20—21 ವರ್ಷ ಟೋಟಲ್ ಸರ್ವಿಸ್ ಮಾಡಿದರೆ ಹೆಚ್ಚು. ಆದರೆ ಉಳಿದ ಇಲಾಖೆಗಳಲ್ಲಿ 30-31 ವರ್ಷ ಸರ್ವಿಸ್ ಮಾಡುವಂತಹ ಅವಕಾಶ ಇರುತ್ತದೆ. ಆದ್ದರಿಂದ ಇವರಿಗೆ ಹೆಚ್ಚು ವರ್ಷ ಸರ್ವಿಸ್ ಮಾಡಿದಂತಹ ಬೆನಿಫಿಟ್ ಸಹ ಇರುವುದಿಲ್ಲ. ಕೆಲವರು ಇವರಿಗೆ ಹೀಗೆ ಹೆಚ್ಚು ಸರ್ವಿಸ್‌ನಲ್ಲಿ ಇಟ್ಟರೆ ಅವರ ಕೈಕೆಳಗೆ ಇರುವಂತ ವರಿಗೆ ಪ್ರೊಮೋಷನ್ಸ್ ಸಿಗುವ ಸಂದರ್ಭ ಕೂಡ ಕಡಿಮೆ ಎಂದು ಹೇಳಿದರು. ನನಗೆ ಅದು ಸರಿಕಾಣುವುದಿಲ್ಲ. ಏಕೆಂದರೆ, ಅವರಿಗೆ ಸಿಗುವ ಪ್ರೊಮೋಷನ್ ಕೇವಲ ಒಂದು ಮೂರು ವರ್ಷದಲ್ಲಿ ಮತ್ತೆ ಸಿಗುತ್ತದೆ. ಸದ್ಯಕ್ಕೆ ಮೂರು ವರ್ಷ ಮಾತ್ರ ಮುಂದಕ್ಕೆ ಹೋಗುತ್ತದೆಂದು ಮಾತ್ರ ಹೇಳುತ್ತೇನೆ. ಎಲ್ಲರಿಗೂ ಇದೇ ರೀತಿಯಲ್ಲಿ ಅನ್ವಯವಾಗುವುದರಿಂದ ಅದರಿಂದ ಏನೂ ತೊಂದರೆಯಾಗುವುದಿಲ್ಲ. ಆದ್ದರಿಂದ 58ಕ್ಕೆ ವಯಸ್ಸು ಇದ್ದುದನ್ನು ಇಳಿಸಬೇಕೆಂಬುದರ ಬಗ್ಗೆ ಸರ್ಕಾರ ಯಾವ ಒಂದು ನಿರ್ಣಯವನ್ನೂ ಕೈಗೊಂಡಿಲ್ಲವೆನ್ನುವ ವಿಚಾರವನ್ನು ತಮಗೆ ತಿಳಿಸುತ್ತೇನೆ.

ಮತ್ತು ಇನ್ನೊಂದು ವಿಚಾರವೇನೆಂದರೆ, ಕೋರ್ಟುಗಳಿಗೆ ಯೋಗ್ಯವಾದ ಕಟ್ಟಡಗಳು ಇಲ್ಲ ಮತ್ತು ಕೋರ್ಟುಗಳನ್ನು ಟೆಂಪಲ್ ಆಫ್ ಜಸ್ಟಿಸ್ ಇದ್ದ ಹಾಗೆ ನೋಡಬೇಕು; ಜಡ್ಜುಗಳನ್ನು ದೇವರ ಹಾಗೆ ನೋಡಬೇಕೆನ್ನುವ ವಿಚಾರವನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಕೋರ್ಟ ಕಟ್ಟಡಗಳ ಬಗ್ಗೆ ಈ ಎಕಾನಮಿ ಮೆಜರ್ಸ್‌ನಿಂದಾಗಿ ಸಾಧ್ಯವಾದಷ್ಟು ಮಟ್ಟಿಗೆ ಅವುಗಳನ್ನು ಪೂರೈಸ ಲಾಗಲಿಲ್ಲ. ಅದೇ ರೀತಿ ಜುಡಿಷಿಯಲ್ ಕ್ವಾರ್ಟರ್ಸ್ ಬಗ್ಗೆ ಪ್ರತಿ ವರ್ಷ 50 ಸಾವಿರದಿಂದ 1 ಲಕ್ಷದ ವರೆಗೆ ಸರ್ಕಾರದವರು ಹಣವನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಈ ಎಕಾನಮಿ ಮೆಜರ್ಸ್ ನಿಂದ ಸ್ವಲ್ಪ ಅದರಲ್ಲಿ ಕಡಿತವಾಗಿದೆ. ಆದರೂ ಸಹ ಈ ವಿಚಾರದಲ್ಲಿ ಸರ್ಕಾರ ಆದಷ್ಟು ಗಮನ ವನ್ನು ಕೊಡುತ್ತದೆ ಎಂದು ಹೇಳುತ್ತೇನೆ. ಇನ್ನು ಫರ್ನಿಚರ್ ಐಟಮುಗಳು ಇದರಲ್ಲಿ ಬರುವುದಿಲ್ಲ; ಅದು ಮಿಸಲೇನಿಯಸ್‌ನಲ್ಲಿ ಬರುತ್ತದೆ.

Sri D. B. KALMANKAR (Afzalpur).—The Munsiff Magistrates at the taluka level, in many cases, are not working efficiently and there is a lot of corruption, with the result the people are losing faith in the Temple of Justice. Whether the Government will consider to devise some new methods to see that people with integrity and honesty are recruited to these posts so that people may have faith in these courts which are called Temples of Justice?

ಶ್ರೀ ಡಿ. ಕೆ. ನಾಯ್ಕರ್.—ನಾನು ಈಗಾಗಲೇ ಹೇಳಿದ ಹಾಗೆ ಬಿಲ್ಡಿಂಗ್ಸ್ ಬಗ್ಗೆ ಕೂಡ ಸರ್ಕಾರದವರು ಲಕ್ಷ ಕೊಡುತ್ತಿದ್ದಾರೆ. ಮತ್ತು ಕೋರ್ಟುಗಳ ಅಡ್ಮಿನಿಸ್ಟ್ರೇಟಿವ್ ಕಂಟ್ರೋಲ್ ಹೈಕೋರ್ಟಿಗೆ ಇರುವುದರಿಂದ ಕಾಲ ಕಾಲಕ್ಕೆ ಅವರು ಯೋಗ್ಯ ಕ್ರಮಗಳನ್ನು ತೆಗೆದುಕೊಂಡು ಸರ್ಕ್ಯುಲರ್ ಇಶ್ಯೂ ಮಾಡುತ್ತಿದ್ದಾರೆ. ಇನ್ನು ಮಾಗಡಿ ಮತ್ತು ಬಸವಕಲ್ಯಾಣದ ಕೋರ್ಟಿನ ಬಗ್ಗೆ ಮಾನ್ಯ ಸದಸ್ಯರು ಒಂದು ವಿಚಾರ ಹೇಳಿದ್ದಾರೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ, ಅದರ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತದೆ. ಇನ್ನು ಕ್ರಿಮಿನಲ್ ಪ್ರೊಸೀಜರ್ ಕೋಡಿನ 107 ಮತ್ತು 110ನೇ ಸೆಕ್ಷನ್ ಪ್ರಕಾರ ಸ್ಪೆಷಲ್ ಜುಡಿಶಿಯಲ್ ಮ್ಯಾಜಿಸ್ಟ್ರೇಟ್ ಪವರನ್ನು ಅಸಿಸ್ಟೆಂಟ್ ಕಮಿಶನರಿಗೆ ಟ್ರಾನ್ಸ್‌ಫರ್ ಮಾಡಿದ್ದಾರೆಂದು ಕೆಲವು ಸದಸ್ಯರು ಹೇಳಿದರು. ಆದರೆ ಇದು ಸೆಕ್ಯೂರಿಟಿ ಪ್ರೊಸೀಡಿಂಗ್ಸ್ ಇರುವುದರಿಂದ ಇದರಲ್ಲಿ ಎಕ್ಸಿಕ್ಯೂಟಿವ್ ಆಫೀಸರ್ಸ್ ಕೆಲಸ ಮಾಡುತ್ತಾರೆಯೇ ಹೊರತು ಜ್ಯುಡಿಶಿಯಲ್ ಪವರ್ಸ್ ಕೊಟ್ಟಿಲ್ಲವೆಂದು ಮಾತ್ರ ಹೇಳುತ್ತೇನೆ.

ಇನ್ನು ಕೋರ್ಟುಗಳಲ್ಲಿ ಕನ್ನಡ ಭಾಷೆ ಬಳಸುವ ಬಗ್ಗೆ ಸೂಚನೆಗಳು ಬಂದಿವೆ. ರಾಜ್ಯಾಂಗದ ಆರ್ಟಿಕಲ್ 348 ಪ್ರಕಾರ ಹೈಕೋರ್ಟು ಮತ್ತು ಸುಪ್ರೀಂ ಕೋರ್ಟುಗಳ ಯಾವುದೇ ಪ್ರೊಸೀಡಿಂಗ್ಸ್ ಇಂಗ್ಲೀಷ್‌ನಲ್ಲಿರತಕ್ಕದ್ದು ಎಂದು ಇದೆ. ಆದರೆ ನಮ್ಮ ಸಬೋರ್ಡಿನೇಟ್ ಕೋರ್ಟುಗಳಲ್ಲಿ ಯಾವುದಾದರೂ ಅಂದರೆ ಇಂಗ್ಲಿಷ್ ಬಿಟ್ಟು ಇತರ ಭಾಷೆಗಳಲ್ಲಿ ಮಾಡಬೇಕಾದರೆ, ಹೈಕೋರ್ಟಿನಿಂದ ಸರ್ಕಾರಕ್ಕೆ ಸಲಹೆ ಬರಬೇಕೆಂದು ಸಿವಿಲ್ ಪ್ರೊಸೀಜರ್ ಕೋಡಿನಲ್ಲಿದೆ. ಈ ಬಗ್ಗೆ ವಿಚಾರ ವಿನಿಮಯ ಮಾಡಲು ಸರ್ಕಾರ ಯೋಗ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಕೆ. ಪ್ರಭಾಕರ್.—ರೆವಿನ್ಯೂ ಪೀಪಲ್ ಎಗ್ಸಿಕ್ಯೂಟಿವ್ ಪೀಪಲ್ ಆಗಿರುತ್ತಾರೆ. ಅವರ ಸಾಮಾನ್ಯವಾಗಿ ಕೇಳಿಕೆಯಿಂದ ಕೆಲಸ ಮಾಡುವ ಜನರು. ಅವರಿಂದ Complications would be more than doing justice. ಇನ್ನು ಜುಡಿಷಿಯಲ್ ಪವರ್ ಸಬ್ ಡಿವಿಷನ್ ಆಫೀಸರಿಗೆ ಇರುತ್ತದೆ. ಆದರೂ ಅದನ್ನು ಅಲ್ಲಿ ಎಗ್ಸಿಕ್ಯೂಟ್ ಮಾಡುವುದಕ್ಕಾಗುವುದಿಲ್ಲ. ಇದನ್ನು ಜುಡಿಷಿಯಲ್ ಡಿಪಾರ್ಟ್‌ಮೆಂಟಿಗೆ ಕೊಡುವುದು ಮೇಲು. ಈಗ ರೆವಿನ್ಯೂ ಅಧಿಕಾರಿಗಳಿಗೆ ಇರುವ ಜುಡಿಷಿಯಲ್ ಪವರ್ ಏನಿದೆಯೋ ಅದನ್ನು ತೆಗೆದಿದ್ದಾರೆ. ಅದರ ಸೋಗು, ನೆರಳು ಮಾತ್ರ ಈಗ ಇವೆ. ಅದು ಈಗ ವೀಕ್ ಆಗುತ್ತಿದೆ. ಅವರ ಮನಸ್ಸಿನಲ್ಲಿರುವ ಹಾಗೆ ಜುಡಿಯಲ್ ಪವರ್ ಏನಿದೆಯೋ ಸಬ್ ಡಿವಿಷನ್ ಆಫೀಸ್ ಮಟ್ಟದಲ್ಲಿ ಅದನ್ನು ತೆಗೆಯುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ ಇದೆ. ಆ ಬಗ್ಗೆ ಸರ್ಕಾರದವರು ಸೂಕ್ತ ಆಲೋಚನೆ ಮಾಡಬೇಕು.

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಸದಸ್ಯರು ಸೂಚಿಸಿದ ಹಾಗೆ ಯಾವುದೇ ಪ್ರೊಪೋಸಲ್ ಇದರ ಬಗ್ಗೆ ಇಲ್ಲದೇ ಇರುವುದರಿಂದ ಮುಂದೆ ಏನಾದರೂ ಈ ಪ್ರೊಪೋಸಲ್ಸ್ ಬಂದರೆ ಯೋಗ್ಯವಾಗಿ ವಿಚಾರಿಸಲಾಗುವುದು.

ಇನ್ನು ಅಪ್ಪರ್ ಹೌಸನ್ನು ಅಬಾಲಿಷ್ ಮಾಡಬೇಕೆಂದು ನನ್ನ ಸ್ನೇಹಿತರು ಹೇಳಿದ್ದಾರೆ. ಆ ಬಗ್ಗೆ ಇಷ್ಟು ಮಾತ್ರ ಹೇಳಬಲ್ಲೆ. ಈ ವಿಷಯ 1970ನೇ ಇಸವಿಯಲ್ಲಿ ಹಿಂದಿನ ಸರ್ಕಾರದ ಮುಂದೆ ಬಂದಿತ್ತು. ಆ ಆಟ್ಟಿಟ್ಯೂಡ್ ಏನೋ ಒಳ್ಳೆಯದು. ಇದನ್ನು ಕ್ಯಾಬಿನೆಟ್‌ನಲ್ಲಿ ರಿಕಾರ್ಡ್ ಮಾಡುವ ವಿಷಯದಲ್ಲಿ ಅಪ್ಪರ್ ಹೌಸ್ ಅಬಾಲಿಷ್ ಮಾಡುವುದು ಸರಿಯಲ್ಲವೆಂದು 1970ನೇ ಇಸವಿಯಲ್ಲಿ ಹಿಂದಿನ ಸರ್ಕಾರ ಒಂದು ನಿರ್ಣಯವನ್ನು ತೆಗೆದುಕೊಂಡಿದೆ. ಈಗಲೂ ಕೂಡ ಅದು ಇದೇ ರೀತಿಯಲ್ಲಿ ಮುಂದುವರಿಸಬೇಕೆಂದು ಸರ್ಕಾರದ ಧೋರಣೆ ಇದೆ. ನನ್ನ ಬಗ್ಗೆ ಸಮರ್ಥನೆ ಮಾಡುವುದಾದರೆ, ಮೈನಾರಿಟಿ ಜನಗಳಿಗೆ, ಟೀಚರ್ಸ್‌ಗೆ, ಗ್ರಾಜುಯೇಟ್‌ಗಳಿಗೆ ವಿದ್ಯಾ ಪರಿಣತರಿಗೆ ಮುಂತಾದವರಿಗೆ ಸಾರ್ವಜನಿಕ ಚುನಾವಣೆಗಳಲ್ಲಿ ಭಾಗವಹಿಸುವುದಕ್ಕೆ ಹೆಚ್ಚು ಕಡಿಮೆ ಸಾಕಷ್ಟು ಅವಕಾಶ ಇಲ್ಲದೇ ಇರುವುದರಿಂದ, ಈ ವರ್ಗದವರನ್ನೇ ಕಾನೂನು ಸಂಬಂಧವಾಗಿ ಪ್ರತ್ಯೇಕ ಒಂದು ಭಾಗವಾಗಿ ತೆಗೆದುಕೊಂಡು ಅವರು ಯೋಗ್ಯವಾಗಿ ಡಿಸ್‌ಕಷನ್ ಮಾಡುವಂಥ ಸಂದರ್ಭ ಒದಗಿ ಬರಲಿ ಎಂಬ ಉದ್ದೇಶದಿಂದ ಇದು ಇರುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).— ಇದರ ಬಗ್ಗೆ ಈ ಸಭೆಯಲ್ಲಿ ಒಂದು ನಿರ್ಣಯ ಮಾಡಿ ಓಟಿಗೆ ಹಾಕುತ್ತೀರಾ? ನಾಮಕರಣಗಳ ಬಗ್ಗೆ ಏನೂ ಹೇಳಲಿಲ್ಲ.

ಶ್ರೀ ಡಿ. ಕೆ. ನಾಯ್ಕರ್.—ನಾಮಕರಣಗಳ ಬಗ್ಗೆ ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪನವರು ಕಟುವಾದ ಟೀಕೆಗಳನ್ನು ಮಾಡಿದ್ದಾರೆ. ಇದರಲ್ಲಿ ಲಿಟರೇಚರ್ ಮತ್ತು ಜರ್ನಲಿಜಂ ಅವರಿಗೆ ಪ್ರಾಧಾನ್ಯತೆ ಕೊಡುತ್ತೇವೆ. ನಮ್ಮ ವಿಧಾನ ಪರಿಷತ್ತಿನಲ್ಲಿ ಶ್ರೀಮತಿ ಕಮಲಾನಿ ಎಂಬುವರು ಬಿ.ಎ.ಎಲ್.ಎಲ್.ಬಿ. ಮತ್ತು ಅವರು ಜರ್ನಲಿಸ್ಟ್ ಆಗಿದ್ದಾರೆ. ಅದಕ್ಕಾಗಿ ಅವರನ್ನು ಸರ್ಕಾರದ

(ಶ್ರೀ ಡಿ. ಕೆ. ನಾಯ್ಕರ್)

ವರು ನಾಮಿನೇಟ್ ಮಾಡಿದ್ದಾರೆ ಯಾರು ನಮ್ಮ ರಾಷ್ಟ್ರಕ್ಕಾಗಿ ದುಡಿದ್ದಾರೆ, ಯಾರು ಯೋಗ್ಯ ಹೆಸರನ್ನು ಪಡೆದಿದ್ದಾರೆ, ಅವರಿಗೆ ಕಾನೂನು ಪ್ರಕಾರ ನಾಮಿನೇಟ್ ಆಗಲು ಅರ್ಹತೆಗಳಿದ್ದರೆ ಆ ಎಲ್ಲಾ ಅರ್ಹತೆಗಳಿವೆಯೇ ಎಂಬುದನ್ನು ನೋಡಿ ಅಂತಹವರನ್ನು ನಾಮಿನೇಟ್ ಮಾಡಲಾಗುತ್ತದೆ.

ಇನ್ನು ಎಲೆಕ್ಷನ್ ಎಕ್ಸ್‌ಪೆಂಡಿಚರ್ ಕಡಿಮೆ ಮಾಡಬೇಕೆಂಬ ಬಗ್ಗೆ ಮಾನ್ಯ ಶ್ರೀ ಅರುಮ್ಗಗಂ ಅವರು ಕೆಲವು ಮಾತುಗಳನ್ನು ಹೇಳಿದ್ದಾರೆ. ಈ ಸಂದರ್ಭದಲ್ಲಿ ಎಲೆಕ್ಷನ್ ಮ್ಯಾಟರ್ಸ್, ಅಂದರೆ ಕಂಟ್ರೋಲ್ ಅಂಡ್ ಪ್ರಿಪರೇಷನ್ ಅಫ್ ವೋಟರ್ಸ್ ಲಿಸ್ಟ್ಸ್—ಈ ಕೆಲಸವನ್ನು 324 ಸೆಕ್ಷನ್ನಿನ ಕಾನೂನು ಪ್ರಕಾರ ಎಲೆಕ್ಷನ್ ಕಮಿಷನ್ನಿಗೆ ಬಿಟ್ಟು ಕೊಡದೆ ಇದರ ಬಗ್ಗೆ ಪಾರ್ಲಿಮೆಂಟ್ ಕಾನೂನು ಮಾಡುವ ಅಧಿಕಾರವಿದೆ. ರೆಪ್ರಸೆಂಟೇಷನ್ ಅಫ್ ಪೀಪಲ್ಸ್ ಆಕ್ಟ್ ಸೆಕ್ಷನ್ 50ರಲ್ಲಿ ಕಾನೂನುಗಳನ್ನು ಸಿದ್ಧಮಾಡಿದೆ. ಆ ಕಾನೂನುಗಳ ಪ್ರಕಾರ ಸೆಕ್ಷನ್ 21ರಲ್ಲಿ ಕಾನೂನು ಇದ್ದ ವ್ಯಾಪ್ತಿಯಲ್ಲಿ ಲಾ ಕಮಿಷನ್ ಪೀರಿಯಾಡಿಕಲ್ಲಾಗಿ ಲಿಸ್ಟನ್ನು ರಿವೈಜ್ ಮಾಡುವ ಅಭಿಪ್ರಾಯವನ್ನು ಇಟ್ಟುಕೊಂಡಿದೆ. ಅವರು ಎಲೆಕ್ಷನ್ನಿನಲ್ಲಿ ಎಕ್ಸ್‌ಪೆಂಡಿಚರ್ ಏನು ಇರಬೇಕೆಂಬ ಬಗ್ಗೆ ಒಂದು ನಿರ್ದಿಷ್ಟವಾಗಿ ಕಾನೂನು ಪ್ರಕಾರ ತೋರಿಸಿದ್ದಾರೆ. ಆದ್ದರಿಂದ ಯಾವತ್ತು ಅವಶ್ಯಕವಾದಂಥ ಕಾನೂನುಗಳನ್ನು ಪಾರ್ಲಿಮೆಂಟ್ ಮಾಡಿರುತ್ತದೋ ಅದರ ಬಗ್ಗೆ ನಮ್ಮ ಸ್ಟೇಟ್ ಲೆಜಿಸ್ಲೇಷನ್ ಯಾವುದೇ ಎನಾಕ್ಟ್‌ಮೆಂಟ್ ಮಾಡದೇ ಇರುವುದರಿಂದ, ಆ ಬಗ್ಗೆ ನಾನು ಇಲ್ಲ ಏನು ಹೇಳಲಿ? ಅದರ ಬಗ್ಗೆ ಎಕ್ಸ್‌ಪೆಂಡಿಚರ್ ಏನಿರಬೇಕೆಂಬುದನ್ನು ರೂಲ್ಸನಲ್ಲಿ ಕೊಟ್ಟಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ವಿಧಾನಮಂಡಲದ ವರದಿಗಾರರ ಸಂಬಳ ಸಾರಿಗೆ ಹಾಗೂ ಕನ್ನಡ ವರದಿಗಾರರಿಗೆ ಟೈಪಿಂಗ್ ಅಲೋಯನ್ಸ್ ಕೊಡುವ ವಿಷಯದ ಬಗ್ಗೆ ಮಾನ್ಯ ಮಂತ್ರಿಗಳು ಏನೂ ಹೇಳಲಿಲ್ಲ. ಅದನ್ನು ತಿಳಿಸಬೇಕು.

ಶ್ರೀ ಡಿ. ಕೆ. ನಾಯ್ಕರ್.—ರಿಪೋರ್ಟರ್ಸ್ ಪೇ ಸ್ಕೇಲ್ಸ್ ಹಾಗೂ ಇತರ ಅಲೋಯನ್ಸಸ್ ಬಗ್ಗೆ ಏನೇನು ಪ್ರೋಪೋಸಲ್‌ಗಳು ಮಾನ್ಯ ಸ್ಪೀಕರ್ ಅವರ ಕಡೆಯಿಂದ ಬರುತ್ತವೆಯೋ ಅದರ ಬಗ್ಗೆ ಸರ್ಕಾರದವರು ಯೋಗ್ಯ ಕ್ರಮವನ್ನು ತೆಗೆದುಕೊಳ್ಳುತ್ತಾರೆಂದು ನಾನು ಆಶ್ವಾಸನೆ ಕೊಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ. (ಹೊಳೇನರಸೀಪುರ).—ಅದು ನಿಮ್ಮ ಹಿಡಿತದಲ್ಲಿಯೇ ಇದೆ ನೀವೇ ಪ್ರೊಪೋಸಲ್ಸ್ ಏನೆಂಬುದನ್ನು ತಿಳಿದು ತಕ್ಕ ಕ್ರಮವನ್ನು ತೆಗೆದುಕೊಂಡರೆ ಒಳ್ಳೆಯದು.

ಶ್ರೀ ಡಿ. ಕೆ. ನಾಯ್ಕರ್.—ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ಅಧಿಕೃತ ವರದಿಗಾರರಿಗೆ ಮಹಾರಾಷ್ಟ್ರದಲ್ಲಿ ಕೊಟ್ಟಿರುವ ಹಾಗೆ ಸಂಬಳ ಸಾರಿಗೆಗಳನ್ನು ಮತ್ತು ಅಲೋಯನ್ಸ್‌ಗಳನ್ನು ಕೊಡಿ.

ಶ್ರೀ ಡಿ. ಕೆ. ನಾಯ್ಕರ್.–ಸ್ಪೀಕರ್ ಅವರ ಕಡೆಯಿಂದ ಪ್ರೊಪೋಸಲ್ಸ್ ಬಂದ ಕೂಡಲೇ ಅದರಂತೆ ಅವರಿಗೂ ಕೊಡುತ್ತೇವೆ. ಅದರ ಬಗ್ಗೆ ಜಾಗ್ರತೆಯಾಗಿ ಪರಿಶೀಲನೆ ಮಾಡುತ್ತೇವೆ.

ಇನ್ನು ಸದಸ್ಯರಿಗೆ ವೇತನ ಹೆಚ್ಚಿಸುವ ಬಗ್ಗೆ ಅಂದರೆ 200 ರೂಪಾಯಿಗಳನ್ನು ಜಾಸ್ತಿ ಕೊಡುವ ವಿಷಯದಲ್ಲಿ ಮಾನ್ಯ ಶ್ರೀ ಆರುಮ್ಗಗಂ ಅವರು ಕೆಲವು ಮಾತುಗಳನ್ನು ಹೇಳಿದ್ದಾರೆ. ಇದು ಅನಾವಶ್ಯಕ. ಸೋಷಿಯಲಿಸ್ಟ್ ಪ್ಯಾಟರನ್ ಆಫ್ ಸೊಸೈಟಿಯನ್ನು ನಾವು ಸ್ಥಾಪನೆ ಮಾಡಬೇಕೆಂದು ಹೇಳುವಾಗ ನಮ್ಮ ಸಂಬಳ ಜಾಸ್ತಿ ಮಾಡಿಕೊಳ್ಳಕೂಡದು, ಅದು ಕಡಿಮೆಯಾಗಬೇಕೆಂದು ಹೇಳಿದರು. ಇದರ ಬಗ್ಗೆ ನನ್ನ ವೈಯುಕ್ತಿಕ ಅಭಿಪ್ರಾಯವೇನೆಂದರೆ, ಯಾರ ಕಡೆಯಿಂದ ನಾವು ಇಲ್ಲಿಗೆ ಆರಿಸಿ ಬಂದಿದ್ದೇವೋ ಅವರೆಲ್ಲರ ಬಗ್ಗೆ ನಾವು ಜವಾಬ್ದಾರಿಯುತವಾಗಿ ಕೆಲವೊಂದು ಕೆಲಸಗಳನ್ನು ಮಾಡುವ ಪ್ರಸಂಗ ಬರುತ್ತದೆ. ಅಸೆಂಬ್ಲಿ ನಡೆದಾಗ ಅಂತಹ ಸಂದರ್ಭದಲ್ಲಿ ಅಲ್ಲಿ ಏನಾದರೂ ಮಾನ್ಯ ಸದಸ್ಯರು ಕೆಲಸಮಾಡುವ ಪರಿಸ್ಥಿತಿ ಬಂದಾಗ ಟೆಲಿಫೋನ್ ಮುಖಾಂತರ, ಪೋಸ್ಟ್ ಕಾರ್ಡು ಮುಖಾಂತರ ಪತ್ರವ್ಯವಹಾರ ಮಾಡುವ ಅನೇಕ ಸಂದರ್ಭಗಳು ಬರುತ್ತವೆ. ಅದರಿಂದಾಗಿ ಫೋನಿನ ಖರ್ಚು, ಪೋಸ್ಟೇಜು ಖರ್ಚು ಹೆಚ್ಚು ಬಂದೀತು. ಅದಕ್ಕೆ ಇದು ಸಮರ್ಥನೆಯಾದೀತು ಎಂದು ನನ್ನ ಅಭಿಪ್ರಾಯ. ಮಾನ್ಯ ಶ್ರೀ ಆರುಮ್ಗಗಂ ಅವರು ಮಾಡಿದಂಥ ಟೀಕೆ ಅಷ್ಟು ನಿಜವಾಗಿ ಸಮಂಜಸವಲ್ಲವೆಂದು ಹೇಳುತ್ತೇನೆ.

ಮಾನ್ಯ ಸದಸ್ಯರು ಯಾವ್ಯಾವ ಸೂಚನೆಗಳನ್ನು ಕೂಲಂಕಷವಾಗಿ ಹೇಳಿದ್ದಾರೋ ಅವೆಲ್ಲಕ್ಕೂ ನಾನು ಬೆಲೆ ಕೊಡುತ್ತೇನೆಂದು ಆಶಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಲೆಜಿಸ್ಲೇಚರನ್ನು ಇಂಡಿಪೆಡೆಂಟ್ ಮಾಡುವ ಬಗ್ಗೆ ಮಾನ್ಯ ಮಂತ್ರಿಗಳು ಏನೂ ಹೇಳಲಿಲ್ಲ.

ಶ್ರೀ ಡಿ. ಕೆ. ನಾಯ್ಕರ್.—ಅದನ್ನು ಪರಿಶೀಲನೆ ಮಾಡುತ್ತೇವೆ.

11-00 A. M.

† ಶ್ರೀ ಎಸ್. ಬಿ. ನಾಗರಾಳ್ (ರೇಷ್ಮೆ ಶಾಖೆಯ ರಾಜ್ಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷಣಿಯರೇ, ನೆನ್ನೆಯ ದಿವಸ ಸಭೆಯ ಮುಂದೆ ಮಾನ್ಯ ಕೈಗಾರಿಕಾ ಸಚಿವರು ರಾಜ್ಯದಲ್ಲಿ ರೇಷ್ಮೆ ಕೈಗಾರಿಕೆಗಳನ್ನು ಒಳಗೊಂಡು ಅನೇಕ ಕೈಗಾರಿಕಾ ಬಜೆಟ್ಟನ್ನು ಸಭೆಯ ಮುಂದೆ ಅವರು ಮಂಡಿಸಿದ್ದಾರೆ. ಈ ರೇಷ್ಮೆ ಕೈಗಾರಿಕಾ ಬಗ್ಗೆ ಈ ಸದನದ ಕೆಲವೊಂದು ಮಾನ್ಯ ಸದಸ್ಯರು ಕೆಲವು ಸೂಚನೆಗಳನ್ನು ಮಂಡಿಸಿದ್ದಾರೆ. ಆ ಸೂಚನಗಳಿಗನುಣವಾಗಿ ಸರ್ಕಾರದವರು ಈ ದಿವಸ ಈ ಕೈಗಾರಿಕೆಯನ್ನು ಒಂದು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಂಡು ಯಾವ ದೃಷ್ಟಿಯಿಂದಲೂ ಯಾರೊಬ್ಬರಿಗೂ ತೊಂದರೆಯಾಗದ ರೀತಿಯಲ್ಲಿ ಎಲ್ಲಾ ವಿಷಯಗಳನ್ನೂ ಕೂಲಂಕಷವಾಗಿ ಪರಿಶೀಲಿಸಿ ಈ ಉದ್ಯಮದಲ್ಲಿ ತೊಡಗಿರತಕ್ಕ ಎಲ್ಲ ಜನರಿಗೂ ಅನುಕೂಲವನ್ನು ಒದಗಿಸಬೇಕೆಂಬುದೇ ಸರ್ಕಾರದವರ ಆಶಯ ಕೂಡ ಇದೆ. ಮಾನ್ಯ ಸದಸ್ಯರು ಕೆಲವರು ಮಾತನಾಡುತ್ತಾ ರೈತರಿಗೆ ರೋಗಪರಿಹಾರ ಬಿತ್ತನೆ ಬೀಜಗಳನ್ನು ಒದಗಿಸಬೇಕೆಂದೂ ಮತ್ತು ರೈತನು ತಾನು ತಯಾರಿಸತಕ್ಕ ರೇಷ್ಮೆ ಗೂಡುಗಳೇನಿದೆ ಅದನ್ನು ಮಾರುಕಟ್ಟೆಗೆ ತಂದಾಗ ಅಲ್ಲಿ ಅವನ್ನು ಮಾರಾಟ ಮಾಡುವುದಕ್ಕೆ ಒಂದು ಸರಿಯಾದ ವ್ಯವಸ್ಥೆ ಮಾಡಬೇಕೆಂದೂ ಹೇಳಿದ್ದಾರೆ. ಈ ದಿವಸ ಒಂದು ಸರಿಯಾದ ಮಾರುಕಟ್ಟೆ ರೈತನಿಗೆ ಇಲ್ಲದಿರುವುದರಿಂದ ರೈತರಿಗೆ ಬಹಳ ತೊಂದರೆ ಆಗಿದೆಯೆಂದೂ ಕೂಡ ಹೇಳಿದ್ದಾರೆ. ಸರ್ಕಾರದವರು ಇದಕ್ಕೆ ತೀವ್ರಗಮನ ಕೊಟ್ಟಿದ್ದಾರೆ. ಇದನ್ನು ತೀವ್ರವಾಗಿ ಬಗೆಹರಿಸುತ್ತಾರೆಂದು ಹೇಳಬಯಸುತ್ತೇನೆ. ಈ ಮಾರುಕಟ್ಟೆಯಲ್ಲಿ ಇರತಕ್ಕ ಆ ಒಂದು ಅವ್ಯವಸ್ಥೆ ಏನಿದೆ ಅದು ಬಹಳ ದಿನಗಳಿಂದಲೂ ಒಂದ ಸಂಪ್ರದಾಯದಹಾಗೆ ನಡೆದುಕೊಂಡು ಬಂದ ಒಂದು ಅವ್ಯವಸ್ಥೆ ಆಗಿದೆ. ಅದನ್ನು ತಕ್ಷಣಕ್ಕೇ ನಿರ್ಮೂಲ ಮಾಡುವುದಕ್ಕಾಗುವುದಿಲ್ಲ. ಆದಾಗ್ಯೂ ಸರ್ಕಾರದವರು ಇದನ್ನು ನಿರ್ಮೂಲ ಮಾಡುವುದಕ್ಕೆ ತೀವ್ರ ಗಮನವನ್ನು ಕೊಡುತ್ತಿದ್ದಾರೆ. ಇನ್ನು ಕೆಲವು ಜನರು ಈ ಸಿರಿಕಲ್ಚರಲ್ ಬಾಬಿಗೆ ತಜ್ಞರ ಕೊರತೆ ಇದೆ ಎಂದು ಹೇಳಿದ್ದಾರೆ. ಆದರೆ ಸರ್ಕಾರದವರಿಗೆ ಹಾಗೆ ಅನಿಸಿಲ್ಲ. ಹಾಗೆ ಕೊರತೆ ಬಿದ್ದಿದೆ ಎಂದು ಸರ್ಕಾರಕ್ಕೆ ಕಂಡುಬಂದಾಗ ಅದನ್ನು ನಿವಾರಣೆ ಮಾಡುವುದಕ್ಕೆ ತಕ್ಷಣ ಗಮನ ಕೊಡಲಾಗುತ್ತದೆಂದು ಅಧ್ಯಕ್ಷರ ಮೂಲಕ ಸಭೆಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ರೇಷ್ಮೇ ಧಾರಣೆಯಲ್ಲಿ ಆಗಾಗ್ಗೆ ಏರುಪೇರುಗಳಾಗುತ್ತಿರುವುದನ್ನು ಸರ್ಕಾರ ಕೂಡ ಗಮನಿಸಿದೆ. ಅದರಿಂದ ಕೆಲವುವೇಳೆ ನೇಕಾರರಿಗೂ, ಕೆಲವು ವೇಳೆ ರೈತರಿಗೂ ತೊಂದರೆಗಳಾಗುತ್ತಿವೆ. ಈ ವಿಚಾರದಲ್ಲಿ ಸರ್ಕಾರಕ್ಕೂ ಕೂಡ ಅನುಕಂಪವಿದೆ. ಕಳೆದ 10 ವರ್ಷಗಳ ಒಂದು ಅವಧಿಯಲ್ಲಿ ಮೈಸೂರು ರಾಜ್ಯದಲ್ಲಿ ರೇಷ್ಮೇ ಧಾರಣೆ ಒಂದೆರಡಾವರ್ತಿ 135 ಮತ್ತು 146 ರವರೆಗೂ ಇಳಿದಿದ್ದು ಮತ್ತು 200 ರೂಪಾಯಿಗಳವರೆಗೂ ಏರಿದ್ದನ್ನು ಗಮನಿಸಿದೆ. ಕೆಲವು ಸಾರಿ ನವಂಬರ್ ಡಿಸೆಂಬರ್ ತಿಂಗಳುಗಳಲ್ಲಿ ಧಾರಣೆ ಇಳಿದು ಮತ್ತೆ ಜನವರಿ ಮಾರ್ಚಿ ತಿಂಗಳುಗಳಲ್ಲಿ ಏರುತ್ತಿದೆ. ಈ ರೇಷ್ಮೆ ಕೈಗಾರಿಕೆಯನ್ನು ಯಾವರೀತಿ ಅಭಿವೃದ್ಧಿಮಾಡಬೇಕು ಎಂಬುದನ್ನು ಕುರಿತು ವಿವರವಾದ ಒಂದು ಹೇಳಿಕೆಯನ್ನು ಮಾನ್ಯ ಮುಖ್ಯ ಮಂತ್ರಿಗಳವರು ಕಳೆದ ಏಪ್ರಿಲ್ ತಿಂಗಳಲ್ಲಿ ಕೊಟ್ಟಿದ್ದಾರೆ. ಸರ್ಕಾರದವರು ಇದರ ಸಲುವಾಗಿ ಒಂದು ಮತ್ತು ಎರಡು ಪ್ಲಾನುಗಳನ್ನು ಹಾಕಿಕೊಂಡು ಇದರ ಅಭಿವೃದ್ಧಿಯನ್ನು ಮಾಡಬೇಕೆಂದಿದ್ದಾರೆ. ಒಂದನೇ ಪ್ಲಾನಿನಲ್ಲಿ 7 ಲಕ್ಷ 25 ಸಾವಿರ ಕೆ. ಜಿ. ರೇಷ್ಮೆ ಬೆಳೆಯು ಬೆಳೆಯುತ್ತಿದ್ದಂಥ ಪರಿಸ್ಥಿತಿ ಹೋಗಿ ಈ ದಿವಸ ನಾಲ್ಕನೇ ಪ್ಲಾನಿನಲ್ಲಿ ಅದು 18 ಲಕ್ಷ ಕೆ. ಜಿ. ಬೆಳೆಯತಕ್ಕ ಪದ್ಧತಿಗೆ ಬಂದಿದೆ. ಅದಾಗ್ಯೂ ಇದಿನ್ನೂ ಸಾಲದೆಂದೇ ಸರ್ಕಾರದವರ ಅಭಿಪ್ರಾಯ. ಅದಕ್ಕಾಗಿ ಅವರು ಈಗ ತಂದಿರತಕ್ಕ ಕ್ರಾಷ್ ಪ್ರೊಗ್ರಾಮಿನಲ್ಲಿ 18 ಕೋಟಿ ರೂಪಾಯಿಗಳನ್ನು ವೆಚ್ಚಮಾಡಿ 10 ವರ್ಷಗಳ ಅವಧಿಯಲ್ಲಿ 35 ಲಕ್ಷ ಕೆ. ಜಿ. ರೇಷ್ಮೆಯನ್ನು ಬೆಳೆಯತಕ್ಕ ಒಂದು ಯೋಜನೆಯನ್ನು ರಾಜ್ಯ ಸರ್ಕಾರ ಕೇಂದ್ರ ಸರ್ಕಾರದವರ ಸಹಾಯದಿಂದ ಹಾಕಿಕೊಂಡಿರುತ್ತಾರೆ. ಇದರಲ್ಲಿ ಸರ್ಕಾರದವರ ಗುರಿ ಈ ರೇಷ್ಮೇ ಧಾರಣೆ ವಿಶೇಷವಾಗಿ ಇಳಿಯಲೂ ಬಾರದು ಮತ್ತು ವಿಶೇಷವಾಗಿ ಏರಲೂಬಾರದು ಅನ್ನುವುದಾಗಿದೆ. ರೇಷ್ಮೇ ಧಾರಣೆ ವಿಶೇಷವಾಗಿ ಇಳಿದರೆ ರೈತರಿಗೆ ತೊಂದರೆ ವಿಶೇಷವಾಗಿ ಏರಿದರೆ ನೇಕಾರರಿಗೆ

(ಶ್ರೀ ಎಸ್. ಬಿ. ನಾಗರಾಳ್)

ತೊಂದರೆ. ಈ ಉಭಯತ್ರರ ಯೋಗಕ್ಷೇಮಗಳನ್ನು ಕಾಪಾಡಿಕೊಂಡು ಬರಲು ಒಂದು ರೇಷ್ಮೆ ಕೊಳ್ಳತಕ್ಕ ಕಾರ್ಪೊರೇಷನ್ನು ಮಾಡಿದೆ. ಈ ಕಾರ್ಪೊರೇಷನ್ ಮೂಲಕ ಯಾರಿಗೂ ತೊಂದರೆ ಆಗದರೀತಿಯಲ್ಲಿ ಕೆಲಸಮಾಡುವುದಕ್ಕೆ ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆ.

ಇನ್ನು ಸರ್ಕಾರದವರ ಮುಂದಿರತಕ್ಕ ಈ ಕ್ರಾಷ್ ಪ್ರೋಗ್ರಾಮು ಏನೆಂಬುದನ್ನು ಸ್ವಲ್ಪ ತಿಳಿಸುವುದಕ್ಕೆ ಇಷ್ಟ ಪಡುತ್ತೇನೆ ಕೇಂದ್ರ ಸರ್ಕಾರದವರ ನೆರವಿನಿಂದ ಒಟ್ಟು 80 ಕೋಟಿ ರೂಪಾಯಿಗಳನ್ನು ಪಡೆದು 10 ವರ್ಷಗಳ ಅವಧಿಯಲ್ಲಿ ಇದನ್ನು ಕಾರ್ಯಗತಮಾಡಬೇಕಾಗಿದೆ. ಇದರ ಅಂಗವಾಗಿ ಮೊದಲನೇ ಒಂದು ವರ್ಷದಲ್ಲಿ 4 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾಗಿದೆ. ಈ 4 ಕೋಟಿ ರೂಪಾಯಿಗಳ ವೆಚ್ಚದಲ್ಲಿ 2 ಲಕ್ಷ ಎಕರೆಗಳಲ್ಲಿ ಮಲ್ಬರಿ ಪ್ಲಾಂಟೇಷನ್ ಬೆಳಸತಕ್ಕ ಯೋಜನೆ ಇದೆ. ಹಾಗೇ 37 ಕೋಟಿ ರೂಪಾಯಿಗಳಲ್ಲಿ 74 ಸಾವಿರ ಬಾವಿಗಳನ್ನು ತೆಗೆಸಬೇಕಾಗಿದೆ. 10 ಕೋಟಿ ರೂಪಾಯಿಗಳಲ್ಲಿ 500 ಸಿರಿಕಲ್ಚರರ್ ಕೋ ಆಪರೇಟಿವ್ ಸೊಸೈಟಿಗಳನ್ನು ಪ್ರಾರಂಭಿಸಬೇಕಾಗಿದೆ. 25 ಕೋಟಿ ರೂಪಾಯಿಗಳಲ್ಲಿ 50 ಸಾವಿರ ರೇರಿಂಗ್ ಸೆಂಟರುಗಳನ್ನು ಸ್ಥಾಪಿಸಬೇಕಾಗಿದೆ. ಹಾಗೇ ಒಂದು ಕೋಟಿ ರೂಪಾಯಿನಲ್ಲಿ 1250 ಗ್ರೇನೇಜ್ ಬಿಲ್ಡಿಂಗುಗಳನ್ನು ಕಟ್ಟಿಸಬೇಕಾಗಿದೆ. ಒಂದು ಕೋಟಿ ರೂಪಾಯಿನಲ್ಲಿ 2000 ರೀಲಿಂಗ್ ಎಸ್ಟಾಬ್ಲಿಷ್‌ಮೆಂಟುಗಳನ್ನು ಮಾಡಬೇಕಾಗಿದೆ. ಹೀಗೆ ಇಷ್ಟು ಕೆಲಸಗಳನ್ನು ಮಾಡಬೇಕೆಂದು ಸರ್ಕಾರ ನಿರ್ಣಯ ತೆಗೆದುಕೊಂಡಿದೆ. ಇದಾದನಂತರ ಒಂದು ಮಾರ್ಕೆಟಿಂಗ್ ಕೋ-ಆಪರೇಟೀವ್ ಸೊಸೈಟಿಗಳನ್ನು ಸ್ಥಾಪಿಸಲು ವರ್ಕಿಂಗ್ ಕ್ಯಾಪಿಟಲಿಗಾಗಿ 2 ಕೋಟಿ ರೂಪಾಯಿಗಳನ್ನು ಇಟ್ಟಿದೆ. ಅಂದರೆ ಈ ವರ್ಷ ಈ ವೆಚ್ಚದಲ್ಲಿ 4 ಕೋಟಿಯನ್ನು ಮಾತ್ರ ಖರ್ಚು ಮಾಡಬೇಕಾಗಿದೆ. ಈ 4 ಕೋಟಿಯಲ್ಲಿ 10 ಸಾವಿರ ಎಕರೆಗಳಲ್ಲಿ ಮಲ್ಬರಿ ಪ್ಲಾಂಟ್ ಮಾಡಬೇಕಾಗಿದೆ. 25 ಸಾವಿರ ಬಾವಿಗಳನ್ನು ಮಾಡಬೇಕಾಗಿದೆ. 25 ಸೊಸೈಟಿಗಳನ್ನು ಮಾಡಬೇಕಾಗಿದೆ. 2500 ರೇರಿಂಗ್ ಹೌಸುಗಳನ್ನು ತೆರೆಯಬೇಕೆಂದಿದೆ ಈ ಉದ್ಯಮಕ್ಕೆ ಖಾಸಗೀ ಜನರು ಮುಂದೆ ಬಂದರೆ ಅವರಿಗೆ 60 ಗ್ರೈನೇಜುಗಳನ್ನು ಕಟ್ಟಿಸಿಕೊಡುವುದಕ್ಕೆ ಪ್ರೊವೈಡ್ ಮಾಡಿದೆ. ನೂರು ರೀಲಿಂಗ್ ಯೂನಿಟ್ಟುಗಳನ್ನು ಮಾಡಬೇಕಾಗಿದೆ. ಮಾರ್ಕೆಟಿಂಗ್ ಕೋ-ಆಪರೇಟಿವ್ ಸೊಸೈಟಿಗಳಿಗೆ 20 ಲಕ್ಷವನ್ನು ವರ್ಕಿಂಗ್ ಕ್ಯಾಪಿಟಲ್‌ಗೆ ಕೊಡಬೇಕಾಗಿದೆ. ಇದನ್ನು ಯಶಸ್ವಿಗೊಳಿಸುವುದಕ್ಕೆ ಮಾನ್ಯ ಸದಸ್ಯರೆಲ್ಲರೂ ಸಹಕರಿಸಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಈ ಬೇಡಿಕೆಯನ್ನು ಅನುಮೋದಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಮಾನ್ಯ ಮಂತ್ರಿಗಳು ರೇಷ್ಮೇ ಬೆಳೆಯತಕ್ಕ ರೈತರ ಹಿತಸಾಧನೆ ಬಗ್ಗೆ ಹೇಳಿದ್ದಾರೆ. ಆದರೆ ನೇಕಾರರ ವಿಷಯದಲ್ಲಿ ಅವರ ತೊಂದರೆಯನ್ನು ನಿವಾರಣೆ ಮಾಡತಕ್ಕ ಬಗ್ಗೆ ಏನು ಯೋಜನೆ ಹಾಕಿಕೊಂಡಿದ್ದಾರೆಂಬುದನ್ನು ಹೇಳಲಿಲ್ಲ.

ಶ್ರೀ ಎಸ್. ಬಿ. ನಾಗರಾಳ್.—ನನ್ನ ಕೈಯಲಿರುವುದು ರೇಷ್ಮೆ ಬೆಳೆಗಾರರ ಅಧಿಕಾರ. ನೇಕಾರರಿಗೆ ಸಹಾಯ ಒದಗಿಸತಕ್ಕ ಅಧಿಕಾರ ಮಾನ್ಯ ಕೈಗಾರಿಕಾ ಸಚಿವರಾದ ಎಸ್. ಎಂ. ಕೃಷ್ಣರವರ ಕೈಲಿದೆ. ಅವರ ವಿಚಾರದಲ್ಲಿ ಸಾಕಷ್ಟು ಅನುಕಂಪ ಅವರಿಗೂ ಇರುವುದರಿಂದ ಅವರ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ನಾನಾದರೋ ನೇರವಾಗಿ ಆ ನೇಕಾರರಿರತಕ್ಕ ಕ್ಷೇತ್ರದಿಂದಲೇ ಆರಿಸಿ ಬಂದವನಾಗಿದ್ದೇನೆ. ನನಗೂ ಅವರ ವಿಚಾರದಲ್ಲಿ ಮಾನ್ಯ ಸದಸ್ಯರಷ್ಟೇ ಅನುಕಂಪವಿದೆ. ಸರ್ಕಾರದವರು ಅವರ ಕಷ್ಟಗಳನ್ನು ಮರೆತಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

Sri C. M. ARUMUGAM.—Madam, in Delhi Parliament, the Deputy Chairman and the Deputy Speaker who were appointed as Minister of State are provided with a car and well-furnished bungalows. In our State, our Deputy Speaker has not been treated on par with the Minister of State and he has not been provided with a car or a bungalow. I want to know from the Government whether they would provide the facilities to our Deputy Speaker ?

MADAM SPEAKER.—The Government have taken note of the Member's suggestion.

SRI C. M. ARUMUGAM.—Our Deputy Speaker has not been provided with a conveyance. I have seen him walking from the Scertaiat to the Legislators' Home. It is the prestige of this House. Keeping in view the prestige of this House, our Deputy Speaker should be provided with a conveyance quickly.

SRI S. HAMID SHAH (Shivajinagar).—Even the Deputy Mayor of the Corporation has been provided with a car.

SRI K. PRABHAKAR.—Irregularities in the Voters' list or the electoral Roll have been brought to the notice of the Government. The concerned officer will have to be directed to republish the voters' lists with the corrections. I want a reply from the Government about ts reaction to my suggestion.

ಶ್ರೀ ಕೆ. ಪ್ರಭಾಕರ್.—ಓಟರುಗಳ ಪಟ್ಟಿಯಲ್ಲಿ ಲೋಪದೋಷವಿದೆ, ಹೆಸರುಗಳನ್ನು ಹೊಡೆದು ಹಾಕುವುದು, ಸೇರಿಸುವುದು ನಡೆದಿದೆ. ಬಹಳ ಜನರ ಹೆಸರನ್ನು ತೆಗೆದು ಹಾಕಿದ್ದಾರೆ. ಈಗಿರುವ ಓಟರುಗಳ ಪಟ್ಟಿಯನ್ನಿಟ್ಟುಕೊಂಡು ತಾಲ್ಲೂಕುಬೋರ್ಡ್ ಚುನಾವಣೆ ನಡೆಸುವುದು ಸರಿಯಲ್ಲ. ಆದುದರಿಂದ ಓಟರುಗಳ ಪಟ್ಟಿಯನ್ನು ಸಂಬಂಧಪಟ್ಟ ಆಫಿಸರಿಂದ ರಿವ್ಯು ಮಾಡಿಸಿ ನಂತರ ತಾಲ್ಲೂಕು ಬೋರ್ಡ್ ಚುನಾವಣೆ ನಡೆಸಬೇಕು. Before the election for the Taluk Board, it should be got rectified and proper list should be established.

ಶ್ರೀ ಎಸ್.ಎಂ. ಕೃಷ್ಣ.—ಕಳೆದ ಚುನಾವಣೆಯಲ್ಲಿ ಓಟರುಗಳ ಪಟ್ಟಿ ಸರಿಯಾಗಿಲ್ಲವೆಂದು ದೂರುಗಳು ಬಂದಿವೆ. ಅದನ್ನು ಸರಿಪಡಿಸಲು ಕಾರ್ಯಕ್ರಮ ತೆಗೆದುಕೊಳ್ಳುವರು. ತಾಲ್ಲೂಕು ಬೋರ್ಡಿನ ಚುನಾವಣೆಗೆ ಮುಂಚೆ ಈ ಕೆಲಸವಾಗುವುದು. ಪ್ರತಿ 6 ತಿಂಗಳಿಗೊಂದು ಸಲ ರಿವ್ಯೂ ಮಾಡುವರು.

MADAM SPEAKER.—The question is :

> "That the respective sums not exceeding the amounts mentioned in the list of Demands be granted to the Government to defray the charges which will come in course of payment during the financial year for the period ending the 31st day of March 1973, in respect of Demands Nos. 24, 16, 43, 44, 9, 11 and 14."

The motion was adopted and the Demands were granted.

As ordered by the Chair the motion for Demands for Grants adopted by the House are reproduced below :

Minister for Industries.—Sir, on the recommendation of the Governor, I beg to move :

> "That a sum not exceeding Rs. 16,00,00,000, inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 24 'Industries'."

Minister for Industries.—Sir, on the recommendation of the Governor, I beg to move:

"That a sum not exceeding Rs. 58,95,000, inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 16 'Scientific Departments'."

Minister for Industries.—Sir, on the recommendation of the Governor, I beg to move:

"That a sum not exceeding Rs. 81,77,000, inclusive of the sum granted 'on account," be granted to the Government to defray the charges which will come in course of payment during the financial year for the period ending 31st day of March 1973, in respect of Demand No. 43 'Capital Outlay on Improvement of Public Health'."

Minister for Industries.—Sir, on the recommendation of the Governor, I beg to move:

"That a sum not exceeding Rs. 11,44,05,000, inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 44 'Capital Outlay on Industrial and Economic Development'."

Minister for Law and Parliamentary Affairs.—Sir, on the recommendation of the Governor, I beg to move:

"That a sum not exceeding Rs. 66,34,000 inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 9 'Parliament, State/Union Territory Legislature'."

Minister for Law and Parliamentary Affairs.—Sir, on the recommendation of the Governor, I beg to move;

"That a sum not exceeding Rs. 2,17,10,000 inclusive of the sum granted 'on account', be granted to the Government to defray the Charges which will come in course of payment during the financial year for the period ending 31st day of March 1973, in respect of Demand No. 11 'Administration of Justice'."

Minister of State for Food and Civil Supplies.—Sir, on the recommendation of the Governor, I beg to move :

"That a sum not exceeding Rs. 3,50,000, inclusive of the sum granted 'on account,' be granted to the Government to defray the charges which will come in course of payment during the financial year for the period ending 31st day of March 1973, in respect of Demand No. 14 'Supplies and Disposals'."

DEMAND No. 39

Sri B. BASAVALINGAPPA (Minister for Municipal Administration).—On the recommendation of the Governor, I beg to move :

"That a sum not exceeding Rs. 14,98,81,000 inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 39 'Miscellaneous'."

MADAM SPEAKER.—Motion moved :

"That a sum not exceeding Rs. 14,98,81,000 inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 39 'Miscellaneous'."

The demand is before the House for discussion.

Sri C. M. ARUMUGAM.—Madam Speaker, there is no Minister for Miscellaneous and there is no Department like Miscellaneous Department and there is no Secretariat for "Miscellaneous." Is there any Minister for Miscellaneous ? It has not been announced by the Governor that there is a Minister for Miscellaneous. I want your ruling, in this connection.

ಅಧ್ಯಕ್ಷರು.—ರೂಲಿಂಗ್ ಸೋಮವಾರ ಕೊಡೋಣ.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಸಭಾಪತಿಗಳೇ, ಈ ದಿನ ನಮ್ಮ ಮುಂದಿರುವ ಮಿಸಲೇನಿಯಸ್ ಡಿಮ್ಯಾಂಡ್ ನಂಬರು 39ರ ಬಗ್ಗೆ ಮಾತನಾಡುತ್ತಾ, ಇದಕ್ಕೆ ಹೆಚ್ಚು ಸಂಬಂಧಪಟ್ಟಿರುವ ಸ್ಥಳೀಯ ಸಂಸ್ಥೆಗಳ ಬಗ್ಗೆ ಇರತಕ್ಕ ಬೇಡಿಕೆಯನ್ನು ವಿರೋಧಿಸುತ್ತಾ ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ಈ ಬೇಡಿಕೆಯನ್ನು ವಿರೋಧಿಸುವುದಕ್ಕೆ ಮುಖ್ಯ ಉದ್ದೇಶವಿಷ್ಟೆ. ಅತಿ ಮುಖ್ಯವಾದ ಈ ಬೇಡಿಕೆಗೆ ಕೇವಲ 4 ಕೋಟಿ 78 ಲಕ್ಷ ರೂಪಾಯಿಗಳನ್ನು ಒದಗಿಸಿರುವುದು ಬಹಳ ಶೋಚನೀಯವಾದ ವಿಚಾರ. ಅದರಲ್ಲಿ ಜನರಿಗೆ ನೇರವಾಗಿ ಸಂಪರ್ಕವಿರುವ ಈ ಸಂಸ್ಥೆಗಳ ವಿಚಾರ ಮನೆ ಮಾತಾಗಿದೆ. ಆದುದರಿಂದ ಜನರ ಸೌಕರ್ಯಕ್ಕೆ ಬೇಕಾದ ಅನುಕೂಲತೆಗಳನ್ನು ಒದಗಿಸಬೇಕಾದ ಸಂದರ್ಭದಲ್ಲಿ ಒದಗಿಸಿರುವ ಹಣ ಬಹಳ ಕಡಮೆ ಇರುವುದರಿಂದ ಈ ಬೇಡಿಕೆಯನ್ನು ವಿರೋಧಿಸಬೇಕಾಗಿದೆ. ಅಲ್ಲದೆ ಸಾಧಾರಣವಾಗಿ ಕೇಂದ್ರ ಸರಕಾರದವರು ತೆರಿಗೆಗಳನ್ನು ಹಾಕಿ ರಾಜ್ಯ ಸರಕಾರ ತೆರಿಗೆಗಳನ್ನು ಹಾಕುವ ಶಕ್ತಿ ಕಳೆದುಕೊಳ್ಳುವಂತೆ ಮಾಡುವುದು. ರಾಜ್ಯ ಸರಕಾರದವರು ತಾವು ಹೆಚ್ಚಿಗೆ ತೆರಿಗೆ ಹಾಕಿ ಸ್ಥಳೀಯ ಸಂಸ್ಥೆಗಳಿಗೆ ತೆರಿಗೆ ಹಾಕಲು ಅವಕಾಶ ಕಡಮೆ ಇರುವಾಗ ಬೆಂಗಳೂರಿನಂಥ ನಗರಗಳ ಅಭಿವೃದ್ಧಿಗೆ ಹಣ ಒದಗಿಸದಿರುವುದು ಶೋಚನೀಯ

(ಶ್ರೀ ಟಿ. ಆರ್. ಶಾಮಣ್ಣ)

ವಾಗಿದೆ. ಈ ರಾಜ್ಯದ ಅನೇಕ ಸ್ಥಳೀಯ ಸಂಸ್ಥೆಗಳು ಬಹಳ ಹಿಂದುಳಿದಿರುವುದರಿಂದ ನಾವು ಬಹಳ ವಿಷಾದಪಡಬೇಕಾಗಿದೆ. ಅದರಲ್ಲೂ ಮುಖ್ಯವಾಗಿ ಈ ಸ್ಥಳೀಯ ಸಂಸ್ಥೆಗಳಿಗೆ, ಟೌನ್ ಮುನಿಸಿಪಾಲಟಿಗಳಿಗೆ ಸಾಕಾದಷ್ಟು ನೀರು ಸರಬರಾಯಿ ಮತ್ತು ಅಂಡರ್‌ಗ್ರೌಂಡ್ ಡ್ರೈನೇಜು ಸೌಕರ್ಯ ಒದಗಿಸಿಲ್ಲ. ಅದುದರಿಂದ ಅನೇಕ ನಗರಗಳಲ್ಲಿ ಮತ್ತು ಅನೇಕ ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ನೀರಿನ ಸೌಕರ್ಯ ಮತ್ತು ಒಳಚರಂಡಿ ವ್ಯವಸ್ಥೆ ಮುಂತಾದುವು ಹೀನಸ್ಥಿತಿಯಲ್ಲಿರುವುದರಿಂದ ಇದಕ್ಕೆ ಸಾಕಾದಷ್ಟು ಹಣ ಕೊಡಬೇಕು. ಅದರಲ್ಲೂ ಮುಖ್ಯವಾಗಿ ಬೆಂಗಳೂರು ನಗರಕ್ಕೆ ಮತ್ತು ಅನೇಕ ಮುಖ್ಯ ಪಟ್ಟಣಗಳಿಗೆ ಮೊದಲನೆಯದಾಗಿ ಸ್ಲಂಕ್ಲಿಯರೆನ್ಸ್‌ಗೆ ಮತ್ತು ಡ್ರೈನೇಜು ವ್ಯವಸ್ಥೆಗೆ ಸಾಕಷ್ಟು ಹಣವಿಲ್ಲ. ಇದಕ್ಕೆ ಕೊಡುವ ಹಣ ಸಾಕಾಗುವುದಿಲ್ಲ. ಸೊಳ್ಳೆ ಕಾಟ ತಪ್ಪಿಸಬೇಕು. ಈ ಕೆಲಸಗಳಿಗಾಗಿ ಬಜೆಟ್ಟಿನಲ್ಲಿ ಒದಗಿಸಿರುವ ಹಣ ಏನೇನೂ ಸಾಲದು, ಹೆಚ್ಚಾಗಿ ಒದಗಿಸಬೇಕು ಎಂದು ಒತ್ತಾಯಮಾಡುತ್ತೇನೆ. ಬೆಂಗಳೂರು ನಗರ ರಾಜ್ಯದ ಒಂದು ಕೇಂದ್ರ ಸ್ಥಳ. ಸುಮಾರು 17 ಲಕ್ಷ ಪ್ರಜೆಗಳಿರುವ ಪಟ್ಟಣ, ಜೊತೆಗೆ ಫ್ಲೋಟಿಂಗ್ ಪಾಪ್ಯುಲೇಷನ್ ಸೇರಿ ಸುಮಾರು 20 ಲಕ್ಷ ಪ್ರಜೆ ಬೆಂಗಳೂರಿನಲ್ಲಿರುವುದು. ಇಂಥ ನಗರದ ಬಗ್ಗೆ ರಾಜ್ಯ ಸರಕಾರಕ್ಕೆ ಬರುವ ಹಣ ಯಾವುದೂ ಇಲ್ಲ. ಮೋಟರು ವೆಹಿಕಲ್ಸ್ ಟ್ಯಾಕ್ಸ್, ಇತ್ಯಾದಿಗಳಲ್ಲಿ ಕಂಪೆನ್ಸೇಷನ್ ಕೊಡುವರು. ಕಾರ್ಪೊರೇಷನ್ನಿನ ಸಿಬ್ಬಂದಿಗೆ 3 ಕೋಟಿ ರೂಪಾಯಿ ಬೇಕು. ಬೇರೆ ಮುನಿಸಿಪಾಲಟಿಗಳಿಗೆ ಮತ್ತು ಲೋಕಲ್ ಬಾಡಿಗಳಿಗೆ ಡಿ.ಎ. ನಲ್ಲಿ ಸುಮಾರು ಸೇಕಡ 50 ಭಾಗ ಕೊಡುವರು. ಅದೇ ಬೆಂಗಳೂರು ನಗರದಲ್ಲಿ 90 ಲಕ್ಷ ಖರ್ಚುಮಾಡುವಾಗ ಸುಮಾರು 18 ಲಕ್ಷ ಮಾತ್ರ ಕೊಡುವರು. ಇದು ಸಾಲದು, ಬೇರೆ ನಗರಸಭೆಗಳಿಗೆ ಲೋಕಲ್‌ಬಾಡೀಸ್‌ಗೆ ಕೊಡುವಂತೆ ಬೆಂಗಳೂರು ಕಾರ್ಪೊರೇಷನ್ನಿಗೂ ಸೇಕಡ 50 ಭಾಗ ಕೊಡಬೇಕು ಎಂದು ಒತ್ತಾಯಮಾಡುತ್ತೇನೆ.

ಬೆಂಗಳೂರು ನಗರದ ಕಾರ್ಪೊರೇಷನ್ ಆಕ್ಟ್ ತಿದ್ದುಪಡಿಯಾಗಿ 25 ವರ್ಷವಾಗಿದೆ. ಇದು ಬಹಳ ಹಳೆಯದು. ಇದನ್ನು ಮದ್ರಾಸಿನಲ್ಲಿರುವ ಆಕ್ಟಿಗನುಣವಾಗಿ ಮಾಡಿದೆ. ಇದನ್ನು ಬೇಗ ಬದಲಾಯಿಸಬೇಕೆಂಬ ಒತ್ತಾಯವಿದೆ. ಇದನ್ನು ಬೊಂಬಾಯಿನಲ್ಲಿರುವಂತೆ ಬದಲಾಯಿಸಬೇಕು ಎಂಬ ಉದ್ದೇಶವಿತ್ತು, ಆ ವಿಚಾರ ಅಲ್ಲಿಗೇ ನಿಂತಿದೆ. ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿತ್ತು, ಆದರೆ ಮುಂದೆ ಏನೂ ಆಗಿಲ್ಲ. ಆದುದರಿಂದ ಈ ವಿಷಯಕ್ಕೆ ತೀವ್ರ ಗಮನ ಕೊಟ್ಟು ಕಾರ್ಪೊರೇಷನ್ ಆಕ್ಟನ್ನು ತಿದ್ದುಪಡಿಮಾಡಬೇಕು.

ಬೆಂಗಳೂರಿನಲ್ಲಿ ಸುಮಾರು 63 ಡಿವಿಜನ್ನುಗಳಿವೆ, ಅದರಲ್ಲಿ ಕೆಲವು ಡಿವಿಜನ್ನುಗಳಲ್ಲಿ 40 ಸಾವಿರ ಓಟರುಗಳಿದ್ದಾರೆ, ಮತ್ತೆ ಕಲವು ಡಿವಿಜನ್ನುಗಳಲ್ಲಿ 7 ಸಾವಿರ ಓಟರುಗಳಿದ್ದಾರೆ. ಆದುದರಿಂದ 1971 ನೆಯ ಇಸವಿಯ ಸೆನ್ಸಸ್ ಅಂಕಿಅಂಶದ ಪ್ರಕಾರ ಡಿವಿಜನ್ನುಗಳ ವ್ಯವಸ್ಥೆಮಾಡಬೇಕು. ಒಂದು ಕಡೆ 39 ಸಾವಿರ, ಇನ್ನೊಂದು ಕಡೆ 7 ಸಾವಿರ ಇರುವುದರಿಂದ ಅನುಕೂಲವಾಗುವುದಿಲ್ಲ. ಆದುದರಿಂದ ಆದಷ್ಟು ಬೇಗ ಡಿವಿಜನ್ನುಗಳ ವ್ಯವಸ್ಥೆಮಾಡಿ ಸಾಧ್ಯವಾದಷ್ಟು ಏರಿಯಾ ಮತ್ತು ಜನಸಂಖ್ಯೆಗನುಸಾರವಾಗಿ ಮಾಡಬೇಕೆಂದು ಸಲಹೆಮಾಡುತ್ತೇನೆ.

ಈ ಬೆಂಗಳೂರು ನಗರದಲ್ಲಿ ಮುಖ್ಯವಾದ ಸಮಸ್ಯೆಗಳು (1) ಸ್ಲಮ್ಸ್ (2) ಮಾಸ್ಕಿಟೋ ನ್ಯೂಸೆನ್ಸ್ (3) ಡ್ರಿಂಕಿಂಗ್ ವಾಟರ್. ಈ ಮೂರು ಸಮಸ್ಯೆಗಳನ್ನೂ ಬಗೆಹರಿಸಬೇಕು.

ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ ಬೆಂಗಳೂರು ನಾಗರಿಕರಿಗೆ ಕಾವೇರಿ ನೀರಿನ ಸರಬರಾಯಿ ಯೋಜನೆಯ ಕೆಲಸವನ್ನು ಅತಿ ಶೀಘ್ರವಾಗಿ ಮಾಡುತ್ತಾ ಇರುವುದು ಸಂತೋಷ. ಆದರೆ ಇದಕ್ಕೆ 30 ಕೋಟಿ ರೂಪಾಯಿಗಳು ಖರ್ಚಾಗುತ್ತದೆ ಎಂದು ಲೆಕ್ಕ ಇಟ್ಟುಕೊಂಡಿದ್ದೀರಿ. ಅಷ್ಟು ಖರ್ಚಾದರೆ ಒಂದು ಸಾವಿರ ಗ್ಯಾಲನ್‌ಗೆ 3 ರೂಪಾಯಿ ಆಗುತ್ತದೆ. ಈವಾಗ ಮಾಡುತ್ತಾ ಇರುವ ಯೋಜನೆಯ ಖರ್ಚೂ ಕೂಡ ಬಡವನ ಮೇಲೆ ಬೀಳುತ್ತದೆ. ಈ ಯೋಜನೆಗೆ ಹಾಕಿರುವ ಖರ್ಚು ದುಬಾರಿ ಆಗಿರುವುದರಿಂದ ಬೆಂಗಳೂರಿನ ಜನತೆಗೆ ನೀರಿನ ದರವನ್ನು ಹೆಚ್ಚಿಸದೇ ಇರುವ ಹಾಗೆ ನೋಡಿಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಬೆಂಗಳೂರು ನಗರದಲ್ಲಿ ಮುಖ್ಯವಾದ ಸಮಸ್ಯೆ ಎಂದರೆ ರೆವಿನ್ಯೂ ಸೈಟ್ಸ್ ವಿತರಣೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಮೊದಲು ಸಹಾನುಭೂತಿಯನ್ನು ತೋರಿಸಿದ್ದರು. ಬೆಂಗಳೂರು ನಗರದ ಎಂ.ಎಲ್.ಎ. ಗಳು ರೆವಿನ್ಯೂ ಸೈಟ್‌ಗಳ ಬಗ್ಗೆ ಮಾನ್ಯ ಮಂತ್ರಿಗಳನ್ನು ಭೇಟಿ ಮಾಡಿ ಯಾರಿಗೆ ನಿಜವಾಗಿ ಸೈಟು ಬೇಕಾಗಿದೆಯೋ ಅಂಥಾವರಿಗೆ ನೀವು ಸೈಟ್ಸನ್ನು ಒದಗಿಸಿಕೊಡಬೇಕೆಂದು ಒತ್ತಾಯ ಮಾಡಿದಾಗ ಅದನ್ನು ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದಾರೆ. ಈಗ

ಅವರ ನಿಲವು ಬದಲಾವಣೆಯಾಗಿದೆ. ಆದುದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳು ಸಹಾನು ಭೂತಿ ತೋರಿಸಿ ಬಡಬಗ್ಗರಿಗೆ ಸೈಟುಗಳನ್ನು ಒದಗಿಸಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಇದರ ಜೊತೆಗೆ ಸೊಸೈಟಿಗಳಿಗೆ ಲೇಔಟ್ ಸ್ಯಾಂಕ್ಷನ್ ಮಾಡುವ ಬಗ್ಗೆ ಒಂದು ಅಡಚಣೆಯನ್ನು ಈಗ ತಂದಿದ್ದಾರೆ. ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಗಳು ಇರುವ ಕಡೆ ಪ್ರಾಧಾನ್ಯತೆ ಕೊಡಬೇಕೆಂದು ಮಾಡಿದ್ದಾರೆ. ಈಗ ಏತಕ್ಕೆ ತಮ್ಮ ನಿಲುವನ್ನು ಬದಲಾಯಿಸಿದ್ದಾರೋ ಗೊತ್ತಿಲ್ಲ.

ಇನ್ನು ಕೆಲವು ಬೋಗಸ್ ಸೊಸೈಟಿಗಳು ಇವೆ. ಅವುಗಳನ್ನು ತೆಗೆಯುವುದಕ್ಕೆ ಪ್ರಯತ್ನ ಮಾಡಬೇಕೇ ಹೊರತು ಕ್ರಮಬದ್ಧವಾಗಿ ಯಾರಿಗೆ ಸೈಟು ಅಗತ್ಯ ಇದೆಯೋ ಅಂಥಾವರು ಸೊಸೈಟಿ ಮಾಡಿಕೊಂಡು ಟ್ರಸ್ಟ್‌ಬೋರ್ಡ್ ಪ್ಲಾನ್‌ಗನುಗುಣವಾಗಿ ಮಾಡಿಕೊಂಡಿದ್ದರೆ ಅಂಥಾವರಿಗೆ ಸೈಟು ಕೊಡದೇ ಹೋದರೆ ಧರ್ಮವಲ್ಲವೆಂದು ಒತ್ತಾಯ ಮಾಡಿ ಹೇಳುತ್ತೇನೆ. ಬೊಂಬಾಯಿ, ಡೆಲ್ಲಿ, ಕಾನ್‌ಪುರ ಈ ರೀತಿ ಬೇರೆ ಬೇರೆ ಪಟ್ಟಣಗಳಲ್ಲಿ ಸೊಸೈಟಿಗಳು ಲೇಔಟ್ ಮಾಡಿಕೊಂಡು ಟ್ರಸ್ಟ್ ಬೋರ್ಡ್ ಪ್ಲಾನ್‌ಗೆ ಅನುಗುಣವಾಗಿ ಮಾಡಿದ್ದಾರೆ. ಅದರಂತೆ ಇದಕ್ಕೂ ಪ್ರಾಧಾನ್ಯತೆ ಕೊಡಬೇಕೆಂದು ಹೇಳುತ್ತೇನೆ. ಅವರು ಆರೀತಿ ನಡೆದುಕೊಳ್ಳದೇ ಹೋದರೆ ಕ್ರಮ ತೆಗೆದುಕೊಳ್ಳಿ. ಈಗ ಬೆಂಗಳೂರಿನಲ್ಲಿ ಹೆಚ್.ಎ.ಎಲ್. ಹೆಚ್.ಎಂ.ಟಿ. ಬಿ.ಇ.ಎಲ್. ಮತ್ತು ಎನ್.ಜಿ.ಇ.ಎಫ್. ಈ ರೀತಿ ಅನೇಕ ಫ್ಯಾಕ್ಟರಿಗಳು ಇವೆ. ಇವರು ಸೊಸೈಟಿಗಳನ್ನು ಮಾಡಿಕೊಂಡು 50 ಸಾವಿರ ಮೆಂಬರುಗಳನ್ನು ಮಾಡಿಕೊಂಡಿದ್ದಾರೆ. ಇದರ ಜೊತೆಗೆ 50 ಲಕ್ಷ ರೂಪಾಯಿ ಡಿಬೆಂಚರ ಲೋನ್‌ನನ್ನು ಹೌಸಿಂಗ್ ಕಾರ್ಪೋರೇಷನ್ನಿನವರು ಎತ್ತಿದ್ದಾರೆ. ಇದಕ್ಕೆ ಸರ್ಕಾರದವರು ಗ್ಯಾರಂಟಿ ಕೊಟ್ಟಿದ್ದಾರೆ. ಆದುದರಿಂದ ಈ ಹೌಸಿಂಗ್ ಕಾರ್ಪೋರೇಷನ್ನಿನಿಂದ ಅವರುಗಳು ಸಾಲ ತೆಗೆದುಕೊಂಡು ಸೈಟುಗಳನ್ನು ಮಾಡೋಣ ಎಂದರೆ ಅದಕ್ಕೆ ಅಡ್ಡಿಪಡಿಸುವುದು ನ್ಯಾಯವಲ್ಲ. ಏನಾದರೂ ಬೋಗಸ್ ಸೊಸೈಟಿ ಆಗಿದ್ದರೆ ಅಂಥಾ ಸೊಸೈಟಿಗೆ ಲೇಔಟ್ ಮಾಡುವುದಕ್ಕೆ ಒಪ್ಪಿಗೆ ಕೊಡಬಾರದು. ಆದುದರಿಂದ ತಮ್ಮ ನೀತಿಯನ್ನು ಬದಲಾವಣೆ ಮಾಡಬೇಕು. ಏನಾದರೂ ದೋಷ ಇದ್ದರೆ ತಿದ್ದುವುದಕ್ಕೆ ಪ್ರಯತ್ನ ಮಾಡಬೇಕೇ ಹೊರತು ಸರಿಯಾದ ರೀತಿಯಲ್ಲಿ ಟ್ರಸ್ಟ್ ಬೋರ್ಡ್ ಪ್ಲಾನ್‌ಗೆ ಅನುಗುಣವಾಗಿ ಲೇಔಟ್ ಮಾಡಿದ್ದರೆ ಅಂಥಾವರಿಗೆ ಸಹಾಯ ಮಾಡಬೇಕು ಎಂದು ಒತ್ತಾಯ ಮಾಡಿ ಹೇಳುತ್ತೇನೆ.

ಇನ್ನು ಬೆಂಗಳೂರು ನಗರ ಸಂಸ್ಥೆ ಚೆನ್ನಾಗಿ ನಡೆಯ ಬೇಕಾದ ಪಕ್ಷದಲ್ಲಿ ರಾಷ್ಟ್ರಾಧ್ಯಕ್ಷರಿಂದ ಮೊದಲುಗೊಂಡು ಎಲ್ಲರೂ ಇದರಲ್ಲಿ ರಾಜಕೀಯ ಮಾಡಬಾರದು. ಈ ಬೆಂಗಳೂರು ಕಾರ್ಪೋರೇಷನ್ ಬಗ್ಗೆ ಹೇಳುವುದಾದರೆ ಇದು ರಾಜಕೀಯದಿಂದ ದೂರ ಇರಬೇಕು. ಆಡಳಿತ ಪಕ್ಷದವರು ಈ ಒಂದು ನೀತಿಯನ್ನು ಅನುಸರಿಸಬೇಕು. ಉತ್ತಮವಾದ ಕೌನ್ಸಿಲರ್ಸ್ ಎಲೆಕ್ಟ್ ಆಗಬೇಕಾದರೆ ಆಡಳಿತ ಪಕ್ಷದವರ ಮಾರ್ಗದರ್ಶನಬೇಕು. ನಾವೂ ಕೂಡ ಸಹಕರಿಸುತ್ತೇವೆ. ಬೆಂಗಳೂರು ನಗರದ ನಗರ ಪಿತೃ ಅಂತ ಅನಿಸಿಕೊಳ್ಳುವಂಥವರು ಉತ್ತಮವಾದವರಿರಬೇಕು. ಇಲ್ಲದೇ ಹೋದರೆ ನಗರಾಡಳಿತಕ್ಕೆ ಹಾನಿಯಾಗಿ ಜನ ಬೇಸರ ಪಡಬೇಕಾಗುತ್ತದೆ. ಬೆಂಗಳೂರು ಕಾರ್ಪೋರೇಷನ್ ವಿಷಯವಾಗಿ ಹೇಳಬೇಕಾದರೆ ಈ ವರ್ಷ ಯಾವ ಪಾರ್ಟಿಗೂ ಕೂಡ ಮೆಜಾರಿಟಿ ಬರಲಿಲ್ಲ. ಆದರೆ ಆಡಳಿತ ಪಕ್ಷದವರು ತಾವು ಅಧಿಕಾರ ವಹಿಸಿಕೊಳ್ಳಬೇಕೆಂದು ತಮಗೆ ಮೆಜಾರಿಟಿ ಇಲ್ಲ ಎಂದು ಡಿ. ಎಂ. ಕೆ. ಮತ್ತು ಮುಸ್ಲಿಂ ಲೀಗ್ ಬೆಂಬಲ ತೆಗೆದುಕೊಂಡು ಮೆಯರ್‌ಸ್ಥಾನ ತೆಗೆದುಕೊಂಡರು. ಈಗ ಇರತಕ್ಕಂಥ 63 ಜನ ಕೌನ್ಸಿಲರ್ಸ್ ಮೇಯರ್ ಡಿಕ್ಟೇಟರ್‌ಷಿಪ್‌ಗೆ ಒಳಗಾಗಿದ್ದಾರೆ. ಈಗ ಬೆಂಗಳೂರು ನಗರಾಡಳಿತ ಮೇಯರ್ ಕೈಯಲ್ಲಿ ಒಂದು ಡಿಕ್ಟೇಟರ್ ಷಿಪ್ ಇದ್ದಹಾಗೆ ಇದೆ. ಸರಿಯಾದ ಆಡಳಿತವಿಲ್ಲದೆ ಜನತೆ ತೊಂದರೆಗೊಳಗಾಗಿದ್ದಾರೆ. ಬೆಂಗಳೂರು ನಗರ ಕಾರ್ಪೋರೇಷನ್ ಆಡಳಿತದಲ್ಲಿ ಅನೇಕ ಲೋಪದೋಷಗಳು ಅವ್ಯವಹಾರಗಳು ನಡೆಯುತ್ತಾ ಇವೆ. ರಾತ್ರಿ 8 ಗಂಟೆಯವರೆಗೆ ಸಭೆ ನಡೆಸಿಕೊಂಡು ನಿರ್ಣಯವನ್ನು ಸರಿಯಾದ ರೀತಿಯಲ್ಲಿ ಮಂಡಿಸದೇ ತಮಗೆ ಇಷ್ಟಬಂದ ರೀತಿಯಲ್ಲಿ ನಿರ್ಣಯ ಮಾಡಿಕೊಳ್ಳುತ್ತಾರೆ. ಯಾವಾಗಲೂ ಕಾರ್ಪೋರೇಷನ್ ಈರೀತಿ ಆದರೆ ಇದನ್ನು ಮುಚ್ಚುವುದು ನ್ಯಾಯ ಎಂದು ಹೇಳುತ್ತೇನೆ. ಇದರ ಬಗ್ಗೆ ಕ್ರಮತೆಗೆದುಕೊಳ್ಳದೇ ಹೋದರೆ ಇದು ಕಾರ್ಪೋರೇಷನ್ ಆಡಳಿತವಾಗುವುದಿಲ್ಲ. ಕೆಲವೇ ಗುಂಪಿನ ಒಂದು ಆಡಳಿತವಾಗುತ್ತದೆ ಎಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಆಸಕ್ತಿವಹಿಸಬೇಕು. ಇಲ್ಲಿ ಆಗುತ್ತಾ ಇರತಕ್ಕಂತಹ ಅನ್ಯಾಯವನ್ನು ಸರಿಪಡಿಸುವುದಕ್ಕೆ ಆಗದೇ ಹೋದರೆ ಇದನ್ನು ಮುಚ್ಚುವುದು ಒಂದೇ ದಾರಿ. ಇಲ್ಲದೇ ಹೋದರೆ ಇದಕ್ಕೆ ಒಂದು ಕಾರ್ಯಕ್ರಮ ಹಾಕಿಕೊಳ್ಳಿ. ನಾವೂ ಕೂಡ ಪೂರ್ಣ ಬೆಂಬಲ ಕೊಟ್ಟು ಯೋಗ್ಯರನ್ನಾಗಿರುವವರನ್ನು ತರುವುದಕ್ಕೆ ಸಹಕಾರ ಕೊಡುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

(ಶ್ರೀ ಟಿ. ಆರ್. ಶಾಮಣ್ಣ)

ಈಗ ಬೆಂಗಳೂರು ನಗರ ಕಾರ್ಪೋರೇಷನ್ನಿನಲ್ಲಿ ಅನೇಕ ಲೋಪದೋಷಗಳು ಇವೆ. ಅದಕ್ಕಾಗಿ ಒಂದು ವಿಜಿಲೆನ್ಸ್ ಕಮಿಷನ್ನನ್ನು ಇಟ್ಟು ಅನೇಕರನ್ನು ಸಸ್ಪೆಂಡ್ ಮಾಡಿದ್ದಾರೆ. ವಿಚಾರಣೆ ಆಗುವುದು ಬಹಳ ನಿಧಾನವಾದರೆ ತಪ್ಪಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಈ ವಿಜಿಲೆನ್ಸ್ ಕಮಿಷನ್ನಿನ ರಿಪೋರ್ಟ್ ಬಗ್ಗೆ ತೀವ್ರ ಕ್ರಮ ತೆಗೆದುಕೊಂಡು ಕಾರ್ಪೋರೇಷನ್ ಆಡಳಿತ ಸರಿಹೋಗುವುದಕ್ಕೆ ಎಚ್ಚರಿಕೆ ವಹಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಲೋಕಲ್ ಬಾಡೀಸ್ ಬಗ್ಗೆ ಈ ಸಂದರ್ಭದಲ್ಲಿ ಹೇಳಬೇಕಾದರೆ ಲೋಕಲ್ ಬಾಡಿಸ್ ಕಾನ್‌ಫರೆನ್ಸ್ ಕರೆದು ಅವರ ಕಷ್ಟಸುಖಗಳನ್ನು ವಿಚಾರಿಸಿ ಅವರಿಗೆ ಏನು ಅನುಕೂಲ ಬೇಕೋ ಅದನ್ನು ಮಾಡಿಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಇದರ ಬಗ್ಗೆ ಕಾಮನ್ ಕೇಡರ್ ಫಾರ್ ಆಲ್ ಲೋಕಲ್ ಬಾಡೀಸ್ ಜಾರಿಗೆ ತರಬೇಕು ಅಂತ ಮಾಡಿದ್ದಾರೆ. ಇದರಲ್ಲಿ ಬೆಂಗಳೂರು ಕಾರ್ಪೋರೇಷನ್ ಬಿಟ್ಟುಹೋಗಿದೆ. ಇದನ್ನು ಸೇರಿಸಿ ಜಾರಿಗೆ ತರಬೇಕು. ಈಗ ಬೆಂಗಳೂರು ಕಾರ್ಪೋರೇಷನ್ ಇದೆ. ಹುಬ್ಬಳಿ ಕಾರ್ಪೋರೇಷನ್ ಇದೆ ಮೈಸೂರು ಮತ್ತು ಮಂಗಳೂರನ್ನು ಕಾರ್ಪೋರೇಷನ್ ಮಾಡಬೇಕು ಅಂತ ಯೋಚನೆ ಮಾಡಿದ್ದಾರೆ. ಆದುದರಿಂದ ಈ ಕಾರ್ಪೋರೇಷನ್‌ಗಳಿಗೆಲ್ಲಾ ಕಾಮನ್ ಕೇಡರನ್ನು ತರುವುದಕ್ಕೆ ಯೋಚನೆ ಮಾಡಿದರೆ ಕಾರ್ಪೋರೇಷನ್ನಿನ ಕೆಲಸಗಳೂ ಕೂಡ ಸಮರ್ಪಕವಾಗಿ ನಡೆಯುವುದಕ್ಕೆ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ನಮ್ಮ ಮಾನ್ಯ ಮಂತ್ರಿಗಳಾದ ಬಸವಲಿಂಗಪ್ಪನವರು ನನಗೆ ಬಹಳ ಆಪ್ತರು, ಆದರೆ ಅವರಿಗೆ ಒಂದು ಎಚ್ಚರಿಕೆಯನ್ನು ಕೊಡಬೇಕಾಗಿದೆ. ಶ್ರೀ ಬಸವಲಿಂಗಪ್ಪನವರು ದುಡುಕಿನಿಂದ ತೀರ್ಮಾನ ತೆಗೆದುಕೊಳ್ಳುತ್ತಿದ್ದಾರೆ. ಎಂದು ಕೆಲವರು ಆಡಿಕೊಳ್ಳುತ್ತಿದ್ದಾರೆ. ಆದುದರಿಂದ ಅವರು ಜನಗಳನ್ನು ವಿಶ್ವಾಸದಿಂದ ಸಂಪಾದನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಆರೀತಿ ಜನಗಳಿಗೆ ಒಂದು ಅನುಕೂಲ ಮಾಡಿಕೊಟ್ಟು ಅವರ ಬಗ್ಗೆ ಒಂದು ಹೆಚ್ಚಿನ ಆಸಕ್ತಿಯನ್ನು ವಹಿಸುತ್ತಾರೆಂದು ನಂಬಿಕೆ ಇಟ್ಟುಕೊಂಡಿದ್ದೇನೆ. ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

11-30 A. M.

† Smt. ADDY SALDANHA (Mangalore I).—Madam Speaker, I fully support the demand placed before the House. I have a few suggestions to make.

Mangalore was governed under the Madras Muncipalities Act when it was in the Madras State. But now although it is in Mysore State, it continues to be governed by the Madras Municipalities Act. So I request the Government of Mysore that the Mysore Municipalities Act should be brought into force in respect of Mangalore Municipality.

The TUKOL pay Commission pay scales have come into force in the State, but the lower paid staff like the typists, peons and bill collectors have not yet been paid under the TUKOL pay scales. So I request the Government to see that they also enjoy the TUKOL pay scales.

The Mangalore Municipality does not get enough grant for road maintenance and this is a city which has the heaviest rainfall. It has also a fertiliser factory and also the Port is coming up. So I request the Government that we should be given 3/4th's share of the Motor Vehicles Tax which the Government collects.

There are lots of drowning cases in Mangalore occurring frequently. The youth go to the Sea which is very dangerous. So I reqeust that the swimming pool should be granted to the Mangalore City.

There are no quarters for the village workers. I request Government to give houses for those workers.

Food adulteration is rampant in the State though there are laws to prevent adulteration. They are rarely in force. Municipalities should take keen interest in the health of citizens.

Unsanitary and filthy hotels are growing in a number of areas under various municipalities. It is a wonder how they can get licences for insanitary hotels. The Law laid down in this behalf should be tightened.

The Muuicipal Councils as they exist have no powers to spend any money without Government sanction towards public amenities. I feel that the Municipalities should be given powers of administration consistent with democratic privileges so that the citizens can enjoy civic amenities. The Municipalties should take some interest in developing civic conscience among children.

In regard to drainage, I feel they should be improved. The present drainage arrangement proves to be a death trap in the rainy season. In many of the towns, particularly in Mangalore, people have to wade through rain water on roads which will be knee-deep.

I also bring to the notice of the Government that the Housing Corporation in IV main road, Gandhinagar Bangalore, have sanctioned a lay-out for building houses for poor people. The proposal is almost at a stand-still for want of Government sanction. So I request the Government that this case should be considered and the Corporation be given permission to take up the lay-out.

There are public workers in Mangalore Corporation who are drawing Rs. 5 allowance per day. The Divisional Commissioner sent orders that they should be given Rs. 3.75 per day. So I request Government that the previous rate of Rs. 5 which they were drawing before should be given back to them.

There are cases of eviction of tenants in municipal areas. The land lords are using the Mysore Rent Control Act to evict poor tenants. The Act is intended to give protection to the tenants. The provisions of the Act have been utilised by the Law Courts, much to the disadvantage of tenants. It is therefore imperative to give complete protection to the tenants form eviction from their premises by suitably amending the Mysore Rent Control Act. Section 21 of the Act provides grounds on which a tenant could be evicted and it is unfortunate that such a section is misused by the landlords for evicting the tenants. I suggest that the tenants should be allowed to keep the premises till they pay the rental to the landlord. The other grounds mentioned in the said section shall be deleted.

(SMT. ADDY SALDANHA)

Though there is a Beggar Prevention Act in force in Municipal areas, beggar nuisance is growing. Since it is not definitely mentioned in the Act as to who is to enforce this law, it is not properly implemented in practice. This ambiguity should be cleared.

Slums are growing throughout the State in metropolitan areas and most of the beautiful parks are disappearing. Some parts of the city in Bangalore do not have drinking water facility. The supply stops at 7 A.M. and they should be waiting till 6 P.M. and throughout the whole day there will be no supply and taps are dry. I request that the people of the city should be provided w th enough water facilities and they should not be made to suffer for want of drinking water.

Before I conclude, I thank the Chair for giving me this opportunity to speak.

†ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ).—ಮಾನ್ಯ ಸಭಾಧ್ಯಕ್ಷರೇ, ಪೌರಾಡಳಿತ
ಸಚಿವರು ಮಂಡಿಸಿರತಕ್ಕ ಬೇಡಿಕೆಯನ್ನು ಅನುಮೋದಿಸುತ್ತ ನಗರಗಳ ಮತ್ತು ಪಟ್ಟಣಗಳ
ಅಭಿವೃದ್ಧಿ ಬಗ್ಗೆ ಯೋಚನೆ ಮಾಡಿ, ವರ್ಷೇ ವರ್ಷೇ ಅಥವಾ ಐದು ವರ್ಷಕ್ಕೆ ಅಥವಾ ಹತ್ತು
ವರ್ಷಕ್ಕೆ ಜನಗಳಿಗೆ ಅನುಕೂಲವಾಗತಕ್ಕ ರಸ್ತೆಗಳಾಗಲೀ, ಇತರ ಸೌಲಭ್ಯಗಳಾಗಲೀ, ಮಾಡ
ಬೇಕು ಎಂದು ಯೋಜನೆ ಮಾಡತಕ್ಕ ಟೌನ್ ಪ್ಲಾನಿಂಗ್ ಸ್ಕೀಮ್ ಹತ್ತು ಸಾವಿರ ಜನಸಂಖ್ಯೆ
ಇರತಕ್ಕ ನಗರಗಳಿಗೆ ಇಡತಕ್ಕುದು ದೇಶದ ಹಿತದೃಷ್ಟಿಯಿಂದ ಬಹಳ ಒಳ್ಳೆಯದು ಎಂದು ಹೇಳು
ತ್ತೇನೆ, ಮಹಾರಾಷ್ಟ್ರ ಮತ್ತು ನಮ್ಮ ದೇಶದ ಅನೇಕ ಕಡೆ ಈ ರೀತಿ ಇದೆ. ನಾನು ಉದಾಹರಣೆಗೆ
ಹೇಳುವುದಾದರೆ, ಬೆಂಗಳೂರು ನಗರವನ್ನೇ ತೆಗೆದುಕೊಳ್ಳೋಣ. ಇಲ್ಲಿ ಟ್ರಸ್ಟ್ ಬೋರ್ಡ್,
ಹಾಗೂ ನಗರ ಕಾರ್ಪೊರೇಷನ್ ಮತ್ತು ಹೌಸಿಂಗ್ ಬೋರ್ಡ್ ಈ ಮೂರೂ ಇವೆ. ಆದರೆ
ಒಂದಕ್ಕೊಂದಕ್ಕೆ ಹೊಂದಾಣಿಕೆ ಇಲ್ಲ. ಇವರು ಮಾಡತಕ್ಕ ಲೇ ಔಟ್‌ಗೂ ಅವರು ಮಾಡತಕ್ಕ ಲೇ
ಔಟ್‌ಗೂ ರಸ್ತೆಗಳ ಅಳತೆ ಮತ್ತು ಹೊಂದಾಣಿಕೆಯಲ್ಲಿ ಒಂದಕ್ಕೊಂದಕ್ಕೆ ಸಂಬಂಧಗಳಿಲ್ಲದ ರೀತಿಯಲ್ಲಿ
ಇವೆ. ಟ್ರಸ್ಟ್ ಬೋರ್ಡ್ ಆಕ್ಟ್‌ನಲ್ಲಿ ಲೇ ಔಟ್ ಅಪ್ರೂವ್ ಮಾಡುವಾಗ ಕಾರ್ಪೊರೇಷನ್ನನ್ನು ಕೇಳ
ಮಾಡಬೇಕೆಂದು ಇದ್ದರೂ ಕೂಡ, ಅವರು ಪ್ಲಾನ್ ವಗೈರೆ ಕಳುಹಿಸಿಕೊಟ್ಟರೂ ಕೂಡ ಅದು ಸರಿ
ಯಾಗಿದೆಯೇ ಇಲ್ಲವೇ ಎನ್ನುವ ಹವ್ಯಾಸಕ್ಕೆ ಕೂಡ ಕಾರ್ಪೊರೇಷನ್ ಹೋಗುತ್ತಿಲ್ಲ ಎಂದು ಅನೇಕ
ವರ್ಷಗಳ ಅನುಭವದಿಂದ ಹೇಳುತ್ತಿದ್ದೇನೆ. ಇದರಿಂದ ನಗರ ಯದ್ವಾತದ್ವಾ ಬೆಳೆಯುವುದಕ್ಕೆ
ಕಾರಣವಾಗಿದೆ. ನಗರ ಯೋಜಿತವಾಗಿ ಬೆಳೆಯುವುದಕ್ಕೆ, ಅಚ್ಚುಕಟ್ಟಾದ ನಗರವಾಗಿ ಬೆಳೆಯುವು
ದಕ್ಕೆ ಸಾಧ್ಯವಾಗಲ ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶಾಮಣ್ಣನವರು ಹೇಳಿದ ಒಂದು ವಿಷಯವನ್ನು
ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರೈವೇಟ್ ಲೇ ಔಟ್ಸ್ ಮಾಡಿರುವವರು ಒಂದು ಚದರ ಗಜಕ್ಕೆ
10 ರೂಪಾಯಿ, 15 ರೂಪಾಯಿ ಪ್ರಕಾರ ಸೈಟುಗಳನ್ನು ಕೊಡುವಾಗ ಟ್ರಸ್ಟ್ ಬೋರ್ಡಿನವರು 25
ರೂಪಾಯಿಗಳ ಪ್ರಕಾರ ಏಕೆ ಕೊಡಬೇಕು ಎಂದು ಗೊತ್ತಾಗುವುದಿಲ್ಲ. ಟ್ರಸ್ಟ್ ಬೋರ್ಡಿನವರು
ಒಪ್ಪಿದ ಪ್ಲಾನ್ ಪ್ರಕಾರ, ನಿಮ್ಮ ಎಸ್ಟಿಮೇಟ್ ಪ್ರಕಾರ ರಸ್ತೆ ಇತ್ಯಾದಿ ಕೆಲಸಗಳನ್ನು ಮಾಡು
ವಾಗ ಪ್ರೈವೇಟ್‌ನವರು ಕೊಡುವುದಕ್ಕಿಂತ ಹೆಚ್ಚಾಗಿ ಎಂದಗೆ ಒಂದು ಚದರ ಗಜಕ್ಕೆ 25
ರೂಪಾಯಿ ದರವನ್ನು ತೆಗೆದುಕೊಳ್ಳುವುದು ಏಕೆ ಎಂದು ಅರ್ಥವಾಗುತ್ತಿಲ್ಲ. ಇದರಿಂದ ಒಂದು
ಚದರ ಗಜಕ್ಕೆ 10 ರೂಪಾಯಿ ಜಾಸ್ತಿಯಾಗುತ್ತದೆ. ಪ್ರೈವೇಟ್ ವ್ಯಕ್ತಿಗಳ ಅನುಕೂಲಕ್ಕೆ ನಾನು
ಮಾತನಾಡುತ್ತಿದ್ದೇನೆಂದು ಯಾರೂ ಭಾವಿಸಬಾರದು. ಟ್ರಸ್ಟ್ ಬೋರ್ಡಿನವರು ಸೈಟುಗಳನ್ನು
ಕೊಡುವಾಗ ಲಾಭ ನಷ್ಟವಿಲ್ಲದ ರೀತಿಯಲ್ಲಿ ವ್ಯವಹಾರ ಮಾಡಬೇಕೆಂದು ಇದ್ದರೂ ಕೂಡ ಲಾಭಕರ
ವಾಗಿ ಕೆಲಸ ಮಾಡಲು ಕಾರಣವಾದರೂ ಏನು ? ಇಷ್ಟೇ ಅಲ್ಲ, ಭೂಮಿಯ ಧಾರಣೆಯನ್ನು ನೀವೆ
ಜಾಸ್ತಿ ಮಾಡುವುದರಿಂದ ಇತರೇ ಜನರಿಗೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಕೂಡ
ಹೇಳುತ್ತೇನೆ. ಟ್ರಸ್ಟ್ ಬೋರ್ಡಿನವರು 25 ರೂಪಾಯಿದರದಲ್ಲಿ ಸೈಟುಗಳನ್ನು ಹಂಚುವುದಾದರೆ,
ಬಡವರಿಗೆ ಸೈಟುಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳುತ್ತೇನೆ. ಈ
ಎಲ್ಲದೃಷ್ಟಿಯಿಂದಲೂ ಪರಿಶೀಲನೆ ಮಾಡಿ, ಪ್ರೈವೇಟ್ ಲೇ ಔಟ್ ಮಾಡುವವರು ನೀವು ಒಪ್ಪಿಗೆ

ಕೊಟ್ಟ ಪ್ಲಾನ್ ಪ್ರಕಾರ ಕೆಲಸಕಾರ್ಯಗಳನ್ನು ಮಾಡಿ ಯಾವ ದರದಲ್ಲಿ ಕೊಡಬಲ್ಲರೋ ಅದೇ ದರದಲ್ಲಿ ಏಕೆ ಕೊಡುವುದಕ್ಕಾಗುವುದಿಲ್ಲ ಎನ್ನುವುದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು. ಹಾಗಿಲ್ಲದೆಇದ್ದರೆ, ಬಡವರಿಗೆ, ಹಿಂದುಳಿದ ಜನಾಂಗಗಳವರಿಗೆ, ಹಣಕಾಸಿನ ಪರಿಸ್ಥಿತಿಯಿಂದ ಹಿಂದಿರುವವರಿಗೆ ಟ್ರಸ್ಟ್ ಬೋರ್ಡಿನಿಂದ ಸೈಟುಗಳು ಸಿಕ್ಕಲಾರದು ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಟ್ರಸ್ಟ್ ಬೋರ್ಡಿನವರು ಅನೇಕ ಕಡೆ ಸೊಸೈಟಿಗಳಿಗೆ ಮಾನ್ಯತೆ ಕೊಟ್ಟು, ಜಾಗ ಕೊಂಡುಕೊಳ್ಳಿ ಎಂದು ಹೇಳಿದ್ದಾರೆ. ಅದರಂತೆ ಅವರು ಜಾಗ ಕೊಂಡುಕೊಂಡು ಅದರ ಮೇಲೆ ಸಾಲ ತೆಗೆದುಕೊಂಡಿದ್ದಾರೆ. ಅವರೆಲ್ಲ ಯಾರು ಎಂದರೆ ಬೆಂಗಳೂರಿನ ಸುತ್ತಮುತ್ತ ಇರುವ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು.

ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಿಗೆ ಇನ್ನೊಂದು ವಿಷಯವನ್ನು ಹೇಳಬೇಕಾಗಿದೆ. ಒಂದು ಕಾನೂನುಮಾಡಿ ಐನು ನೂರು ರೂಪಾಯಿಗಳ ಮೇಲ್ಪಟ್ಟು ವರಮಾನ ಬರತಕ್ಕವರಿಗೆ ಈ ಸೊಸೈಟಿಯವರು ಸೈಟುಗಳನ್ನು ಕೊಡಬಾರದು ಎಂದು ಹೇಳಿ. ಹಾಗಿಲ್ಲದೆ ಹೋದರೆ, ಟ್ರಸ್ಟ ಬೋರ್ಡು ಕಾನೂನಿನಲ್ಲಿ ಕಾರ್ಮಿಕರಿಗೆ ಐದು ಪರ್ಸೆಂಟು ಸೈಟು ಕೊಡಬೇಕು ಎಂದು ಮಾಡಿ. ಲೇಔಟ್ ಮಾಡಿದಾಗ ಅಪ್ರೂವಲ್ ಕೊಟ್ಟಂಥ ಸೊಸೈಟಿಗಳಿಗೆ ಮತ್ತೆ ಅಡಚಣೆ ಮಾಡುವ ವಿಷಯಕ್ಕೆ ಕೈಹಾಕಬಾರದು ಎಂದು ಹೇಳುತ್ತೇನೆ. ಸೈಟುಗಳನ್ನು ನೀವಾಗಿ ಕೊಡುವುದಿಲ್ಲ. ಅವರು ಮಾಡತಕ್ಕ ಸೈಟುಗಳಿಗೆ ಅಪ್ರೂವಲ್ ಕೊಡದಿದ್ದರೆ, ನಗರಗಳಲ್ಲಿ ಗುಡಿಸಲುಗಳು ಬೆಳೆಯುತ್ತವೆ, ಅನೇಕ ವ್ಯಾಧಿಗಳಿಗೆ ಅವಕಾಶವಾಗುತ್ತದೆ. ಈ ದೃಷ್ಟಿಯಿಂದ ಆದರೂ ಕೂಡ ತಾವು ನೋಡಬೇಕು ಎಷ್ಟೋ ಕಾರ್ಖಾನೆಗಳು ಬೆಳೆಯುತ್ತವೆ ಆದರೆ ಅಲ್ಲಿ ಕೆಲಸ ಮಾಡುವ ಕಾರ್ಮಿಕ ಕುಟುಂಬಕ್ಕೆ ಟ್ರಸ್ಟ್‌ಬೋರ್ಡು ಅಥವಾ ಹೌಸಿಂಗ್‌ಬೋರ್ಡುನವರು ಸೈಟುಗಳನ್ನು ಒದಗಿಸಿಕೊಡುತ್ತಾ ಇಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಯಾವ ಒಂದು ಪರಿಹಾರವೂ ಇಲ್ಲವೆ ಕೈಗಾರಿಕೆಗಳನ್ನು ನಗರಗಳಲ್ಲಿ ಹೆಚ್ಚಾಗಿ ಮಾಡಬಾರದು. ನಗರದ ಸುತ್ತ ಮಾನ್ಯ ಮಂತ್ರಿಗಳು ಆರೋಗ್ಯ ಮಂತ್ರಿಗಳು, ಅರ್ಥಿಕ ಮಂತ್ರಿಗಳು ಹೋಗಿ ಬಂದು ನಗರ ಯಾವ ರೀತಿ ಬೆಳೆಯುತ್ತಿದೆ ಎನ್ನುವುದನ್ನು ಪರೀಕ್ಷೆ ಮಾಡಿದರೆ ಒಳ್ಳೆಯದು. ಪ್ಯಾಲೇಸ್ ಆರ್ಚರ್ಡ್ ನೋಡಿ ಬೆಂಗಳೂರು ಚೆನ್ನಾಗಿ ಬೆಳೆದಿದೆ ಎಂದು ತಪ್ಪು ತಿಳಿದುಕೊಳ್ಳಬಾರದು. ಬೆಂಗಳೂರು ನಗರದ ಸುತ್ತ ಮುತ್ತ ಸುಮಾರು 10 ಮೈಲಿಗಳವರೆಗೆ ತರಕಾರಿ ಮತ್ತು ಬತ್ತ ಬೆಳೆಯುವುದರಿಂದ ಅನೇಕ ರೀತಿಯ ರೋಗಗಳನ್ನು ತಡೆಹಿಡಿಯುವುದಕ್ಕೆ ಸಾಧ್ಯವಾಗಲಿಕ್ಕಿಲ್ಲ. ಮಾನ್ಯ ಮಂತ್ರಿಗಳು ಹಿಂದೆ ನಗರಸಭಾ ಸದಸ್ಯರಾಗಿದ್ದರು. ತಮಗೆ ಅನುಭವ ಇದೆ, ತಮ್ಮಷ್ಟೇ ಅನುಭವ ಬಾಕಿ ಮಂತ್ರಿಗಳಿಗೂ ಆಗಬೇಕು ಎನ್ನುವ ದೃಷ್ಟಿಯಿಂದ ಹೇಳುತ್ತೇನೆ. ಬೆಂಗಳೂರಿನಲ್ಲಿ ಯಾವ ರೀತಿ ಸೊಳ್ಳೆಗಳನ್ನು ಕಡಿಮೆ ಮಾಡಬೇಕು ಎಂದು ಸಲಹೆ ಮಾಡುವ ಕಮಿಟಿಗೆ ನನ್ನನ್ನು ಸದಸ್ಯನನ್ನಾಗಿ ಹಾಕಿದ್ದಾರೆ, ಸಂತೋಷ ಕಮಿಟಿಯ ಮುಖಾಂತರ ಈ ಸೊಳ್ಳೆಯ ಕಾಟವನ್ನು ತಪ್ಪಿಸಲಿಕ್ಕೆ ಮೂರು ಕೋಟಿ ರೂಪಾಯಿಗಳನ್ನು ಒದಗಿಸಬೇಕು. ಅಲ್ಲದೆ ಟ್ರಸ್ಟಬೋರ್ಡು, ಹೌಸಿಂಗ್‌ಬೋರ್ಡು ಮತ್ತು ಕಾರ್ಪೋರೇಷನ್ ಈ ಮೂರರಕ್ಕೂ ಸಂಪರ್ಕ ಮಾಡತಕ್ಕ ಒಂದು ಬೋರ್ಡು ಆಗಬೇಕು. ಯಾವ ರೀತಿಯಿಂದ ನಗರವನ್ನು ಬೆಳೆಸಬೇಕು ಎಂದು ಪ್ಲಾನ್ ಮಾಡಬೇಕಾದರೆ, ಮೂರು ಸಂಸ್ಥೆಗಳೂ ಒಟ್ಟಿಗೆ ಕೆಲಸ ಮಾಡಬೇಕು. 30 ದಿವಸದೊಳಗೆ ಲೇಔಟ್ ಮಾಡಬೇಕೇ, ಬಿಡಬೇಕೇ ಎನ್ನುವ ವಿಷಯ ಇತ್ಯರ್ಥ ಮಾಡಬೇಕು. ಈಗ ಏನಾಗಿದೆ ಎಂದರೆ, ಟ್ರಸ್ಟ್‌ಬೋರ್ಡು ಅಪ್ರೂವ್ ಮಾಡದೆ ಇರುವುದನ್ನು ಕಾರ್ಪೋರೇಷನ್ ಅಪ್ರೂವ್ ಮಾಡುತ್ತಾರೆ. ಕಾರ್ಪೋರೇಷನ್ ಅಪ್ರೂವ್ ಮಾಡದೇ ಇರುವುದನ್ನು ಟ್ರಸ್ಟ್ ಬೋರ್ಡು ಅಪ್ರೂವ್ ಮಾಡುತ್ತದೆ. ಈ ರೀತಿ ಆಗಬಾರದು.

ಇನ್ನೊಂದು ವಿಚಾರ ಸರ್ಕಾರದವರು ವಾಟರ್‌ಬೋರ್ಡು ಮಾಡಿದ್ದಾರೆ. ಅವರು ತೆರಿಗೆ ವಸೂಲು ಮಾಡುತ್ತಿದ್ದಾರೆ. ಬೆಂಗಳೂರು ಪೌರರಿಂದ ಟ್ಯಾಕ್ಸ್ ಕಲೆಕ್ಟ ಮಾಡುತ್ತಾರೆ, ಆದರೆ ಅವರಿಗೆ ನೀರು ಕೊಡದಿದ್ದರೆ ಯಾವ ಮುಖದಿಂದ ಟ್ಯಾಕ್ಸ್ ಕಲೆಕ್ಟ ಮಾಡುತ್ತಾರೆ? ಇದು ನನ್ನ ಒಂದು ಕ್ಷೇತ್ರದ ಪ್ರಶ್ನೆಯಲ್ಲ, ಲಕ್ಷಾಂತರ ಮನೆಗಳಿಂದ ವಾಟರ್ ಟ್ಯಾಕ್ಸ್ ತೆಗೆದುಕೊಳ್ಳುತ್ತಾರೆ, ವಿದ್ಯಾಭ್ಯಾಸದ ಟ್ಯಾಕ್ಸ್ ರೀಡೀಂಗ್ ರೂಮು ಟ್ಯಾಕ್ಸ್ ಈ ರೀತಿ ಟ್ಯಾಕ್ಸ್ ತೆಗೆದುಕೊಳ್ಳುತ್ತಾರೆಯೇ ವಿನಹ ಅವರಿಗೆ ಯಾವ ವಿಧವಾದ ಸೌಲಭ್ಯವನ್ನು ಒದಗಿಸುತ್ತಿಲ್ಲ. ಜನರು ಸಿವಿಲ್ ಕೋರ್ಟು ನಲ್ಲಿ ಕೇಸ್ ಹಾಕಿದರೆ, ಈ ಟ್ಯಾಕ್ಸ್ ವಸೂಲು ಮಾಡುವುದಕ್ಕಾಗುವುದಿಲ್ಲ. ಯಾವ ಸೌಲಭ್ಯವನ್ನು ಕೊಡದೆ ಹಣವನ್ನು ವಸೂಲು ಮಾಡುತ್ತಿದ್ದರೆ ಹೇಗೆ ಸಾಧ್ಯ? ಟ್ಯಾಕ್ಸ್ ಕೊಡುವವರಿಗೂ ಆರೋಗ್ಯದಿಂದ ಇರುವುದಕ್ಕೆ ಸಾಧ್ಯವಿಲ್ಲ, ಟಾಕ್ಸ್ ಕೊಡದೆ ಇರತಕ್ಕವರೂ ಆರೋಗ್ಯದಿಂದ ಇರುವುದಕ್ಕೆ ಸಾಧ್ಯವಿಲ್ಲ, ಆರೀತಿ ಯಾಗಿದೆ. ಈ ದೃಷ್ಟಿಯಿಂದ ಎಲ್ಲೆಲ್ಲಿ 10 ಸಾವಿರ ಜನಸಂಖ್ಯೆ

(ಶ್ರೀ ಕೆ. ಶ್ರೀರಾಮು)

ಇರತಕ್ಕ ನಗರಗಳಿಗೆ ಒಂದು ಯೋಜನೆ ತಯಾರು ಮಾಡಿ ಟೌನ್‌ಪ್ಲಾನಿಂಗ್ ಸೆಕ್ಷನ್ ಮುಖಾಂತರ ನಗರಗಳನ್ನು ಅಭಿವೃದ್ಧಿ ಮಾಡಬೇಕು ಎಂದು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಈಗ ನಮ್ಮ ಮುಂದಿರತಕ್ಕ ಹಲವಾರು ಬೇಡಿಕೆಗಳನ್ನು ಮಾನ್ಯ ಪೌರಾಡಳಿತ ಸಚಿವರು ಮಂಡಿಸಿದ್ದಾರೆ. ಇದರ ಬಗ್ಗೆ ಚರ್ಚೆ ಮಾಡತಕ್ಕ ಕಾಲದಲ್ಲಿ ಮೊದಲನೆಯದಾಗಿ ಪೌರಾಡಳಿತ ಸಚಿವರನ್ನು ಅಭಿನಂದಿಸುತ್ತೇನೆ. ಕಾರಣವಾವರೂ ಇಷ್ಟೆ, ಸ್ಕ್ಯಾವೆಂಜರ್ಸ್‌ಗಳ ಸರ್ವಿಸಸ್ ಬಗ್ಗೆ ಇಷ್ಟು ವರ್ಷಗಳ ಕಾಲ ಅವರು ಪಡುತ್ತಿದ್ದಂಥ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಅವರು ಹುದ್ದೆಗಳನ್ನು ಖಾಯಂ ಮಾಡುತ್ತೇವೆ ಎನ್ನುವ ಘೋಷಣೆಯನ್ನು ಮಾಡಿದ್ದಾರೆ. ಸರ್ಕಾರಿ ಅಧಿಕಾರಿಗಳಿಗೆ ಏನೇನು ಸೌಲಭ್ಯಗಳಿವೆಯೋ ಅವನ್ನು ಇವರಿಗೂ ಕೂಡ ಕೊಡತಕ್ಕ ಬಗ್ಗೆ ಸರ್ಕಾರ ನಿರ್ದಿಷ್ಟವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತದೆ ಎಂದು ಹೇಳಿದ್ದಾರೆ. ಆದ್ದರಿಂದ ಇವರನ್ನು ಅಭಿನಂದಿಸಬೇಕಾಗಿದೆ. ಈವೊತ್ತು ಮಾನ್ಯ ಸಚಿವರು ಬಹುಶಃ ಹೌಸಿಂಗ್ ವಿಷಯದಲ್ಲಿ ಹೆಚ್ಚು ಪ್ರಸ್ತಾಪ ಮಾಡಿದ್ದಾರೆ. ಚರ್ಚೆಮಾಡುವುದಕ್ಕಿಂತ ಮುಂಚೆ ಒಂದು ವಿಚಾರ ಹೇಳಬೇಕಾಗಿದೆ. ಅವರು ಅಧಿಕಾರ ವಹಿಸಿಕೊಂಡ ತರುಣದಲ್ಲಿ ಹೆಚ್ಚು ಉತ್ಸಾಕತೆಯಿಂದ ಹಲವಾರು ಲೋಪದೋಷಗಳಿರುವುದನ್ನು ಹೊರಗೆಡುವುದಕ್ಕೆ ಪ್ರಯತ್ನ ಮಾಡಿದರು. ನಿಜವಾಗಿಯೂ ಅದು ಒಳ್ಳೆಯ ಕೆಲಸ. ಕಾರ್ಪೊರೇಷನ್‌ನಲ್ಲಿ ಒಂದೂವರೆ ಎರಡು ಕೋಟಿ ರೂಪಾಯಿ ಅವ್ಯವಹಾರ ನಡೆದಿದೆ, ಟ್ರಸ್ಟ್ ಬೋರ್ಡಿನಲ್ಲಿ ಒಂದು ಕೋಟಿ ರೂಪಾಯಿವರೆಗೆ ಲೆಕ್ಕ ಪತ್ರ ನಾಪತ್ತೆಯಾಗಿದೆ, ಎಂದು ಹೇಳಿ ಇದಕ್ಕೆ ಪ್ರೋಬ್ ಆರ್ಡರ್ ಅನ್ನು ಶರವೇಗದಲ್ಲಿ ಮಾಡಿದರು. ಮೂರು ತಿಂಗಳಲ್ಲಿ ಇಷ್ಟೆಲ್ಲಾ ಪತ್ತೆ ಹಚ್ಚಿದರು ಅದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಅದಾದಮೇಲೆ, ಕೆಲವು ಕಾಗದ ಪತ್ರಗಳು ನಾಪತ್ತೆಯಾಗಿಲ್ಲ ಸ್ಟೈರು ವಿರೆ ಆಗಿವೆ ಎನ್ನುವ ಮರು ಹೇಳಿಕೆಯನ್ನು ನೀಡಿದರು. ತಾವು ಮಂತ್ರಿಗಳು ಇದರ ಬಗ್ಗೆ ತಮ್ಮ ಉತ್ತರದಲ್ಲಿ ಸ್ಪಷ್ಟೀಕರಣ ಮಾಡಬೇಕು. ಏಕೆಂದರೆ ಕಾಂಗ್ರೆಸ್ ಆರ್, ಆಡಳಿತಕ್ಕೆ ಬಂದ ತರುಣದಲ್ಲಿ ಹಿಂದಿನ ಸರ್ಕಾರಗಳಿಂದ ಅನಾಹುತ ನಡೆದುಕೊಂಡು ಬಂದಿದೆ ಎನ್ನುವ ಧಾಟಿಯಲ್ಲಿ ಹೇಳಿದ್ದಾರೆ. ಕಾರ್ಪೊರೇಷನ್‌ನಲ್ಲಿ ಒಂದೂವರೆ ಕೋಟಿ ರೂಪಾಯಿ ಹೋಯಿತು ಟ್ರಸ್ಟ್ ಬೋರ್ಡಿನಲ್ಲಿ ಒಂದು ಕೋಟಿ ಹೋಯಿತು, ಪಿ ಡಬ್ಲ್ಯೂಡಿಯಲ್ಲಿ ಹೀಗೆ ಆಗಿದೆ, ಹಿಂದಿನ ಸರ್ಕಾರದ ಮುಖ್ಯ ಮಂತ್ರಿಗಳು ಹಣವನ್ನು ಜೇಬಿನಲ್ಲಿ ಇಟ್ಟುಕೊಂಡು ಹೋದರು ಎನ್ನುವ ಧಾಟಿಯಲ್ಲಿ ಸರ್ಕಾರದಿಂದ ಹೇಳಿಕೆ ಕೊಟ್ಟುಕೊಂಡು ಹೋದರು. ಇದರ ಬಗ್ಗೆ ತಮ್ಮ ಹೇಳಿಕೆಯ ವಿವರಣೆಯನ್ನು ಕೊಡಬೇಕೆಂದು ಹೇಳುತ್ತೇನೆ. ಇದರ ಜೊತೆಗೆ ಕಾರ್ಪೊರೇಷನ್‌ನಲ್ಲಿ ಕೆಲವು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೀರಿ ಎಂದು ಕೇಳಿದ್ದೇನೆ. ತಾವು ಕೆಲವು ತಾಂತ್ರಿಕ ವಿಭಾಗಕ್ಕೆ ಸೇರಿದ ಅಧಿಕಾರಿಗಳನ್ನು ಮಾತ್ರ ಸಸ್ಪೆಂಡ್ ಮಾಡಿದ್ದೀರಿ ಆದರೆ ಲೆಕ್ಕಪತ್ರ ಇಲಾಖೆಗೆ ಸೇರಿದವರು, ಈ ವ್ಯವಹಾರಗಳಿಗೆ ಸಂಬಂಧಪಟ್ಟವರು ಹಲವರು ಇದ್ದಾರೆ. ಈ ವ್ಯವಹಾರಕ್ಕೆ ಸಂಬಂಧಪಟ್ಟ ರಿಜಿಸ್ಟರ್‌ಗಳೂ, ನಾಪತ್ತೆಯಾಗಿದ್ದರೆ, ಸಂಬಂಧಪಟ್ಟ ದಾಖಲಾತಿಗಳು ನಾಪತ್ತೆಯಾಗಿರತಕ್ಕ ಅಧಿಕಾರಿಗಳನ್ನು ಏತಕ್ಕೆ ಬಿಟ್ಟಿದ್ದೀರಿ? ಅವರ ಮೇಲೆ ತಾವು ಆಕ್ಷನ್ ತೆಗೆದುಕೊಳ್ಳಬೇಕಾಗುತ್ತದೆ. ವಿಜಿಲೆನ್ಸ್ ಕಮಿಷನ್‌ನವರು ಕೊಟ್ಟಿರತಕ್ಕ ರಿಪೋರ್ಟಿನ ಆಧಾರದ ಮೇಲೆ ತಾವು ಕ್ರಮ ತೆಗೆದುಕೊಂಡಿದ್ದೀರಿ, ಎಂದು ಕೇಳಿದ್ದೇನೆ. ಎಲ್ಲಾ ಅಧಿಕಾರಿಗಳ ಬಗ್ಗೆ ಒಂದೇ ಧಾಟಿಯಲ್ಲಿ ಹೋಗಿದ್ದೀರಿ. ಕೆಲವು ಅಧಿಕಾರಿಗಳು 8–10–15 ದಿವಸ ಮುಂಚೆ ಚಾರ್ಜ್ ತೆಗೆದುಕೊಂಡವರನ್ನು ಕೂಡ ಸಸ್ಪೆಂಡ್ ಮಾಡಿದ್ದೀರಿ ಎಂದು ಕೇಳಿದ್ದೇನೆ. ಸರ್ಕಾರ ಒಂದು ನಿರ್ಣಯ ತೆಗೆದುಕೊಳ್ಳತಕ್ಕ ಕಾಲದಲ್ಲಿ ಹೀಗೆ ಹೋಗಬಾರದು. ಎನ್ನುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಮಾನ್ಯ ಮಂತ್ರಿಗಳು ಡೆಲ್ಲಿಯಲ್ಲಿ ಆಗಸ್ಟ್ 15ರೊಳಗೆ ಒಂದು ಲಕ್ಷ ಸೈಟುಗಳನ್ನು ವಿತರಣೆ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಈ ಮಾತನ್ನು ಅವರು ಈ ಸಭೆಯಲ್ಲಿ ಹೇಳಬೇಕಾಗಿತ್ತು. ದೆಹಲಿಯಲ್ಲಿ ಹೇಳಿದ ಔಚಿತ್ಯದ ಬಗ್ಗೆ ನಾನು ಹೇಳುವುದಿಲ್ಲ, ಇನ್ನು 20 ದಿವಸ ಅಥವಾ ಒಂದು ತಿಂಗಳ ಅವಧಿಯಲ್ಲಿ ಇಷ್ಟು ಸೈಟುಗಳನ್ನು ಹಂಚತಕ್ಕದ್ದು ಬರೀ ಪತ್ರಿಕಾ ಘೋಷಣೆ ಆಗಬಾರದು. ಯಾವ ಯಾವ ಜಿಲ್ಲೆಯಲ್ಲಿ ಹಂಚುವುದಕ್ಕೆ ವ್ಯವಸ್ಥೆ ಮಾಡಿಕೊಂಡಿದ್ದೀರಿ ಎನ್ನುವುದನ್ನು ಈಗ ತಿಳಿಸಬೇಕು ಎಂದು ಹೇಳುತ್ತೇನೆ. ಹಿಂದಿನ ಸರ್ಕಾರದವರು ಅರ್ಬನ್ ಡೆವಲಪ್‌ಮೆಂಟ್ ಬೋರ್ಡ್ ಅನ್ನು ಕಾನ್‌ಸ್ಟಿಟ್ಯೂಟ್ ಮಾಡಿದ್ದಾರೆ. ಅದರ ಕೆಲಸ ಯಾವ ರೀತಿಯಲ್ಲಿ ಮುಂದುವರಿಯುತ್ತಿದೆ ಎನ್ನುವುದನ್ನೂ ತಿಳಿಸಬೇಕು. ಬಹುಶ: ತಾವು ಪೌರಾಡಳಿತ

ಸಚಿವರಾಗಿರುವುದರಿಂದ ತಾವು ಅದಕ್ಕೆ ಚೇರ್ಮನ್ ಆಗಿರಬೇಕೆಂದು ತಿಳಿದುಕೊಂಡಿದ್ದೇನೆ. ಅದರ ಕಾರ್ಯ ಎಷ್ಟರಮಟ್ಟಿಗೆ ಮುಂದೆ ಸಾಗಿದೆ ಎನ್ನುವುದನ್ನು ತಿಳಿಸಬೇಕು. ರಾಜ್ಯದಲ್ಲಿರತಕ್ಕ ಹಲವಾರು ಚಿಕ್ಕ ಚಿಕ್ಕಪಟ್ಟಣಗಳ ಅಭಿವೃದ್ಧಿ ಅಷ್ಟೊಂದು ಪ್ರಗತಿದಾಯಕವಾಗಿಲ್ಲ. ಈಗ ಬಹಶ: ಹತ್ತು ಸಾವಿರ ಪ್ರಜಾ ಸಂಖ್ಯೆಗೆ ಮೇಲ್ಪಟ್ಟು ಇರತಕ್ಕ ನಗರಗಳಿಗೆ ಇದರ ವ್ಯಾಪ್ತಿ ಬರುತ್ತದೆ ಎಂದು ನನ್ನ ಅಭಿಪ್ರಾಯ. ಎಲ್ಲಾ ಪಟ್ಟಣಗಳು ಮತ್ತು ನಗರಗಳ ಅಭಿವೃದ್ಧಿ ಉತ್ತಮ ರೀತಿಯಲ್ಲಿ ಆಗತಕ್ಕ ಬಗ್ಗೆ ಕಾರ್ಪೋರೇಷನ್ ಏನೇನು ಕ್ರಮ ತೆಗೆದುಕೊಂಡಿದೆ ಎನ್ನುವುದನ್ನು ದಯವಿಟ್ಟು ತಿಳಿಸಬೇಕೆಂದು ಹೇಳುತ್ತೇನೆ.

ಆಮೇಲೆ ರೂರಲ್ ಹೌಸಿಂಗ್ ಬಗ್ಗೆ ತಾವು ಕೊಟ್ಟಿರತಕ್ಕ ಹಣ ಅತ್ಯಲ್ಪ. ಚೇರ್‌ಮನ್, ರೂರಲ್ ಹೌಸಿಂಗ್‌ಬೋರ್ಡ್ ಕಾರ್ಪೋರೇಷನ್ ಕಾಂಟಾಕ್ಟ್ ಮಾಡಿದ್ದೇನೆ. ಅವರು ಹೇಳಿದರು, ನಮ್ಮ ಹತ್ತಿರ ಹಣವಿಲ್ಲ ಎಂದು. ಈ ದೇಶದಲ್ಲಿ ಹೊಸ ಅಧ್ಯಾಯ ಪ್ರಾರಂಭವಾಗಿದೆ ಎಂದು ಘೋಷಣೆಗಳಿಂದಲೇ ಸಮರ್ಥಿಸುವುದು ಸರಿಯಾದದ್ದು ಅಲ್ಲ.

ಶ್ರೀ ಕೆ. ಪ್ರಭಾಕರ್.—ರೂರಲ್ ಹೌಸಿಂಗಿಗೂ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್‌ಗೂ ಹೇಗೆ ರೆಲವೆಂಟ್ ?

ಶ್ರೀ ಎಚ್. ಡಿ. ದೇವೇಗೌಡ.—ಅದಕ್ಕೆ ಮರ್ಜ್ ಮಾಡಿ ಬಿಟ್ಟಿದ್ದಾರೆ. ಹೌಸಿಂಗ್‌ಬೋರ್ಡ್ ಅವರ ವ್ಯಾಪ್ತಿಗೆ ಬರುತ್ತದೆ ಎಂದು ತಿಳಿದುಕೊಂಡು ಹೇಳುತ್ತಿದ್ದೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ಕಡೆ ಮನೆಗಳಿಲ್ಲ ಎಷ್ಟು ಜನರಿಗೆ ಮನೆಗಳಿಲ್ಲ ಅಂಕಿಅಂಶಗಳನ್ನು ಸಂಗ್ರಹಣೆ ಮಾಡುವುದು ಸೂಕ್ತ. ಪ್ರೊಪೋರ್ಷನೇಟ್ ಮನೆಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಕೇವಲ ಬೆಂಗಳೂರು, ಮೈಸೂರಿನಲ್ಲಿ ಕೆಲವು ಮನೆಗಳನ್ನು ಕಟ್ಟಿಸುವುದರಿಂದ ಮತ್ತು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಕೆಳದರ್ಜೆ ನೌಕರರಿಗೆ ಲೋ ಇನ್‌ಕಮ್ ಮತ್ತು ಮಿಡ್ಲ್ ಇನ್‌ಕಮ್ ಗ್ರೂಪ್‌ನವರಿಗೆ ಮನೆಗಳನ್ನು ಕಟ್ಟುವುದರಿಂದ ದೇಶದ ಸಮಸ್ಯೆ ಬಗೆಹರಿಯಿತು ಎಂದು ಹೇಳುವುದು ಸರಿಯಲ್ಲ. ಇವೊತ್ತು ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ಹರಿಜನರಿಗೆ ಗಿರಿಜನರಿಗೆ ಮನೆಗಳಿಲ್ಲ. ಹಲವಾರು ಬೇರೆ ಜನಾಂಗದವರು ಗುಡಿಸಲಿನಲ್ಲಿ ವಾಸ ಮಾಡುತ್ತಿದ್ದಾರೆ. ಆದರಿಂದ ಇವೊತ್ತು ರಾಜ್ಯದಲ್ಲಿ ಯಾವಯಾವ ಪ್ರದೇಶಗಳಲ್ಲಿ ಮನೆಗಳು ಇಲ್ಲವೆ ಇರತಕ್ಕ ಜನರು ಇದ್ದಾರೆ ಎನ್ನುವ ಬಗ್ಗೆ ಪೂರ್ಣ ಸ್ಟ್ಯಾಟಿಸ್ಟಿಕ್ಸ್ ತರಿಸಿ, ಪ್ರೊಪೋರ್‌ಷನೇಟ್ ಆಗಿ ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು ಎನ್ನುವುದನ್ನು ಹೇಳುತ್ತೇನೆ.

ಇನ್ನು ಬೆಂಗಳೂರು ವಾಟರ್‌ಸಪ್ಲೈ ಸಿವರೇಜ್ ಬೋರ್ಡ್ ಬಗ್ಗೆ ಮಾತನಾಡುವಾಗ ಮಂತ್ರಿಗಳನ್ನು ಕೊಂಚ ಕಟುವಾಗಿ ಟೀಕಿಸಿ ಮಾತನಾಡಬೇಕಾಗುತ್ತದೆ. ತಾವು ಅಧಿಕಾರವನ್ನು ವಹಿಸಿಕೊಂಡ ಮರುಕ್ಷಣದಲ್ಲಿ ತಮಗೆ ಕೂಡ ಸಂಬಂಧಪಟ್ಟ ಹಿಂದಿನ ಬೋರ್ಡಿನ ಸದಸ್ಯರಿಂದ ದೂರು ಬಂದಿವೆ. ತಾವು ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ನಾನು ಕೇಳಬೇಕಾಗುತ್ತದೆ. 24-3-1972 ರಲ್ಲಿ ಬೋರ್ಡಿನ ಅವ್ಯವಹಾರದ ಬಗ್ಗೆ ತಮಗೆ ಒಂದು ದೂರನ್ನು ಇತ್ತಿದ್ದೇನೆ. ವೈಯಕ್ತಿಕವಾಗಿ ಯಾರ ಮೇಲೆ ಆರೋಪವನ್ನು ಮಾಡಬೇಕು ಎನ್ನುವ ಅಭಿಲಾಷೆ ಇಲ್ಲ. ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂದು ಸಭೆಯಲ್ಲಿ ತಿಳಿಸಬೇಕು. ಈ ಬೋರ್ಡಿನ ಅವ್ಯವಹಾರಗಳ ಬಗ್ಗೆ ಈ ಬೋರ್ಡಿನಲ್ಲಿ ಇರತಕ್ಕ ಸದಸ್ಯರ, ಅಧ್ಯಕ್ಷರ ವಿರುದ್ಧ ಆಗಿನ ಸರ್ಕಾರದ ವಿರುದ್ಧ ಏನು ಅಪಾದನೆಗಳನ್ನು ಮಾಡಿದ್ದೀರಿ ಎಂದು ಎಲ್ಲಾ ಓದುವುದಕ್ಕೆ ಹೋಗುವುದಿಲ್ಲ. ಹಾಗೆ ಓದುವುದಕ್ಕೆ ಹೋದರೆ ಈ ಸಭೆಯ ಕಾಲ ಹೆಚ್ಚು ಬೇಕಾಗುತ್ತದೆ. ಒಂದೇ ಒಂದು ಮಾತು ಹೇಳುತ್ತೇನೆ. ಶ್ರೀಮಾನ್ ಚೆನ್ನಬಸಪ್ಪನವರು ಈ ಸಭೆಗೆ ಉಪನಾಯಕರಾಗಿ ಹೀಗೆ ಹೇಳಿದ್ದಾರೆ ; "Mysore State was once a model for good, efficient and honest administration ; but under the regime of Veerendra Patil Mysore has become a model for big fishy money games. It has become a paradise for contractors and middlemen ; it has become a paradise for corrupt men."

ಶ್ರೀಮಾನ್ ಚನ್ನಬಸಪ್ಪನವರು ಈ ಸಭೆಯಲ್ಲಿ ಇತ್ತಕಡೆ ಕೂತಿದ್ದಾಗ 28ನೇ ಸೆಪ್ಟೆಂಬರ್ 1970ರಲ್ಲಿ ನಿಮ್ಮ ಬೋರ್ಡಿನ ಹಗರಣದ ಬಗ್ಗೆ ಹೇಳಿದ್ದಾರೆ. ಹಾಗೆಯೇ ನಮ್ಮ ಮಿತ್ರರು ನಂಜೇಗೌಡರು ಮತ್ತು ಮಾನ್ಯ ದೇವರಾಜ ಅರಸ್‌ರವರು ಹೇಳಿರುವುದನ್ನು ಇಲ್ಲಿ ಓದುವುದಕ್ಕೆ ಟೈಮ್ ಇಲ್ಲ. ತಾವು ಅಧಿಕಾರ ವಹಿಸಿಕೊಂಡ ತಾರುಣ್ಯದಲ್ಲಿ ಭ್ರಷ್ಟಾಚಾರ ನಿರ್ಮೂಲನ ಮಾಡುವುದಕ್ಕೆ ಅಧಿಕಾರಿಗಳ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಮಾಡಿದ ಘೋಷಣೆಯ ಪರಮಾವಧಿ ಎಲ್ಲಿಯವರೆಗೆ ಹೋಯಿತೆಂದರೆ, ಹಿಮಾಲಯ ಪರ್ವತದಿಂದ ಗೌರಿಶಂಕರದ

(ಶ್ರೀ ಎಚ್. ಡಿ. ದೇವೇಗೌಡ)

ವರಿಗೆ ಮುಟ್ಟಿತು ಎಂದು ಹೇಳುತ್ತೇನೆ. ನಾನು ಕೇಳುತ್ತೇನೆ, ನೀವು ಬೋರ್ಡಿನ ಅವ್ಯವಹಾರದ ಬಗ್ಗೆ ಎಷ್ಟು ಕ್ರಮ ತೆಗೆದುಕೊಂಡಿದ್ದೀರಿ? ಹಿಂದೆ ಮಾಡಿರತಕ್ಕ ಹ್ಯೆಪ್ ಡೀಲ್ ಜೊತೆಗೆ ವಾಟರ್ ಟ್ರೀಟ್‌ಮೆಂಟ್ ಪ್ಲಾಂಟ್‌ಗೆ 84 ಲಕ್ಷ ರೂಪಾಯಿನ ಕಂಟ್ರಾಕ್ಟ್ ಕೊಟ್ಟಿದ್ದೀರಿ. ವಾಟರ್‌ಟ್ರೀಟ್ ಮೆಂಟ್ ಪ್ಲಾಂಟ್ ಟೆಂಡರ್ ಅಕ್ಸೆಪ್ಟ್ ಮಾಡುವಾಗ ಲೋಯೆಸ್ಟ್ ಟೆಂಡರ್ ತೆಗೆದುಹಾಕಿ 84 ಲಕ್ಷ ರೂಪಾಯಿಗಳ ಹ್ಯೆಯರ್ ಟೆಂಡರ್ ಅಕ್ಸೆಪ್ಟ್ ಮಾಡಿದ್ದೀರಿ. ಕೊಟ್ಟಿರತಕ್ಕ ಕಾರಣ ಏನು ಎಂದರೆ ಜೆವೊಮಿಲ್ಲರ್ ಪ್ಲಾಂಟು ಅಷ್ಟೊಂದು ಸಮರ್ಪಕವಾಗಿ ಕೆಲಸ ಮಾಡಲಾರದು ಎಂದು. 8 ಲಕ್ಷ ರೂಪಾಯಿ ಹೆಚ್ಚು ಹಣವನ್ನು ಕೊಟ್ಟಿದ್ದೀರಿ. ನಾನಾದರೂ ಹೇಳುತ್ತೇನೆ ಅದರ ಔಚಿತ್ಯ ಏನು ಎಂದು, ಅದರ ಬಗ್ಗೆ ತನಿಖೆ ಆಗಬೇಕು. ಜೆವೋಮಿಲ್ಲರ್ಸ್ is a reputed firm and they have done such type of work in almost all parts of the country including Bombay, Delhi, Calcutta, Agra and several such big cities. ಇನ್ನೊಂದು ಸೋಜಿಗವಾದ ಸಂಗತಿಯೆಂದರೆ ಆದಾದ ಒಂದು ತಿಂಗಳಿಗೆ ಒಂದುಕೋಟಿ 60 ಲಕ್ಷ ರೂಪಾಯಿನ ಸ್ಯೂರೇಜ್ ಟೆಂಡರ್ ಜೆಯೋ ಮಿಲ್ಲರ್‌ಗೆ ಕೊಟ್ಟಿದ್ದೀರಿ. ಒಂದು ತಿಂಗಳ ಹಿಂದೆ ಅವರ ವಾಟರ್ ಟ್ರೀಟ್‌ಮೆಂಟ್ ಪ್ಲಾಂಟ್ ಏನು ಇದೆ ಅದು ಕೆಲಸಕ್ಕೆ ಸಮರ್ಪಕವಾಗಿಲ್ಲ ಎಂದು ಹೇಳಿ ಮತ್ತೆ ಅದೇ ಫರ್ಮಿನವರಿಗೆ ಒಂದು ತಿಂಗಳಾದ ಮೇಲೆ ಸ್ಯೂವರೇಜ್ ವರ್ಕ್‌ನ್ನು ವಹಿಸಿದ್ದೀರಿ. ಯಾವ ಬೋರ್ಡಿನ ಆಡಳಿತ ಮಂಡಳಿಯವರು ಒಂದು ತಿಂಗಳ ಹಿಂದೆ ಈ ಫರ್ಮಿನ ಯೋಗ್ಯಾಯೋಗ್ಯತೆ ಬಗ್ಗೆ ಪರಿಶೀಲನೆ ಮಾಡಿ ಟೆಂಡರ್ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರೋ ಅದೇ ಆಡಳಿತ ಮಂಡಳಿಯವರು ಒಂದು ತಿಂಗಳಾದ ಮೇಲೆ 1 ಕೋಟಿ 60 ಲಕ್ಷ ರೂಪಾಯಿ ಟೆಂಡರ್ ಅವರಿಗೆ ಕೊಡುವ ಬಗ್ಗೆ ಯಾವ ಕಾರಣದಿಂದ ಅವರ ಮನಸ್ಸು ಪರಿವರ್ತನೆ ಆಯಿತು? ಬಹುಶಃ ಏನಾದರೂ ಸಂಬಂಧಪಟ್ಟ ಕಂಟ್ರಾಕ್ಟರು ಆಡಳಿತ ಮಂಡಳಿಯ ಅಭೀಷ್ಟವನ್ನು ಈ ಒಂದು ತಿಂಗಳ ಅವಧಿಯಲ್ಲಿ ನೆರವೇರಿಸಿದರೇ ಎಂದು ಕೇಳಬೇಕಾಗುತ್ತದೆ. ಸರ್‌ಫೇಸ್‌ರೋಡ್‌ಗೆ ರಾಮನಗರ, ಪಿ.ಡಬ್ಲ್ಯೂ.ಡಿ. ಸಬ್‌ಡಿವಿಜನ್‌ನಲ್ಲಿ ಅರ್ತ್ ವರ್ಕ್‌ಗೆ ಏನು ಸ್ಟ್ಯಾಂಡರ್ಡ್ ರೇಟ್ ಇದೆ ಅದು ಹೈ ಟೆಕ್ನಿಕಲ್ ವರ್ಕ್ ಅಲ್ಲ, ಜಲ್ಲಿ ಹಾಕುವುದು, ಕಲ್‌ವರ್ಟ್ ಕಟ್ಟುವುದು, ಬೋರ್ಡಿನವರು ಈ ಒಂದು ಕೆಲಸಕ್ಕೆ ಏನು ಕೊಡುತ್ತಾರೆ ಅದನ್ನು ಸಮರ್ಥನೆ ಮಾಡಬೇಕು. ಮಾನ್ಯ ಚೆನ್ನಬಸಪ್ಪನವರು ಮೊನ್ನೆ ಅಸೆಂಬ್ಲಿಯಲ್ಲಿ ಭಾಷಣ ಮಾಡತಕ್ಕ ಕಾಲದಲ್ಲಿ ಯಾವುದೋ ಒಂದು ಅಂದಾಜಿಗೆ ಒಂದು ಲಕ್ಷ 30 ಸಹಸ್ರ ರೂಪಾಯಿಗಳನ್ನು ಹೆಚ್ಚು ಕೊಡುವುದಕ್ಕೆ ಹೇಗೆ ಸಾಧ್ಯ ಎಂದು ಹೇಳಿದರು. ನಾನು ಇವೊತ್ತು ಹೇಳುತ್ತೇನೆ, the rates of all items have been up by 100 per cent. I would take a challenge and prove it.

12.00 NOON

ಇದಕ್ಕೆಲ್ಲಾ ಷೆಡ್ಯೂಲು ರೇಟು ಇವೆ. ಆದರೆ ಇಲ್ಲಿ ಷೆಡ್ಯೂಲು ರೇಟಿಗಿಂತ ಹೆಚ್ಚಾಗಿ ಎಂದರೆ ಶೇರಡ ನೂರಕ್ಕಿಂತ ಹೆಚ್ಚಾಗಿ ಷೆಡ್ಯೂಲು ರೇಟುಗಳ ಮೇಲೆ ಹಣ ಕೊಟ್ಟಿದ್ದಾರೆ. ಇದನ್ನು ನಾನು ತಮ್ಮ ಎದುರಿಗೇ ವಿವರವಾಗಿ ಪ್ರೂವ್ ಮಾಡಲು ತಯಾರಾಗಿದ್ದೇನೆ. ಒಂದು ವೇಳೆ ನಾನು ಮಾಡುವ ಅಪಾದನೆಗಳು ಸರಿಯಾಗಿಲ್ಲ! ಎಂದು ತಾವು ಹೇಳುವುದಾದರೆ ನಾನು ಇಲ್ಲಿ ಕುಳಿತು ಕೊಳ್ಳಲು ತಯಾರಾಗಿಲ್ಲ ಎಂದೂ ಹೇಳುತ್ತೇನೆ. ಇದು ಹೇಗೆ ಮಾಡಿದ್ದಾರೆ ಇದರಲ್ಲಿ ಏನೇನು ಮಾಡಿ ಯಾವ ರೀತಿ ರೆಕಾರ್ಡುಗಳನ್ನು ಕುಕ್ ಅಪ್ ಮಾಡಿ ಬಿಲ್ಡ್ ಮಾಡಿದ್ದಾರೆ ಎನ್ನುವುದು ಎಲ್ಲ ನನಗೆ ಚೆನ್ನಾಗಿ ಗೊತ್ತಾಗಿದೆ.

I know how it has been managed. I am prepared to prove each matter. I know how our records are being built up here. ಇವೆಲ್ಲಾ ತೊರೆಕಾಡನಹಳ್ಳಿಯಲ್ಲಿ ನಡೆದಿರುವ ಘಟನೆಗಳು. ತೊರೆಕಾಡನಹಳ್ಳಿಯಿಂದ ಬೆಂಗಳೂರುವರೆಗೆ ಎಷ್ಟು ಸಬ್‌ಡಿವಿಜನ್‌ಗಳು ಬರುತ್ತವೋ ಅವೆಲ್ಲವುಗಳಲ್ಲೂ ಇಲ್ಲಿ ಕೆಲಸಮಾಡುವ ಕಂಟ್ರಾಕ್ಟರುಗಳಿಗೆ ಯಾವ ಯಾವ ರೀತಿಯಾದ ರೇಟುಗಳು ಕೊಡಲಾಗಿವೆ ಎನ್ನುವ ವಿವರಗಳನ್ನೆಲ್ಲಾ ಈ ಸಭೆಯ ಮುಂದೆ ತಂದು ಇಡಬೇಕು ಎಂದು ಇಲ್ಲಿ ಹೇಳಲು ಇಚ್ಛೆಪಡುತ್ತೇನೆ. ಇದರ ಜೊತೆಗೆ ಇಲ್ಲಿರುವ ಬೋರ್ಡಿನವರು ರೂಲ್ಸು ಪ್ರಕಾರ ಅವರ ಅನ್ಯುಯಲ್ ಅಕೌಂಟನ್ನು ಸರಕಾರಕ್ಕೆ ಮಂಡಿಸಬೇಕು. ಇದುವರೆಗೆ ಅಂತಹ ಯಾವ ಅಕೌಂಟುಗಳನ್ನೂ ತಂದು ಸರಕಾರಕ್ಕೆ ಕೊಡಲಿಲ್ಲ. ಇಷ್ಟು ವರ್ಷಗಳಾದರೂ ಅನ್ಯುಯಲ್ ಅಕೌಂಟು ಕೊಡದೇ ಇರಲು ಕಾರಣವೇನು?

Board accounts are not placed before the Legislature, though it is a statutory obligation. They should not hesitate to place it. ಈ ಬೋರ್ಡಿನ ವ್ಯವಹಾರಗಳ ಬಗ್ಗೆ ಅದರ ವರ್ಷದ ಲೆಕ್ಕಪತ್ರಗಳನ್ನು ಏತಕ್ಕಾಗಿ ಇದುವರೆಗೆ ಕೊಡಲಿಲ್ಲ? ಇದರ ಬಗ್ಗೆ ಒಂದು ಮಾತನ್ನು ನಾನು ಸ್ವಲ್ಪ ಕಟುವಾಗಿ ಹೇಳಬೇಕಾಗಿದೆ. ಮಾನ್ಯ ಸಚಿವರಿಗೆ ವೈಯುಕ್ತಿಕವಾಗಿ ನಾನು ಏನು ಹೇಳುತ್ತಿಲ್ಲ. ಅವರು ಸರಕಾರದಲ್ಲಿ ಒಬ್ಬರು ಗೌರವ ಯುತವಾದ ನಾಯಕರು ಎಂದು ಅವರಿಗೆ ಹೇಳುತ್ತಿದ್ದೇನೆ. ಮಾನ್ಯ ಮಂತ್ರಿಗಳು ಶ್ರೀಮಾನ್ ಕಾಟ್ವೆಯವರನ್ನು ಇಲ್ಲಿಗೆ ಚೇರ್ಮನ್ನರಾಗಿ ನೇಮಕಮಾಡಿದ್ದಾರೆ. ಇವರು ರಿಟೈರಾದ ಒಬ್ಬ ಇಂಜನೀಯರು. ಇಂತಹವರನ್ನು ಇಲ್ಲಿ ಮತ್ತೆ ನೇಮಕ ಮಾಡಲು ಅಂತಹ ವಿಶೇಷ ಕಾರಣ ಗಳಾದರೂ ಏನಿದ್ದವು? ಇದರಲ್ಲಿ ಮಂತ್ರಿಗಳು ಸ್ವಲ್ಪ ಹೆಚ್ಚು ಆಸಕ್ತಿ ಮಾಡಿದ್ದಾರೆಂದು ನನಗೆ ಗೊತ್ತಾಗಿದೆ. ಈ ಬೋರ್ಡಿನಲ್ಲಿ ನಡೆದಿರುವ ಅವ್ಯವಹಾರಗಳನ್ನು ಸರಿಪಡಿಸಲು ಇವರು ಸಮರ್ಥ ರಾದ ಅಧಿಕಾರಿಗಳೆಂದು ಇವರನ್ನು ಇಲ್ಲಿಗೆ ತರಲಾಯಿತೇ? ಇವರು ರಿಟೈರಾಗಿ ಆರೇಳು ವರ್ಷ ಗಳಾದ ಮೇಲೆ ಇವರನ್ನು ಮತ್ತೆ ಇಲ್ಲಿಗೆ ಏಕೆ ತೆಗೆದುಕೊಳ್ಳಬೇಕಾಗಿತ್ತು? ಇಂತಹವರನ್ನು ಇಲ್ಲ ಚೀಫ್ ಇಂಜನೀಯರಾಗಿ ಇಲ್ಲವೇ ಚೇರ್ಮನ್ನರಾಗಿ ನೇಮಕ ಮಾಡಬಾರದು ಎಂದು ಕೇಳಿಕೊಳ್ಳು ತ್ತೇನೆ. ಇದಕ್ಕೆ ನೀವೇ ಕಾರಣರು. You are responsible for it.

SRI B. BASAVALINGAPPA.—Before the Hon'ble Member proceeds on this point, I would like to say that it is just an *ad hoc* arrangement; it is not an appointment at all. Any time we can remove him.

ಶ್ರೀ ಹೆಚ್. ಡಿ. ದೇವೇಗೌಡ.—ಸಭೆಯಲ್ಲಿ ಮಾನ್ಯ ಮಂತ್ರಿಗಳು ಇವರನ್ನು ಕೂಡಲೇ ತೆಗೆಯುತ್ತೇನೆ ಎಂದು ಆಶ್ವಾಸನೆ ಕೊಟ್ಟರೆ ನಾನು ಅದನ್ನು ಖಂಡಿತ ಸ್ವಾಗತ ಮಾಡುತ್ತೇನೆ.

In the interest of better administration, if he assures that he is going to change him immediately, I welcome that. The moment he comes out with a specific and categorical statement regarding this man.

ಶ್ರೀ ಬಿ. ಬಸವಲಿಂಗಪ್ಪ.—ನಾನು ಮೊದಲೇ ಹೇಳಿದ ಹಾಗೆ ಇಲ್ಲಿ ಚೀಫ್ ಇಂಜನೀಯರಾಗಿ ನೇಮಕ ಮಾಡಿರುವುದು ಒಂದು ಅಡ್ ಹಾಕ್ ಅರೇಂಜ್‌ಮೆಂಟ್ ಮೇಲೆ ಮಾಡಿರುವುದು. ನಿಯಮ ಗಳ ಮೇಲೆ ಮಾಡಿಲ್ಲ. ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಬೇಕೆಂದು ಒಂದು ತಿಂಗಳಿಂದಲೂ ಸರಕಾರ ಪರಿಶೀಲಿಸುತ್ತಿದೆ. ಇದರಲ್ಲಿ ಸ್ವಲ್ಪ ತಡವಾಗಿದೆ, ಅದಕ್ಕಾಗಿ ಸದಸ್ಯರು ಕ್ಷಮಿಸಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಶ್ರೀ ಬಸವಲಿಂಗಪ್ಪನವರು ಹಿಂದೆ ಒಂದು ಸಾರಿ ಆಡಳಿತ ದಲ್ಲಿದ್ದಾಗ ಅವರಿಗೆ ಕೊಟ್ಟ ಫರ್ನಿಚರುಗಳನ್ನು ಸರಕಾರಕ್ಕೆ ವಾಪಸು ಕೊಡಲಿಲ್ಲ ಎಂದು ಇದರ ಬಗ್ಗೆ ವ್ಯವಹಾರಗಳು ಕೋರ್ಟಿನಲ್ಲಿವೆ ಎಂದು ಗೊತ್ತಾಗಿದೆ. ಇಂತಹ ಪ್ರಕರಣಗಳಿಗೆ ಅವರು ಅವಕಾಶ ಕೊಡಬಾರದಾಗಿತ್ತು. ಅವರು ಒಳ್ಳೆಯ ನಾಯಕರಾಗಬೇಕೆಂದು ನಮ್ಮ ಆಸೆ.

He must become a good leader. That is my wish. Those things should not be there. He must be above board.

ವೈಯುಕ್ತಿಕವಾಗಿ ನಾನು ಇಲ್ಲಿ ಹೇಳುತ್ತಿಲ್ಲ. ಯಾವಾಗ ಒಂದು ಸಾರಿ ಮಂತ್ರಿಗಳಾಗಿ ಆಡಳಿತ ದಲ್ಲಿ ಬಂದರೋ ಆಗ ಅವರು ಇವನ್ನೆಲ್ಲಾ ಸರಿಮಾಡುತ್ತಾರೆ ಎಂದು ನಾವು ಭಾವಿಸಿದ್ದೆವು. ಯಾವಾಗಲೂ ಮಂತ್ರಿ ಸ್ಥಾನದಲ್ಲಿ ಕೆಲಸ ಮಾಡುವವರು ನಿಷ್ಕಳಂಕವಾದ ರೀತಿಯಲ್ಲಿ ಕೆಲಸ ಮಾಡುವ ವ್ಯಕ್ತಿಗಳಾಗಿರಬೇಕು. ಇದರಿಂದ ಅವರ ಗೌರವ ಹಾಗೂ ಯೋಗ್ಯತೆ ಹೆಚ್ಚು ಆಗುತ್ತದೆ. ಮತ್ತು ಸರಕಾರಕ್ಕೂ ಹೆಚ್ಚು ಮಾನ್ಯತೆ ದೊರೆಯುತ್ತದೆ ಮತ್ತು ಜನರು ಹೇಳುವ ಅಭಿಪ್ರಾಯಗಳಿಗೆ ಪುರಸ್ಕಾರ ದೊರೆಯುತ್ತದೆ. ಮಾನ್ಯ ಮಂತ್ರಿಗಳು ಕೊಡುತ್ತಿರುವ ಹೇಳಿಕೆಗಳು ಪತ್ರಿಕೆಗಳಲ್ಲಿ ಆಗಾಗ್ಗೆ ಬರುತ್ತಿವೆ. ಅದನ್ನೂ ನೋಡಿದ್ದೇನೆ. ಆದುದರಿಂದ ನಾನು ಇಲ್ಲಿ ಹೇಳುವುದು ಒಂದು ಸಣ್ಣ ಸ್ಥಾನಕ್ಕೆ ನೇಮಕ ಮಾಡುವಾಗ ಅವರು ಚರಿತ್ರಾರ್ಹವಾಗಿ ಚೆನ್ನಾಗಿ ಕೆಲಸಮಾಡಿದವರಾಗಿರ ಬೇಕು. ಆದರೆ ಇಲ್ಲಿ ಶ್ರೀ ಕಾಟ್ವೆಯವರನ್ನು ಹಿಂದೆ ಕ್ವಾಲಿಟಿ ಕಂಟ್ರೋಲ್ ಇಲಾಖೆಯಲ್ಲಿ ಶರಾವತಿ ಯೋಜನೆಯಲ್ಲಿ ನೇಮಕಮಾಡಿ ಅವರು ಅಲ್ಲಿದ್ದ ಮೂರು ವರ್ಷಗಳಲ್ಲಿ ಅನೇಕ ಅನಾಹುತಗಳು ನಡೆದಿವೆ ಎಂದು ಗೊತ್ತಾಗಿದೆ. ಇವರು ಇಲ್ಲಿ ಸಬ್ ಸ್ಟ್ಯಾಂಡರ್ಡ್ ವರ್ಕ್ ಹಾಗೂ ಇನ್ನಿತರ ಅವ್ಯವಹಾರದ ಕೆಲಸಗಳನ್ನು ಮಾಡಿ ಕೆಟ್ಟ ಹೆಸರನ್ನು ಪಡೆದುಕೊಂಡಿದ್ದಾರೆ. ಇಂತಹವರನ್ನು

(ಶ್ರೀ ಹೆಚ್. ಡಿ. ದೇವೇಗೌಡ)

ಇಲ್ಲಿ ಏಕೆ ನೇಮಿಸಬೇಕು ? This man has to stand there as an accused. I have no confidence in him. ಇಂತಹ ಅಧಿಕಾರಿಗಳನ್ನು ಈ ಬೆಂಗಳೂರಿನಲ್ಲಿರುವ ಬೋರ್ಡಿಗೆ ನೇಮಕ ಮಾಡಿಕೊಂಡು ಇಲ್ಲಿರುವ ಅವ್ಯವಹಾರಗಳನ್ನು ಸರಿಪಡಿಸಲಾಗುತ್ತದೆಯೇ ? ನಾನು ಬೆಂಗಳೂರು ನಗರದಲ್ಲಿರುವ ಸುಮಾರು 20ಲಕ್ಷ ಜನತೆಯ ಪರವಾಗಿ ಹೇಳುತ್ತಿದ್ದೇನೆ ಮತ್ತು ಇದು ನಮ್ಮ ಕರ್ತವ್ಯ ಕೂಡ. ಆದುದರಿಂದ ಇಲ್ಲಿ ಯಾವ ರೀತಿಯಾದ ಸಬ್ ಸ್ಟ್ಯಾಂಡರ್ಡ್ ಕೆಲಸಗಳೂ ಕೂಡ ಮಾಡಬಾರದು. ಇದರ ಬಗ್ಗೆ ಹೇಳುವಾಗ ಇಲ್ಲಿಗೆ ಬಂದಿರುವ ಚೀಫ್ ಇಂಜನೀಯರ ಮೇಲೆ ಅನೇಕ ಆಪಾದನೆಗಳು ಬಂದಿವೆ. ಇದರಲ್ಲಿ ನಿರ್ಧಾರ ಮಾಡಬೇಕಾದವರು ಟೆಕ್ನಿಕಲ್ ಪೀಪಲ್. ನಾವು ಹಾಗೂ ನೀವೂ ಟೆಕ್ನಿಕಲ್ ಆದ ಅಭಿಪ್ರಾಯಗಳನ್ನು ಕೊಡಲು ಆಗುವುದಿಲ್ಲ. ಇದಕ್ಕಾಗಿ ಇದರ ಬಗ್ಗೆ ಒಂದು ಹೈ ಪವರು ಕಮಿಟಿಯನ್ನು ಇಲ್ಲಿ ನೇಮಕ ಮಾಡಬೇಕೆಂದು ಸರಕಾರದಲ್ಲಿ ಹೇಳುತ್ತೇನೆ. ಇದರೊಳಗಿರುವ ಫಿಷೀ ಡೀಲ್ ಏನಿದೆ ಅದರ ಬಗ್ಗೆ ವಿಚಾರಣೆ ಮಾಡಿ ಅದನ್ನು ಜನರ ಮುಂದೆ ಬರುವಂತೆ ಮಾಡಿ. ಇದರಲ್ಲಿ ಯಾವುದೇ ರೀತಿಯಾದ ಅಧಿಕಾರಿಗಳೇ ಇರಲಿ ಅವರ ಬಗ್ಗೆ ವಿಚಾರಣೆ ಮಾಡಿ ಸರಿಯಾದ ಒಂದು ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಇದರಲ್ಲಿ ನಾನು ಹೇಳುವುದು I have no confidence in him. I am not going to spare even in case Sri Veerendra Patil is involved. I do not want to see any fishy deal by any man. ಇದರಲ್ಲಿ ಏನಾದರೂ ಅನ್ಯಾಯಗಳು ಆಗಿದ್ದರೆ ಇದರ ಬಗ್ಗೆ ವಿಚಾರಣೆ ಮಾಡಲು ಹಿಂದುಮುಂದು ನೋಡಬಾರದು. ಸರಕಾರ ಇವೆಲ್ಲ ಪ್ರಕರಣಗಳನ್ನೂ ವಿಚಾರಣೆ ಮಾಡಲು ಒತ್ತಾಯ ಮಾಡ ಬೇಕೆಂದು ನಾನು ಇಲ್ಲಿ ಹೇಳುತ್ತೇನೆ. ಇದರಲ್ಲಿ ಶ್ರೀ ವೀರೇಂದ್ರ ಪಾಟೀಲ್‌ರವರು ಅನ್ಯಾಯ ಗಳನ್ನು ಮಾಡಿದ್ದಾರೆ ಎನ್ನುವುದು ಜನತೆಯ ಮುಂದೆ ಬಂದರೆ ಅವರ ಬಗ್ಗೆ ಕೂಡ ಯಾವ ಕ್ರಮ ತೆಗೆದುಕೊಳ್ಳಬಹುದೋ ಅದನ್ನು ನೋಡಬಹುದು. I am demanding an enquiry, I am demanding a judicial probe irrespective of any political pressure,............ಅದಕ್ಕಾಗಿ ನಾನು ಇಲ್ಲಿ ಸಲಹೆ ಮಾಡುವುದು ವಾಟರ್ ಬೋರ್ಡಿನ ಬಗ್ಗೆ ಒಂದು ನಿರ್ಣಯವನ್ನು ಬೆಂಗಳೂರಿನ ಜನತೆಯ ಪರವಾಗಿ ಮಾಡಲು ಇಲ್ಲಿ ಒಂದು ಜ್ಯುಡಿಷಿಯಲ್ ಪ್ರೋಬ್ ನಡೆಸಬೇಕೆಂದು ನಾನು ಸರಕಾರದಲ್ಲಿ ಮನವಿ ಮಾಡುತ್ತೇನೆ. ಇದೂ ಅಲ್ಲದೆ ಹಿಂದೆ ಶ್ರೀಮಾನ್ ಅರಸುರವರ ಕೆಲವು ಹೇಳಿಕೆಗಳು ಪತ್ರಿಕೆಗಳಲ್ಲಿ ಎಂದರೆ ಡೆಕ್ಕನ್ ಹೆರಾಲ್ಡ್‌ನಲ್ಲಿ ಬಂದಿವೆ.

The Statement issued by Sri Devaraj Urs has appeared in the "Deccan Herald." He fixed the responsibility on the Chairman. Today he is shirking that responsibility. I would like to know why he has gone back from his stand after he became the Chief Minister of the State. If this is the way, it does not do good to the country. I want a categorical reply from the Government.

ಶ್ರೀ ಕೆ. ಪ್ರಭಾಕರ್.—ಥರೋ ಎನ್‌ಕ್ವೈರಿ ಮಾಡಿದರೆ ಅಪರಾಧಿ ಸ್ಥಾನದಲ್ಲಿ ಎಲ್ಲರೂ ನಿಲ್ಲಬೇಕಾಗುತ್ತದೆ ಎಂದು ತಾವು ಹೇಳಿದಿರಿ; ಎಲ್ಲರೂ ಎಂದರೆ ಯಾರು ಯಾರು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.—ಬೆಂಗಳೂರು ವಾಟರ್ ಸಪ್ಲೈ ಬೋರ್ಡಿನ ಅಧ್ಯಕ್ಷರು, ಮತ್ತೆ ಈಗ ಹಾಲಿ ಅಧಿಕಾರದಲ್ಲಿರುವ ಚೀಫ್ ಇಂಜಿನಿಯರ್ ಅವರು ಮತ್ತು ಇನ್ನೂ ಅದಕ್ಕೆ ಸಂಬಂಧ ಪಟ್ಟವರೆಲ್ಲರೂ ಈ ಒಂದು ವ್ಯವಹಾರಕ್ಕೆ ಸಂಬಂಧಪಟ್ಟಿದ್ದಾರೆ. ಈಗಿನ ಒಂದು ಧಾಟಿಯಲ್ಲೇ ಮಾನ್ಯ ಮುಖ್ಯಮಂತ್ರಿಗಳು ಎಲ್ಲವೂ ಸರಿಯಾಗಿದೆ ಎಂದು ಸಮರ್ಥನೆ ಮಾಡುವುದಕ್ಕೆ ಹೋದರೆ ಅವರು ಸಹ ಅಕ್ಯೂಸ್ಡ್ ಆಗಬೇಕಾಗುತ್ತದೆ. ವಿಚಾರಣೆ ಮಾಡುವ ಅವಶ್ಯಕತೆ ಇಲ್ಲ ಎನ್ನತಕ್ಕಂಥ ವಾದವನ್ನು ಮುಖ್ಯಮಂತ್ರಿಗಳು ಪ್ರತಿಪಾದನೆ ಮಾಡುವುದಾದರೆ, I must say that he has also connived at it. ಆದ್ದರಿಂದ ಮಾನ್ಯ ಮಂತ್ರಿಗಳು ಈ ವಿಷಯದಲ್ಲಿ ನಿರ್ದಿಷ್ಟವಾದ ಒಂದು ಹೇಳಿಕೆಯನ್ನು ಕೊಡಬೇಕೆಂದು ಹೇಳುತ್ತೇನೆ. ಈಗ ವಾಟರ್ ಸಪ್ಲೈ ಬೋರ್ಡ್ ಬಗ್ಗೆ ಏನು ಅಪಾದನೆಗಳಿವೆ, ಅವು ನಿವೃತ್ತಿಯಾಗಬೇಕಾದರೆ ವಿಚಾರಣೆಯಾಗಲೇಬೇಕು ಎಂದು ಒತ್ತಾಯಪಡಿಸುತ್ತೇನೆ.

ಕೊನೆಯದಾಗಿ ನಾನು ಹೇಳುವುದೇನೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ, ಬೆಂಗಳೂರಿನಂತಹ ನಗರ ಪ್ರದೇಶಗಳಲ್ಲಿ, ಸಣ್ಣಪುಟ್ಟ ಊರುಗಳಲ್ಲಿ ಮನೆಗಳನ್ನು ಕಟ್ಟಿಸಿಕೊಡಲು ಹೆಚ್ಚು ಹಣವನ್ನು ಒದಗಿಸುವುದರ ಮೂಲಕ ಅವುಗಳ ಅಭಿವೃದ್ಧಿಗೆ ಸಹಕಾರ ಕೊಡಬೇಕೆಂದು ಮಾನ್ಯ ಮಂತ್ರಿಗಳಿಗೆ ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆರ್ ಗುಂಡೂರಾವ್ (ಸೋಮವಾರಪೇಟೆ).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ನಮ್ಮ ಮಾನ್ಯ ಪೌರಾಡಳಿತ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಯನ್ನು ಸ್ವಾಗತಿಸುತ್ತಾ, ನನ್ನ ಕೆಲವು ಸಲಹೆಗಳನ್ನು ಕೊಡಬೇಕೆಂದಿದ್ದೇನೆ. ಮಾನ್ಯ ಪೌರಾಡಳಿತ ಸಚಿವರು ಅಧಿಕಾರ ವಹಿಸಿಕೊಂಡಮೇಲೆ ನಮ್ಮ ಪುರಸಭೆಗಳಲ್ಲಿ ತೀವ್ರತರವಾದಂಥ ಬದಲಾವಣೆ ಮಾಡುವುದಕ್ಕೆ ಗಮನ ಕೊಡುತ್ತಿರುವ ವಿಷಯ ಸ್ವಾಗತರ್ಹವಾದುದು. ಜೊತೆಗೆ ನನ್ನ ಒಂದು ಸ್ಪಷ್ಟ ಅಭಿಪ್ರಾಯವೇನೆಂದರೆ, 1964 ನೇ ಇಸವಿಯಲ್ಲಿ ಹೊಸ ಮೈಸೂರಿಗೆ ಸಂಬಂಧಪಟ್ಟಂತೆ ಪುರಸಭಾ ಶಾಸನವನ್ನು ಏನು ಮಾಡಲಾಗಿದೆ, ಅದು ಪ್ರಜಾಪ್ರಭತ್ವಕ್ಕೆ ತದ್ವಿರುದ್ಧವಾದಂಥ ಶಾಸನವಾಗಿದೆ ಎಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಾವು ನಿಜವಾಗಿ ಈ ದೇಶದಲ್ಲಿ ಪ್ರಜಾಪ್ರಭುತ್ವವನ್ನು ಜಾರಿಗೆ ತರಬೇಕಾದರೆ ಪಂಚಾಯಿತಿಗಳಿಗೆ, ತಾಲ್ಲೂಕ್ ಬೋರ್ಡ್‌ಗಳಿಗೆ, ಪುರಸಭೆಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಡಬೇಕಾಗಿದೆ. ಆ ರೀತಿ ಅಧಿಕಾರ ಕೊಟ್ಟಿದ್ದೇ ಆದರೆ ಅವುಗಳು ದಕ್ಷತೆಯಿಂದ ಕೆಲಸ ಮಾಡಲು ಅನುಕೂಲವಾಗುತ್ತದೆ. ಆದರೆ ಈಗಿನ ಪುರಸಭಾ ಕಾನೂನಿನಲ್ಲಿ ಅನೇಕ ತರಹದ ನ್ಯೂನತೆಗಳಿವೆ. ಪುರಸಭಾಧ್ಯಕ್ಷರು ಹೆಸರಿಗೆ ಅಧ್ಯಕ್ಷರಾಗಿರಬೇಕಾಗಿದೆಯೇ ಹೊರತು, ಯಾವುದೇ ಅಧಿಕಾರ ಚಲಾಯಿಸುವುದಕ್ಕೆ ಈಗಿನ ಶಾಸನದಲ್ಲಿ ಅವಕಾಶವಿಲ್ಲ. ಈ ಶಾಸನವನ್ನು ಯಾವ ಸರ್ಕಾರವೇ ತಂದಿರಲಿ, ಶ್ರೀಮಾನ್ ನಿಜಲಿಂಗಪ್ಪನವರ ಸರ್ಕಾರವೇ ಜಾರಿಗೆ ತಂದಿರಲಿ, ಅಥವಾ ವೀರೇಂದ್ರಪಾಟೀಲರ ಸರ್ಕಾರವೇ ಜಾರಿಗೆ ತಂದಿರಲಿ, ಒಟ್ಟಿನಲ್ಲಿ ಈ ಶಾಸನದಿಂದ ಪ್ರಜಾಪ್ರಭುತ್ವದ ಕೊಲೆಯಾಗಿದೆ ಎಂದು ಹೇಳುತ್ತೇನೆ. ಶ್ರೀಮಾನ್ ದೇವೇಗೌಡರು ಈ ಸರ್ಕಾರವನ್ನು ಟೀಕೆ ಮಾಡುತ್ತಿದ್ದಾರೆ. ಈ ಒಂದು ಶಾಸನವನ್ನು ಹಿಂದಿನ ಸರ್ಕಾರದವರು ಯಾವ ರೀತಿ ದುರುಪಯೋಗ ಮಾಡಿದೆ ಎಂಬುದಕ್ಕೆ ಒಂದು ಉದಾಹರಣೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ನಾನು ಸಹ ಪುರಸಭಾಧ್ಯಕ್ಷ. ನಾನು ಕಾಂಗ್ರೆಸ್ (ಆರ್) ಪಕ್ಷದ ಕನ್‌ವೀನರ್ ಆದ ಕೂಡಲೇ, ಅದನ್ನು ಶ್ರೀಮಾನ್ ವೀರೇಂದ್ರಪಾಟೀಲರಿಗೆ ಸಹಿಸುವುದಕ್ಕೆ ಆಗಲಿಲ್ಲ. ಕೂಡಲೆ ಟೆಲಿಗ್ರಾಫಿಕಲ್ ಆರ್ಡರ್ ಕಳುಹಿಸಿ ಕೊಟ್ಟರು. That municipality is superseded and in my place the Tahsildar has been appointed as the Administrator. ಅದರ ಜೊತೆಗೆ ಇನ್ನೊಂದು ಆರ್ಡರ್ ಏನೆಂದರೆ ಅಡ್ಮಿನ್‌ಸ್ಟ್ರೇಟರ್‌ಗೆ "Whether the President is there or not you assume charge yourself." ಎಂದು ಆರ್ಡರ್ ಕೊಟ್ಟಿದ್ದಾರೆ. ಪ್ರಜಾಪ್ರಭುತ್ವವಾದಿಗಳಾಗಿ ಅವರು ಯಾವ ರೀತಿ ನಡೆದುಕೊಂಡರು ಎಂಬುದಕ್ಕೆ ಇದು ಒಂದು ಉದಾಹರಣೆಯಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಮೊನ್ನೆ ನಡೆದ ಶ್ರೀರಂಗಪಟ್ಟಣದ ಉದಾಹರಣೆ ತಮಗೆ ಗೊತ್ತಿದೆ ತಾನೆ ! ಒಟ್ಟಿನಲ್ಲಿ ಶ್ರೀಮಾನ್ ವೀರೇಂದ್ರಪಾಟೀಲರೇ ಆರ್ಡರ್ ಮಾಡಲಿ, ಶ್ರೀಮಾನ್ ದೇವರಾಜ ಅರಸ್ ಅವರೇ ಆರ್ಡರ್ ಮಾಡಲಿ, ಅದೇ ಸುಪ್ರಿಂ ಆರ್ಡರ್ ಆಗುವುದಿಲ್ಲ, ಆ ಆರ್ಡರ್‌ನಲ್ಲಿ ದೋಷವಿದ್ದರೆ ಚಾಲೆಂಜ್ ಮಾಡಲು ಕೋರ್ಟ್ ಇದ್ದೇ ಇದೆ.

ಶ್ರೀ ಆರ್. ಗುಂಡೂರಾವ್.—1964 ನೇ ಇಸವಿಯಲ್ಲಿ ಈ ಶಾಸನ ಸಭೆಯ ಮುಂದೆ ಬಂದಾಗ ತಾವು ಏತಕ್ಕೆ ಅಪೋಸ್ ಮಾಡಲಿಲ್ಲ ?

ಶ್ರೀ ಎಚ್. ಡಿ. ದೇವೇಗೌಡ.—ನಮ್ಮ ಕರ್ತವ್ಯವನ್ನು ನಾವು ಮಾಡಿದ್ದೇವೆ. ನಿಮ್ಮ ಪಕ್ಷದ ಸದಸ್ಯರು ಅದಕ್ಕೆ ಏತಕ್ಕೆ ಒಪ್ಪಿಗೆ ಕೊಟ್ಟರು ಎಂಬುದನ್ನು ಮೊದಲು ಕೇಳಿ.

ಶ್ರೀ ಆರ್. ಗುಂಡುರಾವ್.—ನಾವು ಹೊಸದಾಗಿ ಈ ಸಭೆಗೆ ಆರಿಸಿ ಬಂದಿದ್ದೇವೆ. ನಮಗೆ ಆ ಕಡೆ ಕುಳಿತಿರುವವರ ಸಹವಾಸವೂ ಸಾಕಾಗಿದೆ, ಈ ಕಡೆ ಕುಳಿತಿರುವವರ ಸಹವಾಸವೂ ಸಾಕಾಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಒಟ್ಟಿನಲ್ಲಿ ನೀವಿಬ್ಬರೂ ಸೇರಿ ಈ ರಾಜ್ಯವನ್ನು ಹಾಳು ಮಾಡಿದಿರಿ.

ಶ್ರೀ ಆರ್. ಗುಂಡೂರಾವ್.—ಸರ್ಕಾರದವರು ಪ್ರಜಾಪ್ರಭುತ್ವಕ್ಕೆ ಬೆಲೆ ಕೊಡುವುದಾದರೆ, 1964 ನೇ ಇಸವಿಯ ಪುರಸಭಾ ಕಾನೂನನ್ನು ಕೂಡಲೇ ರದ್ದು ಮಾಡಿ ಹೊಸ ಕಾನೂನನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ. ಈಗಿನ ಕಾನೂನು ಪ್ರಜಾಪ್ರಭುತ್ವದ ತತ್ವಗಳಿಗನುಗುಣವಾಗಿಲ್ಲ.

(ಶ್ರೀ ಆರ್. ಗುಂಡೂರಾವ್)

ಹೊಸ ಮೈಸೂರು ರಚನೆಯಾಗುವುದಕ್ಕೆ ಬೇರೆ ಬೇರೆ ಕಾನೂನುಗಳು ಇದ್ದವು ಅವುಗಳೆಲ್ಲವನ್ನೂ ಕ್ರೋಢೀಕರಿಸಿ ಒಂದು ಶಾಸನವನ್ನು 1964 ರಲ್ಲಿ ಮಾಡಿದರು. ಈ ಶಾಸನದಿಂದ ಯಾವುದೇ ತರಹದಿಂದ ಪುರಸಭೆಯು ಅಭಿವೃದ್ಧಿಯಾಗುವುದಕ್ಕೆ ಅವಕಾಶವಿಲ್ಲ. ಏಕೆಂದರೆ ಪುರಸಭೆಯುವರು ಸರ್ವಾನುಮತದಿಂದ ಯಾವುದೇ ನಿರ್ಣಯ ಪಾಸ್ ಮಾಡಿ ಕಳಿಸಿಕೊಟ್ಟರೂ ಸಹ, ಪ್ರತಿಯೊಂದು ವಿಷಯಗಳಿಗೂ ಸಹ ಜಿಲ್ಲಾಧಿಕಾರಿಯವರು ನೇರವಾಗಿ ಮಧ್ಯ ಪ್ರವೇಶ ಮಾಡುವುದಕ್ಕೆ ಈಗಿನ ಆಕ್ಟಿನಲ್ಲಿ ಅವಕಾಶ ಕೊಡಲಾಗಿದೆ. ಇದರಿಂದ ಅವರು ಬೇಕಾದರೆ ನಿರ್ಣಯಗಳನ್ನು ಸಸ್ಪೆಂಡ್ ಮಾಡುವುದಕ್ಕೆ ಅಥವಾ ಸ್ಟೇ ಮಾಡುವುದಕ್ಕೆ. ಅವಕಾಶವಿದೆ. ಸರ್ವಾನುಮತದಿಂದ ಪಾಸ್ ಮಾಡಿ ಕಳಿಸಿಕೊಟ್ಟಂತಹ ನಿರ್ಣಯವನ್ನು ಜಿಲ್ಲಾಧಿಕಾರಿಯವರು ತಡೆಹಿಡಿಯುವುದಕ್ಕೆ ಅವಕಾಶ ಇರುವುದು ಸರಿಯೇ ಎಂಬುದನ್ನು ಮಾನ್ಯ ಮಂತ್ರಿಗಳು ಪರಿಶೀಲಿಸಬೇಕು. ಒಟ್ಟಿನಲ್ಲಿ ಈಗಿನ ಆಕ್ಟನ್ನು ರದ್ದು ಮಾಡಿ ಹೊಸ ಆಕ್ಟನ್ನು ತೆಗೆದುಕೊಂಡು ಬರಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಜಾಗ್ರತೆ ತೆಗೆದುಕೊಂಡು ಬನ್ನಿ.

ಶ್ರೀ ಆರ್. ಗುಂಡೂರಾವ್.—ತೆಗೆದುಕೊಂಡು ಬರದೆ ವಿಧಿಯಿಲ್ಲ. ಇದರ ಕಡೆಗೆ ಮಾನ್ಯ ಮಂತ್ರಿಗಳು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಪುರಸಭೆಯ ಅಧ್ಯಕ್ಷನಾಗಿ ಕೆಲಸ ಮಾಡಿ ನೋಡಿರುವುದರಿಂದ ಈ ವಿಷಯವನ್ನು ಹೇಳುತ್ತಿದ್ದೇನೆ.

ಇನ್ನು ಬೆಂಗಳೂರು ನಗರದ ವಿಷಯ ಹೇಳಬೇಕೆಂದರೆ, ಬೆಂಗಳೂರು ನಗರದ ವಿಷಯ ಕೇವಲ ಬೆಂಗಳೂರು ನಗರದ ವಾಸಿಗಳಿಗೆ ಸೇರಿದೆ ಎಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ಬೆಂಗಳೂರು ನಗರ ಕರ್ನಾಟಕದ ರಾಜಧಾನಿ. ಬೆಂಗಳೂರು ನಗರ ಎಷ್ಟು ನಿರ್ಮಲವಾಗಿರುತ್ತದೋ, ಬೆಂಗಳೂರು ನಗರ ಎಷ್ಟು ಶೋಭಾಯಮಾನವಾಗಿರುತ್ತದೋ, ಅಷ್ಟೇ ಒಂದು ಒಳ್ಳೆಯ ಹೆಸರು ನಮ್ಮ ಕರ್ನಾಟಕ ರಾಜ್ಯಕ್ಕೆ ಬರುತ್ತದೆ. ಆದರೆ ಇಂದಿನ ಬೆಂಗಳೂರು ನಗರ ಕಾರ್ಪೊರೇಷನ್ನಿನ ಆಡಳಿತವನ್ನು ನೋಡಿದರೆ, ಅದರ ಬಗ್ಗೆ ಅನೇಕ ತರಹದ ಟೀಕೆಗಳಾಗಿವೆ. ಸಾರ್ವಜನಿಕ ಸಭೆಗಳಲ್ಲಿ ಟೀಕೆಗಳಾಗಿವೆ. ಇಂದು ಅಲ್ಲಿ ಯಾವ ಪಕ್ಷದವರು ಆಡಳಿತ ನಡೆಸುತ್ತಿದ್ದಾರೆಂಬುದು ಮುಖ್ಯವಾದ ಪ್ರಶ್ನೆಯಲ್ಲ. ದೇಶದ ಜನರ ಹಿತ ಮುಖ್ಯವಾದುದು. ಕರ್ನಾಟಕದ ರಾಜಧಾನಿ ಯಾವ ರೀತಿ ಅಭಿವೃದ್ಧಿಯಾಗುತ್ತದೆ ಎಂಬುದು ಮುಖ್ಯವಾದ ಪ್ರಶ್ನೆ. ಕೆಲವು ವರ್ಷಗಳವರೆಗೆ ಈ ಕಾರ್ಪೊರೇಷನನ್ನು ಸೂಪರ್‌ಸೀಡ್ ಮಾಡಿದ ಮೇಲೆ ಚುನಾವಣೆ ನಡೆಯಿತು. ಚುನಾವಣೆ ನಡೆದ ಮೇಲೆ ಚುನಾಯಿತ ಪ್ರತಿನಿಧಿಗಳು ಬೆಂಗಳೂರು ನಗರದ ಅಭಿವೃದ್ಧಿಗೆ ಸಾಕಷ್ಟು ಗಮನ ಕೊಡುತ್ತಾರೆ, ಬೆಂಗಳೂರು ನಗರವನ್ನು ಇಡೀ ಇಂಡಿಯಾದೇಶದಲ್ಲಿಯೇ ಸುಂದರವಾದ ನಗರವನ್ನಾಗಿ ಮಾಡುತ್ತಾರೆಂದು ನಾವು ತಿಳಿದುಕೊಂಡಿದ್ದೆವು. ಆದರೆ ಈಗ ಅಲ್ಲಿ ನಡೆಯುತ್ತಿರುವುದೇ ಬೇರೆ. ಜಲಮಂಡಲಿಯಲ್ಲಿ ಅನ್ಯಾಯವಾಗಿದೆ ಎಂಬ ವಿಷಯವನ್ನು ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಅಲ್ಲಿ ಏನು ನ್ಯೂನತೆಗಳಿವೆ, ಅವುಗಳ ಬಗ್ಗೆ ತನಿಖೆ ಮಾಡಿಸಬೇಕು ಎಂದು ಕೇಳುವವರಲ್ಲಿ ನಾನೂ ಒಬ್ಬ. ಯಾರು ಯಾರು ಈ ನ್ಯೂನತೆಗಳಬಗ್ಗೆ ಸಂಬಂಧ ಹೊಂದಿದ್ದಾರೆ ಎಂಬ ಬಗ್ಗೆ ಸಮಗ್ರವಾದ ವಿಚಾರಣೆ ನಡೆಸಬೇಕೆಂದು ನಾನು ಮಾನ್ಯ ಸಚಿವರಿಗೆ ಒತ್ತಾಯ ಮಾಡುತ್ತೇನೆ. ಇಂದು ಕಾರ್ಪೊರೇಷನ್ ಆಡಳಿತ ತೀರ ಹದಗೆಟ್ಟಿದ್ದು, ಇಂದಿನ ಅಲ್ಲಿಯ ಆಡಳಿತ ಯಾರಿಗೂ ಹೆಸರು ತರುವಂತೆ ನಡೆಯುತ್ತಿಲ್ಲ. ಸಾರ್ವಜನಿಕರಿಗೆ ಸಂಬಂಧಪಟ್ಟ ಕೆಲಸದಲ್ಲಾಗಲೀ, ಕಾರ್ಪೊರೇಷನ್ ಆಡಳಿತಕ್ಕೆ ಸಂಬಂಧಪಟ್ಟ ಕೆಲಸದಲ್ಲಾಗಲೀ, ಯಾವುದೇ ತರಹದ ಒಮ್ಮತವಿಲ್ಲ. ಮೇಯರ್ ಅವರ ಮೇಲೆ ಕಮೀಷನರ್ ಅವರು ಚಾರ್ಜ್ ಮಾಡುವುದು, ಕಮೀಷನರ್ ಅವರಮೇಲೆ ಮೇಯರ್ ಅವರು ಚಾರ್ಜ್ ಮಾಡುವುದು ನಡೆಯುತ್ತಿದೆ. ಮತ್ತು ಸಭೆ ನಡೆಯುತ್ತಿದ್ದಾಗ ಪೋಲೀಸಿನವರನ್ನು ಕರೆಸಿ ಸದಸ್ಯರನ್ನು ಹೊರಗೆ ಕಳಿಸುವುದು, ಈ ರೀತಿಯಾಗಿ ಅಲ್ಲಿ ಸಭೆಯ ಕೆಲಸಕಾರ್ಯಗಳೇ ಸರಿಯಾಗಿ ನಡೆಯುತ್ತಿಲ್ಲ. ಸರ್ಕಾರಕ್ಕೆ ಮತ್ತು ಈ ದೇಶಕ್ಕೆ ಕಳಂಕ ತರುವ ರೀತಿಯಲ್ಲಿ ಕೆಲಸಗಳಾಗುತ್ತಿವೆ. ಆದ್ದರಿಂದ ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ಈ ಕಾರ್ಪೊರೇಷನನ್ನು ಆದಷ್ಟು ಬೇಗ ಸೂಪರ್‌ಸೀಡ್ ಮಾಡಿ ಒಂದು ಒಳ್ಳೆಯ ಕಾರ್ಪೊರೇಷನ್ ಕಾನೂನನ್ನು ಜಾರಿಗೆ ತರಬೇಕೆಂದು.

ಮೇಯರ್ ಮತ್ತು ಕಮೀಷನರಿಗೆ ತಿಕ್ಕಾಟ ಬರುವುದಕ್ಕೆ ಕಾನೂನಿನ ಅಡಚಣೆ ಕಾರಣ ನಮಗೆ ಅಲ್ಲಿ ಪಕ್ಷ ಮುಖ್ಯವಲ್ಲ. ಆಡಳಿತ ಮುಖ್ಯ. ಆದ್ದರಿಂದ ನಮ್ಮ ಮಾನ್ಯ ಪೌರಾಡಳಿತ ಸಚಿವರು ಆದಷ್ಟು ಬೇಗ ಕಾರ್ಪೋರೇಷನ್ ಅನ್ನು ಸೂಪರ್‌ಸೀಡ್ ಮಾಡಿ ಮೇಯರ್ ಅವರಿಗೂ

ಕಮಿಷನರಿಗೂ ಮತ್ತು ಕೌನ್ಸಿಲರ್‌ಗಳಿಗೂ ಒಬ್ಬರಿಗೊಬ್ಬರಿಗೆ ಸದ್ಭಾವನೆ ಬರುವಂತೆ ಮಾಡಿ ಕಾರ್ಪೊರೇಷನ್ನಿನಲ್ಲಿ ನಡೆಯುತಕ್ಕ ಗಲಾಟೆಯನ್ನು ತಪ್ಪಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

ಅಧಿಕಾರಿಗಳ ವರ್ಗಾವರ್ಗಿಗಳಿಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಅನೇಕ ಮುನಿಸಿ ಪಾಲಿಟಿಗಳಲ್ಲಿ ಕೆಲಸ ಮಾಡತಕ್ಕ 2, 3 ಮತ್ತು ನಾಲ್ಕನೇ ದರ್ಜೆಯ ಅಧಿಕಾರಿಗಳನ್ನು ಬೇರೆ ಮುನಿಸಿಪಾಲಿಟಿಗಳಿಗೆ ವರ್ಗಾ ಮಾಡತಕ್ಕ ಅವಕಾಶ ಈಗಿರತಕ್ಕ ಕಾನೂನಿನಲ್ಲಿ ಕಂಡುಬರುವುದಿಲ್ಲ, ಈ ನೌಕರರು ಮತ್ತು ಅಧಿಕಾರಿಗಳ ವಿಷಯದಲ್ಲಿ ಏನಾದರೂ ಅಪಾದನೆ ಇದ್ದರೆ ಅವರನ್ನು ಡಿಸ್‌ಮಿಸ್ ಮಾಡಬೇಕು, ಇಲ್ಲದಿದ್ದರೆ ನಿವೃತ್ತಿ ಮಾಡಬೇಕು. ಅದು ಹೊರತು ಬೇರೆ ಯಾವ ತರಹ ಬದಲಾವಣೆಯನ್ನು ಮಾಡುವುದಕ್ಕೆ ಆಗುತ್ತಾ ಇಲ್ಲ. ಇದರಿಂದ ಮುನಿಸಿಪಾಲಿಟಿಗಳಿಗೆ ತೊಂದರೆ ಯಾಗುತ್ತಿದೆ. ಈ ದೃಷ್ಟಿಯಿಂದ ಒಂದು, ಎರಡು, ಮೂರು ಮತ್ತು ನಾಲ್ಕನೇ ದರ್ಜೆಯ ನೌಕರರನ್ನು ಒಂದು ಮುನಿಸಿಪಾಲಿಟಿಯಿಂದ ಇನ್ನೊಂದು ಮುನಿಸಿಪಾಲಿಟಿಗೆ ವರ್ಗಾ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಬೇಕೆಂದು ನಾನು ಹೇಳುತ್ತೇನೆ. ಸೀವರೇಜ್ ಯೋಜನೆಯನ್ನು ಸರ್ಕಾರದವರು ಜಾರಿಗೆ ತಂದದ್ದನ್ನು ನಾನು ಬಹಳವಾಗಿ ಮೆಚ್ಚುತ್ತೇನೆ. ಹೀಗೇನೆ ಮನೆಯಿಲ್ಲದೇ ಇರತಕ್ಕ ಬಡ ಜನಗಳಿಗೆ ಮನೆಯನ್ನು ಕಟ್ಟಿಕೊಡತಕ್ಕ ಯೋಜನೆಯನ್ನು ಆದಷ್ಟು ಜಾಗ್ರತೆ ತಂದರೆ ಬಹಳ ಸಂತೋಷ. ಸರ್ಕಾರದವರು ಬಡಜನಗಳಿಗೆ, ಹರಿಜನ ಗಿರಿಜನರಿಗೆ, ಹಿಂದುಳಿದ ಜನಾಂಗದವರಿಗೆ ಉದ್ಯೋಗ, ವಸತಿ ಇತ್ಯಾದಿ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ಕೇಳಿಕೊಂಡು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಹಮೀದ್‌ಷಾ (ಶಿವಾಜಿನಗರ).—ಮಾನ್ಯ ಅಧ್ಯಕ್ಷರೇ, ಇವೊತ್ತು ಮಾನ್ಯ ಪೌರಾಡಳಿತ ಸಚಿವರು ಈ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ ಒಂದೆರಡು ವಿಷಯ ಗಳನ್ನು ನಾನು ಹೇಳಬಯಸುತ್ತೇನೆ. ಇವೊತ್ತು ಬೆಂಗಳೂರು ಮುನಿಸಿಪಲ್ ಕಾರ್ಪೊರೇಷನ್ನಿನಲ್ಲಿ ಅಧಿಕಾರಿಗಳು ಯಾವ ರೀತಿ ನಡೆದುಕೊಳ್ಳುತ್ತಿದ್ದಾರೆ ಎನ್ನುವುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಇವೊತ್ತು ಕಾರ್ಪೊರೇಷನ್ನಿನಲ್ಲಿ ಆಡಳಿತ ನಡೆಸುತ್ತಾ ಇರತಕ್ಕ ಕಮಿಷನರಾಗಲೀ, ಇಂಜಿನಿಯರ ಗಾಗಲೀ, ಹೆಲ್ತ್ ಆಫೀಸರಿಗಾಗಲೀ ಯಾವುದಾದರೂ ಒಂದು ಅರ್ಜಿಯನ್ನು ಬರೆದರೆ ಅವಕ್ಕೆ ಜವಾಬೇ ಬರುವುದಿಲ್ಲ. ಮಂತ್ರಿಗಳಿಗೆ, ಮುಖ್ಯ ಮಂತ್ರಿಗಳಿಗೆ, ಮತ್ತು ಹೈಕೋರ್ಟ್ ಜಡ್ಜಿಗಳಿಗೆ ಪತ್ರವನ್ನು ಬರೆದರೆ ತಕ್ಷಣ ಜವಾಬು ಬರುತ್ತದೆ. ಆದರೆ ಕಾರ್ಪೊರೇಷನ್ ಅಧಿಕಾರಿಗಳಿಗೆ ಪತ್ರವನ್ನು ಬರೆದರೆ ಜವಾಬು ಬರುವುದಿಲ್ಲ. ಒಂದು ಅರ್ಜಿಗೆ ಎರಡು ವರ್ಷ, ಮೂರು ವರ್ಷ ಆದರೂ ಜವಾಬು ಕೊಡಬೇಕು ಎನ್ನುವ ಭಾವನೆ ಬಾರದೆ ಹೋದರೆ ಹೇಗೆ ? ನಮ್ಮ ಬೆಂಗಳೂರು ನಗರದಲ್ಲಿ ಅನೇಕ ಜನ ಸಮಾಜವಾದ ಮಾತನಾಡುತ್ತಾರೆ. ಆದರೆ ಅದನ್ನು ಕಾರ್ಯತಃ ಅನುಸರಿಸುತ್ತಾ ಇಲ್ಲ. ನನ್ನ ಅಭಿಪ್ರಾಯದಲ್ಲಿ ಸಮಾಜವಾದ ಎಂದರೆ ಬಡಜನಗಳನ್ನು ಉದ್ಧಾರ ಮಾಡುವುದು ಎಂದು ನಾನು ತಿಳಿದುಕೊಂಡಿದ್ದೇನೆ. ಎಲ್ಲರೂ ಹರಿಜನ ಗಿರಿಜನರ ಉದ್ಧಾರ ಮಾಡಬೇಕೆಂದು ಬಹಳವಾಗಿ ಹೇಳುತ್ತಿದ್ದಾರೆ. ಆದರೆ ಕಾರ್ಯತಃ ಅವರ ಉದ್ಧಾರದ ಬಗ್ಗೆ ಕೆಲಸ ಮಾಡುವುದಿಲ್ಲ. ನಾನು ತಮಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಅದೇನೆಂದರೆ ಕಂಟೋನ್ಮೆಂಟನಲ್ಲಿ ಒಂದು ಕಡೆ ಒಂದು ಹರಿಜನ ಸ್ಕೂಲು ಇದೆ. ಅದು ಕಾರ್ಪೊರೇಷನ್ನಿಗೆ ಸೇರಿದ ಜಾಗ. ಅದರ ಪಕ್ಕದಲ್ಲಿ ನಾಯಿ ದೊಡ್ಡಿ ಇದೆ. ಆ ದೊಡ್ಡಿಯಲ್ಲಿ ವಾರಕ್ಕೆ ಒಂದು ಸಾರಿ ನಾಯಿಗಳನ್ನು ಎಲೆಕ್ಟ್ರಿಸಿಟಿಗೆ ಸಿಕ್ಕಿಸಿ ಸಾಯಿಸುತ್ತಾರೆ. ಆದ್ದರಿಂದ ಅಲ್ಲಿ ಇರತಕ್ಕಂಥಾ ದುರ್ವಾಸನೆಯನ್ನು ತಡೆಯುವುದಕ್ಕೆ ಸಾಧ್ಯವಿಲ್ಲ. ಅಂಥಾ ಜಾಗದಲ್ಲಿ ಹರಿಜನರ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಆದಕಾರಣ ಆ ಜಾಗಕ್ಕೆ ಒಂದು ಸಾರಿ ಮಾನ್ಯ ಪೌರಾಡಳಿತ ಶಾಖೆಯ ಮಂತ್ರಿಗಳು ಬಂದು ನೋಡಬೇಕು. ಅದನ್ನು ನೋಡಿ ಅವಕ್ಕೆ ಏನಾದರೂ ಬಂದು ವ್ಯವಸ್ಥೆ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ ನಮ್ಮ ಬೆಂಗಳೂರು ಕಾರ್ಪೊರೇಷನ್‌ನಲ್ಲಿ ಸುಮಾರು 63 ಡಿವಿಜನ್‌ಗಳು ಇವೆ. ಈ ಡಿವಿಜನ್‌ಗಳಲ್ಲಿ ಸರಿಸಮಾನತೆ ಇಲ್ಲ. ಒಂದು ಡಿವಿಜನ್‌ನಲ್ಲಿ 40 ಸಾವಿರ ಮತದಾರರಿ ದ್ದಾರೆ. ಇನ್ನೊಂದು ಡಿವಿಜನ್‌ನಲ್ಲಿ 20 ಸಾವಿರ ಮತದಾರರು ಇದ್ದಾರೆ. ಈ ರೀತಿ ಡಿವಿಜನ್ ಗಳಲ್ಲಿ ಸರಿಸಮಾನತೆ ಇಲ್ಲ. ಇದನ್ನು ಸರಿಪಡಿಸಬೇಕು. ಈ ವೋಟರ್ಸ್ ಲಿಸ್ಟನ್ನು ಕಾರ್ಪೊರೇಷನ್ ಅಧಿಕಾರಿಗಳು ಏನು ತಯಾರು ಮಾಡಿದ್ದಾರೆ ಅದನ್ನು ನೋಡಿದರೆ ಅದೆಷ್ಟು ಸಂತೋಷಪಡಬೇಕೋ ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಮತದಾರರ ಹೆಸರನ್ನು ಹೇಗೆ ಬರೆಯುತ್ತಾರೆ ಎಂದರೆ ಕರಿಯಪ್ಪ ಎಂದು ಇದ್ದರೆ ಕುರಿಯಪ್ಪ ಎಂದು ಬರೆದಿರುತ್ತಾರೆ. ಅದರಲ್ಲೂ ನಮ್ಮ ಮುಸ್ಲಿಮ್ ಜನಾಂಗದವರ ಹೆಸರನ್ನು ತಪ್ಪುತಪ್ಪಾಗಿ ಬರೆದಿರುತ್ತಾರೆ. ಇದನ್ನೆಲ್ಲಾ ಸರಿಯಾಗಿ ಬರೆಯುವಂತೆ ಕಾರ್ಪೊರೇಷನ್ ಅಧಿಕಾರಿಗಳಿಗೆ ಸೂಚನೆಯನ್ನು ಕೊಡಬೇಕು.

ವಾಟರ್‌ಸಪ್ಲೈ ಡಿಪಾರ್ಟ್‌ಮೆಂಟಿನ ಬಗ್ಗೆ ಹೇಳುವುದಾದರೆ ನಾನು ಒಂದು ಉದಾಹರಣೆ
ಯನ್ನು ಹೇಳುತ್ತೇನೆ. ಒಂದು ಊರಿನಲ್ಲಿ ತಾಯಿಮಗಳು ಇಬ್ಬರು ಇದ್ದರಂತೆ, ಮಗಳ ಹೆಸರು
ಗಂಗಾವತಿ, ಒಂದು ದಿವಸ ತಾಯಿ ಮಗಳನ್ನು ಕರೆದು ತುಂಬಾ ಬಾಯಾರಿಕೆಯಾಗಿದೆ ಕುಡಿಯು
ವುದಕ್ಕೆ ನೀರು ತೆಗೆದುಕೊಂಡು ಬಾ ಎಂದು ಹೇಳಿದಳಂತೆ, ಆಕೆ ಕುಡಿಯುವುದಕ್ಕೆ ನೀರು ತರುವ
ವೇಳೆಗೆ ತಾಯಿ ಸತ್ತುಹೋಗಿದ್ದಳಂತೆ. ಈ ರೀತಿಯಾಗಿ ನಮ್ಮ ವಾಟರ್‌ಬೋರ್ಡ್ ಕೆಲಸ ಮಾಡು
ತ್ತಿದೆ. ನಿಜವಾಗಿಯೂ ವಾಟರ್ ಅಂಡ್ ಸೀವರೇಜ್ ಬೋರ್ಡಿನ ಆಡಳಿತವನ್ನು ನೋಡಿದರೆ ನಮಗೆ
ನಾಚಿಕೆಯಾಗುತ್ತದೆ. ಇದನ್ನು ಮಾನ್ಯ ಮಂತ್ರಿಗಳು ಸರಿಪಡಿಸಬೇಕು. ಮತ್ತು ಬೆಂಗಳೂರಿನ
ನಾಗರೀಕರಿಗೆ ಕುಡಿಯುವ ನೀರಿನ ಸರಬರಾಜನ್ನು ಉತ್ತಮ ಪಡಿಸಬೇಕೆಂದು ನಾನು ಹೇಳುತ್ತೇನೆ.

ಇನ್ನು ಬೆಂಗಳೂರು ನಗರದಲ್ಲಿರತಕ್ಕ ರಸ್ತೆಗಳ ಬಗ್ಗೆ ಹೇಳುವುದಾದರೆ ಕಾರ್ಪೋರೇಷನ್
ಏರಿಯಾದಲ್ಲಿರತಕ್ಕ ರಸ್ತೆಗಳು ಪ್ರಯಾಣ ಮಾಡುವುದಕ್ಕೆ ಸರಿಯಾಗಿಲ್ಲ. ಇವು ಫ್ಯಾಮಿಲಿ ಪ್ಲಾನಿಂಗ್
ರೋಡುಗಳಾಗಿವೆ. ಈ ರೋಡುಗಳಲ್ಲಿ 3-4 ತಿಂಗಳು ಗರ್ಭಿಣಿಯಾಗಿರತಕ್ಕ ಹೆಂಗಸರು
ಆಟೋರಿಕ್ಷಾದಲ್ಲಿ ಕುಳಿತು ಪ್ರಯಾಣ ಮಾಡಿದರೆ ಅವರಿಗೆ ಖಂಡಿತಾ ಅಬಾರಷನ್ ಆಗುತ್ತದೆ. ಆದ್ದ
ರಿಂದ ಈ ರೋಡುಗಳಿಗೆ ಫ್ಯಾಮಿಲಿ ಪ್ಲಾನಿಂಗ್ ರೋಡುಗಳು ಎಂದು ಹೇಳಬಹುದು. ಈ ರೋಡು
ಗಳನ್ನು ಹೀಗೆಯೇ ಇಟ್ಟುಕೊಂಡರೆ ಫ್ಯಾಮಿಲಿ ಪ್ಲಾನಿಂಗ್ ಡಿಪಾರ್ಟ್‌ಮೆಂಟಿಗೆ ಖರ್ಚು
ಮಾಡುವುದು ಬೇಡ. ಆದ್ದರಿಂದ ಈ ರಸ್ತೆಗಳ ಬಗ್ಗೆ ಮಾನ್ಯ ಮಂತ್ರಿಗಳು ಗಮನಿಸಬೇಕು.

ಕಾರ್ಪೋರೇಷನ್‌ನವರು ನಡೆಸುತ್ತಿರುವ ಸ್ಕೂಲುಗಳಲ್ಲಿ ಸರಿಯಾಗಿ ಉಪಾಧ್ಯಾಯರುಗಳನ್ನು
ನೇಮಕ ಮಾಡುತ್ತಿಲ್ಲ. ಆದ್ದರಿಂದ ಯಾವ ಯಾವ ಸ್ಕೂಲಿಗೆ ಯಾವ ಯಾವ ಭಾಷೆಯ ಉಪಾಧ್ಯಾ
ಯರು ಬೇಕು ಎಂಬುದನ್ನು ತಿಳಿದುಕೊಂಡು ಆ ಸ್ಕೂಲುಗಳಿಗೆ ವಿಳಂಬ ಇಲ್ಲದಂತೆ ಉಪಾಧ್ಯಾಯ
ರನ್ನು ನೇಮಕ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ನಾನು ಹೇಳುತ್ತೇನೆ.

ಬೆಂಗಳೂರು ನಗರದಲ್ಲಿ ಈಗ ಮೊಬೈಲ್ ಕೋರ್ಟು ಏನಿದೆ ಅವರು ಸಾಕಷ್ಟು ದಕ್ಷತೆಯಿಂದ
ಕೆಲಸ ಮಾಡಬೇಕು. ಬೆಂಗಳೂರು ನಗರದಲ್ಲಿ ರಸ್ತೆಗಳಲ್ಲಿ ಯಾರಾದರೂ ಗಲೀಜು ಮಾಡಿದರೆ
ಅಂಥವರನ್ನು ಹಿಡಿದು ಅವರಿಗೆ ಫೈನ್ ಹಾಕಬೇಕು. ಒಂದು ವೇಳೆ ನನ್ನ ಮಗನೇ ರೋಡಿನಲ್ಲಿ
ಗಲೀಜು ಮಾಡಿದರೆ ಅವನನ್ನು ಹಿಡಿದು ಇಂಥವರ ಮಗ ರೋಡಿನಲ್ಲಿ ಗಲೀಜು ಮಾಡಿದ್ದಕ್ಕೋಸ್ಕರ
ಅವನಿಗೆ 10 ರೂಪಾಯಿ ಫೈನ್ ಹಾಕಿದ್ದೇವೆ ಎಂದು ದೊಡ್ಡ ಅಕ್ಷರದಲ್ಲಿ ಪತ್ರಿಕೆಗಳಲ್ಲಿ ಹಾಕಿದರೆ
ನನಗೆ ಸಂತೋಷವಾಗುತ್ತದೆ. ಇಲ್ಲದೇ ಇದ್ದರೆ ದಿನಬೆಳಗಾದರೆ ಮಕ್ಕಳು ರಸ್ತೆಯಲ್ಲಿ ಗಲೀಜು
ಮಾಡುವುದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಒಂದು ಕಾಲದಲ್ಲಿ ಬೆಂಗಳೂರಿನಲ್ಲಿ ಒಂದು ಮೊಹಲ್ಲಾ
ಮಾಡೆಲ್‌ಸ್ಟ್ರೀಟ್ ಎಂದು ಇತ್ತು. ಇವೊತ್ತು ಅದನ್ನು ನೋಡಿದರೆ ಮಾಡೆಲ್‌ಸ್ಟ್ರೀಟ್ ಎಂದು ಹೇಳು
ವುದಕ್ಕಾಗುವುದಿಲ್ಲ.

ಈಗ ಬೆಂಗಳೂರು ನಗರದಲ್ಲಿ ಕೆಲವು ಕಾರ್ಮಿಕರು ಕೆಲವು ಸೊಸೈಟಿಗಳನ್ನು ಮಾಡಿಕೊಂಡಿ
ದ್ದಾರೆ. ಆ ಸೊಸೈಟಿಗಳಲ್ಲಿ ತಪ್ಪುದಾರಿಯಲ್ಲಿ ಹೋಗತಕ್ಕಂಥಾ ಸೊಸೈಟಿಗಳನ್ನು ಕಂಡು ಹಿಡಿದು
ಅವುಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಇನ್ನೊಂದು ಮಾತು ಹೇಳುತ್ತೇನೆ. ಇವತ್ತು ಬೆಂಗಳೂರು ಸಿಟಿಗೆ ನಾಲ್ಕು ಏಜೆನ್ಸಿಗಳು
ಇವೆ. ಒಂದು ಸಿ. ಐ. ಟಿ. ಬಿ. ಇನ್ನೊಂದು ಕಾರ್ಪೋರೇಷನ್, ಮತ್ತೊಂದು ವಾಟರ್ ಬೋರ್ಡು.
ಇವರೆಲ್ಲರೂ ಸೇರಿಕೊಂಡು ಸಿಟಿಯನ್ನು ಹಾಳು ಮಾಡುತ್ತಿದ್ದಾರೆ. ಇವರಲ್ಲಿ ಯಾವ ಒಂದು
ಯುನಿಫಾರ್ಮಿಟಿಯೂ ಇಲ್ಲ, ಕೋಆರ್ಡಿನೇಶನೂ ಇಲ್ಲ. ಕಾರ್ಪೋರೇಶನಿನವರು ದಿನಾಲೂ ರೋಡು
ಗಳನ್ನು ರಿಪೇರಿ ಮಾಡಿ ಸರಿ ಮಾಡುತ್ತಾರೆ. ಅದರ ಮಧ್ಯದಲ್ಲಿ ಈ ವಾಟರ್-ಬೋರ್ಡಿನವರು
ಅದನ್ನು ಅಗೆದು ಹಾಗೆಯೇ ಬಿಟ್ಟು ಬಿಡುತ್ತಾರೆ. ಅದಕ್ಕೆ ಯಾರು ಬೀಳಲಿ ಅಥವಾ ಸಾಯಲಿ
ಯಾರೂ ನೋಡುತ್ತಾ ಇಲ್ಲ.

12-30 P.M.

ಇನ್ನೊಂದು ವಿಚಾರವೇನೆಂದರೆ, ಬೆಂಗಳೂರು ಕಾರ್ಪೋರೇಶನಾಗಲಿ, ಬಳ್ಳಾರಿ ಮುನಿಸಿ
ಪಾಲಿಟಿಯಾಗಲಿ, ಹುಬ್ಬಳ್ಳಿ ಕಾರ್ಪೋರೇಶನಾಗಲಿ, ಅಥವಾ ಬೀದರ್ ಮುನಿಸಿಪಾಲಿಟಿಯಾಗಲಿ
ಎಲ್ಲಾ ಕಡೆಗಳಲ್ಲಿಯೂ ಇದನ್ನು ಸರಿ ಮಾಡುವುದಕ್ಕೆ ಒಂದು ಕಬ್ಬಿಣದ ಕೈ ಬೇಕಾಗುತ್ತದೆ.
ಸಾಧಾರಣ ಕೈಯಿಂದ ಇದನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಸಚಿವರಿಗೆ

ಹೇಳುತ್ತಿದ್ದೇನೆ ಇಂತಹ ಕೆಲಸಗಳನ್ನು ಅಗತ್ಯವಾಗಿ ಮಾಡಬೇಕು ಎಂದು. ನೀವು ಒಂದು ಕಬ್ಬಿಣದ ಕೈಯಿಂದ ಇವುಗಳನ್ನು ಮಾಡಬೇಕಾಗಿದೆ.

ಮತ್ತೊಂದು ವಿಚಾರವೇನೆಂದರೆ ದೊಡ್ಡ ದೊಡ್ಡ ಬಂಗಲೆಗಳಿಗೆ ದೊಡ್ಡ ದೊಡ್ಡ ಕಂಪೌಂಡು ಗಳು ಇವೆ. ಅಲ್ಲಿ ಗಂಧದ ಮರಗಳು ಬೇಕಾದಷ್ಟು ಇರುತ್ತವೆ. ಹಳೆಯ ಕಾಲದಲ್ಲಿ ಕಾರ್ಪೋರೇಶ ನಿನವರು ಫಾರೆಸ್ಟ್ ಇಲಾಖೆಗೆ ತಿಳಿಸಿ ಅದಕ್ಕೆ ನಂಬರು ಹಾಕುತ್ತಿದ್ದರು. ಆ ಮೇಲೆ ಅದನ್ನು ಯಾರೂ ಕಡಿಯುವ ಹಾಗಿಲ್ಲ. ಆದರೆ ಈಗ ಅದನ್ನು ಮಾಡುತ್ತಾ ಇಲ್ಲ. ಇದರಿಂದ ಸರ್ಕಾರಕ್ಕೆ ಬರುವಂತಹ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತಿದೆ. ಆದ್ದರಿಂದ ಎಲ್ಲಿ ಸೈಟ್ ಮಾಡುತ್ತಾರೆ ಅಲ್ಲಿ ಗಂಧದ ಮರಗಳು ಇವೆಯೇ ಎಂದು ನೋಡಿಕೊಂಡು ಕ್ರಮ ತೆಗೆದುಕೊಳ್ಳಬೇಕೆಂದು ಹೇಳು ತ್ತೇನೆ. ಇನ್ನು ಈ ಮುನಿಸಿಪಾಲಿಟಿ ಆಕ್ಟಿನಲ್ಲಿ ಒಂದು ತಿದ್ದುಪಡಿಯನ್ನು ಮಾಡಿ ಯಾರ್ಯಾರು ಕ್ಲಾಸ್ 2, 3 ಮತ್ತು 4 ನೌಕರರು ತಪ್ಪು ಮಾಡಿದರೆ ಅವರನ್ನು ತಕ್ಷಣ ಬೆಂಗಳೂರಿಂದ ಶಿಕಾರಿ ಪುರಕ್ಕೆ ಟ್ರಾನ್ಸ್‌ಫರ್ ಮಾಡುವ ಹಾಗೆ ಮಾಡಬೇಕೆಂದು ಹೇಳಿ, ನಗರಾಡಳಿತವನ್ನು ಚೆನ್ನಾಗಿ ಮಾಡಲು ಕಬ್ಬಿಣದ ಕೈ ಕೊಡಲಿ ಎಂದು ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೆ, ನಾನು ಪೌರಾಡಳಿತ ಸಚಿವರ ಬೇಡಿಕೆಯ ಮೇಲೆ ಕೆಲವು ಸಲಹೆಗಳನ್ನು ಮತ್ತು ಅನುಮಾನಗಳನ್ನು ವ್ಯಕ್ತಪಡಿಸಲು ಇಚ್ಛೆಪಡು ತ್ತೇನೆ. ಮೊದಲನೆಯದಾಗಿ ಮೈಸೂರು ದೇಶದೊಳಗೆ ಜನತಾ ಸರ್ಕಾರ ಬಂದ ಮೇಲೆ ಕಾರ್ಪೋರೇಶನ್ ಮತ್ತು ಮುನಿಸಿಪಾಲಿಟಿಗಳ ಸ್ಥಿತಿ ಏನಾಗಿದೆ ಅಂದರೆ ಹಿಂದೆ ಎಷ್ಟು ಮಟ್ಟಿನ ಅಧಿಕಾರಿಗಳನ್ನು ಸರ್ಕಾರದವರು ಕೊಟ್ಟಿದ್ದರೋ, ಅವರೆಲ್ಲರನ್ನೂ ಕಿತ್ತು ಹಾಕಿದ್ದಾರೆ. ಇದಕ್ಕೆ ಕಾರಣ, ರಾಜ್ಯ ಸರ್ಕಾರಗಳಿಗೆ ಇದ್ದಂತಹ ಅಧಿಕಾರವನ್ನು ಕೇಂದ್ರ ಸರ್ಕಾರದವರು ಮೊಟಕು ಮಾಡಿದ ಮೇಲೆ ರಾಜ್ಯಸರ್ಕಾರದ ಮಂತ್ರಿಗಳಿಗೆ ಕೆಲಸ ಸಾಲದೆ ಕಾರ್ಪೋರೇಶನ್ ಅಧಿಕಾರವನ್ನು ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆಂದು ಹೇಳಬೇಕಾಗುತ್ತದೆ.

ಎರಡನೇಯದಾಗಿ ಹಿಂದೆ ಇದ್ದಂತಹ ಸರ್ಕಾರದವರು ಮತ್ತು ರಾಜ್ಯಪಾಲರ ಆಡಳಿತದಲ್ಲಿದ್ದಂತ ವರು ಕೂಡ ಆಕ್ಟ್ರಾಯಿ ಪದ್ಧತಿ ಬಹಳ ಹಳೆಯದು, ಇದನ್ನು ರದ್ದು ಮಾಡಬೇಕೆಂದು ಹೇಳಿದ್ದರು. ಕೇಂದ್ರ ಸರ್ಕಾರದವರು ಸಹ ಹಳೆಯ ಕಾಲದ ಆಕ್ಟ್ರಾಯಿಯನ್ನು ವಜಾ ಮಾಡಬೇಕೆಂದು ಹೇಳಿದ್ದಾರೆ. ಆದ್ದರಿಂದ ಹಿಂದೆ ಹೇಳಿದಂತಹ ಸರ್ಕಾರದ ವಚನವನ್ನು ಪಾಲಿಸದೆ ಇವರು ಆಕ್ಟ್ರಾಯಿಯನ್ನು ಹಾಗೆಯೇ ಇಟ್ಟಿದ್ದಾರೆ. ಇದರಿಂದ ಏನಾಗಿದೆ ಅಂದರೆ, ಪ್ರತಿಯೊಂದು ಚೆಕ್ ಪೋಸ್ಟಿನಲ್ಲಿಯೂ ಲಂಚರುಷುವತ್ತುಗಳು ಜಾಸ್ತಿಯಾಗಿವೆ. ಕಾರ್ಪೋರೇಶನ್ ಆಕ್ಟ್ರಾಯಿಯನ್ನು ವಸೂಲು ಮಾಡತಕ್ಕ ವರು ಎಷ್ಟು ಮಟ್ಟಿಗೆ ಲಂಚಕೋರರಾಗಿದ್ದಾರೆಂಬುದು ಸರ್ಕಾರದ ಗಮನಕ್ಕೂ ಬಂದಿದೆ. ಆದ್ದರಿಂದ ಆಕ್ಟ್ರಾಯಿ ಪದ್ಧತಿಯನ್ನು ಇನ್ನಾದರೂ ಏಕೆ ವಜಾ ಮಾಡಬಾರದು ಎಂದು ಆಲೋಚನೆ ಮಾಡಬೇಕಾಗಿದೆ. ಹಿಂದೆ ಒಂದು ಸಾರಿ ಸರ್ಕಾರಕ್ಕೆ ನಾವು ಒಂದು ಮನವಿಯನ್ನು ಸಲ್ಲಿಸಿ, ಆಕ್ಟ್ರಾಯಿ ಎಷ್ಟು ಮಟ್ಟಿಗೆ ವಸೂಲಾಗುತ್ತದೋ ಅದಕ್ಕಿಂತ ಸೇಲ್ಸ್ ಟ್ಯಾಕ್ಸ್ ಮೇಲೆ ಸರ್ಚಾರ್ಜ್ ಹಾಕಬೇಕು ಮತ್ತು ಈ ಆಕ್ಟ್ರಾಯಿಯನ್ನು ನಿಲ್ಲಿಸಬೇಕೆಂದು ಹೇಳಿದ್ದೇವೆ. ಇನ್ನೊಂದು ವಿಚಾರವೇ ನೆಂದರೆ ಈಗ ಲಾರಿಗಳಲ್ಲಿ ಹೊರ ರಾಜ್ಯಗಳಿಂದ ಬರತಕ್ಕ ಸಾಮಾನುಗಳನ್ನು ಟೋಲ್ ಗೇಟ್‌ಗೆ ಬರುವ ಮೊದಲೇ ಹೊರಗಡೆಯೇ ಒಂದು ಗೋಡೌನ್ ಮಾಡಿಕೊಂಡು ಇಳಿಸುತ್ತಿದ್ದಾರೆ. ಇದಕ್ಕೆ ಅವರು ರಾತ್ರೋ ರಾತ್ರಿ ಸಾಮಾನುಗಳನ್ನು ತೆಗೆದುಕೊಂಡು ಬಂದು ಈ ರೀತಿ ಮಾಡುತ್ತಿದ್ದಾರೆ. ಈ ರೀತಿಯಾಗಿ ಅಲ್ಲಿ ನಡೆಯುತ್ತಿದೆ. ಇದರ ಜೊತೆಗೆ ವರಮಾನವನ್ನು ಹೆಚ್ಚಿಸುವುದಕ್ಕೆ ಬೇರೆ ದಾರಿ ಯನ್ನು ಕಂಡುಹಿಡಿಯಬೇಕೆಂದು ಹೇಳುತ್ತೇನೆ. ಉದಾಹರಣೆಗೆ ಸೇಲ್ಸ್ ಟ್ಯಾಕ್ಸ್ ಮೇಲೆ ಸರ್ಚಾರ್ಜ್‌ನ್ನು ಹಾಕಿ ಮುನಿಸಿಪಾಲಿಟಿಯವರಿಗೆ ಕೊಡುವುದಕ್ಕೆ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು 1966ನೇ ಇಸವಿಯಲ್ಲಿ ಬೆಂಗಳೂರು ನಗರ ಕಾರ್ಪೊರೇಶನನ್ನು ರದ್ದು ಮಾಡಿದಾಗ 14 ಅಂಶಗಳ ಪೈಕಿ ಒಂದು ಅಂಶವನ್ನು ಹೇಳುತ್ತಿದ್ದೇನೆ. ಕಾರ್ಪೊರೇಶನಿನಲ್ಲಿ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಮಾಡಿ ಕಳಿಸಿಲ್ಲವೆಂದು ಹೇಳುತ್ತಿದ್ದರು. ಆ ಕಾರಣದಿಂದ ಕಾರ್ಪೋರೇಶನ್ ರದ್ದು ಮಾಡಿದರು. ಅದನ್ನು ರದ್ದು ಮಾಡಿ 7 ವರ್ಷಗಳು ಕಳೆದರೂ ಕೂಡ ಸರ್ಕಾರದವರು ಇನ್ನೂ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸನ್ನು ಜಾರಿಗೆ ಕೊಡುವುದಕ್ಕೆ ವಿಫಲವಾಗಿದೆ. ಆದ್ದರಿಂದ ಈ ಮಂತ್ರಿಮಂಡಲದವರಿಗೆ ಅಧಿಕಾರದಲ್ಲಿರಲು ಹಕ್ಕಿಲ್ಲವೆಂದು ಹೇಳಬೇಕಾಗಿದೆ.

(ಶ್ರೀ ಕೆ. ಎಂ. ನಾಗಣ್ಣ)

ಇನ್ನು ಸ್ಲಮ್ಸ್ ಬಗ್ಗೆ ಒಂದು ಮಾತು. ಬೆಂಗಳೂರು ನಗರದಲ್ಲಿ ಸ್ಲಮ್ಸ್ ಎಲ್ಲಿಂದ ಬಂತು, ಯಾವ ಊರಿನವರು ಅವರು; ಏಕೆ ಬಂದರು ಎಂದು ನೋಡಿದರೆ ಗೊತ್ತಾಗುತ್ತದೆ. ಅವರೆಲ್ಲರೂ ಮೈಸೂರು ದೇಶದ ಜನರಲ್ಲ. ಅವರು ಬೇರೆ ಪ್ರಾಂತ್ಯಗಳಿಂದ ಬಂದಂತಹವರು. ಅದರಲ್ಲಿ ಕನ್ನಡಿಗರ್ಯಾರೂ ಇಲ್ಲ. ಅವರು ವೇಲೂರು, ವಾನಂಬಾಡಿ ಕಡೆಯಿಂದ ಬಂದಂಥವರು. ಈಗ ಸಚಿವರು ಉದಾರ ಭಾವನೆಯಿಂದ ನಿವೇಶನಗಳನ್ನು ಹಂಚುತ್ತೇವೆಂದು ಹೇಳಿದ ಮೇಲೆ ಬೇಕಾದಷ್ಟು ಜನರು ಸ್ಲಮ್‌ಗಳನ್ನು ಮಾಡುತ್ತಿದ್ದಾರೆ. ಒಂದು ಮನೆಯಲ್ಲಿ 5 ಜನ ಇದ್ದರೆ, 5 ಸ್ಲಮ್ ಗುಡಿಸಲುಗಳನ್ನು ಇಂದು ಹಾಕುತ್ತಿದ್ದಾರೆ. ಆದ್ದರಿಂದ ಸ್ಲಮ್ಸ್‌ನಲ್ಲಿರುವವರಿಗೆ ಸೈಟುಗಳನ್ನು ಕೊಡುವಾಗ ಬೆಂಗಳೂರಿನ ಜನರು ಯಾರ್ಯಾರಿದ್ದಾರೆ, ಯಾರ್ಯಾರಿಗೆ ಮನೆ ಇಲ್ಲ, ಮನೆ ಇಲ್ಲದೆ ಬಾಡಿಗೆ ಮನೆಗಳಲ್ಲಿದ್ದಾರೋ ಅಂತಹವರಿಗೆ ಮಾತ್ರ ಸೈಟುಗಳನ್ನು ಕೊಡಬೇಕು. ಇದೂ ಅಲ್ಲದೆ ಅಲ್ಲಿರತಕ್ಕವರಿಗೆ ಈಗ ಯಾರಿಗೆ ಅರ್ಜಿ ಕೊಡಬೇಕೆಂಬುದೇ ಗೊತ್ತಿಲ್ಲ. ಈಗ 25 ಸಾವಿರ ಜನರು ಬಾಡಿಗೆ ಮನೆಗಳಲ್ಲಿ ಇದ್ದಾರೆ. ಅವರಿಗೆಲ್ಲರಿಗೂ ಕೊಡಬೇಕು ಬರೀ ಸ್ಲಮ್ಸ್‌ನಲ್ಲಿದ್ದವರಿಗೆ, ಹೊರಗಡೆಯಿಂದ ಬಂದವರಿಗೆ ಮಾತ್ರ ಸೈಟುಗಳನ್ನು ಕೊಡುತ್ತೇವೆಂಬ ಒಂದು ಕೃಪೆಯನ್ನು ತೋರಿಸಿದರೆ, ಬೆಂಗಳೂರಿನಲ್ಲಿ ನೂರಾರು ವರ್ಷಗಳಿಂದ ಇರತಕ್ಕವರಿಗೆ ಮನೆಗಳು ಇಲ್ಲದೇ ಇರುವವರ ಗತಿಯೇನು ? ಅವರಿಗೂ ಸಹ ಅದೇ ರೀತಿಯ ಕೃಪೆಯನ್ನು ತೋರಿಸಬೇಕು.

ಇನ್ನೊಂದು ವಿಷಯ ಮಾನ್ಯ ಮಂತ್ರಿಗಳು ಬೆಂಗಳೂರಿನ ನಿವಾಸಿಗಳಾಗಿ ಸ್ವಂತ ಮನೆಗಳಲ್ಲಿ ವಾಸವಾಗಿದ್ದಾರೆ. ಹಿಂದೆ ಪತ್ರಿಕೆಗಳಲ್ಲಿಯೂ ಈ ವಿಷಯ ವರದಿಯಾಗಿತ್ತು. ಏನೆಂದರೆ ಮನೆಯ ಮಾಲೀಕರುವಾಸವಾಗಿರತಕ್ಕಂಥ ಮನೆಗಳಿಗೆ ಕಂದಾಯವನ್ನು ಜಾಸ್ತಿ ಮಾಡಕೂಡದೆಂದು ಸರ್ಕಾರದವರು ಒಂದು ಆದೇಶವನ್ನು ಕೊಟ್ಟಿದ್ದಾರೆಂದು ವರದಿಯಾಗಿತ್ತು. ಆದರೆ ಅದರ ತದ್ವಿರುದ್ಧವಾಗಿ ಕಾರ್ಪೊರೇಷನ್ ಸಭೆಯಲ್ಲಿ 'ಕಾರ್ಪೊರೇಷನ್ ಮೇಯರ್ ಅವರು ಏನು ಹೇಳಿದ್ದಾರೆಂದರೆ, ಈ ರೀತಿಯಾಗಿ ಆದೇಶ ಕೊಡುವುದಕ್ಕೆ ಸರ್ಕಾರಕ್ಕೆ ಅಧಿಕಾರವಿಲ್ಲ, ಏನು ಮಾಡಬೇಕಾದರೂ ನಮಗೆ ಅಧಿಕಾರವಿದೆ. ಸರ್ಕಾರದ ಹೇಳಿಕೆಯನ್ನು ನಾವು ಪಾಲಿಸುವುದಕ್ಕೆ ತಯಾರ್ ಆಗಿಲ್ಲ. ಈ ಬಗ್ಗೆ ಸರ್ಕಾರದವರು ತಮ್ಮ ಆದೇಶವನ್ನು ಉಳಿಸಿಕೊಳ್ಳುತ್ತೀರೋ ಅಥವಾ ಮೇಯರ್ ಅವರು ಹೇಳಿದ ಮಾತನ್ನು ಉಳಿಸಿಕೊಳ್ಳುತ್ತಾರೋ ಎಂಬುದನ್ನು ಬೆಂಗಳೂರಿನ 15 ಲಕ್ಷ ಜನರು ಕಾದು ನೋಡುತ್ತಿದ್ದಾರೆ.

ಇನ್ನೊಂದು ವಿಷಯ. ಬೆಂಗಳೂರಿನಲ್ಲಿ ಕೋರ್ಟುಗಳ ಮುಂದೆ ಯಾವಾಗಲೂ ಸಾಮಾನ್ಯವಾಗಿ ಸಾಕ್ಷಿ ಹೇಳುವವರು ಹೆಚ್ಚಿಗೆ ಇರುತ್ತಾರೆ. ಅದೇ ರೀತಿ ಸುಮಾರು ಐದಾರು ವರ್ಷಗಳಿಂದೀಚೆಗೆ ಬರೀ ಬ್ರೋಕರ್ಸ್ ಕಾರ್ಪೊರೇಷನ್ನಿನ ಕಾಂಪೌಂಡ್ ಮುಂದೆ ಇರುತ್ತಾರೆ. ಅವರು ಅಲ್ಲಿನ ಅಧಿಕಾರಿಗಳನ್ನು ಹಾಳು ಮಾಡುತ್ತಿದ್ದಾರೆ. ಯಾವನಾದರೂ ಅರ್ಜಿಯನ್ನು ತೆಗೆದುಕೊಂಡು ಬಂದರೆ ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಹೋಗಿ ಅವನ ಕೆಲಸ ಮಾಡಿಸಿಕೊಳ್ಳಬೇಕೆಂದರೆ, ಅವನು ಅವನಿಗೆ ಲಂಚ ಕೊಡಬೇಕು. ಇದು ಮೊದಲು ನಿವಾರಣೆಯಾಗಬೇಕು. ಕಾರ್ಪೊರೇಷನ್ ಕಚೇರಿಯೊಳಗೆ ಏನಾದರೂ ಅವನ ಸ್ವಂತ ಕೆಲಸವಿರಬೇಕು, ಇನ್ನೊಬ್ಬರ ಕೆಲಸ ಇರಬಾರದೆಂಬ ಒಂದು ನೀತಿಯನ್ನು ಅಲ್ಲಿ ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕು. ಒಟ್ಟಿನಲ್ಲಿ ಅಲ್ಲಿ ಬ್ರೋಕರ್ಸ್ ಹಾವಳಿಯನ್ನು ತಪ್ಪಿಸಿದರೆ ನಿಜವಾಗಿ ಜನಗಳಿಗೆ ಹೆಚ್ಚಿನ ಅನುಕೂಲವಾಗುತ್ತದೆ ಹಾಗೂ ಅಧಿಕಾರಿಗಳಿಗೂ ಹೆಚ್ಚಿಗೆ ಕೆಲಸವನ್ನು ನಿಷ್ಠೆಯಿಂದ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಇನ್ನೊಂದು ವಿಷಯವನ್ನು ಮಾನ್ಯ ಶ್ರೀ ಶಾಮಣ್ಣನವರು ಹೇಳಿದರು. ಅದು ಅವರಿಗೆ ಸರಿಯಾಗಿ ಗೊತ್ತಿಲ್ಲವೆಂದು ಕಾಣುತ್ತದೆ. ವಿಜಿಲೆನ್ಸ್ ಡಿಪಾರ್ಟ್‌ಮೆಂಟಿನವರು ಇಂಜಿನಿಯರುಗಳ ಮೇಲೆ ವರದಿ ಕೊಟ್ಟಿದ್ದಾರೆಂದು. ನಾನು ಹೇಳುವುದಿಷ್ಟೇ. ಇದಕ್ಕೆ ಬರೀ ಇಂಜಿನಿಯರುಗಳೇ ಜವಾಬ್ದಾರರಲ್ಲ. ಇದಕ್ಕೆ ಸಂಬಂಧಪಟ್ಟ ಆಡಿಟರುಗಳೂ ಸಹ ಜವಾಬ್ದಾರರು. 'ಇದರಲ್ಲಿ ಆಡಿಟರ್ಸ್ ಯಾರ್ಯಾರು ಸೇರಿದ್ದಾರೋ ಅವರಮೇಲೆಲ್ಲಾ ಕೂಡ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು.

ಇನ್ನೊಂದು ವಿಷಯ. ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ಕಾರ್ಪೊರೇಷನ್ನಿಗೆ ಅಥವಾ ಮುನಿಸಿಪಾಲಿಟಿಗೆ ಎಷ್ಟು ಸೇರಬೇಕೋ ಅಷ್ಟು ಸೇರುತ್ತಾ ಇಲ್ಲ. ಈಗ ಆ ಬಾಬಿನಲ್ಲಿ 50 ಲಕ್ಷ ರೂಪಾಯಿಗಳನ್ನು ವಸೂಲು ಮಾಡುತ್ತಾರೆ. ಅದರಲ್ಲಿ ಕೇವಲ ನಾಲ್ಕೈದು ಲಕ್ಷ ರೂಪಾಯಿಗಳನ್ನು ಮಾತ್ರ ಕೊಡುತ್ತಾರೆ. ಸುಮಾರು 5—6 ಕೋಟಿ ರೂಪಾಯಿಗಳಾದರೂ ಅಲ್ಲಿಗೆ ನ್ಯಾಯವಾಗಿ

ಸಂದಾಯವಾಗಬೇಕಾಗಿದೆ. ಆ ರೀತಿಯಾಗಿ ಸರ್ಕಾರದವರು ಕೂಡಲೇ ಕೊಡಬೇಕೆಂದು ಹೇಳಿ, ಅಧ್ಯಕ್ಷರು ನನಗೆ ಮಾತನಾಡಲಿಕ್ಕೆ ಇಷ್ಟು ಹೊತ್ತು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಜೇವರ್ಗಿ).—ಸನ್ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಮಾನ್ಯ ಮಂತ್ರಿಗಳು ಮಂಡಿಸಿದ ಡಿಮ್ಯಾಂಡುಗಳಿಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತಾ ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ. ಈ ಪೌರಸಭೆಗಳಲ್ಲಿ ಮಾನ್ಯ ಶ್ರೀ ಗುಂಡೂರಾವ್ ಅವರು ಹೇಳಿದ ಹಾಗೆ ಈ ಹೊಸ ಆಕ್ಟಿನಲ್ಲಿ ಬಹಳ ಡಿಫೆಕ್ಟ್ಸ್ ಇವೆ. ಹೊಸದಾಗಿ ನಾನೂ ಒಬ್ಬ ನಗರ ಸಭಾಸದಸ್ಯನಾಗಿದ್ದೇನೆ. ಎಷ್ಟೋ ಮಾತುಗಳನ್ನು ನಗರ ಸಭೆಯಲ್ಲಿ ಮಾತನಾಡುತ್ತೇವೆ. ಆದರೆ ಎಲ್ಲಾ ಪವರ್ಸ್ ಈಗ ಮುನಿಸಿಪಲ್ ಕಮಿಷನರ್ ಕೈಲಿ ಇದೆ. ಆದ್ದರಿಂದ, ಈ ಆಕ್ಟನ್ನು ಬದಲಾಯಿಸಿ ಜನರನ್ನು ಪ್ರತಿನಿಧಿಸತಕ್ಕ ಎಲ್ಲಾ ಸದಸ್ಯರಿಗೂ ಮತ್ತು ಮುನಿಸಿಪಾಲಿಟಿ ಅಧ್ಯಕ್ಷರಿಗೂ ಕೂಡ ಕೆಲವು ಹಕ್ಕುಗಳು ಸಿಗುವಂತೆ ಅದರಲ್ಲಿ ಕೆಲವು ಬದಲಾವಣೆಗಳು ಆಗಬೇಕೆಂದು ನಾನು ಇಚ್ಛೆಪಡುತ್ತೇನೆ. ಮತ್ತೊಂದು ಮಾತು. ನಾನು ಗುಲ್ಬರ್ಗಾ ಮುನಿಸಿಪಾಲಿಟಿಯಲ್ಲಿದ್ದಾಗ ಎಷ್ಟೋವೇಳೆ ವಿರೋಧಪಕ್ಷದ ನಾಯಕರಾಗಿರತಕ್ಕವರು ಮಾನ್ಯ ಶ್ರೀ ವೀರೇಂದ್ರಪಾಟೀಲ್ ಅವರು ಮುಖ್ಯಮಂತ್ರಿಯಾಗಿದ್ದಾಗ ಅವರ ಹೆಸರನ್ನು ಹೇಳಿ ಕೊಂಡು ಇಲ್ಲಿ ಎಂ. ಎಲ್. ಎ., ಅಲ್ಲಿ ಮುನಿಸಿಪಲ್ ಪ್ರೆಸಿಡೆಂಟ್‌ರಾಗಿದ್ದರು. ಆ ವೇಳೆಗೆ ಗುಲ್ಬರ್ಗಾ ಮುನಿಸಿಪಾಲಿಟಿಯಲ್ಲಿ ನಡೆದಿರತಕ್ಕ ಎಷ್ಟೋ ವಿಷಯಗಳನ್ನು ತಮ್ಮಲ್ಲಿ ತಿಳಿಸಬಯಸು ತ್ತೇನೆ. ಅಂತಹವರು ನಮ್ಮಲ್ಲಿ ಮುನಿಸಿಪಲ್ ಅಧ್ಯಕ್ಷರು ಆಗಿದ್ದಂಥ ಕಾಲದಲ್ಲಿ ಬಸವೇಶ್ವರ ಮೂರ್ತಿಯನ್ನು ಕೊಡಿಸಬೇಕೆಂಬ ಇಚ್ಛೆ ಇತ್ತು. ಈಗ ಅದನ್ನು ಅಲ್ಲಿ ಸ್ಥಾಪನೆಮಾಡಿದ್ದಾರೆ. ಅವರು ಬಸವ ಸಮಿತಿಯ ಅಧ್ಯಕ್ಷರಾಗಿದ್ದಾರೆ. ನಗರ ಸಭೆಯ ಅಧ್ಯಕ್ಷರಾಗಿದ್ದಾರೆ. ಯಾರಾದರೂ ಬಂದರೆ ಅವರಿಂದ 500ರಿಂದ 700 ರೂಪಾಯಿಗಳವರೆಗೆ ತೆಗೆದುಕೊಳ್ಳುತ್ತಾರೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಎಷ್ಟೋ ಲಕ್ಷ ರೂಪಾಯಿಗಳನ್ನು ಕಲೆಕ್ಟ್‌ಮಾಡಿ ಬಸವೇಶ್ವರರ ಹೆಸರಿನಲ್ಲಿ ಒಂದು ಫಂಡ್ ಮಾಡಿರುತ್ತಾರೆ. ಈ ರೀತಿ ಮಾಡಿದ್ದಾರೆಂದು ನಗರಸಭೆಯಲ್ಲಿ ಹೇಳಿದ್ದರೂ ಲಕ್ಷಗಟ್ಟಲೆ ರೂಪಾಯಿಗಳನ್ನು ಕಲೆಕ್ಟ್‌ಮಾಡಿದ್ದರೂ ಸರಿಯಾಗಿ ರಶೀದಿ ಕೊಟ್ಟಿಲ್ಲ. ರಶೀದಿಗಳನ್ನು ಮಿಸ್‌ಯೂಜ್ ಮಾಡುತ್ತಿದ್ದಾರೆ. ನಗರಸಭಾಧ್ಯಕ್ಷರ ಹೆಸರನ್ನು ಉಪಯೋಗಿಸಿ ಈ ರೀತಿ ಮಾಡುತ್ತಾರೆ. ಇದರ ಬಗ್ಗೆ ವಿರೋಧವನ್ನು ವ್ಯಕ್ತ ಪಡಿಸಿದಾಗ ಮೈಸೂರು ಸರ್ಕಾರ ದಿಂದ ಒಂದು ಎನ್‌ಕ್ವೈರಿ ಕಮಿಟಿ ಆಯಿತು. ಆದರೆ ಇಲ್ಲಿಯವರೆಗೂ ಏನು ಎನ್‌ಕ್ವೈರಿ ಆಯಿತೋ ಗೊತ್ತಿಲ್ಲ. ಇದರ ಬಗ್ಗೆ ಎಷ್ಟೊ ರೆಪ್ರಸೆಂಟೇಷನ್‌ಗಳನ್ನು ಮಾಡಿದ್ದರೂ ಸಹ ಇವತ್ತಿನವರೆಗೂ ಏನೂ ಸರ್ಕಾರದಿಂದ ಉತ್ತರ ಬಂದಿಲ್ಲ. ಇದೇ ರೀತಿಯಲ್ಲಿ ಗುಲ್ಬರ್ಗಾದಲ್ಲಿ ಒಂದು ಹೊಸ ಮಾರ್ಕೆಟ್ ಆಗಬೇಕೆಂದು ತೀರ್ಮಾನವಾಗಿತ್ತು. ಅಲ್ಲಿ ಒಂದು ವೆಜಿಟಬಲ್ ಮಾರ್ಕೆಟ್ ಇತ್ತು. ಅಲ್ಲಿರತಕ್ಕ ಜನರಿಗೆ ಮೊದಲು ಸ್ಥಾನ ಕೊಡಬೇಕು. ಅದಾದಮೇಲೆ ಫ್ರೆಷ್ ಅಪ್ಲಿಕೇಷನ್ಸ್‌ನ್ನು ಕನ್ಸಿಡರ್ ಮಾಡಬೇಕು. ಅಲ್ಲಿನ ವೆಜಿಟಬಲ್ ಮಾರ್ಕೆಟ್ ಕಮಿಟಿಯಲ್ಲಿ ನಾನು ಇದ್ದೆ. ಆದರೆ ಆ ಕಮಿಟಿಯಲ್ಲಿಯೂ ಕೂಡ ತಮಗೆ ಬೇಕಾದವರಿಗೆ ಸ್ಥಳ ಕೊಟ್ಟಿದ್ದಾರೆ. ಅನೇಕರು ಇನ್ನೂ ಆ ಹೊಸ ಮಾರ್ಕೆಟ್ಟಿಗೆ ಹೋಗಿಲ್ಲ. ಹೊಸದಾಗಿ ಏನೋ ಮಾರ್ಕೆಟ್ ಕಟ್ಟಿಸಿದ್ದಾರೆ. ಇದರಿಂದ ಲಕ್ಷಾಂತರ ರೂಪಾಯಿಗಳು ಲುಕ್ಸಾನು ಆಗಿದೆ. ಆದಕಾರಣ ತಾವು ಆ ವಿಷಯದಲ್ಲಿ ತಮ್ಮ ಗಮನವನ್ನು ಕೊಡಬೇಕು.

ಮತ್ತೊಂದು ವಿಷಯ. ಇವತ್ತಿನದಿವಸ ಈ ಗುಲ್ಬರ್ಗ ನಗರದಲ್ಲಿ ನೀರಿನದೇ ಒಂದು ದೊಡ್ಡ ಸಮಸ್ಯೆಯಾಗಿದೆ. ಅದನ್ನು ಕೂಡಲೇ ಬಗೆಹರಿಸಬೇಕಾಗಿದೆ. ಹಿಂದೆ ರಾಜ್ಯಪಾಲರು ಆಡಳಿತ ಮಾಡುತ್ತಿದ್ದಾಗ ಅಲ್ಲಿ ನೀರೇ ಇರಲಿಲ್ಲ. ಅಲ್ಲಿಗೆ ಬನ್ನಿತುರ ಪ್ರಾಜೆಕ್ಟಿನಿಂದ ನೀರು ತರಬೇಕಾಗಿತ್ತು. ಇದಕ್ಕಾಗಿ ನಗರಸಭೆಯ ಸದಸ್ಯರು ರಾಜೀನಾಮೆ ಕೊಟ್ಟಿದ್ದರೂ ಆಗ ರಾಜ್ಯಪಾಲರು ಇದರ ಬಗ್ಗೆ ತೀವ್ರ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಈಗ ಫಸ್ಟ್‌ಸ್ಟೇಜ್ ಕೆಲಸ ಮುಗಿದಿದೆ. ಇನ್ನು ಸೆಕೆಂಡ್ ಸ್ಟೇಜ್ ಕೆಲಸ ಮುಗಿಸಬೇಕಾದರೆ ಪೈಪ್ ಕೆಲಸ ಮಾಡಬೇಕು. ಐರನ್ ಅಂಡ್ ಸ್ಟೀಲ್ ಸಪ್ಲೈ ಆಗಬೇಕು ಎಂಬುದಾಗಿ ಹೇಳುತ್ತಿದ್ದಾರೆ. ಅದಕ್ಕಾಗಿ ನಾವು ಲೀಡ್ ತೆಗೆದುಕೊಳ್ಳ ಬೇಕೆಂದು ಹೇಳಿದ ಮೇಲೆ ನಾವು ಒಂದು ಡೆಲಿಗೇಷನ್ ಕೊಟ್ಟಾಗ್ಗೆ ತಾವು ಒಂದು ಇಂಟರೆಸ್ಟ್ ತೋರಿಸಿ ಆಗ ಏನೇನು ಮಾಡುತ್ತೇವೆಂದು ಹೇಳಿದ್ದರೋ ಅದನ್ನು ಇದುವರೆಗೆ ಮಾಡಲಿಲ್ಲ. ಗುಲ್ಬರ್ಗ ಜನರಿಗೆ ನೀರಿನ ಅಭಾವ ಇದೆ. ಆದ್ದರಿಂದ ಹೆಚ್ಚಿಗೆ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸಬೇಕು. ಒಬ್ಬ ಡೆಪ್ಯುಟಿ ಕಮಿಷನರ್ ಪಬ್ಲಿಕ್ ಹೆಲ್ತ್ ಆಫೀಸರ್ಸ್ ಮೂಲಕ ಅವರ ಮನೆಯಲ್ಲಿ ಬೋರ್‌ವೆಲ್ ಹಾಕಿಕೊಂಡು, ಅದನ್ನು ಸರಿಯಾಗಿ ಫಂಕ್ಷನ್ ಮಾಡಿಸಲಿಲ್ಲ. ಇದರಿಂದ

(ಶ್ರೀ ಧರ್ಮಸಿಂಗ್ ನಾರಾಯಣಸಿಂಗ್)

ಬೇರೆ ನೀರಿಗೆ ತುಂಬಾ ಅಭಾವವಾಗಿದೆ. ಒಟ್ಟಿನಲ್ಲಿ ನಾನು ಹೇಳಿರುವ ಬಸವ ಸಮಿತಿಯ ವಿಷಯ ವಾಗಿ, ವೆಜಿಟಬಲ್ ಮಾರ್ಕೆಟ್ ವಿಷಯವಾಗಿ ಹಾಗೂ ನೀರಿನ ವಿಷಯವಾಗಿ ಸರ್ಕಾರದವರು ಅತಿ ಜಾಗ್ರತೆಯಾಗಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಕೊನೆಯದಾಗಿ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕಲ್ಪಿಸಿ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಸಭಾಪತಿಯವರೇ, 'ಈ ದಿವಸ ಸಭೆಯ ಮುಂದೆ ಮಂಡಿಸಿರತಕ್ಕ ಮುನಿಸಿಪಲ್ ಇಲಾಖೆ ಮತ್ತು ಕಾರ್ಪೊರೇಷನ್‌ಗೆ ಸಂಬಂಧಪಟ್ಟ ಬೇಡಿಕೆಗಳು ಏನಿವೆ, ಇವುಗಳನ್ನು ನಾನು ವಿರೋಧಿಸುತ್ತ ಎರಡು ಮಾತುಗಳನ್ನಾಡುವುದಕ್ಕೆ ಇಷ್ಟಪಡುತ್ತೇನೆ.

ಮೊದಲನೆಯದಾಗಿ ನಾನು ಹೇಳಬೇಕಾಗಿರುವುದು ಈ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ನಿಗೆ ಸಂಬಂಧಪಟ್ಟ ಇಲಾಖೆಗಳೇನಿವೆ ಅವು ಮುಖ್ಯವಾಗಿ ಜನಸಂಪರ್ಕವನ್ನು ಇಟ್ಟುಕೊಂಡಿರತಕ್ಕಂಥ ಇಲಾಖೆಗಳಾಗಿವೆ. ಹಾಗೆ ಒಂದು ಜನಸ್ಸಂಪರ್ಕವನ್ನು ಇಟ್ಟುಕೊಳ್ಳಬೇಕಾದುದು ಅವುಗಳ ಒಂದು ಜವಾಬ್ದಾರಿಯೂ ಹೌದು. ಆ ಸಂಸ್ಥೆಗಳು ಜನಸಂಪರ್ಕವನ್ನು ಯಾವ ಕಾರಣ ದಿಂದಲೂ ಕಳೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದರೆ ಇವು ಯಾವ ರೀತಿಯಲ್ಲಿ ಈ ಜನ ಸಂಪರ್ಕವನ್ನು ಇಟ್ಟುಕೊಂಡಿರಬೇಕು, ಅವು ಯಾವ ರೀತಿಯಲ್ಲಿ ತಮ್ಮ ಆಡಳಿತವನ್ನು ನಿರ್ವಹಿಸ ಬೇಕು ಮತ್ತು ಯಾವ ರೀತಿಯಲ್ಲಿ ತಮ್ಮ ಜವಾಬ್ದಾರಿಯನ್ನು ಅವು ನಿರ್ವಹಿಸಬೇಕು. ಅನ್ನುವ ವಿವರಗಳ ಬಗ್ಗೆ ನಾನೀಗ ಹೇಳುವುದಕ್ಕೆ ಹೋಗುವುದಿಲ್ಲ. ಅದಕ್ಕೆ ನನಗೆ ಕಾಲಾವಕಾಶವೂ ಇಲ್ಲ. ಆದರೆ 1971 ರಲ್ಲಿ ಆ ದೆಹಲಿ ಕಾರ್ಪೊರೇಷನ್ ಅಡ್ಮಿನಿಷ್ಟ್ರೇಷನ ವಿಚಾರದಲ್ಲಿ ಹಾಗೂ ಅಲ್ಲಿನ ಮುನಿಸಿಪಲ್ ಅಡ್ಮಿನಿಷ್ಟ್ರೇಷನ್ ವಿಚಾರದಲ್ಲಿ ಬಹಳ ಒಳ್ಳೆಯ ಅಂಶಗಳನ್ನು ಒಳಗೊಂಡ ಒಂದು ಪುಸ್ತಕ ವನ್ನು ಬರೆದಿದ್ದಾರೆ. ಆ ಅಂಶಗಳ ಕಡೆಗೆ ಸರ್ಕಾರದವರ ಗಮನವನ್ನು ಸೆಳೆಯುವುದಕ್ಕೆ ನಾನು ಇಚ್ಛಿಸುತ್ತೇನೆ. ಆ ಪುಸ್ತಕದ ಹೆಸರು 'ದಿ ಸಿಟಿಜನ್ ಅಂಡ್ ಮುನಿಸಿಪಲ್ ಬ್ಯೂರಾಕ್ರಸಿ' ಎಂದು. ಇದನ್ನು ಬರೆದವರು—ವಿ. ಜಗನ್ನಾಥ್ ಮತ್ತು ಎಂ. ಎಸ್. ಬಕ್ಷಿ ಇವರುಗಳು. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ನಮ್ಮ ಬೆಂಗಳೂರು ನಗರ ಕಾರ್ಪೊರೇಷನ್ ವಿಚಾರದಲ್ಲಿ ಈಗಾಗಲೇ ಸಾಕಷ್ಟು ದುರ್ನಾತ ಹೊರಟಿದೆ. ಒಳಗೂ ದುರ್ನಾತ. ಅದರ ವಾಸನೆ ಹೊರಗಡೆಯೂ ಹರಡಿದೆ. ಕಾರ್ಪೊರೇಷನ್ ಸಭೆಯಲ್ಲಿ ಒಬ್ಬ ಸದಸ್ಯರು ಇನ್ನೊಬ್ಬ ಸದಸ್ಯರನ್ನು 'ಚಪ್ಪಲಿಯಿಂದ ಎಸೆಯುತ್ತೇನೆಂದು ಹೇಳಿದ ವಿಷಯ' ಸಾಕಷ್ಟು ಪ್ರಚಾರವಾಗಿ ಎಲ್ಲರಿಗೂ ತಿಳಿದಿರತಕ್ಕ ವಿಚಾರ ಹಾಗೇ ಇನ್ನೊಬ್ಬ ಸದಸ್ಯರು ಡೆಪ್ಯುಟಿ ಮೇಯರನ್ನು ಎತ್ತಿ ಹೊರಗೆ ಹಾಕುತ್ತೇನೆಂದು ಹೇಳಿದ್ದೂ ಈ ದುರ್ನಾತ ಒಳಗೂ ಹೊರಗೂ ಸಾಕಷ್ಟು ಹರಡಿದೆ. ಇದನ್ನು ಕೂಡಲೇ ಸರಿಪಡಿಸಬೇಕು.

ಹಾಗೇ ಇನ್ನು ರಾಜಾಜಿನಗರ ಮತ್ತು ಮಲ್ಲೇಶ್ವರಂ ಕೆಲವು ಭಾಗದಲ್ಲಿ ಇರತಕ್ಕ ಗಲೀಜನ್ನು ನೋಡಿದರೆ ಅಲ್ಲಿ ಯಾರಾದರೂ ಗರ್ಭಿಣಿ ಹೆಂಗಸರು ಹೋದರೆ ಅಬಾರ್ಷನ್ ಆಗುವುದರಲ್ಲಿ ಸಂಶಯವೇ ಇಲ್ಲ. ಇದೇ ವಿಚಾರದಲ್ಲಿ ಶಾಸಕರು ಮುಖ್ಯಮಂತ್ರಿಗಳನ್ನು ಕಂಡಿದ್ದರು. ಸರಿಮಾಡ ಬೇಕೆಂದು ಹೇಳಿದ್ದೆವು. ಈಗಲಾದರೂ ಇದರ ಬಗ್ಗೆ ಸರ್ಕಾರದವರು ಒಂದು ನಿರ್ದಿಷ್ಟವಾದ ಕಾರ್ಯ ಕ್ರಮವನ್ನು ಕೈಗೊಳ್ಳಬೇಕು.

ಇನ್ನು ಆ ಬೆಂಗಳೂರು ಕಾರ್ಪೊರೇಷನ್ನಿಗೆ ಸಂಬಂಧಪಟ್ಟಹಾಗೆ ಇನ್‌ವಾಲ್ವ್ ಆಗಿದ್ದ 203 ಜನರಲ್ಲಿ ಸರ್ಕಾರದವರು ಸಸ್‌ಪೆಂಡ್ ಮಾಡಿರುವುದು ಕೇವಲ 18 ಜನರನ್ನು ಮಾತ್ರ ಸಸ್‌ಪೆಂಡ್ ಮಾಡಿದ್ದಾರೆ. ಅದರಲ್ಲೂ ಆ ಕಾರ್ಪೊರೇಷನ್ನಿಗೆ ಸಂಬಂಧಪಟ್ಟ ಒಬ್ಬ ಅಸಿಸ್ಟೆಂಟ್ ಇಂಜನಿಯರನ್ನೂ ಮತ್ತು ಒಬ್ಬ ಎಸ್. ಇ. ಇವರನ್ನು ಬಿಟ್ಟರೆ ಬಾಕಿ ಇನ್ಯಾವ ಆಫೀಸರುಗಳನ್ನೂ ಇವರು ಟಚ್‌ಮಾಡಿಲ್ಲ. ಕರಪ್ಟ್ ಅಧಿಕಾರಿ ಬಗ್ಗೆ ಕ್ರಮ ಕೈಗೊಂಡರೆ ನನಗೆ ಭಿನ್ನಾಭಿಪ್ರಾಯವಿಲ್ಲ. ಆದರೆ ಯಾರದೋ ಪ್ರೆಷರ್ ಬಂತೆಂದು ಮಂಗಳೂರಲ್ಲಿ ಸಸ್ಪೆಂಡ್ ಮಾಡಿದ್ದವರೊಬ್ಬರ ಬಗ್ಗೆ ಅದನು ಆ ಸಸ್ಪೆನ್‌ಷನ್ನು ಮಂತ್ರಿಗಳೇ ಫೋನ್ ಮಾಡಿ ವಾಪಸ್ ತೆಗೆದುಕೊಂಡಿದ್ದಾರೆ. ಆದರೆ ಮಾನ್ಯ ಮಂತ್ರಿಗಳಿಗೆ ಮಂಗಳೂರು ಜನರ ಬಗ್ಗೆ ಬಹಳ ಪ್ರೇಮವಿರಬಹುದು. ಅದಕ್ಕಾಗಿ ವಿತ್‌ಡ್ರಾ ಮಾಡಿರಬಹುದು. ಆದರೆ ನಾನು ಹೇಳತಕದ್ದು ಹಾಗೆ ಒತ್ತಾಯಕ್ಕೆ ಮಂತ್ರಿಗಳು ಮಣಿಯಬಾರದು ಎಂದು.

ಶ್ರೀ ಬಿ. ಬಸವಲಿಂಗಪ್ಪ.—ಯಾರು ಹೇಳಿದ್ದು ನಾನು ಫೋನ್ ಮಾಡಿದ್ದಾನೆ ಎಂದು? ಅವರ ಹೆಸರೇನು?

ಶ್ರೀ ಎಂ. ಎಸ್. ಕೃಷ್ಣನ್.—ನನ್ನಲ್ಲಿ ಎಲ್ಲಾ ವಿವರಗಳೂ ಇವೆ. ಅನಂತರ ಮಂತ್ರಿಗಳಿಗೆ ಬೇಕಾದರೆ ಕೊಡುತ್ತೇನೆ.

ಇನ್ನು ಆ ಬೇಗಂ ಮೊಹಲ್ಲಾ ವಿಚಾರದಲ್ಲಿ ಏನು ತೀರ್ಮಾನ ಮಾಡಿದ್ದಾರೋ ತಿಳಿಯಲಿಲ್ಲ. ಆದರೆ ಅದು ದುರ್ವ್ಯವಹಾರ ಅದನ್ನು ಕೈಬಿಡಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್. ಇದರಲ್ಲಿ ಸ್ಥಳೀಯ ಸಂಸ್ಥೆಗಳಿಗೆ 1957 ರಲ್ಲಿ ಏನು ನಿಗದಿಮಾಡಲಾಗಿತ್ತೋ ಅದನ್ನೇ ಈಗಲೂ ಕೊಡುತ್ತಿದ್ದಾರೆ. ಈ ದಿವಸ ಈ ಬಾಬಿನಲ್ಲಿ ಉತ್ಪತ್ತಿ ಒಂದಕ್ಕೆ ಹತ್ತಾಗಿದೆ. ಆದ್ದರಿಂದ ಸರ್ಕಾರದವರು ಈ ಬಾಬಿನಿಂದ ಬರತಕ್ಕ ವರಮಾನದಲ್ಲಿ ಕನಿಷ್ಠ ಶೇ 50 ರಷ್ಟನ್ನಾದರೂ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಇದಕ್ಕಾಗಿ ಮುನಿಸಿಪಲ್ ಮತ್ತು ಕಾರ್ಪೊರೇಷನ್ ಆಕ್ಟ್‌ಗಳನ್ನು ತಿದ್ದುಪಡಿ ಮಾಡಬೇಕೆಂದು ಹೇಳುತ್ತೇನೆ.

ಇನ್ನು ರೆವಿನ್ಯೂ ಸೈಟುಗಳನ್ನು ಮಾಡತಕ್ಕ ವಿಚಾರದಲ್ಲಿ ನಾವೆಲ್ಲರೂ ಮಾನ್ಯ ಸಚಿವರನ್ನು ಕಾಣಲು ಹೋಗಿದ್ದೆವು. ಅವುಗಳನ್ನು ಮಾಡಬಾರದೆಂಬ ವಿಷಯಕ್ಕೆ ಕೈಹಾಕಿ ಸುಮ್ಮನೆ ಇಲ್ಲದ ಗೊಂದಲಕ್ಕೆ ಅವಕಾಶ ಮಾಡಬೇಡಿ ಎಂದು ಕೇಳಿಕೊಳ್ಳುತ್ತೇನೆ. ನಾನು ಕೇಳಿಕೊಳ್ಳುವುದು ಗಲಾಟೆಗೆ ಅವಕಾಶ ಕೊಡಬೇಡಿ ಎಂದು.

ಇನ್ನು ಇರತಕ್ಕ 71 ಹಾಸಿಂಗ್ ಕೋ . ಆ . ಸೊಸೈಟಿಗಳಲ್ಲಿ 36 ಸೊಸೈಟಿಗಳು ಕಾರ್ಮಿಕರಿಗೆ ಸೇರಿರುತ್ತವೆ. ಇವುಗಳಲ್ಲಿ ಯಾವುದು ಜನ್ಯುಯಿನ್ ಯಾವುದು ಅಲ್ಲ ಎಂಬುದನ್ನು ತಾವು ವಿಚಾರ ಮಾಡಿಕೊಳ್ಳಿ. ಆದರೆ ಈ ದಿವಸ ಈ ಸೊಸೈಟಿಗಳವರು ಅನೇಕರು ಸಾಲವನ್ನು ತೆಗೆದುಕೊಂಡಿದ್ದಾರೆ. ಅದರ ಬಗ್ಗೆ ಬೆಳೆಯುತ್ತಿರುವ ಬಡ್ಡಿಯನ್ನು ಕಟ್ಟುವುದಕ್ಕೆ ಈಗ ತೊಂದರೆಯಾಗಿದೆ. ಅದಕ್ಕೆ ಅದನ್ನು ತಪ್ಪಿಸುವುದಕ್ಕೆ ಕಾರ್ಯಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು ವಾಟರ್‌ಸಪ್ಲೈ ಅಂಡ್ ಸೂಯೆರೇಜ್ ಬೋರ್ಡಿನ ಬಗ್ಗೆ ಸರ್ಕಾರದವರು ಪ್ರೋಬ್ ಮಾಡಲೇ ಬೇಕು, ಅಲ್ಲಿ ಅನೇಕ ಇರ್ರೆಗ್ಯುಲಾರಿಟೀಸ್ ಇವೆ. ಅದಕ್ಕಾಗಿ ಒಂದು ಜುಡಿಷಿಯಲ್ ಪ್ರೋಬ್ ನಡೆಸಬೇಕೆಂದು ಹೇಳಿ ನನ್ನ ಮಂಗಳೂರು ಸ್ನೇಹಿತರು ಕೇಳಿರತಕ್ಕ ವಿಚಾರಕ್ಕೆ ಸರ್ಕಾರದವರು ಕೂಡಲೇ ಗಮನಕೊಡಬೇಕೆಂದು ಹೇಳುತ್ತೇನೆ.

With regard to the affairs of the Bangalore Water Supply and Sewerage Board, a judicial probe is necessary. Not only is there a bureaucratic attitude regarding the employees but also the way in which the whole thing is done is highly irregu ar. Irregular appointments are made. In respect of Cauvery Water Supply Scheme also such things are going on. Till such time as an enquiry is done, the concerned officers have to be suspended. You have to keep them under suspension.

ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ).—ಮಾನ್ಯ ಅಧ್ಯಕ್ಷರೇ, ನಾನೀಗ ಸಭೆಯ ಮುಂದಿರತಕ್ಕ ಮುನಿಸಿಪಲ್ ಬೇಡಿಕೆಯನ್ನು ಸಂಪೂರ್ಣವಾಗಿ ಸ್ವಾಗತಿಸುತ್ತ, ಸರ್ಕಾರಕ್ಕೆ ಒಂದೆರಡು ಸಲಹೆಗಳನ್ನು ಕೊಡಬಯಸುತ್ತೇನೆ.

ಬೆಂಗಳೂರು ನಗರ ಈ ದಿವಸ ಕಲ್ಯಾಣನಗರವಾಗಿ ಮೈಸೂರು ರಾಜ್ಯದ ರಾಜಧಾನಿ, ಅಷ್ಟೇ ಏಕೆ ಇಡೀ ಭಾರತದಲ್ಲೇ ಒಂದು ವೈಶಿಷ್ಟ್ಯತೆಯನ್ನು ಪಡೆದುಕೊಂಡಿರುವಂಥ ಸುಂದರ ನಗರ. ಈ ನಗರ ಕಾರ್ಪೊರೇಷನ್‌ಗೆ ಸುಮಾರು 8 ಕೋಟಿ ಉತ್ಪನ್ನವಿದೆ. ಅದರಲ್ಲಿ 3 ಕೋಟಿ ಸಿಬ್ಬಂದಿ ವೆಚ್ಚಕ್ಕೆ ಖರ್ಚಾಗುತ್ತಿದೆ. ಈ ಖರ್ಚು ಬಹಳ ದುಬಾರಿ. ಆದರೆ ಹೆಚ್ಚು ದಕ್ಷತೆಯ ಕಡೆಗೆ ಸರ್ಕಾರದ ಗಮನವನ್ನು ನಾನು ಸೆಳೆಯಬಯಸುತ್ತೇನೆ.

ಬೆಂಗಳೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಸ್ಥಾಪನೆಯಾದುದು 1945 ರಲ್ಲಿ, ಇಲ್ಲಿಯವರೆಗೆ ಅದು 37 ಸಾವಿರ ಸೈಟುಗಳನ್ನೂ ಮತ್ತು ಇನ್ನು ಕೆಲವು ಕಟ್ಟಿದ ಮನೆಗಳನ್ನೂ ಹಂಚಿಕೆ ಮಾಡಿದ್ದಾರೆ. ಅದೇ ರೀತಿಯಲ್ಲಿ ಕೆಲವು ಖಾಸಗೀ ಸೊಸೈಟಿಗಳವರೂ ಕೂಡ ಕಳೆದ 5 ವರ್ಷಗಳಲ್ಲಿ ಸುಮಾರು 15 ಸಾವಿರ ಸೈಟುಗಳನ್ನು ಹಂಚಿಕೆ ಮಾಡಿದ್ದಾರೆ. ಇದೂ ಕೂಡ ಪ್ರಶಂಸನೀಯವಾದುದೇ. ಆದರೆ ಇತ್ತೀಚೆಗೆ ಸರ್ಕಾರದವರು ಕೆಲವು ಖಾಸಗೀ ಲೇಔಟುಗಳಿಗೆ ಅವಕಾಶ ಕೊಡಬಾರದೆಂದು ಹೇಳಿದ್ದಾರೆಂದು ಕೇಳುತ್ತೇನೆ. ಆದರೆ ಅದು ಸರಿಯಲ್ಲ. ಸರ್ಕಾರ

(ಶ್ರೀ ಕೆ. ಎಂ. ರುದ್ರಪ್ಪ)

ದವರು ತಮ್ಮ ತೀರ್ಮಾನವನ್ನು ಬದಲಾವಣೆ ಮಾಡಿ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಬಡವರು, ಮಧ್ಯಮ ವರ್ಗದವರಿಗೆ ಸಚಿವರು ಹೆಚ್ಚಿನ ಅನುಕೂಲ ಮಾಡುತ್ತಿದ್ದಾರೆ ಎಂದು ತಿಳಿದುಬಂದಿದೆ.

1-00 P. M.

ಇನ್ನೊಂದು ವಿಚಾರ. ಅದು ಡಿಪಾರ್ಟ್‌ಮೆಂಟ್ ಆಫ್ ಟೌನ್ ಪ್ಲಾನಿಂಗ್‌ಗೆ ಸಂಬಂಧ ಪಟ್ಟಿದೆ. ಇಲ್ಲಿ ಆಡಳಿತದ ದಕ್ಷತೆ ಹೆಚ್ಚಬೇಕು. ಸಿಟಿ ಸರಿಯಾಗಿ ಬೆಳೆಯುವುದಕ್ಕೆ ಅವಕಾಶ ಕೊಡದಿದ್ದರೆ ಅನೇಕ ಸಮಸ್ಯೆಗಳು ಉದ್ಭವಿಸುವುವು. ಜನಸಂಖ್ಯೆ ವಿಪರೀತವಾಗುವುದು. ಆದುದರಿಂದ ಕಟ್ಟುನಿಟ್ಟಾಗಿ ಕಾರ್ಯ ಮಾಡಬೇಕಾಗುವುದು. ಮೈಸೂರು ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಎಂಬ ಆಕ್ಟ್ ಇದೆ. ಈ ಆಕ್ಟನ್ನು ಹಾಸನ ಪಟ್ಟಣಕ್ಕೆ ಅನ್ವಯಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಕಾರಣ ಇಷ್ಟೇ, ಹಾಸನ—ಮಂಗಳೂರು ರೈಲ್ವೆ ಲಿಂಕ್ ಇದೆ, ಜನಸಂಖ್ಯೆ ಬೆಳೆಯುತ್ತಿದೆ. ಇಲ್ಲಿಗೆ ಆ ಆಕ್ಟನ್ನು ಅನ್ವಯಿಸಿದರೆ ಆ ಪಟ್ಟಣ ಸಮಗ್ರ ರೀತಿಯಲ್ಲಿ ಬೆಳೆಯಲು ಅನುಕೂಲವಾಗುವುದು. ಅದು ಪ್ರವಾಸಿಗರ ಕೇಂದ್ರ ಸಹ ಆಗಿದೆ. ಲೋಕ ವಿಖ್ಯಾತವಾದ ದೇವಸ್ಥಾನಗಳು ಹಾಸನ ಜಿಲ್ಲೆಯಲ್ಲಿರುವುದರಿಂದ ಅನೇಕ ಭಾಗಗಳಿಂದ ಪ್ರವಾಸಿಗರು ಬರುವರು. ಆ ಪಟ್ಟಣದ ಬೆಳವಣಿಗೆ ಯಾವರೀತಿ ಆಗಬೇಕಾಗಿತ್ತೋ ಆ ರೀತಿ ಆಗುತ್ತಿಲ್ಲ. ಕಾರಣ ಸರಿಯಾದ ಪ್ಲಾನಿಲ್ಲ ಮತ್ತು ಮುನಿಸಿಪಾಲಿಟಿಯ ಉತ್ಪತ್ತಿ ಕಡಮೆಯಾಗಿದೆ. ಸರಕಾರ ಅದಕ್ಕೆ ಹೆಚ್ಚು ಗ್ರಾಂಟನ್ನು ಕೊಟ್ಟು ಆ ಪಟ್ಟಣವನ್ನು ಅಭಿವೃದ್ಧಿಮಾಡಬೇಕು. ಅಲ್ಲಿ ಸೊಳ್ಳೆಕಾಟ ವಿಪರೀತ ವಾಗಿದೆ. ಆದುದರಿಂದ ಪ್ರವಾಸಿಗರು ಅಲ್ಲಿ ತಂಗಲು ಇಷ್ಟಪಡುವುದಿಲ್ಲ. ಇದರಿಂದ ಹಾಸನದ ಹೆಸರು ಕೆಡುವುದಕ್ಕೆ ಕಾರಣವಾಗಿದೆ. ಇದನ್ನು ಹೋಗಲಾಡಿಸಲು ತೀವ್ರ ಗಮನ ಕೊಡಬೇಕು. ಇದಲ್ಲದೆ ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿ ಆಗಬೇಕು. ಅದಾಗಬೇಕಾದರೆ ಒಂದು ಸಮಗ್ರವಾದ ಪ್ಲಾನ್ ಮಾಡಬೇಕು. ಮೈಸೂರು ದೇಶದಲ್ಲಿ 217 ಪಟ್ಟಣಗಳೇನಿವೆ ಅವುಗಳಲ್ಲಿ 167ಕ್ಕೆ ಕುಡಿಯುವ ನೀರಿನ ಸೌಕರ್ಯ ಇದೆ, ಉಳಿದ ಕಡೆಗಳಲ್ಲಿ ಸರಿಯಾದ ಸೌಕರ್ಯವಿಲ್ಲ. ಹೋಟೇಲುಗಳಲ್ಲಿ ಗಲೀಜು ಇರುವುದರಿಂದ ನಗರ ನೈರ್ಮಲ್ಯ ಕೆಡುವುದು, ಆರೋಗ್ಯ ಕೆಡುವುದು. ಆದುದರಿಂದ ಹೆಚ್ಚಿನ ಆಸಕ್ತಿ ವಹಿಸಿ ಹೋಟೇಲುಗಳಲ್ಲಿ ನೈರ್ಮಲ್ಯದ ಬಗ್ಗೆ ಗಮನಕೊಡಬೇಕು. ಶುಚಿಯಾಗಿಲ್ಲದಿರುವ ಹೋಟೇಲುಗಳ ಲೈಸೆನ್ಸನ್ನು ರದ್ದುಮಾಡಬೇಕು. ಈ ಬಗ್ಗೆ ತೀವ್ರ ಕಾರ್ಯ ಕ್ರಮ ಕೈಕೊಳ್ಳಬೇಕು.

ಇನ್ನೊಂದು ವಿಚಾರ. ಸಕಲೇಶಪುರ ಸುಂದರವಾದ ಪಟ್ಟಣವಾಗಿದೆ. ಅಲ್ಲಿ ನೀರಿನ ಸೌಕರ್ಯ ಸಾಲದು. 9 ಲಕ್ಷ ರೂಪಾಯಿಗಳ ಸ್ಕೀಂ ಮಂಜೂರಾಗಿದೆ. ಇದಕ್ಕೆ ತೀವ್ರ ಗಮನ ಕೊಟ್ಟು ಈ ಕಾರ್ಯವನ್ನು ಆಗಮಾಡಿಕೊಡಬೇಕು.

ಪ್ರಾಪರ್ಟಿ ಟ್ಯಾಕ್ಸ್ ಮತ್ತು ಆಕ್ಟ್ರಾಯಿನಿಂದ ಮುನಿಸಿಪಾಲಿಟಿಗಳಿಗೆ ಹೆಚ್ಚು ಆದಾಯ ಬರುವುದು. ಹೆಚ್ಚು ಆದಾಯ ತರುವ ಆಕ್ಟ್ರಾಯನ್ನು ರದ್ದುಮಾಡುವುದಕ್ಕೆ ಮುಂಚೆ ಅದಕ್ಕೆ ಬದಲಾಗಿ ಬೇರೆ ಆದಾಯ ಬರುವ ಮೂಲಗಳನ್ನು ಹುಡುಕಿ ನಂತರ ರದ್ದು ಮಾಡಬಹುದು. ಆದ್ದರಿಂದ ಈಗ ಇರುವುದನ್ನು ಮುಂದುವರೆಸಬೇಕು. ಇಷ್ಟು ತಿಳಿಸಿ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಉತ್ತರ ಸೋಮವಾರ ಕೊಡಬಹುದು. ಅಂದು ಮಾರ್ನಿಂಗ್ ಸೆಷನ್ ಇಟ್ಟು ಉತ್ತರ ಕೊಟ್ಟ ನಂತರ ಪ್ರಶ್ನೋತ್ತರ ವಗೈರೆ ಮಧ್ಯಾಹ್ನ ಇಟ್ಟುಕೊಳ್ಳಬಹುದು.

ಉಪಾಧ್ಯಕ್ಷರು.—ಅದಕ್ಕೆ ಅವಕಾಶವಿಲ್ಲ.

† **Sri C. M. ARUMUGAM** (KGF).—Mr. Deputy Speaker, I join with Mr. Nagaraj in requesting you to direct the Minister to reply to the debate on Monday Morning if possible because there are other Members to speak......

Mr. DEPUTY SPEAKER.—All these matters have been discussed and agreed upon and it is final. Please do not rake up things which have been settled.

SRI C. M. ARUMUGAM.—Sir, As stated by the Leader of the Opposition, I welcome some of the important measures undertaken by the Hon'ble Minister so far as Municipal workers are concerned. He has passed certain rules under which municipal employees, particularly the sweepers and scavengers, who were neglected all these years, will be deemed as permanent employees of the local bodies and they will be given service gratuity and pension. The previous Governments were only looking after the welfare of the officials who were paid high salary. But they were neglecting the poorer classes. These sweepers and scavengers were treated as casual labour. They were not entitled to servic gratuity or pension. So I compliment them for having got these rules amended providing for service gratuity and pension. With this, Government must also take action against the municipalities which are reluctant to provide uniforms. I hear it is so in Mangalore. You must take drastic action. Reactionary forces are also in important positions in the Municipal administrations of the State. Therefore the Minister and the Government should take action. You must supersede the municipalities who refuse to look after the welafare of the poor, refuse to provide uniform to sweepers and scavengers. To that end, the Municipalities Act should be suitably amended because it was drafted by these reactionary people who wanted to control and dictate to municipalities in the State. It needs a lot of revision. The Municipalities Act says that for every population of 1000 there should be one sweeper.

MR. DEPUTY SPEAKER.—The Assembly consisting of representatives of people has passed the Bill.

SRI C. M. ARUMUGAM.—The Assembly is sovereign and I have no right to criticise. What I submit is that instead of 1000 population, it must be said that there must be one sweeper for every 500 of population. It will increase the employment potential of sweepers and also it will help to keep the cities clean within the municipal area. Coming to Municipal Administration, regarding the Water Supply and Sewerage Board, the Hon'ble Leader of the Opposition said that this Board was constituted by Sri Veerendra Patil four years ago. The Patil Ministry, which was ineffective, never called for a report from the Water Board. Probably they were afraid of the Chairman and Members of the Water Board for four years. The Board never submitted any report on the administration as well as its working. It is provided in the Act that such a report should be submitted to Government. In the same Act, Government have certain powers even to take action to remove or suspend the Member of the Board or even the Chairman, if they do not submit the report. But this Government is in saddle only for three months and it is too small a period. The previous Government has utterly failed in not pulling up the administration of the Board. Now it is time for the Government to take action. If the Act is defective, it must be amended. In the Act if there is a provision made, why the report of the Board is not placed before the House? I ask the Minister.

(SRI C. M. ARUMUGAM)

Sir, on the last occasion when I was talking on the Municipal Administration, I made certain allegations against one officer namely the Engineer-in-Chief. I may tell in this House that this person gave a statement saying that he had no property when he was working as Superintending Engineer, Sharavathi; but now I have also said that in course of time, from 11-5-1968 to 10-1-1969 this gentleman has acquired a lot of property.

The Santhanam Committee have stated that if an officer amasses disproportionate assets, he must take the permission of the Government. But here it is also mentioned that he has not taken the permission of the Government. I am not referring to the present Government. The previous Government has not taken any action against him for not taking permission to acquire this property disproportionate to his earnings. The Santhanam Committee says:

> "No Government servant shall, except with the previous knowledge of the prescribed authority acquire or dispose of any immovable property by lease, mortgage, purchase, Sale, gift or otherwise either in his own name or in the name of any member of his family."

In general law, a member of the family includes wife, father, mother, son, sisters and brothers and relatives. According to the Santhanam Committee, I believe, all those I have mentioned come under family members. It is for the Minister to define who exactly are the members of a family.

This Officer has acquired lot of property in a few years' time. He has purchased land to the extent of 122 acres in a place called Sindh-noor in Raichur District in the name of his maternal uncle. Two or three contractors are involved in this transaction. Ultimately he purchased this land at a cost of Rs. 35,000. He induced his relatives to give a power-of-attorney to his maternal uncle. On 4-3-1968 in Bangalore registration was done for all the 122 acres. His maternal uncle has sold the land at a cost of Rs. 1500 per acre. This Officer purchased a Car No. ADX 19968 bearing Andhra registration. This car has also passed two hands of contractors. The car now bears Mysore No. MYO 1763. Ultimately this Officer instructed the Contractor to change the registrati n of the car to his maternal uncle's name. He used the car for two years. For the present, the car is in Belgaum and is being used by his brother. This Officer has again purchased an estate a farm, very close to Bangalore. He has got a house worth Rs. 4 lakhs. There is something fishy in the registration of the car. His maternal uncle gave the address: "300, Upper Palace Orchard" before the registration authority. There is no such address at all; a wrong address has been given. The Government has suspended so many Engineers. I don't mind if they suspend some more Engineers if they

are found to be guilty. I wish they suspend the auditors of the Finance Department who have colluded with them. The Government should suspend non-technical officers also. If the Mayor is involved in any of those transactions, he may also be Suspended if Government have power to do so. There are two parties in the Congress (R) itself and one party is headed by the Mayor and the other by somebody else. Even though the Congress Legislature Party had directed its Corporators not to contest the Mayoral election, the present Mayor and his followers disobeyed the direction and the result was the present Mayor was elected. So Congress itself is a divided house. That apart, the Government must take action against this Officer, namely, the Engineer in-Chief who is also the Additional Secretary to Government, P.W.D., and the Chairman, Mysore Water Supply and Sewerage Board.. I may also say here that it is not possible for the Government to bring water to Bangalore by December 1973 because the work is sub-standard. Sri Deve Gowda and I have seen the quality of work executed and have brought cement concrete pieces from the lining tc pipes. I will pass them to the Minister. Let him subject them to laboratory test and find out if there has been proper and proportinate mixture of cement and sand. The pipes have been buried without plastering. With regard to the work carried out by the Water Supply Board in regard to the Cauvery water supply scheme, a challenge has been thrown by a retired Chief Engineer to the members of the Board. When an allegation is made against an officer, the Government should have asked that Officer to sue the person who has made allegation in a Court. Why did not this Engineer-in-Chief go to the Court against that retired Chief Engineer who has made allegations against him? That retired Chief Engineer did not make the allegations in this House or the other House and was not entitled to any protection in the eye of law. So this Engineer-in-Chief could have gone to the Court. Why did he not go to the Court. The Minister must also note down that if there is any charge against a Government Officer and if he wants to go to the Press, he must take the permission of the Government, according to the Santhnam Committee Report. The relevant portion reads thus :

> " Vindication of facts and character of Government Servants in Government Service : No Government servant shall, except with the previous sanction of the Government, have recourse to any court or to the Press for the vindication of any official act which has been the subject matter of adverse criticism or talk of defamatory character. "

So this Engineer-in-Chief should have taken the previous permission of the Government to rush to the Press. Has he done so? He has induced one of his colleagues in the Institution of Enginneers to write a letter to the Press in regard to the speech delivered by him on the 7th July. Even for that, he has to take the permission of the Government. Has he taken permission? This Officer is indulging in politics; he is threatening the Government ; he is threatening the Press ; he is

(SRI C. M. ARUMUGAM)

threatening the Assembly. On this Officers's behalf, Sri S. G. Ramachandra, Chairman, The Institution of Engineers, Mysore Centre, issues a Press statement to correct the impression created by this Officer by his speech delivered at the Institution of Engineers. The abovesaid Chairman states that this Officer has not made the statement attributed to him. What right has this Chairman to make such a statement to the Press? There is also a threat to the Press. If you call for the Press report, we can know whether this Engineer-in-Chief has made the statement ascribed to him or not. The Chairman Sri Ramachandra writes to the Press, among other things, as follows :

> "Mr. Magdum further made a fervent appeal that Government would always protect honest and efficient officers who need not be afraid of any dent in their records and that for such officers, nobody can bulldoze nor demolish their morale."

You must kindly mark the word 'bulldozc' used by this Officer.

SRI H. D. DEVE GOWDA.—On the other day when I moved the privilege motion the Hon. Speaker stated that the officer has denied having used that word. I would like to know from my hon. friend Sri Armugum the letter which he is referring to is written by the same officer or any other person? Whether it is a letter written by Mr. Magdum or by some other person? On receiving a denial letter from the officer concerned, the Chair ruled out that there is no privilege. From the proceedings of the Institute of Fngineers it should have been verified before coming to any conclusion. There is the proceedings book as also the tape-record there. If these had been called for and verified that would have helped us.

MR. DEPUTY SPEAKER.—Once a matter is raised it should be raised in all its entirety. If it was not raised in entirety the person who raised it will have to take the responsibility. The ruling on that subject has already been given by the Speaker and the matter is laid at rest. The matter which has been referred to by hon. member Sri Armugum is about the Chairman of the Institute of Engineers. This matter is completely *De Novo*. This cannot be tagged on to certain matters which are laid at rest.

SRI H. D. DEVE GOWDA.—If sufficient reasons are there I think the Chair could re-open the issue. The information now given by my hon. friend Sri Arumugum if it isgoing to be useful for the revision of the rulings already given by the Chair, it could be done.

MR. DEPUTY SPEAKER.—The information now furnished is not sufficient or justified to reconsider the ruling already given on the subject.

SRI C. M. ARUMUGAM.—Sir, I was saying that this Chief Engineer addressed the meeting of Engineers and used that word. Finally I submit that there should be a probe into the property of this particular

officer. I repeat that he has furnished a statement saying that he has no property. Secondly, it is not possible for the Board to bring water to Bangalore by the end of December 1974. I appeal and demand the Hon. Minister to order for a probe into these two aspects.

†ಶ್ರೀ ಕೆ. ಬಿ. ಶಿವಯ್ಯ (ನಂಜನಗೂಡು).—ಅಧ್ಯಕ್ಷರೇ, ಪೌರಾಡಳಿತ ಸಚಿವರು ಮಂಡಿಸಿರ ತಕ್ಕ ಬೇಡಿಕೆಯನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತ ಕೆಲವು ಮಾತುಗಳನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಸೈಟುಗಳನ್ನು ಮುಫತ್ತಾಗಿ ಹಂಚಲು ಸರ್ಕಾರದವರು ಸೂಕ್ತ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಹಾಗೆಯೇ ದೊಡ್ಡ ದೊಡ್ಡ ಪಟ್ಟಣ ಗಳಲ್ಲಿ, ಮೈಸೂರು, ಬೆಂಗಳೂರು ಮುಂತಾದ ಕಡೆ ಬಡ ಜನರಿಗೆ, ಯಾರಿಗೆ ಸೈಟುಗಳಿಲ್ಲವೋ ಅಂಥವರಿಗೆ ಸೈಟುಗಳನ್ನು ಹಂಚಲು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಸಲಹೆ ಮಾಡುತ್ತಿದ್ದೇನೆ.

ರೂರಲ್ ಹೌಸಿಂಗ್ ಸೆಲ್ ಎಂದು ಏನಿದೆ, ಬಡ ಜನತೆ ಸರ್ಕಾರದಿಂದ ಏನೊಂದು ನಿರೀಕ್ಷೆ ಮಾಡುತ್ತಿದೆ ಅಷ್ಟು ತ್ವರಿತವಾಗಿ, ಅಷ್ಟೊಂದು ವೇಗದಿಂದ ಅಲ್ಲಿ ಕೆಲಸಕಾರ್ಯಗಳು ನಡೆಯುತ್ತಿಲ್ಲ. ಇದಕ್ಕೆ ಅನೇಕ ರೀತಿಯಲ್ಲಿ ಅಡಚಣೆಗಳು ಬರುತ್ತಿವೆ, ಅದು ಅಧಿಕಾರಿಗಳಿಂದ ಇರಬಹುದು. ಕಾನೂನುಗಳಿಂದ ತೊಡಕು ಇರಬಹುದು. ಹೆಚ್ಚಿನ ರೀತಿಯಲ್ಲಿ, ಬಹಳ ತ್ವರಿತವಾಗಿ ಬಡ ಜನತೆಗೆ ಆದಷ್ಟು ಬೇಗ ವಾರ್ ಫುಟಿಂಗ್ ಮೇಲೆ ಕ್ರಮ ತೆಗೆದುಕೊಂಡು ಗ್ರಾಮಾಂತರ ಪ್ರದೇಶದಲ್ಲಿ ಸೈಟು ಗಳನ್ನು ಹಂಚಬೇಕೆಂದಿರುವ ರೀತಿಯಲ್ಲಿ, ಬಡ ಜನತೆಗೆ ವಾಸ ಮಾಡಲಕ್ಕೆ ಅನುಕೂಲವಾಗುವ ರೀತಿ ಯಲ್ಲಿ ಮನೆಗಳನ್ನು ರೂರಲ್ ಹೌಸಿಂಗ್ ಸೆಲ್ ಮುಖಾಂತರ ಕಟ್ಟಿಸಿಕೊಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಸೂಚಿಸುತ್ತೇನೆ.

ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ ಜನಗಳಿಗೆ ಮನೆಗಳನ್ನು ಕಟ್ಟಿಕೊಡುವುದರಲ್ಲಿ ಅನೇಕ ತೊಂದರೆಗಳಿವೆ. ಬಹುಶಃ ಅನೇಕ ಜನರು ಈಗ ಮನೆಗಳನ್ನು ಕಟ್ಟಲಿಕ್ಕೆ ಮುಂದೆ ಬರು ತ್ತಿದ್ದಾರೆ. ಅಂಥ ಜನಗಳಿಗೆ ಈ ಹೊತ್ತಿನ ದಿವಸ ಅನೇಕ ಸೌಕರ್ಯಗಳನ್ನು ಒದಗಿಸಿ, ಎಸ್ಟಿ ಮೇಟುಗಳನ್ನು ಚೆಕ್ ಮಾಡಿಸಿಕೊಡುವುದರಲ್ಲಿ, ಮತ್ತು ಸೊಸೈಟಿಗಳವರು ಮನೆಗಳಿಗೆ ಕೊಡಲು ಮಂಜೂರಾಗಿರುವ ಹಣವನ್ನು ಒಂದೊಂದು ಸ್ಟೇಜ್ ಕೆಲಸವಾದ ಕೂಡಲೇ ಕಂತುಗಳಲ್ಲಿ ಕೊಡುವುದರ ಬಗ್ಗೆ ಹೆಚ್ಚು ಗಮನವನ್ನು ಸೇವಾ ಮನೋಭಾವದಿಂದ ಅಧಿಕಾರಿಗಳು ಮತ್ತು ಖಾಸಗಿಯವರು ಕೊಡಬೇಕು. ಸಾಲ ಕೊಟ್ಟ ದಿನದಿಂದ ಮನೆಯನ್ನು ಪೂರೈಸುವ ಕೆಲಸ ಬಹಳ ಬೇಗ ನಡೆಯುವಂತೆ ಸರ್ಕಾರದವರು ಹೆಚ್ಚಿನ ಗಮನವನ್ನು ಕೊಟ್ಟು, ಹರಿಜನ ಗಿರಿಜನರಿಗೆ ಮನೆ ಗಳನ್ನು ಕಟ್ಟಿಸಿಕೊಡುವ ವ್ಯವಸ್ಥೆಯನ್ನು ಮಾಡಬೇಕು. ಇದರ ಬಗ್ಗೆ ಕೂಡ ಸರ್ಕಾರದ ಗಮನ ಹೆಚ್ಚಾಗಿರಬೇಕೆಂದು ಸೂಚಿಸುತ್ತೇನೆ.

ಮೈಸೂರು ಮುನಿಸಿಪಾಲಿಟಿಯನ್ನು ಕಾರ್ಪೊರೇಷನ್ ಮಾಡಬೇಕೆಂದು ಅನೇಕ ವರ್ಷ ಗಳಿಂದಲೂ ಆ ಮುನಿಸಿಪಾಲಿಟಿ ಮತ್ತು ಮೈಸೂರಿನ ಜನತೆ ಬೇಡಿಕೆಯನ್ನು ಸರ್ಕಾರದ ಮುಂದೆ ಇಡುತ್ತಿದ್ದಾರೆ. ಮೈಸೂರು ಮುನಿಸಿಪಾಲಿಟಿ ಕಾರ್ಪೊರೇಷನ್ ಆಗುವುದಕ್ಕೆ ಯೋಗ್ಯವಾಗಿ, ಹೆಚ್ಚಿನ ರೀತಿಯಲ್ಲಿ ಜನಸಂಖ್ಯೆ ಬೆಳೆದಿದೆ. ಅದರ ಸುತ್ತ ಮುತ್ತ ಇರುವ ರಮಣೀಯ ಪ್ರದೇಶಗಳ ಆಡಳಿತ ವ್ಯವಸ್ಥೆ ಸರಿಯಾಗಿಲ್ಲದ್ದರಿಂದ ಅಲ್ಲಿಗೆ ಕಾರ್ಪೊರೇಷನ್ ಬೇಕು. ಮೈಸೂರು ನಗರದ ಅಭಿವೃದ್ಧಿಯ ದೃಷ್ಟಿಯಿಂದ ಅಲ್ಲಿ ಕಾರ್ಪೊರೇಷನ್ ಆಗಬೇಕೆಂದು ಜನತೆ ಕೇಳುತ್ತಿರುವುದರಿಂದ ಅವರ ಬೇಡಿಕೆಯನ್ನು ಈಡೇರಿಸಿಕೊಡಬೇಕು. ಅಲ್ಲಿ ಮುನಿಸಿಪಲ್ ಚುನಾವಣೆಗಳು ಹತ್ತಿರ ವಾಗುತ್ತಿವೆ. ಚುನಾವಣೆಗೆ ಮುಂಚೆಯೇ ಕಾರ್ಪೊರೇಷನ್ ಆಗಿ ಮಾಡಬೇಕು. ಹಾಗೆ ಮಾಡಲು ಸಾಧ್ಯವಾಗದೆ ಇದ್ದರೆ ಚುನಾವಣೆಯಾದ ಕೂಡಲೇ ಮುನಿಸಿಪಾಲಿಟಿಯನ್ನು ಕಾರ್ಪೊರೇಷನ್ ಆಗಿ ಮಾರ್ಪಡಿಸಲು ಸರ್ಕಾರ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅನೇಕ ಸಣ್ಣ ಸಣ್ಣ ಮುನಿಸಿಪಾಲಿಟಿಗಳಲ್ಲಿ ನೀರಿನ ಸೌಕರ್ಯದ ಬಗ್ಗೆ ಹೆಚ್ಚಿನ ಗಮನವನ್ನು ಆ ಮುನಿಸಿಪಾಲಿಟಿಗಳು ಕೊಡುತ್ತಿಲ್ಲ. ಬಹುಶಃ ಹಣದ ಅಭಾವದಿಂದ ಹೀಗಾಗಿದೆ ಮತ್ತು ಅನೇಕ ಸಾಲಗಳನ್ನು ಮುನಿಸಿಪಾಲಿಟಿಗಳು ಮಾಡಿಕೊಂಡಿವೆ. ಹಣದ ಅಭಾವದಿಂದ ಅವರು ಸರ್ಕಾರದ ಬಳಿ ಸಾಲಕ್ಕೆ ಬಂದರೆ ಸರ್ಕಾರದವರು ಸಾಲವನ್ನು ಕೊಡುತ್ತಿಲ್ಲ. ಮುನಿಸಿಪಾಲಿಟಿಗಳು ಸರ್ಕಾರಕ್ಕೆ ಹಣವನ್ನು ಕೊಡಬೇಕಾಗಿದ್ದರೂ ಮುನಿಸಿಪಾಲಿಟಿಗಳಿಗೆ ನೀರನ್ನು ಒದಗಿಸುವುದರಲ್ಲಿ ವಿಶೇಷ ರೀತಿಯಿಂದ ಪರಿಶೀಲನೆ ಮಾಡಿ ಮುಖ್ಯವಾಗಿ ಅಲ್ಲಿ ವಾಸ ಮಾಡುವ ನಾಗರಿಕರಿಗೆ ನೀರನ್ನು ಒದಗಿಸಿಕೊಡುವುದು ಸರ್ಕಾರದ ಹಾಗೂ ಸ್ಥಳೀಯ ಆಡಳಿತವನ್ನು ವಹಿಸಿಕೊಂಡಿರುವ ಪೌರ

ಇನ್ನು ಬೆಂಗಳೂರಿಗೆ ಸೇರಿದ 36 ಹಳ್ಳಿಗಳ ಪರಿಸ್ಥಿತಿಯನ್ನು ತಮ್ಮ ಗಮಣಕ್ಕೆ ತರುತ್ತೇನೆ. ಈವೊತ್ತು, ಆ ಹಳ್ಳಿಗಳ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಅವುಗಳ ಕೆಲವು ಚಿತ್ರಗಳನ್ನು ತಮಗೆ ಕಳುಹಿಸುತ್ತೇನೆ, ಆ ಹಳ್ಳಿಗಳಲ್ಲಿ ನೀರು ಇಲ್ಲ, ಬರೀ ಗುಡಿಸಲುಗಳು ಇವೆ, ಲ್ಯಾವೆಟರಿ ಕೂಡ ಇಲ್ಲ. ಅಲ್ಲಿಯ ಜನರು, ಲೈಟ್ ನೋಡಿಯೇ ಇಲ್ಲ. ಆದರೂ ಈ ಹಳ್ಳಿಗಳು ಕಾರ್ಪೋರೇಷನ್‌ಗೆ ಸೇರಿವೆ. ಹರಿಜನರ ಉದ್ಧಾರಮಾಡುತ್ತೇವೆ, ಅಂತ ಬೀದಿ ಬೀದಿಯಲ್ಲಿ ಉದ್ದ ಉದ್ದವಾಗಿ ಭಾಷಣ ಬಗಿಯುತ್ತೀರಿ. ತಾವು ಈವೊತ್ತು ಈ ಸ್ಥಳಗಳಲ್ಲಿ ಏನು ಮಾಡಿದ್ದೀರಿ. ಹೇಳಿ. 35 ಹಳ್ಳಿಗಳ ಪರಿಸ್ಥಿತಿ ಸಂಪೂರ್ಣವಾಗಿ ಚಿಂತಾಜನಕವಾಗಿದೆ. ಸಾಮಾನ್ಯ ವ್ಯವಸ್ಥೆ ಅಂದರೆ, ನೀರು ಇಲ್ಲ, ರಸ್ತೆ ಇಲ್ಲ, ಲ್ಯಾವೇಟರಿ ಇಲ್ಲ, ಹೆಂಗಸರು ಹಗಲು ಹೊತ್ತು ಲ್ಯಾವೇಟರಿಗೆ ಹೋಗುವ ಪರಿಸ್ಥಿತಿ ಇಲ್ಲ. ಪಬ್ಲಿಕ್ ಲ್ಯಾವೇಟರಿ ಕಲ್ಪಿಸಿದ್ದಾರೆಯೇ ಅಂದರೆ, ಇಲ್ಲ. ತಾವು ಬರುವುದಾದರೆ ಕರೆದುಕೊಂಡು ಹೋಗಿ ತೋರಿಸುತ್ತೇನೆ. ಈ 35 ಹಳ್ಳಿಗಳಲ್ಲಿ ಜನರು ಪಡುತ್ತಿರತಕ್ಕ ಕಷ್ಟ ನರಕಯಾತನೆ ನೋಡಿದರೆ, ತಮಗೂ ಕಣ್ಣೀರು ಬರುತ್ತದೆ. ಈ ಹಳ್ಳಿಗಳ ಚಿತ್ರಗಳನ್ನು ತಮಗೆ ಕಳುಹಿಸುತ್ತೇವೆ. ಅಲ್ಲಿ ಬಹಳ ಕೆಟ್ಟ ವಾತಾವರಣ ನಿರ್ಮಾಣವಾಗಿದೆ, ಎಂದು ಸರ್ಕಾರದ ಗಮನಕ್ಕೆತರುತ್ತೇನೆ. ಇದನ್ನು ಸರ್ಕಾರ ಸಂಪೂರ್ಣವಾಗಿ ಸರಿಪಡಿಸಲಿಕ್ಕೆ ಸಾಧ್ಯವಾಗದಿದ್ದರೆ, 35 ಹಳ್ಳಿಗಳು ಕಾರ್ಪೋರೇಷನ್‌ಗೆ ಸೇರಿಲ್ಲ ಎಂದು ಹೇಳಿ ಬಿಡಿ. ಅವುಗಳನ್ನು ಸೇರಿಸಿಕೊಂಡ ಮೇಲೆ ಒಂದು ಸುಂದರ ನಗರ ಮತ್ತೊಂದು ಕೊಳಚೆ ನಗರ ಎಂದು ಎರಡು ಡಿವಿಜನ್ ಮಾಡಿದ್ದೀರಿ. ಮೇಯರ್ ಅವರು ಮೊನ್ನೆ ಉದ್ದ ಗೌನ್ ಹಾಕಿಕೊಂಡು ರಾಷ್ಟ್ರಪತಿಗಳನ್ನು ಈ ಸುಂದರ ನಗರಕ್ಕೆ ಕರೆದುಕೊಂಡು ಹೋಗಿ ಅವರ ಜೊತೆ ಫೋಟೊ ತೆಗೆಸಿಕೊಂಡಿದ್ದಾರೆ. ಈ 35 ಹಳ್ಳಿಗಳಲ್ಲಿ ಬಡ ಜನರು ಇರುವ ಕಡೆ ಹೋಗಬೇಕಾಗಿತ್ತು. ಹರಿಜನರ ಕಾಲೋನಿಗೆ ಮೊದಲು ಜಾಗ ಕೊಟ್ಟು ಅನಂತರ ಅದನ್ನು ಬೇರೆ ರೀತಿ ಉಪಯೋಗಿಸಬೇಕೆಂದು ಅಲ್ಲಿಗೆ ಬುಲ್‌ಡೋಸ್‌ರ ತಂದಿರಿ. ನಾನು ಹೇಳಿದೆ ಈ ಜಾಗವನ್ನು ಹರಿಜನರ ಕಾಲೋನಿಗೆ ಕೊಟ್ಟಿಲ್ಲ ಎಂದರೆ ನಾನೇ ಬುಲ್‌ಡೋಸ್‌ರ್ ಕೆಳಗೆ ಮಲಗುತ್ತೇನೆ, ಇದು ನನ್ನ ಕ್ಷೇತ್ರಕ್ಕೆ ಸೇರಿದ ಪ್ರದೇಶ ಎಂದು. ಇನ್ನು ಜಯನಗರದಲ್ಲಿ 45 ಲಕ್ಷ ರೂಪಾಯಿನಲ್ಲಿ ಕಾರ್ಪೋರೇಷನ್‌ನವರು ದೊಡ್ಡ ಆಸ್ಪತ್ರೆಯನ್ನು ಕಟ್ಟುತ್ತಿದ್ದಾರೆ. ಆ ಬಿಲ್ಡಿಂಗ್ ಕೊಟ್ಟಾಗ ಕಂಟ್ರಾಕ್ಟ್‌ದಾರನೇ ಕಬ್ಬಿಣ ತರಬೇಕು ಎಂದು ಅಗ್ರಿಮೆಂಟ್ ಇರುವುದು. ಅಗ್ರಿಮೆಂಟನಲ್ಲಿ ಕಂಟ್ರಾಕ್ಟದಾರ ಕಬ್ಬಿಣ ತರಬೇಕು ಎಂದು ಇರುವುದನ್ನು ಕಿತ್ತು ಹಾಕಿ ಬಿಟ್ಟಿದ್ದಾರೆ. ಈವೊತ್ತು ಕಂಟ್ರಾಕ್ಟ್‌ರು ಕಾರ್ಪೋರೇಷನ್ ಮೇಲೆ ತಿರುಗಿಬಿದ್ದಿದ್ದಾನೆ. ಕಾರ್ಪೋರೇಷನ್‌ನವರೇ ಕಬ್ಬಿಣ ಕೊಡಬೇಕೆಂದು ಕಂಟ್ರಾಕ್ಟದಾರ ಕೇಳುತ್ತಿದ್ದಾನೆ. ಅವನೇ ಕಬ್ಬಿಣ ತೆಗೆದುಕೊಂಡು ಮಾಡಬೇಕು ಎಂದಿದ್ದ ಅಗ್ರಿಮೆಂಟನ್ನು ರಾಜಕೀಯ ಮಾಡಿ ಕಿತ್ತು ಹಾಕಿದ್ದಾರೆ. ಈವೊತ್ತು ಆ ಅಗ್ರಿಮೆಂಟ್ ಇಲ್ಲ. ಅವನು ಕೋರ್ಟಿಗೆ ಹೋಗುತ್ತಾನೆ. ಇದರ ಬಗ್ಗೆ ತನಿಖೆ ನಡೆಸಬೇಕು. ನಮ್ಮ ಮೇಯರ್‌ಗೆ ಪಿಸ್ತೂಲ್ ಕೊಟ್ಟಿದ್ದಾರೆ. ಅವರು ಈ ಊರಿಗೆ ಬಂದಾಗ ಈಗ ಇರತಕ್ಕ ಮಾನ್ಯ ಮೇಯರ್‌ರವರಿಗೆ ಒಂದು ಇಂಚು ಆಸ್ತಿ ಇರಲಿಲ್ಲ. ಇವೊತ್ತು ಅವರಿಗೆ ಕೇಂಗೇರಿ ರಸ್ತೆಯಲ್ಲಿ 8 ಎಕರೆ ಆಸ್ತಿ ಇದೆ. ಇದು 8 ಲಕ್ಷಕ್ಕೆ ಹೋಗುತ್ತದೆ. ತ್ಯಾಗರಾಜನಗರದಲ್ಲಿ ಒಂದು ಮನೆಯನ್ನು ಕಟ್ಟುತ್ತಿದ್ದಾರೆ. ಅವರು ಪ್ಲಾನಿಗೆ ವಿರುದ್ಧವಾಗಿ ಮನೆ ಕಟ್ಟುತ್ತಿದ್ದಾರೆ. ದೇಶದಲ್ಲಿ ಎಲ್ಲರೂ ಪ್ಲಾನು ಪ್ರಕಾರ ಮನೆ ಕಟ್ಟಬೇಕು. ಆದರೆ ಪ್ಲಾನಿಗೆ ವಿರುದ್ಧವಾಗಿ ಮೇಯರ್‌ರವರು ಮನೆಯನ್ನು ಕಟ್ಟಿಸುತ್ತಿದ್ದಾರೆ. ಅದಕ್ಕೆ ಒಂದೂವರೆ ಲಕ್ಷ ರೂಪಾಯಿ ಬೆಲೆ ಆಗುತ್ತದೆ. ಅವರಿಗೆ ಎಲ್ಲಿಂದ ಈ ಆಸ್ತಿ ಬಂತು ಎಂದು ಕೇಳುತ್ತೇನೆ. ಇದರ ಬಗ್ಗೆ ತನಿಖೆ ನಡೆಸುವ ಶಕ್ತಿ ಸರ್ಕಾರಕ್ಕೆ ಇದೆಯೇ ಎಂದು ಕೇಳುತ್ತೇನೆ. ಬೇಲಿಯೇ ಎದ್ದು ಹೊಲವನ್ನು ಮೇಯುವ ರೀತಿ ಆಗಿದೆ. ಸಾಮಾನ್ಯ ಬಡವನು ಗುಡಿಸಲನ್ನು ಕಟ್ಟಿಕೊಂಡರೆ ನೀವು ಬಂದು ಲೈಸನ್ಸ್ ಇಲ್ಲದೆ ಕಟ್ಟುತ್ತಿದ್ದೀರಿ, ಎಂದು ಹೇಳಿ ಅವನ್ನು ಡೆಮಾಲಿಷ್ ಮಾಡುತ್ತೀರಿ. ಬೆಂಗಳೂರು ಸಿಟಿ ಕಾಂಗ್ರೆಸ್ಸಿನ ಅಧ್ಯಕ್ಷರು ಸುಭಾಸ್ ನಗರದಲ್ಲಿ ಕಾರ್ಪೋರೇಷನ್ ಲೈಸನ್ಸ್ ಇಲ್ಲದೆ ಒಂದೂವರೆ ತಿಂಗಳ ಕಾಲ ನ್ಯಾಷನಲ್ ಫೇರ್ ನಡೆಸಿದರು. ಸರ್ಕಾರದವರೇ ಕುಮ್ಮಕ್ಕು ಕೊಟ್ಟು ಅಲ್ಲಿ ಲಕ್ಷಾಂತರ ರೂಪಾಯಿ ಸ್ವಾರ್ ಇಟ್ಟಿದ್ದೀರಿ. ಆದರೆ ಬಡವ ಮನೆ ಕಟ್ಟಿಕೊಂಡರೆ ಅದನ್ನು ಒಡೆಸುವುದಕ್ಕೆ ಹೋದಿರಿ. ಒಂದೂವರೆ ತಿಂಗಳ ಕಾಲ ಲೈಸೆನ್ಸ್ ಇಲ್ಲದೆ ನಡೆಸಿದಂಥ ನ್ಯಾಷನಲ್ ಫೇರ್ ಬಗ್ಗೆ ತಾವು ತನಿಖೆ ನಡೆಸಿದಿರಾ? ಖಂಡಿತ ನಡೆಸಲಿಲ್ಲ. ಅದೇ ಸರ್ಕಾರಿ ಜಾಗವನ್ನು ಒಂದು ಸರ್ಕಸ್ಸಿಗೆ ಲೀಸ್‌ಗೆ ಕೊಟ್ಟರು ಅದು ನಿಮ್ಮ ಗಮನಕ್ಕೆ ಬಂದಿದೆಯೋ? ಎಂ.ಎಸ್.ಆರ್.ಟಿ.ಸಿ. 10-12 ಸಾವಿರ ರೂಪಾಯಿ ಬಾಕಿ ಕೊಡಲಿಲ್ಲ. ದೇಶದಲ್ಲಿ ಭಷ್ಟಾಚಾರ ತೆಗೆಯುತ್ತೇವೆ, ಬ್ರಷ್ಟಾಚಾರ ಓಡಿಸುತ್ತೇವೆ ಎಂದು ಏತಕ್ಕೆ ಉದ್ದುದ್ದವಾಗಿ ಭಾಷಣ ಮಾಡುತ್ತೀರಿ? ಧೈರ್ಯವಿಲ್ಲದಿದ್ದರೆ ರಾಜಿನಾಮೆ ಕೊಡುತ್ತೀರಾ? ಆ ಮಾತು ಒತ್ತಾಯ ಮಾಡದಿದ್ದರೆ ನನ್ನ ಕರ್ತವ್ಯ ಲೋಪ ಮಾಡಿದಂತಾಗುತ್ತದೆ. ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

(ಶ್ರೀ ಕೆ. ಬಿ. ಶಿವಯ್ಯ)

ಸಮಿತಿಗಳ ಕರ್ತವ್ಯ. ಎಲ್ಲೆಲ್ಲಿ ನೀರಿನ ಸೌಕರ್ಯವಿಲ್ಲವೋ ಅಂಥ ಕಡೆ ನೀರನ್ನು ಒದಗಿಸುವುದಕ್ಕೆ ಸಾಲವನ್ನು ಅಥವಾ ವಿಶೇಷ ನೆರವನ್ನು ಕೊಟ್ಟು ನೀರು ಒದಗಿಸುವ ಕಾರ್ಯಕ್ರಮಕ್ಕೆ ಗಮನ ಕೊಡಬೇಕು ಎಂದು ಹೇಳುತ್ತೇನೆ.

1-30 P.M.

ಗ್ರಾಮಾಂತರಗಳಲ್ಲಿ ಬಾವಿಗಳನ್ನು ತೋಡಿಸಿಕೊಳ್ಳುವ ರೂರಲ್ ವಾಟರ್ ಸಪ್ಲೈ ಯೋಜನೆ ಇದೆ. ಮುನಿಸಿಪಾಲಿಟಿಗಳಲ್ಲಿಯೂ ಕೂಡ ಈ ಒಂದು ಯೋಜನೆ ಮಾಡಿಕೊಳ್ಳಬೇಕಾದ ಅವಶ್ಯಕತೆ ಇದೆ. ಅಂತಹ ಮುನಿಸಿಪಾಲಿಟಿಗಳಿಗೆ ಸರ್ಕಾರ ಸಾಲ ಕೊಟ್ಟು ಈ ಕೆಲಸ ಮಾಡುವ ಅವಶ್ಯಕತೆ ಇದೆ. ಅನೇಕ ಕೆಲಸ ಕಾರ್ಯಗಳಿಗೆ ಅವರು ಸಾಲ ಮಾಡಿರುವುದರಿಂದ ಹೊಸದಾಗಿ ಸಾಲ ಮಾಡಲು ಅವಕಾಶ ಇಲ್ಲದೆ ಇರುವ ಪ್ರಯುಕ್ತ ಮತ್ತು ಅಲ್ಲಿ ನೀರಿನ ಕೊರತೆ ವಿಶೇಷವಾಗಿ ಹೆಚ್ಚಾಗಿ ಬೆಳೆದಿರುವ ಪ್ರಯುಕ್ತ, ಈ ನೀರಿನ ಅವಶ್ಯಕತೆಯನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಲು ಮತ್ತು ಅವಕಾಶ ಇಲ್ಲದೆ ಇರುವ ಕಡೆ ಅವರಿಗೆ ಹೆಚ್ಚಿನ ರೀತಿಯಲ್ಲಿ ಒಂದು ಯೋಜನೆ ತಯಾರು ಮಾಡಿ, 10 ವರ್ಷಗಳವರೆಗೆ ಅವರಿಗೆ ನೀರಿನ ವ್ಯವಸ್ಥೆ ಮಾಡಿ ಕೊಡಬೇಕು. ಇದು ಬಹಳ ಮುಖ್ಯವಾದ ಕೆಲಸ. ಅದಕ್ಕೆ ಸರ್ಕಾರ ಒಂದು ಯೋಜನೆ ಮಾಡಿಸಿ ಎಲ್ಲಾ ಸಣ್ಣ ಮುನಿಸಿಪಾಲಿಟಿಗಳಿಗೂ ಸಹ ನೀರಿನ ಸೌಕರ್ಯವನ್ನು ಮಾಡಿಕೊಡಬೇಕೆಂದು ಸರ್ಕಾರವನ್ನು ಕೇಳಲು ಇಚ್ಛೆಪಡುತ್ತೇನೆ.

ಕೊನೆಯದಾಗಿ ಈ ಮುನಿಸಿಪಾಲಿಟಿಗಳ ಆಡಳಿತ ಏನಿದೆಯೋ ಅದರಲ್ಲಿ ರಾಜಕೀಯ ಇಲ್ಲದಂತೆ ಅಲ್ಲಿರುವ ಮುನಿಸಿಪಾಲಿಟಿ ಮೇಯರುಗಳು ಯಾವ ಪಾರ್ಟಿಗೆ ಸೇರಿರಲಿ ಅವರು ಜನರಿಗೆ ಸೌಕರ್ಯ ಮಾಡುವ ಮತ್ತು ಅಲ್ಲಿಯ ಡೆವೆಲಪ್‌ಮೆಂಟ್ ಕಾರ್ಯಗಳಲ್ಲಿ ಅವರೆಲ್ಲರ ಒಂದು ಮನಸ್ಸು ಇರಬೇಕು ಎನ್ನುವ ವಾತಾವರಣವನ್ನು ಎಲ್ಲಾ ಮುನಿಸಿಪಾಲಿಟಿಗಳಲ್ಲೂ ಕೂಡ ಉಂಟುಮಾಡಲು ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿ ಇಷ್ಟು ಮಾತನಾಡಲಿಕ್ಕೆ ಅವಕಾಶ ಕೊಟ್ಟ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಮಾನ್ಯ ಸಭಾಧ್ಯಕ್ಷಿಣಿಯವರೇ ಈವೊತ್ತಿನ ದಿವಸ ಈ ಬೇಡಿಕೆಯನ್ನು ಸಂಪೂರ್ಣವಾಗಿ ವಿರೋಧ ಮಾಡುತ್ತಾ ಬೆಂಗಳೂರು ನಗರದ ಕಾರ್ಪೋರೇಷನ್‌ಗೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ತಮ್ಮ ಮುಂದಿಡುವುದಕ್ಕೆ ಇಷ್ಟಪಡುತ್ತೇನೆ. ಈವೊತ್ತಿನ ದಿವಸ, ಬೆಂಗಳೂರು ನಗರದಲ್ಲಿ ಕಾರ್ಪೋರೇಷನ್‌ಗೆ ಚುನಾವಣೆ ನಡೆಸಿ ಅದಕ್ಕೆ ಪ್ರತಿನಿಧಿಗಳನ್ನು ಆರಿಸಿ ಕಳುಹಿಸಿದ್ದಾರೆ. ಆ ಕಾರ್ಪೋರೇಷನ್ ಸಭೆಯ ವೈಖರಿಯನ್ನು ನೋಡಿದಾಗ ನನಗನ್ನಿಸುತ್ತದೆ, ಈಗ ಇರತಕ್ಕ ಮೇಯರ್ ಒಂದು ರೀತಿಯ ಡಿಕ್ಟೇಟರ್ ರೀತಿ ಸಭೆಯನ್ನು ನಡೆಸುತ್ತಿದ್ದಾರೆ. ಇದನ್ನು ನೋಡಿದಾಗ ನನಗಾದರೂ ವ್ಯಥೆಯಾಗುತ್ತದೆ. ಈ ಸಭೆಯನ್ನು ಎಂಟು ಗಂಟೆಯ ಒಳಗೆ ನಡೆಸಬೇಕು ಎಂದು ಇದ್ದರೆ, ರಾತ್ರಿ 12 ಗಂಟೆಯವರೆ ನಡೆಸಿ ಲಕ್ಷಾಂತರ ರೂಪಾಯಿ ವಿನಿಯೋಗ ಮಾಡತಕ್ಕ ಬಿಲ್‌ಗಳನ್ನು ಪಾಸ್ ಮಾಡಿ, ಭ್ರಷ್ಟಾಚಾರ, ನಡೆಸಿರತಕ್ಕಂಥಾದ್ದು ಹಿಂದೆ ಯಾವ ಮೇಯರ್ ಕಾಲದಲ್ಲೂ ನಡೆದಿಲ್ಲ. ಈವೊತ್ತಿನ ದಿವಸ ಕಾರ್ಪೋರೇಷನ್‌ನಲ್ಲಿ ಮೇಯರ್ ಆಡಳಿತದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ವ್ಯಥೆಯಿಂದ ಹೇಳಬೇಕಾಗಿದೆ. ಕೆಲವು ಅಧಿಕಾರಿಗಳನ್ನು ಇಂಜಿನಿಯರುಗಳನ್ನು ಕಾರ್ಪೋರೇಷನ್‌ನಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಸಸ್ಪೆಂಡ್ ಮಾಡಿದ್ದಾರೆ. ಸಸ್ಪೆಂಡ್ ಆದ ಇಂಜಿನಿಯರುಗಳ ಜೊತೆಯಲ್ಲಿದ್ದಂತಹ ಕಮೀಷನರ್ ಅವರು, ಅಡ್ಮಿನಿಸ್ಟ್ರೇಟರ್ ಅವರನ್ನು ಏತಕ್ಕೆ ಬಿಟ್ಟರು; ಎಂದು ನಾನು ಪ್ರಶ್ನೆ ಮಾಡುತ್ತೇನೆ. ಲಕ್ಷಾಂತರ ರೂಪಾಯಿ ಹಣದ ಅವ್ಯವಸ್ಥೆ ನಡೆದಿರುವಾಗ ಇವರು ಜವಾಬ್ದಾರರು. ಅವರನ್ನು ಬಿಟ್ಟು ಬರೀ ಇಂಜಿನಿಯರ್‌ಗಳನ್ನು ಮುಖಕ್ಕೆ ಮಸಿ ಬಳಿಯುವ ಒಂದು ರೀತಿಯ ತಾರತಮ್ಯವನ್ನು ತೋರಿಸಿದಂತಾಗುತ್ತದೆ. ಎಲ್ಲರನ್ನು ನ್ಯಾಯಾಧೀಶರ ಮುಂದೆ ತರುವ ಉದ್ದೇಶವಿದ್ದರೆ, ದಕ್ಷ ಆಡಳಿತ ನಡೆಸಬೇಕು ಎನ್ನುವ ಧೈರ್ಯ ಇದ್ದರೆ, ಹಿಂದೆ, ಇದ್ದಂಥ ಮೇಯರ್ ಮತ್ತು ಇವತ್ತು ಇದ್ದಂಥ ಕಮೀಷನರ್ ಅನ್ನು ಇಂಜಿನಿಯರ್ ಅನ್ನು ಸಂಪೂರ್ಣವಾಗಿ ತನಿಖೆಗೆ ಗುರಿಪಡಿಸಿದರೆ, ಕಾರ್ಪೋರೇಷನ್ ಮೇಲೆ ನೀವು ನಡೆಸತಕ್ಕ ವಿಜಿಲೆನ್ಸ್ ಏನಿದೆ ಅದನ್ನು ನ್ಯಾಯವಾದ ರೀತಿಯಲ್ಲಿ ನಡೆಸುತ್ತೀರಿ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಬರೀ ಇಂಜಿನಿಯರ್‌ಗಳನ್ನು ಸಸ್ಪೆಂಡ್ ಮಾಡಿ, ಮೇಯರ್ ಮತ್ತು ಕಮಿಷನರನ್ನು ಬಿಟ್ಟಿರುವುದಾದರೆ ತಾವು ಯಾವುದೋ ಪ್ರಭಾವಕ್ಕೆ ಒಳಗಾಗಿದ್ದೀರಿ ಎಂದು ತಿಳಿದುಕೊಳ್ಳುತ್ತೇನೆ. ಆವೊತ್ತು ಇದ್ದಂಥ ಅಧಿಕಾರಿಗಳ ಮೇಲೆ, ಮೇಯರ ಮೇಲೆ ಜವಾಬ್ದಾರಿಯನ್ನು ಹೊರಿಸಿ ಜುಡಿಷಿಯಲ್ ಎನ್‌ಕ್ವಯರಿ ಮಾಡಬೇಕೆಂದು ಹೇಳುತ್ತೇನೆ.

(ಶ್ರೀ ವಾಟಾಳ್ ನಾಗರಾಜ್)

ಇನ್ನು ಸ್ವೀಪರ್‌ಗಳ ಬಗ್ಗೆ ಹೇಳುತ್ತೇನೆ. ಸ್ವೀಪರ್‌ಗಳು ಒಂದೇ ಕೋಮಿನವರು ಎನ್ನತಕ್ಕಂಥ ನಿರ್ಣಯ ಬೇಡ. ಕಸ ಗುಡಿಸತಕ್ಕ ಜನ ಯಾವುದೋ ಒಂದೇ ಕೋಮಿನವರು ಆಗಿರಬೇಕು ಎನ್ನುವುದನ್ನು ನಾನು ಒಪ್ಪುವುದಿಲ್ಲ. ಸಮಾಜ ಬದಲಾವಣೆಯಾಗಿವೆ. ಎಲ್ಲಾ ಕೋಮಿನ ಜನ ಇವೊತ್ತು ಪ್ರತಿಯೊಂದು ಕೆಲಸಗಳನ್ನು ಮಾಡುವುದಕ್ಕೆ ಬಂದಾಗ ಮಾತ್ರ ಇದಕ್ಕೆ ಒಂದು ವಿಶೇಷವಾದ ಸಮಾಜವಾದದ ರೂಪಕೊಟ್ಟಂತಾಗುತ್ತದೆ. ಈ ಕೆಲಸಕ್ಕೆ ಬೇರೆಯವರು ಬರತಕ್ಕದ್ದು ಅಗೌರವ ಎನ್ನುವುದನ್ನು ತಪ್ಪಿಸಿ, ಎಲ್ಲರೂ ಬರುವಂತೆ ಆಟ್ರ್ಯಾಕ್ಟ್ ಮಾಡಬೇಕು ಎಂದು ತಮ್ಮಲ್ಲಿ ಕಳಕಳಿಯಿಂದ ಮನವಿಮಾಡಿಕೊಳ್ಳುತ್ತೇನೆ ಇನ್ನು ಈ ಸಿ.ಐ.ಟಿ.ಬಿ. ಬರೀ ಶ್ರೀಮಂತರಿಗೆ, ಮಂತ್ರಿಗಳಿಗೆ, ಅಧಿಕಾರಿಗಳಿಗೆ, ಮಾಜಿಮಂತ್ರಿಗಳಿಗೆ ಇರತಕ್ಕ ಟ್ರಸ್ಟ್‌ಬೋರ್ಡ್ ಆಗಿದೆ. ಸದಾಶಿವ ನಗರದಲ್ಲಿ ಹಂಚಿರತಕ್ಕ ಸೈಟುಗಳಲ್ಲಿ ಯಾವ ಒಬ್ಬ ಬಡವನಿಗೆ ಸೈಟು ಕೊಟ್ಟಿದ್ದಾರೆ? ಅದನ್ನು ಪರಿಶೀಲನೆಮಾಡಿ. ಮಂತ್ರಿಗಳ,. ಅದೂ ಮಾಜಿ ಮಂತ್ರಿಗಳ ದೊಡ್ಡ ದೊಡ್ಡ ಐ.ಎ.ಎಸ್ ಮತ್ತು ಐ.ಪಿ.ಎಸ್, ಅಧಿಕಾರಿಗಳು ವೈಸ್ ಚಾನ್ಸಲರ್ ಇವರುಗಳ ಒಂದು ಭವ್ಯ ನಗರ ಆಗಿದೆಯೇ ಹೊರತು ಒಬ್ಬ ಸಾಮಾನ್ಯ ಬಡವನಿಗೆ ನೀವು ಅಲ್ಲಿ ಒಂದು ಸೈಟ್ ಕೊಟ್ಟಿದ್ದೀರಾ? ಒಂದೊಂದು ಸೈಟಿಗೆ ಅರ್ಜಿ ಹಾಕಿದರೆ, 8 ವರ್ಷ ಆದರೂ ಕೊಡುವುದಿಲ್ಲ. ಕೆಂಗೇರಿ ಉಪನಗರ ಮಾಡಿದ್ದಾರೆ ಅಲ್ಲೂ ಸಿಕ್ಕುವುದಿಲ್ಲ. ಇನ್ನೂ ನಾವು ಮಂಡ್ಯಾಕ್ಕೆ ಹೋಗಬೇಕು ಎಂದು ಕಾಣುತ್ತದೆ. ಟ್ರಸ್ಟ್‌ಬೋರ್ಡಿನವರು ಇನ್ನು ಮುಂದೆ ನಮ್ಮಂಥ ಸಾಮಾನ್ಯ ಜನರಿಗೆ ಕೊಡತಕ್ಕ ನೀತಿಯನ್ನು ಹಾಕಬೇಕು ಎಂದು ತಮ್ಮಲ್ಲಿ ಮನವಿಮಾಡುತ್ತೇನೆ. ಇನ್ನು ಬೆಂಗಳೂರು ಕಾರ್ಪೋರೇಷನ್‌ನಲ್ಲಿ ನಡೆಯುವ ವ್ಯವಹಾರ ಹೇಳುತ್ತೇನೆ. ಹಳೇ ಕಲ್ಲು ಹೊಸ ಬಿಲ್ಲು. ಒಂದೇ ರಸ್ತೆಗೆ 5—5 ಬಿಲ್ಲುಗಳು ಮಾಡಿ ಹಣ ತೆಗೆದುಕೊಂಡಿದ್ದಾರೆ. ರಸ್ತೆಗಳನ್ನು ರಿಪೇರಿ ಮಾಡದೆ ಬಿಲ್ಲನ್ನು ತೆಗೆದುಕೊಂಡಿದ್ದಾರೆ. ಇದು ಬೆಂಗಳೂರು ಕಾರ್ಪೋರೇಷನ್‌ನಲ್ಲಿ ನಡೆಯತಕ್ಕ ವೈಖರಿ. ಮೊದಲು ಕಂಟ್ರಾಕ್ಟರ್ ಅಲ್ಲಿಗೆ ಬರುವಾಗ ಸ್ಕೂಟರಿನಲ್ಲಿ ಬರುತ್ತಾನೆ ಬರಬರುತ್ತಾ ಸುಮಾರು ಒಂದು ಫರ್ಲಾಂಗ್ ದೂರದ ಕಾರ್ ತೆಗೆದುಕೊಳ್ಳುತ್ತಾನೆ. 45 ಲಕ್ಷ ರೂಪಾಯಿ ಕಂಟ್ರಾಕ್ಟ್ ಮಾಡತಕ್ಕ ಒಬ್ಬ ಕಂಟ್ರಾಕ್ಟರಿಗೆ ಭಾರಿ ದೊಡ್ಡ ಕಾರ್ ಇದೆ. ಈ ರೀತಿ ಮಾಡಿದರೆ ಕಾರ್ ಬರುತ್ತದೆ ಎಲ್ಲವೂ ಬರುತ್ತದೆ. ಇಲ್ಲಿಗೆ ಬರತಕ್ಕ ಅಸಿಸ್ಟೆಂಟ್ ಇಂಜಿನಿಯರ್ ಈ ಊರಿನಲ್ಲಿ ಮನೆ ಕಟ್ಟದೆ ಇದ್ದರೆ, ಒಂದು ಕಾರ್ ತೆಗೆದುಕೊಳ್ಳದಿದ್ದರೆ, ಅದು ಒಂದು ಡಿಸ್‌ಕ್ವಾಲಿಫಿಕೇಷನ್. ಕಾರ್ಪೋರೇಷನ್‌ಗೆ ಬಂದರೆ ಒಂದು ಮನೆ ಕಟ್ಟಬೇಕು ಒಂದು ಕಾರ್ ತೆಗೆದುಕೊಳ್ಳಬೇಕು. ಇದು ಕ್ವಾಲಿಫಿಕೇಷನ್. ಕಾರ್ಪೋರೇಷನ್‌ಗೆ ಹೋದರೆ, ಮನೆ ಖಾತಾ, ಟ್ರಾನ್ಸ್‌ಫರ್ ಆಗಲಿಕ್ಕೆ 6 ತಿಂಗಳಾಗುತ್ತದೆ. ಇವೆಲ್ಲವನ್ನೂ ಸರ್ಕಾರದ ಗಮನಕ್ಕೆ ಆಗಿಂದಾಗ್ಗೆ ತಂದರೂ ಅವರು ಯಾವುದೇ ರೀತಿಯಲ್ಲಿ ಕಾರ್ಯಕ್ರಮ ಕೈಕೊಂಡಿಲ್ಲ. ನಿಮಗೆ ನಿಷ್ಠೆ ಇದ್ದರೆ ಈ ಇಲಾಖೆ ದಕ್ಷತೆಯಿಂದ ಕೆಲಸ ಮಾಡಬೇಕೆಂದು ಇದ್ದರೆ, ದಯಮಾಡಿ ಕಂಟ್ರಾಕ್ಟ್ ಸಿಸ್ಟಂನಲ್ಲಿ ನಡೆಯತಕ್ಕ ಮೋಸ ಮತ್ತು ಮೇಯರ್ ನಡೆಸತಕ್ಕ ಗೂಂಡಾಗಿರಿಯನ್ನು ತಪ್ಪಿಸುವುದಕ್ಕೆ ಸತತವಾಗಿ ಕ್ರಮ ಕೈಗೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ (ಸಿರ್ಸಿ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ ಈ ವರೆಗೆ ರಚನಾತ್ಮಕ ಹಾಗೂ ರಚನಾತ್ಮಕ ಇಲ್ಲದಂಥ, ವ್ಯಕ್ತಿ ದ್ವೇಷದಿಂದ ಕೂಡಿದ ಸಲಹೆಗಳು, ಟೀಕೆಗಳು ಬಂದಿವೆ. ಆದರೆ ನಾನು ಕೇವಲ ಒಂದು ವಾಕ್ಯದಲ್ಲಿ ನಾಲ್ಕು ಮಾತು ಹೇಳಿ ಬಿಟ್ಟು ನನ್ನ ಭಾಷಣವನ್ನು ಮುಗಿಸಬೇಕು ಎಂದು ನಿಂತಿದ್ದೇನೆ. ಈ ಮುನಿಸಿಪಾಲಿಟಿ ವಿಷಯದಲ್ಲಿ ಸರ್ಕಾರ ತುಕೋಲ್ ಕಮಿಷನ್ ಕೊಟ್ಟಿರತಕ್ಕ ರಿಪೋರ್ಟನ್ನು ಕಾರ್ಯಗತಮಾಡಿ ಎಲ್ಲಾ ದರ್ಜೆಯ ಹುದ್ದೆಗಳಿಗೂ ರಕ್ಷಣೆಯನ್ನು ಕೊಡಬೇಕು ಮತ್ತು ನಾಲ್ಕನೆ ದರ್ಜೆಯವರಿಗೂ ಇವನ್ನು ಅನ್ವಯ ಮಾಡಬೇಕು ಎಂದು ಸಲಹೆ ಮಾಡುತ್ತೇನೆ. ಈಗ ಇರುವ ಮುನಿಸಿಪಲ್ ಆಕ್ಟ್‌ನಲ್ಲಿ ನೀವು ಹೇಳತಕ್ಕ ಸಮಾಜವಾದ ನೀವು ಹೇಳತಕ್ಕ ಬಡವರ ಸೇವೆ, ನೀವು ಹೇಳತಕ್ಕ ಹೊಸ ನೀತಿಯನ್ನು ಅಳವಡಿಸುವುದಕ್ಕೆ ಅವಕಾಶವಿಲ್ಲ, ಅದನ್ನು ಸೂಕ್ತ ರೀತಿಯಲ್ಲಿ ತಿದ್ದುಪಡಿಮಾಡಿ. ಮಾಡದೆಹೋದರೆ ಅದು ಮಾತಾಗುತ್ತದೆಯೇ ಹೊರತು ಕಾರ್ಯವಾಗುವುದಿಲ್ಲ. ಆದುದರಿಂದ ಇದನ್ನು ತಿದ್ದುಪಡಿ ಮಾಡಬೇಕು ಎಂದು ಮಂತ್ರಿಮಂಡಲಕ್ಕೆ ಸಲಹೆ ಮಾಡುತ್ತೇನೆ. ರಾಜ್ಯಕ್ಕೆ ಸಂಬಂಧಪಟ್ಟ ಪೌರ ಸಮಿತಿಗಳಿಗೆ ಸಿ ಅಂಡ್ ಆರ್ ರೂಲ್ಸ್ ಜಾರಿಗೆ ತರಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಇನ್ನೂ ಲಕ್ಷ ಸೈಟುಗಳನ್ನು ಹಂಚಬೇಕು, 1973 ಆಗಸ್ಟ್ ತಿಂಗಳ ಹೊತ್ತಿಗೆ ಮೈಸೂರು ರಾಜ್ಯದಲ್ಲಿ ಸೈಟುಗಳು ಇಲ್ಲದೆ ಇರತಕ್ಕ ಸಂಸಾರ ಇರಕೂಡದು ಎನ್ನುವ ತತ್ವವನ್ನು ಮಂತ್ರಿಗಳು ಅನೇಕ ಸಂದರ್ಭದಲ್ಲಿ ವ್ಯಕ್ತಪಡಿಸಿದ್ದಾರೆ. ಬೆಳ್ಳಿ ಹಬ್ಬ ಆಚರಿಸುವ ಸಂದರ್ಭದಲ್ಲಿ ಹಲವಾರು ಕಡೆ ಸೈಟು

ಗಳನ್ನು ಕೊಡುತ್ತೇವೆಂದು ಮಂತ್ರಿಗಳು ಅನೇಕ ಭಾಷಣಗಳನ್ನು ಮಾಡಿದ್ದಾರೆ. ಎಷ್ಟು ಸೈಟು ಗಳನ್ನು ಬಡವರಿಗೆ ಕೊಡಲು ವ್ಯವಸ್ಥೆ ಮಾಡಿದ್ದೀರಿ ಎನ್ನುವ ಅಂಕಿ ಅಂಶಗಳನ್ನು ದಯವಿಟ್ಟು ತಿಳಿಸಬೇಕು. ಈ ಬಗ್ಗೆ ಅರ್‌ಬನ್ ಡೆವಲಪ್‌ಮೆಂಟ್ ಬಿಲ್ ಜಾರಿಗೆ ತಂದು ಸೂಕ್ತ ವ್ಯವಸ್ಥೆ ಮಾಡಿ ಬಡವರಿಗೆ, ಕೂಲಿಗಾರರಿಗೆ ನಿರ್ಗತಿಕರಿಗೆ ಮತ್ತು ಶ್ರಮಜೀವಿಗಳಿಗೆ ಹೆಚ್ಚು ಹೆಚ್ಚು ಸೈಟುಗಳನ್ನು ಕೊಡುವಂಥ ವ್ಯವಸ್ಥೆ ಮಾಡಬೇಕು. ಸಿಐಟಿಬಿ ರೂಲ್ಸ್ ತಿದ್ದುಪಡಿ ಮಾಡಿ ಹೊಸ ರೂಲ್ಸ್ ತಂದು ಲಾಟರಿ ಸಿಸ್ಟಮ್ ಜಾರಿಯಲ್ಲಿವೆ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಸಿ ಐ ಟಿ ಬಿಯನ್ನು ಡೆಲ್ಲಿಯಲ್ಲಿರುವ ಬೋರ್ಡಿನಂತೆ ಪರಿವರ್ತನೆ ಮಾಡಿ ಅದರ ಮೂಲಕ ಎಲ್ಲ ಜನರಿಗೂ ಅನುಕೂಲಗಳು ದೊರೆಯುವಂತೆ ವ್ಯವಸ್ಥೆ ಮಾಡಬೇಕು.

ಪ್ರೈವೇಟು ಲೇ ಔಟುಗಳ ಬಗ್ಗೆ ಹೇಳುವಾಗ ಕೆಲವು ಕಡೆಗಳಲ್ಲಿ ನಿಯಮಗಳಿಗೆ ಅನುಸಾರ ವಾಗಿ ಮನೆಗಳನ್ನು ಕಟ್ಟಿರುತ್ತಾರೆ. ಇಂತಹ ಕಡೆಗಳಲ್ಲಿ ಕಾರ್ಪೊರೇಷನ್‌ನವರು ಪ್ರೈವೇಟು ಲೇ ಔಟುಗಳಿಗೆ ಎನ್‌ಕರೇಜು ಮಾಡಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ಶೇಕಡಾ 18 ಪರ್ಸೆಂಟಿನಷ್ಟು ಸೈಟುಗಳನ್ನು ಹರಿಜನ ಹಾಗೂ ಗಿರಿಜನರಿಗೆ ಹಂಚಬೇಕೆಂದು ನಿಯಮ ಇದ್ದರೂ ಅದರಂತೆ ಎಲ್ಲರಿಗೂ ಸೈಟುಗಳು ಸಿಗುವ ವ್ಯವಸ್ಥೆ ಮಾಡಬೇಕು.

ಇನ್ನು ವಾಟರ್ ಸಪ್ಲೈ ಬೋರ್ಡಿನ ಬಗ್ಗೆ ಇಲ್ಲಿ ಅನೇಕ ಟೀಕೆ ಟಿಪ್ಪಣಿಗಳು ಬಂದಿವೆ. ಮತ್ತು ಇಲ್ಲಿನ ಅಧಿಕಾರಿಗಳ ಬಗ್ಗೆ ಕೂಡ ದೋಷಾರೋಪಣೆ ಮಾಡಿದ್ದಾರೆ. ಆದರೆ ನಮ್ಮ ರಾಜ್ಯದ ಒಂದು ಕಮಿಟಿಯ ಐದಾರು ಜನ ಸದಸ್ಯರು ವಾಟರು ಬೋರ್ಡ್ ಸಪ್ಲೈ ಕೆಲಸ ಕಾರ್ಯ ಗಳು ಹೇಗೆ ನಡೆಯುತ್ತಿವೆ ಎಂದು ನೋಡಲು ಹೋಗಿದ್ದರು. ಅವರು ಅಲ್ಲಿಗೆ ಹೋಗಿ ನೋಡಿದಾಗ ಅಲ್ಲಿದ್ದ ಅಧಿಕಾರಿಗಳು ಅವರು ಮಾಡುತ್ತಿರುವ ಕೆಲಸಗಳ ಪೂರ್ಣ ವಿವರಗಳು ಮ್ಯಾಪು ಇತ್ಯಾದಿ ಗಳನ್ನೆಲ್ಲಾ ತೋರಿಸಿದಾಗ ಇಲ್ಲಿಗೆ ಬಂದ ಸದಸ್ಯರಿಗೆ ಈ ಬೋರ್ಡು ಬಹಳ ಚೆನ್ನಾಗಿ ಕೆಲಸ ಮಾಡು ತ್ತಿದೆ ಎನ್ನುವ ಭರವಸೆ ಬಂದಿದೆ ಮತ್ತು ಇದು ಇನ್ನೂ ಉತ್ತಮ ರೀತಿಯಲ್ಲಿ ಕೆಲಸ ಮಾಡಿ ಬೆಂಗಳೂರು ಜನತೆಗೆ ಸಹಾಯ ಮಾಡುತ್ತದೆ ಎಂದು ನಾವು ಆಶಿಸುತ್ತೇವೆ. ಸರಕಾರ ಇದರ ಬಗ್ಗೆ ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಿ ಬೆಂಗಳೂರು ನಗರಕ್ಕೆ ಬೇಗ ನೀರು ಸಿಗುವ ವ್ಯವಸ್ಥೆ ಮಾಡಬೇಕೆಂದು ಇಲ್ಲಿ ಸಲಹೆ ಮಾಡುತ್ತೇನೆ.

ಇನ್ನು ಅತಿ ಮುಖ್ಯವಾದದ್ದು ಬಡಜನರು ಹಾಗೂ ಕೂಲಿಗಾರರು ಹಾಗೂ ಸ್ಲಂಗಳಲ್ಲಿ ವಾಸ ಮಾಡತಕ್ಕ ಜನರನ್ನು ಸರಕಾರ ನೆಗ್‌ಲೆಕ್ಟ್ ಮಾಡುತ್ತಿದ್ದಾರೆ. ಇದಕ್ಕೋಸ್ಕರ ಇಲ್ಲಿ ಸ್ಲಂ ಡೆವಲಪ್‌ಮೆಂಟ್ ಬೋರ್ಡ್ ಒಂದನ್ನು ನೇಮಕ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಮತ್ತು ಇದರ ಬಗ್ಗೆ ಅಂಕಿ ಅಂಶಗಳನ್ನು ತಯಾರು ಮಾಡುವ ವ್ಯವಸ್ಥೆ ಮಾಡಬೇಕು.

ಇನ್ನು ಹೌಸಿಂಗ್ ಬೋರ್ಡು ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಇದರಲ್ಲಿ ಲೋ ಇನ್‌ಕಂ ಗ್ರೂಪು, ಮಿಡ್ಲ್ ಇನ್‌ಕಂ ಗ್ರೂಪು ಮತ್ತು ಹೈ ಇನ್‌ಕಂ ಗ್ರೂಪು, ಇಂಡಸ್ಟ್ರಿಯಲ್ ಇನ್‌ಕಂ ಗ್ರೂಪು ಎಂದು ಮಾಡಿ ಬೇಕಾದಷ್ಟು ಸೈಟುಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ಮುಖ್ಯವಾಗಿ ಬಡವರಿಗೆ ಹಾಗೂ ಕೂಲಿಗಾರರುಗಳಿಗೆ ಕೊಟ್ಟಿಲ್ಲ. ಇನ್ನು ಮುಂದೆ ಆದರೂ ಬಡ ಜನರಿಗೆ ಹೆಚ್ಚು ಸೈಟುಗಳನ್ನು ಕೊಡುವ ವ್ಯವಸ್ಥೆ ಮಾಡಬೇಕು. ಇನ್ನು ಎಸ್ ಟಿ ಹಾಗೂ ಎಸ್ ಸಿ ಹೌಸಿಂಗು ಕೋಆಪರೇಟೀವ್ ಸೊಸೈಟಿಗೆ ಹೌಸಿಂಗು ಬೋರ್ಡಿನವರು ಸಾಕಾದಷ್ಟು ಹಣವನ್ನು ಕೊಡದೇ ಇರುವುದರಿಂದ ಇಲ್ಲಿ ಮಾಡುವ ಸ್ಕೀಂಗಳಿಗೆ ಬಹು ತೊಂದರೆಯಾಗುತ್ತಿದೆ. ಬಡ್ಜೆಟ್ಟಿನಲ್ಲಿ ಕೂಡ ಹೌಸಿಂಗು ಸ್ಕೀಂಗಾಗಿ ಈ ಸೊಸೈಟಿಗೆ ಹಣ ಇಲ್ಲ. ಇದನ್ನು ವಿಚಾರ ಮಾಡಿ ಇವರಿಗೆ ಸರಕಾರ ಸಹಾಯ ಮಾಡಬೇಕು.

ಇನ್ನು ಟೌನ್‌ಪ್ಲಾನಿಂಗು ವರ್ಕ್ ಕೆಲಸವೇನೋ ಸಮರ್ಪಕವಾಗಿ ನಡೆಯುತ್ತಿದೆ. ಅದ ರಂತೆಯೇ ಕಂಟ್ರಿ ಪ್ಲಾನಿಂಗು ಎಂದು ಮಾಡಿ ರಾಜ್ಯದಾದ್ಯಂತ ಇದರ ಕೆಲಸಗಳು ಆಗುವಂತೆ ವ್ಯವಸ್ಥೆ ಮಾಡಬೇಕು.

ಇನ್ನು ಹುಚ್ಚು ನಾಯಿಗಳು ಕಡಿದರೆ ಅದಕ್ಕೆ 14 ಇಂಜಕ್ಷನ್‌ಗಳನ್ನು ಕೊಡಬೇಕೆಂದು ಹೇಳು ತ್ತಾರೆ. ಇದಕ್ಕಾಗಿ ಜನ ಬೆಂಗಳೂರು ಕಾರ್ಪೊರೇಷನ್ನಿಗೇ ಬರಬೇಕಾಗಿದೆ. ಬೇರೆ ಕಡೆ ಇರುವ ಮುನಿಸಿಪಾಲಿಟಿಗಳಲ್ಲಿ ಇಂತಹ ಇಂಜಕ್ಷನ್‌ಗಳನ್ನು ಇಡುವ ವ್ಯವಸ್ಥೆ ಮಾಡಿಲ್ಲ. ಸರಕಾರ ಎಲ್ಲ ಮುನಿಸಿಪಾಲಿಟಿಗಳಲ್ಲೂ ಹುಚ್ಚು ನಾಯಿಕಡಿದವರಿಗೆ ಚಿಕಿತ್ಸೆ ಮಾಡಲು ಅನುಕೂಲವಾಗುವಂತೆ ಇಂತಹ ಇಂಡಕ್ಷನ್ ಟ್ಯುಬುಗಳನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ಇಲ್ಲಿ ಒತ್ತಾಯ ಮಾಡು ತ್ತೇನೆ.

(ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್)

ಇನ್ನು ಹೆಂಡದ ಅಂಗಡಿಗೆ ಕಾರ್ಪೊರೇಷನ್‌ನವರು ಲೈಸನ್ಸ್ ಕೊಡುವಾಗ ಹರಿಜನರು ಎಲ್ಲಿರುತ್ತಾರೋ ಅಲ್ಲೇ ಹೆಂಡದಂಗಡಿಗಳನ್ನು ತೆಗೆಯಲು ಲೈಸನ್ಸ್ ಕೊಡುತ್ತಿದ್ದಾರೆ. ಇಂತಹವರಿಗೆ ಲೈಸನ್ಸ್ ಕೊಡಬಾರದು. ಇದರಿಂದ ಹರಿಜನರಿಗೆ ಹಾನಿಯುಂಟಾಗುತ್ತದೆ. ಸರಕಾರದವರು ಸಮಾಜವಾದ ಜಾರಿಗೆ ತರುತ್ತೇವೆ ಎಂದು ಹೇಳುವಂತೆ ಎಲ್ಲ ಜನರಿಗೂ ಸೈಟುಗಳು ದೊರೆಯುವಂತೆ ವ್ಯವಸ್ಥೆ ಮಾಡಬೇಕು ಮತ್ತು ಮಾನ್ಯ ಮಂತ್ರಿಗಳು ಸಭೆಯ ಮುಂದೆ ಇಟ್ಟಿರುವ ಸುಮಾರು 14 ಕೋಟಿಯ ಬೇಡಿಕೆಗಳನ್ನು ಪುಷ್ಟೀಕರಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ನನ್ನ ಇಲಾಖೆಯ ಬೇಡಿಕೆಗಳ ಬಗ್ಗೆ ಸದನದ ಮಾನ್ಯ ಸದಸ್ಯರು ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ ಮತ್ತು ಇದನ್ನು ಸದಸ್ಯರುಗಳು ಈಗಿರತಕ್ಕ ವ್ಯವಸೆಯ ಬಗ್ಗೆ ಪ್ರತಿಯಾಗಿ ಬೇರೆ ವ್ಯವಸ್ಥೆ ಮಾಡಬೇಕು ಮತ್ತು ಇದನ್ನು ಯಾವ ರೀತಿ ಉಪಯೋಗ ಮಾಡಬೇಕು ಎನ್ನುವುದರ ಬಗ್ಗೆ ಟೀಕೆಯ ರೂಪದಲ್ಲಿ ಸಲಹೆಗಳನ್ನು ಕೊಟ್ಟಿದ್ದಾರೆ. ಇನ್ನು ಕೆಲವು ಸದಸ್ಯರು ಕೆಲವು ಅಧಿಕಾರಿಗಳ ಬಗ್ಗೆ ತೀವ್ರವಾದ ಟೀಕೆಗಳನ್ನೂ ಮಾಡಿದ್ದಾರೆ. ಯಾರು ಯಾರು ಯಾವ ಯಾವ ಸಲಹೆಗಳನ್ನು ಕೊಟ್ಟಿದ್ದಾರೆ ಆ ಸಲಹೆಗಳನ್ನೆಲ್ಲಾ ಸರಕಾರ ಆತ್ಮೀಯತೆಯಿಂದ ಪರಿಶೀಲಿಸಿ ಯಾವ ರೀತಿ ಕಾರ್ಯಗತಮಾಡಬೇಕೋ ಆ ರೀತಿ ಮಾಡುತ್ತೇವೆ. ಮತ್ತು ಕೆಲವು ರಚನಾತ್ಮಕವಾದ ಟೀಕೆಗಳ ಬಗ್ಗೆ ಅಧಿಕಾರಸ್ಥಾನದಲ್ಲಿರುವ ನಾನು ಅವೆಲ್ಲ ವಿಚಾರಗಳನ್ನು ಇಲ್ಲಿ ಸ್ಪಷ್ಟೀಕರಿಸಲು ಕಾತುರನಾಗಿದ್ದೇನೆ. ಅದೇನೆಂದರೆ ಯಾರೇ ಅಧಿಕಾರಿ ಇರಲಿ ಅವರು ಒಂದು ಇಲಾಖೆಯಲ್ಲಿ ಕೆಲಸ ಮಾಡುವಾಗ ಆ ಅಧಿಕಾರಿಗಳು ಸತ್ಯ ಹಾಗೂ ನಿಷ್ಠೆಯಿಂದ ದೇಶದ ಒಂದು ಆಗುಹೋಗುಗಳನ್ನು ಮನಸ್ಸಿನಲ್ಲಿಟ್ಟುಕೊಂಡು ದೇಶಾಭಿಮಾನದಿಂದ ಕೆಲಸ ಮಾಡಬೇಕು ಮತ್ತು ಆ ರೀತಿ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ಯಾರಾದರೂ ಸ್ವೇಚ್ಛೆಯಾಗಿ ಕೆಲವು ಕಡೆ ಆಸ್ತಿಪಾಸ್ತಿಗಳನ್ನು ಮಾಡಬೇಕೆನ್ನುವ ಉದ್ದೇಶದಿಂದ ಲಂಚರುಷುವತ್ತುಗಳಿಗೆ ಈಡಾಗಿ ಸರಕಾರಕ್ಕೆ ವಿರುದ್ಧವಾಗಿ ಕೆಲಸ ಮಾಡುತ್ತಿದ್ದರೆ ತಕ್ಷಣ ಅಂತವರ ಬಗ್ಗೆ ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎಂದು ನಾನು ಈ ಸದನದಲ್ಲಿ ತಮಗೆ ಭರವಸೆ ಕೊಡುತ್ತೇನೆ. ಮತ್ತು ಇಂತಹ ಒಂದು ಕಾರ್ಯಕ್ರಮ ತೆಗೆದುಕೊಳ್ಳುವಾಗ ಈಗ ಇರತಕ್ಕ ನಿಯಮಾವಳಿಗಳು ಸರಿಯಾಗಿಲ್ಲ ಮತ್ತು ಸಮರ್ಪಕವಾಗಿಲ್ಲ. ಇದನ್ನು ಬದಲಾವಣೆಮಾಡಿ ಸರಿಯಾದ ವ್ಯವಸ್ಥೆ ಮಾಡಬೇಕೆಂದು ಸರಕಾರದ ಉದ್ದೇಶವಾಗಿದೆ. ಇದನ್ನು ಯಾವ ರೀತಿ ಮಾಡಬೇಕು ಎನ್ನುವುದರ ಬಗ್ಗೆ ಸರಕಾರ ಬಹಳ ತೀವ್ರತೆಯಿಂದ ಯೋಚನೆ ಮಾಡುತ್ತಿದೆ. ಇಂತಹ ಒಂದು ನಿಯಮಾವಳಿಗಳನ್ನು ಬದಲಾಣೆ ಮಾಡಿ ಮುಂದಿನ ವರ್ಷ ನಾವು ಈ ಸಭೆಗೆ ಬರುವಾಗ ತಮ್ಮ ಮುಂದೆ ಇಟ್ಟರೆ ಆಗ ತಮಗೆ ಇದರಲ್ಲಿ ಒಂದು ರೀತಿಯಾದ ಸಂತೋಷ ಮತ್ತು ತೃಪ್ತಿ ಉಂಟಾಗುತ್ತದೆ ಎಂದು ನಾನು ನಂಬಿದ್ದೇನೆ. ಮತ್ತು ಮಾನ್ಯ ಸದಸ್ಯರು ಈ ಸಭೆಯ ಮುಂದೆ ಇಟ್ಟಿರತಕ್ಕ ಹಲವಾರು ಸಲಹೆಗಳ ಬಗ್ಗೆ ಒಂದೊಂದಾಗಿ ಇಲ್ಲಿ ಉತ್ತರ ಕೊಡಲು ಪ್ರಯತ್ನಪಡುತ್ತೇನೆ.

ಮೊಟ್ಟ ಮೊದಲನೆದಾಗಿ ನಮ್ಮ ಬೆಂಗಳೂರು ಕಾರ್ಪೊರೇಷನ್ ಬಗ್ಗೆ ಬಹಳ ತೀವ್ರವಾದ ಭಾವನೆಗಳನ್ನು ವ್ಯಕ್ತ ಮಾಡಿದ್ದಾರೆ. ನಮ್ಮ ಸರಕಾರ ಬಂದು ಸುಮಾರು 113 ದಿವಸಗಳಾಗಿರಬಹುದು. ಈ ಅವಧಿಯಲ್ಲಿ ಕಾರ್ಪೊರೇಷನ್ ಮೂಲಕ ನಾಗರಿಕರಿಗೆ ಹೆಚ್ಚು ಹೆಚ್ಚು ಸೌಲಭ್ಯಗಳು ಸಿಗಲಾರದು ಎಂದು ಸಂಶಯಪಡಬೇಕಾಗಿಲ್ಲ. ಆದರೆ ಕಾರ್ಪೊರೇಷನ್ ಆದ ನಂತರ ಅಲ್ಲಿ ನಡೆದಿರುವ ವ್ಯವಹಾರಗಳ ಬಗ್ಗೆ ವಿಜಿಲೆನ್ಸ್ ಕಮಿಷನ್‌ನವರು ಒಂದು ತನಿಖೆ ನಡೆಸಿ ಸರಕಾರಕ್ಕೆ ಒಂದು ರಿಪೋರ್ಟು ಕೊಟ್ಟಿದ್ದಾರೆ. ಅದು ಮಾನ್ಯ ಸದಸ್ಯರಿಗೂ ಕೂಡ ಗೊತ್ತಾಗಿದೆ, ಸರಕಾರ ಇದರ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬಹುದೋ ಅವನ್ನು ಮಾಡಬೇಕೆಂದು ಜನತೆ ನಿರೀಕ್ಷಿಸುವುದು ಸ್ವಾಭಾವಿಕ. ಮತ್ತು ಕಾರ್ಪೊರೇಷನ್‌ನಲ್ಲಿರುವ ಸದಸ್ಯರು ಹಾಗೂ ಮೇಯರ್‌ರವರೂ ಸೇರಿ ಎಲ್ಲರೂ ಜನತೆಯ ಸೇವೆ ಮಾಡಬೇಕೆಂದು ಮತ್ತು ನಾಗರಿಕರ ಜೀವನವನ್ನು ಸುವ್ಯವಸ್ಥೆಯಿಂದ ನಡೆಸಿಕೊಂಡು ಹೋಗಲು ಪ್ರಯತ್ನ ಮಾಡಬೇಕು. ಯಾವ ರೀತಿಯಾಗಿ ಇಲ್ಲಿ ಕೆಲಸಗಳು ಆಗುತ್ತಿವೆ ಮತ್ತು ಜನರಿಗೆ ಯಾವ ರೀತಿಯ ಅನುಕೂಲಗಳನ್ನು ಕೊಡುತ್ತಿದ್ದಾರೆ ಎನ್ನುವುದನ್ನೆಲ್ಲಾ ಸರಕಾರ ಬಹು ಜಾಗರೂಕತೆಯಿಂದ ನೋಡುತ್ತಿದೆ. ಆದರೆ ನಾವೇನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ ಮತ್ತು ಯೋಚನೆ ಮಾಡಿಲ್ಲ ಎನ್ನತಕ್ಕದ್ದು ಸರಿಯಲ್ಲ.

2-00 P.M.

ನಾವೇನಾದರು ಕ್ರಮ ತೆಗೆದು ಕೊಳ್ಳಬೇಕಾದರೆ, ಯಾರು ಯಾರು ವಿಧಿವತ್ತಾಗಿ ಕೆಲಸ ಮಾಡುತ್ತಾರೆ, ನಿಯಮಗಳಿಗನುಗುಣವಾಗಿ ಕೆಲಸ ಮಾಡುತ್ತಾರೆ, ಯಾರು ಯಾರು ಮಾಡುವುದಿಲ್ಲ ಎಂಬ ಬಗ್ಗೆ ಸಾಕ್ಷಿಗಳನ್ನು ಸಂಗ್ರಹ ಮಾಡಿ, ಅವನ್ನೆಲ್ಲಾ ಪರಿಶೀಲನೆ ಮಾಡಿ ನಂತರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಯಾರೋ ಹೇಳಿದರು ಎಂದು ಕ್ರಮ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಅದಕ್ಕಾಗಿಯೇ ಯಾರು ಯಾರು ಯಾವ ರೀತಿಯಿಂದ ಕೆಲಸ ಮಾಡುತ್ತಾರೆಂಬುದನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿರುತ್ತೇವೆ. ತಪ್ಪು ಮಾಡಿದವರಬಗ್ಗೆ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೆಂಬ ಬಗ್ಗೆ ಯೋಚನೆ ಮಾಡಿ ನಂತರ ಕ್ರಮ ತೆಗೆದುಕೊಳ್ಳುತ್ತೇವೆ. ಕಾರ್ಪೊರೇಷನ್ ಆಡಳಿತದಲ್ಲಿ ಅವ್ಯವಹಾರಗಳು ನಡೆಯುತ್ತಿವೆ, ನಾಗರಿಕರಿಗೆ ತೃಪ್ತಿಕರವಾದಂಥ ಕೆಲಸ ಕಾರ್ಯಗಳು ನಡೆಯುತ್ತಿಲ್ಲ ಎಂಬುದಾಗಿ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅಲ್ಲಿ ಎಲ್ಲವೂ ತೃಪ್ತಿಕರವಾಗಿ ಕೆಲಸಗಳಾಗುತ್ತಿವೆ ಎಂಬುದು ನನ್ನ ಅಭಿಪ್ರಾಯವಲ್ಲ. ಕೆಲವು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡ ಮೇಲೆ, ಇತರೇ ಅಧಿಕಾರಿಗಳು ಇಂದು ಹೆದರಿ, ಹೆದರಿ ಕೆಲಸ ಮಾಡುವ ಪ್ರಸಂಗ ಬಂದಿದೆ. ಒಟ್ಟಿನಲ್ಲಿ ಮೇಯರ್ ಆಗಲಿ, ಮಾನ್ಯ ಸದಸ್ಯರುಗಳಾಗಲಿ, ತಮ್ಮ ತಮ್ಮ ಕಾರ್ಯ ವ್ಯಾಪ್ತಿ, ಅಧಿಕಾರ ವ್ಯಾಪ್ತಿಯನ್ನು ತಿಳಿದುಕೊಂಡು ಕೆಲಸ ಮಾಡಿದ್ದೇ ಆದರೆ, ಕೆಲಸಗಳು ಚೆನ್ನಾಗಿ ಆಗುತ್ತವೆ ಮತ್ತು ಜನರಿಗೂ ಹೆಚ್ಚಿನ ಸೇವೆಯನ್ನು ಕೊಡಬಹುದು. ಮತ್ತು ಆ ರೀತಿ ಮಾಡಿದ್ದೇ ಆದರೆ ಸರ್ಕಾರವೂ ಸಹ ಬೆಂಬಲ ಕೊಡುತ್ತದೆ. ಆದರೆ ವಿಧಿವತ್ತಾಗಿ ಕೆಲಸ ಮಾಡದೆ, ಅದಕ್ಕೆ ತದ್ವಿರುದ್ಧವಾಗಿ ಕೆಲಸ ಮಾಡುವುದು, ಮತ್ತು ಯಾರನ್ನೋ ಅವಮಾನ ಮಾಡಬೇಕು ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು, ಸಭೆಗಳಲ್ಲಿ ಮತ್ತು ಬಹಿರಂಗ ಸಭೆಗಳಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಒಳ್ಳೆಯದಲ್ಲ. ಅದು ಯಾರಿಗೂ ಸಲ್ಲದ ಮಾತು. ಸರಿಯಾದ ರೀತಿಯಿಂದ ಮತ್ತು ಜನರ ಮನಸ್ಸನ್ನು ತೃಪ್ತಿಪಡಿಸುವ ರೀತಿಯಲ್ಲಿ ಯಾವಾಗಲೂ ಕೆಲಸ ಮಾಡಬೇಕು. ಸರ್ಕಾರದ ಇಚ್ಛೆ ಕೂಡ ಇದೇ ಆಗಿದೆ. ವಿಧಿವತ್ತಾಗಿ ಯಾರು ಕೆಲಸ ಮಾಡುತ್ತಾರೋ, ಅವರ ಬೆನ್ನು ತಟ್ಟುವುದಕ್ಕೆ ನಾವು ಸಿದ್ಧರಿದ್ದೇವೆ. ಬಹಿರಂಗವಾಗಿ ಅವಮಾನವಾಗುವಂತಹ ಮಾತನ್ನಾಡುವುದು, ಸಸ್ಪೆಂಡ್ ಮಾಡುತ್ತೇನೆ ಎಂದು ಹೇಳುವುದು, ಅವರು ಅಂತಹವರು, ಇವರು ಇಂತಹವರು ಎಂದು ಹೇಳುವುದು, ಇದರಿಂದ ಏನಾಗಿದೆ ಎಂದರೆ, ಕಮೀಷನರ್ ಆದಿಯಾಗಿ ಎಲ್ಲರೂ ಹೆದರಿ ನಡೆದುಕೊಳ್ಳುವ ಹಾಗೆ ಆಗಿದೆ. ದೊಡ್ಡ ದೊಡ್ಡ ಅಧಿಕಾರಿಗಳನ್ನು ಹೆದರಿಸಿದರೆ, ಸಣ್ಣ ಸಣ್ಣ ಅಧಿಕಾರಿಗಳು ಎಲ್ಲರೂ ತಾವು ಹೇಳುವ ಹಾಗೆ ಕೇಳುತ್ತಾರೆ ಎಂದು ತಿಳಿದುಕೊಳ್ಳುವುದು ತಪ್ಪು ಮತ್ತು ಕೆಲವು ಮಾನ್ಯ ಸದಸ್ಯರು ಸಭೆಯ ಪ್ರತಿನಿಧಿ ಎಂಬುದನ್ನು ಮರೆತು ಈ ರೀತಿ ವರ್ತನೆ ಮಾಡುವುದು ಸರಿಯಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ನಾವು ಇವೊತ್ತಿನ ದಿವಸ ಕಣ್ಣಲ್ಲಿ ಕಣ್ಣಿಟ್ಟು ಯಾರು ಯಾರು ತಪ್ಪು ಮಾಡುತ್ತಿದ್ದಾರೆ ಎಂಬುದನ್ನು ನೋಡುತ್ತಿದ್ದೇವೆ. ಮತ್ತು ತಪ್ಪು ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳುವಾಗ ಪಾರ್ಟಿಯಿಂದ ಏನಾದರೂ ಬಣ್ಣ ಹಚ್ಚಿನೋಡಿ ಅದರ ಒಂದು ಆಧಾರದ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆಂದು ತಾವು ತಿಳಿದುಕೊಳ್ಳಬಾರದು. ನ್ಯೂನತೆ ಇರುವುದನ್ನು ಸರಿಪಡಿಸುತ್ತೇವೆ. ಯಾರು ಚೆನ್ನಾಗಿ ಕೆಲಸ ಮಾಡುತ್ತಾರೆ, ಅವರ ಬೆನ್ನನ್ನು ತಟ್ಟುತ್ತೇವೆ. ಅಂತಹವರಿಗೆ ಉತ್ತೇಜನ ಕೊಡುವುದು ಸರ್ಕಾರದ ಧರ್ಮ. ಅದನ್ನು ಮಾಡುತ್ತೇವೆ. ಆ ವಿಚಾರದಲ್ಲಿ ನಾವು ಹಿಂದೆ ಬೀಳುವುದಿಲ್ಲ.

ಮಾನ್ಯ ನಾಗಣ್ಣನವರು ಅಕ್ಟ್ರಾಯ್ ರದ್ದು ಮಾಡಬೇಕು, ಇದರಲ್ಲಿ ಅವ್ಯವಹಾರಗಳು ಮತ್ತು ಲಂಚರುಷುವತ್ತುಗಳು ನಡೆಯುತ್ತಿವೆ ಎಂಬುದಾಗಿ ಹೇಳಿದರು. ಬಹಳ ದಿವಸದಿಂದ ಇದನ್ನು ತೆಗೆಯಬೇಕೆಂದು ಎಲ್ಲ ಕಡೆ ಮಾತನಾಡುತ್ತಾರೆ. ಅದನ್ನು ಏತಕ್ಕೆ ತೆಗೆಯಬೇಕು ಎಂಬುದು ನನಗೆ ಇವೊತ್ತಿನವರೆಗೆ ಅರ್ಥವಾಗಿಲ್ಲ. ಒಂದು ಉದಾಹರಣೆ ಹೇಳಬೇಕೆಂದರೆ, ದಿನಬಳಕೆ ವಸ್ತುಗಳ ಬೆಲೆ ಹೆಚ್ಚುತ್ತಾ ಹೋದಂತೆಲ್ಲಾ ಸರ್ಕಾರದವರು ನೌಕರರ ತುಟ್ಟಿಭತ್ಯವನ್ನು ಹೆಚ್ಚಿಸುತ್ತಾ ಬಂದಿದ್ದಾರೆ. ಸರ್ಕಾರದವರು ತನ್ನ ನೌಕರರ ತುಟ್ಟಿಭತ್ಯವನ್ನು ಹೆಚ್ಚಿಸುತ್ತಾ ಬಂದಂತೆಲ್ಲಾ ವರ್ತಕರು ಸಹ ಅಷ್ಟೇ ರೂಪದಲ್ಲಿ ಬೆಲೆಗಳನ್ನು ಹೆಚ್ಚಿಸುತ್ತಾ ಹೋಗುತ್ತಿದ್ದಾರೆ. ಒಟ್ಟಿನಲ್ಲಿ ಸರ್ಕಾರದವರು ಹೆಚ್ಚಿಸುವ ಸಂಬಳದಿಂದ ನೌಕರರಿಗೆ ಅನುಕೂಲವಾಗದೆ, ವರ್ತಕರಿಗೆ ಮತ್ತು ಬೇರೆ ಬೇರೆ ಕ್ಷೇತ್ರಗಳಲ್ಲಿ ವ್ಯವಹಾರ ಮಾಡುವವರಿಗೆ ಅನುಕೂಲವಾಗುತ್ತಿದೆ. ಈ ಒಂದು ಕಾರಣದಿಂದ ಇಂದಿನ ಲಿವಿಂಗ್ ಇಂಡೆಕ್ಸ್ ಏನು ಇದೆ, ಅದು ವಾಸ್ತವಿಕವಾದುದು ಎಂದು ನನಗೆ ಭಾಸವಾಗಿಲ್ಲ. ಒಂದು ಪಕ್ಷ ಆಕ್ಟ್ರಾಯ್‌ನ್ನು ರದ್ದು ಮಾಡಿದರೆ, ಅದರಂತೆ ವರ್ತಕರು ಸಹ ಆಹಾರಪದಾರ್ಥಗಳ ಬೆಲೆಗಳನ್ನು ಕಡಿಮೆ ಮಾಡಿ ಮಾರಾಟ ಮಾಡಿದರೆ ನಮಗೆ ಸಂತೋಷವಾಗುತ್ತದೆ. ಆದರೆ ವ್ಯಾಪಾರಗಾರರು ಆ ರೀತಿ ಮಾಡುವುದಿಲ್ಲವೆಂದು ನನಗನ್ನಿಸುತ್ತದೆ. ಇದುವರೆಗೆ ಬಡವರು ಯಾರು ನನ್ನ ಹತ್ತಿರ

(ಶ್ರೀ ಬಿ. ಬಸವಲಿಂಗಪ್ಪ)

ಬಂದು ಆಕ್ಟ್ರಾಯ್‌ನ್ನು ರದ್ದು ಮಾಡಿ ಎಂದು ಕೇಳಿಲ್ಲ. ಕೇವಲ ವ್ಯಾಪಾರ ಮಾಡುವವರು ಮತ್ತು ಹೋಲ್‌ಸೇಲ್ ಡೀಲರ್ಸ್ ಬಂದು ಆಕ್ಟ್ರಾಯ್ ರದ್ದು ಮಾಡಬೇಕೆಂದು ಕೇಳಿದ್ದಾರೆಯೇ ಹೊರತು ಬಡವರಾರೂ ಬಂದು ನನ್ನನ್ನು ಕೇಳಿಲ್ಲ. ಈ ಆಕ್ಟ್ರಾಯ್‌ನಿಂದ ನಮ್ಮ ಕಾರ್ಪೊರೇಷನ್‌ಗೆ ಸುಮಾರು 2 ಕೋಟಿ ರೂಪಾಯಿಗಳ ಆದಾಯ ಇದೆ. ಈ ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗ ಮಾಡಿದ್ದೇ ಆದರೆ, ಅದರಿಂದ ನಮ್ಮ ಹಣದ ಕೊರತೆಯನ್ನು ಸ್ವಲ್ಪ ಮಟ್ಟಿಗೆ ನಿವಾರಣೆ ಮಾಡುವುದಕ್ಕೆ ಅವಕಾಶವಾಗುತ್ತದೆಂದು ನನಗನ್ನಿಸುತ್ತದೆ. ಆಕ್ಟ್ರಾಯನ್ನು ರದ್ದು ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದರೇ ಹೊರತು, ಅದಕ್ಕೆ ಪ್ರತಿಯಾಗಿ ಆದಾಯ ಪಡೆದುಕೊಳ್ಳಲು ಯಾವ ಸಲಹೆಯನ್ನು ಸಹ ಕೊಡಲಿಲ್ಲ. ಮುಖ್ಯವಾಗಿ ಈಗ ಸಾಮಾನುಗಳ ಬೆಲೆಗಳು ಹೆಚ್ಚುತ್ತಾ ಹೋಗಿರುವುದು ಅದಕ್ಕನುಸಾರವಾಗಿ ನೌಕರರ ತುಟ್ಟಿಭತ್ಯವನ್ನು ಹೆಚ್ಚಿಸುತ್ತಾ ಹೋಗಿರುವುದು ಏನು ಬೆಳೆದುಕೊಂಡು ಬಂದಿದೆ, ಇದು ಸರಿಹೋಗುವವರೆಗೂ ಈ ಆಕ್ಟ್ರಾಯ್‌ನ್ನು ರದ್ದು ಮಾಡುವುದಕ್ಕಾಗುವುದಿಲ್ಲ. ಒಂದು ಪಕ್ಷ ಆಕ್ಟ್ರಾಯನ್ನು ರದ್ದು ಮಾಡಿದರೆ ಸಾಮಾನುಗಳ ಬೆಲೆ ಏನೂ ಕಡಿಮೆಯಾಗುವುದಿಲ್ಲ. ಆದ್ದರಿಂದ ಆಕ್ಟ್ರಾಯನ್ನು ರದ್ದು ಮಾಡುವ ಪ್ರಶ್ನೆ ನನ್ನ ಮನಸ್ಸಿನಲ್ಲಿ ಇಲ್ಲ.

ಇನ್ನು ಈಗಿನ ಕಾರ್ಪೋರೇಷನ್ ಆಕ್ಟ್‌ಗಳು ಸರಿಯಾಗಿಲ್ಲ, ಬೆಂಗಳೂರು ನಗರ ಕಾರ್ಪೊರೇಷನ್‌ಗೆ ಒಂದು ರೀತಿಯ ಆಕ್ಟ್ ಇದ್ದರೆ, ಹುಬ್ಬಳ್ಳಿ—ಧಾರವಾಡ ಕಾರ್ಪೊರೇಷನ್‌ಗೆ ಒಂದು ರೀತಿಯ ಆಕ್ಟ್ ಇದೆ. ಇದು ಸರಿಯಲ್ಲ, ಎಲ್ಲ ಕಾರ್ಪೊರೇಷನ್‌ಗಳಿಗೂ ಅನ್ವಯವಾಗುವಂತೆ ಏಕರೂಪವಾದ ಆಕ್ಟ್‌ನ್ನು ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದರು. ಇದು ಒಳ್ಳೆಯ ಸೂಕ್ತವಾಗಿರತಕ್ಕಂಥ ಸಲಹೆಯಾಗಿದೆ. ಸರ್ಕಾರದ ಮುಂದೆ ಕೂಡ ಈ ಸಲಹೆ ಇದೆ. ಇದರ ಬಗ್ಗೆ ಒಂದು ಬಿಲ್ ನ್ನು ಮುಂದಿನ ಸೆಷನ್‌ನೊಳಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಬೆಂಗಳೂರು ನಗರ ಕಾರ್ಪೊರೇಷನ್‌ನಲ್ಲಿ ರೆಕ್ರೂಟ್‌ಮೆಂಟ್‌ರೂಲ್ಸ್‌ನ್ನು ಇನ್ನೂ ತಯಾರು ಮಾಡಿಲ್ಲ ಈ ಒಂದು ತಪ್ಪಿಗಾಗಿ ಸರ್ಕಾರ ರಾಜೀನಾಮೆ ಕೊಡಬೇಕೆಂದು ಮಾನ್ಯ ಹಿರಿಯ ಸದಸ್ಯರಾದಂಥ ಶ್ರೀಮಾನ್ ನಾಗಣ್ಣನವರು ಹೇಳಿದರು. ಅವರು ಈ ವಿಚಾರವನ್ನು ಸ್ವಲ್ಪ ತನಿಖೆ ಮಾಡಿ ಹೇಳಿದ್ದರೆ ಚೆನ್ನಾಗಿರುತ್ತಿತ್ತು. ತಾ. 3—3—1971ರಲ್ಲಿಯೇ ರೆಕ್ರೂಟ್‌ಮೆಂಟ್ ರೂಲ್ಸ್‌ನ್ನು ಮಾಡಿದ್ದೇವೆ. ಅದು ಅವರಿಗೆ ಗೊತ್ತಿಲ್ಲವೆಂದು ಕಾಣುತ್ತದೆ. ಈಗಲಾದರೂ ಮಾನ್ಯ ಸದಸ್ಯರು ತಮ್ಮ ಭಾವನೆಯನ್ನು ಸರಿಪಿಸಿಕೊಳ್ಳುತ್ತಾರೆಂದು ತಿಳಿದಿದ್ದೇನೆ.

ಇನ್ನು ಮಾನ್ಯ ಕೃಷ್ಣನ್ ಅವರು, ಮಾನ್ಯ ವಾಟಾಳ್ ನಾಗರಾಜ್ ಅವರು ಮತ್ತು ಮಾನ್ಯ ಶಾಮಣ್ಣನವರು ಮೋಟಾರ್ ವೆಹಿಕಲ್ಸ್‌ನಿಂದ ನಗರ ಕಾರ್ಪೋರೇಷನ್‌ಗೆ ಎಷ್ಟು ಉತ್ಪತ್ತಿ ಬರಬೇಕಾಗಿತ್ತೋ ಅಷ್ಟು ಬರುತ್ತಿಲ್ಲ ಎಂಬುದಾಗಿ ಹೇಳಿದರು. ಅದನ್ನು ಪರಿಶೀಲನೆ ಮಾಡಿ ಹೆಚ್ಚು ಉತ್ಪತ್ತಿ ಬರುವ ಹಾಗೆ ಮಾಡಬೇಕೆಂದು ಸರ್ಕಾರದ ಮನಸ್ಸಿನಲ್ಲಿದೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

Sri AZEEZ SAIT (Minister for Labour).—Since the Motor Vehicles Tax is directly concerned with me, I would like to inform the House that at this moment we are not in a position to commit anything. The matter has to be examined.

Sri KONANDUR LINGAPPA.—The Minister cannot intervene in the debate at this state. ಅವರು ಪರಿಶೀಲಿಸುತ್ತೇವೆಂದು ಆಗಲೇ ಹೇಳಿದ್ದಾರೆ.

Sri AZEEZ SAIT.—I have given this information for the benefit of the Hon. Minister for Municipal Administration.

ಶ್ರೀ ಬಿ. ಬಸವಲಿಂಗಪ್ಪ.—ನಾನು ಪರಿಶೀಲಿಸುತ್ತೇನೆ ಎಂದು ಹೇಳಿದೆ. ಅಂದರೆ ಕೊಡುತ್ತೇನೆ ಎಂದು ಅರ್ಥವಲ್ಲ.

35 ಹಳ್ಳಿಗಳನ್ನು ಕಾರ್ಪೋರೇಷನ್ನಿಗೆ ಸೇರಿಸಿಕೊಂಡಿದ್ದಾರೆ. ಅಲ್ಲಿರತಕ್ಕ ಜನಗಳಿಗೆ ನೀರಿನ ಸೌಕರ್ಯ, ರಸ್ತೆಯ ಸೌಕರ್ಯ ಇತ್ಯಾದಿ ನಾಗರೀಕ ಸೌಕರ್ಯಗಳನ್ನು ಸರಿಯಾಗಿ ಒದಗಿಸಿ ಕೊಟ್ಟಿಲ್ಲ ಎಂದು ಹೇಳಿ ಅವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಈಗ ಅವರ ಅವಗಾಹನೆಗೆ ತರುವುದಕ್ಕೆ ಇಚ್ಛೆಪಡುತ್ತೇನೆ, ನಾವು ಈ ವರ್ಷ ಆ ಹಳ್ಳಿಗಳಿಗೆ ನಾಗರೀಕ ಸೌಕರ್ಯಗಳನ್ನು

ಒದಗಿಸಿಕೊಡುವುದಕ್ಕಾಗಿ ಬಡ್ಜೆಟ್ಟಿನಲ್ಲಿ 15 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಅವುಗಳಿಗೆ ಸಂಬಂಧಪಟ್ಟ ಎಲ್ಲಾ ಅಂದಾಜುಗಳನ್ನೂ ಮಾಡಿದ್ದೇವೆ. ಆ 35 ಹಳ್ಳಿಗಳಿಗೆ ಎಲ್ಲಾ ನಾಗರೀಕ ಸೌಲಭ್ಯಗಳನ್ನೂ ಒದಗಿಸಲು 84 ಲಕ್ಷ ರೂಪಾಯಿಗಳ ಒಂದು ಅಂದಾಜನ್ನು ಮಾಡಿದ್ದೇವೆ. ಒಂದು ಫೇಜ್ಡ್ ಪ್ರೋಗ್ರಾಮ್ ಹಾಕಿಕೊಂಡು ಅದರ ಪ್ರಕಾರ ಆ ಕೆಲಸಗಳನ್ನು ಮಾಡಿ ಆದಷ್ಟು ಜಾಗ್ರತೆ ಆ ಕೆಲಸಗಳನ್ನು ಮುಗಿಸಬೇಕೆಂದಿದ್ದೇವೆ. ಮಾನ್ಯ ಸದಸ್ಯರು ಇದನ್ನು ಕೇಳಿ ಸಂತೋಷ ಪಡುತ್ತಾರೆ ಎಂದು ನಾನು ನಿರೀಕ್ಷಣೆ ಮಾಡುತ್ತೇನೆ.

ವಿಜಿಲೆನ್ಸ್ ಕಮಿಷನಿನ ಬಗ್ಗೆ ಕೆಲವು ಮಾನ್ಯ ಸದಸ್ಯರು ಟೀಕೆ ಮಾಡಿದ್ದಾರೆ. ಕೆಲವು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದಾರೆ, ಕೆಲವು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿದ್ದಾರೆ. ಇದರಲ್ಲಿ 18 ಜನ ಅಧಿಕಾರಿಗಳನ್ನು ಮಾತ್ರ ಸಸ್ಪೆನ್‌ಷನ್‌ನಲ್ಲಿಟ್ಟಿದ್ದಾರೆ, ಇನ್ನು ಬೇರೆಯವರ ಮೇಲೆ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿದರು. ಮಾನ್ಯ ಸದಸ್ಯರಿಗೆ ನಾನು ಹೇಳುತ್ತೇನೆ, ಯಾರು ಯಾರು ತಪ್ಪಿತಸ್ಥರು ಇದ್ದಾರೆ ಅವರು ಯಾವ ಡಿಪಾರ್ಟ್‌ಮೆಂಟಿಗೆ ಸೇರಿರಲಿ, ಅವರು ಜ್ಯೂನಿಯರ್ ಇಂಜಿನಿಯರ್ ಆಗಿರಲಿ, ಅಸಿಸ್ಟೆಂಟ್ ಇಂಜಿನಿಯರ್ ಆಗಿರಲಿ, ಅಥವಾ ಯಾವ ಅಧಿಕಾರಿಯಾಗಿರಲಿ ಅವರು ವಿಜಿಲೆನ್ಸ್ ಕಮಿಷನ್ನಿನ ಶಿಫಾರಸ್ಸಿಗೆ ಒಳಪಟ್ಟಿದ್ದರೆ ಅವರ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳುತ್ತೇವೆಂದು ನಾನು ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ಆದ್ದರಿಂದ 18 ಜನ ಅಧಿಕಾರಿಗಳ ಮೇಲೆ ಮಾತ್ರ ಕ್ರಮತೆಗೆದುಕೊಂಡಿದ್ದಾರೆ ಬಾಕಿಯವರ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಹೇಳಿದರು. ಯಾರು ಯಾರು ತಪ್ಪಿತಸ್ಥರಾಗಿದ್ದಾರೆಯೋ ಅವರೆಲ್ಲರನ್ನೂ ಶೀಘ್ರದಲ್ಲಿಯೇ ಹೊರಪಡಿಸುತ್ತೇವೆ. ಯಾರು ಯಾರು ಕಾನೂನನ್ನು ಧೂಳಿಪಟ ಮಾಡಿ ಈ ಒಂದು ಸಂಸ್ಥೆಗೆ ಕಾರ್ಪೋರೇಷನ್ನಿಗೆ ಲುಕ್ಸಾನು ಮಾಡಿದ್ದಾರೆಯೋ ಅಂಥವರ ಮೇಲೆ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳತಕ್ಕಂಥಾದ್ದು ಸೂಕ್ತ ಎನಿಸುತ್ತದೆ. ಬಹಳ ದಿವಸಗಳಿಂದ ಅನೇಕರು ಈ ದೇಶದಲ್ಲಿ ಲಂಚ ಹೋಗಬೇಕು ಎಂದು ಹೇಳುತ್ತಿದ್ದಾರೆ. ಯಾವರೂಪದಲ್ಲಿ ಅದನ್ನು ಕಿತ್ತುಹಾಕಿದರೂ ಇನ್ನೊಂದು ರೂಪದಲ್ಲಿ ಅದು ಬರುತ್ತದೆ. ಲಂಚ ಕೊಡತಕ್ಕವರು ಅಧಿಕಾರಿಗಳಿಗೆ ಮನೆಗೆ ಹೋಗಿ ಲಂಚವನ್ನು ಕೊಡುತ್ತಾರೆ. ಅಥವಾ ಇನ್ನೊಬ್ಬರ ಮುಖಾಂತರ ಸಂಬಂಧಪಟ್ಟ ಅಧಿಕಾರಿಗಳಿಗೆ ಲಂಚವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಹೀಗೆ ನಾನಾರೂಪದಲ್ಲಿ ಲಂಚಗುಳಿತನ ನಡೆಯುತ್ತಿದೆ. ಅಧಿಕಾರಿಗಳು ವಿಶ್ವ ರೂಪದಲ್ಲಿ ಲಂಚವನ್ನು ತೆಗೆದುಕೊಳ್ಳುತ್ತಿದ್ದಾರೆ. ಅಂಥವರ ಮೇಲೆ ಉಗ್ರವಾದ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಈಗ ನಾವು ಯಾವ ಅಧಿಕಾರಿಗಳನ್ನು ಸಸ್ಪೆನ್‌ಷನ್‌ನಲ್ಲಿ ಇಟ್ಟಿದ್ದೇವೆಯೋ ಅವರು ತಪ್ಪಿತಸ್ಥರಲ್ಲದಿದ್ದರೆ, ಅವರು ತಪ್ಪಿತಸ್ಥರಲ್ಲ ಎಂದು ರುಜುವಾತು ಆದರೆ ಅವರಮೇಲೆ ಇರತಕ್ಕ ಸಸ್ಪೆನ್‌ಷನ್ ಆಜ್ಞೆಯನ್ನು ರದ್ದುಗೊಳಿಸಿ, ಆ ಅಧಿಕಾರಿಗಳನ್ನು ಗೌರವದಿಂದ ಕಾಣತಕ್ಕಂಥಾ ವ್ಯವಸ್ಥೆ ಮಾಡುತ್ತೇವೆ. ಪ್ರಾಮಾಣಿಕರಾಗಿ ಕೆಲಸಮಾಡತಕ್ಕಂಥ ಅಧಿಕಾರಿಗಳಿಗೆ ಪ್ರಮೋಷನ್ ಕೊಡೋಣ,. ಸ್ವೇಚ್ಛಾವೃತ್ತಿಯಿಂದ ಕೆಲಸ ಮಾಡತಕ್ಕ ಅಧಿಕಾರಿಗಳಮೇಲೆ ಉಗ್ರವಾದ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಹಿಂಜರಿಯುವುದಿಲ್ಲ. ಅಂಥಾ ವಿಷಯಗಳು ನಮ್ಮ ಗಮನಕ್ಕೆ ಬಾರದೇ ಹೋದರೆ ಆ ಬಗ್ಗೆ ಕ್ಷಮಿಸಬೇಕು, ಆ ಬಗ್ಗೆ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಹೇಳಬೇಕಾಗುತ್ತದೆ. ನಾನು ತಮಗೆ ಮೊದಲೇ ತಿಳಿಸಿದ್ದೇನೆ ಕಾರ್ಪೋರೇಷನ್ನಿನ ಅಧಿಕಾರವನ್ನು, ಆಡಳಿತವನ್ನು ಎಲ್ಲವನ್ನೂ ಸರ್ಕಾರ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದೆ ಎಂದು. ಆದ್ದರಿಂದ ಈ ವಿಚಾರದಲ್ಲಿ ಮಾನ್ಯ ಸದಸ್ಯರು ಸಂತೋಷಪಟ್ಟರೆ ಸಾಕು ಎಂದು ಕಾಣುತ್ತದೆ. ಆಮೇಲೆ ನ್ಯಾಷನಲ್ ಫೇರ್ ವಿಷಯವನ್ನು ಹೇಳಿದ್ದಾರೆ. ಈ ಸಂಬಂಧವಾಗಿ ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಹೇಳಿದ್ದಾರೆ. ಆ ಭೂಮಿ ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯವರಿಗೆ ಸೇರಿದ್ದು. ಆ ಬಗ್ಗೆ ಆ ಇಲಾಖೆಯವರು ಏನೇನು ಕ್ರಮ ತೆಗೆದುಕೊಂಡಿದ್ದಾರೆಯೋ ಗೊತ್ತಿಲ್ಲ. ಈ ಸಂದರ್ಭದಲ್ಲಿ ನಾನು ಒಂದು ವಿಚಾರವನ್ನು ಹೇಳುತ್ತೇನೆ. ಯಾರೇ ಆಗಿರಲಿ, ಅವರು ಯಾವುದೇ ಪಾರ್ಟಿಗೆ ಸೇರಿರಲಿ ಪುರಸಭೆಯ ಕಾನೂನು ಮುರಿದು ಸ್ವೇಚ್ಛೆಯಾಗಿ ವರ್ತಿಸಿದರೆ ಅವರ ಮೇಲೆ ಕ್ರಮತೆಗೆದುಕೊಳ್ಳುವುದು ಸರ್ಕಾರದ ಕರ್ತವ್ಯ.

ಶ್ರೀ ವಾಟಾಳ್ ನಾಗರಾಜ್.—ಎಂ. ಎಸ್. ಆರ್. ಟಿ. ಸಿ. ಯವರು ಅಲ್ಲಿ ನ್ಯಾಷನಲ್ ಫೇರ್ ನಡೆಸಿದವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಂಡಂತೆ ಕಾಣುವುದಿಲ್ಲ.

Sri AZEEZ SAIT.—It is most undesirable on the part of the Hon. Members to mention that the Government is not able to take action in the Subhash Nagar Affair. The Hon. Minister for Municipal Administration will kindly excuse me for my interference in the middle.

(SRI AZEEZ SAIT)

When it was brought to my notice that Sri Dayananda Sagar was continuing the National Fair in Subash Nagar, I took action and trying remove him. A decision is already taken in the matter. In the matter of arrears of rent he is due to Government, action is already taken. There is no question of by-passing anybody. Every pie will be collected.

Sri M. S. KRISHNAN.—It has not been collected. As far as my knowledge goes he is still in possession of the land.

Sri AZEEZ SAIT.—The fact was that he was continuing in possesion of that land when it was brought to my notice. He was still continuing even after the expiry of the lease period. I took action and took the possesion of the land. Whatever the money which was in deposit has been adjusted. Whatever that remains in arrears will be recovered.

ಶ್ರೀ ಬಿ. ಬಸವಲಿಂಗಪ್ಪ.—ಯಾರು ಕಾನೂನನ್ನು ಉಲ್ಲಂಘನೆ ಮಾಡುತ್ತಾರೆಯೋ ಅಂಥವರ ಮೇಲೆ ಸರ್ಕಾರ ಏನು ಕ್ರಮತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಮುನಿಸಿ ಪಾಲಿಟಿ ವಿಚಾರದಲ್ಲಿ ಕೆಲವು ಮಾನ್ಯ ಸದಸ್ಯರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಮುನಿಸಿ ಪಾಲಿಟಿ ಯಲ್ಲಿ ಏನು ಕಾನೂನು ಇದೆ ಅದಕ್ಕನುಸಾರವಾಗಿ ವ್ಯವಸ್ಥಿತ ರೀತಿಯಲ್ಲಿ ಕೆಲಸ ಮಾಡು ತ್ತಿಲ್ಲ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ನಾವು ಶೀಘ್ರದಲ್ಲಿಯೇ ಪ್ರಜಾಪ್ರಭುತ್ವವನ್ನು ಪ್ರತಿಬಿಂಬಿಸುವ ರೀತಿಯಲ್ಲಿ ಪೌರಸಭೆಗಳನ್ನು ನಡೆಸುವುದಕ್ಕೆ ಸಾಧ್ಯವಾಗುವಂತೆ ಪುರಸಭೆಯ ಶಾಸನಕ್ಕೆ ತಿದ್ದುಪಡಿಯನ್ನು ತರಬೇಕೆಂದಿದ್ದೇವೆ. ಆ ಬಗ್ಗೆ ಎಲ್ಲೆಲ್ಲಿ ಏನೇನು ತಿದ್ದುಪಡಿಗಳನ್ನು ತರಬೇಕೋ ಅದನ್ನು ತಂದು ಸೂಕ್ತ ಕ್ರಮಕೈಗೊಳ್ಳುತ್ತೇವೆ. ಮುನಿಸಿಪಲ್ ಏರಿಯಾಗಳನ್ನು ಯಾವ ಯಾವುದನ್ನು ಅಭಿವೃದ್ಧಿ ಮಾಡಬೇಕು, ಎಲ್ಲೆಲ್ಲಿ ಸೀವರೇಜ್ ಸಿಸ್ಟಂ ಆಗಬೇಕು ಎಲ್ಲೆಲ್ಲಿ ನೀರಿನ ಸೌಕರ್ಯ ಒದಗಿಸಿಲ್ಲ ಯಾವ ಯಾವ ಬಡಾವಣೆಗಳನ್ನು ನಿರ್ಮಾಣ ಮಾಡಿ ಅವುಗಳನ್ನು ಅಭಿವೃದ್ಧಿಮಾಬೇಕು ಇಂಥವುಗಳೆಲ್ಲವನ್ನು ಮಾಡುವ ದೃಷ್ಟಿಯಿಂದ ಮೈಸೂರು ದೇಶದಲ್ಲಿ ಒಂದು ಅರ್ಬನ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಎಂದು ಸ್ಥಾಪನೆ ಮಾಡಿದ್ದೇವೆ. ಅದನ್ನು ಸ್ಥಾಪನೆ ಮಾಡಿದಮೇಲೆ ಅದಕ್ಕೆ ಸರ್ಕಾರದವರು ಒಂದು ಲಕ್ಷ ರೂಪಾಯಿ ಷೇರ್ ಕ್ಯಾಪಿಟಲ್ ಹಾಕಿದ್ದಾರೆ. ಆದರೆ ಅದಕ್ಕೆ ಬೇರೆ ಯಾವ ಮುನಿಸಿ ಪಾಲಿಟಿಗಳೂ ಅಷ್ಟು ಆಸಕ್ತಿಯನ್ನು ವಹಿಸಿ ಷೇರ್‌ದಾರರು ಆಗಲಿಲ್ಲ. ಆದ್ದರಿಂದ ಇವೊತ್ತಿನ ವರೆಗೂ ಈ ಒಂದು ಅರ್ಬನ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಯಾವ ಅಭಿವೃದ್ಧಿ ಕಾರ್ಯಗಳನ್ನೂ ತೆಗೆದುಕೊಳ್ಳುವುದಕ್ಕೆ ಆಗಿಲ್ಲ.

ಇನ್ನೊಂದು ಏನೆಂದರೆ ಎಲ್. ಐ. ಸಿ. ಯವರು ಸಹ ಇದು ಸ್ಟ್ಯಾಟ್ಯುಟರಿ ಸಂಸ್ಥೆಯಲ್ಲವೆಂಬ ಭಾವನೆಯಿಂದ ಅವರಿಗೆ ಸಹಾಯ ಕೊಡುವುದಕ್ಕೆ ನಿರಾಕರಿಸಿದ್ದಾರೆ, ಇನ್ನು ಸರ್ಕಾರದವರು ಒಂದು ಅರ್ಬನ್ ಡೆವಲಪ್‌ಮೆಂಟ್ ಬೋರ್ಡ್ ಮಾಡಬೇಕೆಂಬುದನ್ನು ವಿಚಾರ ಮಾಡುತ್ತಿದೆ. ಅದರ ಬಗ್ಗೆ ಒಂದು ಬಿಲ್ಲನ್ನು ಸಹ ತಯಾರು ಮಾಡಿ ತಮ್ಮ ಮುಂದೆ ಆದಷ್ಟು ಬೇಗನೆ ಇಡುತ್ತೇವೆ. ಹೀಗೆ ಮಾಡುವಂತಹ ಅರ್ಬನ್ ಬೋರ್ಡಿಗೂ ಸ್ಲಮ್ ಕ್ಲಿಯರೆನ್ಸ್ ಬೋರ್ಡಿಗೂ ಬಹಳ ವ್ಯತ್ಯಾಸವಿದೆ. ಇದೇ ರೀತಿ ಇಂಡಿಯಾ ಸರ್ಕಾರದವರಲ್ಲಿ ಒಂದು ಹೌಸಿಂಗ್ ಅರ್ಬನ್ ಡೆವೆಲಪ್‌ಮೆಂಟ್ ಸಂಸ್ಥೆ ಇದೆ. ಅಲ್ಲಿಂದ ಕೂಡ ಯಾರಾದರೂ ಟೌನ್ ಡೆವಲಪ್ ಮಾಡುವುದಕ್ಕೆ, ಬಡಾವಣೆಗಳನ್ನು ಮಾಡುವುದಕ್ಕೆ ಸ್ಕೀಮು ತಯಾರು ಮಾಡಿದರೆ, ಅದಕ್ಕೆ ಸಾಲವನ್ನು ಕೊಡುವ ವ್ಯವಸ್ಥೆ ಇದೆ. ಆದರೆ ಯಾರೂ ಹೆಚ್ಚಾಗಿ ಅಲ್ಲಿಂದ ಸಾಲ ತೆಗೆದುಕೊಂಡಿಲ್ಲ. ಆದ್ದರಿಂದ ನಾವು ಅರ್ಬನ್ ಡೆವಲಪ್‌ಮೆಂಟ್ ಬೋರ್ಡನ್ನು ಅತೀ ಶೀಘ್ರವಾಗಿ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಮುಖ್ಯರನೆಯದಾಗಿ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡು ವಿಷಯ, ಮೊನ್ನೆ ತಾವೆಲ್ಲ ಪತ್ರಿಕೆಯಲ್ಲಿ ಒಂದು ವಿಚಾರವನ್ನು ಓದಿರಬಹುದು. ಡೆಲ್ಲಿಯಲ್ಲಿ ಮೊನ್ನೆ ಹೌಸಿಂಗ್ ಮಂತ್ರಿಗಳ ಕಾನ್‌ಫರೆನ್ಸ್ ಆಯಿತು. ಅಲ್ಲಿ ಸೋಷಿಯಲೈಸೇಷನ್ ಆಫ್ ಅರ್ಬನ್ ಪ್ರಾಪರ್ಟಿ ಮಾಡಲೇಬೇಕೆಂಬ ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಅದನ್ನು ಒಪ್ಪಿಕೊಂಡು ಇಲ್ಲಿಯೂ ಸೋಷಿಯಲೈಸೇಷನ್ ಆಫ್ ಅರ್ಬನ್ ಪ್ರಾಪರ್ಟೀಸ್ ಬಗ್ಗೆ ಒಂದು ಕಾನೂನು ಏಕೆ ತರಬಾರದೆಂದು ಯೋಚನೆ

ಮಾಡುತ್ತಿದ್ದೇವೆ. ಇನ್ನು ಸೈಟ್‌ಗಳ ವಿತರಣೆಯ ವಿಚಾರದಲ್ಲಿ ನಿಯಮಗಳನ್ನು ಬದಲಾವಣೆ ಮಾಡಬೇಕೆನ್ನುವ ವಿಚಾರ ಬಹಳ ದಿವಸಗಳಿಂದ ಸರ್ಕಾರದ ಗಮನದಲ್ಲಿತ್ತು, ಎರಡು ಮೂರು ದಿವಸಗಳಲ್ಲಿ ಅದನ್ನು ಹೊರಗೆಡಹುತ್ತೇವೆ. ಆ ನಿಯಮಗಳನ್ನು ಮಾಡುವಾಗ ಎಲ್ಲರಿಗೂ ಒಂದೇ ರೀತಿಯಾದ ಬೆಲೆ ಇಟ್ಟರೆ ಬಡವರಿಗೆ ಸಿಗುವುದಿಲ್ಲ; ಮತ್ತು ಪ್ಯಾರೆಸ್ ಆರ್ಚರ್ಡ್‌ನಂತಹ ಸ್ಥಳಗಳಲ್ಲಿ ಸೈಟ್ ಸಿಗುವುದಿಲ್ಲವೆಂದು ಕೆಲವರು ಹೇಳಿದರು. ಅದಕ್ಕೋಸ್ಕರ ನಾನು ಆಗಲೇ ಹೇಳಿದಂತೆ ಒಂದು ನೀಡ್ ಬೇಸ್‌ಡ್ ಪ್ರಿಯಾರಿಟಿ ಮೇಲೆ ಯಾರು ಬಡವರಿದ್ದಾರೆ ಮತ್ತು ಯಾರು 200 ರೂಪಾಯಿ ಗಿಂತ ಕಡಿಮೆ ಆದಾಯವುಳ್ಳವರಾಗಿರುತ್ತಾರೆ, ಅಂಥವರಿಗೆ ರಿಯಾಯಿತಿಯಲ್ಲಿ ಸೈಟುಗಳನ್ನು ಕೊಡಬೇಕೆಂಬ ನಿಯಮಗಳನ್ನು ಮಾಡುತ್ತಿದ್ದೇವೆ. ಇನ್ನು ರೆವೆನ್ಯೂ ಸೈಟುಗಳ ಬಗ್ಗೆ ಮಾನ್ಯ ಶ್ರೀ ಕೃಷ್ಣನ್‌ರವರು, ನಾಗಣ್ಣನವರು, ಶಾಮಣ್ಣನವರು, ಹಮೀದ್ ಶಾರವರು—ಮುಂತಾದವರು ಸರ್ಕಾರಕ್ಕೆ ಒಂದು ನಿವೇದನೆಯನ್ನು ಮಾಡಿದರು. ಯಾರ್‍ಯಾರು ನ್ಯಾಯಬದ್ಧರಾಗಿರತಕ್ಕಂಥವರು, ಮತ್ತು ಸೈಟ್ ಇಲ್ಲದಿರತಕ್ಕವರು ಇದ್ದಾರೆ, ಅಂಥ ಜನರು ಕೇಳಿದಾಗ, ಅವರಿಗೆ ಸಹಾನುಭೂತಿ ಯನ್ನು ತೋರಿಸಿ ಅನುಕೂಲ ಮಾಡಿಕೊಡಬೇಕೆಂದು ಹೇಳಿದರು. ಸರ್ಕಾರದವರು ಇದನ್ನು ಪರಿಶೀಲನೆ ಮಾಡುತ್ತಿದ್ದಾರೆ; ಮತ್ತು ಅದರ ಬಗ್ಗೆ ಒಂದು ತೀರ್ಮಾನವನ್ನು ಬೇಗನೇ ತೆಗೆದು ಕೊಳ್ಳುತ್ತಾರೆಂದು ಹೇಳುತ್ತೇನೆ.

ಇನ್ನು ಯಾರ್‍ಯಾರು ಲ್ಯಾಂಡ್‌ಲೆಸ್ ಜನರಿದ್ದಾರೆ, ಅವರಿಗೆ ಸೈಟ್ ಕೊಡಬೇಕೆಂದು ಒಂದು ನೀತಿಯನ್ನು ಇಟ್ಟುಕೊಂಡಿದೆ. ಆದ್ದರಿಂದ ಒಂದು ಲಕ್ಷಕ್ಕಿಂತಲೂ ಹೆಚ್ಚು ಸೈಟುಗಳನ್ನು 15ನೇ ಆಗಸ್ಟ್ 72 ರೊಳಗೆ ಹಂಚಿ ಸ್ವಾಧೀನ ಪತ್ರಗಳನ್ನು ಕೊಡುತ್ತೇವೆಂಬ ಮಾತನ್ನು ಇಲ್ಲಿ ಹೇಳುತ್ತೇನೆ. ಅದರದ್ದು ಒಂದು ಸ್ಟೇಟ್‌ಮೆಂಟ್ ಇಲ್ಲಿ ಇದೆ. ನಮಗೆ ಒಂದು ಲಕ್ಷದ 11 ಸಾವಿರದ 205 ಸೈಟುಗಳು ಈಗ ದೊರೆಯುತ್ತವೆ. ಇನ್ನೂ 30—40 ಸಾವಿರ 15ನೇ ತಾರೀಖಿನೊಳಗೆ ಆಗಬಹುದು ಎಂಬ ನಿರೀಕ್ಷಣೆ ಇದೆ. ಕೆಲವರು ಬರೇ ಹೇಳಿಕೆ ಕೊಟ್ಟು ಸುಮ್ಮನಿರಬಾರದು ; ಕಾರ್ಯದಲ್ಲಿಯೂ ಮಾಡಿ ತೋರಿಸಬೇಕೆಂದು ಹೇಳುತ್ತಿದ್ದಾರೆ. ಅದಕ್ಕೋಸ್ಕರ ಇದನ್ನು ಹೇಳುತ್ತಿದ್ದೇನೆ. ನಮ್ಮ ಪಾರ್ಟಿ ಪ್ರಣಾಳಿಕೆಯಲ್ಲಿ ಏನೊಂದು ವಾಗ್ದಾನವನ್ನು ದೇಶಕ್ಕೆ ಕೊಟ್ಟಿದ್ದೇವೆ, ಅದನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದ್ದೇವೆ ಇದರಿಂದ ಲ್ಯಾಂಡ್‌ಲೆಸ್ ಜನರು, ಲೇಬರರ್ಸ್ ಮತ್ತಿತರ ಬಡ ಜನರು ನಿವೇಶನಗಳನ್ನು ಪಡೆಯುತ್ತಾರೆ. ಅಷ್ಟೇ ಅಲ್ಲದೆ ಮುಂದಿನ ತಿಂಗಳು, ಅಂದರೆ ಸ್ವಾತಂತ್ರ್ಯೋತ್ಸವದ ಸಿಲ್‌ವರ್ ಜುಬಿಲಿ ಸಮಯದಲ್ಲಿ ಸುಮಾರು 10 ಸಾವಿರ ಮನೆಗಳನ್ನು ಬಡವರಿಗೆ ಕಟ್ಟಿಸಿ ಕೊಡಬೇಕೆಂಬ ಯೋಜನೆಯನ್ನು ಇಟ್ಟುಕೊಂಡಿದ್ದೇವೆ. ಶೀಘ್ರದಲ್ಲೇ ಅದರ ಬಗ್ಗೆ ಸರ್ಕಾರದವರು ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತಾರೆಂದು ಹೇಳುತ್ತೇನೆ.

ಇನ್ನು ವಾಟರ್ ಸಪ್ಲೈ ಅಂಡ್ ಸಿವರೇಜ್ ಬೋರ್ಡ್ ಬಗ್ಗೆ ಬಹಳ ತೀವ್ರವಾದ ಚರ್ಚೆ ಯಾಗಿದೆ. ಅದಲ್ಲದೆ ಅಲ್ಲಿರತಕ್ಕ ಛೇರ್‌ಮನ್ ಬಗ್ಗೆಯೂ ಬಹಳ ತೀವ್ರವಾದ ಟೀಕೆಗಳನ್ನು ಕೆಲವು ಸದಸ್ಯರು ಮಾಡಿದ್ದಾರೆ. ಎಷ್ಟೋ ದಿವಸಗಳ ಹಿಂದೆ ಆಗಿದ್ದಂತಹ ವ್ಯವಹಾರಗಳ ಬಗ್ಗೆ ನನಗೆ ಕೂಲಂಕಷವಾಗಿ ಪರಿಶೀಲನೆ ಮಾಡುವುದಕ್ಕೆ ಆಗಲಿಲ್ಲ. ಅಲ್ಲಿ ಏನಾದರೂ ಅಕ್ರಮವಾಗಿದ್ದರೆ ರೂಲ್ಸ್ ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಹಿಂಜರಿಯುವುದಿಲ್ಲ. ಎರಡನೆಯದಾಗಿ ಇಲ್ಲಿ ಆಗಿರ ತಕ್ಕಂತಹ ಏನು ಕೆಲಸ ಇದೆ, ಅದನ್ನು ಕೂಡ ನಾವು ವಿಚಾರ ಮಾಡಬೇಕಾಗುತ್ತದೆ. ಗುಲಗಂಜಿ ಯಲ್ಲಿ ಕೆಳಗೆ ಕಪ್ಪು ಚುಕ್ಕೆ ಇದೆ ಎಂಬುದನ್ನು ಮಾತ್ರ ನೋಡಿಕೊಂಡು ಅದರ ಇಡೀ ಭಾಗವೆಲ್ಲಾ ಕಪ್ಪು ಎಂದು ತಿಳಿಯುವುದು ಸರಿಯಲ್ಲ. ಅವರು ಒಳ್ಳೆಯ ಕಾರ್ಯಗಳನ್ನು ಸಹ ಮಾಡಿದ್ದಾರೆಯೇ ಎಂಬುದನ್ನು ಸಹ ನಾವು ನೋಡಬೇಕಾಗಿದೆ. ನಾನು ಹಿಂದೆ ವಿಜಲಂಗಪ್ಪನವರು ಹೇಳಿದ ಹಾಗೆ ಏನೂ ಹೇಳುತ್ತಾ ಇಲ್ಲ. ಆದ್ದರಿಂದ ಏನೊಂದು ಒಳ್ಳೆಯ ಕೆಲಸವನ್ನು ಅವರು ಮಾಡಿದ್ದಾರೆ ಅದನ್ನು ಸಹ ನಾವು ನೋಡಿಕೊಳ್ಳಬೇಕಾಗಿದೆ. ಮೊನ್ನೆ ಅಲ್ಲಿಯ ಕೆಲಸಗಳಿಗೆ ಎಲ್. ಐ. ಸಿ. ಯವರು 5 ಕೋಟಿ ಕೊಡುತ್ತೇವೆಂದು ವಾಗ್ದಾನ ಮಾಡಿದರು. ಇದರ ಬಗ್ಗೆ ನಾವಿಬ್ಬರೂ ಅಲ್ಲಿಗೆ ಹೋಗಿ ಮಾತನಾಡಿ ಬಂದಿದ್ದೇವೆ. ಆದ್ದರಿಂದ ನಾವು ಯಾರು ಒಳ್ಳೆಯ ಕೆಲಸ ಮಾಡುತ್ತಾರೆ, ಅವರ ಬೆನ್ನು ತಟ್ಟಬೇಕಾಗುತ್ತದೆ ಎಂದು ಮಾತ್ರ ಹೇಳುತ್ತೇನೆ. ಅವರನ್ನು ಎಷ್ಟು ವರ್ಷಗಳವರೆಗೆ ಛೇರ್‌ಮನ್ನ ರಾಗಿ ಇಟ್ಟುಕೊಳ್ಳುತ್ತೀರಿ ಎಂದು ಕೇಳಿದರು. ಅವರನ್ನು ಇಲ್ಲಿಯೇ ಇಟ್ಟುಕೊಳ್ಳಬೇಕೆಂದು ನಮ್ಮ ನಿರ್ಧಾರವಲ್ಲ. ಕೆಲಸ ಜಾಸ್ತಿ ಇದ್ದರೆ ಅವರನ್ನು ಇಂಜನಿಯರ್ ಇನ್ ಚೀಫ್ ಮಾಡಬೇಕೆಂಬ ವ್ಯವಸ್ಥೆ ಬಂದಾಗ ಮಾಡಬೇಕಾಗುತ್ತದೆ. ತಕ್ಷಣ ಇದಕ್ಕೆ ಯಾರನ್ನು ಛೇರ್‌ಮನ್‌ರಾಗಿ ಮಾಡ ಬೇಕೆಂಬುದನ್ನು ಯೋಚನೆ ಮಾಡುತ್ತಿದ್ದೇವೆ. ಅಡ್‌ಹಾಕ್ ಅರೇಂಜ್‌ಮೆಂಟ್ ಎಂದು ಅವರನ್ನೆ ಕಂಟಿನ್ಯೂ ಮಾಡಿದ್ದೇವೆ. ತಾತ್ಕಾಲಿಕವಾಗಿ ಅವರನ್ನೇ ಚೀಫ್ ಇಂಜನಿಯರ್ ಆಗಿ ಇಟ್ಟಿದ್ದೇವೆ.

(ಶ್ರೀ ಬಿ. ಬಸವಲಿಂಗಪ್ಪ)

2-30 P.M.

ಶ್ರೀ ಎಂ. ಎಸ್. ಕೃಷ್ಣನ್.—ತಾತ್ಕಾಲಿಕವಾಗಿ ಅಂದರೆ ಎಷ್ಟು ವರ್ಷಗಳವರೆಗೆ ಎಂದು ಆಗುತ್ತದೆ? ಏಕೆಂದರೆ ನೀವು ಬಹಳ ಡಿಸಿಪ್ಲಿನ್ಡ್.

ಶ್ರೀ ಬಿ. ಬಸವಲಿಂಗಪ್ಪ.—ಅವರ ಸೇವೆ ಯಾವತ್ತು ಅವಶ್ಯಕತೆ ಇಲ್ಲವೆಂದು ಗೊತ್ತಾಗುತ್ತದೋ ಆಗ ಅವರನ್ನು ಬದಲಾಯಿಸಬಹುದು. ಅದುವರೆಗೆ ಇದನ್ನೇ ಒಪ್ಪಬೇಕು.

ಇನ್ನು ಅಲ್ಲಿರತಕ್ಕ ಕೆಲಸಗಾರರ ಬಗ್ಗೆ ಶ್ರೀಮಾನ್ ಕೃಷ್ಣನ್ ಅವರು ಒಳ್ಳೆಯ ಆಸಕ್ತಿ ವಹಿಸಿ ಅವರು ಕೆಲವು ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಅವು ತೀರ್ಮಾನವಾಗಲು ಎಷ್ಟು ವರ್ಷಗಳು ತೆಗೆದುಕೊಳ್ಳುತ್ತವೆಂಬುದಕ್ಕೆ ನನ್ನ ಒಂದು ಅಭಿಪ್ರಾಯಕ್ಕೂ, ಶ್ರೀಮಾನ್ ಕೃಷ್ಣನ್ ಅವರ ಅಭಿಪ್ರಾಯಕ್ಕೂ ಏನೂ ವ್ಯತ್ಯಾಸವಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಅವರನ್ನು ಸುಮ್ಮನೆ ಟ್ರಾನ್ಸ್‌ಫರ್ ಮಾಡಬೇಕು, ಸಸ್‌ಪೆನ್‌ಷನ್ ಆಗಿರತಕ್ಕ ಅಧಿಕಾರಿಗಳನ್ನು ತೆಗೆಯಬೇಕು ಎಂದು ಹೇಳಿದರೆ, ಅದಕ್ಕೆ ಲೇಬರ್ ಮಂತ್ರಿಗಳು ಇದ್ದಾರೆ, ತಾವು ಇದ್ದೀರಿ, ಒಂದು ದಿವಸ ಅದಕ್ಕಾಗಿಯೇ ಚರ್ಚೆಮಾಡೋಣ.

ಶ್ರೀ ಬಿ. ಬಸವಲಿಂಗಪ್ಪ.—ಈ ಒಂದು ಬೋರ್ಡಿನಲ್ಲಿ ಯಾರೇ ಕ್ಲಾರ್ಕ್ ಆಗಲೀ ಪ್ಯೂನ್ಸ್ ಆಗಲೀ, ಇನ್ನೂ ಕೆಲವು ಹುದ್ದೆಗಳಲ್ಲಿ ಕೆಲಸಮಾಡುತ್ತಿದ್ದವರಾಗಲೀ ಇದ್ದರೂ ಅವರ ಒಂದು ಸರ್ವಿಸ್ ಕಂಡೀಷನ್ಸ್ ಏನಿವೆಯೋ ಅವನ್ನು ರಕ್ಷಣೆ ಮಾಡಬೇಕಾಗುತ್ತದೆ. ಅದಕ್ಕೆ ಹಿಂಜರಿಯುವುದಿಲ್ಲವೆಂದು ನಾನು ಭರವಸೆ ಕೊಡುತ್ತೇನೆ.

ಇನ್ನು ಸ್ಲಂ ವಿಚಾರದಲ್ಲಿ ಮಾನ್ಯ ಶ್ರೀ ದೇವೇಗೌಡರು ಒಂದು ಮಾತನ್ನು ಹೇಳಿದರು ಸ್ಯುಯರೇಜ್ ಬೋರ್ಡಿನ ವಿಷಯದಲ್ಲಿ ಮಾತನಾಡುತ್ತಾ ಯಾವುದೋ ಒಂದು ಟೆಂಡರಿನ ಬಗ್ಗೆ ಯಾರು ಕೆಲಸ ಸರಿಯಾಗಿ ಮಾಡುವುದಿಲ್ಲವೋ ಅಂತಹ ಕಂಟ್ರಾಕ್ಟರಿಗೆ ಆ ಟೆಂಡರ್ ಕೆಲಸ ಕೊಟ್ಟಿದ್ದಾರೆಂದು ಹೇಳಿದರು. ಅದನ್ನು ನಾನು ಪರಿಶೀಲನೆಮಾಡುತ್ತೇನೆ. ಮತ್ತೆ ಮಾನ್ಯ ಶ್ರೀ ಆರ್ಮುಗಂ ಅವರು ಹೇಳುತ್ತಾ ಅಲ್ಲಿ ಸಿಮೆಂಟ್ ಪ್ಲಾಸ್ಟರಿಂಗ್ ಕೆಲಸ ಸರಿಯಾಗಿಲ್ಲವೆಂದು ಹೇಳಿದರು. ಇದು ಆಧಾರವಲ್ಲದ ಮಾತು ಎಂದು ಹೇಳುತ್ತೇನೆ. ಹಿಂದಿನ ಚೀಫ್ ಇಂಜಿನಿಯರ್ ಬಗ್ಗೆ ಹಾಗೆಯೇ ಹೇಳಿದ್ದರು. ಅದಕ್ಕೆ ಉತ್ತರ ಕೊಟ್ಟಿದ್ದೇನೆ. ಇಂತಹ ಪ್ರಶ್ನೆಗಳಿಗೆ ಮೊದಲೇ ಉತ್ತರ ಕೊಟ್ಟಾದ ಮೇಲೆ ಅದೇ ಪ್ರಶ್ನೆಗೆ ಪುನಃ ಉತ್ತರ ಹೇಳುವುದು ಸರಿಯಲ್ಲ. ಮಾನ್ಯ ಸದಸ್ಯರನೇಕರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಅಲ್ಲಿನ ಕೆಲಸಕಾರ್ಯಗಳನ್ನು ತೋರಿಸಿದಮೇಲೆ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆಂದು ಹೇಳಿದರು. ಮಾನ್ಯ ಶ್ರೀ ಕೃಷ್ಣನ್ ಅವರ ಆದಿಯಾಗಿ ಎಲ್ಲರೂ ಅಲ್ಲಿ ಮಾಡಿದ ಕೆಲಸಕ್ಕೆ ಹೊಗಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಅದಕ್ಕೆ ನಾನು ಹೊಗಳಲೂ ಇಲ್ಲ, ತೆಗಳಲೂ ಇಲ್ಲ. ಅದು ಬಹಳ ಕಷ್ಟವಾದ ಕೆಲಸ.

ಅಧ್ಯಕ್ಷರು.—ನಿಮ್ಮ ಸಂತೋಷವನ್ನು ಯಾರು ವ್ಯಕ್ತಪಡಿಸಬೇಕಾಗುತ್ತದೆ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರಿಗೆ ನಾನು ಭರವಸೆ ಕೊಡುತ್ತೇನೆ. ಏನೇನು ಮಾನ್ಯ ಸದಸ್ಯರು ಇಲ್ಲಿ ಆಕಾಂಕ್ಷೆಗಳನ್ನು ವ್ಯಕ್ತಪಡಿಸಿದ್ದಾರೋ ಅವುಗಳಿಗೆ ಯಾವ ರೀತಿಯೂ ಚ್ಯುತಿ ಬಾರದ ಹಾಗೆ ನಾನು ನೋಡಿಕೊಳ್ಳುತ್ತೇನೆ.

ಇನ್ನು ಕೆಲವು ಸದಸ್ಯರು ಛೇರ್‌ಮನ್ ಅವರು ಅವರ ಇಷ್ಟಬಂದಹಾಗೆ ಹೇಳಿಕೆಗಳನ್ನು ಕೊಡುತ್ತಾರೆಂದು ಹೇಳಿದರು. ಬೋರ್ಡಿನ ಪರವಾಗಿ ಅವರು ಆ ರೀತಿ ಹೇಳುವುದಕ್ಕೆ ಅವಕಾಶ ಇರುವುದಿಲ್ಲ.

ಇನ್ನು 1973ನೇ ಡಿಸೆಂಬರ್‌ನೊಳಗೆ ಕಾವೇರಿಯಿಂದ ನೀರು ಕೊಡುವುದಕ್ಕಾಗುವುದಿಲ್ಲವೆಂದು ಶ್ರೀಮಾನ್ ಆರ್ಮುಗಂ ಅವರು ಹೇಳಿದರು. ನಾನು ಹೇಳುತ್ತೇನೆ, ಅದು ಆಗಿಯೇ ಆಗುತ್ತದೆಂದು. ಯಾರೋ ಅಧಿಕಾರಿಗಳು ಹೇಳಿದ ಒಂದು ವರದಿಯ ಆಧಾರ ಇಟ್ಟುಕೊಂಡು ಹೇಳಿದರೆ ಹೇಗೆ? ಹೇಗಾದರೂ ಮಾಡಿ ಮಾಡಿಕೊಡಬೇಕು. ಒಂದುವೇಳೆ ಈಗ ಮಾಡುವುದಕ್ಕೆ ಆಗದೇ ಹೋದರೆ ಏನು ಮಾಡುವುದು? ಡಿಸೆಂಬರ್ ಆಖೈರಿನೊಳಗೆ ಏನಾಗುತ್ತದೋ ನೋಡೋಣ.

ಈಗ ಬರುವ ತಿಂಗಳು ಇಂಡಿಪೆಂಡೆನ್ಸ್ ಸಿಲ್ವರ್ ಜೂಬಿಲಿ ಮಾಡುತ್ತೇವೆ. ಇದರ ಅಂಗವಾಗಿ ಕೊಳಚೆ ಪ್ರದೇಶಗಳನ್ನು ನಿರ್ಮೂಲ ಮಾಡುವ ಕಾರ್ಯಕ್ರಮವನ್ನು ಈ ತಿಂಗಳ ಅಂತ್ಯದೊಳಗೆ ಮಾಡುತ್ತೇವೆ. ಅದಕ್ಕಾಗಿ ಸೆಪರೇಟ್ ಬೋರ್ಡ್ ಒಂದನ್ನು ಮಾಡುತ್ತಿದ್ದೇವೆ.

ಇನ್ನು ಹೌಸಿಂಗ್ ಬೋರ್ಡ್ ವಿಚಾರದಲ್ಲಿ ಕೆಲವು ಮಾನ್ಯ ಸದಸ್ಯರು ಸಲಹೆಗಳನ್ನು ಕೊಟ್ಟಿದ್ದಾರೆ. ರೂರಲ್ ಹೌಸಿಂಗ್ ಸ್ಕೀಂ ಪ್ರಕಾರ ಇವೆಲ್ಲವನ್ನೂ ಸಮಗ್ರವಾಗಿ ಪರಿಶೀಲಿಸಿ ಯಾವ ರೀತಿಯಾಗಿ ಬಡ ಜನಗಳಿಗೆ ಮತ್ತು ಅವಶ್ಯಕತೆ ಇರುವ ಜನಗಳಿಗೆ ಅವರ ಸೇವೆ ಆಗಬೇಕೆಂಬ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಂಡು ಪತ್ರಿಕೆಗಳ ಮುಂಖಾಂತರ ಅಥವಾ ಈ ಸಭೆಯ ಮೂಲಕ ಹೇಳುವುದಕ್ಕೆ ಹಿಂಜರಿಯುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಇಂಡಸ್ಟ್ರಿಯಲ್ ವರ್ಕರ್ಸ್‌ಗೆ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿಗಳು ಬೇಕಾದಷ್ಟು ಇವೆ, ಅಲ್ಲಿ ತಡೆ ಅಜ್ಞೆ ಹಾಕಿದ್ದಾರೆ. ಅದಕ್ಕಾಗಿ ಲೇಔಟ್ ಮಾಡಿ.

ಶ್ರೀ ಬಿ. ಬಸವಲಿಂಗಪ್ಪ.—ಕೆಲವು ಕಡೆಗಳಲ್ಲಿ ಸಹಕಾರ ಸಂಸ್ಥೆಗಳಿವೆ. ಅವಕ್ಕೆ ತಡೆಯಾಜ್ಞೆ ಕೊಟ್ಟಿದ್ದಾರೆ. ನಿಮ್ಮ ಸೋಷಿಯಲಿಸ್ಟಿಕ್ ಪ್ಯಾಟರನ್ ಆಫ್ ಸೊಸೈಟಿಯ ತತ್ವದ ಪ್ರಕಾರ ಅರ್ಬನ್ ಪ್ರಾಪರ್ಟಿ ಬಗ್ಗೆ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಆ ವಿಷಯದಲ್ಲಿ ದಯಾಮಯಿಯಾಗಿರಬೇಕೆಂದು ಹೇಳಿದರೆ, ಅದಕ್ಕೆ ನಾನು ತಯಾರು ಇಲ್ಲ. ಯಾವ್ಯಾವ ಕೋಆಪರೇಟಿವ್ ಸೊಸೈಟಿಗಳು ಹಾಗೂ ಸಹಕಾರ ಸಂಸ್ಥೆಗಳು ಯಾವ ಒಂದು ನ್ಯೂನತೆ ಇಲ್ಲದೆ ಕೆಲಸಮಾಡುತ್ತಿವೆಯೋ ಅವರಿಗೆ ನಿಜವಾಗಿ ಉತ್ತೇಜನ ಕೊಡುತ್ತೇವೆ. ಈ ಟ್ರಸ್ಟ್ ಬೋರ್ಡ್ ಇಟ್ಟುಕೊಂಡು ಇನ್ನೂ ಸಹಕಾರ ಸಂಸ್ಥೆಗಳನ್ನು ಮಾಡಬೇಕೆಂದು ಹೇಳಿದರೆ ನನಗೆ ಚಿಂತೆ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಆ ರೀತಿಯಾಗಿ ತಡೆಯಾಜ್ಞೆ ಹಾಕಿರುವುದರಿಂದ ಕೆಲವು ಪಾರ್ಟಿಸ್ ಕಟ್ಟಿದ್ದಾರೆ. ಲೇಔಟ್ ಆಗಿದೆ. ತಡೆಯಾಜ್ಞೆ ತೆಗೆದುಕೊಂಡು ಅವರು ಕೆಲಸಗಳನ್ನು ಚೆನ್ನಾಗಿ ನಡೆಸಿದ್ದಾರೆ. ಅಂತಹವರಿಗೆ ತಡೆಯಾಜ್ಞೆ ಹಾಕಿದರೆ ಚೆನ್ನಾಗಿರುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಇಂತಿಂಥ ಸಂಸ್ಥೆಗಳ ಬಗ್ಗೆ ಪರಿಶೀಲನೆ ಮಾಡಿ ಎಂದು ಹೇಳಿದರೆ ಅವನ್ನು ಪರಿಶೀಲನೆಮಾಡುತ್ತೇನೆ. ಆದರೆ ಅನ್ನಿಬಸ್ಸಾಗಿ ಎಲ್ಲರಿಗೂ ಕೊಡಿ ಎಂದು ಹೇಳಿದರೆ ಆ ರೀತಿಯಾಗಿ ನಾನು ಕೊಡುವುದಕ್ಕೆ ತಯಾರಾಗಿಲ್ಲ. ನಮ್ಮ ಸರ್ಕಾರದ ಮನಸ್ಸಿಗೆ ನಿಜವಾಗಿ ಜನಗಳು ಸೇವೆ ಮಾಡುತ್ತಿದ್ದಾರೆಂದೂ, ಟ್ರಸ್ಟ್‌ಬೋರ್ಡ್ ನಿಯಮಾವಳಿಯ ಪ್ರಕಾರ ಕೆಲಸ ಮಾಡುತ್ತಿದ್ದಾರೆಂಬ ನಂಬಿಕೆ ಬಂದರೆ ಸಾಕು, ಅವರಿಗೆ ಹೆಚ್ಚಿಗೆ ಸಹಾಯ ಮಾಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಈಗ 72 ಸಂಸ್ಥೆಗಳಿಗೆ ತಡೆಯಾಜ್ಞೆ ಮಾಡಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಒಬ್ಬೊಬ್ಬರು ಎಷ್ಟೆಷ್ಟು ಸೊಸೈಟಿಗಳಿಗೆ ಮೆಂಬರ್ ಆಗಿದ್ದಾರೆ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಎಲ್ಲರೂ ಸಂತೃಪ್ತರಾಗಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಅವುಗಳ ಪೈಕಿ 36 ಆದರೂ ಅಧಿಕಾರಕ್ಕೆ ಬಂದು ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮೂಲಕ ಕುಡಿಯುವ ನೀರಿನ ಸರಬರಾಯಿ ಯೋಜನೆಯಾಗಲೀ ಟೌನ್ ಪ್ಲಾನಿಂಗ್ ಅಭಿವೃದ್ಧಿ ವಿಚಾರದಲ್ಲಿಯಾಗಲೀ ಸಮಗ್ರವಾದ ದೃಷ್ಟಿಯನ್ನು ಇಟ್ಟುಕೊಂಡು ತೀರ್ಮಾನ ತೆಗೆದುಕೊಳ್ಳುತ್ತಿದ್ದೇವೆಂದು ಮಾನ್ಯ ಸದಸ್ಯರ ಅವಗಾಹನೆಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮೇಯರ್ ಅವರು ಪಿಸ್ತೂಲ್ ಇಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ. ಅದನ್ನು ಪತಕ್ಕೆ ತೆಗೆದುಕೊಂಡಿದ್ದಾರೆ ? ಸಭೆ ನಡೆಸುವುದಕ್ಕೋ ?

ಶ್ರೀ ಬಿ. ಬಸವಲಿಂಗಪ್ಪ.—ಅದರ ಬಗ್ಗೆ ಕಾನೂನು ಪ್ರಕಾರ ರಿಕಾರ್ಡ್ ಇದೆ.

ಇನ್ನು ಶ್ರೀಮಾನ್ ದೇವೇಗೌಡರು ನನ್ನ ವಿಚಾರದಲ್ಲಿ ಒಂದು ಮಾತನ್ನು ಹೇಳಿದರು. ಏನೆಂದರೆ, ನನ್ನ ಮೇಲೆ ಒಂದು ಅಪವಾದ ಇದೆಯೆಂದು ಹೇಳಿದರು. ಅವರಿಗೆ ನನ್ನ ಮೇಲೆ ಅಪವಾದ ಮಾಡುವುದಕ್ಕೆ ಏನೂ ಅಭ್ಯಂತರವಿಲ್ಲ. ನಾನು ಎಲ್ಲಿಯವರೆಗೆ ಸಾರ್ವಜನಿಕ ಜೀವನದಲ್ಲಿ ಇರುತ್ತೇನೋ ಅಲ್ಲಿಯವರೆಗೆ ಸಾರ್ವಜನಿಕರ ಕೆಲಸವೇನಿದೆಯೋ ಅದರ ವಿಘ್ನಕ್ಕೆ ನಾನು ಒಳ ಪಡುವುದಿಲ್ಲ. ಇದುವರೆಗೂ ಯಾವುದೊಂದು ಅವ್ಯವಹಾರ ಮಾಡಲಿಲ್ಲ. ಯಾವೊಂದು ಕೆಲಸವನ್ನೂ ನನ್ನ ಮನಸ್ಸಿಗೆ ವಿರೋಧ ಹೋಗಿ ಇವತ್ತಿನವರೆಗೂ ಮಾಡಿಲ್ಲ. ನನ್ನ ಜೀವನವನ್ನು ಪವಿತ್ರವಾದ ಜೀವನವನ್ನಾಗಿ ನಡೆಸಿಕೊಂಡು ಹೋಗುವುದಕ್ಕೆ ನಿರ್ಧಾರ ಮಾಡಿದ್ದೇನೆ, ಯಾರ ಒಂದು ದಾಕ್ಷಿಣ್ಯಕ್ಕಾಗಿ ಇನ್ನೊಬ್ಬರಲ್ಲಿ ಕೈಯೊಡ್ಡಿ ಜೀವನ ಮಾಡಬೇಕೆಂದು ಇದುವರೆಗೆ ನಾನು ಕೆಲಸಮಾಡಿಲ್ಲ.

(ಶ್ರೀ ಬಿ. ಬಸವಲಿಂಗಪ್ಪ)

ನಾನು ಹೇಳಿದ್ದಕ್ಕೆ ನಮ್ಮ ಮುಖ್ಯಮಂತ್ರಿಗಳು ಕೆಲವು ಅಬ್‌ಜಕ್ಷನ್ಸ್ ಮಾಡಿ ಒಂದು ಆರ್ಡರ್ ಮಾಡಿ, ಮಾನ್ಯ ಶ್ರೀ ಬಸವಲಿಂಗಪ್ಪನವರ ಮೇಲೆ ಕೇಸ್ ಮಾಡಬೇಕೆಂದು ನಿರ್ಣಯ ಮಾಡಿದರೂ ನಾನು ಅಷ್ಟು ಕೀಳುಮಟ್ಟಕ್ಕೆ ಹೋಗಿ ಜೀವನ ಮಾಡುವುದಿಲ್ಲ. ಮುಂದೆಯೂ ಮಾಡುವುದಿಲ್ಲವೆಂದು ನಾನು ಮಾನ್ಯ ಶ್ರೀ ದೇವೇಗೌಡರಿಗೆ ಹೇಳುತ್ತೇನೆ.

ಅವರು ಹಾಗೆ ಹೇಳಿರತಕ್ಕದ್ದು ಒಂದು ಬಹಳ ಗುರುತರವಾದ ವಿಷಯದಲ್ಲಿ ಹೇಳಿದ್ದಾರೆ. ಅಲ್ಲಿ ಆ ಮೊಗದಂರವರನ್ನು ಚೀಫ್ ಇಂಜನಿಯರಾಗಿ ನೇಮಕ ಮಾಡಿದ್ದರ ಹಿನ್ನೆಲೆಯಲ್ಲಿ ಅವರು ಮಾತನಾಡಿದ್ದಾರೆ. ಅದಕ್ಕಾಗಿ ನಾನು ಇಷ್ಟೆಲ್ಲ ಹೇಳಬೇಕಾಯಿತು. ಆದರೆ ನಾನು ತಮಗೊಂದು ಇಷ್ಟು ಹೇಳುತ್ತೇನೆ. ನನ್ನನ್ನು ಯಾರಿಗೇ ಆಗಲಿ ಅಂಥ ಅಡ್ಡಹಾದಿಗೆ ಎಳೆಯುವುದಕ್ಕೆ ಸಾಧ್ಯವೇ ಇಲ್ಲ. ನಾನು ಅಂಥ ಎಳೆಸಿಕೊಳ್ಳತಕ್ಕ ಸ್ಥಿತಿಯಲ್ಲಿ ಹುಟ್ಟಿಯೂ ಇಲ್ಲ. ಆದರೆ ಯಾರು ಏನೇ ತಪ್ಪು ಮಾಡಿರಲಿ ಅದನ್ನು ಮರೆತು ಹರಿಜನರೇನಾದರೂ ಒಂದು ಸಣ್ಣ ತಪ್ಪನ್ನು ಮಾಡಿದ್ದರೂ ಅದನ್ನೆ ಒಂದು ದೊಡ್ಡ ಮಹಾ ಅಪರಾಧವನ್ನಾಗಿ ಹೇಳತಕದ್ದು ಸರಿಯಾದ್ದಲ್ಲ ಎಂದು ಹೇಳುತ್ತೇನೆ. ಬಸವಲಿಂಗಪ್ಪ ಮನೆ ಕಟ್ಟಿಸಿದ್ದು ಲೈಸೆನ್ಸ್ ಇಲ್ಲದೇನೇ ಅಂತ ಹೇಳಿದರೆ ನಾನು ಏನು ಹೇಳಲಿ? ತಾವೆಲ್ಲರೂ ಬಂದು ಪರೀಕ್ಷೆ ಮಾಡಿ. ನಾನು ಆಗ ವಿರೋಧ ಪಕ್ಷದಲ್ಲಿದ್ದೆ. ಹಾಗಿದ್ದಾಗ ನನಗೆ ಲೈಸೆನ್ಸ್ ಪಡೆಯದೆ ಕಟ್ಟಡ ಮಾಡುವುದಕ್ಕೆ ಸಾಧ್ಯವಿದೆಯೇ ಎಂಬ ಒಂದು ಪ್ರಶ್ನೆಯನ್ನು ತಾವೇ ಎಲ್ಲರೂ ತಮ ತಮಗೆ ಹಾಕಿಕೊಂಡರೆ ಅದಕ್ಕೆ ಉತ್ತರ ತಾನಾಗೇ ತಮಗೆ ಸಿಕ್ಕುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ನಾವು ಇಲ್ಲಿ ಯಾರೂ ನಿಮ್ಮವರ್ಗದವರು ಎಂದು ನಿಮ್ಮನ್ನು ಟೀಕೆ ಮಾಡಲಿಲ್ಲವಲ್ಲ?

ಶ್ರೀ ಬಿ. ಬಸವಲಿಂಗಪ್ಪ.—ಶ್ರೀ ಎಚ್. ಡಿ. ದೇವೇಗೌಡ ಅವರು ಶಂಕರಾನಂದ ಅವರಿಗೆ ಬೆಳಗಾಂ ಸಿಟಿಯಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ 10 ಕುಂಟೆ ಜಮೀನನ್ನು ಕೊಟ್ಟಿದ್ದಕ್ಕೆ ಸರ್ಕಾರದಲ್ಲಿ ಏನೋ ಒಂದು ದರೋಡೆ ನಡೆದು ಹೋಗಿದೆ, 2 ಲಕ್ಷ ರೂಪಾಯಿ ಬೆಲೆ ಬಾಳತಕ್ಕ ಭೂಮಿಯನ್ನು ಕೊಟ್ಟಿದ್ದಾರೆಂದು ಅಪಾದನೆ ಮಾಡಿದ್ದಾರೆ. ಆದರೆ, ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಅವರು ಇಲ್ಲಿ ಸದಸ್ಯರಲ್ಲ. ಅವರು ಅಲ್ಲಿ ಮನೆ ಕಟ್ಟಿಕೊಳ್ಳಲು ಅಷ್ಟು ಜಾಗ ಕೊಟ್ಟಿದೆ ಅದರ ಬೆಲೆ 10 ಸಾವಿರದಿಂದ 15 ಸಾವಿರ ಆದರೆ ಹೆಚ್ಚಾಯಿತು. ಯಾರಾದರೂ ತಯಾರಾಗಿದ್ದರೆ 14 ಸಾವಿರ ಕೊಟ್ಟರೆ ಆ ಜಾಗವನ್ನು ಅವರಿಗೆ ಕೊಡಿಸುತ್ತೇನೆ. ಆದರೆ ಹಿಂದೆ ಶ್ರೀ ವೀರೇಂದ್ರ ಪಾಟೀಲರು ಮಂತ್ರಿಗಳಾಗಿದ್ದ ಕಾಲದಲ್ಲಿ ಒಂದೇ ಕಡೆ ಅದೇ ಜಾಗದಲ್ಲಿ ಒಂದೇ ಜಾತಿಗೆ ತಲಾ 16 ಎಕರೆ, 21 ಎಕರೆ ಮತ್ತು 43 ಎಕರೆ ಹೀಗೆಲ್ಲಾ ಕೊಟ್ಟಿದ್ದಾರೆ. ಹೀಗೆ ಒಂದೇ ಜಾತಿಯವರಿಗೆ 63 ಎಕರೆ ಜಮೀನನ್ನು ಕೊಟ್ಟಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಅದನ್ನೆಲ್ಲಾ ಟೇಬಲ್ ಮೇಲೆ ಇಡಿ ನಾವೂ ನೋಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಅವರು ತಮ್ಮವರಿಗೆ ಎಂದು ಎಕರೆಗಟ್ಟಲೆ ಕೊಡಬಹುದು. ಆದರೆ ಈಗ 14 ಕುಂಟೆ ಜಮೀನು ಕೊಟ್ಟಿದ್ದಕ್ಕೆ ಅದರಲ್ಲೂ ಒಬ್ಬ ಹರಿಜನರಿಗೆ ಕೊಟಿದ್ದಕ್ಕೆ ಟೀಕೆ ಬಂದಿದೆ. ಆದರೆ ಯಾರಿಗೆ ಆ ಸ್ಯೆಟನ್ನು ಕೊಟ್ಟಿದೆಯೋ ಅವರು ಈ ಸಭೆಯ ಸದಸ್ಯರಲ್ಲ. ಆದುದರಿಂದ ಅವರು ಇಲ್ಲಿ ಇಲ್ಲದ ಕಾರಣ ಅವರ ರಕ್ಷಣೆ ಮಾಡುವುದು ನನ್ನ ಕರ್ತವ್ಯ ಹಾಗೂ ಧರ್ಮ. ಆದ್ದರಿಂದ ಈ ವಿಚಾರದಲ್ಲಿ ಯಾರೂ ಅನ್ಯಥಾ ಭಾವಿಸಬಾರದೆಂದು ಪ್ರಾರ್ಥನೆ ಮಾಡಿ ನಾನು ಮಂಡಿಸಿರತಕ್ಕ ಡಿಮ್ಯಾಂಡ್‌ಗಳಿಗೆ ತಾವೆಲ್ಲರೂ ಬೆಂಬಲ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

MADAM SPEAKER.—I will now put the Demands to the vote of the House.

The question is :

"That a sum not exceeding Rs. 14,98,81,000 inclusive of the sum granted 'on account' be granted to the Government to defray the charges which will come in course of payment during the financial year for the period ending with 31st day of March 1973 in respect of Demand No. 39. "Miscellaneous".

The motion was adopted and the Demand was granted.

Calling Attention to Matters of Urgent Public Importance

(*i*) *re* : *Private Operators to be permitted to run bus service in Bangalore, Gulbarga and Belgaum.*

SRI B. SATYANARAYANA SINGH (Hospet).—Madam, I call the attention of the Minister for Labour to the reported statement of Labour Minister regarding private operators to be permitted to run bus service in Bangalore, Gulbarga and Belgaum.

SRI AZEEZ SAIT.—I state as follows : —

An article appeared in the Press on 20th May 1972 to the effect that the State Government has prepared proposal for consideration of the Cabinet to allow Private Operators to ply their buses on the routes of Bangalore Transport Service in Bangalore City. When the attention of the Minister for Transport was drawn to this article, the Minister clarified that he has only been thinking about allowing Private Operators to operate buses along with the Mysore State Road Transport Corporation Buses on B.T.S. routes as in the case of Delhi and that the report that he had taken a decision in the matter was not correct. Subsequently the Minister went to Delhi and studied the arrangements at Delhi. It was found that the system of operation of private buses along with the buses of State Transport Undertaking at Delhi is not working satisfactorily. On further consideration of the matter the idea of allowing the Private Operators to ply buses on B.T.S routes has been given up.

(*ii*) *re* : *Nationalisation of short distance bus routes*

SRI B. SATYANARAYANA SINGH.—Madam, I call the attention of the Minister for Labour to the reported statement of Labour Minister regarding nationalisation of short distance bus routes.

SRI AZEEZ SAIT.—I state as follows :—

An article appeared in the Press on 15th June 1972 to the effect that Government have taken a policy decision that all short distance bus routes which are not yet nationalised will be nationalised.

The Government has not taken any such decision as reported in the press.

In the nationalisation schemes prepared by the Mysore State Road Transport Corporation in the past some small contiguous areas have not been nationalised and in these areas private operators are operating. The operation of private buses in the small areas, contiguous to nationalised area is not conducive to the operation of M.S.R.T.C. buses in the nationalised area. It was thought that it would be advisable to nationalise small areas so that the Mysore State Road Transport Corporation could provide efficient, adequate, economical and properly

(SRI AZEEZ SAIT)

co-ordinated Road Transport Services. According to the provisions of the Motor Vehicles Act, 1939, the Mysore State Road Transport Corporation is the competent authority to prepare schemes for nationalising transport services. The schemes after approval by Government will become operative. If the Mysore State Road Transport Corporation decides to Nationalise Transport Services in the small contiguous areas it will have to prepare schemes and send it to Government. The suggestion to Nationalise the Transport Services in the small contiguous areas will be placed before the Mysore State Road Transport Corporation for its consideration.

MADAM SPEAKER.—Sri Gopinath R. Sandra's call attention motion cannot be taken up as he is absent. The House will now adjourn and re-assemble on Monday at One of the Clock.

The House adjourned at Fifty Minutes Past Two of the Clock to meet again at One of the Clock on Monday, the 17th July 1972.

WD 18234—GPB—550—9-2-1973

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Monday, 17th July, 1972 / Ashadha 26, 1894 (Saka Era)

The House met in the Assembly Chamber, Vidhana Soudha, at One of the Clock.

MADAM SPEAKER (SMT. K. S. NAGARATHNAMMA) in the Chair.

STARRED QUESTIONS

(to which oral answers were given)

Survey of Upper Bhadra Project

123. SRI C. R. MOHAMED SAIFUDDIN (Chitradurga).—

Will the Minister of State for Major Irrigation be pleased to state :—

(*a*) whether the proposed Upper Bhadra Project Survey has been completed ;

(*b*) whether the report of the Krishna-Godavari Tribunal has been received by the Government ;

(*c*) if so, the recommendation of the Tribunal ;

(*d*) if not, the stage at which it is pending ;

(*e*) the estimated Cost of the Project ;

(*f*) the estimated command area to be brought under cultivation under this project ?

SRI H. N. NANJE GOWDA (Minister of State for Major Irrigation).—

(*a*) No.

(*b*) No.

(*c*) to (*f*) Does not arise.

SRI C. R. MOHAMED SAIFUDDIN.—Whether it has come to the notice of Government that in different places in the said area some Boards have been installed ? The reply furnished by the Hon. Minister is not satisfactory.

† **Sri H. N. NANJE GOWDA.**—The question was whether the survey work has been completed; for which I have stated 'no'.

Sri C. R. MOHAMED SAIFUDDIN.—At what stage the survey work is ?

Sri H. N. NANJE GOWDA.—It is at different stages.

ಶ್ರೀ ಸಿ. ಆರ್. ಮಹಮದ್ ಸೈಫುದ್ದೀನ್.—ಈ ಯೋಜನೆಯ ಅಂದಾಜ ವೆಚ್ಚವೆಷ್ಟು ಎಂಬುದನ್ನು ನಿಗದಿ ಮಾಡಲಾಗಿದೆಯೇ ?

ಶ್ರೀ ಎಚ್. ಎನ್. ನಂಜೇಗೌಡ.—ಮೊದಲನೇ ಟೆಂಟೆಟೀವ್ ಅಂದಾಜದ ಪ್ರಕಾರ ಅಲ್ಲಿ 36 ಟಿ. ಎಂ. ಸಿ. ಎಫ್ಟಿ ನೀರನ್ನು ತಡೆಯಬೇಕೆಂದು ಅಂದಾಜ ಮಾಡಲಾಗಿತ್ತು. ಮತ್ತೆ ಆ ಅಂದಾಜನ್ನು ರಿವೈಜ್ ಮಾಡಲಾಯಿತು. ಅಲ್ಲಿ 18 ಟಿ. ಎಂ. ಸಿ. ಎಫ್ಟಿ ನೀರನ್ನು ತಡೆಯಬೇಕೆಂದು ಅಂದಾಜ ಮಾಡಲಾಯಿತು. ಮೊದಲನೇ ಅಂದಾಜದ ಪ್ರಕಾರ 56 ಕೋಟಿ 38 ಲಕ್ಷ ರೂಪಾಯಿ ಆಗಿತ್ತು. ಎರಡನೆಯ ಅಂದಾಜಿಗೆ 28 ಕೋಟಿ 66 ಲಕ್ಷ ರೂಪಾಯಿ ಅಂದಾಜಾಗಿತ್ತು.

ಶ್ರೀ ಪಾಟೀಲ್ ಪಾಪಯ್ಯ ನಾಯಕ್.—ಇದನ್ನು ಬೇಗ ಪೂರ್ಣಗೊಳಿಸಬೇಕೆಂಬ ಆಸೆ ಸರ್ಕಾರದವರಿಗೆ ಇದೆಯೇ ?

ಶ್ರೀ ಎಚ್. ಎನ್. ನಂಜೇಗೌಡ.—ನಾವು ಇಲ್ಲಿ ಪದೇ ಪದೇ ಹೇಳುತ್ತಲೇ ಇದ್ದೇವೆ. ಈ ವಿಚಾರ ಟ್ರಿಬ್ಯುನಲ್ ಮುಂದಿದೆ. ಅಲ್ಲಿ ತೀರ್ಮಾನವಾಗುವವರೆಗೆ ಇಲ್ಲಿ ಏನು ಮಾಡುವುದಕ್ಕೂ ಬರುವುದಿಲ್ಲ.

ಶ್ರೀ ಬಾಪೂಗೌಡ ರಾಯಪ್ಪ.—ಆ ಟ್ರಿಬ್ಯೂನಲ್ ಡಿಸಿಷನ್ ಯಾವಾಗ ಮುಗಿಯಬಹುದು ?

ಶ್ರೀ ಎಚ್. ಎನ್. ನಂಜೇಗೌಡ.—ಈಗಾಗಲೆ ಎವಿಡೆನ್ಸ್ ಮುಗಿದಿದೆ. ಇನ್ನು ಇರತಕ್ಕದ್ದು ಆರ್ಗ್ಯುಮೆಂಟ್, ಅದು ಮುಗಿದ 4–5 ತಿಂಗಳಲ್ಲೇ ನಮಗೆ ವರದಿ ಬರಬಹುದು. ಅಂತೂ ಇನ್ನು 5–6 ತಿಂಗಳಲ್ಲಿ ಅದು ತೀರ್ಮಾನವಾಗಬಹುದೆಂದು ನನಗೆ ಅನಿಸುತ್ತದೆ.

ಶ್ರೀ ಸಿ. ಆರ್. ಮಹಮದ್ ಸೈಫುದ್ದೀನ್.—ಆ ಕಮಿಷನ್ನಿನವರ ವರದಿ ಫೇವರಬಲ್ಲಾಗಿ ಬಂದರೆ ಈ ಪ್ರಾಜೆಕ್ಟನ್ನು ಕೂಡಲೆ ಕೈಗೊಳ್ಳುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ನಮ್ಮ ಅಭಿಪ್ರಾಯದ ಪ್ರಕಾರ ನಮಗೆ ದೊರೆಯುತಕ್ಕ ನೀರೆಲ್ಲಾ ದೊರೆತರೆ ನಾವು ಅಲ್ಲಿ ಮೊದಲನ ಅಂದಾಜ ಪ್ರಕಾರ 36 ಟಿ. ಎಂ. ಸಿ. ಎಫ್ಟಿಗೆ ಪ್ರಾಜೆಕ್ಟನ್ನು ಕಟ್ಟುತ್ತೇವೆ.

Upper Bhadra Project and Hebbe Anecut

302. **Sri M. MALLAPPA** (Birur).—

Will the Minister of State for Major Irrigation be pleased to state :—

(a) the nnmber of Schemes proposed to be taken up in Chikmagalur District for providing irrigation facilities to develop agriculture ;

(b) the stage at which the proposed Upper Bhadra Project and Hebbe Anicut is pending for execution ;

(c) the number of acres of land that will be irrigated from Upper Bhadra Project and Habbe Anicut respectively ;

† Astericks indicates that the remarks or speeches have not been revised by the member coneerned.

(*d*) whether Government intends to provide irrigation facilities for Kadur Taluk from Habbe Anicut and Upper Bhadra Projects ?

SRI H. N. NANJE GOWDA (Minister of State for Major Irrigation).–

(*a*) Three Schemes.

(i) Upper Bhadra Project.

(ii) Hebbe Anicut.

(iii) Honnammanahalla project.

(*b*) Under investigation.

(*c*) Does not arise in view of reply to (*b*) above.

(*d*) Will be considered after investigation.

ಶ್ರೀ ಎಂ. ಮಲ್ಲಪ್ಪ.—ಈ ಯೋಜನೆಯನ್ನು ಯಾವಾಗ ಮುಗಿಸುತ್ತಾರೆ ?

† ಶ್ರೀ ಎಚ್. ಎನ್. ನಂಜೇಗೌಡ.—ಮೊದಲು ನಾನಾಗಲೇ ಹೇಳಿದಂತೆ 36 ಟಿ.ಎಂ.ಸಿ.ಎಫ್ಟಿಗೆ ಅಂದಾಜು ಮಾಡಲಾಗಿತ್ತು. ಆಗ ಇದಕ್ಕೆ ತುಂಗಾದಿಂದ ನೀರನ್ನು ಡೈವರ್ಟ್ ಮಾಡತಕ್ಕ ಅಗತ್ಯವಿತ್ತು. ಆಗ ಇದು ಫೀಸಿಬಲ್ ಆಗುವುದಿಲ್ಲ, ಖರ್ಚು ಜಾಸ್ತಿ ಬರುತ್ತದೆಂಬ ಅಭಿಪ್ರಾಯ ಬಂದ ನಂತರ ಇದನ್ನು 16 ಟಿ.ಎಂ.ಸಿ. ಎಫ್ಟಿಗೆ ಪರಿವರ್ತನೆ ಮಾಡಬೇಕಾಯಿತು. ಈ ಕಾರಣದಿಂದ ಸ್ವಲ್ಪ ನಿಧಾನವಾಗಿದೆ.

ಶ್ರೀ ಎಂ. ಮಲ್ಲಪ್ಪ.—ಇದಕ್ಕೆ ವರಾಹ ನದಿ ನೀರನ್ನು ಡೈವರ್ಟ್ ಮಾಡತಕ್ಕ ಯೋಜನೆ ಇದೆಯೋ ?

ಶ್ರೀ ಎಚ್. ಎನ್. ನಂಜೇಗೌಡ.—ನೋಟೀಸ್.

ಶ್ರೀ ಕಾಗೋಡು ತಿಮ್ಮಪ್ಪ.—ಹಾಲಿ ಇರತಕ್ಕ ಭದ್ರಾ ಮೇಲ್ದಂಡೆ ಯೋಜನೆಯು ಕೆಳಗಿರತಕ್ಕ ಅಚ್ಚುಕಟ್ಟಿಗೆಲ್ಲಾ ನೀರು ಇದೆಯೆಂಬುದನ್ನು ನಿರ್ಧಾರ ಮಾಡಿದ ನಂತರ ಈ ಕೆಳದಂಡೆ ಯೋಜನೆ ಉದ್ಭವಿಸುತ್ತದೆಯಲ್ಲವೇ ?

ಶ್ರೀ ಎಚ್. ಎನ್. ನಂಜೇಗೌಡ.—ನೋಟೀಸ್.

ಶ್ರೀ ಜಿ. ಪುಟ್ಟಸ್ವಾಮಿ.—ಹೊನ್ನಮ್ಮನಹಳ್ಳಿ ಪ್ರಾಜೆಕ್ಟ್ ಯಾವ ಹಂತದಲ್ಲಿದೆ ?

ಶ್ರೀ ಎಚ್. ಎನ್. ನಂಜೇಗೌಡ.—ಚಿಕ್ಕಮಗಳೂರು ಜಿಲ್ಲೆಗೆ ಅಯ್ಯನಕೆರೆ, ಮದಗದ ಕೆರೆಗೆ ಹೋಗತಕ್ಕ ನೀರನ್ನು ತಿರುಗಿಸತಕ್ಕ ವಿಚಾರ ಪರಿಶೀಲನೆಯಲ್ಲಿದೆ. ಅದು ಮುಗಿದ ನಂತರ ಇದರ ವಿಚಾರ ಗೊತ್ತಾಗುತ್ತದೆ. ಈಗಲೇ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ಮಲ್ಲಪ್ಪ.—ಭದ್ರಾ ನಾಲೆಯ ನೀರನ್ನು ಕಡೂರಿನವರಿಗೆ ಕೊಡಬಾರದೆಂದು ಅದನ್ನು ಬೇರೆ ಕಡೆಗೆ ಡೈವರ್ಟ್ ಮಾಡಿದ್ದಾರಲ್ಲವೇ ? ಅಲ್ಲಿ ಇದರಿಂದ ಸುಮಾರು 96 ಸಾವಿರ ಎಕರೆಗೆ ನೀರು ಬರುತ್ತಿದ್ದುದು ನಿಂತು ಅಲ್ಲಿಯ ಜನರಿಗೆ ತೊಂದರೆಯಾಗಿಲ್ಲವೇ ?

ಶ್ರೀ ಎಚ್. ಎನ್. ನಂಜೇಗೌಡ.—ಅವರಿಗೆ ಇವರಿಗೆ ಕೊಡಬಾರದೆಂಬ ಪ್ರಶ್ನೆ ಇಲ್ಲ. ಅಲ್ಲಿ ಮುಖ್ಯವಾಗಿ ಕಾಂಟೂರ್ ಲೆವೆಲ್ ಪರ್ಮಿಟ್ ಮಾಡಬೇಕು, ಕಡಿಮೆ ಖರ್ಚಿನಲ್ಲಿ ಕೆಲಸಗಳಾಗಬೇಕು ಅಷ್ಟೇ ಮುಖ್ಯವಾದದ್ದು. ಆ ಅನುಕೂಲಗಳಿದ್ದರೆ ಸರ್ಕಾರದವರು ಅದನ್ನು ಪರಿಶೀಲಿಸುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—ಕಾಂಗ್ರೆಸ್ 'ಆರ್' ಸರ್ಕಾರ ಆಡಳಿತಕ್ಕೆ ಎತ್ತಬೇಕು ಅಂದರೆ ಅತ್ತ ತಿರುಗುತ್ತದೆ ಅಲ್ಲವೇ ?

ಶ್ರೀ ಎಚ್. ಎನ್. ನಂಜೇಗೌಡ.—ಹಿಂದೆ ಇದ್ದ ಸರ್ಕಾರದ ಕಾಲದಲ್ಲಿ ಹಾಗೆ ಆಗಿರಬಹುದು. ಈಗ ಹಾಗೆ ತಿರುಗುವುದಕ್ಕೆ ಸಾಧ್ಯವಿಲ್ಲ.

Misappropriation in Tumkur District Co-operative Wholesale Marketing Society

200. Sri B. BYRAPPAJI (Turuvekere).—

Will the Minister for Co-operation be pleased to state :—

(*a*) the amount misappropriated in the Tumkur District Co-operative Wholesale Marketing Society;

(*b*) the persons responsible for this misappropriation ;

(*c*) the steps taken by the Government in this behalf ?

Sri A. SHANKARA ALVA (Minister for Co-operation).—

(*a*) Rs. 89,395-20.

(*b*) Staff of the society.

(*c*) Cases have been filed against the employees for recovery of amount.

ಶ್ರೀ ಬಿ. ಬೈರಪ್ಪಾಜಿ.—ಈ ಹಣವನ್ನು ದುರುಪಯೋಗಪಡಿಸಿರತಕ್ಕವರ ಹೆಸರು, ದರ್ಜೆ ಮತ್ತು ಯಾರ್ಯಾರು ಎಷ್ಟು ಹಣವನ್ನು ತಿಂದಿದ್ದಾರೆಂಬುದನ್ನು ತಿಳಿಸುತ್ತಾರೆಯೇ ?

† ಶ್ರೀ ಎ. ಶಂಕರ ಆಳ್ವ.—ಎಂ. ಎಸ್. ಕೆ. ಶರ್ಮ 23,214 ರೂಪಾಯಿಗಳು ; ಟಿ. ವಿ. ವಿರೂಪಾಕ್ಷಪ್ಪ 14,441 ರೂಪಾಯಿಗಳು ; ಬಿ. ಕೃಷ್ಣಪ್ಪ 6016 ರೂಪಾಯಿಗಳು ; ಇಷ್ಟು ಹಣ 1968-69 ರಲ್ಲಿ ದುರುಪಯೋಗವಾಗಿದೆ. ಇನ್ನು 1969 ಮತ್ತು 1970 ರಲ್ಲಿ ದುರುಪಯೋಗವಾಗಿರತಕ್ಕ ಹಣ :— ಡಿ. ಕೆ. ಡಿ. ಗೌಡ 21,259 ರೂಪಾಯಿ ; ಎಸ್. ಕೃಷ್ಣಯ್ಯ 12,577 ರೂ ಎ. ಜಿ. ಕೃಷ್ಣಮೂರ್ತಿ 3496 ರೂಪಾಯಿಗಳು ; ಡಿ. ಕೃಷ್ಣಪ್ಪ 122 ರೂಪಾಯಿಗಳು ; ವೈ. ಎನ್. ಮೂರ್ತಿ 776 ರೂಪಾಯಿಗಳು ; ಎ. ಪಿ. ರುಕ್ಮಿಣಿಅಮ್ಮ 820 ರೂಪಾಯಿಗಳು ; ಬಿ. ಎಸ್. ರಾಜೇಶ್ವರಿ 5023 ರೂಪಾಯಿಗಳು ; ನಳಿನಾ 667 ರೂಪಾಯಿಗಳು ಮತ್ತು ಎಗ್ಸಿಬಿಷನ್ ಮತ್ತು ಮಿಸಲೇನಿಯಸ್ 978 ರೂಪಾಯಿಗಳು ; ಹೀಗೆ ಒಟ್ಟು 89,395 ರೂಪಾಯಿ ಚಿಲ್ಲರೆ ಹಣ ದುರುಪಯೋಗವಾಗಿದೆ.

ಶ್ರೀ ಬಿ. ಬೈರಪ್ಪಾಜಿ.—ಇಲ್ಲಿಯವರೆಗೂ ಇದನ್ನು ಹೀಗೆ ಕೈಬಿಡಲು ಕಾರಣವೇನು ?

ಶ್ರೀ ಎ. ಶಂಕರ ಆಳ್ವ.—ಸರ್ಕಾರದವರು ಕ್ರಮ ಕೈಗೊಂಡಿದ್ದಾರೆ. ಆರ್ಬಿಟ್ರೇಷನ್ ಕೇಸನ್ನು ದಾಖಲು ಮಾಡಿದ್ದಾರೆ. ಕೆಲವರ ಮೇಲೆ ಡಿಕ್ರಿ ಆಗಿದೆ. ಇನ್ನು ಕೆಲವರ ಮೇಲೆ ಕ್ರಿಮಿನಲ್ ಕೇಸ್ ದಾಖಲು ಮಾಡುವುದಕ್ಕೆ ಏರ್ಪಾಡಾಗಿದೆ.

ಶ್ರೀ ಎನ್. ಬಸವಯ್ಯ.—ಸಹಕಾರದ ಇಲಾಖೆಯ ಜನರೂ ಇದಕ್ಕೆ ಸಾಮಿಲಾಗಿದ್ದಾರಲ್ಲವೆ ?

ಶ್ರೀ ಎ. ಶಂಕರ ಆಳ್ವ.—ಅದನ್ನು ಪರಿಶೀಲನೆ ಮಾಡಲಾಗುತ್ತಿದೆ.

Sri D. B. KALMANKAR.—Whether the criminal cases have been filed and secondly, whether there are any properties of these employees which are taken as security and from which you could recover these amounts ?

Sri A. SHANKARA ALVA.—There is no information about that.

ಶ್ರೀ ಬಿ. ಬೈರಪ್ಪಾಜಿ.—ಇಲ್ಲಿ ಇಲಾಖೆಯವರು ಮತ್ತು ಹಿಂದಿನ ಸರಕಾರದಲ್ಲಿದ್ದ ಪ್ರಭಾವಶಾಲಿಗಳು ಸೇರಿ ಹಣವನ್ನು ಚಪಾವಣೆ ಮಾಡಲು ಕುಮ್ಮಕ್ಕು ಕೊಟ್ಟಿದ್ದಾರೆ. ಇಲ್ಲಿಯವರೆಗೆ ಆರ್ಬಿಟ್ರೇಟರ್‌ಗೆ ರೆಫರ್ ಮಾಡಿರುವ ವಿಚಾರ ತೀರ್ಮಾನವಾಗಿ ಕಾರ್ಯರೂಪಕ್ಕೆ ಬಂದಿಲ್ಲ. ಕ್ರಿಮಿನಲ್ ಕೇಸ್ ಹಾಕಿರುವುದು ತೀರ್ಮಾನವಾಗಲು ಎಷ್ಟು ವರ್ಷ ಬೇಕಾಗುವುದು ? ಹಣ ದುರುಪಯೋಗವಾಗಿರುವುದನ್ನು ವಸೂಲು ಮಾಡಲು ಸಾಧ್ಯವೇ ?

ಶ್ರೀ ಎ. ಶಂಕರ ಆಳ್ವ.—ಸದ್ಯಕ್ಕೆ ಸಂಬಂಧಪಟ್ಟವರೆಲ್ಲರ ಮೇಲೂ ಆರ್ಬಿಟ್ರೇಷನ್ ಕೇಸನ್ನು ಹಾಕಿದೆ. ಅದಷ್ಟು ಬೇಗ ತೀರ್ಮಾನಮಾಡಬೇಕೆಂದು ತಿಳಿಸಿದೆ.

MADAM SPEAKER.—As the Hon'ble Minister is unwell, I will hold-over this Question No. 218.

Floods of Varada River

267. Sri KAGODU THIMMAPPA (Sagar).—

Will the Minister for Public Works and Electricity be pleased to state :—

(a) whether it has come to the notice of the Government that thousands of acres of land is being washed out every year due to floods of Varada river ;

(b) whether they have taken any steps to prevent the floods ;

(c) whether they have taken up a scheme to construct a big dam near Kanale village, in Sagar Taluk in this respect ;

(d) the reasons for taking up Survey work in the said area ;

(e) whether they have considered to connect Varada river with Sharavathi so as to Prevent floods ?

Sri H. N. NANJE GOWDA (Minister of State for Major Irrigation) [on behelf of SRI H. M. CHANNABASAPPA (Minister for Public Works)].—

(a) Yes.

(b) In order to prevent the floods, flood control and irrigational schemes are under consideration.

(c) Flood control of Varada river near Kanale village and irrigational schemes are under consideration.

(d) Survey work is being taken up to control the floods of Varada river and to take up irrigational schemes.

(e) It has been considered.

ಶ್ರೀ ಕಾಗೋಡು ತಿಮ್ಮಪ್ಪ.—ಪ್ರವಾಹ ನಿಯಂತ್ರಣ ಮತ್ತು ನೀರಾವರಿ ಯೋಜನೆ ಪ್ರವಾಹವನ್ನು ತಡೆಗಟ್ಟಲು ಕೈಕೊಳ್ಳಲು ಉದ್ದೇಶಿಸಿರುವುದು ಪರಿಶೀಲನೆಯಲ್ಲಿದೆ ಎಂದು ಉತ್ತರದಲ್ಲಿದೆ. ಎಷ್ಟು ದಿವಸದಲ್ಲಿ ಪರಿಶೀಲನೆ ಪೂರ್ಣವಾಗಬಹುದು ? ಸರಕಾರ ಎಷ್ಟು ದಿವಸಗಳಲ್ಲಿ ಪೂರ್ಣ ಮಾಡುವುದು ?

ಶ್ರೀ ಎಚ್. ಎನ್. ನಂಜೇಗೌಡ.—ಕರಾರುವಾಕ್ಕಾಗಿ ಅದನ್ನು ಹೇಳುವುದಕ್ಕಾಗುವುದಿಲ್ಲ. ಜಾಗ್ರತೆ ಮುಗಿಸಬೇಕೆಂಬ ಅಭಿಪ್ರಾಯವಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಸಂಬಂಧವಲ್ಲ ನೀರಾವರಿಗೆ ಬರುವ ತಾಲ್ಲೂಕು ಯಾವುದು? ಎಷ್ಟು ಪ್ರದೇಶ ನೀರಾವರಿಯಾಗುವುದು ?

ಶ್ರೀ ಎಚ್. ಎನ್. ನಂಜೇಗೌಡ.—ಒಂದು ದೊಡ್ಡ ಸ್ಟೇಟ್‌ಮೆಂಟ್ ಇದೆ, ಕಳಿಸಿಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಎಷ್ಟು ದಿವಸದಿಂದ ಈ ವಿಚಾರ ಪರಿಶೀಲನೆಯಲ್ಲಿದೆ ? ಜಾಗ್ರತೆ ಬೇಕಾದ ಕಾರ್ಯಕ್ರಮ ತೆಗೆದುಕೊಂಡು ಪ್ರವಾಹದಿಂದ ತೊಂದರೆಯಾಗದಂತೆ ವ್ಯವಸ್ಥೆ ಮಾಡುವಿರಾ ?

ಶ್ರೀ ಎಚ್. ಎನ್. ನಂಜೇಗೌಡ.—1959 ಮತ್ತು 1961ರಲ್ಲಿ ಜಾಸ್ತಿ ಪ್ರವಾಹ ಬಂತು. 1961 ರಿಂದ ಈ ವಿಚಾರದಲ್ಲಿ ಆಲೋಚನೆ ಮಾಡಲು ಪ್ರಾರಂಭಿಸಿದ್ದೇವೆ. 1961ರಲ್ಲಿ ಇದಕ್ಕಾಗಿ ಒಂದು ಕೋಟಿ 76 ಲಕ್ಷ ರೂಪಾಯಿಗಳ ಅಂದಾಜಾಗಿದೆ. ಈಗ ಇರಿಗೇಷನ್ನಿಗೆ ಎಷ್ಟು ಸಾಧ್ಯವಿದೆ ಎಂಬುದನ್ನು ಪರಿಶೀಲಿಸಲಾಗುತ್ತಿದೆ. ಜೊತೆಗೆ ಶರಾವತಿ ನದಿಗೆ ವರದಾ ನದಿಯ ನೀರನ್ನು ಸೇರಿಸುವ ವಿಚಾರವೂ ಕೂಡ ಆಲೋಚನೆಯಲ್ಲಿತ್ತು. ಆದರೆ ಇದು ದುಬಾರಿ ವೆಚ್ಚದ್ದಾದುದರಿಂದ ಇದನ್ನು ಕೈಬಿಡಲಾಗಿದೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಪ್ರವಾಹ ಬಂದು ಅನೇಕ ಸಾರಿ ತೊಂದರೆಯಾಗಿದೆ. ಅದರಿಂದ ಎಷ್ಟು ನಷ್ಟವಾಗಿದೆ ?

ಶ್ರೀ ಎಚ್. ಎನ್. ನಂಜೇಗೌಡ.—ಆ ವಿವರ ನನ್ನಲ್ಲಿಲ್ಲ.

ಶ್ರೀ ಎಫ್. ಎಸ್. ತಾವರೆ.—1961ರಲ್ಲಿ ವರದಾ ನದಿಯ ಮಹಾಪೂರ ಬಂದು 17 ಹಳ್ಳಿಗಳಿಗೆ ತೊಂದರೆಯಾಗಿದೆ. ಇದರಿಂದ ಎಷ್ಟು ಕುಟುಂಬಗಳವರು ಬೀದಿಪಾಲಾಗಿದ್ದಾರೆ.

ಶ್ರೀ ಎಚ್. ಎನ್. ನಂಜೇಗೌಡ.—61ರಲ್ಲಿ ಮಹಾಪೂರ ಬಂತು. ಯಾವ ಕುಟುಂಬಗಳವರು ಬೀದಿ ಪಾಲಾಗಿದ್ದಾರೆ ಎಂಬ ವಿವರ ನನ್ನಲ್ಲಿಲ್ಲ. ವಿವರ ಕೊಟ್ಟರೆ ಸರಕಾರ ಸೂಕ್ತ ಕ್ರಮ ಕೈಗೊಳ್ಳುವುದು.

ಶ್ರೀ ಕಾಗೋಡು ತಿಮ್ಮಪ್ಪ.—ಸಾವಿರಾರು ಜನರು ಪ್ರವಾಹದ ಹಾವಳಿಯಿಂದ ಪ್ರತಿ ವರ್ಷ ತೊಂದರೆಗೀಡಾಗುತ್ತಿರುವುದರಿಂದ ಜಾಗ್ರತೆ ಸೂಕ್ತ ಕ್ರಮ ಕೈಗೊಂಡು ಈ ತೊಂದರೆ ತಪ್ಪಿಸುವಿರಾ ?

ಶ್ರೀ ಎಚ್. ಎನ್. ನಂಜೇಗೌಡ.—ಬೇಗ ಪರಿಹಾರ ಮಾಡಬೇಕೆಂಬ ಉದ್ದೇಶ ಸರಕಾರಕ್ಕಿದೆ. ಕೇಂದ್ರ ಸರಕಾರದಿಂದ ಪ್ರವಾಹ ನಿಯಂತ್ರಣ ವಗೈರೆಗೆ ಸಹಾಯ ಬರುವುದು. ಅದನ್ನು ಯಾವ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳಬೇಕೆಂಬುದನ್ನು ಯೋಚಿಸಿ ಕೇಂದ್ರದಿಂದ ಹಣ ಸಹಾಯ ಪಡೆದು ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕೆಂಬ ಉದ್ದೇಶವಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ವರದಾ ನದಿ ಮತ್ತು ಮಲೆನಾಡಿನಲ್ಲಿರುವ ಇತರ ಕೆಲವು ನದಿಗಳ ಪ್ರವಾಹ ಪ್ರತಿವರ್ಷ ಬಂದು ತೊಂದರೆಯಾಗುತ್ತಿದೆ. ಇದಕ್ಕೆ ಶಾಶ್ವತವಾದ ಪರಿಹಾರ ದೊರೆಯುವಂತೆ ಒಂದು ಯೋಜನೆ ಮಾಡುವಿರಾ ?

Sri H. N. NANJE GOWDA.—It is a suggestion for Consideration.

K. C. T. Mills Limited, Hubli

290. Sri B. G. BANAKAR (Hirekerur).—

Will the Minister for Co-operation be pleased to state :—

(a) whether the Board of Management of the Karnatak Co-operative Textile Mills Ltd., Hubli had closed the Mill and paid the compensation to the employees before the Mill was leased out to Sri G. Mahadevappa ;

(b) whether Sri G. Mahadevappa has paid all the lease amount according to the agreement ;

(c) if not, whether the Government intends to take back the Mill in view of the breach of condition as stipulated in the agreement and take steps to liquidate the Mill ?

Sri A. SHANKARA ALVA (Minister for Co-operation).—

(*a*) Yes.

(*b*) M/s. G. Mahadevappa and Sons have paid the lease rent due for the first year and the advance lease amount due to be paid on the first anniversary of the lease has not been paid yet.

(*c*) As the points of dispute raised by the lessees are still under consideration, the question of Government taking back the mill and taking steps for liquidating it, does not arise at this stage.

ಶ್ರೀ ಬಿ. ಜಿ. ಬಣಕಾರ್.—ಕರ್ನಾಟಕ ಸಹಕಾರಿ ಬಟ್ಟೆ ಗಿರಣಿಯಲ್ಲಿ ಸರಕಾರ ಮತ್ತು ಸಹಕಾರ ಸಂಘದವರು ಹಾಕಿರುವ ಷೇರು ಬಂಡವಾಳ ಮತ್ತು ಸಾಲ ಎಷ್ಟು? ಇದಕ್ಕೆ ಗ್ಯಾರಂಟಿ ಎಷ್ಟು ಕೊಡಲಾಗಿದೆ?

ಶ್ರೀ ಎ. ಶಂಕರ ಆಳ್ವ.—ಷೇರ್ ಕ್ಯಾಪಿಟಲ್ 15 ಲಕ್ಷದ 33 ಸಾವಿರ ರೂಪಾಯಿ, ಸರಕಾರಿ ಷೇರು 40 ಲಕ್ಷ ರೂಪಾಯಿ, ಸಾಲ ಈಗಿನವರೆಗೆ 79 ಲಕ್ಷ 4 ಸಾವಿರ ರೂಪಾಯಿ ಬಾಕಿ ಇದೆ. ಗ್ಯಾರಂಟಿ ಕೊಟ್ಟಿರುವುದು 25.56 ಲಕ್ಷ ರೂಪಾಯಿ-ಇದು ಬಾಕಿ ಇದೆ.

ಶ್ರೀ ಬಿ. ಜಿ. ಬಣಕಾರ್.—ಶ್ರೀ ಜಿ. ಮಹದೇವಪ್ಪನವರಿಗೆ ಪ್ರತಿ ವರ್ಷ ಬಾಡಿಗೆ ರೂಪದಲ್ಲಿ ಎಷ್ಟು ವರ್ಷಕ್ಕೆ ಕೊಡಲಾಗಿದೆ?

ಶ್ರೀ ಎ. ಶಂಕರ ಆಳ್ವ.—20 ವರ್ಷಕ್ಕೆ ಒಂದು ಲೀಸ್ ಮಾಡಿಕೊಂಡಿದ್ದಾರೆ. ಮೊದಲನೆಯ 5 ವರ್ಷ, ವರ್ಷಕ್ಕೆ 6 ಲಕ್ಷ 10 ಸಾವಿರ ರೂಪಾಯಿ ಕೊಡಬೇಕು, ಎರಡನೆಯ 5 ವರ್ಷ, ಪ್ರತಿವರ್ಷ 7 ಲಕ್ಷ ರೂಪಾಯಿ ಕೊಡಬೇಕು, ಮೂರನೆ 5 ವರ್ಷ ವರ್ಷಕ್ಕೆ 7.25 ಲಕ್ಷ ರೂಪಾಯಿ ಕೊಡಬೇಕು, ಕೊನೆಯ 5 ವರ್ಷ ವರ್ಷಕ್ಕೆ 8.17 ಲಕ್ಷ ರೂಪಾಯಿ ಕೊಡಬೇಕು.

ಶ್ರೀ ಬಿ. ಜಿ. ಬಣಕಾರ್.—ಎಷ್ಟು ನಷ್ಟವಾಗಿದೆ?

ಶ್ರೀ ಎ. ಶಂಕರ ಆಳ್ವ.—79 ಲಕ್ಷ 89 ಸಾವಿರ ರೂಪಾಯಿ ನಷ್ಟವಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಕರ್ನಾಟಕ ಸಹಕಾರಿ ಬಟ್ಟೆ ಗಿರಣಿಯಲ್ಲಿ ದುರಾಡಳಿತ ನಡೆದಿದೆ. ಅದಕ್ಕೆ ಸಂಬಂಧಪಟ್ಟವರಮೇಲೆ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆಯೇ? ತೆಗೆದು ಕೊಳ್ಳುವ ಪದ್ಧತಿಯಿದೆಯೇ?

ಶ್ರೀ ಎ. ಶಂಕರ ಆಳ್ವ.—ನಷ್ಟವಾದ ನಂತರ ಒಂದು ತೀರ್ಮಾನವಾಗಿ ಬಾಡಿಗೆ ಕೊಡಬೇಕೆಂದು ಗೊತ್ತುಮಾಡಿತ್ತು. ಇದಕ್ಕೆ ಸರಕಾರ ಪಾರ್ಟಿ ಅಲ್ಲ. ಸಹಕಾರ ತತ್ವದ ಆಧಾರವಮೇಲೆ 20 ವರ್ಷದ ಲೀಸ್ ಮಾಡಿಕೊಂಡಿದ್ದಾರೆ. ಹಣ ವಸೂಲುಮಾಡಿ ಸರಕಾರಕ್ಕೆ ಕೊಡಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಮೊದಲು ಯಾವ ಕಾರಣದಿಂದ ಗಿರಣಿಯನ್ನು ಮುಚ್ಚಲಾಯಿತು? ದುರಾಡಳಿತದಿಂದ ಅದಕ್ಕೆ ಅವಕಾಶವಾಯಿತು ಎಂಬುವುದನ್ನು ಒಪ್ಪುವಿರಾ? ಹಾಗಾದರೆ ಅವರ ಮೇಲೇನು ಕ್ರಮ ತೆಗದುಕೊಳ್ಳುವಿರಿ?

ಶ್ರೀ ಎ. ಶಂಕರ ಆಳ್ವ.—ಅದು ನನ್ನ ತಿಳುವಳಿಕೆಗೆ ಬಂದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮುಂದೆ ಗಮನಕ್ಕೆ ಅದು ಬಂದರೆ ಸೂಕ್ತ ಕ್ರಮ ತೆಗೆದು ಕೊಳ್ಳುವಿರಾ?

ಶ್ರೀ ಎ. ಶಂಕರ ಆಳ್ವ.—ತೆಗೆದುಕೊಳ್ಳುತ್ತೇವೆ.

ಶ್ರೀ ಅಂದಾನಪ್ಪ.—ಪ್ರತಿ ವರ್ಷ ನಷ್ಟವಾಗಿರುವಾಗ ಲೀಸ್‌ಗೆ ಕೊಡಲು ಕಾರಣ ಏನು?

ಶ್ರೀ ಎ. ಶಂಕರ ಆಳ್ವ.—ಆ ಕಾರ್ಖಾನೆ ಮುಚ್ಚುವ ಪರಿಸ್ಥಿತಿ ಬಂದು ಅದು ಸರಕಾರದ ಗಮನಕ್ಕೆ ಬಂದನಂತರ ಒಂದು ತೀರ್ಮಾನಮಾಡಿ ಆ ಮಿಲ್ಲನ್ನು ಬಾಡಿಗೆಗೆ ಕೊಟ್ಟು ಒಂದು ಅಗ್ರಿಮೆಂಟ್ ಮಾಡಿಕೊಳ್ಳಲಾಗಿದೆ. ಆ ಪ್ರಕಾರ ನಡೆಯುತ್ತಿದೆ.

ಶ್ರೀ ಎಚ್. ಡಿ. ದೇವೇಗೌಡ.—ಜಿ. ಮಹದೇವಪ್ಪನವರಿಗೆ ಕೈಸುಟ್ಟಿದೆ. ಅವರು ತಮಗೆ ವಹಿಸಿ ಕೊಡಲು ತಯಾರಿದ್ದರೆ ವಾಪಸು ಪಡೆಯುವಿರಾ?

ಶ್ರೀ ಎ. ಶಂಕರ ಆಳ್ವ.—ಕೊಟ್ಟರೆ ತೆಗೆದುಕೊಳ್ಳಲು ತಯಾರಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಹದೇವಪ್ಪನವರು ವಹಿಸಿಕೊಂಡಮೇಲೆ ನಷ್ಟವಾಗಿರುವುದೆಷ್ಟು ?

ಶ್ರೀ ಎ. ಶಂಕರ ಆಳ್ವ.—ಅದು ಪ್ರೈವೇಟ್ ಕಂಪೆನಿ. ಆದುದರಿಂದ ಅದನ್ನು ಹೇಳಲು ಸಾಧ್ಯವಿಲ್ಲ.

ಶ್ರೀ ಬಿ. ಜಿ. ಬಣಕಾರ್.—ಶ್ರೀ ಜಿ. ಮಹಾದೇವಪ್ಪ ಅವರು ಕರಾರು ಪ್ರಕಾರ ನಡೆದುಕೊಳ್ಳದೇ ಇದ್ದರೆ ಆ ಮಿಲ್ಲನ್ನು ಲಿಕ್ವಿಡೇಷನ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಅವರ ಅಗ್ರಿಮೆಂಟನ್ನು ರದ್ದು ಮಾಡುವುದಕ್ಕೆ ಸಾಧ್ಯವೇ ಇಲ್ಲವೇ ಎನ್ನುವುದನ್ನು ಪರಿಶೀಲನೆ ಮಾಡಲು ಲಾ ಮಿನಿಸ್ಟರ್‌ಗೆ ಕಳುಹಿಸಿಕೊಟ್ಟಿದ್ದೇವೆ. ಅಲ್ಲಿಂದ ಬಂದ ನಂತರ ಪರಿಶೀಲನೆ ಮಾಡುತ್ತೇವೆ.

Grant of Huller Licence in Arsikere Taluk

310. Sri H. S. SIDDAPPA (Arsikere) :—

Will the Minister of State for Food and Civil Supplies be pleased to state :—

(*a*) whether any applications for grant of Huller licence pertaining to Arsikere Taluk are pending ;

(*b*) if so, the reason for pendency ?

Sri H. N. NANJE GOWDA.— Minister of State for Major Irrigation) [On behalf of SMT. E. E. VAZ.—(Minister of State for Food and Civil Supplies)].—

(*a*) No.

(*b*) Does not arise in view of reply to clause (*a*)

Sri H. S. SIDDAPPA.—You have stated in your reply that no applications for grant of Huller licences are pending. Whether it is not a fact that one application for grant of a licence for Huller in Aggunda village in Arsikere Taluk is pending before the Government ?

ಶ್ರೀ ಎಚ್. ಎನ್. ನಂಜೇಗೌಡ.—ಡೆಪ್ಯುಟಿ ಕಮೀಷನ್‌ರವರ ವರದಿ ಮೇಲೆ ಡೈರೆಕ್ಟರ್ ಆಫ್ ಫುಡ್ ಸಪ್ಲೈಸ್ ಲೈಸನ್ಸ್ ಕೊಡುತ್ತಾರೆ. ಡೈರೆಕ್ಟರ್ ಆಫ್ ಫುಡ್ ಸಪ್ಲೈಸ್‌ನಲ್ಲಿ ಪರ್ಮಿಟ್ ಇಷ್ಯೂ ಮಾಡುವುದಕ್ಕೆ 5 ಅಪ್ಲಿಕೇಷನ್ಸ್ ಪೆಂಡಿಂಗ್‌ನಲ್ಲಿ ಇದೆ.

Sri H. S. SIDDAPPA.—May I bring it to your notice that the Deputy Commissioner recommends for the grant of licence and the Director of Food Supplies issues it. Do you know this procedure, Sir ?

ಶ್ರೀ ಎಚ್. ಎನ್. ನಂಜೇಗೌಡ.—ಡೆಪ್ಯುಟಿ ಕಮೀಷನರ್‌ರವರ ವರದಿ ಮೇಲೆ ಡೈರೆಕ್ಟರ್ ಆಫ್ ಫುಡ್ ಸಪ್ಲೈಸ್‌ನವರು ಲೈಸನ್ಸ್ ಇಷ್ಯೂ ಮಾಡುತ್ತಾರೆ. ಆ ರೀತಿ ಡೈರೆಕ್ಟರ್ ಆಫ್ ಫುಡ್ ಸಪ್ಲೈ ಆಫೀಸಿನಲ್ಲಿ 5 ಅರ್ಜಿಗಳು ಪೆಂಡಿಂಗ್‌ನಲ್ಲಿದೆ.

Sri H. S. SIDDAPPA.—Has it come to the notice of Government that on a wrong report made by the Food Assistant of the Deputy Commissioner, an application for grant of a licence, has been rejected even though the party has paid thousands of rupees as bribe ?

Sri H. N. NANJE GOWDA.—It has not come to the notice of Government.

Sri H. S. SIDDAPPA.—If such an instance is brought to the notice of Government, will they contemplate taking action against the concerned officer ?

Sri H. N. NANJE GOWDA.—Action will be taken as per rules if it is brought to the notice of Government.

ಶ್ರೀ ಎಂ. ಬಿ. ರಾಮಸ್ವಾಮಿ.—ಲೈಸನ್ಸನ್ನು ಜಿಲ್ಲಾಧಿಕಾರಿಗಳ ವರದಿ ಮೇಲೆ ಡೈರೆಕ್ಟರ್ ಆಫ್ ಫುಡ್ ಸಪ್ಲೈಸ್ ಅವರು ಕೊಡಬೇಕು ಎಂದು ಹೇಳಿದಿರಿ. ಒಂದೊಂದು ಕೇಸೂ ಕೂಡ ಎಷ್ಟು ವರ್ಷದಿಂದ ಪೆಂಡಿಂಗ್ ಇದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎನ್. ನಂಜೇಗೌಡ.—ಅರಸೀಕೆರೆ ತಾಲ್ಲೂಕಿನಲ್ಲಿ ಪಟೇಲ್ ಬೈರೇಗೌಡರ ಅವರದ್ದು 11-11-68 ರಿಂದ ಪೆಂಡಿಂಗ್ ಇದೆ. ಶ್ರೀ ತಿಮ್ಮೇಗೌಡ ಅವರದ್ದು 11-12-70 ರಿಂದ ಪೆಂಡಿಂಗ್ ಇದೆ. ಶ್ರೀ ಶಂಕರಶೆಟ್ಟಿ 19-10-70 ರಿಂದ ಪೆಂಡಿಂಗ್ ಇದೆ. ಶ್ರೀ ವೈ. ಎನ್. ರೇವಣಯ್ಯ ಯರಗನಾಳು ಅವರದ್ದು 2-11-71 ರಿಂದ ಪೆಂಡಿಂಗ್ ಇದೆ. ಶ್ರೀ ಬಿ. ಎಲ್. ನಾಗರಾಜರಾವ್ ಅವರದ್ದು 11-12-71 ರಿಂದ ಪೆಂಡಿಂಗ್ ಇದೆ. ಇವು ಅವರು ಕೊಟ್ಟಿರುವ ಅರ್ಜಿ ಡೇಟ್. ಅವುಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ರಿಪೋರ್ಟ್ ಕಳುಹಿಸಿ ಎಂದು ಹೇಳಿದ್ದೇವೆ. ಡೈರಕ್ಟರ್ ಆಫ್ ಫುಡ್ ಸಪ್ಲೈ ಆಫೀಸಿನಿಂದ ವರದಿ ಬಂದನಂತರ ತೀರ್ಮಾನ ಕೈಗೊಳ್ಳುತ್ತೇವೆ.

Sri H. S. SIDDAPPA.—In this connection I wrote to the Deputy Commissioner with an unanimous resolution of the TDB to grant a permit for a huller to the party of Aggunda village, but the Deputy Commissioner has not taken action on my letter. But do you contemplate to take action on the unanimous resolution of the TDB to grant a permit to the party ?

ಶ್ರೀ ಎಚ್. ಎನ್. ನಂಜೇಗೌಡ.—ಇದರ ಬಗ್ಗೆ ಕೋಆಪರೇಷನ್ ಡಿಪಾರ್ಟ್‌ಮೆಂಟ್‌ನವರು ತನಿಖೆ ಮಾಡಿ ಅಲ್ಲಿ ಭತ್ತ ಎಷ್ಟು ಸಿಕ್ಕುತ್ತದೆ, ಈ ಸ್ಥಳದಲ್ಲಿ ಮಿಲ್ ಹಾಕುವುದಕ್ಕೆ ಸಾಧ್ಯವೇ ಎಂದು ಆ ಅಧಿಕಾರಿಗಳಿಂದ ವರದಿ ಬೇಕಾಗಿದೆ. ಆದರೆ ತಾಲ್ಲೂಕ್ ಬೋರ್ಡ್‌ನವರು ರೆಸಲ್ಯೂಷನ್ ಮಾಡಿರತಕ್ಕಂಥಾದ್ದು ಸರಿಯಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಈಗ ಇದರಲ್ಲಿ ಉಳಿಕೆ 4 ಜನ ಏನು ಇದ್ದಾರೆ ಅವರಲ್ಲಿ ಒಬ್ಬ ಅರ್ಜಿದಾರನಿಗೆ ಲೈಸನ್ಸ್ ಕೊಡಕೂಡದು ಅಂತ ಅಧಿಕಾರಿಗಳು ಶಾಮೀಲು ನಡೆಸಿ ಅತನಿಗೆ ಕಿರುಕುಳ ಕೊಡುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಪರ್ಮಿಟ್ ಕೊಡುವ ಬಗ್ಗೆ ಬಾಕಿ ಮಿಲ್ಲುಗಳಿಗೆ ಯಾವ ಆಧಾರದ ಮೇಲೆ ಕೊಟ್ಟಿದ್ದೀರೋ ಅದೇ ರೀತಿ ಇದನ್ನು ಪುನರ್ ಪರಿಶೀಲನೆ ಮಾಡಿ ಅವನಿಗೆ ಲೈಸನ್ಸ್ ಕೊಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

Sri H. N. NANJE GOWDA.—If any foulplay is played by any person in issuing the licence, action will be taken against them. Any way I have understood the feelings of the Members. I shall enquire into the matter once again.

Scarcity of Drinking Water in Haveri Town and Other Villages

359. Sri F. S. TAWARE (Haveri).—

Will the Minister for Community Development and Social Welfare be pleased to state :—

whether it has come to the notice of the Government that the people and cattle of Haveri town and other villages were put to

(SRI F. S. TAWARE)

miserable hardships for want of drinking water during last summer though the Varada river runs about 28-30 miles in Haveri Taluk covering 30–40 Villages ?

SRI M. MALLIKARJUNA SWAMY (Minister for Community Development and Social Welfare).—

Yes.

ಶ್ರೀ ಎಫ್. ಎಸ್. ತಾವರೆ.—ಸ್ವಾಮಿ, ಹಾವೇರಿ ತಾಲ್ಲೂಕಿನ ನದಿಯ ದಂಡೆ ಮೇಲಿನ 30—40 ಹಳ್ಳಿಗಳಿಗೂ ಕುಡಿಯುವ ನೀರಿನ ಅಭಾವ ಇದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಈ ತೊಂದರೆಯನ್ನು ನಿವಾರಿಸುವುದಕ್ಕೆ ಏನು ಯೋಜನೆ ಮಾಡಿದ್ದೀರಿ ?

†ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಹೌದು. ಮಳೆ ಇಲ್ಲದೆ ವರದಾ ನದಿಯ ನೀರು ಕಡಿಮೆಯಾಗಿ ನದಿಯ ದಂಡೆ ಮೇಲೆ ನೀರು ಹತ್ತುತ್ತಾ ಇರಲಿಲ್ಲ. ಅದಕ್ಕಾಗಿ ಅಲ್ಲಿ 3 ಫೀಟ್ ಸಿಲ್ಟ್ ತೆಗೆಸುವುದಕ್ಕೆ ಏರ್ಪಾಡು ಮಾಡಿದ್ದೇವೆ. ಈಗ ಮಳೆ ಬಂದಿರುವುದರಿಂದ ನೀರಿನ ಅಭಾವ ಕಡಿಮೆಯಾಗಿದೆ.

ಶ್ರೀ ಎಫ್. ಎಸ್. ತಾವರೆ.—ಪ್ರತಿವರ್ಷವೂ ಏಪ್ರಿಲ್, ಮೇ, ಜೂನ್ ತಿಂಗಳುಗಳಲ್ಲಿ ನೀರು ಹೋಗುತ್ತದೆ. ಜನಗಳಿಗೆ ಆ ಕಾಲದಲ್ಲಿ ನೀರಿಗೆ ತುಂಬಾ ತೊಂದರೆಯಾಗುತ್ತದೆ. ಇದರಿಂದ ಆ ಜನಗಳಿಗೆ ನೀರು ಕುಡಿಯಲಿಕ್ಕೆ ಏನು ಯೋಚನೆ ಮಾಡುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗಾಗಲೇ ಉತ್ತರ ಕೊಟ್ಟಿದ್ದೇನೆ. 7 ಹಳ್ಳಿಗಳಲ್ಲಿ ನೀರಿಗೆ ತೊಂದರೆ ಇದೆ ಎನ್ನತಕ್ಕಂಥಾದ್ದು ಸರ್ಕಾರದ ಗಮನಕ್ಕೆ ಬಂದಿದೆ. ಅಂಥಾ ಕಡೆ ಒಂದು ರಿಗ್‌ನ್ನು ಕೊಟ್ಟು ಬಾವಿಗಳನ್ನು ತೆಗೆಯುವುದಕ್ಕೆ ಈಗಾಲೇ ಏರ್ಪಾಡು ಮಾಡಿದೆ.

ಶ್ರೀ ಎಫ್. ಎಸ್. ತಾವರೆ.—ಈಗ ಏನೋ ರಿಗ್‌ವೆಲ್ಸ್ ಕಳುಹಿಸಿಕೊಟ್ಟಿದ್ದೀರಿ ಆ ಒಂದು ರಿಗ್‌ನಿಂದ ಎಲ್ಲಾ ಹಳ್ಳಿಗಳಲ್ಲೂ ಕೆಲಸ ಮಾಡುವುದಕ್ಕಾಗುತ್ತದೆಯೇ ? ಒಂದು ರಿಗ್ಸ್‌ನ್ನು ಒಂದು ಹಳ್ಳಿಗೆ ಕಳುಹಿಸಿದರೆ ಒಂದು ತಿಂಗಳಾದರೂ ಬೇಕಾಗುತ್ತದೆ. ಈ ರೀತಿ ಆದರೆ ಇನ್ನು 10 ವರ್ಷವಾದರೂ ಮುಗಿಯುವುದಿಲ್ಲ. ಆದುದರಿಂದ ಇದರ ಬಗ್ಗೆ ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ರಿಗ್ಸ್ ಕಳುಹಿಸುವುದು ಜೊತೆಗೆ ಓಪನ್ ವೆಲ್ ತೆಗೆಸುವ ಕಾರ್ಯಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಎಲ್ಲಿ ರಿಗ್ಸ್‌ನಿಂದ ಮಾಡುವುದಕ್ಕೆ ಸಾಧ್ಯವೋ ಅಲ್ಲಿ ರಿಗ್ಸ್‌ನಿಂದ ಬಾವಿಗಳನ್ನು ತೆಗೆಸುತ್ತೇವೆ. ಎಲ್ಲಿ ರಿಗ್ಸ್‌ನಿಂದ ಮಾಡುವುದಕ್ಕೆ ಸಾಧ್ಯವಿಲ್ಲವೋ ಅಂಥ ಕಡೆ ಓಪನ್‌ವೆಲ್ಸ್‌ನಿಂದ ತೆಗೆಸುವುದಕ್ಕೆ ಏರ್ಪಾಡು ಮಾಡೋಣ.

Providing Transport Facilities to Remote Villages

368. SRI B. SATHYANARAYANA SINGH (Hospet).—

Will the Minister for Labour be pleased to state.—

(*a*) whether it is the policy of the Mysore State Road Transport Corporation to run their services on motorable fair weather Kutcha roads ;

(*b*) if not, how transport facilities could be provided to the people in the remote villages ;

(c) whether the number of schedules on each route are being re-examined on the advice of the Regional Transport Authorities at Districts ?

Sri AZEEZ SAIT (Minister for Labour).—

(a) Yes. Provided there is some reasonable traffic.

(b) Does not arise in view of the reply furnished to clause (a) above.

(c) Yes.

ಶ್ರೀ ಬಿ ಸತ್ಯನಾರಾಯಣ ಸಿಂಗ್.—(ಅ)ಗೆ ಉತ್ತರವಾಗಿ ಸಾಕಷ್ಟು ಪ್ರಮಾಣದ ಸಂಚಾರವಿದ್ದಲ್ಲಿ ಸಾಕಷ್ಟು ಬಸ್ಸುಗಳನ್ನು ಓಡಿಸುತ್ತೇವೆ ಎಂದು ಹೇಳಿದ್ದೀರಿ. ಎಷ್ಟು ಕಚ್ಚಾರೋಡ್ಸ್‌ಗಳಲ್ಲಿ ಓಡಿಸುತ್ತಿದ್ದೀರಿ.

† Sri AZEEZ SAIT.—If there is a reasonable stoppage of buses on kutcha roads that would be taken into consideration and transport facilities provided even on fair weather kutcha roads provided there is sufficient traffic.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—(ಸಿ)ಗೆ ಉತ್ತರವಾಗಿ ಪರಿಶೀಲನೆಯಲ್ಲಿದೆ ಎಂದು ಹೇಳುತ್ತೀರಿ ? ಆ ಬಸ್ಸುಗಳನ್ನು ಯಾವ ಯಾವ ಷೆಡ್ಯೂಲ್ ರೂಟ್‌ನಲ್ಲಿ ಹಾಕುತ್ತೀರಿ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಅಜೀಜ್ ಸೇಟ್.—ಯಾವ ಯಾವ ಷೆಡ್ಯೂಲ್ ರೂಟಿಗೆ ಬಸ್ಸುಗಳು ಬೇಕು ಎಂದು ನನ್ನ ಗಮನಕ್ಕೆ ತಂದರೆ ಅದನ್ನು ಪರಿಶೀಲನೆ ಮಾಡಿ ಸಾಕಷ್ಟು ಬಸ್ಸುಗಳನ್ನು ಹಾಕುವುದಕ್ಕೆ ಏರ್ಪಾಡು ಮಾಡುತ್ತೇನೆ.

Sri D. B. KALMANKAR.—Has it come to the notice of Government that many private buses are running on such kutcha roads and they are making huge profits ? So in view of that, whether the Government will take up buses on such routes as it is done in Maharashtra ?

Sri AZEEZ SAIT.—I have sufficiently answered such a question on a number of occasions. These private operators who are in possession of pucca permits are running and we are thinking to replace them as and when we get our buses. Now the Chassis business is not a problem at all because we have decided to go in for Dodge and Bedfords. may inform the House that the Corporation has taken a decision to place orders for Bedfords and Dodges. Recently we have ordered for 100 vehicles as a trial. If these buses are proved to be better, the problem of chassis will be eased.

Sri N. B. SIRDESAI. – May I know whether is has come to the notice of Government that the Divisional Controller, Belgaum, is refusing to ply buses on the fair weather kutcha roads in Belgaum division in general and kutcha roads in Khanapur Taluk in particular ?

Sri AZEEZ SAIT.—Government has not received any such complaints so far. The Hon. Member has brought it to my notice just now. I will look into the matter. I may inform the Member that Government will not make any discrimination between Khanapur and other taluks of Belgaum Division.

1-30 P. M.

ಶ್ರೀ ಕಾಗೋಡು ತಿಮ್ಮಪ್ಪ.—ಸಾಗರ ತಾಲ್ಲೂಕಿನಲ್ಲಿ ಖಾಸಗಿ ಬಸ್ಸುಗಳವರು ಸಮರ್ಪಕವಾಗಿ ಓಡಿಸದೆ ಇರತಕ್ಕ ಪ್ರದೇಶಗಳಲ್ಲಿ ಸರ್ಕಾರದವರು ಬಸ್ಸುಗಳನ್ನು ಓಡಿಸುವುದಕ್ಕೆ ಅಹವಾಲು ಬಂದಿರುವುದನ್ನು ಪರಿಶೀಲನೆ ಮಾಡುತ್ತಾರೆಯೇ ?

ಶ್ರೀ ಅಜೀಜ್ ಸೇಟ್.—ಯಾವಯಾವ ಮಾರ್ಗದಲ್ಲಿ ಬಸ್ಸುಗಳು ಆ ರೀತಿ ಹೋಗುತ್ತವೆ ಅದಕ್ಕೆ ಪರ್ಮಿಟ್ ಇದೆಯೋ ಇಲ್ಲವೋ ಪರಿಶೀಲನೆ ಮಾಡಿಸುತ್ತೇನೆ. ನಮ್ಮ ಬಸ್ಸುಗಳನ್ನು ಹಾಕಬೇಕಾದರೂ ಪರ್ಮಿಟ್ ಇದೆಯೋ ಇಲ್ಲವೋ ನೋಡಿಸಿ ಇಲ್ಲದೆ ಇದ್ದರೆ ಟೆಂಪೋರರಿ ಪರ್ಮಿಷನ್ ತೆಗೆದುಕೊಂಡು ಹಾಕುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಸಿ. ಅಂದಾನಪ್ಪ.—ಖಾಸಗಿ ಬಸ್ಸುಗಳನ್ನು ಓಡಿಸುವ ಮಾರ್ಗದಲ್ಲಿ ಎಂ. ಎಸ್. ಆರ್. ಟಿ. ಸಿ. ಬಸ್ಸುಗಳನ್ನು ಓಡಿಸುವುದಕ್ಕಾಗುವುದಿಲ್ಲ ಎಂದು ರಿಪೋರ್ಟ್ ಕೊಡುತ್ತಾರೆ. ಇದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಅಜೀಜ್ ಸೇಟ್.—ಖಾಸಗಿ ಬಸ್ ಓಡಿಸುವ ಮಾರ್ಗದಲ್ಲಿ ನಮ್ಮ ಬಸ್ ಓಡಿಸುವುದಕ್ಕಾಗುವುದಿಲ್ಲ ಎಂದು ರಿಪೋರ್ಟ್ ಬಂದಿದ್ದರೆ ಕಳುಹಿಸಿಕೊಡಿ. ಯಾವ ಸಂದರ್ಭದಲ್ಲಿ ಆ ರೀತಿ ಹೇಳಿದ್ದಾರೆ ಎಂದು ನಾನು ನೋಡುತ್ತೇನೆ.

ಶ್ರೀ ಟಿ. ತಾರೇ ಗೌಡ.—ತುಮಕೂರಿನಿಂದ ಬುಕ್ಕಾಪಟ್ಟಣಕ್ಕೆ ಸಿರಾ, ತಾವರೆಕೆರೆ ಮಾರ್ಗವಾಗಿ ಬಸ್ ಹಾಕಿದರೆ ಅನುಕೂಲವಾಗುತ್ತದೆ ಎಂದು ಸಲಹೆಗಳನ್ನು ಕಳುಹಿಸಿದ್ದಾರೆ. ಅದನ್ನು ಪರಿಸೀಲಿಸಲಾಗುತ್ತದೆಯೇ ?

ಶ್ರೀ ಅಜೀಜ್ ಸೇಟ್.—ಸಲಹೆಮಾಡಿರುವುದರ ಬಗ್ಗೆ ಎಗ್ಜಾಮಿನ್ ಮಾಡಿಸಿ ರಿಪೋರ್ಟ್ ತರಿಸಿಕೊಂಡು, ರಿಪೋರ್ಟ್ ಬಂದ ನಂತರ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಖಾಸಗಿ ಬಸ್ಸುಗಳ ಜೊತೆಗೆ ನಮ್ಮ ಸರ್ಕಾರಿ ಬಸ್ಸುಗಳು ಓಡುತ್ತಿರುವ ಕಡೆಗಳಲ್ಲಿ ತಮಗೆ ಗೊತ್ತಿರುವಂತೆ ಸರ್ಕಾರಿ ಬಸ್ಸುಗಳು ಸರಿಯಾಗಿ ನಡೆಯುತ್ತಿಲ್ಲ, ನಷ್ಟವಾಗುತ್ತದೆ, ಖಾಸಗಿ ಬಸ್ ಮಾಲೀಕರಿಗೂ ಹಾಗೂ ಸರ್ಕಾರದ ಅಧಿಕಾರಿ ವರ್ಗಕ್ಕೂ ಸಂಪರ್ಕವಿದ್ದು, ಕೆಲವು ವ್ಯವಹಾರಗಳು ನಡೆಯುತ್ತಿವೆ. ಅದನ್ನು ತಮ್ಮ ಗಮನಕ್ಕೆ ತಂದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಅಧ್ಯಕ್ಷರು.—ಅದು ಹೈಪಾಥೆಟಿಕಲ್ ಪ್ರಶ್ನೆ.

ಶ್ರೀ ಸಿ. ಬೈರೇ ಗೌಡ.—ಕೋಲಾರ ಜಿಲ್ಲೆಯಲ್ಲಿ ವೇಮಗಲ್‌ನಿಂದ ಶ್ರೀತಿ ಮತ್ತು ಸೆಟ್ಟಿಮಾದಮಂಗಲದಿಂದ ಕೈವಾರ ಕ್ರಾಸ್ ಈ ಎರಡೂ ಮಾರ್ಗಗಳಲ್ಲಿ ಬಸ್ಸುಗಳನ್ನು ಓಡಿಸುವ ಬಗ್ಗೆ ಪತ್ರ ಬರೆದಿದ್ದೆ. ಅದರ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆಂದು ಹೇಳಬಹುದೇ ?

ಶ್ರೀ ಅಜೀಜ್ ಸೇಟ್.—ಮಾನ್ಯ ಸದಸ್ಯರ ಪತ್ರವನ್ನು ಸೆಂಟ್ರಲ್ ಆಫೀಸಿಗೆ ಕಳುಹಿಸಿದ್ದೇನೆ. ಅವರಿಂದ ರಿಪೋರ್ಟ್ ಬಂದ ತಕ್ಷಣ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವುದಾಗಿ ಉತ್ತರ ಬರೆದಿದ್ದೇನೆ. ಪುನಃ ಅದೇ ಉತ್ತರ ಹೇಳುತ್ತಿದ್ದೇನೆ.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಮೋಟಾರ್ ವೆಹಿಕಲ್ಸ್ ಆಕ್ಟ್ 47ನೇ ಸೆಕ್ಷನ್ ಪ್ರಕಾರ ಆರ್. ಟಿ. ಎ. ಪ್ರತಿ ಐದು ವರ್ಷಕ್ಕೊಂದು ಸಲ ರಸ್ತೆಗಳು ಎಷ್ಟೆಷ್ಟು ಇವೆ, ಎಷ್ಟೆಷ್ಟು ಪುನರ್ವ್ಯವಸ್ಥೆ ಮಾಡಬಹುದು ಎಂದು ಅವರು ವಿಮರ್ಶೆ ಮಾಡಬೇಕು. ಅದು ಅವರ ಸ್ಟ್ಯಾಚ್ಯೂಟರಿ ಫಂಕ್ಷನ್ ; ಕ್ವಾಸಿ ಜುಡಿಷಿಯಲ್ ಫಂಕ್ಷನ್. ಆ ದೃಷ್ಟಿಯಿಂದ ಬಳ್ಳಾರಿ ಜಿಲ್ಲೆ ಆರ್.ಟಿ.ಎ. ಯಾವಾಗ ಪರಿಶೀಲನೆ ಮಾಡುತ್ತಾರೆ, ಯಾವ ಯಾವದನ್ನು ಜಾಸ್ತಿ ಮಾಡುತ್ತಾರೆಂದು ನಿರ್ದಿಷ್ಟವಾಗಿ ಉತ್ತರ ಹೇಳಬಲ್ಲಿರಾ ?

Sri AZEEZ SAIT.—For question (*a*) I have stated 'Yes' and Question (*c*) I have stated 'Yes'. I have nothing to say beyond that.

Dry Farming Schemes in Hadagali and Mallapur Taluks

372. Sri C. ANDANAPPA (Hadagali).—

Will the Minister for Agriculture and Forests be pleased to state :—

whether there is any proposal before the Government to recommend to the Central Government to extend the dry farming scheme to all the villages of Hadagali and Mallapur Taluks, as they are chronically drought affected areas ?

Sri K. H. PATIL (Minister for Agriculture and Forests).—

No.

ಶ್ರೀ ಸಿ. ಅಂದಾನಪ್ಪ.—ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಶಿಫಾರಸು ಮಾಡುತ್ತೀರಾ ?

† ಶ್ರೀ ಕೆ. ಎಚ್. ಪಾಟೀಲ್.—ಒಣ ಬೇಸಾಯದ ಯೋಜನೆಯನ್ನು ವಿಸ್ತರಣೆ ಮಾಡುತ್ತೀರಾ ಎಂದು ಕೇಳಿದ್ದಕ್ಕೆ ಅಂಥ ಯೋಜನೆ ಇಲ್ಲ ಎಂದು ಹೇಳಿದ್ದೇವೆ. ಮಾನ್ಯ ಸದಸ್ಯರ ಅವಗಾಹನೆಗೆ ತರಬೇಕು ಎಂದರೆ, ಕೇಂದ್ರ ಸರ್ಕಾರದವರೇ ಪೂರ್ಣ ವೆಚ್ಚವನ್ನು ವಹಿಸಿಕೊಳ್ಳುವಂಥ ಒಣ ವ್ಯವಸಾಯ ಯೋಜನೆಯೊಂದನ್ನು 8 ಸಾವಿರ ಎಕರೆ ಪ್ರದೇಶದಲ್ಲಿ ಹಡಗಲ ತಾಲ್ಲೂಕಿನಲ್ಲಿ ತೆಗೆದುಕೊಳ್ಳಲಾಗಿದೆ. ಅದು 1973–74 ರವರೆಗೂ ನಡೆಯುತ್ತದೆ ಅದಕ್ಕೆ 20 ಲಕ್ಷ ರೂಪಾಯಿನಷ್ಟು ಹಣ ಖರ್ಚಾಗಬಹುದು ಎನ್ನುವ ಅಂದಾಜಾಗಿದೆ. ಅದರ ಹೊಣೆಯನ್ನು ಕೇಂದ್ರ ಸರ್ಕಾರ ಸಂಪೂರ್ಣವಾಗಿ ಹೊತ್ತಿದೆ. ಆದುದರಿಂದ ಹಡಗಲಿಯ ಎಲ್ಲ ತಾಲ್ಲೂಕುಗಳಿಗೆ ವಿಸ್ತರಣೆ ಮಾಡುವಂಥ ಕಾರ್ಯಕ್ರಮ ಇಲ್ಲ. ಪ್ರಾಜೆಕ್ಟ್ ರಿಪೋರ್ಟ್ ಈಗ ಕೊಟ್ಟಿರುವುದರಿಂದ, ಅದರಿಂದ ಆಗುವ ಅನುಭವವನ್ನು ನೋಡಿಕೊಂಡು, ಅದು ಯಶಸ್ವಿಯಾದನಂತರ ಮುಂದೆ ವಿಸ್ತರಣೆ ಮಾಡಲಿಕ್ಕೆ ಬರೆಯುತ್ತೇವೆ. ಈಗ ಏನೂ ಮಾಡಲಿಕ್ಕೆ ಬರುವುದಿಲ್ಲ.

ಶ್ರೀ ಸಿ. ಅಂದಾನಪ್ಪ.—ಈಗ ಎರಡು ವರ್ಷದ ಅನುಭವವಾಗಿದೆ. ಅದರಿಂದ ಮುಂದಿನ ವರ್ಷಕ್ಕೆ ವಿಸ್ತರಣೆ ಮಾಡಿಕೊಡಲಾಗುತ್ತದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಈಗ ಯಾವುದೂ ಸರ್ಕಾರದ ನಜರಿನಲ್ಲಿ ಇಲ್ಲ. ಈ ಯೋಜನೆಯು ಹಂತ ಪೂರ್ತಿ ಮುಗಿಯುವವರೆಗೆ ಅದರ ಅನುಭವವನ್ನು ನೋಡಬೇಕು. ನೋಡಿದ ಮೇಲೆ, ಪರಿಣಾಮಕಾರಿಯಾಗಿದ್ದು, ಆವಶ್ಯಕವಿದ್ದರೆ, ಮಾನ್ಯ ಸದಸ್ಯರ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ಆ ರೀತಿ ವಿಸ್ತರಣೆಗೆ ಪ್ರಯತ್ನ ಮಾಡಲಾಗುತ್ತದೆ.

MADAM SPEAKER.—Now Question Hour is over.

QUESTIONS FOR ANSWERS ON THE DAY

(but not taken up)

Lift irrigation Project at Jevargi Taluk

239. Sri PRABHAKAR TELKAR (Kalagi).—

Will the Minister for Public Works and Electricity be pleased to state :—

(*a*) whether it is not a fact that Government has started a lift irrigation Project in Jewargi Taluk, Gulbarga District ;

(SRI PRABHAKAR TELKAR)

(b) if so, the cost of the same ;

(c) the area that was proposed to be irrigated under this lift irrigation project ;

(d) the reasons for not irrigating the entire land which was proposed to be irrigated under the scheme ?

SRI H. M. CHANNABASAPPA (Minister for Public Works and Electricity).—

(a) No.

(b) Does not arise in view of reply to clause (a).

(c) Does not arise in view of reply to clause (a).

(d) Does not arise in view of reply to clause (a).

Lift Irrigation Scheme at Mudukathore

248. SRI G. MADE GOWDA (Kirugavalu) :—

Will the Minister for Public Works and Electricity be pleased to state :—

(a) whether plans and estimates have been prepared for " Lift Irrigation Scheme" at Mudukathore by river Cauvery to supply water to B. G Pura and Kirugavalu hoblies in Malavalli Taluk ;

(b) if so, the cost of the Scheme and the total area to be irrigated under this Scheme ;

(c) when the Government will sanction this scheme ?

SRI H. M. CHANNABASAPPA (Minister for Public Works and Electricity) :—

(a) Yes. An estimate for Lift Irrigation Scheme near Mudukathore in T. Narasipura Taluk has been prepared.

(b) (i) The amount of estimates as per S. R. of 1971-72 is Rs. 20.46 lakhs.

(ii) Atchkat proposed to be irrigated is 7,200 acres semi-dry.

(c) As per Government Order No. PWD 4 LBW 66 dated 15th June 1971, the beneficiaries will have to form a co-operative Society and further raise funds for the Scheme in the manner stipulated in the said Government Order before the scheme could be considered for sanction and implementation.

CALLING ATTENTION TO A MATTER OF URGENT PUBLIC IMPORTANCE

re: Buses running between Gulbarga and Aurad—suspension of.

Sri BAPU RAO PATIL (Aurad).—[In Urdu].

Sri AZEEZ SAIT (Minister for Labour).—Mysore State Road Transport Corporation Services on the routes Gulbarga-Aurad and Bidar-Aurad were operated on a temporary permit valid upto 31st May 1972. The operation of these services were suspended as the applications of Mysore State Road Transport Corporation for Fresh Temporary permits to operate these services were rejected by the Regional Transport Authority, Bidar. Arrangements are now being made to issue fresh temporary permits on application by Mysore State Road Transport Corporation and the Mysore State Road Transport Corporation has been requested to apply for the same immediately and to resume these services early.

I am happy to inform the House that the Deputy Commissioner, Bidar, has now reported, which is just now received, that Temporary permit authorising the vehicles to run on the Gulbarga-Aurad and Bidar to Aurad Routes have been issued for a period of 4 months after obtaining the application from the M.S.R.T.C. It is also ascertained from the M.S.R.T.C. that the above two services have been resumed form 5th July 1972. This is for the information of the House.

Sri BAPU RAO PATIL:—[Hindi.]

Sri AZEEZ SAIT:—[Hindi.]

Raising the number of seats in the Agricultural Colleges

Sri H. S. SIDDAPPA (Arsikere).—I am raising a question of great public importance with regard to the admissions of students to the Agricultural Colleges in the State. The last date for finalising the admissions to the Agricultural Colleges in the State is supposed to be the day after tomorrow. I understand that a good number of agriculturists' sons have applied for admission. It is difficult for these candidates to get admissions, because, according to the S. Y. Committee's recommendations, the minimum marks that the candidates have to secure in the interview is 45 per cent ; in the written test they have to get about 50 per cent and in the oral test also they have to get about 50 per cent marks. The aggregate percentage has been fixed as 50 per cent. In these circumstances, the agriculturists' sons have no chance to get into the Agricultural College. Further, the seats that are available in the Bangalore College are 200 and in Dharwar, 120. The total accommodation for students for admission is only 320. in our state. If the capacity is raised to 500 Seats, the agriculturists'

(SRI H. S. SIDDAPPA)

sons would get seats. We would like to have an assurance from the Government that they would help the sons of the soil to get admissions in the Colleges.

† Sri K. H. PATIL (Minister for Agriculture).—Government is already aware of the seriousness of the situation. Government is also aware of the demand of the hon. Members made during the course of discussion. Unfortunately, when the notification was issued, the University has not been issued directions specifying the seats for the sons of the soil. Government is thinking of issuing such a notification from next year. But in the meanwhile, Government is also making strenuous efforts to see what can be done to help the sons of the soil and to see that they are accommodated. If necessary, by taking legal opinion, we will see whether the number of seats could be increased, as suggested by some hon. Members. I can assure you that I fully sympathise with the feeling of the hon. Members in this regard. Fixation of the percentage, etc., is left to the discretion of the Government.

[Leakage of water at the Bhadra Reservior]

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಒಂದು ಮುಖ್ಯವಾದ ವಿಷಯವನ್ನು ತಮ್ಮ ಮೂಲಕ ಈ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. '13-7-1972ರ ಪ್ರಜಾವಾಣಿಯಲ್ಲಿ ಭದ್ರಾ ಜಲಾಶಯದ ಬಗ್ಗೆ ಒಂದು ನ್ಯೂಸ್ ಬಂದಿದೆ. ಏನೆಂದರೆ, ಭದ್ರಾ ಜಲಾಶಯದಿಂದ ಬೇಸಿಗೆ ಬೆಳೆಗೆ ನೀರು ದೊರೆಯುವುದಿಲ್ಲ" ಎಂದು ಜಿಲ್ಲಾಧಿಕಾರಿ ಬಾಲಸುಬ್ರಮಣ್ಯಂ ಅವರು ನಿನ್ನೆ ಇಲ್ಲಿ ತಿಳಿಸಿದರು ಎಂದು ಇದೆ. ಅದಕ್ಕಿಂತ ಮುಖ್ಯವಾಗಿ ಭದ್ರಾ ಜಲಾಶಯದ ಕಟ್ಟೆಯ ಮಧ್ಯಭಾಗದಲ್ಲಿ ನೀರು ಸೋರುತ್ತಾ ಇರುವುದರಿಂದ ಆ ಭಾಗದಲ್ಲಿ ತ್ವರಿತವಾಗಿ ರಿಪೇರಿ ಕೆಲಸ ಆಗದಿದ್ದರೆ, ಇಡೀ ಜಲಾಶಯಕ್ಕೆ ಅಪಾಯ ಸಂಭವಿಸಿ ಇನ್ನೂ ಹೆಚ್ಚಿನ ತೊಂದರೆ ಆಗುವ ಸಂಭವವಿದೆಯೆಂದು ಅವರು ತಿಳಿಸಿದರು ಎಂದು ಕೂಡ ಇದೆ. ಅದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ? ಇನ್ನೊಂದು ರೈತರಿಗೆ ಮುಂದಿನ ವರ್ಷಕ್ಕೆ ಅನಾನುಕೂಲವಾಗುತ್ತದೆ ಎಂದು ಹೇಳುತ್ತಾರೆ. ಇದರ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಂಡಿದ್ದಾರೆ ಎನ್ನುವುದನ್ನು ಮಾನ್ಯ ಮಂತ್ರಿಗಳು ಈ ಸಭೆಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ನನಗೆ ನೋಟೀಸ್ ಕೊಟ್ಟಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ.

ಅಧ್ಯಕ್ಷರು.—ಮಂತ್ರಿಗಳು ಮತ್ತು ಮಾನ್ಯ ಸದಸ್ಯರು ಒಪ್ಪಿಕೊಂಡರೆ ಹೇಗೆ !

ಶ್ರೀ ಎಂ. ಎಸ್. ಕೃಷ್ಣನ್.—ಇದು ರೈತರ ವಿಷಯ, ರಾಜ್ಯಕ್ಕೆ ಸಂಬಂಧಪಟ್ಟ ವಿಷಯ, ಈಗಾಗಲೇ ಶರಾವತಿ ಡ್ಯಾಮ್ ತೂತಾಗಿವೆ, ಇವತ್ತು ಭದ್ರಾ ಡ್ಯಾಂ ತೂತಾಗಿದೆ.

† ಶ್ರೀ ಎಚ್. ಎನ್. ನಂಜೇಗೌಡ.—(ದೊಡ್ಡ ನೀರಾವರಿ ಶಾಖೆಯ ರಾಜ್ಯ ಮಂತ್ರಿಗಳು) ಇದು ಅಂಥ ಗಾಬರಿ ಪಡಬೇಕಾದಂಥ ವಿಷಯವಲ್ಲ. ಅಲ್ಲಿ ತೂಬಿನ ಮಧ್ಯ ಭಾಗದಲ್ಲಿ ತೂತಾಗಿ ಲೀಕೇಜು ಇರುವುದು ನಿಜ. ಅದನ್ನು ರಿಪೇರಿ ಮಾಡಬೇಕು. ಇದರ ಬಗ್ಗೆ ನಾವು ಅಂದಾಜು ಕೂಡ ಮಾಡಿಸಿದ್ದೇವೆ. ಅದರ ರಿಪೇರಿ ಖರ್ಚು ಎರಡು ಲಕ್ಷರೂಪಾಯಿಗಳಾಗುತ್ತದೆ. ನೀರಿನ ಮಟ್ಟ ಹೆಚ್ಚಾಗಿ, ನೀರಿನ ಒತ್ತಡ ಜಾಸ್ತಿಯಾಗಿರುವುದರಿಂದ ಎಷ್ಟು ಸಿಮೆಂಟ್ ಉಪಯೋಗಿಸಿ ತೂತನ್ನು ಮುಚ್ಚಿದರೂ ನೀರು ಸೋರುವುದು ನಿಲ್ಲುವುದಿಲ್ಲ. ಇದರ ಪ್ರಯುಕ್ತ ಅಲ್ಲಿಯ ಸಾರ್ವ

ಜನಿಕ ಮುಖಂಡರೊಡನೆ ಖುದ್ದಾಗಿ ಮಾತನಾಡಿದ್ದೇವೆ. ಇದು ಏನು ಅಂಥ ತಲೆ ಹೋಗತಕ್ಕ ಸಮಾಚಾರವಲ್ಲ. ರಿಪೇರಿ ಕೈಗೊಳ್ಳಬೇಕಾದರೆ, ನೀರನ್ನು ಡಿಪ್ಲೀಟ್ ಮಾಡಬೇಕಾಗುತ್ತದೆ. ಒಳಭಾಗದಲ್ಲಿ ಡಿಪ್ಲೀಟ್ ಮಾಡದಿದ್ದರೆ, ರಿಪೇರಿ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಇದನ್ನು ಮಾಡುವುದಕ್ಕೆ ಎರಡು ತಿಂಗಳು ಬೇಕಾಗುತ್ತದೆ. ನೀರನ್ನು ಡಿಪ್ಲೀಟ್ ಮಾಡಿ ಕೆಲಸ ಮುಗಿಸುವುದಕ್ಕೆ ಎರಡು ತಿಂಗಳು ಬೇಕಾಗುತ್ತದೆ. ಇನ್ನು ಮುಂಚೆಯೇ ಮಾಡಬೇಕಾಗಿತ್ತು. ಆದರೆ ಈ ಪ್ರದೇಶಗಳಲ್ಲಿ ಸ್ಟ್ಯಾಂಡಿಂಗ್ ಕ್ರಾಪ್ ಇರುವುದರಿಂದ, ಅಲ್ಲಿಯ ಮುಖಂಡರುಗಳನ್ನು ಕೂಡ ಸರ್ಕಾರದವರು ಕಾನ್‌ಫಿಡೆನ್ಸಿಗೆ ತೆಗೆದುಕೊಂಡು ಅವರ ಒಪ್ಪಿಗೆ ಪಡೆದಿದ್ದೇವೆ. 1973ರ ಮಾರ್ಚ್ ಅಥವಾ ಏಪ್ರಿಲ್‌ನಲ್ಲಿ ರಿಪೇರಿ ಕಾರ್ಯವನ್ನು ಮುಗಿಸಬೇಕು ಎಂದು ಸರ್ಕಾರ ತೀರ್ಮಾನ ಮಾಡಿದೆ. ಅದರ ಪ್ರಕಾರ ನೋಟಿಫೈ ಮಾಡುತ್ತೇವೆ, ಮಾನ್ಯ ಕೃಷ್ಣನ್‌ರವರಾಗಲೀ, ಮಾನ್ಯ ಸದಸ್ಯರಾಗಲೀ ಗಾಬರಿ ಪಡಬೇಕಾದಂಥ ಸಮಾಚಾರವೇನಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಮಂತ್ರಿಗಳು, ರಿಪೇರಿಗೆ ಎರಡು ಲಕ್ಷರೂಪಾಯಿಗಳು ಬೇಕಾಗುತ್ತದೆ, ಹಾಗೂ ಯಾರೂ ಗಾಬರಿ ಪಡಬೇಕಾದ ವಿಷಯವಲ್ಲ ಎಂದು ಹೇಳಿದರು, ಈ ಕಟ್ಟೆ ಕಟ್ಟಿಸಿದ ಇಂಜನಿಯರು ಯಾರು ?

ಅಧ್ಯಕ್ಷರು.—ಮಾನ್ಯ ಸದಸ್ಯರು ಒಂದು ಮುಖ್ಯ ಅಂಶವನ್ನು ಈ ಸಭೆಯ ಗಮನಕ್ಕೆ ತಗೆದುಕೊಂಡು ಬಂದರು, ಮಂತ್ರಿಗಳು ರಿಪೇರಿ ಮಾಡಿಸುತ್ತೇವೆ ಎಂದು ಹೇಳಿದ್ದಾರೆ. ನೀವು ಅದನ್ನು ಕಟ್ಟಿದಂಥ ಇಂಜನಿಯರು ಯಾರು ? ಪ್ರೊಫೆಸರ್ ಯಾರು ಎಂದು ಕೇಳಿದರೆ ಹೇಗೆ ?

ಶ್ರೀ ಸಿ. ಬೈರೇಗೌಡ (ವೇಮಗಲ್).—ಕೋಲಾರದ ಸರ್ಕಾರಿ ಕಾಲೇಜು ಅಡ್ಮಿಷನ್ ಬಗ್ಗೆ 5—6 ಸಾರಿ ಈ ಸಭೆಯಲ್ಲಿ ಹೇಳಿದ್ದೆ. ಇನ್ನೂ 100 ಚಿಲ್ಲರೆ ಜನಕ್ಕೆ ಅಲ್ಲಿ ಅಡ್ಮಿಷನ್ ಆಗಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರು ಮಂತ್ರಿಗಳ ಛೇಂಬರ್‌ಗೆ ಹೋಗಿ ನೋಡಿ, ಅವರಿಂದ ಫೋನ್ ಮಾಡಿಸ್ಸಿ.

ಶ್ರೀ ಸಿ. ಬೈರೇಗೌಡ.—ಇವತ್ತು ಹನ್ನೊಂದೂವರೆ ಗಂಟೆಗೆ ಈ ವಿಷಯವನ್ನು ಮಾನ್ಯ ಅಧ್ಯಕ್ಷರಿಗೆ ಬರೆದು ಕಳುಹಿಸಿದ್ದೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಬರೆದು ಕಳುಹಿಸಿದ ತಕ್ಷಣ ಈ ವಿಷಯವನ್ನು ತೆಗೆದು ಕೊಳ್ಳುವುದಕ್ಕಾಗುವುದಿಲ್ಲ. ಮಂತ್ರಿಗಳು ಬಂದನಂತರ ನೋಡೋಣ.

Message from the Governor—Announcement

MADAM SPEAKER.—I have an announcement to make. I have received a message of His Excellency the Governor recommending the introduction of consideration of The Mysore Appropriation (No. 2) Bill, 1972.

Hon. Minister for Finance to introduce the Bill.

Mysore Appropriation (No. 2) Bill, 1972.

Introduction

SRI M. Y. GHORPADE (Minister for Finance).—I beg to introduce The Mysore Appropriation (No. 2) Bill, 1972.

MADAM SPEAKER.—The Mysore Appropriation (No. 2) Bill, 1972 is introduced.*

*Bill reproduced as an annexure.

SRI C. M. ARUMUGAM (K.G.F.).—Madam Speaker, I have got one point. As per Rule 64, "the Speaker may, on request being made to him or her, order the publication of any Bill (together with the Statement of Objects and Reasons, the memorandum regarding delegation of legislative power and the financial memorandum accompanying it) in the Gazette, although no motion has been made for leave to introduce the Bill. In that case, it shall not be necessary to move for leave to introduce the Bill and, if the Bill is afterwards introduced, it shall not be necessary to publish it again." That means, if the Bill is published, then there is no need to introduce the Bill.

MR. SPEAKER.—It has always to be introduced.

Sri H. SIDDAVEERAPPA.—I may say these two stages are two distinct stages. Publication is one stage and introduction is another. A Bill cannot be introduced without being published. That is a preliminary Stage. This is the second stage. The only thing is, no motion is necessary when it is to be introduced. Only he says: I introduce. That is perfectly in order.

MADAM SPEAKER.—The bill is introduced. The Hon'ble Minister may move the Bill standing in his name :

Motion to consider

Sri M. Y. GHORPADE : I beg to move :

'That the Mysore Appropriation (No. 2) Bill 1972 be taken into consideration.

MADAM SPEAKER.—Motion moved ;

"That the Mysore Appropriation (No. 2) Bill 1972 be taken into consideration"

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಪತಿಗಳೇ, ಈಗ ಮೈಸೂರು ರಾಜ್ಯದ ಹಣ ವಿನಿಯೋಗಕ್ಕೆ ಸಂಬಂಧಿಸಿದ ಎರಡನೇ ಕಂತಿನ ವಿಧೇಯಕವನ್ನು ನಮ್ಮ ಮುಂದೆ ಅರ್ಥ ಸಚಿವರು ಮಂಡಿಸಿದ್ದಾರೆ. ಬಹುಶಃ ಈ ಸಭೆ ಒಪ್ಪಿಗೆ ಕೊಟ್ಟಮೇಲೆ ಇನ್ನು ಒಂದು ವರ್ಷ ಈ ಹಣ ಖರ್ಚು ಮಾಡುವುದಕ್ಕೆ ಸಭೆಯ ಅನುಮತಿ ಅವಶ್ಯಕವಿಲ್ಲ. ಮುಂದೆ ಏನಾದರೂ ತಾವು ಸಪ್ಲಿಮೆಂಟರಿ ಡಿಮ್ಯಾಂಡ್ಸ್ ನಮ್ಮ ಮುಂದೆ ತರಬೇಕು ಅಷ್ಟೆ. ಈ ದಿವಸ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸರ್ಕಾರ ಹಣವನ್ನು ಖರ್ಚುಮಾಡತಕ್ಕ ಕಾಲದಲ್ಲಿ ಪಕ್ಷಾತೀತವಾದ ದೃಷ್ಟಿಯಿಂದ ಖರ್ಚುಮಾಡತಕ್ಕ ಹವ್ಯಾಸಬೆಳೆಸಿಕೊಳ್ಳಬೇಕು. ಪಕ್ಷಾತೀತ ದೃಷ್ಟಿಯಿಂದ ಖರ್ಚುಮಾಡತಕ್ಕ ಒಳ್ಳೆಯ ಸತ್‌ಸಂಪ್ರದಾಯವನ್ನು ಹಾಕಿಕೊಳ್ಳಬೇಕೆಂದು ನನ್ನ ಸೂಚನೆ. ಈ ರೀತಿ ನಿಮ್ಮ ಮೇಲೆ ಅನುಮಾನ ಏಕೆ ಎನ್ನಬಹುದು. ನಿಮ್ಮ ಬಗ್ಗೆ ಅನುಮಾನ ಪ್ರಾರಂಭವಾಗಿದೆ. ಸಮ್ಮ ಪೌರಾಡಳಿತ ಸಚಿವರಿಗೆ ಎಂತ್ಯೂಸಿಯಾಸಮ್ ತುಂಬ ಹರಿಯುತ್ತದೆ. ಬಹಳ ಸಂತೋಷ. ಅವರದು ಸ್ವಲ್ಪ ಓವರ್ ಎಂತ್ಯೂಸಿಯಾಸಮ್. ವಿರೋಧ ಪಕ್ಷದವರು ಬಂದಿರತಕ್ಕ ಕ್ಷೇತ್ರಗಳಲ್ಲಿ ಹಣವನ್ನು ವಿನಿಯೋಗ ಮಾಡುವ ಕಾಲದಲ್ಲಿ ಈ ಕ್ಷೇತ್ರಗಳ ಅಭಿವೃದ್ಧಿ ಬಗ್ಗೆ ಸರ್ಕಾರ ಹೆಚ್ಚು ಆದ್ಯತೆಯನ್ನು ಕೊಡಬೇಕು. ಆ ಕ್ಷೇತ್ರಗಳ ಪರಿಸ್ಥಿತಿಗೆ ಅನುಗುಣವಾಗಿ ಖರ್ಚು ಮಾಡತಕ್ಕ ಹವ್ಯಾಸವನ್ನು ಇಟ್ಟುಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ನನಗೆ ಎರಡು ವಿಷಯಗಳಲ್ಲಿ ಸರ್ಕಾರದ ನಿರ್ದಿಷ್ಟವಾದ ಅಭಿಪ್ರಾಯಬೇಕು. ಒಂದು ತಾವು ಈಗಾಗಲೇ ಕಳೆದ ಮೂರು ತಿಂಗಳಲ್ಲಿ ಅಧಿಕಾರ ವಹಿಸಿಕೊಂಡಮೇಲೆ ಕೆಲವು ಸಂಸ್ಥೆಗಳಿಗೆ ಖಾಸಗೀ ಸದಸ್ಯರನ್ನು ನಾಮಕರಣ ಮಾಡಿದ್ದೀರಿ. ತಾವು ಈಗಾಗಲೇ ಪಾರ್ಟಿಸಾನ್ ಅಟ್ಟಿಟ್ಯೂಡ್‌ನಿಂದ ನಿರ್ಣಯವನ್ನು ತೆಗೆದುಕೊಂಡಿದ್ದೀರಿ ಎನ್ನುವುದನ್ನು ಸ್ಥೂಲವಾಗಿ ಪರಿಶೀಲನೆ

ಮಾಡಿದರೆ ನೀವು ಪಕ್ಷಾತೀತವಾದ ದೃಷ್ಟಿಯಿಂದ ಹಣವನ್ನು ಖರ್ಚುಮಾಡತಕ್ಕವರಲ್ಲ ಹಿಂದೆ ಬೀಳುತ್ತೀರಿ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಕೆಲವು ಸ್ಟೇಟ್ ಲೆವೆಲ್ ಕಮಿಟಿಗಳಿಗೆ ತಾವು ನಾಮಕರಣ ಮಾಡಿದ್ದೀರಿ. ಸ್ಟೇಟ್ ಪ್ಲಾನಿಂಗ್ ಬೋರ್ಡಿಗೆ ಬಹುಶಃ ಆಡಳಿತ ಕಾಂಗ್ರೆಸ್ಸಿನವರನ್ನು ಬಿಟ್ಟರೆ ಈ ಕಡೆ ಇರತಕ್ಕ ಯಾವ ವ್ಯಕ್ತಿಯೂ ಸಮರ್ಥರಲ್ಲ ಎನ್ನುವ ದೃಷ್ಟಿಯಿಂದ ನಾಮಕರಣ ಮಾಡಿದ್ದೀರಿ. ಇದನ್ನೊಂದನ್ನು ನೋಡುವುದಾದರೆ ವಿರೋಧಪಕ್ಷದ ಸದಸ್ಯರ ಬಗ್ಗೆ ನಿಮಗೆ ಏನು ಅಲಕ್ಷ್ಯ ಮನೋಭಾವನೆ ಇದೆ ಎನ್ನುವುದು ಗೊತ್ತಾಗುತ್ತದೆ. ವಿರೋಧಪಕ್ಷದವರ ಸಂಖ್ಯಾಬಲ ಕಮ್ಮಿ ಇದ್ದರೂ ಅಷ್ಟೊಂದು ಮನಸ್ಸಿನಲ್ಲಿ ಉದ್ಧಟತನ ತೋರಿಸಬಾರದು. ಸಂಖ್ಯಾಬಲ ಕಮ್ಮಿ ಇರಬಹುದು. ರಾಜ್ಯದಲ್ಲಿ ಪ್ರಜಾಪ್ರಭುತ್ವ ಬಾಳಿ ಬೆಳಗಬೇಕಾದರೆ ವಿರೋಧಪಕ್ಷದ ಸದಸ್ಯರಿಗೆ ಸ್ಥಾನಮಾನಗಳನ್ನು ಕೊಡಬೇಕು. ವಿರೋಧಪಕ್ಷದ ಸದಸ್ಯರ ಗೌರವಕ್ಕೆ ಧಕ್ಕೆ ಬಾರದ ರೀತಿಯಲ್ಲಿ ಸಹಕರಿಸಿ ಕೆಲಸಮಾಡತಕ್ಕ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವುದು ಪ್ರಜಾಪ್ರಭುತ್ವದಲ್ಲಿ ಉತ್ತಮವಾದ ನಿಯಮವೆಂದು ತಾವು ಅರಿಯಬೇಕು. ಲ್ಯಾಂಡ್ ಗ್ರ್ಯಾಂಟ್ ಕಮಿಟಿಗಳನ್ನು ಮಾಡುತ್ತಾರೆಂದು ಕೇಳಿದ್ದೇನೆ. ಈ ಹಿಂದಿನ ಸರ್ಕಾರ ಕಮಿಟಿಗಳನ್ನು ನೇಮಕ ಮಾಡಿದಂಥ ಕಾಲದಲ್ಲಿ ಸ್ಥಾನಿಕ ಸಂಸ್ಥೆಗಳಲ್ಲಿ ಇರತಕ್ಕವರಿಗೆ ಈ ಕಮಿಟಿಗಳಲ್ಲಿ ಸದಸ್ಯರನ್ನಾಗಿ ಮಾಡಿದ್ದಾರೆ. ಅಸೆಂಬ್ಲಿ ಮೆಂಬರು, ತಾಲ್ಲೂಕು ಬೋರ್ಡ್ ಅಧ್ಯಕ್ಷರು, ನಿಮ್ಮ ವರ್ಗದ ಪೈಕಿ ಪೌರಸಭೆ ಅಥವಾ ತಾಲ್ಲೂಕು ಅಭಿವೃದ್ಧಿ ಮಂಡಲಿ ಚುನಾಯಿತ ಸದಸ್ಯರು. ಈ ಸದಸ್ಯರನ್ನು ಒಳಗೊಂಡ ಸಮಿತಿಯನ್ನು ತಾಲ್ಲೂಕು ವೈಸ್ ಮಾಡಿದ್ದರು. ಇವೊತ್ತು ಎಲ್ಲಿಯವರೆಗೆ ಹೋಗಿದ್ದೀರಿ ಎಂದು 47 ಜನ ವಿರೋದಪಕ್ಷದ ಸದಸ್ಯರ ಕ್ಷೇತ್ರದಲ್ಲಿ ಸೋತಿರತಕ್ಕಂಥ ಆಡಳಿತ ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿಯನ್ನು ಕೊಟ್ಟರೆ ಅವರನ್ನು ನೀವು ನೇಮಕ ಮಾಡುತ್ತೇವೆ ಎನ್ನುವ ಧಾಟಿಯಲ್ಲಿ ಹೊರಟಿದ್ದೀರಿ. ಮೊದಲೇ 165 ಜನ ಸದಸ್ಯರು ಕೊಟ್ಟ ಪಟ್ಟಿ ಇದೆ. ಇನ್ನು ಗೆದ್ದು ಬಂದಿರತಕ್ಕ 47ಜನ ವಿರೋಧ ಪಕ್ಷದ ಸದಸ್ಯರನ್ನು ಹತ್ತಿಕ್ಕಬೇಕಾದರೆ ನಿಮ್ಮ ಪಕ್ಷದ ಅಭ್ಯರ್ಥಿಗಳು ಸಲಹೆ ಕೊಟ್ಟಿದ್ದರೆ ಮೇಲೆ ಕಮಿಟಿಗಳನ್ನು ಕಾನ್‌ಸ್ಟಿಟ್ಯೂಟ್ ಮಾಡಬೇಕು ಎನ್ನುವ ನಿಲುವನ್ನು ತಳೆದಿದ್ದೀರಿ ಎನ್ನುವುದು ಗೊತ್ತಾಗಿದೆ. ಒಂದುವೇಳೆ ಈ ಒಂದು ಮನೋದಾರ್ಢ್ಯವನ್ನು ಮುಂದುವರಿಸುವುದಾದರೆ ಇತ್ತ ಕಡೆ ಗೌರವಯುತ ಸದಸ್ಯರು ಯಾರೂ ಆ ಕಮಿಟಿಗಳಲ್ಲಿ ಕೆಲಸಮಾಡುವುದಕ್ಕೆ ತಯಾರಾಗಿಲ್ಲ.

2-00 P. M.

ಲ್ಯಾಂಡು ಗ್ರ್ಯಾಂಟು ಕಮಿಟಿಗಳಿಗೆ ನಮ್ಮ ವಿರೋಧ ಪಕ್ಷದವರ ಪೈಕಿ ಯಾರನ್ನೂ ಅಲ್ಲಿಗೆ ನೇಮಕ ಮಾಡುವುದು ಬೇಡ ಎಂದು ನಾನು ಕಳಕಳಿಯಿಂದ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮಲ್ಲಿರುವ 47 ಜನ ವಿರೋಧ ಪಕ್ಷದ ಯಾವ ಸದಸ್ಯರೂ ಈ ಕಮಿಟಿಗಳಲ್ಲಿ ಇದ್ದು ಕೆಲಸ ಮಾಡಲು ನಾವು ಆಸೆಯುಳ್ಳವರಾಗಿಲ್ಲ. ನಿಮಗೆ ನಿಮ್ಮ ಪಕ್ಷವನ್ನು ಬೆಳೆಸಬೇಕು ವಿರೋಧ ಪಕ್ಷವನ್ನು ಹತ್ತಿಕ್ಕಬೇಕು ಎಂಬುದು ನಿಮ್ಮ ಮನಸ್ಸಿನಲ್ಲಿದ್ದರೆ ನಮ್ಮ ಭಾಗದಲ್ಲಿರುವ 47 ಜನರನ್ನು ಬಿಟ್ಟು ಬೇರೆ ನಿಮಗೆ ಯಾರು ಬೇಕಾಗಿವೆಯೋ ಅಂತಹವರನ್ನು ಇದರಲ್ಲಿ ನೇಮಕ ಮಾಡಿಕೊಳ್ಳಬಹುದು. ನಾವು 47 ಜನರೂ ಇದರಲ್ಲಿ ಕೆಲಸ ಮಾಡಲು ತಯಾರಿಲ್ಲ. ಆಡಳಿತ ಪಕ್ಷದವರು ವಿರೋಧ ಪಕ್ಷದವರಿಗೆ ಸರಿಯಾದ ಸ್ಥಾನ ಮಾನಗಳನ್ನು ಕೊಡುವುದು ಯೋಗ್ಯ ಎಂದು ಇಲ್ಲಿ ಹೇಳಲು ಇಚ್ಛೆಪಡುತ್ತೇನೆ. ನಾನು ಇಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ, ಒಂದು ವೇಳೆ ಮುಂದೆ ತಾವು ಇಲ್ಲಿ ಮಾಡುವ ಲ್ಯಾಂಡ್ ಗ್ರ್ಯಾಂಟು ಕಮಿಟಿಗಳಿಗೆ ನಮ್ಮ ಪಕ್ಷದ 47 ಸದಸ್ಯರುಗಳಲ್ಲಿ ಯಾರನ್ನು ಹಾಕಿದರೂ ಅವರು ಖಂಡಿತ ರಾಜಿನಾಮೆ ಕೊಡುತ್ತಾರೆ ಎಂದು ಇಲ್ಲಿ ಹೇಳುತ್ತೇನೆ. ಮತ್ತು ನಮ್ಮ ಪಕ್ಷದ ಸದಸ್ಯರು ಇದರಲ್ಲಿ ಕೆಲಸ ಮಾಡಲು ತಯಾರಾಗಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಇಲ್ಲಿ ತಿಳಿಸುತ್ತಿದ್ದೇನೆ. ಇದರ ಬಗ್ಗೆ ಸರಕಾರದ ನಿಲುವೇನು ಎನ್ನುವುದನ್ನು ಈ ಸಂದರ್ಭದಲ್ಲಿ ತಿಳಿಸಬೇಕೆಂದು ನಾನು ಇಲ್ಲಿ ಕೇಳಲು ಇಚ್ಛೆಪಡುತ್ತೇನೆ.

ಎರಡನೇದಾಗಿ, ತಾಲ್ಲೂಕು ಬೋರ್ಡುಗಳ ಚುನಾವಣೆಗಳ ಪಟ್ಟಿಯಲ್ಲಿ ಕೆಲವು ಲೋಪದೋಷಗಳಿವೆ ಎಂದು ಕೇಳುತ್ತೇವೆ. ಇದನ್ನು ತಿದ್ದುಪಡಿ ಮಾಡಿ ಸರಿಯಾಗಿ ಪ್ರೂಪರ್ಡು ಮಾಡಬೇಕೆಂದು ಸಂಬಂಧಪಟ್ಟ ಮಂತ್ರಿಗಳಲ್ಲಿ ಕೇಳುತ್ತೇನೆ. ಇನ್ನೊಂದು ತಾಲ್ಲೂಕು ಬೋರ್ಡುಗಳ ಚುನಾವಣೆ ಸಂದರ್ಭದಲ್ಲಿ ತಾಲ್ಲೂಕು ಬೋರ್ಡು ಕ್ಷೇತ್ರಗಳ ಮರುವಿಂಗಡಣೆ ಮಾಡುತ್ತಿದ್ದಾರೆಂದು ಕೇಳುತ್ತೇವೆ. ಇಂತಹ ಮರುವಿಂಗಡಣೆ ಮಾಡುವ ಪ್ರವೃತ್ತಿಗೆ ಹೋಗಬಾರದು ಎಂದು ಸರಕಾರದಲ್ಲಿ ಹೇಳುತ್ತೇನೆ. ರಾಜಕೀಯ ಪಕ್ಷಗಳ ಆಧಾರದ ಮೇಲೆ ತಾಲ್ಲೂಕು ಬೋರ್ಡುಗಳ ಕ್ಷೇತ್ರಗಳ ಮರುವಿಂಗಡಣೆ ಮಾಡುವುದಕ್ಕೆ ಕೈ ಹಾಕಬಾರದು. ಈಗಾಗಲೇ ಕ್ಷೇತ್ರಗಳ ಮರುವಿಂಗಡಣೆ ಎರಡು ಸಾರಿ ಆಗಿವೆ. 1960 ರಲ್ಲಿ ಒಂದು ಸಾರಿ ಮತ್ತೆ 1968 ರಲ್ಲಿ ಒಂದು ಸಾರಿ ಕ್ಷೇತ್ರಗಳ

(ಶ್ರೀ ಹೆಚ್. ಡಿ. ದೇವೇಗೌಡ)

ವಿಂಗಡಣೆಯಾಗಿ ಚುನಾವಣೆಗಳು ನಡೆಯಿವೆ. ರಾಜಕೀಯ ಪಕ್ಷಗಳ ಆಧಾರದ ಮೇಲೆ ಮತ್ತು ತಮ್ಮ ಪಕ್ಷದ ಅನುಕೂಲಕ್ಕಾಗಿ ಕ್ಷೇತ್ರಗಳ ಮರುವಿಂಗಡಣೆ ಮಾಡುವುದು ತಪ್ಪು. ಇದನ್ನು ಮಾಡಕೂಡದು ಎಂದು ಇಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇದರ ಬಗ್ಗೆ ಇನ್ನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಇವೆರಡು ಪ್ರಮುಖವಾದ ಸಮಸ್ಯೆಗಳು ಇದ್ದವು, ಒಂದು ವಿರೋಧ ಪಕ್ಷದ ಸ್ಥಾನಮಾನಗಳನ್ನು ಕಾಪಾಡಲು ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಯಾವ ರೀತಿ ಸಹಾಯ ಮಾಡುವುದು ಮತ್ತು ಲ್ಯಾಂಡು ಗ್ರಾಂಟ್ ಕಮಿಟಿಗಳಲ್ಲಿ ನೇಮಕಗಳನ್ನು ಮಾಡುವುದು ಹಾಗೂ ತಾಲ್ಲೂಕು ಬೋರ್ಡುಗಳ ಚುನಾವಣೆಯಲ್ಲಿ ಮತದಾರರ ಕ್ಷೇತ್ರಗಳನ್ನು ವಿಂಗಡಣೆ ಮಾಡುವುದು ಇವುಗಳ ಬಗ್ಗೆ ಸರಕಾರದ ಗಮನವನ್ನು ಸೆಳೆಯಬೇಕೆಂದು ಇಲ್ಲಿ ಹೇಳುತ್ತಿದ್ದೇನೆ. ಶ್ರೀಮಾನ್ ಮಲ್ಲಿಕಾರ್ಜುನಸ್ವಾಮಿಯಂತಹವರು ಮಂತ್ರಿಗಳಾಗಿರುವುದರಿಂದ ಇವರು ಯಾವ ರಾಜಕೀಯಕ್ಕೂ ಒಳಗಾಗುವವರಲ್ಲ ಎಂದು ನಮಗೆ ಗೊತ್ತಿದೆ. ಈಗ ಚುನಾವಣೆಗಳು ನಡೆಯಬೇಕಾಗಿರುತ್ತವೆ ಇವರು ಸಮರ್ಪಕವಾಗಿ ನಡೆಸುತ್ತಾರೆ ಮತ್ತು ಯಾವ ರಾಜಕೀಯಕ್ಕೂ ಅವಕಾಶ ಕೊಡುವುದಿಲ್ಲ ಎಂದು ನಾನು ನಂಬುತ್ತೇನೆ. ನಿಮ್ಮ ಕೈಯಲ್ಲಿ ಇಷ್ಟು ದುಡ್ಡನ್ನೂ ನಂಬಿಕೊಟ್ಟಿರುವುದರಿಂದ ನೀವು ರಾಜ್ಯದ ಕಲ್ಯಾಣಕ್ಕೋಸ್ಕರ ಈ ಹಣವನ್ನು ಉಪಯೋಗ ಮಾಡಬೇಕು. ಇನ್ನು ಅಧಿಕಾರಿಗಳನ್ನು ತಮ್ಮ ಪಕ್ಷದ ಕೆಲವು ಸ್ಥಳೀಯ ಪ್ರಭಾವ ಉಳ್ಳವರಿಗೆ ಒಳಗಾಗಿ ವರ್ಗ ಮಾಡುತ್ತಿದ್ದಾರೆ. ಹೀಗೆ ಅಧಿಕಾರಿಗಳನ್ನು ಆಗಾಗ್ಗೆ ವರ್ಗ ಮಾಡಿದರೆ ಅವರ ಟಿ. ಎ. ಹಾಗೂ ಡಿ.ಎ. ಎಲ್ಲ ಖರ್ಚುಗಳೂ ಸರಕಾರದ ಮೇಲೆ ಬರುವುದಿಲ್ಲವೇ ? ಇದರ ಬಗ್ಗೆ ನನ್ನ ಬಳಿ ನಿದರ್ಶನಗಳಿವೆ, ಕೆಲವು ಅಧಿಕಾರಿಗಳನ್ನು ಆರು ತಿಂಗಳಿಗೊಮ್ಮೆ ವರ್ಗ ಮಾಡಿದ್ದಾರೆ. ವಿರೋಧ ಪಕ್ಷಗಳು ಇರುವ ಕಡೆಗಳಲ್ಲಿ ತಮ್ಮ ಪಕ್ಷಕ್ಕೆ ಬೇಕಾದವರು ಇರಬೇಕೆಂದು ವರ್ಗಗಳನ್ನು ಮಾಡಿದರೆ ಇದರಿಂದ ಸರಕಾರಕ್ಕೆ ಅನುಕೂಲವಾಗುತ್ತದೆಯೋ ! ನಮ್ಮ ಮಾನ್ಯ ಸದಸ್ಯರು ಒಬ್ಬರು ಹೇಳಿದ ಹಾಗೆ ಒಬ್ಬರು ವಿಲೇಜು ಲೆವಲ್ ವರ್ಕರನ್ನು ವರ್ಗ ಮಾಡಕೂಡದು ಎಂದು ಡೈರೆಕ್ಟರು ಹಾಗೂ ಜಾಯಿಂಟು ಡೈರೆಕ್ಟರವರಿಂದ ಶಿಫಾರಸು ಬಂದರೂ ಸರಕಾರ ಕಡೆಗಣಿಸಿ ಅವರನ್ನು ವರ್ಗ ಮಾಡಿದೆ. ಇವೆಲ್ಲಾ ರಾಜಕೀಯಕ್ಕಾಗಿ ಮಾಡಿರುವುದು. ಇಂತಹ ಪ್ರವೃತ್ತಿ ಬೆಳೆಯಬಾರದು

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ (ಸಮಾಜ ವಿಕಾಸ ಮತ್ತು ಸಮಾಜ ಕಲ್ಯಾಣ ಶಾಖೆಗಳ ಮಂತ್ರಿಗಳು).—ವರ್ಗಾವಣೆಗಳೆಲ್ಲವನ್ನೂ ಡಿವಿಜನಲ್ ಕಮಿಷನರುಗಳಿಗೇ ಬಿಡಲಾಗಿದೆ, ಸರಕಾರ ಇದರಲ್ಲಿ ಕೈ ಹಾಕುತ್ತಿಲ್ಲ. ವಿಶೇಷವಾದ ಸಂದರ್ಭಗಳಲ್ಲಿ ಡಿವಿಜನಲ್ ಕಮಿಷನರುಗಳು ಸರಕಾರಕ್ಕೆ ಶಿಫಾರಸು ಮಾಡಿದರೆ ಆಗ ಅದನ್ನು ಯೋಚನೆ ಮಾಡಲಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ವರ್ಗಾವಣೆಗಳನ್ನು ಮಾಡುತ್ತಿಲ್ಲ ಎಂದು ಹೇಳುತ್ತಾರೆ. ಬಹಳ ಸಂತೋಷ. ಸರಕಾರ ಇಂತಹ ಒಂದು ಅವ್ಯವಹಾರಗಳಿಗೆ ಕೈ ಹಾಕಬಾರದು ಎಂದು ಇಲ್ಲಿ ಹೇಳುತ್ತಿದ್ದೇನೆ. ಆದರೆ ಬರೀ ಹೇಳಿಕೆಯನ್ನು ಕೊಡುವುದರಿಂದ ಏನೂ ಆಗುವುದಿಲ್ಲ. ಕಾರ್ಯತಃ ಇದನ್ನು ಮಾಡಿದರೆ ಆಗ ಇದು ತಿಳಿಯುತ್ತದೆ. ಮಾನ್ಯ ಮಂತ್ರಿಗಳಿಗೆ ಹೇಳುವುದು ನನಗೆ ತಿಳಿದಿರುವಂತೆ ಎಂಟು ಕಡೆಗಳಲ್ಲಿ ಈ ರೀತಿ ವರ್ಗಾವಣೆಗಳು ನಡೆದಿವೆ. ಬೇಕಾದರೆ ಹೆಸರುಗಳನ್ನು ಕೊಡಬಹುದು. ಆದರೆ ಇದರಿಂದ ದೇಶದ ರಾಜಕೀಯ ಸಾಧನೆ ಯಾಗುವುದಿಲ್ಲ. ಒಬ್ಬ ಅಧಿಕಾರಿಯನ್ನು ಮೂರು ತಿಂಗಳಲ್ಲಿ ಎಂಟು ಕಡೆಗೆ ವರ್ಗ ಮಾಡಿದ್ದಾರೆ. ಇವರನ್ನು ಫುಟ್‌ಬಾಲ್ ಚೆಂಡು ಒದೆಯುವಂತೆ ಒಂದು ಕಡೆಯಿಂದ ಇನ್ನೊಂದು ಕಡೆ ವರ್ಗ ಮಾಡಿದರೆ ಅದರಿಂದ ಕಾರ್ಯ ಸಾಧನೆ ಮಾಡಿದಂತಾಗುತ್ತದೆಯೆ ! ಈ ತರಹ ವರ್ಗಾವಣೆ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನಲ್ಲಾಗಿದೆ, ಪಿ. ಡಬ್ಲ್ಯು. ಡಿ. ಡಿಪಾರ್ಟ್‌ಮೆಂಟಿನಲ್ಲಿ ಆಗಿದೆ. ಆಡಳಿತ ನಡೆಸತಕ್ಕ ಅಧಿಕಾರಿಗಳಿಗೆ ಮನಸ್ಸು ನೋಯುವಂತೆ ಇಲ್ಲ ಮಾತನಾಡಬೇಕೆಂದು ನಾನು ಮಾತನಾಡುತ್ತಿಲ್ಲ. ಶ್ರೀಮಾನ್ ಬಸವಲಿಂಗಪ್ಪನವರು ನಿನ್ನೆ ಇಲ್ಲಿ ಭಾಷಣ ಮಾಡುವಾಗ ಆಡಳಿತದ ವಿಚಾರವಾಗಿ ಸರಿಯಾಗಿ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ ಎಂದು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ವಿರೋಧ ಮಾಡಬೇಕೆಂದು ಕೀಳುಮಟ್ಟದ ರಾಜಕಾರಣೆಯಾಗಬಾರದು ಎನ್ನುವುದನ್ನು ನಾನು ಸ್ವಾಗತ ಮಾಡುತ್ತೇನೆ. ಹರಿಜನರಿಗೆ ಈಗ ಶೇಡಾ 18 ರಷ್ಟು ಮೀಸಲಿಡಬೇಕು ಎಂದು ಹೇಳುವುದನ್ನು ಮುಂದೆ ಸರಕಾರ ಶೇಕಡಾ 25 ರಷ್ಟು ಮೀಸಲಾಗಿಡುತ್ತೇವೆ ಎಂದು ಹೇಳಿದರೆ ಅದನ್ನು ನಾನು ವಿರೋಧ ಮಾಡುವುದಿಲ್ಲ ಮತ್ತು ಆ ಬಗ್ಗೆ ನನಗೆ ಯಾವ ಅಸಮಾಧಾನವೂ ಇಲ್ಲ. ಆದರೆ ಅಧಿಕಾರ ದುರುಪಯೋಗವಾಗಬಾರದು ಎಂದು ಇಲ್ಲಿ ಹೇಳುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ (ನಗರಾಡಳಿತ ಶಾಖೆಯ ಮಂತ್ರಿಗಳು).—ಶ್ರೀಮಾನ್ ದೇವೇಗೌಡರು ಸಹೃದಯತೆಯಿಂದ ಇಲ್ಲಿ ಮಾತನಾಡುತ್ತಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಸೈಟುಗಳನ್ನು ಕೊಡುವಾಗ ಒಂದು ಕಡೆ ಸುಮಾರು 20 ಎಕರೆ ಇಲ್ಲವೆ ನಲವತ್ತು ಎಕರೆ ಭೂಮಿ ಇರುವ ಪ್ರದೇಶದಲ್ಲಿ ಇತರ ಜನರಿಗೆ ಸೈಟುಗಳನ್ನು ಕೊಡುವ ಹಾಗೆ ಕೊಟ್ಟಿರುವುದರಲ್ಲಿ ಯಾರೋ ಒಬ್ಬರು ಮಂತ್ರಿಗಳು ಆಗಿರಬಹುದು. ಇಲ್ಲವೇ ಬೇರೆ ಕಡೆಗಳಲ್ಲಿ ಅಧಿಕಾರದಲ್ಲಿರಬಹುದು. ಅಂತಹವರು ಒಂದು ಹತ್ತು ಗುಂಟೆ ಭೂಮಿ ಬೇಕೆಂದು ಕೇಳಿದರೆ, ಆಗ ಅವರಿಗೆ ಕೊಟ್ಟರೆ, ಅದರಲ್ಲೇನೋ ದೊಡ್ಡ ಅಪರಾಧವಾಗಿದೆ ಎಂದು ಸರಕಾರವನ್ನು ಟೀಕೆ ಮಾಡುತ್ತಾರೆ. ಅಧಿಕಾರದಲ್ಲಿರುವವರಿಗೆ ಸೈಟುಗಳನ್ನು ಕೊಡಬಾರದು ಎನ್ನುವುದನ್ನು ಹೇಗೆ ಪ್ರಿವೆಂಟುಮಾಡಲು ಆಗುತ್ತದೆ? ಇದರಲ್ಲಿ ಯಾವ ರೀತಿ ತಪ್ಪಾಗುತ್ತದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಮಂತ್ರಿಗಳಾಗಿದ್ದವರು, ಆ ಸ್ಥಾನದಲ್ಲಿದ್ದು ಅದನು ಪಡೆಯಲು ಅರ್ಹತೆಗಳಿದ್ದರೆ, ಪಡೆಯಬಾರದು ಎಂದು ನಾನು ಹೇಳುತ್ತಿಲ್ಲ. ಇದರ ಬಗ್ಗೆ ನಾನು ಈಗ ಸ್ಪಷ್ಟವಾಗಿ ಇಲ್ಲಿ ಹೇಳುತ್ತಿದ್ದೇನೆ. ಈ ಸಭೆಯ ಕಾರ್ಯಕಲಾಪಗಳನ್ನು ನಾನು ಹತ್ತಾರು ವರ್ಷಗಳಿಂದ ಸಭೆಯ ಸದಸ್ಯನಾಗಿ ಹಾಗೂ ಸದಸ್ಯನಾಗಿ ಇಲ್ಲದೇ ಇದ್ದಾಗಲೂ ಬಹಳ ಆಸಕ್ತಿಯಿಂದ ನೋಡುತ್ತಾ ಬಂದಿದ್ದೇನೆ. ಸುಮಾರು ಇಪ್ಪತ್ತು ವರ್ಷಗಳಿಂದಲೂ ಈ ಸಭೆಯಲ್ಲಿ ಅಭ್ಯಾಸ ಮಾಡುತ್ತಾ ಬಂದಿದ್ದೇನೆ. ಇದೇ ಸಭೆಯಲ್ಲಿ ಹಿಂದೆ ಇಲ್ಲಿ ದಿವಂಗತ ಶ್ರೀ ಸುಬ್ರಮಣ್ಯಂರವರು ಮಂತ್ರಿಗಳಾಗಿದ್ದಾಗ ಅವರ ಮಗ ಕಂಟ್ರಾಕ್ಟರು ಆಗಿದ್ದರು, ಇಲ್ಲಿ ಬಹಳ ಚರ್ಚೆಗಳಾದವು. ಅದೇ ರೀತಿ ಶ್ರೀಮಾನ್ ನಿಜಲಿಂಗಪ್ಪನವರು ಮಂತ್ರಿಗಳಾಗಿದ್ದಾಗ ಅವರ ಮಗ ಕಂಟ್ರಾಕ್ಟರಾಗಿದ್ದರು ಎಂದು ಇಲ್ಲಿ ಆಪಾದನೆಗಳು ಬಂದವು. ಆಗ ಶ್ರೀಮಾನ್ ನಿಜಲಿಂಗಪ್ಪನವರು ನನಗೆ ಅದರ ವಿಚಾರ ಗೊತ್ತಿಲ್ಲ ಎಂದು ಹೇಳಿದ್ದರು. ಇಂತಹ ವಿಷಯಗಳಲ್ಲಿ ಸಭೆಯಲ್ಲಿ ಸಾಕಷ್ಟು ಚರ್ಚೆಗಳಾಗಿವೆ. ಇದು ಎಲ್ಲರಿಗೂ ಗೊತ್ತು. ಆದರೆ ಮಂತ್ರಿಮಂಡಲದಲ್ಲಿ ಮಂತ್ರಿಗಳಾಗಿದ್ದರೂ ಅವರಿಗೆ ಬೇರೆ ಕಡೆಗಳಲ್ಲಿ ಭೂಮಿ ಪಡೆಯಲು ಅರ್ಹತೆಗಳಿದ್ದರೆ ಅದನ್ನು ಪಡೆಯಬಹುದು. ಆದರೆ ಇದರಲ್ಲಿ ರಾಜಕೀಯ ಭ್ರಷ್ಟಾಚಾರವಾಗಬಾರದು, ಮಂತ್ರಿಗಳಾಗಿದ್ದಾಗ ಅವರ ಸ್ಥಾನದ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳಲು ಅವಕಾಶ ಕೊಡಬಾರದು. ಮಂತ್ರಿಗಳಾಗಿದ್ದರೆ ಅವರ ಮಗ ಬೇರೆ ಕೆಲಸದಲ್ಲಿ ಇರಬಾರದು ಎಂದು ಹೇಳುತ್ತಿಲ್ಲ. ಅವರ ಪ್ರಭಾವದಿಂದ ಮಾತ್ರ ಕೆಲಸ ಮಾಡಬಾರದು ರಾಜ್ಯ ಸರಕಾರದ ಹಿತಕ್ಕೆ ಧಕ್ಕೆ ಬರುವ ರೀತಿಯಲ್ಲಿರಬಾರದು. ಇಲ್ಲದೇ ಇದ್ದರೆ ಇದೇ ಭ್ರಷ್ಟಾಚಾರಕ್ಕೆ ಒಂದು ಬುನಾದಿಯಾಗುತ್ತದೆ. ಹಿಂದೆ ಸರಕಾರ ಸುಮಾರು 40–50 ಎಕರೆ ಭೂಮಿಯನ್ನು ಯಾರು ಯಾರಿಗೋ ಹಂಚಿರುತ್ತಾರೆ. ಸರಕಾರ ಒಂದು ವೇಳೆ ಇವನ್ನು ಹಂಚುವಾಗ ನೀತಿಬಾಹಿರವಾಗಿ ಹಂಚಿದ್ದರೆ ಕಾನೂನಿಗೆ ವಿರೋಧವಾಗಿ ಮಾಡಿದ್ದರೆ, ಸರಕಾರದ ಆಸ್ತಿಗೆ ಧಕ್ಕೆ ತರುವಂತೆ ಆಗಿದ್ದರೆ ಅದು ಭ್ರಷ್ಟಾಚಾರವಾಗುತ್ತದೆ. ಇಲ್ಲದೇ ನಿಯಮಗಳಿಗೆ ಅನುಸಾರವಾಗಿ ಕಾರ್ಯಕ್ರಮಗಳನ್ನು ತೆಗೆದುಕೊಂಡು ಭೂಮಿ ಹಂಚಿದರೆ ಅದು ತಪ್ಪಾಗುವುದಿಲ್ಲ. ಯಾರೇ ಆಗಲೀ ಅವರು ಅಧಿಕಾರದಲ್ಲಿದ್ದರೂ ಅವರಿಗೆ ಅರ್ಹತೆಗಳಿದ್ದರೆ ಅವರಿಗೆ ಭೂಮಿಯನ್ನು ಹಂಚುವುದು ತಪ್ಪು ಎಂದು ಹೇಳುತ್ತಿಲ್ಲ. ಕಾನೂನಿಗೆ ವಿರೋಧವಾಗಿ ಮಾಡಿದ್ದರೆ ಮಾತ್ರ ಅದು ತಪ್ಪಾಗುತ್ತದೆ, ಇದರಲ್ಲಿ ನಾವೇನೂ ರಾಜಕೀಯ ಮಾಡುವ ಕಾರ್ಯಕ್ಕೆ ಕೈ ಹಾಕುವುದಿಲ್ಲ. ಇವೊತ್ತು ಕೇಂದ್ರದ ಒಬ್ಬರು ಮಂತ್ರಿಗಳಿಗೆ ಹರಿಜನರು ಎಂಬುದಾಗಿ ಜಮೀನು ಕೊಟ್ಟಿದ್ದರೂ ಸಹ ಅದು ತಪ್ಪಾಗುತ್ತದೆ. ಹರಿಜನರೇ ಆಗಲಿ, ಒಕ್ಕಲಿಗರೇ ಆಗಲಿ, ತಪ್ಪು ತಪ್ಪೇ. ಕಾನೂನಿನ ರೀತ್ಯಾ ಯಾವ ಜಾತಿಯವರು ತಪ್ಪುಮಾಡಿದರೂ ಸಹ ಅದು ತಪ್ಪಾಗುತ್ತದೆ. ಹರಿಜನರು ತಪ್ಪು ಮಾಡಿದರೆ ಅಥವಾ ಮರ್ಡರ್ ಮಾಡಿದರೆ ಅದಕ್ಕೂ 18 ಪರ್ಸೆಂಟ್ ರಿಜರ್ವೇಷನ್ ಇಟ್ಟು ಕ್ಷಮಿಸುವುದಕ್ಕಾಗುವುದಿಲ್ಲ. ಈ ಒಂದು ದೃಷ್ಟಿಕೋನದಿಂದ ನಾನು ಹೇಳಿದನೇ ಹೊರತು ಅವರ ಹಕ್ಕಿಗೆ ಟಾರ್ ಬಳಿಯಬೇಕು ಎಂಬ ಭಾವನೆಯಿಂದ ನಾನು ಹೇಳಲಿಲ್ಲ.

Sri C. M. ARUMUGAM.—Madam, I have lot of respect for Sri Deve Gowda, the Leader of the Opposition. But his sarcastic reference to 18 per cent reservation for Harijans even in murder cases is something which I cannot tolerate. It is a remark which touches me to the quick or for that matter anybody who belongs to that community. There is nobody who is so anti-scheduled Caste as Sri Nijalingappa. He and Sri Veerendra Patil were communal-minded and they have spoilled the progress of the State. I may make it clear that I am not here to

(SRI C. M. ARUMUGAM)

support Sri Basavalingappa or Sri Mallikarjunaswamy. But while attacking them, if he says that they should not also claim 18 per cent reservation in murder cases in a sarcastic manner, it hurts the feelings of the Scheduled Caste people as a whole, which forms one-fifth of the population. I have no objection if he attacks Sri Basavaligappa or Mallikarjunaswamy or Rathod or Kitturor or Devaraj Urs or Hutchamasty Gowda but I would request him to refrain from making such sarcastic references to my community as a whole.

ಅಧ್ಯಕ್ಷರು:—18 ಪರಸೆಂಟ್ ಆಗಲೀ, ಒಂದು ಪರ್ಸೆಂಟ್ ಆಗಲೀ, ಯಾರ ಮನಸ್ಸಿಗೂ ನೋಯಿಸುವ ಹಾಗೆ ಮಾತನಾಡುವುದನ್ನು ಆದಷ್ಟು ಮಟ್ಟಿಗೆ ಬಿಟ್ಟುಬಿಡುವುದು ಒಳ್ಳೆಯದು. ಇಲ್ಲದಿದ್ದರೆ ಯಾರಿಗೆ ಚುಚ್ಚುತ್ತದೋ ಅವರಿಗೆ ನೋವಾಗುತ್ತದೆ. ಆದ್ದರಿಂದ ಆ ರೀತಿ ಮಾತನಾಡದೇ ಇರುವುದು ಒಳ್ಳೆಯದು.

ಎಚ್. ಡಿ. ದೇವೇಗೌಡ — ಯಾರ ಮನಸ್ಸನ್ನು ನೋಯಿಸಬೇಕೆಂಬುದು ನನ್ನ ಮನಸ್ಸಿನಲ್ಲಿ ಇಲ್ಲ. ಆದರೆ ಒಂದು ಸಣ್ಣ ವಿಷಯವನ್ನು ದೊಡ್ಡದು ಮಾಡುವುದು ಒಳ್ಳೆಯದಲ್ಲ. I have all respect for my friend Sri Arumugham who is an elderly member. I have never made that remark or allegation against the Central Deputy Minister on the basis of community. He is in office and he has misused his ofiice to take land in Belgaum city. That is the allegation I made on the General Administration Demand. What I mean to say is that under the guise of community, you cannot escape. ಹಿಂದೆ ಶ್ರೀಮಾನ್ ನಿಜಲಿಂಗಪ್ಪನವರು ತಪ್ಪು ಮಾಡಿದ್ದರೆ ಅವರನ್ನು ಬಿಡುವುದಕ್ಕೆ ಸಾಧ್ಯವಿಲ್ಲ. ಅಥವಾ ವೀರೇಂದ್ರ ಪಾಟೀಲರಾಗಲೀ ಜತ್ತಿಯವರಾಗಲೀ ತಪ್ಪು ಮಾಡಿದ್ದರೆ ಅವರನ್ನು ಸಹ ಬಿಡುವುದಕ್ಕೆ ಸಾಧ್ಯವಿಲ್ಲ. ಹಿಂದಿನ ಸರ್ಕಾರದಲ್ಲಿ ಒಂದೇ ಕೋಮಿಗೆ ಜಮೀನು ಮಂಜೂರು ಮಾಡಿದ್ದಾರೆಂದು ಹೇಳುವುದಾದರೆ, Let this Ministry hold a thorough enquiry into it. I am not bothered whether Sri Nijalingappa or Sri Veerendra Patil made a mistake; I am not going to support them. ನಾನು ಯಾವುದೇ ವ್ಯಕ್ತಿಯ ಪ್ರಭಾವದಿಂದ ಇಲ್ಲಿ ಕೆಲಸ ಮಾಡುವುದಕ್ಕೆ ಬಂದಿಲ್ಲ. ಅದು ಸಾಧ್ಯವೂ ಇಲ್ಲ. ಆದರೆ ನೀವು ಹೇಳತಕ್ಕಂಥ ಕಾಲದಲ್ಲಿ ನಿಮ್ಮ ವರ್ಗದವರನ್ನು ದೊಡ್ಡದು ಮಾಡಿ ಹೇಳುವುದು ಬೇಡ. ಆ ರೀತಿ ಹೇಳಬಾರದಾಗಿತ್ತು; ಅಧಿಕಾರದಲ್ಲಿದ್ದುಕೊಂಡು ಯಾರೇ ತಪ್ಪು ಮಾಡಿರಲಿ, ಅಥವಾ ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿದ್ದರೆ ಅದು ತಪ್ಪಾಗುತ್ತದೆ.

SRI B. BASAVALINGAPPA:—The hon. Member should have mentioned simultaneously all the persons who are grantees of lands in Belgaum City. Out of 22 persons who were granted lands, he is taking only one instance where Sri Sankaranand was given 10 guntas of land and is leaving out other instances where persons have been given 43 acres and 20 acres of land. Out of the 22 he picks up only one man because he holds office in the Government of India and magnifies the whole thing. In my reply the other day I justified my stand. The hon. Member only magnified the particular act of a person who is legitimately entitled to get that land.

ಶ್ರೀ ಜೆ. ಎಲ್. ಕಬಾಡಿ.—ನಾಗನೂರ ಅವರಿಗೂ ಸಹ ಜಾಗ ಕೊಟ್ಟಿದ್ದಾರೆ.

SRI C. M. ARUMUGAM.—The retired I. G. P, Sri Louis has by using threat and force taken land both there as well as in Bangalore.

V-.31 N 72
N73-5-1-10
(B) 4889

I request the Hon. Minister to place the list before us so that we can find out what exactly is the matter. And the wonderful Governor gave him six months extension also.

Sri AZEEZ SAIT (Minister for Labour).—There seems to be Division in the ranks of the Opposition. Therefore, the less they talk the better.

Sri H. D. DEVE GOWDA.— Hon. Minister said that in addition to Sri Sankaranand some others also have taken lands. Sri Arumugham mentioned the name of Sri Louis. If Louis has taken land it does not mean that it is correct. ಲೂಯೀಸ ಅವರು ತೆಗೆದು ಕೊಂಡರೆ ಒಳ್ಳೆಯದು ಎಂದು ಹೇಳುವುದಕ್ಕಾಗುವುದಿಲ್ಲ. ನಾನು ಸಭಾಧ್ಯಕ್ಷಿಣಿಯವರ ಮೂಲಕ ಹೇಳುವುದೇನೆಂದರೆ, ಲಿಂಗಾಯಿತರೇ ಆಗಲಿ, ಹರಿಜನರೇ ಆಗಲಿ, ಒಕ್ಕಲಿಗರೇ ಆಗಲಿ, ತಪ್ಪು ಜಾತಿಯ ಆಧಾರದ ಮೇಲೆ ಆಗಬಾರದು. ಜಾತಿಯ ಹೆಸರನ್ನು ಹೇಳಿ ಇಂಥವರು ಮುಂದುವರಿದಿದ್ದಾರೆ, ಇಂಥವರು ಹಿಂದುಳಿದಿದ್ದಾರೆ ಎನ್ನುವವಾದಕ್ಕೆ ಹೋಗಬೇಡಿ. ಏತಕ್ಕೆಂದರೆ ಈಗ ಲಿಂಗಾಯಿತರು ಈ ರಾಜ್ಯವನ್ನು ಆಳಿದರು. ಆದರ ನನ್ನ ಒಂದು ಕ್ಷೇತ್ರದಲ್ಲಿಯೇ ಹಲವಾರು ಜನ ಲಿಂಗಾಯಿತರು ಗುಡಿಸಲುಗಳಲ್ಲಿ ವಾಸವಾಗಿದ್ದಾರೆ. ಈ ದೃಷ್ಟಿಯಿಂದ ಜಾತಿಯ ಆಧಾರದಮೇಲೆ ಅವರನ್ನು ಶೋಷಣೆ ಮಾಡಬೇಡಿ. ಕೆಲವು ಮುಖಂಡರು ಜಾತೀಯ ಆಧಾರದ ಮೇಲೆ ಅವರನ್ನು ಶೋಷಣೆ ಮಾಡಿ ರಾಜಕೀಯ ವೇಷ ಭೂಷಣಗಳನ್ನು ಹಾಕಿಕೊಂಡು ಮೆರೆದಿದ್ದಾರೆ. ಅದು ಶ್ರೀಮಾನ್ ದೇವರಾಜ್ ಅರಸ್ ಅವರಿಗೂ ಅನ್ವಯ ಆಗುತ್ತದೆ. ಏತಕ್ಕೆಂದರೆ ಅವರೂ ಸಹ ಶ್ರೀಮಾನ್ ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ ಇದ್ದರು. ನಿಮ್ಮ ವರ್ಗದವರು ತಪ್ಪು ಮಾಡಿದ್ದಕ್ಕೋಸ್ಕರ ಅದನ್ನು ಬಹಿರಂಗಪಡಿಸಿದರು ಎಂದು ಹೇಳಿದರು. ಅದು ಸರಿಯಲ್ಲ, ಒಂದುವೇಳೆ ಹಿಂದಿನ ಸರ್ಕಾರದವರು ತಪ್ಪು ಮಾಡಿದ್ದರೆ ಅದನ್ನು ಈ ಸಭೆಯ ಮುಂದೆ ತನ್ನಿ. ನಾನು ಅದನ್ನು ಬೇಡ ಎಂದು ಹೇಳುವುದಿಲ್ಲ.

ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ನೇಮಕ ಮಾಡುತ್ತೇವೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಆ ಬಗ್ಗೆ ನಾನು ಒಂದು ಸೂಚನೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಹಿಂದೆ ಹಿಂದುಳಿದ ವರ್ಗದವರಿಗೆ ಸಂಬಂಧಪಟ್ಟಹಾಗೆ ಶ್ರೀಮಾನ್ ನಾಗನಗೌಡರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದ್ದರು. ಆಗ ಕೆಲವು ಜಾತಿಗಳವರಿಗೆ ಹಿಂದುಳಿದ ಪಂಗಡದವರ ಲಿಸ್ಟಿನಲ್ಲಿ ಅವಕಾಶ ಸಿಕ್ಕಲಿಲ್ಲ, ಅವರನ್ನು ಹಿಂದುಳಿದ ಪಂಗಡದವರ ಲಿಸ್ಟಿಗೆ ಸೇರಿಸಲಿಲ್ಲ ಎಂದು ಒಂದು ದೊಡ್ಡ ಆಂದೋಳನ ಆಯಿತು. ಅಂಥಾ ಒಂದು ಅನಾಹುತ ಈಗ ಆಗುವುದು ಬೇಡ. ಈಗಲೇ ಸರ್ಕಾರದವರು ಅಂಕಿ ಅಂಶಗಳನ್ನು ಸಂಗ್ರಹಣೆ ಮಾಡಬೇಕು. ಮುಖ್ಯಮಂತ್ರಿಗಳು ಜನರಲ್ ಅಡ್ಮಿನಿಸ್ಟ್ರೇಷನ್ ಬೇಡಿಕೆಯ ಚರ್ಚೆಗೆ ಉತ್ತರವನ್ನು ಕೊಡತಕ್ಕ ಸಂದರ್ಭದಲ್ಲಿ ನಮ್ಮ ರಾಜ್ಯದ ಐ. ಎ. ಎಸ್. ಆಫೀಸರ ಪೈಕಿ 5 ಜನ ಒಕ್ಕಲಿಗರು ಇದ್ದಾರೆ, 7-8 ಜನ ಲಿಂಗಾಯಿತರು ಇದ್ದಾರ ಎಂದು ಹೇಳಿದ್ದಾರೆ. ಇತರ ಜನಾಂಗದ ಅಂಕಿ ಅಂಶಗಳು ನನ್ನಲ್ಲಿ ಇಲ್ಲ ಎಂದು ಹೇಳಿದ್ದಾರೆ. ಲಿಂಗಾಯಿತರು ಮತ್ತು ಒಕ್ಕಲಿಗರ ಜಾತಿಯ ಅಂಕಿ ಅಂಶಗಳು ಹೇಗೆ ಸಿಕ್ಕಿತು, ಬಾಕಿಯದು ಏತಕ್ಕೆ ಸಿಕ್ಕಲಿಲ್ಲ ಎನ್ನುವ ಸಂಶಯ ಬರುತ್ತದೆ. ಅದಕ್ಕೋಸ್ಕರ ನಾನು ಸರ್ಕಾರದವರಿಗೆ ಹೇಳುವುದೇನೆಂದರೆ ಕ್ಲಾಸ್ 1 ಐ. ಎ. ಎಸ್ ಮತ್ತು ಐ ಪಿ.ಎಸ್ ಕ್ಲಾಸ್ 2 ಕ್ಲಾಸ್ 3 ಕ್ಲಾಸ್ 4 ಎಲ್ಲಾ ನೌಕರಿಗಳಲ್ಲಿಯೂ ಯಾವ ಜನಾಂಗದವರು ಎಷ್ಟೆಷ್ಟು ಜನ ಇದ್ದಾರೆ ಎನ್ನುವ ಅಂಕಿ ಅಂಶಗಳನ್ನು ಕೊಡಿ. ಯಾರು ಯಾರಿಗೆ ಎಷ್ಟು ಪರ್ಸೆಂಟ್ ಕೆಲಸ ಸಿಕ್ಕಿದೆ ಎನ್ನುವ ಅಂಕಿ ಅಂಶಗಳನ್ನು ಕೊಡಿ. ಇದರಲ್ಲಿ ಯಾರಿಗೂ ತಾರತಮ್ಯ ಆಗಬಾರದು. ಲಿಂಗಾಯಿತರು ಮತ್ತು ಒಕ್ಕಲಿಗರು ಬೇರೆ ಜಾತಿಯವರನ್ನು ಶೋಷಣೆ ಮಾಡಿ ಎಲ್ಲಾ ಇಲಾಖೆಗಳಲ್ಲೂ ಬಹಳ ಹೆಚ್ಚು ಕೆಲಸಗಳನ್ನು ಪಡೆದುಕೊಂಡಿದ್ದರೆ ಅವರಿಗೆ ಇನ್ನು 10 ವರ್ಷ ಕೆಲಸಗಳನ್ನು ಕೊಡುವುದು ಬೇಡ ಎಂದು ಒಂದು ಸ್ಪೆಷಲ್ ಜಿ. ಓ. ಮಾಡಿ. ಅವರಿಗೆ ಕೆಲಸಕೊಡುವುದನ್ನು ತಡೆಹಿಡಿಯಿರಿ. ಬೇರೆ ಜಾತಿಯವರಿಗೂ ಕೆಲಸಗಳು ಸಿಕ್ಕಿ ತಾರತಮ್ಯ ಸರಿಯಾಗುವವರೆಗೂ ಅವರಿಗೆ ಕೆಲಸವನ್ನು ಕೊಡುವುದು ಬೇಡ ಎಂದು ಬೇಕಾದರೆ ಈ ಸಭೆಯಲ್ಲಿ ಒಂದು ನಿರ್ಣಯ ತೆಗೆದುಕೊಳ್ಳಿ. ನಾನು ಸ್ವಾಗತ ಮಾಡುತ್ತೇನೆ. ಅವರು ಬಹಳ ಮುಂದೆ ಹೋಗಿದ್ದರೆ ಸ್ವಲ್ಪಕಾಲ ಹಿಂದೆ ಇರಲಿ. ಅದಕ್ಕೋಸ್ಕರ ಕ್ಲಾಸ್ 1 ಕ್ಲಾಸ್ 2 ಕ್ಲಾಸ್ 3 ಕ್ಲಾಸ್ 4 ಈ ನೌಕರರು ಯಾವ ಯಾವ ಜನಾಂಗದವರು ಎಷ್ಟೆಷ್ಟು ಜನಗಳು ಇದ್ದಾರೆ ಎನ್ನತಕ್ಕ ಅಂಕಿ ಅಂಶಗಳನ್ನು ಸಂಗ್ರಹಣೆ ಮಾಡಿ ಆ ಅಂಕಿ ಅಂಶಗಳನ್ನು ಟರ್ಮ್ಸ್ ಅಂಡ್ ರೆಫರೆನ್ಸ್‌ನಲ್ಲಿ ಸೇರಿಸಿ ಬ್ಯಾಕ್‌ವರ್ಡ್ ಕಮಿಷನ್ನಿನವರಿಗೆ ಕೊಟ್ಟರೆ

(SRI H. D. DEVE GOWDA)

ಅವರು ಅದನ್ನೆಲ್ಲಾ ವಿಚಾರಣೆ ಮಾಡುವುದಕ್ಕೆ ಹೆಚ್ಚು ಅನುಕೂಲವಾಗುತ್ತದೆ. ಒಕ್ಕಲಿಗರು 9 ವರ್ಷ ರಾಜ್ಯವನ್ನು ಆಳಿದರು, ಲಿಂಗಾಯಿತರು 15 ವರ್ಷ ರಾಜ್ಯವನ್ನು ಆಳಿದರು ಎಂದು ಹೇಳಿ ಅವರನ್ನು ತುಳಿದು ರಾಜಕೀಯ ಚದುರಂಗದ ಆಟವನ್ನು ಆಡುವುದು ಬೇಡ. ದಯಮಾಡಿ ಸರ್ಕಾರದವರು ಈ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಿ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕು ಇಷ್ಟು ವಿಷಯಗಳನ್ನು ಹೇಳಿ ಶ್ರೀಮಾನ್ ಬಸವಲಿಂಗಪ್ಪನವರು ಮತ್ತು ಶ್ರೀಮಾನ್ ಅರುಮುಗಂ ಅವರು ಹರಿಜನರ ಕೆಲಸಗಳನ್ನು ಮಾಡತಕ್ಕ ಕಾಲದಲ್ಲಿ ಆ ಬಗ್ಗೆ ಅವರಿಗೆ ಎಷ್ಟು ಆಸಕ್ತಿ ಇದೆಯೋ ನನಗೂ ಅಷ್ಟೇ ಆಸಕ್ತಿ ಇದೆ. ಈ ದೇಶದಲ್ಲಿ ಹಿಂದುಳಿದ ವರ್ಗದವರಾಗಲೀ, ಹರಿಜನರಾಗಲೀ ಅವರ ಅಭಿವೃದ್ಧಿಯ ಬಗ್ಗೆ ಕಾರ್ಯವನ್ನು ಮಾಡುವಾಗ ಎಲ್ಲರೂ ಸಹಕರಿಸಬೇಕು ಎನ್ನುವ ದೃಷ್ಟಿಯಿಂದ ನಾನು ಹೇಳುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ (ಆರೋಗ್ಯ ಶಾಖೆಯ ಮಂತ್ರಿಗಳು).—ಈಗ ಮೊನ್ನೆ ನಡೆದ ಸೆನ್‌ಸೆಸ್‌ನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರನ್ನು ಬಿಟ್ಟು ಬೇರೆ ಯಾವ ಜಾತಿಯನ್ನು ನಮೂದಿಸಿಲ್ಲ. ಹೀಗಿರುವಾಗ ಯಾವ ಆಧಾರದ ಮೇಲೆ ಅಂಕಿಅಂಶಗಳನ್ನು ಕಂಡುಹಿಡಿಯುವುದಕ್ಕಾಗುತ್ತದೆ ?

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮುಖ್ಯ ಮಂತ್ರಿಗಳು ಯಾವ ಆಧಾರದ ಮೇಲೆ ಲಿಂಗಾಯಿತರು ಮತ್ತು ಒಕ್ಕಲಿಗರ ಕೋಮಿನ ಅಧಿಕಾರಿಗಳ ಅಂಕಿ ಅಂಶಗಳನ್ನು ಕೊಟ್ಟರೋ ಅದೇ ಆಧಾರದ ಮೇಲೆ ಬಾಕಿ ಜನಗಳ ಅಧಿಕಾರಿಗಳ ಅಂಕಿ ಅಂಶಗಳನ್ನು ಸಂಗ್ರಹ ಮಾಡಲಿ.

ಶ್ರೀ ಅಜೀಜ್ ಸೇಟ್. – ನೀವು ಮಾಡಿದ ಕಚಡಾವನ್ನೆಲ್ಲಾ ತೆಗೆದುಕೊಂಡು ಬಂದು ನಮ್ಮ ತಲೆಯ ಮೇಲೆ ಹಾಕಿದ್ದೀರಿ.

ಶ್ರೀ ಎಚ್. ಡಿ. ದೇವೇಗೌಡ.—ಅದರ ಹೊರೆಯನ್ನು ನಾವು ಹೊತ್ತಿದ್ದೇವೆ.

ಶ್ರೀ ಅಜೀಜ್ ಸೇಟ್.—ನೀವು ಮಾಡಿದ ಕಚಡಾವನ್ನೆಲ್ಲಾ ನಾವು ಈಗ ಕ್ಲೀನ್ ಮಾಡುತ್ತಿದ್ದೇವೆ.

Sri H. D. DEVE GOWDA.—When you are bringing something before the House don't bluff ; when you give replies on behalf of the government you must give with a sense of responsibility.

Sri C. M. ARUMUGAM.—Upto 1951 census they were recording castes. I am asking Congress (R), where is the need for you to create Scheduled Caste cell Scheuled Tribes cell, etc ? In the organisation you want to create cells.

Sri H. SIDDAVEERAPPA.—If you want, you may have a seperate census for the State. It is a separate matter.

ಶ್ರೀ ಎಚ್. ಡಿ. ದೇವೇಗೌಡ.—ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಮಾನ್ಯ ಮುಖ್ಯ ಮಂತ್ರಿಗಳು ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ನೇಮಕ ಮಾಡುತ್ತೇವೆ ಎಂದು ಹೇಳಿದ್ದಾರೆ. ಆದ್ದರಿಂದ ನಾಳೆ ದಿವಸ ಮತ್ತೆ ಗೊಂದಲ ಆಗುವುದು ಬೇಡ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗಾಗಲೇ ಆಂಧ್ರ, ತಮಿಳುನಾಡು, ಮತ್ತು ಕೇರಳ ಈ ರಾಜ್ಯಗಳಲ್ಲಿ ಇಂಥಾ ಒಂದು ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ನೇಮಕಮಾಡಿ ಅಲ್ಲಿ ಅವರು ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದಾರೆ. ಅಲ್ಲಿ ಯಾವ ಗೊಂದಲವೂ ಇಲ್ಲ. ನಮ್ಮ ಸ್ಟೇಟಿನಲ್ಲಿಯೂ ಯಾವ ತರಹದ ಗೊಂದಲಕ್ಕೂ ಅವಕಾಶವಾಗುವುದಿಲ್ಲ ಎಂದು ನಾವು ಪೂರ್ಣವಾಗಿ ನಂಬಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಆ ರೀತಿ ಗೊಂದಲಕ್ಕೆ ಅವಕಾಶ ಕೊಡದಂತೆ ಮಾಡಿದರೆ ಸಂತೋಷ. ಆ ದೃಷ್ಟಿಯಿಂದ ಯಾರಿಗೂ ನೋವಾಗದ ರೀತಿಯಲ್ಲಿ, ಗೊಂದಲವಾಗದ ರೀತಿಯಲ್ಲಿ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ನಾನು ಮೊದಲೇ ತಿಳಿಸಿದ್ದೇನೆ. ಸರ್ಕಾರದವರು ಖರ್ಚು ಮಾಡತಕ್ಕ ಹಣ ರಾಜ್ಯದ ಎಲ್ಲಾ ಜನಗಳ ಏಳಿಗೆಯ ದೃಷ್ಟಿಯಿಂದ ಪಕ್ಷಾತೀತವಾಗಿ ಖರ್ಚು ಮಾಡುವಂತಹ ಕೆಲಸವನ್ನು ಮಾಡಬೇಕು ಎಂದು ಸಲಹೆ ಮಾಡಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

2-30 P. M.

ಶ್ರೀ ಎಂ. ಎಸ್. ಕೃಷ್ಣನ್.—ನನಗೆ ಎಲ್ಲಾ ವಿಷಯಗಳನ್ನು ಇದರ ಬಗ್ಗೆ ಮಾತನಾಡಬೇಕೆಂದು ಏನೂ ಇಲ್ಲ. ಆದರೆ ಕೆಲವು ಸಮಸ್ಯೆಗಳ ಬಗ್ಗೆ ಡಿಮ್ಯಾಂಡುಗಳ ಮೇಲೆ ಮಾತನಾಡುವಾಗ ಲಕ್ಕೆಸಾಧ್ಯವಾಗಲಿಲ್ಲ, ಅದರ ಬಗ್ಗೆ ಮಾತ್ರ ಮಾತನಾಡುತ್ತೇನೆ. ತಾವು ಅದಕ್ಕೆ ಅವಕಾಶ ಹೇಳಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

SRI C. M. ARUMUGUM.—I will also not touch the points which the other hon. members have spoken.

MADAM SPEAKER.—Now hon. Member Sri M. S. Krishnaswamy speak and also note that there is no repetition.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸ್ವಾಮಿ, ನಾನಾದರೂ ಎರಡು ಮೂರು ಅಂಶಗಳ ಬಗ್ಗೆ ಮಾತ್ರ ಹೇಳಿ ಸರ್ಕಾರದ ಗಮನವನ್ನು ಎಳೆಯಬಯಸುತ್ತೇನೆ. ಇವತ್ತು ವಿರೋಧ ಪಕ್ಷದವರು ಹೇಳಿದ ಹಾಗೆ ಕೋಟ್ಯಾಂತರ ರೂಪಾಯಿಗಳನ್ನು ಸರ್ಕಾರಕ್ಕೆ ಕೊಡುತ್ತಿದ್ದಾರೆ. ನಾನು ಬೇಡಿಕೆಗಳ ಮೇಲೆ ಮಾತನಾಡುವಾಗ ಒಂದು ವಿಚಾರ ಮನಸ್ಸಿಗೆ ಬಂತು. ಅದೇನೆಂದರೆ, ಆಳುವ ಪಕ್ಷದವರು ಅಂದರೆ, ಮಾನ್ಯ ಮುಖ್ಯ ಮಂತ್ರಿಯವರನ್ನು ಸೇರಿಸಿ, ಇಲ್ಲಿ ಏನಾದರೂ ಟೀಕೆಗಳನ್ನು ಮಾಡಿದರೆ ಅದನ್ನು ಒಪ್ಪಿಕೊಳ್ಳುವುದರ ಬದಲು ಡಿಫೆಂಡ್ ಮಾಡುತ್ತಿದ್ದಾರೆ. ಯಾವುದಾದರೂ ಅಧಿಕಾರಿಗಳ ಬಗ್ಗೆಯಾಗಲಿ, ಅಥವಾ ಯಾವುದಾದರೂ ಮಂತ್ರಿಗಳ ಬಗ್ಗೆಯಾಗಲಿ ಮಾತನಾಡಿದರೆ ಅದನ್ನು ಡಿಫೆಂಡ್ ಮಾಡುತ್ತಿದ್ದಾರೆ.

I feel that there should not be an undue haste on the part of the Government to defend the officers. When we make certain points in a forcible manner they should not adopt an attitude which is not healthy one. We do criticise officers very sharply. For instance, we criticised about the Chairman of the Water Board not that we have anything personal against him to see that Bangalore gets water at a cheaper rate. From purely technical point of view the estimate has increased from Rs. 22 crores to Rs. 32 crores and the rate per gallon of water would be Rs. 5 instead of Rs. 4. These are matters affecting the interests of the people at large and with that in view we do criticise the officers sharply. But we saw the Hon. Ministers giving mere casual replies to such points. I would like to impress upon the Government that they should have atleast said that they would examine the matter with the technical experts. These are matters affecting the interests of the people of this City and also the people of the State. Other issues raised were about the Sharavathi, Bhadravati Iron & Steel Works etc. I feel that the Government and particularly the Chief Minister and the Hon. Ministers should show a very sober attitude while replying to the points raised and give a correct information.

Secondly, I would submit that a number of suggestions were made both from this side and the other side of the House. The way in which the replies were given by the Government was that we would consider it or we are happy that you have patted us etc. Of course, we do pat the back of the Ministers when they do certain good things. During the discussion on various demands we were used to be confronted by

(ಶ್ರೀ ಎಂ. ಎಸ್. ಕೃಷ್ಣನ್)

saying that after all this Government has come just three or four months back. It is not merely a question of time or months. we know very well that many of these very gentlemen sitting on the other side were on this side previously; but now they are defending the Government even though they know in their hearts that it is not correct. The very fact that we made sharp criticisms itself is a warning for the Government that we are going to judge them from what they do. Daily we see in the press so many statements stating that slums will be cleared; so many sites will be allotted etc. etc. Even to digest these statements has become difficult for persons like me. When such is the case I think it will be much more difficult for the common man to digest those statements. Instead of making these unnecessary and exaggrated statements let them act and do things sincerely and show how far they are socialists.

If the Government has to carry on they have to consider the most important demands of the NGOs who are the back-bone of the State. I know they had gone to the Hon. Minister and had a discussion with him. But I very humbly submit that the Hon. Minister for Finance should have a very sympathetic attitude towards their demands. To-day we have seen in the press that Mr. Khadilkar has conceded to the arbitration on D.A. to Central employees. The D. A. question of NGOs of Mysore State is also very important to have a clean and efficient administration in the State.

Sri C. M. ARUMUGAM (K.G.F.).—Madam Speaker, we are placing at the disposal of the Government of Mysore 623 and odd crores of rupees. We expect this amount to be spent evenly throughout the year. We see that there is a rush of expenditure in the month of March. Last year, the rush of expenditure in March in almost all the departments averages to about 23 per cent, and in Public Works, Education and Industries Department it is more than 30 per cent. Thus, out of Rs. 600 crores they spent about Rs. 150 to Rs. 200 crores in the month of March. It is very irregular and illegal, because they are bound to commit mistakes when they make rush of expenditure.

My friend Sri Deve Gowda, the Leader of the Opposition stated about the administrative policy. They must have a regular policy in making appointments and nominations to the various Boards. Shall I demand the resignation of the Hon'ble Finance Minister for his mis-use of power in making certain appointments and nominations? He has appointed one Sri Chandrakanta Urs, who was the legal adviser for his father's concern the Sandur Manganese Co., as the Government Advocate. It is wrong. This person has not appeared before the High Court in any Writ Petition, and further he has not appeared before the Supreme Court. The Government Advocate, as you know Madam Speaker, will have to face persons like Sriyuths Setalvad, Daftari, Gupte, etc. One cannot be appointed as a Government Advocate

starightaway. First, one should be appointed as a Government Pleader, then as an Additional Advocate, and then as Government Advocate, so that one gains the necessary experience. But, this person has been straightaway appointed as Government Advocate superseding two persons. Sri Puttaswamy, who is already there has appeared in more than 100 writ petitions, but his claim has been neglected. Sri Chandrakanta Urs has also been nominated to the Bangalore Turf Club. Is there meaning in nominating an Advocate to the Turf Club? Formerly, they used to nominate the Direeter of Animal Husbandry to look after the animals. I am told that the present Advocate General is going to become a Judge of the High Court of Mysore, and Sri Chandrakanta Urs will succeed him. On this very appointment and nomination, I demand the resignation of the Finance Minister—he must resign. If this is the attitude of the Government in about 3 months, what will they do if they are allowed for another five years? This very gentleman Sri Chandrakanta Urs had applied to the Bar Association to permit him to run a Company or as a Contractor But the Bar Association refused his application. He wanted to run a Mining Co., with his wife as a sleeping partner. I therefore plead that his appointment is illegal.

There are some Ministers, who are honest, though new. But some Ministers are mis-using power. A retired brigadier, who happens to be one of the Minister's classmate has been appointed as a Member of the Turf Club. It is unfair on his part to have nominated him. Therefore, I condemn this Government—Sri Devaraj Urs Government - for indulging in appointing and nominating his own men. Is the Turf Club a judicial body? Is that a political appointment?

To argue Government cases in High Court and Supreme Court, persons like the Hon'ble Minister for Health Sri H. Siddaveerappa should be there. What is the fun of appointing a person as a Government Advocate who has not even appeared before the High Court or Supreme Court? God alone should save these Ministers who indulge in such appointments and nominations.

Coming to the functioning of the Finance Department, I should say that it some times becomes a stumbling block something like a piece of sand in the socks. They put queries for small things; they do not want other Departments to run smoothly and independently. This should be removed for the smooth running of various departments.

Regarding allotment of cars and scooters, the policy of the grand old man—Sri Nijalingappa, the former Chief Minister, who used to allot according to this own fancies, is being followed by the present Ministry. Within these three months, they have allotted scooters unscrupulously without observing the usual formalities. The Ministers who are provided with cars, have also applied for allotment of cars out of Government quota. I undestand that 50 MLAs who have applied for allotment of cars are awaiting final allotment of scooters. This clearly shows the present Ministry is following the foot-prints of the Veerendra

(SRĪ C. M. ARUMUGAM)

Patil Ministry. I am still collecting the data with regard to allotment of Scooters. Sri Azeez Sait within these three months has committed blunders in the allotment of scooters.

With these few words, I conclude my speech. I thank the Chair for having given me an opportunity to speak.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಈ ದಿವಸ ಆಡಳಿತವನ್ನು ನಡೆಸುತ್ತಿರುವ ಸರ್ಕಾರ 'ಸಮಾಜವಾದದ ಲೇಬಲ್ಲನ್ನು' ಅಂಟಿಸಿಕೊಂಡು ಎಲ್ಲಾ ವಿಷಯಗಳ ಮೇಲೂ ಇದು ಮಾತನಾಡುತ್ತಿದೆ. ಇಂಥವರ ಕೈಲಿ ನಾವೀದಿವಸ ಕೋಟ್ಯಾಂತರ ರೂಪಾಯಿ ಹಣವನ್ನು ಕೊಡುತ್ತಿದ್ದೇವೆ, ಅಟ್ಟವನ್ನು ಹತ್ತತಕ್ಕವನು ಅಟ್ಟವನ್ನು ಹತ್ತಿದ ಮೇಲೆ, ಆ ಹತ್ತಲಿಕ್ಕೆ ಸಹಾಯಕವಾಗಿದ್ದ ಏಣಿಯನ್ನು ಕಾಲಿನಿಂದ ಒದ್ದು ತಳ್ಳಿದಂತೆ, ಈ ದಿವಸ ಈ ಆಡಳಿತವನ್ನು ನಡೆಸತಕ್ಕ ಪಕ್ಷ ತನ್ನ ಸ್ಥಾನವನ್ನು ತಾನು ಭದ್ರಮಾಡಿಕೊಂಡ ನಂತರ ಈ ಸಮಾಜವಾದವನ್ನು ಕಡೆಗಾಣಿಸುತ್ತಿದೆ. ಒಬ್ಬ ಮಾನ್ಯ ಸಚಿವರು ಇದೇ ಸಂಬಂಧವಾಗಿ ಒಂದು ಸಂದರ್ಭದಲ್ಲಿ ಮಾತನಾಡುತ್ತ ಅವರು ಹೀಗೆ ಹೇಳಿದ್ದಾರೆ. ಅದು ಪತ್ರಿಕೆಯಲ್ಲೂ ವರದಿಯಾಗಿದೆ.—''ಸಣ್ಣ ಕೈಗಾರಿಕೆಗಳ ಮೂಲಕ ಹಿಂದುಳಿದ ಪ್ರದೇಶಗಳ ಆರ್ಥಿಕ ಅಭಿವೃದ್ಧಿ ಕುರಿತು ನೆನ್ನೆ ಇಲ್ಲಿ ಪ್ರಾರಂಭವಾದ ರಾಜ್ಯಮಟ್ಟದ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ್ದ ಸಚಿವರು, ತಾವು ಒಮ್ಮೆ ಉಗ್ರ ಸಮಾಜವಾದಿಗಳಾಗಿದ್ದು, ಭಾರಿ ಕೈಗಾರಿಕಾ ಗೃಹಗಳ ವಿರುದ್ಧ ತೀವ್ರ ಟೀಕೆಗಳನ್ನು ಮಾಡುತ್ತಿದ್ದುದನ್ನು ಸ್ಮರಿಸಿ, ಸಚಿವರಾದ ನಂತರ ಅಧಿಕಾರದ ಹೊಣಗಾರಿಕೆಯಿಂದಾಗಿ ಆ ತೀವ್ರತೆಯನ್ನು ಕಳೆದುಕೊಂಡಿರುವ ಭಾವನೆಯುಂಟಾಗಿದೆ ಎಂದು ಹೇಳಿದರು ...ಇವರು ಹೀಗೆ ಮಾತನಾಡಿರುವುದನ್ನು ನೋಡಿದರೆ ಎಷ್ಟು ಬೇಗ ಇವರು ಸಮಾಜವಾದಕ್ಕೆ ಕಂಳಕ ತಂದಿದ್ದಾರೆ ಎಂಬುದು ಗೊತ್ತಾಗುತ್ತದೆ. ಇವರ ವರ್ತನೆ ದೇಶದ ಜನಕ್ಕೆ ದ್ರೋಹವನ್ನು ಬಗೆಯ ತಕ್ಕ ವರ್ತನೆ ಆಗಿದೆ. ದೇಶದ ಜನತೆಯ ಮುಂದೆ ಆಡಂಬರದ ಮಾತನ್ನಾಡಿ ಅಧಿಕಾರಕ್ಕೆ ಬಂದ ಕೂಡಲೇ ಹೀಗೆ ಮಾಡುವುದು ದೇಶಕ್ಕೆ ದೊಡ್ಡ ಅನ್ಯಾಯಮಾಡಿದಂತೆ. ಈ ಅಂಶವನ್ನು ಗಮನಿಸಿ ಆಡಳಿತವರ್ಗದವರು ಜನತೆಗೆ ಪ್ರಾಮಾಣಿಕತೆಯಿಂದ ನಡೆದುಕೊಳ್ಳಬೇಕಾದ್ದು ಅವರ ಆದ್ಯ ಕರ್ತವ್ಯವೆಂದು ಎಚ್ಚರಿಸಿ, ಜನತೆಯ ನಿಂದನೆಗಳಿಗೆ ಗುರಿಯಾಗಬಾರದೆಂದು ಹೇಳಿ ಈ ವಿಚಾರದಲ್ಲಿ ಅವರು ಒಂದು ಸಮಾಧಾನಕರವಾದ ಹೇಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಈ ದಿವಸ ಬಾಯಲ್ಲಿ ಅರ್ಬನ್ ಪ್ರಾಪರ್ಟಿಗೆ ಸೀಲಿಂಗನ್ನು ತರುತ್ತೇವೆಂದು ಒಂದು ಕಡೆ ಹೇಳುತ್ತಿದ್ದರೆ ಇನ್ನೊಂದು ಕಡೆಯಿಂದ ಜನರಿಗೆ ತಮಗೆ ಬೇಕಾದವರಿಗೆ ವಿಶೇಷವಾಗಿ ಕಪ್ಪು ಹಣವನ್ನು ಗಳಿಸುವುದಕ್ಕೆ ಅವರೇ ಉತ್ತೇಜನ ಕೊಡುತ್ತಿದ್ದಾರೆ. ಒಂದು ಕಡೆ ಸಮಾಜವಾದ ಹೇಳುತ್ತಿದ್ದರೂ ಈ ಸರ್ಕಾರದವರ ನಡೆಯೇ ಒಂದು—ನುಡಿಯೇ ಒಂದಾಗಿದೆ. ಇವರು ಈ ದಿವಸ ಬೆಂಗಳೂರು ಮತ್ತು ಮೈಸೂರುಗಳಲ್ಲಿ ಇರತಕ್ಕ ಮಹಾರಾಜರ ಅರಮನೆಗಳನ್ನು ಕೊಂಡುಕೊಳ್ಳುವುದಕ್ಕೆ ಹೊರಟಿದ್ದಾರೆ. ಒಂದೊಂದು ಅರಮನೆಗೂ 2 ಲಕ್ಷ ರೂಪಾಯಿಗಳ ಬೆಲೆಯನ್ನು ನಿಗದಿ ಮಾಡಿದ್ದಾರೆಂದು ಕೇಳುತ್ತಿದ್ದೇನೆ. ಒಂದೊಂದರ ಬೆಲೆಯೂ ಕನಿಷ್ಟ 9 ಲಕ್ಷ ರೂಪಾಯಿಗಳಿಗೆ ಕಡಿಮೆ ಇರುವುದಿಲ್ಲ. ನನಗೇನೂ ಶ್ರೀಮನ್ಮಹಾರಾಜರ ವಿಷಯದಲ್ಲಿ ಅಪಾದನೆ ಮಾಡಬೇಕೆಂಬ ಉದ್ದೇಶವಿಲ್ಲ. ಅವರ ಬಗ್ಗೆ ನನಗೆ ಅಪಾರವಾದ ಗೌರವವಿದೆ. ಹಾಗೇ ಎಕ್ಸೈಜ್ ಇಲಾಖೆಯಲ್ಲಿ ಅನೇಕರು ಕಪ್ಪು ಹಣವನ್ನು ಯಥೇಷ್ಟವಾಗಿ ದುಡಿಯುತ್ತಿದ್ದಾರೆ. ಬೆಂಗಳೂರಲ್ಲೇ ಇರತಕ್ಕ ಕೆಲವು ಬ್ರೂವರೀಸ್‌ನವರು ಸರ್ಕಾರಕ್ಕೆ ಕೊಡಬೇಕಾದ ಎಕ್ಸೈಜ್ ಡ್ಯೂಟಿಯನ್ನೂ ಕೊಡದೆ ತಪ್ಪಿಸಿಕೊಂಡು ಸರ್ಕಾರಕ್ಕೆ ತಪ್ಪು ಲೆಕ್ಕಗಳನ್ನು ಕೊಡುತ್ತಿದ್ದಾರೆ. ಸರ್ಕಾರಕ್ಕೆ ಸುಮಾರು 80 ಲಕ್ಷದ ವರೆಗೂ ಎಕ್ಸೈಜ್ ಡ್ಯೂಟಿಯನ್ನು ಕೊಡದೆ ಮೋಸಮಾಡಿದ್ದಾರೆಂದು ತಿಳಿದು ಬರುತ್ತಿದೆ. ಆಡಳಿತವರ್ಗದಲ್ಲಿ ಇರತಕ್ಕವರು ಇದರಲ್ಲಿ ಆಸಕ್ತಿ ವಹಿಸಿ ಲೆಕ್ಕಗಳನ್ನು ಮುಚ್ಚಿಹಾಕಿದ್ದಾರೆ. ಸುಮಾರು 5 ಲಕ್ಷ ರೂಪಾಯಿ ಕಪ್ಪು ಹಣವನ್ನು ಕೂಡಿಹಾಕಿದ್ದಾರೆಂದು ವರ್ತಮಾನ ಇದೆ. ಇನ್ನೊಂದು ಸುದ್ದಿ ಏನೆಂದರೆ ಸರಿಯಾದ ಪ್ರಮಾಣದಲ್ಲಿ ಆಲ್ಕೋಹಾಲನ್ನು ಮಿಕ್ಸ್ ಮಾಡದೆ ವಿಸ್ಕಿ ಮತ್ತು ಬ್ರಾಂಡಿಗಳನ್ನು ತಯಾರಿಸಿ ಮಿಲಿಟರಿಗೆ ಸಪ್ಲೈ ಮಾಡಿದ್ದಾರೆಂದು ಕೇಳುತ್ತೇನೆ. ಇತ್ತಲಾಗಿ ಸರ್ಕಾರಕ್ಕೆ ಎಕ್ಸೈಜ್ ಡ್ಯೂಟಿನೂ ಇಲ್ಲ ಅತ್ತ ಕಷ್ಟಮರ್‌ಗೆ ಒಳ್ಳೆ ಬ್ರಾಂಡಿಯೂ ಇಲ್ಲ. ಹೀಗೆ ಸರ್ಕಾರಕ್ಕೆ ಮೋಸ ಮಾಡಿ ಕಪ್ಪು ಹಣವನ್ನು ಗಳಿಸುವುದಕ್ಕೆ ಸರ್ಕಾರದವರೇ ಅವಕಾಶ ಮಾಡಿ

ಕೊಟ್ಟಿದ್ದಾರೆ. ಅಷ್ಟೇ ಅಲ್ಲ, ಈ ಆಲ್ಕೋಹಾಲನ್ನು ಬಾಟಲುಗಳಲ್ಲಿ ಸೀಲ್ ಮಾಡಿ ಅವುಗಳಿಗೆ ಬೇರೆ ಏನೋ ಒಂದು ಲೇಬಲ್ಲನ್ನು ಅಂಟಿಸಿ ಅವುಗಳನ್ನು ಬೇರೆ ರಾಜ್ಯಗಳಿಗೆ ಸರ್ಕಾರಕ್ಕೆ ಪತ್ತೆ ಇಲ್ಲದಂತೆ ರವಾನೆ ಮಾಡುತ್ತಿದ್ದಾರೆ. ನನ್ನ ಜೊತೆಯಲ್ಲಿ ಮಂತ್ರಿಗಳು ಬಂದರೆ ನಾನು ಇದನ್ನೆಲ್ಲಾ ಪತ್ತೆ ಹಚ್ಚಿಸಿ ಕೊಡುತ್ತೇನೆ. ಈ ವಿಷಯಗಳೆಲ್ಲಾ ಸರ್ಕಾರದವರ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಏನು ಕ್ರಮ ಕೈಗೊಂಡಿದ್ದಾರೆಂಬುದನ್ನು ದಯವಿಟ್ಟು ಸಭೆಗೆ ತಿಳಿಸಬೇಕೆಂದು ಕೇಳಿ ಕೊಳ್ಳುತ್ತೇನೆ.

†ಶ್ರೀ ಎಂ. ವೈ. ಘೋರ್ಪಡೆ (ಹಣಕಾಸಿನ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷಿಣಿಯರೇ, ಈ ಅಪ್ರೋಪ್ರಿಯೇಷನ್ ಬಿಲ್ಲಿನ ವಿಚಾರದಲ್ಲಿ ಅಷ್ಟು ದೊಡ್ಡ ಭಾಷಣಮಾಡತಕ್ಕ ಸಂಪ್ರದಾಯವಿಲ್ಲ. ಅದಕ್ಕೆ ಅಂಥಾ ಒಂದು ಅಗತ್ಯವೂ ಇರುವುದಿಲ್ಲ. ಆದರೆ ಈ ಸಲ ಈ ಬಿಲ್ಲಿನ ಮೇಲೆ ಮಾತನಾಡುವಾಗ ವಿರೋಧಪಕ್ಷದ ಕೆಲವು ಮುಖ್ಯ ಸದಸ್ಯರು ಕೆಲವು ಮುಖ್ಯ ಮಾತುಗಳ ನ್ನಾಡಿದ್ದಾರೆ. ಅದರ ಬಗ್ಗೆ ಉತ್ತರ ಕೊಡಬೇಕಾದ್ದು ನನ್ನ ಕರ್ತವ್ಯ. ಸಾಮಾನ್ಯವಾಗಿ ಅಪ್ರೋಪ್ರಿಯೇಷನ್ ಬಿಲ್ಲಿನ ಬಗ್ಗೆ ಹೆಚ್ಚು ಮಾತನಾಡುವುದು ಅನಾವಶ್ಯಕ. ಕಾರಣ ಸಾಕಷ್ಟು ಚರ್ಚೆ ಬಡ್ಜೆಟ್ಟನ್ನು ಚರ್ಚೆ ಮಾಡುವ ಕಾಲಕ್ಕೇ ಆಗಿರುತ್ತದೆ. ಆದಾದ ನಂತರ ಮತ್ತೆ ಡಿಮ್ಯಾಂಡುಗಳು ಬಂದಾಗ ಬೇರೆ ಸುದೀರ್ಘವಾಗಿ ಚರ್ಚೆ ನಡೆದಿರುತ್ತದೆ. ಆಗ್ಗೆ ಆಗಲೇ ಅನೇಕರು ಅನೇಕ ಸಲಹೆ ಗಳನ್ನು ಕೊಟ್ಟಿರುತ್ತಾರೆ. ಆದ್ದರಿಂದ ಅಪ್ರೋಪ್ರಿಯೇಷನ್ ಬಿಲ್ ಮಂಡಿಸತಕ್ಕ ಕಾಲದಲ್ಲಿ ಮತ್ತೆ ಇದರಮೇಲೆ ಚರ್ಚೆ ಅನಗತ್ಯ ಎಂದು ಭಾವಿಸಲಾಗಿದೆ. ಹಿಂದೆಇದೇ ಒಂದು ಆಧಾರದ ಮೇಲೆ ಇಲ್ಲಿ ಚರ್ಚೆಯಾಗುತ್ತಿರಲಿಲ್ಲ. ನಾನು ಹಾಗೇ ತಿಳಿದುಕೊಂಡಿದ್ದೆ. ಆದರೆ ಈ ಸಂದರ್ಭದಲ್ಲಿ ಹಣಕಾಸಿನ ವಿಚಾರ ಬಿಟ್ಟು ಬೇರೆ ವಿಚಾರಗಳನ್ನು ಮಾತನಾಡುವುದಕ್ಕೆ ಇದರಲ್ಲಿ ಅವಕಾಶವಿಲ್ಲ. ನಾವು ಇಲ್ಲಿ ಹಣವನ್ನು ಮಂಜೂರು ಮಾಡಿದ ಮೇಲೆ ಸರ್ಕಾರದವರು ಅದನ್ನು ಖರ್ಚುಮಾಡತಕ್ಕ ಕಾಲಕ್ಕೆ ಪಕ್ಷಪಾತ ಮಾಡತಕ್ಕ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಇದರಲ್ಲಿ ಪಕ್ಷಾತೀತವಾಗಲೀ ಜಾತ್ಯಾತೀತ ವಾಗಲಿ ನಡೆಸುವುದಕ್ಕೆ ಹೇಗೆ ಸಾಧ್ಯವಿದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ ಇಲ್ಲಿ ಸಭೆಯವರು ಹಣವನ್ನು ಒಂದು ರಸ್ತೆ, ಬಾವಿ, ಶಾಲೆಗಳಿಗೆ ಮಂಜೂರು ಮಾಡಿದ ನಂತರ ಅದನ್ನು ವಿನಿಯೋಗ ಮಾಡಿದಮೇಲೆ ಆ ರಸ್ತೆ, ಬಾವಿ, ಮತ್ತು ಶಾಲೆಗಳು ಒಂದೇ ಪಕ್ಷಕ್ಕೆ ಹೇಗೆ ಉಪಯೋಗವಾಗುತ್ತವೆ? ಅವುಗಳನ್ನು ಎಲ್ಲರಿಗೂ ಉಪಯೋಗ ಮಾಡಲೇಬೇಕು. ಚರ್ಚೆಗೆ ಮುನ್ನ ಹಾಗೆ ಒಂದು ಭಾವನೆಯಿಂದ ಮಾತನಾಡಬಹುದು. ಆದರೆ ಕಾರ್ಯಗತ ಮಾಡು ವಾಗ ಹಾಗೆ ಮಾಡುವುದಕ್ಕಾಗುವುದಿಲ್ಲ.

3-00 P.M.

ಪ್ಲಾನ್‌ನ ಹಣವಾಗಲಿ ಅಥವಾ ನಾನ್‌ಪ್ಲಾನ್‌ಗೆ ಸಂಬಂಧಪಟ್ಟ ಹಣವಾಗಲಿ ಯಾವ ರೀತಿಯಿಂದ ಅದನ್ನು ಖರ್ಚುಮಾಡಬೇಕು ಎಂಬುದಕ್ಕೆ ಆಯವ್ಯಯಪಟ್ಟಿಯಲ್ಲಿ ತಪಶೀಲಿದೆ. ಅದರ ಪ್ರಕಾರ ಖರ್ಚುಮಾಡಬೇಕು. ಹಾಗೆ ಮಾಡದೇ ಹೋದರೆ ಮಾನ್ಯ ಸದಸ್ಯರು ಪ್ರಶ್ನೆ ಮಾಡಬಹುದು. ಬೇಕಾದ ಹಾಗೆ ಮಾಡುವುದಕ್ಕೆ ಬರುವುದಿಲ್ಲ. ವ್ಯತ್ಯಾಸ ಮಾಡಬೇಕಾದರೆ ಸಪ್ಲಿಮೆಂಟರಿ ಡಿಮ್ಯಾಂಡ್ ತರಬೇಕಾಗುವುದು. ಬಜೆಟ್ಟಿನಲ್ಲಿ ಒದಗಿಸಿರುವ ಹಣವೇನಿದೆ ಅದನ್ನು ಜಾತ್ಯಾತೀತ ದೃಷ್ಟಿಯಿಂದ ಖರ್ಚುಮಾಡಬೇಕು, ಬೇರೆ ರೀತಿಯಿಂದ ಖರ್ಚುಮಾಡಲು ಪ್ರಜಾಪ್ರಭುತ್ವದಲ್ಲಿ ಸಾಧ್ಯವಿಲ್ಲ ಎಂದು ಹೆಮ್ಮೆಯಿಂದ ಹೇಳಬೇಕಾದ ಪರಿಸ್ಥಿತಿಯಿದೆ. ಯಾವುದೇ ಪಕ್ಷ ಆಡಳಿತದಲ್ಲಿರಲಿ ನಮ್ಮ ದೇಶದ ಪದ್ಧತಿಯ ಪ್ರಕಾರ ಪಕ್ಷಾತೀತವಾಗಿ ಯೋಚನೆ ಮಾಡಬೇಕು. ಸೈದ್ಧಾಂತಿಕವಾಗಿ ಚರ್ಚೆ ಮಾಡಬಹುದೇ ಹೊರತು ಪ್ಲಾನ್ ತಯಾರಾದಮೇಲೆ ಪಕ್ಷಾತೀತವಾಗಿ ಖರ್ಚುಮಾಡಲೇಬೇಕು, ಹಾಗೆ ಮಾಡುವರು. ಈ ವಿಚಾರದಲ್ಲಿ ಅನುಮಾನ ಪಡಲು ಅವಕಾಶವೇ ಇಲ್ಲ. ರಾಜಕೀಯದ ಮಾತು ಬಂದಿರುವುದರಿಂದ ನಾನು ಒಂದು ಪಕ್ಷಕ್ಕೆ ಸೇರಿರುವುದರಿಂದ ನಾನೂ ಕೂಡ ರಾಜಕೀಯ ವಾಗಿಯೇ ಉತ್ತರ ಹೇಳಬೇಕಾಗುತ್ತದೆ. ನಾವು ಯಾವುದೇ ಪಕ್ಷಕ್ಕೆ ಸೇರಿದ್ದರೂ ಕೂಡ ಒಂದು ಕಾರ್ಯಕ್ರಮಕ್ಕೆ ಬದ್ಧರಾಗಿದ್ದೇವೆ. ಈ ರೀತಿ ಮಾಡಬೇಕೆಂದು ಒಂದು ನಿರ್ಧಾರವಾಗಿದೆ. ಯಾವುದೇ ವ್ಯಕ್ತಿಯ ವಿರುದ್ಧ ನಾವಿಲ್ಲ, ಕಾರ್ಯಕ್ರಮಗಳಿಗೆ ಬದ್ಧರಾಗಿ ನಾವು ನಡೆಯುತ್ತಿದ್ದೇವೆ. ಯಾವುದೇ ವ್ಯಕ್ತಿಯ ವಿರುದ್ಧವಾಗಿ ನಾವು ನಡೆಯುತ್ತಿಲ್ಲ, ಇದನ್ನು ಮುಖ್ಯಮಂತ್ರಿಗಳೂ ಕೂಡ ಹೇಳಿದ್ದಾರೆ. ಹಿಂದಾಗಿರುವ ತಪ್ಪು ಪುನಃ ಆಗುವುದಕ್ಕೆ ಅವಕಾಶ ಕೊಡುವುದಿಲ್ಲ, ಈ ಸರಕಾರ ಹಾಗೆ ಮಾಡಲು ಬಂದಿಲ್ಲ ಎಂದು ನಾನು ವೈಯುಕ್ತಿಕವಾಗಿ ಹೇಳುತ್ತೇನೆ.

Sri H. D. DEVE GOWDA.—Shall I give instances? After this Ministry came into power, you are telling political philosophy. A Veterinary Stockman has been transferred 9 times within a period of 4 months. From whose pocket are you going to give the T. A. and D. A. or this man?

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಬಹಳ ಅನುಭವ ವಿರಬಹುದು. ಆದರೆ ಮಾನ್ಯ ಸದಸ್ಯರು ಈ ರೀತಿ ಜನರಲೈಜ್ ಮಾಡಿ ಹೇಳುವುದು ಅತಿಶಯೋಕ್ತಿ ಯಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಪಕ್ಷಾತೀತವಾಗಿ ಮಾಡಿ ಎಂದು ಅದಕ್ಕೇ ಹೇಳುತ್ತಿರುವುದು.

ಶ್ರೀ ಎಂ. ವೈ. ಘೋರ್ಪಡೆ.—ಈ ದೇಶದಲ್ಲಿ ರಾಜಕೀಯದಲ್ಲಿ ಏನೇನಾಗುವುದು ಎಂಬುದು ನನಗೂ ಮತ್ತು ಶ್ರೀಮಾನ್ ದೇವೇಗೌಡರಿಗೂ ಗೊತ್ತಿದೆ. ಚುನಾವಣೆಯಾಗುವಾಗ ಬಾಸಿಸಂ ಸಾಕಾಗಿದ್ದಿತ್ತು, ಕೆಲವರಿಗೆ ಬರೇ ಫೋನ್ ಇಟ್ಟುಕೊಂಡು ವರ್ಗಮಾಡುವುದೇ ಕೆಲಸ. ಅದಕ್ಕೆ ವಿರುದ್ಧವಾಗಿ ಪ್ರಾಪೊಗ್ಯಾಂಡಾ ಮಾಡಲಾಗಿದೆ. ಬಾಸಿಸಂ ಮಾಡಲು ನಾವು ಅಧಿಕಾರಕ್ಕೆ ಬಂದಿಲ್ಲ, ಬಾಸಿಸಂ ತೆಗೆದುಹಾಕುವುದಕ್ಕೆ ಬಂದಿದ್ದೇವೆ. ನಮಗೆ ಬಾಸಿಸಂ ನೋಡಿ ನೋಡಿ ಸಾಕಾಗಿದೆ.

Sri H. D. DEVE GOWDA :—Propaganda is different from practicing. You cannot stop it.

ಶ್ರೀ ಎಂ. ವೈ. ಘೋರ್ಪಡೆ :—ಆ ಅನುಭವ ಎಲ್ಲರಿಗೂ ಇದೆ. ಆದುದರಿಂದ ಆ ಕೆಟ್ಟ ಅನುಭವ ಮುಂದುವರೆಸುವುದಕ್ಕೆ ನಾವು ಬಂದಿಲ್ಲ, ನಮಗೂ ಸ್ವಲ್ಪ ಬುದ್ಧಿ ಇದೆ. ಬಾಸಿಸಂ ಪರಿಣಾಮವೇನು, ವೈಯಕ್ತಿಕ ರಾಜಕೀಯದ ಪರಿಣಾಮವೇನು ಎಂಬುದನ್ನು ನಾವು ನೋಡಿದ್ದೇವೆ.

ಶ್ರೀ ಬಾಪುಗೌಡ ರಾಯಪ್ಪ (ಷಹಪುರ).—ನನ್ನ ಕ್ಷೇತ್ರದಲ್ಲಿ ಇಬ್ಬರು ಆಫೀಸರುಗಳನ್ನು 24 ಗಂಟೆಯೊಳಗೆ ವರ್ಗಮಾಡಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ಅದಕ್ಕೆ ಬೀಜ ಹಾಕಿದವರು ಶ್ರೀ ವೀರೇಂದ್ರ ಪಾಟೀಲರು.

ಶ್ರೀ ಎಂ. ವೈ. ಘೋರ್ಪಡೆ :—ಸರ್ಕಾರದ ವತಿಯಿಂದ ನನ್ನ ಅನುಭವದಿಂದ, ನನ್ನ ಅನುಭವದ ಆಧಾರದಮೇಲೆ ನಾನು ಉತ್ತರ ಹೇಳಬೇಕು. ಇಡೀ ಪ್ರಪಂಚದಲ್ಲಿ ನಡೆಯುವ ವಿಷಯಗಳಿಗೆಲ್ಲಾ ಉತ್ತರ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ವೈ. ಪಾಟೀಲ್ (ಸಿಂದಗಿ) :—ನಾವು ಹೇಳುವುದೂ ಕೂಡ ಈ ರಾಜ್ಯದಲ್ಲಿ ನಡೆಯುವುದನ್ನು, ಪ್ರಪಂಚದ್ದಲ್ಲ.

ಶ್ರೀ ಎಂ. ವೈ ಘೋರ್ಪಡೆ :—ಬಳ್ಳಾರಿ ಜಿಲ್ಲೆಯಲ್ಲಿ ಬಾಸಿಸಂ ಎಷ್ಟಿತ್ತು ಎಂಬುದನ್ನು ನಾವು ನೋಡಿದ್ದೇವೆ. ಪೊಲಿಟಿಕಲ್ ಬಾಸಿಸಂ ಅಲ್ಲಿತ್ತು. ನನ್ನ ಇಲಾಖೆ ದೃಷ್ಟಿಯಿಂದ ನಾನು ಮಾತನಾಡುತ್ತೇನೆ. After all we are discussing Appropariation Bill.

ಶ್ರೀ ಎಚ್. ಡಿ. ದೇವೇಗೌಡ :—ನಿಮ್ಮ ಇಲಾಖೆಯಲ್ಲಿ ಈ ರೀತಿ ಆಗದಿರಬಹುದು. ಪಕ್ಷಾತೀತವಾಗಿ ಖರ್ಚುಮಾಡುವುದಾಗಿ ತಾವು ಹೇಳಿದಿರಿ. ಬಜೆಟ್ಟಿನಲ್ಲಿ ಒದಗಿಸಿದ ಮಾತ್ರಕ್ಕೆ ಕೆಲಸವಾಗುವುದಿಲ್ಲ. If the concerned Minister wants to withhold any work, he can. Shall I give you 100 instances of works included in the budget, but stopped on account of intreference of Ministers.

ಶ್ರೀ ಬಾಪುಗೌಡ ರಾಯಪ್ಪ :—ಇಂದು ಕೃಷ್ಣ ಮೇಲ್ದಂಡೆ ಯೋಜನೆಯನ್ನು ಬೈಫರ್ಕೇಟ್ ಮಾಡಿ ರಾಯಚೂರು ಭಾಗಕ್ಕೆ ಅನುಕೂಲವಾಗುವಂತೆ ಒಂದು ಲಕ್ಷ ಎಕರೆಗೆ ಅವಕಾಶ ಮಾಡಿ, ಆಲಮಟ್ಟಿಯಲ್ಲಿ ಒಂದು ಲ ಎಕರೆಗೆ ಸರ್ವೆ ಮಾಡುತ್ತಿದ್ದಾರೆ. ಇದರಲ್ಲಿ ಪಾಲಿಟಿಕ್ಸ್ ಬಂದಿದೆ ತಮ್ಮ ಎಂ ಎಲ್ ಎ ಗಳಿಗೆ ಖುಷಿ ಪಡಿಸಲು ಈ ರೀತಿ ಬೈಫರ್ಕೇಟ್ ಮಾಡುತ್ತಿದ್ದಾರೆ. ಇದಕ್ಕೆ ಸರ್ವೆ ಮಾಡುತ್ತಿದ್ದಾರೆ. ಇದು ಸರಿಯೇ?

Sri M. Y. GHORPADE.—I cannot answer for the details on irrigation.

ಶ್ರೀ ಬಾಪೂಗೌಡ ರಾಯಪ್ಪ.—ಹಿಂದಿನ ಸರಕಾರ ಸುಮಾರು 21 ಲಕ್ಷ ಎಕರೆ ನೀರಾವರಿಯಾಗಲು ಮಾಡಿದ ಯೋಜನೆಯನ್ನು ಕಾಂಗ್ರೆಸ್ (ಆರ್) ಪಕ್ಷದ ಸದಸ್ಯರನ್ನು ಖುಷಿಮಾಡಬೇಕೆಂದು ಈ ರೀತಿ ಬೈಫರ್ಕೇಟ್ ಮಾಡುತ್ತಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ.—ನೀರಿನ ವಿಷಯವನ್ನು ಸಂಬಂಧಪಟ್ಟ ಮಂತ್ರಿಗಳಹತ್ತಿರ ಚರ್ಚೆಮಾಡಬಹುದು. ಅರ್ಲೀನಾಗುತ್ತಿದೆಯೆಂಬುದನ್ನು ನಾನು ಹೇಳುವುದಕ್ಕಾಗುವುದಿಲ್ಲ. ಯಾವುದೇ ಅಭಿವೃದ್ಧಿ ಕಾರ್ಯದಲ್ಲೂ ರಾಜಕೀಯ ಮಾಡುವ ಧೋರಣೆ ಸರಕಾರಕ್ಕಿಲ್ಲವೆಂದು ನಾನು ಹೇಳಿದೆ.

ಈಗ ಸಾಕಷ್ಟು ಹೇಳಿದ್ದೇನೆ. ಹಿಂದೆ ಬಾಸಿಸಂ ಏನಿತ್ತು ಅದು it is the worst kind of political bossism. ನಾವು ಆ ರೀತಿ ಅನ್ಯಾಯ ಮಾಡುವುದಕ್ಕೆ ಹೋಗುವುದಿಲ್ಲ. ನ್ಯಾಯವಾಗಿಯೇ ಹಣ ಉಪಯೋಗ ಮಾಡುತ್ತೇವೆ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಇದರಲ್ಲಿ ಲೋಪದೋಷಗಳು ಏನಾದರೂ ಕಂಡುಬಂದರೆ ಖಂಡಿತವಾಗಿಯೂ ಕೇಳಬಹುದು. ಈವೊತ್ತು ಚರ್ಚೆಯನ್ನು ಮಾಡುತ್ತಾ ಇರುವುದು ಅಪ್ರೋಪ್ರಿಯೇಷನ್ ಮೇಲೆ. ನನ್ನ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟ ವಿಷಯಗಳನ್ನು ಕೇಳಿದರೆ ನಿಮಗೆ ತೃಪ್ತಿಯಾಗುವ ರೀತಿಯಲ್ಲಿ ಉತ್ತರ ಕೊಡಲಿಕ್ಕೆ ಸಾಧ್ಯ.

ಇನ್ನು ಕಮಿಟಿ ಬಗ್ಗೆ ಒಂದು ಮಾತು ಹೇಳಬೇಕೆಂದಿದ್ದೇನೆ. ರಾಜ್ಯ ಮಟ್ಟದಲ್ಲಾಗಲಿ ಯಾವುದೇ ಮಟ್ಟದಲ್ಲಾಗಲಿ ಎಲ್ಲಾ ರಾಜಕೀಯ ಪಕ್ಷಕ್ಕೂ ಪ್ರಾತಿನಿಧ್ಯ ಕೊಡಲೇ ಬೇಕು ಎನ್ನುವ ಉದ್ದೇಶದಿಂದ ಕಮಿಟಿಗಳನ್ನು ರಚನೆಮಾಡುವುದಿಲ್ಲ. ಯಾರಿಗೆ ಯಾವ ವಿಚಾರದಲ್ಲಿ ತಿಳುವಳಿಕೆ ಇದೆಯೋ, ಆಸಕ್ತಿ ಇದೆಯೋ ಅಂಥಾ ಆಸಕ್ತಿ ಇರುವವರನ್ನು ಅಂಥಾ ಕಮಿಟಿಗಳಲ್ಲಿ ಎಕ್ಸ್ ಅಫಿಷಿಯೋ ಆಗಿ ನೇಮಕ ಮಾಡಿಕೊಳ್ಳುವ ಪದ್ಧತಿ ಇದೆ.

ಶ್ರೀ ಎಚ್. ಡಿ. ದೇವೇಗೌಡ.—At least you have got some straight forward attitude. ದಯಮಾಡಿ ಇತರರನ್ನು ಡಿಫೆಂಡ್ ಮಾಡಬೇಡಿ. ಈವೊತ್ತು ಏನು ತಪ್ಪು ಮಾಡಿದ್ದೀರಿ ಅದನ್ನು ತಿದ್ದುಕೊಳ್ಳಿ ಎಂದು ಹೇಳುತ್ತೇನೆ. ಎದುರು ಪಕ್ಷದ 47 ಜನರಲ್ಲಿ 4—6 ಪಕ್ಷಗಳು ಇರಬಹುದು. ಆದರೆ ಆ ಕಮಿಟಿಗಳಿಗೆ ಅರ್ಹತೆ ಪಡೆದಿರುವವರು ಇರುವುದಿಲ್ಲವೇ ?

ಶ್ರೀ ಎಂ. ವೈ. ಘೋರ್ಪಡೆ.—ಎಲ್ಲಾ ಪಕ್ಷಗಳಿಗೂ ಪ್ರತಿಯೊಂದು ಕಮಿಟಿಗೂ ಪ್ರಾತಿನಿಧ್ಯ ಸಿಕ್ಕಬೇಕು. ಅಂತ ಏನೂ ಇಲ್ಲ, ಹಾಗೆಯೇ ಕಮಿಟಿಗಳಿಗೆ ಅವರನ್ನು ಬಿಡಬೇಕು ಎನ್ನುವುದೂ ಇಲ್ಲ. ಅದು ಸ್ವಾಭಾವಿಕ. ಕಮಿಟಿಗಳನ್ನು ನ್ಯಾಯವಾಗಿ ಮಾಡಬೇಕು. I am making a general statement. It is a matter of opinion. ಒಂದು ಉದಾಹರಣೆ ಹೇಳುವುದಾದರೆ ನನ್ನ ಡಿಪಾರ್ಟ್‌ಮೆಂಟ್‌ನಲ್ಲಿ ಒಂದು ಅಡ್ವೈಸರಿ ಕಮಿಟಿ ಮಾಡಬೇಕು ಎಂದು ಇದ್ದೇನೆ. ಅದರಲ್ಲಿ ಸೇಲ್ಸ್ ಟ್ಯಾಕ್ಸ್ ಮತ್ತು ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ ಆಸಕ್ತಿಯಿರುವವರನ್ನು \ಅವರು ಯಾವುದೇ ಪಕ್ಷಕ್ಕೆ ಸೇರಿರಲಿ ಆ ಕಮಿಟಿಯಲ್ಲಿ ಅವರನ್ನು ಮೆಂಬರನ್ನಾಗಿ ಮಾಡಬೇಕು ಎಂದು ಮಾಡಿದ್ದೇನೆ ಆ ರೀತಿ ಮಾಡುವುದರಲ್ಲಿ ಏನೂ ಅನುಮಾನವೇ ಇಲ್ಲವಲ್ಲಾ.

ಇನ್ನು ಲ್ಯಾಂಡ್ ಗ್ರ್ಯಾಂಟ್ಸ್ ಕಮಿಟಿ ಬಗ್ಗೆ ಶ್ರೀಮಾನ್ ದೇವೇಗೌಡರು ಒಂದು ದೊಡ್ಡ ಅನ್ಯಾಯವಾಗಿದೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಶ್ರೀಮಾನ್ ಹುಚ್ಚಮಾಸ್ತಿಗೌಡರನ್ನು ಕೇಳಿದೆ. ಇನ್ನು ಏನೊಂದೂ ನಿರ್ದಿಷ್ಟವಾದ ತೀರ್ಮಾನಕ್ಕೆ ಬಂದಿಲ್ಲ. ಆದರೆ ಆ ಕಮಿಟಿಗೆ ತಾಲ್ಲೂಕು ಬೋರ್ಡ್ ಅಧ್ಯಕ್ಷರು, ಎಂ.ಎಲ್.ಎ.ಗಳು ಅವರು ಮೊದಲಿನಿಂದಲೂ ಎಕ್ಸ್‌ಅಫಿಸಿಯೋ ಮೆಂಬರ್ಸ್ ಆಗುವ ಪದ್ಧತಿ ಇದೆ. ಇದು ನ್ಯಾಯ. ಇದನ್ನು ತಪ್ಪಿಸುವ ನಿರ್ಧಾರ ಸರ್ಕಾರ ಮಾಡಿಲ್ಲ. ಆದರೆ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಪೂರರ್ ಸೆಕ್ಷನ್ ಇರತಕ್ಕಂಥ ಜನಕ್ಕೆ ಇವನ್ನು ಮಾಡಿರುವುದರಿಂದ ತಾಲ್ಲೂಕು ಬೋರ್ಡ್ ಮತ್ತು ಅಧ್ಯಕ್ಷರ ಜೊತೆಗೆ ನಿಮ್ನವರ್ಗದವರನ್ನೂ ಕೂಡ ಮೆಂಬರ್ಸ್ ಮಾಡಬೇಕು ಎಂತ ಮಾಡಿದೆ. Government have no intention of discontinuing the practice of having Taluk Board President and MLAs to work as ex-officio Members on this Committee. Tahsildar is the Chairman of this Committee. ತಾಸೀಲ್ದಾರ್ ಚೇರ್ಮನ್ ಆಗಿದ್ದಾರೆ. ಇದರ ಜೊತೆಗೆ ಇನ್ನು 2—3 ಜನ ಮೆಂಬರ್ಸ್‌ನ್ನು ಮಾಡಬೇಕು ಅನ್ನುವುದು ಈಗಿನ ಸರ್ಕಾರದ ಯೋಜನೆ. ಆದಕಾರಣ ಹಳೇ ಪದ್ಧತಿಯನ್ನು ತಪ್ಪಿಸಿ ಒಂದೇ ಪಕ್ಷದವರು ಇರಬೇಕು ಎನ್ನುವ ದೃಷ್ಟಿಯಿಂದ ಕಮಿಟಿಯನ್ನು ರಚನೆ ಮಾಡಬೇಕು ಎಂದು ಹೇಳುವುದಾದರೆ ಅದು ಸರಿಯಿಲ್ಲ, ವಿರೋಧ ಪಕ್ಷದವರಿಂದ ಏನಾದರೂ ಸಲಹೆಗಳು ಇದ್ದರೆ ಅದನ್ನೂ ಸೇರಿಸಿ ಚರ್ಚೆ ಮಾಡೋಣ.

ಶ್ರೀ ಹೆಚ್. ಡಿ. ದೇವೇಗೌಡ.—ಹರಿಜನ ಮತ್ತು ನಿಮ್ನವರ್ಗದವರಲ್ಲದೆ ಇನ್ನೂ ಬ್ಯಾಕ್‌ವರ್ಡ್ ಕ್ಲಾಸ್‌ನವರು ಇರುವ ಮುನಿಸಿಪಾಲಿಟಿ ಮತ್ತು ತಾಲ್ಲೂಕು ಬೋರ್ಡ್‌ನಲ್ಲಿ, ಎಲೆಕ್ಟೆಡ್ ಬಾಡಿಯಲ್ಲಿರುವವರು ಇರಬೇಕು ಎನ್ನುವ ಸಲಹೆ ಮಾಡುವುದು ಬೇಡವೆ ? It can be represented from the Taluk Board and the Municipality.

ಶ್ರೀ ಎಂ. ವೈ. ಘೋರ್ಪಡೆ.—ಲ್ಯಾಂಡ್ ಗ್ರ್ಯಾಂಟ್ ಕಮಿಟಿ ಬಗ್ಗೆ ಇಷ್ಟು ಮಾತ್ರ ಹೇಳುತ್ತೇನೆ. ಇದರಲ್ಲಿ ತಾಸೀಲ್ದಾರರು ಛೇರ್ಮನ್ ಆಗಿರುತ್ತಾರೆ. ತಾಲ್ಲೂಕು ಬೋರ್ಡ್ ಅಧ್ಯಕ್ಷರು, ಎಂ.ಎಲ್.ಎ.ಗಳು ಎಕ್ಸ್-ಅಫಿಷಿಯೋ ಮೆಂಬರ್ಸ್ ಆಗಿ ಇರುತ್ತಾರೆ. ಹಿಂದೆ ಏನು ಪದ್ಧತಿ ಇತ್ತೋ ಅದನ್ನು ಪೂರ್ತಿ ಬಿಟ್ಟುಬಿಟ್ಟಿದ್ದಾರೆ, ಅನ್ಯಾಯ ಮಾಡಿ, ರಾಜಕೀಯ ಮಾಡಿ ಈ ಕಮಿಟಿಯನ್ನು ಸರ್ಕಾರ ರಚನೆ ಮಾಡುತ್ತಿದ್ದಾರೆ ಎಂದು ಯಾರಾದರೂ ಹೇಳಿದರೆ ಆ ಉದ್ದೇಶ ಯಾರಿಗೂ ಇಲ್ಲ ಎಂದು ಹೇಳುತ್ತೇನೆ. I am not really competent to discuss details of land grants because it pertains to some other departments.

ಇನ್ನು ಶ್ರೀಮಾನ್ ದೇವೇಗೌಡರು ಬ್ಯಾಕ್‌ವರ್ಡ್ ಕ್ಲಾಸ್ ವಿಷಯವಾಗಿ ಒಂದು ಮಾತು ಹೇಳಿದರು. ನನಗೆ ತಿಳಿದ ಮಟ್ಟಿಗೆ ಬ್ಯಾಕ್‌ವರ್ಡ್ ಕ್ಲಾಸ್ ಕಮೀಷನ್ ಮೈಸೂರು ರಾಜ್ಯದಲ್ಲಿ ಹೊಸದಾಗಿ ಏನೂ ಇಲ್ಲ. ದಕ್ಷಿಣ ಹಿಂದೂಸ್ಥಾನದಲ್ಲಿರತಕ್ಕಂಥಾ ಎಲ್ಲಾ ರಾಜ್ಯಗಳಲ್ಲೂ ಬ್ಯಾಕ್‌ವರ್ಡ್ ಕ್ಲಾಸ್‌ಗೆ ಇರತಕ್ಕಂಥ ತೊಂದರೆಗಳನ್ನು ತಪ್ಪಿಸುವ ದೃಷ್ಟಿಯಿಂದ ಈ ಒಂದು ಕಮೀಷನನ್ನು ಮಾಡಿದ್ದಾರೆ. ಅದು ಎಲ್ಲರಿಗೂ ಗೊತ್ತಿದೆ. ಎಕಾನಮಿಕ್ ಬ್ಯಾಕ್‌ವರ್ಡ್‌ನೆಸ್, ಸೋಷಿಯಲ್ ಬ್ಯಾಕ್ ವರ್ಡ್‌ನೆಸ್‌ನ್ನು ಕಂಡುಹಿಡಿಯುವುದಕ್ಕೆ ಹೋದಾಗ ಜಾತೀಯ ವಾದ ಬರುತ್ತದೆ. ಜಾತೀಯ ಪದ್ಧತಿಯಲ್ಲಿ ಏನು ಒಂದು ಸಂದೇಹ ಇದೆ ಅದನ್ನು ಕಾನೂನು ದೃಷ್ಟಿಯಿಂದ ನೋಡಬೇಕಾಗಿದೆ.

Sri H. S. SIDDAPPA.—The Sailors' Soldiers' and Airmen's Board is constituted by the Government. There are one or two experienced personnel who were not included. Others are included. What does that mean, Sir ?

Sri M. Y. GHORPADE.—I have to reply on behalf of the Government to whatever you have said to the extent possible. ಇನ್ನು ಟ್ರಾನ್ಸ್‌ಫರ್ ಬಗ್ಗೆ ಹೇಳಿದ್ದಾರೆ. ನನ್ನ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳುತ್ತೇನೆ. ಟ್ರಾನ್ಸ್‌ಫರ್ಸ್‌ಗೆ ಒಂದು ಕಮಿಟಿ ಮಾಡಿದ್ದೇವೆ. ಅದರಲ್ಲಿ ಮಿನಿಸ್ಟರ್, ಸೆಕ್ರೆಟರಿ ಮತ್ತು ಡಿಪಾರ್ಟ್‌ಮೆಂಟಲ್ ಹೆಡ್ಸ್ ಇರುತ್ತಾರೆ. ಈ ಮೂರು ಜನರನ್ನೂ ಸೇರಿಸಿ ಕಮಿಟಿ ಮಾಡಿದ್ದೇವೆ. ಅವರು ಕೆಲವು ರೂಲ್ಸ್‌ಗಳನ್ನು ಮಾಡಿಕೊಂಡಿದ್ದಾರೆ. ಅದರ ಪ್ರಕಾರ ಈ ರೀತಿ ಇದೆ :—Normally not to transfer a person within 2 years and not to keep a person for more than 4 years. ಈ ಪ್ರಕಾರ ಟ್ರಾನ್ಸ್‌ಫರ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಯಾವುದೇ ರಾಜಕೀಯ ದೃಷ್ಟಿಯಿಂದ ಟ್ರಾನ್ಸ್‌ಫರ್ ಮಾಡುವುದಾದರೆ, ಅಥವಾ ವೈಯಕ್ತಿಕವಾಗಿ ಟ್ರಾನ್ಸ್‌ಫರ್ ಮಾಡಿದರೆ ಯಾವ ಡಿಪಾರ್ಟ್‌ಮೆಂಟೂ ಕೂಡ ಉಳಿಯುವುದಿಲ್ಲ. ನನ್ನ ಡಿಪಾರ್ಟ್‌ಮೆಂಟ್ ಬಗ್ಗೆ ಮಾತನಾಡುವುದಾದರೆ ಒಂದು ವಾರ್ನಿಂಗ್ ಕೊಡುತ್ತೇನೆ, ಮಿನಿಸ್ಟ್ರಿಯಿಂದಾಗಲಿ ಅಥವಾ ನಾನ್ ಅಫಿಷಿಯಲ್ಸ್‌ನ್ನು ಉಪಯೋಗಿಸಿಕೊಂಡು ಮಂತ್ರಿಗಳ ಮೇಲೆ ಪ್ರಭಾವ ಬೀರುವ ಹಾಗೆ ಮಾಡಿದರೆ ಅಂಥಾ ಆಫೀಸರ್ಸ್‌ಗೆ ಬ್ಲಾಕ್‌ಮಾರ್ಕ್ ಕೊಡಬೇಕು ಎಂದು ಮಾಡಿದ್ದೇನೆ. ಇದರಲ್ಲಿ ನನ್ನ ಡಿಪಾರ್ಟ್‌ಮೆಂಟ್‌ನಲ್ಲಿ ಯಾವುದೇ ರಾಜಕೀಯಕ್ಕೆ ಒಳಗಾಗದೆ ಟ್ರಾನ್ಸ್‌ಫರ್ ಮಾಡುವುದಕ್ಕೆ ಏರ್ಪಾಡು ಮಾಡಿದ್ದೇನೆ. ಅದೇ ಮನೋಭಾವ ಇದ್ದರೆ ಒಳ್ಳೆಯದು ಎಂದು ಹೇಳುತ್ತೇನೆ. ಇದರಲ್ಲಿ ಏನೂ ಅನುಮಾನ ಇರಕೂಡದು ಎಂದು ಹೇಳುತ್ತೇನೆ. ಎಲ್ಲರಿಗೂ ಗೊತ್ತಿರುವಂತೆ ಕೆಲವು ಜಾತಿಗಳಲ್ಲಿ ಹೆಚ್ಚು ಬಡತನವಿದೆ, ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದಿರತಕ್ಕ ಪರಿಸ್ಥಿತಿ ಇದೆ. ಆದರೂ ಕೂಡ ಜಾತಿಯ ಹೆಸರಿನಲ್ಲಿ ಏನಾದರೂ ಮಾಡಿದರೆ ಅದಕ್ಕೆ ಅಡ್ಡಿ ಆತಂಕ ಬರುತ್ತದೆ. ಈ ಕೆಲವು ಜಾತಿಗಳಲ್ಲಿರುವ ಬಡತನ, ಆರ್ಥಿಕ, ಸಾಮಾಜಿಕ ಪರಿಸ್ಥಿತಿ ಏನಿದೆ ಅದನ್ನು ಹೋಗಲಾಡಿಸುವುದಕ್ಕೆ ಏನು ಮಾಡಬೇಕೆಂಬುದನ್ನು ಯೋಚನೆ ಮಾಡಬೇಕು. ಹಿಂದುಳಿದ ವರ್ಗಗಳ ಜನರಲ್ಲಿ ಆರ್ಥಿಕ ಮತ್ತು ಸಾಮಾಜಿಕವಾಗಿ ಕೊರತೆ ಏನಿದೆ ಎನ್ನುವುದನ್ನು ಎಲ್ಲರೂ ಒಪ್ಪುತ್ತಾರೆ, ಅವರು ಮುಂದೆ ಬರಬೇಕು ಎನ್ನುವ ವಿಷಯದಲ್ಲಿ ಎಲ್ಲರ ಅಭಿಪ್ರಾಯವೂ ಒಂದೇ ಆಗಿದೆ. ಈ ದಿಸೆಯಲ್ಲಿ ಪ್ರಯತ್ನ ಮಾಡುವಾಗ

ಕಾನೂನು ದೃಷ್ಟಿಯಿಂದ ಏನು ಅಡ್ಡಿ ಆತಂಕ ಬರುತ್ತದೆ, ಅದನ್ನೆಲ್ಲ ಯಾವರೀತಿ ತಪ್ಪಿಸುವುದಕ್ಕೆ ಸಾಧ್ಯ ಎನ್ನುವ ವಿಚಾರಗಳನ್ನೆಲ್ಲ ಪರಿಶೀಲಿಸಲು ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ನೇಮಕ ಮಾಡುವ ವಿಷಯ ಸರ್ಕಾರದ ಮುಂದೆ ಬಂತು. ಆದಕಾರಣ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ನೇಮಕ ಮಾಡಿದ್ದು ತಪ್ಪಾಯಿತು ಎಂದು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಸರಿಯಾಗಿ ಕೆಲಸ ಮಾಡಿ, ಆಳವಾಗಿ ಈ ಸಮಸ್ಯೆಯನ್ನು ಪರಿಶೀಲಿಸಿ ಒಂದು ವರದಿಯನ್ನು ಕೊಟ್ಟ ಮೇಲೆ ಅದನ್ನು ಈ ಸಭೆಯಲ್ಲಿಟ್ಟು, ಅದರ ಮೇಲೆ ಸಾಕಷ್ಟು ಚರ್ಚೆಯಾಗಿ ಒಂದು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ.

ಜಾತಿಗಳ ವಿಷಯದಲ್ಲಿ ಶ್ರೀ ದೇವೇಗೌಡರು ಪದೇ ಪದೇ ಮಾತನಾಡುತ್ತಾರೆ. ಮುಖ್ಯ ಮಂತ್ರಿಗಳು ಐ.ಎ.ಎಸ್. ಅಧಿಕಾರಿಗಳು ಇಷ್ಟು ಜನ ಈ ಜಾತಿಗೆ ಸೇರಿದವರು, ಇಷ್ಟು ಜನ ಆ ಜಾತಿಗೆ ಸೇರಿದವರು ಎಂದು ಅಂಕಿ ಸಂಖ್ಯೆಗಳನ್ನು ಕೊಟ್ಟರು ಎಂದು ಹೇಳಿದರು. ಜಾತಿಯ ಪ್ರಕಾರ ಲೆಕ್ಕವಿಡುವಂಥ ಪದ್ಧತಿ ಮತ್ತು ಈ ಅಂಕಿಸಂಖ್ಯೆ ಕೊಡುವಂಥ ಪದ್ಧತಿ ಸರಿಯಲ್ಲ ಎಂದು ಮಾನ್ಯ ಮುಖ್ಯ ಮಂತ್ರಿಗಳು ಆಗಲೇ ಸ್ಪಷ್ಟವಾಗಿ ಹೇಳಿದರು. ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಜನರಿಗೆ ಮಾತ್ರ ಪ್ರತ್ಯೇಕವಾದ ರಿಸರ್ವೇಷನ್ ಇದೆ. ಅದನ್ನು ಬಿಟ್ಟ ನಂತರ ಜಾತಿಯ ಮೇಲೆ ನೇಮಕ ಮಾಡುವುದು ನಮ್ಮ ಧೋರಣೆಯಲ್ಲ. ಜಾತಿವಾದದ ಮೇಲೆ ಅಂಕಿ ಸಂಖ್ಯೆ ಹೇಳಬಾರದು. ಅವರೆ ಎಲ್ಲ ಸದಸ್ಯರೂ ಹೆಚ್ಚಾಗಿ ಒತ್ತಾಯ ಮಾಡಿದ್ದರಿಂದ ಮುಖ್ಯ ಮಂತ್ರಿಗಳು ಅಂಕಿಸಂಖ್ಯೆಗಳನ್ನು ಸಭೆಗೆ ಕೊಟ್ಟು, ಇದನ್ನೆಲ್ಲ ಹೇಳುವುದು ಸರಿಯಲ್ಲ, ಇನ್ನು ನಾನು ಹೇಳುವುದಿಲ್ಲ ಎಂದೂ ಹೇಳಿದರು. ಐ.ಎ.ಎಸ್. ನಲ್ಲಿ ಅವರವರ ಕಾಂಪಿಟೆನ್ಸ್‌ನಿಂದ ಆರಿಸಿಬರುತ್ತಾರೆ, ಆಯಾ ಜಾತಿಯ ಪ್ರಮಾಣದ ಪ್ರಕಾರ ಆರಿಸಿಬರಬೇಕು ಎಂದು ಹೇಳಲಕ್ಕೆ ಬರುವುದಿಲ್ಲ, ಅದಕ್ಕೆ ಅಸ್ಪದವಿಲ್ಲ ಎಂದು ಹೇಳಿದರು. ಜಾತಿವಾದವನ್ನು ಸಮರ್ಥನೆ ಮಾಡುವ ದೃಷ್ಟಿಯಿಂದ ಹೇಳಲಿಲ್ಲ, ಜಾತಿಗೆ ಇದರಲ್ಲಿ ಯಾವ ಸ್ಥಾನವೂ ಇಲ್ಲ ಎನ್ನುವ ದೃಷ್ಟಿಯಿಂದ ಹೇಳಿದರು. ಕಾಂಪಿಟಿಟಿವ್ ಎಗ್ಸಾಮಿನೇಷನ್ಸ್‌ನಲ್ಲಿ ಎಲ್ಲರಿಗೂ ಅವಕಾಶವಿದೆ.

Sri H. D. DEVE GOWDA.—18 per cent reservation will have to be made for S.C. and S.T. Similarly for backward classes reservations can be made. What is wrong?

Sri M. Y. GHORPADE.—That is quite a different thing.

Sri H. D. DEVE GOWDA.—From the day this Ministry came into power this issue started.

Sri C. M. ARUMUGAM.—This Government has not given proper representation to backward classes. That is our charge.

Sri M. Y. GHORPADE.—I will come to your point. This is a public debate. When certain things are said, I must reply on behalf of the Government.

ಪ್ರಜಾಪ್ರಭುತ್ವದಲ್ಲಿ ವಿಶ್ವಾಸ ನಮಗೂ ಇದೆ, ನಿಮಗೂ ಇದೆ. ಪ್ರಜಾಪ್ರಭುತ್ವವನ್ನು ಒಪ್ಪಿದ ತಕ್ಷಣ ಸರಿಸಮಾನವಾದ ಅವಕಾಶ ಎಲ್ಲರಿಗೂ ಇರಬೇಕು ಎನ್ನುವ ಮಾತನ್ನು ಎಲ್ಲರೂ ಒಪ್ಪಬೇಕಾಗುತ್ತದೆ. ಅಸಮಾನತೆ ಹೋಗಿ, ಸರಿಸಮಾನವಾದ ಅವಕಾಶ ಆದಷ್ಟುಮಟ್ಟಿಗೆ ಎಲ್ಲರಿಗೂ ಬರಬೇಕು. ಸಮಾನತೆಯ ಮಾರ್ಗವೇನಿದೆ, ಸಮಾನತೆ ಈ ದೇಶದಲ್ಲಿ ಬರಬೇಕು ಎಂದು 20 ವರ್ಷಗಳಿಂದ ಎಲ್ಲರೂ ಹೇಳುತ್ತ ಬಂದಿದ್ದೇವೆ. ಈಗ ಸ್ವಲ್ಪಮಟ್ಟಿಗೆ ಕಾಣುತ್ತಿದ್ದೇವೆ. ಇನ್ನು ಮುಂದೆ ಸಮಾನತೆ ಜಾಸ್ತಿಯಾಗುತ್ತದೆ. ಆರ್ಥಿಕ ಮತ್ತು ಸಾಮಾಜಿಕ ಸಮಾನತೆ ಹೆಚ್ಚಾದಾಗ ಜನ ಯಾವುದೇ ಜಾತಿಗೆ ಸೇರಿರಲಿ ಸಮಾನಾವಕಾಶದಿಂದ ರಾಜಕೀಯದಲ್ಲಿ ಭಾಗವಹಿಸುವುದಕ್ಕೆ, ಯಾವುದೇ ಕೆಲಸದಲ್ಲಿ ಭಾಗವಹಿಸುವುದಕ್ಕೆ ಅವಕಾಶವಿರುತ್ತದೆ. ಅಸಮತೆ ಏನಿದೆ ಅದು ಹೋಗಿ ಸಮಾನವಾದ ಶಕ್ತಿ ಬಂದರೆ ಅವಾಗ ಎಲ್ಲ ಜಾತಿಗಳವರೂ ಸರಿಸಮಾನವಾಗಿ ಎಲ್ಲ ಕಾರ್ಯಕ್ರಮಗಳಲ್ಲೂ ಭಾಗವಹಿಸುವುದಕ್ಕೆ ಶಕ್ತಿ ಬರುತ್ತದೆ. ಹಾಗೆ ಬರಲಿ ಎನ್ನುವುದೇ ನಮ್ಮ ಉದ್ದೇಶ. ಹಳೇ ಕಾಲಕ್ಕೆ ನಮ್ಮ ದೇಶದಲ್ಲಿ ಸುಮಾರು 600 ರಾಜರಿದ್ದರು, ಎಲ್ಲ ಅಧಿಕಾರವೂ ಅವರಿಗೆ ಇತ್ತು. ಅವರೇ ರಾಜ್ಯಪಾಳಬೇಕು, ಬೇರೆಯವರಿಗೆ ರಾಜ್ಯದ ಆಳ್ವಿಕೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶವಿರಲಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಿದ್ದ ವಿಷಯ. ಆವಾಗ ನಿರಂಕುಶಾಧಿಕಾರವಿತ್ತು. ಭಾರತ ದೇಶದಲ್ಲಿ ಎಲ್ಲ ಕಡೆಯೂ ಪತ್ರಿಕೆಗಳು ಅಚ್ಚಾಗಿ, ಪ್ರಚಾರವಾಗಿ, ಅವುಗಳನ್ನು ಓದುವ

(SRI M. Y. GHORPADE)

ಶಕ್ತಿ ಜನರಲ್ಲಿ ಬಂದಾಗ, ಅವರಲ್ಲಿ ತಿಳುವಳಿಕೆ ಮೂಡಿದಾಗ, 600 ಜನರಲ್ಲಿ ಎಲ್ಲ ಅಧಿಕಾರವೂ ಉಳಿಯಬೇಕು ಎಂದರೆ ತಪ್ಪಾಗುತ್ತದೆ. ಓದುವ ಶಕ್ತಿ, ಬುದ್ಧಿ ಶಕ್ತಿ, ಅರ್ಥವಾಗುವ ಶಕ್ತಿ ಬಂದಾಗ ಅಧಿಕಾರ ಮಾಡುವುದಕ್ಕೆ ನಮಗೂ ಬರುತ್ತದೆ, ನಿರಂಕುಶ ಪ್ರಭುತ್ವ ಹೋಗಿ ಪ್ರಜಾ ಪ್ರಭುತ್ವ ಬರಲಿ ಎನ್ನುವ ಪ್ರಯತ್ನ ನಡೆಯುತ್ತದೆ. ಕೆಲವರ ಕಡೆಯಿಂದ ಅಧಿಕಾರ ನಡೆಸುವ ಶಕ್ತಿ ಇದ್ದುದು ತಪ್ಪಿ ಎಲ್ಲರಿಗೂ ಅಧಿಕಾರ ನಡೆಸುವ ಶಕ್ತಿ ಬರುತ್ತದೆ. ಹೀಗೆಂದ ಮಾತ್ರಕ್ಕೆ ಸರ್ಕಾರ ಕೆಲವು ಜಾತಿಗಳ ವಿರೋಧವಿದೆ ಎಂದರೆ ಸಮಾಜದಲ್ಲಿ ಪರಿವರ್ತನೆಯಾಗತಕ್ಕ ವಿಷಯವನ್ನು ತಿಳಿದುಕೊಳ್ಳುವ ಶಕ್ತಿ ನಮ್ಮಲ್ಲಿಲ್ಲ ಎಂದು ಹೇಳಬೇಕಾಗುತ್ತದೆ. ಎಲ್ಲರಿಗೂ ಸರಿಸಮಾನವಾದ ಶಕ್ತಿ ಬರುವುದನ್ನು ನೋಡಿ ನಾವು ಸಂತೋಷ ಪಡಬೇಕು. ಕೆಲವೇ ಜನ ಜವಾಬ್ದಾರಿ ವಹಿಸಿಕೊಳ್ಳುತ್ತಿದ್ದೇವೆಂದು ಹೇಳುವುದಾದರೆ ಸರ್ಕಾರ ಆ ಕೆಲಸ ಮಾಡುತ್ತಿಲ್ಲ ಎಂದು ನಾನು ಹೇಳುತ್ತೇನೆ. ಈ ಸರ್ಕಾರ ಏನು ಮಾಡುತ್ತದೆ ಎಂದರೆ ಎಲ್ಲರಿಗೂ ಸರಿಸಮಾನವಾದ ಅವಕಾಶ, ಆರ್ಥಿಕ ಮತ್ತು ಬುದ್ಧಿ ಶಕ್ತಿ ಕೊಡುವ ಪ್ರಯತ್ನ ಮಾಡುತ್ತಿದೆ. ಆ ಕಾರ್ಯಕ್ರಮದ ಪರಿಣಾಮವಾಗಿ ಎಲ್ಲ ಜನತೆ, ಯಾವುದೇ ಜಾತಿಗೆ ಸೇರಿರಲಿ, ಸರಿಸಮಾನವಾಗಿ ತಲೆ ಎತ್ತಿ ನಡೆಯುವ ಶಕ್ತಿ ನಮ್ಮ ಸಮಾಜದಲ್ಲಿ ಬರುತ್ತಿದೆ, ಆದಕಾರಣ ಈ ಪರಿವರ್ತನೆಯಿಂದ ಒಳ್ಳೆಯದಾಗುತ್ತದೆ, ಇದು ಯಾವ ಜಾತಿಯ ವಿರುದ್ಧ ಆಗುತ್ತಿರುವ ಕೆಲಸ ಎಂದು ಯಾರೂ ತಿಳಿದುಕೊಳ್ಳಬಾರದು.

3-30 P. M.

Sri H. D. DEVE GOWDA.—Is not the Finance Minister ashamed? Does he want to tell the name of the particular community?

Sri M. Y. GHORPADE.—I did not use the name of any community at all.

Sri C. M. ARUMUGAM.—Does he want to include all the backward communites?

Sri M. Y. GHORPADE.—It is inevitable that all people, irrespective of community, will become equally strong to exercise their responsibility. It cannot remain the prerogative of some community as in the old days when 600 Rulers were there. It is a process of history. This caste confrontation will be put an end to., to enable one and all to participate in a large measure in nation-building activites.

ಅಷ್ಟೇ ಆಗುತ್ತ ಇರುವುದು, ಅದಕ್ಕೆ ಜಾತಿಯತೆಯ ಸ್ವರೂಪ ಕೊಟ್ಟು ಸಮಾಜವನ್ನು ಹದಗೆಡಿಸುವುದಕ್ಕೆ ಹೋಗಬಾರದು.

ಶ್ರೀ ಎಚ್. ಡಿ. ದೇವೇಗೌಡ.—ನಿಮ್ಮಿಂದ ಈ ಜಾತೀಯತೆ ಪ್ರಾರಂಭವಾಯಿತು. ಮೂರು ತಿಂಗಳಿಂದ, ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಪ್ರಾರಂಭ ಮಾಡಿದ್ದೀರಿ.

ಶ್ರೀ ಎಂ. ವೈ. ಘೋರ್ಪಡೆ.—ಈ ಸರ್ಕಾರದಲ್ಲಿ ಎಲ್ಲಾ ಜಾತಿಗೆ ಸೇರಿರತಕ್ಕ ಜನ ಇದ್ದಾರೆ. ಈ ಸಭೆಯಲ್ಲಿ ಎಲ್ಲಾ ಜಾತಿಗೆ ಸೇರಿರತಕ್ಕ ಜನ ಅವರವರ ಜನಸಂಖ್ಯೆಯ ಪ್ರಕಾರ ಆರಿಸಿಬಂದಿದ್ದಾರೆ ಈ ಪಕ್ಷವಾಗಲೀ ಆ ಪಕ್ಷವಾಗಲೀ ಜಾತೀಯತೆ ಎಲ್ಲಿ ಇದೆ?

ಶ್ರೀ ಎಚ್. ಎಸ್. ಸಿದ್ದಪ್ಪ.—ಅನುಭವಮಂಟಪ ಮಾಡಿದ್ದಾರೆ, ಅನುಭವ ಏನೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ಅನುಭವ ಮಂಟಪ ಮಾಡಿದ್ದಾರೆ, ಅಲ್ಲಮ ಪ್ರಭು ಯಾರು ಹೇಳಿ?

ಶ್ರೀ ಕೋಣಂದೂರು ಲಿಂಗಪ್ಪ.—ತಾವು ಹೇಳುವಾಗ, ಸಮಾನ ಅವಕಾಶ ವಿಷಯ ಹೇಳಿದಿರಿ, ಆದರೆ ಈ ಜಾತೀಯ ಪದ್ಧತಿ ಮೇಲೆ ನಿರ್ಮಾಣವಾಗಿ ನಡೆದುಕೊಂಡು ಬಂದಿರತಕ್ಕ ಈ ರಾಷ್ಟ್ರದಲ್ಲಿ ಸಮಾನ ಅವಕಾಶದಿಂದ ಹಿಂದುಳಿದ ಜಾತಿಗಳಿಗೆ ಮತ್ತು ಅವುಗಳ ಪ್ರಗತಿಗೆ ಅಪಾಯ ಇದೆ.

ಅವುಗಳ ಪ್ರಗತಿ ಕುಂಠಿತವಾಗಿದೆ. ಆದ್ದರಿಂದ ಹಿಂದುಳಿದ ಜಾತಿಗಳಿಗೆ ವಿಶೇಷ ಪ್ರಾತಿನಿಧ್ಯ 100ಕ್ಕೆ 60 ರಷ್ಟು ಸೀಟು ರಿಸರ್ವ್ ಮಾಡುವ ಪ್ರಾತಿನಿಧ್ಯ ಕೊಡುವುದರ ಬಗ್ಗೆ ತಾವು ಯೋಚನೆ ಮಾಡುತ್ತೀರಾ ?

ಶ್ರೀ ಎಂ. ವೈ. ಘೋರ್ಪಡೆ.—ಇಷ್ಟು ಮಾಡಿದರೂ ಜಾತಿಯ ಕೂಗು ಬರುತ್ತಿದೆ. ನೀವು ಹೇಳಿದಂತೆ ಮಾಡಿದರೆ ಏನು ಏನು ಅನುತ್ತೀರೋ We do not believe in the caste system. Caste system is doomed to disappear in another ten years. There will be no caste at all.

[*Interruption*]

ಶ್ರೀ ವಾಟಾಳ್ ನಾಗರಾಜ್.—ತಾವು ಅಂತಹ ಕಾರ್ಯಕ್ರಮ ಹಾಕಿಕೊಂಡಿಲ್ಲ. ಬರೀ ಘೋಷಣೆಯ ಕಾರ್ಯಕ್ರಮ, ಈ ಜಾತೀಯತೆ ಹೋಗುವಂಥ ಕಾರ್ಯಕ್ರಮ ಏನು ಹಾಕಿಕೊಂಡಿದ್ದೀರಿ ?

Sri V. N. PATIL (Humnabad).—While welcoming positive suggestions to eradicate casteism, may I ask whether Government will issue instructions to the concerned and see that the name of the community or caste is not mentioned by students in their applications for admission to schools and colleges and by candidates who apply for Government jobs and nowhere the name of caste appears in official records ?

MADAM SPEAKER.—Will the hon. Member resume his seat ? Otherwise, I will ask him to withdraw from the House. Is he withdrawing or not ? It is not proper for him to stand and be talking when I am on my legs.

[*Interruption*]

Sri M. Y. GHORPADE.—I have tried to answer the caste argument. No one can raise it from the level of ordinary common politics to the level of ideological discussion. I do sincerely beleive that in the next ten years caste will become totally irrelevant. When our children eat in hotels, travel in buses, and wear pants and bush shirt, caste-consciousness cannot just survive. I do believe that caste-consciousness is very much less today than what it was 20 years ago. The awakening that taken place will destroy caste-consciousness ; it is on its way out. It is an eyesore and it is an irrelevent argument and the sooner we forget about it, the better it is. Let me come to other points.

ಮಾನ್ಯ ಸದಸ್ಯರಾದ ಅರ್ಮುಗಂರವರು ನಾನು ರಾಜೀನಾಮೆ ಕೊಡಬೇಕೆಂದು ಹೇಳಿದರು. ಅವರು ಹೆಚ್ಚು ಸೆನ್ಸೇಷನಲ್ ಸ್ಟೇಟ್‌ಮೆಂಟ್ ಮಾಡಿದ್ದಾರೆ. ಬಹುಶಃ ಅವರ ಉದ್ದೇಶ ಪತ್ರಿಕೆಯಲ್ಲಿ ಬೋಲ್ಡ್ ಹೆಡ್ ಲೈನ್ಸ್‌ನಲ್ಲಿ ಬರುತ್ತದೆ ಎಂದು.

ಶ್ರೀ ಕೋಣಂದೂರು ಲಿಂಗಪ್ಪ.—ಪತ್ರಿಕೆಯ ದೃಷ್ಟಿ ಇಟ್ಟುಕೊಂಡು ಹೇಳುತ್ತೇವೆ ಎಂದು ಹೇಳುವುದು ಸರಿಯಲ್ಲ.

Sri C. M. ARUMUGAM.—The Finance Minister must withdraw the statement he made. Let him understand that he has misused his position. Let him also understand that what I have stated is not for the Press but it is for the information of the House and the general public of 3 crores of people. By making those appointments he has misused his power and the people should know that he has misused power, within three months' time. If he does not resign, a time will come when he will be removed. That time will come.

ಶ್ರೀ ಎಂ. ವೈ. ಘೋರ್ಪಡೆ.- ನಾನು ನಮ್ರತೆಯಿಂದ ಹೇಳುವುದು ಇಷ್ಟೆ. ಮಾನ್ಯ ಸದಸ್ಯರು ಯಾವುದೇ ವಿಷಯದ ಬಗ್ಗೆ ಮಾತನಾಡುವಾಗ ಗಾಂಭೀರ್ಯದಿಂದ ಮಾತನಾಡಬೇಕು. ಎಕ್ಸೆಸ್ಸೀವ್ ಆಗಿ, ಹೇಗೆ ಬೇಕೋ ಹಾಗೆ ಮಾತನಾಡುವುದಾದರೆ ಅದರಿಂದ ಏನೂ ಪ್ರಯೋಜನ ವಾಗುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ನಾನು ಅಚಲವಾದ ವಿಶ್ವಾಸ ಇರತಕ್ಕವನು. ನನ್ನಿಂದ ಅಂಥದ್ದು ಏನಾದರೂ ರಾಜ್ಯಕ್ಕೆ ದ್ರೋಹದ ಕೆಲಸ ಆಗಿದ್ದರೆ, ಒಂದು ಕ್ಷಣವೂ ಕೂಡ ನಾನು ಇಲ್ಲಿರುವ ಮನುಷ್ಯ ಅಲ್ಲ, ನೀವು ರಾಜೀನಾಮೆ ಕೊಟ್ಟು ಹೋಗಿ ಎಂದು ಹೇಳುವುದಕ್ಕೆ ಅವಕಾಶ ಕೊಡುತ್ತಾ ಇರಲಿಲ್ಲ. ಈ ಸಂದರ್ಭದಲ್ಲಿ ನನ್ನ ಸ್ನೇಹಿತರಾದ ಅಮೀರ್ಗಂರನರು ಒಂದು ವಿಷಯ ವನ್ನು ಹೇಳಿದರು.

ಶ್ರೀ ವಾಟಾಳ್ ನಾಗರಾಜ್.—ಕಳೆದ 25 ವರ್ಷಗಳಿಂದ ರಾಜೀನಾಮೆ ಕೊಡಿ ಎಂದು ಕೇಳಿದರೂ ಅವರು ರಾಜೀನಾಮೆ ಕೊಡುವುದಿಲ್ಲ. ಬೆಸ್ಸು ಏತಕ್ಕೆ ತಟ್ಟಿಕೊಳ್ಳಬೇಕು ? ಗಂಡಿ ಮನೆ ಕೆಟ್ಟು ಹೋಯಿತೇ ?

ಶ್ರೀ ಎಂ. ವೈ. ಘೋರ್ಪಡೆ.—ರೇಸ್ ಕ್ಲಬ್ ಬಗ್ಗೆ ಬಹಳ ಸಣ್ಣ ಮಾತು ಸಣ್ಣ ವಿಷಯ ಹೇಳಿದರು. ಅಲ್ಲಿ ಏನೂ ತಪ್ಪು ಆಗಿಲ್ಲ, ಸರಿಯಾದ ಕ್ರಮ ಕೈಗೊಂಡಿದೆ. ಚಂದ್ರಕಾಂತ್‌ರಾಜ್ ಅರಸ್ ನಾವೂ ಒಂದೇ ಕಾಲೇಜಿನಲ್ಲಿ ಓದಿದವರು, ಕ್ಲಾಸ್‌ಮೇಟ್ಸ್. ಮೇಲ್ಮನೆಯಲ್ಲಿ ಮಾನ್ಯ ಸದಸ್ಯರಾದ ವೆಂಕಟೇಗೌಡರು ಅವರೂ ನನ್ನ ಕ್ಲಾಸ್ ಮೇಟ್. ಕಾಲೇಜಿನಲ್ಲಿ ಓದಿದ ತಕ್ಷಣ ಏನೋ ಊಹೆ ಮಾಡಿ ಮಾತನಾಡುವುದು ಸರಿಯಲ್ಲ. ರೇಸ್ ಕ್ಲಬ್‌ನಲ್ಲಿ ಸ್ಟ್ಯುವರ್ಡ್ಸ್ ನೇಮಕ ಮಾಡುವ ಅಧಿಕಾರ ಸರ್ಕಾರಕ್ಕೆ ಇದೆ. ಮೂರು ಜನ ಸ್ಟ್ಯುವರ್ಡ್ಸ್‌ನ್ನು ಒಟ್ಟು ಕಮಿಟಿ ಮೆಂಬರ್, ಒಟ್ಟು ನಾಲ್ಕು ಜನರನ್ನು ನೇಮಕ ಮಾಡುತ್ತೇವೆ. ನೇಮಕ ಮಾಡುವಾಗ ಬರೀ ಅಧಿಕಾರಸ್ಥರನ್ನು ನೇಮಕ ಮಾಡಿದರೆ ಟೀಕೆಗೆ ಗುರಿಯಾಗುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ಅವರಿಗೆ ಅನುಭವ ಇಲ್ಲ. ಅನುಭವ ಇರುವ ಶ್ರೀಮಾನ್ ನಾಗಣ್ಣನವರಿಗೆ ಇದರಲ್ಲಿ 50 ವರ್ಷ ಸರ್ವೀಸ್ ಆಗಿದೆ, ಅವರನ್ನು ಏತಕ್ಕೆ ಮಾಡಬಾರದು ?

ಶ್ರೀ ಎಂ. ವೈ. ಘೋರ್ಪಡೆ.—ನಾಲ್ಕು ಜನರನ್ನು ನೇಮಕ ಮಾಡುವಾಗ ನಮ್ಮ ಸೆಕ್ರೆಟರಿ ಮತ್ತು ಫಿನಾನ್ಸ್ ಸೆಕ್ರೆಟರಿ ಅಧಿಕಾರಸ್ಥರನ್ನು ಹಾಕಿದ್ದೇವೆ. ಇನ್ನು ಇಬ್ಬರು ನಾನ್ ಅಫಿಷಿಯಲ್ಸ್ ಇರಬೇಕು. ಈ ರೇಸ್ ಏನು ಇದೆ ಇದನ್ನು ನ್ಯಾಯವಾಗಿ ನೋಡಿಕೊಳ್ಳುವ ಜವಾಬ್ದಾರಿ ಸ್ಟ್ಯುವರ್ಡ್ಸ್‌ಗಳ ಮೇಲೆ ಇರುತ್ತದೆ. ಸ್ಟ್ಯುವರ್ಡ್ಸ್ ಬಿಡ್ಡು ಮಾಡಬಾರದು, ಮತ್ತು ರೇಸಿಂಗ್ ಬಗ್ಗೆ ಸ್ವಲ್ಪಮಟ್ಟಿಗೆ ಗೊತ್ತಿರಬೇಕು. ನನಗೆ ಯಾವ ಕುದುರೆ ರೇಸಿನಲ್ಲಿ ಗೆಲ್ಲುತ್ತದೆ ಯಾವುದು ಸೋಲುತ್ತದೆ ಎನ್ನುವ ಜ್ಞಾನ ಇಲ್ಲ ನನ್ನನ್ನು ಸ್ಟಿವರ್ಡ್ ಮಾಡಿದರೆ ಚೆನ್ನಾಗಿರುವುದಿಲ್ಲ, ಬ್ರಿಗೇಡಿಯರ್ ನಾಯಬ್ ಅವರನ್ನು ಕಮಿಟಿ ಮೆಂಬರಾಗಿ ನೇಮಕಮಾಡಿದ್ದೇವೆ. ಬ್ರಿಗೇಡಿಯರ್ ನಾಯಬ್ ಹಾಕಿದರೆ ಶಿಸ್ತು ಇರುತ್ತದೆ ಎಂದು ತಿಳಿದುಕೊಳ್ಳಬಹುದು. ಅಂಥವರು ರೇಸಿಂಗ್ ಬಗ್ಗೆ ಸ್ವಲ್ಪ ಮಟ್ಟಿಗೆ ಆಸಕ್ತಿ ತೋರಿಸುತ್ತಾರೆ.

ಶ್ರೀ ವಾಟಾಳ್ ನಾಗರಾಜ್.—ಶ್ರೀ ಜೆ. ಬಿ. ಮಲ್ಲಾರಾಧ್ಯರು ಇದ್ದರು. ಅವರನ್ನು ತೆಗೆದುಹಾಕಿ, ತಿಳುವಳಿಕೆ ಇದ್ದವರು ನಮ್ಮ ಸಭೆಯಲ್ಲಿ ಇದ್ದಾರೆ ಅವರನ್ನು ನೇಮಕ ಮಾಡ ಬಹುದಾಗಿತ್ತು. ಈ ಸಭೆಯ ಸದಸ್ಯರಾದ ಶ್ರೀಮಾನ್ ನಾಗಣ್ಣನವರು 50 ವರ್ಷಗಳಿಂದ ಕುದುರೆ ಇಟ್ಟಿದ್ದಾರೆ, ಅವರು ಪ್ರತಿಯೊಂದೂ ತಿಳಿಯತಕ್ಕವರು ಮತ್ತು ಆಳವಾಗಿ ಅಭ್ಯಾಸ ಮಾಡಿರುವವರು. ಅವರ ಬಗ್ಗೆ ಯಾತಕ್ಕೆ ಗಮನ ಕೊಡಲಿಲ್ಲ ? ಅವರನ್ನುಬಿಟ್ಟು ಏನೂ ವಿಚಾರ ತಿಳಿಯದೆ ಇರುವವರನ್ನು ಏಕೆ ಹಾಕಿದ್ದಾರೆ ?

ಶ್ರೀ ಎಂ. ವೈ. ಘೋರ್ಪಡೆ.—ಅದೇ ರೀತಿ ಮಂತ್ರಿಗಳನ್ನು ತೆಗೆದುಕೊಳ್ಳುವಾಗಲೂ ನನಗಿಂತ ಹೆಚ್ಚು ಅನುಭವ ಇದ್ದವರು ಇರಬಹುದು. ನಿಮಗೆ ಏತಕ್ಕೆ ಮಂತ್ರಿಯಾಗಿ ಮಾಡಿದ್ದಾರೆ ನಿಮಗಿಂತ ಅನುಭವಸ್ಥರು ಇಲ್ಲವೇ ಎಂದು ಕೇಳಬಹುದು. ಆದ್ದರಿಂದ ನೀವು ಹೇಳುವುದು ಎಲ್ಲರಿಗೂ ಅನ್ವಯಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಶ್ರೀ ಕೆ. ಕೆ. ಮೂರ್ತಿ ಅವರನ್ನು ಅಪಾಯಿಂಟ್ ಮಾಡಿಸ್ತೀರಿ. ಯೋಗ್ಯತೆ ಇರುವವರನ್ನು ಯಾರನ್ನೂ ತಾವು ಅಪಾಯಿಂಟ್ ಮಾಡುವುದಿಲ್ಲ. ಇಂಥ ವಿಷಯಗಳನ್ನು ಹೇಳುವುದಕ್ಕೆ ಹೋದರೆ ತಮಗೆ ಬೆಟ್ಟದಂಥ ಕೋಪಬರುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—ಅದೇರೀತಿ ನಿಮಗೆ ಉತ್ತರ ಹೇಳಿದರೆ ನೀವು ಏತಕ್ಕೆ ಕೋಪಿಸಿ ಕೊಳ್ಳುತ್ತೀರಿ ? ಈ ರೀತಿ ನಾಯಬ್ ಅವರನ್ನು ಕಮಿಟಿ ಮೆಂಬರ್ ಮಾಡಿದ್ದೇವೆ. ಚಂದ್ರಕಾಂತ ರಾಜ್ ಅರಸ್ ಲಾಯರು ಇದ್ದಾರೆ.

Sri AZEEZ SAIT.—Madam, it appears that some of the hon. Members are not interested to hear the reply of the Finance Minister.

ಅಧ್ಯಕ್ಷರು.—ನಿಮಗೆ ಉತ್ತರ ಬೇಕಿಲ್ಲ ನಿಮಗೆ ಸಮಾಧಾನವಾಗಿದ್ದರೆ ಓಟಿಗೆ ಹಾಕೋಣ. ನಾನು ನಿಂತಿರುವಾಗ ಸುಮ್ಮನೆ ಕೂತುಕೊಳ್ಳಿ. ನಿಮಗೆ ಅವರ ಉತ್ತರ ಅಗತ್ಯವಿಲ್ಲದಿದ್ದರೆ ಓಟಿಗೆ ಹಾಕೋಣ. ಮುಂಡ ಪಾಟೀಲರು ಕೊಟ್ಟಿರುವ ಸೂಚನೆ ಇದೆ, ಅದನ್ನು ಚರ್ಚೆಗೆ ತೆಗೆದು ಕೊಳ್ಳೋಣ. ಗಲಾಟೆ ಮಾಡದೆ ಕುಳಿತುಕೊಂಡರೆ 2 ನಿಮಿಷಗಳಲ್ಲಿ ಮಂತ್ರಿಗಳು ಭಾಷಣ ಮುಗಿಸುತ್ತಾರೆ. ಮಧ್ಯದಲ್ಲಿ ಇಷ್ಟು ಗಲಾಟೆ ಮಾಡಿದರೆ ಅವರು ಹೇಗೆ ಮಾತನಾಡುವುದು ?

ಶ್ರೀ ಎಂ. ವೈ. ಘೋರ್ಪಡೆ.—ಆದಕಾರಣ ನಾನ್ ಅಫಿಷಿಯಲ್ ನೇಮಕ ಮಾಡುವ ಕಾಲಕ್ಕೆ ರೇಸ್ ಕ್ಲಬ್‌ಗೆ ಇಂಡಿಪೆಂಡೆಂಟ್ ಪರ್ಸನ್ ಯಾರನ್ನು ಹಾಕಬೇಕು ಎಂಬುದನ್ನು ಯೋಚನೆ ಮಾಡಿದ್ದೇವೆ. ಶ್ರೀ ಚಂದ್ರಕಾಂತ್‌ರಾಜ್ ಅರಸ್ ಲಾಯರು ಇದ್ದಾರೆ, ಪ್ರಾಮಾಣಿಕರು ಇದ್ದಾರೆ. ಅವರು ಸರ್ಕಾರದ ಹುತೋಟ ಉತ್ತಮಗೊಳಿಸುವುದಕ್ಕೆ ಹೇಗೆ ಸಾಧ್ಯ, ಯಾವರೀತಿ ಮಾಡಬೇಕು ಎಂಬುದನ್ನು ಸ್ವಲ್ಪ ಯೋಚನೆ ಮಾಡಿದ್ದಾರೆ. ಬೇರೆ ಬೇರೆ ದೇಶಗಳಲ್ಲಿ ರೇಸಿಂಗ್ ಕಂಟ್ರೋಲ್ ಹೇಗೆ ಮಾಡುತ್ತಾರೆ ಎಂದು ಅದರಲ್ಲಿ ಇಂಟರೆಸ್ಟ್ ತೆಗೆದುಕೊಂಡಿದ್ದಾರೆ. ಅವರು ಇಂಡಿಪೆಂಡೆಂಟ್ ಇದ್ದಾರೆ. ರೇಸ್ ಕ್ಲಬ್‌ನಲ್ಲಿ ಇರತಕ್ಕ ಯಾವುದೇ ಕ್ಲಿಕ್‌ಗೆ ಒಳಗಾಗದೇ ಇರತಕ್ಕವರು ಮತ್ತು ರೇಸ್ ಜನಕ್ಕೆ ಸಂಬಂಧ ಇಲ್ಲದೆ ಇರುವವರು ಅದರಲ್ಲಿ ಇರಲಿ ಎಂದು ಅವರನ್ನು ನೇಮಕಮಾಡಿದ್ದೇವೆ. ಅವರು ರೇಸಿಂಗ್ ಬಿಡ್‌ಮಾಡುವುದಿಲ್ಲ. ಕಾನೂನು ಗೊತ್ತಿದೆ, ಪ್ರಾಮಾಣಿಕತೆಯಿಂದ ಇದ್ದಾರೆ ಎನ್ನುವುದು ನನಗೆ ಗೊತ್ತಿದೆ, ಅವರು ನನ್ನ ಕ್ಲಾಸ್‌ಮೇಟ್. ಇದರ ಜೊತೆಗೆ ಈ ಸರ್ಕಾರದ ಹುತೋಟ ಯಾವರೀತಿಯಿಂದ ಹೆಚ್ಚಿಸಬೇಕು, ಸುಧಾರಿಸಬೇಕು ಇದರಬಗ್ಗೆ ಯೋಚನೆ ಮಾಡುತ್ತಾ ಇದ್ದಾರೆ. ಆದಕಾರಣ ನಾನ್ ಅಫಿಷಿಯಲ್ಸ್ ನಾಮಿನೇಟೆಡ್ ಸ್ಟೀವರ್ಡ್ ಹಾಕಿದರೆ ಅದು ರೇಸ್ ಕ್ಲಬಿಗೆ ಒಳ್ಳೆಯದಾಗುತ್ತದೆಯೇ ಹೊರತು ಕೆಟ್ಟದ್ದು ಆಗುವುದಿಲ್ಲ ಎಂದು ತಿಳಿದುಕೊಂಡಿದ್ದೇನೆ. ನಾವು ಕಾನೂನು ಪ್ರಕಾರ ಅದನ್ನು ಅನ್ವಯ ಮಾಡುವಾಗ ಯಾರಾದರೂ ಒಬ್ಬರನ್ನು ಹಾಕಬೇಕು, ಯಾರನ್ನು ನೇಮಕಮಾಡಿದರೂ ಕೂಡ ಇದೇವಾದ ಹೇಳುವುದಕ್ಕೆ ಸಾಧ್ಯ; ಅವರಿಗಿಂತಲೂ ಒಳ್ಳೆಯವರು ಇರಲಿಲ್ಲವೇ ಎಂದು ಕೇಳುತ್ತಿದ್ದಿರಿ.

Sri M. S. KRISHNAN.—I would like to know whether the hon. Minister has gone into the anticedents of this non-official whom he has appointed. My own information is that he is involved in smuggling goods inside and outside the State.

Sri M. Y. GHORPADE.—Government had to nominate four people. We decided to nominate two officials and two non-officials to bring in fresh blood. The two officials were the Home Secretary and the Finance Secretary. Among the non-officials one was Brig. Naib whom we appointed as a member of the committee, not as a steward and the other man was Chadrakant Raj Urs. He is nominated as a Steward for the reasons I have already stated because I know personally that he is a good and honest lawyer. He is interested in racing and is not involved in any of the power patterns that may exist inside or outside the race course. That is the only reason why he was nominated. It is not a post where a man can make fabulous money. If you engage a man whom you know he may bring an independent mind to bear on racing. I am confident that it is a good choice which is generally welcomed by all the circles. If he was also appointed as a Government Advocate, that has nothing to do with me or with my department. That development took place much later and certainly not with my knowledge. It is the Chief Minister and the Law Minister who make that appointment.

Sri C. M. ARUMUGAM.—He was appointed last month *i.e.* in June.

Sri M. Y. GHORPADE.—I presume that the Law Minister and the Chief Minister when appointing Advocates would have examined the legal competence of various people before making a particular choice. I feel confident that they have done so. I must, however, point out that that development has nothing to do with me or with my Department; nor was it done after consulting me or with my knowledge. Therefore, simply to say that I have appointed Chandrakantraj Urs as the Government Advocate is absolutely baseless. An hon. Member can say that Sri Naganna is better than Chandrakantraj Urs but that is only a matter of opinion. More than that I do not think any hon. Member of this House is entitled to say, because it is not true and it is not fair. I do not think it is fair to connect these matters in this manner and make a serious statement that some misuse of power has taken place and for which the minister is responsible. I have told at great length the circumstances under which this appointment was made in the Race Club and the appointment of Government Advocate has nothing to do with this appointment in the Race Club. There is nothing wrong if the same person was appointed as Government Advocate by the Chief Minister and Law Minister after due consideration. I am anxious that serious charge made should not go without being fully replied.

I hope that I have supplied all the information that the hon. member Sri C. M. Arumugam expects from me. If not, I shall give further details. I do not want any member to feel that any minister of this government hesitated to place full facts before the House when some allegations are made. That is all my anxiety. So far as I am concerned I am hundred per cent clear in my own mind that there is not ·001 per cent deviation from duty so far as this matter is concerned.

Sri C. M. ARUMUGAM.—What I am submitting to the House is, I have placed before the House certain facts and in the reply the hon. minister has accepted it. My charge is that this individual whom you mentioned has been appointed as the Government Advocate without following any procedure superseding several seniors to him and at the same time he has also been appointed as a Stewared in the Bangalore Race Club. That is my charge.

Sri M. Y. GHORPADE.—I stated the reasons and the circumstances under which Sri Chandrakantraj Urs was appointed by the Government as a Steward in the Race Club for which I take full responsibility. I repeat that nothing wrong has been done in appointing this honest person as Steward in the Race Club. I take full responsibility for that decision. The appointment of the same person as an Advocate is a subsequent development unconnected with this development. That is a development for which I have no competence to speak because it is not within my purview. The Law Minister and the Chief Minister, of course, must have examined the legal competence of various people

before appointing them as Advocates. If the hon. member wants further details, they are the persons who have to answer. I cannot answer the details on that.

MADAM SPEAKER.—I put the motion to the vote of the House. The question is :

"That the Mysore Appropriation (No. 2) Bill, 1972, be taken into consideration,"

The motion was adopted

MADAM SPEAKER.—Now consideration of clauses. The question is :

"That clauses 2, 3 and the Schedule do stand part of the Bill."

The motion was adopted

(Clauses 2, 3 and the schedule were added to the Bill).

MADAM SPEAKER.—The question is :

"That clause 1. The long title and the Enacting Formula do stand part of the Bill."

The Ayes have it...

Sri C. M. ARUMUGAM.—I press for division.

The House divided :

Ayes 65

Nos. 31

MADAM SPEAKER.—The motion is adopted.

The motion was adopted

(Clause 1, the long title and the enacting formulas were added to the Bill).

Motion to pass

Sri M. Y. GHORPADE.—I move : "That the Mysore Appropriation (No. 2) Bill, 1972, be passed."

MADAM SPEAKER.—The question is :

That the Mysore Appropriation (No. 2) Bill, 1972, be passed.

The motion was adopted and the Bill was passed.

4-00 P.M.

Notice of an adjournment Motion

re : Palace affairs

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).--ಅರಮನೆ ವಿಷಯದಲ್ಲಿ ನಾವು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇವೆ.

ಅಧ್ಯಕ್ಷರು.—ನಾನು ಅದನ್ನು ನೋಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದೀ ರಾಜ್ಯದ ಜನತೆಯ ಹಿತದೃಷ್ಟಿಯಿಂದ ಅದು ಬಹಳ ಮುಖ್ಯವಾದ ಪ್ರಶ್ನೆಯಾಗಿದೆ. ಅದನ್ನು ಜಾಗ್ರತೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ಅದನ್ನು ನಾನು ನೋಡಿಸುತ್ತೇನೆ. ದಯವಿಟ್ಟು ತಾವು ಕುಳಿತುಕೊಳ್ಳಿ. ಮುಂದಿನ ವಿಷಯಕ್ಕೆ ಹೋಗೋಣ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಸಮಾಜವಾದದ ಹೆಸರಿನಲ್ಲಿ ದುರ್ವ್ಯವಹಾರ ನಡೆಯುತ್ತಿದೆ. ಅದ್ದರಿಂದ ನಾವು ಮೂರು ಜನ ಸೇರಿ ಕಳುಹಿಸಿಕೊಟ್ಟಿರುವ ಆ ನಿಲುವಳಿ ಸೂಚನೆಯ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ತಮ್ಮ ನಿಲುವಳಿ ಸೂಚನೆ 3-52 ಘಂಟೆಗೆ ಬಂದಿದೆ. ತಾವು ಸಮಾಜವಾದ, ಸಮಾಜವಾದ ಎಂದು ಹೇಳುತ್ತೀರಿ, ಅದರಂತೆ ತಾವು ರೂಲ್ಸನ್ನು ಸಹ ನೋಡಬೇಕು. ತಾವು ಬೆಳಗ್ಗೆ 11 ಗಂಟೆಗೇ ಕೊಡಬೇಕಾಗಿತ್ತು. ಆದರೆ 3-52ಕ್ಕೆ ಕೊಟ್ಟಿದ್ದೀರಿ. ಅದರ ಇಂಪಾರ್ಟೆನ್ಸ್ ನೋಡುತ್ತೇನೆ. ಸಮಾಜವಾದ ಬರುತ್ತದೆ, ತಾವು ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಸಮಾಜವಾದ ಯಾವಾಗ ಬರುತ್ತದೆ ?

MADAM SPEAKER.—ತಾವು ಕಣ್ಣುಬಿಟ್ಟಾಗ. Next item, discussion on matters of urgent public importance. Sri T. R. Shamanna to raise the discussion.

Discussion on Matters of urgent Public Importance for short Duration

(i) re : Working of the Bangalore Transport Service

†ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಅಧ್ಯಕ್ಷರೇ, ಬೆಂಗಳೂರಿನಲ್ಲಿ ಸಾರಿಗೆ ಸಂಸ್ಥೆಯು ಕೆಲಸಮಾಡುತ್ತಿರುವ ವಿಧಾನದ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟದ್ದಕ್ಕೆ ತಮಗೆ ವಂದಿಸುತ್ತೇನೆ. ತಮಗೆ ತಿಳಿದ ಹಾಗೆ ಬೆಂಗಳೂರು ನಗರ ಬಹಳ ವಿಶೇಷ ರೀತಿಯಲ್ಲಿ ಬೆಳೆಯುತ್ತಿದೆ. 1961ರ ಸೆನ್‌ಸಸ್ ಪ್ರಕಾರ ಬೆಂಗಳೂರು ನಗರದ ಜನಸಂಖ್ಯೆಯು 9 ಲಕ್ಷ ಇದ್ದುದ್ದು, 1971ರ ಸೆನ್‌ಸಸ್ ಪ್ರಕಾರ ಅದು 17 ಲಕ್ಷಕ್ಕೂ ಮಿಗಿಲಾಗಿ ಬೆಳೆದಿದೆ. 15 ವರ್ಷದ ಕೆಳಗೆ ಬೆಂಗಳೂರಿನ ವಿಸ್ತೀರ್ಣ 26 ಚದರಮೈಲಿಗಳು ಇದ್ದಿದ್ದು ಈಗ 58 ಚದರ ಮೈಲಿಗಳಷ್ಟು ವಿಸ್ತಾರವಾಗಿದೆ. ಮತ್ತು ಇನ್ನೊಂದು ಮುಖ್ಯವಾದ ವಿಚಾರವೆಂದರೆ ಬೆಂಗಳೂರು ನಗರ ವರ್ಟಿಕಲ್ ಆಗಿ ಬೆಳೆಯದೆ ಹಾರಿಜಾಂಟಲ್ ಆಗಿ ಬೆಳೆದು ಪ್ರಯಾಣದ ಸೌಕರ್ಯ ಒಂದು ಊರಿನಿಂದ ಇನ್ನೊಂದು ಊರಿಗೆ ಹೋದಂತೆ ಆಗಿದೆ. ಅದರ ಜೊತೆಗೆ ಟ್ಯಾಕ್ಸಿ, ಮತ್ತು ಆಟೋರಿಕ್ಷಾದ ದರಗಳು ಸಹ ಹೆಚ್ಚಾಗಿ ಜನಸಾಮಾನ್ಯರು, ಅದರಲ್ಲಿಯೂ ಬಡವರು, ಹೆಣ್ಣುಮಕ್ಕಳು, ವಿದ್ಯಾರ್ಥಿಗಳು, ಕಾರ್ಮಿಕರು ಮತ್ತು ಮಧ್ಯಮ ವರ್ಗದವರು ಪ್ರಯಾಣ ಸೌಕರ್ಯಕ್ಕಾಗಿ ಬಸ್‌ಗಳನ್ನೇ ಉಪಯೋಗಿಸಬೇಕಾದ ಸಂದರ್ಭ ಬಂದಿದೆ. ಆಟೋರಿಕ್ಷಾದಲ್ಲಿ ಪ್ರಯಾಣ ಮಾಡುವುದು ಇತ್ತೀಚೆಗೆ ಬಹಳ ಕಷ್ಟದಾಯಕವಾಗಿದ್ದು, ಅನೇಕ ಸಂದರ್ಭಗಳಲ್ಲಿ ತೊಂದರೆಗಳಾಗುತ್ತಿರುವುದರಿಂದ ಬಸ್‌ಗಳನ್ನೇ ಸಾಮಾನ್ಯ ಜನರು ಉಪಯೋಗಿಸಬೇಕಾಗಿದೆ. ಆದರೆ ಈ ಬಸ್‌ಗಳ ಸಂಚಾರದಲ್ಲಿಯೂ ಸಹ ಅನೇಕ ಅಸೌಕರ್ಯಗಳಿರುವುದರಿಂದ, ಇದರ ಬಗ್ಗೆ ಚರ್ಚೆ ಮಾಡಿ ಸರಿಯಾದ ತೀರ್ಮಾನ ತೆಗೆದುಕೊಳ್ಳುವ ಬಗ್ಗೆ ಈ ಸಭೆ ಗಮನಿಸಬೇಕಾಗಿದೆ. ಬನಶಂಕರಿಯಿಂದ ಯಶವಂತಪುರಕ್ಕೆ ಹೋದರೆ ಒಂದು

ಊರಿನಿಂದ ಒಂದು ಊರಿಗೆ ಹೋದಂತೆ ಆಗುತ್ತದೆ. ಮೊದಲು ಬೆಂಗಳೂರು ನಗರದಲ್ಲಿ ಖಾಸಗೀಯವರು ಬಸ್‌ಗಳನ್ನು ಓಡಿಸುತ್ತಿದ್ದರು. ಆಗ ಪ್ರಯಾಣ ದರ ಇಷ್ಟೊಂದು ದುಬಾರಿಯಾಗಿರಲಿಲ್ಲ. ನಂತರ ಬಿ. ಟಿ. ಸಿ. ಅವರು ನಡೆಸುವುದಕ್ಕೆ ಪ್ರಾರಂಭ ಮಾಡಿದರು. ಅವರು ನಡೆಸುತ್ತಿದ್ದಾಗ ಹೆಚ್ಚು ಲಾಭ ಸಂಪಾದನೆ ಮಾಡುತ್ತಿದ್ದರಲ್ಲದೆ, ಜನರಿಗೂ ಹೆಚ್ಚಿನ ಅನಾನುಕೂಲವಿರಲಿಲ್ಲ. ಬಿ.ಟಿ.ಸಿ. ರಾಷ್ಟ್ರೀಕರಣವಾದ ಮೇಲೆ ನಮ್ಮ ನಗರದ ವಾಹನ ಸೌಕರ್ಯ ಬಹಳ ಉತ್ತಮವಾಗುತ್ತದೆಂಬ ಆಶಾಭಾವವನ್ನು ನಾವು ಇಟ್ಟುಕೊಂಡಿದ್ದೆವು. ಆದರೆ ದಿನೇ ದಿನೇ ಜನರಿಗೆ ಸೌಕರ್ಯ ಕಡಿಮೆಯಾಗುತ್ತಾ ಬಂದಿದೆ. ರಾಷ್ಟ್ರೀಕರಣ ಮಾಡಿದ್ದು ತಪ್ಪು ಎಂಬ ಭಾವನೆ ಏನೂ ನನಲ್ಲಿ ಇಲ್ಲ. ಆದರೆ ಈಗ ಇರುವ ಅಸೌಕರ್ಯಗಳ ಬಗ್ಗೆ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಂದು ಅನೇಕ ಬಸ್-ಸ್ಟಾಪ್‌ಗಳಲ್ಲಿ ಫರ್ಲಾಂಗ್ ಉದ್ದದ ಕ್ಯೂಗಳು ಇರುತ್ತವೆ. ಬಸವನಗುಡಿ, ಮಲ್ಲೇಶ್ವರಂ, ಸಿಟಿಮಾರ್ಕೆಟ್, ಮೆಜೆಸ್ಟಿಕ್ ಸರ್ಕಲ್, ರಸಲ್‌ಮಾರ್ಕೆಟ್ ಮುಂದೆ ಯಾವಾಗಲೂ ಫರ್ಲಾಂಗ್ ಉದ್ದದ ಕ್ಯೂಗಳು ನಿಂತಿರುತ್ತವೆ. ಅದರಲ್ಲೂ ಬೆಂಗಳೂರು ನಾಗರೀಕರಿಗೆ ಹೆಚ್ಚಿನ ತೊಂದರೆಯಾಗಿರುವುದು ಎಂದರೆ, ಬಸ್‌ಗಳು ಮಧ್ಯದಲ್ಲಿರುವ ಬಸ್‌ಸ್ಟಾಪ್‌ಗಳಲ್ಲಿ ನಿಲ್ಲದೆ, ಆ ಬಸ್‌ಸ್ಟಾಪ್‌ಗಳ ನೂರು ಗಜ ಆಚೆ ಅಥವಾ ಈಚೆ ನಿಲ್ಲಿಸಿ ಪ್ರಯಾಣಿಕರನ್ನು ಇಳಿಸಿ ಮುಂದೆ ಹೊರಟು ಹೋಗುತ್ತಿರುವುದು. ಇದರಿಂದ ಬಸ್‌ಸ್ಟಾಪ್‌ನ ಮಧ್ಯದಲ್ಲಿ ನಿಂತಿರುವ ಪ್ರಯಾಣಿಕರಿಗೆ ಹೆಚ್ಚಿನ ತೊಂದರೆಯಾಗುತ್ತಿದೆ ಎಂದರೆ ತಪ್ಪಾಗಲಾರದು. ಇದರ ಜೊತೆಗೆ ಯಾವಾಗ ನೋಡಿದರೂ ಬಸ್‌ಗಳಲ್ಲಿ ಓವರ್-ಲೋಡ್ ಇರುವುದು. 45—50 ಸೀಟ್‌ಗಳು ಇರುವಲ್ಲಿ 80 ರಿಂದ 90 ರವರೆಗೆ ಪ್ರಯಾಣಿಕರು ಇರುತ್ತಾರೆ. ಇದರಿಂದ ಪ್ರಯಾಣಿಕರಿಗೆ ಅಸೌಕರ್ಯ ಜಾಸ್ತಿಯಾಗಿದೆ. ಅಂದರೆ ಪ್ರಯಾಣಿಕರು ಸರಿಯಾಗಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ, ಕಂಡಕ್ಟರ್‌ಗೆ ಟಿಕೇಟ್ ಕೊಡುವುದು ಸಹ ಕಷ್ಟವಾಗುತ್ತದೆ. ಕೆಲವು ಸಲ ಪ್ರಯಾಣಿಕರು ಫುಟ್-ಬೋರ್ಡ್ ಮೇಲೆ ನಿಂತು ಪ್ರಯಾಣ ಮಾಡಿ ಪ್ರಾಣವನ್ನು ಸಹ ಕಳೆದುಕೊಂಡಿದ್ದಾರೆ. ಫುಟ್-ಬೋರ್ಡ್ ಮೇಲೆ ಪ್ರಯಾಣಿಕರು ನಿಂತು ಪ್ರಯಾಣ ಮಾಡುವುದು ನಾಗರೀಕ ಲಕ್ಷಣವಲ್ಲ. ಇದರಿಂದ ಬಸ್ ನಡೆಸುವವರಿಗೆ ಮತ್ತು ಸಂಸ್ಥೆಗೆ ಒಳ್ಳೆಯ ಹೆಸರು ತರುವುದಿಲ್ಲ. ಬಸ್‌ಗಳು ಸಕಾಲಕ್ಕೆ ಬರುವುದಿಲ್ಲ. ಬಂದರೆ ಒಟ್ಟಿಗೆ ನಾಲ್ಕಾರು ಬಸ್‌ಗಳು ಬರುತ್ತದೆ. ಇಲ್ಲದಿದ್ದರೆ ಗಂಟೆಗಟ್ಟಲೆ ಕಾಯಬೇಕಾಗುತ್ತದೆ. ಇದರ ಜೊತೆಗೆ ಅಪಘಾತಗಳು ಸಹ ಆಗಾಗ್ಗೆ ಆಗುತ್ತಿರುತ್ತವೆ. ಅನೇಕ ಸಲ ಬಸ್‌ಗಳು ಕಾಂಪೌಂಡ್‌ಗೆ ಡಿಕ್ಕಿ ಹೊಡೆದು, ಕಾಂಪೌಂಡ್ ಪಕ್ಕದಲ್ಲಿರುವ ಅನೇಕ ಮಕ್ಕಳು ಸತ್ತಿರುವ ಪ್ರಸಂಗಗಳನ್ನು ಪತ್ರಿಕೆಗಳಲ್ಲಿ ನೋಡುತ್ತಿರುತ್ತೇವೆ. ಬಸ್‌ಗಳನ್ನು ಇಟ್ಟಿರುವ ಪರಿಸ್ಥಿತಿಯೂ ಸಹ ಸಮರ್ಪಕವಾಗಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಈ ಬಸ್‌ಗಳಲ್ಲಿ ಕೆಲಸ ಮಾಡುವ ಕಂಡಕ್ಟರ್‌ಗಳ ನಡತೆಯ ಬಗ್ಗೆ ಹೆಚ್ಚು ಹೇಳಿದರೆ ಅದು ಅತಿಶಯೋಕ್ತಿಯಾಗುತ್ತದೆ. ಕಂಡಕ್ಟರ್‌ಗಳಿಗೆ ಒಳ್ಳೆಯ ಸಂಬಳ ಕೊಡುತ್ತಿದ್ದರೂ ಸಹ, ಅವರು ಮಾಡುತ್ತಿರುವ ಕೆಲಸದಿಂದ ಅವರ ನಡೆವಳಿಕೆಯನ್ನು ಖಂಡಿಸಬೇಕಾಗಿದೆ. ಪಿಲ್‌ಫರೇಜ್ ನಡೆಸುತ್ತಾರೆ. ಕೆಲವು ಸಲ ಹಣ ತೆಗೆದುಕೊಂಡು ಟಿಕೆಟ್‌ಗಳನ್ನೇ ಕೊಡುವುದಿಲ್ಲ. ಮತ್ತು ಕೊಟ್ಟ ಟಿಕೇಟ್‌ಗಳನ್ನೇ ಪ್ರಯಾಣಿಕರಿಂದ ಮತ್ತೆ ಪಡೆದುಕೊಂಡು ಬೇರೆಯವರಿಗೆ ಕೊಡುತ್ತಾರೆ. ಸರಿಯಾಗಿ ಟಿಕೆಟ್‌ಗಳನ್ನೇ ಕೊಡುವುದಿಲ್ಲ. ಬಿ.ಟಿ.ಎಸ್. ನಲ್ಲಿ ಲಾಸ್ ಆಗುತ್ತಿರುವುದಕ್ಕೆ ಇದೇ ಕಾರಣ. ಬಿ.ಟಿ.ಸಿ. ಅವರು ನಡೆಸುತ್ತಿದ್ದಾಗ ಮತ್ತು ಖಾಸಗೀಯವರು ನಡೆಸುತ್ತಿದ್ದಾಗ ಲಾಭವಾಗುತ್ತಿತ್ತು. ಆದರೆ ಈಗ ನಷ್ಟವಾಗುತ್ತಿರುವುದಕ್ಕೆ ಕಾರಣವೇನು ಎಂಬುದನ್ನು ನೋಡಬೇಕಾಗಿದೆ. 1967-68 ರಲ್ಲಿ 30.87 ಲಕ್ಷ ರೂಪಾಯಿಗಳು, 1968-69ರಲ್ಲಿ 31.56 ಲಕ್ಷ ರೂಪಾಯಿಗಳು, 1969-70ರಲ್ಲಿ 40 ಲಕ್ಷ ರೂಪಾಯಿಗಳು ನಷ್ಟವಾಗಿದೆ. ಈ ನಷ್ಟ ಇನ್ನೂ ಜಾಸ್ತಿಯಾಗುತ್ತಾ ಹೋಗುತ್ತದೆಂದು ಹೇಳುತ್ತಾರೆ. ಬಸ್‌ಗಳಲ್ಲಿ ಯಾವಾಗಲೂ ಓವರ್ ಲೋಡ್ ಇದ್ದು ಕೂಡ ಲಾಸ್ ಆಗುವುದಕ್ಕೆ ಕಾರಣವೇನು ಎಂಬ ಬಗ್ಗೆ ಅರ್ಥ ಮಾಡಿಕೊಳ್ಳುವುದು ಕಷ್ಟವಾಗಿ ಕಾಣುತ್ತದೆ ಜನರಿಗೆ ಸಾಕಷ್ಟು ಸೌಕರ್ಯವಿಲ್ಲ, ಆದರೆ ಬಸ್ ನಡೆಸುವುದರಲ್ಲಿ ನಷ್ಟವಾಗುತ್ತದೆಂದು ಹೇಳಿದರೆ ಏನೋ ಒಂದು ವಿಚಿತ್ರ ಇರಬೇಕು. ಇದರ ಬಗ್ಗೆ ನಾವು ಯೋಚನೆ ಮಾಡಬೇಕಾಗುತ್ತದೆ.

ಕಂಡಕ್ಟರು ಹೇಳುತ್ತಾರೆ ನಾವು ಇನ್‌ಸ್ಪೆಕ್ಟರಿಗೆ ಕೊಡಬೇಕು, ಡ್ರೈವರಿಗೆ ಕೊಡಬೇಕು ಮತ್ತು ಮೇಲ್ಪಟ್ಟ ಅಧಿಕಾರಿಗಳಿಗೆ ಕೊಡಬೇಕು. ಇಲ್ಲದೆ ಇದ್ದರೆ ನಾವು ಉಳಿಯುವುದು ಕಷ್ಟವಾಗುತ್ತದೆ ಎಂದು ಹೇಳುತ್ತಾರೆ. ಚೆಕ್ ಮಾಡುವುದಕ್ಕೆ ಸ್ಕ್ವಾಡ್ ಇವೆ, ಇನ್‌ಸ್ಪೆಕ್ಟರು ಇದ್ದಾರೆ. ಆದರೂ ಸಹ ಪಿಲ್‌ಫರೇಜ್ ತಪ್ಪುವುದಿಲ್ಲ. ಬಸ್ಸುಗಳನ್ನು ಸರಿಯಾಗಿ ಓಡಿಸುವುದಿಲ್ಲ. ಸ್ಟೇಜ್‌ಪಾಯಿಂಟ್‌ಗಳು ಒಂದು ಕಡೆ 6–7 ಕಡೆ ಒಂದು ಕಡೆ 3-4 ಕಡೆ ಇದೆ ಈಗ ಸಿಟಿ ಮಾರ್ಕೆಟ್‌ನಿಂದ ಕಾರ್ಪೋರೇಷನ್‌ಗೆ ಸ್ವಲ್ಪದೂರ ಹೋದರೂ ಅದಕ್ಕೆ 15 ಪೈಸಾ ತೆಗೆದುಕೊಳ್ಳುತ್ತಾರೆ. ಕೆಲವು ಕಡೆ 6—7

(ಶ್ರೀ ಟಿ. ಆರ್. ಶಾಮಣ್ಣ)

ಸ್ಟೇಜುಗಳು ಬಹಳ ದೂರ ಹೋದರೂ 15 ಪೈಸಾ ತೆಗೆದುಕೊಳ್ಳುತ್ತಾರೆ. ಅದರಿಂದ ಈ ಸ್ಟೇಜ್ ಪಾಯಿಂಟ್‌ಗಳನ್ನು ಪುನರ್‌ವಿಮರ್ಶೆ ಮಾಡಬೇಕು. ಈ ರೋಡ್ ಟ್ರಾನ್ಸ್‌ಪೋರ್ಟ್ ಅವ್ಯವಸ್ಥೆಯಾಗುವುದಕ್ಕೆ ಮೊದಲನೆಯ ಕಾರಣವೇನೆಂದರೆ ಬೆಂಗಳೂರು ನಗರ ಬೇಕಾದಷ್ಟು ಬೆಳೆದಿದೆ. ಹಾಗೆಯೇ ಜನಸಂಖ್ಯೆಯೂ ದಿನೇದಿನೇ ಬೆಳೆಯುತ್ತಿದೆ. ಆದರೆ ಬೆಂಗಳೂರು ನಗರಕ್ಕೆ ಸಾಕಷ್ಟು ಬಸ್ಸುಗಳು ಇಲ್ಲ. ಬಸ್ಸುಗಳ ಮ್ಯಾನೇಜ್‌ಮೆಂಟ್ ಸಮರ್ಪಕವಾಗಿದೆ. ಬೆಂಗಳೂರಿನ ನಾಗರೀಕರ ವಿಚಾರಗಳನ್ನು ಚೆನ್ನಾಗಿ ತಿಳಿದುಕೊಂಡಿರತಕ್ಕ ಮಂತ್ರಿಗಳು ಇದ್ದಾರೆ. ಬಿ. ಟಿ. ಎಸ್. ನಲ್ಲಿ ಇದ್ದು ಬಸ್ಸುಗಳ ಓಡಾಟದ ಬಗ್ಗೆ ಚೆನ್ನಾಗಿ ತಿಳಿದುಕೊಂಡಿರತಕ್ಕ, ಒಳ್ಳೆಯ ಅನುಭವವುಳ್ಳ ಚೇರ್ಮನ್ ಅವರು ಇದ್ದಾರೆ. ಅವರು ಈ ಬಗ್ಗೆ ಸ್ವಲ್ಪ ಗಮನಕೊಟ್ಟರೆ ಬೆಂಗಳೂರಿನ ನಗರದ ಸಾರಿಗೆ ವ್ಯವಸ್ಥೆಯನ್ನು ಉತ್ತಮ ಪಡಿಸುತ್ತಾರೆ ಎನ್ನುವ ನಂಬಿಕೆ ನನಗೆ ಇದೆ. ಆದರೆ ಅದು ಸರಿಹೋಗಬೇಕಾದರೆ ಎಚ್ಚರಿಕೆ ಇರಬೇಕು ಎನ್ನುವ ಬಗ್ಗೆ ಚರ್ಚೆಯಾಗಬೇಕು ಎಂದು ನಾನು ಒತ್ತಾಯ ಮಾಡಿದ್ದೇನೆ. ಈ ಬಿ.ಟಿ. ಸರ್ವೀಸ್‌ನಲ್ಲಿ ಜನಗಳಿಗೆ ಒಂದು ಹೆಚ್ಚಿನ ಸೌಕರ್ಯವನ್ನು ಒದಗಿಸಬೇಕಾದರೆ ಮೊದಲನಿಂದ ಕೊನೆಯವರೆವಿಗೂ ಎಲ್ಲಾ ಅಧಿಕಾರಗಳೂ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ಈ ಬಿ.ಟಿ.ಎಸ್. ಬಸ್ಸುಗಳನ್ನು ನಗರದಿಂದ ಹೊರಗಡೆ ಇರತಕ್ಕ 15–20 ಮೈಲಿ ಇರತಕ್ಕ ಪ್ರದೇಶಗಳಿಗೆ ಓಡಿಸಬಾರದು. ಈಗ ಅನೇಕ ಬಸ್ಸುಗಳು ರಿಪೇರಿ ಆಗದೆ ಡಿಪೋದಲ್ಲಿ ನಿದ್ದೆ ಮಾಡುತ್ತಿವೆ. ಇದರಿಂದಾಗಿ ನಗರದಲ್ಲಿ ಸಾಕಷ್ಟು ಬಸ್ಸುಗಳು ಓಡಾಡುವುದಕ್ಕೆ ಅನಾನುಕೂಲವಾಗಿದೆ. ಈ ಸಿಟಿ ಬಸ್ಸಿಗೆ ಸಂಬಂಧಪಟ್ಟಹಾಗೆ ಸರಿಯಾದ ರೀತಿಯಲ್ಲಿ ಯೋಜನೆಯನ್ನು ರೂಪಿಸಿಕೊಂಡಿಲ್ಲ. ಈ ಇಲಾಖೆಯಲ್ಲಿ ಒಬ್ಬರಿಗೊಬ್ಬರಿಗೆ ಸರಿಯಾದಂತಹ ಹೊಂದಾಣಿಕೆ ಇಲ್ಲ. ಸ್ಪೇರ್ ಪಾರ್ಟ್ಸ್‌ಗಳನ್ನು ಹೋಲ್‌ಸೇಲ್‌ನಲ್ಲಿಯೂ ತೆಗೆದುಕೊಳ್ಳುತ್ತಾರೆ. ಮತ್ತು ಓಪನ್ ಮಾರ್ಕೆಟ್‌ನಲ್ಲಿಯೂ ತೆಗೆದುಕೊಳ್ಳುತ್ತಾರೆ ಈ ಸ್ಪೇರ್ ಪಾರ್ಟ್ಸ್‌ಗಳನ್ನು ಎಷ್ಟು ಬೇಕೋ ಅಷ್ಟನ್ನು ತೆಗೆದುಕೊಳ್ಳದೆ ಜಾಸ್ತಿ ತೆಗೆದುಕೊಳ್ಳುತ್ತಿದ್ದಾರೆ. ಇವುಗಳನ್ನು ಉಪಯೋಗಿಸುವ ಬಗ್ಗೆ ಸಾಕಷ್ಟು ವ್ಯವಸ್ಥೆ ಇಲ್ಲ. ಬೆಂಗಳೂರು ನಗರದಲ್ಲಿ ಬಿ.ಟಿ. ಎಸ್. ಬಸ್ಸುಗಳು ಸುಮಾರು 450 ಅಥವಾ 480 ಬಸ್ಸುಗಳು ಇವೆ. ಅದರಲ್ಲಿ ಸುಮಾರು 80—100 ಬಸ್ಸುಗಳನ್ನು ಕೆಲಸಕ್ಕೆ ಬಾರದೆ ಮೂಲೆಗೆ ತಳ್ಳಿದ್ದಾರೆಂದು ನಾನು ಕೇಳಿದ್ದೇನೆ. ಅವುಗಳು ಆಗಿಂದಾಗ್ಗೆ ರಿಪೇರಿ ಆಗಬೇಕಾಗುತ್ತದೆ. ಅನೇಕ ಷೆಡ್ಯೂಲ್ ರೂಟುಗಳಿಗೂ ಬಸ್ಸುಗಳು ಬೇಕಾಗುತ್ತದೆ ಮತ್ತು ಪೀಕ್ ಅವರ್ಸ್‌ನಲ್ಲಿಯೂ ಹೆಚ್ಚು ಬಸ್ಸುಗಳನ್ನು ಓಡಿಸಬೇಕಾಗುತ್ತದೆ. ಈಗ ಬಸ್ಸುಗಳಲ್ಲಿ ಓವರ್‌ಲೋಡ್ ಹಾಕುತ್ತಿದ್ದಾರೆ. ಈ ಬಸ್ಸಿನ ವ್ಯವಸ್ಥೆಯನ್ನು ಸರಿಪಡಿಸಬೇಕಾದರೆ ಏನು ಮಾಡಬೇಕು,ಎನ್ನುವ ಬಗ್ಗೆ ಸಂಬಧಪಟ್ಟವರು ಬಹಳ ದೀರ್ಘವಾಗಿ ಆಲೋಚನೆ ಮಾಡಬೇಕಾಗುತ್ತದೆ. ಬೆಂಗಳೂರು ನಗರದ ಜನಸಂಖ್ಯೆ ದಿನೇ ದಿನೇ ಬೆಳೆದುಕೊಂಡು ಹೋಗುತ್ತಿದೆ. ಆದ್ದರಿಂದ ಜನಸಂಖ್ಯೆಗೆ ಅನುಗುಣವಾಗಿ ಬಸ್ಸುಗಳನ್ನು ಜಾಸ್ತಿ ಮಾಡಬೇಕು ನ್ಯಾಷನಲೈಜ್ ಪಾಲಸಿಯನ್ನು ಸರ್ಕಾರದವರು ಒಪ್ಪಿಕೊಂಡ ಮೇಲೆ ಸಮರ್ಪಕವಾಗಿ ಜನಗಳಿಗೆ ಟ್ರಾನ್ಸ್‌ಪೋರ್ಟ್ ಸೌಕರ್ಯವನ್ನು ಒದಗಿಸುವುದು ಸರ್ಕಾರದವರ ಆದ್ಯಕರ್ತವ್ಯ.

ಇದರ ಜೊತೆಗೆ ಶ್ರೀ ನಗರ 37 ನೇ ಡಿವಿಜನ್ ಬ್ಯಾಂಕ್ ಕಾಲೋನಿ ಈ ಪ್ರದೇಶಕ್ಕೆ 2—3 ಬಸ್ಸುಗಳನ್ನು ಮಾತ್ರ ಓಡಿಸುತ್ತಿದ್ದಾರೆ. ಅಲ್ಲಿ ವಿಪರೀತ ಮನೆಗಳು ಆಗಿವೆ. ಅಲ್ಲಿಗೆ ಸಾಕಷ್ಟು ಬಸ್ಸುಗಳನ್ನು ಹಾಕಬೇಕು ಮತ್ತು ಶ್ರೀನಗರಕ್ಕೆ ಹೆಚ್ಚು ಬಸ್ಸುಗಳನ್ನು ಹಾಕಬೇಕು. ಮೈಸೂರು ಬ್ಯಾಂಕ್ ಕಾಲೋನಿ, ಇಂದಿರಾನಗರ ಇವುಗಳು ಬಹಳ ಡೆವಲಪ್ ಆಗುತ್ತದೆ. ಈ ಪ್ರದೇಶಕ್ಕೆ ಸಾಕಷ್ಟು ಬಸ್ಸುಗಳು ಇಲ್ಲ. ಈ ಪ್ರದೇಶಕ್ಕೆ ಹೆಚ್ಚು ಬಸ್ಸುಗಳನ್ನು ಓಡಿಸುವುದಕ್ಕೆ ಮಾನ್ಯ ಮಂತ್ರಿಗಳು ಪ್ರಯತ್ನ ಮಾಡಬೇಕು. ಜಯನಗರ ಹೆಚ್ಚು ಬೆಳೆದುಕೊಂಡು ಬರುತ್ತಿದೆ. ಈಗ ಅಲ್ಲಿಗೆ ಸಾಕಷ್ಟು ಬಸ್ಸುಗಳು ಇಲ್ಲ. ಆದ್ದರಿಂದ ಆ ಬಡಾವಣೆಗೆ ಹೆಚ್ಚು ಬಸ್ಸುಗಳನ್ನು ಓಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಬಿ. ಟಿ. ಎಸ್. ಬಸ್ಸಿನ ಅಡ್ವೈಸರಿ ಕಮಿಟಿಯವರು ಎಲ್ಲಾ ಕಡೆಗೂ ಸಾಕಷ್ಟು ಬಸ್ಸುಗಳನ್ನು ಓಡಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ. ನಾನು ಮೊದಲು ಕಾರಿನಲ್ಲಿ ಓಡಾಡುತ್ತಿದ್ದೆ. ಈಗ ಬಸ್ಸಿನಲ್ಲಿ ಓಡಾಡುತ್ತಿದ್ದೇನೆ ಆದ್ದರಿಂದ ಬಸ್ಸಿನಲ್ಲಿರತಕ್ಕ ಸಮಸ್ಯೆಗಳು ನನಗೆ ಈಗ ಅರಿವಾಗುತ್ತವೆ. ರೋಡ್‌ಟ್ರಾನ್ಸ್‌ಪೋರ್ಟ್ ಮಂತ್ರಿಗಳು ಎಂ. ಎಸ್. ಆರ್.ಟಿ.ಯ ಚೇರ್ಮನ್ ಆಗಿರುವುದರಿಂದ ಅವರು ಆಗಾಗ್ಗೆ ಸಿಟಿ ಬಸ್ಸಿನಲ್ಲಿ ಓಡಾಡುವ ಅಭ್ಯಾಸವನ್ನು ಇಟ್ಟುಕೊಂಡರೆ ಅದರಿಂದ ಅನುಕೂಲವಾಗುತ್ತದೆ. ಬಿ.ಟಿ.ಎಸ್. ನವರು ಹೇಳುತ್ತಾರೆ ಸಿಟಿ ಸರ್ವೀಸ್‌ನಲ್ಲಿ ಬೊಂಬಾಯಿನಲ್ಲಿ ಲಾಸಾಗುತ್ತದೆ, ಹೈದರಾಬಾದನಲ್ಲಿ ಲಾಸಾಗುತ್ತದೆ. ಅದಕ್ಕೆ ಹೋಲಿಸಿದರೆ ನಮ್ಮ ಬೆಂಗಳೂರು ಸಿಟಿ ಸರ್ವೀಸ್‌ನಲ್ಲಿ ನಷ್ಟ ಕಡಿಮೆ ಆಗುತ್ತದೆ ಎಂದು ಅವರು ಹೇಳುತ್ತಾರೆ.

ಎಲ್ಲಾ ಬಸ್ಸುಗಳಲ್ಲಿಯೂ ಓವರ್‌ಲೋಡ್ ಇರುತ್ತದೆ ಬಸ್ಸಿನ ಅವಶ್ಯಕತೆ ಹೆಚ್ಚು ಇರುವಾಗ ಇದರಲ್ಲಿ ಲಾಸ್ ಆಗುವುದಕ್ಕೆ ಕಾರಣವಿಲ್ಲ. ಇದನ್ನು ಮಾನ್ಯ ಮಂತ್ರಿಗಳು ಸರಿಯಾಗಿ ಪರಿಶೀಲನೆ ಮಾಡಿದರೆ ಈಗೇನು ಲಾಸಾಗುತ್ತಿದೆ ಅದನ್ನು ತಪ್ಪಿಸಬಹುದು. ಮತ್ತು ಜನಗಳಿಗೆ ಸೌಕರ್ಯವನ್ನೂ ಒದಗಿಸಬಹುದು. ಬೆಂಗಳೂರು ನಗರದಲ್ಲಿ 9 ಗಂಟೆಯಿಂದ 11 ಗಂಟೆಯವರೆಗೆ ವಿದ್ಯಾರ್ಥಿಗಳು ಶಾಲೆಗಳಿಗೆ ಹೋಗಬೇಕಾಗುತ್ತದೆ. ಮತ್ತು ನೌಕರರು ಆಫೀಸುಗಳಿಗೆ ಹೋಗಬೇಕಾಗುತ್ತದೆ. ಮತ್ತೆ ಸಾಯಂಕಾಲ 5 ಗಂಟೆಯಿಂದ 7 ಗಂಟೆಯವರೆಗೂ ಬಸ್ಸುಗಳಲ್ಲಿ ವಿಪರೀತವಾಗಿ ಓವರ್ ಲೋಡಾಗಿರುತ್ತದೆ. ಬಸ್ ಟರ್ಮಿನಸ್‌ನಲ್ಲೇ ಸೀಟು ಸಿಕ್ಕುವುದು ಬಹಳ ಕಷ್ಟವಾಗುತ್ತದೆ. ಇದನ್ನೆಲ್ಲಾ ನೋಡಿದರೆ ಬೆಂಗಳೂರು ನಗರದಲ್ಲಿ ಬಸ್‌ಸೌಕರ್ಯ ಅಷ್ಟು ಸಮರ್ಪಕವಾಗಿಲ್ಲ. ಆದ್ದರಿಂದ ಇದರ ಬಗ್ಗೆ ಸರ್ಕಾರದವರು ತೀವ್ರವಾಗಿ ಗಮನ ಕೊಡಬೇಕು ಎನ್ನುವ ಉದ್ದೇಶದಿಂದ ಈ ಒಂದು ಚರ್ಚೆಗೆ ಅವಕಾಶಕೊಡಬೇಕೆಂದು ನಾನು ಕೇಳಿಕೊಂಡೆ. ಈಗಾಗಲೇ ನಾನು ಹೇಳಿದಂತೆ ಶ್ರೀನಗರ ಮೈಸೂರು ಬ್ಯಾಂಕ್ ಕಾಲೋನಿ ಇಂದಿರಾನಗರ ಈ ಬಡಾವಣೆಗಳಿಗೆ ಬಸ್‌ಸೌಕರ್ಯ ಸರಿಯಾಗಿಲ್ಲ. ಆದ್ದರಿಂದ ಆ ಪ್ರದೇಶಗಳಿಗೆ ಬಸ್‌ಸೌಕರ್ಯಗಳನ್ನು ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಇದನ್ನು ಸಮಗ್ರವಾಗಿ ಯೋಚನೆ ಮಾಡಿ ಇದರ ಬಗ್ಗೆ ಸರಿಯಾದ ತೀರ್ಮಾನವನ್ನು ತೆಗೆದುಕೊಂಡು ಬಸ್ಸುಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡಬೇಕು. ಈ ಬಿ.ಟಿ. ಎಸ್. ಸರ್ವೀಸ್‌ನಲ್ಲಿ ಲಂಚವನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು. ಮತ್ತು ಇದರಲ್ಲಿ ಆಗತಕ್ಕಂಥಾ ನಷ್ಟವನ್ನು ತಪ್ಪಿಸಿ ಇದ್ದು ದಕ್ಷತೆಯಿಂದ ಮತ್ತು ಲಾಭದಾಯಕವಾಗಿ ನಡೆಯುವಂತೆ ವ್ಯವಸ್ಥೆಮಾಡಬೇಕೆಂದು ನಾನು ಹೇಳುತ್ತೇನೆ. ಪೀಕ್ ಅವರ್ಸ್ ಸಿಚುಯೇಷನ್ ಮೀಟ್ ಮಾಡುವುದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು. ಎಂ. ಎಸ್. ಆರ್. ಟಿ. ಸಿಯವರು ಆಗಿಂದಾಗ್ಗೆ ಬಸ್‌ದರಗಳನ್ನು ರೈಜ್ ಮಾಡುತ್ತಿದ್ದಾರೆ. ಆದರೆ ಹೆಚ್ಚಿನ ಬಸ್ಸುಗಳನ್ನು ಹಾಕಿ ಎಂದು ಹೇಳಿದರೆ ಹೆಚ್ಚು ಬಸ್ಸುಗಳನ್ನು ಹಾಕುವುದಿಲ್ಲ. ಇದು ಸರಿಯಿಲ್ಲ. ಜನಗಳಿಗೆ ಬಸ್ಸಿನ ಸೌಕರ್ಯವನ್ನು ಮಾಡಿಕೊಡದಿದ್ದರೆ ಜನಗಳಿಗೆ ಬಹಳ ಕಷ್ಟವಾಗುತ್ತದೆ. ಕಾರ್ಮಿಕರು ವಿದ್ಯಾರ್ಥಿಗಳು ಮತ್ತು ಹೆಂಗಸರು ಬಸ್ಸುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣ ಮಾಡುತ್ತಾರೆ. ಅವರು ಟ್ಯಾಕ್ಸಿಯಲ್ಲಿ ಮತ್ತು ರಿಕ್ಷಾದಲ್ಲಿ ಪ್ರಯಾಣ ಮಾಡುವುದು ಕಷ್ಟ. ಆದ್ದರಿಂದ ಅವರು ಬಸ್ಸಿನಲ್ಲಿ ಪ್ರಯಾಣ ಮಾಡುವುದು ಅನಿವಾರ್ಯವಾಗಿದೆ. ಈ ದೃಷ್ಟಿಯಿಂದ ಬಸ್ಸುಗಳ ಸಂಖ್ಯೆಯನ್ನು ಹೆಚ್ಚಿಸುವುದು ಅನಿವಾರ್ಯವಾಗಿದೆ. ಈ ಚರ್ಚೆಗೆ ಮಾನ್ಯ ಮಂತ್ರಿಗಳು ಸೂಕ್ತ ಉತ್ತರವನ್ನು ಕೊಡಬೇಕು. ಬೆಂಗಳೂರಿನ ಮಾನ್ಯ ಸದಸ್ಯರು ಇದ್ದಾರೆ. ಅವರು ಈ ಚರ್ಚೆಯ ಮೇಲೆ ಮಾತನಾಡಿದ ಮೇಲೆ ಮಾನ್ಯ ಮಂತ್ರಿಗಳು ಸೂಕ್ತ ಉತ್ತರವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

† ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಸ್ವಾಮಿ, ಬೆಂಗಳೂರು ನಗರದ ಬಸ್ಸುಗಳ ಬಗ್ಗೆ ಮಾನ್ಯ ಶಾಮಣ್ಣನವರು ಬಹಳ ವಿಶದವಾಗಿ ಹೇಳಿದ್ದಾರೆ. ನಾನು ಹೇಳುವುದಾದರೂ ಇಷ್ಟೇ. ನನಗೆ ಬಸ್ಸಿನ ಬಗ್ಗೆ ಸ್ವಲ್ಪ ಮಾಹಿತಿ ಇದೆ. 1930ನೇ ಇಸವಿಯಿಂದ 1952ನೇ ಇಸವಿಯ ವರೆಗೆ ನಾನು ಸಹ ಬಸ್ ಆಪರೇಟ್ ಮಾಡುತ್ತಿದ್ದೆ. ಇಲ್ಲಿ ಬಿ.ಟಿ.ಸಿ. ಯವರು ಬಸ್ಸುಗಳನ್ನು ವಹಿಸಿಕೊಂಡಾಗ ಖಾಸಗೀಯವರು ಬಸ್ಸುಗಳನ್ನು ಓಡಾಡಿಸುತ್ತಿದ್ದರು. ಖಾಸಗೀಯವರಿಂದ ಅದನ್ನು ಬಿ.ಟಿ.ಸಿ. ಯವರು ತೆಗೆದುಕೊಂಡ ಕಾಲದಲ್ಲಿ ಖಾಸಗೀಯವರು ಲಾಭವನ್ನು ಸಂಪಾದಿಸುತ್ತಿದ್ದರು. ಆದರೆ ಖಾಸಗೀಯವರಿಂದ ಸರ್ಕಾರದವರು ವಹಿಸಿಕೊಂಡ ಮೇಲೆ ಪ್ರತೀ ವರ್ಷವೂ ಇದರಲ್ಲಿ ನಷ್ಟವಾಗುತ್ತಾ ಇದೆ. ಇದಕ್ಕೆ ಕಾರಣವಾದರೂ ಇಷ್ಟೆ. ಇದನ್ನು ಸರ್ಕಾರದವರು ಸುವ್ಯವಸ್ಥಿತವಾದ ರೀತಿಯಲ್ಲಿ ನಡೆಸುವುದಕ್ಕೆ ದಕ್ಷತೆ ಸಾಲದು ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಮಂತ್ರಿಗಾಗಲಿ ಅಥವಾ ಇತರ ಆಫೀಸರ್ಸ್‌ಗೆ ಆಗಲಿ, ಈ ಬಸ್ ಏನೆಂಬುದು ಕೂಡ ಗೊತ್ತಿರುವುದಿಲ್ಲ; ಮತ್ತು ಯಾವ ರೀತಿಯಲ್ಲಿ ನಡೆಸಬೇಕೆಂಬುದು ಗೊತ್ತಿರುವುದಿಲ್ಲ. ಆದ್ದರಿಂದ ಅವರ ಅದಕ್ಷತೆಯಿಂದಲೇ ಲುಕ್ಸಾನು ಆಗುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಇವರ ಜೊತೆಗೆ ಬಿ.ಟಿ.ಸಿ. ಮ್ಯಾನೇಜ್‌ಮೆಂಟಿನವರು ಏನು ವ್ಯವಹಾರ ಮಾಡಬೇಕೋ, ಅದನ್ನು ಮಾಡದೆ ಅದಕ್ಕೆ ವಿರುದ್ಧವಾಗಿ ಕೆಲಸ ಮಾಡುತ್ತಿದ್ದಾರೆ. ಹೊಸ ಇಂಜಿನು ತೆಗೆದುಕೊಂಡು, ಅದನ್ನು ಹೊರಗೆ ಕಳಿಸಿ, ಪುನಃ ಅದನ್ನು ತೆಗೆದುಕೊಳ್ಳುವಂತಹ ಸಂದರ್ಭಗಳು ಇವೆ. ಇದರಿಂದಾಗಿ ಅಲ್ಲಿರತಕ್ಕಂತಹ ಸಂಬಂಧಪಟ್ಟ ಅಧಿಕಾರಿಗಳು ಬಹಳ ಹಣ ಮಾಡಿದ್ದಾರೆ. ಇವನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಮಂತ್ರಿಗಳಿಗೆ ಇನ್ನೂ ಸಾಧ್ಯವಾಗದಿರುವುದಕ್ಕೆ ಕಾರಣ, ಅವರು ಸಹ ಇಂಥ ಅವ್ಯವಹಾರಗಳಲ್ಲಿ ಕೈವಾಡ ಇಟ್ಟುಕೊಂಡಿದ್ದಾರೆಂದು ಕಾಣುತ್ತದೆ. ಇವೊತ್ತಿನ ದಿವಸ ಉತ್ಸಾಹಿ ಮಂತ್ರಿಯವರು ಬಂದಿದ್ದಾರೆ. ಇದನ್ನು ಅವರು ಎಷ್ಟು ಮಟ್ಟಿಗೆ ಸರಿಮಾಡುತ್ತಾರೆಂಬುದನ್ನು ಕಾದು ನೋಡಬೇಕಾಗಿದೆ. ಆದರೆ ನನಗೆ ಪೂರ್ತಿ ಅದನ್ನು ಸರಿಮಾಡುತ್ತಾರೆಂದು ಹೇಳುವುದಕ್ಕೆ ಧೈರ್ಯವಿಲ್ಲ.

ಒದಗಿಸುತ್ತಿದ್ದಾರೆ. ಆ ರೀತಿ ಇಲ್ಲಿಯೂ ಜನರಿಗೆ ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಇನ್ನೊಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈಗಾಗಲೇ ಒಂದು ಅಡ್ವೈಸರಿ ಕಮಿಟಿ ಎಂಬುದಾಗಿದೆ. ಬಿ. ಟಿ. ಎಸ್ ಟ್ರಾನ್ಸ್‌ಪೋರ್ಟ್ ಬಗ್ಗೆ ಅಡ್ವೈಸರಿ ಕಮಿಟಿಯಲ್ಲಿ ಯಾರ್ಯಾರು ಇರುತ್ತಾರೆ, ಅವರ ಜೊತೆಗೆ ಬೆಂಗಳೂರು ನಗರದ ಎಂ. ಎಲ್. ಎ. ಗಳು ಮತ್ತು ರೆಗ್ಯೂಲರ್ ಪ್ಯಾಸೆಂಜರ್ಸ್ ಯಾರಿರುತ್ತಾರೆ ಅವರಲ್ಲಿ ಕೆಲವರನ್ನು ಸೇರಿಸಿ ಒಂದು ಕಮಿಟಿಯನ್ನು ಮಾಡಿ ಅದರ ಮೀಟಿಂಗ್‌ನ್ನೂ ಕರೆಯಬೇಕೆಂದು ನಾನು ಸಲಹೆಮಾಡುತ್ತೇನೆ.

ಇಷ್ಟು ಹೇಳಿ, ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

4-30 P.M.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಮಾನ್ಯ ಅಧ್ಯಕ್ಷರೇ, ಬಿ. ಟಿ. ಎಸ್. ಬಸ್ಸುಗಳ ಒಂದು ಸೌಲಭ್ಯದ ಬಗ್ಗೆ ಮಾತನಾಡುವಾಗ ಬೆಂಗಳೂರು ನಗರಕ್ಕೆ ಕಾರ್ಪೊರೇಷನ್ನಿಗೆ ಸೇರಿದ 35 ಹಳ್ಳಿಗಳಿವೆ. ಈ 35 ಹಳ್ಳಿಗಳನ್ನು ಸೇರಿಸಿ ಸುಮಾರು ಆರು ವರ್ಷಗಳು ಆದರೂ ಕಾರ್ಪೊರೇಷನ್ನಿನವರೂ ಸಹ ಅದಕ್ಕೆ ಸರಿಯಾದ ಸಹಾಯ, ಸಹಕಾರವನ್ನು ಮಾಡುತ್ತಾ ಇಲ್ಲ. ಕೊನೆಯದಾಗಿ ಬಿ. ಟಿ. ಎಸ್ ಸೌಕರ್ಯ ಕಡೆಯಿಂದ ಈ 35 ಹಳ್ಳಿಗಳಲ್ಲಿ ಇರುವ ಜನರು ಯಾವ ಒಂದು ಸಹಾಯವನ್ನು ಹಾಗೂ ಸೌಕರ್ಯಗಳನ್ನು ಪಡೆಯದೆ ವಿಫಲರಾಗಿದ್ದಾರೆ. ಆ ಬಗ್ಗೆ ಸುಮಾರು ಏಳೆಂಟು ವರ್ಷಗಳಿಂದಲೂ ಕಾರ್ಪೊರೇಷನ್ನಿಗೆ ಅನೇಕ ಸಲಹಾಸೂಚನೆಗಳನ್ನು ತೆಗೆದುಕೊಂಡು ಬಂದರೂ ಇವತ್ತಿನದಿವಸ ಬಸ್ಸುಗಳ ಸೌಕರ್ಯಗಳಂತೂ ಅಲ್ಲಿ ಸಿಗುತ್ತಾ ಇಲ್ಲ. ಅನೇಕ ಕಾರ್ಮಿಕರು ಅಲ್ಲಿಂದ ಬಹಳ ದೂರ ಪ್ರದೇಶಗಳಿಗೆ ಹೋಗಬೇಕಾಗಿದೆ. ಸರ್ಕಾರದವರೂ ಸಹ ಇದರ ಬಗ್ಗೆ ಏನೊಂದು ತೀರ್ಮಾನವನ್ನು ಕೊಟ್ಟಿಲ್ಲವೆಂದು ನಾನು ತೀವ್ರ ವಿಷಾದದಿಂದ ಹೇಳುತ್ತೇನೆ. ಈ ಸಂದರ್ಭದಲ್ಲಿ ನಾನು ಅತಿ ಮುಖ್ಯವಾಗಿ ಒಂದು ವಿಷಯವನ್ನು ಹೇಳಬೇಕಾಗಿದೆ. ಬೆಳಗ್ಗೆ ಮನುಷ್ಯ ಮನೆ ಬಿಟ್ಟು ಮತ್ತೆ ಮನೆಗೆ ಹಿಂದಕ್ಕೆ ಬರುವುದೇ ಈಗಿನ ಸನ್ನಿವೇಶದಲ್ಲಿ ತುಂಬಾ ಅಪನಂಬಿಕೆ ಯಾಗಿದೆ. ರಸ್ತೆಗಳ ಮಧ್ಯದಲ್ಲಿ ಬಿ. ಟಿ. ಎಸ್. ಬಸ್ಸುಗಳ ಆಕ್ಸಿಡೆಂಟ್ಸ್ ಆಗಿ ನೂರಾರು ಜನರು ಸತ್ತಿರುವುದನ್ನು ನಾವು ನೋಡಿದ್ದೇವೆ. ರಸ್ತೆಗಳಲ್ಲಿ ಓಡಾಡುವ ಸಾಮಾನ್ಯ ಜನರನ್ನು ಗಮನಿಸದೆಯೇ ಬಿ. ಟಿ. ಎಸ್. ಬಸ್ಸುಗಳು ಅವರ ಇಚ್ಛೆ ಬಂದಹಾಗೆ ಹೋಗುತ್ತವೆ. ಸಾಕಷ್ಟು ಪ್ರಾಕ್ಟೀಸ್ ಇಲ್ಲದೇ ಇರತಕ್ಕ ಡ್ರೈವರ್ಸ್ ಹಾಗೂ ಕಂಡಕ್ಟರ್ಸ್ ಬಿ. ಟಿ. ಎಸ್. ಬಸ್ಸುಗಳಲ್ಲಿದ್ದಾರೆ. ಇದನ್ನು ತಪ್ಪಿಸಬೇಕು. ಸುಶಿಕ್ಷಿತರಾದವರನ್ನು ಅಲ್ಲಿ ನೇಮಿಸಬೇಕು. ದಿಣ್ಣೆಯಲ್ಲಿ ನಿಂತಿದ್ದಂಥ ಬಸ್ಸುಗಳೇ ಎಷ್ಟೋಸಾರಿ ಹಿಂದಕ್ಕೆ ಹೋಗಿ ಜನಗಳ ಮೇಲೆ ಹರಿದು ಹೋಗಿರತಕ್ಕ ದುರಂತಗಳ ನಿದರ್ಶನಗಳನ್ನು ನೋಡಿದ್ದೇವೆ. ಬೆಳಗ್ಗೆ ಎದ್ದು ಮನೆ ಬಿಟ್ಟು ಹೋದಾಗ ಮತ್ತೆ ಮನೆಗೆ ಬರತಕ್ಕದ್ದು ನಿಮ್ಮ ಬಿ. ಟಿ. ಎಸ್. ಬಸ್ಸುಗಳ ದುರಂತದಿಂದ ತಪ್ಪಿಸಿ ಕೊಂಡರೆ ಸಾಕು. ಆದರೆ ಈ ಸಂದರ್ಭದಲ್ಲಿ ನನ್ನ ಒಂದು ಸಲಹೆ ಏನೆಂದರೆ, ಆ ಪ್ರಕಾರ ಯಾರಾದರೂ ಬಸ್ಸುಗಳ ದುರಂತಕ್ಕೆ ಸಿಕ್ಕಿ ಸತ್ತರೆ ಕೂಡಲೇ ಅವರ ಕಡೆಯವರಿಗೆ ಕೊನೆಯ ಪಕ್ಷ ಐದು ಸಾವಿರ ರೂಪಾಯಿಗಳನ್ನಾದರೂ ಕೊಡಬೇಕೆಂದು ನಾನು ಈ ಒಂದು ಸಂದರ್ಭದಲ್ಲಿ ಒತ್ತಾಯಮಾಡುತ್ತೇನೆ. ಹಿಂದೆ ರಾಜ್ಯ ಪಾಲರಾಗಿದ್ದಂಥ ಮಾನ್ಯ ಶ್ರೀ ಧರ್ಮವೀರ ಅವರು ಇನ್ನುಮುಂದೆ ವಿಶೇಷವಾಗಿ ಬಸ್ಸುಗಳ ಸೌಕರ್ಯವನ್ನು ಕೊಡುತ್ತೇವೆ. ಸುಮಾರು ಎರಡುಮೂರು ವರ್ಷಗಳಿಂದ ಕೆಟ್ಟುಹೋಗಿರತಕ್ಕ ಸುಮಾರು 70—80 ಬಸ್ಸುಗಳನ್ನು ಜಾಗ್ರತೆಯಾಗಿ ರಿಪೇರಿ ಮಾಡಿಸಿ ರಸ್ತೆಗಳಲ್ಲಿ ತಿರುಗಾಡುವಂತೆ ತಕ್ಕ ವ್ಯವಸ್ಥೆಮಾಡುತ್ತೇವೆಂದು ಹೇಳಿದರು. ರಸ್ತೆಗಳಲ್ಲಿ ಜನಸಾಮಾನ್ಯರಾಗಲೀ, ಯಾರೇ ಆಗಲೀ ಓಡಾಡತಕ್ಕ ಸಂದರ್ಭದಲ್ಲಿ ಬಸ್ಸುಗಳನ್ನು ನಡೆಸುವಾಗ ತುಂಬಾ ಜಾಗರೂಕತೆ ಬೇಕು. ಕೆಲವು ಸಂದರ್ಭದಲ್ಲಿ ಪ್ಯಾಸೆಂಜರ್ಸ್ ಕುಳಿತುಕೊಳ್ಳುವ ಬಸ್ಸುಗಳೇ ಕೆಟ್ಟುಹೋಗುತ್ತದೆ. ಅಂತಹುಗಳನ್ನು ಜಾಗ್ರತೆಯಾಗಿ ರಿಪೇರಿಮಾಡಿಸಿಕೊಡಿ ಎಂದು ಅನೇಕ ವರ್ಷಗಳಿಂದ ಅನೇಕ ಜನರು ಒತ್ತಾಯ ಮಾಡಿದರೂ ಸರ್ಕಾರ ಇದುವರೆಗೆ ಗಮನಕೊಟ್ಟಿಲ್ಲವೆಂದು ನಾನು ಹೇಳುತ್ತೇನೆ. ಸುಮಾರು 3 ತಿಂಗಳುಗಳಿಂದ ಮಂತ್ರಿಗಳಿಗೂ ಮತ್ತು ಚೇರ್‌ಮನ್ನರಿಗೂ ಹೊಂದಾಣಿಕೆಯೇ ಇಲ್ಲ. ಅವರ ಈ ಒಂದು ದೃಷ್ಟಿಯಿಂದ ಚೇರ್‌ಮನ್ನರೇ ಒಂದು ಕಡೆ, ಮಂತ್ರಿಗಳೇ ಒಂದು ಕಡೆ. ಬಿ. ಟಿ. ಎಸ್. ನಲ್ಲಿ ಇವರಿಬ್ಬರ ಜಗಳದಲ್ಲಿ ಪ್ಯಾಸೆಂಜರ್ಸ್‌ಗೆ ಕಷ್ಟ. ಇದರಿಂದ ಏನು ಗೊತ್ತಾಗುತ್ತದೆಂದರೆ, ಇಬ್ಬರ ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಯಿತಂತೆ ಎಂಬುದಾಗಿ ಹೇಳಿದಂತಾಗುತ್ತದೆ. ಅವರದೇ ಒಂದು ಡಿಸಿಷನ್ ಆದರೆ, ಇವರದ್ದೇ ಒಂದು ಡಿಸಿಷನ್. ಒಟ್ಟಿನಲ್ಲಿ ಬಿ. ಟಿ. ಎಸ್. ವ್ಯವಸ್ಥೆ ಇಲ್ಲ ಸರಿಯಾಗಿ

(ಶ್ರೀ ಕೆ. ಎಂ. ನಾಗಣ್ಣ)

ಇನ್ನೊಂದು ವಿಚಾರವೇನಂದರೆ ಪ್ರತಿ ದಿನವೂ ಈ ಆಕ್ಸಿಡೆಂಟು ಜಾಸ್ತಿಯಾಗುತ್ತಿವೆ. ಕಂಪೌಂಡ್ ಸಿಕ್ಕಿದರೆ ಕಂಪೌಂಡಿಗೆ ಹೊಡೆಯುತ್ತಾರೆ, ಮರ ಸಿಕ್ಕಿದರ ಮರಕ್ಕೆ ಹೊಡೆಯುತ್ತಾರೆ ಮತ್ತು ರಿಕ್ಷಾಗಳಿಗೆ ಹೊಡೆಯುತ್ತಾರೆ. ಇದಕ್ಕೆ ಕಾರಣ—ಸ್ಪೀಡ್ ಚಕ್ ಮಾಡುವ ವ್ಯವಸ್ಥೆ ಇವರಲ್ಲಿ ಇಲ್ಲ. ಇವೊತ್ತಿನ ದಿವಸ ಪೋಲೀಸರು ಬಸ್ಸಿನಲ್ಲಿ ಟಿಕೆಟ್ ಇಲ್ಲದೆ ಪ್ರಯಾಣ ಮಾಡುವುದರಿಂದ ಅವರು ಇವರ ದಾಕ್ಷಿಣ್ಯಕ್ಕೆ ಒಳಗಾಗಿದ್ದಾರೆ. ಆದ್ದರಿಂದ ಅವರಿಂದಲೂ ಇದನ್ನು ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ. ಹಾಗೆಯೇ ಇವೊತ್ತು ಬಸ್ ಡ್ರೈವರ್ಸ್ ನಮಗೆ ಸ್ವಾತಂತ್ರ್ಯ ಸಿಕ್ಕಿದೆ, ಆದ್ದರಿಂದ ಹೇಗೆ ಬೇಕಾದರೂ ವರ್ತಿಸಬಹುದೆಂದು ತಿಳಿದುಕೊಂಡು ದೊಡ್ಡ ಮಂತ್ರಿಯವರು ಇದ್ದ ಹಾಗೆ ವರ್ತಿಸುತ್ತಿದ್ದಾರೆ. ಕಂಡಕ್ಟರ್ಸ್ ಉಪಮಂತ್ರಿಯ ಹಾಗೆ ವರ್ತಿಸುತ್ತಿದ್ದಾರೆ. ಆದ್ದರಿಂದ ಇದನ್ನು ತಪ್ಪಿಸಿ ಮಾನ್ಯ ಮಂತ್ರಿಯವರು ಒಂದು ಸ್ಪೀಡ್ ಚಕ್ಕಿಂಗ್ ಸ್ಕ್ವಾಡನ್ನು ಮಾಡಬೇಕೆಂದು ಹೇಳುತ್ತೇನೆ. ಇದರಿಂದ ಬಹಳ ಮಟ್ಟಿಗೆ ಆಕ್ಸಿಡೆಂಟುಗಳನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ತಿಳಿಯುತ್ತೇನೆ. ಅದೂ ಅಲ್ಲದೆ ಇಂತಹ ಸ್ಕ್ವಾಡ್ ಮಾಡಿದ್ದರೆ ಅಲ್ಲಿ ದುಡ್ಡು ತಿನ್ನುವುದಕ್ಕೆ ಅವಕಾಶ ಇರುವುದಿಲ್ಲ. ಆದ್ದರಿಂದ ಇದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಮಣ್ಣನವರು ಅನೇಕ ವಿಷಯಗಳನ್ನು ಈಗ ಮಾತನಾಡಿದ್ದಾರೆ. ನಾನಾದರೂ ಈ ಬಿ.ಟಿ.ಎಸ್. ಬಗ್ಗೆ ಹೋದ ಸಭೆಯಲ್ಲಿ, ಅಂದರೆ ಮಾನ್ಯ ಅಜೀಜ್ ಸೇಠರು ಈ ಕಡೆ ಇದ್ದಾಗ್ಯೆ, ಇವನ್ನು ಬೆಂಗಳೂರು ತರಲೆ ಸರ್ವಿಸ್ ಎಂದು ಕರೆದಿದ್ದೇವೆ. ಅದಕ್ಕೆ ನಾಲ್ಕು ಕಾರಣಗಳು ಇವೆ.

ಒಂದನೆಯದು ಈ ಬಸ್ಸುಗಳು ಹೋಗುತ್ತಿರುವಾಗ ಆಗಿಂದಾಗ್ಗೆ ನಿಲ್ಲುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಆಮೇಲೆ ಜನರು ಇಳಿದು ತಳ್ಳಿ ಮುಂದೆ ಕಳಿಸಬೇಕಾಗಿದೆ. ಇದಕ್ಕೆ ಕಾರಣವೇನಂದರೆ ಇದರ ಮೈಂಟೆನೆನ್ಸ್ ಬಹಳ ಕೆಟ್ಟ ರೀತಿಯಲ್ಲಿ ಇದೆ. ಇವರು ವರ್ಕ್‌ಶಾಪ್ ಮೇಲೆ ಹತೋಟಿಯನ್ನು ಇಟ್ಟುಕೊಂಡಿದ್ದಾರೆಯೇ ಇಲ್ಲವೇ ಎಂದು ಗೊತ್ತಿಲ್ಲ. ಅದರಲ್ಲಿಯೂ ಇವತ್ತು ಬ್ರೇಕ್ ಡೌನ್ ಆಗಿರುವ ಬಸ್ಸುಗಳು ಬಹಳ ಇವೆ. ಆದ್ದರಿಂದ ಮೈಂಟೆನೆನ್ಸ್ ಬಗ್ಗೆ ಬಹಳ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಚಾರವೇನೆಂದರೆ ನೀವು ಇಲ್ಲಿ ಕೆಲಸಗಾರರ ಸಹಕಾರ ಸಹ ಪಡೆಯಬೇಕಾಗಿದೆ. ಮ್ಯಾನೇಜ್‌ಮೆಂಟಿನಲ್ಲಿ ಲೇಬರ್ ಪಾರ್ಟಿಸಿಪೇಶನ್ ಅಲ್ಲಿ ಇರಬೇಕು. ಅದೇ ರೀತಿಯಲ್ಲಿ ಇವತ್ತು ಈ ಬಸ್ಸುಗಳಿಂದ ಬರುವಂತಹ ಹೊಗೆ ಭುಗ್ ಭುಗ್ ಎಂದು ಬರುತ್ತಿದೆ. ಇದರ ಬಗ್ಗೆ ಮೊನ್ನೆ ಅಂತರಾಷ್ಟ್ರೀಯ ಕಾನಫರೆನ್ಸ್ ಡೆನ್‌ಮಾರ್ಕಿನಲ್ಲಿ ನಡೆಯಿತು. ಅದೇ ರೀತಿ ಇಂಗ್ಲೇಂಡ್ ಮತ್ತಿತರ ದೇಶಗಳಲ್ಲಿ ಈ ಹೊಗೆಯಿಂದ ಉಂಟಾಗುವಂತಹ ಪೊಲ್ಯೂಶನ್ ಬಗ್ಗೆ ಚರ್ಚೆಯನ್ನು ಮಾಡುತ್ತಿದ್ದಾರೆ. ಆದ್ದರಿಂದ ಇಂತಹ ಹೊಗೆಯನ್ನು ಕಡಿಮೆ ಮಾಡುವುದಕ್ಕೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳಬೇಕು ಅದನ್ನು ನಾವು ಒಂದು ಸೈಂಟಿಫಿಕ್ ರೀತಿಯಲ್ಲಿ ತಪ್ಪಿಸುವುದಕ್ಕೆ ನೋಡಬೇಕಾಗಿದೆ. ಅದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಮೂರನೆಯದಾಗಿ ಏನೆಂದರೆ, ಬಸ್ಸುಗಳು ನಮ್ಮ ಬೆಂಗಳೂರು ನಗರದಲ್ಲಿ ಯಾವ್ಯಾವ ಕಡೆ ಸುತ್ತಾಡುತ್ತಿವೆಯೋ ಅದು ಬಹಳ ಕಡಿಮೆಯಾಗಿದೆ. ಇವತ್ತು ಜಯನಗರದಿಂದ ರಾಜಾಜಿನಗರಕ್ಕೆ ಬಸ್ಸು ಇಲ್ಲ. ಆದ್ದರಿಂದ ಜಯನಗರದಿಂದ ರಾಜಾಜಿನಗರ ವೈಯಾ—ಕೆ ಜಿ ಸರ್ಕಲ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿ ಜಯನಗರ—ಕೆ ಜಿ ಸರ್ಕಲ್—ರಾಜಾಜಿನಗರ ಮತ್ತು ಯಶವಂತಪುರಕ್ಕೆ ಕೂಡ ಒಂದು ಬಸ್ ಹಾಕಬೇಕೆಂದು ಹೇಳುತ್ತೇನೆ. ಇನ್ನೊಂದು ವಿಚಾರವೇನಂದರೆ, ಬಸ್ ಶೆಲ್ಟರ್ ಹಾಕತಕ್ಕದು. ಇವತ್ತು ಮಳೆ—ಬಿಸಿಲು ಇದ್ದಾಗ ಜನರಿಗೆ ನಿಂತುಕೊಳ್ಳಲು ಯಾವ ಸೌಕರ್ಯವೂ ಇಲ್ಲ. ಇದನ್ನು ಕೇಳಿದಾಗ ಮಂತ್ರಿಯವರು ದುಡ್ಡು ಇಲ್ಲವೆಂದು ಹೇಳಬಹುದು. ನಾನು ಹೇಳುವುದೇನೆಂದರೆ ನೀವು ಸಮಾಜವಾದವನ್ನು ಹೇಳಿ ಸಮಾಜ ಕಟ್ಟುವ ಜನರು. ದುಡ್ಡು ಇದ್ದರೆ ಖರ್ಚು ಮಾಡಿ ಆ ಕೆಲಸ ಮಾಡಿ, ಇಲ್ಲದಿದ್ದರೆ ಜನರಿಗೆ ಸೌಕರ್ಯ ಹೇಗೆ ಮಾಡುತ್ತೀರಿ? ಇವತ್ತು, ಟ್ರಾನ್ಸ್‌ಪೋರ್ಟ್ ಎನ್ನುವುದು ಸೋಶಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿಯಲ್ಲಿ ಸರ್ಕಾರದವರು ಬಹಳ ಸಬ್ಸಿಡೈಸ್ ಮಾಡಿ ಜನರಿಗೆ ಒದಗಿಸಬೇಕಾಗಿದೆ. ಮಾಸ್ಕೊ ಮುಂತಾದ ನಗರಗಳಲ್ಲಿ 5 ಪೈಸೆ ಕೊಟ್ಟರೆ ಬಸ್‌ನಲ್ಲಿ 10 ಮೈಲಿ ಹೋಗುವುದಕ್ಕೆ ಅವಕಾಶ ಕೊಡುತ್ತಾರೆ. ಅಲ್ಲಿ ಚೀಪೆಸ್ಟ್ ಮೀನ್ಸ್ ಆಫ್ ಟ್ರಾನ್ಸ್‌ಪೋರ್ಟನ್ನು ಜನರಿಗೆ

(ಶ್ರೀ ವಾಟಾಳ್ ನಾಗರಾಜ್)

ನಡೆಯುತ್ತಾ ಇಲ್ಲ. ಇನ್ನೊಂದು ಬಹಳ ಗುರುತರವಾದ ವಿಷಯವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಗರ್ಭಿಣಿ ಹೆಂಗಸರೇನಾದರೂ ಈ ಬಸ್ಸುಗಳಲ್ಲಿ ಹೊರಟರೆ ಸಾಮಾನ್ಯವಾಗಿ ವಾಣೀವಿಲಾಸ ಆಸ್ಪತ್ರೆಗೆ ಹೋಗಬೇಕಾದಾಗ ಸಾಮಾನ್ಯವಾಗಿ ಬಸ್ಸಿನಲ್ಲೇ ಪ್ರಸವವಾಗುತ್ತದೆ. ಅವರಿಗೆ ಮಕ್ಕಳು ಅಲ್ಲಿಯೇ ಆಗುತ್ತದೆ. ಏಕೆಂದರೆ ಅನೇಕ ಸಂದರ್ಭಗಳಲ್ಲಿ ನಾನು ನೋಡಿದ ಹಾಗೆ, ಬಸ್ಸಿನ ಬೆಲ್ಟ್ ಒಂದು ಕಡೆ ಹೋಗಿರುತ್ತದೆ. ಟೈರ್ ಒಂದು ಕಡೆ ಬಿದ್ದಿರುತ್ತದೆ. ಡ್ರೈವರ್ಸ್ ಸ್ಟೀರಿಂಗ್ ಒಂದು ಕಡೆ ಹೋಗಿರುತ್ತದೆ. ಇದರಿಂದ ರಸ್ತೆ ಬಿಟ್ಟು ಮನುಷ್ಯರ ಮೇಲೆ ಹಾಗೂ ಮನೆಗಳಿಗೆ ನುಗ್ಗಿ ಆಕ್ಸಿಡೆಂಟ್ಸ್ ಆಗಿರುವುದನ್ನು ನಾನು ನೋಡಿದ್ದೇನೆ. ಅನೇಕ ಬಸ್ಸುಗಳಲ್ಲಿ ಮಕ್ಕಳನ್ನು ಹೇಗೆ ಮಾಡಿರತಕ್ಕ ಪ್ರಸಂಗಗಳೂ ಕೂಡ ನನ್ನ ಗಮನಕ್ಕೆ ಬಂದಿದೆ. ಇಂತಹ ವಿಷಯಗಳನ್ನೆಲ್ಲಾ ನಾನು ಬಿ. ಟಿ. ಎಸ್. ಮ್ಯಾನೇಜ್‌ಮೆಂಟಿನವರಿಗೆ ತಿಳಿಸಿದರೂ ಇವತ್ತಿನವರೆಗೂ ಯಾವ ಒಂದು ಸರಿಯಾದ ವ್ಯವಸ್ಥೆಯನ್ನು ಮಾಡಿಲ್ಲ. ಇದು ಇನ್ನು ಮುಂದೆ ಸರಿಹೋಗಬಹುದೆಂದಿದ್ದರೆ, ಈಗ್ಗೆ ಮೂರು ತಿಂಗಳಿಂದಲೂ ಚೇರಮನ್ನರಿಗೆ ಹಾಗೂ ಮಂತ್ರಿಗಳಿಗೆ ಏನೋ ವ್ಯಾಜ್ಯ ನಡೆದು, ಅವರು ಹೇಳುವುದೇ ಒಂದು, ಇವರು ಹೇಳುವುದೇ ಒಂದು, ಈ ರೀತಿಯಾಗಿ ಬಿ. ಟಿ. ಎಸ್. ವ್ಯವಸ್ಥೆ ಸಂಪೂರ್ಣವಾಗಿ ಅವ್ಯವಸ್ಥೆಯಿಂದ ಇದೆಯೆಂದು ಹೇಳುತ್ತೇನೆ. ಆದ್ದರಿಂದ ಸರ್ಕಾರದವರು ಇದನ್ನು ಕೂಡಲೇ ಸರಿಪಡಿಸಬೇಕೆಂದು ನಾನು ಈಗ ಒತ್ತಾಯಮಾಡುತ್ತೇನೆ. ಇಷ್ಟು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಪ್ರಭಾಕರ್ (ವರ್ತೂರು).—ಇವತ್ತು ನಮ್ಮ ಮುಂದೆ ಬಿ. ಟಿ. ಎಸ್. ಬಸ್ಸುಗಳಿಗೆ ಸಂಬಂಧಪಟ್ಟ ಒಂದು ವಿಷಯ ಚರ್ಚೆಗೆ ಇದೆ. ಇದರಲ್ಲಿ ನಾನು ಮುಖ್ಯವಾಗಿ ಹೇಳಬೇಕಾದರೆ, ಹೋಗಿ ಬರುವ ಬಸ್ಸುಗಳಲ್ಲಿ ಕೆಟ್ಟುಹೋಗಿರತಕ್ಕ ಬಸ್ಸುಗಳ ಸಂಖ್ಯೆಯೇ ಜಾಸ್ತಿಯಾಗಿರುತ್ತದೆ. ಅನೇಕ ಬಸ್ಸುಗಳು ಜನಗಳ ಮೇಲೆಯೇ ಹರಿಯುತ್ತವೆ. ಅನೇಕ ಬಸ್ಸುಗಳು ರಿಪೇರಿಗಾಗಿ ಹೋಗಿವೆಯೆಂದು ಯಾವಾಗಲೂ ವರದಿಗಳು ಬರುತ್ತಲೇ ಇರುತ್ತವೆ ಇದರಿಂದ ನನ್ನ ಸಲಹೆ ಯೇನೆಂದರೆ, ಬೆಂಗಳೂರಿನಲ್ಲಿ ಸುತ್ತಮುತ್ತಲೂ ಅನೇಕ ಇಂಡಸ್ಟ್ರೀಸ್ ಉಂಟು, ಐ. ಟಿ. ಐ. ಮತ್ತು ಎಚ್. ಎಂ. ಟಿ. ಬಸ್ಸುಗಳು ಬೆಂಗಳೂರಿನಲ್ಲಿ 400 ಇವೆ. ಆ ಕಂಪೆನಿಯವರೇ ಇವತ್ತಿನ ಬಸ್ಸುಗಳು ಏನೇನು ಸಾಲದು ಎಂದು ಹೇಳುತ್ತಾರೆ. ಅಂದಮೇಲೆ ಇದರಿಂದ ಸಾರ್ವಜನಿಕರಿಗೆ ಇನ್ನೂ ಹೆಚ್ಚಾಗಿ ಕಂಟಕ ಉಂಟಾಗುತ್ತಿದೆಯೆಂದು ಹೇಳಿದರೆ ಅದೇನೂ ತಪ್ಪಾಗಲಾರದು. ಇದನ್ನು ತಪ್ಪಿಸುವುದಕ್ಕೋಸ್ಕರ ಈ ಎಲ್ಲಾ ಬಸ್ಸುಗಳನ್ನು ಸಂಬಂಧಪಟ್ಟ ಇಲಾಖೆಯವರು ತೆಗೆದುಕೊಂಡು ನಡೆಸಿದರೆ ಒಳ್ಳೆಯದು. ಆದರೆ ಬಸ್ಸುಗಳಲ್ಲಿ ಏನೇನು ಸೌಕರ್ಯಗಳನ್ನು ಒದಗಿಸಬೇಕೆಂಬುದು ಬಹು ಮುಖ್ಯ. ಅನೇಕ ಟ್ರಿಪ್ ಸರ್ವಿಸ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಯೋಗ್ಯ. ಈ 400 ಬಸ್ಸುಗಳನ್ನು ಆಗಾಗ್ಗೆ ಉಪಯೋಗಿಸಿಕೊಂಡರೆ, ನಮಗೆ ಹೆಚ್ಚು ಸಹಾಯವಾಗುತ್ತದೆ. ಮುಖ್ಯವಾಗಿ ನಮಗೆ ಸಾಕಷ್ಟು ಬಸ್ಸುಗಳಿಲ್ಲ. ಅವಕ್ಕೆ ಕೊಟ್ಟಿರುವ ದುಡ್ಡು ಸಹ ಸಾಲದು. ವರ್ಕ್‌ಷಾಪ್‌ಗಳು ಜಾಸ್ತಿಯಾಗಿದ್ದರೂ ಬಸ್ಸುಗಳ ಸಂಖ್ಯೆಮಾತ್ರ ಹೆಚ್ಚಿಲ್ಲ. ಹಾಗೆಯೇ ಇರುತ್ತವೆ. ಆದ್ದರಿಂದ ಆ ಬಸ್ಸುಗಳನ್ನೂ ಸಹ ನಾವು ಉಪಯೋಗಿಸಿಕೊಂಡರೆ ನಮಗೆ ಹೆಚ್ಚಿನ ಉಪಕಾರವಾಗುತ್ತದೆ. ಸಾರ್ವಜನಿಕರಿಗೂ ಸಹ ಸಹಾಯವಾಗುವುದೆಂದು ನಾನು ಸಲಹೆಮಾಡುತ್ತೇನೆ. ಸಂಬಂಧಪಟ್ಟ ಇಲಾಖೆಯವರು ಇವನ್ನು ಉಪಯೋಗಿಸಿಕೊಳ್ಳುವಂತೆ ಸರ್ಕಾರದವರು ತಕ್ಕ ವ್ಯವಸ್ಥೆ ಮಾಡಬೇಕೆಂದು ನಾನು ಮನವಿ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† SRI AZEEZ SAIT (Minister for Labour).—Mr. Deputy Speaker Sir, at the outset I start giving reply to the points raised by Sri Vatal Nagaraj. Sri Vatal Nagaraj has made a very uncharitable remark that because of the lack of harmony between the Chairman of the M.S R.T.C. and the Minister for Transport, the affairs of the M.S.R.T.C. and the Bangalore Transport Service have gone bad to worse. I dismiss the very allegations at the first instance by saying that there is complete harmony between the Chairman and the Minister. In fact, the things are moving very fast. Even this morning I went to the M.S.R.T.Cs Office and met the Chief Mechanical Engineer and the Deputy Chief Mechanical Engineer and discussed some important matters. It is unfair

on the part of the Hon. Members to condemn the concern without knowing the details. Of course, there are certain things about which the M.S.R.T.C. is not able to cope up and meet the needs and demands of the public. About 300 buses are off the road and we have now decided and chalked out a programme that within 3 months all the buses shall be repaired in Regional Workshops and Divisional Workshops and we will engage outside workshops to repair all the buses within three months. Therefore, I assure the House that all the buses will come back to the road within the stipulated period. Sri Vatal Nagaraj was telling that the buses of B.T.S. help the pregnant women to deliver in the bus itself, and they need not go to the Vani Vilas Hospital. I must say that person like Sri Vatal Nagaraj has never sat in a bus of late, and he after becoming the representative of the people is travelling in Ambassador Car and he does not know how the buses are and how the passengers are travelling. I am forced to say something in reply to the the remarks of my elderly friend Mr. Naganna who said that those who are incharge of Transport do not know anything about motor mechanism or motor business or transport business. Sir, Mr. Naganna knows about me and my family. I know what transport is right from my childhood. From past experience, I am in a position to assess the situation in the M.S.R.T.C. and point out the loop-holes and lapses which have been there, after occupying my present position. The only thing is that I have not given wide publicity nor I am in the habit of giving publicity. I have moved in buses. The whole difficulty in respect of B.T.S. is this. Bangalore City has developed so much and the population has grown so rapidly from 1961 to 1971, when the census figures were given. I admit that the B.T.S. has not been able fully to cope up with the increasing population and growth of extensions, but I would like to assure the House that I wish to take remedial measures. I have been insisting upon the M.S.R.T C. to have a Research Bureau for the entire Corporation, so that it should be a guiding factor regarding areas requiring buses during peak hours, areas which do not require so many buses and areas which require more buses. This is quite essential for a Corporation like this.

Then, I wish to take up the question of running buses in rural areas. Here, I would like to refer to Mr. Vatal Nagaraj's remarks.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮಂತ್ರಿಗಳು ಆ 35 ಗ್ರಾಮಗಳನ್ನು ನೋಡಿಯೇ ಇಲ್ಲ. ಅಧಿಕಾರಿಗಳು ಬರೆದು ಕೊಟ್ಟಿರತಕ್ಕ ಪಟ್ಟಿಯನ್ನು ನೋಡಿ ಇವರು ಮಾತನಾಡುತ್ತಿದ್ದಾರೆ. ಇದು ಖಂಡಿತ ಒಪ್ಪತಕ್ಕದ್ದಲ್ಲ... ......

Sri AZEEZ SAIT.- It is an admitted fact that I come from the City of Mysore and my friend Mr. Vatal Nagaraj comes from Vatal village. I come from urban area. I do admit that I have not that much of experience regarding villages But I am forced to say that Mr. Vatal Nagaraj has now lost contact with the villagers and I have more contact with them. I am not quite sure whether the B.T.S. are moving towards villages or not, If it is not moving towards villages, I will see what arrangements can be made to see that facilities are given to them.

(Sri Azeez Sait)

I have certain data here, which I wish to place before the House. The Bangalore Transport Service is operating passenger services in a belt of 20 K.Ms. from the Municipal Corporation limits. The approximate area thus covered is more than 400 square kilometres. The present operation is controlled by 5 Depots, three of which are situated in Shantinagar and one each at Jayanagar and Hosahalli. The services mostly radiate from three major stands, *i.e.*, City Market, Kempegowda Circle and Shivajinagar.

The population of Bangalore which stands at 17.50 lakhs as per 1971 figures has a considerable floating population. The M.S.R.T.C. caters to the travelling needs of this major Metropolitan City with a fleet of Leylands and Tata Buses. An average of 352 buses are on road every day carrying 3.17 lakhs passengers per day covering 67,124 K.Ms.

The principle adopted for transporting the passengers is to provide the maximum facility at areas where there is a maximum concentration. It is also our endeavour to see that the buses are utilised throughout the day and the passengers are provided with facilities at both the Terminals of the routes. While enforcing these principles, a survey is undertaken by a technique known as waiting time survey. All major enroute points are covered and at many points shuttles are also operated. The average waiting time has been considerably reduced at enroute points like Malleswaram 8th Cross, Malleswaram Circle, Swastik, K. R. Circle, S. R. Circle, etc., where the concentration of passengers is found to be heavy.

While undertaking such operations, it is ensured that only such roads which have been declared suitable for heavy vehicular traffic and notified as such by the Police, Municipal Corporation and Town Planning Authorities are undertaken for operations.

It is the endeavour of the Corporation that while entering new extensions a minimum of 50 feet road is adopted, so that the incidence of accidents and the turn-over of operation are better controlled. While providing such facilities, the recommendations of different Passengers' Associations as well as the Members of the Divisional Advisory Council are kept in view. The officials of Traffic Operations keep in constant touch with the suggestions of such Associations while planning the operations. A golden mean between the operating efficiency and the needs of commuters is evolved.

I would like to refer here to the suggestion of hon. Member Sri M. S. Krishnan that Members of the Legislature who are in the City of Bangalore should be consulted. I will see that action is taken to consult the M. L. As and Corporators and other Corporation authorities and the Traffic Police and that decisions of importance are taken only after inviting them and consulting them regarding the running of the B. T. S. Services.

At present the fleet of B. T. S. consists of about 2/3 Leylands and 1/3 Tata. The fleet has been strengthened over a period of years and last year we added 20 new and 47 re-conditioned buses.

It is proposed to augment the fleet by 10 Tata and 40 Leylands over the current year. This is expected to further ease the situation. It is true that some of the buses are old, but there has been a difficulty of replacements on account of inadequacy of chassis. This has resulted mostly on account of the strike of M/s. Ashok Leylands and M/s. Simpson Group of Industries. The emergency in the year 1971-72 had further aggravated the situation. Since M/s. Ashok Leylands have now re-opened, it was hoped that the situation would considerably improve. But unfortunately, the same situation still continues. We have decided to go in for Bed Fords and Dodge.

The Mysore State Electricity Board has taken up a phased programme for the removal of overhead lines, so as to facilitate the operation of Double Decker buses. However, on account of the over-bridges and other bottle-necks, some of the heavy extensions like Rajajinagar, Malleswaram, Gandhi Bazaar, Chamarajapet, cannot be connected by a Double Decker. However an experimental bus run between Jayanagar and City Railway Station is on hand. Ulsoor has been provided with a double decker connecting Shivajinagar.

Bus Shelters : At present there are 146 shelters in use. 5 more were constructed in the year 1971-72. It is proposed to construct 15 shelters and 20 queue railings during the current year. Negotiations regarding suitable sites and clearance from the Police Authorities are actively on hand to expedite these constructions.

The control at crowded enroute points is being exercised by providing queue railings. Such queue railings have been installed at Ulsoor, Shivajinagar, Malleswaram, City Railway Station and a few points in City Market.

Accidents : It is true that the number of accidents in Bangalore City has attracted the public attention. However in many instances, the BTS Drivers have not been held guilty. The comparative study of accident rates amongst the Metropolitan Cities of India reveals that the Bangalore Transport Service has the lowest accident rate at 1.03 lakh Kilometers. The figures for Hyderabad, Ahamedabad, Bombay, Delhi, Calcutta are of a higher order ranging from 2 to 11.24, the highest being Calcutta at 22 80.

To overcome the accidents, the MSRTC has taken up a Training Scheme to train the Drivers and educate the Traffic Inspectors in dealing effectively with the cases of accidents. Disciplinary measures have been taken against more than 25 Drivers, where the Drivers were found to be at fault.

(SRI AZEEZ SAIT)

Public Complaints : It is gratifying to note that the public complaints have been steadily on the decline and the complaints which were of an order of 60 in the beginning of the year have been brought down to 30 in the months of February and March.

Public Relations Cell has been set up under an officer to contact every complainant who has a specific grievance against the behaviour of the crew, irregular operations etc. The members of rate payers' Association are periodically contacted.

The Chairman, M.S.R.T.C. had also addressed the Members of the Bangalore City Corporation on two occasions and met the Commuters Associations to ascertain the grievances to undertake remedial measures.

Concerted efforts will be put forth to reduce the complaints.

By rigorous checks and cross-checks, on operational efficiency of more than 90 per cent of the proposed trips has been maintained.

Growth of B. T. S. : The operations of BTS have grown up by three-fold from 1957-58 to 1971-72. The following figures would indicate that the growth of transport facilities has kept pace with the growing population. However, such commuters who are not tied down by office timings may plan their travel during slack hours and co-operate with Transport Authorities in mitigating the hardships during peak hours.

			1957-58	*1971-72*
1	Number of Schedules	...	105	344
2	Scheduled Kilometres	...	20,782	67,124
3	Average vehicles on road per day	...	116	352
4	Average number of passengers carried per day (in lakhs)	...	1.10	3.17
5	Rate of Accident per lakh kilometres	...	3.41	1.03
6	Rate of Break-downs per 10, 000 kilometres	...	6.03	3.62

Future Programme Depots

For better decentralisation of operations and greater effective control, a Depot is under construction at Indiranagar.

It is also programmed to construct one more Depot at Subhashnagar.

Besides, we are now undertaking a sample survey about mini-buses. These 10 mini-buses would be having a privileged class of passengers who would obtain passes—office-goers, advocates, school-goers.

The chief idea is to reduce the rush in other buses at peak hours, and I am sure that by the introduction of these mini-buses we will be able to improve the service and if it proves successful, we can add even some thing more.

Further it was told that buses from Jayanagar to Rajaji Nagar and from Rajaji Nagar to Yeswantapur should be plied. I will assure this House that this will be considered.

Regarding smoke, Sir, many Hon'ble Members suggested that smoke nuisance should be avoided. This happens for two reasons: (1) adulteration of diesel and (2) oil is adulterated. That is how smoke is caused. Now there is a way out for it. In Madras, they have taken the exhaust pipe up instead of allowing smoke on the ground. I am thinking that even if the smoke cannot be controlled, we can just think of having exhaust pipe towards the sky so that this may not be a nuisance to the public.

Many other suggestions have been made by the Hon'ble Members, there are four which should call for an answer:

(1) how are we going to manage peak-hour rush ;
(2) how do we avoid losses ;
(3) how many new buses are you going to put on the road ;
(4) how are we going to end corruption ?

Regarding the suggestion made by Sri Prabhakar, I do not think that a private company may give their buses for plying under the BTS. I do not, how far it will be correct.

Regarding peak hour rush, as I said, I am planning to have a research bureau in the BTS and I am also thinking of adding some buses. Actually, last year 30 buses were withdrawn from the BTS.

Sri M. S. Krishnan was telling that it should be subsidised travelling facility. In foreign countries, this subsided system is provided by collecting a surcharge from the taxation. If the Corporation—I would like to discuss with my Hon'ble friend Sri Basavalingappa, the Hon'ble Minister for Municipal Administration. If they allow me to have a surcharge from the residents of Bangalore, we can equate loss from the BTS and I am sure we can give more and better facilities for transport. Otherwise, we have to keep on with this loss.

Another thing to avoid loss, I am thinking is that the law which we have should be strictly enforced to punish the passengers who would be found in buses without a ticket, instead of taking action against the conductor. Particularly, I want to have a severe raid on the BTS from the Departmental security officers and punish the passengers who travel in buses without a ticket. If this raid continues for a month or so, I think people will become conscious and will get habituated to purchasing ticket. The question was posed to me that while there is loss in BTS, we are actually earning more in the Bombay Karnatak area and that is because passengers are in the habit of

(SRI AZEEZ SAIT)

demanding a ticket from conductors. Somebody questioned me: what about other areas? Particularly in BTS I am asking the conductors to collect money promptly. I want to take rigorous action by putting more raids on buses and then people will come to realise these are national undertakings and we should not enter buses without purchasing a ticket.

With a view to eradicating corruption, I am making a suggestion that arrangements may be made for opening ticket windows at bus stops wherefrom passengers may purchase tickets before getting into the bus. If this arrangement is followed, it will become easier for the Conductor also to issue tickets in the bus to the remaining passengers.

5-00 P.M.

I would like to assure hon. members Sriyuths Naganna and Shamanna that we have taken drastic measures to improve the services. It is hardly three months since this Ministry has assumed office and therefore we require some time to take more measures to improve the operations of the BTS buses.

SRI K. M. NAGANNA.—What about my suggestion to have a speed-checking squad to reduce accidents?

SRI AZEEZ SAIT.—I am not agreeable to have a speed checking squad. Instead of creating that special staff, I will see that steps are taken to control the speed of the vehicles automatically and no driver can drive a vehicle above a certain speed and mileage.

MR. DEPUTY SPEAKER.—The discussion raised by Sri T. R. Shamanna is concluded. Now discussions on the drought conditions prevailing in the State.

(ii) *re: Drought Conditions in Several Areas of the State*

†ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸಭಾಪತಿಗಳೇ, ರಾಜ್ಯದ ನಾನಾ ಮೂಲೆಗಳಲ್ಲಿ ಈ ಒಂದು ಅನಾವೃಷ್ಟಿಯ ಪರಿಣಾಮವಾಗಿ ಉದ್ಭವಿಸಿರುವ ಅಭಾವ ಪರಿಸ್ಥಿತಿ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುವ ದೃಷ್ಟಿಯಿಂದ 2½ ಗಂಟೆ ಕಾಲ ಈ ಚರ್ಚೆಯನ್ನು ಮಾಡಬೇಕು ಎನ್ನುವ ಮೇರೆ ತಾವು ಒಪ್ಪಿಗೆಯನ್ನು ಕೊಟ್ಟಿದ್ದೀರಿ. ಈ ರಾಜ್ಯದ ಹಲವಾರು ಭಾಗಗಳಲ್ಲಿ ಕಾಲಕ್ಕೆ ಮಳೆಯಾಗದೆ ರೈತರು ಕಳವಳಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಮಳೆ ಆಗದೇ ಇದ್ದ ಸಂದರ್ಭದಲ್ಲಿ ಕೆಲವು ಕಡೆ ಸರ್ಕಾರ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಂಡಿದೆ. ತದನಂತರ ಕೆಲವು ಪ್ರದೇಶದಲ್ಲಿ ಮಳೆ ಹೆಚ್ಚಾಗಿ ಅತಿವೃಷ್ಟಿಯಿಂದ ಅನಾಹುತವಾಗಿದೆ. ಉದಾಹರಣೆ ಹೇಳುವುದಾದರೆ ತುಮಕೂರು ಜಿಲ್ಲೆಯಲ್ಲಿ ಕೆಲವು ಭಾಗಗಳಲ್ಲಿ ಪರಿಹಾರ ಕಾರ್ಯಕ್ರಮವನ್ನು ತುರ್ತಾಗಿ ಒದಗಿಸಿದ್ದಾರೆಂದು ಕೇಳಿದ್ದೇನೆ ಆದರೆ ಈವೊತ್ತು ಏನಾಗಿದೆ ಎಂದರೆ ನಮ್ಮ ರಾಜ್ಯದ ಸುಮಾರು 10 ಪರ್ಸೆಂಟು ಇರತಕ್ಕಂಥ ರಾಜ್ಯದಲ್ಲಿ ವ್ಯವಸಾಯಕ್ಕೆ ಯೋಗ್ಯವಾಗಿರತಕ್ಕಂಥ ಭೂಮಿ ಮಳೆಯ ಆಧಾರದ ಮೇಲೆ ನಿಂತಿದೆ. ಈವೊತ್ತು ರೈತ ತನ್ನ ವ್ಯವಸಾಯ ವೃತ್ತಿಯನ್ನು ಅವಲಂಬಿಸಿರತಕ್ಕಂಥ ಕಾಲದಲ್ಲಿ ಮಳೆ ಆಗದೇ ಕೆಲವು ಕಡೆ ಕಾಲಕ್ಕೆ ಸರಿಯಾಗಿ ಮಳೆ ಆಗದೇ ಬೆಳೆ ನಷ್ಟವಾಗಿವೆ ಎಂದು ಪತ್ರಿಕೆಯಲ್ಲಿ ಓದಿದ್ದೇವೆ. ಈವೊತ್ತು ಸರ್ಕಾರದ ಅಧಿಕಾರಿಗಳೂ ಕೂಡ ಕೆಲವು ಕಡೆ ತೀವ್ರವಾಗಿ ಕಾರ್ಯಕ್ರಮ ಕೈಗೊಂಡಿದ್ದಾರೆಂದು ಪತ್ರಿಕೆಗಳಲ್ಲಿ ವರದಿ ಆಗಿರುವುದನ್ನು ಓದಿದ್ದೇನೆ.

ಬಾಂಬೆ ಕರ್ನಾಟಕದಲ್ಲಿ ಬಿಜಾಪುರ ಹಾಗೂ ಧಾರವಾಡ ಕಡೆ ಮಳೆಯಾಗಿ ಅನಾಹುತವಾಗಿದೆ. ಹೆಚ್ಚು ತೊಂದರೆಗೊಳಗಾಗಿರುವಂಥಾ ಪ್ರದೇಶದಲ್ಲಿ ಅಧಿಕಾರಿಗಳು ಪರಿಹಾರ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ ಎನ್ನುವುದನ್ನು ಪತ್ರಿಕೆಯಲ್ಲಿ ಓದಿದ್ದೇನೆ ನನ್ನ ಮಿತ್ರರಾದ ಶ್ರೀ ಎಸ್. ವೈ. ಪಾಟೀಲರು ಅವರು ಮಾತನಾಡತಕ್ಕಂಥ ಕಾಲದಲ್ಲಿ ಅವರು ಒಂದು ಘಾಟಿಯಲ್ಲಿ ಹೋಗಿ ಬರಬಹುದು ಎನ್ನುವ ಕಾಲ ನೋಡುತ್ತಾ ಇದ್ದೇವೆ ಎಂದು ಹೇಳಿದರು. ಕಳೆದ 3 ವರ್ಷಗಳಿಂದಲೂ ಹೆಚ್ಚು ಮಳೆಯಾಗದೆ ಅಲ್ಲಿಯ ಜನ ತೊಂದರೆಗೀಡಾಗಿರುವ ಸಂಭವವನ್ನು ಕೇಳಿದ್ದೇನೆ. ಕುಡಿಯುವ ನೀರಿನ ಅಭಾವ ಇದೆಯೆಂದು ಕೇಳಿದ್ದೇನೆ. ಮಹಾರಾಷ್ಟ್ರದಲ್ಲಿ ಕೊಯಿನಾ ನದಿಯಿಂದ ನೀರನ್ನು ಬಿಡತಕ್ಕಂಥಾ ಒಂದು ಒಪ್ಪಂದವನ್ನು ಮಾಡಿಕೊಂಡಿದ್ದಾರೆ ಎಂದು ಕೇಳಿದ್ದೇನೆ. ತತ್ಪರಿಣಾಮವಾಗಿ ಅವರು ನೀರನ್ನು ಇನ್ನೂ ಬಿಟ್ಟಿಲ್ಲ ಎಂದು ಕೇಳುತ್ತಿದ್ದೇನೆ. ನೀವು ಏನು ಒಂದು ನಿರ್ಣಯ ತೆಗೆದುಕೊಂಡಿದ್ದೀರೋ ಅಂದರೆ ನಾವು ವಿದ್ಯುಚ್ಛಕ್ತಿ ಅವರಿಗೆ ಕೊಟ್ಟು ಅದಕ್ಕೆ ಬದಲಾಗಿ ನೀರನ್ನು ಕೊಡುವುದು ಅಂತ ಏನು ಒಂದು ಒಪ್ಪಂದ ಮಾಡಿಕೊಂಡಿದ್ದೀರೋ ಅದು ಇನ್ನೂ ಕಾರ್ಯಗತವಾಗಿಲ್ಲ. ರಾಜ್ಯ ಸರ್ಕಾರ ತೆಗೆದುಕೊಂಡಿದ್ದ ಈ ನಿಲುವು ಇನ್ನೂ ಫಲಕಾರಿಯಾಗಿಲ್ಲ ಎನ್ನುವುದಕ್ಕೆ ವಿಷಾದಪಡಬೇಕಾಗಿದೆ. ಅವರು ನೀರು ಕೊಡುತ್ತೇವೆ ಎಂದು ಏನು ಒಂದು ವಾಗ್ದಾನ ಮಾಡಿದ್ದರೋ ಅದು ಇನ್ನೂ ಕಾರ್ಯಗತವಾಗದೇ ಹೋದಮೇಲೆ ನಾವು ಏತಕ್ಕೆ ವಿದ್ಯುಚ್ಛಕ್ತಿ ಕೊಡಬೇಕಾಗಿತ್ತು? ನಾವು ವಿದ್ಯುಚ್ಛಕ್ತಿ ಕೊಟ್ಟ ಮೇಲೆ ನೀರು ಕೊಡುವುದು ನ್ಯಾಯ. ನಮಗೆ ಇನ್ನೂ ನೀರು ಬಂದಿಲ್ಲ, ಆದುದರಿಂದ ವಿದ್ಯುಚ್ಛಕ್ತಿ ಕೊಡುವುದು ಸರಿಯಲ್ಲ ಎಂದು ನನ್ನ ಅಭಿಪ್ರಾಯ.

ಇನ್ನು ಒಂದು ವಿಚಾರ ಏನೆಂದರೆ ಇವತ್ತು ಒಂದು ಸರ್ಕಾರದ ಹುಕ್ಕುಂ ಇದೆ. ಕ್ಷಾಮ ಪರಿಹಾರದ ಕಾರ್ಯಕ್ರಮ ಜೂನ್ 30 ರವರೆಗೆ ಮಾಡುವಂತೆ ಆಶ್ವಾಸನೆ ಕೊಟ್ಟಿದ್ದೀರಿ. ಅನಂತರ ಏನು ಮಾಡಬೇಕು ಎನ್ನುವುದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಇನ್ನೂ ಆದೇಶ ಮುಟ್ಟಿಲ್ಲ. ಆದುದರಿಂದ ಅವರು ಇದನ್ನು ಮುಂದುವರಿಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾ ಇದ್ದಾರೆ. ದಯಮಾಡಿ ಸರ್ಕಾರದವರು ಈ ವಿಷಯದಲ್ಲಿ ತೀವ್ರವಾಗಿ ಆಲೋಚಿಸಿ ಆ ಕೆಲಸಗಳನ್ನು ಮುಂದುವರಿಸುವುದಕ್ಕೆ ರೆವಿನ್ಯೂ ಅಧಿಕಾರಿಗಳಿಗೆ ಆದೇಶ ಕೊಡಬೇಕು ಎಂದು ತಿಳಿಸಲಿಚ್ಛಿಸುತ್ತೇನೆ. ಇಲ್ಲಿಯವರೆಗೆ ನಾನಾ ಮೂಲೆಗಳಲ್ಲಿ ಮಾಡಿದಂಥ ಕೆಲಸ ಕಾರ್ಯಗಳು ಒಂದು ಅರ್ಧಮರ್ಧವಾಗಿ ಒಂದು ಅವ್ಯವಸ್ಥೆಯಲ್ಲಿವೆ. ಆದುದರಿಂದ ಸರ್ಕಾರದವರಿಗೆ ಹಣದ ಕೊರತೆ ಇದ್ದರೂ ಪರವಾಯಿಲ್ಲಾ ಅರ್ಧಮರ್ಧವಾಗಿರುವ ಕೆಲಸಕ್ಕೆ ಹೆಚ್ಚು ಹಣವನ್ನು ಒದಗಿಸಿ ಆ ಕೆಲಸಗಳನ್ನು ಪೂರೈಸಬೇಕೆಂದು ಹೇಳುತ್ತೇನೆ. ಜನರು ಬಹಳ ಕಷ್ಟಕ್ಕೆ ಈಡಾಗಿರುವಂಥ ಪ್ರದೇಶದಲ್ಲಿ ತೀವ್ರವಾದ ಎಲ್ಲಾ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ಒತ್ತಾಯಮಾಡಲಿಚ್ಛಿಸುತ್ತೇನೆ. ತಾವು ಈ ಕಡೆ ಇದ್ದಾಗ ಇದರ ಬಗ್ಗೆ ಚರ್ಚೆ ಮಾಡುವ ಕಾಲದಲ್ಲಿ ಇದಕ್ಕೆ ಒಂದು ಪರ್ಮನೆಂಟ್ ಫ್ಯಾಮಿನ್ ಬೋರ್ಡನ್ನು ಮಾಡಬೇಕು ಎಂದು ಹೇಳಿದಿರಿ. ಮತ್ತು ಇದರ ಬಗ್ಗೆ ಹತ್ತಾರು ವರ್ಷದ ಅನುಭವ ಇದೆ, ಈ ಕ್ಷಾಮದ ಅಭಾವ ಈವೊತ್ತೇನೂ ಹೊಸದಲ್ಲ, ಇದು ಆಗಿಂದಾಗ್ಗೆ ಬರುತ್ತದೆ ಎಂದು ಹೇಳಿದಿರಿ. ಆದುದರಿಂದ ನಾನು ಹೇಳುವುದು ಏನೆಂದರೆ ಈ ವರ್ಷದ ಮಳೆ ಪ್ರಮಾಣ ಕಡಿಮೆ. ಮತ್ತು ಹಿಂದಿನ ಒಂದು ಅಂಕಿಅಂಶಗಳನ್ನು ನೋಡುವುದಾದರೆ ಮಳೆಯ ಒಂದು ಪ್ರಮಾಣವೂ ಕೂಡ ಕಡಿಮೆಯಾಗಿದೆ. ಆದುದರಿಂದ ಇದರ ಬಗ್ಗೆ ಒಂದು ಖಾಯಂ ಆಯೋಗವನ್ನು ರಚನೆ ಮಾಡಿ. ವಾರ್ ಫುಟಿಂಗ್ ಮೇಲೆ ತೆಗೆದುಕೊಳ್ಳುವ ಬಗ್ಗೆ ತನ್ನದೇ ಆದ ಒಂದು ಆರ್ಥಿಕ ವ್ಯವಸ್ಥೆ ಮಾಡುವ ರೀತಿಯಲ್ಲಿ ಈ ಒಂದು ಆಯೋಗವನ್ನು ಮಾಡುವುದು ಸೂಕ್ತವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. \ ಈವೊತ್ತಿನ ದಿವಸ ಕೆಲವು ಪ್ರದೇಶಗಳಲ್ಲಿ ರೈತರು ಚಿಂತಾಜನಕ ಪರಿಸ್ಥಿತಿಯಲ್ಲಿರುವುದರಿಂದ ಸಂಬಂಧಪಟ್ಟ ಪ್ರದೇಶದಲ್ಲಿ ಸರ್ಕಾರದ ಸಾಲಗಳು ಏನು ಬರಬೇಕೋ ಅದನ್ನು ತಡೆ ಹಿಡಿಯಬೇಕು ಎಂದು ಹೇಳುತ್ತೇವೆ. ಅವರಿಂದ ವಸೂಲ್ ಮಾಡುವುದಕ್ಕೆ ಯಾವ ತರಹದ ಒತ್ತಾಯವನ್ನೂ ಹಾಕದೆ ತಾತ್ಕಾಲಿಕವಾಗಿ ತಡೆಹಿಡಿಯಬೇಕೆಂದು ಹೇಳುತ್ತೇನೆ. ಇದರ ಜೊತೆಗೆ ಒಂದು ಖಾಯಂ ಪರಿಹಾರವನ್ನು ಹುಡುಕದೇ ಹೋದರೆ ಟೆಂಪರರಿ ಮೆಷರ್‌ನಿಂದ ಏನು ಕೆಲಸ ತೆಗೆದುಕೊಳ್ಳುತ್ತೀರಾ ಅದಕ್ಕೆ ಸಾಕಷ್ಟು ಹಣ ಖರ್ಚಾಗುತ್ತದೆಯೇ ಹೊರತು ಅವರಿಗೆ ಪರ್ಮನೆಂಟ್ ರಿಲೀಫ್ ಸಿಕ್ಕುವುದಿಲ್ಲ. ಈ ಒಂದು ಕಾರಣದಿಂದ ಸರ್ಕಾರ ಇದರ ಬಗ್ಗೆ ತೀವ್ರವಾಗಿ ಆಲೋಚನೆ ಮಾಡಬೇಕಾಗಿದೆ. 100 ಕ್ಕೆ 65–70 ಪರ್ಸೆಂಟ್ ಪ್ರದೇಶಗಳು ಆಗಿಂದಾಗ್ಗೆ ಕ್ಷಾಮಕ್ಕೆ ತುತ್ತಾಗಿರತಕ್ಕಂಥಾ ಕಾಲದಲ್ಲಿ ಶಾಶ್ವತವಾದ ಒಂದು ಪರಿಹಾರವನ್ನು ಕೊಡತಕ್ಕ ಬಗ್ಗೆ ಸರ್ಕಾರ ಕೂಲಂಕಷವಾಗಿ ಆಲೋಚನೆ ಮಾಡಬೇಕಾಗಿದೆ. ಈವೊತ್ತು ಹಲವಾರು ಸ್ಕೀಮುಗಳನ್ನು ಕೇಂದ್ರ ಸರ್ಕಾರದ ವತಿಯಿಂದ ರಾಜ್ಯದಲ್ಲಿ ಇಂಪ್ಲಿಮೆಂಟ್ ಮಾಡುವುದಕ್ಕೆ ಪ್ರಯತ್ನ ಮಾಡಿದೆ. ಅದಕ್ಕಾಗಿ ಫಾರ್ಮರ್ ಡೆವಲಪ್‌ಮೆಂಟ್ ಏಜೆನ್ಸಿ ಇದೆ. ಇದು 2—3 ಜಿಲ್ಲೆಯಲ್ಲಿ ಕಾರ್ಯಗತವಾಗಿರಬಹುದು. ಮೈಸೂರು,

(ಶ್ರೀ ಎಚ್. ಡಿ. ದೇವೇಗೌಡ)

ಬೀದರ್ ಮತ್ತು ತುಮಕೂರು ಜಿಲ್ಲೆಯಲ್ಲಿ ಫಾರ್ಮರ್ ಡೆವಲಪ್‌ಮೆಂಟ್ ಏಜೆನ್ಸಿಯಿಂದ ಏನು ಕಾರ್ಯಕ್ರಮ ನಡೆಯುತ್ತಾ ಇದೆಯೋ ಅದೇ ರೀತಿ ಅಲ್ಲಲ್ಲಿ ರಾಜ್ಯದಲ್ಲಿ ಇಂತಹ ಒಂದು ಯೋಜನೆಯನ್ನು ಕಾರ್ಯಗತ ಮಾಡಿದರೆ ಆ ಪ್ರದೇಶದ ಜನರಿಗೆ ಅನುಕೂಲವಾಗುತ್ತದೆ ಎಂದು ಹೇಳಬಯಸುತ್ತೇನೆ. ರೀ ಫೈನಾನ್ಸಿಂಗ್ ಕಾರ್ಪೊರೇಷನ್‌ನಿಂದ ಹಣವನ್ನು ಒದಗಿಸುವುದಿಲ್ಲ. ಕೇಂದ್ರದ ವತಿಯಿಂದ ಕ್ಷಾಮದ ದವಡೆಗೆ ತುತ್ತಾಗತಕ್ಕ ಪ್ರದೇಶಗಳಲ್ಲಿ ಈ ಯೋಜನೆಗಳ ವ್ಯಾಪ್ತಿಯನ್ನು ಪ್ರಸರಿಸತಕ್ಕದ್ದು ಸೂಕ್ತ. ಕೇಂದ್ರ ಸರ್ಕಾರದಲ್ಲಿ ಈ ಬಗ್ಗೆ ಒತ್ತಾಯಪೂರ್ವಕವಾಗಿ ಹೇಳಿ, ಪರಿಹಾರ ಹೆಚ್ಚಾಗುವುದಕ್ಕೆ ರಾಜ್ಯ ಸರ್ಕಾರ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ.

ನಮ್ಮ ಸಂಶೋಧನೆ ಎಲ್ಲಿಯವರೆಗೂ ಹೋಗಿದೆ ಎಂದರೆ, ಮಳೆ ಸ್ವಲ್ಪ ಕಡಮೆಯಾದರೂ ಬೆಳೆಗೆ ಅನುಕೂಲವಾಗಿ ಬೀಜಗಳನ್ನು ಕಂಡು ಹಿಡಿಯುವುದರ ಕಡೆ ನಮ್ಮ ಅಗ್ರಿಕಲ್ಚರಲ್ ಯೂನಿವರ್ಸಿಟಿ ಪ್ರಯತ್ನ ಮಾಡುತ್ತಿದೆ ಎನ್ನುವುದನ್ನು ಪತ್ರಿಕೆಗಳಲ್ಲಿ ಓದಿದ್ದೇನೆ. ಎಷ್ಟರಮಟ್ಟಿಗೆ ಕಾರ್ಯಸಾಧನೆಯಾಗಿದೆಯೋ ಗೊತ್ತಿಲ್ಲ. ಆ ಕಡೆಗೂ ಕೂಡ ಹೆಚ್ಚಿನ ಗಮನ ಕೊಡುವುದು ಸೂಕ್ತ.

ಬಿಜಾಪುರದ ಉತ್ತರ ಭಾಗ ಬಹಳ ಕಠಿಣ ಪರಿಸ್ಥಿತಿಯಲ್ಲಿದೆ. ಹಾಗೆಯೇ ಧಾರವಾಡದ ನವಲಗುಂದ ತಾಲ್ಲೂಕು, ಬೊಂಬಾಯಿ ಮತ್ತು ಹೈದರಾಬಾದು ಕರ್ಣಾಟಕದ ಭಾಗಗಳಲ್ಲಿ ತೀವ್ರ ಪರಿಸ್ಥಿತಿ ಇದೆ ಎಂದು ಕೇಳಿದ್ದೇನೆ. ಸರ್ಕಾರ ಹೆಚ್ಚು ಆಸಕ್ತಿ ವಹಿಸಿ, ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕು ಮತ್ತು ರಾಜ್ಯದ ಎಲ್ಲ ಭಾಗಗಳಲ್ಲಿಯೂ ಇಂಥ ಸನ್ನಿವೇಶಗಳಿಗೆ ಒಳಗಾಗಿರುವ ಪ್ರದೇಶದಲ್ಲಿ ಕಾಮಗಾರಿ ಕೆಲಸಗಳನ್ನು ಮಾಡುವ ಬಗ್ಗೆ 30-6-72 ರಿಂದ ಕೆಲಸ ಮಾಡಕೂಡದೆಂದು ಆದೇಶವನ್ನು ಸರ್ಕಾರ ಏನು ಕೊಟ್ಟಿದೆ ಅದನ್ನು ಹಿಂತೆಗೆದುಕೊಂಡು ಕಾಮಗಾರಿ ಕೆಲಸಗಳನ್ನು ತೆಗೆದುಕೊಳ್ಳುವುದರ ಬಗ್ಗೆ ಗಮನ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ನಾನು ಮೊದಲೇ ತಿಳಿಸಿದ ಹಾಗೆ ಬಾಕಿ ವಸೂಲಾತಿಯನ್ನು ಪರಿಸ್ಥಿತಿ ಉತ್ತಮವಾಗುವವರೆಗೆ ತಡೆಹಿಡಿಯಬೇಕೆಂದು ಸೂಚನೆ ಕೊಟ್ಟು, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ವೈ. ಪಾಟೀಲ್ (ಸಿಂದಗಿ).—ಮಾನ್ಯ ಸಭಾಪತಿಗಳು ನಮ್ಮ ಪ್ರಾರ್ಥನೆಯನ್ನು ಮನ್ನಿಸಿ ಬಿಜಾಪುರ ಜಿಲ್ಲಾ ದುಷ್ಕಾಳ ಪರಿಸ್ಥಿತಿಯನ್ನು ಚರ್ಚಿಸಲು ಅನುಮತಿ ಕೊಟ್ಟಿದ್ದಕ್ಕಾಗಿ ಮೊದಲನೆಯದಾಗಿ ಅವರನ್ನು ಅಭಿನಂದಿಸುತ್ತೇನೆ.

ಇಡೀ ಬಿಜಾಪುರ ಜಿಲ್ಲೆಯು ಮುಖ್ಯವಾಗಿ ಉತ್ತರ ಭಾಗದ ಎಲ್ಲ ತಾಲ್ಲೂಕುಗಳು ಅದರಲ್ಲಿ ದುರ್ದೈವಿ ಇಂಡಿ ಮತ್ತು ಸಿಂದಗಿ ತಾಲ್ಲೂಕುಗಳಲ್ಲಿ ಎರಡು ವರ್ಷದಿಂದ ಮಳೆಯೇ ಇಲ್ಲ. ಹೋದ ವರ್ಷ ಸ್ವಲ್ಪ ಮಳೆಯಾಗಿ ರೂ. 40,000—00ಗಳ ಹೈಬ್ರೀಡ್ ಸಜ್ಜೆ ಬೀಜ ಬಿತ್ತಿದ್ದು ಮಳೆಯ ಅಭಾವದ ಮೂಲಕ ಒಣಗಿ ಹೋಯಿತು. ಈ ವರ್ಷ ಇಂದಿನವರೆಗೆ ಒಂದು ಹನಿಯೂ ಮಳೆ ಇಲ್ಲದ್ದರಿಂದ ಹತ್ತಾರು ಲಕ್ಷ ರೂಪಾಯಿಗಳ ಶೇಂಗಾ ಬೀಜ ತಂದು ರೈತರು ಬಿತ್ತದೆ ನಿರಾಶೆಯಾದರು. ಸಾಲ ಮಾಡಿ ತಂದ ಬೀಜವನ್ನು ಆಹಾರವಿಲ್ಲದ್ದಕ್ಕಾಗಿ ತಿಂದು ಬಿಟ್ಟರು. ಜೋಳದ ಧಾರಣೆ ವಿಪರೀತ ಏರಿದೆ. ದನಗಳಿಗೆ ಮೇವು ಸಿಗುವುದಿಲ್ಲ. ಸಾವಿರ ರೂಪಾಯಿ ಬೆಲೆಬಾಳುವ ಎತ್ತುಗಳನ್ನು ರೈತರು ಕೈಗೆ ಬಂದಂತೆ ಮಾರಹತ್ತಿದ್ದಾರೆ. ತೋಟದ ಭಾವಿಗಳಿಗೂ ಕುಡಿಯುವ ನೀರಿನ ಭಾವಿಗಳಿಗೂ ನೀರು ಇಲ್ಲ. ಜನರು ಗಾಬರಿಯಾಗಿದ್ದಾರೆ. 2 3 ವರ್ಷಗಳಿಂದ ಬೆಳೆಬಾರದಿದ್ದರಿಂದ ಅಲ್ಲಿಯ ಜನರ ಗತಿ ಏನಾಗಿರಬೇಕು, ಮಂತ್ರಿಗಳು, ಮಾನ್ಯ ಸದಸ್ಯರು ಮಾನವೀತೆಯ ದೃಷ್ಟಿಯಿಂದ ವಿಚಾರ ಮಾಡಿರಿ. ವಿಜಾಪೂರ ಜಿಲ್ಲೆಯ ಬಡ ನೇಕಾರರ ಗೋಳು ಕೇಳುವವರೇ ಇಲ್ಲ. ಬಿಜಾಪುರ ಜಿಲ್ಲೆಯಲ್ಲಿ ಬಡತನದ ದೃಷ್ಟಿಯಿಂದ ಹರಿಜನರಿಗೂ ಹರಿಜನರಲ್ಲದವರಿಗೂ ವ್ಯತ್ಯಾಸ ಇಲ್ಲ. 100ಕ್ಕೆ 80ರಷ್ಟು ಜನರು ಕಡು ಬಡವರೇ ಇಗಿದ್ದಾರೆ. ಬಿಜಾಪುರ ಜಿಲ್ಲೆಯೂ ಕರ್ನಾಟಕ ರಾಜ್ಯದ 1:15 ಭಾಗವಾಗಿದ್ದು ಸರ್ಕಾರ ಲಕ್ಷ ಕೊಡಬೇಕು. ನನ್ನ ವಯಸ್ಸು ಈಗ 60 ವರ್ಷ. ಪ್ರತಿ ಎರಡು ವರ್ಷಕ್ಕೊಮ್ಮೆ ಬಿಜಾಪುರ ಜಿಲ್ಲೆಯಲ್ಲಿ ದುಷ್ಕಾಳ ಬೀಳುತ್ತಲೇ ಇದೆ. ನಾನು ಕನಿಷ್ಠ 20-30 ಬರಗಾಲ ನೋಡಿದ್ದೇನೆ. ಬ್ರಿಟಿಷ್ ಸರ್ಕಾರದವರು ಜೀವ ಹಿಡಿಯ ಲಕ್ಕಾದರೂ ಸಹಾಯ ಮಾಡುತ್ತಿದ್ದರು. ಹಿಂದಿನ ಗವರ್ನರ್ ಶ್ರೀ ಧರ್ಮವೀರರು ಬಂದು ಸಂಚರಿಸಿ, ಕಲ್ಯಾಣ ಮಾಡುತ್ತೇನೆಂದು ಗುಳಿಗಗಳನ್ನೇ ಕೊಟ್ಟು ಹೋದರು ಏನೂ ಮಾಡಲಿಲ್ಲ. ಜನತಾ ಸರ್ಕಾರ ಬಂದ ಬಳಿಕಾದರೂ ಕಲ್ಯಾಣ ಮಾಡುವರೆಂದು ತಿಳಿದಿದ್ದೆವು. ಸಿಂದಗಿ, ಇಂಡಿ ತಾಲ್ಲೂಕುಗಳಲ್ಲಿ ಒಂದು ವಾರ ಸಂಚರಿಸಿ ಬಂದಿದ್ದೇವೆ. ಅಲ್ಲಿಯ ಜನರ ಗೋಳು ನೋಡಿದವರಿಗೆ

ಕಣ್ಣೀರು ಉದುರುತ್ತವೆ. ಇಲ್ಲಿಯವರೆಗಂತೂ ಸರ್ಕಾರ ಬಂದು ನಾಲ್ಕು ತಿಂಗಳಾದರೂ ಏನೂ ಕೆಲಸ ಪ್ರಾರಂಭ ಮಾಡಿಲ್ಲ. ಸರ್ಕಾರದವರು ದಯಮಾಡಿ ಬಡವರಿಗೆ ಕೂಲಿ ಒದಗಿಸಲು ಕೃಷ್ಣಾ ಮೇಲ್ದಂಡೆಯ ಯೋಜನೆಯು, ಇಂಡಿ, ಸಿಂದಗಿ ತಾಲ್ಲೂಕುಗಳಲ್ಲಿ ಕಾಲುವೆ ಅಗೆಯುವ ಕೆಲಸವನ್ನು ತೀವ್ರ ಪ್ರಾರಂಭಿಸಬೇಕು. ಮಾನ್ಯ ಬಾಪುಗೌಡರು ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಈ ಸರ್ಕಾರದವರು ಮಾಡುವುದಿಲ್ಲ. ಕೈಬಿಟ್ಟಿದ್ದಾರೆ ಅನ್ನುವ ಮಾತನ್ನು ನಾನು ನಂಬಲಾರೆ. ಈ ಮಂತ್ರಿ ಮಂಡಲದ ಮೇಲೆ ನಮಗೆ ವಿಶ್ವಾಸವಿದ್ದು, ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಈ ಸರ್ಕಾರ ಮಾಡದೇ ಅಲಕ್ಷ್ಯ ಮಾಡಿದರೆ ಇಲ್ಲವೇ ಕೈಬಿಟ್ಟರೆ ಅದರ ಭಯಂಕರ ಪರಿಣಾಮ ಈ ಸರ್ಕಾರ ಮತ್ತು ಈ ಸರ್ಕಾರದ ಪಕ್ಷದವರು, ಮಾನ್ಯ ಶ್ರೀ ರಾಥೋಡರವರು ಮೊದಲಾದ ಎಲ್ಲ ಸದಸ್ಯರು ವಿಜಾಪೂರ ಜಿಲ್ಲೆಗೆ ಬರುವುದೇ ಕಠಿಣವಾದೀತು.

ಅತೀ ಕೆಟ್ಟ ಆಡಳಿತಗಾರರೆಂದು ಬ್ರಿಟಿಶರನ್ನು ಓಡಿಸಿದೆವು. ಬ್ರಿಟಿಶರಿದ್ದಾಗ ಸಹ ಇಷ್ಟು ತೊಂದರೆಯಾಗಲಲ್ಲ. ಇನ್ನು ಮಾಡುವ ದುಷ್ಕಾಳ ಕಾಮಗಾರಿಗಳು ಮುಂದೆ ದುಷ್ಕಾಳ ಪ್ರತಿಬಂಧಿಸುವಂತವುಗಳಾಗಿರಬೇಕು. ಹಿಂದೆ ಬ್ರಿಟಿಶರು ಬಡ ನೇಕಾರರಿಗೆ ಕಟಿ ಒಡೆಯಲಿಕ್ಕೆ ಹಚ್ಚುತ್ತಿದ್ದರು. ನೇಕಾರರ ಕೈಗೆ ಪೆಟ್ಟು ಹತ್ತಿ ರಕ್ತ ಸುರಿಯುವುದನ್ನು ಕಣ್ಣಾರೆ ಕಂಡಿದ್ದೇನೆ. ಬಿಜಾಪೂರ ಜಿಲ್ಲೆಯ ಜನರು ಯಾರಿಗೆ ಹೇಳಬೇಕು. ಅಲ್ಲಿಯ ಜನರು ಕರ್ನಾಟಕ ರಾಜ್ಯದ ಪ್ರಜೆಗಳು ಹೌದೋ ಅಲ್ಲವೋ ಅಂತಾ ಸರ್ಕಾರಕ್ಕೆ ಸವಾಲು ಮಾಡುತ್ತೇನೆ. ಈ ದುಷ್ಕಾಳ ಕಷ್ಟ ನಮಗೆ ಎಂದು ತಪ್ಪುವದೋ ತಿಳಿಯದಾಗಿದೆ.

ಹಿಂದೆ ಭಾರತ ಸರ್ಕಾರದವರು ದುಷ್ಕಾಳ ಜಿಲ್ಲೆಗಳ ಶೋಧ ಮಾಡುವ ಸಲುವಾಗಿ ರಾಮಮೂರ್ತಿ ಕಮಿಟಿ ನೇಮಿಸಿದ್ದರು. ಬಿಜಾಪುರ ಜಿಲ್ಲೆಯೇ ಭಾರತದ ಎಲ್ಲ ಜಿಲ್ಲೆಗಳಲ್ಲಿ ಹೆಚ್ಚು ದುಷ್ಕಾಳ ಬೀಳುವ ಜಿಲ್ಲೆಯೆಂದು ರಾಮಮೂರ್ತಿ ಕಮಿಟಿಯವರು ಅಭಿಪ್ರಾಯಪಟ್ಟಿದ್ದಾರೆ. ಪ್ರತಿ ಎರಡು ವರ್ಷಕ್ಕೊಮ್ಮೆ ದುಷ್ಕಾಳ ಬೀಳುವ ಬಗ್ಗೆ ಸರ್ಕಾರಿ ರಿಪೋರ್ಟ್‌ನಿಂದಲೇ ಗೊತ್ತಾಗುತ್ತದೆ. ಮಾನ್ಯ ದೇವೇಗೌಡರು ಈಗ ನಡೆದ ಕೆಲಸಗಳನ್ನು ಬಂದು ಮಾಡಬಾರದೆಂದು ಹೇಳಿದರು. ಸರ್ಕಾರದವರು ನಮ್ಮಲ್ಲಿ ಕೆಲಸಗಳನ್ನೇ ಪ್ರಾರಂಭ ಮಾಡಿಲ್ಲ. ಬಂದು ಮಾಡುವ ಪ್ರಶ್ನೆ ಏಕೆ ಬರುತ್ತದೆ. ಇಂದೇ ಸಾಕಷ್ಟು ಮಳೆಯಾದರೂ ಆರು ತಿಂಗಳವರೆಗೆ ಬೆಳೆ ಬರಲು ಸಾಧ್ಯವಿಲ್ಲ. 73 ಫೆಬ್ರುವರಿ ವರೆಗೆ ಜನರಿಗೆ ಕೆಲಸಬೇಕು. ಬಿಜಾಪುರ ಜಿಲ್ಲೆಯಲ್ಲಿ 5 ಹೊಳೆ ಹರಿಯುತ್ತಿದ್ದರೂ ಇಂಡಿ, ಸಿಂದಗಿ ತಾಲ್ಲೂಕುಗಳ ಮಟ್ಟಿಗೆ ಕೃಷ್ಣಾ ಮೇಲ್ದಂಡೆಯ ಹೊರ್ತು ಬೇರೆ ಯೋಜನೆಗಳೇ ಇಲ್ಲ. ಈ ಯೋಜನೆಯಿಂದಲೇ ಇಂಡಿ, ಸಿಂದಗಿ ತಾಲ್ಲೂಕುಗಳ ಕಲ್ಯಾಣವಾಗಬಲ್ಲದು. ಆದಕಾರಣ ಆ ಯೋಜನೆಯ ಇಂಡಿ, ಸಿಂದಗಿ ತಾಲ್ಲೂಕುಗಳ ಕಾಲುವೆ ಕೆಲಸ ತೀವ್ರ ಪ್ರಾರಂಭಿಸಬೇಕು.

2. ಪ್ರತಿ ಊರಿಗೆ 20 ರಂತೆ ನೀರಾವರಿ ಭಾವಿ ಮಂಜೂರು ಮಾಡಬೇಕು. 64 ಫ್ಯಾಮಿನ್ ಕೆಳಗೆ ಕನಿಷ್ಟ 200 ಸ್ಕೇರಸಿಟಿ ಭಾವಿಗಳನ್ನು ಮಂಜೂರು ಮಾಡಬೇಕು ಪ್ರತಿಯೊಂದು ವಿಭಾಗೆ ರೂ. 500-00 ಸಬ್‌ಸಿಡಿ ಕೊಡಬೇಕು. ಸಾಧ್ಯವಾದಲ್ಲಿ ಕೊಳವೆ ನೀರಿನ ಭಾವಿಗಳನ್ನು ಮಾಡಬೇಕು.

3. ನಮ್ಮ ಭಾಗದ ದನಗಳಿಗೆ ಹುಲ್ಲು ತಿನ್ನುವ ರೂಡಿ ಇಲ್ಲಾ. ಬೇರೆ ಕಡೆಯಿಂದ ಹುಲ್ಲನ್ನು ತರಲಾರದೆ ಈಗ ಭಾವಿ ಇದ್ದವರಿಗೆ ದಾಳ ತೆಗೆಯಿಸಿ ಮೇವು ತಯಾರು ಮಾಡಿಕೊಳ್ಳಲು ಪ್ರತಿಯೊಂದು ಭಾವಿಗೆ ರೂ. 1000-00 ಗಳಂತೆ ಮಂಜೂರ ಮಾಡಬೇಕು.

Sri S. M. SHEERANALY CHANDRASEKHAR.—What is the time allotted ?

Mr. DEPUTY SPEAKER.—No Hon. Member can raise any point when another Hon. Member is already on his legs.

Sri S. M. SHEERNALY CHANDRASEKHAR.—We have drought problem in our district also.

Mr. DEPUTY SPEAKER.—The hon. Member will please refer to the Rules of Procedure. It is not necessary that I should give chance to everybody. This is not a debate. It is only a discussion.

ಶ್ರೀ ಎಸ್. ವೈ. ಪಾಟೀಲ್.—4. ಈಗ ಅಪೂರ್ಣವಾದ ರಸ್ತೆಗಳನ್ನು ಪೂರ್ಣಗೊಳಿಸಬೇಕು. ಮತ್ತು ರಸ್ತೆ ಇಲ್ಲದ ಊರುಗಳಿಗೆ ರಸ್ತೆ ಮಂಜೂರ ಮಾಡಬೇಕು.

(ಶ್ರೀ ವೈ. ಎಸ್. ಪಾಟೀಲ್)

5. ವಸರುವ ಕೆರೆಗಳು.—ಇವುಗಳಿಂದ ನೀರು ಬಸಿದು ಭಾವಿಗಳಿಗೆ ನೀರು ಹೆಚ್ಚಾಗುತ್ತದೆ. ಆದ್ದರಿಂದ ಅಲ್ಲಲ್ಲ ಈ ಕೆರೆಗಳನ್ನು ಮಾಡಿಸಿ ಭಾವಿಗಳಿಗೆ ನೀರು ಹೆಚ್ಚಾಗುವಂತೆ ಮಾಡಬೇಕು.

6. ಸಣ್ಣ ನೀರಾವರಿ ಕೆರೆಗಳು.—ಈ ಕೆರೆಗಳನ್ನು ಅವಶ್ಯ ಮಾಡಿಸಬೇಕು. ಆದರೆ ಕೆರೆಗಳಲ್ಲಿ ಮುಳುಗಡೆಯಾಗುವ ರೈತರ ಹೊಲಗಳಿಗೆ ಬದಲಾಗಿ ಹಣ ಕೊಡುವದನ್ನು ಬಿಟ್ಟು ನೀರುಣ್ಣುವ ಭೂಮಿಯನ್ನೇ ಕೊಡಬೇಕು. ಈ ಬಗ್ಗೆ ಅತೀ ತೀವ್ರವಾಗಿ ಕಾಯಿದೆ ಮಾಡಬೇಕು ಕಂಡ ಕಂಡ ಕಾಯಿದೆ ಮಾಡಿ ಜನರಿಗೆ ತೊಂದರೆ ಕೊಡುವದಕ್ಕಿಂತ ಇಂಥ ಜನೋಪಯೋಗಿ ಕಾಯಿದೆಗಳನ್ನು ತೀವ್ರ ಮಾಡಿರಿ. ಇದರಿಂದ ಸರಕಾರಕ್ಕೆ ಹಣದ ತೊಂದರೆಯೇನೂ ಬರುವದಿಲ್ಲ. ಪ್ರತಿ ಊರಿನ ಹತ್ತಿರವೇ ಕಡೆಗೆ ಪ್ರತಿ ಮೂರು ಮೈಲಿಗೊಂದು ಸರಕಾರಿ ಕೆಲಸ ಪ್ರಾರಂಭಿಸಬೇಕು.

7. ಬಂಡಿಂಗ್.—ಇದು ಅತೀ ಜರೂರ ಇದ್ದು ಎಲ್ಲ ಕಡೆ ಆಗಬೇಕು. ಆದರೆ ಸರಕಾರದವರು ಈಗ ಎಷ್ಟೋ ಬಡ ರೈತರ ಹೊಲದಲ್ಲಿ ಹಾಕಿದ ಒಡ್ಡುಗಳ ಸಾಲ, ಹೊಲದ ಬೆಲೆಗಿಂತಲೂ ಹೆಚ್ಚಾಗಿದೆ. ಬಡ ರೈತರು ಹೊಲವನ್ನು ಮಾರಿ ಈ ಸಾಲ ತೀರಿಸುವ ಪ್ರಸಂಗಬಂದಿದೆ. ಅದ್ದರಿಂದ ಬಡ ರೈತರ ಈ ಸಾಲವನ್ನು ಸೂಟ ಬಿಡಬೇಕು. ಮತ್ತು ಪುಕ್ಕಟೆಯಾಗಿ ಒಡ್ಡು ಹಾಕಿಕೊಡಬೇಕು.

8. ಸರಕಾರಿ ಸಾಲದ ಹಣ ವಸೂಲಿ ಕೆಲಸ ಬಂದು ಇಡಲು ಅಧಿಕಾರಿಗಳಿಗೆ ಅತೀ ಜರೂರ ತಿಳಿಸಬೇಕು. ಮಾನ್ಯ ಚನ್ನಬಸಪ್ಪನವರು ನಮ್ಮ ವಿನಂತಿಯನ್ನು ಮನ್ನಿಸಿ ನಾರ್ಮಲ್ ಕೆಲಸಗಳ ಮೇಲೆ ಬ್ಯಾಂಕ್ ತೆಗೆದು ಉಪಕಾರ ಮಾಡಿರುವರು. ಮುಖ್ಯವಾಗಿ ಮಾನ್ಯ ಮುಖ್ಯಮಂತ್ರಿಗಳು, ರೆವಿನ್ಯೂ ಮಂತ್ರಿಗಳು ತೀವ್ರ ವಿಜಾಪೂರ ಜಿಲ್ಲೆಗೆ ಹೋಗಿ ಅಲ್ಲಿಯ ಸ್ಥಿತಿಯನ್ನು ಅಭ್ಯಸಿಸಿ ಜನರ ತೊಂದರೆಯನ್ನು ದೂರ ಮಾಡಬೇಕು. ಭಾರತದ ಮಹಾ ಪ್ರಧಾನಿ ಇಂದಿರಾ ಗಾಂಧಿಯವರು ಬಡವರ ಕೈವಾರಿ ಎಂದು ತಿಳಿದು ಬಂಗಾರದಲ್ಲಿ ತೂಗಿದರು. ನೀವು ಮಂತ್ರಿಗಳು ಬಡವರ ಕೈವಾರಿಗಳೆಂದು ಹೇಳಿಕೊಳ್ಳುತ್ತೀರಿ. ಬರೇ ಮಾತಿನಿಂದ ಪ್ರಯೋಜನವಾಗುವುದಿಲ್ಲ. ಕೃತಿ ಮಾಡಿ ತೋರಿಸಿರಿ. ಮಾನ್ಯ ಬಸವಲಿಂಗಪ್ಪನವರು ಬಡವರಿಗೆ ಮನೆ ಕಟ್ಟಲು ಸ್ಥಳ ಕೊಡಿಸುವುದು ಸ್ತುತ್ಯ, ಅನ್ನವಿಲ್ಲದವರು ಇರುವುದೆಲ್ಲಾ. ನೀರಾವರಿ ಯೋಜನೆ ಮಾಡಿ ಅನ್ನ ಸಿಗುವಂತೆ ಮಾಡಿರಿ. ಕೃಷ್ಣಾ ಮೇಲ್ದಂಡೆ ಯೋಜನೆ, ದೋಣಿ ನದಿ ಯೋಜನೆ ಇತ್ಯಾದಿ ಯೋಜನೆಗಳನ್ನು ಪಕ್ಷಪಾತ ಮಾಡದೆ ಅತೀ ತೀವ್ರವಾಗಿ ಮುಗಿಸಿ ಇಂಡಿ, ಸಿಂದಗಿ ತಾಲ್ಲೂಕದ ಜನರಿಗೆ ಅನ್ನ ಸಿಗುವಂತೆ ಮಾಡಲೆಂದು ಪ್ರಾರ್ಥಿಸಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5-30 P.M.

[MADAM SPEAKER in the Chair]

† Sri BAPU RAO PATIL (Aurad).—[In Urdu]

ಶ್ರೀ ಎಂ. ಎಂ. ಸಜ್ಜನ್ (ಮುದ್ದೇಬಿಹಾಳ್).—ಮಾನ್ಯ ಅಧ್ಯಕ್ಷರೇ, ನಮ್ಮ ಬಿಜಾಪುರ ಜಿಲ್ಲೆಯ ದುಷ್ಕಾಳದ ಬಗ್ಗೆ ಶ್ರೀ ಎಸ್. ವೈ. ಪಾಟೀಲರವರು ಇಲ್ಲಿ ಕಳಕಳಿಯಿಂದ ಎಲ್ಲ ವಿಚಾರಗಳನ್ನೂ ತಿಳಿಸಿದರು. ನಿಜವಾಗಿಯೂ ನಮ್ಮ ಜಿಲ್ಲೆಯ ಪರಿಸ್ಥಿತಿ ಬಹುದಾರುಣವಾಗಿದೆ. ಇಲ್ಲಿನ ಪರಿಸ್ಥಿತಿಯನ್ನು ನಮ್ಮ ಸರಕಾರ ಗಮನಕ್ಕೆ ತೆಗೆದುಕೊಂಡು ಖಾತರಿ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ನಿಜವಾಗಿಯೂ ನಾವು ಈ ಜಿಲ್ಲೆ ಬಗ್ಗೆ ಎಷ್ಟು ಹೇಳಿದರೂ ಅದು ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ಆಗಿದೆ. ಇಂತಹ ದುಷ್ಕಾಳದ ಬವಣಿಗೆ ನಮ್ಮ ಜಿಲ್ಲೆ ಸಿಕ್ಕಿದೆ. ಇದಕ್ಕಾಗಿ ಕಳಕಳಿಯಿಂದ ನಾನು ಮಾನ್ಯ ಸರಕಾರದಲ್ಲಿ ಹೇಳಿಕೊಳ್ಳುವುದು ಇಲ್ಲಿ ಸಾಧ್ಯವಿದ್ದ ಎಲ್ಲ ಕೆಲಸಗಳನ್ನೂ ದುಷ್ಕಾಳದಲ್ಲಿ ಕಷ್ಟಪಡುತ್ತಿರುವ ಬಡಜನರಿಗಾಗಿ ಕೂಡಲೇ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಬಿಜಾಪುರ ಜಿಲ್ಲೆಯ ಬಗ್ಗೆ ಒಂದು ಗೆಜೆಟೀರ್‌ನ್ನು ಹೊರಡಿಸಿದ್ದಾರೆ. ಇದನ್ನು ಯಾರಾದರೂ ಓದಿ ನೋಡಿದರೆ ಅವರಿಗೆ ನಿಜವಾಗಿ ಬಿಜಾಪುರದಲ್ಲಿರುವ ಸ್ಥಿತಿಯು ಅರಿವಾಗುತ್ತದೆ. ಕಳೆದ ಹದಿನೈದು ವರ್ಷಗಳಿಂದಲೂ ಈ ಜಿಲ್ಲೆ ದುಷ್ಕಾಳಕ್ಕೆ ಸಿಗುತ್ತಲೇ ಇದೆ. ಬಿಜಾಪುರ ಜಿಲ್ಲೆ ಮೈಸೂರು ರಾಜ್ಯದಲ್ಲಿ ಎಲ್ಲ ಜಿಲ್ಲೆಗಳಿಗಿಂತ ಬರಗಾಲಕ್ಕೆ ಹೆಚ್ಚು ಸಿಕ್ಕಿ ಕಷ್ಟಗಳಿಗೆ ತುತ್ತಾಗುತ್ತದೆ. ಈ ಜಿಲ್ಲೆಯ ವಾಸ್ತವಾಂಶಗಳನ್ನು ಗಮನಕ್ಕೆ ತೆಗೆದುಕೊಂಡು ಕ್ಷಾಮ ನಿವಾರಣೆಯ ಎಲ್ಲ ಕೆಲಸ ಕಾರ್ಯಗಳನ್ನು ಇಲ್ಲಿಗೆ ಮೊದಲು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಡೀ ಬಿಜಾಪುರ ಜಿಲ್ಲೆಯಲ್ಲಿ ಐವತ್ತು ಕೆರೆಗಳೂ ಇಲ್ಲ. ಇದರಿಂದಾಗಿ ಆಗಾಗ್ಗೆ ನಮ್ಮ ಈ ಬಿಜಾಪುರ ಜಿಲ್ಲೆ ಬರಗಾಲಕ್ಕೆ

ತುತ್ತಾಗುತ್ತಿದೆ. ನನಗೆ ತಿಳಿದಿರುವ ಮಟ್ಟಿಗೆ ಬೇರೆ ಜಿಲ್ಲೆಗಳಲ್ಲಿ ಮಳೆ ಬೀಳುವ ಹಾಗೆ ಈ ಜಿಲ್ಲೆಯಲ್ಲಿ ಮಳೆ ಬರುವುದೇ ಕಡಿಮೆ. ಕನಿಷ್ಟಪಕ್ಷ ಎರಡು ಮಳೆ ಬಂದರೂ ಕೂಡ ಮೊದಲ ಮಳೆಯಲ್ಲಿ ಸ್ವಲ್ಪ ಖರೀಫ್ ಪೀಕು ಮತ್ತು ಇನ್ನೊಂದು ಮಳೆ ಬಂದಾಗ ರಬೀ ಪೀಕು ತೆಗೆಯಲು ಅನುಕೂಲವಾಗುತ್ತದೆ. ಆದರ ಇಲ್ಲಿಗೆ ಮಳೆಯೇ ವಿಶೇಷವಾಗಿ ಬರುತ್ತಿಲ್ಲ. ಇದರಿಂದ ಬಿಜಾಪುರ ಜಿಲ್ಲೆ ಮಳೆಗಾಲಕ್ಕೆ ಖಾತರಿಯಾದ ಪ್ರದೇಶವಾಗಿದೆ. ಆದುದರಿಂದ ಎಲ್ಲ ಕಾಮಗಾರಿಗಳನ್ನು ನಮ್ಮ ಈ ಜಿಲ್ಲೆಯಲ್ಲಿ ಬೇಗನೆ ಆರಂಭಮಾಡಿ ಬಡಜನರಿಗೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತಿನ ವರೆಗೂ ನಮ್ಮ ಜಿಲ್ಲೆಯಲ್ಲಿ ಮಳೆಯೇ ಆಗಿಲ್ಲ. ಇದಕ್ಕಾಗಿ ಸರಕಾರದವರು ನಮ್ಮ ಜಿಲ್ಲೆ ಬಗ್ಗೆ ವಿಶೇಷ ಗಮನ ಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ ಮತ್ತು ಶಾಶ್ವತವಾದ ಪರಿಹಾರ ಕಾಮಗಾರಿಗಳನ್ನು ಇಲ್ಲ ಮಾಡಿಸಿಕೊಡಬೇಕು ಮತ್ತು ಪ್ರತಿಯೊಂದು ಪ್ರದೇಶಗಳಲ್ಲೂ ಬಾವಿಗಳನ್ನು ತೆಗೆಸಿ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಪ್ರತಿಯೊಂದು ಹೊಲದ ಸಮೀಪದಲ್ಲೂ ಬಾವಿಯನ್ನು ತೆಗೆಸಿಕೊಟ್ಟರೆ ಅದರಿಂದ ಬರುವ ಸ್ವಲ್ಪ ನೀರಿನಲ್ಲಾದರೂ ಸ್ವಲ್ಪಮಟ್ಟಿನ ಬೆಳೆ ಬೆಳೆಯಲು ಯತ್ನ ಮಾಡಬಹುದು ಮತ್ತು ಸ್ವಲ್ಪ ಬಡಜನರಿಗೆ ಅನುಕೂಲವಾಗುತ್ತದೆ. ಮತ್ತು ಜನರ ಜೀವನ ಸುಧಾರಿಸಲು ಅನುಕೂಲವಾಗುತ್ತದೆ. ನಮ್ಮ ಜಿಲ್ಲೆಯಲ್ಲಿರತಕ್ಕ ಪ್ರತಿಯೊಂದು ಸಣ್ಣ ಹಳ್ಳಿಯಲ್ಲಿಯೂ ಕೂಡ ಪರ್ಕುಲೇಷನ್ ಟ್ಯಾಂಕ್ಸ್ ತರಹ ಸಣ್ಣ ಹಳ್ಳಗಳಲ್ಲಿ ಸ್ವಲ್ಪ ನೀರು ಬರುತ್ತವೆ. ಇದನ್ನು ಕಾಪಾಡಿಕೊಂಡು ಬರಲು ಸಹಾಯ ಮಾಡಬೇಕು. ಇನ್ನು ಆಲಮಟ್ಟಿ ಅಣೆಕಟ್ಟು ಒಂದನೇ ಹಂತವನ್ನು ಬೇಗನೆ ಮಾಡಿದರೆ ನಮ್ಮ ಜಿಲ್ಲೆಗೆ ಬಹು ಭಾಗಕ್ಕೆ ಅನುಕೂಲವಾಗುತ್ತದೆ, ಇದನ್ನು ಮುಳವಾಡದ ಹತ್ತಿರ ಮಾಡಬೇಕು ಎಂದು ಸರಕಾರದವರಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮಳೆ ಬರುವ ಪ್ರದೇಶಗಳೇ ಬಹು ಕಡಿಮೆ ಇರುವುದರಿಂದ ಇಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಂಗಳನ್ನು ಜಾರಿಗೆ ತಂದರೆ ಇಲ್ಲಿ ಸುಮಾರು ಒಂದೆರಡು ಲಕ್ಷ ಎಕರೆ ನೀರಾವರಿಯಾಗಲು ಅನುಕೂಲವಾಗುತ್ತದೆ ಮತ್ತು ಬರಗಾಲಕ್ಕೆ ಸಿಕ್ಕಿರುವ ಬಿಜಾಪುರ ಜಿಲ್ಲೆಯ ಸ್ಥಿತಿ ಇದರಿಂದ ಎಷ್ಟೋ ಉತ್ತಮವಾಗುತ್ತದೆ. ಲಿಫ್ಟ್ ಇರಿಗೇಷನ್ ಸ್ಕೀಂನ್ನು ಬೇಗನೆ ಮಾಡಿಸಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇನ್ನು ನನ್ನ ಕ್ಷೇತ್ರವಾದ ಮುದ್ದೇಬಿಹಾಳ ತಾಲ್ಲೂಕಿನ ಭೂಮಿಯ ಗುಣ ಬಹಳ ಉಪಯೋಗವಿಲ್ಲದೇ ಇದೆ. ಇದನ್ನು ಅಭಿವೃದ್ಧಿ ಮಾಡಬೇಕು, ದುಷ್ಕಾಳಕ್ಕೆ ಒಳಗಾಗಿರುವ ನಮ್ಮ ತಾಲ್ಲೂಕು ಕಡೆಗೆ ಹೆಚ್ಚು ಕೆಲಸಗಳನ್ನು ಮಾಡಿಸಿಕೊಟ್ಟು ಸಹಾಯ ಮಾಡಿಸಿ ಇಲ್ಲಿ ಕೆಲಸಗಳು ಬೇಗನೆ ಆಗುವಂತೆ ಚಾಲೂ ಮಾಡಬೇಕು.

ಬಿಜಾಪುರ ಜಿಲ್ಲೆಯಲ್ಲಿ ಅನೇಕ ಕೆರೆಗಳನ್ನು ಮಾಡಬೇಕೆಂದು ಸರಕಾರ ಮಂಜೂರು ಮಾಡಿದ್ದರೂ ಅದು ಇನ್ನೂ ಆಗಲಿಲ್ಲ. ಇದನ್ನು ಬೇಗನೆ ಕಾರ್ಯಗತವಾಗುವಂತೆ ಮಾಡಬೇಕು. ಸಂಬಂಧಪಟ್ಟ ಮಾನ್ಯ ಮಂತ್ರಿಗಳು ದುಷ್ಕಾಳದ ಬಗ್ಗೆ ಇರುವ ಎಲ್ಲ ಕಾರ್ಯಗಳನ್ನೂ ಬೇಗನೆ ಚಾಲು ಮಾಡಬೇಕೆಂದೂ ಮತ್ತು ನಮ್ಮ ಜನರಿಗೆ ಅನುಕೂಲ ಮಾಡಿಸಿಕೊಡಬೇಕೆಂದು ಹೇಳಿ ಅಧ್ಯಕ್ಷರು ಇಷ್ಟು ಮಾತಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಮಾನ್ಯ ರೆವಿನ್ಯೂ ಸಚಿವರ ಗಮನಕ್ಕೆ ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ಇರುವ ಅಭಾವ ಪರಿಸ್ಥಿತಿಯ ಬಗ್ಗೆ ಕೆಲವು ವಿಷಯಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಇದುವರೆಗೆ ಮಾತನಾಡಿದ ಸದಸ್ಯರು ಅನೇಕ ಬೇಡಿಕೆಗಳನ್ನು ತಮ್ಮ ಮುಂದೆ ಇಟ್ಟಿದ್ದಾರೆ. ಈಗ ಅಭಾವ ಇರತಕ್ಕಂಥ ಪ್ರದೇಶಗಳಲ್ಲಿ ಪರಿಹಾರ ಕಾಮಗಾರಿ ಕೆಲಸಗಳನ್ನು ಏನು ಮಾಡಿಸುತ್ತಿದ್ದೀರಿ; ಅದನ್ನು ಇಕಾನಮಿ ಮೆಜರ್ ದೃಷ್ಟಿಯಿಂದ ಮತ್ತು ಮಳೆಯಾಗಿದೆಯೆಂಬ ದೃಷ್ಟಿಯಿಂದ ಸಧ್ಯಕ್ಕೆ ನಿಲ್ಲಿಸಿದ್ದೀರಿ. ಇದರಿಂದ ಬಡ ಕೂಲಿಗಾರರಿಗೆ ಬಹಳ ತೊಂದರೆಯಾಗಿದೆ. ಇನ್ನು ಮುಂದೆಯಾದರೂ ಈ ಬಡ ಜನರ ಬಾಯಿಗೆ ಮಣ್ಣು ಬೀಳದಂತೆ ಸರ್ಕಾರದವರು ನೋಡಿಕೊಳ್ಳಬೇಕು ಎಂದು ಕೇಳಿಕೊಳ್ಳುವುದೇ ನಮ್ಮ ಇಂದಿನ ಮುಖ್ಯ ಉದ್ದೇಶವಾಗಿದೆ. ಈಗ ಸ್ವಲ್ಪ ಮಳೆಯಾಗಿದ್ದರೂ ಸಹ, ಬೆಳೆ ಕೈಗೆ ಬರಬೇಕಾದರೆ 3—4 ತಿಂಗಳು ಬೇಕಾಗುತ್ತದೆ. ಅಲ್ಲಿಯವರೆಗೆ ಪರಿಹಾರ ಕಾಮಗಾರಿ ಕೆಲಸಗಳನ್ನು ಮುಂದುವರಿಸುವುದು ಒಳ್ಳೆಯದೆಂದು ಹೇಳುತ್ತೇನೆ. ನಮ್ಮ ಬೀದರ್ ಜಿಲ್ಲೆಯಲ್ಲಿ ಮಾತ್ರವಲ್ಲದೆ, ರಾಯಚೂರು, ಬಿಜಾಪುರ, ತುಮಕೂರು ಮತ್ತು ಕೋಲಾರ್ ಜಿಲ್ಲೆಗಳಲ್ಲಿಯೂ ಸಹ ಸಾಕಷ್ಟು ಮಳೆಯಾಗುತ್ತಿಲ್ಲ. ಈಗ ಸ್ವಲ್ಪ ಮಳೆಯಾಗಿದ್ದರೂ ಸಹ ರೈತರಿಗೆ ಬಿತ್ತುವುದಕ್ಕೆ ಬಿತ್ತನೆ ಬೀಜ ದೊರೆಯುತ್ತಿಲ್ಲ. ರೈತರಿಗೆ ಬಿತ್ತನೆ ಬೀಜ ಒದಗಿಸುವುದಕ್ಕೆ ಏನು ಕ್ರಮ ತೆಗೆದುಕೊಂಡಿದೆ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಕೆ. ಜಿ. ಒಂದಕ್ಕೆ ಒಂದೂವರೆ ರೂಪಾಯಿ ಬೆಲೆಯಲ್ಲಿ ಖಾರೀಫ್ ಬೆಳೆ ಬೆಳೆಯುವವರಿಗೆ ಬಿತ್ತನೆ ಬೀಜ ವನ್ನು ಒದಗಿಸುವುದಕ್ಕೆ ನಮ್ಮ ಸರ್ಕಾರ ಕನಿಕರ ತೋರಿಸಬೇಕು. ಇಲ್ಲದಿದ್ದರೆ ಸಮಾಜಘಾತುಕರು

(ಶ್ರೀ ವಿ. ಎನ್. ಪಾಟೀಲ್)

ಇದೇ ಸಮಯವನ್ನು ದುರುಪಯೋಗ ಮಾಡಿಕೊಂಡು ರೈತರನ್ನು ಶೋಷಣೆ ಮಾಡುತ್ತಾರೆ. ಈಗಾಗಲೇ ಶ್ರೀಮಂತ ವ್ಯಾಪಾರಿಗಳು ಬಜಾರ್‌ನಲ್ಲಿ ಕ್ವಿಂಟಾಲ್‌ಗೆ 130 ರೂಪಾಯಿಗಳಂತೆ ಖರೀದಿ ಮಾಡಿ ಅದಕ್ಕೆ ನವಣೆಯನ್ನು ಬೆರಕೆ ಮಾಡಿ ಕ್ವಿಂಟಾಲ್‌ಗೆ 200 ರೂಪಾಯಿಗಳಂತೆ ಮಾರಾಟ ಮಾಡುತ್ತಿದ್ದಾರೆ. ಇಂತಹ ಸಮಾಜಘಾತುಕರು ಹಳ್ಳಿಹಳ್ಳಿಗಳಲ್ಲಿ ಇದ್ದಾರೆ. ರೈತರಿಗೆ 50 ಕೆ. ಜಿ. ಜೋಳವನ್ನು ಈಗ ಕೊಟ್ಟು ಬೆಳೆ ಬಂದ ಕೂಡಲೆ ಒಂದಕ್ಕೆ ಎರಡಷ್ಟು ಅಂದರೆ ಒಂದು ಕ್ವಿಂಟಾಲ್ ಜೋಳವನ್ನು ವಸೂಲಿ ಮಾಡುವುದು ನಡೆಯುತ್ತಿದೆ. ಸರ್ಕಾರದವರು ಸಾಕಷ್ಟು ಜೋಳವನ್ನು ಹಂಚದೇ ಇರುವುದರಿಂದ ಇದೆಲ್ಲಾ ನಡೆಯುತ್ತಿದೆ. ಇದನ್ನು ತಪ್ಪಿಸಲು ಸರ್ಕಾರದವರು ಸಾಕಷ್ಟು ಜೋಳವನ್ನು ಹಂಚಬೇಕೆಂದು ಕೇಳಿಕೊಳ್ಳುತ್ತೇನೆ.

ಇದರ ಜೊತೆಗೆ ಇನ್ನೊಂದು ಮುಖ್ಯವಾದ ವಿಷಯವೇನೆಂದರೆ, ಎಲ್ಲಿ ಕಾಮಗಾರಿ ಕೆಲಸವಾಗುತ್ತದೋ ಅಲ್ಲಿಯೇ ಕೂಲಿ ಹಣವನ್ನು ಕೊಡದೆ, ಕೂಲಿ ಪಡೆಯಲು ತಾಲ್ಲೂಕ್ ಹೆಡ್‌ಕ್ವಾರ್ಟರ್ಸ್‌ಗೆ ಬರಬೇಕೆಂದು ಬಿ.ಡಿ.ಓ. ಅವರು ಮತ್ತು ವಿಲೇಜ್ ಲೆವಲ್ ವರ್ಕರ್ಸ್ ಅವರು ಕೂಲಿಗಾರರಿಗೆ ಹೇಳುತ್ತಿರುವುದು. ಇದರಿಂದ ಕೂಲಿಗಾರರು ಒಂದು ರೂಪಾಯಿ 30 ಪೈಸೆ ಕೂಲಿ ಪಡೆಯಲು 3—4 ಗಂಟೆಗಳವರೆಗೆ ತಾಲ್ಲೂಕ್ ಕೇಂದ್ರಕ್ಕೆ ಹೋಗಿ ಕಾಯಬೇಕಾದ ಪರಿಸ್ಥಿತಿ ಬಂದಿವೆ. ಈ ಅಧಿಕಾರಿಗಳು ಸರಿಯಾಗಿ ಕೂಲಿ ಕೊಡದೆ ಕೂಲಿಗಾರರಿಗೆ ಅನ್ಯಾಯಮಾಡುತ್ತಿರುವುದಲ್ಲದೆ, 65—70 ವರ್ಷ ವಯಸ್ಸಿನವರು ಕೂಲಿ ಜಾಗ್ರತೆ ಕೊಡಬೇಕೆಂದು ಕೇಳಿದರೆ, ಅಧಿಕಾರಿಗಳು ಏನು ಹೇಳುತ್ತಾರೆಂದರೆ, ಅವರನ್ನು ಒದ್ದು ಹೊರಗೆ ಹಾಕು ಎಂದು. ಈ ರಾಕ್ಷಸರ ಕೈಯಿಂದ ಕೂಲಿಗಳು ಪಾರಾಗಬೇಕಾದರೆ, ಎಲ್ಲಿ ಕೆಲಸ ನಡೆಯುತ್ತದೋ ಅಲ್ಲಿಯೇ ಕೂಲಿ ಸಿಗುವಂತೆ ಸರ್ಕಾರದವರು ಏರ್ಪಾಡು ಮಾಡಬೇಕು. ಫ್ಯಾಮಿನ್ ಬಂದ ಕೂಡಲೆ ಸರ್ಕಾರದವರು ಕಾಮಗಾರಿ ಕೆಲಸ ಮಾಡಿಸಲು ಎರಡು ಲ ರೂಪಾಯಿಗಳನ್ನು ಮಂಜೂರು ಮಾಡಿದರೆ ಅದರಲ್ಲಿ ಖರ್ಚಾಗುವುದು ಒಂದು ಲಕ್ಷ ರೂಪಾಯಿಗಳು ಮಾತ್ರ. ಈ ಒಂದು ಲಕ್ಷ ರೂಪಾಯಿಗಳಲ್ಲಿ ಕೇವಲ 25 ಸಾವಿರ ರೂಪಾಯಿಗಳ ಕೆಲಸವಾಗುತ್ತದೆ. ಉಳಿದ ಹಣವನ್ನು ಬಿ. ಡಿ. ಓ. ಅವರು, ಇಂಜಿನಿಯರ್ ಮುಂತಾದವರು ನುಂಗಿಬಿಡುತ್ತಾರೆ. 12 ಆಣೆಯಷ್ಟು ಹಣ ಹೊಳೆಯಲ್ಲಿ ಹುಣಸೇಹಣ್ಣನ್ನು ತೊಳೆದಂತೆ ಹಾಳಾಗುತ್ತಿದೆ. ಕೇವಲ 4 ಆಣೆಯಷ್ಟು ಕೆಲಸವಾಗುತ್ತಿದೆ. ಫ್ಯಾಮಿನ್ ವರ್ಕ್ಸ್ ಅಂದರೆ ಕೇವಲ ರಸ್ತೆ ರಿಪೇರಿ ಒಂದೇ ಅಲ್ಲ, ಇದರ ಜೊತೆಗೆ, ಈ ಹಣದಿಂದ ಸಣ್ಣ ಸಣ್ಣ ಪಿಕ್‌ಅಪ್‌ಗಳನ್ನು ಕಟ್ಟಿಸಿಕೊಟ್ಟರೆ ರೈತರಿಗೆ ಅನುಕೂಲವಾಗುತ್ತದೆ. ಏಕೆಂದರೆ ನಮ್ಮ ಕಡೆ ಮಳೆಗಾಲದಲ್ಲಿಯೂ ಸಹ ಬಾವಿಗಳಲ್ಲಿ 70—80 ಅಡಿ ಕೆಳಗೆ ನೀರು ಇರುತ್ತದೆ. ಇದರಿಂದ ಪಂಪ್‌ಸೆಟ್‌ಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಈ ಕಾರಣದಿಂದ ಸಣ್ಣ ಸಣ್ಣ ಪಿಕ್‌ಅಪ್‌ಗಳನ್ನು 25 ಎಕರೆಗೆ ನೀರಾವರಿಯಾಗುವಂತೆ ಕಟ್ಟಿಸಿಕೊಡುವುದು ಒಳ್ಳೆಯದು. ಈ ಪಿಕ್‌ಅಪ್‌ಗಳನ್ನು ಕಟ್ಟಿಸಲು ಚೀಫ್ ಇಂಜನಿಯರ್ ಅವರ ಸಲಹೆಯನ್ನು ಪಡೆಯಬೇಕಾಗಿಲ್ಲ. ಹಳ್ಳಿಗಳಿಗೆ ಹೋಗಿ ನಾಲ್ಕು ಜನ ರೈತರನ್ನು ಎಲ್ಲಿ ನೀರು ಸಿಗುತ್ತದೆ ಎಂದು ಕೇಳಿದರೆ ಹೇಳುತ್ತಾರೆ. ಅಂತಹ ಕಡೆ 15 ರಿಂದ 30 ಸಾವಿರ ರೂಪಾಯಿಗಳವರೆಗೆ ಹಣ ಖರ್ಚು ಮಾಡಿ ಕಟ್ಟಿಸಿದರೆ ರೈತರಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಈಗಾಗಲೇ ಮಹಾರಾಷ್ಟ್ರ ಏರಿಯಾದಲ್ಲಿ ನಾಲ್ಕು ನಾಲ್ಕು ಮೈಲಿಗೆ ಒಂದರಂತೆ ಪಿಕ್‌ಅಪ್‌ಗಳನ್ನು ಕಟ್ಟಿಸಿದ್ದಾರೆ. ಅದರಂತೆ ನಮ್ಮ ಏರಿಯಾದಲ್ಲಿಯೂ ಸಹ ಕಟ್ಟಿಸುವುದು ಒಳ್ಳೆಯದು. ಇದರ ಜೊತೆಗೆ 5 ರಿಂದ 10 ಸಾವಿರ ರೂಪಾಯಿ ಖರ್ಚು ಮಾಡಿ ಅಲ್ಲಲ್ಲಿ ಗೋಕಟ್ಟೆಗಳನ್ನು ಕಟ್ಟಿಸಬೇಕು. ಈಗ ದನಕರುಗಳು ನೀರು ಕುಡಿಯಬೇಕಾದರೆ 6— 8 ಮೈಲಿಗಳವರೆಗೆ ನೀರನ್ನು ಹುಡುಕಿಕೊಂಡು ಹೋಗಬೇಕಾಗಿದೆ. ಈ ಅಭಾವ ಪರಿಸ್ಥಿತಿಯನ್ನು ಶಾಶ್ವತವಾಗಿ ಹೋಗಲಾಡಿಸಲು ನಮ್ಮಲ್ಲಿ ಶಾಶ್ವತವಾದಂಥ ಸೈಂಟಿಫಿಕ್ ಅಪ್ರೋಚ್ ಇಲ್ಲ. ಇದಕ್ಕಾಗಿಯೇ ಒಬ್ಬರು ಮಂತ್ರಿಗಳನ್ನು ನೇಮಕ ಮಾಡಬೇಕೆಂದು ಹೇಳುತ್ತೇನೆ. ಮತ್ತು ಫ್ಯಾಮಿನ್ ಬೋರ್ಡ್ ಎಂಬುದಾಗಿ ಮಾಡಿ ಮುಂದಿನ ನಾಲ್ಕೈದು ವರ್ಷಗಳಲ್ಲಿ ಬರತಕ್ಕಂಥ ಬರಗಾಲವನ್ನು ತಡೆಗಟ್ಟುವುದಕ್ಕೆ ಯಾವ ರೀತಿ ಕ್ರಮ ತೆಗೆದುಕೊಳ್ಳಬಹುದು ಎಂಬ ಬಗ್ಗೆ ಎಲ್ಲ ಏರಿಯಾವನ್ನು ಸರ್ವೆ ಮಾಡಿಸಬೇಕು. ಇದಕ್ಕಾಗಿಯೇ ಒಂದು ಆಫೀಸರ್ ಟೀಮ್ ಇಟ್ಟು ಸರ್ವೆ ಮಾಡಿಸಬೇಕು. ಅವರಿಂದ ಕ್ಷಾಮ ಪೀಡಿತ ಪ್ರದೇಶಗಳನ್ನೆಲ್ಲಾ ಸರ್ವೆ ಮಾಡಿಸಿ ಒಂದು ಅಡ್‌ಹಾಕ್ ರಿಪೋರ್ಟ್ ತರಿಸಿಕೊಂಡು ಅದರ ಒಂದು ಆಧಾರದ ಮೇಲೆ ಶಾಶ್ವತವಾದಂಥ ಪರಿಹಾರ ಗಾಮಗಾರಿ ಕೆಲಸಗಳನ್ನು ಮಾಡಿಸಬೇಕು. ಪ್ರತಿಯೊಂದು ಗ್ರಾಮದಲ್ಲಿಯೂ ಕಮ್ಯುನಿಟಿ ವೆಲ್ಸ್ ತೆಗೆಸಿದರೆ ಅದರಿಂದ ನೂರಾರು ಜನರಿಗೆ ಕೆಲಸ ಸಿಗುವುದಲ್ಲದೆ, 50 ರಿಂದ ನೂರು ಎಕರೆಯವರೆಗೆ ನೀರಾವರಿ ಅನುಕೂಲವೂ ಸಹ

ಆಗುತ್ತದೆ. ಈ ರೀತಿ ಕಮ್ಯುನಿಟಿ ವೆಲ್ಸ್ ತೆಗೆಸುವುದರಿಂದ ಬೋರೇಗೌಡನ ದುಡ್ಡನ್ನು ರಾಮೇಗೌಡ ಹೊಡೆದುಕೊಂಡು ಹೋಗುವುದಕ್ಕಾಗುವುದಿಲ್ಲ. ಹಣ ಖರ್ಚಾದರೂ ಸಹ ರೈತರಿಗೆ ಅನುಕೂಲವಾಗುತ್ತದೆ. ರಸ್ತೆ ಕೆಲಸಗಳನ್ನು ಮಾಡಿಸುವುದರಿಂದ ಬೇರೆಯವರು ಹಣವನ್ನು ಹೊಡೆಯುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಪ್ರತಿಯೊಂದು ಹಳ್ಳಿಯಲ್ಲಿಯೂ ಕಮ್ಯುನಿಟಿ ವೆಲ್ಸ್ ತೆಗೆಸುವುದಕ್ಕೆ ಸರ್ಕಾರದವರು ಗಮನ ಕೊಡಬೇಕೆಂದು ಹೇಳುತ್ತೇನೆ.

6-00 P.M.

ಬೀದರ್ ಜಿಲ್ಲೆಯಲ್ಲಿ ಈಗ ಬರಗಾಲ ಪರಿಸ್ಥಿತಿ ಏನು ಇದೆ ಅದರ ಬಗ್ಗೆ ನಾನು ಕೆಲವೊಂದು ವಿಚಾರಗಳನ್ನು ಹೇಳಬಯಸುತ್ತೇನೆ. ಅಲ್ಲಿರತಕ್ಕ ಜನಗಳಿಗೆ ಊಟ ಮಾಡುವುದಕ್ಕೆ ಅನ್ನವಿಲ್ಲ. ತೊಡುವುದಕ್ಕೆ ಬಟ್ಟೆ ಇಲ್ಲ. ಕುಡಿಯುವುದಕ್ಕೆ ನೀರು ಇಲ್ಲ. ಅಂಥಾ ಒಂದು ಕಷ್ಟಪರಿಸ್ಥಿತಿ ಇದೆ. ಅಲ್ಲಿಯ ಜನಗಳ ಕಷ್ಟವನ್ನು ಹೇಳುವುದಕ್ಕಾಗುವುದಿಲ್ಲ. ವಿಲೇಜ್ ಆಫೀಸರ್ಸ್ ರೆವಿನ್ಯೂ ಆಫೀಸರ್ಸ್, ಇವರುಗಳು ರೈತರಿಂದ ಸರ್ಕಾರದ ಸಾಲದ ಹಣವನ್ನು ಕೊಡಬೇಕೆಂದು ತೊಂದರೆ ಕೊಡುತ್ತಿದ್ದಾರೆ. ಆ ರೈತರ ಮನೆಯಲ್ಲಿರತಕ್ಕ ಎಮ್ಮೆ ಹಸುಗಳನ್ನು ಹಿಡಿದುಕೊಂಡು ಹೋಗಿ ಹರಾಜು ಹಾಕುತ್ತಾರೆ. ಮನೆಗೆ ಹಾಕಿರತಕ್ಕ ಜಿಂಕ್ ಷೀಟುಗಳನ್ನು ಕಿತ್ತುಕೊಂಡು ಹೋಗುತ್ತಿದ್ದಾರೆ. ಜಮೀನಿನಲ್ಲಿ 4-5 ಎಕರೆಗಳಲ್ಲಿ ಅರ್ಧಂಬರ್ಧ ಬೆಳೆ ಬೆಳೆದುಬಂದು ನಿಂತಿರುವಾಗ ಅವರ ಜಮೀನಿನಲ್ಲಿ ಹಾಕಿರತಕ್ಕ ಪಂಪುಸೆಟ್ಟುಗಳನ್ನು ಕಿತ್ತುಕೊಂಡು ಹೋಗುತ್ತಿದ್ದಾರೆ. ಆ ರೀತಿ ಅವರು ಪಂಪುಸೆಟ್ಟುಗಳನ್ನು ಕಿತ್ತುಕೊಂಡು ಹೋಗಲು ಅವರಿಗೆ ಯಾವ ಆಧಾರ ಇದೆ. ? ಅವರಿಗೆ ನಿಜವಾಗಿಯೂ ಮಾನವೀಯತೆ ಇಲ್ಲ ಎಂದು ಹೇಳಬೇಕಾಗುತ್ತದೆ. 4 ಎಕರೆ ಜಮೀನಿನಲ್ಲಿ ಬೆಳೆ ಅರ್ಧಂಬರ್ಧ ಬಂದು ನಿಂತಿರುವಾಗ ರೈತನ ಪಂಪುಸೆಟ್ಟು ಕಿತ್ತುಕೊಂಡು ಹೋದರೆ ಅವನು ಮುಂದೆ ಯಾವರೀತಿ ಬೆಳೆಯನ್ನು ತೆಗೆಯಬೇಕು. ಯಾವರೀತಿ ಅವರು ಸಾಲ ತೀರಿಸಬೇಕು ಎನ್ನುವ ಮಾನವೀಯತೆಯ ಕನ್‌ಸಿಡರೇಷನ್ ಅವರಿಗೆ ಇಲ್ಲವೆಂದು ಹೇಳಬೇಕಾಗುತ್ತದೆ.

ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿನವರು ರೈತರ ಹೊಲಗಳಲ್ಲಿ ಕಾಂಟೂರ್‌ಬಂಡಿಂಗ್ ಮತ್ತು ಲೆವೆಲ್ ವರ್ಕ್ಸ್ ಇತ್ಯಾದಿಗಳನ್ನು ಮಾಡಿಸುತ್ತಿದ್ದಾರೆ. ಆ ಕೆಲಸ ಪೂರ್ತಿಯಾಗಿದ್ದರೂ ಅದಕ್ಕೆ ಸಂಬಂಧಪಟ್ಟ ಬಿಲ್ಲುಗಳನ್ನು ಇನ್ನೂ ಫೈನಲ್ ಮಾಡಿಲ್ಲ. ಕೆಲಸಗಳನ್ನು ಪೂರ್ತಿ ಮಾಡಿ ಆ ಹಣಕ್ಕಾಗಿ ಅಪ್ಲಿಕೇಷನ್ ಹಾಕಿ 6 ತಿಂಗಳಾದರೂ ಅದಕ್ಕೆ ಕೊಡಬೇಕಾದ ಹಣವನ್ನು ಕೊಟ್ಟಿಲ್ಲ. ಆ ಕೆಲಸಗಳನ್ನು ಮಾಡಿಸಿದ್ದಕ್ಕೆ ಒಬ್ಬರಿಗೆ ಎರಡುಸಾವಿರ ರೂಪಾಯಿಗಳು ಸಿಕ್ಕುತ್ತದೆ ಎಂದರೆ ಅದರಲ್ಲಿ 500 ರೂಪಾಯಿಗಳನ್ನು ಅದಕ್ಕೆ ಸಂಬಂಧಪಟ್ಟ ನೌಕರರಿಗೆ ಕೊಡಬೇಕು. ಇಲ್ಲದಿದ್ದರೆ ಬಿಲ್ಲುಗಳು ಪಾಸಾಗುವುದಿಲ್ಲ. ಅಂಥಾ ಒಂದು ದುಸ್ಥಿತಿ ಬಂದಿದೆ ಆ ಪ್ರದೇಶಕ್ಕೆ. ಆ ಪ್ರದೇಶದಲ್ಲಿ ಇರತಕ್ಕ ಜನಗಳ ಬಗ್ಗೆ ಮಾನವೀಯತೆಯ ದೃಷ್ಟಿಯೇ ಇಲ್ಲ. ಆ ಬರಗಾಲ ಪ್ರದೇಶಕ್ಕೆ ಮಾನ್ಯ ಅಧ್ಯಕ್ಷಿಣಿಯವರು ಒಂದು ಸಾರಿ ಯಾವಾಗಲಾದರೂ ಬಂದು ಅಲ್ಲಿಯ ಜನಗಳ ಸ್ಥಿತಿಯನ್ನು ನೋಡಿದರೆ, ಅಲ್ಲಿಯ ಪರಿಸ್ಥಿತಿಯನ್ನು ಈ ಸಭೆಯಲ್ಲಿ ಹೇಳಿಕೊಳ್ಳುವುದಕ್ಕೆ ಆ ಭಾಗದ ಸದಸ್ಯರಿಗೆ ಇನ್ನು ಹೆಚ್ಚುಕಾಲಾವಕಾಶಕೊಡಬೇಕು, ಅದು ಡಿಜರ್ವಿಂಗ್ ಕೇಸು ಎಂದು ಅವರಿಗೆ ಗೊತ್ತಾಗುತ್ತದೆ. ಆದ್ದರಿಂದ ಬಿಜಾಪುರ, ಗುಲ್ಬರ್ಗ, ಕೋಲಾರ ಈ ಪ್ರದೇಶಗಳಿಗೆ ಮಾನ್ಯ ಅಧ್ಯಕ್ಷಿಣಿಯವರು ಹೋಗಿ ಪ್ರವಾಸ ಮಾಡಿಕೊಂಡು ಬಂದರೆ ಆ ಭಾಗದ ಸದಸ್ಯರಿಗೆ ಮಾತನಾಡಲು ಹೆಚ್ಚು ಕಾಲಾವಕಾಶವನ್ನು ಕೊಡೋಣ ಎನ್ನುವ ಭಾವನೆ ಅವರಿಗೆ ಬಂದು ಅವರು ಬೆಲ್ ಹೊಡೆಯುವುದಕ್ಕೆ ಹೋಗುವುದಿಲ್ಲ.

ನಮ್ಮ ಬೀದರ್ ಜಿಲ್ಲೆಯಲ್ಲಿ ಸರಿಯಾಗಿ ಮಳೆಬೆಳೆಗಳಾಗದೆ ರೈತರು ತೊಂದರೆಯಲ್ಲಿರುವಾಗ 5-6 ವರ್ಷದ ಹಳೆಯ ಬಾಕಿಯನ್ನು ವಸೂಲು ಮಾಡಲು ಅವರಿಗೆ ಕಿರುಕುಳ ಕೊಡುತ್ತಿದ್ದಾರೆ. ಫ್ಯಾಮಿನ್ ಇರುವ ಕಡೆಗಳಲ್ಲಿ ಅಗ್ರಿಕಲ್ಚರಲ್ ರೀಫೈನಾನ್ಸಿಂಗ್ ಕಾರ್ಪೊರೇಷನ್ನಿನವರು ಸಾಲದ ರೆಕವರಿ 75 ಪರ್ಸೆಂಟ್ ಆಗದೇ ಇದ್ದರೆ ಫರ್ದರ್ ಡೆವಲಪ್‌ಮೆಂಟ್ ಲೋನ್ ಕೊಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಅವರಿಗೆ ಮಾನವೀಯತೆಯ ದೃಷ್ಟಿಯೇ ಇಲ್ಲ. ಆ ಬರಗಾಲ ಇರತಕ್ಕ ಪ್ರದೇಶದಲ್ಲಿ ಕುಡಿಯುವುದಕ್ಕೆ ನೀರು ಬೇಕು ಎಂದರೆ ನೀರಿನ ಜೊತೆಯಲ್ಲಿ ಕೆಸರು ಬರುತ್ತದೆ. ಅಂಥಾ ಕಡೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಸರ್ಕಾರ ಮಾಡಿಲ್ಲ. ಹೀಗಿರುವಾಗ ಶೇಕಡಾ 75 ಪರ್ಸೆಂಟ್ ಹಿಂದಿನ ಲೋನ್ ರೆಕವರಿ ಆಗದಿದ್ದರೆ ಮುಂದೆ ಫರ್ದರ್ ಡೆವಲಪ್‌ಮೆಂಟಿಗೆ ಸಾಲ ಕೊಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಇದು ನಿಜವಾಗಿಯೂ ಮಾನವೀಯತೆಯ ದೃಷ್ಟಿಯಿಂದ ಸರಿಯಲ್ಲ ಈ ಬಗ್ಗೆ ಸರ್ಕಾರದವರು ಗಮನಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಒಂದು ವೇಳೆ ಅದಕ್ಕೆ

(ಶ್ರೀ ವಿ. ಎನ್. ಪಾಟೀಲ್)

ಕಾಯಿದೆ ಅಡ್ಡಿ ಬಂದರೆ ಕಾಯಿದೆಯನ್ನು ಬದಲಾವಣೆ ಮಾಡಿ ಹೊಸಕಾಯಿದೆಯನ್ನು ಮಾಡಿ ಆ ಭಾಗದ ಜನಗಳಿಗೆ ಅನುಕೂಲ ಮಾಡಿಕೊಡಬೇಕು. ಮಾನ್ಯ ಮಂತ್ರಿಗಳು ರೈತ ಕುಟುಂಬದಿಂದ ಬಂದವರು. ಅವರಿಗೆ ಹಳ್ಳಿಗಾಡಿನಲ್ಲಿ ರೈತರ ತೊಂದರೆ ಎಷ್ಟರಮಟ್ಟಿಗೆ ಇದೆಯೆಂಬುದು ಗೊತ್ತಿದೆ. ಆದ್ದರಿಂದ ಅವರು ಈ ಬಗ್ಗೆ ಲಕ್ಷ್ಯಕೊಟ್ಟು ಆ ಭಾಗದ ಜನಗಳಿಗೆ ಸಹಾಯ ಮಾಡಬೇಕು. ನಮ್ಮ ಜಿಲ್ಲೆಯಲ್ಲಿರುವ ಬಸವಾಪುರ, ಕರಕೇನಹಳ್ಳಿ ಮುಂತಾದ ಪ್ರದೇಶಗಳಲ್ಲಿ ಒಂದು ಹುಲ್ಲುಕಡ್ಡಿ ಕೂಡ ಬೆಳೆದಿಲ್ಲ. ಮಳೆಬೆಳೆ ಇಲ್ಲದೆ ಅಲ್ಲಿ ರೈತರು ಕಂಗಾಲಾಗಿದ್ದಾರೆ. ತುಂಬಾ ಕಷ್ಟದಲ್ಲಿದ್ದಾರೆ. ಹೀಗಿರುವಾಗ ರೆವಿನ್ಯೂ ಆಫೀಸರು ಹಳೆಯ ಬಾಕಿ, ತಗಾಯಿ ಸಾಲ ಮುಂತಾದುವುಗಳನ್ನು ವಸೂಲು ಮಾಡುತ್ತಿದ್ದಾರೆ ಅವರಿಗೆ ತೊಂದರೆಕೊಡುತ್ತಿದ್ದಾರೆ. ಅವರಿಗೆ ಹೃದಯ ಇದೆಯೇ? ಅವರನ್ನು ನಾನು ಹಾರ್ಟ್‌ಲೆಸ್ ಆಫೀಸರ್ಸ್ ಎಂದು ಕರೆಯುತ್ತೇನೆ. ಆದ್ದರಿಂದ ಮಾನ್ಯ ಮಂತ್ರಿಗಳು ಆ ಪ್ರದೇಶಕ್ಕೆ ಈಗಲೇ ಬಂದು ಒಂದು ಆರ್ಡರನ್ನು ಕಳುಹಿಸಿ ರೈತರಿಂದ ಸಾಲದ ಹಣವನ್ನು ವಸೂಲು ಮಾಡಬೇಡಿ ಎಂದು ರೆವಿನ್ಯೂ ಆಫೀಸರುಗಳಿಗೆ ತಿಳಿಸಬೇಕೆಂದು ನಾನು ಮಾನ್ಯ ರೆವಿನ್ಯೂ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡು ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

MADAM SPEAKER.—The House will now adjourn and re-assemble at 1-00 P.M. tomorrow.

The House adjourned at Five Minutes past Six of the Clock to meet again at One of the Clock on Tuesday, the 18th July 1972.

ANNEXURE

THE MYSORE APPROPRIATION (No. 2) BILL, 1972.

(L.A. BILL No. 14 OF 1972)

A Bill to authorise payment and appropriation of certain sums from and out of the Consolidated Fund of the State of Mysore for the service of the financial year 1972-73.

WHEREAS it is expedient to authorise payment and appropriation of certain sums from and out of the Consolidated Fund of the State for the services of the financial year 1972-73 ;

BE it enacted by Mysore State Legislature in the Twenty-third Year of the Republic of India as follows :—

1. **Short title.**—This Act may be called the Mysore Appropriation (No. 2) Act, 1972.

2. **Issue of rupees 6,23,08,52,000 out of the Consolidated Fund of the State of Mysore for the financial year 1972-73.**—From and out of the Consolidated Fund of the State of Mysore, there may be paid and applied sums not exceeding those specified in column 3 of the Schedule amounting in the aggregate [inclusive of sums specified in column 3 of the Schedule to the Mysore Appropriation (Vote on Account) Act, 1972] to the sum of six hundred and twenty-three crores, eight lakhs and fifty-two thousand rupees towards defraying the several charges which will come in course of payment during the financial year 1972-73, in respect of the services specified in column 2 of the Schedule.

3. **Appropriation.**—The sums authorised to be paid and applied from and out of the Consolidated Fund of the State of Mysore by this Act shall be appropriated for the services and purposes expressed in the Schedule in relation to the said year.

THE SCHEDULE

(*See* Sections 2 and 3)

1	2	3		
No. of Vote	Services and Purposes	Sums not exceeding		
		Voted by the Legislative Assembly	Charged on the Consolidated Fund	Total
		Rs.	*Rs.*	Rs.
1	Taxes on Income other than Corporation Tax ...	10,98,000	*2,000*	11,00,000
2	Land Revenue ...	4,84,95,000	*5,000*	4,85,00,000
3	State Excise Duties ...	1,98,00,000	...	1,98,00,000
4	Taxes on Vehicles ...	42,99,000	*1,000*	43,00,000
5	Sales Tax ...	1,36,98,000	*2,000*	1,37,00,000
6	Other Taxes and Duties ...	21,50,000	...	21,50,000
7	Stamps ...	28,00,000	...	28,00,000
8	Registration Fees ...	41,50,000	...	41,50,000

...	*Interest on Debt and Other Obligations* ...			
...	*Appropriation for Reduction or Avoidance of Debt* ...	...	*43,81,00,000*	43,81,00,000
9	Parliament, State/Union Territory Legislature ...	66,34,300	*1,56,000*	67,50,000
10	General Administration ...	5,94,23,000	*20,20,000*	6,14,43,000
11	Administration of Justice ...	2,17,10,000	*34,62,000*	2,51,72,000
12	Jails ...	1,04,50,000	...	1,04,50,000
13	Police ...	10,84,00,000	*50,000*	10,84,50,000
14	Supplies and Disposals ...	3,50,000	...	3,50,000
15	Miscellaneous Departments ...	2,52,23,000	*22,000*	2,52,45,000
16	Scientific Departments ...	58,95,000	...	58,95,000
17	Education ...	59,79,82,000	*30,000*	59,80,12,000
18	Medical, Public Health and Family Planning ...	20,59,80,000	*10,000*	20,59,90,000
20	Agriculture ...	14,95,15,000	...	14,95,15,000
21	Rural Development ...	3,65,04,000	...	3,65,04,000
22	Animal Husbandry ...	2,83,00,000	...	2,83,00,000

THE SCHEDULE—(*contd.*)

1	2	3		
No. of Vote	Services and Purposes	Sums not exceeding		
		Voted by the Legislative Assembly	Charged on the Consolidated Fund	Total
		Rs.	*Rs.*	Rs.
23	Co-operation	3,20,22,000	*25,000*	3,20,47,000
24	Industries	16,00,00,000	...	16,00,00,000
25	Community Development Projects, National Extension Service and Local Development Works	5,79,00,000	...	5,79,00,000
26	Labour and Employment ...	1,81,00,000	...	1,81,00,000
27	Miscellaneous, Social and Developmental Organisations ...	11,13,00,000	...	11,13,00,000
29	Irrigation, Navigation, Embankment and Drainage Works (Commercial) ...	17,05,00,000	...	17,05,00,000
30	Irrigation, Navigation, Embankment and Drainage Works (Non-Commercial) ...	4,51,70,000	*10,000*	4,51,80,000

30 B	Capital Outlay on Irrigation, Navigation, Embankment and Drainage Works within the Revenue Account	1,81,00,000	...	1,81,00,000
31	Public Works	43,40,92,000	*1,50,000*	43,42,42,000
31 A	Capital Outlay on Public Works within the Revenue Account	4,71,67,000	*1,000*	4,71,68,000
32	Ports and Pilotage	18,22,000	...	18,22,000
33	Famine Relief	5,24,30,000	...	5,24,30,000
34	Pensions and other Retirement Benefits ...	6,48,89,000	*25,80,000*	6,74,69,000
35	Territorial and Political Pensions ...	53,45,000	*72,000*	54,17,000
36	Privy Purses and Allowances of Indian Rulers ...	13,000	*98,000*	1,11,000
37	Stationery and Printing	1,78,20,000	...	1,78,20,000
38	Forest	8,84,90,000	*60,000*	8,85,50,000
39	Miscellaneous	14,98,81,000	*55,000*	14,99,36,000
40	Commutation of Pensions	56,00,000	...	56,00,000
41	Other Miscellaneous Compensations and Assignments	2,03,50,000	*15,00,000*	2,18,50,000

THE SCHEDULE—(*concld.*)

1	2	3		
		Sums not exceeding		
No. of Vote	Services and Purposes	Voted by Legislative Assembly	Charged on the Consolidated Fund	Total
		Rs.	*Rs.*	Rs.
42	Payment of Compensation to Land holders, etc., on the Abolition of Zamindari System ...	1,00,00,000	...	1,00,00,000
43	Capital Outlay on Improvement of Public Health ...	81,77,000	...	81,77,000
44	Capital Outlay on Industrial and Economic Development ...	11,44,05,000	...	11,44,05,000
45	Capitsl Outlay on Irrigation, Navigation, Embankment and Drainage Works (Commercial) ...	35,12,80,000	*5,00,000*	35,17,80,000
46	Capital Outlay on Irrigation, Navigation, Embankment and Drainage Works (Non-Commercial) ...	96,00,000	...	96,00,000
47	Capital Outlay on Electricity Schemes ...	42,00,000	...	42,00,000

48	Capital Outlay on Public Works ...	4,00,71,000	*50,000*	4,01,21,000
50	Capital Outlay on Ports ...	35,00,000	...	35,00,000
50A	Capital Outlay on Road and Water Transport Schemes ...	5,00,000	...	5,00,000
51	Capital Outlay on Forests ...	22,00,000	...	22,00,000
52	Payment of Commuted Value of Pensions ...	54,00,000	*2,20,000*	56,20,000
53	Capital Outlay on Schemes of Government Trading ...	19,73,57,000	...	19,73,57,000
...	*Public Debt-(Repayment)* } ...	...	*2,02,21,57,000*	2,02,21,57,000
...	*Inter-State Settlements* }			
54	Loans and Advances by the State/Union Territory Governments ...	15,90,17,000	...	15,90,17,000
	Total ...	3,75,95,54,000	*2,47,12,98,000*	6,23,08,52,000

Statement of Objects and Reasons

This Bill is introduced in pursuance of the provisions of Article 204 (1) of the Constitution of India, to provide for the appropriation out of the Consolidated Fund of the State of moneys required towards defraying the several charges which will come in course of payment during the financial year 1972–73.

WD 18242 GPB–550–13-2 1973

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Tuesday, 18th July 1972/Ashadha 27, 1894 (S. E.)

The House met in the Assembly Chamber, Vidhana Soudha, at One of the Clock.

MADAM SPEAKER (SMT. K. S. NAGARATHNAMMA) in the Chair.

STARRED QUESTIONS

(to which oral answers were given)

Misappropriation of Fund in T.M.C. Society, Chitradurga

125. SRI C. R. MOHAMMED SAIFUDDIN (Chitradurga).—

Will the Minister for Co-operation be pleased to state :—

the action taken by the Government on the then Secretary of the Chitradurga Taluk Marketing Co-operative Society, who is alleged to have misappropriated Society fund to an extent of Rs. 80,000 ?

SRI A. SHANKARA ALVA (Minister for Co-operation).—

Statutory enquiry conducted under Section 64 of the MCS Act revealed that the Secretary, Taluk Agricultural Produce Marketing Co-operative Society, Chitradurga, who is a Government Servant has misappropriated Rs. 54,715-47 individually and collectively and not Rs. 80,000 as alleged.

Action under Section 68 of the MCS Act was taken to rectify the defects and recover the money. The delinquent has preferred an appeal before the Joint Registrar of Co-operative Societies, Bangalore Division, and the same is pending. Besides a Departmental enquiry under CCA Rules is proposed to be held against the delinquent.

ಶ್ರೀ ಸಿ. ಆರ್. ಮೊಹಮದ್ ಸೈಫುದ್ದೀನ್.—ಸುಮಾರು 3 ವರ್ಷದಿಂದ 80 ಸಾವಿರ ರೂಪಾಯಿ ದುರುಪಯೋಗವಾಗಿದ್ದರೂ ಎಂಕ್ವೈರಿ ಮಾಡಿಲ್ಲ ಮತ್ತು ಕ್ರಿಮಿನಲ್ ಪ್ರೊಸೀಡಿಂಗ್ಸ್ ಆಗಿಲ್ಲ. ಇದಕ್ಕೆ ಕಾರಣವೇನು ?

ಶ್ರೀ ಎ. ಶಂಕರ. ಆಳ್ವ.—ದುರುಪಯೋಗವಾಗಿರುವುದು 80 ಸಾವಿರ ರೂಪಾಯಿ ಅಲ್ಲ, ಪರ್ಸನಲ್ ರೆಸ್‌ಪಾನ್ಸಿಬಿಲಿಟಿ ಇರುವುದು 11,500 ರೂಪಾಯಿ, ಕ್ಲಾರ್ಕ್‌ಗಳ ಜೊತೆ ಸೇರಿ ದುರುಪಯೋಗಮಾಡಿರುವುದು 40 ಸಾವಿರ ಚಿಲ್ಲರೆ ರೂಪಾಯಿ. ಅಸಿಸ್ಟೆಂಟ್ ರಿಜಿಸ್ಟ್ರಾರರು ಜಾಯಿಂಟ್ ರಿಜಿಸ್ಟ್ರಾರರ ಬಳಿ ಅಪೀಲು ಸಲ್ಲಿಸಿದ್ದಾರೆ. ಚಾರ್ಜಸ್ ಫ್ರೇಂಮಾಡಿ ಕಳಿಸಬೇಕೆಂದು ರಿಜಿಸ್ಟ್ರಾರರು ತಿಳಿಸಿದ್ದಾರೆ.

Sri C. R. MOHAMMED SAIFUDDIN.—Can the Government not keep them under suspension since a very huge amount is involved? I feel that it is a fit case for suspension.

ಶ್ರೀ ಎ. ಶಂಕರ ಆಳ್ವ.—ರಿಜಿಸ್ಟ್ರಾರರಿಂದ ವರದಿ ಬಂದನಂತರ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

Sri B. B. SAYANAK.—May I know since how long this misappropriation was going on and when it was detected?

Sri A. SHANKARA ALVA.—The period is between 26th May 1966 to 12th August 1968 After that, a statutory enquiry was conducted and these losses were discovered, and the Assistant Registrar has filed an appeal before the Joint Registrar-Appeal No. 274/72-73,—and the Joint Registrar has called for the records and his decision is awaited.

ಶ್ರೀ ಸಿ. ಬೈರೇಗೌಡ.—ಅನೇಕ ಸಂದರ್ಭಗಳಲ್ಲಿ 500 ರೂಪಾಯಿ, ಸಾವಿರ ರೂಪಾಯಿ ದುರುಪಯೋಗವಾಗಿರುವಾಗ ಕೂಡ ಕ್ರಮ ತೆಗೆದುಕೊಳ್ಳುವಿರಿ. ಸಾವಿರಾರು, ಲಕ್ಷಾಂತರ ರೂಪಾಯಿ ದುರುಪಯೋಗವಾದಾಗ ಕಣ್ಣುಮುಚ್ಚಿ ಕುಳಿತುಕೊಳ್ಳುವುದು ಗಮನಕ್ಕೆ ಬಂದಿದೆಯೇ?

ಶ್ರೀ ಎ. ಶಂಕರ ಆಳ್ವ.—ಕ್ರಮ ತೆಗೆದುಕೊಳ್ಳಲಾಗಿದೆ.

Construction of Feeder Channel in Chellakere

178. Sri PATEL PAPA NAIK (Molakalmuru).—

Will the Minister for Public Works and Electricity be pleased to state:—

(a) whether the Government proposes to construct a feeder channel from Jingehalla to Nayakanahatti Hirekere in Challakere Taluk;

(b) whether it has come to the notice of the Government that the survey work was completed and the plans and estimates were prepared in this behalf;

(c) whether it has come to their notice that the Ex-Chief Minister Sri S. Nijalingappa, had laid the foundation stone;

(d) if so, the reasons for not taking up the work so far?

Sri H. N. NANJE GOWDA (Minister of State for Major Irrigation) [on behalf of SRI H. M. CHANNABASAPPA (Minister for Public Works)].—

(a) Yes.

(b) Yes.

(c) Yes.

† Indicates that the remarks or speeches have not been revised by the member concerned.

(*d*) The scheme could not be taken up as it was found that it is not possible to obtain more water from the Jingehalla according to gauging report.

ಶ್ರೀ ಪಟೇಲ್ ಪಾಪಾ ನಾಯಕ್.—(ಅ) ಪ್ರಶ್ನೆಗೆ ಉತ್ತರವಾಗಿ ಕಟ್ಟು ಕಾಲುವೆ ನಿರ್ಮಿಸಲು ಸರಕಾರ ಉದ್ದೇಶಿಸಿದೆ ಎಂದು ತಿಳಿಸಲಾಗಿದೆ. (ಈ) ಪ್ರಶ್ನೆಗೆ ಉತ್ತರವಾಗಿ ಈ ಯೋಜನೆ ಕಾರ್ಯಗತಮಾಡಲು ಸಾಧ್ಯವಿಲ್ಲವೆಂದು ತಿಳಿಸಲಾಗಿದೆ. ಒಂದೊಂದು ಕಡೆ ಒಂದೊಂದು ರೀತಿ ಉತ್ತರ ಕೊಟ್ಟಿದೆ. ಇದರ ಅರ್ಥವೇನು ?

† ಶ್ರೀ ಎಚ್. ಎನ್. ನಂಜೇಗೌಡ.—ಮೊದಲು ಉದ್ದೇಶವಿತ್ತು. ಅದರಂತೆ ಎಸ್ಟಿಮೇಟ್ ಮತ್ತು ಪ್ಲಾನ್ ಮಾಡಲಾಯಿತು. ಆಮೇಲೆ ನೀರು ಸಾಕಾಗುವುದಿಲ್ಲವೆಂದು ಗೇಜಿಂಗ್ ವರದಿಯಿಂದ ಗೊತ್ತಾದಮೇಲೆ ಇದನ್ನು ಕೈಬಿಡಲಾಯಿತು.

ಶ್ರೀ ಪಟೇಲ್ ಪಾಪಾ ನಾಯಕ್.—ಇದಕ್ಕೆ ಹಿಂದೆ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ನಿಜಲಿಂಗಪ್ಪನವರು ಅಸ್ತಿಭಾರ ಶಿಲೆ ಹಾಕಿದ್ದರು. ವಿಚಾರ ಪರಿಶೀಲಿಸದೆ ಅಸ್ತಿಭಾರ ಶಿಲೆ ಅವರು ಹಾಕಿದರೇ ?

ಶ್ರೀ ಎಚ್. ಎನ್. ನಂಜೇಗೌಡ.—ಶ್ರೀ ನಿಜಲಿಂಗಪ್ಪನವರಿಗೆ 20-1-66ರಲ್ಲಿ ಒಂದು ಅರ್ಜಿ ಬಂತು. ನಂತರ 27-4-6ರಲ್ಲಿ ಅಸ್ತಿಭಾರ ಹಾಕಿದರು. ಅಂದರೆ ಅದನ್ನು ಹಾಕಿದ್ದು ಅಫಿಷಿಯಲ್ ಫಂಕ್ಷನ್ ಅಲ್ಲ, ಅದು ನಾನ್ ಅಫಿಷಿಯಲ್ ಫಂಕ್ಷನ್. ನಂತರ ಅವರ ಅಪ್ಪಣೆಯಂತೆ ವಿವರವಾಗಿ ಅಂದಾಜು ಮಾಡಲಾಯಿತು. ಅದರ ಅಂದಾಜು ವೆಚ್ಚ 18 ಲಕ್ಷ 50 ಸಾವಿರ ರೂಪಾಯಿಗಳು. ನಂತರ ತಾಂತ್ರಿಕ ಪರಿಶೀಲನೆ ಮಾಡಿ ನೀರು ಸಾಕಾದಷ್ಟು ದೊರೆಯುವುದೇ ಎಂದು ನೋಡಬೇಕೆಂದು ತಿಳಿಸಿದರು. ಅದರ ಪ್ರಕಾರ ಪರಿಶೀಲಿಸಿದಾಗ ಜಿಂಗೆ ಹಳ್ಳದ ನೀರು ಇರುವ ಫೀಡರ್ ಛಾನಲ್ಲುಗಳಿಗೇ ಸಾಲುವುದಿಲ್ಲ ಈಗ 4 ಕೆರೆಗಳನ್ನು ಫೀಡ್ ಮಾಡುತ್ತಿದೆ, ಗುಂಡಕೆರೆ, ಹಳ್ಳದಕೆರೆ, ರೇಕಲಕೆರೆ, ಹಿರೇಮಲ್ಲಮ್ಮನ ಕೆರೆ ಮುಂತಾದುವುಗಳಿಗೆ ಫೀಡ್ ಮಾಡಲು 250 ಎಂ.ಸಿ.ಎಫ್.ಟಿ. ನೀರುಬೇಕು, ಈಗಿರುವುದು 152 ಎಂ.ಸಿ.ಎಫ್.ಟಿ. ಈಗ ಫೀಡ್ ಮಾಡುತ್ತಿರುವುದಕ್ಕೆ ನೀರು ಸಾಲದು. ಹೊಸದಾಗಿ ಬೇರೆ ಕೆರೆಗೆ ಫೀಡ್ ಮಾಡಲು ನೀರು ಸಾಲದು ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಆದುದರಿಂದ ಇದನ್ನು ಕೈಬಿಡಲಾಯಿತು.

ಶ್ರೀ ವಿ. ಮಸಿಯಪ್ಪ.—ಅವರು ಕೇಳುವುದು ಫೀಡರ್ ಛಾನಲ್. ಪ್ರವಾಹ ಮಳೆಗಾಲದಲ್ಲಿ ಬಂದಾಗ ಹೆಚ್ಚು ನೀರು ಸಮುದ್ರಕ್ಕೆ ಹರಿದುಹೋಗುವುದನ್ನು ತಡೆದು ಕೆರೆಗೆ ತಿರುಗಿಸಿ ಅನುಕೂಲ ಮಾಡಬೇಕೆಂದು ಅವರು ಕೇಳುತ್ತಿದ್ದಾರೆ. ಅದನ್ನೇಕೆ ಮಾಡಬಾರದು ?

ಶ್ರೀ ಎಚ್. ಎನ್. ನಂಜೇಗೌಡ.—ಈಗ ಹಿರೇಮಲ್ಲಮನಕೆರೆ ಮತ್ತು ಸಂಗೇನಹಳ್ಳಿ ಕೆರೆಗಳಿಗೆ ಫೀಡರ್‌ಛಾನಲ್ ಇದೆ, ಒಂದು ಸಾರಿ ಕೂಡ ಆ ಕೆರೆಗಳು ಕೋಡಿ ಬಿದ್ದಿಲ್ಲ. ಹಾಗಿರುವಾಗ ಹೊಸದಾಗಿ ಬೇರೆ ಕೆರೆಗೆ ಹೇಗೆ ನೀರನ್ನು ಒದಗಿಸಲು ಸಾಧ್ಯ ?

ಶ್ರೀ ಪಟೇಲ್ ಪಾಪಾ ನಾಯಕ್.—ಮುಖ್ಯಮಂತ್ರಿಗಳು ಅಸ್ತಿಭಾರ ಹಾಕಿದ ಮೇಲೆ ಅವರಿಗೆ ಜವಾಬ್ದಾರಿ ಇಲ್ಲವೇ ? ಅವರು ವಿವರ ತಿಳಿಯದೆ ಹೇಗೆ ಅಂದಾಜು, ನಕ್ಷೆ ಮುಂತಾದುವುಗಳನ್ನು ಮಾಡಲು ಹೇಳಿದರು ?

ಶ್ರೀ ಎಚ್. ಎನ್. ನಂಜೇಗೌಡ.—ಅವರು ಅನ್‌ಅಫಿಷಿಯಲ್ಲಾಗಿ ಆ ಕಡೆ ಹೋಗಿದ್ದಾಗ ಅಸ್ತಿಭಾರ ಹಾಕಿರಬಹುದು. ಅವರು ಇಂಜಿನಿಯರುಗಳನ್ನು ಅದರ ಸಾಧ್ಯತೆ ಬಗ್ಗೆ ಕೇಳಿರುವುದಕ್ಕೆ ರಿಕಾರ್ಡಿಲ್ಲ.

SRI B. B. SAYANAK.—May I know why the flood gauge was not estimated at the time of preparation of plan and estimate, and why it is taken into consideration now ?

SRI H. N. NANJE GOWDA.—We were already having a feeder channel for the water available there. Flood gauges have to be taken to assess the quantity of water available. Therefore, gaugings were taken from 1-5-1971 up-to-date. There was no evidence also to show that Sangenahalli tank discharges any flood water.

Amount Received by the Karnatak Regulated Markets Advisory Committee, Hubli

289. **Sri B. G. BANAKAR** (Hirekerur).—

Will the Minister for Co-operation be pleased to state :—

(*a*) whether the Karnataka Regulated Markets Advisory Committee, Hubli is a Registered Body or whether it is constituted under any of the Provisions of the Mysore Agricultural Prouduce Marketing (Regulations) Act, 1966 ;

(*b*) the total amount received by the Karnataka Regulated Markets Advisiory Committee, Hubli from the Government and the various Market Committees during the last 3 years by way of subscription, grant, subsidy or otherwise ;

(*c*) under what provision of Law the amount was paid by the Market Committees to this Advisory Committee ?

Sri A. SHANKARA ALVA (Minister for Co-operation).—

(*a*) No.

(*b*) From Government ... ... Rs. 46,400–00
From various Market Committees Rs. 3,42,445–73

Rs. 3,88,845–73

(*c*) Under the provision of Section 93 (6) of the Mysore Agricultural Produce Marketing (Regulation) Act. 1966 read with relevant bye-laws of the individual market committees.

ಶ್ರೀ ಬಿ. ಜಿ. ಬಣಕಾರ್.—(ಇ) ಪ್ರಶ್ನೆಗೆ ಉತ್ತರವಾಗಿ ವೈಯಕ್ತಿಕ ಮಾರುಕಟ್ಟೆ ಸಮಿತಿಗಳ ಉಪ-ನಿಯಮಗಳಲ್ಲಿ ಹಣವನ್ನು ಪಾವತಿಮಾಡಲು ಕಲ್ಪಿಸಿರುವ ಅವಕಾಶದ ಮೇರೆಗೆ ಹಣವನ್ನು ಪಾವತಿ ಮಾಡಿದೆ ಎಂದು ತಿಳಿಸಲಾಗಿದೆ. ಉಪ-ನಿಯಮದ ನಂಬರನ್ನು ಹೇಳುವಿರಾ ?

ಶ್ರೀ ಎಂ. ಶಂಕರ ಆಳ್ವ.—936

ಶ್ರೀ ಬಿ. ಜಿ. ಬಣಕಾರ್.—ಉಪ-ನಿಯಮಗಳಿಗೂ ಮತ್ತು ಮೈಸೂರು ಅಗ್ರಿಕಲ್ಚರಲ್ ಪ್ರಾಡ್ಯೂಸ್ ಮಾರ್ಕೆಟಿಂಗ್ (ರೆಗ್ಯುಲೇಷನ್ಸ್) ಆಕ್ಟ್, 1966– ಇದರ 168ನೆ ಸೆಕ್ಷನ್ ಉಪಕಲಮುಗಳಿಗೂ ವೆತ್ಯಾಸವಿದೆಯೇ ?

ಶ್ರೀ ಎಂ. ಶಂಕರ ಆಳ್ವ.—ಈ ಸಮಿತಿಯನ್ನು ಬೊಂಬಾಯಿಯಲ್ಲಿರುವಾಗ ನೇಮಕ ಮಾಡಲಾಯಿತು. ಅಹಮದಾಬಾದಿನಲ್ಲಿ ರೀಜನಲ್ ಅಡ್ವೈಜರಿ ಕಮಿಟಿ ಸೇರಿದಾಗ ರೀಜನಲ್ ಕಮಿಟಿ ಎಂದು ಕರ್ಣಾಟಕ ಪ್ರದೇಶಕ್ಕೆ ಮಾಡಿದರು. ಮೈಸೂರು ಸರಕಾರ ರೀ ಆರ್ಗನೈಜೇಷನ್ ಆದಮೇಲೆ ಅವನ್ನೇ ರೆಕಗ್ನೈಜ್ ಮಾಡಿದೆ. ಈಗ ಸಹ ಉಳಿದ ಟೌನುಗಳಲ್ಲೂ ಇಂಥ ಸಮಿತಿ ಮಾಡಬಹುದು.

ಶ್ರೀ ಬಿ. ಜಿ. ಬಣಕಾರ್.—ಈಗಲಾದರೂ ಮೈಸೂರಿನ ಆಕ್ಟಿನಂತೆ ನೋಂದಾಯಿಸಲು ಆದೇಶ ಕೊಡುವಿರಾ ?

ಶ್ರೀ ಎ. ಶಂಕರ ಆಳ್ವ.—ಅದನ್ನು ಸ್ವಲ್ಪ ನೋಡಬೇಕು,

ಶ್ರೀ ಬಾಪೂರಾವ್ ಪಾಟೀಲ್—ಈಗ ಮೈಸೂರು ರಾಜ್ಯದಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್‌ನ ಹಾಲಿ ಕಾಯಿದೆ ಪ್ರಕಾರ ಅಡ್ವೈಸರಿ ಕಮಿಟಿ ಇದೆ. ಅದನ್ನು ರೀಜನಲ್ ಕಮಿಟಿ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ರೀಜನಲ್ ಕಮಿಟಿ ಮೊದಲಿನಿಂದಲೂ ಇದೆ. ಹಿಂದೆ ಬಾಂಬೆ ಏರಿಯಾದಲ್ಲಿರುವಾಗಲೇ ಆ ಕಮಿಟಿ ಆಗಿತ್ತು. ಆ ಮಾರ್ಕೆಟ್ ಕಮಿಟಿಯವರ ಗ್ರಾಸ್ ಅರ್ನಿಂಗ್ಸ್ ಮೇಲೆ $1\frac{1}{2}$ ಪರ್ಸೆಂಟ್ ಸರ್ಕಾರದವರು ಸಬ್ಸಿಡಿ ಕೊಡುತ್ತಿದ್ದರು. ಅದರ ಉದ್ದೇಶ ಏನೆಂದರೆ ಸೆಮಿನಾರ್ ನಡೆಸುವುದು, ಪಾಂಫ್ಲೆಟ್ಸ್ ಇಷ್ಯೂ ಮಾಡುವುದು ಮತ್ತು ಸಜೆಷನ್ ಕೊಡುವುದು. ಅದಕ್ಕೋಸ್ಕರ ಆ ಕಮಿಟಿಯನ್ನು ಮಾಡಿದ್ದರು.

ಶ್ರೀ ವಿ. ಮಸಿಯಪ್ಪ.—ಸ್ವಾಮಿ, ಈ ಅನ್‌ರಿಜಿಸ್ಟರ್ಡ್ ಅಡ್ವೈಸರಿ ಕಮಿಟಿಗೆ 3,88,845—73 ರೂಪಾಯಿಗಳನ್ನು ಕೊಟ್ಟಿಸಿದ್ದೀರಿ. ಇದು ಯಾವ ರೀತಿ ವಿನಿಯೋಗವಾಗುತ್ತದೆ ಎನ್ನುವುದನ್ನು ತನಿಖೆ ಮಾಡಲು ಏರ್ಪಾಡು ಮಾಡುತ್ತೀರಾ!

ಶ್ರೀ ಎ. ಶಂಕರ ಆಳ್ವ.—ಅದರಲ್ಲಿ ಹೆಚ್ಚು ಕಡಿಮೆ ಆದರೆ ತನಿಖೆ ಮಾಡುತ್ತೇವೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಈ ಕಮಿಟಿ ಸ್ಟೇಟ್ ಲೆವಲ್‌ನ ಕಮಿಟಿ ಆಗಿದ್ದರೆ ಅದರ ಹೆಡ್ ಕ್ವಾರ್ಟರ್ಸ್ ಬೆಂಗಳೂರಿನಲ್ಲಿ ಇರಬೇಕಾಗಿತ್ತು ಅಲ್ಲವೇ ? ಇದು ಒಂದನೇ ಪ್ರಶ್ನೆ, ಎರಡನೇ ಪ್ರಶ್ನೆ ಇನ್ನೂವರಗೆ ಇದರ ಬಗ್ಗೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಇನ್ನು ಮುಂದಾದರೂ ಕೂಡ ಕಮಿಟಿ ಮಾಡುವಾಗ ನಮ್ಮಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಇರುವುದರಿಂದ ಈ ಕಮಿಟಿಯ ಅವಶ್ಯಕತೆ ಏನು ಇರುತ್ತದೆ ಎಂಬುದನ್ನು ಯೋಚನೆ ಮಾಡಿ ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಆ ಕಮಿಟಿ ಹೊಸದಾಗಿ ಕೊಟ್ಟದ್ದಲ್ಲ. ರೀಆರ್ಗನೈಸೇಷನ್ ಆಗಿದ್ದಾಗ ಇದ್ದುದು. ಆ ಪ್ರದೇಶ ಹಿಂದೆ ಬಾಂಬೆ ಕರ್ನಾಟಕ ಏರಿಯಾದಲ್ಲಿರುವಾಗ ಆಗಿತ್ತು. ಈಗ ಅದೇ ಪ್ರಕಾರ ಮೈಸೂರು ಸರ್ಕಾರದವರು ಮೈಸೂರು, ಬೆಂಗಳೂರು ಮತ್ತು ಗುಲ್ಬರ್ಗ ಈ ಡಿವಿಷನ್‌ಗಳಿಗೆ ಅಂತಹ ಒಂದು ಕಮಿಟಿಯನ್ನು ಮಾಡಬೇಕೆಂದು ಕಾರ್ಯಕ್ರಮ ಹಾಕಿಕೊಂಡು ಆದಷ್ಟು ಬೇಗನೆ ಅವನ್ನು ಜಾರಿಗೆ ತರುತ್ತೇವೆ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಈ ಬಾಂಬೆ ರೀಜನ್ಸ್‌ನಲ್ಲಿರುವ ಕಮಿಟಿಯನ್ನು ಡಿಸಾಲ್ವ್ ಮಾಡಿ ಅದರ ಅಸೆಟ್ಸ್ ಅಂಡ್ ಲಯಬಿಲಿಟೀಸ್ ಡಿವಿಷನಲ್ ಮಾರ್ಕೆಟ್ ಕಮಿಟಿಗೆ ಕೊಡುತ್ತೀರಾ !

ಶ್ರೀ ಎ. ಶಂಕರಆಳ್ವ.—ಈಗ ಇರುವ ಮಾರ್ಕೆಟ್‌ಗಳು ಆಯಾಯಾ ರೀಜನ್‌ಗೆ ಮಾಡಲಾಗಿದೆ. ಇನ್ನುಮುಂದೆ ಹೊಸದು ಮಾಡುವಾಗ ಒಂದೊಂದು ಡಿವಿಷನ್‌ಗೂ ಬೇರೆ ಬೇರೆ ಮಾಡುತ್ತೇವೆ.

Sri B. B. SAYANAK.—In answer to (a) you have stated as 'No'. I want to ask the Government under what Act this Committee was constituted ?

Sri A. SHANKARA ALVA.—This Committee was constituted by the Bombay Government on the advice of the Conference held at Ahmedabad in which all the Marketing Officers were present. That Conference had recommended for the formation of Committees for each Region. Based on that recommendation, a Committee for the Karnatak Region was formed.

ಶ್ರೀ ಬಿ. ಜಿ. ಬಣಕಾರ್.—ಬಾಂಬೆ ಆಕ್ಟ್ ಪ್ರಕಾರ ಅಲ್ಲಿ ಪ್ರಾವಿಷನ್ ಇತ್ತು ಮೈಸೂರು ಆಕ್ಟ್ ಪ್ರಕಾರ ಪ್ರಾವಿಷನ್ ಇಲ್ಲ. ಈಗ ಹೊಸ ಆಕ್ಟ್ ಪ್ರಕಾರ ಅದಕ್ಕೆ ಅಮೆಂಡ್‌ಮೆಂಟ್ ತಂದು ರದ್ದು ಮಾಡುತ್ತೀರಾ !

ಶ್ರೀ ಎ. ಶಂಕರ ಆಳ್ವ.—ನಾನು ಮೊದಲೇ ಹೇಳಿದ ಹಾಗೆ ಅಮೆಂಡ್‌ಮೆಂಟ್ ತಂದು ಮಾಡಬೇಕು. ಕೆಲವು ರೀಜನ್‌ಗೆ ಮಾಡುತ್ತೇವೆ. ಗುಲ್ಬರ್ಗ, ಬೆಂಗಳೂರು ಮತ್ತು ಮೈಸೂರು ಈ ಡಿವಿಷನ್‌ಗೆ ಆ ರೀತಿ ಒಂದೊಂದು ಕಮಿಟಿ ಮಾಡುತ್ತೇವೆ.

GOVERNMENT TOURIST BUSES

299. Sri M. MALLAPPA (Birur).—

Will the Minister for Labour be pleased to state :—

(*a*) the number of tourist buses now running on the nationalised routes in each district (Districtwise details, date of permit and the date of expiry of the permit may be given) ;

(*b*) whether there is any difficulty for M.S.R.T.C. to introduce Government Tourist buses to help the tourists as is done by private operators ?

Sri V. S. KOUJALGI (Minister of State for Youth Services) [On behalf of SRI AZEEZ SAIT (Minister for Labour)].—

(*a*) No pucca permits have been issued to tourist buses to ply on nationalised routes. Contract carriages are however plying on nationalised routes.

(*b*) Yes. Non-availability of chassis is one of the difficulties faced by the Corporation in catering to the needs of the tourists.

Sri M. MALLAPPA.—In answer to (*a*) you have stated "No pucca permits have been issued to tourist buses to ply on nationalised routes. Contract carriages are however plying on nationalised routes". May I know what exactly is the difference between the Contract Carriages and the tourist buses ?

Sri V. S. KOUJALGI.—Permits are issued to the Contract Carriages to ply on specified area for a specified period without setting down or Picking up. Passengers enroute.

Sri M. MALLAPPA.—Are you not aware of the fact that these Contract Carriages are regularly carrying on tourists from place to place? For instance, a bus starts from Bangalore, it halts at Tumkur, Tiptur, Arsikere and Birur and on to Shimoga and leaves the places at fixed hours to carry passengers. Are the Government aware of this fact and whether they are not losing revenue ?

Sri V. S. KOUJALGI.—Government is aware and the Government is thinking of taking some action. The action proposed to be taken is under the active consideration of the Government.

Sri M. MALLAPPA.—Are you are not aware of the fact that these Contract Carriages are regularly carrying passengers and as a result of which Government is losing considerable revenue ?

Sri V. S. KOUJALGI.—What action to be taken to prevent such things is under the consideration of Government.

Sri M. S. KRISHNAN.—In answer to (*b*) you have stated "non-availability of chassis is one of the difficulties faced by the Corporation in catering to the needs of the tourists", ಕಾಂಟ್ರಾಕ್ಟ್ ಕ್ಯಾರಿಯೇಜಸ್ ಹೊಂದಿದ್ರ

ವವರು ಜಾಸ್ತಿ ಬಸ್ಸುಗಳನ್ನು ಇಟ್ಟಿರುವುದು ತಮಗೆ ಗೊತ್ತಿದೆ. ಅವರಿಗೆ ಛಾಸಿಸ್ ಸಿಕ್ಕುತ್ತದೆ, ನಿಮಗೆ ಏತಕ್ಕೆ ಸಿಕ್ಕುವುದಿಲ್ಲ ?

Sri V. S. KOUJALGI.—The present situation is very tight because the Chassis manufacturers are only four in number *viz.*, Benz, Leyland, Dodge and Bedford. We have to wait in queue and get the chassis from them.

ಶ್ರೀ ಬಿ. ಜಿ. ಬಣಕಾರ್.—ಅಧ್ಯಕ್ಷರೇ, ಕಾಂಟ್ರಾಕ್ಟ್ ಕ್ಯಾರಿಯೇಜಸ್‌ನವರು ಕಳಾಸೀ ಪಾಳ್ಯಂನಲ್ಲಿರುವ ಗೌರ್ನ್ಮೆಂಟ್ ಬಸ್‌ಸ್ಟ್ಯಾಂಡ್‌ನಲ್ಲಿ ಅವರ ಬಸ್ಸನ್ನು ನಿಲ್ಲಿಸಿ ಪ್ಯಾಸೆಂಜರ್ ತುಂಬಿ ಕೊಂಡು ಹೋಗುವುದರಿಂದ ಸರ್ಕಾರಕ್ಕೆ ಲಾಸ್ ಆಗುತ್ತದೆ. ಇದನ್ನು ತಪ್ಪಿಸುವ ದೃಷ್ಟಿಯಿಂದ ಕಾಂಟ್ರಾಕ್ಟ್ ಕ್ಯಾರಿಯೇಜಸ್‌ಗೆ ಪರ್ಮಿಟ್ ಕೊಡುವುದನ್ನು ನಿಲ್ಲಿಸುತ್ತೀರಾ ?

ಶ್ರೀ ವಿ. ಎಸ್. ಕೌಜಲಗಿ.—ಅದನ್ನು ಕೂಡಲೇ ನಿಲ್ಲಿಸುವುದಕ್ಕಾಗುವುದಿಲ್ಲ.

Sri D. B. KALMANKAR.—The answer given to (*a*) is something different. May I know the number of tourist buses plying districtwise ?

Sri V. S. KOUJALGI.—If you read the answer (*a*), I think it will be quite clear.

Sri D. B. KALMANKAR.—Even if pucca permits have been issued I want the number of tourist buses actually running, because the information sought is regarding the tourist buses actually running. I want the districtwise information.

Sri V. S. KOUJALGI.—I have already stated that these permits have been issued only for a temporary period and time—for a day or two. It is very difficult to get the exact number of tourist buses plying in the districts.

Sri B. B. SAYANAK.—Belgaum—Bangalore Road is a nationalised route. On this road four buses are plying during nights and they are carrying atleast 2000 passengers. But there is no night bus service of the Government. When the private operators are making huge profits, why the Government is not thinking of starting a night service and why you have allowed four private buses to ply during nights ?

ಶ್ರೀ ವಿ. ಎಸ್. ಕೌಜಲಗಿ.—ಮಾನ್ಯ ಸದಸ್ಯರಿಗೆ ಈಗಾಗಲೇ ಅದರ ಬಗ್ಗೆ ಉತ್ತರ ಕೊಟ್ಟಿದ್ದೇನೆ.

Smt. DAMAYANTHI BOREGOWDA.—May I know the number of tourist buses that ply between Mysore and Bangalore ?

Sri V. S. KOUJALGI.—I want notice.

Pending Acquisition Cases in Arsikere Taluk

312. Sri H. S. SIDDAPPA (Ariskere).—

Will the Minister for Revenue be pleased to state:—

(*a*) the number of land acquisition records pending pertaining to Scheduled Castes and Scheduled Tribes in Arsikere Taluk for purposes of constructing houses ;

(*b*) since when they are pending ?

Sri N. HUTCHAMASTY GOWDA (Minister for Revenue).—

(a) 4 (Four).

(b) 1. 23rd July 1959.
2. 12th December 1963.
3. 1st September 1971.
4. 30th September 1971.

Sri H. S. SIDDAPPA.—In answer to (a) you have stated that only 4 records are pending. May I know the villages about which these records are pending ?

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಳೇ ಕಲ್ಯಾಣಿ ಹರಿಜನ ಕಾಲೋನಿ, ಮಾರಗೊಂಡನಹಳ್ಳಿ ಬಣಜಾರ ಕಾಲೋನಿ, ಮುರುಂಡಿ ಹರಿಜನ ಕಾಲೋನಿ ಮತ್ತು ಶನ್ನೇನಹಳ್ಳಿ ಹರಿಜನ ಕಾಲೋನಿ.

Sri H. S. SIDDAPPA.—In answering (a) you have stated 4 records are pending and you have given the dates also. May I know the reasons why they are pending ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಾರಣವೇನೆಂದು ವಿವರವಾಗಿ ಹೇಳುವುದಕ್ಕೆ ಅಷ್ಟು ಸಮಾಚಾರವಿಲ್ಲ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ತಾಲ್ಲೂಕಿನ ಕೆಳಗಿನ ಮಟ್ಟದಲ್ಲಿ ರೆವೆನ್ಯೂ ಇನ್ಸ್‌ಪೆಕ್ಟರಿಗೂ ತಾಲ್ಲೂಕು ಕಚೇರಿಗೂ ಓಡಾಡುವ ಏನು ರಿಕಾರ್ಡುಗಳಿರುತ್ತವೆ ಅವುಗಳಿಗೇ ಬೇರೆ ರಿಜಿಸ್ಟರ್ ಇಟ್ಟುಕೊಂಡಿರುತ್ತಾರೆ. ಅರಸೀಕೆರೆ ತಾಲ್ಲೂಕಿನಲ್ಲಿ ಅನಿರೀಕ್ಷಿತವಾಗಿ ಭೇಟಿ ಕೊಟ್ಟಾಗ ಈ ವಿಚಾರ ಕಂಡು ಬಂತು. ಆ ಕಾರಣವೂ ಇರಬಹುದು.

SRI H. S. SIDDAPPA.—You are saying that only 4 records are pending. May I bring it to your notice that it is false and there are a number of cases pending ? Will you kindly take action to find them out ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೆಲವು ತಾಲ್ಲೂಕು ಕಚೇರಿಗಳಿಗೆ ನಾನು ಅನಿರೀಕ್ಷಿತವಾಗಿ ಭೇಟಿ ನೀಡಿದ್ದರಲ್ಲಿ, ಹೊರಗಿನಿಂದ ಯಾರಾದರೂ ಇನ್ಸ್‌ಪೆಕ್ಟಿಂಗ್ ಆಫೀಸರ್ ಬಂದಾಗ ಅವರಿಗೆ ತೋರಿಸುವುದಕ್ಕೆ ಒಂದು ರಿಜಿಸ್ಟರ್ ಇದೆ. ಅದರಲ್ಲಿ ಏನಿರುತ್ತದೆಂದರೆ ರಿಕಾರ್ಡ್ಸ್ ಬಿಲ್ಡ್ ಅಪ್ ಆದ ಮೇಲೆ ತೋರಿಸತಕ್ಕ ಪಟ್ಟಿ ಅದು. ಇದಲ್ಲದೆ ತಾಲ್ಲೂಕಾಫೀಸಿನಿಂದ ರೆವೆನ್ಯೂ ಇನ್ಸ್‌ಪೆಕ್ಟರಿಗೆ ಓಡಾಡುವ ರಿಕಾರ್ಡುಗಳ ರಿಜಿಸ್ಟರ್ ಒಂದಿದೆ. ಅಂಥ ಕೆಲವು ಕೇಸುಗಳನ್ನು ತಾಲ್ಲೂಕ್ ಆಫೀಸಿನಲ್ಲಿ ನಾನು ನೋಡಿದ್ದೇನೆ.

Vigilance Commission's Report on Working of Engineering Department of Bangalore Corporation

329. Sri T. R. SHAMANNA (Fort).—

Will the Minister for Municipal Administration be pleased to state :—

(a) whether the Vigilance Commission appointed to go into the working of the Engineering Department of the Bangalore City Corporation has completed its investigations ;

(b) if so, whether it has submitted any report to the Government ;

(c) if so, the action Government proposes to take on the cases of suspensions already ordered ;

(d) the steps proposed to the taken by Government to see that the work of the Corporation is carried on efficiently in the interest of the tax-payer ?

Sri B. BASAVALINGAPPA (Minister for Municipal Administration).—

(a) The Vigliance Commission has not completed its investigation

(b) An interim report has been received.

(c) Futher necessary action will be taken after receipt of final report of investigation.

(d) All necessary steps are taken to see that the work does not suffer.

ಶ್ರೀ ಟಿ. ಆರ್. ಶಾಮಣ್ಣ.—ಎಷ್ಟು ಜನರ ಮೇಲೆ ವಿಜಿಲೆನ್ಸ್ ಕಮಿಷನ್‌ರವರು ಆರೋಪಣೆ ಹೊರಿಸಿದ್ದಾರೆ ಮತ್ತು ಅದರಲ್ಲಿ ತೀವ್ರವಾದ, ಉಗ್ರವಾದ ಆರೋಪಣೆಗೆ ಗುರಿಯಾಗಿರುವವರು ಯಾರು ?

†ಶ್ರೀ ಬಿ. ಬಸವಲಿಂಗಪ್ಪ.—ಬೇಡಿಕೆಗಳ ಮೇಲೆ ಉತ್ತರ ಕೊಡುವಾಗ ವಿಷದವಾಗಿ ಹೇಳಿದ್ದೇನೆ. ಕಾರ್ಪೊರೇಷನ್‌ನಲ್ಲಿ ವಿಜಿಲೆನ್ಸ್ ಕಮಿಷನ್ 16-8-1971ರಿಂದ ಅಸ್ತಿತ್ವಕ್ಕೆ ಬಂತು. ಅನಂತರ ಅವರು ಕೊಟ್ಟ ಒಂದು ಪ್ರಿಲಿಮಿನರಿ ರಿಪೋರ್ಟ್ ಮೇಲೆ ಕೆಲವು ಜನರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಒಬ್ಬ ಸೂಪರಿಂಟೆಂಡಿಂಗ್ ಇಂಜಿನಿಯರ್, 5 ಜನ ಎಕ್ಸಿಕ್ಯೂಟಿವ್ ಇಂಜಿನಿಯರ್ಸ್ ಮೇಲೆ ಕ್ರಮ ತೆಗೆದುಕೊಂಡು ಅವರನ್ನು ಸಸ್‌ಪೆನ್‌ಷನ್‌ನಲ್ಲಿಡಲಾಗಿದೆ. ಅಕೌಂಟ್ಸ್ ಡಿಪಾರ್ಟ್‌ಮೆಂಟಿನಲ್ಲಿರತಕ್ಕ ಅಧಿಕಾರಿಗಳ ಮೇಲೆ ಕ್ರಮ ತೆಗೆದು ಕೊಳ್ಳುವುದು ಇನ್ನೂ ಆಗಿಲ್ಲ. ಒಂದೆರಡು ದಿವಸಗಳಲ್ಲಿ ಆ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ. ಫೈನಲ್ ರಿಪೋರ್ಟ್ ಬಂದ ನಂತರ ಸಂಬಂಧಪಟ್ಟವರ ಮೇಲೆಲ್ಲ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ. ಆರ್. ಶಾಮಣ್ಣ.—203 ಜನರ ಮೇಲೆ ಅಪಾದನೆ ಇದ್ದಾಗ ಕೇವಲ 25 ಜನರನ್ನು ಮಾತ್ರ ಸಸ್ಪೆಂಡ್ ಮಾಡಿ ಉಳಿದವರನ್ನು ಸಸ್ಪೆಂಡ್ ಮಾಡದೆ ಇರುವುದಕ್ಕೆ ಕಾರಣವೇನು ? ಎಲ್ಲರ ಮೇಲೂ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಬೇರೆ ಕಾರಣವೇನೂ ಇಲ್ಲ. ಸುಪೀರಿಯರ್ ಆಫೀಸರ್ಸ್ ಯಾರಿದ್ದಾರೆ ಅಂಥವರ ಮೇಲೆ ಮೊದಲು ಕ್ರಮ ತೆಗೆದುಕೊಂಡು ನಂತರ ಅವರ ಕೆಳಗಿನ ಅಧಿಕಾರಿಗಳು ಯಾರಿದ್ದಾರೆ ಅವರ ಮೇಲೆ ಕ್ರಮತೆಗೆದುಕೊಳ್ಳತಕ್ಕ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಕೆಲಸಕ್ಕೆ ತಡೆಯಾಗದಂತೆ ಏನೇನು ಕ್ರಮಗಳನ್ನು ತೆಗೆದು ಕೊಳ್ಳಲಾಗಿದೆ ಎಂದು ಸ್ಪಷ್ಟವಾಗಿ ಹೇಳುವುದಕ್ಕಾಗುತ್ತದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಯಾವ ಯಾವ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೇವೆ ಅವರ ಜಾಗದಲ್ಲಿ ಬೇರೆ ಅಧಿಕಾರಿಗಳನ್ನು ಅಲ್ಲಿಗೆ ಹಾಕಿ ಕೆಲಸ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಕೆ. ಎಂ. ನಾಗಣ್ಣ.—ಇನ್ನು ಎಷ್ಟು ತಿಂಗಳಲ್ಲಿ ಫೈನಲ್ ರಿಪೋರ್ಟ್ ಬರಬಹುದು ಎಂದು ನಿರೀಕ್ಷೆ ಮಾಡುತ್ತಿದ್ದೀರಿ ?

ಶ್ರೀ ಬಿ. ಬಸವಲಿಂಗಪ್ಪ.—ಅತಿ ಜಾಗ್ರತೆಯಾಗಿ ಅಂತಿಮ ವರದಿಯನ್ನು ಕಳುಹಿಸಿಕೊಡುವಂತೆ ನಾವು ಸೂಚನೆಗಳನ್ನು ಕೊಡುತ್ತೇವೆ.

ಶ್ರೀ ಕೆ. ಪ್ರಭಾಕರ್.—ಈಗ ಏನು ಕ್ರಮ ತೆಗೆದುಕೊಂಡು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೀರಿ, ಅವರ ವಿಷಯದಲ್ಲಿ ಆಂಟಿ ಕರಪ್ಷನ್ ಇಲಾಖೆಯಿಂದ ಕಂಪ್ಲೀಟ್ ರಿಪೋರ್ಟ್ ಬಂದಿದೆಯೇ ? ಇವರ ಬಗ್ಗೆ ಪೂರ್ತಿಯಾಗಿ ಎನ್‌ಕ್ವೈರಿ ಮಾಡಿ ಇತ್ಯರ್ಥ ಮಾಡುವುದಕ್ಕೆ ಎಷ್ಟು ದಿವಸ ಹಿಡಿಯುತ್ತದೆ ?

ಶ್ರೀ ಬಿ. ಬಸವಲಿಂಗಪ್ಪ.—ನಾನಾಗಲೇ ಹೇಳಿದಂತೆ ವಿಜಿಲೆನ್ಸ್ ಕಮಿಷನ್ ರಿಪೋರ್ಟಿನ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಈ ಬಗ್ಗೆ ಜಾಗ್ರತೆಯಾಗಿ ಇನ್‌ವೆಸ್ಟಿಗೇಷನ್ ಪೂರ್ತಿ ಮಾಡುವುದಕ್ಕೋಸ್ಕರ ಪೋಲೀಸ್ ಸಿಬ್ಬಂದಿಯನ್ನು ಕೂಡ ಮಂಜೂರು ಮಾಡಿದ್ದೇವೆ. ಎಷ್ಟು ದಿವಸದಲ್ಲಿ ಪೂರ್ತಿಯಾಗುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಬಹಳ ಜಾಗ್ರತೆಯಾಗಿ ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ವಿಜಿಲೆನ್ಸ್ ಕಮಿಷನ್‌ನಿಂದ ಬಂದ ಪ್ರಿಲಿಮಿನರಿ ರಿಪೋರ್ಟ್ ಮೇಲೆ ಕೆಲವು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿರುವುದಾಗಿ ಹೇಳಿದರು. ಅಧಿಕಾರಿಗಳನ್ನು ಸಸ್ಪೆಂಡ್ ಮಾಡತಕ್ಕ ಉದ್ದೇಶ ಎನ್‌ಕ್ವೈರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ. 203 ಜನ ಅಧಿಕಾರಿಗಳ ಮೇಲೆ ಪ್ರಿಲಿಮಿನರಿ ರಿಪೋರ್ಟ್ ಕೊಟ್ಟಿದ್ದಾರೆ. ಫೈನಲ್ ರಿಪೋರ್ಟ್ ಬಂದ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದರೆ, ಈಗ 25 ಜನರನ್ನು ಸಸ್ಪೆಂಡ್ ಮಾಡಿದ್ದರಿಂದ ಎನ್‌ಕ್ವೈರಿಗೆ ಅನುಕೂಲವಾಗುತ್ತದೆ ಎಂದು ಅರ್ಥವೇ ? ಎನ್‌ಕ್ವೈರಿಗೆ ಅನುಕೂಲವಾಗಬೇಕು ಎನ್ನುವ ದೃಷ್ಟಿಯಿಂದ ಸಸ್ಪೆಂಡ್ ಮಾಡುತ್ತಿದ್ದರೆ ಎಲ್ಲರನ್ನೂ ಸಸ್ಪೆಂಡ್ ಮಾಡದೆ 25 ಜನರನ್ನು ಮಾತ್ರ ಸಸ್ಪೆಂಡ್ ಮಾಡಿರುವುದಕ್ಕೆ ಕಾರಣವೇನು ?

ಶ್ರೀ ಬಿ. ಬಸವಲಿಂಗಪ್ಪ.—ಈಗ ಸಸ್ಪೆಂಡ್ ಆಗಿರುವವರೆಲ್ಲ ಹಿರಿಯ ಅಧಿಕಾರಿಗಳು. ಅವರನ್ನು ಸಸ್ಪೆಂಡ್ ಮಾಡುವುದರಿಂದ ಏನು ಎನ್‌ಕ್ವೈರಿ ಆಗುತ್ತದೆ ಅದಕ್ಕೆ ಬಹಳ ಸುಲಲಿತವಾಗಿ ಕ್ರಮ ತೆಗೆದುಕೊಳ್ಳಲಿಕ್ಕೆ ಅನುಕೂಲವಾಗುತ್ತದೆ. ಸಣ್ಣ ಅಧಿಕಾರಿಗಳ ಮೇಲೆ ಕೂಡ ಜಾಗ್ರತೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇನೆ ಪ್ರಿಲಿಮಿನರಿ ರಿಪೋರ್ಟ್ ಬಂದ ಮೇಲೆ ಪ್ರೈಮಾ ಫೇಸಿ ಕೇಸು ಯಾರ ಮೇಲೆ ಇದೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಯಾರ ಮೇಲೆ ಪ್ರೈಮಾ ಫೇಸಿ ಕೇಸಿಲ್ಲ ಅಂಥವರ ಮೇಲೆ ಅಂತಿಮ ವರದಿ ಬಂದ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

Sri T. R. SHAMANNA.—You were good enough to inform that more higher officers have been tackled and the others will be dealt with in due course. But I find that a number of subordinate officers–permanent employees–have been kept under suspension, whereas others have not been kept under suspension.

1.30 P.M.

Sri B. BASAVALINGAPPA.—Action will be taken against all persons who are found guilty.

Sri M. MALLAPPA.—May I know whether the basis for this action is the audit report or the report of the Vigilance Commission ?

Sri B. BASAVALINGAPPA.—We have taken action on the report of the Vigilance Commission.

ಶ್ರೀ ಹೆಚ್. ಡಿ. ದೇವೇಗೌಡ.—ಅಧಿಕಾರಿಗಳನ್ನು ಸಸ್‌ಪೆಂಡ್ ಮಾಡಲಾಗಿದೆ ಎಂದು ಹೇಳುವಾಗ ಯಾರು ತಪ್ಪು ಅಳತೆಯನ್ನು ಕೊಟ್ಟು ಇಲ್ಲವೇ ಓವರ್ ಮೆಷರ ಮೆಂಟುಗಳನ್ನು ಕೊಟ್ಟು ಅಂದಾಜುಗಳನ್ನು ಮಾಡಿರು ವರನ್ನು ಸಸ ಪೆಂಡು ಮಾಡದೆ ಹಿರಿಯ ಅಧಿಕಾರಿಗಳನ್ನು ಸಸ್‌ಪೆಂಡು ಮಾಡುವುದರಲ್ಲಿ ಔಚಿತ್ಯವಾದರೂ ಏನಿತ್ತು ? ಇದರಲ್ಲಿ ರಾಜಕೀಯ ಮಾಡಲು ಇಂತಹ ಅಧಿಕಾರಿಗಳನ್ನು ಸಸ್‌ಪೆಂಡು ಮಾಡುತ್ತಿದ್ದೀರಾ ಹೇಗೆ ?

Sri B. BASAVALINGAPPA.—Government in their orders dated 16th August 1971, requested the Mysore State Vigilance Commission to investigate into the complaints with regard to the execution of works by the Engineers, and staff of the Bangalore City Corporation and report to Government the irregularities committed by them. The report of the Commission had been received in the last week of March, 1972. The Commission has pointed out a series of irregularities committed by

the staff of the Engineering Department, including the Corporation Engineer. The responsible officers of the Engineering Department and those of the Accounts Department have acted, as the report reveals, in complete disregard with the provisions of the P.W.D. Code and Corporation Acts and Rules and thus contributed to the misuse of the funds of the Corporation.

Increased Water Rate In Belgaum

346. Sri B. B. SAYANAK (Belgaum).—

Will the Minister for Municipal Administration be pleased to state :—

(*a*) whether the Government is supplying water to the Belgaum Municipality ;

(*b*) if so, since when ;

(*c*) whether the Belgaum Municipality is distributing water to the consumers ;

(*d*) the water rate that was charged by Belgaum Municipality in 1971 ;

(*e*) whether the water rate in Belgaum has been increased from April 1972 ;

(*f*) if so, the rate of water as at present ;

(*g*) whether the Government has accorded sanction to the levy of increased water rate in Belgaum City ?

Sri B. BASAVALINGAPPA.—(Minister for Municipal Administration).—

(*a*) Yes.

(*b*) From February, 1962.

(*c*) Yes.

(*d*) Re. one per 1,000 gallons.

(*e*) Yes.

(*f*) Rs. 1-06 per 1,000 gallons.

(*g*) Yes.

Sri B. B. SAYANAK.—May I know why the water rate which was one rupee per 1,000 gallons was increased to Rs. 1·06 after April 1972 ?

Sri B. BASAVALINGAPPA.—The water rate was increased due to the increase in the expenditure.

SRI B. B. SAYANAK.—I want to know whether the Municipality has passed any resolution regarding this.

SRI B. BASAVALINGAPPA.—The Municipality has accepted the rates fixed later.

SRI B. B. SAYANAK.—When there are no meters to indicate the consumption of water, how is the Municipality charging water rates ?

SRI B. BASAVALINGAPPA.—I will look into the matter.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಒಂದು ಸಾವಿರ ಗ್ಯಾಲನ್‌ಗಳಿಗೆ ರೂ. 1—06 ಪ್ರೈಸ್ ಮಾಡಿರುವುದು ಹೆಚ್ಚಾಗಿದೆ ಎಂದು ಸರಕಾರಕ್ಕೆ ಬೆಳಗಾಂ ಕಡೆಯಿಂದ ಯಾವುದಾದರೂ ಮನವಿಗಳು ಬಂದಿವೆಯೇ ? ಹಾಗೆ ಬಂದಿದ್ದರೆ ಆ ಮನವಿಗಳನ್ನು ಏನಾದರೂ ಪರಿಶೀಲನೆ ಮಾಡುತ್ತಿದ್ದೀರಾ ಹೇಗೆ ?

ಶ್ರೀ ಬಿ. ಬಸವಲಿಂಗಪ್ಪ.—ಅಂತಹ ಮನವಿಗಳು ಯಾವುದೂ ಬಂದಿಲ್ಲ. ಈಗ ಮಾಡಿರುವ ರೂಪಾಯಿ 1—06ರ ರೇಟು ಬಹಳ ಕಡಿಮೆ ಎನ್ನುವುದು ಸರಕಾರದ ಗಮನದಲ್ಲಿದೆ.

SRI B. B. SAYANAK.—The Municipality or the Government as the case may be, has supplied water to the Aluminium Factory at the rate of Rupee one per 1,000 gals. Why have you increased the rates for the public ?

SRI B. BASAVALINGAPPA.—The rate charged for 1,000 gallons of water is one rupee and twenty paise and not one rupee.

Damage Due to Floods of Varada River

362. SRI F. S. TAWARE (Haveri).—

Will the Minister for Revenue be pleased to state :—

(*a*) the number of villages damaged due to floods of Varada river during 1961 and whether it has come to the notice of Government that the temporary sheds constructed by them at the cost of Rs. 250 have also been damaged and the people have become shelterless ;

(*b*) if so, whether they propose to take up a permanent scheme to prevent the damage due to floods ;

(*c*) whether they would consider to prepare a scheme whereby the Mysore Housing Board should choose some such villages affected by floods every year and build houses for the villagers and recover the cost in instalments so that this problem may be solved early ;

(*d*) if so, the difficulties of the Government in implementing the scheme ;

(*e*) the reasons for not providing sites in the villages affected by floods ?

Sri N. HUTCHAMASTHY GOWDA (Minister for Revenue).—

(*a*) 36 villages. 83 out of 963 sheds in Haveri Taluk and 11 out of 493 sheds in Hanagal Taluk have been damaged. The residents of these sheds have either built pucca houses or returned to their original houses.

(*b*) No.

(*c*) No.

(*d*) Does not arise.

(*e*) In 10 villages of Haveri taluk and in 6 villages of Savanur taluk sites have been provided.

ಶ್ರೀ ಎಫ್. ಎಸ್. ತಾವರೆ.—ಹೊಸ ನಿವೇಶನಗಳನ್ನು ಇಲ್ಲಿ ತೊಂದರೆಗೆ ಈಡಾದವರಿಗೆ ಕೊಡಿಸಬೇಕೆಂದು ಹಿಂದೆ ಸರಕಾರ ಯೋಚನೆ ಮಾಡಿದ್ದರೂ ಇದುವರೆಗೂ ಇವರಿಗೆ ವಸತಿ ಸೌಕರ್ಯ ಮಾಡಿಕೊಡಲಿಲ್ಲ. ಹಿಂದೆ ಇದ್ದ ಜಾಗದಲ್ಲೇ ಇರಲು ಪರವಾನಗಿಯನ್ನು ಸರಕಾರ ಕೊಡುತ್ತಿದ್ದಾರೆಯೇ ಹೇಗೆ?

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸರಕಾರದವರೇನೊ ಹಿಂದಿನ ಜಾಗದಲ್ಲಿರಲು ಪರವಾನಗಿ ಕೊಡುತ್ತಿಲ್ಲ. ಇವರಿಗೆಲ್ಲಾ ಬೇರೆ ಕಡೆ ನಿವೇಶನಗಳನ್ನು ಕೊಟ್ಟು ಮನೆ ಕಟ್ಟಿಕೊಳ್ಳಲು ಸಹಾಯ ಮಾಡಬೇಕೆಂದು ಇದೆ.

ಶ್ರೀ ಎಫ್. ಎಸ್. ತಾವರೆ.—ಹಿಂದೆ ಇಲ್ಲಿ ಸರಕಾರ ನಿರ್ಮಿಸಿಕೊಟ್ಟಿದ್ದ ಷೆಡ್ಡು ಸಂಪೂರ್ಣವಾಗಿ ಹಾಳಾಗಿ ಇವರಿಗೆ ವಾಸಕ್ಕೆ ಅನುಕೂಲವಾಗಿಲ್ಲ ಮತ್ತು ಈ ಜನ ಮನೆಗಳಿಲ್ಲದೆ ತೊಂದರೆ ಪಡುತ್ತಿದ್ದಾರೆ. ಇವರಿಗೆ ಬೇಗ ಮನೆಗಳನ್ನು ಕಟ್ಟಿಸಿಕೊಡುವ ಪ್ರಯತ್ನ ಮಾಡುತ್ತಾರೆಯೇ ಇಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇವರಿಗಾಗಿ ಬೇರೆ ಸ್ಥಳಗಳನ್ನು ಅಕ್ವೈರು ಮಾಡಿಕೊಂಡು ಇಲ್ಲಿನ ಗ್ರಾಮ ಪಂಚಾಯತಿಗಳವರು ಈ ಪ್ರದೇಶವನ್ನು ಅವರಿಗೆ ಕೊಟ್ಟು ಮನೆ ಕಟ್ಟಿಸಿಕೊಳ್ಳಲು ಸಹಾಯ ಮಾಡಬೇಕೆಂದು ಈಗಾಗಲೇ ಸೂಚನೆಗಳನ್ನು ಕೊಡಲಾಗಿದೆ. ಇದಕ್ಕಾಗಿ ಆ ಪಂಚಾಯತಿಗಳವರು ಜಮೀನನ್ನು ಕೂಡ ಅಕ್ವೈರು ಮಾಡಿದ್ದಾರೆ. ಇವರೆಲ್ಲ ಅಲ್ಲಿಗೆ ಮನೆ ಕಟ್ಟಿಕೊಳ್ಳಲು ಹೋಗುತ್ತಾರೆ.

ಶ್ರೀ ಎಫ್. ಎಸ್. ತಾವರೆ.—ಇದರಲ್ಲಿ ತಾವು ಒಂದು ರೀತಿ ಹೇಳುತ್ತೀರಿ, ನಿನ್ನೆ ಇಲ್ಲಿ ಮಾನ್ಯ ನೀರಾವರಿ ಸಚಿವರು ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಕೇಂದ್ರ ಸರಕಾರ ಇದಕ್ಕಾಗಿ ಸಹಾಯ ಮಾಡುತ್ತಾರೆ ಅದರ ಮೂಲಕ ಇವರಿಗೆ ಮನೆಗಳನ್ನು ಕಟ್ಟಿಸಿಕೊಟ್ಟು ಕಾರ್ಯರೂಪಕ್ಕೆ ತರಬಹುದು ಎಂದು ಹೇಳಿದರು. ಇದರಲ್ಲಿ ಸರಕಾರ ಯಾವುದು ಸರಿ ಎಂದು ಹೇಳುತ್ತದೆ ?

ಶ್ರೀ ಹೆಚ್. ಎನ್. ನಂಜೇಗೌಡ.—ನಿನ್ನೆ ನಾನು ಹೇಳಿದುದು ಫ್ಲಡ್ ಕಂಟ್ರೋಲ್ ಸ್ಕೀಂಗಾಗಿ ಹೆಚ್ಚಿನ ಸಹಾಯವನ್ನು ಬೇರೆ ರಾಜ್ಯಗಳಿಗೆ ಕೊಡುವ ಹಾಗೆ ನಮ್ಮ ರಾಜ್ಯ ಸರಕಾರ ಕೂಡ ಪ್ರಯತ್ನ ಮಾಡಿ ಕೇಂದ್ರ ಸರಕಾರದಿಂದ ಪಡೆಯಬೇಕಾಗಿದೆ. ಆ ಸಹಾಯ ಬಂದ ಕೂಡಲೇ ನಮ್ಮ ರಾಜ್ಯದಲ್ಲೂ ಫ್ಲಡ್ ಕಂಟ್ರೋಲ್ ಸ್ಕೀಂ ಮುಖಾಂತರ ಕೆಲಸಗಳನ್ನು ಕಾರ್ಯರೂಪಕ್ಕೆ ತರಬಹುದು ಎಂದು ಮಾತ್ರ ನಾನು ಹೇಳಿದ್ದು.

ಶ್ರೀ ಎಫ್. ಎಸ್. ತಾವರೆ.—ಇದರಿಂದ ಇಲ್ಲೂ ಕೂಡ ಒಂದು ಯೋಚನೆ ಇದ್ದೆ, ಇಲ್ಲಿ ರೆವಿನ್ಯೂ ಮಂತ್ರಿಗಳು ಒಂದು ರೀತಿಯಾಗಿ ಮನೆಗಳನ್ನು ಕಟ್ಟಿಸುತ್ತೇವೆ ಎನ್ನುತ್ತಾರೆ. ಇದರಲ್ಲಿ ಯಾವುದು ಸರಿಯಾದುದು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೇಂದ್ರ ಸರಕಾರದಿಂದ ಹಣ ಒದಗಿಸಿಕೊಂಡು ಮಾಡುವ ಯೋಜನೆಯೇ ಬೇರೆ. ಇಲ್ಲಿ ಬೇರೆ ಸ್ಥಳಗಳಲ್ಲಿ ಪ್ರವಾಹದಿಂದ ಹಾನಿಗೊಳಗಾದವರಿಗೆ ಮನೆ ಕಟ್ಟಿಸಿ ಕೊಡುವುದಕ್ಕೆ ಹೌಸಿಂಗು ಸ್ಕೀಂಗಳ ಮೂಲಕ ಪ್ರಯತ್ನ ಮಾಡುತ್ತಿದ್ದೇವೆ. ಪ್ರವಾಹದಿಂದ ತೊಂದರೆಗೆ ಒಳಗಾಗಿರತಕ್ಕವರಿಗೆ ಅವರಿದ್ದ ಸ್ಥಳಗಳನ್ನು ಬಿಟ್ಟು ಬೇರೆ ಕಡೆಗಳಲ್ಲಿ ಭೂಮಿಯನ್ನು ಅಕ್ವೈರು ಮಾಡಿಕೊಂಡು ಅಲ್ಲಿ ಸೈಟುಗಳಾಗಿ ವಿಂಗಡಿಸಿ ಇವರೆಲ್ಲರಿಗೂ ಮನೆಗಳನ್ನು ಕಟ್ಟಿಸುವುದು ಸದ್ಯದ ಅಪೇಕ್ಷೆಯಾಗಿದೆ, ಕೇಂದ್ರ ಸರಕಾರದಿಂದ ಇಂತಹ ಮನೆಗಳನ್ನು ಕಟ್ಟಲು ಯಾವ ಹಣವನ್ನು ಒದಗಿಸಿಲ್ಲ.

ಶ್ರೀ ಎಸ್. ಬಂಗಾರಪ್ಪ.—1961ರಲ್ಲಿ ವರದಾ ನದಿಯು ಮಹಾಪೂರ ಬಂದಾಗ ಕೆಲವು ಕಡೆಗಳಲ್ಲಿದ್ದ ಊರುಗಳು ಹಾಗೂ ಭೂಮಿ ಎಲ್ಲ ಹಾಳಾಗಿ ಹೋದಂತೆ ನಮ್ಮ ಭಾಗದ ಕೆಲವು ಕಡೆಗಳಲ್ಲೂ ನೀರು ಹರಿದು ಜನಕ್ಕೆ ಬಹು ತೊಂದರೆಯಾಯಿತು. ಇಂತಹವರಿಗಾಗಿ ಸೈಟುಗಳನ್ನು ಮಾಡಲು ಬೇರೆ ಕಡೆ ಸ್ಥಳವನ್ನು ಅಕ್ವೈರು ಮಾಡಿಕೊಂಡು ಅಲ್ಲಿ ಷೆಡ್‌ಗಳನ್ನು ಕಟ್ಟಿಕೊಳ್ಳಲು ಸಹಾಯ ವನ್ನು ಇನ್ನೂ ಒದಗಿಸಿಕೊಡಲಿಲ್ಲ. ಈಗಲಾದರೂ ಬೇರೆ ಕಡೆಗಳಲ್ಲಿ ವಸತಿ ಸೌಕರ್ಯ ಮಾಡುವಂತೆ ಇಲ್ಲೂ ಕಷ್ಟಕ್ಕೆ ಸಿಕ್ಕಿರುವ ಜನಗಳಿಗೆ ವಸತಿ ಸೌಕರ್ಯಗಳನ್ನು ಮಾಡಿಸಲು ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪ್ರವಾಹದಿಂದ ಹಾನಿಗೊಳಗಾಗಿರುವ ಗ್ರಾಮಗಳು ಬೇರೆ, ಎಲ್ಲಾದರೂ ಇದ್ದರೆ ಅಲ್ಲೂ ಕೂಡ ಬೇರೆ ಜಾಗವನ್ನು ಅಕ್ವೈರು ಮಾಡಲು ಹಾಗೂ ಸೈಟುಗಳನ್ನು ಕೊಡುವ ವಿಚಾರವನ್ನು ಪರಿಶೀಲನೆ ಮಾಡಿ ಆದಷ್ಟು ಬೇಗ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಎಫ್. ಎಸ್. ತಾವರೆ.—ಹೌಸಿಂಗ್ ಬೋರ್ಡಿಗೆ ಇದರಲ್ಲಿ ಪ್ರಾಶಸ್ತ್ಯ ಕೊಟ್ಟು ಇಲ್ಲಿನ ಜನರಿಗೆ ಬೇಗನೆ ಮನೆಗಳನ್ನು ಕಟ್ಟಿಸಿಕೊಡಲು ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಾಗಲೇ ನಾನು ತಿಳಿಸಿದಂತೆ ಹೌಸಿಂಗ್ ಬೋರ್ಡಿನ ಸಹಾಯವನ್ನು ಪಡೆದುಕೊಂಡು ಇಲ್ಲಿನ ನಿರ್ಗತಿಕರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಇಲ್ಲಿ ಭೂಮಿಯನ್ನು ಒದಗಿಸಿಕೊಡಲಾಗಿದೆ ಮತ್ತು ಆದಷ್ಟು ಬೇಗ ಮನೆಗಳನ್ನು ಕಟ್ಟಿಸಿ ಕೊಡಲು ಪ್ರಯತ್ನ ಮಾಡುತ್ತೇವೆ.

Nationalisation of Sugar Industry

369. SRI B. SATHYANARAYANA SINGH (Hospet).—

Will the Minister for Industries be pleased to state :—

(*a*) whether steps are being taken by Government to bring in legislation to control and regulate the working of the Sugar Industry in the State during the current Session of the Legislative Assembly ;

(*b*) whether there is a proposal before Government to recommend to the Government of India to nationalise the Sugar Industry as nationalisation principle of Sugar Industry has been accepted by the Government of India ;

(*c*) if not, the reasons for the same ?

Sri S. M. KRISHNA (Minister for Industries).—

(*a*) No.

(*b*) No.

(*c*) It does not arise since we have no proposal.

ಶ್ರೀ ಬಿ. ಸತ್ಯನಾರಾಯಣಸಿಂಗ್.—ಸಕ್ಕರೆ ಉದ್ಯಮಗಳ ಕಾರ್ಯಾಚರಣೆಗಳನ್ನು ಸರಿಪಡಿಸಲು ಮುಂದಿನ ಅಧಿವೇಶನದಲ್ಲಿ ಒಂದು ಷುಗರ್‌ಕೇನ್ ಬಿಲ್ಲನ್ನು ಸರಕಾರ ತರುತ್ತದೆ ಎಂದು ಹೇಳಿದ್ದರು. ಅದನ್ನು ಈ ಅಧಿವೇಶನದಲ್ಲಿ ತರುತ್ತಾರೆಯೇ ?

†ಶ್ರೀ ಎಸ್. ಎಂ. ಕೃಷ್ಣ.—ಸಕ್ಕರೆ ಕೈಗಾರಿಕೆ ಬಗ್ಗೆ ಸಮಗ್ರವಾದ ಒಂದು ನೀತಿಯನ್ನು ದೇಶದಲ್ಲಿ ಜಾರಿಗೆ ತರುವುದಕ್ಕೋಸ್ಕರ ಕೇಂದ್ರ ಸರಕಾರದವರು ಒಂದು ಕಮಿಷನ್‌ನ್ನು ರಚನೆ ಮಾಡಿದ್ದಾರೆ. ಆ ಕಮಿಷನ್ ವರದಿ ಬಂದ ಮೇಲೆ ಇದರ ಬಗ್ಗೆ ರಾಜ್ಯ ಸರಕಾರ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬಹುದು ಎಂದು ನಾನು ಆಶಿಸುತ್ತೇನೆ.

ಶ್ರೀ ಬಿ. ಸತ್ಯನಾರಾಯಣಸಿಂಗ್.—ತಾವು ಸಕ್ಕರೆ ಉದ್ಯಮ ರಾಷ್ಟ್ರೀಕರಣದ ಬಗ್ಗೆ ಹೇಳುತ್ತಿದ್ದೀರಿ ಎಂದು ಕಾಣುತ್ತದೆ. ಕಬ್ಬಿನಲ್ಲಿ ಸಕ್ಕರೆ ಅಂಶ ಕಬ್ಬಿನ ಬೆಳೆಗಾರರಿಗೆ ಫ್ಯಾಕ್ಟರಿಯಿಂದ ಬರತಕ್ಕ ಹಣ, ಬಂಡಿ ತೂಕ ಮಾಡುವ ವ್ಯವಸ್ಥೆ, ಇದರ ಬಗ್ಗೆ ಇವೊತ್ತಿನ ದಿವಸ ರಾಜ್ಯ ಸರ್ಕಾರಕ್ಕೆ ಅಧಿಕಾರವಿಲ್ಲ. ಇದನು ನಿಯಂತ್ರಣ ಮಾಡಲು ಒಂದು ಷುಗರ್‌ಕೇನ್ ಬಿಲ್ ತರುವುದಕ್ಕೆ ಸರ್ಕಾರದ ಅಭಿಪ್ರಾಯ ಇದೆಯೇ ?

ಶ್ರೀ ಎಸ್. ಎಂ. ಕೃಷ್ಣ.—ಈ ಅಂಶ ಎಲ್ಲವೂ ಕೂಡ ಅದರ ಕಾರ್ಯವ್ಯಾಪ್ತಿಗೆ ಬಂದಿದೆ ಆದ್ದರಿಂದ ಸರ್ಕಾರದವರು ಯೋಚನೆ ಮಾಡುತ್ತಿದ್ದಾರೆ. ಈ ಮಧ್ಯೆ ತಮಿಳುನಾಡು ಸರ್ಕಾರದಲ್ಲಿ ಮಹಾರಾಷ್ಟ್ರ ಸರ್ಕಾರದಲ್ಲಿ ಇಂಥ ಕಾನೂನು ಜಾರಿಗೆ ಬಂದಿದೆ ಎಂದು ಗೊತ್ತಾಗಿದೆ. ಆದ್ದರಿಂದ ಕೆಲವು ಡೀಟೇಲ್ಸ್ ನಾವು ಕೇಳಿದ್ದೇವೆ ಅದು ಬಂದ ಕೂಡಲೇ ಇದನ್ನು ಯೋಚನೆ ಮಾಡುತ್ತೇವೆ.

ಶ್ರೀ ಎಮ್. ಎಸ್. ಕೃಷ್ಣನ್.—ಕೇಂದ್ರ ಸರ್ಕಾರದವರು ಯೋಗ್ಯ ಕಮಿಷನ್ ರಚನೆ ಮಾಡಿದ್ದಾರೆ, ಸಮಗ್ರವಾಗಿ ಯೋಚನೆ ಮಾಡಿ ಆಮೇಲೆ ತೀರ್ಮಾನ ಮಾಡುತ್ತೇವೆಂದು ಹೇಳಿದಿರಿ. ಕಮಿಷನ್ನಿನವರು ಸರ್ಕಾರವನ್ನು ಕೈಗಾರಿಕೆ ಬಗ್ಗೆ ಕೇಳಿದ್ದಾರೆಯೇ ? ಆ ರೀತಿ ಕೇಳಿದ್ದರೆ ತಾವು ಅಭಿಪ್ರಾಯ ಕೊಟ್ಟಿದ್ದೀರಾ ? ಆ ರೀತಿ ಅಭಿಪ್ರಾಯ ಕೊಟ್ಟಿದ್ದರೆ ಏನು ಅಭಿಪ್ರಾಯ ಕೊಟ್ಟಿದ್ದೀರಿ ?

ಶ್ರೀ ಎಸ್. ಎಂ. ಕೃಷ್ಣ.—ಒಂದಕ್ಕಿಂತ ಹೆಚ್ಚು ಸಾರಿ ಕಮಿಷನ್ನಿನವರು ಬೆಂಗಳೂರಿಗೆ ಬಂದು ರಾಜ್ಯ ಸರ್ಕಾರದ ಅಭಿಪ್ರಾಯಗಳನ್ನು ಕೂಡಾ ಕೇಳಿಕೊಂಡು ಹೋಗಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಅಭಿಪ್ರಾಯ ಏನು ಎನ್ನುವುದು ಕೇಳಿದ್ದೆ. ಮಾನ್ಯ ಮಂತ್ರಿಗಳು ಹೇಳಿದ್ದರೆ ಚೆನ್ನಾಗಿತ್ತು.

ಶ್ರೀ ಎಸ್. ಎಂ. ಕೃಷ್ಣ.—ಬಹಳ ದೊಡ್ಡ ಕ್ವೆಶ್ಚನೀರ್ ಕೊಟ್ಟಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ರಾಷ್ಟ್ರೀಕರಣದ ಬಗ್ಗೆ ತಮ್ಮ ಅಭಿಪ್ರಾಯ ?

ಶ್ರೀ ಎಸ್. ಎಂ. ಕೃಷ್ಣ.—ರಾಷ್ಟ್ರೀಕರಣ ಆಗಬೇಕು ಎನ್ನುವುದೇ ಸರ್ಕಾರದ ಅಭಿಪ್ರಾಯ.

ಶ್ರೀ ಕೆ. ಎಂ. ನಾಗಣ್ಣ.—(ಬಿ) ನಲ್ಲಿ ಕಾರಣಗಳು ಏನು ಎಂದು ಕೇಳಿದ್ದಾರೆ. ಆ ಕಾರಣಗಳನ್ನು ಉತ್ತರಿಸಬೇಕು.

ಶ್ರೀ ಎಸ್. ಎಂ. ಕೃಷ್ಣ.—ಪ್ರಶ್ನೆಯಲ್ಲಿ ರಾಷ್ಟ್ರೀಕರಣದ ಬಗ್ಗೆ ಸರ್ಕಾರದ ನೀತಿ ಏನು ಎಂದು ಕೇಳಿದ್ದಾರೆ, ಎರಡನೆಯದು ರೆಗ್ಯುಲೇಟ್ ಮಾಡುವುದರ ಬಗ್ಗೆ ಕೇಳಿದ್ದಾರೆ. ಕಬ್ಬು ಬೆಳೆಗಾರರಿಗೆ ಸಕ್ಕರೆ ಕಾರ್ಖಾನೆಯಲ್ಲಿ ನ್ಯಾಯ ಬೆಲೆ ಕೊಡುವುದು ಟ್ರಾನ್ಸ್‌ಪೋರ್ಟ್ ಫೆಸಿಲಿಟೀಸ್ ಕೊಡಬೇಕೆಂಬುದು ಇನ್ನೊಂದು ವಿಚಾರ. ಮೊದಲನೇ ವಿಚಾರದಲ್ಲಿ ಆ ರೀತಿ ಹೇಳಿದೆ.

ಶ್ರೀ ಹಂಜಿ ಶಿವಣ್ಣ.—ಸಕ್ಕರೆ ಕಾರ್ಖಾನೆಗಳಲ್ಲಿ ಒಂದೊಂದರ ಕಡೆ ಒಂದೊಂದು ತರಹ ದರ ಕೊಡುತ್ತಿದ್ದಾರೆ. ದೇಶಾದ್ಯಂತ ಇದೇ ರೀತಿ ಇದ್ದಹಾಗೆ ಕಾಣುತ್ತಿದೆ, ಆದ್ದರಿಂದ ಏಕರೂಪದಲ್ಲಿ ಒಂದೇ ತರಹ ದರ ಕೊಡುವ ಹಾಗೆ ಏರ್ಪಾಡು ಮಾಡಬೇಕು. ಇನ್ನೊಂದು ಪ್ರಶ್ನೆ, ಸಕ್ಕರೆ ಕಾರ್ಖಾನೆ ಬೇಕಾದಷ್ಟು ಇದ್ದರೂ ಕೂಡ ಕೆಲವು ಕಡೆಗಳಲ್ಲಿ ಒಬ್ಬೊಬ್ಬರೇ ಕಾರ್ಖಾನೆ ಇಟ್ಟುಕೊಂಡು ಮನಾಪಲಿ ಮಾಡಿಕೊಂಡು ರೈತರಿಗೆ ಹೆಚ್ಚು ತೊಂದರೆಯಾಗುತ್ತಿದೆ. ಸರ್ಕಾರದವರು ಮುಂದೆ ಬಂದು ಷೇರ್ಸ್ ಕಲೆಕ್ಟ್ ಮಾಡುವುದಕ್ಕೆ ಅವಕಾಶಮಾಡಿಕೊಟ್ಟು ಕಾರ್ಖಾನೆ ತೆರೆಯುಲಿಕ್ಕೆ ಆಲೋಚನೆ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಕಬ್ಬು ಬೆಳೆಗಾರರಿಗೆ ನ್ಯಾಯವಾದ ಬೆಲೆ ಕೊಡಿಸಬೇಕು ಎನ್ನುವುದೇ ಸರ್ಕಾರದ ಉದ್ದೇಶ. ಆ ಉದ್ದೇಶವನ್ನು ಸರ್ಕಾರ ನೇರವಾಗಿ ಹೊಂದಿರತಕ್ಕ ಸರ್ಕಾರಿ ಕಾರ್ಖಾನೆಗಳಲ್ಲಿ ಈಗಾಗಲೇ ಜಾರಿಗೆ ತಂದಿದೆ. ಯಾವುದೇ ಖಾಸಗಿ ಕಾರ್ಖಾನೆಯವರಾಗಲಿ ನ್ಯಾಯವಾದ ಕಬ್ಬಿನ ಬೆಲೆಯನ್ನು ರೈತರಿಗೆ ಕೊಡದೆ ಹೋದರೆ ಸರ್ಕಾರ ಕಣ್ಣುಮುಚ್ಚಿಕೊಂಡು, ಕೈಕಟ್ಟಿಕೊಂಡು ಕೂತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಸಾಕಷ್ಟು ಕಾನೂನಿನ ಆಧಾರವಿದೆ.

SRI B. B. SAYANAK.—May I know whether the Chief Minister of U. P. Mr. Kamalapathi Tripathi when he was the Chief Minister, has declared that he is going to nationalise the sugar industry and why the Government of Mysore is not going to take the same decision ?

Sri S. M. KRISHNA.—Nationalisation is a question which shall have to be decided by the Union Government. Mr. Tripathi has stated the opinion of his Government. But ultimately a decision will have to be taken by the Union Govornmont which in turn is awaiting the report of the Commission which it has appointed.

ಶ್ರೀ ವಿ. ಮಸಿಯಪ್ಪ.—ಸಕ್ಕರೆ ಧಾರಣೆ ನಿಗದಿ ಮಾಡಿರತಕ್ಕದ್ದು ರಾಜ್ಯ ರಾಜ್ಯಕ್ಕೆ ಹೆಚ್ಚಿನ ಏರುಪೇರು ಇದೆ. ಮೈಸೂರು ರಾಜ್ಯ ಕಬ್ಬಿನ ಬೆಳೆಗಾರರಿಗೆ ನಿಗದಿ ಮಾಡಿರತಕ್ಕ 125 ರೂಪಾಯಿ ಕ್ವಿಂಟಾಲಿಗೆ. ಈ ರೇಟಿನಿಂದ ಬಹಳ ಅನ್ಯಾಯವಾಗುತ್ತದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಅದನ್ನು ಸರಿಪಡಿಸಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಇತ್ತೀಚೆಗೆ ಕೇಂದ್ರ ಸರ್ಕಾರದವರು ನಿಗದಿ ಮಾಡಿರತಕ್ಕ ಧಾರಣೆ ತಕ್ಷಣ ರಾಜ್ಯಗಳಿಗೆ ಬಹುಮಟ್ಟಿಗೆ ತೊಂದರೆ ಉಂಟುಮಾಡಿದೆಯೆಂದು ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೇವೆ. ಅವರು ತಮ್ಮ ನೀತಿಯನ್ನು ಸ್ವಲ್ಪಮಟ್ಟಿಗಾದರೂ ಕೂಡ ಸುಧಾರಣೆ ಮಾಡಿಕೊಳ್ಳಬೇಕು ಎಂದು ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದವರನ್ನು ಪ್ರಾರ್ಥನೆ ಮಾಡಿದ್ದಾರೆ.

ಶ್ರೀ ಬಿ. ಸತ್ಯನಾರಾಯಣಸಿಂಗ್.—ಕಬ್ಬಿನ ಬೆಳೆಗಾರರಿಗೆ ಸಕಾಲದಲ್ಲಿ ಹಣವನ್ನು ಖಾಸಗಿ ಕಬ್ಬಿನ ಫ್ಯಾಕ್ಟರಿಯವರು ಮತ್ತು ಮಾಲೀಕರು ಕೊಡುತ್ತಾ ಇಲ್ಲ, ಆದರಿಂದ ಬಹಳ ತೊಂದರೆಯಾಗುತ್ತದೆ. ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಸ್. ಎಂ. ಕೃಷ್ಣ.—ಯಾವ ಖಾಸಗಿ ಕಾರ್ಖಾನೆಗಳು ನಮ್ಮ ರಾಜ್ಯದಲ್ಲಿ ಸರಿಯಾದಂಥ ಕಾಲದಲ್ಲಿ ಕಬ್ಬು ಬೆಳೆಗಾರರಿಗೆ ದರವನ್ನು ಕೊಡುವುದಿಲ್ಲ ಎಂದು ಸರ್ಕಾರದ ಗಮನಕ್ಕೆ ತಂದರೆ ಕಾನೂನಿನ ಚೌಕಟ್ಟಿನಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಯಾವದಾಕ್ಷಿಣ್ಯವೂ ಇಲ್ಲದೆ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಸತ್ಯನಾರಾಯಣಸಿಂಗ್.—ಕ್ರಮ ತೆಗೆದುಕೊಳ್ಳುವುದಕ್ಕೆ ಅಂಥ ಕಾನೂನು ಇಲ್ಲ. ಅಧಿಕಾರ ಇಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಕಾನೂನಿನ ಚೌಕಟ್ಟಿನೊಳಗೆ ಸಾಧ್ಯ ಆಗದೇ ಹೋದರೆ ಉದಾಹರಣೆಗೆ ಶಿವಮೊಗ್ಗ ಹತ್ತಿರ ಇರುವ ಖಾಸಗಿ ಸಕ್ಕರೆ ಕಾರ್ಖಾನೆಗೆ 3 ಸಾವಿರ ಎಕರೆ ಜಮೀನನ್ನು ಲೀಸ್ ಬೇಸಿಸ್ ಮೇಲೆ ಕೊಟ್ಟಿದ್ದೇವೆ. ಅಂದಮೇಲೆ ಒಂದು ಅಲ್ಲ ಒಂದು ರೀತಿಯಲ್ಲಿ ಸರ್ಕಾರದ ಜೊತೆಯಲ್ಲಿ ಅವರು ಆಬ್ಲಿಗೇಷನ್‌ಗೆ ಸಿಕ್ಕಿದ್ದಾರೆ. ಆದ್ದರಿಂದ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅವರಮೇಲೆ ಪ್ರಭಾವವನ್ನು ಬೀರಬೇಕಾಗಿದೆ.

Sri C. ANNADANAPPA.—Madam Speaker, I would like to bring to your kind notice that my Question No. 375 has been thoroughly changed and it does not give the correct idea. My question was an appeal against the order of the Assistant Registrar directing the alleged President to break open the lock; that was my quetsion. They have changed the question so as not to give any meaning at all.

MADAM SPEAKER.—The hon. member may give a notice again. We will take it up later. Now it is held over.

Representation from a Legislator and others of Khanapur

379. Sri N. B. SARDESAI (Khanapur).—

Will the Minister for Education be pleased to state:—

(a) whether Government have received any representation from the Member of the Legislative Assembly from Khanapur and the

President of Khanapur Taluk Primary School Teachers' Association, Khanapur in the month of April 1972, addressed to the Minister for Education;

(*b*) if so, whether it has been acknowleged;

(*c*) the action Government has taken on the fourteen items of grievances, put before the Minister for Education in the said representation;

(*d*) the action the Government has taken in respect of telegram from a Legislator, Khanapura in the month of May 1972 in this connection?

Sri A. R. BADARINARAYANA.—(Minister for Education).—

(*a*) Yes.

(*b*) No, as a report on each of the item has already been called for and awaited.

(*c*) Immediately on receipt of the representation, a report has been called for. The compilation of information in respect of each item and particularly some of the items like 6, 7 and 8 relating to the period prior to 1957 entails considerable time to compile.

(*d*) The District Level Recruitment Committee has been constituted to fill up the vacancies as per rules.

Sri M. B. SIRDESAI.—Sir, in answer to (c), you have stated that Government require considerable time for the compilation of information in respect of items like 6, 7, and 8. But decision on item 8 and likewise item 9, 10 and 13 could be taken at the Government level without calling for information. Is it because Government wants to avoid taking a decision immediately?

Sri A. R. BADARINARAYANA.—What the Hon'ble Member states is far from truth. Because Government is very anxious. The Hon'ble Member has given 14 requests. On 14 requests information has got to be collected from the DDPIs and AEOs which reply is awaited. Immediately the information is received, it will be intimated to the Hon'ble Member.

Sri N. B. SIRDESAI.—May I know what definite period of time will be required by the Government to redress the grievances mentioned in the representation?

Sri A. R. BADARINARAYANA.—Government is very anxious to give the information as early as possible.

Sri N. B. SIRDESAI.—May I know whether Government is aware of the fact that on account of transfers to distant places of primary low paid teachers, especially the lady teachers and teachers who are nearing the age of retirement, are suffering hardship?

Sri A. R. BADARINARAYANA.—The Government as a matter of policy do not want primary school teachers to stay in the places of their taluk. They have not been transferred to distant places. They have been transferred to adjacent taluks. As regards women teachers, as far as possible, Government has instructed officers to see that husband and wife are made to stay in the same place.

Sri B. B. SAYANAK.—Schools were reopened in the month of April and four months have passed since then. But still now, four months after the reopening of the schools, Primary School Teachers are being transferred from one Taluk to another May I know whether the Government will stop these transfers in the midst of a school session. Secondly, I would like to know the 14 items of grievances contained in the representation cited by my friend Sri Sirdesai.

Sri A. R BADARINARAYANA.—I appreciate the question put by the hon. member. Government have issued instructions to Officers that transfers should not be made in the mid-term.

Sri P. A. PAWASHE.—What is the time limit given to the Recruitment Committee to fill up the vacancies ?

Sri A. R. BADARINARAYANA.— The District Level Committee will work it out.

ಶ್ರೀ ಎಚ್. ಡಿ. ದೇವೇಗೌಡ.—ಈ ಉಪಾಧ್ಯಾಯರನ್ನು ಅಡ್ಜಸೆಂಟ್ ತಾಲ್ಲೂಕುಗಳಿಗೆ ವರ್ಗಮಾಡುವುದಕ್ಕೆ ಸೂಚನೆ ಕೊಟ್ಟಿದ್ದೇವೆ ಎಂದು ಹೇಳಿದಿರಿ. ಬೇರೆ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಮೂರನೇ ದರ್ಜೆ ಅಧಿಕಾರಿಗಳು ಆಯಾ ತಾಲ್ಲೂಕುಗಳಲ್ಲಿ ಕೆಲಸ ಮಾಡುವುದಕ್ಕೆ ಅವಕಾಶ ಇರುವಾಗ, ಈ ಉಪಾಧ್ಯಾಯರುಗಳನ್ನು ಏತಕ್ಕೆ ಪಕ್ಕದ ತಾಲ್ಲೂಕುಗಳಿಗೆ, ಬೇರೆ ತಾಲ್ಲೂಕುಗಳಿಗೆ ಹಾಕಬೇಕು ಎನ್ನುವ ನಿರ್ಧಾರ ತೆಗೆದುಕೊಂಡಿದ್ದೀರಿ ? ಇದರ ಉದ್ದೇಶ ಏನು?

Sri A. R. BADARINARAYANA.—There have been numerous requests in the Assembly and Council and representations from the public that it would be desirable that Government servants, particularly the Teachers, should not be kept in the same Taluk, in the interest of Government service.

Sri B. B. SAYANAK.—In Belgaum District, there are 440 Primary Teachers' posts are vacant. Since three years these posts are not filled by the Government, uptill now. Although today is 18th July, Government has not filled up these posts. May I know whether the Government is going to fill all the vacent posts immediately. If not, what is the reason for not filling them ?

Sri A. R. BADARINARAYANA.—Regarding the non-filling of 440 teachers' posts, I do not know. I want notice about this matter. Any way, since information has come from the hon. member, I will have the matter examined and I will immediately attend to it.

Sri N. B. SIRDESAI—Why Government is not disbursing the salaries to the teachers each month ?

Sri A. R. BADARINARAYANA.—I don't accept that the Government is not disbursing the pay of the Teachers every month. They are disbursing it every month. I do not know in which particular case non-payment has happened.

SRI G. N. PATIL.—I wish to know whether Government will appoint local candidates for teachers' posts ?

SRI A. R. BADARINARAYANA.—As far as possible Government do not propose to appoint local candidates. They have asked the District Level Recruitment Committees as also the Public Service Commission to hasten their work.

M. S. K. Mills Co. Ltd., Gulbarga

218. SRI MALLIKARJUN KHARGE (Gurmitkal).—

Will the Minister for Industries be pleased to state:—

(*a*) whether the Government has received any information from the Central Government regarding the investigation of the affairs of the Mahaboob Shahi Kulbarga Mills Company Limited Gulbarga ;

(*b*) whether the said Mill is being taken over by the Central Government to improve the present state of affairs ;

(*c*) whether the Mahaboob Shahi Kulbarga Mills Company Ltd. is running under profit or loss ;

SRI S. M. KRISHNA (Minister for Industries).—

(*a*) Yes.

(*b*) Not known.

(*c*) The mill is presently working on profit.

MADAM SPEAKER.—Sri D. B. Kalmankar has been authorised to put question. No. 218.

SRI D. B. KALMANKAR.—What report has been received from the Central Government ?

† SRI S. M. KRISHNA.—I have unofficial information that the Committee which was appointed by the Union Government has just submitted the report to the Union Government. We have not received a copy of that report and we are awaiting the report.

SRI D. B. KALMANKAR.—May I know who the members of the Investigating Committee are ?

SRI S. M. KRISHNA.—I do not have the details right now with me.

SRI D. B. KALMANKAR.—May I know under what terms and conditions the management of the M.S.K. Mills was given to Sri Kesariwala ?

SRI S. M. KRISHNA.—Madam, I appreciate the concern of the hon. Member, but I am not too sure whether the supplementary would arise out of the main question. This question has got a limited objective.

Sri D. B. KALMANKAR.—In 1969-70 the M.S.K. Mills has suffered a loss of Rs. 20 lakhs; again in 1970-71 there is a loss of 16 lakhs. In view of this fact, how does the Government say that it is working on profit ?

Sri S. M. KRISHNA.—From the information I have, the Mill is making a profit of Rs. 4 to 5 thousand every day. From the last month the profits have gone up even to Rs. 9 and 10 thousand daily. It is expected that if nothing untoward happens, the situation may continue for a fairly long time. But, unfortunately, this Mill is bedevilled with certian labour problems. I am given to understand that there are seven Unions functioning in this Textile Mill. When there is no labour unrest or Inter-Union rivalry, the indications are that this Mill is going to make profits.

Then the hon'ble Member asked me about the personnel of the Committee which was appointed to investigate into the working of the MSK Mills. Madam, I have details here. Sri S. D. Mehta was the Chairman. Dr. P. V. Seshadri, National Textile Corporation, Ltd, Sri P. G. Rao, Controller, Southern Region, National Textile Corporation, Sri N. S. Bharath, Joint Secretary, Department of Finance, Government of Mysore, Sri I. D. Gupta, Inspecting Officer, Office of the Regional Director, Company Law Board, and Dr. O. S. Krishna Murthy, Deputy Director, Office of the Textile Commissioner—these are the Members of the Committee.

Sri BAPU GOWDA RAYAPPA.—While entrusting this M.S.K. Mill; to private agency, what was the loss that the Mill was incurring ?

Sri S M. KRISHNA.—Well, I think, it had lost quite a bit. At one time, the loss was much more than the capital invested on the Mill it was more than Rs. 1 crore.

Sri M. S. KRISHNAN.—In view of the fact that even after handing it over to the private entrepreneurs, this Mill has not been able to turn the corner and there have been lot of complaints about the MSK Mills Management, does the Government consider that it should be taken over as a sick mill by the Textile Corporation ?

Sri S. M. KRISHNA.—It is only on that provision that we made a reference to the Union Government and the Union Government appointed this Committe. So, the larger question whether it should be taken over as a sick mill would depend upon the report submitted to the Government of India by the Committee.

Sri D. B. KALMANKAR.—May I know whether the Government will consider the suggestion to change the present Chairman Sri Chandappa Patil because he is not an expert and appoint an experienced person as Chairman ?

Sri S. M. KRISHNA.—Sri Chandappa Patil was appointed Chairman some time last year and let me stop at that.

MADAM SPEAKER.—The Question Hour is over.

QUESTIONS FOR ANSWERS ON THE DAY

(but not taken up)

Recruitment of the posts of Educational Officers

211. Sri C. N. PATIL (Lingasugur).—

Will the Minister for Education be pleased to state :—

(a) the number of candidates selected by the Public Service Commission in December 1971 for the post of District Educational Officer (being re-designated as Educational Officers) :

(b) whether appointment orders in respect of these candidates have been issued ;

(c) if not, the reasons for the same ?

Sri A. R. BADARINARAYANA (Minister for Education).—

(a) Seven.

(b) No.

(c) The list of selected candidates prepared by the Public Service Commission is not in accordance with the Recruitment Rules.

2-00 P.M.

Calling Attention to Matter of Urgent Public Importance

(i) re : *Mechanisation of Kemmannagundi Mines.*

Sri ABDUL KHUDDUS ANWAR (Bhadravati).—I call the attention of the Minister for Industries to the mechanisation of Kemmangundi Mines.

Sri S. M. KRISHNA (Minister for Industries).—I State as follows :

The amouut spent on the mechanisation of the Kemmangundi Mines including purchase of machinery and equipment is Rs. 24.70 alkhs. The Kemmangundi mines is not proposed to be closed down and therefore the question of rehabilitation of the employees in the mines does not arise.

(SRI S. M. KRISHNA).

The production of Kemmangundi Iron Ore is about 1.5 lakhs tonnes per annum. The production cost has increased year by year as could be seen from the following figures:—

Year	Production	Cost/tonne	
	Tonnes	Rs.	
1968–69	1,25.880	36.74	
1969–70	1,53,840	43.38	
1970–71	1,55,170	54.16	(Cost worked out
1971–72	1,71,000	51.36	for 9 months only)

Consequent upon starting of two new Electric Pig Iron Furnaces, the consumption of Iron Ore has increased from 1.5 lakh tonnes to 4 lakhs tonnes per annum. Since heavy investment is involved for meeting the entire requirement of Iron Ore from Kemmangundi mines and also owing to limited facilitis of transport, Ropeways, etc., purchase of Iron Ore was resorted to from private source to meet a portion of the requirements of Mysore Iron and Steel Ltd., after starting new EPFs. The cost per tonne of purchase ore, is Rs. 33.70 F. O.R. Bhadravathi.

M/s National Mineral Development Corporation, a Government of India Concern, have been entrusted with the work of preparing a Project Report for mechanisation of Kemmangundi Mines to meet the entire demand of the Iron Ore. Their final and II phase report has been received recently and it is under examination.

According to the first report the mechanisation of mines has to be taken up in two stages. In the first stage it is proposed to produce 1.5 lakhs tonnes finished ore by a capital outlay of Rs. 40.94 lakhs.

It is only on the basis of the advice of M/s National Mineral Development Corporation, partial mechanisation of mines has been resorted to by purchase of machinery and equipments worth Rs. 24.70 lakhs as detailed below :—

			Rs. in lakhs
1.	Power Shovel	One	8.50
2.	Dumpers	Four	10.50
3.	Wagon Drills	Two	1.10
4.	Portable Compressors	Two	1.10
5.	Bull Dozer	One	3.50
		Total	24.70

The Board of Directors of Mysore Iron and Steel Ltd., have reviewed the increasing cost of Iron Ore at Kemmangundi mines and they have resolved at the 71st meeting on 17-4-1972 to constitute a sub-committee to examine in greater detail the mining operation in Kemmangundi Mines and to report to Board about the feasibility of continuing mining operations or otherwise and the report of the Sub-committee is awaited by Government.

SRI ABDUL KHUDDUS ANWAR.—There are two conflicting statements. The National Mineral Development Corporation has given a feasibility report to mechanise these mines and another committee *viz.* The Board of Directors of MISL has been appointed to go into the feasibility or otherwise or continuing the mining operations. Am I to presume that the plan is to close down the mines once and for all ?

SRI S. M. KRISHNA.—This aspect of the question will also be gone into by the committee that has been appointed by the Board of Directors of MISL.

SRI M. S. KRISHNAN.—When already the N. M. D. C. has gone into this matter and found the scheme feasible, where was the necessity for the Board of Trustees of MISL to constitute another committee ?

SRI S. M. KRISHNA.—On the basis of certain recommendations of the N.M.D.C., certain investments were made and certain mechnisation processes were resorted to. But unfortunately even after the mechanisation, the mining operations became costlier. In view of the new development, the Board of Directors took cognisance of that fact and have appointed a committee which will go into the whole question and make certain recommendations.

SRI ABDUL KHUDDUS ANWAR.—In 1969-70 the production was 1.5 lakh tons. Again after mechanisation the production remains at the same level. So, in spite of using the machinery, the working of the mines has not improved. It is on account of low production and mismanagement. So, the remedy is to change the management.

SRI S. M. KRISHNA.—That is exactly what I have been trying to make out. In spite of mechanisation we have not been able to make the mining operations economical. That is why the committee is going into this aspect

SRI ABDUL KHUDDUS ANWAR.—You can get 15,000 tons every day if it is efficiently managed. Your management is not efficient, the workers are all right. My fear is that if the mine is closed down, 1500 workers will be thrown out on the streets. Let the Management be changed and taken over by some other efficient man. The present man has spoiled the whole show and you have given him promotion and appointed him as the General Manager.

SRI S. M. KRISHNA.—The hon. Member's allegation that there has been some mismanagement will also be gone into by the expert committee.

(ii) re : *Murder at Attalatti near Bijapur*

Sri M. S. KRISHNAN (Malleswaram).—Madam, I call the attention of the Chief Minister to the murder that took place at Attalatti near Bijapur.

Sri N. HUTCHAMASTHY GOWDA (Minister for Revenue).—Sir, On behalf of the Hon. Chief Minister, I stete as follows.

ಅಟ್ಟಲಟ್ಟಿ ಗ್ರಾಮವು ಬಿಜಾಪುರದಿಂದ ಸುಮಾರು 7 ಮೈಲಿ ದೂರದಲ್ಲಿದೆ. ದಿನಾಂಕ 30-6-1972ರಂದು ಬೆಳಗ್ಗೆ 7 ಗಂಟೆಯಿಂದ 9 ಗಂಟೆಯೊಳಗೆ ಅಟ್ಟಲಟ್ಟಿ ಗ್ರಾಮದ ಶ್ರೀ ಸಿದ್ಧರಾಯ ಶಿದ್ದಪ್ಪ ಸೊನ್ನದ ಮತ್ತು ಬೇರೆ 10 ಜನರು ಕಾನೂನು ವಿರುದ್ಧ ಸಭೆಗೂಡಿ ಶ್ರೀಯುತರಾದ (1) ನಾಗಪ್ಪ ಸಾತಪ್ಪ ಸೊನ್ನದ (2) ಹನುಮಂತ ಶಿವಪ್ಪ ಸೊನ್ನದ (3) ಅಂಬಣ್ಣ ಸಾತಪ್ಪ ಸೊನ್ನದ (4) ಸೋಮಣ್ಣ ಹೊನ್ನಪ್ಪ ಪಟ್ಟದ (5) ಸಿದ್ದಪ್ಪ ಶಿವಪ್ಪ ಸೊನ್ನದ ಮತ್ತು (6) ಲಕ್ಷ್ಮಣ ಲಿಂಗಪ್ಪ ಬಲ್ಲದ—ಈ ಆರು ಜನರನ್ನು ಕೊಲೆ ಮಾಡಿ, ಅದೇ ಗ್ರಾಮದ ಬೇರೆ 4 ಜನರನ್ನು ಗಾಯಗೊಳಿಸಿದರು. ಅದೇ ದಿನ ಬೆಳಗ್ಗೆ ಸುಮಾರು 9 ಗಂಟೆಗೆ ಈ ಗಲಭೆಯ ಸುದ್ದಿ ಕೇಳಿದ ಬಿಜಾಪುರ ಗ್ರಾಮಾಂತರ ಪ್ರದೇಶದ ಪೋಲೀಸ್ ಸಬ್ ಇನ್ಸ್‌ಪೆಕ್ಟರವರು ಚಿಕ್ಕದೊಂದು ಪೋಲೀಸು ಪಡೆಯನ್ನು ಕೂಡಿಕೊಂಡು ಆ ಗ್ರಾಮಕ್ಕೆ ಜೀಪಿನಲ್ಲಿ ಧಾವಿಸಿದರು. ಗ್ರಾಮಕ್ಕೆ ತಲುಪಿದೊಡನೆಯೇ ಮೇಲ್ಕಂಡ ವ್ಯಕ್ತಿಗಳ ಕೊಲೆಯ ವಿಚಾರ ತಿಳಿದುಕೊಂಡರು. ಈ ಬಗ್ಗೆ ಕೇಸ್ ರಿಜಿಸ್ಟರಾಗಿದೆ. ತನಿಖೆ ಪ್ರಾರಂಭವಾಗಿದೆ. ಬೆಳಗಾವಿಯ ಡೆಪ್ಯುಟಿ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಬಿಜಾಪುರದ ಪೋಲೀಸ್ ಸೂಪರಿಂಟೆಂಡೆಂಟ್ ಮತ್ತು ಸಿ.ಐ.ಡಿ. ಪೋಲೀಸ್ ಸೂಪರಿಂಟೆಂಡೆಂಟ್ ಇವರನ್ನು ಈ ಉದ್ದೇಶಕ್ಕಾಗಿ ವಿಶೇಷವಾಗಿ ನೇಮಿಸಿದೆ. ಇವರು ತಾವೇ ತನಿಖೆಯ ಮೇಲ್ವಿಚಾರಣೆ ವಹಿಸಿಕೊಂಡಿದ್ದಾರೆ. 11 ಜನ ಅಪಾದಿತರಲ್ಲಿ 9 ಜನರನ್ನು ದಸ್ತಗಿರಿ ಮಾಡಲಾಗಿದೆ; ಇಬ್ಬರು ಪರಾರಿಯಾಗಿದ್ದಾರೆ. ಪರಾರಿಯಾಗಿರುವ ಅಪಾದಿತರನ್ನು ದಸ್ತಗಿರಿ ಮಾಡಲು ಯತ್ನ ನಡೆಯುತ್ತಿದೆ. ಗಾಯಗೊಂಡ 4 ಜನರನ್ನು ಸಿವಿಲ್ ಆಸ್ಪತ್ರೆಗೆ ಸೇರಿಸಲಾಗಿದೆ. ಇವರಲ್ಲೊಬ್ಬರು ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಅಪಾದಿತರನ್ನು ದಿನಾಂಕ 5-7-72ವರೆಗೆ ಪೋಲೀಸ್ ರಕ್ಷೆಯಲ್ಲಿ ಇರಿಸಲಾಗಿದೆ.

ಮೃತ ನಾಗಪ್ಪ ಸಾತಪ್ಪ ಸೊನ್ನದ ಹಾಗೂ ಅವರ ಬಂಧುಗಳು ಮತ್ತು ಅಪಾದಿತ ಸಿದ್ಧರಾಯ ಸಿದ್ದಪ್ಪ ಸೊನ್ನದ ಮತ್ತಿತರರು ಇವರ ನಡುವೆ ದೀರ್ಘಕಾಲದಿಂದ ಇದ್ದ ಭೂ ವಿವಾದವೂ ಮತ್ತು 1960 ಹಾಗೂ 1962ರಲ್ಲಿ ಈ ಗ್ರಾಮದಲ್ಲಿ ನಡೆದ ಎರಡು ಕೊಲೆ ಪ್ರಕರಣಗಳೂ ಇವುಗಳಿಂದುಂಟಾದ ವೈರವೇ ಈ ಕೊಲೆಗಳಿಗೆ ಕಾರಣವೆಂದು ವರದಿಯಾಗಿದೆ. 1960ನೇ ಇಸವಿಯ ಪ್ರಕರಣದಲ್ಲಿ ಅಪಾದಿತ ಸಿದ್ಧರಾಯ ಸಿದ್ದಪ್ಪ ಸೊನ್ನದ ಮತ್ತು ಬೇರೆ 3 ಜನರಿಗೆ, ಶಿವಪ್ಪ ನಿಂಗಪ್ಪ ಸೊನ್ನದ ಇವನ ಮಾವನಾದ ಹಾಗೂ ಅಪಾದಿತ ಸಿದ್ಧರಾಯ ಸಿದ್ದಪ್ಪ ಸೊನ್ನದ ಇವನ ಕಕ್ಕನಾದ ಶೇಗುಣಸಿಯ ಯಮನಪ್ಪ ಮಾದಪ್ಪನ ಕೊಲೆ ಮಾಡಿದ್ದಕ್ಕಾಗಿ ಜೀವಾವಧಿ ಶಿಕ್ಷೆ ವಿಧಿಸಲಾಗಿತ್ತು. ಅಪಾದಿತ ಸಿದ್ಧರಾಯ ಸಿದ್ದಪ್ಪ ಸೊನ್ನದನು ಸುಮಾರು ಒಂದೂವರೆ ವರ್ಷ ಹಿಂದೆ ಜೈಲಿನಿಂದ ಬಿಡುಗಡೆ ಹೊಂದಿದ್ದನು. ಆತ ಆ ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿಯಾಗಿದ್ದು ತನಗೆ ಶಿಕ್ಷೆಯಾಗುವುದಕ್ಕೆ ಕಾರಣನಾಗಿದ್ದ ಮೃತ ನಾಗಪ್ಪ ಸಾತಪ್ಪ ಸೊನ್ನದನ ಬಗೆಗೆ ವೈರ ಸಾಧಿಸುತ್ತಿದ್ದನು. ಅಲ್ಲದೆ, ಅಪಾದಿತ ಸಿದ್ಧರಾಯ ಸಿದ್ದಪ್ಪ ಸೊನ್ನದನಿಗೂ ಅವನ ಕಕ್ಕ ಶಿವಪ್ಪ ನಿಂಗಪ್ಪ ಸೊನ್ನದನಿಗೂ ಭೂ ವಿವಾದ ಇತ್ತು. ಈ ಭೂ ವಿವಾದದಲ್ಲಿ ಮೃತ ನಾಗಪ್ಪ ಸಾತಪ್ಪ ಸೊನ್ನದನು ಅಪಾದಿತ ಸಿದ್ಧರಾಯ ಸಿದ್ದಪ್ಪ ಸೊನ್ನದನ ಕಕ್ಕನಿಗೆ ಬೆಂಬಲವಾಗಿದ್ದನೆಂದು ವರದಿಯಾಗಿದೆ. ಸ್ಥಳೀಯ ಪೋಲೀಸರು ಕ್ರಿಮಿನಲ್ ಪ್ರೊಸೀಜರ್ ಕೋಡಿನ 107ನೆಯ ಪ್ರಕರಣದ ಮೇರೆಗೆ ಇವೆರಡೂ ಪಂಗಡಗಳ ಮೇಲೆ ವ್ಯವಹರಣೆ ಹೂಡಿದ್ದರು. ಈ ವ್ಯವಹರಣೆ ಕೋರ್ಟಿನಲ್ಲಿ ವಿಚಾರಣೆಯಲ್ಲಿದೆ.

ಗ್ರಾಮದಲ್ಲಿ ಈಗ ಸಶಸ್ತ್ರ ಪೋಲೀಸ್ ಪಡೆಯನ್ನು ಇರಿಸಲಾಗಿದೆ. ಈಗ ಪರಿಸ್ಥಿತಿ ಶಾಂತವಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ತಾವು 9 ಜನಗಳನ್ನು ಅರೆಸ್ಟ್ ಮಾಡಿದ್ದೇವೆ, ಇಬ್ಬರು ಕಣ್ಮರೆಯಾಗಿದ್ದಾರೆ ಎಂದು ಹೇಳಿದಿರಿ. ಕಣ್ಮರೆಯಾಗಿರುವವರು ಯಾರು ಎಂಬುದನ್ನು ಹೇಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವರು ಯಾರು ಯಾರು ಎಂಬ ವಿವರಗಳು ಈಗ ನನ್ನಲ್ಲಿ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಸಿದ್ದಪ್ಪ ಶಿವಣ್ಣ ಸನ್ನದ್ ಎನ್ನುವವರು ಜೈಲನಿಂದ ಬಿಡುಗಡೆಯಾಗಿದ್ದಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಲ್ಲ.

ಶ್ರೀ ಸಿ. ಎನ್. ಪಾಟೀಲ್.—ಎರಡು ಪಂಗಡಗಳ ಮಧ್ಯೆ ವೈರತ್ವವಿದ್ದುದರಿಂದ ಈ ಪ್ರಕರಣ ಬೆಳೆದು ಅದರ ಸಲುವಾಗಿ 107 ನೇ ಕಲಂ ಪ್ರಕಾರ ಕಟ್ಟೆ ಹಾಕಿ ಅದು ಕೋರ್ಟಿನಲ್ಲಿ ಪೆಂಡಿಂಗ್ ಇದೆ ಎಂದು ಹೇಳಿದಿರಿ, ಈ ವಿಚಾರ ಸರ್ಕಾರಕ್ಕೆ ಮೊದಲೇ ಗೊತ್ತಿತ್ತು. ಹೀಗಿರುವಾಗ ಸರ್ಕಾರದವರು ಈ ಬಗ್ಗೆ ಮುಂಜಾಗರೂಕತೆ ಕ್ರಮವನ್ನು ಏತಕ್ಕೆ ಕೈಗೊಳ್ಳಲಿಲ್ಲ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವೈರತ್ವ ಎಷ್ಟೋ ಕಡೆ ಇರುತ್ತದೆ. ಅದರಿಂದ ಇಂಥಾ ಪರಿಣಾಮಗಳು ಉಂಟಾಗುತ್ತವೆ. ಅಂಥವುಗಳನ್ನು ಪ್ರತಿಯೊಂದು ಕ್ಷಣದಲ್ಲೂ ಸರ್ಕಾರ ಕಾದು ಕುಳಿತುಕೊಂಡಿರುವುದಕ್ಕಾಗುವುದಿಲ್ಲ.

ಶ್ರೀ ಜೆ. ಎನ್. ಕಬಾಡಿ.—ಈಗ ಎರಡು ವರ್ಷಗಳಿಂದಲೂ ಅಲ್ಲಿ ಕೊಲೆಸುಲಿಗೆಗಳು ಆಗುತ್ತಿತ್ತು. ಒಂದು ಭೀಕರ ಪರಿಸ್ಥಿತಿ ಉಂಟಾಗುತ್ತದೆ ಎಂದು ಸರ್ಕಾರಕ್ಕೆ ಗೊತ್ತಿತ್ತು. ಕೆಲವು ಕಾರಣಕ್ಕಾಗಿ ಇಂಥಾ ಒಂದು ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದಾರೆ. ಅದರಿಂದ ಅಲ್ಲಿ ಪರಿಸ್ಥಿತಿ ಉಲ್ಬಣವಾಗುವುದಕ್ಕೆ ಕಾರಣವಾಯಿತು. ಅಲ್ಲಿ ಪೋಲೀಸಿನವರು ಮತ್ತು ಸರ್ಕಾರದವರು ಆ ಬಗ್ಗೆ ಅಲಕ್ಷ್ಯ ಮಾಡಿದ್ದರಿಂದ ಈ ರೀತಿ ಆಗುವುದಕ್ಕೆ ಕಾರಣವಾಯಿತು. ಆದ್ದರಿಂದ ಅದಕ್ಕೆ ತಾವು ಜವಾಬ್ದಾರರು ಹೌದೇ ಅಥವಾ ಅಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಈಗಾಗಲೇ ಸಭೆಯಮುಂದೆ ವಿನಂತಿ ಮಾಡಿದೆ. ಹೀಗೆ ಎಷ್ಟೋ ಪ್ರಸಂಗಗಳಲ್ಲಿ ಒಬ್ಬರಿಗೊಬ್ಬರಿಗೆ ವೈರತ್ವ ಇರುತ್ತದೆ. ಆದ್ದರಿಂದ ಸಾಮಾನ್ಯವಾಗಿ ಪೋಲೀಸಿನವರು ಆಯಾ ಪ್ರಸಂಗಗಳಿಗೆ ಎಷ್ಟು ಗಮನಕೊಡಬೇಕೋ ಅಷ್ಟು ಗಮನ ಕೊಟ್ಟು ಎಚ್ಚರಿಕೆಯಿಂದ ನೋಡುತ್ತಾರೆ. ಆ ರೀತಿ ಗಮನಕೊಟ್ಟಿಲ್ಲ ಎಂದು ಮಾನ್ಯ ಸದಸ್ಯರು ಸರ್ಕಾರದ ಮೇಲೆ ಹಾಗೂ ಪೋಲೀಸರ ಮೇಲೆ ಆಪಾದನೆ ಮಾಡಿರುವುದು ಅವರ ಅಭಿಪ್ರಾಯ.

ಶ್ರೀ ಎಂ. ಎಸ್. ಕೃಷ್ಣನ್.—ಆ ಕೊಲೆ ಸಂಬಂಧದಲ್ಲಿ ಜಮೀನಿನ ವ್ಯವಹಾರಕ್ಕೆ ಸಂಬಂಧಪಟ್ಟದ್ದೋ, ರೈತರಿಗೆ ಸಂಬಂಧಪಟ್ಟದ್ದೋ ಅಥವಾ ಅಂತರಿಕ ಫ್ಯಾಮಿಲಿಯ ವಿಷಯಕ್ಕೆ ಸಂಬಂಧಪಟ್ಟದ್ದೋ ಎಂದು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಜಮೀನಿನ ಸಂಬಂಧವಾದದ್ದು.

(iii) re: *Lands allotted in Amrit Mahal Kaval of Halkudike.*

SRI T. M. MANJUNATH (Tiptur).—I call the attention of the Minister for Revenue to the difficulties experienced by farmers who have been allotted lands in Amrit Mahal Kaval of Halkudike.

SRI N. HUTCHAMASTHY GOWDA.—Sir, I state as follows :

The call attention notice relates to the disposal of land in S. No. 1 of Halkudike Amruthmahal Kaval Village, Tiptur Taluk.

S. No. 1 of Halkudike Amruthmahal Kaval is classified as 'Amruthmahal Kaval' measuring 4484 acres and 38 guntas. Out of this, Government in their order No. RD 32 LAD 62 dated 1st August 1964 have transferred an extent of 750 acres of land to the Revenue Department for cultivation purposes. The above transferred land was handed over to the Revenue Department on 28th July 1967 after observing all formalities in the matter.

(SRI N. HUTCHAMASTHY GOWDA)

Out of the extent of 750 acres transferred to Revenue Department, an extent of 464-00 acres of land has been disposed of so far as per rules for cultivation purpose and in consultation with the Taluk Level Consultative Committee.

The details of categorywise disposals are as follows :

				A G
1	Depressed class	...	...	100-00
2	Military persons	...	...	150-00
3	Political sufferers	...	...	24-00
4	Others and Goldsmiths	...	...	140-00
5	Siddaganga Mutt	...	...	50-00
			Total :	464-00

In respect of the disposed extent Saguvali Chits have been issued to grantees after forming blocks.

It is reported that the present dispute is in between the Excise Department and the grantees noted in Item No. 4 (*i.e.*, Goldsmiths). The Excise Inspector, Tiptur Range who has visited the area on 25th June 72 has stated that there are 10,000 to 15,000 young Date plants in the land granted to Goldsmiths and thus the land has to be reserved and included in the date reserve list. It is reported that the grantees have resorted to remove the trees by using a Bulldozer to level the land. It is further stated that there were about 35,000 Date Plants prior to the beginning of the alleged bulldozing operations by the grantees, and these grantees have not obtained the permission before launching the alleged cutting operations as per the provisions of the Mysore Excise (cutting and removal of Date leaves and deadwood) Rules, 1967.

The Tahsildar, Tiptur Taluk and the Superintendent of Excise Tumkur have been instructed to inspect the area jointly and to furnish their opinion in regard to the points raised by the Excise Inspector, Tiptur Range and also as to the removal or preservation of the Date trees on the area in question for deciding the issue. Pending decision in the matter the Tahsildar, Tiptur has been directed to see that the *Status-quo* is maintained in the area and further removal of Date trees is stopped forthwith.

ಶ್ರೀ ಟಿ. ಎಂ. ಮಂಜುನಾಥ್.—ಆ ಜಮೀನನ್ನು ಹಂಚಬೇಕಾದರೆ ಆ ಕಮಿಟಿಯಲ್ಲಿ ರೆವಿನ್ಯೂ ಆಫೀಸರು, ತಹಶೀಲ್ದಾರರು, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರು, ಎಗ್ಜಿಕ್ಯೂಟೀವ್ ಇಂಜನಿಯರು ಎಲ್ಲರೂ ಇದ್ದಾರೆ. ಹೀಗಿರುವಾಗ ಆ ಜಮೀನನ್ನು ಹಂಚುವುದಕ್ಕೆ ಸಂಬಂಧಪಟ್ಟಂತೆ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಿಂದ ಸ್ಕೈನು ಮಾಡಿಸಿಕೊಂಡಿದ್ದಾರೆ. ಅದು ವ್ಯವಸಾಯಕ್ಕೆ ಯೋಗ್ಯವಾಗಿದೆ ಆ ಜಮೀನನ್ನು ಅವರಿಗೆ ಹಂಚಬಹುದು ಎಂದು ಅವರು ತಮ್ಮ ಒಪೀನಿಯನ್ ಕೊಟ್ಟಿದ್ದಾರೆ. ಇಷ್ಟೆಲ್ಲಾ ಆದಮೇಲೆ ಆ ಜಮೀನನ್ನು ಬಡಜನಗಳಾದ ಅಕ್ಕಸಾಲಿಗರಿಗೆ ಹಂಚಿದ ಮೇಲೆ ಅವರು ತಹಶೀಲ್ದಾರರಿಂದ ಸಾಗುವಳಿ ಚೀಟಿಯನ್ನು ಪಡೆದುಕೊಂಡು ಅದನ್ನು ಉಳುಮೆ ಮಾಡುವುದಕ್ಕೆ ಹೋದಾಗ ಎಕ್ಸೈಜ್ ಇನ್ಸ್‌ಪೆಕ್ಟರು ಆ ಜಮೀನಿನಲ್ಲಿ ಈಚಲು ಮರಗಳಿವೆ, ಅದು ರಿಜರ್ವ್ ಲ್ಯಾಂಡ್ ಅದನ್ನು ಉಳುಮೆ

ಮಾಡಕೂಡದು ಎಂದು ಹೇಳಿದಾಗ ಅವರು ನಾವು ತಹಶೀಲ್ದಾರರಿಂದ ಸಾಗುವಳಿ ಚೀಟಿಯನ್ನು ತಂದಿದ್ದೇವೆ ಎಂದು ಹೇಳಿದರೂ ಕೂಡ ಅದಕ್ಕೆ ಅವರು ಒಪ್ಪದೆ ತಹಶೀಲ್ದಾರರು 50 ರೂಪಾಯಿಗಳನ್ನು ಕೊಟ್ಟರೆ ಸಾಗುವಳಿ ಚೀಟಿ ಕೊಡುತ್ತಾರೆ ಎಂದು ಹೇಳಿ ಆ ಬಡವರಿಗೆ ಆ ಭೂಮಿಯನ್ನು ಉಳುವುದಕ್ಕೆ ತೊಂದರೆ ಕೊಟ್ಟಿದ್ದಾರೆ. ಅಮೃತಮಹಲ್ ಕಾವಲಿನಲ್ಲಿ ಈಚಲು ಮರಗಳು ಏನಿವೆ ಆ ಜಮೀನನ್ನು ಉಳಿಸಿಕೊಂಡು ಬಾಕಿ ಜಮೀನನ್ನು ಬಡ ಜನಗಳಿಗೆ ಹಂಚಿದ್ದಾರೆ. ಅದು ವ್ಯವಸಾಯಕ್ಕೆ ಯೋಗ್ಯವಾದ ಜಮೀನು. ಆ ಜಮೀನನ್ನು ಅವರಿಗೆ ಸಾಗುವಳಿಗೆ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. 10 ಸಾರಿ ಅರ್ಜಿಗಳನ್ನು ಕೊಟ್ಟಿದ್ದೇವೆ. ಆದರೂ ಕ್ರಮ ತೆಗೆದುಕೊಳ್ಳದಿರುವುದಕ್ಕೆ ಕಾರಣವೇನು ? ಇದಕ್ಕೆ ಜವಾಬ್ದಾರರು ಯಾರು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಾಲ್ಲೂಕು ಲೆವಲ್ ಕಮಿಟಿಯಲ್ಲಿ ಸಾಮಾನ್ಯವಾಗಿ ಜಿಲ್ಲಾ ಮಟ್ಟದ ಎಕ್ಸೈಸ್ ಆಫೀಸರ್ ಇರತಕ್ಕಂತಹ ಪದ್ಧತಿ ಇಲ್ಲ. ಅವರು ಆ ಸಮಯದಲ್ಲಿ ಹೇಗೆ ಮಾಡಿದ್ದಾರೆಂಬುದನ್ನು ವರದಿ ತರಿಸಿಕೊಂಡು ಹೇಳಬೇಕಾಗಿದೆ. ಅದೂ ಅಲ್ಲದೆ ಅವರು ತಹಸೀಲ್ದಾರ್‌ರವರು 50 ರೂಪಾಯಿ ಕೊಟ್ಟರೆ ಕೊಡುವರು ಎಂದು ಕೂಡ ಹೇಳುತ್ತಿದ್ದಾರೆ. ಆದ್ದರಿಂದ ಇದರಲ್ಲಿ ಎಷ್ಟು ಸತ್ಯಾಂಶ ಇದೆಯೆಂಬುದನ್ನು ನೋಡಬೇಕು. ಅದನ್ನು ವಿಚಾರಿಸುತ್ತೇನೆ. ಆ ಜಮೀನಿನಲ್ಲಿ ಡೇಟ್ ಟ್ರೀ ಬೆಳೆಸುವುದಕ್ಕೆ ರಿಸರ್ವ್ ಮಾಡಿದ್ದಾರೆ, ಅದನ್ನು ಉಳಿಸಿಕೊಂಡು ಪಕ್ಕದ ಜಮೀನು ಕೊಡುವುದಕ್ಕೆ ವರದಿ ತರಿಸಿಕೊಂಡು ತೀರ್ಮಾನ ಮಾಡಬೇಕಾಗುತ್ತದೆ. ನಾನು ಹಿಂದಿನ ಗಮನ ಸೆಳೆಯುವ ಸೂಚನೆ ಬಗ್ಗೆ ಒಂದು ವಿಷಯವನ್ನು ಇಲ್ಲಿ ಹೇಳುತ್ತೇನೆ. ಅದರಲ್ಲಿ ಇನ್ನಿಬ್ಬರು ತಪ್ಪಿಸಿಕೊಂಡು ಹೋಗಿದ್ದಾರೆ ಎನ್ನುವ ವಿಷಯ ಹೇಳಿತ್ತು. ಈಗ ಅವರಿಬ್ಬರನ್ನು ಕೂಡ ಅರೆಸ್ಟ್ ಮಾಡಿದ್ದೇವೆ. ಅವರು ಪೋಲೀಸ್ ಕಸ್ಟಡಿಯಲ್ಲಿದ್ದಾರೆ.

Statement of the Minister for Education

re : *Admission of Students in Government College, Kolar*

Sri C. BYRE GOWDA (Vemgal).—I request the Hon. Minister for Education to make a statement regarding admission of students in Government College, Kolar.

Sri A. R. BADARINARAYANA (Minister for Education).—In regard to the matter raised by the hon. member regarding admission to the Kolar College, I got in touch with the Principal and have instructed him to see most of the boys are admitted. Now I have received report to the effect that everyone of them has been admitted and there is no trouble. Apart from this, the question of starting a Junior College for Kolar Town is under active consideration of the Government and I hope orders will be issued shortly.

Sri C. BYRE GOWDA.—Will that be Government Junior College ?

Sri A. R. BADARINARAYANA.—Yes, yes.

Notice of adjournment motion re: *Purchasing the three Palaces belonging to the former Maharaja of Mysore*

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಈಗ ಊಟಿ, ಬೆಂಗಳೂರು ಮತ್ತು ಮೈಸೂರು ಅರಮನೆಗಳನ್ನು ಖರೀದಿ ಮಾಡತಕ್ಕ ವಿಷಯದಲ್ಲಿ ಮತ್ತು ಅದರ ಬಗ್ಗೆ 30–40 ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕ ವಿಷಯದಲ್ಲಿ ನಾನು ಒಂದು ನಿಲುವಳಿ ಸೂಚನೆಯನ್ನು ಕಳಿಸಿದ್ದೆ. ಅದಕ್ಕೆ ಮುಂಚೆ ಗಮನ ಸೆಳೆಯುವ ಒಂದು ಸೂಚನೆಯನ್ನು ಸಹ ಕಳಿಸಿದ್ದೆ. ಅದಕ್ಕೆ ಕೂಡ

(ಶ್ರೀ ಎಸ್. ಬಂಗಾರಪ್ಪ)

ಸರ್ಕಾರದಿಂದ ಯಾವ ಉತ್ತರವೂ ಬಂದಿಲ್ಲ. ಜೊತೆಗೆ ಮೂರು ಅರಮನೆಗಳನ್ನು ಖರೀದಿ ಮಾಡುವ ವಿಚಾರದಲ್ಲಿ ಕೇಂದ ಸರ್ಕಾರದವರು ಅದನ್ನು ಮಾರಬಹುದು ; ಅದು ಅವರವರಿಗೆ ಸೇರಿರತಕ್ಕಂತಹ ವಿಚಾರ ಎಂದು ಹೇಳಿದ್ದಾರೆಂದು ಮುಖ್ಯಮಂತ್ರಿಯವರು ಸಹ ಹೇಳಿದ್ದಾರೆ. ಅದರ ಜೊತೆಗೆ ಮೊನ್ನೆ ಒಂದು ಹೇಳಿಕೆಕೊಟ್ಟು, ಈ ವಿಷಯವನ್ನು ಮಾನವೀಯತೆಯ ದೃಷ್ಟಿಯಿಂದ ನೋಡಬೇಕಾಗುತ್ತದೆ ಎಂದು ಹೇಳಿದ್ದಾರೆ. ನಾನಾದರೂ ಹೇಳುವುದೇನೆಂದರೆ, ಈ ಸೊತ್ತು ಜನತೆಯ ಸೊತ್ತು. ಜನತೆಯ ಸೊತ್ತು ಇದು ಆಗಿರುವುದರಿಂದ ಇದನ್ನು ಮಾರತಕ್ಕಂತಹ ಅಧಿಕಾರ ರಾಜರಿಗೆ ಇಲ್ಲ.

ಅಧ್ಯಕ್ಷರು.—ಅದರ ಬಗ್ಗೆ ನಾನು ತಮಗೆ ಬರೆದು ಕಳುಹಿಸಿದ್ದೇನೆ. ಪುನಃ ತಾವು ಅದರ ಬಗ್ಗೆ ಭಾಷಣವೇ ಶುರು ಮಾಡಿದ್ದೀರಲ್ಲ! ನಾನು ಅಪ್ಪಣೆ ಕೊಟ್ಟ ಮೇಲೆ ತಾವು ಮಾತನಾಡತಕ್ಕದ್ದು.

ಶ್ರೀ ಎಸ್. ಬಂಗಾರಪ್ಪ.—ಈಗಾಗಲೇ ಇವರ ಬಗ್ಗೆ ಮುಖ್ಯ ಕಾರ್ಯದರ್ಶಿಯವರು ಮಹಾರಾಜರೊಡನೆ ಮಾತನಾಡತಕ್ಕ ವಿಷಯ ಪತ್ರಿಕೆಯಲ್ಲಿಯೂ ಬಂದಿದೆ. ಇದು ಜನತೆಯ ಸೊತ್ತಾಗಿರುವುದರಿಂದ ಇದರ ಬಗ್ಗೆ ಮಾನವೀಯತೆಯ ದೃಷ್ಟಿಯಿಂದ ಕಾಣತಕ್ಕದ್ದು ಅಗತ್ಯವಿಲ್ಲ. ಇವತ್ತು ಬಡವರು ಏನಿದ್ದಾರೆ ಮತ್ತು ಅರೆ ಹೊಟ್ಟೆಯ ಜನ ಏನಿದ್ದಾರೆ, ಅವರನ್ನು ಮಾನವೀಯತೆಯ ದೃಷ್ಟಿಯಿಂದ ನೋಡಬೇಕಾಗಿದೆಯೇ ವಿನಹ ಇಂತಹ ಬಂಡವಾಳಶಾಹಿಗಳನ್ನಲ್ಲ. ರಾಜ್ಯ ಸರ್ಕಾರದವರು ಮುಖ್ಯ ಕಾರ್ಯದರ್ಶಿಯವರನ್ನು ಅಲ್ಲಿಗೆ ಏಕೆ ಕಳಿಸಿದ್ದಾರೆಂಬುದನ್ನು ತಿಳಿಸಬೇಕು. ಇದರಲ್ಲಿ ರಾಜ್ಯ ಸರ್ಕಾರದ ಪಾತ್ರವೂ ಇದೆ, ಮುಖ್ಯ ಮಂತ್ರಿಯವರ ಪಾತ್ರವೂ ಇದೆ. ರಾಜ್ಯ ಸರ್ಕಾರದವರು ತಮ್ಮ ಒಪ್ಪಿಗೆಯನ್ನು ಕೊಡದೆ ಪುನಃ ಕೇಂದ್ರ ಸರ್ಕಾರದವರು ಕೊಡುವುದಿಲ್ಲ. ಇದರಲ್ಲಿ ಶ್ರೀಮಾನ್ ದೇವರಾಜ ಅರಸರ ಪ್ರಮುಖ ವಾದ ಪಾತ್ರವಿದೆಯೆಂದು ತಿಳಿಯುತ್ತೇನೆ. ಏಕೆಂದರೆ ಇವರು ಅರಸರು. ಒಂದು ವೇಳೆ ಇದಕ್ಕೆ ಕಾನೂನಿನ ತಡೆ ಬಂದರೆ ಆ ಕಾನೂನನ್ನು ಬದಲಾವಣೆ ಮಾಡತಕ್ಕ ಕಾರ್ಯಕ್ರಮ ಹಾಕಿಕೊಳ್ಳಬೇಕು. ಆದ್ದರಿಂದ ನನ್ನ ನಿಲುವಳಿ ಸೂಚನೆಯ ಮೇಲೆ ಅಧ್ಯಕ್ಷರು ಕೊಟ್ಟಿರತಕ್ಕಂತಹ ಅಭಿಪ್ರಾಯವನ್ನು ರಿವೈಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಆ ಅರಮನೆಗಳಿಗೆ ಒಂದಕ್ಕೆ 800 ಎಕರೆ ಜಮೀನು ಇದೆ, ಇನ್ನೊಂದರಲ್ಲಿ 400 ಎಕರೆ ಜಮೀನು ಇದೆ. ಪುನಃ ನೀವು ಮಹಾರಾಜರನ್ನು ರಾಜರನ್ನಾಗಿ ದಯವಿಟ್ಟು ಮಾಡಬೇಡಿ. ಅವರಿಗೆ ಜೀವನಕ್ಕೆ ಎಷ್ಟು ಬೇಕು, ಅಷ್ಟು ಅವರು ಇಟ್ಟುಕೊಳ್ಳಲಿ. ಆದರೆ ಅರಮನೆಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ದಯವಿಟ್ಟು ಮುಖ್ಯಮಂತ್ರಿಯವರು ಇದರ ಬಗ್ಗೆ ಹೇಳಿಕೆಯನ್ನು ಕೊಡಬೇಕು. ಮತ್ತು ಅಧ್ಯಕ್ಷರು ಏನೊಂದು ಅಪ್ಪಣೆಯನ್ನು ಅದರ ಮೇಲೆ ಕೊಟ್ಟಿದ್ದಾರೆ, ಅದನ್ನು ಪುನಃ ರಿವೈಸ್ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಇದು ಬಹಳ ಗಂಭೀರವಾದ ಪ್ರಶ್ನೆ.

ಅಧ್ಯಕ್ಷರು.—ಇದು ಮಹತ್ವದ ಪ್ರಶ್ನೆಯೆಂದು ಈ ಮನೆಯಲ್ಲಿ ಎಷ್ಟೋ ಸಾರಿ ಚರ್ಚೆ ಮಾಡಿದ್ದೇವೆ. ಈಗ ಏನು ಮಹತ್ವದ ವಿಚಾರಗಳು ಇವೆಯೋ ಅವುಗಳನ್ನು ಬಂಗಾರಪ್ಪನವರು ಹೇಳಿದ್ದಾರೆ. ಪುನಃ ತಾವು ಏಕೆ ಎದ್ದುನಿಂತುಕೊಳ್ಳುತ್ತೀರಾ ?

† ಶ್ರೀ ವಾಟಾಳ್ ನಾಗರಾಜ್ —ಅಧ್ಯಕ್ಷರೇ, ಇದರಲ್ಲಿ ಯಾವ ಒಂದು ಪ್ರೆಸ್ಟೀಜ್ ಪ್ರಶ್ನೆಯಾಗಲಿ, ಅಥವಾ ಯಾರನ್ನಾದರೂ ದೂಷಿಸಬೇಕೆಂದಾಗಲಿ ನಮಗೆ ಉದ್ದೇಶ ಇಲ್ಲ. ಇವತ್ತು ಮಾನ್ಯ ಮುಖ್ಯ ಮಂತ್ರಿಯವರ ಧ್ಯೇಯ ಧೋರಣೆಗಳ ಬಗ್ಗೆ ನಾವು ಒಪ್ಪಿಕೊಂಡ ಜನರು. ಅವರು ಆಸ್ತಿ ಮಿತಿ ಎರಡು ಲಕ್ಷ ರೂಪಾಯಿಗಳು ಇರಬೇಕು ಮತ್ತು 10 ಸ್ಟ್ಯಾಂಡರ್ಡ್ ಎಕರೆ ಇರಬೇಕು ಎಂದು ಹೇಳುತ್ತಿದ್ದಾರೆ. ಅದನ್ನು ಇನ್ನೂ ಕಡಿಮೆ ಮಾಡಿದರೆ ನಮಗೆ ಇನ್ನೂ ಸಂತೋಷವಾಗುತ್ತದೆ. ನೀವು ಎಷ್ಟು ಕಡಿಮೆಗೆ ತರುತ್ತೀರೋ, ಅಷ್ಟನ್ನು ಮಾಡಿದರೆ ನಾನು ನಿಮಗೆ ನಿಮ್ಮ ಉದ್ದ ಮತ್ತು ತೂಕದಷ್ಟು ಗಾತ್ರದ ಹಾರವನ್ನು ಹಾಕುತ್ತೇನೆ. ದೆಹಲಿಯಲ್ಲಿ ನೀವು 10 ಸ್ಟ್ಯಾಂಡರ್ಡ್ ಎಕರೆ ಇರಬೇಕು, ಎರಡು ಲಕ್ಷಕ್ಕೆ ಸೀಲಿಂಗ್ ಲಿಮಿಟ್ ಇರಬೇಕೆಂದು ಹೇಳುತ್ತಿದ್ದೀರಿ. ಇಂತಹ ಕಾರ್ಯಕ್ರಮಗಳನ್ನು ತಾವು ಇವತ್ತು ದೇಶದಲ್ಲಿ ತೆಗೆದುಕೊಳ್ಳುತ್ತಿದ್ದೀರಿ. ನಾನು ನಿಮ್ಮ ಪಾರ್ಟಿಯವನು ಅಲ್ಲದಿದ್ದರೂ ನಿಮ್ಮ ಇಂತಹ ಕಾರ್ಯಕ್ರಮಗಳಿಗೆ ನಿಮಗೆ ಹೆಗಲಿಗೆ ಹೆಗಲು ಕೊಟ್ಟು ಸಹಕಾರ ನೀಡುವವರಲ್ಲಿ ಒಬ್ಬ. ಆದರೆ ಮೈಸೂರಿನ ಮಹಾರಾಜರ ಬಗ್ಗೆ ನನಗೆ ಬಹಳ ಅಪಾರವಾದ ನಂಬಿಕೆ ಇದೆ. ಅವರಿಗೆ ಬೇಕಾದರೆ, ಅಮೇರಿಕದಂತಹ ದೊಡ್ಡ ದೇಶದ ಅಂಬ್ಯಾಸಡರನ್ನಾಗಿ ಮಾಡಿ ; ಯಾರು ಬೇಡವೆನ್ನುತ್ತಾರೆ. 13 ಲಕ್ಷಕ್ಕೆ ಕಾರ್ಪೊರೇಷನ್ನಿನವರು ರಿಸೊಲ್ಯೂಶನ್ ಮಾಡಿ ಬೇಗಂ ಮಹಲನ್ನು ಖರೀದಿ ಮಾಡಬೇಕೆಂದು ಸಹ ಹೇಳುತ್ತಿದ್ದರು. ಬಳ್ಳಾರಿಯಲ್ಲಿ ಒಬ್ಬರು ದೊಡ್ಡ

ಶ್ರೀಮಂತರು ನನಗೆ ಸಿಕ್ಕಿದರು. ಅವರಿಗೆ ಮೂರು ದೊಡ್ಡ ದೊಡ್ಡ ಮನೆಗಳು ಇವೆ. ಅವರು ಈಗ ಭಯದಿಂದ ಒಂದು ಮನೆ ನನಗೆ ಇರಲಿ ಎಂದು ಹೇಳುತ್ತಿದ್ದಾರೆ. ಹೀಗೆ ಈಗ ಶ್ರೀಮಂತರು ಮನೆಗೆ ಸೀಲಿಂಗ್ ಬರುತ್ತದೆ ಎಂದು ಭಯಪಟ್ಟುಕೊಂಡು ಇರುವಾಗ ಈ ರೀತಿ ಮಾಡುವುದು ಸರಿಯಲ್ಲ.

2-30 P.M.

ಅಧ್ಯಕ್ಷರು.—ಒಂದು ನಿಮಿಷ, ಒಂದು ನಿಮಿಷ, ಸ್ವಲ್ಪ ಸ್ವಲ್ಪ, ತಾಳಿ, ತಾಳಿ ಎಂದುಕೊಂಡೇ ಒಂದೊಂದು ನಿಮಿಷದಂತೆ ಹೆಚ್ಚಿಸಿಕೊಳ್ಳುತ್ತಾ ನೀವು ನಿಮ್ಮ ಭಾಷಣವನ್ನು ಮಾಡುವುದಕ್ಕಾಗುವುದಿಲ್ಲ. ಆ ರೀತಿಯಾಗಿ ಕಾಲಾವಕಾಶವನ್ನು ನಿಮಗೆ ಹೆಚ್ಚಿಗೆ ಕೊಡುವುದಕ್ಕಾಗುವುದಿಲ್ಲ. ಇತರ ಸದಸ್ಯರು ಹೇಳಿದ್ದನ್ನೇ ತಾವು ಹೇಳುತ್ತಾ ಹೋದರೆ ಕಾಲಾವಕಾಶ ಹೆಚ್ಚಿಗೆ ಬೇಕಾಗುತ್ತದೆ. ಈ ವಿಚಾರದಲ್ಲಿ ಸರ್ಕಾರ ಏನು ಹೇಳುತ್ತದೋ ಅದನ್ನು ಕೇಳೋಣ.

ಶ್ರೀ ವಾಟಾಳ್ ನಾಗರಾಜ್.—ಕೊನೆಯದಾಗಿ ಒಂದು ಮಾತು. ನಾನು ನಿಮಗೆ ಕಳುಹಿಸಿರತಕ್ಕ ನಿಲುವಳಿ ಸೂಚನೆಗೆ ತಾವು ಅವಕಾಶಮಾಡಿಕೊಟ್ಟು ಈ ಸಭೆಯಲ್ಲಿ ಅದು ಚರ್ಚೆಯಾಗಬೇಕು. ಆ ನಿಲುವಳಿ ಸೂಚನೆಯ ಚರ್ಚೆಗೆ ನೀವು ಅನುಮತಿ ಕೊಡಬೇಕು. ಇದು ಬಹಳ ಗುರುತರವಾದುದು. ಇದು ಇಡೀ ದೇಶದ ಪ್ರಶ್ನೆ. ಆಂಧ್ರಕ್ಕೆ ಬೇರೆ, ಮಹಾರಾಷ್ಟ್ರಕ್ಕೆ ಬೇರೆ, ಮೈಸೂರಿಗೆ ಬೇರೆ ಎನ್ನುವ ಪ್ರಶ್ನೆ ಬೇಡ. ಎಲ್ಲರಿಗೂ ಒಂದೇ ರೀತಿಯ ಕಾನೂನು ಅನ್ವಯವಾಗಬೇಕು. ಈ ವಿಚಾರವನ್ನು ಈ ಸಭೆಯಲ್ಲಿ ಚರ್ಚೆಮಾಡಲು ತಾವು ಅವಕಾಶ ಕೊಡಬೇಕೆಂದು ನಾನು ಒತ್ತಾಯಮಾಡುತ್ತೇನೆ.

Sri C. M. ARUMUGAM (K. G. F.).—I am one of those who have signed the Motion. I am not going to repeat what my other friends have said. My submission is that at the time of the merger of States, there were different agreements between different States. So far as Mysore State is concerned, a new clause has been added that the State Government shall be responsible for maintaining the Palaces so long as the ruler and his successors live. Since they have taken away the privileges and the privy purses of these Maharajas, there arises a situation whether these palaces are the property of the Government. If you agree that it is the property of the State, it is necessary that this House should be consulted in the matter We see some statement that the Maharaja has been permitted to alienate the property without the knowledge of this House. The question about the three palaces, two in the State and one at Ooty, has been raised several times in this House, but no official statement has been made by the Chief Minister to the Call Attention Notice that we have given. This House has been kept completely in the dark. It is a very important matter concerning the State. The decision of the Chief Minister cannot be a State decision ; the Party decision cannot be a State decision. This House is the custodian of all matters pertaining to the State and therefore this House is entitled to discuss this issue. You Madam as a senior Parliamentarian will accept that when the House is in Session, they cannot announce any decision outside the House. In fact, the decision about the appointment of Backward Classes Commission was announced without referring the matter in this House—of course the Finance Minister casually stated about it yesterday here. You have replied to our letter. But it is not a Ruling. A letter from the Hon'ble Speaker is not a Ruling, because it does not form part of the proceedings of this House. It is a matter of public importance concerning some crores of rupees and a matter which touches the Agreement. As you are aware,

(SRI C. M. ARUMUGAM)

the Palace in Rajasthan has been converted into a museum. Since you have not given a Ruling, I submit that even now you can kindly permit a discussion on this subject.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೆ, ಇದರಲ್ಲಿ ಮುಖ್ಯವಾದ ಪ್ರಶ್ನೆ ಅಡಗಿದೆ. ಇದರ ಬಗ್ಗೆ ಈಗಾಗಲೇ ಇನ್‌ಸ್ಟ್ರುಮೆಂಟ್ ಆಫ್ ಆಕ್ಸೆಪ್ಷನ್ ಆಗಿರುವುದರಿಂದ ಈ ಮೂರು ಅರಮನೆಗಳ ಮೇಲ್ವಿಚಾರಣೆಯ ಕಾರ್ಯವನ್ನು ಸರ್ಕಾರವೇ ನಿರ್ವಹಿಸುತ್ತಾ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿದೆ. ನನಗೆ ತಿಳಿದಿರುವ ಹಾಗೆ ಕೇಂದ್ರ ಸರ್ಕಾರ ಒಂದು ಕಂಡೀಷನ್ನನ್ನು ರಿವೋಕ್ ಮಾಡಿ ಅವನ್ನು ಮಾರಾಟಮಾಡುವುದಕ್ಕೆ ಅವಕಾಶಮಾಡಿಕೊಟ್ಟಿದೆ ಎಂಬ ಮಾತನ್ನು ನಾನು ಕೇಳುತ್ತಿದ್ದೇನೆ. ಒಂದುವೇಳೆ ಕೇಂದ್ರಸರ್ಕಾರ ಅಂತಹ ಅನುಮತಿಯನ್ನು ನೀಡುವ ಸಂದರ್ಭದಲ್ಲಿ ರಾಜ್ಯಸರ್ಕಾರ ಅದನ್ನು ಪ್ರತಿಭಟಿಸಬೇಕಾಗಿತ್ತು. ಏಕೆಂದರೆ ಸುಮಾರು 25 ವರ್ಷಗಳಿಂದಲೂ ಈ ಅರಮನೆಗಳಿಗೋಸ್ಕರ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಅದು ಸರ್ಕಾರದ ಆಸ್ತಿ ಹಾಗೂ ಸಾರ್ವಜನಿಕರ ಆಸ್ತಿ ಎಂಬುದಾಗಿ ರೂಢಿಸಿಕೊಂಡು ಬಂದಮೇಲೆ ಅದನ್ನು ರಕ್ಷಣೆ ಮಾಡುವ ಜವಾಬ್ದಾರಿ ಈ ಸರ್ಕಾರಕ್ಕೆ ಇತ್ತು. ಅಂತಹ ಕೆಲಸದಲ್ಲಿ ಈ ಸರ್ಕಾರ ನಿಜವಾಗಿ ವಿಫಲವಾಗಿದೆಯೆಂದು ಕಾಣುತ್ತದೆ. ಏನೋ ಒಂದೆರಡು ಕೋಟಿ ರೂಪಾಯಿಗಳ ಆಸ್ತಿ ಎಂದರೆ ಹೋಗಲಿ ಎನ್ನಬಹುದು. ಆದರೆ ಇದು ಕೋಟ್ಯಾಂತರ ರೂಪಾಯಿಗಳ ಆಸ್ತಿಯೆಂಬುದಾಗಿ ಪರಿಗಣಿಸುತ್ತಿರುವಾಗ ಇದರ ಬಗ್ಗೆ ಸರ್ಕಾರ ಇಷ್ಟು ಉದಾಸೀನವಾಗಿ ಹೆಚ್ಚು ಜವಾಬ್ದಾರಿ ತೆಗೆದುಕೊಳ್ಳದೆ ಹೋಗುವುದಾದರೆ ಈ ದೇಶದ ಜನ ಏನೆಂದಾರು ? ಈ ಸರ್ಕಾರದ ಮೇಲೆ ಅವರು ಯಾವ ರೀತಿ ವಿಶ್ವಾಸವಿಡಬೇಕೆಂಬುದು ಗೊತ್ತಾಗುತ್ತಾ ಇಲ್ಲ. ಮೇಲಾಗಿ ನನಗೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ಅಪಾರವಾದ ವಿಶ್ವಾಸವಿದ್ದರೂ ಈ ರಾಜ್ಯದ ಪ್ರತಿನಿಧಿಗಳಾಗಿರತಕ್ಕವರು ಅವರು ಒಂದುವೇಳೆ ಕೇಂದ್ರಸರ್ಕಾರ ಯಾವುದೇ ಕಾರಣದಿಂದ ಅದರ ಬಗ್ಗೆ ಅಂತಹ ಅನುಮತಿ ಯನ್ನು ನೀಡಿದ್ದರೂ ಅದಕ್ಕೆ ವಿರೋಧ ಸಲ್ಲಿಸಬೇಕಾಗಿತ್ತು. ಈ ರಾಜ್ಯದ ಜನರ ಹಿತಾಸಕ್ತಿಯನ್ನು ಕಾಯಬೇಕಾಗಿತ್ತು. ಈ ಕೆಲಸದಲ್ಲಿ ಈ ಸರ್ಕಾರದವರು ವಿಫಲರಾಗಿದ್ದಾರೆಂದು ನನಗೆ ಸಂಪೂರ್ಣ ಮನವರಿಕೆಯಾಗಿದೆ. ಆದ್ದರಿಂದ ಇದರ ಚರ್ಚೆಗೆ ಖಂಡಿತವಾಗಿ ಈ ಸಭೆಯಲ್ಲಿ ಅವಕಾಶ ಕೊಡಬೇಕು. ಇದರ ಬಗ್ಗೆ ಕಾನೂನು ತಜ್ಞರು ಯಾವ ಅಭಿಪ್ರಾಯವನ್ನು ಕೊಟ್ಟಿದ್ದಾರೋ ಅದನ್ನು ಈ ಸಭೆಗೆ ತಿಳಿಸಬೇಕು. ಆ ಒಂದು ಇನ್‌ಸ್ಟ್ರುಮೆಂಟನ್ನು ಸದನದ ಮುಂದೆ ಇಡಬೇಕು. ಈ ಅರಮನೆಗಳ ಆಸ್ತಿ ಪೂರ್ಣವಾಗಿ ಅರಸರಿಗೆ ಸೇರಿದೆಯೋ ಅಥವಾ ಈ ಸರ್ಕಾರಕ್ಕೆ ಸೇರಿವೆಯೋ ಎಂಬುದು ಆ ಒಂದು ಇನ್‌ಸ್ಟ್ರುಮೆಂಟಿನಲ್ಲಿ ಯಾವ ರೀತಿಯಲ್ಲಿ ಅಡಕವಾಗಿದೆ ಎಂಬುದನ್ನು ಈ ಸಭೆಯಲ್ಲಿ ತಿಳಿಸ ಬೇಕು. ಈ ಒಂದು ವ್ಯವಹಾರದಲ್ಲಿ ರಾಜ್ಯ ಸರ್ಕಾರದ ಕಾನೂನು ತಜ್ಞರು ಏನು ಅಭಿಪ್ರಾ ಯವನ್ನು ಸೂಚಿಸಿದ್ದಾರೆ, ಅದನ್ನು ತಾವು ಒಂದುವೇಳೆ ಈಗಾಗಲೇ ಪಡೆದಿದ್ದರೆ ಅದನ್ನೂ ಸಹ ಈ ಸಭೆಯ ಮುಂದೆ ಇಡಬೇಕೆಂದು ಹೇಳಬಯಸುತ್ತೇನೆ. ಅದು ಬಹಳ ಸೂಕ್ತವಾದುದು. ಇದರಲ್ಲಿ ನಿಮ್ಮ ಪ್ರಾಮಾಣಿಕತೆ ಎಷ್ಟೆಂಬುದನ್ನು ತೋರಿಸಬೇಕು. ಕೋಟ್ಯಾಂತರ ರೂಪಾಯಿಗಳಷ್ಟು ಬೆಲೆ ಬಾಳತಕ್ಕ ಈ ಅರಮನೆಗಳ ಆಸ್ತಿಯ ಬಗ್ಗೆ ಕೇಂದ್ರಸರ್ಕಾರ ಏನಾದರೂ ಒಂದು ಅನುಮತಿ ಕೊಟ್ಟಿದ್ದರೆ ಅದನ್ನು ಪುನರ್ಪರಿಶೀಲನೆಮಾಡಿ ಅದನ್ನು ರಾಜ್ಯಸರ್ಕಾರದ ಆಸ್ತಿಯಾಗಿ ಉಳಿಸಿ ಕೊಳ್ಳಬೇಕೆಂಬ ದೃಷ್ಟಿಯಲ್ಲಿ ನಾವು ನೀವು ಎಲ್ಲರೂ ಈಗ ತೀರ್ಮಾನ ಮಾಡುವ ಸಂದರ್ಭ ಬಂದಿದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳೇ ಮುಂದಾಳಾಗಿ ನಿಂತು ತೀರ್ಮಾನಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

† ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸಿಪುರ).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಈಗ ಉತ್ತರ ಕೊಡುವುದಕ್ಕೆ ಮುಂಚೆ ನಾನು ಒಂದು ಮಾತನ್ನು ಹೇಳಬೇಕಾಗಿದೆ. ನಾನು ಈ ವಿಚಾರದಲ್ಲಿ ಮುಖ್ಯಮಂತ್ರಿಗಳಿಗೆ ಒಂದು ಪತ್ರವನ್ನು ಬರೆದಿದ್ದೆ. ಅದಕ್ಕೆ ನನಗೆ ಉತ್ತರವನ್ನೂ ಸಹ ಕೊಟ್ಟಿದ್ದಾರೆ. ಈ ವಿಚಾರದಲ್ಲಿ ಕಳೆದ ಬಡ್ಜೆಟ್ ಅಧಿವೇಶನದಲ್ಲಿ ಜನರಲ್ ಡಿಸ್‌ಕಷನ್ನಿನಲ್ಲಿ ಪ್ರಸ್ತಾಪಮಾಡಲಾಗಿದೆ. ಪುನಃ ಮೊನ್ನೆ ಜನರಲ್ ಅಡ್ಮಿನಿಸ್ಟ್ರೇಷನ್ ವಿಷಯದ ಬಗ್ಗೆ ಚರ್ಚೆಮಾಡಿದ ಕಾಲದಲ್ಲಿಯೂ ಪ್ರಸ್ತಾಪಮಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿ ಗಳು ಇದು ಕೇಂದ್ರಸರ್ಕಾರಕ್ಕೂ ಮತ್ತು ಮಹಾರಾಜರಿಗೂ ಸಂಬಂಧಪಟ್ಟ ವಿಷಯವೆಂಬುದಾಗಿ ಅವರ ಹೇಳಿಕೆಯಲ್ಲಿ ಹೇಳಿದ್ದಾರೆ. ಮತ್ತು ಇದು ರಾಜ್ಯಸರ್ಕಾರಕ್ಕೆ ಸಂಬಂಧವಿಲ್ಲವೆಂಬುದಾಗಿಯೂ ಹೇಳಿದ್ದಾರೆ. ಅಂದಮೇಲೆ ಅವರು ಅವರ ಪಕ್ಷದಲ್ಲಿ ಪ್ರಸ್ತಾಪಮಾಡಿದಂಥ ಒಂದು ವಿಷಯವನ್ನು

ಇಲ್ಲಿ ಪ್ರಸ್ತಾಪಮಾಡಿದ್ದಾರೆ. ಈ ಆಸ್ತಿಯ ಬಗ್ಗೆ ನೆಗೋಷಿಯೇಟ್ ಮಾಡುವ ವಿಚಾರವನ್ನು ಚೀಫ್ ಸೆಕ್ರೆಟರಿಯವರಿಗೆ ವಹಿಸಿ, ಆ ವಿಚಾರವಾಗಿ ಸೂಚನೆ ಕೊಟ್ಟಿದ್ದೇನೆ ಎಂಬುದಾಗಿ ಹೇಳಿದ್ದಾರೆ. ಬಹುಶಃ ಅವರು ಈ ಸರ್ಕಾರದ ನಿಲುವನ್ನು ಮೊದಲೇ ಈ ಸಭೆಯ ಮುಂದೆ ತಿಳಿಸಿದ್ದರೆ ಬಹಳ ಚೆನ್ನಾಗಿತ್ತು. ಇದು ಒಂದು ಪಕ್ಷದ ಪ್ರಶ್ನೆಯಲ್ಲ. ಇಡೀ ರಾಜ್ಯದ ಜನತೆಗೆ ಸಂಬಂಧಪಟ್ಟ ಪ್ರಶ್ನೆ. ಇಂತಹ ಬೃಹತ್ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುವ ಕಾಲದಲ್ಲಿ ಕೇವಲ ಒಂದೇ ಒಂದು ಪಕ್ಷದ ಪರಿಮಿತಿಗೆ ಅನ್ವಯವಾಗುವಂತಹ ನಿರ್ಣಯವನ್ನು ತೆಗೆದುಕೊಳ್ಳುವುದು ಸಮಂಜಸವಲ್ಲ. ಆ ರೀತಿಯಾಗಿ ಮಾಡಬಾರದಾಗಿತ್ತು. ಈ ಸಭೆಗೇ ಮೊದಲು ತಿಳಿಸಿ ಒಂದು ನಿರ್ಣಯವನ್ನು ತೆಗೆದುಕೊಳ್ಳಬಹುದಾಗಿತ್ತು. ತಮ್ಮ ಒಂದು ಪಕ್ಷದ ಸಭೆಯಲ್ಲಿ ತೀರ್ಮಾನವಾದಂಥ ಒಂದು ನಿರ್ಣಯದ ಪ್ರಕಾರ ಚೀಫ್ ಸೆಕ್ರೆಟರಿಯವರಿಗೆ ಸೂಚನೆಮಾಡಿದ್ದೇನೆಂದು ತಾವು ಹೇಳಿದ್ದೀರಿ. ನಾನು ಮೊದಲೇ ಹೇಳಿದಹಾಗೆ ಆ ಮರ್ಜರ್ ಅಗ್ರಿಮೆಂಟಿನಲ್ಲಿ ಹಾಕಿರತಕ್ಕ ಷರತ್ತುಗಳೇನು ಮತ್ತು ಆ ಆಸ್ತಿಗಳೆಲ್ಲಾ ನಾನ್ ಏಲಿಯನಬಲ್ಲೇ ಅಥವಾ ಅಲ್ಲವೇ ಎನ್ನುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಅಭಿಪ್ರಾಯವೇನು ಹಾಗೂ ಈ ವಿಚಾರಗಳ ಪರಿಶೀಲನೆಗಾಗಿ ಇವನ್ನು ಲಾ ಇಲಾಖೆಗೆ ಒಪ್ಪಿಸಲಾಗಿತ್ತೇ, ಹಾಗೆ ಒಪ್ಪಿಸಿದ್ದಲ್ಲಿ ಅವರೇನು ಶಿಫಾರಸು ಮಾಡಿದ್ದಾರೆ, ಅವರ ಶಿಫಾರಸಿಗನುಗುಣವಾಗಿ ಮಂತ್ರಿಮಂಡಲದವರು ಈ ತೀರ್ಮಾನ ತೆಗೆದುಕೊಂಡಿದ್ದಾರೆಯೇ ಅಥವಾ ಈ ತೀರ್ಮಾನವನ್ನು ಲಾ ಇಲಾಖೆಯವರ ಅಭಿಪ್ರಾಯವನ್ನು ತಿಳಿಯದೇನೇ ತೆಗೆದು ಕೊಂಡಿದ್ದಾರೆಯೇ ಎನ್ನುವುದೊಂದೂ ಸಭೆಯಲ್ಲಿರತಕ್ಕ ಸದಸ್ಯರಿಗೆ ಗೊತ್ತಿಲ್ಲ. ಸರ್ಕಾರದವರು ಸಭೆಯಲ್ಲಿರತಕ್ಕ ಎಲ್ಲಾ ಪಕ್ಷಗಳ ಅಭಿಪ್ರಾಯವನ್ನು ಪಡೆದು ಈ ವಿಚಾರದಲ್ಲಿ ಇವರೊಂದು ತೀರ್ಮಾನಕ್ಕೆ ಬರಬೇಕಾಗಿತ್ತು. ಈ ಸಂದರ್ಭದಲ್ಲಿ ಒಬ್ಬೊಬ್ಬ ಮಂತ್ರಿಗಳು ಒಂದೊಂದು ರೀತಿಯ ಹೇಳಿಕೆಗಳನ್ನು ಕೊಡುತ್ತಿದ್ದಾರೆ. ಮಾನ್ಯ ಸಿದ್ದವೀರಪ್ಪನವರು ಈ ಅರಮನೆಗಳನ್ನು ಅವರಿಗೆ ಮಾರಾಟ ಮಾಡಿಕೊಳ್ಳಲು ಬಿಟ್ಟು ಕೊಡತಕ್ಕದ್ದು ಒಂದು ಮಾನವೀಯತೆಯ ಪ್ರಶ್ನೆ ಎಂದು ಪರಿಗಣಿಸಬೇಕೆಂಬುದಾಗಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಆ ವಿಚಾರ ಬೇರೆ ಆಯಿತು. ನನಗೆ ತೋರುತ್ತಿರುವುದರಲ್ಲಿ ಈ ಮಂತ್ರಿಮಂಡಲದವರು ಕಾನೂನು ತಜ್ಞರು ಕೊಟ್ಟ ಅಭಿಪ್ರಾಯಕ್ಕೆ ತದ್ವಿರುದ್ಧವಾಗಿ ನಡೆದಿದ್ದಾರೆಂದು ಕಾಣುತ್ತಿದೆ. ಯಾವುದೇ ಒಂದು ವಿಷಯವನ್ನು ಕಾನೂನು ಚೌಕಟ್ಟಿನಲ್ಲಿ ಪರಿಶೀಲನೆ ಮಾಡತಕ್ಕ ಸಂದರ್ಭವಿದ್ದಾಗ ಅದನ್ನು ಅಲ್ಲಗಳೆದು ಅದನ್ನು ಮಾನವೀಯತೆಯ ದೃಷ್ಟಿ ಇಂದು ನೋಡತಕ್ಕ ಪ್ರಶ್ನೆ ಇಲ್ಲಿ ಉದ್ಭವಿಸುವುದೇ ಇಲ್ಲ. ಹಿಂದೆ ಇದೇ ಸಭೆಯಲ್ಲಿ ಯಾವಾಗ ಇನ್ನೂ ಕಾಂಗ್ರೆಸ್ ಡಿವೈಡೆಡ್ ಆಗಿರಲಿಲ್ಲವೋ ಆಗ್ಗೆ ಇದೇ ಸಭೆಯಲ್ಲಿ ಸುಭಾಷ್ ನಗರದಲ್ಲಿ ಒಂದು ಜಾಗವನ್ನು 99 ವರ್ಷದ ಲೀಜ್ ಮೇಲೆ ಕೊಡತಕ್ಕ ಒಂದು ಸಂದರ್ಭದಲ್ಲಿ ಈಗ ಇಲ್ಲಿ ಮುಖ್ಯಮಂತ್ರಿಗಳಾಗಿರತಕ್ಕವರು ಅಂದು ವಿರೋಧಪಕ್ಷದ ಸದಸ್ಯರಾಗಿದ್ದು ಆ ವಿಚಾರದಲ್ಲಿ ಇವರು ದೊಡ್ಡ ಪ್ರತಿಭಟನೆ ಮಾಡಿ ಆ ವಾದದಲ್ಲಿ ಇವರು ಭಾಗಿಗಳಾಗಿದ್ದರು. ಆ ದಿವಸ ಅದೊಂದು ದೇಶದ ಆಸ್ತಿ. ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳತಕ್ಕ ವಿಚಾರದಲ್ಲಿ ವಿರೋಧಪಕ್ಷದ ಅಭಿಪ್ರಾಯ ಪಡೆಯಬೇಕಾಗಿತ್ತೆಂದು ಆದಿವಸ ಇವರು ವಾದ ಮಾಡಿದ್ದಾರೆ. ಹಾಗೇ ಈ ದಿವಸ ಇವರು ಸಂಸ್ಥಾನ ನಡೆಸುತ್ತಿರುವ ಆಸ್ತಿಗಳೇನಿವೆ ಅವು ರಾಜ್ಯಕ್ಕೆ ಸಂಬಂಧಪಟ್ಟ ಈ ದೇಶಕ್ಕೆ ಸಂಬಂಧಪಟ್ಟ ಆಸ್ತಿಗಳು. ಅಂಥ ಆಸ್ತಿಗಳನ್ನು ಕೊಳ್ಳತಕ್ಕ ವಿಚಾರದಲ್ಲಿ ಅಥವಾ ಮಾರಾಟ ಮಾಡತಕ್ಕ ವಿಚಾರದಲ್ಲಿ ಸರ್ಕಾರ ಈ ಸದನದ ಅಭಿಪ್ರಾಯವನ್ನು ಪಡೆಯದೆ ಮಾಡಬಾರದು. ಈ ಮಂತ್ರಿಮಂಡಲದವರು ಕಾನೂನು ತಜ್ಞರ ಅಭಿಪ್ರಾಯವನ್ನು ಅಲ್ಲಗಳೆದು ನಾನ್ ಏಲಿಯನಬಲ್ ಎಂಬುದಾಗಿದ್ದ ಆಸ್ತಿಯನ್ನು ಏಲಿಯನಬಲ್ ಎಂದು ಮಾಡಿರತಕ್ಕದ್ದು ನಿಜವೇ ಅಲ್ಲವೇ ಅನ್ನುವುದನ್ನು ಇವರು ಸಭೆಗೆ ತಿಳಿಸ ಬೇಕಾಗಿದೆ. ಇದು ಬಹಳ ಪ್ರಾಮುಖ್ಯವಾದ ವಿಷಯ. ಈ ವಿಚಾರದಲ್ಲಿ ಕ್ಯಾಬಿನೆಟ್ಟಿನವರೂ ಕೂಡ ತೀರ್ಮಾನ ತೆಗೆದು ಕೊಂಡಿಲ್ಲವೆಂಬುದಾಗಿ ನಾನು ವರ್ತಮಾನ ಕೇಳುತ್ತಿದ್ದೇನೆ. ಈ ವಿಚಾರದಲ್ಲಿ ಮಾನವೀಯತೆಯ ದೃಷ್ಟಿಯಿಂದ ಪರಿಶೀಲನೆ ಮಾಡತಕ್ಕ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. ಈ ಸಭೆ ತೀರ್ಮಾನ ಮಾಡಬೇಕಾದ ವಿಷಯ ಇದು. ಒಬ್ಬಿಬ್ಬರು ವ್ಯಕ್ತಿಗಳು ಕುಳಿತು ತೀರ್ಮಾನ ಮಾಡತಕ್ಕ ವಿಷಯವಲ್ಲ ಇದು. ಮಾನ್ಯ ಮುಖ್ಯ ಮಂತ್ರಿಗಳಿಗೆ ದೇಶದ ಹಿತ ಮುಖ್ಯವೇ ವಿನಾ ಒಬ್ಬ ವ್ಯಕ್ತಿಯ ಹಿತಸಾಧನೆ ಅಷ್ಟು ಪ್ರಾಮುಖ್ಯವಾದುದಲ್ಲ, ಈ ದಿವಸ ದೇಶದಲ್ಲಿದ್ದ ರಾಜಮಹಾರಾಜರೆಲ್ಲರ ಪ್ರಿವಿಪರ್ಸನ್ನು ಕೇಂದ್ರ ಸರ್ಕಾರದವರು ಕಿತ್ತು ಹಾಕಿದ್ದಾರೆ. ಆ ರಾಜರುಗಳು ಈಗ ತೊಂದರೆಯಲ್ಲಿರಬಹುದು. ಆ ವಿಷಯ ಬೇರೆ. ಇಲ್ಲಿ ಇದನ್ನು ಒಂದು ಪಕ್ಷದ ಪ್ರಶ್ನೆಯಾಗಿ ಆಗಲೀ ಇಲ್ಲವೇ ಒಂದು ಮಾನವೀಯತೆಯ ದೃಷ್ಟಿಯಿಂದ ನೋಡತಕ್ಕ ವಿಷಯವೆಂದಾಗಲಿ ಇದನ್ನು ಭಾವಿಸಿ ತೀರ್ಮಾನ ಮಾಡುವುದಕ್ಕಾಗುವುದಿಲ್ಲ. ಇದು ಇಡೀ ದೇಶಕ್ಕೆ ಸಂಬಂಧಪಟ್ಟ ವಿಷಯ. ಇದನ್ನು ಕಾನೂನು ಪ್ರಕಾರ ತೀರ್ಮಾನ ಮಾಡಬೇಕಾಗಿದೆ. ಆದರೆ ಅವರೂ ಅರಸರು—ಇತ್ತ ಮುಖ್ಯ ಮಂತ್ರಿಗಳೂ ಅರಸರು ಅದರಿಂದ ಹಾಗೆ ಮಾಡಿದ್ದಾರೆಂದು ಆಗಲೇ ಯಾರೋ ಹೇಳಿದರು. ಆದರೆ

(ಶ್ರೀ ಹೆಚ್. ಡಿ. ದೇವೇಗೌಡ)

ನಮ್ಮ ಮುಖ್ಯ ಮಂತ್ರಿಗಳ ಮಾತು ಹಾಗಿರಲಿ. ಹಿಂದೆ ಇದ್ದ ಮಹಾರಾಜರುಗಳು ದೇಶದಲ್ಲಿ ಹಲವು ಉಪಯುಕ್ತ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಆ ಅಳರಸರ ವಿಚಾರದಲ್ಲಿ ಟೀಕೆ ಮಾಡುವುದಕ್ಕೆ ತಯಾರಿಲ್ಲ. ಇದು ಒಂದು ಬಾಂಧವ್ಯದ ಪ್ರಶ್ನೆಯಲ್ಲ. ಕಾನೂನು ಪ್ರಕಾರ ತೀರ್ಮಾನ ಮಾಡಬೇಕಾದಂಥ ಒಂದು ಬಹಳ ಪ್ರಾಮುಖ್ಯವಾದ ಪ್ರಶ್ನೆ. ಈ ವಿಚಾರದಲ್ಲಿ ಸರ್ಕಾರದವರು ಇವನ್ನು ದೇಶದ ಜನತೆಯ ಹಿತದೃಷ್ಟಿಯಿಂದ ನಿರ್ಣಯ ಮಾಡಿದ್ದಲ್ಲಿ ಒಳ್ಳೆಯ ದಾಗುತ್ತಿತ್ತು. ಆ ಅರಮನೆಗಳನ್ನು ವರ್ಷಂಪ್ರತಿ ಮೈಂಟೇನ್ ಮಾಡುವುದಕ್ಕೆ 75 ಲಕ್ಷ ರೂಪಾಯಿ ಗಳನ್ನು ಸರ್ಕಾರದವರು ಖರ್ಚುಮಾಡಬೇಕೆಂದು ಮರ್ಜರ್ ಅಗ್ರಿಮೆಂಟಿನಲ್ಲಿ ನಮೂದಿಸಲಾಗಿದೆ. ಹಾಗೆ ಒಂದು ಷರತ್ತಿದ್ದಾಗ ಅದನ್ನು ಅಲ್ಲಗಳೆದು ಮುಖ್ಯಮಂತ್ರಿಗಳು ನಮ್ಮ ರಾಜ್ಯದ ಚೀಫ್ ಸೆಕ್ರೆಟರಿಗಳನ್ನು ಮೈಸೂರಿಗೆ ಮಹಾರಾಜರ ಹತ್ತಿರ ಕಳುಹಿಸಿ ಅರಮನೆಗಳನ್ನು ಕೊಳ್ಳುವುದರ ಬಗ್ಗೆ ವ್ಯವಹಾರ ನಡೆಸುತ್ತಿದ್ದಾರೆಂಬುದಾಗಿ ಈ ದಿವಸದ ಪತ್ರಿಕೆಗಳಲ್ಲಿ ಕೂಡ ಬಂದಿದೆ. ಆದರೆ ಇದು ಮುಖ್ಯ ಮಂತ್ರಿಗಳ—ಮಹಾರಾಜರ ಮತ್ತು ಚೀಫ್ ಸೆಕ್ರೆಟರಿಗಳ ನಡುವೆ ನಡೆಯತಕ್ಕಂಥ ಒಂದು ಖಾಸಗೀ ವ್ಯವಹಾರವಲ್ಲ. ಈ ದಿವಸ ಕೇಂದ್ರ ಸರ್ಕಾರದವರು ರಾಜ್ಯಾಂಗವನ್ನು ಅಮೆಂಡ್ ಮಾಡಿದ್ದಾರೆ. ಆಸ್ತಿಯನ್ನು ಆಕ್ವಯರ್ ಮಾಡಿಕೊಂಡಾಗ ಸರ್ಕಾರದವರು ಅಂಥ ಆಸ್ತಿಗೆ ಪರಿಹಾರವನ್ನು—ಕೊಡುವಾಗ ಅದಕ್ಕೆ ಮಾರುಕಟ್ಟೆಯ ಬೆಲೆಯನ್ನು ಕೊಡಬೇಕೇ ಅಥವಾ ಸರ್ಕಾರ ದವರು ಸರಿಯೆಂದು ತೀರ್ಮಾನ ಮಾಡಿದ ಬೆಲೆಯನ್ನು ಕೊಡಬೇಕೇ ಎನ್ನತಕ್ಕ ವಿಚಾರದಲ್ಲಿ ಈ ದಿವಸ ನ್ಯಾಯಾಲಯಗಳಿಗೂ ಕೂಡ ಇದು ಸರಿ ಇದು ಸರಿಯಲ್ಲ ಎಂದು ಹೇಳುವುದಕ್ಕೆ ಅವಕಾಶವಿಲ್ಲ. ಹಾಗಿರುವಾಗ ಸರ್ಕಾರದವರು ಒಬ್ಬ ವ್ಯಕ್ತಿಗೆ ಅನುಕೂಲ ಮಾಡಿ ಇಡೀ ದೇಶಕ್ಕೆ ಅನ್ಯಾಯ ಮಾಡತಕ್ಕ ಸಂದರ್ಭ ಇಲ್ಲಿ ಕಾಣುತ್ತಿರುವುದರಿಂದ, ಇದನ್ನು ಒಂದು ಪಕ್ಷದ ಪ್ರಶ್ನೆಯೆಂದು ಭಾವಿಸದೆ ಈ ಎಲ್ಲಾ ವಿಚಾರಗಳನ್ನೂ ಈ ಸಭೆಯಲ್ಲೇ ಚರ್ಚೆ ಮಾಡಿ ತೀರ್ಮಾನಕ್ಕೆ ಬರಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆಮಾಡಿ ಈ ಬಗ್ಗೆ ಜನರಲ್ಲಿ ಎದ್ದಿರತಕ್ಕ ಸಂಶಯ ನಿವಾರಣೆಗೆ ಇದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

†ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಇದರಲ್ಲಿ ಮುಖ್ಯವಾಗಿ ಎರಡು ಪ್ರಶ್ನೆಗಳು ಉದ್ಭವಿಸುತ್ತವೆ. ಒಂದು ಕಾನೂನಿನ ಪ್ರಶ್ನೆ; ಅಗ್ರಿಮೆಂಟನ್ನು ರಿವೋಕ್ ಮಾಡಲು ಅವಕಾಶ ಇದೆಯೇ ಇಲ್ಲವೇ ಎನ್ನುವುದು. ಇನ್ನು ಎರಡನೆಯದು ಏಲಿಯನೇಷನ್ ಮಾಡುವುದಕ್ಕೆ ಅಗ್ರಿ ಮೆಂಟಿನಲ್ಲಿ ಅವಕಾಶವಿದೆಯೇ–ಇಲ್ಲವೇ ಎನ್ನುವುದು. ಆ ಆಸ್ತಿಗಳನ್ನು ಏಲಿಯನೇಟ್ ಮಾಡುವುದಕ್ಕೆ ಅಗ್ರಿಮೆಂಟ್ ಪ್ರಕಾರ ಅವಕಾಶವಿಲ್ಲ ಎಂದು ನಮಗೆ ತಿಳಿದು ಬಂದಿದೆ. ಇನ್ನೊಂದು ಪ್ರಶ್ನೆ ಮಹಾ ರಾಜರು ಇದನ್ನು ಮಾರಾಟ ಮಾಡಿಕೊಳ್ಳಲು ಕೇಂದ್ರ ಸರ್ಕಾರಕ್ಕೆ ಕೇಳಿಕೊಂಡಿದ್ದರು ಎಂಬುದು. ಇದೇ ವಿಚಾರದಲ್ಲಿ ಹಿಂದೆ ಇದ್ದ ಮಂತ್ರಿಮಂಡಲ ಅಂದರೆ ಶ್ರೀಮಾನ್ ದೇವೇಗೌಡರು ಸೇರಿರತಕ್ಕ ಪಕ್ಷದ ಆಡಳಿತವಿದ್ದ ಕಾಲಕ್ಕೆ ಅಂದರೆ ಶ್ರೀಮಾನ್ ವೀರೇಂದ್ರ ಪಾಟೀಲರ ಸರ್ಕಾರವಿದ್ದಾಗ ಅವರು ಆ ಆಸ್ತಿಗಳನ್ನು ಏಲಿಯನೇಷನ್ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ಹೇಳಿದ್ದರೆಂದು ಶ್ರೀ ಗೌಡರು ಹೇಳುತ್ತಿದ್ದಾರೆ. ಆದಾದನಂತರ ಧರ್ಮವೀರ ಅವರ ಕಾಲದಲ್ಲಿ ಮತ್ತೆ ಇದೇ ವಿಚಾರದಲ್ಲಿ ನನಗೇನೂ ಸಂಬಂಧವಿಲ್ಲ ಎಂದು ಹೇಳಿ ಇದರ ಬಗ್ಗೆ ಕೇಂದ್ರಕ್ಕೆ ಅವರು ಪತ್ರ ಬರೆದಿದ್ದ ರೆಂದು ತಿಳಿದು ಬಂದಿದೆ. ಇನ್ನು ಇತ್ತೀಚೆಗೆ ಈ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಆ ಅಗ್ರಿಮೆಂಟಿ ನಲ್ಲಿ ಹಾಕಲಾಗಿದ್ದ ಏಲಿಯನೇಷನ್ ಕ್ಲಾಜನ್ನು ತೆಗೆದು ಹಾಕುವುದಕ್ಕೆ ಪರ್ಮಿಷನ್ ಕೊಟ್ಟಿದ್ದಾರೆಂದು ಈ ದಿವಸ ಇಂಡಿಯನ್ ಎಕ್ಸ್‌ಪ್ರೆಸ್ ಪೇಪರಿನಲ್ಲೂ ಕೂಡ ಬಂದಿದೆ. ಹೀಗೆ ಸರ್ಕಾರದವರು ಮಾಡಿ ರುವುದು ಅವರು ಹೇಳತಕ್ಕ ಸಮಾಜವಾದಕ್ಕೂ ಅವರೀಗ ನಡೆಸುತ್ತಿರುವುದಕ್ಕೂ ಸರಿಯಾಗಿದೆಯೇ? ಅವರುಹೇಳುತ್ತಿರುವ ತತ್ವಕ್ಕೆ ಈ ಕಾರ್ಯ ಅಳವಡುತ್ತದೆಯೇ? ಇಲ್ಲಿ ಕಾನೂನು ಪ್ರಶ್ನೆ ಉದ್ಭವವಾಗು ವುದನ್ನು ಈ ಸರ್ಕಾರ ಅಲ್ಲಗಳೆದು ವರ್ತಿಸಿಲ್ಲವೇ? ಈ ಸಭೆಯ ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿರು ವಂತೆ ರಾಜ್ಯಾಂಗಕ್ಕೆ 25 ನೇ ತಿದ್ದುಪಡಿಯನ್ನು ತಂದನಂತರ ಯಾರಿಗೂ ರೈಟ್‌ಟು ಪ್ರಾಪರ್ಟಿ ಇಲ್ಲ ಎನ್ನತಕ್ಕ ವಾದವನ್ನು ನಾವು ಕೇಳುತ್ತಿದ್ದೇವೆ. ಈ ದಿವಸ ಕೂಡ ಮೋಹನ್ ಧಾರಿಯಾ ಅವರು ರಾಜ್ಯಾಂಗವನ್ನು ತಿದ್ದುಪಡಿ ಮಾಡಿ ದೇಶದಲ್ಲಿ ಪ್ರಗತಿಪರವಾದ ಧೋರಣೆಗಳನ್ನು ಜಾರಿಗೆ ತರುತ್ತೇವೆ ಎಂದು ಪತ್ರಿಕೆಗಳಲ್ಲಿ ಹೇಳಿದ್ದಾರೆ. ಹಾಗಿರುವಾಗ ಇವರು ಆ ಎಲ್ಲಾ ಸಮತಾವಾದ ತತ್ವಗಳಿಗೂ ತಿಲಾಂಜಲಿಯನ್ನು ಇತ್ತು ಇಂಥ ಕೆಲಸ ಮಾಡುವುದು ಸರಿಯೇ? ಮುಖ್ಯಮಂತ್ರಿಗಳು ಚೀಫ್ ಸೆಕ್ರೆಟರಿಯವರನ್ನು ಮೈಸೂರಿಗೆ ಕಳುಹಿಸಿದ ನಂತರ ಆಡಳಿತ ಪಕ್ಷದಲ್ಲೇ ಗುಸು ಗುಸು ಅಂತ ಸುದ್ದಿಗಳೆದ್ದು ಅವರ ಪಕ್ಷದಲ್ಲೇ ಜನರಿಗೆ ಅನುಮಾನಗಳೆದ್ದಿವೆ ಎಂದು ಹೇಳುತ್ತಿದ್ದಾರೆ.

ಇನ್ನು ಎರಡನೇಯದಾಗಿ ಸಭೆಗೆ ಆ ಅಗ್ರಿಮೆಂಟನ್ನು ಒದಗಿಸಲಿ. ಸರ್ಕಾರದವರೇ ಏಲಿಯನೇಷನ್ನಿಗೆ ಅವಕಾಶ ಕೊಟ್ಟು ಅನಂತರ ತಾವೇ ಆ ಆಸ್ತಿಯನ್ನು ಕೊಳ್ಳುತ್ತೇವೆಂದು ಹೇಳತಕ್ಕದ್ದು ಒಂದು ದೊಡ್ಡ ಅಪರಾಧವಾಗುತ್ತದೆ. ಜನರ ಹಿತದೃಷ್ಟಿಯನ್ನು ಕಡೆಗಣಿಸಿ ಅದನ್ನು ಕೊಳ್ಳುವುದು ತಪ್ಪು.

ಇನ್ನು ಮೂರನೆಯದಾಗಿ ನಮ್ಮ ಮುಖ್ಯಮಂತ್ರಿಗಳು ಏನಿದ್ದಾರೆ ಇವರನ್ನು ಆ ಆಳರಸರ ಜೊತೆಯಲ್ಲಿ ಸೇರಿಸುವುದಕ್ಕಾಗುವುದಿಲ್ಲ. ಈ ಹಿಂದೆ ದೇಶದಲ್ಲಿ ಆಳರಸರ ಪದ್ಧತಿ ಹೋಗಬೇಕೆಂದು ವಾದ ಮಾಡುತ್ತಿದ್ದವರಲ್ಲಿ ಇವರೂ ಸೇರಿದ್ದಾರೆ. ಹಾಗಿರುವಾಗ ಆ ಅರಸರಿಗೆ ಏನೋ ಒಂದು ಉಪಾಯ ಮಾಡಿ ಅನುಕೂಲ ಮಾಡಿಕೊಡಬೇಕೆಂಬ ಆಸೆ ಇವರಿಗೇನೂ ಇದ್ದಂತೆ ಕಾಣುತ್ತಿಲ್ಲ. ಯಾರ ವಶದಲ್ಲಿ ಆ ಆಸ್ತಿ ಇದೆಯೋ ಅದನ್ನು ಮಾರಾಟಮಾಡುವುದಕ್ಕೆ ಅವರಿಗೆ ಹಕ್ಕಿಲ್ಲ ಮತ್ತು ಅದನ್ನು ಕೊಂಡುಕೊಳ್ಳತಕ್ಕ ಹಕ್ಕು ಸರ್ಕಾರಕ್ಕೂ ಇಲ್ಲ ಅಂದಾಗ ಪರಿಹಾರ ಕೊಡತಕ್ಕ ಪ್ರಶ್ನೆಯೇ ಇಲ್ಲ ಉದ್ಭವಿಸುವುದಿಲ್ಲ. ಆದ್ದರಿಂದ ಪರಿಹಾರದ ಪ್ರಶ್ನೆ ಬಹಳ ಸ್ಪಷ್ಟವಾಗಿದೆ. ಒಂದು ನಯಾಪೈಸೆ ಪರಿಹಾರವನ್ನು ಕೂಡ ಕೊಡಬಾರದು ಎಂಬ ಅಭಿಪ್ರಾಯವಿದೆ. ಅನುಕೂಲ ಇಲ್ಲದಿರುವವರಿಗೆ ಕೊಡಬಹುದು. ಈ ಸಂದರ್ಭದಲ್ಲಿ ಪರಿಹಾರ ಕೊಡುವುದರಲ್ಲಿ ಅರ್ಥವಿಲ್ಲ. ಇದು ಬಹಳ ಗಹನವಾದ ಪ್ರಶ್ನೆ. ಇದು ನಿಲುವಳಿ ಸೂಚನೆಯ ಪ್ರಶ್ನೆಯಲ್ಲ, ಅದಕ್ಕಿಂತ ದೊಡ್ಡ ಪ್ರಶ್ನೆ. ಶ್ರೀ ಘೋರ್ಪಡೆಯವರು ಸರಿಯಾಗಿ ಉತ್ತರ ಹೇಳಲಿಲ್ಲ, ಮುಖ್ಯ ಮಂತ್ರಿಗಳು ಆ ದಿವಸ ಇರಲಿಲ್ಲ. ಇಂದು ಮುಖ್ಯ ಮಂತ್ರಿಗಳಿರುವುದರಿಂದ ನಮ್ಮನ್ನು ಅವರು ವಿಶ್ವಾಸಕ್ಕೆ ತೆಗೆದುಕೊಂಡು ಯಾವರೀತಿ ಹೇಗೆ ಮಾಡಬೇಕು ಎಂದು ನಮ್ಮನ್ನು ಕೇಳಿ ಮುಂದುವರೆಯಬೇಕು. ಶ್ರೀ ವಿ. ಎನ್. ಪಾಟೀಲರಮೇಲೆ ಒಂದು ಕೇಸಿದೆ. ನಾವು ಝಂಡ ಹಿಡಿದುಕೊಂಡು ಅರಮನೆ ಬಳಿ ಇರುವ ಪ್ರದೇಶದಲ್ಲಿ ಕಾರ್ಮಿಕರಿಗೆ ಸೈಟುಮಾಡಿಕೊಡಿ, ಜನರಿಗೆ ಅವನ್ನು ಹಂಚಿ, ಅರಮನೆಯನ್ನು ಮ್ಯೂಸಿಯಂ ಮಾಡಿ ಎಂದು ಗಲಾಟೆ ಮಾಡಿದೆವು. ಇದು ಬಹಳ ಮುಖ್ಯವಾದ ಪ್ರಶ್ನೆ. ನಮ್ಮನ್ನು ವಿಶ್ವಾಸಕ್ಕೆ ತೆಗೆದು ಕೊಳ್ಳಬೇಕು.

† ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ವಿಷಯ ನಿನ್ನೆಯ ದಿವಸ ಇಲ್ಲಿ ಪ್ರಸ್ತಾಪಿಸಲ್ಪಟ್ಟಿತ್ತೆಂದು ಕಾಣುತ್ತದೆ. ಅಪ್ರೋಪ್ರಿಯೇಷನ್ ಬಿಲ್ಲಿನ ಮೇಲೆ ಚರ್ಚೆಯಾಗುವಾಗ ಈ ವಿಚಾರ ಬಂದಿರುವಂತೆ ಕಾಣುತ್ತದೆ. ನಿನ್ನೆ ಈ ವಿಚಾರ ಬಂದಾಗ ನಾನು ಇರಲಿಲ್ಲ, ಮೇಲ್ಮನೆಗೆ ಹೋಗಿದ್ದೆ. ಮೊದಲು ಕಾಲ್ ಅಟೆನ್ಷನ್ ನೋಟೀಸನ್ನು ಗಮನಕ್ಕೆ ತಂದಾಗ ಅದಕ್ಕೆ ಉತ್ತರ ಸಿದ್ಧಮಾಡಿದ್ದೆ. ಬಹುಶಃ ಅದಿನ್ನೂ ತಮ್ಮ ಗಮನಕ್ಕೆ ಬಂದಿರಲಿಲ್ಲವೆಂದು ಕಾಣುತ್ತದೆ. ಈ ದಿವಸ ಬರಬಹುದು. ಈ ದಿವಸ ನಿಲುವಳಿ ಸೂಚನೆ ಬಂದಿದೆಯೆಂದು ಗೊತ್ತಾಗಿದೆ. ಅದರ ವಿಚಾರ ಇಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಹಿಂದೆ ಈ ವಿಚಾರ ಚರ್ಚೆಯಾದಾಗ ನಾನು ವಿವರ ಹೇಳಿದ್ದೆ, ನನಗೆ ತಿಳಿದಂತೆ ಆಗ ತಿಳಿಸಿದ್ದೆ. ನಾನು ಯಾವುದಾದರೂ ದುರುದ್ದೇಶದಿಂದ ಯಾವುವನ್ನೂ ಮುಚ್ಚುಮರೆಮಾಡಿಲ್ಲ. ಯಾರಿಗಾದರೂ ಸಹಾಯವಾಗಲಿ ಎಂದು ಏನೂ ಮಾಡಿರುವುದಿಲ್ಲ. ಹಿಂದೆ ಹೇಳಿರುವುದನ್ನೇ ಇಂದೂ ನಾನು ಹೇಳುತ್ತಿದ್ದೇನೆ. ಸ್ವಲ್ಪಮಟ್ಟಿಗೆ ನನ್ನ ವಿಚಾರ ಶ್ರೀ ಕೃಷ್ಣನ್‌ರವರು ಹೇಳಿ ನನ್ನ ಕೆಲಸವನ್ನು ಸ್ವಲ್ಪ ಹಗುರುಮಾಡಿದ್ದಾರೆ. I must thank him for it. ಶ್ರೀ ಬಂಗಾರಪ್ಪನವರು ಈಚೆಗೆ ಬಂದವರು, ಅವರಿಗೆ ಹೆಚ್ಚು ಗೊತ್ತಿಲ್ಲ. ಆದುದರಿಂದ ಅವರ ವಯಸ್ಸಿಗೆ ತಕ್ಕ ಧಾಟಿಯಲ್ಲಿ ಅವರು ಹೇಳುತ್ತಿದ್ದಾರೆ. ಇದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡಬೇಕಾಗಿಲ್ಲ. 1940 ನೆಯ ಇಸವಿಯಲ್ಲಿ ಮಹಾರಾಜರು ಇದಕ್ಕಿಂತ ಬಹಳ ಜೋರಾಗಿದ್ದರು. ಆಗ ನಾವು ಕಾಂಗ್ರೆಸ್ ಚಳವಳಿ ಮಾಡಿದೆವು. ಆಗ ನಾನು ಅದೇ ಜಾತಿಯವನೇ ಆಗಿದ್ದೆ; ಈಗ ಹೊಸದಾಗಿ ಆಗಿಲ್ಲ. ಈ ವಿಚಾರವನ್ನು ಇಷ್ಟಕ್ಕೆ ಬಿಡುತ್ತೇನೆ.

ಸಮಾಜವಾದದ ವಿಚಾರದಲ್ಲಿ ನಾವು ನಂಬಿಕೆಯುಳ್ಳವರು. ಆದುದರಿಂದ ಇವರೇಕೆ ಹೀಗೆ ಮಾಡುತ್ತಿದ್ದಾರೆ ಎಂದು ಸಹಜವಾಗಿ ಯಾರ ಮನಸ್ಸಿನಲ್ಲಾದರೂ ಒಂದು ಅಪನಂಬಿಕೆ ಉಂಟಾಗುವಂಥ ಸನ್ನಿವೇಶವಿದೆ. ಇದನ್ನು ಇಲ್ಲವೆಂದು ಹೇಳುವುದಿಲ್ಲ. ಆ ದೃಷ್ಟಿಯಿಂದ ಹೆಚ್ಚೇನು ನಡೆದಿದೆ ಎಂಬುದನ್ನು ಸ್ಪಷ್ಟಪಡಿಸಬೇಕಾದ್ದು ನನ್ನ ಕರ್ತವ್ಯವಾಗಿದೆ. ಮತ್ತೆ ಈ ವಿಷಯಗಳನ್ನು ಈ ಮನೆಯಲ್ಲಲ್ಲದೆ ಪಕ್ಷದಲ್ಲಿ ಪ್ರಸ್ತಾಪಮಾಡಿದ್ದಾರೆ ಎಂದು ಎದುರು ಪಕ್ಷದ ನಾಯಕರು ಆಕ್ಷೇಪಿಸಿದ್ದಾರೆ. ಪ್ರಜಾಸತ್ತೆಯಲ್ಲಿ ಪಾರ್ಟಿ ಸಿಸ್ಟಂ ಆಫ್ ಡೆಮೊಕ್ರಸಿ ಇರುವಾಗ ಪಕ್ಷದಲ್ಲಿ ಈ ವಿಚಾರ ಪ್ರಸ್ತಾಪ ಮಾಡಿರುವುದು ಸಹಜವಾದುದು, ಸೂಕ್ತವಾದುದು, ಕಾನೂನಿನ ಚೌಕಟ್ಟಿನಲ್ಲಿ ಸಂಪ್ರದಾಯದ ಚೌಕಟ್ಟಿನಲ್ಲಿ ನಡೆದಿರುವ ನಡವಳಿಕೆ. ಆದುದರಿಂದ ಇದರ ಬಗ್ಗೆ ನಾನೇನೂ

(ಶ್ರೀ ಡಿ. ದೇವರಾಜ ಅರಸ್)

ಇದು ಸರಿ ಎಂದು ಹೇಳಬೇಕಾದ ಅಗತ್ಯವಿಲ್ಲ. ಯಾವ ಪಕ್ಷ ಸರಕಾರವನ್ನು ನಡೆಸುತ್ತದೆಯೋ ಆ ಪಕ್ಷ ತನ್ನ ಪಕ್ಷದಲ್ಲಿ ವಿಚಾರಗಳನ್ನು ಪ್ರಸ್ತಾಪಮಾಡುವ ಹಕ್ಕನ್ನು ಕಳೆದುಕೊಂಡಿಲ್ಲ. ಮತ್ತು ಈ ವಿಷಯಗಳನ್ನು ಕಾನೂನು ಪ್ರಕಾರ ನೋಡಬೇಕೆಂಬ ಧೋರಣೆಯನ್ನು ಈಗ ಮಾತನಾಡಿದ ಎಲ್ಲ ಮಾನ್ಯ ಮಿತ್ರರೂ ಒಪ್ಪುತ್ತಾರೆ. ಇದನ್ನು ಒಪ್ಪಿದಮೇಲೆ ಆ ತತ್ವದ ಪ್ರಕಾರ ಸರಕಾರದ ನಡೆವಳಿಕೆ ನಡೆದಿದೆ ಎಂಬುದನ್ನು ನಾನು ಈ ಸಭೆಗೆ ಸ್ಪಷ್ಟಪಡಿಸಬೇಕಾಗಿದೆ ಎಂದು ನನಗನ್ನಿಸುತ್ತದೆ. ಮಾನವೀಯತೆ ದೃಷ್ಟಿಯಿಂದ ನೋಡಿದ್ದೇನೆ, ಆ ದೃಷ್ಟಿ ಈ ಸಂದರ್ಭಕ್ಕೆ ಸಲ್ಲುವುದಲ್ಲ ಎಂಬ ಮಾತನ್ನು ಹೇಳಿದ್ದಾರೆ. ಅದನ್ನು ನಾನು ಬಹಳಮಟ್ಟಿಗೆ ಒಪ್ಪುತ್ತೇನೆ. ನಾನು ಆ ಮಾತನ್ನು ಎಲ್ಲೂ ಹೇಳಿದಹಾಗೆ ಜ್ಞಾಪಕವಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಪತ್ರಿಕೆಯಲ್ಲಿದೆ.

ಶ್ರೀ ಡಿ. ದೇವರಾಜ ಅರಸ್.—ಅದು ಬೇರೆ ವಿಷಯ. ಸದಸ್ಯರು ತಪ್ಪನ್ನು ತೋರಿಸಿದರೆ ಒಪ್ಪುವುದಕ್ಕೆ ಸಿದ್ಧವಾಗಿದ್ದೇನೆ. ಈಗ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ತಾರುಣ್ಯದಲ್ಲಿ ರಾಜರುಗಳಿಗೂ ಕೇಂದ್ರ ಸರಕಾರಕ್ಕೂ ನಡೆದ ಒಪ್ಪಂದಗಳ ವಿಷಯಕ್ಕೆ ಬರುತ್ತೇನೆ. ಆ ಒಪ್ಪಂದದ ಆಧಾರದಮೇಲೆ ಅರಮನೆಗೆ ಸಂಬಂಧಪಟ್ಟ ವಿಷಯಗಳು ನಡೆದುಕೊಂಡು ಬಂದಿವೆ. ನಾವು ತೆಗೆದುಕೊಂಡಿರುವ ತೀರ್ಮಾನದ ಬಗ್ಗೆ ನಮ್ಮದೇನೂ ಅಭ್ಯಂತರವಿಲ್ಲ ಎಂದು ಹಿಂದೆ ಹೇಳಿದ್ದೇನೆ, ಈಗಲೂ ಅದನ್ನೇ ಹೇಳುತ್ತಿದ್ದೇನೆ. ಈ ಪಕ್ಷ ನನ್ನೊಬ್ಬನದೇನೂ ಅಲ್ಲ. ಮಾನ್ಯ ಸದಸ್ಯರು ಒಂದು ಶಂಕೆ ವ್ಯಕ್ತಮಾಡಿದರು. ಏನಾದರೂ ತಪ್ಪು ಮಾಡಿದ್ದಾರೇನೋ ಎಂದು ಶಂಕೆಪಟ್ಟರು. ಹಾಗೇನೂ ಮಾಡಿಲ್ಲ. ಯಾವುದಾದರೂ ಇಂಥ ವಿಷಯಗಳು ಕ್ಯಾಬಿನೆಟ್ ತೀರ್ಮಾನಕ್ಕೆ ಒಳಪಟ್ಟಿರುವಾಗ ಯಾವರೀತಿಯಲ್ಲಿ ಎಲ್ಲಾ ವಿಷಯಗಳೂ ಪ್ರೋಸೆಸ್ ಆಗುತ್ತವೆಯೋ ಅದೇ ರೀತಿಯಲ್ಲಿ ಕ್ಯಾಬಿನೆಟ್ ಮುಂದೆ ಬಂದು ಅಲ್ಲಿ ಚರ್ಚೆಯಾಗಿ ತೀರ್ಮಾನ ತೆಗೆದುಕೊಂಡಿದೆ.

3-00 P.M.

ಮತ್ತೆ ಇಲ್ಲಿ ಇನ್ನೊಂದು ಮಾತು ಏನೆಂದರೆ ಈ ರೀತಿ ಒಪ್ಪಿಗೆ ಕೊಡಬೇಕಾಗಿತ್ತೇ ಇಲ್ಲವೇ ಎನ್ನುವ ವಿಚಾರದಲ್ಲಿ ಭಿನ್ನಾಭಿಪ್ರಾಯ ಇದೆ. ಮಾನ್ಯ ಸ್ನೇಹಿತರು ಅನೇಕರು ಈಗ ಹೇಳಿದ್ದಾರೆ. ಸರ್ಕಾರ ಈರೀತಿ ಒಪ್ಪಿಗೆ ಕೊಡಬಾರದಾಗಿತ್ತು ಎಂದು. ಅದರಲ್ಲಿ ಎರಡು ತರಹ ವಾದ ಮಾಡುವುದಕ್ಕೆ ಅವಕಾಶ ಇದ್ದಿರಬಹುದು. ನಾನು ಒಂದು ವೇಳೆ ಆ ರೀತಿ ವಾದ ಮಾಡುವುದಾದರೆ ಅದು ಶುದ್ಧ ತಪ್ಪಾಗುತ್ತದೆ, ಅದು ಸರಿ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಅವರವರ ವ್ಯೂಸ್‌ನಲ್ಲಿ ಬೇರೆಬೇರೆ ಹೇಳಬಹುದು. ಅದು ಅವರ ಅಭಿಪ್ರಾಯ. ನಾವು ಈರೀತಿ ಅಭಿಪ್ರಾಯಕ್ಕೆ ಬರುವುದಕ್ಕೆ ಏನಾದರೂ ಒಂದು ಆಧಾರ ಇರಬೇಕು. ಆ ಆಧಾರಗಳ ಮೇಲೆ ಕೆಲವು ಸ್ನೇಹಿತರು ಹೇಳಿದ ಹಾಗೆ ಅವರಿಗೆ ನಾವು ದಾಕ್ಷಿಣ್ಯ ತೋರಿಸಿ ಸಹಾಯ ಮಾಡುವುದು ಒಂದು ಹಿನ್ನೆಲೆ ಇರಬಹುದು. ಅಥವಾ ನಾವು ಮಾನವೀಯತೆಯಿಂದ ಸಹಾಯ ಮಾಡುವುದು ಒಂದು ಹಿನ್ನೆಲೆ ಇರಬಹುದು. ಇಲ್ಲವೇ ಕಾನೂನು ಪ್ರಕಾರ ನಡೆದಿರಬಹುದು. ಈಗ ನಾನು ಮೊದಲೇ ತಿಳಿಸಿದ ಹಾಗೆ ಎಷ್ಟು ಹೇಳಿದರೂ ಅವರು ಸಂಬಂಧ, ಜಾತಿ, ವೈಖರಿಯಿಂದ ಮಾಡಿದ್ದಾರೆ ಎಂದು ಯಾರಾದರೂ ಅನ್ನುವುದಾದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ನಾನು ಈರೀತಿ ಹೇಳಬಹುದು, ಇನ್ನೊಬ್ಬರು ಹಾಗೆ ಮಾಡಿದ್ದೀರಿ ಎಂದು ಹೇಳಬಹುದು. ಇದರ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ. ಇದು ಸರಿಯಲ್ಲ ಎಂದು ಹೇಳಬಹುದು. ಮಾನವೀಯತೆ ದೃಷ್ಟಿಯಿಂದ ವಿಚಾರವೆಲ್ಲವನ್ನೂ ಒಪ್ಪಿಕೊಂಡು ಇಂತಹ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇನ್ನು ನಮಗೆ ಕಾನೂನಿನ ಬಗ್ಗೆ ಪೂರ್ಣ ಆಧಾರ ಇದೆಯೇ ಎನ್ನುವುದನ್ನು ತಿಳಿಸಬೇಕು. ಅದನ್ನು ತಿಳಿಸುವುದಕ್ಕೆ ಕೇಂದ್ರದಿಂದ ಬಂದಿರತಕ್ಕ ಒಂದು ಕಾಗದವನ್ನು ಈ ಸಭೆಯ ಮುಂದೆ ಓದಿದರೆ ಬಹುಶಃ ನಾವು ಅದಕ್ಕಾಗಿ ಈ ತೀರ್ಮಾನಕ್ಕೆ ಬಂದಿದ್ದೇವೆ ಎನ್ನುವುದನ್ನು ಅವರು ಸ್ಪಷ್ಟಪಡಿಸುತ್ತಾರೆ ಎಂದು ನನ್ನ ನಂಬಿಕೆ. ಕೇಂದ್ರದಿಂದ ನಮಗೆ ಕಾಗದ ಬಂದಿರುವುದನ್ನು ಈ ಸಭೆಯ ಮುಂದೆ ಓದುತ್ತೇನೆ : ಆ ಕಾಗದ ಚೀಫ್ ಸೆಕ್ರೆಟೆರಿಯವರಿಗೆ ಬಂದಿದೆ. ಅದು ಈರೀತಿ ಇದೆ:

Letter dated October 15, 1971, from the Ministry of Home Affairs, addressed to the Chief Secretary.

Kindly refer to your letter No. GAD 11/PSR 30-4-1971, dated 30th April 1971 regarding the removal of condition of inalienability attached to certain properties of the Maharaja of Mysore. In this letter you have stated that the Palaces in question are "State properties with limited rights of user vested with the Ruler for the time being". You have also requested for copies of the original inventory furnished by the Maharaja to the Government of India and the correspondence between the Maharaja and the Government of India on this matter. The original inventory of immovable properties, securities and cash balances claimed by the Maharaja of Mysore as his private property was sent to us by the Huzur Secretary to His Highness the Maharaja in February 1950. All the properties mentioned in that list had been accepted by the Government of India as the private properties of the Maharaja with the concurrence of the State Government. We have on record a list which bears the signature of the Chief Secretary to the State Government as also of Sri V. P. Menon, Secretary, Ministry of States. It appears from the State Government's letter No. 16102-CB dated 4/6-2-1951 (copy enclosed) that three such lists were prepared and we take it that a copy of each would be available with the State Government. If however, it is desired that copies of these communications should be made available to the State Government, we shall be glad to do so. It is clear from the inventory of private properties of the Maharaja of Mysore that the three Palaces at Mysore, Bangalore and Ootacamund had been declared as the private property of the Maharaja. While the Mysore Government had, at the time of private property settlement, agreed to bear the expenditure on the maintenance of the buildings, grounds and gardens, inclusive of water supply and electricity, they did not then object to these Palaces being declared as the private properties of the Maharaja. We are unable to accept the views held by the State Government that the Maharaja has only the user's right in these properties. We are also advised that since the private property settlement was finalised by the Government of India, it is open only to that Government to modify the private properties settlement and to revoke the inalienability clause.

ಈ ಕಾಗದದ ಪ್ರಕಾರ ನಾವು ತೆಗೆದುಕೊಂಡಿರತಕ್ಕ ನಿಲುವನ್ನು ಸಮರ್ಥನೆ ಮಾಡಿದ್ದೇವೆ. ಮತ್ತೆ ಒಂದು ಮಾತು ಈಗ ನೀವು ಏತಕ್ಕೆ ಚೀಫ್ ಸೆಕ್ರಟರಿಯವರನ್ನು ಕಳುಹಿಸಿದ್ದೀರಿ ಇದರಲ್ಲಿ ಹಿನ್ನೆಲೆ ಏನು ಇದೆಯೋ ಅನ್ನುವುದು ಒಂದು ವಿಚಾರ. ಮತ್ತು ಆ ಆಸ್ತಿಗೆ ಕಾಂಪೆನ್ಸೇಷನ್ ಕೊಡುವ ವಿಚಾರದಲ್ಲಿ ಕಾಂಪೆನ್‌ಸೇಷನ್ ಕೊಡದೆ ಸರ್ಕಾರವೇ ನೇರವಾಗಿ ತೆಗೆದುಕೊಳ್ಳುವುದು ಯೋಗ್ಯ. ಇದು ನಮ್ಮ ಪಕ್ಷದ ನಿಲುವು. ಅದು ಸರಿಯಾದ ಮಾರ್ಗ ಎನುವುದು ನಮ್ಮ ಶ್ರೀಮಾನ್ ಕೃಷ್ಣನ್‌ರವರ ವಾದ. ಈ ವಿಚಾರದಲ್ಲಿ ಕೇಂದ್ರ ಸರ್ಕಾರದವರು ನಮಗೆ ಒಂದು ಪತ್ರ ಬರೆದು ಏನು ತಿಳಿಸಿದ್ದಾರೆ ಎಂದರೆ ನಾನು ಹೋದ ಸಲ ಸಾಮಾನ್ಯ ಬಡ್ಜೆಟ್ ಚರ್ಚೆಯಲ್ಲಿ ಈ ಮಾತನ್ನು ಹೇಳಿದ್ದೇನೆ. ಮೈಸೂರು ಅರಮನೆಯನ್ನು ಒಂದು ಟ್ರಸ್ಟ್ ಮಾಡುವುದು ಸೂಕ್ತವೆಂದು ಹೇಳಿದ್ದೇನೆ. ನಾನು ಒಂದು ಸಲಹೆ ಮಾಡಿದ್ದೇನೆ. ಅಂದರೆ ಸರ್ಕಾರದವರು ಮಾಡಿದ್ದಾರೆ. ಆ ಸಲಹೆಯನ್ನು ಕೇಂದ್ರ ಸರ್ಕಾರದವರು ಒಪ್ಪಿ ಅದು ಒಳ್ಳೆಯ ಸಲಹೆ ಎಂದು ಕಾಗದ ಬರೆದಿದ್ದಾರೆ. ನನ್ನ ಸಲಹೆ ಏನೆಂದರೆ ಆ ಟ್ರಸ್ಟ್‌ನಲ್ಲಿ ನಮ್ಮ ಪ್ರತಿನಿಧಿ ಮತ್ತು ಕೇಂದ್ರ ಸರ್ಕಾರದ ಪ್ರತಿನಿಧಿ ಇರುವಂತೆ ವ್ಯವಸ್ಥೆ ಮಾಡಬೇಕು ಎಂದು ನಾವು ಅವರಿಗೆ ತಿಳಿಸಿದ್ದೇವೆ. ಅವರು ಪ್ರೈವೇಟ್ ಪ್ರಾಪರ್ಟಿಯನ್ನು ಏಲಿನಿಯೇಟ್ ಮಾಡುವುದಕ್ಕೆ ಅವಕಾಶ ಕೊಡಿ ಎಂದು

(ಶ್ರೀ ಡಿ. ದೇವರಾಜ ಅರಸ್)

ಪತ್ರ ಬರೆದರು. ಆದಾದ ಮೇಲೆ ಪತ್ರ ಬಂದು 1-2 ದಿನಗಳು ಆಗಿತ್ತೋ ಏನೋ ನಾವು ಇನ್ನೂ
ಮಹಾರಾಜರಿಗೆ ಕಳುಹಿಸಿರಲಿಲ್ಲ. ಕೇಂದ್ರದ ಹೋಮ್ ಡಿಪಾರ್ಟ್‌ಮೆಂಟಿನ ಸೆಕ್ರೆಟರಿಯವ
ರೊಬ್ಬರು ನಮಗೆ ಫೋನ್ ಮುಖಾಂತರ ತಿಳಿಸಿದರಂತೆ. ಶ್ರೀಮಾನ್ ಹನುಮಂತಯ್ಯನವರು
ಈಗ ರೈಲ್ವೆ ಮಿನಿಸ್ಟರ್ ಆಗಿ ಯೂನಿಯನ್ ಮಿನಿಸ್ಟ್ರಿನಲ್ಲಿರುವವರು. ಇದರಬಗ್ಗೆ ನಮ್ಮಲ್ಲಿ ಪ್ರಸ್ತಾಪ
ಮಾಡಿ ನಾನು ಮುಖ್ಯಮಂತ್ರಿಗಳಲ್ಲಿ ಹೋಗಿ ಮಾತಾನಾಡಬೇಕಾದುದು ಇದೆ ಎಂದು ಹೇಳಿದರು.
ಆದ್ದರಿಂದ ನೀವು ರಾಜ್ಯ ಸರ್ಕಾರದವರಿಗೆ ಅದನ್ನು ಹಾಗೆಯೇ ಸ್ವಲ್ಪ ಇಡುವುದಕ್ಕೆ ಹೇಳಿ, ಎಂದು
ಅವರು ತಿಳಿಸಿದರಂತೆ.

ಈ ರೀತಿ ಅಲ್ಲಿಯ ಸೆಕ್ರೆಟರಿಯವರು ಅವರು ಕಳುಹಿಸಿರುವ ಕಾಗದವನ್ನು ಶ್ರೀ ಹನುಮಂತಯ್ಯ
ನವರು ಬಂದು ಮಾತನಾಡಿಕೊಂಡು ಹೋಗುವವರೆಗೂ ಸ್ವಲ್ಪ ಹಾಗೆಯೇ ತಡೆದು ಇಡಿ ಎಂದು
ಫೋನ್ ಮುಖೇನ ತಿಳಿಸಿದರು. ಶ್ರೀ ಹನುಮಂತಯ್ಯನವರು ಇಲ್ಲಿಗೆ ಬಂದರು. ಬಂದು ಈ ವಿಚಾರ
ನನ್ನಲ್ಲಿ ಪ್ರಸ್ತಾಪ ಮಾಡಿದರು. ಅವರು ತಿಳಿಸಿದಂಥ ಅಭಿಪ್ರಾಯ ಇಷ್ಟು. ಈಗ ಮಹಾರಾಜರ
ಈ ಅರಮನೆಗಳು ಅವರ ಪ್ರೈವೇಟ್ ಪ್ರಾಪರ್ಟಿ ಎಂದು ಹೇಳಿದರೂ ನನ್ನ ಅಭ್ಯಂತರವಿಲ್ಲ. ಆದರೆ
ಯಾವ ಕಾರಣಕ್ಕೂ ಬೆಂಗಳೂರು ಅರಮನೆಯನ್ನು ಹೋಟಲ್ಲಾಗಿ ಮಾಡುವುದು ಅಷ್ಟು ಒಳ್ಳೆಯದಲ್ಲ
ಅದಕ್ಕೆ ಒಂದು ಹಿನ್ನಲೆ ಇದೆ, ಟ್ರೆಡಿಷನ್ ಇದೆ. ಅದನ್ನು ಹೋಟಲ್ಲಾಗಿ ಮಾಡುವುದು ಯೋಗ್ಯವೂ
ಅಲ್ಲ, ಅದಕ್ಕೆ ಅವಕಾಶ ಕೊಡುವುದು ಸಾಧುವೂ ಅಲ್ಲ ಎನ್ನುವುದು ಅವರ ಅಭಿಪ್ರಾಯ. ಅದಕ್ಕೆ
ನನ್ನದೇನೂ ಅಭ್ಯಂತರವಿಲ್ಲ, ನಾನು ಹೋಟಲ್ ಆಗಬಾರದು ಎನ್ನುವವನೂ ಅಲ್ಲ, ಆಗಲೇ ಬೇಕು
ಎಂದು ಹೇಳುವವನೂ ಅಲ್ಲ. ವೈಯುಕ್ತವಾಗಿ ಇದನ್ನೆಲ್ಲ ಹಾಗೆಯೇ ಇಟ್ಟು ಒಂದು ದೊಡ್ಡ
ವನವನ್ನಾಗಿ ಪರಿವರ್ತಿಸಿ ಸಾರ್ವಜನಿಕರು ಅದನ್ನು ನೋಡುವುದಕ್ಕೆ, ಆನಂದಿಸುವುದಕ್ಕೆ ಅವಕಾಶ
ಮಾಡಿದರೆ ಉತ್ತಮ. ಬೇರೆ ಬೇರೆ ಕಡೆ ಪಟ್ಟಣಗಳಲ್ಲಿ, ಅದರಲ್ಲಿಯೂ ಪಾಶ್ಚಿಮಾತ್ಯ ದೇಶಗಳಲ್ಲಿ
ಕೆಲವು ಇಂತಹ ಉದ್ಯಾನವನಗಳನ್ನು ಬಹಳ ಚೆನ್ನಾಗಿ ಮಾಡಿದ್ದಾರೆ., ಅಲ್ಲಿ ಅದಕ್ಕೆ ಸುತ್ತ
ಕಾಂಪೌಂಡ್ ಹಾಕಿ ಇಟ್ಟುಕೊಂಡಿದ್ದಾರೆ. ಜನರು ಒಳಗಡೆ ಹೋಗಬೇಕಾದರೆ ಗೇಟ್ ಮನಿ
ಕಲೆಕ್ಟ್ ಮಾಡುತ್ತಾರೆ. ಹಾಗೆ ಬಂದಂಥ ಹಣದಿಂದ ಆ ತೋಟಗಳನ್ನು, ಬೃಂದಾವನಗಳನ್ನು ಅಲ್ಲಿ
ಮೇಂಟೇನ್ ಮಾಡುತ್ತಾರೆ. ಬೆಂಗಳೂರ್ ಅರಮನೆಗೆ ಕಾಂಪೌಂಡ್ ಕೂಡ ಇದೆ. ಅದನ್ನು
ನಾವು ತೆಗೆದುಕೊಂಡರೆ ಒಳ್ಳೆಯ ರೀತಿಯಿಂದ ಮಾಡುವುದಕ್ಕೆ ನನಗೆ ಆಸಕ್ತಿ ಇದೆ. ನನಗೆ ಕ್ರೈ
ಹಿಡಿಯುತ್ತಿರುವುದು ಏನೆಂದರೆ ನಮ್ಮಲ್ಲಿ ದುಡ್ಡು ಇಲ್ಲದೆ ಇರುವುದು. ಅದಕ್ಕೆ ನಮ್ಮ ಸದಸ್ಯರು
ಹೇಳಿದಂಥ ರೀತಿಯಲ್ಲಿ ಆದರೆ ದುಡ್ಡು ಬೇಕಾಗಿಲ್ಲ. ಎಲ್ಲವನ್ನೂ ನಾವು ಮುಟ್ಟುಗೋಲು ಹಾಕಿ
ಕೊಂಡಿದ್ದೇವೆ ಅಥವಾ ಸರ್ಕಾರದವರೇ ಎಲ್ಲ ತೆಗೆದುಕೊಂಡಿದ್ದಾರೆ. ನ್ಯಾಷನಲೈಸ್ ಮಾಡಿದ್ದಾರೆ
ಎಂದು ಏನಾದರೂ ಹೇಳಬಹುದು. ಆದರೆ ಈಗಿರುವ ಕಾನೂನುಗಳಲ್ಲಿ ಹಾಗೆ ಮಾಡುವುದಕ್ಕೆ
ಬರುವುದಿಲ್ಲ ಎಂದು ನನ್ನ ತಿಳುವಳಿಕೆ. ಮತ್ತೆ ಅದನ್ನು ಮಾಡಬೇಕಾದರೆ ಕೇಂದ್ರ ಮತ್ತು ನಾವು
ಆಲೋಚನೆ ಮಾಡಿ ಅದಕ್ಕೆ ಬೇಕಾದಷ್ಟು ಪ್ರವರಗಳು ವಿವರಗಳು ಬೇಕು. ಬ್ಯಾಂಕುಗಳ ರಾಷ್ಟ್ರೀ
ಕರಣ ನಡೆಯಿತು. 14 ಬ್ಯಾಂಕುಗಳನ್ನು ಕೇಂದ್ರ ಸರ್ಕಾರದವರು ತೆಗೆದುಕೊಂಡರು, ಅವು
ಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಆಗಲಿಲ್ಲ. ಅದಕ್ಕೆ ಕಾಂಪೆನ್‌ಸೇಷನ್ ಸಹ 24
ಕೋಟಿ ರೂಪಾಯಿ ಕೊಟ್ಟರು. ಪ್ರಥಮ ಹಂತದಲ್ಲಿ ಅಷ್ಟು ಕೊಟ್ಟರು. ಆಮೇಲೆ ಬ್ಯಾಂಕುಗಳವರು
ಸುಪ್ರೀಂ ಕೋರ್ಟಿಗೆ ಹೋದರು. ಅಲ್ಲಿ ಕೇಂದ್ರ ಸರ್ಕಾರ ಕೊಟ್ಟಿರುವಷ್ಟು ಹಣ ಸರಿಯಲ್ಲ. ಅವರು
ಬಹಳ ಕಡಮೆ ಬೆಲೆ ಕಟ್ಟಿದ್ದಾರೆ ಎಂದು 80 ಕೋಟಿ ರೂಪಾಯಿಗಳಿಗೆ ಏರಿಸಿದರು. ಆದೇ ಸಂದರ್ಭ
ದಲ್ಲಿ ಕೇಂದ್ರ ಸರ್ಕಾರದವರು ಮತ್ತು ನಮ್ಮ ಪಕ್ಷದವರು ಯೋಚನೆ ಮಾಡಿದ್ದು. ಬ್ಯಾಂಕ್ ರಾಷ್ಟ್ರೀ
ಕರಣದ ಕೇಸು ನಮ್ಮ ತೀರ್ಮಾನವನ್ನು ಪುಸ್ಕ್ರೀಕರಿಸಿತು. ಆಗ ತೀವ್ರವಾಗಿ ಯೋಚನೆ ಮಾಡಿ
ನಾವು ಮಾರುಕಟ್ಟೆ ಬೆಲೆ ಎನ್ನುವುದನ್ನು ಯಾವ ರೀತಿ ನಿಗದಿ ಮಾಡಿದರೂ ಖಾಸಗಿ ಜನರು ಕೋರ್ಟ್
ಮುಖೇನ ಹೋಗಿ ಅದು ಸರಿಯಲ್ಲ ಎನ್ನುವುದಕ್ಕೆ ಅವಕಾಶವಿದೆ, ಇನ್ನೂ ಹೆಚ್ಚಾಗಿ ಬೆಲೆ ಕಟ್ಟಿಸು
ವುದಕ್ಕೆ ಅವಕಾಶವಿದೆ ಎನ್ನುವುದು ಸ್ಪಷ್ಟವಾಗುತ್ತಿದೆ. ಆ ರೀತಿ ನಾವು ಹೋದರೆ ಈ ದೇಶದಲ್ಲಿ
ಸಾಧಾರಣ ಜನರಿಗೆ ಯಾವುದೇ ರೀತಿಯಿಂದ ಸಹಾಯವಾಗತಕ್ಕ ಯೋಗ್ಯ ಕಾರ್ಯಕ್ರಮಗಳನ್ನು ಮಾಡು
ವುದಕ್ಕೆ ಇದು ದೊಡ್ಡ ಅಡಚಣೆ. ಭೂಸುಧಾರಣಾ ಕಾನೂನಿಗೆ ಇದು ಒಂದು ದೊಡ್ಡ ಅಡಚಣೆ ಎಂದು
ತಿಳಿದೇ ಇದನ್ನು ಕಾನ್‌ಸ್ಟಿಟ್ಯೂಷನ್‌ನಲ್ಲಿ ಬದಲಾವಣೆ ಮಾಡಬೇಕು ಎಂದು ಹೊರಟಿದ್ದು. ಅದನ್ನೇ
ಈಗ ತಾವು ಹೇಳಿದ್ದು, ರಾಜ್ಯಾಂಗದ 25ನೇ ತಿದ್ದುಪಡಿ ಎಂದು. ಈ ತಿದ್ದುಪಡಿಯ ಪ್ರಕಾರ ಯಾವು
ದನ್ನೇ ಆಗಲೀ, ನಾವು ಕಾಂಪೆನ್ಸೇಷನ್ ಕೊಡದ ಹಾಗೆ ಆಸ್ತಿಯನ್ನು ತೆಗೆದುಕೊಳ್ಳಬೇಕು ಎಂದು

ಎಲ್ಲಿಯೂ ಅಧಿಕಾರ ಕೊಟ್ಟಿಲ್ಲ. ಆದರೆ ಯಾವುದೇ ಒಂದು ಆಸ್ತಿಯನ್ನು ಸರ್ಕಾರ ಸಾರ್ವಜನಿಕರ ಉಪಯೋಗಕ್ಕಾಗಿ ತೆಗೆದುಕೊಂಡರೆ, ಆ ಆಸ್ತಿಗೆ ಎಷ್ಟು ಪರಿಹಾರವನ್ನು ಕೊಡಬೇಕು ಎನ್ನುವಾಗ ಕೋರ್ಟಿಗೆ ಹೋಗಿ ಅಲ್ಲಿ ತೀರ್ಮಾನವಾಗುವ ಅವಕಾಶವನ್ನು ಕೊಡುವುದಿಲ್ಲ. ಒಂದು ಸಾವಿರ ರೂಪಾಯಿ ಕೊಡಬೇಕು ಎನ್ನುವ ಆಸ್ತಿಗೆ 100 ರೂಪಾಯಿ ಕೊಡಬಹುದು ಎಂದು ತೀರ್ಮಾನ ಮಾಡಬಹುದು. ಅದರ ಮೇಲೆ ಕೋರ್ಟಿಗೆ ಹೋಗುವುದಕ್ಕೆ ಅವಕಾಶವಿಲ್ಲ. ಕೋರ್ಟುಗಳ ವ್ಯಾಪ್ತಿಯಿಂದ ಅದನ್ನು ದೂರ ಇಟ್ಟಿದ್ದಾರೆ, ಆ ಕಾನೂನು ಪ್ರಕಾರ. ಇದನ್ನೇ ನಿನ್ನೆ ದಿವಸ ಯೂನಿಯನ್ ಮಿನಿಸ್ಟರ್ ಆಫ್ ಸ್ಟೇಟ್ ಮೋಹನ್ ಧಾರಿಯಾ ಅವರು ಹೇಳಿರುವುದು. ಸ್ಟೇಟ್ ಲೆಜಿಸ್ಲೇಚರ್‌ನವರು ಇದರ ಉಪಯೋಗ ವನ್ನು ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ. ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟನ್ನು ನಾವು ಉಪಯೋಗ ಮಾಡಿಕೊಳ್ಳಬೇಕಾದರೆ ಇಲ್ಲಿ ನಾವು ಲೆಜಿಸ್ಲೇಷನ್ ಮಾಡಬೇಕು. ಯಾವ ರೀತಿಯ ಕಾಂಪನ್‌ಸೇಷನ್ ಕೊಡಬೇಕು, ಅದಕ್ಕೆ ಒಂದು ರೀತಿ, ನೀತಿ, ಕಾನೂನು ಇವೆಲ್ಲ ಮಾಡ ಬೇಕಾಗುತ್ತದೆ. ಹಾಗಿಲ್ಲದೆ ಮನಸ್ಸಿಗೆ ಬಂದಂತೆ ನೂರು ರೂಪಾಯಿ ಆಸ್ತಿಗೆ ಐದು ರೂಪಾಯಿ ಕೊಡುತ್ತೇನೆ ಅಥವಾ ನೂರು ರೂಪಾಯಿ ಆಸ್ತಿಗೆ ಒಂದು ಸಾವಿರ ರೂಪಾಯಿ ಕೊಡುತ್ತೇನೆಂದು ಹೇಳಬಹುದು. ಎರಡು ರೀತಿಯೂ ಇದೆ. ಅದಕ್ಕೋಸ್ಕರವೇ ಇದನ್ನು ಯಾವ ರೀತಿ ನಡೆಸಿಕೊಂಡು ಹೋಗಬೇಕು ಎನ್ನುವುದಕ್ಕೆ ಒಂದು ಲೆಜಿಸ್ಲೇಷನ್ ಆಗಬೇಕು. ಈ ಆಸ್ತಿಗಳನ್ನು ನಾವು ಅಕ್ವೈರ್ ಮಾಡುತ್ತೇವೆಯೋ, ಕೊಂಡುಕೊಳ್ಳುತ್ತೇವೆಯೋ, ಅದಕ್ಕೆ ಆ ಮೇಲೆ ಬರುತ್ತೇನೆ. ಏನು ಮಾಡಿ ದರೂ ನಾವು ಕಾಂಪೆನ್‌ಸೇಷನ್ ಕೊಡಲೇ ಬೇಕು. ಆ ಹಣವನ್ನು ಕೊಡಬೇಕಾದರೆ, ನಾನು ಶ್ರೀ ಹನುಮಂತಯ್ಯನವರ ಸಂಗಡ ಹೇಳಿದೆ, ನಮ್ಮ ಹತ್ತಿರ ಹಣವಿಲ್ಲ ಕೇಂದ್ರ ಸರ್ಕಾರದಿಂದ ಸಹಾಯ ಮಾಡಬೇಕು, ಅದನ್ನು ಯೋಚನೆ ಮಾಡಿ ಎಂದು ಹೇಳಿದೆ. ಆಗಲಿ ನಾನು ಕೇಂದ್ರದಲ್ಲಿ ಇತರ ಮಂತ್ರಿ ಗಳ ಸಂಗಡ ಮಾತನಾಡುತ್ತೇನೆ ಎಂದು ಹೇಳಿದರು. ಮತ್ತು ಏನಾದರೂ ಒಂದು ಸಂದರ್ಭದಲ್ಲಿ ದುಡ್ಡು ಸಿಕ್ಕಲಿಲ್ಲವೆಂದರೆ, ನಾನು ಬಹುಶಃ ರೈಲ್ವೆ ಮಿನಿಸ್ಟ್ರಿಯಿಂದ ಇದಕ್ಕೆಲ್ಲ ದುಡ್ಡು ಕೊಟ್ಟಾದರೂ ತೆಗೆದುಕೊಳ್ಳುತ್ತೇನೆ, ನಾನು ತೆಗೆದುಕೊಂಡರೆ ಗಾರ್ಡನ್ ಆಗಿ ಇಡುವುದಕ್ಕಾಗುವುದಿಲ್ಲ, ಅಲ್ಲಿ ಒಂದು ದೊಡ್ಡ ರೈಲ್ವೆ ಸ್ಟೇಷನ್ ಮಾಡೋಣ ಎಂದು ಹೇಳಿದರು. ಏನಾದರೂ ಮಾಡಿ, ನಾವು ಈ ತೀರ್ಮಾನ ತೆಗೆದುಕೊಂಡಿದ್ದೇವೆ. ನಮಗೆ ಹಣದ ಅಭಾವವಿರುವುದರಿಂದ, ತೊಂದರೆ ಇರುವುದ ರಿಂದ ಇನ್ನು ಯಾವುದಾದರೂ ರೀತಿ ಯೋಚನೆ ಮಾಡಿ ಗಾರ್ಡನ್ ವಗೈರೆ ಮಾಡುತ್ತೇವೆಂದರೆ ಯಾರಾದರೂ ಬ್ಯಾಂಕಿನವರು ದುಡ್ಡು ಕೊಡುವುದಾದರೆ, ಅದನ್ನೂ ಸ್ವಲ್ಪ ಯೋಚನೆ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ರೈಲ್ವೆ ಮಂತ್ರಿಗಳು ದೊಡ್ಡ ರೈಲ್ವೆ ಸ್ಟೇಷನ್ ಮಾಡೋಣ ಎಂದು ಹೇಳಿದರು. ಇರಿಗೇಷನ್ ಮಿನಿಸ್ಟರಾಗಿದ್ದರೆ ದೊಡ್ಡ ಕೆರೆ ಮಾಡೋಣ ಎಂದು ಹೇಳು ತ್ತಿದ್ದರು ಎಂದು ಕಾಣುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಆಮೇಲೆ, ಬ್ಯಾಂಕುಗಳಿಂದ ಏನಾದರೂ ಲಾಂಗ್ ಟರ್ಮ್ ಸಾಲ ಸಿಕ್ಕುತ್ತದೆಯೇ ಎಂದು ನೋಡಿದೆವು. ಅದು ಏತಕ್ಕೆ ಎಂದರೆ, ಅಲ್ಲಿ ಒಂದು ಗಾರ್ಡನ್ ಮಾಡಿ, ತುಂಬಾ ಅಟ್ರ್ಯಾಕ್ಷನ್ ಇಟ್ಟು, ಜನಗಳು ದುಡ್ಡು ಕೊಟ್ಟು ಒಳಗಡೆ ನೋಟ ನೋಡುವ ಹಾಗೆ ಮಾಡಿ ದರೆ ಸಕ್ಸಸ್ ಆಗುತ್ತದೆಯೇ, ಈ ರೀತಿ ಮಾಡಬಹುದೇ ಇದನ್ನೆಲ್ಲಾ ಯೋಚನೆ ಮಾಡಬೇಕಾಗುತ್ತದೆ. ದಯವಿಟ್ಟು ನೀವೂ ಯೋಚನೆ ಮಾಡಿ, ನಾನು ಅಷ್ಟರೊಳಗೆ ಈ ವಿಷಯ ಸ್ಟಡಿ ಮಾಡಿ, ಡೆಲ್ಲಿಗೆ 21ನೇ ತಾರೀಖು ಬರುತ್ತಿದ್ದೇನೆ, ಇದರ ಬಗ್ಗೆ ಮತ್ತೆ ಪ್ರಸ್ತಾಪ ಮಾಡೋಣ ಎಂದು ಹೇಳಿದೆ. ಏತನ್ಮಧ್ಯೆ ಈ ವಿಚಾರಗಳು ಬಂದಮೇಲೆ ಮಾತನಾಡುತ್ತೇನೆ, ತಡೆಹಿಡಿಯಿರಿ ಎಂದು ಹೇಳಿದ್ದರು. ಆ ರೀತಿ ತಡೆದು ಇಟ್ಟಿದ್ದೇನೆ. ವಿಚಾರ ಬಂತು, ಬರುವುದಕ್ಕೆ ಮುಂಚಿತವಾಗಿ ಚೀಫ್‌ಸೆಕ್ರೆಟರಿ ಯವರನ್ನು ಮಹಾರಾಜರ ಹತ್ತಿರ ಪ್ರಸ್ತಾಪ ಮಾಡಿ ಅದನ್ನು ಕೊಡುವುದಕ್ಕೆ ಅವರು ಏನು ಹೇಳುತ್ತಾರೆ, ಅವರ ಅಭಿಪ್ರಾಯ ಏನು ಇದೆ ಮಾತನಾಡಿಕೊಂಡು ಬನ್ನಿ ಎಂದು ನಾನು ಅವರನ್ನು ಕಳುಹಿಸಿದೆ. ಚೀಫ್ ಸೆಕ್ರೆಟರಿಯವರಿಂದ ನನಗೆ ಇನ್ನೂ ವರದಿ ಬಂದಿಲ್ಲ. ಇದುವರೆಗೂ ನಡೆದಿರ ತಕ್ಕ ವಿಚಾರ ಇಷ್ಟೆ; ಇಷ್ಟು ವಿಷಯಗಳನ್ನು ತಮ್ಮ ಮುಂದಿಟ್ಟಿದ್ದೇನೆ. ಅಲ್ಲಿಂದ ಈಚೆಗೆ ನಡೆಯ ತಕ್ಕಂಥ ವಿದ್ಯಮಾನಗಳು ಏನು ಇವೆ, ಕೇಂದ್ರದವರು ಪ್ರಸ್ತಾಪ ಮಾಡಿ ಯಾವ ರೀತಿ ಇದರ ಬಗ್ಗೆ ಸಲಹೆ ಕೊಡುತ್ತಾರೆ ಇದನ್ನೆಲ್ಲಾ ಗಮನಿಸುವುದು ಒಂದು ಕಡೆ. ಮತ್ತೆ ಇನ್ನೊಂದು ಕಡೆ ಏನು ಅಂದರೆ ಈಗ ಕೇಂದ್ರದವರ ಅಭಿಪ್ರಾಯದಲ್ಲೂ ಬಹುಶಃ ನಮ್ಮ ದೇಶದ ಅಭಿಪ್ರಾಯದಲ್ಲೂ ಮಹಾರಾಜರಿಗೆ ಏನೂ ಕೊಡದ ಹಾಗೆ ಎಲ್ಲವನ್ನೂ ತೆಗೆದುಕೊಂಡು ಬಿಡಬೇಕು ಎಂದು ಇಲ್ಲ. ನಮ್ಮ ದೇಶದಲ್ಲಿ ಜನತೆ ಮಹಾರಾಜರಿಗೆ ಅವರ ಜೀವಿತ ಕಾಲದಲ್ಲಿ ಅವರ ಮಕ್ಕಳು ಅಥವಾ ಅವರ ಕುಟುಂಬಕ್ಕೆ ಒಂದು ರೀತಿಯಾಗಿ ಅವರು ಬಾಳುವೆ ಮಾಡುವಂತೆ ಕೆಲವು ಏರ್ಪಾಡುಗಳನ್ನು ನಾವು ಮಾಡುವುದಕ್ಕೆ ಸಹಾಯ ಮಾಡಿದರೆ, ನನಗೆ ತಿಳುವಳಿಕೆ ಇರುವ ಹಾಗೆ, ದೇಶದ ಜನತೆ ಇದನ್ನು

(ಶ್ರೀ ಡಿ. ದೇವರಾಜ ಅರಸ್)

ಬೇಡ ಎಂದು ಹೇಳುವುದಿಲ್ಲ. ಅವರು ಒಪ್ಪುತ್ತಾರೆ, ಅಥವಾ ಮೆಚ್ಚುತ್ತಾರೆ ಎಂದು ನನ್ನ ತಿಳುವಳಿಕೆ. ಆದರೆ ಒಂದು ವಿಚಾರ, ಈಗ ಕೇಂದ್ರಕ್ಕೂ ಗೊತ್ತಿದೆ ನಮಗೂ ಗೊತ್ತಿದೆ, ಡೀಟೇಲ್ಸ್ ಅನ್ನು ನಾನು ಹೇಳುವುದು ಅಷ್ಟು ಸರಿಯಲ್ಲ. ಬೇರೆ ರಾಜಮಹಾರಾಜರುಗಳ ವಿಚಾರ ಏನಾದರೂ ಇರಲಿ, ನಮ್ಮ ಮೈಸೂರು ರಾಜರ ಇವತ್ತಿನ ಪರಿಸ್ಥಿತಿ ಏನಾಗಿದೆ ಅಂದರೆ, ಸ್ವಲ್ಪ ಚಿಂತಾಜನಕವಾಗಿದೆ. ಅವರಿಗೆ ಮನೆ ಇರಬಹುದು, ಸಾಮಾನು ಇರಬಹುದು, ಅವರ ಜೀವನ ಪರಿಸ್ಥಿತಿ ಅಷ್ಟು ಚೆನ್ನಾಗಿಲ್ಲ. ಮತ್ತೆ ಅನೇಕ ಕಮಿಟ್‌ಮೆಂಟ್ಸ್, ಸಾಲ ಸೋಲ ಇದೆ ಎಂದು ಅವರೇ ಹೇಳುತ್ತಿದ್ದಾರೆ. ಏತನ್ಮಧ್ಯೆ, ಮೈಸೂರಿನಲ್ಲಿರತಕ್ಕ ಪ್ರಾಪರ್ಟೀಸ್ ಅನ್ನು ಅಲ್ಲಿ ಇಲ್ಲಿ ಕೊಡುವುದಕ್ಕೆ ಶುರು ಮಾಡಿದಾಗ, ನಾನು ಹೇಳಿದೆ, ಇದನ್ನು ಕೊಡಬೇಡಿ, ಸರ್ಕಾರ ತೆಗೆದು ಕೊಳ್ಳಬೇಕು, ಯಾರು ಯಾರೋ ತಗೆದುಕೊಂಡು ಹಾಳು ಮಾಡಿಬಿಟ್ಟಾರು ಎಂದು. ಅರಮನೆ ಸುತ್ತ ಆವರಣ ಕೋಟೆ ಹೊರಭಾಗವನ್ನು ಲೀಸ್ ಮಾಡಿ ಕೊಡಲಿಕ್ಕೆ ಹೊರಟಿದ್ದರು, ಇತ್ತೀಚೆಗೆ ನಾನು ಹೋಗಿ ಇದನ್ನು ಕೊಡುವುದಕ್ಕೆ ನಾನು ಒಪ್ಪುವುದಿಲ್ಲ, ಕೆಲವು ಪ್ರಾಪರ್ಟಿಗಳನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಎಂದು ಹೇಳಿದೆ. ಯಾರೋ ಕಾಲೇಜು ಮಾಡುವುದಕ್ಕೆ ತೆಗೆದುಕೊಂಡಿದ್ದಾರೆ ಎಂದು ಹೇಳಿದರು. ಅದಕ್ಕೆ ನಾನು ಹೇಳಿದೆ, ನಾವು ಇದನ್ನು ಒಪ್ಪುವುದಕ್ಕೆ ಆಗುವುದಿಲ್ಲ, ಸರ್ಕಾರಕ್ಕೆ ಬೇಕಾದ ಬಿಲ್ಡಿಂಗ್ ಇದೆ, ಅಲ್ಲಿ ಸರ್ಕಾರದ ಇಲಾಖೆಯವರು ಇದ್ದಾರೆ, ಅದನ್ನು ನಾವು ತೆಗೆದುಕೊಳ್ಳುತ್ತೇವೆ ಎಂದು. ತೆಗೆದುಕೊಳ್ಳುವುದಕ್ಕೆ ನಾನು ಆಗಲೇ ನಮ್ಮ ಚೀಫ್ ಸೆಕ್ರೆಟರಿಯವರಿಗೆ ಅದರ ಒಂದು ಎಸ್ಟಿಮೇಟ್ ಅನ್ನು ಪಿ.ಡಬ್ಲ್ಯು.ಡಿ. ಯಿಂದ ಮಾಡಿಸಿ, ಆಮೇಲೆ ಮಾತನಾಡೋಣ ಎಂದು ಹೇಳಿದ್ದೇನೆ. ಆ ಕಾರ್ಯ ನಡೆಯುತ್ತಿದೆ. ಮತ್ತೆ ದೊಡ್ಡ ಕೆರೆ ಮುಂಭಾಗದಲ್ಲಿ ಮೈದಾನ ಇದೆ ಅದು ಪ್ಯಾಲೇಸ್‌ಗೆ ಸೇರಿದ್ದು ಎಂದು ಹೇಳುತ್ತಾರೆ, ಇಲ್ಲ ಎಂದೂ ಹೇಳುತ್ತಾರೆ, ನನಗೆ ಅದು ಗೊತ್ತಿಲ್ಲ. ನನಗೆ ಹೇಳಿದ ಪ್ರಕಾರ, ಪೂರ್ಣವಾಗಿ ಸರ್ಕಾರಕ್ಕೆ ಅದನ್ನು ಬಿಟ್ಟಿದ್ದಾರೆ ಎಂದು ಅವರು ಹೇಳುತ್ತಾ ಇದ್ದಾರೆ, ಬಿಟ್ಟೂ ಬಿಟ್ಟಿದ್ದಾರೆ. ಅರಮನೆ ಮುಂದೆ ಇರತಕ್ಕ ಮೈದಾನವನ್ನು ತೆಗೆದುಕೊಂಡು ಒಂದು ಭಾಗದಲ್ಲಿ ಎಕ್ಸಿಬಿಷನ್ ಗ್ರೌಂಡ್ಸ್ ಮಾಡೋಣ ಎಂದು ಇದೆ. ಈಗ ಎಕ್ಸಿಬಿಷನ್ ನಡೆಯುತ್ತಾ ಇದ್ದಂಥ ಪ್ರದೇಶವನ್ನು ಬಹಳ ದಿವಸಗಳಿಂದ ಮೆಡಿಕಲ್ ಕಾಲೇಜಿಗೆ ಕೇಳುತ್ತಾ ಇದ್ದಾರೆ. ಅದನ್ನು ಮೈಸೂರು ಮೆಡಿಕಲ್ ಕಾಲೇಜ್ ಎಕ್ಸ್‌ಪ್ಯಾನ್‌ಷನ್‌ಗೆ ಅವಕಾಶವಿಲ್ಲದ ಕಾರಣ ಅವರಿಗೆ ಕೊಟ್ಟು ಬಿಡೋಣ. ಪ್ಯಾಲೇಸ್ ಫೀಸ್ಟ್, ನವರಾತ್ರಿ ಹಬ್ಬ ಮಾಡಬೇಕಾದರೆ, ಅದರ ಅಂಗವಾಗಿ ಎಕ್ಸಿಬಿಷನ್ ನಡೆಯಬೇಕಾದರೆ ಉಳಿದಿರುವ ದೊಡ್ಡ ಕೆರೆ ಮೈದಾನದಲ್ಲಿ ಮಾಡೋಣ ಎನ್ನುವ ಯೋಚನೆ ಇದೆ. ಅಲ್ಪಸ್ವಲ್ಪ ಉಳಿದಿರತಕ್ಕ ರಾಯನಕೆರೆ ಡೈಯರಿ ಫಾರಂ ಪ್ರಾಪರ್ಟಿ ಇದೆ. ಅಲ್ಲಿ ನಮ್ಮ ಸರ್ಕಾರ ಡೈರಿ ಫಾರಂ ಹಾಕಿಕೊಳ್ಳುವುದಕ್ಕೆ ಉಪಯೋಗಿಸೋಣ ಎಂದು ನಾವು ಯೋಚನೆ ಮಾಡುತ್ತಿದ್ದೇವೆ. ಇನ್ನು ಬನ್ನಿಮಂಟಪ ದೊಡ್ಡ ಮೈದಾನ ಇದೆ, ಅದನ್ನು ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನವರು ಅಕ್ವೈರ್ ಮಾಡಿಕೊಳ್ಳಬೇಕು ಎಂದು ಹೇಳಿದ್ದಾರೆ, ಅದಕ್ಕೆ ನಮ್ಮ ಒಪ್ಪಿಗೆಯನ್ನು ಕೊಟ್ಟಿದ್ದೇವೆ. ಹೀಗೆ ಮೈಸೂರಿನ ಅರಮನೆ ಟ್ರಸ್ಟ್ ಮಾಡಬೇಕು ಎಂದು ಬರೆದಾಗ, ಅವರು ಒಪ್ಪಿದ ಮೇಲೆ ತೆಗೆದುಕೊಳ್ಳುವ ಪ್ರಶ್ನೆ ಬರುವುದಿಲ್ಲ. ಉಳಿದಿರುವುದು ಊಟಿಯಲ್ಲಿರುವ ಅರಮನೆ ಅಲ್ಲಿ ನಮಗೆ ಸಂಬಂಧ ಇಲ್ಲದಿರುವುದರಿಂದ ನಾವು ತೆಗೆದುಕೊಳ್ಳಬೇಕು ಎನ್ನುವ ಇಚ್ಛೆಯೂ ಇಲ್ಲ ಇನ್ನು ಕೇಂದ್ರ ಸರ್ಕಾರದವರು ಇದರ ಮೇಲೆ ಏನು ಹೇಳುತ್ತಾರೆ ಎನ್ನುವುದನ್ನು, ನಾನು ಮತ್ತೆ ಅವರಲ್ಲಿ ಪ್ರಸ್ತಾಪ ಮಾಡಿದ ಮೇಲೆ ಅವರು ಇದರ ಬಗ್ಗೆ ನಮಗೆ ಯಾವ ರೀತಿಯ ಸಹಾಯ ಮಾಡುತ್ತಾರೆ ಎಂದು ತಿಳಿದು ಮುಂದಿನ ಕಾರ್ಯಕ್ರಮ ನಡೆಸಬೇಕಾಗಿದೆ. ಒಂದು ವಿಚಾರ ಎಂದರೆ, ಬೆಂಗಳೂರು ಅರಮನೆಗೆ ಸಂಬಂಧಪಟ್ಟಿರತಕ್ಕ ಜಮೀನನ್ನು ಅಕ್ವೈರ್ ಮಾಡಿಕೊಳ್ಳಬೇಕಾದರೆ, ಅದಕ್ಕೂ ಇದಕ್ಕೂ ಸಂಬಂಧವಿಲ್ಲವೆ, ಅಕ್ವೈರ್ ಮಾಡಿಕೊಳ್ಳಬಹುದು. ಇದನ್ನು ಅಕ್ವೈರ್ ಮಾಡಿಕೊಳ್ಳುವುದಕ್ಕೆ ಕೇಂದ್ರಸರ್ಕಾರ ಕಾನೂನು ಪ್ರಕಾರ ಅಡ್ಡಿ ಬರುವುದಕ್ಕಾಗುವುದಿಲ್ಲ. ಅದಕ್ಕೆ ಬೇರೆ ಸ್ಪೆಷಲ್ ಆಕ್ಟ್ ಮಾಡುವುದಕ್ಕೆ ಸಾಧ್ಯವೇ, ಅದನ್ನು ನಾನು ಎಕ್ಸಾಮಿನ್ ಮಾಡುತ್ತಿದ್ದೇನೆ. ಆದ್ದರಿಂದ ನಾವು ಇದನ್ನು ನೇರವಾಗಿ ತೆಗೆದುಕೊಳ್ಳಬೇಕು ಎಂದು ಹೇಳಿದರೆ ಈ ಒಪ್ಪಂದ ಏನು ಇದೆ, ಕೇಂದ್ರದವರು ಒಪ್ಪಿಗೆ ಕೊಟ್ಟಿರುವ ವಿಚಾರ ಏನು ಇದೆ, ಆದರಿಂದ ಯಾವ ರೀತಿಯ ಅಡಚಣೆ ಬರುವ ಹಾಗಿಲ್ಲ, ದುಡ್ಡು ಕೊಡಬೇಕಾಗುತ್ತದೆ. ಇನ್ನು ಇದು ಸ್ಟೇಟ್ ಪ್ರಾಪರ್ಟಿ ಮಾಡಲಿಕ್ಕೆ ಅವರು ಒಪ್ಪಿದರೆ, ತಾವು ಹೇಳಿದ ಹಾಗೆ, ನಮ್ಮದೇ ಇದು, ನಿಮ್ಮದು ಅಲ್ಲ, ಎಂದು ಹೇಳಬಹುದಿತ್ತು.

Sri C. M. ARUMUGAM.—Sri Veerendra Patil has stated that this property cannot be alienated and that so long the Maharaja and his family live he has that much of privilege. When once the privilege is taken away, naturally it comes to the Government.

ಶ್ರೀ ಡಿ. ದೇವರಾಜ ಅರಸ್.—ಅವರ ಅಭಿಪ್ರಾಯ ತಿಳಿದೇ ಕಾಗದ ಬರೆದಿರುವುದು. That is what I am saying ಅವರು ಲಿಸ್ಟ್ ಕೊಡಿ ಎಂದು ಹೇಳಿದ್ದಾರೆ We are glad to give ಎಂದು ಹೇಳಿದ್ದೇನೆ. We have taken a decision, this is a decision. ಇಷ್ಟು ವಿವರಣೆಗಳನ್ನು ಕೊಟ್ಟಿದ್ದೇನೆ, ಮತ್ತು ನಾನು ಯಾವುದನ್ನು ಬಚ್ಚಿಟ್ಟು ಮಾತನಾಡಿಲ್ಲ. ಬಚ್ಚಿಡ ಬೇಕಾದ ಅಗತ್ಯವೂ ನನಗೆ ಇಲ್ಲ. ಒಂದು ವಿಚಾರದಲ್ಲಿ ನನಗೆ ಧೈರ್ಯವಿದೆ, ಯಾವುದೇ ರೀತಿಯ ದಾಕ್ಷಿಣ್ಯವನ್ನು ನನ್ನ ರಾಜಕೀಯ ಜೀವನದಲ್ಲಿ ಸೇರಿಸುವುದಕ್ಕೆ ಅವಕಾಶ ಕೊಟ್ಟಿಲ್ಲ. ಈಗಲೂ ಕೊಡುವವನಲ್ಲ, ಮುಂದೆಯೂ ಕೊಡುವವನಲ್ಲ. ಆದ್ದರಿಂದ ನಾನು ಯಾವುದನ್ನೂ ಬಚ್ಚಿಡ ಬೇಕಾದ ಅಗತ್ಯ ಏನೂ ಇಲ್ಲ. ಯಾರಿಂದಲೂ ನಾನು ಯಾವುದೇ ಒಂದು ರೀತಿಯಾದ ಪದವಿ ಯನ್ನಾಗಲೀ ಆಸ್ತಿಯನ್ನಾಗಲೀ ಪಡೆಯಬೇಕಾದಂಥ ಇಚ್ಛೆ ಖಂಡಿತವಾಗಿ ನನಗೆ ಇಲ್ಲ. ಈ ದೇಶದಲ್ಲಿ ಆಸ್ತಿ ಮೇಲೆ ಮಿತಿ ಇಡಬೇಕು ಎಂದು ನಾನು ಒಬ್ಬನೇ ಹೇಳಲಿಲ್ಲ. ಅನೇಕರು ಹೇಳಿ ಕೊಂಡು ಬಂದಿದ್ದಾರೆ. ಅದನ್ನು ನಾನೂ ಹೇಳುತ್ತಾ ಇದ್ದೇನೆ. ಆದ್ದರಿಂದ ಈ ಒಂದು ಕೀರ್ತಿಯೋ ಅಪಕೀರ್ತಿಯೋ ಒಬ್ಬನಿಗೆ ಸೇರಿದ್ದು ಅಲ್ಲ. ಅದು ಕೀರ್ತಿಯಾಗಲೀ ಅಪಕೀರ್ತಿಯಾಗಲೀ ಹೇಳುತ್ತಾ ಬಂದಿದ್ದೇನೆ, ಈಗಲೂ ಹೇಳುತ್ತಿದ್ದೇನೆ, ನಾಳೆಯೂ ಹೇಳುತ್ತೇನೆ. ಆದರೆ ಸರ್ಕಾರ ನಡೆಯುತ್ತಾ ಯಿರುವುದು ಒಂದು ಕಾನೂನಿನ ಚೌಕಟ್ಟಿನಲ್ಲಿ. ಆದ್ದರಿಂದ ಈ ಚೌಕಟ್ಟು ಬಿಟ್ಟು ಹೋಗುವುದಕ್ಕೆ ಕಷ್ಟವಾಗುತ್ತದೆ. ಈಗ ಮಹಾರಾಜರಿಗೆ ಇಂತಹ ಒಂದು ಸನ್ನಿವೇಶ ಬಂದು ಬಿಟ್ಟಿದೆ. ಅದರ ಬಗ್ಗೆ ಚಿಂತನೆ ಮಾಡಬೇಕಾಗಿಲ್ಲ. ಯಾರ ಮೇಲೂ ದೂಷಣೆ ಮಾಡಬೇಕಾಗಿಲ್ಲ, ತಪ್ಪು ಹೊರಿಸುವುದಕ್ಕೆ ಕಾರಣವಿಲ್ಲ. ನಾವು ಈಗ ಒಂದು ಸಂಧಿಕಾಲದಲ್ಲಿದ್ದೇವೆ ಅದಕ್ಕೆ ತಮಗೆ ಒಂದು ದೃಷ್ಟಾಂತವನ್ನು ಕೊಡುತ್ತೇನೆ. ಮಹಾ ಭಾರತದಲ್ಲಿ ಅದು ಬಂದಿದೆ. ಒಂದು ಸಾಯಂಕಾಲ ಕರ್ಣನನ್ನು ಶ್ರೀ ಕೃಷ್ಣ ಕರೆದುಕೊಂಡು ಹೋಗುತ್ತಾನೆ. ಸೂರ್ಯ ಮುಳುಗುತ್ತಾ ಇದ್ದಾನೆ. ಕತ್ತಲೆ ಬೆಳಕು ಎರಡೂ ಇದೆ. ಸಂಧ್ಯಾಕಾಲ ಮತ್ತು ಸಂಧಿಕಾಲ. ಸಂಧಿಕಾಲದ ನಡುವೆ ಏನು ಮಾತ ನಾಡಿದರೂ ಹುತ್ತದ ಪಕ್ಕದಲ್ಲಿ ಹೂವು ಬಿದ್ದಿದ್ದರೂ ಹಾವಿನ ಹಾಗೆ ಕಾಣುತ್ತದೆ. ಆದ್ದರಿಂದ ನಿನ್ನ ಹತ್ತಿರ ಮಾತನಾಡುವುದಕ್ಕೆ ಇಚ್ಛೆ ಇಲ್ಲ. ಬೇಗ ಮನೆಗೆ ಹೋಗು ಎಂದು ಹೇಳುತ್ತಿದ್ದಾನೆ. ಹಾಗೆ ಸಂಧಿಕಾಲದಲ್ಲಿ ನಾವು ಇದ್ದೇವೆ.

3–30 P. M.

ಶ್ರೀ ಎಸ್. ಬಂಗಾರಪ್ಪ.—ತಾವು ದಾನಶೂರ ಕರ್ಣ ಎನ್ನುವುದು ಅರ್ಥವಾಯಿತು.

ಶ್ರೀ ಡಿ. ದೇವರಾಜ ಅರಸ್.—ನನ್ನ ಜೊತೆ ಆ ಜನ್ಮದಲ್ಲಿ ನೀವೂ ಇದ್ದಿರಿ ಎಂದು ಆಯಿತು. ಆದುದರಿಂದ ಇದು ಎಂಥ ಸಂಧಿಕಾಲ ಎಂದರೆ ರಾಜಕೀಯ ಸಂಧಿಕಾಲ ಸಂಧ್ಯಾಕಾಲ ಎರಡೂ ಇದೆ. ಈ ಸಂಧಿಕಾಲದಲ್ಲಿ ಒಂದು ಅನುಮಾನ ಬರುವುದಕ್ಕೆ ಅವಕಾಶವಿದೆ. ನನಗೆ ತಿಳಿದಹಾಗೆ ಯಾವುದೂ ಮುಚ್ಚಿ ಇಡದೆ ಅನುಮಾನ ಪರಿಹರಿಸುವುದಕ್ಕೆ ನನ್ನ ಕೈಲಾದಷ್ಟು ಪ್ರಯತ್ನ ಮಾಡಿ ದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಈಗ ಮುಖ್ಯಮಂತ್ರಿಗಳು ಎರಡು ಕಾರಣ ಗಳಿಂದ ಈ ವಿಷಯವನ್ನು ನಾವು ನೋಡುವುದಕ್ಕೆ ಸಾಧ್ಯವಿದ್ದರೂ, ಕೂಡ ಮಾನವೀಯತೆ ದೃಷ್ಟಿ ಯಿಂದ ಸಹಾಯ ಮಾಡುವ ಆಧಾರ ಕೊಟ್ಟರು. ಕಾನೂನು ತೊಡಕು ಇದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ರಾಜ್ಯಾಂಗಕ್ಕೆ ಆಗಿರುವ 25ನೇ ತಿದ್ದುಪಡಿ ಪ್ರಕಾರ ಮಾರ್ಕೆಟ್ ವ್ಯಾಲ್ಯೂ ಕೇಳುವುದಕ್ಕೆ ಕೋರ್ಟಿಗೆ ಹೋಗುವ ಹಾಗಿಲ್ಲ. ಸರ್ಕಾರ ನಿಗದಿ ಮಾಡುವ ಕಾಂಪೆನ್ಸೇಷನ್ ಮಾತ್ರ ಯಾವ ವ್ಯಕ್ತಿಯಿಂದ ಸ್ವತ್ತನ್ನು ಪಡೆಯುತ್ತೇವೆಯೋ ಆ ವ್ಯಕ್ತಿ ಕೇಳುವುದಕ್ಕೆ ಹಕ್ಕು ಇರು ತ್ತದೆ. ಈ ತೊಡಕು ಇರುವುದರಿಂದ ರಾಜ್ಯ ಸರ್ಕಾರದವರು ಮಹಾರಾಜರ ಆಸ್ತಿಯನ್ನು ಅಕ್ವೈರ್ ಮಾಡಿದಾಗ ಅವರು ಕೋರ್ಟಿಗೆ ಹೋಗುವುದಕ್ಕೆ ಅವಕಾಶ ಇಲ್ಲದೆ ಇರುವುದರಿಂದ, ರಾಜ್ಯ ಸರ್ಕಾರ ವ್ಯಾಲ್ಯು ನಿಗದಿ ಮಾಡಬೇಕಾಗುತ್ತದೆಂದು ಹೇಳಿದರು. ಸಮತಾವಾದ ಹೇಳತಕ್ಕ ಜನ ತಾವು. ಈ ಸ್ವತ್ತು ಜನತಾ ಸ್ವತ್ತು ಆಗಿರುವುದರಿಂದ ಕೇಂದ್ರ ಸರ್ಕಾರದ ಜೊತೆಗೆ ಸಮಾಲೋಚನೆ ನಡೆಸಿ, ಪತ್ರವ್ಯವಹಾರ ನಡೆಸಿ ರಾಜ್ಯಾಂಗಕ್ಕೆ ಒಂದು ತಿದ್ದುಪಡಿ ತಂದು ಯಾವ ಪರಿಹಾರ ಕೊಡದೆ ಸ್ವತ್ತನ್ನು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ಎಂದು ತಿಳಿಸಬೇಕು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ ವ್ಯವಹಾರದಲ್ಲಿ ನಡೆದಿರತಕ್ಕ ಎಲ್ಲಾ ವಿಚಾರಗಳನ್ನು ಸಭೆಯಮುಂದೆ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ತಿಳಿಸಿದರು. ನಾನಾದರೂ ಅವರ ವೈಯಕ್ತಿಕವಾದ ಸಂಬಂಧದ ಬಗ್ಗೆ ಮಾತನಾಡುವವನು ಅಲ್ಲ. ಈಗಲೂ ಅವರ ಬಗ್ಗೆ ಅಪಾರ ವಾದ ನಂಬಿಕೆಯನ್ನು ಇಟ್ಟುಕೊಂಡಿರುವವನು. ಆದರೆ ಒಂದು ಪ್ರಶ್ನೆ ಕಾಡುತಲ್ತಿ ಇದೆ. ಸೀಲಿಂಗ್ ಏನು ಹೇಳುತ್ತಾ ಇದ್ದೀರಿ, 2ಲಕ್ಷ ರೂಪಾಯಿ ಸೀಲಿಂಗ್ 10 ಸ್ಟ್ಯಾಂಡರ್ಡ್ ಎಕರೆ ಎಂದು ಏನು ಹೇಳುತ್ತಿದ್ದೀರಿ ಅಂಥ ಸಮಯದಲ್ಲಿ ಈ ರೀತಿ ಪ್ರಾಪರ್ಟಿಯನ್ನು ತಾವಾದರೂ, ಕೇಂದ್ರ ಸರ್ಕಾರದವರಾದರೂ ಕೂಡ, ಕೋಟ್ಯಾಂತರ ರೂಪಾಯಿಗಳನ್ನು ಕೊಟ್ಟು ಕೊಂಡುಕೊಳ್ಳ ತಕ್ಕದ್ದು ಸೀಲಿಂಗಿನ ಬುಡಕ್ಕೆ ಸಂಪೂರ್ಣವಾಗಿ ಕೊಡಲಿ ಏಟು ಹಾಕಿದ ಹಾಗಾಗುತ್ತದೆ. ದೊಡ್ಡ ಶ್ರೀಮಂತರುಗಳಿಗೆ ಮನೆಗಳು ಇವೆ, ಕೋಟ್ಯಾಂತರ ರೂಪಾಯಿ ಬಾಳತಕ್ಕ ಭಾರಿ ಭಾರಿ ಬಂಗಲೆ ಗಳು ಇವೆ. ಹಿಂದೆ-ರಾಮಪ್ರಿಯ ಬಂಗಲೆ ಅಂಥ ಪ್ರಕರಣಗಳು ಬಂದಿವೆ. ನಿಮ್ಮ ಸೀಲಿಂಗ್‌ನ್ನು ಎರಡೂವರೆ ಲಕ್ಷ ಮಾಡುತ್ತೀರೆಂದು ಇಟ್ಟುಕೊಳ್ಳೋಣ. ಮಿಕ್ಕಿದ್ದನ್ನು ಬೇರೆಯವರಿಗೆ ಕೊಡಬೇಕು ಅಥವಾ ಹಂಚಬೇಕು ಎನ್ನುವುದು ನಮ್ಮ ನಿಮ್ಮ ತತ್ವವೆಂದು ತಿಳಿದುಕೊಂಡಿದ್ದೇನೆ. ಈಗ ತಾವು ಹೊರಟಿರತಕ್ಕ ರೀತಿಯಲ್ಲಿ ನೀವಾದರೂ ಕೊಂಡುಕೊಳ್ಳಿ, ಕೇಂದ್ರ ಸರ್ಕಾರದವರಾದರೂ ಕೊಂಡು ಕೊಳ್ಳಲಿ, ಲಕ್ಷಾಂತರ ರೂಪಾಯಿ, ಕೋಟ್ಯಾಂತರ ರೂಪಾಯಿ ಸ್ವತ್ತು ಎಷ್ಟು ಬೆಲೆ ಬಾಳುತ್ತದೋ ಅದು ಪರಿಹಾರ ಕೊಟ್ಟಂತಾಗುತ್ತದೆ. ಅಂದಾಗ ನಿಮ್ಮ ಸಮಾಜವಾದದ ತತ್ವಕ್ಕೆ ಅನುಗುಣವಾಗಿ ಸೀಲಿಂಗ್ ಏನು ಹಾಕುವುದಕ್ಕೆ ಹೊರಟಿದ್ದೀರಿ ಆ ತತ್ವಕ್ಕೆ ವಿರುದ್ಧವಾದ ಕ್ರಮವಾಗುತ್ತದೆ. ಇದರಿಂದ ದೇಶದಲ್ಲಿ ಸಮಾಜವಾದಿ ಕಾರ್ಯಕ್ರಮಕ್ಕೆ ಒಳ್ಳೆಯ ಮಾರ್ಗವನ್ನು ಹಾಕಿದಂತಾಗುವು ದಿಲ್ಲ ಎನ್ನುವ ದೊಡ್ಡ ಅನುಮಾನ ನನ್ನನ್ನು ಇವೊತ್ತು ಕಾಡುತ್ತಾ ಇದೆ. ಸೀಲಿಂಗ್ 2ಲಕ್ಷ, 5 ಲಕ್ಷ, 5ಕೋಟಿ ತೀರ್ಮಾನಮಾಡಿದರೆ, ಮಿಕ್ಕದ್ದು ಆಸ್ತಿ ಯಾರಿಗೆ ಕೊಡಬೇಕು ? ಶ್ರೀಮಂತರಿಗೆ ಉಳಿಯಬೇಕೇ, ಮಹಾರಾಜರ ಆಸ್ತಿ ಅವರಿಗೆ ಉಳಿಯಬೇಕೇ ಯಾರಿಗೆ ಉಳಿಯಬೇಕು ಎನ್ನುವ ಪ್ರಶ್ನೆ ಬರುತ್ತದೆ. ಮಹಾರಾಜರ ಆಸ್ತಿ ಒಬ್ಬರ ಹತ್ತಿರ ಇಲ್ಲ. ಮಹಾರಾಜರ ಹೆಸರನ್ನು ಹೇಳಿ ಅನೇಕ ಮಾಜಿ ಮಂತ್ರಿಗಳು, ಮಾಜಿ ಎಂ.ಎಲ್.ಎ. ಗಳು ಮತ್ತು ಅನೇಕ ದೊಡ್ಡದೊಡ್ಡವರು ಕೋಟ್ಯಾಂತರ ರೂಪಾಯಿ ಆಸ್ತಿಯನ್ನು ಹಿಂದೆ ಬರೆಸಿಕೊಂಡಿರತಕ್ಕ ನಿದರ್ಶನ ಕಂಡಿದ್ದೇನೆ, ನಿಮ್ಮ ಬಗ್ಗೆ ಅಪಾರ ನಂಬಿಕೆ ಇಟ್ಟುಕೊಂಡಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ಹೆಸರು ಗೊತ್ತಿದ್ದರೆ ಹೇಳಿ.

ಶ್ರೀ ವಾಟಾಳ್ ನಾಗರಾಜ್.—ಅದು ದೊಡ್ಡ ಕಾಂಟ್ರವರ್ಸಿಯಾಗುತ್ತದೆ. ಹಿಂದೆ ಇದ್ದ ಮಂತ್ರಿಗಳು, ಎಂ.ಎಲ್.ಎ. ಗಳು ಮಹಾರಾಜರಿಗಿಂತ ಹೆಚ್ಚಿನ ಆಸ್ತಿಯನ್ನು ಪಡೆದವರು ಇದ್ದಾರೆ. ಇವೊತ್ತು ದೇಶದಲ್ಲಿ ಮಕ್ಕಳ ಹೆಸರಿಗೆ, ದನಗಳ ಹೆಸರಿಗೆ ನಾಯಿ ಹೆಸರಿನಲ್ಲಿ ಮನೆಗಳನ್ನು ಹಂಚಿಕೆ ಮಾಡುತ್ತಿದ್ದಾರೆ. ಇವರು ಏನು ಆ ರೀತಿ ಹಂಚಿಕೆ ಮಾಡಿಲ್ಲ. ಇವರಿಗೆ ತೊಂದರೆ ಇದೆ ಎನ್ನತಕ್ಕದ್ದು ತಿಳಿದ ಮೇಲೆ, ನಾನು ವಾದ ವಿವಾದ ಮಾಡುವವನಲ್ಲ. ಇವರ ಬಗ್ಗೆ ಅಪಾರವಾದ ಗೌರವ ಇಟ್ಟು ಕೊಂಡಿರುವವನು. ನಿಮ್ಮ ಸಮತಾವಾದ ತತ್ವದಂತೆ ಆಗಸ್ಟ್ 15ನೇ ತಾರೀಖು ಕ್ರಾಂತಿಕಾರಕವಾದ ಕಾರ್ಯಕ್ರಮವನ್ನು ರಾಜ್ಯದಲ್ಲಿ ಹಾಕಬೇಕೆಂದು ಒಂದು ಕಾರ್ಯಕ್ರಮ ರಚನೆ ಮಾಡಿಕೊಂಡಿ ದ್ದೀರಿ. ಅವನ್ನೆಲ್ಲಾ ನಾವು ನೋಡುವಾಗ ಒಂದುಕಡೆ ಪ್ರಾಪರ್ಟಿ ಸೀಲಿಂಗ್ 2 ಲಕ್ಷ ಇರಬೇಕು ಎಂದು ಹೇಳುತ್ತೀರಿ, ದೆಹಲಿಯಲ್ಲಿ ಎಲ್ಲರಿಗಿಂತ ಮುಂಚಿತವಾಗಿ 10 ಸ್ಟ್ಯಾಂಡರ್ಡ್ ಎಕರೆ ಇರಬೇಕು ಎಂದು ಹೇಳಿದ್ದೀರಿ. ಒಂದುಕಡೆ ಆ ರೀತಿ ಹೇಳುತ್ತೀರಿ ಮತ್ತೊಂದು ಕಡೆ ಈ ರೀತಿ ಖರೀದಿಗೆ ಕೊಂಡು ಕೊಳ್ಳುವ ಥಾಟಿಯಲ್ಲಿ ಹೋಗುವುದಾದರೆ ನಿಮ್ಮ ತತ್ವದಲ್ಲಿ ಏನು ನಂಬಿಕೆ ಬರುತ್ತದೆ ?

ಶ್ರೀ ಎಂ. ಎಸ್. ಕೃಷ್ಣನ್.—ಕೆಲವು ಸಂಶಯಗಳನ್ನು ನಿವಾರಣೆ ಮಾಡಿದ್ದೀರಿ. ಇನ್ನೊಂದು ಸಂಶಯ ನಿವಾರಣೆಯಾಗಬೇಕಾಗಿದೆ. ಇನ್‌ಏಲಿಯನಬಲಟಿ ಕ್ಲಾಸ್ ಏನು ಇದೆ ಅದನ್ನು ಓದಿದಿರಿ. ಮಾರಿಕೊಳ್ಳಬಹುದು ಎಂದು ಕೇಂದ್ರಸರ್ಕಾರದವರು ಹೇಳಿದ್ದಾರೆ. ಎರಡನೆಯ ಪ್ರಶ್ನೆ ವ್ಯಾಖ್ಯಾನ ಮಾಡಿದಿರಿ. 25ನೇ ಅಮೆಂಡ್‌ಮೆಂಟ್ ಮಾಡಿದ್ದರೂ ಸಹ ಪರಿಹಾರ ಕೊಡರೇ ಕೂಡದು ಎಂದು ಏನೂ ಇಲ್ಲ. ಪರಿಹಾರ ಕೊಡರೇ ಬೇಕಾಗುತ್ತದೆ, ಇದರ ಬಗ್ಗೆ ಶ್ರೀಮಾನ್ ಹನುಮಂ ತಯ್ಯನವರ ಹತ್ತಿರ ಚರ್ಚೆ ಮಾಡಿದ್ದೇನೆ'ನಮ್ಮ ಹತ್ತಿರ ಹಣವಿಲ್ಲ ಕೇಂದ್ರದವರು ಕೊಟ್ಟರೆ ಯೋಚನೆ ಮಾಡೋಣ ಎಂದು ತಾವು ಮಾತನಾಡುತ್ತಾ ಹೇಳಿದಿರಿ. ಇದರಲ್ಲಿ ಏನು ಅರ್ಥ ಬರುತ್ತದೆ? ಒಂದು ಪರಿಹಾರ ಕೊಡಬೇಕಾಗುತ್ತದೆಂದು ತೀರ್ಮಾನಕ್ಕೆ ಬಂದಿದ್ದೀರಿ. ನನ್ನ ಉತ್ತರ ಇಷ್ಟೇ. ಕಾಂಪೆನ್ಸೇಷನ್ ಕೊಡದೆಹೋದರೆ ಬಹಳ ಸಂತೋಷ ಅದು ನಮ್ಮ ಅಭಿಪ್ರಾಯ ಇದೆ. ಅದಕ್ಕೆ ಘಟನಾವಳಿಯಲ್ಲಿ ತಿದ್ದುಪಡಿಮಾಡಬೇಕು 25ನೇ ಅಮೆಂಡ್‌ಮೆಂಟ್‌ನಂತೆ ಹೋಗಬೇಕು. 25ನೇ ಅಮೆಂಡ್‌ಮೆಂಟ್ ಚೌಕಟ್ಟಿನೊಳಗೆ ಮಾರ್ಕೆಟ್‌ವ್ಯಾಲ್ಯೂ ಕೊಡಬೇಕಾಗಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಎಲ್ಲಿ ಹೇಳಿದ್ದೇನೆ ? Why go on that assumption ? I have never stated at any stage either now or previously that we are going to pay the market value.

ಶ್ರೀ ಎಂ. ಎಸ್. ಕೃಷ್ಣನ್.—ನನ್ನ ಸೂಚನೆ ಏನು ಎಂದರೆ ಇವರಿಗೆ ಕೊಡುವುದನ್ನು ಕೊಡಬೇಕಾಗಿಲ್ಲ ಎಂದು ಹೇಳುವುದಾಗಲೀ ಇಲ್ಲವೇ ಕಡಿಮೆ ಮಾಡುವುದಾಗಲೀ ಅಲ್ಲ. ಇದರಲ್ಲಿ ಏನೋ ಒಂದು ರೀತಿಯ ಮೋಸವಾಗಿದೆ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ನನಗೆ ತಿಳಿದ ಮಟ್ಟಿಗೆ ಸಾಮಾನ್ಯ ಜನರಿಗೆ ಯಾವ ರೀತಿ ಪರಿಹಾರಗಳನ್ನು ಸರಕಾರ ಕೊಡುತ್ತದೋ ಆ ರೀತಿ ಇವರ ವಿಚಾರದಲ್ಲೂ ಪರಿಶೀಲನೆ ಮಾಡಬೇಕು. ಈಗಿರುವ ಮಹಾರಾಜರು ಅವರು ಸುಖವಾಗಿ ಜೀವನ ಮಾಡುವುದಕ್ಕೆ ಬೇಕಾದಷ್ಟು ಇದೆ, ಅವರ ಮಕ್ಕಳು ಹಾಗೂ ಮೊಮ್ಮಕ್ಕಳು ಇರುವವರೆಗೂ ಜೀವನ ಮಾಡುವುದಕ್ಕೆ ತಕ್ಕ ಶಕ್ತಿ ಇದೆ, ಅದು ನನಗೆ ಗೊತ್ತು. ಹೀಗಿರಬೇಕಾದರೆ ಪರಿಹಾರ ಕೊಡಬೇಕಾದರೆ ಜನಸಾಮಾನ್ಯರಿಗೆ ಯಾವ ರೀತಿಯಾಗಿ ಪರಿಹಾರ ಕೊಡಬೇಕೋ ಆ ರೀತಿ ಇಲ್ಲೂ ಯೋಚನೆ ಮಾಡುವುದಕ್ಕೆ ಅವಕಾಶವಿದೆ, ಈ ದೃಷ್ಟಿಯಲ್ಲಿ ಸರಕಾರ ಗಮನ ಕೊಡಬೇಕು, ಇವರಿಗೆ ಪರಿಹಾರ ಕೊಡಬೇಕೆಂದರೆ ನಮ್ಮಲ್ಲಿ ಹಣವಿಲ್ಲ ಕೇಂದ್ರ ಸರಕಾರದವರು ಕೊಟ್ಟರೆ ಆಗ ನಾವು ಕೊಡಬಹುದು ಎಂದು ಹೇಳುತ್ತಾರೆ. ಇವೊತ್ತು ಕೇಂದ್ರದಲ್ಲಿ ಶ್ರೀಮಾನ್ ಹನುಮಂತಯ್ಯನವರು ಮಂತ್ರಿಗಳಾಗಿರಬಹುದು. ನಾಳೆ ಅವರು ಮಂತ್ರಿಗಳಾಗಿರುತ್ತಾರೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಕೊನೆಗೆ ಇದು ನಮ್ಮ ಸರಕಾರದ ತಲೆ ಮೇಲೆ ಹೊರೆ ಬೀಳುವಂತೆ ಮಾಡಲು ಹೋಗಬೇಡಿ ಇಂತಹ ವ್ಯವಹಾರಕ್ಕೆ ಖಂಡಿತ ಅವಕಾಶ ಮಾಡಿಕೊಡಕೂಡದು ಎಂದು ತಮ್ಮಲ್ಲಿ ನಾನು ಹೇಳುತ್ತೇನೆ.

Sri K. PUTTASWAMY (Chamundeshwari).—Madam Speaker, while thanking the Chief Minister for making full disclosure of the development leading to a stage where the Government of India now can take a decision, I would like to state one point, which, according to me is fundamentally a legal point.

We all know that prior to 1947 the rulers of native States did not enjoy full powers of sovereignty, sovereignty vested in the paramount power. On 15th August 1947 the paramountcy lapsed and on the lapsing of paramount power the rulers of the native States became full sovereign. They continuel for some time like that till the Maharaja entered into an agreement for merger of Mysore with the Indian Union. If we go back to that period the merger agreement was accession treaty or whatever we may call it, is a document between two sovereigns, the Maharaja of Mysore entered into a merger treaty in his capacity as a overeign. In 1950 when the Treaty came into existence, what was the position ? At a time when the Maharaja enjoyed constitutionally the full sovereign powers and the private property list was prepared, it was agreed between the Maharaja who was then fully sovereign and the Indian Union that the concurrence of Mysore Government has to be obtained. In the correspondence this phrase is found. Then also the Mysore Government has concurred and with the concurrence of the Mysore Government a private property list was prepared. At that time the Government of India was not, according to me, prepared to give enlarged powers of ownership for these three Palaces. Powers of ownership were limited only to right of residence. Now, the sovereign powers of Maharaja were taken out and it was merged in the Indian Union. I concede that it is not open to the Government of India to take a final decison. But, I submit in all humility, that the concurrence or opinion of the Government is a very very relevant factor. I do not think the Government of India would take a decision if the Mysore

(SRI K. PUTTASWAMY)

Government does not concur with their opinion. That is my reading. After having listened to the hon. Chief Minister I am surprised that the Indian Union which was not prepared to give enlarged powers over these three palaces would now, at a time when the thinking of the country has changed, think of enlarging the powers of ownership. I take it that the accession treaty and the private property list is not governed by the ordinary law. It is not under any law that this agreement has been entered into. It is clear for all of us that under the Transfer of Property Act the condition of inalienability is void *ab initio*. Condition is valid and condition of inalienability is void *ab initio*. Therefore such an agreement could not have held ground if it were in accordance with any law. This agreement is above law in the exercise of powers of sovereign powers of the two contracting parties and it so happens that one of the contracting parties has ceased to enjoy sovereign powers. All these sovereign powers are now vested in the Indian Union and the Indian Union, while conceding that it has the right to take a decision finally, I would humbly submit to this House that it is the legitimate duty of the Government of Mysore to point out to the Government of Ind a the changed circumstances and also to bring to their notice that the 1950 treaty which contains the clause of inalienability cannot be changed now.

This is the point which I would like the Hon. Chief Minister to kindly consider, ponder over and if necessary consult the Law Department and if he finds that there is any force in this, he might kindly bring it to the notice of the Government of India.

ಶ್ರೀ ಡಿ. ದೇವರಾಜ ಅರಸ್.—ಈಗ ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಮತ್ತು ಶ್ರೀಮಾನ್ ಕೃಷ್ಣನ್ ಅವರು ಆಸ್ತಿಯ ವಿಚಾರದಲ್ಲಿ ಸೀಲಿಂಗ್ ಲಿಮಿಟ್ ಹಾಕಬೇಕೆಂದು ಏನು ಹೇಳಿದರು, ಆ ವಿಚಾರದಲ್ಲಿ ನಾವು ಈಗಾಗಲೇ ಒಪ್ಪಿಕೊಂಡು ಕಾನೂನು ಮಾಡುವುದಕ್ಕೆ ಹೊರಟಿದ್ದೇವೆ. ಅದರಂತೆ ಲ್ಯಾಂಡ್ ಸೀಲಿಂಗನ್ನು ಸಹ ಕಡಿಮೆ ಮಾಡುವುದಕ್ಕೆ ಹೊರಟಿದ್ದೇವೆ. ಆ ರೀತಿ ಕಾನೂನು ಮಾಡಿದ ಮೇಲೆ, ಅದು ಮಹಾರಾಜರ ಆಸ್ತಿಗೂ ಸಹ ಅನ್ವಯವಾಗಲೇ ಬೇಕು. ಆಸ್ತಿಯ ಮೇಲೆ ಸೀಲಿಂಗ್ ಹಾಕಿದಾಗ ಅವರ ಆಸ್ತಿಯು ಸಹ ಹೋಗಬೇಕು. ಅವರಿಗಾಗಿಯೇ ಸ್ಪೆಷಲ್ ಆಗಿ ಕಾನೂನು ಮಾಡುವ ಪ್ರಶ್ನೆಯೇ ಉಳಿದಿಲ್ಲ. ಅವರ ಹತ್ತಿರ 500 ಎಕರೆ ಇರಲಿ, 10 ಎಕರೆ ಇರಲಿ, ನಾವು ಸೀಲಿಂಗ್ ಹಾಕಿದಾಗ, ಅದು ಅವರಿಗೂ ಸಹ ಅನ್ವಯವಾಗುತ್ತದೆ. ಈ ರೀತಿ ಸೀಲಿಂಗ್ ಹಾಕುವ ವಿಚಾರ ಇರುವಾಗ ಅವರ ಆಸ್ತಿಯನ್ನು ಏತಕ್ಕೆ ಕೊಂಡುಕೊಳ್ಳಬೇಕು ಎಂದು ಮಾನ್ಯ ಸದಸ್ಯರು ಪ್ರಶ್ನೆ ಹಾಕುತ್ತಿದ್ದಾರೆ. ಮತ್ತು ಕಾಂಪೆನ್‌ಸೇಷನ್ ಏತಕ್ಕೆ ಕೊಡಬೇಕು, ಆ ರೀತಿ ಕೊಡಬೇಕಾಗಿದ್ದರೆ ಈಗಿರುವ ಕಾನೂನನ್ನೇ ತಿದ್ದುಪಡಿ ಮಾಡಿ ಎಂಬುದಾಗಿ ಸಹ ಅವರು ಹೇಳಿದರು. ಅರಮನೆಯನ್ನು ಕೊಂಡುಕೊಳ್ಳಬೇಕೆಂದು ಹೋದವನು ನಾನಲ್ಲ. ಅದನ್ನು ಗಾರ್ಡನ್ ಆಗಿ ಮಾಡಬೇಕು ಎಂದು ಹೇಳಿದಾಗ ಆ ಪ್ರಶ್ನೆ ಬರುತ್ತದೆ. ನಾಳೆ ಕಾನೂನು ಜಾರಿಯಲ್ಲಿ ಬಂದಾಗ ಅದು ಅವರಿಗೂ ಸಹ ಅನ್ವಯವಾಗುತ್ತದೆ. ಶ್ರೀಮಾನ್ ಹನುಮಂತಯ್ಯನವರು ಇಲ್ಲಿಗೆ ಬಂದಾಗ ಅದನ್ನು ಗಾರ್ಡನ್ ಮಾಡುವುದು ಒಳ್ಳೆಯದು ಎಂಬ ಸಲಹೆಯನ್ನು ಅವರ ಮುಂದೆ ಇಟ್ಟಾಗ ಅವರು ಕೇಂದ್ರ ಸರ್ಕಾರದವರ ಹತ್ತಿರ ಕೇಳುತ್ತೇನೆ ಎಂದು ಹೇಳಿದ್ದಾರೆ. ನಾಳೆ ಸೀಲಿಂಗ್ ಲಿಮಿಟ್ ಬಗ್ಗೆ ಬಿಲ್ ಬಂದಾಗ, ಈ ಆಸ್ತಿಯನ್ನು ಎಗ್ಜೆಮ್ಟ್ ಮಾಡಿ ಎಂದರೆ ಆಗ ನಮ್ಮದು ತಪ್ಪಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ನೀವು ಸೀಲಿಂಗ್ ಲಿಮಿಟ್ ತರುವುದರೊಳಗೆ ಅವರು ಬೇರೆಯವರಿಗೆ ಮಾರಿದರೆ ಏನು ಮಾಡುತ್ತೀರಿ ?

Sri D. DEVARAJ URS.—He is also an ordinary citizen, even if X, Y or Z buys it he runs the risk.

ಶ್ರೀ ಎಸ್. ಬಂಗಾರಪ್ಪ.—ಚಿಲ್ಲರೆ ಚಿಲ್ಲರೆಯಾಗಿ ಸೈಟ್‌ಗಳನ್ನಾಗಿ ಮಾಡಿ ಮಾರಾಟ ಮಾಡಿದರೆ ಏನು ಮಾಡುತ್ತೀರಿ ?

Sri D. DEVARAJ URS.—Even if he were to sell what all he has and get money it will have to be given back to the Government by way of capital-gains tax.

Sri C. M. ARUMUGAM.—May I know whether the land reforms Act was applicable to the Maharaja of Mysore or was he exempted ?

Sri D. DEVARAJ URS.—As far as my knowledge goes he has not been exempted.

Sri C. M. ARUMUGAM.—Till such time you bring in Urban ceilings will you issue an ordinance that no person including the Maharaja should sell their properties ?

Sri D. DEVARAJ URS.—At the conference of all State Chief Ministers held recently at Delhi we discussed this particular point, along with the socialisation of the urban property.

ಶ್ರೀ ಎಸ್. ಬಂಗಾರಪ್ಪ.—ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ.

ಶ್ರೀ ಡಿ. ದೇವರಾಜ ಅರಸ್.—ನಿಮ್ಮ ಪ್ರಶ್ನೆಗೆ ಉತ್ತರವನ್ನು ಯಕ್ಷ ಬಂದು ಕೊಡಬೇಕು. ನನ್ನ ಕೈಯಿಂದ ಸಾಧ್ಯವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಆದಷ್ಟು ಜಾಗ್ರತೆ ಸೀಲಿಂಗ್ ಲಿಮಿಟ್ ತಂದು ಹೆಚ್ಚಿನ ಆಸ್ತಿಯನ್ನು ಪರಿಹಾರ ಕೊಡದೆ ವಶಪಡಿಸಿಕೊಳ್ಳುವುದಕ್ಕೆ ಪ್ರಯತ್ನವನ್ನು ಏತಕ್ಕೆ ಮಾಡಬಾರದು ?

ಶ್ರೀ ಡಿ. ದೇವರಾಜ ಅರಸ್.—ನಿಮ್ಮ ರಾಜ್ಯ ಬಂದಾಗ ಆ ರೀತಿ ಮಾಡುವಿರಂತೆ, ಈಗ ಸುಮ್ಮನೆ ಇರಿ.

ಶ್ರೀ ಎಸ್. ಬಂಗಾರಪ್ಪ.—ನಾವು ಹೊಸ ಪಕ್ಷವನ್ನು ರಚನೆ ಮಾಡಿದ್ದೇವೆ. ನೀವೆಲ್ಲಾ ಬಂದು ಸೇರಿಕೊಂಡರೆ ಹೊಸ ರಾಜ್ಯ ಸ್ಥಾಪನೆ ಮಾಡಬಹುದು.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಕೃಷ್ಣನ್ ಅವರು ಹೇಳಿದಂತೆ ಕಾಂಪೆನ್‌ಸೇಷನ್ ಕಡಿಮೆ ಕೊಡಲಿ ಅಥವಾ ಜಾಸ್ತಿ ಕೊಡಲಿ, ಅದಕ್ಕೆ ರಾಜ್ಯಾಂಗವನ್ನು ತಿದ್ದುಪಡಿ ಮಾಡಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ರಾಜ್ಯಾಂಗವನ್ನು ತಿದ್ದುಪಡಿ ಮಾಡಬೇಕಾಗಿದ್ದರೆ ಮಾಡಲಿ.

ಶ್ರೀ ಡಿ. ದೇವರಾಜ ಅರಸ್.—ಅದು ನನ್ನ ಒಬ್ಬನ ಕೈಯಲ್ಲಿ ಇಲ್ಲ. ಅದನ್ನು ಕೇಂದ್ರ ಸರ್ಕಾರದವರು ಮಾಡಬೇಕು. ಮಾನ್ಯ ಪುಟ್ಟಸ್ವಾಮಿಯವರು ಹೇಳಿದ ಹಾಗೆ ಈ ವಿಷಯ ವಿಶೇಷವಾದ ಕಾನೂನಿನಲ್ಲಿ ಒಳಪಡುತ್ತದೆ ಎಂಬ ವಿಷಯ ನನಗೆ ಗೊತ್ತಿಲ್ಲ. ಅವರು ಲಾಯರ್ ಇರುವುದರಿಂದ ಅವರಿಗೆ ಹೆಚ್ಚು ಗೊತ್ತಿರಬೇಕು. ನಾನು ಲಾಯರ್ ಕೆಲಸ ಮಾಡಿಲ್ಲ. ಅವರು ಒಂದು ವಿಷಯವನ್ನು ನನಗೆ ಸಹಾಯಕವಾಗಿ ಹೇಳಿದರು. ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಆಕ್ಟ್ ಬಗ್ಗೆ ಅವರು ಹೇಳಿದರು. Condition of inalienability becomes meaningless under the Transfer of Properties Act, ಎಂದು. Another point he made was that this property cannot be treated as property under the Transfer of property Act. That is a matter which should be examined or to ask the Government of India to examine it. That is what he stated. ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಆಕ್ಟ್ ಇದಕ್ಕೂ ಅನ್ವಯವಾಗುವುದಾದರೆ, ಅದು ಮೀನಿಂಗ್‌ಲೆಸ್ ಆಗುತ್ತದೆ ಎಂಬ ವಿಷಯವನ್ನು ಹಿಂದೆ ಕೂಡ ನಮ್ಮ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದಾರೆ. ಆದರೂ ಕೂಡ ಕೇಂದ್ರ ಸರ್ಕಾರದವರು ಈ ಒಂದು ತೀರ್ಮಾನಕ್ಕೆ ಬಂದಿದ್ದಾರೆ.

(ಶ್ರೀ ಡಿ. ದೇವರಾಜ ಅರಸ್)

ಮತ್ತೆ ಬೇಕಾದರೆ ಕೇಂದ್ರ ಸರ್ಕಾರಕ್ಕೆ ತಿಳಿಸೋಣ. ಈಗ ಕೇಂದ್ರ ಸರ್ಕಾರದವರು ತಮ್ಮ ಒಪಿನಿಯನ್ ತಿಳಿಸಿದ್ದಾರೆ ಮತ್ತು ಡಿಸ್ಕೈಡೆಡ್ ಎಂದು ಅವರು ಹೇಳಿದ್ದಾರೆ. ಅಂದರೆ ಆರ್ಡಿನರಿ ರಾ ಇದಕ್ಕೂ ಅಪ್ಲೈ ಆಗುತ್ತದೆ ಎಂದು ತಿಳಿದುಕೊಂಡೇ ಅವರು ಈ ಒಂದು ತೀರ್ಮಾನಕ್ಕೆ ಬಂದಿದ್ದಾರೆಂದು ನನ್ನ ಅಭಿಪ್ರಾಯವಾಗಿದೆ.

ಅಧ್ಯಕ್ಷರು.—ಈಗ ಮತ್ತೆ ಕ್ಲಾರಿಫಿಕೇಷನ್ ಕೇಳಬೇಕಾದ ಅಗತ್ಯವಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಎಲ್ಲ ವಿವರಗಳನ್ನು ಸಹ ತಿಳಿಸಿದ್ದಾರೆ. I don't think there is need to revise my decision. I therefore disallow the adjournment motion.

Sri H. S. SIDDAPPA.—I have a very important matter to bring to the notice of this House. There is a paper called "KALAMANA" in which it is stated that :

"ಹರಿಜನೋದ್ಧಾರ, ಹಿಂದೂ ಸಂಪ್ರದಾಯ ವಿರುದ್ಧ ?" ಎಂಬ ಬಗ್ಗೆ ವಿವರಣೆ ಕೊಡಲಾಗಿದೆ. ಮತ್ತು ಇವರೇ ನಿಮ್ಮ ಮೂಲ ಜನ್ಮದಾತರು ಎಂಬ ಬಗ್ಗೆ ಸಹ ವಿವರಣೆ ಕೊಡಲಾಗಿದೆ. ಜಾತ್ಯತೀತ ಸಮಾಜ ಸ್ಥಾಪನೆ ಆಗಬೇಕು ಎಂದು ಈ ಸರ್ಕಾರ ಹೇಳುತ್ತಿರುವಾಗ ಇಂತಹ ಒಂದು ಪತ್ರಿಕೆಯನ್ನು ಬೆಂಗಳೂರಿನಲ್ಲಿ ಅಚ್ಚು ಹಾಕಲು ಅವಕಾಶ ಕೊಟ್ಟವರು ಯಾರು ಎಂದು ಕೇಳುತ್ತೇನೆ. ಹರಿಜನರ ಸಂಪ್ರದಾಯಕ್ಕೆ ವಿರುದ್ಧವಾಗಿ ಈ ಪತ್ರಿಕೆಯನ್ನು ಅಚ್ಚು ಮಾಡಲಾಗಿದೆ. ಜಾತಿಯ ವರ್ಣನೆಯನ್ನು ಕೊಡುತ್ತಾ "ಚಂಡಾಲ" ಎಂಬ ಬಗ್ಗೆ ಈ ರೀತಿ ಹೇಳಲಾಗಿದೆ :

> "ಬ್ರಾಹ್ಮಣ ಸ್ತ್ರೀಯಲ್ಲಿ ಶೂದ್ರವೀರ್ಯದಿಂದ ಹುಟ್ಟಿದವನು ಚಂಡಾಲನೆನಿಸುವನು ಇವನು ಅಪಾತ್ರನು ಯಾವುದೊಂದು ಪಾತ್ರವು ಇವನಿಗಿಲ್ಲವೋ ಇಂಥವರಿಗೆ ಕತ್ತೆಯೇ ಧನವು ಅಸ್ತಿಯು. ಇಂಥವನ ಸ್ಪರ್ಶ ಮಾಡುವುದು ನಿಷಿದ್ಧವು ಇವರನ್ನು ಮುಟ್ಟಿದರೆ ಉಟ್ಟ ಬಟ್ಟೆ ಸಹಿ ಸ್ನಾನವನ್ನು ಮಾಡಬೇಕು" ಎಂಬುದಾಗಿ.

ಅಧ್ಯಕ್ಷರು.—ಆ ಪತ್ರಿಕೆಯಲ್ಲಿ ಬಂದಿರುವ ವಿಷಯಕ್ಕೂ ಈ ಸಭೆಗೂ ಯಾವ ಸಂಬಂಧವೂ ಇಲ್ಲ, ತಾವು ದಯಮಾಡಿ ಕುಳಿತುಕೊಳ್ಳಿ. ಮುಂದಿನ ವಿಷಯಕ್ಕೆ ನಾವು ಹೋಗೋಣ.

Sri H. S. SIDDAPPA.—My point is that this paper should be taken to task ; the persons who are responsible to publish this paper should be taken to task. ರಾಷ್ಟ್ರದಹಿತವನ್ನು ಕಾಪಾಡುವುದಕ್ಕಾಗಿಯೇ ಈ ಸಭೆ ಇರುವುದು. ಜಾತ್ಯಾತೀತ ರಾಜ್ಯವನ್ನು ಸ್ಥಾಪನೆ ಮಾಡಬೇಕೆಂದು ನಾವು ಹೊರಟಿರುವಾಗ ಇಂತಹ ಪತ್ರಿಕೆಯನ್ನು ಅಚ್ಚು ಹಾಕುವುದಕ್ಕೆ ಅವಕಾಶ ಕೊಡುವುದು ಸರಿಯಲ್ಲ. ಇದೇ ಪತ್ರಿಕೆಯಲ್ಲಿ ಲಿಂಗಾಯತ ಎಂಬುದಕ್ಕೆ ಈ ಅರ್ಥ ಕೊಡಲಾಗಿದೆ :

> "ವ್ರಾತ್ಯ ವೈಶ್ಯನ ದೆಸೆಯಿಂದ ವ್ಯಭಿಚಾರಿಣಿ ವೈಶ್ಯ ಸ್ತ್ರೀಯಲ್ಲಿ ಲಿಂಗಾಯತನೆಂಬ ಪುತ್ರನು ಉತ್ಪನ್ನನಾಗುತ್ತಾನೆ. ಈತನು ಹಣೆಯಲ್ಲಿ ವಿಭೂತಿಯನ್ನು ಧರಿಸಿ, ಗಳದಲ್ಲಿ ಲಿಂಗವನ್ನು ಕಟ್ಟಿಕೊಂಡು ಪೂಜಿಸುತ್ತಾನೆ. ವಸ್ತ್ರ, ಕರೀಮೆಣಸು, ಹಿಂಗು ಇತ್ಯಾದಿ ಗಳನ್ನು ಮಾರಿ ಜೀವಿಸುತ್ತಾನೆ,"

ಎಂಬುದಾಗಿ. ಇಂತಹ ಪತ್ರಿಕೆ ರಾಜ್ಯದ ಹಿತವನ್ನು ಕಾಪಾಡುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅರಸು ಎಂದರೆ ಏನು ಎಂಬ ಬಗ್ಗೆ ಏನಾದರು ಅದರಲ್ಲಿ ಇದೆಯೇ ?

ಶ್ರೀ ಎಚ್. ಎಸ್. ಸಿದ್ದಪ್ಪ.—ಈ ಪತ್ರಿಕೆಯ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಇಲ್ಲದಿದ್ದರೆ ಈ ಪತ್ರಿಕೆಯ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಕ್ರಮ ತೆಗೆದು ಕೊಳ್ಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಹೊಸದಾಗಿ ಈ ಸಭೆಗೆ ಬಂದಿರತಕ್ಕ ಮಾನ್ಯ ಸದಸ್ಯರು ದಯಮಾಡಿ ರೂಲ್ಸ್‌ನ್ನು ಸರಿಯಾಗಿ ಓದಿಕೊಳ್ಳಬೇಕು.

4-00 P. M.

ತಾವು ಮೊದಲೇ ನೋಟೀಸ್ ಕೊಡದೆ ಸುಮ್ಮನೆ ಹೀಗೆ ವಿಚಾರಗಳನ್ನು ಎತ್ತಿದರೆ ಹೇಗೆ ?

ಶ್ರೀ ಎಚ್. ಎಸ್. ಸಿದ್ದಪ್ಪ.—ಇದು ಬಹಳ ಮುಖ್ಯವಾದದ್ದು, ಇದರ ಅರ್ಜೆನ್ಸಿ ಬಹಳವಾಗಿ ಇತ್ತು. ನಮ್ಮ ರಾಜ್ಯದ ಮುಖ್ಯ ನ್ಯಾಯಾಧೀಶರು ಈ ಪತ್ರಿಕೆಯಲ್ಲಿರತಕ್ಕ ವಿಷಯಗಳಿಗೆ ಸಂಬಂಧಪಟ್ಟ ಒಂದು ಪುಸ್ತಕವನ್ನು ಬಿಡುಗಡೆ ಮಾಡಿದ್ದಾರೆ.

ಅಧ್ಯಕ್ಷರು.—ಎಲ್ಲಕ್ಕಿಂತ ಮುಖ್ಯವಾಗಿ ಈಗ ನಮ್ಮ ಮುಂದಿರುವ ಈ ಸಭೆಯ ಕಾರ್ಯಕಲಾಪಕ್ಕೆ ಹೆಚ್ಚಿನ ಗಮನ ಕೊಡಬೇಕು. ಆದ್ದರಿಂದ ನಾವು ಇನ್ನು ಮುಂದಿನ ವಿಷಯಕ್ಕೆ ಹೋಗೋಣ.

ಸರ್ಕಾರದವರು ಪ್ರತಿವರ್ಷ ವನಮಹೋತ್ಸವ ಮಾಡಿ, ಇದ್ದ ಒಂದೆರಡು ಗಿಡಗಳನ್ನೂ ಕತ್ತರಿಸುವುದರಿಂದ ಈಗ ವನಮಹೋತ್ಸವ ಆಗದೆ ಒಣ ಮಹೋತ್ಸವ ಆಗಿದೆ. ಲೆಕ್ಕದಲ್ಲಿ 10 ಸಾವಿರ ಗಿಡಗಳನ್ನು ಕೊಟ್ಟಿದ್ದು ಇದೆ. ಅಂಕಿ ಸಂಖ್ಯೆಗಳಲ್ಲಿ ಗಿಡಗಳು ಬೆಳೆದಿವೆಯೇ ವಿನಹ ಭೂಮಿ ಮೇಲೆ ಬೆಳೆಯಲಿಲ್ಲ. ಮರಗಳು ಇಲ್ಲದೆ ಇರುವಕಡೆ ಮಳೆ ಬೀಳುವುದಿಲ್ಲ. ನಮ್ಮ ಕಡೆ ಮರಗಳು ಇಲ್ಲದೆ ಬಹಳವಾಗಿ ಕ್ಷಾಮಕ್ಕೆ ನಾವು ತುತ್ತಾಗುತ್ತಿದ್ದೇವೆ. ಈಗ ಲೆಕ್ಕ ತೆಗೆದುಕೊಂಡರೆ ಸಾಕಷ್ಟು ಮಳೆಯಾಗಿಲ್ಲ ಹೋದವರ್ಷ ಆಗಸ್ಟ್ ಕೊನೆಯೊಳಗೆ ಸ್ವಲ್ಪ ಸ್ವಲ್ಪ ಬಿತ್ತನೆ ಹಾಕಿದ್ದು ಮಳೆ ಇಲ್ಲದೆ ಒಣಗಿಹೋಯಿತು. ಈ ವರ್ಷ ಎಲ್ಲಿಯೂ ಬಿತ್ತನೆ ಆಗಿಲ್ಲ. ಹಿಂದೆ ಸರ್ಕಾರದವರು ಪಿ.ಡಬ್ಲ್ಯು.ಡಿ. ವರ್ಕ್ಸ್ ಬಗ್ಗೆ ಬ್ಯಾನ್ ಹಾಕಿದ್ದರಿಂದ ಯಾವ ಕೆಲಸಗಳೂ ಆಗಿಲ್ಲ. ಈಗ ಮಾನ್ಯ ಮಂತ್ರಿಗಳು ಬ್ಯಾನ್ ತೆಗೆದಿದ್ದಾರೆ. ಆದರೂ ನಮ್ಮ ಕಡೆ ಲೋಕೋಪಯೋಗಿ ಇಂಜನಿಯರುಗಳು ಯಾವ ಕೆಲಸವನ್ನು ಮಾಡಿಲ್ಲ. ಈಗಲೂ ಬ್ಯಾನ್ ತೆಗೆದಿರುವುದು ಅವರಿಗೆ ಅಗತ್ಯ ಇಲ್ಲ. ಅಲ್ಲಿ ಇನ್ನೂ ಯಾವ ಕಾಮಗಾರಿಗಳನ್ನೂ ಷುರುವು ಮಾಡಿಲ್ಲ. ಜನಗಳಿಗೆ ಅನಾನುಕೂಲವಾಗಿದೆ. ಇದನ್ನು ಸರ್ಕಾರದವರು ಪರಿಶೀಲಿಸಬೇಕು. ನಾನು ಹೇಳುವ ಹಾಗೆ ಇನ್ನು ಮುಂದೆ ರಿಜರ್ವ್ ಬ್ಯಾಂಕಿನಿಂದ ಎಲ್ಲಾ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳಿಗೂ ಸಾಲದ ಬಗ್ಗೆ ಎಲಿಜಿಬಿಲಿಟಿ ಕೊಡುವ ಹಾಗೆ ಸರ್ಕಾರ ಪ್ರಯತ್ನ ಮಾಡಬೇಕು. ಯಾರೋ ಕೆಲವರು ಮಾಡಿದ ತಪ್ಪಿಗಾಗಿ ಎಲ್ಲರನ್ನೂ ಶಿಕ್ಷೆ ಮಾಡುವುದು ಬಹಳ ಹೀನಾಯವಾದುದು. ಆದ್ದರಿಂದ ತಾವೆಲ್ಲರೂ ಏನಾದರೂ ಒಂದು ನಿರ್ಣಯ ಮಾಡಿ ಎಲ್ಲೆಲ್ಲಿ ಕ್ಷಾಮ ಇದೆ, ಯಾವ್ಯಾವ ಜಿಲ್ಲೆಗಳಲ್ಲಿ ಈಗ ಕ್ಷಾಮ ತಲೆದೋರಿದೆ ಅಲ್ಲಿಗೆ ಪರಿಹಾರ ಕೊಡಬೇಕು. ಈಗ ಬಿಜಾಪುರ, ಚಿತ್ರದುರ್ಗ ಜಿಲ್ಲೆಗಳಲ್ಲಿ ಹೆಚ್ಚಿಗೆ ಕ್ಷಾಮ ಇದೆಯೆಂದು ಹೇಳುತ್ತಾರೆ. ಕ್ಷಾಮ ಕೋಲಾರದಲ್ಲಿದೆಯೆಂದು ನಾವು ಹೇಳುತ್ತಿದ್ದೇವೆ. ಮುಖ್ಯವಾಗಿ ತಮ್ಮಲ್ಲಿ ಇರುವ ಪಟ್ಟಿ ಪ್ರಕಾರ ಎಲ್ಲೆಲ್ಲಿ ಕ್ಷಾಮ ಇದೆಯೆಂಬ ಲೆಕ್ಕವಿದೆ. ಅಂತಹ ಕಡೆಗಳಲ್ಲಿ ಶಾಶ್ವತ ಪರಿಹಾರವನ್ನು ಮಾಡಿಕೊಡಬೇಕು. ಅಂತರ್ ಬಾವಿಗಳನ್ನು ಮಾಡುವುದಕ್ಕೆ ಹೆಚ್ಚುಹೆಚ್ಚಾಗಿ ಸಾಲಗಳನ್ನು ಕೊಡಬೇಕು. ಅದರ ಜೊತೆಗೆ ವಿದ್ಯುಚ್ಛಕ್ತಿ ಸರಬರಾಜು ಚೆನ್ನಾಗಿ ಮಾಡಿಕೊಟ್ಟರೆ ಕ್ಷಾಮ ಪರಿಹಾರವಾಗುವುದಕ್ಕೆ ಸಾಧ್ಯ. ಆದರೆ ಮಳೆಯನ್ನೇ ನಂಬಿ ಕ್ಷಾಮ ಪರಿಹಾರ ಮಾಡುವುದಕ್ಕಾಗುವುದಿಲ್ಲವೆಂದು ರೈತರು ಪರಿತಪಿಸುತ್ತಿದ್ದಾರೆ. ಆದ್ದರಿಂದ ಸಂಬಂಧಪಟ್ಟ ಇಲಾಖೆಯವರು ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಸರ್ಕಾರದವರು ಸೂಚನೆ ಕೊಡಬೇಕೆಂದು ಹೇಳಿ, ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬೈರಪ್ಪಾಜಿ (ತುರವೇಕೆರೆ).—ಮಾನ್ಯ ಅಧ್ಯಕ್ಷರೇ, ಈ ದೇಶದಲ್ಲಿ ಕಳೆದ 50-60 ವರ್ಷಗಳಿಂದಲೂ ಆಗಾಗ್ಗೆ ಕೆಲವು ಜಿಲ್ಲೆಗಳು ಯಾವಾಗಲೂ ಕ್ಷಾಮಕ್ಕೆ ತುತ್ತಾಗುತ್ತಿರುವ ಪರಿಸ್ಥಿತಿ ಒದಗುತ್ತಾ ಇರುವುದು ನಮಗೆಲ್ಲರಿಗೂ ಗೊತ್ತಿದೆ. ಇದರಲ್ಲಿ ಎಲ್ಲಾ ಜಿಲ್ಲೆಗಳ ಪೈಕಿ, ತುಮಕೂರು ಜಿಲ್ಲೆಯೂ ಒಂದು ಎಂದು ಹೇಳಿದರೆ ಅದು ಅತಿಶಯೋಕ್ತಿ ಆಗಲಾರದೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸುಮಾರು ಏಳೆಂಟು ವರ್ಷಗಳಿಂದಲೂ ಕೂಡ ಈ ಜಿಲ್ಲೆಯಲ್ಲಿ ಮಳೆ ಪ್ರಾರಂಭದಲ್ಲಿ ಚೆನ್ನಾಗಿ ಬರುತ್ತದೆ. ಕೊನೆಯಲ್ಲಿ ಹೋಗುತ್ತದೆ. ಇಲ್ಲಾ ಪ್ರಾರಂಭದಲ್ಲಿ ಕೈಕೊಟ್ಟು ಕೊನೆಯಲ್ಲಿ ಚೆನ್ನಾಗಿ ಬರುತ್ತದೆ. ಹೀಗಾಗಿ ಬೆಳೆ ಸಾಮಾನ್ಯ ಪ್ರಮಾಣದಲ್ಲಿ ಕೂಡ ಸುಮಾರು ಏಳೆಂಟು ವರ್ಷಗಳಿಂದ ರೈತನ ಕೈ ಸೇರದೇ ಇರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆಯೆಂದು ನಾನಾದರೂ ಕೂಡ ಭಾವಿಸುತ್ತೇನೆ. ಇಂತಹ ಸಂದರ್ಭದಲ್ಲಿ ಪ್ರತಿವರ್ಷವೂ ಕೂಡ ಕ್ಷಾಮಕ್ಕೆ ತುತ್ತಾಗಿರತಕ್ಕ ತುಮಕೂರು ಜಿಲ್ಲೆಯಲ್ಲಿ ಕೆಲವು ಕಾಮಗಾರಿಗಳನ್ನು ತೆಗೆದುಕೊಂಡಿದ್ದೂ ಉಂಟು. ಆ ಕಾಮಗಾರಿಗಳಲ್ಲಿ ರಸ್ತೆ ಮಾಡುವಂಥಾದ್ದು, ಸಣ್ಣಸಣ್ಣ ನೀರಾವರಿ ಕೆಲಸಗಳನ್ನು ಮಾಡಿಸತಕ್ಕದ್ದು ಹೊಲಗಳಿಗೆ ಒಡ್ಡುಗಳನ್ನು ಹಾಕಿಸುವುದು—ಇತ್ಯಾದಿ ಕೆಲಸಗಳನ್ನು ಪ್ರತಿವರ್ಷವೂ ಕೂಡ ನಮ್ಮ ಜಿಲ್ಲೆಯಲ್ಲಿ ಸರ್ಕಾರ ತೆಗೆದುಕೊಂಡಿತ್ತು.

4-30 P.M.

ಆಗಲೇ ನಮ್ಮ ಗೆಳೆಯರು ಹೇಳಿದ ಹಾಗೆ ಸರ್ಕಾರದವರು, ಕೊಟ್ಟ ಹಣ ಯಾವ ಒಂದು ಕಾಮಗಾರಿಯನ್ನಾಗಲಿ ಪೂರ್ಣಮಾಡುವುದಕ್ಕಾಗಲಿಲ್ಲ ಎಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ನಮ್ಮ ತುಮಕೂರು ಜಿಲ್ಲೆಯಲ್ಲಿರತಕ್ಕ ಒಟ್ಟು ಹತ್ತು ತಾಲ್ಲೂಕುಗಳಲ್ಲಿ ಯಾವ ಒಂದು ತಾಲ್ಲೂಕ್ ಕೂಡ ನೆಮ್ಮದಿಯಿಂದ ಇರುವುದಕ್ಕೆ ಅವಕಾಶವಾಗಿಲ್ಲ. ಅದರಲ್ಲೂ ತುಮಕೂರು ತಾಲ್ಲೂಕ್,

ಕುಣಿಗಲ್ ತಾಲ್ಲೂಕ್ ತಿಪಟೂರು ಮತ್ತು ತುರುವೇಕೆರೆ ತಾಲ್ಲೂಕುಗಳೂ, ಹಾಗೆಯೇ ಶಿರಾ, ಮಧುಗಿರಿ, ಚಿಕ್ಕನಾಯಕನಹಳ್ಳಿ, ಪಾವಗಡ, ಗುಬ್ಬಿ ಮತ್ತು ಕೊರಟಗೆರೆ ಈ ತಾಲ್ಲೂಕುಗಳ ಕೆಲಕೆಲವು ಭಾಗಗಳು ವರ್ಷಂಪ್ರತಿ ಕ್ಷಾಮಕ್ಕೆ ತುತ್ತಾಗುತ್ತಿರುತ್ತವೆ. ಸರ್ಕಾರದವರು ಇಲ್ಲಿಯವರೆಗೂ ಮಾಡಿರತಕ್ಕ ಕಾಮಗಾರಿಗಳಿಂದ ಜನರಿಗೆ ಸಾಕಷ್ಟು ಪ್ರಮಾಣದಲ್ಲಿ ಜೀವನೋಪಾಯವನ್ನು ಒದಗಿಸುವುದರಲ್ಲಿ ಯಾವ ಅನುಕೂಲವೂ ದೊರೆತಿಲ್ಲ ಎಂದು ಹೇಳುವುದಕ್ಕೆ ಈ ಸಂದರ್ಭದಲ್ಲಿ ನಾನು ಇಷ್ಟಪಡುತ್ತೇನೆ. ಇನ್ನು ಮುಂದಕ್ಕಾದರೂ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನರಿಗೆ ಒಂದು ಜೀವನೋಪಾಯವನ್ನು ಕಲ್ಪಿಸತಕ್ಕ ಕಾಮಕಾರಿಗಳನ್ನು ಕೈಗೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ವಿಚಾರದಲ್ಲಿ ಏನೋ ಎಂ. ಎಲ್. ಎ. ಗಳು ಹೇಳುತ್ತಾರೆಂದು ಸ್ವಲ್ಪ ಹಣ ಕೊಟ್ಟರಾಯಿತೆಂಬ ಒಂದು ಭಾವನೆ ಹಿಂದಿನ ಸರ್ಕಾರದಲ್ಲಿತ್ತು. ಅಂಥ ಭಾವನೆ ಇರಕೂಡದೆಂದು ಕೇಳಿಕೊಳ್ಳುತ್ತೇನೆ.

ನಮ್ಮ ಜಿಲ್ಲೆಯಲ್ಲಿ ಕ್ಷಾಮನಿವಾರಣಾ ನಿಧಿಯಿಂದ ಹಣವನ್ನು ಖರ್ಚುಮಾಡಿ ಅಲ್ಲ ಏನು ಕೆಲವು ರಸ್ತೆಗಳನ್ನು ಹಾಗೂ ಸಣ್ಣ ನೀರಾವರಿ ಕಾಮಗಾರಿಗಳನ್ನು ಮಾಡಿಸಿದ್ದಾರೆ ಮತ್ತು ಅಲ್ಲೇನು ಕೆಲವು ಒಡ್ಡುಗಳನ್ನು ಕಟ್ಟಿಸಿದ್ದಾರೆ ಅವುಗಳೆಲ್ಲಾ ಇನ್ನೂ ಅಪೂರ್ಣವಾಗಿ ಹಾಗೇ ಉಳಿದಿವೆ. ಇಂಥ ನಿದರ್ಶನಗಳು ನನ್ನ ಗಮನಕ್ಕೆ ಅನೇಕ ಬಂದಿವೆ. ಮಂತ್ರಿಗಳ ಗಮನಕ್ಕೂ ಕೂಡ ಕೆಲವು ಬಂದಿರಬಹುದೆಂದು ನಾನು ನಂಬಿದ್ದೇನೆ. ಹಿಂದೆ ಕ್ಷಾಮ ನಿವಾರಣಾ ನಿಧಿಯಿಂದ ಕೈಗೊಂಡ ಕೆಲಸಗಳಲ್ಲಿ ಯಾವ ಯಾವ ಕೆಲಸಗಳು ಹಾಗೇ ಅಪೂರ್ಣವಾಗಿ ಇನ್ನೂ ಉಳಿದಿವೆಯೋ ಅಂಥ ಕೆಲಸಗಳಿಗೆ ಈ ವರ್ಷದ ಕ್ಷಾಮನಿಧಿಯಿಂದ ಹಣವನ್ನು ಹಾಕಿ ಆ ಕೆಲಸಗಳನ್ನು ಪೂರ್ಣಗೊಳಿಸಬೇಕೆಂದು ಕಳಕಳಿಯಿಂದ ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ಜಿಲ್ಲೆಯಲ್ಲಿ 10 ಎಕರೆಗಳ ಒಳಗೆ ಹಾಗೂ ಮೇಲ್ಪಟ್ಟು ಅಚ್ಚುಕಟ್ಟು ಇರತಕ್ಕ ಅನೇಕ ಸಣ್ಣ ಸಣ್ಣ ನೀರಾವರಿ ಕಾಮಗಾರಿಗಳಿವೆ. ಅವು ಈ ದಿವಸ ಜನರ ಉಪಯೋಗಕ್ಕೆ ಬರುವಂತಿಲ್ಲ. ಕಾರಣ ಅವುಗಳ ಜೀರ್ಣೋದ್ಧಾರ ಕಾರ್ಯವನ್ನು ಇಲ್ಲಿಯತನಕ ಮಾಡಿಲ್ಲ. ಹಾಗೂ ಅಲ್ಲಿ ಇಲ್ಲಿ ಕೈಗೊಂಡಿದ್ದ ಒಂದೆರಡು ಕೆಲಸಗಳು ಪೂರ್ಣವಾಗದೆ ಹಾಗೆಯೇ ಉಳಿದಿರುತ್ತವೆ. ಇಂಥ ಅಪೂರ್ಣವಾಗಿ ಉಳಿದಿರತಕ್ಕ ಕಾಮಗಾರಿಗಳನ್ನು ಈ ವರ್ಷದ ಕ್ಷಾಮಪರಿಹಾರ ನಿಧಿಯಿಂದ ಹಣವನ್ನು ಒದಗಿಸಿ ಅವುಗಳನ್ನು ಪೂರ್ಣ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಅಲ್ಲಿ ಒಡ್ಡುಗಳನ್ನು ಹಾಕಿರತಕ್ಕ ಬಗ್ಗೆ ಜನರು ಬಹಳ ಬೇಜಾರಾಗಿದ್ದಾರೆ. ಕಾರಣ ಅಲ್ಲಿ ಒಳಗಿನ ಮಣ್ಣನ್ನೇ ತೆಗೆದು ಆ ಒಡ್ಡಿಗೆ ಉಪಯೋಗ ಮಾಡಿದ್ದಾರೆ. ಹಾಗೆ ಆ ಮಣ್ಣನ್ನು ಹಾಕಬಾರದು. ಅಲ್ಲದೆ ಅಲ್ಲಿ ಮಟ್ಟವಾಗಿದ್ದ ಭೂಮಿಯನ್ನು ಬೇರೆ ಅಗೆದು ಜನರಿಗೆ ತೊಂದರೆಯನ್ನು ಮಾಡಿದ್ದಾರೆ. ಇಂಥ ನಿದರ್ಶನಗಳು ಅನೇಕ ಇವೆ. ಈ ಒಡ್ಡನ್ನು ಕಟ್ಟುತಕ್ಕ ಕೆಲಸದಲ್ಲೂ ಲೋಪದೋಷಗಳು ಇರುತ್ತವೆ. ಇವುಗಳನ್ನು ಕೂಡಲೇ ಸರಿಪಡಿಸಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ತುಮಕೂರು ಜಿಲ್ಲೆಗೆ ಒಂದು ಶಾಶ್ವತವಾದ ಪರಿಹಾರವನ್ನು ಹುಡುಕಲೇಬೇಕೆಂದಿದ್ದರೆ ಅದಕ್ಕೆ ಇನ್ನೇನು ಮಾಡುವುದಕ್ಕೂ ಸಾಧ್ಯವಿಲ್ಲ—ಹೇಮಾವತಿ ನೀರನ್ನು ತಂದರೆ ಮಾತ್ರ ಇಲ್ಲಿಯ ಜನರಿಗೆ ಒಂದು ಶಾಶ್ವತ ಪರಿಹಾರವನ್ನು ಹುಡುಕಿದಂತಾಗುತ್ತದೆ. ಆದ್ದರಿಂದ ಹೇಮಾವತಿ ಅಣೆಕಟ್ಟಿನಿಂದ ನೀರನ್ನು ತುಮಕೂರು ಜಿಲ್ಲೆಯ ತಾಲ್ಲೂಕುಗಳಿಗೆ ಅಂದರೆ—ತುಮಕೂರು, ತಿಪಟೂರು, ತುರುವೇಕೆರೆ, ಕುಣಿಗಲ್ ಮತ್ತು ಗುಬ್ಬಿ ಹಾಗೂ ನಾಗಮಂಗಲ ಈ ತಾಲ್ಲೂಕುಗಳಿಗೆ ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಾಗೆಯೇ ಅಪ್ಪರ್ ಭದ್ರಾ ಪ್ರಾಜೆಕ್ಟಿನಿಂದ ನೀರನ್ನು ಚಿಕ್ಕನಾಯಕನಹಳ್ಳಿ, ಶಿರಾ, ಮಧುಗಿರಿ, ಪಾವಗಡ ಮತ್ತು ಕೊರಟಗೆರೆ ತಾಲ್ಲೂಕುಗಳಿಗೆ ಒದಗಿಸಿ ಅಲ್ಲಿ ವರ್ಷಂ ಪ್ರತಿ ಬರತಕ್ಕ ಕ್ಷಾಮವನ್ನು ತಡೆಗಟ್ಟಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ಜಿಲ್ಲೆಯಲ್ಲಿ ವರ್ಷೇ ವರ್ಷೇ ಕ್ಷಾಮನಿವಾರಣಾ ಕೆಲಸಗಳನ್ನು ನಡೆಸುತ್ತಿದ್ದರೂ ಕೂಡ ಅಲ್ಲಿನ ಜನರಿಗೇನೂ ಇದರಿಂದ ಸುಖವಾಗಿಲ್ಲ. ಹಣವನ್ನು ಖರ್ಚುಮಾಡಿದ್ದರೂ ಪ್ರಯೋಜನವಾಗಿಲ್ಲ. ಜನರು ಬಹಳ ಕಷ್ಟಪರಿಸ್ಥಿತಿಯಲ್ಲಿದ್ದಾರೆ. ಆದಕಾರಣ ಅಲ್ಲಿಯ ಜನಕ್ಕೆ ಒಂದು ಶಾಶ್ವತವಾದ ಪರಿಹಾರವನ್ನು ಒದಗಿಸುವುದಕ್ಕೆ ಸಾಧ್ಯವಿರತಕ್ಕ ಒಂದೇ ಒಂದು ಮಾರ್ಗವೆಂದರೆ ಹೇಮಾವತಿ ಮತ್ತು ಅಪ್ಪರ್ ಭದ್ರಾ ಪ್ರಾಜೆಕ್ಟ್‌ಗಳಿಂದ ನೀರನ್ನು ತಂದು ತುಮಕೂರು ಜಿಲ್ಲೆಗೆ ಒದಗಿಸಿದರೆ ಅನುಕೂಲವಾಗುತ್ತದೆ. ಅಲ್ಲಿಯ ಜನರ ಅಳಿವು—ಉಳಿವು ಈ ಎರಡು ಪ್ರಾಜೆಕ್ಟ್‌ಗಳ ನೀರನ್ನೇ

(ಶ್ರೀ ಬೈರಪ್ಪಾಜಿ)

ಅವಲಂಬಿಸಿರುತ್ತದೆ. ಈ ಅನುಕೂಲವನ್ನು ನಮ್ಮ ಜಿಲ್ಲೆಗೆ ಮಾಡಿಕೊಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—I have repeatedly stated that it is the unfettered right of the Presiding Officer to call upon the hon. members to speak. One hon. Member said that only hon. Members from this side are called in succession. I told him yesterdy that a number of Members of the Opposition were given chances. He was telling me that it was not so. I got the information immediately. The facts are as follows. Four hon. Members who spoke from the Opposition are Sriyuths H. D. Devegowda, S. Y. Patil, Bapurao Patil, and one Member from this side who spoke is Sri M. M. Sajjan.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಸನ್ಮಾನ್ಯ ಅಧ್ಯಕ್ಷರೇ, ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿರುವುದಕ್ಕಾಗಿ ಮೊಟ್ಟಮೊದಲನೆಯದಾಗಿ ವಂದಿಸುತ್ತಾ ಕೋಲಾರ ಜಿಲ್ಲೆಯ ಕ್ಷಾಮ ಪರಿಸ್ಥಿತಿಯನ್ನು ಸರಕಾರದ ಗಮನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ. ಮೈಸೂರು ರಾಜ್ಯದಲ್ಲಿ ಕ್ಷಾಮ ಯಾವಾಗಲೂ ಕೆಲವು ಭಾಗಗಳಲ್ಲಿ ಬರುವುದು, ಕೋಲಾರ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಪ್ರತಿ ವರ್ಷವೂ ಬರುವುದು. ಇದೇನೂ ನಮಗೆ ಹೊಸದಲ್ಲ. ಅಲ್ಲಿ ಜನರಿಗೆ ಆಹಾರ ಮತ್ತು ನೀರಿಗೆ ಕ್ಷಾಮ ಬರುವುದಲ್ಲದೆ ದನಕರುಗಳಿಗೆ ಸಹ ಮೇವು ಮತ್ತು ನೀರು ದೊರೆಯದೆ ತೊಂದರೆಯಾಗುವುದು. ಇದಕ್ಕೆ ಸರಿಯಾದ ಪರಿಹಾರ ಇನ್ನೂ ದೊರಕಿಲ್ಲ. ಹೀಗಿದ್ದರೂ ಕಳೆದ 25 ವರ್ಷಗಳಿಂದಲೂ ಕೂಡ ಸರಕಾರ ಕೋಲಾರ ಜಿಲ್ಲೆಗೆ ಶಾಶ್ವತವಾದ ಪರಿಹಾರ ಒದಗಿಸಿಲ್ಲ. ಇಂದು ಆ ಜಿಲ್ಲೆಯಲ್ಲಿ ಕಡಲೆಕಾಯಿ, ರಾಗಿ ಅಥವಾ ಬತ್ತ ಯಾವುದೂ ಕೂಡ ಬಿತ್ತನೆಮಾಡಿಲ್ಲ. ವ್ಯವಸಾಯದ ಇಲಾಖೆಯು ತಿಳಿಸುವಂತೆ ಈಗ ಯಾವ ಬೆಳೆ ಇಡುವುದಕ್ಕೂ ಕಾಲ ಮಿಂಚಿಹೋಗಿದೆ. ಇದುವರೆಗೆ ಭೂಮಿಯಲ್ಲಿ ಒಂದು ಕಾಳನ್ನೂ ಕೂಡ ಬಿತ್ತದಿರುವುದರಿಂದ ಬೆಳೆ ಬರುವಂತಿಲ್ಲ. ಸರಕಾರದ ಮನೋಭಾವ ನೋಡಿದರೆ ಮನೆಗೆ ಬೆಂಕಿ ಬಿದ್ದಾಗ ಬಾವಿ ತೆಗೆಯುವಂತಿದೆ. ಈ ಮನೋಭಾವವನ್ನು ಈಗ ಬಂದಿರುವ ಹೊಸ ಸರಕಾರವಾದರೂ ಬಿಟ್ಟು ಆಗಾಗ್ಗೆ ಕ್ಷಾಮಕ್ಕೆ ತುತ್ತಾಗುತ್ತಿರುವ ಜಿಲ್ಲೆಗಳಿಗೆ ಶಾಶ್ವತವಾದ ಪರಿಹಾರ ದೊರೆಯುವಂತೆ ವ್ಯವಸ್ಥೆ ಮಾಡಬೇಕು. ಅದಕ್ಕಾಗಿ ಎಲ್ಲಾ ಜಿಲ್ಲೆಗಳ ಅಂಕಿಅಂಶ ತೆಗೆದುಕೊಂಡು ಯಾವ ವರ್ಷ ಮಳೆಬೆಳೆ ಆಗಿಲ್ಲ, ಆಗಾಗ್ಗೆ ಕ್ಷಾಮ ಎಲ್ಲಿ ಬರುವುದು ಎಂದು ನೋಡಿ ಕ್ಷಾಮ ನಿವಾರಣೆಗೆ ಸೂಕ್ತ ಪರಿಹಾರ ಒದಗಿಸಲು ವ್ಯವಸ್ಥೆಮಾಡಬೇಕು ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಯಬೇಕು, ಅದಕ್ಕೆ ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕು ಎಂದು ಸಲಹೆಮಾಡುತ್ತೇನೆ.

ಆಂಧ್ರ ಪ್ರದೇಶದಲ್ಲಿ ರಾಯಲ್ ಸೀಮೆ ಡೆವಲಪ್‌ಮೆಂಟ್ ಬೋರ್ಡ್ ಎಂದು ಒಂದು ಸ್ಟ್ಯಾಟ್ಯೂಟರಿ ಬಾಡಿ ಮಾಡಿ ಅದು ಕೆಲಸಮಾಡುತ್ತಿದೆ. ಹಿಂದಿನ ಕೋಲಾರ ಜಿಲ್ಲೆಯ ಸದಸ್ಯರು ರಾಯಲ್ ಸೀಮೆ ಅಭಿವೃದ್ಧಿ ಮಂಡಲಿ ಮಾದರಿಯಲ್ಲಿ ನಮ್ಮ ರಾಜ್ಯದಲ್ಲೂ ಅಭಿವೃದ್ಧಿ ಸಮಿತಿ ಅಥವ ಮಂಡಲಿ ಮಾಡಬೇಕೆಂದು ಈ ಸಭೆಯಲ್ಲಿ ಒತ್ತಾಯಮಾಡಿದ್ದರು. ಆದರೆ ಇದುವರೆಗೆ ಆ ಬಗ್ಗೆ ಏನೂ ಕಾರ್ಯಕ್ರಮ ಕೈಕೊಂಡಿಲ್ಲ. ಯಾವ ಜಿಲ್ಲೆ ಕ್ಷಾಮಕ್ಕೊಳಗಾಗುವುದೋ ಅದಕ್ಕೆ ರಾಯಲ್ ಸೀಮೆ ಅಭಿವೃದ್ಧಿ ಮಂಡಲಿ ರೀತಿಯಲ್ಲಿ ಒಂದು ಸಮಿತಿ ಮಾಡಿ ಅದರ ಮೂಲಕ ಕ್ಷಾಮ ನಿವಾರಣೆ ಮಾಡಲು ಏನು ಕೆಲಸವಾಗಬೇಕೋ ಅದನ್ನು ತೀವ್ರವಾಗಿ ಸರಕಾರ ಅತ್ಯಾವಶ್ಯಕವಾಗಿ ಮಾಡಿಸಬೇಕು ಎಂದು ಸೂಚನೆ ಮಾಡುತ್ತೇನೆ. ಇಂದು ಕುಡಿಯುವ ನೀರಿಗೆ ಕೋಲಾರ ತಾಲ್ಲೂಕು ಮತ್ತಿತರ ಕಡೆಗಳಲ್ಲಿ ತೊಂದರೆಯಾಗಿದೆ, ದನಕರುಗಳಿಗೆ ಸಹ ಕುಡಿಯಲು ನೀರಿಲ್ಲ. ತಕ್ಷಣ ನೀರನ್ನೊದಗಿಸಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಹಾಗೆ ಮಾಡಿ ಇರುವ ಕಷ್ಟ ಪರಿಹಾರ ಮಾಡಬೇಕು. ಈಗ ಈ ಸಂಬಂಧದಲ್ಲಿ ಒಂದು ನಯಾಪೈಸೆ ಕೂಡ ಖರ್ಚು ಮಾಡಬಾರದು ಎಂದು ತಿಳಿಸಿರುವುದರಿಂದ ಹಣವಿದ್ದರೂ ಕೂಡ ಖರ್ಚುಮಾಡಲು ಅಧಿಕಾರವಿಲ್ಲ. ಆದುದರಿಂದ ಈಗ ಮಾಡಿರುವ ಆರ್ಡರನ್ನು ವಾಪಸು ಪಡೆದು ಅತ್ಯಾವಶ್ಯಕವಾಗಿ ಆಗಬೇಕಾಗಿರುವ ಕೆಲಸಗಳನ್ನು ಮಾಡಿ ಅನುಕೂಲಮಾಡಿ ಕೊಡಬೇಕು. ಕೋಲಾರ ತಾಲ್ಲೂಕಿನಲ್ಲಿ ಪಾಲಾರ್ ನದಿ ಹರಿಯುವುದು. ಭೂಮಿಯಲ್ಲಿ ಸಾಕಷ್ಟು ಅಂಡರ್‌ಗ್ರೌಂಡ್ ವಾಟರ್ ಇದೆ, ನದಿ ತೀರದಲ್ಲಿ ಬಾವಿಗಳಿವೆ, ಅಲ್ಲಿ ಸಾಕಷ್ಟು ನೀರಿದೆಯೆಂದು

ವೈಜ್ಞಾನಿಕವಾಗಿ ಗೊತ್ತಾಗಿದೆ. ಆದುದರಿಂದ ಬೋರ್‌ವೆಲ್ಸ್ ಅಥವ ಓಪನ್‌ವೆಲ್ಸ್ ನದಿ ಬೆಡ್‌ನಲ್ಲಿ ತೆಗೆದು ಸಾವಿರಾರು ಎಕರೆಗೆ ನೀರು ಸರಬರಾಯಿ ಮಾಡಬಹುದು. ಇದಕ್ಕೆ ವ್ಯವಸ್ಥೆ ಮಾಡಬೇಕೆಂದು ಒತ್ತಾಯಮಾಡುತ್ತೇನೆ.

ಮುಖ್ಯವಾಗಿ ನಮ್ಮ ಜಿಲ್ಲೆ ರೇಷ್ಮೆಗೆ ಪ್ರಸಿದ್ಧವಾಗಿದೆ. ಎಷ್ಟು ಒತ್ತಾಯ ಮಾಡಿದರೂ ಕೂಡ ಇದುವರೆಗೆ ಉತ್ತಮವಾದ ತಳಿ ಒದಗಿಸಿಲ್ಲ. ಅಭಾವ ಪರಿಸ್ಥಿತಿ ಇರುವಾಗ ರೇಷ್ಮೆ ಅಭಿವೃದ್ಧಿಗೆ ಅವಕಾಶ ಮಾಡಿದರೆ ಅನುಕೂಲವಾಗುವುದು. ಆದುದರಿಂದ ರೇಷ್ಮೆ ಬೆಳೆಗೆ ತಕ್ಕ ಅನುಕೂಲ ಒದಗಿಸಬೇಕೆಂದು ಒತ್ತಾಯ ಮಾಡುತ್ತೇನೆ. ಇಷ್ಟು ಹೇಳಿ ಅವಕಾಶವಿತ್ತ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಜೇವರ್ಗಿ) :—ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಅಭಾವ ಪರಿಸ್ಥಿತಿ ಅನೇಕ ಕಡೆಗಳಲ್ಲಿರುವದರಿಂದ ಪರಿಹಾರ ಕಾರ್ಯಗಳನ್ನು ಕೈಕೊಳ್ಳಬೇಕೆಂಬ ವಿಚಾರದಲ್ಲಿ ಚರ್ಚೆ ನಡೆದಿದೆ. ವಿಶೇಷವಾಗಿ ಮೈಸೂರು ರಾಜ್ಯದಲ್ಲಿ ಹೈದರಾಬಾದು ಕರ್ನಾಟಕದಲ್ಲಿ ನಮ್ಮ ಕಡೆ ಬರಗಾಲ ಪರಿಸ್ಥಿತಿಯಿದೆ. ತಮಗೆ ಸುದ್ದಿ ಬಂದಿರಬಹುದು. ಗುಲ್ಬರ್ಗ ಜಿಲ್ಲೆಯಲ್ಲಿ 20 ಇಂಚಿಗಿಂತ ಕಡಿಮೆ ಮಳೆಯಾಗಿ ಸಾಮಾನ್ಯವಾಗಿ ಅಲ್ಲಿ ಮಳೆಯೇ ಇಲ್ಲ. ನಮಗೆ ಬಂದಿರುವ ಸುದ್ದಿ ಪ್ರಕಾರ ಅಲ್ಲಿ ಗಂಭೀರ ಪರಿಸ್ಥಿತಿಯಿದೆ. ಆದಕಾರಣ ಸರಕಾರ ಬೇರೆ ಜಿಲ್ಲೆಗಳಿಗಿಂತ ಗುಲ್ಬರ್ಗಾಕ್ಕೆ ಹೆಚ್ಚು ಗಮನ ಕೊಡಬೇಕು. ಕೆಲವು ತಾಲ್ಲೂಕುಗಳಲ್ಲಿ ಗಂಭೀರ ಪರಿಸ್ಥಿತಿಯಿದೆ. ಕರೀಫ್ ಬೆಳೆಯಿಲ್ಲ. ಒಕ್ಕಲಿಗರಿಗೆ ಕುಡಿಯಲು ನೀರಿಲ್ಲ, ದನಗಳಿಗೆ ಮೇವು ಮತ್ತು ನೀರಿಲ್ಲ. ಎಷ್ಟೋ ಸಲ ಶ್ರೀ ಮಲ್ಲಿಕಾರ್ಜುನಸ್ವಾಮಿಗಳಿಗೆ ಹೇಳಿದಾಗ ರಿಗ್ ಬರುತ್ತದೆ, ಕೆಲಸವಾಗುತ್ತದೆ ಎಂದು ಒಂದು ರೀತಿ ಹೇಳಿದರು. ಅದರ ಸಲುವಾಗಿ ನಾನು ಮತ್ತು ಬಾಪೂಗೌಡರು ಕೇಳಿದೆವು. ಆದರೆ ರಿಗ್ ಬರಲಿಲ್ಲ, ನೀರಿಲ್ಲದೆ ಜನತೆಗೆ ಮತ್ತು ದನಕರುಗಳಿಗೆ ತೊಂದರೆಯಾಗಿದೆ. ಇಂಥ ಪರಿಸ್ಥಿತಿಯಲ್ಲಿ ಕೊಂಚ ಹಣ ಕೊಡುವರು. ಆದರೆ ಅಷ್ಟು ಹಣದಿಂದ ಗುಲ್ಬರ್ಗದ ಪರಿಸ್ಥಿತಿ ಉತ್ತಮವಾಗುವುದಿಲ್ಲ. ಆದಕಾರಣ ಸರಿಯಾಗಿ ಮಳೆಯಾಗಿರುವ ಬೇರೆ ಜಿಲ್ಲೆಗಳನ್ನು ಬಿಟ್ಟು ನಮ್ಮ ಜಿಲ್ಲೆಯಲ್ಲಿ ಗಂಭೀರ ಪರಿಸ್ಥಿತಿಯಿರುವುದರಿಂದ ಅದನ್ನು ನಿವಾರಣೆ ಮಾಡಲು ಹೆಚ್ಚು ಹಣ ಒದಗಿಸಿ ರಿಲೀಫ್ ಕೆಲಸ ಮಾಡಬೇಕು. 200 ರೂಪಾಯಿ ಕೊಡಬೇಕಾದರೆ ಒಕ್ಕಲಿಗ ತಾಶೀಲ್ದಾರರ ಬಳಿ ತಿರುಗಬೇಕು, ಎಂಟು ದಿವಸ ಅವರಿರುವ ಸ್ಥಳದಲ್ಲಿ ಕುಳಿತು 25 ರೂಪಾಯಿ ಖರ್ಚುಮಾಡಬೇಕು. ಆದಕಾರಣ ಈ ಸಲವಾದರೂ ಒಂದು ಸರ್ಕ್ಯುಲರ್ ಕಳಿಸಿ ಅದಕ್ಕೆ ಅವಕಾಶವಿಲ್ಲದಂತೆ ಮಾಡಬೇಕು. ಎಲ್ಲೆಲ್ಲಿ ಇಂತಹ ಪರಿಸ್ಥಿತಿ ಇದೆಯೋ ಆ ತಾಲ್ಲೂಕುಗಳಲ್ಲಿರತಕ್ಕಂಥಾ ಹಳ್ಳಿಯವರಿಗೆ ಸ್ಪಾಟ್‌ನಲ್ಲೇ ಮುಟ್ಟುವ ಹಾಗೆ ಆಫೀಸರ್ಸ್ ನೇರವಾಗಿ ಹೋಗಿ ಪೂರ್ಣ ರೊಕ್ಕ ಕೊಡುವ ಹಾಗೆ ಮಾಡಬೇಕು. ಹಾಗೆ ಮಾಡಿದರೆ ಕಂಪ್ಲೈಂಟ್ ಕಡಿಮೆ ಆಗುತ್ತದೆ.

ಇನ್ನು ಮೇಜರ್ ಇರ್ರಿಗೇಷನ್ ಮತ್ತು ಮೈನರ್ ಇರ್ರಿಗೇಷನ್ ವಿಚಾರ ಹೇಳುವುದಾದರೆ ನಮ್ಮ ಹೈದ್ರಾಬಾದ್ ಕರ್ನಾಟಕಕ್ಕೆ ಅಲಕ್ಷ ಮಾಡಹತ್ತಿದ್ದೀರಿ ಎಂದು ನನ್ನ ಒಂದು ಭಾವನೆ. ನಮ್ಮ ಹೈದ್ರಾಬಾದ್ ಕರ್ನಾಟಕದ ಭಾಗದ ಜನರು ಬಹಳ ತೊಂದರೆಯಲ್ಲಿದ್ದಾರೆ. ಬಿಜಾಪುರ, ಗುಲ್ಬರ್ಗ, ಬೀದರ್ ಮತ್ತು ರಾಯಚೂರು ಕೆಲವು ಭಾಗಗಳಲ್ಲಿ, ಮತ್ತು ಯಲ್‌ಬುರ್ಗ ಕೆಲವು ಭಾಗಗಳಲ್ಲಿ ಸ್ಕೇರ್ಸಿಟಿ ಬಗ್ಗೆ ಅಲಕ್ಷ ಮಾಡಿದ್ದೀರಿ. ಇದರ ಬಗ್ಗೆ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ಈ ಸೆಷನ್ ಮುಗಿದ ನಂತರ ಗುಲ್ಬರ್ಗಕ್ಕೆ ಬರಬೇಕು. ಅಲ್ಲಿ ಎರಡು ಸಾರಿ ಮಳೆ ಬರಲಿಲ್ಲ. ಈ ರೀತಿ ಮಳೆ ಬಾರದೇ ಇರುವುದು 3ನೇ ಸಾರಿ. ಈ ಭಾಗದಲ್ಲಿ ಯಾವ ಕಾರ್ಖಾನೆಗಳೂ ಇಲ್ಲ. ಆದಕಾರಣ ಈ ಭಾಗದಲ್ಲಿ ಅಗ್ರಿಕಲ್ಚರ್ ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲೆಮ್ ಏನು ಇದೆ ಅದನ್ನು ಸಾಲ್ವ್ ಮಾಡುವುದಕ್ಕೆ ತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಮತ್ತು ಆ ಭಾಗದಲ್ಲಿ ಕುಡಿಯುವುದಕ್ಕೆ, ನೀರೂ ಇಲ್ಲ. ಈವೊತ್ತು ಅಫ್ಜಲ್‌ಪುರ್ ಮತ್ತು ದೇವದುರ್ಗದಿಂದ ಎಷ್ಟೋ ಜನರು ಬರುತ್ತಿದ್ದಾರೆ ಆದುದರಿಂದ ನಮ್ಮ ಕಡೆಗೆ ಹೆಚ್ಚು ರೊಕ್ಕ ಕೊಟ್ಟು ಏನಾದರೂ ಕೆಲಸ ಪ್ರಾರಂಭ ಮಾಡಬೇಕು. ಆವಾಗ ಅವರಿಗೆ ಕೆಲಸ ಸಿಕ್ಕುತ್ತದೆ. ಇದನ್ನು ತಿಳಿದು ಆದಷ್ಟು ಬೇಗ ಅಲ್ಲಿ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Statement by the Chief Minister *re:* Constitution of the Mysore Backward Classes Commission.

Sri D. DEVARAJ URS (Chief Minister).—I have to make an announcement with regard to the constitution of the Backward Classes Commission. You know that some time back during the course of the debate on the Budget, I have mentioned that Government are seriously thinking of constituting the Backward Classes Commission. And very recently at the last meeting of the Cabinet we did take a decision to constitute a Commission. Accordingly, a decision has been taken to constitute a Backward Classes Commission with seven members, with one among them as Chairman to go into the question of backward classes. I shall read a statement.

1 In reply to the debate for grants for General Administration Department and various other Departments, I had indicated that Government were actively considering the constitution of a Backward Classes Commission.

2 The Supreme Court and several High Courts have observed that for the purposes of determination of the Backward Classes for purposes of Article 15 (4) and 16 (4) of the Constitution definite criteria should be applied. It is desirable that any criteria fixed and any list of Backward Classes prepared should be periodically reviewed. In Mysore State the criteria applied since 1963 has been income-*cum* occupation and this has not been reviewed so far.

3. In order to evolve proper criteria and prepare a list of Backward Classes, a detailed enquiry is necessary. Government have, therefore, decided to constitute a Backward Classes Commission consisting of—

1.	Shri L. G. Havanoor	...	Chairman
2.	Shri Y. Ramachandra	...	Member
3.	Shri K. R. S. Naidu	...	Member
4.	Shri K. M. Naganna	...	Member
5.	Shri S. R. Masanasetty	...	Member
6.	Shri Dharmasingh	...	Member
7.	Shri P. T. Habib	...	Member

The terms of reference of the Commission are :—

(1) To suggest the criteria to be adopted for determining whether any classes of persons in the State other than the Scheduled Castes and the Scheduled Tribes may be treated as socially and educationally backward classes.

(2) To investigate into the living and working conditions of all such classes of persons with special reference to the difficulties under which they may be labouring and to m akrecommendations as to the special provisions which

are necessary to be made by the Government for their advancement and for the promotion of their social, educational and economic interest generally.

(3). To make a list of all classes which may be regarded as backward classes in the State.

(4) To suggest that reservations should be made for such classes in the educational institutions maintained by the State or receiving aid out of the State funds.

(5) To suggest that other concessions like scholarships, etc., may be given to such classes by way of assistance.

(6) To determine to what extent such classes are represented in the services under the State and to recommend what reservations of posts in such services may be made for them.

(7) To generally advise the Government about the steps to be taken to ensure adequate safeguards for the backward classes of citizens in the State.

Sri BAPU GOWDA RAYAPPA.—I want to ask some clarification.

Mr. DEPUTY SPEAKER.—I cannot permit the hon. Member. The hon. members have agitated that during the Assembly Session all policy statements of Government should first be made in the House. With due deference to the sentiments expressed by the members, the Hon'ble Chief Minister has made a statement right now on the constitution of the Mysore Backward Classes Commission. Cyclostyled copies of the Statement are available and if the members desire to have it, they can have it. Beyond that, I cannot allow anything else. Hon'ble Minister for Revenue to reply.

ಶ್ರೀ ಆರ್. ಎಸ್. ಪಾಟೀಲ್.—ಸ್ಕೇರ್ಸಿಟಿ ಬಗ್ಗೆ ನನ್ನ ತಾಲ್ಲೂಕಿನ ವಿಚಾರವಾಗಿ ಮಾತನಾಡಲು ಅವಕಾಶ ಕೊಟ್ಟರೆ ಮಾತನಾಡುತ್ತೇನೆ. ಇಲ್ಲದಿದ್ದರೆ ಇಲ್ಲ.

Mr. DEPUTY SPEAKER.—Hon. member Sri Patil was a member of this House previously too. If he had just intimated yesterday, some arrangement could have been made to accommodate him. It has been agreed that the Hon'ble Minister for Revenue has to be called to reply to the discussion on drought conditions. So it is not possible now to permit him or any other member to speak.

ಶ್ರೀ ಜೆ. ಎಲ್. ಕಬಾಡಿ.—ನನ್ನ ಕಾಲ್ ಅಟೆನ್‌ಷನ್ ನೋಟೀಸ್ ಯಾವಾಗ ತೆಗೆದು ಕೊಳ್ಳುತ್ತೀರಿ ?

Mr. DEPUTY SPEAKER.—I have called upon the Revenue Minister to reply. Full justice has been done to the Opposition Members. Not only due time but extra time has also been given to them. Sri Kabadi may consult his leader.

5-00 P.M.

Discussion on a Matter of Urgent Public Importance *re* : Drought Condition in Several areas of the State

(Debate Continued)

† ಶ್ರೀ ಜೆ. ಎಲ್. ಕಬಾಡಿ (ಬಳ್ಳೊಳ್ಳಿ).—ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ಬಿಜಾಪುರ ಜಿಲ್ಲೆಯ ಉತ್ತರ ಭಾಗದಲ್ಲಿ ಎಂದರೆ ಮುದ್ದೇಬಿಹಾಳ, ಬಾಗೇವಾಡಿ, ಇಂಡಿ, ಸಿಂದಗಿ ಮತ್ತು ಬಿಜಾಪುರ ಈ ಭಾಗದಲ್ಲಿ ಪರಿಸ್ಥಿತಿ ಗಂಭೀರವಾಗಿದೆ. ಅಲ್ಲಿ ಒಂದು ಹನಿ ಮಳೆ ಇಲ್ಲ, ಕುಡಿಯಲಿಕ್ಕೆ ನೀರಿಲ್ಲ. ಇದಕ್ಕಾಗಿ ನಾವು ಮಾನ್ಯ ಮುಖ್ಯ ಮಂತ್ರಿಗಳಿಗೆ 27-3-1972 ರಿಂದ ಪದೇ ಪದೇ ನಾಲ್ಕೈದು ಪತ್ರಗಳನ್ನು ಬರೆದು ಎಂ. ಎಲ್. ಎ. ಗಳೆಲ್ಲರೂ ಕೂಡಿ ಬಹಳ ಒತ್ತಾಯ ಮಾಡಿದೆವು. ರೆವೆನ್ಯೂ ಮಂತ್ರಿಗಳು, ಲೋಕೋಪಯೋಗಿ ಮಂತ್ರಿಗಳು ಅದರ ಬಗ್ಗೆ ಬಹಳ ತ್ವರಿತವಾಗಿ ಕ್ರಮ ತೆಗೆದುಕೊಳ್ಳಬೇಕು ಎನ್ನುವುದರ ಕಡೆ ವಿಚಾರ ಮಾಡದೆ ಇರುವುದಕ್ಕೆ ವಿಷಾದವಾಗುತ್ತಿದೆ. ಅಲ್ಲಿರುವ ದುಷ್ಕಾಳ ಪರಿಸ್ಥಿತಿ ಸಲುವಾಗಿ ಅಲ್ಲಿಗೆ ಕೇವಲ ಒಂದೆರಡು ಲಕ್ಷ ರೂಪಾಯಿ ಕೊಡುತ್ತಿರುವುದನ್ನು ನೋಡಿ ವಿಷಾದವಾಗುತ್ತದೆ. ನಮ್ಮಲ್ಲಿ ಕುಡಿಯಲಿಕ್ಕೆ ನೀರಿಲ್ಲ, ರಿಗ್ಸ್ ಕೊಡಿರಿ ಎಂದು ಕೇಳಿದರೆ ಒಂದೇ ಒಂದು ರಿಗ್ ಯಂತ್ರ ಕೊಟ್ಟಿದ್ದರೂ ಸಹಿತ ಅದೂ ಉಪಯೋಗವಿಲ್ಲದೆ ಕೆಟ್ಟು ಹೋಗಿ ಕುಡಿಯುವುದಕ್ಕೆ ನೀರಿನ ವ್ಯವಸ್ಥೆ ಮಾಡದೆ ಇರುವುದು ಶೋಚನೀಯ ಸಂಗತಿ. ನಮ್ಮ ಜಿಲ್ಲೆಯಲ್ಲಿ ಜೋಳದ ಧಾರಣೆ ಒಂದು ಕ್ವಿಂಟಾಲಿಗೆ 130 ರೂಪಾಯಿ ಆಗಿದ್ದರೂ ಸಹಿತ ಕಾಳನ್ನು ರೈತರಿಗೆ ಹೇಗೆ ಒದಗಿಸಬೇಕು, ರೈತರಿಗೆ ಇರುವ ಕಷ್ಟಕಾರ್ಪಣ್ಯವನ್ನು ಹೇಗೆ ದೂರ ಮಾಡಬೇಕು ಎನ್ನುವುದರ ಸಲುವಾಗಿ ಸರ್ಕಾರ ವಿಚಾರ ಮಾಡಿಲ್ಲ. ಕೆಲವು ಕೆರೆಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳಿದರೂ ಸಹಿತ ಕೆರೆಗಳನ್ನು ತೆಗೆದುಕೊಳ್ಳುವ ವಿಚಾರದಲ್ಲಿ ಬಹಳ ಕನಿಕರವಾದ ಪರಿಸ್ಥಿತಿಯನ್ನು ತಂದೊಡ್ಡಿದ್ದಾರೆ. ಬಡವರ ಹೊಲಗಳನ್ನು ಎಲ್ಲಿ ಮುಳುಗಿಸಬಹುದೋ ಅಲ್ಲಿ ಕೆರೆ ಮಾಡುತ್ತಿದ್ದಾರೆಯೇ ಹೊರತು ಶ್ರೀಮಂತರ ಜಮೀನು ಮುಳುಗುವ ಕಡೆ ಕೆರೆ ಮಾಡುತ್ತಿಲ್ಲ. ದನಗಳಿಗೆ ಮೇವು ಸಹಿತ ಇಲ್ಲದೆ ಇರುವುದರಿಂದ ಫಾಡರ್ ಸಪ್ಲೈ ಮಾಡಬೇಕೆಂದು ಹೇಳುತ್ತಿದ್ದರೂ, ನಮ್ಮ ಜಿಲ್ಲೆಯಿಂದ ಫಾಡರ್ ಹೊರಗಡೆ ಹೋಗದೆ ಇರುವಂತೆ ಮಾಡಬೇಕೆಂದು ಹೇಳುತ್ತಿದ್ದರೂ ಕೂಡ ಅಧಿಕಾರಿಗಳು ಏನು ಕ್ರಮ ತೆಗೆದುಕೊಂಡಿಲ್ಲ. ಜೋಳ ಬ್ಲಾಕ್ ಮಾರ್ಕೆಟ್ಟಿನಲ್ಲಿ ಸಾಕಷ್ಟು ಪ್ರಮಾಣದಲ್ಲಿ ಹೋಗುತ್ತಿದೆ, ಅದರ ಬಗ್ಗೆ ಕೂಡ ಸಾಕಷ್ಟು ನಿಗಾ ವಹಿಸಬೇಕೆಂದು ಕೇಳಿಕೊಂಡರೂ ಸಹಿತ ಇಲ್ಲಿಯವರೆಗೂ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ನಮ್ಮ ಜಿಲ್ಲೆಗೆ ಒದಗಿಸಲ್ಪಟ್ಟ ಹಣ ಸಾಕಷ್ಟು ಇಲ್ಲ. ಕೆಲಸ ಕಾರ್ಯಗಳನ್ನೂ ತೆಗೆದುಕೊಳ್ಳುವುದಕ್ಕೆ ಅಧಿಕಾರಿಗಳಿಗೆ ಸಾಧ್ಯವಾಗುತ್ತಿಲ್ಲ ಎಂದು ನಾನು ರೆವೆನ್ಯೂ ಮಂತ್ರಿಗಳನ್ನು ಕೇಳಿದಾಗ ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದು ಸಾಕಾಗುವುದಿಲ್ಲವೇ ಎಂದು ಕೇಳಿದರು. ಕೊಡಗು ಜಿಲ್ಲೆಯಷ್ಟು ನಮ್ಮ ತಾಲ್ಲೂಕು ಒಂದೇ ಇದೆ. ಅಲ್ಲಿಗೆ ಹೆಚ್ಚು ಹಣ ಬೇಕು. ಸ್ವತಃ ನಾನು ಮತ್ತು ನಮ್ಮ ಜಿಲ್ಲೆಯ ಎಂ. ಎಲ್. ಎ. ಗಳು ಮಾತನಾಡಿದಾಗ ಡೆಪ್ಯುಟಿ ಕಮಿಷನರಿಗೆ ಫೋನ್ ಮಾಡಿ ಪರಿಸ್ಥಿತಿ ಏನಾಗಿದೆ ಎಂದು ಕೇಳಿದರು. ನಾವು ಹೇಳುವುದರಲ್ಲಿ ಮಾನ್ಯ ಮಂತ್ರಿಗಳಿಗೆ ನಂಬಿಕೆ ಬಾರದೆ ಇದ್ದದ್ದು ಬಹಳ ವಿಷಾದನೀಯವೆಂದು ಹೇಳುತ್ತೇನೆ. ಮಾನ್ಯ ಮಂತ್ರಿಗಳು ಈಗಲಾದರೂ ಹೆಚ್ಚು ಹಣವನ್ನು ನಮ್ಮ ಭಾಗಕ್ಕೆ ಒದಗಿಸಬೇಕೆಂದು ಕೇಳಿಕೊಂಡು ಅಧ್ಯಕ್ಷರು ಇಷ್ಟು ಮಾತ್ರ ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆ ಎಂದ ಕೂಡಲೇ ಸಂಪತ್ತು ಹೊಂದಿರತಕ್ಕ ಜಿಲ್ಲೆ ಎನ್ನುವುದು ಜನರ ಅಭಿಪ್ರಾಯ. ಶಿವಮೊಗ್ಗ ಜಿಲ್ಲೆಯೊಳಗೆ ಎರಡು ಭಾಗವಿದೆ. ತೀರ್ಥಹಳ್ಳಿ, ಹೊಸನಗರ, ಸೊರಬ, ಸಾಗರ ಈ ನಾಲ್ಕು ತಾಲ್ಲೂಕುಗಳು ಒಂದು ಭಾಗ. ಶಿಕಾರಿಪುರ, ಶಿವಮೊಗ್ಗ, ಹೊನ್ನಾಳಿ, ಚನ್ನಗಿರಿ ಮತ್ತು ಭದ್ರಾವತಿ ಇವು ಒಂದು ಭಾಗವಾಗುತ್ತದೆ. ಶಿವಮೊಗ್ಗ ತಾಲ್ಲೂಕು, ಶಿಕಾರಿಪುರ ತಾಲ್ಲೂಕುಗಳಲ್ಲಿ ಮಳೆ ಇಲ್ಲದಂಥ ಗ್ರಾಮಗಳ ಒಂದು ಬೆಲ್ಟ್ ಇದೆ. ಅನೇಕ ಸಾರಿ ಹತ್ತಾರು ವರ್ಷದಿಂದ ಸರ್ಕಾರದ ಗಮನಕ್ಕೆ ತಂದರೂ ಕೂಡ ಸರ್ಕಾರದವರು ಗಮನ ಕೊಡುತ್ತಿಲ್ಲ. ರಿಗ್ ಮೆಷಿನ್ಸ್ ಯಾವ ಯಾವ ಜಿಲ್ಲೆಗೆ ಕೊಟ್ಟಿದ್ದಾರೆಂಬುದನ್ನು ನೋಡಿದರೆ ಶಿವಮೊಗ್ಗ ಜಿಲ್ಲೆಗೆ ಕೊಟ್ಟಿಲ್ಲ. ಶಿವಮೊಗ್ಗ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಕೂಡ ಚರ್ಚೆಯಾಗಿ ಒಂದು ರೆಸಲ್ಯೂಷನ್ ಮಾಡಿ ಪದೇ

ಪದೇ ಸರ್ಕಾರದ ಗಮನಕ್ಕೆ ತರುತ್ತಿದ್ದೇವೆ. ಶಿವಮೊಗ್ಗ ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿಯೂ ಸಂಪೂರ್ಣವಾಗಿ ಮಳೆ ಬರುವುದಿಲ್ಲ. ಶಿವಮೊಗ್ಗ ತಾಲ್ಲೂಕು, ಷಿಕಾರಿಪುರ ತಾಲ್ಲೂಕುಗಳಲ್ಲಿ ಮಳೆಯಾಗುವುದು ಬಹಳ ಕಡಿಮೆ. ಆದುದರಿಂದ ಈ ಸಮಸ್ಯೆಯನ್ನು ಮೂಲಭೂತವಾಗಿ ಪರಿಶೀಲನೆ ಮಾಡಿ, ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಒಂದು ಖಾತ್ರಿಯಾದ ವ್ಯವಸ್ಥೆಯನ್ನು ಮಾಡಿಕೊಡಬೇಕು. ರಿಗ್ಸ್ ಕಳಿಸಬೇಕು, ಮೆಷಿನ್ಸ್ ಕಳುಹಿಸಬೇಕು ಎಂದು ಪದೇ ಪದೇ ಸರ್ಕಾರಕ್ಕೆ ಕೋರಿಕೆಗಳನ್ನು ಕಳುಹಿಸಿದ್ದರೂ ಕೂಡ ಶಿವಮೊಗ್ಗ ಜಿಲ್ಲೆಗೆ ಗಮನ ಕೊಟ್ಟಿಲ್ಲ. ಸಹಕಾರ ಮಂತ್ರಿಗಳು ಮತ್ತು ರೆವೆನ್ಯೂ ಮಂತ್ರಿಗಳು ಕಂದಾಯದ ಬಾಕಿ ಮತ್ತು ಹಳೆಯ ಸಾಲವನ್ನು ವಸೂಲ್ಮಾಡುವುದನ್ನು ಸದ್ಯಕ್ಕೆ ನಿಲ್ಲಿಸಬೇಕೆಂದು ಕೇಳಿಕೊಂಡರೂ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಹೊಸ ಸೀರೆ ಬರುತ್ತದೆಂದು ಹಳೇ ಸೀರೆ ಸುಟ್ಟು ಕೊಳ್ಳುವ ಹಾಗೆ, ಹೊಸ ದಾಗಿ ಸಾಲ ಕೊಡುವವರೆಗೂ ಹಳೇ ಸಾಲವನ್ನು ತೀರಿಸುವ ಪರಿಸ್ಥಿತಿಯಲ್ಲಿ ಅಲ್ಲಿಯ ಜನರು ಇಲ್ಲ. ಹೊಸದಾಗಿ ಜಮೀನು ಅಬಾದು ಮಾಡುವುದಕ್ಕೆ ಆಸೆ ತೋರಿಸಿ, ಅದಕ್ಕೆ ಬೇಕಾದ ಹಣ ಸಹಾಯ ಮಾಡಿದರೆ ಸರ್ಕಾರ ಹಿಂದೆ ಕೊಟ್ಟ ಸಾಲಗಳನ್ನು ತೀರಿಸುತ್ತಾರೆಯೇ ಹೊರತು ಇಲ್ಲದೆ ಹೋದರೆ ಸಾಧ್ಯವಿಲ್ಲ. ಶಿವಮೊಗ್ಗ ಮತ್ತು ಷಿಕಾರಿಪುರ ಈ ಎರಡು ತಾಲ್ಲೂಕುಗಳಲ್ಲಿ ರೈತರು, ಬಡಜನರು ಬಹಳ ಬವಣೆಯಲ್ಲಿದ್ದಾರೆ. ಗುಲ್ಬರ್ಗ ಜಿಲ್ಲೆಯಲ್ಲಿ, ಬಿಜಾಪುರ ಜಿಲ್ಲೆಯಲ್ಲಿ ಬಹಳ ತೊಡಕುಗಳಿಲ್ಲ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಶಿವಮೊಗ್ಗ ಜಿಲ್ಲೆ ಸಮೃದ್ಧಿಯಾಗಿಲ್ಲ. ಅಡಕೆ ಬೆಳೆಯುವ ತೋಟಗಳು ಸಾಗರ, ತೀರ್ಥಹಳ್ಳಿ ತಾಲ್ಲೂಕುಗಳಲ್ಲಿದ್ದರೂ ಎಲ್ಲ ತಾಲ್ಲೂಕುಗಳೂ ಸಮೃದ್ಧಿಯಾಗಿಲ್ಲ ಎನ್ನುವ ಮಾತನ್ನು ತಿಳಿದುಕೊಳ್ಳಬೇಕು.

ಶಿವಮೊಗ್ಗ ಜಿಲ್ಲೆಯನ್ನೂ ಕೂಡ, ನೀವು ಅಭಾವ ಪ್ರದೇಶದಲ್ಲಿ ಸೇರಿಸಿಕೊಂಡು, ವಿಶೇಷ ಸವಲತ್ತನ್ನು, ಹಣವನ್ನು, ಯಂತ್ರವನ್ನು ಕೊಡಬೇಕು ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ಶಿವಮೊಗ್ಗ ಮತ್ತು ಶಿಕಾರಿಪುರ ತಾಲ್ಲೂಕುಗಳನ್ನು ಈ ಡ್ರಾಟ್ ಲಿಸ್ಟ್‌ನಲ್ಲಿ ಸೇರಿಸಿಕೊಳ್ಳಬೇಕೆಂದು ಹೇಳಿ, ಅಧ್ಯಕ್ಷರು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಾಪೂಗೌಡ ರಾಯಪ್ಪ (ಷಹಪುರ).—ಗುಲ್ಬರ್ಗ ಜಿಲ್ಲೆಯಲ್ಲಿ ಎರಡು ವರ್ಷಗಳಿಂದ ಸತತವಾಗಿ ಹಿಂಗಾರಿ ಮತ್ತು ಮುಂಗಾರಿ ಮಳೆ ಇಲ್ಲ. ಈಗ ಎರಡು ತಿಂಗಳಿಂದ ಮುಂಗಾರಿ ಮಳೆ ಆಗಿಲ್ಲ. ಆ ಪ್ರದೇಶದಲ್ಲಿ ಇನ್ನೂ ಬೀಜ ಬಿತ್ತಿಲ್ಲ, ಈ ವರ್ಷವೂ ಮುಂಗಾರಿ ಬೆಳೆ ಸಂಪೂರ್ಣವಾಗಿ ನಾಶವಾಗತಕ್ಕ ಪರಿಸ್ಥಿತಿ ಬಂದಿದೆ. ಆ ಭಾಗದ ಜನರು, ಜಿಲ್ಲೆಯ ಹೊರಗೆ, ಬೇರೆ ಜಿಲ್ಲೆಗೆ ಹೋದರೂ ಅವರಿಗೆ ಏನೂ ಲಭ್ಯವಾಗುತ್ತಾ ಇಲ್ಲ. ಎಲ್ಲಾ ಭಾಗದಲ್ಲಿ ಕ್ಷಾಮ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಂಡು ಹೇರಳವಾಗಿ ಹಣ ಖರ್ಚು ಮಾಡುತ್ತಿದ್ದಾರೆ. ಈ ರೀತಿ ಖರ್ಚುಮಾಡುವ ಹಣ ನೇರವಾಗಿ ರೈತನ ಕೈಗೆ ಮುಟ್ಟುತ್ತಾ ಇಲ್ಲ. ನೂರು ರೂಪಾಯಿ ತಕಾವಿ ಸಾಲವನ್ನು ರೈತನಿಗೆ ಕೊಡಬೇಕಾದರೆ, ಅವನ ಕೈಗೆ ಮುಟ್ಟುವುದು ಐವತ್ತು ರೂಪಾಯಿ ಮಾತ್ರ, ಆದ್ದರಿಂದ ಕಂದಾಯ ಸಚಿವರು ಈಗ ಕೊಡತಕ್ಕ ಹಣ ನೇರವಾಗಿ ರೈತನ ಕೈಗೆ ಮುಟ್ಟತಕ್ಕ ಪ್ರಯತ್ನ ಮಾಡಬೇಕು. 100 ರೂಪಾಯಿ ತಕಾವಿ ಸಾಲ ಕೊಡಿ ಅಥವಾ ಒಂದು ಸಾವಿರ ರೂಪಾಯಿ ತಕಾವಿ ಸಾಲ ಕೊಡಿ, ಆದರೆ ಈ ಸಾಲ ರೈತನ ಕೈಗೆ ನೇರವಾಗಿ ಸಿಕ್ಕುವ ವ್ಯವಸ್ಥೆ ಮಾಡಿದರೆ ಏನಾದರೂ ಸಹಾಯ ಮಾಡಿದಂತೆ ನೆಮ್ಮದಿಯಾಗುತ್ತದೆ. ಗುಲ್ಬರ್ಗ ಜಿಲ್ಲೆಯಲ್ಲಿ ಜೋಳದ ಧಾರಣೆ ದಿನುಪ್ರತಿ ಏರುತ್ತಿದೆ. ಒಂದು ಕ್ವಿಂಟಾಲ್ ಜೋಳಕ್ಕೆ 110 ರೂಪಾಯಿ ಧಾರಣೆ ಇದೆ. ಇಷ್ಟು ಇದ್ದರೂ ಮಾರ್ಕೆಟ್ಟಿನಲ್ಲಿ ಜೋಳ ಸಿಕ್ಕುತ್ತಿಲ್ಲ. ಷಹಪೂರ, ಇಂಡಿ ಮತ್ತು ಆ ಭಾಗದಲ್ಲಿ ಸಂಗ್ರಹ ಮಾಡಿದ ಜೋಳ ಏನು ಇದೆ ಅದನ್ನು ತಹಸೀಲ್ದಾರ್‌ರವರಿಗೆ ಹೇಳಿ ರಿಲೀಸ್ ಮಾಡಿಸಬೇಕು. ತಾಲ್ಲೂಕು ಮಟ್ಟದಲ್ಲಿ ಅಲ್ಲದೆ ದೊಡ್ಡ ಗ್ರಾಮಗಳಲ್ಲಿ ಜೋಳದ ಫೇರ್ ಪ್ರೈಸ್ ಷಾಪುಗಳನ್ನು ತೆಗೆಯುವ ವ್ಯವಸ್ಥೆಯನ್ನು ತೀವ್ರ ಗತಿಯಲ್ಲಿ ಮಾಡಬೇಕು. ಈ ವ್ಯವಸ್ಥೆ ಮಾಡಿದರೆ ಜನರಿಗೆ ಅನುಕೂಲವಾಗುತ್ತದೆ. ಸರ್ಕಾರದವರು ಬರಗಾಲ ಕಂಡುಬಂದಂಥ ಜಿಲ್ಲೆಗಳಲ್ಲಿ ಒಂದು ಫೇಸ್ಡ್ ಪ್ರೋಗ್ರಾಂ ಹಾಕಿಕೊಂಡು ಪರಿಹಾರ ಕಾಮಗಾರಿಗಳನ್ನು ಮಾಡಬೇಕು. ಬಿಜಾಪುರ ಜಿಲ್ಲೆ, ರಾಯಚೂರು ಜಿಲ್ಲೆ ಮತ್ತು ತುಮಕೂರು ಜಿಲ್ಲೆ ಇನ್ನು 8-10 ಜಿಲ್ಲೆಗಳು ಇವೆ. ಪ್ರತಿವರ್ಷ ಒಂದೊಂದು ಜಿಲ್ಲೆಯಲ್ಲಿ ಶಾಶ್ವತವಾದ ಕಾರ್ಯ ಕ್ರಮಗಳನ್ನು ತೆಗೆದುಕೊಳ್ಳುವ ವ್ಯವಸ್ಥೆ ಮಾಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆರ್. ಎಸ್. ಪಾಟೀಲ್ (ರಾಮದುರ್ಗ).—ಆದರಣೀಯ ಅಧ್ಯಕ್ಷರೇ, ನಿನ್ನೆಯಿಂದ ದೇಶದಲ್ಲಿ ತಲೆದೋರಿರುವ ಅಭಾವ ಪರಿಸ್ಥಿತಿಯ ಬಗ್ಗೆ ಚರ್ಚೆ ನಡೆದು ಎಲ್ಲರೂ ಇದನ್ನು ಯಾವ ರೀತಿಯಾಗಿ ಎದುರಿಸಬೇಕು ಎನ್ನುವುದ ಬಗ್ಗೆ ಸೂಚನೆಗಳನ್ನು ಕೊಟ್ಟಿದ್ದಾರೆ. ಪ್ರತಿ ವರ್ಷವೂ

(ಶ್ರೀ ಆರ್. ಎಸ್. ಪಾಟೀಲ್)

ಈ ಮನೆಯಲ್ಲಿ ಏನು ಏನು ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು, ಏನು ಏನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎನ್ನುವ ಸಲುವಾಗಿ ಕೋಟಿಗಟ್ಟಲೆ ಸೂಚನೆಗಳನ್ನು ಕೊಟ್ಟಿದ್ದಾರೆ. ನಾನು ವಿಶೇಷವಾದ ಸೂಚನೆಗಳಿಗೆ ಹೋಗದೆ, ಮಹಾಭಾರತದ ಪುರಾಣಕಾಲದ ಪ್ರಸಂಗ ಒಂದನ್ನು ಹೇಳಿ, ಸಮಯ ಉಳಿದರೆ, ಮುಂದಿನ ವಿಷಯವನ್ನು ಮಾತನಾಡುತ್ತೇನೆ. ನಹುಷ ಚಕ್ರವರ್ತಿ ಇಂದ್ರನ ಪದವಿಯನ್ನು ಏರಿದ ಸಮಯ. ಆಗ ದೇಶದಲ್ಲಿರತಕ್ಕ ಎಲ್ಲಾ ಅಭಾವಪ್ರದೇಶದ ಪ್ರತಿನಿಧಿಗಳು ಭೂಲೋಕದ ಮನುಷ್ಯನಾಗಿದ್ದ ಇಂದ್ರನ ಹತ್ತಿರ ಒಂದು ಡೆಲಿಗೇಷನ್ ತೆಗೆದುಕೊಂಡು ಹೋದರು. ಅಲ್ಲಿಗೆ ಹೋದಾಗ, ಆ ಸಭೆಯಲ್ಲಿ ದೂರ್ವಾಸ ಮುನಿಗಳು ಇದ್ದುದನ್ನು ಇವರುಗಳು ಗಮನಿಸಲಿಲ್ಲ. ಆಗ ದೂರ್ವಾಸ ಮುನಿಗಳು ಸಿಟ್ಟಿಗೆದ್ದು, ನಿಮ್ಮ ಇಷ್ಟಾರ್ಥ ಸಿದ್ಧಿಸದಿರಲಿ, ಕೈಗೂಡದಿರಲಿ ಎಂದು ಶಾಪ ಕೊಟ್ಟರು. ಆಗ ಈ ಪ್ರತಿನಿಧಿಗಳಿಗೆ ತಾವು ಮಾಡಿದ ತಪ್ಪಿನ ಅರಿವಾಗಿ, ಪ್ರತಿಯೊಂದು ಶಾಪಕ್ಕೂ ವಿಮೋಚನೆ ಇದೆ, ದಯವಿಟ್ಟು ಅದಕ್ಕೆ ಪರಿಹಾರ ಹೇಳಿ ಎಂದು ಕೇಳಿದಾಗ—1972 ರಲ್ಲಿ ಶ್ರೀ ದೇವರಾಜ್ ಅರಸ್ ಅವರು ಮುಖ್ಯಮಂತ್ರಿಗಳಾಗಿ, ಹುಚ್ಚಮಾಸ್ತಿಗೌಡರು ಕಂದಾಯ ಸಚಿವರಾಗಿ ಬರುತ್ತಾರೆ—ಎಲ್ಲಾ ಸಚಿವರುಗಳ ಹೆಸರುಗಳು ಹೇಳಲಿಕ್ಕಾಗುವುದಿಲ್ಲವಾದ್ದರಿಂದ ಹೇಳುವುದಿಲ್ಲ—ಇವರ ಕಾಲದಲ್ಲಿ ಈ ಅಭಾವಪರಿಸ್ಥಿತಿ ಕೊನೆಗಾಣುತ್ತದೆ ಎಂದು ಹೇಳುತ್ತಾರೆ ದೂರ್ವಾಸ ಮುನಿಗಳು. ಈ ದೂರ್ವಾಸ ಮುನಿಗಳ ವಾಣಿಯು ಹುಸಿಯಾಗದಂತಹುದಾದ್ದರಿಂದ ಈ ಅಭಾವ ಪರಿಸ್ಥಿತಿ ಎಂದೂ ತಲೆದೋರದ ಹಾಗೆ ಶಾಶ್ವತವಾದ ಕಾರ್ಯಕ್ರಮ ಕೈಗೊಳ್ಳುತ್ತಾರೆ ಎಂದು ಈ ಸಭೆಯ ಗಮನಕ್ಕೆ ತರುತ್ತೇನೆ. ಬೆಳಗಾವಿಯಂಥ ಸುಂದರವಾದ ಜಿಲ್ಲೆಯಲ್ಲಿ ಅಭಾವ ಪರಿಸ್ಥಿತಿ ಇದೆ ಎಂದು ಪ್ರತಿಯೊಬ್ಬರ ತಿಳುವಳಿಕೆ ಇದೆ. ರಾಮದುರ್ಗ, ಸಾಂದತ್ತಿ, ತಿಕೋಟಿ ಮೊದಲಾದ ಭಾಗಗಳಲ್ಲಿ ಕ್ಷಾಮ ಪರಿಸ್ಥಿತಿ ತಲೆದೋರಿದೆ. ಕಂದಾಯ ಸಚಿವರುಗಳ ಗಮನಕ್ಕೆ ರಾಮದುರ್ಗ ತಾಲ್ಲೂಕಿನಲ್ಲಿರತಕ್ಕ ಪರಿಸ್ಥಿತಿಯನ್ನು ತಂದಿದ್ದೇನೆ. ಅಲ್ಲಿಯ ಪರಿಸ್ಥಿತಿ ಇನ್ನಷ್ಟು ಸೂಕ್ಷ್ಮವಾಗಿ, ತೀಕ್ಷ್ಣವಾಗಿ, ಕಠಿಣವಾಗಿ ಮಾಡುವುದಾದರೆ, ಯಾವ ಕಾರ್ಯಕ್ರಮ ಹಾಕಿದರೂ ಅನ್ನದ ದೇವರ ಮುಂದೆ ಬೇರೆ ದೇವರುಂಟೆ! ಹಸಿದವರಿಗೆ ದೇವರು ಅನ್ನದ ರೂಪದಲ್ಲಿ ಕಾಣುತ್ತಾನೆ. ಹಸಿದ ಜನ ಹೇಯ ಕೆಲಸಗಳನ್ನು ಮಾಡುವುದಕ್ಕೆ ಮುನ್ನ ಈ ಕೆಲಸಗಳನ್ನು ಮಾಡುವುದು ಸೂಕ್ತ.

ಆ ಅವಕಾಶವನ್ನು ಒದಗಿಸಿಕೊಳ್ಳಬೇಕಾದರೆ ಅಭಾವ ನಿವಾರಣಾ ಕ್ರಮಗಳನ್ನು ತೀವ್ರ ಕೈಕೊಳ್ಳಬೇಕು. ಅಲ್ಲಿ ರಸ್ತೆ ಕಾಮಗಾರಿಗಳನ್ನು ಕೈಕೊಳ್ಳುವುದಕ್ಕೆ ಸಾಧ್ಯವಿದೆ. ಈ ಕಾರ್ಯಕ್ರಮಗಳನ್ನೆಲ್ಲಾ ಕೈಕೊಂಡು ಈಗ ಉಂಟಾಗಿರತಕ್ಕಂಥ ಭಯಂಕರ ಪರಿಸ್ಥಿತಿಯಿಂದ ಜನರನ್ನು ಪಾರುಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಆಹಾರಧಾನ್ಯದ ಸ್ಥಿತಿ ಕೂಡ ಚಿಂತಾಜನಕವಾಗಿದೆ. ಒಂದು ಕ್ವಿಂಟಾಲ್ ಜೋಳಕ್ಕೆ 130 ರೂಪಾಯಿ ಕೊಟ್ಟರೂ ಸಿಕ್ಕುತ್ತಾ ಇಲ್ಲ. ಅಂಥ ಕಡೆ ಅಗ್ಗದ ಅಂಗಡಿಗಳನ್ನು ತರೆಯಬೇಕೆಂದು ಕೇಳಿಕೊಂಡು ಕೊನೆ ಗಳಿಗೆಯಲ್ಲಿ ಅವಕಾಶ ಕೊಟ್ಟ ಅಧ್ಯಕ್ಷಿಣಿಯವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ ನಿನ್ನೆ ಮಾನ್ಯ ಸದಸ್ಯರು ಅನೇಕ ಜನ ಈ ಚರ್ಚೆಯಲ್ಲಿ ಭಾಗವಹಿಸುವಾಗ ಒಳ್ಳೆಯ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅವರಿಗೆ ಇರತಕ್ಕ ಆತಂಕವನ್ನು ಸಭೆಯ ಗಮನಕ್ಕೆ ತಂದಿದ್ದಾರೆ. ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರು ಸ್ಥೂಲವಾಗಿ ವಿಮರ್ಶೆಮಾಡಿ ಶಾಶ್ವತವಾದಂಥ ಪರಿಹಾರ ಕಾಮಗಾರಿಗಳ ಕಡೆಗೆ ದೃಷ್ಟಿಯನ್ನು ಇಟ್ಟುಕೊಂಡು ಕೆಲಸಮಾಡಬೇಕು. ಈ ಮಧ್ಯೆ ಈಗ ಇರತಕ್ಕ ತೊಂದರೆಗೆ ತಾತ್ಕಾಲಿಕವಾದಂಥ ಪರಿಹಾರಕಾರ್ಯಗಳನ್ನು ಕೂಡ ಅದಷ್ಟು ಜಾಗ್ರತೆ ಕೈಕೊಳ್ಳಬೇಕೆಂದು ತಿಳಿಸಿದರು. ಶ್ರೀಮಾನ್ ಎಸ್. ವೈ. ಪಾಟೀಲರು ಬಹಳ ಆಗ್ರಹ ಪೂರ್ವಕವಾಗಿ ಮನನೊಂದು ಬಿಜಾಪುರ ಜಿಲ್ಲೆಯ ಜನರಿಗೆ ಉಂಟಾಗಿರುವ ತೊಂದರೆಗಳನ್ನು ಸಭೆಯ ಗಮನಕ್ಕೆ ತಂದಿದ್ದಾರೆ. ಹಾಗೆಯೇ ಬಿಜಾಪುರ ಜಿಲ್ಲೆಯಿಂದ ಬಂದಂಥ ಸದಸ್ಯರೆಲ್ಲರೂ ಈ ವಿಷಯವನ್ನು ತಿಳಿಸಿದ್ದಾರೆ ಅವರ ಜೊತೆಗೆ ಶ್ರೀ ಎಸ್. ವೈ. ಪಾಟೀಲರು ಮಾತನಾಡಿ ಮಂತ್ರಿಮಂಡಲದಲ್ಲಿ ಇರತಕ್ಕ ಶ್ರೀ ಕೆ. ಟಿ. ರಾಥೋಡ್ ಮತ್ತು ಆಡಳಿತ ಪಕ್ಷದಲ್ಲಿ ಇರತಕ್ಕ ಇತರ ಸದಸ್ಯರು ಮಲಗಿದ್ದಾರೆ, ಅವರ ಕಾರ್ಯವನ್ನು ಮಾಡುತ್ತಾ ಇಲ್ಲ. ಈಗ ಅವರು ಎಚ್ಚರ ತಪ್ಪಿದರೆ ಮುಂದೆ ಅವರನ್ನು ಜನರು ವಿಚಾರಿಸಿಕೊಳ್ಳುತ್ತಾರೆ ಎಂದು ಹೇಳಿದರು. ಈ ಸಭೆ ಸೇರುವ ಮೊದಲು ಮಂತ್ರಿಮಂಡಲದಲ್ಲಿ ಇರತಕ್ಕ ಶ್ರೀ ರಾಥೋಡ್ ಮತ್ತು ನಮ್ಮ ಪಕ್ಷದ ಇತರ ಸದಸ್ಯರು ನನ್ನ ಜೊತೆಯಲ್ಲಿ ಅಲ್ಲಿ ಇರತಕ್ಕ ಭೀಕರ

ಪರಿಸ್ಥಿತಿಯನ್ನು ಎಷ್ಟರಮಟ್ಟಿಗೆ ವರ್ಣಿಸಿ ಹೇಳಬೇಕೋ ಅವೆಲ್ಲವನ್ನು ಹೇಳಿದ್ದಾರೆ. ಅಷ್ಟೇ ಅಲ್ಲದೆ ರಾಥೋಡ್‌ರವರು ಖುದ್ದಾಗಿ ಹೋಗಿ ಜಿಲ್ಲೆಯ ಪರಿಸ್ಥಿತಿಯನ್ನು ನೋಡಿಕೊಂಡು ಬಂದು ಆದಷ್ಟು ಬೇಗ ಪರಿಹಾರ ಕೊಡಬೇಕೆಂದು ತಿಳಿಸಿದ್ದಾರೆ. ಅದರ ಜೊತೆಗೆ ನಮ್ಮ ಶ್ರೀಮಾನ್ ನಗರಾಳ್‌ರವರು ಕೂಡಾ ಪರಿಸ್ಥಿತಿಯನ್ನು ನೋಡಿಕೊಂಡು ಬಂದು ಅದನ್ನು ನನ್ನ ಗಮನಕ್ಕೆ ತಂದಿದ್ದಾರೆ. ಇದನ್ನೆಲ್ಲಾ ಶ್ರೀಮಾನ್ ಶಂಕರಗೌಡರು ಹೇಳಿದಹಾಗೆ ವಿರೋಧಪಕ್ಷದ ಸದಸ್ಯರು ಮಾತ್ರ ಆಸಕ್ತಿ ವಹಿಸಿದ್ದಾರೆ. ಆಡಳಿತ ಪಕ್ಷದವರು ವಹಿಸಲಿಲ್ಲ ಎಂದು ಹೇಳುವುದು ತಪ್ಪು. ಅವರು ಸ್ಪಷ್ಟವಾಗಿ ವಿಷಯವನ್ನು ತಿಳಿಸಿದ್ದಾರೆ. ಆಡಳಿತ ಪಕ್ಷದವರು ತಿಳಿಸಲಿ, ಮಂತ್ರಿಗಳು ತಿಳಿಸಲಿ ಅಥವಾ ಎದುರು ಪಕ್ಷದ ಸದಸ್ಯರು ತಿಳಿಸಲಿ,—ಶಂಕರಗೌಡರು ಹೇಳಿದ್ದು ಶಾಪ ಕೊಡುವ ರೀತಿಯಲ್ಲಿ ಇತ್ತು—ಯಾರೇ ಹೇಳಲ್ಲಿ ಇದು ಬಹಳ ಗಂಭೀರವಾದಂಥ ಪ್ರಶ್ನೆ. ಎದುರು ಪಕ್ಷದವರು ತಾವು ಮಾತ್ರ ಕಾರ್ಯ ಭರದಲ್ಲಿ ಇದ್ದೇವೆ ಆಡಳಿತ ಪಕ್ಷದವರು ಕಾರ್ಯಲೋಪ ಮಾಡಿದ್ದಾರೆ ಎಂದು ಹೇಳುವಾಗ ನಾವು ಏನು ಮಾಡಿದ್ದೇವೆ ಎನ್ನುವುದನ್ನು ಹೇಳಬೇಕಾಗುತ್ತದೆ. ನಿಮಗೆ ಎಲ್ಲಾ ಕೀರ್ತಿಯನ್ನು ಕೊಟ್ಟು ನಾವು ಮೈಮರೆತು ಮಲಗಿದ್ದೇವೆ ಎಂದು ಹೇಳುವುದರಿಂದ ಜನರಿಗೆ ತಪ್ಪು ತಿಳುವಳಿಕೆಯಾಗುತ್ತದೆ. ಇಲ್ಲದೇ ಹೋದರೆ ರಾಜಕೀಯ ಪ್ರಸ್ತಾಪಮಾಡಿ, ಈ ವಿಷಯವನ್ನು ಅದರ ಜೊತೆಗೆ ಲಗತ್ತು ಮಾಡುವುದಕ್ಕೆ ನನಗೆ ಖಂಡಿತ ಇಷ್ಟವಿರಲಿಲ್ಲ. ಅವರು ಹೇಳಿದ್ದರಿಂದ ನಾನು ಹೇಳಬೇಕಾಗಿ ಬಂತು. ಎದುರು ಪಕ್ಷದ ಸದಸ್ಯರು ಹೇಳಲಿ ಅಥವಾ ಆಡಳಿತ ಪಕ್ಷದವರು ಹೇಳಲಿ, ಆಗಲೇ ನಾನು ಹೇಳಿದ ಹಾಗೆ, ಇದು ಗಂಭೀರವಾದ ಪ್ರಶ್ನೆ, ಬಹಳ ದೊಡ್ಡ ಪ್ರಶ್ನೆ. ಮೈಸೂರು ರಾಜ್ಯದಲ್ಲಿ ಬಿಜಾಪುರ ಮುಂತಾದ ಜಿಲ್ಲೆಗಳು ಸೇರಿದಾಗಿನಿಂದ ಅಲ್ಲಿ ಒಂದೇ ಸಮನೆ ತೊಂದರೆಗಳು ಉದ್ಭವಿಸುತ್ತಾ ಇರುವುದು ಹಿಂದಿನ ಸರ್ಕಾರಕ್ಕೆ ಗೊತ್ತಾಗಿ ಅನೇಕ ಕಾರ್ಯಕ್ರಮಗಳನ್ನು ಕೈಕೊಂಡಿದ್ದಾರೆಂದು ಭಾವಿಸುತ್ತೇನೆ. ಶಂಕರಗೌಡರು ಅವರ 60 ವರ್ಷ ವಯಸ್ಸಿನಲ್ಲಿ 30 ವರ್ಷಗಳಕಾಲ ದುಷ್ಕಾಲ ಪರಿಸ್ಥಿತಿ ನೋಡಿದ್ದೇನೆ ಎಂದು ಹೇಳಿದರು ಹಿಂದೆ ಕೂಡ ಆಡಳಿತ ಪಕ್ಷದಲ್ಲಿ ಇದ್ದಾಗ, ಅವರ ಬಾಯಲ್ಲಿ ಬಿಜಾಪುರ ಜಿಲ್ಲೆ ಬಗ್ಗೆ ಮಾತನಾಡತಕ್ಕ ಕಾಲದಲ್ಲಿ ದುಷ್ಕಾಳ ಪದ ನನ್ನ ಕಿವಿಗೆ ಗಂಟೆಹೊಡೆದ ಹಾಗೆ ಕೇಳುತ್ತಿತ್ತು ಅದನ್ನು ಅತಿಶಯೋಕ್ತಿ ಎಂದು ಭಾವಿಸುವುದಿಲ್ಲ. ಅಲ್ಲಿ ಇರತಕ್ಕ ಪರಿಸ್ಥಿತಿಯನ್ನು ಇಷ್ಟು ಜನ ಮಾನ್ಯ ಸದಸ್ಯರು ಮನಮುಟ್ಟುವ ಹಾಗೆ ಹೇಳುವಾಗ, ಇದರಲ್ಲಿ ಯಾವ ಅನುಮಾನ ಇಟ್ಟುಕೊಂಡು ಮಾತನಾಡುತ್ತೇನೆ ಎಂದು ಸಭೆಯ ಮಾನ್ಯ ಸದಸ್ಯರು ತಿಳಿಯಬಾರದು. ಆದರೆ ಸರ್ಕಾರ ತಾತ್ಕಾಲಿಕ ಕಾರ್ಯಕ್ರಮಗಳನ್ನು ಎಷ್ಟರಮಟ್ಟಿಗೆ ತೆಗೆದುಕೊಂಡಿದೆ ಶಾಶ್ವತ ಕಾರ್ಯಕ್ರಮಗಳನ್ನು ಏನೇನು ಮಾಡಿದ್ದಾರೆ ಎನ್ನುವುದು ಸಭೆ ತಿಳಿಯಬೇಕಾದುದು ಅಗತ್ಯವೆಂದು ಭಾವಿಸುತ್ತೇನೆ. ಈಗ ಬಿಜಾಪುರ ಜಿಲ್ಲೆಯಲ್ಲಿ 1,270 ಗ್ರಾಮಗಳ ಪೈಕಿ 518 ಗ್ರಾಮಗಳಲ್ಲಿ ತೊಂದರೆಗಳಾಗಿದೆ ಎಂದು ವರದಿ ಬಂದಿದೆ. 518 ಗ್ರಾಮಗಳಲ್ಲಿನ ವಿಚಾರವನ್ನು ಹೇಳಿದರೆ ವಿವರವಾಗುತ್ತದೆ. ಒಟ್ಟಿನಲ್ಲಿ ಮಳೆ ಬಹಳ ಕಡಿಮೆಯಾಗಿರುತ್ತದೆ. ಅಲ್ಪಸ್ವಲ್ಪ ಮಳೆಯಾಗಿ ಬಿತ್ತನೆಗೆ ಅನುಕೂಲವಾಗಿಲ್ಲ ಮಳೆ ಆಗಿರತಕ್ಕ ರೀತಿ ಹಾಗೆ ಇದೆ. ಕುಡಿಯುವ ನೀರಿನ ತೊಂದರೆ ಬಾಗಲಕೋಟೆ ಮತ್ತು ಬಾದಾಮಿ ತಾಲ್ಲೂಕುಗಳ ಬಹಳ ಗ್ರಾಮಗಳಲ್ಲಿ ಉಂಟಾಗಿದೆ ಎಂದು ನನಗೆ ವರದಿ ಬಂದಿದೆ. ಅದರಂತೆ ಪ್ರತಿ ತಾಲ್ಲೂಕಿನಲ್ಲಿ ಗಾಡಿಯನ್ನು ಬಾಡಿಗೆ ಮಾಡಿಕೊಂಡು ಬಂದು ಕುಡಿಯುವ ನೀರನ್ನು ಒದಗಿಸಿಕೊಡುವುದರ ಜೊತೆಗೆ ಇಂಡಿ, ರಬಕವಿ, ಬಾಣಹತ್ತಿ, ಇವುಗಳಿಗೆ ಬೋರ್‌ವೆಲ್ಸ್‌ಗಳನ್ನು ಕೊಡುವ ವ್ಯವಸ್ಥೆಮಾಡಿದೆ. ಇಂಡಿ ಟೌನಿನಲ್ಲಿ ಪಿಡಬ್ಲ್ಯೂಡಿ ವಾಟರ್ ಟ್ಯಾಂಕ್ ನೀರನ್ನು ತೆಗೆದುಕೊಂಡು ಬಂದು ಕುಡಿಯುವ ನೀರನ್ನು ಒದಗಿಸುತ್ತಿದೆ. ಇಂಡಿಯಲ್ಲಿ ಮೊದಲು ಈ ರೀತಿ ಪ್ರಾರಂಭ ಮಾಡಿ ನಂತರ ಪೈಪ್ ಮುಖಾಂತರ ನೀರನ್ನು ಕೊಡುವ ವ್ಯವಸ್ಥೆ ಪ್ರಾರಂಭವಾಗಿದೆ. ಇನ್ನು 64 ಫ್ಯಾಮಿನ್ ರಿಲೀಫ್‌ನಿಂದ 71-72ನೇ ಇಸವಿಯಲ್ಲಿ 34,64,295 ರೂಪಾಯಿಗಳನ್ನು ಒದಗಿಸಿತ್ತು. ಅದರಲ್ಲಿ ಉಳಿದಿರುವುದು ಬಹಳ ಕಡಿಮೆ. ಇದೂ ಅಲ್ಲದೆ ರೂರಲ್ ವರ್ಕ್ಸ್ ಪ್ರೋಗ್ರಾಮ್‌ನಲ್ಲಿ ಬಾದಾಮಿ, ಬಾಗಲ್‌ಕೋಟೆ, ಬಾಗೇವಾಡಿ, ಬಿಜಾಪುರ, ಬೀಳಗಿ, ಹುನಗುಂದ, ಮುದ್ದೇಬಿಹಾಳ ತಾಲ್ಲೋಕುಗಳಲ್ಲಿ 79 ಲಕ್ಷ 81 ಸಾವಿರ ರೂಪಾಯಿ ಒದಗಿಸಿದೆ. ಒಟ್ಟು ಎರಡು ಕಾರ್ಯಕ್ರಮಗಳಿಂದ 114 ಲಕ್ಷ 47 ಸಾವಿರ ರೂಪಾಯಿ ಹಣ ಒದಗಿಸಿದೆ. ಇದರ ಜೊತೆಗೆ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನಿಂದ ಅಪ್ಪರ್ ಕೃಷ್ಣಾ ಪ್ರಾಜೆಕ್ಟಿನ ಕೆಲವು ಕಾಲುವೆಗಳನ್ನು ತೆಗೆದುಕೊಳ್ಳಬೇಕೆಂದು ಕೆಲಸ ತೆಗೆದುಕೊಂಡಿದೆ. ಇದು 1971-72ನೇ ಇಸವಿ ಕಾರ್ಯಕ್ರಮ. ಇದರ ಜೊತೆಗೆ ಬಡ್ಜೆಟ್ಟಿನಲ್ಲಿ 72-73ನೇ ಇಸವಿಯಲ್ಲಿ ಇರಿಗೇಷನ್‌ಗೆ ರಸ್ತೆಗಳಿಗೆ ಮತ್ತು ಇತರ ಕೆಲಸಗಳಿಗೆ ಹಣ ಒದಗಿಸಿರುವುದು 10 ಲಕ್ಷದ 61 ಸಾವಿರ 800 ನೂರು ರೂಪಾಯಿ.

(ಶ್ರೀ ಎನ್. ಹುಚ್ಚಮಾಸ್ತಿಗೌಡ)

5-30 P.M.

ವಿವರವಾಗಿ ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ ಮತ್ತು ಎಷ್ಟು ಜನಕ್ಕೆ ಕೆಲಸಗಳನ್ನು ಒದಗಿಸಿಕೊಡಲಾಗಿದೆ ಇದರ ವಿವರಗಳನ್ನೆಲ್ಲಾ ಇಲ್ಲಿ ಕೊಡುವುದಕ್ಕೆ ನಾನು ಹೋಗುವುದಿಲ್ಲ. ಈಗಿರತಕ್ಕ ಹಣದಲ್ಲಿ 64 ಫ್ಯಾಮಿನ್ ರಿಲೀಫ್ ಬಾಬಿನಲ್ಲಿ 3.18 ಲಕ್ಷ ಖರ್ಚಾಗಿದೆ, ಸಾಯಿಲ್ ಕನ್‌ಸರ್ವೇಷನ್ ಬಾಬಿನಲ್ಲಿ 5.51 ಲಕ್ಷ ಖರ್ಚಾಗಿದೆ, ಇದಲ್ಲದೆ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಮೂಲಕ 51.66 ಲಕ್ಷದಷ್ಟು ಹಣ ಖರ್ಚಾಗಿದೆ. ಬಿಜಾಪುರ ಡಿಸ್ಟ್ರಿಕ್ಟ್‌ಗೆ ಸಂಬಂಧಪಟ್ಟ ಹಾಗೆ ನಾನು ಇಲ್ಲಿ ವಿವರಗಳನ್ನು ಕೊಟ್ಟಿದ್ದೇನೆ. ಇದಲ್ಲದೆ ಈಚೆಗೆ ರ್‍ಯಾಂಡ್ ಆರ್ಮಿ ಎಂದು ಬೇರೆ ಮಾಡಲಾಗಿದೆ. ಇದರ ಮೂಲಕ ಕೂಲಿ ಜನಗಳಿಗೆ ಕೆಲಸವನ್ನು ಕೊಡಬೇಕೆಂದು ಸರಾಸರಿ ಒಂದು ವರ್ಷದಲ್ಲಿ 250 ಜನಕ್ಕೆ ಕೆಲಸ ಕೊಟ್ಟು ಕೂಲಿ ಪಡೆಯಲು ಸಹಾಯ ಮಾಡಿ ಕೊಡಲಾಗಿದೆ. ಇದಲ್ಲದೆ ಕ್ರ್ಯಾಷ್ ಪ್ರೋಗ್ರಾಂನಲ್ಲಿ ಜನರಿಗೆ ಕೆಲಸ ಒದಗಿಸಿ ಕೊಡಬೇಕೆಂದು ಸುಮಾರು ಒಂದು ಸಾವಿರ ಜನಕ್ಕೆ ಕೆಲಸಗಳನ್ನು ಕೊಡಿಸಿದ್ದಾರೆ. ಇದಲ್ಲದೆ ನ್ಯಾಷನಲ್ ಹೈವೇ ಮತ್ತು ಎಂ.ಎಫ್.ಎ.ಎಲ್. ಡೆವಲಪ್‌ಮೆಂಟ್ ಏಜನ್ಸಿಗಳ ಮೂಲಕ ಐನೂರು ಜನರಿಗೆ ಕೆಲಸಗಳನ್ನು ಒದಗಿಸಿಕೊಟ್ಟಿದ್ದಾರೆ. ಇದೂ ಅಲ್ಲದೆ ಅಲಮಟ್ಟಿ ಡ್ಯಾಂನಲ್ಲಿ ಕೆಲಸ ನಡೆಯುತ್ತಿದೆ. ಇಲ್ಲಿ ಕೂಡ ಸುಮಾರು 1,200 ಜನರಿಗೆ ಕೆಲಸಗಳನ್ನು ಒದಗಿಸಿಕೊಡಲಾಗಿದೆ. ಇದರ ಜೊತೆಗೆ ಹಿಂದೆ ಇದ್ದ ಫ್ಯಾಮಿನ್ ರಿಲೀಫ್ ಪ್ರೋಗ್ರಾಂ ಎನ್ನುವುದನ್ನು ಈಗ ಡ್ರಾಟ್ ಪ್ರೋನ್ ಏರಿಯಾ ಪ್ರೋಗ್ರಾಂ ಎಂದು ಹೊಸದಾಗಿ ಕರೆಯಲಾಗಿದೆ. ಇದರ ಮೂಲಕ ಕೂಡ ಬಿಜಾಪುರ ಜಿಲ್ಲೆಯ ಏಳು ತಾಲ್ಲೂಕುಗಳಿಗೆ ಹಣವನ್ನು 1972-73 ನೇ ಸಾಲಿಗಾಗಿ ಒದಗಿಸಿಕೊಡಲಾಗಿದೆ. ಇದರ ವಿವರಗಳು ಈ ರೀತಿ ಇವೆ:

Rs. in lakhs.

Name of Taluk	Soil conservation	Minor irrigation	Afforestation	Road	Total
1. Badami	4.50	10.61	3.36	2.67	21.14
2. Bagalkot	0.90	1.49	2.88	1.67	6.94
3. Bagewadi	4.50	6.95	0.24	2.65	14.34
4. Bijapur	4.50	2.77	1.44	2.83	11.54
5. Biligi	0.23	0.90	1.20	1.91	4.24
6. Hungund	1,13	5.98	2.58	2.17	11.86
7. Muddebihal	4.50	5.36	...	2.62	12.48
					82.54

ಹೀಗೆ ಡ್ರಾಟ್ ಪ್ರೋನ್ ಏರಿಯಾ ಪ್ರೋಗ್ರಾಂ 1972-73 ನೇ ಸಾಲಿನಲ್ಲಿ ಎಷ್ಟು ಸಹಾಯವನ್ನು ಒದಗಿಸಲಾಗಿದೆ, ಇದರ ಜೊತೆಗೆ ಈ ವರ್ಷದ ಜೂನ್ ಆಖೈರು ಒಳಗಾಗಿ ಕೆಲಸ ಮಾಡುವುದಕ್ಕಾಗಿ ಕೇಂದ್ರ ಸರ್ಕಾರದ ಅನುಮತಿ ಪಡೆದು ಹಣವನ್ನು ಖರ್ಚು ಮಾಡಲಾಗಿದೆ. ಇದೂ ಅಲ್ಲದೆ ಹಿಂದೆ ಕ್ಷಾಮ ಪರಿಹಾರ ಕಾರ್ಯಕ್ಕೆ ಕೊಟ್ಟ ಹಣದಲ್ಲಿ ಉಳಿದಿದ್ದ ಮೂರು ಲಕ್ಷವನ್ನು ಕೂಡ ಖರ್ಚು ಮಾಡಬೇಕೆಂದು ಸೂಚನೆಗಳನ್ನು ಕೊಡಲಾಗಿದೆ. ಮಾನ್ಯ ಸದಸ್ಯರಾದ ಶ್ರೀ ಕಬಾಡಿಯವರು ಇದರ ಬಗ್ಗೆ ಮಾತನಾಡುತ್ತಾ ಮೂರು ಲಕ್ಷ ಇಲ್ಲಿಗೆ ಸಾಕೇ ಎಂದು ಹಾಸ್ಯ ಮಾಡುವ ರೀತಿಯಲ್ಲಿ ಹೇಳಿದರು. ಆದರೂ ನಮಗೆ ಇಲ್ಲಿನ ಸ್ಥಿತಿಯು ಅರಿವು ಪೂರ್ಣವಾಗಿ ಇದ್ದುದರಿಂದ ನಮ್ಮ ಕೈಲಾದಷ್ಟು ನಮ್ಮ ಮಿತಿಯೊಳಗೆ ಸಹಾಯ ಮಾಡಲಾಗಿದೆ.

ಶ್ರೀ ಜೆ. ಎಲ್. ಕಬಾಡಿ.—ನಾನೇನು ತಮಾಷೆಯಾಗಿ ಇಲ್ಲಿ ಹೇಳಲಿಲ್ಲ. ಇಲ್ಲಿರುವ ಭೀಕರ ಪರಿಸ್ಥಿತಿಯ ಒಂದು ಚಿತ್ರವನ್ನು ಸರಕಾರದ ಗಮನಕ್ಕೆ ತರಬೇಕೆಂದು ಮಾತ್ರ ಇಲ್ಲಿ ಸೀರಿಯಸ್ ಆಗಿ ಹೇಳಿದೆ, ಇದರಲ್ಲಿ ಯಾವ ವಿಧವಾದ ತಮಾಷೆಯೂ ಇರಲಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನೀವು ಹೇಳಬೇಕಾದ ವಿಷಯವನ್ನು ಹೇಳಿದ್ದೀರಿ. ನೀವು ತಮಾಷೆಯಾಗಿ ಹೇಳಿಲ್ಲದಿದ್ದರೂ ನಾವು ಅವನ್ನು ತಮಾಷೆ ವಿಷಯ ಎಂದು ತಿಳಿಯುವುದಿಲ್ಲ, ನನಗೂ ಗೊತ್ತಿದೆ. ಆ ಜಿಲ್ಲೆಯಲ್ಲಿ ಉಳಿದಿರುವ ಮೂರು ಲಕ್ಷದಷ್ಟು ಹಣ ಸಾಕಾಗುತ್ತದೆಯೋ ಇಲ್ಲವೋ ಎನ್ನುವುದರ ಬಗ್ಗೆ ನಾನೇ ಖುದ್ದು ಡಿವಿಜನಲ್ ಕಮಿಷನರವರೊಡನೆ ಮಾತನಾಡಿದ್ದೇನೆ. ಇದರ ಬಗ್ಗೆ ಹಣ ಸಾಲದು ಎಂದು ವಿಚಾರಗಳು ತಿಳಿದುಬಂದುದರಿಂದ ಈ ಜಿಲ್ಲೆಗಾಗಿ ಬೇರೆ ಬಾಬು ಗಳಲ್ಲಿ ಉಳಿಯುವುದರಿಂದ ಮತ್ತೆ ಏಳು ಲಕ್ಷ ರೂಪಾಯಿಗಳಷ್ಟನ್ನು ಒದಗಿಸಿಕೊಡಬೇಕೆಂದೂ ಅವರಿಗೆ ಹೇಳಲಾಗಿದೆ. ಇದಲ್ಲದೆ ಸಾಯಿಲ್ ಕನ್‌ಸರ್‌ವೇಷನ್‌ನಲ್ಲಿ ಸುಮಾರು ಏಳೂವರೆ ಸಾವಿರ ಜನಗಳಿಗೆ ಕೆಲಸವನ್ನು ಒದಗಿಸಿಕೊಡಲಾಗಿದೆ ಮತ್ತು ನೀರಾವರಿ ಕೆಲಸಗಳನ್ನು ಮಾಡುವಾಗ ಜನರಿಗೆ ಕೆಲಸಗಳನ್ನು ಕೊಡಬೇಕೆಂದು ಹೇಳಿ ಅಲ್ಲಲ್ಲಿ ಕೆಲಸಗಳನ್ನೂ ಜನಗಳಿಗೆ ಕೊಡುತ್ತಿದ್ದಾರೆ.

ಇನ್ನು 1971-72 ನೇ ಸಾಲಿನಲ್ಲಿ ರ್‍ಯಾಂಡ್ ಇಂಪ್ರೂವ್‌ಮೆಂಟ್ ಹಾಗೂ ತಕಾವಿ ಸಾಲ ಗಳನ್ನು ಸುಮಾರು 24 ಲಕ್ಷದಷ್ಟು ಕೊಡಲಾಗಿದೆ. ಬಿಜಾಪುರ ಜಿಲ್ಲೆಯಲ್ಲಿ ಈ ಸಾಲನಲ್ಲಿ ರ್‍ಯಾಂಡ್ ಇಂಪ್ರೂವ್‌ಮೆಂಟ್ ಲೋನ್‌ಗಾಗಿ 1,25,000 ಕೊಡಲಾಗಿದೆ, ತಕಾವಿ ಸಾಲಕ್ಕಾಗಿ 2,10,000 ಲಕ್ಷ ಕೊಡಲಾಗಿದೆ. ಇದೂ ಅಲ್ಲದೆ ಬೀದರ, ಗುಲ್ಬರ್ಗ ಹಾಗೂ ಚಿತ್ರದುರ್ಗ, ಈ ಜಿಲ್ಲೆಗಳಲ್ಲೂ ಮತ್ತು ಹಾಸನ ಕೆಲವು ಭಾಗಗಳಲ್ಲಿ ಕ್ಷಾಮ ಪರಿಸ್ಥಿತಿ ಇದೆ ಎಂದು ತಿಳಿದು ಅಲ್ಲಿಗೂ ಕೂಡ ಹಣವನ್ನು ಒದಗಿಸಿಕೊಡಲಾಗಿದೆ. ಇವೆಲ್ಲ ಜಿಲ್ಲೆಗಳಿಗೂ 64 ಫ್ಯಾಮಿನ್ ರಿಲೀಫ್ ಬಾಬಿನಿಂದ ಹಣವನ್ನು ಒದಗಿಸಿಕೊಡಲಾಗಿದೆ. ಬೀದರ್ ಜಿಲ್ಲೆಗಾಗಿ 29 ಲಕ್ಷ ಕೊಡಲಾಗಿದೆ, ಗುಲ್ಬರ್ಗಾ ಜಿಲ್ಲೆಗೆ 34.66 ಲಕ್ಷ, ಹಾಸನ ಜಿಲ್ಲೆಗೆ 17.73 ಲಕ್ಷ ಮತ್ತು ಚಿತ್ರದುರ್ಗ ಜಿಲ್ಲೆಗೆ 12.54 ಲಕ್ಷ 1971-72 ಸ ಲನಲ್ಲಿ ಒದಗಿಸಿ ಕೊಡಲಾಗಿದೆ. ಇನ್ನು 1972-73 ನೇ ಸಾಲಿನಲ್ಲಿ ಈ ನಾಲ್ಕು ಜಿಲ್ಲೆಗಳಿಗೆ ಒದಗಿಸಿರುವ ಹಣದ ವಿವರಗಳು ಹೀಗಿವೆ:

ಬೀದರ್ ಜಿಲ್ಲೆಗೆ 2.55 ಲಕ್ಷ, ಗುಲ್ಬರ್ಗಾ ಜಿಲ್ಲೆಗೆ 5.15 ಲಕ್ಷ
ಹಾಸನ ಜಿಲ್ಲೆಗಾಗಿ 9.29 ಲಕ್ಷ ಮತ್ತು ಚಿತ್ರದುರ್ಗ ಜಿಲ್ಲೆಗೆ 1.54 ಲಕ್ಷ

ಎಂದು ಅಲಾಟ್ ಮಾಡಲಾಗಿದೆ. ಇವೆಲ್ಲ ಭಾಗಗಳಲ್ಲೂ ತ್ವರಿತವಾಗಿ ಕೆಲಸಗಳು ನಡೆಯುತ್ತಿವೆ ಮತ್ತು ಜನರಿಗೆ ಹೆಚ್ಚು ಕೆಲಸಗಳನ್ನು ಒದಗಿಸಿಕೊಡಬೇಕೆಂದೂ ಹೇಳಲಾಗಿದೆ. ಇದರಂತೆ ಆಯಾ ಡಿವಿಜನಲ್ ಕಮಿಷನರುಗಳು ಕೆಲಸಗಳನ್ನು ಏರ್ಪಾಡು ಮಾಡುತ್ತಿದ್ದಾರೆ. ಹೀಗಿದ್ದರೂ ಕೂಡ ಎಲ್ಲ ಸಮಸ್ಯೆಗಳೂ ಪೂರ್ತಿಯಾಗಿ ಬಗೆಹರಿದಿವೆ ಮತ್ತು ಎಲ್ಲ ಕೆಲಸಗಳೂ ಆಗಿವೆ ಎಂದು ಸರಕಾರ ಭಾವಿಸುವುದಿಲ್ಲ. ಪರಿಸ್ಥಿತಿಯ ಎಲ್ಲ ವಿವರಗಳ ಅರಿವು ಸರಕಾರಕ್ಕೆ ತಿಳಿದಿದೆ ಮತ್ತು ಮಾನ್ಯ ಸದಸ್ಯರಿಗೆಲ್ಲಾ ಇದರ ಬಗ್ಗೆ ಪೂರ್ಣವಾದ ವಿವರಗಳು ತಿಳಿಯಲಿ ಎನ್ನುವ ಉದ್ದೇಶದಿಂದ ಇಲ್ಲಿ ಎಲ್ಲ ವಿವರಗಳನ್ನೂ ಕೊಟ್ಟಿದ್ದೇನೆ ಮತ್ತು ಸಾಕಾದಷ್ಟು ಹಣವನ್ನೂ ಅಲ್ಲಲ್ಲಿ ಒದಗಿಸಿ ಕೊಟ್ಟಿದ್ದೇವೆ ಮತ್ತು ಮುಂದೆ ಕೂಡ ಇದರ ಬಗ್ಗೆ ಏರ್ಪಾಡು ಮಾಡುತ್ತೇವೆ. ಇದರ ಜೊತೆಗೆ ಇವೊತ್ತು ಮೇಲ್ಮನೆಯಲ್ಲಿ ನಮ್ಮ ರಾಜ್ಯದ ಅಪ್ರೋಪ್ರಿಯೇಷನ್ ಬಿಲ್ ಪಾಸಾಗುವುದರಲ್ಲಿದೆ. ಅದಾದ ಮೇಲೆ ನಮಗೆ ಒದಗಿಸಿರುವ ಹಣದಲ್ಲಿ ಎಲ್ಲಿಲ್ಲಿ ಹೆಚ್ಚುವರಿಯಾಗಿ ಉಳಿಯಬಹುದು ಅದನ್ನೆಲ್ಲಾ ನೋಡಿಕೊಂಡು ಈ ಬಾಬಿಗಾಗಿ ಒದಗಿಸಿಕೊಡಲು ಪ್ರಯತ್ನ ಮಾಡುವುದರಲ್ಲಿ ಕೂಡ ಹಿಂತೆಗೆಯು ವುದಿಲ್ಲ ಎಂದು ಈ ಮಾನ್ಯ ಸಭೆಗೆ ಹೇಳಲು ಇಷ್ಟಪಡುತ್ತೇನೆ. ಮತ್ತು ಈ ಸಭೆಯ ಅಧಿವೇಶನ ಮುಗಿದಕೂಡಲೇ ಬಿಜಾಪುರ ಜಿಲ್ಲೆಯ ಯಾವ ಯಾವ ಭಾಗದಲ್ಲಿ ತೊಂದರೆ ಇದೆ ಅದನ್ನು ನಾನು ಖುದ್ದು ಹೋಗಿ ನೋಡಿಕೊಂಡು ಅಲ್ಲಿನ ಪರಿಸ್ಥಿತಿಯನ್ನು ತಿಳಿದುಕೊಂಡು ಅಲ್ಲಿ ಕೊಟ್ಟಿರುವ ಹಣ ಸಾಲದೇ ಇದ್ದರೆ ಮತ್ತಷ್ಟು ಹಣವನ್ನು ಒದಗಿಸಲು ಪ್ರಯತ್ನ ಮಾಡುತ್ತೇನೆ ಮತ್ತು ಇದರಲ್ಲಿ ಶಾಶ್ವತವಾದ ಕ್ಷಾಮ ಪರಿಹಾರ ಕಾರ್ಯಕ್ರಮಗಳನ್ನು ಮುಂದುವರಿಸಲು ತಕ್ಕ ಕ್ರಮಗಳನ್ನು ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ. ಬೀದರ್ ಜಿಲ್ಲೆಯಲ್ಲಿರುವ ಕಾರಂಜ ಯೋಜನೆ, ತುಮಕೂರು ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಹೇಮಾವತಿ ಯೋಜನೆ ಹಾಗೂ ಭದ್ರಾ ಮೇಲ್ದಂಡೆ ಯೋಜನೆ ಇಂಥ ನೀರಾವರಿ ಕಾಮಗಾರಿ ಕೆಲಸಗಳು ನಡೆಯುತ್ತಿವೆ. ಇದರಲ್ಲಿ ಕೆಲವು ಮಾನ್ಯ ಸದಸ್ಯರು ಮಾತನಾಡುವಾಗ ಕೆಲವು ಕಡೆಗಳಲ್ಲಿರುವ ಕೆರೆಗಳನ್ನು ದುರಸ್ತು ಮಾಡುವ ಕಾರ್ಯದಲ್ಲಿ ವಿರೋಧ ಪಕ್ಷಗಳ ಕ್ಷೇತ್ರಗಳ ಕೆರೆಗಳನ್ನು ಬಿಟ್ಟು ಬೇರೆ ಕಡೆ ಕೆರೆ ಕೆಲಸಗಳಾಗುತ್ತಿವೆ ಎಂದು ಹೇಳಿದರು. ನಾವು ಅಂತಹ ಕೆಲಸಗಳು ಯಾವುದನ್ನೂ ಮಾಡುತ್ತಿಲ್ಲ. ನಮಗೆ ಹಿಂದಿನವರ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಚರಿತ್ರೆ ಗೊತ್ತಿದೆ. ಎಲ್ಲೆಲ್ಲಿ ಅಗತ್ಯವಾಗಿ ಕೆಲಸಗಳು ಆಗಬೇಕೋ ಅಂತಹ ಕಡೆಗಳಲ್ಲಿ ಜನಗಳಿಗೆ ಹೆಚ್ಚು ಉಪಯೋಗ ಮಾಡಬೇಕೆಂದು ಅಲ್ಲಿ ಕೆಲಸಗಳನ್ನು ತೆಗೆದುಕೊಂಡು ಪ್ರಾರಂಭಮಾಡುತ್ತಿದ್ದೇವೆ. ಹಿಂದೆ ಒಂದು ರೀತಿಯಾದ ಪ್ಲ್ಯಾನ್ ಇತ್ತು. ಈಗ ಅದನ್ನು ತೆಗೆಯಲಾಗಿದೆ. ಅಗತ್ಯವಾದ ಪ್ರಸಂಗಗಳನ್ನೆಲ್ಲಾ ಪರಿಶೀಲನೆ ಮಾಡಿ ಶಾಶ್ವತವಾದ ಪರಿಹಾರಕಾರ್ಯಕ್ರಮಗಳನ್ನು ಮಾಡಲು ನಾವು ಪ್ರಯತ್ನ ಮಾಡುತ್ತಿದ್ದೇವೆ.

ಇನ್ನೂ ಕೆಲವು ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಗೆ ನಾವು ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಇವೊತ್ತು ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಯಾವ ರೀತಿ ಇದೆ ಎಂಬುವುದನ್ನು ನಮ್ಮ ಆರ್ಥಿಕ ಮಂತ್ರಿಗಳು ಮಾನ್ಯ ಸದಸ್ಯರಿಗೆ ತಿಳಿಸಿದ್ದಾರೆ. ಈಗತಾನೆ ನಾವು ಕಷ್ಟದಿಂದ ಹೊರಗಡೆ ಬರತಕ್ಕಂಥ ಸ್ಥಿತಿಯಲ್ಲಿದ್ದೇವೆ. ಅಂದರೆ ಕಷ್ಟವೆಲ್ಲಾ ನಿವಾರಣೆಯಾಗಿದೆ ಎಂದು ನಾನು ಹೇಳುವುದಿಲ್ಲ. ಕೇಂದ್ರ ಸರ್ಕಾರದವರು ನಮ್ಮಿಂದ ಸಾಲವನ್ನು ವಸೂಲಿ ಮಾಡುವುದು ಏನಿತ್ತು, ಅದರಿಂದ ತಪ್ಪಿಸಿಕೊಂಡು ಈಚೆಗೆ ಬಂದು ಕಣ್ಣುಬಿಟ್ಟು ನೋಡುವ ಪರಿಸ್ಥಿತಿಗೆ ನಾವು ಬಂದಿದ್ದೇವೆ. ಈ ಪರಿಸ್ಥಿತಿಯಲ್ಲಿ ನಾವು ಎಷ್ಟು ಹಣವನ್ನು ನೀರಾವರಿ ಕಾಮಗಾರಿಗಳಿಗೆ ಖರ್ಚು ಮಾಡಬಹುದು ಎಂಬುದನ್ನು ನೋಡಬೇಕಾಗುತ್ತದೆ. ಈಗಿನ ಪರಿಸ್ಥಿತಿಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಸ್ವಲ್ಪ ಮಟ್ಟಿಗೆ ಹಣವನ್ನು ಒದಗಿಸಿದ್ದೇವೆ. ಅದು ಎಷ್ಟರಮಟ್ಟಿಗೂ ಸಮಾಧಾನಕರವಾಗಿಲ್ಲ ಎಂಬುದು ನನಗೆ ಗೊತ್ತು. ಇವೊತ್ತಿನ ಪರಿಸ್ಥಿತಿಯಲ್ಲಿ ನಾವು 1974ನೇ ಇಸವಿಯೊಳಗೆ ಕಾವೇರಿ ಜಲಾನಯನದಲ್ಲಿ ಆಗಬೇಕಾಗಿರುವ ಕೆಲಸಗಳಿಗೆ ಹೆಚ್ಚು ಗಮನ ಕೊಡುವುದು ಅಗತ್ಯವಿದೆ. ನಮ್ಮ ರಾಜ್ಯದ ಉತ್ತರ ಭಾಗದಲ್ಲಿರುವ ಪ್ರದೇಶಗಳನ್ನು ಸಹ ನಾವು ಗಮನದಲ್ಲಿಟ್ಟುಕೊಂಡು ಅಲ್ಲಿಯ ನೀರಾವರಿ ಕಾಮಗಾರಿಗಳಿಗೆ ಎಷ್ಟು ಹಣವನ್ನು ಖರ್ಚು ಮಾಡುವುದಕ್ಕೆ ಸಾಧ್ಯವಿದೆಯೋ ಅಷ್ಟನ್ನು ಖರ್ಚು ಮಾಡುವುದಕ್ಕೆ ನಮ್ಮ ಶಕ್ತಿ ಮೀರಿ ಪ್ರಯತ್ನ ಮಾಡುತ್ತೇವೆಂಬ ಭರವಸೆಯನ್ನು ಕೊಡುತ್ತೇನೆ. ಶಾಶ್ವತವಾದಂಥ ಕಾರ್ಯಕ್ರಮಗಳನ್ನು ಎಷ್ಟೆಷ್ಟು ಕೈಗೊಳ್ಳಬಹುದೋ ಅಷ್ಟನ್ನೂ ತಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇರಿಗೇಷನ್ ಬಾವಿಗಳಿಗಾಗಿ ಈ ಸಾಲಿನಲ್ಲಿ ಎಷ್ಟು ಹಣ ಒದಗಿಸಲಾಗಿದೆ ಎಂಬುದನ್ನು ಸಹ ತಿಳಿಸುತ್ತೇನೆ.

1.	ಬೆಂಗಳೂರು ಡಿವಿಜನ್	...	21,00,000-00
2.	ಮೈಸೂರು ಡಿವಿಜನ್	...	51,70,000-00
3.	ಬೆಳಗಾಂ ಡಿವಿಜನ್	...	76,00,000-00
4.	ಗುಲ್ಬರ್ಗ ಡಿವಿಜನ್	...	21,00,000-00

ಈ ಪ್ರಕಾರ ಇರಿಗೇಷನ್ ವೆಲ್ಸ್‌ಗಾಗಿ ಒಂದು ಕೋಟಿ 69 ಲಕ್ಷದ 70 ಸಾವಿರ ರೂಪಾಯಿಗಳನ್ನು 64ನೇ ಫ್ಯಾಮಿನ್ ರಿಲೀಫ್ ಫಂಡ್ಸಿನಿಂದ ಕೊಡಬೇಕೆಂದು ಕಾರ್ಯಕ್ರಮವನ್ನು ಇಟ್ಟುಕೊಳ್ಳಲಾಗಿದೆ. ಇದರ ಜೊತೆಗೆ ಶಾಶ್ವತವಾದಂಥ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ನೀರಾವರಿ ಬಾವಿಗಳನ್ನು ತೆಗೆಸುವ ಕಾರ್ಯಕ್ರಮವೂ ಸಹ ಇದೆ. ಅದರಂತೆ ಈಗಾಗಲೇ ಬಿಜಾಪುರ ಜಿಲ್ಲೆಯಲ್ಲಿ ನನಗೆ ತಿಳಿದ ಹಾಗೆ 15 ಲಕ್ಷ ರೂಪಾಯಿಗಳನ್ನು ನೀರಾವರಿ ಬಾವಿಗಳಿಗಾಗಿ ಖರ್ಚು ಮಾಡಿದ್ದೇವೆ. ಈ ಜಿಲ್ಲೆಗೆ ಮಾತ್ರವಲ್ಲದೆ, ಕೋಲಾರ, ತುಮಕೂರು, ಬಿದರೆ, ಚಿತ್ರದುರ್ಗ, ಗುಲ್ಬರ್ಗ ಮತ್ತು ಶಿವಮೊಗ್ಗ ಜಿಲ್ಲೆಯ ಕೆಲವು ಭಾಗಗಳಲ್ಲಿ ನೀರಾವರಿ ಬಾವಿಗಳನ್ನು ತೋಡಿಸುವುದಕ್ಕೆ ಇನ್ನೂ ಹೆಚ್ಚು ಹಣವನ್ನು ಒದಗಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡಿದೆ. ಶ್ರೀಮಾನ್ ಶೀರನಾಳಿ ಚಂದ್ರಶೇಖರ್ ಅವರು ಶಿವಮೊಗ್ಗ ಜಿಲ್ಲೆಯ ಕೆಲವು ಭಾಗಗಳು ತೊಂದರೆಯಲ್ಲಿವೆ ಎಂಬುದನು ತಿಳಿಸಿದರು. ನಾನು ಆ ಭಾಗದಲ್ಲಿ ಪ್ರವಾಸ ಹೋದಾಗ, ಆ ಜಿಲ್ಲೆಯಿಂದ ಬಂದಿರತಕ್ಕಂಥ ನನ್ನ ಸಹೋದ್ಯೋಗಿ ಮಂತ್ರಿಯವರು ಸಹ ಆ ಭಾಗಗಳ ವಿಚಾರವನ್ನು ಹೇಳಿದರು. ಅಲ್ಲಿ ಸುಮಾರು 74 ಗ್ರಾಮಗಳ ಒಂದು ಬೆಲ್ಟ್ ಏರಿಯಾ ಇದ್ದ ಹಾಗೆ ಇದೆ, ಅಲ್ಲಿ ಮಳೆಯ ಅಭಾವ ಜಾಸ್ತಿ ಇದೆ, ಅಲ್ಲಿ ನೀರಾವರಿ ಕಾಮಗಾರಿ ಕೆಲಸಗಳನ್ನು ಕೈಕೊಳ್ಳಬೇಕೆಂದು ಅವರು ತಿಳಿಸಿದರು. ಅದೇ ರೀತಿ ಕೋಲಾರ ಜಿಲ್ಲೆಯಲ್ಲಿಯೂ ಸಹ ಆಗಾಗ್ಗೆ ಕ್ಷಾಮಕ್ಕೆ ತುತ್ತಾಗತಕ್ಕಂಥ ಪ್ರದೇಶಗಳಿರುವ ಅರಿವು ಸರ್ಕಾರಕ್ಕೆ ಇದೆ. ಮತ್ತು ರಾಜ್ಯದ ನಾನಾ ಭಾಗಗಳಲ್ಲಿ ಸರಿಯಾಗಿ ಮಳೆಯಾಗದೆ ತೊಂದರೆ ಇರುವುದು ಸಹ ಸರ್ಕಾರಕ್ಕೆ ಗೊತ್ತಿದೆ. ಅಂತಹ ಪ್ರದೇಶಗಳಲ್ಲಿ ತಾತ್ಕಾಲಿಕವಾದಂಥ ಪರಿಹಾರ ಒದಗಿಸಿಕೊಡುವುದರ ಜೊತೆಗೆ ಶಾಶ್ವತವಾದಂಥ ಪರಿಹಾರಗಳನ್ನು ಒದಗಿಸಿಕೊಡುವುದಕ್ಕೆ ಸರ್ವ ಪ್ರಯತ್ನ ಮಾಡುತ್ತೇವೆಂದು ಮತ್ತೊಮ್ಮೆ ಭರವಸೆ ಕೊಡುತ್ತೇನೆ. ಶ್ರೀಮಾನ್ ಆರ್. ಎಸ್. ಪಾಟೀಲ್ ಅವರು ಒಂದು ಮಾತನ್ನು ಶಾಶ್ವತ ಪರಿಹಾರ ಕಾಮಗಾರಿಯ ಬಗ್ಗೆ ಹೇಳುತಾ, 1972ನೇ ಇಸವಿಯಲ್ಲಿ ಶ್ರೀಮಾನ್

ದೇವರಾಜ ಅರಸ್ ಅವರು ಮುಖ್ಯಮಂತ್ರಿಗಳಾಗಿ ಬರುತ್ತಾರೆ, ಶ್ರೀಮಾನ್ ಹುಚ್ಚಮಾಸ್ತಿ ಗೌಡರು ರೆವಿನ್ಯೂ ಮಂತ್ರಿಗಳಾಗಿ ಬರುತ್ತಾರೆ, ಆಗ ರಾಜ್ಯದ ಎಲ್ಲಾ ಅಭಾವ ಪೀಡಿತ ಪ್ರದೇಶಗಳಲ್ಲಿ ಶಾಶ್ವತವಾದಂಥ ಪರಿಹಾರ ಕಾಮಗಾರಿ ಕೆಲಸಗಳಾಗುತ್ತವೆ, ಎಲ್ಲಾ ತೊಂದರೆಗಳು ನಿವಾರಣೆ ಯಾಗುತ್ತವೆ ಎಂಬುದಾಗಿ ದೇವಲೋಕದ ಒಂದು ಕಥೆಯನ್ನು ಹೇಳಿದರು. ದೇವರು ಆ ಒಂದು ಶಕ್ತಿಯನ್ನು ನಮಗೆ ಕೊಡಲಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಹರಿಕಥೆಯಲ್ಲಿ ನಿಮಗೆ ನಂಬಿಕೆ ಇದೆಯೋ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ದೇವರಲ್ಲಿ ನನಗೆ ನಂಬಿಕೆ ಇದೆ. ಅದರಿಂದಲೇ ದೇವರು ಆ ಶಕ್ತಿ ಕೊಡಲಿ ಎಂದು ಕೇಳಿಕೊಂಡಿದ್ದು. ದೇವರ ದಯೆಯಿಂದ ನಮ್ಮ ರಾಜ್ಯದ ನಾನಾ ಭಾಗ ಗಳಲ್ಲಿರತಕ್ಕ ಕುಂದುಕೊರತೆಗಳು ಶಾಶ್ವತವಾಗಿ ನಿವಾರಣೆಯಾಗುವ ಹಾಗೆ ಆಗಲಿ ಎಂದು ಹಾರೈ ಸುತ್ತೇನೆ. ಈ ದೃಷ್ಟಿಯಿಂದ ಎಷ್ಟು ಹಣವನ್ನು ಒದಗಿಸಬಹುದೋ ಅಷ್ಟನ್ನು ಒದಗಿಸುವುದಕ್ಕೆ ಕಳಕಳಿಯಿಂದ ಪ್ರಯತ್ನ ಮಾಡುತ್ತೇನೆ ಎನ್ನುವುದನ್ನು ಮಾನ್ಯ ಸಭೆಗೆ ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಂ. ಸಜ್ಜನ್ (ಮುದ್ದೇಬಿಹಾಳ್).—ಬಿಜಾಪುರ ಜಿಲ್ಲೆಯಲ್ಲಿ ಕ್ಷಾಮ ನಿವಾರಣೆ ಗಾಗಿ 1971-72ರಲ್ಲಿ ಎಷ್ಟು ಹಣ ಖರ್ಚು ಮಾಡಿದ್ದೀರಿ ಮತ್ತು 1972-73ರ ಸಾಲಿನಲ್ಲಿ ಅಂದರೆ ಕಳೆದ ಎರಡು ತಿಂಗಳಲ್ಲಿ ಈ ಜಿಲ್ಲೆಯ ಯಾವ ಯಾವ ತಾಲ್ಲೂಕ್‌ಗಳಲ್ಲಿ ಎಷ್ಟೆಷ್ಟು ಹಣ ಖರ್ಚು ಮಾಡಿದ್ದೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಇಕಾನಮಿ ಮೆಜರನ್ನು ತೆಗೆದಮೇಲೆ ಕೇವಲ ಕ್ಷಾಮ ಪೀಡಿತ ಪ್ರದೇಶಗಳಿಗೆ ಮಾತ್ರ ತಕಾವಿ ಸಾಲ ಮತ್ತು ಜಮೀನು ಅಭಿವೃದ್ಧಿ ಸಾಲವನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಈ ಸಾಲಗಳನ್ನು ಎಲ್ಲ ತಾಲ್ಲೂಕುಗಳಿಗೂ ಸಹ ಕೊಡುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಡುತ್ತೀರಾ ?

ಶ್ರೀ ಜೆ. ಎಲ್. ಕಬಾಡಿ.—ಇಂಡಿ ಮತ್ತು ಸಿಂಧಗಿ ತಾಲ್ಲೂಕ್‌ಗಳನ್ನು ಸೆಂಟ್ರಲ್ ರೂರಲ್ ವರ್ಕ್ಸ್ ಪ್ರೋಗ್ರಾಮ್‌ನಲ್ಲಿ ಸೇರಿಸಿಲ್ಲ. ಇವು ಯಾವಾಗಲೂ ಕ್ಷಾಮ ಪೀಡಿತ ಪ್ರದೇಶಗಳಾಗಿರು ವುದರಿಂದ, ಈ ಪ್ರದೇಶಗಳನ್ನು ಆ ಪ್ರೋಗ್ರಾಮ್ ಲಿಸ್ಟ್‌ನಲ್ಲಿ ಸೇರಿಸಿದರೆ ಅಲ್ಲಿಯ ಕ್ಷಾಮವನ್ನು ನಿವಾರಣೆ ಮಾಡುವುದಕ್ಕೆ ಸಹಾಯಕವಾಗುತ್ತದೆ. ಅದ್ದರಿಂದ ಇದರ ಬಗ್ಗೆ ಸರ್ಕಾರದವರು ಯೋಚನೆ ಮಾಡುತ್ತಾರೆಯೇ ?

ಶ್ರೀ ಎಚ್. ಡಿ. ದೇವೇಗೌಡ.—ಪರಿಹಾರ ಕಾಮಗಾರಿ ಕೆಲಸಗಳನ್ನು ಕೈಕೊಳ್ಳಲು ಜೂನ್ 30ವರೆಗೆ ಮಾತ್ರ ತಾವು ಆದೇಶ ಕೊಟ್ಟಿದ್ದೀರಿ. ಜೂನ್ 30ರ ನಂತರವೂ ಕೆಲಸವನ್ನು ಮುಂದು ವರೆಸುವುದಕ್ಕೆ ತಾವು ಆದೇಶ ಕೊಟ್ಟು ಅರ್ಧ ಕೆಲಸಗಳಾಗಿರುವುದನ್ನು ಪೂರ್ತಿ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ವಿ. ಎನ್. ಪಾಟೀಲ್.—ಗುಲ್ಬರ್ಗಾ ಡಿವಿಜನ್‌ಗೆ ನೀರಾವರಿ ಬಾವಿಗಳನ್ನು ತೆಗೆಸಲು 21 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ ಎಂದು ಹೇಳಿದಿರಿ. ಈ ಹಣದಿಂದ 300 ಬಾವಿಗಳನ್ನು ಸಹ ತೆಗೆಸಲು ಸಾಧ್ಯವಾಗುವುದಿಲ್ಲ. ಮತ್ತು ಈ ಹಣದಿಂದ ಕ್ಷಾಮವನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ಜಿಲ್ಲೆಯಲ್ಲಿ ಸುಮಾರು ನಾಲ್ಕೂವರೆ ಲಕ್ಷ ಜನರು ಬೆಳೆ ಸರಿಯಾಗಿ ಆಗದೆ ನಿರುದ್ಯೋಗಿಗಳಾಗಿದ್ದಾರೆ. ಕೂಲಿ ಸಹ ಸರಿಯಾಗಿ ಸಿಗುತ್ತಿಲ್ಲ. ಅದ್ದರಿಂದ ಇನ್ನೂ ಹೆಚ್ಚು ಹಣವನ್ನು ಬಾವಿಗಳನ್ನು ತೋಡಿಸಲು ನಮ್ಮ ಜಿಲ್ಲೆಗೆ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಕೆಲವು ಹಳ್ಳಿಗಳ ಹೆಸರುಗಳನ್ನು ಕೊಟ್ಟು ಅಲ್ಲಿ ಒಂದಾಣೆ ಬೆಳೆ ಸಹ ಆಗಿಲ್ಲವೆಂದು ಹೇಳಿದ್ದೆ. ತಾವು ಅದರ ಬಗ್ಗೆ ವಿವರಗಳನ್ನು ತರಿಸುತ್ತೇನೆಂದು ಹೇಳಿದ್ದೀರಿ. ಆ ವಿವರಗಳನ್ನು ಏನಾದರೂ ತಾವು ತರಿಸಿದ್ದೀರಾ ? ತರಿಸಿದ್ದರೆ ಅಂತಹ ಕಡೆಗಳಲ್ಲಿ ತಕಾವಿ ಸಾಲ ಮತ್ತು ಹಳೆಯ ಸಾಲಗಳನ್ನು ವಸೂಲ್ ಮಾಡುವುದನ್ನು ನಿಲ್ಲಿಸುತ್ತೀರಾ ? ಈಗ ಅಧಿಕಾರಿಗಳು ಸಾಲ ಕೊಡಲಿಲ್ಲವೆಂಬ ಕಾರಣದಿಂದ ಪಂಪ್ ಸೆಟ್ಟುಗಳನ್ನು ಸೀಜ್ ಮಾಡುತ್ತಿದ್ದಾರೆ. ಆ ರೀತಿ ಮಾಡಬಾರದೆಂದು ರೆವಿನ್ಯೂ ಅಧಿಕಾರಿ ಗಳಿಗೆ ತಿಳಿಸುತ್ತೀರಾ ?

ಶ್ರೀ ಕೆ. ಪ್ರಭಾಕರ್.—ಬೆಂಗಳೂರು ಡಿವಿಜನ್‌ಗೆ ಕೊಟ್ಟಿರುವ ಹಣವನ್ನು ಜಾಸ್ತಿ ಮಾಡ ಬೇಕು. ಬೆಂಗಳೂರು ಸೌತ್ ತಾಲ್ಲೂಕ್ ಸ್ಯಾನಿಟರಿ ಬೋರ್ಡ್ ಏರಿಯಾ ಆದ ಎಚ್. ಎ. ಎಲ್. ಪ್ರದೇಶದಲ್ಲಿ ಅಭಿವೃದ್ಧಿ ಕೆಲಸಗಳನ್ನು ಮತ್ತು ಪರಿಹಾರ ಕಾಮಗಾರಿ ಕೆಲಸಗಳನ್ನು ಯಾವುದನ್ನೂ ತಗೆದುಕೊಳ್ಳಬಾರದೆಂದು ಸರ್ಕಾರದವರು ಏನು ಸ್ಟೇ ಕೊಟ್ಟಿದ್ದಾರೆ ಅದನ್ನು ತೆಗೆದುಹಾಕಬೇಕು.

(ಶ್ರೀ ಕೆ. ಪ್ರಭಾಕರ್)

ತುಮಕೂರು ಜಿಲ್ಲೆಯ ಪಾವಗಡ, ಶಿರಾ ಮತ್ತು ಮಧುಗಿರಿ ತಾಲ್ಲೂಕ್‌ಗಳಲ್ಲಿ ಈ ಸಲ ಜಾಸ್ತಿ ಮಳೆಯಾಗಿ ರೈತರಿಗೆ ವಿಪರೀತ ನಷ್ಟವಾಗಿದೆ. ಆದ್ದರಿಂದ ಅಲ್ಲಿ ಶಾಶ್ವತವಾದಂಥ ಪರಿಹಾರ ಕಾಮಗಾರಿ ಕೆಲಸಗಳನ್ನು ಕೈಕೊಳ್ಳಬೇಕು. ಅದರಂತೆ ನಾಗಮಂಗಲ ತಾಲ್ಲೂಕ್‌ನಲ್ಲಿಯೂ ಸಹ ಶಾಶ್ವತವಾದಂಥ ಪರಿಹಾರ ಕಾಮಗಾರಿ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಸೂಚನೆ ಮಾಡುತ್ತೇನೆ. ಬೆಂಗಳೂರು ಜಿಲ್ಲೆಯಲ್ಲಿ ಇನ್ನೂ ಬತ್ತನೆಯಾಗಿಲ್ಲ. ಇದರ ಬಗ್ಗೆ ಸಹ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರದವರು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಬೇಕು.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿರತಕ್ಕ 74 ಹಳ್ಳಿಗಳು ಏನಿವೆ ಅವು ಕ್ಷಾಮಪೀಡಿತ ಪ್ರದೇಶಗಳಾಗಿದ್ದರೂ ಕೂಡ ಆ ಹಳ್ಳಿಗಳಿಗೆ ಯಾವ ಒಂದು ಅಲಾಟ್‌ಮೆಂಟ್ ಸಹ ಇಟ್ಟಿಲ್ಲದೇ ಇರುವುದು ಬಹಳ ಶೋಚನೀಯ. ಅಲ್ಲಿರತಕ್ಕ ಕೆಲವು ನೀರಾವರಿ ಯೋಜನೆಗಳನ್ನು ಪೂರ್ತಿ ಮಾಡಿದರೆ ಆ 74 ಹಳ್ಳಿಗಳ ಕ್ಷಾಮ ನಿವಾರಣೆಯಾಗುತ್ತದೆ ಎಂದು ನಾವು ಸಲಹೆ ಕೊಟ್ಟರೂ ಕೂಡ ಆ ಯೋಜನೆಗಳನ್ನು ಬಡ್ಜೆಟ್ಟಿನಲ್ಲಿ ಸೇರಿಸಿಲ್ಲ. ಸೀಗೆಹಳ್ಳಿ ಯೋಜನೆ, ಅಪ್ಪರ್ ಭದ್ರಾ ಯೋಜನೆ, ಕೃಷ್ಣಾ ನೀರಿನ ಡಿಸ್‌ಪ್ಯೂಟ್ ತೀರ್ಮಾನವಾಗುವವರೆಗೂ ಈ ಯೋಜನೆಗಳು ಪೂರ್ತಿಯಾಗುವುದಿಲ್ಲ. ನಮ್ಮ ಜಿಲ್ಲೆಯ ಕ್ಯಾಬಿನೆಟ್ ಮಂತ್ರಿಗಳು ಆ ಪ್ರದೇಶವನ್ನು ಡ್ರೌಟ್ ಏರಿಯಾ ಎಂದು ಸಾರಿ ಕ್ಷಾಮಪೀಡಿತ ಪ್ರದೇಶದಲ್ಲಿ ಸೇರಿಸಿಲ್ಲ ಇದಕ್ಕೆ ಕಾರಣ ಏನು?

ಶ್ರೀ ಆರ್. ಎಸ್. ಪಾಟೀಲ್.—ಬೆಳಗಾವ್ ಜಿಲ್ಲೆಯಲ್ಲಿ ರಾಮದುರ್ಗ ಮತ್ತು ಸವದತ್ತಿ ಈ ಪ್ರದೇಶಗಳಲ್ಲಿ ತೀವ್ರ ಕ್ಷಾಮ ಇದೆ. ಆದ್ದರಿಂದ ಆ ಪ್ರದೇಶದಲ್ಲಿ ಕ್ಷಾಮ ಪರಿಹಾರಕ್ಕೋಸ್ಕರ ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ, ಮತ್ತು ಎಷ್ಟು ಹಣವನ್ನು ಖರ್ಚು ಮಾಡಬೇಕೆಂದಿದ್ದೀರಿ ಎಂಬುದನ್ನು ತಿಳಿಸುತ್ತೀರಾ? ಮತ್ತು ಆ ಪ್ರದೇಶದಲ್ಲಿ ಭೂಕಂದಾಯವನ್ನು ಪೂರ್ಣವಾಗಿ ವಿನಾಯಿತಿ ಮಾಡುತ್ತೀರಾ?

ಶ್ರೀ ಪಿ. ಎಂ. ಬಂಗಿ (ಜಮಖಂಡಿ).—ಜಮಖಂಡಿ ಮತ್ತು ಮುಧೋಳ್ ತಾಲ್ಲೂಕುಗಳಲ್ಲಿ ಪರಿಹಾರ ಕಾಮಗಾರಿಗಳಿಗಾಗಿ ಏನೂ ಹಣ ಮಂಜೂರು ಮಾಡಿಲ್ಲ. ಈ ತಾಲ್ಲೂಕುಗಳಲ್ಲಿ ಮಳೆ ಬೆಳೆ ಇಲ್ಲದೆ ಜನ ಹಾಹಾಕಾರ ಪಡುತ್ತಿದ್ದಾರೆ. ಆದರೂ ಈ ತಾಲ್ಲೂಕುಗಳಿಗೆ ಕ್ಷಾಮ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಲು ಯಾವ ಹಣವನ್ನು ಮಂಜೂರು ಮಾಡಿಲ್ಲ ಏತಕ್ಕೆ ಆ ತಾಲ್ಲೂಕುಗಳನ್ನು ಮರೆತ್ತಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ವೈ. ಬಿ. ಜೋಗಣ್ಣನವರು (ನರಗುಂದ).—ನಮ್ಮ ತಾಲ್ಲೂಕಿನಲ್ಲಿ ಕ್ಷಾಮಪರಿಹಾರ ಕಾಮಗಾರಿಗಳನ್ನು ಇನ್ನೂ ಪ್ರಾರಂಭ ಮಾಡಿಲ್ಲ. ಯಾವಾಗ ಅಲ್ಲಿ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತೀರಾ ಎಂಬುದನ್ನು ಹೇಳಬೇಕು.

ಶ್ರೀ ಎ. ಪಿ. ಮುನಿಸ್ವಾಮಿ.—ಕೋಲಾರ ಜಿಲ್ಲೆಯನ್ನು ಪೂರ್ತಿ ಮರೆತಹಾಗೆ ಕಾಣುತ್ತದೆ. ದಯವಿಟ್ಟು ಆ ರೀತಿ ಮಾಡಬೇಡಿ ನಮ್ಮ ಮಾಲೂರು ತಾಲ್ಲೂಕಿನಲ್ಲಿ ಕ್ಷಾಮಪರಿಹಾರ ಕಾಮಗಾರಿಗಳನ್ನು ಕೈಗೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀರಂಗಪಟ್ಟಣ).—ನಾಗಮಂಗಲ ತಾಲ್ಲೂಕಿನಲ್ಲಿ ಅನೇಕ ಪ್ರದೇಶಗಳು ಕ್ಷಾಮಪೀಡಿತ ಪ್ರದೇಶಗಳಾಗಿವೆ. ಆ ಪ್ರದೇಶಕ್ಕೆ ಎಷ್ಟು ಹಣವನ್ನು ಒದಗಿಸಿದ್ದೀರಿ ಮತ್ತು ಯಾವ ಯಾವ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಡಿ. ದೇವರಾಜ್ ಅರಸ್ (ಮುಖ್ಯಮಂತ್ರಿಗಳು).—ಇದರಲ್ಲಿ ಒಂದು ವಿಚಾರ ಇದೆ. ಎಲ್ಲಾ ಕಡೆಯೂ ಕ್ಷಾಮ ಇದೆಯೆಂದು ಅದೇ ಒಂದು ಕಥೆ ಆಗಬಾರದು. ಶಿವಮೊಗ್ಗದಲ್ಲಿಯೂ ಕ್ಷಾಮ ಇದೆಯೋ ಏನೋ, ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಏನೋ ಹೇಳಿದಹಾಗಿತ್ತು.

ಶ್ರೀ ಕೋಣಂದೂರು ಲಿಂಗಪ್ಪ.—ಇಲ್ಲ ಇಲ್ಲ. ಚಂದ್ರಶೇಖರ್ ಹೇಳಿದರು.

ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ್.—ನಾನೇ ಅಲ್ಲ ಕ್ಯಾಬಿನೆಟ್ ಮಂತ್ರಿಗಳೂ ಕೂಡ ಅಲ್ಲಿ ಕ್ಷಾಮ ಇದೆಯೆಂದೂ ಹೇಳಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಗೊತ್ತು, ಗೊತ್ತು, ಮಾನ್ಯ ಸದಸ್ಯರು ಹೇಳುವುದೆಲ್ಲಾ ಎಷ್ಟು ಸತ್ಯ ಇದೆಯೆಂಬುದು ಗೊತ್ತು. ನಿಜದ ತಲೆಯ ಮೇಲೆ ಹೊಡೆದ ಹಾಗೆ ಹೇಳಿದ್ದಾರೆ. ಈ ಸಭೆಯಲ್ಲಿ ಇಂಥಾ ವಿಚಾರಗಳು ಬಂದಾಗ ಯಾವರೀತಿ ಇರುತ್ತದೆ ಎಂಬುದು ನನಗೆ ಸ್ವಲ್ಪ ಅನುಭವ ಇದೆ.

ಈ ಕ್ಷಾಮಪೀಡಿತ ಪ್ರದೇಶಗಳಲ್ಲಿ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳುವುದಕ್ಕಾಗಿ ಸುಮಾರು 20 ಕೋಟಿ ರೂಪಾಯಿಗಳನ್ನು ನಮ್ಮ ರಾಜ್ಯಕ್ಕೆ ಒದಗಿಸಬೇಕೆಂದು ಹಿಂದೆ ನಾವು ಒಂದು ನಿರ್ಣಯವನ್ನು ಮಾಡಿ ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದೆವು. ಆಗ ಇಂಡಿಯಾ ಸರ್ಕಾರದಿಂದ ನಮ್ಮ ರಾಜ್ಯಕ್ಕೆ ಒಂದು ಟೀಮನ್ನು ಕಳುಹಿಸಿ ಇಲ್ಲಿನ ಪರಿಸ್ಥಿತಿ ಏನಿದೆ, 20 ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕ ಅವಶ್ಯಕತೆ ಇದೆಯೋ ಇಲ್ಲವೇ ಎಂಬುದನ್ನು ಅವರು ನೋಡಿಕೊಂಡು ಹೋಗಿ ಅದಕ್ಕೆ ಎಷ್ಟು ಕೊಡಬೇಕೋ ಅಷ್ಟನ್ನು ಕೊಟ್ಟಿದ್ದಾರೆ.

ಇನ್ನೊಂದು ವಿಚಾರವನ್ನು ಈ ಸಭೆಯ ಗಮನಕ್ಕೆ ತರುವುದು ಏನೆಂದರೆ ಈಗ ಕ್ಷಾಮ ಬಂದಿದೆ ಎಂದರೆ ಎಲ್ಲಾ ಕಡೆಗಳಲ್ಲೂ ಕಂದಾಯವನ್ನು ಕೊಡಬೇಕಾಗಿಲ್ಲ, ಸರ್ಕಾರದಿಂದ ಕೊಟ್ಟ ಸಾಲವನ್ನು ವಸೂಲು ಮಾಡಬೇಡಿ, ಮಾನ್ಯ ಸದಸ್ಯರು ಸುಲಭವಾಗಿ ಹೇಳುತ್ತಿದ್ದಾರೆ. ಕಂದಾಯವನ್ನು ಮಾಫಿ ಮಾಡಿ, ಸರ್ಕಾರದವರು ಕೊಟ್ಟ ಸಾಲವನ್ನು ವಸೂಲು ಮಾಡಬೇಡಿ ಎಂದು ಹೇಳಿದರೆ ದೇಶದ ಕೆಲಸಕಾರ್ಯಗಳು ಹೇಗೆ ನಡೆಯಬೇಕು? ಇದಕ್ಕೆಲ್ಲಾ ಯಾರು ದುಡ್ಡು ಕೊಡುತ್ತಾರೆ? ಇದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಹೇಗಿದೆ ಎಂಬುದು ಬಡ್ಜೆಟ್ ಭಾಷಣದಲ್ಲಿ ಗೊತ್ತಾಗಿದೆ. ಮತ್ತು ಈಗ ಇಂಡಿಯ ಸರ್ಕಾರದವರು ಸಹ ನಮಗೆ ಹೊರಗಡೆಯಿಂದ ನೆರವು ಬರುವುದಿಲ್ಲ. ನಿಮ್ಮ ಕಾಲಿನ ಮೇಲೆ ನೀವು ನಿಂತುಕೊಳ್ಳಿ ಎಂದು ಹೇಳುತ್ತಿದ್ದಾರೆ. ಆದ್ದರಿಂದ ನಮ್ಮಲ್ಲಿ ಇರತಕ್ಕ ರಿಸೋರ್ಸಸ್‌ನಲ್ಲೇ ಈ ಕೆಲಸಗಳನ್ನೆಲ್ಲಾ ನಾವು ನಿರ್ವಹಿಸಬೇಕಾಗುತ್ತದೆ. ಈಗ ಬಿಜಾಪುರದಲ್ಲಿ, ಗುಲ್ಬರ್ಗಾದಲ್ಲಿ ಇನ್ನೂ ಕೆಲವು ಕಡೆ ಕ್ಷಾಮ ಇದೆಯೆಂದು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟ ವರದಿಯೂ ಇದೆ. ಆದ್ದರಿಂದ ಈಗ ನಮ್ಮಲ್ಲಿ ಇರತಕ್ಕ ರಿಸೋರ್ಸಸ್‌ನಲ್ಲಿ ಈ ಕೆಲಸಗಳನ್ನು ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ಎಲ್ಲಿ ನಿಜವಾದ ಪರಿಸ್ಥಿತಿ ಇದೆಯೆಂಬುದನ್ನು ಹೇಳಿದರೆ ಅಂಥಾ ಕಡೆ ನಾವು ಕೆಲಸಕಾರ್ಯಗಳನ್ನು ಮಾಡೋಣ. ಆದರೆ ಈ ರೀತಿ ಎಲ್ಲಾ ಕಡೆಯೂ ಕ್ಷಾಮ ಇದೆಯೆಂದು ಹೇಳಿದರೆ ಜನ ಮೆಚ್ಚುತ್ತಾರೆ ಎನ್ನುವ ವಿಚಾರವನ್ನು ತಾವು ಚಿಂತನೆ ಮಾಡಬೇಕಾಗಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಶ್ರೀಮಾನ್ ದೇವೇಗೌಡರು ಜುಲೈ ಒಂದನೇ ತಾರೀಖಿನ ನಂತರವೂ ಈ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಈ ಕ್ಷಾಮನಿವಾರಣಾ ಪರಿಹಾರ ಕಾಮಗಾರಿಗಳಿಗೆ ಸಂಬಂಧಪಟ್ಟ ಹಾಗೆ ಕೆಲವು ಭಾಗದಲ್ಲಿ ಇನ್ನೂ ಪ್ರೋಗ್ರಾಮ್ ಹಾಕಿರಲಿಲ್ಲ. ಕೆಲವು ಭಾಗದಲ್ಲಿ ಕೆಲಸ ನಡೆಯುತ್ತಿದೆ. ಜೂನ್ ತಿಂಗಳ ಆಖೈರು ವರೆಗೂ ನಮಗೆ ಕೇಂದ್ರ ಸರ್ಕಾರದವರು ಕೊಟ್ಟಿದ್ದಂತಹ ಹಣವನ್ನು ನಾವು ಖರ್ಚು ಮಾಡಿದ್ದೇವೆ. ಜುಲೈ ಒಂದನೇ ತಾರೀಖಿನ ನಂತರವೂ ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಂಥಾಕಡೆ ಪರಿಹಾರ ಕಾಮಗಾರಿಗಳು ನಡೆಯಬೇಕೆಂದು ನಾವು ಈಗಾಗಲೇ ತಿಳಿಸಿದ್ದೇವೆ.

ಶ್ರೀ ಜೆ. ಎಲ್. ಕಬಾಡಿಯವರು ಇಂಡಿ ಮತ್ತು ಸಿಂದಗಿ ಈ ತಾಲ್ಲೂಕುಗಳನ್ನು ರೂರಲ್ ವರ್ಕ್ಸ್ ಪ್ರೋಗ್ರಾಮಿನಲ್ಲಿ ಸೇರಿಸಿಲ್ಲ ಎಂದು ಹೇಳಿದರು. ಮೊದಲು ಅದನ್ನು ರೂರಲ್ ವರ್ಕ್ಸ್ ಪ್ರೋಗ್ರಾಮಿನಲ್ಲಿ ಸೇರಿಸಿರಲಿಲ್ಲ. ಅದು ನಿಜ. ಇತ್ತೀಚೆಗೆ ಡ್ರಾಟ್ ಏರಿಯಾದ 46 ತಾಲ್ಲೂಕುಗಳನ್ನು ರೂರಲ್ ವರ್ಕ್ಸ್ ಪ್ರೋಗ್ರಾಮಿನಲ್ಲಿ ಸೇರಿಸುವಾಗ ಅದನ್ನು ಇದರಲ್ಲಿ ಸೇರಿಸಿದೆ. ಅದರ ಜೊತೆಗೆ ಕೆಲವು ತಾಲ್ಲೂಕುಗಳು ಅಗಿಂದಾಗ್ಯೆ ಈ ತೊಂದರೆಗೆ ಒಳಗಾಗುತ್ತವೆ ಎನ್ನುವ ವಿಚಾರ ಬಂದಿದೆ. ಆದ್ದರಿಂದ ಯಾವ ಯಾವ ತಾಲ್ಲೂಕುಗಳನ್ನು ಈ ರೂರಲ್‌ವರ್ಕ್ಸ್ ಪ್ರೋಗ್ರಾಮಿನಲ್ಲಿ ಸೇರಿಸಬೇಕು ಎಂದು ನಾವು ಯೋಚನೆ ಮಾಡುತ್ತಿದ್ದೇವೆ. ಬೆಂಗಳೂರು, ಮೈಸೂರು, ಬೆಳಗಾವ್ ಮತ್ತು ಗುಲ್ಬರ್ಗಾ ಡಿವಿಜನ್‌ಗಳಲ್ಲಿ ಈ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕಾಗಿ ಫ್ಯಾಮಿನ್ ಹೆಡ್‌ನಲ್ಲಿ ಹಣವನ್ನು ಒದಗಿಸಿದ್ದೇವೆ. ಯಾವ ಯಾವ ಊರಿನಲ್ಲಿ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು, ಎಷ್ಟೆಷ್ಟು ಹಣವನ್ನು ಖರ್ಚು ಮಾಡಬೇಕು ಎನ್ನುವ ಬಗ್ಗೆ ಆಯಾ ಸ್ಥಳೀಯ ಅಧಿಕಾರಿಗಳು ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ.

ಶ್ರೀಮಾನ್ ಶೀರನಾಳಿ ಚಂದ್ರಶೇಖರ್ ಅವರು ಸೀಗೆಹಳ್ಳದ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ಹೇಳಿದರು. ಅದರ ಬಗ್ಗೆ ನದೀ ನೀರಿನ ವಿವಾದ ಬಗೆಹರಿಯುವ ತನಕ ಅದನ್ನು ಮಾಡುವುದಕ್ಕೆ ಆಗುವುದಿಲ್ಲ ಎಂದು ನೀರಾವರಿ ಮತ್ತು ಲೋಕೋಪಯೋಗಿ ಸಚಿವರು ಈಗಾಗಲೇ ತಿಳಿಸಿದ್ದಾರೆ. ಈ ವಿಚಾರಗಳನ್ನು ಹೆಚ್ಚು ಹೇಳುವುದಕ್ಕೆ ಅವಕಾಶವಿಲ್ಲ. ಗುಲ್ಬರ್ಗಾ ಬಿಜಾಪುರ, ಚಿತ್ರದುರ್ಗ, ತುಮಕೂರು, ಗುಲ್ಬರ್ಗಾದಲ್ಲಿ 3 ತಾಲ್ಲೂಕುಗಳು, ರಾಯಚೂರಿನಲ್ಲಿ ಎರಡು ತಾಲ್ಲೂಕುಗಳು, ಬೆಳಗಾಮಿನಲ್ಲಿ 5 ತಾಲ್ಲೂಕುಗಳು, ಧಾರವಾಡಾದಲ್ಲಿ 5 ತಾಲ್ಲೂಕುಗಳು, ಬಳ್ಳಾರಿಯಲ್ಲಿ 2 ತಾಲ್ಲೂಕುಗಳು, ಕೋಲಾರ ಜಿಲ್ಲೆಯಲ್ಲಿ 8 ತಾಲ್ಲೂಕುಗಳು, ಈ ಎಲ್ಲಾ ತಾಲ್ಲೂಕುಗಳಿಗೂ ಡ್ರಾಟ್ ಪ್ರೋಗ್ರಾಮಿನಲ್ಲಿ ಹಣವನ್ನು ಒದಗಿಸಬೇಕೆಂದು ಸಂಬಂಧಪಟ್ಟ ಆಫೀಸರುಗಳಿಗೆ ತಿಳಿಸಲಾಗಿದೆ.

ಶ್ರೀ ಎಂ. ಬಿ. ರಾಮಸ್ವಾಮಿ (ಆನೇಕಲ್).—ಬೆಂಗಳೂರು ಡಿವಿಜನ್‌ನಲ್ಲಿ ನಮ್ಮ ಆನೇಕಲ್ ತಾಲ್ಲೂಕಿನಲ್ಲಿ ಸರಿಯಾಗಿ ಮಳೆ ಆಗಿಲ್ಲ, ಬಿತ್ತನೆ ಮಾಡಿಲ್ಲ. ದನಕರುಗಳಿಗೆ ಮೇವು ನೀರು ಇಲ್ಲದೆ ಅವು ಸಾಯುತ್ತಿವೆ. ಮರಗಳನ್ನು ಕಡಿದು ದನಗಳಿಗೆ ಮೇವು ಹಾಕುವ ಪರಿಸ್ಥಿತಿ ಬಂದಿದೆ.

6-00 P.M.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಕ್ಷಣ ಬೆಂಗಳೂರು ಜಿಲ್ಲೆಯಲ್ಲಿ ಮಳೆ ಬರುತ್ತದೆಂದು ನಾವು ಆಶಿಸೋಣ. ಇನ್ನು ಗುಲ್ಬರ್ಗ ಜಿಲ್ಲೆಯಲ್ಲಿ ಶೋರಾಪುರ, ಶಾಪುರ್ ಮತ್ತು ಯಾದ್‌ಗಿರ್ ಡ್ರಾಟ್ ಪ್ರೋಗ್ರಾಂನಲ್ಲಿ ಸೇರಿವೆ. ಈ 42 ತಾಲ್ಲೂಕುಗಳ ಜೊತೆಗೆ ಇನ್ನೂ 48 ತಾಲ್ಲೂಕುಗಳನ್ನು ಸೇರಿಸಬೇಕೆಂದು ಪಟ್ಟಿ ಮಾಡಿದ್ದೇವೆ. ಇನ್ನು ಕೋಲಾರ, ಧಾರವಾಡ, ಹುಬ್ಬಳ್ಳಿ—ಇವುಗಳು ಸಹ ನಮ್ಮ ಕಾರ್ಯಕ್ರಮಗಳಲ್ಲಿ ಸೇರಿವೆ. ಇನ್ನು ಭಾಷಣ ಮಾಡುವುದಕ್ಕೆ ಸಾಧ್ಯವಾಗದಿದ್ದವರು—ಅಂದರೆ ಶ್ರೀ ಸತ್ಯನಾರಾಯಣಸಿಂಗ್‌ರವರು ಹಡಗಲಿ ಮತ್ತು ಮಲ್ಲಾಪುರಗಳಲ್ಲಿ ಬಹಳ ತೊಂದರೆಯಾಗಿದೆ ಎಂದು ಹೇಳಿದ್ದಾರೆ. ಶ್ರೀಮಾನ್ ಬಂಗಿಯವರು ಜಮಖಂಡಿಯು ಪಟ್ಟಣವಾದರೂ ಕುಡಿಯುವ ನೀರಿನ ತೊಂದರೆ ಬಹಳ ಇದೆ ಎಂದು ಹೇಳಿದ್ದಾರೆ. ಅಲ್ಲಿ ರಿಗ್‌ಗಳ ಮೂಲಕ ನೀರನ್ನು ಒದಗಿಸುವ ಕಾರ್ಯಕ್ರಮ ಸರ್ಕಾರದ ಮುಂದೆ ಇದೆ. ಅದೇ ರೀತಿ ಇತರ ಮಾನ್ಯ ಸದಸ್ಯರು ಸಹ ಅನೇಕ ತಾಲ್ಲೂಕುಗಳಲ್ಲಿ ಎಷ್ಟೋ ಕಡೆ ನೀರಿನ ತೊಂದರೆ ಮತ್ತು ಪಂಪ್‌ಸೆಟ್ಟು ಮತ್ತು ಬೋರ್ ವೆಲ್‌ಗಳ ಬಗ್ಗೆಯೂ ತಿಳಿಸಿದ್ದಾರೆ. ಅದಕ್ಕೆ ಎಲ್ಲದಕ್ಕೂ ವಿವರಗಳನ್ನು ತಿಳಿಸುತ್ತಾ ಹೋದರೆ ಬಹಳ ತಡವಾಗುತ್ತದೆ.

ಆ ಮೇಲೆ ಫೇರ್ ಪ್ರೈಸ್ ಷಾಪುಗಳ ಬಗ್ಗೆ ಕೆಲವರು ಸಲಹೆಗಳನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಬಂಗಿಯವರು ಸಹ ಪಟ್ಟಣಗಳಲ್ಲಿ ಮಾಡಬೇಕೆಂದು ಸಲಹೆ ಮಾಡಿದ್ದರು. ಆದ್ದರಿಂದ ಎಲ್ಲೆಲ್ಲಿ ಧಾನ್ಯಗಳ ಬೆಲೆ ಜಾಸ್ತಿಯಾಗಿದೆ, ಅದನ್ನು ನೋಡಿಕೊಂಡು ನಮ್ಮಲ್ಲಿರತಕ್ಕ ಧಾನ್ಯಗಳನ್ನು ಫೇರ್ ಪ್ರೈಸ್ ಅಂಗಡಿಗಳನ್ನು ತೆರೆದು ಅದರ ಮೂಲಕ ವಿತರಣೆ ಮಾಡುವುದಕ್ಕೆ ಬೇಕಾದಂತಹ ವ್ಯವಸ್ಥೆಗಳನ್ನು ಮಾಡುತ್ತೇವೆಂದು ಮಾತ್ರ ಇಲ್ಲಿ ಹೇಳಬಯಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು (ಚಿತ್ರದುರ್ಗ).—ತಮ್ಮ ಪಟ್ಟಿಯಲ್ಲಿ ಚಿತ್ರದುರ್ಗ ಜಿಲ್ಲೆಯ ಕೆಲವು ತಾಲೂಕುಗಳನ್ನು ಸಹ ಸೇರಿಸಿದ್ದೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವುಗಳನ್ನು ಸಹ ಸೇರಿಸಿದೆ.

ಉಪಾಧ್ಯಕ್ಷರು.—ಈಗ ಸಭೆಯು ಮುಕ್ತಾಯಗೊಂಡು ನಾಳೆ 1—00 ಗಂಟೆಗೆ ಪುನಃ ಸೇರುವುದು.

The House adjourned at Five Minutes past Six of the Clock to meet at One of the Clock on Wednesday, the 19th July 1972.

WD 18247—GPB—550—8-2-1973

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Wednesday, 19th July 1972/Ashadha 28, 1894 (Saka Era).

The House met in the Assembly Chamber, Vidhana Soudha, at One of the Clock.

MADAM SPEAKER (SMT. K. S. NAGARATHNAMMA) in the Chair.

STARRED QUESTIONS

(to which oral answers were given)

T. A. P. C. M. Societies engaged in Cotton Trade

209. SRI C. N. PATIL (Lingsugur).—

Will the Minister for Co-operation be pleased to state :—

(*a*) the number of Taluk Agricultural Produce Co-operative Marketing Societies which are active and inactive throughout the State (Districtwise) and of which the number of Marketing Societies (T. A. P. C. M. S.) engaged in cotton trade (engaged by Cotton Corporation of India);

(*b*) the total quantity of cotton purchased from the concerned societies on behalf of the Cotton Corporation of India and its value in rupees ?

SRI A. SHANKARA ALVA (Minister for Co-operation).—

(*a*) Active T. A. P. C. M. Ss.	...	176
Inactive T. A. P. C. M. Ss.	...	1

(Districtwise statement is appended)

45 societies are engaged in cotton trade of which 8 T. A. P. C. M. Ss. are engaged by the Cotton Corporation of India.

(SRI A SHANKARA ALVA)

(*b*) 79,142 quintals up to 31st May, 1972 value being Rs. 1,85,74,937.

STATEMENT

Sl. No.	Name of the District		No. of Marketing Societies that are	
			Active	Inactive
1	Bangalore	...	11	...
2	Tumkur	...	10	...
3	Kolar	...	11	...
4	Chitradurga	...	9	...
5	Shimoga	...	9	...
6	Mysore	...	11	...
7	Hassan	...	8	...
8	Coorg	...	3	...
9	Chickmagalur	...	7	...
10	Mandya	...	7	...
11	South Kanara	...	8	...
12	Gulbarga	...	9	1
13	Raichur	...	9	...
14	Bidar	...	5	...
15	Bellary	...	8	...
16	Dharwar	...	19	...
17	Belgaum	...	10	...
18	Bijapur	...	11	...
19	North Kanara	...	11	...
	Total	...	176	1

ಶ್ರೀ ಸಿ. ಎನ್. ಪಾಟೀಲ್.—ಭಾರತದ ಅರಳೆ ಸಂಸ್ಥೆಯ ಪರವಾಗಿ ಇರುವ ಮಾರ್ಕೆಟಿಂಗ್ ಸೊಸೈಟಿಗಳು ಪ್ರತಿಯೊಂದು ಜಿಲ್ಲೆಯಲ್ಲೂ ಅರಳೆಯನ್ನು ಖರೀದಿ ಮಾಡಿದ್ದಾರೆ. ಅವರು ಖರೀದಿ ಮಾಡಿರುವ ಒಟ್ಟು ಅರಳೆ ಎಷ್ಟು ಮತ್ತು ಹಣ ಎಷ್ಟು ಎನ್ನುವುದನ್ನು ತಿಳಿಸುತ್ತೀರಾ ? ಮತ್ತು ಆ ಸೊಸೈಟಿಗಳು ಯಾವುವು ?

ಶ್ರೀ ಎ. ಶಂಕರ ಆಳ್ವ.—ಭಾರತದ ಅರಳೆ ಸಂಸ್ಥೆಯ ಪರವಾಗಿ ಇರುವ ತಾಲ್ಲೂಕು ವ್ಯವಸಾಯೋತ್ಪನ್ನ ಸಹಕಾರಿ ಮಾರುಕಟ್ಟೆ ಸಂಘಗಳು 79,142 ಕ್ವಿಂಟಾಲ್‌ಗಳಷ್ಟು ಅರಳೆ

ಯನ್ನು ಕರೆಕ್ಟ್ ಮಾಡಿದ್ದಾರೆ. ಅದರ ಮೌಲ್ಯ 1,85,74,937-00 ರೂಪಾಯಿಗಳು. ಆ ಸಂಸ್ಥೆಗಳು ಯಾವುವು ಎಂದರೆ ರಾಯಚೂರು, ಗದಗ್, ರೋಣ್, ಹುಬ್ಬಳ್ಳಿ, ಕುಂದಗೋಳ್, ಯಾದಗಿರಿ ಮತ್ತು ಬಳ್ಳಾರಿಯಲ್ಲಿರುವುವು.

ಶ್ರೀ ಸಿ. ಎನ್. ಪಾಟೀಲ್.—ರಾಯಚೂರು ಪ್ರಾಪರ್‌ನಲ್ಲಿ ತಾಲ್ಲೂಕು ಮಾರ್ಕೆಟಿಂಗ್ ಕೋಆಪರೇಟೀವ್ ಸೊಸೈಟಿ ಒಂದಕ್ಕೆ ಮಾತ್ರ ಏಜೆನ್ಸಿ ಕೊಟ್ಟಿದ್ದಾರೆ. ಆ ಜಿಲ್ಲೆ ಹತ್ತಿ ಬೆಳೆಯುವ ಪ್ರದೇಶವಾದ್ದರಿಂದ ಉಳಿದ ತಾಲ್ಲೂಕುಗಳಿಗೆ ಏತಕ್ಕೆ ಏಜನ್ಸಿ ಕೊಡಲಿಲ್ಲ ?

ಶ್ರೀ ಎ. ಶಂಕರ ಆಳ್ವ.—ಒಟ್ಟು 45 ಸೊಸೈಟಿಗಳು ಈ ಅರಳೆ ವ್ಯಾಪಾರದ ವ್ಯವಹಾರದಲ್ಲಿ ತೊಡಗಿವೆ. ಅದರಲ್ಲಿ 8 ಸೊಸೈಟಿಗಳಲ್ಲಿ ಮಾತ್ರ ಕಾಟನ್ ಕಾರ್ಪೊರೇಷನ್ ಮುಖಾಂತರ ಖರೀದಿ ಮಾಡುತ್ತಾರೆ. ಒಟ್ಟು 45 ಸೊಸೈಟಿಗಳು 5 ಕೋಟಿ 19 ಲಕ್ಷ 7 ಸಾವಿರ ಚಿಲ್ಲರೆಯಷ್ಟು ಅರಳೆ ಖರೀದಿ ಮಾಡಿವೆ.

ಶ್ರೀ ಬಾಪೂಗೌಡ ರಾಯಪ್ಪ.—ರಾಯಚೂರು, ಗುಲ್ಬರ್ಗ ಮತ್ತು ಧಾರವಾರ ಈ ಮೂರು ಜಿಲ್ಲೆಗಳಲ್ಲಿ ವಿಶೇಷವಾಗಿ ಹತ್ತಿ ಬೆಳೆಯುತ್ತಿದ್ದಾರೆ. ಅದರೆ ಕಾಟನ್ ಕಾರ್ಪೊರೇಷನ್ ಮುಖಾಂತರ ಸೊಸೈಟಿಯವರು ಖರೀದಿ ಮಾಡಿರುವುದು 1,85,74,937-00 ರೂ. ಗಳು ಇನ್ನೂ ಬೇಕಾದಷ್ಟು ಹತ್ತಿ ಉಳಿದಿದೆ. ಆದುದರಿಂದ ಕಾಟನ್ ಕಾರ್ಪೊರೇಷನ್‌ನವರು ಹೆಚ್ಚು ಪ್ರಮಾಣದಲ್ಲಿ ಹತ್ತಿಯನ್ನು ಖರೀದಿ ಮಾಡುವುದಕ್ಕೆ ವ್ಯವಸ್ಥೆಯನ್ನು ಏತಕ್ಕೆ ಮಾಡಲಿಲ್ಲಾ ?

ಶ್ರೀ ಎ. ಶಂಕರ ಆಳ್ವ.—ಅವರು ಈಸಾರಿ ಪ್ರಥಮವಾಗಿ ಶುರು ಮಾಡಿದ್ದಾರೆ. ಅವರು ಶುರು ಮಾಡಿರುವುದು ಸ್ವಲ್ಪ ತಡವಾಗಿದೆ. ಅವರು 23-6-1972 ರಲ್ಲಿ ಒಂದು ಸಭೆ ಸೇರಿ ಇನ್ನು ಮುಂದಕ್ಕೆ ಎಲ್ಲಾ ಸೊಸೈಟಿಗಳ ಮುಖಾಂತರ ಹತ್ತಿಯನ್ನು ಖರೀದಿ ಮಾಡುತ್ತೇವೆ ಎಂದು ಭರವಸೆ ಕೊಟ್ಟಿದ್ದಾರೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಸ್ವಾಮಿ, 45 ಸಂಘಗಳು ಅರಳೆ ವ್ಯಾಪಾರದಲ್ಲಿ ತೊಡಗಿದ್ದು ಅವುಗಳ ಪೈಕಿ 8 ತಾಲ್ಲೂಕು ವ್ಯವಸಾಯೋತ್ಪನ್ನ ಸಹಕಾರಿ ಮಾರುಕಟ್ಟೆ ಸಂಘಗಳಿಗೆ ಕೇಂದ್ರ ಸರ್ಕಾರದವರು ಮಾನ್ಯತೆ ಕೊಟ್ಟಿದ್ದಾರೆ ಮತ್ತು ಅದರಲ್ಲಿ ವ್ಯಾಪಾರ ಆಗುತ್ತದೆ ಎಂದು ಹೇಳಿದಿರಿ. ಆದರೆ ಎಲ್ಲಾ ಅರಳೆಯನ್ನೂ ಅವರೇ ಏತಕ್ಕೆ ತೆಗೆದುಕೊಳ್ಳಬಾರದು ?

ಶ್ರೀ ಎ. ಶಂಕರ ಆಳ್ವ.—ಕಾಟನ್ ಕಾರ್ಪೊರೇಷನ್ನಿನವರು 8 ಸೊಸೈಟಿಗಳ ಮುಖಾಂತರ ಅವರಾಗಿಯೇ ಬಂದು ಖರೀದಿ ಮಾಡಿದ್ದಾರೆ. ಆರೀತಿ ಅವರು ಖರೀಧಿ ಮಾಡಿರುವುದು 79,142 ಕ್ವಿಂಟಾಲ್‌ಗಳು, ಅದರ ಮೌಲ್ಯ 1,85,74,937-00 ರೂ. ಗಳು.

ಶ್ರೀ ಸಿ. ಎನ್. ಪಾಟೀಲ್.—ನಮ್ಮ ಕೋಆಪರೇಟೀವ್ ರಿಜಿಸ್ಟ್ರಾರ್‌ರವರು ಒಂದು ಸರ್ಕ್ಯುಲರ್‌ನ್ನು ಇಷ್ಯೂ ಮಾಡಿದ್ದಾರೆ ಎಂದು ತಿಳಿದು ಬಂದಿದೆ. ಅದು ಏನೆಂದರೆ ಉಳಿದಂಥ ಅರಳೆಯನ್ನು ಕಾಟನ್ ಕಾರ್ಪೊರೇಷನ್‌ನವರು ಮಾನ್ಯತೆ ಮಾಡಿರುವ ಕಮಿಷನ್ ಏಜನ್ಸಿ ಮುಖಾಂತರ ತೆಗೆದುಕೊಳ್ಳಬೇಕು, ಬೇರೆ ಯಾರಿಂದಲೂ ತೆಗೆದುಕೊಳ್ಳಕೂಡದು ಎಂದು ಇದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಶಂಕರ ಆಳ್ವ.—ಆ ಸರ್ಕ್ಯುಲರ್ ಕೊಟ್ಟಿರುವುದು ನನ್ನ ಗಮನಕ್ಕೆ ಬಂದಿಲ್ಲ.

SRI B. B. SAYANAK.—There are 176 active T.A.P.C.M.Ss in the State. Out of these how many are running in profit and how many are running in loss ?

SRI A. SHANKAR ALVA.—I cannot give the figures off hand.

ಶ್ರೀ ಎನ್. ಎಸ್. ಗುರುಸಿದ್ದಪ್ಪ.—45 ಸಂಘಗಳಲ್ಲಿ ಈ ಅರಳೆ ವ್ಯಾಪಾರ ನಡೆಯುತ್ತಾ ಇದೆ ಎಂದು ಹೇಳಿದ್ದೀರಿ. ಅದರಲ್ಲಿ ಎಲ್ಲಾ ಸೊಸೈಟಿಗಳೂ ಸೇರಿ ಎಷ್ಟು ಕ್ವಿಂಟಾಲ್ ಅರಳೆಯನ್ನು ಖರೀದಿ ಮಾಡಿದ್ದಾರೆ ಎನ್ನುವ ಅಂಕಿಸಂಖ್ಯೆಗಳನ್ನು ಕೊಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಎಲ್ಲಾ 45 ಸೊಸೈಟಿಗಳೂ ಸೇರಿ ಒಟ್ಟು 2,24,242 ಕ್ವಿಂಟಾಲ್‌ನಷ್ಟು ಖರೀದಿ ಮಾಡಿದ್ದಾರೆ. ಆದರಲ್ಲಿ ಕಾರ್ಪೊರೇಷನ್ ಮಾನ್ಯತೆ ಪಡೆದಿರುವ 8 ಸೊಸೈಟಿಗಳಲ್ಲಿ 79,142 ಕ್ವಿಂಟಾಲ್‌ಗಳಷ್ಟು ಅರಳೆ ಖರೀದಿಯಾಗಿದೆ. ಅದರ ಮೌಲ್ಯ 1,85,74,937-00 ರೂಪಾಯಿಗಳು.

ಶ್ರೀ ಶರಣಪ್ಪ.—ಕಾಟನ್ ಕಾರ್ಪೊರೇಷನ್ ಮಾನ್ಯತೆ ಪಡೆದಿರುವ ಮಾರ್ಕೆಟಿಂಗ್ ಸೊಸೈಟಿಗಳು ಏನು ಅರಳೆಯನ್ನು ಖರೀದಿ ಮಾಡುತ್ತಿದ್ದಾರೋ ಅವರಿಗೆ ಫೈನಾನ್ಸ್ ಯಾರು ಕೊಡುತ್ತಾರೆ ?

ಶ್ರೀ ಎ. ಶಂಕರ ಆಳ್ವ.—ಕಾಟನ್ ಕಾರ್ಪೊರೇಷನ್ ಮಾನ್ಯತೆ ಪಡೆದಿರುವ 8 ಸೊಸೈಟಿಗಳು ಅವರೇನೇ ಪ್ರತಿವರ್ಷವೂ ಬಂದು ದುಡ್ಡು ಹಾಕಿ ಅರಳೆಯನ್ನು ಪಡೆದುಕೊಳ್ಳುತ್ತಿದ್ದಾರೆ. ಆರೀತಿ ಅವರು ಒಪ್ಪಂದ ಮಾಡಿಕೊಂಡಿದ್ದಾರೆ.

Diploma holder (Local Candidates) working in Upper Krishna Project

278. Sri BAPU GOWDA RAYAPPA (Shahapur).—

Will the Minister for Public Works and Electricity be pleased to state :—

(a) the number of diploma holders working on daily wage basis and as local candidates in Upper Krishna Prjoect ;

(b) since when they are working there ;

(c) when their services will be regularised and made permanent ?

Sri H. M. CHANNABASAPPA (Minister for Public Works).—

(a) (i) Daily wage basis	...	14
(ii) Local candidates	...	13

(b) (i) Diploma holders on daily wages are working for the period ranging from 1 to 2 years.

(ii) Diploma holders as local candidates are working for 10 to 12 years.

(c) (i) Diploma holders on daily wages are not eligible for regularisation of their services under the existing orders.

(ii) The services of Diploma holders working as local candidates are being regularised by the Chief Engineer (C & B).

ಶ್ರೀ ಬಾಪೂಗೌಡ ರಾಯಪ್ಪ.—ಡೈಲಿ ವೇಜಸ್ ಮೇಲೆ ಕೆಲಸ ಮಾಡುವ ಡಿಪ್ಲೊಮಾದಾರರು ಸಾವಿರಾರು ಜನರಿದ್ದಾರೆ. ಅಂಥವರ ಸರ್ವಿಸ್ ಯಾವಾಗ ರೆಗ್ಯುಲರೈಸ್ ಮಾಡುತ್ತೀರಿ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಡೈಲಿ ವೇಜಸ್ ಮೇಲೆ ಕೆಲಸ ಮಾಡುತ್ತಿರುವವರು ಮಾನ್ಯ ಸದಸ್ಯರು ಹೇಳುವಂತೆ ಸಾವಿರಾರು ಜನರಿಲ್ಲ. 14 ಜನ ಮಾತ್ರ ಇರತಕ್ಕುದು.

ಶ್ರೀ ಬಾಪೂ ಗೌಡ ರಾಯಪ್ಪ.—ಸ್ಥಳೀಯ ಅಭ್ಯರ್ಥಿಗಳಾಗಿ 10–12 ವರ್ಷದಿಂದ ಡಿಪ್ಲೊಮಾದಾರರು ಕೆಲಸ ಮಾಡುತ್ತಿದ್ದಾರೆ. ಅವರ ಸರ್ವಿಸ್ ಮತ್ತು ಪೇಸ್ಕೇಲ್ ರೆಗ್ಯುಲರೈಸ್ ಮಾಡಿಲ್ಲ, ಮುಂದೆ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಹಾಗೆ ರೆಗ್ಯುಲರೈಸ್ ಮಾಡುವ ಕಾಲಕ್ಕೆ ಅವರ ಪೇಸ್ಕೇಲ್, ಸರ್ವಿಸ್ ಮುಂತಾದುವನ್ನೆಲ್ಲ ಗಣನೆಗೆ ತೆಗೆದುಕೊಳ್ಳಲಾಗುತ್ತದೆಯೇ ?

† Indicates that the remarks or speeches have not been revised by the member concerned.

ಶ್ರೀ ಎಚ್. ಎಂ. ಚನ್ನಬಸಪ್ಪ.—13 ಜನರ ಪೈಕಿ 11 ಜನರ ಸರ್ವಿಸ್ ರೆಗ್ಯುಲರೈಸಾಗಿದೆ ಒಬ್ಬರಿಗೆ ವಯಸ್ಸಾಗಿರುವುದರಿಂದ ರೆಗ್ಯುಲರೈಸ್ ಮಾಡುವುದಕ್ಕೆ ಸಾಧ್ಯವಿಲ್ಲ. ಇನ್ನೊಬ್ಬರ ವಿಷಯ ಪರಿಶೀಲನೆಯಲ್ಲಿದೆ.

ಶ್ರೀ ಬಾಪೂ ಗೌಡ ರಾಯಪ್ಪ.—ಡೈಲಿ ವೇಜಸ್ ಮೇಲೆ ಕೆಲಸ ಮಾಡತಕ್ಕ 14 ಮಂದಿಗೆ ಎಷ್ಟು ದಿವಸಗಳಲ್ಲಿ ರೆಗ್ಯುಲರೈಸ್ ಮಾಡುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರ ಸರ್ವಿಸ್ ರೆಗ್ಯುಲರೈಸ್ ಮಾಡುವುದಕ್ಕೆ ಸಾಧ್ಯವಿಲ್ಲ.

Sri B. B. SAYANAK.—May I know how many rupees you are paying as daily wages ?

Sri H. M. CHANNABASAPPA.—That depends upon the locality and nature of work, and I cannot tell you what wages are being paid.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಸರ್ಕಾರದವರು ಸುಮಾರು ಏಳು ಸಾವಿರ ಜನ ಸ್ಥಳೀಯ ಅಭ್ಯರ್ಥಿಗಳನ್ನು ರೆಗ್ಯುಲರೈಸ್ ಮಾಡಿರುವಾಗ 12 ವರ್ಷ ಕಾಲ ಕೆಲಸ ಮಾಡಿರುವ 13ಜನ ಡಿಪ್ಲೊಮಾದಾರರನ್ನು ಹೇಗೆ ರೆಗ್ಯುಲರೈಸ್ ಮಾಡಲಿಲ್ಲ ಎಂದು ಹೇಳುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—13 ಜನರೇನಿದ್ದಾರೆ, ಅವರ ಪೈಕಿ 11 ಜನರನ್ನು ರೆಗ್ಯುಲರೈಸ್ ಮಾಡಿದ್ದೇವೆ. ಅವರ ಸರ್ವಿಸ್ ಯಾವತ್ತಿನಿಂದ ಪ್ರಾರಂಭ ಮಾಡಿದರು ಅವತ್ತಿನಿಂದ ಲೆಕ್ಕಕ್ಕೆ ತೆಗೆದುಕೊಳ್ಳುತ್ತೇವೆ. ಇನ್ನಿಬ್ಬರ ಪೈಕಿ ನಾನು ಆಗಲೇ ಹೇಳಿದಂತೆ ಒಬ್ಬರದು ಏಜ್ ಬಾರ್ ಆಗಿರುವುದರಿಂದ ಅವರನ್ನು ರೆಗ್ಯುಲರೈಸ್ ಮಾಡುವುದಕ್ಕಾಗುವುದಿಲ್ಲ. ಇನ್ನೊಬ್ಬರ ವಿಷಯ ಪರಿಶೀಲನೆಯಲ್ಲಿದೆ.

ಶ್ರೀ ಬಾಪೂ ಗೌಡ ರಾಯಪ್ಪ.—10—12 ವರ್ಷಕಾಲ ಲೋಕಲ್ ಕ್ಯಾಂಡಿಡೇಟಾಗಿ ಕೆಲಸ ಮಾಡಿದ್ದರೂ ವಯಸ್ಸಾಗಿದೆ ಎನ್ನುವ ಕಾರಣದಿಂದ ರೆಗ್ಯುಲರೈಸ್ ಮಾಡುವುದಕ್ಕೆ ಆಗುವುದಿಲ್ಲವೆಂದರೆ ಮುಂದೆ ಪರಿಸ್ಥಿತಿ ಏನಾಗುತ್ತದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರು ಸರ್ವಿಸ್ ಪ್ರಾರಂಭ ಮಾಡಿದಾಗ ಯಾವ ವಯಸ್ಸಿರಬೇಕಾಗಿತ್ತೋ ಆ ವಯಸ್ಸು ಇದ್ದರೆ ಮಾತ್ರ ರೆಗ್ಯುಲರೈಸ್ ಮಾಡುವುದಕ್ಕೆ ಅವಕಾಶವಾಗುತ್ತದೆ, ಇಲ್ಲದೆ ಇದ್ದರೆ ಇಲ್ಲ.

Industrial Loans Granted in Arsikere Taluk

311. Sri H. S. SIDDAPPA (Arsikere).—

Will the Minister for Industries be pleased to state :—

(*a*) the number of industrial loans granted in Arsikere Taluk, name, address and the amount granted together with the name of the industry may be furnished (both by Government and the Industrial Bank since 1967) ;

(*b*) the number of defaulters and the amounts defaulted ?

Sri S. M. KRISHNA (Minister for Industries).—

(*a*) *Vide* Statements appended.

(*b*) 17. Rs. 79,430-44.

(SRI S. M. KRISHNA)

STATEMENT—I

List of Industrialists of Arsikere Taluk of whom loans have been sanctioned under the Mysore State aid to Industries Act, 1959, as on 31-5-1972 (from 1-4-1967 to end of 31-5-1972).

Sl. No.	Name of the Industrialist	Amount Sanctioned	Amount released with date	Amount Defaulted: Principal	Amount Defaulted: Interest	Instalments fall due on	Name of the Industry to which loan is granted	Remarks
1	2	3	4	5	6	7	8	9
	Sriyuths :							
1	S. Nanjappa. Proprietor, Laxmi Oil Mills, Arsikere.	9,500	5,000 27-11-1968 4,500 24-2-1970	594.00	2,523.29	24-2-1972	Oil Mills	(a)
2	G. Channabasappa, M/s. Siddeswara Coir Industry, Arsikere.	24,999	24,999 14-8-1968	1,562-50 1,562-50	813.53 769.93	14-8-1971 14-2-1972	Coir Industry	(b)
3	S. Channe Gowda, Sri Prasanna Mallikarjuna Coir Industry, Sosivalue Village, Arsikere Taluk.	24,500	13,000 28-4-1969 11,500 4-6-1969	...	...	4-6-1972	do	(c)
4	Dandur Math Basaviah, Arsikere.	24,999	15,000 1-6-1969	...	...	...	Desicated Copra	(d)

Remarks :—(a) In spite of Demand notices issued, the loanee has not paid the 1st instalment.

(b) Reminders have been issued to repay the loan.

(c) The loanee is promptly paying the instalments, 3rd instalment has fallen due on 4-6-72 but challans have not yet been received for having remitted the loan amount.

(d) 1st instalment of sanctioned loan amount has been released for construction of factory building. But the loanee has not utilised the amount for the purpose for which it was sanctioned. Action has been taken to terminate the State-aid-loan and to recover the entire amount of Rs. 15,000.

(SRI S. M. KRISHNA)

STATEMENT—II

HASSAN DISTRICT INDUSTRIAL CO-OPERATIVE BANK LIMITED, HASSAN

Statement showing the disbursement of Loan–Arsikere Taluk (Hassan District)

Sl. No.	Name	Amount disbursed	Date of disbursement	Amount received	Balance outstanding as on 31-5-72.	Overdue	Remarks
1	2	3	4	5	6	7	8
	SSI Loan :—						
1	J. Shanmukhappa, Arsikere	5,000-00	2-6-66 29-6-66	5,000-00	...	...	
2	Arsikere Taluk Coir Industrial Co-operative Society, Arsikere.	10,000-00	12-5-66 24-6-66	5,365-00	4,635-00	4,635-00	
3	Gejje & Bakket makers' craft Co-operative Society, Malladevihalli.	4,000-00	23-5-69 29-6-71	749-35	3,250-65	2,500-00	
	Goldsmiths Loan-Societies :—						
1	Arsikere Taluk Viswkarma Kushala Kaigarika Sahakara Sangha, Arsikere.	40,000-00	20-10-64 13-8-65	5,715-00	34,285-00	9,430-00	
	Working Capital Loan :—						
1	M. N. Basappa, Arsikere	7,000-00	2-12-71	...	7,000-00	...	
2	B. R. Thimmappa, Gandasi	10,000-00	9-5-70	10,000-00	...	...	
	Working Capital Loan :—						
1	K. Murigappa, Arsikere	10,000-00	28-9-65	6,750-00	3,250-00	3,250-00	
2	J. Shanmukhappa, Arsikere	10,000-00	23-9-66	10,000-00	...	...	
3	Arsikere Taluk Coir Industrial Co-operative Society Limited, Arsikere.	5,000-00	28-12-66	5,000-00	...	...	
4	G. Channabasappa, Arsikere	10,000-00	28-2-67	10,000-00	...	...	
5	B. T. Marulusiddappa, Arsikere.	2,000-00	4-1-68	2,000-00	...	...	
6	G. Channabasappa, Arsikere.	10,000-00	2-4-68	10,000-00	...	...	
7	Arsikere Taluk Coir Industrial C. S., Arsikere.	10,000-00	5-4-68	...	10,000-00	10,000-00	
8	B. R. Thimmappa, Gandasi	10,000-00	7-2-69	10,000-00	...	...	
9	B. T. Marulusiddappa, Arsikere.	2,500-00	3-4-69	2,500-00	...	...	
10	S. Channe Gowda, Arsikere	10,000-00	3-1-70	2,927-50	7,072-50	7,072-50	
11	M. N. Basappa, Arsikere	6,000-00	23-1-70	6,000-00	...	...	
12	G. Channabasappa, Arsikere	10,000-00	16-2-72	...	10,000-00	10,000-00	

(SRI S. M. KRISHNA)

1	2	3	4	5	6	7	8
13	B. T. Marulusiddappa, Arsikere.	5,000-00	29-5-70	5,000-00	...	...	
14	Viswakarma Kaigarika, S. S. Limited, Arsikere.	5,000-00	23-9-70	...	5,000-00	5,000-00	
15	M. N. Basappa, Arsikere	6,000-00	10-11-70	6,000-00	...	...	
16	B. T. Marulasiddappa, Arsikere.	5,000-00	7-5-71	...	5,000-00	5,000-00	
	Three Tier System Loan :—						
1	Taluk Industrial Co-operative Society, Arsikere.	37,180-57	1-7-71 to 31-5-72	13,558-57	23,622-00	...	
	TICS Loan—District :—						
1	Thimmaiah, Arsikere	10,000-00	10-2-70	7,750-00	2,250-00	2,250-00	
2	Harnally Papanna, Arsikere	5,000-00	16-9-70	1,717-82	3,282-18	3,282-18	
3	N. Govindaiah, Arsikere	5,000-00	3-12-70	2,377-65	2,622-35	2,622-35	
4	S. N. Appaiah, Arsikere	5, 00-00	26-12-70	500-00	4,500-00	4,500-00	
5	Janaki Bai, Arsikere	2,000-00	21-4-71	1,937-34	62-66	62-66	
6	A. Thangaraj, Arsikere	2,000-00	21-4-71	...	2,000-00	2,000-00	
	Total ...	2,58,680-57		1,30,848-23	1,27,832-34	71,604-69	

STATEMENT-III

HASSAN DISTRICT INDUSTRIAL CO-OPERATIVE BANK LIMITED, HASSAN

Disbursement of Displaced Goldsmiths Loan (Arsikere Taluk, Hassan District)

Sl. No.	Name	L. A. No.	Amount disbursed Rs.	Date of disbursement		Remarks
				I instalment	II instalment	
1	2	3	4	5	6	7
	Sriyuths—					
1	Basavachari, Gandasi	22/64-65	400-00	12-2-1964	10-9-1965	...
2	S. V. Divakar, J. C. Puram	23/64-65	500-00	12-2-1964	16-8-1965	...
3	Yajaman Siddappachariya, Banavara	24/64-65	400-00	15-12-1964	2-11-1965	...
4	H. R. Kalachari, Hundiganahalu	25/64-65	400-00	12-12-1964	15-5-1965	...
5	Thimmachari, Hundiganahalu	26/64-65	300-00	12-12-1964	21-5-1965	...
6	Murthachari, Arsikere	28/64-65	350-00	12-12-1964	1-7-1965	...
7	K. S. Deverachari, Kittanakere	29/64-65	350-00	12-12-1964	19-5-1965	...
8	K. Arjunachari, Javagal	30/64-65	350-00	12-12-1964	19-5-1965	...
9	M. Narayanachar, Arsikere	31/64-65	350-00	12-12-1964	1-7-1965	...
10	Dasachari, Doddenhalli	32/64-65	350-00	12-12-1964	22-6-1966	...
11	L. Mallachari, Arsikere	33/64-65	250-00	12-12-1964	1-7-1965	...
12	T. M. Ningappachari, Arsikere	34/64-65	350-00	12-12-1964	10-8-1965	...
13	Eswarachari, Jayachamarajapura	35/64-65	350-00	12-12-1964	18-8-1965	...
14	Narayanachari, Arsikere	86/64-65	350-00	12-12-1964	11-6-1965	...
15	Nanjachari, Chikklingahalli	36/64-65	350-00	12-12-1964	18-5-1965	...
16	Chikkaveerabhadrachari, Chikkur	37/64-65	350-00	12-12-1964	11-6-1965	...
17	A. Govindachar, Arsikere	87/64-65	400-00	15-12-1964	15-6-1965	...
18	H. A. Rangachar, Chagachagere	102/64-65	350-00	23-12-1964	2-11-1965	...
		Total ...	6,500-00			

(SRI S. M. KRISHNA)

Industrial Loans sanctioned by Mysore State Financial Corporation

ARSIKERE TALUK

(a) *No. of Loans sanctioned...* *Two*

Sl. No.	Type of Industry	Amount Sanctioned	If default amount defaulted
1	High density Polythene bags manufacture.	80,000	Nil
2	Transport Industry	34,000	Nil
	Total amount assisted	1,14,000	

(b) *Name of defaulters and the amount defaulted... Nil.*

Sri H. S. SIDDAPPA.—In Statement—I, under Remarks (d), it is stated that the amount given to the party has been misutilised. I want to know what action Government propose to take for the utilisation of the industrial loans ?

† Sri S. M. KRISHNA.—We will certainly take action to recover whatever amounts are advanced as loan.

Sri H. S. SIDDAPPA.—May I say that these industrial loans have been misutilised because the Departmental officers are not vigilant over these industrial loans ?

Sri S. M. KRISHNA.—I cannot say that all the persons who have taken the loan, have misutilised the funds or the loans that have been advanced by the Industrial Bank, Financial Corporations and other agencies. But certainly it would be the endeavour of the Departmental Officers to see that moneys are utilised for the purpose for which the loans have been granted.

Sri H. S. SIDDAPPA.—It is stated in the reply that Sri Dandur Math Basaviah of Arsikere has misutilised the funds advanced to hin. May I take it for granted that no action has been taken on him just because he is your party man ?

Sri S. M. KRISHNA.—When applications are made and at the time of recovery of the loans, political identity will not be considered. We will recover the amount.

Alienation of lands granted to political sufferers in Survey No. 4 of Rangenahalli

234. Sri HANJI SHIVANNA (Tarikere).—

Will the Minister for Revenue be pleased to state :—

(*a*) the number of political sufferers to whom the Government had granted lands in Survey No. 4 of Rangenahalli in Tarikere Taluk;

(*b*) whether while granting the lands, a condition was stipulated that these lands should not be alienated for 14 years ;

(*c*) the number of persons who have sold these lands and to whom ;

(*d*) whether these are not irrigated lands ;

(*e*) if the sale of these lands is illegal, whether they would cancel the sale and think of taking possession of those lands ?

Sri N. HUTCHAMASTHY GOWDA (Minister for Revenue).—

(*a*) 26 Persons.

(*b*) Yes.

(*c*) *Vide* list appended.

(*d*) Yes.

(*e*) This is under consideration of the Government.

LIST

The names of the persons granted land	The names of persons to whom the land is alienated
Sriyuths.—	
(1) A. Subramanya Setty	Annegowda-bin-Channegowda
(2) T. Krishnoji Rao	Thammegowda-bin-Boregowda
(3) Ramaiah Setty	Rangamma Kondi Pariyappa
(4) K. G. Veeranna	Y. R. Rudrappa-bin-Revanna
(5) C. G. Thimmaiah	Hyderman Kaka-bin-Punjappa
(6) Y. Yelloji Rao	B. D. O., Tarikere
(7) T. A. Shivalingaiah	Ghananeswar-bin-Vitala Rao
(8) Neelakantappa	B. D. O., Tarikere
(9) T. D. Maharudraiah	N. Kodanda Ramu
(10) S. Rangaiah	N. Kumaraswamy
(11) A. B. Siddappa	B. Ramaiah-bin-Hanumanthappa
(12) H. N. Shivaiahswamy	Thimmanna-bin-Thimmegowda
(13) N. S. Puttarudraiah	Sarojamma-bin-Shivalingaiah

ಶ್ರೀ ಹಂಜಿ ಶಿವಣ್ಣ.—ರಾಜಕೀಯ ಸಂತ್ರಸ್ತರಿಗೆ 26 ಜನಗಳಿಗೆ ಜಮೀನು ಕೊಟಿದ್ದಾರೆ. ಜಮೀನು ಕೊಡುವಾಗ 15 ವರ್ಷ ಕಾಲ ಪರಭಾರೆ ಮಾಡಬಾರದು ಎನ್ನುವ ನಿರ್ಬಂಧವಿದ್ದರೂ ಪರಭಾರೆ ಮಾಡಿದ್ದಾರೆ. ಕೆಲವರು ಪುಢಾರಿಗಳು ರಾಜಕೀಯ ಸಂತ್ರಸ್ತರೆಂದು ನೀರಾವರಿ ಜಮೀನನ್ನು ಕೊಡಿಸಿಕೊಟ್ಟು ಈಚೆಗೆ ಅವರೇ ಲಪಟಾಯಿಸಿದ್ದಾರೆ. ಇಂಥ ಜಮೀನುಗಳನ್ನು ಸರ್ಕಾರಕ್ಕಾದರೂ ತೆಗೆದುಕೊಳ್ಳುವುದಕ್ಕೆ ಅಥವಾ ಸಂಬಂದಪಟ್ಟ ಪಾರ್ಟಿಗಳಿಗೆ ಕೊಡುಸುವುದಕ್ಕೆ ಸಾಧ್ಯವೇ ?

† ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಪರಭಾರೆ ಮಾಡಿರತಕ್ಕದ್ದು ವ್ಯಕ್ತವಾಗಿರುವ ಸಂದರ್ಭಗಳಲ್ಲಿ ಅವರ ಮೇಲೆ ಕ್ರಮ ಕೈಕೊಂಡು ಆ ಜಮೀನಗಳನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಸರ್ಕಾರದವರು ಈಗಾಗಲೇ ಕಾರ್ಯಕ್ರಮ ಕೈಕೊಂಡಿದ್ದಾರೆಂದು ಉತ್ತರದಲ್ಲಿ ಹೇಳಿದ್ದೇನೆ.

ಶ್ರೀ ಹಂಜಿ ಶಿವಣ್ಣ.—ಸಂಬಂಧಪಟ್ಟ ಅಧಿಕಾರಿಗಳಿಗೆ ಕೂಡಲೇ 'ಅದೇಶ ಕೊಡುತ್ತೀರಾ ಸ್ವಾಮಿ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಯಾರು ಯಾರಿಗೆ ಈ 13 ಜನ ಪರಭಾರ ಮಾಡಿದ್ದಾರೆ ಎನ್ನುವ ಪಟ್ಟಿಯನ್ನು ಕೊಟ್ಟಿದ್ದೇನೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಕೂಡಲೇ ಕ್ರಮ ಕೈಕೊಳ್ಳಬೇಕೆಂದು ಆದೇಶ ಕೊಡುತ್ತೇನೆ.

Sri B. B. SAYANAK.—26 Political sufferers have been given land. Out of 26 persons, 13 have sold the land. I want to know whether Government are going to confiscate the land immediately ?

Sri N. HUTCHAMASTHY GOWDA.—I have already answered that question.

Electrification of Villages in Haveri Taluk

356. Sri F. S. TAVARE (Haveri).—

Will the Minister for Public Works and Electricity be pleased to state :—

(*a*) the number of villages that are electrified in Haveri Taluk together with the number electrified for irrigational purpose; the number for which service connections were given and the remaining villages yet to be electrified ;

(*b*) whether it has come to their notice that the irrigational and commercial crops, etc., have failed in the villages of this taluk due to non-supply of electricity for 4 to 6 days in a week ?

(*c*) the stage at which the scheme to construct 111 and 33 Kilo watts stations at Haveri and Guttal respectively by M. S. E. B. is pending and the reasons for the delay ;

(*d*) when the remaining village will be electrified ?

Sri H. M. CHANNABASAPPA (Minister for Public Works).—

(*a*) Out of 112 villages in Haveri taluk 49 villages and 6 hamlets have been electrified, of which 33 villages and 6 hamlets under Rural Electrification Programme, 8 villages under 'I P Scheme' and the remaining 8 villages under' service connections'. Of the balance of

63 villages, 32 have been included in the programme for 1972-73, of which 8 have already been electrified.

(*b*) No.

(*c*) The proposal for construction of 110 KV transmission line between Hubli and Haveri is included in the 4th Plan of the Board and the work will be taken up after receipt of the requisite equipment ordered with the suppliers. The proposal for 33 KV Sub-station at Guttal is not included in the current plan of the Board.

(*d*) Supply of electricity to the remaining villages will be arranged in a phased manner, subject to availability of funds.

ಶ್ರೀ ಎಫ್. ಎಸ್. ತಾವರೆ.—(ಆ) ಭಾಗಕ್ಕೆ ಉತ್ತರವಾಗಿ ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ತಿಳಿಸಿದ್ದಾರೆ. ಕಳೆದ ನಾಲ್ಕೆಂಟು ವರ್ಷಗಳಿಂದ ಸ್ಥಳೀಯ ಅಧಿಕಾರಿಗಳಿಗೆ, ಎಕ್ಸಿಕ್ಯೂಟಿವ್ ಇಂಜಿನಿಯರಿಗೆ, ಆರೆಂಟು ದಿವಸ ಕರೆಂಟ್ ಇರುವುದಿಲ್ಲವೆಂದು ಬರೆದು ತಿಳಿಸುತ್ತಿದ್ದೇವೆ. ಚೀಫ್ ಇಂಜಿನಿಯರಿಗೂ ಬರೆದಿರುತ್ತೇವೆ. ಸರಿಪಡಿಸುತ್ತೇವೆಂದು ಅವರು ಹೇಳುತ್ತಾರೆ. ಹಾಗಿದ್ದ ಮೇಲೆ ಸರ್ಕಾರದ ಲಕ್ಷ್ಯಕ್ಕೆ ಬಂದಿಲ್ಲವೆಂದು ಉತ್ತರ ಕೊಟ್ಟಿರುವಾಗ ತಮ್ಮ ಲಕ್ಷ್ಯಕ್ಕೆ ಬರಬೇಕಾದರೆ ಏನು ಮಾಡಬೇಕು ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಯನ್ನು ಅವರೇ ಓದಿದರೆ ಗೊತ್ತಾಗುತ್ತದೆ. ಒಂದು ವಾರದಲ್ಲಿ ಆರು ದಿವಸ ಎಲೆಕ್ಟ್ರಿಸಿಟಿ ಇಲ್ಲವೆಂದರೆ ಎಲೆಕ್ಟ್ರಿಸಿಟಿ ಇಲ್ಲವೇ ಇಲ್ಲ ಎಂದು ಅರ್ಥವಾಗುತ್ತದೆ. ಆ ರೀತಿ ಆಗಿಲ್ಲ. ಎರಡನೆಯದು ವಿದ್ಯುತ್ ಪೂರೈಕೆ ಇಲ್ಲದೆ ಬೆಳೆ ಬಾಳುವ ಫಸಲುಗಳು ಹಾಳಾಗುತ್ತಿವೆ ಎಂದು ಏನು ನಮೂದಿಸಿದ್ದಾರೆ ಅದು ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ನಾನು ಹೇಳಿರುವುದು.

ಶ್ರೀ ಎಫ್. ಎಸ್. ತಾವರೆ.—ಅಲ್ಲಿ ಕಂಬ ಮತ್ತು ತಂತಿ ಇರುತ್ತದೆ. ಆದರೆ ವಾರಗಟ್ಟಲೆ ವಿದ್ಯುಚ್ಛಕ್ತಿ ಸರಬರಾಜು ಇರುವುದಿಲ್ಲ. ಇದಕ್ಕೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೊದಲು ವಾರದಲ್ಲಿ 6 ದಿನಗಳು ವಿದ್ಯುಚ್ಛಕ್ತಿ ಸರಬರಾಜು ಆಗುವುದಿಲ್ಲವೆಂದು ಹೇಳಿದರು. ಈಗ ವಾರದಲ್ಲಿ 7 ದಿನಗಳೂ ಸಹ ಸರಬರಾಜಾಗುತ್ತಿಲ್ಲವೆಂದು ಹೇಳುತ್ತಿದ್ದಾರೆ. ಅದು ಸರಿಯಿಲ್ಲ.

ಶ್ರೀ ಕೆ. ಎಫ್. ಪಾಟೀಲ್.—ಪ್ರತಿದಿನವೂ ಸಹ ಪ್ರತಿ ಗಂಟೆಗೆ ಮತ್ತು ಎರಡು ಗಂಟೆಗೆ ಒಂದು ಸಲ ಕರೆಂಟ್ ಆಫ್ ಆಗುತ್ತಿರುತ್ತದೆ. ಇದನ್ನು ಸರಿಪಡಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾವೇರಿ ತಾಲ್ಲೂಕ್‌ನಲ್ಲಿ ಸ್ವಲ್ಪಮಟ್ಟಿಗೆ ತೊಂದರೆಗಳಾಗುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಅದನ್ನು ಸರಿಪಡಿಸುವುದಕ್ಕೆ ಆಜ್ಞೆ ಮಾಡಿದೆ. ಈಗಾಗಲೇ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ.

ಶ್ರೀ ಎಫ್. ಎಸ್. ತಾವರೆ.—ಗುತ್ತಲದಲ್ಲಿ 33 ಕಿಲೋವಾಟದ ಸ್ಟೇಷನನ್ನು ಕಟ್ಟುವ ವಿಚಾರವು 1969-70 ರ ಬಡ್ಜೆಟ್‌ನೊಳಗೆ ಬಂದಿತ್ತು. ಆದರೆ ಅದನ್ನು ಕಟ್ಟದೆ ಏತಕ್ಕೆ ಕೈಬಿಟ್ಟರೋ ಗೊತ್ತಿಲ್ಲ. ಈಗ ಮತ್ತೆ ಈ ಉಪಕೇಂದ್ರವನ್ನು ಸ್ಥಾಪಿಸುವ ಸಲಹೆ ವಿದ್ಯುಚ್ಛಕ್ತಿ ಮಂಡಲಿಯ ಪ್ರಸಕ್ತ ಯೋಜನೆಯಲ್ಲಿ ಸೇರಿಸಿಲ್ಲ ಎಂದು ಹೇಳಿದ್ದಾರೆ. ಅಂದರೆ ಯಾವಾಗ ಈ ಉಪಕೇಂದ್ರವನ್ನು ಸ್ಥಾಪಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಗುತ್ತಲದಲ್ಲಿ ಒಂದು ಉಪ-ಕೇಂದ್ರವನ್ನು ಸ್ಥಾಪಿಸಬೇಕೆಂದು ನಾನು ಅಲ್ಲಿಗೆ ಹೋಗಿದ್ದಾಗ ಜನರು ತಿಳಿಸಿದ್ದಾರೆ. ಅಲ್ಲಿ ಉಪ-ಕೇಂದ್ರವನ್ನು ಸ್ಥಾಪಿಸುವ ಅವಶ್ಯಕತೆ ಇದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಅದರಂತೆ ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕೆಂದು ಆಜ್ಞೆ ಮಾಡಿದೆ.

ಶ್ರೀ ಕೆ. ಎಫ್. ಪಾಟೀಲ್.—ವಿದ್ಯುಚ್ಛಕ್ತಿಯನ್ನು ಹೊಸದಾಗಿ ಗ್ರಾಮಗಳಿಗೆ ಕೊಡಬೇಕಾದರೆ ಮೇನ್-ಲೈನ್ ಆ ಗ್ರಾಮಕ್ಕೆ ಒಂದೂವರೆ ಮೈಲಿ ದೂರದಲ್ಲಿ ಇರಬೇಕೆಂದು ನಿಯಮ ಇರುವುದು ನಿಜವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದೂವರೆ ಮೈಲಿ ಅಲ್ಲ, ಒಂದೂವರೆ ಕಿಲೋಮೀಟರ್ ದೂರದಲ್ಲಿ ಮೇನ್-ಲೈನ್ ಇರಬೇಕು ಮತ್ತು ವಿದ್ಯುಚ್ಛಕ್ತಿ ಸರಬರಾಜು ಮಾಡುವುದರಿಂದ ಸಾಕಷ್ಟು ಉತ್ಪನ್ನ ಬರುವುದು ನಿಗದಿಯಾದರೆ ಅಂತಹ ಕಡೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುತ್ತೇವೆ.

M.S.R.T.C. and Private Buses Plying from Belgaum to Bangalore

345. Sri B. B. SAYANAK (Belgaum).—

Will the Minister for Labour be pleased to state :—

(*a*) the number of Mysore State Road Transport Corporation buses plying from Belgaum to Bangalore every day ;

(*b*) the number of direct passengers travelling from Belgaum to Bangalore every day ;

(*c*) the number of private buses plying from Belgaum to Banga- every day by night ?

Sri AZEEZ SAIT (Minister for Labour).—

(*a*) One.

(*b*) About 155.

(*c*) Four buses.

Sri B. B. SAYANAK.—May I know why the Government has allowed four private buses to ply from Belgaum to Bangalore, when the route is a nationalised one ?

† Sri AZEEZ SAIT.—The buses are contract carriages which have pucca permits. There is no route demarcation for these buses. They can ply anywhere in the State and according to the pucca permit, they can ply from Belgaum to Bangalore.

Sri B. B. SAYANAK.—What are the names of the buses and of those who run them ?

Sri AZEEZ SAIT.—I want notice.

Sri N. B. SIRDESAI.—The private operators of the Contract Carriages were helpful to the previous Government and are helpful to this Government and so, the Hon. Minister is disinclined to put MSRTC buses on these routes.

Sri AZEEZ SAIT.—I do not know whether the private operators were helpful to the previous Government, but they have not been helpful to the present Government.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಎಂ. ಎಸ್. ಆರ್. ಟಿ. ಸಿ. ಬಸ್‌ಗಳನ್ನು ರಾತ್ರಿ ವೇಳೆಯಲ್ಲಿ ದೂರದ ಸ್ಥಳಗಳಿಗೆ ಏನು ಈಗ ಓಡಿಸಲಾಗುತ್ತಿದೆ, ಆ ಬಸ್‌ಗಳಲ್ಲಿ ಸ್ಟಾಂಡಿಂಗ್ ಸೀಟ್‌ಗಳನ್ನು ಸಹ ಹಾಕುತ್ತಿದ್ದಾರೆ. ಇದರಿಂದ ಪ್ರಯಾಣಿಕರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ

Sri AZEEZ SAIT.—That is a matter to be considered.

Sri C. M. ARUMUGAM.—These private contract buses are meant for carrying the tourists. Has it come to the notice of the Government that instead of carrying the tourists, these buses are permitting regular passengers to travel and are plying regular buses from Belgaum to Bangalore ?

Sri AZEEZ SAIT.—To a certain extent I concede what the hon. Member says. He will be happy to know that from 15th June up to now, a special D.I.G's Squad, which was formed with the personnel of MSRTC, Motor Vehicles Department and the Police, has been operating. They were able to take action against about 400 buses, out of which 97 buses were plying without permits. So, we have tightened up the action. We will try to undo what was done by the previous Government.

ಶ್ರೀ ಎಂ. ಎಸ್. ಕೃಷ್ಣನ್.—ರಾತ್ರಿ ವೇಳೆಯಲ್ಲಿ ಬಸ್‌ಗಳನ್ನು ಓಡಿಸಲು ಖಾಸಗಿಯವರಿಗೆ ಕೊಟ್ಟಿರುವುದು ಸರಿಯಲ್ಲ ಎಂಬುದನ್ನು ತತ್ವಶಃ ಒಪ್ಪಿಕೊಂಡಿದ್ದೀರಿ. ಬೆಳಗಾವಿಯಿಂದ ಬೆಂಗಳೂರಿಗೆ ಓಡಾಡುವ ಈ ನಾಲ್ಕು ಬಸ್‌ಗಳಲ್ಲಿ ಒಂದು ತಮ್ಮ ಕಾಂಗ್ರೆಸ್ ಪಕ್ಷದ ಎಂ.ಎಲ್.ಸಿ. ಅವರದ್ದು ಎಂಬುದು ಗೊತ್ತಿದೆಯೇ ?

Sri AZEEZ SAIT.—I said I wanted Notice to furnish the names.

Sri B. B. SAYANAK.—In answer to question (*b*), the Hon'ble Minister stated that about 155 direct passengers are travelling from Belgaum to Bangalore every day. This is perfectly wrong. There are four buses and they are carrying about 180 passengers from Belgaum to Bangalore and Government buses are running empty every day. Why is it so ?

Sri AZEEZ SAIT.—I do not concede that they are coming empty. At the same time, I must concede that I have not counted them physically.

Sri B. B. SAYANAK.—I will show you that 180 passengers are coming and going every day, if you come with me. They are making huge profit every day.

Sri H. M. CHANNABASAPPA.—In regard to Question No. 244 (370) I submit that the Hon. Minister is not here and hence, it may be taken up some other time.

MADAM SPEAKER.—Yes, the Question is held over.

Allotment of Government land to landless in Khanapur taluk

380. Sri N. B. SIRDESAI (Khanapur).—

Will the Minister for Revenue be pleased to State :—

(a) whether

(SRI N. B. SIRDESAI)

to the extent of 2,700 acres, including both Forest and Revenue and had sanctioned the land for allotment;

(*b*) whether Government has examined the fertility and productivity of the sanctioned lands;

(*c*) whether possession of the land sanctioned is given to the grantee to enable them to raise crops and to fulfil the conditions of putting the lands under cultivation within the given period;

(*d*) whether Government intend to take back lands unfit for cultivation and replace them by lands fit for cultivation?

Sri N. HUTCHAMASTHY GOWDA (Minister for Revenue).—

(*a*) No.

(*b*) According to Rules governing the grant of Government lands, only lands fit for cultivation are notified as available for disposal.

(*c*) As per rules possession of lands granted is to be given only after the occupancy price fixed and measurement fees are paid by the grantees. The grantee has to bring the land under cultivation within a period of three years from the date of taking possession.

(*d*) Does not arise as lands unfit for cultivation have not been granted.

Sri N.B.SIRDESAI.—Before putting supplementaries, I will make it clear to the Minister, that the information supplied by the Department is incorrect, because, before the dissolution of the previous Assembly, the previous Government had released land to the extent I have mentioned in my question and there was one Consultative Committee of which I was a Member, which had recommended release of land to the tune of over 1000 acres. But though the lands have been released, possession has not been given by the Revenue Department. This is for your information.

Now, I will put additional supplementaries.

May I know, Sir, how many acres of land were released to the landless persons in Khanapur taluk during the last three years?

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನ್ನಲ್ಲಿರುವ ಅಂಕಿ ಅಂಶಗಳ ಪ್ರಕಾರ ಆ ವರ್ತಮಾನ ಇಲ್ಲ. ಮಾನ್ಯ ಸರ್ದೇಸಾಯಿಯವರು ಕಂದಾಯ ಹಾಗೂ ಅರಣ್ಯ ಭೂಮಿಗಳನ್ನು ಸೇರಿಸಿ ಭೂರಹಿತರಿಗೆ ಎಷ್ಟು ಎಕರೆ ಹಂಚಲಾಗಿದೆ ಎಂದು ಕೇಳಿದರು. ಅದಕ್ಕೆ ಟೆಕ್ನಿಕಲ್ ಆಗಿ 'ಇಲ್ಲ' ಎಂಬ ಉತ್ತರ ಕೊಡಲಾಗಿದೆ. ಆದರೂ ಇದುವರೆಗೆ 1369 ಎಕರೆ 35 ಗುಂಟೆ ಜಮೀನನ್ನು 519 ಜನರಿಗೆ ಹಂಚಲಾಗಿದೆ. ಇವರ ಪೈಕಿ 236 ಜನರು ಸ್ವಾಧೀನಾನುಭವದ ಮೌಲ್ಯ ಹಾಗೂ ಮೋಜಣಿ ಶುಲ್ಕಗಳನ್ನು ಪಾವತಿ ಮಾಡಿರುವುದರಿಂದ, ಭೂಮಿಯನ್ನು ಅವರ ಸ್ವಾಧೀನಕ್ಕೆ ಕೊಡಲಾಗಿದೆ.

1-30 P.M.

Sri N. B. SIRDESAI.—Has it come to the notice of the Government that even after the payment of the occupancy price of the concerned lands, the lands have not been given possession of by the Revenue Department ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದು ಮೋಜಿಣಿ ಶುಲ್ಕ ಮತ್ತು ಕಿಮ್ಮತ್ತು ಕೊಡದೆ ಇರುವುದರಿಂದ ಅವರಿಗೆ ಆ ಜಮೀನನ್ನು ಕೊಡುವುದಕ್ಕೆ ಆಗಿಲ್ಲ.

Sri N. B. SIRDESAI.—Through you Madam Speaker, I wish to bring to the kind notice of the Hon'ble Minister that lands unfit for cultivation have been sanctioned by the Government and therefore some of the cultivators have not credited the occupancy price and that must looked into.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಇಲ್ಲಿ ನನ್ನಲ್ಲಿರತಕ್ಕ ಅಂಕಿಅಂಶಗಳ ಪ್ರಕಾರ 230 ಜನ ಮಾತ್ರ ಆಕ್ಯುಪೆನ್ಸಿ ಪ್ರೈಜ್, ಮೋಜಿಣಿ ಶುಲ್ಕ ಮತ್ತು ಕಿಮ್ಮತ್ತು ಶುಲ್ಕವನ್ನು ಕೊಟ್ಟಿದ್ದಾರೆ. ಅವರಿಗೆ ಆ ಭೂಮಿಯನ್ನು ಸ್ವಾಧೀನಕ್ಕೆ ಕೊಟ್ಟಿದೆ. ಉಳಿದವರು ಆ ಶುಲ್ಕವನ್ನು ಕೊಟ್ಟಿಲ್ಲ ಎಂದು ಇಲ್ಲಿ ಮಾಹಿತಿ ಇದೆ. ಅವರು ಆ ಶುಲ್ಕವನ್ನು ಕೊಟ್ಟಿದ್ದು ಭೂಮಿಯನ್ನು ಕೊಡದಿದ್ದರೆ ಅವರಿಗೆ ಭೂಮಿಯನ್ನು ಕೊಡಲು ಕ್ರಮತೆಗೆದುಕೊಂಡು ಅವರಿಗೆ ಭೂಮಿಯನ್ನು ಕೊಡಿಸಲು ಪ್ರಯತ್ನ ಮಾಡುತ್ತೇನೆ.

Sri B. B. SAYANAK.—During the President's Rule in Mysore State, how many acres of land were released to the poor agriculturists by the Thasildars ? I am asking with reference to Khanapur taluk.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಾಮಾನ್ಯವಾಗಿ ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ ವ್ಯವಸಾಯಕ್ಕೆ ಲಾಯಕ್ಕಾಗಿರತಕ್ಕ ಭೂಮಿಯನ್ನು ಮಾತ್ರ ಕೊಡುತ್ತಾರೆ. ಅಲ್ಲಿ ಇಂಥಾ ಭೂಮಿ ಇದೆ, ಅದನ್ನು ಕೊಡಿ ಎಂದು ಅವರು ಕೇಳಿದರೆ ಅದನು ನಾವು ಪರಿಶೀಲನೆ ಮಾಡುತ್ತೇವೆ. ತಹಶೀಲ್ದಾರರು ಭೂಮಿಯನ್ನು ರಿಲೀಜ್ ಮಾಡುವ ಪ್ರಶ್ನೆಯೇ ಇಲ್ಲ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಮಲೆನಾಡು ಜಿಲ್ಲೆಗಳಲ್ಲಿ ಪ್ರಪೋಸ್ಡ್ ಫಾರೆಸ್ಟ್ ಲ್ಯಾಂಡ್ ಎಂದು ಕೆಲವು ಕಡೆ ಭೂಮಿಯನ್ನು ರಿಜರ್ವ್ ಮಾಡಿದ್ದಾರೆ. ಇದು ತಮ್ಮ ಗಮನಕ್ಕೆ ಬಂದಿದೆಯೇ ?

ಅಧ್ಯಕ್ಷರು.—ಇದು ಖಾನಾಪುರಕ್ಕೆ ಸಂಬಂಧಪಟ್ಟಿದ್ದು. ಇದು ಮಲೆನಾಡಿನ ಜಮೀನಿಗೆ ಸಂಬಂಧಪಟ್ಟಿದ್ದಲ್ಲ.

Sri N. B. SIRDESAI.—In your answer to (*c*) you have stated that the grantee has to bring the land under cultivation within a period of three years from the date of taking possession ? How is it possible for the grantees to bring it under cultivation before the expiry of three years without possession being given by the Revenue Department ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ರೂಲ್ಸ್ ಪ್ರಕಾರ ಇರುವುದು "from the date of taking possession" : ಭೂಮಿಯನ್ನು ಸ್ವಾಧೀನಕ್ಕೆ ಕೊಟ್ಟಮೇಲೆ ಮೂರು ವರ್ಷ ಎಂದು ಇದೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ ಭೂಮಿಯನು ಕೊಟ್ಟಿದ್ದೇವೆ ಎಂದು ತಾವು ಹೇಳಿದಿರಿ. ಹಾಗಾದರೆ ತಾವು ಹರಿಜನ ಗಿರಿಜನರಿಗೆ ಎಷ್ಟು ಜನಗಳಿಗೆ ಕೊಟ್ಟಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ವಿವರ ಈಗ ನನ್ನಲ್ಲಿ ಇಲ್ಲ.

Mysore Sandal Oil Factory Staff

405. Sri K. SRIRAMULU (Gandhinagar).—

Will the Minister for Industries be pleased to state :—

(a) the total number of labourers in Mysore Sandal Oil Factory ;

(b) the amount of salary paid to them per month ;

(c) the number of clerks and officers in the factory and amount of salary paid to them per month ?

Sri S. M. KRISHNA (Minister for Industries).—

	Mysore	Shimoga	Total
(a)	177	103	280
(b)	Rs. 42,633	Rs. 21,763	Rs. 64,396
(c)	53	33	86
	Rs. 22,706	Rs. 14,096	Rs. 36,802

ಶ್ರೀ ಕೆ. ಶ್ರೀರಾಮುಲು.—ಸ್ವಾಮಿ ಈ ಗಂಧದ ಎಣ್ಣೆಯ ಕಾರ್ಖಾನೆಯ ಸಿಬ್ಬಂದಿಯವರಿಗೆ ಕೊಡತಕ್ಕ ವೇತನವನ್ನು ಈ ಪ್ರಶ್ನೆಯಲ್ಲಿ ನಮೂದು ಮಾಡಿದ್ದೀರಿ, ಇದರಲ್ಲಿ ಡಿ.ಎ. ಸೇರಿಸಿದೆಯೋ ಹೇಗೆ ಎಂಬುದನ್ನು ತಿಳಿಸುತ್ತೀರಾ?

† ಶ್ರೀ ಎಸ್. ಎಂ. ಕೃಷ್ಣ.—ವೇತನದಲ್ಲಿ ಡಿ.ಎ. ಇನ್‌ಕ್ಲೂಡ್ ಆಗಿದೆ.

ಶ್ರೀ ಕೆ. ಶ್ರೀರಾಮುಲು.—ಪ್ರತಿ ಮೂರು ಜನ ಕಾರ್ಮಿಕರಿಗೂ ಒಬ್ಬರು ಸೂಪರ್‌ವೈಜರ್ ಸ್ಥಾನ ಇರುತ್ತದೆಂದು ಅರ್ಥವಾಗುತ್ತದೆ. ಇದು ಸರಿಯೇ ?

ಶ್ರೀ ಎಸ್. ಎಂ. ಕೃಷ್ಣ.—ಬಹಳ ಹಿಂದೆ ಈ ಫ್ಯಾಕ್ಟರಿಗಳು ಪ್ರಾರಂಭವಾಗಿವೆ. ಆದ್ದರಿಂದ ಅಲ್ಲಿ ಶಾಸ್ತ್ರೀಯವಾಗಿ ರೆಕ್ರೂಟ್‌ಮೆಂಟ್ ನಡೆದಿದೆ ಎಂದು ನಾನು ಭಾವಿಸುವುದಿಲ್ಲ. ಆಗಿಂದಾಗ್ಯೆ ರೆಕ್ರೂಟ್‌ಮೆಂಟನ್ನು ತಮಗೆ ತಿಳಿದಹಾಗೆ ಮಾಡಿಕೊಂಡು ಬಂದಿದ್ದಾರೆ. ಇನ್ನು ಮುಂದೆ ರೆಕ್ರೂಟ್‌ಮೆಂಟ್ ಮಾಡುವಾಗ ಒಂದು ಕಾರ್ಖಾನೆಗೆ ಇಷ್ಟು ಜನ ಕಾರ್ಮಿಕರಿಗೆ ಇಷ್ಟು ಜನ ಸೂಪರ್‌ವೈಜರ್ ಇರಬೇಕು ಎಂದು ಟೇಬಲ್ ಪ್ರಕಾರ ರೆಕ್ರೂಟ್‌ಮೆಂಟ್ ಮಾಡುತ್ತೇವೆ.

ಶ್ರೀ ಕೆ. ಶ್ರೀರಾಮುಲು.—ಉಳಿಯತಾಯದ ದೃಷ್ಟಿಯಿಂದ ಎರಡು ಕಾರ್ಖಾನೆಗಳು ಒಂದೇ ಕಡೆ ಇರುವುದು ಒಳ್ಳೆಯದು ಎಂದು ಭಾವಿಸುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಮೈಸೂರಿನಲ್ಲಿರತಕ್ಕ ಗಂಧದ ಎಣ್ಣೆಯ ಕಾರ್ಖಾನೆಯನ್ನು ವರ್ಗಾಯಿಸುತ್ತೇವೆ ಎಂದು ಹೇಳಿದರೆ ಅವರು ಪ್ರತಿಭಟನೆ ಮಾಡುತ್ತಾರೆ, ಶಿವಮೊಗ್ಗದಲ್ಲಿರತಕ್ಕ ಕಾರ್ಖಾನೆಯನ್ನು ವರ್ಗಾಯಿಸುವುದಕ್ಕೆ ಅವರೂ ವಿರೋಧವನ್ನು ಸೂಚಿಸುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ತಾವು ಕೊಟ್ಟಿರುವ ಪಟ್ಟಿ ಪ್ರಕಾರ the ratio of salary between the workers and supervisory staff is nearly more than double. The number of workers are more and they get less than 50 per cet of the amount paid to the supervisory and clerical staff. Will the Minister try to increase the salary of workers ?

Sri S. M. KRISHNA.—I am afraid the Association of Workers, both in Shimoga and Mysore, have entered into a truce agreement with the management on 1st April 1968. It has come to a close on 31st March 1972. Now the workers have put forward before the management certian fresh proposals and they are being considered by the

management. Certainly at that point of time, all these factors will be borne in mind.

ಶ್ರೀ ಕಾಗೋಡು ತಿಮ್ಮಪ್ಪ.—ಶಿವಮೊಗ್ಗದಲ್ಲಿರತಕ್ಕ ಕಾರ್ಖಾನೆ ಬಹಳ ವರ್ಷಗಳಿಂದ ಒಂದೇ ಸ್ಥಿತಿಯಲ್ಲಿದೆ. ಆದ್ದರಿಂದ ಅದನ್ನು ಸ್ವಲ್ಪ ಅಭಿವೃದ್ಧಿಪಡಿಸಿ ಹೆಚ್ಚು ಜನಗಳಿಗೆ ಉದ್ಯೋಗ ಕೊಡುವುದಕ್ಕೆ ಆಲೋಚನೆ ಮಾಡುತ್ತೀರಾ?

ಶ್ರೀ ಎಸ್. ಎಂ. ಕೃಷ್ಣ.—ಹೆಚ್ಚು ಜನಗಳಿಗೆ ಉದ್ಯೋಗ ಕಲ್ಪಿಸಬೇಕು ಎಂಬುದು ನಮ್ಮ ಉದ್ದೇಶ.

ಶ್ರೀ ಸಿ. ಬೈರೇಗೌಡ.—ಅವರಿಗೆ ಮಿನಿಮಮ್ 'ವೇಜಸ್' ಆಕ್ಟ್ ಪ್ರಕಾರ ಸಂಬಳವನ್ನು ಕೊಡುತ್ತಿದ್ದೀರಾ ಹೇಗೆ? ಈಗ ಅಲ್ಲಿ ಸೂಪರ್'ವೈಜರುಗಳಿಗೆ ಮತ್ತು ಕ್ಲಾರ್ಕ್‌ಗಳಿಗೆ ಹೆಚ್ಚು ಸಂಬಳ ಮತ್ತು ಕಾರ್ಮಿಕರಿಗೆ ಕಡಿಮೆ ಸಂಬಳ ಯಾವ ಆಧಾರದ ಮೇಲೆ ಕೊಡುತ್ತೀರಾ?

ಶ್ರೀ ಎಸ್. ಎಂ. ಕೃಷ್ಣ.—ಅವರು ಕೆಲಸಕ್ಕೆ ಅರ್ಜಿಯನ್ನು ಹಾಕಿ, ಅವರನ್ನು ಕೆಲಸಕ್ಕೆ ನೇಮಿಸಿಕೊಳ್ಳುವಾಗ ಯಾವ ಆಧಾರದ ಮೇಲೆ ಕ್ಲಾರ್ಕಿಗೆ ಇಷ್ಟು ಸಂಬಳ, ಸೂಪರ್'ವೈಜರಿಗೆ ಇಷ್ಟು ಸಂಬಳ, ಕಾರ್ಮಿಕರಿಗೆ ಇಷ್ಟು ಸಂಬಳ ಎಂದು ನಿಗದಿ ಮಾಡಿ ರೆಕ್ರೂಟ್ ಮಾಡಿಕೊಂಡಿರುತ್ತಾರೆಯೋ ಅದನ್ನೇ ಮುಂದುವರಿಸಿಕೊಂಡು ಬರುತ್ತಾರೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಸ್ವಾಮಿ, ಮೈಸೂರು ಗಂಧದ ಎಣ್ಣೆಯ ಕಾರ್ಖಾನೆಯಲ್ಲಿ 177 ಜನ ಕಾರ್ಮಿಕರು, ಗುಮಾಸ್ತರು ಮತ್ತು ಅಧಿಕಾರಿಗಳು 53 ಜನ, ಶಿವಮೊಗ್ಗ ಗಂಧದ ಎಣ್ಣೆಯ ಕಾರ್ಖಾನೆಯಲ್ಲಿ 103 ಜನ ಕಾರ್ಮಿಕರು, 33 ಜನ ಗುಮಾಸ್ತರು ಮತ್ತು ಅಧಿಕಾರಿಗಳು ಇದ್ದಾರೆ. ಇದರಲ್ಲಿ ಹರಿಜನ ಗಿರಿಜನರು ಎಷ್ಟು ಜನ ಇದ್ದಾರೆ. ಒಂದು ವೇಳೆ ಅದರಲ್ಲಿ ಹರಿಜನ ಗಿರಿಜನರು ಇಲ್ಲದಿದ್ದರೆ ಇನ್ನು ಮುಂದಕ್ಕಾದರೂ ಕೂಡ ಈ ಫ್ಯಾಕ್ಟರಿಗಳಲ್ಲಿ ಹರಿಜನ ಗಿರಿಜನರಿಗೆ ಕೆಲಸಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಸ್. ಎಂ. ಕೃಷ್ಣ.—ಇದುವರೆಗೆ ಅವರಿಗೆ ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ, ಇನ್ನು ಮುಂದೆ ಮಾಡತಕ್ಕ ರೆಕ್ರೂಟ್‌ಮೆಂಟಿನಲ್ಲಿ ಹರಿಜನ ಗಿರಿಜನರಿಗೆ ಸಾಕಷ್ಟು ಪ್ರಾತಿನಿಧ್ಯ ಕೊಡಬೇಕು ಎನ್ನುವ ತತ್ವವನ್ನು ನಾನು ಒಪ್ಪತಕ್ಕವನು.

Rural Housing Scheme

370. Sri B. SATHYANARAYANA SINGH (Hospet).—

Will the Minister for Municipal Administration be pleased to state:—

(*a*) whether there is a proposal before Government to allot Rs. 50 lakhs in the current year's budget for Rural Housing Scheme;

(*b*) whether there is any proposal before the Government to grant housing loans to the weaker sections of the society of Bellary District through Rural Housing Cell?

Sri B. BASAVALINGAPPA (Minister for Municipal Administration).—

(*a*) A provision of Rs. 40 lakhs has been made in the State Plan Budget towards Rural Housing Scheme to be alloted to the Mysore Housing Board out of the loan to be received from the Life Insurance Corporation of India.

(SRI B. BASAVALINGAPPA)

(*b*) As a matter of policy the loans under Rural Housing Scheme are sanctioned to the weaker sections of the society in Rural Areas and as recommended by the respective Deputy Commissioners of Districts. In Bellery District also, loans will be sanctioned to such of the villagers as recommended by the Deputy Coommissioner and the Executive Engineer, Mysore Housing Board Division, Bellary, subject to availability of grants under Rural Housing Scheme.

ಶ್ರೀ ಬಿ. ಸತ್ಯನಾರಾಯಣಸಿಂಗ್.—ಯಾವ ಯಾವ ಜಿಲ್ಲೆಗಳಲ್ಲಿ ರೂರಲ್ ಹೌಸಿಂಗ್ ಸ್ಕೀಂ ಪ್ರಕಾರ ಮಾಡಿರುವ ಸೊಸೈಟಿಗಳು ಸಮರ್ಪಕವಾಗಿ ಕೆಲಸ ಮಾಡುತ್ತಿವೆಯೋ ಅವರಿಗೆ ಹೆಚ್ಚು ಸಾಲಗಳನ್ನು ಕೊಡಲು ಪ್ರಾಶಸ್ತ್ಯ ಕೊಡುತ್ತೀರಾ ?

†ಶ್ರೀ ಬಿ. ಬಸವಲಿಂಗಪ್ಪ.—ಇದನ್ನು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಹರಿಜನ ಗಿರಿಜನರಿಗಾಗಿ ಮನೆಕಟ್ಟಿಕೊಳ್ಳುವುದಕ್ಕಾಗಿ ಜೀವವಿಮಾ ಸಂಸ್ಥೆಯವರು ಹಣ ಕೊಡಲು ಮುಂದೆ ಬಂದಿದ್ದಾರೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಈ ಪ್ರಶ್ನೆ ಬೇರೆಯಾಗುತ್ತದೆ. ಇದಕ್ಕೆ ಸಂಬಂಧ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ರೂರಲ್ ಹೌಸಿಂಗ್ ಸ್ಕೀಂಗೆ ಸಂಬಂಧಪಟ್ಟ ಹಾಗೆ ಎಲ್. ಐ. ಸಿ. ಯಲ್ಲಿ ಒಂದು ಕಾಂಪ್ರಹೆನ್ಸೀವ್ ಸ್ಕೀಂ ಇದೆ, ಇದರಂತೆ ಕೇರಳದಲ್ಲಿ ಸುಮಾರು ಐದು ಲಕ್ಷ ಮನೆಗಳನ್ನು ಮೂರು ವರ್ಷಗಳಲ್ಲಿ ಕಟ್ಟಲು ಕೇಂದ್ರದವರು ಸಹಾಯ ಮಾಡುತ್ತಾರೆಂದು ತಿಳಿದು ಬಂದಿದೆ. ಇದರ ಬಗ್ಗೆ ಈ ಸರಕಾರ ಕೂಡ ಆಲೋಚನೆ ಮಾಡುತ್ತಿದ್ದಾರೆಯೇ ಹೇಗೆ ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಬಹಳ ಮಹತ್ವವುಳ್ಳದ್ದು. ರೂರಲ್ ಹೌಸಿಂಗ್ ಸ್ಕೀಂ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎನ್ನುವುದು ಸರಕಾರದ ಅಭಿಪ್ರಾಯ ಮತ್ತು ಸಾಕಷ್ಟು ಮನೆಗಳನ್ನು ಇದುವರೆಗೆ ಕಟ್ಟಲೂ ಆಗಿಲ್ಲ ಎನ್ನುವುದೂ ಸರ್ಕಾರದ ಅಭಿಪ್ರಾಯ ನಾನು ಮೊದಲೇ ಹೇಳಿದ ಹಾಗೆ ರೂರಲ್ ಹೌಸಿಂಗ್ ಸ್ಕೀಂ ಮೂಲಕ ಹೆಚ್ಚು ಹೆಚ್ಚು ಮನೆಗಳನ್ನು ಕಟ್ಟಿಸುವ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಎರಡನೇದು ಸರಕಾರದವರೇ ಸಾಕಷ್ಟು ಹಣವನ್ನು ಒದಗಿಸಿ ಬಡವರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕು ಎನ್ನುವ ಯೋಜನೆಯೂ ಇದೆ. ಇವೆಲ್ಲವೂ ಸರಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಉತ್ತರದಲ್ಲಿ ಮುಂಗಡ ಪತ್ರದಲ್ಲಿ ರೂರಲ್ ಹೌಸಿಂಗು ಸ್ಕೀಂಗಾಗಿ 40 ಲಕ್ಷ ಹಣ ಒದಗಿಸಲಾಗಿದೆ ಎಂದು ಇದೆ. ಇದರಲ್ಲಿ ಶೇಕಡಾ ಇಪ್ಪತ್ತರಷ್ಟು ಹಣವನ್ನು ಪರಿಶಿಷ್ಟ ವರ್ಗದವರಿಗಾಗಿ ಇಡಲು ಸರಕಾರ ಅವಕಾಶ ಮಾಡಿಕೊಡುತ್ತದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಈ ಸಲಹೆಯನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಹೆಚ್. ಪಿ. ಚನ್ನಪ್ಪ.—ಹೌಸಿಂಗು ಬೋರ್ಡಿನಲ್ಲಿ ಸಾಲದ ಹಣವನ್ನು ಮಂಜೂರು ಮಾಡುವುದರಲ್ಲಿ ವಿಳಂಬವಾಗುತ್ತಿದೆ, ಇದನ್ನು ತಪ್ಪಿಸಲು ತಕ್ಕ ಕ್ರಮ ತೆಗೆದುಕೊಂಡು ಸಾಲಗಳನ್ನು ಬೇಗನೇ ಮಂಜೂರು ಮಾಡಲು ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ನಾನೂ ಕೂಡ ಹಿಂದೆ ಈ ಬೋರ್ಡು ಮೂಲಕ ನಗದು ಹಣವನ್ನು ಕೊಡುವಾಗ ಇದನ್ನು ಹೇಗೆ ಕೊಡುತ್ತಾರೆ ಎನ್ನುವುದನ್ನು ಪರಿಶೀಲನೆ ಮಾಡಿ ನೋಡಿದಾಗ ಇದು ಕೆಲವೂ ಹಿತಾಸಕ್ತಿಗಳಿಗಾಗಿ ಹೋಗುತ್ತಿರುವುದು ತಿಳಿಯಿತು. ಇದನ್ನು ಗಮನಕ್ಕೆ ತೆಗೆದುಕೊಂಡು ನಗದು ಹಣ ಕೊಡುವುದನ್ನು ಸರಕಾರ ಈಚೆಗೆ ನಿಲ್ಲಿಸಿದೆ ಎರಡನೇ ಕಂತಿನ ಸಾಲಕೊಡಬೇಕಾದರೆ ಮೊದಲನೇ ಹಂತದಲ್ಲಿ ಕೊಟ್ಟಿದ್ದ ಸಾಲವನ್ನು ತೀರಿಸಬೇಕಾಗಿಲ್ಲವಾದ್ದರಿಂದ ಆದಷ್ಟು ಬೇಗ ಸಾಲಪಾವತಿ ಮಾಡಲು ಅವಕಾಶವಿದೆ ಇವರಿಗೆಲ್ಲಾ ಕೊಡಲಾಗುತ್ತಿದೆ.

ಶ್ರೀ ಶರಣಪ್ಪ.—ಡೆಪ್ಯುಟೀ ಕಮಿಷನರವರು ಶಿಫಾರಸು ಮಾಡಿದರೇನೇ ಇಂತಹ ಹರಿಜನರಿರುವ ಸ್ಥಳಗಳಿಗೆ ಹಣವನ್ನು ಒದಗಿಸುತ್ತಾರೆ ಮತ್ತು ಅಲ್ಲಿ ಮನೆಗಳನ್ನು ಕಟ್ಟಿಸುತ್ತಾರೆ ಎಂದು

ಇದೆ. ಆದರೆ ಕೆಲವು ಗ್ರಾಮಗಳವರು ಒಂದು ವೇಳೆ ಅವರಾಗಿಯೇ ಹರಿಜನರಿಗಾಗಿ ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ಅಭಿಪ್ರಾಯ ವ್ಯಕ್ತಮಾಡಿದರೆ ಅವರಿಗೂ ಸಹಾಯ ಮಾಡಿ ಅನುಕೂಲ ಮಾಡುತ್ತದೆಯೇ ಹೇಗೆ ?

ಶ್ರೀ ಬಿ. ಬಸವಲಿಂಗಪ್ಪ.—ಇದೂ ಒಂದು ಮಾರ್ಗ. ಇದು ಡೆಪ್ಯುಟೀ ಕಮಿಷನರವರು ಅವರೇ ತೆಗೆದುಕೊಳ್ಳತಕ್ಕ ಕಾರ್ಯಕ್ರಮ. ಮಾನ್ಯ ಸದಸ್ಯರು ಸಲಹೆ ಮಾಡಿದಂತೆ ಆಯಾ ಗ್ರಾಮಗಳವರೇ ಮುಂದೆ ಬಂದು ಮನೆ ಕಟ್ಟುತ್ತೇವೆ ಎಂದು ಹೇಳಿ ಸರಕಾರದ ಮಂಜೂರಾತಿ ಕೇಳಿದರೆ ಅದನ್ನು ಮಂಜೂರು ಮಾಡುವುದಕ್ಕೆ ಹಿಂದೆಗೆಯುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಗ್ರಾಮಾಂತರಗಳಲ್ಲಿ ಕಟ್ಟುವ ಮನೆಗಳಲ್ಲಿ ಶೇಕಡಾ ಐವತ್ತರಷ್ಟನ್ನು ಹರಿಜನ ಹಾಗೂ ಗಿರಿಜನರಿಗೇ ಇರಬೇಕೆಂದು ಇಡಲು ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ನಮ್ಮ ಸರಕಾರದ ನೀತಿಯೇನು ಎನ್ನುವುದನ್ನು ಸ್ಪಷ್ಟವಾಗಿ ಬಹು ದಿವಸಗಳ ಹಿಂದೆಯೇ ಹೇಳಿದ್ದೇವೆ ಮತ್ತು ಇದರಂತೆ ಹರಿಜನರಿಗೆ ಸಹಾಯ ಮಾಡತಕ್ಕದ್ದು ನಮ್ಮ ಆದ್ಯ ಕರ್ತವ್ಯ. ಹರಿಜನ ಹಾಗೂ ಗಿರಿಜನರಿಗೆ ಪ್ರಾಶಸ್ತ್ಯ ಕೊಡಬೇಕೆಂದು ಹರಿಜನರು ಹಾಗೂ ಬಡವರು ಹಿಂದುಳಿದವರ್ಗಗಳವರು ಇವರೆಲ್ಲರಿಗೂ ಹೆಚ್ಚಿನ ಗಮನ ಕೊಡಬೇಕೆಂದು ಇವರಿಗೆಲ್ಲಾ ಸಾಲ ಕೊಟ್ಟು ಮನೆ ಕಟ್ಟಿಸಿಕೊಡಬೇಕೆಂದು ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದೂ ಇದೆ.

ಶ್ರೀ ಗಟ್ಟಿ ಚಂದ್ರಶೇಖರ್.—ಹರಿಜನರಿಗೆ ಸಾಲ ಕೊಟ್ಟು ಮನೆ ಕಟ್ಟಿಸುವ ಬಗ್ಗೆ ಹಣ ಕೊಟ್ಟರೆ ದುರುಪಯೋಗವಾಗುತ್ತದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ನಾನು ಸರಕಾರವನ್ನು ಕೇಳಿದುದು ಸರಕಾರದವರೇ ಒಂದೊಂದು ಕಡೆ ಹತ್ತು ಮನೆಗಳನ್ನು ಕಟ್ಟಿಸಿ ಹರಿಜನರಿಗೆ ಹಾಗೂ ಹಿಂದುಳಿದ ಬಡವರಿಗೆ ಹಂಚಲು ವ್ಯವಸ್ಥೆ ಏಕೆ ಮಾಡಬಾರದು ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ನಾನು ಇಂತಹ ಒಂದು ಸೊಸೈಟಿಯ ಡೈರಕ್ಟರಾಗಿಯೂ ಕೆಲಸ ಮಾಡಿದ್ದೇನೆ. ಇದರ ಅನುಭವದ ಪ್ರಕಾರ ಮನೆಗಳನ್ನು ಕಟ್ಟಲು ಸಾಲ ಕೊಟ್ಟರೆ ಮನೆಗಳನ್ನು ಕಟ್ಟದೆ ಹಣವೇ ವಾಪಸು ಬರುವ ಸ್ಥಿತಿಯಲ್ಲಿರುತ್ತಿರಲಿಲ್ಲ. ಇದಕ್ಕಾಗಿ ಬಡವರಿಗಾಗಿ ಸರಕಾರವೇ ನೇರವಾಗಿ ಮನೆಗಳನ್ನು ಕಟ್ಟಿಸಿ ಕೊಡಬೇಕೆಂದು ಸರಕಾರದ ಉದ್ದೇಶ ಇದೆ. ಇದರ ಬಗ್ಗೆ ಯೋಚನೆ ಮಾಡಲಾಗುತ್ತಿದೆ. ಇದರ ಬಗ್ಗೆ ಸರಕಾರ ಅತಿ ಶೀಘ್ರವಾಗಿ ನಿರ್ಧಾರ ತೆಗೆದುಕೊಳ್ಳುತ್ತದೆ ಎಂದು ಮಾತ್ರ ಇಲ್ಲಿ ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಹರಿಜನರಿಗಾಗಿ ಮನೆಗೆ ಕೊಟ್ಟ ಸಾಲವನ್ನು ಅವರು ಮರುಪಾವತಿ ಮಾಡುವ ಸ್ಥಿತಿಯಲ್ಲಿರುವುದಿಲ್ಲ. ಇಂತಹ ಬಡ ಹರಿಜನರ ಬಗ್ಗೆ ಸಾಲಗಳನ್ನು ಕೊಟ್ಟಿದ್ದರೆ ಅದನ್ನು ಮಾಫೀ ಮಾಡುವುದಕ್ಕೆ ಪರಿಶೀಲನೆ ಮಾಡುತ್ತಾರೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಇಂತಹ ಕೇಸುಗಳು ಬಂದಾಗ ಅದರ ಬಗ್ಗೆ ಸೂಕ್ತ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರಗಳು ಮುಗಿದವು.

QUESTIONS FOR ANSWERS ON THE DAY

(but not taken up)

Hemavathi Project

340. Sri H. D. DEVEGOWDA (Holenarasipur).—

Will the Minister of State for Major Irrigation be pleased to state:—

(*a*) when the Hemavathy Project was sanctioned and when it will be completed;

(SRI H. D. DEVEGOWDA)

(*b*) the progress achieved so far (both physical and financial) ;

(*c*) the progress achieved during the month of March, April, May, June 1970, 1971, 1972 ?

SRI H. N. NANJE GOWDA (Minister of State for Major Irrigation).—

(*a*) Originally sanctioned in September 1967 and subsequently sanctioned for enlarged storage of 34 T M C in May 1971.

Will be completed in all respects by 1976 depending on the availability of funds.

(*b*) About 55% of the Masonry Dam has been completed. In the Earth Dam about 41% of the earth work to embankment has been completed. Of the 100 Kms. of Canal taken up for execution, about 64% of excavation is completed. Cross Masonry works are yet to be taken up.

Expenditure incurred on Dam and Canal up to the end of April, 1972 is 838.27 lakhs and 329.19 lakhs respectively.

(*c*)—	*1970*	*1971*	*1972*
March	64.51 lakhs	62.93 lakhs	28.26 lakhs
April	8.91 lakhs	45.11 lakhs	80.42 lakhs
May	20.45 lakhs	46.60 lakhs	42.00 lakhs
June	17.42 lakhs	57.16 lakhs	Figure under compilation.

Construction of Dam Across Hemavathi River Near Gorur

364. SRI T. N. MADAPPA GOWDA (Nagamangala).—

Will the Minister of State for Major Irrigation be pleased to state :—

the number of acres of land that is expected to be brought under the irrigation by constructing a dam across Hemavathi river near Gorur in addition to the land already under irrigation at present ?

SRI H. N. NANJE GOWDA (Minister of State for Major Irrigation).—

It is contemplated to irrigate 1,00,000 acres as per sanctioned Hemavathy Project estimate. This is in addition to the existing atchkat under anicut Channels. Possibilities of extending irrigation benefits for more area is under investigation.

Complaint of Kudligi T. A. P. C. M. Society

376. SRI C. ANDANAPPA (Hadagali).—

Will the Chief Minister be pleased to state :—

(*a*) the action taken on the complaint filed in 1967 before the Superintendent of Police, Bellary, Circle Inspector, Kudligi, Police Sub-Inspector, Kottur against the persons who broke open the locks of Kudligi Taluk Agricultural Produce Co-operative Marketing Society Limited, Kottur and took possession of cash, properties and accounts ;

(*b*) if not, the reasons for the same as also the action taken against the police officers concerned for their inaction ?

SRI D. DEVARAJ URS (Chief Minister).—

(*a*) A petition from the then President of Kottur Marketing Society alleging house trespass, etc., in respect of the said Society was received by the Superintendent of Police, Bellary in the year 1967. The petition was enquired into.

(*b*) As the enquiry did not disclose any cognizable offence, no further action was taken.

Calling Attention to Matters of Urgent Public Importance

(*i*) re : *the termination of services of the candidates selected by the Public Service Commission in Gulbarga*

SRI BAPU GOWDA RAYAPPA (Shahapur).—Madam, I call the attention of the Minister for Revenue to the termination of services of the candidates selected by the Public Service Commission in Gulbarga.

SRI N. HUTCHAMASTHY GOWDA (Minister for Revenue).—I State as follows.—

Consequent on the expiry of the term for which the temporary establishment for Election work was sanctioned in Gulbarga District, 4 First Division clerks and 20 Second Division clerks appointed through the Public Service Commission had to be discontinued with effect from 1-4-1972. The officials are relieved on the principle that the last to join

(SRI N. HUTCHAMASTHY GOWDA)

should be the first to go. However with a view to mitigate hardship, these officials have been continued in leave vacancies which became available subsequent to 1st April 1972. They are now apprehending that their services may be terminated when the permanent officials who are on leave return to duty. They have therefore requested that they may be continued in service. But this is not possible as there are no sanctioned posts against which they can be shown.

As these officials have been selected by the P.S.C. and assigned to the Unit of the Deputy Commissioner, Gulbarga District, they will be appointed in future vacancies as and when they occur. For such fresh appointments the age limit will not apply. Also the pay of such officials will be fixed taking into consideration the pay last drawn and the previous service will count for pension etc. Interruption in service for short periods is unavoidable when temporary staff is taken for items of work such as Election which last over for a limited period and they have to be disbanded. The practice followed in Gulbarga District was adopted in other Districts also.

ಶ್ರೀ ಬಾಪೂಗೌಡ ರಾಯಪ್ಪ.—ತಾವು ಹೇಳಿದಿರಿ, ಸರ್ವಿಸ್ ರೆಗ್ಯುಲರೈಸ್ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು. ಈ ತಿಂಗಳು 30ನೇ ತಾರೀಖು ಡಿಪಾರ್ಟಮೆಂಟಿನ ಬೇಡಿಕೆ ಪ್ರಕಾರ ಕಲ್ಬುರ್ಗಿ ಜಿಲ್ಲೆಯಲ್ಲಿ ಸಾವಿರಾರು ಹುಡುಗರನ್ನು ಪಬ್ಲಿಕ್ ಸರ್ವೀಸ್ ಕಮಿಷನ್ ನವರು ಇಂಟರ್‌ವ್ಯೂಗೆ ಕರೆದಿದ್ದಾರೆ. ತಾವು ಈಗ 20 ಹುಡುಗರಿಗೆ ಸರ್ವೀಸ್ ರೆಗ್ಯುಲರೈಸ್ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತೀರಿ. ಒಂದು ಕಡೆ ಇಂಟರ್‌ವ್ಯೂ ಕರೆಯುವುದಕ್ಕೆ ಪ್ರಾರಂಭ ಮಾಡಿರುವಾಗ ಇನ್ನೊಂದು ಕಡೆ ಪಬ್ಲಿಕ್ ಸರ್ವೀಸ್ ಕಮಿಷನ್‌ನಿಂದ ಯಾರು ಸೆಲೆಕ್ಟ್ ಆಗಿದ್ದಾರೋ ಅವರನ್ನು ರೆಗ್ಯೂಲರೈಸ್ ಮಾಡದೆ ಇರುವುದಕ್ಕೆ ಕಾರಣ ಏನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಆಗಲೇ ಓದಿ ಹೇಳಿದ ಹಾಗೆ ಟೆಂಪರರಿ ವೇಕೆನ್ಸೀಸ್ ಗೋಸ್ಕರ ಅವರನ್ನು ಪಬ್ಲಿಕ್ ಸರ್ವೀಸ್ ಕಮಿಷನ್‌ನವರು ಅಪಾಯಿಂಟ್ ಮಾಡಿದರು. ಪರ್ಮನೆಂಟ್ ವೇಕೆನ್ಸಿ ಅಡ್ವರ್ಟೈಸ್ ಮಾಡಿದಾಗ, ಅದಕ್ಕೆ ಅರ್ಜಿ ಹಾಕಿ, ಅವರು ಬರುವುದಕ್ಕೆ ಸಾಧ್ಯಇತ್ತು, ಈ ಸಮಯವನ್ನು ಅವರು ಉಪಯೋಗಿಸಿಕೊಳ್ಳಬಹುದಿತ್ತು.

ಶ್ರೀ ಬಾಪೂಗೌಡ ರಾಯಪ್ಪ.—ಪಬ್ಲಿಕ್ ಸರ್ವೀಸ್ ಕಮಿಷನ್‌ನವರು ಸೆಲೆಕ್ಟ್ ಮಾಡಿ ಟೆಂಪರರಿ ಸರ್ವೀಸ್ ಮೇಲೆ ತೆಗೆದುಕೊಂಡಿರುವ ಜನಕ್ಕೆ ಪರ್ಮನೆಂಟ್ ಸರ್ವೀಸ್ ಕೊಡದಿದ್ದರೆ, ಇವರನ್ನು ಇಂಟರವ್ಯೂ ಮಾಡಿ ಪ್ರಯೋಜನ ಏನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಟೆಂಪರರಿ ಪೋಸ್ಟ್ಸ್‌ಗೋಸ್ಕರ ಪಬ್ಲಿಕ್ ಸರ್ವೀಸ್ ಕಮಿಷನ್‌ನಿಂದ ಆರಿಸಿರತಕ್ಕ ಅಭ್ಯರ್ಥಿಗಳು, ಖಾಯಂ ಹುದ್ದೆಗಳನ್ನು ಅಡ್ವರ್‌ಟೈಸ್ ಮಾಡಿದಾಗ, ಆ ಸಂದರ್ಭದಲ್ಲಿ ಈ ಖಾಯಂ ಹುದ್ದೆಗಳಿಗೆ ಅರ್ಜಿ ಹಾಕಿಕೊಂಡು ಬರುವುದಕ್ಕೆ ಸಾಧ್ಯ ಇದೆ. ಈ ಸಮಯವನ್ನು ಅವರು ಉಪಯೋಗಿಸಿಕೊಳ್ಳಬಹುದಿತ್ತು. ಅವರು ಈಗ ಇರತಕ್ಕ ಹುದ್ದೆಗಳು ಖಾಯಂ ಹುದ್ದೆಗಳಲ್ಲ.

ಶ್ರೀ ಬಾಪೂಗೌಡ ರಾಯಪ್ಪ.—ಇಡೀ ರಾಜ್ಯದಲ್ಲಿ ಫಸ್ಟ್ ಡಿವಿಷನ್ ಮತ್ತು ಸೆಕೆಂಡ್ ಡಿವಿಷನ್ ಹುದ್ದೆಗಳಿಗೆ ಇಂಟರವ್ಯೂ ಕರೆಯುತ್ತಾರೆ, ಆದ್ದರಿಂದ ತಮ್ಮಲ್ಲಿ ಖಾಯಂ ಇದ್ದೆಯೆಂದು ಸ್ಪಷ್ಟವಾಗಿದೆ. ಇಂಥ ಖಾಯಂ ಹುದ್ದೆಗಳಲ್ಲಿ ಅವರನ್ನು ಏತಕ್ಕೆ ಖಾಯಂ ಮಾಡುವುದಿಲ್ಲ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಆರಿಸಿರತಕ್ಕ ಹುದ್ದೆಗಳು ಹಂಗಾಮಿ ಹುದ್ದೆಗಳು, ಖಾಯಂ ಹುದ್ದೆಗಳಿಗೆ ಅಡವರ್ಟೈಸ್ ಮಾಡಿ ತೆಗೆದುಕೊಳ್ಳುವ ಸಂದರ್ಭ ಬಂದಾಗ ಪಬ್ಲಿಕ್ ಸರ್ವೀಸ್ ಕಮಿಷನ್‌ಗೆ ಅರ್ಜಿ ಹಾಕಿಕೊಂಡು ಖಾಯಂ ಹುದ್ದೆಗಳಲ್ಲಿ ಆರಿಸಿ ಬರುವುದಕ್ಕೆ ಅವಕಾಶ ವಿತ್ತು. ಅದು ಅಲ್ಲದೆ ಹೋದರೆ ಖಾಯಂ ಹುದ್ದೆಗಳಿಗೂ ಮತ್ತು ಹಂಗಾಮಿ ಹುದ್ದೆಗಳಿಗೂ ಏನು ವ್ಯತ್ಯಾಸ ಇದೆ ? ಅವರು ಆ ಸಂಧರ್ಭವನ್ನು ಉಪಯೋಗಿಸಿಕೊಳ್ಳಬಹುದಿತ್ತು.

ಶ್ರೀ ಶರಣಪ್ಪ.—20 ಜನರನ್ನು ಏನು ಟೆಂಪರರಿ ಹುದ್ದೆಗಳಿಗೆ ತೆಗೆದುಕೊಂಡಿದ್ದಾರೆ, ಅವರು ಪಬ್ಲಿಕ್ ಸರ್ವೀಸ್ ಕಮಿಷನ್ ಮೂಲಕ ಸೆಲೆಕ್ಟ್ ಆದ ಕ್ಯಾಂಡಿಡೇಟ್‌ಗಳು. ಅವರು ಖಾಯಂ ಹುದ್ದೆಗಳಿಗೆ ಸೆಲೆಕ್ಟ್ ಆಗುದು. ಸ್ಥಳ ಅವಕಾಶ ಇಲ್ಲದ ಮೂಲಕ ಸ್ಥಾನ ಸಿಕ್ಕಲಿಲ್ಲ. ಅವರನ್ನು ಪರ್ಮನೆಂಟ್ ಆಗಿ ಏತಕ್ಕೆ ಮಾಡುವುದಿಲ್ಲ ? ಎಂದು ಮಾನ್ಯಸದಸ್ಯರ ಪ್ರಶ್ನೆ. ಅದಕ್ಕೆ ಉತ್ತರ ಕೊಡಬೇಕು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಅರ್ಥಮಾಡಿಕೊಳಲಿಲ್ಲವೋ ನನ್ನನ್ನು ಅವರು ಅರ್ಥಮಾಡಿಕೊಳ್ಳಲಿಲ್ಲವೋ ಗೊತ್ತಾಗಲಿಲ್ಲ. ತಾತ್ಕಾಲಿಕವಾದ ಹುದ್ದೆಗಳಿಗೆ ಪಬ್ಲಿಕ್ ಸರ್ವೀಸ್ ಕಮೀಷನ್ ಅವರನ್ನು ಆರಿಸಿರುವುದು. ಆದ್ದರಿಂದ ತಾತ್ಕಾಲಿಕ ಹುದ್ದೆಗಳಿಗೆ ಮಾತ್ರ ಇವರಿಗೆ ಅವಕಾಶ ಸಿಗುತ್ತದೆ.

Sri BAPU GOWDA RAYAPPA.—That means, again these people have to apper before the Public Service Commission. They are already selected by the P.S.C. An interview will be held to select First and Second Division Clerks in Gulbarga. What is the difficulty of Government in accommodating these 20 persons who have already been selected by the P.S.C in the permanent vacancies that are available ?

(ಉತ್ತರ ಇಲ್ಲ)

Sri D. B. KALMANKAR.—These twenty persons have already been selected by the Public Service Commission and posted to temporary posts. Out of the existing permanent vacancies for which they are going to recruit candidates, will it not be possible for the Government to accommodate these 20 persons who are already selected by the P.S.C. in 20 vacancies and fill up the remaining vacancies with fresh people ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹೇಗೆ ಮಾಡುವುದಕ್ಕೆ ಸಾಧ್ಯ ಎಂದು, ಅದನ್ನು ಆಲೋಚನೆ ಮಾಡುತ್ತೇನೆ.

ಶ್ರೀ ಬಾಪೂಗೌಡ ರಾಯಪ್ಪ.—ಸರ್ವೀಸ್ ವಿತ್ ಕೌಂಟ್ ಫಾರ್ ಪೆನ್‌ಷನ್ ಎಂದು ಹೇಳಿದ್ದೀರಿ, ಪೆನ್‌ಷನ್ ಕೌಂಟ್ ಮಾಡುವ ಕಾಲಕ್ಕೆ ಸರ್ವೀಸ್ ರೂಲ್ಸ್ ಅಮೆಂಡ್ ಮಾಡುವ ಪ್ರಶ್ನೆ ಬರುತ್ತದೆ. ಅವರು ಟೆಂಪರರಿ ಎಂಪ್ಲಾಯೀಸ್ ಆಗಿದ್ದಾರೆ. ಸರ್ವೀಸ್ ರೆಗ್ಯುಲರೈಸ್ ಮಾಡುವಾಗ, ರೂಲ್ ಅಡ್ಡಿ ಬಂದರೆ ಅದನ್ನು ಸರಿ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ರೂಲ್ ಅಡ್ಡಿ ಬರುವುದಿಲ್ಲ; ಬಂದರೆ ಅದನ್ನು ಸರಿ ಮಾಡುತ್ತೇವೆ ಎಂದು ಸ್ಪಷ್ಟವಾಗಿ ಹೇಳಿದ್ದೇನೆ.

(*ii*) re : *Grave situation in Hosanagar due to Sharavathi backwaters*

Sri S. M. SHEERANALY CHANDRASEKHAR (Hosanagar).—I Call the attention of the Minister for Public Works to the grave situation that has arisen in Hosanagar town due to Sharavathi back waters on all the three sides of the town.

Sri H. M. CHANNABASAPPA (Minister for Public Works) I state as follows :—The full reservoir level of the Linganamakki dam is 1819.00'. All lands that will be submerged upto this level have been acquired and compensation as per rules has already been paid. It is a fact that Hosanagar town will be surrounded on three sides by the back waters of Sharavathi but the full reservoir level contour is at an average distance of 2–3 furlongs at most places and a little less than a furlong at only three places. During 1970, the maximum reservoir level recorded was

(SRI H. M. CHANNABASAPPA)

RL 1818.9′ which was just 0.1′ below the full reservoir level. The reservoir level as on 30-6-1972 was 1751.40′. Alternative communication arrangements for connecting the town with other important places have already been made. The impact of the back waters on the health of the residents will have to be examined. In the circumstances, there does not appear to exist any grave situation in Hosanagar as a result of the back waters of Linganamakki reservoir.

It is, however, understood that there is an agitation for the establishment of industries in Hosanagar for providing employment opportunities to the displaced persons affected by the acquisition of lands that have been submerged by the water spread of the reservoir.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಮಾನ್ಯ ಮಂತ್ರಿಗಳಿಗೆ ಒಂದು ವಿಷಯವನ್ನು ಅರಿಕೆ ಮಾಡಿಕೊಳ್ಳುತ್ತೇನೆ, ತಾವು ಇದರ ಅರ್ಧ ಫರ್ಲಾಂಗ್ ಸುತ್ತ ಅನೇಕ ಕಡೆಗಳಲ್ಲಿ ನೀರು ಇದೆ ಎಂದು ಹೇಳಿದ್ದೀರಿ. ಈ ಸಂದರ್ಭದಲ್ಲಿ ಊರಿನವರಿಗೆ ಸೂಕ್ತವಾದ ಪರಿಹಾರ ಕೊಟ್ಟು ಅದು ಸಬ್‌ಮರ್ಜ್ ಏರಿಯಾ ಎಂದು ಹೇಳಿ, ಕನ್‌ಸಿಡರ್ ಮಾಡುತ್ತೇವೆ ಎಂದು ಕಳುಹಿಸಿದ್ದು ಉಂಟು. ಹೊಸ ನಗರ ಏರಿಯಾ ಏನು ಇದೆ ಅದನ್ನು ಬಿಟ್ಟಿದ್ದಾರೆ. ಹೊಸನಗರ ಟೌನ್‌ನಲ್ಲಿ ವ್ಯಾಪಾರಸ್ಥರು ಮತ್ತು ಕೂಲಿಯವರೂ, ಸುತ್ತಮುತ್ತ ಜಮೀನು ಹೊಂದಿರತಕ್ಕ ಜನರ ಮೇಲೆ ಅವಲಂಬಿಸಿರುತ್ತಾರೆ. ಅರ್ಧ ಫರ್ಲಾಂಗ್ ಇರತಕ್ಕ ಜಮೀನಿನಲ್ಲಿ ಸಬರಬ್ಸ್‌ನಲ್ಲಿ ವಾಸಮಾಡತಕ್ಕ ಜನ, ಶಿವಮೊಗ್ಗ, ತರೀಕೆರೆಗೆ ಹೋಗಿದ್ದಾರೆ. ಹೊಸನಗರ ಟೌನ್‌ನಲ್ಲಿ ಇರತಕ್ಕ ಜನರಿಗೆ ಜೀವನ ಕಷ್ಟವಾಗಿದೆ, ಆದ್ದರಿಂದ ಅಲ್ಲಿಯ ಜನಕ್ಕೆ ಪರಿಹಾರ ಕೊಟ್ಟು, ಅವರನ್ನೂ ಕೂಡ ಮುಳುಗಡೆಯಾಗಿರತಕ್ಕ ಜನ ಎಂದು ಕನ್‌ಸಿಡರ್ ಮಾಡಿ ಪರಿಹಾರ ಕೊಡುತ್ತೀರಾ? ಇಲ್ಲದಿದ್ದರೆ, ಅಲ್ಲಿ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡತಕ್ಕ ಏರ್ಪಾಡು ಮಾಡುತ್ತೀರಾ? ಅದೂ ಇಲ್ಲದಿದ್ದರೆ ಹೊಸನಗರ ಟೌನ್‌ನಲ್ಲಿ ಇರತಕ್ಕ ಜನ ಹೆಚ್ಚು ಕಾಲ ವಾಸ ಮಾಡುವುದಕ್ಕಾಗುವುದಿಲ್ಲ. ಕೂಲಿಗಾರರಿಗೆ ಒಂದು ಹೊತ್ತಿಗೆ ಊಟಕ್ಕೆ ಇದ್ದರೆ, ಇನ್ನೊಂದು ಹೊತ್ತಿಗೆ ಇಲ್ಲ. ವ್ಯಾಪಾರಸ್ಥರು ಸುಮ್ಮನೆ ಅಂಗಡಿಗಳಲ್ಲಿ ಕೂತುಕೊಳ್ಳುವ ಪರಿಸ್ಥಿತಿ ಬಂದಿದೆ. ಅವರಿಗೆ ಮೂರು ಕಾಸಿನ ವ್ಯಾಪಾರವೂ ಇಲ್ಲ. ಇದನ್ನು ತಮ್ಮ ಗಮನಕ್ಕೆ ತಂದಿದ್ದೇನೆ, ಇದಕ್ಕೆ ಸೂಕ್ತವಾದ ರೀತಿಯಲ್ಲಿ ಪರಿಹಾರ ಕೊಡುತ್ತೀರಾ?

2-00 P. M.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಹೇಳುವಂತೆ ಈ ಗ್ರೇವ್ ಸಿಚ್ಯುಯೇಷನ್ ಸರ್ಕಾರದ ಗಮನಕ್ಕೆ ಬಂದಿಲ್ಲ. ಒಂದನೆಯದು, ಜನರ ಆರೋಗ್ಯಕ್ಕೆ ತೊಂದರೆ ಬರುತ್ತದೆ ಎನ್ನುವ ವಿಷಯವನ್ನು ವಿಚಾರಮಾಡುತ್ತಿದ್ದೇವೆ. ಹಾಗೇನಾದರೂ ತೊಂದರೆ ಬಂದರೆ ತಕ್ಕ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆ. ಎರಡನೆಯದು, ಯಾರು ಯಾರಿಂದ ಜಮೀನುಗಳನ್ನು ತೆಗೆದುಕೊಂಡಿದ್ದೇವೋ ಅವರಿಗೆಲ್ಲಾ ನ್ಯಾಯವಾದಂಥ ಬೆಲೆ ಕೊಟ್ಟು ಪರಿಹಾರ ಕೊಟ್ಟಿದ್ದೇವೆ. ಆ ಪರಿಹಾರವನ್ನು ಉಪಯೋಗ ಮಾಡಿಕೊಂಡು ಅವರು ಬೇರೆ ಉದ್ಯಮಗಳು ಮತ್ತು ವ್ಯಾಪಾರವನ್ನು ಮಾಡಿಕೊಂಡು ಜೀವನ ಮಾಡಿಕೊಳ್ಳುವುದಕ್ಕೆ ಸಾಕಷ್ಟು ಅವಕಾಶ ಅವರಿಗೆ ಇದೆ. ಮೊದಲಿಂದಲೂ, ಕೂಲಿಗಾರರು, ಜಮೀನು ಇಲ್ಲದೆ ಇರುವ ವಿಷಯದಲ್ಲಿ ಯೋಚನೆ ಮಾಡಬೇಕಾಗಿದೆಯೇ ವಿನಃ ವಿಶೇಷ ರೀತಿಯಲ್ಲಿ ಸೌಲಭ್ಯವನ್ನು ಹೊಂದಿರತಕ್ಕ ಜನಗಳ ವಿಚಾರ ನಾವು ಮಾಡಬೇಕಾಗಿಲ್ಲ. ಸಣ್ಣ ಪುಟ್ಟ ಕೈಗಾರಿಕೆಗಳನ್ನು ಮಾಡಿ ಅವರ ಜೀವನಕ್ಕೆ ಮಾರ್ಗ ಮಾಡಿಕೊಡಬೇಕು ಎನ್ನುವ ಬಗ್ಗೆ ಒತ್ತಡ ಇದೆ. ಅದನ್ನು ಸಹಾನುಭೂತಿಯಿಂದ ಸರ್ಕಾರ ಪರಿಶೀಲನೆ ಮಾಡುತ್ತಿದೆ. ಇಷ್ಟು ವಿಷಯ ಮಾನ್ಯ ಸದಸ್ಯರಿಗೆ ತೃಪ್ತಿ ಉಂಟುಮಾಡುತ್ತದೆ ಎಂದು ತಿಳಿದುಕೊಂಡಿದ್ದೇನೆ.

ಶ್ರೀ ಹಂಜಿ ಶಿವಣ್ಣ.—ಜಮೀನು ಮುಳುಗಡೆ ಆದವರಿಗೆ ಭದ್ರಾ ನಾಲಾ ಕೆಳಗೆ ಜಮೀನನ್ನು ಸರಿಯಾಗಿ ಹಂಚಿದ್ದೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಜಮೀನನ್ನು ದರಖಾಸ್ತು ಮೂಲಕ ಕೊಡುವ ರೂಲ್ಸ್‌ನಲ್ಲಿ ಎಕ್ಸ್‌ಪ್ರೊಪ್ರಿಯೇಟೆಡ್ ರೈಟ್ ಮೇಲೆ ಪ್ರಾಧಾನ್ಯತೆ ಕೊಡಬೇಕು ಎಂದು ನಿಗದಿಯಾಗಿದೆ. ಮುಳುಗಡೆ ರೈತರಿಗೆ ಜಮೀನು ಕೊಡತಕ್ಕ ವಿಷಯದಲ್ಲಿ ಹರಿಜನರಿಗಿಂತಲೂ ಹೆಚ್ಚಿನ ಪ್ರಾಧಾನ್ಯತೆ ಮೊಟ್ಟಮೊದಲು ಕೊಟ್ಟಿದೆ. ಯಾರು ದುಡ್ಡು ಬೇಕು ಎಂದು ಕೇಳಿದ್ದಾರೆ ಅವರಿಗೆ ದುಡ್ಡು ಕೊಟ್ಟಿದ್ದೇವೆ ಯಾರು ಜಮೀನು ಬೇಕು ಎಂದು ಕೇಳಿದರು ಅವರಿಗೆ ಜಮೀನು ಕೊಟ್ಟಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಮುಳುಗಡೆ ರೈತರಿಗೆ 10-12 ವರ್ಷದ ಒಳಗಡೆ ಪುನರ್ ವ್ಯವಸ್ಥೆ ಮಾಡದೆ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ? ಸಾಗುವಳಿ ಚೀಟಿ ಕೊಡದೆ ಇರತಕ್ಕ ಘಟನೆಗಳು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮುಳುಗಡೆ ರೈತರ ವಿಷಯದಲ್ಲಿ ಸರ್ಕಾರಕ್ಕೆ ಸಹಾನುಭೂತಿ ಇದೆ. ಯತ್‌ಕಿಂಚಿತ್ ತೊಂದರೆ ಆದಪಕ್ಷದಲ್ಲಿ ಸರ್ಕಾರದ ಗಮನಕ್ಕೆ ತಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್.—ಮಾನ್ಯ ಮಂತ್ರಿಗಳು ಒಂದು ಫರ್ಲಾಂಗ್ ಅರ್ಧ ಫರ್ಲಾಂಗ್ ದೂರದಲ್ಲಿ ನೀರು ಇದೆ ಎಂದು ಹೇಳಿದರು. ಹೊಸನಗರ ಮಧ್ಯೆ ಭಾಗದಿಂದ ಅಳತೆ ತೆಗೆದುಕೊಂಡಿದ್ದಾರೆ ಎಂದು ಕಾಣುತ್ತದೆ. ಮನೆ ಮುಂಭಾಗದಲ್ಲಿ ಇರುವ ಪ್ರದೇಶದಲ್ಲಿ ನೀರು ಇದೆ. ಇದರಿಂದ ಜನರ ಆರೋಗ್ಯಕ್ಕೆ ತೊಂದರೆಯಾಗುವುದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆರೋಗ್ಯಕ್ಕೆ ತೊಂದರೆ ಆಗುವ ಸಂದರ್ಭ ಪರಿಶೀಲನೆ ಮಾಡುತ್ತೇವೆ. ತೊಂದರೆಯಾಗುತ್ತದೆ ಎಂದು ಗಮನಕ್ಕೆ ಬಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾ ಇರುವಾಗ ಪುನಃ ಒತ್ತಾಯ ಮಾಡಿ ಹೇಳಿದರೆ ಒಂದಕ್ಕೆರಡರಷ್ಟು ಒತ್ತಡ ಸಿಕ್ಕುವುದಿಲ್ಲ.

(*iii*) re : *Termination of Services of 350 Teachers in Gulbarga*

SRI DHARMASINGH NARAYANA SINGH (Jewargi).—I call the attention of the Minister for Education to the termination of services of about 350 teachers by the Deputy Director of Public Instruction, Gulbarga.

SRI A. R. BADARINARAYANA (Minister for Education).—I state as follows :

During the year, 1971-72, 345 local candidates were working in Gulbarga district in Primary Schools as Training substitutes in training vacancies and as per Rules their appointments were terminated on the 31st of March 1972. Their appointments were purely temporary, as they were recruited merely to fill up the training vacancies.

Now, according to Government Order dated 5th June 1972 local candidates appointed in any vacancy could be continued in the same vacancies until the regular recruitment to fill up these Posts is made by the District Level Recruitment Committees set up for this purpose. Accordingly, the Deputy Director of Public Instruction, Gulbarga is now taking action to re-appoint these local candidates to the available vacancies till such time as the District Level Recruitment Committee completes its work. However, it may be mentioned that the number of vacancies now no longer remains at 345. It has now been reduced to 225 as certain retrenched local candidates from Raichur District have been accommodated as per instructions of the Divisional Commissioner, Gulbarga and the total number of teachers undergoing training has also, decreased. Consequently the vacancies now stand at 225 alone. The District Level Recruitment............

Sri D. B. KALMANKAR.—The hon. Minister was pleased to state that the number of vacancies now is not 345 but 225. It was also stated that the Deputy Director of Public Instruction, Gulbarga, is taking action to see that local candidates from Raichur District are taken. May I know how they have been accommodated ?

Sri A. R. BADARINARAYANA.—The District Level Recruitment Committee has not finished its selections. Pending its selection, these local candidates have been reappointed.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಡಿಸ್ಟ್ರಿಕ್ಟ್ ಲೆವೆರ್ ರಿಕ್ರೂಟ್‌ಮೆಂಟ್ ಕಮಿಟಿ ಗುಲ್ಬರ್ಗದಲ್ಲಿ ಕೆಲಸ ಮಾಡುತ್ತಾ ಇದೆ ಎಂದು ಹೇಳಿದಿರಿ. ಎಲ್ಲಾ ಡೆಪ್ಯುಟಿ ಡೈರೆಕ್ಟರ್ಸ್ ಬಿಜಾಪುರದವರು ಇದ್ದ ಕಾರಣ ಸುಳ್ಳು ಎಂಪ್ಲಾಯ್‌ಮೆಂಟ್ ಸರ್ಟಿಫಿಕೇಟ್ ತಂದು ಕೆಲಸಕ್ಕೆ ಹಾಕುತ್ತಿದ್ದಾರೆ. ಗುಲ್ಬರ್ಗ ಡಿಸ್ಟ್ರಿಕ್ಟ್‌ನಲ್ಲಿ ಈಗಾಗಲೇ ಕೆಲಸ ಮಾಡುತ್ತಾ ಇದ್ದ ಟೀಚರ್ಸ್‌ಗೆ ಕೆಲಸ ಸಿಕ್ಕಲು ಕಷ್ಟವಾಗಿದೆ. ಆದಕಾರಣ ನಮ್ಮಲ್ಲಿ ಮೊದಲು ಸೇರಿದ 345 ಟೀಚರ್ಸ್ ಏನು ಕೆಲಸ ಮಾಡುತ್ತಾ ಇದ್ದರು ಅವರಿಗೆ ಮತ್ತೆ ಅಪ್ಲಿಕೇಷನ್ ಏತಕ್ಕೆ ಕಾರ್‌ಫಾರ್ ಮಾಡುತ್ತೀರಿ ? ಅವರಿಗೆ ಮೊದಲು ಕೆಲಸ ಕೊಡಬೇಕಾಗಿತ್ತು.

Sri A. R. BADARINARAYANA.—The recruitment rules are not like that. When applications are invited for a particular post everyone is entitled to apply. It is not as is only the retrenched candidates are to apply.

Sri C. M. ARUMUGAM.—The Hon. Minister stated that there is no provision in the rules to give preference to the retrenched teachers. Under the Industrial Disputes Act only retrenched people are given top priority. Does the Hon. Minister know this ?

Sri A. R. BADARINARAYANA.—What I said was that the retrenched teachers also stand equal chance along with others. But others are not barred from applying.

Sri D. B. KALMANKAR.—The Minister stated in his statement that certain retrenched local candidates from Raichur District have been accommodated at the instructions of the Divisional Commissioner. If that is so, why the remaining retrenched teachers also should not be accommodated ?

Sri A. R. BADARINARAYANA.—There were some retrenched candidates. Of them, some have been accommodated and the others will be made to appear before the District Level Recruitment Committee and they will naturally get preference.

Sri BAPU GOWDA RAYAPPA.—It is necessary to interview all these 345 candidates for filling up the vacancies !

Sri A. R. BADARINARYANA.—It is absolutely necessary. These retrenched candidates should also appear before the District level recruitment committee and take their chance.

Sri PRABHAKAR TELKAR.—There are so many villages without schools. Whether the Government will open schools in such villages and accommodate these retrenched teachers in Gulbarga District ?

Sri A. R. BADARINARAYANA.—This call attention notice does not pertain to that.

Sri MALLIKARJUN KHARGE.—The Minister as stated that some candidates have been accommodated as per the instructions of the Divisional Commissinoer. Then why should the District Level Recruitment Committee interview other candidates ?

Sri A. R. BADARINARYANA.—The District level recruitment committee has not made the selections. There were some vacancies and those vacancies were filled up according to the directions of the Divisional Commissioner temporarily.

Sri D. B. KALMANKAR.—In view of the fact that there are many schools which have no teachers will the Government consider a suggestion to accommodate these retrenched teachers is such schools ?

Sri A. R. BADARINARAYANA.—If the District level recruitment committee has a list of selected candidates, they have got to be preferred first before these people are appointed.

MADAM SPEAKER.—Now we shall take up the next item.

Supply of English Question Papers to Kannada Medium Students in Mysore and Bangalore Universities

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಅಧ್ಯಕ್ಷರೇ, ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ ಮಾಧ್ಯಮಗಳಲ್ಲಿ ಪಾಠವನ್ನು ಹೇಳಿಸಿಕೊಂಡ ವಿದ್ಯಾರ್ಥಿಗಳಿಗೆ ಪರೀಕ್ಷೆಗಳಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಪ್ರಶ್ನಪತ್ರಿಕೆಗಳನು ಕೊಟ್ಟಿರುವುದರಿಂದ ಬಹಳ ವಿದ್ಯಾರ್ಥಿಗಳು ಫೇಲಾಗಿದ್ದಾರೆ. ಇದು ಬಹಳ ಗಂಭೀರವಾದ ಪ್ರಶ್ನೆ. ಮೊನ್ನೆ ಮಾರ್ಚಿ ತಿಂಗಳಲ್ಲಿ ಈ ರೀತಿಯಾಗಿದೆ.

ಅಧ್ಯಕ್ಷರು.—ಇದರ ಬಗ್ಗೆ ನೋಟೀಸ್ ಕಳುಹಿಸಿ ಕೊಟ್ಟರೆ ಅದನ್ನು ನಾನು ನೋಡುತ್ತೇನೆ.

Sri A. R. BADARINARAYANA.—This particular matter was brought to my notice by hon. member Sri Konandur Lingappa also just now. I will look into the matter.

Scarcity of Kerosene in Bangalore City.

Sri C. M. ARUMUGAM (K.G.F.).—I have a submission to make, with regard to scarcity of Kerosene in Bangalore City. The City of Bangalore requires about 1 lakh 20 thousand litres of Kerosene per day. There are two contractors, *viz.*, Sri Appanna and Sri K. K. Murthy. Mr Appanna has been given 60,000 litres of Kerosene per day and Sri K. K. Murthy has been given 30,000 litres of Kerosene per day for supplying the same to the people in Bangalore City. Mr. K. K. Murthy, the dealer in Kerosene supply, who has got the quota of 30,000 litres per day is selling kerosene in places like Ramanagaram, Channapatna and other places without licennce. He had been warned by the Deputy Commissioner of Bangalore also for the same reasons.

(SRI C. M. ARUMUGAM)

Mr. K. K. Murthy is also the agent for Indian Oil Company. These two dealers with a quota of 90,000 litres per day are not selling kerosene in Bangalore but they are selling it outside Bangalore City. Therefore, I call the attention of the Hon. Minister and request her, through the Speaker, to take immediate action on these two contractors. Mr. K. K. Murthy is a very famouse man and he is entering every field. Further, for many years he was selling kerosene without licence. But when the Deputy Commissioner of Bangalore District warned him he got the licence within three minutes. This is also an important point. I want to bring this to the notice of the Government for taking immediate action in the matter

ಶ್ರೀ ವಾಟಾಳ್ ನಾಗರಾಜ್.—ಸೀಮೆಯೆಣ್ಣೆ ಏಜೆನ್ಸಿ ಮಾನ್ಯ ಶ್ರೀ ಕೆ. ಕೆ. ಮೂರ್ತಿಗಳಿಗೆ ಬಹಳ ವರ್ಷಗಳಿಂದ ಇದೆ. ಹಿಂದೆ ಇವರು ಇದನ್ನು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಿ ಮಂಡ್ಯದಲ್ಲಿ ಕೇಸ್ ಆಗಿದೆ. ಮತ್ತೆ ಅವರಿಗೇ ಕೊಡುತ್ತಿದ್ದಾರೆ. ಅಂತಹ ದೊಡ್ಡವರು ಇವರು. ಪ್ರಭಾವ ಯುತವಾದ ವ್ಯಕ್ತಿ. ಎಣ್ಣೆಯನ್ನು ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರುತ್ತಾರೆ. ಅಧಿಕಾರಿಗಳೇ ಇವರಿಗೆ ಹೆದರುತ್ತಾರೆ. ಅವರು ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರುತ್ತಿರುವುದರಿಂದ ಬೆಂಗಳೂರು ಸಿಟಿಯ 20 ಲಕ್ಷ ಜನರಿಗೆ ಬಹಳ ತೊಂದರೆಯಾಗಿದೆ. ಹೊರಗಡೆಗೆ ಇದನ್ನು ಕಳುಹಿಸುವುದಕ್ಕೆ ಅವರೇ ಕಂಟ್ರಾಕ್ಟರ್. ಆದ್ದರಿಂದ ಸರ್ಕಾರದವರು ಇವರ ಬಗ್ಗೆ ಯಾವ ಪ್ರಭಾವಕ್ಕೂ ಒಳಗಾಗದೆ ತಕ್ಕ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಸೀಮೆಯೆಣ್ಣೆಯ ಬಗ್ಗೆ ನಡೆಯುತ್ತಿರುವ ಜಾಲ ಏನಿದೆಯೋ ಅದು ಬಹಳ ಅನ್ಯಾಯವಾಗಿದೆ. ಅವರು ಅನಾವಶ್ಯಕವಾಗಿ ಸ್ಕೇರ್ಸಿಟಿಯನ್ನು ಉಂಟು ಮಾಡುತ್ತಿದ್ದಾರೆ. ಸೀಮೆಯೆಣ್ಣೆ ತರತಕ್ಕ ವ್ಯಾಗನ್ನುಗಳನ್ನು ಜಾಲಹಳ್ಳಿ ರೈಲ್ವೆಸ್ಟೇಷನ್ನಿನಲ್ಲಿ ನಿಲ್ಲಿಸಿ ಈ ಎರಡು ದಿವಸಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸ್ಕೇರ್ಸಿಟಿ ಉಂಟುಮಾಡಿದುದರ ಪರಿಣಾಮ ವಾಗಿ ಇವತ್ತು ಸುಮಾರು 60—65 ಜನರು ಮಲ್ಲೇಶ್ವರಂನಿಂದ ಒಂದು ಲೀಟರಿಗೆ 90 ಪೈಸೆ ಕೊಟ್ಟು ಸೀಮೆಯೆಣ್ಣೆಯನ್ನು ಕೊಂಡು ತರುತ್ತಿದ್ದಾರೆ. ಹಿಂದೆಯೂ ಅನಾವಶ್ಯಕವಾಗಿ ಹೀಗೆಯೇ ಮಾಡಿದ್ದರು. ಇವರು ಒಬ್ಬ ಏಜೆಂಟಾಗಿ ಈ ದೇಶದಲ್ಲಿ ಅನಾವಶ್ಯಕವಾಗಿ ಸೀಮೆಯೆಣ್ಣೆಯ ಕ್ಷಾಮವನ್ನು ಉಂಟುಮಾಡುತ್ತಿದ್ದಾರೆ. ಅದಕ್ಕೆ ಸರ್ಕಾರದವರು ನಿಗಾ ತೆಗೆದುಕೊಳ್ಳಬೇಕು!

ಶ್ರೀ ಸಿ. ಬೈರೇಗೌಡ (ವೇಮಗಲ್).—ಇತ್ತೀಚೆಗೆ ಪ್ರತಿಯೊಂದು ಲೀಟರಿಗೆ ಒಬ್ಬೊಬ್ಬ ಪೋಲೀಸ್‌ನವರಿಗೆ ಐದು ಪೈಸೆ ಕೊಡಬೇಕೆಂದು ಹೇಳಿದ್ದಾರೆ.

ಅಧ್ಯಕ್ಷರು.—ಹಾಗೆ ಸದಸ್ಯರು ಯಾರಿಗೆ ಕೊಡಿಸಿದ್ದಾರೆ? ತಮಗೆ ಸರಿಯಾಗಿ ಗೊತ್ತಾಗದ ಹೊರತು ಆ ರೀತಿ ಹೇಳಬಾರದು.

ಶ್ರೀ ಸಿ. ಬೈರೇಗೌಡ.—ಆ ರೀತಿ ಕೊಡುತ್ತಿದ್ದರೆ ಇಲ್ಲಿ ಅದನ್ನು ತಿಳಿಸಬೇಕಲ್ಲವೇ!

ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ನನ್ನ ಕಾಲ್ ಅಟೆನ್‌ಷನ್ ನೋಟೀಸ್ ಏನಾಯಿತು!

ಅಧ್ಯಕ್ಷರು.—ಇವತ್ತು ಕಳುಹಿಸಿದ್ದು ಇವತ್ತೇ ಬರುತ್ತದೆಯೇ?

ಶ್ರೀ ಎಸ್. ಬಂಗಾರಪ್ಪ (ಸೊರಬ).—ನಮಗೆ ಗೊತ್ತಿದೆ ಅವರು ಏನು ಹೇಳಿಕೆಯನ್ನು ಕೊಡುತ್ತಾರೆ ಎಂಬುದು. ಬೇಕಾದರೆ ನಾನೇ ಅಂದಾಜುಮಾಡುತ್ತೇನೆ. ಇಲ್ಲಿ ಒಬ್ಬ ವ್ಯಕ್ತಿಯ ಹೆಸರನ್ನು ಹೇಳಿದರು. ಶ್ರೀ ಕೆ. ಕೆ. ಮೂರ್ತಿಯವರ ಹೆಸರು ಮೊಟ್ಟಮೊದಲು ಈ ಸದನದಲ್ಲಿ ಬರುತ್ತಾ ಇಲ್ಲ. ಹಲವಾರು ಬಾರಿ ಬರುತ್ತಿದೆ. ಆ ಮಹನೀಯರ ವಿಷಯ ಬಹಳ ಇದೆ. ಅವರ ಬಗ್ಗೆ 50 ಸಾರಿ ಬಂದಿದೆಯೆಂದು ಹೇಳಿದಮೇಲೆ ಇವತ್ತೂ ಒಂದು ಸಾರಿ ಹೇಳಬಹುದು. ಇನ್ನೂ ಬೇಕಾದರೆ ಅವರ ವಿಷಯ ಒಂದು ಸಾವಿರ ಸಾರಿಯಾದರೂ ಹೇಳಬೇಕಾಗುತ್ತದೆ.

ಅಧ್ಯಕ್ಷರು.—ಈಗ ಮಾನ್ಯ ಶ್ರೀ ಆರ್ಮುಗಂ ಅವರು ಅದಕ್ಕೆ ಸಂಬಂಧಪಟ್ಟಹಾಗೆ ಅವರಿಗೆ ಆ ಏಜೆನ್ಸಿ ಇದೆಯೆಂದು ಹೇಳಿದರು. ಈ ಪ್ರಪಂಚದಲ್ಲಿ ಯಾರೇ ಆಗಲಿ ಒಬ್ಬರಿಗೊಬ್ಬರು ಮಿತ್ರರು ಆಗಬೇಡವೇ?

ಶ್ರೀ ಎಸ್. ಬಂಗಾರಪ್ಪ.—ಅವರ ಚರಿತ್ರೆ ಹೇಳುವುದಕ್ಕೆ ಹೋದರೆ ಬಹಳ ಅಸಾಧ್ಯವಾಗುತ್ತದೆ. ಬರೀ ಅವರಿಗೆ ಸಂಬಂಧಪಟ್ಟಹಾಗೆ ಸೀಮೆಯೆಣ್ಣೆ ವಿಷಯವಾಗಿ ಮಾತ್ರ ಈಗ ಹೇಳುತ್ತೇವೆ.

ಅಧ್ಯಕ್ಷರು.—ಸುಮ್ಮನೆ ಅವರ ಚರಿತ್ರೆ ಇಲ್ಲಿ ಏಕೆ ಬೇಕು ! ಅವರ ಚರಿತ್ರೆ ಬಗ್ಗೆ ಸಂಬಂಧ ನಿಮಗೂ ಇಲ್ಲ, ನಮಗೂ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ನಮಗೆ ಇದೆ. ಅವರು ಬ್ಲಾಕ್‌ಮಾರ್ಕೆಟಿಯರ್, ಅವರು ಲೈಸೆನ್ಸ್ ತೆಗೆದುಕೊಂಡಿಲ್ಲ. ಅವರು ಮಾನ್ಯ ಮುಖ್ಯಮಂತ್ರಿಗಳ ಅಪ್ಪರು.

Statement by the Minister of State for Food and Civil Supplies
re : *Shartage of Kerosene*

† ಶ್ರೀಮತಿ ಇ. ಇ. ವಾಜ್. (ಆಹಾರ ಮತ್ತು ನಿತ್ಯೋಪಯೋಗಿ ಶಾಖೆಗಳ ರಾಜ್ಯ ಮಂತ್ರಿಗಳು).—ಈಗ ನಮ್ಮ ಮಾನ್ಯ ಸದಸ್ಯರು ಅನೇಕರು ಏನೋ ಒಂದು ಅಪಾದನೆಯನ್ನು ತಂದರು. ಅದರ ಬಗ್ಗೆ ನಾನು ಹೇಳುವುದಾದರೆ ಮಾನ್ಯ ಶ್ರೀ ಕೆ. ಕೆ. ಮೂರ್ತಿಯವರು ಒಬ್ಬರೇ ಏಜೆಂಟಲ್ಲ. ಅಂತಹವರು 11 ಜನರು ಇದ್ದಾರೆ. ಅವರಿಗೆ ಲೈಸೆನ್ಸ್ ಕೊಟ್ಟಿದ್ದು ಹಿಂದಿನ ಸರ್ಕಾರ. ನಾವು ಕೊಟ್ಟಿದ್ದಲ್ಲ. ಈಗ ಸೀಮೆಯೆಣ್ಣೆ ಅಭಾವ ಏನಿದೆಯೋ ಅದು ನಿಜವಾಗಿಯೂ ಇವತ್ತು ಒಂದು ದಿವಸ ಬಿಟ್ಟರೆ ನಂತರ ತೊಂದರೆಯಾಗಲಾರದು. ಹಿಂದಿನ ತಿಂಗಳಲ್ಲಿ 29ನೇ ಮತ್ತು 30ನೇ ತಾರೀಖನಂದು ಸಾಕಷ್ಟು ವ್ಯಾಗನ್‌ಗಳು ಬರಲಿಲ್ಲ. ಅದರಿಂದ ಆ ಎರಡು ದಿವಸಗಳು ಸ್ವಲ್ಪಮಟ್ಟಿಗೆ ತೊಂದರೆಯೇನೋ ಆಯಿತು. ನಾನೇ ಡಿಪೋಗೆ ಹೋಗಿ 24 ತಾಸುಗಳವರೆಗೆ ಖುದ್ದಾಗಿ ಈ ವಿಚಾರವಾಗಿ ಗಮನಕೊಟ್ಟಿದ್ದೇನೆ. ಜನರಿಗೆ ಇರತಕ್ಕ ತೊಂದರೆಯನ್ನು ಆದಷ್ಟು ಮಟ್ಟಿಗೆ ಜಾಗ್ರತೆಯಾಗಿ ನಿವಾರಿಸಬೇಕೆಂಬ ದೃಷ್ಟಿಯಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತವಾಗಿ ಸಲಹೆಗಳನ್ನು ಕೊಟ್ಟಿದ್ದೇನೆ. ಆದರೂ ಅನೇಕರಿಗೆ ಪ್ಯಾನಿಕ್ ಬಂತು, ಸೀಮೆಯೆಣ್ಣೆ ಬರಲಿಲ್ಲವೆಂದು ಭಯ ಬಂತು. ಅದು ಸಹಜ. ಈ ರೀತಿ ಯಾವಾಗಲೂ ಆಗಿಲ್ಲ. ಇಷ್ಟು ತೊಂದರೆಯಾಗುವುದಕ್ಕೆ ಒಂದು ಮುಖ್ಯ ಕಾರಣವೇನೆಂದರೆ, ಸಾಮಾನ್ಯವಾಗಿ ಕೇವಲ 5 ಲೀಟರುಗಳನ್ನು ಕೊಳ್ಳುವವರು ಸುಮಾರು 40–50 ಲೀಟರುಗಳನ್ನು ಕೊಳ್ಳುತ್ತಿದ್ದಾರೆ. ಮನೆಯಲ್ಲಿ 8–10 ಜನಗಳಿದ್ದರೆ ಅವರೆಲ್ಲರನ್ನೂ ಕ್ಯೂನಲ್ಲಿ ನಿಲ್ಲಿಸಿ ಪಡೆಯುತ್ತಿರುವುದು ಜಾಸ್ತಿಯಾಗಿದೆ. ಯಾರಾದರೂ ಬ್ಲ್ಯಾಕ್ ಮಾರ್ಕೆಟ್ಟಿನಲ್ಲಿ ಮಾರಿದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಬೇಕೆಂದು ಆ ಅಧಿಕಾರಿಗಳ ಫೋನ್ ನಂಬರನ್ನೂ ಸಹ ತಿಳಿಸಲಾಗಿದೆ. ಎರಡು ಮೂರು ದಿವಸಗಳಲ್ಲಿ ಇದು ಸರಿಹೋಗುತ್ತದೆ. ಯಾರೇ ಆಗಲೀ ಅದನ್ನು ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರುತ್ತಿದ್ದರೆ, ಅಂತಹ ವಿಷಯ ಸರ್ಕಾರದ ಗಮನಕ್ಕೆ ಬಂದರೆ ನಾವು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆಂಬ ಭರವಸೆಯನ್ನೂ ಸಹ ಕೊಟ್ಟಿದ್ದೇನೆ. ಇವೊತ್ತು 6 ಘಂಟೆಗೆ ಟ್ರೈನ್ ಬರಬೇಕಾಗಿತ್ತು. ಡಿಲೇ ಆಯಿತು. 11 ಘಂಟೆಗೆ ಇಲ್ಲಿಗೆ ಬರಬೇಕಾಗಿತ್ತು. ಟ್ರೈನು ಮಾಲೂರಿನಲ್ಲಿಯೇ ನಿಂತುಹೋಗಿದೆ. ರೈಲುಕಂಬಿ ಹಾದಿ ರಿಪೇರಿ ಮಾಡುವ ಸಲುವಾಗಿ ಒಂದು ಘಂಟೆ ಕಾಲ ರೈಲು ಹೊತ್ತಾಗಿ ಬರುತ್ತದೆಂದು ಹೇಳಿದ್ದಾರೆ. ಐ. ಓ. ಸಿ. ಅವರು ನಮಗೆ ಸೀಮೆಯೆಣ್ಣೆಯನ್ನು ಕೊಚ್ಚಿನ್‌ನಿಂದ ಹಾಗೂ ಮಂಗಳೂರಿನಿಂದ ಕಳುಹಿಸುತ್ತಾರೆ. ಕೊಚ್ಚಿನ್ ರಿಫೈನರಿಯಿಂದಲೂ ನಮಗೆ ಸಪ್ಲೈ ಯಾವಾಗ ಬರುತ್ತದೆಂಬುದನ್ನೂ ಸಹ ತಿಳಿಸಲ್ಲಿಲ್ಲ. ಅವರೂ ನಮಗೆ ಒದಗಿಸಬೇಕು. ಮಾನ್ಯ ಸದಸ್ಯರು ಹೇಳಿದ ಪ್ರಕಾರ ಕೆಲವರು ಲೈಸೆನ್ಸ್ ಇಲ್ಲದೆ ಮಾರುತ್ತಿದ್ದರೆಂಬ ಬಗ್ಗೆ ವಿಚಾರಮಾಡಲಾಗುತ್ತದೆ. ಸೀಮೆಯೆಣ್ಣೆ ನಮಗೆ ಬೇಕಾದಷ್ಟು ಇರುವಾಗ, ಯಾರು, ಯಾವಾಗ ಹೇಗೆ ಮಾರುತ್ತಾರೆಂಬುದನ್ನು ಸಾಮಾನ್ಯವಾಗಿ ಗಮನಕೊಡುವುದಿಲ್ಲ. ಇಂಥಾದ್ದು ಯಾವುದಕ್ಕೂ ಹೆಚ್ಚಿಗೆ ಗಮನಕೊಡುವುದಕ್ಕಾಗುವುದಿಲ್ಲ. ಈಗ ಅಭಾವ ಬಂದದ್ದರಿಂದ, ಅವರು ಹಾಗೆ ಮಾಡಿದರು ಇವರು ಹೀಗೆ ಮಾಡಿದರೆಂದು ಹೇಳುತ್ತಾರೆ. ಸಾಮಾನ್ಯವಾಗಿ ಹೇಳುವುದಾದರೆ ಲೈಸೆನ್ಸ್ ಇಲ್ಲದೆ ಮಾರುವುದು ತಪ್ಪು. ಆ ರೀತಿ ಮಾರುತ್ತಿರುವುದನ್ನು ಕೂಡಲೇ ನಿಲ್ಲಿಸಬೇಕೆಂದು ಸೂಚನೆ ಕೊಟ್ಟಿದೆ. ಸೀಮೆಯೆಣ್ಣೆಯನ್ನು ಮಾರುವವರು ಯಾವಾಗಲೂ ಲೈಸೆನ್ಸ್ ಪಡೆದಿರಬೇಕು. ಆ ರೀತಿ ಲೈಸೆನ್ಸ್ ಪಡೆದಿರುವವರೆಲ್ಲರೂ ಅದನ್ನು ನಮ್ಮ ಕಾರ್ಪೊರೇಷನ್ ಎಲ್ಲೆಯೊಳಗೇ ಮಾರಬೇಕು. ಎಣ್ಣೆ ಬೇಕಾದಷ್ಟು ನಮ್ಮಲ್ಲಿ ಸಾಕಷ್ಟು ಸ್ಟಾಕ್ ಇಲ್ಲದೇ ಇದ್ದುದರಿಂದ ಈಗ ಸ್ವಲ್ಪ ತೊಂದರೆಯಾಯಿತು, ಆದಷ್ಟು ಜಾಗ್ರತೆಯಾಗಿ ಸೀಮೆಯೆಣ್ಣೆಗೆ

(ಶ್ರೀಮತಿ ಇ. ಇ. ವಾಜ್)

ಇರತಕ್ಕ ಅಭಾವವನ್ನು ಹೋಗಲಾಡಿಸುವುದಕ್ಕೆ ಎಲ್ಲ ಪ್ರಯತ್ನಗಳನ್ನು ಸರಕಾರದವರು ಈಗಾಗಲೇ ಮಾಡುತ್ತಿದ್ದಾರೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಾನು ಇಷ್ಟು ಹೇಳಿದ ಮೇಲೆ ಮಾನ್ಯ ಸದಸ್ಯರೆಲ್ಲರೂ ಈಗ ಸಮಾಧಾನ ಮಾಡಿಕೊಳ್ಳಬಹುದೆಂದು ನನಗನಿಸುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಆ ವ್ಯಾಗನ್ ಸಿಕ್ ವ್ಯಾಗನ್ ಎಂಬುದಾಗಿ ಏಜೆಂಟ್ ಮತ್ತು ರೈಲ್ವೆ ಸಿಬ್ಬಂದಿಯವರು ಹೇಳಿದ್ದು......

ಶ್ರೀ ವಾಟಾಳ್ ನಾಗರಾಜ್.—ಇವರು ಆಹಾರ ಸಚಿವರಾದಮೇಲೆ ಈಗ ಸಕ್ಕರೆಗೆ ಸ್ಕೇರ್ಸಿಟಿ ಇದೆ. ಟೈರ್‌ಗೆ ಸ್ಕೇರ್ಸಿಟಿ ಇದೆ, ಸೀಮೆಯೆಣ್ಣೆಗೆ ಸ್ಕೇರ್ಸಿಟಿ ಇದೆ. ನಾಳೆ ಉಪ್ಪಿಗೂ ಅಭಾವ ಬರುತ್ತದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಇವರ ಪೋರ್ಟ್‌ಫೋಲಿಯೋವನ್ನು ಚೇಂಜ್ ಮಾಡಿದರೆ ಬಹಳ ಒಳ್ಳೆಯದು. ಅವರಿಗೆ ಏನಾದರೂ ಬೇರೆ ಪೋರ್ಟ್‌ಫೋಲಿಯೊ ಕೊಡುವುದು ಒಳ್ಳೆಯದು.

2–30 P.M.

ಶ್ರೀ ಸಿ. ಬೈರೇಗೌಡ.—ಅಧ್ಯಕ್ಷರೇ, ಈಗ ಬೇಬಿ ಫುಡ್ ಸಿಗುತ್ತಾ ಇಲ್ಲ. ಅದನ್ನು ಬ್ಲಾಕ್‌ಮಾರ್ಕೆಟ್ಟಿನಲ್ಲಿ ಮಾರುತ್ತಿದ್ದಾರೆ. ಅದರ ಬಗ್ಗೆ ಸರ್ಕಾರದವರು ಜಾಗ್ರತೆಯಾಗಿ ಕ್ರಮ ತೆಗೆದುಕೊಳ್ಳಬೇಕು. ಈ ವಿಚಾರದಲ್ಲಿ ಮಂತ್ರಿಗಳು ಉತ್ತರ ಹೇಳಬೇಕು.

Mysore (Bombay and Hyderabad Areas) Religious and Charitable Inams Abolition Bill, 1972

Motion to Consider

(Debate Continued)

ಅಧ್ಯಕ್ಷರು:—ಈಗ 'ದಿ ಮೈಸೂರು (ಬಾಂಬೆ ಮತ್ತು ಹೈದ್ರಾಬಾದ್ ಪ್ರದೇಶಗಳ) ರಿಲಿಜಿಯಸ್ ಮತ್ತು ಛಾರಿಟೆಬಲ್ ಇನಾಂ ಅಬಾಲಿಷನ್ ಬಿಲ್ 1972 ಇದರ ಮೇಲೆ ಚರ್ಚೆ ಪ್ರಾರಂಭವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೆ: ಮಾನ್ಯ ರೆವಿನ್ಯೂ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರತಕ್ಕ ಹೈದ್ರಾಬಾದ್ ಮತ್ತು ಮುಂಬೈ ಪ್ರದೇಶಗಳಿಗೆ ಸಂಬಂಧಪಟ್ಟ ರಿಲಿಜಿಯಸ್ ಮತ್ತು ಛಾರಿಟೆಬಲ್ ಇನಾಂ ರದ್ದಿಯಾತಿ ಮಸೂದೆಯನ್ನು ಸಭೆಯ ಮುಂದೆ ಮಂಡಿಸುವುದಕ್ಕೆ ಪೂರ್ವಭಾವಿಯಾಗಿ ಅವರು ಇದನ್ನು ಸುಧೀರ್ಘವಾಗಿ ಪರಿಶೀಲನೆ ಮಾಡಿ ಇದನ್ನು ತಂದಿಲ್ಲ ಅನ್ನುವುದು ನನಗೆ ಈ ಮಸೂದೆಯನ್ನು ಓದಿದ ಮೇಲೆ ಗೊತ್ತಾಯಿತು. ಹಳೇ ಮೈಸೂರಲ್ಲಿ ಈಗಾಗಲೇ ಇಂಥಾ ಒಂದು ಕಾನೂನು ಜಾರಿಯಲ್ಲಿದೆ. ಇಲ್ಲಿ ಅದು 1955 ರಲ್ಲೇ ಜಾರಿಗೆ ಬಂದಿತ್ತು. ಹಾಗೆ ಇಲ್ಲಿ ಒಂದು ಕಾನೂನು ಈಗಾಗಲೇ ಜಾರಿಯಲ್ಲಿದ್ದರೂ ಮತ್ತೆ ಈಗ ಈ ಒಂದು ಹೊಸ ಬಿಲ್ಲನ್ನು ತರತಕ್ಕ ಅಗತ್ಯವಾದರೂ ಏನಿತ್ತು ಎಂದು ಕೇಳುತ್ತೇನೆ? ಹಾಲಿ ಇದ್ದ ಕಾನೂನಿಗೇ ಒಂದು ತಿದ್ದುಪಡಿಯನ್ನು ತಂದಿದ್ದರೆ ಸಾಕಾಗುತ್ತಿತ್ತು. ಹೋಗಲಿ ಈಗ ಹೊಸದಾಗಿ ಈ ಒಂದು ಮಸೂದೆಯನ್ನು ತಂದಿದ್ದಾರೆ. ತರಲಿ. ಇದರ ಬಗ್ಗೆ ನನ್ನ ಅಭ್ಯಂತರವೇನೂ ಇರುವುದಿಲ್ಲ. ಆದರೆ ಒಂದು ಸಮಗ್ರವಾದ ಭೂಸುಧಾರಣೆಯನ್ನು ಜಾರಿಗೆ ತರತಕ್ಕ ಸನ್ನಿವೇಶ ಬಹಳ ಹತ್ತಿರದಲ್ಲೇ ಇದ್ದಾಗ ಈವಿಷಯವನ್ನೂ ಅದರಲ್ಲೇ ಅಳವಡಿಸಿ ತರಬಹುದಾಗಿತ್ತು. ಹೀಗೆ ಹಾಲಿ ಇರತಕ್ಕ ಇನಾಂ ಅಬಾಲಿಷನ್ ಶಾಸನಕ್ಕೆ ಒಂದು ತಿದ್ದುಪಡಿ ಮಾಡುವುದರ ಮೂಲಕವಾಗಲಿ, ಇಲ್ಲವೇ ಸಮಗ್ರ ಭೂಸುಧಾರಣೆಯ ಮಸೂದೆಯಲ್ಲಾಗಲೀ ಇದನ್ನು ಅಳವಡಿಸಿ ಮಾಡಬಹುದಾಗಿತ್ತು. ಅಂಥಾ ಅವಕಾಶವನ್ನೆಲ್ಲಾ ಕೈ ಬಿಟ್ಟು ಮಾನ್ಯ ಮಂತ್ರಿಗಳು ಇದನ್ನು ತಂದಿರುವುದನ್ನು ನೋಡಿದರೆ ಏನೋ ಒಂದು ಪ್ರಶಸ್ತಿಯನ್ನು ಪಡೆಯಬೇಕೆಂಬ ಉದ್ದೇಶದಿಂದ ಇದನ್ನು ತಂದಿರುವಂತೆ ಭಾಸವಾಗುತ್ತಿದೆ.

ಆದರೆ ಈ ದಿವಸ ಸರ್ಕಾರದವರು ತಂದಿರತಕ್ಕ ಈ ಮಸೂದೆಯ ವ್ಯಾಪ್ತಿಯಲ್ಲಿ ಬರತಕ್ಕ ಜನರ ಸಂಖ್ಯೆಯಾದರೂ ಎಷ್ಟು? ಇದರಲ್ಲಿ ಯಾರಿಗೆ ಅನುಕೂಲ ಮಾಡಿಕೊಡಬೇಕು ಅನ್ನುವುದನ್ನು ಇವರು ವಿಚಾರಮಾಡಿ ಇದನ್ನು ತಂದಹಾಗೆ ಕಾಣುವುದಿಲ್ಲ. ಕಂದಾಯ ಮಂತ್ರಿಗಳು ತಮ್ಮ ಮನಸ್ಸಿನಲ್ಲಿ ಒಂದು ಸ್ಪಷ್ಟ ಕಲ್ಪನೆ ಇಲ್ಲದೇನೇ ಈ ಮಸೂದೆಯನ್ನು ತಂದಹಾಗೆ ಕಾಣುತ್ತಿದೆ. ಈ ಹಿಂದೆ ಮೈಸೂರು ರಾಜ್ಯದಲ್ಲಿ ಅಂದರೆ ಹಳೇ ಮೈಸೂರು ರಾಜ್ಯದಲ್ಲಿ ಜಾರಿಗೆ ತಂದಿದ್ದ ಇನಾಂ ಅಬಾಲಿಷನ್ ಶಾಸನ ಏನಿತ್ತು ಅದಕ್ಕೇ ಒಂದು ಈ ಸಂಬಂಧವಾದ ತಿದ್ದುಪಡಿಯನ್ನು ತಂದಿದ್ದರೆ ಅಷ್ಟೇ ಸಾಕಾಗುತ್ತಿರಲಿಲ್ಲವೇ? ಈಗ ತಂದಿರತಕ್ಕ ಈ ಒಂದು ಮಸೂದೆಯಲ್ಲಾದರೂ ಯಾರಿಗೆ ಸರ್ಕಾರದವರು ರಕ್ಷಣೆ ಕೊಡಬೇಕೆಂದಿದ್ದಾರೆ ಎಂಬ ಬಗ್ಗೆ ತಮ್ಮ ಮನಸ್ಸಿನಲ್ಲೇನಾದರೂ ಒಂದು ಕಲ್ಪನೆ ಇದೆಯೇ? ಇಂಥ ಯಾವ ಒಂದು ಅಂಶವನ್ನೂ ಪರಿಶೀಲನೆ ಮಾಡದೆ ಇದನ್ನು ತಂದಿದ್ದಾರೆಂದು ತಿಳಿಸುವುದಕ್ಕೆ ನಾನು ವಿಷಾದ ಪಡುತ್ತೇನೆ. ಈ ಒಂದು ಮಸೂದೆಯಿಂದ ಅಲ್ಲಿ ಯಾರು ಖಾಯಂ ಗೇಣೀದಾರರಾಗಿದ್ದಾರೋ ಅಂಥವರಿಗೆ ಮಾತ್ರ ಭೂಮಿಯ ಮಾಲೀಕತ್ವವನ್ನು ಕೊಡಿಸುವುದಕ್ಕೆ ಸಾಧ್ಯ ಅವಕ್ಕಾಗಿ ಇಂಥ ಒಂದು ಕಾನೂನನ್ನು ತರಬೇಕಾಗಿತ್ತೇ? ಇನ್ನುಳಿದ ಬೇರೆ ಯಾವ ಗೇಣಿದಾರರಿಗೂ ಈ ಮಸೂದೆಯಿಂದ ಪ್ರಯೋಜನವಾಗುವುದಿಲ್ಲ. ಮುಂಬೈ ಮತ್ತು ಆ ಹೈದರಾಬಾದ್ ಪ್ರದೇಶದಲ್ಲಿ ಈಗಾಗಲೇ ಯಾರು ಮೂಗೇಣಿದಾರರಾಗಿ ತಮ್ಮಲ್ಲಿ ಆ ರಿಜಿಸ್ಟರ್ಡ್ ಪತ್ರವನ್ನು ಇಟ್ಟುಕೊಂಡಿದ್ದಾರೋ ಅಂಥವರಿಗೆ ಮಾತ್ರ ಇದರಿಂದ ಸ್ವಲ್ಪ ಅನುಕೂಲ. ಬಾಕಿ ಇನ್ನಾರಿಗೂ ಇದರಿಂದ ಅನುಕೂಲವಿಲ್ಲ. ಅಂದರೆ ಸರ್ಕಾರದವರ ಉದ್ದೇಶ ಇನ್ನುಳಿದ ಗೇಣಿದಾರರು ಹಾಗೆ ಮುಂದುವರಿಯಲಿ ಅನ್ನುವುದು ಇವರ ಆಶೆಯಾಗಿದ್ದಂತೆ ಕಾಣುತ್ತದೆ. ಅಂದಾಗ ಇವರಲ್ಲಿ ಆ ಸಮಾಜವಾದದ ಬಗ್ಗೆ ಅಭಿಮಾನ ವಿಶ್ವಾಸ ಎಷ್ಟುಮಟ್ಟಿಗೆ ಇದೆ ಅನ್ನುವುದು ಇದರಿಂದಲೇ ವೇದ್ಯವಾಗುವಾಗುತ್ತದೆ. ಇವರು ಬಾಯಲ್ಲಿ ಹೇಳುವುದು ಒಂದು ಮತ್ತು ಆಚರಣೆಯಲ್ಲಿ ನಡೆಯುವುದೇ ಮತ್ತೊಂದು. ಹೀಗಾದರೆ ರಾಜ್ಯದಲ್ಲಿ ಸಮತಾವಾದ ಸಮಾಜ ಜಾರಿಗೆ ಬರುವುದಕ್ಕೆ ಅವಕಾಶವಾದರೂ ಎಲ್ಲಿದೆ? ಮಧ್ಯವರ್ತಿಜನರು ಯಾಗೂ ಇರಬಾರದು—ಉಳುವವನೇ ಹೊಲದ ಒಡೆಯನಾಗಬೇಕು ಎಂದು ಸಾರುತ್ತ, ಘೋಷಣೆಗಳನ್ನು ಮಾಡುತ್ತಾ ಈ ದಿವಸ ಇನಾಂದಾರರ ಕೈಕೆಳಗಿದ್ದ ಗೇಣೀದಾರರನ್ನು ಸರ್ಕಾರದ ಕೈಕೆಳಗೆ ಗೇಣೀದಾರರನ್ನಾಗಿ ಮಾಡಿಕೊಳ್ಳಲು ಸರ್ಕಾರದವರು ಪ್ರಯತ್ನ ಮಾಡಿದ್ದಾರೆ. ಈ ಮಸೂದೆಯನ್ನು ಎಲ್ಲಾ ಗೇಣಿದಾರರಿಗೂ ಅನ್ವಯಿಸುವಂತೆ ತರಬೇಕಾಗಿತ್ತು. ಅಲ್ಲಿ ಈ ಶಾಸನಕ್ಕೆ ಒಳಗಾಗತಕ್ಕಂಥ ಮೂಲಗೇಣೀದಾರರು ಶೇಕಡ 5 ಇದ್ದಾರೋ ಇಲ್ಲವೋ ತಿಳಿಯದು. ಇನ್ನು ಶೇಕಡ 95 ರಷ್ಟು ಜನ ಗೇಣಿದಾರರಿಗೆ ಇದರಿಂದೇನೂ ಪ್ರಯೋಜನವಿಲ್ಲ. ಹಿಂದೆ ಅಖಿಲ ಭಾರತ ಕಾಂಗ್ರೆಸ್ಸಿನವರು ಎಲ್ಲಾ ಭೂಮಿಯನ್ನೂ ನಾನ್ ರೆಸ್ಯೂಮಬಲ್ ಲ್ಯಾಂಡನ್ನಾಗಿ ಮಾಡಬೇಕೆಂಬ ಸಿದ್ಧಾಂತಕ್ಕೆ ಅವರು ಕಟ್ಟುಬಿದ್ದಿದ್ದರು. ಇತ್ತೀಚಿನ ಚುನಾವಣೆಗಳ ಕಾಲದಲ್ಲೂ ಕೂಡ ಇದನ್ನೇ ಅವರು ಜನರಿಗೆ ಸಾರಿ ಘೋಷಣೆ ಮಾಡಿ ಈ ದಿವಸ ಒಬ್ಬರಿಗೊಂದು ಇನ್ನೊಬ್ಬರಿಗೊಂದನ್ನು ಮಾಡಲು ಹೊರಟಿದ್ದಾರೆ. ಈ ಮಸೂದೆಯಿಂದ ಕೆಲವರಿಗೆ ಅನ್ಯಾಯವಾಗುತ್ತದೆ. ಒಂದು ಸಮಗ್ರ ಭೂಸುಧಾರಣಾ ಮಸೂದೆಯನ್ನು ತಂದು ಗೇಣೀದಾರರಿಗೆ ಅನುಕೂಲ ಮಾಡತಕ್ಕ ದೆಶೆಯಲ್ಲಿ ಈ ಸರ್ಕಾರದವರು ವಿಫಲರಾಗಿದ್ದಾರೆ. ಕೆಲವರು ಹಿಂದಿನಿಂದ ಯಾವ ರೀತಿ ಗೇಣಿಕೊಡುತ್ತಿದ್ದರೋ ಇನ್ನು ಮುಂದಕ್ಕೂ ಹಾಗೇ ಅವರು ಗೇಣೀದಾರರಾಗೇ ಮುಂದುವರಿಯಬೇಕೆಂಬುದು ಸರ್ಕಾರದವರ ಆಸೆ ಇದ್ದಂತೆ ಕಾಣುತ್ತಿದೆ. ಅವರು ಹಾಗೇ ದಾರಿದ್ರ್ಯದಲ್ಲೇ ಇರಲಿ ಎನ್ನುವುದು ಈ ಸರ್ಕಾರದವರ ನೀತಿ. ಇದನ್ನೆಲ್ಲಾ ನೋಡಿದರೆ ಇವರ ನಿಜವಾದ ನಿಲುವು ಅಥವಾ ಧೋರಣೆಯೇನು ಎಂಬುದೇ ಗೊತ್ತಾಗುತ್ತಿಲ್ಲ. ಗೇಣಿ ಪದ್ಧತಿ ಇರಬೇಕೋ ಅಥವಾ ಇದು ರದ್ದಾಗಬೇಕೋ ಯಾವುದೂ ಇವರ ವರ್ತನೆಯಿಂದ ಗೊತ್ತಾಗುತ್ತಿಲ್ಲ. ಈ ಮಸೂದೆಯಲ್ಲಿ ಖಾಯಂ ಗೇಣಿದಾರರಲ್ಲದವರಿಗೆ ಆಕ್ಯೂಪೆನ್ಸಿ ರೈಟನ್ನು ಕೊಡುವುದಕ್ಕೆ ಯಾವ ಅವಕಾಶವನ್ನೂ ಮಾಡಿಲ್ಲ. ಒಂದು ವರ್ಗದ ಗೇಣೀದಾರರಿಗೆ ಅನ್ವಯಿಸಿ ಇನ್ನೊಂದು ವರ್ಗದ ಗೇಣೀದಾರರಿಗೆ ಇದನ್ನು ಅನ್ವಯ ಮಾಡುವುದಕ್ಕೆ ಕೈ ಬಿಟ್ಟಿದ್ದಾರೆ. ಅಂದಾಗ ಈ ಸರ್ಕಾರಕ್ಕೆ ಪ್ರಾಮಾಣಿಕವಾಗಿಯೂ ಗೇಣಿದಾರರಿಗೆ ಅನುಕೂಲ ಮಾಡಬೇಕೆಂಬ ಇರಾದೆ ಇವರಿಗೆ ಇದೆಯೇ! ಹಿಂದೆ ಎರಡು ಇನಾಂ ರದ್ದಿಯಾತಿ ಕಾನೂನುಗಳನ್ನು ತಂದಾಗಲೂ ಕೂಡ ಸರಿಯಾದ ಪ್ರತಿಫಲ ದೊರೆಯಲಿಲ್ಲ. ಈಗ ಈ ಕಾನೂನಿಂದಲೂ ಕೂಡ ಹಾಗೆಯೇ ಆಗುವುದು. ಕಾನೂನು ತರುವುದಕ್ಕೆ ಮುಂಚೆ ಒಂದು ಕೆಲಸ ಮಾಡಬೇಕಾಗಿತ್ತು. ಈಗ ಹೈದರಾಬಾದು ಮತ್ತು ಮುಂಬಯಿ ಪ್ರದೇಶಗಳಲ್ಲೇನು ಇನಾಂ ಜಮೀನಿದೆ ಅದನ್ನೂ ಯಾರು ಸಾಗುವಳಿ ಮಾಡುತ್ತಿದ್ದಾರೆ ಅವರ ಹೆಸರಿನಲ್ಲಿ ಪಹಣಿ ಇದೆಯೇ, ಅವರ ಹಕ್ಕಿನ ಬಗ್ಗೆ ದಾಖಲೆ ಇದೆಯೇ ಅವರು ಜಮೀನನ್ನು ಸಾಗುವಳಿ ಮಾಡುತ್ತಿರುವ ವಿಚಾರದಲ್ಲಿ ಅದನ್ನು ತೋರಿಸಲು ದಾಖಲೆ ಇದೆಯೇ ಎಂಬುದನ್ನು ಪೂರ್ಣವಾಗಿ ಪರಿಶೀಲಿಸಬೇಕಾಗಿತ್ತು. ಈ ಕಾನೂನು ಜಾರಿಗೆ ಬಂದರೆ ಗೇಣೀದಾರರಿಗೆ ಮಾಲೀಕತ್ವ ಸಿಕ್ಕ

(ಶ್ರೀ ಕಾಗೋಡು ತಿಮ್ಮಪ್ಪ)

ವುದಿಲ್ಲ. ಗೇಣೀದಾರರು ಬಡವರು, ಅವರಿಗೆ ಬುದ್ಧಿ ಸಾಲದು. ಗೇಣೀ ಕೊಟ್ಟಿದ್ದಕ್ಕೆ ಅವರು ರಸೀದಿ ತೆಗೆದುಕೊಳ್ಳುವುದಿಲ್ಲ. ಕರಾರು ಬರೆಸಿ ಇಟ್ಟುಕೊಳ್ಳುವುದಿಲ್ಲ. ಆದುದರಿಂದ ಎಷ್ಟು ವರ್ಷಗಳಿಂದ ಗೇಣೀದಾರರಾಗಿದ್ದರೂ ಕೂಡ ಗೇಣಿದಾರ ಎಂದು ತೋರಿಸಲು ದಾಖಲೆ ಇಲ್ಲದಿರುವುದರಿಂದ ಇಂಥ ಕಾನೂನು ಬಂದರೂ ಸಹ ಕಾನೂನಿನ ಪ್ರಕಾರ ಹಕ್ಕನ್ನು ರೂಢಿಸಿಕೊಳ್ಳಲು, ಮಾಲಕನಾಗಲು ಸಾಧ್ಯವಾಗುತ್ತಿಲ್ಲ. ಇದು ಸ್ವತಃ ಕಂಡು ಹೇಳುತ್ತಿರುವ ವಿಚಾರ. ವಿದ್ಯಾ ಮಂತ್ರಿಗಳಾದ ಶ್ರೀ ಬದರಿನಾರಾಯಣರವರು ಕೂಡ ಇನಾಂದಾರರಾಗಿದ್ದರು, ಅವರ ಕೈಕೆಳಗೆ ನೂರಾರು ರೈತರು ಜಮೀನುಮಾಡುತ್ತಿದ್ದರು. ಅವರ ಇನಾಂ ರದ್ದಾದಾಗ ಅವರ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದ ನೂರಾರು ರೈತರಿಗೆ ಹಕ್ಕು ದೊರೆಯಲಿಲ್ಲ. ಇನಾಂದಾರರೇ ಮಾಲೀಕರಾಗಿದ್ದಾರೆ ಭೂಸುಧಾರಣೆ ಕಾನೂನಿನ ಪ್ರಕಾರ ಗೇಣಿದಾರರಿಗೆ ಹಕ್ಕು ದೊರೆಯಬೇಕಾಗಿದೆ. ಮುಖ್ಯವಾಗಿ ಗೇಣಿದಾರರನ್ನು ರಕ್ಷಣೆ ಮಾಡಲು ಇನಾಂ ರದ್ದುಮಾಡಬೇಕು. ಜಮೀನನ್ನು ಸಾಗುವಳಿ ಮಾಡುವವರಿಗೆ, ಗೇಣಿದಾರರಿಗೆ ರಕ್ಷಣೆ ಕೊಡಬೇಕು, ಅವರಿಗೆ ಜಮೀನು ಮಾಲಕತ್ವ ಸಿಕ್ಕುವಂತೆ ಮಾಡಬೇಕು ಎಂಬ ಗುರಿ ಏನಿದೆ ಅದು ಸಾಧನೆ ಆಗಲು ಈಗ ಅವಕಾಶವಿಲ್ಲದಂತಾಗಿದೆ. ಗುರಿ ಮುಟ್ಟಬೇಕಾದರೆ ಮೊದಲು ಪ್ರಾರಂಭದ ಕೆಲಸ ಮಾಡಬೇಕು. ಆ ಕೆಲಸವನ್ನು ಸರಕಾರ ಹಿಂದೆ ಇಂಥ ಕಾನೂನು ತಂದಾಗಲೂ ಮಾಡಿಲ್ಲ. ಆದುದರಿಂದ ಯಾವ ಉದ್ದೇಶದಿಂದ ಕಾನೂನನ್ನು ಮಾಡಲಾಗುವುದೋ ಆ ಉದ್ದೇಶ ಸಫಲವಾಗುವುದಿಲ್ಲ, ಗೇಣಿದಾರರಿಗೆ ಪ್ರಯೋಜನವಾಗುವುದಿಲ್ಲ ಎಂಬುದು ಅನುಭವದ ವಿಷಯ. ಆದುದರಿಂದ ಮಾನ್ಯ ಕಂದಾಯ ಮಂತ್ರಿಗಳಿಗೆ ಹೇಳುವುದು ಈ ಕಾನೂನನ್ನು ತರುವುದಕ್ಕೆ 6 ತಿಂಗಳು ತಡವಾದರೂ ಚಿಂತೆಯಿಲ್ಲ, ಜಮೀನನ್ನು ಯಾರು ಸಾಗುವಳಿ ಮಾಡುತ್ತಿದ್ದಾರೆ, ಅವರಿಗೆ ಸಾಕಾದಷ್ಟು ದಾಖಲೆಯಿದೆಯೇ, ಎಷ್ಟು ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದಾರೆ ಎಂಬುದನ್ನು ತಿಳಿಸಲು ಕಾಗದಪತ್ರವಿದೆಯೇ ಎಂಬುದನ್ನು ಪರಿಶೀಲಿಸಿ ಸ್ಪಷ್ಟಪಡಿಸಿ ಇರುವ ದಾಖಲೆ ಒದಗಿಸಿ ಕಾನೂನು ತಂದರೆ ಸಹಾಯವಾಗುವುದು. ಇಲ್ಲದಿದ್ದರೆ ಈ ಸಭೆಯಲ್ಲಿ ಚರ್ಚೆಮಾಡಿ ಕಾಲ ಕಳೆದಂತಾಗುವುದು, ಅದರಿಂದ ಉದ್ದೇಶ ಸಫಲವಾಗುವುದಿಲ್ಲ. ನಾನು ವಕೀಲ ವೃತ್ತಿ ಮಾಡುವುದರಿಂದ ಮತ್ತು ಇನಾಂ ರೈತರ ಸಂಪರ್ಕ ಪಡೆದು ವಿಚಾರ ತಿಳಿದಿರುವುದರಿಂದ ಹೇಳುತ್ತಿದ್ದೇನೆ. ನೂರಾರು ವರ್ಷಗಳಿಂದ ಸಾಗುವಳಿ ಮಾಡಿ ಆಕ್ಯುಪೆನ್ಸಿ ರೈಟ್ ದೊರೆಯದಿರುವವರು ಅನೇಕರಿದ್ದಾರೆ. ಅವರಿಗೆ ದಾಖಲೆ ಇಟ್ಟುಕೊಳ್ಳಲು ಶಕ್ತಿಯಿಲ್ಲ. ಅವರು ತಮ್ಮ ಹಕ್ಕನ್ನು ಕಳೆದುಕೊಂಡು ಇಂದು ಚಾಲಗೇಣಿ ರೈತರಾಗಿರುತ್ತಾರೆ. ಇನಾಂದಾರರಿಗೆ ಒಂದು ಅವಕಾಶವಿದೆ, ಯಾವ ಗೇಣಿದಾರನಿಗೆ ಎಷ್ಟು ಭೂಮಿಯನ್ನು ಸಾಗುವಳಿಗೆ ಕೊಟ್ಟಿದೆ ಎಂಬ ದಾಖಲೆ ಇನಾಂದಾರರು ಇಡಬೇಕು. ಅವರು 14 ಮತ್ತು 15 ನೆ ನಂಬರ್ ಅಕೌಂಟ್ ಇಡಬೇಕು. ಆದರೆ ಅದನ್ನು ಸಕಾಲದಲ್ಲಿ ಅವರು ಬರೆದು ಕಛೇರಿಗೆ ಕೊಡುತ್ತಿಲ್ಲ. ಕಾನೂನು ಜಾರಿಗೆ ಬಂದಮೇಲೆ ಒಂದು ದಿವಸ ಬರೆಯುವರು. 1955 ರಲ್ಲಿ ರಾಮಪ್ಪ ಸಾಗುಮಾಡುತ್ತಿದ್ದ ಎಂದು ಬರೆದರೆ 56 ರಲ್ಲಿ ಭೀಮಣ್ಣ ಸಾಗುವಳಿ ಮಾಡುತ್ತಿರುವುದಾಗಿ ಬರೆಯುವರು. ಮತ್ತೆ 57 ರಲ್ಲಿ ಮತ್ತೊಬ್ಬರ ಹೆಸರು ಬರೆಯುವರು. ಸಾಗುವಳಿ ಮಾಡುವವರು ಒಬ್ಬರೇ ಆದರೂ ಪ್ರತಿ ವರ್ಷ ಹೆಸರು ಬದಲಾಯಿಸುವರು. ಸಾರೋದ್ಧಾರವಾಗಿ 10-20 ವರ್ಷ ಸಾಗುವಳಿ ಮಾಡುತ್ತಿದ್ದರೂ ಲೆಕ್ಕದ ಪುಸ್ತಕದಲ್ಲಿ ಪ್ರತಿ ವರ್ಷ ಒಬ್ಬೊಬ್ಬರು ಹಂಗಾಮಿಯಾಗಿ ಮಾಡುವರು ಎಂದು ತೋರಿಸಿ ಗೇಣಿದಾರರ ಹಕ್ಕನ್ನು ಮೊಟಕು ಮಾಡುವ ಕೆಲಸ ಮಾಡುತ್ತಿದ್ದಾರೆ. ಇಂಥ ಪ್ರಸಂಗವಿದೆ. ಅನುಭವದಿಂದ ಇದನ್ನು ಹೇಳುವುದು. ಆದುದರಿಂದ ಈ ಕಾನೂನು ಜಾರಿಗೆ ಬರುವುದು ನಿಧಾನವಾದರೂ ಚಿಂತೆಯಿಲ್ಲ ಸಾಗುವಳಿ ಮಾಡುವವರಿಗೆ ಬೇಕಾದ ದಾಖಲೆ ದೊರೆಯುವಂತೆ ಮಾಡಿ. ಗ್ರಾಮ ಲೆಕ್ಕಾಧಿಕಾರಿಗಳು ಗೇಣಿ ರೈತರಿಗೆ ಅಜಾತ ಶತ್ರುವಾಗಿದ್ದಾರೆ, ಅವರು ದಾಖಲೆ ಬರೆಯುವಾಗ ಗೇಣಿ ರೈತರ ಹೆಸರನ್ನು ನಮೂದು ಮಾಡುವುದಿಲ್ಲ. ಹಿಂದಿನ ಶಾನುಭೋಗರು ಮತ್ತು ಈ ದಿವಸ ಇರುವ ಗ್ರಾಮ ಲೆಕ್ಕಾಧಿಕಾರಿಗಳು ಇವರ ಕೈಗೆ ಗೇಣಿದಾರರು ಸಿಕ್ಕಿ ನರಳುತ್ತಿದ್ದಾರೆ. ಗೇಣಿದಾರರು ಸಾಗುವಳಿ ಮಾಡುತ್ತಿದ್ದರೂ ಮಾಡುತ್ತಿಲ್ಲವೆಂದು ನಮೂದು ಮಾಡುವರು. ಸೊರಬ ತಾಲ್ಲೂಕಿನಲ್ಲಿ ಪಹಣಿ ತಿದ್ದುಪಡಿ ಮಾಡಿದರು. ಇದನ್ನು ಕಂದಾಯ ಮಂತ್ರಿಗಳಿಗೆ ಮತ್ತು ವಿದ್ಯಾ ಮಂತ್ರಿಗಳಿಗೆ, ಸರಕಾರಕ್ಕೆ ತಿಳಿಸಿ ಲೋಪವನ್ನು ಸರಿಪಡಿಸುವಂತೆ ಬೇಡಿಕೊಂಡರೂ ಏನೂ ಆಗಲಿಲ್ಲ. ಬಡವರಿಗೆ ತೊಂದರೆಯಾದುದರಿಂದ ಸತ್ಯಾಗ್ರಹ ಮಾಡಿದರೂ ಪ್ರಯೋಜನವಾಗಲಿಲ್ಲ. ಗೇಣಿದಾರರಿಗೆ ಸರಿಯಾದ ದಾಖಲೆ ದೊರೆಯುವಂತೆ ನೋಡಿಕೊಳ್ಳದಿದ್ದರೆ ಅವರು ಉಳಿಯುವುದಿಲ್ಲ. ಭೂಸುಧಾರಣೆ ಕಾನೂನು ಬರುವುದೆಂದು ಹಂತಹಂತವಾಗಿ ಪಹಣಿಯನ್ನು ಬದಲಾಯಿಸಿ ಹೆಸರುಗಳನ್ನು ಬದಲಾಯಿಸಿದ್ದಾರೆ. ಆದುದರಿಂದ ಹೋರಾಟ ಮಾಡಬೇಕಾಗಿದೆ. ಇಂಥ ಪ್ರಸಂಗ

ಬಂದಿದೆ. ಸರಕಾರಕ್ಕೆ ಈಗ ಸೂಚನೆ ಕೊಟ್ಟಿದ್ದೇವೆ ಗ್ರಾಮಾಧಿಕಾರಿಗಳಿಂದ ಮತ್ತು ಹಳೆಯ ಶಾನುಭೋಗರಿಂದ ಇಂಥ ಪರಿಸ್ಥಿತಿ ಬಂದಿದೆ. ಹೀಗಿರುವಾಗ ರೈತರಿಗೆ ಭೂಮಿಯ ಹಕ್ಕನ್ನು ಕೊಡಲು ಹೊರಟಿದ್ದಾರೆ. ಸಾಗುವಳಿದಾರರಿಗೆ ದಾಖಲೆ ಏನೂ ಇಲ್ಲ, ರಕ್ಷಣೆ ಇಲ್ಲ. ಇದರ ಬಗ್ಗೆ ಹಿಂದಿನಿಂದಲೂ ಒತ್ತಾಯ ಮಾಡಿದ್ದೇವೆ. ಎಲ್ಲಿ ಗೇಣಿ ರೈತರು ಸಂಘಟಿತರಾಗಿರುವರೋ ಅಂಥ ಕಡೆ ಅಲ್ಪಸ್ವಲ್ಪ ಅವರಿಗೆ ಅನುಕೂಲವಾಗಿದೆ. ಬೇರೆ ಕಡೆ ಅವರ ಸರ್ವನಾಶವಾಗಿದೆ. ಮೊನ್ನೆ ವಿಚಾರ ಸಂಕೀರ್ಣವಾದಾಗ ಒಬ್ಬನಿಗೆ 1,500 ಎಕರೆ ಇದೆ, ಅದರಲ್ಲಿ 1,300 ಎಕರೆ ಗೇಣಿಗೆ ಕೊಟ್ಟಿದ್ದಾನೆ, ಹೀಗಿದ್ದರೂ ಗೇಣಿ ರೈತರ ಬಗ್ಗೆ ಪಹಣಿಯಲ್ಲಿ ದಾಖಲೆಯಿಲ್ಲ ಎಂಬುದು ಬೆಳಕಿಗೆ ಬಂತು. ಆದುದರಿಂದ ಭೂಸುಧಾರಣಾ ಕಾನೂನನ್ನು ತಂದರೂ ಗೇಣಿದಾರರಲ್ಲಿ ಒಬ್ಬರಿಗೂ ಜಮೀನು ಸಿಕ್ಕುವುದಿಲ್ಲ. ನಾಳೆ ಕಾನೂನು ತಂದರೆ ಯಾರಿಗೆ ಜಮೀನು ಕೊಡಬೇಕೆಂಬ ಪ್ರಶ್ನೆ ಬರುವುದು. ದಾಖಲೆ ಸರಿಯಾಗಿಲ್ಲದಿರುವುದರಿಂದ ನಾಳೆ ಜಮೀನಿಗೆ ಬೇರೆಯವರು ಅರ್ಜಿ ಹಾಕಿ ಯಾರೋ ಪ್ರಭಾವಶಾಲಿಗಳು ಜಮೀನನ್ನು ಪಡೆಯಲು ಅವಕಾಶವಿದೆ. ಇಂಥ ಪರಿಸ್ಥಿತಿ ಇದೆ. ಇಂದು ಪ್ರಭಾವಶಾಲಿಗಳು ಚುನಾವಣೆಯಲ್ಲಿ ಗೆಲ್ಲುವರು. ಅವರಿಗೆ ಸಮಾಜದಲ್ಲಿ ವ್ಯಕ್ತಿತ್ವವಿದೆ. ಕಾನೂನು ರೀತಿಯಲ್ಲಿ ಅವರು ಬಡವರಂತೆ ತೋರಿಸಿಕೊಳ್ಳುವರು. ಅಲ್ಲದೆ ಜಮೀನುದಾರರು ಪ್ರಭಾವ ಶಾಲಿಗಳು ಮತ್ತು ಪ್ರತಿಷ್ಠಾವಂತರು. ಗೇಣಿದಾರರು ಜಾಗೃತರಾಗಿರುವ ಕಡೆ ಮಾತ್ರ ಹಕ್ಕು ಬಾಧ್ಯತೆಗಳನ್ನು ಸ್ವಲ್ಪ ರಕ್ಷಣೆ ಮಾಡಿಕೊಂಡಿದ್ದಾರೆ.

ಆದರೆ ನಾನು ತಿಳಿದಿರತಕ್ಕಂಥ ಪ್ರದೇಶದಲ್ಲಿ ಅವರಿಗೆ ರಕ್ಷಣೆ ಇಲ್ಲ. ಅವರು ಜಮೀನ್ದಾರರ ಮರ್ಜಿಯಲ್ಲಿ ಅವರ ಅಂತಃಕರಣದಲ್ಲಿರುವಂತೆ ನಡೆದುಕೊಂಡು ಹೋಗಬೇಕು. ಇಲ್ಲದಿದ್ದರೆ ಅವರು ಉಳಿಯುವುದಿಲ್ಲ; ಏತಕ್ಕೆಂದರೆ ಅವರಲ್ಲಿ ದಾಖಲೆಗಳು ಏನೂ ಇಲ್ಲ. ನಮ್ಮ ರಾಜ್ಯದಲ್ಲಿ ಈ ಪರಿಸ್ಥಿತಿ ಇದೆ. ನೀವು ಭೂಸುಧಾರಣೆ ಕಾನೂನು ತಂದರೂ ಕೂಡ 100ಕ್ಕೆ 20 ಜನ ಪ್ರಯೋಜನ ಪಡೆಯುತ್ತಾರೆ. ಆದುದರಿಂದ ಒಂದು ಕಾನೂನು ತರುವಾಗ ಕಾನೂನಿನ ಪ್ರಯೋಜನವನ್ನು ಪೂರ್ಣವಾಗಿ ಜನರಿಗೆ ತಿಳಿಸಬೇಕು. ಇದರ ಬಗ್ಗೆ ಸರ್ಕಾರದವರು ಆಲೋಚನೆ ಮಾಡಬೇಕು. ಕಂದಾಯ ಮಂತ್ರಿಗಳು ಈ ಮಸೂದೆಯನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಇನಾಂಗೆ ಸಂಬಂಧಪಟ್ಟ ವಿಷಯಗಳನ್ನು ಸ್ವಲ್ಪ ದೀರ್ಘವಾಗಿ ಆಲೋಚನೆ ಮಾಡಿ ತರಬೇಕಾಗಿತ್ತು. ಇದರಲ್ಲಿ ಸಾಕಷ್ಟು ಪರಿಶ್ರಮ ಇಲ್ಲವೆಂದು ಗೊತ್ತಾಗಿದೆ. ಅವರು ಕಾನೂನನ್ನು ತರುವಾಗ ಇಲಾಖಾ ಕಾರ್ಯದರ್ಶಿಗಳು ಬರೆಯಿರಿ ಎಂದು ಹೇಳುತ್ತಾರೆ ಅವರು ಬರೆಯುತ್ತಾರೆ. ಕಾನೂನಿನಲ್ಲಿರ ತಕ್ಕಂಥಾ ಪ್ರತಿಯೊಂದು ಸೆಕ್ಷನ್‌ನ ಅಂಶವೂ ಕೂಡ ಹಿಂದೆ ಇರತಕ್ಕಂಥಾ ಕಾಪಿಯನ್ನು ಮಾಡಿದ್ದಾರೆಯೇ ವಿನಃ ಅದರಿಂದ ಪ್ರಗತಿಪರವಾಗಿ, ಕ್ರಾಂತಿಕಾರಕವಾಗಿ ಇನಾಂ ಕಾನೂನಿನ ರದ್ದಿಯಾತಿ ಬಗ್ಗೆ ಗೇಣಿದಾರನಿಗೆ ಸಮಗ್ರವಾಗಿ ಒದಗಿಸುವ ಪ್ರಯೋಜನ ಬರಲಿಲ್ಲ. ಇದು ಒಂದು ನಕಲೀ ಕಾನೂನು ಎಂದು ಹೇಳಬೇಕಾಗುತ್ತದೆ. ಉಳುವವನೇ ಭೂಮಾಲೀಕನೆಂದು ಮಾಡಿದ್ದರೆ ನಿಜ ವಾಗಿಯೂ ಪ್ರಶಂಸೆ ಮಾಡಬಹುದಾಗಿತ್ತು. ಆದುದರಿಂದ ನಾನು ಸರ್ಕಾರವನ್ನು ಕೇಳುವುದು ಏನೆಂದರೆ ಭೂಮಿಯ ಪ್ರಶ್ನೆಯನ್ನು ಬಹಳ ದೀರ್ಘವಾಗಿ ಆಲೋಚನೆ ಮಾಡಬೇಕು ಎಂದು. ಗೇಣಿದಾರನ ರಕ್ಷಣೆ ಇನ್ನೂ ಆಗಿಲ್ಲ. 1952ನೇ ಇಸವಿಯಲ್ಲಿ ಗೇಣಿದಾರರ ಕಾನೂನು ಪ್ರಾರಂಭ ವಾಯಿತು. ಶ್ರೀಮಾನ್ ಕಡಿದಾಳ್ ಮಂಜಪ್ಪನವರ ನೇತೃತ್ವದಲ್ಲಿ ಆದ ಈ ಕಾನೂನು ಸುಮಾರು 20 ವರ್ಷಗಳಿಂದಲೂ ಗೇಣಿದಾರರ ರಕ್ಷಣೆ ಇನ್ನು ಆಗಿಲ್ಲ. ರೈತನಿಗೆ ತನ್ನ ಹಕ್ಕುಗಳಿಗೆ ಏನು ರಕ್ಷಣೆ ಮಾಡಬೇಕೋ ಅದನ್ನು ಇದುವರೆಗೂ ಮಾಡಿಕೊಟ್ಟಿಲ್ಲ. ಭೂಮಾಲೀಕರು ಇನಾಂದಾರರು ಪ್ರಭಾವಶಾಲಿಗಳಾಗಿರುವುದರಿಂದ ಅವರು ಜಾಗ್ರತೆಯಾಗಿ ತಮ್ಮ ತಮ್ಮ ಜಮೀನುಗಳನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಸಂಬಂಧಪಟ್ಟ ದಾಖಲೆಗಳಲ್ಲಿ ತಿದ್ದುಪಡಿ ಮಾಡುವುದರ ಮುಖಾಂತರ ವಾಗಿಯಾಗಲಿ ಪಹಣಿ ಬದಲಾವಣೆ ಮಾಡುವುದರ ಮುಖಾಂತರವಾಗಲಿ ತಮ್ಮ ಹಕ್ಕುಗಳನ್ನು ರಕ್ಷಿಸಿ ಕೊಳ್ಳುವುದಕ್ಕೆ ಏನೇನು ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕೋ ಮಾಡಿಕೊಂಡಿದ್ದಾರೆ. ಇಂಥಾ ಭಯಾನಕ ಪರಿಸ್ಥಿತಿ ನಮ್ಮ ಮುಂದೆ ಇದೆ. ಇಂಥ ಮುಗ್ಧ ರೈತನಿಗೆ ಬರೀ ಕಾನೂನಿನಿಂದ ಏನೂ ಪ್ರಯೋಜನವಿಲ್ಲ. ಹುಲಿ ಎದುರಿಗೆ ಗೋವನ್ನು ಕಳುಹಿಸಿದ ಹಾಗೆ ಆಗಿದೆ. ಈ ಭಯಂಕರವಾದ ಹುಲಿಯ ಎದುರಿನಲ್ಲಿ ಗೋವಿನ ರಕ್ಷಣೆ ಮಾಡತಕ್ಕಂಥ ಜವಾಬ್ದಾರಿ ಸರ್ಕಾರದ ಕೈಯಲ್ಲಿ ಇದೆ. ಈ ರೀತಿಯಾಗಿ ಗೇಣಿದಾರರು ಪಶುವಿಗೆ ಸಮನಾಗಿರುವುದರಿಂದ ಅವರಿಗೆ ರಕ್ಷಣೆ ಕೊಡಬೇಕು. ಕಾನೂನಿನಲ್ಲಿ ಪ್ರಗತಿಪರವಾದ ಕ್ರಾಂತಿಕಾರಕವಾದ ಮಾರ್ಗವನ್ನು ಅನುಸರಿಸಿದರೆ ಮಾತ್ರ ರೈತನ ರಕ್ಷಣೆ ಮಾಡಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಹೇಳುವುದು ಒಂದು ಮಾಡುವುದು ಇನ್ನೊಂದು ಮಾಡಿದಂತಾಗುತ್ತದೆ. ಹೇಳಿದ್ದನ್ನು ಕಾರ್ಯರೂಪಕ್ಕೆ ತನ್ನಿ. ಮನಸ್ಸಿನಲ್ಲಿ ಮಾಡುವುದು ಒಂದು ಹೇಳುವುದು ಇನ್ನೊಂದು. ಇದನ್ನು ಬಿಟ್ಟು ತ್ರಿಕರಣಶುದ್ಧಿಯಿಂದ ನಡೆದುಕೊಳ್ಳಿ. ಇಲ್ಲದೇ

(ಶ್ರೀ ಕಾಗೋಡು ತಿಮ್ಮಪ್ಪ)

ಹೋದರೆ ಅಧಿಕಾರವನ್ನು ಕಳೆದುಕೊಳ್ಳುತ್ತೀರಿ. ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾಗ ದೇವರ ಸಮಾನರೆಂದು ಪೂಜಿಸಲ್ಪಡುತ್ತಿದ್ದರು. ಈಗ ಅದೇ ಜನರು ಅವರ ಬಗ್ಗೆ ಹೇಸಿಗೆ ಪಡುತ್ತಾರೆ. ಅಂಥಾ ಪರಿಸ್ಥಿತಿ ಬಂದಿದೆ. ಎರಡು ವರ್ಗದ ಜನರನ್ನು ನಾವು ಸ್ವತಃ ನೋಡಿ ತಿಳಿದುಕೊಂಡಿದ್ದೇವೆ. ಹೀಗಿರುವಾಗ ಅಧಿಕಾರ ಇದ್ದಾಗ ಅವರನ್ನು ಪೂಜಿಸುವುದು ಅಧಿಕಾರ ಕಳೆದುಕೊಂಡಾಗ ನಿಕೃಷ್ಟವಾಗಿ ಕಾಣುವುದು ಈ ಸಮಾಜದಲ್ಲಿರತಕ್ಕಂಥ ದೋಷ. ಈಗ ನಿಮಗೆ ಒಂದು ಅವಕಾಶ ದೊರೆತಿದೆ. ಆದುದರಿಂದ ಈಗ ನೀವು ಪ್ರಾಮಾಣಿಕತೆಯಿಂದ ಹೇಳ ತಕ್ಕಂಥಾದನ್ನು ಕಾರ್ಯರೂಪಕ್ಕೆ ತರುವುದಾದರೆ, ಅಷ್ಟೇ ಪ್ರಾಮಾಣಿಕತೆ, ಅಷ್ಟೇ ಕ್ರಾಂತಿಕಾರಕ ವಾಗಿ ನಿಮ್ಮ ಕಾನೂನು ಇರಬೇಕು. ಇಲ್ಲದೇ ಹೋದರೆ ಅದು ಏನೂ ಪ್ರಯೋಜನವಾಗುವುದಿಲ್ಲ. ಹಿಂದೆ ಇದ್ದವರು ಎಷ್ಟೋ ಕಾನೂನು ಮಾಡಿದ್ದಾರೆ. ಯಾವ ಸಮಸ್ಯೆಯೂ ಕೂಡ ಬಗೆಹರಿಸಲಿಲ್ಲ. ಯಾರೂ ಕೂಡ ರೈತನಿಗೆ ರಕ್ಷಣೆಯನ್ನು ಒದಗಿಸಿಕೊಡುವುದಕ್ಕಾಗಲಿಲ್ಲ. ಆದುದರಿಂದ ಕಾನೂನು ಮಾಡುವುದಾದರೆ ಈ ಒಂದು ಸಮಸ್ಯೆಗೆ ಸಮಗ್ರವಾಗಿ ಅಮೂಲಾಗ್ರವಾದಂಥ ಪರಿಹಾರವನ್ನು ಕಂಡುಕೊಳ್ಳುವುದೇ ಈ ಕಾನೂನಿನ ಮೂಲ ಉದ್ದೇಶವಾಗಿರಬೇಕು. ಹಿಂದೆ ತಂದಿರತಕ್ಕ ಕಾನೂನುಗಳನ್ನು ನೋಡಿದ್ದೇವೆ. ಯಾವುದೂ ಕಾರ್ಯಗತವಾಗಲಿಲ್ಲ. 1954ನೇ ಇಸವಿಯಲ್ಲಿ ಇನಾಂ ರದ್ದಿಯಾತಿ ಕಾನೂನು ಬಂತು. ಈವೊತ್ತಿನವರೆಗೂ ಅದು ಸಂಪೂರ್ಣವಾಗಿ ಕಾರ್ಯಗತ ವಾಗಲಿಲ್ಲ. ಇದಕ್ಕೆ ಯಾರು ಜವಾಬ್ದಾರರು ? ಮೈಸೂರು ರಿಲಿಜಿಯಸ್ ಅಂಡ್ ಛಾರಿಟಬಲ್ ಇನಾಂ ಅಬಾಲಿಷನ್ ಆಕ್ಟ್ 1956 ರಲ್ಲೇ ಜಾರಿಗೆ ಬಂತು ಅದನ್ನು ಇನ್ನೂ ಜಾರಿಗೆ ತಂದಿಲ್ಲ. ದೇವಸ್ಥಾನಕ್ಕೆ ಸಂಬಂಧಪಟ್ಟಂತೆ $1\frac{1}{2}$ ವರ್ಷದ ಹಿಂದೆ ಡೆಪ್ಯೂಟಿ ಕಮಿಷನರ್‌ರವರಿಗೆ ಇದರ ಬಗ್ಗೆ ವಿಚಾರಣೆ ಮಾಡಿ ಎಂದು ಅರ್ಜಿ ಹಾಕಿದರೆ ಈವೊತ್ತಿನವರೆಗೂ ವಿಚಾರಣೆ ಆಗಿಲ್ಲ. ಸಾವಿರಾರು ಅರ್ಜಿಗಳು ಸ್ಪೆಷಲ್ ಡೆಪ್ಯೂಟಿ ಕಮೀಷನರ್ ಫಾರ್ ಇನಾಂ ಅಬಾಲಿಷನ್ ಅವರಿಗೆ ಬಂದಿವೆ. ಇವನ್ನೆಲ್ಲಾ ಯಾವಾಗ ವಿಚಾರಣೆ ಮಾಡುತ್ತಾರೆ. ಇದನ್ನು ಯಾವಾಗ ಬಗೆಹರಿಸುತ್ತೀರಿ ? ಇನಾಂದಾರರು, ಜಮೀನ್ದಾರರು ಗೇಣಿದಾರರನ್ನು ಕೋರ್ಟಿಗೆ ಹತ್ತಿಸುತ್ತಾ ಇದ್ದಾರೆ. ನೀವು ಇನಾಂ ರದ್ದಿಯಾತಿ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ. ತಾಸೀಲ್ದಾರರೇ ಹೋಗಿ ದೇವಸ್ಥಾನಕ್ಕೆ ಸಂಬಂಧಪಟ್ಟ ಜಮೀನುಗಳು ಮುಂದೆ ಇರಬಾರದು ಎಂದು ಹೇಳುತ್ತಿದ್ದಾರೆ. ಮುಂದಿನ ಭೂಸುಧಾರಣೆ ಏನು ಎನ್ನುವುದೇ ಗೊತ್ತಿಲ್ಲ. 1955ನೇ ಇಸವಿಯಲ್ಲಿ ಬಂದಿರತಕ್ಕಂಥ ಕಾನೂನು ಇವೊತ್ತಿನವರೆಗೂ ಪೂರ್ಣವಾಗಿ ಕಾರ್ಯಗತವಾಗಿಲ್ಲ. ಅರ್ಧಂಬರ್ಧವಾಗಿದೆ. 20 ವರ್ಷವಾದರೂ ಕೂಡ ಇನ್ನೂ ಕಾರ್ಯಗತವಾಗಿಲ್ಲ. ಎಲ್ಲ ಭೂಮಿಗೂ ಸಂಬಂಧಪಟ್ಟಂತೆ ಒಂದೇ ಕಾನೂನು ಇರಬೇಕು. ಎಲ್ಲ ಭೂಮಿಗೂ ಮಧ್ಯವರ್ತಿ ಜನರನ್ನು ತೊಡೆದು ಹಾಕಬೇಕು. ಉಳುವವನೇ ಭೂಮಿ ಒಡೆಯನಾಗಬೇಕು. ಇದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಒಂದೇ ಒಂದು ಕಾನೂನು ಮಾಡಬೇಕು. ಆ ರೀತಿ ತಂದರೆ ದೇವಸ್ಥಾನದ ಜಮೀನುಗಳನ್ನು ಮತ್ತು ಇನಾಂ ಜಮೀನುಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ ಇಲ್ಲದೇ ಹೋದರೆ ಹೈದ್ರಾಬಾದ್‌ಗೆ ಒಂದು ಕಾನೂನು ಮಂಗಳೂರಿಗೆ ಒಂದು ಕಾನೂನು ತರಬೇಕಾದ ಸಂದರ್ಭ ಬರುತ್ತದೆ. ಪ್ರತಿಯೊಂದು ಭಾಗಕ್ಕೂ ಒಂದೊಂದು ಕಾನೂನು ತಂದರೆ ಸರಿಹೋಗುವುದಿಲ್ಲ. ಆದುದರಿಂದ ಎಲ್ಲ ಭೂಮಿಗೂ ಸಂಬಂಧಪಟ್ಟಂತೆ ಸಮಗ್ರವಾದ ಒಂದು ಕಾನೂನು ತರಬೇಕು, ಹೀಗಾದರೆ ರೈತನ ಉದ್ಧಾರವಾಗುತ್ತದೆ, ಇಲ್ಲದಿದ್ದರೆ ಆಗುವುದಿಲ್ಲ. ನಾಳೆ ದಿವಸ ನೀವು ಭೂಸುಧಾರಣೆ ಕಾನೂನು ತರುತ್ತೇವೆ ಎಂದು ಹೇಳುತ್ತಿದ್ದೀರಿ. ಪಹಣಿಯಲ್ಲಿ ಜಮೀನ್ದಾರರು ಅವರಿಗೆ ತಕ್ಕಂತೆ ಬರೆಸಿಕೊಂಡಿರುತ್ತಾರೆ. ಗೇಣಿ ರೈತರುಗಳಿಗೆ ಅವರ ಹತ್ತಿರ ದುಡ್ಡು ಇಲ್ಲದೆ ಅವನು ಏನೂ ಬರೆಸಿ ಕೊಳ್ಳುವುದಕ್ಕಾಗುವುದಿಲ್ಲ. ಈ ಕಾನೂನು ತಂದ ಮಾತ್ರಕ್ಕೆ ಗೇಣಿ ರೈತರಿಗೆ ಪೋಲೀಸರು ರಕ್ಷಣೆ ಕೊಡುವುದಿಲ್ಲ. ಅವರು ದೊಡ್ಡ ದೊಡ್ಡ ಜಮೀನ್ದಾರರ ಪ್ರಭಾವಕ್ಕೆ ಒಳಗಾಗಿರುತ್ತಾರೆ. ಗೇಣಿದಾರರ ರಕ್ಷಣೆ ಮಾಡುವುದಕ್ಕೆ ಸರ್ಕಾರ ಮುಂದಾಗುವುದಿಲ್ಲ. ಏತಕ್ಕೆಂದರೆ ಭೂ ಮಾಲೀಕತ್ವ ಜಮೀನ್ದಾರನ ಹೆಸರಿನಲ್ಲೇ ಇರುವುದರಿಂದ ಗೇಣಿದಾರನಿಗೆ ರಕ್ಷಣೆ ಇರುವುದಿಲ್ಲ. ಪಹಣಿ ಯಲ್ಲೂ ಜಮೀನ್ದಾರ ತನ್ನ ಹೆಸರನ್ನು ಬದಲಾವಣೆ ಮಾಡಿಕೊಳ್ಳುತ್ತಾನೆ. ಇವರು ಏತಕ್ಕೆ ಬದಲಾವಣೆ ಮಾಡಿಕೊಳ್ಳಬೇಕು ? ಪೋಲೀಸಿನವರು ಗೇಣಿದಾರರಿಗೆ ರಕ್ಷಣೆ ಕೊಡುವುದಿಲ್ಲ, ಏತಕ್ಕೆಂದರೆ ಗೇಣಿರೈತ ಇವರಿಗೆ ಏನೂ ಕೊಡುವುದಿಲ್ಲ ಎಂದು. ಆದುದರಿಂದ ಪೋಲೀಸ್ ಇಲಾಖೆ ಯವರು ಗೇಣಿ ರೈತನಿಗೆ ರಕ್ಷಣೆ ಕೊಡುವಂತೆ ನಡೆಯಬೇಕು ಎಂದು ಹೇಳುತ್ತೇನೆ.

3-00 P. M.

ಎಷ್ಟೋ ವರ್ಷದಿಂದ ಮಾಡಿಕೊಂಡು ಬಂದಿರುವ ಸೊರಬ ತಾಲ್ಲೂಕು ಮಾಗಡಿ ಗ್ರಾಮದ
ಜಮೀನಿನ ಸಂಬಂಧದಲ್ಲಿ 145ನೇ ಸೆಕ್ಷನ್ ಪ್ರಕಾರ ಕೋರ್ಟಿಗೆ ಎಳೆಯುತ್ತಿದ್ದಾರೆ. ಬಿತ್ತಿರುವ
ಫಸಲು ಕೊಳೆಯುತ್ತಿದೆ. ಅವನ್ನು ಉಳಿಸಿಕೊಳ್ಳುವುದಕ್ಕೆ ಸತ್ಯಾಗ್ರಹ ಮಾಡತಕ್ಕ ಪ್ರಸಂಗ
ಬಂದಿದೆ. ಮೊದಲು ಗೇಣಿದಾರನಿಗೆ ರಕ್ಷಣೆಯಾಗಬೇಕು ಎಂಬ ದೃಷ್ಟಿಯಿಂದ ಇರತಕ್ಕ ಕಾಗದ
ಪತ್ರಗಳನ್ನು ವ್ಯವಸ್ಥಿತವಾಗಿ ಇಟ್ಟಿದ್ದಾರೆಯೇ ಇಲ್ಲವೇ ಎನ್ನುವುದನ್ನು ಪರಿಶೀಲನೆ ಮಾಡಬೇಕು.
ಕಂದಾಯ ಮಂತ್ರಿಗಳು ಇಲ್ಲಿ ಕುಳಿತುಕೊಂಡು ಆಲೋಚನೆ ಮಾಡಿದರೆ ಸಮಸ್ಯೆ ಬಗೆಹರಿಯುವುದಿಲ್ಲ.
ಪ್ರತಿ ತಾಲ್ಲೂಕಿಗೆ ಹೋಗಿ, ಕುಳಿತು, ತಾಲ್ಲೂಕು ಆಫೀಸುಗಳಲ್ಲಿ ಏನಾಗಿದೆ, ಅಲ್ಲಿರುವವರು
ಏನಾದರೂ ಕೆಲಸ ಮಾಡುತ್ತಾರೆಯೇ ಇಲ್ಲವೇ ಎನ್ನುವುದನ್ನು ಸ್ವತಃ ಕುಳಿತು ಪರಿಶೀಲಿ
ಸುವುದಲ್ಲದೆ ಜನರಿಂದಲೇ ಸೇರಿರತಕ್ಕ ಕಮಿಟಿಗಳನ್ನು ಆಯಾ ಪಂಚಾಯಿತಿ ಕ್ಷೇತ್ರ
ಗಳಲ್ಲಿ ನಡೆಸಿ, ಪಹಣಿ ದಾಖಲೆಯನ್ನು ಪ್ರಯತ್ನ ಮಾಡಬೇಕೆಂದು ದುರಸ್ತು ಮಾಡು
ವುದಕ್ಕೆ, ಸಮರ್ಪಕ ರೀತಿಯಲ್ಲಿ ಕಾನೂನು ಬದಲಾವಣೆ ಮಾಡುವುದಕ್ಕೆ ನಾನು ಒತ್ತಾಯ
ಮಾಡುತ್ತೇನೆ. ನಾನು ಈ ಕಾನೂನನ್ನು ಸ್ವಾಗತಿಸುತ್ತೇನೆ. ಸ್ವಾಗತಿಸದೆ ಇರುವುದಕ್ಕಾ
ಗುವುದಿಲ್ಲ. ನೀವು ತಂದಿರುವ ಕಾನೂನು ಮಾತ್ರ ಪ್ರಗತಿದಾಯಕವಾಗಿಲ್ಲ ನೀವು
ನಿರೀಕ್ಷಣೆ ಮಾಡಿದಂಥ ಪರಿಹಾರ ಈ ಕಾನೂನಿನಿಂದ ಗೇಣಿ ರೈತನಿಗೆ ಒದಗಿಸಿಕೊಡುವುದಕ್ಕಾಗು
ವುದಿಲ್ಲ. ಪರ್ಮನೆಂಟ್ ಟೆನೆಂಟಿಗೆ ಮಾತ್ರ ಆಕ್ಯುಪೆನ್ಸಿ ರೈಟ್ಸ್ ಕೊಡುವ ದೃಷ್ಟಿಯಿಂದ ಕಾನೂನು
ತಂದಿದ್ದಾರೆ. ಅದೇ ರೀತಿಯಲ್ಲಿ ಉಳಿದಿರುವ ಚಾಲು ಗೇಣಿದಾರರು ಮತ್ತು ಇತರ ಗೇಣಿದಾರರಿಗೆ
ಕೂಡ ಆಕ್ಯುಪೆನ್ಸಿ ರೈಟ್ಸ್ ಕೊಡುವ ದೃಷ್ಟಿಯಿಂದ ಮತ್ತು ಸಂಪೂರ್ಣವಾಗಿ ಗೇಣಿದಾರರಿಗೆ
ಜಮೀನಿನ ಮಾಲೀಕತ್ವ ಸಿಕ್ಕುವ ರೀತಿಯಲ್ಲಿ ಕಾನೂನಿನಲ್ಲಿ ಬದಲಾವಣೆ ಮಾಡಬೇಕೆಂದು ಅಗ್ರಹ
ಪೂರ್ವಕವಾಗಿ ಈ ಸಂದರ್ಭದಲ್ಲಿ ಸರ್ಕಾರವನ್ನು ತಮ್ಮ ಮುಖಾಂತರ ಒತ್ತಾಯಪಡಿಸಿ ನನ್ನ
ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಸಭಾಪತಿಗಳೇ, ಮೈಸೂರು (ಬಾಂಬೆ
ಅಂಡ್ ಹೈದರಾಬಾದ್ ಏರಿಯಾಸ್) ರಿಲಿಜಿಯಸ್ ಅಂಡ್ ಚಾರಿಟಬಲ್ ಇನಾಂಸ್ ಅಬಾಲಿಷನ್
ಬಿಲ್ 1972, ಇದನ್ನು ಒಂದು ಕಾಯಿದೆಯಾಗಿ ಮಾಡುವುದಕ್ಕೆ ಈಗ ನಮ್ಮ ಮುಂದೆ ಇಟ್ಟಿದ್ದಾರೆ.
ಮೈಸೂರು ರಿಲಿಜಿಯಸ್ ಅಂಡ್ ಚಾರಿಟಬಲ್ ಇನಾಂಸ್ ಅಬಾಲಿಷನ್ ಆಕ್ಟ್ 1955 ಇತ್ತು,
ಮೈಸೂರು ಇನಾಂಸ್ ಅಬಾಲಿಷನ್ ಆಕ್ಟ್ 1969 ಇತ್ತು. ಈ ಕಾಯಿದೆಗಳಿಗೆ ತಿದ್ದುಪಡಿ
ತಂದು ಅದರಲ್ಲಿ ಹೈದರಾಬಾದ್ ಮತ್ತು ಬೊಂಬಾಯಿ ಪ್ರದೇಶಗಳು ಸೇರಬೇಕು ಎಂದು ಯಾವುದಾ
ದರೂ ರೀತಿಯಲ್ಲಿ ಬದಲಾವಣೆ ಮಾಡಬೇಕಾಗಿತ್ತು. ಇಡೀ ಮೈಸೂರು ರಾಜ್ಯ ಕರ್ನಾಟಕವಾಗ
ಬೇಕು, ಇಡೀ ಕರ್ನಾಟಕ ಒಂದೇ ಎಂದು ಹೇಳುವ ಕಾಲದಲ್ಲಿ ಬೊಂಬಾಯಿ ಏರಿಯಾ ಮದ್ರಾಸ್
ಏರಿಯಾ, ಹಳೇ ಮೈಸೂರು ಎಂದು ವ್ಯತ್ಯಾಸ ಮಾಡತಕ್ಕದ್ದು ಅನ್ಯಾಯ. ಈಗ ತಂದಿರುವ
ಬಿಲ್ ಬೊಂಬಾಯಿ ಮತ್ತು ಹೈದರಾಬಾದ್ ಏರಿಯಾಸ್‌ಗೆ ಸಂಬಂಧಪಟ್ಟಿದೆ. ಹಳೇ ಮೈಸೂರಿಗೇ
ಬೇರೆ ಇದೆ. ನಮ್ಮ ರಾಜ್ಯದ ಎಲ್ಲ ಭಾಗಗಳಿಗೂ ಅನ್ವಯವಾಗುವಂತೆ ಒಂದು ಸಮಗ್ರವಾದ ಬಿಲ್
ತಂದು ಕ್ರೋಡಿಕರಿಸಿ ಅಗತ್ಯ ತಿದ್ದುಪಡಿಗಳು ಏನೇನಾಗಬೇಕೋ ಅದನ್ನೆಲ್ಲ ಇಟ್ಟಿದ್ದರೆ ಚೆನ್ನಾಗಿತ್ತು.
ಅದರ ಜೊತೆಗೆ ಇನಾಂ ಅಬಾಲಿಷನ್ ಆಕ್ಟ್ ಪಾಸಾಗಿ 17 ವರ್ಷವಾಯಿತು. 12 ವರ್ಷದ ಕೆಳಗೆ
ಕೆಲವು ತಿದ್ದುಪಡಿಗಳನ್ನು ಮಾಡಿದ್ದಾರೆ. ಮೈಸೂರು ರಾಜ್ಯದಲ್ಲಿ ಬೊಂಬಾಯಿ ಪ್ರಾಂತ,
ಹೈದರಾಬಾದ್ ಪ್ರಾಂತ ಸೇರಿಕೊಂಡರೂ ಕೂಡ ಕಳೆದ 10—12 ವರ್ಷಗಳ ಕಾಲ ಯಾವ
ವಿಧವಾದ ಕಾಯಿದೆಯನ್ನೂ ಮಾಡದೆ ಬೊಂಬಾಯಿ ಭಾಗದಲ್ಲಿ ಒಂದು ಕಾಯಿದೆ, ಬೇರೆ ಮಾಡುವು
ದಾದರೆ ಮೈಸೂರಿನ ಒಂದು ಭಾಗಕ್ಕೆ ವ್ಯತ್ಯಾಸವಾಗುತ್ತದೆ. 10—12 ವರ್ಷಗಳ ಕಾಲದಲ್ಲಿ
ಯಾವ ಯಾವ ಕಾಯಿದೆಗಳನ್ನು ಬದಲಾವಣೆ ಮಾಡಬೇಕು, ಯಾವ ಯಾವ ಹಕ್ಕುಬಾಧ್ಯತೆಗಳನ್ನು
ಸರಿಪಡಿಸುವುದಕ್ಕೆ ಏನು ಬೇಕೋ ಅದನ್ನು ಮಾಡಲು ಅವಕಾಶವಿತ್ತು. ಚಿಲ್ಲರೆ ಚಿಲ್ಲರೆಯಾಗಿ ಬಿಲ್
ಗಳನ್ನು ತರುತ್ತಿರುವುದರಿಂದ ಅದರಲ್ಲಿ ಲೋಪ ದೋಷಗಳು ಹೆಚ್ಚಾಗುತ್ತವೆ.

ನನ್ನ ಮುಖ್ಯವಾದ ಆರೋಪ, ಇಡೀ ರಾಜ್ಯದಲ್ಲಿ ಅಥವಾ ಇಡೀ ದೇಶದಲ್ಲಿ ಹಿಂದುಗಳಿಗೆ
ಸಂಬಂಧಪಟ್ಟ ಹಾಗೆ ಎಲ್ಲವನ್ನೂ ತೆಗೆದುಕೊಂಡು ಬರುತ್ತಾರೆ. ಚರ್ಚುಗಳಿಗೆ ಬೇಕಾದಷ್ಟು ಆಸ್ತಿ
ಬೇಕಾದಷ್ಟು ಜಮೀನು ಇರಬಹುದು. ಬೆಂಗಳೂರಿನ ಸುತ್ತಮುತ್ತ ಅನೇಕ ಚರ್ಚುಗಳು ಬೇಕಾ
ದಷ್ಟು ಜಮೀನು ತೆಗೆದುಕೊಂಡು ಇಟ್ಟುಕೊಂಡಿರುತ್ತವೆ. ಅದೇ ರೀತಿ ಮುಸ್ಲಿಮರ ಸಂಸ್ಥೆಗಳೂ
ಜಮೀನು ಇಟ್ಟುಕೊಂಡಿರುತ್ತವೆ. ಆದ್ದರಿಂದ ಹಿಂದುಗಳಿಗೇ ಒಂದು ಲಾ ಮತ್ತು ಬೇರೆಯವರಿಗೇ
ಒಂದು ಲಾ ಮಾಡುವುದು ಸರಿಯಲ್ಲ. ಇಂಡಿಯಾ ದೇಶದ ಪ್ರಜೆಯಾಗಿ ಯಾರಿದ್ದಾರೆ, ಪ್ರತಿಯೊಬ್ಬರಿಗೂ

(ಶ್ರೀ ಟಿ. ಆರ್. ಶಾಮಣ್ಣ)

ಕೂಡ ಒಂದೇ ಕಾಯದೆ ಅನ್ವಯವಾಗುವ ಹಾಗೆ ಮಾಡಬೇಕು, ಒಂದೊಂದು ಜನಾಂಗಕ್ಕೆ ಒಂದೊಂದು ರೀತಿ ಮಾಡುವುದು ಖಂಡನೀಯವೆಂದು ಹೇಳುತ್ತೇನೆ. ಇಡೀ ರಾಜ್ಯದಲ್ಲಿರುವ 2 ಕೋಟಿ 75 ಲಕ್ಷ ಜನರೆಲ್ಲರೂ ಮೈಸೂರು ದೇಶದ ನಿವಾಸಿಗಳು. ಇವರೆಲ್ಲರಿಗೂ ಒಂದೇ ವಿಧವಾದ ಕಾನೂನು ಅನ್ವಯವಾಗಬೇಕು. ಹಿಂದೂಗಳು ಕುರಿಗಳ ಹಾಗೆ, ಏನು ಕಷ್ಟ ಬಂದರೂ ಸಹಿಸಿ ಕೊಳ್ಳಬೇಕು ಎನ್ನುವ ಮನೋಭಾವ ಇಟ್ಟುಕೊಂಡಿರುವುದರಿಂದ ಪ್ರತಿಯೊಂದು ವಿಚಾರದಲ್ಲಿಯೂ ಅವರಿಗೆ ಅನಾನುಕೂಲವಾಗುತ್ತಿದೆ.

ಗೇಣಿದಾರರು ಜಮೀನು ತಮ್ಮ ಹೆಸರಿಗೆ ಪಟ್ಟಾ ಆದಮೇಲೆ ಭೂಕಂದಾಯವನ್ನು ಭೂಮಾಲೀಕರಿಗೆ ಕೊಡುವ ಹಾಗೆ ಸರ್ಕಾರದವರಿಗೆ ಕೊಡಬೇಕೆಂದು ತಿದ್ದುಪಡಿಯಲ್ಲಿದೆ. ಅದರ ಜೊತೆಗೆ ಜಮೀನುಗಳಿಗೆ ಸಂಬಂಧಪಟ್ಟ ಹಾಗೆ 15 ವರ್ಷದಷ್ಟು ಗೇಣಿಯನ್ನು 10 ವರ್ಷದೊಳಗೆ ಸರ್ಕಾರಕ್ಕೆ ಕೊಡಬೇಕೆಂಬ ನಿಯಮವಿದೆ. 10 ವರ್ಷವೆಂದರೆ ಒಂದು ಕಡೆ ಕಂದಾಯ ಕೊಡಬೇಕು, ಇನ್ನೊಂದು ಕಡೆ ಕಂತು ಕೊಡಬೇಕು. ಇವೆರಡನ್ನೂ ಕೊಡುವುದಕ್ಕೆ ಕಷ್ಟವಾಗುತ್ತದೆ. ಹೆಚ್ಚು ದುಡ್ಡನ್ನು ಕೊಡುವುದಕ್ಕೆ ಆಗುವುದಿಲ್ಲ. ಆದುರಿಂದ 10 ವರ್ಷಗಳ ಕಂತುಗಳಲ್ಲಿ ಎನ್ನುವುದಕ್ಕೆ ಬದರಾಗಿ 20 ವರ್ಷದ ಕಂತುಗಳಲ್ಲಿ ಕೊಡುವಂತೆ ಮಾಡಬೇಕು. ಜಮೀನು ಹೊಸದಾಗಿ ತೆಗೆದು ಕೊಂಡಿರುವುದರಿಂದ, ಅದಕ್ಕೆ ಬೇಕಾದಷ್ಟು ದುಡ್ಡು ಖರ್ಚು ಮಾಡಿ ರೂಢಿಸುವುದಕ್ಕೆ ಪ್ರಯತ್ನ ಮಾಡಬೇಕು. ಅವನಿಗೆ ಕಂತು ಮತ್ತು ಕಂದಾಯ ಎರಡನ್ನೂ ಕೊಡುವುದಕ್ಕೆ ಕಷ್ಟವಾಗುವುದರಿಂದ 20 ವರ್ಷದ ಕಂತುಗಳಲ್ಲಿ ಹಣ ಕೊಡುವ ವ್ಯವಸ್ಥೆ ಮಾಡಬೇಕು ಎಂದು ಒತ್ತಿ ಹೇಳುತ್ತೇನೆ.

ಉಳುವವನಿಗೇ ಭೂಮಿ ಎನ್ನುವ ತತ್ವವನ್ನು ಎಲ್ಲರೂ ಒಪ್ಪಿಕೊಂಡಿರುವುದರಿಂದ ಇದರ ಬಗ್ಗೆ ವಿರೋಧ ಮಾಡುವುದಕ್ಕೆ ಅವಕಾಶವಿಲ್ಲ. ಆದರೂ ಕೂಡ ಸಮಾಜವಾದದಲ್ಲಿ ಪ್ರತಿಯೊಬ್ಬ ಪ್ರಜೆಯೂ ಕೂಡ ಬದುಕಿ ಬಾಳತಕ್ಕ ಅವಕಾಶವಿರಬೇಕು. ಒಬ್ಬರ ಆಸ್ತಿಯನ್ನು ಬೇರೆಯವರಿಗೆ ಕೊಡುವಾಗ ಅವರಿಗೆ ಸರಿಯಾದ ರೀತಿಯಲ್ಲಿ ಜೀವನ ಮಾಡುವುದಕ್ಕೆ ಅವಕಾಶವಿರಬೇಕು, ಅವರು ಬೀದಿ ಬಿಕಾರಿ ಗಳಾಗಬಾರದು. ನಾನು ಇನಾಂದಾರರ ಬಗ್ಗೆ ವಾದಿಸುತ್ತಿಲ್ಲ. ಫೈನಾನ್ಷಿಯಲ್ ಮೆಮೊ ರಾಂಡಂ ಪ್ರಕಾರ ರೈತರು 4.61 ಲಕ್ಷ ರೂಪಾಯಿ ಕಂದಾಯ ರೂಪದಲ್ಲಿ ಕೊಡುತ್ತಾರೆಂದು ತಿಳಿಸಿದ್ದಾರೆ. ಅದರ ಜೊತೆಗೆ ಭೂ ಆಸ್ತಿಯನ್ನು ತೆಗೆದುಕೊಂಡರೆ ಅದರ ಬಗ್ಗೆ 127 ಲಕ್ಷ ರೂಪಾಯಿ ಕೊಡುತ್ತಾರೆಂದು ಹೇಳುತ್ತಾರೆ. ತಸ್ದಿಕ್ ರೂಪವಾಗಿ 17.69 ಲಕ್ಷ ರೂಪಾಯಿಗಳನ್ನು ಪ್ರತಿ ವರ್ಷವೂ ದೇವಸ್ಥಾನಗಳು ಮತ್ತು ಚಾರಿಟಬಲ್ ಇನಾಂಗಳಿಗೆ ಕೊಡಬೇಕಾಗುತ್ತದೆ ಎಂದು ತಿಳಿಸಿದ್ದಾರೆ. ವರ್ಷಕ್ಕೆ ಸುಮಾರು 17 ಲಕ್ಷ ರೂಪಾಯಿಗಳನ್ನು ಕೊಡುವುದೆಂದರೆ ಬಹಳ ಹೆಚ್ಚಿನ ಮೊತ್ತವಾಗುತ್ತದೆ. 127 ಲಕ್ಷ ರೂಪಾಯಿ ಆಸ್ತಿಯನ್ನು ತೆಗೆದುಕೊಂಡು ವರ್ಷಕ್ಕೆ 17 ಲಕ್ಷ ರೂಪಾಯಿ ಪರಿಹಾರ ಕೊಟ್ಟರೆ ಬಹಳ ಜಾಸ್ತಿಯಾಗುತ್ತದೆ. ಆದುದರಿಂದ 127 ಲಕ್ಷ ರೂಪಾಯಿ ಗಳನ್ನು ಚಿಲ್ಲರೆ ಚಿಲ್ಲರೆಯಾಗಿ ಕೊಡುವುದಕ್ಕೆ ಬದಲು ಕೊಡಬೇಕಾದ ಹಣವನ್ನು ಪೂರ್ತಿಯಾಗಿ ಕೊಟ್ಟು ಮುಜರಾಯಿ ಇಲಾಖೆ ಅಥವಾ ಇನಾಂದಾರರನ್ನು ಟ್ರಸ್ಟ್ ಆಗಿ ಮಾಡಿ ಅದರಿಂದ ಬರ ತಕ್ಕ ಉತ್ಪನ್ನವನ್ನು ಉಪಯೋಗಿಸಬಹುದು ಎನ್ನುವ ಸಲಹೆಯನ್ನು ಕೊಡುತ್ತೇನೆ. ಆದ್ದರಿಂದ ಎಲ್ಲಿಯವರಿಗೆ ಇವು ನಡೆದು ಕೊಂಡುಹೋಗುತ್ತದೋ ಗೊತ್ತಾಗುವುದಿಲ್ಲ. ದೇವಸ್ಥಾನ ಸರಿಯಾಗಿ ನಡೆಯಬೇಕಾದರೆ, ಉತ್ಪನ್ನ ಬೇಕು. ಅನೇಕ ದೇವಸ್ಥಾನಗಳಿಗೆ ಉತ್ಪನ್ನ ಇಲ್ಲದೆ ಅರ್ಚಕರು ಉಪವಾಸವಿದ್ದಾರೆ. ಸರ್ಕಾರದವರು ದೇವಸ್ಥಾನಗಳನ್ನು ನಡೆಸುವ ದೊಡ್ಡ ಜವಾಬ್ದಾರಿ ತೆಗೆದುಕೊಳ್ಳುತ್ತಿದ್ದಾರೆ. ದೇವಸ್ಥಾನಕ್ಕೆ ಜಮೀನು ಇದ್ದರೂ ಕೂಡ ಉತ್ಪನ್ನ ಬರುತ್ತಾ ಇಲ್ಲ. ಅದನ್ನು ತೆಗೆದುಕೊಳ್ಳುವ ಶಕ್ತಿಯೂ ಅವರಿಗೆ ಇಲ್ಲ. ದೇವಸ್ಥಾನಕ್ಕೆ ಯಾರೂ ದುಡ್ಡು ಕೊಡುವು ದಿಲ್ಲ. ಆದ್ದರಿಂದ ಸರ್ಕಾರದವರು ಅವರಿಗೆ ಕೊಡಬೇಕಾದ ಮೊತ್ತವನ್ನು ನಿಗದಿ ಮಾಡಿ ಬಿಟ್ಟು ಪಾವತಿಮಾಡಿದರೆ ಅದನ್ನು ಟ್ರಜರಿ ಅಥವಾ ಬ್ಯಾಂಕಿನಲ್ಲಿ ಹಾಕಿಕೊಂಡು ಅದರಿಂದ ಜೀವನ ಮಾಡುವುದು ಉತ್ತಮವೆಂದು ಕಾಣುತ್ತದೆ. ಪ್ರತಿವರ್ಷ ಸರ್ಕಾರ 17.96 ಲಕ್ಷ ರೂಪಾಯಿ ವಸೂಲು ಮಾಡಬೇಕಾಗಿದೆ. ಅವರಿಗೂ ತೊಂದರೆ ಇರುತ್ತದೆ. ದೇವಸ್ಥಾನ ಸರಿಯಾಗಿ ನಡೆದು ಕೊಂಡು ಹೋಗುವುದಿಲ್ಲ. ಸಣ್ಣ ಹಿಡುವಳಿದಾರರ ಬಗ್ಗೆ ಕನಿಕರದ ಆಟಿಟ್ಯೂಡ್ ತೆಗೆದುಕೊಳ್ಳ ಬೇಕು. ಜಮೀನು ಅವರಿಗೆ ಸಿಕ್ಕುವುದಿಲ್ಲ. ಆದರೆ, ಅವರಿಗೆ ಜೀವನ ಮಾರ್ಗವನ್ನು ಹುಡುಕಿಕೊಡ ಬೇಕು. ಅವರಿಗೆ ಬೇಕಾದ ಹಣವನ್ನು ಒಟ್ಟಿಗೆ ಕೊಟ್ಟರೆ ಯಾವುದಾದರೂ ದಾರಿ ಮಾಡಿದಂತಾಗು ತ್ತದೆ. ದೇವಸ್ಥಾನಗಳು ಸಾರೋದ್ಧಾರವಾಗಿ ನಡೆದುಕೊಂಡು ಹೋಗಬೇಕೆಂದು ಅವಕ್ಕೆ ಜಮೀನು ಕೊಟ್ಟಿದ್ದರು. ಆದರೆ, ನಾನಾ ಕಾರಣಗಳಿಂದ ಉತ್ಪನ್ನ ವಸೂಲು ಆಗುತ್ತಿಲ್ಲ. ಅನೇಕ

ಕಡೆ ಮಂಗಳಾರತಿ ಆಗುವುದು ಕಷ್ಟವಾಗಿದೆ. ಆದ್ದರಿಂದ ನಮ್ಮ ಹಿಂದೂ ಧರ್ಮ ಉಳಿಯಬೇಕಾದರೆ, ಈ ದೇವಸ್ಥಾನಗಳಿರಬೇಕು. ಮಠಗಳಿರಬೇಕು. ಈ ಮಠಗಳು ರಾಜಕಾರಣದ ಮಠಗಳು, ಆಗಬಾರದು. ಧರ್ಮಬೋಧೆ ಮಾಡಬೇಕು. ಇದರ ಜೊತೆಗೆ ಚಾರಿಟಬಲ್ ಎಂಡೋಮೆಂಟ್ಸ್ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಗೋಖಲೇ ಇನ್‌ಟ್ಯೂಟ್ ಅವುಗಳ ಬಗ್ಗೆ ಏನು ಮಾಡುತ್ತೀರಿ ! ನೋಡಬೇಕು. ಕೆಲವು ಹಾಸ್ಟಲ್‌ಗಳನ್ನು ಮತ್ತು ಸ್ಕೂಲುಗಳನ್ನು ಈ ಮಠಗಳವರು ನಡೆಸುತ್ತಿದ್ದಾರೆ. ಈ ಮಠಗಳಿಗಿದ್ದ ಭೂಮಿಯ ಉತ್ಪನ್ನವನ್ನು ಇದಕ್ಕೆ ಉಪಯೋಗಿಸುತ್ತಿದ್ದಾರೆ. ಅಂಥದಕ್ಕೆ ಧಕ್ಕೆ ಬಾರದ ಹಾಗೆ ಅನುಕೂಲ ಮಾಡಿಕೊಡಬೇಕೆಂದು ಸೂಚಿಸುತ್ತೇವೆ. ಈ ಬಿಲ್ಲನ್ನು ನನಗೆ ತಿಳಿದ ಪ್ರಕಾರ ಸೆಲೆಕ್ಟ ಕಮಿಟಿಗೆ ಕಳುಹಿಸುತ್ತಾರೆ. ಅಲ್ಲಿ ಇಡೀ ರಾಜ್ಯಕ್ಕೆ ಏಕರೂಪದ ಬಿಲ್ ಬರುವುದಕ್ಕೆ ಪ್ರಯತ್ನ ಪಡಬೇಕು. ಏಕೆಂದರೆ, ಹಳೇ ಮೈಸೂರಿಗೆ ಹೊಸ ಮೈಸೂರಿಗೆ ಡಿಸ್‌ಕ್ರಿಮಿನೇಷನ್ ಆಗುತ್ತದೆ. ಎರಡು ಆಕ್ಟಗಳನ್ನು ಇಟ್ಟುಕೊಂಡು ನೋಡಿದರೆ ಅದಕ್ಕೆ ಇದಕ್ಕೆ ವ್ಯತ್ಯಾಸ ಕಂಡು ಬರುತ್ತದೆ. ಸಮಗ್ರವಾಗಿ ಇಡೀ ರಾಜ್ಯಕ್ಕೆ ಅನ್ವಯಿಸುವ ಏಕರೂಪದ ಬಿಲ್ಲನ್ನು ತಯಾರು ಮಾಡಿ ಜಾಯಿಂಟ್ ಕಮಿಟಿಯ ಪರ್ಯಾಲೋಚನೆಗೆ ಕೊಡುವುದು ಉತ್ತಮ. ಇಲ್ಲದೆ ಇದ್ದರೆ ಬಾಂಬೆ ಕರ್ನಾಟಕಕ್ಕೆ ಬೇರೆ, ಮತ್ತು ಹಳೇ ಕರ್ನಾಟಕಕ್ಕೆ ಬೇರೆ ರೀತಿಯನ್ನು ಅನುಸರಿಸಿದಂತಾಗುತ್ತದೆ. ಆದ್ದರಿಂದ ಈ ರಾಜ್ಯಕ್ಕೆ ಒಂದು ಸಮಗ್ರವಾದ ಬಿಲ್ ಬರುವ ಹಾಗೆ ಮಾಡಿದರೆ ಎಲ್ಲರಿಗೂ ಅನುಕೂಲ ಮಾಡಿದಂತಾಗುತ್ತದೆ. ಆದ್ದರಿಂದ ಮೊದಲೇ ಹೇಳಿದಹಾಗೆ ರೈತರು ಕೊಡಬೇಕಾದಂಥ ದುಡ್ಡನ್ನು ಹತ್ತು ಇನ್‌ಸ್ಟಾಲ್‌ಮೆಂಟ್‌ಗಳಲ್ಲಿ ಕೊಡಬೇಕೆಂದಿದೆ. ಅದನ್ನು 20 ಇನ್‌ಸ್ಟಾಲ್‌ಮೆಂಟ್‌ಗಳಾಗಿ ಮಾಡಬೇಕು ಸಂಬಂಧಪಟ್ಟ ಕಾಯಿದೆ ಎಲ್ಲಾ ಜಾತಿಗೂ ಅನ್ವಯಿಸುವ ಹಾಗೆ ಮಾಡಬೇಕು. ಸರ್ಕಾರದವರು ಕೊಡಬೇಕಾದ ದುಡ್ಡನ್ನು ಒಟ್ಟಿಗೆ ಕೊಟ್ಟು ಈ ಸಂಸ್ಥೆಗಳು ಚೆನ್ನಾಗಿ ನಡೆದುಕೊಂಡು ಹೋಗುವ ಹಾಗೆ ಮಾಡಬೇಕು. ಬೇಕಾದರೆ, ಸರ್ಕಾರದ ನಾಮಿನಿಯನ್ನು ಸಂಸ್ಥೆಗಳ ಮ್ಯಾನೇಜಮೆಂಟ್ ಕಮಿಟಿಯಲ್ಲಿ ಹಾಕುವುದರ ಮೂಲಕ ಈ ಸಂಸ್ಥೆಗಳು ಚೆನ್ನಾಗಿ ನಡೆಯಬೇಕೇ ಹೊರತು ಅವುಗಳ ಚಟುವಟಿಕೆ ಕುಂಠಿತವಾಗುವುದಕ್ಕೆ ಅವಕಾಶ ಇರಬಾರದು. ಇದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗುವ ಅವಶ್ಯಕತೆ ಇಲ್ಲ. ಹೋಗಲೇಬೇಕಾದರೆ, ಸಮಗ್ರ ಬಿಲ್ ಒಂದನ್ನು ತರಬೇಕು ಎಂದು ಹೇಳಿ ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ವಿ. ಕಕ್ಕಿಲಾಯ (ಬಂಟ್ವಾಳ).—ಮಾನ್ಯ ಅಧ್ಯಕ್ಷಣಿಯವರೇ, ಈ ಮಸೂದೆಯನ್ನು ಬೆಂಬಲಿಸಬೇಕೋ ಅಥವಾ ವಿರೋಧಿಸಬೇಕೋ ಎಂದು ನನಗೆ ತಿಳಿಯುವುದಿಲ್ಲ. ಏಕೆಂದರೆ ಇದು ಯಾರಿಗಾಗಿ ಒಳ್ಳೆಯ ಪ್ರಗತಿಶೀಲವಾದಂಥ ಮಸೂದೆ ಎಂದು ಕಾಣುತ್ತದೆ, ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು. ಈ ಮಸೂದೆಯನ್ನು 1951ರಲ್ಲಿ ಗುಂಡಪ್ಪ ಸಮಿತಿಯವರು ಶಿಫಾರಸ್ ಮಾಡಿದರು. ಆ ಶಿಫಾರಸ್‌ನ ಆಧಾರದಲ್ಲಿ ಮೇಲೆ ಈ ಮಸೂದೆಯನ್ನು ತಯಾರು ಮಾಡಿದ್ದಾರೆ. 1954ರಲ್ಲಿ ಹಳೆಯ ಮೈಸೂರಿನ ಸಂಸ್ಥಾನಕ್ಕೆ ಅನ್ವಯಿಸುವಂತೆ ದೇವಾಯ ಮತ್ತು ಧರ್ಮಾಯ ಸಂಸ್ಥೆಗೆ ಸಂಬಂಧಪಟ್ಟ ಮಸೂದೆ ಏನು ಇದೆ, ಅದರ ಚೌಕಟ್ಟಿನೊಳಗೆ ಈ ಮಸೂದೆಯನ್ನು ತಯಾರು ಮಾಡಿದ್ದಾರೆ. ಇದು ತಯಾರಾಗಿ ನಿಜವಾಗಿಯೂ ಬಹಳ ಕಾಲ ಕಳೆದು ಹೋಗಿದೆ. 1951ರಿಂದ 1954ರಲ್ಲಿ ಆಗಬೇಕಾಗಿದ್ದರೆ, ನಮ್ಮ ದೇಶದ ಪರಿಸ್ಥಿತಿ, ಜನತೆಯ ಮನೋಭಾವ ಮತ್ತು ಸರ್ಕಾರದ ಧೋರಣೆ ಕೂಡ ಬದಲಾವಣೆಯಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ ಆದರೆ ಈ ಮಸೂದೆಯನ್ನು ನೋಡಿದರೆ, ಲೋಕವೇ ಬದಲಾವಣೆ ಆದರೂ ಕೂಡ ನಮ್ಮ ಸರ್ಕಾರದ ಧೋರಣೆ ಬದಲಾವಣೆ ಆದ ಹಾಗೆ ಕಾಣುವುದಿಲ್ಲ, ಇದರಲ್ಲಿ ಹೊಸದೂ ಏನೂ ಕಾಣುವುದಿಲ್ಲ. ಚಾರಿಟಬಲ್ ಮತ್ತು ರಿಲಿಜಿಯಸ್ ಎಂಡೋಮೆಂಟ್ಸ್, ಇನಾಂ ಆಕ್ಟ್ ಅನ್ನು ತರಬೇಕಾಗಿದ್ದರೆ ಎರಡು ಮುಖ್ಯ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಇಂಥ ಒಂದು ಮಸೂದಾ ಕಾನೂನನ್ನು ತರಬೇಕಾಗಿತ್ತು. ನಮ್ಮ ರಾಷ್ಟ್ರ ಮತಾತೀತ ರಾಷ್ಟ್ರ, ಅದರಲ್ಲೂ ಜನತೆಯ ಜೀವನದ ಮೇಲೆ ಮತೀಯ ಸಂಸ್ಥೆಗಳು ಶೋಷಣೆ ನಡೆಸುವಂಥಾದ್ದನ್ನು ಕೊನೆಗಾಣಿಸಿ, ಧಾರ್ಮಿಕ ಸಂಸ್ಥೆಗಳು, ಮತೀಯ ಸಂಸ್ಥೆಗಳು ಜಗತ್ತಿನ ಸಂಸ್ಕೃತಿಯ ಅಭಿವೃದ್ಧಿಗೆ ಮತ್ತು ಸಮಾಜದಲ್ಲಿ, ಜನತೆಯಲ್ಲಿ ಎಲ್ಲಾ ರೀತಿಯ ಸರ್ವತೋಮುಖವಾದ ಅಭಿವೃದ್ಧಿಗೆ ಪ್ರೋತ್ಸಾಹ ಕೊಡುವ ರೀತಿಯಲ್ಲಿ ಸಂಸ್ಥೆಗಳನ್ನು ನಡೆಸುವುದಕ್ಕೆ ಸರ್ಕಾರ ಪ್ರೋತ್ಸಾಹ ಕೊಡಬೇಕು. ಅದಕ್ಕೆ ಬೇಕಾದ ಒಂದು ತಳಹದಿಯನ್ನು ನಿರ್ಮಾಣ ಮಾಡಬೇಕು. ಈ ದೃಷ್ಟಿಕೋಣ ಈ ಮಸೂದೆಯನ್ನು ತರುವಾಗ ನಿಜವಾಗಿ ಇದ್ದಹಾಗೆ ಕಾಣಿಸುವುದಿಲ್ಲ. ರೈತರಿಂದ ಪ್ರತಿವರ್ಷ 4.61 ಲಕ್ಷರೂಪಾಯಿಗಳನ್ನು ವಸೂಲು ಮಾಡಿ 17.69 ಲಕ್ಷರೂಪಾಯಿಗಳನ್ನು ಈ ಸಂಸ್ಥೆಗೆ ಕೊಡುವ ವ್ಯವಸ್ಥೆಯನ್ನು ಸರ್ಕಾರದವರು ಈ ಮಸೂದೆಯಲ್ಲಿ ಮಾಡಿದ್ದಾರೆ ಎಂದು ಅಫಿಷಿಯಲ್ ಮೆಮೊರ್ಯಾಂಡಂ ನೋಡಿದರೆ ಅರ್ಥವಾಗು

(ಶ್ರೀ ಬಿ. ವಿ. ಕಕ್ಕಿಲಾಯ)

ತ್ತದೆ. ಧಾರ್ಮಿಕ ಸಂಸ್ಥೆಗಳಿಗೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಸರ್ಕಾರದ ಖಜಾನೆಯಿಂದ ಹಣ ಕೊಡಬೇಕಾದಂಥ ಅವಶ್ಯಕತ ಇದೆಯೇ ಎನ್ನುವುದನ್ನು ಸರಿಯಾಗಿ ಯೋಚನೆ ಮಾಡಬೇಕು. ಧಾರ್ಮಿಕ ಸಂಸ್ಥೆಗಳ ಪೂಜೆ ಪುನಸ್ಕಾರಾದಿಗಳು ನಡೆಯಕೂಡದು ಎಂದು ನನ್ನ ವಿಚಾರ ಅಲ್ಲ; ನಡೆಯಬೇಕು ಅದನ್ನು ನಡೆಸಲಿಕ್ಕೆ ಸರ್ಕಾರದಿಂದ ಹಣ ಕೊಡಬೇಕಾಗಿದ್ದರೆ ಈ ಸಂಸ್ಥೆಗಳು ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡದೆ ಇದ್ದರೆ ಯಾವ ಕಾರ್ಯಗಳನ್ನು ಮಾಡುವುದಕ್ಕೋಸ್ಕರ ಇದೆ ? ಈ ಸಂಸ್ಥೆಗಳು ಸ್ಪೆಷಲ್ ಆಗಿ ಕಾರ್ಯಗಳನ್ನು ಮಾಡುವುದು ಆದರೆ ಮಾತ್ರ ಸರ್ಕಾರ ಅವುಗಳಿಗೆ ಸಹಾಯ ಕೊಡಬೇಕು. ಇವತ್ತು ಇರುವಂಥ ಸಂಸ್ಥೆಗಳು, ಧಾರ್ಮಿಕ ಮತ್ತು ವಿದ್ಯಾ ಸಂಸ್ಥೆಗಳು ಎಂದು ಏನು ಹೇಳುತ್ತೇವೆ ಆ ಸಂಸ್ಥೆಗಳು ತಮ್ಮ ಮೂಲ ಉದ್ದೇಶವನ್ನು ಮರೆತು ಬೇರೆ ರೀತಿಯಲ್ಲಿ ವರ್ತಿಸುತ್ತಿವೆ ಎನ್ನುವುದನ್ನು ನಮ್ಮ ಸ್ವಂತ ಅನುಭವದಿಂದ ಹೇಳಬಹುದು. ನಮ್ಮ ರಾಷ್ಟ್ರಕವಿ ಕುವೆಂಪು ಅವರ ಮಾತಿನಲ್ಲಿ ಹೇಳುವುದಾದರೆ, ಅವರು ಬಹಳ ಚನ್ನಾಗಿ ಹೇಳಿದ್ದಾರೆ. ಕಾಣಿಕೆ ಹೆಸರಿನಲ್ಲಿ ಕಾಂಚಾಣ ತೆಗೆದುಕೊಂಡು ಪ್ರಯಾಣಿಕರ ಹೋಟೇಲಿಗೆ ಸಾಲಕೊಡುವುದು; ಉಡುಪಿಯಲ್ಲಿ ಸಿನಿಮಾ ಕಟ್ಟುವುದು; ಬೆಂಗಳೂರು ನಗರದಲ್ಲಿ ಬೇಕಾದಂಥ ಮೋಜು ಮಾಡುವುದು ಸಮಾಜವಾದವನ್ನು ಮಾತನಾಡುವ ಕಾಲದಲ್ಲಿ ಇದನ್ನೆಲ್ಲಾ ಧರ್ಮ ಸಂಸ್ಥೆಗಳ ಮುಖಾಂತರ ಸರ್ಕಾರದ ಆಶ್ರಯದಲ್ಲಿ ನಡೆಸುತ್ತಿರುವುದನ್ನು ಸರ್ಕಾರದವರು ಗಮನಿಸಬೇಕು.

[Mr. DEPUTY SPEAKER in the Chair]

ಇದು ಸರ್ಕಾರದ ಬೊಕ್ಕಸದಿಂದ ಇಷ್ಟು ಹಣಖರ್ಚು ಮಾಡುವಾಗ ಹೈದರಾಬಾದ್, ಮುಂಬೈ ಕರ್ನಾಟಕ ಭಾಗದಲ್ಲಿ ಎಷ್ಟು ಶೋಷಣೆ ನಡೆಯುತ್ತದೆ ಎನ್ನುವ ಪುರಾವೆಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಇನ್ನು ನಮ್ಮ ಜಿಲ್ಲೆಯ ಪುರಾವೆಗಳನು ಬೇಕಾದರೆ ಕೊಡುವುದಕ್ಕೆ ತಯಾರಿದ್ದೇನೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಸಾಮಾನ್ಯವಾಗಿ ಎಲ್ಲಾ ಕಡೆಯೂ ಇದೇ ರೀತಿ ನಡೆಯುತ್ತಿದೆ. ಎಲ್ಲಾ ಧಾರ್ಮಿಕ ಸಂಸ್ಥೆಗಳು ಮತ್ತು ಮತೀಯ ಸಂಸ್ಥೆಗಳನ್ನು ಹತೋಟಿಗೆ ತೆಗೆದುಕೊಂಡು ಆ ಸಂಸ್ಥೆಗಳು ಯಾವ ಉದ್ದೇಶಕ್ಕಾಗಿ ಸ್ಥಾಪನೆ ಆಗಿವೆ, ಆ ಉದ್ದೇಶಕ್ಕಾಗಿ ನಡೆಯುವ ಹಾಗೆ ಆಗುವಂತೆ ಮಾಡಿ ಅವುಗಳಲ್ಲಿ ನಡೆಯುತ್ತಿರುವ ಸಾರ್ವಜನಿಕ ಶೋಷಣೆಯನ್ನು ತಪ್ಪಿಸುವುದಕ್ಕೆ ಶಾಸನವನ್ನು ತರತಕ್ಕದ್ದನ್ನು ಬಿಟ್ಟು ಇನಾಮತಿಯನ್ನು ರದ್ದು ಮಾಡುವ ಶಾಸನವನ್ನು ತಂದಿದ್ದಾರೆ. ಈ ದೃಷ್ಟಿಯಲ್ಲಿ ಇದು ಸಂಪೂರ್ಣ ವಿಪರ್ಯಾಸವಾಗಿದೆ ಎಂದು ಹೇಳಬೇಕಾಗಿದೆ. ಎರಡನೆಯದು ಶಾಸನವನ್ನು ತರುವಾಗ ಇನಾಮತಿಗೆ ಒಳಪಟ್ಟ ರೈತರಿಗೆ ರಕ್ಷಣೆ ಕೊಡುವುದು ಮುಖ್ಯ ಉದ್ದೇಶ ಆಗಬೇಕಾಗಿತ್ತು. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಮಾತನಾಡುವಾಗ ಇದರ ಬಗ್ಗೆ ವಿಶದವಾಗಿ ಹೇಳಿದರು. ಮಸೂದೆಯಲ್ಲಿ ಪರಮನೆಂಟ್ ಟೆನೆನ್ಸಿ—ಕಾಯಂ ಗೇಣಿದಾರರು ಯಾರು ಇದ್ದಾರೆ ಅವರಿಗೆ ಮಾತ್ರ ಸ್ವಲ್ಪ ರಕ್ಷಣೆ ಕೊಡುವ ವ್ಯವಸ್ಥೆಯನ್ನು ಇದರಲ್ಲಿ ಮಾಡಿದ್ದಾರೆ. ನಮ್ಮ ಅನುಭವದಲ್ಲಿ ಪರಮನೆಂಟ್ ಟೆನೆನ್ಸಿ ಎನ್ನುವವು ಮಾತ್ರ ಅಲ್ಲ, ಇನಾಂತಿಗೆ ಸಂಬಂಧಪಟ್ಟ ಜಮೀನುಗಳನ್ನು ಯಾವ ರೈತರು ವ್ಯವಸಾಯ ಮಾಡುತ್ತಾರೆ ಅಂತಹ ರೈತರಿಗೆ ರಕ್ಷಣೆಯನ್ನು ಕಾನೂನಿನಲ್ಲಿ ಕೊಡಬೇಕಿತ್ತು. ಅದು ಕೊಡದೆ ಇದ್ದರೆ ತಾವು ಈಗೇನು ಕಾನೂನು ಮಾಡುತ್ತೀರಿ, ಅದ್ದರಿಂದ ಉಪಯೋಗವೂ ಆಗುವುದಿಲ್ಲ. 1954ರಲ್ಲಿ ಇದೇ ಶಾಸನ ಸಭೆಯಲ್ಲಿ ಅಂಗೀಕಾರವಾದ ಹಳೆ ಮೈಸೂರಿಗೆ ಸಂಬಂಧಪಟ್ಟ ಶಾಸನ ಜಾರಿಯಾಗಿ 17 ವರ್ಷಗಳು ಆದಮೇಲೆ ಇದ್ದ ಕಾನೂನಿನಿಂದ ಯಾವ ಅನುಕೂಲವಾಗಿದೆ ಎನ್ನುವುದನ್ನು ಪರಿಶೀಲನೆಮಾಡಿ ನೋಡಿದರೆ ಜಮೀನಿನಲ್ಲಿ ವ್ಯವಸಾಯ ಮಾಡುವವರಿಗೆ ಹೆಚ್ಚಿನ ರಕ್ಷಣೆ ಸಿಕ್ಕುತ್ತಾ ಇಲ್ಲ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. 'ಪರಸನಲ್ ಅಂಡ್ ಮಿಸಿಲೇನಿಯಸ್ ಇನಾಂಸ್ ರದ್ದಿಯಾತಿ ಕಾನೂನಾಗಲೀ, ಚಾರಿಟೆಬಲ್ ಇನಾಂಸ್ ರದ್ದಿಯಾತಿ ಆಗಲಿ, ಈ ಎರಡು ಶಾಸನಗಳನ್ನು ರದ್ದು ಮಾಡುವುದರಿಂದ ಉಳುವವರಿಗೆ, ರೈತರಿಗೆ ನಿಜವಾಗಿ ರಕ್ಷಣೆ ಸಿಕುತ್ತಾ ಇಲ್ಲ. ಒಂದೆರಡು ಉದಾಹರಣೆಗಳನ್ನು ಕೊಡಬೇಕಾದರೆ 2--3 ವರ್ಷಗಳ ಹಿಂದೆ ಬಾಗೇಪಲ್ಲಿಯಲ್ಲಿ ಆಗಡಮತ್ತಿ ಮಾಜಿ ಇನಾಮುದಾರರು ಇದ್ದಾರೆ 50-60 ವರ್ಷಗಳಿಂದ ಉಳುಮೆ ಮಾಡುವ ರೈತರನ್ನು ಸುಳ್ಳು ಪಹಣಿ ಬರಸಿ ಜಮೀನಿನಿಂದ ಹೊರಕ್ಕೆ ಹಾಕುವುದಕ್ಕೆ ಹೊರಟಿದ್ದಾರೆ. ಬಾಗೇಪಲ್ಲಿ ತಾಲ್ಲೋಕು ತಹಸಿಲ್ದಾರ್‌ರು ಪಹಣಿ ಬರೆಯುವುದರಲ್ಲಿ ಅನ್ಯಾಯ ಮಾಡಿದ್ದಾರೆ ಎಂದು ತಾಲ್ಲೋಕಿನ ರೈತರ ಮುಂದಾಳುಗಳು ಅನ್ನ ಸತ್ಯಾಗ್ರಹ ಮಾಡುತ್ತಾ ಇದ್ದಾರೆ. ಒಂದು ಉದಾಹರಣೆ ಹೇಳುತ್ತೇನೆ, ಬೆಂಗಳೂರು ಕೊನೆರಾಜ್‌ಪುರದಲ್ಲಿ ಪಹಣಿ ಹೆಚ್ಚು ಕಡಮೆ ಮಾಡಿ, ವರ್ಷಕ್ಕೆ ಒಂದಾವರ್ತಿ ಬರೆಸಿ ರೈತರಿಂದ ಜಮೀನನ್ನು ಕಿತ್ತುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾ ಇರುವುದು

ತಮ್ಮ ಗಮನಕ್ಕೆ ತಂದಿದ್ದೇನೆ. ಇದು ರಾಜ್ಯದ ಎಲ್ಲಾ ಕಡೆಗಳಲ್ಲೂ ಮತ್ತು ಕೋಲಾರ ಜಿಲ್ಲೆಯ ಎಲ್ಲಾ ಗ್ರಾಮಗಳಲ್ಲೂ ನಡೆಯುತ್ತಾ ಇದೆ. ಜೋಡಿ ಇನಾಮತಿ ರದ್ದು ಆದಮೇಲೆ ಅಲ್ಲಿ ಉಳುವ ರೈತ ಹಕ್ಕನ್ನು ಪಡೆಯಲು ಸಾಧ್ಯವಾಗಿಲ್ಲ. ಕಾನೂನು ಆಗಿ ದೇವಾಲಯ ಮತ್ತು ಸಂಸ್ಥೆಗಳ ಮಾಲೀಕರಿಗೆ ಲಕ್ಷಾಂತರ ರೂಪಾಯಿ ಪರಿಹಾರ ಕೊಟ್ಟಿದ್ದು ಆಯಿತು. ಜಮೀನ್ದಾರರಿಗೆ ಲಕ್ಷಾಂತರ ರೂಪಾಯಿ ಪರಿಹಾರ ಕೊಟ್ಟಿದ್ದಾಯಿತು. ಪರಿಹಾರ ತೆಗೆದುಕೊಂಡು ರೈತರ ಭೂಮಿಯನ್ನು ಕಿತ್ತುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೆ. ತಾವು ಮಸೂದೆಯನ್ನು ತೆಗೆದುಕೊಂಡು ಬಂದಮೇಲೆ ಇದೇ ಕ್ರಮವನ್ನು ಹೈದರಾಬಾದ್ ಮತ್ತು ಮುಂಬೈ ಪ್ರದೇಶದಲ್ಲಿ ಕೂಡ ಇವೊತ್ತು ಜಾರಿಗೆ ತರವುದಾದರೆ ಬಹಳ ದೊಡ್ಡ ಅನ್ಯಾಯ, ದೇಶದ ರೈತರಿಗೆ ಮಾಡಿದಂತಾಗುತ್ತದೆ. ಇಂಥ ಅನ್ಯಾಯ ಮಾಡುವುದಕ್ಕೆ ಮಾನ್ಯ ಮಂತ್ರಿಗಳಿಗೆ ಉದ್ದೇಶ ಇಲ್ಲದೆ ಇದ್ದರೂ ಕೂಡ ಪರಿಣಾಮ ಹಾಗಾಗುತ್ತದೆ. ತಾವು ಮಾಡಿರುವ ಮಸೂದೆಯಲ್ಲಿ ಅದನ್ನು ನೋಡಿದರೆ ತಮ್ಮ ಉದ್ದಿಶ್ಯ ಏನೇ ಇದ್ದರೂ ಕೂಡ, ಸಾರ್ವಜನಿಕ ಬೊಕ್ಕಸದಿಂದ ಹಣವನ್ನು ಕೊಡುವುದು. ಆಮೇಲೆ ಆ ಜಮೀನನ್ನು ಕೂಡ ಬಿಟ್ಟುಬಿಡುವುದು ಏನಿದೆ ಇದು ಬಹಳ ದೊಡ್ಡ ಅನ್ಯಾಯ ಮಾಡಿದಂತಾಗುತ್ತದೆ. ಆದ್ದರಿಂದ ಈ ಮಸೂದೆಯನ್ನು ಈಗ ಇದ್ದ ರೀತಿಯಲ್ಲೇ ಅಂಗೀಕಾರ ಮಾಡುವುದಕ್ಕೆ ಒಪ್ಪಿಗೆ ಕೊಡುವುದಕ್ಕೆ ಖಂಡಿತ ಸಾಧ್ಯವಿಲ್ಲ ಎಂದು ಸಭೆಯಲ್ಲಿ ನಾವು ಹೇಳಬೇಕಾಗುತ್ತದೆ. ಇಂಥ ಮಸೂದೆಯನ್ನು ತರುವ ಮೊದಲು ಇದಕ್ಕೆ ಸ್ವಲ್ಪ ತಯಾರಿ ಮಾಡಬೇಕಾಗಿತ್ತು. ಕಳೆದ 11 ವರ್ಷಗಳ ಅನುಭವ ಇದ್ದಮೇಲೆ ಅದನ್ನು ಉಪಯೋಗಿಸಿಕೊಂಡು ಅದಕ್ಕೆ ಅನುಗುಣವಾಗಿ ಕೆಲವು ತಯಾರಿ ಮಾಡಬೇಕಿತ್ತು. ಆ ತಯಾರಿ ಏನು ಎಂದರೆ ಪಹಣಿ ಮತ್ತು ರಿಕಾರ್ಡ್ ಆಫ್ ರೈಟ್ಸ್ ಸಿದ್ಧಗೊಳಿಸಬೇಕಾಗಿತ್ತು. ಈ ಪಹಣಿ ಬರೆಯುವ ವಿಚಾರದಲ್ಲಿ ಮತ್ತು ರೆಕಾರ್ಡ್ ಆಫ್ ರೈಟ್ಸ್ ಮಾಡುವ ವಿಚಾರದಲ್ಲಿ ಸರ್ಕಾರ ಈಗ ಅಂಗೀಕಾರ ಮಾಡಿರುವ ಕಾರ್ಯ ರೈತರನ್ನು ಪೂರ್ತಿ ವಂಚನೆ ಮಾಡುವ ಕ್ರಮ ಎಂದು ಹೇಳಿದರೂ ಕೂಡ ಅದು ತಪ್ಪಾಗಲಾರದು. ನಿಜವಾಗಿ ಇವೊತ್ತಿನ ವಾಸ್ತವಿಕ ಸ್ಥಿತಿ ನಮ್ಮ ರಾಜ್ಯದಲ್ಲಿ ಏನು ಇದೆ ಎಂದರೆ ವ್ಯವಸಾಯ ಮಾಡುತ್ತಾ ಇರುವವನು ಒಬ್ಬ ಇದ್ದಾನೆ, ಟಿಲ್ಲರ್ ಆಫ್ ದಿ ಸಾಯಿಲ್ ಎನ್ನುವ ಒಂದು ವರ್ಗವಾಗಿದೆ. ಯಾವ ಕಾನೂನು ಮಾಡಿದರೂ ಕೂಡ ಅದರ ಪ್ರಕಾರ ಇವೊತ್ತು ಒಬ್ಬ ರೈತ ಇಂಥ ಜಮೀನನ್ನು ನಾನು ವ್ಯವಸಾಯ ಮಾಡುತ್ತಾ ಇದ್ದೇನೆ, ನನಗೆ ಇದರ ಹಕ್ಕು ಬರಬೇಕು. ಇದರ ಮಾಲಿಕತನ ಬರಬೇಕು ಎಂದು ಕೇಳುವುದಕ್ಕೆ ಬಹಳ ಕಷ್ಟವಾಗುತ್ತದೆ ಅಸಾಧ್ಯ ಎಂದು ಹೇಳಿದರೆ ಅದು ತಪ್ಪಾಗಲಾರದು. ಇಂಥ ಕಾನೂನುಗಳಿಂದ ನಮ್ಮ ಹಳ್ಳಿಗಳಲ್ಲಿ ಹೆಚ್ಚು ಗೊಂದಲಗಳನ್ನು ಮಾಡುತ್ತಾರೆ. ಮತ್ತು ಅವ ಗೆ ಯಾವರೀತಿಯಿಂದಲೂ ಸಹಾಯ ಮಾಡಿದಂತಾಗುವುದಿಲ್ಲ. ಆದುದರಿಂದ ಈ ಕಾನೂನನ್ನು ತರುವುದಕ್ಕಿಂತ ಮೊದಲು ಪ್ರತಿಯೊಂದು ಗ್ರಾಮದಲ್ಲೂ ಕೂಡ ಅಲ್ಲಿ ಇರುವ ಎಲ್ಲಾ ರೈತರನ್ನು ಕೂಡಿಸಿ ಅವರ ಮುಂದೆ ಯಾರು ಯಾರು ರೆಕಾರ್ಡ್ ಆಫ್ ರೈಟ್ಸ್ ಮಾಡುವವರು ಇದ್ದಾರೆ, ಪಹಣಿ ಬರೆಯುವವರು ಇದ್ದಾರೆ ಅವರನ್ನು ಕೂಡಿಸಿ ಅವರ ಸಮಕ್ಷಮದಲ್ಲಿ ಅವರ ಹಕ್ಕುಗಳನ್ನು ಸಾಬೀತು ಮಾಡುವುದಕ್ಕೆ ಅವರವರ ಅಭಿಪ್ರಾಯ ಹೇಳಲು ಅವಕಾಶ ಮಾಡಿ ಕೊಟ್ಟರೆ ಉಳುವ ರೈತನಿಗೆ ಪ್ರಯೋಜನವಾಗುತ್ತದೆಯೇ ಹೊರತು ಬೇರೆ ಯಾವುದರಿಂದಲೂ ಪ್ರಯೋಜನ ಆಗುವುದಕ್ಕೆ ಸಾಧ್ಯವಿಲ್ಲ. ಈ ಕಾನೂನನ್ನು ಈಗ ಸಭೆಯಲ್ಲಿ ಇಂಟರ್‌ಡ್ಯೂಸ್ ಮಾಡುತ್ತಾ ಇದ್ದೀರಿ, ಚರ್ಚೆ ನಡೆಸುತ್ತಿದ್ದೀರಿ, ಇದು ಈ ಅಧಿವೇಶನದಲ್ಲಿ ಮಂಜೂರು ಆಗುತ್ತದೋ ಇಲ್ಲವೊ ಗೊತ್ತಿಲ್ಲ. ಮಾನ್ಯ ಮಂತ್ರಿಗಳು ಹೇಳಬೇಕು ಇದು ಅಂಗೀಕಾರವಾಗಿ ಇದನ್ನು ಜಾರಿಗೆ ಕೊಡುವ ಮೊದಲು ಪ್ರತಿಯೊಂದು ಗ್ರಾಮದಲ್ಲೂ ಸರಿಯಾದ ರೆಕಾರ್ಡ್ ಆಫ್‌ರೈಟ್ಸ್ ಸಿದ್ಧಗೊಳಿಸಬೇಕು ಮತ್ತು ಪಹಣಿ ಬರೆಯುವ ಕ್ರಮವನ್ನು ಜಾರಿ ಮಾಡಲು ಸರ್ಕಾರದವರು ವಿಶೇಷವಾದ ಗಮನ ಕೊಡಬೇಕೆಂದು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ. ಹಳೇ ಮೈಸೂರಿಗೆ ಸಂಬಂಧಪಟ್ಟ ಹಾಗೆ ಹಿಂದೆ ಈ ಮಸೂದೆ ಬಂದಾಗ ಇದೇ ಸಭೆಯಲ್ಲಿ ಇದಕ್ಕೆ ಬಹಳ ತೀವ್ರವಾದ ವಿರೋಧಗಳು ಬಂದಿದ್ದನ್ನು ತಮ್ಮ ಗಮನಕ್ಕೆ ತರಬೇಕೆಂದು ಇದ್ದೇನೆ.

3-30 P.M.

ಆ ಕಾಲದಲ್ಲಿ ಇಂತಹ ಶಾಸನ ಬಂದಾಗ ವಿರೋಧ ಪಕ್ಷದವರು ಯಾವ ರೀತಿ ವಿರೋಧ ಮಾಡುತ್ತಿದ್ದರು ಎನ್ನುವುದು ಹಿಂದೆ ಈ ಸಭೆಯಲ್ಲಿ ನಡೆದ ಪ್ರೊಸೀಡಿಂಗ್ಸ್ ಓದಿದರೆ ನಮಗೆ ಗೊತ್ತಾಗುತ್ತದೆ. ಅಂದು ಸರಕಾರದಲ್ಲಿ ಕಂದಾಯ ಸಚಿವರಾಗಿದ್ದ ಶ್ರೀಮಾನ್ ಕಡಿದಾಳ್ ಮಂಜಪ್ಪನವರಿಗೆ ಕೆಲ ಸದಸ್ಯರು ಶಾಪ ಹಾಕಿದರು ಎಂದೂ ಮತ್ತು ಆಗಿನ ಸಭೆಯಲ್ಲಿ ಕೆಲ ಸದಸ್ಯರು ಇಂತಹ ಒಂದು ಮಸೂದೆಯನ್ನು ತಾವು ತರುವುದಕ್ಕೆ ಹೊರಟಿರುವುದರಿಂದ ಇನ್ನು ಅರವತ್ತು ವರ್ಷಗಳ ಕಾಲ ನೀವು ಕ್ರಿಮಿಗಳಾಗಿ ಇಲ್ಲವೇ ಹುಳುವಾಗಿ ಹುಟ್ಟುತ್ತೀರಿ ಎಂದು ಹೇಳಿದ್ದಾರೆ. ಇವನ್ನೆಲ್ಲಾ ನಾವು

(ಶ್ರೀ ಬಿ. ವಿ. ಕಕ್ಕಿಲಾಯ)

ಆಗಿನ ಪ್ರೊಸೀಡಿಂಗ್ಸ್ ತೆಗೆದು ಓದಿದರೆ ಗೊತ್ತಾಗುತ್ತದೆ. ಆ ರೀತಿಯಾಗಿ ಆಗಿನ ಕಂದಾಯ ಸಚಿವರು ಅವರನ್ನು ಬಹಿರಂಗವಾಗಿ ಬೆದರಿಸುವ ಪರಿಸ್ಥಿತಿ ಇತ್ತು. ಆದರೆ ಇಂದು ಪರಿಸ್ಥಿತಿ ಬದಲಾಗಿದ್ದರೂ ಜನ ಬಾಯಿಗೆ ಬೀಗ ಹಾಕಿಕೊಂಡಿದ್ದರೂ ಬಹಿರಂಗವಾಗಿ ವಿರೋಧ ಮಾಡದೇ ಇದ್ದರೂ ಪರೋಕ್ಷವಾಗಿ ಇದಕ್ಕೆ ಇಲ್ಲದ ಅಡಚಣೆಗಳನ್ನು ತರುತ್ತಿದ್ದಾರೆ ಎಂದು ಇಲ್ಲಿ ಸ್ಪಷ್ಟವಾಗಿ ಹೇಳಲು ಇಷ್ಟಪಡುತ್ತೇನೆ. ಕೆಲವು ದಿವಸಗಳ ಹಿಂದೆ ನಮ್ಮ ಸರಕಾರದ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಬಸವಲಿಂಗಪ್ಪನವರು ಒಂದು ಹೇಳಿಕೆ ಕೊಟ್ಟರು. ಅದರಂತೆ ದೇಶದಲ್ಲಿರುವ ಹದಿಮೂರು ದೊಡ್ಡ ದೇವಾಲಯಗಳನ್ನು ಸರಕಾರವೇ ವಹಿಸಿಕೊಳ್ಳುತ್ತದೆ ಮತ್ತು ಇದರ ವ್ಯವಸ್ಥೆಯನ್ನು ಇನ್ನು ಮುಂದೆ ಸರಕಾರ ಮಾಡುತ್ತದೆ ಎಂದು. ಇದು ಬಂದ ಕೆಲವು ದಿನಗಳಾದ ಮೇಲೆ ರಾಜ್ಯದ ಮುಖ್ಯ ಮಂತ್ರಿಗಳು ಇಂತಹ ಯಾವ ದೇವಾಲಯಗಳನ್ನೂ ಸರಕಾರ ವಹಿಸಿಕೊಳ್ಳಲು ಉದ್ದೇಶಮಾಡಿಲ್ಲ ಎಂದು ಹೇಳಿಕೆ ಕೊಟ್ಟರು. ಹೀಗೆ ಒಂದಕ್ಕೊಂದು ವಿರುದ್ಧವಾದ ಹೇಳಿಕೆ ಕೊಟ್ಟು ಇದರಲ್ಲಿ ಮಂತ್ರಿಗಳು ಒಂದು ರೀತಿಯಾದ ನಾಟಕ ಮಾಡಲು ಹೊರಟಿದ್ದಾರೆ. ಇದರಿಂದೇನಾಗುತ್ತದೆ ಲಾಬಿ ಷುರುವಾಗುತ್ತದೆ, ಇದಕ್ಕೆ ಸಂಬಂಧಪಟ್ಟ ವ್ಯಕ್ತಿಗಳು ಅದಕ್ಕೆ ಬೇಕಾದ ವ್ಯವಸ್ಥೆಗಳನ್ನು ಮಾಡುತ್ತಾರೆ, ಇದರಲ್ಲಿ ಇಬ್ಬರು ಮಂತ್ರಿಗಳು ಅವರಿಗೆ ಗೊತ್ತಿಲ್ಲದೆ ಹೇಳಿಕೆಗಳನ್ನು ಕೊಟ್ಟರೋ ಇದು ಅವರ ಪಕ್ಷಕ್ಕೆ ಸಂಬಂಧಪಟ್ಟ ವಿಷಯ, ನಾನೇನೂ ಇದರ ಬಗ್ಗೆ ಹೇಳಬೇಕಾಗಿಲ್ಲ. ಇಂತಹ ಮಸೂದೆಗಳು ನಮ್ಮ ಮುಂದೆ ಬರುತ್ತವೆ ಎಂದು ರಾಜ್ಯದ ಮೂಲೆ ಮೂಲೆಗಳಿಂದ ಪ್ರಭಾವಶಾಲಿಗಳಾದ ವ್ಯಕ್ತಿಗಳು, ಜಮೀನುದಾರರು, ವಕೀಲರು, ಸಂಬಂಧಪಟ್ಟ ಜೋಡಿದಾರರುಗಳು, ಇನಾಂದಾರರುಗಳು ಇಲ್ಲಿಗೆ ಬಂದು ಮಂತ್ರಿಗಳಲ್ಲಿ ಅವರ ಪ್ರಭಾವವನ್ನು ಬೀರಿ ಮಂತ್ರಿಗಳೆಲ್ಲಾ ಅವರ ಜೊತೆಯಲ್ಲೇ ಇರುವಂತೆ ಹೇಳುತ್ತಾರೆ. ಆದುದರಿಂದ ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದು ಇಂತಹ ಮಸೂದೆಯನ್ನು ತರುವುದಕ್ಕೆ ಮೊದಲು ಈ ರೀತಿಯಾಗಿರುವ ಶಕ್ತಿಗಳನ್ನು ಮುರಿದರೆ ಅದರಿಂದೇನಾದರೂ ಪ್ರಯೋಜನವಾಗುತ್ತದೆ. ಅದೂ ಅಲ್ಲದೆ ಶ್ರೀ ಕಾಗೋಡು ತಿಮ್ಮಪ್ಪನವರು ಮತ್ತು ಇತರ ಸದಸ್ಯರುಗಳು ಹೇಳಿದ ಹಾಗೆ ಮೊದಲು ಭೂಸುಧಾರಣೆಗೆ ಆಗಬೇಕಾದ ತಿದ್ದುಪಡಿಗಳನ್ನು ಮಾಡಿ ಅದನ್ನು ಬೇಗನೆ ಶಾಸನವಾಗುವಂತೆ ಮಾಡಬೇಕು. ಇದರಲ್ಲಿರುವ ಪಾಳೆಯಗಾರಿಕೆಯನ್ನು ಮುರಿಯಬೇಕು ಈ ಪಾಳೇಗಾರರು ಧಾರ್ಮಿಕ ಹಾಗೂ ಮತೀಯ ಸಂಸ್ಥೆಗಳನ್ನು ವಹಿಸಿಕೊಂಡು ಮೆರೆಯುತ್ತಿದ್ದಾರೆ. ಇವರ ಪ್ರಾಬಲ್ಯವನ್ನು ಮುರಿಯಬೇಕು. ಇಂತಹವರನ್ನು ಮುಂದುವರಿಸಿಕೊಂಡು ಇಂತಹ ಒಂದು ಮಸೂದೆ ತರುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಮಾನ್ಯ ಸಚಿವರು ಒಳ್ಳೆಯ ಉದ್ದೇಶದಿಂದ ಈ ಮಸೂದೆ ತಂದಿದ್ದರೂ ಮೊದಲು ಭೂಸುಧಾರಣೆಗೆ ಮಾಡಬೇಕಾದ ತಿದ್ದುಪಡಿಗಳನ್ನು ಮಾಡಿ ಈ ವರ್ಷದ ಕೊನೆಯೊಳಗಾಗಿ ಅದು ಜಾರಿಗೆ ಬರುವಂತೆ ಮಾಡಿ, ಇದಕ್ಕಾಗಿ ಬೇಕಾದರೆ ಈ ಶಾಸನ ಸಭೆಯನ್ನು ಮುಂದುವರಿಸಿ ಆದಷ್ಟು ಬೇಗ ಆ ಶಾಸನಕ್ಕೆ ಮಂಜೂರಾತಿ ಪಡೆಯಬೇಕೆಂದು ಹೇಳುತ್ತೇನೆ. ಅದೂ ಅಲ್ಲದೆ ಬರುವ ಆಗಷ್ಟು 15 ನೇ ತಾರೀಖು ಬೆಳ್ಳಿಯ ಹಬ್ಬವನ್ನು ಮಾಡಬೇಕೆಂದಿರುವ ಸಂದರ್ಭದಲ್ಲಿ ನಮ್ಮ ದೇಶದಲ್ಲಿ ಹೊಲ ಉಳುವವರೆಲ್ಲರಿಗೂ ಭೂಮಿ ಸಿಗುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ ಮತ್ತು ಇದಕ್ಕಾಗಿ ರಿಕಾರ್ಡ್ ಆಫ್ ರೈಟ್ಸ್‌ಗಳ ಕಾರ್ಯವನ್ನೂ ಪೂರ್ಣವಾಗಿ ಆಗುವಂತೆ ವ್ಯವಸ್ಥೆ ಮಾಡಬೇಕು, ಇವೆರಡನ್ನೂ ಮಾಡಿದ ಮೇಲೆ ಧಾರ್ಮಿಕ ಸಂಸ್ಥೆಗಳ ಬಗ್ಗೆ ಸರಕಾರ ಯೋಚಿಸಬಹುದು. ಇಂದು ಧಾರ್ಮಿಕ ಸಂಸ್ಥೆಗಳ ಹೆಸರಿನಲ್ಲಿ ಭ್ರಷ್ಟಾಚಾರ ಭಕ್ತಾದಿಗಳು ಕೊಡುವ ಹಣದಿಂದ ನಡೆಯುತ್ತಿವೆ. ಇವನ್ನೆಲ್ಲಾ ಸರಿಯಾಗಿ ಪರಿಶೀಲಿಸಿ ಇವುಗಳ ವ್ಯವಸ್ಥೆಯನ್ನು ಸರಿ ಮಾಡಬೇಕು, ನಾನು ಹೇಳಿರುವ ಉದ್ದೇಶಗಳನ್ನು ಸರಕಾರ ಮನಸ್ಸಿಗೆ ತೆಗೆದುಕೊಂಡು ಮೊದಲು ಭೂಸುಧಾರಣೆ ಮಸೂದೆಗೆ ತಿದ್ದುಪಡಿ ತರಬೇಕೆಂದು ಹೇಳಿ ಅಧ್ಯಕ್ಷರು ನನಗೆ ಇಷ್ಟು ಮಾತಾಡಲು ಅವಕಾಶ ಕೊಟ್ಟದ್ದಕ್ಕೆ ಅವರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಮಾನ್ಯ ಅಧ್ಯಕ್ಷರೇ, ಇಲ್ಲಿ ತಂದಿರುವ ಮಸೂದೆಯ ಒಂದು ಉದ್ದೇಶವನ್ನು ನೋಡಿದರೆ ಈ ಮಸೂದೆಯಿಂದ ಬಡವರಿಗೆ ಯಾವ ಪ್ರಯೋಜನವೂ ಆಗುವುದಿಲ್ಲ. ಇಂತಹ ಒಂದು ಮಸೂದೆಯನ್ನು ತರುವುದರಿಂದ ಸರಕಾರದ ಉದ್ದೇಶ ಪೂರ್ತಿಯಾಗುವುದಿಲ್ಲ ಎಂದು ಇಲ್ಲಿ ಹೇಳುತ್ತೇನೆ. ಇಂತಹ ಒಂದು ಮಸೂದೆ ಸರಕಾರ ತರುತ್ತದೆ ಎಂದು ಘೋಷಣೆ ಮಾಡಿದಾಗ ನಾನು ತಿಳಿದುಕೊಂಡಿದ್ದೆ ಇದರಲ್ಲಿ ಬಡಜನಕ್ಕೆ ಅನುಕೂಲ ಆಗುತ್ತೆ ಎಂದು. ಇದರಲ್ಲಿ Exploitation of Riots will be removed, lock

stock barrel......ಎಂದು ತಿಳಿದುಕೊಂಡಿದ್ದೆ. ಆದರೆ ಇದನ್ನು ನೋಡಿ ತುಂಬಾ ನಿರಾಸೆಯಾಯಿತು. ಇದು ಬೊಂಬಾಯಿ ಹಾಗೂ ಹೈದರಾಬಾದು ಭಾಗಗಳ ಕಡೆಗೆ ಅನ್ವಯವಾಗುವ ಮಸೂದೆ ಎಂದು ದೇವರ ಹೆಸರಿನಲ್ಲಿ ತಂದು ಇಲ್ಲಿ ಎಕ್ಸ್‌ಪ್ಲಾಯಿಟ್ ಮಾಡುತ್ತಿದ್ದಾರೆ. ಎಷ್ಟು ಕೀಳು ದರ್ಜೆಗೆ ಇದರಲ್ಲಿ ಇಳಿದಿದ್ದಾರೆ ಎಂದು ಹೇಳಲು ಕೆಲವು ಉದಾಹರಣೆಗಳನ್ನು ಕೊಡಬಹುದು. ಉದಾಹರಣೆಯಾಗಿ ನಮ್ಮ ಭಾಗದಲ್ಲಿ ಒಂದೂರಿನಲ್ಲಿ ಕುಲಕರ್ಣಿ ಎನ್ನುವವರು ಒಬ್ಬರು ಇರುತ್ತಾರೆ ಅವರು ವರ್ಷಕ್ಕೆ ಐದು ರೂಪಾಯಿ ಕಂದಾಯ ಕೊಡುತ್ತಾರೆ. ಆದರೆ ಅವರ ಭೂಮಿ ಯಾರ ಹೆಸರಿನಲ್ಲಿದೆ ಎಂದು ನೋಡಿದರೆ ಅದು ಹನುಮಪ್ಪನ ಹೊಲ ಸರ್ವೆ ನಂಬರು 29 ಎಂದು ಇರುತ್ತದೆ, ಇಲ್ಲಿನ ಕುಲಕರ್ಣಿ ಇದರ ಅನುಭವ ಪಡೆಯುತ್ತಿರುತ್ತಾನೆ, ಹೀಗೆ ದೇವರ ಹೆಸರಿನಲ್ಲಿ ನೂರಾರು ಎಕರೆಗಳಷ್ಟು ಭೂಮಿ ಪಡೆದು ಅನುಭವಿಸುತ್ತ ಬರುತ್ತಿದ್ದಾರೆ. ಇದು ನೂರು ಹಾಗೂ ಇನ್ನೂರು ವರ್ಷಗಳಿಂದಲೂ ನಡೆಯುತ್ತಾ ಬರುತ್ತಿದೆ. ಹೆಸರು ಮಾತ್ರ ಹೊಲದಲ್ಲಿ ದೇವರ ಗುಡಿ ಹೆಸರು, ಇದರ ಅನುಭವ ಪಡೆಯುವವರು ಬೇರೆ ಯಾರೋ ಒಬ್ಬರು. ಇಲ್ಲಿ ಹೀಗೆ ಶ್ರೀಮಂತರು ಭೂಮಿಯನ್ನು ದೇವರ ಹೆಸರಿನಲ್ಲಿ ಇಟ್ಟುಕೊಂಡು ಅನುಭವಿಸಿಕೊಂಡು ಬರುತ್ತಿದ್ದಾರೆ ಮತ್ತು ಇದರ ದುರುಪಯೋಗ ದೇವರ ಹೆಸರಿನಲ್ಲಿ ನಡೆಯುತ್ತಿದೆ. ಈ ರೀತಿಯಾಗಿ ಜನ ತರ್ಡ್‌ರೇಟಿಗೆ ಇಳಿದು ಇಂದು ಲಕ್ಷಾಂತರ ಎಕರೆ ಭೂಮಿ ಪಡೆದು ಕಾರುಗಳಲ್ಲಿ ಅಡ್ಡಾಡುತ್ತಿದ್ದಾರೆ, ಕೋರ್ಟಿನಲ್ಲಿ ಪರ್ಸನಲ್ ಪ್ರಾಪರ್ಟಿ ಎಂದು ಡಿಕ್ಲರೇಷನ್ ಪಡೆದರೆ ಸಾಕು ಇವರ ಹೆಸರಿನಲ್ಲೇ ಎಲ್ಲ ಕಾರು ಇತ್ಯಾದಿ ಸಾಮಾನುಗಳೂ ಇರುತ್ತವೆ. ಹಿಂದೆ ಯಾವ ರೀತಿ ಸರಕಾರ ಇದನ್ನು ನೋಡಿಕೊಂಡು ಕಣ್ಣುಮುಚ್ಚಿಕುಳಿತುಕೊಂಡು ಬರುತ್ತಿತ್ತು? ಇಂದೂ ಕೂಡ ಬೇರೆ ಸರಕಾರ ಬಂದರೂ ಕೂಡ ಇದರಲ್ಲಿರುವ ನಮ್ಮ ಅಣ್ಣ ತಮ್ಮಂದಿರು ಕೂಡ ಅದೇ ತಪ್ಪನ್ನು ಇನ್ನೂ ಮುಂದುವರಿಸುತ್ತಾ ಬರುತ್ತಿದ್ದಾರೆ. ಇದರ ಜೊತೆಗೆ ಸಹಕಾರ ಕೊಡಬೇಕು ಎಂದರೆ ನಾವು ಹೇಗೆ ಸಹಕಾರ ಕೊಡುವುದು ? ಇದರಲ್ಲಿ ಯಾವ ಪಾರ್ಟಿಗಳ ವಿಚಾರ ಬರುವುದಿಲ್ಲ. ಇದಕ್ಕಾಗಿ ಮಾನ್ಯ ಸರಕಾರದವರು ಅಪೋಸಿಷನ್‌ನಲ್ಲಿರುವ ಸದಸ್ಯರನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡು ಇದರ ಬಗ್ಗೆ ಏನಾದರೂ ಪರಿಶೀಲನೆ ಮಾಡುತ್ತಿದ್ದಾರೆಯೇ ಎಂದು ಕೇಳಬೇಕಾಗಿದೆ, ಸುಮ್ಮನೆ ಇಲ್ಲಿ ಒಂದು ಮಸೂದೆಯನ್ನು ಬರೆಸಿ ಇಲ್ಲಿ ಪಾಸು ಮಾಡಬೇಕೆಂದು ತಂದರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಈಗ ಸರ್ಕಾರದವರು ಏನು ಬಿಲ್ ತಂದಿದ್ದಾರೆ, ಅದರ ಉದ್ದೇಶ ಏನೂ ಕೆಟ್ಟದ್ದು ಇಲ್ಲ. ಆದರೆ ಅದನ್ನು ತರುವುದಕ್ಕೆ ಮೊದಲು ವಿರೋಧಪಕ್ಷದ ಸದಸ್ಯರ ಅಭಿಪ್ರಾಯವನ್ನು ಅದರಲ್ಲೂ ಮುಖ್ಯವಾಗಿ ಹೈದರಾಬಾದ್ ಮತ್ತು ಮುಂಬೈ ಕರ್ನಾಟಕ ಪ್ರದೇಶದಿಂದ ಬಂದಿರುವ ಸದಸ್ಯರ ಅಭಿಪ್ರಾಯವನ್ನು ಪಡೆದುಕೊಂಡಿದ್ದರೆ ಚೆನ್ನಾಗಿರುತ್ತಿತ್ತು. ವಿರೋಧಪಕ್ಷದ ಸದಸ್ಯರ ಅಭಿಪ್ರಾಯ ಪಡೆದುಕೊಳ್ಳುವುದಕ್ಕೆ ಸರ್ಕಾರದವರಿಗೆ ಇಚ್ಛೆ ಇಲ್ಲದಿದ್ದರೆ, ಅವರ ಪಕ್ಷದ ಸದಸ್ಯರ ಅಭಿಪ್ರಾಯವನ್ನಾದರೂ ಪಡೆದುಕೊಳ್ಳಬಹುದಾಗಿತ್ತು. ಆದರೆ ಅದನ್ನು ಸಹ ಮಾಡಿಲ್ಲ. ಇದರಿಂದಲೇ ನಮಗೆ ಸಂಶಯಕ್ಕೆ ಎಡೆ ಕೊಡುತ್ತಿದೆ. ನಮ್ಮ ದೇಶದಲ್ಲಿ ಯಾವುದೇ ಒಂದು ಮತಕ್ಕೆ ಸಂಬಂಧಿಸಿದ ಭೂಮಿ ಏನಿದೆ ಅದನ್ನು ರೈತನ ಜಮೀನು ಎಂದು ಸಾರುವ ಬಗ್ಗೆ ಈ ಬಿಲ್‌ನಲ್ಲಿ ಒಂದು ಶಬ್ದವಿಲ್ಲ. ಇಂದು ನಮ್ಮ ರಾಜ್ಯದಲ್ಲಿ ಹಿಂದೂ ಧರ್ಮಕ್ಕೆ, ಮುಸ್ಲಿಂ ಧರ್ಮಕ್ಕೆ, ಕ್ರೈಸ್ತ ಧರ್ಮಕ್ಕೆ ಸೇರಿದ ಜಮೀನುಗಳಿವೆ. ದೇವರಿಗೇನೂ ಜಮೀನು ಬೇಕಾಗಿಲ್ಲ. ಆದರೆ ದೇವರ ಹೆಸರಿನಲ್ಲಿ ದಳ್ಳಾಳಿಗಳು ಅದರ ಉಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ. ಇನ್ನು ಮುಂದೆ ದೇವರ ಹೆಸರು ಹೇಳಿಕೊಂಡು ಜಮೀನನ್ನು ಅನುಭವಿಸುವುದಕ್ಕೆ ಅವಕಾಶ ಕೊಡಬೇಡಿ. ಅದನ್ನು ಕೂಡಲೆ ಬಂದ್ ಮಾಡಿ. ಟೆನೆನ್ಸಿ ಆಕ್ಟ್ ಮತ್ತು ಲ್ಯಾಂಡ್‌ರಿಫಾರಮ್ಸ್ ಆಕ್ಟ್‌ಗಳಿಗೆ ಏನು ಡೆಫಿನಿಷನ್ ಕೊಡಲಾಗಿದೆಯೋ ಅದನ್ನೇ ಈ ಬಿಲ್‌ಗೂ ಸಹ ಕೊಡಬೇಕೆಂದು ನಾನು ಹೇಳುತ್ತೇನೆ. ಒಬ್ಬ ರೈತ ಒಂದು ವರ್ಷದಿಂದ ಜಮೀನು ಸಾಗುವಳಿ ಮಾಡುತ್ತಿದ್ದರೂ ಸಹ ಅದನ್ನು ಅವನಿಗೇ ಖಾಯಂ ಮಾಡುವ ವ್ಯವಸ್ಥೆ ಮಾಡಬೇಕು. ಆದರೆ ಈಗ ಈ ಒಂದು ಗ್ಯಾರಂಟಿಯನ್ನು ಮತ್ತು ರಕ್ಷಣೆಯನ್ನು ಅವನಿಗೆ ಕೊಡುತ್ತಿಲ್ಲ. ಏಕ್‌ಸಾಲ್ ಲಾವಣಿ ಎಂಬುದು ನಮ್ಮ ಭಾಗದಲ್ಲಿ ಇದೆ. ಅಂದರೆ ಸಾಗುವಳಿ ಮಾಡುವವರು ಒಬ್ಬರಾದರೆ ಅದರ ಆದಾಯವನ್ನು ಅನುಭವಿಸುವವರು ಊರಿನ ಪುಡಾರಿಗಳು, ಕುಲಕರ್ಣಿಗಳು ಮುಂತಾದವರು ಆಗಿರುತ್ತಾರೆ. ಮತ್ತು ಒಬ್ಬನೇ 25 ವರ್ಷದಿಂದ ಸಾಗುವಳಿ ಮಾಡುತ್ತಿದ್ದರೂ ಸಹ, ಒಂದು ವರ್ಷದಿಂದ ಆ ಜಮೀನನ್ನು ಸಾಗುವಳಿ ಮಾಡುತ್ತಿದ್ದಾನೆ ಎಂಬುದಾಗಿ ರೆಕಾರ್ಡ್‌ನಲ್ಲಿ ಬರೆಯುತ್ತಾರೆ. ಇದರಿಂದ ಆತನಿಗೆ ಜಮೀನಿನ ಹಕ್ಕು ಸಿಗುವುದಕ್ಕೆ ಅವಕಾಶವಾಗುವುದಿಲ್ಲ. ಪ್ರತಿವರ್ಷವೂ ಸಹ ಜಮೀನು ಸಾಗುವಳಿ ಮಾಡುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಹರಾಜು ಹಾಕುತ್ತಾರೆ. ಆದರೆ ಅದನ್ನು ಪಡೆಯುವುದು ಹಿಂದಿನಿಂದ ಮಾಡಿಕೊಂಡು ಬಂದಿರುವ ರೈತರೇ. ಇನ್ನೊಂದು ಮುಖ್ಯವಾದ ಅಂಶವೆಂದರೆ ಹಿಂದೂ ದೇವಾಲಯಗಳಿಗೆ ಸೇರಿದ ಜಮೀನನ್ನು ಹರಿಜನರು ಸಾಗುವಳಿ ಮಾಡುತ್ತಿರುತ್ತಾರೆ. ಆದರೆ ಅವರಿಗೆ ಆ ಜಮೀನಿನ ಮೇಲೆ ಹಕ್ಕು ಮಾತ್ರ ಇರುವುದಿಲ್ಲ.

(ಶ್ರೀ ವಿ. ಎನ್. ಪಾಟೀಲ್)

ಇಂದು ಲೋಕೋಪಯೋಗಿ ಇಲಾಖೆಯಲ್ಲಿಯೂ ಸಹ 30 ದಿವಸ ಕೆಲಸ ಮಾಡಿಸಿಕೊಂಡು 29 ದಿವಸಕ್ಕೆ ಸಂಬಳ ಕೊಡುತ್ತಿದ್ದಾರೆ. ಈ ರೀತಿ ಕೆಲಸ ಮಾಡುವವರನ್ನು ವರ್ಕ್ ಚಾರ್ಜ್ಡ್ ಎಂಪ್ಲಾಯೀಸ್ ಎಂದು ಕರೆಯಲಾಗುತ್ತದೆ. ಅಂದರೆ ಇವರು ಯಾವಾಗಲೂ ಹಂಗಾಮಿ ನೌಕರರಾಗಿಯೇ ಇರಬೇಕು. ಕಾಯಂ ಮಾಡುವ ಪ್ರಶ್ನೆಯೇ ಇಲ್ಲ. ಮಾನ್ಯ ಚನ್ನಬಸಪ್ಪನವರ ಕಾಲದಲ್ಲಿಯಾದರೂ ವರ್ಕ್ ಚಾರ್ಜ್ಡ್ ಎಂಬ ಶಬ್ದವನ್ನು ತೆಗೆಯುತ್ತಾರೆಂದು ನಾನು ನಂಬಿದ್ದೇನೆ. ಕಾಯಂ ಮಾಡುವುದು ಅವಶ್ಯಕವಿದ್ದರೂ ಸಹ ಮಾಡುತ್ತಿಲ್ಲ. ಅಂದಮೇಲೆ fictitious personality, juridical personality, and factual personality ಏನಾದರೂ ವ್ಯತ್ಯಾಸ ಇದೆಯೇ ಎಂದು ಕೇಳುತ್ತೇನೆ. ಬಾಯಿ ಮಾತಿನಲ್ಲಿ ಸಮಾಜವಾದದ ಮಾತನಾಡುತ್ತಾರೆಯೇ ಹೊರತು ಅದನ್ನು ಜಾರಿಯಲ್ಲಿ ತರುತ್ತಿಲ್ಲ. ಇಂದು ಗೇಣಿದಾರರಿಗೆ ಎಷ್ಟೆಷ್ಟು ರೀತಿಯಿಂದ ಅನ್ಯಾಯಗಳಾಗುತ್ತಿವೆ ಎಂಬುದನ್ನು ಸರ್ಕಾರದವರು ಗಮನದಲ್ಲಿ ಇಟ್ಟುಕೊಂಡು, ಅದನ್ನೆಲ್ಲಾ ಸರಿಪಡಿಸಬೇಕು. ಇಂದು ದೇವರ ಹೆಸರಿನಲ್ಲಿ ಅನ್ಯಾಯವಾಗುತ್ತಿದೆ. ಇಂದು ದೇವರ ಹೆಸರು ಹೇಳಿಕೊಂಡು ಎಷ್ಟು ಜನರು ಜಮೀನನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ, ಆ ರಾಕ್ಷಸರ ಕೈಯಿಂದ ಆ ಜಮೀನುಗಳನ್ನು ಬಿಡಿಸಿ ಗೇಣಿದಾರರಿಗೇ ಕಾಯಂ ಮಾಡಬೇಕೆಂದು ಹೇಳುತ್ತೇನೆ. ನಮ್ಮಲ್ಲಿ ಗೋಸ್ವಾಮಿ ಪಂಗಡ ಎಂಬುದು ಇದೆ. ಅವರು ಸುಮಾರು 400 ವರ್ಷಗಳ ಹಿಂದೆ ರಾಜರ ಆಶೀರ್ವಾದ ಪಡೆದುಕೊಂಡು ಪಡೆದುಕೊಂಡ ಜಮೀನನ್ನು ವಂಶಪಾರಂಪರ್ಯವಾಗಿ ಅನುಭವಿಸಿಕೊಂಡು ಬರುತ್ತಿದ್ದಾರೆ. ಸರ್ಕಾರದವರು ಯಾವ ಒಂದು ಸೈಂಟಿಫಿಕ್ ಅಪ್ರೋಚ್ ಇಟ್ಟುಕೊಂಡು ಅವರೇ ಅನುಭವಿಸಿಕೊಂಡು ಬರುವುದಕ್ಕೆ ಅವಕಾಶ ಕೊಟ್ಟಿದ್ದಾರೆಂದು ಕೇಳುತ್ತೇನೆ. If you say that one year's tenant is not a permanent tenant, is it not an insult to democracy ; an insult to the Constitution ; and if it is so, please remove it or wipe it out. ಮಾನ್ಯ ಮಂತ್ರಿಯವರು ಗೇಣಿದಾರರಿಗೆ ಎಲ್ಲ ರೀತಿಯ ರಕ್ಷಣೆಯನ್ನು ಕೊಡುವ ಬಗ್ಗೆ ಭರವಸೆ ಕೊಡಬೇಕು. ನೆನ್ನೆ ದಿವಸ ನಾವು ಫ್ಯಾಮಿನ್ ರಿಲೀಫ್ ಬಗ್ಗೆ ಕೇಳಿದ ನಾನಾ ಪ್ರಶ್ನೆಗಳಿಗೆ ಮಾನ್ಯ ಮಂತ್ರಿಯವರು ಎಲ್ಲವನ್ನು ಗಮನದಲ್ಲಿ ಇಟ್ಟುಕೊಂಡಿದ್ದೇನೆ, ಅದಕ್ಕೆಲ್ಲಾ ಗಮನ ಕೊಡುತ್ತೇನೆ ಎಂದು ಹೇಳಿಬಿಟ್ಟರು. ಅದೇ ರೀತಿಯ ಉತ್ತರವನ್ನು ಇಂದು ಸಹ ಗೇಣಿದಾರರ ಬಗ್ಗೆ ಕೊಡಬಾರದು. ತಮ್ಮ ಕಡೆ ಮೆಜಾರಿಟಿ ಇದೆ ಎಂದು ಸದಸ್ಯರ ಕೈಎತ್ತಿಸಿ ಬಿಲ್‌ನ್ನು ಪಾಸ್ ಮಾಡಿಬಿಡಬಹುದು. ಆದರೆ ಅದರಿಂದ ಗೇಣಿದಾರರಿಗೆ ರಕ್ಷಣೆ ಕೊಟ್ಟಂತಾಗುವುದಿಲ್ಲ. ಮತ್ತು ಸಮಾಜವಾದವನ್ನು ಜಾರಿಗೆ ತಂದಂತಾಗುವುದಿಲ್ಲ. ಈಗ ಏನು ಬೋನಾಫೈಡ್ ಮಿಸ್ಟೇಕ್‌ಗಳು ಆಗುತ್ತಿವೆ ಅವನ್ನು ಮುಖ್ಯವಾಗಿ ತಡೆಗಟ್ಟಬೇಕು. ವಕ್ಫ್ ಲ್ಯಾಂಡ್ಸ್ ಬಗ್ಗೆ ಈ ಬಿಲ್‌ನಲ್ಲಿ ಯಾವ ಮಾತನ್ನು ಸಹ ಹೇಳಿಲ್ಲ. ಅದನ್ನು ಸಹ ಇದರಲ್ಲಿ ಸೇರಿಸಬೇಕಾಗಿತ್ತು. ಮುಖ್ಯವಾಗಿ ನಾನು ಸರ್ಕಾರದವರನ್ನು ಕೇಳಿಕೊಳ್ಳುವುದೇನೆಂದರೆ, ಯಾವ ಒಂದು ಮತಧರ್ಮಕ್ಕೆ ಸೇರಿದ ಜಮೀನೇ ಇರಲಿ, ಆ ಎಲ್ಲ ಜಮೀನನ್ನು ಸಹ ಈಗ ಯಾರು ಗೇಣಿಗೆ ಮಾಡುತ್ತಿದ್ದಾರೋ ಅವರಿಗೇ ಕಾಯಂ ಮಾಡಬೇಕೆಂದು ಹೇಳುತ್ತೇನೆ. ಆ ರೀತಿ ಮಾಡುವುದು ಸರ್ಕಾರದ ಧರ್ಮ ಎಂದು ನಾನು ತಿಳಿದುಕೊಂಡಿದ್ದೇನೆ. ಮತ್ತು ಅಪ್ಪರ್‌ಮೋಸ್ಟ್ ಡ್ಯೂಟಿ ಎಂದು ತಿಳಿದುಕೊಳ್ಳುತ್ತೇನೆ. ಈಗ ನಾವು ತಿಳಿದುಕೊಂಡಂತಹ ರೀತಿಯಲ್ಲಿ ಬಿಲ್‌ನ್ನು ಸಭೆಯ ಮುಂದೆ ತಂದಿಲ್ಲ.

ನಮ್ಮ ದೇಶದಲ್ಲಿ ಪ್ರತಿಯೊಂದು ಕಾಯಿದೆಯೂ ಕೂಡ ಧಾರ್ಮಿಕವಾಗಿ ಕಾಣುತ್ತವೆ. ಯಾವುದೇ ಒಂದು ಧರ್ಮವಾಗಲೀ ನ್ಯಾಯವಾಗಿರತಕ್ಕದ್ದು ಅನ್ಯಾಯವಾಗಲಾರದು. ಜಹಗೀರಿಗಳು ಹಿಂದೆ ಬೇಕಾದಷ್ಟು ಆಗಿವೆ. ಒಂದು ಟಾಮ್ ಟಾಮ್ ಹಾಕುವುದಕ್ಕೆಲ್ಲಾ ಒಂದು ಇನಾಮು ಇದೆ. ಅಂಥ ಇನಾಮ್ದಾರರಾಗಿರುವವರೆಲ್ಲರೂ ಇವೊತ್ತು ಕಾಂಪೆನ್‌ಸೇಷನ್ ತೆಗೆದುಕೊಳ್ಳುವಂತೆ ಪರಿಸ್ಥಿತಿ ಬರುತ್ತಿದೆ. ನಮ್ಮ ಬೀದರ್ ಜಿಲ್ಲೆಯಲ್ಲಿ ಏಕ್‌ಸಾಲ್ ಲಾವಣಿದಾರರು ಎಂದು 100ಕ್ಕೆ 90 ಜನ ಟೆನೆಂಟ್ಸ್ ಇದ್ದಾರೆ. ಅವರಿಗೆ ಇದರಲ್ಲಿ ಯಾವ ರೀತಿ ರಕ್ಷಣೆ ಕೊಡುತ್ತೀರಿ. ಪ್ರತಿಯೊಂದು ಗ್ರಾಮದಲ್ಲಿಯೂ ಇನಾಮ್ ಜಮೀನು ಮಾಡತಕ್ಕ ಎಷ್ಟೋ ಜನ ರೈತರು ಇದ್ದಾರೆ. ಆದ್ದರಿಂದ ಆ ಹಳ್ಳಿಗಳಿಗೆ ರೆವಿನ್ಯೂ ಇನ್‌ಸ್ಪೆಕ್ಟರ್ ಮತ್ತು ತಹಶೀಲ್ದಾರರನ್ನು ಕಳುಹಿಸಿ ಎನ್‌ಕ್ವೈರಿ ಮಾಡಿ ಈ ಇನಾಮ್ ಜಮೀನುಗಳಿಗೆ ಸಂಬಂಧಪಟ್ಟ ಜಮೀನನ್ನು ಯಾರು ಯಾರು ವ್ಯವಸಾಯ ಮಾಡುತ್ತಿದ್ದಾರೆಯೋ ಅದನ್ನು ಅವರಿಗೆ ಕೊಡುವಂತಹ ಒಂದು ವ್ಯವಸ್ಥೆ ಮಾಡಬೇಕು. ಇನ್ನು ಕೆಲವರು ಸುಮಾರು 100 ವರ್ಷಗಳಿಂದಲೂ ಇನಾಮ್ ಭೂಮಿಯನ್ನು ಗೇಣಿಗೆ ಮಾಡಿಕೊಂಡು ಬರುತ್ತಿದ್ದಾರೆ. ಅವರಿಗೆ ಯಾವುದೇ ಒಂದು ರೆಕಾರ್ಡ್ಸ್ ಇಲ್ಲದಿದ್ದರೂ ಕೂಡ ಅವರ ಹೆಸರಿನಲ್ಲಿ ಪಹಣಿ ಇದ್ದರೆ

ಅಂಥವರಿಗೂ ಕೂಡ ಈ ಇನಾಮ್ ಜಮೀನು ಮಾಡಿಕೊಡುವಂತಹ ವ್ಯವಸ್ಥೆ ಮಾಡಬೇಕು. ನಮ್ಮಲ್ಲಿ 100 ಕ್ಕೆ 75 ಜನ ಗೇಣಿದಾರರು ಇದ್ದಾರೆ. ಅವರ ಆರ್ಥಿಕ ಸ್ಥಿತಿ ಅಷ್ಟೊಂದು ಚೆನ್ನಾಗಿಲ್ಲ. ಎಷ್ಟೋ ಜನ ರೈತರು ಜಮೀನಿಗೆ ಕಂದಾಯವನ್ನು ಕಟ್ಟಿ ಶ್ಯಾನುಭೋಗರಿಂದ ರಶೀತಿಯನ್ನು ತೆಗೆದುಕೊಳ್ಳುವುದಕ್ಕೆ ಆಗದೇ ಇರುವಂತಹ ಪರಿಸ್ಥಿತಿ ಇದೆ. ಮಾನ್ಯ ರೆವಿನ್ಯೂ ಮಂತ್ರಿಗಳು ನಮ್ಮ ಹೈದರಾಬಾದ್ ಕರ್ನಾಟಕಕ್ಕೆ ಮೂರು ದಿವಸ ಟೂರ್ ಪ್ರೋಗ್ರಾಮ್ ಹಾಕಿಕೊಂಡು ಬಂದರೆ ಅಲ್ಲಿ ಏನು ನಿಜವಾದ ಪರಿಸ್ಥಿತಿ ಇದೆ ಎಂಬುದು ಗೊತ್ತಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ನಾನಾ ನಮೂನೆಯ ರಾಜಕೀಯ ಮಾಡುತ್ತಿದ್ದಾರೆ. ಒಬ್ಬ ವ್ಯಕ್ತಿಗೆ ಅವನು ಕಮ್ಯುನಿಸ್ಟ್ ಪಾರ್ಟಿಗೆ ಸೇರಿದವನು ಎನ್ನುವ ದ್ವೇಷದಿಂದ ಅವನಿಗೆ ಅನ್ಯಾಯ ಮಾಡಬೇಕೆಂದು ಅವನನ್ನು ಹಿಡಿದುಕೊಂಡು ಹೋಗಿ ಪೋಲೀಸ್ ಸ್ಟೇಷನ್‌ನಲ್ಲಿ ಲಾಕಪ್‌ನಲ್ಲಿ ಇಟ್ಟಿದ್ದರು. ಕೆಲವು ಜಮೀನ್ದಾರರು ಪಹಣಿಯನ್ನು ಬದಲಾಯಿಸಿ ಜಮೀನನ್ನು ವಶಪಡಿಸಿಕೊಳ್ಳುವಂತಹ ಪ್ರಯತ್ನ ಕೂಡ ನಡೆದಿದೆ. ಗೇಣಿ ಜಮೀನಿನ ಸಂಬಂಧವಲ್ಲಿ ರೈತರಿಗೆ ನಾನಾ ರೀತಿಯಾದ ತೊಂದರೆಗಳಾಗುತ್ತಿವೆ. ಯಾವುದೇ ಒಂದು ಜಮೀನಿನ ಸಂಬಂಧ ರೈತರು ಪೋಲೀಸಿನವರಿಗೆ ಕಂಪ್ಲೇಂಟ್ ಕೊಟ್ಟರೆ ಅದನ್ನು ತೆಗೆದುಕೊಳ್ಳದೇ ಇರುವಂತಹ ಎಕ್ಸ್‌ಪ್ಲಾಯಿಟೇಷನ್ ನಡೆಯುತ್ತಿದೆ. ಈ ಕಾನೂನನ್ನು ಜಾರಿಗೆ ತರುವ ಮುನ್ನ ಗೇಣಿದಾರನಿಗೆ ಸಾಕಷ್ಟು ಜಮೀನು ಹಕ್ಕು ಸಾಧಿಸುವ ಸಾಮರ್ಥ್ಯ ಮತ್ತು ಅದಕ್ಕೆ ಸಂಬಂಧಿಸಿ ಪಹಣಿ ಕಾಗದ ಪತ್ರಗಳು ಇವೆಯೇ ಎಂಬುದನ್ನು ಸರ್ಕಾರದವರು ಪರಿಶೀಲಿಸಿ ಒಂದುವೇಳೆ ಅವು ಇಲ್ಲದೇ ಹೋದರೆ ಅವನಿಗೆ ರಕ್ಷಣೆಕೊಡಲು ಅವುಗಳನ್ನು ಒದಗಿಸಿ ಅವನಿಗೆ ಜಮೀನು ದೊರಕುವಂತಹ ಅವಕಾಶವನ್ನುಂಟು ಮಾಡಬೇಕು. ಇವೊತ್ತಿನ ಪ್ರಜಾಪ್ರಭುತ್ವದಲ್ಲಿ ಸಮಾಜವಾದ ತತ್ವಕ್ಕೆ ಅನುಗುಣವಾಗಿ ನೀವು ಕಾಯಿದೆಯನ್ನು ತರುವುದಾದರೆ ಹೈದರಾಬಾದ್ ಕರ್ನಾಟಕದ ಧರ್ಮಾದಾಯ ಜಮೀನಿನಲ್ಲಿ ಉಳಿವ ಎಲ್ಲ ವರ್ಗಗಳ ಗೇಣಿದಾರರಿಗೆ ಜಮೀನು ಖಾಯಂ ಆಗುವಂತೆ ಮಾಡಬೇಕು. ನಮ್ಮ ಬೀದರ್ ಜಿಲ್ಲೆಗೆ ಮಾನ್ಯ ರೆವಿನ್ಯೂ ಮಂತ್ರಿಗಳು ಪ್ರವಾಸಬರಬೇಕು. ತಾವೇನಾದರೂ ಅಲ್ಲಿಗೆ ಪ್ರವಾಸ ಬಂದರೆ ನಾವು ತಮಗೆ ಹೂವಿನ ಹಾರ, ಸುಗಂಧದ್ರವ್ಯ ಯಾವುದನ್ನೂ ಹಾಕುವುದಿಲ್ಲ. ಆ ಹಳ್ಳಿಗಳ ಪ್ರತಿ ಕಾರ್ಮಿಕರ ರೈತರ ಕಣ್ಣೀರು ಹನಿಗಳ ಸರವನ್ನು ನಾವು ತಮಗೆ ಹಾರವನ್ನು ಹಾಕುತ್ತೇವೆ. ಅದರ ಸಲುವಾಗಿ ತಾವು ನಮ್ಮ ಬೀದರ್ ಜಿಲ್ಲೆಗೆ ಬರಬೇಕು. ಅಲ್ಲಿನ ರೈತರ ಕಷ್ಟಪರಿಸ್ಥಿತಿಯನ್ನು ಕಣ್ಣಾರೆ ನೋಡಬೇಕು. ಈಗ ತಾವು ತಂದಿರತಕ್ಕ ಕಾಯಿದೆ ಏನಿದೆ ಅದರ ಪ್ರಕಾರ ಹೈದರಾಬಾದ್ ಕರ್ನಾಟಕ ಮತ್ತು ಬೊಂಬಾಯಿ ಕರ್ನಾಟಕ ಪ್ರದೇಶಗಳಿಗೂ ಈ ಕಾಯಿದೆಯನ್ನು ಅನ್ವಯಿಸುವುದಕ್ಕೆ ತಾವು ಹೊರಟಿದ್ದೀರಿ, ಹೈದರಾಬಾದ್ ಕರ್ನಾಟಕದಲ್ಲಿ ರೈತರಿಗೆ ಬಹಳ ಎಕ್ಸ್‌ಪ್ಲಾಯಿಟೇಷನ್ ನಡೆಯುತ್ತಿದೆ. ಆದ್ದರಿಂದ ಇದರ ಉದ್ದೇಶ ಸಫಲವಾಗಬೇಕಾದರೆ ಇದನ್ನು ಸ್ವಲ್ಪ ಯೋಚನೆ ಮಾಡಿ ಇದರಲ್ಲಿ ಕೆಲವು ಬದಲಾವಣೆಗಳನ್ನು ಮಾಡಬೇಕು ಮತ್ತು ಇದು ಎಲ್ಲಾ ಮಾತೀಯ ಧರ್ಮಸಂಸ್ಥೆಗಳಿಗೂ ಅನ್ವಯಿಸುತ್ತದೆ ಎಂದು ಹಾಕಬೇಕು. ದೇವರಿಗೆ ಜಮೀನು ಬೇಕಾಗಿಲ್ಲ. ಆದರೆ ದೇವರ ಏಜೆನ್ಸಿಗಳಿಗೆ ಈ ಜಮೀನು ಬೇಕಾಗಿದೆ. ಗೇಣಿದಾರರು ಎಲ್ಲರೂ ಜಮೀನಿನ ಮಾಲೀಕರಾಗುವಂತೆ ಕ್ರಮ ಕೈಗೊಳ್ಳಬೇಕು. ಈ ಇನಾಮ್ ಜಮೀನನ್ನು ಗೇಣಿದಾರ ಒಂದು ವರ್ಷ ಗೇಣಿಗೆ ಮಾಡಿದ್ದರೂ ಕೂಡ ಅವರಿಗೂ ಈ ಒಂದು ಕಾಯಿದೆ ಅನ್ವಯವಾಗುವಂತೆ ಮಾಡಬೇಕು. ಏಕ್‌ಸಾಲ್ ಲಾವಣಿ ಜಮೀನಿನ ಟೆನೆಂಟ್ಸ್ ಏನಿದ್ದಾರೆ ಅವರಿಗೂ ಸಹ ಜಮೀನಿನ ಮಾಲೀಕತ್ವ ಸಿಕ್ಕುವಂತೆ ಮಾಡಬೇಕು. ಇಷ್ಟು ಹೇಳಿ ನನಗೆ ಮಾತನಾಡುವುದಕ್ಕೆ ಮಾನ್ಯ ಉಪಾಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ಇವೊತ್ತು ಈ ಸಭೆಯ ಮುಂದೆ ಮಾನ್ಯ ಕಂದಾಯ ಮಂತ್ರಿಗಳು ತಂದಿರತಕ್ಕ ಮೈಸೂರು ರಾಜ್ಯದ (ಮುಂಬಯಿ ಹಾಗೂ ಹೈದರಾಬಾದ್ ಪ್ರದೇಶಗಳ) ಮತ ಸಂಬಂಧವಾದ ಹಾಗೂ ಧರ್ಮಾದಾಯ ಇನಾಂ ರದ್ದಿಯಾತಿಗೆ ಸಂಬಂಧಿಸಿದ ವಿಧೇಯಕವನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತಾ ಅನೇಕ ವಿಷಯಗಳನ್ನು ನಾನು ತಮ್ಮ ಮುಂದೆ ಹೇಳಬೇಕಾಗಿದೆ. ನನ್ನ ಸ್ನೇಹಿತರು ಈಗಾಗಲೇ ಹೇಳಿದರು. ಶೃಂಗೇರಿಯಿಂದ ಬಂದಿರತಕ್ಕ ಸದಸ್ಯರಿಗೆ ಈ ಮಸೂದೆಯಮೇಲೆ ಮಾತನಾಡುವುದಕ್ಕೆ ಅವಕಾಶ ಕೊಡಿ, ಅವರು ಈ ಬಗ್ಗೆ ಚೆನ್ನಾಗಿ ಮಾತನಾಡುತ್ತಾರೆ ಎಂದು, ಅದು ನಿಜ. ನಾವು ನಮ್ಮ ಅಪ್ಪ ಮತ್ತು ನಮ್ಮ ಅಜ್ಜನ ಕಾಲದಲ್ಲಿ ಎಲ್ಲಾ ದೇವರಿಗೂ ಕಾಣಿಕೆ ಇತ್ಯಾದಿಗಳನ್ನು ಕೊಟ್ಟಿದ್ದೇವೆ. ಇತ್ತೀಚೆಗೆ ಜಹಗೀರಿ ಮತ್ತು ಇನಾಮ್ ಅಬಾಲಿಷ್ ಆದಮೇಲೆ ಸ್ವಲ್ಪಮಟ್ಟಿಗೆ ಸರ್ಕಾರಕ್ಕೂ ಹಣವನ್ನು ಕೊಡುತ್ತಿದ್ದೇವೆ. ಆದರೆ ಹೆಚ್ಚು ಭಾಗ ದೇವರಿಗೆ ನಾವು ಕೊಟ್ಟಿದ್ದೇವೆ. ಆದರೆ ಇದು ಎಷ್ಟರ ಮಟ್ಟಿಗೆ ಪ್ರಯೋಜನವಾಗಿದೆ ಎಂಬುದನ್ನೂ ಸಹ ನಾವು ನೋಡಬೇಕಾಗಿದೆ. ರಾಮಮಹಾ

(ಶ್ರೀ ಕೆ. ಎನ್. ವೀರಪ್ಪಗೌಡ)

ರಾಜರುಗಳ ಕಾಲದಲ್ಲಿ ಅವರು ಬೇಕಾದಷ್ಟು ದೇವಸ್ಥಾನಗಳನ್ನು ಸ್ಥಾಪನೆ ಮಾಡಿದ್ದಾರೆ. ಅವರು ದೇವಸ್ಥಾನಕ್ಕೆ ಬರತಕ್ಕ ಕಾಲದಲ್ಲಿ ದೇವಸ್ಥಾನದ ಅರ್ಚಕರು ಅವರನ್ನು ಪೂರ್ಣಕುಂಭ, ಮಂತ್ರ, ಮತ್ತು ವಾದ್ಯಸಮೇತ ದೇವಸ್ಥಾನಕ್ಕೆ ಕರೆದುಕೊಂಡು ಹೋಗುತ್ತಿದ್ದರು.

4-00 P.M.

ಹೀಗಿದ್ದರೂ ಕೂಡ ಸ್ವಾತಂತ್ರ್ಯ ಬಂದ ಮೇಲೆ ನಮ್ಮ ಮಂತ್ರಿಗಳು ಇಲ್ಲಿ ಕೂತು ಮಾತನಾಡುತ್ತಾರೆ, ಬಿಲ್ಲುಗಳನ್ನು ತರುತ್ತಾರೆ—ಎಲ್ಲಾ ಮಾಡುತ್ತಾರೆ. ಆದರೆ ಅವರು ನಾಳೆಯ ದಿವಸ ಅಲ್ಲಿ ಹೋದರೆ, ಅಲ್ಲಿ ಯಾವ ಸಾಮಾನ್ಯ ಜನರಿಗೂ ಸಹ ಅವರನ್ನು ನೋಡುವಂತಹ ಅವಕಾಶ ಸಿಗುವುದಿಲ್ಲ. ಇವರಿಗೆ ಪೂರ್ಣ ಕುಂಭದಿಂದ ಮೆರವಣಿಗೆ ಮಾಡಿಕೊಂಡು ಹೋದರೆ ಹಿಂದೆ ಇವರ ಪ್ರತಿನಿಧಿ ಇರತಕ್ಕದ್ದನ್ನು ಸಹ ಮರೆತು ಬಿಡುತ್ತಾರೆ. ಹಿಂದೆ ಒಂದು ಸಾರಿ ಒಬ್ಬರು ಹರಿಜನರು ಜಿಲ್ಲಾಧಿಕಾರಿಗಳು ಇದ್ದರು. ಮಾನ್ಯ ಕಡಿದಾಳ್ ಮಂಜಪ್ಪನವರನ್ನು ಬರಮಾಡಿಕೊಳ್ಳುವ ಸಂದರ್ಭದಲ್ಲಿ ಈ ಜಿಲ್ಲಾಧಿಕಾರಿಗೆ ಎಲ್ಲಿಗೆ ಹೋಗಬೇಕೆಂದು ಗೊತ್ತಾಗಲಿಲ್ಲ. ಆಲ್ಲೇ ಅವರು ಇದ್ದರು. ನಂತರ ನಾನು ಅವರನ್ನು "ಬನ್ನಿ ಸ್ವಾಮಿ" ಎಂದು ಕರಕೊಂಡು ಹೋದೆ. ಇದರಿಂದಾಗಿ ಎಲ್ಲರಿಗೂ ನನ್ನ ಮೇಲೆ ಕಣ್ಣು ಬಿತ್ತು. ಕಡಿದಾಳ್ ಮಂಜಪ್ಪನವರು ಬಿಟ್ಟು ಹೋದರೂ ವೀರಪ್ಪಗೌಡರು ಅವರನ್ನು ಕರಕೊಂಡು ಹೋದರು ಎಂದು ಹೇಳಲಿಕ್ಕೆ ಪ್ರಾರಂಭ ಮಾಡಿದರು. ಅದರ ಬಗ್ಗೆ ಸ್ವಾಮಿಗಳಿಗೂ ದೂರು ಹೋಯಿತು, ನಾನು ಹೇಳುವುದಾದರೂ ಇಷ್ಟೆ. 1947ನೇ ಇಸವಿಯಲ್ಲಿ ಏನು ನಡೆಯುತ್ತಿತ್ತು ಅದು ಈಗಲೂ ನಡೆಯುತ್ತಿದೆ. ಹಿಂದೆ ಒಂದು ಸಾರಿ ಜಾಗೀರಿ ಅಬಾಲಿಷ್ ಆಯ್ತು; ಇನಾಂ ಆ ಮೇಲೆ ಅಭಾಲಿಷ್ ಆಯ್ತು. ಈಗ ದೇವಸ್ಥಾನಗಳ ಬಗ್ಗೆ ಒಂದು ಮಸೂದೆಯನ್ನು ತಂದಿದ್ದಾರೆ. ಹೀಗೆ ತಂದರೂ, ಇವರು ಅಲ್ಲಿಗೆ ಹೋದ ತಕ್ಷಣ ಇವರಿಗೆ ಶಾಲು ಹೊದಿಸಿ ಸತ್ಕರಿಸಿಬಿಟ್ಟಾಗ ಎಲ್ಲವನ್ನೂ ಮರೆತು ಬಿಡುತ್ತಾರೆ. ಹಿಂದೆ ಮಾನ್ಯ ಕಡಿದಾಳ್ ಮಂಜಪ್ಪನವರು ಮಾತನಾಡಿ ಮಾತನಾಡಿ ಒಂದು ಸಾರಿ ನೂರಾರು ಎಕರೆ ಜಮೀನನ್ನು ಕೊಟ್ಟು ಬಿಟ್ಟರು. ಅದೇ ರೀತಿ ತಾಲ್ಲೂಕು ಬೋರ್ಡ್ ಹೈಸ್ಕೂಲನ್ನು ಸಹ ಕೊಟ್ಟುಬಿಟ್ಟರು. ಈಗಿನ ರೆವೆನ್ಯೂ ಮಂತ್ರಿಯವರಾದರೂ ಸಹ ಬಹಳ ಆಸಕ್ತಿ ವಹಿಸಿ ಇದನ್ನು ತಂದಿದ್ದಾರೆ. ಇದನ್ನು ಇನ್ನೂ ಸ್ವಲ್ಪ ಪೂರ್ತಿಯಾಗಿ ವಿಮರ್ಶೆ ಮಾಡಿ ತಂದಿದ್ದರೆ ಚೆನ್ನಾಗಿತ್ತು. ಇವೊತ್ತಿನ ದಿವಸ ಜಮೀನು ಎಲ್ಲೆಲ್ಲಿ ಇದೆ, ಅದು ಯಾವ ಭೂಮಿಯೇ ಆಗಿರಲಿ, ಅಥವಾ ಯಾವ ಸಂಸ್ಥೆಯದ್ದೇ ಆಗಿರಲಿ, ಅವುಗಳಿಗೆ ಎಲ್ಲದಕ್ಕೂ ಒಂದೇ ರೀತಿಯ ನಿಯಮಗಳು ಇರಬೇಕು. ಆ ಮಠಕ್ಕೆ ರಕ್ಷಣೆ ಕೊಡುವುದು, ಈ ಮಠಕ್ಕೆ ವಿನಾಯಿತಿ ಕೊಡುವುದು; ಇದು ಇನ್ನೊಂದು ಸಂಸ್ಥೆಗೆ ಸೇರಿದ್ದು; ಅದು ಮತ್ತೊಂದು ವ್ಯಕ್ತಿಗೆ ಸೇರಿದ್ದು ಎಂದು ಮಾಡಬಾರದು. ಅದು ಯಾವ ಭೂಮಿಯೇ ಆಗಿರಲಿ, ಅವೆಲ್ಲವನ್ನೂ ಒಟ್ಟು ಸೇರಿಸಿ, ಯಾರು ಗೇಣಿದಾರ ಭೂಮಿ ಇಲ್ಲದೆ ಇರುತ್ತಾನೋ, ಅವನಿಗೆ ಕೊಡುವಂತಹ ಏರ್ಪಾಡು ಮಾಡಬೇಕು. ಇವತ್ತು ದೇವರ ಹೆಸರಿನಲ್ಲಿರುವಂತಹ ಭೂಮಿ ಯಾವ ವ್ಯವಸಾಯ ಮಾಡತಕ್ಕ ಗೇಣಿದಾರನಿದ್ದಾನೆಯೋ, ಅವನಿಗೆ ಹೋಗಬೇಕಾಗುತ್ತದೆ. ಅವನು ಲ್ಯಾಂಡ್‌ಲೆಸ್ ಆಗಿರಬೇಕು. ಏಕೆಂದರೆ ಅನೇಕ ಜಮೀನು ಇದ್ದಂತಹ ಜನರು ನಿಮ್ಮ ಭೂಸುಧಾರಣೆ ಬರುತ್ತದೆಂದು ಪಹಣಿಗಳನ್ನು ಸಹ ಸುಟ್ಟು ಹಾಕಿ ಗೇಣೀದಾರರನ್ನು ಅಲ್ಲಿಂದ ಓಡಿಸಿದ್ದಾರೆ. ಇಂಥವರ ಬಗ್ಗೆ ತಾವು ಹೆಚ್ಚಿನ ಮಾಹಿತಿಗಳನ್ನು ಪಡೆದು, ಅವರಿಗೆ ನೇರವಾಗಿ ಭೂಮಿಯನ್ನು ಒದಗಿಸತಕ್ಕಂತಹ ಅವಕಾಶವನ್ನು ಮಾಡಬೇಕು. ಉದಾಹರಣೆಗೆ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ಕಿಗ್ಗಾ ಎಂಬಲ್ಲಿ ಒಂದು ಮುಜರಾಯಿ ಇನ್‌ಸ್ಟಿಟ್ಯೂಶನ್ ಇದೆ. ಅದಕ್ಕೆ 960 ಎಕರೆ ಜಮೀನು ಇದೆ. ಇದು ಸ್ವಲ್ಪ ಮಟ್ಟಿಗೆ ಶ್ರೀಮಂತರ ಕೈಯಲ್ಲಿಯೇ ಇದೆ. ಈ ಶ್ರೀಮಂತ ಜನರು ದೇವಸ್ಥಾನಕ್ಕೆ ಸಲ್ಲಿಸಬೇಕಾದ ಗೇಣಿಯನ್ನು ಪಾವತಿ ಮಾಡುವುದು. ಅದರೆ ಇನ್ನೊಬ್ಬ ಗೇಣೀದಾರ ಸಾಗುವಳಿ ಮಾಡಿ ಈ ಶ್ರೀಮಂತನಿಗೆ ಗೇಣಿ ಕೊಡುವುದು. ಇದರಿಂದ ದೇವಸ್ಥಾನಕ್ಕೆ 50 ರೂಪಾಯಿ ಬಂದರೆ ಇವನಿಗೆ 500 ರೂಪಾಯಿ ಗೇಣಿದಾರನಿಂದ ಬರುತ್ತದೆ. ಈ ರೀತಿಯಲ್ಲಿ ದುಡ್ಡು ಹೊಡೆಯುತ್ತಿದ್ದಾರೆ. ಇದರ ಬಗ್ಗೆ ರಿಪೋರ್ಟ್ ತರಿಸಿಕೊಂಡು ಇದನ್ನು ವಿಮರ್ಶೆ ಮಾಡುವುದಾದರೆ ಅಂಥವರಿಗೆ ಖಾಯಂ ಮಾಡುವ ಸಂದರ್ಭ ಇರುತ್ತದೆ. ಅದೇ ರೀತಿ ಯಾರಹತ್ರ ಪಹಣಿ ಇದೆ ಅಂಥವರಿಗೆ ಭೂಮಿಯನ್ನು ಕೊಡುವುದಾದರೆ ಆದನ್ನು ಸಹ ಸರಿಯಾಗಿ ಪರಿಶೀಲನೆ ಮಾಡಬೇಕಾಗುತ್ತದೆ. ಏಕೆಂದರೆ ಇವತ್ತು ಪಹಣಿ ಒಬ್ಬರ ಹತ್ತಿರ ಇರಬಹುದು, ಸಾಗುವಳಿ ಇನ್ನೊಬ್ಬ ಮಾಡುತ್ತಿರಬಹುದು. ಅಥವಾ ಸಾಗುವಳಿ ಮಾಡುತ್ತಿರುವವರಲ್ಲಿ ಪಹಣಿ ಇಲ್ಲದೆ ಇರಬಹುದು. ಆದ್ದರಿಂದ ಗೇಣಿದಾರರ

ಬಗ್ಗೆ ನಿಜವಾಗಿಯೂ ಬಹಳ ಕೂಲಂಕಷವಾಗಿ ಪರಿಶೀಲನೆಮಾಡಿ ಯಾರು ನಿಜವಾಗಿ ಸಾಗುವಳಿ ಮಾಡುತ್ತಾರೆ, ಯಾರಿಗೆ ನಿಜವಾಗಿ ಭೂಮಿ ಇಲ್ಲ ಎಂದು ನೋಡಿ ವಿತರಣೆ ಮಾಡಬೇಕಾಗಿದೆ. ಇದಕ್ಕೆ ಮಾನ್ಯ ಮಂತ್ರಿಯವರು ಒಂದು ಕಮಿಟಿ ಮಾಡಿ, ಯಾರು ಯಾರು ಎಷ್ಟೆಷ್ಟು ವರ್ಷಗಳಿಂದ ನಿಜವಾಗಿ ಗೇಣಿಗೆ ಸಾಗುವಳಿ ಮಾಡುತ್ತಾರೆಂಬುದನ್ನು ನೋಡಿ ಮಾಡಿದರೆ ಆ ಗೇಣೀದಾರರು ಬದುಕುತ್ತಾರೆ. ಇಲ್ಲದಿದ್ದರೆ ಅವರು ಬದುಕುವುದಕ್ಕೆ ಸಾಧ್ಯವಿಲ್ಲ. ನನಗೆ ಇವರ ಬಗ್ಗೆ ದಿನಾಲೂ ಪತ್ರಗಳು ಬರುತ್ತಿವೆ. ಎಷ್ಟೋ ಜನರು ನಾನು 15-20 ವರ್ಷಗಳಿಂದ ಗೇಣಿಗೆ ಸಾಗುವಳಿ ಮಾಡುತ್ತಿದ್ದೇವೆ, ಗೇಣಿ ರಸೀದಿ ಭೂಮಾಲಿಕರು ಕೊಡುತ್ತಾ ಇಲ್ಲ; ಈ ವರ್ಷ ಗೊಬ್ಬರ ಹಾಕಿದ್ದೇನೆ; ಆದರೂ ಅವರು ಬಂದು ಸಾಗುವಳಿ ಮಾಡುತ್ತಿದ್ದಾರೆ ಇತ್ಯಾದಿ ವಿಷಯಗಳನ್ನು ಕಾಗದದಲ್ಲಿ ಬರೆದು ತಿಳಿಸಿದ್ದಾರೆ. ಇವೊತ್ತಿನ ದಿವಸ ಈ ಒಂದು ಪಹಣಿಗೆ ರಜಿಸ್ಟ್ರೇಷನಿಗಿಂತಲೂ ಹೆಚ್ಚಿನ ಪ್ರಾಶಸ್ತ್ಯ ದೊರಕಿದ ಹಾಗೆ ಕಾಣುತ್ತದೆ. ಇವತ್ತು ಪಹಣಿ ಇದ್ದರೆ, ಖರೀದಿ ಮಾಡಿದ್ದು ಸಹ ನ್ಯಾಯವಾಗಿ ರುತ್ತದೆ; ಪಹಣಿ ಇಲ್ಲದಿದ್ದರೆ ಅದಕ್ಕೆ ಬೆಲೆ ಇರುವುದಿಲ್ಲ. ಪರಿಸ್ಥಿತಿ ಹೀಗೆ ಇರುವಾಗ, ಸಾಮಾನ್ಯ ಜನರು ಈ ಪಹಣಿಯನ್ನು ಬರೆಯುವಂತಹ ಸಂದರ್ಭ ಇರುವಾಗ, ತಾಹಸೀಲ್ದಾರರು ಯಾರು ನಿಜವಾಗಿ ಸಾಗುವಳಿ ಮಾಡುತ್ತಾರೆಂಬುದನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲದಿರುವಾಗ, ಇಂಥ ಅನ್ಯಾಯಗಳು ಬಹಳವಾಗಿ ಆಗಿ ಗೇಣೀದಾರರು ಪಡಬಾರದ ಕಷ್ಟಗಳನ್ನು ಅನುಭವಿಸಿದ್ದಾರೆ. ನಮ್ಮ ದೇಶದಲ್ಲಿ ಗೇಣೀದಾರರಿಗೆ ಅನ್ಯಾಯ ಆಗಿರುವಷ್ಟು ಪ್ರಪಂಚದಲ್ಲಿ ಬೇರೆ ಯಾರಿಗೂ ಆಗಿಲ್ಲ. ಆದ್ದರಿಂದ ಈ ಜನರಿಗೆ ಯಾವ ರೀತಿಯ ಅನುಕೂಲ ಮಾಡಿಕೊಡಬೇಕೆಂಬುದರ ಬಗ್ಗೆ ಪುನಃ ಆಲೋಚನೆ ಮಾಡಬೇಕಾದ ಸಂದರ್ಭ ಬಂದಿದೆ. ಅದೇ ರೀತಿಯಲ್ಲಿ ಶೃಂಗೇರಿಯಲ್ಲಿ ಜಹಗೀರ್ ಅಬಾಲಿಶ್ ಆಯ್ತು. ಎಲ್ಲ ಏರಿಯಾಗಳು ಸರ್ಕಾರಕ್ಕೆ ಪೂರ್ತಿಯಾಗಿ ಬಂದಿವೆ. ಅದರ ಮಧ್ಯೆ ಅಲ್ಲಿ ಒಂದು ಮಲ್ಲಿಕಾರ್ಜುನ ದೇವಸ್ಥಾನ ಇದೆ. ಅದಕ್ಕೆ ಒಬ್ಬರು ಏಜೆಂಟರು ಇದ್ದಾರೆ. ಅವರು ಗೇಣಿ ವಸೂಲು ಮಾಡುವುದು. ಅದೇ ರೀತಿ ಇನ್ನೊಂದು ಗಣಪತಿ ದೇವಸ್ಥಾನ ಇದೆ. ಅಲ್ಲಿಗೆ ಸಹ ಒಬ್ಬ ಏಜೆಂಟರು ಇದ್ದಾರೆ. ಅವರೇ ಎಲ್ಲಾ ವ್ಯವಹಾರವನ್ನು ನೋಡಿಕೊಂಡು ಗೇಣಿ ವಸೂಲು ಮಾಡುತ್ತಾರೆ. ಈ ರೀತಿ ಪುನಃ ಅವರಿಗೆ ಅಧಿಕಾರವನ್ನು ಕೊಟ್ಟುಕೊಂಡು ಬಂದರೆ ಹೇಗೆ ? ಇದರ ಬಗ್ಗೆ ನನಗೆ ಏನೂ ಅರ್ಥವಾಗುವುದಿಲ್ಲ. ಹೀಗೆ ಅನೇಕ ರೀತಿಯಲ್ಲಿ ನೋಡಿದಾಗ ಈ ದೇವರ ಹೆಸರು ಹೇಳಿ ಆಗುವಂತಹ ಅನ್ಯಾಯ ಅಷ್ಟಿಷ್ಟಲ್ಲ. ಅದಕ್ಕೆ ಸಾಕಷ್ಟು ಉದಾಹರಣೆಗಳನ್ನು ಕೊಡಬಹುದು.

ಇನ್ನೊಂದು ವಿಚಾರ. 1965ನೇ ಅಕ್ಟೋಬರ್ 2 ರ ಒಳಗೆ ಸಾಗುವಳಿ ಮಾಡತಕ್ಕವರು ಡಿಕ್ಲೇರ್ ಮಾಡಬೇಕೆಂದು ಡಿವಿಜನಲ್ ಕಮಿಶನರ್ ಹೇಳಿದರು. ಅದನ್ನು ಪುನಃ 1970 ಮಾರ್ಚಿ 30ಕ್ಕೆ ಮುಂದುವರಿಸಿದರು. ಇದರ ಪ್ರಕಾರ ಕೆಲವರು ಅರ್ಜಿ ಹಾಕಿದರು. ಆದರೆ ಆ ಅರ್ಜಿಗಳು ಎಲ್ಲಿಗೆ ಹೋಯಿತೆಂದು ಯಾರಿಗೂ ಗೊತ್ತಾಗಿಲ್ಲ. ಅದನ್ನು ವಿಮರ್ಶೆ ಮಾಡುತ್ತೇವೆಂದು ಹೇಳಿದ್ದರು. ಆದರೆ ಇದುವರೆಗೂ ಯಾವ ವಿಮರ್ಶೆಯೂ ಇಲ್ಲ, ಯಾವ ಕ್ರಮವೂ ಇಲ್ಲ. ಇಷ್ಟು ಮಾಡಿಬಿಟ್ಟು ಸರ್ಕಾರದವರು ಕೈಬಿಟ್ಟದ್ದು ಏಕೆ ? ಇದನ್ನು ಈಗಲಾದರೂ ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಶೃಂಗೇರಿ ಮಠಕ್ಕೆ ಪ್ರತಿ ವರ್ಷ ನಮ್ಮ ಬಜೆಟ್‌ನಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಒದಗಿಸಿ ಕೊಡುತ್ತಿದ್ದಾರೆ. ಅದರ ಬಗ್ಗೆ ಏನಾದರೂ ಬಂದರೆ ಅದು ಖಾಸಗೀಯಾಗಿದೆ ಎಂದು ಹೇಳುತ್ತಿದ್ದೀರಿ. ಇದು ಏನೆಂದು ನನಗೆ ಅರ್ಥವಾಗುವುದಿಲ್ಲ. ಅದೂ ಅಲ್ಲದೆ ಅಲ್ಲಿಗೆ ಸಾವಿರಾರು ರೂಪಾಯಿ ಕಾಣಿಕೆ ಬರುತ್ತಿದೆ. ಇದನ್ನೆಲ್ಲಾ ಅವರಿಗೆ ಇಷ್ಟ ಬಂದ ಹಾಗೆ ಖರ್ಚು ಮಾಡಬಹುದು. ಇದು ಯಾವ ಜನಾಂಗದ ಧರ್ಮಪ್ರಚಾರಕ್ಕೆ ಹೀಗೆ ಮಾಡುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ಅದೂ ಅಲ್ಲದೆ ಯಾರಾದರೂ ಬ್ಲಾಕ್ ಮನಿ ಇಟ್ಟಂಥವರು ಸಹ ಅಲ್ಲಿ ತಂದು ಹಾಕುತ್ತಿದ್ದಾರೆ. ಅಂಥ ಹಣ ಏನಿದೆ, ಅದಕ್ಕೆ ಲೆಕ್ಕವೇ ಇಲ್ಲದಂತೆ ಆಗಿದೆ. ಅವುಗಳನ್ನು ತಮಗೆ ಖುಷಿ ಬಂದಹಾಗೆ, ತಮಗೆ ಬೇಕಾದವರಿಗೆ ಏನು ಬೇಕಾದರೂ ಕೊಟ್ಟು ಖರ್ಚು ಮಾಡುತ್ತಿದ್ದಾರೆ. ಹೇಗೆ ಒಂದು ಮೊನಾಪಲಿಯಾಗಿ ಅಲ್ಲಿ ನಡೆಯುತ್ತಿದೆ. ಆದ್ದರಿಂದ ಇಂತಹ ಪದ್ಧತಿಯನ್ನು ಪೂರ್ತಿಯಾಗಿ ಬದಲಾವಣೆ ಮಾಡಬೇಕಾಗುತ್ತದೆ. ಅದೇರೀತಿ ಅವರು ಶಾಲು ಹೊದಿಸತಕ್ಕ ಪದ್ಧತಿಯನ್ನು ಸ್ವಲ್ಪ ಮಟ್ಟಿಗಾದರೂ ವಿರೋಧಿಸಿ, ಅದನ್ನು ತೆಗೆದುಹಾಕುವುದಕ್ಕೆ ಸಿದ್ಧರಾಗಬೇಕೆಂದು ಮಾನ್ಯ ಮಂತ್ರಿಯವರಿಗೆ ಹೇಳುತ್ತೇನೆ. ಅವರು ಯಾವ ರೀತಿಯಲ್ಲಿ ಬುಕ್ ಮಾಡುತ್ತಾರೋ ಗೊತ್ತಾಗುವುದಿಲ್ಲ. ಅಲ್ಲಿ ಸಾಮಾನ್ಯ ಜನಗಳಿಗೆ ಪ್ರವೇಶವಿಲ್ಲದಿರುವ ಹಾಗೆ ಸ್ವಾಮಿಗಳು ಆಶೀರ್ವಾದ ಮಾಡಿ ಬಂದಿದ್ದಾರೆ. ಪ್ರಸಾದವನ್ನು ಕೈಗೆ ಇಟ್ಟು ಹೋಗುತ್ತಾರೆ. ಸಾಮಾನ್ಯವಾಗಿ ರೆವೆನ್ಯೂ ಇನ್‌ಸ್ಪೆಕ್ಟರ್ ಹೇಳಿದರು, ಅಸೆಂಬ್ಲಿ ಸದಸ್ಯರು, ತಾಲ್ಲೂಕು ಬೋರ್ಡಿನ ಸದಸ್ಯರು, ಪ್ರೆಸಿಡೆಂಟರಿಗೆ ಇರುವ ಹಾಗೆ ಎಲ್ಲರಿಗೂ ಅವರ ಆಶೀರ್ವಾದ ಇರುವುದಿಲ್ಲವೆಂದು ಮಾನ್ಯ ಶ್ರೀ ಹುಚ್ಚಮಾಸ್ತಿಗೌಡರು ಏನು ಹೇಳಿದರೋ ಅದನ್ನು ನೋಡಬೇಕು.

(ಶ್ರೀ ಕೆ. ಎನ್. ವೀರಪ್ಪಗೌಡ)

ಈಗಾಗಲೇ ಇದು ಹೋಗಿಬಿಡುತ್ತದೆಂದು ನಾನು ತಿಳಿದುಕೊಂಡಿದ್ದೆ. ಅಂತೂ ಇದು ಹೋಗುತ್ತದೆಂದು ನನಗೆ ಒಂದು ನಂಬಿಕೆ ಇದೆ. ಹಣ ಕೊಡುತ್ತಿದ್ದಾರೆ. ಸಾರ್ವಜನಿಕರಿಗೆ ಪ್ರವೇಶ ಉಂಟೇ ? ಅದಕ್ಕೇನಾದರೂ ಕಮಿಟಿ ಬೇಕೇ ! ಮುಖ್ಯವಾಗಿ ದರಿದ್ರನಾರಾಯಣರಿಗೆ ಉಪಯೋಗವಾಗುವ ಮಟ್ಟಕ್ಕೆ ನಿಜವಾಗಿ ತರುತ್ತಾರೆಯೋ ಎಂಬುದನ್ನು ಇವರು ವಿಮರ್ಶೆಮಾಡಬೇಕೆಂದು ನಮ್ಮ ಸ್ನೇಹಿತರು ಹೇಳಿದರು. ಈಗ ದೇವಾಸ್ಥಾನಗಳು ಬಹಳಜಾಸ್ತಿ ಇವೆ. ನಮ್ಮಲ್ಲಿ ಅನ್ ಎಂಪ್ಲಾಯಮೆಂಟ್ ಬಹಳ ಜಾಸ್ತಿಯಾಗಿದೆ. ಜನರಿಗೆ ಎಂಪ್ಲಾಯ್‌ಮೆಂಟ್ ಹೇಗಾದರೂ ಕೊಡಲೇಬೇಕು. ಆದ್ದರಿಂದ ದೇವಾಸ್ಥಾನಗಳಲ್ಲಿ ಕೂಡ ಜನರಿಗೆ ಎಂಪ್ಲಾಮೆಂಟ್ ಕೊಡಬಹುದು. ಈಗ ದೇವಸ್ಥಾನಗಳಲ್ಲಿ ಯಾರೋ ಒಬ್ಬರ ಒಂದು ಗುಂಪು ಅಥವಾ ಒಂದು ಪಂಗಡದವರು ಪೂಜೆ ಮಾಡುತ್ತಾ ಇದ್ದಾರೆ. ಮಾನ್ಯ ಶ್ರೀ ಚನ್ನಬಸಪ್ಪನವರು ಒಳ್ಳೆಯ ಅನುಭವಶಾಲಿಗಳು. ಅವರು ಒಂದು ವಿಷಯವನ್ನು ಗಮನಿಸಬೇಕು. ಮುಖ್ಯವಾಗಿ ಪೂಜೆ ಮಾಡುವುದಕ್ಕೆ ನಾಲ್ಕು ಮಂತ್ರಗಳನ್ನು ಹೇಳಬೇಕು. ಶೃಂಗೇರಿಯಲ್ಲಿ ಸಂಸ್ಕೃತ ಪಾಠಶಾಲೆಗಳಲ್ಲಿ ಅನೇಕರಿಗೆ ಇದು ಅಭ್ಯಾಸವಾಗಿರುತ್ತದೆ. ಅದೇ ರೀತಿ ಮಂತ್ರಹೇಳುವುದನ್ನು ಕಲಿತುಕೊಂಡಂತಹವರಿಗೆ ಎಂಪ್ಲಾಮೆಂಟ್ ಎಕ್ಸ್‌ಚೇಂಜ್‌ನಲ್ಲಿ ರಿಜಿಸ್ಟರ್ ಮಾಡಿಸಿಕೊಂಡು ಎಲ್ಲಾ ಪಂಗಡಗಳವರಿಗೂ ಪೂಜೆ ಮಾಡತಕ್ಕ ಸಂದರ್ಭವನ್ನು ಒದಗಿಸಿಕೊಟ್ಟು ಆ ಒಂದು ರೀತಿಯಲ್ಲಿ ಅವರಿಗೂ ಜೀವನಕ್ಕೆ ಅನುಕೂಲವಾಗುವಂತೆ ಏರ್ಪಾಡುಮಾಡಬೇಕು. ಈಗ ಕೆಲವು ಸಮಸ್ಯೆಗಳು ಬರುತ್ತಿವೆ. ಒಂದು ಕಡೆ ಇದಕ್ಕೆ ಸಂಬಂಧಪಟ್ಟ ಹಾಗೆ ಕೆಲವು ಕಾನೂನುಗಳನ್ನು ಮಾಡುವುದು, ಮತ್ತೆ ಕೆಲವು ಕಾನೂನುಗಳನ್ನು ಅಭಾಲಿಷ್ ಮಾಡುವುದು. ಕೆಲವು ಕಡೆಗಳಲ್ಲಿ ಬೇರೆ ಯಾವುದಾದರೂ ಸಂಸ್ಥೆಗಳನ್ನು ಮಾಡಿಕೊಂಡು ಬಂದರೆ ಅವರಿಗೆ ಮನ್ನಣೆ ಕೊಡುವುದು—ಈ ರೀತಿ ಆಗುತ್ತಿದೆ.

ಇನ್ನು ಭೂದಾನ, ವಿದ್ಯಾದಾನ ಮಾನ್ಯ ಶ್ರೀ ಹನುಮಂತಯ್ಯನವರ ಕಾಲದಲ್ಲಿ ಬಂತು. ಈ ಭೂದಾನದಲ್ಲಿ ಲಕ್ಷಾಂತರ ಎಕರೆ ಭೂಮಿಯನ್ನು ಕೊಟ್ಟಿದ್ದಾರೆ. ಆ ಕಾಲದಲ್ಲಿ ಒಂದು ಕಮಿಟಿ ಮಾಡಿ ಅದಕ್ಕೆ ಒಬ್ಬ ಛೇರ್‌ಮನ್ನರನ್ನು ನೇಮಕಮಾಡಿದ್ದರು. ಸಾವಿರಾರು ರೂಪಾಯಿಗಳನ್ನು ಅದರ ಬೆಟರ್‌ಮೆಂಟಿಗೆ ಉಪಯೋಗಿಸಿಕೊಂಡಿದ್ದಾರೆ. ಸಾಗುವಳಿ ಮಾಡುವವರೂ ಸಹ ಉಪಯೋಗಿಸಿಕೊಂಡಿದ್ದಾರೆ. ಆದ್ದರಿಂದ ಈಗ ಎಲ್ಲಾ ಕ್ಷೇತ್ರಗಳಿಗೂ ಅನ್ವಯವಾಗುವ ಹಾಗೆ ಒಂದು ಕಾನೂನು ಮಾಡಬೇಕೇ ಹೊರತು ಬೇರೆ ಬೇರೆ ರೂಪದಲ್ಲಿ ಮಾಡುವುದು ಸರಿಯಾದ ವ್ಯವಸ್ಥೆಯಲ್ಲ. ಅಂತೂ ದೇವಾಲಯಗಳ ವಿಷಯದಲ್ಲಿ ಏನೂ ಸುಧಾರಣೆಮಾಡಲಿಲ್ಲ. ರೈತರಿಗೆ ಇದರಿಂದ ಹೆಚ್ಚಿನ ಸುಧಾರಣೆಯಾಗಬೇಕು. ಜಮೀನು ನಿಜವಾಗಿ ಉಳತಕ್ಕ ರೈತರಿಗೇ ಸಿಗಬೇಕು. ಭೂಸುಧಾರಣೆಯನ್ನು ಮುಂದೆ ಜಾರಿಗೆ ತರುವಾಗ ಯಾವನು ವ್ಯವಸಾಯಗಾರನಾಗಿದ್ದಾನೋ, ಯಾವನಿಗೆ ಜಮೀನು ಇಲ್ಲವೋ ಅಂತಹವರಿಗೆ ಜಮೀನು ದೊರೆಯಬೇಕು. ಅದಕ್ಕಾಗಿ ತಹಸೀಲ್ದಾರರ ನೇತೃತ್ವದಲ್ಲಿ ಒಂದು ಕಮಿಟಿಮಾಡಿ ಅದರ ಮೂಲಕ ರೈತರಿಗೆ ಜಮೀನು ದೊರೆಯುವ ಹಾಗೆ ಮಾಡದೇ ಹೋದರೆ ನಿಜವಾಗಿ ಇನ್ನು ಕೆಲವು ದಿವಸಗಳಲ್ಲಿ ನಿರುದ್ಯೋಗ ಸಮಸ್ಯೆಗೆ ಬಡ ಜನರೂ ಸಹ ಬಲಿ ಬೀಳುತ್ತಾರೆ. ಈಗಾಗಲೇ ಅನೇಕರು ಬಿದ್ದಿದ್ದಾರೆ.

ಎಷ್ಟೋ ಕಡೆಗಳಲ್ಲಿ ಲ್ಯಾಂಡ್ ಡಿಸ್‌ಪ್ಯೂಟ್ಸ್ ಬಗ್ಗೆ ತೀರ್ಮಾನಮಾಡಲು ಕೋರ್ಟುಗಳನ್ನು ಮಾಡಿದ್ದಾರೆ. ಆ ಕೋರ್ಟಿನಲ್ಲಿ ಒಬ್ಬರಿಗೊಬ್ಬರು ಜಮೀನು ಬಿಡಿಸಿಕೊಳ್ಳುವುದಕ್ಕಾಗುವುದಿಲ್ಲವೆಂದು ವಾದ ಮಾಡುತ್ತಾರೆ. ಆದ್ದರಿಂದ ಯಾವ ರೂಪದಲ್ಲಿ ಮಾಡಿದರೂ ಗೇಣೀದಾರರಿಗೆ ರಕ್ಷಣೆಯಾಗಿಲ್ಲ. ಅವರಿಗೆ ತಮ್ಮ ಕಾಲದಲ್ಲಿ ತಕ್ಕ ಪರಿಹಾರ ದೊರಕುವ ಅವಕಾಶ ಇದ್ದೇ ಇದೆ. ನಮಗೆ 1947ರಲ್ಲಿಯೇ ಸ್ವಾತಂತ್ರ್ಯ ಬಂತು. ಇವತ್ತಿನವರೆಗೂ ಈ ದೇಶದ ಆಡಳಿತದಲ್ಲಿ ಮುಖ್ಯ ಪಾತ್ರವನ್ನು ವಹಿಸತಕ್ಕ ಅವಕಾಶ ತಮಗೆ ಸಿಕ್ಕಿರಲಿಲ್ಲ. ಈಗ ಬಹು ಮುಖ್ಯವಾದ ಸ್ಥಾನವನ್ನು ತಾವು ಗಳಿಸಿದ್ದೀರಿ. ರೆವಿನ್ಯೂ ಮಂತ್ರಿಗಳಾಗಿದ್ದೀರಿ. ಆದ್ದರಿಂದ ತಾವು ಕೂಡ ಯಾವುದೇ ರೀತಿಯಲ್ಲಿ ಯಾವ ದಾಕ್ಷಿಣ್ಯಕ್ಕೂ ಒಳಗಾಗದೆ, ಯಾರು ಯಾವ ಶಾಲು ಹೊದಿಸಿದರೂ ಅದರ ದಾಕ್ಷಿಣ್ಯಕ್ಕೆ ಒಳಗಾಗದೆ ಈ ವಿಚಾರದಲ್ಲಿ ದೀರ್ಘವಾಗಿ ಯೋಚನೆಮಾಡಬೇಕು. ಒಟ್ಟಿನಲ್ಲಿ ರೈತ ಜನಾಂಗವನ್ನು ಹಾಗೂ ವ್ಯವಸಾಯಗಾರರನ್ನು ಬಲಿಷ್ಠರನ್ನಾಗಿ ಮಾಡಿ ಸಾಕಷ್ಟು ಕಡಿಮೆ ಬೆಲೆಯಲ್ಲಿ ಆಹಾರಪದಾರ್ಥಗಳು ಜನರಿಗೆ ದೊರೆಯುವಂತೆ ಮಾಡಬೇಕು. ಕೆಲವು ಮಠದವರಿಗೆ ಬೇಕಾದಷ್ಟು ಜಮೀನು ಇರುತ್ತದೆ. ಅದರಲ್ಲಿ ಯಾರೋ ಒಬ್ಬ ರೈತ ಜಮೀನು ಮಾಡುತ್ತಿರುತ್ತಾನೆ. ಆದರೂ ಕೂಡ ಅಲ್ಲಿ ಒಂದು ಸ್ಕೂಲು ಬೇಕು ಅಂತ ಅದಕ್ಕಾಗಿ ಒಂದು ಅರ್ಜಿಯನ್ನು ಡೆಪ್ಯುಟಿ ಕಮಿಷನರಿಗೆ ಹಾಕುತ್ತಾರೆ, ಆ ರೈತನಿಂದ ಆ ಜಮೀನನ್ನು ಬಿಡಿಸಿಕೊಳ್ಳುವುದಕ್ಕೆ ಪ್ರಯತ್ನಮಾಡು

ತ್ತಾರೆ. ಏನೇನೋ ಹೆಸರು ಹೇಳಿ, ಅದು ಧರ್ಮದ ಮಠ, ಅಲ್ಲಿ ಒಂದು ಧರ್ಮ ಸಂಸ್ಥಾಪನೆ ಮಾಡಬೇಕೆಂದು ಹೇಳಿಕೊಂಡು ಜಮೀನು ಬಿಡಿಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ಇಂತಹ ಪ್ರಸಂಗಗಳನ್ನು ಕೂಡಲೇ ಕಂಡುಹಿಡಿದು ಇದಕ್ಕೆ ಅವಕಾಶ ಕೊಡಕೂಡದೆಂದು ಹೇಳುತ್ತೇನೆ. ಮತ್ತು ಪದೇ ಪದೇ ಈ ರೀತಿ ಒಂದು ವಿಧೇಯಕವನ್ನು ಈ ಸಭೆಯ ಮುಂದೆ ತರುತ್ತಿರುವುದನ್ನು ನಿಲ್ಲಿಸಬೇಕೆಂದು ಹೇಳಿ ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೇ; ಮಾನ್ಯ ಮಂತ್ರಿಗಳು ತಂದಿರತಕ್ಕ ಈ ಬಿಲ್ಲಿಗೆ ಸ್ವಾಗತಬಯಸುತ್ತೇನೆ. ನನ್ನ ಮಿತ್ರರಾದಂಥ ಮಾನ್ಯ ಶ್ರೀ ವೀರಪ್ಪಗೌಡರು ಈ ಒಂದು ವಿಷಯದ ಬಗ್ಗೆ ಹೊರಗೆ ಇದ್ದುಕೊಂಡು ಮಾತನಾಡಿದ್ದಾರೆ. ನಾನು ಒಳಗೇ ಇದ್ದುಕೊಂಡು ಮಾತನಾಡುತ್ತೇನೆ. ನಾನು ಹುಟ್ಟಿದಾರಭ್ಯ ಧರ್ಮದ ಹೆಸರಿನಲ್ಲಿ ಶೋಷಣೆ ನಡೆಯುತ್ತಿರುವ ವರ್ಗದೊಳಗೆ ಹುಟ್ಟಿ ಬೆಳೆದು ಬಾಳಿದವನು. ಆದ್ದರಿಂದ ಅವರಿಗಿಂತ ಹೆಚ್ಚು ವಿಷಯಗಳು ನನಗೆ ತಿಳಿದಿರುವುದರಿಂದ ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಈ ದೇಶದಲ್ಲಿ ಧರ್ಮದ ಹೆಸರಿನಲ್ಲಿ ಆಗಿರುವ ಅನ್ಯಾಯ, ಶೋಷಣೆ ಇನ್ನು ಯಾವ ದೇಶದಲ್ಲಿಯೂ ಆಗಿಲ್ಲವೆಂದು ಹೇಳಿದರೆ ನಮ್ಮ ಸ್ನೇಹಿತರೆಲ್ಲರೂ ಒಪ್ಪುತ್ತಾರೆ. ನಾವು ಮತ್ತೆ ಮತ್ತೆ ಮಠ, ಮನೆ, ಮತ್ತು ದೇವಸ್ಥಾನಗಳಿಗೆ ಕೊಟ್ಟಿರುವ ಸವಲತ್ತುಗಳನ್ನು ನೋಡಿದರೆ ನಾವು ಪುನಃ ಒಂದು ಸಮಾಜದ ಪುನರ್ವರ್ತನೆ ಮಾಡುವುದಕ್ಕೆ ಹೊರಟಿದ್ದೇವೆಯೋ ಏನೋ ಎಂಬ ಭಾವನೆ ಬರದೇ ಇರಲಾರದು. ನಾವು ಸಮಾಜವಾದ ಎಂಬುದಾಗಿ ಒಂದು ಕಡೆ ಹೇಳುತ್ತೇವೆ. ಮತ್ತೆ ಒಂದು ಕಡೆ ಧರ್ಮದ ಹೆಸರನ್ನು ಹೇಳುತ್ತೇವೆ. ಆದರೆ ಧರ್ಮಕ್ಕೂ, ಮತಕ್ಕೂ ವ್ಯತ್ಯಾಸವಿದೆ. ಧರ್ಮ ಬೇರೆ, ಮತ ಬೇರೆ. ಮತೀಯ ಸಂಸ್ಥೆಗಳನ್ನು ಪೋಷಣೆ ಮಾಡುವುದಕ್ಕೆ ಎಂಬುದಾಗಿ ಒಂದು ಕಡೆ ಹೇಳುತ್ತೀರಿ, ಇನ್ನೊಂದು ಕಡೆ ಅವನ್ನು ಶೋಷಣೆ ಮಾಡುವುದಕ್ಕೆ ಎಂಬುದಾಗಿ ಹೇಳುತ್ತೀರಿ. ಇದು ಒಂದಕ್ಕೊಂದಕ್ಕೆ ದ್ವಂದ್ವ ಅರ್ಥ ಕೊಡುತ್ತದೆ. ಇದು ಹೇಗಿದೆಯೆಂದರೆ, ಗೋಕುಲಾಷ್ಟಮಿಗೂ ಖಾಸಿಂಗೂ ಎಷ್ಟು ವ್ಯತ್ಯಾಸವಿದೆಯೋ ಆ ರೀತಿ ಇದೆ.

ಈ ಸಮಾಜವಾದ ಮತ್ತು ಮತೀಯ ಸಂಸ್ಥೆಗಳು ಒಂದಕ್ಕೊಂದು ಹೊಂದಿಕೊಂಡು ಹೋಗುವುದಕ್ಕೆ ಸಾಧ್ಯವೇ ಇಲ್ಲ. ನಾವು ಈ ದಿವಸ ಸಾರುತ್ತಿರುವ ಸಮಾಜವಾದದ ಧೋರಣೆಯಲ್ಲಿ ಈ ಮಠಮಾನ್ಯಗಳನ್ನೂ ಮತ್ತು ಧರ್ಮ ಸಂಸ್ಥೆಗಳನ್ನೂ ಕಾಪಾಡಿಕೊಂಡು ಬರುವುದಕ್ಕೆ ಸಾಧ್ಯವೇ ಇಲ್ಲ; ಅದಕ್ಕೆ ಅವಕಾಶವೂ ಕೂಡ ಇಲ್ಲ. ಇನ್ನು ಹಾಲಿ ಇರತಕ್ಕ ಸ್ವಾಮಿಗಳ ಪೈಕಿ ಆ ಪುರಿ ಸ್ವಾಮಿಗಳು ಬಹಳ ಕ್ರಾಂತಿಕಾರಿಕ ಸ್ವಾಮಿಗಳಾಗಿದ್ದಾರೆ. ಆದ್ದರಿಂದ ಈಗಾಗಲೇ ಅವರನ್ನು ಉಳಿದೆಲ್ಲಾ ಮಠಾಧಿಪತಿಗಳೂ ಇವರನ್ನು ಹೊರಗೆ ಹಾಕಿದ್ದಾರೆ. 'ಏಕಂ ಸತ್ ವಿಪ್ರಾಃ ಬಹುಧಾ ವದಂತೀ ''ಮತ್ತು ಆಕಾಶಾತ್ ಪತಿತಂ ತೋಯಂ ಸಾಗರಂ ಪ್ರತಿಗಚ್ಛತಿ' ಎಂದು ನಾವೆಲ್ಲ ಬಾಯಲ್ಲಿ ಹೀಗೆ ಬೇಕಾದಷ್ಟನ್ನು ಹೇಳುತ್ತೇವೆ. ಎಲ್ಲರೂ ಬಾಯಲ್ಲಿ 'ಏಕಂ ಸತ್ ವಿಪ್ರಾಃ ಬಹುಧಾ ವದಂತೀ' ಅಂದರೆ ಎಲ್ಲರಲ್ಲಿಯೂ ಇರತಕ್ಕ ಪರಮಾತ್ಮನು ಅಥವಾ ಆತ್ಮನು ಒಬ್ಬನೇ ಎಂದು ಅದರ ಅರ್ಥ. ಪರಮಾತ್ಮನು ಇರುವವನು ಒಬ್ಬನೇ ಆದರೂ ಆತನಿಗೆ ಹೆಸರುಗಳು ಅನಂತವಾಗಿವೆ, ಪರಮಾತ್ಮನನ್ನು ಭಕ್ತರು ಅನೇಕ ಹೆಸರುಗಳಿಂದ ಕರೆದಿದ್ದಾರೆ. ಆದರೆ ಹೇಳುತ್ತಿರುವಂತೆ ನಾವುಗಳ್ಯಾರೂ ಆಚರಣೆಯಲ್ಲಿ ನಡೆಯುತ್ತಿಲ್ಲ. ನಮ್ಮ ಮನೆಯ ಎದುರಿಗೆ ಒಂದು ಶಂಕರನಾರಾಯಣ ದೇವಸ್ಥಾನವಿದೆ. ಒಂದು ದಿವಸ ಒಬ್ಬ ಅಯ್ಯಂಗಾರ್ ಅವರು ಅಲ್ಲಿಗೆ ಬಂದರು, ಅವರು ಇಲ್ಲಿ ಯಾವುದಾದರೂ ದೇಸ್ಥಾನವಿದೆಯೇ ಎಂದು ಕೇಳಿದಾಗ ಜನರು ಇದೆ ಎಂದು ಹೇಳಿ ಈ ಶಂಕರನಾರಾಯಣ ದೇವಸ್ಥಾನದ ಹೆಸರನ್ನು ಹೇಳಿದರು. ಆಗ ಅವರು ಹೋಗಿ ದೇವಸ್ಥಾನಕ್ಕೆ ಪ್ರದಕ್ಷಿಣೆ ಮಾಡಿ, ದೇವರಿಗೆ ನಮಸ್ಕಾರ ಮಾಡಿ ಬಂದ ನಂತರ ಅಲ್ಲಿದ್ದವರು ಯಾರೋ ಅದು ಶಂಕರನಾರಾಯಣ ದೇವಸ್ಥಾನ ಎಂದು ಹೇಳಿದ್ದನ್ನು ಕೇಳಿ, ಬಹುಶಃ ಮೊದಲು ಅವರು ಈ ದೇವಸ್ಥಾನದ ಹೆಸರನ್ನು ಕೇಳಿಸಿಕೊಂಡಾಗ ಮೊದಲನೇ ಅರ್ಧಭಾಗವನ್ನು ಸರಿಯಾಗಿ ಕೇಳಿಸಿಕೊಳ್ಳದೆ ಬರಿ 'ನಾರಾಯಣ' ಅನ್ನುವುದಷ್ಟನ್ನೇ ಜ್ಞಾಪಕದಲ್ಲಿಟ್ಟುಕೊಂಡು ದೇವಸ್ಥಾನಕ್ಕೇ ಪ್ರದಕ್ಷಿಣೆ ಮಾಡಿದಂತೆ ಕಾಣುತ್ತದೆ. ಯಾವಾಗ ಆ ದೇವಸ್ಥಾನ 'ಶಂಕರನಾರಾಯಣ ದೇವಸ್ಥಾನವೆಂದು ಗೊತ್ತಾಯಿತೋ ಆಗ ಅವರು ಅಲ್ಲಿ ನಿಲ್ಲಲೇ ಇಲ್ಲ ಹೊರಟೇ ಹೋದರು, ಮತ್ತೆ ಅವರು ವಾಪಸ್ ಅಲ್ಲಿಗೆ ಬರಲೇ ಇಲ್ಲ. ನಮ್ಮಲ್ಲಿ ಸ್ಪೀಕಿಂಗ್ ಟು ಪರ್ಸನ್ಸ್ ಎಂದು ಏನು ಹೇಳುತ್ತೇವೆ, ಇಂಥ ಒಂದು ಭಿನ್ನ ಭೇಧಗಳನ್ನು ಎಣಿಸತಕ್ಕಂಥ ಜನರು ನಮ್ಮ ದೇಶದಲ್ಲಿದ್ದಷ್ಟು ಇನ್ನಾವ ದೇಶದಲ್ಲೂ ಇಲ್ಲ. ನಾನು ಒಬ್ಬ ಅದ್ವೈತಿಗಳನ್ನು ಒಂದಾವರ್ತಿ ಕೇಳಿದೆ: ನೀವು 'ಅಹಂ

(ಶ್ರೀ ಎಸ್. ಎಂ ಶೀರನಾಳಿ ಚಂದ್ರಶೇಖರ್)

ಬ್ರಹ್ಮಾಸ್ಮಿನ್' ಎಂದು ಹೇಳುತ್ತೀರಲ್ಲ, ಹಾಗಿರುವಾಗ ಈ ಹರಿಜನರನ್ನು ನಿಮ್ಮ ಮನೆಗಳಿಗೆ ಏಕೆ ಬಿಟ್ಟು ಕೊಳ್ಳುವುದಿಲ್ಲವೆಂದು ಕೇಳಿದ್ದಕ್ಕೆ ಅವರು ಹೇಳಿದರು-ನಾವಿನ್ನೂ ಆ ಮಟ್ಟಕ್ಕೆ ಮುಟ್ಟಿಲ್ಲ ಎಂದು. ನಾವು ಈಗ ಇಲ್ಲಿ ಶತಮಾನಗಟ್ಟಲೆ 'ಅಹಂಬ್ರಹ್ಮಾಸ್ಮಿನ್' ತತ್ವವನ್ನು ಹೇಳುತ್ತಿದ್ದರೂ ನಮ್ಮ ಸಮಾಜದಲ್ಲಿ ಕೀಳು ಮೇಲು ಎನ್ನುವುದು ಹೋಗುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ನಮ್ಮ ಈ ತತ್ವಗಳೆಲ್ಲಾ ಕೇವಲ ಹೇಳುವುದಕ್ಕೆ ಮಾತ್ರ ಇವೆಯೇ ವಿನಾ ಅವು ಆಚರಣೆಗಾಗಿ ಇರುವುದಿಲ್ಲ.

ಇನ್ನು ಈ ದಿವಸ ಸಭೆಯ ಮುಂದಿರತಕ್ಕ ಬಿಲ್ಲಿನಿಂದ ಯಾರಿಗೆ ಉಪಯೋಗ ಆಗುತ್ತದೆ? ನಾನೂ ಒಬ್ಬ ಅದ್ವೈತಿ. ಜಗತ್ತಿನಲ್ಲಿರತಕ್ಕ ಎಲ್ಲಾ ಜೀವರಾಶಿಗಳೂ ಒಂದೇ ಎನ್ನತಕ್ಕವನು. ಮೊದಲು ಅದ್ವೈತವನ್ನು ಸಾರಿದವರು ಶಂಕರಾಚಾರ್ಯರು. ಆದರೆ ಜನರು ಅದನ್ನು ಪಾಲನೆ ಮಾಡಿಕೊಂಡು ಬರಲಿಲ್ಲ. ಈ ದಿವಸ ಪ್ರತಿಯೊಂದು ದೇವಸ್ಥಾನಕ್ಕೂ ನೂರಾರು ಎಕರೆ ಜಮೀನು ಇರುತ್ತದೆ. ಅದನ್ನು ಮಾಡತಕ್ಕವರು ಎಲ್ಲರೂ ಬಡವರೇ, ಆದರೆ ಆ ಜಮೀನು ಶ್ರೀಮಂತರ ಹೆಸರಿನಲ್ಲಿರುತ್ತದೆ. ನಮ್ಮ ಸರ್ಕಾರ ಕೂಡಲೇ ಭೂಶಾಸನವನ್ನು ಜಾರಿಗೆ ತಂದು ಇದನ್ನೆಲ್ಲಾ ಹೋಗಲಾಡಿಸಬೇಕು. ಈ ದಿವಸ ಈ ಮಸೂದೆಯಿಂದ ಬಡ ಗೇಣಿದಾರನಿಗೇನೂ ಅನುಕೂಲವಾಗುತ್ತಿಲ್ಲ. ಆದರೆ ನಾನು ಒಬ್ಬ ನಿಷ್ಠಾವಂತ ಸಮಾಜವಾದಿ. ನಾನೂ ಕೂಡ ಈ ಸಭೆಯ ಮುಂದೆ 'ಇಂಟರ್ ಕ್ಯಾಸ್ಟ್ ಮ್ಯಾರೇಜ್ ಬಿಲ್ಲು.' ಮತ್ತು ಇನ್ನೊಂದು ದೇವಸ್ಥಾನಗಳಲ್ಲಿ ಪೂಜೆ ಮಾಡತಕ್ಕ ಅರ್ಚಕ ಆತನು ಯಾವ ಜಾತಿಯವನೇ ಇರಲಿ ಆತನಿಗೆ ಮಂತ್ರಗಳನ್ನು ಹೇಳುವುದು ಶಾಸ್ತ್ರ ವಿಚಾರಗಳು ಮತ್ತು ಪೂಜಾ ಕ್ರಮಗಳು ಗೊತ್ತಿದ್ದರೆ ಅಂಥವರನ್ನು ಅರ್ಚಕರನ್ನಾಗಿ ನೇಮಕ ಮಾಡಬಹುದೆಂದು ಒಂದು ಬಿಲ್ಲು-ಹೀಗೆ ಎರಡು ಬಿಲ್ಲುಗಳನ್ನು ತರತಕ್ಕವನಿದ್ದೇನೆ. ಹಿಂದಿನಿಂದಲೂ ಸಮಾಜವನ್ನು ಯಾರು ಶೋಷಣೆ ಮಾಡಿಕೊಂಡು ಬಂದಿದ್ದಾರೋ ಅಂಥವರಿಗೇ ಈ ದಿವಸ ಮತ್ತೆ ಅನುಕೂಲಗಳು ದೊರೆಯುತ್ತಿವೆ. ಈ ದಿವಸ ಇಲ್ಲಿ ತಂದಿರತಕ್ಕ ಈ ಬಿಲ್ಲೇನಿದೆ ಇದು 'ಕಾಯಕವೇ ಕೈಲಾಸ. ಅನ್ನತಕ್ಕ ಜನರಿಗಲ್ಲ. ಅಂಥ ಕಷ್ಟದಾರಿ ಜನರಿಗೆ ಇದರಿಂದೇನೂ ಅನುಕೂಲವಾಗುವುದಿಲ್ಲ' ಇದನ್ನು ಸರ್ಕಾರ ಕೂಡಲೇ ಅಂದ ನ್ಯೂನತೆಯನ್ನು ಹೋಗಲಾಡಿಸಬೇಕು. ನಮ್ಮ ಶಿವಮೊಗ್ಗಾದಲ್ಲಿ ನೂರಾರು ಎಕರೆ ಜಮೀನು ಇನ್ನೂ 'ವೈವಾಟದಾರರ' ಕೈಲೇ ಇದೆ. ದೇವರನ್ನು ಕಲಾಹೀನನ್ನಾಗಿ ಮಾಡಿದ ಮೇಲೆ ಈ ಜಮೀನುಗಳೆಲ್ಲಾ ಸರ್ಕಾರಕ್ಕೆ ಸೇರಬೇಕು. ಹೊಸನಗರ ತಾಲ್ಲೂಕ್‌ನಲ್ಲಿ ಒಂದು ದೇವಸ್ಥಾನಕ್ಕೆ ನೂರಾರು ಎಕರೆ ಜಮೀನಿತ್ತು. ಆದರೆ ಆ ದೇವಸ್ಥಾನ ಆ ಹಿರೇಭಾಸ್ಕರ ಪ್ರಾಜೆಕ್ಟನ್ನು ಕಟ್ಟಿದ ಕಾರಣ ಜಮೀನೆಲ್ಲಾ ಮುಳುಗಡೆ ಆಯಿತು. ಆಗ ಆ ದೇವಸ್ಥಾನವನ್ನು ಅಲ್ಲಿನ ದೇವರನ್ನು ಕಲಾಹೀನ ಮಾಡಲಾಯಿತು, ಅಲ್ಲಿ ಲಿಂಗನಮಕ್ಕಿ ಡ್ಯಾಮನ್ನು ಕಟ್ಟಿದನಂತರ ಹಿಂದೆ ಆ ಹೊಸನಗರದ ದೇವಸ್ಥಾನ ಕಲಾಹೀನವಾದ ನಂತರ ಜಮೀನು ಎಲ್ಲಾ ಮುಳುಗಡೆ ಆಗಿದೆ. ಅದಕ್ಕೆ ನಾನು ವೈವಾಟ್‌ದಾರ—ನನಗೆ ಪರಿಹಾರ ಇಲ್ಲಿಯವರೆಗೂ ಸಂದಾಯವಾಗಿಲ್ಲ ಎಂದು ಸರ್ಕಾರಕ್ಕೆ ಅರ್ಜಿ ಹಾಕಿ ಅಪಾರವಾದ ಹಣವನ್ನು ಪರಿಹಾರ ರೂಪದಲ್ಲಿ ಪಡೆದಿದ್ದಾರೆ. ಸರ್ಕಾರದ ಹಣವನ್ನು ಅವರು ಲೂಟಿ ಮಾಡಿದ್ದಾರೆಂದು ನಾನು ಹೇಳುತ್ತೇನೆ. ನಾವೆಲ್ಲರೂ ಸರ್ಕಾರಕ್ಕೆ ಇದರ ಬಗ್ಗೆ ತಿಳುವಳಿಕೆ ಕೊಟ್ಟಮೇಲೆ ಸರ್ಕಾರ ಅದನ್ನು ವಿಚಾರ ಮಾಡುವುದಕ್ಕೆ ಪ್ರಾರಂಭಮಾಡುವ ಕಾಲಕ್ಕೆ ಅಲ್ಲಿದ್ದ ಬುದ್ಧಿವಂತ ಜನರು ಆ ಫೈಲೇ ಇಲ್ಲದಂತೆ ಮಾಡಿದ್ದಾರೆ. ಈ ದಿವಸ ಈ ರಾಜ್ಯದಲ್ಲಿ ಸಹಸ್ರಾರು ರೂಪಾಯಿಗಳು ಕೈಲಿದ್ದರೆ ಯಾರು ಯಾರನ್ನಾದರೂ ಖೂನಿ ಮಾಡಿ ಬಚಾವಾಗಬಹುದು ಎಂದಾಯಿತು. ಅಂತೂ ಈ ದಿವಸ ಕೂಡ ಆ ಶೋಷಣೆ ಇನ್ನೂ ತಪ್ಪಿಲ್ಲ. ಹೀಗೆ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಭೀಮನಕಟ್ಟೆಮಠ ಅಂತ ಇದೆ. ಅಲ್ಲಿನ ವೈವಾಟ್‌ದಾರರಿಗೆ ಒಂದು ನಯಾಪೈಸೆ ದಾನ ಮಾಡಿದ ಅಭ್ಯಾಸವಿಲ್ಲ – ಧರ್ಮಮಾಡಿದ ಅಭ್ಯಾಸವಿಲ್ಲ. ಅವರನ್ನು ನಾವು ಹೋಗಿ ಒಂದು ಆಸ್ಪತ್ರೆಗೆ ಹೊಸದಾಗಿ ಎಕ್ಸ್‌ರೇ ಪ್ಲಾಂಟನ್ನು ಹಾಕಬೇಕಾಗಿದೆ ಅದಕ್ಕೆ 500 ರೂಪಾಯಿಗಳ ದಾನ ಕೊಡಬೇಕೆಂದು ಕೇಳಿದ್ದಕ್ಕೆ ಅವರು ನಿಮ್ಮ ಸರ್ಕಾರ ದಿನಕ್ಕೊಂದು ಕಾನೂನನ್ನು ತರುತ್ತಿದೆ. ನಮ್ಮ ಗೇಣೀದಾರರು ಕಳೆದ ಹತ್ತಾರು ವರ್ಷಗಳಿಂದ ಗೇಣಿಯನ್ನೇ ಕೊಟ್ಟಿಲ್ಲ, ನಮ್ಮ ಜೀವನ ಸಾಗಿಸುವುದೇ ಕಷ್ಟವಾಗಿದೆ ಎಂದು. ಆದರೆ ಅವರು ಇರತಕ್ಕವರು ಒಬ್ಬರೇ. ಅವರಿಗೆ ಸಂಸಾರವಿಲ್ಲ. 50-100 ಎಕರೆ ತೋಟದ ಜಮೀನನ್ನು ಇಟ್ಟುಕೊಂಡಿದ್ದರೂ ಗೇಣಿಬರುತ್ತಿಲ್ಲ ಅನ್ನುವ ಒಂದು ಕಾರಣದಮೇಲೆ ಅವರು ದಾನ ಕೊಡುವುದಕ್ಕೇನೂ ಇಲ್ಲ ಎಂದು ಹೇಳಿಬಿಟ್ಟರು. ಇದನ್ನು ನೋಡಿಯೇ ಅನೇಕರು ಈ ಕಲಿಯುಗಕ್ಕೆ ಸಂನ್ಯಾಸಬೇಕಾಗಿಲ್ಲ ಎಂದು ಹೇಳಿದ್ದಾರೆ. ಈ ನಾನಾ ಕಾರಣಗಳಿಂದಲೇ ಸರ್ಕಾರದವರು ಈ ಮಾತೀಯ ಸಂಸ್ಥೆಗಳಿಗೆ ಸೇರಿರತಕ್ಕ ಮಠ ಮಾನ್ಯಗಳಿಗೆ ಸೇರಿರತಕ್ಕ ಆಸ್ತಿಗಳನ್ನೆಲ್ಲಾ ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಹೇಳುತ್ತಿದ್ದೇನೆ ನಾನೂ ಒಬ್ಬ ಬ್ರಾಹ್ಮಣ. ಆದರೆ ಹಿಂದೂ ದೇವಸ್ಥಾನಗಳು ಕೇವಲ ಕೆಲವರಿಗೆ ನಾಲ್ಕಾರು

ಜನರಿಗೆ ಮಾತ್ರ ಬಟ್ಟೆ ಊಟ ಹೊಡೆಯುವುದಕ್ಕೆ ಇವೆ ಎನ್ನುವುದಾದ್ದರೆ ಅದು ತೀರಾ ನಾಚಿಕೆಗೇಡಿನ ವಿಚಾರ. ಇಂಥ ಜನರನ್ನು ಸಮಾಜದಿಂದ ಹೊರಗೆ ಹಾಕಬೇಕೆಂದು ನಾನು ಹೇಳುತ್ತೇನೆ.

4-30 P.M.

ಇಂಥ ಮಠಗಳನ್ನು ಉಳಿಸಿಕೊಂಡು ಬರಬೇಕಾಗಿಲ್ಲ. ಯಾವ ಮಠ ಮತೀಯ ಸಂಸ್ಥೆಯಾಗಿರುವುದೋ ಯಾವುದು ಸಮಾಜಕ್ಕೆ ಸರಿಯಾಗಿ ಸಹಾಯಮಾಡುವುದಿಲ್ಲವೋ ಅದನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. ಈ ತಿರುಪತಿಯ ದೇವಸ್ಥಾನ ತೆಗೆದುಕೊಳ್ಳಿ, ಅಲ್ಲಿ ಕೋಟಿಗಟ್ಟಲೆ ಹಣ ಬರುವುದು. ಬಡವನಿಗೆ ಸಾಯಂಕಾಲದವರೆಗೆ ದುಡಿದ ರೂ ಹತ್ತು ರೂಪಾಯಿ ಸಿಕ್ಕುವುದಿಲ್ಲ. ಆದುದರಿಂದ ತಿರುಪತಿಯಲ್ಲಿ ಬರುವ ಆದಾಯವನ್ನು ಬಡವರ ಉದ್ಧಾರಕ್ಕೆ, ಸಮಾಜ ಸೇವೆಗೆ ಉಪಯೋಗಿಸಬೇಕು. ಈ ವಿಚಾರವನ್ನು ಪರಿಶೀಲಿಸಬೇಕು. ಈ ದಿವಸ ಸನ್ಯಾಸಿಗಳು ಎಷ್ಟು ಜನ ಅವರ ಧರ್ಮದಂತೆ ನಡೆಯುತ್ತಿದ್ದಾರೆಂಬುದನ್ನು ಯೋಚನೆಮಾಡಬೇಕು. ಉಡುಪಿಯಲ್ಲಿ 8 ಮಠಗಳಿವೆ. ಅದರ ಇತಿಹಾಸ ಹೇಳುವುದಾದರೆ ಆ ಮಠಗಳ ವೆಚ್ಚ, ಬೊಂಬಾಯಿನಲ್ಲಿ ಅವರು ನಡೆಸುವ ಭೋಗ, ಅವರ ನಿರಂಕುಶ ಪ್ರಭುತ್ವ ನೋಡಿದರೆ ಈ ಮಠಗಳಿಗೆ ಮುಟ್ಟುಗೋಲು ಹಾಕುವುದು ಒಳ್ಳೆಯದೆಂದು ತೋರುವುದು. ಅನೇಕರು ಹೊಟ್ಟೆಗಿಲ್ಲದೆ ಎಂಜಲೆಲೆಗಳನ್ನು ತೆಗೆದುಕೊಂಡು ಅದರಲ್ಲಿರುವುದನ್ನು ತಿನ್ನುವರು. ಹೀಗಿರುವಾಗ ಅನೇಕರಿಗೆ ಹೊಟ್ಟೆಗಿಲ್ಲದೆ ಕಷ್ಟಪಡುತ್ತಿರುವಾಗ ಮಠಗಳಿಗೆ ಅಲ್ಲಿ ಬೇಕಾದ ಹಾಗೆ ಖರ್ಚು ಮಾಡಲು ಅವಕಾಶ ಕೊಡುವುದು ಉಚಿತವಲ್ಲ. ಬಡವರು ಊಟ ಕೇಳಿದರೆ ಕಲ್ಲು ತೆಗೆದುಕೊಂಡು ಹೊಡೆಯುವರು. ಕೆಲವು ಕಡೆ ಕೇವಲ ಬ್ರಾಹ್ಮಣರಿಗೆ ಮಾತ್ರ ಸಂತರ್ಪಣೆ ನಡೆಯುವುದು ಇಂಥ ಮಠಗಳೇಕಿರಬೇಕು ? ಪ್ರತಿಯೊಬ್ಬ ವಿಚಾರಪರರಿಗೂ ಇದು ಗೊತ್ತಿದೆ. ಇಂದು ತಂದಿರುವ ಬಿಲ್ಲಿಗೆ ನಾವು ಬೆಂಬಲ ಕೊಡಲೇಬೇಕು. ಆದರೆ ಈ ಬಿಲ್ಲಿನಿಂದ ಕೇವಲ ಧರ್ಮ ಸಂಸ್ಥೆಗಳಿಗೆ ಆಶೀರ್ವಾದ ಮಾಡಿದಂತಾಗುತ್ತದೆ. ಇಂದು ಯಾವ ಮಠಗಳು ಮತ್ತು ವಿದ್ಯಾ ಸಂಸ್ಥೆಗಳು ಎಲ್ಲ ವರ್ಗದವರಿಗೂ ವೆಚ್ಚಮಾಡದೆ ಒಂದು ಕೋಮಿನವರಿಗೆ ಮೀಸಲಾಗಿವೆ ಅಂಥವುಗಳಿಗೆ ಮುಟ್ಟುಗೋಲು ಹಾಕಲೇಬೇಕು. ಶ್ರೀ ಬಸವರಾಜ ಕಟ್ಟೀಮನಿಯವರ ಜರತಾರಿ ಜಗದ್ಗುರು ಎಂಬ ಪುಸ್ತಕವನ್ನು ಓದಿದರೆ ಮಠಾಧಿಪತಿಗಳ ಲೋಲುಪ್ತಿ, ಭೋಗವಿಲಾಸ ವಗೈರೆ ಗೊತ್ತಾಗುವುದು. ಇಷ್ಟು ಹೇಳಿ ಈ ಬಿಲ್ಲಿಗೆ ಬೆಂಬಲ ಕೊಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮಾಡಿರುವ ಟೀಕೆಗಳು ಈ ಮಸೂದಾಕಾನೂನಿಗೆ ಅಷ್ಟಾಗಿ ಸಂಬಂಧಪಡುವುದಿಲ್ಲ. ನಾನು ಅವುಗಳಿಗೆ ಹೆಚ್ಚು ಗಮನ ಕೊಡಲು ಸಾಧ್ಯವಿಲ್ಲ.

Sri C. M. ARUMUGAM.—I am raising a point of order, Sir. I submit that just now the Revenue Minister said that the discussion that has taken place here is not within the purview of the Bill. That means that what has been said so far is not relevant to the Bill. Mr. Deputy Speaker Sir, what has been said here, is deemed to have been said with your permission and indirectly the statement of the Hon'ble Minister has questioned the authority of the Speaker. I submit whether it is open to a Minister to make that sort of a remark to say that what was said on the floor of the House was not relevant. The Speaker is something like a Vigilance Officer and presides over the House. If he has not stopped any Member from speaking, it means that what he has said is quite relevant and the Speaker has permitted it.

Mr. DEPUTY SPEAKER.—I have fully followed the Hon'ble Member. What the Hon'ble Minister meant is that certain portions of the speeches are extraneous to the scope of the Bill. He means to say that certain portions cannot be said strictly to be within the scope of the Bill, neither *intra vires* nor *ultra vires* but extraneous. That is why I am unable to uphold the point of order.

† ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ಮಸೂದಾ ಕಾನೂನಿನಲ್ಲಿರತಕ್ಕ ಮುಖ್ಯಾಂಶಗಳ ಕಡೆಗೆ ಯಾರ್‍ಯಾರು ಸರಕಾರದ ಗಮನ ಸೆಳೆದಿದ್ದಾರೋ ಅವರು ಹೇಳಿರತಕ್ಕ ವಿಷಯಗಳಿಗೆ ಮಾತ್ರ ಉತ್ತರ ಕೊಡಲಿಚ್ಛಿಸುತ್ತೇನೆ. ಈಗ ಇಲ್ಲಿ ದೇವಸ್ಥಾನಗಳ ಸ್ವಾಧೀನದಲ್ಲಿರುವ ಜಮೀನುಗಳು ಹೆಚ್ಚಾಗಿ ಗೇಣಿದಾರರ ವಶದಲ್ಲಿವೆ. ಆ ಗೇಣಿದಾರರಿಗೆ ನ್ಯಾಯವಾದ ಹಕ್ಕು ಸಲ್ಲಬೇಕು. ಅವರು ಸಾಗುವಳಿ ಮಾಡುವ ಭೂಮಿ ಅವರಿಗೆ ಸೇರಬೇಕು, ಅದಕ್ಕೆ ಲೋಪ ಬಾರದಹಾಗೆ ನೋಡಿಕೊಳ್ಳಬೇಕು ಎಂದು ಸಲಹೆಮಾಡಿದ್ದಾರೆ. ಆ ವಿಷಯಗಳಿಗೆ ಲೋಪ ಬಾರದಹಾಗೆ ನೋಡಿಕೊಳ್ಳಲು ಈ ಕಾನೂನಿನಲ್ಲಿ ಯಾವ ಕಲಮುಗಳಿವೆ ಅವುಗಳಲ್ಲಿ ದೋಷವಿದ್ದರೆ ಸರಿಪಡಿಸಬೇಕಾದ್ದು ಅಗತ್ಯ ಎಂದು ತಿಳಿಸುವುದಕ್ಕೆ ನಾನು ಇಷ್ಟ ಪಡುತ್ತೇನೆ.

ಇನ್ನೊಂದು ವಿಚಾರ. ದೇವಸ್ಥಾನದ ಜಮೀನುಗಳನ್ನು ದೊಡ್ಡದೊಡ್ಡ ಭೂಮಾಲೀಕರು ವಶಪಡಿಸಿಕೊಂಡಿದ್ದಾರೆ, ಅದನ್ನು ತಪ್ಪಿಸಿ ಯಾರು ಬಡವರಾಗಿ ಗೇಣಿ ಮಾಡುತ್ತಿರುವರೋ ಅವರಿಗೆ ಸಲ್ಲುವಂತೆ ಮಾಡಬೇಕು, ದೊಡ್ಡದೊಡ್ಡ ಜಮೀನುದಾರರು ಸ್ವತಃ ಸಾಗುವಳಿ ಮಾಡದಿರುವಾಗ ಅವರಿಗೆ ಸಲ್ಲದಂತೆ ನೋಡಿಕೊಳ್ಳಬೇಕು ಎಂದು ಮಾನ್ಯ ಸದಸ್ಯರು ಸಲಹೆ ಮಾಡಿದ್ದಾರೆ. ಇದು ಕೆಲವು ಭಾಗಗಳಲ್ಲಿರುವ ದೇವಸ್ಥಾನಗಳಲ್ಲಿ ಆಗಿರುವುದು ನಿಜ. ನೂರಾರು ಎಕರೆ ಇರತಕ್ಕಂಥ ಪ್ರದೇಶದಲ್ಲಿ ದೊಡ್ಡ ದೊಡ್ಡವರು ಅವರ ಹೆಸರಿಗೆ ಅವರೇ ಗೇಣಿದಾರರಾಗಿ ಅದನ್ನು ಮಾಡಿಕೊಂಡು ಬೇರೆಯವರ ಮುಖಾಂತರ ಸಾಗುವಳಿ ಮಾಡಿಸುತ್ತಿದ್ದಾರೆ. ದಕ್ಷಿಣ ಕನ್ನಡ ಭಾಗಗಳಲ್ಲಿ ಮೂಲ ಗೇಣಿದಾರರ ಪಾತ್ರ ವಹಿಸಿದ್ದಾರೆ. ರೈತನ ಹತ್ತಿರ ಹೆಚ್ಚು ದವಸ ದುಡ್ಡನ್ನು ವಸೂಲ್ಮಾಡುವುದು ದೇವಸ್ಥಾನಕ್ಕೆ ಅಲ್ಪಸ್ವಲ್ಪ ಕೊಡುವುದು ಈರೀತಿ ಕೊಡುವವರು ಇದ್ದಾರೆ. ಅದನ್ನು ತಪ್ಪಿಸುವುದಕ್ಕೆ ತಕ್ಕ ಕಾರ್ಯಕ್ರಮವನ್ನು ಯೋಚನೆ ಮಾಡಬೇಕು ಎಂದು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಇದು ಅಗತ್ಯವೆಂದು ನಾನೂ ಕೂಡ ಭಾವಿಸುತ್ತೇನೆ. ಇದು ಯಾವರೀತಿ ಮಾಡಬೇಕು ಎನ್ನುವುದನ್ನು ಅನಂತರ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ದೇವಸ್ಥಾನಕ್ಕೆ ಸಲ್ಲಿಸಬೇಕಾದಂಥ ಅನ್ಯೂಯಿಟಿ ಕೊಡುವ ವಿಷಯದಲ್ಲಿ ಕೆಲವರು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ. ಆ ದೇವಸ್ಥಾನಗಳಿಗೆ ಅನ್ಯೂಯಿಟಿ ಕೊಡಬೇಕಾದ ಅಗತ್ಯವಿಲ್ಲ, ಅಲ್ಲಿ ಅನೇಕ ಅನ್ಯಾಯ ಪರಂಪರೆಗಳು ನಡೆಯುತ್ತವೆ. ಹಿಂದಿನಿಂದಲೂ ಬೇಕಾದಷ್ಟು ಪಂಗಡಗಳ ದೃಷ್ಟಿಯನ್ನಿಟ್ಟುಕೊಂಡು ಕೆಲವರನ್ನು ಇಟ್ಟುಕೊಳ್ಳುತ್ತಾರೆ, ಕೆಲವರನ್ನು ಬಿಡಿಸುತ್ತಾರೆ ಹೀಗೆಲ್ಲಾ ಕೆಲವು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಈಗತಾನೇ ಮಾತನಾಡಿದಂಥ ಶ್ರೀರನಾಳಿ ಚಂದ್ರಶೇಖರ್‌ರವರು ಕೆಲವು ಮಠಗಳನ್ನೂ ಕೂಡ ಸರ್ಕಾರದ ವಶಕ್ಕೆ ತೆಗೆದುಕೊಂಡು ಅಲ್ಲಿ ನಡೆಯುತ್ತಾ ಇರತಕ್ಕಂಥ ಅನ್ಯಾಯಗಳನ್ನು ತಪ್ಪಿಸುವುದಾದರೆ ನೀವು ಕೊಟ್ಟಂಥ ಅನ್ಯೂಯಿಟಿ ಹಣ ರಕ್ಷಣೆ ಆಗುತ್ತದೆ ಇಲ್ಲದೇ ಇದ್ದರೆ ಇಲ್ಲ ಎಂದು ತಿಳಿಸಿದರು. ಇದೆಲ್ಲಾ ಮಾನ್ಯ ಸಭೆಗೆ ಗೊತ್ತಿರುವ ಹಾಗೆ ಅನೇಕ ಕಡೆಗಳಲ್ಲಿ ಈರೀತಿ ನಡೆಯುತ್ತಾ ಇದೆ. ಇಲ್ಲ ಎಂದು ಹೇಳುವ ಹಾಗೆ ಇಲ್ಲ. ಕಾನೂನಿನ ಮುಖಾಂತರ ಅಲ್ಲಿ ಆಗತಕ್ಕಂಥಾ ಅನ್ಯಾಯಗಳನ್ನು ತಪ್ಪಿಸತಕ್ಕಂಥಾ ವಿಷಯ ಈವೊತ್ತು ಚರ್ಚೆ ಮಾಡುತ್ತಾ ಇಲ್ಲ. ಈವೊತ್ತು ಚರ್ಚೆ ಮಾಡತಕ್ಕಂಥಾದ್ದು ಭೂಮಿ ಯಾರಿಗೆ ಸಲ್ಲಬೇಕು ಎಂದು. ಈ ಸಂಸ್ಥೆಗಳು ಯಾವರೀತಿ ನಡೆಯಬೇಕು ಎನ್ನುವುದು ಮುಖ್ಯವಾದ ವಿಷಯ. ಹಳೇ ಮೈಸೂರು ರಾಜ್ಯದಲ್ಲಿ ಕಾನೂನು ಈಗಾಗಲೇ ಜಾರಿಯಲ್ಲಿದೆ. ಆದರೆ ಇದೇ ಭಾಗದಲ್ಲಿ ಹೈದ್ರಾಬಾದ್ ಪ್ರದೇಶದಲ್ಲಿ ಮತ್ತು ಬಾಂಬೆ ಪ್ರದೇಶದಿಂದ ಬಂದಿರತಕ್ಕಂಥ ಪ್ರದೇಶದಲ್ಲಿ ಇದು ಜಾರಿಯಲ್ಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಮದ್ರಾಸ್ ಪ್ರದೇಶದಿಂದ ಬಂದಿರತಕ್ಕ ಭಾಗದ ಇನಾಂ ಜಮೀನುಗಳಿಗೆ ಏನು ಪರಿಹಾರ ಸೂಚಿಸುತ್ತೀರಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದನ್ನೂ ಕೂಡ ಇದರೊಳಗೇನೇ ಸೇರಿಸಬೇಕಾದ ಅಗತ್ಯ ಇದೆ. ಏತಕ್ಕೆಂದರೆ ಅಲ್ಲಿಯೂ ಕೆಲವು ಭಾಗಗಳಲ್ಲಿ ಇವೆ. ಹೆಚ್ಚಾಗಿ ಮುಜರಾಯಿ ಸಂಸ್ಥೆಗೆ ಸೇರಿರತಕ್ಕಂಥ ಕೆಲವು ಇನ್ಸ್ಟಿಟ್ಯೂಷನ್ಸ್ ಏನು ಇವೆ ಅವುಗಳಿಗೆ ಸಂಬಂಧಪಟ್ಟ ಹಾಗೆ ಈ ಮಸೂದಾ ಕಾನೂನು ಇರುವುದು. ಅವುಗಳ ಸ್ವಾಧೀನದಲ್ಲಿರತಕ್ಕಂಥಾ ಭೂಮಿಯನ್ನೂ ಕೂಡ ಹಳೆಯ ಮೈಸೂರಿನಲ್ಲಿರತಕ್ಕಂಥ ಭಾಗಗಳಿಗೂ ಅನ್ವಯಿಸುವ ಹಾಗೆ ಕಾನೂನು ಮಾಡಬೇಕು. ಇದು ಎಷ್ಟರಮಟ್ಟಿಗೆ ಮೈಸೂರು ರಾಜ್ಯದಲ್ಲಿಯೂ ಎಲ್ಲಾ ಭಾಗಗಳಿಗೂ ಅನ್ವಯವಾಗುತ್ತದೆ ಎನ್ನುವುದನ್ನು ನೋಡಬೇಕು. ಇದರಲ್ಲಿ ಕುಂದುಕೊರತೆಗಳು ಏನು ಇವೆ ಎನ್ನುವುದನ್ನು ಯೋಚನೆ ಮಾಡುವ ಕಾಲವೂ ಬರಬಹುದು. ನನ್ನ ಅಭಿಪ್ರಾಯದಲ್ಲಿ ಇವುಗಳನ್ನೆಲ್ಲಾ ಸರಿಪಡಿಸಬೇಕಾದು

ಅಗತ್ಯ ಇದೆ ಎಂದು ಹೇಳುತ್ತೇನೆ. ಮಾನ್ಯ ಸದಸ್ಯರೂ ಕೂಡ ಇದರ ಬಗ್ಗೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಈ ದೃಷ್ಟಿಯಿಂದ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹಾಕಿದರೆ ಅದರಲ್ಲಿರುವ ದೋಷಗಳನ್ನು ತಿದ್ದುವುದಕ್ಕೆ ಅನುಕೂಲವಾಗುತ್ತದೆಂದು ನನ್ನ ಭಾವನೆ. ಇದರ ಬಗ್ಗೆ ಇನ್ನೂ ಹೆಚ್ಚು ಹೆಚ್ಚಾಗಿ ಸಲಹೆಗಳನ್ನು ಕೊಟ್ಟಿದ್ದಾರೆ. ಈಗ ತಂದಿರತಕ್ಕಂಥಾ ಕಾನೂನಿನ ಉದ್ದೇಶ ಸೂಕ್ತವಾಗಿರುವುದರಿಂದ ಅದಕ್ಕನುಗುಣವಾಗಿ ಸಲಹೆಗಳನ್ನು ಅಳವಡಿಸಬೇಕಾದರೆ ಮೇಲ್ಮನೆಯಲ್ಲಿ ಮತ್ತು ಈ ಮನೆಯಲ್ಲಿ ಎರಡೂ ಮನೆಯ ಸದಸ್ಯರನ್ನು ಕೂಡಿಸಿರತಕ್ಕಂಥ ಒಂದು ಜಂಟಿ ಸಮಿತಿಯನ್ನು ನೇಮಕ ಮಾಡುವುದು ಸೂಕ್ತವೆಂದು ನಾನು ಭಾವಿಸುತ್ತೇನೆ. ಈ ಮಸೂದಾ ಕಾನೂನನ್ನು ಈ ಸಭೆಯ ಮುಂದೆ ಇಟ್ಟಾಗ ಇದರ ಉದ್ದೇಶವೇನು ಇದರಲ್ಲಿರುವ ತೊಂದರೆಗಳೇನು ಎನ್ನುವುದನ್ನು ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಆದುದರಿಂದ ಇದರ ಬಗ್ಗೆ ಇನ್ನೂ ಸವಿಸ್ತಾರವಾಗಿ ನಾನು ಹೇಳಬೇಕಾದ್ದು ಅಗತ್ಯವಿಲ್ಲವೆಂದು ನಾನು ಭಾವಿಸುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಇದರಲ್ಲಿ ತಿದ್ದುಪಡಿಯಾದ ಮೇಲೆ ಹಳೇ ಮೈಸೂರು ಪ್ರದೇಶದಲ್ಲಿರತಕ್ಕಂಥ ಶಾಸನವನ್ನು ಹೊಸದಾಗಿ ದಕ್ಷಿಣ ಕನ್ನಡ, ಬಳ್ಳಾರಿ, ಕೊಡಗು ಈ ಜಿಲ್ಲೆಗಳಿಗೆ ಅನ್ವಯಿಸತಕ್ಕಂಥ ಶಾಸನ ಏಕರೂಪಕ್ಕೆ ತರುವಂತೆ ಯಾವ ರೀತಿ ಹೊಂದಾಣಿಕೆ ಮಾಡಲಾಗುತ್ತದೆ ಎಂದು ಹೇಳಿದ್ದರೆ ಚೆನ್ನಾಗಿತ್ತು.

Mr. DEPUTY SPEAKER.—How can he anticipate the deliberation of the Select Committee ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಕೊಡಗಿನಲ್ಲಿ ಕೆಲವು ಜಮೀನುಗಳು ಇವೆ. ಕೆಲವು ಕಡೆ ಇಂತಹ ಸಂಸ್ಥೆಗಳು ಇವೆ. ಕೆಲವು ಕಡೆ ಮೈನರ್ಸ್ ಜಮೀನುಗಳು ಇವೆ. ಕೆಲವು ಭಾಗದಲ್ಲಿ ಜಮ್ಮ ಜಮೀನುಗಳು ಇವೆ. ಮತ್ತು ಅದಕ್ಕೆ ಸಂಬಂಧಪಟ್ಟಂತೆ 5–6 ತರಹ ಬಗೆಯ ಭೂಮಿ ಕೊಡಗಿನಲ್ಲಿದೆ. ಅವುಗಳನ್ನೆಲ್ಲಾ ಅಬಾಲಿಷ್ ಮಾಡುವುದಕ್ಕೆ ಪ್ರತ್ಯೇಕವಾದ ಒಂದು ಕಾನೂನು ತರುವ ಸಂದರ್ಭ ಇದೆ. ಮತ್ತೆ ಸಂಡೂರಿನಲ್ಲಿ ಶಿವಾಯಿ ಜಮಾಯಿ ಭೂಮಿ ಇದೆ. ಅದನ್ನು ಯಾವರೀತಿ ಹೊಂದಾವಣಿಕೆ ಮಾಡಬೇಕು ಅಥವಾ ಅದನ್ನು ಹಾಗೆಯೇ ಗೇಣಿದಾರರಿಗೆ ಒಪ್ಪಿಸಬೇಕೇ ಎನ್ನುವುದೂ ಕೂಡ ಸರ್ಕಾರದ ಪರ್ಯಾಲೋಚನೆಯಲ್ಲಿದೆ. ಈಗ ಅಮೆಂಡ್‌ಮೆಂಟ್ ಇರತಕ್ಕಂಥಾದ್ದು ಸ್ಪಷ್ಟವಾಗಿದೆ. ಇದು ಜಾಯಿಂಟ್ ಸಲೆಕ್ಟ್ ಕಮಿಟಿಗೆ ಹೋಗಿ ಅಲ್ಲಿಂದ ಇದು ನಮ್ಮ ಹತ್ತಿರ ಬಂದ ಮೇಲೆ ಮುಂದೆ ಏನು ಮಾಡತಕ್ಕದ್ದು ಎನ್ನುವುದನ್ನು ಯೋಚನೆ ಮಾಡಬೇಕು. ಈಗ ಏನೂ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಇದು ಜಂಟಿ ಸಮಿತಿಗೆ ಹೋಗಬೇಕಾದ್ದು ಅವಶ್ಯಕ ಇರುವುದರಿಂದ ಇದರಲ್ಲಿರುವ ಎಲ್ಲಾ ಅಂಶಗಳಿಗೂ ಮತ್ತು ಮಾನ್ಯ ಸದಸ್ಯರು ಎತ್ತಿದ ಅಂಶಗಳಿಗೂ ಉತ್ತರ ಕೊಡಬೇಕಾದ ಅಗತ್ಯವಿಲ್ಲ ಎಂದು ಭಾವಿಸಿದ್ದೇನೆ. ಮುಖ್ಯವಾಗಿ ಮಾನ್ಯ ಸದಸ್ಯರು ಹೇಳತಕ್ಕಂಥ ಸಲಹೆಗಳನ್ನು ಪರಿಶೀಲನೆಗೆ ತೆಗೆದುಕೊಳ್ಳುವುದಕ್ಕೆ ಇದು ಜಂಟಿ ಸಮಿತಿಗೆ ಹೋದರೆ ಸಾಧ್ಯವಾಗುತ್ತದೆ. ಆದುದರಿಂದ ಮಾನ್ಯ ಸದಸ್ಯರುಗಳು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ನಾನು ಹೇಳುತ್ತೇನೆ.

Mr. DEPUTY SPEAKER.—The question is :

"That the Mysore (Bombay and Hyderabad Areas) Religious and Charitable Inams Abolition Bill, 1972" be taken into consideration."

The motion was adopted.

Motion to Refer to a Joint Select Committee

Sri N. HUTCHAMASTHY GOWDA (Minister for Revenue) : Sir, I move :

"That the Mysore (Bombay and Hyderabad Areas) Religious and Charitable Inams Abolition Bill, 1972, be referred to a Joint Select Committee consisting of a total number of 20 Members (15 from the Legislative Assembly and

(SRI N. HUTCHAMASTHY GOWDA)

5 from the Legislative Council) that the concurrence of the Legislative Council, be obtained therefor and that the following members of this House shall be members of the Joint Select Committee ;."

Sriyuths :

1	S. M. Yahya	9	N. G. Halappa
2	Smt. Addy Saldhana	10	D. B. Kalamankar
3	Jayaprakash Shetty	11	C. R. Saifuddin
4	H. Linga Reddy	12	Kagodu Thimmappa
5	P. M. Bangi	13	V. N. Patil
6	Subhash Asture	14	Sharanappa
7	Smt. Damayanthi Boregowda	15	P. B. Patil
8	M. Mallappa		

MR. DEPUTY SPEAKER.—The question is:

"That the Mysore (Bombay and Hyderabad Areas) Religious and Charitable Inams Abolition Bill, 1972, be referred to a Joint Select Committee consisting of a total number of 20 Members (15 from the Legislative Assembly and 5 from the Legislative Council), that the concurrence of the Legislative Council be obtained therefor and that the following members of this House shall be members of the Joint Select Committee" :

Sriyuths :

1	S. M. Yahya		
2	Smt. Addy Saldhana	9	N. G. Halappa
3	Jayapraksh Shetty	10	D. B. Kalmankar
4	H. Linga Reddy	11	C. R. Saifuddin
5	P. M. Bangi	12	Kagodu Thimmappa
6	Subhash Asture	13	V. N. Patil
7	Smt. Damayanthi Boregowda	14	Sharanappa
8	M. Mallappa	15	P. B. Patil

The motion was adopted.

MR. DEPUTY SPEAKER.—Under Sub-Rule (2) of Rule 240 of the Rules of Procedure and Conduct of Business, I nominate the Hon'ble Minister for Revenue and the Hon'ble Minister for Law to be members of the Joint Select Committee.

The Committee will elect its own Chairman.

Indian Penal Code (Mysore Amendment) Bill, 1972.

Motion to Consider

Sri H. M. CHANNABASAPPA (Minister for Public Works).—Sir, I beg to move :

"That the Indian Penal Code (Mysore Amendment) Bill, 1972 be taken into consideration :"

Mr. DEPUTY SPEAKER.—Motion moved :

"That the Indian Penal Code (Mysore Amendment) Bill, 1972 be taken into consideration."

† Sri H. M. CHANNABASAPPA.—Sir, in moving this Bill I feel that there is not much need for me to elaborate it. I would only submit that the intention of this Bill is very simple and the object is also laudable. The object of the Bill is to amend Section 103 of the Indian Penal Code so far as it applies to Mysore State. Section 103 reads thus :

"The right of private defence of property extends, under the restrictions mentioned in Section 99, to the voluntary causing of death or of any other harm to the wrong doer, if the offence, the committing of which, or the attempting to commit which, occasions the exercise of the right, be an offence of any of the descriptions hereinafter enumerated, namely :—

First—Robbery ;

Secondly—House—breaking by night ;

Thirdly—Mischief by fire committed on any building, tent or vessel, which building, tent or vessel is used as a human dwelling, or as a place for the custody of property ;

Fourthly—Theft, mischief of house trespass, under such circumstances as may reasonably cause apprehension that death or grievous hurt will be the consequence, if such right of private defence is not exercised."

The object of the amendment is to make this applicable to places of worship and also to properties belonging to the State. With the agitational approaches that are developing fast, members will agree with me that there is need to protect public properties also and to treat them as worthwhile and valued as private property. With that intention we have proposed to bring a small amendment and this amendment intends to introduce the words "as a place of worship or" in the list of mischiefs that are noted in the third item in Section 103.

(SRI H. M. CHANNABASAPPA)

Secondly, it proposes to introduce the following clause after the clause Fourthly :—

> " Fifthly–Mischief by fire or any explosive substance committed on any property used or intended to be used for the purpose of Government or any local authority, statutory body or company owned or controlled by Government, or railway or on any vehicle used or adapted to be used for the carriage of passengers for hire or reward."

This is the last part of Section 103. It is considered necessary to amend Section 103 of the Indian Penal Code in its application to Mysore State so as to enlarge the scope of the right of private defence of property to cover the cases where mischief by fire or explosive substance is committed or attempted to be committed in respect of the aforesaid property, railway or vehicle.

This is a simple measure which, I am sure, will be accepted by the House because it intends to give a larger share of safety to public properties and also to places of worship. With these few words I commend this Bill for the consideration of this House.

†ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಭಾಪತಿಗಳೇ, ಈ ದಿನ ನಮ್ಮ ಮುಂದೆ ಇಟ್ಟಿರತಕ್ಕ ಮಸೂದೆಯನ್ನು ನಾನು ಅನಿವಾರ್ಯವಾಗಿ ವಿರೋಧಿಸಬೇಕಾಗಿದೆ. ವಿರೋಧಿಸತಕ್ಕ ಉದ್ದೇಶವಾದರೂ ಇಷ್ಟೇ, ಇಂಡಿಯನ್ ಪೀನಲ್ ಕೋಡಿನ ಅನೇಕ ಕಾಯದೆಗಳು ಸದುದ್ದೇಶದಿಂದ ರಾಜ್ಯದ ಕ್ಷೇಮದ ಬಗ್ಗೆ, ಜನಗಳ ಹಿತದ ಬಗ್ಗೆ ಇದ್ದರೂ ಕೂಡ ಅನೇಕ ಸಂದರ್ಭಗಳಲ್ಲಿ ಪೋಲೀಸಿನವರು ಸತ್ಯಾಗ್ರಹ ಮಾಡುವ ಸಮಯದಲ್ಲಿ ಅಥವಾ ತಮ್ಮ ನ್ಯಾಯವಾದ ಹಕ್ಕು ಬಾಧ್ಯತೆಗಳನ್ನು ಪಡೆದುಕೊಳ್ಳುವುದಕ್ಕೆ ಹೋರಾಡತಕ್ಕ ಸಮಯದಲ್ಲಿ, ಇಂಥ ನಿಬಂಧನೆಗಳನ್ನು ಉಪಯೋಗಿಸಿಕೊಂಡು ಅದರಲ್ಲಿ ಹೋರಾಟಗಾರರನ್ನು ಕೂಡ ಸಿಕ್ಕಿಹಾಕುತ್ತಾರೆ. ಅದಕ್ಕೆ ನಾನು ವಿರೋಧ ಮಾಡಬೇಕಾಗಿದೆ. ಈಗ ನಮ್ಮ ಮುಂದೆ ಇರತಕ್ಕದ್ದರಲ್ಲಿ ನಾನು ಒಂದು ತಿದ್ದುಪಡಿಯನ್ನು ಕೊಟ್ಟಿದ್ದೇನೆ. ಆ ತಿದ್ದುಪಡಿ ಇರುವ ರೀತಿಯಲ್ಲಿಯೇ ಮಾನ್ಯ ಮಂತ್ರಿಗಳು ಕೂಡ ತಮ್ಮ ತಿದ್ದುಪಡಿಯನ್ನು ಹೇಳಿರುವುದರಿಂದ ಅದರ ಆವಶ್ಯಕತೆ ಇದೆಯೇ, ಸೇರಿಸಿಕೊಳ್ಳಬೇಕೇ, ಬಿಡಬೇಕೆ ಎನ್ನುವುದರ ಬಗ್ಗೆ ಮಂತ್ರಿಗಳೇ ಯೋಚನೆ ಮಾಡಲಿ. ಸರ್ಕಾರದವರು ಏನು ತಿದ್ದುಪಡಿ ತೆಗೆದುಕೊಂಡು ಬಂದಿದ್ದಾರೆ ಅದರ ಬಗ್ಗೆ ತತ್ವಶಃ ವಿರೋಧ ಮಾಡಿದರೂ ಕೂಡ ಅದರ ಆವಶ್ಯಕತೆ ಇದೆ ಎನ್ನುವುದನ್ನು ಹೇಳಬೇಕಾಗುತ್ತದೆ. ಆದರೆ ಅದನ್ನು ದುರುಪಯೋಗ ಮಾಡುವುದಕ್ಕೆ ಖಂಡಿತ ಅವಕಾಶ ಕೊಡಬಾರದು ಎಂದು ಮಾತ್ರ ಒತ್ತಿ ಹೇಳುತ್ತೇನೆ.

5–00 P. M.

ಪೋಲೀಸರ ಕೈಗೆ ಅಧಿಕಾರ ಕೊಟ್ಟರೆ, ಹುಚ್ಚನ ಕೈಗೆ ದೊಣ್ಣೆ ಕೊಟ್ಟ ಹಾಗೆ. ಇಂಥಾದ್ದನ್ನು ಸಾರ್ವಜನಿಕರು ಪ್ರತಿಭಟನೆ ಮಾಡಿದರೆ, ಖೂನಿ ಮಾಡುವುದಕ್ಕೆ ಬಂದರು ಎಂದು ನೆಪ ಹಾಕಿ ಅನೇಕ ತಿಂಗಳ ಕಾಲ ಕೋರ್ಟಿಗೆ ಅಲೆಸುತ್ತಾರೆ. ನಾವು ಸತ್ಯಾಗ್ರಹ ಅಥವಾ ಅಜಿಟೇಷನ್ ಮಾಡಿದರೆ ವರ್ಷಾನುಗಟ್ಟಲೆ ಆದರೂ ಕೂಡ ಕೋರ್ಟಿಗೆ ಅಲೆಯುವ ಪ್ರಸಂಗ ಬರುತ್ತದೆ. ತಿಳಿದಂಥವರು ಯಾರು ಕೊಳ್ಳೆ ಹೊಡೆಯುವುದಕ್ಕೆ ಹೋಗುವುದಿಲ್ಲ, ಲೂಟಿ ಮಾಡುವುದಕ್ಕೆ ಹೋಗುವುದಿಲ್ಲ. ಅಂಥವರ ಮೇಲೆ ಕಾಯಿದೆ ಹೊರಿಸಿ ಸ್ಟೇಷನ್‌ಗೆ ಕರೆಸಿಕೊಳ್ಳುತ್ತಾರೆ. ಆದ್ದರಿಂದ ಯಾವ ಕಾರಣಕ್ಕಾಗಿ ಈ ಕಾನೂನನ್ನು ಮಾಡಿದೆಯೋ ಅಂಥದ್ದಕ್ಕೆ ಉಪಯೋಗ ಮಾಡಬೇಕು. ಅದನ್ನು ಬಿಟ್ಟು ಪೋಲೀಸಿನವರು ಎಲ್ಲರ ಮೇಲೆ ಇದನ್ನು ಪ್ರಯೋಗ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಸ್ಟೂಡೆಂಟ್ಸ್ ಟ್ರಬಲ್, ಕಾರ್ಮಿಕರ ಟ್ರಬಲ್ ಮತ್ತು ಯಾವುದಾದರೂ ಒಂದು ಗಲಾಟೆಯ ಕಾರಣಕ್ಕಾಗಿಂದಾಗ್ಗೆ ಇಲ್ಲಿ ಪ್ಲೇರ್ ಅಪ್

ಆಗುವ ಹಾಗೆ ಎಲ್ಲೂ ಆಗುವುದಿಲ್ಲ. ಇದಕ್ಕೆ ಇಂಡಿಯನ್ ಪೀನಲ್ ಕೋಡ್ ಉಪಯೋಗಿಸುತ್ತಾರೆ. ಅಜಿಟೇಷನ್ ಮಾಡುವವರಿಗೆ ಬೇರೆ, ದರೋಡೆ ಮಾಡುವವರಿಗೆ ಬೇರೆ, ಕಾರಿಗೆ ಬೆಂಕಿ ಹಚ್ಚುವವರು ಪ್ರಯಾಣಿಕರಿಗೆ ಕಲ್ಲು ಎಸೆಯುತ್ತಾರೆ, ದೇಶದ ಆಸ್ತಿಪಾಸ್ತಿಗಳನ್ನು ನಾಶ ಮಾಡುವುದರ ಜೊತೆಗೆ ನಾಗರೀಕರಿಗೆ ತೊಂದರೆ ಮಾಡುತ್ತಾರೆ ಇವರಿಗೆ ಬೇರೆ ಕಾನೂನನ್ನು ಉಪಯೋಗಿಸುತ್ತಾರೆ. ನನಗೆ ತಿಳಿದ ಹಾಗೆ ಸ್ಟೂಡೆಂಟ್ಸ್ ಸ್ಟ್ರೈಕ್ ಆದಾಗ ಸೆಂಟ್ರಲ್ ಕಾಲೇಜು ಕಾಂಪೌಂಡ್ ಇಟ್ಟಿಗೆ ಕಿತ್ತು ಹೊಡೆಯುವುದಕ್ಕೆ ಶುರು ಮಾಡಿದರು. ಇಡೀ ಬೆಂಗಳೂರಿನಲ್ಲಿ ಬೀದಿ ದೀಪದ ಬಲ್ಬುಗಳನ್ನು, ಸುಮಾರು 50–60ಸಾವಿರ ರೂಪಾಯಿಗಳ ಬಲ್ಬುಗಳನ್ನು ಹೊಡೆದು ಹಾಕಿದರು. ಕಾರ್ಪೊರೇಷನ್ ನವರು ಈ ನಷ್ಟವನ್ನು ತುಂಬಿಸುವುದಕ್ಕಾಗುವುದಿಲ್ಲ. ಇವರು ಮಾಡುವ ತಪ್ಪಿಗೆ ಅನೇಕ ತಿಂಗಳ ಕಾಲ ಸಾವಿರಾರು ಜನ ಕತ್ತಲಲ್ಲಿ ಓಡಾಡಬೇಕಾಗುತ್ತದೆ. ಯಾರ ಮೇಲೆ ಈ ಕಾನೂನನ್ನು ಉಪಯೋಗಿಸಬೇಕು ಅವರ ಮೇಲೆ ಉಪಯೋಗಿಸದೆ, ಅಜಿಟೇಷನ್ ಮಾಡುವವರನ್ನು ತುಳಿಯಬೇಕು ಎನ್ನುವ ಉದ್ದೇಶದಿಂದ ಈ ಕಾನೂನನ್ನು ಉಪಯೋಗಿಸುವುದು ಖಂಡನೀಯ. ದೇಶದ ಆಸ್ತಿಯನ್ನು ಹಾಳು ಮಾಡುವವರಿಗೆ ಈ ಕಾಯಿದೆ ಉಪಯೋಗಿಸಿದರೆ ತಪ್ಪು ಇಲ್ಲ. ನಿರಪರಾಧಿಯಾದವರ ಮೇಲೆ ಉಪಯೋಗಿಸಿದ್ದಾರೆ. ನಮ್ಮ ಮೇಲೆ 10-15 ಕೇಸುಗಳನ್ನು ಹಾಕಿದ್ದರು, ಆದರೆ ಒಂದು ಕೇಸೂ ನಿಲ್ಲಲಿಲ್ಲ. ಇದರಿಂದ ಸುಳ್ಳು ಕೇಸು ಹಾಕುವುದಕ್ಕೆ ಅವಕಾಶವಾಗುತ್ತದೆ. ಯಾವ ರೀತಿ ನಿರಪರಾಧಿಗಳ ಮೇಲೆ ಈ ಕಾಯಿದೆ ಉಪಯೋಗಿಸುವುದನ್ನು ತಪ್ಪಿಸಬೇಕು ಎಂಬುದನ್ನು ಯೋಚನೆ ಮಾಡಬೇಕು. ಇದರ ಬಗ್ಗೆ ಇಲ್ಲಿ ನಾನು ಎರಡು ಅಮೆಂಡ್‌ಮೆಂಟ್‌ಗಳನ್ನು ತಂದಿದ್ದೇನೆ. ಈ ತಿದ್ದುಪಡಿಗಳನ್ನು ಸಭೆಯವರು ಒಪ್ಪಬೇಕೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರ ಏನು ಇಂಡಿಯನ್ ಪೀನಲ್ ಕೋಡಿನ 103ನೇ ಸೆಕ್ಷನ್ ತಿದ್ದುಪಡಿ ತಂದಿದ್ದಾರೆ, ಅದನ್ನು ಸಂಪೂರ್ಣವಾಗಿ ವಿರೋಧಿಸಿ, ಎರಡು ಮಾತುಗಳನ್ನು ಹೇಳಲಿಕ್ಕೆ ಅಪೇಕ್ಷಿಪಡುತ್ತೇನೆ. ಇಂಡಿಯನ್ ಪೀನಲ್ ಕೋಡಿನಲ್ಲಿರತಕ್ಕ ಅನೇಕ ಸೆಕ್ಷನ್‌ಗಳು ಸುಸಂಸ್ಕೃತ ಸಮಾಜದಲ್ಲಿ ನಾಗರೀಕ ಸರ್ಕಾರ ಇಟ್ಟುಕೊಳ್ಳತಕ್ಕ ಸೆಕ್ಷನ್‌ಗಳಲ್ಲ. ನಾವು ಮಹಾತ್ಮಗಾಂಧೀಜಿಯವರನ್ನು ಹೆಸರಿಸುತ್ತೇವೆ ; ಅವರ ನೆನಪನ್ನು ಮಾಡುತ್ತೇವೆ ; ಅಹಿಂಸಾತ್ಮಕವಾದ ಹೋರಾಟದಿಂದ ಸ್ವಾತಂತ್ರ್ಯವನ್ನು ನಾವು ಗಳಿಸಿದೆವು. ಯಾವುದೇ ಸುಸಂಸ್ಕೃತವಾದ ಸಮಾಜದಲ್ಲಿ, ಶಕ್ತಿ ಮೂಲಕ, ಜನರ ಕ್ರಾಂತಿ ಶಕ್ತಿಯನ್ನು ದಮನ ಮಾಡತಕ್ಕಂಥ ಕಾರ್ಯ ಯಶಸ್ವಿಯಾದುದು ಇಲ್ಲ. ಇವತ್ತು ಅನ್ಯಾಯಗಳು ಎಲ್ಲಾ ಕಡೆಗಳಲ್ಲೂ ನಡೆಯುತ್ತಾ ಇವೆ. ವ್ಯಕ್ತಿ ಮತ್ತು ಶಕ್ತಿಗಳ ಕೈಯಿಂದ ಜನಸಾಮಾನ್ಯರಿಗೆ ಮತ್ತು ಮುಗ್ಧರಿಗೆ ಅನ್ಯಾಯವಾಗಿದೆ, ಆಗತಕ್ಕಂಥ ಸಂಭವವೂ ಕೂಡ ಇಲ್ಲದೆ ಇಲ್ಲ. ಇಂಥ ಸಂದರ್ಭದಲ್ಲಿ ಪ್ರಜಾಪ್ರಭುತ್ವವನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳತಕ್ಕ ನಾವು ಅನ್ಯಾಯದ ವಿರುದ್ಧ ಪ್ರತಿಭಟನೆ ಮಾಡತಕ್ಕ ಮಾರ್ಗ ಯಾವುದು ? ನ್ಯಾಯದ ವಿರುದ್ಧ ವ್ಯಕ್ತಿಯಾಗಲಿ, ಶಕ್ತಿಯಾಗಲಿ ಅನ್ಯಾಯವಾಗಿದ್ದರೆ, ಅಂಥ ಅನ್ಯಾಯಗಳ ವಿರುದ್ಧ ಪ್ರತಿಭಟನೆ ಮಾಡಲಿಕ್ಕೆ ಇರತಕ್ಕ ಎರಡು ಮಾರ್ಗಗಳನ್ನು ಮಹಾತ್ಮ ಗಾಂಧೀಜಿಯವರು ಜಗತ್ತಿಗೆ ಕೊಟ್ಟಿದ್ದಾರೆ. ಒಂದು ಅತ್ಯಂತ ಸುಸಂಸ್ಕೃತವಾದಂಥ ಸತ್ಯಾಗ್ರಹ ಮತ್ತು ಕಾನೂನು ಭಂಗ ಚಳುವಳಿ. ಬಹುಶಃ ಮಾನವ ಕೋಟಿಯ ಇತಿಹಾಸದಲ್ಲಿ ಇದಕ್ಕಿಂತಲೂ ಸುಸಂಸ್ಕೃತವಾದ ಮಾರ್ಗವನ್ನು ಕಂಡುಹಿಡಿದು ಅದನ್ನು ಅನುಸರಿಸಿ ಅದಕ್ಕೆ ಜೀವಕಳೆಯನ್ನು ಕೊಟ್ಟಂಥ ಖ್ಯಾತಿ ಪೂಜ್ಯ ಮಹಾತ್ಮ ಗಾಂಧಿಯವರನ್ನು ಬಿಟ್ಟರೆ ಜಗತ್ತಿನ ಇತಿಹಾಸದಲ್ಲಿ ಇನ್ನು ಯಾರಿಗೂ ಬಹುಶಃ ಸಲ್ಲುವುದಿಲ್ಲ. ಅವರು ನುಡಿದು, ನಡೆದು ತೋರಿಸಿದಂಥ ದಾರಿ ಅದು. ಇಂಥಹ ಮಾರ್ಗವನ್ನು ಜೀವಂತವಾಗಿ ಇಟ್ಟಂಥ ನಮ್ಮ ದಿವಂಗತ ರಾಮಮೋಹನ ಲೋಹಿಯಾ ಅಂಥವರಿಗೆ 103ನೇ ಸೆಕ್ಷನ್ ಹಾಕಿ ಸೆರೆವಾಸಕ್ಕೆ ಕಳುಹಿಸಿದ್ದು ನಮಗೆ ನೆನಪು ಇದೆ. ಯಾರು ಅಹಿಂಸಾತ್ಮಕ ಹೋರಾಟವನ್ನು ನಡೆಸುತ್ತಾರೋ, ಯಾರು ಅನ್ಯಾಯದ ವಿರುದ್ಧ ಹೋರಾಟ ಮಾಡುತ್ತಾರೋ ಅಂಥವರ ಮೇಲೆ ಈ ಕಾಯಿದೆಯನ್ನು ಉಪಯೋಗಿಸಿ ದಸ್ತಗಿರಿ ಮಾಡಿ ಜೈಲಿಗೆ ಕಳುಹಿಸಿದ್ದನ್ನು ಕಂಡಿದ್ದೇವೆ. ಪಂಡಿತ ಜವಾಹರಲಾಲ್ ನೆಹರೂ ಅವರ ಕಾಲದಲ್ಲಿ, ಸ್ವಾತಂತ್ರ್ಯ ಬಂದನಂತರ ಲೋಹಿಯಾ ಅವರನ್ನು, ಮತ್ತು ಸೋಷಿಯಲಿಸ್ಟ್ ಪಕ್ಷದ ಅನೇಕ ಸದಸ್ಯರನ್ನು ಇದೇ ಸೆಕ್ಷನ್ ಮೇಲೆ ಜೈಲಿಗೆ ಹಾಕಿದ್ದು, ಸೆರೆ ವಾಸವನ್ನು ಅನುಭವಿಸಿ ಬಂದವರು ಅನೇಕರು ಇದ್ದೇವೆ. ಆದ್ದರಿಂದ ಮೊದಲೇ ಅವರು ಅಧಿಕಾರದ ಅಮಲಿನಲ್ಲಿ ಓಲಾಡುತ್ತಿರತಕ್ಕವರು ಅದರ ಜೊತೆಯಲ್ಲಿ ಈ ಅಸ್ತ್ರವನ್ನು ಕೊಟ್ಟರೆ ಮುಗಿದೇಹೋಯಿತು. ಈ ಕಾಂಗ್ರೆಸ್ ಸರ್ಕಾರ ಕಳೆದ 25 ವರ್ಷಗಳಿಂದ ಅಧಿಕಾರವನ್ನು ಹೊಂದಿ, ಈ ಅಸ್ತ್ರವನ್ನು ಇಟ್ಟುಕೊಂಡು ರಾಜಕೀಯ ವಿರೋಧಿಗಳನ್ನು ಮತ್ತು ಅಹಿಂಸಾತ್ಮಕ ಹೋರಾಟ ನಡೆಸತಕ್ಕ ವಿದ್ಯಾರ್ಥಿಗಳು, ಯುವಜನರ ಕ್ರಾಂತಿ ಶಕ್ತಿಯನ್ನು,

(ಶ್ರೀ ಕೋಣಂದೂರು ಲಿಂಗಪ್ಪ)

ಪ್ರತಿಭಟನಾ ಶಕ್ತಿಯನ್ನು ದಮನ ಮಾಡುವುದಕ್ಕೆ ಸಾಕಷ್ಟು ಸಾರಿ ಈ ಅಸ್ತ್ರವನ್ನು ಉಪಯೋಗಿಸಿದ್ದಾರೆ. ಈಗ ಇರತಕ್ಕ ಸೆಕ್ಷನ್‌ನಿಂದ ವಿಧ್ವಂಸಕ ಕೃತ್ಯಗಳನ್ನು ದಮನ ಮಾಡಲಿಕ್ಕೆ ಸಾಕಷ್ಟು ಅವಕಾಶಗಳು ಇವೆ. Misch ef by fire committed on any building, tent or vessel which building, tent or vessel is used as a human dwelling or as a place for the custody of property ; ಎಂದು ಹೇಳಿದ್ದೀರಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವೆಲ್ಲವೂ ಕೂಡ ಪ್ರೈವೇಟ್ ಪಾರ್ಟಿಗೆ ಅಪ್ಲೈ ಆಗುತ್ತದೆ. They are all for defence of private property.

ಶ್ರೀ ಕೋಣಂದೂರು ಲಿಂಗಪ್ಪ.—ಇಂಥ ಡಿಫೆನ್ಸ್ ಆಫ್ ಪ್ರೈವೇಟ್ ಪ್ರಾಪರ್ಟಿ ಎನ್ನುವ ಹೆಸರಿನಲ್ಲಿ ಬೇರೆ ಕಡೆ ವಿದ್ಯಾರ್ಥಿಗಳು ಚಳುವಳಿ ಮಾಡಿ ಕುಲಪತಿಗಳನ್ನು ಸಚಿವರನ್ನು ಅಥವಾ ಸಂಬಂಧಪಟ್ಟವರನ್ನು ಕಾಣಲಿಕ್ಕೆ ಹೋದಾಗ ಅನೇಕ ಸಾರಿ ನಾವು ಏಟು ತಿಂದಿದ್ದೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—I would like to correct the hon. member. ಇದರ ಉದ್ದೇಶ, ಸತ್ಯಾಗ್ರಹಗಳು, ಮತ್ತು ಇದರ ಚಳುವಳಿಗಳನ್ನು ಧಮನ ಮಾಡತಕ್ಕದ್ದು ಅಲ್ಲ. ಮಿಸ್‌ಚೀಫ್ ಬೈ ಫೈರ್ ಆರ್ ಎಕ್ಸ್‌ಪ್ಲೋಸೀವ್ಸ್, ಎಂದರೆ ಬೆಂಕಿ ಹಾಕತಕ್ಕದ್ದನ್ನು ಅಥವಾ ಎಕ್ಸ್‌ಪ್ಲೋಸೀವ್ಸ್ ಹಾಕತಕ್ಕದ್ದನ್ನು ತಡೆಗಟ್ಟುವುದು ಮತ್ತು ಈ ರೀತಿಯಲ್ಲಿ ಸಾರ್ವಜನಿಕ ಸ್ವತ್ತುಗಳನ್ನು ಹಾನಿಮಾಡತಕ್ಕ ವಿಧ್ವಂಸಕ ಕಾರ್ಯಕ್ರಮಗಳನ್ನು ಡಿಫೆಂಡ್ ಮಾಡಿಕೊಳ್ಳಲಿಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಈ ಕಾನೂನು ಉಪಯೋಗವಾಗಬೇಕೇ ವಿನಹ, ತಾವು ಹೇಳುವ ರೀತಿಯಲ್ಲಿ ಪೊಲಿಟಿಕಲ್ ಡೆಮಾನ್‌ಸ್ಟ್ರೇಷನ್ ಮಾಡತಕ್ಕವರಮೇಲೆ ಉಪಯೋಗ ಮಾಡಬೇಕು ಎನ್ನುವ ಉದ್ದೇಶ ಅಲ್ಲ, ಅದೂ ಮೊದಲೂ ಇಲ್ಲ, ಈಗಲೂ ಇಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಸರ್ಕಾರಿ ಕಟ್ಟಡಗಳನ್ನು ರಕ್ಷಣೆ ಮಾಡಬಹುದು ಎಂದು ಏನು ಕಾಯಿದೆಯನ್ನು ಈಗ ತಂದ್ದೀರಿ. ಇದನ್ನು ಅಹಿಂಸಾತ್ಮಕ ಹೋರಾಟ ಮಾಡತಕ್ಕವರ ಮೇಲೆ ತಿರುಗಿಸುತ್ತೀರಿ. ಇವುಗಳನ್ನು ರಕ್ಷಣೆ ಮಾಡಬೇಕು ಎನ್ನತಕ್ಕ ಮುಂದಾಲೋಚನೆ ಅಥವ ದುರಾಲೋಚನೆ ನಿಮಗೆ ಏತಕ್ಕೆ ಬಂತು ? ನಮ್ಮ ಜನರ ಸುಸಂಸ್ಕೃತ ನಡೆವಳಿಕೆ ಬಗ್ಗೆ ಏಕೆ ಅವಿಶ್ವಾಸ ಬಂದಿದೆ ? ಎಲ್ಲಾ ಯುವಜನ ಚಳುವಳಿ, ಕನ್ನಡ ಚಳುವಳಿ ಕಾರ್ಮಿಕ ಚಳುವಳಿ ಅಹಿಂಸಾತ್ಮಕವಾಗಿ ನಡೆದಿದೆ. ವಿಧ್ವಂಸಕ ಕಾರ್ಯಗಳನ್ನು ನಡೆಸುವುದನ್ನು ಹತ್ತಿಕ್ಕುವುದರಲ್ಲಿ ತಾವು ಮೊದಲನೆಯವರು ಈಗ ತಾವು ಮಾಡುತ್ತಿರುವುದನ್ನು ನೋಡಿದರೆ ವಿಧ್ವಂಸಕ ಕಾರ್ಯಗಳು ನಡೆಯಲಿಕ್ಕೆ ಪ್ರಚೋದನೆ ಕೊಡಲಿಕ್ಕೆ ಈ ಕಾನೂನನ್ನು ತರುತ್ತಿದ್ದೀರಿ ಎಂದು ಭಾಸವಾಗುತ್ತದೆ. ಇದು ಯಾರಿಗೂ ಹೊಳೆದಿರಲಿಲ್ಲ. ಈ ಒಂದು ಕಲ್ಪನೆ ಅಥವ ಮುಂದಿನ ಒಂದು ಅಪಾಯದ ಕಲ್ಪನೆ ತಾವು ಮಾಡಿಕೊಂಡಿದ್ದೀರಿ. ಇಂಥ ಕಲ್ಪನೆ ಮಾಡಿಕೊಂಡಿರುವುದು ಸಾಧುವಾದದ್ದು ಅಲ್ಲ ಮತ್ತು ಸರಿಯಾದುದು ಅಲ್ಲ. ಈ ಕಾಯಿದೆಗೆ ಏನು ತಿದ್ದುಪಡಿಯನ್ನು ತಂದಿದ್ದೀರಿ ಇದರಿಂದ ನಮ್ಮ ರಾಜ್ಯದ ಯುವಜನರ, ವಿಧ್ಯಾರ್ಥಿಗಳ ಮತ್ತು ಕಾರ್ಮಿಕರ ಪ್ರತಿಭಟನೆಯ ಶಕ್ತಿಯನ್ನು ದಮನಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ ಎಂದು ಹೇಳಿ ಇದನ್ನು ಸಂಪುರ್ಣವಾಗಿ ವಿರೋಧಿಸುತ್ತೇನೆ.

† ಶ್ರೀ ಬಿ. ವಿ. ಕಕ್ಕಿಲಾಯ.—ಸನ್ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಕೋಣಂದೂರು ಲಿಂಗಪನವರ ಹಾಗೆ ನಾನೂ ಕೂಡ ಈ ತಿದ್ದುಪಡಿ ಮಸೂದೆಯನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಆತ್ಮ ರಕ್ಷಣೆಗೋಸ್ಕರ, ಖಾಸಗಿ ಆಸ್ತಿ ರಕ್ಷಣೆಗೋಸ್ಕರ ಪ್ರತಿಭಟನೆ ಮಾಡುವಾಗ ಜೀವ ಹಾನಿ ಆದರೂ ಕೂಡ ಆ ಜೀವ ಹಾನಿ ಮಾಡಿದವರಿಗೆ ಶಿಕ್ಷೆ ಆಗುವುದಿಲ್ಲ. ರಕ್ಷಣೆ ಸಿಕ್ಕುತ್ತದೆ ಎನ್ನುವುದು ಈ ಮೂಲ ಶಾಸನದಲ್ಲಿರುವ ಕಾಲಮ್ಮಿನ ಉದ್ದೇಶ ಎಂದು ನಾನು ತಿಳಿದುಕೊಂಡಿದ್ದೇನೆ. ಸಾರ್ವಜನಿಕರ ಸ್ವತ್ತುಗಳ ರಕ್ಷಣೆಗೋಸ್ಕರ ಪೋಲೀಸ್ ಅಧಿಕಾರಿಗಳು ಗೋಲಿಬಾರ್ ಮಾಡಿದರೆ ಅಥವಾ ಯಾವುದೇ ರೀತಿಯಲ್ಲಿ ರಕ್ಷಣೆ ಮಾಡಲಿಕ್ಕೆ ಹೋದಾಗ ಯಾರಿಗಾದರೂ ಜೀವ ಹಾನಿ ಆದರೆ ಅದನ್ನು ಪ್ರಶ್ನಿಸಬಾರದು, ಅದಕ್ಕೂ ಕೂಡ ಅನ್ವಯಿಸಬೇಕು ಎನ್ನುವ ಉದ್ದೇಶದಿಂದ ಈ ತಿದ್ದುಪಡಿ ತಂದಿದ್ದೇವೆ ಎನ್ನುತ್ತಾರೆ. ಸಾರ್ವಜನಿಕರ ಸ್ವತ್ತನ್ನು ರಕ್ಷಣೆ ಮಾಡುವುದು ಅವಶ್ಯಕವಿದೆ. ಅನುಮಾನವಿಲ್ಲ. ವ್ಯಕ್ತಿಗಳ ಸ್ವತ್ತನ್ನು ರಕ್ಷಣೆ ಮಾಡುವುದಕ್ಕಿಂತಲೂ ಸಾರ್ವಜನಿಕ ಸ್ವತ್ತನ್ನು ರಕ್ಷಣೆ ಮಾಡುವುದಕ್ಕೆ ಹೆಚ್ಚಿನ ಆಸಕ್ತಿಯನ್ನು ಸರ್ಕಾರ ವಹಿಸಿದೆ. ದುರದೃಷ್ಟ ವಶಾತ್ ಸರ್ಕಾರ ಕೂಡ ಸಾರ್ವಜನಿಕ ಸ್ವತ್ತುಗಳನ್ನು ರಕ್ಷಣೆ ಮಾಡುವುದಕ್ಕಿಂತಲೂ ವ್ಯಕ್ತಿಗತವಾದ ಸ್ವತ್ತುಗಳನ್ನು ರಕ್ಷಣೆ ಮಾಡುವುದಕ್ಕೆ ಹೆಚ್ಚಿನ ಗಮನಕೊಡುತ್ತಿದ್ದಾರೆ. ಸಾರ್ವಜನಿಕ ಸ್ವತ್ತುಗಳನ್ನು ಶ್ರೀಮಂತರಿಗೆ ಮಾರಾಟ

ಮಾಡುವುದನ್ನು, ಕೆಲವು ವ್ಯಕ್ತಿಗಳಿಗೆ ಅದನ್ನು ಪರಭಾರೆ ಮಾಡುವುದನ್ನು ಅವರ ನಿಯಂತ್ರಣಕ್ಕೆ ಕೊಡುವುದನ್ನು ನಾವು ನೋಡುತ್ತಿದ್ದೇವೆ. ಆದುದರಿಂದ ಈ ವಿಚಾರದಲ್ಲಿ ಸಾರ್ವಜನಿಕರನ್ನು ಅಥವಾ ಚಳುವಳಿ ಮಾಡುವವರನ್ನು ದಮನ ಮಾಡುವುದು ಉಪಯೋಗವಿಲ್ಲ. ನಮಗೆ ಸ್ವಾತಂತ್ರ್ಯ ಬಂದಮೇಲೆ ಸಾರ್ವಜನಿಕ ಸ್ವತ್ತುಗಳ ಬಗ್ಗೆ ಏನೋ ಕೆಲವು ಸಂದರ್ಭಗಳಲ್ಲಿ ಅಲ್ಲ ಇಲ್ಲ ಕೆಲವು ಘಟನೆಗಳು ನಡೆದಿರಬೇಕು ಆದರೂ ಕೂಡ ಸಾರ್ವಜನಿಕರ ಸ್ವತ್ತು ರಕ್ಷಣೆ ಮಾಡುವುದು ಎಲ್ಲರ ಕರ್ತವ್ಯವೆಂದು ನಮ್ಮ ದೇಶದಲ್ಲಿ ಇರುವ ಜವಾಬ್ದಾರಿಯುತ ರಾಜಕೀಯ ಪಕ್ಷಗಳು ಮತ್ತು ಮುಂದಾಳುಗಳು ಒಪ್ಪಿಕೊಂಡಿದ್ದಾರೆ. ಸಾರ್ವಜನಿಕರ ಸ್ವತ್ತು ರಕ್ಷಣೆಯಾಗುತ್ತಾ ಇರುವುದು ಪೋಲೀಸರ ಮುತುವರ್ಜಿಯಿಂದ ಅಥವಾ ಅವರ ಸಾಮರ್ಥ್ಯದಿಂದಲ್ಲ. ಸಾರ್ವಜನಿಕರ ಸ್ವತ್ತುಗಳು ರಕ್ಷಣೆಯಾಗುತ್ತಾ ಇರುವುದು ಮತ್ತು ಸಮಾಜದಲ್ಲಿ ಶಾಂತಿ ವ್ಯವಸ್ಥೆ ಮತ್ತು ಶಿಸ್ತು ಉಳಿಯುತ್ತಾ ಇರುವುದು ನಿಜವಾಗಿ ಜನರ ಸ್ವಯಂಪ್ರೇರಿತವಾದ ಕಟ್ಟುಪಾಡಿನಿಂದ ಅಲ್ಲದೆ ಈ ಪೋಲೀಸ್ ಸಿಬ್ಬಂದಿಯ ಸಾಮರ್ಥ್ಯದಿಂದಲ್ಲ ಎಂದು ಸರ್ಕಾರದ ಗಮನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ. ಆದುದರಿಂದ ಸಾರ್ವಜನಿಕ ರಕ್ಷಣೆಗೋಸ್ಕರ...

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗಾದರೆ ಪೋಲೀಸ್ ಡಿಪಾರ್ಟ್‌ಮೆಂಟ್ ಏತಕ್ಕೆ ?

ಶ್ರೀ ಬಿ. ವಿ. ಕಕ್ಕಿಲಾಯ.—ಸಾರ್ವಜನಿಕರ ರಕ್ಷಣೆಗೋಸ್ಕರ ಎನ್ನುವ ಉದ್ದೇಶದಿಂದ ಈ ಕಾನೂನಿನ ತಿದ್ದುಪಡಿ ಮಾಡಬೇಕಾದ ಅವಶ್ಯಕತೆಯಿಲ್ಲ. ಇಂಡಿಯನ್ ಪೀನಲ್ ಕೋಡ್ ಸ್ಟಬ್ರೈಸ್ ಆಗಿ ಇದೆ. ಒಂದುವೇಳೆ ತಿದ್ದುಪಡಿ ತರಬೇಕಾದರೆ ಬೇರೆ ರೂಪದಲ್ಲಿ ತಿದ್ದುಪಡಿ ಮಾಡಿ ಅಮೂಲಾಗ್ರವಾಗಿ ಇದರ ಬದಲಾವಣೆಯಾಗಬೇಕು. ಜನತೆಯನ್ನು ದಮನ ಮಾಡುವ ರೀತಿಯಲ್ಲಿ ತಿದ್ದುಪಡಿ ಮಾಡುವ ಅವಶ್ಯಕತೆಯಿಲ್ಲ ಎಂದು ಹೇಳುತ್ತೇನೆ. ತಮ್ಮ ಉದ್ದೇಶ ಎಷ್ಟೇ ಒಳ್ಳೆಯ ಉದ್ದೇಶ ಎಂದು ಹೇಳಿದರೂ ಕೂಡ ನಂಬಲಿಕ್ಕೆ ಬರುವುದಿಲ್ಲ. ಕೆಲವು ಉದಾಹರಣೆಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಎಲ್ಲಿ ಗೋಲಿಬಾರ್ ಆಗಲಿ, ಎಲ್ಲಿ ಅತ್ಯಾಚಾರ ನಡೆಯಲಿ ಅದಕ್ಕೆ ಪೋಲೀಸರು ಕೊಡುವ ಉತ್ತರ ಏನು ಎಂದರೆ ಪೋಲೀಸ್ ಅಧಿಕಾರಿಗಳ ರಕ್ಷಣೆಗೋಸ್ಕರ ಇದನ್ನು ಮಾಡುವುದು ಎಂದು ಹೇಳುತ್ತಾರೆ. ಯಾರೋ ಒಬ್ಬರು ಕಲ್ಲು ಹೊಡೆದರು ನಮ್ಮ ಜೋಬಿಗೆ ಬಿದ್ದು ಹೋಯಿತು, ಯಾರೋ ಬಂದು ಗಲಾಟೆ ಮಾಡಿದರು ಅದಕ್ಕೋಸ್ಕರ ಗೋಲಿಬಾರ್ ಮಾಡಿದ್ದೇವೆ ಎಂದು ಇವೊತ್ತಿನವರೆಗೂ ಉತ್ತರ ಕೊಡುತ್ತಿದ್ದಾರೆ. ಅವರು ಕೊಟ್ಟಂತ ಉತ್ತರವನ್ನು ಈ ಸದನದಲ್ಲಿ ಮಂತ್ರಿಗಳು ಓದಿ ಹೇಳುತ್ತಿದ್ದಾರೆ. ಇದು ದಿನನಿತ್ಯ ನಡೆಯುತ್ತಿರುವುದು. ನಿಜವಾಗಿ ರಕ್ಷಣೆ ಬೇಕಾಗಿರುವುದು ಎಲ್ಲಾ ಆಯುಧಗಳನ್ನು ಹಿಡಿದುಕೊಂಡು ಕಾರ್ಟ್‌ರಿಡ್ಜಸ್ ತುಂಬಿದ ರಿವಾಲ್ವಾರ್ ಬಂದೂಕಗಳನ್ನು ಹಿಡಿದುಕೊಂಡು ಇರತಕ್ಕ ಪೋಲೀಸ್ ಇಲಾಖೆಗೆ ಇಲ್ಲ ರಕ್ಷಣೆ ಸಿಕ್ಕಬೇಕಾದುದು ಆಗಿದೆ. ನಿರಾಯುಧರಾಗಿ ಇರುವ ನಮ್ಮ ಜನರಿಗೆ ಇದರಿಂದ ಯಾವ ಪ್ರಯೋಜನವಿಲ್ಲ ಎಂದು ತಮ್ಮ ಗಮನಕ್ಕೆ ತರಬೇಕೆಂದು ಇದ್ದೇನೆ. ಕೋಮುವಾರು ಗಲಭೆ ನಡೆಯುತ್ತದೆ, ಕಾರ್ಮಿಕರ ಮುಷ್ಕರ ಅಥವಾ ಇನ್ನೂ ಯಾವುದೋ ಮುಷ್ಕರವಾಗುತ್ತದೆ ಅಂಥ ಸಂದರ್ಭದಲ್ಲಿ ಸಾರ್ವಜನಿಕ ಸ್ವತ್ತುಗಳ ಸಮೀಪದಲ್ಲಿ ಮುಷ್ಕರ ನಡೆಯಿತು, ಗಲಭೆ ನಡೆಯಿತು ಎಂದರೆ ಈ ಕಾನೂನನ್ನು ಉಪಯೋಗ ಮಾಡಿಕೊಳ್ಳಬಹುದು. ಅದು ಬಿಟ್ಟು ತಾಲ್ಲೋಕು ಕಚೇರಿಯನ್ನು ರಕ್ಷಣೆ ಮಾಡಲಿಕ್ಕೆ, ಪಂಚಾಯಿತಿ ಆಫೀಸನ್ನು ರಕ್ಷಣೆ ಮಾಡಲಿಕ್ಕೆ ಎಂದು ಯಾವುದೇ ಒಂದು ಕಾರಣಕ್ಕೋಸ್ಕರ ಗೋಲಿಬಾರು ಮಾಡಿದ್ದೇವೆ, ಇಂಥವನನ್ನು ಕೊಂದು ಹಾಕಿದ್ದೇವೆ ಎಂದು ಹೇಳಿ, ಈ ತಿದ್ದುಪಡಿ ಪ್ರಕಾರ ರಕ್ಷಣೆ ಪಡೆಯುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಎರಡು ಘಟನೆಗಳು ನಡೆದರೆ ಮಾತ್ರ ಈ ಕಾನೂನಿನ ಪ್ರಯೋಗ ನಡೆಯುತ್ತದೆ. ಅದು ಏನೆಂದರೆ Mischief by fire or any explosive substance committed on any property used...ಗಲಾಟೆ ಮಾಡಿದ ಕಡೆ ಎಲ್ಲ ಉದ್ದೇಶಪೂರ್ವಕವಾಗಿ ಬೆಂಕಿ ಹಚ್ಚಿ ಸಾರ್ವಜನಿಕರ ಸ್ವತ್ತುಗಳನ್ನು ನಾಶ ಮಾಡತಕ್ಕದ್ದು ಇದೆ ಮತ್ತು ಎಕ್ಸ್‌ಪ್ಲೋಸೀವ್ ಸಬ್‌ಸ್ಟೆನ್ಸ್ ಹಾಕಿ ನಾಶ ಮಾಡತಕ್ಕದ್ದು ಇದೆ. ಈ ಎರಡು ಘಟನೆಗಳು ಆದರೆ ಮಾತ್ರ ಈ ಕಾನೂನು ಅಪ್ಲೈ ಆಗುತ್ತದೆ ಇಲ್ಲದಿದ್ದರೆ ಇಲ್ಲ. ಆದರೆ ಈಗ ನಮ್ಮ ಕಣ್ಣುಮುಂದೆ ಇರುವ ಪೋಲೀಸು ಅಧಿಕಾರಿಗಳು ಯಾವ ರೀತಿ ಮಾಡುತ್ತಿದ್ದಾರೆ ಅದು ನಮಗೆಲ್ಲಾ ಗೊತ್ತಿದೆ. ಹಿಂದೆ ಇದ್ದ ಮಂತ್ರಿಗಳು (ತಾವಲ್ಲ) ಯಾವ ರೀತಿ ದೇಶದಲ್ಲಿ ಒಂದು ರೀತಿಯಾದ ಗೊಂದಲವನ್ನುಂಟುಮಾಡಿ ಹಾನಿ ಮಾಡಿದರು ಮತ್ತು ಆಸ್ತಿಪಾಸ್ತಿಗಳನ್ನು ಹೇಗೆ ಲೂಟಿ ಮಾಡಿದರು ಎನ್ನುವುದು ಗೊತ್ತಿದೆ. ಅಂತಹ ಕ್ರಮಗಳನ್ನು ತಡೆಯುವುದಕ್ಕೆ ಆಗ ತಕ್ಕ ಕ್ರಮವನ್ನು ತೆಗೆದುಕೊಳ್ಳದೇ ಎಲ್ಲವನ್ನೂ ನ್ಯಾಯಾಲಯಗಳಿಗೇ ಕಳುಹಿಸುತ್ತಿದ್ದರು. ಈಗ ಪೋಲೀಸರಿಗೆ ಪ್ರಚೋದನೆ ಮಾಡುವಂತಹ ಒಂದು ಕಾನೂನು ತಿದ್ದುಪಡಿ ಮಾಡಿ ತರುವ ಅವಶ್ಯಕತೆಯಾದರೂ

(ಶ್ರೀ ಎಚ್. ಎಂ. ಚನ್ನಬಸಪ್ಪ)

ಏನಿತ್ತು ? ಇದರಿಂದ ಪೋಲೀಸು ಅಧಿಕಾರಿಗಳಿಗೆ ಇನ್ನಷ್ಟು ಗೊಂದಲ ಮಾಡಲು ಒಂದು ಅವಕಾಶ ಕೊಡುವುದಕ್ಕೆ ಸಹಾಯವಾಯಿತ್ತು; ಮತ್ತು ಇದು ತಂದಿರುವ ಉದ್ದೇಶ ಸಫಲವಾಗುವುದಿಲ್ಲ. ಸಾರ್ವಜನಿಕರ ಸ್ವತ್ತುಗಳನ್ನು ರಕ್ಷಣೆ ಮಾಡಲಿಕ್ಕಾಗಿ ಮತ್ತು ದೇಶದಲ್ಲಿ ಶಾಂತಿ ಭಂಗವಾಗುತ್ತದೆ ಎಂದು ಬೆಂಕಿ ಹಚ್ಚುವವರನ್ನು ಶಿಕ್ಷೆಗೆ ಗುರಿ ಮಾಡಬೇಕೆಂದು ಇಲ್ಲಿ ತಂದಿರುವ ತಿದ್ದುಪಡಿ ಮಸೂದೆ ಸರಿಯಾದುದಲ್ಲ. ಸರಕಾರ ಈ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ಇದರಲ್ಲಿ ಮುಖ್ಯವಾಗಿರುವ ಒಂದು ಅಂಶವನ್ನು ಗಮನಿಸಬೇಕಾಗಿದೆ. ಆತ್ಮರಕ್ಷಣೆ ಮಾಡುವ ಹೆಸರಿನಲ್ಲಿ ರಕ್ಷಣಾ ಇಲಾಖೆಯಲ್ಲಿ ಪೋಲೀಸು ಸಿಬ್ಬಂದಿಯವರ ಮುಷ್ಠಿಯನ್ನು ಮತ್ತಷ್ಟು ಭದ್ರಪಡಿಸುವುದಕ್ಕಾಗಿ ಇಂತಹ ಒಂದು ತಿದ್ದುಪಡಿ ಮಸೂದೆ ತರಲಾಗಿದೆಯೇ ವಿನಾ ಬೇರೆ ಯಾವ ಉದ್ದೇಶವೂ ಇಲ್ಲ ಎಂದು ಹೇಳಬೇಕಾಗಿದೆ. ಸರಕಾರಕ್ಕೆ ಇಂತಹ ಒಂದು ತಿದ್ದುಪಡಿ ಮಸೂದೆ ತರುವ ಅವಶ್ಯಕತೆಯಾದರೂ ಈ ಸನ್ನಿವೇಶದಲ್ಲಿ ಇತ್ತೆ ? ಸ್ವಾತಂತ್ರ್ಯ ಹೋರಾಟದಲ್ಲಿ ಸಾರ್ವಜನಿಕರ ಎಷ್ಟೋ ಆಸ್ತಿಪಾಸ್ತಿಗಳು ಹಾಳಾದುವು ಮತ್ತು ಆಗಿದ್ದ ಬ್ರಿಟೀಷ್ ಸರಕಾರ ಇದ್ದಾಗಲೂ ಸಾಮೂಹಿಕವಾಗಿ ಜನ ಆಸ್ತಿಪಾಸ್ತಿಗಳನ್ನು ಲೂಟಿ ಮಾಡಿದರೂ. ಇದರ ಬಗ್ಗೆ ಸರಕಾರ ಆಗ ಏನೂ ಕ್ರಮ ತೆಗೆದುಕೊಳ್ಳಲಿಲ್ಲ ಮತ್ತು ಇಷ್ಟು ತೀವ್ರವಾಗಿ ಆಗ ಯೋಚನೆ ಮಾಡಲಿಲ್ಲ. ಇದರಲ್ಲಿ 103ನೇ ಸೆಕ್ಷನನ್ನು ತಿದ್ದುಪಡಿ ಮಾಡಬೇಕೆಂದು ಇಲ್ಲಿ ತರುವುದರ ಅವಶ್ಯಕತೆ ಇರಲಿಲ್ಲ. ಇದರಲ್ಲಿ ಏನೋ ಒಂದು ರೀತಿಯ ಅನುಮಾನ ನಮಗೆ ಬರುತ್ತಿದೆ. ಇದು ಕೇಂದ್ರ ಸರಕಾರಕ್ಕೆ ಪ್ರಮುಖವಾದ ವಿಷಯವಾಗಿದ್ದರೆ ಅವರೇ ಒಂದು ತಿದ್ದುಪಡಿ ಮಾಡಿ ಇಲ್ಲಿಗೆ ಕಳುಹಿಸಬಹುದಾಗಿತ್ತು. ಆದರೆ ಇಲ್ಲಿ ನಮ್ಮ ಸರಕಾರ ಇಂತಹ ಒಂದು ತಿದ್ದುಪಡಿ ತಂದು ಏನೋ ಮಾಡಲು ಹೊರಟಿದ್ದಾರೆ, ಬೇರೆ ರಾಜ್ಯಗಳಲ್ಲಿ ಎಲ್ಲೂ ಕೂಡ ಇಂತಹ ತಿದ್ದುಪಡಿ ಕಾನೂನು ಇಲ್ಲ. ಕೇರಳ ಹಾಗೂ ಬೆಂಗಾಲ್ ಇಲ್ಲಿ ಇಂತಹ ಒಂದು ಕಾನೂನು ಇರಬಹುದು. ಆದರೆ ಇದರಲ್ಲೇನೋ ಹೊಂಚು ಮಾಡಿಕೊಂಡು ಇಂತಹ ಒಂದು ತಿದ್ದುಪಡಿ ಕಾನೂನು ತರುತ್ತಿದ್ದಾರೆ ಎನ್ನುವ ಶಂಕೆ ಬರುತ್ತಿದೆ. ಇದರಲ್ಲಿ ಮಿಸ್‌ಚೀಫ್ ಬೈ ಫೈರ್ ಎನ್ನುವುದಕ್ಕೆ ಇಂಡಿಯನ್ ಪೀನಲ್ ಕೋಡಿನಲ್ಲಿ ಸೆಕ್ಷನ್ 425 ರಲ್ಲೇ ಅವಕಾಶಗಳಿವೆ. ಇಂತಹ ಒಂದು ತಿದ್ದುಪಡಿಯ ಅವಶ್ಯಕತೆಯೇ ಇರಲಿಲ್ಲ. ಇದರಲ್ಲಿ ಯಾರನ್ನು ದಮನ ಮಾಡಬೇಕೆಂದು ಮಸೂದೆ ತರುತ್ತೀರಿ ! ಇದನ್ನು ತರುವ ಕಾರಣವೇ ಇಲ್ಲ. ನಿಮ್ಮ ಕೈಯ್ಯನ್ನು ಭದ್ರಪಡಿಸಿಕೊಳ್ಳುವುದಕ್ಕಾಗಿ ತರುತ್ತಿದ್ದೀರಿ ಎಂದು ಕಾಣುತ್ತೆ. ಗುಂಡನ್ನು ಹಾರಿಸಿದಾಗ ಇಲ್ಲವೇ ರಾತ್ರಿ ಪ್ರಹಾರವಾದಾಗ ಇಲ್ಲವೇ ವಿಧ್ವಂಸಕ ಕೃತ್ಯಗಳು ನಡೆದಾಗ ಐ ಪಿ.ಸಿ. ಪ್ರಕಾರ ಸಾಕಷ್ಟು ಶಿಕ್ಷೆ ಕೊಡಲು ಅವಕಾಶ ಇದೆ, ಮತ್ತೆ ಇದಕ್ಕೆ ತಿದ್ದುಪಡಿ ತರುವ ಅವಶ್ಯಕತೆಯೇ ಇಲ್ಲ. ಮತ್ತು ಇದರಲ್ಲಿ ಶ್ರೇಷ್ಠ ನ್ಯಾಯಾಲಯದವರು ಪ್ರವೇಶಿಸಿ ಯಾವ ತೀರ್ಮಾನವನ್ನೂ ಇದುವರೆಗೆ ಕೊಟ್ಟಿರುವುದು ಕಂಡು ಬಂದಿಲ್ಲ. ಇಂತಹ ಒಂದು ವಿಶೇಷ ಸಂದರ್ಭವನ್ನು ನೀವೇ ವಹಿಸಿಕೊಂಡು ಸುಮ್ಮನೆ ಅನಾವಶ್ಯಕವಾಗಿ ಇಂತಹ ಒಂದು ಮಸೂದೆಯನ್ನು ಇಲ್ಲಿ ತರುವುದು ಸರಿಯಲ್ಲ. ಆದುದರಿಂದ ಕೂಡಲೇ ಸರಕಾರ ಈ ಮಸೂದೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ. ಕೆ. ನಾಯಕರ್ (ನ್ಯಾಯಾಂಗ ಮತ್ತು ಸಂಸದೀಯ ವ್ಯವಹಾರ ಶಾಖೆಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ಅಮೆಂಡ್‌ಮೆಂಟ್ ಬಗ್ಗೆ ಮಾನ್ಯ ಸದಸ್ಯರು ವಿರೋಧ ಮಾಡುತ್ತಾ ಇರುವ ಕಾನೂನಿನಲ್ಲೇ ರಕ್ಷಣೆ ಕೊಡಲು ಅವಕಾಶಗಳಿವೆ ಮತ್ತೆ ಇಂತಹ ಪ್ರಸಂಗಗಳನ್ನು ಏಕೆ ಇಲ್ಲಿ ತರಬೇಕೆಂದು ಹೇಳಿದ್ದಾರೆ. ಇದರಲ್ಲಿ ಬರೀ ಸೆಕ್ಷನ್-103ನ್ನು ಮಾತ್ರ ತಿದ್ದುಪಡಿ ಮಾಡಿ ಕೇವಲ ಎರಡು ವಿಚಾರಗಳ ಬಗ್ಗೆ ಮಾತ್ರ ತಿದ್ದುಪಡಿ ಮಾಡಿ ತರಲಾಗಿದೆ. ಪ್ರತಿಯೊಬ್ಬ ಮನುಷ್ಯನ ರೈಟನ್ನೂ ರಕ್ಷಣೆ ಮಾಡುವುದರ ಸಲುವಾಗಿ ಇಲ್ಲಿ ತರಲಾಗಿದೆ, ಮಾನ್ಯ ಸದಸ್ಯರು ಹೇಳುವಂತಹ ತೊಂದರೆಗಳೇನೂ ಇದರಲ್ಲಿ ಇಲ್ಲ, ಪ್ರತಿಯೊಬ್ಬರ ಹಕ್ಕನ್ನು ರಕ್ಷಣೆ ಮಾಡುವುದು ಸರಕಾರದ ಕರ್ತವ್ಯ, ಆ ಒಂದು ಉದ್ದೇಶದಿಂದಾಗಿ ಇಂತಹ ಒಂದು ಸಣ್ಣ ಅಮೆಂಡ್‌ಮೆಂಟ್‌ನ್ನು ಇಲ್ಲಿ ತರಲಾಗಿದೆ, ಇದರಿಂದೇನೂ ಅಧಿಕಾರದ ದುರುಪಯೋಗವಾಗುವುದಿಲ್ಲ, ಇಂತಹ ಒಂದು ಮಸೂದೆಗೆ ಎಲ್ಲರೂ ಬೆಂಬಲ ಕೊಡಬೇಕೆಂದು ಆಶಿಸುತ್ತೇನೆ.

†ಶ್ರೀ ಹೆಚ್. ಎಂ. ಚನ್ನಬಸಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀಮಾನ್ ಶಾಮಣ್ಣನವರು ಮಾತನಾಡುತ್ತಾ, 'ಅಕ್ಕಿಯ ಮೇಲೆ ಆಸೆ, ನೆಂಟರ ಮೇಲೆ ಪ್ರೀತಿ, ಎನ್ನುವ ರೀತಿಯಲ್ಲಿ ಇಲ್ಲಿ ಹೇಳಿದರು. ಒಂದು ಕಡೆ ಕಾನೂನು ಆಗಬೇಕು ಎನ್ನುತ್ತಾರೆ. ಅವರಿಗೂ ಗೊತ್ತು ಈಚೆಗೆ ಬೆಂಗಳೂರಿನಲ್ಲಿ ಗಲಭೆಗಳಾದಾಗ ಕಾರ್ಪೊರೇಷನ್ನಿನ ಆಸ್ತಿಗೆ ಎಷ್ಟು ನಷ್ಟವಾಗಿದೆ ಎಂಬುದು ಮತ್ತು ಅವರೇ ಇದನ್ನು ನೋಡಿ, ಅನುಭವಿಸಿ ಮತ್ತು ಇವುಗಳನ್ನು ರಿಪೇರಿ ಮಾಡಲು ಲಕ್ಷಾಂತರ ರೂಪಾಯಿಗಳ ಹಣವನ್ನು ಇಲ್ಲಿ ವೋಟು ಮಾಡಿಕೊಟ್ಟಿದ್ದಾರೆ. ಎಷ್ಟು ಆಸ್ತಿಪಾಸ್ತಿಗಳಿಗೆ ತೊಂದರೆಯಾಗಿದೆ ಎನ್ನುವುದನ್ನು ಅವರು ತಮ್ಮ ಸ್ವಂತ ಅನುಭವದಿಂದ ತಿಳಿದುಕೊಂಡಿದ್ದಾರೆ. ಆದಕ್ಕಾಗಿಯೇ ಇಂತಹ ಒಂದು ಕಾನೂನು ಆಗಬೇಕು ಎಂದು ನಾವು ಹೇಳುತ್ತಿರುವುದು, ಕಟ್ಟಡಗಳನ್ನು ಒಡೆಯುವುದು, ಸಾರ್ವಜನಿಕ ಆಸ್ತಿ ಪಾಸ್ತಿಗಳನ್ನು ಹಾಳುಮಾಡುವುದು, ಜೀಪುಗಳಿಗೆ ಬೆಂಕಿ ಹಾಕುವುದು ಇಂತಹ ಕಾರ್ಯಗಳು ನಡೆಯುತ್ತಿದ್ದರೆ ಸರಕಾರ ಇದನ್ನು ತಡಗಟ್ಟಲೇಬೇಕು ಅದಕ್ಕಾಗಿ ಇಲ್ಲಿ ಒಂದು ಸಣ್ಣ ತಿದ್ದುಪಡಿ ಕಾನೂನು ತರಲಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಮಫ್ತಿಯಲ್ಲಿರುವ ಪೋಲೀಸಿನವರೆ ಇದರ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳುತ್ತಿದ್ದಾರಲ್ಲ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಮಫ್ತಿಯಲ್ಲಿ ಪೋಲೀಸಿನವರು ಈ ಕೆಲಸ ಮಾಡುತ್ತಿದ್ದರೂ ಇದುವರೆಗೆ ಸಾರ್ವಜನಿಕ ಆಸ್ತಿಪಾಸ್ತಿಗೆ ನಡೆದಷ್ಟು ಹಾನಿ ಹಿಂದೆ ಯಾವಾಗಲೂ ಆಗಿರಲಿಲ್ಲ. ಪೋಲೀಸಿನವರೇ ಇದನ್ನು ಮಾಡಲ ಸರಿಯಾದ ನಿಯಮಗಳಿಲ್ಲ, ಇಂತಹ ಒಂದು ಸಂದರ್ಭ ಬಂದ ಕಾಲದಲ್ಲಿ ಮಾತ್ರ ಈ ಕಾನೂನನ್ನು ಉಪಯೋಗಮಾಡಬೇಕಾಗಿ ಬರತ್ತದೆ. ಬೇರೆ ಸಂದರ್ಭದಲ್ಲಿ ಇದನ್ನು ಪೋಲೀಸಿನವರು ಉಪಯೋಗಿಸಿಕೊಳ್ಳುವುದಿಲ್ಲ.

5-00 P. M.

ರಾಮರಾಜ್ಯದಲ್ಲಿಯೂ ಕೂಡ ರಕ್ಷಣ ಇಲಾಖೆ ಇತ್ತು. ರಕ್ಷಣಾ ಇಲಾಖೆಗೆ ಏನೇನು ಅಧಿಕಾರಿಗಳನ್ನು ಕೊಡಲಾಗುತ್ತದೋ, ಅದನ್ನು ಅವರು ದುರುಪಯೋಗ ಮಾಡಬಾರದು. ಅಧಿಕಾರ ದುರುಪಯೋಗ ಆಗದಂತೆ ನೋಡಿಕೊಳ್ಳಬೇಕು ಎನ್ನುವುದರಲ್ಲಿ ಮಾನ್ಯ ಸದಸ್ಯರು ಎಷ್ಟು ಕಾತುರರಾಗಿದ್ದಾರೋ ಅಷ್ಟೇ ಕಾತುರದಿಂದ ಸರ್ಕಾರವೂ ಸಹ ಇದೆ ಎಂದು ಅಷ್ಟು ಮಾತ್ರ ಭರವಸೆ ಕೊಡುತ್ತೇನೆ. ಮಾನ್ಯ ಸ್ನೇಹಿತರಾದ ಕಾಗೋಡು ತಿಮ್ಮಪ್ಪನವರು ಮಾತನಾಡುತ್ತಾ ಇಂಗ್ಲೀಷಿನವರ ಕಾಲದಲ್ಲಿ ಬೇಕಾದಷ್ಟು ಚಳುವಳಿಗಳನ್ನು ನಡೆಸಲಾಯಿತು, ಆಗ ಅವರ ತಲೆಗೆ ಈ ಒಂದು ತಿದ್ದುಪಡಿಯನ್ನು ತರುವ ಅವಶ್ಯಕತೆ ಹೊಳೆಯಲಿಲ್ಲ, ಈಗ ತಾವು ಏತಕ್ಕೆ ತಂದಿದ್ದೀರಿ ಎಂದು ಕೇಳಿದರು. ಬ್ರಿಟಿಷರಿಗೆ ಸಾರ್ವಜನಿಕ ಸ್ವತ್ತುಗಳು ತಮ್ಮದು ಎಂಬ ಭಾವನೆ ಇರಲಿಲ್ಲ. ಸ್ವರಾಜ್ಯ ಬಂದ ಮೇಲೆ ಆಸ್ತಿ ಪಾಸ್ತಿ ಎಲ್ಲವೂ ನಮ್ಮ ಸ್ವತ್ತಾಗಿದೆ. ಅದನ್ನು ಕಾಪಾಡಿಕೊಂಡು ಹೋಗುವುದು ಮತ್ತು ಬೆಳೆಸಿಕೊಂಡು ಹೋಗುವ ಜವಾಬ್ದಾರಿ ನಮ್ಮದಾಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಈಗ ತಂದಿರತಕ್ಕ ತಿದ್ದುಪಡಿಯ ಪ್ರಕಾರ ರಾಜ್ಯ ಸರ್ಕಾರದ ಆಸ್ತಿಗಳು, ಕೇಂದ್ರಸರ್ಕಾರದ ಆಸ್ತಿಗಳು ಎಂಬುದಕ್ಕೆ ಏನಾದರು ಕ್ಲಾರಿಫಿಕೇಶನ್ ಇದೆಯೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಎಲ್ಲವೂ ಸಾರ್ವಜನಿಕ ಸ್ವತ್ತುಗಳೇ. ಅದು ರಾಜ್ಯ ಸರ್ಕಾರಕ್ಕೆ ಸೇರಿರಲಿ, ಕೇಂದ್ರ ಸರ್ಕಾರಕ್ಕೆ ಸೇರಿರಲಿ, ಖಾಸಗೀ ಸಂಸ್ಥೆಗಳಿಗೆ ಸೇರಿರಲಿ, ಕಾರ್ಪೊರೇಷನ್‌ಗೆ ಸೇರಿರಲಿ, ಎಲ್ಲವೂ ಇದರಲ್ಲಿ ಸೇರಿಕೊಳ್ಳುತ್ತದೆ. ಆಸ್ತಿ ನಮ್ಮದು ಎಂಬ ಬಗ್ಗೆ ಎಲ್ಲರಿಗೂ ಅರಿವು ಇದೆ. ಯಾವ ಚಳುವಳಿಗಳು ತತ್ವಗಳಿಗೆ ಒಳಪಟ್ಟು, ತತ್ವದ ಅನುಯಾಯಿಗಳ ಮಾರ್ಗದರ್ಶನಕ್ಕೆ ಒಳಪಟ್ಟು ನಡೆಯುತ್ತವೋ ಅಂತಹ ಚಳುವಳಿಗಳನ್ನು ಮಾನ್ಯ ಮಾಡತಕ್ಕದಾಗಿರುತ್ತದೆ. ಆದರೆ ಚಳುವಳಿಗಳು ಶಾಂತರೀತಿಯಿಂದ ನಡೆಯಬೇಕು ಎಂಬುದು ಸರ್ಕಾರದ ಉದ್ದೇಶ ಇದ್ದರೂ ಕೂಡ, ಅನೇಕ ವೇಳೆ ಅಶಾಂತಿಗೆ ಒಳಪಟ್ಟು ಅಪಘಾತಗಳಾಗುತಿರುವುದು ಎಲ್ಲರಿಗೂ ಗೊತ್ತಿದೆ. ಎಲ್ಲ ಚಳುವಳಿಗಳಲ್ಲಿಯೂ ಸಹ ಬೆಂಕಿ, ಸ್ಫೋಟಕವಸ್ತು, ಮೊದಲಾದವುಗಳನ್ನು ಉಪಯೋಗ ಮಾಡುವುದಿಲ್ಲ. ಆದರೆ ಕೆಲವು ಸಂದರ್ಭಗಳಲ್ಲಿ ಏನಾದರು ಬೆಂಕಿ, ಸ್ಫೋಟಕ ವಸ್ತುಗಳನ್ನು ಉಪಯೋಗ ಮಾಡಿದರೆ, ಅದನ್ನು ರಕ್ಷಣೆ ಮಾಡುವ ಹಕ್ಕು ಪೋಲೀಸಿನವರಿಗೆ ಇರಬಾರದು ಎಂದರೆ ಅದು ತಪ್ಪಾಗುತ್ತದೆ. ಆದರೆ ಅಧಿಕಾರವನ್ನು ದುರುಪಯೋಗ ಮಾಡಿಕೊಂಡರೆ ಮಾತ್ರ ತಪ್ಪಾಗುತ್ತದೆ. ಆದ್ದರಿಂದ ಈ ವಿಷಯದಲ್ಲಿ ಅನುಮಾನ ಇಟ್ಟುಕೊಳ್ಳಬೇಕಾದ್ದು ಇಲ್ಲ ಎಂದು ಮಾತ್ರ ಈ ಸಂದರ್ಭದಲ್ಲಿ ಹೇಳುತ್ತೇನೆ. ಎಲ್ಲಿಯವರೆಗೆ ನಾವೆಲ್ಲರೂ ತತ್ವದ ಅನುಯಾಯಿಗಳಾಗಿ ಹೋಗುತ್ತೇವೋ ಅಲ್ಲಿಯವರೆಗೆ

(ಶ್ರೀ ಎಚ್. ಎಂ. ಚನ್ನಬಸಪ್ಪ)

ಈ ಶಾಸನಗಳು ಮತ್ತು ರಕ್ಷಣಾ ವ್ಯವಸ್ಥೆಗಳು ಅನವಶ್ಯಕವಾಗುತ್ತವೆ. ಆದರೆ ಎಲ್ಲರೂ ಒಳ್ಳೆಯ ಜನರು ಇದ್ದರೂ ಕೂಡ ಕೆಟ್ಟ ಜನರೂ ಇದ್ದಾರೆಂಬುದನ್ನು ಮಾನ್ಯ ಸದಸ್ಯರು ಒಪ್ಪಿಕೊಳ್ಳಬೇಕು. ಸಮಯ ಸಂದರ್ಭಗಳನ್ನು ಉಪಯೋಗ ಮಾಡಿಕೊಂಡು ಅನಾಹುತ ಮಾಡುವವರು ಅಲ್ಲೊಬ್ಬರು, ಇಲ್ಲೊಬ್ಬರು ಇರುವುದರಿಂದ, ಅಂತಹ ಸಂದರ್ಭಗಳಲ್ಲಿ ರಕ್ಷಣಾ ವ್ಯವಸ್ಥೆಯನ್ನು ಕೈಗೊಳ್ಳುವುದಕ್ಕೆ ಇವರಿಗೆ ಅಧಿಕಾರ ಇರಬೇಕು ಎಂಬ ಉದ್ದೇಶದಿಂದ ಇದನ್ನು ತರಲಾಗಿದೆ. ನನ್ನ ಮಾನ್ಯ ಮಿತ್ರರಾದ ರಾ ಮಂತ್ರಿಗಳು ಹೇಳಿದಂತೆ, ಹಕ್ಕುಬಾಧ್ಯತೆಗಳನ್ನು ಕಾಪಾಡಿಕೊಳ್ಳುವುದಕ್ಕೆ ಕಾನೂನಿನಲ್ಲಿ ಸಾರ್ವಜನಿಕರಿಗೆ ಅಷ್ಟೊಂದು ಹಕ್ಕುಗಳನು ಕೊಟ್ಟಿರುವಾಗ, ಇಡೀ ಸಮಾಜಕ್ಕೆ ಸಂಬಂಧಪಟ್ಟಂತೆ ಇರುವ ವಸ್ತುಗಳನ್ನು ಕಾಪಾಡುವುದಕ್ಕೆ ಸಹ ಅಗತ್ಯ ಹಕ್ಕುಗಳನ್ನು ಸರ್ಕಾರಕ್ಕೆ ಕೊಡದಿದ್ದರೆ ತಪ್ಪಾಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ದೊಡ್ಡ ಮನಸ್ಸು ಮಾಡಿ ಇಡೀ ದೇಶಕ್ಕೆ ಅವಶ್ಯಕವಾದಂಥ ತಿದ್ದುಪಡಿಯನ್ನು ಏನು ಈಗ ತರಲಾಗಿದೆ, ಅದಕ್ಕೆ ಸಂಪೂರ್ಣವಾದ ಬೆಂಬಲ ಕೊಡಬೇಕೆಂದು ಆಶಿಸುತ್ತೇನೆ.

Sri KAGODU THIMMAPPA.—It is better to obtain the opinion of the Advocate General.

Mr. DEPUTY SPEAKER.—It is too late to make a suggestion of this kind.

The question is :

"That the Indian Penal Code (Mysore Amendment) Bill, 1972, be taken into consideration."

The motion was adopted.

Consideration of Clauses

Clause 2

Mr. DEPUTY SPEAKER.—There are two amendments to clause 2 of the Bill which may be moved.

Sri T. R. SHAMANNA (Fort).—I beg to move:

1. That at page 2 in sub-clause (1) (i) after the proposed words "any explosive substance" the words "or dismantling or breaking the property" shall be added.

2. That at page 2, in sub-clause (2) after the words "fire or any explosive substance" the words "breaking or pulling down the property" shall be added.

Mr. DEPUTY SPEAKER.—Amendments moved :

"That at page 2 in sub-clause (1) (i) after the proposed words "any explosive substance" the words "or dismantling or breaking the property" shall be added.

"That at page 2, in sub-clause (2) after the words "fire or any explosive substance" the words "breaking or pulling down the property" shall be added.

† ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಭಾಪತಿಯವರೇ, ನಾನು ಮೊದಲೇ ಹೇಳಿದ ಹಾಗೆ, ಯಾವ ಕಾರಣದಿಂದ ಈ ಕರಡು ಮಸೂದೆಗೆ ವಿರೋಧ ಮಾಡುತ್ತಿದ್ದೇನೆ ಎಂಬುದನ್ನು ಸ್ಪಷ್ಟಪಡಿಸಿದ್ದೇನೆ. ಸಾಧಾರಣವಾಗಿ ಪ್ರತಿಯೊಂದು ಚಳುವಳಿಯಲ್ಲಿಯೂ ಸಹ ಪೋಲೀಸಿನವರು ಚಳುವಳಿಯನ್ನು ದಮನ ಮಾಡಲು ಚಳುವಳಿಗಾರರ ಮೇಲೆ ಕಲ್ಲುಗಳನ್ನು ತೂರುತ್ತಿರುವುದಲ್ಲದೆ,

ಚಳುವಳಿಗಾರರನ್ನು ಹಿಡಿದು ಬಡಿದುಹಾಕಿದ್ದಾರೆ. ಈಗ ಎಷ್ಟು ಕಾನೂನುಗಳಿವೆಯೋ ಅಷ್ಟನ್ನೂ ಉಪಯೋಗ ಮಾಡಿಕೊಂಡು, ಅವುಗಳ ಆಧಾರದ ಮೇಲೆ ಜನರ ಮೇಲೆ ಕೇಸ್‌ಗಳನ್ನು ಹಾಕಿ ಕೋರ್ಟಿಗೆ ಎಳೆದಿದ್ದಾರೆ. ಚಳುವಳಿಯಾದಾಗಲೆಲ್ಲಾ ಕಾರ್ಪೊರೇಷನ್ ಆಸ್ತಿಗೆ ನಷ್ಟವಾಗುತ್ತಿರುವುದನ್ನು ನಾವು ನೋಡಿದ್ದೇವೆ. ಸಿಟಿಮಾರ್ಕೆಟ್ಟಿನಿಂದ ಹಿಡಿದು ನ್ಯಾಷನಲ್ ಹೈಸ್ಕೂಲ್‌ವರೆಗೆ ಅನೇಕ ಬೀದಿ ದೀಪಗಳಿವೆ. ಅವುಗಳನ್ನು ಚಳುವಳಿಗಾರರು ಹೊಡೆದುಹಾಕಿದರೆ, ಅವುಗಳನ್ನು ರೀಪ್ಲೇಸ್ ಮಾಡಬೇಕಾದರೆ ಒಂದು ತಿಂಗಳಾಗುತ್ತದೆ. ಅಲ್ಲಿಯವರೆಗೆ ಅಲ್ಲಿ ಓಡಾಡುವ ನಾಗರೀಕರು ಕತ್ತಲಲ್ಲಿ ಓಡಾಡಬೇಕಾಗುತ್ತದೆ. ಆ ಸಮಯದಲ್ಲಿ ಅವರು ಇವರ ಮನೆ ಹಾಳಾಗ, ಲೈಟ್ ಹೊಡೆದು ಹಾಕಿದ್ದಾರೆ ಎಂಬುದಾಗಿ ಶಪಿಸುತ್ತಾರೆ. ಈಗ ಕಾರ್ಪೊರೇಷನ್‌ನವರು ವರ್ಷ ಒಂದಕ್ಕೆ ಲೈಟ್‌ಗಾಗಿ 45 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಹೊಡೆದು ಹಾಕಿದ ಲೈಟ್‌ಗಳನ್ನು ರೀಪ್ಲೇಸ್ ಮಾಡಬೇಕಾದರೆ ಲಕ್ಷಾಂತರ ರೂಪಾಯಿಗಳ ಖರ್ಚು ಬರುತ್ತದೆ. ಮೊನ್ನೆ ಕಾಲೇಜ್ ವಿದ್ಯಾರ್ಥಿಗಳ ಚಳುವಳಿ ನಡೆದಾಗ ಸೆಂಟ್ರಲ್ ಕಾಲೇಜಿನ ಕಾಂಪೌಂಡನ್ನು ಪೂರ್ತಿಯಾಗಿ ಕಿತ್ತು ಹಾಕಿದರು.

ಶ್ರೀ ಕೋಣಂದೂರು ಲಿಂಗಪ್ಪ.—ಕಾಂಪೌಂಡನ್ನು ಪೋಲೀಸಿನವರೇ ಕಿತ್ತು ಹಾಕಿದ್ದು.

ಶ್ರೀ ಟಿ. ಆರ್. ಶಾಮಣ್ಣ.—ಚಳುವಳಿ ನಡೆಸುವವರು ಎಷ್ಟೋ ಸಲ ಇಟ್ಟಿಗೆ ಚೂರುಗಳನ್ನು ವಾಹನಗಳ ಮೇಲೆ ಎಸೆದು, ಪ್ರಯಾಣಿಕರಿಗೆ ಗಾಯಗಳಾಗಿ ಆಸ್ಪತ್ರೆಗೆ ಹೋದ ಸಂದರ್ಭಗಳಿವೆ. ಈಗ ನಾನು ತಂದಿರತಕ್ಕ ತಿದ್ದುಪಡಿ ಏನಿದೆಯೋ ಅದನ್ನು ಕಾರ್ಪೊರೇಷನ್ ಹಿತದೃಷ್ಟಿಯಿಂದ ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ ಮತ್ತು ಸಮರ್ಥಿಸುತ್ತೇನೆ.

ಶ್ರೀ ವಿ. ಎನ್. ಪಾಟೀಲ್.—ಮಾನ್ಯ ಉಪಾಧ್ಯಕ್ಷರೇ, ಸರ್ಕಾರ ಕೆಲವು ಅಧಿಕಾರಗಳನ್ನು ಹೆಚ್ಚು ಕೊಡಿ ಎಂದು ಕೇಳಿತು. ಅದಕ್ಕೆ ಮಾನ್ಯ ಶಾಮಣ್ಣನವರು, ಅಷ್ಟು ಅಧಿಕಾರಗಳನ್ನು ಕೇಳಿದರೆ ಸಾಲದು, ಇನ್ನೂ ಹೆಚ್ಚಿಗೆ ಕೇಳಬೇಕಾಗಿತ್ತು ಎಂದು ಹೇಳುತ್ತಾರೆ. ಅದನ್ನು ವಿರೋಧ ಮಾಡುವುದಕ್ಕೆ ಇಷ್ಟಪಡುತ್ತೇನೆ. ಮುಖ್ಯವಾಗಿ ಕಾಲೇಜು ವಿದ್ಯಾರ್ಥಿಗಳು ಏತಕ್ಕಾಗಿ ಬಸ್‌ಗಳಿಗೆ ಕಲ್ಲು ಎಸೆಯುತ್ತಾರೆ, ಏತಕ್ಕಾಗಿ ಚಳುವಳಿ, ಅಥವಾ ಆಂದೋಲನ ಮಾಡುತ್ತಾರೆಂದರೆ ಫೀಯನ್ನು ದಿನೇದಿನೇ ಹೆಚ್ಚು ಮಾಡುತ್ತಿರುವುದಕ್ಕಾಗಿ. ಇವೊತ್ತು ಖಾಸಗೀ ಕಾಲೇಜುಗಳ ಮೇಲೆ ಸರ್ಕಾರದ ಕಂಟ್ರೋಲ್ ಇಲ್ಲವಾಗಿದೆ. ಅದಕ್ಕಾಗಿ ಅವರು ಫೀಯನ್ನು ಜಾಸ್ತಿ ಮಾಡುತ್ತಿದ್ದಾರೆ. ಸಮಾಜದಲ್ಲಿರುವ ಕೊಳಕನ್ನು ತೆಗೆದುಹಾಕುವುದಕ್ಕೆ ಸರ್ಕಾರದವರು ಮನಸ್ಸು ಮಾಡಿಲ್ಲ.

ಈಗ ಶ್ರೀಮಾನ್ ಶಾಮಣ್ಣನವರು ಅವರ ತಿದ್ದುಪಡಿಯ ಬಗ್ಗೆ ಏನು ಹೇಳಿದರು ಅದನ್ನು ನಾನು ವಿರೋಧ ಮಾಡುತ್ತೇನೆ. ಏತಕ್ಕೆಂದರೆ ಈಗ ಮುಖ್ಯವಾಗಿ ಸಮಾಜದಲ್ಲಿರುವಂತಹ ಅಸಮಾನತೆಗಳು ಉಂಟಾದಾಗ, ಸರ್ಕಾರದಲ್ಲಿ ಜನತೆಗೆ ಅನ್ಯಾಯಗಳು ನಡೆದಾಗ ಕಲ್ಲುಎಸೆಯುವುದು, ಚಳುವಳಿ ಮಾಡುವುದು ಹಿಂಸೆ ಮಾಡುವುದು ಗಲಾಟೆ ಮಾಡುವುದು, ಇವೆಲ್ಲಾ ನಡೆಯುತ್ತವೆ. ಅದಕ್ಕೆ ಬೇಕಾದಂತಹ ಪರಿಹಾರಗಳನ್ನು ಸರ್ಕಾರದವರು ಒದಗಿಸಿಕೊಟ್ಟರೆ ಇಂಥಾ ಚಳುವಳಿಗಳು ನಡೆಯುವುದಕ್ಕೆ ಅವಕಾಶವೇ ಇರುವುದಿಲ್ಲ. ಈಗಾಗಲೇ ಪೋಲೀಸಿನವರು ಜನಗಳಿಗೆ ಹೆಚ್ಚಿನ ತೊಂದರೆಯನ್ನು ಕೊಡುತ್ತಿದ್ದಾರೆ. ಅವರಿಗೆ ಇನ್ನೂ ಹೆಚ್ಚಿನ ಅಧಿಕಾರವನ್ನು ಕೊಡುವುದಾದರೆ ಅವರು ಅದನ್ನು ದುರುಪಯೋಗಮಾಡಿಕೊಳ್ಳುತ್ತಾರೆ. ಈಗ ದೇಶದಲ್ಲಿ ನಾನಾ ರೀತಿಯಾದ ಕೊಲೆಗಳು ನಡೆಯುತ್ತಿವೆ. ಹೆಣ್ಣುಮಕ್ಕಳ ಮಾನಭಂಗ ಕೂಡ ನಡೆಯುತ್ತಿದೆ. ಇದನ್ನು ತಪ್ಪಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕಾಗುತ್ತದೆ. ಈಗ ಪೋಲೀಸಿನವರಿಗೆ ಕೊಟ್ಟಿರುವ ಅಧಿಕಾರವೇ ಸಾಕು, ಇನ್ನೂ ಹೆಚ್ಚಿನ ಅಧಿಕಾರವನ್ನು ಕೊಡುವುದು ಸೂಕ್ತವಲ್ಲ, ಈ ದೃಷ್ಟಿಯಿಂದ ನಾನು ಶ್ರೀಮಾನ್ ಶಾಮಣ್ಣನವರು ತಂದಿರುವ ತಿದ್ದುಪಡಿಯನ್ನು ವಿರೋಧಿಸುತ್ತೇನೆ. ಇದನ್ನು ಸರ್ಕಾರದವರು ರಿಜೆಕ್ಟ್ ಮಾಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ತಂದಿರತಕ್ಕ ತಿದ್ದುಪಡಿಯಲ್ಲಿ ಶ್ರೀಮಾನ್ ಶಾಮಣ್ಣನವರ ಮನಸ್ಸಿನಲ್ಲಿ ಏನು ಉದ್ದೇಶ ಇದೆಯೋ ಅದನ್ನು ಸಾಧನೆ ಮಾಡುವುದಕ್ಕೆ ಪ್ರತಿಕೂಲವಾಗುತ್ತದೆ. ಈಗ ಇಲ್ಲಿರತಕ್ಕಂಥಾ ತಿದ್ದುಪಡಿಯಲ್ಲಿ ಅಲ್ಪಸಲ್ಪ ಸಣ್ಣಪುಟ್ಟ ಘಟನೆಗಳು ಆದರೆ ಅವು ಇದರೊಳಗೆ ಬರುವುದಿಲ್ಲ. ಒಂದುವೇಳೆ ಯಾರಾದರೂ ಕಲ್ಲುಹೊಡೆದರೆ ಒಂದು ಬಲ್ಬ್

(ಶ್ರೀ ಎಚ್. ಎಂ. ಚನ್ನಬಸಪ್ಪ)

ಒಡೆದುಹೋಯಿತು, ಕಾರಿಗೆ ಜಖಂ ಆಯಿತು, ಅಂಥಾದ್ದನ್ನು ಪ್ರಿವೆಂಟ್ ಮಾಡುವುದಕ್ಕೆ ಈ ತಿದ್ದುಪಡಿಯಲ್ಲಿ ಬರುವುದಿಲ್ಲ. ಈಗ ಮಾನ್ಯ ಸದಸ್ಯರಾದ ಶ್ರೀಮಾನ್ ಶಾಮಣ್ಣನವರು ತಂದಿರತಕ್ಕ ತಿದ್ದುಪಡಿಯನ್ನು ಒಪ್ಪಿಕೊಂಡರೆ ಬಲ್ಬ್ ಒಡೆದು ಹೋಯಿತು, ಕಾರಿಗೆ ಜಖಂ ಆಯಿತು, ಅಂಥಾ ಸಂದರ್ಭಗಳಲ್ಲಿ ಮತ್ತು ಸೆಲ್ಫ್ ಪ್ರೊಟೆಕ್ಷನ್ನಿಗೆ ಇದನ್ನು ಉಪಯೋಗಮಾಡಿಕೊಳ್ಳುವುದಕ್ಕೆ ಅವಕಾಶಬರುತ್ತದೆ. ಮಾನ್ಯ ಸದಸ್ಯರ ಉದ್ದೇಶವೇನೋ ಒಳ್ಳೆಯದು. ಶ್ರೀಮಾನ್ ಶಾಮಣ್ಣನವರು ಹೇಳಿದಂತೆ ಇಂಥಾ ಘಟನೆಗಳು ಆಗಬಾರದು, ಇದನ್ನು ತಡೆಗಟ್ಟುವುದು ಅಗತ್ಯ. ಎಲ್ಲರೂ ಅದಕ್ಕೆ ಸಹಕಾರಿಗಳಾಗಿದ್ದರೆ ಅದನ್ನು ತಡೆಗಟ್ಟುವುದಕ್ಕೆ ಸಾಧ್ಯವಿದೆ. ಬಲ್ಬ್ ಒಡೆದುಹೋಯಿತು ನಮ್ಮ ಆಸ್ತಿ ನಷ್ಟವಾಯಿತು. ಆದರಿಂದ ಉದ್ದೇಶ ಸಾಧನೆಯಾಗುವುದಿಲ್ಲ. ಆದ್ದರಿಂದ ಅಂಥವುಗಳೆಲ್ಲವನ್ನೂ ಚಳುವಳಿಯ ಮುಖಂಡತ್ವವನ್ನು ವಹಿಸಿಕೊಂಡಿರತಕ್ಕ ಜನ ಯಾರು ಇದ್ದಾರೆ ಅವರು ದೇಶಪ್ರೇಮದಿಂದ ಕೆಲಸ ಮಾಡಿದರೆ ಅಂತಹ ಘಟನೆಗಳು ಆಗುವುದಿಲ್ಲ. ಆದ್ದರಿಂದ ಈಗ ಮಾನ್ಯ ಸದಸ್ಯರು ತಂದಿರತಕ್ಕ ತಿದ್ದುಪಡಿಯನ್ನು ನಾವು ಒಪ್ಪಿಕೊಂಡರೆ ಅದು ಮೂಗಿಗಿಂತ ಮೂಗುತಿಭಾರ ಎಂದಾಗುತ್ತದೆ. ಸಣ್ಣಪುಟ್ಟ ಘಟನೆಗಳನ್ನೆಲ್ಲಾ ಇದರಲ್ಲಿ ಸೇರಿಸಿದರೆ ಅದು ಸರ್ಕಾರದ ಅಭಿಪ್ರಾಯಕ್ಕೆ ತದ್ವಿರುದ್ಧವಾಗುತ್ತದೆ. ಈ ದೃಷ್ಟಿಯಿಂದ ಮಾನ್ಯ ಸದಸ್ಯರ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಆದಕಾರಣ ಮಾನ್ಯ ಸದಸ್ಯರಾದ ಶ್ರೀಮಾನ್ ಶಾಮಣ್ಣನವರು ಅವರ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಪ್ರಾರ್ಥಿಸುತ್ತೇನೆ.

Mr. DEPUTY SPEAKER.—Is the hon. member withdrawing the amendment ?

Sri T. R. SHAMANNA.—Before withdrawing I want to offer some remarks.

Mr. DEPUTY SPEAKER.—There is no quostion of offering remarks. He must make up his mind to withdraw it.

ಶ್ರೀ ಟಿ. ಆರ್. ಶಾಮಣ್ಣ.—ಈಗ ಮಾನ್ಯ ಮಂತ್ರಿಗಳು ಒಂದು ತಿದ್ದುಪಡಿಯನ್ನು ತಂದು ಅದರಲ್ಲಿ ಲೋಕಲ್ ಬಾಡೀಸ್ ಅನ್ನು ಸೇರಿಸಿದ್ದಾರೆ. ಆದ್ದರಿಂದ, ನನ್ನ ತಿದ್ದುಪಡಿ ಅಗತ್ಯವಿಲ್ಲ. ಅದನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

Mr. DEPUTY SPEAKER.—I hope the House gives permission for the Hon. Member to withdraw his amendment.

HON. MEMBERS.—Yes.

(The amendment was withdrawn by leave of the House)

Mr. DEPUTY SPEAKER.—I will now put the clause to the vote of the House.

The question is :

"That clause 2 do stand part of the Bill."

The motion was adopted and Clause 2 was added to the Bill.

Now I will put clause 1, the long title and the enacting formula of the Bill to the vote of the House.

The question is :

"That clause 1, the long title and the enacting formula do stand part of the Bill."

The motion was adopted and Clause 1, the long title and enacting formula were added to the Bill.

Motion to pass.

Sri H. M. CHANNABASAPPA.—I beg to move :

"that the Indian Penal Code (Mysore Amendment) Bill, 1972 be passed."

Mr. DEPUTY SPEAKER.—The question is :

"That the Indian Penal Code (Mysore Amendment) Bill, 1972 be passed."

The motion was adopted and the Bill was passed.

There is one more bill, and that is The Press and Registration of Books (Mysore Amendment) Bill, 1972.

Press and Registration of Books (Mysore Amendment) Bill 1972.

Motion to consider.

Sri H. M. CHANNABASAPPA.—I beg to move :

"That the Press and Registration of Books (Mysore Amendment) Bill, 1972, be taken into consideration."

Mr. DEPUTY SPEAKER.—Motion moved.

"That the Press and Registration of Books (Mysore Amendment) Bill, 1972, be taken into consideration."

†ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಾಮಿ ತಿದ್ದುಪಡಿ ಬಹಳ ಸಣ್ಣದು, ಈಗಿರತಕ್ಕ ಶಾಸನದ ಪ್ರಕಾರ ಯಾವ ಪ್ರೆಸ್ಸೇ ಆಗಲೀ ಅಥವಾ ಪತ್ರಿಕಾ ಪ್ರಕಟಣೆಯಾಗಲೀ ತಾವು ಮಾಡತಕ್ಕ ಪ್ರಕಟಣೆಗಳು ಮತ್ತು ಪುಸ್ತಕಗಳು-ಇವುಗಳನ್ನೆಲ್ಲಾ ಸರ್ಕಾರಕ್ಕೆ ಅಥವಾ ಸರ್ಕಾರದ ಆಜ್ಞೆಯನ್ನು ಪಡೆದಿರತಕ್ಕವರಿಗೆ ಉಚಿತವಾಗಿ 3 ಪ್ರತಿಗಳನ್ನು ಸಲ್ಲಿಸಬೇಕೆಂದು ವಿಧಾಯಕವಾಗಿದೆ. ಈಗ ಬೊಂಬಾಯಿನಲ್ಲಿರತಕ್ಕ ಶಾಸನ ಏನಿದೆ, ಅದಕ್ಕನುಗುಣವಾಗಿ ಬೊಂಬಾಯಿ ಕರ್ನಾಟಕದಲ್ಲಿ ಜಾರಿಯಲ್ಲಿದೆ. ಈಗ ಮೈಸೂರಿನಲ್ಲಿರುವ ಆಜ್ಞೆಯ ಪ್ರಕಾರ ಸರ್ಕಾರಕ್ಕೆ ಎರಡು ಪ್ರತಿಗಳನ್ನು ಮಾತ್ರ ಉಚಿತವಾಗಿ ಕೊಡಬೇಕೆಂದು ವಿಧಾಯಕವಾಗಿದೆ. ಇದು ದೇಶದ ಎಲ್ಲಾ ಕಡೆಗಳಲ್ಲಿಯೂ ಒಂದೇ ರೀತಿ ಇರತಕ್ಕದ್ದು ಯೋಗ್ಯ ಮತ್ತು ಆ ಪ್ರಕಟಣೆಗಳ ಪ್ರತಿಯೊಂದು ಪ್ರತಿಯನ್ನೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಕಳುಹಿಸುವುದು ಯೋಗ್ಯ ಎಂದು ಹೇಳಿ ರಾಜ್ಯದ ಎಲ್ಲಾ ಭಾಗಗಳಲ್ಲಿಯೂ ಒಂದೇ ತರಹ ಕಾನೂನು ಇರುವುದು ಯೋಗ್ಯ ಎನ್ನುವ ದೃಷ್ಟಿಯಿಂದ ಈ ತಿದ್ದುಪಡಿಯನ್ನು ಇಲ್ಲಿ ತಂದಿದ್ದೇವೆ. ಇದನ್ನು ತಾವುಗಳು ಒಪ್ಪಿಕೊಳ್ಳಬೇಕೆಂದು ನಾನು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

MR. DEPUTY SPEAKER.—The question is:

"That the Press and Registration of Books (Mysore Amendment) Bill, 1972, be taken into consideratson".

The motion was adopted.

Now clause by Clause consideration.

Consideration of Clauses

CLAUSE—2

MR. DEPUTY SPEAKER.—The question is:

"That Clause 2 do stand part of the Bill."

The motion was adopted and Clause 2 was added to the Bill.

Now I will put Clause 1, to the vote of the House.

The question is :

"That clause 1, the long title and the Enacting Formula do stand part of the Bill".

The motion was adopted.

Clause 1, the long title and enacting formula were added to the Bill.

Motion to pass

SRI H. M. CHANNABASAPPA.—Sir, I move :

"That the Press and Registration of Books (Mysore Amendment) Bill, be passed".

MR. DEPUTY SPEAKER.—The question is :

"That the Press and Registration of Books (Mysore Amendment) Bill, 1972, be passed."

The motion was adopted and the Bill was passed.

There is one half-an-hour discussion. It will be taken up tomorrow.

Now the house stands adjourned, to meet again at 1 P.M. tomorrow.

The House adjourned at Fifty-three Minutes past Five of the Clock to meet again at One of the Clock on Thursday the 20th July 1972.

WD 18262—GPB—500—13-2-1973

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Thursday, the 20th July 1972/Ashadha 29, 1894 (Śaka Era)

The House met in the Assembly Chamber, Vidhana Soudha, at One of the Clock.

MADAM SPEAKER [SMT. K. S. NAGARATHNAMMA] in the Chair.

STARRED QUESTIONS

(to which oral Answers were given)

Electrification of Villages in the State

233. Sri C. N. PATIL (Lingsugur).—

Will the Minister for Public Works and Electricity be pleased to state :—

(a) whether any firm date has been fixed to electrify all the villages of which census for electrification is taken in the State;

(b) whether there is any scheme to include in rural electrification programme these villages which do not come under the guide-lines laid down by the Mysore State Electricity Board ;

(c) the total number of villages census and non-census electrified (districtwise information may be furnished) during the last one year ;

(d) whether there is any proposal to include also the villages under the rural electrification programme to which electricity is not available due to some provision in the guide-lines coming in the way and to subsidise the Mysore State Electricity Board to compensate the loss, if it sustains in such cases ?

Sri H. M. CHANNABASAPPA (Minister for public Works).—

(a) No.

(b) No.

(c) 2,751 as indicated in the statement appended.

(d) No.

(SRI H. M. CHANNABASAPPA)

Districtwise breakup of Electrified Census Villages and Hamlets during the year 1971-72.

Sl. No.	District		No. of Census villages Electrified during the year 1971–72.	No. of Hamlets Electrified during 1971–72.	Total No. of villages and Hamlets electrified during the year 1971–72.
1	Bangalore	...	192	60	252
2	Belgaum	...	87	13	100
3	Bellary	...	46	26	72
4	Bidar	...	94	29	123
5	Bijapur	...	163	10	173
6	Chickmagalur	...	62	27	89
7	Chitradurga	...	87	23	110
8	Coorg	...	13	3	16
9	Dharwar	...	160	5	165
10	Gulbarga	...	134	9	143
11	Hassan	...	146	30	176
12	Kolar	...	276	64	340
13	Mandya	...	100	23	123
14	Mysore	...	140	73	213
15	North Kanara	...	24	3	27
16	Raichur	...	172	4	176
17	Shimoga	...	65	25	90
18	South Kanara	...	97	6	103
19	Tumkur	...	211	49	260
	Total	...	2,269	482	2,751

ಶ್ರೀ ಸಿ. ಎನ್. ಪಾಟೀಲ್.—ನಮ್ಮ ಪಕ್ಕದ ಮದ್ರಾಸು ರಾಜ್ಯ ಮತ್ತು ಇನ್ನಿತರ ಕೆಲವು ರಾಜ್ಯಗಳಲ್ಲಿ ಈಗಾಗಲೇ ರೂರಲ್ ಎಲೆಕ್ಟ್ರಿಫಿಕೇಷನ್ ಮುಗಿಯುತ್ತಿರುವಾಗ ನಮ್ಮ ರಾಜ್ಯದಲ್ಲಿ ಏಕೆ ನಿಧಾನವಾಗಿದೆ ? ಸರ್ಕಾರದಲ್ಲಿ ಅದರ ಬಗ್ಗೆ ಏನಾದರೂ ಯೋಜನೆ ಇದೆಯೇ ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ನಿರ್ದಿಷ್ಟವಾದ ವಿಧಿನಿಯಮಗಳನ್ನನುಸರಿಸಿ ವಿದ್ಯುದ್ವೇಗದಲ್ಲಿ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುವ ಯೋಚನೆ ಮಾಡಿದ್ದೇವೆ. ಈ ವರ್ಷ ಸುಮಾರು 2750 ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಕೊಡಬೇಕೆಂದೂ ಯೋಚನೆ ಮಾಡಿದ್ದೇವೆ. ಸಾಧ್ಯವಾದರೆ ಮೂರು ಸಾವಿರ ಹಳ್ಳಿಗಳಿಗೆ ಕೂಡ ಕೊಡಬೇಕು ಎಂದು ಇದ್ದೇವೆ. ಸರ್ಕಾರ ತಾನು ಯೋಚನೆ ಮಾಡುವುದರ ಜೊತೆಗೆ ಗ್ರಾಮದಲ್ಲಿರತಕ್ಕ ಮುಖಂಡರು ಗ್ರಾಮದ ಜನರು ಕೂಡ ವಿಧಿನಿಯಮಗಳನ್ನನುಸರಿಸಿ ವಿದ್ಯುಚ್ಛಕ್ತಿಯನ್ನು ತೆಗೆದುಕೊಳ್ಳುವುದಕ್ಕೆ ಎಷ್ಟೆಷ್ಟು ಬೇಗ ಮುಂದೆ ಬರುತ್ತಾರೆ ಅಷ್ಟಷ್ಟು ಬೇಗ ಸರ್ಕಾರ ಅವರಿಗೆ ಆದ್ಯತೆ ಕೊಡುತ್ತದೆ.

ಶ್ರೀ ಸಿ. ಎನ್. ಪಾಟೀಲ್.—ಮೇನ್ ಲೈನಿಗೆ ಒಂದೂವರೆ ಕಿಲೋ ಮೀಟರ್ ಅಂತರದಲ್ಲಿರುವ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಪೂರೈಸಲಾಗುತ್ತದೆ ಎಂದು ನಿನ್ನೆ ಮಾನ್ಯ ಮಂತ್ರಿಗಳು ಸಭೆಯಲ್ಲಿ ಹೇಳಿದ್ದಾರೆ. ಬೊಂಬಾಯಿ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕದಲ್ಲಿ ಕೆಲವು ಹಳ್ಳಿಗಳ ಅಂತರ ದೂರವಿದ್ದು, ಕುಡಿಯುವ ನೀರಿನ ಬಾವಿಗಳೇ ಇಲ್ಲದೆ ಇರುವಾಗ ಲಿಫ್ಟ್ ಇರಿಗೇಷನಿಗೆ ಪ್ರಾಧಾನ್ಯತೆ ಕೊಡಲಿಕ್ಕೆ ಬರುವುದಿಲ್ಲ. ಆದ್ದರಿಂದ ಮುಖ್ಯ ಮೇನ್ ಲೈನಿಗೆ ಸಮೀಪದಲ್ಲಿರುವ ಸಂಭವ ಕಡಿಮೆ. ಆದುದರಿಂದ ನೂರು ಹಳ್ಳಿಗಳಲ್ಲಿ 25 ಹಳ್ಳಿಗಳ ಬಗ್ಗೆಯಾದರೂ ಎಕ್ಸೆಪ್ಷನ್ ತೆಗೆದುಕೊಂಡು, ಸರ್ಕಾರದಿಂದ ಬೇಕಾದರೆ ಸಬ್ಸಿಡಿ ಕೊಟ್ಟು ಎಲ್ಲ ಹಳ್ಳಿಗಳಿಗೂ ವಿದ್ಯುಚ್ಛಕ್ತಿಯನ್ನು ಕೊಡುವ ವ್ಯವಸ್ಥೆಯನ್ನು ಸರ್ಕಾರದವರು ಮಾಡುತ್ತಾರೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುವುದನ್ನು ವೇಗಗೊಳಿಸಬೇಕೆಂದು ಅನೇಕ ವಿಧಿ ನಿಯಮಗಳನ್ನು ಸಡಿಲ ಮಾಡಿದ್ದೇವೆ. ಟ್ಯಾಪಿಂಗ್ ಪಾಯಿಂಟ್‌ನಿಂದ ಒಂದೂವರೆ ಕಿಲೋ ಮೀಟರ್ ಒಳಗೆ ಇರತಕ್ಕ ಗ್ರಾಮಗಳಿಗೂ 5 ಅಥವಾ 7½ ಪರ್ಸೆಂಟ್ ಉತ್ಪನ್ನ ಬಾರದೆ ಇದ್ದರೆ ಕೊಡುವುದಕ್ಕಾಗುವುದಿಲ್ಲ. ಯಾವ ಯಾವ ಗ್ರಾಮಗಳು ಒಂದೂವರೆ ಕಿಲೋ ಮೀಟರ್ ಒಳಗೆ ಬರುತ್ತವೆ ಆ ಗ್ರಾಮಗಳನ್ನು ನಮ್ಮ ಕಾರ್ಯಕ್ರಮ ಪಟ್ಟಿಯಲ್ಲಿ ಹಾಕಿಕೊಳ್ಳುತ್ತೇವೆ.

Sri D. B. KALMANKAR —In answer to (*b*) you have stated 'No'. As suggested by Sri C. N. Patil, whether the Government consider taking over some big villages which do not come within the distance of 1½ Kms. from the power main ?

Sri H. M. CHANNABASAPPA.—I have already made it clear it is not as though we include such villages which come within 1½ Kms. Even if the villages are 10 to 25 Kms away, we are prepared to include in the scheme provided they are potential areas. The Government has ordered that for all potential areas sub-transmission line may be drawn so that return may become feasible for the villages.

ಶ್ರೀ ಸಿ. ಬೈರೇಗೌಡ.—ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ಬೇಗ ಜನ ಮುಂದೆ ಬಂದರೆ, ಅಷ್ಟು ಬೇಗ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ತಯಾರಾಗಿದ್ದೇವೆಂದು ಮಾನ್ಯ ಮಂತ್ರಿಗಳು ಈಗ ತಾನೇ ಹೇಳಿದರು. ನನಗೆ ಗೊತ್ತಿರುವ ಹಾಗೆ ಕೋಲಾರ ಪ್ರದೇಶದಲ್ಲಿ ನಾರ್ಮ್ಸ್ ಎಲ್ಲಾ ಪೂರ್ತಿಯಾಗಿ, ಎಸ್ಟಿಮೇಟುಗಳು ಮಂಜೂರಾಗಿ, ಅಗ್ರಿಮೆಂಟ್ ವಗೈರೆ ಎಲ್ಲ ಪೂರ್ತಿಯಾಗಿ ಸುಮಾರು ಒಂದು ವರ್ಷವಾಗಿದ್ದರೂ ಏನೂ ಕೆಲಸ ಪೂರ್ತಿಯಾಗಿಲ್ಲ. ಇದನ್ನು ಎಷ್ಟು ಬೇಗ ಮುಗಿಸುವುದಕ್ಕಾಗುತ್ತದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಗ್ರಿಮೆಂಟ್ ವಗೈರೆ ಕೊಟ್ಟಿದ್ದರೂ ನಿರ್ದಿಷ್ಟವಾದ ಉತ್ಪನ್ನ ಬಾರದೆ ಇದ್ದ ಪಕ್ಷದಲ್ಲಿ ಅವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಒಂದು ವೇಳೆ ಬಂದರೆ ಅದರ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

† Astericks indicate that the remarks or speeches have not been revised by the member concerned.

ಶ್ರೀ ಎಸ್. ಎಂ. ಚಂದ್ರಶೇಕರ್.—'ದೀಪದ ಬುಡ ಕತ್ತಲೆ' ಎನ್ನುವಂತೆ ಲಿಂಗನಮಕ್ಕಿ ಜಲಾಶಯದಿಂದ ಇಡೀ ಸಂಸ್ಥಾನ ಮತ್ತು ಇತರ ರಾಜ್ಯಗಳಿಗೆ ವಿದ್ಯುಚ್ಛಕ್ತಿ ಹೋಗುತ್ತಿದೆ. ಆದರೆ ಲಿಂಗನಮಕ್ಕಿ ಜಲಾಶಯದ ಹತ್ತಿರ ಹತ್ತಿರ ಇರತಕ್ಕ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಮಂಜೂರಾಗಿಲ್ಲ ಎನ್ನುವುದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ ?

Sri H. M. CHANNABASAPPA.—There may not be a number of cases where the power has not been sanctioned. The villages round about might not have fulfilled the requirements for electrification. If these villages satisfy the usual norms, we will certainly do the needful. ಗ್ರಾಮಾಂತರ ಜನಗಳಿಗೆ ತಾವು ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕು, ಅದೆಲ್ಲ ಪೂರೈಕೆಯಾಗಿ ಮತ್ತು ನಮ್ಮ ನಾರ್ಮ್ಸ್ ಸರಿಹೊಂದಿದ ಪಕ್ಷದಲ್ಲಿ ವಿದ್ಯುಚ್ಛಕ್ತಿಯನ್ನು ಪೂರೈಸುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಗವರ್ನರ್ ಕಾಲದಲ್ಲಿ ಎರಡು ಪಟ್ಟಿ ಮಾಡಿದ್ದರು. ಎರಡನೇ ಪಟ್ಟಿಯನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಎಕಾನಮಿ ಮೆಷರ್ಸ್‌ನಿಂದ ಕೆಲಸವನ್ನು ನಿಲ್ಲಿಸಲು ಆದೇಶ ಕೊಟ್ಟಿದ್ದರು. ಎಂಟು ಹತ್ತು ದಿವಸಗಳ ಕೆಳಗೆ ಮಾನ್ಯ ಮಂತ್ರಿಗಳ ಮಾತನಾಡುವಾಗ ಯಾವ ಯಾವ ಕೆಲಸಗಳನ್ನು ಮಿತವ್ಯಯ ದೃಷ್ಟಿಯಿಂದ ನಿಲ್ಲಿಸಲಾಗಿತ್ತೋ ಅವುಗಳನ್ನು ಮಾಡುವಂತೆ ಹೇಳಿದ್ದೇವೆಂದು ತಿಳಿಸಿದರು. ಹಾಸನದಲ್ಲಿ ಈ ಬಗ್ಗೆ ಏನೂ ಡೈರೆಕ್ಷನ್ ಹೋಗಿಲ್ಲ. ಬೇಗ ಆದೇಶ ಕಳುಹಿಸುವ ವ್ಯವಸ್ಥೆ ಮಾಡುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೋದ ವರ್ಷ ವಿದ್ಯುಚ್ಛಕ್ತಿಯನ್ನು ಕೊಡಲು ಎಷ್ಟು ವೇಗದಲ್ಲಿ ಕೆಲಸ ಮಾಡಿದೆವೋ ಅದಕ್ಕಿಂತ ಕಡಿಮೆ ಇಲ್ಲದಂಥ ವೇಗದಿಂದ ಕೆಲಸ ಮಾಡಬೇಕೆಂದು ಹುಕುಂ ಕೊಟ್ಟು ಮೂರು ನಾಲ್ಕು ದಿವಸಗಳಾಗಿವೆ. ಅದು ಇನ್ನೂ ಟ್ರಾನ್ಸಿಷನ್‌ನಲ್ಲಿರಬಹುದು ಎಂದು ಕಾಣುತ್ತದೆ.

ಅಧ್ಯಕ್ಷರು.—271, 573 ಮತ್ತು 640 ನೇ ಪ್ರಶ್ನೆಗಳನ್ನು ಒಟ್ಟಿಗೆ ತೆಗೆದುಕೊಳ್ಳೋಣ.

Damage to Canal of Sharavathy Valley Project

271. **Sri KAGODU THIMMAPPA** (Sagar).—

Will the Minister for Public Works and Electricity be pleased to state:—

(a) the amount that was spent for canal between Linganmakki dam and Surge tank ;

(b) whether the design for the said canal was obtained from a private firm, if so, the amount paid by the Government for the same ;

(c) the justification of obtaining the design from a private firm when the Government had technical staff with them ;

(d) whether the rumour that the canal is damaged is true ; if so, on whom the responsibility fixed by the Government ?

Sri H. M. CHANNABASAPPA (Minister for Public Works).—

(a) The total amount incurred on Water Conductor System from Linganmakki Dam up to the Surge tank in the Sharavathi Valley project is Rs. 3,97,93,271.

(b) The tender accepted for the construction of power channel, which is one of the components of the Water Conductor System, was based on contractor's design and drawings.

(*c*) On technical advice, a choice was given in the tender for the contractors to furnish their own alternative design and to quote rates for both the departmental as well as their own design.

(*d*) Yes. Damages were observed in 1963 and 1964 and they were immediately got repaired. The question of locating the causes for these damages as also to fix responsibility for the same is engaging the attention of Government.

Defects in the Tunnel of Sharavathy Valley Hydro-electric Project

573. Sri C. M. ARUMUGAM (K.G.F.).—

Will the Minister for Public Works and Electricity be pleased to state :—

(*a*) whether there is any defect in the pressure tunnel of the Sharavathi Valley Hydro-Electric Project ;

(*b*) if so, whether it has been brought to the notice of the authorities concerned ;

(*c*) the action taken in that behalf ;

(*d*) the estimated expenditure to repair the tunnel ;

(*e*) the names of the contractor, Chief Engineer, Superintending Engineer, Executive Engineer and Assistant Engineers who were in-charge when the tunnel was constructed ?

Sri H. M. CHANNABASAPPA (Minister for Public Works).—

(*a*) Some damages have been observed in the pressure tunnel No. 1 of the Sharavathy Valley Hydro-Electric Project.

(*b*) Yes.

(*c*) The Mysore Power Corporation is seized of the matter and is making arrangements for carrying out repairs during August-September 1972.

(*d*) The expenditure required for repairs can be assessed only after knowing the extent of the damages caused to the tunnel.

(*e*) Contractors—M/s. Hindustan Construction Co. List of officers is given below as per information compiled so far.

Chief Engineers :

1. Sri L. C. Muniswamy Reddy. (Deceased)
2. Sri Iftikar Ahmed (on leave preparatory to retirement)
3. Sri L. T. Aminbhavi (Retired)

(SRI H. M. CHANNABASAPPA)

Superintending Engineers :	1.	Sri A. R. Raichur up to December 1963—(Resigned)
	2.	Sri B. V. Vittalmurthy (Retired)
Executive Engineers :	1.	Sri C. V. Gopalakrishna Setty
	2.	Sri V L. Narayana (Retd.)
	3.	Sri H. M. Kori (Retd.)
	4.	Sri P. R. Seetharamiah.
Assistant Engineers :	1.	Sri L. Shivalingiah
	2.	Sri C. K. Balakrishna
	3.	Sri M. Channappa
	4.	Sri R. Somashekar.

Defects in Tunnel of Sharavathy Hydro Electric Project

640. SRI H. D. DEVE GOWDA (Holenarasipur).—

Will the Minister for Public Works and Electricity be pleased to state :—

(*a*) when was the work relating to concreting of tunnel works of Sharavathi Hydro Electric Project sanctioned ;

(*b*) to whom and when the said work was entrusted on contract, and who was the then Minister for Public Works ;

(*c*) when was the work completed; the number and names of the Public Works Ministers during the period from the beginning to end of the works ;

(*d*) whether damage is caused to this work (concreting) and the reasons therefor ;

(*e*) the amount of expenditure required for its repairs ;

(*f*) whether it is a fact that due to damage to the tunnel the wheels of power generating plant is affected and the expenditure to be incurred for their repairs ?

SRI H. M. CHANNABASAPPA (Minister for Public Works and Electricity).—

(*a*) January 1960.

(*b*) (i) M/s Hindustan Construction Company—in September 1960.

(ii) Sri H. M. Channabasappa was the Minister for Public Works and Electricity.

(*c*) (i) Completed in 1965.

(ii) Four, as indicated below:

(a) Sri H. M. Channabasappa
(b) Sri H. K. Veeranna Gowda
(c) Sri Veerendra Patil
(d) Sri S. Nijalingappa

(*d*) Yes. The question of location of causes for the damages is engaging the attention of Government.

(*e*) The expenditure required for the repairs can be assessed only after knowing the extent of the damages caused to the tunnel.

(*f*) Yes. The Mysore Power Corporation is seized of the matter and is assessing the extent of damages caused.

ಶ್ರೀ ಕಾಗೋಡು ತಿಮ್ಮಪ್ಪ.—ಸುಮಾರು 1963-64 ರಲ್ಲಿ ಕಾಲುವೆ ಜಖಂ ಆಗಿರುವುದು ಕಂಡು ಬಂತು ಎಂದು ಹೇಳಿದ್ದಾರೆ. ಹಾಗಿದ್ದರೂ ಅದನ್ನು ಏಕೆ ಹೊರಗೆಡವಲಿಲ್ಲ ? ಏಕೆ ಬಚ್ಚಿಡಲಾಗಿತ್ತು ಎಂದು ಹೇಳುವುದಕ್ಕಾಗುತ್ತದೆಯೇ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಬಚ್ಚಿಡಲಿಲ್ಲ. ರಿಪೇರಿ ಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ರೀತಿ ಜಖಂ ಆಗುವುಕ್ಕೆ ಮುಖ್ಯವಾದ ಕಾರಣಗಳೇನು ಎನ್ನುವುದನ್ನು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಫೈನಲ್ ಆಗಿ ಏನು ಕಾರಣ ಎನ್ನುವದನ್ನು ವಿಚಾರ ಮಾಡಬೇಕಾಗಿದೆ. ಆದರೆ ಇದುವರೆಗೂ ತಿಳಿದು ಬಂದಿರುವಂತೆ ಕೆಳಗಡೆ ನೀರಿನ ಒತ್ತಡ ಬಹಳ ಹೆಚ್ಚಾಗಿ ಹಾಸಿರತಕ್ಕ ಸಿಮೆಂಟ್ ಸ್ಲಾಬ್ ಕ್ರ್ಯಾಕ್ ಆಯಿತು ಮತ್ತು ಎಕ್ಸ್‌ಪ್ಯಾನ್‌ಷನ್ ಜಾಯಿಂಟ್ಸ್‌ನಲ್ಲಿ ನೀರು ಸೋರುವುದು, ಈ ಎರಡು ಮುಖ್ಯ ಕಾರಣದಿಂದ ಇದರಲ್ಲಿ ತೊಂದರೆಯಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಸುಮಾರು 3 ಕೋಟಿ 97 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿರತಕ್ಕ ಈ ಒಂದು ಕಾಲುವೆ, ಇಷ್ಟು ಬೇಗ ನಾದುರಸ್ತಿ ಆಗಬೇಕಾದರೆ, ಉಪಯೋಗಿಸಿರತಕ್ಕ ಸಾಮಾನುಗಳು, ತಮ್ಮ ಇಲಾಖೆಯ ಎಸ್ಟಿಮೇಟ್ ಪ್ರಕಾರ, ಸ್ಪೆಸಿಫಿಕೇಷನ್ ಪ್ರಕಾರ ಇದೆಯೇ ಅಥವಾ ಏನಾದರೂ ದೋಷಪೂರಿತ ಮೆಟೀರಿಯಲ್ಸ್ ಅನ್ನು ಉಪಯೋಗಿಸಿದ್ದಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೂರು ಕೋಟಿ 97 ಲಕ್ಷ ರೂಪಾಯಿ ಖರ್ಚಾಗಿರತಕ್ಕದು ಮೂರು ಭಾಗಗಳಿಗೆ. ಒಂದು, ಪವರ್ ಚಾನಲ್ ಇದಕ್ಕೆ 1 ಕೋಟಿ 86 ಲಕ್ಷ ರೂಪಾಯಿ; ಎರಡು ಮಳಲಿ ಟನಲ್ ಇದಕ್ಕೆ 82 ಲಕ್ಷ ರೂಪಾಯಿ; ಮೂರು, ಒಡೇನಬೈಲ್ ಪ್ರಪರ್ ಟನಲ್ ಇದಕ್ಕೆ 1 ಕೋಟಿ 29 ಲಕ್ಷ ರೂಪಾಯಿ ಇಷ್ಟು ಸೇರಿ ಮೂರು ಕೋಟಿ 97 ಲಕ್ಷ ರೂಪಾಯಿ ಆಗಿದೆ. ತಾವು ಈ ಒಂದು ಕಾಲುವೆಗೆ ಮೂರು ಕೋಟಿ 97 ಲಕ್ಷ ರೂಪಾಯಿ ಖರ್ಚಾಗಿದೆ ಎಂದು ಹೇಳುವುದು ಸರಿಯಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಈ ಸದನದಲ್ಲಿ, ಈ ರೀತಿ ಕಾಲುವೆ ಜಖಂ ಆಗುವುದಕ್ಕೆ ಮುಖ್ಯ ಕಾರಣ, ಅಲ್ಲಿ ಉಪಯೋಗಿಸಿರತಕ್ಕ ಮೆಟೀರಿಯಲ್ಸ್‌ಗಳು ದೋಷಪೂರಿತವಾದಂಥವು ಎಂದು ಹೇಳಿದ್ದೀರಿ. ದೋಷಪೂರಿತವಾದ ಕೆಲಸವಾಗಿಲ್ಲ ಎಂದು ಆಗ ಇದ್ದಂಥ ಚೀಫ್ ಇಂಜನಿಯರ್‌ರವರು ಹೇಳಿಕೆ ಕೊಟ್ಟಿದ್ದಾರೆ, ಇದರಲ್ಲಿ ಯಾವುದು ಸರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಹೇಳತಕ್ಕದ್ದು ಸರಿಯಲ್ಲ. ದೋಷ ಪೂರಿತವಾದುದ್ದೇ ಅಲ್ಲವೇ ಎನ್ನುವ ಅಭಿಪ್ರಾಯವನ್ನು ನನ್ನ ಸ್ಟೇಟ್‌ಮೆಂಟಿನಲ್ಲ ವ್ಯಕ್ತವಾಡಿಲ್ಲ. ಇರತಕ್ಕ ಅಂಕಿ ಅಂಶ ಮತ್ತು ವಾಸ್ತವಾಂಶ ತಮ್ಮ ಮುಂದೆ ಇಟ್ಟಿದೆ ಅಷ್ಟೇ.

ಶ್ರೀ ಎಚ್. ಡಿ. ದೇವೇಗೌಡ.—ತಾವು 252 ನೇ ಪ್ರಶ್ನೆ (ಡಿ) ಗೆ ಉತ್ತರ ಕೊಡುತ್ತಾ, The question of location of causes for the damages is engaging the attention of Government ಎಂದು ಹೇಳಿದ್ದೀರಿ. ತಾವು ಇಲ್ಲಿ ಉತ್ತರಕೊಡತಕ್ಕ ಕಾಲದಲ್ಲಿ ಶಾಬಿ ಕೆಲಸ ಮತ್ತು ಸಬ್ ಸ್ಟ್ಯಾಂಡರ್ಡ್ ಕೆಲಸ ಆಗಿದೆ, ಜೆಲ್ಲಿ ಕಿತ್ತು ಬರುತ್ತದೆ, ಕಾಂಕ್ರೀಟ್ ಒಡೆದು ಹೋಗಿದೆ ಎಂದು ಹೇಳಿದ್ದೀರಿ. ಇದರ ಬಗ್ಗೆ ತಮ್ಮ ಸ್ಪಷ್ಟವಾದ ನಿಲುವನ್ನು ತಿಳಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ಟೇಟ್‌ಮೆಂಟ್ ಆಫ್ ಫ್ಯಾಕ್ಟ್ಸ್ ಕೊಟ್ಟಿದ್ದೇನೆ, ಏನು ನಡೆಯಿತು ಎಂದು ಕೊಟ್ಟಿದ್ದೇನೆ, ಅದರ ಮೇಲೆ ನಿರ್ಣಯ ಆಗತಕ್ಕದ್ದು ಇದೆ. ಏನು ಕಾರಣ, ಯಾರಿಂದ ಆಯಿತು, ಇವು ಇನ್ನೂ ವಿಚಾರ ಮಾಡತಕ್ಕ ವಿಷಯ ಇದೆ.

ಶ್ರೀ ಎಚ್. ಡಿ. ದೇವೇಗೌಡ.—251 ನೇಯ ಪ್ರಶ್ನೆಗೆ, ಆಫೀಸರ್ಸ್ ಯಾರು ಯಾರು ಇದ್ದರು ಎಂದು ಪಟ್ಟಿ ಕೊಟ್ಟಿದ್ದಾರೆ. ಆ ಅಧಿಕಾರಿಗಳು ಎಲ್ಲರೂ ಟನಲ್ ಕೆಲಸ ಮಾಡಿದ್ದರಲ್ಲಿ ಇದ್ದರೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಟನಲ್ ಕನ್ಸ್ಟ್ರಕ್ಟ್ ಮಾಡುವ ಕಾಲದಲ್ಲಿ ಯಾರು ಯಾರು ಆ ಕೆಲಸದ ಚಾರ್ಜನಲ್ಲಿ ಇದ್ದರು ಎಂದು ಹೆಸರುಗಳನ್ನು ಕೊಟ್ಟಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಕೆಲಸದಲ್ಲಿ ಡಿಫೆಕ್ಟ್ ಕಾರ್ಯಗಳನ್ನು ಪತ್ತೆ ಹಚ್ಚುವುದಕ್ಕೆ ಯಾರನ್ನು ನೇಮಕ ಮಾಡಿದ್ದೀರಿ, ಎಷ್ಟು ದಿವಸಗಳಾಗುತ್ತದೆ ? ಮತ್ತು ಡಿಫೆಕ್ಟ್ ಯಾವ ಕಾರಣಕ್ಕೆ ಆಯಿತು ಸಬ್‌ಸ್ಟ್ಯಾಂಡರ್ಡ್ ಕೆಲಸ ಆಯಿತೇ ಕೆಮಿಕಲ್ ರೀಆಕ್ಷನ್‌ನಿಂದ ಆಯಿತೇ, ಎನ್ನುವುದನ್ನು ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ಅನ್ನು ನೇಮಕ ಮಾಡಿ ಕಂಡು ಹಿಡಿಯುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ವರ್ಕ್ಸ್ ಇನ್ಸ್‌ಪೆಕ್ಟ್ ಮಾಡುವ ಕಾಲದಲ್ಲಿ, ಯಾವ ಪ್ರಮಾಣದಲ್ಲಿ, ಎಲ್ಲೆಲ್ಲಿ ಅನಾಹುತವಾಗಿದೆ, ಯಾವರೀತಿಯಲ್ಲಿ ಆಗಿದೆ, ಅವೆಲ್ಲವನ್ನೂ ಪರಿಶೀಲನೆ ಮಾಡಬೇಕಾದರೆ ಕಾಲುವೆಯನ್ನು ಷಟ್ ಡೌನ್ ಮಾಡಿ ಮಾಡಬೇಕು. ಆಗ ಒಂದು ಸಲ ನೋಡಿದ ಮೇಲೆ, ತಾಂತ್ರಿಕಜ್ಞರು ಯಾವ ತರಹ ಮಾಡಬೇಕು, ಹೇಗೆ ಮಾಡಬೇಕು ಎನ್ನುವ ವಿವರಗಳನ್ನು ಅವರು ನಿರ್ಣಯ ಮಾಡುತ್ತಾರೆ. ತಾವು ಕೇಳಿರತಕ್ಕ 252ನೇ ಪ್ರಶ್ನೆಯಲ್ಲಿ When was the work relating to concreting of tunnel works of Sharavati Hydro Electric Project sanctioned ಎಂದು ಕೇಳಿದ್ದೀರಿ. ಅದಕ್ಕೆ ಉತ್ತರವಾಗಿ ಜನವರಿ 1960 ಎಂದು ಹೇಳಿದೆ, ಅದು ಟೆಂಡರ್ ಅಪ್ರೂವ್ ಮಾಡಿದ ಕಾಲ. ಟನಲ್ ಕಾಂಕ್ರೀಟ್ ವರ್ಕ್ ಪ್ರಾರಂಭ ಮಾಡಿದ್ದು 1-10-1961 ಎಂದು ಇಟ್ಟುಕೊಳ್ಳಬೇಕು.

ಶ್ರೀ ಎಸ್. ಎಂ. ಚಂದ್ರಶೇಖರ್.—ಮಾನ್ಯ ಮಂತ್ರಿಗಳು ಆ ಕಾಲದಲ್ಲಿ ಇದ್ದ ಇಂಜನಿಯರುಗಳ ಹೆಸರುಗಳನ್ನು ಕೊಟ್ಟಿದ್ದಾರೆ, ಅವರು ಹೇರಳವಾಗಿ ಹಣ ಗಳಿಸಿರತಕ್ಕ ದಾಖಲೆಯನ್ನು ಕೊಟ್ಟರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ವಿವರಣೆಗಳನ್ನು ಒದಗಿಸಿ, ಪ್ರೈಮಾಫೇಸಿ ಕೇಸ್ ಇದೆ ಎಂದು ಕಂಡುಬಂದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಎಂ. ನಾಗಣ್ಣ.—ಮಾನ್ಯ ಸದಸ್ಯರಾದ ಅರ್ಮುಗಂ ಅವರ (ಸಿ) ಪ್ರಶ್ನೆಗೆ The Mysore Power Corporation is siezed of the matter and is making arrangements for carrying out repairs during August-September 1972 ಎಂದು ಹೇಳಿದ್ದೀರಿ, (ಡಿ) ನಲ್ಲಿ the expenditure required for repairs can be assessed only after knowing the extent of the damages caused to the tunnel ಎಂದು ಹೇಳಿದ್ದೀರಿ. ಇದುವರೆಗೂ ಎಷ್ಟು ಡ್ಯಾಮೇಜಸ್ ಆಗಿದೆ ಎಂದು ನಿಖರವಾಗಿ ಗೊತ್ತಿಲ್ಲ ಎಂದು ಆಗುತ್ತದೆ. ನಾವು ಜುಲೈ ಕೊನೆಯಲ್ಲಿ ಇದ್ದೇವೆ, ಆಗಸ್ಟ್‌ನಲ್ಲಿ ಕೆಲಸ ಶುರು ಮಾಡಬೇಕು ಎಂದು ಈಗಾಗಲೇ ತಮಗೆ ವರದಿ ಬಂದಿರಬಹುದು. ಎಷ್ಟು ಡ್ಯಾಮೇಜ್ ಆಗಿದೆಯೆಂದು ತಿಳಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆಲಸ ಎಷ್ಟು ಪ್ರಮಾಣದಲ್ಲಿದೆ, ಮತ್ತು ಎಷ್ಟು ಹಣ ಖರ್ಚಾಗುತ್ತದೆ, ಯಾವರೀತಿ ಅದನ್ನು ರಿಪೇರಿ ಮಾಡಬೇಕು ಎನ್ನತಕ್ಕ ವಿಚಾರವನ್ನು ತಜ್ಞರಿಂದ ಆಗಸ್ಟ್ ತಿಂಗಳಲ್ಲಿ ನೋಡಿದಮೇಲೆ ಅಸೆಸ್ ಮಾಡಬೇಕಾಗಿದೆ. ಅದನ್ನು ನೋಡದ ಮುನ್ನ, ಅಸೆಸ್

ಮಾಡಿ, ಎಸ್ಟಿಮೇಟ್ ಮಾಡುವುದು ಸಾಧ್ಯವಾಗುವುದಿಲ್ಲ. ಆಗಸ್ಟ್ ತಿಂಗಳಲ್ಲಿ ಮೈಸೂರ್ ಪವರ್ ಕಾರ್ಪೋರೇಷನ್ ಅವರ ಇಂಜನಿಯರ್‌ಗಳು, ಸಂಬಂಧಪಟ್ಟವರಲ್ಲಿ ವ್ಯವಹಾರ ನಡೆಸಿ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ

ಶ್ರೀ ಕೆ. ಎಂ. ನಾಗಣ್ಣ.—ಆಗಸ್ಟ್-ಸೆಪ್ಟೆಂಬರ್ ತಿಂಗಳಲ್ಲಿ ರಿಪೇರ್ಸ್ ಕ್ಯಾರಿ ಔಟ್ ಮಾಡುತ್ತೇವೆ ಎಂದು ಹೇಳುತ್ತೀರಿ. ಈಗಾಗಲೇ ಇದರ ಬಗ್ಗೆ ವರದಿ ಬಂದಿರಬಹುದು, ಬಾರದಿದ್ದರೆ ಈ ತಿಂಗಳ ಕೊನೆಗೆ ತರಿಸುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ವರದಿ ಬಂದಿದೆ, ಏನೇನು ನಡೆದಿದೆ ಎನ್ನತಕ್ಕ ವರದಿ ಇದೆ. ಕರಾರುವಾಕ್ಕಾಗಿ ಯಾವ ತರಹ ಡ್ಯಾಮೇಜ್ ಆಗಿದೆ, ಎಷ್ಟು ಖರ್ಚಾಗುತ್ತದೆ, ಎನ್ನುವುದನ್ನು ಅಸೆಸ್ ಮಾಡಿ ರಿಪೇರಿ ಕ್ಯಾರಿ ಔಟ್ ಮಾಡುವುದ, ಹೀಗೆ ಏಕಕಾಲದಲ್ಲಿ ಎರಡೂ ಆಗಬೇಕಾಗುತ್ತದೆ. ಬಹಳ ಕಾಲ ಮುಚ್ಚಿಡುವುದಕ್ಕೆ ಆಗುವುದಿಲ್ಲ. ಯಾವಾಗ ನೀರನ್ನು ಷಟ್ ಡೌನ್ ಮಾಡುತ್ತೇವೆ, ತಕ್ಷಣ, ನೋಡುವುದು, ಮಾಡುವುದು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ವಿಷಯದಲ್ಲಿ ಬರೀ ತಾಂತ್ರಿಕ ತಪ್ಪು ಮಾತ್ರವಲ್ಲ, ಅನೇಕ ದುರ್ವ್ಯವಹಾರಗಳು ನಡೆದಿವೆ. ಲಂಚ ರುಷುವತ್ತುಗಳ ಅಪಾದನೆಗಳು ಕರಪ್ಷನ್ ಚಾರ್ಜಸ್ ಇದೆ ಎಂದು ತಮಗೆ ಗೊತ್ತಾಗಿದೆ. ಈ ರೀತಿ ಇರಬೇಕಾದರೆ, ಇದರ ಬಗ್ಗೆ ಜುಡಿಷಿಯಲ್ ಪ್ರೋಬ್ ಮಾಡುವುದಕ್ಕೆ ಒಪ್ಪಿಕೊಳ್ಳುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—"Appropriate action would be taken at the appropriate time" ಎಂದು ಅನೇಕವೇಳೆ ಹೇಳಿದ್ದೇನೆ. ಅಪ್ರೋಪ್ರಿಯೇಟ್ ಟೈಮ್ ಬಂದ ಕೂಡಲೇ ವಿವರಗಳನ್ನು ನೋಡಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಸರ್ಕಾರ ತೆಗೆದುಕೊಳ್ಳುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ.—ತಮ್ಮ ಉತ್ತರದಲ್ಲಿ ಅನೇಕ ಅಧಿಕಾರಿಗಳು ನಿವೃತ್ತರಾಗಿದ್ದಾರೆ, ರಾಜೀನಾಮೆ ಕೊಟ್ಟಿದ್ದಾರೆ ಎಂದು ಹೇಳಿದ್ದೀರಿ. ಆಗ ಯಾವ ಯಾವ ಕಾಲದಲ್ಲಿ, ಯಾವ ಯಾವ ಮಂತ್ರಿಗಳು ಇದ್ದರು, ಈ ಬಗ್ಗೆ ವಿವರಗಳನ್ನು ಮತ್ತು ಮಂತ್ರಿಗಳ ಹೆಸರನ್ನು ಕೊಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ವಿವರಗಳನ್ನು ಕೊಡುತ್ತೇನೆ,

3-3-1961ರ ವರೆಗೆ ಶ್ರೀ ಎಚ್. ಎಂ. ಚನ್ನಬಸಪ್ಪನವರು,

9-3-1961 ರಿಂದ 9-3-1962ರ ವರೆಗೆ ಶ್ರೀ ಎಚ್. ಕೆ. ವೀರಣ್ಣಗೌಡರು,

20-6-1962ರ ವರೆಗೆ ಶ್ರೀ ವೀರೇಂದ್ರ ಪಾಟೀಲರು ಇದ್ದರು,

3-3-1967ರ ವರೆಗೆ ಶ್ರೀ ನಿಜಲಿಂಗಪ್ಪನವರು ಇದ್ದರು.

ಶ್ರೀ ಸಿ. ಬೈರೇಗೌಡ.—ಈ ಸಭೆಗೆ ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಹೇಳಿಕೆಯನ್ನು ಮತ್ತು ಇತರರು ಹೇಳಿದ್ದು ಕೇಳಿದರೆ, ಶರಾವತಿ ಪ್ರಾಜೆಕ್ಟ್ ಇರುತ್ತದೋ, ಕೊಚ್ಚಿಕೊಂಡು ಹೋಗುತ್ತದೆಯೋ ಎಂಬ ಅನುಮಾನ ಇದೆ. ಕೆಲವು ದಿವಸಗಳು ಎಲೆಕ್ಟ್ರಿಸಿಟಿ ಇಲ್ಲದಿದ್ದರೆ ಚಿಂತೆ ಇಲ್ಲ, ಅಲ್ಲಿ ಕೆಲಸ ನಿಲ್ಲಿಸಿ, ಯಾವ ಯಾವುದಕ್ಕೆ ಡ್ಯಾಮೇಜ್ ಆಗಿದೆ ಎನ್ನುವುದನ್ನು ಪೂರ್ತಿಯಾಗಿ ಸರ್ಕಾರ ಸಭೆಯ ಮುಂದೆ ಇಡುವುದಕ್ಕೆ ಸಾಧ್ಯವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೊಚ್ಚಿಕೊಂಡು ಹೋಗುತ್ತದೆ ಎನ್ನುವ ಅಭಿಪ್ರಾಯ ಸರಿಯಲ್ಲ. ಸೂಕ್ತ ಕಾಲದಲ್ಲಿ ಅದಕ್ಕೆ ಏನು ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡು ಭದ್ರಪಡಿಸುವುದರಲ್ಲಿ ಏನೇನೂ ಅನುಮಾನವಿಲ್ಲ.

ಶ್ರೀ ಎಸ್. ಎಂ. ಚಂದ್ರಶೇಖರ್.—ಆಗಿರತಕ್ಕ ಅನಾಹುತಕ್ಕೆ ರಿಪೇರಿ ಮಾಡುವಾಗ ಅನೇಕ ದಿನಗಳು ಲೈಟು ಇರುವುದಿಲ್ಲ, ಎಂದು ಜನತೆಯಲ್ಲಿ ಭಯ ಮೂಡಿದೆ, ಇದು ಸತ್ಯವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಲೈಟು ಇರುವುದಿಲ್ಲ ಎಂದು ಹೇಳುವುದಿಲ್ಲ, ಕೆಲವು ಕಾಲ ಪವರ್ ಸ್ವಲ್ಪ ಕಡಿಮೆಯಾಗುತ್ತದೆ ಎನ್ನುವುದು ಒಪ್ಪಿಕೊಳ್ಳತಕ್ಕ ವಿಷಯ.

ಶ್ರೀ ಎಚ್. ಡಿ. ದೇವೇಗೌಡ.—ಕೆಲಸ ನಡೆಯತಕ್ಕ ಕಾಲದಲ್ಲಿ, 1-10-1961 ರಂದು ಕಾಂಕ್ರೀಟ್ ಹಾಕಲಿಕ್ಕೆ ಪ್ರಾರಂಭಮಾಡಿದ್ದು, ಕೆಲಸ ಕಂಪ್ಲೀಟ್ ಆಗಿದ್ದು 65ರ ವರೆಗೆ ಎಂದು ಹೇಳಿದ್ದೀರಿ. ಆ ಕಾಲದಲ್ಲಿ ಯಾರಾದರೂ ಅಧಿಕಾರಿಗಳು, ಸಬ್ ಸ್ಟ್ಯಾಂಡರ್ಡ್ ವರ್ಕ ಮಾಡುತ್ತಿದ್ದಾರೆ, ಇದನ್ನು ತಪ್ಪಿಸುವುದಕ್ಕೆ ನಮ್ಮ ಕೈಯಲ್ಲಿ ಸಾಧ್ಯವಾಗುವುದಿಲ್ಲ ಎಂದು ಮಂತ್ರಿಗಳಿಗೆ ವರದಿಯನ್ನು ಕೊಟ್ಟಿದ್ದಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಧಿಕಾರಿಗಳು ನೇರವಾಗಿ ಮಂತ್ರಿಗಳಿಗೆ ವರದಿ ಕೊಡುವುದಿಲ್ಲ, ಮೇಲ್ಪಟ್ಟ ಆಫೀಸರುಗಳಿಗೆ ಕೊಡುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—ತ್ರೂ ಪ್ರಾಪರ್ ಚಾನಲ್ ಬರುತ್ತದೆ, ಎಕ್ಸಿಕ್ಯುಟೀವ್ ಇಂಜಿನಿಯರ್, ಸೂಪರಿಂಟೆಂಡಿಂಗ್ ಇಂಜಿನಿಯರ್, ಚಿಫ ಇಂಜಿನಿಯರ್, ಪಿ. ಡಬ್ಲ್ಯು ಸೆಕ್ರೆಟರಿ, ಮೂಲಕ ಬರುತ್ತದೆ, ಆದರೆ, ಕೆಲವು ಕಂಟ್ರಾಕ್ಟರುಗಳು ರಾಜಕೀಯ ಪ್ರಭಾವಕ್ಕೆ ಒಳಗಾಗಿರುವುದರಿಂದ, ಇದನ್ನು ತಪ್ಪಿಸುವುದಕ್ಕಾಗುವುದಿಲ್ಲ, ಎಂದು ಕೆಲವು ಆಫೀಸರುಗಳು ತಮ್ಮ ಅಸಹಾಯಕತೆಯನ್ನು ತಿಳಿಸಿದ್ದಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರಕ್ಕೆ ಎಕ್ಸಿಕ್ಯುಟೀವ್ ಇಂಜಿನಿಯರುಗಳು ಕಳುಹಿಸತಕ್ಕ ಸಂಪ್ರದಾಯ ಇಲ್ಲ. ಅವರು ತಮ್ಮ ಮೇಲಿನ ಅಧಿಕಾರಿಗಳಿಗೆ ತಿಳಿಸಬೇಕಾಗುತ್ತದೆ.

ಶ್ರೀ ಎಚ್.ಡಿ. ದೇವೇಗೌಡ.—ಮೇಲಧಿಕಾರಿಗಳಿಗೆ ಈ ತರಹ ಆಗುತ್ತಿದೆ.ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ ಪ್ರಭಾವಯುತ ಕಂಟ್ರಾಕ್ಟರಗಳಾಗಿವುದರಿಂದ ಅವರಿಂದ ಕ್ವಾಲಿಟಿ ವರ್ಕ ಎಗ್ಸಿಕ್ಯೂಟ್ ಮಾಡಿಸುವುದಕ್ಕೆ ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ವಿಷಯವನ್ನು ವಿವರವಾಗಿ ತಿಳಿಸಿದ್ದೇನೆ. ನೋಟನ್ನು ಓದಿಕೊಂಡರೆ ಏನು ಏನು ಅಂಶ ತಿಳಿಸಿದ್ದೇನೆ ಎನ್ನುವುದು ಗೊತ್ತಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಕಾಲುವೆ ಜಖಮ್ ಆಗಿದೆ ರಿಪೇರಿ ಮಾಡುವ ಕೆಲಸ ಪರಿಶೀಲನೆ ಮಾಡತ್ತಿದ್ದೇವೆಂದು ಹೇಳಿದ್ದೀರಿ. ರಿಪೇರಿ ಮಾಡುವ ಕೆಲಸಕ್ಕೆ ಕೈ ಹಾಕಿದರೆ ಕಾಲುವೆಯನ್ನು ಮುಚ್ಚಿ ಕೆಲಸ ಮಾಡುವುದಾದರೆ ಎಷ್ಟು ದಿವಸಗಳ ಕಾಲದಲ್ಲಿ ಈ ಕೆಲಸವನ್ನು ಪೂರೈಸುವುದಕ್ಕೆ ಆಗುತ್ತದೆ ? ಅದರ ಪಕ್ಕದಲ್ಲಿ ಇನ್ನೊಂದು ಕಾಲುವೆ ಹಾಕುವ ಪರಿಶೀಲನೆ ಇದೆ ಎಂದು ವರದಿ ಆಗಿತ್ತು ಎಂದು ಹೇಳಿಕೆಯಲ್ಲಿ ಹೇಳಿದ್ದೀರಿ. ಎರಡನೇ ಕಾಲುವೆ ಹಾಕುವ ಯೋಜನೆಯನ್ನು ಆಲೋಚನೆ ಮಾಡುತ್ತೀರಾ ? ಇರತಕ್ಕ ಕಾಲುವೆಯನ್ನು ರೀಪೇರಿ ಮಾಡಿ ಎಷ್ಟು ದಿವಸಗಳಲ್ಲಿ ರಿಪೇರಿ ಮಾಡುವುದಕ್ಕೆ ಆಗುತ್ತದೆಂದು ಹೇಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—1963—64ರಲ್ಲಿ ಜಖಮ್ ಆದಕಾಲದಲ್ಲಿ ಮುಂದೆ ಇದರಿಂದ ರಿಸ್ಕ್ ಏನಾದರೂ ಆಗಬಹುದು, ಅಂಥ ರಿಸ್ಕನ್ನು ತಡೆಗಟ್ಟುವುದಕ್ಕೋಸ್ಕರ ಇನ್ನೊಂದು ಸ್ಟ್ಯಾಂಡ್ ಬೈ ಕಾಲುವೆ ಮಾಡಬೇಕು ಎನ್ನುವ ಯೋಚನೆ ಆಗಿನ ಸರ್ಕಾರದಲ್ಲಿ ಇತ್ತು, ಅದಕ್ಕೆ ಸರ್ಕಾರದವರು 3 ಕೋಟಿ 75 ಲಕ್ಷ ರೂಪಾಯಿ ರಫ್ ಪ್ಲ್ಯಾನ್ ಎಸ್ಟಿಮೇಟ್ ಮಾಡಿ ಇದರ ಬಗ್ಗೆ ಏನು ಆಖೈರು ತೀರ್ಮಾನ ತೆಗೆದುಕೊಳ್ಳಲಿಲ್ಲ. ಆ ಅಭಿಪ್ರಾಯ ಮಾತ್ರ ಇತ್ತು.

ಶ್ರೀ ಎಚ್. ಡಿ. ದೇವೇಗೌಡ.—ಕ್ವಾಲಿಟಿ ಕಂಟ್ರೋಲ್ ಡಿವಿಜನ್ ಇದು ಕೇಂದ್ರ ಸರ್ಕಾರದವರ ಹತೋಟಿಯಲ್ಲಿ ಕೆಲಸಮಾಡುತ್ತಾ ಇದೆಯೇ ಅಥವಾ ರಾಜ್ಯ ಸರ್ಕಾರದ ವತಿಯಿಂದ ಕೆಲಸ ಮಾಡುತ್ತಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಾಮಾನ್ಯವಾಗಿ ಕ್ವಾಲಿಟಿ ಕಂಟ್ರೋಲ್‌ನಲ್ಲಿ ಕೇಂದ್ರ ಸರ್ಕಾರದ ಪ್ರವೇಶ ಇಲ್ಲ.

Upper Krishna Project

279. Sri BAPUGOWDA RAYAPPA (Shahapur).—

Will the Minister of State for Major Irrigation be pleased to state:—

(*a*) the amount provided for the construction of Upper Krishna Project in 1972—73 ;

(*b*) the expenditure on the staff of the Dam Construction division Canal Division, Survey Division and on Land Acquisition Staff ;

(*c*) whether Government is thinking to create a ful-fledged division with a Chief Engineer in this Project, so as to complete it as early as possible?

SRI H. N. NANJE GOWDA (Minister of State for Major Irrigation).—

(*a*) Rs. 194.00 lakhs.

(*b*) Likely expenditure during 1972-73 on establishment is about Rs. 22.00 lakhs.

(*c*) No.

ಶ್ರೀ ಬಾಪುಗೌಡ ರಾಯಪ್ಪ.—ಬಜೆಟ್ಟಿನಲ್ಲಿ ತೋರಿಸಿರುವ ಎಕ್ಸ್‌ಪೆಂಡಿಚರ್ ಸುಮಾರು 53 ಲಕ್ಷ ರೂಪಾಯಿ ಇದೆ 22 ಲಕ್ಷ ರೂಪಾಯಿ ಯಾವುದು ? 53 ಲಕ್ಷ ರೂಪಾಯಿ ಖರ್ಚು ತೋರಿಸ ರಾಗಿರುವ ಈ ವ್ಯತ್ಯಾಸ ಏತಕ್ಕೆ ? (ಅ) ಪ್ರಶ್ನೆಯಲ್ಲಿ ಅಣೆಕಟ್ಟಿನ ರಚನೆ ವಿಭಾಗ, ನಾಲೇ ವಿಭಾಗ ಸಮೀಕ್ಷೆ ವಿಭಾಗ ಹಾಗೂ ಭೂ ಸ್ವಾಧೀನ ಸಿಬ್ಬಂಧಿ ವರ್ಗದವರಿಗಾಗಿ ವೆಚ್ಚವಾದ ಮೊಬಲಗೆಷ್ಟು!

† ಶ್ರೀ ಎಚ್. ಎನ್. ನಂಜೇಗಾಡ.—ತಾವು ಸಿಬ್ಬಂದಿ ವರ್ಗದವರಿಗೆ ವೆಚ್ಚವಾದ ಮೊಬಲಗು ಎಷ್ಟು ಎಂದು ಕೇಳಿದ್ದೀರಿ, ಅದನ್ನು ಕೊಟ್ಟಿದ್ದೇವೆ.

ಶ್ರೀ ಬಾಪುಗೌಡ ರಾಯಪ್ಪ.—(ಅ)ಕ್ಕೆ ಉತ್ತರ ಕೊಡುತ್ತಾ ನಾರಾಯಣಪುರ್ ಮತ್ತು ಆಲಮಟ್ಟಿ ಡ್ಯಾಮ್‌ಗೆ 1 ಕೋಟಿ 94 ಲಕ್ಷ ರೂಪಾಯಿ ಈ ವರ್ಷ ಹಣ ಒದಗಿಸಿದ್ದೀರಿ ಕಂಟ್ರಾಕ್ಟ್ ಹಣ ಕಮ್ಮಿ ಇದ್ದಯೆಂದು ತಿಳಿದುಕೊಂಡು ಕಂಟ್ರಾಕ್ಟ್ ಕೆಲಸ ಸ್ಥಗಿತ ಮಾಡಿದ್ದಾರೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎನ್. ನಂಜೇಗೌಡ.– ಗಮನಕ್ಕೆ ಬಂದಿಲ್ಲ.

SRI RAJA PID NAIK.—May I Know how much amount has been spent so far for this project ?

ಶ್ರೀ ಎಚ್. ಎನ್. ನಂಜೇಗೌಡ.—ಹೋದ ಸಾರಿ 4 ಕೋಟಿ ರೂಪಾಯಿ ಖರ್ಚು ಮಾಡಿದೆ.

ಶ್ರೀ ಎಚ್.ಡಿ. ದೇವೇಗೌಡ.—ರಾಜ್ಯದಲ್ಲಿರತಕ್ಕ ನೀರಾವರಿ ಯೋಜನೆಯನ್ನು 10 ವರ್ಷ ಗಳಲ್ಲಿ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಮುಖ್ಯ ಮಂತ್ರಿಗಳು ಹೇಳಿಕೆಯಲ್ಲಿ ಹೇಳಿದ್ದಾರೆ. ಅಪ್ಪರ್ ಕೃಷ್ಣಕ್ಕೆ 1 ಕೋಟಿ 94 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಈ ರೀತಿ ಪ್ರತಿ ವರ್ಷ ಒಂದು ಕೋಟಿ ರೂಪಾಯಿ ಒದಗಿಸುವುದಾದರೆ 10 ವರ್ಷಗಳಲ್ಲಿ ಇದನ್ನು ಪೂರೈಸು ವುದಕ್ಕೆ ಸಾಧ್ಯವಾಗುತ್ತದೆಯೇ ? ಆದ್ದರಿಂದ ಕೇಂದ್ರದವರಿಯಿಂದ ಮತ್ತೆ ಬೇರೆ ಯಾವುದಾದರೂ ರೂಪದಲ್ಲಿ ಇದಕ್ಕೆ ಹಣ ಒದಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

1.30 P.M.

ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—ಈ ವರ್ಷ ನಮ್ಮ ಹಣದ ಮುಗ್ಗಟ್ಟಿ ನಿಂದ ಇಷ್ಟು ಮಾತ್ರ ಒದಗಿಸುವುದಕ್ಕೆ ನಮಗೆ ಆಗಿದೆ. ಮತ್ತೆ ಈ ವರ್ಷದ ಅಂತ್ಯದೊಳಗಾಗಿ ಇನ್ನೂ ಸ್ವಲ್ಪ ಹಣವನ್ನು ಖರ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆ ಮತ್ತು ಅದನ್ನು ಮಾಡಲು ಪ್ರಯತ್ನ ಮಾಡುತ್ತೇವೆ. ಆದರೂ ಇದೇನೂ ಅಷ್ಟು ದೊಡ್ಡ ಹಣವಾಗುವುದಿಲ್ಲ. ಒಂದಲ್ಲ ಎರಡು ಕೋಟಿಯಷ್ಟು ಒದಗಿಸಿದರೂ ಇದರ ವರ್ಕ್ ಮ್ಯಾಗ್ನಿಟ್ಯೂಡು ಏನಿದೆ ಅದಕ್ಕೆ ಸಾಲುವುದಿಲ್ಲ ಎಂದು ಹೇಳಬೇಕಾಗಿದೆ. ಇದರ ಬಗ್ಗೆ ಬೇರೆ ಸಂದರ್ಭದಲ್ಲೂ ಈ ಸಭೆಗೆ ಹೇಳಿದ್ದೇನೆ. ನಮ್ಮ ದೇಶದಲ್ಲಿ ಇರುವ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನೆಲ್ಲಾ ನಾವು ಪೂರೈಸಬೇಕಾದರೆ ನಮಗೆ ಎಷ್ಟು ವರ್ಷಗಳು ಬೇಕು ಮತ್ತು ಇದಕ್ಕೆ ಹಣವನ್ನು ಯಾವ ರೀತಿಯಿಂದ ಒದಗಿಸಬೇಕು ಎನ್ನುವುದನ್ನು ತೀವ್ರವಾಗಿ ಯೋಚಿಸಬೇಕಾಗಿದೆ. ಕೇಂದ್ರ ಸರಕಾರದಲ್ಲಿ ಕೂಡ ಅನೇಕ ರಾಜ್ಯಗಳು ಇಂತಹ ದೊಡ್ಡ ನೀರಾವರಿ ಯೋಜನೆಗಳ ಬಗ್ಗೆ ಒಂದು ಹೊಸ ದೃಷ್ಟಿಯಿಂದ ನೋಡಬೇಕಾಗಿದೆ, ದೊಡ್ಡ ಪ್ರಾಜೆಕ್ಟ್

(ಶ್ರೀ ಡಿ. ದೇವರಾಜ ಅರಸ್)

ಗಳನ್ನು ಮಾಡಿ ನೀರಾವರಿ ಸೌಕರ್ಯಗಳನ್ನು ಅದರಿಂದ ಪೂರ್ಣವಾಗಿ ಉಪಯೋಗಮಾಡಿಕೊಳ್ಳುವುದಕ್ಕೆ ಅದಕ್ಕೆ ಬೇಕಾದ ಹಣವನ್ನು ನ್ಯಾಚುರಲ್ ರಿಸೋರ್ಸಸ್‌ಗಳಿಂದ ಹಾಗೂ ಬೇರೆ ವಿಧದಿಂದ ಪಡೆದು ಇಂತಹ ಹೊಳೆಗಳ ನೀರನ್ನು ಉಪಯೋಗಮಾಡಬೇಕೆಂದು ನಾವು ಎನ್. ಡಿ. ಸಿ. ಮೀಟಿಂಗಿನಲ್ಲೂ ಒತ್ತಾಯ ಮಾಡಿ ಹೇಳಿದ್ದೇವೆ. ಈಚೆಗೆ ನಮ್ಮ ಪಿಡಬ್ಲ್ಯೂ ಇಲಾಖಾ ಮಂತ್ರಿಗಳು ಕಾಶ್ಮೀರಕ್ಕೆ ಹೋದಾಗ ಅಲ್ಲಿ ಆದ ಪಿ.ಡಬ್ಲ್ಯೂ. ಡಿ. ಮಿನಿಸ್ಟರುಗಳ ಕಾನ್ಫರೆನ್ಸಿನಲ್ಲಿ ಕೂಡ ಇಂತಹ ದೊಡ್ಡ ನೀರಾವರಿ ಯೋಜನೆಗಳ ಬಗ್ಗೆ ಚರ್ಚೆಯಾಗಿ ಅಲ್ಲೂ ಕೂಡ ಒಂದು ರೆಸಲ್ಯೂಷನ್ನು ಪಾಸುಮಾಡಿ ಅದನ್ನು ಕೇಂದ್ರದ ಮಂತ್ರಿಗಳೇ ಒಪ್ಪಿ ಕೇಂದ್ರ ಸರಕಾರಕ್ಕೆ ಕಳುಹಿಸಿದ್ದಾರೆ ಮತ್ತು ಅವರೆಲ್ಲರೂ ಕೂಡ ಇದರ ಬಗ್ಗೆ ಯೋಚನೆ ಮಾಡುವುದು ಯೋಗ್ಯವಾದುದು ಎಂದು ಹೇಳಿದ್ದಾರೆ. ಇದಕ್ಕೆ ಐದನೇ ಯೋಜನೆಯಲ್ಲಿ ಹಣವನ್ನು ಒದಗಿಸುವ ಬಗ್ಗೆ ಅಲ್ಲೂ ಪ್ರಸ್ತಾಪ ಮಾಡಿದ್ದಾರೆ. ನಾನು ಇಷ್ಟು ಹೇಳಬಹುದು. ನಾಲ್ಕನೇ ಯೋಜನೆಯವರೆಗೆ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನೆಲ್ಲಾ ಸಂಬಂಧಪಟ್ಟ ರಾಜ್ಯಸರಕಾರಗಳೇ ಅದರ ಜವಾಬ್ದಾರಿಯನ್ನು ಹೊರಲಿ ಎಂದು ಇತ್ತು. ಮತ್ತು ಇದು ಆಗಿನ ಸರಕಾರದ ನಿಲುವೂ ಕೂಡ ಆಗಿತ್ತು. ಇದೇ ನಿಲುವನ್ನು ಆಗ ಕೇಂದ್ರ ಸರಕಾರ ಹಾಗೂ ಪ್ಲಾನಿಂಗ್ ಕಮಿಷನ್‌ನವರು ಹೊಂದಿದ್ದರು. ಆದರೆ 1972 ರಿಂದೀಚೆಗೆ ಎಂದರೆ ಐದನೇ ಯೋಜನೆಯ ಪ್ರಾರಂಭದಲ್ಲಿ ಇದನ್ನು ಯಾವ ರೀತಿ ಮಾಡಬೇಕು ಮತ್ತು ಇದನ್ನು ಹೀಗೇ ಬಿಟ್ಟು ರಾಜ್ಯಸರಕಾರದವರಿಗೇ ಅವರ ಜವಾಬ್ದಾರಿಗೇ ಬಿಟ್ಟು ದೇಶದಲ್ಲಿ ಇರತಕ್ಕ ಪ್ರಕೃತಿ ದತ್ತವಾದ ಎಲ್ಲ ಸೌಲಭ್ಯಗಳನ್ನೂ ಉಪಯೋಗ ಮಾಡಿಕೊಂಡು ದೇಶದ ಸಂಪತ್ತನ್ನು ಹೆಚ್ಚು ಮಾಡಬೇಕಾದರೆ ಇಂತಹ ಯೋಜನೆಗಳಿಗೆ ಸಾಕಷ್ಟು ಹಣವನ್ನು ಒದಗಿಸಿ ಬೇಗನೆ ಇದನ್ನು ಕಾರ್ಯ ರೂಪಕ್ಕೆ ತರಬೇಕೆಂದು ತೀವ್ರವಾಗಿ ಯೋಚನೆ ಮಾಡುತ್ತಿದ್ದೇವೆ. ನಮ್ಮ ಆಸೆ ಐದನೇ ಯೋಜನೆ ಅವಧಿಯೊಳಗೆ ಇದಕ್ಕೆ ಇನ್ನೂ ಹೆಚ್ಚು ಹಣವನ್ನು ಒದಗಿಸಲು ಪ್ರಯತ್ನಮಾಡಿ ಮುಗಿಸಬೇಕೆಂದೂ ಇದೆ, ಈಗಿರುವಂತೆ ನಮ್ಮ ಸರಕಾರವೇ ಇಂತಹ ದೊಡ್ಡ ನೀರಾವರಿ ಯೋಜನೆಗಳನ್ನು ಮುಗಿಸಬೇಕಾದರೆ ಇನ್ನೂ ಇಪ್ಪತ್ತು ವರ್ಷಗಳಷ್ಟು ಕಾಲ ಬೇಕಾಗುತ್ತದೆ ಇದರಿಂದಾಗಿ ನಾನಾ ರೀತಿಯ ತೊಂದರೆಗಳು ಜನರಲ್ಲಿ ಉಂಟಾಗುತ್ತದೆ ಮತ್ತು ನಿರ್ಮಾಣ ಮಾಡುವ ಕೆಲಸವೂ ನಿಧಾನವಾಗಿ ಕುಂಠಿತವಾಗುತ್ತದೆ. ಆದೂ ಅಲ್ಲದೆ ಇಷ್ಟೇ ದಿನಗಳಲ್ಲಿ ಈ ನೀರಾವರಿ ಯೋಜನೆಗಳನ್ನೆಲ್ಲಾ ಮುಗಿಸುತ್ತೇವೆ ಎಂದು ಹೇಳುವುದೂ ಕಷ್ಟವಾಗಿದೆ. ಇವೆಲ್ಲ ದೃಷ್ಟಿಯಿಂದ ರಾಜ್ಯ ಸರಕಾರದವರು ಆದಷ್ಟೂ ಹೆಚ್ಚು ಹಣವನ್ನು ಒದಗಿಸಲು ತೀವ್ರವಾದ ಕಾರ್ಯಕ್ರಮಗಳನ್ನು ಅನುಸರಿಸಬೇಕಾಗುತ್ತದೆ. ಹೀಗೆ ಮಾಡಿದರೆ ಇನ್ನು ಹತ್ತು ವರ್ಷಗಳೊಳಗಾಗಿ ಇದರ ಕೆಲಸಗಳನ್ನೆಲ್ಲಾ ಮುಗಿಸುವ ಒಂದು ಸಾಧ್ಯತೆ ಇದೆ, ಇದರ ಬಗ್ಗೆ ಕೇಂದ್ರ ಸರಕಾರದಲ್ಲೂ ನಾವು ಪದೇ ಪದೇ ಒತ್ತಾಯ ಮಾಡುತ್ತ ಬರುತ್ತಿದ್ದೇವೆ ಎಂದು ಇಷ್ಟು ಮಾತ್ರ ಇಲ್ಲಿ ಹೇಳುತ್ತೇನೆ.

Grant of Land to Service and Ex-Service Personnel

313. Sri H. S. SIDDAPPA (Arsikere).—

Will the Minister for Revenue be pleased to state:—

(*a*) the number of applications received for the grant of land by service personnel and Ex-Service personnel in Arsikere Taluk;

(*b*) the number of applications disposed of with details of lands granted to them?

Sri N. HUTCHAMASTHY GOWDA (Minister for Revenue).—

(*a*) Nine.

(*b*) One.

An extent of 3 acres of land has been granted to one Sri Nanjappa, S/o Narasaiah of Marasetty halli Village, Gandsi Hobli, Arasikere Taluk during the year 1970-71.

Sri H. S. SIDDAPPA.—May I know the names and extent of land granted to these nine persons?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಲ್ಲಿ ಕೇಳಿರುವ ಒಂಬತ್ತು ಜನರಿಗೂ ಜಮೀನು ಮಂಜೂರಾಗಿಲ್ಲ.—1-6-1972ರಲ್ಲಿ ಇವರಿಂದ ಅರ್ಜಿಗಳು ಬಂದವು. ಇದರಲ್ಲಿ ಒಬ್ಬರಿಗೆ ಮಾತ್ರ ಜಮೀನನ್ನು ಕೊಡಲಾಗಿದೆ.

Sri H. S. SIDDAPPA.—I want the date of applications of these nine persons.

ಶ್ರೀ ಎನ್ ಹುಚ್ಚಮಾಸ್ತಿಗೌಡ.— ಯಾವ ತಾರೀಖಿನಲ್ಲಿ ಬಂದವು ಎನ್ನುವ ವಿವರಗಳು ನನ್ನ ಮುಂದೆ ಇಲ್ಲ. ಆದರೆ ಇವೆಲ್ಲ ಅರ್ಜಿಗಳು 1-6-72ಕ್ಕೆ ಮುಂಚೆ ಬಂದಿರುವ ಅರ್ಜಿಗಳು.

Sri H. S. SIDDAPPA.—Does the Hon'ble Minister think that 3 acres of land would suffice the Ex-Servicemen and if it is not sufficient, would the Government think of getting some more lands to them ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಲ್ಲಿ ಇವರು ಕೇಳಿರುವ ಜಮೀನಿನ ಸ್ಥಿತಿ ಯಾವ ರೀತಿಯಲ್ಲಿದೆಯೋ ಅದು ನಮಗೆ ಗೊತ್ತಿಲ್ಲ, ಜಮೀನು ಗದ್ದೆಯಾಗಿದ್ದರೆ ಈಗ ಕೊಟ್ಟಿರುವ ಭೂಮಿ ಸಾಕಾಗುತ್ತದೆ, ಇಲ್ಲವೇ ಖುಷ್ಕಿ ಭೂಮಿ ಇದ್ದರೆ ಇದಕ್ಕಿಂತ ಇನ್ನೂ ಸ್ವಲ್ಪ ಹೆಚ್ಚಿಗೆ ಕೊಡಬೇಕಾಗಿ ಬರಬಹುದು.

Sri H. S. SIDDAPPA.—Does the Governmant have any scheme or proposal to rehabilitate these Ex-Sevicemen where there are no agricultural lands for them ?

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಇಂತಹ ಮಾಜೀ ಸೈನಿಕರುಗಳಿಂದ ಅರ್ಜಿಗಳು ಭೂಮಿಗಾಗಿ ಬಂದರೆ ಪ್ರತ್ಯೇಕವಾಗಿ ಇವರಿಗೆಲ್ಲಾ ಇಂತಹ ಒಂದು ಸರ್ವೆ ನಂಬರು ಭೂಮಿಯಲ್ಲಿ ರಿಸರ್ವ್ ಮಾಡಬೇಕೆಂದು ಆಯಾ ಮಿಲಿಟರಿ ಅಧಿಕಾರಿಗಳಿಗೆ ಸೂಚನೆಗಳನ್ನು ಕೊಡಲಾಗಿದೆ ಮತ್ತು ಇದರಂತೆ ಅಲ್ಲಲ್ಲಿ ಭೂಮಿಯನ್ನೂ ರಿಸರ್ವ್ ಮಾಡಲಾಗಿದೆ. ಕೆಲವು ಪ್ರದೇಶಗಳಲ್ಲಿ ಮಾಡಿಲ್ಲ.

Audit Reports on the Accounts of Ex-Lakkavalli Village Panchayat

323. Sri HANJI SHIVANNA (Tarikere).—

Will the Minister for Community Development and Social Welfare be pleased to state :—

(*a*) the amount for which objections were raised, the amount reported to be misappropriated in the Audit reports relating to ex-Lakkavalli Village Panchayat of Tarikere Taluk ;

(*b*) whether the amount has been recovered ;

(*c*) how many days back the Audit report was submitted ;

(*d*) wheth action has been taken by Government to recover the amount ?

Sri M. MALLIKARJUNASWAMY (Minister for Community Development and Social Welfare).—

(*a*) It is reported in the audit report as follows :

The amount for which objection was raised Rs. 71,427-15.

The amount misappropriated Rs. 24,891-03.

(*b*) Not yet.

(*c*) The following audit reports of the Assistant Controller, Shimoga have been received :

The audit report of accounts from 1960 to 1964	3-5-1965 19-1-1968
The audit report of accounts from 1964-65	6-3-1967
The audit report of the accounts from 1966 to 1969	June, 1969

(*d*) The steps to be taken for recovery of amount is under consideration of Government.

ಶ್ರೀ ಹಂಜಿ ಶಿವಣ್ಣ.—ಈ ಪಂಚಾಯತಿಯಲ್ಲಿ ಇಷ್ಟು ಭಾರಿ ಮೊತ್ತದ ಹಣ ಮಿಸ್ ಅಪ್ರೋಪ್ರಿಯೇಟು ಆಗಿದ್ದರೂ ಸರಕಾರದವರು ತಕ್ಕ ಕ್ರಮ ತೆಗೆದುಕೊಳ್ಳದೇ ಕಣ್ಣುಮುಚ್ಚಿ ಕುಳಿತಿದ್ದಾರೆಯೇ ಹೇಗೆ ?

†ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಸರಕಾರ ನೋಡುತ್ತಾ ಕುಳಿತಿಲ್ಲ. ಆಡಿಟ್ ರಿಪೋರ್ಟ್ ಬಂದ ಮೇಲೆ ತನಿಖಾ ಅಧಿಕಾರಿಗಳು ಇವೆಲ್ಲವನ್ನೂ ತನಿಖೆ ಮಾಡಿ ವಿಚಾರಣೆ ಮಾಡಿದ್ದಾರೆ. 14-12-70, 18-12-70, 19-12-70 ಮತ್ತು 10-5-71 ರಲ್ಲಿ. ಇದರ ಬಗ್ಗೆ ವಿಚಾರಣೆ ಮಾಡಿ ಪಂಚಾಯತಿಯವರಿಂದ ಹಣ ವಸೂಲು ಮಾಡಬೇಕೆಂದು ಆದೇಶಗಳನ್ನು ಕೊಡಲಾಗಿದೆ.

ಶ್ರೀ ಹಂಜೀ ಶಿವಣ್ಣ.—60 ರಿಂದ 69-70 ರವರೆಗೆ ಈ ಪಂಚಾಯತಿಯಲ್ಲಿ ಆಡಿಟರು ಆಡಿಟ್ಟು ಮಾಡಿದರೂ ಇಷ್ಟು ಹಣ ಬಾಕಿ ಬಂದಿದೆ, ಇಷ್ಟು ಹಣ ದುರುಪಯೋಗವಾಗಿದ್ದರೂ ಇವರ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳದೇ ಇರುವುದು ಸರಿಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—1960 ರಿಂದ 1964, 1964 ರಿಂದ 1965 ಮತ್ತು 1966 ರಿಂದ 1969ರ ವರೆಗೆ ತನಿಖೆ ನಡೆದ ಅವರು ಕೊಟ್ಟ ರಿಪೋರ್ಟಿನ ಮೇಲೆ ತನಿಖಾಧಿಕಾರಿಗಳು ಇದನ್ನು ತನಿಖೆ ಮಾಡಲು ಹೋಗಿದ್ದಾರೆ ಮತ್ತು ಇವರಿಂದ ಹಣ ವಸೂಲ ಮಾಡಬೇಕೆಂದು ಸೂಚನೆಗಳನ್ನು ಕೊಟ್ಟಿದ್ದಾರೆ ಇದರ ಮೇಲೆ ಇವರು ಡಿವಿಜನಲ್ ಕಮಿಷನ್‌ರವರ ಕೋರ್ಟಿನಲ್ಲಿ ಅಪೀಲು ಹಾಕಿದ್ದರು, ಅಲ್ಲೂ ಕೂಡ ಇದು ಸರಿಯಾಗಿಲ್ಲ. ತನಿಖಾಧಿಕಾರಿಗಳು ಹೇಳಿರುವಂತೆ ಎಲ್ಲ ಹಣವನ್ನೂ ಪಂಚಾಯತಿಯವರಿಂದ ವಸೂಲು ಮಾಡಬೇಕೆಂದು ಹೇಳಲಾಗಿದೆ. 30-10-71 ರಲ್ಲಿ ಡಿವಿಜನಲ್ ಕಮಿಷನರು ಈ ಆದೇಶವನ್ನು ಕೊಟ್ಟಿದ್ದಾರೆ, ಇದರ ಮೇಲೆ ಈ ಪಂಚಾಯತಿಯವರು ಸರಕಾರಕ್ಕೆ ಒಂದು ಅಪೀಲು ಹಾಕಿದ್ದಾರೆ, ಇದರ ಹಿಯರಿಂಗು 10-7-72 ರಂದು ಇತ್ತು. ಆದರೆ ಇದಕ್ಕೆ ಸಂಬಂಧಪಟ್ಟ ಅಡ್ವೊಕೇಟರವರು ಬಾರದೇ ಇದ್ದುದರಿಂದ ಈ ಕೇಸನ್ನು ಮುಂದೂಡಲಾಗಿದೆ ಮತ್ತು ಈಗ ಇದು ಸರಕಾರದ ಮುಂದೆ ಇದೆ.

Sri M. MALLAPPA.—Supplementary to (*a*) and (*d*) : What steps have the Government taken for recovery, and when have they taken them ? Why there is inordinate delay in recovering the amounts which the Government admit as having been misappropriated ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅವರಿಗೆ ಕಾನೂನು ರೀತ್ಯಾ ಅಪೀಲ್ ಹೋಗುವುದಕ್ಕೆ ಅವಕಾಶ ಇತ್ತು. ಅದರಂತೆ ಅವರು ಕೋರ್ಟಿಗೆ ಹೋಗಿದ್ದರು. ಈಗ ಸರ್ಕಾರದ ಮುಂದೆ ಬಂದಿದ್ದಾರೆ. ಆಗಸ್ಟ್ ಮೂರರಂದು ಹಿಯರಿಂಗ್ ಇಟ್ಟುಕೊಂಡಿದ್ದೇನೆ. ಹಿಯರಿಂಗ್ ಆದ ಮೇಲೆ ಹಣ ವಸೂಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಇಷ್ಟೊಂದು ಹಣ ದುರುಪಯೋಗವಾಗಿದ್ದರೂ ಸಹ ಕ್ರಿಮಿನಲ್ ಮೊಕದ್ದಮೆಯನ್ನು ಏತಕ್ಕೆ ಹಾಕಿಲ್ಲ?

ಅಧ್ಯಕ್ಷರು.— ಅದಕ್ಕೆ ಉತ್ತರ ಕೊಟ್ಟಿದ್ದಾರೆ.

ಶ್ರೀ ಹಂಪಿ ಶಿವಣ್ಣ.—ಲೆಕ್ಕಪತ್ರದ ಪ್ರಕಾರ ಇಷ್ಟು ಹಣ ದುರುಪಯೋಗವಾಗಿದ್ದರೆ, ಲೆಕ್ಕ ಪತ್ರ ಇಡದೆ ಸುಮಾರು 2 ಲಕ್ಷ ರೂಪಾಯಿಗಳವರೆಗೆ ದುರುಪಯೋಗವಾಗಿದೆ. ಆದ್ದರಿಂದ ಈಗ ದುರುಪಯೋಗವಾಗಿರುವ ಹಣವನ್ನು ಬಡ್ಡಿ ಸಮೇತ ವಸೂಲಿ ಮಾಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದನ್ನು ಪರಿಶೀಲನೆ ಮಾಡುತ್ತೇವೆ.

Introduction of Old-Age Pension Scheme in the State

352. SRI B. B. SAYANAK (Belgaum).—

Will the Minister for Finance be pleased to state :—

(*a*) whether the old age pension scheme is introduced in the State ;

(*b*) if so, since when ;

(*c*) the number of old persons receiving pension (Districtwise) under this scheme ;

(*d*) the amount of pension paid to each person ?

SRI M. Y. GHORPADE (Minister for Finance).—

(*a*) Yes.

(*b*) Since 1st January 1965.

(*c*) Districtwise statement showing the number of persons to whom the old age pension has been sanctioned up to end of March 1972 is appended.

(*d*) According to the scheme each pensioner was getting an amount of Rs. 15 per month up to end of 31st March 1970. From 1st April 1970 the amount of old age pension has been enhanced from Rs. 15 per month to Rs. 30 per month.

(SRI M. Y. GHORPADE)

Old age pension scheme

Name of the Division and District		*No. of persons to whom old age pension has been sanctioned*
I Bangalore Division—		
1 Bangalore District	...	1,810
2 Tumkur District	...	784
3 Kolar	...	869
4 Chitradurga District	...	774
5 Shimoga District	...	337
	Total ...	4,574
II Mysore Division—		
1 Mysore	...	1,309
2 South Kanara	...	1,072
3 Mandya	...	380
4 Hassan	...	1,192
5 Chickmagalur	...	438
6 Coorg	...	11
	Total ...	4,402
III Belgaum Division—		
1 Belgaum	...	102
2 Dharwar	...	195
3 Bijapur	...	203
4 North Kanara	...	533
	Total ...	1,033
IV Gulbarga Division—		
1 Gulbarga	...	196
2 Raichur	...	171
3 Bidar	...	69
4 Bellary	...	468
	Total ...	904
	Grand Total ...	10,913

Sri B. B. SAYANAK. What are the criteria to get old age pension?

† Sri M. Y. GHORPADE.—I have explained this at length once before in the House. I shall repeat it for the benefit of the members. The criterion so far was that he or she shall be twenty years of age which recently our Government has reduced from 70 to 65. In the case of disabled persons the age limit which was 65 has now been reduced to 60. In addition to qualifying from the age point of view, a person has to be destitute and he must have no other source of income.

Sri B. B. SAYANAK.—According to the list, in Belgaum Division 1,033 old-age persons got pension and in Gulbarga Division 904 persons got pension. This shows that this scheme is not known to the villagers. May I request the Government to have a census of the old-age persons and make this scheme compulsory to the old-age persons who have nobody to look after and who are very poor ?

Sri M. Y. GHORPADE.—These powers have been decentralised and the Deputy Commissioner is fully authorised to recommend suitable names and it is really for the hon. Members of this House to whichever party they belonged to bring to the notice of the Deputy Commissioners the deserving cases.

Sri M. S. KRISHNAN.—The number has increased tremendously in other places particularly Bangalore. Can we therefore come to the conclusion that in Belgaum Division there are neither destitute people nor old people ?

Sri M. Y. GHORPADE.—A full district-wise list has been given and it varies from district to district. No such conclusion can be arrived. It only means that the tempo has to be developed in different districts and non-officials must also co-operate with the officials and bring them to the notice of the officials. It may be that some cases have not been taken into account.

ಶ್ರೀ ಕೋಣಂದೂರು ಲಿಂಗಪ್ಪ.—ಈಗ ಶಿವಮೊಗ್ಗ ಜಿಲ್ಲೆಯಲ್ಲಿ 337 ಜನಕ್ಕೆ ಮಂಜೂರು ಮಾಡಿದ್ದೀರಿ. ಬಾಕಿ ಇರತಕ್ಕಂಥ ನೂರಾರು ಅರ್ಜಿಗಳನ್ನು ಜಾಗ್ರತೆ ಇತ್ಯರ್ಥ ಮಾಡುತ್ತೀರಾ ?

ಶ್ರೀ ಎಂ. ವೈ. ಘೋರ್ಪಡೆ.—ತ್ವರಿತವಾಗಿ ಅರ್ಜಿಗಳನ್ನು ಇತ್ಯರ್ಥ ಮಾಡುವ ದೃಷ್ಟಿಯಿಂದಲೇ ಸರ್ಕಾರಕ್ಕೆ ಅರ್ಜಿಗಳನ್ನು ಬರುವುದನ್ನು ನಿಲ್ಲಿಸಿ ಜಿಲ್ಲಾಧಿಕಾರಿಗಳವರಿಗೆ ಇತ್ಯರ್ಥ ಮಾಡುವ ಅಧಿಕಾರವನ್ನು ಕೊಡಲಾಗಿದೆ. ಯಾವುದಾದರು ಅರ್ಜಿ ಇತ್ಯರ್ಥವಾಗದಿದ್ದರೆ ಅದನ್ನು ನಮ್ಮ ಗಮನಕ್ಕೆ ತಂದರೆ ತೀವ್ರವಾಗಿ ಪರಿಶೀಲಿಸಿ ಮಂಜೂರು ಮಾಡುವುದಕ್ಕೆ ಕಾರ್ಯಕ್ರಮ ಕೈಕೊಳ್ಳುತ್ತೇವೆ.

ಶ್ರೀ ಕೆ. ಎಂ. ನಾಗಣ್ಣ.—ಬೆಂಗಳೂರು ಜಿಲ್ಲೆಯಲ್ಲಿ 1810 ಜನರಿಗೆ ಕೊಡಲಾಗಿದೆ ಎಂದು ಹೇಳಿದ್ದೀರಿ. ಇನ್ನೂ ಎಷ್ಟು ಅರ್ಜಿಗಳು ಇತ್ಯರ್ಥವಾಗಬೇಕಾಗಿದೆ ಎಂಬುದನ್ನು ತಿಳಿಸುತ್ತೀರಾ ? ಈಗ ಇತ್ಯರ್ಥವಾಗದೇ ಇರುವ ಅರ್ಜಿಗಳನ್ನು ಇತ್ಯರ್ಥ ಮಾಡುವ ಬಗ್ಗೆ ಅರ್ಜಿದಾರರು ಹೋಗಿ ಕೇಳಿದರೆ ಸಂಬಂಧಪಟ್ಟ ಅಧಿಕಾರಿಗಳು ನಾಳೆ ಬಾ, ನಾಡಿದ್ದು ಬಾ ಎಂದು ತಿರುಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಜಾಗ್ರತೆ ಇತ್ಯರ್ಥಪಡಿಸುವಂತೆ ಆದೇಶ ಕೊಡುತ್ತೀರಾ ?

ಶ್ರೀ ಎಂ. ವೈ. ಘೋರ್ಪಡೆ.—ಒಟ್ಟು ಅರ್ಜಿಗಳು : 16,378. ಇದರಲ್ಲಿ ಮಂಜೂರಾಗಿರುವುದು 10,424. ರಿಜೆಕ್ಟ್ ಆಗಿರುವುದು 4,452. ಪೆಂಡಿಂಗ್ ಇರುವುದು 1,302. ಪೆಂಡಿಂಗ್ ಇರುವುದನ್ನು ಮಂಜೂರು ಮಾಡುವುದಕ್ಕೆ ಏನೇನು ಮಾಡಬೇಕೋ ಅದನ್ನು ಮಾಡುತ್ತೇವೆ.

Sri P. M. BANGI.—What is the mode of payment of pension ? Is it by M. O. or through the Treasury Officer ?

Sri M. Y. GHORPADE.—It is done by the Treasury Officer.

Sri P. M. BANGI.—Can it not be sent by M. O ?

Sri M. Y. GHORPADE.—This system has been found quite satisfactory and there has been no complaint.

Sri B. B. SAYANAK.—Is not the old-age pension of Rs. 30 meagre and may I know whether the Government is going to increase it ?

Sri M. Y. GHORPADE.—At present, there is no proposal to increase it. The hon. Member will appreciate that only recently Government has reduced the age from 70 to 65.

Bridge Across Thungabhadra River

357. Sri F. S. TAWARE (Haveri).—

Will the Minister for Public Works and Electricity be pleased to state :—

(*a*) when did the Government lay the foundation stone of bridge across Tungabhadra river in Haveri Taluk ;

(*b*) the stage of the works at present ;

(*c*) the difficulties of the Government in completing the same ;

(*d*) its estimated cost ;

(*e*) the amount spent so far ;

(*f*) the amount required to complete it ;

(*g*) the time required to complete the same ?

Sri H. M. CHANNABASAPPA (Minister for Public Works).—

(*a*) In 1961 February.

(*b*) The work relating to the construction of basement and its upper part is completed. Out of twenty arches the work relating to upper-most part of the fifteen arches is completed.

(*c*) The work is in progress, and the cause for delay is dissatisfaction of the Contractor.

(*d*) Rs. 14 lakhs.

(*e*) Rs. 21,21,259.

(*f*) Rs. 2 lakhs.

(*g*) It may be completed by about May 1973.

ಶ್ರೀ ಎಫ್. ಎಸ್. ತಾವರೆ.— ಮೊದಲಿನ ಅಂದಾಜಿಗೂ ಈಗ ಕೆಲಸ ಮುಗಿಯುವ ವೇಳೆಗೆ ಆಗತಕ್ಕ ಅಂದಾಜಿಗೂ 9 ಲಕ್ಷ ಚಿಲ್ಲರೆ ರೂಪಾಯಿಯಷ್ಟು ವ್ಯತ್ಯಾಸವಾಗುತ್ತದೆ. ಈ ರೀತಿ ವ್ಯತ್ಯಾಸವಾಗಲು ಪ್ಲಾನನ್ನು ಏನಾದರು ಬದಲಾವಣೆ ಮಾಡಿದ್ದೀರಾ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಪ್ಲಾನ್ ಬದಲಾವಣೆಯಾಗಿಲ್ಲ. ಆದರೆ ಅನೇಕ ಕಾರಣಗಳಿಂದ ಹಣ ಜಾಸ್ತಿ ಖರ್ಚಾಗಿದೆ. ಅದರಲ್ಲಿ ಮುಖ್ಯವಾದುದು ಎಂದರೆ, ನೀರೆತ್ತುವ ಅಂದಾಜಿನಲ್ಲಿ ಲಂಪ್‌ಸಮ್ ಅಂದಾಜು ಮಾಡಿದ್ದು ಬಹಳ ಹೆಚ್ಚಾಯಿತು. ಇದೇ ಮುಖ್ಯವಾದ ಕಾರಣ.

ಶ್ರೀ ಎಫ್. ಎಸ್. ತಾವರೆ.—ಇದರೊಳಗೆ ಇಲಾಖೆಯವರು ಎಷ್ಟು ಕೆಲಸ ಮಾಡಿದ್ದಾರೆ, ಕಂಟ್ರಾಕ್ಟರ್ ಎಷ್ಟು ಕೆಲಸ ಮಾಡಿದ್ದರೆಂಬುದನ್ನು ತಿಳಿಸಬೇಕು ?

ಶ್ರೀ ಎಚ್. ಎಂ. ಚನ್ನಬಸಪ್ಪ.—7, 8, ಮತ್ತು 9ನೇ ಕಮಾನುಗಳಲ್ಲಿ ನೀರೆತ್ತುವ ಕೆಲಸವನ್ನು ಇಲಾಖೆಯವರೇ ಮಾಡಿದ್ದಾರೆ.

ಶ್ರೀ ಎಫ್. ಎಸ್. ತಾವರೆ. ಕಂಟ್ರಾಕ್ಟರ್‌ಗಳನ್ನು ಸಮಾಧಾನ ಪಡಿಸುವುದಕ್ಕಾಗಿ ಹೆಚ್ಚು ಹಣ ಕೊಟ್ಟಿರುವುದು ನಿಜವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದರಲ್ಲಿ ಕಂಟ್ರಾಕ್ಟರ್‌ಗಳನ್ನು ಸಮಾಧಾನ ಮಾಡುವ ಪ್ರಶ್ನೆಯೇ ಇಲ್ಲ. ಇದರಲ್ಲಿ ಇಲಾಖೆಯವರು ಬಹುಭಾಗದ ಕೆಲಸ ಮಾಡಿಲ್ಲ. ಕಂಟ್ರಾಕ್ಟ್ ಕೊಟ್ಟಿರತಕ್ಕಂಥ ಅಂದಾಜಿನ ಮೇಲೆ 32 ಪರ್‌ಸೆಂಟ್ ಹೆಚ್ಚಿಗೆ ಅಕ್ಸೆಪ್ಟ್ ಮಾಡಿರುವುದು ಅಂದರೆ ಅಂದಾಜು 14 ಲಕ್ಷ ರೂಪಾಯಿಗಳಿದ್ದರೆ, ಮೂರನೇ ಒಂದು ಭಾಗದಷ್ಟು ಅಂದರೆ ನಾಲ್ಕೂವರೆ ಲಕ್ಷ ರೂಪಾಯಿ ಹೆಚ್ಚಾಗುತ್ತದೆ. ಈ ಯೋಜನೆಯ ಕೆಲಸ ನಿಧಾನವಾಗಿರುವುದಕ್ಕೆ ಮತ್ತು ಹೆಚ್ಚು ಹಣ ಖರ್ಚಾಗಿರುವುದಕ್ಕೆ ಮುಖ್ಯವಾದ ಕಾರಣವೆಂದರೆ, ನೀರೆತ್ತುವ ಕೆಲಸದಲ್ಲಿ ಎಡರು ತೊಡರುಗಳು ಬಂದಿದ್ದು. ಅದಕ್ಕಾಗಿಯೇ ಹೆಚ್ಚು ಹಣ ಖರ್ಚಾಗುವುದಕ್ಕೆ ಕಾರಣವಾಯಿತು.

Construction of Bus Stands and pick up sheds in Khanapur Taluk

382. Sri N. B. SIRDESAI (Khanapur).—

Will the Minister for Labour be pleassd to state :—

(*a*) whether Government is aware of the necessity of full fledged bus-stands at all the towns and pick-up sheds at all the important villages ; if so, whether survey has been taken up in the matter ;

(*b*) whether Government have received representations from the Legislator from Khanapur in connection with the necessity of a bus stand at Khanapur and pick-up sheds in villages ; if so, the action taken in the matter ?

Sri AZEEZ SAIT (Minister for Labour).—

(*a*) Yes.

Construction of bus stations and shelters is being taken up depending on (i) traffic requirements (ii) availability of land and (iii) availability of funds.

(*b*) Yes.

(SRI AZEEZ SAIT)

Considering the necessity of a bus stand at Khanapur, a site measuring 200' × 200' of Government waste land out of Survey No. 48 of Khanapur has been secured, but this allotment has been challenged by the Goa Panchayat Gairon Trust Committee in the Munsiff's Court at Khanapur. Early action will be taken to provide the said bus stand on taking possession of the site.

Proposals for providing Pick up sheds at Bidi, Panishwad, Hire-Munoli and Nandagad are under consideration of M.S.R.T.C.

Sri N. B. SIRDESAI.—Is not the Government aware that survey No. 48 of Khanapur is a Government waste land and now it vests in the Town Panchayat of Khanapur. So, the Gairon Trust Committee has no locus standi to challenge in any court of law and stop the work.

†Sri AZEEZ SAIT,—The challenge is there before the court and we have to wait till the judgment is over.

Sri N. B. SIRDESAI.—May I know whether Government will accept the new proposals for providing pick-up sheds in various areas of Khanapur Taluka?

Sri AZEEZ SAIT.—About pick-up sheds and bus stands I have already said that I have taken a decision. Till I get the report from the Sub-Committee as to their necessity I am not in a position to to take up the construction of bus stands or pick-up stands.

Sri B. B. SAYANAK.—(*Marathi*)

Sri AZEEZ SAIT.—(*Gujarathi*)

Sri V. N. PATIL.—(*Urdu*)

Sri AZEEZ SAIT.—(*Urdu*)

ಅಧ್ಯಕ್ಷರು — ಮಾನ್ಯ ಸದಸ್ಯರು ಯಾವ ಭಾಷೆಯಲ್ಲಿ ಬೇಕಾದರೂ ಪ್ರಶ್ನೆಯನ್ನು ಕೇಳ ಬಹುದು. ಆದರೆ ತಾವು ಕೇಳತಕ್ಕ ಪ್ರಶ್ನೆಗಳು ಈ ಸಭೆಯ ಗಮನಕ್ಕೆ ಬಂದು ಅವು ರೆಕಾರ್ಡ್ ಆಗಬೇಕು ಎಂದು ತಮ್ಮ ಅಪೇಕ್ಷೆ ಇದ್ದರೆ ಕನ್ನಡದಲ್ಲಿ ಅಥವಾ ಇಂಗ್ಲೀಷಿನಲ್ಲಿ ಪ್ರಶ್ನೆಗಳನ್ನು ಕೇಳಬಹುದು. ಇಲ್ಲದೇ ಹೋದರೆ ತಮಗೆ ಯಾವ ಭಾಷೆ ಬೇಕೋ ಆ ಭಾಷೆಯಲ್ಲಿ ಪ್ರಶ್ನೆಯನ್ನು ಕೇಳಬಹುದು.

Sri V. N. PATIL.—(*Urdu*)

Sri AZEEZ SAIT.—(*Urdu*)

Letters Addressed to Ministers by M. L. As.

406. Sri K. SRIRAMULU (Gandhinagar).—

Will the Chief Minister be pleased to state:—

(*a*) whether it has come to the notice of the Government that whenever members of the Legislative Assembly write letters to the Ministers they do not get any reply from the concerned;

(*b*) if so, the reasons for the same?

Sri D. DEVARAJ URS (Chief Minister).—

(*a*) No.

(*b*) Does not arise.

ಶ್ರೀ ಕೆ. ಶ್ರೀರಾಮುಲು.— ವಿಧಾನಸಭಾ ಸದಸ್ಯರುಗಳು ಸಂಬಂಧಪಟ್ಟ ಮಂತ್ರಿಗಳಿಗೆ ಕಾಗದ ಬರೆದರೆ ಅವರಿಂದ ಉತ್ತರಗಳೇ ಬರುವುದಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಬಂದಿಲ್ಲ ಎಂದು ಹೇಳಿದ್ದಾರೆ. ಹಾಗಾದರೆ ತಮ್ಮ ಖಾತೆಗೆ ಹಾಗೂ ಇತರ ಮಂತ್ರಿಗಳಿಗೆ ಪತ್ರವನ್ನು ಬರೆದರೆ ತಮಗೆ ತಿಳಿಸಬೇಕೆಂಬ ಪದ್ಧತಿ ಇಲ್ಲವೇ ?

ಶ್ರೀ ಡಿ. ದೇವರಾಜ ಅರಸ್.— ಬೇರೆ ಮಂತ್ರಿಗಳು ನನಗೆ ಅವುಗಳನ್ನು ಕಳುಹಿಸತಕ್ಕಂಥಾ ಪದ್ಧತಿ ಇಲ್ಲ. ಜನರಲ್ ಆಗಿ ಆಗಿಂದಾಗ್ಯೆ ಮಂತ್ರಿಗಳಿಗೆ ಯಾರಾದರೂ ಕಾಗದ ಬರೆದರೆ ಅದಕ್ಕೆ ಅವರು ಉತ್ತರವನ್ನು ಕೊಡಬೇಕು. ಎಲ್ಲರೂ ಆ ರೀತಿ ಮಾಡುತ್ತಿದ್ದಾರೆ. ಆಗಿಂದಾಗ್ಯೆ ನಾನು ಕೂಡ ಯಾರಾದರೂ ಕಾಗದ ಬರೆದರೆ ಅವರಿಗೆ ಜವಾಬು ಕೊಡಬೇಕೆಂದು ಹೇಳಿದ್ದೇನೆ. ಯಾವುದಾದರೆ ಸ್ಪೆಸಿಫಿಕ್ ಇನ್‌ಸ್ಟೆನ್ಸ್ ಇದ್ದರೆ ಹೇಳಿ ತಮಗೆ ಉತ್ತರ ಬರುವಹಾಗೆ ಮಾಡೋಣ.

ಶ್ರೀ ಕೆ. ಶ್ರೀರಾಮುಲು.—ಏಪ್ರಿಲ್ 21 ನೇ ತಾರೀಖು ನಾನು ಶ್ರೀಮಾನ್ ಸಿದ್ಧವೀರಪ್ಪನವರು, ಶ್ರೀ ಬದರಿನಾರಾಯಣ ಅವರು ಮತ್ತು ಶ್ರೀ ಚಿಕ್ಕೇಗೌಡರು ಈ ಮಂತ್ರಿಗಳಿಗೆ ಕಾಗದವನ್ನು ಬರೆದಿದ್ದೇನೆ. ಅವರಿಂದ ನನ್ನ ಪತ್ರಕ್ಕೆ ಉತ್ತರ ಬಂದಿಲ್ಲ. ಆದ್ದರಿಂದ ಮಂತ್ರಿಗಳಿಂದ ಬೇಗನೆ ಉತ್ತರ ಬರುವುದಕ್ಕೆ ಹೊಸದಾಗಿ ಯಾವುದಾದರೂ ಒಂದು ಕ್ರಮವನ್ನು ತೆಗೆದು ಕೊಳ್ಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.— ಅವರಿಗೆ ಹೇಳುತ್ತೇನೆ. ತಮಗೆ ಉತ್ತರ ಬರುವಹಾಗೆ ಮಾಡುತ್ತೇನೆ.

ಶ್ರೀ ಎಂ. ವಿ. ರುದ್ರಪ್ಪ.—ಎಲ್ಲರಿಗೂ ಬೇಗನೆ ಉತ್ತರ ಬರುವಹಾಗೆ ಏರ್ಪಾಟು ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ತಾವು ಪತ್ರ ಬರೆದರೆ ಅದಕ್ಕೆ ಬೇಗ ಉತ್ತರ ಬರುವ ಹಾಗೆ ಮಾಡುತ್ತೇವೆ.

Construction of a Tank at Mugalnagaon Village, Chittapur Taluk

240. **Sri PRABHAKAR TELKAR** (Kalagi).—

Will the Minister for Public Works and Electricity be pleased to state :—

(*a*) whether the Government has constructed a tank at Nugalnagaon village, Chittapur taluk, for irrigation purposes ;

(*b*) if so, the estimated cost of it, and when construction of the same was completed ;

(*c*) the extent of land proposed to be irrigated under this tank ;

(*d*) whether any land is irrigated so far under this tank ;

(*e*) if so, the extent of land brought under irrigation after construction of this tank ;

(*f*) the extent of land that yet remains to be irrigated ?

Sri H. M. CHANNABASAPPA (Minister for Public Works).—

(*a*) Yes.

(*b*) The sanctioned estimated cost is Rs. 7,98,200 and the work was completed during June, 1969.

(*c*) 964 acres.

(*d*) Yes.

(*e*) 280 acres.

(*f*) 681 acres.

Sri PRABHAKAR TELKAR.—Has it come to the notice of the Government that not a single acre of land has been irrigated and the complaint of the people is that the water is not suitable for irrigation ?

† Sri H. M. CHANNABASAPPA.—The hon. member is giving information. The information made out by the hon. member has not come to the knowledge of the Government.

Sri PRABHAKAR TELKAR.—The general complaint of the people of the area is that they are not able to use the water for irrigation. May I know whether the Government tested the water and soil before taking up the project ?

Sri H. M. CHANNABASAPPA.—According to the information I have, the reason for non-utilisation of water is not the reason attributed by the members.

Sri V. N. PATIL.—May I know what are the reasons for non-utilisation of water for irrigation ?

Sri H. M. CHANNABASAPPA.—According to the information available with the Government the reasons for non-utilisation of water is that the line of the land is not easy. levelling has to be done and spade work has got to be done for levelling the earth.

Sri D. B. KALMANKAR.—May I know whether the Government will verify whether water is utilised for irrigation and if not, find out the reasons for the same and see that water is utilised ?

Sri H. M. CHANNABASAPPA.—I would certainly take action to see whatever the member has stated is correct or not ; if wrong information is given to the Government I will verify who is responsible for it.

ಶ್ರೀ ಸಿ. ಎನ್. ಪಾಟೀಲ್.—ಈಗ ನಮ್ಮ ಭಾಗದಲ್ಲಿ ಹಾಗೂ ಇತರ ಕಡೆಗಳಲ್ಲಿ ಸಣ್ಣ ಸಣ್ಣ ಕೆರೆಗಳು ಹಾಗೂ ಕುಂಟೆಗಳು ಇವೆ. ಅವುಗಳಿಗೆ ಫೀಲ್ಡ್ ಚಾನಲ್ ಇಲ್ಲದೆ ಇರುವುದರಿಂದ ಆ ನೀರನ್ನು ಉಪಯೋಗ ಮಾಡುವುದಕ್ಕೆ ಆಗುತ್ತಿಲ್ಲ. ಕೆರೆ ಸಿಲ್ಟ್ ಆಗುತ್ತದೆ. ಆದ್ದರಿಂದ ಆದಷ್ಟು ಜಾಗ್ರತೆ ಆ ಕೆರೆ ಕುಂಟೆಗಳಿಗೆ ಫೀಲ್ಡ್ ಚಾನಲ್ ಮಾಡಿಕೊಟ್ಟು ಆ ನೀರು ಉಪಯೋಗವಾಗುವ ಹಾಗೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಈ ಪ್ರಶ್ನೆಗೆ ಅನ್ವಯಿಸುವುದಿಲ್ಲ. ಆದರೂ ಸಹ ಕೆರೆಯಿಂದ ನೀರು ಸಪ್ಲೈ ಆಗುವುದು ತಡವಾಗಿದ್ದರೆ, ಫೀಲ್ಡ್ ಚಾನಲ್ ಮಾಡಿಕೊಡುವುದಕ್ಕೆ ಸರ್ಕಾರದ ಅಭ್ಯಂತರವಿಲ್ಲ, ಅದನ್ನು ಮಾಡಿಸಿಕೊಡುತ್ತೇವೆ.

SRI PRABHAKAR TELKAR.—Will the Government give reasons for not providing water to 684 acres of land uptill now ?

SRI H. M. CHANNABASAPPA.—Water has been made available. But the people have not taken. That is the point.

MADAM SPEAKER.—Question Hour is over.

QUESTIONS FOR ANSWERS ON THE DAY
(but not taken up)

Sugarcane Cess Fund Division in Mandya Division

281. SRI G. MADE GOWDA (Kirugavalu).—

Will the Minister for Public Works and Electricity be pleased to state :—

(*a*) whether there was a separate Sugarcane Cess Fund Division in Mandya Division to look after construction and effecting improvements to roads ;

(*b*) if so, the reason for the abolition of that Division ;

(*c*) the alternative arrangements made to maintain and improve these roads ?

SRI H. M. CHANNABASAPPA (Minister for Public Works and Electricity).—

(*a*) Yes.

(*b*) The Division was abolished consequent on the reorganisation of P.W.D. Divisions in Mandya District.

(*c*) On abolition of the Division in 1959 all important roads were handed over to Mandya Division and the remaining roads to V.C. Divsion, Mandya for maintenance and improvements.

Expenditure on Gorur Dam

366. SRI T. N. MADAPPA GOWDA (Nagamangala).—

Will the Minister of State for Major Irrigation be pleased to state :—

(*a*) the amount of expenditure incurred for construction of Gorur Dam ;

(*b*) the names of aluks that would be benefited ?

Sri H. N. NANJE GOWDA (Minister of State for Major Irrigation).—

(*a*) Expenditure incurred up to the end of April, 1972 is Rs. 1,432.09 lakhs.

(*b*) (i) Hassan Taluk
(ii) Channarayapatna Taluk
(iii) Holenarsipur Taluk
(iv) Krishnarajpet Taluk
(v) Pandavapura Taluk
(vi) Arkalgud Taluk

Enhancing the Rate of Cotton Seed

378. Sri C. ANDANAPPA (Hadagali).—

Will the Minister for Agriculture and Forests be pleased to state :—

(*a*) the reason for enhancing the selling rate of H4 Cotton seed to Rs. 95 per Kg. against the decision reached at the meeting of growers, the Director of Agriculture and the representatives of Agro-Industries Corporation ;

(*b*) the basis for allowing a margin of Rs. 15 per Kg. to the Agro-Industries Corporation ?

Sri K. H. PATIL (Minister for Agriculture and Forests). —

(*a*) According to the decisions taken at the meeting of Seed Producers, Officers of the Department of Agriculture and the Mysore State Agro-Industries Corporation Limited, on 17th April 1972, the seed will be sold at Rs 90+(Sales Tax 1½%+2% surcharge on Sales Tax=Rs. 91-38). Seed will not be sold at Rs. 95 per Kg.

(*b*) The margin allowed per Kg. is Rs. 10. The seeds will be procurred at Rs. 80 per Kg. The places of production and consumption are located far apart. The Mysore State Agro-Industries Corporation will have to incur transport and other incidental charges for the movement of seeds. In addition to this if the interest on investment and the margin of profit is added, the margin of Rs. 10 allowed is reasonable. Added to this the Mysore State Agro-Industries Corporation will run a risk and lose heavily if some stocks of seeds remain unsold due to unforeseen circumstances. Taking all these things into consideration the margin of profit of Rs. 10 per Kg. is reasonable.

CALLING ATTENTION TO MATTERS OF URGENT PUBLIC IMPORTANCE

(*i*) re : *Malpractices in the admission of Children in Little Flower Convent School, Hospet*

SRI B. SATYANARAYANA SINGH (Hospet).—I call the attention of the Minister for Education to malpractices in the admission of children in Little Flower Convent School, Hospet.

SRI A. R. BADARINARAYANA (Minister for Education).—I state as follows : Regarding the Calling Attention Notice No. 90 of the hon. Member, each item raised by the Member from (a) to (h) is replied as under as per our information ;

(*a*) Little Flower Convent, School Hospet, is an institution with English Medium not receiving any aid from the Department. However, the Management are collecting Rs. 10 p.m. as tuition fee for Standards I to IV and Rs. 12 p.m. for Standards V and VI.

(*b*) As per our information, the following is the enrolment of the children as on to-day :

		Boys	*Girls*	*Total*
I	'A'	41	25	66
	'B'	37	20	57
II	'A'	49	24	73
	'B'	51	27	78
III	'A'	48	30	78
	IV	38	16	54
	V	26	17	43
	VI	14	17	31
	VII	18	10	28
	Total	322	186	508

(c) and (b) At present, there are nine teachers for the total strength of 508 pupils. Hence the average comes to 56. However, it is gathered that the institution proposes to have three more sections and three more teachers for this purpose. This would release the pressure on each class and it is proposed to restrict the strength of the sections to 60. Thus, there will be adequate staff for the institution after the addition of 3 more teachers.

(*e*) As regards the matter of the institution taking receipt for more amount than is actually paid to the teaching staff, Government have no information in this. If the hon. member has any information, it will be looked into,

(SRI A. R. BADARINARAYANA)

(*f*) The institution is not collecting 10 paise as penalty from each pupil, on compulsory basis, for coming late to the school. However, it is gathered that a Defence Fund Box is kept in the school and it is left to the discretion of pupils to donate for this purpose.

(*g*) It is confirmed that a fee of Rs. 15 is collected for every child admitted to the Nursery.

After giving the above factual information, I may bring to the notice of the House that this institution is an English Medium School without any aid from the department. Accordingly, they are collecting tuition fee from all the pupils to defray expenditure of salary of the staff and maintenance of the school.

Thus we see that there does not appear to be any illegal collection of fees, and no malpractice as such has been brought to the notice of Government.

2-00 P.M.

SRI B. SATYANARAYAN SINGH.—Is the Government aware that this school is running Kannada medium section also and getting the grants from Government ?

SRI A. R. BADARINARAYANA.—I have no information about that.

SRI B. B. SAYANAK.—Just because this is an English Medium School and is not getting grants from Government does it mean that they should charge fees ?

SRI A.R. BADARINARAYANA.—This is a private school and they are not getting any grants from Government. The students are at liberty to join or not to join the said school. But the Government has obligation to open schools and Government schools are there to admit students. This being a private school it would not be possible to force them not to collect fees.

SRI B. SATYANARAYAN SINGH.—Are there any rules to regulate collection of fees in schools which are not receiving grants and if not, is there any proposal to frame such rules ?

SRI A. R. BADARINARAYANA.—At present there are no such rules. Since the hon. Member has made a suggestion now it will be considered.

ಶ್ರೀ ಕಾಗೋಡು ತಿಮ್ಮಪ್ಪ.—ಈ ಶಾಲೆಗಳಿಗೆ ತಾವು ಏನಾದರೂ ಮಾನ್ಯತೆ ಕೊಟ್ಟಿದ್ದರೆ ಸರ್ಕಾರದವರು ಏಕೆ ಇವುಗಳನ್ನು ತಮ್ಮ ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡಬಾರದು ? ಮತ್ತು ಈ ಫೀ ಕಲೆಕ್ಟ್ ಮಾಡುವ ಬಗ್ಗೆ ಏಕೆ ಕ್ರಮ ತೆಗೆದುಕೊಳ್ಳಬಾರದು ।

SRI A. R. BADARINARAYANA.—Permission to run the institution has been given. It would not be proper for us to force them to admit students without payment of fees. However, Government will fulfil its obligation to provide free and compulsory education to the children in Government Schools.

SRI B. SATYANARAYAN SINGH.—Since the institution is making a good business by way of fees collections, atleast while renewing the recognition of the said school for next year will the Government put some restrictions on collection of fees ?

SRI A. R. BADARINARAYANA.—If the hon. Member brings it to my notice separately that they are collecting exhorbitant fees, I shall have it examined.

MADAM SPEAKER —Next calling attention notice by hon. Member Sri Kalmankar.

(*ii*) re : *Non-allocation of pay in the Revised Pay Scale of teachers of junior colleges*

SRI D. B. KALMANKAR (Afzalpur).—I call the attention of the Hon. Minister for Education to the non-allocation of pay in the revised pay scale of teachers of Junior Colleges.

SRI A. R. BADARINARAYANA.—I wish to make the following statement.

In this connection, the Board of Pre-University Education has resolved that the pay scales of the Principals of Junior Colleges should be in the grade of Rs. 400–950 and those of Lecturers in the grade of Rs. 300–700. These recommendation are now under active considera-tion of Government and a Government Order in this behalf is expected to be issued very shortly. As soon as the Government order is issued, the Lecturers would be allocated in their appropriate grades.

SRI D. B. KALMANKAR.—In many of the Private Colleges where XI Standard classes are being conducted which have now been converted into Junior Colleges, the teachers handling XI standard classes are not getting any new scales and thereby they are disappointed. In view of this will the Government see that those teachers also get the benefit of the new scales ?

SRI A. R. BADARINARAYANA.—The Lecturers need not get disappointed. They will be given what they deserve.

ಶ್ರೀ ಕೊಣಂದೂರು ಲಿಂಗಪ್ಪ.—ಈಗ ಜೂನಿಯರ್ ಕಾಲೇಜ್ ಮತ್ತು ಸರ್ಕಾರೀ ಕಾಲೇಜು ಗಳಿಗೆ ನೇಮಕ ಮಾಡುವಾಗ ಅವರಿಗೆ ಮಾಸ್ಟರ್ ಡಿಗ್ರಿ ಇರಬೇಕೆಂದು ಇದೆ. ಆದ್ದರಿಂದ ಅವರೆಲ್ಲರಿಗೂ ಒಂದೇ ಸ್ಕೇಲ್, ಒಂದೇ ರೀತಿಯ ಸಂಬಳಸಾರಿಗೆಗಳನ್ನು ಕೊಡದೆ ಏಕೆ ತಾರತಮ್ಯ ಮಾಡುತ್ತೀರಿ ? ಇದನ್ನು ಸರಿ ಮಾಡುತ್ತೀರಾ ?

SRI A. R. BADARINARAYANA.—If there is any disparity it will be looked into.

SRI B. B. SAYANAK.—There are some composite Junior Colleges in Belgaum and they are not getting grants. Will the Government see that they are given grants ?

Sri A. R. BADARINARAYANA.—Why does the hon. member think that grants to composite junior colleges will not be paid. If there is any such complaint in Belgaum I will look into it.

MADAM SPEAKER.—Next calling attention notice by hon. Member Sri Gopinath R Sandra.

(*iii*) re : *Recovery of Local Fund Arrears in Dharwar District.*

Sri GOPINATH R. SANDRA (Hubli-Rural).—I call the attention of the Hon. Minister for Revenue to the recovery of local fund arrears in Dharwar District.

Sri N. HUTCHAMASTI GOWDA (Minister for Revenue).—I state as follows : The Hon'ble Member has alleged that there is harrassment in collecting the dues of local fund which are in arrears for the last five years in Dharwar District in General and in Hubli Taluk in particular.

No coercive measure has been adopted in any case to collect the arrears of local fund in Dharwar District. This applies to Hubli Taluk also. Even demand notices have not been issued. Recovery was made where the amount was paid smoothly without resort to coercive measures. No instances of causing harassmsnt to the agriculturists have come to the notice of Government.

The Rules for suspension and remission of land revenue are prescribed in Government Notification No. RDF 9 TRM 66, dated 15th April 1968. In accordance with these Rules, remission of land revenue is being granted by the Government and suspension of land revenue is being sanctioned by the concerned Deputy Commissioners to whom powers have been delegated in that respect.

As there was no specified provision in the Mysore Land Revenue Act, 1964 and Rules thereunder as to the remission of cesses following remission of land revenue, the opinion of the Department of Law and Parliamentary Affairs was sought in the matter. That Department has recorded its opinion as follows :—

> " That expression 'land Revenue' is not defined under Section 2 of the M. L. R. Act (Act No. 12 of 1964, but reference is made to the definition 'land revenue' given under Sec. 60 (b) of the Act. Apparently, the definition is given under Chapter VI of the Act and the definition is limited for purposes of revenue jurisdiction. The expression 'land revenue' is defined under clause (b) to include any tax, cess, rate or other impost payable under the provisions of any law for the time being in force and such moneys due to the Government on account of such cesses, etc., are treated as 'land revenue' for the purpose of collection. It is clear

from the provisions contained in the Act that such cesses are not part of land revenue though they are recoverable as land revenue.

All that Sec. 194 contemplates is the remission of land revenue in whole or in part as may be Specified in such notification. Remmission implies the liability to pay, but the authority empowered to recover, such debt or money refrains to do so for reasons specified in Sec. 194. It follows, therefore, that remission of land revenue would not necessarily imply remission of other cesses liable to be recovered under the provisions of any law in force. There appears to be no provision under the L. R. Act for remission of such cesses imposed under the provisions of any other law in force"

As opined by the Law Department, instructions were issued to the Divisional Commissioners and the Deputy Commissioners intimating that there is no provision for remission of cesses and that, in future, while, submitting remission proposals to Government for approval, cesses are not to be included.

Divisional Commissioners were again requested in Government letter No. RDN 31 TRM 71, dated 8th June 1971 to issue suitable instructions to the Deputy Commissioners to restrict their suspension orders to land revenue (excluding cesses) and to exclude cesses while submitting their proposals to Government for remission of land revenue.

The Divisional Commissioner, Belgaum, wanted clarification as to whether the Government Order dated 8th June 1971 will have to be given effect to from the year 1971 or 1972 or whether the cesses on land revenue suspended or remitted in the past may have to be put down for recovery. On this, the Department of Law and Parliamentary Affairs was again consulted. The views expressed by that Department are as follows : —

" This Department has already furnished opinion that the cess is not part of the land revenue, though cesses are recovered as land revenue and there is no provision under the Land Revenue Act for remission of such cesses imposed under the provisions of any other law in force. In view of the opinion furnished by this Department that there is no provision in the Land Revenue Act for remission of cesses imposed under the provisions of any other law in force, the cess payable for the years during which there have been remission of land revenue will have to be collected. As already opined, cesses not part of the land revenue, though they are recovered as land revenue. "

On the above opinion of the Law Department the Divisional Commissioner, Belgaum was informed in Government letter No. RDN 57 TRM 71, dated 22nd February 1972, that cesses payable for the years during which there had been remission of land revenue would have to

(SRI N. HUTCHAMASTI GOWDA)

be collected as arrears and that necessary instructions might be given to all the Deputy Commissioners in this regard. The other Divisional Commissioners were also informed of the position. Accordingly, the Revenue authorities are taking action to recover the arrears of cesses.

ಶ್ರೀ ಗೋಪಿನಾಥ್ ಆರ್. ಸಾಂದ್ರ.—ಈಗ ಐದು ವರ್ಷಗಳ ಲೋಕಲ್ ಸೆಸ್ ಫಂಡನ್ನು ಒಮ್ಮೆಲೇ ವಸೂಲುಮಾಡುವುದು ಅನ್ಯಾಯವಲ್ಲವೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಐದು ವರ್ಷಗಳ ಬಾಕಿಯನ್ನು ಒಮ್ಮೆಲೇ ವಸೂಲು ಮಾಡುವ ಕಾರ್ಯಕ್ರಮವನ್ನು ಏನೂ ಕೈಗೊಂಡಿಲ್ಲ. ಹಿಂದೆ ಕೆಲವು ಸಂದರ್ಭಗಳಲ್ಲಿ ಪ್ರಶ್ನೆಗಳಿಗೆ ಉತ್ತರ ಹೇಳುವಾಗ ಈಗ ಹಳೆಯ ವರ್ಷದ ಹಾಗೂ ಹಿಂದಿನ ವರ್ಷದ ಬಾಕಿ ಮಾತ್ರ ವಸೂಲು ಮಾಡಬೇಕೆಂದು ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದೆ. ಆ ವರ್ಷದ ಕಂದಾಯ ಮತ್ತೆ ಹಿಂದಿನ ವರ್ಷದ ಕಂದಾಯ ಅದರ ಜೊತೆಯಲ್ಲಿ ಸೆಸ್ ವಸೂಲುಮಾಡುವ ಕಾರ್ಯಕ್ರಮ ಇದೆ.

ಶ್ರೀ ಗೋಪಿನಾಥ್ ಆರ್. ಸಾಂದ್ರ.—5 ವರ್ಷಗಳ ಕಂದಾಯ ಈಗಾಗಲೇ ವಸೂಲು ಮಾಡಿದ್ದರೆ ಅದನ್ನು ಮುಂದಿನ ವರ್ಷದ ಲೆಕ್ಕಕ್ಕೆ ತೆಗೆದುಕೊಳ್ಳುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವಸೂಲಾಗಿರುವ ಕಂದಾಯ ಸರ್ಕಾರಕ್ಕೆ ಬಂದಿದೆ. ಮುಂದೆ ವಸೂಲುಮಾಡುವುದರಲ್ಲಿ ಆ ವಿನಾಯತಿ ತೋರಿಸಬಹುದು.

Students' Strikes at Belgaum.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ವಿದ್ಯಾರ್ಥಿಗಳ ಶಿಕ್ಷಣ ಶುಲ್ಕವನ್ನು ಅಧಿಕ ಮಾಡಿರುವ ಬಗ್ಗೆ ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೇನೆ. ಇವತ್ತಿನ ಪತ್ರಿಕೆ ಪ್ರಕಾರ ಬೆಳಗಾಂನಲ್ಲಿ ಐದು ಕಾಲೇಜುಗಳು ಮುಷ್ಕರವನ್ನು ಪ್ರಾರಂಭಮಾಡಿವೆ. ಅಲ್ಲಿರುವ ಖಾಸಗೀ ಕಾಲೇಜಿನವರು ಅಧಿಕ ಶುಲ್ಕವನ್ನು ವಸೂಲುಮಾಡುತ್ತಿರುವ ಬಗ್ಗೆ ವಿದ್ಯಾರ್ಥಿಗಳು ಅಲ್ಲಿ ಚಳುವಳಿಯನ್ನು ಪ್ರಾರಂಭಮಾಡಿದ್ದಾರೆ. ಇದರಿಂದ ರಾಜ್ಯಾದ್ಯಂತ ಚಳುವಳಿ ನಡೆಯುವುದಕ್ಕೆ ಸಿದ್ಧತೆಗಳು ಆಗುತ್ತಿವೆ. ಇಷ್ಟಾದರೂ ಈ ಬಗ್ಗೆ ಸರ್ಕಾರದವರು ಎಚ್ಚರಿಕೆ ತೆಗೆದುಕೊಳ್ಳದೆ ಅವರಿಗೆ ಸೂಕ್ತ ತಿಳುವಳಿಕೆಯನ್ನೂ ಕೊಡದೇ ಇರುವುದರಿಂದ ವಿದ್ಯಾರ್ಥಿಗಳು ಈ ಬಗ್ಗೆ ಚಳುವಳಿಹೂಡಲು ಪರೋಕ್ಷವಾಗಿ ಪ್ರಚೋದನೆಗೆ ಅವಕಾಶ ಕೊಡಬಾರದೆಂದು ನಾನು ವಿದ್ಯಾಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ತಮ್ಮ ಕಾಲ್ ಅಟೆನ್‌ಷನ್ ನೋಟೀಸನ್ನು ಕಳುಹಿಸಿಕೊಟ್ಟಿದ್ದೇನೆ. ಅದಕ್ಕೆ ಸರ್ಕಾರದಿಂದ ಉತ್ತರ ಬಂದಾಗ ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ವಿದ್ಯಾರ್ಥಿಗಳ ಚಳುವಳಿ ಇವತ್ತು ಬೆಳಗಾಂನಲ್ಲಿ ಆಗಿದೆ. ನಾಳೆ ಬೆಂಗಳೂರಿನಲ್ಲಿಯೂ ಆಗಬಹುದು. ಮೊನ್ನೆ ಚಿಕ್ಕಮಗಳೂರಿನಲ್ಲಿ ನಡೆಯಿತು.

ಅಧ್ಯಕ್ಷರು.—ತಾವು ಪೇಪರ್‌ನಲ್ಲಿ ನೋಡಿರುವುದನ್ನೆಲ್ಲಾ ಮಂತ್ರಿಗಳು ಎಲ್ಲಿ ನೋಡಿರುತ್ತಾರೆ? ಆದಷ್ಟು ಜಾಗ್ರತೆಯಾಗಿ ತಮ್ಮ ಕಾಲ್ ಅಟೆನ್‌ಷನ್ ನೋಟೀಸನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಸರ್ಕಾರ ಆ ಖಾಸಗೀ ಕಾಲೇಜುಗಳವರ ಮೇಲೆ ಸರಿಯಾಗಿ ಕಂಟ್ರೋಲ್ ಇಟ್ಟುಕೊಳ್ಳಲಿಲ್ಲ, ಸರ್ಕಾರಿ ಕಾಲೇಜುಗಳಿಗಿಂತ ಹೆಚ್ಚಿಗೆ ಖಾಸಗೀ ಕಾಲೇಜುಗಳಲ್ಲಿ ಶುಲ್ಕವನ್ನು ವಸೂಲುಮಾಡುತ್ತಿದ್ದರೂ, ಅದರ ಬಗ್ಗೆ ವಿದ್ಯಾರ್ಥಿಗಳು ತೀವ್ರ ಚಳುವಳಿಯನ್ನು ಮಾಡುತ್ತಿದ್ದರೂ ಸರ್ಕಾರದವರು ಆ ವಿಚಾರದಲ್ಲಿ ಯಾವ ಒಂದು ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕೋ ಅದರಲ್ಲಿ ವಿಫಲರಾಗಿದ್ದಾರೆ.

Police excesses over a woman under trial in Bidar District

ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ನಾನು ಒಂದು ಅಡ್ಜರ್ನ್‌ಮೆಂಟ್ ಮೋಷನ್ ಕಳುಹಿಸಿದ್ದೆ. ಮೊನ್ನೆತಾನೆ ನಮ್ಮ ಜಿಲ್ಲೆಯಲ್ಲಿ ಪೋಲೀಸ್ ಲಾಕಪ್ಪಿನಲ್ಲಿ ಅಂಡರ್ ಟ್ರೈಯಲ್ ಯಾಗಿ ಒಬ್ಬ ಮಹಿಳೆಯು ಮಾನಭಂಗವಾಗಿದೆಯೆಂಬುದಾಗಿ ನಾನು ಒಂದು ಅಡ್ಜರ್ನ್‌ಮೆಂಟ್ ಮೋಷನ್ ಕಳುಹಿಸಿದ್ದೆ. ಅದನ್ನು ತಾವು ಒಪ್ಪಿಕೊಳ್ಳಬೇಕಾಗಿತ್ತು.

ಅಧ್ಯಕ್ಷರು.—ಕಾಲ್ ಅಟ್‌ನ್‌ಷನ್ ನೋಟೀಸಾಗಿ ಇದನ್ನು ತೆಗೆದುಕೊಳ್ಳಬೇಕೆಂದು ಕಳುಹಿಸಿದ್ದೀರಿ. ಅದಕ್ಕೆ ಆಗಲೇ ಉತ್ತರ ಕೊಟ್ಟಿದ್ದೇನೆ. ನಾನು ಉತ್ತರ ಕೊಟ್ಟಾದಮೇಲೆ ಪುನಃ ನೀವು ಒಂದೊಂದು ಗಜ ಭಾಷಣ ಮಾಡಿ ಹೇಳುವುದೆಂದರೇನು, ನೀವು ನನಗೆ ಅದರ ಬಗ್ಗೆ ಪುನಃ ಪತ್ರ ಬರೆಯುವ ಕಾರಣವಿಲ್ಲ, ನಿಮ್ಮ ಪತ್ರಕ್ಕೆ ಉತ್ತರ ಹೇಳುವ ಕರ್ತವ್ಯ ನನ್ನದು. ಅದಕ್ಕೆ ಮಂತ್ರಿಗಳು ಹೇಗೆ ಜವಾಬ್ದಾರರು, ನನ್ನ ಪತ್ರಕ್ಕೆ ಮರ್ಯಾದೆ ಬರಬೇಕಾಗಿದೆ. ನಾನು ನಿಮಗೆ ಉತ್ತರ ಕೊಟ್ಟಿದ್ದಕ್ಕೆ ಸ್ಯಾಂಕ್ಟಿಟಿ ಏನು ?

ಶ್ರೀ ವಾಟಾಳ್ ನಾಗರಾಜ್.—ತಾವು ಇರುವುದರಿಂದಲೇ ನಮಗೆ ಸ್ವಾತಂತ್ರವಿದೆ.

ಅಧ್ಯಕ್ಷರು.—ಆ ಮಾತನ್ನು ಕೇಳಿ ನನಗೆ ಬಹಳ ಆನಂದವಾಗಿದೆ. ಆದರೆ ಇಲ್ಲಿ ಇವರ ಬಗ್ಗೆ ರೂಲ್ಸ್ ಏನಿದೆಯೋ-ಅದರಂತೆ ನಾವೆಲ್ಲರೂ ಫಾಲೋ ಮಾಡಬೇಕು. ನೀವು ಕಳುಹಿಸಿರುವ ಪತ್ರಕೆ ನಾನು ಉತ್ತರ ಕೊಟ್ಟಾದಮೇಲೆ ಅದಕ್ಕೆ ಮಾನ್ಯತೆ ಇರಬೇಕು.

ಶ್ರೀ ವಿ. ಎನ್. ಪಾಟೀಲ್.—ಅದಕ್ಕೆ ಗೌರವ ಕೊಟ್ಟಿದ್ದೇನೆ.

ಅಧ್ಯಕ್ಷರು.—ಪುನಃ ಅದನ್ನೇ ಎತ್ತಿ ಹೇಳಬಾರದು. ರೂಲ್ಸ್ ಪ್ರಕಾರ ಅದರ ಬಗ್ಗೆ ಕ್ರಮ ವನ್ನು ತೆಗೆದುಕೊಂಡಿದ್ದೇನೆ. ಅದನ್ನು ಕಳುಹಿಸಿದ್ದೇನೆ. ಅದನ್ನು ಎಗ್ಸಾಮಿನ್ ಮಾಡುತ್ತಿದ್ದಾರೆ ಇದು ದುರ್ದೈವದ ಸಂಗತಿ. ಹೀಗೆ ಮಾಡಬಾರದಾಗಿತ್ತು. ನನ್ನ ಪತ್ರಕ್ಕೆ ಏನು ಮರ್ಯಾದೆ ಕೊಟ್ಟಹಾಗಾಗುತ್ತದೆ !

ಶ್ರೀ ವಿ. ಎನ್. ಪಾಟೀಲ್.—ನಾನು ಕಾಲ್ ಅಟೆನ್‌ಷನ್ನಿಗೆ ಒಪ್ಪಿಗೆ ಕೊಟ್ಟಿದ್ದರೂ ಅದನ್ನು ವಿತ್‌ಹೆಲ್ಡ್ ಮಾಡಿದ್ದೀರಿ. ನನ್ನ ಕಾಲ್ ಅಟೆನ್‌ಷನ್ ನೋಟೀಸಿಗೆ 15 ದಿವಸಗಳೊಳಗೆ ಉತ್ತರ ಬರುತ್ತದೆಂದರೆ, ನನಗೆ ಕಾನ್ಫಿಡೆನ್ಸ್ ಆಗುತ್ತದೆ. ಇಲ್ಲದಿದ್ದರೆ ನನ್ನ ಇವೆಂಟ್ಸ್ ಡಿಸ್ಟ್ರಾಯ್ ಆದಂತಾಗುತ್ತದೆ. ಮಹಿಳೆಯ ಮಾನಭಂಗಕ್ಕೆ ಸಾಕಷ್ಟು ಬಲತ್ಕಾರವಾಗಿದೆ. ಆದ್ದರಿಂದ ನನಗೆ ಜಾಗ್ರತೆಯಾಗಿ ಉತ್ತರ ಬಾರದಿದ್ದರೆ ಅಷ್ಟರೊಳಗೆ ಕೇಸು ವಿತ್‌ಡ್ರಾ ಮಾಡುತ್ತಾರೆ. ಆದ್ದರಿಂದ ಈ ನನ್ನ ಕಾಲ್ ಅಟೆನ್‌ಷನ್ನಿಗೆ ಟಾಪ್ ಪ್ರೈಯಾರಿಟಿ ಕೊಟ್ಟು ನಾಳೆ ದಿವಸವೇ ಮಾನ್ಯ ಮುಖ್ಯ ಮಂತ್ರಿಗಳು ಅದರ ಬಗ್ಗೆ ಉತ್ತರ ಕೊಡಬೇಕೆಂದು ಹೇಳಿಕಳುಹಿಸುತ್ತೇನೆಂದು ತಾವು ಆಶ್ವಾಸನೆ ಯನ್ನು ಕೊಟ್ಟರೆ ಸಾಕು.

ಅಧ್ಯಕ್ಷರು.—ತಾವು ಸ್ವಲ್ಪ ತಾಳಿದರೆ ಒಳ್ಳೆಯದು. ತಾವು ಹೇಳಿದ್ದನ್ನು ತಿಳಿದುಕೊಳ್ಳು ವುದಕ್ಕೆ ನನಗೆ ಶಕ್ತಿ ಇದೆ. ತಾವು ಹೇಳಿದ್ದು ನನಗೆ ಅರ್ಥವಾಗಿದೆ. ತಮ್ಮ ಪ್ರಶ್ನೆಗೆ ಪ್ರಾಮು ಖ್ಯತೆ ಕೊಟ್ಟಿದ್ದೇನೆ ತಮ್ಮ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ. ಅದಕ್ಕೆ ಆದಷ್ಟು ಜಾಗ್ರತೆಯಾಗಿ ಉತ್ತರ ಕೊಡಬೇಕೆಂದೂ ಸಹ ಹೇಳುತ್ತೇನೆ.

Procedure for Supplementaries during Question Hour

Sri H. S. SIDDAPPA (Arsikere).—I want to make a humble submission to the Chair. With regard to Questions and Answers, our difficulty is, some of us are new members and we may err while asking the questions. The Chair being a friend, philosopher and guide to the House, you can kindly guide us if we put a wrong question. The Chair instead of guiding us to put questions this way or that way, cause the next question. It would be very nice from the point of view of the

(SRI H. S. SIDDAPPA)

Chair but that would be embarrassing to the new members. During Question Hour, we feel rather heckled and we are frightened at the way we are treated by the Chair.

The second point is : the other day I asked a quession to the Hon. Revenue Minister. The Chair immediately called me to order saying that it was not an important question.

MADAM SPEAKER.—It appears the hon. member did not catch the meaning of order. Order means the House should come to order. Since he is a new member, any lapse on his part would be excused.

Sri H. S. SIDDAPPA.—My submission is that even though I am a new member, it is not my intention to err or commit mistake or act against the rules of the House. My only submission is, you please guide us, but do not curtail our right to put questions and elicit information. Our Questions will always be based on some principles. Yesterday I asked a question and the reply was that the Government was not in power when the loan was granted. Please guide us in putting questions in the best way you conceive of. My impression is: that you are curtailing our right in putting questions. If we are treated in the manner in which we are treated, we will be frustrated. We may not be able to participate in the debate if we are condemned. Please do not give us that impression.

ಅಧ್ಯಕ್ಷರು.—ನಾನು ಈ ಅಧಿವೇಶನಕ್ಕೆ ಚರ್ಚೆ ಮಾಡಲು ಬಂದಿರತಕ್ಕ ಪ್ರಶ್ನೆಗಳೇನಿವೆ ಅವುಗಳಲ್ಲಿ ಯಾವ ಯಾವ ಪ್ರಶ್ನೆಗಳಿಗೆ ಸರ್ಕಾರದಿಂದ ಉತ್ತರಗಳು ಬರುತ್ತವೆಯೋ ಅದರ ಪ್ರಕಾರ ಅವುಗಳನ್ನು ವಿಂಗಡಿಸಿ ಪಟ್ಟಿ ತಯಾರು ಮಾಡಿ ದಿನಕ್ಕೆ 15 ಪ್ರಶ್ನೆಗಳಂತೆ ಇಲ್ಲಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶ ಕಲ್ಪಿಸಿರುತ್ತೇನೆ. ಇನ್ನು ಈ ಅಧಿವೇಶನ ಕೆಲವೇ ದಿನಗಳಲ್ಲಿ ಮುಗಿಯಲಿದೆ. ಅಷ್ಟರೊಳಗಾಗಿ ಎಲ್ಲಾ ಸದಸ್ಯರ ಪ್ರಶ್ನೆಗಳನ್ನೂ ಸಾಧ್ಯವಾದಮಟ್ಟಿಗೂ ಚರ್ಚೆ ಮಾಡುವುದಕ್ಕೆ ಅವಕಾಶ ಕಲ್ಪಿಸಬೇಕೆಂಬುದು ನನ್ನ ಉದ್ದೇಶ. ನಾನು ಇಲ್ಲಿ ಸಭೆಗೆ ಬರುವುದಕ್ಕೆ ಮೊದಲೇ ಎರಡು ಗಂಟೆಗಳಿಗೆ ಮುಂಚಿತವಾಗಿ ಆಫೀಸಿಗೆ ಬಂದು ಈ ದಿವಸದ ಪ್ರಶ್ನೋತ್ತರ ಪಟ್ಟಿಯನ್ನು ತರಿಸಿ ಅವುಗಳನ್ನೆಲ್ಲಾ ಓದಿ ಅವುಗಳಲ್ಲಿ ಯಾವುದು ಜನರಲ್ ಯಾವುದು ಲೋಕಲ್ ಎಂಬುದನ್ನೂ ಮತ್ತು ಯಾವ ಯಾವ ಪ್ರಶ್ನೆ ಎಷ್ಟು ಮಹತ್ವವುಳ್ಳದ್ದಾಗಿದೆ ಎನ್ನುವುದನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆ ಮಾಡಿಕೊಂಡು ಇಲ್ಲಿಗೆ ಬರುತ್ತೇನೆ. ನಾನು ಹಾಗೇ ಏಕಾಏಕಿಯಾಗಿ ಇಲ್ಲಿಗೆ ಬಂದು ಕುಳಿತುಕೊಳ್ಳುವುದಿಲ್ಲ. ಇಲ್ಲಿ ಚರ್ಚೆಗೆ ಬರತಕ್ಕ ಪ್ರತಿಯೊಂದು ಪ್ರಶ್ನೆಯೂ ಆಯಾಯ ಸದಸ್ಯರ ದೃಷ್ಟಿಯಲ್ಲಿ ಅದು ಬಹಳ ಪ್ರಾಮುಖ್ಯವಾದುದೇ ಆಗಿರುತ್ತದೆ. ಆದ್ದರಿಂದ ಒಂದು ದಿನಕ್ಕೆ ನಿಗದಿ ಮಾಡಿದ ಪ್ರಶ್ನೆಗಳೆಲ್ಲ ಆ ದಿವಸವೇ ಮುಗಿಯಬೇಕು. ಅಂದಾಗ ಇಲ್ಲಿರತಕ್ಕ 217 ಜನರಿಗೆ ಒಂದೊಂದು ಪ್ರಶ್ನೆಗೂ ಉಪಪ್ರಶ್ನೆಗಳನ್ನು ಹಾಕಬೇಕಾದರೆ ಎಷ್ಟು ಕಾಲ ಬೇಕಾಗುತ್ತದೆ, ನೀವೇ ಆಲೋಚಿಸಿ ನೋಡಿ. ಮಾನ್ಯ ಮುಖ್ಯ ಮಂತ್ರಿಗಳು ಶ್ರೀ ಬಾಪೂ ಗೌಡರ ಪ್ರಶ್ನೆಗೆ ಸ್ವಲ್ಪ ವಿವರವಾದ ಉತ್ತರ ಕೊಟ್ಟಿದ್ದರಿಂದ ಅವರ ಪ್ರಶ್ನೆಗೆ ಸ್ವಲ್ಪ ಕಾಲ ಹೆಚ್ಚು ಹಿಡಿಯಿತು. ಶ್ರೀ ಬಾಪೂಗೌಡರು ಬಹಳ ಮನನೊಂದು ಪ್ರಶ್ನೆ ಕೇಳಿದ್ದಕ್ಕೆ ಹಾಗೆ ವಿವರವಾದ ಉತ್ತರ ಕೊಡಬೇಕಾಯಿತು. ಅಷ್ಟೇವಿನಾ ಇಲ್ಲಿ ಸದಸ್ಯರಿಗೆ ಭಯವನ್ನುಂಟುಮಾಡಬೇಕು ಅಥವಾ ಅವರ ಉದ್ದೇಶಕ್ಕೆ ಭಂಗ ಮಾಡಬೇಕು ಅನ್ನುವ ಯಾವ ಉದ್ದೇಶವೂ ನನಗಿರುವುದಿಲ್ಲ. ಇದರಲ್ಲಿ ಯಾರೂ ಘಾಬರಿಯಾಗಬೇಕಾದ್ದಿಲ್ಲ. ನಾನು ಮೊದಲು ಮೊದಲು ಈ ಸಭೆಗೆ ಬಂದಾಗ ಮಾತನಾಡುವುದಕ್ಕೆ ಭಯಪಡುತ್ತಿದ್ದಂತೆ ನೀವುಗಳೂ ಕೂಡ ಹೊಸದಾಗಿ ಬಂದಿರುವುದರಿಂದ ಭಯಪಡುತ್ತಿದ್ದೀರಿ. ಸ್ವಲ್ಪ ದಿನಗಳು ಕಳೆದ ನಂತರ ನೀವೂ ಧೈರ್ಯವಾಗಿ ಮಾತನಾಡುತ್ತೀರಿ ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಇಷ್ಟನ್ನು ಹೇಳಿದಮೇಲೆ ತಮಗೆಲ್ಲಾ ಸಮಾಧಾನವಾಗಿದೆಯೆಂದು ನಾನು ಆಶಿಸುತ್ತೇನೆ.

SRI H. S. SIDDAPPA.—If 10 supplementaries are put to a question, then you do not allow us. You can allow us to put only few supplementaries.

ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಒಬ್ಬ ಸದಸ್ಯರು ಉಪಪ್ರಶ್ನೆಯನ್ನು ಹಾಕತಕ್ಕ ಕಾಲದಲ್ಲಿ ತಾವು ಅಧ್ಯಕ್ಷರು ಅದು ಈ ಸಂದರ್ಭದಲ್ಲಿ ಉದ್ಭವಿಸುವುದಿಲ್ಲ ಎಂದು ಹೇಳುತ್ತೀರಿ. ಇದಕ್ಕೆ ಮುಖ್ಯ ಕಾರಣ ಏನೆಂದರೆ ಸದಸ್ಯರು ಕೇಳತಕ್ಕ ಪ್ರಶ್ನೆಗೆ ಮಂತ್ರಿಗಳು ನೇರವಾದ ಸರಿಯಾದ ಉತ್ತರವನ್ನು ಒದಗಿಸುತ್ತಿಲ್ಲ. ಅದರಿಂದ ಸದಸ್ಯರು ಪದೇ ಪದೇ ಅನೇಕ ಪ್ರಶ್ನೆಗಳನ್ನು ಕೇಳಬೇಕಾಗುತ್ತದೆ. ಆದ್ದರಿಂದ ದಯವಿಟ್ಟು ಅಧ್ಯಕ್ಷರು ಮಂತ್ರಿಗಳಿಗೆ ಸರಿಯಾಗಿ ಉತ್ತರ ಕೊಡುವುದಕ್ಕೆ ಒಂದು ಡೈರಕ್ಷನ್ ಕೊಡಬೇಕೆಂದು ಪ್ರಾರ್ಥನೆ.

ಅಧ್ಯಕ್ಷರು.—ನಾನು ಮಾನ್ಯ ಮಂತ್ರಿಗಳಿಗೆ ಹೀಗೆ ಉತ್ತರ ಹೇಳಿ ಎಂದು ಹೇಳುವುದಕ್ಕೆ ಹೇಗೆ ಆಗುತ್ತದೆ.

ಶ್ರೀ ಕೆ. ಎಂ. ನಾಗಣ್ಣ.—ಅಧ್ಯಕ್ಷರಿಗೆ ಹಾಗೆ ಡೈರೆಕ್ಷನ್ ಕೊಡತಕ್ಕ ಅಧಿಕಾರವಿದೆ.

ಅಧ್ಯಕ್ಷರು.—ನಾನೂ ಕೂಡ ಎಷ್ಟೋ ಸಂದರ್ಭಗಳಲ್ಲಿ ಮಂತ್ರಿಗಳಿಗೆ ಉತ್ತರ ಕೊಡಲೇಬೇಕೆಂದು ಒತ್ತಾಯ ಮಾಡಿದ್ದೇನೆ.

Admission at the B.V.Sc. Colleges

SRI M. MALLAPPA (Birur).—I have got an important submission to make regarding the selection of candidates to the BVSc. college. At present only 50 seats are allotted to that college. As per the rules of procedure now in fo ce, it is not possible for the students coming from the rural parts to seek entry in that college. That is why I would like to make a request to the Hon. Minister for Agriculture to kindly increase the number of seats and thereby provide an opportunity for the boys coming from the rural parts to seek admission in this college so that these boys could serve their villages better.

ಶ್ರೀ ಎಚ್. ಡಿ ದೇವೇಗೌಡ (ಹೊಳೇನರಸೀಪುರ).—ನಾನು ನಾಲ್ಕು ದಿನಗಳ ಕೆಳಗೆ ಬಿ.ಎಸ್ಸಿ. ಅಗ್ರಿಕಲ್ಚರ್‌ಗೆ ಇದೇ ಪ್ರಾಬ್ಲಂ ಬಂದಿತ್ತು ಎಂಬ ವಿಚಾರವನ್ನು ಸರ್ಕಾರದವರ ಗಮನಕ್ಕೆ ತಂದೆ. ಅದಕ್ಕೆ ಅವರೇನೂ ಉತ್ತರವನ್ನೇ ಕೊಡಲಿಲ್ಲ. ಈ ದಿವಸ BVSc ಕಾಲೇಜಿನ ಪ್ರಾಬ್ಲಂ ಷುರುವಾಗಿದೆ. ಹಳ್ಳಿಗಾಡಿನ ಜನಕ್ಕೆ ಹೆಚ್ಚಿಗೆ ಸೀಟುಗಳನ್ನು ಈ ಎಲ್ಲಾ ಕಾಲೇಜುಗಳಲ್ಲೂ ಒದಗಿಸುವುದಕ್ಕೆ ಸರ್ಕಾರದವರಲ್ಲಿ ಏನಾದರೂ ಒಂದು ಫಾರ್ಮುಲಾ ಇದೆಯೇ. ಇದ್ದರೆ ತಿಳಿಸುತ್ತಾರೆಯೇ.

ಶ್ರೀ ಎನ್. ಚಿಕ್ಕೆಗೌಡ (ಪಶುಸಂಗೋಪನ ಶಾಖೆಯ ರಾಜ್ಯ ಸಚಿವರು).—ಈ ವಿಚಾರದಲ್ಲಿ ಮಾನ್ಯ ಶಾಸನ ಸಭಾ ಸದಸ್ಯರುಗಳೂ ಮತ್ತು ವಿದ್ಯಾರ್ಥಿಗಳ ಪೋಷಕರೂ ನನಗೆ ಈ ವಿಚಾರವನ್ನು ಸಾಕಷ್ಟು ತಿಳಿಸಿದ್ದಾರೆ. ಈ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆ. ನಾನು ಈ ವಿಚಾರವನ್ನು ಮಾನ್ಯ ವ್ಯವಸಾಯದ ಮಂತ್ರಿಗಳ ಗಮನಕ್ಕೂ ತಂದಿದ್ದೇನೆ. ಆ ಬಿ.ಎಸ್ಸಿ ಅಗ್ರಿಕಲ್ಚರ್‌ನಲ್ಲಿ 60 ಸೀಟುಗಳನ್ನು ಹೆಚ್ಚು ಮಾಡುವುದಕ್ಕೆ ಸರ್ಕಾರದವರು ತೀರ್ಮಾನ ತೆಗೆದುಕೊಂಡಿದ್ದಾರೆ. ಇನ್ನು ಬಿ.ವಿ.ಎಸ್ಸಿ ಕಾಲೇಜಿನಲ್ಲಿ 50 ಸೀಟುಗಳು ಇದ್ದುದನ್ನು ಈಗ 80ಕ್ಕೆ ಏರಿಸುವಂತೆ ಅಲ್ಲಿನ ಸಂಬಂಧಪಟ್ಟ ಅಧಿಕಾರಿಗಳಿಗೂ ಮತ್ತು ಉಪಕುಲಪತಿಗಳಿಗೂ ತಿಳಿಸಿದೇನೆ. ಇದರಿಂದ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ವಿದ್ಯಾರ್ಥಿಗಳಿಗೂ ಮತ್ತು ಕಡಿಮೆ ನಂಬರನ್ನು ಪಡೆದ ವಿದ್ಯಾರ್ಥಿಗಳಿಗೂ ಅಡ್ಮಿಷನ್‌ಗೆ ಯಾವ ತೊಂದರೆಯೂ ಆಗಲಾರದೆಂದು ಭಾವಿಸಿದ್ದೇನೆ.

Drought conditions, etc., at Indi Taluka

ಶ್ರೀ ಜೆ. ಎಲ್. ಕಬಾಡಿ (ಬಳ್ಳೊಳ್ಳಿ),—ನನಗೆ ಈ ದಿವಸ ಒಂದು ವೈರ್ ಬಂದಿದೆ. ಅದನ್ನು ನಾನು ಅಧ್ಯಕ್ಷರ ಕಡೆಗೆ ರವಾನಿಸುತ್ತೇನೆ. ನಮ್ಮ ಕಡೆಯಿಂದ ಅಂದರೆ ಇಂಡಿ ತಾಲ್ಲೂಕದಲ್ಲಿ ಕ್ಷಾಮ ಹೆಚ್ಚಾಗಿ ಜನರಿಗೆ ತಿನ್ನುವುದಕ್ಕೆ ಅನ್ನವಿಲ್ಲದೆ ಕಡೆಗೆ ಗಂಜಿ ಕುಡಿಯುವುದಕ್ಕೂ ಕೂಡ ಸಾಧ್ಯವಾಗ ದಂಥ ಕಠಿನ ಪರಿಸ್ಥಿತಿ ಉಂಟಾಗಿ ಜನರು ಉಪವಾಸದಿಂದ ಹೊಟ್ಟೆಗಿಲ್ಲದೆ ಸಾಯುತ್ತಿದ್ದಾರೆ. ಇದು ಅತಿ ದುಃಖಕರವಾದ ಸಂಗತಿ. ದನಗಳಿಗೂ ಕೂಡ ಮೇವಿಲ್ಲ, ನೀರೂ ಕೂಡ ಅವುಗಳಿಗೆ ಸಿಕ್ಕ ದಂತಾಗಿದೆ. ಸರ್ಕಾರದವರು ಈ ವಿಚಾರದಲ್ಲಿ ನಿಷ್ಕಾಳಜಿಯಿಂದ ವರ್ತಿಸುತ್ತಿರುವುದಕ್ಕೆ ನಾನು ನನ್ನ ವಿಷಾದವನ್ನು ತೀವ್ರವಾಗಿ ವ್ಯಕ್ತಪಡಿಸಬೇಕಾಗಿದೆ. ನಾನು ಮೊನ್ನೆ ಇದೇ ಸಭೆಯಲ್ಲಿ ಡ್ರಾಟ್ ಕಂಡೀಷನ್ ಮೇಲೆ ಚರ್ಚೆ ನಡೆದಾಗ ಅನೇಕ ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತಂದಾಗ್ಯೂ ಅವರು ಇತ್ತ ಕಿವಿಗೊಟ್ಟಂತೆ ಕಾಣುತ್ತಿಲ್ಲ. ಅಧ್ಯಕ್ಷರು ಇಲ್ಲಿ ಇದರ ಬಗ್ಗೆ ಒಂದು ಅಪ್ತಾಲೋಚನೆ ಮಾಡುವುದಕ್ಕೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

2–30 P.M.

ಇವತ್ತು ಆ ಭಾಗದಲ್ಲಿ ಎಲ್ಲಾ ಹಳ್ಳಿಗಳಲ್ಲೂ ಅಭಾವ ಪರಿಸ್ಥಿತಿಯಿದೆ. ಆ ಬಗ್ಗೆ ವೈರ್ ಕಳಿಸಿ ದ್ದಾರೆ. 4–6–197_ರಲ್ಲಿ ಡಿವಿಜನಲ್ ಕಮಿಷನರ್ ಆ ಕಡೆ ಭೇಟಿ ಕೊಟ್ಟಾಗ ಎಂ.ಎಲ್.ಎ. ಮತ್ತು ತಾಲ್ಲೂಕು ಬೋರ್ಡ್ ಸದಸ್ಯರು ಹೇಳಿದರು. . ಸಾಕಷ್ಟು ಹಣ ಒದಗಿಸಲು ಪ್ರಯತ್ನ ಮಾಡುವುದಾಗಿ ಹೇಳಿದರು. ಅಲ್ಲಿ ಗಂಭೀರ ಪರಿಸ್ಥಿತಿ ಇದೆ. ಇದುವರೆಗೆ ಹಣ ಸಾಕಷ್ಟು ಒದಗಿಸಿಲ್ಲ. ಮೊದಲು ತೀವ್ರವಾಗಿ ಅಲ್ಲಿ ಪರಿಹಾರ ಕಾರ್ಯಕೈಗೊಳ್ಳಬೇಕು. ಅಲ್ಲಿನ ಜನರಿಗೆ ಕಷ್ಟ ಬಂದು ಕೆಲಸಮಾಡಲು ಕೂಡ ಶಕ್ತಿಯಿಲ್ಲ. ಆದುದರಿಂದ ಎಂಟು ದಿವಸ ಅಲ್ಲಿನ ಜನತೆಗೆ ಹೊಟ್ಟೆಗೆ ಹಾಕಿ ಅವರನ್ನು ಜೋಪಾನಮಾಡಿ ಶಕ್ತಿ ಅವರಿಗೆ ಬಂದಮೇಲೆ ಕೆಲಸ ದೊರೆಯು ವಂತೆ ವ್ಯವಸ್ಥೆಮಾಡಬೇಕು.

ಅಧ್ಯಕ್ಷರು.—ಸಂಬಂಧಪಟ್ಟ ಮಂತ್ರಿಗಳಿಗೆ ತಮ್ಮ ಕಾಗದ ಕಳಿಸಿದೆ, ಅವರು ಈಗ ಇಲ್ಲಿ ಹಾಜರಿಲ್ಲ.

Notice of adjournment notice *re*: blackmarketing Kerosene oil

ಶ್ರೀ ವಾಟಾಳ್ ನಾಗರಾಜ್.—ನಾನೊಂದು ನೋಟೀಸ್ ಕಳಿಸಿದ್ದೆ, ಶ್ರೀ ಕೆ. ಕೆ. ಮೂರ್ತಿಗಳ ವಿಚಾರ ಸ್ವಲ್ಪ ಹೇಳಬೇಕಾಗಿದೆ, ಅವರು ಬ್ಲಾಕ್ ಮಾರ್ಕೆಟ್ ಮಾಡುವರು. ಲೈಸೆನ್ಸ್ ಇಲ್ಲದೆ ಇರುವವರಿಗೆ ಸೀಮೆಎಣ್ಣೆ ಮಾರಾಟಮಾಡುವುದನ್ನು ತೆಗೆದುಕೊಳ್ಳಿ ಎಂದು ಹೇಳುವುದಕ್ಕೆ ಬದಲಾಗಿ ಅವರನ್ನೇಕೆ ಸಸ್ಪೆಂಡ್ ಮಾಡಿಲ್ಲ.

ಅಧ್ಯಕ್ಷರು.—ಅದು ನಿಲುವಳಿ ಸೂಚನೆಯಾಗುವುದಿಲ್ಲ, ಬೇರೆ ರೀತಿಯಲ್ಲಿ ಸೂಚನೆ ಕೊಡಿ. ಶ್ರೀ ಲಿಂಗಪ್ಪನವರಿಗೆ ಹೇಳಿರುವುದನ್ನು ನಿಮಗೂ ಹೇಳುತ್ತಿದ್ದೇನೆ. ನಾನು ಬರೆದಿರುವ ಪತ್ರಕ್ಕೆ ಮಾನ್ಯತೆ ಕೊಡಬೇಕು. ಬರೆದಮೇಲೆ ಮಾತ್ರ ಆ ವಿಚಾರ ಎತ್ತುವುದು ನಿಯಮಗಳಿಗೆ ವಿರೋಧ ವಾಗುವುದು. ಮತ್ತೊಂದು ರೂಲ್ ಪ್ರಕಾರ ಬೇರೆ ಮೋಷನ್ ಕಳಿಸಿ, ನೀವು ಕಳಿಸಿರುವುದು ನಿಲುವಳಿ ಸೂಚನೆಯಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ನಾನು ತಮ್ಮ ಪತ್ರಕ್ಕೆ ಬಹಳ ಗೌರವ ಕೊಟ್ಟಿ ದ್ದೇನೆ. ತಮ್ಮ ವಿಷಯದಲ್ಲಿ ನನಗೆ ಅಪಾರ ಗೌರವವಿದೆ. ನಾನು ವಾದವಿವಾದ ಮಾಡುತ್ತಿಲ್ಲ. ನನ್ನ ಪ್ರಶ್ನೆ ಶ್ರೀ ಕೆ ಕೆ. ಮೂರ್ತಿಯವರು ಲೈಸೆನ್ಸ್ ಇಲ್ಲದೆ ಸೀಮೆಎಣ್ಣೆ ಮಾರುತ್ತಿದ್ದುದು ತಿಳಿದ ಮೇಲೆ ಅದನ್ನು ಕೇಳಿದಾಗ ಲೈಸೆನ್ಸ್ ಪಡೆದಿದ್ದಾರೆ. ಅವರು ಮಾಡಿದ್ದು ತಪ್ಪು ಎಂದು ಸರ್ಕಾರಕ್ಕೆ ತಿಳಿದಿದೆ. ಆ ಬಗ್ಗೆ ಕ್ರಮ ಏಕೆ ತೆಗೆದುಕೊಳ್ಳಲಿಲ್ಲ. ಅವರ ಮೇಲೆ ಸುಮಾರು ಐದಾರು ವರ್ಷ ಗಳಿಂದ ಮಂಡ್ಯ, ಬೆಂಗಳೂರು ಮುಂತಾದ ಕಡೆಗಳಲ್ಲಿ ಎಂಟುಹತ್ತು ಕೇಸುಗಳನ್ನು ಹಾಕಿದ್ದಾರೆ,

ಶ್ರೀ ಆರ್. ಗುಂಡೂರಾವ್ (ಸೋಮವಾರ್‌ಪೇಟೆ).—ಪಾಯಿಂಟ್ ಆಫ್ ಆರ್ಡರ್ ಸರ್. ನಿಲುವಳಿ ಸೂಚನೆಯ ಮೇಲೆ ಮಾತನಾಡಲು ಅವಕಾಶವಿಲ್ಲದಿರುವಾಗ, ಅನುಮತಿ ಕೊಡದಿರುವಾಗ ಅವರು ಹೀಗೆ ಮಾತನಾಡುವುದು ಸರಿಯಲ್ಲ.

ಅಧ್ಯಕ್ಷರು.—ಅವಕಾಶವಿಲ್ಲವೆಂದು ಹೇಳಿದರೂ ಅದಕ್ಕೆ ಮೀರಿ ಮಾತನಾಡಿದರೆ ಮುಂದೆ ಕಷ್ಟವಾಗುವುದು, ನಾನು ನಿಮಗೆ ಹೇಳಿದ್ದೇನೆ.

ಶ್ರೀ ಆರ್. ಗುಂಡೂರಾವ್.—ಒಬ್ಬರಿಗೆ ಹೀಗೆ ಮಾತನಾಡಲು ಅವಕಾಶ ಕೊಟ್ಟರೆ ನಮಗೂ ಕೊಡಬೇಕಾಗುವುದು, ಅದೇ ಪದ್ಧತಿ ನಾವೂ ಅನುಸರಿಸಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್. - ಅನುಸರಿಸಿ.

ಅಧ್ಯಕ್ಷರು.—ಇದೇ ವಿಚಾರವನ್ನು ಬೇರೆ ರೂಪದಲ್ಲಿ ಕಳಿಸಿದರೆ ಅವಕಾಶ ಕೊಡಬಹುದು. ಈ ವಿಚಾರ ನಿಲುವಳಿ ಸೂಚನೆಯಾಗುವುದಿಲ್ಲ. ಇದನ್ನು ತಿಳಿಸಿದ ಮೇಲೆ ತಾವು ಮಾತನಾಡುವುದು ಸರಿಯಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಿನ್ನೆ ದಿವಸ ಮಂತ್ರಿಗಳು ಕೊಟ್ಟ ಹೇಳಿಕೆಯನ್ನು ನಾನು ಓದಿದ್ದೇನೆ. ಲೈಸೆನ್ಸ್ ತೆಗೆದುಕೊಂಡಿರಲಿಲ್ಲವೆಂಬುದನ್ನು ಸರ್ಕಾರದವರು ಒಪ್ಪಿದ ಮೇಲೆ ಒಂದು ಪ್ರಶ್ನೆ ಬರುವುದು. ಅವರ ಮೇಲೇನು ಕ್ರಮ ತೆಗೆದುಕೊಂಡರು ? ಬ್ಲಾಕ್ ಮಾರ್ಕೆಟ್‌ನಲ್ಲಿ ಸೀಮೆಎಣ್ಣೆ ಇತ್ಯಾದಿ ಮಾರಿರುವುದಕ್ಕೇನು ಕ್ರಮ ತೆಗೆದುಕೊಂಡಿರಿ ? ಅಥವ ತೆಗೆದುಕೊಳ್ಳಲು ತಯಾರಾಗಿದ್ದೀರಾ ಎಂಬುದನ್ನು ಹೇಳಬೇಕು. ತಮ್ಮ ಮೂಲಕ ಮಂತ್ರಿಗಳನ್ನು ನಾನು ಕೇಳಿಕೊಳ್ಳುತ್ತೇನೆ. ಮಲ್ಲೇಶ್ವರ, ಬಳೇಪೇಟೆ ಮುಂತಾದ ಕಡೆಗಳಲ್ಲಿ ಇಂದು ಸೀಮೆಎಣ್ಣೆಯಿಲ್ಲದೆ ತೊಂದರೆಯಾಗಿದೆ. ಈ ರೀತಿ ದೂರು ಬಂದಾಗ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ಹೇಳಬೇಕು.

ಶ್ರೀ ಎಚ್. ಡಿ. ದೇವೇಗೌಡ.—ನಿಲುವಳಿ ಸೂಚನೆ ಒಪ್ಪುವುದಕ್ಕಾಗುವುದಿಲ್ಲವೆಂದು ರೂಲಿಂಗ್ ಕೊಟ್ಟಿರುವುದನ್ನು ನಾನು ಒಪ್ಪುತ್ತೇನೆ. ಇಂಥ ವಿಷಯಗಳಿಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ. ಕಾಲ್ ಅಟೆನ್‌ಷನ್ ನೋಟೀಸು ಕಳಿಸಿದರೆ ಚರ್ಚೆ ಮಾಡುವುದಕ್ಕಾಗುವುದಿಲ್ಲ. ಸದಸ್ಯರಿಗೆ ಇಂಥ ವಿಷಯಗಳಲ್ಲಿ ಆಸಕ್ತಿಯಿರುವಾಗ ಸರಕಾರ ಈ ವಿಚಾರಗಳಿಗೆ ತೀವ್ರವಾಗಿ ಗಮನ ಕೊಡಬೇಕೆಂದು ಸರಕಾರದ ಗಮನ ಸೆಳೆಯಲು ಈಗ ಮಾನ್ಯ ಸದಸ್ಯರು ಈ ವಿಚಾರವನ್ನೆತ್ತಿದ್ದಾರೆ. ನಿಲುವಳಿ ಸೂಚನೆಯ ನೆಪದಲ್ಲಿ ಸಭೆಯ ಕಾಲವನ್ನು ಕಳೆಯಬೇಕೆಂಬ ಅಭಿಪ್ರಾಯ ನಮಗಿಲ್ಲ. ನಿಲುವಳಿ ಸೂಚನೆಗಳಿಗೆ ಅವಕಾಶ ದೊರೆಯುವುದು ಬಹಳ ಅಪರೂಪ. ಕಳೆದ 25 ವರ್ಷಗಳಲ್ಲಿ ಒಂದೆರಡು ಸಂದರ್ಭಗಳಲ್ಲಿ ಅವಕಾಶ ಕೊಟ್ಟಿರಬಹುದು ಆದರೆ ಇಷ್ಟು ಮಾತ್ರ ನಾನು ಹೇಳುತ್ತೇನೆ ಮಂತ್ರಿಗಳ ಹೇಳಿಕೆಯನ್ನು ನಾನು ಪ್ರಜಾವಾಣಿ ಪತ್ರಿಕೆಯಲ್ಲಿ ಓದಿದೆ ಇದರ ಬಗ್ಗೆ ಚರ್ಚೆಮಾಡುವುದಿಲ್ಲ ಮಂತ್ರಿಗಳೇ ತಪ್ಪು ಮಾಡಿರುವರೆಂದು ಹೇಳಿದ ಮೇಲೆ ಯಾರು ತಪ್ಪು ಮಾಡಿದರೋ ಅವರಮೇಲೆ ಕ್ರಮವನ್ನು ಕಾನೂನಿನ ಪ್ರಕಾರ ತೆಗೆದುಕೊಳ್ಳಬೇಕು ಸರಕಾರ ಹಾಗೆ ಮಾಡಿ ತೋರಿಸದಿದ್ದರೆ ಬೇಲಿಯೇ ಎದ್ದು ಹೊಲ ಮೇದ ಹಾಗಾಗುತ್ತದೆ ಸರಕಾರದಲ್ಲಿ ಜನರಿಗೆ ವಿಶ್ವಾಸ ಉಳಿಯುವುದಿಲ್ಲ ಎಷ್ಟು ದೊಡ್ಡವರಾದರೂ ತಪ್ಪು ಮಾಡಿದಾಗ ಅವರಿಗೆ ಶಿಕ್ಷೆಯಾಗಲೇಬೇಕು ಅವರು ಲೈಸೆನ್ಸ್ ತೆಗೆದುಗೊಂಡಿಲ್ಲ, ಹಾಗೆ ಕೆಲವು ಕಾಲ ತಳ್ಳಿ ನಂತರ ತೆಗೆದುಕೊಂಡಿದ್ದಾರೆ ಎಂದು ತಿಳಿಸಿದ್ದಾರೆ. ಕ್ರಮ ಅದರಮೇಲೆ ತೆಗೆದುಕೊಳ್ಳದಿರುವುದು ಸರಿಯೆ ? ಹಿಂದೆ ಮಂತ್ರಿಗಳು ಟೈರು ಮಾರಾಟದ ಅಂಗಡಿಗಳಿಗೆ ಹೋಗಿ ಪರಿಶೀಲಿಸಿದಂತೆ ಅದೇ ರೀತಿಯಲ್ಲಿ ಈ ವಿಷಯದಲ್ಲೂ ಕೂಡ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು ಸರಕಾರ ಅವರಿಗೆ ಬುದ್ಧಿ ಕಲಿಸಬೇಕು.

Sri H. S. SIDDAPPA.—I seek a clarification about the adjournment motion and call attention motion. Some of the adjournment motions are converted by the Hon. Speaker to Call Attention motion. If that is so, why not this motion also is converted into such a motion so that it could be discussed here ?

ಅಧ್ಯಕ್ಷರು.—ಹೇಳುತ್ತೇನೆ. ನಿನ್ನೆ ದಿವಸ ಬೇಕಾದಷ್ಟು ಚರ್ಚೆಯಾಗಿದೆ. ನಿನ್ನೆ ಸಭೆಯ ಗಮನ ಸೆಳೆದು ಮಂತ್ರಿಗಳು ಉತ್ತರ ಕೊಟ್ಟರು. ಜನರ ಕಷ್ಟವೆಷ್ಟಿದೆ ಎಂಬುದು ಸರಕಾರಕ್ಕೆ ಗೊತ್ತಾಗಿದೆ. ಅದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುವುದಾಗಿ ಮಂತ್ರಿಗಳು ಭರವಸೆ ಕೊಟ್ಟಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಕ್ಷಮಿಸಬೇಕು. ಈಗಿನ ನಡವಳಿಕೆ ಸದಸ್ಯರಿಗೆ ಮತ್ತು ಸರಕಾರಕ್ಕೆ ಅಗೌರವ ತರುವ ರೀತಿಯಲ್ಲಿದೆ. ವಿರೋಧ ಪಕ್ಷ ಏನು ಮಾಡುವುದಕ್ಕೆ ಸಾಧ್ಯ ಎಂಬ ಭಾವನೆ ಇರಬಾರದು. ಫಿಲಂ ಕಾರ್ಪೋರೇಷನ್ ಜೀಪ್‌ನಲ್ಲಿ ಕಾಫಿಪುಡಿ ತೆಗೆದುಕೊಂಡು ಹೋಗಿರುವಾಗ ಕೇಸು ಹಾಕುವುದಿದೆ. ನೊಂದು ಹೇಳುವಾಗ ಸರಕಾರ ಸುಮ್ಮನಿದ್ದರೆ ಗೌರವ ಬರುವುದಿಲ್ಲ. ಇಂದಿರಾ ಗಾಂಧಿಯವರ ಹೆಸರಿನಲ್ಲಿ ಅಧಿಕಾರಕ್ಕೆ ಬಂದಿದ್ದೀರಿ. ಈಗ ಲಾದರೂ ಪ್ರಾಸಿಕ್ಯೂಟ್ ಮಾಡುತ್ತೇವೆಂದು ಹೇಳಿ.

ಶ್ರೀ ವಾಟಾಳ್ ನಾಗರಾಜ್.—ಕೆ. ಕೆ. ಮೂರ್ತಿಗಳು ಸುಮಾರು 5 ಸಮಿತಿಗಳಲ್ಲಿದ್ದಾರೆ. ಇಂಥ ಬ್ಲಾಕ್ ಮಾರ್ಕೆಟ್ ಮಾಡುವವರಿಗೇಕೆ ಉತ್ತೇಜನ ಕೊಡಬೇಕು ? ಇದು ಅರ್ಥವಾಗುವುದಿಲ್ಲ. ಈ ಸಭೆಯಲ್ಲಿ ಎಂಟುಹತ್ತು ಬಾರಿ ಈ ವಿಷಯ ಹೇಳಿದರು. ಸಾಕ್ಷ್ಯ ಬೇಕಾದರೆ ಕೊಡುತ್ತೇನೆ. ಇಂದು ವಿರೋಧ ಪಕ್ಷದ ನಾಯಕರಿಗೆ ಇಲ್ಲದಿರುವ ಗೌರವ ಮೂರ್ತಿಗಳಿಗಿದೆ.

ನಾನು ತಮಗೆ ಒಂದು ಮಾತು ಹೇಳುತ್ತೇನೆ. ಈ ಆಹಾರದ ಇಲಾಖೆಯಲ್ಲಿ ಕೆಲವು ವರ್ಷಗಳ ಹಿಂದೆ ಅವರ ಮೇಲೆ ಮಂಡ್ಯ, ಮಲ್ಲೇಶ್ವರ ಮತ್ತು ಇತರ ಕಡೆಗಳಲ್ಲಿ ಕೇಸು ಆಗಿತ್ತು. ಅವರು ಸರ್ಕಾರದ ಮುಖ್ಯಮಂತ್ರಿಗಳಿಗಿಂತಲೂ ಒಂದು ದೊಡ್ಡ ಅಂತಸ್ತಿನಲ್ಲಿದ್ದಾರೆ. ತಮಗೆ ಗೊತ್ತಿಲ್ಲ ಎಂದು ಕಾಣುತ್ತದೆ. ಅವರ ಮೇಲೆ 11 ಕೇಸುಗಳು ಇವೆ. ಈವೊತ್ತು ಅವರ ಬಗ್ಗೆ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಅವರ ಮಾತುಗಳನ್ನು ತಾವು ಗಮನಕ್ಕೆ ತೆಗೆದುಕೊಂಡಿಲ್ಲ. ಅವರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂದು ಹೇಳಿಲ್ಲ.

ಅಧ್ಯಕ್ಷರು.—ಆ ವಿಚಾರದಲ್ಲಿ ಮಂತ್ರಿಗಳು ಉತ್ತರ ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರು ಉತ್ತರ ಹೇಳಿಲ್ಲ.

ಅಧ್ಯಕ್ಷರ .—ಉತ್ತರ ಹೇಳಿದ್ದಾರೆ.

ಶ್ರೀ ಎಂ.ಎಸ್. ಕೃಷ್ಣನ್.—ತಮ್ಮ ಬಗ್ಗೆ ಗೌರವ ಇದೆ. ಅವರು ಜಾಣರಲ್ಲಿ ಜಾಣರು ಆಗಿದ್ದಾರೆ. ನಮಗೆ ಇದರ ಬಗ್ಗೆ ಸರಿಯಾದ ಉತ್ತರ ಕೊಡಿಸಬೇಕು.

ಅಧ್ಯಕ್ಷರು.—ಅವರು ನಾಳೆ ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರು ನಾಳೆ ಡೆಲ್ಲಿಗೆ ಹೋಗುತ್ತಾರೆ. ಆದ ದರಿಂದ ಇದರ ಬಗ್ಗೆ ಈವೊತ್ತೇ ಸ್ಟೇಟ್‌ಮೆಂಟನ್ನು ಕೊಡಿಸಬೇಕು.

MADAM SPEAKER.—Would the hon. Minister of State like to make a statement to day or to morrow ?

Smt. E. E. VAZ (Minister of State for Food and Civil Supplies).—I will make a statement tomorrow.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಂತ್ರಿಗಳನ್ನು ನಾನು ಕೇಳುವ ಪ್ರಶ್ನೆ ಏನೆಂದರೆ ಶ್ರೀಮಾನ್ ಮೂರ್ತಿ ಅವರು ಲೈಸನ್ಸ್ ಇಲ್ಲದೆ ಸೀಮೆಎಣ್ಣೆ ಮಾರಾಟ ಮಾಡಿದ್ದಾರೆ. ಅದಕ್ಕಾಗಿ ಅವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ? ಇದರ ಬಗ್ಗೆ ಸರಿಯಾದ ಉತ್ತರ ಕೊಡಬೇಕು.

ಅಧ್ಯಕ್ಷರು.—ಅವರು ಸ್ಟೇಟ್‌ಮೆಂಟ್ ಮಾಡಿದ್ದು ತಾವು ಸರಿಯಾಗಿ ತಿಳಿದುಕೊಂಡಿಲ್ಲ ಎಂದು ಕಾಣುತ್ತದೆ. ಅವರು ಅದನ್ನೆಲ್ಲಾ ಹೇಳಿದ್ದಾರೆ.

Affairs at the Bangalore Fair Price Depots.

ಶ್ರೀ ಕೆ. ಎಂ. ನಾಗಣ್ಣ.—ಅಧ್ಯಕ್ಷರೇ, ಮಾನ್ಯ ಆಹಾರಮಂತ್ರಿಗಳಲ್ಲಿ ತಮ್ಮ ಮೂಲಕ ಒಂದು ವಿಷಯವನ್ನು ಅವರ ಗಮನಕ್ಕೆ ತರಬೇಕಾಗಿದೆ. ಬೆಂಗಳೂರು ನಗರದಲ್ಲಿ ಇರತಕ್ಕಂಥ ಆಹಾರ ಡಿಪೋವಿನಲ್ಲಿ ಸರಿಯಾದ ರೀತಿಯಲ್ಲಿ ಆಹಾರದಿನಸಿ ಬಡವರಿಗೆ ಸಿಕ್ಕುತ್ತಾ ಇಲ್ಲ. 10-12 ಜನ ಇರತಕ್ಕಂಥ ಒಂದು ಸಂಸಾರಕ್ಕೆ 40 ಕೆ. ಜಿ. ದಿನಸಿ ಕೊಡಬೇಕಾಗಿದ್ದರೆ 10-12 ಕೆ. ಜಿ. ಕೊಡುತ್ತಿದ್ದಾರೆ ಎಂದು ಕೇಳಿದ್ದೇನೆ. ಡಿಪೋವಿನಲ್ಲಿ ಅವರಿಗೆ ಇಷ್ಟಬಂದ ರೀತಿಯಲ್ಲಿ ದಿನಸಿಯನ್ನು ಕೊಡುತ್ತಿದ್ದಾರೆ. ಮಾನ್ಯ ಮಂತ್ರಿಗಳು ಹೊಸದಾಗಿ ಬಂದ ಕೂಡಲೇ ಸ್ವಲ್ಪ ಚುರುಕಾಗಿ ಕೆಲಸ ಮಾಡಿದರು. 3-4 ತಿಂಗಳಾದ ಮೇಲೆ ಅವರು ಮಾಡುವ ಕೆಲಸ ಕಡಿಮೆಯಾಗುತ್ತಾ ಇದೆ. ಇದರ ಬಗ್ಗೆ ನಿಗಾವಹಿಸಿ ಬಡವರಿಗೆ ಸರಿಯಾದ ರೀತಿಯಲ್ಲಿ ಡಿಪೋ ಮೂಲಕ ಆಹಾರ ಧಾನ್ಯವನ್ನು ಒದಗಿಸಿ ಕೊಡಬೇಕು ಎಂದು ಹೇಳುತ್ತೇನೆ. ಇಲ್ಲದೇ ಹೋದರೆ ತರಗು ಪೇಟೆಯಲ್ಲಿ ಆಹಾರದ ಬೆಲೆಯಲ್ಲಾ ಜಾಸ್ತಿಯಾಗುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ಇದರ ಬಗ್ಗೆ ತಕ್ಕ ಕಾರ್ಯಕ್ರಮವನ್ನು ಕೂಡಲೇ ತೆಗೆದುಕೊಂಡು ಬಡಬಗ್ಗರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

Students' agitation in Belgaum

Sri B. B. SAYANAK (Belgaum).-Madam Speaker, my friend Mr. Lingappa has raised a question regarding the students' agitation in Belgaum. I have asked a calling attention question two days back. The Hon. Minister has made a statement in the House. He is of the opinion that the Government has given consent to raise twice the present fee and that is why there is agitation in Belgaum. If the Government is not going to take drastic action against the private colleges, it will spread from Belgaum to other places of the State.

MADAM SPEAKER.—The Hon. Minister will look into it.

Sri B. B. SAYANAK.—The Hon. Minister is leaving for Delhi tomorrow.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಸಯನಕ್‌ರವರು ಹೇಳಿದಂತೆ ಖಾಸಗೀ ಕಾಲೇಜಿನವರು ಒಂದಕ್ಕೆ ಎರಡರಷ್ಟು ಫೀಜ್‌ಗಳನ್ನು ವಸೂಲು ಮಾಡುತ್ತಿದ್ದಾರೆ. ಇವರ ಮೇಲೆ ತಾವು ಏತಕ್ಕೆ ಹತೋಟಿಯನ್ನು ಸರಿಯಾಗಿ ಇಟ್ಟುಕೊಂಡಿಲ್ಲ? ಇದೇ ರೀತಿ ಮುಂದುವರೆಯುವುದಾದರೆ ರಾಜ್ಯಾದ್ಯಂತ ಚಳುವಳಿಯಾಗುತ್ತದೆ. ಆದುದರಿಂದ ಇದರ ಬಗ್ಗೆ ಅವರ ಕೈಯ್ಯಲ್ಲಿ ಒಂದು ಸ್ಟೇಟ್‌ಮೆಂಟನ್ನು ಈವೊತ್ತೇ ಕೊಡಿಸಬೇಕೆಂದು ಕೇಳುತ್ತೇನೆ.

Sri A. R. BADARINARAYANA (Minister for Education).—I will take some time and make a statement.

OFFICIAL RESOLUTION

re : Ratifying the Constitution of (28th Amendment) Bill, 1972, as passed by two Houses of Parliament

Sri D. K. NAIKAR (Minister for Law and Parliamentary Affairs).—Madam Speaker, I beg to move :

"That this House ratifies the amendments to the Constitution of India falling within the purview of the proviso to

(SRI D. K. NAIKAR)

clause (2) of article 368 thereof, proposed to be made by the Constitution (Twenty-eighth Amendment) Bill, 1972, as passed by the two Houses of Parliament."

MADAM SPEAKER.—Resolution moved :

"That this House ratifies the amendments to the Constitution of India falling within the purview of the proviso to clause (2) of article 368 thereof, proposed to be made by the Constitution (Twenty-eighth Amendment) Bill, 1972, as passed by the two Houses of Parliament."

† ಶ್ರೀ ಡಿ. ಕೆ. ನಾಯಕರ್.—ಮಾನ್ಯ ಅಧ್ಯಕ್ಷರೇ, ಹಿಂದಕ್ಕೆ ಅಂದರೆ ಬ್ರಿಟಿಷ್ ಸರ್ಕಾರ ಇದ್ದಾಗ ಐ.ಸಿ.ಎಸ್. ಆಫೀಸರ್ಸ್‌ನ್ನು ಯಾವ ನಿಯಮಾವಳಿ ಪ್ರಕಾರ ನೇಮಿಸಿದರೋ ಅದರಂತೆ ಅವರಿಗೆ ಈ ಕಾನ್ಸ್ಟಿಟ್ಯೂಷನ್ ಪ್ರಾವಿಷನ್ಸ್‌ನ ಆರ್ಟಿಕಲ್ 314 ರಲ್ಲಿ ಕೆಲವೊಂದು ಸ್ಪೆಷಲ್ ರೈಟ್ಸ್ ಮತ್ತು ಪ್ರಿವಿಲೇಜಸ್‌ಗಳನ್ನು ಕೊಡಲಾಗಿದೆ. ಆ ಪ್ರಿವಿಲೇಜಸ್‌ಗಳನ್ನು ಈ ಅಮೆಂಡ್‌ಮೆಂಟ್ ಮುಖಾಂತರ ವಾಪಸ್ಸು ತೆಗೆದುಕೊಳ್ಳಲಾಗಿದೆ. ಇವತ್ತು ಇಂತಹ ಐ.ಸಿ.ಎಸ್. ಆಫೀಸರ್ಸ್ ಇನ್ನೂ ವರೆಗೆ ಅಂದರೆ ಈ ತಾರೀಖಿನವರೆಗೆ 111 ಜನ ಇದ್ದಾರೆ ಎಂದು ನಮಗೆ ತಿಳಿದ ಮಟ್ಟಿಗೆ ಮಾಹಿತಿ ಇದೆ. ಅವರ ಹಕ್ಕುಗಳನ್ನು ಕಸಿದುಕೊಳ್ಳುವುದು ಅಷ್ಟೇ ಅಲ್ಲದೆ ಆರ್ಟಿಕಲ್ 314ರಲ್ಲಿ ಅವರಿಗೆ ಇರುವ ಸ್ಪೆಷಲ್ ರೈಟ್ಸ್‌ನ್ನು ಡಿಲೀಟ್ ಮಾಡಿದೆ. 312 (1), (2) (3) (4), ಈ ತರಹ ಒಂದೇ ಹೊಸ ಆರ್ಟಿಕಲ್‌ನ್ನು ಸೇರಿಸಲಾಗಿದೆ. ಮತ್ತು ಇದರಲ್ಲಿ ಇನ್ನೂ ಕೆಲವು ಐ.ಸಿ.ಎಸ್. ಆಫೀಸರ್ಸ್‌ಗಳು ಹೈಕೋರ್ಟಿನಲ್ಲಿ ಮತ್ತು ಸುಪ್ರೀಂ ಕೋರ್ಟಿನಲ್ಲಿ ಕೆಲವರನ್ನು ಅವ್ಯಾಪ್ತಿಯೊಳಗಾಗಿ ನೇಮಿಸಿದ್ದು ಉಂಟು. ಅಂಥಾವರಿಗೆ ಯಾವ ಬಗೆಯಾದ ಹಕ್ಕುಗಳು ಕಾದಿಡಬೇಕು ಎನ್ನುವುದೂ ಕೂಡ ಇದರಲ್ಲಿ ಒಂದು ಪ್ರಾವಿಷನ್ ಮಾಡಲಾಗಿದೆ ಒಂದುವೇಳೆ ಕಾನ್ಸ್ಟಿಟ್ಯೂಷನ್ ಬರುವುದಕ್ಕೆ ಮೊದಲೇ ಈ ಐ.ಸಿ.ಎಸ್. ಆಫೀಸರ್ಸ್ ಬ್ರಿಟಿಷ್ ಸರ್ಕಾರದೊಡನೆ ಯಾವುದೇ ರೀತಿಯಾದ ಒಂದು ಅಗ್ರಿಮೆಂಟ್, ಕವೆನೆಂಟ್ ಪ್ರಕಾರ ಹಕ್ಕುಗಳನ್ನು ಇಟ್ಟುಕೊಂಡಿದ್ದರೂ ಕೂಡ ಅಂತಹ ಆಧಾರದ ಮೇಲೆ ಅವರು ಸುಪ್ರೀಂ ಕೋರ್ಟಿಗಾಗಲಿ, ಹೈಕೋರ್ಟಿಗಾಗಲಿ ಹೋಗಿ ಫೈಟ್ ಮಾಡಬಾರದು. ಅಂತಹ ಹಕ್ಕುಗಳನ್ನು ಪರಿಶೀಲಿಸಲು ಸುಪ್ರೀಂಕೋರ್ಟ್‌ಗೆ ಇರುವಂಥಾ ಅಧಿಕಾರ ನಮಗೆ ಸೇರುವುದಕ್ಕೆ ಪಾರ್ಲಿಮೆಂಟ್ ಸೂಕ್ತವಾದ ಬದಲಾವಣೆ ಮಾಡಬೇಕು, ಅದನ್ನು ಮಾಡಲು ಈಗ ಇರತಕ್ಕ ಪ್ರಿವಿಲೇಜಸ್‌ನ್ನು ರಿವೋಕ್ ಮಾಡಬೇಕು ಎಂದು ಇದೆ. ಈ ಕಕ್ಷಿಯಲ್ಲೂ ಕೂಡ ಸುಪ್ರೀಂಕೋರ್ಟ್ ಮತ್ತು ಹೈಕೋರ್ಟಿನವರು ಇಂಟರ್‌ಫಿಯರ್ ಆಗಬಾರದು. ಹೈಕೋರ್ಟ್‌ನಲ್ಲಿ ಇರತಕ್ಕಂಥಾ ಕೇಸನ್ನು ಜುಡಿಷಿಯಲ್ ಆಗಿ ಗಣನೆಗೆ ತೆಗೆದುಕೊಳ್ಳುವುದಕ್ಕೂ ಕೂಡ ಒಂದು ಪ್ರಾವಿಷನ್ ಮಾಡಿದೆ. ಇದು ಮಾಡುವಂಥ ಪ್ರಶ್ನೆ ಏತಕ್ಕೆ ಬಂತು ಎಂದರೆ ಚೇಂಜಿಂಗ್ ಸೋಷಿಯಲ್ ಆರ್ಡರ್‌ಗೆ ಅನುಗುಣವಾಗಿ ಐ.ಸಿ.ಎಸ್ ಆಫೀಸರ್ಸ್‌ಗೆ ಮಾತ್ರ ಈ ಪ್ರಿವಿಲೇಜ್, ರೈಟ್ಸ್ ಇರಕೂಡದು. ಅದರಲ್ಲಿ ಹೊಂದಾಣಿಕೆ ಇರಬೇಕು. ಈ ಹಕ್ಕುಗಳನ್ನು ಮೊಟಕುಗೊಳಿಸುವುದಕ್ಕೆ ಈ ಕಾನ್ಸ್ಟಿಟ್ಯೂಷನಲ್ ಪ್ರಾವಿಷನ್ ತಂದಿದೆ. ಆದುದರಿಂದ ಮಾನ್ಯ ಸದಸ್ಯರು ಇದಕ್ಕೆ ಸಮ್ಮತಿ ಕೊಡುತ್ತಾರೆಂದು ನಂಬುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್. (ಮಲ್ಲೇಶ್ವರಂ).—ಮಾನ್ಯ ಸಭಾಧ್ಯಕ್ಷಣಿಯವರೇ, ಸಂವಿಧಾನಕ್ಕೆ ತಂದಿರುವ 28ನೇ ತಿದ್ದುಪಡಿಗೆ ಬೆಂಬಲ ನೀಡುತ್ತ ಎರಡು ಮಾತನಾಡಲಿಕ್ಕೆ ಇಚ್ಛೆಪಡುತ್ತೇನೆ. ಈ ತಿದ್ದುಪಡಿಗೆ ಬೆಂಬಲ ನೀಡುವುದರಿಂದ ಸರ್ಕಾರ ಭಾರಿ ಕ್ರಾಂತಿಕಾರಿ ಕೆಲಸವನ್ನು ಮಾಡಿದೆ ಎಂದು ನಾನು ಒಪ್ಪಿಕೊಳ್ಳುವುದಿಲ್ಲ. ಇಂದಿನ ಸೋಷಿಯಲ್ ಆರ್ಡರ್‌ಗೆ ಅನುಗುಣವಾಗಿ ಈ ತಿದ್ದುಪಡಿಯನ್ನು ತೆಗೆದುಕೊಂಡು ಬರುತ್ತಿದ್ದೇವೆಂದು ಹೇಳಿದರು. ಈ ದಿನ ಐ.ಸಿ.ಎಸ್. ಯಂತ್ರವೇ ಹೋಗುತ್ತಿದೆ. ಅಂಥವರ ಮೇಲೆ ಈ ದಿವಸ ಇವರ ಕಣ್ಣು ಬಿದ್ದಿದೆ. ಐ.ಸಿ.ಎಸ್. ಅಧಿಕಾರಿಗಳು ನಮಗೆ ತಿಳಿದಮಟ್ಟಿಗೆ ಸುಮಾರು ವರ್ಷಗಳಿಂದ ನಮ್ಮ ದೇಶದಲ್ಲಿದ್ದಾರೆ ಮತ್ತು ಈಗ 111 ಜನರು ಮಾತ್ರ ಇದ್ದಾರೆ. ಐ.ಸಿ.ಎಸ್. ಅಧಿಕಾರಿಗಳು ಬ್ರಿಟಿಷ್ ಸಾಮ್ರಾಜ್ಯ ವ್ಯವಸ್ಥೆಯ ಬಾಲಬಡುಕರಾಗಿದ್ದು, ಅವರಿಗನುಗುಣವಾಗಿ ಕೆಲಸ ಮಾಡುವಂಥ ಜನ. ಅವರಲ್ಲನೇಕರು (ಕೆಲವೇ ಮಂದಿಯನ್ನು ಬಿಟ್ಟು) ನಮ್ಮ ದೇಶದ ರಾಷ್ಟ್ರದ ಹಿತವನ್ನು ಹತ್ತಿಕ್ಕಿ, ಜನಗಳ ಮರ್ಧನಕ್ಕೆ ಕೆಲಸ ಮಾಡಿದವರು. ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಬಂದ ನಂತರ ಸಹ ಅನೇಕ ಅಧಿಕಾರಿಗಳು ಕಾರ್ಯ

ದರ್ಶಿಗಳಾಗಿ, ಜಂಟಿ ಕಾರ್ಯದರ್ಶಿಗಳಾಗಿ ನಾನಾ ಹುದ್ದೆಗಳಲ್ಲಿ ಇದ್ದಾಗ ದೇಶ ಎಲ್ಲಿಯತನಕ ಮುಂದೆ ಹೋಗುವುದಕ್ಕೆ ಅವಕಾಶವಿತ್ತೋ ಅದಕ್ಕೆ ಅಡ್ಡಿ ಆಡಚಣೆ ತಂದು ಆದಷ್ಟು ನಮ್ಮ ದೇಶವನ್ನು ಹಿಂದಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡುತ್ತಿರುವ ಜನ ಇವರು. ಇದರಲ್ಲಿ ರಿಟೈರಾಗಿರುವವರು ಹಿಂದೆ ಮೇಲಿನಂತೆ ಮಾಡಿದ್ದಾರೆ, ರಿಟೈರಾಗದೆ ಇರುವವರು ಮಾಡುತ್ತಲೇ ಇದ್ದಾರೆ. ಸಮಾತಾವಾದ ತತ್ವಗಳನ್ನು ಒಪ್ಪಿಕೊಳ್ಳುವಂಥ ಅಧಿಕಾರಿಗಳು ಯಾರೂ ಇವರಲ್ಲಿಲ್ಲ. ಬಂಗಾಳದಲ್ಲಿ ಒಬ್ಬಿಬ್ಬರು ಮಾತ್ರ ಹಿಂದೆ ನಮ್ಮಲ್ಲಿ ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಟ ನಡೆದಾಗ ನೇರವಾಗಿ ಪ್ರಜಾಸಮರದ ವಾದಿಗಳಾಗಿ ಸಾಮ್ರಾಜ್ಯಶಾಹಿಗಳಿಗೆ ವಿರೋಧ ವ್ಯಕ್ತಪಡಿಸಿದರು; ಆಗ ಅವರು ಟೀಕೆಗೆ ಗುರಿಯಾದರು. ಅಂಥವರನ್ನು ಒಬ್ಬಿಬ್ಬರನ್ನು ಬಿಟ್ಟರೆ ಮುಕ್ಕಾಲು ಜನ ಸಾಮ್ರಾಜ್ಯಶಾಹಿಗಳ ಪರವಾಗಿ ಇದ್ದವರು. ಆಳುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಕಳೆದ 25 ವರ್ಷಗಳಿಂದ ಈ ವಿಷಯ ಗೊತ್ತಿರಲಿಲ್ಲವೇ? ಕಾಂಗ್ರೆಸ್ (ಸಂಸ್ಥಾ) ಮತ್ತು ಕಾಂಗ್ರೆಸ್ (ಆರ್) ಎರಡೂ ಪಕ್ಷಗಳೂ ಮೊನ್ನೆ ಮೊನ್ನೆವರೆಗೂ ಒಂದೇ ಪಕ್ಷವಾಗಿತ್ತು. ಐ.ಸಿ.ಎಸ್. ಅಧಿಕಾರಿಗಳನ್ನು ಮುಂದುವರಿಸುವ ವಿಷಯದಲ್ಲಿ, ಕಮ್ಯೂನಿಸ್ಟ್ ಪಕ್ಷ, ಸೋಷಿಯಲಿಸ್ಟ್ ಇವರೆಲ್ಲರೂ ಕಟುವಾಗಿ ಟೀಕೆ ಮಾಡಿದ್ದಾರೆ. ಶ್ರೀ ಮಧುಲಿಮಯೆ ಈ ಪ್ರಶ್ನೆಯ ಸಂಬಂಧದಲ್ಲಿ ಒಂದು ಬಿಲ್ಲನ್ನೂ ತೆಗೆದುಕೊಂಡು ಬಂದರು. ಆಗ ಸರ್ಕಾರ ಕಣ್ಣು ತೆರೆಯಲಿಲ್ಲ, ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಲಿಲ್ಲ. ಸರ್ಕಾರದ ವ್ಯವಹಾರವೆಲ್ಲ ಏನಾಗಿದೆ ಎಂದರೆ ('ಊರು ಹೋದ ಮೇಲೆ ಕೋಟೆ ಬಾಗಿಲು ಹಾಕಿದರು.' ಎನ್ನುವಂತೆ ನಡೆದುಕೊಂಡಿದ್ದಾರೆಂದು ನನ್ನ ಅಭಿಪ್ರಾಯ. ಇದು ನೇರವಾಗಿ ಕೇಂದ್ರಕ್ಕೆ ಅನ್ವಯಿಸುತ್ತದೆ. ತಮಗೆಲ್ಲ ಗೊತ್ತಿರುವ ಹಾಗೆ ಕಳೆದ 25 ವರ್ಷದ ಚರಿತ್ರೆಯಲ್ಲಿ ಗುತ್ತೇದಾರಿ ಮನೋಭಾವ ಹೆಚ್ಚಿದೆ, ನಿರುದ್ಯೋಗ ತಾಂಡವವಾಡುತ್ತಿದೆ. ಆವಾಗ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಸೋಷಿಯಲಿಸ್ಟ್ ಡೆವಲಪ್‌ಮೆಂಟ್ ನಮ್ಮ ದೇಶದಲ್ಲಿ ಇರಬೇಕು, ನಾನ್ ಕ್ಯಾಪಿಟಲಿಸ್ಟಿಕ್ ಡೆವಲಪ್‌ಮೆಂಟ್ ಇರಬೇಕು, ಅದಕ್ಕೆ ಐ.ಸಿ.ಎಸ್ ಅಧಿಕಾರಿಗಳು ಅಡ್ಡಿ ಬರುತ್ತಿದ್ದಾರೆ, ತಡೆ ಹಾಕುತ್ತಿದ್ದಾರೆ ಎನ್ನುವ ಅಭಿಪ್ರಾಯ ಆಗ ಬರಲಿಲ್ಲ. ಈಗಲಾದರೂ ಬಂದಿದೆ ಎನ್ನುವುದು ಸಂತೋಷದ ಸಂಗತಿ. ಇದು ಹಿಂದೆಯೇ ಬರಬೇಕಾಗಿತ್ತು.

ಮಾನ್ಯ ಮುಖ್ಯ ಮಂತ್ರಿಗಳು ಮೊನ್ನೆ ದಿನ ಮಾತನಾಡುವಾಗ ಬ್ಯಾಂಕುಗಳ ರಾಷ್ಟ್ರೀಕರಣ ಮಾಡಿದ್ದೇವೆ, ಅದಕ್ಕೆ 86 ಕೋಟಿ ರೂಪಾಯಿಗಳ ಪರಿಹಾರ ಕೊಡಬೇಕಾಗಿ ಬಂತು ಎಂದು ಹೇಳಿದರು. ಸ್ವಲ್ಪ ಕೊಡಬೇಕೆಂದು ಯೋಚನೆ ಮಾಡಿದ್ದೆವು, ಅವರು ಸುಪ್ರೀಂ ಕೋರ್ಟಿಗೆ ಹೋದರು, ಅವರಿಗೆ 86 ಕೋಟಿ ರೂಪಾಯಿ ಕೊಡಬೇಕಾಗಿ ಬಂತು ಎಂದು ಹೇಳಿದರು. ಇದೇ ನಾಚಿಕೆಗೇಡಿನ ಪ್ರಸಂಗ. ಆ ರೀತಿ ಹೆಚ್ಚಾಗಿ ಕೊಡುವುದಕ್ಕೆ ಯಾರು ಕಾರಣರು, ಆ ರೀತಿಯಾಗುವುದಕ್ಕೆ ಏಕೆ ಬಿಟ್ಟಿರಿ? ಮೊದಲೇ 25ನೇ ತಿದ್ದುಪಡಿಯನ್ನು ತಂದಿದ್ದರೆ ಹೇಗಿತ್ತು? ನಮ್ಮ ದೇಶದ ಪುರೋಗಾಮಿ ಶಕ್ತಿಗಳು, ಎಡ ಶಕ್ತಿಗಳು ಮತ್ತು ಎಲ್ಲ ಸೇರಿ ಹೇಳಿರುವುದು ಮೊದಲೇ ಇಂಥ ತಿದ್ದುಪಡಿಯನ್ನು ಏಕೆ ತರಲಿಲ್ಲ, ಏಕೆ ಹಾಗೆಯೇ ಬಿಟ್ಟುಕೊಂಡು ಬಂದಿರಿ ಎಂದು. ಮೊದಲೇ ತಿದ್ದುಪಡಿ ಮಾಡದೇ ಇದ್ದುದರಿಂದ 86 ಕೋಟಿ ರೂಪಾಯಿ ಪರಿಹಾರ ಕೊಡಬೇಕಾಗಿ ಬಂತು. ನಿಮ್ಮ ವ್ಯವಹಾರವೆಲ್ಲ ಹೀಗೆಯೇ ಆಗಿದೆ. ಹಿಂದೆ ರಾಮಪ್ರಿಯ ಕಟ್ಟಡವನ್ನು 13 ಲಕ್ಷ ರೂಪಾಯಿಗಳಿಗೆ ತೆಗೆದುಕೊಳ್ಳಬೇಕೆಂದು ಯೋಚನೆ ಮಾಡಿದ್ದಿರಿ. ಇನ್ನೂ ನಿಮ್ಮಲ್ಲಿ ಮನೋಭಾವ ಬದಲಾಗಿಲ್ಲವೆಂದು ಹೇಳುತ್ತಿದ್ದೇನೆ. ರಾಜಮಹಾರಾಜರುಗಳ ಅರಮನೆಗಳನ್ನು ಕೊಂಡುಕೊಳ್ಳುವುದಕ್ಕೆ ಕೋಟ್ಯಾಂತರ ರೂಪಾಯಿ ಕೊಡಬೇಕೆಂದು ಗುಸಗುಸ ನಡೆಯುತ್ತಿದೆ ಎಂದು ತಿಳಿದುಬಂದಿರುತ್ತದೆ.

ಈ ರೀತಿಯ ತಿದ್ದುಪಡಿಗಳನ್ನು ತರುವುದರಿಂದ ಎಲ್ಲ ಹೋದ ಮೇಲೆ ಯಾರಿಗೋಸ್ಕರ ತರುತ್ತಿದ್ದೀರಿ ಎಂದು ನಾನು ಕೇಳಬೇಕಾಗುತ್ತದೆ. ಗರೀಬಿ ಹಠಾವೋ ಘೋಷಣೆ ನಿಮಗೆಲ್ಲ ವೋಟು ಗಳಿಸಿಕೊಟ್ಟಿದೆ. ಜನರ ಹೆದರಿಕೆ ನಿಮಗೆ ಉಂಟಾಗಿ ಇಂಥ ತಿದ್ದುಪಡಿಗಳನ್ನು ಅವರ ಕಣ್ಣೊರಸುವುದಕ್ಕೆ ತರುತಿದ್ದೀರಿ. ಸರಿಯಾಗಿ ನಡೆಸಿಕೊಳ್ಳದೆ ಹೋದರೆ ಜನ ಛಡಿ ಏಟು ಕೊಡುತ್ತಾರೆ. ಅಧಿಕಾರದಲ್ಲಿ ಇರುವುದರಿಂದ ಅವರ ಭಯ ಮೊದಲು ನಿಮಗೆ ತಪ್ಪಿದ್ದಲ್ಲ. ನಾವು ಗರೀಬಿ ಹಠಾವೋ ವಿಚಾರವಾಗಿ ಕೆಲಸ ಮಾಡುತ್ತಿರುವ ಜನವಾದುದರಿಂದ ನಮಗೆ ಛಡಿ ಏಟು ಯಾರೂ ಹಾಕುವುದಕ್ಕೆ ಹೋಗುವುದಿಲ್ಲ. ಮಾನ್ಯ ಮಂತ್ರಿಗಳಿಗೆ ಆ ಪರಿಸ್ಥಿತಿ ಬರಬಾರದು.

ಈ ರಾಜ್ಯಾಂಗ ತಿದ್ದುಪಡಿ ಬಿಲ್ ಈ ಹೊತ್ತು ಏನು ತರುತ್ತಿದ್ದೀರಿ ಇದು ಮೊದಲೇ ಬರಬೇಕಾಗಿತ್ತು; ಬಹಳ ಹಿಂದೆಯೇ ಬರಬೇಕಾಗಿತ್ತು. 25ನೇ ತಿದ್ದುಪಡಿ ಅಥವಾ 28ನೇ ತಿದ್ದುಪಡಿ ಯಾವುದೇ ಆಗಲೀ ಬಹಳ ಹಿಂದೆಯೇ ಬರಬೇಕಾಗಿತ್ತು. ಕಮ್ಯುನಿಸ್ಟ್ ಪಕ್ಷದವರು ಒತ್ತಾಯ ಮಾಡಿ ಹೇಳುತ್ತಿದ್ದರೂ ಆಳುವ ಪಕ್ಷ ಅದನ್ನು ತೆಗೆದುಕೊಂಡು ಬರಲಿಲ್ಲ. ಐ.ಸಿ.ಎಸ್.

(ಶ್ರೀ ಎಂ. ಎಸ್. ಕೃಷ್ಣನ್)

ಅಧಿಕಾರಿಗಳನ್ನು ಹೊಗಳಿದ್ದೀರಿ. ಕೇಂದ್ರದ ಮಂತ್ರಿಗಳಾಗಿರುವ ಶ್ರೀ ವೈ. ಬಿ. ಚವಾಣ್ ಅವರು ಹೇಳಿರುವ ಕೆಲವು ವಾಕ್ಯಗಳನ್ನು ಇಲ್ಲಿ ಸಭೆಯ ಗಮನಕ್ಕೆ ತರುತ್ತೇನೆ.

SRI Y. B. CHAVAN. has said :

> " I have been in the administration for the last 20 years. I have come in contact with more than two dozen ICS officers in different capacities. I can say that without exception, all the officers with whom I had the opportunity to work had done excellent work. It will be ungratefulness not to recognise the work that they have done."

It is something like a certificate—something like the one given by the Hon'ble Chief Minister to Mr. Magdum who is Chairman. Engineer-in-Chief, etc., etc.

Sri H. D. DEVE GOWDA.—When was that ?

Sri M. S. KRISHNAN.—As late as 1970.

I can tell you quite a number of these officers who have been praised by the Hon'ble Finance Minister of the Government of India have been put on the dock, have been found guilty of corrupt practices. And these people have been praised.

ಆಗಲೇ ಎರಡು ಭಾಗವಾಗಿ ಹೋಗಿದೆ. ಈ ತರಹ ಮನೋಭಾವ ಇರುವುದರಿಂದ ತೊಂದರೆ ಬಂದಿದೆ. ಮಾನ್ಯ ಮಂತ್ರಿಗಳು ಮತ್ತು ನಾಯಕರುಗಳು ಹೇಳಿದ್ದನ್ನು ಕೇರ್‌ಫುಲ್ ಆಗಿ ಕೇಳಿದೆ. ಈ ಬಿಲ್ಲಿನಿಂದ ಅವರಿಗೆ ಏನು ಪ್ರಿವಿಲೇಜಸ್ ಇವೆ ಅದನ್ನು ಕಸಿದುಕೊಳ್ಳುವುದಕ್ಕೆ ಹಕ್ಕು ಬರುತ್ತದೆ.

3-00 P. M.

It is an enabling Bill. It is not a Bill which takes away the privileges. Even today they enjoy all the privileges. I do not know what reasons held them back to bring both the enabling Bills and the Bill to say that these people have lost their privileges, If the Government can do it in the case of princes, why not they do it in this case ? Why is the Government delaying it ? I do not know whether Government is going to do it at all.

Sri M. MALLIKARJUNASWAMY (Minister for Community Development and Social Welfare).—Executive action has been taken.

Sri M. S. KRISHNAN.—May I humbly submit that by Executive action you cannot do it. The Hon'ble Minister does not know that unless the Parliament take away the privileges, this Government cannot do anything. Only an enabling provision won't help this Government.

Sri D. B. KALMANKAR. – It is an admitted fact.

Sri M. S. KRISHNAN.—It is all the better for me and all the worse for you.

I do not see the reason why the Government should not have brought it earlier. Why are they delaying the process? The process must be hastened. ಐ.ಎ.ಎಸ್. ಅಧಿಕಾರಿಗಳು ಏನು ಏನು ಅನುಕೂಲಗಳನ್ನು ಅನುಭವಿಸುತ್ತಿದ್ದಾರೆ ಎನ್ನುವುದು ತಮಗೆ ಗೊತ್ತಿದೆ.

450—1350 ರೂಪಾಯಿಗಳ ಸ್ಕೇಲು ಐ.ಸಿ.ಎಸ್. ಜೂನಿಯರ್ ಆಫೀಸರ್ಸ್‌ಗೆ ಇದೆ, 400—1000 ರೂಪಾಯಿಗಳ ಸ್ಕೇಲು ಐ.ಎ.ಎಸ್. ನವರಿಗೆ ಇದೆ, 900—1800 ರೂಪಾಯಿಗಳ ಸ್ಕೇಲು ಐ.ಎ.ಎಸ್. ನವರಿಗೆ ಇದೆ, 1200—2150 ಸೀನಿಯರ್ ಐ.ಎ.ಎಸ್. ನವರಿಗೆ ಇದೆ, 4000 ರೂಪಾಯಿಗಳು ಸೂಪರ್ ಸರ್ವೀಸ್ ಐ.ಸಿ.ಎಸ್. ನವ ಗೆ ಇದೆ, 3000 ರೂಪಾಯಿಗಳು ಜಾಯಿಂಟ್ ಸೆಕ್ರೆಟರಿಯವರಿಗೆ ಇದೆ, ಇವರಿಗೆ ಲೀವ್ ಬೆನಿಫಿಟ್ಸ್ ಎಂದು 2500 ರೂಪಾಯಿಗಳನ್ನು ಕೊಡುತ್ತಾರೆ. ಐ.ಸಿ.ಎಸ್. ನವರಿಗೆ ಒಂದ ವರ್ಷಕ್ಕೆ 2800 ರೂಪಾಯಿ ಅನ್ಯುಯಿಟಿ ಎಂದು ಕೊಡುತ್ತಾರೆ. ಈ ಸ್ಪೆಷಲ್ ಪ್ರಾವಿಷನ್ ಅನ್ನು ತೆಗೆಯಬೇಕಾಗಿತ್ತು. ಬರೀ ಎನೇಬಲಿಂಗ್ ಪ್ರಾವಿಷನ್ ಮಾಡಿಕೊಂಡಿದ್ದಾರೆ. ಇದು ಅಷ್ಟೊಂದು ರೆವೆಲ್ಯೂಷನರಿ ಎಂದು ಹೇಳುವುದಕ್ಕಾಗುವುದಿಲ್ಲ. ಒಂದು ಪ್ರಾರಂಭ ಮಾಡಿದ್ದಾರೆ ಎಂದು ಮಾತ್ರ ಹೇಳಬೇಕಾಗಿದೆ.

ಇನ್ನೊಂದು ವಿಷಯ :

"Provided that in the case of any such person who is holding or has held the office of the Chief Justice or other judge of the Supreme Court or a High Court, the Comptroller or Auditor-General of India, the Chairman or other member of the Union or State Public Service Commission or the Chief Election Commissioner, nothing in sub-clause (*a*) or sub-clause (*b*) shall be construed as empowering Parliament to vary or revoke, after his appointment to such post, the conditions of service to his disadvantage except in so far as such conditious of service are applicable to him by reason of his being a person appointed by the Secretary of State or Secretary of State in Council to a civil service of the Crown in India."

ಇದರ ಅರ್ಥ ಏನಾಗುತ್ತದೆ ಎಂದರೆ ಅವರಿಗೆಮಾತ್ರ ಸ್ಪೆಷಲ್ ಸ್ಟೇಟಸ್ ಕೊಟ್ಟಿದ್ದಾರೆ. ಬೇರೆಯವರಿಗೆ ಕಸಿದುಕೊಳ್ಳುವುದಕ್ಕೆ ಹಕ್ಕು ಇದೆ. ಇಂಥ ಡಿಸ್ಕ್ರಿಮಿನೇಷನ್ ಏತಕ್ಕೆ ಮಾಡಬೇಕು ? ಐ. ಸಿ. ಎಸ್. ಅಧಿಕಾರಿಗಳಾಗಿ ಜಡ್ಜಸ್ ಆಗಿರುವವರು ಹಳೆ ಕಾಲದವರು. ಹೊಸ ಸೋಷಿಯಲ್ ಆರ್ಡರ್‌ನಲ್ಲಿ ಪುರೋಗಾಮಿ ಅಭಿಪ್ರಾಯ ಇರುವವರನ್ನು ಜಡ್ಜ್‌ಗಳಾಗಿ ಮಾಡಿ ಇಟ್ಟರೆ ದೇಶ ಮುಂದುವರಿಯುತ್ತದೆ. ಹಳೆಯ ಕಾಲದ ಪ್ರತಿಗಾಮಿ ಪದ್ಧತಿ ಇಟ್ಟುಕೊಂಡಿರುವ ಜನಗಳಿಗೆ ವಿಶೇಷ : ವಲತ್ತು ಕೊಡಬೇಕು ಎನ್ನುವ ಸೂಚನೆ ಇದೆ. ಒಟ್ಟಿನಲ್ಲಿ ಒಂದು ಪ್ರಗತಿಯ ಹೆಜ್ಜೆಯನ್ನು ಇಟ್ಟಿದ್ದೀರಿ. ಈ ಪುಟ್ಟ ಹೆಜ್ಜೆಗೆ ಯಾರ ವಿರೋಧ ಬರಲಾರದು ಎಂದ ಹೇಳಿ ಇದಕ್ಕೆ ಬೆಂಬಲ ನೀಡುತ್ತೇನೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಸಭಾಧ್ಯಕ್ಷಣಿಯವರೇ, ಈ ದಿವಸ ಪಾರ್ಲಿಮೆಂಟರಿ ಸಚಿವರು ಇಟ್ಟಿರತಕ್ಕ ಈ 28ನೇ ತಿದ್ದುಪಡಿಯನ್ನು ತಾತ್ವಿಕವಾಗಿ ಒಪ್ಪಿಕೊಳ್ಳುತ್ತೇನೆ. ಆದರೆ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ತಿದ್ದುಪಡಿ ತಾರದೆ ಲೆಜಿಸ್ಲೇಷನ್ ಮಾಡುವುದಕ್ಕಾಗುವುದಿಲ್ಲ. ತಿದ್ದುಪಡಿಗೆ ಒಂದು ಲೆಜಿಸ್ಲೇಷನ್ ತರಬೇಕಾಗುತ್ತದೆ. ನೀವು ಅಂಥ ಒಂದು ಲೆಜಿಸ್ಲೇಷನ್ ಅನ್ನು ತರುತ್ತೀರಿ ಎಂದು ಭಾವಿಸೋಣ, ಅದರಿಂದ ನೀವು ಏನು ಆಶೋತ್ತರ ಇಟ್ಟುಕೊಂಡಿದ್ದೀರೋ ಅದನ್ನು ನೆರವೇರಿಸುತ್ತೇವೆ ಎನ್ನುವ ಭಾವನೆ ತಮಗೆ ಇದ್ದರೆ, ಅದು ಕೇವಲ ಕಲ್ಪನೆ. ಲೋಕಸಭೆಯ ಡಿಬೇಟ್ ಅನ್ನು ಓದಿದರೆ, ರಾಷ್ಟ್ರದಲ್ಲಿ 90 ಅಥವಾ 105 ಜನ ಅಧಿಕಾರಿಗಳಿಗೆ ಮಾತ್ರ ಈ ತಿದ್ದುಪಡಿ ಅನ್ವಯಿಸುತ್ತದೆ. ಆದರೆ ಅವರೂ ಒಂದು, ಎರಡು ವರ್ಷದಲ್ಲಿ ರಿಟೈರ್ ಆಗಿ ಹೋಗುತ್ತಾರೆ ಎಂದು ವ್ಯಕ್ತವಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—1979 ರ ಹೊತ್ತಿಗೆ ಯಾರೂ ಇರುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಈ 105 ಜನ ಅಧಿಕಾರಿಗಳು ಒಂದೆರಡು ಅಥವಾ ಮೂರು ವರ್ಷಗಳಲ್ಲಿ ರಿಟೈರ್ ಆಗಿ ಹೋಗುತ್ತಾರೆ, ತಮ್ಮ ಪ್ರಗತಿಪರ ಧೋರಣೆಯನ್ನು ನಿರೂಪಣೆ ಮಾಡುವುದಕ್ಕೆ ಮತ್ತು ಕಾರ್ಯಗತ ಮಾಡುವುದಕ್ಕೆ ಇವರು ಅಡ್ಡಿ ಇದ್ದರು ಎಂದು ಕಾನೂನು ಮತಿಯಿಂದ ತಂದಿದ್ದರೆ ಇದನ್ನು ಸ್ವಾಗತಮಾಡುತ್ತೇನೆ. ತಮ್ಮ ಧೋರಣೆಯನ್ನು ಕಾರ್ಯಗತ ಮಾಡುತ್ತೀರಿ ಎನ್ನುವುದು ಕಲ್ಪನೆ. ಪ್ರೀವಿ ಪರ್ಸಸ್ ತೆಗೆದಿದ್ದಾರೆ, ಅಧಿಕಾರಿಗಳ ಪ್ರಿವಿಲೇಜ್ ಕೂಡ ಇರಬಾರದು ಸ್ಪೆಷಲ್ ಪ್ರಿವಿಲೇಜಸ್ ಇರಬಾರದು ಎನ್ನುವುದು ತಾತ್ವಿಕವಾಗಿ ಒಪ್ಪತಕ್ಕದ್ದು ಸರಿ. ಇಂಥ ಪ್ರಿವಿಲೇಜಸ್ ಅನ್ನು ಎನ್‌ಜಾಯ್ ಮಾಡುವುದು ಸರಿಯಾದುದು ಅಲ್ಲ. ಆದರೆ ಒಂದು ಹೆಜ್ಜೆ ಮುಂದೆ ಹೋಗಿ, ಹೇಳುವುದಾದರೆ ಈ ಒಂದು ಪ್ರಜಾ ಸರ್ಕಾರ ರಚನೆಯಾದ ಮೇಲೆ, ಸ್ವಾತಂತ್ರ್ಯ ಬಂದಮೇಲೆ, ಪ್ರಜೆಗಳ ಮತಿಯಿಂದ ಇಂಥ ಪ್ರಿವಿಲೇಜಸ್‌ನ ಫಲವನ್ನು ಊಟಮಾಡತಕ್ಕ ಜನ ಪ್ರಿವಲೇಜಸ್‌ನ್ನು ಸೃಷ್ಟಿಮಾಡಿಕೊಂಡಿದ್ದಾರೆ, ಗವರ್ನರ್, ಮುಖ್ಯ ಮಂತ್ರಿಗಳು, ಮಂತ್ರಿಗಳು, ಪ್ರಧಾನ ಮಂತ್ರಿಗಳು ಯಾರನ್ನು ಬೇಕಾದರೂ ಕರೆದುಕೊಂಡು ಹೋಗಿ ಅವರಿಗಾಗಿ ಖರ್ಚು ಮಾಡುವ ಹಣದ ಬಗ್ಗೆ ಚರ್ಚೆ ಮಾಡುವ ಅವಕಾಶ ಹಕ್ಕು ಈ ಸಭೆಗೆ ಇಲ್ಲ. ರಾಷ್ಟ್ರಾಧ್ಯಕ್ಷರು ಖರ್ಚುಮಾಡುವುದನ್ನು ಚರ್ಚೆ ಮಾಡುವುದಕ್ಕೆ ಹಕ್ಕು ಇಲ್ಲ. ಪ್ರಾಸಂಗಿಕ ವಾಗಿ ಹೇಳುವುದಾದರೆ ಒಬ್ಬ ಗವರ್ನರ್ ತಮ್ಮ ಮನೆಗಳಿಗೆ ಹೋಗತಕ್ಕ ಜನಗಳಿಗೆ ಟೀ ಕೊಡು ತ್ತಾರೆ, ಅವರ ದಿನದ ವೆಚ್ಚವನ್ನು ಲೆಕ್ಕ ಹಾಕಿದರೆ, 1800 ರೂಪಾಯಿಯವರೆಗೂ ಖರ್ಚು ಮಾಡತಕ್ಕ ಸನ್ನಿವೇಶಗಳು ಉಂಟು. ಆದ್ದರಿಂದ 105 ಜನ ಅಧಿಕಾರಿಗಳಿಗೆ ಇರತಕ್ಕ ಪ್ರಿವಿಲೇಜ್ ತೆಗೆಯುವ ಮಾತ್ರದಿಂದ ತಮ್ಮ ಸಮಾಜವಾದದ ಧೋರಣೆಯನ್ನು ಜಾರಿಗೆ ತರಲಿಕ್ಕೆ ಅನುಕೂಲ ವಾಗುವ ತಮ್ಮ ದೃಷ್ಟಿಕೋನ ಏನು ಇದೆ, ಅದು ಇಷ್ಟಕ್ಕೆ ಸೀಮಿತವಾದರೆ ಪ್ರಯೋಜನವಿಲ್ಲ. 25 ವರ್ಷದ ನಮ್ಮ ಕಹಿ ಅನುಭವದಲ್ಲಿ, ನಾವು ಹಲವಾರು ಕಾರ್ಯಗಳನ್ನು ಮಾಡುವುದಕ್ಕೆ ಆಲೋಚನೆ ಮಾಡಬೇಕಾಗಿದೆ. ಪ್ರಧಾನ ಮಂತ್ರಿಗಳು, ಕೇಂದ್ರದ ನಾಯಕರುಗಳು, ರಾಷ್ಟ್ರಪತಿ ಭವನದಲ್ಲಿ ಖರ್ಚು ಅಗುವ ಬಗ್ಗೆ ಲೆಕ್ಕಾಚಾರ ಹಾಕಬೇಕಾಗುತ್ತದೆ, ವಿಚಾರಣೆ ನಡೆಸಬೇಕಾಗುತ್ತದೆ ಎಂದು ಅದರ ಬಗ್ಗೆ ಒಂದು ತಿದ್ದುಪಡಿ ಮಾಡಿ ಕ್ರಮ ತೆಗೆದು ಕೊಳ್ಳುವುದಕ್ಕೆ ಯಾರೂ ತಯಾರಾಗಿಲ್ಲ. ಇವತ್ತು ಎಲ್ಲಿಯವರಿಗೆ ಹೋಗಿದೆ ಎಂದರೆ, ಹಿಂದೆ ಕಾಂಗ್ರೆಸ್ಸಿನಲ್ಲಿ ಪ್ರತಿಗಾಮಿ ಶಕ್ತಿಗಳು ಮತ್ತು ಪ್ರಗತಿಪರರು, ಬಡ ಜನತೆಗೆ ಇರುವ ಅಡ್ಡಿ ಆತಂಕಗಳನ್ನು ನೀಗಿಸುತ್ತೇವೆ ಎಂದು ಅಧಿಕಾರದ ಸ್ಥಾನದ ಭದ್ರತೆಗೋಸ್ಕರ ಘೋಷಣೆಗಳನ್ನು ಮಾಡಿ ಕಚ್ಚಾಟ ಮಾಡಿದರು. ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ರಾಜ್ಯದಲ್ಲಿ ಶ್ರೀಮಾನ್ ನಿಜಲಿಂಗಪ್ಪನವರು ರಾಜಕೀಯದಿಂದ ನಿವೃತ್ತಿಯಾದಮೇಲೆ ಜೋಗಿ ಮಠದಲ್ಲಿ ವಿಶ್ರಾಂತಿ ಪಡೆಯುತ್ತೇನೆಂದು ಹೇಳಿ ರಾಜ್ಯದ ಮುಖ್ಯ ಮಂತ್ರಿಗಳಾದ ಕಾಲದಲ್ಲಿ ಈ ಸಭೆಯಲ್ಲಿ ಪ್ರಸ್ತಾಪ ಆದದ್ದು ನೋಡಿದ್ದೇನೆ. ಜಮೀನು ಕೊಡುವುದಿಲ್ಲವೆಂದು ನಿರ್ಣಯ ತೆಗೆದು ಕೊಂಡಿದ್ದೀರಿ ಬಹಳ ಒಳ್ಳೆಯದು. ಶ್ರೀಮಾನ್ ನಿಜಲಿಂಗಪ್ಪನವರ ಮುಖಂಡತ್ವದ ಅಧ್ಯಕ್ಷತೆಯಲ್ಲಿ ಪ್ರಗತಿದಾಯಕವಾದ, ಪ್ರಗತಿಪರವಾದ ಧೋರಣೆಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ದೊಡ್ಡ ಪ್ರಚಾರ ಈ ದೇಶದಲ್ಲಿ ನಡೆದು ಹೋಯಿತು. ಅವರು ಈ ರಾಜ್ಯದ ಒಂದು ಮುಖಂಡತ್ವದಲ್ಲ ಕೆಲವು ಕಾಲ ಇದ್ದರು. ರಾಷ್ಟ್ರ ಮುಖಂಡತ್ವ ದೊರೆತದ್ದು ಇಲ್ಲ. ನಿಜಲಿಂಗಪ್ಪ ರಾಷ್ಟ್ರ ನಾಯಕರು ಎಂದು ಕರೆಯುವುದಾದರೆ ನಾನು ತಯಾರಿಲ್ಲ. ಅವರು ರಾಷ್ಟ್ರ ನಾಯಕರು ಎಂದು ಒಪ್ಪಿಕೊಳ್ಳುವುದಕ್ಕೂ ತಯಾರಿಲ್ಲ. ನೀವು ರಾಷ್ಟ್ರ ನಾಯಕರು ಎಂದು ಬಯ್ಯುವುದಕ್ಕೆ ಕರೆದರೆ ಚಿಂತೆಯಿಲ್ಲ. ಪ್ರಧಾನ ಮಂತ್ರಿಗಳು ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು 18–20 ತಿಂಗಳು ರಾಷ್ಟ್ರವನ್ನು ಆಳಿದ್ದನ್ನು ಬಿಟ್ಟು ಬಿಟ್ಟರೆ ಒಂದೇ ಮನೆತನದ ವರು ರಾಷ್ಟ್ರ ಆಳಿದ್ದು ರಾಷ್ಟ್ರದ ಮುಖಂಡತ್ವ ಇಟ್ಟುಕೊಂಡಿದ್ದರು. ನಿಜಲಿಂಗಪ್ಪನವರು 5–6 ವರ್ಷಗಳು ಮುಖ್ಯಮಂತ್ರಿಗಳಾಗಿದ್ದರು ಎಂದು ಕಾಣುತ್ತದೆ. ರಾಷ್ಟ್ರದಲ್ಲಿ ಬಡತನ ನಿವಾರಣೆ ಮಾಡುವುದಕ್ಕೆ ಇವರಿಗೆ ಯಾರು ಅಡ್ಡಿಯಾಗಿದ್ದರು ? ಆರೋಪಣೆ ಮಾಡುವುದಕ್ಕೆ ಒಂದು ಸ್ಥಾನದ ಕಚ್ಚಾಟದಿಂದ ಸ್ಥಾನ ಭದ್ರತೆಗೋಸ್ಕರ ಆಡತಕ್ಕ ಮಾತುಗಳೇ ಹೊರತು ಕಾಂಗ್ರೆಸ್ ವಿಭಾಗವಾದ ಮೇಲೂ ಕೂಡ ಶ್ರೀಮಾನ್ ಚವಾಣ್‌ರವರು 1970 ರಲ್ಲಿ ಹೇಳಿದ್ದನ್ನು ಕೆಲವು ಮಿತ್ರರು ಉಲ್ಲೇಖ ಮಾಡಿದ್ದಾರೆ. ಕಾಂಗ್ರೆಸ್ ಡಿವೈಡ್ ಆಗಿ ಒಂದೂವರೆ ವರ್ಷಗಳು ಕಳೆದು ಹೋದವು, ಶ್ರೀಮಾನ್ ಮಧುಲಿಮಯೆಯವರು ಒಂದು ತಿದ್ದುಪಡಿಯನ್ನು ಅಧಿಕಾರಿಗಳ ಅಧಿಕಾರ ಡಿಫೆಂಡ್ ಮಾಡುವುದಕ್ಕೆ ತಂದಾಗ (ಆರ್) ಕಾಂಗ್ರೆಸ್ ಸರ್ಕಾರ ಒಪ್ಪಲಿಲ್ಲ. ಬಿದ್ದುಹೋಯಿತು. ಏಕೆಂದರೆ ಪ್ರೀವಿ ಪರ್ಸ್ ತೆಗೆದದ್ದು ಆಯಿತು, ಬ್ಯಾಂಕ್ ನ್ಯಾಷನಲೈಸೇಷನ್ ಆಯಿತು. ಕಳೆದ 3–4 ವರ್ಷಗಳ ಅನುಭವದಲ್ಲಿ ಬಡತನ ನಿವಾರಣೆ ಮಾಡುವುದಕ್ಕೆ ಹಲವಾರು ಎಡರುತೊಡರುಗಳು ಇವೆ ಎಂದು

ಇದು ಒಂದು ಸಾಧನೆ ಅಧಿಕಾರಿಗಳಿಗೆ ಪ್ರಿವಿಲೇಜಸ್ ತೆಗೆದರೆ ಮತ್ತಷ್ಟು ಮಾರ್ಗ ಸುಗಮವಾಗಬಹುದು ಎನ್ನುವ ವಾದವನ್ನು ಒಡ್ಡಿದರು. ಸಂತೋಷ ಇದು ಆದಮೇಲೆ ಲ್ಯಾಂಡ್ ರಿಫಾರಂಸ್ ಅರ್ಬನ್ ಸೀಲಿಂಗ್ಸ್ ಕತೆ ಹೇಳಿದರು, ಕೇಳುತ್ತಾ ಇದ್ದೇವೆ. ಅರ್ಬನ್ ಸೀಲಿಂಗ್ ಆದಕ್ಕೆ ಬಹುಶಃ ಅಧಿಕಾರಿಗಳು ಯಾರೂ ಅಡ್ಡಿಬರಲಾರರು, ಸೆಕೆಂಡ್ ಡಿವಿಜನ್ ಗುಮಾಸ್ತರು ಬರುತ್ತಾರೆ, ಆಗ ಅದನ್ನು ಯೋಚಿಸುವುದಕ್ಕೆ ಪ್ರಯತ್ನ ಮಾಡೋಣ. ಕೆಲವು ರಾಜ್ಯಗಳಲ್ಲಿ ಅರ್ಬನ್ ಸೀಲಿಂಗ್ ಬಗ್ಗೆ ಮಸೂದೆಗಳನ್ನು ತಂದಿದ್ದಾರೆ ಪಾಸ್ ಮಾಡಿದ್ದಾರೆ. ಇಂಡಸ್ಟ್ರಿಯಲ್ ಹೌಸಿಗೆ ಎಗ್ಜಂಪ್ಷನ್, ಸಿನಿಮಾ ಥಿಯೇಟರ್ಸ್‌ಗೆ ಎಗ್ಜಮ್ಷನ್, ಹೋಟೆಲ್‌ಗಳಿಗೆ ಎಗ್ಜಮ್ಷನ್, ಈ ತರಹ ಎಗ್ಜಮ್ಷನ ಕೊಟ್ಟುಕೊಂಡು ಬಡತನ ನಿವಾರಣೆ ಮಾಡುತ್ತೇವೆ ಎಂದು ಹೇಳುವ ಘೋಷಣೆ ಏನು ಇದೆ ಅದನ್ನು ಸ್ವಲ್ಪ ವಿಚಾರ ಮಾಡಬೇಕಾಗಿದೆ. ಕೇಂದ್ರದವರು ನೇಮಕ ಮಾಡಿದಂಥ ಒಂದು ಸಬ್ ಕಮಿಟಿಯವರು ಕೊಟ್ಟಂಥ ರಿಪೋರ್ಟ್ ನೋಡಿದರೆ 5 ಲಕ್ಷ ರೂಪಾಯಿಗಳ ಲಿಮಿಟ್ ಒಂದು ವಾಸದ ಮನೆ ಮೇಲೆ ಇಟ್ಟಿದ್ದಾರೆ. ಯಾವ ವಾಸದ ಮನೆ 5 ಲಕ್ಷ ರೂಪಾಯಿಗಳಿಗೂ ಹೆಚ್ಚು ಆಗುತ್ತದೆ ? ಅಂತಹವು ಎಷ್ಟು ಸಿಕ್ಕುತ್ತದೆ ಎಂಬುದು ಅಂಕಿ ಸಂಗ್ರಹಣೆ ಮಾಡಿದಮೇಲೆ ಗೊತ್ತಾಗುತ್ತದೆ. ಇಷ್ಟು ರಿಯಾಯಿತಿ ಕೊಟ್ಟು ನಿಮ್ಮ ಧೋರಣೆ ಏನು ಇದೆ, ನಿಮ್ಮ ನೀತಿ ಏನು ಇದೆ ಅದನ್ನು ಅನುಷ್ಠಾನಕ್ಕೆ ತರುತ್ತೀರೆಂದು ಹೇಳುತ್ತಿದ್ದೀರಿ ಅದು ಬಹಳ ಕಾಲ ಉಳಿಯುವುದಿಲ್ಲ ಯಾವ ಸಿಂಡಿಕೇಟ್ ಅಡ್ಡಿ ಆತಂಕ ಮಾಡುವುದಕ್ಕೆ ಸಾಧ್ಯವಿಲ್ಲ. ಗುಜರಾತ್‌ನಲ್ಲಿ 15 ಜನ, ಮೈಸೂರಿನಲ್ಲಿ 22 ಜನ, ಇನ್ನು ಕೆಲವು ರಾಜ್ಯಗಳಲ್ಲಿ 5–10 ಇರಬೇಕು. ಸ್ವತಂತ್ರ ಪಾರ್ಟಿ ನಿರ್ನಾಮವಾಗಿದೆ ಉಳಿದೇ ಇಲ್ಲ. ಏತಕ್ಕೆ ಹೇಳುತ್ತೇನೆ ಎಂದರೆ ಇಂಥ ಕೆಲವು ತಿದ್ದುಪಡಿಗಳನ್ನು ಮಾಡುತ್ತೇವೆ ಎಂದು ತಾವು ಕೊಟ್ಟಂಥ ವಚನ ಏನು ಇದೆ ತಾವು ಮಾಡಿದಂಥ ಘೋಷಣೆ ಏನು ಇದೆ ಅದನ್ನು ಕಾರ್ಯರೂಪಕ್ಕೆ ತರುತ್ತೇವೆ ಎನ್ನುವ ಉದ್ಧಟತನ ಇನ್ನು ಎಷ್ಟುಕಾಲ ಉಳಿಯುತ್ತದೆ ಎನ್ನುವುದನ್ನು ಹೇಳಬೇಕಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಪ್ರೊಫೆಸರ್ ದಾಂಡ್‌ಕರ್‌ರವರು ಒಂದು ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದಾರೆ. ಗರೀಬಿ ಹಟಾವ್ ಏನು ಮಾಡುತ್ತಾರೆ? ಸುಮಾರು 100 ಕ್ಕೆ 40 ಭಾಗ ಜನರು ಪಾವರ್ಟಿ ಲೈನ್ ಕೆಳಗೆ ಇರುವವರು ಇದ್ದಾರೆ. ಪರ್ ಕ್ಯಾಪಿಟ ಎಕ್ಸಪೆಂಡಿಚರ್ ಪರ್ ಡೇ 50 ನಯಾಪೈಸೆ ಇದೆ. ಆದುದರಿಂದ ನಮಗೆ ಸಿಂಡಿಕೇಟ್ ಕಾಂಗ್ರೆಸ್ ಅಥವಾ ಸ್ವತಂತ್ರ ಪಾರ್ಟಿ ಅಡ್ಡಿ ಬಂದಿಲ್ಲ ನಮ್ಮ ಪ್ರಾಬ್ಲಮ್ ಬಹಳ ಬೃಹದಾಕಾರವಾದ ಸಮಸ್ಯೆಯಾಗಿದೆ. ಇಷ್ಟನ್ನು ಮಾತ್ರ ಸದಸ್ಯರು ತಿಳಿದುಕೊಂಡು ಮಾತನಾಡಬೇಕೆಂದು ಹೇಳಿ ವಿನಂತಿ ಮಾಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಈ ತನಕ ಹೇಳಿದಿರಿ ಸಿಂಡಿಕೇಟ್ ಪಾರ್ಟಿ ಅಥವಾ ಸ್ವತಂತ್ರ ಪಾರ್ಟಿ ಅಡ್ಡಿ ಇಲ್ಲ ಎಂದು ಏನು ಇಲ್ಲಿ ಸತ್ಯಾಂಶವು ತಾವು ನುಡಿದಿದ್ದೀರಿ ಅದಕ್ಕೆ ಈ ಸಭೆಯಲ್ಲಿ ನಿಮ್ಮನ್ನು ವೆಲ್ ಕಮ್ ಮಾಡುತ್ತೇನೆ. ಅಧಿಕಾರ ವ್ಯಾಮೋಹಕ್ಕೋಸ್ಕರ ಹೆಸರುಗಳನ್ನು ಕಟ್ಟಿಕೊಂಡು ಕಥೆ ಕಟ್ಟಿದ್ದೀರಿ ಪರಂತು 1967ರಲ್ಲಿ ಕಾಂಗ್ರೆಸ್ ಹೇಳುವುದಕ್ಕೆ ಹೆಸರು ಇಲ್ಲದೆ ಹೊರಟು ಹೋಯಿತು. ಪ್ರಧಾನ ಮಂತ್ರಿಗಳು ಇಂದಿರಾಗಾಂಧಿಯವರು ಇದ್ದರು. ನಿಜಲಿಂಗಪ್ಪನವರು ಊರಿನಲ್ಲಿ ಇದ್ದರು. ಸ್ಥಾನದ ವ್ಯಾಮೋಹದಿಂದ ದೊಡ್ಡ ಪ್ರಚಾರ ಮಾಡಿದಿರಿ, ಸ್ಥಾನಗಳನ್ನು ಭದ್ರ ಮಾಡುವುದಕ್ಕೆ ದೊಡ್ಡ ಚಳುವಳಿ ನಡೆಯಿತು ಬಹಳ ಸಂತೋಷ. ಈಗಲಾದರು ಕೊನೆಗೆ ಒಂದು ಮಾತು ಹೇಳುತ್ತೇನೆ. ಪ್ರಿವಿಲೇಜಸ್ ಅಧಿಕಾರಿಗಳಿಂದ ಕಿತ್ತು ಹಾಕಿದ್ದರಿಂದಲೇ ನಮ್ಮ ಸಮಸ್ಯೆ ಬಗೆ ಹರಿಯುವುದಕ್ಕೆ ಸಾಧ್ಯವಿಲ್ಲ. ಪ್ರಾಮುಖ್ಯವಾಗಿ ಎಕ್ಸ್‌ಪರ್ಟ್ಸ್ ಬೇಕು ಎನ್ನುವ ದೃಷ್ಟಿಯನ್ನು ಮಾತ್ರ ಹೇಳುತ್ತೇನೆ. ಏತಕ್ಕೆಂದರೆ ಪತ್ರಿಕೆಯಲ್ಲಿ ಬೆಳಿಗ್ಗೆ ಆದರೆ ನೋಡುತ್ತೇವೆ ಆಡಳಿತ ಕಾಂಗ್ರೆಸ್ಸಿನಲ್ಲಿ ಹಲವಾರು ಹಿತಾಸಕ್ತಿಗಳು ಇದ್ದು ಘೋಷಣೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಅಡ್ಡಿ ಆಗಿದ್ದಾರೆಂದು ಪ್ರಧಾನಮಂತ್ರಿಗಳು ಹೇಳಿರತಕ್ಕದ್ದು ಓದಿದ್ದೇನೆ. (ಆರ್) ಕಾಂಗ್ರೆಸ್ ಇವರಿಂದಲೇ ಇದಕ್ಕೆ ಅಡ್ಡಿ ಇದೆ ಪತ್ರಿಕೆಯಲ್ಲಿ ಹೇಳಿರುವ ವರದಿಯನ್ನು ಓದಿದ್ದೇನೆ ಕೇವಲ ಕೆಲವು ತಿದ್ದುಪಡಿಗಳು ಬರುವುದರಿಂದ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗುವುದಿಲ್ಲ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಇದರ ಜೊತೆಗೆ. ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ. ಶ್ರೀಮಾನ್ ನಂಜೇಗೌಡರು ಹಿಂದೆ ಇದೇ ಸಭೆಯಲ್ಲಿ ಒಂದು ಪಬ್ಲಿಕ್ ಎನ್‌ಕ್ವೈರಿ ಬಿಲ್ಲನ್ನು ತರುತ್ತೇವೆ ಎಂದು ಹೇಳಿ ಬಹಳ ದೀರ್ಘವಾಗಿ ಇದರ ಮೇಲೆ ಚರ್ಚೆ ಮಾಡಿದ್ದರು. ಇದನ್ನು ಸಮರ್ಥನೆಮಾಡುತ್ತಾ ಮಾನ್ಯ ಶ್ರೀ ಚನ್ನಬಸಪ್ಪನವರು ಕೂಡ ಬಹಳ ದೀರ್ಘವಾಗಿ ಇಲ್ಲಿ ಮಾತನಾಡಿದರು. ಈಗ ಅವರೇ ಆಡಳಿತ ಪಕ್ಷದ ಅಧಿಕಾರದಲ್ಲಿದ್ದಾರೆ. ಅವರೇಕೆ ಇದುವರೆಗೆ ಇಲ್ಲಿ ಇಂತಹ ಒಂದು ಬಿಲ್ಲನ್ನು ತರುವ ಆಲೋಚನೆ ಮಾಡಲಿಲ್ಲ? ಕಳೆದ ಇಪ್ಪತ್ತೈದು ವರ್ಷದಲ್ಲಿ

(ಶ್ರೀ ಹೆಚ್. ಡಿ. ದೇವೇಗೌಡ)

ಯಾರು ಯಾರು ಆಡಳಿತದ ಸ್ಥಾನಮಾನಗಳನ್ನು ಭದ್ರಪಡಿಸಿಕೊಂಡು ಅದರ ಉಪಯೋಗವನ್ನು ಪಡೆದಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಇದರಲ್ಲಿ ಯಾರು ಯೋಗ್ಯರು ಎನ್ನುವುದನ್ನು ಜನ ನೋಡುತ್ತಿದ್ದಾರೆ. ಇಂದು ಬೀದಿಗಳಲ್ಲಿ ಜನರು ಮಾತಾಡುವುದನ್ನು ಗಮನಿಸಬಹುದು. ಅದನ್ನು ಹೆಚ್ಚು ಆಸಕ್ತಿಯಿಂದ ಕೇಳಿದರೆ ನಿಮಗೇ ಗೊತ್ತಾಗುತ್ತದೆ, ಜನ ಇಂದು ಆಡಳಿತ ಕಾಂಗ್ರೆಸ್ಸು ಬಂದಿದೆ ಹಿಂದೆ ಆ ಕಾಂಗ್ರೆಸ್ಸು ಬಂತು ಎಂದು ಹೇಳುವವರು ಇಂದು ಎಲ್ಲ ಕಳ್ಳರೇ ಇದರಲ್ಲಿ ಇರುವವರು ಎನ್ನುವಂತಾಗಿದೆ, ಹಿಂದೆ ಈ ಕಡೆ ಸದಸ್ಯರಾಗಿದ್ದ ಶ್ರೀಮಾನ್ ನಂಜೇಗೌಡರು ಇದುವರೆಗೂ ಅವರು ಹೇಳಿದ ಪಬ್ಲಿಕ್ ಎನ್‌ಕ್ವೈರಿ ಬಿಲ್ಲನ್ನು ತರುವುದಕ್ಕೆ ಆಗಲಿಲ್ಲ. ಕಳೆದ ಇಪ್ಪತ್ತೈದು ವರ್ಷಗಳಿಂದಲೂ ಎಲ್ಲ ಸವಲತ್ತುಗಳನ್ನು ಪಡೆದುಕೊಂಡು ಇರುವವರು ಇದ್ದಾರೆ, ಇವೊತ್ತು ಜನ ಹೇಳುವುದನ್ನು ಕೇಳಿರಬಹುದು. ಬಾಯಲ್ಲಿ ಅಲ್ಪ ಸೌಕರ್ಯಗಳನ್ನು ಪಡೆಯಬೇಕೆಂದು ಹೇಳುವ ಮುಖ್ಯ ಮಂತ್ರಿಗಳು ಇಂದು ಫಿಯಟ್ ಕಾರಿನಲ್ಲಿ ಓಡಾಡುತ್ತಿದ್ದಾರೆ, ಇವೆಲ್ಲಾ ಜನತಂತ್ರದಲ್ಲಿ ನಾವು ಮಾಡಿಕೊಟ್ಟಿರುವ ಅಲ್ಪ ಸೌಕರ್ಯಗಳು, ಆದರೆ ಆ ಸ್ಥಾನದ ಬಲದಿಂದ ಬಹಳ ಜನ ಹಣವನ್ನು ಸಂಪಾದನೆ ಮಾಡಿಕೊಂಡಿದ್ದಾರೆ ಎಂದು ತಿಳಿದಿದೆ. ಮತ್ತು ಇಂದು ರಾಜ್ಯದಲ್ಲಿ ಇವರ ಸಹಾಯದಿಂದ ಅನೇಕ ದುರ್ವ್ಯವಹಾರಗಳಿಗೆ ಇಳಿದಿದ್ದಾರೆ ಎನ್ನುವ ಒಂದು ಅಭಿಪ್ರಾಯಕ್ಕೆ ಬಂದಿದ್ದಾರೆ. ಇದನ್ನೆಲ್ಲಾ ತಡೆಯುವುದಕ್ಕೆ ನಿಮ್ಮಲ್ಲಿ ಬೇರೆ ಅಸ್ತ್ರ ಇಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ ಇಂದು ದೇಶದಲ್ಲಿ ಕಪ್ಪು ಹಣ ಎಲ್ಲಿದೆ ಎಂದರೆ ಹಳ್ಳಿಗಳಲ್ಲಿ ಇಲ್ಲ, ಅದು ರಾಜಕಾರಣಿಗಳಲ್ಲೇ ಇದೆ, ಮಾನ್ಯ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳವರು ಹಿಂದೆ ಚುನಾವಣೆಗೆ ಅವರ ಕ್ಷೇತ್ರದಲ್ಲಿ ನಿಂತಾಗ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಎನ್ನುವುದನ್ನು ಅಲ್ಲಿಯ ಮತದಾರರೇ ತಿಳಿದುಕೊಂಡಿದ್ದಾರೆ. ಚುನಾವಣೆಯಲ್ಲಿ ಯಾವ ರೀತಿ ದುರ್ವ್ಯವಹಾರಗಳನ್ನು ಮಾಡಿದ್ದಾರೆ ಇದರಲ್ಲಿ ಯಾರು ಪ್ರಾಮಾಣಿಕವಾಗಿ ಖರ್ಚು ಮಾಡಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಇದರ ಮೇಲೆ ಬಹಳ ದೊಡ್ಡದಾಗಿ ನೀವು ಇಲ್ಲಿ ಬಂದು ಹೇಳಬಹುದು, ಬಹುಶಃ ಯಾರೂ ಪ್ರಾಮಾಣಿಕವಾಗಿ ಚುನಾವಣೆಯ ಲೆಕ್ಕಗಳನ್ನು ಕೊಟ್ಟಿರುವುದಿಲ್ಲ, ಇದು ಎಲ್ಲರಿಗೂ ತಿಳಿದಿರುವ ವಿಚಾರ. ನಾನು ಹೇಳುತ್ತಿರುವುದು, ಕಳೆದ ಮೂರು ತಿಂಗಳಿಂದ ನೀವು ಆಡಳಿತ ವಹಿಸಿಕೊಂಡ ಮೇಲೆ ನನಗೂ ಕೂಡ ಹಲವಾರು ವಿಷಯಗಳು ತಿಳಿದಿವೆ, ಕಾಲ ಬಂದಾಗ ಅದರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ತಾತ್ವಿಕವಾಗಿ ನಾನು ಇಲ್ಲಿ ತಂದಿರುವ ತಿದ್ದುಪಡಿಯನ್ನು ಒಪ್ಪಿದರೂ ಈ ಅಮೆಂಡುಮೆಂಟಿನಂತೆ ಜಾರಿಗೆ ತರಲು ನಿಮ್ಮ ಕಾಂಗ್ರೆಸ್ಸು ಪಕ್ಷದವರಿಂದಲೇ ತಡೆಗಳು ಬರುತ್ತಿವೆ, ಇದಕ್ಕೆ ಯಾವ ರೀತಿ ಅಡ್ಡಿ ಆತಂಕಗಳು ಹಾಗೂ ಹಲವಾರು ಶಕ್ತಿಗಳು ನಿಮ್ಮನ್ನು ತಡೆಯುತ್ತಿವೆ ಎನ್ನುವುದು ನಮ್ಮ ಗಮನಕ್ಕೆ ಬಂದಿವೆ. ಇವೊತ್ತು ಆಡಳಿತ ಕಾಂಗ್ರೆಸ್ಸು ಪಕ್ಷದವರು ಅಧಿಕಾರಕ್ಕೆ ಬಂದಿದ್ದಾರೆ. ಇನ್ನೂ ನಾಲ್ಕೂ ಮುಕ್ಕಾಲು ವರ್ಷ ಇಲ್ಲಿ ಆಡಳಿತ ನಡೆಸುತ್ತಾರೆ. ಇವರು ಆಡಳಿತ ಬದಲಾಯಿಸಿದ ಮೇಲೆ ಮುಂದೆ ಯಾರು ಬರುತ್ತಾರೋ ಅದನ್ನು ನೋಡಲು ನಾವು ಜೀವಂತರಾಗಿರುತ್ತೇವೋ ಇಲ್ಲವೋ ಗೊತ್ತಿಲ್ಲ.

Sri M. MALLIKARJUNASWAMY.—Slogans have led and revolutions have always followed. It is inevitable. That, you must not forget.

ಶ್ರೀ ಹೆಚ್. ಡಿ. ದೇವೇಗೌಡ.—ಶ್ರೀಮಾನ್ ಮಲ್ಲಿಕಾರ್ಜುನಸ್ವಾಮಿಯವರು ಬಹಳ ಉತ್ಪ್ರೇಕ್ಷೆಯಿಂದ ಇಲ್ಲಿ ಬಹು ಓವರ್ ಎಂಥೂಸಿಯಾಜಂನಿಂದ ಇಲ್ಲಿ ಮಾತಾಡುತ್ತಾರೆ, ಅವರಿಗೆ ನಾನು ಹೇಳುವುದು ಇಂತಹ ಶಕ್ತಿಗಳೆಲ್ಲಾ ನಿಮ್ಮ ಸುತ್ತ ಇವೆ. ಇದರ ಬಗ್ಗೆ ಗಮನ ಕೊಡಬೇಕೆಂದು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಹಿಸ್ಟರಿ ಇದೆ.

Sri H. D. DEVE GOWDA.—I am telling you about the history of the revolution. ಚರಿತ್ರೆ ವಿಷಯದ ಬಗ್ಗೆ ನಾವು ಇಲ್ಲಿ ವಿಮರ್ಶೆಮಾಡುವುದು ಅಗತ್ಯವಿಲ್ಲ, ಹಲವಾರು ರೀತಿಯ ಚರಿತ್ರೆಗಳಿವೆ, ಇದರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ನೀವು ಹೋಗುವ ಮಾರ್ಗ ಇದಲ್ಲ. ತಾವು ಈಗಾಗಲೇ ಅರ್ಬನ್ ಸೀಲಿಂಗು ಒಂದು ರೀತಿ ಮಾಡಬೇಕು, ಲ್ಯಾಂಡು ಸೀಲಿಂಗು ಒಂದು ರೀತಿ ಮಾಡಬೇಕೆಂದು ಹೇಳುತ್ತೀರಿ. ಆದರೆ ಎಲ್ಲ ವಿಚಾರಗಳೂ ಒಂದು ರೀತಿಯಾಗಿ ಡಿಸ್ ಅರ್ಗನೈಸ್ ಆಗಿದೆ ಎನ್ನುವ ಭಾವನೆ ಜನರಲ್ಲಿ ಬಂದಿದೆ.

ನಿಮ್ಮ ನಾಯಕರುಗಳೇ ಒಂದು ಕಡೆ ಹೇಳುತ್ತಾರೆ : All hurdles and bottlenecks have been eradicated for implementing socialistic progarmmes......
ಹೀಗೆ ಹೇಳುವುದನ್ನು ನಾವು ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ನಿಮ್ಮ ನಾಯಕರಾದ ಶ್ರೀ ಸಿ. ಸುಬ್ರಮಣ್ಯಂರವರು ಒಂದು ಕಡೆ ಹೀಗೆ ಹೇಳುತ್ತಾರೆ.

The object is to remove all hurdies and bottlenecks to implement your policies and programmes. ಇನ್ನು ಇದರಲ್ಲಿ ನೀವು ಹೇಳುವಂತೆ 105 ಜನ ಐ. ಎ. ಎಸ್. ಅಧಿಕಾರಿಗಳಿಗೆ ಹೆಚ್ಚು ಸೌಲಭ್ಯಗಳು ಇವೆ. ಇದನ್ನು ಮುಂದು ವರಿಸಬಾರದು ಎಂದು ಹೇಳುವುದರಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲ. ಇವರೇ ಅಲ್ಲದೆ ಇಂದು ಸರಕಾರದಲ್ಲಿ ಇನ್ನೂ ಮೂರು ಮೂರುವರೆ ಸಾವಿರ ಸಂಬಳ ಪಡೆಯುವ ಅಧಿಕಾರಿಗಳಿದ್ದಾರೆ. ಇದು ಎಲ್ಲರಿಗೂ ಅನ್ವಯವಾಗುವಂತೆ ಮಾಡಬೇಕು. ಇಂದು ಒಬ್ಬ ಅಧಿಕಾರಿಗೆ ಮೂರು ಸಾವಿರ ಸಂಬಳ ಮತ್ತು ಒಬ್ಬ ಜವಾನನಿಗೆ ನೂರು ರೂಪಾಯಿ ಸಂಬಳ ಎಂದು ಕೊಡುವುದರಲ್ಲಿ ಎಷ್ಟು ವ್ಯತ್ಯಾಸ ಇದೆ ಎನ್ನುವುದನ್ನು ನೋಡಬೇಕು. ಇದರಲ್ಲಿರುವ ತಾರತಮ್ಯವನ್ನು ಹೋಗ ಲಾಡಿಸಬೇಕು, ಇವೆಲ್ಲವನ್ನು ನೋಡಿಕೊಂಡು ಸಮಾಜದಲ್ಲಿರುವ ಜನಕ್ಕೆ ನ್ಯಾಯ ದೊರಕಿಸಿ ಕೊಡಬೇಕೆಂದು ಹೇಳಿ ಈ ತಿದ್ದುಪಡಿಗೆ ತಾತ್ವಿಕವಾಗಿ ನನ್ನ ಒಪ್ಪಿಗೆ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಸರಕಾರದ ವತಿಯಿಂದ ಈ ಸದನದ ಮುಂದೆ ನಮ್ಮ ಒಪ್ಪಿಗೆಗಾಗಿ ಈ ರಾಜ್ಯಾಂಗದ 28ನೇ ತಿದ್ದುಪಡಿಯನ್ನು ಮಂಡಿಸಿರತಕ್ಕ ಸಂದರ್ಭದಲ್ಲಿ ನಾನು ಇದನ್ನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಮತ್ತು ಇದರ ಜೊತೆಗೆ ಒಂದೆರಡು ಮಾತುಗಳನ್ನೂ ಹೇಳಲು ಇಚ್ಛೆಪಡುತ್ತೇನೆ.

ಮಾನ್ಯ ಮಂತ್ರಿಗಳು ಹೇಳಿದರು ಭಾರತದೇಶದಲ್ಲಿ ನೂರಹನ್ನೊಂದು ಜನ ಐ.ಸಿ.ಎಸ್. ಅಧಿಕಾರಿಗಳು ಇದ್ದಾರೆ ಇವರಿಗೆ ರಾಜ್ಯದಲ್ಲಿ ಈಗಿರತಕ್ಕ ಸೌಲಭ್ಯಗಳನ್ನು ತೆಗೆದುಹಾಕಬೇಕು ಎನ್ನುವ ಉದ್ದೇಶದಿಂದ ಈ ತಿದ್ದುಪಡಿಯನ್ನು ತರಲಾಗಿದೆ ಎಂದು. ಇದು ಸ್ವಾಗತಾರ್ಹವಾದ ಮಾತು ಮತ್ತು ಇದನ್ನು ಒಪ್ಪತಕ್ಕದ್ದು. ಆದರೆ ಐ.ಸಿ.ಎಸ್. ಅಧಿಕಾರಿಗಳಷ್ಟೇ ಸಂಬಳವನ್ನು ಪಡೆಯುತ್ತಿರುವ ಹೈಕೋರ್ಟ್ ಜಡ್ಜ್‌ಗಳಿಗೆ, ಎಲೆಕ್ಷನ್ ಆಫೀಸರ್‌ಗಳಿಗೆ, ಚೀಫ್-ಎಲೆಕ್ಷನ್ ಆಫೀಸರ್‌ಗೆ, ಕಂಟ್ರೋಲರ್ ಜನರಲ್ ಆಫ್ ಇಂಡಿಯಾ ಅವರಿಗೆ, ಸುಪ್ರೀಂಕೋರ್ಟ್ ಜಡ್ಜ್‌ಗಳಿಗೆ ಈ ಒಂದು ತಿದ್ದುಪಡಿ ಅನ್ವಯವಾಗುವುದಿಲ್ಲ. ಐ.ಸಿ.ಎಸ್. ಅಧಿಕಾರಿಗಳಿಗೆ ಈಗ ಇರುವ ಸೌಲಭ್ಯವನ್ನು ತೆಗೆದುಹಾಕತಕ್ಕಂಥ ಸಂದರ್ಭ ಏಕೆ ಬಂತು ಎಂದು ಕೇಳುತ್ತೇನೆ. ಸಮಾಜ ವಾದವನ್ನು ತರಬೇಕೆಂಬುದು ತಮ್ಮ ಆಶೆ. ಪ್ರಜಾಪ್ರಭುತ್ವಕ್ಕೆ ವಿರೋಧವಾಗಿರತಕ್ಕಂಥ ಯಾವುದೇ ಪದ್ಧತಿಯನ್ನು ತೆಗೆದುಹಾಕಬೇಕೆಂಬ ಉದ್ದೇಶದಿಂದ ಇದನ್ನು ತಂದಿದ್ದೀರಿ. ವಿಶೇಷ ಸೌಲಭ್ಯಗಳು ಪ್ರಜಾಪ್ರಭುತ್ವದಲ್ಲಿ ಯಾರಿಗೂ ಇರಬಾರದು ಎಂಬ ಮಾತನ್ನು ನಾವು ಒಪ್ಪಲೇ ಬೇಕಾಗುತ್ತದೆ. ಇದುವರೆಗೆ ಮಾನ್ಯ ಸದಸ್ಯರು ಮಾತನಾಡಿರತಕ್ಕಂಥ ವಿಷಯಗಳನ್ನೇ ನಾನು ಉಚ್ಚಾರ ಮಾಡುವುದಕ್ಕೆ ಹೋಗುವುದಿಲ್ಲ. ಕಳೆದ 25 ವರ್ಷಗಳಿಂದ ತಮ್ಮಲ್ಲಿ ಇಲ್ಲದೇ ಇದ್ದ ಸಮಾಜವಾದ ಒಂದು ದಿವಸದಲ್ಲಿ ಯಾವ ರೀತಿ ಬಂತು ಎಂಬುದನ್ನು ಕೇಳಬಯಸುತ್ತೇನೆ. ಸಾಯಂಕಾಲ ಇಲ್ಲದ ಸಮಾಜವಾದ ಬೆಳಿಗ್ಗೆ ಬಂದುಬಿಟ್ಟಿದೆ. ಇದರಿಂದಲೇ ಜನರಲ್ಲಿ ಒಂದು ರೀತಿಯ ಗೊಂದಲವಾಗಿದೆ. ಶ್ರೀಮಾನ್ ಭಾಸ್ಕರಶೆಟ್ಟರು ಸಮಾಜವಾದದ ಮಾತನ್ನು ಈ ಕಡೆ ಇದ್ದಾಗ ಹೇಳಿ ಹೇಳಿ ಈಗ ಆ ಕಡೆಗೆ ಹೋಗಿ ರೆಸ್ಟ್ ತೆಗೆದುಕೊಳ್ಳುತ್ತಿದ್ದಾರೆ. ಆ ಜನರ ಜೊತೆಗೆ ಹೋಗಿ ಸೇರಿಕೊಂಡಿರುವ ನಿಮಗೆ ಏನು ಹೇಳಬೇಕೋ ಗೊತ್ತಿಲ್ಲ. ಈಗ ನಿಮ್ಮ ಸಮಾಜವಾದಕ್ಕೆ ರೆಸ್ಟ್ ಸಿಗುತ್ತಿದೆಯೋ ಅಥವಾ ರಸ್ಟ್ ಹಿಡಿದಿದೆಯೋ ನನಗೆ ಗೊತ್ತಿಲ್ಲ. 1971ನೇ ಇಸವಿಯಲ್ಲಿ ಮಧ್ಯ ಕಾಲೀನ ಪಾರ್ಲಮೆಂಟ್ ಚುನಾವಣೆಯಾದ ಮೇಲೆ, 1972ನೇ ಇಸವಿಯಲ್ಲಿ ಶಾಸನಸಭೆಗಳ ಚುನಾವಣೆಯಾದ ಮೇಲೆ ತಮ್ಮಲ್ಲಿ ಸಮಾಜವಾದ ಎಂಬುದು ದೊಡ್ಡ ವ್ಯಾಪ್ತಿಯಲ್ಲಿ ಕಾಣುತ್ತಿದೆ. ಇಷ್ಟು ತಡವಾದ ಮೇಲಾದರೂ ತಮ್ಮಲ್ಲಿ ಸಮಾಜವಾದ ಕಂಡುಬಂದಿದ್ದಕ್ಕಾಗಿ ಸ್ವಾಗತ ಮಾಡಬೇಕಾಗುತ್ತದೆ, ಅದರ ಜೊತೆಯಲ್ಲಿ ಇನ್ನೊಂದು ವಿಷಯವನ್ನು ಪ್ರಸ್ತಾಪ ಮಾಡಬೇಕಾಗಿದೆ, ಏನೆಂದರೆ ತಮ್ಮಲ್ಲಿ ನಿಜವಾಗಿಯೂ ಸಮಾಜವಾದದಲ್ಲಿ ನಿಷ್ಠೆ ಇದ್ದರೆ, ಪ್ರಾಮಾಣಿಕತೆ ಇದ್ದರೆ ಸಮಾಜವಾದತನ ನಿಮ್ಮಲ್ಲಿ ಇದ್ದಿದ್ದೇ ಆದರೆ, ಇಂಡಿಯನ್ ಅಡ್ಮಿನಿಸ್ಟ್ರೇಷನ್ ಸರ್ವಿಸಸ್‌ಗೆ ಸೇರಿರುವ ವ್ಯಕ್ತಿಗಳನ್ನು ನೇಮಕ ಮಾಡತಕ್ಕಂಥ ಅಧಿಕಾರ ಏನು ಕೇಂದ್ರಸರ್ಕಾರಕ್ಕೆ ಇದೆ, ಆ ಅಧಿಕಾರವನ್ನು ರಾಜ್ಯಸರ್ಕಾರದವರು ತೆಗೆದುಕೊಳ್ಳಬೇಕು. ಈಗಿನ ಪದ್ಧತಿ ಅಧಿಕಾರ

(ಶ್ರೀ ಎಸ್. ಬಂಗಾರಪ್ಪ)

ವಿಕೇಂದ್ರೀಕರಣದ ರೀತಿನೀತಿಗೆ ಅನುಗುಣವಾಗಿಲ್ಲ ಮತ್ತು ಪ್ರಜಾಪ್ರಭುತ್ವದ ಲಕ್ಷಣವಲ್ಲ. ಈ ವಿಷಯ ಈಗಿನ ತಿದ್ದುಪಡಿಯ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದು ಮಾನ್ಯ ಅಧ್ಯಕ್ಷರು ಹೇಳಬಹುದು. ಆದರೆ ಈಗ ಸರ್ಕಾರದವರು ತಿದ್ದುಪಡಿಯ ಮೇಲೆ ತಿದ್ದುಪಡಿ ತರುತ್ತಿರುವಾಗ, ಇದಕ್ಕೂ ಒಂದು ತಿದ್ದುಪಡಿಯನ್ನು ತಂದು ಐ.ಎ.ಎಸ್. ಅಧಿಕಾರಿಗಳನ್ನು ನೇಮಕ ಮಾಡುವ, ನಿವೃತ್ತರಾದ ಮೇಲೆ ವಿಶ್ರಾಂತಿ ವೇತನ ಕೊಡುವ ಅಧಿಕಾರವನ್ನು ತಾವೇ ತೆಗೆದುಕೊಳ್ಳಬೇಕು. ಅದರಂತೆ ಈ ಒಂದು ಕಾನೂನು ತರುತ್ತಾರೆಂದು ನಾನು ಆಶೆ ಮಾಡುತ್ತೇನೆ.

3-30 P.M.

ಇನ್ನೊಂದು ವಿಷಯವೆಂದರೆ, ಇಂದು ಸಣ್ಣಪುಟ್ಟ ನೌಕರವರ್ಗದವರನ್ನು ಬಿಟ್ಟು ದೊಡ್ಡ ದೊಡ್ಡ ಅಧಿಕಾರಿಗಳು ಏನಿದ್ದಾರೆ, ಅವರು ಸರಿಯಾಗಿ ನಡೆದುಕೊಳ್ಳಬೇಕಾಗಿದೆ. ಮುಖ್ಯವಾಗಿ 'ಹೆಡ್' ಸರಿಯಾಗಿರಬೇಕು. ಇಲ್ಲದಿದ್ದರೆ ಯಾವ ಕೆಲಸವೂ ಸರಿಯಾಗಿ ಆಗುವುದಿಲ್ಲ. ಇಂದು, ಐ.ಸಿ.ಎಸ್., ಐ.ಎ.ಎಸ್. ಮುಂತಾದ ದೊಡ್ಡ ದೊಡ್ಡ ಅಧಿಕಾರಿಗಳು ಏನಿದ್ದಾರೆ, ಅವರು ಮಹಾ ಮಹಾ ಕಾರ್ಯಗಳನ್ನು ಜನಕ್ಕೆ ವಿರುದ್ಧವಾಗಿ ಮಾಡಿದ್ದರಿಂದಲೇ ನಮ್ಮ ದೇಶ ಈ ಅಧೋಗತಿಗೆ ಬಂದಿರುವುದು. ಈ ಒಂದು ದೃಷ್ಟಿಯಿಂದ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ತಂದಿರತಕ್ಕ ತಿದ್ದುಪಡಿ ಏನೋ ಸ್ವಾಗತಾರ್ಹವಾಗಿದೆ. ಸಮಾಜವಾದವನ್ನು ತರತಕ್ಕಂಥ ಉತ್ಕಟ ಇಚ್ಛೆ ತಮ್ಮಲ್ಲಿ ಇದೆ ಎಂದು ನಾನು ನಂಬಿದ್ದೇನೆ.

ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ್.—ಹಾಗಿದ್ದರೆ ತಾವು ನಮ್ಮ ಪಕ್ಷಕ್ಕೆ ಸೇರಬಹುದು!

ಶ್ರೀ ಎಸ್. ಬಂಗಾರಪ್ಪ.—ನೀವು ಬಂದು ನಮ್ಮ ಪಕ್ಷಕ್ಕೆ ಸೇರಬಹುದು. ಮಾನ್ಯ ಮಂತ್ರಿಗಳಾದ ನಾಯ್ಕರ್ ಅವರ ಹೃದಯದಲ್ಲಿ ಬಹಳ ದೊಡ್ಡ ಸಮಾಜವಾದವನ್ನು ತರುವ ಆಶೆ ಇದ್ದರೆ, ಈಗ ಏನು 111 ಜನಕ್ಕೆ ಸಂಬಂಧಪಟ್ಟಂತೆ ತಿದ್ದುಪಡಿ ತಂದಿದ್ದೀರಿ, ಅದರಂತೆ ಐ.ಎ.ಎಸ್., ಐ.ಪಿ.ಎಸ್., ಐ.ಎಫ್.ಎಸ್. ಮುಂತಾದ ಅಧಿಕಾರಿಗಳು ಏನಿದ್ದಾರೆ ಅವರ ಬಗ್ಗೆಯೂ ಸಹ ಇದೇ ತರಹದ ತಿದ್ದುಪಡಿ ತರಬೇಕು. ಏಕೆಂದರೆ ಈಗ ನೀವು ಐ.ಸಿ.ಎಸ್. ಅಧಿಕಾರಿಗಳಿಗೆ ಸಂಬಂಧಪಟ್ಟಂತೆ ಏನು ತಿದ್ದುಪಡಿ ಈಗ ತಂದಿದ್ದೀರಿ ಅವರು ಇನ್ನು ಸಧ್ಯದಲ್ಲಿಯೇ ರಿಟೈರ್ ಆಗುತ್ತಾರೆ. ಆದ್ದರಿಂದ ಅವರಷ್ಟೇ ಸಂಬಳವನ್ನು ಪಡೆಯುವಂತಹ ಇತರೇ ಅಧಿಕಾರಿಗಳ ಬಗ್ಗೆಯೂ ಸಹ ಗಮನ ಕೊಡಬೇಕೆಂದು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† Sri D. B. KALMANKAR (Afzalpur).—While wholeheartedly welcoming the resolution that is before the House, I would like to make some observations. I feel this measure has been brought a bit late. Article 314 which is proposed to be deleted relates to the abolition of the privileges that the I.C.S. officers as a class enjoyed. I was reading through the debates of Lok Sabha as to understand what these privileges were from the speeches of Mr. Piloo Mody and Mr. Nahata. The then Home Minister replying to the points raised stated that the total capital value of annuity transferred to U. K. Government with effect from 1st April 1955 was Rs. 118 crores. He also tried to point out the difference between the I.C.S. officers and I.A S. officers. As a matter of fact, this point was also brought during the deleberations that were going on in the Constituent Assembly by Sri Ananthashayanam Iyengar, who has stated as follows :—

"Possibly they—(British) wanted the interests of the Indian bureaucrats to be safeguarded because they were loyal

to them and they did not want to let them down when our own Government came in. I am not in favour of any provision in the Constitution. We could as well incorporate it in an Act of Parliament later on. But we must have the power to regulate. These are becoming 'super sovereigns' of this country."

So, these privileges of the ICS officers were opposed even in the days of the Constituent Assembly. It cannot be said that this particular subject was not agitating the minds of the parliamentarians or the leaders in the country at that time. Even Sri Madhu Limaye had brought this subject in 1970. Some members pointed out then as to why there was so much of delay. Sri Shashi Bhushan while speaking in Parliament has stated as follows :

(*Hindi*)

So, there is lot of difference between the conditions prevailing when Sri Madhu Limaye had brought up the subject. There were, as it is known Sir, reactionary forces in so many parties including the Congress Party, and so it was not possible to bring in this measure at that time. Now a stable Government has come after the mid term elections of 1972 headed by the dynamic leadership of Indira Gandhi and it was possible to introduce such a measure. It is very clear from the figures also that this measure is not going to affect very much these officers. Before independence there were 1300 ICS officers, after partition there were 451 ICS officers and now in 1972 the number stands at 97. It is also admitted that by 1979 there will not be any ICS officers. Many measures had to be taken after the new Government came into being and one such measure was to do away with the special privileges because we are wedded to democratic socialism. From that point of view, this measure has got significanc. That is why this particular Bill was necessary to be brought. It is a good thing that we have done away with this and we should ratify this wholeheartedly. Nothing is going to happen on account of the abolition of the privileges of these officers. On the other hand it will be conducive for democratic socialism to come in this country. At the same time, I feel that the mentality of the ICS officers that persists in our IAS officers should also be put down. In this conection, I would just like to refer to the speech of Sri N. G. Goray in the Rajya Sabha.

Mr. DEPUTY SPEAKER.—Why does the hon. member refer to the IAS officers?

Sri D. B. KALMANKAR.—The conditions will not improve by doing awey with the privileges of ICS Officers.

Mr DEPUTY SPEAKER.—The hon. member is at liberty to move a Resolution!

Sri D. B. KALMANKAR.—It will be done at the appropriate time. Sri N. G. Goray has stated as follows :—

"Sir, so many people have talked about the privileges of ICS people. Have you ever considered the privileges that are enjoyed by the Company executives? When I go back or when I come here, Sir, every time on the plane they are the people who are travelling. It is they who live like demigods. How much do they get? They get thousands of rupees. Here you say that the ICS people get Rs. 3,500 per month when they reach the top while the I.A.S. people are given only Rs. 3,000. But I know many of the company executives who get Rs. 10,000 per month, besides all the perquisites. What about this class? What about the new elite that is coming up-doctors and the advocates who charge, every day they appear in the High Court or the Supreme Court, Rs. 10,000 or Rs. 5,000? What about them? So, Sir, by trying to analyse this ICS cadre and their deeds and misdeeds, I, for one, would say that this is a cadre which is becoming extinct, going down..."

Why I am referring to this is, by doing away only with ICS officers situation will not improve. In this country, if you are really sincere, about what we profess, then it is necessary to see that things are also altered in other walks of life. Gandhiji thought that after Independence our Rashtrapati will not keep the chambers or the big office of the Viceroy, and that our Ministers and other officials would copy it and set an example by their action in our free India. The Government has to think whether we could create that kind of a climate in this country and whether we could bring in a mental change in the officialdom so that it may be possible to bring in democratic socialistic measures in the country. From that point of view these things were discussed in the Parliament, and with the exception of one or two members, all the members, supported this measure. It is the Britishers who wanted these officers to continue. But it is good that we are doing away with them. We have got to think of officers of the type who would by conviction believe in socialism and adapt themselves to the changing conditions in the country. No doubt the ICS officers are going ; let us thank them, but the mentality of these officers should be changed. I wanted to touch upon many other points but since the time allotted is very little, I conclude my speech. I wholeheartedly welcome this measure. With these words, I thank the Chair.

ಶ್ರೀ ಕೋಣಂದೂರು ಲಿಂಗಪ್ಪ.—On a point of order Sir. ನಮ್ಮದು ಸಹ ಒಂದು ರಾಜಕೀಯ ಪಕ್ಷವಾದುದರಿಂದ ನಮಗೂ ಸಾಕಷ್ಟು ಕಾಲವನ್ನು ಇದರಲ್ಲಿ ಮಾತನಾಡಲು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. DEPUTY SPEAKER.—You recognise that more time is given because it is a political party. Please note that other members are also representatives of the people. If they do not belong to any political party they represent over a lakh of people. Therefore due consideration

must be given even if they do not belong to any party. From Congress (R) nobody has spoken. I have therefore called upon Sri Chandrasekhar to speak. I am anxious that he should not be interrupted while he is speaking.

† ಶ್ರೀ ಎಸ್., ಎಂ. ಶೀರನಾಳಿ ಚಂದ್ರಶೇಖರ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ತಾನೆ ಸಂಪ್ರದಾಯವಾದಿ ಮಡಿವಂತ ಬ್ರಾಹ್ಮಣ ಸ್ನೇಹಿತರ ಬಗ್ಗೆ ಮಾತನಾಡಲು ಅವಕಾಶ ಸಿಕ್ಕಿತ್ತು, ಇಂದು ನಮ್ಮ ಸಮಾಜದಲ್ಲಿರುವ ಇನ್ನೊಂದು ವರ್ಗವಾದ ನಿಯೋ ಬ್ರಾಹ್ಮಣರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕೆ ಮೊದಲನೆಯದಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಪ್ರಾರಂಭಿಸುತ್ತೇನೆ.

ಈ ಒಂದು ವರ್ಗ ನಮ್ಮ ದೇಶದಲ್ಲಿ ದೇಶಕ್ಕಾಗಿ, ದೇಶದ ಸ್ವಾತಂತ್ರ್ಯಕ್ಕಾಗಿ ತ್ಯಾಗಮಾಡಿದಂತಹ ಜನರನ್ನು ಬಲವಾನ ತೆಗೆದುಕೊಂಡಂತಹ, ವರ್ಗಕ್ಕೆ ಸೇರಿದ ಜನರು. ಈ ವರ್ಗವನ್ನು ನಿರ್ಮೂಲ ಮಾಡುವುದಕ್ಕಾಗಿ ಸ್ವಾತಂತ್ರ್ಯ ಬಂದು 25 ವರ್ಷಗಳ ಮೇಲಾದರೂ ನಮ್ಮ ನಾಯಕಿಯಾದ ಇಂದಿರಾಜಿಯವರು ಮನಸ್ಸು ಮಾಡಿದ್ದಕ್ಕಾಗಿ ಅವರಿಗೆ ಮೊದಲನೆಯದಾಗಿ ವಂದಿಸುತ್ತೇನೆ. ದೇಶದ ಸ್ವಾತಂತ್ರ್ಯಕ್ಕಾಗಿ ತ್ಯಾಗಮಾಡಿದ ಜನರನ್ನು ಪ್ರೊಸಿಕ್ಯೂಟ್ ಮಾಡಿರತಕ್ಕಂತಹ ಈ ಐ.ಸಿ. ಎಸ್. ಅಧಿಕಾರಿಗಳ ವರ್ಗ ಏನಿದೆ, ಇವರನ್ನು 25 ವರ್ಷಗಳ ಹಿಂದೆಯೇ ಕಳಿಸಬೇಕಾಗಿತ್ತು. ಆದರೆ ಮಾನ್ಯ ದೇವೇ ಗೌಡರ ಪಕ್ಷದ ಜನರು ನಮ್ಮಲ್ಲಿ ಏನಿದ್ದಾರೆ, ಅವರಿಂದಾಗಿ 25 ವರ್ಷಗಳಾದರೂ ನಮಗೆ ಆ ಕಾರ್ಯದಲ್ಲಿ ಮುಂದುವರಿದು ಕಾರ್ಯೋನ್ಮುಖರಾಗುವುದಕ್ಕೆ ಬಿಟ್ಟಿಲ್ಲವೆಂದು ಹೇಳುತ್ತೇನೆ. ನಮ್ಮ ಹಿಂದಿನ ನಾಯಕರಾದ ನೆಹರೂ ಅವರು ಎಷ್ಟೋ ಸಾರಿ ಇದರ ? ಗ್ಗೆ ನೆನೆಸಿದರೂ, ಇನ್ನು ಕೆಲವು ವರ್ಗಗಳಿಂದಾಗಿ ಅದನ್ನು ಮಾಡಲು ಸಾಧ್ಯವಾಗಲಿಲ್ಲ. ನಾವು ಹಳೆಯ ಕಾಲದ ಸ್ಮಾರಕ ಎಂದು ಏನು ಕರೆಯುತ್ತೇವೆ, ಆ ರೀತಿಯಲ್ಲಿ ಇದು ಬ್ರಿಟಿಷರು ಹಾಕಿಕೊಟ್ಟಿರತಕ್ಕ ಒಂದು ಕೆಟ್ಟ ಸಂಪ್ರದಾಯವಾಗಿದೆ. ಇದನ್ನು ಮುರಿಯುವುದಕ್ಕೆ ನಮ್ಮಲ್ಲಿರುವ ಹಲವು ವಿರೋಧ ಶಕ್ತಿಗಳಿಂದ ಸಾಧ್ಯವಾಗಲಿಲ್ಲ. ಮಾನ್ಯ ದೇವೇಗೌಡರು "ಎಲ್ಲಾ ನಿಮ್ಮ ವಾದವನ್ನು ಒಪ್ಪುತ್ತೇನೆ" ಎಂದು ಹೇಳುತ್ತಾರೆ. ಆದರೆ ನನ್ನ ಕುದುರೆಗೆ ಮೂರೇ ಕಾಲು ಎಂದು ಹೇಳುತ್ತಿರುತ್ತಾರೆ. ಇದು ಏಕೆ ಈ ರೀತಿ ಹೇಳುತ್ತಾರೆಂದು ನನಗೆ ಅರ್ಥವಾಗುತ್ತಿಲ್ಲ. ಜನತೆ ಇವತ್ತು ನಾವು ಮಾಡುವಂತಹ ಎಲ್ಲ ಕಾರ್ಯಗಳನ್ನು ನೋಡಿ ಅರ್ಥಮಾಡಿಕೊಳ್ಳುತ್ತಾರೆ ನಾವು ಏನು ಮಾಡುತ್ತೇವೆ ಎಂಬುದನ್ನು ಕಾದು ನೋಡುತ್ತಿದ್ದಾರೆ. ಈ ಮಡಿವಂತಿಕೆಯ ವರ್ಗ ಕೇವಲ ಸಿಂಗಾರ ಮತ್ತು ಭೂಷಣಕ್ಕಾಗಿ ಇರುವಂತಹ ವರ್ಗವಾಗಿದೆ. ಇಂತಹ ವರ್ಗವನ್ನು ಇನ್ನು ಮುಂದೆ ಬೆಳೆಸಿಕೊಂಡು ಹೋಗತಕ್ಕದ್ದು ನಾಚಿಕಗೇಡು ಎಂದು ಹೇಳುತ್ತೇನೆ. ಅದೇ ಸಂದರ್ಭದಲ್ಲಿ ಕೆಲವು ಐ.ಸಿ.ಎಸ್. ಆಫೀಸರುಗಳು ದೇಶಕ್ಕಾಗಿ ಬಹಳ ಸೇವೆ ಸಲ್ಲಿಸಿದ್ದಾರೆಂದು ಪಾರ್ಲಿಮೆಂಟಿನಲ್ಲಿ ಕೆಲವು ಸದಸ್ಯರು ಉದ್ಧರಿಸಿದ್ದಾರೆ. ನೂರಾರು ಜನ ಇರುವಾಗ ಎಲ್ಲೋ ಕೆಲವರು ಇಂತಹ ಒಳ್ಳೆಯ ಕೆಲಸ ಮಾಡಿದ್ದಾರೆಂದು ಇಡೀ ವರ್ಗವನ್ನೇ ಇಟ್ಟುಕೊಳ್ಳುವುದು ಸಮಾಜವಾದ ತತ್ವಕ್ಕೆ ವಿರೋಧವಲ್ಲವೇ ? ನಾವು ಇವತ್ತು ಸಮಾಜವಾದವನ್ನು ಹೇಳುವಾಗ ಇವರಿಗೆ ಕೊಡುವಂತಹ ಯಾವ ಒಂದು ಪ್ರಿವಿಲೆಜಸ್ ಇವೆ, ಅವುಗಳಿಗೆ ಮಾನ್ಯತೆ ಕೊಡದೆ ಅದನ್ನು ತೆಗೆದುಹಾಕಬೇಕಾಗುತ್ತದೆ. ಇವತ್ತು ಐ.ಸಿ.ಎಸ್. ಅಧಿಕಾರಿಗಳು ಹೋದರೂ ಕೂಡ ಅವರ ಪೀಳಿಗೆಯು ಮುಂದುವರಿಯುತ್ತಾ ಇದೆ. ಈ ಪೀಳಿಗೆಯು ಸಾಮಾನ್ಯ ಜನರೊಡನೆ, ಮಣ್ಣಿನಲ್ಲಿ ಕೆಲಸಮಾಡಿಕೊಂಡಿದ್ದ ಜನರೊಡನೆ ಬೆರೆಯುವುದಕ್ಕೆ ಒಪ್ಪುತ್ತಾ ಇಲ್ಲ. ಇದಕ್ಕೋಸ್ಕರವೇ ನಾನು ರೋಟರಿ ಕ್ಲಬಿಗೆ ಸದಸ್ಯನಾಗಿ ಸೇರಿದ್ದೇನೆ. ಅಲ್ಲಿರತಕ್ಕಂತಹ ಸದಸ್ಯರ ನಡವಳಿಕೆಗಳನ್ನು ಅರಿತುಕೊಳ್ಳಬೇಕೆನ್ನುವ ದೃಷ್ಟಿಯಿಂದ ನಾನು ಆ ಕ್ಲಬ್ಬಿನ ಸದಸ್ಯನಾಗಿದ್ದೇನೆ. ಅಲ್ಲಿಗೆ ನಾನು ಬರೇ ಈ ಒಂದು ಬುಶ್ ಶರ್ಟ್ ಮತ್ತು ಆರ್ಡಿನರಿ ಪ್ಯಾಂಟ್ ಹಾಕಿಕೊಂಡು ಹೋದರೆ ಯಾರೂ ಮಾತನಾಡಿಸುವುದೇ ಇಲ್ಲ. ಅಲ್ಲಿಗೆ ಬರುವಂತವರೆಲ್ಲಾ ಟೈಟ್ ಪ್ಯಾಂಟ್ ಹಾಕಿಕೊಂಡು, ಟಿಪ್ ಟಾಪ್ ಡ್ರೆಸ್‌ನಲ್ಲಿರತಕ್ಕವರು. ಇಂತಹ ಸಂಪ್ರದಾಯದಲ್ಲಿ ಅವರು ಬೆಳೆದುಕೊಂಡು ಬಂದಿರುತ್ತಾರೆ. ಇಂತಹ ಒಂದು ಸಂಪ್ರದಾಯವನ್ನು ನಾವು ತೆಗೆದುಹಾಕಬೇಕಾದರೆ ಮೊದಲು ಈ ವರ್ಗವನ್ನು ತೆಗೆದುಹಾಕಬೇಕಾಗುತ್ತದೆ. ಅದೇ ಜನರು ಈಗ ನಾನು ಎಂ.ಎಲ್.ಎ. ಆದ ಮೇಲೆ ಮಾತನಾಡಿಸುತ್ತಿದ್ದಾರೆ. ಈ ವರ್ಗಕ್ಕೆ ಹಿಂದೆ ಗೂಢಚರ್ಯೆಯ ವರ್ಗ ಎಂದು ಹೇಳುತ್ತಿದ್ದರು. ನಾವು ಇವತ್ತು ನಮ್ಮ ಸಮಾಜಕ್ಕೆ ಹೊಂದಿಕೊಂಡು ಬದಲಾವಣೆಗಳನ್ನು ಮಾಡಬೇಕಾಗಿದೆ. ಕೆಲವರು, ಏನು ನಿಮ್ಮ ಪ್ರಧಾನ ಮಂತ್ರಿಯವರು ಹೇಳಿದರೂ, ನಾವು ತಾನೆ ಅವುಗಳನ್ನು ಕಾರ್ಯಗತ ಮಾಡುವವರು ಎಂದು

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ಹೇಳುತ್ತಿದ್ದಾರೆ. ಆದ್ದರಿಂದಲೇ ನಮ್ಮ ಸಮಾಜದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಅದಕ್ಕೆ ಬೇಕಾಗಿ ಈ ಐ.ಸಿ.ಎಸ್. ಅಧಿಕಾರಿಗಳ ಪ್ರಿವಿಲೇಜ್ ಬಗ್ಗೆ ಈ ಕ್ರಾಂತಿಕಾರಿ ಬಿಲ್ಲನ್ನು ತಂದಿದ್ದಾರೆ. ಇವತ್ತು ನಮ್ಮ ಸಮಾಜವಾದೀ ಕಾರ್ಯಕ್ರಮಗಳನ್ನು ಈ ಐ.ಸಿ.ಎಸ್. ಅಧಿಕಾರಿಗಳ ಮೂಲಕ ಮಾಡುವುದಕ್ಕೆ ಸಾಧ್ಯವಿಲ್ಲ. ನಾವು ಇವತ್ತು ಅಧಿಕಾರಿ ವರ್ಗವನ್ನು ನಿರ್ಮಾಣ ಮಾಡುವುದಾದರೆ, ಆ ಅಧಿಕಾರಿಗಳಿಗೆ ಒಂದು ಟ್ರೈನಿಂಗ್ ಶಾಖೆಯನ್ನು ತೆರೆದು ನಮ್ಮ ದೇಶಕ್ಕೆ ಯಾವ ತರದ ಆಡಳಿತ ಬೇಕು, ಮತ್ತು ಯಾವ ರೀತಿಯಲ್ಲಿ ಕೆಲಸ ಮಾಡಬೇಕೆಂಬುದರ ಬಗ್ಗೆ ತಿಳುವಳಿಕೆ ಕೊಡಬೇಕಾಗುತ್ತದೆ. ಹಾಗೆ ಮಾಡಿ ಅಧಿಕಾರಿಗಳನ್ನು ಆಡಳಿತ ನಡೆಸುವುದಕ್ಕೆ ಹಾಕಬೇಕೇ ಹೊರತು ಇಂತಹ ಅಧಿಕಾರಿ ವರ್ಗವನ್ನು ನಿರ್ಮಾಣ ಮಾಡಿದರೆ ನಮ್ಮ ತತ್ವವನ್ನು ಜಾರಿಗೆ ತರುವುದಕ್ಕೆ ಸಾಧ್ಯವಾಗುವುದಿಲ್ಲ. ಈ ವಿಷಯದಲ್ಲಿ ಪಾರ್ಲಿಮೆಂಟಿನಲ್ಲಿ ಒಂದು ಉದಾಹರಣೆಯನ್ನು ಕೊಟ್ಟು ಒಬ್ಬರು ಮಾತನಾಡಿದ್ದಾರೆ. ಒಬ್ಬ ಭಕ್ಷಿ ಎನ್ನತಕ್ಕ ಅಧಿಕಾರಿ ಇಂಗ್ಲೆಂಡಿಗೆ ಹೋಗಬೇಕೆಂಬ ಕಾರಣದಿಂದ 6 ತಿಂಗಳು ಕಾಲ ರಜೆ ಬೇಕೆಂದು ಅರ್ಜಿ ಹಾಕಿದಾಗ, ಸರ್ಕಾರದವರು ಅದನ್ನು ರಿಜೆಕ್ಟ್ ಮಾಡಿದರು. ಪುನಃ ಅವನು ಸುಪ್ರೀಂ ಕೋರ್ಟಿಗೆ ಹೋಗುತ್ತಾನೆ. ಅಲ್ಲಿ ಸುಪ್ರೀಂ ಕೋರ್ಟಿನವರು ಅವನ ಅರ್ಜಿಯನ್ನು ಎತ್ತಿ ಹಿಡಿಯುತ್ತಾರೆ. ಇದರಿಂದ ಜುಡಿಶಿಯರ್‌ನಲ್ಲಿಯೂ ಯಾವ ರೀತಿಯ ಅಧಿಕಾರಿಗಳು ಇದ್ದಾರೆಂದು ತಾವು ತಿಳಿದುಕೊಳ್ಳಬಹುದು. ಇದರಿಂದ ಜುಡಿಶಿಯರ್‌ನಲ್ಲಿರತಕ್ಕವರು ಸಹ ಇದು ನಮ್ಮ ನೆಲ, ಇದು ನಮ್ಮ ತಾಯ್ನಾಡು ಮತ್ತು ನಮ್ಮ ಒಂದು ವಿಚಾರ ಪರಂಪರೆ ಇದೆ, ಅದಕ್ಕನುಗುಣವಾಗಿ ಹೊಂದಾಣಿಕೆ ಮಾಡಿಕೊಂಡು ಹೋಗುತ್ತಾ ಇಲ್ಲವೆಂಬುದನ್ನು ಹೇಳುತ್ತೇನೆ. ಆದ್ದರಿಂದ ನಾವು ಆಮೂಲಾಗ್ರವಾಗಿ ಎ ಯಿಂದ ಜಡ್ ವರೆಗೆ ಕ್ರಾಂತಿಕಾರೀ ಬದಲಾವಣೆಗಳನ್ನು ಮಾಡಿದ ಹೊರತು, ಇದರಲ್ಲಿ ಮೂಲಭೂತವಾದ ಯಾವ ಬದಲಾವಣೆಗಳೂ ಆಗುವುದಿಲ್ಲ. ಆದ್ದರಿಂದ ಬೇರೆ ವಿಚಾರಗಳಲ್ಲಿಯೂ ಸಹ ಇದೇ ರೀತಿಯ ಬದಲಾವಣೆಗಳನ್ನು ಮಾಡುವುದಕ್ಕೆ ನಾವು ಪ್ರಯತ್ನ ಮಾಡಬೇಕೆಂದು ಹೇಳಿ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

4-00 P.M.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ಕಾಂಗ್ರೆಸ್ ಅಧಿಕಾರ ಗದ್ದುಗೆಗೆ ಬಂದ 25 ವರ್ಷಗಳ ತರುವಾಯ ಈ ಒಂದು ತಿದ್ದುಪಡಿಯನ್ನು ಸಂವಿಧಾನಕ್ಕೆ ಏನು ತರುತ್ತಿದ್ದಾರೋ ಇಷ್ಟು ಕಾಲವನ್ನು ತೆಗೆದುಕೊಂಡಿದ್ದನ್ನು ನೋಡಿದರೆ ಇವರು ರಾಷ್ಟ್ರದಲ್ಲಿ ಯಾವುದೇ ರೀತಿ ಪ್ರಗತಿಪರವಾದ ಹಾಗೂ ಕ್ರಾಂತಿಕಾರಕವಾದ ಕಾರ್ಯಗಳನ್ನು ತ್ವರಿತವಾಗಿ ಮಾಡತಕ್ಕವರಲ್ಲ ಎನ್ನುವುದು ಸಿದ್ಧಾಂತವಾಗಿದೆ. ಅದು ಸ್ಪಷ್ಟವಾಗಿದೆ. ಮೊಟ್ಟಮೊದಲು ಮಾತನಾಡಿದಂಥ ಶ್ರೀಮಾನ್ ಕಲಮಂಕರ್ ಅವರಿಗೆ ಅಭಿನಂದಿಸುತ್ತೇನೆ. ಅವರು ಇದರಲ್ಲಿ ಒಂದು ತಿದ್ದುಪಡಿಯ ಇತಿಹಾಸವನ್ನು ಹೇಳಿದ್ದಾರೆ. ಈ ಐ. ಸಿ. ಎಸ್. ಅಧಿಕಾರಿಗಳು ಏನು ಇದ್ದಾರೆಯೋ ಇವರು ಬ್ರಿಟಿಷರು ಸೃಷ್ಟಿಮಾಡಿದಂಥ ಒಂದು ಪ್ರತಿಗಾಮಿ ಶಕ್ತಿಯುಳ್ಳವರಾಗಿದ್ದರು. ಆ ಬ್ರಿಟಿಷರು ನಮ್ಮ ರಾಷ್ಟ್ರದ ಸ್ವಾತಂತ್ರ್ಯ ಚಳುವಳಿಗೆ ಅಡಿಗಲ್ಲನ್ನು ಕಟ್ಟುವ ಸಲುವಾಗಿ ನಮ್ಮ ರಾಷ್ಟ್ರದಲ್ಲಿರುವ ಜನರನ್ನು ಆರಿಸಿ ಅವರಿಗೆ ತರಪೇತು ಕೊಟ್ಟು ಅವರ ಏಜೆಂಟರಾಗಿ ಕೆಲಸಮಾಡುವುದಕ್ಕೆ ನೇಮಿಸಿಕೊಂಡ ಜನ. ಅವರಲ್ಲಿ ಕೆಲವರು ಉತ್ತಮರು ಇರಬಹುದು. ಸ್ವಾತಂತ್ರ್ಯ ಚಳುವಳಿಗೆ ಕೆಲಸಮಾಡದೇ ಇರಬಹುದು. ಕೆಲವರನ್ನು ಹೆಸರಿಸಬಹುದು ಆದರೆ ಬಹುಸಂಖ್ಯಾತ ಐ. ಸಿ. ಎಸ್. ಅಧಿಕಾರಿಗಳು ನಮ್ಮ ಸ್ವಾತಂತ್ರ್ಯಕ್ಕೆ ಅಡಿಗಲ್ಲು ಕಟ್ಟಿದಂಥ ಜನರು. ಇವರಿಂದ ಬಹಳ ಅನ್ಯಾಯಗಳು ನಮ್ಮ ರಾಷ್ಟ್ರದಲ್ಲಿ ಆಗುತ್ತಿರುವುದನ್ನು ಗಮನಿಸಿ ಸ್ವಾತಂತ್ರ್ಯ ಬಂದ ತರುಣದಲ್ಲಿ ಈ ಒಂದು ಮನೋಭಾವದ ಜನರನ್ನು ಅಧಿಕಾರ ಗದ್ದುಗೆಯಿಂದ ಇಳಿಸಬೇಕೆಂದು ಹಠ ತೊಟ್ಟು ಹೋರಾಟ ಮಾಡಿದಂತ ಇತಿಹಾಸ ಇದು. ಸೋಷಿಯಲಿಸ್ಟ್ ಪಾರ್ಟಿಗೆ ನಮ್ಮ ಲೋಹಿಯಾ ಅವರ ಸೇವೆ ಸಾಲದು. ಕಾಂಗ್ರೆಸ್ ಮಹಾ ಮುಖಂಡರಾದ ಪಂಡಿತ್ ಜವಹರ್‌ಲಾಲ್ ನೆಹರೂ ಅವರು, ನಮ್ಮ ಕಾಂಗ್ರೆಸ್ ಆಡಳಿತದ ಮಾಜೀ ಮುಖಂಡರಾಗಿ ರಾಷ್ಟ್ರದ ಪ್ರಧಾನಮಂತ್ರಿಗಳಾಗಿ ಈ ರಾಷ್ಟ್ರದ ಒಂದು ದೊಡ್ಡ ಪ್ರಗತಿಗೆ ದೊಡ್ಡ ಆತಂಕರಾಗಿದ್ದರು. ಅವರು ಆಗಿನ ಬ್ರಿಟಿಷರ ಪ್ರಯತ್ನದ ಫಲವಾಗಿ ಲೋಕಸಭೆಯಲ್ಲಿಯೆ ಹೇಳದೆ ಕೇಳದೆ ಸೋಂಗಡೆಯೂ ಸೇರದೆ ಬ್ರಿಟಿಷರೊಡನೆ ಯಾವುದೋ ಒಂದು ಸಂಪ್ರದಾಯವನ್ನು ಅನುಸರಿಸಿ

ಕೊಂಡು ಬಂದರೋ ಅದನ್ನು ಮುರಿಯದೆ ಅದನ್ನೇ ಒಂದು ರೀತಿಯಲ್ಲಿ ಬೆಳೆಸಿಕೊಂಡು ಜನರಿಗೆ ಮೋಸದ ಅನೇಕ ಮಾತುಗಳನ್ನು ಹೇಳಿಕೊಂಡು ನಮ್ಮ ಜನರನ್ನು ವಂಚಿಸಿಕೊಂಡು ಬ್ರಿಟಿಷರ ಸಂಪ್ರದಾಯವನ್ನು ಮುಂದುವರಿಸಿಕೊಂಡು ಬಂದಂಥ ಕೀರ್ತಿ ಪಂಡಿತ ಜವಹರ್‌ಲಾಲ್ ನೆಹರೂ ಅವರಿಗೆ ಸಲ್ಲದು. ಕಳೆದ 20–30 ವರ್ಷಗಳ ಚರಿತ್ರೆಯನ್ನು ನೋಡಿದರೆ, ಇವರ ವಿಷಯ ಚೆನ್ನಾಗಿ ಅರ್ಥವಾಗುತ್ತದೆ. ಹಿಂದೆ ಇದ್ದಂತೆ ಅನೇಕ ಸಮಾಜವಾದಿಗಳು ಈಗಲೂ ಇದ್ದಾರೆ. ಅವರನ್ನು ನೆಹರೂ ಅವರು ಸಮಾಜೀವಿಗಳೆಂದು ಭಾವಿಸಿದ್ದರು. ಅವರೂ ಹಾಗೆ ಸಮಾಜೀವಿಗಳಾಗಿಯೇ ಇದ್ದರು. ಆದ್ದರಿಂದ ರಾಷ್ಟ್ರದಲ್ಲಿ ಯಾವುದೇ ಪ್ರಗತಿಯನ್ನು ಸಾಧಿಸುವುದಕ್ಕಾಗಲಿಲ್ಲ. ಅವರು ಅದಕ್ಕೆ ದೊಡ್ಡ ಆತಂಕರಾಗಿದ್ದರು. ಐ. ಸಿ. ಎಸ್. ಅಧಿಕಾರಿಗಳ ವಿಶೇಷ ಹಕ್ಕು ಬಾಧ್ಯತೆಗಳನ್ನು ತೆಗೆಯಬೇಕೆಂದು ನಮ್ಮ ನಾಯಕರಾದಂಥ ಸೋಷಿಯಲಿಸ್ಟ್ ಪಾರ್ಟಿಯ ಮುಖಂಡರಾದ ಮಧುಲಿಮೆಯವರು ಇದೇ ತಿದ್ದುಪಡಿಯನ್ನು ತಂದಾಗ ವಿರೋಧಿಸಿದವರು ಯಾರು? ಇವತ್ತು ಯಾರು ಇಂದಿರಾ ಗಾಂಧಿಯವರ ಕಾಂಗ್ರೆಸ್ ಎಂದು ಹೇಳುತ್ತಾರೊ ಅವರು. ಅಂದಮೇಲೆ ಶ್ರೀಮತಿ ಇಂದಿರಾಗಾಂಧಿಯವರು ಏನು ಹೇಳುತ್ತಿದ್ದರು, ಇವರೇ ಈ ತಿದ್ದುಪಡಿಯನ್ನು ವಿರೋಧಿಸಿ ಅದನ್ನು ಬಿದ್ದುಹೋಗುವ ಹಾಗೆ ಮಾಡಿದವರು. ಇವತ್ತು ಅದನ್ನೇ ಪುನಃ ಇಲ್ಲಿ ತಂದಿದ್ದಾರೆ. ಅದನ್ನು ನಾವು ಇವತ್ತು ಸ್ವಾಗತಿಸುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಇವತ್ತು ಅದನ್ನೇ ತಾವು ತಂದಿದ್ದರೆ ಖಂಡಿತವಾಗಿ ನಾವು ವಿರೋಧಿಸುತ್ತಿದ್ದೆವು.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಶ್ರೀ ಮಧುಲಿಮೆಯವರು ಲೋಕಸಭೆಯಲ್ಲಿ ಇದರ ಬಗ್ಗೆ ಒಂದು ಖಾಸಗೀ ವಿಧೇಯಕವನ್ನು ಮಂಡಿಸಿದಾಗ ಸರ್ಕಾರದ ಪರವಾಗಿ ಉತ್ತರಕೊಡುತ್ತಾ ಆಗಲೂ ಸರ್ಕಾರ ಹೇಳಿದ್ದೇನೆಂದರೆ, ಐ. ಸಿ. ಎಸ್. ಅಧಿಕಾರಿಗಳಿಗೆ ಸ್ಪೆಷಲ್ ಪ್ರಿವಿಲೇಜಸ್ ಏನಿವೆಯೋ ಅವನ್ನು ತೆಗೆದುಹಾಕುವುದಕ್ಕೆ ಸರ್ಕಾರದ ಪರವಾಗಿ ಸೂಕ್ತ ವಿಧೇಯಕವೊಂದನ್ನು ಮಂಡಿಸುತ್ತೇವೆ ಆದ್ದರಿಂದ ಮಾನ್ಯ ಶ್ರೀ ಮಧುಲಿಮೆಯವರು ಇದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು, ನಮ್ಮ ವಿಧೇಯಕ ಪಾಸ್ ಆಗಬೇಕೆಂದು ಹಠ ಮಾಡಿದ್ದರಿಂದ ಈ ತಿದ್ದುಪಡಿ ಅವತ್ತು ತಿರಸ್ಕಾರ ಮಾಡಲಾಯಿತು. ಇದಾದ ಆರು ತಿಂಗಳುಗಳ ನಂತರ ಆ ಬಗ್ಗೆ ಮತ್ತೆ ಸರ್ಕಾರವೇ ಒಂದು ತಿದ್ದುಪಡಿ ವಿಧೇಯಕವನ್ನು ಮಂಡಿಸಿ ಲೋಕಸಭೆಯಲ್ಲಿ ಪಾಸ್ ಮಾಡಿದ್ದಾರೆ. ಅದು ಬಹಳ ಸಂತೋಷದ ವಿಷಯ. ಈಗ ನಮ್ಮ ಮಾನ್ಯ ಮಾಜೀ ಲೋಕಸಭಾ ಸದಸ್ಯರಿಗೆ ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಇವತ್ತು ವೇಗವಾಗಿ, ಕ್ರಮಬದ್ಧವಾಗಿ ತಂದಂಥ ಖಾಸಗೀ ನಿರ್ಣಯವನ್ನು ಸಭೆಯಲ್ಲಿ ಮಂಡಿಸಿದಾಗ ಹಿಂದೆ ಅದಕ್ಕೆ ತಾವು ಏಕೆ ಬೆಂಬಲ ಕೊಡಬಾರದಾಗಿತ್ತು? ಅದರ ಒಂದು ಸಂಪೂರ್ಣ ಕೀರ್ತಿ ಮಾನ್ಯ ಶ್ರೀ ಮಧುಲಿಮೆಯವರಿಗೆ ಹೋಗಿ ನಂತರ ಸೋಷಿಯಲಿಸ್ಟ್ ಪಾರ್ಟಿಗೆ ಹೋಗುತ್ತದೆಂದು ಬೇಕುಬೇಕಾಗಿ ತಮ್ಮ ಪಕ್ಷದವರು ಸ್ವಾರ್ಥದ ಕಾರಣದಿಂದ ವಿರೋಧಿಸಿದ್ದಾರೆಂದು ಜನ ಭಾವಿಸುತ್ತಾರೆ. ಸಾವಿರಾರು ಜನರ ಹಿತವನ್ನು ಐ. ಸಿ. ಎಸ್. ಅಧಿಕಾರಿಗಳು ತೆಗೆದುಕೊಂಡಿಲ್ಲ ಇವತ್ತು ಅವರಿಗೆ ಸದ್ಬುದ್ಧಿ ಬಂದಿದೆ. ಅಂತಹ ವಾತಾವರಣವನ್ನು ನಿರ್ಮಾಣಮಾಡುವುದಕ್ಕೆ ತಾವು ಆ ಕೀರ್ತಿಯನ್ನು ತಮಗೆ ಸಲ್ಲಬೇಕೆಂದು ಹೇಳಿದರೆ ಅದನ್ನು ಒಪ್ಪುವುದಕ್ಕೆ ನಾನು ತಯಾರು ಇಲ್ಲ. ಅದರ ಒಂದು ಸಂಪೂರ್ಣ ಕೀರ್ತಿ ನಮ್ಮ ನಾಯಕರಾಗಿರತಕ್ಕ ಮಾನ್ಯ ಶ್ರೀ ಮಧುಲಿಮೆಯವರಿಗೆ ಮಾತ್ರ ಸಲ್ಲಬೇಕೇ ಹೊರತು ಬೇರೆಯವರಿಗೆ ಇಲ್ಲ. ಇದೇ ರೀತಿಯಲ್ಲಿ ಬ್ಯಾಂಕ್ ನ್ಯಾಷನಲೈಜೇಷನ್ ಮಾಡಬೇಕು. ಪ್ರಿವಿ ಪರ್ಸ್ ರದ್ದುಮಾಡಬೇಕೆಂದು 1955ನೇ ಇಸವಿಯಲ್ಲಿ ನಮ್ಮ ಪೂಜ್ಯ ಗುರುಗಳಾದ ಶ್ರೀಮಾನ್ ಗೋಪಾಲಗೌಡರು ಹೇಳಿದರು. ಬ್ಯಾಂಕ್ ನ್ಯಾಷನಲೈಜೇಷನ್ ವಿಷಯವನ್ನೂ ಸಹ ಅವರು ಹೇಳಿದರು. ಈಗ ಇದನ್ನು ತಂದಿದ್ದಾರೆ. ತಾವು ಇವುಗಳ ಬಗ್ಗೆ ಒಳ್ಳೆಯ ರಿವಲ್ಯೂಷನರಿಗಳಿಂದ ಏನು ಹೇಳುತ್ತೀರಿ ಹಾಗೆ ಬ್ಯಾಂಕ್ ನ್ಯಾಷನಲೈಜೇಷನ್ ಮಾಡುವುದು ಹಾಗೂ ಪ್ರಿವಿ ಪರ್ಸ್ ರದ್ದುಮಾಡುವುದು ಆಗುತ್ತದೆಂದು ನಾನು ಹೇಳಬಹುದು. 1935ನೇ ಇಸವಿಯಲ್ಲಿ ನಮ್ಮ ಮೈಸೂರಿನಲ್ಲಿ ಆಗಿನ ಮಹಾರಾಜರಾಗಿದ್ದ ಶ್ರೀ ಕೃಷ್ಣರಾಜ ಒಡೆಯರ್ ಅವರು ಮೈಸೂರು ಬ್ಯಾಂಕನ್ನು ಸ್ಥಾಪನೆ ಮಾಡಿದರು. ಅವರನ್ನು ನಾನು ಸಮಾಜವಾದಿಗಳು ಎಂದು ಹೇಳಬೇಕಾಗುತ್ತದೆ. ಹಾಗೆಯೇ ಇವತ್ತು ಏನು ಐ. ಸಿ. ಎಸ್. ಅಧಿಕಾರಿಗಳು ಇದ್ದಾರೆಯೋ ಅವರ ಪ್ರಿವಿಲೇಜಸ್‌ಗಳನ್ನು ತೆಗೆಯುವುದಕ್ಕೆ ಮಾನ್ಯ ಸದಸ್ಯರು ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಇದರ ಸಂಪೂರ್ಣ ಕೀರ್ತಿ ಸೋಷಿಯಲಿಸ್ಟ್ ಪಾರ್ಟಿಗೆ ಸಲ್ಲಬೇಕು. ಇವತ್ತು 111 ಜನ ಐ ಸಿ ಎಸ್ ಅಧಿಕಾರಿಗಳು ಇದ್ದಾರೆ. ಇವರ ಬಗ್ಗೆ ಒಂದು ತಿದ್ದುಪಡಿಯನ್ನು ತಂದಿದ್ದೀರಿ. ಇವರ ಸಂಬಳ

(ಶ್ರೀ ಕೋಣಂದೂರು ಲಿಂಗಪ್ಪ)

ಸಾರಿಗೆ ಬಗ್ಗೆ ಇವರ ಮನೋಭಾವದಲ್ಲಿ ಯಾವ ತರಹ ವ್ಯತ್ಯಾಸ ಬಂದಿಲ್ಲ. ಅವರಿಗೆ ಇರುವ ವಿಶೇಷ ಹಕ್ಕು ಬಾಧ್ಯತೆಗಳನ್ನು ತೆಗೆಯುವುದಕ್ಕೆ ಅಪೇಕ್ಷೆಪಟ್ಟಿದ್ದಾರೆ. ಅದನ್ನು ಸಂಪೂರ್ಣವಾಗಿ ಜಾರಿಗೊಳಿಸುತ್ತಾರೆಂದು ಹೇಳುವುದಕ್ಕೆ ನನಗೆ ವಿಶ್ವಾಸವಿಲ್ಲ. ಏಕೆಂದರೆ, ನಿಮ್ಮ ಕೇಂದ್ರದ ಮಾನ್ಯ ಶ್ರೀ ಚವಾಣ್ ಅವರು ಸೂಚಿಸಿರುವ ಮೆಚ್ಚುಗೆಯನ್ನು ಕಂಡರೆ ನೀವು ನಿಜವಾಗಿ ಅದನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸುತ್ತೀರಾ ಎಂಬ ವಿಶ್ವಾಸ ನಮಗೆ ಇಲ್ಲ. ಆದ್ದರಿಂದ ಇವತ್ತು ಏನು ತಿದ್ದುಪಡಿಯನ್ನು ತಂದಿದ್ದೀರಿ, ಇದು ಕೇವಲ ಐ. ಸಿ. ಎಸ್. ಅಧಿಕಾರಿಗಳಿಗೆ ಸಂಬಂಧಪಟ್ಟಿದ್ದರೂ ಕೆಲವರಿಗೆ ವಿಶೇಷವಾದ ವಿನಾಯಿತಿ ಕೊಟ್ಟಿದ್ದೀರಿ. ಇದನ್ನು ಅವರಿಗೆ ಉಪಯೋಗ ಮಾಡಬಹುದು. ಅವರು ವಿನಾಯಿತಿ ಪಡೆಯುವುದಕ್ಕೆ ಏನು ಅರ್ಹತೆ ಪಡೆದಿದ್ದಾರೋ ಅದನ್ನೆ ಮಿಕ್ಕವರಿಗೆ ಏಕೆ ಲಾಗು ಮಾಡಬಾರದು? ಈ ರೀತಿಯಾಗಿ ವಿಶೇಷವಾದ ವಿನಾಯಿತಿಗಳನ್ನು ಕೊಡುವಾಗ ಒಂದು ಹೊಸ ವರ್ಗವನ್ನು ಸೃಷ್ಟಿ ಮಾಡುತ್ತಿದ್ದೀರಿ. ಈಗ ಐ ಸಿ ಎಸ್ ಅಧಿಕಾರಿಗಳಿಗೆ ವಿಶೇಷ ಸೌಲತ್ತು ಇರಕೂಡದೆಂದು ಒಂದು ತಿದ್ದುಪಡಿಯನ್ನು ತಂದಿದ್ದೀರಿ. ಹಾಗಿರುವಾಗ ಅದರಲ್ಲಿ ವಿನಾಯಿತಿ ಕೊಡಬಾರದು. ನಮ್ಮಲ್ಲಿ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳೂ ಇದ್ದಾರೆ. ಅವರಿಗೂ ವಿಶೇಷ ಸವಲತ್ತು ಇರಕೂಡದು. ಸಮಾಜವಾದದ ಪ್ರಕಾರ ಯಾರಿಗೂ ಒಂದು ಸಾವಿರ ರೂಪಾಯಿಗಳ ಮೇಲ್ಪಟ್ಟು ಸಂಬಳ ಇರಕೂಡದು ಎಂಬುದಾಗಿ ಹೇಳುತ್ತಿದ್ದೀರಿ. ಕೆಲವು ಪ್ರಿವಿಲೇಜಸ್ಸನ್ನು ತೆಗೆದರೆ ಮಾತ್ರ ಸಮಾಜವಾದ ಬರುವುದಿಲ್ಲ. ಒಂದು ಸಾವಿರ ರೂಪಾಯಿಗಳ ಸಂಬಳದ ಮಿತಿಯನ್ನು ಹಾಕಿ. ರಾಷ್ಟ್ರಪತಿಗಳಿಗೆ ಹಾಗೂ ರಾಜ್ಯಪಾಲರಿಗೂ ಒಂದು ಮಿತಿ ಇರಬೇಕೆಂದು ಬೇರೆ ಹೇಳುತ್ತಿದ್ದಾರೆ. ಅದಕ್ಕಾಗಿ ಇನ್ನು ಮುಂದೆ ಇಂತಹ ವಿಷಯಗಳಲ್ಲಿ ಪ್ರತಿಯೊಂದಕ್ಕೂ ಬೇರೆ ಬಿಲ್‌ಗಳನ್ನು ತರಬೇಕಾಗುತ್ತದೆ. ಅದಕ್ಕೋಸ್ಕರ ಈ ರೀತಿಯಾಗಿ ರಿಪೇರಿ ಕೆಲಸ ಮಾಡಬೇಡಿ. ಕೂಡಲೇ ಒಂದು ಹೊಸದಾದಂಥ ಸಂವಿಧಾನದ ಸಭೆಯನ್ನು ಕರೆದು ಹೊಸ ಸಂವಿಧಾನವನ್ನು ಜಾರಿಗೆ ತರಬೇಕು ಎಂದು ಹೇಳುತ್ತೇನೆ. ಇವತ್ತು ಕೇವಲ ಈ ರೀತಿ ಒಂದೊಂದು ತಿದ್ದುಪಡಿಯನ್ನು ಮಾತ್ರ ತಂದರೆ ಸಾಲದು. ಇದರಿಂದ ಯಾವತ್ತು ಸಮಾಜವಾದವನ್ನು ಜಾರಿಗೆ ತರುವುದಕ್ಕಾಗುವುದಿಲ್ಲ. ಸಮಾಜವಾದದ ಗುರಿಯನ್ನು ಮುಟ್ಟುವುದಕ್ಕೆ ಇವತ್ತಿನ ಸಂವಿಧಾನವನ್ನು ತಿದ್ದುಪಡಿ ಮಾಡಬೇಕು. ಶ್ರೀ ಸಾಮಾನ್ಯರಿಗೆ ವಿಶೇಷವಾದಂಥ ಸೌಕರ್ಯವನ್ನು ಒದಗಿಸಬೇಕು. ಅವನಿಗೆ ಪೂರ್ಣ ಹಕ್ಕುಗಳನ್ನು ಕೊಡಬೇಕು. ಈಗ ಮಾಡಿರುವಂತೆ ರಿಪೇರಿ ಮಾಡುವುದಕ್ಕೆ ಬದಲು ಸಮಾಜವಾದ ರಾಷ್ಟ್ರವನ್ನು ಸ್ಥಾಪನೆ ಮಾಡತಕ್ಕ ಒಂದು ಸಮಗ್ರ ತಿದ್ದುಪಡಿಯನ್ನು ತೆಗೆದುಕೊಂಡು ಬಂದು ಹೊಸದಾಗಿ ಹೊಸ ಸಂವಿಧಾನ ಸಭೆಯನ್ನು ಕರೆದು ಅಲ್ಲಿ ತೀರ್ಮಾನ ಮಾಡಬೇಕು. ಆಗ ಸಮಾಜವಾದದ ಗುರಿಯನ್ನು ನಾವು ತಲುಪುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ. ಅಂತೂ ಈ ಸಭೆಯಲ್ಲಿ ಈಗ ಏನು ಈ ಒಂದು ಬಿಲ್ಲನ್ನು ತಂದಿದ್ದಾರೆ ಇದಕ್ಕೆ ನಮ್ಮ ಬೆಂಬಲವಿದೆಯೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಸಭಾಪತಿಗಳೇ, ನಮ್ಮ ಮುಂದೆ ಇರತಕ್ಕಂಥ ನಿರ್ಣಯದ ಬಗ್ಗೆ ನಾನು ಅಡ್ಡಿ ಮಾಡದೇ ಇದ್ದರೂ ಕೂಡ ಕೆಲವು ವಿಚಾರಗಳನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

1947 ರಲ್ಲಿ ನಮಗೆ ಸ್ವಾತಂತ್ರ್ಯ ಬಂದ ಕಾಲದಲ್ಲಿ ನಮ್ಮಲ್ಲಿ 1984 ಜನ ಐ.ಸಿ.ಎಸ್. ಅಧಿಕಾರಿಗಳಿದ್ದರು. ಈ ದಿವಸ ಆ ಸಂಖ್ಯೆ 106 ಕ್ಕೆ ಇಳಿದಿದೆ. ಈ 106ರ ಪೈಕಿ 11 ಜನರು ಫಾರಿನ್ ಸರ್ವೀಸಿನಲ್ಲಿದ್ದಾರೆ. 95 ಜನರು ಸೆಂಟ್ರಲ್ ಸರ್ವೀಸಿನಲ್ಲಿದ್ದಾರೆ. ಇವರಲ್ಲಿ 56 ಜನರು ಆಕ್ಟೀವ್ ಸರ್ವೀಸ್‌ನಲ್ಲಿದ್ದಾರೆ. ಈ ವರ್ಷದ ಕೊನೆಗೆ 16 ಜನರು ನಿವೃತ್ತರಾಗತಕ್ಕವರಿದ್ದಾರೆ. ಇನ್ನುಳಿದವರೂ ಕೂಡ ಸ್ವಲ್ಪ ಕಾಲದಲ್ಲೇ ನಿವೃತ್ತರಾಗತಕ್ಕವರಿದ್ದಾರೆ. ಅಂದಾಗ ಇಷ್ಟಕ್ಕಾಗಿ ಇಂಥ ಒಂದು ಬಿಲ್ಲನ್ನು ತರಬೇಕಾಗಿತ್ತೇ ಎಂದು ಕೇಳುತ್ತೇನೆ? ಆದರೆ ಇದರ ಉದ್ದೇಶ ಘನವಾದುದೇ ಇರಬಹುದು. ಆದರೆ ಈಗ ಇದನ್ನು ತಂದಿರತಕ್ಕ ಉದ್ದೇಶ ಬರಿ ಓಟ್ ಕ್ಯಾಚಿಂಗ್ ವಿನಾ ಇದರಿಂದ ದೇಶಕ್ಕೇನೂ ಅನುಕೂಲವಾಗುವುದಿಲ್ಲ. ಇವರು ನಿಜವಾಗಿಯೂ ದೇಶದಲ್ಲಿ ಸಮಾಜವಾದವನ್ನು ಜಾರಿಗೆ ತರಬೇಕೆಂಬ ಉದ್ದೇಶವಿದ್ದ ಪಕ್ಷಕ್ಕೆ ರಾಜ್ಯದ ಒಟ್ಟು ಹಿತವನ್ನು ರಾಜ್ಯದ ಆರ್ಥಿಕ ಹಿತವನ್ನು ಕೇವಲ 75 ಸಂಸಾರಗಳ ಹಿಡಿತಕ್ಕೆ ಏಕೆ ಬಿಡುತ್ತಿದ್ದರು? ಇಂಥವರನ್ನು ಬಿಟ್ಟು ಈ ಕೇವಲ 60—70 ಜನರಿಗೆ ಬರುತ್ತಿದ್ದ ಸೌಲಭ್ಯಗಳನ್ನು ಮೊಟಕು ಮಾಡುವುದಕ್ಕೆ ಏಕೆ ಇವರು ಕೈ ಹಾಕಿದರು? ಸಮಾಜವಾದಕ್ಕೆ ಅಡ್ಡಿಪಡಿಸತಕ್ಕ 75 ಸಂಸಾರಗಳನ್ನು ಬೆಳೆಯ ಬಿಟ್ಟ

ದ್ದಾರೆ. ಹಾಗೇ ಇನ್ನೂ ನಮ್ಮ ರಾಷ್ಟ್ರದಲ್ಲಿ ಲಕ್ಷಾಂತರ ರೂಪಾಯಿಗಳನ್ನು ವಿನಾಕಾರಣ ಆ ರಾಷ್ಟ್ರಪತಿಗಳ ಬಗ್ಗೆ ಮತ್ತು ಗೌರ್ನರುಗಳ ಬಗ್ಗೆ ಖರ್ಚುಮಾಡುತ್ತಿದ್ದೇವೆ. ಇದನ್ನು ಏಕೆ ಇನ್ನೂ ತಡೆಗಟ್ಟಲಿಲ್ಲ! ಇವುಗಳನ್ನೆಲ್ಲಾ ಬಿಟ್ಟುಕೊಟ್ಟು ಈ ಐ.ಸಿ.ಎಸ್. ಅಧಿಕಾರಿಗಳ ಖರ್ಚನ್ನು ಮಿತಿಗೊಳಿಸುದಕ್ಕೆ ಹೊರಟಿರುವುದರಲ್ಲಿ ಅರ್ಥವಿಲ್ಲ. ಇನ್ನು ಈಗಿನ ಕೆಲವು ಐ.ಎ.ಎಸ್. ಅಧಿಕಾರಿಗಳು ಆ ಐ.ಸಿ.ಎಸ್. ಅಧಿಕಾರಿಗಳ ಧೋರಣೆಯನ್ನೇ ತಾಳುವುದಕ್ಕೆ ಹೊರಟಿದ್ದಾರೆ. ಅವರಿಗೆ ಈಗಲೇ ಎಚ್ಚರಿಕೆ ಕೊಡುತ್ತಿದ್ದೇನೆ, ಅವರು ಅರಿತುಕೊಳ್ಳಬೇಕು. ಜನರ ಕಷ್ಟವೇನು ಎಂಬುದು ಅವರಿಗಿನ್ನೂ ಅರಿವಾಗಿಲ್ಲ. ಎಲ್ಲಕ್ಕೂ ಮಿಗಿಲಾಗಿ ಇವರಿಗೆ ಮಾದರಿಯಾಗಿ ಮಂತ್ರಿಗಳು ನಡೆದುಕೊಳ್ಳಬೇಕು. ಮಂತ್ರಿಗಳು ತಮ್ಮ ಜೀವನವನ್ನು ಸರಳವಾಗಿಯೂ ಮಿತವ್ಯಯವಾಗಿಯೂ ನಡೆಸಬೇಕು. ಅವನ್ನು ಬಿಟ್ಟು ಇವರೂ ಕೂಡ ಆ ಐ.ಸಿ.ಎಸ್. ಅಧಿಕಾರಿಗಳನ್ನು ಇಮಿಟೇಟ್ ಮಾಡುತ್ತ ಅವರಂತೆ ಇವರೂ ವೈಭವದಲ್ಲಿ ಇರುವುದನ್ನು ಬಿಟ್ಟು, ಇವರು ಮಾದರಿ ಆಗಿ ಕೆಲಸ ಮಾಡುತ್ತಿಲ್ಲ. ಎಲ್ಲಾ ಒಂದು ಸ್ಲೋಗನ್ ಹೇಳಿಕೊಂಡು ಕೆಲಸಗಳಾಗುತ್ತಿವೆ. ಆದಾಗ್ಯೂ ನಾನು ಇದರ ಉದ್ದೇಶಕ್ಕೆ ಬೆಂಬಲ ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಅಧ್ಯಕ್ಷರೇ ಈ ದಿವಸ ನಮ್ಮ ಮುಂದೆ ಏನು ಆ ನಮ್ಮ ಪಾರ್ಲಿಯಮೆಂಟಿನವರು ಅಂಗೀಕರಿಸಿದ್ದಾರೆ ಆ ಒಂದು ನಿರ್ಣಯವನ್ನು ರ್ಯಾಟಿಫಿಕೇಷನ್ ಬಗ್ಗೆ ಇಲ್ಲಿ ಮಂಡಿಸಿದ್ದಾರೆ. ಈ ವಿಚಾರದಲ್ಲಿ ಈಗಾಗಲೇ ಅನೇಕ ಮಾನ್ಯ ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇದರ ವಿಚಾರದಲ್ಲಿ ನಾನು ಅಷ್ಟು ಹೆಚ್ಚಿಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಸೂಕ್ಷ್ಮವಾಗಿ ಒಂದು ಮಾತಿನಲ್ಲೇ ಹೇಳುವುದಾದರೆ ಈ ನಿರ್ಣಯದಲ್ಲಿ ಅಡಕವಾಗಿರತಕ್ಕದ್ದು ಜವಳೀ ಅಂಗಡಿಗಳ ಮುಂದೆ ಅವರು ಅಂದಚೆಂದಗಳಿಂದ ಕೂಡಿದ ಒಂದು ಷೋ ಕೇಸನ್ನು ಇಡುತ್ತಾರಲ್ಲಾ ಅದರಂತೆಯೇ ಇದು ಕೂಡ ಇವೆ. ಆದರೆ ಆ ಜವಳೀ ಅಂಗಡಿಯಲ್ಲಿ ಒಳಗೆಲ್ಲಾ ಹೇಗೆ ಹಳೇ ಸರಕುಗಳೇ ಇರುತ್ತವೆಯೋ ಹಾಗೇ ಈ ಸರ್ಕಾರದಲ್ಲೂ ಹಳೆ ಸರುಕುಗಳು ವಿಶೇಷವಾಗಿವೆ. ಆದ್ದರಿಂದ ಇವರು ಈ ದಿವಸ ತಂದಿರತಕ್ಕ ಈ 111 ಜನರಿಗೆ ಸಂಬಂಧಪಟ್ಟ ಈ ಮಸೂದೆ ಏನಿವೆ ಇದರಿಂದ ದೇಶದಲ್ಲಿ ಅಂಥ ಯಾವ ಕ್ರಾಂತಿಕಾರಕ ಅಥವಾ ಪ್ರಗತಿದಾಯಕ ಬದಲಾವಣೆಗಳು ಆಗುವುದಕ್ಕೆ ಈ ಮಸೂದೆಯಿಂದ ಸಾಧ್ಯವಿಲ್ಲ. ಇದೊಂದು ಕೇವಲ ಎನೇಬ್ಲಿಂಗ್ ಪ್ರಾವಿಜನ್ ಮಾತ್ರ. ಈ ಒಂದು ಪ್ರಿವಿಲೇಜನ್ನು ತೆಗೆಯುವುದಕ್ಕೆ ಕಳೆದ 25 ವರ್ಷಗಳಿಂದ ಇವರೇಕೆ ನಿದ್ರೆ ಮಾಡುತ್ತಿದ್ದರು! ಇವರು ಇದರ ಬಗ್ಗೆ ಎಚ್ಚರವಾದ್ದು ಯಾವಾಗ! ಇವರು ಈ 111 ಜನರ ಬಗ್ಗೆ ಇಷ್ಟು ಕಳವಳ ಪಡತಕ್ಕವರು ಏಕೆ ಇಡೀ ದೇಶದ ಆರ್ಥಿಕ ಭವಿಷ್ಯ ಕೇವಲ 75 ಬಂಡವಾಳಷಾಹಿ ಕುಟುಂಬಗಳ ಕೈಲಿ ಅವರ ಒಂದು ಮನಾಪಲಿಯಾಗಿದೆ. ಅದನ್ನು ಏಕೆ ಇಲ್ಲಿಯವರೆಗೂ ಇವರು ರಾಷ್ಟ್ರೀಕರಣ ಮಾಡಲಿಲ್ಲ! ಇದರಂತೆಯೇ ಇವರ ಬಗ್ಗೆಯೂ ಒಂದು ಬಿಲ್ಲನ್ನು ತಂದಿದ್ದರೆ ಆಗ ನಾನು ಬಹಳ ಸಂತೋಷಪಡುತ್ತಿದ್ದೆ. ಈ ದಿವಸ ನಮ್ಮ ದೇಶದ ಆರ್ಥಿಕ ಸಂಪತ್ತೇನಿದೆ ಅದು ಈ 75 ಬಂಡವಾಳಷಾಹಿ ಜನರನ್ನೇ ಅವಲಂಬಿಸಿ ನಡೆಯಬೇಕಾಗಿದೆ. ಇವರು ನಮ್ಮ ಸಮಾಜವಾದಕ್ಕೆ ಅಡ್ಡಿಯಾಗಿ ನಿಂತಿದ್ದಾರೆ. ಈ ದಿವಸ ನಮ್ಮ ರಾಷ್ಟ್ರದಲ್ಲಿ ಆ 75 ಜನ ಕ್ಯಾಪಿಟಲಿಸ್ಟರ ಕೃಪಾಕಟಾಕ್ಷದಿಂದ ಆಳುವ ಪಕ್ಷ ಅಧಿಕಾರವನ್ನು ನಡೆಸುತ್ತಿದೆ. ಇನ್ನು ಇದರಲ್ಲಿ ಕೆಲವರಿಗೆ ವಿನಾಯಿತಿ ಬೇರೆ ಇಟ್ಟಿದ್ದಾರೆ. ಸುಪ್ರೀಂ ಕೋರ್ಟಿನ ಹಾಗೂ ರಾಜ್ಯಗಳ ಹೈಕೋರ್ಟಿನ ನ್ಯಾಯಾಧೀಶರುಗಳಿಗೆ ಈ ಒಂದು ವಿನಾಯಿತಿಯನ್ನು ಕೊಟ್ಟಿದ್ದಾರೆ. ಹಿಂದೆ ಇವರು ಆ ಬ್ಯಾಂಕ್ ನ್ಯಾಷನಲೈಜ್ ಕೇಸಿನಲ್ಲಿ ಸಮಾಜವಾದಕ್ಕೆ ತದ್ವಿರುದ್ಧವಾಗಿ ತೀರ್ಮಾನ ಕೊಟ್ಟಿದ್ದು ಲೋಕವಿದಿತವಾಗಿದೆ. ಹಾಗಿರುವಾಗ ಇವರಿಗೆ ಇಂಥ ಒಂದು ವಿನಾಯಿತಿ ಕೊಟ್ಟರೆ ಮುಂದೆ ದೇಶಕ್ಕೆ ಸುಖವಿದೆಯೇ ಅನ್ನುವುದರಲ್ಲಿ ನನಗೆ ತುಂಬಾ ಅನುಮಾನವಿದೆ. ಆದ್ದರಿಂದ ಇವರಿಗೆ ವಿನಾಯ್ತಿ ಕೊಟ್ಟಿದ್ದು ಸರಿಯಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇದಕ್ಕೆ ಎಲ್ಲರೂ ಬೆಂಬಲ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಈ ಬಿಲ್ಲನ್ನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ತಮ್ಮ ಮುಂದಿಡಬೇಕೆಂದಿದ್ದೇನೆ. ಯಾವತ್ತೋ ಬರಬೇಕಾದ ಬಿಲ್ಲು ಇಂದು ಬಂದಿದೆ. 25 ವರ್ಷಗಳಮೇಲಾದರೂ ನಮ್ಮ ಸರಕಾರದವರು ಇದನ್ನು ತಂದಿರುವುದು ಸಂತೋಷವನ್ನು ಉಂಟುಮಾಡಿದೆ. ಇದರ ಉದ್ದೇಶ 1979ಕ್ಕೆ ಐ.ಸಿ.ಎಸ್. ಅಧಿಕಾರಿಗಳನ್ನು ಮನೆಗೆ ಕಳಿಸಬೇಕೆಂಬುದು, ಇನ್ನು ಐದಾರು ವರ್ಷಗಳಲ್ಲಿ ಅವರ ಕಥೆ ಮುಗಿಯುವುದು. ಬಹಳ ಎಚ್ಚರದಿಂದ ಇದನ್ನು ಮಾಡಿದ್ದಾರೆ. ನೀವು ತರುವ ಬಿಲ್ಲುಗಳು ಒಂದು ತರಹ ನಾಟಕೀಯವಾಗಿರುತ್ತವೆ. ಇಂಥ ಬಿಲ್ಲುಗಳನ್ನು ಮಾಡಬೇಕಾದರೆ ಬಹಳ ವಿಚಾರ ಮಾಡಬೇಕು. ಒಂದು ಕಡೆ ರಾಜರುಗಳನ್ನು ಮನೆಗೆ ಕಳಿಸಿದೆವು ಎಂದು ಹೇಳುವುದು, ಅವರಿಗೆ ಸೌಲತ್ತು ಇಡಬಾರದು, ಸಾಮಾನ್ಯ ಪ್ರಜೆಗಳ ಹಾಗೆ ಅವರಿರಬೇಕು ಎಂದು ಹೇಳುವ ಧೋರಣೆಯಿದೆ. ಮತ್ತೊಂದು ಕಡೆ ರಾಜರಷ್ಟು ವೈಭವ

(ಶ್ರೀ ವಾಟಾಳ್ ನಾಗರಾಜ್).

ಮತ್ತು ಅನುಭವಿಸುವ ರಾಜ್ಯಪಾಲರನ್ನು ನೇಮಕ ಮಾಡುವುದು ಇದೆ. ಇದರ ಪರಿಣಾಮವೇ ನೋಡಿದಾಗ ಒಂದು ಕಡೆ ಸೌಲತ್ತುಗಳು ಹೋಗುವುವು, ಮತ್ತೊಂದು ಕಡೆ ಅವು ಬೇರೆ ರೂಪದಲ್ಲಿ ಬರುವುವು. ಇದಕ್ಕೆ ಉದಾಹರಣೆ ಹೇಳುವುದಾದರೆ ರಾಜ್ಯಪಾಲರಿಗೆ ರಾಜರಿಗಿರುವ ಎಲ್ಲಾ ಸೌಲತ್ತುಗಳೂ ಇವೆ. ಅವರು ವಾಸಮಾಡುವ ಮನೆ ರಾಜಭವನ ಎಂದು ಕರೆಯಲ್ಪಟ್ಟಿದೆ. ಅರಮನೆ ಎಂದು ಕರೆಯುವುದನ್ನು ರಾಜಭವನ ಎಂದು ಕರೆಯುವರು. ಪ್ರಜಾಪ್ರಭುತ್ವದಲ್ಲಿ ಸ್ವಾತಂತ್ರ್ಯ ಬಂದು 25 ವರ್ಷವಾಗಿರುವಾಗ ರಾಜರಷ್ಟೇ ಸೌಲತ್ತನ್ನು ರಾಜ್ಯಪಾಲರಿಗೆ ಕೊಡುತ್ತಿದ್ದಾರೆ. ರಾಜ್ಯಪಾಲರಮೇಲೆ ದಾವ ಹಾಕುವುದಕ್ಕೆ ಅವಕಾಶವಿಲ್ಲ. ಅವರು ಕೋರ್ಟುಗಳಿಗೆ ಬರುವಂತಿಲ್ಲ. ಇಂಥ ವಿಶೇಷ ಸೌಲತ್ತುಗಳೇನು ರಾಜರಿಗಿದ್ದುವೋ ಅದೇ ಸೌಲತ್ತುಗಳು ರಾಜ್ಯಪಾಲರಿಗೂ ಇವೆ. ಮತ್ತು ಈ ದೇಶದ ರಾಷ್ಟ್ರಪತಿಯವರು ಎಲ್ಲರಿಗಿಂತ ಉನ್ನತವಾದ ಸೌಲತ್ತುಗಳನ್ನು ಅನುಭವಿಸುವ ಪ್ರಸಂಗವಿದೆ. ಅವರ ಮನೆಯಲ್ಲಿ ಸುಮಾರು 300 ಕೋಣೆಗಳಿವೆ 200 ಎಕರೆ ಪ್ರದೇಶ ......

Mr. DEPUTY SPEAKER.—Members cannot criticise the President of India. The scope is limited. Please do not transgress the limit.

Hon. members cannot even criticise the Governor here. Even under the Rules of Procedure members cannot do that.

ಶ್ರೀ ವಾಟಾಳ್ ನಾಗರಾಜ್.—ನಾನು ಅವರನ್ನು ಆರೋಪ ಮಾಡುತ್ತಿಲ್ಲ. ಈ ದೇಶದಲ್ಲೇ ನಾಗುತ್ತಿದೆಯೆಂಬುದನ್ನು ಹೇಳುತ್ತಿದ್ದೇನೆ. ಸಾಮಾನ್ಯ ಜನರು ಸ್ವಾತಂತ್ರ್ಯ ಬಂದು 25 ವರ್ಷಗಳಾದರೂ ಕೂಡ ಬೀದಿಯಲ್ಲಿ ಭಿಕ್ಷೆ ಬೇಡುತ್ತಿದ್ದಾರೆ. ಅವರನ್ನು ಪೋಲೀಸಿನವರು ಹಿಡಿದು ವ್ಯಾನಿನಲ್ಲಿ ಲಾಕಪ್‌ಗೆ ತೆಗೆದುಕೊಂಡು ಹೋಗುತ್ತಿದ್ದಾರೆ. ರಾಜ್ಯಪಾಲರಿಗೆ, ಐ.ಸಿ.ಎಸ್. ಅಧಿಕಾರಿಗಳಿಗಿರುವ ಸೌಲತ್ತು ರಾಜ್ಯದಲ್ಲಿ ಯಾರಿಗೂ ಇಲ್ಲ. ಇದನ್ನು ವಿಚಾರಮಾಡಬೇಕಾಗಿದೆ. ಇಂಥ ಸೌಲತ್ತು ಹೋಗಬಹುದೆಂದು ಇದುವರೆಗೆ ನೋಡಿದೆವು. ಆದರೆ ಜನರ ಮುಂದೆ ಸರಕಾರ ಒಂದು ನಾಟಕವಾಡುತ್ತಿದೆ. ಬಾಯಲ್ಲಿ ಹೇಳುವುದು ಕೃತಿಯಲ್ಲಿ, ಆಚರಣೆಯಲ್ಲಿ ತರುತ್ತಿಲ್ಲ. ಬರೀ ಭಾಷಣ ಮಾಡಿದರೆ ಕೆಲಸವಾಗುವುದಿಲ್ಲ. ಸಮಾಜವಾದಿ ಕಾರ್ಯಕ್ರಮ ಹಾಕಿ ಈ ದೇಶದಲ್ಲಿ ಸಾಮಾನ್ಯ ಜನರಿಗೆ ಎಲ್ಲಾ ರೀತಿಯ ಸೌಲತ್ತುಗಳನ್ನೂ ದೊರಕಿಸಿಕೊಡಬೇಕೆಂದು ಸರಕಾರ ಇರುವುದಾದರೆ ಬರೀ ಐ.ಸಿ.ಎಸ್. ಆಫೀಸರುಗಳನ್ನು ತೆಗೆದು ಅವರಿಗೆ ಕೊಡುವ ಸೌಲತ್ತನ್ನು ತೆಗೆದು ಹಾಕಿದರೆ ಸಾಲದು, ವರ್ಷಕ್ಕೆ 40 ಲಕ್ಷ ರೂಪಾಯಿ ಖರ್ಚಾಗುವ ರಾಜ್ಯಪಾಲರ ಹುದ್ದೆಯನ್ನು ಸಹ ಕಿತ್ತುಹಾಕಬೇಕು ಎಂದು ಹೇಳುತ್ತಿದ್ದೇನೆ. ಈ ಬಿಲ್ಲಿನಲ್ಲಿರುವುದನ್ನು ಕಾರ್ಯಗತ ಮಾಡುವುದಾದರೆ ಅದಕ್ಕೆ ನಮ್ಮ ಸ್ವಾಗತವಿದೆ. ಯಾವುದೇ ಬಿಲ್ಲನ್ನು ತಂದರೂ ಅದು ಕಾರ್ಯಗತವಾಗಬೇಕು. ಒಂದು ಕಡೆ ಕೊಡುತ್ತಿದ್ದ ಸೌಲತ್ತನ್ನು ಕಿತ್ತು ಹಾಕಿ ಮತ್ತೊಂದು ಕಡೆ ಬೇ ರೀತಿಯಲ್ಲಿ ಸೌಲತ್ತನ್ನು ಕೊಡಬಾರದು ಎಂದು ಇಷ್ಟನ್ನು ಹೇಳಿ ನನ್ನ ಭಾಷಣ ಮುಗಿಸುತ್ತೇನೆ

† **Sri B. B. SAYANAK** (Belgaum).—Mr. Deputy Speaker, I rise to welcome this 31st Ame' dment of the Constitution Bill, 1972. According to me, this is a radical measure. My friends are of the opinion that the ICS officers are the servants of the old Britishers; they are the products of the Britishers; they are the remnants of the Britishers. We are criticising the ICS officers because they are not patriotic. They are traitors of India. But that is not the case. The First ICS officer was the eldest brother of RABINDRANATH TAGORE. Is he not patriotic?

Mr. DEPUTY SPEAKER.—He may be the first Indian. There were other Englishmen even before that.

Sri B. B. SAYANAK.—What about Subhas Bose? Is he not a patriot? We are talking against the ICS officers.

Sri KONANDUR LINGAPPA.—Subhas Bose was not an ICS officer.

Mr. DEPUTY SPEAKER.—Hon'ble Member may commit mistakes. Democracy permits that.

Sri B. B. SAYANAK.—When we are talking about the huge amounts of salary they are getting, I want to ask my friends whether the doctors, whether the Advocates of the Supreme Court and High Court, are not getting a huge amount of salary? We are not talking ill about them. Now our great leader Sardar Vallabhbhai Patel said in 1947 that the ICS is steel frame work of the Indian Aministration. The late Sardar Vallabhbhai Patel was a staunch defender of the privileges. Once he asked: "Do you want to run the Government by Congress workers?" And again he was saying: "I feel very sad that the very instrument from whom we have to take work, we have been continuously quarrelling with. If this is so, we are not doing any service to the country; we are doing a great disservice."

These are the words of Sardar Vallabhbhai Patel.

4-30 P.M.

I am of opinion that this Government has limited powers. The two Houses of Parliament have ratified these amendments. Now our scope of power is limited only to ratify those amendments. My submission is that in 1979 the last I.C.S. Officer will be retiring. Moreover, there is not a single I.C.S. Officer in Mysore State. In Mysore State there are only I.A.S. Officers. So it is not good on our part to criticise or make any comment on the I.C.S. Officers.

Now this amendment is an urgent one and I support it.

ಶ್ರೀ ಡಿ. ಕೆ. ನಾಯಕರ್.—ಈ ಬಿಲ್ಲನ್ನು ಮಂಡಿಸಿದಾಗ ಸಂಕ್ಷಿಪ್ತವಾಗಿ ಅದರ ಉದ್ದೇಶ ಹೇಳಿದೆ. ಆರ್ಟಿಕಲ್ 314 ರಲ್ಲಿರತಕ್ಕಂಥ ಸ್ಪೆಷಲ್ ಪ್ರಿವಿಲೇಜಸ್‌ಗಳನ್ನು ತೊಡಕ ಮಾಡುವುದಕ್ಕೋಸ್ಕರ ಈ ಆರ್ಟಿಕಲ್‌ನ್ನು ಡಿಲೀಟ್ ಮಾಡಲಾಗಿದೆ ಎಂದು ಹೇಳಿದೆ. ಅಷ್ಟೇ ಅಲ್ಲ ಆರ್ಟಿಕಲ್ 312 (2) ರ ಪ್ರಕಾರ ಐ.ಸಿ.ಎಸ್. ಆಫೀಸರ್ಸ್ ಸರ್ವಿಸ್ ಕಂಡೀಷನ್ಸ್‌ನಲ್ಲಿ ಏನಾದರೂ ಬದಲಾವಣೆಗಳನ್ನು ಮಾಡುವುದಕ್ಕೋಸ್ಕರ ಅಧಿಕಾರ ಪಾರ್ಲಿಮೆಂಟ್‌ಗೆ ಇರಬೇಕು ಎಂದು ಕಾಯಿದೆ ಆಗಿದೆ. ನನ್ನ ಕೆಲವು ಸ್ನೇಹಿತರು ಹೇಳಿದರು ಹೀಗೆ ಅಧಿಕಾರ ಪಡೆದ ನಂತರ ಯಾವುದೇ ಸರ್ವಿಸ್ ಕಂಡೀಷನ್ಸ್‌ನಲ್ಲಿ ಬದಲಾವಣೆ ಮಾಡಬೇಕಾದರೆ ಪಾರ್ಲಿಮೆಂಟ್ ಮುಖಾಂತರ ಮಾಡುವುದಕ್ಕೆ ಶಕ್ಯವಾಗುತ್ತದೆ ಎಂದು ಮತ್ತು ಇದರ ಪ್ರಕಾರ ಐ.ಎ.ಎಸ್. ಮತ್ತು ಐ.ಪಿ.ಎಸ್. ಆಫೀಸರ್ಸ್‌ಗಳಿಗೂ ಕೂಡ ಆರ್ಟಿಕಲ್ 312 ರ ಪ್ರಕಾರ ಪಾರ್ಲಿಮೆಂಟ್‌ಗೆ ಅಧಿಕಾರ ಇದೆ. ಐ.ಎ.ಎಸ್. ಆಫೀಸರ್ಸ್ ಸರ್ವಿಸ್ ಕಂಡೀಷನ್ಸ್ ಬಗ್ಗೆ ವಿವರವಾಗಿ ಈ ತರಹದ ಅಮೆಂಡ್‌ಮೆಂಟ್‌ನ್ನು ತರಲಾಗಿದೆ. ಮಾನ್ಯ ಸದಸ್ಯರಾದ ಶ್ರೀಮಾನ್ ಶಾಮಣ್ಣನವರು ಒಂದು ಮಾತನ್ನು ಹೇಳಿದ್ದಾರೆ. ಅದು ಏನೆಂದರೆ ಐ.ಸಿ.ಎಸ್. ಆಫೀಸರ್ಸ್ ಈಗಿನ ಮಟ್ಟಿಗೆ ಸ್ವಲ್ಪ ಜನರು ಇದ್ದಾರೆ. ಅದಕ್ಕೋಸ್ಕರ ಬೇಗನೆ ಈ ಕಾನೂನು ತರುವುದರಲ್ಲಿ ಅಷ್ಟು ಮಹತ್ವ ಇರಲಿಲ್ಲ ಎಂದು. ನಾನು ಹೇಳುವುದು ಮಾನ್ಯ ಸದಸ್ಯರು ಕೂಲಂಕಷವಾಗಿ ಇದನ್ನು ಪರಿಶೀಲಿಸಲಿಲ್ಲ ವೆಂದು ನನಗೆ ಅನಿಸುತ್ತದೆ. ಏತಕ್ಕೆಂದರೆ ನಿವೃತ್ತರಾದಂಥ ರಿಟೈರ್ಡ್ ಆಫೀಸರ್ಸ್ ಬಗ್ಗೆಯೂ ಕೂಡ (ಬಿ) ಅನ್ನುವ ಪ್ರಾವಿಷನ್ ಮಾಡಿದೆ. ಕೇವಲ ಈಗಿದ್ದವರಿಗಷ್ಟೇ ಅಲ್ಲ. ಯಾವತ್ತೂ ಕೂಡ ಈ ಜನರಿಗೆ ಈ ಒಂದು ತರಹ ಬದಲಾವಣೆ ಮಾಡಬೇಕಾಗಿದ್ದಲ್ಲಿ ಪಾರ್ಲಿಮೆಂಟಿಗೆ ಅಧಿಕಾರ ಇರಬೇಕು ಅನ್ನುವ ಉದ್ದೇಶದಿಂದ ಈ ಅಮೆಂಡ್‌ಮೆಂಟ್‌ನ್ನು ತರಲಾಗಿದೆ ಎಂದು ಇಷ್ಟು ಮಾತ್ರ ಹೇಳಬಯಸುತ್ತೇನೆ.

(ಶ್ರೀ ಡಿ. ಕೆ. ನಾಯಕರ್)

ಇನ್ನು ಶ್ರೀಮಾನ್ ದೇವೇಗೌಡರು ಒಂದು ಮಾತು ಹೇಳಿದರು. ಈ ಅಮೆಂಡ್‌ಮೆಂಟ್ ತಂದದ್ದು ಒಂದು ರೀತಿಯಲ್ಲಿ ನೋಡಿದರೆ ಚವ್ಹಾಣರೇ ಐ.ಸಿ.ಎಸ್. ಆಫೀಸರ್ಸ್ ದಕ್ಷತೆ ಬಗ್ಗೆ ಪ್ರಶಂಸೆ ಮಾಡಿದಾಗ ಅವರು ಎಷ್ಟರವಟ್ಟಿಗೆ ಈ ಕೆಲಸವನ್ನು ಕಾರ್ಯಗತ ಮಾಡುತ್ತಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ ಈ ಬಗ್ಗೆ ಒಂದು ಅಮೆಂಡ್‌ಮೆಂಟ್‌ನ್ನು ಪಾರ್ಲಿಮೆಂಟ್‌ನಲ್ಲಿ ತಂದಾಗ ಅದನ್ನು ಎಷ್ಟರಮಟ್ಟಿಗೆ ಕಾರ್ಯರೂಪದಲ್ಲಿ ತರುತ್ತಾರೆ ಎಂದು ಅರ್ಥ ಮಾಡಿಕೊಳ್ಳಬೇಕಾಗಿದೆ. ಅವರು ಕೆಲಸವನ್ನು ಪ್ರಶಂಸೆ ಮಾಡಿ ಅರ್ಥ ಮಾಡಿಕೊಳ್ಳುವುದಕ್ಕೂ ಅಥವಾ ಅದನ್ನು ಕಾರ್ಯ ರೂಪಕ್ಕೆ ತರುವುದಕ್ಕೂ ಏನೂ ಸಂಬಂಧವಿಲ್ಲ. ಆದುದರಿಂದ ಇದನ್ನು ತಡವಾಗಿ ತಂದಿದ್ದೇವೆ ಎಂದು ಹೇಳಿದರೆ ನಾನು ಒಪ್ಪುವುದಿಲ್ಲ. ನಮ್ಮ ಪಾರ್ಲಿಮೆಂಟಿಗೆ (ಆರ್) ಮೆಜಾರಿಟಿ ಬಂದದ್ದು 1½ ವರ್ಷದ ಹಿಂದೆ. ಎಷ್ಟೊಂದು ತೀವ್ರಗತಿಯಲ್ಲಿ ಬದಲಾವಣೆ ಮಾಡುತ್ತಾ ಇದ್ದೇವೆ ಎಂಬುದನ್ನು ಅವರು ಪ್ರಶಂಸೆ ಮಾಡಬೇಕಾಗಿತ್ತು. ಈ ಐ.ಎ. ಎಸ್. ಆಫೀಸರ್ಸ್ ಸರ್ವೀಸ್ ಕಂಡೀಷನ್ಸ್ ಬಗ್ಗೆ ವಿಶೇಷವಾಗಿ ಹೇಳಬೇಕಾದರೆ ಪಾರ್ಲಿಮೆಂಟ್‌ನಲ್ಲಿ ಕಾನೂನು ಬದಲಾವಣೆ ಮಾಡಿದನಂತರ ಐ.ಎ.ಎಸ್, ಆಫೀಸರ್ಸ್ ಜನರಲ್ ಸರ್ವಿಸಸ್‌ನಲ್ಲೂ ಕೂಡ ಅವರಿಗೆ ಯಾವ ಪರಿಣಾಮವೂ ಆಗದಂತೆ, ಏನೂ ಲುಕ್ಸಾನು ಆಗದ ರೀತಿಯಲ್ಲಿ ಒಂದು ಪ್ರಾವಿಷನ್ ಮಾಡಿಕೊಟ್ಟಿದ್ದಾರೆ. ಈಗಲೂ ಕೂಡ ಸುಪ್ರೀಮ್ ಕೋರ್ಟ್, ಹೈಕೋರ್ಟ್ ಮತ್ತು ಡಿಸ್ಟ್ರಿಕ್ಟ್ ಕೋರ್ಟುಗಳಿಗೆ ಐ.ಸಿ.ಎಸ್. ಆಫೀಸರ್ಸ್ ಇರಬಹುದು. ಮುಂದೆ ಅದನ್ನು ಬದಲಾವಣೆ ಮಾಡುತ್ತಾರೆ. ಆದರೆ ಅದನ್ನು ಈಗ ಲಾಗು ಮಾಡುತ್ತೇವೆ. ಏತಕ್ಕೆಂದರೆ ಅವರಿಗೆ ಏನಾದರೂ ಲುಕ್ಸಾನು ಆಗುವ ಸಂಭವವಿದ್ದೀತು ಎಂದು. ಒಂದು ವೇಳೆ ಅವರು ಜಡ್ಜಸ್ ಆಗಿ ಐ.ಸಿ.ಎಸ್. ಆಫೀಸರ್ಸ್ ಆಗಿ ನೇಮಕವಾಗಿದ್ದರೂ ಕೂಡ ಕಾನ್ಸ್ಟಿಟ್ಯೂಷನ್ ಪ್ರಕಾರ ಅವರಿಗೂ ವಿಶೇಷವಾದ ಸವಲತ್ತುಗಳನ್ನು ಒದಗಿಸಬೇಕು ಅಂತ ಅವರಿಗೆ ಸಪರೇಟ್ ಪ್ರಾವಿಷನ್ ಮಾಡಲಾಗಿದೆ. ಹೈಕೋರ್ಟ್‌ಗೆ ಹೋದರೂ ಕೂಡ ಅವರಿಗೆ ವಿಶೇಷವಾದ ಹಕ್ಕುಗಳು ಇರುತ್ತದೆ. ಅವರ ಪ್ರಿವಿಲೇಜಸ್‌ಗೆ ಯಾವ ಒಂದು ಹಾನಿಯೂ ಆಗಬಾರದೆಂದು ಈ ಒಂದು ಸಲಕರಣೆಯನ್ನು ಹಾಕಲಾಗಿದೆ ಎಂದು ನಾನು ಹೇಳುತ್ತೇನೆ.

ಆದುದರಿಂದ ಈ ಅಮೆಂಡ್‌ಮೆಂಟ್ ಬಿಲ್ಲಿನ ಬಗ್ಗೆ ವಿಶೇಷವಾಗಿ ಇತರ ಆಫೀಸರ್ಸ್ ಬಗ್ಗೆಯೂ ಒಂದು ಬಿಗಿ ಮಾಡುವುದು ಅವಶ್ಯಕ ಎಂದು ನನಗೆ ಅನಿಸಿದೆ. ಆದರೆ 368ರ ಆರ್ಟಿಕಲ್ ಪ್ರಕಾರ ನಮ್ಮ ಲೆಜಿಸ್ಲೇಷನ್ ಅಧಿಕಾರ ಇರುವುದು ಕೇವಲ ರ್ಯಾಟಿಫಿಕೇಷನ್ ಅಂದರೆ ಇದರ ಅರ್ಥ ಸಮ್ಮತಿ ಕೊಡುವುದು. ಕಾನ್ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ಮಾಡುವ ಅಧಿಕಾರ ಆರ್ಟಿಕಲ್ 368ರ ಪ್ರಕಾರ ಪಾರ್ಲಿಮೆಂಟಿಗೆ ಇದೆ ಎಂದು ಅರ್ಥಮಾಡಿಕೊಳ್ಳಬೇಕು. ಈ ರೀತಿ ಪಾರ್ಲಿಮೆಂಟಿಗೆ ಅಧಿಕಾರ ಇದ್ದರೂ ಕೂಡ ಅಮೆಂಡ್‌ಮೆಂಟ್ ಬಿಲ್ ಎರಡೂ ಸದನಗಳಲ್ಲೂ ಮೆಜಾರಿಟಿ ವೋಟಿನಿಂದ ಪಾಸ್ ಆಗುವ ರೀತಿ ಆಗಬೇಕು. ನಮ್ಮ ದೇಶದಲ್ಲಿರುವ ಅರ್ಧ ನಂಬರ್ ರಾಜ್ಯಗಳು ಇದಕ್ಕೆ ಸಮ್ಮತಿ ಕೊಡಬೇಕು ಎಂದು ನಾನು ತಿಳಿದುಕೊಂಡಿದ್ದೇನೆ. ಅದರಂತೆ ಎಲ್ಲರೂ ಸಮ್ಮತಿ ಕೊಟ್ಟಿದ್ದಾರೆ ಯಾರೂ ಅಸಮ್ಮತಿ ವ್ಯಕ್ತಪಡಿಸಿಲ್ಲ. ಅದರಿಂದ ಬಹಳ ಸಂತೋಷ ವ್ಯಕ್ತವಾಗುತ್ತದೆ. ಆದುದರಿಂದ ಎಲ್ಲಾ ಸದಸ್ಯರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸಿ ಈ ಬಿಲ್ಲಿಗೆ ಎಲ್ಲರೂ ಸಮ್ಮತಿ ಕೊಡುತ್ತಾರೆಂದು ನಾನು ಆಶಿಸುತ್ತೇನೆ.

Mr. DEPUTY SPEAKER.—Now I shall put the Resolution to the vote of the House. The question is :

"That this Hous· ratifies the amendments to the Constitution of India falling within the purview of the proviso to clause (2) of Article 368 thereof, proposed to be made by the Constitution (Twenty-eighth Amendment) Bill, 1972, as passed by the two Houses of Parliament."

The Resolution was unanimously adopted.

NON-OFFICIAL RESOLUTION

re:—Steps to remove or improve the existining Slums in Bangalore city.

(*Debate Contd.*)

† ಶ್ರೀ ಕೆ. ಶ್ರೀ ರಾಮುಲು (ಗಾಂಧಿನಗರ).—ಮಾನ್ಯ ಅಧ್ಯಕ್ಷರೇ, 18-4-72 ರಂದು ನಗರದ ಕೊಳಚೆ ಪ್ರದೇಶದ ವಿಷಯವಾಗಿ ನಾನು ಮಾತನಾಡಿದ ನಂತರ ಈ ಸಭೆಯ ಸದಸ್ಯರಾಗಿ ರುವ ಶ್ರೀ ಪೂಸಲಿಂಗಂ ಅವರು ವಾಲ್ ಪೋಸ್ಟರ್ ಹಾಕಿ, ಪ್ರಚಾರ ಮಾಡಿ, ನನ್ನ ಬಗ್ಗೆ ಖಂಡನಾ ಸಭೆಯನ್ನು ನಡೆಸಿದ್ದಾರೆ. 18-4-72 ರಂದು ನಾನು ತಮಿಳರ ಬಗ್ಗೆ ಮತ್ತು ಗುಡಿಸಲು ನಿವಾಸಿಗಳ ಬಗ್ಗೆ ಅವಮಾನಕರವಾಗಿ ಮಾತನಾಡಿದೆ ಎಂದು 30-4-72 ರಂದು ಖಂಡನಾ ಸಭೆಯನ್ನು ನಡೆಸಿ ಅದರಲ್ಲಿ ಭಾಗವಹಿಸಿದ್ದಾರೆ. ವಾಲ್ ಪೋಸ್ಟರ್ ತಮಿಳಿನಲ್ಲದೆ (ತಮಿಳಿನಲ್ಲಿ ಓದಿದರು) ನಾನು ಏನು ಮಾತನಾಡಿದ್ದೇನೆ ಎನ್ನುವುದು ಪ್ರೊಸೀಡಿಂಗ್ಸ್‌ನಲ್ಲಿದೆ.

ಉಪಾಧ್ಯಕ್ಷರು.— ಆ ಪೋಸ್ಟರ್ ನನ್ನಲ್ಲಿ ಕಳುಹಿಸಿ ಕೊಡಿ.

ಶ್ರೀ ಕೆ. ಶ್ರೀ ರಾಮುಲು —ಕಳುಹಿಸಿಕೊಡುತ್ತೇನೆ. ಅದರ ಬಗ್ಗೆ ನಾನು ಕೆಲವು ಮಾತು ಗಳನ್ನು ಹೇಳಬೇಕಾಗಿದೆ. ನಾನು ತಮಿಳರ ಬಗ್ಗೆಯಾಗಲೀ, ಗುಡಿಸಲುವಾಸಿಗಳ ಬಗ್ಗೆಯಾಗಲೀ ಅವಮಾನಕರವಾಗಿ ಮಾತನಾಡಿಲ್ಲ. ಒಂದು ವೇಳೆ ಮಾತನಾಡಿದ್ದರೆ ಕೇಳತಕ್ಕ ಹಕ್ಕು ಮಾನ್ಯ ಸದಸ್ಯರಿಗಿದೆ, ಹಕ್ಕುಭಾಧ್ಯತೆ ಕ್ರಮ ತೆಗೆದುಕೊಳ್ಳುವುದಕ್ಕೆ ಅಧಿಕಾರವುಂಟು. ಇನ್ನೊಂದು ವಿಷಯವೇನೆಂದರೆ ದಿನಚುಡರ್ ಎನ್ನುವ ದಿನಪತ್ರಿಕೆ ಇದೆ. ಅದಕ್ಕೆ ಸರಕಾರದವರು ತಿಂಗಳೊಂದಕ್ಕೆ 2 ಸಾವಿರ ರೂಪಾಯಿ ಜಾಹಿರಾತು ಕೊಡುತ್ತಿದ್ದಾರೆ. ಆ ಪತ್ರಿಕೆಯಲ್ಲಿ ಇನ್ನೂ ಬರುತ್ತಲೇ ಇದೆ, ಬರುತ್ತಲೇ ಇದೆ. ಇದು ಭಾಷೆಯ ಪ್ರಶ್ನೆ. ಆದರೆ ಅವರು ಜಾತಿವಾದದ ಪ್ರಶ್ನೆಯನ್ನು ಎತ್ತಿದ್ದಾರೆ. ನಾನು ಆರಿಸಿಬಂದಿರತಕ್ಕ ಪ್ರಜೆಗಳ ಪರವಾಗಿ ಇಲ್ಲಿ ಮಾತನಾಡುವ ಹಕ್ಕು ನನಗಿದೆ. ಇಲ್ಲ ಎನ್ನುವ ರೀತಿಯಲ್ಲಿ ನನ್ನನ್ನು ಹೆದರಿಸಿದ್ದಾರೆ. ನನ್ನ ರೈಟ್ ಕಟ್ ಮಾಡುವುದಕ್ಕೆ ಆ ಪತ್ರಿಕೆ ಪ್ರಯತ್ನ ಮಾಡಿದೆ. ನಾನು ಮಾತನಾಡಿದರೆ ಖಂಡನಾ ಸಭೆಯನ್ನು ನಡೆಸುತ್ತಾರೋ ಏನೋ ಎನ್ನುವ ಹೆದರಿಕೆ ಇದೆ. ಅದಕ್ಕೆ ತಮ್ಮ ರಕ್ಷಣೆಯನ್ನು ಕೇಳುತ್ತಿದ್ದೇನೆ.

ಮಾನ್ಯ ಅಧ್ಯಕ್ಷರೇ, ಬೆಂಗಳೂರು ಕೊಳಚೆ ನಿವಾಸಿಗಳು 40 ವರ್ಷಗಳಿಂದ ಬೆಂಗಳೂರಿನಲ್ಲಿ ಗುಡಿಸಲು ನಿವಾಸಿಗಳಾಗಿಯೇ ಉಳಿದುಕೊಂಡಿದ್ದಾರೆ. ಮಲಮೂತ್ರ ಸೊಳ್ಳೆ ಇತ್ಯಾದಿ ಕೊಳಚೆ ಯಿಂದ ತುಂಬಿರತಕ್ಕ ಬೆಂಗಳೂರು ಎಂದು ಕರೆಯಬಹುದು. ಬೆಂಗಳೂರಿನ ಸುತ್ತ ಒಂದು ದಿವಸ ಯಾರಾದರೂ ಮಂತ್ರಿಗಳು ಅವಕಾಶ ಮಾಡಿಕೊಂಡು ನೋಡಿದರೆ ಇದರಲ್ಲಿ ಬೆಳೆಯುತಕ್ಕ ಜನ ಯಾವ ರೀತಿಯಲ್ಲಿದ್ದಾರೆ, ಯಾವ ರೂಪದಲ್ಲಿದ್ದಾರೆ ಎಂದ ಅರ್ಥ ಮಾಡಿಕೊಳ್ಳಬಹುದು. ನನ್ನ ಮೊಟ್ಟಮೊದಲನೆಯ ಭಾಷಣದಲ್ಲಿ ಈ ಪ್ರದೇಶಗಳಲ್ಲಿ, ದೇಶಕ್ಕೆ ಬೇಡವಾಗಿರತಕ್ಕ ಮೂರು ಸೌಂಡ್ ಮಕ್ಕಳು ಹುಟ್ಟುತ್ತಾರೆ ಎಂದು ಹೇಳಿದೆ. ಕಳೆದ 25 ವರ್ಷಗಳಿಂದ, ಸರ್ಕಾರ ಯಾವುದೇ ಆಗಿರಲಿ ಇವರ ಬಗ್ಗೆ ಗಮನಕೊಟ್ಟಿಲ್ಲವೆಂದರೆ ತಪ್ಪಾಗಲಾರದು. ಗುಡಿಸಲು ವಾಸಿಗಳು ಉಳಿದುಕೊಂಡಿದ್ದಾರೆ ಇವರ ಬಗ್ಗೆ ಕಳೆದ 25 ವರ್ಷಗಳಿಂದ ಯಾರೂ ಯೋಚನೆ ಮಾಡಿಲ್ಲ, ಅವರ ಬಗ್ಗೆ ಯೋಚನೆ ಮಾಡತಕ್ಕವರು ಬೆಂಗಳೂರಿನಲ್ಲಿ ಯಾರೂ ಇಲ್ಲ, ಮಂತ್ರಿಮಂಡಲದಲ್ಲಿಯೂ ಯಾರೂ ಇಲ್ಲ. ಒಂದು ದೃಷ್ಟಿಯಿಂದ ನೋಡಿದರೆ ಬೆಂಗಳೂರಿಗೆ ಎಲ್ಲ ವಿಧದಿಂದಲೂ ಅನ್ಯಾಯವಾಗಿದೆ.

ಮಂತ್ರಿಗಳು ಐದು ವರ್ಷಕಾಲವಿರುತ್ತಾರೆ. ಆ ಕಾಲದಲ್ಲಿ ಮನೆ, ಮಠ ಎಲ್ಲ ಆಸ್ತಿ ಮಾಡುತ್ತಾರೆ. ಅವರು ಇರತಕ್ಕ ಹಳ್ಳಿಯಲ್ಲಿ ಆಸ್ತಿ ಇರುತ್ತದೆ, ಮದುವೆ ಮಾಡಿಕೊಳ್ಳತಕ್ಕ ಅತ್ತೆ ಮನೆಯಲ್ಲಿ ಆಸ್ತಿ ಇರುತ್ತದೆ, ಬೆಂಗಳೂರಿನಲ್ಲಿ ಆಸ್ತಿ ಇರುತ್ತದೆ. ಇನ್ನು ಎಲ್ಲಾದರೂ ಪ್ರೆಸಿಡೆಂಟ ರಾಗಿ ಹೋದರೆ ಅಲ್ಲಿಯೂ ಆಸ್ತಿ ಮಾಡಿಕೊಳ್ಳುತ್ತಾರೆ. ಹೀಗೆ ನಾಲ್ಕಾರು ಕಡೆ ಆಸ್ತಿ ಇರುವಾಗ, 40 ವರ್ಷದಿಂದ ಬೆಂಗಳೂರಿನಲ್ಲಿಯೇ ಹುಟ್ಟಿ ಬೆಳೆಯುತ್ತಿರುವ ಬಡವರಿಗೆ ಏಕೆ ಅವಕಾಶವಾಗ ಬಾರದು? ಅದರಲ್ಲಿ ತಪ್ಪೇನು? ಹಾಗೆ ಮಾಡದೆ ಇದ್ದರೆ ನಾವು ಎಂಥ ಸಮಾಜವಾದವನ್ನು ಸೃಷ್ಟಿ ಸುವುದು? ಬರೀ ಬೂಟಾಟಿಕೆ ಸಮಾಜವಾದವಾಗುತ್ತದೆ. ನನ್ನ ಕ್ಷೇತ್ರದಲ್ಲಿ ಗುಡಿಸಲು ವಾಸಿಗಳು, ಬಡ ಜನರು ಮತ್ತು ಹರಿಜನರು ಸೇಕಡ 60 ಭಾಗವಿದ್ದಾರೆ. ಅವರಿಗೆ ಕುಡಿಯುವುದಕ್ಕೆ ನೀರಿಲ್ಲ. ಮಂತ್ರಿಗಳಿಗೆ ಪತ್ರ ಬರೆದರೆ ಇನ್ನೂ ಉತ್ತರವೇ ಬಂದಿಲ್ಲ. ಅವರನ್ನು ಎಷ್ಟರಮಟ್ಟಿಗೆ ಉತ್ತಮ ಸ್ಥಿತಿಗೆ ತರಬಹುದಾಗಿತ್ತೋ ಅಷ್ಟಕ್ಕೂ ತಂದಿಲ್ಲ.

(ಶ್ರೀ ಕೆ. ಶ್ರೀರಾಮುಲು)

8 ಲಕ್ಷ ಜನ ಕಾರ್ಮಿಕರು, ಹರಿಜನರು ಇರತಕ್ಕ ಬೆಂಗಳೂರಿನಲ್ಲಿ ನಾಲ್ಕು ಲಕ್ಷ ಜನ ಕಾರ್ಖಾನೆ ಕೆಲಸಗಾರರಿದ್ದಾರೆ. 1972—73ಕ್ಕೆ ಬಜೆಟ್ಟಿನಲ್ಲಿ ಇವರಿಗಾಗಿ ಎಷ್ಟು ಹಣವನ್ನು ಇಟ್ಟಿದ್ದಾರೆ? ಕೇಂದ್ರ ಸರ್ಕಾರದ ಒಂದೂವರೆ ಕೋಟಿ ರೂಪಾಯಿ ಯೋಜನೆ ಇದೆ. ಇಲ್ಲಿರುವ ಬಡ ಜನಗಳಿಗೆ, ಇಲ್ಲಿಂತಕ್ಕ ಸಾವಿರಾರು ಲಕ್ಷಾಂತರ ಗುಡಿಸಲು ವಾಸಿಗಳಿಗೆ 1973ನೇ ಆಗಸ್ಟ್ ವೇಳೆಗೆ ಏನಾದರೂ ಮಾಡುವುದಕ್ಕೆ ಸಾಧ್ಯವೇ! ಇದು ಬಹಳ ಸಂಕಟವಾದ ಪ್ರಶ್ನೆ. ಕಳೆದ 25 ವರ್ಷಗಳಲ್ಲಿ ಗುಡಿಸಲು ವಾಸಿಗಳಿಗಾಗಿ ಏನೇನು ಮಾಡಲಿಲ್ಲವೋ ಅದನ್ನು ಕೆಲವೇ ವರ್ಷಗಳಲ್ಲಿ ಮಾಡುವುದಕ್ಕೆ ಸಾಕಾದಷ್ಟು ದುಡ್ಡನ್ನು ಈ ಬಜೆಟ್ಟಿನಲ್ಲಿ ಒದಗಿಸಬೇಕು. ಇಲ್ಲದೆ ಇದ್ದರೆ ನಾವು ಹೇಳುವುದೆಲ್ಲ ಬೂಟಾಟಿಕೆಯ ಮಾತಾಗಿ ಬಡ ಜನರನ್ನು, ಕಾರ್ಮಿಕರನ್ನು, ಹರಿಜನರನ್ನು ಉದ್ಧಾರ ಮಾಡುತ್ತೇವೆಂದು ಹೇಳಿದರು ಅದನ್ನು ಯಾರೂ ನಂಬಲಾರರು ಎನ್ನುವುದನ್ನು ಸ್ಪಷ್ಟವಾಗಿ ಹೇಳಿ, ಮಾನ್ಯ ಮಂತ್ರಿಗಳು ಈ ವಿಷಯದ ಕಡೆಗೆ ಹೆಚ್ಚು ಗಮನ ಕೊಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

†Sri D. POOSALINGAM (Bharathinagar).—Mr. Deputy Speaker, I am grateful to you for having given me a chance to participate on the non-official resolution brought by Sri T. R. Shamanna regarding the Slum Clearance in Bangalore City. As it stands we have not provided even primary facilities for many of the slums existing in Bangalore. Of course last year the Bangalore City Corporation has spent four or five lakhs to improve the conditions of slum dwellers and in some places borewells were provided. There are some slums in the city. As our Minister said there are some slums like Bhakshi Gardens, which is not fit even for animals to live. I request the Minister to form the Slum Clearance Board as early as possible, to rehabilitate the slum dwellers.

While the hon. member Sri Sriramulu was speaking on this resolution he stated we are giving Karnataka food, we are giving Karnataka water and Karnataka land. It is in the record. I am sorry to say that this kind of speech will not safeguard the interests of minorities. As the slum dwellers have been born here, I feel just like others they have every right to live. My friend said that these slum dwellers during the election time they were asking for Karunanidhi flags and after election they asked for Karnataka flags This is far from truth. I can tell you that in a democratic set up as citizens of this country they have every right to ask for any flag they like. He or his party may not like Karunanidhi flag but it is in support of that Karunanidhi flag that Sri Hanumanthiah won the election and only with that flag that they were able to win in the Bangalore City Corporation. I am sorry I have been forced to speak this.

One more thing I want to say. As D. M. K. we are not here to encourage any more fresh slums here. In this connection I would like to read the resolution of the Bangalore City Corporation :

"Commissioner's letter dated 19th May 1971 placing the letter No. H. M. A. 17 M. N. I. 71 dated 14th May 1971 received from the Secretary to Government, Health and Municipal Administration Department, Bangalore, regarding

'Financing the Slum Clearance Scheme in Bangalore' by contributing:

1.	City Improvement Trust Board	Rs. 30 lakhs
2.	Corporation of the City of Bangalore	30 lakhs
3.	State Government	30 lakhs
4.	Matching contribution by Government of India	90 lakhs
	Grand Total	180

for consideration and decision.

Resolution:

The subject is discussed and resolved as follows:

1. Out of the total sum of Rs. 180 lakhs for the scheme, 2/3 of the amount should be earmarked to the Corporation for the Slum Clearance Scheme and 1/3 of the amount to the City Improvement Trust Board.

2. Separate proposal may be put up for additional staff to this project.

3. Multistoreyed buildings should be constructed on the available corporation land and should be provided to the Corporation employees only."

I want to bring this fact to the notice of the House. I belong to the D. M. K. Party and this resolution was passed when I was the Chairman of the Works Committee of the Bangalore City Corporation. This being the case there is meaning in saying that we are responsible for increasing the slums.

I want to tell one thing. The hon. member referred to some article appearing in the "DINASUDAR". What has appeared in that paper is only a translation of what appeared in the INDIAN EXPRESS. It is on record and it can be verified.

Finally I want to say that we are existing here only to serve the people of Karnataka. I can give one example. Last month the Congress (O) party changed the name of its party as Karnataka Pradesh Congress Committee. But my party changed its name as KARNATAKA STATE D. M. K. Party in 1959.

Mr. DEPUTY SPEAKER.—Is the hon. member sure that he is speaking on the resolution before the House?

Sri D. POOSALINGAM.—Finally I want to conclude by saying that we are loyal to our State and I go even to the extent of saying that we are born here living here and going to die here. We are loyal to our State and I go even to the extent of saying that we are prepared to sacrifice our lives to safeguard the interests of Karnataka.

† ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೇ, ಸ್ಲಂ ಕ್ಲಿಯರೆನ್ಸ್ ಬಗ್ಗೆ ಸಹಾನುಭೂತಿ ತೋರಿಸುವುದು ಸ್ವಾಭಾವಿಕ, ಹಿಂದೆ ನಗರದಲ್ಲಿ ಅಲ್ಲಲ್ಲಿ ಇದ್ದ ಗುಡಿಸಲುಗಳನ್ನು ತೆಗೆಸಬೇಕು ಇದರಿಂದ ನಗರದ ಸೌಂದರ್ಯ ಕೆಡುತ್ತದೆ ಎಂದು ಕಾರ್ಪೊರೇಷನ್ ಮೂಲಕ ಸರಕಾರಕ್ಕೆ ಮನವಿ ಮಾಡಿತ್ತು. ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡರೋ ಗೊತ್ತಿಲ್ಲ. ಬೆಂಗಳೂರು ನಗರಕ್ಕೆ ಗುಡಿಸಲುಗಳು ಒಂದು ರೀತಿಯ ಕಳಂಕವಾಗಿ ಪರಿಣಮಿಸಿದೆ, ಗುಡಿಸಲುಗಳನ್ನೆಲ್ಲಾ ತೆಗೆದು ಇಲ್ಲಿರುವ ಜನಕ್ಕೆ ನಗರದ ಹೊರಗಡೆ ಕಟ್ಟಡಗಳನ್ನು ಕಟ್ಟಿಸಿ ಅನುಕೂಲಮಾಡಬೇಕೆಂದು ಒಂದು ಯೋಜನೆ ಕೂಡ ಇತ್ತು. ಹಿಂದೆ ಇದ್ದ ಮಂತ್ರಿಗಳಿಗೆ ನಾವು ಕೂಡ ಇಲ್ಲಿರುವ ಗುಡಿಸಲುಗಳಲ್ಲಿರುವವರನ್ನೆಲ್ಲಾ ತೆಗೆಯಬೇಕು. ಇವರಿಗೆ ನಗರದ ಹೊರಗಡೆ ಮಲ್ಟಿಸ್ಟೋರೀಡ್ ಬಿಲ್ಡಿಂಗು ಕಟ್ಟಿ ಇವರಿಗೆಲ್ಲಾ ವಸತಿ ಸೌಕರ್ಯ ಮಾಡಬೇಕೆಂದು ಹೇಳಿದ್ದರೂ ಇನ್ನೂ ನಗರದಲ್ಲಿ ಗುಡಿಸಲುಗಳನ್ನು ತೆಗೆಯಲು ಸಾಕಷ್ಟು ಕ್ರಮ ತೆಗೆದುಕೊಂಡಿಲ್ಲ. ನಾವು ಇಂತಹ ಗುಡಿಸಲುಗಳವರನ್ನು ನಗರದಿಂದ ಹೊರಗೆ ಹಾಕುವಾಗ ಇವರನ್ನು ಎಲ್ಲರನ್ನೂ ಒಂದೇ ಕಡೆ ಇರುವಂತೆ ಮಾಡುವುದು ಸರಿಯಲ್ಲ ಎಂದೂ ಸಲಹೆ ಮಾಡಿದ್ದೆವು. ಆದರೂ ಇಂದು ಗುಡಿಸಲುಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಈಗ ನಗರದಲ್ಲಿ ಸೊಳ್ಳೆಕಾಟ ತಡೆಯಬೇಕೆಂದು ಒಂದು ಕಮಿಟಿ ಮಾಡಿದ್ದಾರೆ. ಆದರೆ ಗುಡಿಸಲುಗಳನ್ನು ತೆಗೆಯದೇ ಇದ್ದರೆ ಸೊಳ್ಳೆಗಳು ನಾಶವಾಗುವುದಿಲ್ಲ. ಗುಡಿಸಲುಗಳಿಂದಲೇ ಸೊಳ್ಳೆಗಳು ನಗರದಲ್ಲಿ ಹೆಚ್ಚಾಗುತ್ತಿವೆ. ಮದ್ರಾಸಿನಲ್ಲಿ ಗುಡಿಸಲುಗಳವರನ್ನೆಲ್ಲಾ ಬೇರೆ ಕಡೆ ಇಟ್ಟು ಅವರಿಗೆ ಮನೆಗಳನ್ನು ಮಾಡಿಕೊಟ್ಟಿದ್ದಾರೆ. ಅದೇ ರೀತಿ ಇವರನ್ನೆಲ್ಲಾ ನಗರದ ಹೊರಗೆ ವಾಸಿಸಲು ಅವಕಾಶ ಮಾಡಿಕೊಟ್ಟು ಇವರಿಗೆ ಮನೆಗಳನ್ನು ಮಾಡಿಸಿಕೊಡಬೇಕು ಇಂತಹ ಗುಡಿಸಲುಗಳು ಹೆಚ್ಚಾಗುವುದರಿಂದ ಬೆಂಗಳೂರು ನಗರದ ಸೌಂದರ್ಯವು ಕೆಡುತ್ತಿದೆ. ನಮ್ಮ ಮಾನ್ಯ ಸಚಿವರಾದ ಶ್ರೀ ಬಸವಲಿಂಗಪ್ಪನವರು ನಮ್ಮ ನಗರದಲ್ಲೇ ಇರುವವರಾದ್ದರಿಂದ ಇವರ ಕಾಲದಲ್ಲಾದರೂ ಬೆಂಗಳೂರು ನಗರದ ಸೌಂದರ್ಯವನ್ನು ಕಾಪಾಡುತ್ತಾರೆಂದು ಆಶಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ಆರ್. ಶ್ರೀನಿವಾಸಲುನಾಯ್ಡು (ಶಾಂತಿನಗರ).—ಮಾನ್ಯ ಅಧ್ಯಕ್ಷರೇ, ಕೊಳಚೆ ಪ್ರದೇಶಗಳ ನಿರ್ಮೂಲನೆಯ ಬಗ್ಗೆ ತಂದಿರುವ ನಿರ್ಣಯದ ಬಗ್ಗೆ ಎರಡು ಮಾತುಗಳನ್ನು ಹೇಳಬೇಕಾಗಿದೆ. ಇಡೀ ಹಿಂದೂಸ್ತಾನದಲ್ಲಿ ಅದರಲ್ಲಿಯೂ ನಮ್ಮ ಬೆಂಗಳೂರು ನಗರದಲ್ಲಿ ಕೊಳಚೆ ಪ್ರದೇಶಗಳು ಹೆಚ್ಚು ಇಲ್ಲದಿದ್ದರೂ, ಇದು ಎಲ್ಲ ಕಡೆಗಳಲ್ಲೂ ಇದೆ. ಇವಕ್ಕೆ ಕಾರಣ ನಮ್ಮ ಬೆಂಗಳೂರಿನಲ್ಲಿ ಇಂಡಸ್ಟ್ರಿ ಪ್ರದೇಶಗಳು ಹೆಚ್ಚಾಗಿರುವುದರಿಂದ ಇಲ್ಲಿ ಸ್ವಲ್ಪ ಹೆಚ್ಚಾಗಿದೆ. ನಮ್ಮ ನಗರದಲ್ಲಿ ಸುಮಾರು 140 ಕೊಳಚೆ ಪ್ರದೇಶಗಳು ಇವೆ ಎಂದು ನಾನು ಹೇಳುತ್ತೇನೆ. ಇವು ಸಾಧಾರಣವಾಗಿ ನಾಲ್ಕು ಕಡೆಗಳಲ್ಲಿ ಇರುತ್ತವೆ. ರೆವೆನ್ಯೂ ಸೈಟುಗಳಲ್ಲಿ ಇವೆ. ಪ್ರೈವೇಟು ಲ್ಯಾಂಡುಗಳಲ್ಲಿ ಇವೆ, ಟ್ರಸ್ಟು ಬೋರ್ಡುಗಳ ಭೂಮಿಯಲ್ಲಿವೆ ಮತ್ತು ಕಾರ್ಪೋರೇಷನ್‌ಗೆ ಸೇರಿದ ಜಾಗದಲ್ಲಿ ಇವೆ.

5-00 P. M.

ಇವರು ಹೇಗೆ ಕಟ್ಟಿರುತ್ತಾರೆ? ಸಾಧಾರಣವಾಗಿ ಮನೆ ಪ್ರಶ್ನೆ "ನ್ಯಾಷನಲ್ ಪ್ರಾಬ್ಲಂ", ಪ್ರತಿಯೊಬ್ಬರಿಗೂ ಮನೆ ಬೇಕು, ಹಕ್ಕಿ ಪಕ್ಷಿಗೂ ಮನೆಬೇಕು. ಆದುದರಿಂದ ಕೊಳಚೆ ಪ್ರದೇಶಗಳು ಉದ್ಭವವಾಗುತ್ತವೆ. C. I. T. B. ಯಲ್ಲಿ ಸಾಧಾರಣವಾಗಿ ಬಡವರಿಗೆ ಮನೆ ಸಿಕ್ಕುವುದಿಲ್ಲ, ಆದುದರಿಂದ ಕೊಳಚೆ ಪ್ರದೇಶ ತಾನೆ ತಾನಾಗಿ ಉತ್ಪನ್ನವಾಗುತ್ತದೆ. ಪ್ಯಾಲೆಸ್ ಆರ್ಚರ್ಡ್, ಬಸವನಗುಡಿ ಬನಶಂಕರಿ ಲೇಔಟ್, ರಾಜಾಜಿನಗರ, ಕಾರ್ಡ್ ರೋಡ್ ಎಂದು ಮಾಡಿದ್ದಾರೆ. ಇಲ್ಲಿ ಬಡಜನರಿಗೆ ಸಿಕ್ಕುವುದಿಲ್ಲ. C. I. T. B. ಪ್ರಯೋಜನವಾಗುವುದಿಲ್ಲ. ಆದುದರಿಂದ ಕೊಳಚೆ ಪ್ರದೇಶಗಳು ಬರುತ್ತವೆ. ಕೆಲಸಕಾರ್ಯಗಳು ಸಿಗುವುದು ಬಹಳ ತೊಂದರೆಯಲ್ಲಿ ಇರುವುದರಿಂದ ಬಡತನ ಇದ್ದೇ ಇರುತ್ತದೆ. ಜನ ಬೆಂದಿರುತ್ತಾರೆ, ನೊಂದಿರುತ್ತಾರೆ ಮತ್ತು ಕಂದಿರುತ್ತಾರೆ. ಜನ ಪಟ್ಟಣಕ್ಕೆ ಬರುತ್ತಾರೆ, ಪ್ರತಿನಿತ್ಯ ಕೊನೆ ಪಕ್ಷ 25 ಸಂಸಾರ ವಲಸೆ ಬರುತ್ತವೆ ನಮ್ಮ ಸರ್ಕಾರದವರು ಇವೊತ್ತಿನ ದಿವಸ ನಿರ್ದಿಷ್ಟವಾದ ಕಾರ್ಯಕ್ರಮ ಹಾಕಿಕೊಂಡು, ಈಗ ಇರತಕ್ಕ 140ನ್ನು 180 ಆಗದ ಹಾಗೆ ನೋಡಿಕೊಳ್ಳಬೇಕು. ಇಲ್ಲಿ ಏನಾಗಿದೆಯೆಂದರೆ ಕೊಳಚೆ ಪ್ರದೇಶದಲ್ಲಿ ನಮ್ಮ ಮಿತ್ರರು ಹೇಳಿದ ಹಾಗೆ ಎಲ್ಲಾ ಕಾಯಿಲೆಗಳು ರೋಗಗಳು, ಬರುತ್ತವೆ. ಅವರು ಸಾಧಾರಣವಾಗಿ 10 ಅಡಿಯೊಳಗೆ ಮನೆ ಕಟ್ಟುತ್ತಾರೆ, ಒಂದೊಂದು ಪ್ರದೇಶದಲ್ಲಿ 50—100 ಮನೆ ಇರುತ್ತವೆ ದೂರ ಇರುವುದಿಲ್ಲ. ಕೂಲಿ ಜನ ಲಾಲ್‌ಬಾಗ್, ಮಾರ್ಕೆಟ್, ಅವಿನ್ಯೂ ರೋಡ್‌ನಲ್ಲಿ ಸಣ್ಣಪುಟ್ಟ ಅಂಗಡಿಗಳನ್ನು ಇಟ್ಟುಕೊಂಡು ಕೂಲಿ ಮಾಡಿಕೊಂಡು ಮತ್ತು ಫ್ಯಾಕ್ಟರಿ

ಯಲ್ಲಿ ಕೆಲಸ ಮಾಡುವ ಬಡ ಜನ ಇವರು ಮಸಾಕ್‌ಫ್ಲೋರ್, ಪ್ಯಾಲೆಸ್ ಆರ್ಚರ್ಡ್‌ನಲ್ಲಿ ಮಾಡರನ್ ಫೆಸಿಲಿಟೀಸ್ ಕೇಳುವ ಜನ ಅಲ್ಲ, ಕೊಳಚೆ ಪ್ರದೇಶದ ಜನದವರ ನೆರವು ಎಲ್ಲಾ ಪಾರ್ಟಿಗೂ ಬಂಡವಾಳವಾಗಿದೆ, ಒಟ್ ಕ್ಯಾಚ್ ಮಾಡುವುದಕ್ಕೆ ನಮ್ಮ ಪಕ್ಷದವರು, ವಿರೋಧಪಕ್ಷದವರು ಕೊಳಚೆ ಪ್ರದೇಶದ ಜನರ ಮೇಲೆ ವಿಶ್ವಾಸ ಪ್ರೀತಿ ಇಟ್ಟುಕೊಂಡು ಇರುವರೆಂದು ಒಪ್ಪಿಕೊಳ್ಳುತ್ತೇನೆ. ಅವರಲ್ಲಿ ಎಷ್ಟು ವಿಶ್ವಾಸ ಇದೆಯೋ ಅಷ್ಟು ಅನುಕೂಲತೆ ಕೊಟ್ಟಿಲ್ಲ. ಕಾರಣಾಂತರದಿಂದ ಕೊಳಚೆ ಪ್ರದೇಶ ಬೆಳೆದಿದೆ. ಇವರಿಗೆ ವ ಊರು ಬೇಕು ಔಟ್ ವಾಸದ ಮನೆ, ಆಧುನಿಕ ಫ್ಲಷ್ ನೀರು, ಯೂರಿನಲ್ಸ್, ಕೊಳಾಯಿ ಅನೇಕ ಸಂದರ್ಭದಲ್ಲಿ ಕೊಳಾಯಿಯಲ್ಲಿ ನೀರು ಸಪ್ಲೈ ಮಾಡುವ ಕಾಲದಲ್ಲಿ ಒಬ್ಬರಿಗೊಬ್ಬರು ಹೊಡೆದಾಡುವುದನ್ನು ನೋಡಿದ್ದೇವೆ. They should be provided basic amenities like water, light and urinals. ಹೆಚ್ಚಿನ ರೀತಿಯಲ್ಲಿ ಕಟ್ಟಿಸಿಕೊಟ್ಟು ಸಹಾಯ ಮಾಡಬೇಕ . ಒಂದು ನಿರ್ದಿಷ್ಟವಾದ ಕ್ರಮ ತೆಗೆದುಕೊಳ್ಳಬೇಕೆಂಬುದೇ ನನ್ನ ಸಲಹೆ. ಕೊಳಚೆ ಪ್ರದೇಶಗಳಿಗೆ ಅಭಿವೃದ್ಧಿಗಾಗಿ ಇಂಪ್ರೂವ್‌ಮೆಂಟ್ ಬೋರ್ಡ್ ಇರಬೇಕೆಂದು ಈಗಲೂ ಸಹ ಒತ್ತಾಯಪಡಿಸಿ ಹೇಳುತ್ತೇನೆ. ಸ್ಲಮ್ ಇಂಪ್ರೂವ್‌ಮೆಂಟ್ ಬೋರ್ಡ್ ತಕ್ಷಣ ಆಗಲೇ ಆಗಬೇಕು. ಇದು ಸಿಟಿ ಇಂಪ್ರೂವ್‌ಮೆಂಟ್ ಬೋರ್ಡ್ ಇದ್ದಹಾಗೆ ಇರಬೇಕು. ಇನ್ನು ಮುಂದೆ ಸಿಟಿ ಇಂಪ್ರೂವ್‌ಮೆಂಟ್ ಬೋರ್ಡ್ 30—40 ಸೈಟ್ ಮಾಡಿ ಎಲ್ಲರಿಗೂ ಕೊಡುವಂತೆ ಮಾಡಬೇಕು. 180—120ರ ಸೈಟುಗಳನ್ನು ಕಡಿಮೆ ಮಾಡಬೇಕು. ಪ್ರತಿಯೊಬ್ಬರಿಗೂ ಮನೆ ಬೇಕು ಎಂದು ಹೇಳತಕ್ಕ ನಾವು Let there be uniform standard of sites throughout the city. 30 × 40 ಸೈಟಿನಲ್ಲಿ ಮನೆ ಕಟ್ಟಿಕೊಳ್ಳಬಹುದು. ಸೊಳ್ಳೆಗಳ ಕಾಟ ನಗರ ಸುತ್ತ ಹೋಗುವಾಗ ನೋಡಿದ್ದೇವೆ. C.I.T.B. ಯವರು ಅಕ್ವಿಜಿಷನ್ ಪ್ರೊಸಿಡೀಂಗ್ಸ್ ಎಲ್ಲಿ ಸುಲಭವಾಗಿ ಆಗಿದೆಯೋ ಅಲ್ಲಿ ಜಮೀನು ಕೊಂಡುಕೊಂಡು ಸೈಟ್ ಮಾಡಿದ್ದಾರೆ. ಮಧ್ಯೆ ಗ್ರೀನ್ ಹಾಗೆಯೇ ಉಳಿದಿದೆ. ಸೊಳ್ಳೆ ಇರುವುದು. ನೀರು ಹೋಗುವುದಕ್ಕೆ ಅನುಕೂಲತೆ ಇಲ್ಲ. ಕಾರಣ ಏನೆಂದರೆ ಕಾರ್ಪೊರೇಷನ್, ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಮತ್ತು ವಾಟರ್ ಬೋರ್ಡ್ ಈ ಮೂವರ ವ್ಯವಸ್ಥೆಯಲ್ಲಿ ಹೊಂದಾಣಿಕೆ ಇಲ್ಲ. ವಾಟರ್ ಬೋರ್ಡ್ ಬೇರೆ ಬೇರೆ ಮಾಡುತ್ತಾರೆ ಎಂದು ಇಲಾಖೆಯವರು ಕಾರ್ಪೊರೇಷನ್ ವಾಟರ್ ಬೋರ್ಡ್ ಮಾಡುತ್ತಾರೆ ಎಂದು, ವಾಟರ್ ಬೋರ್ಡಿನವರು C. I. T. B. ಯವರು ಮಾಡುತ್ತಾರೆ ಎಂದು ಈ ಮೂರು ಇಲಾಖೆಯನ್ನು ಸರಿಯಾದ "ಕೋಆರ್ಡಿನೇಷನ್" ಕಮಿಟಿ ಮಾಡಿ ನಿರ್ದಿಷ್ಟವಾದ ಕಾರ್ಯಕ್ರಮ ಹಾಕಿಕೊಳ್ಳುವಂತೆ ಮಾಡಿಕೊಳ್ಳಬೇಕು. ಜೊತೆಗೆ ಸ್ಲಮ್ಸ್ ಕ್ಲಿಯರ್ ಮಾಡುವ ಬಗ್ಗೆ ನಿರ್ದಿಷ್ಟ ಕ್ರಮ ಹಾಕುವ ಕಾಲದಲ್ಲಿ ಟ್ರಾನ್ಸಿಟರಿ ಕ್ಯಾಂಪ್ಸ್‌ನಿಂದ ವಸತಿ ಕಲ್ಪಿಸುವ ಕ್ರಮ ಮಾಡಬೇಕಾಗುತ್ತದೆ. ಮುಖ್ಯವಾಗಿ ಸಿಟಿ ಮಧ್ಯಭಾಗದಲ್ಲಿ ಅನೇಕ ಸಂದರ್ಭಗಳಲ್ಲಿ ನೋಡಿದರೆ ಬೆಂಗಳೂರು ಸುಂದರವಾದ ಪಟ್ಟಣ, ಗಾರ್ಡನ್ ಸಿಟಿ ಎಂದು ದೂರದಿಂದ ಬಂದು ನೋಡಿದವರು ಹೇಳುತ್ತಾರೆ. ಕೊಳಚೆ ಪ್ರದೇಶ ಹೇಗೆ ಇದೆ, ಇವುಗಳನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರ "ಫೈನಾನ್ಸ್" ಬೇಕು. C. I. T. B. ಯಿಂದ ಸೆಂಟ್ರಲ್ ಗೌರ್ನಮೆಂಟ್ ಸಾಲ ಅಥವಾ ಕಾರ್ಪೊರೇಷನ್ ಹಣವನ್ನು ಒದಗಿಸಿ ಕೆಲವು ಮನೆಗಳನ್ನು ಒಂದೇ ಸಮನೆ ಕಟ್ಟಿಕೊಂಡು ಹೋಗುವುದು ಒಳ್ಳೆಯದು. ಮೊದಲೇ ಹೇಳಿದ ಹಾಗೆ "ಹಕ್ಕಿಪಕ್ಷಿಗಳಿಗೂ" ಮನೆ ಬೇಕು. ಆದರೆ ಮನೆ ಸಮಸ್ಯೆ ಒಂದೇ ದಿವಸದಲ್ಲಿ ಮುಗಿಯುವುದಕ್ಕೆ ಸಾಧ್ಯವಿಲ್ಲ. ಎಲ್ಲೆಲ್ಲಿ "ಪ್ಯಾಚಸ್" ಇದೆ, ಜಾಗ ಇದೆ ಅಲ್ಲಿ "ವರ್ಟಿಕಲ್" vertical ಆಗಿ ಮನೆಗಳನ್ನು ಕಟ್ಟಬೇಕು, ದೂರ ಹೋದರೆ ನೀರು ಸಪ್ಲೈ ಮಾಡುವುದಕ್ಕೆ ಕಷ್ಟವಾಗುತ್ತದೆ. ಅಲ್ಲಿ ಎಲ್ಲಾ ಬಡವರು, ಎಲ್ಲಾ ಜಾತಿಯವರು ಎಲ್ಲಾ ಕೋಮಿನವರು, ತಮಿಳರು, ಕನ್ನಡಿಗರು, ಇರುತ್ತಾರೆ. ಹೈಜನಿಕ್ ಕಂಡಿಷನ್ ಅಲ್ಲಿ ಇರುವುದನ್ನು ನೋಡಿದರೆ ಗೊತ್ತಾಗುತ್ತದೆ ನಮ್ಮ ಕಾರ್ಪೊರೇಷನ್ ಆಗಲಿ ಸಿಐಟಿಬಿ ಆಗಲಿ ವಾಟರ್ ಬೋರ್ಡ್ ಆಗಲಿ ಪ್ಲಾನ್ ಹಾಕಿ ಕಾರ್ಯಕ್ರಮ ಮಾಡಬೇಕಾಗುತ್ತದೆ. ಇವರ ಜೊತೆಗೆ "ಕಮ್ಯೂನಿಟಿ ಸೆಂಟರ್ಸ್" ಮಾಡಬೇಕಾಗುತ್ತದೆ. ಅನೇಕಜನ ಅಲ್ಲಿ ಕೈಗಾರಿಕೆಯಲ್ಲಿ ಕೆಲಸ ಮಾಡುವವರು ಇದ್ದಾರೆ. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್, ಕಾಟೇಜ್ ಇಂಡಸ್ಟ್ರೀಸ್, ಇವುಗಳನ್ನು ಕೊಳಚೆ ಪ್ರದೇಶಗಳಲ್ಲಿ ಸ್ಥಾಪನೆ ಮಾಡಬೇಕು. ಆದರಿಂದ ಬಂಡವಾಳಶಾಹಿಗಳು ಸಹಾಯ ಮಾಡುವುದಕ್ಕೆ ಇಷ್ಟವಿಲ್ಲ. ಎಂದರೆ ಕೊಳಚೆ ಪ್ರದೇಶಗಳಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳನ್ನು ಮಾಡತಕ್ಕ ಜನರು ಎಲ್ಲಾ ಬಡ ಜನ. ಹಳ್ಳಿಯಲ್ಲಿ ಬಡತನದಲ್ಲಿ ಬೆಂದು ಉಪವಾಸ ಬಿದ್ದು "ಕೆಟ್ಟು ಪಟ್ಟಣ" ಸೇರು ಎಂದು ಹೇಳುತ್ತಾರೆ ಆ ರೀತಿ ಬಂದು ಸೇರಿರುತ್ತಾರೆ. ಆದುದರಿಂದ ಈಗ ಇರತಕ್ಕ 140 ಸ್ಲಮ್ಸ್‌ಗಳನ್ನು ಹೇಗಾದರೂ ನಿರ್ಮೂಲ ಮಾಡಬೇಕು. ಒಂದು ನಿರ್ದಿಷ್ಟವಾದ ಕಾರ್ಯಕ್ರಮ ಹಾಕಿಕೊಳ್ಳುವುದು ಒಳ್ಳೆಯದು. ಕೊಳಚೆ ಪ್ರದೇಶಗಳು ಬೆಳೆಯದಹಾಗೆ ನೋಡಿಕೊಳ್ಳಬೇಕಾದುದು ನಮ್ಮ ಕರ್ತವ್ಯವೆಂದು ಹೇಳಿ, ಎರಡು ಮಾತುಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಬಸವಲಿಂಗಪ್ಪ (ನಗರಾಡಳಿತ ಶಾಖೆಯ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷರೇ, ಈ ಸಭೆಯ ಮಾನ್ಯ ಸದಸ್ಯರಾದ ಶ್ರೀಮಾನ್ ಶಾಮಣ್ಣನವರು ಕೊಳಚೆ ಪ್ರದೇಶಗಳ ಬಗ್ಗೆ ತಂದಿರುವ ನಿರ್ಣಯ ಹೀಗೆ ಇದೆ :

> "This Assembly is of the opinion that immediate steps be taken to remove or improve the existing slums in Bangalore City, which is causing hardship and inconvenience to the slum-dwellers."

ಮಾನ್ಯ ಸದಸ್ಯರು ಈ ಸಭೆಯಲ್ಲಿ ಮಾತನಾಡಿ ವ್ಯಕ್ತಪಡಿಸಿರತಕ್ಕ ಆಕಾಂಕ್ಷೆ ನೋಡಿದರೆ ಸುಮಾರು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ಈ ಕೊಳಚೆ ಪ್ರದೇಶಗಳು ಎಲ್ಲರ ಗಮನ ಸೆಳದಿದ್ದರೂ ಕೂಡ ಅದು ನಿವಾರಣೆಯಾಗದೆ ಹಾಗೆ ಉಳಿದಿರತಕ್ಕದ್ದು ನಮ್ಮ ಮಾನ್ಯ ಸದಸ್ಯರ ಗಮನದಲ್ಲಿರಬೇಕು. ನಾವು ಸರ್ಕಾರವನ್ನು ವಹಿಸಿಕೊಂಡಮೇಲೆ ಈ ಕೊಳಚೆ ಪ್ರದೇಶಗಳ ಅಭಿವೃದ್ಧಿ ಬಗ್ಗೆ ತೀವ್ರವಾದ ಗಮನವನ್ನು ಕೊಟ್ಟು ಆದಷ್ಟು ಜಾಗ್ರತೆ ಈ ಸಮಸ್ಯೆಯನ್ನು ಬಗೆಹರಿಸಲೇಬೇಕು ಎಂದು ನಿರ್ಧಾರಮಾಡಿದ್ದೇವೆ. ಬೆಂಗಳೂರಿನಲ್ಲಿ ಸುಮಾರು 128 ಕೊಳಚೆ ಪ್ರದೇಶಗಳು ಇವೆ.

ಶ್ರೀ ವಾಟಾಳ್ ನಾಗರಾಜ್.—ಇವು ಹನುಮಂತನ ಬಾಲ ಬೆಳೆದಹಾಗೆ ಬೆಳದಿವೆ.

ಶ್ರೀ ಬಿ. ಬಸವಲಿಂಗಪ್ಪ.—ಹಾಗೆ ಬೆಳೆದಿರತಕ್ಕ ಕೊಳಚೆ ಪ್ರದೇಶಗಳ ಪರವಾಗಿ ಮಾತನಾಡಿದ ಶ್ರೀ ವಾಟಾಳ್ ನಾಗರಾಜ್ ಮತ್ತು ಇನ್ನು ಅನೇಕ ಮಾನ್ಯ ಸದಸ್ಯರು ಈ ಬಗ್ಗೆ ನಮ್ಮ ಸರ್ಕಾರದ ಮುಂದೆ ಏನು ಮಾಡಬೇಕೆಂದು ನಿರ್ದೇಶನ ಮಾಡಲಿಲ್ಲ. ಎಲ್ಲಾ ಕೊಳಚೆ ಪ್ರದೇಶಗಳನ್ನು ಒಂದು ನಿರ್ದಿಷ್ಟವಾದ ಅವಧಿಯಲ್ಲಿ ನಿರ್ದಿಷ್ಟವಾದ ಕಾರ್ಯಕ್ರಮ ಹಾಕಿಕೊಂಡು ಬಗೆಹರಿಸುವುದಕ್ಕೆ ನಮ್ಮ ಸರ್ಕಾರವೇ ಅಲ್ಲ ಕೇಂದ್ರಸರ್ಕಾರ ಕೂಡ ತೀರ್ಮಾನ ಮಾಡಿದೆ. ನಾವು ಮಾಡಿದ ಅಂದಾಜು ಪ್ರಕಾರ ಬೆಂಗಳೂರಿನಲ್ಲಿ 25 ಸಾವಿರ ಸಂಸಾರಗಳು ಇವೆ. ಮತ್ತೆ ಆಗಿಂದಾಗ್ಗೆ ಬಂದು ಹೋಗತಕ್ಕವರು ಈ ಕಾರ್ಖಾನೆಯಲ್ಲಿ ಕೆಲಸಮಾಡತಕ್ಕವರ ಎಲ್ಲಾ ಲೆಕ್ಕವನ್ನು ತೆಗೆದುಕೊಂಡರೆ ಇನ್ನು 5 ಸಾವಿರ ಸಂಸಾರಗಳು ಈ ಕೊಳಚೆ ಪ್ರದೇಶಗಳಲ್ಲಿ ಇವೆ. ಅವರು ಬೇರೆ ಕೊಳಚೆ ಪ್ರದೇಶಗಳನ್ನು ಮಾಡಿಕೊಂಡು ಸಂಸಾರ ನಡೆಸುತ್ತಿದ್ದಾರೆ. ಅವರಿಗೆ ಎಲ್ಲಾ ಮನೆ ಕಟ್ಟಿಕೊಡಬೇಕು ಎಂದು ಯೋಚನೆ ಮಾಡುವುದಾದರೆ ಒಂದು ಸಂಸಾರಕ್ಕೆ 3 ಸಾವಿರ ರೂಪಾಯಿ ಖರ್ಚುಮಾಡಿದರೆ 30 ಸಾವಿರ ಕುಟುಂಬಗಳಿಗೆ 60 ಕೋಟಿ ರೂಪಾಯಿ ಬೇಕಾಗುತ್ತದೆ. 60 ಕೋಟಿ ರೂಪಾಯಿ ಹಣವನ್ನು ಈ ಬಾಬಿಗೆ ಒದಗಿಸಿ ಒಂದೆರಡು ವರ್ಷಗಳಲ್ಲಿ ಈ ಸಮಸ್ಯೆ ಪರಿಹಾರ ಮಾಡುವುದಕ್ಕೆ ಸಾಧ್ಯವಿಲ್ಲ. ನಾವು ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇದರ ಪ್ರಕಾರ ಎಲ್ಲೆಲ್ಲಿ ಕೊಳಚೆ ಪ್ರದೇಶಗಳು ಇವೆ, ಅಲ್ಲಲ್ಲಿ ನಗರ ಸೌಲಭ್ಯಗಳನ್ನು ಒದಗಿಸುವುದು ಒಂದು ಕಾರ್ಯಕ್ರಮ. ವಿದ್ಯುತ್ ಬೆಳಕನ್ನು ಒದಗಿಸುವುದು, ಒಳಚರಂಡಿ ವ್ಯವಸ್ಥೆ ಮಾಡುವುದು, ರಸ್ತೆಗಳನ್ನು ಮಾಡುವುದು ನೀರಿನ ವ್ಯವಸ್ಥೆ ಮಾಡುವುದು ಇದೆ; ಇದು ಒಂದು ಕಾರ್ಯಕ್ರಮ. ಇನ್ನು ಒಂದು ಕಾರ್ಯವು ಏನೆಂದರೆ ಎಲ್ಲಾ ಸೌಲಭ್ಯಗಳನ್ನು ಒದಗಿಸಿ ಇಲ್ಲಿ ಒಂದು ಯೋಜಿತ ಕಾರ್ಯಕ್ರಮದ ಪ್ರಕಾರ ಮನೆ ಕಟ್ಟಿಸಿಕೊಡುವುದು ಕಾರ್ಯಕ್ರಮದಲ್ಲಿ ಇದೆ. ಎರಡು ಕಾರ್ಯಕ್ರಮಗಳನ್ನು ಒಂದೇ ಸಮಯದಲ್ಲಿ ನಾವು ಪ್ರಯತ್ನಮಾಡಿಬಿಟ್ಟು ಆದಷ್ಟು ಜಾಗ್ರತೆ ಆದಷ್ಟು ಬೇಗ ಆದಷ್ಟು ಕೊಳಚೆ ಪ್ರದೇಶಗಳನ್ನು ನಿರ್ಮೂಲ ಮಾಡತಕ್ಕದ್ದು ಸರ್ಕಾರದ ಉದ್ದೇಶ.

ಶ್ರೀಮಾನ್ ಪೂಸಲಿಂಗಮ್ ಅವರು ಮಾತನಾಡುತ್ತಾ ಕೆಲವು ಆತಂಕಗಳನ್ನು ವ್ಯಕ್ತಪಡಿಸಿದರು. ಏನೆಂದರೆ, ನಾವೂ ಕರ್ನಾಟಕದಲ್ಲಿ ಹುಟ್ಟಿದ್ದೇವೆ, ಬೇರೆಯವರು ಅಪಾದನೆಮಾಡಿದ ಹಾಗೆ ನಾವು ಬೇರೆ ಕಡೆಗೆ ಲಾಯಲ್ಟಿ ತೋರಿಸುತ್ತಾ ಇಲ್ಲ ಎಂದು ವ್ಯಕ್ತಪಡಿಸಿದರು. ಈ ವಿಷಯದಲ್ಲಿ ಸರ್ಕಾರಕ್ಕೆ ಸಂಕುಚಿತ ಮನೋಭಾವನೆ ಇಲ್ಲವೆಂದು ಈ ಸದನದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅಲ್ಪ ಸಂಖ್ಯಾತರು ಏನು ಇದ್ದಾರೆ, ಮರಾಠಿ ಮಾತನಾಡುವವರು, ತೆಲುಗು ಮಾತನಾಡುವವರು, ಯಾರು ಯಾರು ಇದ್ದಾರೋ ಅವರೆಲ್ಲರೂ ಸಹೋದರರಂತೆ, ಸಮಭಾಗಿಗಳಾಗಿ ಎಲ್ಲಾ ಹಕ್ಕುಗಳನ್ನು ಹೊಂದುವ ಅಧಿಕಾರ ಅವರಿಗೆ ಉಂಟು. ಆದ್ದರಿಂದ ಶ್ರೀಮಾನ್ ಪೂಸಲಿಂಗಂ ಅವರು ಯಾವ ಆತಂಕವನ್ನು ಇಟ್ಟುಕೊಳ್ಳಬಾರದು ಎಂದು ಹೇಳುತ್ತೇನೆ. ದೇಶದ ಅಭಿವೃದ್ಧಿಯಲ್ಲಿ ತಾವು ಕೂಡ ಹೋರಾಟ ನಡೆಸುತ್ತೇವೆ ಎಂದು ಹೇಳಿದ್ದಾರೆ, ಅದನ್ನು ನಾನು ಸ್ವಾಗತಿಸುತ್ತೇನೆ. ಇನ್ನು ಕೆಲವರು ಕೊಳಚೆ ಪ್ರದೇಶದಲ್ಲಿರುವ ಜನಗಳು ವಸತಿ ಸೌಕರ್ಯವಿಲ್ಲದೆ ಬಹಳ ಕಷ್ಟದಲ್ಲಿದ್ದಾರೆಂದು ಹೇಳಿದ್ದಾರೆ. ಅದನ್ನು ಆದಷ್ಟು ಜಾಗ್ರತೆ ನಿವಾರಣೆ ಮಾಡುವುದಕ್ಕೆ

ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇನೆ. ಮುಂದಿನ ತಿಂಗಳು ಸ್ವಾತಂತ್ರ್ಯೋತ್ಸವದ ಬೆಳ್ಳಿ ಹಬ್ಬದ ಅಂಗವಾಗಿ ಈ ಕಾರ್ಯಕ್ರಮ ಪ್ರಾರಂಭ ಮಾಡಬೇಕೆಂದು ಒಂದು ಸಮಿತಿಯನ್ನು ರಚನೆ ಮಾಡಿದ್ದೇವೆ. ನಾನು ಅದಕ್ಕೆ ಅಧ್ಯಕ್ಷನಾಗಿದ್ದೇನೆ, ಮತ್ತು ಡೆಪ್ಯೂಟಿ ಕಮಿಷನರ್ ಅವರು ಪ್ರೆಸಿಡೆಂಟ್ ಆಗಿದ್ದು ಆ ಕೆಲಸ ಮಾಡುವುದಕ್ಕೆ ತೀರ್ಮಾನ ಮಾಡಿದ್ದೇವೆ. ಈ ಕೆಲಸಕಾರ್ಯಗಳನ್ನು ಪ್ರಾರಂಭ ಮಾಡುವುದರಲ್ಲಿ, ಶೀಘ್ರವಾಗಿ ಕೆಲಸ ಪೂರೈಸುವುದರಲ್ಲಿ ಯಾವ ಆತಂಕವೂ ಬರಲಾರದು ಎಂದು ಹೇಳುವುದಕ್ಕೆ ನಾನಾದರೂ ಇಚ್ಛೆಪಡುತ್ತೇನೆ. ಒಂದು ಅತಿಶಯವಾದ ಸನ್ನಿವೇಶ ಎಂದರೆ, ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಂತ್ರಿಗಳಿಗೆ ವಾಟರ್ ಸಪ್ಲೈ ಸೂಯರೇಜ್ ಬೋರ್ಡು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡು ಮತ್ತು ಇತರೆ ಕೆಲಸಗಳು ಸೇರಿವೆ. ಈ ಒಂದು ವ್ಯವಸ್ಥೆ ಸರ್ಕಾರದಲ್ಲಿ ಮಾಡತಕ್ಕದ್ದು ಒಂದು ವಿಶೇಷವಾದ ಸಂಗತಿ. ಕೊಳಚೆ ಪ್ರದೇಶಗಳಿಗೆ ಬೇಕಾಗಿರತಕ್ಕ ಖಾತೆಗಳು ಮುನಿಸಿಪಲ್ ಅಡ್ಮಿನಿಸ್ಟ್ರೇಷನಲ್ಲಿ ಸೇರಿರುವುದರಿಂದ ಅತಿ ಶೀಘ್ರವಾಗಿ ಮಾಡುವುದಕ್ಕೆ ಯಾವ ಆತಂಕವೂ ಇರುವುದಿಲ್ಲ ಎಂದು ನಾನು ಹೇಳುತ್ತೇನೆ. ಇನ್ನೊಂದು ವಿಷಯ ಏನೆಂದರೆ, ಬೆಂಗಳೂರು ಸಿಟಿಯಲ್ಲಿರತಕ್ಕ ಕೆಲವು ಸ್ಲಂ ಪ್ರದೇಶಗಳು ಬಹಳ ಬೆಲೆ ಬಾಳತಕ್ಕ ಪ್ರದೇಶಗಳು. ಅವುಗಳನ್ನು ಜನಗಳಿಗೆ ಪುಕ್ಕಟೆಯಾಗಿ ಕೊಡತಕ್ಕ ವ್ಯವಸ್ಥೆ ಮಾಡಬೇಕಾಗಿದೆ. ಅಥವಾ ಏನಾದರೂ ಸಬ್ಸಿಡಿ ರೂಪದಲ್ಲಿ ಆ ಬೆಲೆಯನ್ನು ಕೊಡತಕ್ಕ ವ್ಯವಸ್ಥೆಮಾಡಬೇಕಾಗಿದೆ. ಇದು ಹಣದ ವಿಚಾರವಾದ್ದರಿಂದ, ಟ್ರಸ್ಟಬೋರ್ಡಿನವರಿಗೂ ಲುಕ್ಸಾನು ಆಗದ ಹಾಗೆ ಸೂಯರೇಜ್ ಬೋರ್ಡಿಗೂ ಮತ್ತು ಯಾರಿಗೂ ಲುಕ್ಸಾನು ಆಗದ ಹಾಗೆ ಒಂದು ವ್ಯವಸ್ಥೆಯ ರೂಪದಲ್ಲಿ ಅವರಿಗೆ ಕೊಡಬೇಕು ಎಂದು ಸರ್ಕಾರದ ಗಮನದಲ್ಲಿದೆ. ಇಂಥ ಒಂದು ರೀತಿಯ ಕಾರ್ಯಕ್ರಮವನ್ನು ಸರ್ಕಾರ ನೀಗಿಸುವುದು ಒಂದು ಮುಖ್ಯವಾದ ಉದ್ದೇಶ. ಈ ಕಾರ್ಯಕ್ರಮ ಪ್ರಾರಂಭ ಮಾಡಿದಮೇಲೆ, ಆತಂಕ ಇಲ್ಲದೆ ಸುಲಲಿತವಾಗಿ ನಡೆದುಕೊಂಡು ಹೋಗುತ್ತದೆ ಮತ್ತು ನಾವು ತೀವ್ರತೆಯ ಮನಸ್ಸಿನಿಂದ ಈ ಕೆಲಸ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ಈಗ ತಾವು ಎಲ್ಲಿ ಇದ್ದೀರಿ !

ಶ್ರೀ ಬಿ. ಬಸವಲಿಂಗಪ್ಪ.—ಅವರಿಗೆ ಸರಿಯಾಗಿ ಜೀವನ ಮಾಡುವುದಕ್ಕೆ ಒಂದು ಶಕ್ತಿ ಕೊಡದಿದ್ದರೆ ಅವರು ಹೇಗೆ ಜೀವನ ಮಾಡುತ್ತಾರೆ? ನಾನು ಬಹುಶಃ ಕೊಳಚೆ ಪ್ರದೇಶದಲ್ಲಿ ಹೋಗಿ ಜೀವನ ಮಾಡಬೇಕು ಎನ್ನುವುದು ತಮ್ಮ ಇಚ್ಛೆ ಅಲ್ಲ ಎಂದು ನಾನು ಭಾವಿಸುತ್ತೇನೆ. ಈ ಕೊಳಚೆ ಪ್ರದೇಶಗಳಲ್ಲಿ ವಾಸವಾಗಿರತಕ್ಕವರನ್ನು ಹೊರಗೆ ಹಾಕಬೇಡಿ, ಏನಾದರೂ ಸೌಲಭ್ಯ ಕೊಡಿ ಹೊರಗೆ ಹೋಗುತ್ತಾರೆ ಎನ್ನುವ ಅವರ ಅಭಿಪ್ರಾಯದಲ್ಲಿ ಯಾವ ಭಿನ್ನಾಭಿಪ್ರಾಯವಿಲ್ಲ. ಅಲ್ಲಿ ವಾಸ ಮಾಡತಕ್ಕ ಜನ ಕೂಲಿಯಿಂದ ಮತ್ತು ಸಣ್ಣ ಸಣ್ಣ ಕೆಲಸದಿಂದ ಜೀವನ ಮಾಡುತ್ತಾರೆ ಅವರಿಗೆ ಒಂದು ಶಾಶ್ವತವಾದ ಕಸಬು ಇಲ್ಲದೆ ಇರುವುದರಿಂದ ನಾವು ನೇರವಾಗಿ ಎಲ್ಲಿ ಬ್ಯುಸಿನೆಸ್‌ಪ್ಲೇಸ್ ಇದೆ ಅಲ್ಲಿ ಅವರಿಗೆ ವಸತಿ ಒದಗಿಸುವುದು ಸೂಕ್ತ ಎಂದು ನನ್ನ ಅಭಿಪ್ರಾಯ. ಇದೇ ರೀತಿಯಲ್ಲಿ 1995ನೇ ಇಸವಿಯಲ್ಲಿ ಸರ್ಕಾರ ಒಂದು ಹುಕುಂ ಮಾಡಿತ್ತು ಎಲ್ಲೆಲ್ಲಿ ಇಂಥ ಜನಗಳು ವಾಸವಾಗಿದ್ದಾರೋ, ಹರಿಜನರು ನಿಮ್ನ ವರ್ಗದವರು, ಬಡ ಜನರು ವಾಸವಾಗಿದ್ದಾರೋ, ಅವರನ್ನು ಬೇರೆಕಡೆಗೆ ರವಾನೆ ಮಾಡಬಾರದು, ಫ್ರಿಹೋಲ್ಡ್ ಮತ್ತು ಲೀಸ್ ಹೋಲ್ಡ್ ಜಮೀನಿನ ಆಧಾರದ ಮೇಲೆ ಅವರಿಗೆ ಜಮೀನನ್ನು ಕೊಡಬೇಕು, ಹೊರಗೆ ಹಾಕಬಾರದು ಎಂದು ಸರ್ಕಾರ ಹುಕುಂ ಮಾಡಿದರು. ಅದನ್ನು ಗಮನದಲ್ಲಿಟ್ಟುಕೊಂಡು ನಾವು ಬೆಂಗಳೂರು ಪಟ್ಟಣ ಬೆಳೆಯುತ್ತಾ ಹೋದ ಹಾಗೆ ಜಮೀನು ಕಡಿಮೆಯಾಗುತ್ತಾ ಹೋಗುತ್ತದೆ ಎಂದು ಆದಷ್ಟು ಮಲ್ಟಿಸ್ಟೋರೀಡ್ ಬಿಲ್ಡಿಂಗ್‌ಗಳನ್ನು ಕಟ್ಟಿ ಜನಗಳಿಗೆ ಅವಕಾಶ ಮಾಡಿಕೊಡಬೇಕು ಎನ್ನುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ವಾಟಾಳ್ ನಾಗರಾಜ್.—ಈ ಕೊಳಚೆ ಪ್ರದೇಶ ಬೆಂಗಳೂರಿನಲ್ಲಿ ಜಾಸ್ತಿಯಾಗುವುದಕ್ಕೆ ಕಾರಣ ಯಾರು ಎಂಬ ಅಂಕಿ ಸಂಖ್ಯೆಗಳು ತಮ್ಮಲ್ಲಿ ಇದ್ದರೆ ಈ ಸಭೆಗೆ ತಿಳಿಸಿದರೆ ಒಳ್ಳೆಯದು. ಅಲ್ಲಿ ವಾಸ ಮಾಡತಕ್ಕವರು ಯಾವ ಕಡೆಯಿಂದ ಬಂದಿರುವವರು, ಯಾವ ಭಾಷೆ ಮಾತನಾಡುವವರು, ಈ ಕೊಳಚೆ ಪ್ರದೇಶ ಜಾಸ್ತಿಯಾಗಬೇಕಾದರೆ ಕಾರಣರು ಯಾರು ಎನ್ನುವುದು ಗೊತ್ತಾಗುತ್ತದೆ. ಎಲ್ಲಿ ಕಾರ್ಪೋರೇಷನ್ ಜಾಗ ಇದೆ, ಅಲ್ಲಿ ಗುಡಿಸಲುಗಳನ್ನು ಹಾಕಿಕೊಂಡಿದ್ದಾರೆ. ಒಂದೊಂದು ದಿವಸಕ್ಕೆ 100—165 ಗುಡಿಸಲುಗಳು ಬೆಳೆಯಬೇಕಾದರೆ ಕಾರಣ ಯಾರು ! ಇದೇ ರೀತಿ ಆದರೆ ಬೆಂಗಳೂರು ಉಳಿಯುವುದಕ್ಕೆ ಸಾಧ್ಯವೇ ? ತಾವು ಸರ್ವೆ ಮಾಡಿದ್ದರೆ, ಯಾವ ಯಾವ ಭಾಷೆಯನ್ನು ಮಾತನಾಡುವವರು ಇದ್ದಾರೆ ಎನ್ನುವ ಮಾಹಿತಿ ತಮ್ಮಲ್ಲಿ ಇದ್ದರೆ ಹೇಳಿ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ವಿವೇಚನಾತ್ಮಕವಾದ ಒಂದು ವಿಷಯವನ್ನು ಎತ್ತಿದ್ದಾರೆ. ಪ್ರಪಂಚದಲ್ಲಿ ಎಲ್ಲಾ ಕಡೆಯೂ, ಇಂಗ್ಲೇಂಡಿನಲ್ಲಿಯೂ ಸಹ

(ಶ್ರೀ ಬಿ. ಬಸವಲಿಂಗಪ್ಪ)

ಇದು ಒಂದು ಸಹಬಾಳ್ವೆ ದೇಶ ಎಂದ ಅವರು ತಿಳಿದುಕೊಂಡಿದ್ದಾರೆ. ಯಾವ ದೇಶದವರೇ ಆಗಲಿ ಇಲ್ಲಿಗೆ ಬಂದು ನೆಲಸಬಹುದು. ಇಡೀ ಹಿಂದೂಸ್ಥಾನದಲ್ಲಿ ಯಾರೇ ಆಗಲೀ ಅವರಿಗೆ ಬೇರೆ ಯಾವ ರಾಜ್ಯದಲ್ಲಿ ಜಾಗ ಕೊಡದೆ ಇರಲಿ, ಮನೆ ಕೊಡದೆ ಇರಲಿ ಅಂಥವರು ನಮ್ಮ ರಾಜ್ಯದಲ್ಲಿ ಬಂದು ನೆಲಸುತ್ತಾರೆ, ಮನೆ ಮಾಡಿಕೊಳ್ಳುತ್ತಾರೆ ಎಂದು ನನ್ನ ಭಾವನೆ. ಏಕೆಂದರೆ ಇತರರ ಸಮಸ್ಯೆ ಅವರಿಗೇ ಸೇರಿದ್ದು. ಆದರೆ ಮೈಸೂರು ರಾಜ್ಯದಲ್ಲಿ ಇಂಗ್ಲೇಂಡ್‌ನಲ್ಲಿರುವಂತೆ ಸಹ ಬಾಳ್ವೆಗೆ ಅವಕಾಶವಿದೆ. ಈ ರೀತಿ ಸಹಬಾಳ್ವೆಗೆ ಅವಕಾಶವನ್ನು ಮೈಸೂರು ರಾಜ್ಯ ಕೊಟ್ಟಿರುವುದು ಇತಿಹಾಸ ಪ್ರಸಿದ್ಧವಾಗಬೇಕು. ಯಾರು ಬೇಕಾದರೂ ಮೈಸೂರು ರಾಜ್ಯದಲ್ಲಿ ಬಂದು ನೆಲಸಬಹುದು, ಕೆಲಸ ಮಾಡಬಹುದು, ಆಸ್ತಿ ಮಾಡಿಕೊಳ್ಳಬಹುದು. ಕೊಳಚೆ ಪ್ರದೇಶದ ಜನರು ಎಲ್ಲಿಂದ ಬಂದರು, ಅದಕ್ಕೆ ಕೊನೆ ಎಲ್ಲಿ ಎಂದು ಕೇಳಿದ , ಅದಕ್ಕೆ ಉತ್ತರ ಕೊಡುವುದು ಕಷ್ಟ. ಏಕೆಂದರೆ ಬರುವವರು ಬರುತ್ತಲೇ ಇರುತ್ತಾರೆ. ಅದಕ್ಕೆ ಕೊನೆಯೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ಹೊರಗಡೆಯಿಂದ ಬರುವ ಜನರ ಪರ ಅಥವಾ ವಿರುದ್ಧವಾಗಿ ನಾನು ಮಾತನಾಡುತ್ತಿಲ್ಲ. ಆದರೆ ಇವರ ಸಂಖ್ಯೆ ಹೀಗೆಯೇ ಬೆಳೆಯುತ್ತಾ ಹೋದರೆ ಅವರಿಗೆ ಜಾಗ ಎಲ್ಲಿಂದ ಕೊಡುತ್ತೀರಿ ಮತ್ತು ಈಗಿರುವವರಲ್ಲಿ ಯಾವ ಯಾವ ರಾಜ್ಯದವರು ಎಷ್ಟೆಷ್ಟು ಇದ್ದಾರೆ ಎಂಬ ಬಗ್ಗೆ ತಮ್ಮಲ್ಲಿ ಅಂಕಿಅಂಶಗಳು ಇವೆಯೇ ?

ಶ್ರೀ ಬಿ. ವಿ. ಕಕ್ಕಿಲಾಯ.—ಮುಂಬೈನಲ್ಲಿಯೂ ಲಕ್ಷಾಂತರ ಮಂದಿ ಕನ್ನಡಿಗರು ಇದ್ದಾರೆ ಎಂಬುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು.

ಶ್ರೀ ಬಿ. ಬಸವಲಿಂಪ್ಪ.—ಮಾನ್ಯ ವಾಟಾಳ್ ನಾಗರಾಜ್ ಅವರ ಮನಸ್ಸಿನಲ್ಲಿ ಏನು ಆತಂಕ ಇದೆಯೋ ಅದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಅವರು ಕೇಳಿದಂತಹ ಅಂಕಿಅಂಶಗಳು ನಮ್ಮಲ್ಲಿ ಇವೆ. ಮತ್ತೆ ಹೊಸದಾಗಿ ಬರದೇ ಇರುವುದಕ್ಕೆ ಏನೇನು ಕಾರ್ಯಕ್ರಮ ತೆಗೆದು ಕೊಳ್ಳಬೇಕೋ ಅದನ್ನೆಲ್ಲಾ ತೆಗೆದುಕೊಂಡಿದ್ದೇನೆ. ಒಂದು ಸಲ ಗುಡಿಸಲುವಾಸಿಗಳ ಬಗ್ಗೆ ಕ್ರಮ ತೆಗೆದುಕೊಂಡಾಗ ಅವರ ಪರವಾಗಿ ಮಾನ್ಯ ವಾಟಾಳ್ ನಾಗರಾಜ್ ಅವರೇ ಪ್ರತಿನಿಧಿಯಾಗಿ ಬಂದು, ಆ ರೀತಿ ಕ್ರಮ ತೆಗೆದುಕೊಂಡಿದ್ದು ಸರಿಯಲ್ಲ ಎಂದು ಹೇಳಿದರು.

ಶ್ರೀ ವಾಟಾಳ್ ನಾಗರಾಜ್.—ಅಲ್ಲಿ 150 ಗುಡಿಸಲು ಹಾಕಿಕೊಂಡಿದ್ದವರು ಬೇರೆ ರಾಜ್ಯದವರಲ್ಲ, ಅವರೆಲ್ಲ ನಮ್ಮ ರಾಜ್ಯದವರೇ. ಬೇಕಾದರೆ ಮಾನ್ಯ ಅಧ್ಯಕ್ಷರು ಹೋಗಿ ಪರಿಶೀಲಿಸ ಬಹುದು. ಅವರಿಗೆ ಬೇರೆ ಕಡೆ ಜಾಗ ಇಲ್ಲದಿದ್ದರಿಂದ ಅಲ್ಲಿ ಗುಡಿಸಲು ಹಾಕಿಕೊಂಡಿದ್ದರು. ಮುಖ್ಯವಾಗಿ ನಮ್ಮ ರಾಜ್ಯದ ಜನರ ಪರಿಸ್ಥಿತಿಯನ್ನು ಮೊದಲು ನೋಡಬೇಕು ಎಂಬುದು ನನ್ನ ವಾದ.

ಶ್ರೀ ಬಿ. ಬಸವಲಿಂಗಪ್ಪ.—ಅದನ್ನು ಸಾಕಷ್ಟು ತಿಳಿದುಕೊಂಡಿದ್ದೇನೆ. ನನ್ನಲ್ಲಿ ಮಾನ್ಯ ಸದಸ್ಯರಿಗೆ ವಿಶ್ವಾಸ ಇದೆ ಎಂದು ಕಾಣುತ್ತದೆ. ಬೇರೆ ಕಡೆಗಳಿಂದ ಬಂದು ಅತಿಕ್ರಮವಾಗಿ ಗುಡಿಸಲು ಹಾಕುವುದನ್ನು ಯಾವ ರೀತಿ ತಡೆಗಟ್ಟಬೇಕೋ, ಆ ರೀತಿ ತಡೆಗಟ್ಟುವುದಕ್ಕೆ ಕಾರ್ಯ ಕ್ರಮ ತೆಗೆದುಕೊಂಡಿದ್ದೇವೆ. ಆ ಒಂದು ಶಕ್ತಿ ನನ್ನಲ್ಲಿದೆ! ಇನ್ನು ಮುಂದೆ ಬೆಂಗಳೂರು ನಗರದಲ್ಲಿ ಹೆಚ್ಚು ಹೆಚ್ಚು ಸ್ಲಮ್‌ಗಳು ಬೆಳೆಯುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಪ್ರಭಾಕರ್ (ವರ್ತೂರು).—ಸ್ಲಮ್‌ಗಳನ್ನು ನಿವಾರಣೆ ಮಾಡುವಾಗ, ಅಲ್ಲಿ ವಾಸ ಮಾಡುತ್ತಿರುವವರಿಗೆ ಅಡ್-ಹಾಕ್ ಹೌಸಿಂಗ್ ಕಾಲೋನಿಗಳನ್ನು ನಿರ್ಮಾಣ ಮಾಡಬೇಕು. ಸ್ಲಮ್ ಏರಿಯಾದಲ್ಲಿ ಹೊಸದಾಗಿ ಮನೆಗಳನ್ನು ಕಟ್ಟಿದ ಮೇಲೆ ಅಡ್-ಹಾಕ್ ಹೌಸಿಂಗ್ ಕಾಲೋನಿಯಲ್ಲಿ ರುವವರನ್ನು ಹೊಸ ಮನೆಗಳಿಗೆ ಷಿಫ್ಟ್ ಮಾಡಬೇಕು. ಈ ರೀತಿ ಮಾಡದಿದ್ದರೆ ಗುಡಿಸಲುವಾಸಿ ಗಳಿಗೆ ತೊಂದರೆಯಾಗುತ್ತದೆ. ಮತ್ತು ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳುವುದಕ್ಕೂ ಸಹ ತೊಂದರೆಯಾಗುತ್ತದೆ. ಇದಕ್ಕೆ ನನ್ನ ಕ್ಷೇತ್ರದ ಅನಂತಪುರವೇ ಸಾಕ್ಷಿಯಾಗಿದೆ. ಅಲ್ಲಿರುವ ಗುಡಿಸಲುಗಳನ್ನು ತೆಗೆದರೆ ಗುಡಿಸಲುವಾಸಿಗಳಿಗೆ ತೊಂದರೆಯಾಗುತ್ತದೆ, ಗುಡಿಸಲುಗಳನ್ನು ತೆಗೆಯದಿದ್ದರೆ ರಸ್ತೆ ಮಾಡಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ಮೊದಲು ಅಡ್-ಹಾಕ್ ಹೌಸಿಂಗ್ ಕಾಲೋನಿಗಳನ್ನು ಕಟ್ಟಿಸಬೇಕು. ಈ ಬಗ್ಗೆ ಸರ್ಕಾರದವರು ಮತ್ತು ಕಾರ್ಪೊರೇಷನ್‌ನವರು ಸೇರಿಕೊಂಡು ಮಿಲಿಟರಿ ಕ್ಯಾಂಪ್ ತರಹ ಅಡ್-ಹಾಕ್ ಹೌಸಿಂಗ್ ಕಾಲೋನಿ ಮಾಡಿ ನಂತರ ಕೊಳಚೆ ಪ್ರದೇಶಗಳಲ್ಲಿ ಮನೆಗಳನ್ನು ಕಟ್ಟಿಸಬೇಕು. ಈ ಮನೆಗಳಲ್ಲಿ ಎಲ್ಲ ರೀತಿಯ

ಸೌಲಭ್ಯಗಳಿರಬೇಕಲ್ಲದೆ, ಅದು ಕಾರ್ಪೊರೇಷನ್ ಸ್ವತ್ತಾಗಿರಬೇಕು. ನಮ್ಮ ಮಾನ್ಯ ಮಂತ್ರಿಗಳು ಈ ವಿಚಾರದಲ್ಲಿ ಹೆಚ್ಚು ಉತ್ಸಾಹಶಾಲಿಗಳಾಗಿರುವುದರಿಂದ, ಈಗಿರುವ ತೊಡಕನ್ನು ತಪ್ಪಿಸುವ ಬಗ್ಗೆ ಸಲಹೆಗಳನ್ನು ಕೊಡುತ್ತಿದ್ದೇನೆ. ಮಾನ್ಯ ಮಂತ್ರಿಗಳು 1973ನೇ ಡಿಸೆಂಬರ್ ತಿಂಗಳೊಳಗೆ ಕಾವೇರಿ ನೀರನ್ನು ಬೆಂಗಳೂರಿಗೆ ತರುತ್ತೇವೆ ಎಂಬ ಬಗ್ಗೆ ಏನು ಒಂದು ಗೊತ್ತಾದ ಕಾಲವನ್ನು ಕೊಟ್ಟಿದ್ದಾರೋ, ಅದರಂತೆ ಬೆಂಗಳೂರಿನಲ್ಲಿರುವ ಕೊಳಚೆ ಪ್ರದೇಶಗಳನ್ನು ಇನ್ನು ಎಷ್ಟು ವರ್ಷದಲ್ಲಿ ಇಲ್ಲದ ಹಾಗೆ ಮಾಡುತ್ತೀರಿ ಎಂಬ ಬಗ್ಗೆ ಪ್ರಕಟಣೆ ಹೊರಡಿಸಬೇಕು. ಮತ್ತು ಅದಕ್ಕಾಗಿ ಸರ್ಕಾರದವರು ಯಾವ ರೀತಿ ಸನ್ನದ್ಧರಾಗಿದ್ದಾರೆಂಬುದನ್ನು ತಿಳಿಸಬೇಕು. ಮತ್ತು ಕೊಳಚೆ ಪ್ರದೇಶಗಳ ನಿರ್ಮೂಲನದ ಬಗ್ಗೆ ಸರ್ಕಾರದ ಧೋರಣೆ ಏನಿದೆ ಎಂಬುದನ್ನು ಸಹ ತಿಳಿಸಬೇಕು. ಅದಷ್ಟು ಜಾಗ್ರತೆ ಇದರ ಕಡೆಗೆ ಮಾನ್ಯರು ಗಮನ ಕೊಟ್ಟಿದ್ದೇ ಆದರೆ ಬೆಂಗಳೂರು ಸುಂದರ ನಗರವಾಗುವುದಲ್ಲದೆ, ಜನರಿಗೆ ಆನಂದವಾಗುವುದು. ಮತ್ತು ಮಾನ್ಯ ಮಂತ್ರಿಗಳ ಹೆಸರ ಆಚಂದ್ರಾರ್ಕವಾಗಿ ಉಳಿಯುತ್ತದೆ. ಆದ್ದರಿಂದ ನಾನು ಕೇಳಿದ ಎರಡು ಪ್ರಶ್ನೆಗಳಿಗೆ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಆರ್ ಶ್ರೀನಿವಾಸಲು ನಾಯಿಡು.—ಸ್ಲಮ್ ಇಂಪ್ರೂವ್‌ಮೆಂಟ್ ಅಥವಾ ಡೆವಲಪ್‌ಮೆಂಟ್ ಬೋರ್ಡ್ ಬಗ್ಗೆ ತಾವು ಏನನ್ನೂ ಹೇಳಲಿಲ್ಲ.

ಶ್ರೀ ಎ. ವಿ. ಮುನಿಸ್ವಾಮಿ (ಮಾಲೂರು).—ಬೆಂಗಳೂರಿನಲ್ಲಿ ಸ್ಲಮ್‌ಗಳು ಜಾಸ್ತಿಯಾಗುವುದಕ್ಕೆ ಕಾರಣವೇನು ಎಂಬ ಬಗ್ಗೆ ಸರ್ವೆ ಮಾಡಬೇಕು. ನನಗೆ ಗೊತ್ತಿರುವಂತೆ ಕುಡಿಯುವ ಚಟ ಇರುವವರು ಮದ್ರಾಸ್‌ನಿಂದ ಇಲ್ಲಿಗೆ ಬಂದು ನೆಲೆಸಿದ್ದಾರೆ. ಇಲ್ಲಿರುವ ಮದ್ರಾಸ್‌ನ ಅನೇಕ ಗುಡಿಸಲುವಾಸಿಗಳಿಗೆ ಮದ್ರಾಸ್‌ನಲ್ಲಿ ಜಮೀನು ಇದೆ. ಆಸ್ತಿ ಇದೆ. ಆದ್ದರಿಂದ ಅವರು ಇಲ್ಲಿಗೆ ಸಂಪಾದನೆ ಮಾಡಬೇಕೆಂದು ಬಂದವರಲ್ಲ. ಕುಡಿಯುವುದಕ್ಕಾಗಿ ಬಂದವರು. ಮಾನ್ಯ ನಾಗಣ್ಣನವರು ಮಾತನಾಡುವಾಗ ಮದ್ರಾಸ್ ನಗರದಲ್ಲಿ ಗುಡಿಸಲುವಾಸಿಗಳಿಗೆ ಅಲ್ಲಿಯ ಸರ್ಕಾರದವರು ಫ್ಲಾಟ್ಸ್ ಕಟ್ಟಿಸಿಕೊಟ್ಟಿರುವಂತೆ ಇಲ್ಲಿಯೂ ಕಟ್ಟಿಸಿಕೊಡಬೇಕೆಂದು ಹೇಳಿದರು. ಆದರೆ ಅಲ್ಲಿ ಏನಾಗುತ್ತಿದೆ ಎಂದರೆ, ಕೆಲವರು ಅಣ್ಣತಮ್ಮಂದಿರ ಹೆಸರಿನಲ್ಲಿ ಫ್ಲಾಟ್ಸ್‌ನ್ನು ತೆಗೆದುಕೊಂಡು, ಮತ್ತೆ ಇನ್ನೊಂದು ಕಡೆ ಗುಡಿಸಲುಗಳನ್ನು ನಿರ್ಮಾಣ ಮಾಡುತ್ತಿದ್ದಾರೆ. ಆ ಒಂದು ಪ್ರಾಬ್ಲಮ್ ಇಲ್ಲಿಯೂ ಬರದಂತೆ ನೋಡಿಕೊಳ್ಳಬೇಕಲ್ಲದೆ, ಗುಡಿಸಲುಗಳನ್ನು ಯಾವ ರೀತಿ ಕಟ್ಟಲಾಯಿತು ಎಂಬ ಬಗ್ಗೆ ಮೊದಲೇ ಸರ್ವೆ ಮಾಡಬೇಕು ಮತ್ತು ಇನ್ನು ಮುಂದೆ ಗುಡಿಸಲುಗಳು ಹುಟ್ಟಿಕೊಳ್ಳದಂತೆ ನೋಡಿಕೊಳ್ಳಬೇಕೆಂದು ಕೇಳಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಇಂದು ಬೆಂಗಳೂರು ನಗರದಲ್ಲಿ ಕೊಳಚೆ ಪ್ರದೇಶಗಳ ನಿರ್ಮಾಣ ಕ್ಷಯ ರೋಗದ ಹಾಗೆ ಆಗುತ್ತಿದೆ. ಇದನ್ನು ತಡೆಗಟ್ಟುವ ಬಗ್ಗೆ ಏನೇನು ಕಾರ್ಯಕ್ರಮ ಇಟ್ಟುಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಎಚ್. ಜಿ. ಚೆನ್ನಪ್ಪ (ಮಾಗಡಿ).—ಸ್ಲಮ್ ಏರಿಯಾಗಳು ಸಿಟಿಗಳಲ್ಲಿ ಇರುವಂತೆ ಟೌನ್ ಹೆಡ್‌ಕ್ವಾರ್ಟರ್ಸ್‌ನಲ್ಲಿಯೂ ಇವೆ. ಆದ್ದರಿಂದ ಅಲ್ಲಿ ಅವುಗಳನ್ನು ಕ್ಲಿಯರ್ ಮಾಡುವ ಬಗ್ಗೆ ಏನಾದರೂ ವ್ಯವಸ್ಥೆ ಇದೆಯೇ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಪ್ರಭಾಕರ್ ಅವರು ಅಡ್-ಹಾಕ್ ಹೌಸಿಂಗ್ ಕಾಲೋನಿ ಮಾಡಬೇಕೆಂದು ಹೇಳಿದರು. ಈಗ ಸರ್ಕಾರದವರು ಅದೇ ತರಹದಲ್ಲಿ ಟ್ರಾನ್ಸಿಟ್ ಕ್ಯಾಂಪ್ಸ್ ಮಾಡಬೇಕೆಂದು ಯೋಚನೆ ಮಾಡುತ್ತಿದ್ದಾರೆ. ಕೊಳಚೆ ಪ್ರದೇಶಗಳನ್ನು ನಿರ್ಮೂಲ ಮಾಡಬೇಕೆಂದು ಮನಸ್ಸು ಮಾಡಿದಾಗ ಅಲ್ಲಿಯ ನಿವಾಸಿಗಳನ್ನು ಈ ಕ್ಯಾಂಪ್ಸ್‌ಗೆ ಕಳಿಸಿ, ಕೊಳಚೆ ಪ್ರದೇಶದಲ್ಲಿ ಮನೆಗಳನ್ನು ಕಟ್ಟಿಸಿದ ನಂತರ ಮತ್ತೆ ಅವರನ್ನು ಅಲ್ಲಿಗೆ ಕಳಿಸಿಕೊಡಬೇಕೆಂಬುದು ಸರ್ಕಾರದ ಗಮನದಲ್ಲಿದೆ.

ಸ್ಲಮ್ ಕ್ಲಿಯರೆನ್ಸ್ ಬಗ್ಗೆ ಒಂದು ನಿರ್ದಿಷ್ಟವಾದ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಶ್ರೀ ಕೆ. ಆರ್. ಎಸ್. ನಾಯುಡು ಅವರು ಹೇಳಿದರು. ಅದಕ್ಕಾಗಿಯೇ ನಾನು ಈಗಾಗಲೇ ಹೇಳಿದ್ದೇನೆ ನಾವು ಸ್ಲಮ್ ಕ್ಲಿಯರೆನ್ಸ್‌ಗಾಗಿ ಒಂದು ಬೋರ್ಡ್ ಮಾಡುತ್ತೇವೆ. ಈಗ ನಗರದಲ್ಲಿರುವ ಕೊಳಚೆ ಪ್ರದೇಶದ ನಿವಾರಣಾ ಕ್ರಮಗಳನ್ನು ಆಗಸ್ಟ್ 15 ರಂದು ಪ್ರಾರಂಭ ಮಾಡುತ್ತೇವೆ. ಅದಕ್ಕಾಗಿ ಈಗಾಗಲೇ ಸರ್ಕಾರ ಒಂದು ಎಗ್ಸಿಕ್ಯುಟಿವ್ ಸಮಿತಿಯನ್ನು ರಚಿಸಿದೆ ಎಂದು ನಾನು ಈಗಾಗಲೇ ಹೇಳಿದ್ದೇನೆ. ಮತ್ತು ಟೌನ್‌ಗಳಲ್ಲಿ ಇಂಥಾ ಕೊಳಚೆ ಪ್ರದೇಶಗಳು ಇದ್ದರೆ

(ಶ್ರೀ ಬಿ. ಬಸವಲಿಂಗಪ್ಪ)

ಆ ಕೊಳಚೆ ಪ್ರದೇಶಗಳ ನಿರ್ಮೂಲನಕ್ಕೂ ಒಂದು ಪ್ರಾವಿಜನ್ ಇಡಬೇಕು ಎಂದು ಶ್ರೀಮಾನ್ ಚನ್ನಪ್ಪನವರು ಹೇಳಿದ್ದಾರೆ. ಒಂದುವೇಳೆ ಇದಕ್ಕೆ ಹಣವನ್ನು ಇಡದಿದ್ದರೂ ಕೂಡ ಎಲ್ಲೆಲ್ಲಿ ಟೌನ್‌ಗಳಲ್ಲಿ ಅನಿರೀಕ್ಷಿತವಾಗಿ ಹಣವನ್ನು ಒದಗಿಸುವ ಪ್ರಮೇಯ ಬಂದರೆ ಹೆಚ್ಚು ಹಣ ಬಂದರೆ ಟೌನ್‌ಗಳಿಗೂ ಸ್ಲಮ್ ಕ್ಲಿಯರೆನ್ಸ್ ಬಗ್ಗೆ ಹಣವನ್ನು ಒದಗಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

5–30 P.M.

ಅಧ್ಯಕ್ಷರು.—ಶ್ರೀಮಾನ್ ಶಾಮಣ್ಣನವರು ಅವರ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಯೇ ?

† ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಭಾಧ್ಯಕ್ಷರೇ, ಈಗ ಕಳೆದ ಎರಡು ದಿವಸಗಳಿಂದ ಈ ನಿರ್ಣಯದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ನಾವು ಯಾವ ಉದ್ದೇಶದಿಂದ ಈ ನಿರ್ಣಯವನ್ನು ಈ ಸಭೆಯ ಮುಂದೆ ತಂದಿದ್ದೇವೆಯೋ ಅದು ಫಲಕಾರಿಯಾಗುವ ರೀತಿಯಲ್ಲಿ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಪೌರಾಡಳಿತ ಸಚಿವರು ಹೇಳಿದ್ದಾರೆ. ಈ ವಿಚಾರದಲ್ಲಿ ನನ್ನ ಅರಿಕೆ ಇಷ್ಟೆ. ಇವೊತ್ತಿನ ದಿವಸ ಹೊಸದಾಗಿ ಕೊಳಚೆ ಪ್ರದೇಶಗಳು ಬೆಳೆಯದಹಾಗೆ ತೀವ್ರವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಒಂದು ಸ್ಲಮ್ ಕ್ಲಿಯರ್ ಮಾಡಿ ಅವರನ್ನು ಬೇರೆ ಕಡೆ ಕಳುಹಿಸಿದರೆ ಮತ್ತೊಂದು ಸ್ಲಮ್ ಉದ್ಭವವಾಗುತ್ತದೆ. ಆದ್ದರಿಂದ ಆ ರೀತಿ ಮತ್ತೆ ಸ್ಲಮ್ ಆಗದಹಾಗೆ ನೋಡಿಕೊಳ್ಳಬೇಕು.

ಶ್ರೀ ಬಿ. ಬಸವಲಿಂಗಪ್ಪ.—ದುರುಪಯೋಗ ಮಾಡಿಕೊಂಡರೆ ಅವರಿಗೆ ಪ್ರಾಸಿಕ್ಯೂಟ್ ಮಾಡುವುದಕ್ಕೆ ಪ್ರಾವಿಜನ್ ಇದೆ.

ಶ್ರೀ ಟಿ. ಆರ್. ಶಾಮಣ್ಣ.—ಅನೇಕ ಸ್ಲಮ್ ಆ ರೀತಿ ಆಗಿದೆ. ಆದ್ದರಿಂದ ಮುಂದೆ ಪುನಃ ಸ್ಲಮ್ ಆಗದಹಾಗೆ ನೋಡಿಕೊಳ್ಳಬೇಕು. ಈಗ ಒಂದು ಕಡೆ 9 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಸ್ಲಮ್ ಕ್ಲಿಯರ್ ಮಾಡಿದರು. ಆದರೆ ಅಲ್ಲಿ ಪುನಃ ಉದ್ಭವವಾಗಿದೆ. ಹಾಗೆಯೇ ಕಲಾಸಿ ಪಾಳ್ಯದಲ್ಲಿ ಸ್ಲಮ್ ತೆಗೆಯುವುದಕ್ಕೆ ಸರ್ಕಾರದವರು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಈ ಸ್ಲಮ್ ಕ್ಲಿಯರ್ ಮಾಡುವುದಕ್ಕೆ ಹಣದ ಕೊರತೆಯೇನಾದರೂ ಇದ್ದರೆ ಟ್ರಸ್ಟ್ ಬೋರ್ಡಿನವರು, ಕಾರ್ಪೋರೇಷನ್‌ನವರು ಮತ್ತು ರಾಜ್ಯ ಸರ್ಕಾರದವರು ಈ ಮೂವರೂ ಸೇರಿಕೊಂಡು ಅದಕ್ಕೆ ಹಣವನ್ನು ಒದಗಿಸಿಕೊಂಡು ನಗರದಲ್ಲಿ ಕೊಳಚೆ ನಿರ್ಮೂಲನಾ ಕೆಲಸವನ್ನು ಮಾಡಬೇಕು. ಮತ್ತು ಸ್ಲಮ್ ಬೆಳೆಯುವುದಕ್ಕೆ ಅವಕಾಶವನ್ನು ಕೊಡಬಾರದು ಎಂದು ನಾನು ಹೇಳುತ್ತೇನೆ. ಹಾಗೂ ಈಗ ಕಾನ್‌ಸ್ಟಿಟ್ಯೂಷನ್ ಬದಲಾವಣೆಯಾಗಿರುವುದರಿಂದ ಅನೇಕ ಸ್ಥಳಗಳಲ್ಲಿ ಪ್ರೈವೇಟ್ ಪ್ರಾಪರ್ಟಿ ಲ್ಯಾಂಡ್ ಅಕ್ವೈರ್ ಮಾಡಿಕೊಳ್ಳುವುದಕ್ಕೆ ಸುಲಭವಾಗಿರುವುದರಿಂದ, ಸುಲಭವಾದ ರೀತಿಯಲ್ಲಿ ಲ್ಯಾಂಡ್ ಅನ್ನು ಅಕ್ವೈರ್ ಮಾಡಿಕೊಂಡು ಬೆಂಗಳೂರಿನ ಸೌಂದರ್ಯವನ್ನು ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡಬೇಕು ; ಬಡವರಿಗೆ ಅನುಕೂಲವಾಗುವ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. With the right of reservation to bring back this resolution if the assurances of the Hon. Minister are not fulfilled, I withdraw my resolution.

MADAM SPEAKER.—Does the House permit the Hon. Member to withdraw his resolution ?

HON. MEMBERS.—Yes.

MADAM SPEAKER.—The resolution is withdrawn.

The resolution was by leave withdrawn.

(ii) *re*: Appointment of a Committee to review the working of the co-operatives, etc.

SRI S. KARIYAPPA (Kanakapura).—I move the following resolution :

"That this Assembly is of the opinion that in order to make the work of the Co-operatives more effective and purposeful, an enquiry Committee be appointed for reviewing the work of the Co-operatives and to pin-point the defects and to suggest elaborate modes of improvement."

MADAM SPEAKER.—Resolution moved :

"That this Assembly is of the opinion that in order to make the work of the Co-operatives more effective and purposeful, an enquiry Committee be appointed for reviewing the work of the Co-operatives and to pin-point the defects and to suggest elaborate modes of improvement."

†ಶ್ರೀ ಎಸ್. ಕರಿಯಪ್ಪ.—ಮಾನ್ಯ ಅಧ್ಯಕ್ಷರೇ, ಪರಸ್ಪರ ಸಹಕಾರ ಸಂಘಗಳ ಒಂದು ಆಂದೋಳನವನ್ನು ನಮ್ಮ ದೇಶಕ್ಕೆ ತಂದು ಸುಮಾರು ಅರ್ಧ ಶತಮಾನ ಕೂಡ ಮೀರಿದೆ. ಈ ಸಹಕಾರ ಸಂಘಗಳ ಒಂದು ಆಂದೋಳನವನ್ನು ಒಂದು ದೊಡ್ಡ ಉದ್ದೇಶದಿಂದ ಮಾಡಲಾಯಿತು. ಇದನ್ನು ತಂದಾಗ ಇದರಿಂದ ನಮ್ಮ ದೇಶದ ಆರ್ಥಿಕ ಸ್ಥಿತಿ ಬಹುಮಟ್ಟಿಗೆ ಉತ್ತಮಗೊಳ್ಳುತ್ತದೆ, ಅದರಿಂದ ಸಮಾಜದಲ್ಲಿರತಕ್ಕ ಆರ್ಥಿಕ ಏರುಪೇರುಗಳು ಬಹಳ ಮಟ್ಟಿಗೆ ಕಡಿಮೆಯಾಗುತ್ತವೆ ಎನ್ನುವ ಭಾವನೆಯನ್ನು ಇಟ್ಟುಕೊಂಡು ಇದನ್ನು ತಂದರು. ಆದರೆ ಇದರಿಂದ ನಮಗೆ ದೊರೆಯತಕ್ಕ ಫಲ ಮಾತ್ರ ವಿಪರೀತಕ್ಕೆ ಇಟ್ಟುಕೊಂಡಿದೆ. ಸಹಕಾರ ಚಳುವಳಿಯಿಂದ ನಮ್ಮ ದೇಶಕ್ಕೆ ಮಹತ್ತರವಾದ ಪ್ರಯೋಜನ ಆಗುವುದು ಉಂಟು. ನಮ್ಮ ಆರ್ಥಿಕ ವ್ಯವಸ್ಥೆ ಒಂದು ರೀತಿಯಲ್ಲಿ ಉತ್ತಮಗೊಳ್ಳುವುದು ಉಂಟು. ನಾವು ಯಾವ ಒಂದು ಸಮಾಜವಾದ ಎಂದು ಹೇಳುತ್ತೇವೆಯೋ ಆ ಸಮಾಜವಾದದ ಬಹು ಅಂಶಗಳನ್ನು ಈ ಸಹಕಾರಿ ಆಂದೋಳನದಿಂದ ಸಾಧಿಸಬಹುದಾಗಿದೆ. ಇಂಥಾ ಕೋಆಪರೇಟೀವ್ ಸಮಾಜವಾದ ತತ್ವವನ್ನು ಹಲವಾರು ದೊಡ್ಡವರು ಒಪ್ಪಿಕೊಂಡಿದ್ದಾರೆ. ಮುಖ್ಯವಾಗಿ ಮನುಷ್ಯನಿಗೆ ಬೇಕಾದ್ದು ಮೂರ ಅಂಶಗಳು. ಇರುವುದಕ್ಕೆ ಮನೆ, ಉಳುವುದಕ್ಕೆ ಹೊಲ, ಇಲ್ಲದೇಹೋದರೆ ಮಾಡುವುದಕ್ಕೆ ಕೆಲಸ, ಮೈಗೆ ಬಟ್ಟೆ, ಇಷ್ಟು ಇದ್ದರೆ ಮನುಷ್ಯನಿಗೆ ಯಾವುದೂ ಬೇಕಾಗುವುದಿಲ್ಲ. ಅಷ್ಟು ಅಗತ್ಯವಾದ ಸೌಕರ್ಯಗಳು ಇದ್ದರೆ ಮನುಷ್ಯನಿಗೆ ಸಮಾಜದಲ್ಲಿ ಒಂದು ಸಮಾಧಾನ ಉಂಟಾಗುತ್ತದೆ. ಅದನ್ನು ಏರ್ಪಾಟು ಮಾಡಿಕೊಳ್ಳುವುದಕ್ಕೆ ಈ ಸಹಕಾರಿ ಆಂದೋಳನ ಬಹಳ ಸಹಕಾರಿಯಾಗಿದೆ. ಇದು ಮನುಷ್ಯನ ಜೀವನಕ್ಕೆ ಬೇಕಾದ ಅಗತ್ಯತೆಗಳನ್ನು ಪೂರೈಸಲು ಸಹಕಾರಿಯಾಗುವುದು ಎಂದು ನಾವು ಈ ಸಹಕಾರಿ ಆಂದೋಳನವನ್ನು ದೇಶದಲ್ಲಿ ತಂದೆವು. ಆದರೆ ಅದು ವಿಫಲವಾಗಿದೆ. ಅದರಿಂದ ಯಾವ ಉದ್ದೇಶವನ್ನು ಯಾವ ಯಾವ ಗುರಿಯನ್ನು ಮುಟ್ಟಬೇಕೋ ಅದನ್ನು ಮುಟ್ಟುವುದಕ್ಕೆ ಸಾಧ್ಯವಾಗಿಲ್ಲ. ಇದಕ್ಕೆ ಹಲವಾರು ಕಾರಣಗಳು ಇವೆ. ನಮಗೆ ಸ್ವಾತಂತ್ರ್ಯ ಪ್ರಾಪ್ತವಾದ ಪ್ರಾರಂಭದಲ್ಲಿ ಈ ಸಹಕಾರ ಸಂಘಗಳನ್ನು ದೇಶದಲ್ಲಿ ಎಲ್ಲಾ ಕಡೆಗಳಲ್ಲಿಯೂ ಸ್ಥಾಪನೆ ಮಾಡಲಾಯಿತು. ಸಹಕಾರಿ ಆಂದೋಳನವನ್ನು ಆಚರಣೆಗೆ ತರಲಾಯಿತು. ಇವುಗಳನ್ನು ಆಚರಣೆಗೆ ತರುವುದರಿಂದ ನಾವು ಒಂದು ಆರ್ಥಿಕ ಹೊಸ ವ್ಯವಸ್ಥೆಯನ್ನು ತರಬೇಕು ಎನ್ನುವ ದೃಷ್ಟಿಯಿಂದ ಮಲ್ಟಿಪರ್ಪಸ್ ಸೊಸೈಟಿಗಳು ಎನ್ನುವುದನ್ನು ಆಚರಣೆಗೆ ತರಲಾಯಿತು. ಅನಂತರ ಎಲ್ಲಾ ಬಾಬುಗಳಲ್ಲಿಯೂ ಕೂಡ ವ್ಯವಸಾಯಕ್ಕೆ ಸಂಬಂಧಪಟ್ಟ ಹಾಗೆ, ಕೈಗಾರಿಕೆಗಳಿಗೆ ಸಂಬಂಧಪಟ್ಟ ಹಾಗೆ, ಮತ್ತು ಮನುಷ್ಯನ ಜೀವನಕ್ಕೆ ಸಂಬಂಧಪಟ್ಟ ಹಾಗೆ ಯಾವ ಯಾವ ಬಾಬುಗಳು ಇವೆಯೋ ಆ ಎಲ್ಲಾ ಬಾಬುಗಳಲ್ಲಿಯೂ ಕೋಆಪರೇಟೀವ್ ಸೊಸೈಟಿಗಳನ್ನು ತರಲಾಯಿತು. ಆದರೆ ಅವುಗಳನ್ನು ನಡೆಸತಕ್ಕ ಜನಗಳು ಸ್ವಾರ್ಥಿಗಳಾಗಿ ಯಾವ ಒಂದು ಉದ್ದೇಶದಿಂದ ಅವುಗಳನ್ನು ತರಲಾಯಿತೋ ಅವುಗಳನು ಈಡೇರಿಸುವುದಕ್ಕೆ ಸಾಧ್ಯವಿಲ್ಲದೇ ಹೋಯಿತ. ಹಾಗೆ ಆಗಬೇಕಾದರೆ ಕಾರಣ ಅವುಗಳ ವ್ಯವಸ್ಥೆಯನ್ನು ನೋಡಿ

(ಶ್ರೀ ಎಸ್. ಕರಿಯಪ್ಪ)

ಕೊಳ್ಳುವುದಕ್ಕೆ ಮುಂದೆ ಬಂದಂತಹ ಅಧ್ಯಕ್ಷರುಗಳು, ಕಾರ್ಯದರ್ಶಿಗಳು ಮತ್ತು ಡೈರೆಕ್ಟರುಗಳು ಮತ್ತು ಆ ಇಲಾಖೆಯವರು ಬಹುಮಟ್ಟಿಗೆ ಕಾರಣರು ಎಂದು ನಾವು ಹೇಳಬೇಕಾಗಿದೆ. ಇವತ್ತು ಯಾವ ವ್ಯವಸ್ಥೆಗಳಿವೆ, ನಾವು ಅದನ್ನು ಸರಿಯಾಗಿ ನೋಡಿಕೊಳ್ಳದಿದ್ದರೆ, ಮತ್ತು ತಪ್ಪುಗಳನ್ನು ತಿದ್ದದೆ ಹೋದರೆ, ಅವುಗಳ ಹೇಗೆ ಸರಿಯಾಗಿ ನಡೆಯುತ್ತದೆ? ಈ ರೀತಿಯಾಗಿ ಇಂತಹ ಸೊಸೈಟಿಗಳು ಅಧೋಗತಿಗೆ ಇಳಿದಿವೆ. ದೇಶದಲ್ಲಿರತಕ್ಕಂತಹ 9 ಸಾವಿರ ಸೊಸೈಟಿಗಳ ಪೈಕಿ 5 ಸಾವಿರ ಸೊಸೈಟಿಗಳು ಇವತ್ತು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಅಲ್ಲಿರತಕ್ಕಂತಹ ಸೆಕ್ರೆಟರಿಗಳು ಮತ್ತು ಪ್ರೆಸಿಡೆಂಟರುಗಳು ದುಡ್ಡನ್ನು ತಿಂದು ತೇಗುತ್ತಿದ್ದಾರೆ. ಇದರಿಂದಾಗಿ ಸಾವಿರಾರು ಸೊಸೈಟಿಗಳು ನಮ್ಮ ದೇಶದಲ್ಲಿ ವಿಫಲಗೊಂಡಿವೆಯೆಂದು ಹೇಳಬೇಕಾಗಿದೆ. ಇವತ್ತು ಅನೇಕ ಸೊಸೈಟಿಗಳು 10—15 ವರ್ಷಗಳಾದರೂ ಜನರಲ್ ಬಾಡಿ ಮೀಟಿಂಗನ್ನು ಕರೆದು ಮಾಡಿರುವುದಿಲ್ಲ. ಅದನ್ನು ಮಾಡಿದ್ದಾರೆಯೇ ಇಲ್ಲವೇ ಎಂಬುದನ್ನು ಸೊಸೈಟಿಯ ಇನ್ಸ್‌ಪೆಕ್ಟರಾಗಲಿ, ರಿಜಿಸ್ಟ್ರಾರವರಾಗಲಿ ನೋಡಿಕೊಂಡಿಲ್ಲ. ಹೀಗೆ ಅವುಗಳನ್ನು ನೋಡಿಕೊಳ್ಳದೆ ಉದಾಸೀನ ಭಾವವನ್ನು ತೋರಿಸಿದುದರಿಂದ ಹೀಗೆ ಅನೇಕ ಸೊಸೈಟಿಗಳಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ತಿಂದು ಹಾಕಿದ್ದಾರೆ. ಮತ್ತು ಯಾವ ಕೆಲಸಗಳನ್ನು ಸೊಸೈಟಿಗಳು ಮಾಡಬೇಕೋ ಅವುಗಳನ್ನು ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಇವತ್ತು ಸಣ್ಣ ಹಿಡುವಳಿದಾರರಿಗೂ ಅಭಿವೃದ್ಧಿ ಮಾಡಬೇಕಾದರೆ ಅವರಿಗೆ ಸಹಕಾರಿ ಸಂಸ್ಥೆಗಳ ಮುಖಾಂತರ ಸಹಾಯವನ್ನು ಒದಗಿಸಬೇಕಾಗಿದೆ. ಅದು ಸೊಸೈಟಿಗಳಿಂದ ಬರಬೇಕಾಗಿದೆ. ಸೊಸೈಟಿಗಳಲ್ಲಿ ಹಣ ಇಲ್ಲದಿರುವುದರಿಂದ ಅವರಿಗೆ ಹಣ ಎಲ್ಲಿಂದ ಕೊಡಬೇಕು? ಮತ್ತು ಅವುಗಳು ನಡೆಯುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಇನ್ನೊಂದು ನ್ಯೂನತೆ ಏನೆಂದರೆ, ಕಾನೂನಿನಲ್ಲಿರತಕ್ಕಂತಹ ನ್ಯೂನತೆ. ಇವತ್ತು ಸೊಸೈಟಿಯಲ್ಲಿ ಹಣ ತಿಂದವರು ಹಾಗೂ ಹೀಗೂ ಎರಡು ವರ್ಷಗಳ ಕಾಲ ತಳ್ಳಿ ಬಿಟ್ಟರೆ, ಈ ಲಿಮಿಟೇಶನ್ ಆಕ್ಟ್ ಪ್ರಕಾರ ಹೀಗೆ ತಿಂದಂತಹ ಹಣ ಗೋವಿಂದವಾಗಿ ಬಿಡುತ್ತದೆ. ಇದನ್ನು ವಾಪಸ್ಸು ಅವರಿಂದ ವಸೂಲು ಮಾಡುವುದಕ್ಕಾಗುವುದಿಲ್ಲ. ಮತ್ತು ಅವರು ತಿಂದು ಹಾಕಿ ಬಿಟ್ಟು ತಪ್ಪಿಸಿಕೊಂಡು ಬಿಡುತ್ತಾರೆ. ಈ ಕಾನೂನಿನ ನ್ಯೂನತೆಯನ್ನು ಬದಲಾವಣೆ ಮಾಡಬೇಕಾಗಿದೆ. ಎರಡು ವರ್ಷ ಇರುವಂಥದ್ದನ್ನು 4—5 ವರ್ಷವೆಂದು ಮಾಡಬೇಕಾಗಿದೆ. ಈ ಲಿಮಿಟೇಶನ್ ಅವಧಿಯನ್ನು ಹೆಚ್ಚಿಸದೆ ಹೋದರೆ ಅಲ್ಲಿ ಇದೇ ರೀತಿಯ ಅವ್ಯವಹಾರಗಳು ಆಗುವುದಕ್ಕೆ ಅವಕಾಶವಾಗುತ್ತದೆ. ಅದೇ ರೀತಿ ಈ ಸೊಸೈಟಿಗಳ ಕೇಸುಗಳು ಸಹ ಸರಿಯಾಗಿ ನಡೆಯುತ್ತಿಲ್ಲ. ಈಗ ಈ ಕೇಸುಗಳನ್ನು ವಿಚಾರಣೆ ಮಾಡುವುದಕ್ಕೆ ಹಲವು ಆರ್ಬಿಟ್ರೇಟರ್ಸ್ ಎಂದು ನೇಮಕ ಮಾಡಿದ್ದಾರೆ. ಅವರು ಕೊಟ್ಟಿರತಕ್ಕಂತಹ ತೀರ್ಮಾನಗಳನ್ನು ನೋಡಿದರೆ ನಿಜವಾಗಿಯೂ ಅದು ನ್ಯಾಯವಾದ ತೀರ್ಮಾನವೇ ಎಂದು ಅನುಮಾನ ಬರುತ್ತದೆ. ಹೀಗಾಗಿ ಸೊಸೈಟಿಗಳಿಂದ ಯಾವ ಒಂದು ಪ್ರಯೋಜನ ಜನರಿಗೆ ಸಿಗಬೇಕೋ, ಅದು ಸಿಗುತ್ತಾ ಇಲ್ಲ. ಇವತ್ತು 9 ಸಾವಿರದಲ್ಲಿ 5 ಸಾವಿರ ಸರಿಯಾಗಿ ಕೆಲಸ ಮಾಡುತ್ತಿಲ್ಲ; ಉಳಿದ 4 ಸಾವಿರ ಸೊಸೈಟಿಗಳಲ್ಲಿ ಸಹ ಅನೇಕ ಲೋಪದೋಷಗಳು ಇವೆ. ಇದು ಬಹಳ ವಿಷಾದಕರವಾದ ಸಂಗತಿ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇದನ್ನೆಲ್ಲಾ ಸರಿಪಡಿಸಬೇಕಾದರೆ ಇದಕ್ಕೆ ಒಂದು ಕಮಿಟಿಯನ್ನು ಮಾಡಬೇಕಾಗುತ್ತದೆ. ಆ ಕಮಿಟಿಯವರು ಎಲ್ಲ ವಿಚಾರಗಳನ್ನು ಕೂಲಂಕಷವಾಗಿ ವಿಚಾರ ಮಾಡಿ, ಒಂದು ದೊಡ್ಡ ಪಟ್ಟಿಯನ್ನು ಮಾಡಿ ಆಗಿರತಕ್ಕಂತಹ ಅವ್ಯವಹಾರಗಳನ್ನು ಸರಿಪಡಿಸಿದರೆ ಅದಕ್ಕೆ ಪರಿಹಾರವಾಗುತ್ತದೆ ಮತ್ತು ಸೊಸೈಟಿಗಳಿಂದ ಸಮಾಜಕ್ಕೆ ಒಳ್ಳೆಯದಾಗುತ್ತದೆಂದು ಹೇಳುತ್ತೇವೆ. ಅದೇ ಅಭಿಪ್ರಾಯದಲ್ಲಿ ಈ ನಿರ್ಣಯವನ್ನು ಕಳಿಸಿದ್ದೇನೆ. ಇದನ್ನು ಸರ್ಕಾರದವರು ಪರ್ಯಾಲೋಚನೆ ಮಾಡಿ ಒಂದು ಸಮಿತಿ ಮಾಡಿ, ಆಗಿರತಕ್ಕಂತಹ ಅವ್ಯವಹಾರಗಳನ್ನು ಸರಿಪಡಿಸಬೇಕೆಂಬುದೇ ಅದರ ಉದ್ದೇಶ. ಇವತ್ತು ನಾವು ಸಮಾಜವಾದವನ್ನು ಜಾರಿಗೆ ತಂದು ಜಮೀನು ಇಲ್ಲದವರಿಗೆ ಜಮೀನು ಹಂಚುತ್ತೇವೆಂದು ಹೇಳುತ್ತಿದ್ದೇವೆ. ಆದರೆ ಅದನ್ನು ಕೂಡ ಮಾಡುವುದಕ್ಕೆ ನಮಗೆ ಈ ಸೊಸೈಟಿಗಳ ಅವಶ್ಯಕತೆ ಬಹಳ ಇದೆ. ಇವತ್ತು ಜಮೀನು ಕೊಟ್ಟರೂ ಅವನು ಬೇಸಾಯ ಮಾಡಬೇಕಾದರೆ ಅವನಿಗೆ ಬೀಜ ಬೇಕು, ಗೊಬ್ಬರ ಬೇಕು, ಎತ್ತುಗಳು ಬೇಕು ಮತ್ತು ಇತರ ಸಲಕರಣೆಗಳು ಬೇಕು. ನಾವು ಇವತ್ತು ಜಮೀನು ಹಂಚಿದರೂ ಅವನಿಗೆ ಉಡಿದಾರದಿಂದ ಪುಟ್‌ಗೋಸಿ ತನಕ ಕೊಡಬೇಕಾಗುತ್ತದೆ. ಅವುಗಳಿಗೆಲ್ಲಾ ಸೊಸೈಟಿಗಳಿಂದ ಹಣ ಕೊಡಬೇಕಾಗುತ್ತದೆ. ಆದ್ದರಿಂದ ನಾವು ಇವತ್ತು ಸಮಾಜವಾದವನ್ನು ಜಾರಿಗೆ ತರಬೇಕಾದರೆ, ಜಮೀನು ಹಂಚಬೇಕಾದರೆ, ಸೊಸೈಟಿಗಳ ಪಾತ್ರ ಬಹಳ ಮುಖ್ಯವಾದುದು. ಆದ್ದರಿಂದ ಈ ಎಲ್ಲಾ ಕಾರಣಗಳನ್ನು ಗಮನಕ್ಕೆ ತೆಗೆದು

ಕೊಂಡು ಈ ಸೊಸೈಟಿಗಳನ್ನು ಪುನರ್‌ಜೀವಗೊಳಿಸಬೇಕಾಗಿದೆ. ಈ ಸೊಸೈಟಿಗಳು ಈಗ ಒಂದು ಅವ್ಯವಸ್ಥೆಯಲ್ಲಿದ್ದು ನಿರ್ನಾಮವಾಗುತ್ತಿವೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಆದ್ದರಿಂದ ಒಂದು ಇದಕ್ಕೆ ಎನ್‌ಕ್ವಾಯರಿ ಕಮಿಟಿ ಮಾಡಿ, ಅಲ್ಲಿರತಕ್ಕಂತಹ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಸರ್ಕಾರದವರು ತಕ್ಕ ವ್ಯವಸ್ಥೆ ಮಾಡಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳಿ ನನ್ನ ಮಾತುಗಳನ್ನ ಮುಗಿಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಸಭಾಧ್ಯಕ್ಷರೆ, ಹಿರಿಯ ಸದಸ್ಯರಾದಂತಹ ಮಾನ್ಯ ಶ್ರೀ ಕರಿಯಪ್ಪನವರು ಏನೊಂದು ಖಾಸಗೀ ನಿರ್ಣಯವನ್ನು ಮಂಡನೆ ಮಾಡಿದ್ದಾರೆ, ಅದಕ್ಕೆ ನನ್ನ ಬೆಂಬಲವನ್ನು ಸೂಚಿಸಿ ನಾಲ್ಕು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಸಹನಾಭವತು, ಸಹನೌಭುನಕ್ತು ಎಂದು ಉಪನಿಷತ್ತಿನಲ್ಲಿ ಹೇಳಿದ ಮಾತು ಆದಿ ಕಾಲದಿಂದ ನಡೆದು ಬಂದಿರುತ್ತದೆ. ಆದರೆ ಆ ಮಾತು ಅಲ್ಲೇ ಉಳಿದು ಹೋಯಿತು. ಆಧುನಿಕ ಕಾಲದಲ್ಲಿ ಈ ಕೋಆಪರೇಟಿವ್ ಮೂವ್‌ಮೆಂಟ್ ಮತ್ತು ಸೋಶಿಯಲಿಸಂ—ಈ ಎರಡು ಶಬ್ದಗಳನ್ನು ಸೃಷ್ಟಿಮಾಡಿ ಪ್ರಾರಂಭಿಸಿದ ರೋಬರ್ಟ್ ಓವನ್‌ರವರನ್ನು ನಾವು ಈ ಸಂದರ್ಭದಲ್ಲಿ ಸ್ಮರಿಸಬಹುದು. ಇವರು ಸುಮಾರು ಒಂದು ಶತಮಾನದ ಹಿಂದೆ ಇದನ್ನು ಸೃಷ್ಟಿ ಮಾಡಿದರು. ಅದೇ ರೀತಿ ಕಮ್ಯುನಿಸ್ಟ್‌ನು ಕಾರ್ಲ್ ಮಾರ್ಕ್ಸ್‌ರು ಈಗ ಕ್ವಾರಲ್ ಮಾರ್ಕ್ಸ್ ಆಗಿಬಿಟ್ಟಿದ್ದಾರೆ. ಹೀಗೆ ರೋಬರ್ಟ್ ಓವನ್‌ರವರ ಕಾಲದಿಂದ ಜಗತ್ತಿನಲ್ಲಿ ಈ ಒಂದು ಸಹಕಾರ ಪದ್ಧತಿಯ ಮೇಲೆ ಒಂದು ಆಂದೋಳನ ಆರಂಭವಾಯಿತು. ನಮ್ಮ ಭಾರತ ದೇಶದಲ್ಲಿ ಸ್ವಾತಂತ್ರ್ಯ ಬಂದನಂತರ ಈ ಆಂದೋಳನ ಬಹಳ ತೀವ್ರಗತಿಯಿಂದ ಜಾರಿಗೆ ಬಂತು. ಸಮಾಜವಾದದ ಸಾಕ್ಷಾತ್ಕಾರ ಈ ಸಹಕಾರೀ ಆಂದೋಳನದ ಮುಖಾಂತರ ಸಾಧ್ಯವೆಂದು ನಂಬಿರತಕ್ಕವರಲ್ಲಿ ನಾವು ಲೋಹಿಯಾ ಸಮಾಜವಾದಿಗಳು ಮೊದಲಿಗರು. ಸಹಕಾರಿ ಪದ್ಧತಿಯನ್ನು ನಾವು ಸಜೀವಗೊಳಿಸದೆ ಹೋದರೆ, ಅಥವಾ ಅದು ವಿಫಲವಾದಲ್ಲಿ ಮುಂದಿನ ಹೆಜ್ಜೆಯೇ "ಕಮ್ಯೂನ್ಸ್" ಅಂದರೆ ಸ್ವಾತಂತ್ರ್ಯ ಇಲ್ಲದಿರತಕ್ಕ ಪರಿಸ್ಥಿತಿ ಉಂಟಾಗುವುದಕ್ಕೆ ಕಾರಣವಾಗುತ್ತದೆ. ಆದ್ದರಿಂದ ಪ್ರಜಾಪ್ರಭುತ್ವ ಮತ್ತು ಸಮಾಜವಾದ—ಇವುಗಳನ್ನು ಸಾಕ್ಷಾತ್ಕಾರಗೊಳಿಸಲು ಇರತಕ್ಕಂತಹ ಒಂದೇ ಮಾರ್ಗವೆಂದರೆ ಈ ಸಹಕಾರೀ ಸಂಘಗಳನ್ನು ಜೀವಂತಗೊಳಿಸಿ ಅವುಗಳು ಆರೋಗ್ಯಕರವಾಗಿ ನಡೆಯುವುದಕ್ಕೆ ಪ್ರಯತ್ನ ಮಾಡುವುದು. ಆದರೆ ದುರದೃಷ್ಟವಶಾತ್ ಇವತ್ತು ಸಹಕಾರ ಎಂಬುದು ಸಾಹುಕಾರ ಎಂಬ ಶಬ್ದಕ್ಕೆ ಸಮಾನವಾಗಿ ಬಂದು ನಿಂತಿವೆ. ಇವತ್ತು ಹಳ್ಳಿಗಳಲ್ಲಿ ನೋಡಿದರೆ, ನಮ್ಮ ಹಳ್ಳಿಗಳ ಸಹಕಾರಕ್ಕಿಂತ ನಿಮ್ಮ ಸಹಕಾರ ಸಂಘದ ಸಹಕಾರಿಗಳು ಏನಿದ್ದಾರೆಯೋ ಅವರು ಯಾವ ರೀತಿಯಲ್ಲಿಯೂ ಸುಧಾರಣೆಯಾಗಿಲ್ಲ. ಇವತ್ತು ಬಡ ರೈತ, ಕೂಲಿಗಾರ, ಗೇಣೀದಾರ, ಇವರಲ್ಲಿ ಯಾರಾದರೂ ಏನಾದರೂ ಸವಲತ್ತನ್ನು ಪಡೆಯಬೇಕೆಂದರೆ, ಅಲ್ಲಿ ಹಿಂದಿನ ಪರಂಪರೆಗಳಿಂದ ಯಾರು ಪಟ್ಟಭದ್ರ ಹಿತ ಸಂರಕ್ಷಕರಾಗಿ ಸಹಕಾರಸಂಘಗಳಲ್ಲಿ ಇದ್ದರೋ ಅವರೇ ಹೊಸಮುಖವನ್ನು ಇಟ್ಟುಕೊಂಡು ಇವತ್ತು ಕುಳಿತಿದ್ದಾರೆ. ಅವರೆಲ್ಲರೂ ಅದೇ ಹಳೆಯ ಶಾನುಭೋಗರು, ಅದೇ ಹಳೆಯ ಗೌಡರು. ಆದರೆ ಹೆಸರು ಮಾತ್ರ ಸಹಕಾರ ಸಂಘ. ವಿಶೇಷವೇನೂ ಇಲ್ಲ. ಅವರು ಎಲ್ಲಿ ಹೋಗುವುದೂ ಬೇಡ, ಅವರು ಈಚೆಗೆ ಬರುವುದೂ ಬೇಡ. ಬೀದಿ ಮನೆ ತುಳಿದುದು ಸಾಕು. ಇವತ್ತು ಹೊಸ ಜನರಿಗೆ, ಹೊಸ ಆಶಾಭಾವನೆಯನ್ನು ಇಟ್ಟುಕೊಂಡು ಬಂದಿರತಕ್ಕವರಿಗೆ ಹೆಚ್ಚಿನ ಅವಕಾಶವನ್ನು ಸಹಕಾರಸಂಘಗಳಲ್ಲಿ ಕೊಡಬೇಕು. ಇವತ್ತು ಅವರು ಏನೂ ಹೊಸ ಮುಖವನ್ನು ಹಾಕಿಕೊಂಡು ಗೋಮುಖ ವ್ಯಾಘ್ರವನ್ನು ಇಟ್ಟುಕೊಂಡು ಬಂದಿಲ್ಲ. ಆದ್ದರಿಂದ ಪಟ್ಟಭದ್ರ ಹಿತ ಸಂರಕ್ಷಕರ ಬಗ್ಗೆ ತನಿಖೆ ನಡೆಸಬೇಕು. ತಾವೇ ಇವತ್ತು ಹೊಸದಾದಂಥ ಒಂದು ಶ್ರೀಮಂತ ವರ್ಗವನ್ನು ಸೃಷ್ಟಿಮಾಡಿದ್ದೀರಿ. ಹೊಸಬರಿಗೆ ಹೊಸ ಶಕ್ತಿ ಬರುವುದಕ್ಕೆ ಸಾಧ್ಯವೇ ಹೊರತು ಹಳಬರಿಗೆ ಅದು ಬರುವುದಿಲ್ಲವೆಂದು ನಾವು ಸಲಹೆಗಳನ್ನು ಕೊಡುತ್ತಾ ಬಂದಿದ್ದೇವೆ. 25 ವರ್ಷಗಳಿಂದ ನೀವು ಏನೂ ಮಾಡಲಿಲ್ಲ. ಅದಕ್ಕೋಸ್ಕರವೇ ಸಹಕಾರ ಸಂಘಗಳಲ್ಲಿ ಹೊಸ ಆದರ್ಶವಾದಿಗಳಿಗೆ ಅವಕಾಶ ಕೊಡಬೇಕು. ಒಟ್ಟಿನಲ್ಲಿ ಈ ಸಹಕಾರ ಸಂಘಗಳಲ್ಲಿ ಸ್ವಾಹಾಕಾರಿ ಎಂದೇನಿದೆಯೋ ಅದನ್ನು ನಿರ್ಮೂಲ ಮಾಡಬೇಕು. ಆರೀತಿಮಾಡಿ ವಿಶೇಷವಾದಂಥ ಸವಲತ್ತುಗಳನ್ನು ನಿಜವಾದಬಡವರು, ರೈತರು ಯಾರೇ ಇದ್ದರೂ, ಕೂಲಿಗಾರರು ಯಾರೇ ಇದ್ದರೂ, ಹಿಂದುಳಿದವರು ಯಾರೇ ಇದ್ದರೂ ಅವರಿಗೆ ಒದಗಿಸಬೇಕು. ಅವರಿಗೆ ಸಿಗುವ ಸೌಕರ್ಯಗಳು ಸಿಗುವುದಕ್ಕೆ ಯಾವ ತರಹ ನಿಮ್ಮ ಕಾನೂನು ಅಡ್ಡಿ ಆತಂಕಗಳು ಇರಬಾರದು. ಅದಕ್ಕೆ ಮೇಲ್ವಿಚಾರಣೆ ಚೆನ್ನಾಗಿ ಇರಬೇಕು. ಮೇಲ್ವಿಚಾರಕರು ಸಮರ್ಥರಾಗಿರಬೇಕು. ಆದರೆ ಮೇಲ್ವಿಚಾರಕರೇ ಸ್ವಾಹಾಕಾರರ ಜೊತೆಯಲ್ಲಿ ಸೇರಿಕೊಂಡು ಬಡಬಗ್ಗರಿಗೆ ಬಲಿ ಹಾಕುತ್ತಿದ್ದರೆ ಏನು ಮಾಡಬೇಕು ? ಹೀಗೆ ಇವತ್ತು ನಮ್ಮ ರಾಜ್ಯದಲ್ಲಿರತಕ್ಕ ಸಹಕಾರ ಸಂಘಗಳಲ್ಲಿ

(ಶ್ರೀ ಕೋಣಂದೂರು ಲಿಂಗಪ್ಪ)

ಜನರ ಹಿತವನ್ನು ಸಂಪೂರ್ಣವಾಗಿ ಅಲಕ್ಷ್ಯಮಾಡಿ ಯಾರು ಮುಖಂಡರು ಇರುತ್ತಾರೋ ಅವರೇ ತಮ್ಮ ಜೇಬನ್ನು ತುಂಬಿಕೊಂಡು ಹೋಗುತ್ತಿದ್ದಾರೆ. ಸಾವಿರಗಟ್ಟಲೆ ಲಂಚ ಕೊಡಿ ಎಂದು ಹೇಳಿರುವುದೂ ಉಂಟು. ನಿಮ್ಮ ಸಿ. ಐ. ಡಿ. ಯವರು ಬೇಕಾದರೆ ಬಡವರು ಯಾರು ಇದ್ದಾರೆಯೋ ಅವರಲ್ಲಿ ಈ ಬಗ್ಗೆ ವಿಚಾರಮಾಡಲಿ. ನಿಮಗೆ ಎಲ್ಲಿಂದ ಇನ್‌ಫರ್‌ಮೇಶನ್ ಬರುತ್ತದೆ, ನಿಮಗೆ ಇವೆಲ್ಲವನ್ನೂ ಹೇಳುವವರು ಯಾರು ಎಂದು ಪ್ರಶ್ನೆಮಾಡಬಹುದು. ಅವರು ಒಂದು ಮಟ್ಟದ ಜನ. ಎಲ್ಲಾ ಬಿಳಿ ಅಂಗಿಗಳವರು. ಆದ್ದರಿಂದ ನಿಜವಾಗಿ ಜನಸಾಮಾನ್ಯರ ಕಷ್ಟ ಹೀಗಿದೆ. ಅವರಿಂದ ಏನು ಉಪಕಾರ, ಅಪಕಾರವಾಗುತ್ತದೆ ಎಂಬುದನ್ನು ನೋಡಬೇಕು. ಆದ್ದರಿಂದ ಅಲ್ಲಿ ಸರಿಯಾದಂಥ ಜನಗಳನ್ನು ನೇಮಿಸಿ ಅಲ್ಲಿನ ಕೆಲಸ ಕಾರ್ಯಗಳು ಹೇಗೆ ನಡೆಯುತ್ತಿವೆಯೆಂಬುದನ್ನು ತಿಳಿದುಕೊಂಡು ಬಂದರೆ ಒಳ್ಳೆಯದು. ನಮ್ಮ ಶಿವಮೊಗ್ಗಾ ಜಿಲ್ಲೆಯಲ್ಲಿ, ಅದರಲ್ಲಿಯೂ ಮಲೆನಾಡಿನಲ್ಲಿ ಅನೇಕ ಸಹಕಾರ ಸಂಘಗಳ ಸ್ವತ್ತು, ಹಣ ಕೇವಲ ಕೆಲವರ ಪಾಲಾಗಿದೆ. ಅವರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? ಕೇವಲ ಅವರ ಒಂದು ಪ್ರಭಾವಕ್ಕೊಳಗಾಗಿ, ಬಲಿಯಾಗಿ ಮತ್ತೆ ಅವರನ್ನು ಅಲ್ಲಿಗೇ ಬಿಡುತ್ತೀರಿ. ಇದು 25 ವರ್ಷಗಳಿಂದ ಬಂದಿರುವುದು. ಕಾಂಗ್ರೆಸ್ ಸರ್ಕಾರ ಬಂದು ಇವತ್ತಿನವರೆಗೂ ಇದೇ ತರಹದಲ್ಲಿ ನಡೆದುಕೊಂಡು ಬಂದಿದ್ದಾರೆ. ಹೊಸದೇನು ಮಾಡಿದ್ದೀರಿ? ಸಹಕಾರಿ ಆಂದೋಳನವೇನಿದೆಯೋ ಅದಕ್ಕೆ ಹೊಸ ಜೀವನವನ್ನು ತುಂಬುವವರೆಗೆ ಸಮಾಜವಾದವನ್ನು ಸಾಕ್ಷಾತ್ಕಾರವಾಗಿ ಮಾಡುವುದಕ್ಕೆ ಆಗುವುದಿಲ್ಲ. ಹಳೆಯ ಕೊಳೆಯನ್ನು ತೊಳೆಯಿರಿ. ಹೊಸ ಸೂಪರ್‌ವೈಜರನ್ನು ಇಡಿ. ಸಾಮಾನ್ಯ ಜನರಿಗೆ ಅಲ್ಲಿ ಅವಕಾಶಕೊಡಿ. ಕಂತುಗಳನ್ನು ಜಾಸ್ತಿ ಮಾಡಿ, ಮೆಂಬರ್‌ಷಿಪ್ ಫೀ ಕಡಿಮೆಮಾಡಿ ಎರಡು ರೂಪಾಯಿ, 5 ರೂಪಾಯಿ ಇಡಿ, ಬೇಕಾದರೆ ಇನ್ನೂ ಬೇಕು ಎಂದು ಕೇಳಿ. ಆದರೆ ಈಗಿರತಕ್ಕ ಕೋಆಪರೇಟಿವ್ ಆಕ್ಟನ್ನು ಬದಲಾವಣೆ ಮಾಡಿ. ಇನ್ನೊಂದು ವಿಷಯ ಎರಡು ವರ್ಷಗಳನಂತರ ಎಷ್ಟೇ ಹಣ ದುರುಪಯೋಗವಾದರೂ ಕೇಳಬಾರದೆಂಬ ಕ್ಲಾಜನ್ನು ತೆಗೆದುಹಾಕಿ. ಯಾವ ಮನುಷ್ಯನೇ ಆಗಲಿ ಅಲ್ಲಿನ ಹಣವನ್ನು ದುರುಪಯೋಗಪಡಿಸಿಕೊಂಡರೂ ಅವನ ಸ್ವತ್ತಿನ ಮೇಲೆ, ಹಾಗೂ ಅವನ ಆಸ್ತಿ ಮೇಲೆ ಜಪ್ತಿ ಮಾಡಬೇಕೆಂದು ಮಾಡಿ. ಸಹಕಾರ ಸಂಘಗಳಲ್ಲಿ ಇತರರ ಹೆಸರಿನಲ್ಲಿ ವ್ಯವಹಾರವಾಗುತ್ತದೆ. ಅದನ್ನು ನಿಲ್ಲಿಸುವುದಕ್ಕೆ ತೀವ್ರ ಕ್ರಮವನ್ನು ಕೂಡಲೇ ಕೈಗೊಳ್ಳಬೇಕು. ಕೇವಲ ಘೋಷಣೆ ಮಾಡುವುದರಿಂದ ಏನೂ ಪ್ರಯೋಜನವಿಲ್ಲ. ಅಲ್ಲಿನ ತನಿಖಾಧಿಕಾರಿಗಳು ನ್ಯಾಯಾಧೀಶರಾದರೆ ಒಳ್ಳೆಯದು. ಅದೃಷ್ಟವಶಾತ್ ನಿಮ್ಮ ಕೋಆಪರೇಟಿವ್ ಡಿಪಾರ್ಟ್‌ಮೆಂಟಿನಲ್ಲಿ ಮಂತ್ರಿಗಳು ಒಳ್ಳೆಯವರು ಇದ್ದಾರೆ. ರಿಜಿಸ್ಟ್ರಾರ್ ಅವರು ಒಳ್ಳೆಯವರು ಸಿಕ್ಕಿದ್ದಾರೆ. ಬರೀ ಒಳ್ಳೆಯತನದಿಂದ ಇದನ್ನು ರಿಪೇರಿ ಮಾಡುವುದಕ್ಕಾಗುವುದಿಲ್ಲ. ಭ್ರಷ್ಟಾಚಾರದವರ ಬಗ್ಗೆ ಸ್ವಲ್ಪ ಕಠೋರತೆ ಬೇಕು. ಅಷ್ಟೇ ಅಲ್ಲದೆ ಇವತ್ತು ಇದುವರೆಗೆ ನಡೆದುಕೊಂಡು ಬಂದಿರತಕ್ಕ ಅನ್ಯಾಯಗಳ ಪರಂಪರೆಯನ್ನು ನೋಡಿದರೆ ಕೋಆಪರೇಟಿವ್ ಸೊಸೈಟಿಗಳಲ್ಲಿ ನಡೆಯುತ್ತಿರತಕ್ಕ ಅನ್ಯಾಯಗಳನ್ನು ಪರಿಶೀಲನೆ ಮಾಡುವುದಕ್ಕೆ ಒಂದು ವಿಶೇಷವಾದಂಥ ನ್ಯಾಯಾಲಯವನ್ನು ನಿರ್ಮಾಣಮಾಡಬೇಕಾಗುತ್ತದೆ. ಆದ್ದರಿಂದ ಇವತ್ತು ನಮ್ಮ ರಾಜ್ಯಮಟ್ಟಿಗೆ ಹೇಳುವುದಾದರೆ, ಸಹಕಾರಿ ಆಂದೋಳನ ಜೀವಂತವಾಗಿ ಇರಬೇಕಾದರೆ, ಏನೇನು ಹೊಸ ವಿಚಾರಗಳನ್ನು ಅಳವಡಿಸಬೇಕೆಂಬುದನ್ನು ವಿಚಾರ ಮಾಡಬೇಕು. ಆ ವಿಚಾರದಲ್ಲಿ ಸುಮ್ಮನೆ ಕಾಲಹರಣ ಮಾಡಬಾರದು. ಹಿರಿಯ ಸದಸ್ಯರಾದ ಮಾನ್ಯ ಶ್ರೀ ಕರಿಯಪ್ಪನವರು ಇದರ ಬಗ್ಗೆ ಒಂದು ತನಿಖಾ ಸಮಿತಿಯನ್ನು ಕೂಡಲೇ ನೇಮಿಸಬೇಕೆಂದು ಹೇಳಿದ್ದಾರೆ. ಅದನ್ನು ನೇಮಿಸುವುದರ ಮೂಲಕ, ಈಗ ಕೊಳೆತುಹೋಗಿರತಕ್ಕ ಹಳಸಿಹೋಗಿರತಕ್ಕ ಸಹಕಾರಿ ಆಂದೋಳನ ಏನಿದೆಯೋ ಅದಕ್ಕೆ ಪುನರ್ಜನ್ಮ ಕೊಡುವುದಕ್ಕೆ ತಕ್ಕ ಬೆಂಬಲವನ್ನು ಕೊಡಬೇಕೆಂದೂ, ಅದಕ್ಕೆ ತಕ್ಕ ಸಹಾಯ ಮಾಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

MADAM SPEAKER.—The House will now adjourn and meet tomorrow again at 1 P. M.

The House adjourned at Six of the Clock to meet at One of the Clock on Friday the 21st July 1972.

WD 18262—GPB—600—15-2-1973

GOVERNMENT OF KARNATAKA

DEPARTMENT OF
KARNATAKA STATE ARCHIVES
LIBRARY, BANGALORE

This book should be returned on or before the date mentioned below :

KSA LIBRARY, B'lore
B004889
328.32402 548 LAD,1972
JJ37

Call No.......................................
Author.......................................
172
...587...
'E ARCHIVES
NGALORE